CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 17

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 3—1—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೧೭

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

### ಮನಸ್ತಾಪ ಕಾರಣ

## ಕಾಶ್ಮೀರದ ಯಕ್ಷಪ್ರಶ್ನೆ

ಭಾರತವು ಎದುರಿಸಬೇಕಾಗಿರುವ ಸಮಸ್ಯೆಗಳಲ್ಲಿ ಇಂದು ಬಗೆಹರಿಯದುಳಿದುದೆಂದರೆ ಕಾಶ್ಮೀರ ಸಮಸ್ಯೆ. ಇಂದು ಜಗತ್ತಿನ ಗಮನವನ್ನೇ ತನ್ನೆಡೆಗೆ ಸೆಳೆದುಕೊಂಡಿರುವ ಈ ಸಮಸ್ಯೆಗೆ ನ್ಯಾಯಪೂರ್ಣ ಪರಿಹಾರ ಸಾಧ್ಯವಿಲ್ಲವೆಂಬಂತಿದೆ. ಯಾಕೆಂದರೆ ಪಾಕಿಸ್ತಾನದ ಸ್ವಾರ್ಥ ಪ್ರವೃತ್ತಿಗೆ ಯಾವುದೇ ಸತ್ಯ—ನ್ಯಾಯಗಳು ಕಾಣುವುದು ಅಪರೂಪ. ಭಾರತದ ಮೇಲೆ ವೈರ ಸಾಧಿಸಲೆಂಬಂತೆ ಹೊರಟಿರುವ ಅದಕ್ಕೆ ಈ ಕಾಶ್ಮೀರ ಸಮಸ್ಯೆ ನಿಜವಾಗಿಯೂ ಒಂದು ದೊಡ್ಡ ಅಸ್ತ್ರ ಸಿಕ್ಕಿದಂತಾಗಿದೆ. ಕಾಶ್ಮೀರದ ಜನತೆ ಏನು ಬಯಸುತ್ತಾರೆ? ಎಂಬುದನ್ನು ಸರಿಯಾಗಿ ಅರಿತುಕೊಳ್ಳದೆ ಪಾಕಿಸ್ತಾನಕ್ಕೆ ಇಂದು ಕಾಶ್ಮೀರವನ್ನು ನುಂಗುವುದೊಂದೇ ಬೇಕಾಗಿದೆ. ಹಾಗಿದ್ದರೂ ಭಾರತ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಲಾರದು ಎಂಬುದನ್ನು ಅದು ತಿಳಿದುಕೊಳ್ಳಬೇಕು. ತನ್ನ ದೇಶದ ಒಂದು ರಾಜ್ಯದ ಮೇಲೆ ಆಕ್ರಮಣವಾಗಿರುವುದನ್ನು ಸ್ವಾತಂತ್ರ್ಯ ಪ್ರಿಯವಾದ ಭಾರತವೆಂದಿಗೂ ಸಹಿಸಲಾರದು.

**ಸಮಸ್ಯೆಗೆ ಕಾರಣವೇನು?**

ಕಾಶ್ಮೀರ ಸಮಸ್ಯೆ ಈಗ ಬಹು ಗಂಭೀರವೆನಿಸಿದೆ. ಬ್ರಿಟಿಷರು ಭಾರತ-ಪಾಕಿಸ್ತಾನಗಳಿಗೆ ಸ್ವಾತಂತ್ರ್ಯವಿತ್ತಾಗ ಕಾಶ್ಮೀರಕ್ಕೂ ಸ್ವಾತಂತ್ರ್ಯವಿತ್ತರು. ಆದರೆ ಪಾಕಿಸ್ತಾನ ಕಾಶ್ಮೀರ ತಮಗೆ ಸೇರಿದುದೆಂದು ಹೇಳಿ ಅದರ ಮೇಲೆ ಆಕ್ರಮಣ ಮಾಡಿತು. ಆಗ ಕಾಶ್ಮೀರವು ಭಾರತಕ್ಕೆ ಮೊರೆಯಿಡಲು, ಭಾರತ ಒಡನೆ ಸೈನ್ಯವಿತ್ತು ಪಾಕಿಸ್ತಾನವನ್ನು ತಡೆಯಿತು. ಮುಂದೆ ಕಾಶ್ಮೀರವನ್ನು ಅಲ್ಲಿನ ರಾಜರು ಮತ್ತು ಜನತೆ ಭಾರತದೊಡನೆ ವಿಲಯನಗೊಳಿಸಿದರು. ಆದರೆ ಪಾಕಿಸ್ತಾನ ಒಪ್ಪದೆ ಪುನಃ ಕಿರುಕುಳ ತಂದುಬಿಟ್ಟಿತು. ಸಂಯುಕ್ತ ರಾಷ್ಟ್ರಸಂಘವು ಆಕ್ರಮಿತ ಭಾಗದಿಂದ ಪಾಕಿಸ್ತಾನ ತನ್ನ ಸೇನೆಯನ್ನು ಹಿಂದೆಗೆದುಕೊಳ್ಳಬೇಕು ಮತ್ತು ಭಾರತವು ಕಾಶ್ಮೀರದಲ್ಲಿ ಜನಮತಗಣನೆ ನಡೆಸಬೇಕು ಎಂದು ನಿರ್ಧರಿಸಿತು. ಆಗ ಇದಕ್ಕೆ ಎರಡೂ ದೇಶಗಳು ಒಪ್ಪಿದ್ದುವು. ಆದರೆ ಪಾಕಿಸ್ತಾನಿಗಳಿಗೆ ಈ ನೀತಿ ಬೇಡವಾಯಿತು. ಅವರು ಆಕ್ರಮಿತ ಭಾಗವನ್ನು ಬಿಡಲು, ಅಲ್ಲಿಂದ ಸೇನೆ ತೆಗೆಯಲು ಒಪ್ಪಲಿಲ್ಲ. ಫಲತಃ ಇದೊಂದು ಮಹಾ ಸಮಸ್ಯೆಯಾಗಿಯೇ ಉಳಿಯಿತು.

**ಸುಂದರವಾದ ನಂದನವನ ಕಾಶ್ಮೀರ**

ಭೂಲೋಕ ಸ್ವರ್ಗವಾದ ಈ ಕಾಶ್ಮೀರವನ್ನು ಯಾರಿಗಾದರೂ ಬಿಡಲು ಮನಸ್ಸು ಬಂದೀತೇ? ಆ ಸುಂದರ ನಂದನವನಕ್ಕೆ ಮಾರುಹೋಗದವರಾರು? ಈ ಹಣ್ಣು ಹಂಪಲುಗಳ ಮನೋಹರ ಕುಂಕುಮ ಕೇಸರಿಯ, ರಮಣೀಯ ಉದ್ಯಾನವನಗಳ, ಚೇತೋಹಾರಕ ಪರ್ವತಶ್ರೇಣಿಗಳ ಕಾಶ್ಮೀರ ಯಾರಿಗೆ ಬೇಡ? ಭೂಲೋಕ ಪ್ರಸಿದ್ಧ ರೇಶ್ಮೆ—ಉಣ್ಣೆಗಳನ್ನು ಸಿದ್ಧಗೊಳಿಸುವ ಈ ನಂದನವನ ನಿಜಕ್ಕೂ ಏಕೈಕ ಸುಂದರ ನಾಡಾಗಿದೆ. ಕಾಶ್ಮೀರದ ಸುಂದರ ದೋಣಿಮನೆಗಳ ಜೀವನ, ಅನ್ಯತ್ರ ಒದಗಿ ಬರುವುದು ದುರ್ಲಭವೇ ಸರಿ. ಇದಕ್ಕಾಗಿಯೇ ಆಕ್ರಮಣ ಮಾಡಿ ವಶದಲ್ಲಿಟ್ಟುಕೊಂಡ ಪಾಕಿಸ್ತಾನ ಅದನ್ನು ಹೇಗೆ ಬಿಟ್ಟುಕೊಟ್ಟೀತು?

**ಬ್ರಿಟನ್-ಅಮೇರಿಕಾ ದೃಷ್ಟಿಕೋಣ**

ಪಾಕಿಸ್ತಾನದ ಆಗ್ರಹಕ್ಕೆ ತಕ್ಕಂತೆ ಅಮೇರಿಕಾ-ಬ್ರಿಟನ್‌ಗಳು ಕಾಶ್ಮೀರದಲ್ಲಿ ಪಾಕಿಸ್ತಾನಕ್ಕೂ ಹಕ್ಕಿದೆಯೆಂದು ವಾದಿಸುವಂತಿದೆ. ನೇಟೋ ರಾಷ್ಟ್ರದ ಸದಸ್ಯತ್ವ ಪಡೆದು ಈ ಎರಡು ರಾಷ್ಟ್ರಗಳ ಕೈಗೊಂಬೆಯಾಗಿರುವ ಕಾಶ್ಮೀರದ ಬಗ್ಗೆ ಈ ನೀತಿ ತಳೆದಿರಬೇಕು. ಆದರೆ ಈಚೆಗೆ ಭಾರತ-ಪಾಕಿಸ್ತಾನಗಳಿಗೆ ಬಂದು ಹೋದ ಹ್ಯಾರಿಮನ್ನರು ಉಭಯ ರಾಷ್ಟ್ರಗಳ ಮಧ್ಯೆ ಉನ್ನತ ಮಾತುಕತೆಯಾಗುವ ಏರ್ಪಾಡು ಮಾಡಿ ಹೋದರು. ಇದರೊಂದಿಗೆ ಅಮೇರಿಕಾವು ತಾನು ಭಾರತಕ್ಕೆ ಮಾಡುವ ಸಹಾಯವು ಕಾಶ್ಮೀರ ಸಮಸ್ಯೆಯ ಪರಿಹಾರದ ಮೇಲೆ ಹೊಂದಿಕೊಂಡಿದೆಯೆಂದು ಅಸ್ಪಷ್ಟ ಹೇಳಿಕೆಯನ್ನಿತ್ತಿದೆ.

**ಸ್ವರ್ಣಸಿಂಗರ ನಿಯೋಗ**

ಕಳೆದ ತಿಂಗಳಲ್ಲಿ ೫ ಮಂದಿಯ ನಿಯೋಗದ ನಾಯಕರಾಗಿ ನಮ್ಮ ಉಕ್ಕು ಕೈಗಾರಿಕಾ ಮಂತ್ರಿ ಸ್ವರ್ಣಸಿಂಘರು ಈ ಬಗ್ಗೆ ಪಾಕಿಸ್ತಾನದ ಅಧಿಕಾರಿಗಳೊಡನೆ ಮಾತುಕತೆ ಮಾಡಲು ತೆರಳಿದರು. ಮಾತುಕತೆಯ ವೃತ್ತಾಂತವೇನೆಂದು ಹೊರಬೀಳದಿದ್ದರೂ ಪುನಃ ದೆಹಲಿಯಲ್ಲಿ ಜನವರಿ ೧೬ರಂದು ಮಂತ್ರಿಮಟ್ಟದ ಮಾತುಕತೆ ಮುಂದುವರಿಯಲಿದೆಯೆಂದು ತಿಳಿದು ಬಂದಿದೆ. ಇದರಲ್ಲಿ ಸಾಧ್ಯವಾದರೆ ಮತಗಣನೆಯ ಸಂಭವವೂ ಚರ್ಚಿಸಲ್ಪಡಬಹುದೆಂದು ಹೇಳಲಾಗಿದೆ. ಆದರೆ ಆರ್ಥಿಕ ಮತ್ತು ರಾಜನೈತಿಕ ಪರಿಸ್ಥಿತಿಗೆ ಹೊಂದಿಕೊಂಡೇ ಈ ರೀತಿ ಮಾಡಲಾಗುವುದೆಂದು ಶ್ರೀ ನೆಹರೂರವರು ಹೇಳಿದ್ದು ಅದಕ್ಕೆ ಅಯೂಬರು ಸಮ್ಮತಿಸಿದ್ದಾರೆ. ಸ್ವರ್ಣಸಿಂಘರು ಪಾಕಿಸ್ತಾನಿಗಳ ಮುಖಕ್ಕೆ ತಕ್ಕ ಮಾತಾಡಿ ಭಾರತದ ಧೋರಣೆಯನ್ನೂ ವಿವರಿಸುವುದರಲ್ಲಿ ಬಹು ಕುಶಲರು. ಈ ಮಾತುಕತೆ ಸಫಲವಾಗಿ ಅಂತ್ಯಗೊಂಡೀತೆನ್ನಬಹುದು. ಪಾಕಿಸ್ತಾನ ವಿದೇಶ ಮಂತ್ರಿ ಭುಟ್ಟೋ, ಡೆಹ್ಲ ಮೊದಲಾದವರು ಈಗ ಪುನಃ ಕಾಶ್ಮೀರದ ಬಗೆಗೆ ಹೆಚ್ಚು ಆಶಾವಾದ ಇರಿಸಿಕೊಂಡಿದ್ದಾರೆ.

**ಬೆದರಿಕೆ ಸಲ್ಲದು**

ಕಾಶ್ಮೀರ ಸಮಸ್ಯೆ ಪರಿಹಾರವಾಗದಿದ್ದರೆ ಉಭಯ ದೇಶಗಳ ಸಂಬಂಧ ಕೆಟ್ಟು ಹೋಗಿ ಯುದ್ಧವು ಆಗುವ ಸಂಭವವಿದೆಯೆಂದು ಪಾಕಿಸ್ತಾನೀ ನಾಯಕರು ಹೇಳುತ್ತಿದ್ದಾರೆ. ಹೇಗಾದರೂ ಮಾಡಿ ಕಾಶ್ಮೀರವನ್ನು ಪಡೆಯುವ ಈ ತಂತ್ರ ಪೂರ್ಣ ಬೆದರಿಕೆಗೆ ಭಾರತ ಒಪ್ಪದು. ಅಂದು ಜನಮತಗಣನೆಗೆ ಅಡ್ಡಗಾಲಿಕ್ಕಿದ ಪಾಕಿಸ್ತಾನ ಇಂದು ಉಪಾಯವಿಲ್ಲದೆ ಜನಮತಗಣನೆಯಾಗಬೇಕೆಂದು ಹೇಳಿದರೆ ಅದಕ್ಕೆ ಒಪ್ಪಲು ಭಾರತ ಸಿದ್ಧವಿಲ್ಲ. ಪಾಕಿಸ್ತಾನವು ಚೀನದೊಡನೆ ಗಡಿ ಒಪ್ಪಂದವನ್ನು ಮಾಡಿಕೊಂಡು ಭಾರತವನ್ನು ಬೆದರಿಸುತ್ತಿದೆ. ಕುತ್ಸಿತ ಹಾಗೂ ನಿಂದಾಪೂರ್ಣ ವರ್ತನೆಯಿದು ಎನ್ನಬಹುದು. ಚೀನಾದ ಆಕ್ರಮಣದಿಂದ ನಾವು ಪಾರಾಗದ ಹೊರತು ಕಾಶ್ಮೀರ ಸಮಸ್ಯೆಯ ಪರಿಹಾರವಿಲ್ಲವೆಂದು ನೆಹರೂರವರು ಸ್ಪಷ್ಟವಾಗಿ ಹೇಳಿದ್ದಾರೆ. ಯಾಕೆಂದರೆ ನಮ್ಮ ಸೈನ್ಯ ಸಾಗಾಟ, ಶಸ್ತ್ರ ಪೂರೈಕೆಯ ದಾರಿಯು ಕಾಶ್ಮೀರದಲ್ಲಿದೆ.

**ಕಾಶ್ಮೀರ ಸಮಸ್ಯೆ ಬಗೆಹರಿಯುವುದೇ?**

ರಾಜಕೀಯ ತಜ್ಞರ ಅಭಿಪ್ರಾಯದಂತೆ ಒಗಟನಂತಿರುವ ಈ ಸಮಸ್ಯೆ ಪರಿಹಾರವಾಗಲು ನಿಜಕ್ಕೂ ಬಹು ಕಷ್ಟವಿದೆ. ಯಾಕೆಂದರೆ ವಸ್ತುಸ್ಥಿತಿಯನ್ನು ಮಸಿ ಬಳಿದು ಮುಚ್ಚಿಟ್ಟು ಸ್ವೈರ ವೃತ್ತಿಯನ್ನು ಮಾಡುವ ಪಾಕಿಸ್ತಾನ ನ್ಯಾಯವಾದ ಭಾರತದ ಹೇಳಿಕೆಗೆ ಒಪ್ಪದಿದ್ದುದರಿಂದ ಈ ಸಮಸ್ಯೆ ಬಹು ಸಮಯ ದಾಟಿದರೂ ಬಗೆಹರಿಯಲಾರದು. ಪಾಕಿಸ್ತಾನಿಗಳಿಗೆ ಕಾಶ್ಮೀರದ ಒಂದಂಶ ಕೊಟ್ಟರೆ ಮಾತ್ರ ಈ ಸಮಸ್ಯೆ ಪರಿಹಾರವಾಗಬಲ್ಲುದು. ಆದರೆ ಇದಕ್ಕೆ ಭಾರತ ತಯಾರಿಲ್ಲ. ಕಾಶ್ಮೀರದ ಜನತೆ, ಅಲ್ಲಿನ ಪ್ರಧಾನಿ ಭಕ್ಷಿಯವರು ಕಾಶ್ಮೀರವನ್ನು ಯಾವುದೇ ಉದಾರತೆಗೆ, ಮಾತುಕತೆಗೆ ಒಪ್ಪಿ ಪಾಕಿಸ್ತಾನಕ್ಕೆ ಒಪ್ಪಿಸಿದುದೇ ಆದರೆ ಕಾಶ್ಮೀರಿಗಳು ಯುದ್ಧಕ್ಕೂ ಸಿದ್ಧರು, ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಸಾರಿ ಹೇಳಿದ್ದಾರೆ.

**ಕಾಶ್ಮೀರ ಭಾರತದ ಅವಿಭಾಜ್ಯ ಅಂಗ**

ಸ್ವಾತಂತ್ರ್ಯದ ಅನಂತರ ಭಾರತವು ಕಾಶ್ಮೀರದ ಯೋಜನೆಗಳಿಗೆ ಅಭಿವೃದ್ಧಿಗೆ ಸಾಕಷ್ಟು ಹಣ ವೆಚ್ಚ ಮಾಡಿದೆ. ಅದನ್ನು ಒಂದು ಪ್ರತ್ಯೇಕ ಪ್ರಾಂತ್ಯವೆಂದು ಪರಿಗಣಿಸಿದೆ. ಈ ಪರಿಸ್ಥಿತಿ ಹೀಗಿರುವಾಗ ನಮ್ಮದೇ ರಾಜ್ಯದ ಒಂದು ತುಂಡನ್ನು ಉದಾರವಾಗಿ ಬೇರೆಯವರಿಗೆ ಕೈಯೆತ್ತಿ ಕೊಡುವುದಕ್ಕೆ ಭಾರತವು ಎಂದಿಗೂ ಸಿದ್ಧವಿಲ್ಲ. ಈ ವಿವಾದವನ್ನು ಭಾರತ-ಪಾಕಿಸ್ತಾನಿಗಳೇ ಕಾಶ್ಮೀರದ ಜನತೆಯ ಮನಸ್ಸನ್ನು ಅರಿತುಕೊಂಡು ಬಗೆಹರಿಸಿಕೊಳ್ಳಬೇಕಲ್ಲದೆ, ಈ ದಿಸೆಯಲ್ಲಿ ಯಾರ ಮತ್ತಾವುದೂ ನಡೆಯಬಾರದು. ಸದ್ಯದಲ್ಲಿ ಮುಗಿದು ಮುಂದೆ ಮುಂದುವರಿಯುವ ಪಾಕ್-ಭಾರತಗಳ ಮಾತುಕತೆಗಳು ಸೌಹಾರ್ದತೆಯನ್ನು ಬೆಳೆಸುವಲ್ಲಿ ಮತ್ತು ವಿವಾದಗಳನ್ನು ತೀರಿಸಿಕೊಳ್ಳುವಲ್ಲಿ ಮುಖ್ಯ ಸೈಲುಕಲ್ಲುಗಳಾಗುವುವೆಂದು ಆಶಯ ವ್ಯಕ್ತಪಡಿಸಬಹುದು.

—ಶ್ರೀ ರಾಮತನಯ.

ಖೀ ರಾ

ನೀವು ತಾಳಿಕೆ-ಬಾಳಿಕೆಯನ್ನು-ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ, ಮಂಗಳೂರು 1

KHIRA

# ಬದುಕಿನ ಅರ್ಥವರಿಯದ
# ಮೃಗ ಮಾನವ

—ಶ್ರೀಮತಿ ಪಿ. ಯಶೋದಾ ಯನ್ ಜೆನ್ನಿ.

"ಅನಸೂಯಾ...ಸ್ವಲ್ಪ ಇಲ್ಲಿಬಾರೇ. ಇಡೀ ದಿನ ಒಳಗೇ ಏನ್ಮಾಡ್ತೀಯಾ?...." ಗೆಳತಿ ಸುಲಕ್ಷಣೆ ಕರೆದಾಗಲೂ ಅನಸೂಯೆ ಹೊರಗೆ ಬರಲೇ ಇಲ್ಲ. "ಇಲ್ಲ ಸುಲಕ್ಷಣೆ, ನೀನೇ ಒಳಗೆ ಬಾ 'ಅವರು' ಬರುವ ಹೊತ್ತಾಯ್ತು ಅಡುಗೆ ಇನ್ನೂ ಆಗಿಲ್ಲ" ಎಂದು ಒಳಗಿಂದಲೇ ಉತ್ತರಿಸಿದಳು ಅನಸೂಯೆ.

"ಅಬ್ಬ! ಅದೆಷ್ಟು ಜಂಭವೇ ನಿನಗೆ! ಅವರು ಬಂದರೆ ಸ್ವಲ್ಪ ಕಾಯ್ತಾರೆ. ಅದರಿಂದೇನು?"

"ನಿನಗೆ ಗೊತ್ತಿಲ್ಲ ಸುಲಕ್ಷಣೆ, ದಣಿದು ಬರುವ ಪತಿಯನ್ನು ಇನ್ನಷ್ಟು ದಣಿಸಬಾರದು." ಪುನಃ ಉತ್ತರ ಬಂದುದೂ ಒಳಗಿನಿಂದಲೇ. ಇದರಿಂದಾಗಿ ಸುಲಕ್ಷಣೆಗೆ ನಿರಾಶೆ, ಅವಮಾನಗಳು ಏಕಕಾಲದಲ್ಲುಂಟಾದುವು. ಆಕೆ ಮಾತನಾಡದೆ ಎದ್ದು ಹೊರಟಳು. ಒಳಗಿನಿಂದಲೇ ಅದನ್ನು ಗಮನಿಸಿಯೂ ಅಡುಗೆಯ ಸಿದ್ಧತೆಯಲ್ಲಿದ್ದ ಅನುಸೂಯಾ ಮಾತನಾಡಲಿಲ್ಲ. ಸುಲಕ್ಷಣೆಗೆ ಬೇಸರ ಸಿಟ್ಟು ಬಂದಿದೆಯೆಂಬುದನ್ನರಿತೂ ಆಕೆ ಹೊರಗೆ ಕಾಲಿಡಲಿಲ್ಲ. ಅವಮಾನದಿಂದ ನೊಂದು ಹೋದ ಗೆಳತಿಯನ್ನು ಹಿಂದೆ ಬಾರೆಂದು ಕರೆಯಲೂ ಇಲ್ಲ.

ಅವಮಾನದಿಂದ, ಕ್ರೋಧದಿಂದ, ವ್ಯಥೆಯಿಂದ ಒಳಗೊಳಗೇ ಕುದಿಯುತ್ತಾ ಸುಲಕ್ಷಣೆ ತನ್ನ ಬಡ ಗುಡಿಸಲಿನಂತಿರುವ ಒಂದು ಕೊಠಡಿಯ ಮನೆಯನ್ನು ಸೇರಿದಳು. ಅನಸೂಯೆ ಅವಳನ್ನು ಹೀಗೆ ಅವಮಾನಿಸಿದ್ದು ಇದೇ ಮೊದಲಾಗಿರಲಿಲ್ಲ. ಇದಕ್ಕಿಂತ ಮೊದಲೂ ಅದೆಷ್ಟೋ ಬಾರಿ ನಗುನಗುತ್ತಲೇ ಸುಲಕ್ಷಣೆಯನ್ನು ಟೀಕಿಸಿದ್ದಳು.

ಪತಿಯ ಪ್ರೀತಿ, ದಾಂಪತ್ಯ ಜೀವನದ ಸೊಗಸಿನ ಮಾತು ಬಂದಾಗಲೆಲ್ಲ ಅವಳು ಹಸನ್ಮುಖಿಯಾಗಿಯೇ ಅನ್ನುತ್ತಿದ್ದಳು.

'ಅದೆಲ್ಲ ನಿನಗೆ ಗೊತ್ತಿಲ್ಲ ಸುಲಕ್ಷಣೇ'

ಸ್ವಾಭಾವಿಕವಾಗಿಯೂ ಸರಳ ನಡವಳಿಕೆಯ ಅನಸೂಯೆ ಗೆಳತಿಯನ್ನು ನೋಯಿಸಬೇಕೆಂದು ಆ ಮಾತು ಆಡುತ್ತಿರಲಿಲ್ಲವಾದರೂ ಇದರಿಂದ ಸುಲಕ್ಷಣೆಯ ಬೆಂದೆದೆ ನೋವನ್ನು ಸಹಿಸಲಾಗದೆ ನರಳುತಿತ್ತು. ಆದರೂ ಸುಲಕ್ಷಣೆ ಎಲ್ಲವನ್ನು ಸಹಿಸಿಕೊಂಡು ಮತ್ತೆ ಮತ್ತೂ ಗೆಳತಿಯ ಮನೆಗೆ ಹೋಗಲಪೇಕ್ಷಿಸುವಳು. ಆದರೆ ಹೋದಷ್ಟು ಸಲವೂ ಅಪಮಾನ ಮತ್ತು ದುಃಖದ ಭಾರದಿಂದಲೇ ತಲೆ ತಗ್ಗಿಸಿಕೊಂಡೇ ಮನೆ ಸೇರುವಳು. ಆ ಮೇಲೆ ಹೃದಯ ಹಗುರವಾಗುವ ವರೆಗೆ ಅತ್ತು ಸಮಾಧಾನಗೊಳ್ಳುವಳು. ಇನ್ನು ಮುಂದೆ ಅಲ್ಲಿಗೆ ಕಾಲನ್ನೇ ಇರಿಸಲಾರೆನೆಂದು ಪ್ರತಿಜ್ಞೆ ಗೈದರೂ ಆಕೆಯ ಪ್ರತಿಜ್ಞೆ ಒಂದೆರಡು ದಿನಗಳಲ್ಲೇ ಭಂಗವಾಗಿ ಬಿಡುತಿತ್ತು.

ಅದಕ್ಕೆ ಕಾರಣ ಆಕೆಯ ಸಹಿಸಲಾಗದ ಒಂಟಿ ಜೀವನದ ಬರುಡು ಬಾಳು, ಅಸಹನೀಯವಾದ ಏಕಾಂತತೆ, ಎದೆಯಿರಿಯುವ ಶೂನ್ಯತೆ, ಆಕೆಯನ್ನು ಮತ್ತೂ, ಮತ್ತೂ ಅನಸೂಯೆಯ ಮನೆಯತ್ತ ಸೆಳೆಯುತಿತ್ತು.

ಆದರೆ ಅನಸೂಯೆ ಮರೆತು ಕೂಡಾ ಸುಲಕ್ಷಣೆಯ ಮನೆಯತ್ತ ಕಾಲಿರಿಸುವವಳಲ್ಲ. ಆದರೆ ಆ ಬಗ್ಗೆ ಸುಲಕ್ಷಣೆ ಮರೆತು ಕೂಡಾ ಆಕ್ಷೇಪವೆತ್ತುವಂತಿರಲಿಲ್ಲ. ಏಕೆಂದರೆ ಅನಸೂಯೆಗೆ ಯಾವಾಗ ನೋಡಿದರೂ ಪತಿ ಮಕ್ಕಳು ಸಂಸಾರವೆಂದು ಬಿಡುವೇ ಇರುತ್ತಿರಲಿಲ್ಲ. ಸುಲಕ್ಷಣೆಯಾಗಿಯೇ ಅವಳ ಮನೆಗೆ ಹೋದಾಗಲೂ ಆಕೆಗೆ ಹರಟೆಗೆ ಸಮಯ ಸಿಗುವುದು ಬಹಳ ಅತ್ಯಲ್ಪ. ಬಿಡುವಾದಾಗ, ಮಕ್ಕಳ ವಿದ್ಯೆ, ಬುದ್ಧಿ ಯೋಗಕ್ಷೇಮಗಳ ಯೋಚನೆಯಾಕೆಗೆ, ಅಲ್ಲದೆ ಅವರ ಗೆಳೆತನದ ಮಧ್ಯೆ ಇರುವ ಇನ್ನೊಂದು ಅಡ್ಡ ಗೋಡೆಯೆಂದರೆ ಸುಲಕ್ಷಣೆಯ ಬಡತನ. ಶ್ರೀಮಂತ ಸಾಹುಕಾರ ರಂಗಣ್ಣನ ಮಡದಿ ಸುಲಕ್ಷಣೆಯ ಬಡಗುಡಿಸಲಿಗೆ ಕಾಲಿಂಸಿಯಾಳೇ ಎನ್ನುವ ಯೋಚನೆ ಸುಲಕ್ಷಣೆಗೇ ಇತ್ತು. ಅನುಸೂಯೆಗೆ ಆ ಭಾವನೆಯಿತ್ತೋ ಇಲ್ಲವೋ? ಆದರೆ ಆಕೆಗೆ ಬೇಕಾದ್ದು ತನ್ನ ಮನೆಯ ಮತ್ತು ಸಂಸಾರದ ನೆಮ್ಮದಿ, ಅದನ್ನು ಕಾಯುವ ಯೋಚನೆಯಲ್ಲಿ ಅವಳಿಗೆ ಉಳಿದ ಹರಟೆಗೆ ಸಮಯದ ಅಭಾವವೇ ಕಾಣಿಸುತಿತ್ತು.

ಅಬ್ಬ! ಅದೆಷ್ಟೋ ಸಲ ತನ್ನನ್ನು ಅವಮಾನಗೊಳಿಸಿದ್ದಳು ಅನುಸೂಯೆ. ತಾನು ವಿಧವೆ. ದಾಂಪತ್ಯ ಸುಖದಿಂದ ವಂಚಿತಳಾದವಳು. ನಿಜ. ಆದರೆ...ಆದರೆ ದಾಂಪತ್ಯದ ಜೀವನದ ಸವಿಯೆಂದರೇನೆಂದರಿಯದ, ಸತಿಯ ಕರ್ತವ್ಯವೆಂದರೇನೆಂದು ತಿಳಿಯದ ಅಪ್ರಬುದ್ಧೆಯೇ ಅಷ್ಟು ಅಜ್ಞಳೇ? ಅದನ್ನು ಯೋಚಿಸುವಾಗಲೆಲ್ಲ ಸುಲಕ್ಷಣೆಯ ಮೈ ಕ್ರೋಧದಿಂದ ನಡುಗುತ್ತಲಿತ್ತು. ಮನೆ ಸೇರಿದ ಸುಲಕ್ಷಣೆ ಚಾಪೆ ಬಿಡಿಸಿ ಮಲಗಿದಳು. ಆಕೆಯ ಭಾರವಾದ ಶೂನ್ಯ ಹೃದಯ ನೋವಿನಿಂದ ನರಳುತ್ತಿತ್ತು. ಮಿದುಳು ಯೋಚನಾ ಭಾರದಿಂದ ಸಿಡಿಯುತ್ತಿತ್ತು.

ವಿಧಿ ಸುಲಕ್ಷಣೆಯ ಸುಖವನ್ನು ಸೂರೆಗೊಂಡಿತ್ತು. ಇಪ್ಪತ್ತರ ವಯಸ್ಸಿನಲ್ಲೇ ವಿಧವೆಯಾದ ಆಕೆಗೆ ಸುಖ ಸಂತೋಷಗಳ ಆಸೆಯನ್ನು ಉಳಿದಿರಲಿಲ್ಲ. ಆಕೆಯ ಸಹಿಸಲಾಗದ ಮಾನಸಿಕ ಯಾತನೆ ಗೆಳತಿಯ ಸಹಾನುಭೂತಿ, ಸಂತಸದ ನುಡಿಗಳ ಹರಟೆಯಲ್ಲಾದರೂ ಕಡಿಮೆಯಾದೀತೆಂದೂಹಿಸಿದರೆ ಆ ಊಹೆ ಅದಕ್ಕೆ ವಿರೋಧವಾಗಿಯೇ ನಡೆದಿತ್ತು. ಪತಿ, ಮಕ್ಕಳು, ಸಂಸಾರ, ಮನೆಯೆಂದು ಹಗಲೂ ರಾತ್ರಿ ಯೋಚಿಸುವ ಅನುಸೂಯೆಗೆ ಸುಲಕ್ಷಣೆಯ ಗೆಳೆತನ, ಸಹವಾಸ ಅಗತ್ಯವೆನಿಸಲಿಲ್ಲವೇನೋ

ಅನಸೂಯೆ ಸುಲಕ್ಷಣೆಗಿಂತ ಒಂದೆರಡು ವರ್ಷಕ್ಕೆ ಹಿರಿಯಳಾಗಿರಬಹುದು. ಅಂತಹ ಕುರೂಪಿಯೆನಿಸದಿದ್ದರೂ ಸುಂದರಿ ಎಂದು ಯಾರೂ ಹೇಳುವಂತಿರಲಿಲ್ಲ.

ಆದರೆ ಸುಲಕ್ಷಣೆ ಅವಳ ಸೌಂದರ್ಯಕ್ಕೆ ಮರುಳಾಗಿಯೇ ರಮೇಶನು ಮನೆಯವರ ವಿರೋಧವನ್ನು ಅಲಕ್ಷಿಸಿ ಮದುವೆಯಾಗಿದ್ದ. ಆದರೆ ಮದುವೆಯಾಗಿ ವರ್ಷವಾಗುವಷ್ಟರಲ್ಲೇ ವಿಷಮ ಶೀತ ಜ್ವರಕ್ಕೆ ಬಲಿಯಾಗಿ ಅಸು ನೀಗಿದ್ದ. ಆ ಮೇಲೆ ಅವರ ಮದುವೆಯ ಕಾರಣದಿಂದಲೇ ಉಂಟಾದ ಹಿರಿಯರ ದ್ವೇಷವನ್ನು ಮರೆಯಲಾಗದೆ ಸುಲಕ್ಷಣೆ ಅನಾಥೆಯಾದಳು. ದೂರದ ಊರಲ್ಲಿರುವ ಅಣ್ಣನೋರ್ವ ತಂಗಿಗೆ ತಿಂಗಳಿಗೊಮ್ಮೆ ಅಲ್ಪ ಹಣವನ್ನು ಕಳುಹಿಸುತ್ತಿದ್ದ. ಅದು ಸುಲಕ್ಷಣೆಯ ಹೊಟ್ಟೆ ಬಟ್ಟೆಗೆ ಎಟಕುವಂತಿರಲಿಲ್ಲ.

ಆದರೆ ಸುಲಕ್ಷಣೆಯ ಸೌಂದರ್ಯ! ಅತಿ ಎತ್ತರವೆನಿಸದ ದೇಹಾಕೃತಿ. ವೃದುವಾದ ಬಿಳಿಯ ಮೈವರ್ಣ, ಮುದ್ದಾದ ಮುಖದಲ್ಲಿ ಕಪ್ಪಾಗಿ ಹೊಳೆಯುವ ಕಾಂತಿಯುತ ಕಣ್ಣುಗಳು, ಕೆಂದುಟಿಗಳು, ನೀಳವಾದ ಕೇಶರಾಶಿ. ಅವಳನ್ನು ನೋಡಿದವರ ದೃಷ್ಟಿ ಬೇಡವೆಂದರೂ ಮತ್ತೊಮ್ಮೆ ನೋಡುವಂತೆ ಮಾಡುತಿತ್ತು. ಹೆಚ್ಚೇಕೆ... ಅನಸೂಯೆ ಹೆಮ್ಮೆಯಿಂದಾಡುವ ಅವಳ ಪತಿ ರಂಗಣ್ಣ.... ಅದೆಷ್ಟೋ ಸಲ ಸುಲಕ್ಷಣೆಯತ್ತ ಮೆಚ್ಚಿಕೆಯ ನೋಟವನ್ನು ಬೀರಿದ್ದ. ಅಗತ್ಯವಿಲ್ಲದಾಗಲೂ ಆಕೆಯನ್ನು ನಗುನಗುತ್ತಾ ಮಾತನಾಡಿಸುತ್ತಿದ್ದ. ಅನಸೂಯೆಗಿಲ್ಲದ ಗೌರವ, ಅಭಿಮಾನಗಳು ರಂಗಣ್ಣನಿಗೆ ಸುಲಕ್ಷಣೆಯ ಮೇಲೆ ಆಕೆ ತೋರಿಸಿದ ಪ್ರೀತಿ, ಕರುಣೆಗಳು ರಂಗಣ್ಣನಲ್ಲಿದ್ದುವು. ಹೆಚ್ಚೇಕೆ, ಅತನ ಆ ದೃಷ್ಟಿಯ ಅಸೆಗಣ್ಣಿನ ಅರ್ಥ ಮಾಡಿಕೊಳ್ಳಲಾರದಷ್ಟು ಅಜ್ಞಳೇ ಸುಲಕ್ಷಣೆ? ಅನಸೂಯೆ ಹೆಮ್ಮೆಯಿಂದುಬ್ಬುವ ಅವಳ ಪತಿ ರಂಗಣ್ಣ ಸುಲಕ್ಷಣೆ ಮನಸ್ಸು ಮಾಡಿದ್ದರೆ ಅವಳ ದಾಸಾನುದಾಸನಾಗಲು ಸಿದ್ಧನಿದ್ದ.

ಆದರೆ ಸುಲಕ್ಷಣೆ ಅಂತಹ ಅವಿವೇಕಿಯಲ್ಲ. ಸ್ತ್ರೀಗೆ ಶೀಲವೇ ಎಲ್ಲಕ್ಕಿಂತಲೂ ಪ್ರಧಾನವೆಂಬುದನ್ನರಿತವಳು ಆಕೆ ದಾರಿ ತಪ್ಪಲು ಸಿದ್ಧಳಿರಲಿಲ್ಲ: ಆದರೆ.... ಆದರೆ ಎರಡು ವರ್ಷಗಳ ಈ ಏಕಾಂತ ಜೀವನ ಈ ಮನೋವೇದನೆ.... ಈ ಈ ಶೂನ್ಯತೆ ಇವನ್ನು ಸಹಿಸಿಕೊಳ್ಳುವುದು ಹೇಗೆ? ಅಷ್ಟೇ ಅಲ್ಲ... ಅನಸೂಯೆ, ಆಕೆಯಿಂದಾದ ಅವಮಾನ.... ಅದನ್ನಿದಿರಿಸಲು ಮಾರ್ಗವೇ ಇಲ್ಲವೇ? ಇದಕ್ಕೆ ಕೊನೆಯೇ ಇಲ್ಲವೆ? ಎಂದಿನ ವರೆಗೆ ಒಂಟಿ ಬಾಳಿನ ಕಾರಾಗೃಹವಾಸ!

ರಂಗಣ್ಣ ಸುಲಕ್ಷಣೆಯ ಸುಖದುಃಖದಲ್ಲಿ ಸಹಾನುಭೂತಿ ತೋರುವ ನೆವದಿಂದ ಅದೆಷ್ಟೋ ಸಲ ಆಕೆಯ ಮನೆಗೆ ಬರುತ್ತಲಿದ್ದ. ಅಲ್ಲದೆ ಆಕೆಗೆ ಬೇಕಾದ ಎಲ್ಲ ಸಾಮಾನುಗಳೂ ಅವನಂಗಡಿಯಿಂದಲೇ ಕಡ ರೂಪವಾಗಿ ಬರುತ್ತಿತ್ತಲ್ಲದೆ ಅವನೆಂದೂ ತಾನಾಗಿಯೇ ಆ ಸಾಲವನ್ನು ಕೇಳುತ್ತಿರಲಿಲ್ಲ. ಆದರೂ ಅನಸೂಯೆಗೆ ಒಣ ಜಂಭ. ತಾನು ಸಾಹುಕಾರನ ಪತ್ನಿ ಎನ್ನುವ ಹೆಮ್ಮೆ. ಆ ಸಾಹುಕಾರ ಸುಲಕ್ಷಣೆ ಮನಸ್ಸು ಮಾಡಿದರೆ ಅವಳ ಕೈಗೊಂಬೆಯಾಗಿ ಕುಣಿಯಲಾರನೇ? ಎಂದೂ ಇಲ್ಲದ ಕೆಟ್ಟ ಭಾವನೆಯೊಂದು ಸುಲಕ್ಷಣೆಯ ಮಿದುಳಿನಲ್ಲಿ ತಿಕ್ಕಾಟ ನಡೆಸಲಾರಂಭಿಸಿತು. ಆ ಯೋಚನೆಯಿಂದ ಆದರ ಅಸಹ್ಯ ನೋವಿ

(೧೧ನೇ ಪುಟ ನೋಡಿರಿ)





**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ') ಅವರ ನವೀನ ಜನಪದ ಗೀತಾಸಂಕಲನ

**'ಕೋಕಿಲವಾಣಿ'**

(ಪ್ರಿನ್ಸಿಪಾಲ್ ವಿ ಎಂ ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ. ಜಿ. ಎಂ. ಕಾಲೇಜು ಕುಂಜಿಬೆಟ್ಟು, ಉಡುಪಿ,

## ಚೀನಾ ದಾಳಿಯ ಆಗುಹೋಗು

# ದೇಶದಲ್ಲಿ ಭಾವೈಕ್ಯದ ಪ್ರತಿಷ್ಠಾಪನೆ

ವೈರಿ ಬಗೆದಷ್ಟೊಂದು ಆದದ್ದು ಮತ್ತೊಂದು. ಚೀನವು ಭಾರತದ ಮೇಲೆ ದಾಳಿ ಮಾಡಿದಾಗ ಇಡೀ ನಮ್ಮ ದೇಶವನ್ನು ಅಪಹರಿಸಿಕೊಳ್ಳಬೇಕೆನ್ನುವ ಹುಚ್ಚುತನ ಮಾಡಿರಲಿಕ್ಕಿಲ್ಲವಾದರೂ ಭಾರತಕ್ಕೆ ಸಾಧ್ಯವಾದಷ್ಟು ಕೆಡುಕನ್ನುಂಟು ಮಾಡಬೇಕೆನ್ನುವ ದುರುದ್ದೇಶವಿದ್ದಿರಬೇಕೆಂಬುದು ಸ್ಪಷ್ಟವಾಗಿದೆ. ನಮಗೆ ಈಗಾಗಲೇ ಸಾಕಷ್ಟು ನಷ್ಟ ಕಷ್ಟಗಳುಂಟಾಗಿವೆ. ಆದರೆ ದೈವಾನುಗ್ರಹದಿಂದ ಯಾರೂ ಎಣಿಸಿಂದ ಕೆಲವು ಲಾಭಗಳೂ ಆಗಿವೆಯೆನ್ನಬಹುದು. ಇದರಿಂದ ನಮಗೆಷ್ಟು ಆನಂದವಾಗುತ್ತದೋ ಅಷ್ಟೇ ಆಶ್ಚರ್ಯ ಪರದೇಶದವರಿಗೆ ಆಗಿದೆ.

ಹಿಂದೂ ದೇಶದ ಪ್ರಾಚೀನ ಚರಿತ್ರೆಯಲ್ಲಿ ಒಂದೇ ಒಂದು ಕಳಂಕವೆಂದರೆ ಇಲ್ಲಿಯ ರಾಜರುಗಳು ತಮ್ಮ ತಮ್ಮೊಳಗೆ ಮಾಡಿಕೊಳ್ಳುತ್ತಿದ್ದ ಕಾದಾಟ. ಹೆಣ್ಣು, ಹೊನ್ನು ಮತ್ತು ಮಣ್ಣು ಇವುಗಳಲ್ಲಿ ಒಂದಲ್ಲ ಒಂದು ಕಾರಣದಿಂದ ತಮ್ಮೊಳಗೆ ಜಗಳ ಕಾಯುವುದರಲ್ಲಿ ಭಾರತದ ಪುರಾತನ ರಾಜರುಗಳು ಹೆಸರು ಪಡೆದಿದ್ದರು. ಇದರಿಂದ 'ಇಬ್ಬರ ಜಗಳ ಮೂರನೆಯವನ ಆದಾಯ'ವೆನ್ನುವ ಗಾದೆಯನ್ನು ಕಾರ್ಯತಃ ಸ್ಪಷ್ಟಪಡಿಸಿದ್ದರು. ವೀರ ಪೋರಸನಿಗೆ ತನ್ನವರೇ ಸಹಾಯ ಮಾಡದ್ದರಿಂದ ಅಲೆಕ್ಸಾಂಡರನಿಗೆ ಜಯವಾಯಿತು. ಜಯಚಂದನು ಪೃಥ್ವಿರಾಜನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಬಯಸಿ ಮುಸಲ್ಮಾನರಿಗೆ ಭಾರತವನ್ನು ಆಳಲು ದಾರಿಮಾಡಿ ಕೊಟ್ಟನು. ನಮ್ಮ ದೇಶದ ತುಂಡರಸರೊಳಗಣ ದ್ವೇಷ ಮತ್ತು ಮತ್ಸರ ಹೇಗೆ ಇಂಗ್ಲಿಷರಿಗೆ ಸಹಾಯವಾಯಿತು ಎನ್ನುವುದು ಇತ್ತೀಚಿನ ಮಾತಾಗಿದೆ. ಚರಿತ್ರೆಯಲ್ಲಿ ಇಂತಹ ಉದಾಹರಣೆಗಳಿಗೆ ಲೆಕ್ಕವಿಲ್ಲ.

ಇಪ್ಪತ್ತನೇ ಶತಮಾನದಲ್ಲಿ ಸ್ವಾತಂತ್ರ್ಯವಾಗುವಾಗಲಾದರೂ ಹಿಂದೂದೇಶವು ಒಂದೇ ದೇಶವಾಗಿರಬೇಕೆಂದು ಮಹಾತ್ಮಾ ಗಾಂಧಿಯವರು ಕಟ್ಟಿದ್ದ ಕನಸನ್ನು ಕುಹಕಿ ಜಿನ್ನಾ ನೆರವೇರದಂತೆ ಮಾಡಿದ. ಹಿಂದೂದೇಶವು ಇಬ್ಭಾಗವಾಯಿತು. ಬದಲು ಒಂದೇ ದೇಶವಾಗಿದ್ದರೆ ಅದನ್ನು ನುಗ್ಗುವಷ್ಟು ಧೈರ್ಯ ಚೀನಕ್ಕೆ ಅಷ್ಟು ಸುಲಭದಲ್ಲಿ ಬರುತ್ತಿರಲಿಲ್ಲ. ಆದರೂ ಚಿಂತೆಯಿಲ್ಲ. ಸ್ವತಂತ್ರ ಭಾರತವಾದರೂ ಯಾವ ಕಡೆ ತೊಂದರೆಯಿಲ್ಲದೆ ಮುನ್ನಡೆಯಬೇಕೆಂದು ಎಲ್ಲರ ಆಕಾಂಕ್ಷೆ ಮತ್ತು ಪ್ರಾರ್ಥನೆಯಾಗಿತ್ತು. ವರ್ಷ ಕಳೆದಂತೆ ಮಾತ್ರ ನಮ್ಮ ದೇಶದ ಜನರು ಚರಿತ್ರೆಯ ಪಾಠಗಳನ್ನು ಒಂದೊಂದಾಗಿ ಮರೆಯಲು ಆರಂಭಿಸಿದಂತೆ ಕಾಣುತ್ತಿತ್ತು. ದೇಶದ ಹಿತಕ್ಕಿಂತಲೂ ಭಾಷೆಯ ಹಿತವೇ ಮೇಲೆಂದು ಬಗೆದು ಒಂದೊಂದು ಭಾಷೆಯವರಿಗೆ ಒಂದೊಂದು ಪ್ರಾಂತ ಪಡೆದುಕೊಂಡರು. ಇಷ್ಟೊಂದು ವಿಶಾಲವಾದ ದೇಶದಲ್ಲಿ ಯಾವುದಕ್ಕೆ ಕೊರತೆಯಿದ್ದರೂ ಭಾಷೆಗಳಿಗೆ ಕೊರತೆಯೇ! ಚಿಕ್ಕ ಪುಟ್ಟ ಜನಾಂಗವೂ ತಮ್ಮ ಭಾಷೆ ಬೇರೆಂದೂ ಅದನ್ನಾಡುವವರಿಗೆ ಪ್ರತ್ಯೇಕ ಪ್ರಾಂತವಾಗಬೇಕೆಂದೂ ಹಟ ಹಿಡಿಯಲು ತೊಡಗಿದ್ದನ್ನು ನೋಡುವಾಗ ಭಾರತೀಯರ ಮನೋಭಾವನೆ ವಿಶಾಲಗೊಂಡಿಲ್ಲವೆಂದು ಸ್ಪಷ್ಟವಾಗಿದೆ. 'ಬಿಡಿಸಿದರೆ ಹತ್ತಿಪ್ಪತ್ತು, ಮೂಸಿದರೆ ವಾಸನೆ' ಯೆನ್ನುವ ನೀರುಳ್ಳಿಯ ಮೇಲಿನ ಒಗಟಿನಂತಾಗಿತ್ತು ಭಾರತದ ಸನ್ನಿವೇಶ. ಪಂಜಾಬಿ ಸುಭಾ ಆಗಬೇಕೆಂದು ವಯೋವೃದ್ಧ ತಾರಾಸಿಂಗರೂ ಮತ್ತವರ ಅನುಯಾಯಿಗಳೂ ಹೂಡಿದ್ದ ಚಳವಳಿ ಎಲ್ಲರಿಗೂ ತಿಳಿದ ಒಂದು ಉದಾಹರಣೆ. ಉರಿಯುವ ಬೆಂಕಿಗೆ ತುಪ್ಪ ಎರೆಯುವಂತಿತ್ತು ಮದ್ರಾಸಿನಲ್ಲಿ ಹುಟ್ಟಿದ್ದ ದ್ರಾವಿಡ ಸ್ಥಾನದ ಕರೆ. ರಾಜಕೀಯ ರಂಗದಲ್ಲಿ ಇದೊಂದು ತಮಾಷೆಯೆಂದು ಹಲವರು ಆಡಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಡಿಲ್ಲಿಯ ಪಾರ್ಲಿಮೆಂಟಿನಲ್ಲಿ ಕೂಡಾ 'ಭಾರತದಲ್ಲಿ ದ್ರಾವಿಡ ಸ್ಥಾನ ಪ್ರತ್ಯೇಕವಾಗಬೇಕು' ಎಂಬ ಕೂಗು ಕೇಳಿಸಿದಾಗಲೇ ಎಚ್ಚತ್ತರು ನಮ್ಮ ಮುಖಂಡರು. ಈ ರೀತಿ ಭಾರತವು ಸಾಗಿದರೆ ಮುಂದೆ ಗತಿಯೇನು ಎನ್ನುವ ಪ್ರಶ್ನೆಗೆ ಎಲ್ಲಿಲ್ಲದ ಮಹತ್ವ ಉಂಟಾಯಿತು. ಸ್ವತಂತ್ರ ಭಾರತದಲ್ಲಿ ಇಂತಹ ಅಪಸ್ವರ ಎಲ್ಲಿಯೂ ಕೇಳಿಸಬಾರದು; ದೇಶವು ಒಂದಾಗಿ ಯುಗ ಯುಗಾಂತರದ ತನಕ ಉಳಿಯಬೇಕೆಂದು ದೃಢ ನಿಶ್ಚಯ ಮಾಡಿದ ಮುಂದಾಳುಗಳು ಇದನ್ನು ಹೇಗೆ ಸಾಧಿಸಬೇಕೆಂದು ಚಿಂತಿಸ ತೊಡಗಿದರು. ಇಂತಹ ಸಂದಿಗ್ಧ ಸಮಯದಲ್ಲೇ ಆಯಿತು ಚೀನದ ದಾಳಿ. ಆಗಲೇ ಎಚ್ಚತ್ತಿತು ಭಾರತದ ಜನತೆ!

ದೇಶದ ಸ್ವಾತಂತ್ರ್ಯ ಎಷ್ಟೊಂದು ಪ್ರಮುಖ್ಯವಾದುದು ಮತ್ತು ಪವಿತ್ರವಾದುದು ಎಂದು ತಿಳಿದುಕೊಳ್ಳಬೇಕಾದರೆ ಚೀನವು ಭಾರತದ ಮೇಲೆ ದಾಳಿಮಾಡಬೇಕಾಯಿತು. ನಮ್ಮಲ್ಲಿರುವ ಎಷ್ಟೊಂದು ಅಮೂಲ್ಯವಾದ ವಸ್ತುವಾದರೂ ಅದರ ನಿಜವಾದ ಬೆಲೆ ಗೊತ್ತಾಗಬೇಕಾದರೆ ಅದನ್ನು ಕಳೆದುಕೊಳ್ಳಬೇಕು ಅಥವಾ ಅಂತಹ ಸಂದರ್ಭವಾದರೂ ಒದಗಬೇಕು. ಚೀನವು ಭಾರತದ ಗಡಿಯನ್ನು ನುಗ್ಗಿದಾಗ ಜಯಚಂದನ ಕತೆ ಯೆಲ್ಲರಿಗೂ ನೆನಪಿಗೆ ಬಂದಿರಬೇಕು. ದ್ರಾವಿಡ ಮುನ್ನೇತ್ರ ಕಜಗಮಿನ ಮುಂದಾಳುಗಳು ದೇಶರಕ್ಷಣೆಗೆ ಎಲ್ಲರಿಗಿಂತಲೂ ತಾವೇ ಮುಂದೆ ಬರಲನುವಾದರು. ಪಂಜಾಬಿ ಸ್ಥಾನವಾಗಲಿ ಪ್ಲಿಸೆಂದು ಬೇಸತ್ತಿದ್ದ ಸಿಕ್ಕರು ತಮ್ಮ ತನು ಮನ ಧನಗಳನ್ನು ದೇಶಕ್ಕರ್ಪಿಸಿ ಅವರ್ತವ್ಯರಾದರು. ಮೈಸೂರು ಮಹಾರಾಷ್ಟ್ರಗಳೊಳಗಣ ಗಡಿ ವಿವಾದ ತಾನಾಗಿಯೇ ನಿಂತುಹೋಯಿತು. ದೇಶದ ರಕ್ಷಣಾ ನಿಧಿಗೆ ಬಡವನೆನ್ನುವ ಭೇದವಿಲ್ಲದೆ ಪ್ರತಿಯೊಬ್ಬರೂ ಸಹಾಯ

(೧೦ನೇ ಪುಟ ನೋಡಿರಿ)


## ನಿಮ್ಮ ಸಹಾಯ ಅಗತ್ಯ

ಕ್ಷಯರೋಗಕ್ಕೆ ಹೇತುವಾದ — ಟ್ಯೂಬರ್ಕ್ಲ್ ಬ್ಯಾಸಿಲಸ್— ಎಂಬ ಕ್ರಿಮಿಯು ರೋಗಪೀಡಿತ ಜನರಿಂದ ಹರಡಲ್ಪಡುತ್ತದೆ. ವ್ಯಕ್ತ ಪ್ರತಿಬಂಧಕ ಕಾರ್ಯಕ್ರಮವನ್ನು ಜನರ ಸಹಕಾರದಿಂದ ಮಾತ್ರ ಮುಂದೊತ್ತಬಹುದಾಗಿದೆ. ಸಹಕಾರದ ಮೊದಲಾಗಿ ಕ್ಷಯರೋಗ ಎಂದರೇನು, ಅದನ್ನು ಹೇಗೆ ತಡೆಗಟ್ಟಬಹುದು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ತಿಳಿವಳಿಕೆಯು ಭಾರತದ ಕ್ಷಯರೋಗ ಸಮಿತಿ ಮತ್ತು ರಾಜ್ಯದಲ್ಲಿರುವ ಕ್ಷಯರೋಗ ಸಮಿತಿಗಳ ಮುಖ್ಯ ಕಾರ್ಯಕ್ರಮವಾದ ಜ್ಞಾನ ಪ್ರಸಾರದ ಮೂಲಕ ಸಾಧ್ಯವಾಗುತ್ತದೆ

ಟಿ. ಬಿ. ಮೊಹರು ಮಾರಾಟ ಚಳವಳವು ಆರೋಗ್ಯ ಜ್ಞಾನವನ್ನು ವರ್ಧಿಸಲು ಸಹಾಯ ಮಾಡುತ್ತದೆ. ಟಿ. ಬಿ. ಮೊಹರುಗಳು ಕ್ಷಯರೋಗವನ್ನು ತಡೆಗಟ್ಟಬಹುದೆಂಬ ಸಂದೇಶದೊಂದಿಗೆ ಜನರ ಕೈಸೇರುತ್ತವೆ; ಮತ್ತು ಈ ವಿಪತ್ತಿನಿಂದ ಕಾಪಾಡಲಿಕ್ಕೆ ನಿಶ್ಚಿತ ಕೆಲಸ ಮಾಡಲು ಟಿ. ಬಿ. ಸಮಿತಿಗಳಿಗೆ ಜನತಾ ಸಹಕಾರವು ಅತ್ಯಾವಶ್ಯಕವಾಗಿದೆ.




ಟಿ. ಬಿ. ಮುದ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಕೊಂಡುಕೊಳ್ಳಿರಿ ಮತ್ತು ನಿಮ್ಮ ರಾಜ್ಯದ ಟಿ. ಬಿ. ಸಮಿತಿಗಳಿಗೆ ಸಹಾಯ ಮಾಡಿರಿ. ಒಂದು ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ.

ಮುದ್ರೆಗಳು— ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಮಿತಿ, ಸರಕಾರಿ ವೆನ್‌ಲೋಕ್ ಆಸ್ಪತ್ರೆ ಮಂಗಳೂರು, ಮತ್ತು ಅದರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ.

## ಹದಿಮೂರನೆ ಟಿ. ಬಿ. ಮೊಹರು ಮಾರಾಟ ಚಳವಳ

( ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ನಡೆಸಲ್ಪಡುವಂಥಾದ್ದು )

ಈ ಸ್ಥಳದ ಉದಾರ ದಾತೃಗಳು —
Coffee Land & Industries (Mysore) Ltd.,
Coorg

## ಕುತಂತ್ರದಿಂದ ಇಷ್ಟಾರ್ಥಸಿದ್ಧಿಯೆ?

# ಚೀನಾದ ನೈಜ ನಿಯಂತ್ರಣರೇಖೆ

ಚೀನಾವು ಹೇಳುವ 'ನೈಜ ನಿಯಂತ್ರಣ ರೇಖೆ'ಯು ಅದಕ್ಕೆ ಸಪ್ಟಂಬರ ೮ಕ್ಕೆ ಮೊದಲು ನುಂಗಿದ ಭಾರತದ ಪವಿತ್ರ ಭೂಮಿಯನ್ನಲ್ಲದೆ ಆನಂತರ ಮಾಡಿದ ಮಹಾದಾಳಿಯಿಂದ ಆಕ್ರಮಿಸಿದ ೨೫೦೦ ಚದರ ಮೈಲುಗಳಷ್ಟು ಭೂಮಿಯನ್ನು ಹೆಚ್ಚಾಗಿ ಲಪಟಾಯಿಸುವುದು.

೧೯೬೨ನೆ ಅಕ್ಟೋಬರ ೨೪ರಂದು ಚೀನೀಯ ಪ್ರಧಾನ ಮಂತ್ರಿ ಚೌ ಎನ್–ಲಾಯ್ ಅವರು ಗಡಿ ತಂಟೆಯನ್ನು ನಿಲ್ಲಿಸಲು, ಶಾಂತಿಯುತ ಪರಿಹಾರ ಮಾರ್ಗವನ್ನು ಮರುದೆರೆಯಲು ಮತ್ತು ಚೀನಾ-ಭಾರತ ಗಡಿ ವಿವಾದವನ್ನು ಪರಿಹರಿಸಿಕೊಳ್ಳಲು ತೋರಿಕೆಯ ಮಟ್ಟಿಗೆ ಮೂರು ಅಂಶಗಳ ಸೂಚನೆಯನ್ನು ಮುಂದಿಟ್ಟರು. ಎರಡೂ ಪಕ್ಷಗಳು 'ನೈಜ ನಿಯಂತ್ರಣ ರೇಖೆ'ಯನ್ನು ಮನ್ನಿಸಬೇಕು ಎಂಬುದು ಅವರ ಅತಿ ಮುಖ್ಯ ಸಲಹೆಯಾಗಿತ್ತು.

ಈ ಸಲಹೆಯು ನಡೆಯುತಿದ್ದ ಮಾತುಕತೆಯನ್ನು ಇಮ್ಮಡಿಸಿತು. 'ನೈಜ ನಿಯಂತ್ರಣ ರೇಖೆ'ಯೆಂದರೆ ಏನು? ಎಂದು ಎಲ್ಲರೂ ಕೇಳಿದರು. ಪ್ರತಿಯೊಬ್ಬರೂ ತಮತಮಗೆ ತೋಚಿದಂತೆ ಅದನ್ನು ಅರ್ಥವಿಸಿಕೊಂಡರು. ಅದೇ ಸಮಯದಲ್ಲಿ ಚೀನಾದಿಂದ ಬಂದ ವಿವರಣೆಯು ಗಲಿಬಿಲಿಯನ್ನು ಹೆಚ್ಚಿಸಿತೇ ಹೊರತು ಸಂದೇಹ ನಿವಾರಣೆ ಮಾಡಲಿಲ್ಲ.

ಆಕ್ಷಣವೇ '೧೯೫೯ರ ನವಂಬರ ೭ರಂದು ನೈಜ ನಿಯಂತ್ರಣ ರೇಖೆ' ಯಾಗಿದ್ದುದೇ ಅದು ಎಂದು ತಿಳಿಯಿತು. ಆದರೆ, ಅಂತಹ ಒಂದು ರೇಖೆಯು ಆ ಕಾಲದಲ್ಲಿ ಇರಲೇ ಇಲ್ಲವೆಂದೂ ಗೊತ್ತಾಯಿತು. ಚೀನಾವು ಹೇಳುವ ಆ ಕಾಲ್ಪನಿಕ ರೇಖೆ ಅದರ ಅಧಿಕೃತ ಬೇಡಿಕೆಯ ರೇಖೆ ಮಾತ್ರ. ಇನ್ನೂ ಹೇಳಬಹುದಾದರೆ, ಈ ಬೇಡಿಕೆಯ ರೇಖೆಯು ಕಾಲ ಕಾಲಕ್ಕೆ ಬದಲಾಯಿಸುತ್ತಿರುತ್ತದೆ. ಚೀನಾದ ಬೇಡಿಕೆಯನ್ನು ಮುಂದಿಡುವುದೇ ಈ ರೇಖೆಯ ಕೆಲಸ.

ಇಂದು, ಚೀನಾವು ಹೇಳುವ ನೈಜ ನಿಯಂತ್ರಣ ರೇಖೆಯೊಳಗೆ ೧೯೬೨ರ ಸಪ್ಟಂಬರ ೮ರ ಮೊದಲೇ ಆಕ್ರಮಿಸಿದ ಭಾರತೀಯ ಭೂ ಪ್ರದೇಶವಲ್ಲದೆ ದೊಡ್ಡ ಪ್ರಮಾಣದ ಆಕ್ರಮಣದಿಂದ ವಶಪಡಿಸಿರುವ ಸ್ಥಳವೂ ಕೂಡಿರುತ್ತದೆ.

ಚೀನಾವು ತನ್ನ ಸೇನೆಯನ್ನು ೧೯೬೨ರ ಸಪ್ತಂಬರ ೮ರ ರೇಖೆಯಿಂದ ಹಿಂದೆ ಸರಿಸುವಂತೆ ಭಾರತವು ಒತ್ತಾಯಿಸುತ್ತದೆ. ಆ ರೇಖೆಯಾವುದು? ಇದು ಬಹಳ ಸ್ಪಷ್ಟವಾದ ರೇಖೆ. ಅಕ್ಟೋಬರ ೨೪,೧೯೬೨ರಂದು ಪ್ರಧಾನಿ ನೆಹರುರವರು ಚೌ ಎನ್-ಲಾಯ್‌ಯವರಿಗೆ ಬರೆದ ಪತ್ರದಲ್ಲಿ ನಮೂದಿಸಲಾದ ರೇಖೆ. 'ಗಡಿ ರಕ್ಷಕರು' ಭಾರತವನ್ನು ಹಿರಿದಾಗಿ ಆಕ್ರಮಿಸುವುದಕ್ಕೆ ಮೊದಲು ಚೀನೀಯರು ತಳವೂರಿದ್ದ ರೇಖೆಯದು. ಭಾರತದ ೨೫೦೦ ಚದರ ಮೈಲು ಭೂಭಾಗವನ್ನು ತನ್ನ ಆಕ್ರಮಣದ ಫಲವೆಂದು ಕೊಯುವ ಚೀನಾದ ಇರಾದೆಯನ್ನು ನಿಷ್ಫಲಗೊಳಿಸುವ ರೇಖೆಯದು; ಸಂದೇಹ ಅಥವಾ ದ್ವೈಯರ್ಥಗಳಿಗೆ ಆಸ್ಪದ ಕೊಡಲಾರದ ನಿಗದಿಯಾದ ರೇಖೆಯದು.

(೯ನೇ ಪುಟ ನೋಡಿರಿ)





ಪುತ್ತೂರು ಡಿ ಮು. ಕೋರ್ಟಿನಲ್ಲಿ

O. S. 469/62

ಚೆನ್ನಪ್ಪ ಗೌಡ —ವಾದಿ.

ರಂಗಪ್ಪ ಗೌಡ ಕೂಡಾ—ಪ್ರತಿವಾದಿರು.

2ನೇ ಪ್ರತಿವಾದಿ ಕಿಟ್ಟ ಗೌಡ, ರಂಗಪ್ಪ ಗೌಡ್ರ ಮಗ ನಡಗ್ರಾಮದ ಬೇಜಾರಯೆಂಬಲ್ಲಿ ಬೆಳ್ತಂಗಡಿ ತಾಲೂಕು P. O. Permanu

ವಾದಿಯು ನಿಂಮ ಮೇಲೆ ಗಾಡಿ ಎತ್ತು ವ್ಯಾಪಾರದ ಬಾಬ್ತು ರೂ 750=00 ವ ಖರ್ಚಿಗೆ ಮಾಡಿದ ಮೇಲಿನ ದಾವೆಯು ತಾರೀಕು 22—1—63ಕ್ಕೆ ಯಿರುವದ್ರಿಂದ ನೀವು ಆ ದಿನ ಬೆಳಿಗ್ಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಪರಿಸದಿದ್ದಲ್ಲಿ ನಿಂಮನ್ನು ಶಿವಾಯಿ ಮಾಡಿ ತೀರ್ಮಾನಿಸಲಾದೀತು,

ಕೋರ್ಟಿನ ಹ್ಯುಂ ಪ್ರಕಾರ

(Sd) Sripati Rao B.
Advocate for plff.

ಪುತ್ತೂರು, 21—12—62



ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ ಜೀವನದ ಭದ್ರತೆಗೂ ಉಳಿತಾಯವು ಅತ್ಯವಶ್ಯ.

ಉಳಿತಾಯ ಮಾಡಿರಿ!

ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.



ಪುತ್ತೂರು ಡಿ ಮು ಕೋರ್ಟಿನಲ್ಲಿ

S. E. P. 226/62 S. C. 521/60 of Udipi D. M. C.

The Hanuman Transport & Co., —ವಾದಿ ಅರ್ಜಿದಾರ

ಕೆ. ರಮಾನಾಥ ಶೆಟ್ಟಿ ವರದರಾಯ ಶೆಟ್ಟಿಯವರ ಮಗ, ಉಜಿರೆ ಗ್ರಾಮ ಬೆಳ್ತಂಗಡಿ ತಾಲ್ಲು P.O. ಉಜಿರೆ-ಪ್ರತಿವಾದಿ-ಎದುರೀಗೆ

ಸದ್ರಿ ಡಿಕ್ರಿ ಆ್ಯಮೇಜು ವಸೂಲಿಗೆ ನಿಮ್ಮನ್ನು ವಾರಂಟಿನಲ್ಲಿ ಯಾಕೆ ಹಿಡಿಯಬಾರದಾಗಿ ಅರ್ಜಿದಾರ ಮಾಡಿದ ಮೇಲಿನ ಅಮಲ್ದಾರಿ ನೋಟೀಸು ಬಗ್ಗೆ ತಾ. 18—1—63ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆ ಇದ್ರೆ ನೀವು ಆ ದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸುವುದಿದ್ರೆ ನಿಮ್ಮನ್ನು ಶಿವಾಯಿ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ,

(Sd) K. R. Shenoy
Advocate for petr.

ಪುತ್ತೂರು, ತಾ. 21—12—62

## ಗಡಿ ವಿವಾದದ ತವರ್ಮನೆ

# ಕನಸಿನ ಚೀನೀಯ ಸಾಮ್ರಾಜ್ಯ

ಭಾರತದ ಮೇಲೆ ಸದ್ಯ ಮಾಡಿದ ಆಕ್ರಮಣ ಹಾಗೂ ಕೊಡುತ್ತಿರುವ ಕೀಟಲೆಗಳು ತನ್ನ ನಾಳಿನ ಸಾಮ್ರಾಜ್ಯ ರಚನೆಯ ಪ್ರಥಮ ಹಂತಗಳು ಎಂದು ಚೀನಾ ತಿಳಿದಿದೆ. ಭಾರತವೊಂದನ್ನು ನುಂಗಿಬಿಟ್ಟರೆ ಮತ್ತಾತ್ತನೂ ತನ್ನ ಕನಸನ್ನು ಭಗ್ನಗೊಳಿಸಲಾರರು ಎಂಬುದೇ ಅದರ ದೃಢ ನಿರ್ಧಾರ

ಪೇಕಿಂಗ್‌ನಲ್ಲಿ "ಆಧುನಿಕ ಚೀನಾದ ಸಂಕ್ಷಿಪ್ತ ಚರಿತ್ರೆ"ಯೆಂಬುದೊಂದು ಪುಸ್ತಕವು ಪ್ರಕಟವಾಗಿದೆ. ಇದರಲ್ಲಿ ಮೊದಲು ಚೀನಾದ ಭಾಗವಾಗಿದ್ದು ೧೮೪೦ರಿಂದ ೧೯೧೯ರ ನಡುವೆ ಸಾಮ್ರಾಜ್ಯವಾದಿಗಳು ಕಸಿದುಕೊಂಡ ಚೀನಾದ ಭೂಭಾಗವೆಂದು ಒಂದು ವಿಲಕ್ಷಣ ನಕಾಶೆಯು ಇದೆ. ಈ ನಕಾಶೆಯು ಕನಸಿನ ಚೀನಾವನ್ನು ನನಸು ಮಾಡುವುದೇ ಇಂದು ಜನತಾ ಚೀನಾದ ಆಶಯ; ಅದಕ್ಕಾಗಿ ಇಟ್ಟ ಮುಖ್ಯ ಹೆಜ್ಜೆ ಭಾರತದ ಮೇಲೆ ಆಕ್ರಮಣ.

ಚೀನಾದ ನಾಳಿನ ಸಾಮ್ರಾಜ್ಯದ ಭೂಭಾಗವು ಅದರ ಸುತ್ತಲಿನ ಹತ್ತು ರಾಷ್ಟ್ರಗಳಲ್ಲಿ ಹಂಚಿದೆ. ಸೋವಿಯತ್ ರಷ್ಯದಿಂದ ಹಿಡಿದು ನೇಪಾಲ, ಭೂತಾನ, ಪಾಕಿಸ್ತಾನ, ಬ್ರಹ್ಮ, ಮಲಯಾ, ಥೈಲೆಂಡ್, ಉತ್ತರ ವಿಯತನಾಮ, ದಕ್ಷಿಣ ವಿಯತನಾಮು, ಲಾವೋಸ್, ಕಾಂಬೋಡಿಯಾಗಳಲ್ಲಿ ಹರಡಿ ಭಾರತದ ತನಕವೂ ತನ್ನ ನೆಲವಿದೆಯೆಂದು ಚೀನಾ ಹೇಳುತ್ತದೆ. ಈ ನಕಾಶೆಯು ಚೀನೀಯರ ಸ್ವಪ್ನ ಸಾಮ್ರಾಜ್ಯದ ಪ್ರತೀಕವೆಂಬುದು ಅಕ್ಷರಶಃ ಸಿದ್ಧ. ಇದಕ್ಕೆ ಅವರ ವರ್ತನೆಯೇ ಮತ್ತಷ್ಟು ಪುಷ್ಟಿ ಕೊಡುತ್ತದೆ; ಅವರ ಭೂದಾಹವು ಶಮನಗೊಳ್ಳಬೇಕಾದರೆ, ಇವೆಲ್ಲಾ ದೇಶಗಳು ತಮ್ಮ ನೆಲವನ್ನು ದಾನಮಾಡಬೇಕಾದೀತು.

ತನ್ನ ನೆರೆಯ ಎಲ್ಲ ದೇಶಗಳೊಡನೆಯೂ ಸೀಮಾ ವಿವಾದವಿರುವ ಏಕೈಕ ರಾಷ್ಟ್ರವೆಂದರೆ, ಚೀನಾ. ಆದರೆ, ಅದು ಬಹಿರಂಗವಾಗಿ ಅದನ್ನು ಮುಂದಿಟ್ಟದ್ದು ಭಾರತದೊಡನೆ ಮಾತ್ರ. ಏಷ್ಯದ ಗಣನೀಯ ಹಾಗೂ ಮಹಾ-ದೇಶ ಭಾರತವನ್ನು ಸದೆಬಡಿಯಲು ಕಳೆದ ೧೦-೧೫ ವರ್ಷಗಳ ತಯಾರಿ ನಡೆಸಿದ ಚೀನಾವು ಇದನ್ನು ನುಂಗಿದರೆ, ಮತ್ತೆ ಉಳಿದವುಗಳು ಅಗಣ್ಯವೆಂದು ತಿಳಿದಿರಬಹುದು. 'ಶಾಂತಿಯುತ ಸಾಧನಗಳು' ಭಾರತದೊಡನೆ ಫಲಕಾರಿಯಾಗದೆ ಹೋದರೂ ಭಾರತವೇ ತಲೆಬಾಗಿತೆಂದರೆ, ಉಳಿದವು ಮತ್ತೇನು ಮಾಡಬೇಕು? ಅದಕ್ಕೆಂದೇ ಈ ಕುತಂತ್ರ. ಇದರಿಂದ ಚೀನಾ ಗೆದ್ದಿತೆಂದರೆ, ಭಾರತೇತರ ದೇಶಗಳ ಸ್ನೇಹ ದೊರೆತೇ ದೊರೆಯುವುದೆಂದು ಅವರ ಹವಣಿಕೆ! ಒಂದು ವೇಳೆ ಅದು ಅಸಾಧ್ಯವೆಂದಾದರೆ, ಗಡಿರಕ್ಷಕ ಸ್ವರೂಪದ ಸೇನೆ ಸಿದ್ಧವೇ ಇದೆ!

ಬ್ರಹ್ಮ-ಚೀನಾಗಳ ನಡುವೆ ಇದ್ದ ಗಡಿ ವಿವಾದವು ೧೯೫೦ರಲ್ಲಿ ಬೆಳಕಿಗೆ ಬಂತು. ಆಗ ಒಂದು ನಕಾಶೆಯಲ್ಲಿ ಭಾಮೋನಗರದಿಂದ ಉತ್ತರಕ್ಕಿರುವ ಬ್ರಹ್ಮೀಯ ಭೂಮಿ ತನ್ನದೆಂದು ಚೀನ ತೋರಿಸಿತು. ಆ ಭಾಗದಲ್ಲಿ ಗಡಿ 'ಅನಿರ್ಧಾರಿತ'ವಿದೆಯೆಂದು. ಹೀಗೆ ಹಠಾತ್ತಾಗಿ ಬಂದ ಪ್ರತಿಭಟನೆಗೆ ಹಳೆಯ ನಕಾಶೆಯನ್ನೇ ಪರಿಷ್ಕರಿಸದೆ ಪ್ರಕಟಿಸಲಾಗಿದೆ ಎಂದು ಸಮಾಧಾನ ಬಂತು. ಆದರೆ, ೧೯೫೬ರಲ್ಲಿ ಇದೇ ಮಾದರಿಯ ಭೂಪಟಗಳು ಹೊರಬಂದವು. ಬ್ರಹ್ಮದ ೭,೦೦೦ ಚದರ ಮೈಲಿ ಭೂಮಿಯನ್ನು ಚೀನೀಯ 'ಗಡಿರಕ್ಷಕರು' ವಶಪಡಿಸಿದರು. ೧೯೫೭ರ ನಂತರ ದೀರ್ಘಕಾಲದ ಮಾತುಕತೆ ನಡೆದು ೧೯೬೦ರಲ್ಲಿ ಗಡಿ ಒಪ್ಪಂದಕ್ಕೆ ಬರಲಾಯಿತು. ಮೆಕಮಹೋನ ರೇಖೆಯನ್ನೇ ತನ್ನ ಮತ್ತು ಬ್ರಹ್ಮದ ಗಡಿಯೆಂದು ಚೀನ ಒಪ್ಪಿತು. ತನ್ನದೆಂದು ಹೇಳುತ್ತಿದ್ದ ಭೂಭಾಗದ ಮೇಲೆ ತನ್ನ ಅಧಿಕಾರವನ್ನು ಬಿಟ್ಟುಕೊಟ್ಟಿತು. ಮುಂದೆ ಇದಕ್ಕಿಂತ ದೊಡ್ಡ ಪಾಲನ್ನು ಪಡೆಯುವ ಇರಾದೆಯಿದ್ದುದರಿಂದಲೇ ಅಂದದು ತ್ಯಾಗ ಮಾಡಿತು.

ಚೀನಾ-ನೇಪಾಳಗಳ ನಡುವೆಯೂ ವಿವಾದವನ್ನು ೧೯೬೧ರಲ್ಲಿ ಪರಿಹರಿಸುವ ಒಡಂಬಡಿಕೆಯೊಂದಾಯಿತು.

ಬ್ರಹ್ಮದೊಡನೆ ನ್ಯಾಯಬದ್ಧವೆಂದು ಚೀನಾ ಮೆಕಮಹೋನ ರೇಖೆಯನ್ನು ಒಪ್ಪಿದೆ, ಗಡಿ ನಿರ್ಧಾರ ಮಾಡಿದೆ. ಆದರೆ ಅದೇ ರೇಖೆಯು ಭಾರತದ ವಿಷಯದಲ್ಲಿ ಮಾತ್ರ ಅಸ್ವೀಕೃತ ಮಾತ್ರವಲ್ಲ ಅನ್ಯಾಯವಾದುದು ವಿಚಿತ್ರ. ಭಾರತ ನೆರೆಯಲ್ಲಿರುವ ಬ್ರಹ್ಮ-ನೇಪಾಳಗಳೊಡನೆ ತನಗಿದ್ದ ಸೀಮಾ ವಿವಾದಗಳನ್ನು ಶಾಂತಿಯುತ ಮಾರ್ಗಗಳಿಂದಲೇ ಪರಿಹರಿಸಿಕೊಂಡಿರುವುದನ್ನು ಚೀನಾ ಉದಾಹರಿಸಿ ಭಾರತವನ್ನೇ ದೋಷಿಯೆಂದು ಸಾರುತ್ತದೆ. ಇದರಲ್ಲಿರುವ ಒಳಗುಟ್ಟು ಸರ್ವವಿದಿತ. ಮೊನ್ನೆ ಮೊನ್ನೆ ಪಾಕಿಸ್ತಾನದೊಡನೆಯೂ ಒಡಂಬಡಿಕೆ ಮಾಡಿಕೊಂಡಿತೆಂದು ಸುದ್ದಿ. ಈಗ ಭಾರತವು ಮಾತ್ರ ಸಂಧಾನ ಬಯಸುವುದಿಲ್ಲವೆಂದು ಡಂಗುರ ಹೊಡೆಯಲು ಸಾಮ್ರಾಜ್ಯವಾದಿ ಚೀನಾಕ್ಕೆ ಇನ್ನು ಅಡ್ಡಿಯಿಲ್ಲ. ಏಕೆಂದರೆ, ಭಾರತವನ್ನು ನುಂಗಿದರೆ, ಅದರಿಂದ ಸಿಂಹ ಭೂಭಾಗ ದೊರೆಯುವಾಗ, ಅಂಗೈಯಗಲದ ನೆಲಕ್ಕೆ ಈಗಲೇ ಏಕೆ ಹಾತೊರೆಯಬೇಕು? ಲಾಯ್-ಮಾವೋ ನಾಳಿನ ಆಕಾಶಗೋಪುರ ಸ್ವರೂಪದ ಸ್ವಪ್ನ ಸಾಮ್ರಾಜ್ಯದ ಸ್ಥಿತಿ ಹೀಗಿದೆ!

ಪಾಕಿಸ್ತಾನ ಇಂದು ಚೀನಾದೊಡನೆ ಒಪ್ಪಂದ ಮಾಡಿಕೊಂಡಿರಬಹುದು. ಆದರಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ವಿವಾದ ಪರಿಹಾರಕ್ಕೆ ಮಾತುಕತೆ ಪ್ರಾರಂಭವಾಗುವ ಮುನ್ನಾದಿನವೇ ಈ ಪ್ರಕಟಣೆ ಹೊರಟುದು ಭಾರತಕ್ಕೆ ದಿಗಿಲು ಬೀಳುವಂತೆ ಮಾಡಿದ ಪೂರ್ವನಿಯೋಜಿತ ಸಂಚು

೧೯೫೯ರಲ್ಲಿ ಪಾಕಿಸ್ತಾನದ ವಿದೇಶ ಮಂತ್ರಿ ಜಫರುಲ್ಲಾಖಾನರು ಚೀನೀ ಸೈನಿಕರು ಕಾಶ್ಮೀರದ ಉತ್ತರ ಗಡಿಗಳನ್ನು ಉಲ್ಲಂಘಿಸಿದ್ದಾರೆ ಎಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ೧೯೫೯ರಲ್ಲಿ ಚೀನಾದ ಒಂದು ನಕ್ಷೆಯಲ್ಲಿ ಧಾಳಿಕಾರರು ಕಾಶ್ಮೀರದಲ್ಲಿ ಆಕ್ರಮಿಸಿಕೊಂಡಿರುವ ಭೂಪ್ರದೇಶದಲ್ಲಿ ೧೫೦೦೦ ಕಿಲೋ ಮೀಟರುಗಳಷ್ಟು ನೆಲವನ್ನು ಚೀನೀಯರದೆಂದು ತೋರಿಸಲಾಗಿತ್ತು. ಆದರೆ, ಈ ಬಗ್ಗೆ ತನ್ನ ಹಕ್ಕನ್ನು ಮಾತ್ರ ಅದು ಮುಂದಿಟ್ಟಿರಲಿಲ್ಲ.

೧೯೬೨ರ ಅಕ್ಟೋಬರ ೩ರಂದು ಪಾಕಿಸ್ತಾನದ 'ಡಾನ್' ಪತ್ರಿಕೆಯು ಸಂಪಾದಕೀಯದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ, 'ಮೆಕಮಹೋನ ರೇಖೆಯ ಮುಖ್ಯ ಭಾಗ ಭಾರತಕ್ಕೆ ಸೇರಿದ್ದು. ಆದರೂ ಪಾಕಿಸ್ತಾನಕ್ಕೆ ಸಂಬಂಧಪಟ್ಟಂತೆ ನೆಲವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಆ ರೇಖೆಯ ಪಾವಿತ್ರ್ಯವನ್ನು ರಕ್ಷಿಸಿಕೊಂಡು ಬರಬೇಕು; ಭೂಪಟಗಳಿರಲಿ, ಇಲ್ಲದಿರಲಿ, ನಾವು ನಮ್ಮ ಭೂಪ್ರದೇಶದಲ್ಲಿ ಒಂದು ಅಂಗುಲದಷ್ಟು ನೆಲವನ್ನೂ ಬಿಟ್ಟುಕೊಡಲಾರೆವು" ಎಂದು ಗರ್ಜಿಸಿತು.

ಕಾಶ್ಮೀರದಲ್ಲಿ ಗಡಿ ನಿರ್ಧರಿಸುವ ಹಕ್ಕು ಪಾಕ್-ಚೀನಾಗಳಿಗಿಲ್ಲವೆಂದು ಭಾರತವು ಪ್ರತಿಭಟನೆಯನ್ನು ವ್ಯಕ್ತಪಡಿಸಿರುವಂತೆಯೇ ಅವು ಒಡಂಬಡಿಕೆ ಮಾಡಿಕೊಂಡವು ಎಂಬುದು ಖೇದಜನಕ. ಇದೂ ಭಾರತದ ಸಾರ್ವಭೌಮತೆಗೊಂದು ಆಹ್ವಾನವೆಂದು ತಿಳಿಯಬೇಕು.

ಚೀನಾ-ಗಡಿವಿವಾದ ರಷ್ಯದೊಡನೆಯೂ ಇದೆ. ಮತ್ತು ಅದು ಈಗ ತುಸು ಉಲ್ಬಣಾವಸ್ಥೆಗೆ ಏರಿದೆಯೆಂದು ತಿಳಿಯುತ್ತದೆ. ಚೀನಾ-ಮಂಗೋಲಿಯಾ ಗಡಿ ಇನ್ನೂ ಅನಿರ್ಧಾರಿತವಾಗಿಯೇ ಇದೆಯೆಂದು ಚೀನಾದ ವಾದ. ಮಂಚೂರಿಯಾದಲ್ಲೂ ಇಂತಹ ವಿವಾದವಿದ್ದಿದೆ. ೩೦ ಕಿಲೋಮೀಟರ್ ಉದ್ದದ ದ್ವೀಪವೊಂದು ನನ್ನದು ತನ್ನದು ಎಂದು ರಷ್ಯ—ಚೀನಾಗಳು ವಾದರಂಗಕ್ಕೆ ಇಳಿದಿವೆ. ಹಾಗೆಯೇ ಖಬರೊವಿಸ್ಕ್ ಮತ್ತು ಸಿಂಕಿಯಾಂಗ್‌ನ ಪಶ್ಚಿಮ ಭಾಗದ ತುದಿಯಲ್ಲಿಯೂ ವಿವಾದವಿದ್ದಿದೆ.

ಗಡಿ ವಿವಾದದ ಬಗ್ಗೆ ಆಡುವ ಚೀನಾದ ಸಮಾಧಾನವೆಂದರೆ, ಅದು ಅನಿರ್ಧಾರಿತವೆಂದು. ಚೀನಾದ ರೇಖೆಗಳೆಲ್ಲವೂ ಕೇಳಿಕೆಯ ರೇಖೆಗಳಾಗಿರುವುದರಿಂದ ಅಂತಹ ಗಡಿಗಳು ನಿರ್ಧಾರಿತ ಸ್ಥಿತಿಗೆ ಬರುವುದೂ ಶಕ್ಯವಿಲ್ಲ. ಚೀನಾವು ತನ್ನ ದೇಶದ ಗಡಿ ನಿರ್ಧಾರ ಮಾಡಿಕೊಳ್ಳಬೇಕಾದರೆ, ಅದರ ಸಾಮ್ರಾಜ್ಯ ದಾಹ ಕೊನೆಗೊಳ್ಳಬೇಕು; ಇದಕ್ಕಾಗಿ ವಿವಾದವಿರುವ ಎಲ್ಲ ದೇಶಗಳೂ ಒಂದಾಗಿ ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವುದು ಹಿತಕಾರಿಯಾದೀತು.

---

**ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ**

S. C. 478/1962

ಪದ್ಮಾವತಿ ಅಮ್ಮ — ವಾದಿ

ಕರಿಯ ನಾೈಕ, ಅಂಗರ ನಾೈಕರ ಮಗ, ಬಂಟ್ವಾಳ ತಾಲೂಕು ಬಿಳಿಯೂರು ಗ್ರಾಮದ ತೋಟ ಎಂಬಲ್ಲಿ — ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲಿನ ದಾವೆಯ ವಾದಿಯು ನಿಂಮ ಮೇಲೆ, ಗೇಣಿ ಬಾಕಿ ಬಗ್ಗೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 21—1—1963 ಕ್ಕೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ನಿಂಮ ಉದಾಹರಣೆಯನ್ನು ದಾಖ್ಲು ಮಾಡತಕ್ಕದ್ದು ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕ್ಕುಂ ಪ್ರಕಾರ

**(Sd) P. Anantharaja Ariga**

Advocate for plaintiff.

ಮೊಕ್ಕಾಂ: ಪುತ್ತೂರು, ತಾ. 23—12—62



ಶುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲು: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಾರ್ಥಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

**REY ROGAS & CO., 23-A, Anand Nagar, BOMBAY-28**

**ನವಯುಗ**

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
| --- | --- | --- |
| ೪೨ | ೩-೧-೧೯೬೩ | ೧೭ |

## ಶಕ್ತಿ ಸಂಘಟನೆ

ಚೀನೀಯರ ಆಕ್ರಮಣವು ದೇಶಕ್ಕೆ ಗಂಡಾಂತರವೆಂಬ ಸತ್ಯ ಸಂಗತಿ ತುಸು ತಡವಾಗಿಯಾದರೂ ಎಲ್ಲ ಪ್ರಜೆಗಳಿಗೆ ಮನವರಿಕೆಯಾದುದು ಸಂತೋಷದ ಸಂಗತಿ. ನೈಜ ಭಾರತೀಯನಿರುವುದು ಹಳ್ಳಿ ಹಳ್ಳಿಯಲ್ಲಿ ಎಂಬ ದರಿಂದ ಅಲ್ಲಿನ ಜನತೆಯಲ್ಲಿ ಆಕ್ರಮಣದ ಸ್ಪಷ್ಟ ಭಾವನೆಯು ಮೂಡುವಂತೆ ಮಾಡಬೇಕು. ಈ ಸತ್ಯತೆಯನ್ನೂ ಅದರಿಂದ ಉಂಟಾದ ಹಾನಿ ಮತ್ತು ಅದು ಮಾಡಿದ ದುಷ್ಪರಿಣಾಮಗಳನ್ನೂ ಎಲ್ಲರಿಗೂ ತಿಳಿಯುವಂತೆ ಮತ್ತು ಆಕ್ರಮಣ ವಿರೋಧಿ ಭಾವನೆಯು ಅವರಲ್ಲಿ ಹುಟ್ಟುವಂತೆ ಮಾಡಿದರೆ, ಎಲ್ಲರೂ ಬಯಸುವ ಭಾವೈಕ್ಯ ತನಗೆ ತಾನಾಗಿಯೇ ಹುಟ್ಟಿಕೊಂಡೀತು. ಚೀನೀಯ ಆಕ್ರಮಣವು ಭಾರತೀಯರ ಮೇಲೆ ವಿಶಿಷ್ಟ ಪ್ರಭಾವವನ್ನು ಬೀರಿದೆಯೆಂಬುದು ನಿಜ. ಆದರೆ, ದೇಶದ ಐಕ್ಯಭಾವವನ್ನು ಹೆಚ್ಚಿಸಬೇಕಾದರೆ, ಅನಕ್ಷರಸ್ಥರಾದ ಗ್ರಾಮೀಣ ಜನತೆಗೆ ಇವುಗಳ ಸುಸ್ಪಷ್ಟ ಚಿತ್ರ ದೊರೆಯುವಂತಾಗಬೇಕು.

ಭಾರತವು ಚೀನಾದೊಡನೆ ಯುದ್ಧ ಮಾಡುತ್ತಿಲ್ಲ; ಅದನ್ನು ಮಾಡುವ ಅಪೇಕ್ಷೆಯಾದರೂ ಇಲ್ಲ. ಭಾರತವು ತನ್ನ ನೆಲವನ್ನು ಸಂರಕ್ಷಿಸುವುದು ಎಂದರೆ ತನ್ನ ಸಂರಕ್ಷಣೆಯನ್ನು ಮಾಡಿಕೊಳ್ಳುವುದು; ಅದಕ್ಕಾಗಿ ಉಚಿತವರಿದು ಕಾರ್ಯಕ್ಕೆ ಕೊಳ್ಳುವುದು. ಆದುದರಿಂದ ಎರಡೆರಡು ಮಹಾ ಯುದ್ಧಗಳ ದುಷ್ಪರಿಣಾಮಗಳನ್ನು ಕಂಡು ನಡುಗಿದ್ದವರ ನಡುವೆ ಯುದ್ಧದ ಭಯವನ್ನು ಹುಟ್ಟಿಸುವುದರ ಬದಲು, ದೇಶ ಸಂರಕ್ಷಣೆಯ ಆತ್ಮ ಬಲವನ್ನು ಕೆರಳಿಸುವುದು ಉಚಿತ. ಚೀನೀಯರ ಆಕ್ರಮಣ ಅನ್ಯಾಯಕಾರಿ, ಗಂಡಾಂತರಕಾರಿ, ಅಗೌರವಪ್ರದ ಹೌದು; ಇದನ್ನು ಪ್ರಚಾರ ಮಾಡುತ್ತಿರುವುದರಿಂದಲೇ ಯಶಸ್ಸು ಲಭಿಸೀತೆಂದೂ ನಿರೀಕ್ಷಿತ ಫಲಪ್ರಾಪ್ತವಾದೀತೆಂದೂ ಹೇಳವಂತಿಲ್ಲ. ಆಕ್ರಮಣದ ಗಂಡಾಂತರಗಳನ್ನು ಮನವರಿಕೆ ಮಾಡುವುದರೊಡನೆ ಅದನ್ನು ವಿರೋಧಿಸಲು ಮತ್ತು ದೇಶ ಸಂರಕ್ಷಣೆ ಮಾಡಲು ಪ್ರತಿಯೊಬ್ಬನೂ ಬದ್ಧ ಕಂಕಣನಾಗುವಂತೆ ಪ್ರೇರೇಪಣೆ ನೀಡುವ ಕಾರ್ಯ ನಡೆಯಬೇಕು. ಪೇಟೆ ಪಟ್ಟಣಗಳ ಜನರು ಸ್ವಾಭಾವಿಕವಾಗಿ ಅಕ್ಷರಜ್ಞರು ಮತ್ತು ಹಳ್ಳಿಗರಿಗಿಂತ ಈ ವಿಷಯದಲ್ಲಿ ಧೈರ್ಯಶಾಲಿಗಳು. ನಿಜ ಪರಿಸ್ಥಿತಿಯನ್ನು ತಿಳಿದ ಪ್ರತಿ ಭಾರತೀಯನೂ ದೇಶರಕ್ಷಣೆಗೆಂದು ತನ್ನಿಂದ ಸಾಧ್ಯವಾದ ನೆರವನ್ನು ಅವಶ್ಯ ಮಾಡಿಯೇ ಮಾಡುತ್ತಾನೆ. ಇದಕ್ಕೆ ಸಂಬಂಧಪಟ್ಟವರು ಮಾಡಬೇಕಾದ ಪ್ರಥಮ ಕಾರ್ಯವೆಂದರೆ, ಚೀನೀಯ ಆಕ್ರಮಣದ ನಗ್ನ ಚಿತ್ರವು ಪ್ರತಿ ಭಾರತೀಯನಿಗೆ ಮುಟ್ಟುವಂತೆ ಮಾಡುವುದು; ಅದರ ದುಷ್ಪರಿಣಾಮಗಳ ಬಗೆಗೆ ಮನವರಿಕೆ ಮಾಡಿ ಸ್ವಾತಂತ್ರ್ಯದ ಮತ್ತು ಸಂರಕ್ಷಣೆಯ ಭಾವನೆಯು ಬೆಳೆಯುವಂತೆ ಮಾಡುವುದು. ಅವರಿಂದ ಲಭ್ಯವಿರುವ ಸಹಾಯವನ್ನು ಪಡೆದುಕೊಳ್ಳುವುದು.

ದೇಶದ ಇಂದಿನ ತುರ್ತಿನ ಪರಿಸ್ಥಿತಿಯಲ್ಲಿ ಜನತೆಯ ಸಹಾಯವು ಯಾವ ರೂಪದಲ್ಲೇ ಇರಲಿ, ಅದನ್ನು ಮುಕ್ತ ಕಂಠದಿಂದ ಪ್ರಶಂಸಿಸಿ ಸ್ವಾಗತಿಸಬೇಕು. ಧನ ಮಾತ್ರವಲ್ಲದೆ ಇತರ ನೆರವನ್ನೂ ಪಡೆಯಬಹುದು. ಕ್ರಮಬದ್ಧವಾಗಿ ಕರಗಳನ್ನು ತೆರುವುದೂ ಕೂಡಾ ಒಂದು ಬಗೆಯ ಮಹಾ ಸೇವೆ. ಕರಗಳಿಂದ ತಪ್ಪಿಸಿಕೊಳ್ಳುವುದು ಮಹಾಪರಾಧ. ಒಂದು ಸ್ವತಂತ್ರ ದೇಶದ ನಾಗರಿಕನಲ್ಲಿ ಕೆಲವೊಂದು ಶಿಷ್ಟಾಚಾರಗಳೂ ಸಭ್ಯಾಚಾರಗಳೂ ಇರಬೇಕಾಗುತ್ತವೆ. ಇವನ್ನು ನಾಗರಿಕನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತ ಬರುವುದರಿಂದ ಮಹತ್ವದ ದೇಶ ಸೇವೆಯಾಗುತ್ತದೆ. ಸಂರಕ್ಷಣಾ ನಿಧಿಯನ್ನು ಕೂಡಿಸುವುದು ಮಾತ್ರ ಇಂದಿನ ಅಗತ್ಯದ ಕೆಲಸವಲ್ಲ; ಜನರು ಸಂರಕ್ಷಣಾ ಕಾರ್ಯಗಳಲ್ಲಿ ಹೇಗೆ ಭಾಗವಹಿಸಬಹುದು ಎಂಬುದನ್ನೂ ಅವರಿಗೆ ತಿಳಿಯ ಹೇಳುವುದೂ ಮತ್ತು ಬೇರೆ ಬೇರೆ ರಕ್ಷಣಾ ಕಾರ್ಯಗಳಲ್ಲಿ ಆಸಕ್ತಿ ತೋರುವವರಿಗೆ ಸೂಕ್ತ ಮಾರ್ಗದರ್ಶನ ಮಾಡುವುದೂ ಅಷ್ಟೇ ಅಗತ್ಯದ ಕೆಲಸಗಳು. ಇದಕ್ಕಾಗಿ ಒಂದು ಪ್ರತ್ಯೇಕ ಸಮಿತಿಯು ಏರ್ಪಡಬಹುದು. ಇದು ನಿಧಿಯನ್ನು ಸಂಗ್ರಹಿಸುವುದರ ಜತೆಗೆ ಮಿಲಿಟರಿ ಸೇರುವ, ರಕ್ತದಾನ ಮಾಡುವ, ಇನ್ನಿತರ ವಿಧಾನಗಳಿಂದ ಸ್ವೇಚ್ಛೆಯಿಂದ ದೇಶಕ್ಕಾಗಿ ದುಡಿಯಲು ಉತ್ಸುಕರಿರುವವರನ್ನು ಗುರುತಿಸಿಕೊಳ್ಳಬಹುದು ಮತ್ತು ಮುಂದೆ ಕಾಲಕ್ರಮದಲ್ಲಿ ಇವರ ನೆರವನ್ನು ಪಡೆದುಕೊಳ್ಳಬಹುದು. ಚೀನೀಯರೊಡನಿರುವ ಗಡಿ ವಿವಾದವು ನಾಲ್ಕಾರು ತಿಂಗಳುಗಳಲ್ಲಿಯೇ ಮುಗಿಯುವಂತಿಲ್ಲ. ಕಡಿಮೆ ಪಕ್ಷ ಅದು ನಾಲ್ಕಾರು ವರ್ಷಗಳ ವರೆಗಾದರೂ ಮುಂದುವರಿಯುವುದು ಎಂದು ನಮ್ಮ ಪ್ರಧಾನಿಗಳೇ ಅಂದಿದ್ದಾರೆ; ಇದು ಸತ್ಯವೇ. ಹಾಗಿರುವಾಗ, ದೇಶದ ಆಂತರಿಕೋತ್ಪನ್ನಗಳ ಬೆಳವಣಿಗೆ, ಸಂರಕ್ಷಣಾ ಕಾರ್ಯಗಳ ತೀವ್ರತೆ ಮತ್ತು ದೇಶದಲ್ಲಿ ಬಿಕ್ಕಟ್ಟನ್ನೂ ಏಕತೆಯನ್ನೂ ಉಳಿಸಿಕೊಳ್ಳುವಲ್ಲಿ ಕಾಳಜಿ—ಇವೆಲ್ಲವುಗಳೂ ಸಂರಕ್ಷಣೆಯ ಕಾರ್ಯಗಳೇ ಎಂದರೆ, ಮಾನವ ಶಕ್ತಿ, ಪ್ರಕೃತಿ ಶಕ್ತಿಯನ್ನು ಸರಿ ದಾರಿಯಲ್ಲಿ ಮುನ್ನಡೆಸಿ, ವೈರಿಗಳನ್ನು ಬಗ್ಗುಬಡಿಯುವ ಕಾರ್ಯಕ್ರಮಗಳು ತೀವ್ರಗೊಳ್ಳಬೇಕು. ಗಡಿ ಪ್ರದೇಶದ ರಾಜ್ಯಗಳಲ್ಲಿ ಸೈನಿಕ ತರಬೇತಿಯನ್ನು ನಾಗರಿಕರಿಗೆ ನೀಡುತ್ತಿರುವಂತೆಯೇ ಈ ಯೋಜನೆಯನ್ನು ದೇಶದಾದ್ಯಂತ ವಿಸ್ತರಿಸಿ, ನಾಳೆ ಬರಲಿರುವ ದೊಡ್ಡ ಗಂಡಾಂತರವನ್ನು ಎದುರಿಸಲು ಈ ಗಳಿಗೆಯಿಂದಲೇ ನಾವು ಸನ್ನದ್ಧರಾಗಬೇಕು. ನಮ್ಮಲ್ಲಿ ಶಕ್ತಿ ಅಧಿಕವಿದೆ; ಅದರ ಸದುಪಯೋಗವಾಗಬೇಕು.

## ಉಡುಪಿಯಲ್ಲಿ ಮಂತ್ರಿ ಡಾ। ನಾಗಪ್ಪ ಆಳ್ವರು

ಕಳೆದ ತಾ. ೩೦ ನೇ ಸಂಜೆ ತಾಲೂಕು ರಾ. ರ. ಸಮಿತಿಯ ಆಶ್ರಯದಲ್ಲಿ ರಥಬೀದಿಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಆರೋಗ್ಯ ಮಂತ್ರಿ ಡಾ। ಕೆ. ನಾಗಪ್ಪ ಆಳ್ವರು ಭಾಷಣಮಾಡುತ್ತಾ "ನಾವು ರಾಷ್ಟ್ರ ರಕ್ಷಣೆಗೋಸ್ಕರ ಪಕ್ಷ ಪಂಗಡ, ಜಾತಿ, ಮತಗಳನ್ನು ಮರೆತು ಒಗ್ಗಟ್ಟಿನಿಂದ ಶ್ರಮಿಸುವ ಪ್ರತಿಜ್ಞೆಗೈಯಬೇಕು. ಸ್ವಾತಂತ್ರ್ಯ ದೊರೆತಂದಿನಿಂದ ಪ್ರಗತಿಯೆಡೆಗೆ ನಾವು ಸಾಗುತ್ತಿರುವಾಗಲೇ ಒಮ್ಮಿಂದೊಮ್ಮೆಲೇ ನಮಗೆ ಚೀನಿಯರಿಂದ ಪೆಟ್ಟು ಬಿದ್ದಿದೆ ಅವರನ್ನು ನಾವು ಎದುರಿಸಲು ಸಿದ್ಧರಾಗಿರಬೇಕು. ರಾ. ರ. ನಿಧಿಗೆ ಸಾಧ್ಯವಾದ ನೆರವು ನೀಡಬೇಕು" ಎಂದು ಹೇಳಿದರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಟಿ. ಎ. ಪೈಗಳು ಮಾತಾಡುತ್ತಾ ನಮ್ಮ ಸಹಕಾರಕ್ಕಿಂತಲೂ, ರಾಷ್ಟ್ರಪ್ರೇಮ ಇಂದಿನ ಪರಿಸ್ಥಿತಿಯಲ್ಲಿ ಮುಖ್ಯವಾಗಿದೆ. ನಾವು ದುರಾಕ್ರಮಣಕ್ಕಾಗಿ ಶಕ್ತಿಯನ್ನು ಬಳಸದೇ, ನಮ್ಮ ಆತ್ಮರಕ್ಷಣೆಗಾಗಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು. ಸಭಿಕರಲ್ಲಿ ಹಲವರು ರಾ. ರ. ನಿಧಿಗೆ ನೆರವು ನೀಡಿದರು. ಶ್ರೀ ಕಲ್ಯಾಣಜಿ ಶ್ರೀನಿವಾಸ ಆಚಾರ್ಯರಿಂದ ಸಂಗ್ರಹಿಸಿದ ರೂ. 200/ನ್ನು ಶ್ರೀ ಪಿ. ಶಿವಾಜಿ ಶೆಟ್ಟರು ಮಂತ್ರಿಗಳಿಗೊಪ್ಪಿಸಿದರು.

ಆರಂಭದಲ್ಲಿ ನಗರ ಸಭಾಪತಿ ಶ್ರೀ ಪಿ. ಆರ್. ಶೆಣೈಯವರು ಮಂತ್ರಿಗಳಿಗೆ ಹಾರಾರ್ಪಣೆಗೈದರು. ಶ್ರೀ ಎ. ಜೆ. ಆಳ್ವೆಯವರು ಸ್ವಾಗತ ಭಾಷಣ ಮಾಡಿದರಲ್ಲದೆ ಅಂತ್ಯದಲ್ಲಿ ಆಭಾರ ಮನ್ನಿಸಿದರು. ಮಂತ್ರಿಗಳು ಬ್ರಹ್ಮಾವರದಿಂದ ಉಡುಪಿಗೆ ಬರುವ ದಾರಿಯಲ್ಲಿ ಉಪ್ಪೂರಿಗೆ ತೆರಳಿ ಎಡ್ವೋಕೇಟ್ ಪಿ. ಶಿವಾಜಿ ಶೆಟ್ಟರ ನೇತೃತ್ವದಲ್ಲಿ ಗ್ರಾಮಸ್ಥರಿಂದ ಸಂಗ್ರಹಿಸಲಾದ ಸುಮಾರು 400ರೂ ಗಳನ್ನು ರಾ. ರ. ನಿಧಿಗೆ ಸ್ವೀಕರಿಸಿದರು.

**ಮಣಿಪಾಲದಲ್ಲಿ ರಕ್ಷಣಾ ನಿಧಿಗೆ ಕೊಡುಗೆ** — ತಾ. ೩೦ನೇ ರಾತ್ರಿ ಮಂತ್ರಿ ಡಾ। ನಾಗಪ್ಪ ಆಳ್ವರಿಗೆ ಮಣಿಪಾಲದಲ್ಲಿ ಭೋಜನ ಸತ್ಕಾರವಾದ ಬಳಿಕ ಜರಗಿದ ಸಭೆಯಲ್ಲಿ ಡಾ। ಮಾಧವ ಪೈಗಳಿಂದ ಸ್ಥಾಪಿತವಾದ ಬೇರೆಬೇರೆ ಸಂಸ್ಥೆಗಳ ಹಾಗೂ ವ್ಯಕ್ತಿಗಳ ರೂ. ೩ ಲಕ್ಷಗಳ ಮೊತ್ತವನ್ನು ರಕ್ಷಣಾ ನಿಧಿಗೆ ಒಪ್ಪಿಸಲಾಯಿತು.

ಆರಂಭದಲ್ಲಿ ಶ್ರೀ ಟಿ. ಎ. ಪೈಗಳವರು ಸ್ವಾಗತಭಾಷಣ ಮಾಡುತ್ತಾ ನಮ್ಮ ಸೈನಿಕರಿಗೆ ನಮ್ಮಿಂದ ಸಾಧ್ಯವಾದಷ್ಟು ಬೆಂಬಲ ನೀಡುವುದು ನಮ್ಮ ಕರ್ತವ್ಯವಾಗಿದೆ ರಕ್ಷಣಾ ನಿಧಿಗೂ ನಾವು ನಮ್ಮಿಂದಾದಷ್ಟು ನೆರವು ನೀಡಬೇಕು ಮಾತ್ರವಲ್ಲದೇ ನಮ್ಮ ಸೈನಿಕ ಶಕ್ತಿಯನ್ನೂ, ಜೊತೆಗೆ ಸಂಪತ್ತನ್ನೂ ಹೆಚ್ಚಿಸಲು ಪ್ರಯತ್ನಿಸಬೇಕು ನಮ್ಮ ದ. ಕ. ಜಿಲ್ಲೆಯು ಇತರ ಎಲ್ಲಾ ಜಿಲ್ಲೆಗಳಿಗಿಂತಲೂ ದೊಡ್ಡ ಮೊತ್ತವನ್ನು ರಾ. ರ. ನಿಧಿಗೆ ಸಮರ್ಪಿಸಿದೆ. ಇದು ನಮಗೊಂದು ಅಭಿಮಾನದ ಸಂಗತಿ. ಆದರೆ ನಾವು ಇನ್ನೂ

## ಅಪಪ್ರಚಾರ ವಿಧಾನ

ಪೀಕಿಂಗ್ ರೇಡಿಯೋ ಹಾಡಿನ ಒಂದು ಸೊಲ್ಲನ್ನು ಕರಾಚಿ ಪತ್ರಿಕೆ ಪ್ರಕಟಿಸಿತು. ಇದರಿಂದ ಭಾರತದ ಪ್ರಧಾನಿಯವರ ಧೋರಣೆಯೇನು ಎಂಬ ಬಗ್ಗೆ ಸ್ವಯಂ ಭಾರತೀಯರಿಗೂ ಸಂದೇಹವೇಳುವಂತೆ ಮಾಡುವ ಪ್ರಯತ್ನ ನಡೆಯಿತು. ಪಂಡಿತ ನೆಹರು ಹಿಂದೆ ಜೇಲಿನಲ್ಲಿದ್ದಾಗ, ತಮ್ಮ ಮಗಳಿಗೆ ಬರೆದೊಂದು ಪತ್ರದಲ್ಲಿ ಸಾಮ್ರಾಜ್ಯವಾದಿಗಳು ರೂಪಿಸಿದ ಮ್ಯಾಕ ಮಹೋನ ರೇಖೆಯನ್ನು ಚೀನಾದ ಮೇಲೆ ಬಲಾತ್ಕಾರವಾಗಿ ಹೇರಲಾಗುತ್ತಿದೆ ಯೆಂದು ಉಲ್ಲೇಖಿಸಿದ್ದರೆಂದೂ ಈ ಅಂಶವು ಅವರ, "ಇಂಡಿಯಾ ಇನ್ ಬಾಂಡೇಜ್" ಎಂಬ ಪುಸ್ತಕದಲ್ಲಿದೆಯೆಂದೂ ಅದರ ಸಾರ. ಈ ಹಾಡಿನಿಂದ ಭಾರತೀಯರಿಗೂ ಅವರ ಸಹಾಯಕ್ಕೆ ಬಂದ ಪಾಶ್ಚಾತ್ಯರಿಗೂ ಗಲಿಬಿಲಿಯಾಗುವುದು ಸಹಜ. ಆದರೆ, ವಸ್ತುಸ್ಥಿತಿಯು ಇದಕ್ಕೆ ವಿಪರೀತವೇ ಇದೆ. ಪ್ರಧಾನಿ ನೆಹರು ಉಲ್ಲೇಖಿತ ಪುಸ್ತಕ ಬರೆಯಲೂ ಇಲ್ಲ. ಅದನ್ನು ಬರೆದವರು ಅಮೆರಿಕೆಯ ಸೌಂದರ ಲೇಂಡ್ ಎಂಬವರು. ಅದರಲ್ಲಿ ಪೀಕಿಂಗಿನ ಹಾಡು ಇಲ್ಲವೇ ಇಲ್ಲ. ಎಂದರೆ, ಪೀಕಿಂಗ್ ಭಾರತೀಯರು ನೆಹರು ಮೇಲೆ ತೋರಿಸುತ್ತಿರುವ ಅಚಲ ವಿಶ್ವಾಸವನ್ನು ಕೆಡಿಸಲು ಮಾಡಿದ ಸಂಚು, ತನ್ನ ಗೆಳೆಯನಿಗೆ ಕರಾಚಿ ನೀಡಿದ ಒತ್ತಾಸೆ ಇದು ಎಂದು ತಿಳಿಯಬೇಕು. ಪ್ರಾಚೀನ ರಾಜತಂತ್ರದಲ್ಲಿ ಇಂತಹ ಕುತಂತ್ರಗಳು ಪ್ರಭಾವಕಾರಿಯಾಗಿದ್ದವು; ಈ ವಿಧದ ಬರ್ಬರ ನೀತಿಯನ್ನು ಇಂದಿಗೂ ಚೀನಾ ಅನುಸರಿಸುತ್ತಿದೆ; ಇದರಿಂದ ಎಚ್ಚರಿಕೆ ವಹಿಸಬೇಕು, ಸುದ್ದಿಯ—ಮುಖ್ಯವಾಗಿ ಚೀನಾದ—ಸತ್ಯಾಸತ್ಯತೆಗಳನ್ನು ವಿಮರ್ಶಿಸದೆ ಪ್ರಚಾರ ಮಾಡಬಾರದು; ನಂಬಲೂ ಬಾರದು—ಎಂಬ ಪಾಠ ಭಾರತೀಯರಿಗೆ.

*Announcement*

Twenty Sixth January is a great day for us, and more so this year, in the context of the Chinese incursion into our sacred land across the formidable barriers of the Himalayas.

'NAVAYUGA' the popular Kannada weekly of our state has been all along advocating the cause of the common man in his struggle for independence prior to 1947, and even after independence. All these years, it has been a useful vehicle of modern political and cultural thought; it has been a very vociferous medium of advertising the accomplishments of our banking and industrial concerns and the fare of the traders all over the state.

This year's REPUBLIC DAY SPECIAL is going to be a larger issue and can serve the above said purposes better. In short, it will fully promote your interests and cater to your literary and cultural tastes.

Shall we, hence, request you to join us in the celebrating the Republic Day, 1963 by advertising your fare in our columns and contributing to the success of the special on or before 10–1–1963.

*ADVT. MANAGER.*
**Navayuga, Udipi.**

ರಾ. ರ. ನಿಧಿಗೆ ನೆರವು ನೀಡಬೇಕು ಎಂದು ಹೇಳಿ ಸಿಂಡಿಕೇಟ್ ಬ್ಯಾಂಕಿನ ಪರವಾಗಿ ರೂ. 1 ಲಕ್ಷದ 51 ಸಾವಿರವನ್ನು ರಾ. ರ. ನಿಧಿಗೆ ಅರ್ಪಿಸುವಂತೆ ಡಾ| ಮಾಧವ ಪೈಗಳನ್ನು ಕೇಳಿಕೊಂಡರು. ಪ್ರತೀ ತಿಂಗಳು ರೂ 5 ಲಕ್ಷಗಳನ್ನು ರಕ್ಷಣಾ ಬಾಂಡಿನಲ್ಲಿ, 1 ಕೋಟಿ ಯಾಗುವ ತನಕ ಬ್ಯಾಂಕು ಗಳಿಸುವುದೆಂದು ತಿಳಿಸಿದರು. ಡಾ| ಪೈಗಳು ನಿಧಿಯನ್ನು ಅರ್ಪಿಸಿದ ಬಳಿಕ ಡಾ| ಆಳ್ವರು ಮಾತಾಡುತ್ತಾ ಚೀನದ ದುರಾಕ್ರಮಣದ ಕುರಿತು ಪ್ರಸ್ತಾಪಿಸಿ, ಶತ್ರುವನ್ನು ಎದುರಿಸಲು ನಾವು ನಮ್ಮನಾಯಕರ ಶಕ್ತಿಯನ್ನು ಹೆಚ್ಚಿಸಬೇಕೆಂದರು. ಡಾ| ಪೈಗಳ ಕಾರ್ಯ ತತ್ಪರತೆಯನ್ನು ಶ್ಲಾಘಿಸಿ, ಗುಡ್ಡ ಕಾಡು ಪ್ರದೇಶವಾದ ಮಣಿಪಾಲವನ್ನು ಒಂದು ಆದರ್ಶ ಸಂಸ್ಥೆಗಳ ಕೇಂದ್ರವನ್ನಾಗಿ ಮಾರ್ಪಡಿಸಿದುದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು

ಕೊನೆಯಲ್ಲಿ ಡಾ| ಪೈಗಳು ಧನ್ಯವಾದ ಸಮರ್ಪಣೆ ಮಾಡುತ್ತಾ ದೇಶಜಾಗೃತವಾಗಿ ಸಂಘಟಿಸಿ ಕಾರ್ಯೋನ್ಮುಖವಾದುದನ್ನು ಪ್ರಸ್ತಾಪಿಸಿ, ಇಂಜಿನಿಯರಿಂಗ್ ಕಾಲೇಜಿನ ವರ್ಕ್ ಶಾಪನ್ನೂ, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಯನ್ನೂ ಈ ತುರ್ತು ಪರಿಸ್ಥಿತಿಯಲ್ಲಿ ಯುದ್ಧದ ಪ್ರಯೋಜನಕ್ಕಾಗಿ ಕೊಡಲು ಸದಾ ಸಿದ್ಧರಾಗಿದ್ದೇವೆಂದರು.

**ಜನತಾ ಭವನದಲ್ಲಿ ಡಾ| ಆಳ್ವ** - ಉಡುಪಿಯ ಜನತಾಭವನದಲ್ಲಿ ಕಳೆದ ತಾ 31 ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ತಾಲೂಕು ಬೋರ್ಡು, ಪಂಚಾಯತ್, ನಗರ ಸಭೆ, ಸಹಕಾರೀ ಸಂಸ್ಥೆಗಳ ಕಾರ್ಯಕರ್ತರ ಸಭೆಯಲ್ಲಿ ಡಾ| ಆಳ್ವರು ಮಾತಾಡುತ್ತಾ ನಮ್ಮ ಜಿಲ್ಲೆಯಲ್ಲಿ 700ಕ್ಕಿಂತಲೂ ಮಿಕ್ಕಿ ಸಹಕಾರಿ ಸಂಸ್ಥೆಗಳಿರುವುದು ಶ್ಲಾಘನೀಯವೆಂದೂ ಇಂತಹ ಸಂಸ್ಥೆಗಳು ನಮ್ಮ ದೇಶದ ರೈತರಿಗೆ ಇನ್ನೂ ಹೆಚ್ಚಿನ ಬೆಂಬಲವಿತ್ತು ರಾಷ್ಟ್ರ ಸಂಪತ್ತನ್ನು ಹೆಚ್ಚಿಸಲು ಪ್ರಯತ್ನಿಸಬೇಕೆಂದೂ ನಮ್ಮ ಜನರು ಸೋಮಾರಿತನವನ್ನು ಬಿಟ್ಟು ದೇಶಕ್ಕಾಗಿ ದುಡಿಯಬೇಕೆಂದೂ ಹೇಳಿದರು. ಶ್ರೀ ಟಿ. ಎ. ಪೈಗಳ ನೇತೃತ್ವದಲ್ಲಿ ಉಡುಪಿ ತಾಲೂಕಿನಲ್ಲಿ ಆದ ಪ್ರಗತಿ ಕಾರ್ಯಗಳಿಗಾಗಿ ಅವರನ್ನು ಅಭಿನಂದಿಸಿದರು.

ಅಧ್ಯಕ್ಷ ಶ್ರೀ ಟಿ. ಎ ಪೈಗಳು ಗ್ರಾಮಗಳ ಏಳ್ಗೆ, ಆರ್ಥಿಕ ಪರಿಸ್ಥಿತಿಯ ಸುಧಾರಣೆ ಮೊದಲಾದ ಕುರಿತು ಭಾಷಣ ಮಾಡಿದ ತರುವಾಯ ರೂ. 4185ನ್ನೂ 240ರೂ ಬೆಲೆಯ ಚಿನ್ನವನ್ನ ರಾ. ರ. ನಿಧಿಗೆ ಅರ್ಪಿಸಿದರು. ಶ್ರೀಮತಿ ಹಿರಿಯಣ್ಣ ಹೆಗ್ಡೆಯವರು ತನ್ನೆರಡು ಬಳೆಗಳನ್ನೂ, ಶ್ರೀ ವಿಠಲ ಶೆಟ್ಟರು ತಮ್ಮ ಉಂಗುರವನ್ನೂ ರಾ. ರ. ನಿಧಿಗರ್ಪಿಸಿದರು. ಪ್ರಾರಂಭದಲ್ಲಿ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ವಿಟ್ಠಪ್ಪನವರು ಮಂತ್ರಿಗಳಿಗೆ ಹಾರಾರ್ಪಣೆಗೈದರು. ಎಮ್ಮೆಕೇ


**ಕುಂದಾಪುರ ಡಿ ಮು. ಕೋರ್ಟಿನಲ್ಲಿ**

S. C. 717/1962.

ವೆಂಕಟಾಚಲ ಹತ್ವಾರ —ವಾದಿ.

ಚಿಕ್ಕು ಕೂಡಾ —ಪ್ರತಿವಾದಿರು.

3ನೇ ಪ್ರತಿವಾದಿ ರಾಮ ಬನಾರಿ, ಕೃಷ್ಣ ಹೆಂಗ್ಸಿನ ಮಗ, ಕುಂದಾಪುರ ತಾಲ್ಲೂಕು ಕೋಣೆ ಗ್ರಾಮ —ಇವರಿಗೆ,

ವಾದಿಯ ಹಕ್ಕಿನ ಕೋಣಿ ಗ್ರಾಮದ ಸರ್ವೆ ನಂಬ್ರ 109/9 ನಂಜ 0-20 ಸೆಂಟ್ಸ್ ಸ್ಥಳವನ್ನು ಚಾಲಗೇಣಿಯಾಗಿ ಅನುಭವಿಸುವ ಸ್ಥಳದ ಬಾಬ್ತು ಕಳೆದ ಪ್ಲವ ಸಂ|ರದ ಗೇಣಿ ಬಾಕಿಗೆ ಪ್ರತಿವಾದಿರ ಮೇಲೆ ವಾದಿಯು ದಾವಾ ಮಾಡಿರುವದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆ ಇದ್ದಲ್ಲಿ ತಾರೀಕು 7-1-1963ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸೋಣಾಗಿಯದೆ.

**K. Raghunalha Shenoy,**
*Advocate for Pltf.*
Coondapoor, 20-12-1962.


ಟ್ ಶ್ರೀ ಪಿ. ಶಿವಾಜಿ ಶೆಟ್ಟರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರು ಧನ್ಯವಾದ ಸಮರ್ಪಣೆಗೈದರು.

ಅಂದೆ ಬೆಳಿಗ್ಗೆ ಮಂತ್ರಿ ಡಾ| ನಾಗಪ್ಪ ಆಳ್ವರು ಆಸ್ಪತ್ರೆಗೆ ಭೇಟಿಯಿತ್ತು ಅಸಿಸ್ಟೆಂಟ್ ಸರ್ಜನ್ ಡಾ| ಸದಾನಂದ ಶೆಟ್ಟಿ, ಸರ್ಜನ್ ಡಾ| ಕೆ. ಸುಬ್ಬಣ್ಣ ಅವರಿಂದ ಸ್ವಾಗತಿಸಲ್ಪಟ್ಟು ಆಸ್ಪತ್ರೆಯ ವಿವಿಧ ಭಾಗಗಳನ್ನು ಪರಿಶೀಲಿಸಿದರು.

## ಭಂಡಾರಕಾರ್ಸ ಆರ್ಟ್ಸ ಮತ್ತು ಸಾಯಿನ್ಸ್ ಕಾಲೇಜ ನಿಧಿಗೆ ಉತ್ಸಾಹದ ಕೊಡುಗೆ

ಕುಂದಾಪುರದಲ್ಲಿ ಮಣಿಪಾಲದ ಎಕಾಡಮಿಯ ಪತಿಯಿಂದ ಸ್ಥಾಪಿತವಾಗಿರುವ ಭಂಡಾರಕಾರ್ಸ ಆರ್ಟ್ಸ ಮತ್ತು ಸಾಯನ್ಸ್ ಕಾಲೇಜಿನ ಟ್ರಸ್ಟಿಗಳ ಯಾಗೂ ಕಾರ್ಯ ಸಮಿತಿಯ ಸಭೆಯು ಕಳೆದ ತಾ. 27ರಂದು ಡಾ| ವೆಂಕಟರಮಣಯ್ಯನವರ ಪ್ರೇಮಾ ಕ್ಲಿನಿಕ್‌ನಲ್ಲಿ ಜರಗಿತು ಟ್ರಸ್ಟಿನ ವೈಸ್ ಪ್ರೆಸಿಡೆಂಟ್ ಶ್ರೀ ವಿಠಲ ಮಂಜುನಾಥ ಕಾಮತರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಆರಂಭದಲ್ಲಿ ಟ್ರಸ್ಟಿನ ರಿಜಿಸ್ಟ್ರಾರರಾದ ಡಾ| ಟಿ ಮಾಧವ ಪೈಗಳು ಕೊಲೇಜಿಗಾಗಿ ಕುಂದಾಪುರದಲ್ಲಿ ಮಾತ್ರವೇ ಒಂದು ಲಕ್ಷಕ್ಕೂ ಮೇಲ್ಪಟ್ಟು ನಿಧಿ ಸಂಗ್ರಹಕ್ಕೆ ಸಹಾಯ ಕೊಟ್ಟವರನ್ನು ಶ್ಲಾಘಿಸಿ ಕುಂದಾಪುರದವರಿಗೆ ತಾನು ಎಕಾಡಮಿಯ ಕಡೆಯಿಂದ ಕೃತಜ್ಞತೆಯನ್ನು ಸಲ್ಲಿಸಿದಲ್ಲಿ ಅತಿಶಯವಾಗಲಾರದು ಎಂತ ಸ್ಪಷ್ಟೀಕರಿಸಿದರು ಡಾ| ಎಚ್ ವೆಂಕಟರಮಣಯ್ಯ, ವ್ಯಾ ಮಂಜಯ್ಯ ಸೆಟ್ಟಿಯಾರ್, ಪಿ ತೋಳಾರ, ಪ್ರಕಾಶ ಮೇಚ್‌ಫೆಕ್ಟರಿ ವಗೈರೆರು ಇಡೀ ತಾಲೂಕಿನ ವ್ಯಾಪ್ತಿಯೊಳಗೆ ಧನ ಸಂಗ್ರಹದ ವಿಚಾರ ಚರ್ಚಿಸಿ ಕೆಲವು ನಿರ್ಧಾರಗಳನ್ನು ಸೂಚಿಸಿದರು. ಕುಂದಾಪುರದ ಪ್ರಮುಖ ಕೈಗಾರಿಕೋದ್ಯಮಿಗಳಾದ ಶ್ರೀ ಥಿಯೋಡರ ಸೋನ್ಸರನ್ನು ಕೋಲೇಜಿನ ಟ್ರಸ್ಟಿಗಳಲ್ಲೊಬ್ಬರಾಗಿ ಸಭೆಯು ಸ್ವೀಕರಿಸಿತು ಕಾಲೇಜಿನ ಕಟ್ಟಡಗಳಲ್ಲೊಂದಾದ 510 ಅಡಿ ಉದ್ದದ ಕಟ್ಟಡದ ಕೆಲಸವು ಭರದಿಂದ ಸಾಗುತ್ತಿದ್ದು ಈಗಾಗಲೇ ಕೆಲವು ಕೋಣೆಗಳ ಕೆಲಸವು ಮುಗಿಯುತ್ತಾ ಬಂದಿದೆ ಉಳಿದ ಕೆಲಸಗಳೂ ತೀವ್ರಗತಿಯಿಂದ ಮುಂದೆ ಸಾಗಿದ್ದು 1963ನೇ ಜೂನಿನಿಂದಲೇ ಸಂಪೂರ್ಣ ಸುಸಜ್ಜಿತವಾದ ಭಂಡಾರಕಾರ್ಸ ಆರ್ಟ್ಸ ಮತ್ತು ಸಾಯನ್ಸ ಕೋಲೇಜು ಕುಂದಾಪುರದಲ್ಲಿ ಆರಂಭವಾಗುವದೆಂಬ ಬಗ್ಗೆ ಅಭಿಮಾನವೆನಿಸುತ್ತದೆ.

ಟ್ರಸ್ಟಿಗಳ ಕಡೆಯಿಂದ ಎಡ್ವೋಕೇಟ್ ರಘುನಾಥ ಶ್ಯಾನುಭಾಗರು ಧನ್ಯವಾದ ಅರ್ಪಿಸುತ್ತಾ ಈ 16 ಲಕ್ಷ ರೂಪಾಯಿ ಆಗತ್ಯವಿರುವ ಕೋಲೇಜಿನ ಯೋಜನೆಗೆ ಡಾ| ಮಾಧವ ಪೈಗಳು ತನ್ನ 65ನೇಯ ವರ್ಷ ಪ್ರಾಯದಲ್ಲಿ ಇಷ್ಟು ಸ್ಫೂರ್ತಿಯಿಂದ ಕೆಲಸ ಮಾಡುವುದರ ಬಗ್ಗೆ ತನ್ನ ಕೃತಜ್ಞತೆ ಅರ್ಪಿಸಿ ಕುಂದಾಪುರದ ದೇಶ ವಿದೇಶಗಳಲ್ಲಿರುವ ಮಹನೀಯರು ತಮ್ಮ ಹುಟ್ಟು ತಾಲೂಕಿನಲ್ಲಿ ಆಗತಕ್ಕ ಈ ಮಹಾ ಕಾರ್ಯಕ್ಕೆ ಸಹಾಯವನ್ನು ಬಯಸಿ ದಾನಿಗಳಿಗೆ ಅಭಿನಂದನೆಗಳನ್ನಿತ್ತರು

**ಉಪಹಾರ ಸಮಾರಂಭ**—ತನ್ನ ಸಹೋದರಿ. ಸೌ, ಕವಿತಾರವರಿಗೆ ಶ್ರೀ ಫೋಗೇಶ್ ರವರೊಂದಿಗೆ ವಿವಾಹವಾದ ಸಂಬಂಧ ಶ್ರೀ ಎಮ್. ಮಧ್ವರಾಜ್ ಎಂ. ಎಲ್. ಎ.ರವರು ಕಳೆದ ತಾ. 30ನೇ ಸಂಜೆ ಮಲ್ಪೆಯ ತಮ್ಮ ರಾಜಮಂದಿರದಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಉಡುಪಿಯ ಮತ್ತು ಇತರ ಕಡೆಗಳ ಗಣ್ಯ ಮಹನೀಯರನೇಕರು ಆಮಂತ್ರಿಸಲಾಗಿದ್ದರು. ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರೂ ಆಗಮಿಸಿ ವಧೂವರರನ್ನು ಹರಸಿದರು.

**ಶ್ರೀ ವಿ. ಎಸ್ ಕುಡುವರ ದೇಣಿಗೆ.** ಕಳೆದ ತಾ. 27ರಂದು ಮಂಗಳೂರಿನ ಅತ್ತ ಮಹನೀಯರಿಂದೊಡಗೂಡಿದ ಸಭೆಯಲ್ಲಿ ಕೆನರಾ ವರ್ಕ್ ಶೋಪ್ಸಿನ ಟೆಕ್ನಿಕಲ್ ಡೈರೆಕ್ಟರ್ ಶ್ರೀ ವಿ. ಎಸ್. ಕುಡುವರು ತಮಗೆ ಸಂಬಂಧಿಸಿದ ಸಂಸ್ಥೆಗಳ ಪರವಾಗಿಯೂ, ವೈಯಕ್ತಿಕವಾಗಿಯೂ ರೂ 50.000ವನ್ನು ಆರೋಗ್ಯ ಮಂತ್ರಿ ಡಾ. ನಾಗಪ್ಪ ಆಳ್ವರ ಮೂಲಕ ರಾಷ್ಟ್ರೀಯ ರಕ್ಷಣಾ ನಿಧಿಗೆ ಒಪ್ಪಿಸಿದರು ಮಾತ್ರವಲ್ಲದೆ ಇನ್ನೂ ಹೆಚ್ಚಿಗೆ ಕೊಡುವ ಭರವಸೆಯನ್ನಿತ್ತರು. ಆರಂಭದಲ್ಲಿ ಶ್ರೀ ಜಿ. ಸೋಮಶೇಖರ ರಾಯರು ಸ್ವಾಗತಿಸಿದರು ಜಿಲ್ಲಾಧಿಕಾರಿ ಶ್ರೀ ಸಿ. ಜಿ ಪದ್ಮನಾಭ ಮತ್ತು ಮಂತ್ರಿ ಡಾ| ನಾಗಪ್ಪ ಆಳ್ವರು ಭಾಷಣಮಾಡಿ ಜನತೆಯ ಬೆಂಬಲ ಕೋರಿದರು: ಕೊನೆಯಲ್ಲಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ರಾಜೀವ ಭಂಡಾರಿಯವರು ವಂದನೆಗಳನ್ನರ್ಪಿಸಿದರು. ಈ ಸಭೆಯಲ್ಲಿ ಇನ್ನೂ ಹಲವಾರು ಸಂಸ್ಥೆಗಳೂ ವ್ಯಕ್ತಿಗಳೂ ರಾ. ರ. ನಿಧಿಗೆ ಕೊಡುಗೆಯನ್ನಿತ್ತವು.

**ಉಡುಪಿಯಲ್ಲಿ ಕಾರಂತರಿಗೆ ಹೊಸ ವರ್ಷದ ಗೌರವ ಸತ್ಕಾರ**—ಯಾವುದೇ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹಿರಿಯರೊಬ್ಬರನ್ನು ಹೊಸ ವರ್ಷದಲ್ಲಿ ಗೌರವಿಸಿ ಸತ್ಕರಿಸುವ ಉಪಕ್ರಮವೊಂದನ್ನು ದಿ| ಉಪೇಂದ್ರ ಅನಂತ ಪೈಗಳು ಕೆಲವು ವರ್ಷಗಳ ಹಿಂದೆ ಆರಂಭಿಸಿದ್ದನ್ನು ಅವರಿಂದ ಸ್ಥಾಪಿಸಲ್ಪಟ್ಟ ಕೆಲವು ಸಂಸ್ಥೆಗಳ ಪತಿಯಿಂದ ಶ್ರೀ ಟಿ. ರಮೇಶ ಪೈಗಳ ನೇತೃತ್ವದಲ್ಲಿ ಮುಂದುವರಿದುಕೊಂಡ ಬಂದಿರುವಂತೆ ಈ ವರುಷ ಜನವರಿ ತಾ. 1ರಂದು ಕರ್ನಾಟಕದ ಹಿರಿಯ ಮತ್ತು ಪ್ರಸಿದ್ಧ ಸಾಹಿತಿ ಶ್ರೀ ಕೆ ಶಿವರಾಮ ಕಾರಂತರನ್ನು ಉಪೇಂದ್ರ ಭಾಗಿನಲ್ಲಿ ನೂತನವಾಗಿ ನಿರ್ಮಾಣವಾದ ಕಲ್ಪನಾ—ಹೊಸ ಥಿಯೇಟರಿನಲ್ಲಿ ಸತ್ಕರಿಸಲಾಯಿತು. ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರಿಂದ ಪ್ರಾರ್ಥನೆಯೊಡನೆ ಶ್ರೀ ಪಿ ಶ್ರೀಪತಿ ಆಚಾರ್ಯರು ಕೇಳಿಕೊಂಡಂತೆ ಡಾ| ಮಾಧವ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಅತಿಥಿ ಕಾರಂತರಿಗೆ ಹಾರಾರ್ಪಣೆಗೈದರು. ಶ್ರೀ ಟಿ. ರಮೇಶ ಪೈಗಳು ಸ್ವಾಗತಭಾಷಣ ಮಾಡುತ್ತಾ ಶ್ರೀ ಕಾರಂತರ ಪ್ರತಿಭೆ, ಅವರು ಸಾಹಿತ್ಯ ರಂಗದಲ್ಲಿ ಸಲ್ಲಿಸಿದ ಸೇವೆ ಅವರು ಪಡೆದಿರುವ ಸನ್ಮಾನಗಳನ್ನು ಪ್ರಸ್ತಾಪಿಸಿದರು ಶ್ರೀ ಎಸ್. ಕೆ ಶ್ರೀಪತಿ ಆಚಾರ್ಯರು ಮಾತನಾಡುತ್ತಾ ಶ್ರೀ ಕಾರಂತರ ಸಾಹಿತ್ಯ ಕೃತಿಗಳ ವಿಮರ್ಶೆ ಅವರ ಧ್ಯೇಯ, ಧೋರಣೆ ನಡೆದುಬಂದ ದಾರಿ ಮೊದಲಾದುವನ್ನು ವಿವರಿಸಿ ಅಭಿನಂದನೆ ಸಲ್ಲಿಸಿದರು ಶ್ರೀ ಟಿ. ಎ. ಪೈಗಳು ಭಾಷಣ ಮಾಡುತ್ತ ಶ್ರೀ ಕಾರಂತರು ದೇಶದ ಸಂಪತ್ತೆಂದೂ ಅವರ ಉತ್ತಮ ಕೃತಿಗಳ ಪ್ರಯೋಜನವು ದೇಶದ ಜನರಿಗೆ ದೊರೆಯುವಂತಾಗಬೇಕೆಂದೂ ಅಂತಾರಾಷ್ಟ್ರೀಯ ಬಹುಮಾನಕ್ಕೆ ಅವರು ಪಾತ್ರರಾಗಿರುವರಾದರೂ ಈ ದಿಸೆಯಲ್ಲಿ ದೇಶದ ಗಮನ ಬೀಳದಿರುವುದು ವಿಷಾದಕರವೆಂದೂ ಅವರ ಸಾಹಿತ್ಯ, ನಿರ್ಮಾಣ, ಸರಕಾರ, ಸಂಸ್ಥೆಗಳಿಂದ ಕೂಡಾ ಅಸಾಧ್ಯವಾದುದೆಂದೂ ಹೇಳಿ ಶುಭಕೋರಿದರು ಅತಿಥಿ ಶ್ರೀ ಕಾರಂತರು ಮಾತನಾಡುತ್ತಾ ದೇಶದ ಇಂದಿನ ವಿಷಮ ಪರಿಸ್ಥಿತಿಯನ್ನು ವಿವರಿಸಿ, ನಮ್ಮ ನಾಡು ಬೆಳೆಯಬೇಕಾದರೆ ಇನ್ನೆಷ್ಟೋ ಉತ್ಕರ್ಷಕ್ಕಾಗಿ ಮತ್ಸರವನ್ನು ಬಿಟ್ಟು ಪ್ರತಿಯೊಬ್ಬರೂ ವಿಚಾರಶೀಲರೂ ಕ್ರಿಯಾಶೀಲರೂ ಆಗಬೇಕೆಂದೂ, ಸರಕಾರವು ಯೋಗ್ಯ ಮಾರ್ಗದರ್ಶನ ಮಾಡಬೇಕೆಂದೂ, ಪತ್ರಿಕೆನವರು ಇಂದು ನಮ್ಮ ಮುಖಂಡರು ಬರೀ ಘೋಷಣೆ, ಭಾಷಣಗಳಿಂದ ಜನರನ್ನು ಹಾಸ್ಯ ಮನೋವೃತ್ತಿಗೆ ಒಯ್ಯುತ್ತಿದ್ದಾರೆಂದೂ ಪ್ರತೀ ಕ್ಷೇತ್ರದಲ್ಲಿಯೂ, ಜೀವನಕ್ಕೆ ಆತಂಕಗಳನ್ನೊಡ್ಡುತ್ತಿರುವರೆಂದೂ, ಪ್ರಗತಿ ಉತ್ಪನ್ನಗಳನ್ನು ಕುಂಠಿತಗೊಳಿಸುತ್ತಿರುವರೆಂದೂ ಇಂದಿನ ಯುದ್ಧ ಪರಿಸ್ಥಿತಿಯಲ್ಲಿ ಜನ ತ್ಯಾಗಕ್ಕೆ ಸಿದ್ಧರಾಗಿರುವರಾದರೂ ನಮ್ಮ ಮುಂದಾಳುಗಳು ಇನ್ನೂ ನಮ್ಮ ಅತ್ಯಾವಶ್ಯಕ ತೀ ಪ್ರಕಾರ್ಯಕ್ಕೆ ಸಜ್ಜುಗೊಂಡಂತೆ ಕಾಣ ಬರುವಿಲ್ಲವೆಂದೂ ನಾವು ನಮ್ಮ ಕಾಲ್ಮೇಲೆ ನಿಲ್ಲಬೇಕೆಂದೂ ನಾವು ಅತ್ಯಧಿಕ ಬಲಿಷ್ಠರಾಗದಿದ್ದರೆ, ನಮಗೆ ಉಳಿಗಾಲವಿಲ್ಲವೆಂದೂ, ಹೇಳಿ ತಮಗಿತ್ತ ಸತ್ಕಾರಕ್ಕೆ ವಂದನೆಗಳನರ್ಪಿಸಿದರು. ಅಧ್ಯಕ್ಷ ಡಾ| ಪೈಗಳು ಕಾರಂತರ ಮಾತುಗಳನ್ನು ಸ್ವೀಕರಿಸಿ ದೇಶವು ಸಾಧಿಸಿದ ಪ್ರಗತಿಯನ್ನು ಪ್ರಸ್ತಾಪಿಸಿ ಯಾಂತ್ರಿಕ ಯೋಜನೆಗಳಿಗೆ ಯುದ್ಧವು ಜೀವನಾಡಿಗಳು, ಅವು ಅನಿವಾರ್ಯವಾಗಿವೆ ಯೆಂದೂ ಕಾರಂತರ ವಿಚಾರಪರ ಭಾಷಣವನ್ನು ಪ್ರತಿಯೊಬ್ಬರೂ ವಿಚಾರಿಸಿ ಕಾರ್ಯಗತಗೊಳಿಸಬೇಕೆಂದೂ ಹೇಳಿದರು. ಶ್ರೀ ಎ. ಜೆ. ಆಳ್ವರವರು ಅಂತ್ಯದಲ್ಲಿ ವಂದನಾರ್ಪಣೆಗೈದರು


ನವ ವರುಷದ — 1963

ನಿರ್ಧಾರ

ಈ ಶುಭದಿನದಂದು

• ಹೆಚ್ಚು ಬೆಳೆಸಲು

• ಹೆಚ್ಚು ದುಡಿಯಲು

• ಹೆಚ್ಚು ಉಳಿಸಲು

ನಾವು ನಿರ್ಧರಿಸೋಣ

ದೇಶದ ಅತ್ಯಮೂಲ್ಯ ಸ್ವಾತಂತ್ರ್ಯವನ್ನು ರಕ್ಷಿಸಲು ಇದೊಂದೇ ಪವಿತ್ರ ಮಾರ್ಗ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್: ಮಂಗಳೂರು, ಆಡಳಿತ ಕಛೇರಿ: ಬೆಂಗಳೂರು

## ಗೇಹ ರಾಜ್ಯದಲ್ಲಿ

# ಸಂರಕ್ಷಣೆ ಮತ್ತು ಪಾನನಿರೋಧ

"ಏನಂತೆ ಪೇಪರಿನಲ್ಲಿ ವಿಶೇಷ?"

"ಅಕ್ಷರಜ್ಞೆಯಾದ ನೀನೇ ನೋಡಲ್ಲಾ?"

"ನಾನಂತೂ ನೋಡುತ್ತೇನೆ. ಈಗ ನೀವು ನೋಡಿದ್ರಲ್ಲಾ? ಏನಾದರೂ ವಿಶೇಷ ವಾರ್ತೆ ಇದೆಯೇಂತ ಹೇಳಬಾರದೆ?"

"ಹೆಂಗುಸಾಗಿದ್ರೂ ಗಂಡಸಿಂದ ಕೆಲಸ ಮಾಡಿಸುವ ಜಾಣ್ಮೆ ನಿನಗಂತೂ ಕರಗತವಾಗದೆ ಆಗಲಿ; ಸದ್ಯ ವಿಶೇಷ ಸುದ್ದಿಯೇನೂಂತ ಮಾತ್ರ ಕೇಳಡಿಯಲ್ಲಾ, ಅದೇ ನನ್ನ ಪುಣ್ಯ.."

ಏಕೆ ಅರ್ಧದಲ್ಲಿ ನಿಲ್ಲಿಸಿದಿರಿ? ಬ್ರೇಕ್ ಒತ್ತಿದ್ರೂ ನಿಲ್ಲದ ನಾಲಿಗೆ ಈಗ ಒತ್ತದೇನೇ ನಿಂತುಬಿಡ್ತಲ್ಲ?"

"ಮತ್ತೇನು ಮಾಡೋದು? ಮಣಿಪಲ ಏರು ಇಳಿಯೋವಾಗ ಬ್ರೇಕು ಒತ್ತಿದ್ರೂ ನಿಲ್ಲೋದಿಲ್ಲ; ಹತ್ತೋವಾಗ ಹಿಡಿದ್ರೆ ನಿಲ್ಲುವುದೇ ಬಿಡದಲ್ಲ; ಜಾರ್ಲಿಕ್ಕೂ ಸುರುವಾಗುತ್ತೆ."

"ಡ್ರೈವರ ಎಚ್ಚರದಲ್ಲಿರೋವಾಗ ಬ್ರೇಕು ಒತ್ತಬೇಕೋ ಬೇಡ್ವೋಂತ ನೋಡಿಕೊಳ್ತಾನೆ; ಗೇರ್ ಬೇಕಾದಲ್ಲಿ ಹಾಕಿಕೊಳ್ತಾನೆ."

"ಅದು ಸರಿ. ಆದರೆ, ಡ್ರೈವರನಿಗೇನೇ ಬ್ರೇಕು ಗೇರು ಎರಡೂ ಇಲ್ಲದಿದ್ರೆ?"

"ಹಾಗೆ ಏನಂತೀರಾ? ನನಗೆ ಅರ್ಥವಾಗೋಲ್ಲ. ಸ್ವಲ್ಪ ತಿಳಿಸಿ ಹೇಳೀಂದ್ರೆ..."

"ಇಕೋ, ನೀನೇ ನೋಡಿಕೊ. ಅರ್ಥವೋ ಅನರ್ಥವೋ ಏನಾದರೂ ಒಂದು ಆಗುತ್ತೆ."

"ನನ್ಗೆ ಈಗ ಓದೋಕೆಲ್ಲ ಪುರ್ಸೊತ್ತೂಂತ ಮಗುವಿಗೆ ಮೊಲೆಹಾಲು ಕುಡಿಸೋದು ಕಾಣೆಸ್ಲೇದೇ ಇಲ್ವಾನಿನ್ಗೆ?"

"ಓ, ಸರಿ ಸರಿ. ನೀನು ಹಾಲು ಕುಡಿಸುತ್ತಿ, ಭಾರತ ಮಾತೆ ಇನ್ನು ತನ್ನ ಮಕ್ಕಳಿಗೆ ಹೆಂಡ ಕುಡಿಸತ್ತಾಳೆ."

"ಅಯ್ಯಯ್ಯೋ, ಹಾಂಗ್ರಂದ್ರೆ?"

ಹಾಂಗಂದ್ರೆ ಹೀಂಗಂದ್ರೆ ಏನೂ ಇಲ್ಲ ಇನ್ನು ಎಲ್ಲ ಹೆಂಡ ಕುಡಿಬೇಕೂಂತ ಕಾನೂನು ಮಾಡ್ತಾರೆ. ತಿಳೀತೆ? ಈಗ್ಲೇ ಏನಾದರೂ ಅಭ್ಯಾಸ ಮಾಡಿಕೊಂಡ್ರೆ ಬದುಕ್ಬಹುದು. ಇಲ್ವಾದ್ರೆ ಕಷ್ಟ."

"ಏಕಂತಿರಾ ಹೀಗೆಲ್ಲಾ? ಏನಿದು ಆತ್ಪ್ರಾಣ?"

"ಆತ್ರಾಣಾನೂ ಇಲ್ಲ ನಿತ್ರಾಣಾನೂ ಇಲ್ಲ. ಸದ್ಯ ಪ್ರಾಣ ಹಿಡಿದ್ಕೊಂಡು ಬದುಕುವುದೂ ಇಲ್ಲ."

"ಏನೆಲ್ಲಾ ಒಗಟು ನುಡಿದ್ಹಾಗೆ ಆಡ್ತಾ ಇದ್ದೀರಾ? ಸ್ವಲ್ಪ ವಿವರಿಸಿ ಹೇಳೀಂದ್ರೆ"

"ಏನು ಹೇಳೋದು, ಅದೇ ನೋಡು ನೀನೇ ನೋಡ್ಕೋ ಎಂದದ್ದು."

"ಏನಪ್ಪಾ ಅಂಥಾ ಭಾರಿ ಸಂಗ್ತಿ; ಹೇಳ್ಳಿಕ್ಕೆ ಆಗದ್ದು. ಓದಿಯೇ ತಿಳ್ಕೊಬೇಕಾದ್ದು?"

"ಮತ್ತೇನಿಲ್ಲಾ, ಹೇಳ್ಳಿಕ್ಕೆ ನೋಡ್ಲಿಕ್ಕೆ ಎಲ್ಲಾ ಆಗುತ್ತೆ; ಆದ್ರೆ ಸಹಿಸೋದಕ್ಕೆ ಮಾತ್ರ ಆಗೊಲ್ಲ. ಏನು ಮಾಡ್ಲಿ ಹೇಳು. ಒಟ್ಟಾರೆ, ನಮ್ಮನ್ನಾಳೋವರ್ಗೆಲ್ಲಾ...."

"ನೋಡಿ, ಎಲ್ಲ ಬಿಟ್ಟು ಆಳೋವರ ಮೇಲೆ ರೇಗಿ ಬಿಡ್ತೀರಾ?"

"ಮತ್ಯಾರ ಮೇಲೆ ರೇಗೋದು? ನಿನ್ನ ನನ್ನ ಮೇಲೆ ರೇಗಿ ಮಾಡೋದಾದ್ರೂ ಏನು?"

"ಯಾರ ಮೇಲೆ ಬೇಕಾದ್ರೂ ರೇಗಿ. ನಾನೇನೂ ಅಡ್ಡಿ ಮಾಡೋಲ್ಲ. ಆದ್ರೆ ಆಳೋ ನೆಹ್ರೂ ಮೇಲೆ ಮಾತ್ರ..."

"ಅದು ನನ್ಗೆ ಗೊತ್ತಿಲ್ವೆ ಚಿನ್ನಿ? ನಿನ್ಗೂ ನೆಹ್ರೂಗೂ ಗಳಸ್ಯ ಕಂಠಸ್ಯ. ನೆಹ್ರೂ ಕಳ್ದ ವರ್ಷ ಮಂಗ್ಳೂರಿಗೆ ಬಂದಾಗ ಹೋಗಿ ನೋಡ್ಕೊಂಡು ನಡೆದ ಕಾರ್ ರೋಡಿನ ಧೂಳನ್ನು ಕೆರ್ಸಿ ತಲೆಗೆ ಸುರ್ಕೊಂಡದ್ದನ್ನು ಮರ್ತೇನೆಯೆ ನಾನು?'

"ಸರಿ ಬಿಡೀಂದ್ರೆ. ಏನೋ ಮಾಡಿಬಿಟ್ಟೆ. ತಪ್ಪಾದ್ರೆ ಕ್ಷಮಿಸಿಬಿಡಿ. ಮತ್ತೆ ಅದನ್ನೆಲ್ಲಾ ಹೇಳಿ ಹೇಳಿ ತಮಾಷೆ ಗಿಮಾಷೆ ಮಾಡಬೇಡಿ.'

"ಅಯ್ಯೋ ಪಾಪವೆ ಅದನ್ನ ತಪ್ಪೂಂತ ನಾನು ಹೇಳಿದ್ನೆ? ಮಾಡು. ಹಾಗೇ ಮಾಮಾಡು ಬದುಕಿ ಉಳ್ದ್ರೆ, ಇನ್ನೊಂದ್ಸಾರು ಬಾರೀನೂ ಮಾಡು ನಾನು ಬೇಡಾಂತೇನೆಯೆ?" ನಾನು ಅಂದದ್ದು ನೆಹರೂ ವಿಚಾರ ಅಲ್ಲ. ನಮ್ಮ ರಾಜ್ಯ ಸರಕಾರದ ನಾಯಕರುಗಳನ್ನು."

"ನಾಯಕರು ಅಂದ್ರೆ?"

"ಅದೇ. ಅದೇ ಮುಖಂಡ್ರು... ಪುಂಡ್ರು...."

"ಯಾಕೆ ಹಾಗಂತೀರಾ?"

"ಮತ್ತೇನನ್ನ ಬೇಕು ನೋಡು. ಗಾಂಧಿಯವರ ಆದರ್ಶಾಂತ ಮಧ್ಯಪಾನ ನಿಷೇಧಾಂತ ಕಾನೂನು ಮಾಡಿದ್ರು."

"ಹೌದು. ಈಗ ಮತ್ತೇನಾಯಿತು?"

"ಆಗೋದೇನು? ಅದನ್ನು ಕಿತ್ತು ಮುಕ್ತಮಾರ್ಕೆಟ್ಟು ಮಾಡೋಣಾಂತ ಕೆಲವರ ಯೋಚನೆ."

"ಅಂದ್ರೆ, ಹಿಂದೆ ಇದ್ದಂತೆಯೇ ಗಡಂಗುಗಳನ್ನು ಬೀದಿ ಬಾಗ್ಲಲ್ಲೇ ತೆರೆಯುವುದು ಎನ್ನಿ."

"ಹೌದು. ಹಾಗೇನೇ. ಆದ್ರೆ ನೀನೇ ಹೇಳು ಇದು ನ್ಯಾಯವೇ ಅಂತ?"

"ಅಲ್ಲ, ಯಾಕಂತೆ ಹೀಗೆಲ್ಲಾ ಮಾಡೋದು?"

"ಅದಕ್ಕೆ ಕುಮಾರು ಕಾರಣಗಳಿವೆ."

"ಅದೇ ಯಾವುದೂಂತ...,,

"ನೋಡು ಪಾನ ನಿಷೇಧ ಯಶಸ್ವಿ ಆಗಿಲ್ಲವಾದ್ರಿಂದ ಅದನ್ನು ಕಿತ್ತುಹಾಕಿ ಬಿಡಬೇಕೂಂತ ನಮ್ಮ ಎಮ್ಮೆಲೆಗಳಲ್ಲಿ ಕೆಲವರ ವಾದ. ಇದ್ರಿಂದ ಸರ್ಕಾರದ ಆದಾಯ ಹೆಚ್ಚಾಗುವುದು...,,

"ಸರಿ, ಸರಿ ಈಗ ಅರ್ಥವಾಯ್ತು. ತಮ್ಮ ಸಂಬ್ಳ ಬತ್ತೆ ಮತ್ತೆ ಹೆಚ್ಚಿಸಿಕೊಳ್ಳಬಹುದೂಂತ ಈ ಆಲೋಚನೆ ಅಲ್ವೆ?,,

"ಹಾಗೇನಿಲ್ಲ. ಅದರೂ ಅದೀಕೂನ್ನು. ಆದರೆ, ಅವರು ಕೊಡೋ ಕಾರಣ ಬೇರೇನೇ ಇದೆ.,,

"ಏನಂತ ಬೊಗಳ್ತಾರೆ ಅವ್ರು?,,

"ರಾಷ್ಟ್ರೀಯ ರಕ್ಷಣೆಗೆ ಹೆಚ್ಚು ಹಣ ಬೇಕು; ಅದಕ್ಕಾಗಿ ಹೆಚ್ಚು ಕೂಡಿ ಹಾಕಬೇಕಾದ್ರೆ...."

"ಓ, ಹಾಗೋ! ಅದಕ್ಕೆ ಇನ್ನೂ ಒಂದು ಕೆಲ್ಸ ಮಾಡಬಹುದು."

"ಏನಂತೆ, ನೋಡೋಣ. ನಮ್ಮ ಎಮ್ಮೆಲೇಗೆ ತಿಳಿಸಿ ಬಿಡೋಣ...."

"ಇಸ್ಸಿ. ನೀವೊಂದು..."

"ಇಲ್ಲಮ್ಮ ಇಲ್ಲ. ಹೀಗೇ ತಮಾಷೆಗೆ ಹೇಳಿದೆ. ಇರಲಿ, ನಾನಾದ್ರೂ ಕೇಳಬಾರದ ಯೋಚನೆಯೇ ಅದೆ.?"

"ಮಾತಿಗೆ ಹೇಳ್ತೀನೆ; ಮತ್ತೆ ನೀವು ಇದನ್ನೇ ಬಿಗಿಹಿಡ್ದು ಯಾವಾಗ್ಲೂ..."

"ಇಲ್ಲ ಇಲ್ಲಾ ಇಲ್ಲ. ನಿನ್ನ ಆರಳಾಣೆಗೂ ಇಲ್ಲ...."

"ಹೌದು, ನನ್ನ ಆಣೆ ಹಾಕಿ ನಾನು ಸತ್ರೆ ಏನಂತೆ ನಿಮಗೆ ನಷ್ಟ?"

"ಇಲ್ಲ, ನಿನ್ನ ಕೊರಳ ಕರಿಮಣಿ ಯಾಣೆ. ಆಯ್ತಲ್ಲ?"

"ಅಯ್ಯೋ, ಇದೇನು ಅನ್ತಾ ಇದ್ದೀರಿ? ನೀವು...ನೀವು ಹೋದ್ರೆ...ಮತ್ತೆ ನನ್ಗತಿ"

"ಹಾಗೂ ಅಲ್ಲ. ಮತ್ತೆ ಹೇಗೆ ನಿನಗೆ ವಿಶ್ವಾಸ ಹುಟ್ಟೀತೂಂತ.... ಈಗ ತಿಳೀತು ಆ ಹೆಂಡದಾಣೆಯಾಗಿಯೂ...."

"ಥೀ, ಬೇಡಾಂದ್ರೆ, ಆ ಹೆಂಡದ ಮಾತೆತ್ತಬೇಡಿ.

"ಸರಿ ಹಾಗಾದ್ರೆ ನಿನ್ನ ಪ್ಲಾನೇನು ಹೇಳು."

"ಮತ್ತೇನೂ ಇಲ್ಲ. ನಮ್ಮೂರಲ್ಲಿ ಪೋಲೀಸರು ಇದ್ದಾರಲ್ಲಾ"

ಹೌದು..."

ಅವರು ಯಾಕಿರೋದೂಂತ"

"ಅಯ್ಯೋ, ಕಳ್ಳತನ, ಜಗಳಾಟ ನಿಲ್ಲಿಸಲಿಕ್ಕೆ, ಹಿಡೀಲಿಕ್ಕೆ. ಮತ್ತೆ....ಕಳ್ಳಭಟ್ಟಿ....

"ಅಲ್ಲ, ನೀವೇ ಹೇಳಿ, ಈಗ ದೇಶದಲ್ಲಿ ಕಳ್ಳತನವೇ ಇಲ್ವೆ? ಕೊಲೆ ಸುಲಿಗೆ ನಡಿಯೋದಿಲ್ವೇ?'

"ಅಂದ್ರೆ ಅದನ್ನು ನಿಲ್ಲಿಸಿಬಿಡ್ಬೇಕೂಂತ ತಾನೇ ನಿನ್ನ ಸಲಹೆ?"

"ಮತ್ತೆ ನೋಡಿ ಆಸ್ಪತ್ರೆ—ಡಾಕ್ಟ್ರು ಇದ್ದ ಹಾಗೇನೇ ಜನ ಸಾಯ್ತಾರೆ. ಅವರನ್ನೂ ವಜಾ ಮಾಡಿದ್ರೆ...."

"ಸರಿ ಸರಿ; ಮಂತ್ರಿ ಮಂಡಲ ಎಂಪ್ಪೆಲ್ಲೈಗಳನ್ನು ಕಿತ್ತು ಹಾಕಿ ರಾಷ್ಟ್ರಪತಿಗಳ ಆಡಳಿತೆ ತಂದ್ರೂ ರಾಜ್ಯ ನಡಿಯುತ್ತೆ."

'ಸರ್ಕಾರನೇ ಬೇಡಾಂತೇನೆ ನಾನು. ಜನರ ಸೇವೆ ಮಾಡೋಕೆ ತಾನೇ ಸರಕಾರ ಇರೋದು? ಅದೂನೂ ಇಲ್ಲದಿದ್ರೆ ಜನ ತಂ ಸೇವೆ ತಾವೇ ಮಾಡಿಕೊಳ್ತಾರೆ. ಆಗ ಸಂರಕ್ಷಣೆಯೂ ಬೇಡ ಏನೂ ಬೇಡ..."

"ಓ ಹೋ ಹೋ, ನಿನ್ನ ಬುದ್ಧಿಯೆ? ಆಷ್ಟಾಗುವಾಗ ಜೀವನಾನೂ ಬೇಡಾದೀತು!"

"ಅಲ್ಲ, ಮಾತಿಗೆ ಹೇಳಿದೆ...."

"ಅದನ್ನೇ ನೋಡು ನಿನ್ನ ನೆಹ್ರೂ ಮುರಾರ್ಜಿ ಅಂದದ್ದು?"

'ಏನಂದಿದ್ರು? ಅದನ್ನೇ ನಾನು ಆಗಿನಿಂದ್ಲೂ ಕೇಳ್ತಾ ಇದ್ದೆ. ನೀವು....,

"ಪಾನ ನಿಷೇಧವನ್ನು ಹಣದ ದೃಷ್ಟಿಯಿಂದ ನೋಡಬಾರದು ಅದನ್ನ ಕಟ್ಟುನಿಟ್ಟಾಗಿ ವ್ಯವಹಾರಕ್ಕೆ ತರಬೇಕೂಂತ.,,

"ಅಲ್ವೆ ಮತ್ತೆ? ತಾನೇ ಮಾಡಿದ ಕಾನೂನನ್ನು ಜ್ಯಾರಿಮಾಡಲು ಸರಕಾರ ಹಿಂದೆ ಸರಿದರೆ, ಅದರ ಬೆಳೆಯೆಲ್ಲಿ ಉಳಿಯಿತೂಂತ? ನಿಮ್ಮ ಎಮ್ಮೆಲೆ ಹಾಂಗೆ ಹೀಂಗೆ ಅಂದ್ರೆ ಕಿವಿ ಹಿಂಡಿ ಹೇಳಿ ಹೀಂಗೇಂತ,,

"ಸರಿ, ಸರಿ ಹೇಳ್ತೀನೆ. ನಮ್ಮ ರಾಣೀ ಸಾಹೇಬರು ಕಿವಿ ಹಿಂಡಿ ಹೇಳಿದ್ದಾರೇಂತ,,

"ನೋಡಿ, ನಿಮಗೆ ಇದ. ಪ್ರಜಾಪ್ರಭುತ್ವಾಂತ ಗೊತ್ತೇ ಇಲ್ವೆ?,,

"ಇಲ್ದೇ ಇದ್ರೆ ಇಷ್ಟೆಲ್ಲಾ ಆಡೋಕಾಗುತ್ತೆಯೆ?,,

'ಮತ್ತೆ ರಾಜರಾಣಿ ದೇಖೋ ಅಂತೀರಲ್ಲಾ?,,

"ನೋಡು ಚಿನ್ನಿ, ದೇಶವೇನೂ ಪ್ರಜಾಸತ್ತೆ ನಾನು ರಾಜ-ನೀನು ರಾಣಿಯೇ ಅಲ್ವೆ? ನಮ್ಮನ್ನು ಯಾರು ತಾನೇ ಆಳುತ್ತಾರೆ? ಅಥವಾ ಯಾರನ್ನು ನಾವು ಆಳುತ್ತೇವೆ? ಆಳುವವರು ಆಳಿಸಿಕೊಳ್ಳುವವರೂಂತ ಇದ್ರೆ ತಾನೇ ಪ್ರಜಾಸತ್ತೆಯಾಗದು?"

"ಮತ್ತೆ ನಮ್ಮ ಹಿರಿಯರು ಕಿರಿಯರು

"ರಾಜ ಮಾತೆ, ರಾಜಪಿತ, ರಾಜ ಕುಮಾರ, ರಾಜ ಕುಮಾರಿ...."

"ಮತ್ತೆ ರಾಣಿ ಮಾತೆ, ರಾಣಿ ಪಿತ, ರಾಣಿ ಕುಮಾರ...."

"ಹ್ಹ ಹ್ಹ ಹ್ಹ...ಏನಿದು ಏನಿದು?'

"ಏಕೆ? ..ಏನಾಯಿತು"

"ಅದದ್ದೇನಿಲ್ಲ. ರಾಜ ಕುಮಾರ ಬೇರೆ ರಾಣಿ ಕುಮಾರ ಬೇರೆಯೇ?"

"ಓ...."

"ನೋಡು ನೋಡು, ರಾಜಕುಮಾರ ಅಲ್ಲ—ರಾಣಿ ಕುಮಾರನ ಹೊಟ್ಟೆ ತುಂಬಿದ್ರೆ ರಾಜನ ಹೊಟ್ಟೆ ತಣ್ಣಗಂಟೆ ಆಗಲೇ ಒಂಬತ್ತು ದಾಟಿತು

"ಹ್ಹೂಂ ಬನ್ನಿ, ಬನ್ನಿ...."

—ಗೋರಾ.


## ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ಶೀಘ್ರವಾಗಿ ವೃದ್ಧಿಹೊಂದುವುದು.

**ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.**

**ವಿಜಯ ಬೇಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3

## ಅವೈತನಿಕ ಜನರಲ್

ಗಡವಾಲ ರ್‍ಯಾಫಲ್ಸ್‌ನ ಶಿಕ್ಷಣ ಕೇಂದ್ರ ಹಾಗೂ ಮುಖ್ಯಾವಾಸವಾಗಿರುವ ಲೆನ್ಸ್‌ಡಾವುನ್‌ನ ಪರೇಡ್ ಮೈದಾನದಲ್ಲಿ ಒಂದು ಕಡೆ ದೊಡ್ಡದಾದ ಹಸುರು ಬಟ್ಟೆಯ ಮೇಲೆ ದೈತ್ಯಾಕಾರದ ಆಡಿನ ಚಿತ್ರವಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ರೋಚಕ ಕಥೆಯಿದೆ.

೧೮೯೫ರಲ್ಲಿ ಭಾರತದಲ್ಲಿದ್ದ ಬ್ರಿಟಿಷ ಸರಕಾರವು ಚಿತ್ರಾಲ ಕದನದಲ್ಲಿ ಸಂಕಷ್ಟಕ್ಕೀಡಾಯಿತು. ವೀರರಿಂದ ಕೂಡಿದ ಗಡವಾಲ ರೆಜಿಮೆಂಟನ್ನು ಅದು ಕಳಿಸಿತು. ಯುದ್ಧದಲ್ಲಿ ತೊಡಗಿದ ಈ ಸೇನೆಯ ಒಂದು ತುಕುಡಿಯು ಎಲ್ಲೆಲ್ಲಿಯೋ ಅದೃಶ್ಯವಾಗುವಂತಾಯಿತು. ಇದರಲ್ಲಿದ್ದ ಸೈನಿಕರ ಸಂಗಡದ ಆಹಾರ ಪದಾರ್ಥಗಳೆಲ್ಲವೂ ಮುಗಿದಿದ್ದುವು. ಹಸಿವೆ ನೀರಡಿಕೆಗಳಿಂದ ಕಂಗೆಟ್ಟ ಈ ಸೈನಿಕರು ತಮ್ಮ ಮೃತ್ಯುವಿನ ಗಳಿಗೆಯನ್ನೇ ಇದಿರುನೋಡುತ್ತಿದ್ದರು. ಅದೇ ಸಮಯಕ್ಕೆ ಅಲ್ಲಿಗೊಂದು ವಿಶಾಲಕಾಯ ಆಡು ಆಗಮಿಸಿತು. ಕೆಲವು ಯೋಧರು ಅದನ್ನು ಹೊಡೆದು ಕೊಲ್ಲಲು ಕೈಯೆತ್ತಿದರು. ಆಡು ತನ್ನ ತಲೆ ಮತ್ತು ಉಗುರುಗಳಿಂದ ವಿಚಿತ್ರ ಸಂಕೇತವನ್ನು ಮಾಡಿತು. ಸೈನಿಕರ ಕೈಯಿಳಿದುವು. ಅವರು ಕುತೂಹಲಗೊಂಡು ಅದನ್ನು ಹಿಂಬಾಲಿಸಿದರು. ಸ್ವಲ್ಪ ದೂರ ಸರಿದ ಬಳಿಕ ಆಡು ನಿಂತು ಉಗುರುಗಳಿಂದ ನೆಲ ಕೆರೆಯ ತೊಡಗಿತು. ಅದನ್ನು ನೋಡುತ್ತಲೇ ಸೈನಿಕರೂ ನೆಲ ಅಗೆಯಲು ತೊಡಗಿದರು. ಅವರಿಗೆ ಬಟಾಟೆ ಗೆಡ್ಡೆಗಳ ರಾಶಿಯೇ ದೊರೆತುವು. ಇದರಿಂದ ಮೃತ್ಯು ಪ್ರತೀಕ್ಷೆ ಮಾಡುತ್ತಿದ್ದ ತುಕುಡಿಯು ಬದುಕಿಕೊಂಡಿತು. ಆ ಬಳಿಕ ಉಳಿದ ತುಕುಡಿಗಳೂ ಅದನ್ನು ಕೂಡಿಕೊಂಡುವು, ಯುದ್ಧದಲ್ಲಿ ವಿಜಯವೂ ಪ್ರಾಪ್ತವಾಯಿತು.

ಈ ಅಪ್ರತ್ಯಾಶಿತ ಮತ್ತು ಮಹತ್ವಪೂರ್ಣ ಸೇವೆಯನ್ನು ಗಮನಿಸಿ ಆಡಿಗೆ ವೀರ ಸೈನಿಕನಂತೆ 'ಅವೈತನಿಕ ಜನರಲ್' ಪದವಿಯಿತ್ತು ಗೌರವಿಸಿದರು. ಕೃತಜ್ಞ ಸೇನೆಯು ತನ್ನೊಡನೆ ಅದನ್ನು ಗಡವಾಲಕ್ಕೊಯ್ದಿತು. ಕೆಲವು ವರ್ಷಗಳ ವರೆಗೆ ಈ ಚಿತ್ರಾಲ ಜಾತಿಯ ಆಡು ಲೆನ್ಸ್‌ಡಾವುನ್‌ನಲ್ಲಿ ಬದುಕಿಕೊಂಡಿತು. ಒರ್ವ ಉಚ್ಚ ಸೈನಿಕ ಅಧಿಕಾರಿಯಂತೆಯೇ ಇದರ ವ್ಯವಸ್ಥೆಗಳಿದ್ದುವು. ಅಂತೆಯೇ ಇದಕ್ಕೆ ಕೀರ್ತಿಯೂ ಲಭಿಸಿತು. ಚಿತ್ರಾಲ ಯುದ್ಧಾನಂತರ ಗಡವಾಲ ರ್‍ಯಾಫಲ್ಸ್‌ಪಡೆಗಳು ಯುದ್ಧಕ್ಕೆ ಹೋಗುತ್ತಿರುವಾಗ, ಈ ಮೀಸೆ ಹೊತ್ತ 'ಜನರಲ್ಲ'ನಿಗೆ ವಂದನೆ ಮಾಡಿ ಹೊರಡುತ್ತಿದ್ದವು.

ಹೀಗೆ ಬದುಕಿಗೊಂದು ಆಸರೆಯೆನಿಸಿದ 'ಜನರಲ್' ಮೃತ್ಯುಮುಖವಾದ ಬಳಿಕ ಅದರ ದೈತ್ಯಾಕಾರದ ಚಿತ್ರವೊಂದು ಪರೇಡ್ ಮೈದಾನದಲ್ಲಿ ರಾರಾಜಿಸುತ್ತದೆ.

## ಓ ಜವಾನ

(೧೩ ವರ್ಷದ ವಿದ್ಯಾರ್ಥಿ ಬರೆದುದು)

ಓ ನಮ್ಮ ಹೆಮ್ಮೆಯ ಜವಾನ
ನಿನಗೆ ಜಯವಾಗಲಿ
ನಿನಗೆ ಕಲ್ಯಾಣವಾಗಲಿ.
ನಿನ್ನ ಶೌರ್ಯದ ಮೇಲೆಯೇ ನಿಂದಿದೆ ಭಾರತ ।
ಅದರಿಂದಲೇ ನಿನಗೆ ಸದಾ ಜಯ ಖಂಡಿತ ॥
ಅಳುಕದೆ ಇಡು ನೀನು ನಿನ್ನ ಹೆಜ್ಜೆ ಮುಂದೆ ।
ನಲವತ್ತ ನಾಲ್ಕು ಕೋಟಿ ಭಾರತೀಯರಿರುವರು ನಿನ್ನ ಹಿಂದೆ ॥
ಹಿಂಸ ಮೋಸಾದಿಗಳೆಲ್ಲ ಚೀನಿಯರ ಕುತಂತ್ರ ।
ಸತ್ಯ ಅಹಿಂಸೆಯು ಭಾರತೀಯರ ಬೀಜ ಮಂತ್ರ ॥
ಬುದ್ಧ ಗಾಂಧಿಯರ ಅಮರ ಸಂದೇಶ ಹೊತ್ತು ನಿಂದಿಹಳು ಭಾರತಿ ।
ಬರಗಾಲದಿ ಭಯಂಕರ ಬರಡಾಗಿ ಬಿದ್ದಿಹುದು ಚೀನಿಯರ ಶರಧಿ ॥
ಬೌದ್ಧ ಲಾಮಾಗಳಾಗಿ ವಂಚಿಸಲು ಬಂದಿಹರು ಚೀನಿಯರು ।
ಚತುರ ಭಾರತೀಯರಿದನು ಮೊದಲೇ ತಿಳಿದಿಹರು ॥
ಕಮ್ಯುನಿಸಮನ್ನು ಜಗತ್ತಿಗೇ ಹರಡಬೇಕಾಗಿದೆ ಚೀನಕ್ಕೆ ।
ವಿಶ್ವದಲಿ ಶಾಂತಿ ಬೀಜವ ಬಿತ್ತಬೇಕಾಗಿದೆ ಭಾರತಕ್ಕೆ ॥
ಅಶೋಕನ ಪುಣ್ಯನಾಡಿಗೆ ಇನ್ನು ಬರಲಾರ ಆ ಕಳ್ಳ ಚೀನಿ ।
ಬಂದರೆ ಭಾರತೀಯರು ಮಾಡದಿರರು ಅವನನ್ನು ಪಾಲುಚೀನಿ ॥
ಎಂದೊಕ್ಕೊರಲಿನಿಂದ ಒರಲುತಿದೆ ಭಾರತದ ಜನಕೋಟಿ ।
ದೇಶ ಸೇವೆಯೆ ಈಶ ಸೇವೆ ಎಂದು ನೀವ್ ಹೋರಾಡು ॥
ನಿನಗೆ ಜಯವಾಗಲಿ
ಓ ಜವಾನ
ನಿನಗೆ ಕಲ್ಯಾಣವಾಗಲಿ.

ಆನಂದ ಗಂಗಾಧರ ಐನಳ್ಳಿ,
ಹುಬ್ಬಳ್ಳಿ.
೧೭-೧೨-೧೯೬೨.

## ಚೀನಾದ ನೈಜ ನಿಯಂತ್ರಣರೇಖೆ

(೯ನೇ ಪುಟದಿಂದ)

೧ನೆಯ ಚಿತ್ರ (೪ನೆ ಪುಟನೋಡಿರಿ) ಅದರಲ್ಲಿ ಲಡಖದ ನಕ್ಷೆಯಿದೆ. ಮೇಲಿಂದ ಕೆಳಕ್ಕೆ ಎಳೆದ ಬಾಗು ರೇಖೆಯು ಸಪ್ಟಂಬರ ೮ರ ನಂತರ ಚೀನೀಯರು ಆಕ್ರಮಿಸಿದ ಭೂಭಾಗವನ್ನು ತೋರಿಸುತ್ತದೆ. ಇದಕ್ಕೂ ಅಡ್ಡಕ್ಕೆ ಎಳೆದ ನೀಳ ರೇಖಾ ಪ್ರದೇಶಕ್ಕೂ ನಡುವಿರುವರೇಖೆಯೇ ಸಪ್ಟಂಬರ ೮ರದ್ದು. ತಮ್ಮ ನೈಜ ನಿಯಂತ್ರಣ ರೇಖೆಯು ಇದರ ಪಶ್ಚಿಮ ಸರಹದ್ದಿನಲ್ಲೇ ಇದೆಯೆಂದು ಚೀನೀಯರು ಹೇಳುತ್ತಾರೆ. ಅಂದರೆ, ಆಕ್ರಮಣದಿಂದ ಪಡೆದ ಭೂಮಿಯನ್ನು ಕಬಳಿಸುವುದೇ ಅವರ ಆ ರೇಖೆಯ ಉದ್ದೇಶವೆಂದು ಸುಸ್ಪಷ್ಟವಿದೆ.

ನೇಫಾ ಪ್ರದೇಶದಲ್ಲಿ ಕೆಳಗಿನ ನಕ್ಷೆಯಲ್ಲಿ ತೋರಿಸಿದಂತೆ ಸಪ್ಟಂಬರ ೮ರ ರೇಖೆಯು (ದಪ್ಪವಾಗಿದೆ) ಉತ್ತರ ಹಿಮಾಲಯದ ಶಿಖರಗಳ ಪಕ್ಕದಲ್ಲಿದೆ. ಬ್ರಹ್ಮ ಮತ್ತು ತನ್ನ ಸೀಮಾರೇಖೆಯೆಂದು ಚೀನಾ ಮನ್ನಿಸುವ, ಆದರೆ ಭಾರತ ಹಾಗೂ ತನ್ನ ನಡುವಣ ಅಕ್ರಮರೇಖೆಯೆಂದು ಕರೆಯುವ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದ ಮ್ಯಾಕಮಹೋನ ರೇಖೆಯೇ ಇದು. ಮೊದಲು, ಚೀನಾವು ನೈಜ ನಿಯಂತ್ರಣ ರೇಖೆಯು ಮ್ಯಾಕಮಹೋನವೆಂದು ಕರೆಯುವ ರೇಖೆಯನ್ನು ಅನುಸರಿಸಿಯೇ ಹರಿಯುವ ಸಾಂಪ್ರದಾಯಿಕ ರೇಖೆಯೇ ಎಂದು ಹೇಳಿತ್ತು.

೧೯೬೨ರ ದಶಂಬರ ೧೩ರಂದು ನವಚೀನಾ ವಾರ್ತಾಸಂಸ್ಥೆಯು ಬೊಂಡಿಲಾದ ಸುದ್ದಿಗಾರನಿಂದ ಕಳಿಸಲ್ಪಟ್ಟ ವರದಿಯೊಂದನ್ನು ಪೇಕಿಂಗ್ ರೇಡಿಯೋ ಪ್ರಸಾರ ಮಾಡಿತು. ಇದರಲ್ಲಿ 'ಮುನಿಯೋ ಕ್ಷೇತ್ರದ ರಾಜಧಾನಿ ತವಾಂಗದ ಅಧಿಕಾರ ವ್ಯಾಪ್ತಿಯಲ್ಲೇ ಬೊಂಡಿಲಾ ಯಾವಾಗಲೂ ಇತ್ತು. ೧೯೫೧ರಲ್ಲಿ ಭಾರತೀಯ ಪಡೆಗಳು ಈ ಪ್ರದೇಶವನ್ನು ಅಕ್ರಮವಾಗಿ ಆಕ್ರಮಿಸಿದಾಗ, ಅವರು ನೇಫಾದ ಕಮೆಂಗ್ ಗಡಿ ವಿಭಾಗವೆಂದು ಇದರ ಹೆಸರನ್ನು ಬದಲಿಸಿದರು' ಎಂದು ಹೇಳಲಾಗಿದೆ.

ಪ್ರಧಾನಿ ನೆಹರುರವರ ಮಾತಿನಲ್ಲಿ ಹೇಳುವುದಾದರೆ, ಬೊಂಡಿಲಾವು ೧೦,೦೦೦ ವರ್ಷಗಿಂತಲೂ ಅಧಿಕ ಕಾಲದಿಂದ ಭಾರತದ ಅಂಗವಾಗಿಯೇ ಇದೆ. ಆದರೆ, ಚೀನಾದ ಹೆಚ್ಚು ಹೊಸ ನೈಜನಿಯಂತ್ರಣ ರೇಖೆಯೊಳಗೆ ಇದೂ ಸೇರಿಕೊಳ್ಳುತ್ತದೆ.

ಚೀನಾದ 'ನೈಜನಿಯಂತ್ರಣ ರೇಖೆ'ಯು ಚರ; ಅಸ್ಥಿರ ನಿಜವಾಗಿಯೂ ಅದು ಚೀನೀಯ ಬೇಡಿಕೆಯ ರೇಖೆ. ಅದು ಗೊಂದಲವನ್ನುಂಟು ಮಾಡುವ ರೇಖೆ. ಚೀನೀಯರ ರಣಕೌಶಲವಿರುವುದೇ ಗೊಂದಲ ನಿರ್ಮಾಣದಲ್ಲಿ.



## ಕವಲು ದಾರಿ—ಕೆಂಪು ದೀಪ

# ಅಭಾವೈಕ್ಯತೆ

—ಸುದಾಸ

ದಣಿದ ಮನಸ್ಸು ವಿಶ್ರಾಂತಿ ಪಡೆಯ ಬಯಸುವದು ಸಹಜ. ವಿಶ್ರಾಂತಿ ಎಂದ ಮಾತ್ರಕ್ಕೆ, ವಿರಾಮ ಕುರ್ಚಿಯನ್ನಲಂಕರಿಸಬೇಕೆಂದೇನೂ ಇಲ್ಲ. ಒಂದು ಆಟವನ್ನು ಆಡುವದರ ಮೂಲಕ, ಒಂದು ಪುಸ್ತಕವನ್ನು ಓದುವದರ ಮೂಲಕ, ದಣಿದ ಮನಸ್ಸಿಗೆ ನೆಮ್ಮದಿ ಸಿಗಬಹುದು. ಅಂತೂ ಅದರ ಓಟವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಹರಿಯಗೊಡುವದು ಉತ್ತಮ ಎಂದಂತಾಯಿತು.

ಅದಕ್ಕೆಂದೇ ಈಗ ನಿಮ್ಮನ್ನು ಕಾಲ್ಚೆಂಡಿನ ಕಳಕ್ಕೆ ಕರೆದೊಯ್ಯಬೇಕೆನ್ನಿಸುತ್ತಿದೆ ನನಗೆ. ಜೊತೆಯಲ್ಲೆ ಬರುವಿರಲ್ಲ? ಇಲ್ಲೇ ಇಳಿಯಿರಿ. ಈ ಒಳದಾರಿಯಲ್ಲಿ ಹೋಗೋಣ. ಅಂದರೇನೇ ಸಮಯಕ್ಕೆ ಸರಿಯಾಗಿ ನಾವು ಆಟದ ಬಯಲನ್ನು ಸೇರಬಹುದು.

ಮುಂದೆ ಕಾಣಿಸುತ್ತಿದೆಯಲ್ಲ, ಅದೇ ಆಟದ ಬಯಲು. ಆಟಗಾರರು ಆಡಲು ಕಳಕ್ಕೆ ಇಳಿದೂ ಆಗಿದೆ. ಇಲ್ಲೇ ನಿಂತುಕೊಳ್ಳೋಣ. ಜನಜಂಗುಳಿಯ ನಡುವೆ ಕುಳಿತಿರುವದಕ್ಕಿಂತ ಇಲ್ಲಿ ನಿಂತುಕೊಂಡು ನೋಡುವದು ಹಿತ.

ಅಲ್ಲಿ ನೋಡಿ! ಯಾರ ಕಾಲಿಗೂ ಚೆಂಡು ಸಿಗದಂತೆ ತಪ್ಪಿಸಿಕೊಂಡು ಆ ಕುಳ್ಳ ಗೋಲಿನೆಡೆಗೆ ಸಾಗುತ್ತಿದ್ದಾನೆ. ನೋಟವಂತೂ ನೋಡಲು ರಂಜಕವಾಗಿದೆಯಲ್ಲವೆ? ಅಹೋ! ಕುಳ್ಳನ ಕಾಲಿಗೆ ಕತ್ತರಿ ಹಾಕಿದರು! ಕುಳ್ಳ ಬಿದ್ದುಬಿಟ್ಟ. ಸುತ್ತಲೂ ನಗೆಯ ಸದ್ದು ಕೇಳಿಸುತ್ತಿದೆ. ಅಯ್ಯೋ ಪಾಪ, ಎನ್ನುತ್ತೀರೇನು ನೀವು? ಬಿದ್ದವನಿಗೊಂದು ಗುದ್ದು ಹೆಚ್ಚು ಎಂದು ಅನ್ನುವವರು ನೀವಲ್ಲ, ಎನ್ನುವದನ್ನು ನಾನು ಸುಸ್ಪಷ್ಟವಾಗಿ ಬಲ್ಲೆ.

ಅದೋ, ಆ ಧಾಂಡಿಗ ಹೇಗೆ ಹೊಡೆದ ಕಿಕ್! ಚೆಂಡು ಮುಗಿಲು ಮುಟ್ಟುತ್ತಿದೆಯೇನೊ ಎಂದನ್ನಿಸುತ್ತಿದೆಯಲ್ಲವೆ? ಜನರು ಕೇಕೆ ಹಾಕುತ್ತಿದ್ದಾರೆ. ಕರತಾಡನದ ಸದ್ದಿನಿಂದ ಧಾಂಡಿಗ ಇನ್ನೂ ಸ್ವಲ್ಪ ಉಬ್ಬಿದವನಂತೆ ಕಾಣಿಸುತ್ತಿರುವನಲ್ಲ? ಆಟದಕಳೆಯಂತೂ ರಂಗೇರಿ ಹೋಗಿದೆ.

ಗೋಲ್ ಕೀಪರ್ ಸಿದ್ಧನಾಗಿ ನಿಂತಿದ್ದಾನೆ. ಇಕ್ಕಡೆಯವರಲ್ಲೂ ಘರ್ಷಣೆ ನಡೆದಿದೆ. ಸೋಲು ಗೆಲವುಗಳ ಆತುರ ಕಾತರ ದೃಷ್ಟಿ, ಚೆಂಡಿನತ್ತ ಕೇಂದ್ರೀಕರಿಸಲ್ಪಟ್ಟಿದೆ.

ಒಂದು ಕೈ ನಾವೂ ನೋಡೋಣ. ಎಂಬ ಬಯಕೆ, ನಿಮ್ಮಲ್ಲಿ ಮೂಡಿದೆಯಲ್ಲವೇ? ಹಾಗಿದ್ದರೆ—ಕೈಕಟ್ಟಿ ಸುಮ್ಮನೆ ನಿಂತಿರುವಿರೇಕೆ? ಇಳಿಯಿರಲ್ಲ ಕಳಕ್ಕೆ?

ಬನ್ನಿ, ಭಾವೈಕ್ಯತೆಯ ಮೈದಾನಿಗೆ! ಅಭಾವಗಳನ್ನೆಲ್ಲ ಕೇಂದ್ರೀಕರಿಸಿ ಗೋಲ್ ತಂಬಿಸುತ್ತೀರೇನು?! ಈ ಆಟ ನಮಗೆ ಹೊಸದು; ನಾವಿನ್ನೂ ಅಭ್ಯಾಸ ನಡೆಸಿಲ್ಲ ಎನ್ನುತ್ತೀರೇನು?

ಆಟ ಹಳೆಯದೆ! ನಿಮಗೆ ಕಲಿಸಿರುವ ರೀತಿ ಮಾತ್ರ ಗಿಳಿಪಾಠದಿಂದ ಬಂದುದು.

ಈ ವರೆಗೆ ನೀವು ಕೇಳಿದ್ದು ಟುಬ್ಬಣ್ಣಚಾರದ ಭಾವೈಕ್ಯತೆಯ ಜೊಬ್ಬಾಟವನ್ನು ಕೇಳಿಸಿಬಂದುದು ಆಲಸ್ಯಪ್ರವೀಣ ಪ್ರವೃತ್ತಿಯ ಕೇಂದ್ರಗಳಿಂದ!

ನಮ್ಮ ಪ್ರಜಾ ಪ್ರತಿನಿಧಿಗಳು ಭಾವೈಕ್ಯತೆಯನ್ನು ನೂರಾರು ವಿಧದಲ್ಲಿ ಬಣ್ಣಿಸಿದ್ದಾರೆ. ಆದರೆ ಅವರ ಅಂತರ್ಮುಖದ ಅಭಿಪ್ರಾಯ ಸೂಚಕ ಮುಳ್ಳು, ಐಕ್ಯತೆಯೆನ್ನುವದು ಸ್ವಪಕ್ಷದ ವರ್ತುಲದಿಂದ ಹೊರಗಿರಬಾರದು ಎನ್ನುವದನ್ನಷ್ಟೆ ಸೂಚಿಸುತ್ತದೆ!

ಕಠಿಣ ದಂಡನೆಗಳ ಮುಳ್ಳಿನ ಕಿರೀಟವನ್ನು ತಲೆಗಿರಿಸಲಾದೀತು ಎಂಬ ಬೆದರಿಕೆಯೇ ಸಜಾತೀಯ ವಾದಿಗಳ ಭಾವೈಕ್ಯತೆಯ ಮೂಲ ಬಂಡವಾಳ.

ತಾನು ಮಾಡುತ್ತಿರುವದು ನಟನೆಯೆನ್ನುವದನ್ನು ನಟ ಚೆನ್ನಾಗಿ ಬಲ್ಲ. ನಟನಾ ಚಾತುರ್ಯ ತೋರಿಸುವಷ್ಟೆ ಅವನ ಕೆಲಸ. ಭಾವೈಕ್ಯತೆಯ ನಾಟಕವನ್ನು ಆಡುವಾಗಲೂ, ತಮ್ಮ ನಟನಾ ಕೌಶಲ್ಯವನ್ನು ತೋರಿಸದಿದ್ದರೆ ಹೇಗೆ?

ಅಭಾವಗಳೇನೇನಿವೆಯೊ, ಅವೆಲ್ಲವನ್ನೂ ಒಂದುಗೂಡಿಸಿ, ಹೊಡೆಯಿರಿ ಕಿಕ್! ಅಂದಾಗ ಮಾತ್ರ ಭಾವನೆಗೆ ಎಡೆಗೊಟ್ಟಂತಾಗಿ, ನಿರ್ಮಲಾಂತಃಕರಣದ ಸದ್ಭಾವನೆ ಮೂಡೀತು. ಆ ಕೆಲಸವನ್ನು ನಾವೆಲ್ಲ


**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

O. S. 554/62

ಪಿ ನರಸಿಂಹ ನಾಯಕ್ & ಸನ್ಸ್ —ವಾದಿ.

ಎಚ್. ವೆಂಕಟೇಶ ಶೆಣೈ, ಎಚ್. ದಾಸಪ್ಪ ಶೆಣೈಯವರ ಮಗ, ಕಡಬ ಕಸಬಾ ಗ್ರಾಮ, P. W. D. Contractor P O ಕಡಬ —ಪ್ರತಿವಾದಿಗೆ

ವಾದಿಯು ಟಿಂಬರ್ ಫರ್ಮಿನಲ್ಲಿ ಪ್ರತಿವಾದಿಯು ನಡಿಸಿದ ವಹಿವಾಟಿನಲ್ಲಿ ಆತನಿಂದ ಬರ ರೂ. 981=20nP. ಕೋರ್ಟು ಖರ್ಚು ವ ಮುಂದಣ ಬಡ್ಡಿಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯು ತಾರೀಕು 11—1—1963ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆ ಇದ್ರೆ ನೀವು ಆ ದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸದಿದ್ರೆ ನಿಮ್ಮನ್ನು ಶಿಮ್ಮಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(*Sd*) K. R. Shenoy
Adv. for plff.

ಪುತ್ತೂರು, 19—12—62


## ದೇಶದಲ್ಲಿ ಭಾವೈಕ್ಯದ ಪ್ರತಿಷ್ಠಾಪನೆ

(೩ನೇ ಪುಟದಿಂದ)

ನೀಡುತ್ತಿರುವುದನ್ನು ನೋಡಿ ಪ್ರಧಾನ ಮಂತ್ರಿ ನೆಹರೂ ತುಂಬಾ ಸ್ಫೂರ್ತಿಗೊಂಡಿದ್ದಾರೆ ಅನಿರೀಕ್ಷಿತವಾಗಿ ಉಂಟಾದ ಯುದ್ಧದಲ್ಲಿ ಮೊದಲಿಗೆ ಸ್ವಲ್ಪ ಅಪಜಯವಾದರೂ ಯಾರೊಬ್ಬ ಭಾರತೀಯನೂ ಎದೆಗೆಡದೆ ಎದ್ದುನಿಂತು ಚೀನಿಯರ ಸೊಕ್ಕು ಮುರಿಯಬೇಕೆಂದು ಮಾಡಿದ ಗರ್ಜನೆ ಮತ್ತು ಶಪಥ ಇವುಗಳನ್ನು ನೋಡಿ ಚೀನದವರು ಬೆರಗಾಗಿದ್ದಾರೆಂದು ವಾರ್ತೆಯಿದೆ. ಇತ್ತೀಚೆಗೆ ಭಾರತಕ್ಕೆ ಬಂದ ಪರಕೀಯರು "ಪ್ರಪಂಚದಲ್ಲಿ ಇಂದು ಆದರ್ಶ ರೀತಿಯಲ್ಲಿ ಒಗ್ಗಟ್ಟನ್ನು ಗಳಿಸಿದ ದೇಶವೆಂದರೆ ಭಾರತ" ಎಂದು ನುಡಿದದ್ದರಲ್ಲಿ ಅತಿಶಯೋಕ್ತಿಯಿಲ್ಲವೆನ್ನಬಹುದು.

ಒಂದು ರೀತಿಯಲ್ಲಿ ನೋಡಿದರೆ ಭಾರತದಲ್ಲಿ ಇಂದು ಕಂಡು ಬರುವ ಈ ಒಗ್ಗಟ್ಟಿನಲ್ಲಿ ಆಶ್ಚರ್ಯವೇನಿಲ್ಲ. ದೊಡ್ಡದಾದ ಒಂದು ಕುಟುಂಬದ ಜನರು ತಮ್ಮೊಳಗೆ ಆಗಾಗ ಜಗಳವಾಡುತ್ತಿದ್ದರೂ ಹೊರಗಿನ ಶತ್ರು ಒಬ್ಬನು ಕುಟುಂಬದ ಮೇಲೆ ವಕ್ರ ದೃಷ್ಟಿಯನ್ನು ಬೀರಿದರೆ ಅವರೆಲ್ಲರೂ ಒಟ್ಟಾಗಿ ಶತ್ರುವನ್ನು ಹೊಡೆದೋಡಿಸುವುದು ಸ್ವಾಭಾವಿಕ. ಭಾರತೀಯರಿಗೆ ತಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರೆನ್ನುವ ಭಾವನೆ (ತಡವಾಗಿಯಾದರೂ) ಈಗ ಉಂಟಾಗಿರುವುದು ತುಂಬಾ ಸಂತೋಷಕರ. ಹೊರಗಿನಿಂದ ಬಂದ ವೈರಿ ಹಿಂದೆ ಹೋದ ಮೇಲೆ ಮಾತ್ರ ಅವರು ಪುನಃ ಕಚ್ಚಾಟ ಆರಂಭ ಮಾಡಬಾರದು. ಎಂದಿನ ತನಕ ನಾವಿದನ್ನು ಅರಿತಿರುವುದಿಲ್ಲವೊ ಅಂದಿನ ವರೆಗೆ ಪರಕೀಯರ ದಾಳಿಯ ಭಯವಿರುವುದು ಮಾತ್ರವಲ್ಲ ಅದನ್ನು ತಡೆಗಟ್ಟುವುದೂ ಕಷ್ಟಸಾಧ್ಯ. ಇಂದು ಭಾರತದಲ್ಲಿ ಕಾಣುವ ಈ ಒಗ್ಗಟ್ಟಿಗೆ ಪ್ರಧಾನ ಮಂತ್ರಿ ನೆಹರೂರ ವ್ಯಕ್ತಿತ್ವವೂ ಬಹುಮಟ್ಟಿಗೆ ಕಾರಣವೆನ್ನಬೇಕು. ಅವರು ರಾಜಕೀಯ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷದವರಾದರೂ ಜನಸಾಮಾನ್ಯರ ದೃಷ್ಟಿಯಲ್ಲಿ ಅವರು ಬರೀ ದೇಶದ ಪ್ರತಿನಿಧಿ ಮಹಾತ್ಮಾ ಗಾಂಧಿಯವರ ನಂತರ ಇಷ್ಟೊಂದು ಜನರ ಬೆಂಬಲ ಗಳಿಸುವ ಶಕ್ತಿ ಬೇರೆ ಯಾವ ಮುಖಂಡನಿಗೂ ಇದ್ದಿಲ್ಲ. ಆದರೆ ನೆಹರು ಚಿರಾಯುವಲ್ಲವೆಂಬುದನ್ನು ಯಾರೂ ಮರೆಯಲಾಗದು. ದೇಶದ ಏಳಿಗೆ ಬರೇ ಒಬ್ಬ ವ್ಯಕ್ತಿಯನ್ನು ಹೊಂದಿಕೊಂಡಿರಬಾರದು; ಜನರನ್ನು ಹೊಂದಿಕೊಂಡಿರಬೇಕು. ಅದೇಕೆಂದರೆ ಇಂದಿದ್ದ ವ್ಯಕ್ತಿ ನಾಳೆ ಯಿಲ್ಲದಿರಬಹುದು. ಮ.ಹಾ ಯುದ್ಧದಲ್ಲಿ ಜಯ ಒದಗಿಸಿದ ವೀರ ಚರ್ಚಿಲ್ಲರನ್ನು ಕೂಡಾ ಬ್ರಿಟಿಷ್ ಜನತೆ ಯುದ್ಧ ಮುಗಿಯುತ್ತಲೇ ಕಡೆಗಣಿಸಿತ್ತು ಅದು ಅಲ್ಲಿಯ ಜನತೆಯ ಜವಾಬ್ದಾರಿಯನ್ನು ರಾಜಕೀಯದ ತಿಳಿವಳಿಕೆಯ ಮಟ್ಟವನ್ನೂ ವ್ಯಕ್ತಗೊಳಿಸುತ್ತದೆ. ಆ ಮಟ್ಟವನ್ನು ಮುಟ್ಟಲು ನಮ್ಮ ದೇಶದ ಜನರಿಗೆ ಇನ್ನೂ ಹಲವು ವರ್ಷಗಳು ಬೇಕು. ಆದರೆ ಈಗಾಗಲೇ ಅವರು ಆ ಹಂಬಲದಲ್ಲಿದ್ದಾರೆಂದು ಕಂಡುಬಂದಿದೆ. ಇದು ತುಂಬಾ ಹಿತಕರವಾದ ಶುಭ ಸೂಚನೆ.

—ಶ್ರೀ ಪಿ. ವಿ. ಸೆಟ್ಟಿ.

ಮಾಡದೆ ಗಂಟೆಗಟ್ಟಲೆ ಭಾಷಣ ಮಾಡುವದೆಂದರೆ, ಏನೂ ಅರಿಯದ ಜನತೆಗೆ ವಿಷಪ್ರಾಶನಮಾಡಿಸಿದಂತೆ ಆಗಲಿಕ್ಕಿಲ್ಲ?

ಒಬ್ಬ ಮಹಾಶಯರು ಭಾಷಣದ— ತಮ್ಮ ಅಮೂಲ್ಯ ಭಾಷಣದ ಕೊನೆಗೆ ಹೀಗಂದರು:

'ಕಾಂಗ್ರೆಸು' ಎಂದರೇನು ಎನ್ನುವದನ್ನು ಅರಿತುಕೊಳ್ಳದ ಜನರಿಗೆ ಭಾವೈಕ್ಯತೆ ಎಂದರೇನು ಎನ್ನುವದೂ ಅರ್ಥವಾಗಲಿಕ್ಕಿಲ್ಲ. ಆದ್ದರಿಂದ ಮೊದಲು ಕಾಂಗ್ರೆಸ್ಸನ್ನು ಅರಿತುಕೊಳ್ಳಿ.

ನನ್ನ ಮಿತ್ರ ನನ್ನೊಡನೆ ಪ್ರಶ್ನಿಸಿದ: ಭಾವೈಕ್ಯತೆ ಎಂದರೇನು? ಕಾಂಗ್ರೆಸ್ಸು ಎಂದರೇನು?

ನಾನು ಅಂದಿನ ದಿನ ಭಾಷಣ ಬಿಗಿದ ಘನ ಅತಿಥಿಗಳತ್ತ ಬೊಟ್ಟುಮಾಡಿ ತೋರಿಸಿದೆ.

— —


**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

S. C. 495/1962

B. ಮಂಜುನಾಥ ಬಾಳಿಗ —ವಾದಿ.

ನಾರಾಯಣ ಕಂಮ್ತಿ ಸಹ—ಪ್ರತಿವಾದಿರು

1ನೇ ಪ್ರತಿವಾದಿ ನಾರಾಯಣ ಕಂಮ್ತಿ, ವಾಮನ ಕಂಮ್ತಿಯವರ ಮಗ ಬೆಳ್ತಂಗಡಿ ತಾಲ್ಲೂಕು ಉಜ್ರೆ ಗ್ರಾಮದ ಉಜ್ರೆಯಲ್ಲಿ ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ವಾದಿಯು ನಿಂಮ ಮೇಲೆ ಕೂಡಾ ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 11—1—1963ಕ್ಕೆ ಯಿಟ್ಟಿರುವುದರಿಂದ ಆದ್ಯೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ, ಸದ್ರಿ ದಿವ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(*Sd*) C. V. Shastry
Advocate for Plff.

ಪುತ್ತೂರು, 20—12—62.





**ಸೂಚನೆ**

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

# ಮೃಗ ಮಾನವ

(೨ನೇ ಪುಟದಿಂದ)

ನಿಂದ ಸುಲಕ್ಷಣೆ ಬೆವರಿದಳು. ಆದರೂ ಅನಸೂಯೆಯ ಅಹಂಕಾರಕ್ಕೆ ತನಗಾದ ಅವಮಾನಕ್ಕೆ ಪ್ರತೀಕಾರವೆಸಗುವ ದ್ವೇಷಮಯಿಯಂತೆ ಆಕೆಯ ಹೃದಯ ಕಲ್ಲಾಗತೊಡಗಿತ್ತು.

ಎರಡು ವರ್ಷಗಳಿಂದಲೂ ಏಕಾಂತ ಜೀವನವು ಅದರೊಂದಿಗೆ ಸ್ತ್ರೀಗೆ ಪವಿತ್ರವಾಗಿರುವ ಶೀಲವನ್ನು ಜಾಗ್ರತೆಯಿಂದ ಭಯದಿಂದ ಗೌರವದಿಂದ ಉಳಿಸಿಕೊಂಡು ಬಂದ ವಿಧವೆ ಸುಲಕ್ಷಣೆಯೀಗ ಅನಸೂಯೆಯ ಮೇಲಿನ ದ್ವೇಷದಿಂದ ಅವಮಾನಕ್ಕೆ ಪ್ರತೀಕಾರವೆಸಗುವ ದುರ್ಯೋಚನೆಯಿಂದ ಎಲ್ಲವನ್ನೂ ಮರೆತಳು. ಶೀಲ, ಮರ್ಯಾದೆ, ಗೌರವಗಳಿಗಲ್ಲಿ ಸ್ಥಾನವಿರಲಿಲ್ಲ. ಪ್ರತೀಕಾರ! ಸುಖದ ಬಾಳು! ಇವಿಷ್ಟೇ ಅವಳಿಗಾಗ ಮಹತ್ವಪೂರ್ಣವೆನಿಸಿತು. ಆಕೆಗಿನ್ನು ತನ್ನ ಒಂಟಿ ಜೀವನ ಅಸಹ್ಯ ಬಾಳನ್ನು ನಡೆಸುವುದು ಸಾಧ್ಯವೆಂದೆನಿಸಲಿಲ್ಲ.

ರಂಗಣ್ಣನಿಗೆ ಸುಲಕ್ಷಣೆಯ ಬದಲಾವಣೆ ವಿಚಿತ್ರವೆನಿಸಿತು. ಅತ್ಯಂತ ವಿಸ್ಮಯವಾಯಿತು. ರಂಗಣ್ಣ ತಾನಾಗಿಯೇ ಅವಳ ಸ್ನೇಹವನ್ನು ಯಾಚಿಸಿ ನಗುನಗುತ್ತಾ ಮಾತನಾಡಿಸುತ್ತಿದ್ದಾಗಲೂ ಮುಖವೆತ್ತದೇ ಉತ್ತರ ಸಲ್ಲಿಸುತ್ತಿದ್ದ ಸುಲಕ್ಷಣೆಯಲ್ಲೀಗ ಸಂಕೋಚದ ಸುಳಿವೇ ಕಾಣಿಸುತ್ತಿರಲಿಲ್ಲ. ಆಕೆ ತಾನಾಗಿಯೇ ರಂಗಣ್ಣನನ್ನು ಮಾತನಾಡಿಸುವಳಲ್ಲದೆ ಅದರಲ್ಲಿ ಲಜ್ಜೆಯ ಛಾಯೆಯೇ ಇದ್ದಂತಿರಲಿಲ್ಲ. ಬದಲಾಗಿ ಅವನನ್ನಾಕರ್ಷಿಸಲಿಕ್ಕಾಗಿಯೇ ತೋರುವ ವೈಯಾರದ ಅಭಿನಯ ಬಹಳವಾಗಿತ್ತು. ಬಹುದಿನಗಳ ಮನದಾಸೆ ಅಷ್ಟು ಸುಲಭವಾಗಿ ಈಡೇರಿತೆಂದು ಆತ ಕನಸಿನಲ್ಲೂ ಎಣಿಸಿರಲಿಲ್ಲ. ಸುಲಕ್ಷಣೆಯಂತಹ ಅಪ್ರತಿಮ ಸುಂದರಿಯೇ ರಂಗಣ್ಣನನ್ನು ತಾನಾಗಿಯೇ ಒಲಿದು ಬರುವುದೆಂದರೆ ಅವನ ಭಾಗ್ಯಕ್ಕೆಣೆಯಿದೆಯೇ? ರಂಗಣ್ಣನೇನೋ ಸುಲಕ್ಷಣೆಯನ್ನು ಬಹಳ ದಿನಗಳ ಹಿಂದೆಯೇ ತನ್ನ ವಶಪಡಿಸಿಕೊಳ್ಳಬೇಕೆಂದು ಆಶಿಸಿದ್ದ. ಆದರೆ ಆ ಆಸೆ ಫಲಿಸುವುದೇ ದುಸ್ಸಾಧ್ಯವೆಂದೆನಿಸಿದ್ದಾಗ ಈಗ ಸುಲಭವಾಗಿ ಹಕ್ಕಿ ಬಲೆಯೊಳಗೆ ಬೀಳುವುದೆಂದರೆ? ರಂಗಣ್ಣ ಸೌಂದರ್ಯ ಪ್ರಿಯ. ಆದರೆ ಆತನಿಗೆ ಬುದ್ಧಿ ಚೆನ್ನಾಗಿ ಬಲಿಯುವುದಕ್ಕಿಂತ ಮೊದಲೇ ಆತನ ಅನುಮತಿಯನ್ನೇ ಕೇಳದೆ ಅವನ ಹಿರಿಯರು ಅನಸೂಯೆಯನ್ನು ಕೊರಳಿಗೆ ಕಟ್ಟಿಬಿಟ್ಟಿದ್ದರು. ಇದರಿಂದಾತನಿಗೆ ಬಹಳ ನಿರಾಶೆಯಾಗಿತ್ತು. ಊರಿನ ಸುಂದರಿಯರನ್ನು ಹಸಿದ ಹಂಬಲದಿಂದ ನೋಡುವ ದುರಭ್ಯಾಸ ಬೆಳೆದು ಬಿಟ್ಟಿತ್ತು. ಆದರೆ ಪತ್ನಿಯಾಗಿ ಬಂದ ಅನಸೂಯೆ ರಂಗಣ್ಣನಿಗೆ ಯಾವ ಕೊಂತೆಯೂ ಉಂಟಾಗದಂತೆ ಸತಿಯ ಕರ್ತವ್ಯದಲ್ಲಿ ಸ್ವಲ್ಪವೂ ಚ್ಯುತಿ ಬಾರದಂತೆ ಜಾಗ್ರತೆಯಿಂದ ನಡೆದುಕೊಳ್ಳುತ್ತಿದ್ದಳು. ಇದರಿಂದಾಗಿಯೇ ರಂಗಣ್ಣನ ದೃಷ್ಟಿಯಲ್ಲಿ ಎಷ್ಟೋ ಸುಂದರಿಯರು ಸುಳಿದಿದ್ದರೂ ಇದಕ್ಕಿಂತ ಮೊದಲೊಮ್ಮೆಯೂ ಅವರ ಒಲಿಯೊಳಗೆ ಸಿಕ್ಕಿರಲಿಲ್ಲ. ಆದರೆ ಈಗ ಒಲಿದು ಬಂದ ರೂಪಸಿಯನ್ನು ತಿರಸ್ಕರಿಸುವುದಿರಲಿ...ಆ ಯೋಚನೆಯನ್ನು ಮಾಡುವುದೇ ಅಸಾಧ್ಯವೆನಿಸಿತಾತನಿಗೆ.

ರಂಗಣ್ಣ ಸುಲಕ್ಷಣೆಯರ ಸ್ನೇಹ ಸಂಬಂಧ ಬಹಳ ಗೌಪ್ಯವಾಗಿ ಆರಂಭವಾದರೂ ಕೆಲವೇ ದಿನಗಳಲ್ಲಿ ಅದು ಊರಿನ ಎಲ್ಲ ಜನರಿಗೂ ತಿಳಿದುಬಿಟ್ಟಿತು. ಆದರೆ ಇದರಿಂದ ಅವರ ಸ್ನೇಹಾಚಾರಕ್ಕೆ ಆತಂಕವಾಗುವುದಿರಲಿ ಇನ್ನಷ್ಟು ಹೆಚ್ಚಿನ ಲಾಭವೇ ಆಯಿತೆನ್ನಬೇಕು. ಅದೇನೆಂದರೆ ಈ ವರೆಗೆ ಮರೆಯಾಗಿ ಗೌಪ್ಯವಲ್ಲಿ ನಡೆದ ಒಡನಾಟ ಈಗ ಬಹಿರಂಗ ಅಂಜಿಕೆಯಿಲ್ಲದೇ ರಂಗಣ್ಣ ಎಲ್ಲರಿದಿರೇ ಸುಲಕ್ಷಣೆಯ ಮನೆಯಲ್ಲಿ ಗಳಿಗೆ ಹರಟೆ ಹೊಡೆಯುತ್ತಿದ್ದ. ಸುಲಕ್ಷಣೆ ಎಲ್ಲರಿದಿರು ಕಿಲಕಿಲನೆ ನಗುತ್ತಾ ಅವನನ್ನು ನಗಿಸುತ್ತಿದ್ದಳು. ಶ್ರೀಮಂತ ಸಾಹುಕಾರ ರಂಗಣ್ಣನನ್ನು ಇದಿರಿಸಿ ನಿಂದಿಸುವ ಸಾಮರ್ಥ್ಯ ಯಾವ ಮನುಷ್ಯನಿಗೂ ಇರಲಿಲ್ಲ. ಎಂದಮೇಲೆ ಅವನ ಪ್ರೇಯಸಿಯ ವಿಷಯ ನಿಂದಿಸುವುದಾದರೂ ಹೇಗೆ? ಮರೆಯಲ್ಲಿ ರಂಗಣ್ಣನ ತೆಗಳಿಕೆ, ಸುಲಕ್ಷಣೆಯ ನಿಂದೆ, ಅವಮಾನದ ಮಾತುಗಳು ಬೇಕಾದಷ್ಟಾಗುತ್ತಿತ್ತು. ಸುಖ, ಸಂತೋಷದ ಅಮಲಿನಲ್ಲಿರುವ ಸುಲಕ್ಷಣೆಗೆ ಅದು ಕೇಳಿಸಿದರೆ ತಾನೇ? ಅವಳದಕ್ಕೆ ಕಿವಿಗೊಟ್ಟಿರಲಿಲ್ಲವೇ?

ಅನಸೂಯೆಗೂ ಈ ವಿಷಯ ಕೆಲವೇ ದಿನಗಳಲ್ಲಿ ತಿಳಿದುಬಿಟ್ಟಿತ್ತು. ಒಬ್ಬ ಒಂದು ಫರ್ಲಾಂಗ್ ದೂರದ ತನ್ನ ಗೆಳತಿಯ ಮನೆಯಲ್ಲಿ ನಡೆಯುವ ಅನಾಚಾರವನ್ನು ಆಕೆ ಸಹಿಸದಾದಳು. ಸುಲಕ್ಷಣೆಯ ಸ್ನೇಹದಿಂದ ಮನೆ, ಮಡದಿ, ಮಕ್ಕಳನ್ನೇ ಮರೆತ ಗಂಡನ ವರ್ತನೆ ಕಣ್ಣೀರು ಬರಿಸಿತು. ಗೆಳತಿಯಂತೆಯೇ ಆತ್ಮೀಯಳಾಗಿ ಮನೆಗೆ ಬರುತ್ತಲಿದ್ದ ಸುಲಕ್ಷಣೆಯ ನಡತೆಯಿಂದಾಗಿ ಕ್ರೋಧ, ತಿರಸ್ಕಾರಗಳುಂಟಾದವು. ಆದರೆ ಮೊದಲೇ ಅಪರೂಪವಾಗಿ ಮನೆಗೆ ಬರುತ್ತಿದ್ದ ರಂಗಣ್ಣ, ಅನಸೂಯೆ ತನ್ನ ಸ್ನೇಹ ಸಂಬಂಧದ ವಿಷಯವಾಗಿ ಮಾತನಾಡಲಾರಂಭಿಸಿದ ಮೇಲಂತೂ ಮನೆಗೆ ಬರುವುದನ್ನೇ ನಿಲ್ಲಿಸಿಬಿಟ್ಟ. ಅನಸೂಯೆ ಕಣ್ಣೀರ್ಗರೆಯುತ್ತಾ ದಿನ ದೂಡಲಾರಂಭಿಸಿದಳು.

ನಾಲ್ಕು ವರ್ಷಗಳು ಕಳೆದವು. ವಿಧವೆ ಸುಲಕ್ಷಣೆಯ ನಿಂದೆ, ಅವಮಾನಗಳ ಹೀನನುಡಿ ಆಡಿ ಆಡಿ ಬೇಸತ್ತಿದ್ದರು ಜನರು. ಅವರ ವರ್ತನೆಯಲ್ಲೀಗ ಯಾವ ವಿಶೇಷತೆಯೂ ಇದೆ ಎನಿಸುವಂತಿರಲಿಲ್ಲ. ಆದರೆ ಅದಕ್ಕಿಂತಲೂ ಹೆಚ್ಚಿನ ಬದಲಾವಣೆಯೂ ಆಗಿತ್ತು, ರಂಗಣ್ಣ ಸುಲಕ್ಷಣೆಯರಲ್ಲಿ ಹೊಸತಾಗಿ ಅವರನ್ನು ನೋಡಿದ ಜನರು ಅವರು ಪತಿ, ಪತ್ನಿಯರಲ್ಲವೆಂದು ಎಂದೂ ಹೇಳುವಂತಿರಲಿಲ್ಲ. ಅಂತಹ ರೀತಿಯಲ್ಲಿಯೇ ಅವರು ಜೀವಿಸುತ್ತಿದ್ದರು. ಆ ನಾಲ್ಕು ವರ್ಷಗಳ ಅವಧಿಯಲ್ಲಿ ಸುಲಕ್ಷಣೆ ಯಾವ ಭೀತಿಯೂ ಇಲ್ಲದೆ, ಎರಡು ಮಕ್ಕಳನ್ನು ಹಡೆದಿದ್ದಳು. ರಂಗಣ್ಣ ಆ ಮಕ್ಕಳಿಂದ 'ಅಪ್ಪ'ನೆಂದೂ ಕರೆಸಿಕೊಂಡ. ಸುಲಕ್ಷಣೆ ಮುತ್ತೈದೆಯ ವೇಷದಿಂದಲೇ ಕಂಗೊಳಿಸುತ್ತಿದ್ದಳು. ಅಲ್ಲದೆ ರಂಗಣ್ಣನನ್ನು ಪತಿಯೆಂದೇ ಪೂಜಿಸಿ, ಗೌರವಿಸುತ್ತಿದ್ದಳು. ಆಕೆಯ ಮನೆಯಲ್ಲೀಗ ಶ್ರೀಮಂತಿಕೆ ತುಂಬಿ ತುಳುಕಾಡುತ್ತಿತ್ತು. ಮೊದಲಿನ ಒಂದು ಕೊಠಡಿಯ ಬದಲು ನಾಲ್ಕು ಕೋಣೆಗಳ ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ರಂಗಣ್ಣನ ಸಂಪಾದನೆಯ ಎಲ್ಲ ಹಣವೂ ಸುಲಕ್ಷಣೆಯ ಸುಖ, ಸಂತೋಷಗಳಿಗೆ ಮೀಸಲಾಗಿರುತ್ತಿತ್ತು. ಅವಳ ಸರ್ವ ಸಂಕಷ್ಟಗಳೂ ದೂರವಾಗಿದ್ದವು. ಆಕೆ ತನ್ನ ಕೆಲಸದ ಸಹಾಯಕ್ಕಾಗಿ ಹುಡುಗಿಯೋರ್ವಳನ್ನು ನಿಯಮಿಸಿಕೊಂಡಿದ್ದಳು. ಆ ಕೆಲಸದ ಹುಡುಗಿಯೇ ಹದಿನೆಂಟು ವರುಷದ ಪ್ರಭಾ. ಆಕೆ ಸುಲಕ್ಷಣೆಯ ದೂರದ ಸಂಬಂಧಿಕಳಂತೆ. ಪ್ರಭಾಳ ಚೆಲುವು ರಂಗಣ್ಣನನ್ನು ದಿಗ್ಭ್ರಮೆಗೊಳಿಸಿತು. ಸುಲಕ್ಷಣೆಗಿಂತಲೂ ಚೆಲುವೆಯರಿದ್ದಾರೆಂದರೆ? ಅಬ್ಬ ಇದೆಂತಹ ಸೌಂದರ್ಯ....ರಂಗಣ್ಣ ಪ್ರಭಾಳನ್ನು ನೋಡಿ ಬೆರಗಾಗಿಬಿಟ್ಟ. ಅವಳ ಸೌಂದರ್ಯದಿದಿರು ಸುಲಕ್ಷಣೆಯ ಸೌಂದರ್ಯ ಎಷ್ಟೊಂದು ಕ್ಷುಲ್ಲಕ ಎನಿಸಿತು. ಈಗವನಿಗೆ ಸುಲಕ್ಷಣೆಯಲ್ಲಿ ಯಾವ ಆಕರ್ಷಣೆಯೂ ಉಳಿದಂತಿರಲಿಲ್ಲ. ಅದೊಂದು ದಿನ ಸುಲಕ್ಷಣೆ ಅಳುವ ಮಗುವನ್ನು ಸಮಾಧಾನಗೊಳಿಸುತ್ತಾ ಮಗುವಿಗೆ ಉಣಿಸುತ್ತಿದ್ದಳು. ಆಗ ಪಕ್ಕದ ಕೊಠಡಿಯಿಂದ ಚೀರುವುದು ಕೇಳಿಸಿತು.

"ಅಯ್ಯೋ....ಬಿಡಿ....ಬಿಡಿ....ಬೇಡ.. ಊಹ್ಞ...."

"ಕೂಗ ಬೇಡ ಪ್ರಭಾ ನಿನ್ನ ಸೌಂದರ್ಯದಿಂದ ನಾನು ಭ್ರಾಂತನಾಗಿದ್ದೇನೆ. ನಿನಗಾಗಿ ನಾನು...."

"ಊಹ್ಞ... ಅಯ್ಯೋ... ನನ್ನನ್ನು ಬಿಡಿ" ಸುಲಕ್ಷಣೆ ಮಗುವನ್ನೆತ್ತಿಕೊಂಡೇ ಓಡಿದಳು. ಕೊಠಡಿಯ ಬಾಗಿಲ ಬಳಿ ಬಂದು ನಿಂತಳು. ರಂಗಣ್ಣ ಪ್ರಭಾಳ ಕೈ ಹಿಡಿದೆಳೆಯುತ್ತಿದ್ದಾನೆ. ಪ್ರಭಾ ಬಿಡಿಸಿಕೊಳ್ಳಲಿಕ್ಕಾಗಿ ಯತ್ನಿಸುತ್ತ ಅಳುತಿದ್ದಾಳೆ.

"ಥೂ...ಪಶು... ಮೃಗ.... ಥೂ... ಅಯ್ಯೋ...ದೇವರೇ..."

ರಂಗಣ್ಣ ಬೆಚ್ಚಿಬಿದ್ದು ಕೈಬಿಟ್ಟ. ಪ್ರಭಾ ಅಳುತ್ತಾ ಹೊರಗೋಡಿದಳು.

"ಎಂತಹ ಮೂರ್ಖನ ಸಹವಾಸ ಮಾಡಿದೆ ದೇವರೇ...ನಾನಂತೂ ಹಾಳಾದೆ ಆದರೆ ಎಲ್ಲರನ್ನೂ ಕೆಡಿಸುವುದೆಂದರೇನು? ನೀವೆಂತಾ ಮನುಷ್ಯರಪ್ಪಾ....ಮೃಗಕ್ಕಿಂತಲೂ ಕಡೆಯಾಗಿ...."

ಆಕೆ ಇನ್ನೂ ಮಾತನಾಡ ಬಯಸಿದ್ದಳು ಆದರೆ ಮೊದಲೇ ಸಿಟ್ಟು, ಅವಮಾನಗಳಿಂದ ಕೆರಳಿದ ರಂಗಣ್ಣ ಗರ್ಜಿಸತೊಡಗಿದ.

"ನಾನೇನು ನಿನ್ನ ಕೈಹಿಡಿದ ಗಂಡನೇನು? ಕೈಹಿಡಿದ ಹೆಂಡತಿಯನ್ನೇ ಬಿಟ್ಟಿದ್ದೇನಂತೆ....ನೀನೊಬ್ಬಳು ಗತಿಯಾಗಿರೋದು ಊರಿಗೇ ತಿಳಿದಿದೆ ನನ್ನ ವಿಚಾರ ಮಾತನಾಡುವ ಆಗತ್ಯ, ಅಧಿಕಾರ ನಿನಗಿಲ್ಲ...." ಎನ್ನುತ್ತಾ ಸಿಟ್ಟಿನಿಂದ ಹೊರಟುಬಿಟ್ಟನಾತ.

ಸುಲಕ್ಷಣೆ ಕುಸಿದು ಕುಳಿತು ಅಳತೊಡಗಿದಳು. ಅವಳೊಂದಿಗೆ ಮಗುವೂ ಅಳುವಿನ ದನಿಕೂಡಿಸಿತು. ಆದರೆ ರಂಗಣ್ಣ ಹಿಂದಿರುಗಿ ನೋಡಲೂ ಇಲ್ಲ. ಆ ಮೇಲೆ ಎಂದೂ ಅಲ್ಲಿಗೆ ಕಾಲಿರಿಸಲಾರೆನೆಂದು ಪ್ರತಿಜ್ಞೆಗೈದೇ ತೆರಳಿದ್ದನಾತ.


ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ತಿಳಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಒಡಿಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

REGD. No. B. G. 176
LICENCE No. 31
Licensed to Post without Prepayment

### ಕರ್ವೆ ತೋರಿದ ಬೆಳಕು

# ಮಹಿಳೆಯರ ಪುನರುಜ್ಜೀವನ



ಶತಾಯುಷಿ ಭಾರತರತ್ನ ಡಾಕ್ಟರ್ ಧೊಂಡೋ ಕೇಶವ ಕರ್ವೆಯವರು ಭಾರತದ ಮಹಿಳೆಯರಿಗೆ ಸಾಮಾಜಿಕ ಜೀವನದಲ್ಲಿ ವಿಶಿಷ್ಟವಾದ ಸ್ಥಾನಮಾನಗಳು ದೊರೆಯುವಂತೆ ನಿರಂತರ ದುಡಿದು, ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದವರಿಗೆ ಆಶ್ರಯ ನೀಡಿ ಅವರ ಬಾಳು ಹಸನಾಗುವಂತೆ ಶ್ರಮಿಸಿ ಸಾಮಾಜಿಕ ಜೀವನಕ್ಕೊಂದು ವಿನೂತನ ಅಧ್ಯಾಯ ತೆರೆದು ಕೊಟ್ಟಿದ್ದಾರೆ

ಭಾರತದಲ್ಲಿನ ವಿಧವೆಯರ ಹಾಗೂ ಅನಾಥರಾದ ಸ್ತ್ರೀಯರ ಮತ್ತು ಬಾಲಿಕೆಯರ ಕ್ಷೇಮಕ್ಕಾಗಿ ಶ್ರೀ ಕರ್ವೆಯವರು ತಮ್ಮ ಜೀವನದ ಸಿಂಹ ಭಾಗವನ್ನು ಸವೆಯಿಸಿದ್ದಾರೆ. ತಾನು ಮಾಡಿದ ಪ್ರಯತ್ನದ ಫಲವನ್ನು ಉಣ್ಣುವ ಭಾಗ್ಯ ಕೆಲವರಿಗೆ ಮಾತ್ರ ಇರುವುದು. ಶ್ರೀ ಕರ್ವೆಯವರು ಅಂತಹ ಪುಣ್ಯ ಜೀವಿಗಳಲ್ಲಿ ಒಬ್ಬರಾಗಿದ್ದಾರೆ.

ಶ್ರೀ ಕರ್ವೆಯವರೇ ಒಮ್ಮೆ ಹೇಳಿದ್ದಾರೆ—“ಸುಖಸಂಪೂರ್ಣವೂ, ಸಂತೃಪ್ತವೂ ಆದ ಜೀವನ ನನ್ನದು; ನನ್ನ ಅಭಿಲಾಷೆಗಳೆಲ್ಲವೂ ಪೂರ್ತಿಯಾಗಿವೆ. ಸಂಯುಕ್ತ ಮಹಾರಾಷ್ಟ್ರವು ರೂಪುಗೊಂಡದ್ದನ್ನು ಕಾಣಬೇಕೆಂಬ ನನ್ನ ಅಭಿಲಾಷೆಯೂ ಈಡೇರಿತು.” ಎಂದು.

ಪೂನಾದಿಂದ ೪ ಮೈಲು ದೂರದಲ್ಲಿ ಹಿಂಗ್ನೆ ಗ್ರಾಮದಲ್ಲಿ, ಮಹರ್ಷಿ ಕರ್ವೆಯವರು ತಮ್ಮ ವಿಧವಾ ಮಂದಿರವನ್ನು ಸ್ಥಾಪಿಸಿದರು. ಒಂದು ಚಿಕ್ಕ ಗುಡಿಸಲಿನಲ್ಲಿ ಶುರುಮಾಡುವಾಗ ಬರೇ ನಾಲ್ಕು ಮಂದಿ ವಿಧವೆಯವರು ಮಾತ್ರ ಅದರಲ್ಲಿದ್ದರು. ಆದರೆ ಅದೇ ಸ್ಥಳವಿಂದು ಮಹಿಳಾಕ್ಷೇಮ ಕಾರ್ಯಕರ್ತರ ಒಂದು ತೀರ್ಥವನ ಕೇಂದ್ರವಾಗಿ ಬಿಟ್ಟಿದೆ. ರಾಜಕೀಯ ಮುಂದಾಳುಗಳೂ ಸಮಾಜಸೇವಾತತ್ಪರರೂ, ವಿಶಿಷ್ಟ ವಿದೇಶೀ ಸಂಚಾರಿಗಳೂ ಆ ಸ್ಥಳವನ್ನು ಸಂದರ್ಶಿಸುವರು. ಭಾರತದ ಆ ವಂದ್ಯ ವಯೋವೃದ್ಧರಾದ ಮಹರ್ಷಿ ಕರ್ವೆಯವರಿಗೆ ತಮ್ಮ ಗೌರವವನ್ನು ಸಲ್ಲಿಸುವರು

ಪ್ರಾಯಾಧಿಕ್ಯವಿದ್ದರೂ ಶ್ರೀ ಕರ್ವೆಯವರು ಸಾಧಾರಣ ರೀತಿಯಲ್ಲೇ ಜೀವನ ಸಾಗಿಸುತ್ತಿದ್ದರು. ಸಾಯುವ ವರೆಗೂ ಅವರ ಜೀವನ ಚೆನ್ನಾಗಿಯೇ ಇತ್ತು. ಮಿತಹಾರಿಯಾದ ಅವರು ಮೊಸರು, ಹಣ್ಣು ಮತ್ತು ಬಿಸ್ಕತ್‌ಗಳನ್ನುಪಯೋಗಿಸುತ್ತಿದ್ದರು. ಮುಂಜಾನೆಯ ವಾಯು ಸೇವನಾ ಸಂಚಾರ ಅವರ ದಿನಚರ್ಯೆಗಳಲ್ಲಿ ಒಂದು. ಹಾಗೆಯೇ ಸಾಯಂಕಾಲ ಒಮ್ಮೆ ಕಾರಿನಲ್ಲಿ ಸುತ್ತಾಡಿ ಬರುವುದೆಂದರೂ ಅವರಿಗೆ ಬಹು ಆನಂದ ಅವರು ಓದದ ಮಾಸಿಕ ದೈನಿಕ-ಸಾಪ್ತಾಹಿಕ ಪತ್ರಿಕೆಗಳಿಲ್ಲ. ಹಾಗೆಯೇ ಶಾಸ್ತ್ರೀಯ ವಿಷಯಗಳಲ್ಲಿ ಅವರಿಗೆ ಹೆಚ್ಚಿನ ಅಧ್ಯಯನವಿದೆ. ಮಕ್ಕಳೊಡನೆ ಆಟವಾಡಿಕೊಂಡಿರುವುದೆಂದರೆ ಅವರಿಗೆ ಬಹು ಇಷ್ಟ.

ಸಂತೋಷ, ಸಂತಾಪ, ಪರೀಕ್ಷಾಕಾಲ ಇದುತಿ ಮೇಲಾಗುವಿಕೆಗಳು ಜೀವನದಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡಿವೆ. ತನ್ನ ಜೀವನ ಚರಿತ್ರೆ ‘ಜೀವನಕ್ಕೆ ಒಂದು ತಿರುವನ್ನುಂಟು ಮಾಡಿದ’ ಪ್ರತ್ಯೇಕವಾದ ಘಟನೆಯನ್ನು ಅವರು ಒಮ್ಮೆ ಹೇಳಿದ್ದಾರೆ—‘ಮೊದಲನೇ ಹೆಂಡತಿ ತೀರಿದಾಗ ನನಗೆ ೩೨ ವರ್ಷಗಳು ಆಗಿದ್ದುವು. ೨೦ ವರ್ಷದ ಒಬ್ಬ ಸ್ತ್ರೀಯನ್ನು ಮದುವೆಯಾಗುವಂತೆ ಆಗ ಮನೆಯವರು ನನ್ನನ್ನು ಒತ್ತಾಯ ಪಡಿಸಿದರು ಆದರೆ ಘನೀಭವಿಸಿದ ಪ್ರತಿಭಟನೆ. ಪರಿಹಾಸ್ಯಗಳನ್ನು ಲೆಕ್ಕಿಸದೆ ನಾನು ೨೪ ವರ್ಷ ವಯಸ್ಸಿ ಒಬ್ಬ ವಿಧವೆಯನ್ನು ಮದುವೆಯಾದೆ ಇದು ನಾನು ನನ್ನ ಜೀವನದಲ್ಲಿ ಧೈರ್ಯವಾಗಿ ಮಾಡಿದ ಒಂದು ವಿವೇಕಯುಕ್ತ ಕಾರ್ಯವಾಗಿತ್ತು,,

ಈ ಒಂದು ಘಟನೆಯು ವಿಧವೆಯರ ವಿವಾಹಕ್ಕೆ ಒಂದು ಮಹಾ ಪ್ರಸ್ತಾನವನ್ನೇ ಆರಂಭಮಾಡಲು ಶ್ರೀ ಕರ್ವೆಯವರಿಗೆ ಪ್ರಚೋದನೆ ಕೊಟ್ಟಿತು. ಅಂದಿನಿಂದ ಅವರು ಅದಕ್ಕಾಗಿಯೇ ಹೋರಾಡಿದರು.

೧೮೯೬ರಲ್ಲಿ ಶ್ರೀ ಕರ್ವೆಯವರು ವಿಧವಾ ವಿವಾಹ ಸಂಘಟನೆಯನ್ನು ಪ್ರಸ್ತಾಪಿಸಿದರು. ವಿಧವಾ ಮಂದಿರವನ್ನು ಪಟ್ಟಣದಿಂದ ತುಸು ದೂರದಲ್ಲಿ ಸ್ಥಾಪಿಸಬೇಕೆಂಬುದು ಅವರ ಆಸೆಯಾಗಿತ್ತು. ಅದಕ್ಕಾಗಿ ಅವರಿಗೆ ಸ್ಥಳ ಉಚಿತವಾಗಿ ದೊರೆಯಿತು. ವಿಧವಾ ಮಂದಿರದ ಕೆಲಸವೂ ಪ್ರಾರಂಭವಾಯಿತು. ಆ ಸಂದರ್ಭದ ತನ್ನ ಮಾನಸಿಕ ಸ್ಥಿತಿಯ ಬಗ್ಗೆ ಶ್ರೀ ಕರ್ವೆಯವರು “ಆ ಕಾಲದಲ್ಲಿ ನಮ್ಮ ಹೆಂಗೆಳೆಯರು ಒಂದು ಮಾಡಿನ ಕೆಳಗೆ ಮಲಗಬೇಕಾಗಿತ್ತು. ಚಾಪೆಯನ್ನು ಹೊದ್ದುಕೊಂಡು ಮಲಗುವುದೇ ಮಳೆಯಿಂದ ಮುಕ್ತಗೊಳ್ಳಲಿದ್ದ ಉಪಾಯವಾಗಿತ್ತು. ನಾವು ಭಾರತದ ಸ್ತ್ರೀಯರ ಸಾಮಾಜಿಕವೂ ಸಾಂಪತ್ತಿಕವೂ ಆದ ದಾಸ್ಯತೆಯನ್ನು ನಿರ್ಮೂಲ ಮಾಡಲು ಕಂಕಣ ಬದ್ಧರಾಗಿ ಕಾರ್ಯರಂಗಕ್ಕಿಳಿದುದರಿಂದ ಕುಪಿತರಾದ ಮೂವಲೀ ಜನರು ನಮ್ಮ ಮೇಲೆ ಕಲ್ಲೆಸೆಯುವರೋ ಎಂಬ ಭಯದಿಂದ ಒಂದೊಂದು ದಿನವನ್ನು ಬಹು ಜಾಗ್ರತೆಯಿಂದ ಕಳೆಯುತ್ತಿದ್ದೆವು” ಎಂದು ಹೇಳಿದ್ದಾರೆ. ಅದೃಷ್ಟ ವಶಾತ್ ಅಂತಹ ಸಂದರ್ಭ ಬಂದೊದಗಲಿಲ್ಲ. ಆ ಸ್ಥಳವಿಂದು ವಿಧವಾ ಮಂದಿರದಿಂದ ಮಹಿಳಾ ವಿದ್ಯಾಪೀಠದಿಂದ ಕಂಗೊಳಿಸುತ್ತಿದೆ.

ಸುಮಾರು ೬೦ ವರ್ಷಗಳ ಹಿಂದೆ ಬರೇ ಕಳ್ಳಿಗಿಡಗಳಿಂದ ತುಂಬಿ ಶೂನ್ಯವಾದ ಪ್ರದೇಶವಿಂದು ಒಂದು ಸ್ವಯಂಪೂರ್ಣವಾದ ಕಾಲೊನಿಯಾಗಿದೆ. ಅಲ್ಲಿನ ಮಹಿಳಾ ವಿದ್ಯಾ ಪೀಠದಲ್ಲಿ ಸಾವಿರಕ್ಕಿಂತಲೂ ಹೆಚ್ಚು ಹೆಂಗಸರು ಅಧ್ಯಯನ ಮಾಡುತ್ತಿದ್ದಾರೆ. ಧನಿಕರೂ, ದರಿದ್ರರೂ ಅನಾಥರೂ, ಮಾನ್ಯ ಕುಲಜಾತರೂ ಇಂದಲ್ಲಿ ಒಟ್ಟಿಗೆ ಕುಳಿತು ಉಣ್ಣುತ್ತಾರೆ ಅವರೆಲ್ಲವರೂ ಸೇರಿ ಒಂದು ಸ್ವತಂತ್ರವಾದ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೆ.

—— —

## —: ಅಮೃತ ಬಿಂದು :—

ಜೇನಿನೊಳಗೆ ಮುಳುಗಿದ್ದರೂ ಕೂಡ ಸಟ್ಟುಗವು ಯಾವ ರೀತಿ ಜೇನಿನ ರುಚಿಯನ್ನರಿಯದೋ ಹಾಗೆಯೇ ಜ್ಞಾನಿಗಳೊಡನಿರುವ ತಿಳಿಗೇಡಿಯೂ ಕೂಡ!

o o o

ನಿನ್ನ ಬಗ್ಗೆ ನೀನು ಎಚ್ಚರದಿಂದಿರಬೇಕು. ನಿನ್ನ ಸಹೋದರ ತಪ್ಪು ಮಾಡಿದರೆ ಆತನನ್ನು ಕ್ಷಮಿಸು. ಆದರೆ ನೀನು ತಪ್ಪು ಮಾಡಿದರೆ ನಿನ್ನನ್ನು ಶಿಕ್ಷಿಸದಿರಬೇಡ.

o o o

ದೇವರ ಮೆಚ್ಚುಗೆ ಪಡೆಯಲು ಬ್ರಾಹ್ಮಣನಾಗಬೇಕಿಲ್ಲ ಋಷಿ, ಸನ್ಯಾಸಿಗಳಾಗಬೇಕಿಲ್ಲ. ಮನುಷ್ಯನ ಆತ್ಮದ ವಿಶ್ವಾಸದಲ್ಲಿ ದೇವರಿದ್ದಾನೆ.

o o o

ಖ್ಯಾತಿ ಎಂಬುದು ಖಾಸಗಿ ಆಸ್ತಿ ಅದನ್ನು ಕಳೆದುಕೊಳ್ಳುವ ವರೆಗೆ ಅದರ ಬೆಲೆ ತಿಳಿದಿರುವುದಿಲ್ಲ.

—— ——

**ಹೊಸ ಪುಸ್ತಕ—**
**ನಚಿಕೇತ'ರ,**
ನವೀನ ಕಾದಂಬರಿ—

**ಹಸುರು ಹಂಸ**

**ಇದೀಗ ಪ್ರಕಟವಾಗಿದೆ.**
ಬೆಲೆ: ರೂ. ಎರಡು.
ವಿಚಾರಿಸಿರಿ.
**ನವಯುಗ ಪ್ರೆಸ್, ಉಡುಪಿ.**

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: **ಉಡುಪಿ (ಮೈಸೂರು ರಾಜ್ಯ)**
ಸ್ಥಾಪನೆ: ೧೯೨೫

**ಪ್ರಕಟಣೆ**

**ದಿ ಕೇರಳ ಸರ್ವಿಸ್ ಬ್ಯಾಂಕ್ ಲಿಮಿಟೆಡ್**
**ತ್ರಿವೆಂಡ್ರಮ್**
ಇದರ ಸಾಲಮೂಲಗಳನ್ನು 1962 ದಶಂಬರ 29ರಂದು
**ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್**
**ಸಿಂಡಿಕೇಟ್ ಲಿಮಿಟೆಡ್**
ವಹಿಸಿಕೊಂಡಿದೆ ಎಂದು ತಿಳಿಸಲು ಬ್ಯಾಂಕಿನ ಡೈರೆಕ್ಟರ್ ಮಂಡಳಿಯವರು ಸಂತೋಷಪಡುತ್ತಾರೆ. ಈ ಬ್ಯಾಂಕಿನ ಸಂಯೋಜನೆಯಿಂದಾಗಿ ಸಿಂಡಿಕೇಟ್ ಬ್ಯಾಂಕಿಗೆ ಕೇರಳ ರಾಜ್ಯದಲ್ಲಿ ಇನ್ನು ಎಂಟು ಶಾಖೆಗಳು ಹೆಚ್ಚಾಗುವವು.

1. ಚೆಂಗನಚೆರಿ
2. ಕಾಯಮ್‌ಕುಲಮ್
3. ಕ್ವಿಲೋನ್
4. ಪಂಡಲಮ್
5. ಪೊನ್ನುನ್ನಮ್
6. ಪುನಲುರ್
7. ತೊಡುಪುರಾ
8. ತ್ರಿವೆಂಡ್ರಮ್

ಕೇರಳ ಸರ್ವಿಸ್ ಬ್ಯಾಂಕಿನ ಅಲೆಪ್ಪಿ ಮತ್ತು ಕೊಟ್ಟಾಯಂ ಶಾಖೆಗಳು ಸಿಂಡಿಕೇಟ್ ಬ್ಯಾಂಕಿನ ಅಲೆಪ್ಪಿ ಮತ್ತು ಕೊಟ್ಟಾಯಂ ಶಾಖೆಗಳೊಂದಿಗೆ ವಿಲೀನಗೊಳ್ಳುವುವು.

**ಡಾ| ಟಿ. ಎಂ. ಪೈ,** ಚೆಯರ್‌ಮನ್
**ಟಿ. ಎ. ಪೈ,** ಮೆನೇಜಿಂಗ್ ಡೈರೆಕ್ಟರ್

175 ಶಾಖೆಗಳು
**ಸಿಂಡಿಕೇಟ್ ಬ್ಯಾಂಕ್**

Edited Printed & Published by K. H. Shetty, at the Navayuga Press, Udipi, S. India.

ONTRIBUTE
OUR MITE
O OUR
ATIONAL
EFENCE
UND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ
Regd. No. B.G. 176
Vol. 42 No. 18

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 10—1—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೧೮

### ಭಾರತದ ಗಡಿಯಲ್ಲಿ

## ಚೀನೀಯರ ಸಮರ ಸಿದ್ಧತೆ

ಬೆಕ್ಕು ಸನ್ಯಾಸಿಯಂತೆ ಬಾಯಲ್ಲಿ ಶಾಂತಿ ಶಾಂತಿ ಎಂದು ಹೇಳಿ ಇಲಿಗಳನ್ನೆಲ್ಲ ತಿಂದಂತೆ ಇಂದು ಚೈನಾ ಮಾಡುತ್ತಿದೆ. ಸಮರವಿರಾಮ ಮಾಡಿ ತನ್ನ ಸೈನ್ಯವನ್ನು ತಾನು ಪ್ರಾಮಾಣಿಕವಾಗಿ ಹಿಂತೆಗೆಯುತ್ತಿದ್ದೇನೆಂದು ಚೈನಾದ ನಾಯಕರು ಸಾರುತ್ತಿದ್ದಾರೆ. ಅವರು ವಸ್ತುಸ್ಥಿತಿಯನ್ನು ಅಡಗಿಸಿ ಜಗತ್ತಿನ ಕಣ್ಣಿಗೆ ಮಣ್ಣೆರಚಿ ಸುಳ್ಳನ್ನು ಸತ್ಯಸ್ಯ ಸತ್ಯಕಥನವೆಂದು ಸಮರ್ಥಿಸುತ್ತಿರುವುದು ನಿಜಕ್ಕೂ ವಿಶ್ವದ ಕೆಲವು ರಾಷ್ಟ್ರಗಳಿಗೆ ಇನ್ನೂ ಅರಿವಾಗಿಲ್ಲ. ಚೀನಾ ಸತ್ಯ ಹೇಳುತ್ತಿದೆಯೆಂಬ ಭಾವನೆ ಕೆಲವರಿಗೆ ಇದೆ. ಅವರು ವಸ್ತುಸ್ಥಿತಿಯ ಸರಿಯಾದ ಜ್ಞಾನಮಾಡಿಕೊಳ್ಳದುದೇ ಇದರ ಕಾರಣ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂದು ಚೀನೀ ನಾಯಕರು ಯುದ್ಧವಿರಾಮ ಸಾರಿ ಜಗತ್ತಿನೆದುರಿಗೆ ತಾವು ಸಂಭಾವಿತರು, ಶಾಂತಿಪ್ರಿಯರು ಎಂಬುದನ್ನು ತೋರಿಸಬಯಸುತ್ತಾರೆ. ತಮ್ಮ ನೀತಿ ಆಕ್ರಮಣ ನೀತಿಯಲ್ಲವೆಂಬುದನ್ನು ತೋರಿಸಿಕೊಂಡು ಜಗತ್ತಿನ ಜನತೆಯು ತಮ್ಮ ಮೇಲಿನ ಆರೋಪವನ್ನು ಕಲಂಕವನ್ನು ದೂರೀಕರಿಸಲೆತ್ನಿಸುತ್ತಿದ್ದಾರೆ. ಗಡಿಯಿಂದ ತಮ್ಮ ಸೇನೆಯನ್ನು ಹಿಂದೆ ತೆಗೆದುದು ಬರೇ 'ನಾಮ್‌ಕೇವಾಸ್ತೆ' ತಾನೇ. ಅಲ್ಲಿ ತಮ್ಮ ಪಹರೆಯವರನ್ನು ಗುಪ್ತಚಾರರನ್ನು ಗುಪ್ತವಾಗಿರಿಸಿ. ಕೆಲವು ಕಡೆ ಪೋಲೀಸ್ ಠಾಣ್ಯವನ್ನೂ ಇರಿಸಿದ್ದಾರೆ. ಇದರ ನಂತರ ನಾವು ಯುದ್ಧ ನಿಲ್ಲಿಸಿ ಗಡಿಯನ್ನು ಸೇನಾ ರಹಿತಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಭಾರತವನ್ನು ಮಾತುಕತೆಗೆ ಬರುವಂತೆ ಮತ್ತೆ ಮತ್ತೆ ಕರೆಯುತ್ತಿದ್ದಾರೆ. ಇದರಲ್ಲಿ ಏನೂ ಹುರುಳಿಲ್ಲ ಎಂಬುದು ಸ್ವಯಂ ವಿದಿತ.

### ಯುದ್ಧ ಸಿದ್ಧತೆ

ಚೀನಾ ಯುದ್ಧ ವಿರಾಮ ಸಾರಿದುದು ಕೇವಲ ತನ್ನ ಯುದ್ಧ ತಯಾರಿಗೆಂಬುದನ್ನು ಈಗ ಜಗತ್ತೇ ಮನಗಂಡಿದೆ. ಬಾಯಿಯಲ್ಲಿ 'ನಾವು ಸಂಧಾನಕ್ಕೆ ಸಿದ್ಧರಿದ್ದೇವೆ. ನಾವು ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲು ಬಯಸುತ್ತೇವೆ. ನಮಗೆ ಯುದ್ಧ ಬೇಡವೆಂದು ಢಂಬಾಚಾರ ಮಾಡುತ್ತಿದೆ. ಚೀನಾದ ಈ ತೆರನ ಪ್ರವೃತ್ತಿ ಪ್ರಾರಂಭದಿಂದಲೇ ಭಾರತಕ್ಕೆ ತಿಳಿದಿದೆ. ಅಂದು ನೆಹರೂರವರು ಚೀನಾದ ಭೂಪಟದ ಬಗ್ಗೆ ಮಾತಾಡಿದಾಗ ಚೌರವರು, 'ಅದು ಪ್ರಿಂಟ್ ಮಿಸ್ಟೇಕ್ ಮುಂದಿನ ಬಾರಿ ಸರಿಪಡಿಸುತ್ತೇವೆ' ಎಂದು ಹೇಳಿ ಸಾಗಿಸಿದುದು ದೊಡ್ಡ ಸೈನ್ಯವನ್ನೇ ಅದೇ ರೀತಿ ಈಗ ಯುದ್ಧ ವಿರಾಮ ಎಂದು ಬಾಯಿಯಲ್ಲಿ ಹೇಳಿ, ಭರದಿಂದ ಯುದ್ಧ ಸಿದ್ಧತೆಮಾಡುತ್ತಿದೆ. ಇಷ್ಟು ಮಾತ್ರವಲ್ಲದೆ ಈಗ ಅದು ಭಾರತವು ತನ್ನ ಮೋಸ, ಕಪಟ, ವಂಚನೆಗಳಿಂದ ಕೂಡಿದ ಸೂಚನೆಗಳಿಗೆ ಒಪ್ಪದಿದ್ದರೆ ತಾನು ಯುದ್ಧ ಮಾಡಬೇಕಾಗುವುದು ಎಂದು ಬೆದರಿಕೆ ಹಾಕಿದೆ.

### ಟಿಬೇಟಿನಲ್ಲಿ ಭಾರೀ ತಯಾರಿ

ಟಿಬೇಟನ್ನು ಮೋಸ ಅನ್ಯಾಯಗಳಿಂದ ನುಂಗಿದ ಚೀನಾ ಈಗ ಅದನ್ನು ಸಮರ ತಯಾರಿಯ ಕೇಂದ್ರವನ್ನಾಗಿಮಾಡಿಕೊಂಡಿದೆ. ಅಲ್ಲಿ ಚೀನಾ—ಭಾರತ ಗಡಿಯುದ್ಧ ಶುರುವಾದಂದಿನಿಂದಲೇ ಸೈನಿಕರಿಗೆ ಶಿಕ್ಷಣಕೊಡಲ್ಪಡುತ್ತಿತ್ತು. ಆದರೆ ಕಳೆದ ತಿಂಗಳ ಉತ್ತರಾರ್ಧದಿಂದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳನ್ನು ತೆರೆದಿದೆ. ಟಿಬೇಟಿನ ಕಪಂಗ್ಲಾ ಪಟ್ಟಣದ ಪ್ರದೇಶದಲ್ಲಿ ಮಿಶನ್ ಗನ್ನುಗಳು, ಪಿಸ್ತೂಲ್, ಕೋವಿ ಮೊದಲಾದ ಶ್ರೇಷ್ಠ ತರಗತಿಯ ಯುದ್ಧ ಸಾಮಗ್ರಿಗಳು ಭರದಿಂದ ತಯಾರಿಸಲಾಗುತ್ತಿವೆ. ತನ್ನ ದೇಶದ ಜನರನ್ನು ಕೂಳಿಲ್ಲದೆ ಕೊಂದುಹಾಕಿದರೂ ಅದು ಭಾರತದ ಮೇಲೆ ಯುದ್ಧ ಮಾಡದಿರದು. ಅದು ರಷ್ಯಾದಿಂದ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳುವ ಯೋಚನೆಯಲ್ಲಿತ್ತು. ಆದರೆ ಅದರ ಅಹಂಕಾರಕ್ಕೆ ಬಗ್ಗದ ರಷ್ಯ ಅದನ್ನು ಮತ್ತೆ ಎಚ್ಚರಿಸಿದುದರಿಂದ ಈಗ ಅದು ತನ್ನನ್ನು ತಾನೇ ನೋಡಿಕೊಳ್ಳುವಂತಾಗಿದೆ. ಅದಕ್ಕೆ ಭಾರತಕ್ಕೆ ಸಹಾಯ ಮಾಡುವಂತೆ ಸಹಾಯ ಮಾಡುವ ರಾಷ್ಟ್ರಗಳಾವುವೂ ಇಲ್ಲ.

### ತನ್ನ ಸಂಸ್ಕೃತಿಗೇ ಮಹಾ ಆಘಾತ

ಚೀನಾವು ಭಾರತದ ಮೇಲೆ ಆಕ್ರಮಣ ಮಾಡಿ ಪರಂಪರಾಗತ ತನ್ನ ಸಂಸ್ಕೃತಿ ಧರ್ಮಕ್ಕೆ ಮಹಾನ್ ಆಘಾತವನ್ನುಂಟುಮಾಡಿದೆ ಎಂದು ನೆಹರೂರವರು ಸ್ಪಷ್ಟವಾಗಿ ನುಡಿದಿದ್ದಾರೆ. ರವೀಂದ್ರರ ವಿಶ್ವಭಾರತಿ ವಿಶ್ವವಿದ್ಯಾಲಯದ ಪದವೀದಾನದ ಸಂದರ್ಭದಲ್ಲಿ ಚೀನಾದವರಾಗಿ ಚೀನಾ ಸಂಸ್ಕೃತಿ-ಕಲೆಗಳ ಶಿಕ್ಷಣ ಕೊಡುತ್ತಿರುವ ಒಬ್ಬ ಪ್ರೊಫೆಸರರು ಚೀನಾದ ಅಸುರೀಕೃತ್ಯದ ಬಗ್ಗೆ ನೆಹರೂರವರ ಭಾಷಣ ಕೇಳುತ್ತಾ ಕೇಳುತ್ತಾ ಧಾರಾಕಾರವಾಗಿ ಕಣ್ಣೀರ್ಗರೆದಿದ್ದಾರೆ. ಬುದ್ಧನ ಧರ್ಮವನ್ನು ಅವರು ತಿರುವು ಮುರುವು ಮಾಡಿಕೊಂಡಿದ್ದಾರೆ. ಬುದ್ಧನನ್ನು ಕಮ್ಯೂನಿಸ್ಟ್ ಪಾರ್ಟಿಗೆ ಸೇರಿಸಿಬಿಟ್ಟಿದ್ದಾರೆ. ರಾಷ್ಟ್ರಪಿತ ಡಾ। ಸನ್. ಯಾತ್. ಸೇನರ ಆಶೆಗಳನ್ನು ಹಾರಿಸಿ, ನುಚ್ಚುನೂರಾಗಿಸಿ ಸಾಮ್ರಾಜ್ಯದೇವಿಯ ಉಪಾಸನೆ ಮಾಡುತ್ತಿದ್ದಾರೆ. ಭಾರತ ತಮ್ಮ ಸಂಸ್ಕೃತಿ-ಧರ್ಮಗಳಿಗೆ ಮಾತ್ರ ಸ್ಥಾನ-ಮೂಲ ಕೇಂದ್ರ ಎಂಬುದನ್ನು ಮರೆತು ಅದು ತಮ್ಮ ಕೈಯೊಳಗಿನ ನೆಲ್ಲಿಯಾಗಬೇಕೆಂದು ಹಣಿಕಿ ಆಕ್ರಮಣ ಮಾಡಿದ್ದಾರೆ. ಹೀಗೆ ತಮ್ಮ ಆತ್ಮಕ್ಕೆ ಘಾತುಕ ಕೆಲಸ ಮಾಡಿಕೊಂಡ ಚೀನೀಯರು ಅಧಃಪತನದ ಗುಂಡಿಯಲ್ಲಿ ಬೀಳುವ ಸಮಯ ಬಹು ಸನಿಹವಾಗಿದೆ.

### ಸಿರಿಮಾವೋ ದೌತ್ಯ

ತಟಸ್ಥ ರಾಷ್ಟ್ರಗಳ ನಾಯಿಕೆಯಾಗಿ ಸಿಂಹಳದ ಸಿರಿಮಾವೊ ಇಂದು ಈ ವಿವಾದವನ್ನು ಪರಿಹರಿಸುವ ಕಾರ್ಯದಲ್ಲಿದ್ದಾರೆ. ಆದರೆ, ಇದರಿಂದೇನೂ ಆಗುವಂತಿಲ್ಲ. ಯಾಕೆಂದರೆ ಅವರು ವಸ್ತುಸ್ಥಿತಿಯ ಸರಿಯಾದ ಜ್ಞಾನವನ್ನು ಮುಖ್ಯಾಧಾರವಾಗಿಟ್ಟುಕೊಂಡು ಇಂದು ಸಮಸ್ಯೆಗೆ ಪರಿಹಾರ ಹುಡುಕಿಲ್ಲ. ಅವರು ಉಭಯ ರಾಷ್ಟ್ರಗಳಿಗೆ ಸಮ್ಮತವಾಗುವ ಸೂತ್ರವೆಂದು ಬಾಯಲ್ಲಿ ಹೇಳಿ ಭಾರತ ಚೀನಾಗಳ ಮುಖಕ್ಕೆ ತಕ್ಕಂತೆ ಮಾತಾಡಿ ಅನಂತರ ಸುಮ್ಮನೆ ಕುಳಿತುಕೊಳ್ಳುವುದರಲ್ಲಿ ಸಂಶಯವಿಲ್ಲ. ಚೀನಾ ಆಕ್ರಮಣ ಮಾಡಿದೆಯೆಂಬುದು ಜಗಜ್ಜನಿತವಾಗಿರುವಾಗ ಅವರು ಇನ್ನು ಸಂಧಾನವೇನೆಂದು ಮಾಡುವುದು? ಭಾರತದ ಭೂಭಾಗವನ್ನು ಸಿರಿಮಾವೋ ಬಂದರೆಂದು ನಾವು ಕೊಡಲು ಸಿದ್ಧರಿಲ್ಲ. ಚೀನಾದವರು ಕಪಟ ನಾಟಕ ಸೂತ್ರಧಾರಿಗಳಾಗಿ ಜಗತ್ತಿನ ಕಣ್ಣಿಗೆ ಮಣ್ಣೆರಚಿ ತಾವು ಆಕ್ರಮಿತ ಪ್ರದೇಶವನ್ನು ಒಳಗೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗಿರುವಾಗ ಸಿರಿಮಾವೋ ಏನು ಮಾಡಲು ಸಾಧ್ಯವಿದೆ? ಇದರಿಂದ ಸಿರಿಮಾವೊ ಯಾ ಅನ್ಯ ತಟಸ್ಥ ರಾಷ್ಟ್ರಗಳು ಏನನ್ನೂ ಮಾಡುವಂತಿಲ್ಲ. ಭಾರತ ಚೀನಾ ಆಕ್ರಮಿತ ಸ್ಥಳದಿಂದ ಹಿಂದೆ ಹೋಗದೆ ಯಾವುದೇ ತರದ ಸೂಚನೆ, ಒಪ್ಪಂದ ಮಾತುಕತೆಗಳಿಗೆ ಸಿದ್ಧವಿಲ್ಲ. ಯಾಕೆಂದರೆ ಚೀನಾ ನಮಗೆ ಚೆನ್ನಾಗಿ ಬುದ್ಧಿ ಕಲಿಸಿದೆ. ಇನ್ನು ನಾವು ಅದರ ಬಲೆಗೆ, ಮೋಸಕ್ಕೆ ಮತ್ತೆ ತುತ್ತಾಗಲಾರೆವು.

### ಚೀನಾ ಯುದ್ಧ ಮಾಡುವುದು!

ಇದರಿಂದ ಚೀನಾ ಖಂಡಿತವಾಗಿಯೂ ಇನ್ನು ಸ್ವಲ್ಪವೇ ಸಮಯದಲ್ಲಿ ಭಾರತದ ಮೇಲೆ ಭಾರೀ ಪ್ರಮಾಣದ ಯುದ್ಧಮಾಡುವ ನಿರೀಕ್ಷೆಯಿದೆ. ಅದು ಈಗ ಕೇವಲ ತನ್ನ ಯುದ್ಧಕಾರ್ಯಕ್ಕೆ ದೊಡ್ಡ ಗಾತ್ರದ ನೆವನ ಹುಡುಕುತ್ತಿದೆ. ಅದು ಒಂದು ನಾಟಕವಾಡಿ ಜಗತ್ತಿಗೆ ತನ್ನ ಮೋಸ, ವಂಚನೆಗಳ ಸ್ಪಷ್ಟ ಪ್ರದರ್ಶನವನ್ನು ತೋರಿಸುತ್ತಿದೆ. ಭಾರತೀಯರು ಇಂಥ ಮೋಸಕ್ಕೆ ಇನ್ನು ಬಲಿಯಾಗರು. ನಮ್ಮಲ್ಲಿಯೂ ಸೇನೆಯ ತಯಾರಿ ಭರದಿಂದ ಸಾಗುತ್ತಿದೆ. ನಾವು ಚೀನಿಯರಿಗೆ ಹೆದರಬೇಕೆಂದಿಲ್ಲ. ಅವರ ಈ ಕಪಟವನ್ನು ಬಯಲಾಗಿಸಿ, ಭಾರತದ ಸತ್ಯ-ನ್ಯಾಯವಾದ ನೀತಿಯನ್ನು ಜಗತ್ತಿಗೆ ಸಾರಿ ನಮ್ಮ ತಾಯಿಯ ನೆಲದಿಂದ ಚೀನೀಯರನ್ನು ಓಡಿಸದೆ ಬಿಡಲಾರೆವು.

—ಶ್ರೀ ರಾಮತನಯ.

ಹೆಚ್ಚು ಬೆಳೆಸಿರಿ
ಕಡಿಮೆ ಬಳಸಿರಿ

ಭದ್ರತೆ
ಬಾಳಿಕೆಗಾಗಿ
ಖೀರಾ

ಇದೀಗ ರಾಷ್ಟ್ರ ರಕ್ಷಣೆ, ಭದ್ರತೆಗಾಗಿ ಹೋರಾಡುವ ಕಾಲವಲ್ಲವೆ?
ನಿಮ್ಮ ಮನೆಯ ಸುರಕ್ಷಿತತೆ, ಭದ್ರತೆಗಳಿಗಾಗಿ ಖೀರಾ ಉಕ್ಕಿನ ಫರ್ನಿಚರುಗಳನ್ನು ಆರಿಸುವುದು ಉಚಿತವಲ್ಲವೆ?
ಮನೆ, ಮಠ, ಆಫೀಸು, ಆಸ್ಪತ್ರೆ, ಶಾಲೆ ಕಾಲೇಜುಗಳಿಗೆ ಅತ್ಯಾವಶ್ಯಕವಾದ ಯಾವತ್ತೂ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ ಯಾ ಸಂದರ್ಶಿಸಿರಿ!

ಶಾಸ್ತ್ರಿ & ಕೋ
ಹಂಪನಕಟ್ಟೆ,
ಮಂಗಳೂರು- 1.

(ಕಿರು ನಾಟಕ)

# "ರಂಗಮ್ಮನ ಇತಿಹಾಸ"

ಲೇಖಕ: ಪಿ. ಜಿ. ಪರಮೇಶ್ವರಪ್ಪ

— ಪಾತ್ರ ವರ್ಗ —

ರಂಗಮ್ಮ— ವಿಧವೆ.

ಪಾರ್ವತಿ— ರಂಗಮ್ಮನ ಮಗಳು.

ರಾಜು— ತಬ್ಬಲಿಯಾಗಿ ಬೆಳೆದವನು.

ರವಿ— ರಾಜುವಿನ ಸ್ನೇಹಿತ.

●

(ಒಂದು ಅಲಂಕೃತವಾದ ರೂಮು ಒಂದು ಮೂಲೆಯಲ್ಲಿ ಮಂಚ ಅದರ ಮುಂದೆ Table. ಟೇಬಲ್ ಮೇಲೆ ಹೊಗೆಯಾಡುತ್ತಿರುವ ಊದುಬತ್ತಿ ಇದೆ. ರೂಮು ಮುಂಭಾಗದಲ್ಲಿ ಎರಡು ಕುರ್ಚಿ, ಅದರ ಮುಂದೊಂದು ಟೇಬಲ್. ಕುರ್ಚಿಯಲ್ಲಿ ಪಾರ್ವತಿ ಕುಳಿತುಕೊಂಡು ಅಳುತ್ತಿರುತ್ತಾಳೆ. ತೆರೆ ಸರಿದ ನಂತರ ರಂಗಮ್ಮನ ಪ್ರವೇಶ.)

ರಂಗಮ್ಮ— ಪಾರೂ ಪಾರೂ, ಇದೇನೆ ಹಿಂಗೆ ಕುರ್ಚಿಯಲ್ಲಿ ಕುಳಿತುಕೊಂಡಿದ್ದೀಯಾ. ಅವರು ಬರುವ ಹೊತ್ತಾಯಿತು. ಶೃಂಗಾರವೆಲ್ಲಾ ಆಯಿತೇನೇ. [ಪಾರ್ವತಿ ತಲೆ ಎತ್ತುವಳು] ರಂಗಮ್ಮ ಕಣ್ಣೀರು ಒರೆಸುತ್ತಾ. ಅಳಬೇಡ, ಪಾರ್ವತಿ ಅಳಬೇಡ. ಏನು ಮಾಡಲಿ ಹೇಳು. ಎರಡು ಹೊತ್ತಿನ ಕೂಳಿಗಾದರೂ ಈ ಕೆಲಸ ಮಾಡಲೇ ಬೇಕು ವಿಧಿ ನಿಯಮವನ್ನು ತಪ್ಪಿಸುವರಾರು? ನನ್ನ ಕಾಲದಲ್ಲಿ ನನ್ನದೇ ಒಂದು ಇತಿಹಾಸವಾಯಿತು. ಅರೇ ಕುಂಕುಮವನ್ನೇ ಇಟ್ಟು ಕೊಂಡಿಲ್ಲವಲ್ಲ ಒಳಗಡೆ ಹೋಗಿ ಕುಂಕುಮ ಹಚ್ಚಿಕೊಂಡು ಬಾ ಹೋಗು.

ಪಾರ್ವತಿ— ಅಮ್ಮೋ! (ಅಳುವಳು).

ರಂಗಮ್ಮ— ಅಳಬೇಡ ಪಾರೂ.

ಪಾರ್ವತಿ— (ದುಃಖಿಸುತ್ತಾ) ಅಮ್ಮಾ, ಸೂಳೆಯಾಗಿ ಸಾಯುವುದಕ್ಕಿಂತ ಆತ್ಮಹತ್ಯೆಮಾಡಿಕೊಳ್ಳುವುದೇ ಲೇಸು. ಬಂದ ಬಂದ ಗಂಡಸರಿಗೆ ಮೈಕೊಟ್ಟು ಆರೋಗ್ಯ ಕೆಟ್ಟ ಮೇಲೆ ಮತ್ತೆ ಬರುವರೇ ನಮ್ಮ ಅದೃಷ್ಟಕ್ಕೆ ಒಂದು ನಾಯಿಯೂ ಸುಳಿಯುವುದಿಲ್ಲ.

ರಂಗಮ್ಮ— ಅಹುದು ಕಂದಾ. ನೀನು ಹೇಳುತ್ತಿರುವುದು ಸಾವಿರ ಪಾಲು ಸತ್ಯ. ಹೂವಿನಲ್ಲಿದ್ದ ಸೌರಭವನ್ನು ಹೀರಿದ ಮೇಲೆ ಪತಂಗ ಮತ್ತೆ ಸುಳಿಯುವುದಿಲ್ಲ. ನಾಯಿ ಮುಟ್ಟಿದ ಎಂಜಲಿನಂತಾಗುತ್ತೇವೆ.

ಪಾರ್ವತಿ— ಎಲ್ಲಾ ಗೊತ್ತಿದ್ದರೂ ಮತ್ತೆ ಅದೇ ಹಾದಿಯನ್ನ ತುಳಿಯುತ್ತಿದ್ದೀಯಲ್ಲಾ. ಇರಲು ಕಂಡ ಬಾವಿಗೆ ಹಗಲು ಯಾರು ಬೀಳುತ್ತಾರೆ? ನಿನ್ನ ಜೀವನವೆಲ್ಲಾ ಹೀಗೆಯೇ ಮುಗಿಯಿತು. ಇನ್ನೂ ನನ್ನನ್ನು ಈ ಪಾಪಕೂಪಕ್ಕೆ ತಳ್ಳಲು ಪ್ರಾರಂಭಿಸಿದೆಯೂ? (ಹೊರಗಡೆ ಶಬ್ದ ಕೇಳಿ ಬರುವುದು.)

ರಂಗಮ್ಮ— ಅವರು ಗಾಡಿಯಲ್ಲಿ ಬಂದಾಗಾಯಿತು. ಕುಂಕುಮ ಇಟ್ಟುಕೋ ಹೋಗು.

ಪಾರ್ವತಿ— ನನ್ನಿಂದ ಸಾಧ್ಯವಿಲ್ಲವಮ್ಮಾ ಈ ಹಾಳು ಕೆಲಸ. ನೀನು ಕೆಟ್ಟಿಯಂತ ನನ್ನನ್ನು ಹಾಳು ಮಾಡಬೇಡ. ನಾನು ಪತಿವ್ರತೆಯಾಗಿ ಬಾಳಬೇಕೆಂದು ಬಹಳ ದಿನದಿಂದಲೂ ಯೋಚಿಸಿದ್ದೇನೆ.

ರಂಗಮ್ಮ— (ನಗುತ್ತಾ) ಪತಿವ್ರತೆ! ಅದರ ಅರ್ಥವೇ ನಮಗೆ ಗೊತ್ತಿಲ್ಲ ಪಾರೂ. ನಮ್ಮಂತಹ ನಿತ್ಯ ಸುಮಂಗಲಿಯರಿಗೆ ಪಾತಿವ್ರತ್ಯ ಎಲ್ಲಿ ಬಂತು? ಅದರ ಹೆಸರು ಕೇಳಿದರೆ ನಾಕು ಮೈಯಲ್ಲಾ ಉರಿಯುತ್ತದೆ. ನನ್ನ ಕಷ್ಟ ನಿನಗೇನು ಗೊತ್ತು ಪಾರು? ಹೋಗು ಒಳಗಡೆ ಹೋಗು.

ಪಾರ್ವತಿ— ಅಮ್ಮಾ ನನ್ನ ಹೆಣ ಬಿದ್ದರೂ ಸರಿಯೇ, ಈ ಕೆಲಸ ಮಾತ್ರ ನನ್ನಿಂದಾ ಸಾಧ್ಯವಿಲ್ಲ.

ರಂಗಮ್ಮ— ಹಠ ಮಾಡಬೇಡ ಪಾರೂ. ತಾಯಿಯಂತೆ ಮಗಳು ನೂಲಿನಂತೆ ಸೀರೆ ಅಂತ ಗಾದೆ ಕೇಳಿಲ್ಲವೇ? ನೀನು ಮದ್ವೆಯಾಗಿ ಪತಿವ್ರತೆಯಾಗಿ ಬಾಳಬೇಕೆಂಬು ನಿನ್ನ ಆಸೆ. ನಿನ್ನ ಆಸೆಯನ್ನು ಯಾರು ನೇರವೇರಿಸುವರು? ನಿನ್ನನ್ನು ಮದುವೆಯಾಗಲು ಯಾರು ಬರುವರು? ಸೂಳೆಯ ಮಗಳು ಸೂಳೆಯಾಗಿಯೇ ಬಾಳಬೇಕು ಪಾರೂ. ಇಲ್ಲದಿದ್ದರೆ ಜನರೇ ಆ ಕೆಲಸ ಮಾಡುತ್ತಾರೆ,

ಪಾರ್ವತಿ— ಅಮ್ಮಾ ಕೆಸರಿನಲ್ಲಿ ಕಮಲವಿದ್ದರೂ ಹೂವನ್ನು ತ್ಯಜಿಸುವರೇ? ಜನರು ಪ್ರೀತಿಸುವುದಿಲ್ಲವೇ? ಕೆಸರಿನಲ್ಲಿದೆ ಎಂದು ತಿರಸ್ಕರಿಸುವರೇ? ನಿನ್ನಂತೆ ನನ್ನನ್ನು ಹಾಳು ಮಾಡಲು ನಿಂತಿರುವಾಗ ಗಂಡು ಎಲ್ಲಿ ತಾನೆ ಸಿಕ್ಕುತ್ತೆ. ಮದ್ವೆ ಎಂದು?

ರಂಗಮ್ಮ— ಪಾರ್ವತೀ ನಮ್ಮಂತವರಿಗೆ ಮದ್ವೆಯು ಪ್ರತಿ ರಾತ್ರಿಯೂ ನಡೆಯುತ್ತದೆ.

ಪಾರ್ವತಿ ಅಮ್ಮಾ ನಿನ್ನ ಹತ್ತಿರ ಮಾತನಾಡಿ ಪ್ರಯೋಜನವಿಲ್ಲ.

ರಂಗಮ್ಮ— ನಾನು ಹೇಳಿದಂತೆ ಮಾಡು ಪಾರೂ. ಆಗಲೇ ಗಾಡಿ ಶಬ್ದವಾಯಿತು.

ಪಾರ್ವತಿ – ನನ್ನಿಂದ ಖಂಡಿತ ಸಾಧ್ಯವಿಲ್ಲವಮ್ಮಾ. (ನಿರ್ಗಮನ)

ರಂಗಮ್ಮ— (ಸ್ವಗತ) ಏನು ಮಾಡಲಿ. ಒಂದೇ ಸಮನೆ ಹಠ ಮಾಡುತ್ತಿದ್ದಾಳಲ್ಲಾ. ಇವಳಿಗೆ ಹೇಳಿ ಹೇಳಿ ಸಾಕಾಗಿ ಹೋಯಿತು. ಒಂದು ಸಾರಿಯೂ ಬಲೆಗೆ ಬೀಳಲಿಲ್ಲ. ಎರಡು ತುತ್ತು ಅನ್ನಕ್ಕೋಸ್ಕರ ಎಂತಹ ಕೆಲಸವಾದ್ರೂ ಮಾಡಬೇಕು. ನಾಲಿಗೆ ಹಸಿವನ್ನು ಅಡಗಿಸದು. ಹಾಳು ಹೊಟ್ಟೆಗೆ ಆಚಾರವೇ ಗೊತ್ತಿಲ್ಲ. ಮನೆಯಲ್ಲಿ ಯಜಮಾನರು ಇದ್ದರೆ ಚೆಂದ. ಇಲ್ಲದಿದ್ದರೆ ಮಸಣಕ್ಕೆ ಸಮಾನ. ಹೇ ಪರಮೇಶ್ವರಾ, ಎಂತಹ ಸ್ಥಿತಿಯನ್ನು ಕೊಟ್ಟಿಯಲ್ಲಾ! ಸಂಕಟ ಬಂದಾಗ ವೆಂಕಟರಮಣನೆಂಬ ಹಾಗಾಯಿತು. ನನ್ನ ಸೌಂದರ್ಯವಿದ್ದಾಗ ಗಂಡುಗಳು ನೊಣಗಳಂತೆ ಬಂದರು. ಈಗ? ಹಳಸಿದ ಅನ್ನಕ್ಕೆ ಯಾರು ತಾನೇ ಆಸೆಪಡುತ್ತಾರೆ? ಅಂತೂ ನನ್ನ ಕಾಲ ಮುಗಿಯಿತು. ಇನ್ನೂ ನನ್ನ ಮಗಳ ಕಾಲ. ನನ್ನ ಕಾಲ ಒಂದಾದರೇ ಮಗಳ ಕಾಲವೇ ಬದಲಾಗಿದೆ. ಸೂಳೆಯ ಮಗಳು ಪತಿವ್ರತೆಯಾಗಿ ಬಾಳಬೇಕೆಂದು ಹಗಲು ಕನಸು ಕಾಣುತ್ತಿದ್ದಾಳೆ. ಇದು ಸಾಧ್ಯವೇ ಪರಮೇಶ್ವರಾ! ನನ್ನ ಆಸೆಗಿಂತಲೂ ಪಾರ್ವತೀ ಆಸೆಯನ್ನೇ ನೆರವೇರಿಸು. ನನಗೆ ಕಾಡು ಹತ್ತಿರವಾಗಿರುವಾಗ ಇನ್ನೂ ಊರಿನ ಸುದ್ದಿಯೇಕೆ. ಹಣ್ಣೆಲೆ ಉದುರುವಾಗ ಜಿಗರೆಲೆ ನಗಬೇಕಲ್ಲವೇ? ಯಾರೋ ಬರುತ್ತಿರುವರು. (ರಾಜು ಮತ್ತು ರವಿಯ ಪ್ರವೇಶ) ಬನ್ನಿ ಬನ್ನಿ ಕುಳಿತುಕೊಳ್ಳಿ. ನೀವು ದಯಮಾಡಿಸಿದ್ದು ಬಹಳ ಸಂತೋಷ.

ರಾಜು— (ತೊದಲುತ್ತಾ) ಆಉ ಇಹ! (ಹಲ್ಲು ಕಿರಿಯುವನು)

ರವಿ— ಎಲ್ಲಿ ನಿಮ್ಮ ಹುಡುಗ ಕಾಣುವುದಿಲ್ಲವಲ್ಲ,

ರಾಜು— ಈ ಹುಡುಗ ನಿಮಗೇನಾಗಬೇಕು

ರಂಗಮ್ಮ— ಅದೊಂದು ತಬ್ಬಲಿ ಮಗು ಸಾಕಿಕೊಂಡಿದ್ದೇನೆ.

ರಾಜು— ನಿಮ್ಮನ್ನು ತಾಯಿ ಎಂದ.

ರಂಗಮ್ಮ— ಅಯ್ಯೋ ತಬ್ಬಲಿ ಮಗುವಿಗೆ ಒಂದೂ ತಿಳಿಯದು. ಅದಕ್ಕೆ ತಾಯಿ ತಂದೆ ಯಾರು ಇಲ್ಲಾ.

ರಾಜು— ಅಯ್ಯೊ, ಅದು ನನ್ನಂತೆ ತಬ್ಬಲಿಯೇ? ಅಮ್ಮಾ ನೀವು ಎಂತಹ ಪುಣ್ಯಾತ್ಮರು. ಒರ್ವ ಮಗುವಿನ ಜೀವನವನ್ನು ಕಾಪಾಡಿಕೊಂಡು ಬಂದಿದ್ದಿರಲ್ಲಾ. ಅದೇ ಸಂತೋಷ. ಇದೇ ರೀತಿ ನಮ್ಮ ಭಾರತದಲ್ಲಿ ಪ್ರತಿಯೊರ್ವ ಮಹಿಳೆಯು ಮುಂದೆ ಬರಬೇಕು. ಆಗ ದೇಶದಲ್ಲಿ ಸ್ವಲ್ಪ ಮಟ್ಟಿಗಾದರೂ ಅನಾಥರು ಕಡಿಮೆಯಾಗುತ್ತಾರೆ.

ರವಿ— ಗಂಡಸರು ಯಾರು ಇಲ್ಲವೇ ಮನೆಯಲ್ಲಿ?

ರಂಗಮ್ಮ— ಇಲ್ಲದೆ ಏನು? (ನಗುವಳು)

ರಾಜು— ಯಾರು?

ರಂಗಮ್ಮ— ನೀವೇ!

ರವಿ— ನಾವೇ! ನಿಮ್ಮ ಹುಡುಗನ ಬಡತನ ಸ್ಥಿತಿ ನೋಡಿ ಬಂಬೇಕಾಯಿತು, ನಿಮ್ಮ ಮನೆಯ ಯಜಮಾನರು ಯಾರು ಇಲ್ಲವೇ?

ರಂಗಮ್ಮ— ಯಜಮಾನರೇ! ನಮಗೆ ಯಜಮಾನರು ಒಬ್ಬರೇ ಇಬ್ಬರೆ........ ನಿಮ್ಮಂತೆ ಹೇಳಿ ಕಳಿಸಿದ ತಕ್ಷಣ ನಮ್ಮ ಮನೆಗೆ ಬರುತ್ತಾರೋ ಅವರೇ............ ನೀವು ಬಂದಿರುವುದು ನಮ್ಮ ಪಾಲಿನ ಪುಣ್ಯ.

ರಾಜು— ಏನು ಮಾತನಾಡುತ್ತಿರುವುದು? ಒಂದೂ ಅರ್ಥವೇ ಆಗುತ್ತಿಲ್ಲವಲ್ಲ.

ರಂಗಮ್ಮ— ನಮ್ಮ ಪಾರೂ ಕಳಿಸಿ ಕೊಡುತ್ತೇನೆ ಆಗ ಅರ್ಥವಾಗುತ್ತದೆ.

ರಾಜು – ಪಾರೂ! ಯಾವ ಪಾರಿವಾಳ?

ರಂಗಮ್ಮ— ಸಾಕಿದ ಪಾರಿವಾಳ. ಅದು ಮಾತನಾಡಿಸಿದರೆ ಮಾತನಾಡುತ್ತದೆ. ಮತ್ತೆ ನಿಮಗೆ ಸ್ವರ್ಗವನ್ನು ಕೊಡಬಲ್ಲುದು.

ರವಿ— ಹಾಗೇನು?

ರಂಗಮ್ಮ— ಕುಳಿತಿರಿ. ಈಗ ಕಳಿಸಿ ಕೊಡುತ್ತೇನೆ.

ರಾಜು— ಏನು ರವಿ, ಇವರು......

ರವಿ— ಗೊತ್ತಾಗಲಿಲ್ಲವೇನೋ ಬೆಪ್ಪುಕೋಡಿ. ಇವರು ನಿತ್ಯ ಸುಮಂಗಲಿಯರು.

ರಾಜು— What! ನಿತ್ಯ ಸುಮಂಗಿಯರು!!

ರವಿ – ಹೌದು ಕಣೋ ಗುಗ್ಗು. ಇದು ಸೂಳೆ ಮನೆ.

ರವಿ— ಅಯ್ಯೋ ನನ್ನ ಕರ್ಮವೇ! ಕರೆದ ಹುಡುಗನ ಸ್ಥಿತಿ ನೋಡಿ ಬಂದೆವು. ಪಾಪ! ಸಹಾಯ ಮಾಡೋಣ ಅಂತಾ ನಾವು ಬಂದ್ರೆ ಇದು ಹೀಗಾಗಬೇಕೆ? ಈಗ ಏನು ಮಾಡುವುದು.

ರವಿ— ಅಲ್ಲಯ್ಯ, ಆಕಾಡಕ್ಕೆ ಇಳಿದ ಮೇಲೆ ನನ್ನ ಕೇಳುತ್ತಿಯಲ್ಲ.

ರಾಜು— ಹಾಸ್ಯ ಇಲ್ಲಿ ಬೇಡಯ್ಯ ನಿನ್ನದು. ನನ್ನ ಜೀವನದಲ್ಲಿಯೇ ಇದು ಪ್ರಥಮ ಬಾರಿ. ನಾನು ಕೇವಲ ಕಥೆ ಕಾದಂಬರಿಗಳಲ್ಲಿ ಓದಿದ್ದೆ ವಿನಃ ಪ್ರತ್ಯಕ್ಷವಾಗಿ ನೋಡಿರಲಿಲ್ಲ.

ರವಿ— ಈಗ ಏನಾಗಿದೆ? ಒಂದು ರಾತ್ರಿ ಇದ್ದು ಸುಖಭೋಗವನ್ನು ಅನುಭವಿಸಿ ಬಾ.

ರಾಜು— ನಾನ್‌ಸೆನ್ಸ್. ಏನು ಮಾತನಾಡುತ್ತೀದ್ದೀಯೂ? ನನ್ನ ಜೀವ ಹೋದ್ರು ಇಂತಹ ಕೆಲಸಕ್ಕಿಳಿಯುವುದಿಲ್ಲ ನಾನು ವಾರದನ್ನ ತಿಂದು ಜೀವಿಸಿ ಇಲ್ಲಿಯ ವರೆಗೆ ಓದಿದ್ದೇನೆ. ತಂದೆ ತಾಯಿ ಇಲ್ಲದ ತಬ್ಬಲಿ ನಾನು ನನ್ನ ಆರೋಗ್ಯ ಕೆಟ್ಟರೆ ನಾಯಿ ಸಹ ಮೂಸಿ ನೋಡುವುದಿಲ್ಲ ಗೊತ್ತೇ?

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

## ಸಾಮ್ರಾಜ್ಯವಾದದ ನೀತಿ

# ಚೀನೀಯರ ಕಟ್ಟಾಸುರ ಬೇಡಿಗೆ

ಚೀನೀಯರು ಸ್ಪಷ್ಟವಾಗಿ ಭಾರತದ ಭೂಭಾಗದ ಮೇಲೆ ಅತಿಕ್ರಮಣ ಮಾಡಿರುವುದು ಎಲ್ಲರಿಗೂ ಗೊತ್ತು. ಅವರು ಯುದ್ಧವಿರಾಮವನ್ನು ಘೋಷಿಸಿದ ನಂತರವೇ ಓರ್ವ ಭಾರತೀಯ 'ಜನರಲ್' ಅನ್ನುಕೊಂಡಿರುವುದೂ ವಿದಿತ. ಅತ್ತ ಟಿಬೇಟಿನಲ್ಲಿ ದೊಡ್ಡ ಮೊತ್ತದ ಸೇನೆಯನ್ನು ಒಗ್ಗೂಡಿಸುತ್ತಿರುವ ಚೀನೀಯರ ಈ ಸಮರ ವಿರಾಮಕ್ಕೆ ಯಾವ ಅರ್ಥವೆಂದು ಯಾವ ನಿಘಂಟೂ ಹೇಳಲಾರದಂತಾಗಿದೆ. ಅದರ ಮೇಲೆ, ನೇಫಾದಲ್ಲಿ ತನ್ನ ಸೈನ್ಯವನ್ನು ಹಿಂದೆ ಕರೆಯುತ್ತಿರುವ ಚೀನಾವು ಲಡಖನ್ನು ನುಂಗುವ ಸಂಚು ಮಾಡುತ್ತಿದೆಯೆಂಬುದಕ್ಕೆ ಅಲ್ಲಿನ ವಿದ್ಯಮಾನಗಳೇ ಸಾಕ್ಷಿ. ಈ ಪ್ರದೇಶದಲ್ಲೇ ಚೀನಾವು ಅಕ್ಸಾಯ್ ಚಿನ ಮಾರ್ಗವನ್ನು ಕೂಡಾ ಅನ್ಯಾಯವಾಗಿ ನಿರ್ಮಿಸಿಕೊಂಡಿದೆ. ಬೇರೆ ಬೇರೆ ವಿಧಾನಗಳಿಂದ ತಮ್ಮ ಒಗಟಿನಂತಹ ಸಮರ ವಿರಾಮ ಪತ್ರವನ್ನು ಸ್ಪಷ್ಟೀಕರಿಸುವ ನೆವನಗಳಿಂದ ಭಾರತೀಯರ ಮಾತೃಭೂಮಿಯ ಮೇಲೆ ಅಧಿಕಾರ ಜಮಾಯಿಸುವ ತಮ್ಮ ದೃಢ ನಿಲುಮೆಗೆ ಅಂಟಿ ಕುಳಿತಿರುವ ಸಾಮ್ರಾಜ್ಯವಾದಿ ಚೀನಾವು ಮೂಲ ಸಮಸ್ಯೆಯನ್ನು ಬಿಡಿಸಿ ಸರಳಗೊಳಿಸುವ ಬದಲು ಅದನ್ನು ಮತ್ತಷ್ಟು ಸಿಕ್ಕು ಹಾಕುತ್ತಲಿದೆ ಎಂಬುದನ್ನು ನಾವು ಅರಿತು ಕೊಳ್ಳಬೇಕು.

ಪಕ್ಕದಲ್ಲಿರುವ ಚಿತ್ರವನ್ನು ನೋಡಿರಿ. ಇದು ಚೀನೀಯರ ಆಕ್ರಮಣಕ್ಕೆ ತುತ್ತಾದ ಭಾರತದ ಪವಿತ್ರ ನೆಲ ಲಡಖದ ಒಂದು ಭಾಗ, ಭಾರತೀಯರಿಗೆ ಪರಮ ಪುನೀತೆಯೆನಿಸಿದ ಸಿಂಧೂ ನದಿಯು ಪ್ರಾರಂಭದಲ್ಲಿ ಹರಿಯುತ್ತಿರುವ ಪುಣ್ಯ ನೆಲ. ಚೀನೀಯ ಆಕ್ರಮಣಕಾರರ ಅಸಂಖ್ಯ ಸೈನ್ಯವನ್ನು ಕೆಚ್ಚೆದೆಯಿಂದ ಎದುರಿಸಿ, ಭಾರತೀಯರ ರಣಕೌಶಲವನ್ನೂ ಧೈರ್ಯ ಸಾಹಸಗಳನ್ನೂ ಜಗಜ್ಜಾಹೀರು ಮಾಡಿದ ಚುಶೂಲ್ ಇರುವ ಗಂಡುನೆಲ್ಲ ಇಂತಹ ಭೂಮಿಯಲ್ಲಿ ತಮ್ಮದೂ ಪಾಲಿದೆ ಎಂದು ಚೀನಾವು ಹೇಳುವುದಾದರೆ, ಅದು ಅನ್ಯಾಯ, ಅಸಹನೀಯ. ಏಕೆಂದರೆ ಈ ಇಡಿಯ ಪ್ರದೇಶದಲ್ಲು ೧೯೫೮ಕ್ಕೆ ಮೊದಲು ಭಾರತೀಯ ಗಡಿ ಸೈನಿಕರು ತಮ್ಮ ಪೆಟ್ರೋಲುಗಳೊಂದಿಗೆ ಸಂಚರಿಸುತಿದ್ದರು. ಈ ಭಾಗದ ಕಂದಾಯವು ಕೂಡಾ ಭಾರತಕ್ಕೇನೇ ಲಭಿಸುತಿತ್ತು. ಎಂದರೆ, ಪ್ರತ್ಯಕ್ಷವಾಗಿ ಈ ನೆಲವು ಭಾರತೀಯ ಸಾರ್ವಭೌಮತೆಗೆ ಸೇರಿದುದು ಎಂದು ಪ್ರತ್ಯೇಕ ಹೇಳಬೇಕೆ?

ಚಿತ್ರದಲ್ಲಿ ನಕ್ಷತ್ರಾಕೃತಿಯ ಸಂಕೇತಗಳಿವೆ ತಾನೆ? ಇವು ಭಾರತೀಯ ಗಡಿ ಸೈನಿಕರು ೧೯೫೮ಕ್ಕೆ ಮೊದಲು ಸಂಚರಿಸುತ್ತಿದ್ದ ಎಲ್ಲೆಯನ್ನು ತೋರಿಸುತ್ತವೆ. ಇಡಿಯ ಲಡಖದ ಸೀಮೆಯ ಗುಂಟವೂ ನಮ್ಮ ಪ್ರಭುತ್ವವಿದೆಯೆಂಬುದಕ್ಕೆ ಇದು ಜ್ವಲಂತ ನಿದರ್ಶನ. ಆದರೆ, ಚೀನೀಯರು ಮಾತ್ರ ಇದನ್ನು ಮನ್ನಿಸದಿರುವಷ್ಟು ಅಂಧರಾಗಿದ್ದಾರೆ. ಇದನ್ನೇ ಸಾಮ್ರಾಜ್ಯವಾದವೆಂದು ಹೇಳುವುದು. ಇದಕ್ಕಿಂತ ದೊಡ್ಡ ಅನ್ಯಾಯ, ಅತ್ಯಾಚಾರವು ಮತ್ತೊಂದಿಲ್ಲವೇ ಇಲ್ಲ.




೧೯೫೬ರಲ್ಲಿ ಚೀನಾವು ಪ್ರಕಟಿಸಿದ ನಕ್ಷೆಯೊಂದರಲ್ಲಿ ಚೀನಾ-ಭಾರತಗಳ ಗಡಿಯನ್ನು ತಪ್ಪಿ ನಮೂದಿಸಲಾಗಿತ್ತು. ಇದನ್ನು ಈ ಚಿತ್ರದಲ್ಲಿ ಚುಕ್ಕೆಗಳಿಂದ ಗುರುತಿಸಲಾಗಿದೆ. ೧೯೫೯ರ ನವಂಬರದಲ್ಲಿ ಚೀನೀಯ ಪ್ರಧಾನಿ ಚೌ ಎನ್ ಲಾಯ್ ಅವರು ಇದೇ ನಿಜವಾದ ಸೀಮಾರೇಖೆಯೆಂದು ವಾದಿಸಿ ಭಾರತದ ಭೂಭಾಗದ ಮೇಲೆ ತಮ್ಮ ಅಧಿಕಾರವನ್ನು ಪ್ರತಿಷ್ಠಾಪಿಸುವ ಪ್ರಯತ್ನ ಮಾಡಿದರು.

ಆದರೆ, ಇಂದು ಚೀನಾವು ಆ ರೇಖೆಯನ್ನೂ ಮೀರಿ ಅದಕ್ಕೂ ಮುಂದೆ ತನ್ನ ಎಲ್ಲೆಯೆಂದೆನ್ನುತ್ತಿದೆ. ಇಂದು ಅದು ತನ್ನದೆಂದು ಹೇಳುವ ಭೂಭಾಗವನ್ನು ಕಿರುಗೀಟು (— —) ಗಳಿಂದ ಅಂಕಿಸಿದೆ. ಈ ರೇಖೆ ಎಂಬುದು ಇದಕ್ಕೆ ಮೊದಲು ಇರಲೇ ಇಲ್ಲ. ಮೊನ್ನೆ ಅಕ್ಟೋಬರದಲ್ಲಿ ದೊಡ್ಡ ಮೊತ್ತದ ಆಕ್ರಮಣ ಮಾಡಿದ ನಂತರವೇ ಈ ರೇಖೆಯೊಳಗಿನ ಭೂಮಿಯು ಅದರ ಕೈ ಸೇರಿತು. ಇಂದಿಗೂ ಅದು ಅನಿರ್ಣೀತವಾಗಿಯೇ ಉಳಿದಿದೆ. ಉದ್ದ ಗೀಟುಗಳಿಂದ (— —) ಸಂಕೇತಿಸಿ ಪ್ರತ್ಯೇಕಿಸಿದ ರೇಖೆಯು ೧೯೫೯ರ ನವಂಬರದ ನೈಜ ನಿಯಂತ್ರಣ ರೇಖೆಯೆಂದು ಚೀನಾ ಹೇಳುತ್ತದೆ. ಆದರೆ ಅದು ವರೆಗೂ ಭಾರತೀಯರ ನಿಯಂತ್ರಣದಲ್ಲಿ ಅದಕ್ಕೂ ಆಚೆಗಿನ ಪ್ರದೇಶದಲ್ಲಿ ಭಾರತೀಯ ಪ್ರಭುತ್ವವು ಕಾರ್ಯಕೃತವಾಗಿದೆ. ಹಾಗಿರುವಾಗ ಇದು ಚೀನೀಯ ಸ್ವಕಪೋಲ ಕಲ್ಪಿತ ರೇಖೆ ಮಾತ್ರ.

ಇದರಿಂದ ಚೀನೀಯರ ನೈಜ ನಿಯಂತ್ರಣ ರೇಖೆಯು ಅವರ ಇಚ್ಛೆಗನುಸಾರ ಬದಲಾಯಿಸುತ್ತಿದೆಯೆಂದು ಹೇಳಬೇಕಾಗುತ್ತದೆ. ಅಂದರೆ, ಚೀನಾಕ್ಕೆ ಬೇಕಾದುದು ಶಾಂತಿಯಲ್ಲ, ಮಿತ್ರತ್ವವಲ್ಲ. ಇವುಗಳ ಹೆಸರಿನಲ್ಲಿ ಅತ್ಯಾಚಾರಗೈದು ಭಾರತದ ಪುಣ್ಯ ನೆಲವನ್ನು ಕಬಳಿಸುವುದು ಮಾತ್ರ ಬೇಕಾಗಿದೆ. ಮಾತೃಭೂಮಿಯ ಮೇಲೆ ನಡೆಯುತ್ತಿರುವ ಈ ವಿಧದ ಅತ್ಯಾಚಾರವನ್ನು ಕಂಡೂ ತೆಪ್ಪಗಿರುವವರು ಭಾರತೀಯರಲ್ಲ. ತಮ್ಮ ತಾಯ್ನೆಲದ ಒಂದು ಅಂಗುಲದಷ್ಟನ್ನೂ ನುಂಗಲು ಭಾರತೀಯರು ಬಿಡುವುದಿಲ್ಲ. ಇಂತಹ ದೃಢ ಪ್ರತಿಜ್ಞೆಯನ್ನೇ ಎಲ್ಲರೂ ಮಾಡಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತಂದೇ ತೀರುತ್ತಾರೆ.

ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ
ಜೀವನದ ಭದ್ರತೆಗೂ
ಉಳಿತಾಯವು
ಅತ್ಯವಶ್ಯ.

ಉಳಿತಾಯ ಮಾಡಿರಿ!
ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

ಕೊರ್ಪೊರೇಶನ್ ಬೇಂಕ್
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಇಂದಿನ ರಾಜ್ಯಕೀಯ

# ಲಢಾಖದ ಮೇಲೆ ಕೆಂಪು ನೆರಳು

ಭಾರತ ಸರಕಾರವು ತ್ರಿವಿಷ್ಟಪದ (ಟಿಬೇಟಿನ) ಮೇಲೆ ಚೈನಿ ಕಮ್ಯುನಿಸ್ಟರ ಆಧಿಪತ್ಯವನ್ನು ಒಪ್ಪಿಕೊಂಡ ತಪ್ಪಿನಿಂದಾಗಿ ಅದರ ದುಷ್ಪರಿಣಾಮವನ್ನು ಈ ನಮ್ಮ ಶಾಂತಿಪ್ರಿಯ ದೇಶವು ಬಹಳ ಕಾಲದ ವರೆಗೂ ಸಹಿಸಿಕೊಂಡಿರಬೇಕಾದೀತು. ಈ ನೀತಿಯ ಅನುಸರಣೆಗೆ ಕಾರಣವೆಂದರೆ ಆಂಗ್ಲೇಯರು ಅವರ ಆಳ್ವಿಕೆಯ ಕಾಲದಲ್ಲಿ ಆ ರೀತಿ ಮಾಡಿದ್ದರೆಂಬುದಿದೆ. ಆದರೆ ನಾವಲ್ಲಿ ಒಂದು ಮುಖ್ಯ ವಿಷಯವನ್ನು ಮರೆತು ಬಿಟ್ಟಿರುವೆವು. ಆ ಸಮಯದಲ್ಲಿ ಚೈನಾವು ವಿರೋಧಿ ಬಣಗಳಿಂದ ವಿಭಜಿಸಲ್ಪಟ್ಟು, ಆಂತರಿಕ ಕಲಹಗಳಗೊಳಪಟ್ಟು ಇದ್ದಿತಲ್ಲದೆ ನಿರ್ಜೀವ ಸ್ಥಿತಿಯಲ್ಲೇ ಇತ್ತು. ಆಗ ತ್ರಿವಿಷ್ಟಪದ ಮೇಲಿನ ಅವರ ಅಧಿಕಾರ ಕೇವಲ ಹೆಸರಿಗೆ ಮಾತ್ರವಾಗಿತ್ತು. ಚೈನಾದ ಈ ನಾಮಮಾತ್ರದ ಅಧಿಕಾರವಿದ್ದರೂ ಕೂಡಾ ತ್ರಿವಿಷ್ಟಪಕ್ಕೆ ಯಾವಾಗಲೂ ಆಂತರಿಕ ವ್ಯವಹಾರ ನಡೆಸುವಲ್ಲಿ ಪೂರ್ಣ ಸ್ವಾತಂತ್ರ್ಯವಿತ್ತು. ಅಲ್ಲದೆ ವಿದೇಶಗಳೊಂದಿಗೆ ಸಂಧಿ-ಒಪ್ಪಂದಗಳನ್ನು ಮಾಡಿಕೊಳ್ಳುವದರಲ್ಲಿ ಕೂಡಾ ಪೂರ್ಣ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯವೂ ಇತ್ತು. ಜಾಪಾನು ಮತ್ತು ಚೈನಾದ ಯುದ್ಧದಲ್ಲಿ ಜಾಪಾನಿಗಳ ಆಕ್ರಮಣ (೧೯೩೧) ಆರಂಭವಾದಾಗ ಆಂಗ್ಲೇಯರು ಚೈನಾಕ್ಕೆ ತ್ರಿವಿಷ್ಟಪದ ಮೂಲಕ ಯುದ್ಧ ಸಾಮಗ್ರಿಗಳನ್ನು ಕಳುಹಿಸುವ ಯೋಜನೆ ಮಾಡಿದಾಗ ತ್ರಿವಿಷ್ಟಪವು ಆ ರೀತಿ ಮಾಡಲು ಅವರಿಗೆ ಸಮ್ಮತಿ ಕೊಡಲಿಲ್ಲ. ೧೯೧೧ರಿಂದ ೧೯೪೯ರ ವರೆಗೂ ಅದು ಪೂರ್ಣ ಸ್ವತಂತ್ರವಾಗಿತ್ತು. ೧೯೧೩ರಲ್ಲಿ ಮತ್ತು ಅನಂತರ ೧೯೪೯ರಲ್ಲಿ ತನ್ನ ಸ್ವತಂತ್ರತೆಯನ್ನದು ಸಾರಿತ್ತು. ಆದರಲ್ಲಿ ಭಾರತದ ಕೈವಾಡ ಏನೂ ಇರದಿದ್ದ ಕಾರಣ ಆಂತಾರಾಷ್ಟ್ರೀಯ ವಲಯವದಕ್ಕೆ ಮನ್ನಣೆ ಕೊಡಲಿಲ್ಲ.

೧೯೪೭ರ ಆಗೋಸ್ತ ಹದಿನೈದನೆಯ ದಿನ ಸ್ವತಂತ್ರ ಭಾರತವು ಜನ್ಮ ತಳೆಯಿತು. ೧೯೪೯ರ ಆಕ್ಟೋಬರಿನಲ್ಲಿ ನವೀನ ಚೈನಾ ಜನ್ಮ ತಳೆಯಿತು. ಆ ಎರಡು ವರ್ಷಗಳ ನಡುವಣ ಸಮಯದಲ್ಲಿ ಭಾರತವು ದೂರದರ್ಶಿತ ಯೋಜನೆಯಿಂದ ಮನಸ್ಸು ಮಾಡಿದ್ದಲ್ಲಿ ತ್ರಿವಿಷ್ಟಪಕ್ಕೆ ಅಂತಾರಾಷ್ಟ್ರೀಯ ಅಂಗಣದಲ್ಲಿ ಸ್ವಾತಂತ್ರ್ಯದ ಮುದ್ರೆಯನ್ನೊತ್ತಬಹುದಾಗಿತ್ತು. ಶೋಕದಾಯಕ ಹಾಗೂ ವಿಸ್ಮಯಕಾರಕ ವಿಷಯವೆಂದರೆ ನಾವು ಆ ರೀತಿ ಮಾಡದೆ ಇರುವದು ಒಂದು ನೆರೆಯ ದೇಶ — ಯಾವದರ ಧರ್ಮ, ಯಾವದರ ಸಂಸ್ಕೃತಿ ಹಾಗೂ ಕಲಾಚಾರವು ನಮ್ಮ ಕಾಣಿಕೆ ಇದೆಯೋ — ಆ ದೇಶದ ಮೇಲಣ ನಮ್ಮ ಕರ್ತವ್ಯದಲ್ಲಿ ನಾವು ತಪ್ಪಿರುವೆವು. ನಾವು ತ್ರಿವಿಷ್ಟಪವನ್ನು ತಿಳಿದೇ ಚೈನಿ ದಾಸ್ಯತ್ವಕ್ಕೆ ನಬ್ಬಿರುವೆವು ಹಾಗೂ ಅದರ ವಿಶಿಷ್ಟ ಸಂಸ್ಕೃತಿಯು ನಷ್ಟ-ಭ್ರಷ್ಟವಾಗುವುದರಲ್ಲಿ ಹಾಗೂ ಹೇಳಕೂಡದಂತಹ ಅತ್ಯಾಚಾರದ ಪೈಶಾಚಿಕ ನೃತ್ಯವಾಡುವಂತಹ ಪಾಪಕಾರ್ಯದಲ್ಲಿ ಭಾಗಿಗಳಾಗಿದ್ದೇವೆ. ಅಷ್ಟು ಮಾತ್ರವಲ್ಲ, ನಾವು ನಮ್ಮ ಒಳ್ಳೆಯದರತ್ತ ಉಪೇಕ್ಷೆಯನ್ನು ಕಾಣಿಸಿರುವೆವು. ಚೌ-ಎನ್-ಲೈಯ ಮಧುರ ಆಲಾಪದಿಂದ ಹಾಗೂ ಪಂಚಶೀಲ ಮಹಾಮಂತ್ರದ ಪ್ರಭಾವದಿಂದ ಮುಗ್ಧರಾಗಿದ್ದ ನಾವು ಕಣ್ಣು ತೆರೆದಾಗ ಚೈನಾವು ಲ್ಹಾಸಾದಿಂದ ಸಿಕಿಯಾಂಗ್ ಮಾರ್ಗ ನಿರ್ಮಾಣ ಕಾರ್ಯದಲ್ಲಿ ಮಗ್ನವಾಗಿತ್ತು, ಮಾತ್ರವಲ್ಲ, ಈ ಯೋಜನೆಯನ್ನು ಕಾರ್ಯಾನ್ವಿತಗೊಳಿಸುವದರಲ್ಲಿ ನಮ್ಮ ೧೪,೦೦೦ ಚದರ ಮೈಲು ಭೂ ಪ್ರದೇಶವನ್ನು ತಮ್ಮ ಪಾದಾಕ್ರಾಂತಗೊಳಿಸಿಕೊಂಡಿತ್ತು.

ತ್ರಿವಿಷ್ಟಪದ ಮೇಲೆ ಚೈನಿ ಕಮ್ಯೂನಿಸ್ಟರಿಂದ ಆಕ್ರಮಣ ನಡೆಯುವ ಪೂರ್ವದಲ್ಲಿ ನಮ್ಮ ಸೀಮಾ ಪ್ರದೇಶವು ಸ್ವತಂತ್ರ, ಶಾಂತಿಮಯ ತ್ರಿವಿಷ್ಟಪದೊಂದಿಗೆ ಕೂಡುತ್ತಿತ್ತು. ಹಾಗಾಗಿ ನಮ್ಮ ಗಡಿಯ ರಕ್ಷಣೆಗಾಗಿ ಅಲ್ಲಿ ಒಬ್ಬ ಸೈನಿಕನನ್ನು ಕೂಡಾ ನಿಲ್ಲಿಸುವ ಆವಶ್ಯಕತೆ ಇರಲಿಲ್ಲ. ಆದರೆ ಈಗ ನಮ್ಮ ಸೀಮೆಯು ಚೈನಾ—ಬೃಹತ್ ದೇಶ, ಮಹಾ ಶಕ್ತಿಶಾಲಿ, ವಿಸ್ತಾರ ಕಾಮನೆಯ ಆಕ್ರಮಣ ಮನೋಭಾವನೆಯ, ಆತತಾಯಿ-ದೇಶದೊಂದಿಗೆ ಸೇರಬೇಕಾಗಿಯದೆ; ಮತ್ತು ಆ ಎಲ್ಲೆಯ ರಕ್ಷಣೆಗಾಗಿ ಆ ದುರ್ಗಮ ಪ್ರದೇಶದಲ್ಲಿ ಒಂದು ದೊಡ್ಡ ಸುಸಜ್ಜಿತ ಸೇನೆಯನ್ನು ನಿಲ್ಲಿಸುವದು ಅನಿವಾರ್ಯವಾಗಿದೆ. ಈ ಭಯಂಕರ ಪರಿಸ್ಥಿತಿಯಿಂದ ಭಾರತದ ಬಡ ಖಜಾನೆಯ ಮೇಲೆ ಸಹಿಸಲು ಕಷ್ಟವಾಗಿರುವಂತಹ ಅದ್ಯಾವ ರೀತಿಯ ಭಾರ ಬಿದ್ದಿರುತ್ತದೆ ಹಾಗೂ ಬೀಳುತ್ತಾ ಇದೆ ಎಂಬುದರ ಕಲ್ಪನೆಯಿಂದ ಮನಸ್ಸಿನಲ್ಲಿ ತಳಮಳ ಉಂಟಾಗುವದು ಸ್ವಾಭಾವಿಕವಿದೆ.

ನಮ್ಮ ನಾಡಿನ ೧೪,೦೦೦ ಚದರ ಮೈಲು ಭೂಪ್ರದೇಶವನ್ನು ಚೈನಾ ಕಬಳಿಸಿರುವದರಲ್ಲಿ ಲಢಾಖಿನ ಪರಿಸ್ಥಿತಿಯು ಹಾನಿಕಾರಕ ಪ್ರಭಾವಕ್ಕೊಳಗಾಗಿಯುವೆ. ಕೇಂದ್ರ ಸರಕಾರದ ಮೂಲಕ ಲಢಾಖಿನ ರಕ್ಷಣೆಗಾಗಿ ಸೈನಿಕ ವ್ಯವಸ್ಥೆ ಮಾಡಲಾಗಿಯದೆ. ಆದರಿಂದ ಲಢಾಖ ಜನರಿಗೆ ಅಭಯದಾನ ದೊರಕಿದೆ. ಆದರೆ ಈ ವ್ಯವಸ್ಥೆಯನ್ನು ಸ್ಥಿರಗೊಳಿಸಲು ಕೆಲ ಯೋಜನೆಗಳನ್ನು ಕಾರ್ಯಾನ್ವಿತಗೊಳಿಸುವ ಆವಶ್ಯಕತೆ ಇದೆ. ಸರ್ವ ಪ್ರಥಮವಾಗಿ, ಧಾರ್ಮಿಕ ಸ್ಥಾನಗಳನ್ನು ಜೋಡಿಸುವಂತಿರುವ ರಸ್ತೆಗಳ ನಿರ್ಮಾಣವು ಬರುತ್ತದೆ. ಇದರಲ್ಲಿ ಸಂದೇಹವೇನೂ ಇರುವದಿಲ್ಲ. ಲಢಾಖಿನಲ್ಲಿ, ಪಾಕಿಸ್ತಾನದ ೧೯೪೮ರ ಅಂತ್ಯದಲ್ಲಾದ ಪರಾಜಯದ ನಂತರ ಸ್ವಲ್ಪ ಸಮಯದಲ್ಲೇ, ಭಾರತೀಯ ಸೇನೆಯು ಶ್ರೀನಗರದಿಂದ ಕರಗಿಲದ ವರೆಗೆ ರಸ್ತೆಯನ್ನು ರಚಿಸಿದೆ. ಆದರ ನಂತರ ಎರಡು ವರ್ಷಗಳೊಳಗೆ ಕಾಶ್ಮೀರ ಸರಕಾರವು ಕರಗಿಲಿನಿಂದ ಲೇಹದ ವರೆಗೆ ರಸ್ತೆಯನ್ನು ನಿರ್ಮಿಸಿದೆ. ಈಗ ಶ್ರೀನಗರದಿಂದ ಲೇಹದ ವರೆಗೆ ಬಸ್ಸಿನಿಂದ ಅಥವಾ ಜೀಪಿನಿಂದ ಸುಲಭವಾಗಿ ಪ್ರಯಾಣ ಮಾಡಬಹುದಾಗಿಯದೆ. ಭಾರತೀಯ ಸೇನೆಯು ಲೇಹವನ್ನು ಚುಶೂಲದೊಂದಿಗೆ ಜೋಡಿಸುವ ಮಾರ್ಗವನ್ನು ನಿರ್ಮಿಸುವ ಕಾರ್ಯವನ್ನು ಆರಂಭಿಸಿತ್ತು. ಈ ಮಾರ್ಗ ಪೂರ್ಣವಾದಾಗ ಅದು ಸರ್ವಋತು ರಸ್ತೆಯಾಗುತ್ತದೆ. ಲೇಹದಿಂದ ನೂಬ್ರಾದ ರಸ್ತೆ ಮತ್ತು ಕರಗಿಲಿನಿಂದ ಜಾಂಸ್ಕಾರದ ರಸ್ತೆ ಕೂಡಾ ಬಹಳ ಮಹತ್ವಪೂರ್ಣದ್ದಿದೆ; ಮತ್ತು ಅದರ ನಿರ್ಮಾಣ ಕಾರ್ಯ ತೀವ್ರಗತಿಯಿಂದಪೂರ್ಣವಾಗಬೇಕಾಗಿಯದೆ. ಜಾಂಸ್ಕಾರ ಮತ್ತು ನೂಬ್ರಾದಲ್ಲಿ ವಿಮಾನ ನಿಲ್ದಾಣ ಹಾಗೂ ತಂತಿ ಮತ್ತು ಅಂಚೆ ವ್ಯವಸ್ಥೆ ಕೂಡಾ ತೀರಾ ಆವಶ್ಯಕವಿದೆ. ಆದರೆ ಎಲ್ಲದಕ್ಕಿಂತಲೂ ಅಧಿಕ ಮಹತ್ವಪೂರ್ಣ ಕಾರ್ಯವೆಂದರೆ ಲೇಹವನ್ನು ಪಂಜಾಬಿ(ಪೂರ್ವ)ನೊಂದಿಗೆ ಜೋಡಿಸಲು ಬೇಕಾಗಿರುವ ರಸ್ತೆಯ ನಿರ್ಮಾಣವಿದೆ. ಇದರಲ್ಲಿ ಸಂದೇಹವಿರದಿದ್ದರೂ ಈ ಯೋಜನೆಯು ಅತೀ ಕಠಿಣತರದ್ದಿದೆ. ಲೇಹ ಮತ್ತು ಪೂರ್ವ ಪಂಜಾಬಿನ ಸಮೀಪದಲ್ಲಿ ಈಗ ಇರುವ ಮಾರ್ಗಗಳಲ್ಲಿ ಬಹಳ ಎತ್ತರದ ನಾಲ್ಕು ಕಣಿವೆ ಮಾರ್ಗಗಳಿವೆ. ಅವುಗಳ ಮೇಲಿನಿಂದ ರಸ್ತೆ ನಿರ್ಮಾಣ ಕಾರ್ಯವು ಸರಳ ಕಾರ್ಯವಿರುವದಿಲ್ಲ. ಈ ಮಾರ್ಗದಿಂದ ಉತ್ತಮ ರಸ್ತೆಯ ನಿರ್ಮಾಣ ಸಾಧ್ಯವಿಲ್ಲದಿದ್ದಲ್ಲಿ ಬೇರೆ ಮಾರ್ಗವನ್ನು ಅವಶ್ಯ ಕಂಡುಹಿಡಿಯಲೇಬೇಕಾದೀತು. ಯಾಕೆಂದರೆ ಲೇಹವನ್ನು ಭಾರತದೊಂದಿಗೆ ಸೇರಿಸಲು ಈಗ ಒಂದೇ ಒಂದು ರಸ್ತೆ ಇದೆ. ಅದು ಜೋಜಿಲಾದ ಮೇಲಿನಿಂದ ಹೋಗುತ್ತಿದೆ, ಮತ್ತು ಕರಗಿಲದ ಬಳಿ ಪಾಕಿಸ್ತಾನಿ ಚೌಕದ ಸಮೀಪದಿಂದ ಹಾಯ್ದು ಹೋಗುತ್ತಿರುವದರಿಂದ, ಅದೂ ಪಾಕಿಸ್ತಾನವು ಕಾಲು ಕೆದರಿ ಕಾಳಗಕ್ಕೆ ಕರೆಯುತ್ತಿರುವಂತಹ ಪರಿಸ್ಥಿತಿಯಲ್ಲಿ, ಅದನ್ನು ರಕ್ಷಿಸುವದು ಸ್ವಲ್ಪ ಕಷ್ಟದ ಕಾರ್ಯವಿದೆ. ಭಾರತ ಸರಕಾರವು ಆರಂಭ ರಸ್ತೆಯು ಲಢಾಖಿಗೆ ಹೋಗುವ ಮಾರ್ಗವನ್ನು ಕೂಡಾ ನಿರ್ಮಾಣಮಾಡಬೇಕು.

ಚೈನಾ ನಡೆಸಿರುವ ಪರಾಕ್ರಮದಿಂದ ಲಢಾಖಿಗೆ ಕೇವಲ ರಕ್ಷಣೆಯ ಸಮಸ್ಯೆ ಮಾತ್ರ ಉತ್ಪನ್ನವಾಗಿರುವದಲ್ಲದೆ, ಅದರಿಂದ ಪೂರ್ವ ಲೇಹ ಮತ್ತು ಲ್ಹಾಸದ ಬಳಿ ನಡೆಯುತ್ತಿದ್ದ ವ್ಯಾಪಾರ ವ್ಯವಸ್ಥೆ ಕೂಡಾ ನಿಂತುಹೋಗಿದೆ. ಇದರಿಂದಲೇ ಪೂರ್ವ ಸಿಕಿಯಾಂಗಿಗೆ ಕಾಶ್ಮೀರದೊಂದಿಗೆ ನಡೆಯುತ್ತಿದ್ದ ವ್ಯಾಪಾರಕ್ಕೆ ಕೂಡಾ ತಡೆ ಉಂಟಾಗಿಯದೆ. ಈ ವ್ಯಾಪಾರವನ್ನು ನಡೆಸುತ್ತಿದ್ದ ಜನರು ತಮ್ಮ ಸಾಮಾನುಗಳನ್ನು ಲೇಹ-ಕರಗಿಲ್ ಮಾರ್ಗದಿಂದ ಹೊರ ಜಗತ್ತಿಗೆ ತಲಪಿಸುತ್ತಿದ್ದರು. ಇದರಿಂದ ಆ ಭಾಗಗಳಲ್ಲಿ ವಾಸಮಾಡುತ್ತಿದ್ದ ಜನರಿಗೆ ಉತ್ತಮ ಆರ್ಥಿಕ ಲಾಭ ದೊರಕುತ್ತಿತ್ತು. ಅದೂ ಅಲ್ಲದೆ ತ್ರಿವಿಷ್ಟಪದ ಮೇಲೆ ಚೈನಾ ಅಧಿಕಾರ ಪ್ರಹಾರ ಪ್ರಯೋಗ ನಡೆಸಿದಂದಿನಿಂದ ಪಶ್ಮೀನಾ ಮತ್ತು ಉಣ್ಣೆಯ ವ್ಯಾಪಾರಕ್ಕೆ ಧಕ್ಕೆ ತಗಲಿದೆ. ಪಶ್ಮೀನಾವನ್ನು ಇಲ್ಲೇ ಪಡೆಯಲು ಕಾಶ್ಮೀರ ಸರಕಾರ ಪ್ರಯತ್ನಪಡುತ್ತಿದೆ.

ಲಢಾಕಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಸರಕಾರವು ನೂಲುವ ಹಾಗೂ ನೇಯುವ ಇತ್ಯಾದಿ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೀಯುತ್ತಿದೆ. ಆದರೂ ಲಢಾಖ್ ಕೃಷಿಯ ಮೇಲೆ ಅವಲಂಬಿಸಿಕೊಂಡಿರುವ ಪ್ರದೇಶವಿದೆ. ಅದರ ಅಧಿಕ ಭಾಗವು ನೀರಿನ ಅಭಾವದ ಕಾರಣದಿಂದಾಗಿ ಬಂಜರಾಗಿ ಇದೆ. ಕಾಶ್ಮೀರ ಸರಕಾರದ ಯೋಜನೆಗಳಲ್ಲಿ ಕಾಲುವೆಗಳನ್ನು ತೋಡುವದೂ ಒಂದು ಇದೆ; ಅದಕ್ಕಾಗಿ ವಿಶೇಷ ಗಮನ ಕೊಡಲಾಗಿದೆ ಅದು ಕಾರ್ಯಾನ್ವಿತ ಗೊಳಿಸಲ್ಪಟ್ಟಾಗ ಆಹಾರ ಅಭಾವದ ಸಮಸ್ಯೆ ಬಗೆಹರಿಯಲು ಸಹಾಯವಾಗುತ್ತದೆ. ಅಲ್ಲದೆ ಕೃಷಿ ಸಂಬಂಧದ ಕ್ರಮಗಳಲ್ಲಿ ವಿಕಾಸವಾದಾಗ ಕೃಷಿಗೆ ಬಹಳ ಉಪಯೋಗವಾಗುತ್ತದೆ ರಾಸಾಯನಿಕ ಗೊಬ್ಬರ-ಬೀಜದ ಪ್ರಯೋಗವನ್ನು ಜನತೆಗೆ ತಿಳಿಯಪಡಿಸಿ, ಅವುಗಳನ್ನು ಒದಗಿಸಿ ಕೊಟ್ಟು, ಬೆಳೆಯನ್ನು ಹೆಚ್ಚಿಸುವದು ಸರಕಾರದ ಕರ್ತವ್ಯ ಇದೆ.

ಈ ಪ್ರದೇಶದ ಸಮಸ್ಯೆಗಳಲ್ಲಿ ಬಹಳ ಮುಖ್ಯವಾಗಿರುವದು ಜನ ಸಂಖ್ಯೆಯ ವಿರಳತೆ. ಲೇಹ ತಹಶೀಲು ಬೌದ್ಧರಿಗೆ ಮುಖ್ಯವಾಗಿದೆ. ಅದರ ಕ್ಷೇತ್ರಫಲವು ೨೯,೪೪೮ ಚದರ ಮೈಲು. ಆದರೆ ಅಲ್ಲಿಯ ಜನಸಂಖ್ಯೆ ೪೦,೦೦೦ಕ್ಕಿಂತ ಅಧಿಕ

(೯ನೇ ಪುಟ ನೋಡಿರಿ)


## ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

**ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.**

**ವಿಜಯ ಬೇಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3




## ಅಭ್ಯುದಯ ಶ್ರೇಯಸ್ಸಿದ್ಧಿಗೆ

# ಆಧಾರಸ್ತಂಭ - ಸದ್ಧರ್ಮ

ಪ್ರಶ್ನೆ— ನಮ್ಮ ಅವನತಿಗೆ ಧರ್ಮವು ಮೂಲ ಕಾರಣವಾಗಿದೆಯಲ್ಲವೇ?

ಉತ್ತರ— ಹೀಗೆ ಹೇಳುವವರು ನಿಜವಾಗಿಯೂ ಹುಚ್ಚರು.

ಪ್ರ— ಯಾಕೆ?

ಉ— ಧರ್ಮದ ಕಾರಣದಿಂದಲೇ, ದೇಶದ, ಮನುಷ್ಯನ ಮತ್ತು ಸಮಾಜದ ಅಧಃಪತನವಾಗುವುದೆಂದು ಹೇಳುವವರು ಹುಚ್ಚರಲ್ಲದೆ ಮತ್ತೇನು?

ಪ್ರ— ಹೇಗೆ?

ಉ— ಧರ್ಮದ ನಿಜವಾದ ಸ್ವರೂಪವನ್ನು ತಿಳಿಯದವರು ಹೀಗೆ ಹೇಳುತ್ತಾರೆ. ಭಾರತವರ್ಷದ ಧಾರ್ಮಿಕ ಸಿದ್ಧಾಂತವನ್ನು ಅವರು ಆಳವಾಗಿ ಅಧ್ಯಯನ ಮಾಡಿದ್ದರೆ. ಹೀಗೆ ಪ್ರಶ್ನೆ ಮಾಡಲು ಸಾಧ್ಯವೇ ಇಲ್ಲ.

ಪ್ರ— ಅರೇ, ನೀವೇನು ಹೇಳುತ್ತಿರುವಿರಿ? ಏನು ಧರ್ಮದಿಂದಲೇ ಭಾರತದ ಪತನವಾಗಲಿಲ್ಲವೇ? ಭಾರತ ದುರ್ಬಲಗೊಳ್ಳಲಿಲ್ಲವೇ? ಈ ಧರ್ಮಕ್ಕಾಗಿಯೇ ಭಾರತದಲ್ಲಿ ರಕ್ತದ ಕಾಲುವೆ ಹರಿಯಲಿಲ್ಲವೇ?

ಉ— ಮಿತ್ರಾ! ನೀನು ನಿಜವಾಗಿಯೂ ಅಜ್ಞಾನಿಯಾಗಿದ್ದೀ.

ಪ್ರ—ಹಾಗಾದರೆ ಮತ್ತೇನು ಹೇಳಲಿ,

ಉ— ಭಾರತೀಯರು ತಮ್ಮ ಧರ್ಮವನ್ನು—ಸ್ವಧರ್ಮವನ್ನು ಬಿಟ್ಟುದರಿಂದಲೇ ಅವರು ಕೆಳಗೆ ಬಿದ್ದರು ಎಂದು ಹೇಳಿದರೆ ಸರಿಯಾಗುತ್ತದೆ.

ಪ್ರ— ನಿಮ್ಮ ಈ ಹಾಳು ಧರ್ಮ ಯಾವ ಕೆಲಸಕ್ಕೆ?

ಉ— ಅದೇನು ಹಾಗೆ? ಜನರು ಧರ್ಮದ ಮರ್ಮವನ್ನರಿತಿಲ್ಲ.

ಪ್ರ- ಧರ್ಮದಮರ್ಮವೆಂದರೇನು?

ಉ— ಧರ್ಮವು ಮನುಷ್ಯನನ್ನು ದೇವತೆಯನ್ನಾಗಿ ಮಾಡಿ ಅವನಲ್ಲಿರುವ ಪಶುತ್ವವನ್ನು ದೂರೀಕರಿಸಿ ಅವನ ಅಂತರ್ಯವನ್ನು ಪವಿತ್ರವನ್ನಾಗಿ ಮಾಡುತ್ತದೆ ಮಾನವನ ಜೀವನವನ್ನು ವಿಕಸಿತಗೊಳಿಸುವುದರಲ್ಲಿ ಧರ್ಮ ನಿಜವಾಗಿಯೂ ಸಮರ್ಥವಾಗಿದೆ. ಇಂಥ ಧರ್ಮದಿಂದ ದೇಶದ ಪತನವಾಗುವುದು ಹೇಗೆ? ಸ್ವಲ್ಪ ಯೋಚಿಸು. ನಿಜವಾದ ಧರ್ಮ, ಆತ್ಮವಿಕಾಸದಲ್ಲಿ, ಆತ್ಮೋನ್ನತಿಯಲ್ಲಿ ಅಡಕವಾಗಿದೆ.

ಮುಕ್ತಿಯನ್ನು ಹೊಂದುವುದೇ ಧರ್ಮದ ಲಕ್ಷ್ಯ. ಆದುದರಿಂದ ಧರ್ಮನಿಷ್ಠವಾದ ರಾಷ್ಟ್ರವು ಎಂದೂ ರಾಷ್ಟ್ರಕಲ್ಯಾಣಕ್ಕೆ ಆತಂಕವಾಗದು. ಬದಲು, ಧರ್ಮದಲ್ಲಿ ಅನುರಾಗ, ನಿಷ್ಠೆ ಹೆಚ್ಚಾದಷ್ಟು ದೇಶದ ಪ್ರಗತಿ ಅಭಿವೃದ್ಧಿ ಹೊಂದುವುದು. ಧಾರ್ಮಿಕ ಜೀವನವೆಂದಿಗೂ ರಾಷ್ಟ್ರಕ್ಕೆ ವಿರೋಧಿಯಾಗಲಾರದು. ರಾಷ್ಟ್ರೀಯ ಜೀವನದ ಪೂರ್ಣತ್ವಕ್ಕೆ ಅದು ಸಹಕಾರಿ.

ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಚಿರಂತನ ಸ್ವರೂಪದವುಗಳಾಗಿವೆ. ಯಾವ, ದೇಶ ಈ ಚಿರಂತನ ತತ್ವವನ್ನು ಅರಿತು ಅದರ ಆಚರಣೆ ಮಾಡುತ್ತದೋ ಅದು ಚಿರಜೀವಿಯಾಗುತ್ತದು.

ಪ್ರ— ನೀವು ಏನು ಹೇಳುತ್ತಿರೆಂದು ನನಗೆ ಅರ್ಥವಾಗುವುದಿಲ್ಲ.

ಉ— ಏನು ರೋಮ್, ಗ್ರೀಸ್, ಖಾಲ್ಡಿಯಾ, ಮೊದಲಾದ ರಾಷ್ಟ್ರಗಳು ಧರ್ಮಭ್ರಷ್ಟವಾದಾಗಲೇ ಪತನವಾದುದನ್ನು ನೀನು ಮರೆತುಬಿಟ್ಟೆಯೊ?

ಪ್ರ— ನನಗದು ಗೊತ್ತಿಲ್ಲ ಸ್ವಲ್ಪ ಹೇಳಿರಿ.

ಉ— ಅವರು ಚಿರಂತನಮೂಲ್ಯವೆಂಬ ತತ್ವವನ್ನ ಬಿಟ್ಟಿದ್ದರು. ಚಾರಿತ್ರ್ಯಹೀನರಾದ ಅವರು ಜನರಿಗೆ ಬೇಡವಾದರು. ವ್ಯಾಪಾರ, ರಾಜ್ಯಭಾರ ಧನಪ್ರಾಪ್ತಿ ಮೊದಲಾದವುಗಳಲ್ಲಿ ಚಾರಿತ್ರ್ಯದ ಪವಿತ್ರತೆಯು ನಷ್ಟವಾದರೆ ಅದಕ್ಕೆ ಬೆಲೆಯಿಲ್ಲ. ಅಧರ್ಮದ ಪ್ರವೇಶವಾದಲ್ಲಿ ಪತನ ಆಗುವುದು ನಿಸ್ಸಂಶಯ.

ಪ್ರ—ಇತಿಹಾಸ ಹಾಗಿರಲಿ! ಧರ್ಮಶಾಸ್ತ್ರ ಏನು ಹೇಳುತ್ತದೆ?

ಉ— ಮನು ಒಂದು ಕಡೆಯಲ್ಲಿ ಹೇಳಿದ್ದಾನೆ:

ಅಧರ್ಮೇಣೈಧತೇತಾವತ್ ತತೋ ಭದ್ರಾಣಿಪಶ್ಯತಿ ।
ತತಃಸಪತ್ನಾನ್ ಜಯತೀ ಸಮೂಲಂ ಚವಿನಶ್ಯತಿ ॥

ಮನುಷ್ಯ, ಸಮಾಜ, ದೇಶವೆಲ್ಲ ಅಧರ್ಮದಿಂದ ಕಾಲ ಕಳೆದಾಗ ಏನಾಗುತ್ತದೆಂದು ನೀನು ಬಲ್ಲೆಯಾ?

ಪ್ರ— ಏನಾಗುವುದು?

ಉ— ಬೇರುಸಹಿತ ಅಂಥವರು ನಾಶಗೊಳ್ಳುತ್ತಾರೆ. ಆದರಿಂದ ಆ ದಿನದ ಈ ಬಾಳುವೆಯಲ್ಲಿ ಕ್ಷಣಿಕ ಸುಖ ಲಾಲಸೆಯನ್ನು ತ್ಯಜಿಸಿ ಶಾಶ್ವತ ಸುಖವನ್ನೀವ ಆಧ್ಯಾತ್ಮಿಕ— ಆದಿಭೌತಿಕವಾದ ಚಿರಂತನ ತತ್ವವನ್ನ ಅರಿಯಬೇಕು.

ಪ್ರ— ಭಾರತದಲ್ಲಿ ಇಂಥ ಉತ್ಕೃಷ್ಟ ಧರ್ಮವಿದ್ದಂತೆಯೇ ಅದು ಈ ರೀತಿ ಪತನ ಹೊಂದಲು ಕಾರಣವೇನು?

ಉ— ಪಾಶ್ಚಾತ್ಯ ಸಭ್ಯತೆಯ ಪ್ರಭಾವ ಆಧ್ಯಾತ್ಮಿಕ ಪರಿಸ್ಥಿತಿನ ನಾಶಗಳೇ ಭಾರತದ ನೈತಿಕ ಅಧಃಪತನಕ್ಕೆ ಕಾರಣಗಳಾಗಿವೆ. ಇದರಿಂದ ಧರ್ಮವು ಅವನತಿಗೆ ಕಾರಣವೆನ್ನುವುದು ಸರಿಯಾಗಲಾರದು. ಭಾರತದ ಪತನಕ್ಕೆ ಬೇರೆಯೇ ಕಾರಣಗಳಿವೆ.

ಏನು ಉಪನಿಷದ್ ಕಾಲದಲ್ಲಿ ಭಾರತದಲ್ಲಿ ಸಮೃದ್ಧ ರಾಜ್ಯ ಇರಲಿಲ್ಲವೇ ?

ಪ್ರ— ಇಲ್ಲವೆಂದು ಯಾರು ಹೇಳಿದರು?

ಉ— ವಿಕ್ರಮಾದಿತ್ಯ ಚಂದ್ರಗುಪ್ತ ಅಶೋಕ ಮೊದಲಾದ ರಾಜರ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿ, ಕಲೆ, ಶಿಲ್ಪ ಮೊದಲಾದುವುಗಳು ಉನ್ನತಿಯ ಉತ್ತುಂಗ ಶಿಖರದಲ್ಲಿ ರಾರಾಜಿಸುತ್ತಿರಲಿಲ್ಲವೇ? ಒಬ್ಬ ಪ್ರಸಿದ್ಧ ಇತಿಹಾಸಕಾರನು ಕೆಳಗಿನ ವಿಷಯಗಳ ಮೇಲೆ ಮುಕ್ತ ಕಂಠದಿಂದ ಉತ್ತರ ಕೊಟ್ಟಿದ್ದಾನೆ.

ಪ್ರ— ಯಾವ ಯಾವ ವಿಷಯಗಳ ಮೇಲೆ?

ಉ—ಸಾಮಾನ್ಯವಾಗಿ ಭಾರತೀಯರು ಪರಲೋಕವಾದಿಗಳು ಮತ್ತು ಐಹಿಕ ಸುಖವನ್ನ ಉಪೇಕ್ಷಿಸುವವರು. ಎಂದು ಹೇಳಲಾಗಿದೆ.

—ಆದರೆ—

ಭಾರತೀಯರು ಕೇವಲ ಪರಲೋಕ ವಾದಿಗಳಾಗಿ ಲೌಕಿಕ ಅಭ್ಯುದಯವನ್ನು ತಿರಸ್ಕರಿಸುತ್ತಿದ್ದರೆನ್ನುವುದು ಸರಿಯಲ್ಲ.

—ಭಾರತೀಯರು—

ಉಪನಿಷದ್, ವೇದಾಂತ—ಗೀತೆಗಳಂಥ ಗ್ರಂಥಗಳನ್ನು ರಚಿಸಿದ, ಭಾರತದ ಋಷಿಗಳು, ಮಹಾತ್ಮರು, ದುರ್ಬಲರು, ನಿಷ್ಪ್ರಯೋಜಕರು. ಎಂದು ಹೇಳುವುದು ಸರಿಯಾಗಲಾರದು. ಅವರು ಆಧ್ಯಾತ್ಮದೊಂದಿಗೆ ಅಭ್ಯುದಯವನ್ನು ಸಾಧಿಸಿಕೊಂಡೇಬಂದಿದ್ದಾರೆ. ಮಾತ್ರವಲ್ಲದೆ ಅಹಿಂಸಾ ತತ್ವಗಳೊಂದಿಗೆ ಆತ್ಮ ವಿಕಸನ ಮಾಡುವ ಪ್ರಯತ್ನ ಚೆನ್ನಾಗಿ ಮಾಡಿದ್ದಾರೆ. ಇದರಿಂದಲೇ ಭಾರತದ ಸಂಗೀತ, ಶಿಲ್ಪ, ಚಿತ್ರಕಲೆ, ಸಾಹಿತ್ಯಗಳಲ್ಲಿ ಪರಮಾತ್ಮನ ದರ್ಶನವನ್ನು ನಾವು ಪಡೆಯುತ್ತೇವೆ.

ಪ್ರ— ಸಾಕು, ಸಾಕು; ಹಿಂದಿನ ವಿಚಾರ ಇರಲಿ. ಅಷ್ಟು ಉನ್ನತಿಯಲ್ಲಿದ್ದ ಭಾರತ ಇಂದು ಇಷ್ಟು ಕೆಳಗೆ ಬೀಳಲು ಕಾರಣವೇನು

ಉ— ನಾನು ಮೊದಲು ಹೇಳಿದಂತೆ ಭಾರತೀಯರು ಆಧ್ಯಾತ್ಮಿಕ ಮೌಲ್ಯಗಳನ್ನು, ತತ್ವಗಳನ್ನು ಕೈಬಿಡುತ್ತಾ ಬಂದುದು ಭಾರತದ ಪತನಕ್ಕೆ ನಾಂದಿಯಾಯಿತು.

ಪ್ರ— ಈ ಅಮೂಲ್ಯ ತತ್ವಗಳಿಗೂ ಧರ್ಮಕ್ಕೂ ಏನು ಸಂಬಂಧ.

ಉ— ಧರ್ಮವೊಂದೇ ಈ ಅಮೂಲ್ಯ ತತ್ವಗಳತ್ತ ನಮ್ಮನ್ನು ಕೊಂಡೊಯ್ಯಲು ಸಮರ್ಥವಾಗಿದೆ. ಧರ್ಮದ ಆಧಾರದ ಮೇಲೆ ಸಂಚಾರಗದ ಮೇಲೆ ಹಿಂದೆ ಗುರುಕುಲ ಪದ್ಧತಿಯ ಶಿಕ್ಷಣವಿದ್ದಾಗ ಭಾರತೀಯರು ತಮ್ಮ ನೀತಿ - ಚಾರಿತ್ರ್ಯ ವಿದ್ವತ್ತುಗಳಿಗಾಗಿ ಬಹು ಹೆಸರು ಪಡೆದಿದ್ದರು.

ಆದರ್ಶವಾದ ಧಾರ್ಮಿಕ, ಸಾಂಸ್ಕೃತಿಕ ಆರ್ಥಿಕ ಔದ್ಯೋಗಿಕ ಮತ್ತು ಸಾಮಾಜಿಕ ಪ್ರಗತಿಯಿಂದ ಕೂಡಿದ ರಾಜ್ಯವನ್ನು ಭಾರತೀಯರು ಸ್ಥಾಪಿಸಿ ಉತ್ತರೋತ್ತರ ಕೀರ್ತಿಗಳಿಸಿದ್ದಾರೆ; ಸಫಲರಾಗಿದ್ದಾರೆ. ಪರದೇಶಗಳಿಗೂ ಹೋಗಿ ಭಾರತೀಯ ಸಂಸ್ಕೃತಿಯ ಘನತೆ ಹಿರಿಮೆಗಳನ್ನು ಸಾರಿ ಹೊಗಳಿದ್ದಾರೆ ಮಾತ್ರವಲ್ಲದೆ ಪರದೇಶಗಳಲ್ಲಿಯೂ ತಮ್ಮ ರಾಜ್ಯ ಸ್ಥಾಪಿಸಿದ್ದಾರೆ. ಹೀಗಿರುವಾಗ ಧರ್ಮವನ್ನು ನಿರರ್ಥಕವೆಂದು ಹೇಳಿದರೆ ನಮ್ಮಷ್ಟು ಮೂರ್ಖರು ಎಲ್ಲಿದ್ದಾರೆ? ಮಾತ್ರವಲ್ಲದೆ—

ಇತಿಹಾಸಕಾರರು—

ಇದೇ ರೀತಿಯ. ಧಾರ್ಮಿಕವಾದ ಗುರುಕುಲ ಪದ್ಧತಿಯ ಶಿಕ್ಷಣದಿಂದಲೇ ಭಾರತದಲ್ಲಿ ವಸಿಷ್ಠ ವಿಶ್ವಾಮಿತ್ರರಿಂದ ಪ್ರಾರಂಭಿಸಿ, ರಾಮ,ಕೃಷ್ಣರ ಜನಕ, ಮೈತ್ರೇಯಿ—ಗಾರ್ಗಿ, ಪಾಣಿನೀ ಪತಂಜಲಿಗಳಂತಹ ಮಹಾ ತಪಸಿಗಳು, ಯೋಗಿಗಳು, ಚಂದ್ರಗುಪ್ತ, ಅಶೋಕ, ರಣಜಿತ ಸಿಂಹ, ಶಿವಾಜಿ ಪುಲಿಕೇಶಿಗಳಂತಹ ರಾಜರು ಹುಟ್ಟಿದ್ದಾರೆಂದು ಹೇಳಿದ್ದಾರೆ.

ಇಂಥ ಪವಿತ್ರವಾದ ಉನ್ನತ ಧರ್ಮವನ್ನು ಬಿಡುವುದು ಯೋಗ್ಯವೆನಿಸಲಾರದು.

ಮೊಹೆಂಜೋದಾರೋ ಹರಪ್ಪಾಗಳ ಪ್ರೇಕ್ಷಣೆಯಿಂದ ಭಾರತದ ಪ್ರಗತಿಗೆ ಧರ್ಮ ಎಷ್ಟೊಂದು ಆವಶ್ಯಕ ಎಂದು ವಿದಿತವಾಗುತ್ತದೆ. ಅಲ್ಲಿನ ಅವಶೇಷಗಳು ಮೇಲಿನ ವಿಷಯವನ್ನು ಇಂದೂ ಎತ್ತಿ ಹೇಳುತ್ತಿವೆ.

ಈ ಅವಶೇಷಗಳಿಂದ ಭಾರತದ ಉನ್ನತಿಯ ಅಮೃತವಾಣಿ—

ಚರೈವೇತಿ, ಚರೈವೇತಿ—

ಮುಂದೆ ನಡೆ, ಮುಂದೆ ನಡೆ, ಎಂಬುದು ನೆನಪಿಗೆ ಬರುತ್ತದೆ. ಇಂಥ ವೈದಿಕ ಘೋಷಣೆಯಿಂದ ನಮ್ಮಲ್ಲಿ ಹೊಸ ಚೈತನ್ಯ ಬಂದುತಾಗುತ್ತದೆ. ಇದರಿಂದ ಉತ್ಸಾಹಿತಗೊಂಡ ನಮ್ಮ ಪೂರ್ವಜರು ತಮ್ಮ ಮನೆಯಲ್ಲಿ ಉಳಿಯಲಾರದಾದರು. ಅವರು ಜಾವಾ ಇಂಡೋನೇಶಿಯಾ ಟಿಬೇಟ್, ಚೀನಾ, ಬಾಲಿ, ಸುಮಾತ್ರ, ಸಿಲೋನ್ ಮುಂತಾದ ದೇಶಗಳಲ್ಲಿ ಭಾರತದ ಭವ್ಯ ಸಂಸ್ಕೃತಿ ಧರ್ಮದ ಪ್ರಸಾರ ಮಾಡಿದರು.

(ಆನೇ ಪುಟ ನೋಡಿರಿ)

1963ನೇ ಜನವರಿಯಿಂದ

ನಗುವ-ನಂದ

31ನೇ ಸಂಪುಟಾರಂಭ

ಆಕರ್ಷಣೀಯ ಮುಖಪುಟ, ಹಾಸ್ಯ ಲೇಖನಗಳು, ಕತೆಗಳು, ಅಣಕವಾಡುಗಳು, ಚುಟುಕಗಳು, ವ್ಯಂಗ್ಯ ಚಿತ್ರಗಳೊಂದೊಡಗೂಡಿ ಪ್ರತಿ ತಿಂಗಳೂ ಪ್ರಕಟವಾಗುವುದು.

ಜನವರಿ ಸಂಚಿಕೆಯಿಂದ ಶ್ರೀ 'ಅಷ್ಟಾವಕ್ರ'ರವರ ಹಾಸ್ಯಕಥಾವಳಿ 'ವಿನೋದದಲ್ಲಿ ವಿವಾಹ' ಪ್ರಕಟವಾಗುವುದು.

ಬಿಡಿ ಸಂಚಿಕೆಯ ಬೆಲೆ ಆಗಲಿ, ವಾರ್ಷಿಕ ಚಂದಾ ದರವಾಗಲಿ ಜಾಸ್ತಿಯಾಗಿಲ್ಲ

ಬಿಡಿ ಸಂಚಿಕೆ: ಕೇವಲ 16 ನ. ಪೈ.

ವಾರ್ಷಿಕ ಚಂದಾ: ದೀಪಾವಳಿ ಸಂಚಿಕೆಯೂ ಸೇರಿ ರೂ. 2-50 ಮಾತ್ರ.

(ಅಂಚೆ ಹಾಸಲು ಉಚಿತ) ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ. ಮೈಸೂರು ಪ್ರಾಂತ್ಯದ ವಿದ್ಯಾಸಂಸ್ಥೆಗಳಿಗೂ ಮಂಜೂರಾಗಿದೆ. ಯಾವ ತಿಂಗಳಿಂದ ಬೇಕಾದರೂ ಚಂದಾದಾರರಾಗಬಹುದು.

T.B.C. 336/32-33 dated 15th June 1933.

ವಿವರಗಳಿಗೆ: ನಗುವ-ನಂದ : : ಬೆಂಗಳೂರು-೧೧.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೩ | ೧೦-೧-೧೯೬೩ | ೧೮ |


## ಸಿರಿಮಾವ್ರೋ ದೌತ್ಯ

ಆರು ಆಫ್ರೇಶ್ಯನ್ ರಾಷ್ಟ್ರಗಳು ಕೊಲಂಬೋ ಸಮ್ಮೇಳನದಲ್ಲಿ ಅಂಗೀಕರಿಸಿದ ಗುಪ್ತ ಗೊತ್ತುವಳಿಯನ್ನು ಮುಂದಿಟ್ಟು ಮಾಡಿ ಉಂಟಾಗಿರುವ ವಿವಾದವನ್ನು ಶಾಂತಿ-ಸೌಹಾರ್ದಯುತವಾಗಿಯೇ ಪರಿಹರಿಸಿಕೊಳ್ಳುವಂತೆ ಚೀನಾ—ಭಾರತಗಳ ನಡುವೆ ಮಾತುಕತೆಯ ಮಾರ್ಗವನ್ನು ತೆರೆಯಲು ಸೂಕ್ತ ವಾತಾವರಣ ನಿರ್ಮಿಸುವ ಸದಾಶಯದೊಡನೆ ಸಿಂಹಳದ ಪ್ರಧಾನಿ ಸಿರಿಮಾವೊ ಪೇಕಿಂಗಿಗೆ ಭೆಟ್ಟಿಯಿತ್ತರು; ನವದೆಹಲಿಗೂ ಆಗಮಿಸಿದರು. ಪೇಕಿಂಗ್ ಸಂದರ್ಶನವು ಬಿಚ್ಚು ಮನಸ್ಸಿನಿಂದ ನಡೆಯಿತೆಂದೂ ಚೀನವು ವಿವಾದ ಪರಿಹಾರದ ಬಗ್ಗೆ ಆಸಕ್ತಿ ತಳೆದಿದೆ ಮಾತ್ರವಲ್ಲದೆ ಶಾಂತ ಮಾರ್ಗವನ್ನೇ ಬಯಸುತ್ತಿದೆಯೆಂದು ತನಗೆ ಮನವರಿಕೆಯಾಗಿದೆಯೆಂದೂ ಚೀನಾವು ಏಕಪಕ್ಷೀಯವಾಗಿ ಸಮರ ವಿರಾಮವನ್ನು ಉಗ್ಗಡಿಸಿದುದು ಅದರ ಅಂತರಂಗದ ದ್ಯೋತಕವೆಂದೂ ಅವರೆಂದಿದ್ದಾರೆ.

ಸಿರಿಮಾವೋ ಪೇಕಿಂಗಿನಲ್ಲಿ ಕೂತು ಅಲ್ಲಿನ ರಾಜಕಾರಣಿಗಳ ಮುಖಕ್ಕೆ ತಕ್ಕ ಮಾತನ್ನಾಡಿದುದರಲ್ಲಿ ತಪ್ಪಿಲ್ಲ; ಆದರೆ, ಅವರಾಗಲೀ ಅವರು ಸೇರಿಸಿದ ಸಮ್ಮೇಳನವಾಗಲೀ ಚೀನವನ್ನು ಆಕ್ರಮಣಗಾರನೆಂದು ಕರೆಯುವಲ್ಲಿ ಒಮ್ಮತಕ್ಕೆ ಬರಲಿಲ್ಲ; ಸತ್ಯಪರಿಸ್ಥಿತಿಯನ್ನು ಸುಸ್ಪಷ್ಟವಾಗಿ ಮನವರಿಕೆ ಮಾಡದಿದ್ದುದರಿಂದಲೂ ಅಥವಾ ಸತ್ಯ ನುಡಿಯಲು ಬೆದರಿಯೋ ಅವರು ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬ ನೀತಿಯನ್ನು ಅನುಸರಿಸಿರಬಹುದು. ಇದು ಅವರ ದೌರ್ಬಲ್ಯದ ಪ್ರತೀಕವೆಂದೇ ಹೇಳಬೇಕಾಗುತ್ತದೆ. ಆದರೆ, ಚೀನಾದ ಅಂತರಾತ್ಮವು ಶಾಂತಿಯನ್ನೇ ಬಯಸುವುದಾದರೆ, ಸತ್ಯವಾಗಿಯೇ ಯುದ್ಧಸ್ತಂಭನವನ್ನು ಕಾರ್ಯಾನ್ವಿತಗೊಳಿಸುತ್ತಿರುವುದಾದರೆ, ಒಂದೇ ಬಾರಿಗೆ ನೇಫಾ ಮತ್ತು ಲಡಖಗಳೆರಡರಲ್ಲಿಯೂ ತಾವು ಆಕ್ರಮಿಸಿದ ಪ್ರದೇಶವನ್ನು ತೆರವು ಮಾಡಬಾರದೇಕೆ? ಭಾರತವು ತನ್ನ ಮುಂದಿಟ್ಟ ಕನಿಷ್ಠ ಬೇಡಿಕೆ—೧೯೬೨ರ ಸಪ್ಟೆಂಬರ ೮ರಂದು ಇದ್ದ ಸ್ಥಳಕ್ಕೆ ಸೇನೆಯನ್ನು ಮರಳಿ ಕರೆಯಬೇಕು—ಯನ್ನು ಮನ್ನಿಸದೆ ಅವಾಸ್ತವಿಕತೆಯ ನೈಜನಿಯಂತ್ರಣ ರೇಖೆಯೊಂದನ್ನು ಕಲ್ಪಿಸುತ್ತಿರುವುದೇಕೆ? ಎಲ್ಲಕ್ಕಿಂತ ಹೆಚ್ಚಾಗಿ ನೇಫಾದಲ್ಲಿ ಹಿಂದೆ ಸರಿದು ಲಡಖದಲ್ಲಿ ಸ್ಥಿರವಾಗಿರುವುದೇಕೆ? ಅಥವಾ ಟಿಬೇಟದಲ್ಲಿ ಬಹುದೊಡ್ಡದಾದ ಸೈನ್ಯವನ್ನು ಒಗ್ಗೂಡಿಸುತ್ತಿರುವುದೇಕೆ?—ಎಂದು ಮುಂತಾದ ಪ್ರಶ್ನೆಗಳು ಏಳುತ್ತವೆ. ಇವಕ್ಕೆ ಸಮಾಧಾನಕರವೆನಿಸುವ ಉತ್ತರಗಳು ಚೀನಾದೊಡನೆ ಇಲ್ಲವೆಂಬುದನ್ನೂ ಅದು ಭಾರತದ ಪವಿತ್ರ ನೆಲವನ್ನು ಯಾವುದಾದರೂ ಉಪಾಯಾಂತರದಿಂದ ನುಂಗಿ ಬಿಡುವ ಇರಾದೆಯಲ್ಲೇ ಇದೆಯೆಂಬುದನ್ನೂ ನಾವು ಸಂಪೂರ್ಣ ಅಲ್ಲಗಳೆಯುವಂತಿಲ್ಲ. ತಾನು ಹೇಳಿದ ಮಾತುಗಳಿಗೇನೇ ವ್ಯತಿರಿಕ್ತವಾಗಿ ಆಚರಿಸಿದ ಚೀನೀಯರ ಅಂತರಾತ್ಮವು ಏನಿದೆ, ಹೇಗಿದೆಯೆಂದು ಊಹಿಸುವುದೂ ಕಠಿನವೆಂದು ಅನುಭವ ಸಾರಿ ಹೇಳುತ್ತಿರುವಾಗ, ಅವರ ಸದ್ಯದ ವ್ಯವಹರಣೆ ಅಕುಟಿಲವೆಂದು ನಂಬುವುದು ಹೇಗೆ? ಇದಕ್ಕೆ ಸಿರಿಮಾವೋ ಯಾವ ಸಮಾಧಾನವನ್ನು ಹೇಳುವವರಿದ್ದಾರೆ ಎಂದು ಪ್ರಶ್ನಿಸಲೇ ಬೇಕಾಗುತ್ತದೆ.

ಬೆಳ್ಳಗಿದ್ದುದೆಲ್ಲಾ ಹಾಲಲ್ಲವೆಂಬ ಪಾಠವನ್ನು ಚೀನಾವು ನಮಗೆ ಕಲಿಸಿತು. ತೆನಾಲಿ ರಾಮಕೃಷ್ಣನ ಬೆಕ್ಕಿನಂತೆ ಭಾರತವೀಗ ಚೀನೀಯರ ಬಿಳಿ ಹಾಲನ್ನು ಹೇಗೆ ಕುಡಿದೀತು? ಅಥವಾ ಕುಡಿಯಲುದ್ಯೋಗಿಸೀತು? ಇರುಳು ಕಂಡ ಬಾವಿಗೆ ಹಗಲು ಬೀಳುವಷ್ಟು ಬುದ್ಧಿಗೇಡಿ ಭಾರತೀಯರಲ್ಲ. ಶಾಂತಿ, ಸ್ನೇಹ, ಸಹೋದರತೆ, ಪಂಚಶೀಲ, ಬಾಡುಂಗ ಪರಿಷತ್ತು ಎಂದು ಮುಂತಾದ ದೀರ್ಘೋದೀರ್ಘ ಮಾತುಗಳನ್ನು ಉಚ್ಚರಿಸುತ್ತ ೪೫ ಕೋಟಿ ಭಾರತೀಯರ ಮೇಲೆ ಆಕ್ರಮಣಮಾಡಿದ ಚೀನಿಯರು ಭಾರತೀಯ ಪವಿತ್ರ ನೆಲಕ್ಕೆ ಅಪಚಾರ ವೆಸಗಿದುದಲ್ಲ. ಅವರ ಹೃದಯಕ್ಕೆ ಕಾದ ಸಲಕೆಯ ಬರೆಯಿಟ್ಟರು. ಕೊಲಂಬೊದ ಗುಪ್ತ ಸಲಹೆ-ಸೂಚನೆಗಳಿಗೆ ಈಗ ಅನುಕೂಲಾಭಿಪ್ರಾಯವಿತ್ತ ಚೌಎನ್ ಲಾಯ್ ಇಷ್ಟರಲ್ಲೇ ತನ್ನ ನಿಲುವನ್ನು ಬದಲಾಯಿಸಿರುವುದೂ ಅಸಾಧ್ಯವಲ್ಲ. ಸಾಮ್ರಾಜ್ಯದಾಹವು ತುತ್ತತುದಿಗೇರಿರುವಾಗ, ಶಕ್ತಿಮದವು ನೆತ್ತಿಗೇರಿದಾಗ ತೃಣವನ್ನೇ ಪರ್ವತವೆಂದು ನೋಡುವ ಮನೋವೃತ್ತಿ ಬಲಿತಿರುವಾಗ. ಚೀನಾ ಏನು ಮಾಡೀತು, ಏನು ಮಾಡಲಾರದು ಎಂದು ಯಾರೂ ಹೇಳುವಂತಿಲ್ಲ. ನವದೆಹಲಿಗೆ ಬಂದ ಸಿರಿಮಾವೋ ಇಲ್ಲಿಯೂ ತಮ್ಮ ಮಾತುಕತೆಯನ್ನು ನಡೆಸಿದರು. ಇಲ್ಲಿ ಸಂಯುಕ್ತ ಅರಬರಾಜ್ಯ ಮತ್ತು ಘಾನಾದ ಪ್ರತಿನಿಧಿಗಳೂ ಅವರನ್ನು ಕೂಡುವರು. ಅರಬ ರಾಜ್ಯವು ಭಾರತದ ನೀತಿಯನ್ನು ಬೆಂಬಲಿಸಿದ್ದರೆ, ಘಾನಾವು ಒಂದು ಒಗಟಿನಂತಹ ಧೋರಣೆಯನ್ನು ತಾಳಿತ್ತು; ಇಂದಿಗೂ ಅದರ ನಿಲುವು ಸ್ಪಷ್ಟವಿಲ್ಲ. ಇದರಿಂದಾಗಿ ನವದೆಹಲಿಯ ಮಾತುಕತೆಗಳು ಅತಿ ಮುಖ್ಯದವೆಂದು ತಿಳಿಯಲು ಆಸ್ಪದವಿದೆ. ಚೀನಾದ ಪ್ರತಿಕ್ರಿಯೆಗಳು ಏನೆಂಬುದನ್ನು ಭಾರತದ ಅಭಿಪ್ರಾಯಗಳು ಹೊರಬಿದ್ದ ನಂತರವೇ ತಿಳಿಯಬಹುದು ಎಂಬ ಉದ್ಗಾರವು ತುಂಬ ಅರ್ಥಪೂರ್ಣವಾಗಿರುವಂತೆ ಭಾಸವಾಗುತ್ತದೆ.

ಇಲ್ಲಿ ಒಂದು ವಿಚಾರವನ್ನು ಒತ್ತಿ ಹೇಳಬೇಕೆನಿಸುತ್ತದೆ. ಚೀನಾವು ಶಾಂತಿಯನ್ನು ಬಯಸುತ್ತದೆ. ವಿವಾದವನ್ನು ಮಾತುಕತೆಗಳಿಂದಲೇ ಪರಿಹರಿಸಿಕೊಳ್ಳಲು ಆತುರದಿಂದಿದೆ—ಎಂಬುದರಲ್ಲಿ ಸಂಪೂರ್ಣ ವಿಶ್ವಾಸವಿಡುವುದು ಸಾಧ್ಯವಿಲ್ಲ. ಇದಕ್ಕೆ ಅದು ಇದುವರೆಗೆ ಮಾಡಿದ ವಿಶ್ವಾಸಘಾತವೆ ಮತ್ತು ಇದೀಗ ಮಾಡುತ್ತಿರುವ ಸಮರ ಸಿದ್ಧತೆಗಳೇ ಸಾಕ್ಷಿ. ಆದರೆ, ಭಾರತವು ಯುದ್ಧ ಮಾಡಲು ಹೋಗಲಿಲ್ಲ; ಅಥವಾ ಮಾಡುವ ಆತುರವಾದರೂ ಅದಕ್ಕಿರಲಿಲ್ಲ; ಇಂದಾದರೂ ಅದು ತನ್ನ ಕನಿಷ್ಠ ಬೇಡಿಕೆಯು ಅಡೇರಿತೆಂದರೆ, ಮಾತುಕತೆಗೆ ಸಿದ್ಧವಿದೆ. ಸಿರಿಮಾವೋ ತಂದ ಗೊತ್ತುವಳಿಯ ಸ್ವರೂಪ ತಿಳಿದಿಲ್ಲವಾದುದರಿಂದ ಆ ಬಗ್ಗೆ ಏನೂ ಹೇಳುವಂತಿಲ್ಲ. ಹಾಗಿದ್ದರೂ, ವಿವಾದ ಪರಿಹಾರದಲ್ಲಿ ಭಾರತಕ್ಕಿಂತಲೂ ಚೀನಾದ ಮನಸ್ಸನ್ನೇ ಒಲಿಸುವ ಪ್ರಯತ್ನ ಹೆಚ್ಚು ಬೇಕಾಗಿತ್ತು. ಈ ಪ್ರಯತ್ನವನ್ನು ಅವರು ಮಾಡಿರಲೂ ಬಹುದು; ಆದರೆ, ಅದು ಸಫಲವಾಗಿಲ್ಲವೆಂದು ತಿಳಿದುಕೊಳ್ಳುವುದಕ್ಕೆ ಕಾರಣಗಳಿವೆ. ಎಂತಲೇ ಸಿರಿಮಾವೋ ನಾಯಕತ್ವದ ಫಲಶ್ರುತಿ ಶೂನ್ಯದ ಮಿತಿಯನ್ನೇ ಮುಟ್ಟುವವೇ ಎಂಬ ನಿರಾಶೆ ಕವಿಯುತ್ತದೆ. ಹಾಗಾಗದೆ ಅವರ ದೌತ್ಯ ಯಶಪ್ರದವೆನಿಸಿದರೆ, ಅವರು ಅಸಾಧಾರಣ ಸಾಹಸ ಮಾಡಿದಂತೆಯೇ ಆಗುವುದು. ಎಲ್ಲರ ಆಶಯವಾದರೂ ಅದು ಸಫಲವಾಗಲಿ ಎಂದೇ ಆಗಿದೆ.

## ಪಾನ ಪ್ರತಿಬಂಧ ರದ್ದತಿ

ಸಂರಕ್ಷಣಾ ವೆಚ್ಚವನ್ನು ಅನಿರೀಕ್ಷಿತವಾಗಿ ಹೆಚ್ಚಿಸಬೇಕಾಗಿ ಬಂದುದರಿಂದ ದೇಶದ ಒಂದು ಪಂಗಡದ ಜನರು ಮದ್ಯಪಾನ ನಿಷೇಧ ಕಾಯದೆಯನ್ನು ಕಿತ್ತುಹಾಕಿ ಅವಕ್ಕೆ ಮುಕ್ತ ಮಾರುಕಟ್ಟೆ ಒದಗಿಸಬೇಕೆಂದು ವಾದಿಸುತ್ತಿದರು. ಕೆಲವೊಂದು ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ಆಸಕ್ತಿ ತೋರಿಸಿದುದೂ ಉತ್ತರ ಪ್ರದೇಶ ಸರಕಾರವು ಅದಕ್ಕೆ ಓ ಗೊಟ್ಟು ಪ್ರತಿಬಂಧವನ್ನು ಕಿತ್ತೆಸೆದುದೂ ಸುವಿದಿತ. ಆದರೆ, ಈ ಸಂಬಂಧದ ಅಖಿಲ ಭಾರತೀಯ ನೀತಿಯು ಇದಕ್ಕೆ ವ್ಯತಿರಿಕ್ತವಾಗಿಯೇ ಉಳಿದಿದೆ; ಮುಂದೆಯೂ ಉಳಿಯುವುದು. ಆದರ್ಶಕ್ಕೂ ವ್ಯವಹಾರಕ್ಕೂ ತುಂಬ ಅಂತರವಿದೆ ನಿಜವೇ. ಆದರೆ, ಒಮ್ಮೆ ಆದರ್ಶವನ್ನು ವ್ಯವಹಾರ ರಂಗಕ್ಕೆ ಇಳಿಸಿದ ನಂತರ, ಮತ್ತೆ ಹಿಂಜರಿಯುವುದು ಹೇಡಿತನವೆಂದು ನಾವು ಹಿಂದಿನಿಂದಲೂ ಹೇಳುತ್ತ ಬಂದಿದ್ದೇವೆ. ಪ್ರತಿಬಂಧವನ್ನು ಕಿತ್ತು ಹಾಕುವುದರಿಂದ ಒಟ್ಟು ೨೦೦ ಕೋಟಿ ರೂಪಾಯಿಗಳ ಆದಾಯ ಬರುವುದೆಂದು ಹೇಗೆ ಹೇಗೋ ಅಂಕೆ ಸಂಖ್ಯೆಗಳನ್ನು ಕೂಡಿ ಹಾಕಿದವರೂ ಇದ್ದಾರೆ. ಆದರೆ, ಇದು ಕೇವಲ ಕನಸಿನ ಗಂಟು ಮಾತ್ರವೆಂದು ಶ್ರೀ ಮನ್ನಾರಣ ಸಮಿತಿಯು ತನ್ನ ಪರಿಶೀಲನಾ ನಂತರ ಹೇಳಿದೆ. ಹೆಚ್ಚುವ ಆದಾಯವು ಸುಮಾರು ೪೫.೫೦ ಕೋಟಿ ರೂಪಾಯಿಗಳಷ್ಟು ಆಗಬಹುದೆಂದು ಅದರ ಅಂದಾಜು. ಇಷ್ಟೊಂದು ಅಲ್ಪ ಹಣಕ್ಕಾಗಿ ನಾವು ಮುಂದಿಟ್ಟ ಹೆಜ್ಜೆಯನ್ನು ಹಿಂದೆ ಇಡಬೇಕೆ? ಜನತೆಯ ಬುದ್ಧಿ ಶಕ್ತಿಯನ್ನು ಕೆಡಿಸಿ, ದೇಶದ ಸಂರಕ್ಷಣೆಯನ್ನು ಭದ್ರಗೊಳಿಸುವುದು ಸಾಧ್ಯವೆ? ಎಂಬ ಪ್ರಶ್ನೆಗಳನ್ನು ನಾವು ಯೋಚಿಸ ಬೇಕಾಗುತ್ತದೆ. ಪ್ರತಿಬಂಧ ಕಾಯದೆಯನ್ನು ಯಶಸ್ವಿಗೊಳಿಸುವ ಬಗ್ಗೆ ಆಸಕ್ತಿ ವಹಿಸಿದರೆ, ಅದರಿಂದ ನಮ್ಮ ನೈತಿಕ ಮಟ್ಟವೂ ಏರುವುದು; ಆತ್ಮ ಶಕ್ತಿಯೂ ಹೆಚ್ಚುವುದು.

---

### ಜವಾಹರ

೪೫ ಕೋಟಿ ರೂಪಾಯಿಗಳಿಗೂ ಮಿಕ್ಕಿದ ವೆಚ್ಚದಲ್ಲಿ ಉತ್ತರ ಪ್ರದೇಶದ ರಿಹಂದಾ ಅಣೆಕಟ್ಟಿಗಿಂತಲೂ ಅದರ ಉದ್ಘಾಟನಾವಸರದಲ್ಲಿ ಪ್ರಧಾನಿ ನೆಹರು ನೀಡಿದ ಸಂದೇಶ—ದೊಡ್ಡದಾದುದು. ಕಟ್ಟೆಯ ನಿರ್ಮಾಣಕ್ಕೆ ನೆರವಾದ ಸ್ನೇಹಿತ ರಾಷ್ಟ್ರಗಳನ್ನು ಅಭಿನಂದಿಸಿದ ಅವರು—ದೇಶದ ಜನರೇ ಸ್ವಶ್ರಮದಿಂದ ರಾಷ್ಟ್ರ ನಿರ್ಮಾಣ ಮಾಡುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ರಾಷ್ಟ್ರನಿರ್ಮಾಣಕಾರ್ಯ ಪರಿಶ್ರಮದಿಂದ ಮಾತ್ರ ಸಾಧ್ಯ; ಭಿಕ್ಷೆ ಬೇಡುವುದರಿಂದಲ್ಲ. ಆದುದರಿಂದ ಭಾರತದ ಆರ್ಥಿಕ ಸ್ಥಿತಿಗತಿಯನ್ನು ಸುಭದ್ರಗೊಳಿಸಲು ಭಾರತೀಯರು ಅವ್ಯಾಹತವಾಗಿ ಪರಿಶ್ರಮಿಸಬೇಕು. ಎಂಬ ಅವರ ಕರೆಯು ದಿಗ್ ದಿಗಂತಗಳಲ್ಲಿ ಮಾರ್ದನಿಗೊಡಬೇಕು.

### ಜಗಜ್ಜೀವನರಾಮ

ಯುದ್ಧದ ಸಂದರ್ಭವೊದಗಿದಾಗ ತಮ್ಮ ಲಾಭಮಾಡಿಕೊಳ್ಳುವ ಲಾಭ ಬಡಕರಿಗೇನೂ ಕಡಮೆಯಿಲ್ಲ. ಇಂದು ದೇಶದಲ್ಲಿ ಉಂಟಾದ ಸಮರಛಾಯೆಯಡಿಯಲ್ಲಿ ಸ್ವಾರ್ಥಿಗಳು ತಮ್ಮ ಸ್ವಾರ್ಥಸಾಧನೆಗೆ ತೊಡಗುವುದನ್ನು ಕೇಂದ್ರ ಸಂಪರ್ಕ ಖಾತಾ ಮಂತ್ರಿ ಜಗಜ್ಜೀವನ ರಾಮರು ದೇಶದ್ರೋಹವೆಂದು ಕರೆದಿದ್ದಾರೆ. ಇಂತಹ ದ್ರೋಹಿಗಳನ್ನು ಉಗ್ರವಾಗಿ ದಂಡಿಸುವ ಕಾರ್ಯಕ್ಕೂ ನಾಂದಿಯಾಗ ಬಹುದು. ಉಳ್ಳವರು ಇಲ್ಲದವರನ್ನು ಪೀಡಿಸುವುದು ಪರಿಪಾಠವೆಂಬಂತಿರುವ ಭಾರತದಲ್ಲಿ ಸಮಾಜ ಘಾತುಕರನ್ನು ಕಂಡು ಹಿಡಿದು ಸದೆ ಬಡಿಯುವ ಅಗತ್ಯವಿದ್ದೇ ಇದೆ.

---

## In The Court of District Munsif of Coondapoor

R. I. A. 776/62 in O. S. 273/61

Between-Leo D'Souza—Plaintiff
and
Valerina Mascaranes and others
Defendants

To
Srimathi Roman D'Souza Widow of Xavier D'Souza- Care of Rominal Trusily Saint Andrew Church Bombay-20. (12th defendant)

Please take notice that the plaintiff above named had filed the above application for finel decree. Since the defendants had failed to deposit the amount into bank as directed in the preliminary decree dated 11-4-1962. The Said application stands posted to 18-1-1963 at 11 A. M. upon the said Court If you fail to appear before the said Court on that day either in person or through a duly instructed pleader, you will be set exparte and further order will be passed in your absence.

(Sd) K. Ramappayya
B. A. LL. B
Advocate for Plaintiff.
Coondapoor, 7—1—63

## ಅಲ್ಲಲ್ಲಿಯ ಸುದ್ದಿ ಸಾರ

**ಸುಬ್ರಹ್ಮಣ್ಯದಲ್ಲಿ ಧರ್ಮ ಸಮ್ಮೇಳನ—** ಇದೇ ತಾ ೧೮ರಂದು ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಧರ್ಮ ಸಮ್ಮೇಳನವೊಂದು, ಪ್ರಿನ್ಸಿಪಾಲ್ ಸಬೋರ್ಡಿನೇಟ್ ಜಡ್ಜ್ ಶ್ರೀ ಆರ್. ವಿ. ಕೊಲ್ಲಾಳಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಬಾಲಕಿಯರಿಂದ ಪ್ರಾರ್ಥನೆಯಾದ ಬಳಿಕ ದೇವಾಲಯದ ಧರ್ಮದರ್ಶಿಗಳಲ್ಲೊಬ್ಬರಾದ ಶ್ರೀ ಬಿ. ನಾರಾಯಣ ಶೇಕರಿಂದ ಸ್ವಾಗತ ಭಾಷಣವಾಯಿತು. ಇದು ಆರನೇಯ ಧರ್ಮ ಸಮ್ಮೇಳನವೆಂದು ಅವರು ತಿಳಿಸಿದರು. ಅಧ್ಯಕ್ಷರು ಮಾತಾಡುತ್ತಾ ಜನರು ಧರ್ಮವಂತರಾಗಿ ಬಾಳಬೇಕು ಎಂದು ಹೇಳಿದರು. ಅಂದಿನ ಪ್ರಮುಖ ಭಾಷಣಕಾರರಾದ ಶ್ರೀ ಕೆ. ಲೋಕಯ್ಯ ಶೆಟ್ಟರು ಧರ್ಮದ ಸ್ವರೂಪವನ್ನೂ ಅದರ ವಿವಿಧಾರ್ಥಗಳನ್ನೂ ವಿವರಿಸಿದರು. ಅನಂತರ ಶ್ರೀ ಪಿ. ಕೆ. ನಾರಾಯಣರು ವಿಚಾರ ಸ್ವಾತಂತ್ರ್ಯದಿಂದ, ಭಾರತದಲ್ಲಿ ಧರ್ಮವು ಯಾವ ರೀತಿಯಲ್ಲಿ ವಿಕಾಸಿಸುತ್ತಿದೆಯೆಂಬುದನ್ನು ತಿಳಿಸಿದರು. ಬೆಂಗಳೂರಿನ "ಪ್ರಜಾವಾಣಿ"ಯ ಸಂಪಾದಕ, ಶ್ರೀ ಟಿ. ಎಸ್. ರಾಮಚಂದ್ರರಾಯರು ಮಾತಾಡುತ್ತಾ "ಅಧರ್ಮವೇ ಇಂದಿನ ಧರ್ಮವಾಗಿರುವಾಗ, ಇಲ್ಲಿ ಧರ್ಮ ಸಮ್ಮೇಳನ ಜರಗಿದುದು ಸುಯೋಗ" ಎಂದು ಹೇಳಿದರು. ಸಭಾಂತ್ಯದಲ್ಲಿ ದೇವಾಲಯದ ಮೆನೇಜರ್ ಶ್ರೀ ರಾಮಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು.

### ಬಂಟರ ಯಾನೆ ನಾಡವರ ಸಂಘ

**ಮುಂಬಯಿ—** 34ನೇ ಲಿಮಿಂಗ್‌ಟನ್ ರೋಡ್, ಮುಂಬಯಿ ನಂಬ್ರ 7ರಲ್ಲಿರುವ "ನವಯುಗ" ಬಿಲ್ಡಿಂಗಿನ 4ನೇ ಅಂತಸ್ತಿನಲ್ಲಿ ಆಫೀಸಿಗಾಗಿ ತೆಗೆದುಕೊಂಡ ಸ್ಥಳದಲ್ಲಿ, ಮೈಸೂರು ಹೈ ಕೋರ್ಟಿನ ನ್ಯಾಯಾಧೀಶರಾದ ನ್ಯಾ. ಕೆ. ಸದಾನಂದ ಹೆಗ್ಡೆಯವರು ತಾ. 23—12—62ನೇ ಬೆಳಿಗ್ಗೆ ಹತ್ತು ಗಂಟೆಗೆ ಮೇಲಿನ ಸಂಘದ ಹೊಸ ಆಫೀಸಿನ ಉದ್ಘಾಟನೆಯನ್ನು ಮಾಡಿ ರಸಭರಿತವಾದ ಭಾಷಣವನ್ನಿತ್ತರು. ಶ್ರೀ ಕೆ. ವಿಠಲ ಶೆಟ್ರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶ್ರೀಯುತರುಗಳಾದ ರಾಮ ಬಿ. ಶೆಟ್ರು ಕಳವಾರು ರಾಮ ಶೆಟ್ರು, ಬಜಾಲ್ ಸಂಜೀವ ಶೆಟ್ರುಯವರು ಸಂದರ್ಭೋಚಿತ ಭಾಷಣ ಮಾಡಲು, ಮೂಲ್ಕಿ ಗಂಗಯ್ಯ ಶೆಟ್ರು ಧನ್ಯವಾದಗಳನ್ನರ್ಪಿಸಿದರು.

**ವಾರ್ಷಿಕೋತ್ಸವ—** ಕರ್ನಾಟಕ ನೂತನ ಸಂಗೀತ ಸಭಾ, ಮುಂಬಯಿ, ಇದರ ಮೂವತ್ತನೇ ವಾರ್ಷಿಕೋತ್ಸವವು ಇದೇ ತಾ. 26-1-1963ನೇ ಶನಿವಾರ ಅಪರಾಹ್ನ ಘಂಟೆ 2-30ಕ್ಕೆ ಸರಿಯಾಗಿ ಕೋಟೆಯೊಳಗಿನ ಸರ್ ಕವಾಸ್ಜೀ ಜಹಂಗೀರ್ ಸಭಾ ಸದನದಲ್ಲಿ ಶ್ರೀ ಜೆ. ಎನ್. ಅಯ್ಯರರ ಅಧ್ಯಕ್ಷತೆಯಲ್ಲಿ ನೆರವೇರಲಿರುವುದು. ಡಾ. ಕೆ. ಆರ್. ಮಹಿಷಿಯವರು ಅಂದಿನ ಮುಖ್ಯ ಅತಿಥಿಯಾಗಲಿರುವರು.

ಮನರಂಜನೆಯ ಕಾರ್ಯಕ್ರಮದಲ್ಲಿ ಸಭೆಯ ಸದಸ್ಯರು "ಬಲಿದಾನ" ಎಂಬ ಕನ್ನಡ ನಾಟಕವನ್ನು ಅಭಿನಯಿಸಲಿರುವರು.

**ಪ್ರಥಮ ಚಿಕಿತ್ಸಾ ತರಗತಿಯ ಉದ್ಘಾಟನೆ—** ನಮ್ಮ ದೇಶದ ಇಂದಿನ ಅಪಾಯಕಾರಿ ಸಂದರ್ಭದಲ್ಲಿ, ಜನತೆಗೆ ಪ್ರಥಮ ಚಿಕಿತ್ಸೆಯ ಶಿಕ್ಷಣವನ್ನು ಕೊಡುವ ಉದ್ದೇಶದಿಂದ, ಉಡುಪಿ ಸರಕಾರಿ ಆಸ್ಪತ್ರೆಯವರು ಒಂದು ಪ್ರಥಮ ಚಿಕಿತ್ಸಾ ತರಗತಿಯನ್ನು ತಾ. ೩ರಂದು ತೆರೆದರು. ಇದರ ಉದ್ಘಾಟನಾ ಸಮಾರಂಭವು ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ, ಡಾ. ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಡಾ. ಎಂ. ಸದಾನಂದ ಶೆಟ್ಟರು ಅತಿಥಿಗಳನ್ನು ಸ್ವಾಗತಿಸಿದರು. ಸರ್ಜನರಾದ ಡಾ. ಕೆ. ಮುದ್ದಣ್ಣನವರು ಪ್ರಥಮ ಚಿಕಿತ್ಸೆಯ ಅವಶ್ಯಕತೆಯನ್ನು ವಿವರಿಸಿ ಇದು ಕೇವಲ ಎಂಟು ದಿನಗಳ ತರಬೇತಿ ಎಂದು ತಿಳಿಸಿದರು.

ಶ್ರೀ ರಂಗನಾಥ ಶೆಣೈಯವರು [illegible]ತ್ತಾ ರಾಷ್ಟ್ರ ರಕ್ಷಣೆಯು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ. ಪ್ರಥಮ ಚಿಕಿತ್ಸೆಯು ರಾಷ್ಟ್ರ ರಕ್ಷಣೆಯ ಪ್ರಮುಖ ಹೆಜ್ಜೆಯಾಗಿದೆ, ಎಂದರು.

ಅಧ್ಯಕ್ಷ ಡಾ| ಪಿ. ಆರ್. ನಾಯಕ್‌ರವರು ನಾವು ನಮ್ಮ ಜವಾನರಿಗೆ ಸದಾ ಬೆಂಬಲ ನೀಡಬೇಕು, ನಮ್ಮ ಸರಕಾರವನ್ನು ಟೀಕಿಸುವಂತಹ ಹೇಯ ಕಾರ್ಯದಲ್ಲಿ ನಾವು ತೊಡಗಬಾರದು ಎಂದು ಹೇಳಿದರು.

**ಉಚಿತ ಶ್ವಾಸ ರೋಗಿ ಸೇವಾ ಶಿಬಿರ—** ಶ್ವಾಸ ರೋಗದ ತಜ್ಞ ಚಿಕಿತ್ಸಕರಾದ ಡಾ. ಎನ್. ಬಿ. ಮಕಾಳೆಯವರ ವೈದ್ಯಕೀಯ ಸೇವೆಯ ಲಾಭ ದಾವಣಗೆರೆ ಪಟ್ಟಣಕ್ಕೂ ಸುತ್ತಿನ ಹಳ್ಳಿಗಳಿಗೂ ಆಗಲೆಂಬ ಆಕಾಂಕ್ಷೆಯಿಂದ ದಿನಾಂಕ 11—1—63 ರಿಂದ 23—1—63ರ ವರೆಗೆ ಶ್ರೀ ಚೆನ್ನಗಿರಿ ವಿರೂಪಾಕ್ಷಪ್ಪನವರ ಧರ್ಮ ಛತ್ರದಲ್ಲಿ ಉಚಿತ ಶ್ವಾಸ ರೋಗಿ ಸೇವಾ ಶಿಬಿರಗಳನ್ನೂ ನಡೆಸಲಾಗುವದು. 10 ದಿನಗಳ ಈ ಶಿಬಿರದಲ್ಲಿ ಔಷಧ ಹಾಗೂ ಚಿಕಿತ್ಸೆ ಸಂಪೂರ್ಣ ಉಚಿತವಾಗಿರುವದು ಅವಶ್ಯವೆನಿಸಿದರೆ ಕೊಡಲಾಗುವ ಆಯುರ್ವೇದಿಕ ಇಂಜೆಕ್ಷನಕ್ಕೆ ಸ್ವಲ್ಪ ಬೆಲೆ ಕೊಡಬೇಕಾಗುವದು ಅಸ್ತಮಾ ಪೀಡಿತರು ೧ ರೂಪಾಯಿ ಸಹಾಯ ಧನ ಸಲ್ಲಿಸಿ ಶಿಬಿರ ಸ್ಥಳದಲ್ಲಿ ತಮ್ಮ ಹೆಸರುಗಳನ್ನು ಬರೆಯಿಸಬೇಕು ದಮ್ಮು ಅಥವಾ ಅಸ್ತಮಾ ಬೇನೆಯಿಂದ ಬಳಲುತ್ತಿರುವ ಜನಗಳು ಈ ಶಿಬಿರದ ಲಾಭ ಪಡೆದು ಆರೋಗ್ಯವಂತರಾಗಬೇಕೆಂದು ಕೋರಿದೆ.

### ದ್ವಿತೀಯ ಕನ್ನಡ ಸಾಹಿತ್ಯಸ್ಪರ್ಧೆ

೧೯೬೩—ನಮ್ಮ ಸಂಸ್ಥೆಯ ಆಶ್ರಯದಲ್ಲಿ ಪ್ರಬಂಧ, ಸಣ್ಣ ಕಥೆ ಕವನ ಹಾಗೂ ಕೈ ಬರಹ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಪ್ರತಿಯೊಂದು ವಿಭಾಗಕ್ಕೂ ಪ್ರವೇಶ ಧನ ಒಂದು ರೂಪಾಯಿ. ಸ್ಪರ್ಧೆಗೆ ಭಾಗವಹಿಸಲು ಕೊನೆಯ ತಾರೀಕು 31-1-63 ವಿವರಗಳಿಗೆ ಬರೆಯಿರಿ—

ಸಂಚಾಲಕರು ಶ್ರೀ ಸರಸ್ವತಿ ಕಲಾನಿಕೇತನ್ ನೈ ೧೩೦ ೧೬ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 3

**ನಾಟಕ ಪ್ರದರ್ಶನ—** ಬಿಲ್ಲವರ ಎಸೋಸಿಯೇಶನಿನ ವತಿಯಿಂದ ನಡೆಯುತ್ತಿರುವ ಗುರುನಾರಾಯಣ ಧರ್ಮಾರ್ಥ ರಾತ್ರಿ ಪ್ರೌಢ ಶಾಲೆಯ ಸಹಾಯಾರ್ಥವಾಗಿ ದಿನಾಂಕ 31-12-62ರಂದು ಮುಂಬೈಯ ಬಿರ್ಲಾ ಮಾತುಶ್ರೀ ಸಭಾಗಾರದಲ್ಲಿ ಕನ್ನಡದ ಸುಪ್ರಸಿದ್ಧ ನಾಟಕಕಾರರಾದ ಶ್ರೀ ರಂಗರ 'ಸಾವಿತ್ರಿ' ಎಂಬ ನಾಟಕವನ್ನು ಪ್ರದರ್ಶಿಸಿತು.

ಹೃದಯಂಗಮವಾದ ಕಾವ್ಯಭಾಷೆಯೇ ಈ ನಾಟಕದ ಜೀವಾಳ. ಸಾವಿತ್ರಿಯಾಗಿ ಕುಂದ ನಾಡಕರ್ಣಿ, ದ್ಯುಮತ್ಸೇನನಾಗಿ ಕಲಗೇರಿ. ನಾರದನ ಪಾತ್ರದಲ್ಲಿ ವಸಂತ ಕವಲಿ, ಎಂ. ಎನ್. ರಾಮಚಂದ್ರ ರಾವ್ ಅವರು ಯಮನಾಗಿ ತಮ್ಮ ತಮ್ಮ ಪಾತ್ರಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದರು. ಪ್ರೇಮ ಪ್ರಭಾಕರರ (ಸತ್ಯವಾನ) ಆರ್ ಬಿ ಉಚ್ಚಿಲ್ (ಅಶ್ವಪತಿ) ಅವರೂ ಸಮರ್ಪಕವಾಗಿಯೇ ಅಭಿನಯಿಸಿದರು. ನಾಟಕದ ಪ್ರಧಾನ ಪಾತ್ರಗಳಲ್ಲಿ ಒಂದಾದ ನಟಿಯ ಪಾತ್ರದಲ್ಲಿ ವಿಜಯಲಕ್ಷ್ಮಿ ಚೆನ್ನಾಗಿ ನುರಿತ ಕಲಾವಿದೆಯಂತೆ ಅಭಿನಯಿಸಿದಳು. ಸೂತ್ರಧಾರರಾಗಿ [ನಾಟಕದ ದಿಗ್ದರ್ಶಕರಾದ] ಕೆ. ಕೆ. ಸುವರ್ಣರ ಅಭಿನಯ ಅಮೋಘವಾಗಿತ್ತು.

ಐ. ಎಸ್. ಟಿ.ಯವರ ರಂಗಸಜ್ಜಿಕೆ ಆಕರ್ಷಕವಾಗಿತ್ತು. ಸಂಗೀತವೂ ಇಂಪಾಗಿತ್ತು. ಎಲ್ಲಕ್ಕಿಂತಲೂ ಹೆಚ್ಚಾಗಿ ಮುಂಬೈಯ ಕನ್ನಡ ನಾಟಕ ಪ್ರೇಮಿಗಳಿಗೆ ಶ್ರೀ ರಂಗರ ಈ ನಾಟಕವನ್ನು ಅತ್ಯುತ್ತಮವಾಗಿ ಪ್ರದರ್ಶಿಸಿ ತೋರಿಸಿದುದಕ್ಕಾಗಿ ಬಿಲ್ಲವರ ಎಸೋಸಿಯೇಶನಿನ ಸಾಂಸ್ಕೃತಿಕ ವಿಭಾಗದವರೂ ದಿಗ್ದರ್ಶಕ ಕೆ. ಕೆ. ಸುವರ್ಣರೂ ಅಭಿನಂದನಾರ್ಹರಾಗಿದ್ದಾರೆ. ಎಂದು ಎಸ್. ಎಂ. ಶೆಟ್ಟಿ ತಿಮ್ಮಂಜೆ ಕರಾರಿ ಇವರು ಬರೆಯುತ್ತಾರೆ.

**ಇಂಟಕ್ ಮಜೂರ ಸಂಘಟನೆ—** ನಮ್ಮ ದೇಶದಲ್ಲಿಯೇ ಏಕಮೇವ ಅದ್ವಿತೀಯ ಮಜೂರ ಸಂಘಟನೆಯಾದ, ಸುಮಾರು ಹದಿನಾರು ಲಕ್ಷ ಸದಸ್ಯರನ್ನೊಳಗೊಂಡ 'ಇಂಟಕ್'ನ ಆಶ್ರಯದಲ್ಲಿ ನಮ್ಮ ಜಿಲ್ಲೆಯ ಮಜೂರರನ್ನು ಸಂಘಟಿಸುವರೆ ಸುಮಾರು ಮೂರು ವರ್ಷಗಳಿಂದ ನಾವು ಶ್ರಮಪಡುತ್ತಿರುವ ವಿಚಾರವನ್ನು ತಾವು ತಿಳಿದಿರಬಹುದು. ನಮ್ಮ ಸಂಘಟನೆಯನ್ನು ಇನ್ನೂ ಬಲಪಡಿಸುವ ಉದ್ದೇಶದಿಂದ ಮೈಸೂರು ಪ್ರದೇಶ ಇಂಟಕ್‌ನ ಜನರಲ್ ಕೌನ್ಸಿಲಿನ ಸಭೆಯನ್ನು ಮಂಗಳೂರಲ್ಲಿ ಇದೇ ಜನವರಿ 12, 13ರಂದು ಜರಗಿಸುವರೇ ಆಲೋಚಿಸಿದ್ದೇವೆ. ಇದರ ಸಭೆಗೆ ಪ್ರಾದೇಶಿಕ ಇಂಟಕ್‌ಗೆ ಸಂಯೋಜಿಸಲ್ಪಟ್ಟ, ಎಲ್ಲಾ ಮಜೂರ ಸಂಘಟನೆಗಳ ಪ್ರತಿನಿಧಿಗಳು ಆಗಮಿಸಲಿರುವರಲ್ಲದೆ, ಮಾನ್ಯ ಮಜೂರ ಮಂತ್ರಿ ಶ್ರೀ ದೇವರಾಜ್ ಅರಸ್‌ರವರು ಕೂಡಾ ಸಭೆಯಲ್ಲಿ ಭಾಗವಹಿಸಲಿರುವರು. ಪ್ರತಿನಿಧಿಗಳ ವಸತಿ ಸೌಕರ್ಯದ ವ್ಯವಸ್ಥೆಯನ್ನು ಸ್ವಾಗತ ಸಮಿತಿಯು ವಹಿಸಿಕೊಳ್ಳಬೇಕಾಗಿದೆ. ಇಂಟಕಿನ ಸಂಘಟನೆಗೆ ಸಾರ್ವಜನಿಕರು ಸಹಕಾರ, ಪ್ರೋತ್ಸಾಹ ಇತ್ತು ಸಹಕರಿಸಬೇಕಾಗಿ ಸ್ವಾಗತ ಸಮಿತಿಯು ವಿನಂತಿಸುತ್ತದೆ.

**೨೪ನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನ—** ಇಪ್ಪತ್ತನಾಲ್ಕನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನವನ್ನು ಇದೇ ಬರುವ 1963ರ ಮಾರ್ಚ್ ತಿಂಗಳಲ್ಲಿ ಮಂಗಳೂರಲ್ಲಿ ಜರಗಿಸಬೇಕೆಂದು ನಿಶ್ಚಯಿಸಲಾಗಿದೆ

ನಮ್ಮ ರಾಷ್ಟ್ರ ಸ್ವಾತಂತ್ರ್ಯಪ್ರಾಪ್ತಿಯ ಪೂರ್ವದಲ್ಲಿ ಸರಕಾರದಿಂದ ಆಯುರ್ವೇದಕ್ಕೆ ಲಭಿಸುತ್ತಿದ್ದ ಗೌರವ ಪ್ರೋತ್ಸಾಹಗಳು ಸ್ವಾತಂತ್ರ್ಯೋತ್ತರ ಕಾಲದ ನಮ್ಮ ಸರಕಾರದಿಂದ ಲಭಿಸುತ್ತಿಲ್ಲವೆಂಬುದು ವಿಷಾದಾಸ್ಪದವಾಗಿದೆ. ಮಧ್ಯಪಾನ ನಿರೋಧ ಕಾಯಿದೆ, ಮೆಡಿಸಿನ್ ಎಂಡ್ ಟ್ವಾಯಿಲೆಟ್ ಪ್ರಿಪರೇಶನ್ ಕಾಯಿದೆಗಳಿಂದಾಗಿ ಆಯುರ್ವೇದಿಕರು ತಮ್ಮ ವೃತ್ತಿಯಲ್ಲಿ ನಿತ್ಯ ಉಪಯೋಗಿಸುತ್ತಿರುವ ಆಸವಾರಿಷ್ಟಗಳನ್ನು ಸ್ವತಂತ್ರರಾಗಿ ತಯಾರಿಸುವಂತಿಲ್ಲ. ಅವುಗಳನ್ನು ತಯಾರಿಸಿ ಉಪಯೋಗಿಸಲು ಲೈಸನ್ಸ್. ರೇವಣಾತಿಗಳೆಂಬ ಹಲವಾರು ಪ್ರತಿಬಂಧಕಗಳನ್ನು ಹೇರಲಾಗಿದೆ. ಇದರಿಂದ ಆಯುರ್ವೇದ ಚಿಕಿತ್ಸಕರ ಸ್ವಾತಂತ್ರ್ಯಕ್ಕೇನೆಯೇ ಗಂಡಾಂತರ ಪರಿಸ್ಥಿತಿಯೊದಗಿದೆ. ನಮ್ಮ ರಾಷ್ಟ್ರದ ಮೂಲಭೂತವಾದ ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಅರ್ವಾಚೀನ ಚಿಕಿತ್ಸಾಪದ್ಧತಿಗಿಂತ ಹೆಚ್ಚಲ್ಲದಿದ್ದರೂ ಅವರಷ್ಟೇ ಪ್ರೋತ್ಸಾಹವಾದರೂ ಸಿಗಬಹುದೆಂಬ ನಮ್ಮ ಮನೋಭಿಲಾಷೆಯು ನಿರಾಶಾದಾಯಕವಾಗುತ್ತಾ ಬರುತ್ತಿದೆ. ರಿಜಿಸ್ಟ್ರೇಶನ್ ಕಾಯಿದೆ ಮಂಜೂರಾಗಿದ್ದರೂ ಅದರ ನಿಯಮಗಳು ಇನ್ನೂ ಮಂಜೂರಾಗಿಲ್ಲ ರಿಜಿಸ್ಟ್ರೇಶನ್ ಬೋರ್ಡಿನ ರಚನೆ, ಆಯುರ್ವೇದ ನಿರ್ದೇಶಕರ ನೇಮಕ ಮೊದಲಾದವುಗಳ ಆಶ್ವಾಸನೆಗಳು ಜಲಲಿಪಿಯಂತಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಮಹತ್ವದ ವಿಚಾರಗಳನ್ನು ಗಂಭೀರವಾಗಿ ಪರಾಮರ್ಶಿಸಿ, ಒಂದು ಸುಸೂತ್ರವಾದ ಪರಿಣಾಮ ನಿರ್ಧಾರಕ್ಕೆ ಬರುವ ಉದ್ದೇಶದ ಸಲುವಾಗಿಯೇ ಈ ಸಮ್ಮೇಳನವು ಜರಗುವುದಾಗಿದೆ. ವೈದ್ಯರೆಲ್ಲರೂ ತಮ್ಮ ಭೇದಭಾವಗಳನ್ನು ಮರೆತು ಸಂಘಟಿತರಾಗಿ ಆಯುರ್ವೇದ ಚಿಕಿತ್ಸಾಪದ್ಧತಿ ಪುನರುಜ್ಜೀವನಗೊಳಿಸುವ ಪವಿತ್ರ ಉದ್ದೇಶವನ್ನು ಸಾಧಿಸುವುದರಲ್ಲಿ ಸಾಮೂಹಿಕವಾಗಿ ಭಾಗವಹಿಸುವುದು ಹಾಗೂ ಸಂಸ್ಥೆಯನ್ನು ಬಲಪಡಿಸುವುದು ತಮ್ಮ ಕರ್ತವ್ಯವೆಂದು ಭಾವಿಸಬೇಕಾಗಿದೆ.

ಈ ಚಾರಿತ್ರಿಕ ಸಮ್ಮೇಳನದ ಸ್ಮಾರಕಾರ್ಥವಾಗಿ 'ಸಮ್ಮೇಳನ ಕಾಣಿಕೆ' ಎಂಬ ಗ್ರಂಥವನ್ನು ಪ್ರಕಟಿಸಬೇಕೆಂದಿದ್ದೇವೆ. ಹಾಗೆಯೇ ಭೇಷಜ ವಸ್ತು ಪ್ರದರ್ಶನವೂ ಜರಗಬೇಕಾಗಿದೆ ಈ ಕಾರ್ಯಗಳು ಯಶಸ್ವಿಯಾಗಿ ಜರಗಬೇಕಾದರೆ ನಮ್ಮ ರಾಜ್ಯದ ಎಲ್ಲಾ ವೈದ್ಯರೂ ಉದಾರ ಮನಸ್ಸಿನಿಂದ ಧನಸಹಾಯವನ್ನೂ, ಸಹಕಾರವನ್ನೂ ನೀಡಬೇಕಾಗಿದೆ. ನಮ್ಮ ಜಿಲ್ಲೆಯ ವೈದ್ಯರೆಲ್ಲರೂ ಸ್ವಾಗತ ಸಮಿತಿಯ ಸದಸ್ಯರಾಗಿಯೂ ಇತರರೂ ಪ್ರತಿನಿಧಿ ಸಹಾಯಕರಾಗಿಯೂ ಸೇರಿ ಸಮ್ಮೇಳನವನ್ನು ಯಶಸ್ವಿಗೊಳಿಸುವುದಕ್ಕೆ ನೆರವಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಇತಿ ಸ್ವಾಗತ ಸಮಿತಿಯ ಸದಸ್ಯರು

ಜಿ. ಸೋಮಶೇಖರ ರಾವ್, ನಗರಸಭಾಪತಿ., (ಅಧ್ಯಕ್ಷ.) ಮಜೇಲ್ ಶ್ರೀನಿವಾಸ ನಾಯಕ್, ಎಮ್. ಎಲ್. ಎ , ಕೆ. ಎಸ್. ಎನ್. ಅಡಿಗ, ಗಿರಿಧರಲಾಲ್ ಚಂದ್ರನಾ, ವೈದ್ಯಗುರು ಡಾ| ಎಂ. ಆರ್. ಭಟ್, ವೈದ್ಯ ವಿಶಾರದ ಬಿ ಆರ್. ಹರಿದಾಸ್, ವೈದ್ಯವಿಶಾರದ ಎಚ್ ತಿಮ್ಮಪ್ಪ ಪಂಡಿತ್, (ಉಪಾಧ್ಯಕ್ಷರು) ಡಾ| ಎಂ ಸಿ ಶಾಸ್ತ್ರಿ ಎಲ್. ಐ ಎಮ್. (ಕೋಶಾಧ್ಯಕ್ಷ) ಡಾ| ಎಸ್. ವಿ ಉಪಾಧ್ಯಾಯ, (ಪ್ರಧಾನ ಕಾರ್ಯದರ್ಶಿ) ಡಾ| ಪಿ. ಕೆ. ಪಿ. ಶರ್ಮ, ವೈದ್ಯ ವಾಮನ ಕೊಡಿಯಾಲ್‌ಬೈಲ್, ವೈದ್ಯ ಎ. ವೆಂಕಪ್ಪಯ್ಯ, (ಜೊತೆ ಕಾರ್ಯದರ್ಶಿಗಳು)

**ವಿನಂತಿ**

ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರರು ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರೆಯಿಂದ ಸಲ್ಲಿಸಿ ಕೊಡುವಂತೆ ತಿಳಿಸುತ್ತಾ ವಿನಂತಿಸುತ್ತೇವೆ

ಚಂದಾ ಹಣವನ್ನು ಮನಿಯಾರ್ಡರ್ ಮಾಡಬಹುದು; ಇಲ್ಲವೆ ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚ ಇಲ್ಲದೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ಹೆಸರಿನೊಂದಿಗೆ ಚಂದಾ ನಂಬ್ರ ತಿಳಿಸಿದರೆ ಅನುಕೂಲ. ಮತ್ತು ಬೇಂಕಿನವರು ಕೊಡುವ ಪಾವತಿ ರಶೀದಿಯನ್ನು ನಮಗೆ ಕಳಿಸಿದರೆ ಕೂಡಲೇ ನಮ್ಮ ರಶೀದಿಯನ್ನು ಕಳುಹಿಸಲು ಸುಲಭವಾಗುತ್ತದೆ —ಮೆನೇಜರ್.


## INDIAN COMPANIES ACT 1956

### In the matter of Homes & Estates Private Ltd Udipi

At an Extra Ordinary General Body Meeting of the shareholders held at the Registered Office of the Company, on 31-12-1962 at 4 P. M. the following Special Resolutions were passed.

SPECIAL RESOLUTIONS

1. Resolved that the Company be wound up Voluntarily as Members Voluntary Liquidation in view of the fact that there is no scope for further increasing the business.
2. Resolved that Sri M. Gopalkrishna Bhat son of M. Dasa Bhat, residing near Modern Garage, Udipi be and is hereby appointed as the Liquidator of the Company on a remuneration of Rs. 500/- five hundred only for winding up the affairs of the Company speedily. He is authorised to exercise all or any powers given by clause (1) to (IV) of Sub section 2 of Sec 450 of Companies Act 1956.

M R· Karnad
*Director.*

# ಧೀರ ಯೋಧರಿಗೆ ರೈತರೇ ಮೂಲಾಧಾರ

ನಮಗೆ ಸ್ವರಾಜ್ಯ ಬಂದು ಬಹಳ ವರ್ಷಗಳೇನಾಗಿಲ್ಲ; ಕೇವಲ ಹದಿನೈದು ವರ್ಷಗಳಾದುವು; ಈ ವರ್ಷಗಳಲ್ಲಿ ನಮ್ಮ ನೆರೆ ರಾಷ್ಟ್ರವಾದ ಚೀಣಾದ ಮೈತ್ರಿಯಲ್ಲಿ ಪೂರ್ಣ ನಂಬಿಕೆಯಿಟ್ಟು ಯುದ್ಧ ಸಿದ್ಧತೆಗಿಂತ ಆರ್ಥಿಕ ಸಿದ್ಧತೆಗೆ ಹೆಚ್ಚು ಗಮನ ಕೊಟ್ಟೆವು. ಪ್ರಪಂಚಕ್ಕೇ ಮಾದರಿಯಾದಂತಹ ಪ್ರಜಾ ಸರಕಾರವನ್ನು ನಿರ್ಮಿಸಿದೆವು. ಒಳ್ಳೆಯದನ್ನು ಬಯಸಿ ಸರ್ವರಿಂದಲೂ ಸ್ನೇಹವನ್ನು ಕೋರಿದೆವು. ಆದರೆ ಚೀಣಾ ಈ ಸ್ನೇಹಕ್ಕೆ ಎರಡು ಬಗೆಯಿತು.

ಈಗ ಚೀಣೀಯರು, ನಮ್ಮ ಸ್ವಾತಂತ್ರ್ಯಕ್ಕೇ ಭಂಗ ತರುವಂತಹ ನಾನಾ ಕುತಂತ್ರಗಳನ್ನು ಹೂಡಿದ್ದಾರೆ, ದೇಶಕ್ಕೇ ದೊಡ್ಡ ಗೋಡೆಯಂತಿದ್ದ ಹಿಮಾಲಯ ಪರ್ವತವನ್ನು ದಾಟಿ ಬಂದು ನಮ್ಮ ಪವಿತ್ರ ನೆಲಕ್ಕೆ ಅಪಚಾರವೆಸಗುತ್ತಿದ್ದಾರೆ. ಅವರ ಅತ್ಯಾಚಾರವನ್ನು ಹಿಮ್ಮೆಟ್ಟಿಸಲು ನಮ್ಮ ವೀರ ಯೋಧರು. ಅಲ್ಲಿಯ ಭೀಕರ ಚಳಿಯಲ್ಲಿ ಶೌರ್ಯದಿಂದ ಕಾದಾಡುತ್ತಾ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸುತ್ತಿದ್ದಾರೆ ಶತ್ರುಗಳನ್ನು ಹಿಮ್ಮೆಟ್ಟಿಸುವ ಕಾರ್ಯ ಸೈನಿಕರಿಗೇ ಮೀಸಲಿಲ್ಲ. ಅಷ್ಟೇ ಗುರುತರ ಜವಾಬ್ದಾರಿ ರೈತರ ಮೇಲಿದೆ. ರೈತರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಸೈನಿಕರ ಸಾಹಸ ನಿರರ್ಥಕವಾಗುತ್ತದೆ.

ಹಿಂದೆ ನೆಪೋಲಿಯನ್ ಚಕ್ರವರ್ತಿ ಹೇಳಿದ್ದು “ತಿಂಡಿ ತಿಂದರೇ ಖಂಡಗಳ ಕಸರತ್ತು ಎಂದು. ಈಗ ಅದರ ಸತ್ಯ ನಮಗೆ ಅರಿವಾಗಿದೆ. ಯುದ್ಧದಲ್ಲಿ ತೊಡಗಿರುವ ಸೈನಿಕ ಕೋಟಿಗೆ ಪುಷ್ಟಿ ಕೊಡುವ ತಿಂಡಿ ತಿನಸುಗಳು ಬೇಕು, ತರಕಾರಿ ಬೇಕು ಎಲ್ಲವೂ ಅಧಿಕ ಪ್ರಮಾಣದಲ್ಲಿ ಬೇಕು. ಪಂಚವಾರ್ಷಿಕ ಯೋಜನೆಗಳೂ ಅಧಿಕ ಆಹಾರ ಬೆಳೆಯಲು ಪ್ರೇರಣೆ ನೀಡಿ ಅದಕ್ಕಾಗಿ ನಾನಾ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಿವೆ; ನಿಜ, ಆದರೆ ಇದು ತುರ್ತಿನ ಪರಿಸ್ಥಿತಿ. ಯಾವ ಕಾರಣಕ್ಕೂ ಆಲಸ್ಯ ಮಾಡುವ ಹಾಗಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ರೈತರು ಬೇರೆಯಲ್ಲ. ಇಬ್ಬರೂ ಹೋರಾಡಿದರೇನೇ ದೇಶಕ್ಕೆ ಗೆಲುವು ಸಿದ್ಧ.

**ಅಧಿಕ ಬೆಳೆ ಹೇಗೆ?**

ಒಂದಲ್ಲ ಒಂದು ಕಾರಣಕ್ಕೆಂದು ರೈತರು ಜಮೀನಿನ ಕೆಲವು ಜಾಗಗಳನ್ನು ಸಾಗುವಳಿಗೆ ತಂದಿರುವುದಿಲ್ಲ. ತಿಟ್ಟೆದೆಯೆಂದೋ, ಹಳ್ಳವಿದೆಯೆಂದೋ ಚವುಳು ಭೂಮಿಯೆಂದೋ ತುಂಡು ಜಾಗಗಳನ್ನು ರೈತರು ಬೀಳು ಬಿಟ್ಟಿರುತ್ತಾರೆ. ಈ ಬೀಳು ಜಾಗಗಳನ್ನು ಸಾಗುವಳಿಗೆ ತರಲು ಸುಧಾರಿತ ಕ್ರಮಗಳಿವೆ. ಬೇಲಿಗಾಗಿಯೂ ಬದುವುಗಳಿಗಾಗಿಯೂ ರೈತರು ಹೆಚ್ಚು ಜಾಗವನ್ನು ವ್ಯರ್ಥ ಮಾಡುತ್ತಾರೆ. ಇದನ್ನು ಆದಷ್ಟು ಕಡಿಮೆ ಮಾಡಿ ಇರುವ ಜಾಗದಲ್ಲೆಲ್ಲಾ ಸಾಗುವಳಿ ಮಾಡುವುದು ಇಂದು ಅತ್ಯವಶ್ಯಕವೆನ್ನುವುದನ್ನು ರೈತರು ತಿಳಿಯಬೇಕು. ಹರಳು, ಹಸುರು ಗೊಬ್ಬರದ ಗಿಡಗಳು ಮೇವು ಮೊದಲಾದುವನ್ನು ಬದುವಿನ ಮೇಲೆ ಬೆಳೆಸಬಹುದು. ರೈತರ ಕರ್ತವ್ಯಗಳನ್ನೂ ಅಧಿಕ ಬೆಳೆಗೆ ಗಮನಿಸಬೇಕಾದ ಅಂಶಗಳನ್ನೂ ಒಳಗೊಂಡಿರುವ ದಶಸೂತ್ರಗಳನ್ನೂ ಇಲ್ಲಿ ನೀಡಲಾಗಿಯದೆ.

**ಅಧಿಕ ಬೆಳೆಗೆ—ದಶಸೂತ್ರಗಳು.**

1. ಉಳುಮೆಗೆ, ಅಂತರಕೃಷಿಗೆ, ಹಲುವೆ ಹೊಡೆಯುವುದಕ್ಕೆ, ಮಣ್ಣು ಸಮ ಮಾಡುವುದಕ್ಕೆ ಹೀಗೆ ಹೊಲದ ಎಲ್ಲಾ ಕೃಷಿ ಕೆಲಸಗಳಿಗೂ ಆಧುನಿಕ ರೀತಿಯ ಕಬ್ಬಿಣದ ಮುಟ್ಟುಗಳನ್ನೇ ಉಪಯೋಗಿಸಬೇಕು.

2. ಭೂಮಿ, ಕಾಲಗಳಿಗೆ ಸರಿಹೊಂದುವಂತಹ ಉತ್ತಮ—ತಳಿಯ ಸುಧಾರಿತ ಬೀಜಗಳನ್ನೇ ಬಿತ್ತನೆಗೆ ಉಪಯೋಗಿಸಬೇಕು. ಪಿಡುಗುಗಳು ಬರದಂತೆ ಬಿತ್ತನೆಗೆ ಮುನ್ನವೇ ಬೀಜಗಳನ್ನು ಉಪಚರಿಸಬೇಕು. ಭತ್ತ, ಹತ್ತಿ ಇತ್ಯಾದಿಗಳ ಬೀಜಗಳನ್ನು ಪಾಸ್ಫಿಕ ದ್ರಾವಣಗಳಲ್ಲಿ ನೆನಸಿ ಭಿತ್ತಿದರೆ ಇಳುವರಿ ಹೆಚ್ಚುವುದೆಂದು ಗೊತ್ತಾಗಿದೆ.

3. ದದನ ಮೂತ್ರ, ಸಗಣಿ ಮೊದಲಾದ ಎಲ್ಲಾ ತಿಪ್ಪೆ ಕಸವನ್ನೂ ಒಟ್ಟು ಮಾಡಿ ಕಾಂಪೋಸ್ಟು ತಯಾರಿಸಿ ಹೊಲಕ್ಕೆ ನೀಡಬೇಕು. ಸಾಧ್ಯವಾದೆಡೆಗಳಲ್ಲೆಲ್ಲಾ ಹಸಿರು ಗೊಬ್ಬರದ ಗಿಡಗಳನ್ನು ಬೆಳೆಯಬೇಕು.

4. ಮಣ್ಣನ್ನು ಪರೀಕ್ಷೆ ಮಾಡಿ ಅದಕ್ಕೆ ಆವಶ್ಯಕವಾದ ಸಸ್ಯಪೋಷಕಗಳಾವವು ಎಂಬುದನ್ನೂ ಯಾವ ಪ್ರಮಾಣದಲ್ಲೆಂಬುದನ್ನೂ ಗೊತ್ತುಹಚ್ಚಿ, ಅವಕ್ಕನುಗುಣವಾಗಿ ರಾಸಾಯನಿಕ ಗೊಬ್ಬರವನ್ನು ಮಣ್ಣಿಗೆ ನೀಡಬೇಕು.

5. ಕಳೆಗಳನ್ನು ನಾಶಮಾಡುವುದರಲ್ಲಿ ಸ್ವಲ್ಪವೂ ಆಲಸ್ಯ ಮಾಡಕೂಡದು. ಸಾಧ್ಯವಿದ್ದರೆ ರೋಟರಿ ಕಳೆಕೀಳಕವನ್ನು ಉಪಯೋಗಿಸಿ ಅನಂತರ ಕೃಷಿ ಮಾಡಬೇಕು; ಅಥವಾ ಸುಧಾರಿತ ರಾಸಾಯನಿಕ ಕಳೆ ನಾಶಕಗಳನ್ನು ಪ್ರಯೋಗಿಸಬೇಕು.

6. ಪೈರಿಗೆ ಬೇಕಾದಾಗಲೆಲ್ಲಾ, ಅಗತ್ಯ ಪ್ರಮಾಣದಲ್ಲಿ ನೀರನ್ನು ಒದಗಿಸಬೇಕು; ನೀರನ್ನು ಹೊರ ಹಾಕುವುದಕ್ಕೂ ಸೂಕ್ತ ಕ್ರಮಗಳನ್ನು ಆವಶ್ಯಕವಿದ್ದೆಡೆಗಳಲ್ಲಿ ಏರ್ಪಡಿಸಬೇಕು.

7. ಪೈರಿಗೆ ಯಾವ ರೋಗವಾಗಲೀ, ಕೀಟವಾಗಲೀ ಬೀಳದಂತೆ ಮುನ್ನೆಚ್ಚರಿಕೆ ವಹಿಸಬೇಕು; ಹಾಗೂ ಪಿಡುಗುಗಳೇನಾದರೂ ಕಂಡುಬಂದರೆ ಕೂಡಲೇ ರೋಗದವನ್ನು ತಡೆಗಟ್ಟುವ ಅಥವಾ ಕೀಟಗಳನ್ನು ನಾಶಮಾಡುವ ಕ್ರಮಗಳನ್ನು ವಹಿಸಬೇಕು.

8. ಮಣ್ಣಿನ ಸಾರವನ್ನು. ಫಲವತ್ತನ್ನೂ ಕಾಪಾಡಲು ಸಸ್ಯಗಳ ಪರಿವರ್ತನೆಯನ್ನು ಅನುಸರಿಸಬೇಕು.

9. ಮಣ್ಣಿನ ಸವಕಲಿನಿಂದು ಟಾಗುವ ನಷ್ಟವನ್ನು ತಡೆಗಟ್ಟಿ ಭೂಸಾರಂಕ್ಷಣೆಗೆ ಆವಶ್ಯಕವಾದ ಎಲ್ಲಾ ಕ್ರಮಗಳನ್ನೂ ಪಾಲಿಸಬೇಕು.

10. ನಿಯೋಜಿತ ಕೃಷಿ ವ್ಯವಸ್ಥೆಯನ್ನು ಆಚರಿಸಿ, ಇರುವ ಭೂಸಂಪತ್ತಿನಿಂದ ಎಷ್ಟು ಧಾನ್ಯ ಸಂಪತ್ತನ್ನು ಹೊಂದಬಹುದೋ ಅಷ್ಟನ್ನೂ ಹೊಂದಲು ಸರ್ವವಿಧದಲ್ಲೂ ಪ್ರಯತ್ನಿಸಬೇಕು.

ಈ ಹತ್ತು ಸೂತ್ರಗಳು ಅಧಿಕ ಬೆಳೆಗೆ ಹತ್ತು ಭುಜಗಳಿದ್ದಂತೆ.

**ಸಾಗುವಳಿಯ ಬಗ್ಗೆ ಲೆಕ್ಕಪತ್ರ**

ಈ ದಶಸೂತ್ರಗಳ ಜೊತೆಗೆ ಇನ್ನೊಂದು ಸಲಹೆ: ರೈತರು ತಮ್ಮ ಜಮೀನಿನ ಸಾಗುವಳಿಯ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನಿಡಬೇಕು, ಇರುವ ಭೂಮಿಯನ್ನೆಲ್ಲಾ ಸಾಗುವಳಿಗೆ ತಂದರೆ ಸಾಲದು. ಸಾಗುವಳಿ ಭೂಮಿಗೆ ಬೀಳುವ ಖರ್ಚೆಷ್ಟು. ಅದರ ಉತ್ಪತ್ತಿ ಎಷ್ಟು. ಎಷ್ಟು ಹಣ ಹಾಕಿದಾಗ ಎಷ್ಟು ಪಟ್ಟು ಲಾಭ ಇರುತ್ತದೆ—ಮೊದಲಾದ ವಿಷಯಗಳನ್ನು ರೈತರು ಅವಶ್ಯವಾಗಿ ತಿಳಿದುಕೊಳ್ಳಬೇಕು. ಸಾಗುವಳಿಯ ಸಂಬಂಧದಲ್ಲಿ ಕೈಗೊಳ್ಳುವ ಪ್ರತಿ ಕಾರ್ಯಕ್ಕೂ ಖರ್ಚಿರುತ್ತದೆ. ಈ ಖರ್ಚುಗಳನ್ನು ಆದಷ್ಟು ಬುದ್ಧಿವಂತಿಕೆಯಿಂದ ಮಾಡಿ ಹೆಚ್ಚು ಉತ್ಪತ್ತಿಯನ್ನೂ, ಲಾಭವನ್ನೂ ಹೊಂದುವ ಮಾರ್ಗಗಳನ್ನು ರೈತರು ಕಂಡುಕೊಳ್ಳಬೇಕಾದರೆ ಅಚ್ಚುಕಟ್ಟಾದ ಲೆಕ್ಕ ಪತ್ರಗಳನ್ನಿಡುವುದೊಂದೇ ದಾರಿ.

---

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**
R. E. P. 460/1962. M. C. 67/62
ದಿ ಸ್ಟೇಟ್ ಓಫ್ ಮೈಸೂರು —ಅರ್ಜಿದಾರ
ಮತ್ತು
ಕೆ ಬಾಲಣ್ಣ ಗೌಡ —ಎದ್ರಿ

ಎದ್ರಿ ಕೆ. ಬಾಲಣ್ಣ ಗೌಡ, ಚೆನ್ನಣ್ಣ ಗೌಡರ ಮಗ ಟಿಂಬರ್ ಮರ್ಚಂಟ್ ಪುತ್ತೂರು ತಾಲೂಕು ಗುತ್ತಿಗಾರು ಗ್ರಾಮದಲ್ಲಿ—ಇವರಿಗೆ ಸರಕಾರಕ್ಕೆ ಸಲ್ಲತಕ್ಕ ಸೇಲ್‌ಟೇಕ್ಸ್ ವಸೂಲಿಗೆ ಮಾಡಿದ ಮೇಲಿನ ಅಮಲ್ದಾರಿಯಲ್ಲಿ ನಿಮ್ಮ ಸ್ಥಿರಾಸ್ತಿ ಜಪ್ತಿಪಡಿಸಿರುತ್ತದೆ. ನಿಮಗೆ ಪ್ರೊಹಿಬಿಟರಿ ಆರ್ಡರ್ ಜ್ಯಾರೀ ಬಗ್ಗೆಂತ ತಾ. 17—1—1963ಕ್ಕೆ ವ್ಯಾದೆಯಿರುವುದರಿಂದ ಆ ದಿವ್ಸ ಮೇಲ್ಕಂಡ ಕೋರ್ಟಿಗೆ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉದಾಹರಿಸಿಕೊಳ್ಳದಿದ್ದಲ್ಲಿ ಆಸ್ತಿ ಏಲಂಗೆ ಮುಂದರಿಸಲಾಗುವುದೆಂತ ಕೋರ್ಟಿನ ಹುಕುಂಪ್ರಕಾರ ಈ ಮೂಲ್ಕ ತಿಳಿಸೋದಾಗ್ಯದೆ.

(Sd) K. T. Bhat
Assistant Govt. Pleader.
Puttur, Date 3—1—1963.

---

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್
ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—
**TALES OF IND**
ಕಥಾವಳಿಯ ಕನ್ನಡ ಅನುವಾದ
**ಭಾರತೀಯ ಕಥೆಗಳು**
ಚಿಕ್ಕ ಚೊಕ್ಕ ೧೫ ಕಥೆಗಳು ಬೆಲೆ ರೂ. 1—12—0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,
ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

---

## ಅಭ್ಯುದಯ ಶ್ರೇಯಸ್ಸಿದ್ಧಿಗೆ ಆಧಾರಸ್ತಂಭ—ಸದ್ಧರ್ಮ

(೫ನೇ ಪುಟದಿಂದ)

ನಾವಿಂದು ಗತವೈಭವದ ಐಹಿಕ ಉನ್ನತಿಯ, ಅಭ್ಯುದಯದ ಹೆಸರೆತ್ತಿ ನಮ್ಮ ತಲೆ ಎತ್ತುತಿದ್ದೇವೆ.

ನಮ್ಮ ಪೂರ್ವಜರು ವೈರಾಗ್ಯ ಹೊಂದಿ ಪರಲೋಕದ ಬಗ್ಗೆ ಯೋಚಿಸುತ್ತಿದ್ದರೆನ್ನುವುದು ಸರಿಯಲ್ಲ. ಇದು ಅಜ್ಞಾನದ ದ್ಯೋತಕವಾಗಿದೆ. ಐಹಿಕ-ಪಾರಲೌಕಿಕ ಕಾರ್ಯಗಳಲ್ಲಿ ಸದಾ ಸ್ಫೂರ್ತಿ ಶಕ್ತಿಗಳನ್ನು ಇತ್ತ ಈ ಧರ್ಮವನ್ನು ಬಿಡುವುದು ನಿಜಕ್ಕೂ ವಿವೇಕಶೂನ್ಯವಾಗದಿರಲಾರದು.

ಕೆಲವೊಂದು ಕೈಗೆಟಕದ ದುರಾಕಾಂಕ್ಷೆಗಳು, ಮಿಥ್ಯಾಚಾರಗಳು ನಮ್ಮ ಪತನಕ್ಕೆ ಕಾರಣವಾಗಿವೆ. ಆದರೆ ಈ ಧರ್ಮವಿರುದ್ಧವಾದ ಮಿಥ್ಯಾಚಾರ, ದುರಾಕಾಂಕ್ಷೆಗಳಿಗೆ ಧರ್ಮವೇ ಮೂಲವೆಂದು ತಿಳಿದು, ನಿಜವಾದ ಧರ್ಮವನ್ನು ಕೈಬಿಡುವುದು ಉಚಿತವೇ?

ಧರ್ಮವೆಂಬುದು ನಮ್ಮ ಮಾತೃಭೂಮಿಯ ಪ್ರಾಣವಾಗಿದೆ. ನಮ್ಮ ರಾಜ್ಯಭಾರ, ನಮ್ಮ ಕಾರ್ಯ, ಶಿಕ್ಷೆ ಎಲ್ಲಾ ಧರ್ಮದ ಮೇಲೆಯೇ ಆಧರಿಸಲ್ಪಟ್ಟಿದೆ.

ಇದಕ್ಕೋಸ್ಕರವೇ ಎಲ್ಲೋ ಬಾರಕೀಯನೇ— “ನೀನು ಧರ್ಮಶಬ್ದದ ಮರ್ಮವನ್ನರಿತುಕೋ”

ಧರ್ಮವು ಆಧ್ಯಾತ್ಮಿಕ ಆಧಾರದ ಮೇಲೆ ನಿಂತ ಜೀವನಶಾಸ್ತ್ರವಾಗಿದೆ. ನಿಜವಾದ ಮನುಷ್ಯನನ್ನು ನಿರ್ಮಿಸುವುದೇ ಧರ್ಮವಾಗಿದೆ.

ಧರ್ಮವು ಪರಂಪರಾಗತ ಅಂಧವಿಶ್ವಾಸಗಳ, ರೂಢಿಗಳ, ಮಿಥ್ಯಾಚಾರಗಳ ದುರಾಕಾಂಕ್ಷೆಗಳ ಮೂಲವಲ್ಲ; ಹೆಸರಲ್ಲ.

ಯತೋಽಭ್ಯುದಯಃ ನಿಶ್ರೇಯಸಸಿದ್ಧಿಸಧರ್ಮಃ। ಅಭ್ಯುದಯ ಮತ್ತು ಶ್ರೇಯಸಿದ್ಧಿಗೆ ನೆರವಾಗುವುದೇ ಧರ್ಮವಾಗಿದೆ.

(ಆಧಾರಿತ)

—ಬಿ. ಎನ್. ಜೋಗಿತ್ತಾಯ.

---

**ಸೂಚನೆ**

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

# ಲಢಾಖದ ಮೇಲೆ ಕೆಂಪು ನೆರಳು

(೪ನೇ ಪುಟದಿಂದ)

ಇರುವದಿಲ್ಲ. ಈ ಸಂಖ್ಯೆಯು ಶ್ರೀನಗರದ ಜನಸಂಖ್ಯೆಯ ಆರರಲ್ಲಿ ಒಂದು ಭಾಗವೂ ಇರುವದಿಲ್ಲ. ಸಾವಿರಾರು ವರ್ಷಗಳಿಂದ ಅಲ್ಲಿಯ ಬೌದ್ಧರು ಸಂಪ್ರದಾಯ ಕಟ್ಟಳೆಗಳಿಗೆ ಶರಣು ಹೋಗಿರುವದೇ ಜನಸಂಖ್ಯೆಯ ವಿರಳತೆಗೆ ಮುಖ್ಯ ಕಾರಣವಿದೆ. ಈ ಸಂಪ್ರದಾಯಗಳನ್ನೀಗ ಸರಕಾರ ನಿಷೇಧಿಸಿದೆಯಾದರೂ ಸಾಧಾರಣ ಜನತೆ ಅದರ ಪ್ರಭಾವದಿಂದ ಇನ್ನೂ ಪಾರಾಗಿರುವದಿಲ್ಲ.

ಬೌದ್ಧರಲ್ಲಿ ಒಂದು ಜಾತಿ ಡೋಕ್ರಾ ಜನರದ್ದಿದೆ. ಅವರು ನಖ-ಶಿಖಾಂತ ಆರ್ಯರಿದ್ದಾರೆ. ಅವರು ಕೆಲ ಶತಮಾನಗಳ ಹಿಂದೆ ದರ್ದಿ ಸ್ಥಾನದಿಂದ [ಗಿಲಗಿತ್ ಪ್ರದೇಶ] ತಮ್ಮ ಸಂಸ್ಕೃತಿಯ ರಕ್ಷಣೆಗೈಯುವದಕ್ಕಾಗಿ ಲಢಾಖಿಗೆ ಓಡಿ ಬಂದಿರುವರು; ಈಗಿನ ವರೆಗೆ ದಾಹ, ಹನೂ, ದರಚಿಕ್ಸ, ಗರಕೋನದ ಗ್ರಾಮಗಳಲ್ಲಿ—ಲೇಹದ ಉತ್ತರಕ್ಕಿರುವ ಪ್ರದೇಶಗಳಲ್ಲಿ ವಾಸಿಸಿಕೊಂಡಿದ್ದಾರೆ ಈ ಗ್ರಾಮಗಳಲ್ಲಿ ಹವಾಗುಣ ಉತ್ತಮ ತರದ್ದಿದೆ. ಅಲ್ಲಿ ದ್ರಾಕ್ಷೆ ಮುಂತಾದ ಹಣ್ಣುಗಳು ಬೆಳೆಯುತ್ತವೆ. ಇಲ್ಲಿಯ ಜನರು ಗೋಪಾಲನೆ ಮಾಡುತ್ತಿರುವರಾದರೂ ಅದರ ಹಾಲ, ಮೊಸರು ಮುಂತಾದವುಗಳನ್ನು ಅವರು ಉಪಯೋಗಿಸಿಕೊಳ್ಳುವದಿಲ್ಲ. ಅದರ ಸೆಗಣಿಯನ್ನು ಅವರು ಸುಡುವದಿಲ್ಲ. ಬೆಳೆಯ ಕೆಲಸಕ್ಕೆ ಅವುಗಳನ್ನು ಉಪಯೋಗಿಸುವದೂ ಇಲ್ಲ ಕೋಳಿ ಅಲ್ಲದೆ ಕೋಳಿ ಮೊಟ್ಟೆಯನ್ನು ಅವರು ತಿನ್ನುವದಿಲ್ಲ. ಈ ಸಂಪ್ರದಾಯ-ನಿಯಮವನ್ನು ಅವರು ಗಿಲಗಿತದಿಂದ ತಂದಿದ್ದು ತಮ್ಮ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅದಕ್ಕೆ ಪ್ರಧಾನ ಸ್ಥಾನವನ್ನಿತ್ತಿರುವರು. ಇನ್ನೊಂದು ಬೌದ್ಧ ಜಾತಿಯ ಜನರು ಮದ್ಯಪಾನಾಸಕ್ತರಿರುವರು. ಅವರು ದ್ರಾಕ್ಷೆಯಿಂದ ಮದಿರೆಯನ್ನು ಮಾಡುತ್ತಾರೆ. ಅತಿ ಮಾದಕ ಸೇವನೆಯಿಂದಾಗಿ ಅವರ ಸಂಖ್ಯೆ ದಿನದಿಂದ ದಿನಕ್ಕೆ ಕಮ್ಮಿಯಾಗುತ್ತ ಬರುತ್ತಿದೆ ಅವರ ಸಂಖ್ಯೆ ಎರಡು-ಮೂರು ನೂರುಗಳಿಗಿಂತ ಅಧಿಕವಿರಲಾರದು. ಚಾಂಗಪಾ ಜನರು ೧೩,೦೦೦ ೧೫,೦೦೦ ಅಡಿಗಳಷ್ಟು ಎತ್ತರವಿರುವ ಉನ್ನತ ಶಿಖರ ಪ್ರದೇಶಗಳಲ್ಲಿ ವಾಸಮಾಡುತ್ತಾರೆ. ಅಲ್ಲಿ ಅವರು ಡೇರೆ ಕಟ್ಟಿಕೊಂಡಿರುತ್ತಾರೆ. ಅವರು ಆಡು—ಕುರಿಗಳನ್ನು ಸಾಕುತ್ತಾರೆ. ಅವುಗಳಿಗೆ ಬೇಕಾಗುವ ಹುಲ್ಲನ್ನು ಹುಡುಕುತ್ತ ಅವರು ಋತು ಪರಿವರ್ತನೆಗೆ ಅನುಸಾರವಾಗಿ ಸ್ಥಳದಿಂದ ಸ್ಥಳಕ್ಕೆ ಸುತ್ತಾಡುತ್ತಿರುತ್ತಾರೆ ಇವರಿಗೆ ಹೊರ ಜಗತ್ತಿನ, ನವ ನಾಗರಿಕತೆಯ, ಗಂಧಗಾಳಿಯೂ ಸೋಂಕಿರುವದಿಲ್ಲ. ಸಹಸ್ರಾರು ವರ್ಷಗಳ ಹಿಂದೆ ಇದ್ದ ರೀತಿಯಲ್ಲೇ ಇಂದೂ ಅವರು ಇದ್ದಾರೆ.

"ಆಧುನಿಕ ಅಧೋಗತಿಯಿಂದ ಇವರನ್ನು ಎಬ್ಬಿಸಲು ಏನಾದರೂ ಕಾರ್ಯಕ್ರಮಗಳಿವೆಯೋ"? ಈ ಪ್ರಶ್ನೆಗೆ ಉತ್ತರವನ್ನು ಕಂಡು ಹಿಡಿಯಲು ಅನ್ವೇಷಣ ನಡೆಸುವದು ಅತ್ಯಾವಶ್ಯಕವಿದೆ.

ಬೌದ್ಧರ ಮತ-ಪರಿವಾರದ ಸಿದ್ಧಾಂತದ ಪ್ರಚಾರವು ಸರ್ವಥಾ ಅಯುಕ್ತ ಹಾಗೂ ಹಾನಿಕಾರವಿದೆ ಎಂಬುದು ಸ್ಪಷ್ಟ ಸಂಗತಿ ಇದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ೩.೩—ಸಂಕಲನಕ್ಕಾಗಿ ತೆಗೆದಿಡಲ್ಪಟ್ಟಿರುವ ಧನರಾಶಿಯಿಂದ ಲೇಹ ನಗರದಲ್ಲಿರುವ ಲೈಂಗಿಕ ರೋಗ ರುಜಿನಗಳನ್ನು ಗುಣಪಡಿಸುವ ಸಲುವಾಗಿ ಮೊದಲು ಉಪಯೋಗಿಸುವದು ಉತ್ತಮ ಕಾರ್ಯ ಇರುತ್ತದೆ.

ಕಾಶ್ಮೀರ ಮಂತ್ರಿ ಮಂಡಲವು ೧೯೬೩ರಿಂದ ಓರ್ವ ಬೌದ್ಧ ಮಂತ್ರಿಗೆ ಸ್ಥಾನ ಕೊಟ್ಟಿದೆ. ಈ ಸ್ಥಾನದಲ್ಲಿ ಕೌಶಿಕ ಬಕುಲಾ ಎಂಬ ಲಾಮಾ ಗುರುವೇ ಅಂದಿನಿಂದಲೂ ಇದ್ದಾರೆ. ಚೈನಿ ಕಮ್ಯೂನಿಸ್ಟರು ಆಕ್ರಮಣ ನಡೆಸಲಾರಂಭಿಸಿದಂದಿನಿಂದ ಈ ಸ್ಥಳದಿಂದ ಅನೇಕ ಜನರು ಕೇಂದ್ರ ಸರಕಾರದಲ್ಲಿ ಅನೇಕಾನೇಕ ಸ್ಥಾನಗಳನ್ನು ಪಡೆದಿರುವರು. ಈ ವ್ಯವಸ್ಥೆಯು ಫಲರೂಪವಾಗಿ ಇಲ್ಲಿ ಶಾಸನಕ್ರಮ ಒಳ್ಳೆ ರೀತಿಯಲ್ಲಿದ್ದು, ಜನರು ಸಂತುಷ್ಟರಂತಿದ್ದಾರೆ. ಇಲ್ಲಿಯ ಜನರಿಗೆ ತಮ್ಮ ಧರ್ಮದ ಮೇಲೆ ಉತ್ತಮ ಶ್ರದ್ಧೆ ಇರುವದರಿಂದ ಅವರು ಧರ್ಮಭ್ರಷ್ಟ, ಪೈಶಾಚಿಕ ರಕ್ತಲಾಲುಪ ಕಮ್ಯೂನಿಸ್ಟ ಚೈನೀಯರನ್ನು ತುಚ್ಛ ಕಾರ ಭಾವನೆಯಿಂದ ಕಾಣುತ್ತಿದ್ದಾರೆ. ಅವರಿಗೆ ಭಾರತವು ಪುಣ್ಯ ಭೂಮಿ ಇದೆ, ಅದರ ರಕ್ಷಣೆಗಾಗಿ ಅವರು ಆದಂತಹ ಬಲಿದಾನಕ್ಕೂ ಸದಾಸಿದ್ಧರಿದ್ದಾರೆ. ಆದರೂ ಚೈನಿ ಕಮ್ಯೂನಿಸ್ಟರು ಈಗಾಗಲೇ ಬಹಳ ಭಾಗವನ್ನು ತಮ್ಮ ಆಕ್ರಮಣಕ್ಕೊಳಪಡಿಸಿಕೊಂಡಿರುವರು. ಅಲ್ಲಿಂದ ಚೈನಿಯರು ಶಾಲ್ತಿಗೆಯ ಬಿದ್ದಲ್ಲಿ ಅವರಿಗೆ ಹೆಚ್ಚು ಕಾಲ ಕಾಲೂರಿಕೊಂಡಿರಲು ಸಾಧ್ಯ ಇರುವದಿಲ್ಲ [ಅವರು ಕಾಲೂರಿಕೊಂಡಿರುವವರಾದರೂ ಎಂತು? ಲಡಾಖಿಗಳು ಮಾತ್ರ ಚೈನಿ ಕಮ್ಯೂನಿಸ್ಟರನ್ನು ಎದುರಿಸುತ್ತಿರುವದಲ್ಲ, ಅಖಂಡ ಭಾರತ—ಕನ್ಯಾ ಕುಮಾರಿಯಿಂದ ಹಿಮಾಚಲದ ವರೆಗೂ ಇರುವ ಭಾರತೀಯರೆಲ್ಲರೂ ಇಂದು ಒಂದಾಗಿದ್ದಾರೆ. ಲಢಾಖಿಗಳು ಭಯಪಡುವ ಸಂಭವವೇ-ಇರುವದಿಲ್ಲ ಅವರು ಧೈರ್ಯ ಕಳೆದುಕೊಳ್ಳಬೇಕಾಗಿರುವದಿಲ್ಲ. ಯಾವದೋ ಒಂದು ಪಕ್ಷಕ್ಕಾಗಿ, ಯಾವದೋ ಓರ್ವ ಮುಂದಾಳುವಿಗಾಗಿ ಅವರಿಂದು ಒಂದಾಗದೆ ಇದ್ದಿರಬಹುದು ಅದೆಲ್ಲವುಗಳಿಗಿಂತಲೂ ಅಧಿಕ ಶ್ರದ್ಧೆ—ಪ್ರೀತಿಗಳಿಗೆ ಪಾತ್ರವಾಗಿರುವ ಪವಿತ್ರ ಮಾತೃ ಭೂಮಿಯ ಕಣಕಣದ ಗೌರವವನ್ನು ಕಾಪಾಡಲು ಅವರು ಒಂದಾಗಿರುವರು.

ಇದನ್ನು ಕಂಡು ಆ ಚೈನಿ ಕಮ್ಯೂನಿಸ್ಟರ ದಲ್ಲಾಳಿಗಳು ಇಲ್ಲಿ ಹಲವಾರು ರೂಪದಲ್ಲಿ ವೇಷ ಬದಲಾಯಿಸುತ್ತ ಅನೇಕ ಕುಹಕ ಆಟಗಳನ್ನು ಆಡುತ್ತಿದ್ದಾರೆ. ಚೌ-ಎನ್-ಲೈಯು ಶ್ರೀ ಕೃಷ್ಣನ ಅವತಾರವೆಂದೂ, ಧರ್ಮಪರಿಪಾಲನೆಗಾಗಿ ಅವನು ಹಿಮಾಲಯವನ್ನು ದಾಟಿ ಬರುತ್ತಿರುವನೆಂದು ಕೆಲವರಿಗೂ, ಚೈನಿ ಕಮ್ಯೂನಿಸ್ಟರನ್ನು ತಡೆಗಟ್ಟಲು ಯಾರಿಗೂ ಸಾಧ್ಯ ಇರುವದಿಲ್ಲ, ನಮ್ಮ ಪಕ್ಷಕ್ಕೆ ಸಹಾಯ ಧನ ಸಲ್ಲಿಸಿ, ಈ ರಸೀತಿಯನ್ನಿಟ್ಟುಕೊಂಡಿದ್ದು, ಚೈನಿ ಕಮ್ಯೂನಿಸ್ಟರು ಬಂದಾಗ ಅದನ್ನು ತೋರಿಸಿದಲ್ಲಿ ಅವರು ಹಿಂಸಡೆ ಮಿತ್ರರಂತೆ ಕಾಣುವರಾಗಿ ಗಡಿ ಜನತೆಯನ್ನು ಮೋಸಗೊಳಿಸಲಾಗಿದೆ. ತೇಜಪುರದಲ್ಲಿ ಇನ್ನೊಂದು ರೀತಿಯ ಆಟವನ್ನು ಆಡಲಾಗಿಯದೆ. ಆಸ್ಸಾಮಿನ ಭೂಪ್ರದೇಶದಲ್ಲಿ ಪಾಕಿಸ್ತಾನಕ್ಕೆ ಪಕ್ಕದಲ್ಲಿರುವದು. ಪಾಕಿಸ್ತಾನಕ್ಕೂ, ಚೈನಾದ (ತ್ರಿವಿಷ್ಟಪ) ಎಲ್ಲೆಯುತ್ತ ಇರುವ ಪ್ರದೇಶ ಚೈನಾಕ್ಕೆ ಸೇರಿಸಲ್ಪಡುವದರಿಂದ ಪಾಕಿಸ್ತಾನಿಸ್ತ್ರೀಯರು ಭಯಪಡಬೇಕಾಗಿಲ್ಲವೆಂಬ ಮುನ್ನೆಚ್ಚರಿಕೆಯನ್ನವರಿಗಿತ್ತು ಊರಿನಲ್ಲಿ ಚೈನಿಯರ ಆಗಮನದ ಸುದ್ದಿಯನ್ನು ಹಬ್ಬಿಸಿ, ತೇಜಪುರದಲ್ಲಿ ಗಲಾಟೆ ಮಾಡಲಾಯಿತು. ದಕ್ಷಿಣ ಭಾರತದಲ್ಲೂ ಇವರು ಸುಮ್ಮಗಿರುವದಿಲ್ಲ. ಇಲ್ಲಿಯೂ ಇರುವ ಪಾಕಿಸ್ತಾನಿ ಪ್ರಿಯರ ಬಳಿ ಕಾಶ್ಮೀರ, ಪಂಜಾಬಗಳನ್ನು ಪಾಕಿಸ್ತಾನಕ್ಕೆ ಕೊಡಲಾಗುತ್ತದೆಂದೂ ರಷ್ಯಾದ ಸಹಾಯದಿಂದ ಭಾರತವನ್ನು ಬಗ್ಗುಬಡೆಯುವದು ಖಂಡಿತವೆಂದೂ ಅವರ ಮನಸ್ಸನ್ನು ಸೆಳೆಯಕೊಳ್ಳಲಾಗುತ್ತದೆ ಉತ್ತರ ಭಾರತವನ್ನು ಮಾತ್ರ ಚೈನಾಕ್ಕೆ ಸೇರಿಸಿಕೊಳ್ಳಲಾಗುತ್ತದೆಯೆಂದೂ ದಕ್ಷಿಣ ಭಾರತವನ್ನು-ದ್ರಾವಿಡ ನಾಡನ್ನು—ದ್ರಾವಿಡರಿಗೆ ಕೊಡಲಾಗುವದೆಂದೂ, ಅವರ ಬಿಡುಗಡೆಗಾಗಿ ಚೈನೀಯರು ಬರುತ್ತಿರುವರೆಂದೂ ಅವರ ಬಳಿ—ದ್ರಾವಿಡ ನಾಡವಾದಿಗಳ ಬಳಿ—ಹೇಳಿ ಅವರ ಮನಸ್ಸನ್ನು ಸೆಳೆದುಕೊಳ್ಳಲಾಗುತ್ತದೆ. ಇಷ್ಟಕ್ಕೇನೇ ಈ ಕುತಂತ್ರಿಗಳು ಸುಮ್ಮಗಿರುವದಿಲ್ಲ. ಮಾಲಿಕರ ಮಂಗ ಮುಷ್ಟಿಯಿಂದ ಕಾರ್ಮಿಕರನ್ನು ತಪ್ಪಿಸಲಿಕ್ಕಾಗಿ ಅವರ ಮುಕ್ತಿಗಾಗಿ ಮುಕ್ತಿಸೇನೆ ಬರುತ್ತಿದೆ ಎಂದು ಅವನ್ನು ನಂಬುವವರ ಬಳಿ ಪ್ರಚಾರ ಮಾಡಲಾಗುತ್ತಿದೆ. ಈ ರೀತಿ ಪಕ್ಷ-ಪರಿಸ್ಥಿತಿಗಳಿಗನ್ನು ಸಾರವಾಗಿ ವದಂತಿಗಳನ್ನು ಹಬ್ಬಿಸಲಾಗುತ್ತಿದೆ. ಆದುದರಿಂದ ಈಗ ಕಂಡು ಬಂದಿರುವದು ಲಢಾಖಿನ ಮೇಲೆ ಮಾತ್ರವಲ್ಲ ಅಖಿಲ ಭಾರತದ ಮೇಲೆ ಕೆಂಪು ಛಾಯೆ ಇದೆ. ಈ ಗ್ರಹಣದಿಂದ ಭಾರತ ಭಾಸ್ಕರ ಪಾರಾಗಲೇ ಬೇಕು. ಜಗತ್ತು ಪುನಃ ಬೆಳಕನ್ನು ಕಾಣಲೇ ಬೇಕು.–[ಶಿ. ಶಂ]

—ಶಿವಶಂಕರ, ಮದ್ರಾಸು.

—ಶ್ರೀ ಶ್ರೀಧರ ಕೌಲ್

ಪಾಂಚಜನ್ಯ (ಹಿಂದಿ) ದಿಂದ

# ಅಮರ ಪ್ರೇಮಂ.

ಬದುಕಬೇಕು ಬದುಕಿಗಾಗಿ
ಮಾಡಬೇಕು ತ್ಯಾಗವಾ
ತ್ಯಾಗವನ್ನು ಸಾಧಿಸಿದರೆ
ನಡೆಸಬಹುದು ಜೀವನಾ
ಬಾಳಿನಲ್ಲಿ ಶಾಂತಿ ಸುಖಗಳಿಲ್ಲ—
ವೆನುತ, ಜನರು ನುಡಿವರೂ
ಸೋಲು ಬಾಳಗೆಲುವ ಮೂಲ—
ವೆನುತ ಜನರು ಮರೆವರೂ
ಕಷ್ಟವನ್ನು ಮಾಡದಿರಲು
ಕಾರ್ಯಸಿದ್ಧಿಯಾಗ್ವದೇಃ
ಕಷ್ಟಪಟ್ಟು ಬೆವರು ಸುರಿಸಿ
ದುಡಿದು ಜಯವ ಕೋರಿರೀ
ಎಲ್ಲರನ್ನು ಜಗತ್ತಿನಲ್ಲಿ ಪ್ರೀತಿ—
—ಸುವದೇ, ಸೃಷ್ಟಿನಿಯಮವೂ
ಪರರ ವಸ್ತುವನ್ನು ಆಶಿಸದೇ
ಇರುವದದುವೇ, ಮನುಷ್ಯಧರ್ಮವೂ
ಕಷ್ಟ ಸುಖದ ಕಾಲದಲ್ಲಿ
ಸತ್ಯವನ್ನು ಮರೆಯದೇ.
ಹಿರಿಯರೊರೆದ ಮಂತ್ರವನ್ನು
ನೆನೆಸಿ ಸಾಗಬೇಕು ಜೀವನಾ.
ಪಾಪ ಕಾರ್ಯವೆಲ್ಲ ಬಿಟ್ಟು
ಪಡೆಯಬೇಕು ಮೋಕ್ಷವಾ.
ಜಗದೊಳಿರುವ ಮನುಜರಿಗೇ
ಪ್ರೇಮವೊಂದೆ ಅಮರವೂ.
ಪ್ರೇಮವೆಂಬ ಅಸ್ತ್ರದಲ್ಲಿ
ಜಗದ ಜನರ ಗೆಲಿವ ಮಂತ್ರ.
ಅಡಕವಾಗಿ ಇದ್ದು ಜನರ
ಮನವ ಸೆಳೆಯುತಿರುವದೂ.

—"ವಾಣಿ ಶರಣ"

—'ಯೋತಡ್ಕ"

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

## ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

**ಸಾಹಸ ಭೀಮ ವಿಜಯ (ಗದಾಯುದ್ಧ)** ೦–೮–೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

**ಭಾರತದ ಗುರುಕುಲ** ೦–೬–೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

**ಲಕ್ಷ್ಮಪಗಡೆ** ೦–೬–೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

**ಭರತೇಶ ದಿಗ್ವಿಜಯ** ೦–೮–೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

**ವಾಲಿ ಸುಗ್ರೀವ (ಬಹುಮಾನಿತ)** ೦–೮–೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ವ ನಪ್ರೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

### ಕನಲು ದಾರಿ—ಕೆಂಪು ದೀಪ

# ತಾಯಿ ನುಡಿ-ಕಾರಂತ ಸಂಚಿಕೆ

— ಸುದಾಸ

ನಿರ್ದಿಷ್ಟವಾಗಿ ಇಂತಿಷ್ಟೇ ಎಂದು ಹೇಳುವಂತಿಲ್ಲವಾದರೂ, ಸಹಸ್ರ ಸಂಖ್ಯೆಗಳಲ್ಲಿ ಮುಂಬಯಿ ಕನ್ನಡಿಗರನ್ನು ಎಣಿಸುವ ಕಾಲ, ಕಳೆದು ಹೋಗಿದೆ. ಈಗೆಲ್ಲಾ ಲಕ್ಷಗಳ ಎಣಿಕೆ. ನಾಲ್ಕು ಲಕ್ಷ ಕನ್ನಡಿಗರಿದ್ದಾರೆ, ಮುಂಬಯಿಯಲ್ಲಿ!

ನಾಲ್ಕು ಲಕ್ಷ ಕನ್ನಡಿಗರ ಪರವಾಗಿ ಒಂದು ಪತ್ರಿಕೆ—ಕನ್ನಡದ ಒಂದು ಪತ್ರಿಕೆ. ಬೇಡವೆ?

ಉತ್ತರವನ್ನು ಹಿಂದೊಮ್ಮೆ ಮುಂಬಯಿ ಕನ್ನಡಿಗರು ಇತ್ತಿದ್ದಾರೆ; ತಮಗಿರುವ ಕನ್ನಡದ ಅಭಿಮಾನವನ್ನು ಉದಾರ ಹೃದಯದಿಂದ ಧಾರೆ ಎರೆದು ಕೊಟ್ಟಿದ್ದಾರೆ.

ಕನ್ನಡಿಗರಲ್ಲಿ ಬೇರೇನಿಲ್ಲವಾದರೂ, ಬೇರೆಲ್ಲೂ ಕಾಣಸಿಗದ, ವ್ಯಕ್ತಿ ಪ್ರತಿಷ್ಠೆಗಾಗಿ ಬಾಯ್ಬಿಡುವ ಗುಣವಂತೂ ಇದೆ. ಸದ್ಯ ಅಷ್ಟಾದರೂ ಇದೆಯಲ್ಲ ಎಂದು ನಾವು ತೃಪ್ತಿ ಪಡಬಹುದು. ತೃಪ್ತಿಪಡಬಹುದೇನೋ ನಿಜ. ಆದರೆ ತಾವು ಮಾಡಿದ್ದೇ ಸರಿ ಎನ್ನುವ ಪ್ರಭೃತಿಗಳ ಕುರಿತು ಯಾರೂ ಆನ್ನಬಾರದು ಎಂಬ ಮಾತು ಚಿನ್ನಕ್ಕೆ ಪುಟವಿಟ್ಟಷ್ಟು ನಿಜ.

ನುಡಿ? ಆ ಹೆಸರು ಕಿವಿಗೆ ಬಿದ್ದಾಗ ಹೃದಯ ಮಿಡಿಯುತ್ತದೆ. ಮುಂಬಯಿ ಕನ್ನಡಿಗರಿಗೆ ಒಂದು ಅಪೂರ್ವ ಸೊಬಗನ್ನು ಕಾಣಿಸಿಕೊಟ್ಟ ನುಡಿ—ಕನ್ನಡ ಪತ್ರಿಕೋದ್ಯಮದ ಒಂದು ಮೈಲುಗಲ್ಲು ಎಂದು ಹಿರಿಯರಿಂದ ಹರಸಿಕೊಂಡ ನುಡಿ–ಮುಂಬಯಿ ಕನ್ನಡಿಗರ, ಅಷ್ಟೆ ಅಲ್ಲ–ಸಮಸ್ತ ಕನ್ನಡಿಗರ ಭಾಷಾಭಿಮಾನದ ಕುರುಹಿನ ಫಲಶ್ರುತಿಯನ್ನು ಮೀಂಟಿ—ಕಾಲಗರ್ಭದಲ್ಲಿ ಅಡಗಿ ಹೋಯಿತು.

ಈ ಮಾತು ಅಕ್ಷರಶಃ ನಿಜ. ರೋಮಾಂಚನೀಯ ಎಂಬ ಶಬ್ದದ ಇನ್ನೊಂದು ಅರ್ಥ—ನುಡಿಯ ಹೋರಾಟ!

ನುಡಿ ಕಣ್ಮರೆಯಾಯಿತು; ಶಂಕರಾಚಾರ್ಯ, ವಿವೇಕಾನಂದರಂತೆ ಅಲ್ಪಾಯುಷಿಯೆನಿಸಿ, ಉಜ್ವಲ ಪ್ರಭೆ ಬೀರಿ, ನುಡಿ ಕಣ್ಮರೆಯಾಯಿತು.

ಕನ್ನಡಿಗರು ಎಚ್ಚತ್ತರು; ಮುಂಬಯಿಯ ಕನ್ನಡಿಗರು ಎಚ್ಚತ್ತು ಕೇಳಿದರು; ನುಡಿ ಕಣ್ಮರೆಯಾಯಿತೇ? ಯಾಕೆ ಕಣ್ಮರೆಯಾಯಿತು? ಎಂದು, ಎದೆತಟ್ಟಿ ನಾವಿದ್ದೇವೆನ್ನುವದನ್ನು ಸೂಚಿಸುತ್ತ, ನುಡಿಗೆ ಗುಳಿ ತೋಡಿದವರೇ ನುಡಿಯ ಬೆನ್ನು ತಟ್ಟಿ ಪ್ರಶ್ನಿಸಿದರು, ತಮ್ಮ ಕನ್ನಡಾಭಿಮಾನಕ್ಕೆ ಇದು ಸಾಕ್ಷಿ, ಎಂಬಂತೆ.

ಅದಕ್ಕೆ ಉತ್ತರವನ್ನು ನುಡಿ ಕೊಡಬಹುದಿತ್ತು. ಆದರೆ ಕನ್ನಡಿಗರ ಭಾಷಾಭಿಮಾನದ ಕುರಿತು, ಅಚಲ ವಿಶ್ವಾಸ ತಾಳಿದ್ದ ನುಡಿ, ಉತ್ತರಿಸಲಿಲ್ಲ.

ಎಂತಹ ಹುಚ್ಚು ಆವೇಶ! ಅದೆಂತಹ ಹುಚ್ಚು ಸಾಹಸ! ದಿಟ್ಟತನದ ಹೆಜ್ಜೆಯಿರಿಸಿ, ನುಡಿ ಸಾಗಿದ ದಾರಿಯಲ್ಲೇ ನಾನೂ ಮುಂದೊತ್ತಿ ಸಾಗುವೆನೆನ್ನುವ ಸಾಹಸದ ಎದೆಗಾರಿಕೆ ತೊಟ್ಟು, ಅಣಿಗೊಂಡು ನಿಂತಿತು, ಇನ್ನೊಂದು ವಾರಪತ್ರಿಕೆ; ತಾಯಿನುಡಿ.

ಕನ್ನಡಿಗರೇ, ನಿಮಗೆ ನಿಮ್ಮದೇ ಆದ ಒಂದು ಪತ್ರಿಕೆ ಬೇಕಲ್ಲವೇ? ಎಂಬ ತಾಯಿನುಡಿಯ ಪ್ರಶ್ನೆಗೆ, ಮುಂಬಯಿಯ ಕನ್ನಡಿಗರು, ಮತ್ತೊಮ್ಮೆ ತಮ್ಮ ಭಾಷಾಭಿಮಾನವನ್ನು ವ್ಯಕ್ತಪಡಿಸಿದರು; ತಾಯಿ ನುಡಿ ಮಾಸಿಕಕ್ಕೆ ಪರಿವರ್ತನೆಗೊಂಡುದು—ಅವರ ಅಭಿಮಾನದ ಫಲಶ್ರುತಿ.

"ಈ ಅರುವತ್ತಕ್ಕೆ ಮತ್ತರುವತ್ತು ಸೇರಲಿ; ಕಾರಂತರ ಸೃಷ್ಟಿ ಸಂಗಮ ಸುಗಮವಾಗಿ ಸಾಗಲಿ—ಎಂದು ಕಾರಂತರಿಗೆ ತಾಯಿ ನುಡಿಯ ಸುಭಾಶಯ— ಆ ಆಶಯದ ಪ್ರತೀಕವಾಗಿ ಈ ಕಾಣಿಕೆ.

ಶ್ರೀ ಕೋಟ ಶಿವರಾಮ ಕಾರಂತರಿಗೆ ಅರುವತ್ತು ತುಂಬಿದಾಗ ಅವರ ನಲವತ್ತು ವರ್ಷಗಳ ನಿರರ್ಗಳ ಸಾಹಿತ್ಯ ಸಂಸ್ಕೃತಿ ಸೇವೆಯ ಸವಿ ನೆನಪಿಗಾಗಿ ಈ ಸಂಚಿಕೆ ತಾಯಿ ನುಡಿಯ ಕಾಣಿಕೆ ಎಂದು ನಿರ್ಧರಿಸಿದ್ದೆವು. ಆದರೆ ಅಂತ್ಯವಿಲ್ಲದ ಅಡಚಣೆಗಳಿಂದಾಗಿ ಪದ್ಧತಿಯಂತೆ ನಾವು ಕಾಲವಾಗಿ ತಿಂಗಳು ಕಳೆದು ತಾಯಿ ನುಡಿ ಬೆಳಕಿಗೆ ಬರುತ್ತಿದೆ."

ಈ ಸಂದರ್ಭದಲ್ಲಿ ರಾಷ್ಟ್ರಕವಿ ಗೋವಿಂದ ಪೈಯವರು ಹೀಗೆ ಹರಸಿ ಆಶೀರ್ವದಿಸಿದ್ದಾರೆ:

ಶ್ರೀ ಕೋಟ ಶಿವರಾಮ ಕಾರಂತರೆಂದರೆ ಕರ್ಣಾಟಕದ ಶ್ರೇಷ್ಠರಾದ ಒಬ್ಬ ಸನ್ಮಾನ್ಯರಾದ ಗದ್ಯ ಸಾಹಿತಿ ಎಂಬಲ್ಲಿ ಎರಡು ಮಾತಿಲ್ಲ. ಅವರ 'ಮರಳಿ ಮಣ್ಣಿಗೆ' ಎಂದು ಬಹಳ ಮೇಲಾದ ಕಾದಂಬರಿ ಕನ್ನಡ ನಾಡಿನಲ್ಲಿ ಹೊರಹೊಮ್ಮಿದೊಡನೆಯೇ ಅವರಿಗೆ ವಿಶೇಷವಾದ ಮನ್ನಣೆಯನ್ನು ಸಲ್ಲಿಸಬೇಕಾಗಿತ್ತು. ಆ ಶುಭ ಕಾರ್ಯವಾದರೆ ಅಗ್ಗ ಮರವೆಯುಸ್ಸು ಸಂದು ಹೋಯಿತು, ಅಂದರೆ ಅಂದಿನ ಹಬ್ಬದ ಆ ಸಮಾರಂಭವು ತಪ್ಪಿತು. ಅದನ್ನೀಗ ಅವರ ೬೦ನೆಯ ಹುಟ್ಟು ದಿನದಂದು ಆಚರಿಸಿದರೆ, ಆ ತಪ್ಪನ್ನು ತಿದ್ದಿದಂತಾಗುತ್ತದೆ.

ಆ ಬಗ್ಗೆ ನಿಮ್ಮ 'ತಾಯಿನುಡಿ'ಯ ದೀಪಾವಳಿಯ ಸಂಚಿಕೆಯನ್ನು 'ಕಾರಂತರ ಸಂಚಿಕೆ'ಯೆಂದು ಅವರ ಹೆಸರಿನಲ್ಲಿ ಮೀಸಲು ಸಂಚಿಕೆಯಾಗಿ ಪ್ರಕಟಿಸಲಿಕ್ಕಿರುವ ನಿಮ್ಮ ಸ್ತುತ್ಯವಾದ ಉದ್ದೇಶದ ಬಗ್ಗೆ ಕನ್ನಡ ನಾಡಿನ ನಾಡೇ ಮೆಚ್ಚದಿರದು."

ಈ ಸಂಚಿಕೆಯಲ್ಲಿ ಕಾರಂತರೇ ಬರೆದಿರುವ ಅವರ ಬಾಲ್ಯ ಜೀವನದ ಸೊಗಸಾದ ಕಥೆಯಿದೆ!

ಕಾರಂತರ ಕಾದಂಬರಿಗಳ ಕುರಿತು ಮ. ವಿ. ನಾಯಕರ ಲೇಖನಿ, ಕಾರಂತರ ಜೀವನದ ಸಂಕ್ರಾಂತಿಕಾಲವನ್ನು ರೂಪಿಸುವ ಚಿತ್ರಕ್ಕಿಳಿದಿರುವದು ಸ್ತುತ್ಯವಾಗಿದೆ.

ನಾಡಿನ ಹಿರಿಯ, ಕಿರಿಯರ ಲೇಖನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದ್ದರೂ, ಇದರಿಂದಲೇ ತಾಯಿನುಡಿಯ ಉದ್ದೇಶ ಸಫಲಗೊಂಡಿದೆಯೆಂದು ಹೇಳುವಂತಿಲ್ಲ. ಆದರೂ ಎಂತಹ ಅಡಚಣೆಗಳಿದ್ದರೂ, ಅವೆಲ್ಲವನ್ನೂ ಮೆಟ್ಟಿನಿಂತು ಇಂತಹ ಸಾಹಸಕ್ಕಿಳಿದ ತಾಯಿನುಡಿಯ ಕುರಿತು, ರಾಷ್ಟ್ರಕವಿಗಳೇ ಅಂದಿರುವಂತೆ, ಕನ್ನಡ ನಾಡಿನ ನಾಡೇ ಮೆಚ್ಚದಿರಲಿಕ್ಕಿಲ್ಲ?

ನಾಡು ಮೆಚ್ಚುವ ಪ್ರಶ್ನೆ—ಜನರು ಮೆಚ್ಚುವ ಪ್ರಶ್ನೆ—ಪತ್ರಿಕೆಯ ಬಂಡವಾಳವಾಗದು. ತಾಯಿನುಡಿಯ ಅಳಿವು, ಉಳಿವು ಮಹತ್ವದ ವಿಷಯವಲ್ಲ. ಆದರೆ, ಸಸ್ಮಿತ್ರನಾತೆ, ಸದುದ್ದೇಶದ ಸಾಧನೆಗಾಗಿ ಸದಾ ಕಾಲ ಜಾಗ್ರತವಾಗಿರಬಲ್ಲ ಯಾವುದೇ ಒಂದು ಪತ್ರಿಕೆ, ಬಾಳಬೇಕಾದರೆ. ಅಂದು ನೊರೆಯುವ ಪುರಸ್ಕಾರಕ್ಕಿಂತ ಹೆಚ್ಚಿನ ಪುರಸ್ಕಾರ, ಬೇರೊಂದು ಸಿಗಲಿಕ್ಕಿಲ್ಲ.

ಭಾರತೀಯ ಜವಾನರಿಗೆ ರಕ್ತದಾನ ಮಾಡಲು ಮುಂದಾಗುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.


ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ') ಅವರ ನವೀನ ಜನಪದ ಗೀತಾಸಂಕಲನ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ.ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ.ಜಿ.ಎಂ. ಕಾಲೇಜು ಕುಂಜಿಬೆಟ್ಟು ಉಡುಪಿ,






ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 606 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟು ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26



ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಮು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

## "ರಂಗಮ್ಮನ ಇತಿಹಾಸ"

(೨ನೇ ಪುಟದಿಂದ)

ರವಿ— ಅಹುದು ರಾಜು.

ರಾಜು— ಈಗ ಏನಯ್ಯ ಮಾಡಬೇಕು?

ರವಿ— ಇಲ್ಲಿಂದ ಕಾಲು ಕೀಳಬೇಕು ತಾನೇ?

ರಾಜು— ಇನ್ನೂ ಕಣಿ ಕೇಳುತ್ತೀಯಲ್ಲಾ.

ರವಿ— ಒಂದು ಐದು ರೂಪಾಯಿ ಬಿಸಾಡಿ ಹೋದರಾಯಿತು.

ರಾಜು— ನನ್ನ ಹತ್ತಿರ ಹಣವೇ ಇಲ್ಲ. ಆ ಹುಡುಗ ಎಂತಹ ಮೋಸ ಮಾಡಿದ.

ರವಿ— ನೀನು ಬೆಳ್ಳಗಿದ್ದದ್ದೆಲ್ಲಾ ಹಾಲು ಎನ್ನುತ್ತೀಯೊ. ಈಗ ಗೊತ್ತಾಯಿತೋ. ಗಿರಾಕಿಯನ್ನು ಕರೆದುಕೊಂಡು ಬರುವುದು ಅವನ ಡ್ಯೂಟಿ.

ರಾಜು— ಅವನ ಡ್ಯೂಟಿ ಮನೆ ಹಾಳಾಯ್ತು. ನನ್ನ ಡ್ಯೂಟಿ ನೋಡಯ್ಯ ಅಂದ್ರೆ.

ರವಿ— ನಾನೊಂದು ಮಾತು ಹೇಳುತ್ತೇನೆ ಕೇಳುತ್ತೀಯೊ?

ರಾಜು— ಏನಯ್ಯ ಅದು?

ರವಿ— ನಿನಗೆ ಹೇಗಿದ್ದರೂ ಮದುವೆಯಾಗಿಲ್ಲ. ಈಗ ಬರುವಳನ್ನೇಕೆ ಮದ್ವೆಯಾಗಬಾರದು?

ರಾಜು—What! you ಈಡಿಯಟ್. ಎಂತಹ ಮಾತು ಹೇಳುತ್ತೀಯಲ್ಲ? ಆ ದೇಹ ಎಷ್ಟು ಜನರ ರುಚಿಯನ್ನು ನೋಡಿದೆಯೋ? ಪರರಿಗೆ ಮೈಕೊಟ್ಟವಳನ್ನು ನಾನು Marriage ಆಗೋದೆ. ಇಮ್‌ಪಾಸಿಬಲ್, ಇಮ್‌ಪಾಸಿಬಲ್ ರವಿ. ನನ್ನ ಜೀವವಿರುವವರೆಗೆ ಸಾಧ್ಯವಿಲ್ಲ

ರವಿ— ಅಲ್ಲಾ ಖಾದಿ ಬಟ್ಟೆಯನ್ನು ಹಾಕಿಕೊಂಡು, ಗಾಂಧಿ ತತ್ವವನ್ನು ಅನುಸರಿಸ ಬೇಕಯ್ಯ. ಇಂತಹ ಜನಾಂಗವನ್ನು ಕಾಪಾಡಬೇಕು.

ರಾಜು— ಇಲ್ಲಿಂದ ತಪ್ಪಿಸಿಕೊಳ್ಳುವ ವಿಚಾರ ನೋಡು ಅಂದ್ರೆ ಏನೇನೋ ಬೊಗಳುತ್ತಿದ್ದೀಯಲ್ಲಾ? ಇದರ ಅನುಭವ ನಿನಗೆ ಇದೆ ಅಂತ ಕಾಣುತ್ತೆ ಅದಕ್ಕೆ ಮಜಾವಾಗಿ ಕುಳಿತಿದ್ದೀಯೊ. ನಿನ್ನ ಹತ್ತಿರ ಹಣವಿದ್ದರೆ ಕೊಡು, ರೂಮು ಕಡೆ ಹೋಗೋಣ.

[ರಂಗಮ್ಮ ಮತ್ತು ಪಾರ್ವತಿ ಪ್ರವೇಶ]

ರಂಗಮ್ಮ— ಬಾ ಪಾರೂ, ನಾಚಿಕೆಯೇಕೆ? [ಪಾರ್ವತಿ ತಾಂಬೂಲಪಟ್ಟೆಯನ್ನು ಟೇಬಲ್ ಮೇಲೆ ಇಟ್ಟು ನಮಸ್ಕರಿಸುವಳು. ಸ್ವಲ್ಪ ಹೊತ್ತು ಎಲ್ಲರೂ ಮೌನ ಅನಂತರ ರಂಗಮ್ಮನೇ] ಏನೋ ಬಡವರ ಸೇವೆ ಎಲ್ಲವನ್ನು ಸ್ವೀಕರಿಸಬೇಕು.

ರಾಜು— ಥತ್. ನಾವಿಲ್ಲಿಗೆ ಬಂದದ್ದೇ ತಪ್ಪು. ಎಲ್ಲೋ ಶುದ್ಧ ಹಳ್ಳಿಜನ ಸಹವಾಸವಾಯ್ತು.

ರವಿ— ಶಾಂತನಾಗು ರಾಜು. ಗಲಾಟೆ ಮಾಡಿದರೆ ನಿನ್ನದೆ ಮರ್‍ಯಾದೆ ಹೋಗುತ್ತೆ.

ರಂಗಮ್ಮ— ಏನು ಸ್ವಾಮಿ, ಹಳ್ಳಿಗಿಳ್ಳಿ ಅಂತೀರಾ?

ರಾಜು— ತಪ್ಪಲ್ಲದೆ ಮತ್ತೇನು? ನಾವು ಬಂದಿದ್ದು ಸೂಳೆ ಮನೆಗೆ ಎಂದಲ್ಲ.

ರಂಗಮ್ಮ— ಅದು ನಮ್ಮ ತಪ್ಪೇ?

ರವಿ— ಹೌದು ನಿಮ್ಮದೇ ತಪ್ಪು

ರಂಗಮ್ಮ— ಅದು ಹೇಗೆ?

ರಾಜು— ಅದು ಹೇಗೋ? ಹುಡುಗನಿಂದ ಹೇಳಿ ಕಳಿಸಿದಿರಿ.

ರಂಗಮ್ಮ— (ನಗುತ್ತಾ) ನೀವು ತಿಂಡಿ ಪೊಟ್ಟಣ ಕಳಿಸಿದಿರಲ್ಲಾ ಅದರ ಗೂಡಾರ್ಥವೇನು.

ರಾಜು— ಹೌದು ಕಳಿಸಿದೆವು. ಪಾಪ! ಹುಡುಗ ಹಸಿದಿದ್ದ. ಬಡವರೆಂದು ತಿಳಿದುಕೊಂಡು ಕಳಿಸಿದೆವು ಆದರೆ ನೀವು ಬಡವರಲ್ಲಾ ಕಳ್ಳ ಬಡವರು. ಆದರೆ ಇಂತಹ ಜನರೆಂದು ನಾನು ತಿಳಿದುಕೊಂಡಿರಲಿಲ್ಲ. ಬಡವರೆಂದೇ ಸಹಾಯ ಮಾಡಲು ಬಂದೆವು.

ರಂಗಮ್ಮ— ಈಗ ಆದ ಪ್ರಮಾದವೇನು.

ರವಿ— ಛೀ! ಛೀ!! ಎಲ್ಲಿಯಾದರೂ ಉಂಟೇ ಸೂಳೆಯರ ಮನೆ ಬಹಳ ಪವಿತ್ರ ಅಲ್ಲವೇ?

ರಂಗಮ್ಮ— ಸ್ವಾಮಿ, ನಿಮ್ಮ ಮನೆಯೇ ಪವಿತ್ರವಾಗಿರಲಿ. ಏನು ಮಾಡಬೇಕು? ಹೊಟ್ಟೆಯ ಕೂಗಿನ ಮುಂದೇ?

ರಾಜು— ಹೊಟ್ಟೆ! ಹೊಟ್ಟೆ!! ನಿಮ್ಮ ಮನೆಗೆ ಬೆಂಕಿಹಾಕ ಮೈಮಾರಿ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಿಂತ ಸಾಯೋದೆ ಲೇಸು. ಇಂತಹ ಬಂಡ ಬಾಳು ಏತಕ್ಕೆ?

ರಂಗಮ್ಮ— ಒಂದು ಆಪಾದನೆಯಲ್ಲಿ ಸರಿಯಾಗಿದೆ ಸ್ವಾಮಿ, ರಾಜಣ್ಣನವರೇ, ನೀವು ಹೊಟ್ಟೆ ತುಂಬಿದವರು. ಹೇಗೆ ಬೇಕಾದರೂ ಮಾತನಾಡಬಹುದು. ನಮ್ಮಂತವರ ನೋವು ನಿಮಗೆ ಸಂತೋಷವಾಗಿಯೇ ಕಾಣಬಹುದು. ನೀವೇ ಈ ಸ್ಥಿತಿಯಲ್ಲಿ ಇದ್ದಿದ್ದರೇ ಗೊತ್ತಾಗತಿತ್ತು ಬೇಳೆ ಕಾಳು ಅಕ್ಕಿ ಸತ್ಯ ಬಹಳ ನೋವು ಸ್ವಾಮಿ.

ರವಿ— ಬದುಕುವುದಕ್ಕೆ ಬೇರೆ ಮಾರ್ಗವೇ ಇಲ್ಲವೇನು?

ರಂಗಮ್ಮ— ನಮಗೆ ದೇವರು ತೋರಿಸಿದ ಮಾರ್ಗ ಇದೇ ಸ್ವಾಮಿ.

ರಾಜು— ಅಯ್ಯೋ ದೇವರು ನಿಮ್ಮ ಕೈಯಲ್ಲಿ ಸಿಕ್ಕಿ ಪತಿತನಾದ

ರಂಗಮ್ಮ— ಗಂಡಸರಿಗೆ ಜೀವಿಸಲು ನೂರಾರು ಮಾರ್ಗಗಳಿವೆ. ಆದರೆ ನನ್ನಂತಹ ಅಬಲೆಯರಿಗೆ? ನಿರ್ಗತಿಕಳಾದ ಹೆಣ್ಣಿಗೆ? ಬೀದಿ ಬಿಕಾರಿಯಾದ ಹೆಣ್ಣಿಗೆ ಉಳಿದಿರುವುದು ಎರಡೇ ಮಾರ್ಗ ನೀವು ಹೇಳಿದಂತೆ ಆತ್ಮ ಹತ್ಯೆ ಮಾಡಿಕೊಳ್ಳಬೇಕು. ಇನ್ನೊಂದು ಮೈ ಮಾರಿ ಜೀವನ ನಡೆಸಬೇಕು. ನೀವು ಬ್ರಾಹ್ಮಣರ ಹಾಗೆ ಕಾಣುತ್ತೀರಲ್ಲ.

ರಾಜು— ನಾನು ಬ್ರಾಹ್ಮಣನಲ್ಲ. ವೀರಶೈವ ಇವನು ಮಾತ್ರ ಬ್ರಾಹ್ಮಣ.

ರಂಗಮ್ಮ— ನಾನು ಒಂದಾನೊಂದು ಕಾಲದಲ್ಲಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿ ಬೆಳೆದವಳು. ತಕ್ಕಮಟ್ಟಿಗೆ ಓದು ಬರಹವನ್ನು ಕಲಿತೆ ನೆನಸಿಕೊಂಡರೆ ಅದೆಲ್ಲಾ ಕನಸಿನಾಗೆ ಕಾಣುತ್ತದೆ.

ರವಿ— ಅಯ್ಯೋ ಬ್ರಾಹ್ಮಣ್ಯವೆ? ಈ ಸ್ಥಿತಿಗೆ ಇಳಿಯಿತೇ ನಮ್ಮ ಜಾತಿಯಲ್ಲಿ ಇಂತವರೂ ಉಂಟೇ.

ರಂಗಮ್ಮ— ಜಾತೀ! ಜಾತೀ!! ನಾವೇನು ದೇವಲೋಕದಿಂದ ಇಳಿದು ಬಂದಿದ್ದೇವೆಯೋ? ಈ ಮನುಷ್ಯರು ಮಾಡಿಕೊಂಡ ಜಾತಿಗಳು ಮನುಷ್ಯನಿಗೆ ವ್ಯಾಮುಗ್ರವಾಗಿ ನಿಂತುಕೊಂಡಿವೆ. ನಾನು ನನ್ನ ಜೀವಮಾನದಲ್ಲಿ ಯಾರೊಡನೆಯೂ ಈ ರೀತಿಯಾಗಿ ಮಾತನಾಡಲಿಲ್ಲ. ನನ್ನ ಇತಿಹಾಸವನ್ನೇ ಹೇಳಿ ಬಿಡುತ್ತೇನೆ ಕೇಳಿ ನನ್ನ ಪಾರ್ವತಿ ಈ ಕೆಲಸಕ್ಕೆ ಬಂದಿರುವುದೇ ಈ ದಿನ. ಪ್ರತಿ ದಿನವು ಹೇಳಿ ಹೇಳಿ ಸಾಕಾಗಿ ಹೋಯಿತು. ಮದ್ವೆಯಾಗಿ ಪತಿವ್ರತೆಯಾಗಿ ಬಾಳಬೇಕೆಂದು ಕನಸು ಕಾಣುತ್ತಿದ್ದಾಳೆ. ಇವಳು ಏನೇ ಪತಿವ್ರತೆಯಾಗಿದ್ದರೂ ತಾಯಿಯಂತೆ ಮಗಳು ಎಂದು ತಿಳಿದುಕೊಳ್ಳುತ್ತಾರೆ. ಪಾರ್ವತಿಯ ಕನಸು ನನಸಾಗಲು ಸಾಧ್ಯವೇ?

ರಾಜು— ಏಕೆ ಸಾಧ್ಯವಿಲ್ಲಾ? ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ.

ರಂಗಮ್ಮ— ರಾಜಣ್ಣನವರೇ, ಮಾತನಾಡುವುದು ಬಹಳ ಸುಲಭ. ಆದರೆ ಅವನ್ನು ಕಾರ್ಯ ರೂಪಕ್ಕೆ ತರುವುದು ಬಹಳ ಕಷ್ಟ. ಅದರಲ್ಲೂ ಸೂಳೆಯ ಮಗಳನ್ನು ಮದ್ವೆಯಾಗಲು ಯಾವ ಗಂಡು ತಾನೇ ಮುಂದೇ ಬಂದೀತು?

ರವಿ— ಅದೊಂದೆ problem. ನೀವು ಈ ಸ್ಥಿತಿಗೆ ಇಳಿಯಬೇಕಾದರೆ ಬಹಳ ಕಷ್ಟಪಟ್ಟಿರಬೇಕು

ರಂಗಮ್ಮ— ಹಿಂದಿನ ವಿಷಯ ನೆನಸಿಕೊಂಡರೆ ಕಣ್ಣಲ್ಲಿ ನೀರು ಬರುವುದಿಲ್ಲ ರಕ್ತವೇ ಹರಿದು ಬರುತ್ತೆ. ಪಾರು ಹುಟ್ಟಿದ ವರ್ಷಕ್ಕೆ ಗಂಡನನ್ನು ಕಳೆದುಕೊಂಡೆ. ನನ್ನ ಅಪ್ಪಅಮ್ಮ ಎಲ್ಲಾ ಅಣ್ಣತಮ್ಮಂದಿರು ನನಗೆ ನೀರು ಕುಡಿದರು. ನಾನು ನಿಲ್ಲುವುದಕ್ಕೆ ನೆರಳಿಲ್ಲದೆ ಬೀದಿ ಬಿಕಾರಿಣಿಯಾದೆ. ನನ್ನ ಪ್ರಿಯವ ರೂಪ ಇಟ್ಟುಕೊಂಡು ಎಲ್ಲಿ ಹೋಗಲಿ? ದಿನ ಕಳೆಯುವುದೇ ಬಹಳ ಕಷ್ಟವಾಯಿತು ದೇವರು ಯೌವನ ಕೊಟ್ಟ, ಹಸಿವು ಕೊಟ್ಟ, ರೂಪ ಕೊಟ್ಟ ಆದರೆ ಆದರೆ ಸಾಯಲು ಮನಸ್ಸು ಕೊಡಲಿಲ್ಲ.

ರವಿ— ಅದಕ್ಕೆ ಈ ಸ್ಥಿತಿಗೆ ಇಳಿದಿರೆನ್ನಿ.

ರಂಗಮ್ಮ— ಹೌದು ಸ್ವಾಮಿ, ನಾನು ಸಾಹುಕಾರರ ಮನೆಗೆ ಕೂಲಿಗೆ ಹೋದೆ. ಹಸಿದ ಹುಲಿಯ ಕಣ್ಣು ನನ್ನ ಮೇಲೆ ಬಿತ್ತು. ಅಂದಿನಿಂದಲೇ ಈ ಪಾಪ ಕೂಪಕ್ಕೆ ಜಾರಿದೆ. ಇಂತಹ ಸಾಹುಕಾರರಿಂದಲೇ ನಮ್ಮಂತಹ ಸೂಳೆಯರು ಹೆಚ್ಚಾಗಿರುವುದು. ಅವನ ಹೆಂಡತಿಗೆ ಗೊತ್ತಾಗುತ್ತಲೇ ಮನೆ ಬಿಟ್ಟು ಓಡಿಸಿದಳು.

ರಾಜು— ಅಯ್ಯೋ ಕರ್ಮವೇ! ಎಂತಹ ಕಷ್ಟಪಟ್ಟಿರುವಿರಿ ನನಗಿಂತಲೂ ಬಾರಿ ಕಷ್ಟವನ್ನು ಅನುಭವಿಸಿರುವಿರಿ.

ರಂಗಮ್ಮ— ನನ್ನ ಜಾತಿ ಹೋಯ್ತು ಕೂಲಿ ಹೋಯ್ತು ಮಾನ ಹೋಯ್ತು ಆದರೆ ಈ ದೇಹದ ಯೌವನ ಒಂದು ಉಳಿದಿತ್ತು. ಆಗ ನನಗೆ ಈ ರೂಪ ಯೌವನ ಇರುವ ವರೆಗೆ ಪ್ರಪಂಚದಲ್ಲಿ ಬಾಳಬಹುದೆಂದು ಗೊತ್ತಾಯಿತು.

ರವಿ— ದೇಹವನ್ನು ಮಾರಿಕೊಂಡು.

ರಂಗಮ್ಮ— ಹೌದು ರವಿಣ್ಣನವರೇ ನಾಯಿಯ ಜನ್ಮವಾದರೂ ಬೇಕು. ಆದರೆ ಬೇಡ. ಏಳೇಳು ಜನ್ಮಕ್ಕೂ ಈ ಸೂಳೆ ಜನ್ಮ ಬೇಡ

ರಾಜು— ತಾವು ಇಂತಹವರೆಂದು ನನಗೆ ಗೊತ್ತಾಗಲಿಲ್ಲ ಈಗ ಅರ್ಥವಾಯ್ತು ನಿಮ್ಮ ಇತಿಹಾಸ. ನಾವು ನೆನಸಿ ಬಂದದ್ದು ಒಂದು ಇಲ್ಲಿ ನಡೆದದ್ದೇ ಒಂದು ತಾಯಿ, ಒಂದು ಒಂದು ಮಾತನ್ನು ಹೇಳುತ್ತೇನೆ ಕೇಳುತ್ತೀರಾ?

ರಂಗಮ್ಮ— ಹೇಳಿ ಅದಕ್ಕೇನು?

ರಾಜು— ಈ ಜೀವನ ಇಂದಿಗೆ ಕೊನೆಗಾಣಿಸಲು ಸಾಧ್ಯವಿಲ್ಲವೇ?

ರಂಗಮ್ಮ— ನೀವು ಹೇಳಿದಂತೆ ಮಾಡಬಹುದು. ಆದರೆ....

ರವಿ— ಆದರೆ ಗೇಣು ಹೊಟ್ಟೆ ಏನು ಮಾಡಲಿ ಅಂತೀರೋ

ರಂಗಮ್ಮ— ಅಹುದು ಸ್ವಾಮಿ. ಈ ಜೀವನ ಬಿಟ್ಟರೆ ನನಗೆ ಬೇರೆ ಮಾರ್ಗವೇ ಇಲ್ಲ.

ರಾಜು— ನೀವೇನೋ ಬಾಳಿದಿರಿ. ಆದರೆ ನಿಮ್ಮ ಮಗಳ ಬಾಳನ್ನೇಕೆ ಹಾಳು ಮಾಡುವಿರಿ? ಅವಳೊಬ್ಬಳಾದರೂ ಸುಖವಾಗಿರಲಿ. ಮದ್ವೆ ಮಾಡಿ ಕೊಡಿ.

ರಂಗಮ್ಮ— ಮದ್ವೆ! ನನ್ನ ಮಗಳನ್ನು ಮದ್ವೆಯಾಗಲು ಯಾರು ಬರುತ್ತಾರೆ? ಅದೂ ಅಲ್ಲದೆ ಸೂಳೆಯ ಮಗಳನ್ನು ಮದುವೆಯಾಗಲು ಬರುವರೇ? ಒಂದು ದಿನದ ತೃಪ್ತಿಗಾಗಿ ಬರುವರೇ ವಿನಃ ವಿವಾಹಕ್ಕಲ್ಲ ಸ್ವಾಮಿ.

ರಾಜು— ನೀವು ಮನಸ್ಸು ಮಾಡಿದರೆ ಆಗುತ್ತಾರೆ.

ರಂಗಮ್ಮ— ನಾನು ಮನಸ್ಸು ಮಾಡಿದರೆ ಮದ್ವೆಯಾಗುತ್ತದೆಯೇ?!

ರಾಜು— ನೀವು ಒಪ್ಪುವುದಾದರೆ ನಾನೇ ವಿವಾಹವಾಗುತ್ತೇನೆ.

ರಂಗಮ್ಮ— ಏನೆಂದಿರಿ ನೀವೇ ವಿವಾಹವಾಗುತ್ತೀರಾ!!

ರವಿ— ಏನಯ್ಯ ರಾಜು, ಏನು ಮಾತನಾಡುತ್ತಿದ್ದೀಯೊ, ಸೂಳೆಯ ಮಗಳೊಂದಿಗೆ ಸಂಬಂಧವೆ?

ರವಿ— ಹಾಗಾದರೇನು ರವಿ?

REGD. No. B. G. 176
LICENCE No. 31
Licensed to Post without Prepayment

ರಂಗಮ್ಮ— ನೀವು ಹೇಳುವುದು ಸತ್ಯವೇ?

ರಾಜು— ಹೌದು.

ರಂಗಮ್ಮ— ಈ ರೀತಿಯಾಗಿ ಮಾಡಿದರೆ ನಿಮ್ಮ ಪಾದ ಪೂಜೆ ಮಾಡುತ್ತಾ ಕುಳಿತುಕೊಳ್ಳುತ್ತೇನೆ.

ರವಿ— ಲೋ ರಾಜು ನಿನಗೆ ಹುಚ್ಚು ಹಿಡಿಯಿತೇನೋ?

ರಾಜು— ಇಲ್ಲ ರವಿ ಇವರ ಇತಿಹಾಸ ಕೇಳಿದ ಮೇಲೆ ನನ್ನ ಮನಸ್ಸೇ ಬದಲಾಯಿಸಿತು. ಇವರ ಬಾಳನ್ನು ಪವಿತ್ರವಾಗಿ ಮಾಡಬೇಕೆಂದು ಮನಸ್ಸಾಯಿತು. ಗಾಂಧಿ ಟೊಪ್ಪಿಯನ್ನು ತೊಟ್ಟ ಮೇಲೆ ಇಂತಹವರ ಪರಿಸ್ಥಿತಿಯನ್ನು ಸುಧಾರಿಸಬೇಕು.

ರವಿ— ಇದು ನಿನ್ನ ಕರ್ಮ ಇರಬೇಕು.

ರಾಜು— ಕರ್ಮವಲ್ಲ ರವಿ. ಇದೊಂದು ಮಹತ್ ಕಾರ್ಯ ಸಾಧನೆ. ಪಾರ್ವತಿ ಕನಸ್ಸನ್ನು ನನಸಾಗುವಂತೆ ಮಾಡಬೇಕು.

ರವಿ— ಅವರ ಜಾತಿ ನೋಡಿದರೆ ....

ರಾಜು— ಹೂಂ! ಜಾತಿ. ಪ್ರಪಂಚದಲ್ಲಿರುವುದು ಎರಡು ಜಾತಿ. ಒಂದು ಗಂಡು, ಇನ್ನೊಂದು ಹೆಣ್ಣು. ಇವರನ್ನು ನಾನು ಕಾಪಾಡುತ್ತೇನೆ.

ರವಿ— ಮತ್ತೊಮ್ಮೆ ಆಲೋಚಿಸಿ ಕಾರ್ಯಸಾಧನೆ ಮಾಡು. ದುಡುಕಬೇಡ ರಾಜು. ಹಳ್ಳಕ್ಕೆ ಬಿದ್ದ ಮೇಲೆ ಎತ್ತುವವರಾರೂ ಇಲ್ಲ.

ರಾಜು— ನನ್ನ ಗುರಿಯನ್ನು ತಪ್ಪಿಸಲು ಸಾಧ್ಯವಿಲ್ಲ.

ರಂಗಮ್ಮ— ಈ ಜನ್ಮದಲ್ಲಿಯೇ ನಿಮ್ಮನ್ನು ಮರೆಯುವುದಿಲ್ಲ. ಪಾರೂ ಇವರಿಗೆ ನಮಸ್ಕರಿಸು. (ನಮಸ್ಕರಿಸುವಳು)

ರಾಜು— (ಕೈ ಹಿಡಿದು ಎಳಿಸುತ್ತಾ) ಮೇಲಕ್ಕೇಳು ಪಾರೂ. ಇನ್ನು ಮೇಲೆ ಇಂತಹ ಜೀವನವೇ ಬೇಡ

ಪಾರ್ವತಿ— ಕಳೆದುಕೊಂಡ ಹಣವನ್ನು ಮರಳಿ ಪಡೆಯಬಹುದು. ಹಾಳು ಮಾಡಿಕೊಂಡ ಆರೋಗ್ಯವನ್ನು ಸರಿಹೊಂದಿಸಬಹುದು. ಶೀಲವನ್ನು ಕೆಡಿಸಿಕೊಂಡ ಮೇಲೆ ಮರಳಿ ಪಡೆಯಲು ಸಾಧ್ಯವಿಲ್ಲ. ಆದರೆ ನನ್ನ ಶೀಲವು ಕೆಡುವುದಕ್ಕಿಂತ ಮುಂಚೆ ಸಮುದ್ರವನ್ನು ದಾಟಿದೆ. ನನ್ನ ಎಲ್ಲಾ ಕೀರ್ತಿಯು ಇವರಿಗೆ ಸೇರಬೇಕು. ನಾನು ಪತಿವ್ರತೆಯಾಗಿ ಬಾಳಬೇಕೆಂದು ಕನಸು ಕಾಣುತ್ತಿದ್ದುದು ಈಗ ನನಸಾಯಿತು.

ರವಿ— ಪರವಾಯಿಲ್ಲ ಚೆನ್ನಾಗಿಯೇ ತಿಳಿದುಕೊಂಡಿದ್ದಾರೆ.

ರಾಜು— ಪಾರೂ (ಎಂದು ಆಲಿಂಗಿಸಿಕೊಳ್ಳುವನು)

ರವಿ— ಲೋ ರಾಜು, ನಾವು ಇನ್ನು ಇಲ್ಲಿಯೇ ಇದ್ದೇವೆ.

(ಎಲ್ಲರೂ ನಗುವರು. ತೆರೆ ಸರಿಯುವುದು.)

— ಸಂಪೂರ್ಣ —

**ಸೂಚನೆ:—** ಈ ನಾಟಕವನ್ನು ಅಭಿನಯಿಸುವ ಇಚ್ಛೆಯುಳ್ಳವರು ನಾಟಕ ಕರ್ತರ ಅನುಮತಿ ಪಡೆಯ ಬೇಕು. ಇವರಿಗೆ ಬರೆಯಿರಿ— ಪಿ. ಜಿ. ಪರಮೇಶ್ವರಪ್ಪ S/o ಪಿ. ಗುರುಶಾಂತಪ್ಪ ಅಂಡ್ ಸನ್ಸ್ ಜವಳಿ ವ್ಯಾಪಾರಿಗಳು ಸಂತೆಪೇಟೆ. ಚಿತ್ರದುರ್ಗ. (ಮೈಸೂರು ಸ್ಟೇಟ್)

ಗೇಹರಾಜ್ಯದಲ್ಲಿ

# ನವ ವರ್ಷದ ನವ ಸಂದೇಶ

'ಲೇ, ಇಲ್ಲಿ ಬಾರೇ, ನವ ವರ್ಷದ ಸಂದೇಶವೊಂದಿದೆ, ಕೇಳೇ.'

'ಯಾವೂರದ್ದೋ ಸಂದೇಶ?'

'ಮತ್ತಾವೂರದ್ದೇ? ಕೆಂಪು ಚೀನಾದ್ದು".

"ಓಹೋ, ಏನಂತೆ? ಮುಂದಿನ ವರ್ಷ ಅಸಾಮವನ್ನೇ ನುಂಗಿ ಬಿಡುತ್ತೇವೆಂತ ತಾನೆ?"

'ನೋಡು, ಹೇಳಿದ ಕೂಡ್ಲೆ ಸುರುವಾಯ್ತು ಕೊಂಕು. ಅದೇನು ಚೀನೀಯರಿಗೆ ನುಂಗೋದೊಂದೇ ಗೊತ್ತಿರೋದೆ? ಅಥವಾ ಅವರು ಮಾತ್ರಾ ನುಂಗೋದೆ?"

"ನೋಡಿ, ನೀವು ಹೀಗೇಕೆ ಮಾತಾಡ್ತೀರಿ ಇಂದೂಂತ!"

"ಏನು ಏನೆಂದೆ?"

"ಮೊನ್ನೆ ನೀವೇ ಅಂದಿದ್ರಲ್ಲ, ಸಾಮ್ರಾಜ್ಯದಾಹದಿಂದ ಕೆಂಪು ಚೀನಾ ಭಾರತ ನುಂಗಲು ಹವಣಿಸಿತೂಂತ"

"ಸರಿ ಸರಿ. ಅಲ್ಲವೇ ಮತ್ತೆ?"

"ಮತ್ತೆ ಈಗ ಹೇಳ್ತೀರಿ, ಅವರಿಗೆ ನುಂಗೋದೊಂದೇ ಕೆಲ್ಸವೇಂತ ಅಲ್ಲ, ನಾನು ಕೇಳ್ತೀನಿ, ಅವರಿಗೆ ಮತ್ತೇನು ಕೆಲ್ಸಾಂತ."

'ನೋಡು, ನೀನು ಉಗುರು ತೋರ್‍ಸಿದ್ರೆ ಬೆರಳು ನುಂಗುತ್ತಿ, ಬೆರಳು ತೋರ್‍ಸಿದ್ರೆ ಕೈನೇ ನುಂಗುತ್ತಿ." ಇದಕ್ಕೆ ನಾನೇನ್ಮಾಡ್ಲಿ?

"ಅಲ್ಲ ನೀವು ಒಗಟು ನುಡೀಬೇಡಿ, ಇದ್ದದ್ದನ್ನ ಇದ್ದಹಾಗೆ ಹೇಳೀಂದ್ರೆ ಹೀಗೆ ಲ್ಲಾ ಬಳ್ಸಿ ಮಾತು ಯಾಕೇಂತ?

"ನೋಡು, ಭಾರತದ ನೇಫಾ ಲಡಖ ನುಂಗಿದ್ರು ನಿಜಾನೇ. ಆದ್ರೆ ನುಂಗ್ಬೇಕಾದ್ರೆ ಅವರೆಷ್ಟು ಹೊತ್ತು ಅಡುಗೆ ಮಾಡ್ಬೇಕಾಯ್ತು ಬಲ್ಲೆಯಾ? ಆದೂ ಅಲ್ದೆ ಈಗ ನುಂಗಿದ ನೇಫಾ ಕಾರುತ್ತಾ ಇದ್ದಾರೆ, ಮತ್ತೆ ಲಡಖವನ್ನೂ..."

'ಹೌದೇನ್ರಿ? ಲಡಖವನ್ನೂ ಬಿಟ್ಟು ಹೋಗ್ತಾರಂತೆಯಾ? ಪಾಪ, ಇಷ್ಟು ಹೊತ್ತಿನ್ನಂತ್ರವಾದ್ರೂ ತಾವು ಮಾಡಿದ್ದು ತಪ್ಪೂಂತ ಅವರಿಗೆ ಗೊತ್ತಾಯ್ತಲ್ಲ...."

"ಏ, ಅವಸರ ಮಾಡ್ಬೇಡ. ಅವರೆಲ್ಲಿ ಲಡಖ ಬಿಟ್ಟಿದ್ದಾರೆ?"

"ಮತ್ತೆ ನೀವೀಗ ಹಾಗಂದ್ರಲ್ಲ!"

'ಏನಂದೆನೇ ನಾನು? ನಾಳೆ ಲಡಾಖವನ್ನೂ ಹಾಗೇ ಕಾರ್ಬೇಕಾದೀತೂಂತ ಅದ್ನೇ ಹೊರ್‍ತು ..."

"ಓ, ಅಷ್ಟೆಯೆ? ಇದೇ ತಾನೇ ನಿಮ್ಮ ನವ ವರ್ಷದ ಸಂದೇಹ?"

"ಸಂದೇಹ ಅಲ್ಲ ಕಣೇ ಸಂದೇಶ, ಸಂದೇಶ-ಸಂದೇಶ ಅಂದ್ರೆ ಕಮ್ಯೂನಿಸ್ಟ್ ದೇಶ"

"ಅದಾವ ದೇಶವೋ?"

"ಅದೇ ನಮ್ಮ ದೇಶ. ಅಂದ್ರೆ, ಭಾರತ ದೇಶ."

ಉತ್ಪಾದನೆಯ ವಿಷಯಗಳಿಗಲ್ಲದೆ
ಅನ್ಯಥಾ ಸಾಲಮಾಡದಿರೋಣ.
ಮದುವೆ ಉಪನಯನಾದಿ
ಸಾಮಾಜಿಕ ಸಮಾರಂಭಗಳ
ವೆಚ್ಚವನ್ನು ನಿಲ್ಲಿಸೋಣ.
ಸಬಲ ಮತ್ತು ಶಕ್ತಿಯುತ
ರಾಷ್ಟ್ರವನ್ನು ಕಟ್ಟುವ
ಹೊಸ ಅಭ್ಯಾಸಗಳನ್ನು
ಬೆಳೆಸುವ;
ಉಳಿಸುವ
ರಾಷ್ಟ್ರರಕ್ಷಣೆಗಾಗಿ
ಅರ್ಪಿಸುವ

ಸಿಂಡಿಕೇಟ್ ಬ್ಯಾಂಕ್

● ಶಾಂತಿ ಸಮಯದಂತೆ ಸಮರ ಕಾಲದಲ್ಲಿಯೂ ರಾಷ್ಟ್ರಸೇವೆಯ ಧ್ಯೇಯದಲ್ಲಿ ●

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

"ಹ್ಞೂಂ....ಏನಂತೆ? ಮುಂದುವರ್ಸಿ".

"ಅದೇ, ನವ ವರ್ಷದಲ್ಲಿ ನಮ್ಮ ಭಾರತ ದೇಶವೊಂದು ಸಂದೇಶವಾಗಬೇಕಾಗ್ತದೇಂತ...."

"ಏನು ಚೀನಾದ ನಿಮ್ಮ ಲಾಯರು ಹೇಳಿಕಳ್ಸಿದ್ರೆ?"

"ಛೆ, ಛೆ, ಏನಿದು ಮಾತು? ಯಾರು ಲಾಯರು!" ಯಾರ ಲಾಯರು?"

'ಅದೇ ಕೆಂಪಿನ ಲಾಯರು ಇದ್ದಾನಲ್ಲ ಚಪ್ಪಟೆ ಮೂಗಿನವ....ಅವನೇ."

"ಓ, ಚೌ ಎನ್ ಲಾಯ್ ತಾನೇ ನೀನನ್ನೋದು? ಅವ್ನು ಮಾಡ್ಸಿದ ಆಕ್ರಮಣದಿಂದ ನಮ್ಮೆಲ್ಲರಿಗೆ ನವ್ಯನಕ್ಕೆ ಸಂದೇಶ ಬಂದು ಮುಟ್ಟಿದೆ. ಅದನ್ನೇ ಹೇಳೋಣಾಂತ ನಿನ್ನನ್ನು ಕೂಗಿದೆ."

"ಅಯ್ತಪ್ಪ ಹೇಳ್ಬಿಡಿ...."

"ಹೊಸ್ವರ್ಷ ನಾವೂ ನಮ್ದೇಶಾನೂ ಹೊಸ್ತಾಗಬೇಕು. ಸ್ವಾತಂತ್ರ್ಯ ಉಳ್ಸಿಕೊಳ್ಳೋಕೆ ಶಕ್ತಿ ಕೂಡಿಸ್ಬೇಕು; ನಮ್ಮನ್ನ ಉಣ್ಣೋಕೆ ಹೆಚ್ಚು ಬೆಳೆಸ್ಬೇಕು; ದೇಶಕ್ಕಾಗಿ ಹೆಚ್ಚು ಕೂಡಿಸ್ಬೇಕು ನಮ್ಮ ದೇಶ ನಮ್ಮ ಮಾತೆ ಪ್ರಾಣಕ್ಕಿಂತ ಮೇಲೂಂತ...."

"ಹಾಡಿ ಮೆರವಣಿಗೆ ತೆಗೀಬೇಕೂಂತ ಅಲ್ವೆ...?" ಪಾಪ ಹೋರಾಡ್ಲಿಕ್ಕೆ ಆಗದವರು ಮತ್ತೇನು ತಾನೇ ಮಾಡಿಯಾರು?"

"ಹಾಗಲ್ಲವೇ; ನಾನು ಹೇಳೋದನ್ನ ಪೂರ್ಣ ಕೇಳ್ಕೊ. '............'

"...ಹಾಗೆ ತಿಳ್ಕೊಂಡು ದೇಶ ಸೇವೆಗೆ ಸನ್ನದ್ಧರಾಗಬೇಕು ಎಂಬುದೇ ಆ ಸಂದೇಶ."

"ಅಲ್ಲ, ಆ ಲಂಕಿಣಿ ಲಾಯರನ್ನು ಕಾಣಲು ಹೋಗಿದ್ಲು ಅಂತ ನೀವು ಅಂದಿದ್ರಿ. ಅವಳೇನು ಮಾಡಿದಳು?"

"ಲಂಕಿಣಿ?...ಯಾರು...ಓ ಅವಳು ಸಿರಿಮಾವೋ...."

"ಸಿಹಿಮಾವೊ ಕಹಿ ಮಾವೋ ಯಾರಿಗೆ ಗೊತ್ತು?"

"ಪ್ರಾಯಃ ಅದು ಕಹಿಮಾವೇ ಆದೀತು. ಸಿಹಿ ಎಲ್ಲಿ ಆಗುತ್ತೆ?

"ಅಂದ್ರೆ ಅದ್ರಿಂದ್ಲೂ ಪ್ರಯೋಜನಾ ಇಲ್ಲಾಂತ ಆಲ್ವೆ? ಮತ್ತೇನು ಮಾಡೋದು? ನಮ್ಮನೇ ನಮ್ಗೆ ಬೇಕಾದ್ರೆ ಜೀವವಿರುವ ತನಕ ಹೋರಾಡ್ಲೇ ಬೇಕಲ್ಲ?

"ಚೆನ್ನಿ ...."

"ಏನು...?"

"ಏನಿಲ್ಲ, ನಿನ್ನಂತಹ ತಾಯಂದಿರು ಭಾರತದಲ್ಲಿ ಇದ್ದಾರೆಂತ್ಲೇ ಅದು ಇನ್ನೂ ಉಳ್ದಿದೆ"

"ಸಾಕು ಬಿಡ್ರೀಂದ್ರೆ, ನಿಮ್ದು ಯಾವಾಗ್ಲೂ ಹೀಗೆ"

"ಇನ್ನು, ನವ ವರ್ಷದ ನವ ಸಂದೇಶ ತಿಳೀತು ತಾನೇ. ಇನ್ನು ಇಲ್ಲಿ ಹತ್ರ ಬಾ"

"ಅಲ್ಲ ಮಗು ಅಳ್ತಾ ಇದೆ. ಇಲ್ಲಿ ನಿಮ್ಗೆ...."

"ಅಳಲಿ ಬಿಡೇ ಇಡಿ ಭಾರತವೇ ಅಳುತ್ತಿದಂತೆ ನಮ್ಮಗು ಏನು ವಿಶೇಷ?"

"ಹೌದು, ಇಡಿ ದೇಶ ಅಳುತ್ತಿರುವಾಗ ನೀವು ಮಾತ್ರ ನಗ್ತಾ ಇರ್ಬೇಕು ಅಲ್ವಾ? ಚೆನ್ನಾಯ್ತು."

ಕ್ಷಮಿಸು ಚೆನ್ನಿ ತಪ್ಪಿದೆ. ಹೋಗು ಸಮಾಧಾನ ಮಾಡು.''

"ಹೂಂ...."

— ಗೋರಾ.

Edited Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 19

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 17-1-1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೧೯

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿ
ಉದಾ
ಸಹಾಯ
ಸಲ್ಲಿಸಿ

### ನಮ್ಮ ವೀರ ಪ್ರತಿಜ್ಞೆ

## ನಾವೆಲ್ಲರು ಸೈನಿಕರೇ ಇರಲಾವುದೆ ಉಡುಪು

ನಾವೆಲ್ಲರೂ ಪ್ರಬಲ ವೈರಿಯೊಬ್ಬನ ಮೋಸದಿಂದ ಆಕ್ರಮಿಸಿಕೊಂಡಿರುವ ನಮ್ಮ ಪವಿತ್ರ ಮಾತೃಭೂಮಿಯ ಗಡಿನೆಲವನ್ನು ಮರಳಿ ಪಡೆಯುವ ವರೆಗೆ ವಿಶ್ರಮಿಸುವದಿಲ್ಲವೆಂದು ವೀರ ಪ್ರತಿಜ್ಞೆಯನ್ನು ಮಾಡಿದ್ದೇವೆ. ಈ ಪ್ರತಿಜ್ಞೆಗೆ ತಕ್ಕಂತೆ ಶಕ್ತಿಮೀರಿ ಪ್ರಯತ್ನಗಳನ್ನು ಮಾಡುತ್ತಲಿದ್ದೇವೆ. ಧರ್ಮಕ್ಕೆ ಜಯವೆಂಬ ದಿವ್ಯಮಂತ್ರ ನಮಗೆ ಸ್ಫೂರ್ತಿಯನ್ನೂ, ಶಕ್ತಿಯನ್ನೂ ನೀಡುತ್ತಿದೆ. ಮಿತ್ರ ರಾಷ್ಟ್ರಗಳ ಸ್ವಯಂಪ್ರೇರಿತ ಸಹಾಯ ನಮಗೆ ಉತ್ಸಾಹವನ್ನೂ, ಹುಮ್ಮಸ್ಸನ್ನೂ ಉಂಟು ಮಾಡುತ್ತಿದೆ. ದೇಶದಾದ್ಯಂತ ಭಾರತದ ಆಬಾಲವೃದ್ಧರೂ, ಬಡವ ಬಲ್ಲಿದರೂ, ಸ್ತ್ರೀ ಪುರುಷರೂ ತೋರುತ್ತಿರುವ ತ್ಯಾಗ, ಬಲಿದಾನ, ರಾಷ್ಟ್ರಪ್ರೇಮಗಳು ನಮಗೆ ವಿಜಯದಲ್ಲಿ ವಿಶ್ವಾಸವನ್ನು ಹುಟ್ಟಿಸಿವೆ. ಎಲ್ಲಕ್ಕೂ ಮಿಗಿಲಾಗಿ, ಕೊರೆಯುತ್ತಿರುವ ಚಳಿಯಲ್ಲಿ, ಹಿಮದಲ್ಲಿ, ಗಿರಿ, ಕಂದರ, ಕಣಿವೆಗಳಲ್ಲಿ ತಮಗಿಂತಲೂ ಸಂಖ್ಯೆಯಲ್ಲಿ, ಶಸ್ತ್ರಾಸ್ತ್ರಗಳಲ್ಲಿ, ಸಲಕರಣೆ ಸಜ್ಜಿಕೆಗಳಲ್ಲಿ ಎಷ್ಟೋ ಪಾಲು ಮಿಗಿಲೆನಿಸಿ ಬಂದ ವೈರಿಯೊಡನೆ ಜಗತ್ತೇ ಬೆರಗಾಗಿ ಬೆರಳು ಕಚ್ಚುವಂತೆ ಹೋರಾಡಿದ ನಮ್ಮ ವೀರ ಯೋಧರ ಶೌರ್ಯ ಸಾಹಸಗಳು ಯಾರಿಂದಲೂ ನಮ್ಮ ಸ್ವಾತಂತ್ರ್ಯಹರಣ ಸಾಧ್ಯವಿಲ್ಲವೆಂಬ ಭರವಸೆಯನ್ನು ನಮಗೆ ನೀಡಿವೆ.

ಇದೊ ರಕ್ತದ ಕಾಣಿಕೆಯಿದೊ
ಶ್ರಮ ಸ್ವೇದದ ಮುಡಿಪು!
ನಾವೆಲ್ಲರು ಸೈನಿಕರೇ
ಇರಲಾವುದೆ ಉಡುಪು!

ಎಂದು ಕವಿ ಕೆರಳಿ ಉದ್ಘೋಷಿಸಿರುವಂತೆ ಈ ವಿಜಯ ನಮ್ಮ ಕರಗತವಾಗುವ ಮುನ್ನ ನಮ್ಮಿಂದ ಶ್ರಮದ, ಬೆವರಿನ, ರಕ್ತದ ಕಾಣಿಕೆಯನ್ನು ಬೇಡುತ್ತಿದೆ. ಗಡಿಗಳಲ್ಲಿ ಕಡುಗಲಿಗಳಾಗಿ ಕಾದುತ್ತಲಿರುವ ಯೋಧರು ಮಾತ್ರ ಸೈನಿಕರಲ್ಲ, ಹೊಲಗದ್ದೆಗಳಲ್ಲಿ, ಗಣಿ ಗಿರಣಿಗಳಲ್ಲಿ, ಕಾರ್ಯಾಲಯ ಯಂತ್ರಾಲಯಗಳಲ್ಲಿ ಮತಮಂದಿರಗಳಲ್ಲಿ, ಶಾಲೆ ಕಾಲೇಜುಗಳಲ್ಲಿ ಕಾರ್ಯನಿರತನಾಗಿರುವ ಪ್ರತಿಯೊಬ್ಬ ಭಾರತೀಯನೂ ಶಸ್ತ್ರವಿಲ್ಲದ ಸೈನಿಕನೆಂಬ ನಾಡ ನಿರ್ಧಾರವನ್ನು ನೀಡುತ್ತಿದೆ.

ದೇಶದಲ್ಲಿ ಉತ್ಸಾಹ ಉಕ್ಕಿ ಬಂದಿದೆ. ದೇಶಭಕ್ತಿಗೆ ಮಹಾಪೂರ ಬಂದಿದೆ. ಭಿನ್ನಾಭಿಪ್ರಾಯಗಳು ಬಯಲಾಗಿವೆ. ಭಾವೈಕ್ಯತೆ ಬಲಗೊಂಡಿದೆ. ರಾಷ್ಟ್ರಕ್ಕೆ ರಾಷ್ಟ್ರವೇ ಒಬ್ಬ ವ್ಯಕ್ತಿಯಂತೆ ಎದ್ದು ಸಡ್ಡುಹೊಡೆದು ನಿಂತಿದೆ. ಈಗ ಈ ಉತ್ಸಾಹ, ಆವೇಶ, ಹುರುಪು, ಹುಮ್ಮಸ್ಸು ಉತ್ಪಾದನೆಯಲ್ಲಿ ವಿನಿಯೋಗವಾಗಬೇಕು. ಯುದ್ಧದಲ್ಲಿ ವಿಜಯ ಸಂಪಾದಿಸಲು ಸೈನಿಕರ, ಶಸ್ತ್ರಾಸ್ತ್ರಗಳ ಬಲ ಎಷ್ಟು ಅಗತ್ಯವೋ ಆರ್ಥಿಕ ಭದ್ರತೆಯು ಉತ್ಪತ್ತಿಯ, ಹುಟ್ಟುವಳಿಯ ಬಲವೂ ಅಷ್ಟೇ ಅಗತ್ಯ. ರಕ್ಷಣಾ ಪ್ರಯತ್ನಗಳಿಗೆ ಉತ್ಪಾದನಾ ಪ್ರಯತ್ನಗಳೇ ಮೂಲಾಧಾರ; ಸೈನಿಕ ಸಿದ್ಧತೆಗೆ ಸಾಂಪತ್ತಿಕ ಭದ್ರತೆಯೇ ಬುನಾದಿ.

ಆದುದರಿಂದ, ದೇಶದಾದ್ಯಂತ ದುಡಿಮೆ ಇಮ್ಮಡಿಯಾಗಬೇಕು. ಯಾರು ಏನನ್ನೇ ಮಾಡುತ್ತಲಿರಲಿ, ಅದನ್ನು ಇನ್ನಷ್ಟು ಶ್ರದ್ಧೆಯಿಂದ, ಶ್ರಮದಿಂದ ಹೆಚ್ಚು ಸಮಯದವರೆಗೆ ಮಾಡಿ ಈ ದೇಶದ ಒಟ್ಟು ಸಂಪತ್ತು ಎಲ್ಲ ವಿಧದಲ್ಲಿಯೂ ಅಧಿಕವಾಗುವಂತೆ ಮಾಡಬೇಕು. ಪ್ರತಿದಿನ ಒಂದೊಂದು ತಾಸು, ಪ್ರತಿ ತಿಂಗಳು ಒಂದೊಂದು ದಿನ ಹೆಚ್ಚು ದುಡಿದು ಅದರಿಂದ ಒದಗುವ ಹೆಚ್ಚಿನ ಗಳಿಕೆಯನ್ನು ರಾಷ್ಟ್ರರಕ್ಷಣೆಗೆ ಅರ್ಪಿಸಬೇಕು. ಇದುವೇ ದೇಶಪ್ರೇಮಿಯ ಧರ್ಮ, ಕರ್ತವ್ಯಕರ್ಮ ಈಗ! "ಗಣಿ ಗಿರಣಿಯು ರಣಾಂಗಣಿಸಲಿ ರಣಸಿದ್ಧತೆಯಿಂ; ಉತ್ಪತ್ತಿಯು ಉಕ್ಕೇರಲಿ ಹೊಲಗದ್ದೆಗಳಿಂದ!"

### ಪಂಚಾಯತಗಳ ಪಾತ್ರ

ಈ ಪ್ರಸಂಗದಲ್ಲಿ ಕರ್ತವ್ಯವೇನು? ಬಹು ದೊಡ್ಡ ಪಾತ್ರವನ್ನು ಪಂಚಾಯತಗಳು ವಹಿಸಬೇಕಾಗಿದೆ. ಭಾರತ ಸರಕಾರವು ಗ್ರಾಮ ಪಂಚಾಯತಿಗಳ ಮುಖಾಂತರ ಗ್ರಾಮವಾಸಿಗಳೆಲ್ಲರ ಸಹಾಯ ಸಹಕಾರಗಳನ್ನು ಸಂರಕ್ಷಣಾ ಕಾರ್ಯಗಳಿಗಾಗಿ ಕ್ರೋಢಿಸುವ ವಿಶೇಷ ಯೋಜನೆಯೊಂದನ್ನು ಸಿದ್ಧಗೊಳಿಸಿದೆ. ಈ ಯೋಜನೆಯ ಮುಖ್ಯಾಂಶಗಳಿವು:—

1) ಪ್ರತಿಯೊಂದು ಪಂಚಾಯತಿಯೂ 'ಗ್ರಾಮ ಸ್ವಯಂಸೇವಕ ದಳ'ವೊಂದನ್ನು ಸಂಘಟಿಸುವುದು.

2) ಪ್ರತಿಯೊಂದು 'ಗ್ರಾಮ ಸ್ವಯಂಸೇವಕ ದಳ'ದ ಕರ್ತವ್ಯಗಳು ಮೂರು: ಉತ್ಪಾದನೆ, ಸಾಮೂಹಿಕ ಶಿಕ್ಷಣ ಮತ್ತು ಗ್ರಾಮರಕ್ಷಣೆ

3) ಜನವರಿ 26, 1963ರಂದು ಗಣರಾಜ್ಯೋತ್ಸವ ದಿನ ಭಾರತದ ಪ್ರಧಾನ ಮಂತ್ರಿಗಳು ಈ ಯೋಜನೆಯನ್ನು ಉದ್ಘಾಟಿಸುವರು.

### ಸಂರಕ್ಷಣಾ ಶ್ರಮನಿಧಿ

ಗ್ರಾಮದ ಸಶಕ್ತ ಸ್ತ್ರೀ ಪುರುಷರೆಲ್ಲ 'ಗ್ರಾಮ ಸ್ವಯಂಸೇವಕ ದಳ'ಕ್ಕೆ ಸೇರಬೇಕು. ಅವರಲ್ಲಿ ಪ್ರತಿಯೊಬ್ಬರೂ ಪ್ರತಿ ತಿಂಗಳೂ ಒಂದು ದಿನದ ಶ್ರಮವನ್ನಾಗಲಿ ಇಲ್ಲವೆ ಒಂದು ದಿನದ ಗಳಿಕೆಯನ್ನಾಗಲಿ ಗ್ರಾಮಪಂಚಾಯತಿಗೆ ಅರ್ಪಿಸಬೇಕು. ಗ್ರಾಮ ಪಂಚಾಯತಿಯು ಹೀಗೆ ಬಂದ ಶ್ರಮ ಮತ್ತು ಹಣದ ಕಾಣಿಕೆಗಳ ಲೆಖ್ಖವನ್ನಿಟ್ಟು ಅವುಗಳ ಸಹಾಯದಿಂದ ಸಾಮೂಹಿಕ ಹಿತದ ಕಾರ್ಯಗಳನ್ನು ಕೈಕೊಳ್ಳಬೇಕು ಇದೇ 'ಸಂರಕ್ಷಣಾ ಶ್ರಮನಿಧಿ'.

'ಸಂರಕ್ಷಣಾ ಶ್ರಮನಿಧಿ'ಯಿಂದ ನಡೆಯಬಹುದಾದ ಸಾಮೂಹಿಕ ಅಭಿವೃದ್ಧಿಯ ಕಾರ್ಯಗಳು ಹಲವಾರು. ಅವುಗಳನ್ನು ತುರ್ತು ಪರಿಸ್ಥಿತಿಗೆ ಅನುಗುಣವಾಗಿ ತ್ವರಿತಗತಿಯಿಂದ ಪೂರ್ಣಗೊಳಿಸಬೇಕು. ಹುಟ್ಟುವಳಿಯನ್ನು ಹೆಚ್ಚಿಸಲು ಸಹಾಯಕವಾಗುವ ಯಾವ ಕಾರ್ಯವನ್ನಾದರೂ ಕೈಕೊಳ್ಳಬಹುದು.

### ಅಧಿಕ ಉತ್ಪಾದನೆ

ಬೇಸಾಯದ ಉತ್ಪತ್ತಿ ಹೊಟ್ಟೆ ಬಟ್ಟೆಗೆ ಮಾತ್ರ ಆಗತ್ಯವಾದುದಲ್ಲ ಅದು ಯುದ್ಧ ಮಾಡುವ ಯೋಧರಿಗೆ ಮದ್ದುಗುಂಡು! ಅದನ್ನು ಎಲ್ಲ ಪ್ರಯತ್ನಗಳಿಂದಲೂ ಹೆಚ್ಚಿಸುವುದೇ ಹೆಗ್ಗುರಿಯಾಗಬೇಕು. ಗ್ರಾಮವಾಸಿಗಳು ತಮ್ಮ ಗ್ರಾಮದ ಹೊಲಗಳ ಹುಟ್ಟುವಳಿಯು ಹೆಚ್ಚುತ್ತಲೇ ಹೋಗುವಂತೆ ಹುಮ್ಮಸ್ಸಿನಿಂದ ದುಡಿಯಬೇಕು. ರಣರಂಗದಲ್ಲಿ ಯುದ್ಧ ಮಾಡುವ ಪ್ರತಿಯೊಬ್ಬ ಸೈನಿಕನ ಹಿಂದೆ ಹೊಲದಲ್ಲಿ ಹತ್ತು ಜನ, ನೂರು ಜನ ದುಡಿಯಬೇಕು. ಹೀಗಾದರೆ ಜಯ ನಿಶ್ಚಿತ ನಮಗೆ.

### ಮಹಿಳೆಯರೂ ಮುಂದೆ

ರಾಷ್ಟ್ರರಕ್ಷಣೆಯ ಈ ಮಹಾ ಪ್ರಯತ್ನದಲ್ಲಿ ಮಹಿಳೆಯರು ಹಿಂದುಳಿದಿಲ್ಲ. ಕೆಲವೆಡೆ ಅವರೇ ಪುರುಷರಿಗಿಂತ ಮುಂದೆ ಹೋಗಿದ್ದಾರೆ! ತಮ್ಮ ಪ್ರೀತಿಯ ಒಡವೆಗಳನ್ನು ಧಾರಾಳವಾಗಿ ಧಾರೆಯೆರೆದಿದ್ದಾರೆ! ಮಂಗಲ ಸೂತ್ರದ ಚಿನ್ನದ ಗುಂಡುಗಳನ್ನು ಮದ್ದು ಗುಂಡುಗಳಿಗಾಗಿ ಇತ್ತ ಮಹಾಸತಿಯರೂ ಉಂಟು! ಅವರಿಗಾಗಿ 'ಗ್ರಾಮ ಸ್ವಯಂಸೇವಕದಳ'ದಲ್ಲಿ ಮಹಿಳಾ ಶಾಖೆಯೊಂದನ್ನು ರಚಿಸಬೇಕು ಅಗ್ಗದ ದರದ ಅಂಗಡಿಗಳನ್ನು ನಡೆಸುವ, ಸೇವಾಸಹಕಾರ ಸಂಘಗಳನ್ನು ನಡೆಸುವ, ಸಣ್ಣ ಉಳಿತಾಯ ಯೋಜನೆಯನ್ನು ಸಫಲಗೊಳಿಸುವ, ಯೋಧರಿಗಾಗಿ ಉಣ್ಣೆಯ ವಸ್ತ್ರಗಳನ್ನು ಹೆಣೆಯುವ, ತಿಂಡಿತಿನಸುಗಳನ್ನು ತಯಾರಿಸುವ ಕಾರ್ಯಗಳನ್ನೂ ಅವರು ಸಮರ್ಪಕವಾಗಿ ಮಾಡಬಲ್ಲರು ಮಾಡಬೇಕು.

### ಸಾಮೂಹಿಕ ಶಿಕ್ಷಣ

ಉತ್ಪಾದನೆಯ ಜತೆಜತೆಗೆ ಸಾಮೂಹಿಕ ಶಿಕ್ಷಣಕ್ಕೂ ಅಷ್ಟೇ ಗಮನ ಕೊಡುವ ಅಗತ್ಯವಿದೆ ಹಾರಿಕೆಯ ಸುದ್ದಿಗಳನ್ನು ಜನ ನಂಬಿ ಹೌಹಾರದಂತೆ ಅವರಿಗೆ ನಿಜಸ್ಥಿತಿಯನ್ನು ದಿನದಿನವೂ ತಿಳಿಸಿ ನೆಮ್ಮದಿಯನ್ನು ನೀಡುವುದು, ಸಹಕಾರೀ ಸಂಘಗಳಿಗೆ ಹೆಚ್ಚು ಸದಸ್ಯರನ್ನು ಸೇರಿಸುವುದು, ಮಾರುಕಟ್ಟೆಗಳ ಬಗ್ಗೆ, ಬೇಸಾಯದ ಹೊಸ ವಿಧಾನಗಳ ಬಗ್ಗೆ, ಸರಕಾರದ ಯೋಜನೆಗಳ ಬಗ್ಗೆ ತಿಳುವಳಿಕೆ ಕೊಡುವುದು. ಉಳಿತಾಯದ ಮಹತ್ವವನ್ನು ತಿಳಿಸುವುದು —ಹೀಗೆ ಸಲವು ಬಗೆಯಾಗಿ ಸಾಮೂಹಿಕ ಶಿಕ್ಷಣವನ್ನು ಮುಂದುವರಿಸಬೇಕು. ಈ ಕಾರ್ಯದಲ್ಲಿ ಸ್ಥಳೀಯ ಶಾಲಾ ಗುರುಗಳ, ಬಲ್ಲವರ ಸಹಾಯ ತೆಗೆದುಕೊಳ್ಳಬೇಕು

### ಗ್ರಾಮ ರಕ್ಷಣೆ

ಗ್ರಾಮರಕ್ಷಣೆಯೆಂದೊಡನೆ ನಿಮ್ಮ ಗ್ರಾಮದ ವರೆಗೂ ಯುದ್ಧ ಬರುವುದೆಂದು ಅರ್ಥವಲ್ಲ. ಈ ಕೆಳಗಿನ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಅರ್ಥ: ಸಂಚಾರದ ರಕ್ಷಣೆ, ಸೇನೆ ಮತ್ತು ರಕ್ಷಣಾದಳಕ್ಕೆ ಅಧಿಕ ಸೇರ್ಪಡೆ ಪ್ರಥಮ ಚಿಕಿತ್ಸೆಯ ಶಿಕ್ಷ

(೩ನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ-ಬಾಳಿಕೆಯನ್ನು-ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು 1
KHIRA

## ಶತಮಾನೋತ್ಸವದ ಸಮಯದಲ್ಲಿ

# ವಿವೇಕವಾಣಿ

ದೇಶವಿಡೀ ಸುತ್ತಾಡಿ, ಪರ್ಯಟನೆಗೈದು ವಿವೇಕಾನಂದರವರು ೧೮೯೨ರ ಡಿಸೆಂಬರದಲ್ಲಿ ಮಾತೆಯ ಪಾದವನ್ನು ಮುಟ್ಟಲು, ಆಕೆಯ ಆಶೀರ್ವಾದ ಪಡೆಯಲು ಕನ್ಯಾಕುಮಾರಿಯತ್ತ ಬಂದರು. ಸಮುದ್ರದ ನಡುವೆ ಸಾಧಾರಣ ಒಂದು ಫರ್ಲಾಂಗು ದೂರದಲ್ಲಿದ್ದ ಬಂಡೆಯೊಂದು ಅವರ ಗಮನವನ್ನು ಸೆಳೆಯಿತು. ಪ್ರವಾಹ, ಅಲೆ, ಮೊಸಳೆ, ಶಾರ್ಕ್, ತಿಮಿಂಗಲ.... ಒಂದಕ್ಕೂ ಭಯಪಡದೆ ಸ್ವಾಮಿ ವಿವೇಕಾನಂದರವರು ಹಾರಿ, ಈಜಾಡಿ ಬಂಡೆಯ ಮೇಲೆ ನಿಂತುಕೊಂಡು ಸಮಗ್ರ ಭಾರತದ ದರ್ಶನ ಪಡೆದರು. ಕವಿವರ ಭಾರತೀಯವರು ಹಾಡಿರುವ

“ಬಡಗಲಲಿ ಹಿಮಗಿರಿಯು, ಪಾಪಾ!
ತೆಂಕಲಲಿ ಬಾಳ್ವ ಕುಮರಿ ಮೊನೆ
ಪಾಪಾ! ಕೆಡೆದಿರುವ ಪೆರ್ಗಡಲು
ಕಂಪಾ!—ಇದರ ಪೂರ್ವಕೂ ಪಶ್ಚಿ
ಮಕೂ, ಪಾಪಾ!....ಭೇದವಿಲ್ಲದ ಹಿಂ
ದೂಸ್ಥಾನ — ಇವನು ದೈವವೆಂದು
ಕೈಮುಗಿಯಮ್ಮ, ಪಾಪಾ!”

ಅರಿತವರು ಸ್ತುತಿಸುವ ಭಾರತದ ದಿವ್ಯ ದರ್ಶನದ ಭಾಗ್ಯ ಅಂದವರಿಗೆ ಲಭಿಸಿತು. ಅವರು ಅಂದೇ ನಿಶ್ಚಯಿಸಿದರು. “ಭಾರತಕ್ಕೆ ಬೇಕಾಗಿರುವದು ಕೊನೆಯ ಪಕ್ಷ ಸಾವಿರ ತರುಣರ—ತರುಣರ ಗಮನಿಸಿರಿ ಪ್ರಾಣಿಗಳದ್ದಲ್ಲ—ಬಲಿದಾನ.” ಅವರಂದೇ ಕಂಕಣ ಕಟ್ಟಿಕೊಂಡರು; ಕಟಿಬದ್ಧರಾದರು. ಅಲ್ಲಿಂದ ಹಿಂತಿರುಗಿದ ಪರಿವ್ರಾಜಕರು ನಂತರ ಅಮೇರಿಕಕ್ಕೆ ತೆರಳಿ ಹಿಂದೂ ಧರ್ಮದ ಪರಿಚಯ ಮಾಡಿಕೊಟ್ಟರು—ಬಾಹ್ಯ ಜಗತ್ತಿಗೆ “ಆಂಗ್ಲೇಯರೊಂದಿಗೆ ಸಮಾನರೆನಿಸಿಕೊಳ್ಳಬೇಕಾದರೆ ಅವರ ಬಳಿಯಿಂದ ಕಲಿತುಕೊಳ್ಳುವಂತೆ ಅವರಿಗೆ ಕಲಿಸಿಕೊಡಬೇಕಾಗಿರುತ್ತದೆ. ಹಲ ಶತಮಾನ ಬಿಡದೆ ಕಲಿಸಿಕೊಟ್ಟರೂ ಮತ್ತೂ ನಮ್ಮ ಬಳಿ ಬೇಕಾದಷ್ಟಿದೆ ಅವರು ಕಲಿತುಕೊಳ್ಳುವಂತಹದು. ಈ ಕೆಲಸ ಆಗಲೇಬೇಕು.” ಇದು ಅವರ ಸ್ಪಷ್ಟ ಅಭಿಪ್ರಾಯವಿತ್ತು.

ಹಾಗೆಂದು ಗರ್ವಪಟ್ಟುಕೊಂಡು ಸುಮ್ಮನೆ ಕುಳಿತುಕೊಂಡರೆ ಕಾರ್ಯ ಮುಂದುವರಿಯುತ್ತದೆಯೇ? ಪ್ರತಿಯೊಂದು ಮಹಾನ್ ಕಾರ್ಯಕ್ಕೂ ತ್ಯಾಗದ ಅವಶ್ಯಕತೆ ಇದೆ; ಪ್ರತಿಯೊಂದನ್ನು ತ್ಯಾಗಮಾಡಬೇಕಾದೀತು. ಇದನ್ನು ವಿವೇಕಾನಂದರವರು ಹಲವಾರು ವರ್ಷಗಳ ಹಿಂದೆ ತಿಳಿಸಿರುವರಾದರೂ ಆ ಮಾತಿನ ಅರ್ಥ ಇಂದು ಸ್ಪಷ್ಟವಾಗುತ್ತದೆ. ಚೈನೀಯರು ಬಂದು ನಮ್ಮ ತಲೆಯ ಮೇಲೆ ಕುಳಿತುಕೊಂಡಿರುವಾಗ ಆ ಆಕ್ರಮಣದ ಅರಿವೂ ಅವರಿಗಾಗಲೇ ಉಂಟಾಗಿತ್ತು. ಬ್ರಿಟಿಷರು ಕಾಲ್ತೆಗೆದೊಡನೆ ನಾವು ಜಾಗ್ರತೆಯಿಂದಿರದೆ ಭ್ರಮೆಗೊಳಗಾಗಿ ಮೈಮರೆತಲ್ಲಿ ಚೈನೀಯರ ಬೂಟುಗಾಲಿನೊದೆತಕ್ಕೆ ತುತ್ತಾಗಬೇಕಾದೀತೆಂಬುದನ್ನು ಅವರು ಅಂದೇ ಅರುಹಿದ್ದರು.

ನಮ್ಮ ದೇಶಕ್ಕೆ ಬೇಕಾಗಿರುವದು ಮಾತಿನ ಮಲ್ಲರ ಸಂಖ್ಯೆಯಲ್ಲ. ನಮ್ಮ ನಾಡಿಗೆ ಬೇಕಾಗಿರುವದು ಉಕ್ಕಿನ ನರ-ನಾಡಿಗಳು, ಕಬ್ಬಿಣದ ಮಾಂಸಖಂಡಗಳು, ಅಲ್ಲದೆ ಯಾವ ಚಾಪಲ್ಯಕ್ಕೂ ತುತ್ತಾಗಲಾರದಂತಹ ಮನಸ್ಸು ಮತ್ತು ಸಮುದ್ರದಾಳಕ್ಕೂ ನುಗ್ಗಿ ಸಾವನ್ನು ಮುಖತಃ ಕಂಡು ಬೆದರದೆ ಒಂದಕ್ಕೆ ಬರುವ ಧೈರ್ಯ. ಇದೇ ಅವರ ಧೀರವಾಣಿ. ಅಳುವದು ಸಾಕು. ಮಾನವರಂತೆ ಎದ್ದು ನಿಲ್ಲಬೇಕಾಗಿರುವದು ಇಂದು. ಮನುಷ್ಯ; ಜನರು ಬೇಕಾಗಿರುವದು ಇಂದು; ಉಳಿದೆಲ್ಲವೂ ತನ್ನಷ್ಟಕ್ಕೆನೇ ಸಿದ್ಧವಾದಾವು, ಆದರೆ ಬಲಶಾಲಿ, ಯೋಧ, ನಂಬಿಗಸ್ಥ, ಪ್ರಾಮಾಣಿಕ ತರುಣಪಡೆ ಬೇಕಾಗಿಯದೆ. ಇಂತಹ ನೂರು ಜನ ಇದ್ದಲ್ಲಿ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಬಲ್ಲೆ.

ಪ್ರಪಂಚದಲ್ಲಿ ಕ್ರಾಂತಿಯುಗ ಬೇಕಾಗಿಯದೆ. ಜಗತ್ತು ಮಗಿಯಲು ಪ್ರಯತ್ನಿಸುತ್ತಿದೆ, ಇತಿಹಾಸವನ್ನು. ಪೂರ್ಣ ಪ್ರಪಂಚಕ್ಕೆ ಗುರುವಾಗಿತ್ತು ಭಾರತವು, ಪುಣ್ಯ ಕ್ಷೇತ್ರವಾಗಿತ್ತು ಈ ನಾಡು ಇಂದೂ ಆ ದೇಶದ ಜನರನ್ನು ಗುಲಾಮರಂತೆ ಕಾಣುವ ಅಜ್ಞಾನಿಗಳೂ ಇದ್ದಾರೆ. ಭಾರತೀಯರೆಂದರೆ ಸುಲಿಯಲ್ಪಟ್ಟಿರುವ ಬಾಳೆಹಣ್ಣುಗಳು. ಅವನ್ನು ಗಬಕ್ಕನೆ ನುಂಗಬಹುದೆಂದು ಇತ್ತ ಇಂದೂ ಅನಾಗರಿಕ ರಕ್ತಪಿಪಾಸಿಗಳು ಧಾವಿಸಿ ಬರುತ್ತಿದ್ದಾರೆ. ಭಾರತೀಯರಿಗಾದರೋ ಭಾರತದ ಕಣಕಣವೂ ಪವಿತ್ರವಿದೆ, ಇಲ್ಲಿಯ ವಾಯು ಪವಿತ್ರವಿದೆ—ಪಾವನ ಪವನ; ಇದು ತೀರ್ಥ ಕ್ಷೇತ್ರವಿದೆ, ಯಾತ್ರಾಕ್ಷೇತ್ರವಿದೆ. ಆದನ್ನು ರಕ್ಷಿಸಲು ಭಾರತೀಯರು ಮುಂದಾಗುವದರಲ್ಲಿ ಸಂದೇಹವೇನು? ಆ ಭಾರತೀಯರನ್ನು ಪೋಷಿಸಲು ದಾರದ ಅವಶ್ಯಕತೆ ಇದೆ. ವಿಧೇಯತೆಯ ಅಭ್ಯಾಸ ಇಲ್ಲದೆ ಅವರೆಷ್ಟರೂ ಮುಂದಕ್ಕೆ ಬಂದಲ್ಲಿ ಗುಜ್ಜು ಗುಂಪಲು ಮಾತ್ರ ಉಂಟಾದೀತು. ಸಂಘಟನೆಗೆ ಅವರು ಒಳಗಾಗಿರಬೇಕು. ಸಂಘವೇ ಶಕ್ತಿ ಇದೆ. ಆದರ ರಹಸ್ಯವು ವಿಧೇಯತೆ ಇದೆ. ಮಾತ್ಸರ್ಯ ಹಾಗೂ ಮೋಸಗಾರಿಕೆಯ ಮೂರಣ ಹೋಮ ಆಗಲೇ ಬೇಕು. ಒಗ್ಗಟ್ಟಿನಿಂದ, ಐಕ್ಯತೆಯಿಂದ ಭುಜಕ್ಕೆ ಭುಜಕೊಟ್ಟು ದುಡಿಯಲು ಕಲಿಯಬೇಕು. ಇದುವೆ ನಮ್ಮ ಪಾವನ ಮಾತೃಭೂಮಿಯ ಆವಶ್ಯಕತೆ ಇದೆ. ಇಲ್ಲದಿದ್ದಲ್ಲಿ ಪುನಃ ಪುನಃ ನಾವು ಕಷ್ಟಕೋಟಲೆಗಳಿಗೊಳಗಾಗಬೇಕಾದೀತು. ನಿರ್ಬಲತೆಯೇ ಕಷ್ಟಕೋಟಲೆಗಳ ಕಾರಣವಿದೆ, ಶಕ್ತಿಯ ಆವಶ್ಯಕತೆ ಇಂದು ಬಹಳ ಇದೆ. ಭಾರತದ ಮಾತ್ರವಲ್ಲ ಜಗತ್ತಿನ ಜಾಡ್ಯಕ್ಕೆ ಔಷಧಿಯಾಗಿ ಇದೆ ಶಕ್ತಿ. ರಾಷ್ಟ್ರದ ನರನಾಡಿಗಳಲ್ಲಿ ಹೊಸ ಶಕ್ತಿಯ ಸಂಚಾರವಾಗಬೇಕು. ಧೈರ್ಯವಂತರಾಗಬೇಕು, ಶಕ್ತಿವಂತರಾಗಬೇಕು.

ನಾವು ಬಲವಂತರಾಗದಿದ್ದರೂ ಬಲಯುಕ್ತ ಬಣದತ್ತ ನಾವು ಬಾಗಿದರೂ ಸಾಕೆಂದು ಕೆಲವು ಮುಖಂಡರೆನಿಸಿಕೊಂಡಿರುವ ಹಿರಿಯ ವ್ಯಕ್ತಿಗಳೂ ಹೇಳುವದುಂಟು. ಈ ಗುಳ್ಳೆಯನ್ನು ಸ್ವಾಮಿ ವಿವೇಕಾನಂದರವರು ಅಂದೇ ಒಡೆದಿರುವರು. ಕ್ರಿಸ್ತೀಯ ರಾಷ್ಟ್ರವಾಗಿರುವ ಅಮೇರಿಕದಲ್ಲೇ ಅವರು ಅಂದು ಸ್ಪಷ್ಟಪಡಿಸಿರುವರು. “ಕ್ರೈಸ್ತ ಮತಾನುಯಾಯಿಗಳೇ ನೀವು ಕ್ರೈಸ್ತರಲ್ಲದವರ ಆತ್ಮವನ್ನು ಉದ್ಧರಿಸಲು ಅಷ್ಟೊಂದು ಕಾತರರಾಗಿರುವಿರಲ್ಲ, ಉಪವಾಸದಿಂದ ನಶಿಸಿ ಹೋಗುತ್ತಿರುವ ಅವರ ಕಾಯವನ್ನು ಕಾಪಾಡುವದಕ್ಕಾಗಿ ಏತಕ್ಕೆ ಪ್ರಯತ್ನಪಡಬಾರದು? ಕ್ರೈಸ್ತರಿಂದ ಕ್ರೈಸ್ತ ದೇಶದಲ್ಲಿ ಕ್ರೈಸ್ತರಲ್ಲದವರಿಗೆ ಸಹಾಯವನ್ನು ಹೊಂದುವದು ಅದೆಷ್ಟು ಕಷ್ಟವೆಂಬುದು ಇದೀಗ ನನಗೆ ಸ್ಪಷ್ಟವಾಗಿ ತಿಳಿಯಿತು.” ಇದನ್ನು ಇಂದಿನ ಮುಖಂಡರೂ ಗಮನಿಸಬೇಕು. ಚೈನಾ ಚಿರತೆಯಿಂದ ತಪ್ಪಿಸಿಕೊಳ್ಳಲು ಆಂಗ್ಲೇಯ ಹಾಗೂ ಅಮೇರಿಕ ಹುಲಿಗೆ ಆಹುತಿಯಾಗಬೇಕೇ? ಅಮೇರಿಕವಾಗಲೀ ಬ್ರಿಟನವಾಗಲೀ ಆದೆಂದೂ ಸುಮ್ಮಗಿದ್ದುದಿಲ್ಲ. ಹಲವಾರು ಕ್ರಿಸ್ತೀಯ ಮತ ಪ್ರಸಾರಕರನ್ನು ಹಲವಾರು ವೇಷಗಳಲ್ಲಿ ಇತ್ತ ಕಳುಹಿಸುತ್ತಿವೆ. ಅವರು ಇಂದು ಸಹಾಯಕ್ಕಾಗಿ ಮುಂದಕ್ಕೆ ಬಂದರೂ ಹಿಂದಿನಿಂದ ಅದರ ಪರಿಣಾಮ ಏನಾಗಬಹುದೆಂಬುದನ್ನು ನಾವು ಲಕ್ಷಿಸುತ್ತಿರಬೇಕು. ಆದರೆ ಅದೇ ಕಾರಣದಿಂದ ಅವರನ್ನು ತೆಗಳುವಂತಿಲ್ಲ. ಚಿರತೆಯನ್ನೆದುರಿಸಲು ಜಾಣತನದಿಂದ ಸಹಾಯವನ್ನು ಪಡೆಯುತ್ತಿರಲೇ ಬೇಕು. ವಿವೇಕಾನಂದರವರ ವಿವೇಕವಾಣಿಯನ್ನು ಸ್ವಲ್ಪ ಬದಲಾಯಿಸಿ ನೋಡಿದಾಗ ಪ್ರಪಂಚದ ಇನ್ನೊಂದು ಮುಖದ ಅನುಭವ ನಮಗಾಗುತ್ತದೆ. ಕಮ್ಯೂನಿಸ್ಟರಲ್ಲದವರಿಗೆ ಕಮ್ಯೂನಿಸ್ಟ್ ರಾಷ್ಟ್ರಗಳಿಂದ ಸಹಾಯವು ಸಿಕ್ಕೀತೇ? ರಷ್ಯಾದ ಮಾತಿನಲ್ಲೇ ಹೇಳುವದಾದಲ್ಲಿ ಭಾರತೀಯರು ಅವರಿಗೆ ಕೇವಲ ಸ್ನೇಹಿತರು ಮಾತ್ರ, ಆದರೆ ಚೈನಿ ಕಮ್ಯೂನಿಸ್ಟರು ಸಹೋದರರೇ ಇದ್ದಾರೆ. ಸಹೋದರನಿಗೆ ಸಿಗದ ಸಹಾಯ ಸ್ನೇಹಿತನಿಗೆ ಸಿಕ್ಕೀತೇ? ಇನ್ನು ಚೈನಿ ಕಮ್ಯೂನಿಸ್ಟರನ್ನು ನಂಬುವ ಮಾತಾದರೂ ಎಲ್ಲಿಂದ ಬಂದೀತು?

ಸ್ವಾಮಿ ವಿವೇಕಾನಂದರವರ ನೂರನೇ ವರ್ಷದ ಹುಟ್ಟುಹಬ್ಬದ ಸಮಯದಲ್ಲೇ ಭಾರೀ ಪ್ರಮಾಣದಲ್ಲಿ ಚೈನಿ ಕಮ್ಯೂನಿಸ್ಟರಿಂದ ಆಕ್ರಮಣ ನಡೆದು ಒಂದು ಘಟ್ಟಕ್ಕೆ ಬಂದಿರುತ್ತದೆ. ಸ್ವಾಮಿ ವಿವೇಕಾನಂದರವರ ವಿವೇಕವಾಣಿಯತ್ತ ಗಮನ ಹರಿಸಿದಲ್ಲಿ ಇಂದು ಬಂದೊದಗಿರುವ ಕುತ್ತಿನಿಂದ ಸುಲಭವಾಗಿ ಪಾರಾಗಬಹುದು. ಅದರ ಮುನ್ನೆಚ್ಚರಿಕೆಯನ್ನೂ, ಔಷಧಿಯನ್ನೂ ಅವರಂದೇ ಸೂಚಿಸಿರುವರು. ಅದನ್ನು ಅರಿತುಕೊಂಡು ಅಂತೆಯೇ ವರ್ತಿಸುವದು ಜಾಣರ ಲಕ್ಷಣವಿದೆ.

ಭಾರತ ಮಾತ್ರವಲ್ಲ ಜ್ಞಾನ ತೃಷೆಯುಳ್ಳ ಜಗತ್ತೇ ಇಂದು ವಿವೇಕಾನಂದರನ್ನು ಸ್ಮರಿಸುತ್ತದೆ. ಹಿಂದೂವು ಹಿಂದಿನ ವೈಭವಪೂರಿತ ಗತ ಇತಿಹಾಸದತ್ತ ಸಿಂಹಾವಲೋಕನ ಮಾಡಿದತ್ತ ಮುಂದಣ ಹೆಜ್ಜೆಯನ್ನು ಸರಿಯಾಗಿಡಬಲ್ಲನೆಂದು ವಿವೇಕಾನಂದರೇ ವಿವರಿಸಿರುವರು. ಆದಕ್ಕಾಗಿ ಅವರು ಅಖಿಲ ಭಾರತದ ಜನತೆಗೇನೇ ಯಾರನ್ನು ಜನತಾ ಜನಾರ್ದನನೆಂದು ಕರೆಯುತ್ತಿದ್ದರೋ ಅವರ ಬಳಿ ಕರೆ ಇತ್ತಿರುವರು. ಭಾರತೀಯರೇ ಏಳಿರಿ, ಎದ್ದೇಳಿರಿ! ಮತ್ತು ಗುರಿ ಮುಟ್ಟುವ ತನಕವೂ ವಿಶ್ರಮಿಸದಿರಿ. ಇದೇ ಅಂದಿನ ದಿವ್ಯ ಮಂತ್ರವಿದೆ.

—ಶಿವಶಂಕರ
ಮಂದ್ರಾಸು.

**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ಖಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

೮

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಅಮೇರಿಕನ್ ಪಿಸ್ತೂಲ್ ಆಟೋ
ಮೇಟಿಕ್ 6 ಗುಂಡು ಮತ್ತು 60
ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ಕುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಆದರೊಂದಿಗೆ 100 ಗುಂಡು ಧರ್ಮಾರ್ಥ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

**REY ROGAS & CO., 23-A, Anand Nagar, BOMBAY-26**

# ಭಗವಂತ ಬಂದಿದ್ದಾನೆ

೧

ಇಂದಿನ ವಿಜ್ಞಾನ ಕಾಲದ ಅವತಾರ ಪುರುಷ 'ಶ್ರೀ ಸತ್ಯಸಾಯಿ ಬಾಬಾ'ಎಂಬುದರಲ್ಲಿ ಸಂಶಯವೇ? ಈ ಭಗವಾನ್ ಚಿನ್ಮಯ ಸ್ವರೂಪಿಯ ನಾಮಧೇಯವನ್ನು ನಾನು ಕೇಳಿದ ಪುಣ್ಯ ದಿನ ತಾ. ೧೫—೮—೧೯೪೭ರಂದು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಸಂತೋಷದ ದಿನ. ಚಿನ್ಮಯ ರೂಪಿಯಾದ ಪೂಜ್ಯರ ದರ್ಶನದ ಫಲವನ್ನು ಹಾಗೂ ಮಹಿಮೆಯನ್ನು ಅಂದಿನ ನವಭಾರತ ಸಂಚಿಕೆಯಲ್ಲಿ ವಿವರಿಸಿದ್ದರು. ಇಂದಿನ ಠಕ್ಕ ಸನ್ಯಾಸಿಗಳ ನಡೆನುಡಿ ಹಾಗೂ 'ಚಾಲ'ಗಳನ್ನರಿತ ನನಗೆ ಮೇಲಿನ ಲೇಖನವನ್ನೋದಿ ಮನದೊಳಗೆ ನಗು ಬಂತು. ಕೆಲ ದಿನಗಳಲ್ಲೇ ಸನ್ಯಾಸಿಯೊಬ್ಬನನ್ನು ಬಂಧಿಸಿದ ಸುದ್ದಿ ಪತ್ರಿಕೆಯಲ್ಲಿ ಕಂಡ ನಂತರ 'ಶ್ರೀ ಸಾಯಿಬಾಬರ' ಹೆಸರು ಕಣ್ಮರೆಯಾಯಿತು.

ಈಗ ಕೆಲವೇ ತಿಂಗಳುಗಳ ಹಿಂದೆ ನಮ್ಮ ಬಂಧು ಒಬ್ಬರು ಶ್ರೀ ಜ್ಯೋತಿರ್ಮಯರವರಲ್ಲಿಗೆ ಹೋಗಿ ಬಂದರು. ಅಲ್ಲಿಯ ಸಂಪೂರ್ಣ ಸಂಗತಿಗಳನ್ನು ವಿಸ್ತರಿಸಿದಾಗ ತನ್ನಿಂದ ತಾನೆ ಒಂದು ಆಶೆ, ಆಕಾಂಕ್ಷೆ, ಭಕ್ತಿಗಳು ಮೂಡಿದವು. ಅವರು ತಂದಿದ್ದ ಭಾವ ಚಿತ್ರವನ್ನೂ ಪರಿಮಳಯುಕ್ತವಾದ ಭಸ್ಮವನ್ನೂ ನಮಗಿತ್ತು, ಬಾಬಾಜಿಯವರ ಭಕ್ತರಾಗುವಂತೆ ಮಾಡಿದರು.

ತಾ. ೧೩-೯-೬೨ರಂದು ನಾವು ಚಿನ್ಮಯದರ್ಶನಕ್ಕೆಂದು ಹೊರಟು ತಾ. ೧೫ರಂದು ಪ್ರಶಾಂತಿ ನಿಲಯದ ಗೇಟನ್ನು ಹೊಕ್ಕೆವು. ಅಲ್ಲಿ ಕಾರಿನಿಂದಿಳಿದು ಭಕ್ತ ತಂಡದ ಭಜನಾ ಮಂದಿರದೆಡೆಗೆ ಹೆಜ್ಜೆಯನ್ನಿಟ್ಟೆವು. 'ಭೂಮಾತೆ'ಯ ಮಕ್ಕಳಾದ ನಾವೆಲ್ಲಾ ಒಂದೇ ಎಂಬುದನ್ನು ಇಲ್ಲಿಯ ಕ್ರಮದಿಂದ ಎಂತಹ 'ಮೂಢ'ನೂ ತಿಳಿಯದಿರಲಾರನು.

ಅಷ್ಟು ಹೊತ್ತಿಗೆ ಭಜನಾ ಮಂದಿರದೊಳಗಿಂದ ಭಜನೆಯು ಕೇಳುತ್ತಿತ್ತು. ನಾವೂ ಗಂಡಸರು, ಹೆಂಗಸರು ಬೇರೆ ಬೇರೆಯಾಗಿ ಕೂತೆವು. ಭಗವಂತನ ಸಾನಿಧ್ಯಕ್ಕೆ ಕೊಂಡೊಯ್ಯಬಲ್ಲ ಆ ಭಜನೆಯಲ್ಲಿ ಭಾಗವಹಿಸಿದೆವು. ಅಷ್ಟೊತ್ತಿಗೆ 'ಭಗವಾನ್ ಬಾಬಾಜಿ'ಯವರು ಅಲ್ಲೇ ಇಟ್ಟಿರುವ ಬೆಳ್ಳಿಯ ಪೀಠವನ್ನಲಂಕರಿಸಿದರು. ಪ್ರೇಮದಿಂದ, ಭಕ್ತಿಯಿಂದ ಕೂತಲ್ಲೇ ವಂದಿಸಿದೆನು. ಭಗವಂತನೇ ನಮ್ಮೆದುರು ಸಾಕಾರವಾಗಿ ನಿಂತಿರುವರೆಂದು ತಿಳಿಯಿತು. ಭಜನೆಯಲ್ಲಿ ಭಗವಂತನ ವಿವಿಧ ಅವತಾರಗಳನ್ನೇ ಕೊಂಡಾಡುವ ಹಾಗೂ, ಬಾಬಾಜಿಯವರನ್ನ ಕೊಂಡಾಡುವ ಹಾಡುಗಳಿದ್ದವು. ಮಂಗಳಗೀತೆ ಹಾಡಿ ಆರತಿಎತ್ತುವಾಗ ಬಾಬಾಜಿ ಹೊರ ನಡೆದರು. ಅಲ್ಲೇ ವೇದಿಕೆಯ ಮೇಲೆ ಭಗವಾನ್ ಶಿರ್ಡಿ ಸಾಯಿಬಾಬಾರ ಜೀವಂತ ಗಾತ್ರದ ಭಾವಚಿತ್ರ, ಭಗವಾನ್ ಸತ್ಯ ಸಾಯಿ ಬಾಬಾರ ಅದೇ ಗಾತ್ರದ ಎರಡು ಭಾವಚಿತ್ರ. ಮುರಲೀಧರನಾಗಿ ಶ್ರೀಕೃಷ್ಣನ ಪ್ರತಿಮೆ. ಅದರ ಕೆಳಗೆ ಶಿರ್ಡಿ ಸಾಯಿಬಾಬಾರ ಪ್ರತಿಮೆ. ಭಜನೆ ಮುಗಿದೊಡನೆಯೇ ಆ ಭವ್ಯ ಭಜನಾ ಮಂದಿರದಲ್ಲಿ ಪ್ರಣಾಮ ಮಾಡಿ ಹೊರ ಹೊರಟೆವು.

ಭಕ್ತರೆಲ್ಲ ಹೊರಬಂದು ಅಂಗಳದಲ್ಲಿ ಕೈಮುಗಿದು ನಿಂತು ಮಾಳಿಗೆಯೆಡೆ ನೋಡುತ್ತಿದ್ದರು. ನಾವೂ ಅತ್ತ ಹೋದೆವು. ಹೌದು ಅದೇ ಕೆಂಪು ನಿಲುವಂಗಿ ಧರಿಸಿದ ಚಿನ್ಮಯ ರೂಪಿ ಮಾಳಿಗೆಯಿಂದಲೇ ಕೆಳಗಿದ್ದ ಭಕ್ತ ಸಮೂಹಕ್ಕೆ ತನ್ನ ಅಭಯ ಹಸ್ತದಿಂದ ಆಶೀರ್ವದಿಸುತ್ತಿದ್ದರು. ಭಗವಂತನ ಆಶೀರ್ವಾದವನ್ನು ಪಡೆದು ಊಟಮಾಡಲೆಂದು ಪ್ರಶಾಂತಿ ನಿಲಯದ ಭೋಜನ ಶಾಲೆಗೆ ಹೊಕ್ಕೆವು.

ನಮ್ಮ ಭೋಜನ ತೀರಿಸಿಕೊಂಡು ಸ್ನಾನಕ್ಕಾಗಿ ಅಲ್ಲೇ ಹರಿಯುತ್ತಿರುವ 'ಚಿತ್ರಾವತಿ' ನದಿಗೆ ಹೋಗಿ, ಮಿಂದು, ಬಟ್ಟೆ ಒಗೆಯುತ್ತಿರುವಾಗ ಒಂದು ಲಾರಿ ಬಂತು. ಆಲೋಚಿಸುತ್ತಿದ್ದಂತೆ ಮೇಲು ಕೀಳೆಂಬ ಭಾವನೆ ಇಲ್ಲದೆ ನೂರಕ್ಕೂ ಮಿಕ್ಕಿದ ಜನ ಸಮೂಹ ಮರಳ ರಾಶಿಮಾಡಿ ಲಾರಿಗೆ ಹೇರುವುದನ್ನು ಕಂಡೆವು. ಹೀಗೇಕೆ ಎಂಬ ಪ್ರಶ್ನೆಯು ಬರುವ ಮೊದಲೇ ಶ್ರೀ ಬಾಬಾಜಿಯವರು ವಿಶಾಲವಾದ ಭೋಜನಾ ಮಂದಿರವನ್ನು ಕಟ್ಟುತ್ತಿರುವರೆಂಬುದು ತಿಳಿಯಿತು. ಭಕ್ತರಾದ ನಾವೂ ಲಾರಿಗೆ ಹೊಯ್ಗೆ ತುಂಬಿಸಿ ಅಳಿಲ ಸೇವೆ ಮಾಡಿ ಕಾರಿನತ್ತ ಹೆಜ್ಜೆಯನ್ನಿಟ್ಟೆವು.

ನಮ್ಮ ಬಟ್ಟೆಗಳನ್ನೆಲ್ಲಾ ಮಡಚಿ ಕಾರಿನಲ್ಲಿಟ್ಟು, ಕಾರಿಗೆ ಬೀಗ ಹಾಕಿ ಭಜನಾ ಮಂದಿರದ ಸುತ್ತ ತಿರುಗುತ್ತಿದ್ದೆವು. ಸುಮಾರು ೪ ಘಂಟೆ ಸಮಯ ಮಾಳಿಗೆಯಿಂದ ಮಹಾದೇವ ಕೆಳಗಿಳಿದರು. ಆಗಲೇ ನನ್ನ ಶೀರ್ಘರೋಗಿಗಳು ಕಾಲಿಗೆ ಬಿದ್ದರು. ನನಗೆ ಕಾಲು ಹಿಡಿಯಲಾಗಲಿಲ್ಲವಲ್ಲಾ! ಎಂದು ಅವರ ಹಿಂದೆಯೆ ನಡೆದೆವು ಬಾಬಾಜಿ ಅಲ್ಲೇ ಇರುವ ಭೋಜನ ಶಾಲೆಗೆ ಹೊಕ್ಕರು. ಒಳಗೆ ಕೆಲವರು ಅಡ್ಡಬಿದ್ದರು. ನಾವು ಹೋಗುವಾ ಎಂದು ನೆನೆಯುತ್ತಿರುವಾಗ ಸ್ವಾಮಿಜಿಯವರೇ 'ಒಳಗೆ ಬರಬೇಡಿ" ಎಂಬಂತೆ ಆಜ್ಞೆ ಇತ್ತರು. ಇದನ್ನೆಲ್ಲಾ ಕಂಡ ನನ್ನ ಮಾತೃಶ್ರೀಯವರು ನನ್ನೊಡನೆ ಬಹು ಬೇಸರದಿಂದ 'ಬಾಬಾಜಿಯವರಿಗೆ ಕೋಪ ಬಂದಿರಬಹುದೇ?" ಎಂದರು. ಉಂಟೇ! ದೇವರಿಗೂ ಕೋಪ ಬರುವುದೇ' ಎಂದು ಹಿಂತಿರುಗಿ ಅಲ್ಲಿದ್ದ ಭಕ್ತರೊಡನೆ ಸಂಭಾಷಣೆಗೆ ಪ್ರಾರಂಭಿಸಿದೆವು. ಚಿಕ್ಕ ಮಗಳೊಂದಿಗರೊಬ್ಬರು ೧೭ ವರ್ಷಗಳಿಂದ ನಡೆಯಲಾಗದೆ ಪ್ರತ್ಯಕ್ಷ ದೇವ ಸನ್ನಿಧಿಗೆ ಬಂದು ಗುಣಮುಖರಾದುದನ್ನು ತಿಳಕೊಂಡೆವು. ಅಷ್ಟು ಹೊತ್ತಿಗೆ ಸ್ವಾಮಿಜಿಯವರು, ಅಂಗಳದಲ್ಲಿ ಬಂದು ನಿಂತರು. ಹಲವಾರು ಮಂದಿ ತಮ್ಮ ಪಾದ ಧೂಳಿಯನ್ನು ಸ್ವೀಕರಿಸಿ ಕೊಂಡರು. ನಾವೂ ಸ್ವೀಕರಿಸಿದೆವು ಆಗ ಶಿವಮೊಗ್ಗದವರೊಬ್ಬರಲ್ಲಿ 'ನಿಮಗೆ ಹೊಟ್ಟೆ ನೋವೇ? ಎಂದು ಪ್ರಶ್ನಿಸಿದರು ಹೌದೆಂದು ಉತ್ತರ ಬರಲು ತನ್ನ ಅಭಯ ಹಸ್ತವನ್ನು ಕೆಳಮುಖಮಾಡಿ ತಿರುಗಿಸಿ ಬಂದ ಪರಿಮಳಯುಕ್ತವಾದ ಭಸ್ಮವನ್ನು ಅವರ ಹಣೆಗೂ, ಬಾಯಿಗೂ ಹಾಗೆ ಕೈಯಲ್ಲಿ ಸ್ವಲ್ಪಕೊಟ್ಟು ದಿನಾಲೂ ಸೇವಿಸುವಂತೆ ಸ್ವಚ್ಛ ಕನ್ನಡದಲ್ಲೇ ಹೇಳಿ ಬೀಳ್ಕೊಟ್ಟರು. ಇದನ್ನೆಲ್ಲಾ ಕಂಡ ನನಗೆ ಪರಮಾತ್ಮನ ಕೈಯಿಂದ ವಿಭೂತಿ ಸಿಕ್ಕಲಿಲ್ಲವಲ್ಲಾ ಎಂದು ಮನದೊಳಗೇ ಬೇಸರವಾಯಿತು.

ಕಾರ್ಮೋಡಗಳು ಕವಿದು ಜಡಿ ಮಳೆಯು ಬರುವ ಮುನ್ಸೂಚನೆಯನ್ನು ನೋಡಿ ಅಲ್ಲೇ ರಾಶಿಯಾಗಿ ಹಾಕಿದ್ದ ಹೊಯ್ಗೆಯನ್ನು ಭವ್ಯವಾದ ಮಂದಿರ ಕಟ್ಟಲು ಹಾಕಿ ಅಡಿಗಲ್ಲ ಸುತ್ತಲೂ ಹಾಕುವಂತೆ 'ಭಗವಾನ್' ತಿಳಿಸಿದರು. ಚಿನ್ಮಯ ರೂ

(ಆನೇ ಪುಟ ನೋಡಿರಿ)


## ರೋಗಿಗಳ ಪುನರ್ಜೀವನ

ಕ್ಷಯರೋಗಿಗಳು, ಅಧಿಕಾರಿಗಳಿಂದ ಸಹಕಾರ ದೊರೆತರೆ, ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ, ತಮ್ಮಸ್ಥಕ್ಕೆ ತಾವು ಪುನಃ ಸಮಾಜದಲ್ಲಿ ಜೀವನ ನಿರ್ವಹಿಸಬಹುದು. ಬದುಕಿರುವವರಲ್ಲಿ ಬರೇ ಕೆಲವರು ಕ್ಷಯರೋಗದಿಂದಾಗಿ ಕೆಲಸಮಾಡಲು ಅಶಕ್ತರಾಗಿರುವುದನ್ನೂ, ಕೆಲಸಮಾಡಲು ಶಕ್ತರಾಗಿರುವವರಲ್ಲಿ ಬರೇ ಕೆಲವರಿಗೆ ಕೆಲಸಸಿಗುವುದು ಕಷ್ಟವಾಗಿರುವುದನ್ನೂ, ನಾವು ನೋಡುವ ದಿನ ಬಹಳ ದೂರವಿರಲಾರದು

ಪುನರ್ನಿವಾಸ ಯೋಜನೆಗಳು ಇಂತಹ ಪರಿಣಾಮಗಳಿಗೆ ಸಹಾಯ ಮಾಡುತ್ತವೆ. ಟಿ.ಬಿ. ಮುದ್ರೆಗಳ ಮಾರಾಟ ಚಳವಳವು ಅಂತಹ ಯೋಜನೆಗಳನ್ನು ನಿರ್ವಹಿಸಲು ಬೇಕಾದ ನಿಧಿಯೆತ್ತಲು ಸಹಾಯಮಾಡುತ್ತದೆ. ಟಿ ಬಿ ಮುದ್ರೆಗಳು ಅಧಿಕ ಪ್ರಮಾಣದಲ್ಲಿ ಕೊಂಡುಕೊಳ್ಳಲ್ಪಡಬೇಕು. ಒಂದು ಟಿ ಬಿ. ಮುದ್ರೆಯ ಬೆಲೆ 10 ನಯೇಪೈಸೆ ಮಾತ್ರ.

ನಕಾಶೆಗಳು ಬೇಕಾಗಿವೆ:— ಸರಳ ಮತ್ತು ಆಕರ್ಷಕವಾದ ನಕಾಶೆಗಳು ಹದಿನಾಲ್ಕನೇ ಟಿ ಬಿ ಮುದ್ರೆ ಮಾರಾಟ ಚಳವಳಕ್ಕಾಗಿ ಆಮಂತ್ರಿಸಲ್ಪಟ್ಟಿವೆ ಅತ್ಯುತ್ತಮವಾದ ಮುದ್ರೆಯ ನಕಾಶೆಗೆ ರೂ. 500 ರ ಬಹುಮಾನ ಕೊಡಲ್ಪಡುವುದು. ವಿವರವಾದ ನಿರ್ದಿಷ್ಟ ಫೋರ್ಮುಗಳಿಗೆ ದಯವಿಟ್ಟು ಬರೆಯಿರಿ— ದಿ ಸೆಕ್ರೆಟರಿ, ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಓಫ್ ಇಂಡಿಯಾ, 3, ರೆಡ್ ಕ್ರೋಸ್ ರೋಡ್, ನ್ಯೂ ಡಿಲ್ಲಿ—2.

## 13 ನೇ ಟಿ. ಬಿ. ಮುದ್ರೆ ಮಾರಾಟ ಚಳವಳ

(ಟಿ ಬಿ ಎಸೋಸಿಯೇಶನ್ ಓಫ್ ಇಂಡಿಯಾ, ನ್ಯೂ ಡಿಲ್ಲಿ ಇವರಿಂದ ನಡೆಸಲ್ಪಡುವಂತಹುದು)

ಸ್ಥಳದಾನ ಮಾಡಿದವರು:

**Messrs. Kodak Limited, Bombay.**

# ಆದರ್ಶ ಕವಿ-ವರ ಮುದ್ದಣ

**ಶ್ರೀ ಬಿ. ನಾರಾಯಣ ಜೋಗಿತ್ತಾಯ**

ಕನ್ನಡ ನಾಡಿನ ಒಂದು ಮೂಲೆಯಲ್ಲಿ ಊರ ದೇಗುಲದಲ್ಲಿ ಚಾಕರಿ ಮಾಡಿ ಹೊಟ್ಟೆ ಹೊರೆಯುವ ನಿರ್ಗತಿಕ, ಬಡ, ಕುಟುಂಬದಲ್ಲಿ ಜನ್ಮವೆತ್ತಿ ಕಷ್ಟ ಕಾರ್ಪಣ್ಯಗಳೊಂದಿಗೆ ಹೋರಾಡಿ, ಅವಿಶ್ರಾಂತವಾದ ಪರಿಶ್ರಮದಿಂದ ಕನ್ನಡ ಸಾಹಿತ್ಯ ಸೇವೆಯನ್ನು ಸಿಂಗರಿಸಿದ ಕವಿವರ ಮುದ್ದಣ್ಣನ ಬಹುಮುಖವಾದ ಕಾವ್ಯ ಕೀರ್ತಿಯನ್ನು ಕನ್ನಡ ನಾಡಿನ ಆದ್ಯಂತ ಅನೇಕ ಮಂದಿ ಹಿರಿಯರು, ಪ್ರಸಿದ್ಧ ವಿದ್ವಾಂಸರು, ಕವಿವರೇಣ್ಯರು, ಸಾಹಿತ್ಯ ಸಂಶೋಧಕರು, ರಸಿಕ ಶಿಖಾಮಣಿಗಳಾದ ಸರಸ್ವತಿಯ ವರಪುತ್ರರು ಕಳೆದ ಅರ್ಧ ಶತಮಾನಗಳಿಂದಲೂ ಮುಕ್ತ ಕಂಠದಿಂದ ಕೊಂಡಾಡಿ, ಆತನನ್ನು ಪಂಪರನ್ನಾದಿ ಕವಿ ಪರಂಪರೆಗೆ ಸೇರಿಸಿದ್ದಾರೆ ಇಂಥ ಕವಿ-ಪುಂಗವನ ಜೀವನದಿಂದ ಜನ ಸಾಮಾನ್ಯರು ಕಲಿಯ ಬೇಕಾದ ಪಾಠಗಳು ತುಂಬಾ ಇವೆ.

**ಜೀವನ**

೧೮೭೦ ಜನವರಿ ೨೪ರಂದು ಸೋಮವಾರ ಕಾರ್ಕಳ ತಾಲೂಕಿನ ನಂದಳಿಕೆ ಗ್ರಾಮದಲ್ಲಿ ದೇಗುಲಕ್ಕೆ ಹೂ ಮಾಡಿಯುವವರ ಮನೆಯಲ್ಲಿ ನಮ್ಮ ಕವಿ ಮುದ್ದಣನು ಮಹಾಲಕ್ಷ್ಮಿಯ ಉದರದಲ್ಲಿ ಜನಿಸಿದನು. ಮಗು ಮುದ್ದು ಮುದ್ದಾಗಿದ್ದುದರಿಂದ ಲಕ್ಷ್ಮೀನಾರಣಪ್ಪನೆಂದು ಹೆಸರಿಟ್ಟಿದ್ದರೂ ಕೊಂಡಾಟಕ್ಕಾಗಿ 'ಮುದ್ದಣ್ಣನೆಂದು ಚಕ್ಕಂದವಾಗಿ ಕರೆಯುವುದು ರೂಢಿಯಾಗಿ ಹೋಯಿತು. ಬಾಲ್ಯದಲ್ಲೇ ಭಾವೀ ಕವಿ ಮುದ್ದಣ್ಣನಿಗೆ ಕವನಗಳ ಮೇಲೆ ಆದರ. ಕವಿತೆಯಲ್ಲದೆ, ಬಯಲಾಟ, ಪುರಾಣ ಶ್ರವಣ ಇತ್ಯಾದಿ ವಿವಿಧ ವಿಚಾರಗಳು ಅವನ ಅಂತಃರಂಗದ ಗುಪ್ತ ಶಕ್ತಿಗೆ ಚೇತನವನ್ನಿತ್ತಿದ್ದುವು ಹತ್ತೊಂಭತ್ತನೆಯ ವಯಸ್ಸಿನಲ್ಲೇ ಉಡುಪಿಯ ಬೋರ್ಡ್ ಮಿಡ್ಲ್ ಶಾಲೆಯಲ್ಲಿ ಅಂಗ ಸಾಧನೆಯ ಶಿಕ್ಷಕನಾಗಿ ಬರೀ ಹತ್ತು ರುಪಾಯಿ ಮಾಸಿಕ ವೇತನ ಪಡೆಯುತ್ತಿದ್ದನು. ಮೂರು ವರ್ಷಗಳ ತರುವಾಯ ಕುಂದಾಪುರದ ಹೈಸ್ಕೂಲಿನಲ್ಲಿ ಅಂಗ ಸಾಧನೆಯ ಶಿಕ್ಷಕನಾಗಿದ್ದಂತೆಯೇ ತನ್ನ ಸಾಹಿತ್ಯ ಸೇವೆಗೆ ನಾಂದಿಯಿರಿಸಿದನು.

ಮುದ್ದಣ್ಣನು ಸುಂದರ ಕಾಯನಾಗಿದ್ದನು. ಚಂಚಲ ಕಣ್ಣು ಆತನ ರೂಪಕ್ಕೆ ಮೆರಗು ಕೊಡುವಂತಿತ್ತು. ನೀಳವಾದ ಮೂಗು ಗಂಭೀರ ಮುಖ ಮುದ್ರೆಯೊಂದಿಗೆ ಶೋಭಿಸುತಿತ್ತು. ಏಕಪಾಟಿಯಾದ ಮುದ್ದಣ್ಣ ಸ್ವ ಪ್ರಯತ್ನದಿಂದ ಕನ್ನಡ ಹಾಗೂ ಸಂಸ್ಕೃತಗಳಲ್ಲಿ ಅಸಾಧಾರಣವಾದ ಅಧ್ಯಯನ ನಡೆಸಿ ಪಾಂಡಿತ್ಯವನ್ನು ಪಡೆದನು. ಆ ಮೇಲೆ ತನ್ನ ೨೮ನೇ ವಯಸ್ಸಿನಲ್ಲಿ ತಾನು ದುಡಿಯಲನುವಾಗಿ ೯ ವರ್ಷಗಳು ದಾಟಿದ ನಂತರ ೨೦ ರುಪಾಯಿ ಸಂಬಳದಲ್ಲಿ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿ ದುಡಿಯಲನುವಾದನು.

ಚುರುಕು ಬುದ್ಧಿವೃತ್ತಿಯಿಂದ, ಶುದ್ಧವಾದ ಭಾಷೆಯಿಂದ ಬೇಕಾದಷ್ಟೇ ಮಾತಾಡುತ್ತಲಿದ್ದಾತನು, ದೃಢ, ಅದ್ಭುತ ದೇಹದ ಎರಡೂ ಕೈಗಳಿಂದ ಎರಡು ಅಕ್ಕಿ ಮುಡಿ ಎತ್ತಿ ಬಿಡುವಷ್ಟು ಬಲಿಷ್ಠನಾಗಿದ್ದನು ತನ್ನ ಆಯುಷ್ಯದಲ್ಲಿ ಒಂದು ಕ್ಷಣವಾದರೂ ವ್ಯರ್ಥವಾಗಿ ಕಳೆಯದಾದನು. ಓದುತ್ತಾ ಬರೆಯುತ್ತಾ ಸಾಹಿತ್ಯ ತಪಸ್ಸಿನಲ್ಲಿ ತನ್ನನ್ನು ತಾನೇ ಮರೆತನು.

**ಕಾವ್ಯ ಪರಿಚಯ**

ಕವಿ ಮುದ್ದಣ್ಣನು 'ರತ್ನಾವತೀ ಕಲ್ಯಾಣ' ಮತ್ತು "ಕುಮಾರ ವಿಜಯ ಎಂಬ ಎರಡು ಯಕ್ಷಗಾನವನ್ನು ರಚಿಸಿರುವನು ರತ್ನಾವತೀ ಕಲ್ಯಾಣವನ್ನು ಬ್ರಹತ್ಕಥಾ ಪುರಾಣದ ಒಂದು ಕತೆಯ ಆಧಾರದ ಮೇಲೂ ಕುಮಾರ ವಿಜಯವನ್ನು ಸ್ಕಂದ ಪುರಾಣದ ಶೂರಪದ್ಮಾಸುರ ವಧೆಯ ಕತೆಯ ಮೇಲೂ, ತಾನು ಉಡುಪಿಯ ಮಿಡ್ಲ್ ಶಾಲೆಯಲ್ಲಿ ಅಧ್ಯಾಪಕನಾಗಿದ್ದಾಗ ರಚಿಸಿದನು.

ತದುಪರಿ ಅದ್ಭುತ ರಾಮಾಯಣವನ್ನು ಹಳೆಗನ್ನಡ ಗದ್ಯದಲ್ಲಿ ಬರೆದನು. ಅದನ್ನು ಆವನ ಹೆಸರಿನಿಂದ ಪ್ರಕಟಿಸುವವರಿಲ್ಲ. ಹುಟ್ಟು ಬಡವನಾದುದರಿಂದ ತಾನಾಗಿ ಪ್ರಕಟಿಸುವಂತಿಲ್ಲ. ಹೀಗೆ ಉಭಯ ಸಂಕಟಕ್ಕೆ ತುತ್ತಾದ ಮುದ್ದಣ್ಣ ತನ್ನ ಹೆಸರನ್ನು ಮರೆಸಿ, ತನಗೆ ಸಿಕ್ಕಿದ ಕೃತಿಯೆಂದು ಪ್ರಕಟಣೆಗೆ ಮೈಸೂರಿಗೆ ಕಳುಹಿಸಿದನು. ಅದು ೧೮೯೫ರಲ್ಲಿ ಪ್ರಕಟವಾಯಿತು.

ಮುಂದೆ ಎರಡು ವರ್ಷಗಳು ಕಳೆದಾಗ ತನ್ನ ಕಾವ್ಯವಾದ 'ಶ್ರೀ ರಾಮ ಪಟ್ಟಾಭಿಷೇಕ' ಎಂಬ ಅಮರ ಕೃತಿಯನ್ನು ತನ್ನ ತಾಯಿಯ ಹೆಸರಿನಲ್ಲಿ ಕಳುಹಿಸಿದನು. ೧೮೯೭ರಲ್ಲಿ ಅದೂ ಪ್ರಕಟವಾಯಿತು.

ತದನಂತರ ತನ್ನ ಸಂಸ್ಕೃತಾಭ್ಯಾಸದ ಗುರುಗಳಾದ ಶ್ರೀ ವೆಂಕಟ್ರಮಣ ಹೆಬ್ಬಾರರ ಸಲಹೆಯ ಮೇರೆಗೆ—ತನ್ನ ಮೇರು ಸದೃಶ ಮಹಾ ಕೃತಿಯಾದ—ಕನ್ನಡ ಸಾಹಿತ್ಯದಲ್ಲಿ ನವ ನೂತನವಾದ—ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದ ಮಹಾ ಗ್ರಂಥ "ರಾಮಾಶ್ವಮೇಧ"ವನ್ನು ಗದ್ಯದಲ್ಲಿ ಬರೆದು, ಆ ಗ್ರಂಥಕರ್ತ ಮುದ್ದಣ್ಣನೆಂದು ಹೆಸರಿಕ್ಕಿ ಅದನ್ನು ಪ್ರಕಟಿಸಲು ಮೈಸೂರಿಗೆ ಕಳುಹಿಸಿದನು. ಅದು ೧೯೦೧ರಲ್ಲಿ ಪ್ರಕಟವಾಯಿತು. ರಾಮಾಶ್ವಮೇಧವನ್ನು ಬರೆದಾದ ನಂತರ ಹಳೆಗನ್ನಡ ಸೂತ್ರಾತ್ಮಕವಾದ ವ್ಯಾಕರಣವನ್ನೂ 'ಗೋದಾವರಿ' ಎಂಬ ಸಾಮಾಜಿಕ ಕಾದಂಬರಿಯನ್ನೂ ಬರೆಯತೊಡಗಿದ್ದನು. ದುರ್ದೈವದಿಂದ ಅದು ಪೂರ್ತಿಯಾಗಲಿಲ್ಲ. ೧೯೦೦ರ ಜುಲೈಯಲ್ಲಿ ಮಂಗಳೂರಿನ 'ಸುವಾಸಿನೀ' ಎಂಬ ಮಾಸಿಕ ಪತ್ರಿಕೆಯಲ್ಲಿ ಪ್ರಥಮ ಸಂಪುಟದಲ್ಲಿ ೬ ಜೋಗುಳ ಪದಗಳ ಕುರಿತು ಸಂಶೋಧನಾತ್ಮಕವಾದ ಲೇಖವೊಂದನ್ನು 'ಚಕ್ರಪಾಣಿ' ಎಂಬ ಗುಪ್ತ ನಾಮದಿಂದ ಬರೆದಿದ್ದನು.

**ಕೊನೆಯ ದಿನಗಳು**

ಉತ್ತಮ ಗ್ರಂಥಗಳ ಸಾಲಿನಲ್ಲಿ ಮೊದಲು ನಿಲ್ಲುವ ತನ್ನ ಗ್ರಂಥ ರಾಮಾಶ್ವಮೇಧವನ್ನು ನೋಡುವ ಸೌಭಾಗ್ಯವು ಆತನಿಗೆ ಲಭಿಸಿದೆಯೇ? ಅದು ಪ್ರಕಟವಾದಾಗಲೇ ಆತನು ಹಾಸಿಗೆ ಹಿಡಿದಿದ್ದ. ಕ್ಷಯ ರೋಗದಿಂದ ನರಳಿ ಬಳಲುತ್ತಲಿದ್ದ ಮುಂದೆ ಸ್ವಲ್ಪ ಕಾಲ ಉಳಿದಿದ್ದರೆ ತಾನು ತನ್ನ ಅಮರ ಕೃತಿಗಳಿಂದಾಗಿ ಕನ್ನಡ ಸಾಹಿತ್ಯಾಕಾಶದಲ್ಲಿ ಧ್ರುವತಾರೆಯಾಗಿ ಮಿನುಗಿ ಮೆರೆಯುವೆನೆಂದು ಮುದ್ದಣ್ಣನಿಗೆ ಅರಿವಾಗಿ ಅತ್ಮ ಸಂತೋಷವಾಗುತ್ತಿತ್ತು. ತನ್ನ ಮೂವತ್ತೊಂದನೆಯ ವಯಸ್ಸು ದಾಟಿದ ಕೆಲವೇ ದಿನಗಳಲ್ಲಿ ನಮ್ಮ 'ಕಬ್ಬಿಗರ ಬಲ್ಲಹ" ಅರ್ಥಾತ್ ಕವಿಗಳ ಮುಂದಾಳಾದ ಮುದ್ದಣ್ಣ ವಿಧಿಯ ತಾಳಕ್ಕೆ ಮಣಿದು, ಕುಣಿದು, ಇಹದಿಂದ ಮರೆಯಾಗಬೇಕಾಯಿತು. ಸಾಹಿತ್ಯ ಸಮಾರಾಧನೆಯಲ್ಲಿಯೇ ತನ್ಮಯನಾದ ತಪಸ್ವೀ ಕವಿಯು ತನ್ನ ಕೊನೆಯುಸಿರನ್ನು ಬಿಡಬೇಕಾಯಿತು.

ರಾಷ್ಟ್ರಕವಿ— ಕಾವ್ಯರ್ಷಿ ಮಂಜೇಶ್ವರ ಗೋವಿಂದ ಪೈಗಳು "ಮುದ್ದಣ್ಣ ಕನ್ನಡ ಸಾಹಿತ್ಯಾಕಾಶದ ತರುಣ ಭಾಸ್ಕರ"ನೆಂದು ಕೊಂಡಾಡಿದ್ದಾರೆ. ಕವಿವರ ಶ್ರೀ ಸಾಲಿ ರಾಮಚಂದ್ರ ರಾಯರು "ಮುದ್ದಣ್ಣನೇ ಇಂದಿನ ಕನ್ನಡ ಸಾಹಿತ್ಯವನ್ನು ಸುಗಿಸಿದ ಕಳರುತಿಯ ಕೋಗಿಲೆಯೆಂದು ಮನಸಾರೆ ಹೊಗಳಿದ್ದಾರೆ. ಕನ್ನಡ ಸಾಹಿತ್ಯದ ಹಿರಿಯ ಸಾಹಿತಿಗಳೆಲ್ಲಾ "ಮುದ್ದಣ್ಣನು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯೆಬ್ಬಿಸಿದ ಅಮರ ಕವಿ" ಎಂದು ಘಂಟಾಘೋಷವಾಗಿ ಸಾರಿದ್ದಾರೆ.

ಆಜನ್ಮ ಬಡವನಾದ ಮುದ್ದಣ್ಣ ತನ್ನ ಬವಣೆಯೆಲ್ಲವನ್ನೂ ಬದಿಗಿರಿಸಿ ಸಾಹಿತ್ಯಾರಾಧನೆಯಲ್ಲಿ ತನ್ಮಯನಾಗಿ ಮುಂದಿನ ಪೀಳಿಗೆಗೆ ಮಾರ್ಗದರ್ಶಕನಾಗಿ ಅಮರ ಕವಿಯಾಗಿ ಮೆರೆದನು. ತುತ್ತು ಕೂಳಿಗೆ ಸಾಕಾಗದ ಸಿಕ್ಕ ಸಂಬಳವನ್ನು ಮನೆ ಖರ್ಚಿಗಾಗಿಯೇ ಸವೆಯಿಸಿ ತನ್ನ ಅತ್ಯಲ್ಪ ಆಯುರ್ಮಾನವನ್ನು ಕನ್ನಡಮ್ಮನ ಸೇವೆಗಾಗಿಯೇ ಮೀಸಲಾಗಿಟ್ಟು, ಕಿಂಚಿತ್ತೂ ವಿರಾಮ, ವಿಶ್ರಾಂತಿ ಇಲ್ಲದೆ ಬೆಂದು, ಯಾವೊಂದೂ ಅಲ್ಪ ಸಹಾಯವೂ ಇಲ್ಲದೆ ಕೊರಗಿ, ಸೊರಗಿ, ಕ್ಷಯ ರೋಗಕ್ಕೆ ತುತ್ತಾಗಿ.ಕೆಲಕಾಲ ಹಾಸಿಗೆ ಹಿಡಿದು ೧೯೦೧ ಫೆಬ್ರವರಿ ೧೫ರಂದು ಶುಕ್ರವಾ

(೭ನೇ ಪುಟ ನೋಡಿರಿ)

ಹರ್ಷದ ಸುಗ್ಗಿಯೊಂದಿಗೆ
ಆರಂಭ — ಈ ಪುಸ್ತಕ

ಅದೇ ಕೆನರಾ ಬ್ಯಾಂಕಿನ
ಸೇವಿಂಗ್ಸ್ ಖಾತೆಯ
ಪಾಸ್ ಬುಕ್
ನಿಮ್ಮ ಹಣವು ಕೆನರಾ ಬ್ಯಾಂಕಿನಲ್ಲಿ ಬೇಗನೆ
ಬೆಳೆಯುವುದಲ್ಲದೆ ವರ್ಷಕ್ಕೆ ಶೇಕಡ
3
ಬಡ್ಡಿಯನ್ನೂ ಸಂಪಾದಿಸುವುದು
ಮೈಸೂರು ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ಕೆನರಾ ಬ್ಯಾಂಕಿನಲ್ಲಿ
ನಿಮ್ಮ ಹಣವನ್ನು ಕೂಡಿಟ್ಟಲ್ಲಿ ನಿಮಗೆ ಸಂಪೂರ್ಣ ಭದ್ರತೆ ಲಭಿಸುವುದು
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸ್: ಮಂಗಳೂರು ಆಡಳಿತ ಕಛೇರಿ: ಬೆಂಗಳೂರು
ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ ೪೨ | ಉಡುಪಿ ೧೭-೧-೧೯೬೩ | ವಾರ ೧೯ |
|---|---|---|

## ಬಂಗಾರದ ವ್ಯವಹಾರ

ದೇಶದ ಸರ್ವತೋಮುಖಾಭಿವೃದ್ಧಿಗೆ ಅದರ ಸಮಗ್ರ ಸಂಪತ್ತಿನ ಯಥೇಷ್ಟ ಉಪಯೋಗವಾಗಬೇಕು ಎಂದು ಅರ್ಥಶಾಸ್ತ್ರಗಳ ಅಂಬೋಣ. ನಿರುಪಯುಕ್ತವಾದ ಒಂದೇ ಒಂದು ವಸ್ತು ಸೃಷ್ಟಿಯಲ್ಲಿಲ್ಲ; ಪ್ರತಿ ವಸ್ತುವಿನ ಶಕ್ತಿಯ, ಬೆಲೆಯ ಆಳವನ್ನರಿತುಕೊಂಡು, ಅದನ್ನು ನಾವು ಬಳಸಿಕೊಳ್ಳಬೇಕು; ಇದು ಅಭಿವೃದ್ಧಿಯ ಮಂತ್ರ ಮತ್ತು ತಂತ್ರ. ಇದಕ್ಕಾಗಿ ಅಭಿವೃದ್ಧಿಪಥ ಭ್ರಮಣ ಮಾಡುತ್ತಿರುವ ಭಾರತವಾದರೂ ತನ್ನ ನೈಸರ್ಗಿಕ ಸಂಪತ್ತನ್ನು ಕಂಡುಕೊಂಡು ಅವನ್ನು ಅಭಿವೃದ್ಧಿ ಯೋಜನೆಗಳಿಗೆ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ; ಬಹು ಮಟ್ಟಿಗೆ ಇದರಲ್ಲಿ ಯಶಸ್ವಿಯೂ ಆಗುತ್ತಿದೆ. ಆದರೆ, ಇಂದು ನಾವು ಎದುರಿಸಬೇಕಾದ ಗಂಡಾಂತರದ ಪರಿಸ್ಥಿತಿಯಲ್ಲಿ ದೇಶದ ಉತ್ಪಾದನೆಯಲ್ಲಿಯೂ ದೇಶದ ಸಂರಕ್ಷಣಾ ವ್ಯವಸ್ಥೆಯಲ್ಲಿಯೂ ಗಣನೀಯ ಏರಿಕೆಯಾಗಬೇಕಾದುದು ಅನಿವಾರ್ಯ. ಇದುವರೆಗೂ ನಾವು ಸಂರಕ್ಷಣೆಯ ಪ್ರಶ್ನೆಯನ್ನು ಕಡೆಗಣಿಸಿ, ದೇಶದ ಆಂತರಿಕ ಅಭಿವೃದ್ಧಿಯಲ್ಲಿಯೇ ಲಕ್ಷ್ಯಪೂರಯಿಸುತ್ತ ಬಂದಿದ್ದೇವೆ. ಮುಂದೆಯೂ ಈ ರೀತಿ ಮಾಡುವುದು ಸಾಧ್ಯವಿಲ್ಲವಾದುದರಿಂದ ಎರಡನ್ನೂ ಮುಂದುವರಿಸಿಕೊಂಡು ಹೋಗಲು ಇನ್ನೂ ಅಗಾಧ ಸಂಪತ್ತು ಬೇಕು; ಇದರಿಂದಾಗಿ ನಮ್ಮ ಮುಗ್ಗಟ್ಟು ಅವರ್ಣನೀಯ; ಈ ದುಸ್ಥಿತಿಯನ್ನು ತಪ್ಪಿಸುವುದಕ್ಕೆ ಭಾರತ ಸರಕಾರವು ಹೊರಡಿಸಿದ ಬಂಗಾರದ ಶಾಸನವು ಸಹಕಾರಿಯಾಗುವ ನಿರೀಕ್ಷೆಯಿದೆ.

ಬಂಗಾರದ ಮೇಲಿನ ಮೋಹದಿಂದ ಅದನ್ನು ಕೂಡ ಹಾಕುವ ಪರಿಪಾಠ ನಮ್ಮ ದೇಶದಲ್ಲಿ ಅನೂಚಾನವಾಗಿ ಬಂದಿದೆ. ಮಾನವರು ತಮ್ಮ ದೇಹದ ಮೇಲೆ ಬಂಗಾರದ ಆಭರಣಗಳನ್ನು ಹೇರುತ್ತಿರುವುದಲ್ಲದೆ ತಮ್ಮ ದೇವಾಲಯಗಳನ್ನೂ ಸ್ವರ್ಣಮಯವಾಗಿ ಮಾಡುತ್ತಿದ್ದರು. ಇಂದು ಆಭರಣಗಳ ರೂಪದಲ್ಲಿರುವ ಬಂಗಾರವೆಲ್ಲವನ್ನೂ ಕೂಡ ಹಾಕಿ ಅದನ್ನು ಉಪಯೋಗಕ್ಕೆ ತಂದು ಕೊಂಡರೆ, ಭಾರತವು ಬಡ ದೇಶವಾಗಿ ಉಳಿಯಲಾರದು. ಆಭರಣಗಳು ಸೌಂದರ್ಯೋಪಾಸಕರಾದ ಭಾರತೀಯರ ಮೆಚ್ಚುಗೆಯನ್ನು ಪಡೆದಿವೆ. ಪ್ರಾಯಶಃ ಪ್ರಪಂಚದ ಇತರ ಯಾವ ದೇಶದಲ್ಲಿಯೂ ಇಲ್ಲದಿರುವಷ್ಟು ಬಂಗಾರದ ಒಡವೆಗಳು ಇಲ್ಲಿವೆ. ಇನ್ನು ಶ್ರೀಮಂತರು ಸಂಪತ್ತನ್ನು ಕಪಾಟಿನಲ್ಲಿ ಕೂಡಿ ಹಾಕುವ ಬದಲು ಬಂಗಾರದ ಗಟ್ಟಿಗಳಲ್ಲಿ ವಿನಿಯೋಗಿಸುವ ಪರಿಪಾಠವಿದೆ. ಹೀಗೆ ಸಂಗ್ರಹವಾದ ಬಂಗಾರವಾದರೂ ಬೃಹತ್ ಪ್ರಮಾಣದಲ್ಲಿದೆ; ಎಂತಲೇ ಬಂಗಾರದ ಬೆಲೆಯಲ್ಲಿ ಏರಿಕೆಯೂ ಅದರ ಕಳ್ಳವ್ಯಾಪಾರವೂ ಬೇಕೆಂಬಷ್ಟು ನಡೆಯುತ್ತಿದೆ. ಇದರಿಂದಾಗಿ ಭಾರತದ ಕೋಟಿ ಕೋಟಿ ರೂಪಾಯಿಗಳು ವ್ಯರ್ಥವಾಗಿ ಉಪಯೋಗಕ್ಕೆ ಬಾರದಂತೆ ಪೆಟ್ಟಿಗೆಯೊಳಗಡೆ ಕೂತಿರುತ್ತವೆ. ಆವಶ್ಯಕತೆಗಿಂತ ಹೆಚ್ಚಿನ ಒಂದು ನಯಾ ಪೈಸವನ್ನು ಒಂದೇ ಒಂದು ದಿನದ ಮಟ್ಟಿಗಾದರೂ ಕಿಸೆಯಲ್ಲಿರಿಸಿಕೊಳ್ಳುವುದನ್ನು ನಿಷೇಧಿಸುವ ಅರ್ಥಶಾಸ್ತ್ರ ಇಂತಹ ಬಂಗಾರದ ಶೇಖರಣೆಯನ್ನು ಅನುಮತಿಸೀತೆ?

ಚೀನೀಯರ ಧಾಳಿ, ಸಂರಕ್ಷಣೆಗಾಗಿ ಚಿನ್ನದ ಆವಶ್ಯಕತೆ — ಇವುಗಳಿಂದಾಗಿಯೇ ಈ ಬಂಗಾರದ ಶಾಸನ ಬಂತು ಎನ್ನುವುದು ಸರಿಯಲ್ಲ. ಚೀನೀಯರ ದಾಳಿಗೆ ಎರಡು ತಿಂಗಳ ಮೊದಲೇ ಅರ್ಥಮಂತ್ರಿ ಮುರಾರ್ಜಿಯವರು ಘೋಷಿಸಿದ್ದರು: 'ಮೂಲೆಯಲ್ಲಿ ಬಿದ್ದಿರುವ ಚಿನ್ನವನ್ನು ಬಯಲಿಗೆಳೆಯಲು ಉಪಾಯ ಹೂಡುತ್ತೇನೆ' ಎಂದು. ಚೀನೀಯರ ದಾಳಿಯು ಈ ಉಪಾಯವನ್ನು ಬೇಗನೆ ಕಂಡು ಹಿಡಿಯಲು ಪ್ರೇರಕವಾಗಿದ್ದಿರಬಹುದು ಅಷ್ಟೆ. ಬಂಗಾರದ ಬಾಂಡುಗಳನ್ನು ಹೊರಡಿಸಿದರು ಅವರು. ಇದರಲ್ಲಿ ವಿನಿಯೋಗಿಸುವ ಬಂಗಾರವು ಎಲ್ಲಿಂದ ಬಂತು ಎಂದು ಕೂಡ ವಿಚಾರಿಸುವುದಿಲ್ಲವೆಂದೂ ಪವನಿಗೆ ರೂ. ೬೨ರಂತೆ ಬೆಲೆಕಟ್ಟುವುದೆಂದೂ ಭರವಸೆಯಿತ್ತರೂ ನಮ್ಮ ಸ್ವರ್ಣಾಧೀಶರಿಂದ ಇದಕ್ಕೆ ಅನುಕೂಲ ಪ್ರತಿಕ್ರಿಯೆ ಹೊರಡಲಿಲ್ಲ; ಅರ್ಥಾತ್ ಬಂಗಾರದ ಬಾಂಡುಗಳು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ. ಗುಪ್ತಧನವನ್ನು ಕಿತ್ತು, ಅದನ್ನು ವ್ಯವಹಾರಕ್ಕೆ ಬಳಸಿಕೊಳ್ಳುವ ಅರ್ಥಶಾಸ್ತ್ರದ ಈ ಯುಗದಲ್ಲಿ ಬಂಗಾರದ ಮೇಲೆ ಸಂಪೂರ್ಣ ನಿಯಂತ್ರಣವನ್ನೇ ತರುವಂತೆ ಶ್ರೀಮಂತರೇ ಮಾಡಿಕೊಂಡರು. ಅವರು ತಾವಾಗಿಯೇ ಬಾಂಡುಗಳನ್ನು ಖರೀದಿಸುತ್ತಿದ್ದರೆ, ಹೀಗಾಗುತ್ತಿರಲಿಲ್ಲವೆಂದು ಜಗ ಅನಿಸಬಹುದು. ಹೇಗೂ ದೇಶದ ಭವಿಷ್ಯ ಉಜ್ವಲವಾಗಿಸುವುದಕ್ಕೆ ಪ್ರೇರಕವೆನಿಸುವ ಈ ಶಾಸನವನ್ನು ಮನಃಪೂರ್ವಕತೆಯಿಂದ ಭಾರತೀಯರು, ಮುಖ್ಯವಾಗಿ ಬಂಗಾರದ ಸಂಗ್ರಹವುಳ್ಳವರು, ಸ್ವಾಗತಿಸಿ ಅದಕ್ಕೆ ವಿಧೇಯರಾಗಿ ಆಚರಿಸಬೇಕು.

ಬಂಗಾರದ ಶಾಸನವು ಆಭರಣಗಳ ಗೊಡವೆಗೆ ಹೋಗುವುದಿಲ್ಲ. ಒಬ್ಬ ಸಾಮಾನ್ಯ ಮನುಷ್ಯನು ೫೦ ಗ್ರಾಂ ಚಿನ್ನದ ಆಭರಣಗಳನ್ನು ಹೊಂದಬಹುದು. ಧಾರ್ಮಿಕ ಸಂಸ್ಥೆಗಳಲ್ಲಿರುವ ಬಂಗಾರದ ಆಭರಣಗಳಿಗೂ ಶಾಸನ ಅನ್ವಯಿಸುವುದಿಲ್ಲ. ಇನ್ನು ಮುಂದೆ ಮಾತ್ರ ೧೪ ಕ್ಯಾರೆಟ್ ಚಿನ್ನವನ್ನೇ ಆಭರಣಗಳಿಗಾಗಿ ಬಳಸಬೇಕು. ಈ ನಿಯಮಿತಿಯಿಂದ ಇರ್ವರು ಹಿರಿಯರೂ ಮೂವರು ಕಿರಿಯರೂ ಇರುವ ಒಂದು ಮಿಶ್ರ ಪರಿವಾರದೊಡನೆ ೫೦೦ ಗ್ರಾಂ ಚಿನ್ನದ ಆಭರಣಗಳಿರಬಹುದು. (ಎಂದರೆ ೬೦ ಪವನುಗಳು) ಇದಕ್ಕಿಂತ ಹೆಚ್ಚು ಅನಗತ್ಯವೇ ಅಲ್ಲವೇ? ಆದರೆ, ಕೆಲವೊಂದು ವ್ಯಾಪಾರಿಗಳಿಗೂ ಕೆಲಸಗಾರರಿಗೂ ತುಸು ತೊಂದರೆಯೆನಿಸೀತು; ಆದರೂ ಇದಕ್ಕೆ ಸೂಕ್ತ ಪರಿಹಾರವನ್ನು ಬಂಗಾರದ ವ್ಯವಹಾರ ಮಂಡಳಿ ನೀಡೀತು ಎಂದು ಆಶಿಸುತ್ತೇವೆ. ಬಂಗಾರದ ಶಾಸನ ಅನಿರೀಕ್ಷಿತವಲ್ಲ; ಅನಪೇಕ್ಷಿತವೂ ಅಲ್ಲ. ಆವಶ್ಯಕತೆಗಿಂತ ಹೆಚ್ಚಿನದನ್ನು ಬಳಸಬಾರದು, ಕೂಡಿಡಬಾರದು— ಸಂಪತ್ತು ಯಾವಾಗಲೂ ಸಂಚರಿಸುತ್ತಿರಬೇಕು. ಅದು ಗಂಟು ಅಥವಾ ಗುಪ್ತ ಧನದ ರೂಪದಲ್ಲಿ ಮೃತವಾಗಿರಬಾರದು. ದೇಶ ಪುನಾರಚನೆಗೆ ನೆರವಾಗುವಂತಿರುವ ಈ ಶಾಸನವನ್ನು ಭಾರತೀಯರೆಲ್ಲರೂ ಪೂರ್ಣ ಮನಸ್ಸಿನಿಂದ ಸ್ವಾಗತಿಸಬೇಕು. ಅದರ ಯಶಸ್ಸಿಗಾಗಿ ದುಡಿಯಬೇಕು.

## ಶಿಕ್ಷಣದ ಮಟ್ಟ

ಸರಕಾರಿ ಪರೀಕ್ಷೆಗಳಿಗೆ ಶಾಲೆಗಳಿಂದ ವಿದ್ಯಾರ್ಥಿಗಳನ್ನು ಕಳಿಸುವಾಗ ದುರ್ನೀತಿಯ ಕಾರಣವೊಂದನ್ನು ಬಿಟ್ಟು ಉಳಿದ ಯಾವುದೇ ಕಾರಣಗಳಿಂದ ಕುಳಿತುಕೊಳ್ಳಿಸಲಾಗದು ಎಂದು ಮದ್ರಾಸ ಸರಕಾರದ ಆಜ್ಞೆಯಾಗಿದೆ. ಹಾಗೆಯೇ ಎರಡೂವರೆ ವರ್ಷಗಳಿಂದ ವಿದ್ಯಾಭ್ಯಾಸವೆಂದು ರಾಗ ಹೊಡೆಯುತ್ತ ಬಂದ ಹಿಂದೀ ಭಾಷೆಯಲ್ಲಿ ಉತ್ತೀರ್ಣವಾಗುವುದೂ ಐಚ್ಛಿಕವೆಂದು ಹೇಳಿದೆ. ಇದೇ ಮಾದರಿಯನ್ನು ಮೈಸೂರೂ ಅನುಕರಿಸಿದ್ದರೆ, ಅದ ಆಶ್ಚರ್ಯವಲ್ಲ. ರಾಷ್ಟ್ರೀಯ ತುರ್ತಿನ ಪರಿಸ್ಥಿತಿಯಲ್ಲಿ ಹೀಗೆ ಮಾಡುವುದೂ ಆವಶ್ಯವೆಂದು ಅವು ಮನಗಂಡಿರಬಹುದು. ವಿದ್ಯೆಯ ಮಟ್ಟವು ಉನ್ನತವಾಗಬೇಕು ಎಂದು ನಾಲಗೆಯಲ್ಲಿ ಹೇಳುತ್ತ ಕಾರ್ಯದಲ್ಲಿ ಅದಕ್ಕೆ ಅನುಕೂಲತೆಯೊದಗಿಸದಿರುವುದು ಲಜ್ಜಾಸ್ಪದ. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದರಿಂದ ಸಂಪತ್ತು ವ್ಯರ್ಥವಾಗುತ್ತದೆ ಎಂಬ ಒಂದೇ ಒಂದು ಕಾರಣಕ್ಕಾಗಿ ಪ್ರಗತಿಯಿಲ್ಲದ, ಮಟ್ಟವನ್ನು ತಂದುಕೊಳ್ಳದ ವಿದ್ಯಾರ್ಥಿಯನ್ನು ಉತ್ತೀರ್ಣಗೊಳಿಸುವುದು ಅಪೇಕ್ಷಣೀಯವೇ? ಹಾಗಾದರೆ, ಪರೀಕ್ಷೆಗಳ ಆವಶ್ಯಕತೆಯಾದರೂ ಏನು? ಅವು ನಡೆದರೂ ವಿದ್ಯಾರ್ಥಿಯನ್ನು ಉತ್ತೀರ್ಣಗೊಳಿಸುವಾಗ ಪಡೆದ ಗುಣಗಳಿಗೆ ಯಾವ ಪ್ರಾಶಸ್ತ್ಯವೂ ಇಲ್ಲ; ಹಾಜರಿ ಮಾತ್ರವಿದ್ದರೆ ಸಾಕು; ಇಲ್ಲದೆ ಇದ್ದರೂ ವಿನಾಯತಿ ನೀಡಬಹುದು—ಅಂತೂ ನಷ್ಟವಾಗುತ್ತಿರುವ ಸಂಪತ್ತನ್ನು ಉಳಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಫೇಲು ಮಾಡಬಾರದು ಎಂದು ಕಟ್ಟುನಿಟ್ಟಾಗಿ ಹೇಳಿದರೆ, ಅಪರ್ಯಾಪ್ತ ಪ್ರಮಾಣದಲ್ಲಿರುವ ಅಧ್ಯಾಪಕರಿಗಾದರೂ ಆರಾಮ ದೊರೆತೀತು. ಅಲ್ಲಿಗೆ ಕಾಗದ ಪತ್ರಗಳಲ್ಲಿಯಾದರೂ ಶಿಕ್ಷಣದ ಎತ್ತರ ಏರೀತು.

## ವಾರ್ತಾವೇದಿಕೆ

### ಸಿರಿಮಾವ್ವೋ ಭಂಡಾರನಾಯಕೆ

ಕೊಲಂಬೋ ಸಮ್ಮೇಳನದ ಸಂದೇಶವನ್ನು ಹಿಡಿದುಕೊಂಡು ಅದನ್ನು ಚೀನಾ-ಭಾರತಗಳಿಗೆ ವಿವರಿಸುವ ಉದ್ದೇಶದಿಂದ ಪ್ರವಾಸ ತೊಡಗಿದ ಸಿಂಹಳದ ಪ್ರಧಾನಿ ಸಿರಿಮಾವ್ವೋ ಭಂಡಾರನಾಯಿಕೆಯವರು ಪೀಕಿಂಗಿನಿಂದ ನವದೆಹಲಿಗೆ ಸಮಾಗಮಿಸಿದರು. ಘಾನ ಮತ್ತು ಸಂಯುಕ್ತ ಅರಬ ಪ್ರಜಾರಾಜ್ಯದ ಪ್ರತಿನಿಧಿಗಳೂ ಅವರನ್ನು ಕೂಡಿಕೊಂಡರು, ಸಮ್ಮೇಳನದ ಗೊತ್ತುವಳಿಯು ಇನ್ನೂ ರಹಸ್ಯದಲ್ಲಿಯೇ ಉಳಿದಿದ್ದರೂ ಮಾತುಕತೆಯ ವಿವರಗಳು ಗುಪ್ತವಾಗಿಯೇ ಇರುವವಾದರೂ ಅದರಲ್ಲಿ ಭಾರತದ ಕನಿಷ್ಠ ಬೇಡಿಕೆ ಸಪ್ಟೆಂಬರ ೮, ೧೯೬೨ರಂದು ಇದ್ದಲ್ಲಿಗೆ ಚೀನೀಯರು ಮರಳಬೇಕೆಂಬುದನ್ನು ತಿರಸ್ಕರಿಸಲಾಗಿಲ್ಲವೆಂದು ಮಾತ್ರ ತಿಳಿಯುತ್ತದೆ. ಭಾರತದ ಬೇಡಿಕೆಯನ್ನು ಚೀನವು ಮಾನ್ಯಮಾಡುವುದಾದರೆ, ಮುಂದೆ ಮಾತುಕತೆಯ ಬಾಗಿಲನ್ನು ತೆರೆಯಲು ಪ್ರಧಾನಿ ನೆಹರು ಸಿದ್ಧರಿದ್ದಾರೆ. ಹಾಗೆಂದ ಮಾತ್ರಕ್ಕೆ ಚೀನವು ಬೇಡಿದ್ದನ್ನು ಕೊಟ್ಟು ಬಿಡಲು ಅವರು ಸಿದ್ಧರಿಲ್ಲ; ವಿವಾದದ ತೀಕ್ಷ್ಣತೆಯು ತುಸು ಹಗುರಕ್ಕೆ ಬರುವುದು ಎಂದು ಮಾತ್ರ ಅರ್ಥ.

### ಗೋಪಾಲ ರೆಡ್ಡಿ

ಕೇಂದ್ರ ಸರಕಾರದ ಬಾನುಲಿ ಮತ್ತು ವಾರ್ತಾ ಶಾಖೆಗಳ ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರು ಚೀನೀಯರು ಒಪ್ಪಿಕೊಂಡ ಪಂಚಶೀಲವನ್ನು ಪಂಚಶೂಲವನ್ನಾಗಿ ಪರಿವರ್ತಿಸಿ ಪ್ರತಿಯೊಂದನ್ನು ಲಡಾಖ, ನೇಪಾಳ, ಸಿಕ್ಕಿಂ, ಭೂತಾನ ಮತ್ತು ನೇಫಾಗಳಿಗೆ ಗುರಿಯಿಟ್ಟು ಹೊಡೆದಿದ್ದಾರೆ ಎಂದು ವರ್ಣಿಸಿದ್ದಾರೆ. ಇದು ಅಕ್ಷರಶಃ ನಿಜವೆಂದು ಒಪ್ಪಿಕೊಳ್ಳಲೇಬೇಕು. ಆದರೆ, ಶೂಲದಿಂದ ಚುಚ್ಚಲ್ಪಟ್ಟ ನೇಫಾ ಮತ್ತು ಲಡಾಖಗಳ ವಾರ್ತೆಗಳನ್ನು ಬಾನುಲಿಗಳ ಮೂಲಕ ಬಿತ್ತರಿಸುವಾಗ ಭಾರತೀಯರ ಹೃದಯಕ್ಕೇನೇ ಶೂಲವಿಕ್ಕಿದಂತಾಗುತ್ತಿತ್ತು ಎಂದು ಅವರು ತಿಳಿಯದಿರಲಾರರು. ಯುದ್ಧದ ಸಮಯದಲ್ಲಿ ಶತ್ರುವು ಅತಿರಂಜಿತ ಅಪಪ್ರಚಾರ ತೀವ್ರವಾಗಿ ನಡೆಸುತ್ತಿರುವಾಗ ನಮ್ಮ

ಬಾನುಲಿ ಹಳಸಿದ ಸುದ್ದಿಗಳನ್ನೇ ಬಿತ್ತರಿಸುತ್ತಿತ್ತು. ಆಕಾಶವಾಣಿಯು ಸಂಪೂರ್ಣ ಪ್ರಯೋಜನವನ್ನು ಸಂರಕ್ಷಣಾ ಸಿದ್ಧತೆಗಾಗಿ ಶಕ್ತಿಯುತವಾಗಿ ಪಡೆದುಕೊಳ್ಳುವ ವ್ಯವಸ್ಥೆಯಾಗಬೇಕು; ಸಾರಯುಕ್ತವಾದ ಕಾರ್ಯಕ್ರಮಗಳು ಬೇಕು ಎಂದು ಜನ ಬಯಸಿದರೆ ತಪ್ಪಾಗಲಾರದು.

### ನಿಜಲಿಂಗಪ್ಪ

ಬಳ್ಳಾರಿಯ ಕಬ್ಬಿಣದ ಅದುರುಗಳು ಪಶ್ಚಿಮ ಕರಾವಳಿಯ ಬಂದರಗಳಿಂದ ನಿರ್ಯಾತವಾಗುವುದರಿಂದ ರಾಜ್ಯದ ಸಂಪತ್ತು ರಾಜ್ಯದಲ್ಲಿಯೇ ಉಳಿಯುತ್ತದೆ, ವಿದೇಶೀ ವಿನಿಮಯವೂ ಲಭಿಸುತ್ತದೆ. ಆದರೆ, ಅದುರಿನ ಸಾಗಾಣಿಕೆಯಲ್ಲಿ ಅವ್ಯವಸ್ಥೆಯಿರುವುದರಿಂದ ಸಂಕಟವು ಬಂದೊದಗಿದೆಯೆಂದು ತಿಳಿಯುತ್ತದೆ. ದಕ್ಷಿಣ ರೇಲ್ವೆಯ ಮಲತಾಯಿ ನೀತಿ ಮತ್ತು ಅದಕ್ಕೆ ಪೂರಕವಾಗಿ ರಾಜ್ಯ ಸರಕಾರದ ನಿರ್ಲಕ್ಷ್ಯಗಳ ಪರಿಣಾಮವಿದು ಎಂಬುದು ಖಚಿತವಿದೆ. ಇದೇ ಪರಿಸ್ಥಿತಿಯು ಮುಂದುವರಿದರೆ, ಅದುರುಗಳನ್ನು ಅನಿವಾರ್ಯವಾಗಿ ಪೂರ್ವಕರಾವಳಿಯ ಮೂಲಕ ರಫ್ತು ಮಾಡಬೇಕಾಗಿ ಬರಬಹುದು. ಇದರಿಂದ ಕರ್ನಾಟಕಕ್ಕೆ ಹಾನಿ ಖಂಡಿತ. ಆದುದರಿಂದ ರಾಜ್ಯಸರಕಾರದ ಮುಖ್ಯಸ್ಥರಾದ ನಿಜಲಿಂಗಪ್ಪನವರು ಒದಗಿರುವ ಆವಾಂತರವನ್ನು ಬಗೆಹರಿಸುವಲ್ಲಿ ಶ್ರಮಿಸಬೇಕು; ರಾಜ್ಯದ ಆರ್ಥಿಕ ಹಾಗೂ ಔದ್ಯಮಿಕ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಅವಮನಸ್ಸು ಮಾಡಬಾರದು.

## ಅಲ್ಲಲ್ಲಿಯ ಸುದ್ದಿ ಸಾರ

**ರಾಷ್ಟ್ರೀಯ ಉಳಿತಾಯ ಯೋಜನಾ ಶಿಬಿರ**— ಉಡುಪಿ ತಾಲೂಕು ರಾಷ್ಟ್ರೀಯ ಉಳಿತಾಯ ಯೋಜನಾ ಸಂಘದ ಜವಾಬ್ದಾರಿಕೆಯಲ್ಲಿ ಕಳೆದ ತಾ. ೬ರಂದು, ಮಲ್ಪೆಯ ಫಿಶರೀಸ್ ಸ್ಕ್ಯಾಲಿನಲ್ಲಿ ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ, ಶ್ರೀ ಎಂ. ಮಧ್ವರಾಜರಿಂದ ರಾಷ್ಟ್ರೀಯ ಯೋಜನಾ ಶಿಬಿರವು ಉದ್ಘಾಟಿಸಲ್ಪಟ್ಟಿತು. ಪ್ರಾರಂಭದಲ್ಲಿ ರಾಜ್ಯದ ಉಳಿತಾಯ ಯೋಜನಾ ಇಲಾಖೆಯ ಅಧಿಕಾರಿ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಮಧ್ವರಾಜರು ಉದ್ಘಾಟನಾ ಭಾಷಣ ಮಾಡುತ್ತಾ, ದೇಶದ ಮುಂದಿರುವ ಭೀಕರ ಪರಿಸ್ಥಿತಿಯನ್ನು ತಿಳಿಸಿ ಅದನ್ನು ಎದುರಿಸಲು ಎಲ್ಲರೂ ಏಕತಾ ಭಾವನೆಯಿಂದ ದೃಢ ಸಂಕಲ್ಪದಿಂದ ಸಿದ್ಧರಾಗಬೇಕೆಂದೂ ಈ ಶಿಬಿರದಲ್ಲಿ ಮಾಹಿತಿ ಪಡೆದವರು ಪಟ್ಟಣದಲ್ಲಿ ಮಾತ್ರವಲ್ಲದೇ ಗ್ರಾಮಾಂತರಗಳಲ್ಲಿಯೂ ಉಳಿತಾಯದ ಮಹಾನ್ ಸಂದೇಶವನ್ನು ಜನತೆಗೆ ಸಾರಬೇಕೆಂದೂ ಹೇಳಿದರು.

ಡಾ| ಪೈಗಳು ಮಾತಾಡುತ್ತಾ; ಬಡವರಾದರೂ, ಉಳಿತಾಯದಿಂದ ಶ್ರೀಮಂತರಾಗಲು ಸಾಧ್ಯವಿದೆ ಎಂದೂ ಭಾರತದ 45 ಕೋಟಿ ಪ್ರಜೆಗಳಲ್ಲಿ ಪ್ರತಿಯೊಬ್ಬರೂ, ದಿನಾಲೂ 10 ನಯೇ ಪೈಸೆಯಷ್ಟು ಉಳಿತಾಯ ಮಾಡಿದರೆ, ಇಡೀ ಭಾರತದ ಒಂದು ದಿನದ ಉಳಿತಾಯವು 4 1/3 ಕೋಟಿ ರೂಗಳಷ್ಟಾಗುವದೆಂದೂ ನಾವು ನಮ್ಮ ಉತ್ಪಾದನೆಯನ್ನೂ ಹೆಚ್ಚುಗೊಳಿಸಬೇಕೆಂದೂ ಉಳಿತಾಯವನ್ನೂ ಮಾಡಬೇಕೆಂದೂ ತಿಳಿಸಿದರು. ಕೊನೆಯಲ್ಲಿ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು ಧನ್ಯವಾದ ಸಮರ್ಪಿಸಿದರು.

**ಡಾ| ಕೆ. ಕೆ. ರೈಗಳ ನಿಧನ** – ಪುತ್ತೂರು ತಾಲೂಕಿನ ಪ್ರಸಿದ್ಧ ಕುಂಡಡ್ಕ ಮನೆತನದ ಡಾ| ಕೆ. ಕೆ. ರೈಗಳು ಕಳೆದ ತಾ. 7ರಂದು ಸಂಜೆ, ಪುತ್ತೂರಿನಲ್ಲಿ ಟೆನ್ನಿಸ್ ಆಡುತ್ತಿರುವಾಗಲೇ ಹೃದಯಸ್ತಂಭನದಿಂದ ಆಕಸ್ಮಿಕ ನಿಧನ ಹೊಂದಿರುವುದು ವಿಷಾದಕರವಿದೆ. ಡಾ| ರೈಗಳು ದ. ಕ. ಜಿಲ್ಲಾ ಬೋರ್ಡಿನ ಹಲವಾರು ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ಇತ್ತೀಚೆಗೆ ಬಂಟ್ವಾಳ ಆಸ್ಪತ್ರೆಯಿಂದ ನಿವೃತ್ತರಾಗಿದ್ದರು. ಡಾ. ರೈಗಳು ಶಾಂತ ಸ್ವಭಾವಿಗಳಾಗಿದ್ದು ನಿರಾಡಂಬರ ಜೀವನವನ್ನು ನಡೆಸುತ್ತಿದ್ದರು. ಇವರ ಸಹ ಧರ್ಮಿಣಿ ಶ್ರೀಮತಿ ಲೀಲಾವತಿ ರೈಗಳು ಬಂಟ್ವಾಳ ತಾಲೂಕು ಬೋರ್ಡಿನ ಅಧ್ಯಕ್ಷೆಯಾಗಿರುವರು. ಡಾ| ರೈಗಳು ಶ್ರೀಮತಿಯವರಿಗೆ, ಅವರ ಕೆಲಸದಲ್ಲಿ ತುಂಬಾ ನೆರವಾಗುತ್ತಿದ್ದರು

**ಶಿವಪುರ ಅನಂತ ಭಟ್ಟರ ನಿಧನ**
ಕಾರ್ಕಳ ತಾಲೂಕು ಶಿವಪುರ ಅನಂತ ಭಟ್ಟರು ತಾ. ೬ರಂದು ಶಿವಪುರದ ತನ್ನ ಮನೆಯಲ್ಲಿ ಹೃತ್ಕ್ರಿಯೆ ನಿಂತು ತನ್ನ ೭೬ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರು ಪುಣ್ಯ ಕಾರ್ಯಗಳಿಗೆ ಸಹಾಯ ನೀಡುವದರಲ್ಲಿಯೂ ಬಡ ಜನರಿಗೆ ನೆರವು ನೀಡುವದರಲ್ಲಿಯೂ ಅತ್ಯಂತ ಉದಾರಿಗಳಾಗಿದ್ದರು. ಶಿವಪುರ ಹಾಗೂ ಆಸುಪಾಸಿನ ಗ್ರಾಮಗಳಲ್ಲಿ ಮಾತ್ರವಲ್ಲದೆ ಶಿವಮೊಗ್ಗ ಭದ್ರಾವತಿಗಳಲ್ಲಿಯೂ ಜನಪ್ರಿಯರಾಗಿದ್ದರು.

**ವಾರ್ಷಿಕ ಮಹಾ ಸಭೆ** – ಉಡುಪಿ ಪರಿಯಾಳ ಸಮಾಜ ಸುಧಾರಕ ಸಂಘದ ವಾರ್ಷಿಕ ಮಹಾ ಸಭೆಯು, ತಾ. ೨೫—1—1963ನೇ ಶುಕ್ರವಾರ ಅಪರಾಹ್ನ 2 ಗಂಟೆಗೆ ಉಡುಪಿ ಚರ್ಚ ರೋಡಿನಲ್ಲಿರುವ ನಾಯಕ್ ಆಯುರ್ವೇದಾಶ್ರಮದ ಕಟ್ಟಡದ ಮಾಳಿಗೆಯಲ್ಲಿ, ಶ್ರೀ ಬಿ ಭಾಸ್ಕರ ಶೆಟ್ಟಿ ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

**ವೈದ್ಯಕೀಯ ಸಹಾಯ ವಿಸ್ತರಣಾ ಯೋಜನೆ**— ಇದೇ ತಾ. 11ರಂದು, ಡಾ. ಟಿ. ಮಾಧವ ಪೈಗಳು, ಕಾರ್ಕಳದಲ್ಲಿ ಅಲ್ಲಿಯ ಸಿಂಡಿಕೇಟ್ ಬೇಂಕಿನ ಶಾಖೆಯ ಆಶ್ರಯದಲ್ಲಿ ಜರಗಿಸಲಾದ, ವೈದ್ಯಕೀಯ ಸಹಾಯ ವಿಸ್ತರಣಾ ಯೋಜನೆಯನ್ನು ಉದ್ಘಾಟಿಸಿದರು.

ಡಾ. ಪೈಯವರು ಮಾತಾಡುತ್ತಾ, ಮಣಿಪಾಲದ ಕಸ್ತೂರ್ಬಾ ಜನರಲ್ ಹಾಸ್ಪಿಟಲ್ ಮತ್ತು ಅಲ್ಲಿಯ ವೈದ್ಯರಿಂದ ಈ ಯೋಜನೆಯ ಮುಖಾಂತರ, ದೊರಕಬಹುದಾದ ಸಲಹೆಗಳ ಉಪಯೋಗವನ್ನು ಎಲ್ಲರೂ ಪಡೆಯಬೇಕೆಂದೂ ವೈದ್ಯಕೀಯ ಉಪಯೋಗವನ್ನು ಹಳ್ಳಿ ಹಳ್ಳಿಗಳಿಗೂ ಒದಗಿಸುವುದೇ ಈ ಯೋಜನೆಯ ಮುಖ್ಯ ಕಾರ್ಯ"ವೆಂದೂ ಹೇಳಿದರು. ಡಾ| ಥೋಮಸ್‌ರವರು ಮಾತಾಡುತ್ತಾ ತಾನೂ ತನ್ನ ವೈದ್ಯಕೀಯ ಬಳಗವೂ ಜನರ ಸೇವೆಗೆ ಯಾವಾಗಲೂ ಸಿದ್ಧವೆಂದು ತಿಳಿಸಿದರು. ಕಾರ್ಕಳದ ತಹಸಿಲ್ದಾರರಾದ ಶ್ರೀ ಲಿಂಗಪ್ಪಯ್ಯನವರು, ಆಸ್ಪತ್ರೆ ಹಾಗೂ ಅಲ್ಲಿನ ವೈದ್ಯರಿಂದ ದೊರೆತ ಸಹಾಯಗಳನ್ನು ವಿವರಿಸಿದರು. ಶ್ರೀ ಕೆ. ವಿ. ಎಸ್. ಉಪಾಧ್ಯಾಯರು ಡಾ| ಪೈಗಳ ಹಾಗೂ ಅವರ ವೈದ್ಯಕೀಯ ಬಳಗದ ಸೇವೆಯನ್ನು ಶ್ಲಾಘಿಸಿ ಕಾರ್ಕಳದ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಇದೇ ದಿನ ಮಧ್ಯಾಹ್ನದ ನಂತರ ಸಾಧಾರಣ 300ಕ್ಕೂ ಮಿಕ್ಕಿದ ರೋಗಿಗಳನ್ನು ಪರೀಕ್ಷಿಸಿ ಅವರಿಗೆ ಈ ಯೋಜನೆಯ ವೈದ್ಯಕೀಯ ಮಂಡಳಿಯು ಸಲಹೆಯಿತ್ತಿತು.

**ರೋಟರಿ ಕ್ಲಬ್ಬಿನ ಸಭೆ**— ಇದೇ ತಾ. 12ರಂದು ಉಡುಪಿ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಶ್ರೀ ಟಿ ರಮೇಶ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಕೆಲವು ಆಟದ ಸಾಮಾನುಗಳನ್ನು, ಬ್ರಹ್ಮಗಿರಿಯಲ್ಲಿರುವ ಶ್ರೀ ಸ್ವಾಮಿ ಈಶ್ವರಾನಂದ ಹರಿಜನ ಬಾಲಿಕಾಶ್ರಮಕ್ಕೆ, ಶ್ರೀ ಆರೂರುಲಕ್ಷ್ಮೀನಾರಾಯಣ ರಾಯರ ಮುಖಾಂತರ ಒಪ್ಪಿಸಲಾಯಿತು.

ತರುಣ ವಿದ್ಯಾರ್ಥಿಗಳಲ್ಲಿರುವ ರಾಷ್ಟ್ರಪ್ರೇಮವನ್ನು ಪ್ರೋತ್ಸಾಹಿಸಲು ಹಾಗೂ, ಅವರ ನೈಜ ಹಾಗೂ ನೈತಿಕ ಗುಣ, ಪ್ರತಿಭೆ ಮಾತ್ರವಲ್ಲದೇ ಅವರ ಭವಿಷ್ಯದ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿಯು ಹೆಚ್ಚುವಂತೆ ಮಾಡಲು ಅನುಕೂಲವಾಗಿರುವ ತರಬೇತಿಯನ್ನು ಕೊಡಲು ಒಂದು 'ಇಂಟರ್ ಎಕ್ಟ್' ಸ್ಥಾಪಿಸುವ ಬಗ್ಗೆ ಆಲೋಚಿಸಿ ಪ್ರಯೋಗಾರ್ಥವಾಗಿ ಇಲ್ಲಿಯ ಬೋರ್ಡು ಹೈಸ್ಕೂಲಿನ 20 ಹೈಸ್ಕೂಲು ವಿದ್ಯಾರ್ಥಿಗಳನ್ನು ಆರಿಸಲಾಗುವುದು ಎಂದು ನಿರ್ಣಯಿಸಿದರು.


# ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ರಿಜಿಸ್ಟರ್ಡ್ ಆಫೀಸು: **ವಿಜಯಾ ಬ್ಯಾಂಕ್ ಬಿಲ್ಡಿಂಗ್,**
**ಲೈಟ್‌ಹೌಸ್ ಹಿಲ್‌ರೋಡು, ಮಂಗಳೂರು-3 ದ. ಕ.**

**—: ಏಲಂ ನೋಟೀಸು :—**

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಕಾಲದಲ್ಲಿ ಮರುಪಾವತಿ ಮಾಡುವರೇ ತಪ್ಪಿರುವುದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮ ಪ್ರಕಾರವಾದ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಿದ್ದರೂ ಸದ್ರಿ ಲೋನುಗಳ ಬಾಬ್ತು ಅಸ್ಲು ಬಡ್ಡಿ ಮೊಬಲಗನ್ನು ಸಲ್ಲಿಸದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 30—1—1963ನೇ ಬುಧವಾರ ಅಪರಾಹ್ನ ಘಂಟೆ 4ಕ್ಕೆ ಸರಿಯಾಗಿ ನ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಏಲಂನಲ್ಲಿ ಹುಟ್ಟಿ ಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿಗೆ ಬರ ಐವೇಜನ್ನು ವಸೂಲು ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ತಾ. 31.12.62ಕ್ಕೆ ಬರತಕ್ಕ ಮೊಬಲಗು |
|---|---|---|
| 826/61 | ದೀನನಾಥ ಕೆ. ಬಂಗೇರ, ಕುಪ್ಪ ಸಾಲಿಯಾನರ ಮಗ ಮೂಲೂರು ಪಟ್ನ ಮುಂಬಾಯಿ ಕುಪ್ಪನಮನೆ ಉಚ್ಚಿಲ ಪೋಸ್ಟು. | 102=40 |
| 973/61 | ಕೆ. ಹಸನ, ಮೈದಿನರ ಮಗ, ಮೂಲೂರು ಗ್ರಾಮ, ಉಚ್ಚಿಲ ಪೋಸ್ಟು. | 231=15 |
| 974/61 | ಯಮ್. ವಿಟ್ಠಲ ಹೆಗ್ಡೆ, ಸಿದ್ದಯ್ಯ ಹೆಗ್ಡೆಯವರ ಅಳಿಯ, ಮಲ್ಲಾರು ಗ್ರಾಮ ಮಲ್ಲಾರು ಪೋಸ್ಟು | 118=15 |
| 993/61 | ಬಾಬು ಶೆಟ್ಟಿ, ಅಂತಯ್ಯ ಶೆಟ್ರ ಅಳಿಯ, ಮೂಲೂರು ಬಿಕ್ರಿಗುತ್ತು, ಉಚ್ಚಿಲ ಪೋಸ್ಟು. | 174=65 |
| 1002/61 | ತಿಪ್ಪ ಜಿ. ಸಾಲಿಯಾನ್, ಗುಡ್ಡ ಪೂಜಾರಿಯವರ ಮಗ, ಪಡು ಗ್ರಾಮ, ಕಾಪು ಪೋಸ್ಟು. | 26=75 |
| 1039/61 | ರಾಮಯ್ಯ ಆಚಾರಿ, ಶೇಷ ಆಚಾರಿಯವರ ಮಗ, ಉಳಿಯಾರಗೋಳಿ ಗ್ರಾಮ, ಉಳಿಯಾರಗೋಳಿ ಪೋಸ್ಟು. | 15=50 |
| 1045/61 | ಅಣ್ಣಪ್ಪ ಪೂಜಾರಿ, ಬಂಗು ಪೂಜಾರಿಯವರ ಅಳಿಯ, ಮಲ್ಲಾರ್ ಗ್ರಾಮ, ಮೂಡಬೆಟ್ಟು ಪೋಸ್ಟು. ಮಲ್ಲಾರು | 230=30 |
| 1121/61 | ಹೇಮಚಂದ್ರ ಹೆಗ್ಡೆ, ಮಹಾಬಲ ಹೆಗ್ಡೆಯವರ ಮಗ, ಕೊಂಜಾರು ಯೆಲ್ಲೂರು ಗ್ರಾಮ, ಯೆಲ್ಲೂರು ಪೋಸ್ಟು. | 117=15 |
| 1191/61 | ಸುಂದರ ಮುಖಾರಿ, ಮೊಣ್ಣ ಮುಖಾರಿಯವರ ಮಗ ತೆಂಕು ಗ್ರಾಮ, ಯೆರ್ಮಾಳು ಪೋಸ್ಟು. | 19=80 |
| 1213/61 | ಸಿ ಐ. ಬಂಗೇರ, ಇಸಿಯಲ್ ಬಂಗೇರರ ಮಗ, ಮಿಶನ್ ಕಂಪೌಂಡ್, ಉಚ್ಚಿಲ. | 71=00 |
| 1242/61 | ,, ,, ,, | 28=85 |
| 1260/61 | ,, ,, ,, | 45=40 |
| 1229/61 | ಗೋಪ ಪೂಜಾರಿ, ಕೊರಗ ಪೂಜಾರಿಯವರ ಮಗ, ಗರಡಿಮನೆ, ಪಡುಗ್ರಾಮ, ಮಲ್ಲಾರು ಪೋಸ್ಟು. | 26=45 |
| 1232/61 | ಸುಬ್ಬಯ್ಯ ಕೆ. ಕೋಟಿಯಾನ್, ಕಾಂತು ಬೆಲ್ಚಾಡರ ಮಗ, ಹೋಟೇಲು ಮಾಲಿಕ, ಕಾಪು. | 37=55 |
| 1306/61 | ನಾರಾಯಣ ಆಚಾರಿ, ತಮ್ಮಯ್ಯ ಆಚಾರಿಯವರ ಮಗ, ಪಾದೂರು ತಾನ್ಕೊಟ್ಟು ಪಾದೂರು ಪೋಸ್ಟು. | 18=35 |
| 22/62 | ಮುಸ್ತಫ್ ಸಾಹೇಬ್, ಅಲ್ಲಿ ಸಾಹೇಬರ ಮಗ, ಮಲ್ಲಾರ್ ಗ್ರಾಮ, ಮಲ್ಲಾರ್ ಪೋಸ್ಟು | 23=30 |
| 25/62 | ಕಮಲ ಮರಕಾಲ್ತಿ, ಚಿಕ್ಕಿ ಮರಕಾಲ್ತಿಯವರ ಮಗಳು, ಕೈಪುಂಜಾಲ್, ಕೊಕ್ರ ಮರಕಾಲರಮನೆ, ಉಳಿಯಾರಗೋಳಿ ಪೋಸ್ಟು. | 12=90 |
| 40/62 | ಜಗನ್ನಾಥ ಯುಸ್. ಸಾಲಿಯಾನ್, ಶೀನ ಸುವರ್ಣರ ಮಗ, C/o ಅಲಂಕಾರ ಡ್ರೆಸ್ಸಿಂಗ್ ಕಾಪು. | 39=75 |
| 533/62 | ಯಚ್. ಅಹಮದ್, ಹುಸೈನರ ಮಗ, ಪಡುಗ್ರಾಮ ಲೈಟ್ ಹೌಸಿನ ಹತ್ತಿರ, ಕಾಪು. | 54=55 |
| 465/62 | ಯಚ್. ಅಹಮ್ಮದ್ ಬ್ಯಾರಿ, ಹುಸೈನ್ ಬ್ಯಾರಿಯವರ ಮಗ, ಪಡುಗ್ರಾಮ ಕಾಪು ಪೋಸ್ಟು. | 38=85 |

THE VIJAYA BANK LTD., KAUP, Dated: 10-1.1963. — B. BHASKARA SHETTY, *Agent.*



ಬರುವ ವಾರ
ಪ್ರಸಿದ್ಧ ಲೇಖಕರ ವಿವಿಧ
ಲೇಖನಗಳಿಂದೊಡಗೂಡಿ
ಪ್ರಕಟವಾಗಲಿರುವ
**ಪ್ರಜಾರಾಜ್ಯ ವಿಶೇಷಾಂಕ**
ವನ್ನು ನಿರೀಕ್ಷಿಸಿರಿ!


(೧ನೇ ಪುಟದಿಂದ)

ನ, ಸಂಚಾರ ಶಾಕರ್ಯ ರಕ್ಷಣೆ, ಅಗ್ನಿಶಮನ ಜ್ಞಾನ, ಸಂಘಟನೆ, ವ್ಯಾಯಾಮ, ರೈಫಲು ಕೇಂದ್ರ ಸ್ಥಾಪನೆ ಮೊದಲಾದುವುಗಳಲ್ಲಿ ಗ್ರಾಮವು ಆಸಕ್ತವಾಗಬೇಕು.

ಜನನಿಯ, ಜನ್ಮಭೂಮಿಯ ಋಣ ತೀರಿಸುವ ಸುಯೋಗ ಸರ್ವರಿಗೂ ಸರ್ವಕಾಲದಲ್ಲಿಯೂ ಸಿಕ್ಕುವುದಿಲ್ಲ. ನಮ್ಮ ಸುದೈವದಿಂದ ಜನ್ಮಭೂಮಿಯ ಋಣ ತೀರಿಸುವ ಸುಯೋಗ ನಮಗೀಗ ಬಂದಿದೆ ಇದನ್ನು ಕಳೆದುಕೊಳ್ಳದಿರೋಣ. ಎಲ್ಲರೂ ನಮ್ಮನಮ್ಮ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ನಿರ್ವಹಿಸಿ ಭಾರತಾಂಬೆಯ ಮಕ್ಕಳೆನಿಸಿಕೊಳ್ಳಲು ತಕ್ಕವರಾಗೋಣ.

**ಶ್ರೀ ರಾಮಕೃಷ್ಣ ಹೆಗಡೆ,**
ಅಭಿವೃದ್ಧಿ ಮತ್ತು ಸಹಕಾರ ಮಂತ್ರಿ
ಮೈಸೂರು ರಾಜ್ಯ.

ಜಗತ್ತಿನ ಹಿತಕ್ಕಾಗಿ...

# ಭಾರತ ಸರ್ವಸ್ವವನ್ನು ತ್ಯಾಗ ಮಾಡಲಿ

"ಉತ್ತಿಷ್ಠ ನರಶಾರ್ದೂಲ"ನೆಂದು ಶ್ರೀರಾಮನನ್ನು ಸಂಬೋಧಿಸಿ ವಿಶ್ವಾಮಿತ್ರ ಹೇಳಿದ ಕಾಲವೊಂದಿತ್ತು. "ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ" ಎಂದು ಅರ್ಜುನನನ್ನು ಶ್ರೀಕೃಷ್ಣನು ಸಂಬೋಧಿಸಿದ ಕಾಲವೊಂದಿತ್ತು. "ಸರ್ವಸ್ವವನ್ನು ಭಸ್ಮಮಾಡಿ ಬನ್ನಿ ನನ್ನ ಹಿಂದೆ" ಎಂದು ಗಾಂಧೀಜಿಯವರು ಭಾರತೀಯರನ್ನೆಲ್ಲ ಸಂಬೋಧಿಸಿದ ಕಾಲದ ಪರಿಚಯ ನಮ್ಮಲ್ಲಿ ಹಲವರಿಗಿದೆ. ಇಂದು ಉತ್ತರ ದಿಕ್ಕಿನಲ್ಲಿ ಅವತರಿಸಿ, ವಾಯವ್ಯ ಈಶಾನ್ಯ ಮೂಲೆಗಳ ಮೂಲಕ ಭಾರತದ ಪುಣ್ಯ ಭೂಮಿಯ ಮೇಲೆ ಆಕ್ರಮಣ ಕ್ರೂರ ಕರ್ಮವನ್ನಾರಂಭಿಸಿರುವ ಚೀನಾಸುರರನ್ನು ಭಾರತದ ಸೀಮಾ ರೇಖೆಯಿಂದಾಚೆಗೆ ಓಡಿಸಲು ಮಹಾ ಪ್ರಧಾನ ಪಂಡಿತ ಜವಹರಲಾಲ್ ನೆಹರೂಗಳು ಭಾರತೀಯರನ್ನೆಲ್ಲ "ಪ್ರಜಾತಂತ್ರಾತ್ಮಕ ಗಣರಾಜ್ಯ ರಕ್ಷಕರೆ! ಸ್ವಾತಂತ್ರ್ಯ ಪ್ರೇಮಿಗಳೇ! ಏಳಿ! ಎಚ್ಚೇಳಿ"ರೆಂದು ಕೇಳುತ್ತಿದ್ದಾರೆ.

**ಶಾಂತಿ ಕ್ಷೇತ್ರ ಎಂದು ಕುರುಕ್ಷೇತ್ರ**

"ಉತ್ತರದ ಶಾಂತಿಯುತ ಕ್ಷೇತ್ರ" ವಿಂದು ಕುರುಕ್ಷೇತ್ರವಾಗಿದೆ. ಸ್ವತಂತ್ರ ರಾಷ್ಟ್ರ ಜೀವನದ ಮರ್ಯಾದೆಗಿಂದು ಭಂಗ ಬಂದಿದೆ. ಭಾರತ ಸ್ವಾತಂತ್ರ್ಯಕ್ಕೇ ಸಂಚಕಾರ ಬಂದಿದೆ. ಮಿತ್ರ ದ್ರೋಹಿಗಳಾದ ಚೀನರು ನಮ್ಮ ಮಾತೃಭೂಮಿಯ ಪವಿತ್ರತೆಯನ್ನು ಭಂಗಗೊಳಿಸಿ ಯತ್ನಿಸುತ್ತಿದ್ದಾರೆ. ರಾಷ್ಟ್ರದಲ್ಲಿಂದು ಘೋರ ಪರಿಸ್ಥಿತಿ ತಲೆ ಹಾಕಿದೆ ಇದೇ ವಿಶೇಷ ಪರಿಸ್ಥಿತಿ—ಸಂಗ್ರಾಮ ಪರಿಸ್ಥಿತಿ" ಎಂದ ವಿವರಿಸುತ್ತಿದ್ದಾರೆ. ಇಂತಹ ವಿಪತ್ತು, ವಿಪ್ಲವ, ಧರ್ಮಗ್ಲಾನಿ—ಉಂಟಾದಾಗ ಇಲ್ಲಿನ ಜನಪದವು ತನ್ನ ಸರ್ವಶಕ್ತಿಗಳಿಂದ, ತೇಜಸ್ಸಿನಿಂದ, ವಿರಾಡ್ರೂಪದಿಂದ ವ್ಯಕ್ತವಾಗುವುದು!

**ಭಾರತ ವಿಶ್ವಪ್ರೇಮಿ-ವಿಶ್ವಬಂಧು**

ದೀರ್ಘಕಾಲ ಹೋರಾಡಿ, ಗಾಂಧೀಜಿಯವರ ದಿವ್ಯ ನ್ಯಾಯ ಕತ್ತದಲ್ಲಿ, ಜಗತ್ತು ಕಂಡು ಕೇಳರಿಯದ ರೀತಿಯಲ್ಲಿ, ಪರಮ ಒಲಿಯುತ ಸಾಮ್ರಾಜ್ಯವನ್ನು ಹತೋಟಿ ತಪ್ಪಿಸಿದವು. ಆದರೂ ಅವರು ಭಾರತದ ಮಿತ್ರರಾಗಿಯೇ ಉಳಿದಿದ್ದಾರೆ....ಆ ಮಹಾತ್ಮನ ಆಶೀರ್ವಾದ, ದೇವರ ಅನುಗ್ರಹ, ಭಾರತವಿಂದ 'ವಿಶ್ವಪ್ರೇಮಿ-ವಿಶ್ವಬಂಧು'ವೆನಿಸಿ ಶಾಂತಿಯುತ ಸಹಬಾಳ್ವೆಯ ಜೀವನವನ್ನು ನಡೆಸುತ್ತ ಬಂದಿದೆ. ಗಾಂಧೀಜಿಯವರ 'ಕರ್ಮಲಮ ಲಸಂ ಜಾತ ನೆಹರೂಗಳೇ ಉದಾರ 'ಪಂಚಶೀಲ" ನೀತಿ ಪ್ರತಿಪಾದಕರು ಪ್ರತಿಪಾಲಕರ ಏಷ್ಯಾ ಆಫ್ರಿಕಾ, ಯೂರೋಪ್ ಎಲ್ಲ ಖಂಡಗಳ ಸ್ನೇಹವನ್ನೂ ಭದ್ರಗೊಳಿಸಿದರು. ಚೀನದೊಂದಿಗೂ ಬಾಂಧವ್ಯ ಬೆಳೆಸಿದರು. ಚೌ ಎನ್ ಲೈ ಭಾರತದ ಭೇಟಿಯೊಂದು ಮಹಾ ಐತಿಹಾಸಿಕ ಪ್ರಕರಣ.

ಚೀನಾ ಭಾರತಗಳೆರಡೂ ಮಹಾ ಪ್ರಾಚೀನ ರಾಷ್ಟ್ರಗಳು — ಯುಗ ಯುಗಗಳ ಪ್ರಾಚೀನ ಪವಿತ್ರೇತಿಹಾಸವುಳ್ಳ ಜನಾಂಗಗಳು. ಇವೆರಡು ರಾಷ್ಟ್ರಗಳ ಮಧ್ಯೆ ದೇವತಾತ್ಮಾ ನಗಾಧಿರಾಜ, ಹಿಮಾಲಯ " ಮಾನಸ ಸರೋವರ ಇರುವುದಲ್ಲ! ಕೈಲಾಸವಿರುವುದಲ್ಲ! ಗೌರೀ-ಸ್ವರೂಪ ಮಹಾ ತಪಸ್ಸು ಮಾಡಿದ್ದಲ್ಲೇ! ಗಂಗಾ, ಸಿಂಧೂ, ಬ್ರಹ್ಮಪುತ್ರ ನದಿಗಳೆಲ್ಲ ಉದ್ಭವಿಸುವುದಲ್ಲಿ! ಜಗತ್ತಿನ ಅತ್ಯುನ್ನತ ಶೃಂಗ 'ಗೌರೀಶಂಕರ' ಇರುವುದಲ್ಲಿ!

ಮಂಥರಾ ದುರ್ಬೋಧನೆಯು ರಾಮರಾವಣರ ಯುದ್ಧಕ್ಕೆ ಕಾರಣವಾಯಿತು. ಶಕುನಿ ಚೇಷ್ಟೆಯು ಕೌರವ-ಪಾಂಡವರ ಯುದ್ಧಕ್ಕೆ ಕಾರಣವಾಯಿತು; ಮಾವೋ-ಚಾ ದುರಾಶೆ ಇಂದು ಚೀನಾ-ಭಾರತ ಯುದ್ಧಕ್ಕೆ ಕಾರಣವಾಗಿದೆ ರಣವಾದ್ಯಗಳು ಮೊಳಗುತ್ತಿವೆ. ಯುಗ ಯುಗಗಳ ತಪೋಭೂಮಿ ಇಂದು ರಣಭೂಮಿಯಾಗಿದೆ. ಅಭ್ರಂಕಷ ಹಿಮಾಲಯದ ಗಿರಿ ಕಂದರ ಕಾಂತಾರ ಪ್ರದೇಶಗಳೆಲ್ಲ ಮಲಿನ ರಕ್ತಪ್ರವಾಹ ಕ್ಷೇತ್ರಗಳಾಗಿವೆ. ಈ ರಾಕ್ಷಸೀ ಪರಿವರ್ತನಕ್ಕೆ ಕಾರಣರು ಚೀನದ ಕಮ್ಯೂನಿಸ್ಟ್ ನಾಯಕರು. ಈ ರಕ್ಕಸಿಖಾಸಿಗಳನ್ನು ನಾವು ಎದುರಿಸಬೇಕಾಗಿದೆ.

**ಸತ್ವಪರೀಕ್ಷೆಯ ವಿಷಮಗಳಿಗೆ**

ನಮ್ಮ ಸತ್ವಪರೀಕ್ಷೆಯ ವಿಷಮಗಳಿಗೆ ಇದು ನಾವೀಗ ಸತ್ವ-ಶಕ್ತಿಗಳೆರಡನ್ನು, ಅಪೂರ್ವ ಗುಣ ಪ್ರಮಾಣಗಳಿಂದ ತೋರಿಸಬೇಕಾಗಿದೆ ಸರ್ವಸ್ವವನ್ನು ಭಾರತ ಮಾತೆಯ ಪಾದಾರವಿಂದಗಳಲ್ಲಿ ಸಮರ್ಪಿಸಿ, ಕೈಯಲ್ಲಿ ಕರವಾಲ ಹಿಡಿದು,

"ತಾಯೆ! ಇದೋ ಹೊರಟೆ, ನಿನ್ನ
ಮೇಲಾಕ್ರಮಣ ಮಾಡಲು ಬಂದ
ಚೀನಾ ದಾನವ ಕುಲ ನಿರ್ಮೂಲ
ಮಾಡುವ ಶಕ್ತಿಯನ್ನು ನಮಗೆ
ಕೃಪೆ ಮಾಡಿ, ನಮ್ಮನ್ನು ಹರಸು."

ಎಂದು ಪ್ರಾರ್ಥಿಸಬೇಕಾಗಿದೆ.

ಭಾರತವು ಸ್ವತಂತ್ರವಾಗಿದ್ದರೆ ಜಗತ್ತು ಸ್ವತಂತ್ರ; ಭಾರತದಲ್ಲಿ ಶಾಂತಿ ಇದ್ದರೆ ಜಗತ್ತಿನಲ್ಲಿ ಶಾಂತಿ. ಆದ ಕಾರಣ ಭಾರತವು ಜಗತ್ತಿನ ಹಿತಕ್ಕಾಗಿ, ಮಾನವ ಕುಲದ ಕಲ್ಯಾಣಕ್ಕಾಗಿ, ಸರ್ವಸ್ವವನ್ನೂ ತ್ಯಾಗಮಾಡಬೇಕು. ಭಾರತೀಯರೆಲ್ಲ ಬಲಭದ್ರರೆನಿಸಬೇಕು! ಮಕ್ಕಳೆಲ್ಲ ಅಭಿಮನ್ಯು ಸಮಾನರೆನಿಸಬೇಕು

ಶ್ರೀ ಕೆ. ತಾ. ಶರ್ಮ, ಬೆಂಗಳೂರು

[ಆಕಾಶವಾಣಿ ಬೆಂಗಳೂರು ಕೇಂದ್ರದ ಸೌಜನ್ಯದಿಂದ.]

## ಆದರ್ಶ ಕವಿ–ವರ ಮುದ್ದಣ

(೫ನೇ ಪುಟದಿಂದ)

ರ ಮಧ್ಯಾಹ್ನ ಅಕಾಲ ಮೃತ್ಯುವಿಗೆ ತುತ್ತಾದನು.

ಮುದ್ದಣ್ಣ ಕವಿಯ ಜೀವಿತದ ನೆನಪು ಕಂಬನಿಯ ಕಡಲಾದರೆ, ಆತನ ಕೃತಿಯು ಆನಂದಾನುಭವ ಅಮೃತಧಾರೆಯಾಗಿದೆ! ಅದುವರಿಂದಲೇ ಕನ್ನಡದ ಪರಂಪರೆ ಮುದ್ದಣ್ಣ ಪರಂಪರೆ ಇಂದಿಗೂ ಸಾಗುತ್ತಿದೆ; ಮುಂದೆಯೂ ಸಾಗಲಿದೆ. ಚಂದನದ ವಿಧಿ ಕಠಿಣ ಶಿಲೆಯಲ್ಲಿ ನಿತ್ಯ ತೇಯುತ್ತಿದ್ದರೂ ಅದು ಪೂಸಿದವರ ಮೈಗೆ ಸಿತ್ಯತಂಪನ್ನೂ ಮೂಸಿದವರ ಮೂಗಿಗೆ ಕಂಪನ್ನೂ ಕೊಡುತ್ತದೆ. ಎಲ್ಲೋ ಕಾಡಿನಲ್ಲಿ ಹುಟ್ಟಿ, ಅಲ್ಲೇ ಕೊರಡಾಗಿ ಬಿದ್ದು ಕೊಳೆಯುವುದಕ್ಕಿಂತಲೂ, ಈ ಜೀವ ಲೋಕಕ್ಕೆ ಆನಂದವನ್ನು ಕೊಡುವ ಭಾಗ್ಯ ಚಂದನಕ್ಕೆ ದೊರಕಿದರೆ, ಆ ಭಾಗ್ಯಕ್ಕಿಂತ ಮಿಗಿಲಾಗಿಲ್ಲದುದು ಅದಕ್ಕೆ ಬೇರೇನಿದೆ! ಅಂತೆಯೇ ಮನುಷ್ಯನಾಗಿ ಹುಟ್ಟಿ ನೂರು ವರ್ಷ ಬದುಕಿದರೂ ಬರಿದೆ ಹಣ್ಣಾಗಿ, ಮಣ್ಣಾಗಿ ಹೋಗುವ ಈ ದೇಹ, ಗಾಳಿಯಲ್ಲಿ ತೇಲಿ ಹೋಗುವ ಈ ದೇಹ, ಕೇವಲ ಹತ್ತೇ ದಿನ ಬಾಳಿದರೂ ಹಲವಾರು ಜನರಿಗೆ ಆನಂದವನ್ನು ಕೊಡಬಲ್ಲದಾದರೂ ಹಾಗೆ ಜೀವ ಲೋಕಕ್ಕೆ ಕೊಡಬಲ್ಲದಾದ ಆನಂದ ಶಾಶ್ವತವಾಗಿ ಉಳಿಯಬಲ್ಲುದಾದರೆ ಅಂತಹ ಜೀವನ ನಿಜವಾಗಿಯೂ ಸಾರ್ಥಕ! ಧನ್ಯ! ಕನ್ನಡ ಸಾರಸ್ವತ ಲೋಕದ ಓ ವೀರ ಕುವರ ಮುದ್ದಣ್ಣ ನಿನ್ನ ಕೃತಿಗಳ ಸಂದೇಶವೂ ಇದೇ ಅಲ್ಲವೇ! ಅದೇ ಕನ್ನಡ ಕವಿಗಳ ಶ್ವಾಸನಿಶ್ವಾಸ!! ಮುದ್ದಣ್ಣ ನೆನಹಿಗೆ ಇದೇ ನಮ್ಮ ಪರಮಶ್ರದ್ಧಾಂಜಲಿ!!!

ಉಜ್ವಲ ಭವಿಷ್ಯವಿರುವ

# ಬ್ಯಾಂಕರ್ ಟಿ. ಎ. ಪೈ

"ನಮ್ಮ ದೇಶದ ಮಹತ್ತರವಾದ ಸಮಸ್ಯೆಯೆಂದರೆ ಪ್ರತಿಯೊಬ್ಬನಿಗೂ ಬ್ಯಾಂಕಿನಲ್ಲಿ ಒಂದು ಸೇವಿಂಗ್ಸ್ ಖಾತೆಯನ್ನು ತೆರೆಯಲು ಸಮರ್ಥತೆಯನ್ನು ಕಲ್ಪಿಸಿಕೊಡುವುದು" ಎಂಬುದಾಗಿ ಕಳೆದ ವರ್ಷ ಡಾ| ಟಿ ಎಂ. ಎ. ಪೈಗಳವರಿಂದ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಇದರ ಮ್ಯಾನೇಜಿಂಗ್ ಡೈರೆಕ್ಟರ್ ಹದ್ದೆಯನ್ನು ಸ್ವೀಕರಿಸಿದ ಶ್ರೀ ಟಿ ಎ. ಪೈಗಳು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀ ಪೈಗಳು ಈ ಹುದ್ದೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಹೆಚ್ಚಿನ ಪರಿಶ್ರಮವನ್ನು ಹೊತ್ತು ತಂದಿದ್ದಾರೆ.

ಮುಂಬಯಿಯ ಸಿಡ್ನೆಮ್ ವಾಣಿಜ್ಯ ಮತ್ತು ಅರ್ಥಶಾಸ್ತ್ರ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಬಳಿಕ ಶ್ರೀಯುತರು ೧೯೪೩ರಲ್ಲಿ ಉಪ ಮ್ಯಾನೇಜರರಾಗಿ ಸಿಂಡಿಕೇಟ್ ಬ್ಯಾಂಕನ್ನು ಸೇರಿದರು. ನೂತನ ವ್ಯಾಪಾರ ಖಾತೆಯಲ್ಲಿದ್ದ ಶ್ರೀ ಪೈಗಳವರು ಉದ್ದಿಮೆಯನ್ನು ವ್ಯಾಪಕ ರೀತಿಯಲ್ಲಿ ಬೆಳೆಸಲು ಉದ್ಯುಕ್ತರಾಗಿ, ೧೯೪೪ರಲ್ಲಿ ಬ್ಯಾಂಕಿನ ಜನರಲ್ ಮ್ಯಾನೇಜರರಾದರು.

೧೯೬೧ರ ತನಕದ ಅವರ ಉಜ್ವಲ ಅಧಿಕಾರಾವಧಿಯಲ್ಲಿ ಅವರ ಬ್ಯಾಂಕಿಂಗ್ ಕ್ಷೇತ್ರದ ಉನ್ನತ ಧ್ಯೇಯಗಳು ಬಹುಮಟ್ಟಿಗೆ ಫಲದಾಯಕವಾಗಿವೆ, ೧೯೬೧ರ ನಂತರ ಅಲ್ಪಾವಧಿಯ ತನಕ ಡಿಪ್ಯುಟಿ ಛೀಫ್ ಆಫೀಸರ್ ಎಂದು ನಾಮಾಂಕಿತರಾದ ಶ್ರೀ ಪೈಗಳು ೧೯೬೨ರ ಜನವರಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡರು. ಶ್ರೀಯುತರು ಈಗ ಬ್ಯಾಂಕಿನ ಛೀಫ್ ಎಕ್ಸಿಕ್ಯುಟಿವ್ ಆಫೀಸರರಾಗಿದ್ದಾರೆ.

ಹಿಂದಿನ ಕೆಲವು ವರ್ಷಗಳಲ್ಲಿ ಸಿಂಡಿಕೇಟ್ ಬ್ಯಾಂಕ್ ಸಾಧಿಸಿದ ಅದ್ಭುತ ಪ್ರಗತಿಯಲ್ಲಿ ಶ್ರೀ ಪೈಗಳವರ ಪಾತ್ರ ಅಮೋಘವಾದುದು. ಅವರು ಈ ವಿಷಯದಲ್ಲಿ ನಿಷ್ಠೆಯವರಾಗಿಯೂ ಹೆಮ್ಮೆ ಪಡಬಹುದಾಗಿದೆ. ೩೭ ವರ್ಷಗಳ ಹಿಂದೆ ಕೇವಲ ಎಂಟು ಸಾವಿರ ರೂಪಾಯಿ ಮೂಲಧನದಿಂದ ಪ್ರಾರಂಭವಾದ ಈ ಬ್ಯಾಂಕು ಇಂದು ದೇಶದ ಮುಖ್ಯ ಬ್ಯಾಂಕುಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಒಟ್ಟು ಡಿಪಾಸಿಟ್ ಸುಮಾರು ೩೦ ಕೋಟಿಯಾಗಿದ್ದರೆ, ಭಂಡವಾಳವು ರೂ ೩೭ ಕೋಟಿಗೂ ಮಿಕ್ಕಿದೆ.

ಚಿಕ್ಕ ಹಳ್ಳಿಗಳಲ್ಲಿ ಹಾಗೂ ಚಿಕ್ಕ ಪಟ್ಟಣಗಳಲ್ಲಿ ಶಾಖೆಗಳುಳ್ಳ ಈ ಬ್ಯಾಂಕು ಇಂದು ೧೪೩ ಶಾಖೆಗಳನ್ನೊಳಗೊಂಡಿದೆ. ಚಿಕ್ಕ ಉಳಿತಾಯ ಯೋಜನೆಯನ್ನು ಫಲಕಾರಿಯಾಗಿ ಪ್ರಚುರ ಪಡಿಸುವುದರಲ್ಲಿ ಭಾಗಿಯಾದ ಈ ಬ್ಯಾಂಕು ಪಿಗ್ಮಿ ಡಿಪಾಜಿಟ್ ಯೋಜನೆಯ ಮೂಲಕ ಹೆಚ್ಚು ಜನರನ್ನು ಬ್ಯಾಂಕಿಂಗ್ ಕ್ಷೇತ್ರದತ್ತ ಆಕರ್ಷಿಸಿದೆ.

ಬ್ಯಾಂಕಿನ ಅಮೋಘ ಯಶಸ್ಸು ಅವರ ನಿಸ್ವಾರ್ಥ ಸೇವೆಯಿಂದಲೇ ಲಭಿಸಿತೆಂದು ಶ್ರೀ ಪೈಗಳವರು ಹೇಳುತ್ತಾರೆ. "ಯಾವ ವ್ಯವಹಾರವೂ ಸಣ್ಣದೆಂದು ಪರಿಗಣಿಸಲ್ಪಡುವುದಿಲ್ಲ. ಎರಡಾಣೆಯೂ ಕೂಡಾ ಚಿಕ್ಕ ಮೊತ್ತವಲ್ಲ. ಕೃಷಿ, ಪಟ್ಟಿಗಾರಿಕೆಯು ಬ್ಯಾಂಕಿಂಗ್ ಕ್ಷೇತ್ರವನ್ನು ವಿಸ್ತರಿಸುವ ಒಬ್ಬ ಬಳು ಮುಖ್ಯವಾದ ಜಾಹೀರಾತುದಾರನಾಗಿದ್ದಾನೆ" ಎಂಬುದು ಶ್ರೀ ಪೈಗಳವರ ಅಭಿಪ್ರಾಯ.

ಶ್ರೀ ಪೈಗಳವರು ಬೇರೆ ಸಂಘ—ಸಂಸ್ಥೆಗಳಲ್ಲಿಯೂ ತಮ್ಮ ಉಪಯುಕ್ತತೆಯನ್ನು ತೋರಿಸಿ ಕೊಟ್ಟಿದ್ದಾರೆ. ಅವರು ಮೈಸೂರು ವ್ಯವಸಾಯ ಸಂಘ, ಬೆಂಗಳೂರು ಸೌತ್ ಕೆನರಾ ಕೋ-ಓಪರೇಟಿವ್ ಬ್ಯಾಂಕ್', ಮಂಗಳೂರು ಹಾಗೂ ಉಡುಪಿ ಹರಿ ಹಗ್ಗ ಕೆಲಸಗಾರರ ಕೋ-ಓಪರೇಟಿವ್ ಸಂಘ ಮುಲ್ಕಿ, ಇವುಗಳ ಡೈರೆಕ್ಟರೂ ಆಗಿದ್ದಾರೆ.

["Industrial Times"ನಿಂದ]

—ಶ್ರೀ ಎನ್. ನಾರಾಯಣ ಬಲ್ಲಾಳ

ಭವ್ಯ ಭವಿಷ್ಯಕ್ಕಾಗಿ
ರಾಷ್ಟ್ರ ರಕ್ಷಣೆಯ ನೆರವಿಗಾಗಿ
1963ರ ಪ್ರೀಮಿಯಂ
ಪ್ರೈಜ್ ಬಾಂಡುಗಳನ್ನು
ಕೊಂಡುಕೊಳ್ಳಿರಿ.

## ಭಗವಂತ ಬಂದಿದ್ದಾನೆ

(೩ನೇ ಪುಟದಿಂದ)

ಪಿಯು ಅಲ್ಲೇ ಸುಳಿದಾಡುತ್ತಿದ್ದರು. ನಾವೂ ಹ್ಯೊಗೆ ಹಾಕುತ್ತಿದ್ದೆವು. ಆಗ ದಯಾಕರನು ನನ್ನ ಅಣ್ಣನವರಲ್ಲಿ ತೆಲುಗಿನಲ್ಲಿ ಏನೋ ಮಾತಾಡಿದರು. 'ನನಗೆ ಅರ್ಥವಾಗುವುದಿಲ್ಲ ಸ್ವಾಮಿ' ಎಂದರು. ನಿಮ್ಮ ಕಾರಿನ ಕೀ ಇತ್ತ ಕೊಡಿ, ಹ್ಯೊಗೆಯಲ್ಲಿ ಬಿದ್ದು ಹೋದೀತ..' ಎಂದು ಕೀ ತೆಕ್ಕೊಂಡರು. ಅಲ್ಲೇ ಬೇರೆ ಹ್ಯೊಗೆ ಹಾಕುತ್ತಿರುವ ನಮ್ಮ ಬಂಧು ಒಬ್ಬರಲ್ಲಿ 'ನೀವು ಎಂಬಾಸೆಡರ್ ಕಾರಿನಲ್ಲಿ ಬಂದದ್ದೇ' ಎಂದು ಕೇಳಿದರಂತೆ ಸರ್ವಾಂತರಯಾಮಿಯಾದ ಭಗವಂತನಿಗೆ ತಿಳಿಯದ ವಿಷಯ ಉಂಟೇ? ಸುತ್ತಲೂ ಕಾರ್ಮೋಡಗಳು ಕವಿಯುತ್ತಾ ಬರಲು ಚಿನ್ಮಯರೂಪಿಯು ಅಭಯ ಹಸ್ತಕ್ಕೆ ಅಂಜಿ ಸರಿದೇ ಬಿಟ್ಟವು. ಇದನ್ನೆಲ್ಲಾ ಕಂಡ ನಮಗೆ ಆಶ್ಚರ್ಯವಾಗುವುದರಲ್ಲಿ ವಿಶೇಷವೇನು?

ಸಂಜೆ ಗಂಟೆ ೬ಕ್ಕೆ ಭಗವಾನ್ ಬಾಬಾಜಿಯವರ ಮಾತಾ ಪಿತೃಗಳ ಸಂದರ್ಶನಕ್ಕಾಗಿ ತೆರಳಿದೆವು. 'ತುಂಬಿದ ಕೊಡ ತುಳುಕಾಡಲಾರದು." ಎಂಬ ಗಾದೆಯಂತೆ ಪೂಜ್ಯರ ತಾಯಿ ಶ್ರೀಮತಿ ಈಶ್ವರಾಂಬೆಯವರು, ನಮ್ಮನ್ನು ಕರೆದು ಕುಳ್ಳಿರಿಸಿ ಹಣೆಗೆ ಕುಂಕುಮವನ್ನಿಟ್ಟು ಸತ್ಕರಿಸಿದರು. ಮಹಾ ಮಾತೆಯಾ ಕಾಲು ಹಿಡಿದು ಅಲ್ಲೇ ಎದುರುಗಿದ್ದ ಪಾರ್ವತಮ್ಮ (ಬಾಬಾಜಿಯವರ ಅಕ್ಕ) ನವರ ಮನೆಗೂ ಹೋಗಿ ಆಶೀರ್ವಾದ ಪಡಕೊಂಡು, ಕನ್ನಡ ಭಾಷೆಯಲ್ಲೇ ಪರಸ್ಪರ ಮಾತಾಡಿ ಪ್ರಾರ್ಥನಾ ಮಂದಿರಕ್ಕೆ ಹಿಂತಿರುಗಿದೆವು.

೭ ಗಂಟೆಗೆ ಸರಿಯಾಗಿ ಭಜನೆಯು ಶುರುವಾಯಿತು. ನಾವೂ ಭಜನೆಯಲ್ಲಿ ಸೇರಿಕೊಂಡೆವು. ಬಾಬಾಜಿಯವರು ಬೆಳ್ಳಿಯ ಪೀಠವನ್ನಲಂಕರಿಸಿ ಗಟ್ಟಿಯಾಗಿ ತಾಳ ಹಾಕುತ್ತಿದ್ದರು. ಭಜನೆಯು ಮುಗಿಯಿತು, ಆರತಿಯಾಗುವಾಗ ಬಾಬಾಜಿ ಹೊರ ನಡೆದರು, ನಾವೂ ಭಜನೆ ಮುಗಿದು ಹೊರ ಬಂದು ಮಾಳಿಗೆಯ ಕಡೆಗೆ ನೋಡುತ್ತಾ ನಿಂತೆವು. 'ನಿಶಾಕಾಲವಲ್ಲ ಪ್ರತಿಜೀವರಾಶಿಯೂ ವಿಶ್ರಾಂತಿ ಪಡೆವ ಸಮಯ! ಆದರೆ ಶ್ರೇಷ್ಠವರ್ಗದ ಮನುಷ್ಯರಾದ ನಮಗೆ ಮಾತ್ರ ಈ ರಾತ್ರಿ ಛತ್ರದಲ್ಲೇ ಮಳೆ, ಗಾಳಿ, ಶೀತಕ್ಕೆ ಮಲಗಬೇಕಾಯಿತು. ಸಾಕಷ್ಟು ಬಟ್ಟೆಗಳನ್ನಾದರೂ ಹೊದೆದುಕೊಳ್ಳಲು, ಅವುಗಳೆಲ್ಲಾ ನಮ್ಮ ಕಾರಿನೊಳಗೆ, ಅದರ 'ಕೀ' ನಮ್ಮ ಅವತಾರ ಪುರುಷರಲ್ಲಿ; ಎಂದೆಲ್ಲಾ ಕಳವಳವಾಗುವಷ್ಟರಲ್ಲೇ! ಆ ನಮ್ಮ ಭಗವಾನ್ ಸ್ವರೂಪಿಯು ತಕ್ಷಣ ಮಾಳಿಯಿಂದ ಅಣ್ಣನವರಿಗೆ 'ಕೀ' ಕೆಳಗೆ ಹಾಕಿದರು. ಅಲ್ಲಿಂದಲೇ ವಂದಿಸಿ ಆಶೀರ್ವಾದಪಡೆದು ಊಟ ಮುಗಿಸಿ ಭವ್ಯವಾದ ಛತ್ರದಲ್ಲಿ ಮಲಗಿದೆವು.

ಮರುದಿನ ೪॥ ಗಂಟೆಗೆ ಎದ್ದು ಪ್ರಾರ್ಥನಾ ಮಂದಿರದತ್ತ ನಡೆದೆವು. ಒಳಗೆ ಮಂದಿರದಲ್ಲಿ ನಸು ಬೆಳಕಿನಲ್ಲಿ ಅನೇಕ ಭಕ್ತರು ಕುಳಿತ್ತಿದ್ದರು. ॥ ಗಂಟೆ ನಡೆಯುವ ಪ್ರಣವ ಧ್ಯಾನದಲ್ಲಿ ನಾವೂ ಸೇರಿದೆವು. ಮತ್ತೆ ನಾವು ಹೊರ ನಡೆದು ನಮ್ಮ ನಿತ್ಯ ಕರ್ಮಗಳನ್ನು ತೀರಿಸಿ ಕಾಫಿ ಕುಡಿದು ಬಂದೆವು ಕೆಲ ಮಂದಿ ಪ್ರಯಾಣಕ್ಕೆ ತಯಾರಾದರು. ಆದರೆ ನಾವು 'ಭಗವಂತನ ಹಿತೋಪದೇಶವನ್ನು ಪಡೆಯದೆ ಹೋಗುವುದಿಲ್ಲವೆಂದು ನಿಶ್ಚಯಿಸಿದೆವು'.

ಶಿಷ್ಯರೊಬ್ಬರು ಹೋಗುವವರಿಗೆ ಪ್ರಸಾದವನ್ನು ನನ್ನಲ್ಲಿ ಕೊಡುವಂತೆ ಬಾಬಾಜಿ ಹೇಳಿರುವರು ಎಂದು ಹೇಳಿದರು. ಅವರು ಕೊಟ್ಟ ವಿಭೂತಿಯ ಕಟ್ಟುಗಳನ್ನು 'I look to you if you look to mo' ಎಂಬ ಅವರ ಆಶ್ವಾಸನೆ ಉಳ್ಳ ಭಾವಚಿತ್ರವನ್ನು ಪಡಕೊಂಡೆ. ಅಂಗಳದಲ್ಲೇ ನಿಂತು ಮಾಳಿಗೆಯೆಡೆ ನೋಡುತ್ತಾ 'ಅಯ್ಯೋ ದೇವನೇ ನಿನಗೇನು ನಮ್ಮಲ್ಲಿಷ್ಟು ಬೇಸರ! ಕರುಣಾಕರಾ ನಮ್ಮೆಡೆಗೆ ನೋಡು! ಪರಶಿವನಿಗೆ ಸಮಾನನಾದ ತಂದೆಯೇ ನಮ್ಮಲ್ಲಿ ಮಾತಾಡು! ಮೊದಲಾಗಿ ಮನದಲ್ಲಿ ಸ್ಮರಿಸುತ್ತಿರಲು. ಆಗೋ! ಚಿನ್ಮಯ ರೂಪಿಯು ನಮ್ಮ ಮೊರೆಯನ್ನು ಕೇಳಿ ಈ ಕಡೆಗೆ ಬಂದೇ ಬಂದನು!

ನಮ್ಮನ್ನು ಆರು ಮಂದಿಯನ್ನು ಮಾತ್ರ ಸ್ವಾಮೀಜಿ ಬರಮಾಡಿಕೊಂಡರು. ಬಹು ಮಧುರವಾಗಿ ತಿಳಿಕನ್ನಡದಲ್ಲೇ ಮಾತನಾಡುತ್ತಾ ತನ್ನ ಅಭಯ ಹಸ್ತದಲ್ಲಿ ನಿರ್ಮಿಸಿದ ವಿಭೂತಿಯನ್ನು ನಮ್ಮೆಲ್ಲರ ಹಣೆಗೂ ಹಾಕಿ ಹೆಂಗಸರಿಗೆ ಕೈಗೆ ಹಾಕಿ ಬಾಯಿಗೆ ಹಾಕಿಕೊಳ್ಳುವಂತೆ ಹೇಳಿದರು. ಭಗವಾನ್ ಸ್ವರೂಪಿಯು ನಮ್ಮನ್ನು ಆತನೆಡೆಗೆ ಆಕರ್ಷಿಸಿಕೊಂಡು, ಆಹ್ಲಾದದಿಂದ ಮೆರೆಯುವಂತೆ ಮಾಡಬೇಕೇ! ಆಗ ನಮ್ಮ ದೇಹ ಮಾತ್ರ ಭೂಮಿಯಲ್ಲಿತ್ತು ಹೊರತು ಮನಸ್ಸು ಸ್ವಾಮಿಯೊಡನೆ ಐಕ್ಯತೆ ಹೊಂದಿತ್ತು. ನನ್ನ ಜ್ಯೇಷ್ಠರಲ್ಲಿ ಮಾತನಾಡುವರೆ ಶ್ರೀಯುತರು ಗೋಪ್ಯವಾದ ಕೋಣೆಗೆ ಕರೆದು ಹಿತೋಪದೇಶವನ್ನಿತ್ತರಂತೆ. ಇಡೀ ಸಂಸಾರದ ಕುರಿತು ವ್ಯಾಖ್ಯಾನಮಾಡಿ ಮುಂದಕ್ಕೆ ನಡಕೊಳ್ಳುವ ರೀತಿಗಳನ್ನು ಹೇಳಿದರು. ಅವರ ದಿವ್ಯಾಶೀರ್ವಾದಗಳನ್ನು ಪಡೆದು, ಪಾದ ಧೂಳಿಯನ್ನು ಸ್ವೀಕರಿಸಿಕೊಂಡೆವು. ಕಡೆಗೆ ಪರಂಜ್ಯೋತಿ ತಮ್ಮ ದಿವ್ಯಹಸ್ತದಿಂದಲೇ ಒಂದು ಸಣ್ಣ ಅವರ ಅಭಯ ಹಸ್ತದ ಭಾವಚಿತ್ರವನ್ನು ನನ್ನಣ್ಣನವರಿಗೆ ಕೊಡುತ್ತಾ, ದೇವರನ್ನು ನೆನೆಯುತ್ತಿರಿ ಜಯಶಾಲಿಗಳಾಗಿ ಬಾಳಿರಿ ಮೊದಲಾದ ಹಿತನುಡಿಗಳಿಂದಲೂ, ನಗುಮೊಗದಿಂದಲೂ ಕೂಡಿ, ನಮ್ಮನ್ನು ಬೀಳ್ಕೊಟ್ಟರು.

ಚಿನ್ನಾಭರಣಗಳನ್ನು ತಯಾರಿಸುವ ಅಕ್ಕಸಾಲಿಗನಿಗೆ ಒಡವೆಗಳ ಅಗತ್ಯವಿಲ್ಲ! ಚಂದದ ವಸ್ತ್ರಗಳನ್ನು ನೇಯುವ ಜೇಡನಿಗೆ ಬೇಕಾದುದು ಅಲ್ಪ ಬಟ್ಟೆ ಮಾತ್ರ! ನಮ್ಮ "ಶ್ರೀ ಸತ್ಯ ಸಾಯಿ ಬಾಬಾರವರಿಗೆ ಬೇಕಾದುದು ಭಕ್ತ ಸಮೂಹ! ಆತನ ಭಂಡಾರದಲ್ಲಿ ಯಾವುದಕ್ಕೆ ಕೊರತೆ?

ನಮ್ಮ ರಾಜ್ಯ ಕೇಂದ್ರದ ಬೆಂಗಳೂರಿನಿಂದ ಸುಮಾರು ನೂರು ಮೈಲು ದೂರದ ಆಂಧ್ರ ಪ್ರದೇಶದ "ಪುಟ್ಟಪರ್ತಿ" ಯೆಂಬ ಬರೀ ಹಳ್ಳಿಯಲ್ಲಿ ೧೯೨೬ನೇ ಇಸವಿ ನವಂಬರ ತಿಂಗಳು ತಾರೀಕು ೨೩ನೇ ಸೋಮವಾರ ಭಗವಾನ್ ಸ್ವಾಮಿಯವರ ಜನ್ಮ ದಿನ. ಭಕ್ತತಂಡದವರು ಸಾಧ್ಯವಿದ್ದಷ್ಟು ಮಟ್ಟಿಗೆ ಪುಟ್ಟಪರ್ತಿಗೆ ಹೋಗಿ ಪುಣ್ಯ ಸಂಪಾದಿಸಿ, ಅವರವರ ಕಷ್ಟಗಳನ್ನು ಪರಿಹರಿಸಿ ಈ ನಶ್ವರ ದೇಹವನ್ನು ನಂಬದೆ, ಆ ನಮ್ಮ ಪರಂಜ್ಯೋತಿಯನ್ನೇ ನೆನೆದು ಮುಕ್ತಿಗಾಗಿ ಸಾಧಿಸುವ.

— ಕುಮಾರಿ ವಿನತಾ ರೈ,
ಸವಣೂರು.

**ನೀತಿಕಥೆ**

## ಹುಡುಗಾಟ

ಒಂದೂರಿನಲ್ಲಿ ಒಬ್ಬ ಮಾವಟಿಗನಿದ್ದ. ಅವನ ಬಳಿ ಒಂದು ಆನೆ ಇತ್ತು. ಅವನು ಪ್ರತಿ ದಿನ ಆನೆಯ ಮೇಲೆ ಹತ್ತಿ ನೀರು ಕುಡಿಸುವುದಕ್ಕೆ ಕೊಳದ ಹತ್ತಿರ ಕರೆದುಕೊಂಡು ಹೋಗುತ್ತಿದ್ದ. ಅವನು ಹೋಗುವ ದಾರಿಯಲ್ಲಿ ಆನೆಗೆ ತೆಂಗಿನ ಕಾಯಿ ಕೊಡುವವರು ಕೊಡುತ್ತಿದ್ದರು, ಬಾಳೆಹಣ್ಣು ಕೊಡುವವರು ಕೊಡುತ್ತಿದ್ದರು, ಕಾಸು ಕೊಡುವವರು ಕೊಡ್ತಾ ಇದ್ದರು. ಆನೆ ಕಾಸನ್ನು ಸೊಂಡಿಲ ತುದೀಲಿ ತೆಗೆದುಕೊಂಡು ಮಾವಟಿಗನಿಗೆ ಕೊಡುತ್ತಿತ್ತು.

ಕೊಳಕ್ಕೆ ಹೋಗೋ ದಾರೀಲಿ ಒಬ್ಬ ಬಡಗಿ ಇದ್ದ. ಅವನು ಪ್ರತಿ ದಿನ ಆನೆಗೆ ಅಂಜೂರದ ಎಲೆ ಕೊಡುತ್ತಿದ್ದ. ಅಂಜೂರದ ಎಲೆ ಎಂದರೆ ಆನೆಗೆ ಬಹಳ ಇಷ್ಟ.

ಒಂದು ದಿನ ಬಡಗಿ ಮಾವಟಿಗನನ್ನು ನೋಡಿ, "ಇವತ್ತೊಂದು ತಮಾಷೆ ಮಾಡ್ತೇನೆ. ಆನೆ ಕಂಡುಹಿಡಿಯುತ್ತೇ ನೋಡೋಣ" ಎಂದ. "ಏನಪ್ಪಾ ನಿನ್ನ ತಮಾಷೆ?" ಅಂತ ಮಾವಟಿಗ ಕೇಳಿದ. "ಏನಿಲ್ಲ, ಒಂದು ಕಲ್ಲಿನ ಮೇಲೆ ಅಂಜೂರದ ಎಲೆ ಸುತ್ತಿ ಆನೆಗೆ ಕೊಡುತ್ತೇನೆ. ಏನು ಮಾಡುತ್ತೊ ನೋಡೋಣ. ಕಲ್ಲು ಸಹಿತ ನುಂಗುತ್ತೊ ಅಥವಾ ಕಲ್ಲು ಎಸೆದು ಎಲೆ ಮಾತ್ರ ತಿನ್ನುತ್ತೊ ನೋಡಬೇಕು." ಎಂದ ಬಡಗಿ. "ಬೇಡಪ್ಪ ಆನೆಗೆ ಕೋಪ ಬಂದೀತು." ಎಂದು ಮಾವಟಿಗ ಹೇಳಿದರೂ ಬಡಗಿ ಕೇಳಲಿಲ್ಲ, ಕಲ್ಲಿಗೆ ಅಂಜೂರದೆಲೆ ಸುತ್ತಿಕೊಟ್ಟ. ಆನೆ ಎಲೆಯನ್ನು ಮಾತ್ರ ತಿಂದು ಕಲ್ಲನ್ನು ಹೊರಗೆ ಹಾಕಿಬಿಟ್ಟಿತು "ನಾನು ಹೇಳಲಿಲ್ಲವೇ?" ಎಂದ ಮಾವಟಿಗ. "ಈಗೇನು ಆಯಿತು?" ಎಂದು ಬಡಗಿ ಜಂಬದಿಂದ ಕೇಳಿದ. "ಆನೆಗೆ ಕೋಪ ಬಂದಿದೆ" ಎಂದ ಮಾವಟಿಗ.

ಆನೆ ಕೊಳಕ್ಕೆ ಹೋಯಿತು ನೀರು ಕುಡಿದು ಹಿಂತಿರುಗಿ ಬಂತು. ಬಡಗಿ ಜಗಲಿಯ ಮೇಲೆ ಕುಳಿತಿದ್ದ. ಆನೆ ಬಡಗಿಯ ಹತ್ತಿರ ಬಂತು ಅವನ ನಡುವಿಗೆ ಸೊಂಡಿಲನ್ನು ಸುತ್ತಿ ಮೇಲಕ್ಕೆತ್ತಿಕೊಂಡಿತು. ಮಾವಟಿಗ 'ಬೇಡ' ಎಂದ. ಆನೆ ಲಕ್ಷ್ಯ ಮಾಡದೇ ಪಕ್ಕದಲ್ಲಿದ್ದ ಬಂಡೆಯ ಮೇಲೆ ಅವನನ್ನು ಬಟ್ಟೆ ಒಗೆದಂತೆ ಅಪ್ಪಳಿಸಿತು. ಬಡಗಿ ತಲೆ ಒಡೆದು ಸತ್ತುಹೋದ. ನೆರೆದವರು ಗೋಳಾಡಿದರು.

ಆದ್ದರಿಂದ, "ಹುಡುಗಾಟಕ್ಕಾಗಿಯಾದರೂ ಮೂಕ ಪ್ರಾಣಿಗಳನ್ನು ನವು ಕೆಣಕಬಾರದು."

—'ಗಾಯತ್ರೀ ಅನುಜ'
ಬೆಳವಿನಕೊಡಿಗೆ

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

**ಹೊಸ ವರ್ಷದ ಕೊಡುಗೆ**

— ಠೇವಣಾತಿ ಬಡ್ಡಿ ದರಗಳ ಹೆಚ್ಚಳ —

| | | | | | | |
|---|---|---|---|---|---|---|
| 1 | ರಿಂದ | 2 | ತಿಂಗಳ | ವರೆಗೆ | — | $4\frac{1}{4}$% |
| 3 | ,, | 11 | ,, | ,, | — | $4\frac{1}{2}$% |
| 12 | ,, | 23 | ,, | ,, | — | 5% |
| 24 | ,, | 35 | ,, | ,, | — | $5\frac{1}{4}$% |
| 36 | ,, | 60 | ,, | ,, | — | $5\frac{1}{2}$% |

ರೂ. 5,000/- ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ $5\frac{1}{2}$%ಗೆ ಮೀರದಂತೆ $\frac{1}{4}$% ಹೆಚ್ಚಿನ ಬಡ್ಡಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.
ರೂಪಾಯಿ ಎರಡು ಕೋಟಿಗೂ ಮಿಕ್ಕಿದ ಚಲಾವಣಾ ಸಂಪತ್ತು.

## ಚೀನೀಯರಿಗೆ ಕಿವಿಮಾತು

# ಭಾರತೀಯರು ಹೇಡಿಗಳಲ್ಲ

ಭಾರತವು ಅತಿ ಪ್ರಾಚೀನ ಕಾಲದಿಂದಲೇ ಶಾಂತಿಯುತ ರಾಷ್ಟ್ರವಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಎಷ್ಟೆಷ್ಟೋ ಬಹಿಷ್ಕಾರಿಗಳು ಭಾರತ ದೇಶವನ್ನು ಸ್ವಾರ್ಥಉದ್ದೇಶದಿಂದ ಭಾರತದೊಡನೆ ಯುದ್ಧ ಮಾಡಿರುವರು. ಆದರೆ "ಪ್ರಧಾನಿ ಶ್ರೀ ನೆಹರು" ಹೇಳಿದಂತೆ ಅಂತಿಮ ಜಯವು ನಮಗೆ ಪ್ರಾಚೀನ ಕಾಲದಿಂದ ಇಂದಿನ ವರೆಗೂ ಲಭಿಸುತ್ತಾ ಬಂದಿರುವುದು. ಸೋದರ ಭಾವದಿಂದಿದ್ದು ಮಿತ್ರ ರಾಷ್ಟ್ರವಾಗಿರುತ್ತಿದ್ದ ಕಮ್ಯೂನಿಸ್ಟ್ ಚೀನಿಯರು ಈಗ ನಮ್ಮ ಮೇಲೆ ಧಾಳಿ ಮಾಡಿರುವರು. ನಾವು ಯಾರನ್ನು ನಮ್ಮ ಮಿತ್ರರೆಂದೂ, ನಮ್ಮಂತೆ ಸತ್ಯವಾದಿಗಳೆಂದೂ, ಈ ತನಕ ತಿಳಿದು ಕೊಂಡಿದ್ದೆವೋ ಅಂಥ ಮಿತ್ರರಾದ ಚೀನೀಯರಿಂದ ನಮ್ಮ ಪವಿತ್ರಭೂಮಿಯಾದ ಭಾರತ ದೇಶಕ್ಕೆ ಅಪಮಾನವಾಗಿದೆ. ಸತ್ಯವಾದಿಗಳಾದ ನಮ್ಮನ್ನು ಮಿತ್ರರಂತೆ ನಟಿಸಿ ವಂಚನೆಯಿಂದ ಆಕ್ರಮಣ ಮಾಡಲು ಮುಂದೊತ್ತಿ ಬಂದಿರುವರು. ಭಾರತವು ಎಂದಿಗೂ ಸತ್ಯವನ್ನು ಬಿಟ್ಟು ಹೋಗದು, ಶರಣರನ್ನು ಎಂದಿಗೂ ಕೈಬಿಡದು. ಆದರೆ ರಕ್ತಮದದಿಂದ ಭಾರತದ ಮೇಲೆ ಧಾಳಿ ನಡೆಸಲು ಬಂದಿರುವವರು ಯಾರೇ ಆದರೂ ಸರಿ ಅಂಥವರನ್ನು ಅದು ಬಾದಂತೆ ಹಿಂದೆ ಕಳುಹಿಸುವದುಯೆಂಬುದರಲ್ಲಿ ಸಂದೇಹವಿಲ್ಲ.

ಈಗ ಭಾರತ ಮಾತೆಗೆ ವಿಷಮ ಪರಿಸ್ಥಿತಿಯು ಬಂದೊದಗಿದೆ. ಇಂಥ ಸಂದಿಗ್ಧ ಪರಿಸ್ಥಿತಿಯ ಸಮಯದಲ್ಲಿ ಭಾರತೀಯ ವೀರ ಪುತ್ರ-ಪುತ್ರಿಯರ ನಿರ್ಜೀವ ನಾವು ಪ್ರತಿಯೊಬ್ಬರೂ ನಮ್ಮ ಸ್ವಾರ್ಥಗಳನ್ನು ಜಾತಿ, ಮತ ಭೇದಗಳನ್ನು ತೊರೆದು, ಅಪಾರಂತೆ ಮುನ್ನುಗ್ಗುತ್ತಿರುವ ಕಮ್ಯೂನಿಸ್ಟ್ ಚೀನೀಯರನ್ನು ಹಿಮ್ಮೆಟ್ಟಿಸುವುದು ನಮ್ಮ ಕರ್ತವ್ಯ. ಈ ಗಂಭೀರ ಸಂದರ್ಭದಲ್ಲಿ ಯಾವನೊಬ್ಬನೇ ಭಾರತೀಯನಾದರೂ ಸ್ವಾರ್ಥವನ್ನು ಬಗೆಯದೆ—ತನ್ನಿಂದಾಗುವ ಸಕಲ ಸಹಾಯವನ್ನು ಪ್ರಧಾನಿಯವರಿಗೆ (ಸರಕಾರಕ್ಕೆ) ಕೊಡುವುದು ಅತೀ ಅಗತ್ಯ.

ಇನ್ನ ಸಮಾಧಾನದ ಸೂಚನೆಯನ್ನು ಕಮ್ಯೂನಿಸ್ಟ್ ಚೀನಿಯರು ಸಾರಿರುವರು. ಆದರೆ ಇದನ್ನು ನಂಬುವುದು ಕಷ್ಟ. ಯಾಕೆಂದರೆ, ಈ ಮೊದಲು ಕಮ್ಯೂನಿಸ್ಟ್ ಚೀನಿಯರು ಸವಿಮಾತುಗಳನ್ನಾಡಿ ಸ್ನೇಹದಿಂದ ಸತ್ಯ ನಂಬಿದ ನಮ್ಮನ್ನು ವಂಚನೆಯಿಂದ ಸೋಲಿಸಿರುವರು. ಆದುದರಿಂದ ಇನ್ನು ಮುಂದೆಯೂ ಸಮರವಿರಾಮ ಸೂಚನೆಯನ್ನೊಡ್ಡಿ ಮೊದಲಿನಂತೆ ಭಾರತೀಯರನ್ನು ವಂಚಿಸಬಹುದೆಂದು ಹೊರಟರೆ ಅದು ಕಮ್ಯೂನಿಸ್ಟ್ ಚೀನಿಯರಿಂದ ಇನ್ನು ಮುಂದೆ ಖಂಡಿತವಾಗಿಯೂ ಸಾಧ್ಯವಾಗಲಾರದು. ಭಾರತೀಯರು ಹೇಡಿಗಳಲ್ಲವೆಂಬುದನ್ನು ವಂಚಕ ಚೀನಿಯರು ಈ ಮೊದಲೇ ಅರಿತಿರಬೇಕು. ಒಂದು ವೇಳೆ ಅರಿಯದಿದ್ದರೂ ಇನ್ನು ಮುಂದಾದರೂ ಅರಿತುಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ. ಶಕ್ತಿಯಲ್ಲಾಗಲೀ-ಯುಕ್ತಿಯಲ್ಲಾಗಲೀ-ಅಥವಾ ಶೌರ್ಯ ಸಾಹಸದಲ್ಲಾಗಲೀ ಎಂದೆಂದಿಗೂ ಕೆಂಪು ಚೀನಿಯರಿಂದ ಕಡಿಮೆಯಾಗಿಲ್ಲವೆಂಬುದನ್ನು ಅವರು ತಿಳಿದುಕೊಳ್ಳಲಿ. ನಮ್ಮ ಶರೀರದಲ್ಲಿ ಒಂದೇ ಒಂದು ಬಿಂದು ರಕ್ತವಿರುವ ತನಕ ಹೋರಾಡುವುದಲ್ಲದೆ ಪರರಾಷ್ಟ್ರವಾದ ಕಮ್ಯೂನಿಸ್ಟ್ ಚೀನೀಯರ ವಶಕ್ಕೆ ಭಾರತವನ್ನು ಖಂಡಿತವಾಗಿಯೂ ಬಿಡಲಾರೆವು. ಜಯಾಪಜಯವು ದೈವಾಧೀನ. ಆದರೆ ಸತ್ಯದ ಕಡೆಗಲ್ಲದೆ ಅಸತ್ಯದ ಕಡೆಗೆ ಎಂದಿಗೂ ಜಯವು ಲಭಿಸಲಾರದು. ನಾವು ಯಾವ ಸಮಯದಲ್ಲಾದರೂ ರಾಷ್ಟ್ರಕ್ಕಾಗಿ ನಮ್ಮ ಜೀವವನ್ನೇ ಬಲಿಕೊಡಲು ಹಿಂಜರಿಯಲಾರೆವು. ರಾಷ್ಟ್ರಕ್ಕಾಗಿ ಹಲವು ತರದ ಕಷ್ಟ ನಷ್ಟಗಳನ್ನು ಅನುಭವಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದಿರುವ ಮಹಾತ್ಮಾ ಗಾಂಧಿಯವರನ್ನು ಸದಾ ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಹೋಗುವೆವು. ಮಹಾತ್ಮರ ಆಶೀರ್ವಾದವು ನಮ್ಮನ್ನು ಯಾವಾಗಲೂ ಕಾಪಾಡುವದು. ಭಾರತದಂತಹ ಶಾಂತಿಯುತವಾಗಿರುವ ತಟಸ್ಥ ರಾಷ್ಟ್ರದ ಮೇಲೆ ಅನಾವಶ್ಯಕವಾಗಿ ಕಮ್ಯೂನಿಸ್ಟ್ ಚೀನಿಯರು ಇಂದು ಧಾಳಿ ಮಾಡಿರುವರು. ಭಾರತವು ಚೀನಿಯರನ್ನು ಕಡೆಯ ತನಕವೂ ಮಿತ್ರರಾಷ್ಟ್ರವೆಂದೇ ನಂಬಿತ್ತು. ಆದರೆ ಈ ಮಿತ್ರತ್ವವನ್ನು ಉಳಿಸಿಕೊಳ್ಳುವ ದಾರಿಯು ಕೆಂಪು ಚೀನೀಯರಿಗೆ ತಿಳಿಯದಾಯಿತು. ಆದರೆ ಇನ್ನು ಭಾರತವು ಮೊದಲಿನಂತೆ ಚೀನೀಯರ ಕಪಟ ಮಾತುಗಳನ್ನು ನಂಬದು, ಮಾತ್ರವಲ್ಲದೆ ಭಾರತವು ತಿಳಿಸಿದ ಸೂಚನೆಯನ್ನು ತಿರಸ್ಕರಿಸಿದರೆ ಕಮ್ಯೂನಿಸ್ಟ್ ಚೀನದೊಡನೆ ಸಂಧಾನ ಕೂಡ ಮಾಡಲಾರದು. ರಾಷ್ಟ್ರಕ್ಕೆ ಇಂದು ಬಂದಿರುವಂಥ ತುರ್ತುಪರಿಸ್ಥಿತಿಯ ಸಮಯದಲ್ಲಿ ಭಾರತವನ್ನು ವೈರಿಗಳಿಂದ ರಕ್ಷಿಸಲು ಬೆಂಬಲವನ್ನಿತ್ತು ಸಹಕರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರುತ್ತದೆ.

"ವಾಣಿಶರಣ" 'ಯೋತಡ್ಕ'

---


**ಉದಾರ ದಾನ ಮಾಡಿರಿ—**

**ಪ್ರತಿಯೊಂದು ನಯಾ ಪೈಸಾವೂ ಗಣನೀಯವಾಗಿದೆ**

**ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳ ಮನವಿ.**

**ಎಸ್. ನಿಜಲಿಂಗಪ್ಪ**, ಬಿ ಎ ಎಲ್ ಎಲ್. ಬಿ.
ಮುಖ್ಯಮಂತ್ರಿ.

"ವಿಧಾನ ಸೌಧ"
ಬೆಂಗಳೂರು—1
ಡಿಶಂಬರ 7, 1962.

ಬೇಂಕುಗಳಲ್ಲಿ ಎಕೌಂಟ್ ಇರುವ ಎಲ್ಲಾ ಜನರು ತಮ್ಮ ತಮ್ಮ ಎಕೌಂಟ್‌ಗಳಲ್ಲಿ ತಿಂಗಳಾಂತ್ಯದಲ್ಲಿ ಉಳಿಯುವ ಪ್ರತಿ ನಯಾ ಪೈಸಾವನ್ನು ರಾಷ್ಟ್ರೀಯ ರಕ್ಷಣಾನಿಧಿಗೆ ತೆರುವಂತೆ ತಮ್ಮ ತಮ್ಮ ಬೇಂಕುಗಳಿಗೆ ಅಧಿಕಾರ ವಹಿಸಿ ಕೊಡಬೇಕಾಗಿ ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ. ಈ ಚಿಕ್ಕ ಪುಟ್ಟ ಕೊಡುಗೆಗಳೇ ಬಹು ದೊಡ್ಡ ಮೊತ್ತವಾಗಬಲ್ಲವು.

ನಮ್ಮ ಧೀರ ಜವಾನರಿಗಾಗಿ ಈ ರೀತಿಯ ಸೌಹಾರ್ದ-ಸಹಕಾರಗಳನ್ನು ನೀಡಲು ಯಾರೂ ಹಿಂಜರಿಯಲಾರರೆಂಬ ಬಗ್ಗೆ ನನಗೆ ವಿಶ್ವಾಸವಿದೆ.

(ಸಹಿ) **ಎಸ್. ನಿಜಲಿಂಗಪ್ಪ**

ಮಾನ್ಯ ಮುಖ್ಯ ಮಂತ್ರಿಗಳ ಈ ಮನವಿಯನ್ನು ಮನ್ನಿಸಿ ಅವಶ್ಯವಿರುವ ಅಧಿಕಾರ ಪತ್ರಗಳನ್ನು ನಮಗೀಯುವಂತೆ **ಕೊರ್ಪೊರೇಶನ್ ಬೇಂಕ್** ತನ್ನ ಎಲ್ಲಾ ಎಕೌಂಟ್‌ದಾರರನ್ನು ಈ ಮೂಲಕ ಅರಿಕೆ ಮಾಡಿಕೊಳ್ಳುತ್ತದೆ.

ಅಧಿಕಾರ ಪತ್ರಗಳ ಮಾದರಿ ಪ್ರತಿಯು ಬೇಂಕಿನ ಎಲ್ಲಾ ಶಾಖೆಗಳಲ್ಲಿ ಸಿಗುವುವು.

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್**

(ಸ್ಥಾಪನೆ 1906)

ರಿಜಿಸ್ಟರ್ಡ್ ಆಫೀಸು
**ಉಡುಪಿ.**

ಆಡಳಿತ ಆಫೀಸು
**ಮಂಗಳೂರು**

( ರಾಷ್ಟ್ರದ ಪವಿತ್ರ ಸೇವೆಯಲ್ಲಿ )

ಚಿರೆಪಿ


### ವಿನಂತಿ

ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರರು ದಯ ಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿ ಕೊಡುವಂತೆ ತಿಳಿಗೊಳಿಸ್ಕೆ ವಿನಂತಿಸುತ್ತೇವೆ.

ಚಂದಾ ಹಣವನ್ನು ಮನಿ ಆರ್ಡರ್ ಮಾಡಬಹುದು; ಇಲ್ಲವೆ ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚು ಇಲ್ಲದೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ಹೆಸರಿನೊಂದಿಗೆ ಚಂದಾ ನಂಬ್ರ ತಿಳಿಸಿದರೆ ಅನುಕೂಲ. ಮತ್ತು ಬೇಂಕಿನವರು ಕೊಡುವ ಪಾವತಿ ರಶೀದಿಯನ್ನು ನಮಗೆ ಕಳಿಸಿದರೆ ಕೂಡಲೇ ನಮ್ಮ ರಶೀದಿಯನ್ನು ಕಳಹಿಸಲು ಸುಲಭವಾಗುತ್ತದೆ —ಮೆನೇಜರ್

---


**ಹೊಸ ಪುಸ್ತಕ—**
ನಚಿಕೇತ'ರ,
ನವೀನ ಕಾದಂಬರಿ—

**ಹಸುರು ಹಂಸ**

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.



REGD. No. B. G. 176
LICENCE No. 31
Licensed to Post without Prepayment

### ಕವಲು ದಾರಿ—ಕೆಂಪು ದೀಪ

# 'ಕಿಡಿ'ಯ ಶೇಷಪ್ಪ, ಅವರು ಇನ್ನಿಲ್ಲ

— ಸುದಾಸ

ಯಾರು ಚಿರಂಜೀವಿಗಳು ಈ ಧರಿತ್ರಿಯಲ್ಲಿ? ಅಶ್ವತ್ಥಾಮನು ಚಿರಂಜೀವಿಯೆ? ಆಂಜನೇಯನು ಚಿರಂಜೀವಿಯೆ? ಅವರು ಚಿರಂಜೀವಿಗಳೇ ಆಗಿರುವದಾದರೆ ಈಗ ಎಲ್ಲಿ? ನಿರ್ದಿಷ್ಟ ಸ್ಥಳಯಾವದು? ಹುಲು ಮಾನವರು ಅವರನ್ನು ಕಾಣಲು ಸಾಧ್ಯವಿಲ್ಲ?

ಹುಟ್ಟಿದವರು ಸಾಯಲೇ ಬೇಕು. ಇದು ಮೃತ್ಯುಲೋಕದ ನಿಯಮ. ಆದರೆ ನಲ್ವತ್ತನಾಲ್ಕರ ತರುಣನನ್ನು ಮೃತ್ಯು ತನ್ನೆಡೆಗೆ ಸೆಳೆದುಕೊಳ್ಳಬಹುದೆಂದು ಯಾರು ತಿಳಿದಿದ್ದರು?

ಕಾರ್ಯನಿರತ ಪತ್ರಿಕೋದ್ಯಮಿಯ ಜೀವನ ಆದರಲ್ಲೂ ಚಿಲು ಕನ್ನಡದ ಪತ್ರಿಕೋದ್ಯಮಿಯ ಜೀವನ ಯಾವ ಮಟ್ಟದ್ದಾಗಿದ್ದೀತು? ಯಾವ ಮಟ್ಟದ ಸುಖವನ್ನು ಅತ ಕಾಣಬಲ್ಲ?

ಆ ಸೊಬಗಿನ ಸಾಚಯವನ್ನು—ನಿರಂತರ ಅನುಭವಿಸುವ ನರಳಾಟವೇ ಕನ್ನಡ ಪತ್ರಿಕೋದ್ಯಮಿ ಒದಕಿನಲ್ಲಿ ಅನುಭವಿಸುವ ಸುಖ ಎಂಬುದನ್ನು ಕಾಣಿಸಿಕೊಟ್ಟವರು ಹಲವು ಮಂದಿ. ಅಂತಹ ವ್ಯಕ್ತಿಗಳ ಪಟ್ಟಿಯಲ್ಲಿ ಕಿಡಿಯ ಶೇಷಪ್ಪನವರೂ ಒಬ್ಬರಾಗಿ ಮೆರೆದರು. ಮುಗ್ಧ ಜನರನ್ನು ವಂಚಿಸುವ ಶ್ರೀಮಂತರ ಸುಗುಣಗಳ ವರ್ಣನೆಯನ್ನು ನಾವು ತಿಳಿದುಕೊಳ್ಳಬೆಕಾಗಿದ್ದರೆ, ಕಿಡಿಯತ್ತ ನೋಡಬೇಕು. ರಾಜಕೀಯ ಗುರುಗಳ ಮಂತ್ರಪಠನೆಯ ಇಂಪಾದ ಧ್ವನಿ ಕೇಳಿ ಬರುತ್ತಿದ್ದುದು ಕಿಡಿಯಲ್ಲಿ!

ಚೀನಾದ ವಿರುದ್ಧ ಮೈಸೂರಿನ ಮಹಾ ಕೋಟೆಯನ್ನು ಸಂಘಟಿಸಲು ಮಂತ್ರಿಗಳಿಗೆ ಮುಖವಿಲ್ಲವೇ? ಎಂದು ಇತ್ತೀಚೆಗೆ ಕಿಡಿ ಹಾರಿಸಿದ್ದರು, ಜನಮೆಚ್ಚುಗೆಯ ಶೇಷಪ್ಪನವರು.

ಗಂಟು ಕದಿಯುವವಕ್ಕಲ್ಲ, ಬ್ಲಾಕ್ ಮಾರ್ಕೆಟಿಗಲ್ಲ, ಈ ಕರೆ: ಚೀನೀಯರನ್ನು ಹೊಡೆದೋಡಿಸಲು. ಇದು ಕಿಡಿಯ ವ್ಯಂಗ್ಯ ಚಿತ್ರದ ಇಣುಕು ನೋಟ. 'ಹಿಮಾಲಯದಲ್ಲಿ ನೆತ್ತರಿನ ನೈವೇದ್ಯ ಅರ್ಪಿಸಿದ ಅಭಿಮನ್ಯುಗಳ ತ್ಯಾಗ ಬರಿದಾಗದು. ಇದು ಕಿಡಿಯ ಆಕಾಂಕ್ಷೆ.

'ಹದಿನೆಂಟನೆಯ ಶತಮಾನದ ನಗ್ನ ಸಾಮ್ರಾಜ್ಯಶಾಹಿ ಖಾಳ್ಳೀಗಾರಿಕೆಯ ದೇಶ ವಿದೇಶಗಳನ್ನು ಕೊಳ್ಳೆ ಹೊಡೆಯುವ ಹೇಯ ಆಕ್ರಮಣವನ್ನು ನೆನಪಿಗೆ ತರುವ ಚೀನಾದ ದಾಳಿಯನ್ನು ಎದುರಿಸುವ ಸವಾಲನ್ನು ನಾವು ಒಪ್ಪಿಕೊಂಡಿದ್ದೇವೆ. ಸಿಡಿಲಿಗೆ ಬರಸಿಡಿಲಾಗಿ ಎರಗುವೆವೆಂದು ವೀರ ಪ್ರತಿಜ್ಞೆ ಮಾಡಿದ್ದೇವೆ—

ಮೈಸೂರು ರಾಜ್ಯದಲ್ಲಿ ಜನತೆಯಾರಿಗೂ ಕಡಿಮೆಯಿಲ್ಲವೆಂಬಂತೆ ಅಮಿತ ಉತ್ಸಾಹದಿಂದ ಮುಂದೆ ಬಂದು ರಕ್ಷಣಾ ನಿಧಿಗೆ ಉದಾರವಾಗಿ ಎಲ್ಲ ರೀತಿಯ ಕಾಣಿಕೆಗಳನ್ನು ಸಲ್ಲಿಸುತ್ತಿದ್ದಾರೆ. ಹಣ, ಬಂಗಾರ ಹನಿಯಾಗಿ, ಹಳ್ಳವಾಗಿ, ನದಿಯಾಗಿ ಕೋಡಿಹರಿಯುತ್ತಿದೆ—

"ಈಗ ದೇಶದಲ್ಲಿ ಉಂಟಾಗಿರುವ ಈ ಮಾನಸಿಕ, ಭಾವನಾತ್ಮಕ ಹಾಗೂ ರಾಷ್ಟ್ರಪ್ರೇಮಿ ಉತ್ಸಾಹವನ್ನು ಸಂಘಟಿಸಿ, ಉಳಿಸಿಕೊಳ್ಳುವ ಕಾರ್ಯ ನಡೆಯಬೇಕಾಗಿದೆ. ಇದನ್ನು ಎಲ್ಲ ಸಾರ್ವಜನಿಕ ಮುಖಂಡರು ಮಾಡಬೇಕಾಗಿದೆ."

"ಹೆಚ್ಚಾಗಿ ಆಡಳಿತ ಪಕ್ಷದವರು, ಮಂತ್ರಿಗಳು, ಅಧಿಕಾರ ಸ್ಥಾನದಲ್ಲಿರುವವರು ಈ ಕಾರ್ಯವನ್ನು ಮಾಡಬೇಕಾಗಿದೆ."

"ಈ ಕೆಲಸವನ್ನು ನಮ್ಮ ನೆರೆರಾಜ್ಯವಾದ ಮಹಾರಾಷ್ಟ್ರದ ಮುಖ್ಯಮಂತ್ರಿ ಎಷ್ಟು ಭಾವನಾಪರವಶತೆಯಿಂದ ಮಾಡುತ್ತಿದ್ದಾರೆಂದರೆ, ನನ್ನ ಕೆಲಸ ಕಡಿಮೆ, ಕಡಿಮೆಯೆಂದು ಅನಿಸುತ್ತದೆ. ಅವರು ಒಂದು ದಿನವೂ ಬಿಡದೆ ಬಹಿರಂಗ ಸಭೆಗಳನ್ನು ನಡೆಸುತ್ತಾ, ಜನತೆಯಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸಿ, ರಕ್ತವನ್ನು ಬಿಸಿ ಮಾಡುತ್ತಿದ್ದಾರೆ...."

"ಆದರೆ ನಮ್ಮ ರಾಜ್ಯದಲ್ಲಾದರೋ ಇನ್ನೂ ಹೇಳಿಕೆಗಳನ್ನು ಕೊಡುವದರಲ್ಲಿಯೇ ಕಾಲ ಕಳೆಯುತ್ತಿದ್ದೇವೆ. ರಾಷ್ಟ್ರರಕ್ಷಣೆಯ ಪ್ರತಿಜ್ಞೆಯನ್ನು ಜನರೇ ಸ್ವಪ್ರೇರಣೆಯಿಂದ ಮಾಡಲಿ ಎಂದು ನಮ್ಮ ಮುಖಂಡರು ಆರಾಮವಾಗಿ ಕೂತಂತೆ ಇದೆ."

o o o

ಶೇಷಪ್ಪ ಇನ್ನಿಲ್ಲ! ನಮ್ಮ ಶೇಷಪ್ಪ ಇನ್ನಿಲ್ಲ! ಜನತೆಗಾಗಿ ಕ್ರಾಂತಿಯ ಕಹಳೆ ಊದಿದ ಶೇಷಪ್ಪ ಇನ್ನಿಲ್ಲ!

ಕನ್ನಡ ಪತ್ರಿಕೆಗಳ ಕುರಿತು ಚರ್ಚಿಸುವಾಗ ವಿಷಯದ ನಡುವೆ ಕಿಡಿ ಸುಳಿಯದೆ ಉಳಿಯುವದಿಲ್ಲ. (ಕನ್ನಡ ಪತ್ರಿಕೋದ್ಯಮದ ಗತ ವೈಭವ ಸಂಸ್ಮರಣೆಯಲ್ಲಿ, ಎಂ. ಹರಿದಾಸಾಚಾರ್ಯರು, ಮೊಹರೆ ಹಣಮಂತರಾಯರು ನುಸುಳಿಕೊಂಡಾರು. ಆದರೆ ಅವರು ನಮ್ಮ ಸ್ಮೃತಿಪಥದಲ್ಲಿ ಸದಾ ಕಾಲ ಕಾಣುವಂತಹದೇನನ್ನೂ ನಾವು ಮಾಡಲಿಲ್ಲ. ಅದು ಕನ್ನಡದ ಹಿರಿಮೆಯೋ ಏನೋ? ಕನ್ನಡದ ವೈಚಿತ್ರ್ಯ ಪೂರ್ಣ ನೀತಿಯಾಗಿದ್ದಿರಲೂ ಬಹುದು.)

ಕಿಡಿ ಬೇರೆ ಶೇಷಪ್ಪನವರು ಬೇರೆಯೆ? ಕಿಡಿ ಮತ್ತು ಶೇಷಪ್ಪನವರು ಒಂದು ನಾಣ್ಯದ ಎರಡು ಮುಖವಿದ್ದಂತೆ! ಏಳೆಂಟು ವರ್ಷಗಳ ಹಿಂದೆ ಹೀಗೆ ಮಾತಿನ ನಡುವೆ ಶೇಷಪ್ಪನವರ ವಿಷಯ ಪ್ರಸ್ತಾಪಕ್ಕೆ ಬಂತು. 'ಅವರಿಗೆ ಕೋರ್ಟಿನ ಬಾಗಿಲು ತಟ್ಟುತ್ತ ಅಲೆಯುವದೊಂದೇ ಕೆಲಸ' ಎಂದು, ಮಿತ್ರರೊಬ್ಬರು ಅಂದರು. ಎಂತಹ ಸತ್ಯ! ಬಹುಶಃ ನ್ಯಾಯ ದೇವತೆಗೆ ಅನ್ಯಾಯದ ವಿರುದ್ಧ ಹೋರಾಡುವ ಶೇಷಪ್ಪನವರು ಎಂದರೆ ಅಷ್ಟು ಪ್ರೀತಿಯೋ ಏನೋ!

ಇನ್ನು ಅಂತಿಮ ಗೌರವ ಸೂಚಿಸುವ ಮಾತು, ಉಳಿಯಿತು.

ಅಂತಿಮ ಗೌರವ ಸೂಚಿಸಲು ಯಾರಿಲ್ಲ ಬಂದಿಲ್ಲ?

ಮುಖ್ಯಮಂತ್ರಿ ನಿಜಲಿಂಗಪ್ಪನವರು ಅರ್ಥ ಸಚಿವ ಜತ್ತಿಯವರು, ಕಡಿದಾಳ್ ಮಂಜಪ್ಪನವರು, ಮೇಯರ್ ಕೃಷ್ಣ ಅಯ್ಯರ್, ಆ. ನ. ಕೃ. ಮುಂತಾದವರು, ಅಂತಿಮ ಗೌರವಾರ್ಪಣೆ ಮಾಡಲು ಬಂದಿದ್ದರು.

ಶೇಷಪ್ಪ, ಅವರು ಇನ್ನಿಲ್ಲ! ಅವರು ಜೀವನವಿಡೀ (ನರಳಿ, ಪಾಡುಪಟ್ಟು) ಸಲ್ಲಿಸಿದ ನಿಸ್ವಾರ್ಥ ರಹಿತ ಸೇವೆ ಅಮರವಾಗಿ ಉಳಿಯುತ್ತದೆ! ಶ್ರೀಯುತರ ಕುಟುಂಬಕ್ಕೆ ಉಂಟಾದ ದುಃಖದಲ್ಲಿ ನಾವು ಸಹಭಾಗಿಗಳು! ಎರಡು ನಿಮಿಷದ ಮೌನ ಪ್ರಾರ್ಥನೆ, ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದು!

o o o

ಇನ್ನು ಉಳಿದಿರುವದು ಆದ್ಯ ಕರ್ತವ್ಯ ಆ ಕುರಿತು ಒಂದು ಸೂಚನೆ. ಅದು—ಶೇಷಪ್ಪನವರ ಸ್ಮಾರಕ ನಿಧಿ ಸಂಗ್ರಹ.

೧ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವದು.

೨ ಜನರ ಕಣ್ಮುಂದೆ ಸದಾ ಕಾಲ ಸುಳಿಯುವ ಸ್ಥಳದಲ್ಲಿ ಅವರ ಸ್ಮಾರಕ ಪುತ್ಥಳಿಯನ್ನು ನಿಲ್ಲಿಸುವದು.

೩. ಒಂದು ಸರ್ಕಲ್ಲಿಗೆ ಅವರ ಹೆಸರಿಟ್ಟು ಕರೆಯುವದು.

೪ ಒಂದು ರಸ್ತೆಗೆ ಅವರ ಹೆಸರು.

೫ ಒಂದು ಪಾರ್ಕನ್ನು ಅವರ ಹೆಸರಿರಿಸಿಕೊಂಡು ಕರೆಯುವದು

ಪಾಲಿಸಲೇ ಬೇಕಾಗಿರುವ ಈ ಕರ್ತವ್ಯಗಳನ್ನು ನಾವು ಆಚರಣೆಯಲ್ಲಿ ತರಲಾಗದಿದ್ದರೆ, ನಮ್ಮ ಆದರ್ಶದ ಕಲ್ಪನೆಗಳಿಗೆ ಬೆಂಕಿ ಹಚ್ಚೋಣ. ಅದರ ಮೇಲೊಂದು ಗೋರಿ ಕಟ್ಟಿ ಅಚ್ಚಳಿಯದ ರೀತಿ ಇಂತು ಬರೆಯೋಣ:

ಅಭಿಮಾನಧನರೆ! ಈ ಸ್ಥಳದಲ್ಲಿ ನಾವು ನಮ್ಮ ಆದರ್ಶದ ಕಲ್ಪನೆಗಳಿಗೆ ಬೆಂಕಿ ಹಚ್ಚಿದ್ದೇವೆ ನಮ್ಮ ನಾಟ್ ಪ್ರವಾಹ ಎಷ್ಟು ರುಕ್ಷವಾಗಿದೆ ಎಂಬುದಕ್ಕೆ ಇದು ಸಾಕ್ಷಿ. ನೀನೆಂದೂ ಇಂತಹ ಪ್ರಲಾಪಕ್ಕೆ ಎಡೆ ಮಾಡಿಗೊಡ ಬೇಡಿರಿ.

ಈ ರೀತಿಯಲ್ಲಾದರೂ ಮುಂದಿನ ಪೀಳಿಗೆಗಳಿಗೆ 'ನಮ್ಮ ಪ್ರಾಮಾಣಿಕತೆಯ ಅರಿವು ಮಾಡಿ ಕೊಡೋಣ

---

ಗೃಹಿಣಿಯರ

ಜವಾಬ್ದಾರಿಯು ಸಂಸಾರ ನಿರ್ವಹಣೆಯಲ್ಲಿ ಮಹತ್ತರವಾದುದು ಮನೆಯ ಆಯವ್ಯಯಗಳನ್ನು ಸರಿಹೊಂದಿಸಿಕೊಂಡು ತನ್ನ ಮನೆ ಕುಟುಂಬಗಳನ್ನು ಬೆಳಗಿಸುವುದು ಆಕೆಯ ಧರ್ಮ. ಅದಕ್ಕೆ ಆಕೆಯ ಸೇವಿಂಗ್ಸ್ ಬ್ಯಾಂಕ್ ಖಾತೆಯು ಬಹು ವಿಧವಾಗಿ ನೆರವಾಗಬಲ್ಲದು.

ಸಿಂಡಿಕೇಟ್ ಬ್ಯಾಂಕು ಸ್ತ್ರೀಯರು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಹೆಚ್ಚಿನ ಪ್ರೋತ್ಸಾಹವನ್ನೀಯುವುದು.

ನಿಮಗೆ ಸಮೀಪವಿರುವ ನಮ್ಮ ಶಾಖೆಯನ್ನು ಸಂದರ್ಶಿಸಿರಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಸ್ಥಾಪನೆ: ೧೯೨೫

---

**ಸೂಚನೆ**

**"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.**

Edited Printed & Published by K. H. Shetty, at the Navayuga Press, Udipi, S. India.

# ನವಯುಗ

ಪ್ರಜಾರಾಜ್ಯ ವಿಶೇಷಾಂಕ — ೧೯೬೩

**NAVAYUGA — REPUBLIC DAY SPECIAL 1963**

25 nP.

REGD. No. B. G. 176
LICENCE No. 31
Licensed to Post without Prepayment

### ಕವಲು ದಾರಿ—ಕೆಂಪು ದೀಪ

# 'ಕಿಡಿ'ಯ ಶೇಷಪ್ಪ, ಅವರು ಇನ್ನಿಲ್ಲ

— ಸುದಾಸ

ಯಾರು ಚಿರಂಜೀವಿಗಳು ಈ ಧರಿತ್ರಿಯಲ್ಲಿ? ಅಶ್ವತ್ಥಾಮನು ಚಿರಂಜೀವಿಯೆ? ಆಂಜನೇಯನು ಚಿರಂಜೀವಿಯೆ? ಅವರು ಚಿರಂಜೀವಿಗಳೇ ಆಗಿರುವದಾದರೆ ಈಗ ಎಲ್ಲಿ? ನಿರ್ದಿಷ್ಟ ಸ್ಥಳ ಯಾವದು? ಹುಲು ಮಾನವರು ಅವರನ್ನು ಕಾಣಲು ಸಾಧ್ಯವಿಲ್ಲ?

ಹುಟ್ಟಿದವರು ಸಾಯಲೇ ಬೇಕು. ಇದು ಮೃತ್ಯುಲೋಕದ ನಿಯಮ. ಆದರೆ ನಲ್ವತ್ತನಾಲ್ಕರ ತರುಣನನ್ನು ಮೃತ್ಯು ತನ್ನೆಡೆಗೆ ಸೆಳೆದುಕೊಳ್ಳಬಹುದೆಂದು ಯಾರು ತಿಳಿದಿದ್ದರು?

ಕಾರ್ಯನಿರತ ಪತ್ರಿಕೋದ್ಯಮಿಯ ಜೀವನ ಅದರಲ್ಲೂ ಹುಲು ಕನ್ನಡದ ಪತ್ರಿಕೋದ್ಯಮಿಯ ಜೀವನ ಯಾವ ಮಟ್ಟದ್ದಾಗಿದ್ದೀತು? ಯಾವ ಮಟ್ಟದ ಸುಖವನ್ನು ಆತ ಕಾಣಬಲ್ಲ?

ಆ ನೋವಿನ ಪಾತ್ರವನ್ನು—ನಿರಂತರ ಅನುಭವಿಸುವ ಪಾಲಿಟ್ಟವರೇ ಕನ್ನಡ ಪತ್ರಿಕೋದ್ಯಮಿ ಒಬ್ಬ. ಕಿಸಕ್ಕೆ ಅನುಭವಿಸುವ ಸವಿ ಏಟನ್ನು ಕಾಣಿಸಿಕೊಟ್ಟವರು ಹಲವು ಮಂದಿ. ಅಂತಹ ವ್ಯಕ್ತಿಗಳ ಪಟ್ಟಿಯಲ್ಲಿ ಕಿಡಿಯ ಶೇಷಪ್ಪನವರೂ ಒಬ್ಬರಾಗಿ ಮೆರೆದರು. ಮುಗ್ಧ ಜನರನ್ನು ವಂಚಿಸುವ ಶ್ರೀಮಂತರ ಸುಗುಣಗಳ ವರ್ಣನೆಯನ್ನು ನಾವು ತಿಳಿದುಕೊಳ್ಳಬೇಕಾಗಿದ್ದರೆ, ಕಿಡಿಯನ್ನೇ ನೋಡಬೇಕು. ರಾಜಕೀಯ ಗುರುಗಳ ಮಂತ್ರಪಠನೆಯ ಇಂಪಾದ ಧ್ವನಿ ಕೇಳಿ ಬರುತ್ತಿದ್ದುದು ಕಿಡಿಯಲ್ಲಿ!

ಚೀನಾದ ವಿರುದ್ಧ ಮೈಸೂರಿನ ಮಹಾ ಕೋಟೆಯನ್ನು ಸಂಘಟಿಸಲು ಮಂತ್ರಿಗಳಿಗೆ ಮನವಿಲ್ಲವೇ? ಎಂದು ಇತ್ತೀಚೆಗೆ ಕಿಡಿ ಹಾರಿಸಿದ್ದರು ಜನಮೆಚ್ಚುಗೆಯ ಶೇಷಪ್ಪನವರು.

ಗುಟ್ಟು ಕಡಿಮೆಯವರಲ್ಲ. ಬ್ಲ್ಯಾಕ್ ಮಾರ್ಕೆಟಿಗರನ್ನು, ಈ ಕರಿ ಚೇಳುಗಳನ್ನು ಹೊಡೆದೋಡಿಸಲು ಇದು ಕಿಡಿಯ ವ್ಯಂಗ್ಯ ಚಿತ್ರದ ಇಣುಕು ನೋಟ. 'ಜಮೂಲ ಯದಲ್ಲಿ ನೆತ್ತರಿನ ನೈವೇದ್ಯ ಅರ್ಪಿಸಿದ ಅಭಿಮನ್ಯುಗಳ ತ್ಯಾಗ ಬರಿದಾಗದು. ಇದು ಕಿಡಿಯ ಆಕಾಂಕ್ಷೆ.

'ಹದಿನೆಂಟನೆಯ ಶತಮಾನದ ನಗ್ನ ಸಾಮ್ರಾಜ್ಯಶಾಹಿ ಪಾಳ್ಳೇಗಾರಿಕೆಯು ದೇಶ ವಿದೇಶಗಳನ್ನು ಕೊಳ್ಳೆ ಹೊಡೆಯುವ ಹೇಯ ಆಕ್ರಮಣವನ್ನು ನೆನಪಿಗೆ ತರುವ ಚೀನಾದ ದಾಳಿಯನ್ನು ಎದುರಿಸುವ ಸವಾಲನ್ನು ನಾವು ಒಪ್ಪಿಕೊಂಡಿದ್ದೇವೆ. ಸಿಡಿಲಿಗೆ ಬರಸಿಡಿಲಾಗಿ ಎರಗುವೆವೆಂದು ವೀರ ಪ್ರತಿಜ್ಞೆ ಮಾಡಿದ್ದೇವೆ—

ಮೈಸೂರು ರಾಜ್ಯದಲ್ಲಿ ಜನತೆ ಯಾರಿಗೂ ಕಡಿಮೆಯಿಲ್ಲವೆಂಬಂತೆ ಅಮಿತ ಉತ್ಸಾಹದಿಂದ ಮುಂದೆ ಬಂದು ರಕ್ಷಣಾ ನಿಧಿಗೆ ಉದಾರವಾಗಿ ಎಲ್ಲ ರೀತಿಯ ಕಾಣಿಕೆಗಳನ್ನು ಸಲ್ಲಿಸುತ್ತಿದ್ದಾರೆ. ಹಣ,ಬಂಗಾರ ಹನಿಯಾಗಿ, ಹಳ್ಳವಾಗಿ, ನದಿಯಾಗಿ ಕೋಡಿಹರಿಯುತ್ತಿದೆ—

"ಈಗ ದೇಶದಲ್ಲಿ ಉಂಟಾಗಿರುವ ಈ ಮಾನಸಿಕ, ಭಾವನಾತ್ಮಕ ಹಾಗೂ ರಾಷ್ಟ್ರಪ್ರೇಮ ಉತ್ಸಾಹವನ್ನು ಸಂಘಟಿಸಿ, ಉಳಿಸಿಕೊಳ್ಳುವ ಕಾರ್ಯ ನಡೆಯಬೇಕಾಗಿದೆ. ಇದನ್ನು ಎಲ್ಲ ಸಾರ್ವಜನಿಕ ಮುಖಂಡರು ಮಾಡಬೇಕಾಗಿದೆ."

"ಹೆಚ್ಚಾಗಿ ಆಡಳಿತ ಪಕ್ಷದವರು, ಮಂತ್ರಿಗಳು, ಅಧಿಕಾರ ಸ್ಥಾನದಲ್ಲಿರುವವರು ಈ ಕಾರ್ಯವನ್ನು ಮಾಡಬೇಕಾಗಿದೆ."

"ಈ ಕೆಲಸವನ್ನು ನಮ್ಮ ನೆರೆರಾಜ್ಯವಾದ ಮಹಾರಾಷ್ಟ್ರದ ಮುಖ್ಯ ಮಂತ್ರಿ ಎಷ್ಟು ಭಾವನಾಪರವಶತೆಯಿಂದ ಮಾಡುತ್ತಿದ್ದಾರೆಂದರೆ, ನಮ್ಮ ಕೆಲಸ ಕಡಿಮೆ, ಕಡಿಮೆಯೆಂದು ಅನಿಸುತ್ತದೆ. ಅವರು ಒಂದು ದಿನವೂ ಬಿಡದೆ ಬಹಿರಂಗ ಸಭೆಗಳನ್ನು ನಡೆಸುತ್ತಾ, ಜನತೆಯಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸಿ, ರಕ್ತವನ್ನು ಬಿಸಿ ಮಾಡುತ್ತಿದ್ದಾರೆ...."

"ಆದರೆ ನಮ್ಮ ರಾಜ್ಯದಲ್ಲಾದರೋ ಇನ್ನೂ ಹೇಳಿಕೆಗಳನ್ನು ಕೊಡುವದರಲ್ಲಿಯೇ ಕಾಲ ಕಳೆಯುತ್ತಿದ್ದೇವೆ. ರಾಷ್ಟ್ರರಕ್ಷಣೆಯ ಪ್ರತಿಜ್ಞೆಯನ್ನು ಜನರೇ ಸ್ವಪ್ರೇರಣೆಯಿಂದ ಮಾಡಲಿ ಎಂದು ನಮ್ಮ ಮುಖಂಡರು ಆರಾಮವಾಗಿ ಕೂತಂತೆ ಇದೆ."

o o o

ಶೇಷಪ್ಪ ಇನ್ನಿಲ್ಲ! ನಮ್ಮ ಶೇಷಪ್ಪ ಇನ್ನಿಲ್ಲ! ಜನತೆಗಾಗಿ ಕ್ರಾಂತಿಯ ಕಹಳೆ ಊದಿದ ಶೇಷಪ್ಪ ಇನ್ನಿಲ್ಲ!

ಕನ್ನಡ ಪತ್ರಿಕೆಗಳ ಕುರಿತು ಚರ್ಚಿಸುವಾಗ ವಿಷಯದ ನಡುವೆ ಕಿಡಿ ಸುಳಿಯದೆ ಉಳಿಯುವದಿಲ್ಲ. (ಕನ್ನಡ ಪತ್ರಿಕೋದ್ಯಮದ ಗತ ವೈಭವ ಸಂಸ್ಮರಣೆಯಲ್ಲಿ, ಎಂ. ಹರಿದಾಸರಾಯರು, ಮೊಹರೆ ಹಣಮಂತರಾಯರು ನುಸುಳಿಕೊಂಡಾರು. ಆದರೆ ಅವರು ನಮ್ಮ ಸ್ಮೃತಿಪಥದಲ್ಲಿ ಸದಾ ಕಾಲ ಕಾಣುವಂತಹದೇನನ್ನೂ ನಾವು ಮಾಡಲಿಲ್ಲ. ಅದು ಕನ್ನಡದ ಹಿರಿಮೆಯೋ ಏನೋ? ಕನ್ನಡದ ವೈಚಿತ್ರ್ಯ ಪೂರ್ಣ ನೀತಿಯಾಗಿದ್ದಿರಲೂ ಬಹುದು.)

ಕಿಡಿ ಬೇಕೆ ಶೇಷಪ್ಪನವರು ಬೇರೆಯೆ? ಕಿಡಿ ಮತ್ತು ಶೇಷಪ್ಪನವರು ಒಂದು ನಾಣ್ಯದ ಎರಡು ಮುಖವಿದ್ದಂತೆ! ಏಳೆಂಟು ವರ್ಷಗಳ ಹಿಂದೆ ಹೀಗೆ ಮಾತಿನ ನಡುವೆ ಶೇಷಪ್ಪನವರ ವಿಷಯ ಪ್ರಸ್ತಾಪಕ್ಕೆ ಬಂತು. 'ಅವರಿಗೆ ಕೋರ್ಟಿನ ಬಾಗಿಲು ತಟ್ಟುತ್ತ ಅಲೆಯುವದೊಂದೇ ಕೆಲಸ' ಎಂದು, ಮಿತ್ರರೊಬ್ಬರು ಅಂದರು. ಎಂತಹ ಸತ್ಯ! ಬಹುಶಃ ನ್ಯಾಯ ದೇವತೆಗೆ ಅನ್ಯಾಯದ ವಿರುದ್ಧ ಹೋರಾಡುವ ಶೇಷಪ್ಪನವರು ಎಂದರೆ ಅಷ್ಟು ಪ್ರೀತಿಯೋ ಏನೋ!

ಇನ್ನು ಅಂತಿಮ ಗೌರವ ಸೂಚಿಸುವ ಮಾತು, ಉಳಿಯಿತು.

ಅಂತಿಮ ಗೌರವ ಸೂಚಿಸಲು ಯಾರಿಲ್ಲ ಬಂದಿಲ್ಲ?

ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಅರ್ಥ ಸಚಿವ ಜತ್ತಿಯವರು, ಕಡಿದಾಳ್ ಮಂಜಪ್ಪನವರು, ಮೇಯರ್ ಕೃಷ್ಣ ಅಯ್ಯರ್, ಅ. ನ. ಕೃ. ಮುಂತಾದವರು, ಅಂತಿಮ ಗೌರವಾರ್ಪಣೆ ಮಾಡಲು ಬಂದಿದ್ದರು.

ಶೇಷಪ್ಪ, ಅವರು ಇನ್ನಿಲ್ಲ! ಅವರು ಜೀವನವಿಡೀ (ನರಳಿ, ಪಾಡುಪಟ್ಟು) ಸಲ್ಲಿಸಿದ ಸ್ವಾರ್ಥ ರಹಿತ ಸೇವೆ ಅಮರವಾಗಿ ಉಳಿಯುತ್ತದೆ! ಶ್ರೀಯುತರ ಕುಟುಂಬಕ್ಕೆ ಉಂಟಾದ ದುಃಖದಲ್ಲಿ ನಾವು ಸಹಭಾಗಿಗಳು! ಎರಡು ನಿಮಿಷದ ಮೌನ ಪ್ರಾರ್ಥನೆ, ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದು!

o o o

ಇನ್ನು ಉಳಿದಿರುವದು ಆದ್ಯ ಕರ್ತವ್ಯದ ಕುರಿತು ಒಂದು ಸೂಚನೆ. ಅದು— ಶೇಷಪ್ಪನವರ ಸ್ಮಾರಕ ನಿಧಿ ಸಂಗ್ರಹ.

೧ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವದು.

೨ ಜನರ ಕಣ್ಮುಂದೆ ಸದಾ ಕಾಲ ಸುಳಿಯುವ ಸ್ಥಳದಲ್ಲಿ ಅವರ ಸ್ಮಾರಕ ಪುತ್ಥಳಿಯನ್ನು ನಿಲ್ಲಿಸುವದು.

೩ ಒಂದು ಸರ್ಕಲ್ಲಿಗೆ ಅವರ ಹೆಸರಿಟ್ಟು ಕರೆಯುವದು.

೪ ಒಂದು ರಸ್ತೆಗೆ ಅವರ ಹೆಸರು.

೫ ಒಂದು ಪಾರ್ಕನ್ನು ಅವರ ಹೆಸರಿರಿಸಿಕೊಂಡು ಕರೆಯುವದು

ಪಾಲಿಸಲೇ ಬೇಕಾಗಿರುವ ಈ ಕರ್ತವ್ಯಗಳನ್ನು ನಾವು ಆಚರಣೆಯಲ್ಲಿ ತರಲಾಗದಿದ್ದರೆ, ನಮ್ಮ ಆದರ್ಶದ ಕಲ್ಪನೆಗಳಿಗೆ ಬೆಂಕಿ ಹಚ್ಚೋಣ. ಅದರ ಮೇಲೊಂದು ಗೋರಿ ಕಟ್ಟಿ ಅಚ್ಚಳಿಯದ ರೀತಿ ಇಂತು ಬರೆಯೋಣ:

ಅಭಿಮಾನಧನರೆ! ಈ ಸ್ಥಳದಲ್ಲಿ ನಾವು ನಮ್ಮ ಆದರ್ಶದ ಕಲ್ಪನೆಗಳಿಗೆ ಬೆಂಕಿ ಹಚ್ಚಿದ್ದೇವೆ. ನಮ್ಮ ನಾಡಿನ ಪ್ರವಾಹ ಎಷ್ಟು ರುಕ್ಷವಾಗಿದೆ ಎಂಬುದಕ್ಕೆ ಇದು ಸಾಕ್ಷಿ. ನೀವೆಂದೂ ಇಂತಹ ಪ್ರಲಾಪಕ್ಕೆ ಎಡೆ ಮಾಡಿಗೊಡಬೇಡಿರಿ.

ಈ ರೀತಿಯಲ್ಲಾದರೂ ಮುಂದಿನ ಪೀಳಿಗೆಗಳಿಗೆ ನಮ್ಮ ಪ್ರಾಮಾಣಿಕತೆಯ ಅರಿವು ಮಾಡಿಕೊಡೋಣ

---

**ಸೂಚನೆ**

**"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ಸ.**

ಗೃಹಿಣಿಯರ

ಜವಾಬ್ದಾರಿಯು ಸಂಸಾರ ನಿರ್ವಹಣೆಯಲ್ಲಿ ಮಹತ್ತರವಾದುದು. ಮನೆಯ ಆಯವ್ಯಯಗಳನ್ನು ಸರಿಹೊಂದಿಸಿಕೊಂಡು ತನ್ನ ಮನೆ ಕುಟುಂಬಗಳನ್ನು ಬೆಳಗಿಸುವುದು ಆಕೆಯ ಧರ್ಮ. ಅದಕ್ಕೆ ಆಕೆಯ ಸೇವಿಂಗ್ಸ್ ಬ್ಯಾಂಕ್ ಖಾತೆಯು ಬಹು ವಿಧವಾಗಿ ನೆರವಾಗಬಲ್ಲದು.

ಸಿಂಡಿಕೇಟ್ ಬ್ಯಾಂಕು ಸ್ತ್ರೀಯರು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಹೆಚ್ಚಿನ ಪ್ರೋತ್ಸಾಹವನ್ನೀಯುವುದು.

ನಿಮಗೆ ಸಮೀಪವಿರುವ ನಮ್ಮ ಶಾಖೆಯನ್ನು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ
ಸ್ಥಾಪನೆ: ೧೯೨೫

Edited Printed & Published by K. H. Shetty, at the Navayuga Press, Udipi, S. India.

# ನವಯುಗ

ಪ್ರಜಾರಾಜ್ಯ ವಿಶೇಷಾಂಕ — ೧೯೬೩

IAVAYUGA— RLPUBLIC DAY SPECIAL 1963

25
nP.




ನನ್ನ ಮಾತು ಕೇಳಿ, — ಬ್ಯಾಂಕ್ ಲೆಕ್ಕವನ್ನು ಪ್ರಾರಂಭಿಸಿ: ವಿಜಯ ಬ್ಯಾಂಕಿನವರು ನಿಮ್ಮ ಹಣದ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ. ಜೀವನೋಪಾಯದ ಮೊದಲಲ್ಲಿ ನಿಮ್ಮಂತಹ ಯುವಕರಿಗೆ ವ್ಯವಹಾರದ ತೊಡರುಗಳು ಒದಗುವುದು ಸಹಜ. ಅವುಗಳನ್ನು ಅವರು ಚೆನ್ನಾಗಿ ಅರಿತಿರುವರೆಂದು ನಿಮಗೇ ತಿಳಿಯುವುದು — ಇದು ನನ್ನ ಅನುಭವ. ಕೂಡಲೆ ಹೋಗಿ ಅವರನ್ನು ಕಾಣಿ — ವಿಜಯ ಬ್ಯಾಂಕಿನಲ್ಲಿ ಲೆಕ್ಕವನ್ನು ತೆರೆಯುವುದು ಅತಿ ಸುಲಭ

ಇನ್ನೂ ಒಂದು ವಿಷಯ. ಬ್ಯಾಂಕಿನಲ್ಲಿ ಲೆಕ್ಕವಿದ್ದರೆ ಹಣದ ಉಳಿತಾಯ ತಾನಾಗಿ ಆಗುತ್ತದೆ. ನನಗೆ ಗೊತ್ತು — ಕಾರಣ, ನಾನು ಕೂಡಿಸಿದ್ದು ಹಾಗೆ.



## ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು.

"ವಿಜಯ ಬ್ಯಾಂಕ್ ಬಿಲ್ಡಿಂಗ್"

ಲೈಟ್ ಹೌಸ್ ಹಿಲ್ ರೋಡ್ ಮಂಗಳೂರು-3

**ಶಾಖೆಗಳು**

| | | |
|---|---|---|
| ಬೆಂಗಳೂರು | ಕುಂದಾಪುರ | ಮಂಗಳೂರು |
| ಭಟ್ಕಳ | ಗೋಣಿಕೊಪ್ಪಲ್ | ಮಡಿಕೇರಿ |
| ಬೊಂಬಾಯಿ | ಕಾಞ್ಞಂಗಾಡು | ಮೂಡಿಗೆರೆ |
| ಬ್ರಹ್ಮಾವರ | ಕಾರ್ಕಳ | ಮೈಸೂರು |
| ಬೈಂದೂರು | ಕಾಸರಗೋಡು | ನಂಜನಗೂಡು |
| ಚಾಮರಾಜನಗರ | ಕಾಪು | ಪುತ್ತೂರು |
| ಸಿಟಿ—ಮಂಗಳೂರು | ಕೊಳ್ಳೆಗಾಲ | ಉಡುಪಿ |

# THE VIJAYA BANK LTD.

*Registered Office:* 'Vijaya Bank Building'.

**Light House Hill Road, MANGALORE – 3.**

ಸ್ಥಾಪಕರು:
ದಿ| ಶ್ರೀ ಎ. ಬಿ. ಶೆಟ್ಟರು
(ಮದರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

# ನವ ಯುಗ

ಸಂಪುಟ ೪೨ Vol. 42
ಸಂಚಿಕೆ ೨೦ No. 20

ಪ್ರಜಾರಾಜ್ಯ ವಿಶೇಷಾಂಕ ೧೯೬೩

Estd. 1921 ಸ್ಥಾಪನೆ
ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ.

# ಭೀಷ್ಮಪ್ರತಿಜ್ಞೆಯ ಸುದಿನ

ಪ್ರಜಾತಂತ್ರದ ತಳಹದಿಯಲ್ಲಿ ನಿರಂತರ ಮುಂದುವರಿಯುತ್ತಿದ್ದ ನಮ್ಮನ್ನು ಸಾಮ್ರಾಜ್ಯಶಾಹಿ ಚೀನವು ಜಗ್ಗಿಸುವ ಕುಪ್ರಯತ್ನವನ್ನಿಂದು ಮಾಡುತ್ತಿದೆ; ನಮ್ಮ ಮನೆಯ ಬಾಗಿಲನ್ನು ಮುರಿದು, ಅದನ್ನು ತನ್ನ ವಶದಲ್ಲಿಡುವ ದುಸ್ಸಾಹಸ ಮಾಡುತ್ತಿದೆ; ಆದರೆ, ನಾವು ಹತವೀರ್ಯರಲ್ಲ; ನಮ್ಮ ಕಿವಿ ಕಿವಿಗಳಲ್ಲಿ 'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ' ಎಂಬ ಆರ್ಷೇಯವಾಣಿ ಚಣ ಚಣವಲ್ಲೂ ಪಡಿನುಡಿಗುಡುತ್ತಿದೆ. ಅದನ್ನು ಕೇಳಿ, ಬಾಗಿಲಲ್ಲಿ ಬಂದು ನಿಂತ ಚೀನೀ ಸಾಮ್ರಾಜ್ಯವಾದಿಯನ್ನು ಹೊರದಬ್ಬುವುದಕ್ಕೆ ಬದ್ಧಕಂಕಣರಾಗಿದ್ದೇವೆ.

ಪ್ರಜಾರಾಜ್ಯ ಭಾರತದ ಪಂಚಶೀಲನಿಷ್ಠ ವಿದೇಶ ನೀತಿ, ಗಾಂಧೀಜಿಯವರ ಅಹಿಂಸೆಯ ಪಾಠಗಳಿಂದ ಭಾರತೀಯರು ಅಂಜುಬುರುಕರು, ಕದನಭೀರುಗಳು, ಅಶಕ್ತರು— ಎಂಬ ಭಾವನೆಯನ್ನು ಚೀನ ತಳೆದುಕೊಂಡಿರಬಹುದು. ಅವರ ಆ ಸ್ವರ್ಣಸ್ವಪ್ನವು ಕೇವಲ ಆಕಾಶಕುಸುಮವೆಂಬುದನ್ನು ಭಾರತೀಯ ವೀರ ಯೋಧರು ನೆಲಂಗುಳಿಗಳಿಗೆ ಪ್ರತ್ಯಕ್ಷಪಡಿಸಿ, ಭಾರತೀಯರ ಕೆಚ್ಚು, ಪರಾಕ್ರಮ ಮತ್ತು ಏಕತೆಯ ಪರಿಚಯ ಮಾಡಿಕೊಟ್ಟಿದ್ದಾರೆ. ಭಾರತೀಯರ ರಣಕೌಶಲ ವಿಶ್ವವಿದಿತವಾಗಿದೆ; ಅದು ಚೀನೀಯ ಭೂಪಿಪಾಸುಗಳಿಗೆ ಅರಿಯದುದು ಅವರ ಅಜ್ಞಾನ.

ಗೋಮುಖ ವ್ಯಾಘ್ರ ಚೀನವಿಂದು ಸಂಧಾನದ ಹೆಸರಿನಲ್ಲಿ ಸಮರಸನ್ನಾಹ ಮಾಡುತ್ತಿರುವಂತೆ ತೋರುತ್ತದೆ. ಕೊಲಂಬೋ ಸಮ್ಮೇಳನದ ಆಗ್ರಣಿ ಸಿರಿಮಾವೋ ಭಂಡಾರನಾಯಿಕೆಯವರನ್ನೂ ತನ್ನ ಪ್ರಚಾರ ಸಾಧನವನ್ನಾಗಿ ಮಾಡಿಕೊಳ್ಳುವಷ್ಟು ಅದು ಮುಂದುವರಿದಿದೆ; ಇದರಿಂದಲೇ ನಾವು ತಿಳಿಯಬಹುದು—ಅವರ ಇರಾದೆಯೇನು ಎಂಬುವನ್ನು. ಈಗ ತಿಳಿಸಬೇಕು, ಶಾಂತಿ ಮಂತ್ರ ಪಠಿಸುತ್ತ ಕತ್ತಿ ಹಿರಿಯುವ ಚೀನಾದ ಕುತಂತ್ರಿಗಳಿಗೆ, ಅಪಪ್ರಚಾರಕ್ಕೆ ಎಂದೂ ಬಗ್ಗುವವರು ಭಾರತೀಯರು ಅಲ್ಲವೆಂಬುದನ್ನು.

'ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೊ' ಅಲ್ಲಿ ನೆಲಸುವವರು ಭಾರತೀಯರು. ಚೀನೀಯ ಪಡಂಭೂತನಿಂದ ಅಳುಕುವವರು ನಾವಲ್ಲ; ಸಾಮ್ರಾಜ್ಯವಾದದ ಮುಂದೆ ತಲೆ ಬಾಗಿಸುವವರು ನಾವಲ್ಲ; ಅವುಗಳನ್ನು ಮೆಟ್ಟಿ ಧೈರ್ಯದಿಂದ ಸ್ವತಂತ್ರರಾಗಿ ತಲೆಯೆತ್ತಿ ನಿಲ್ಲುವ ವೀರ ಯೋಧರು ನಾವು 'ನಾವೆಲ್ಲರೂ ಸೈನಿಕರೇ ಇರಲಾವುದೆ ಉಡುಪು' ಎಂಬುದನ್ನು ಇಂದು ತೋರಿಸಿಕೊಡಬೇಕು ನಾವು.

'ದೇಶವೊಂದಳಿಯೆ ಉಳಿವವರಾರು? ದೇಶವೊಂದುಳಿಯೆ ಅಳಿವವರಾರು?' ಎಂಬುದೇ ನಮ್ಮ ಮಂತ್ರವಾಗಬೇಕು. ನಮ್ಮ ರಕ್ಷಣೆಯಾಗಬೇಕಾದರೆ, ನಮ್ಮ ದೇಶದ ರಕ್ಷಣೆಯಾಗಬೇಕು. ಅದಕ್ಕಾಗಿ ಪ್ರಾಣ ಪಣವಿಟ್ಟು ನಾವು ಹೋರಾಡಬೇಕು. ನಮ್ಮ ಧನ ಕನಕ ವಸ್ತು ವಾಹನಗಳನ್ನು ತ್ಯಾಗಮಾಡಿಯಾದರೂ ಮಾತೃಭೂಸಂರಕ್ಷಣೆಯ ಕಾರ್ಯದಲ್ಲಿ ಮಗ್ನರಾಗಬೇಕು, ಸಹಕಾರ ನೀಡಬೇಕು. ಇಂದು ಇದು ನಮ್ಮ ಆದ್ಯ ಕರ್ತವ್ಯ, ಪರಮ ಕರ್ತವ್ಯ; ಇದಕ್ಕೆ ತಪ್ಪಿದರೆ ನಾವು ಕರ್ತವ್ಯಭ್ರಷ್ಟರಾದೇವು, ದೇಶಭ್ರಷ್ಟರಾದೇವು. ಈರೇಳು ಜನ್ಮಗಳಲ್ಲೂ ಮಹಾ ನರಕಭಾಜನರಾದೇವು.

ಇಂದು (ಜನವರಿ ೨೬) ನಾವು ಗಣರಾಜ್ಯ ದಿನವನ್ನು ಆಚರಿಸುತ್ತೇವೆ. ಹಿಂದಿನ ದಿನಗಳ ಆನಂದಾತಿರೇಕಕ್ಕಿಂದು ಎಡೆಯಿಲ್ಲ. ಆದರೆ ಜನವರಿ ೨೬, ನಮ್ಮ ದೇಶದ ಚರಿತ್ರೆಯಲ್ಲಿ ವಿವಿಧ ಕಾರಣಗಳಿಂದ ಖ್ಯಾತವಾದ ಸುದಿನ. 'ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ, ಅದು ದೊರೆಯುವ ವಿಶ್ರಮಿಸಲಾರೆವು' ಎಂದು ಲೋಕಮಾನ್ಯ ತಿಲಕರು ಉದ್ಘೋಷಿಸಿದ ಅಮರ ಪರ್ವದಿನವದು. ಈ ವರ್ಷದ ಜನವರಿ ೨೬ರಂದು ಕೂಡಾ ಅದೇ ದೃಢ ನಿರ್ಧಾರವನ್ನು ಗಂಭೀರ ಪ್ರತಿಜ್ಞೆಯನ್ನು ಗೈದು ಮಾತೃಭೂಮಿಯ ಕೇಶಾಕರ್ಷಣಗೈದ ಚೀನೀಯ ದುಶ್ಶಾಸನನನ್ನು ಶುಣಾಸನನನ್ನಾಗಿ ಮಾಡುವುದಕ್ಕೆ ಅಣಿಕಟ್ಟಬೇಕು.

ನಮ್ಮ ಅಭಿವೃದ್ಧಿಯ ಮಾರ್ಗಗಳು ಕುಂಠಿತಗೊಳ್ಳಬಹುದು, ಪ್ರಗತಿಪಥ ಭ್ರಮಣದಲ್ಲಿ ನಾವು ನಡಿಗೆಯನ್ನು ನಿಧಾನಗೊಳಿಸಬೇಕಾಗಬಹುದು. ಅಮಿತ ತ್ಯಾಗಕ್ಕೂ ಸಿದ್ಧರಾಗಬೇಕಾದೀತು. ಆದರೆ, ಎಚ್ಚತ್ತ ಭಾರತೀಯನಿಗೆ ವಿಶ್ರಾಂತಿಯಿಲ್ಲ. ಸಕಲ ಶಕ್ತಿಯಿಂದ ಮುಟ ನೆತ್ತಿ ಸಂಘಟಿತರಾಗಿ ತಲೆಯೆತ್ತಿ ವೈರಿತಲೆಯನ್ನು ಮೆಟ್ಟಿ ಅವಭೃಥ ಮಾಡೋಣ. ಇಂತಹ ಭೀಷ್ಮಪ್ರತಿಜ್ಞೆ ಇಂದು ಕೈಗೊಳ್ಳೋಣ.

—·—

**ನಮ್ಮ ಮಾತು** ಪ್ರಜಾಪ್ರಭುತ್ವದ ಪರ್ವದಿನದ ಚಿರಸ್ಮರಣೆಗೆಂದು ಪ್ರಕಟಿಸಿದ ಈ ಸಂಚಿಕೆಯ ನಿರ್ಮಾಣದಲ್ಲಿ ಸಹಕರಿಸಿದವರು ಹತ್ತು ಹಲವು ಜನರು. ಅನೇಕ ಪ್ರಸಿದ್ಧ ಲೇಖಕ, ಲೇಖಕಿಯರ ಅಮೂಲ್ಯ ಕೃತಿಗಳನ್ನು ನಾವು ತರಿಸಿ ಇಟ್ಟುಕೊಂಡಿದ್ದರೂ ಸ್ಥಳಾಭಾವದಿಂದ ಅವು ಅಪ್ರಕಟಿತವಾಗಿಯೇ ಉಳಿಯಬೇಕಾಯಿತು. ಅವುಗಳನ್ನು ಕ್ರಮಶಃ ವಾರಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಇದಕ್ಕಾಗಿ ಲೇಖಕ ಬಂಧುಗಳಲ್ಲಿ ಕ್ಷಮೆಯಾಚಿಸುತ್ತೇವೆ. ಸಂಚಿಕೆಯ ಸರ್ವಾಂಗ ಸುಂದರತೆಗೆ ಕಾರಣೀಭೂತರಾದ ಬರಹಗಾರರ, ಬರಹಗಾರ್ತಿಯರು, ಉತ್ತೇಜನ ನೀಡಿದ ಜಾಹೀರಾತುದಾರರು, ಮುದ್ರಣಾಲಯದ ಕೆಲಸಗಾರರು ಇತರ ನೆರವಿಗರು ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿ ಮುಂದಕ್ಕೂ ಅವರ ಸಹಕಾರ ಸಿಗಲೆಂದು ಹಾರೈಸುತ್ತೇವೆ.

—ಸಂ ನ.

## ರಕ್ಷಾ ಕಂಕಣ.

ಕ್ರಾಂತಿ ಭ್ರಾಂತರು ಆಕ್ರಮಿಸಿ
ದೇಶ ಹೊಕ್ಕು
ಈಶಾನ್ಯ ದಿಸೆಯಲ್ಲಿ ಧಿಕ್ಕಾರವಿಕ್ಕು
ಯಂತ್ರತಂತ್ರದಿ ಸೆಣಸು ಸಮ
ಜೋಡಿ ಮಿಕ್ಕು,
ಶಾಂತಿ ಕ್ರಾಂತಿಯು ವಿಶ್ವದಲಿ
ಹಾಳುಮೊಕ್ಕು.

ಗಿರಿಯ ಕಣದಲ್ಲಿ ಕೂಗುತಿದೆ-ರಣಭೇರಿ,
ಕೆಂಪುಚೀನರು ನುಗ್ಗಿಹರು ಗಡಿಯದಾರಿ,
ದಿಕ್ಕು ದಿಕ್ಕುಗಳಿಂದ ಘೋಷಿಸುತ ಸಾರಿ,
ಎಚ್ಚೆಳಿ ರಕ್ಷಣೆಗೆ ಗಡಿನಾಡ ಸಿರಿ.

ಈ ಬನ್ನ ಬಂದಿರಲು ತಾಯಿಯ
ಮುಡಿಗೆ,
ಇನ್ನೇಕೆ ನಿನಗೆ ಈ ಬಣ್ಣದ ಉಡಿಗೆ,
ಮತ್ತೆ ಮೈಮೇಲಿನ ಚಿನ್ನದ ತೊಡಿಗೆ,
ನೀಡು ರಕ್ಷಣೆಗಾಗಿ ಲಾಭದ ಗಡಿಗೆ

ಕಳೆದು ಬಾ ಆಲಸ್ಯ ದೇಶದಳ ಭರ್ತಿ
ಬಲಿದಾನಕಾಗಿ ಬರುವಿಹುದೀಗ ಸರ್ತಿ
ಭಾರತದ ವೀರ ನೀ ಪಡೆಯಲಿಹೆ ಕೀರ್ತಿ
ಬದ್ಧ ಕಂಕಣನಾಗು ತ್ಯಾಗದಲಿ ಪೂರ್ತಿ

ಅರಿಕಲು ದೇಶಕ್ಕೆ ಹಚ್ಚಿರುವ ಕಿಚ್ಚು
ತೂರಿಸಲು ವೈರಿಗಳ ದೇಶದಿಂದಚ್ಚು
ದಾರಿಸಲು ಜಗಂದ್ವ ಜನ ಗಡಿಯ
ಮೇಲೆಚ್ಚು,
ತೋರಿಸಲು ಹೋರಾಡಿ ರಾಜಸಿಕ
ಕೆಚ್ಚು,

## ಎತ್ತಿ ಕೆತ್ತಿ ರಾ ರತಿ!

●

ನಮ್ಮ ತಾಯಿ ಭಾರತಿ!
ಗೆತ್ತಿರೆತ್ತಿರಾರತಿ ||

ನಾಡಗುಡಿಯ ನೆತ್ತಿ ಹಿಡಿದು
ನಾಡಗಡಿಯ ಕಡೆಗೆ ನಡೆದು
ಸ್ವಾತಂತ್ರ್ಯ ವಾಣಿ ನುಡಿದು || ಎ ||

ನಾಡ ರಕ್ಷಿಪುದಕೆ ದುಡಿದು
ಕೇಡಿಗರನು ಕಡಿದು ಕಡಿದು
ನಾಡಿನೊಲುಮೆ ಮಿಡಿದು ಮಿಡಿದು ||ಎ||

ಬಾಳ ಬತ್ತಿಯನ್ನೆ ಉರಿದು
ನೆತ್ತರೆಣ್ಣೆ ಎರೆದು ಎರೆದು
ದಾಹ ಮೋಹಗಳನು ತೊರೆದು || ಎ ||

ಧೈರ್ಯ ಶೌರ್ಯ ಗಂಟೆ ಮೊಳಗಿ
ಸ್ವಾತಂತ್ರ್ಯ ದೀಪ ಬೆಳಗಿ
ನಾಕ ಲೋಕಗಳನು ತೊಳಗಿ || ಎ ||

ಭಾರತಾಂಬೆ ನಮ್ಮ ಹರಣ
ಭಾರತಾಂಬೆ ನಿನ್ನ ಚರಣ
ಯುಗಳಕಿದೊ ನಾವು ಶರಣ || ಎ ||

—ರಮಾನಂದ ಬನಾರಿ,
ದೇಲಂಪಾಡಿ.

---

ವೀರ ಸೀನೆದ್ದೇಳು ಕೆಚ್ಚೆದೆಯ ಕಿರಣ,
ದೇಶರಕ್ಷಣೆಗಾಗಿ ಕೊಡು ನಿನ್ನ ಹರಣ.
ಕಾದಿಹುದು ಭರ್ಜಿ ಬಂದೂಕಿನಾಭರಣ,
ಪಣಮಾಡುಪಿಡಿದುನೀ ಮಾತೆಯಚರಣ

— ಸಿರಿಪತಿ

## ನಿನಗಾಗಿ!

ಎದೆ ನೊಂದಿದೆ!
ಬಿಡಿ ಬೆಂದಿದೆ!
ಎಲೆ ತಾಯಿಯೆ ನಿನಗೆ!
ಮದ ಭರಿತರು
ಒದಗಿಸುತಿಹ
ಸಂಕಷ್ಟದ ಬಗೆಗೆ! ||ಎದೆ||

ತನು ನಿನ್ನದು
ಮನ ನಿನ್ನದು
ನಿನಗಾಗಿಯೆ ಮತಿ!
ಕ್ಷಣಮಾತ್ರದೆ
ಪೆಣನಾಗಲು
ಹಿಂಜರಿವೆನೆ ದಾತೆ? ||ಎದೆ||

ನೀನೆಂದೊಡೆ
ಬೇಕೆಂದಡೆ
ಹಾರುವೆ ಶರಧಿ!
ನಿನಗಾಗಿಯೆ
ತೃಣದಂತೆಯೆ
ಉರಿವೆನು ಭರದಿ ||ಎದೆ||

ನರನಾಡಿಯೊ
ಳುರಿ ತುಂಬಿಸು
ನವ ಚೇತನ ರಸವಾ! ||
ನವಸ್ಫೂರ್ತಿಯೊ
ಳೆದೆ ಎತ್ತುತ
ಮುನ್ನಡೆಯುವ ಜಸವಾ!
|| ಎದೆ ||

ಇದೊ ಸ್ಥೈರಿಸು!
ಮುದ ತೋರಿಸು
ಹರಸಾ ನಮ್ಮ
ಅದರಿಂದಲಿ
ವಧು ವಿಜಯಳ
ವರಿಸುವೆವಮ್ಮ! ||ಎದೆ||

**ಭಾಸ್ಕರ ಭಂಡಾರಿ, ಮಜಿಬೈಲು**
**ಮಂಜೇಶ್ವರ**

---

**ಉಡ್ಪಿ ಸಬ್ ಜಡ್ಜರ ಕೋರ್ಟಿನಲ್ಲಿ**
**A. S. 90/1962.**

ನಿಬಲಿಯೋ ಪಿಂಟೊ —ಅಪೀಲಾಂಟ.

ಮತ್ತು

ರೋಲ್‌ದಾವ್ ಪಿಂಟೋ ಕೂಡಾ
—ಎದ್ರಿರು.

ಇವರೊಳಗೆ

3ನೇ ಎದ್ರಿ ಶಿವ ಭಂಡಾರಿ—ಮಹಾ ಲಿಂಗ ಭಂಡಾರಿ ಮಗ—4ನೇ ಎದ್ರಿ—ಗೋವಿಂದ ನ್ಯಾಕ—ಕುಪ್ಪ ನ್ಯಾಕರ ಮಗ-ಕುಂದಾಪುರ ತಾಲೂಕು ಗಂಗೊಳ್ಳಿಯಲ್ಲಿರುವವರು -ಇವರಿಗೆ ಈ ಮೂಲಕ ತಿಳಿಯಪಡಿಗುವುದೇನಂದ್ರೆ—

ಕುಂದಾಪುರ ಡಿ. ಮು. ಕೋರ್ಟು O. S. 458/59ನೇ ತೀರ್ಪಿನ ಮೇಲೆ 1ನೇ ಪ್ರತಿವಾದಿ ಯಾದ ಅಪೀಲಾಂಟನು ಮೇಲ್ಕಂಡ ಅಪೀಲು ದಾಖಲ್ಲು ಮಾಡಿ, ಸದ್ರಿ ಅಪೀಲು ತಾರೀಕು 6—2—1963ಕ್ಕೆ ಇಟ್ಟಿರುತ್ತದೆ. ಆದರಲ್ಲಿ ನಿಮಗೇನಾದರೂ ಪ್ರತಿ ವ್ಯವಹರಿಸು ವಂಥಾದಿದ್ರೆ ತಾರೀಕು 6—2—1963ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಾತಿಯಿಂದ ತೀರ್ಮಾನಿಸಲ್ಪಡುವುದು.

K. Balachandra Rao.
Advocate for Appellant.

ಉಡ್ಪಿ, ತಾ. 21—1—63.


ಪ್ರಜಾರಾಜ್ಯೋತ್ಸವದ

ಶುಭಾಶಯಗಳು

ಕಿಲಗೂರು ಚಾ

ಕಿಲಗೂರು ಚಾ

ಜೈ ಭಾರತ್ ಮಿಲ್ಸ್
ಪ್ರೈವೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಪೇಂದ್ರ ಭಾಗ್, ಉಡುಪಿ.



ಪ್ರಜಾರಾಜ್ಯ ದಿನಾಚರಣೆಯ
ಶುಭಾಶಯಗಳು

KALPANA

KALPANA

ಏರ್ ಕಂಡಿಶನ್ಡ್ ಕೋಣೆಗಳಿರುವ
ಅತ್ಯಾಧುನಿಕ ಮಾದರಿಯ ವಸತಿಗೃಹ

ಕಲ್ಪನಾ

ಉಪೇಂದ್ರ ಭಾಗ್, ಉಡುಪಿ.

ಸ್ಥಾಪಕರು:
ದಿ| ಶ್ರೀ ಎ. ಬಿ. ಶೆಟ್ಟರು
(ಮದರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

# ನವ ಯುಗ

ಸಂಪುಟ ೪೨ Vol. 42
ಸಂಚಿಕೆ ೨೦ No. 20

Estd. 1921 ಸ್ಥಾಪನೆ

ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ.

ಪ್ರಜಾರಾಜ್ಯ ವಿಶೇಷಾಂಕ ೧೯೬೩

# ಭೀಷ್ಮಪ್ರತಿಜ್ಞೆಯ ಸುದಿನ

ಪ್ರಜಾತಂತ್ರದ ಹಳಹದಿಯಲ್ಲಿ ನಿರಂತರ ಮುಂದುವರಿಯುತ್ತಿದ್ದ ನಮ್ಮನ್ನು ಸಾಮ್ರಾಜ್ಯಶಾಹಿ ಚೀನವು ಜಗ್ಗಿಸುವ ಕುಪ್ರಯತ್ನವನ್ನೆಂದು ಮಾಡುತ್ತಿದೆ; ನಮ್ಮ ಮನೆಯ ಬಾಗಿಲನ್ನು ಮುರಿದು, ಅದನ್ನು ತನ್ನ ವಶದಲ್ಲಿಡುವ ದುಷ್ಟಸಾಹಸ ಮಾಡುತ್ತಿದೆ; ಆದರೆ, ನಾವು ಹತವೀರ್ಯರಲ್ಲ; ನಮ್ಮ ಕಿವಿ ಕಿವಿಗಳಲ್ಲಿ 'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ' ಎಂಬ ಅಶರೀರವಾಣಿ ಚಣ ಚಣವೆಲ್ಲಾ ಪಡಿನುಡಿಗುಡುತ್ತಿದೆ. ಅದನ್ನು ಕೇಳಿ, ಬಾಗಿಲಲ್ಲಿ ಬಂದು ನಿಂತ ಚೀನೀ ಸಾಮ್ರಾಜ್ಯವಾದಿಯನ್ನು ಹೊರದಬ್ಬುವುದಕ್ಕೆ ಬದ್ಧಕಂಕಣರಾಗಿದ್ದೇವೆ.

ಪ್ರಜಾರಾಜ್ಯ ಭಾರತದ ಪಂಚಶೀಲನಿಷ್ಠ ವಿದೇಶ ನೀತಿ, ಗಾಂಧೀಜಿಯವರ ಅಹಿಂಸೆಯ ವಿಚಾರಗಳಿಂದ ಭಾರತೀಯರು ಅಂಜುಬುರುಕರು, ಕದನಭೀರುಗಳು, ಅಶಕ್ತರು— ಎಂಬ ಭಾವನೆಯನ್ನು ಚೀನ ತಳೆದುಕೊಂಡಿರಬಹುದು. ಅವರ ಆ ಸ್ವರ್ಣಸ್ವಪ್ನವು ಕೇವಲ ಆಕಾಶಕುಸುಮವೆಂಬುದನ್ನು ಭಾರತೀಯ ವೀರ ಯೋಧರು ನೆಲಂಗುಳಿಗಳಿಗೆ ಪ್ರತ್ಯಕ್ಷಪಡಿಸಿ, ಭಾರತೀಯರ ಕೆಚ್ಚು, ಪರಾಕ್ರಮ ಮತ್ತು ಏಕತೆಯ ಪರಿಚಯ ಮಾಡಿಕೊಟ್ಟಿದ್ದಾರೆ. ಭಾರತೀಯರ ರಣಕೌಶಲ ವಿಶ್ವವಿದಿತವಾಗಿದೆ; ಅದು ಚೀನೀಯ ಧೂರ್ತರುಗಳಿಗೆ ಅರಿಯದುದು ಅವರ ಅಜ್ಞಾನ.

ಗೋಮುಖ ವ್ಯಾಘ್ರ ಚೀನವಿಂದು ಸಂಧಾನದ ಹೆಸರಿನಲ್ಲಿ ಸಮರಸನ್ನಾಹ ಮಾಡುತ್ತಿರುವಂತೆ ತೋರುತ್ತದೆ. ಕೊಲಂಬೋ ಸಮ್ಮೇಳನದ ಅಗ್ರಣಿ ಸಿರಿಮಾವೋ ಭಂಡಾರನಾಯಕೆಯವರನ್ನೂ ತನ್ನ ಪ್ರಚಾರ ಸಾಧನವನ್ನಾಗಿ ಮಾಡಿಕೊಳ್ಳುವಷ್ಟು ಅದು ಮುಂದುವರಿದಿದೆ; ಇದರಿಂದಲೇ ನಾವು ತಿಳಿಯಬಹುದು—ಅವರ ಇರಾದೆಯೇನು ಎಂಬುದನ್ನು. ಈಗ ತಿಳಿಸಬೇಕು, ಶಾಂತಿ ಮಂತ್ರ ಪಠಿಸುತ್ತ ಕತ್ತಿ ಹಿರಿಯುವ ಚೀನಾದ ಕುತಂತ್ರಿಗಳಿಗೆ, ಅಪಪ್ರಚಾರಕ್ಕೆ ಎಂದೂ ಬಗ್ಗುವವರು ಭಾರತೀಯರು ಅಲ್ಲವೆಂಬುದನ್ನು.

'ಎಲ್ಲಿ ಮನ ಕಳುಕಿರದೊ ಎಲ್ಲಿ ತಲೆ ಬಾಗಿರದೊ' ಅಲ್ಲಿ ನೆಲಸುವವರು ಭಾರತೀಯರು. ಚೀನೀಯ ಪಿಡಂಭೂತನಿಂದ ಅಳುಕುವವರು ನಾವಲ್ಲ; ಸಾಮ್ರಾಜ್ಯವಾದದ ಮುಂದೆ ತಲೆ ಬಾಗಿಸುವವರು ನಾವಲ್ಲ; ಅವುಗಳನ್ನು ಮೆಟ್ಟಿ ಧೈರ್ಯದಿಂದ ಸ್ವತಂತ್ರವಾಗಿ ತಲೆಯೆತ್ತಿ ನಿಲ್ಲುವ ವೀರ ಯೋಧರು ನಾವು 'ನಾವೆಲ್ಲರೂ ಸೈನಿಕರೇ ಇರಲಾವುದೆ ಉಡುಪು' ಎಂಬುದನ್ನು ಇಂದು ತೋರಿಸಿಕೊಡಬೇಕು ನಾವು.

'ದೇಶವೊಂದಳಿಯೆ ಉಳಿವವರಾರು? ದೇಶವೊಂದುಳಿಯೆ ಅಳಿವವರಾರು?' ಎಂಬುದೇ ನಮ್ಮ ಮಂತ್ರವಾಗಬೇಕು. ನಮ್ಮ ರಕ್ಷಣೆಯಾಗಬೇಕಾದರೆ, ನಮ್ಮ ದೇಶದ ರಕ್ಷಣೆಯಾಗಬೇಕು. ಇದಕ್ಕಾಗಿ ಪ್ರಾಣ ಪಣವಿಟ್ಟು ನಾವು ಹೋರಾಡಬೇಕು. ನಮ್ಮ ಧನ ಕನಕ ವಸ್ತು ವಾಹನಗಳನ್ನು ತ್ಯಾಗಮಾಡಿಯಾದರೂ ಮಾತೃಭೂಸಂರಕ್ಷಣೆಯ ಕಾರ್ಯದಲ್ಲಿ ಮಗ್ನರಾಗಬೇಕು, ಸಹಕಾರ ನೀಡಬೇಕು. ಇಂದು ಇದು ನಮ್ಮ ಆದ್ಯ ಕರ್ತವ್ಯ, ಪರಮ ಕರ್ತವ್ಯ; ಇದಕ್ಕೆ ತಪ್ಪಿದರೆ ನಾವು ಕರ್ತವ್ಯಭ್ರಷ್ಟರಾದೇವು, ದೇಶಭ್ರಷ್ಟರಾದೇವು. ಏಳೇಳು ಜನ್ಮಗಳಲ್ಲೂ ಮಹಾ ನರಕಭಾಜನರಾದೇವು.

ಇಂದು (ಜನವರಿ ೨೬) ನಾವು ಗಣರಾಜ್ಯ ದಿನವನ್ನು ಆಚರಿಸುತ್ತೇವೆ. ಹಿಂದಿನ ದಿನಗಳ ಆನಂದಾತಿರೇಕಕ್ಕಿಂದು ಎಡೆಯಿಲ್ಲ. ಆದರೆ ಜನವರಿ ೨೬, ನಮ್ಮ ದೇಶದ ಚರಿತ್ರೆಯಲ್ಲಿ ವಿವಿಧ ಕಾರಣಗಳಿಂದ ಖ್ಯಾತವಾದ ಸುದಿನ 'ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ, ಅದು ದೊರೆಯದೆ ವಿಶ್ರಮಿಸಲಾರೆವು' ಎಂದು ಲೋಕಮಾನ್ಯ ತಿಲಕರು ಉದ್ಘೋಷಿಸಿದ ಅಮರ ಪರ್ವದಿನವದು. ಈ ವರ್ಷದ ಜನವರಿ ೨೬ರಂದು ಕೂಡಾ ಅದೇ ದೃಢ ನಿರ್ಧಾರವನ್ನು ಗಂಭೀರ ಪ್ರತಿಜ್ಞೆಯನ್ನು ಗೈದು ಮಾತೃಭೂಮಿಯ ಕೇಶಾಕರ್ಷಣಗೈದ ಚೀನೀಯ ದುಶ್ಶಾಸನನನ್ನು ಕುಶಾಸನನನ್ನಾಗಿ ಮಾಡುವುದಕ್ಕೆ ಅಣಿಕಟ್ಟಬೇಕು.

ನಮ್ಮ ಅಭಿವೃದ್ಧಿಯ ಮಾರ್ಗಗಳು ಕುಂಠಿತಗೊಳ್ಳಬಹುದು, ಪ್ರಗತಿಪಥ ಭ್ರಮಣದಲ್ಲಿ ನಾವು ನಡಿಗೆಯನ್ನು ನಿಧಾನಗೊಳಿಸಬೇಕಾಗಬಹುದು. ಅಮಿತ ತ್ಯಾಗಕ್ಕೂ ಸಿದ್ಧರಾಗಬೇಕಾದೀತು. ಆದರೆ, ಎಚ್ಚೆತ್ತ ಭಾರತೀಯನಿಗೆ ವಿಶ್ರಾಂತಿಯಿಲ್ಲ ಸಕಲ ಶಕ್ತಿಯಿಂದ ಪುಟನೆತ್ತಿ ಸಂಘಟಿತರಾಗಿ ತಲೆಯೆತ್ತಿ ವೈರಿತಲೆಯನ್ನು ಮೆಟ್ಟಿ ಅವಭೃಥ ಮಾಡೋಣ. ಇಂತಹ ಭೀಷ್ಮಪ್ರತಿಜ್ಞೆ ಇಂದು ಕೈಗೊಳ್ಳೋಣ.

+++ +++ +++

**ನಮ್ಮ ಮಾತು** ಪ್ರಜಾಪ್ರಭುತ್ವದ ಪರ್ವದಿನದ ಚಿರಸ್ಮರಣೆಗೆಂದು ಪ್ರಕಟಿಸಿದ ಈ ಸಂಚಿಕೆಯ ನಿರ್ಮಾಣದಲ್ಲಿ ಸಹಕರಿಸಿದವರು ಹತ್ತು ಹಲವು ಜನರು. ಅನೇಕ ಪ್ರಸಿದ್ಧ ಲೇಖಕ, ಲೇಖಕಿಯರ ಅಮೂಲ್ಯ ಕೃತಿಗಳನ್ನು ನಾವು ತರಿಸಿ ಇಟ್ಟುಕೊಂಡಿದ್ದರೂ ಸ್ಥಳಾಭಾವದಿಂದ ಅವು ಅಪ್ರಕಟಿತವಾಗಿಯೇ ಉಳಿಯಬೇಕಾಯಿತು. ಇವುಗಳನ್ನು ಕ್ರಮಶಃ ವಾರಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಇದಕ್ಕಾಗಿ ಲೇಖಕ ಬಂಧುಗಳಲ್ಲಿ ಕ್ಷಮೆ ಯಾಚಿಸುತ್ತೇವೆ. ಸಂಚಿಕೆಯ ಸರ್ವಾಂಗ ಸುಂದರತೆಗೆ ಕಾರಣೀಭೂತರಾದ ಬರೆಹಗಾರರ, ಬರೆಹಗಾರ್ತಿಯರು, ಉತ್ತೇಜನ ನೀಡಿದ ಜಾಹೀರಾತುದಾರರು, ಮುದ್ರಣಾಲಯದ ಕೆಲಸಗಾರರು ಇತರ ನೆರವಿಗರು ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿ ಮುಂದಕ್ಕೂ ಅವರ ಸಹಕಾರ ಸಿಗಲೆಂದು ಪ್ರಾರ್ಥಿಸುತ್ತೇವೆ. —ಸಂ. ನ.

## ರಕ್ಷಾ ಕಂಕಣ.

ಕ್ರಾಂತಿ ಭ್ರಾಂತರು ಆಕ್ರಮಿಸೆ
ದೇಶ ಹೊಕ್ಕು
ಈಶಾನ್ಯ ದಿಸೆಯಲ್ಲಿ ಧಿಕ್ಕಾರವಿಕ್ಕು
ಯಂತ್ರತಂತ್ರದಿ ಸೆಣಸು ಸವು
ಜೋಡಿ ಮಿಕ್ಕು,
ಶಾಂತಿ ಕ್ರಾಂತಿಯು ವಿಶ್ವದಲಿ
ಹಾಳುಹೊಕ್ಕು.

ಗಿರಿಯ ಕಣದಲ್ಲಿ ಕೂಗುತಿದೆ-ರಣಭೇರಿ,
ಕೆಂಪುಚೀನರು ನುಗ್ಗಿಹರು ಗಡಿಯದಾರಿ,
ದಿಕ್ಕು ದಿಕ್ಕುಗಳಿಂದ ಘೋಷಿಸುತ ಸಾರಿ,
ಎದ್ದೇಳಿ ರಕ್ಷಣೆಗೆ ಗಡಿನಾಡ ಸಿರಿ.

ಈ ಬನ್ನಬಂದಿರಲು ತಾಯಿಯ
ಮುಡಿಗೆ,
ಇನ್ನೇಕೆ ನಿನಗೆ ಈ ಬಣ್ಣದ ಉಡಿಗೆ,
ಮತ್ತೆ ವೈವೇಲಿನ ಚಿನ್ನದ ತೊಡಿಗೆ,
ನೀಡು ರಕ್ಷಣೆಗಾಗಿ ಲಾಭದ ಗಡಿಗೆ

ಕಳೆದು ಬಾ ಆಲಸ್ಯ ದೇಶದಳ ಭರ್ತಿ
ಬಲಿದಾನಕಾಗಿ ಬಂದಿಹುದೀಗ ಸರ್ತಿ
ಭಾರತದ ವೀರ ನೀ ಪಡೆಯಲಿಹೆ ಕೀರ್ತಿ
ಬದ್ಧಕಂಕಣನಾಗು ತ್ಯಾಗದಲಿ ಪೂರ್ತಿ.

ಅರಿಸಲು ದೇಶಕ್ಕೆ ಹಚ್ಚಿರುವ ಕಿಚ್ಚು
ತೂರಿಸಲು ವೈರಿಗಳ ನೇರದಿಂದೆಚ್ಚು
ಹಾರಿಸಲು ಜಯಧ್ವಜವ ಗಡಿಯ
ಮೇಲೆಚ್ಚು,
ತೋರಿಸಲು ಹೋರಾಡಿ ರಾಜಸಿಕ
ಕೆಚ್ಚು,

## ಎತ್ತಿರೆತ್ತಿರಾರತಿ!

ನಮ್ಮ ತಾಯಿ ಭಾರತಿ !
ಗೆತ್ತಿರೆತ್ತಿರಾರತಿ ॥

ನಾಡಗುಡಿಯ ನೆತ್ತಿ ಹಿಡಿದು
ನಾಡಗಡಿಯ ಕಡೆಗೆ ನಡೆದು
ಸ್ವಾತಂತ್ರ್ಯ ವಾಣಿ ನುಡಿದು ॥ ಎ ॥

ನಾಡ ರಕ್ಷಿಸುದಕೆ ದುಡಿದು
ಕೇಡಿಗರನು ಕಡಿದು ಕಡಿದು
ನಾಡಿನೊಲುಮೆ ಮಿಡಿದು ಮಿಡಿದು ॥ಎ॥

ಬಾಳ ಬತ್ತಿಯನ್ನೆ ಉರಿದು
ನೆತ್ತರೆಣ್ಣೆ ಎರೆದು ಎರೆದು
ದಾಹ ಮೋಹಗಳನು ತೊರೆದು ॥ ಎ ॥

ಧೈರ್ಯ ಶೌರ್ಯ ಗಂಟೆ ಮೊಳಗಿ
ಸ್ವಾತಂತ್ರ್ಯ ದೀಪ ಬೆಳಗಿ
ನಾಕ ಲೋಕಗಳನು ತೊಳಗಿ ॥ ಎ ॥

ಭಾರತಾಂಬೆ ನಮ್ಮ ಹರಣ
ಭಾರತಾಂಬೆ ನಿನ್ನ ಚರಣ
ಯುಗಳಕಿದೊ ನಾವು ಶರಣ ॥ ಎ ॥

—ರಮಾನಂದ ಬನಾರಿ,
ದೇಲಂಪಾಡಿ.

---

ವೀರ ನೀನೆದ್ದೇಳು ಕೆಚ್ಚಿದೆಯು ಕಿರಣ,
ದೇಶರಕ್ಷಣೆಗಾಗಿ ಕೊಡು ನಿನ್ನ ಹರಣ,
ಕಾದಿಹುದು ಭರ್ತಿ ಬಂದೂಕಿನಾಭರಣ,
ಪಣವೊಡುಸಿಡಿದುನೀ ಮಾತೆಯಚರಣ

—ಸಿರಿಪತಿ

## ನಿನಗಾಗಿ!

ಎದೆ ನೊಂದಿದೆ!
ಬೆದೆ ಬೆಂದಿದೆ!
ಎಲೆ ತಾಯಿಯೆ ನಿನಗೆ!
ಮದ ಭರಿತರು
ಒದಗಿಸುತಿಹ
ಸಂಕಷ್ಟದ ಬಗೆಗೆ! ॥ಎದೆ॥

ತನು ನಿನ್ನದು
ಮನ ನಿನ್ನದು
ನಿನಗಾಗಿಯೆ ಮಾತೆ!
ಕ್ಷಣಮಾತ್ರದೆ
ಪೆಣನಾಗಲು
ಹಿಂಜರಿವೆನೆ ದಾತೆ? ॥ಎದೆ॥

ನೀನೆಂದೊಡೆ
ಬೇಕೆಂದಡೆ
ಹಾರುವೆ ಶರಧಿ!
ನಿನಗಾಗಿಯೆ
ತೃಣದಂತೆಯೆ
ಉರಿವೆನು ಭರದಿ ॥ಎದೆ॥

ನರನಾಡಿಯೊ
ಳುರಿ ತುಂಬಿಸು
ನವ ಚೇತನ ರಸವಾ! ॥
ನವಸ್ಫೂರ್ತಿಯೊ
ಳೆದೆ ಎತ್ತುತ
ಮುನ್ನಡೆಯುವ ಜಸವಾ!
॥ ಎದೆ ॥

ಇದೊ ಸೈರಿಕು!
ಮುದ ತೋರಿಸು
ಹರಸೌ ನಮ್ಮ
ಆದರಿಂದಲೆ
ವಧು ವಿಜಯಳ
ವರಿಸುವೆವಮ್ಮ! ॥ಎದೆ॥

**ಭಾಸ್ಕರ ಭಂಡಾರಿ, ಮಜಿಬೈಲು**
**ಮಂಜೇಶ್ವರ**

---

**ಉಡ್ಪಿ ಸಬ್ ಜಡ್ಜರ ಕೋರ್ಟಿನಲ್ಲಿ**
**A. S. 90/1962.**

ನಿಖಲಿಯೋ ಪಿಂಟೊ —ಅಪೀಲಾಂಟ.
ಮತ್ತು
ರೋಲ್ ದಾನ್ ಪಿಂಟೋ ಕೂಡಾ
—ಎದ್ರಿರು.

ಇವರೊಳಗೆ

3ನೇ ಎದ್ರಿ ಶಿವ ಭಂಡಾರಿ—ಮಹಾಲಿಂಗ ಭಂಡಾರಿ ಮಗ—4ನೇ ಎದ್ರಿ—ಗೋವಿಂದ ನ್ಯಾಕ—ಕುಪ್ಪ ನ್ಯಾಕರ ಮಗ—ಕುಂದಾಪುರ ತಾಲೂಕು ಗಂಗೊಳ್ಳಿಯಲ್ಲಿರುವವರು —ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಕುಂದಾಪುರ ಡಿ. ಮು. ಕೋರ್ಟು O. S. 458/59ನೇ ತೀರ್ಪಿನ ಮೇಲೆ 1ನೇ ಪ್ರತಿವಾದಿ ಯಾದ ಅಪೀಲಾಂಟನು ಮೇಲ್ಕಂಡ ಅಪೀಲು ದಾಖ್ಲ ಮಾಡಿ, ಸದ್ರಿ ಅಪೀಲು ತಾರೀಕು 6—2—1963ಕ್ಕೆ ಇಟ್ಟಿರುತ್ತದೆ. ಆದರಲ್ಲಿ ನಿಮಗೇನಾದರೂ ಪ್ರತಿ ವ್ಯವಹರಿಸುವಂಥಾದಿದ್ರೆ ತಾರೀಕು 6—2—1963ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಾತಿಯಿಂದ ತೀರ್ಮಾನಿಸಲ್ಪಡುವುದು.

K. Balachandra Rao,
Advocate for Appellant.

ಉಡ್ಪಿ, ತಾ. 21-1-63.


ಪ್ರಜಾರಾಜ್ಯೋತ್ಸವದ

ಶುಭಾಶಯಗಳು

ಕೆಲಗೂರು ಚಾ ಕೆಲಗೂರು ಚಾ

ಜೈ ಭಾರತ್ ಮಿಲ್ಸ್

ಪ್ರೈವೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಪೇಂದ್ರ ಭಾಗ್, ಉಡುಪಿ.



ಪ್ರಜಾರಾಜ್ಯ ದಿನಾಚರಣೆಯ

ಶುಭಾಶಯಗಳು

KALPANA

KALPANA

ಏರ್ ಕಂಡಿಶನ್ಡ್ ಕೋಣೆಗಳಿರುವ
ಅತ್ಯಾಧುನಿಕ ಮಾದರಿಯ ವಸತಿಗೃಹ

ಕಲ್ಪನಾ

ಉಪೇಂದ್ರ ಭಾಗ್, ಉಡುಪಿ.

ವಿದೇಶೀಯ ಇಲ್ಲವೇ ರಾಷ್ಟ್ರೀಯ ಸರಕಾರದ ನಿಯಂತ್ರಣದಿಂದ ಸ್ವತಂತ್ರವಾಗುವುದಕ್ಕೆ ನಿರಂತರ ಸಾಧನೆ ಮಾಡುವುದೇ ಸ್ವರಾಜ್ಯ. ಜೀವನದ ಪ್ರತಿ ವಿಷಯದ ಕಾರ್ಯಾಚರಣೆಗೂ ಪ್ರಜೆಗಳು ಸ್ವರಾಜ್ಯ ಸರಕಾರದ ಮುಖವನ್ನೇ ನೋಡಬೇಕಾಗಿರುವುದಾದರೆ, ಅಂತಹ ಸರಕಾರವು ಕ್ಲೇಶಕಾರಣವಾಗುವುದು.

ಸರಕಾರದ ಮಧ್ಯಪ್ರವೇಶವಿಲ್ಲದೆ ಒಂದು ರಾಷ್ಟ್ರವು ತನ್ನ ಕಾರ್ಯಕಲಾಪಗಳನ್ನು ನಿರಂತಕವಾಗಿಯೂ ಪರಿಣಾಮಕಾರಿಯಾಗಿಯೂ ಮುನ್ನಡೆಸುತ್ತ ಹೋಗುವುದಾದರೆ, ಅದು ನಿಜವಾದಪ್ರಜಾಪ್ರಭುತ್ವ. ಇದಕ್ಕೆ ಪ್ರತಿಕೂಲ ಪರಿಸ್ಥಿತಿಯಿರುವುದಾದರೆ, ಅದು ನಾಮ ಮಾತ್ರಕ್ಕೆ ಇರುವ ಪ್ರಜಾಪ್ರಭುತ್ವ.

ಒಬ್ಬನ ಉಪಯೋಗಕ್ಕಾಗಿ ಮತ್ತೊಬ್ಬರನ್ನು ಬಳಸಿಕೊಳ್ಳುವ ಹವ್ಯಾಸವನ್ನು ಮಿತಗೊಳಿಸಿ, ಸ್ಪಷ್ಟವಾಗಿ ಒಳಿತನ್ನೇ ಮಾಡುವ ಉದ್ದೇಶದಿಂದಾದರೂ ಸರಕಾರದ ಅಧಿಕಾರವನ್ನು ಹೆಚ್ಚಿಸುವುದಕ್ಕೆ ನಾನು ಅಂಜುತ್ತೇನೆ; ಏಕೆಂದರೆ, ಹೀಗೆ ಅಧಿಕಾರ ಹೆಚ್ಚಿಸುವುದರಿಂದ, ಸರ್ವ ಪ್ರಗತಿ ಹೇತುವಾದ ವ್ಯಕ್ತಿತ್ವದ ಮೂಲವನ್ನೇ ನಾಶಮಾಡಿ ಅದು ಮಹಾ ಅಪಾಯವನ್ನು ತಂದೊಡ್ಡುತ್ತದೆ.

ವ್ಯಕ್ತಿಯು ಗಣನೆಗೆ ಅನರ್ಹನೆನಿಸಿದರೆ, ಮತ್ತೆ ಸಮಾಜಕ್ಕೆ ಉಳಿದುದಾದರೂ ಏನು? ವ್ಯಕ್ತಿಗತ ಸ್ವಾತಂತ್ರ್ಯವೊಂದೇ ಮನುಷ್ಯನನ್ನು ಸಮಾಜದ ಸೇವೆಗಾಗಿ ಸ್ವೇಚ್ಛೆಯಿಂದ ತ್ಯಾಗ ಮಾಡುವುದಕ್ಕೆ ಸಮರ್ಥವಾಗಿಸೀತು. ಅತನಿಂದ ಸ್ವಾತಂತ್ರ್ಯವನ್ನು ಕಿತ್ತುಕೊಂಡರೆ, ಅವನೊಬ್ಬ ಪ್ರತಿರೋಧಿ ಯಾದಾನು. ಇದು ಕಾರಣ ಸಮಾಜವು ನಾಶವಾದೀತು. ವ್ಯಕ್ತಿ ಸ್ವಾತಂತ್ರ್ಯ ನಿರಾಕರಣೆಯಿಂದ ಯಾವ ಸಮಾಜವನ್ನೂ ಕಟ್ಟುವುದು ಯಾವ ಕಾಲಕ್ಕೂ ಸಾಧ್ಯವಿಲ್ಲ.

— ಮಹಾತ್ಮಾ ಗಾಂಧಿ


SUKHA NIVAS
BOARDING & LODGING
COURT ROAD, UDIPI
ಸ್ಥಾಪನೆ: 1932
ಮನೆಯ ವಾತಾವರಣದ ಶುಚಿ–ರುಚಿಯಾದ ಊಟ
ಮತ್ತು ಉಪಾಹಾರಕ್ಕೆ ಹೆಸರಾದುದು.
ಉತ್ತಮ ಕೊಠಡಿಗಳು ಸಿಗುತ್ತವೆ.
ಸಂದರ್ಶಿಸಿರಿ ಮತ್ತು ಸಂತೃಪ್ತರಾಗಿರಿ!
ಎಚ್. ವಿ. ನಾಯಕ್
ಪ್ರೊಪ್ರೈಟರ್.
ಸುಖ ನಿವಾಸ ಕೋರ್ಟ್ ರೋಡು ಉಡುಪಿ

ಮಹಾತ್ಮಾಗಾಂಧಿಯವರ ದೇಶಕ್ಕೆ ಸೇರಿದ ನಾವು ಶಸ್ತ್ರಗಳನ್ನು ಹೇಗೆ ತೆಗೆದುಕೊಳ್ಳುತ್ತೇವೆ ಎಂದು ಕೆಲವರು ಕೇಳುತ್ತಾರೆ. ಇದು ಶುದ್ಧ ತಪ್ಪು ಭಾವನೆ. ಅನ್ಯಾಯದ ಮುಂದೆ ತಲೆ ಬಾಗಲು ಗಾಂಧೀಜಿ ಎಂದೂ ಕಲಿಸಿಲ್ಲ. ಹೇಡಿತನ ಮತ್ತು ಶಸ್ತ್ರಾಸ್ತ್ರಗ್ರಹಣಗಳಲ್ಲಿ ಯಾವುದಾದರೊಂದನ್ನು ಆಯ್ದುಕೊಳ್ಳುವ ಅವಕಾಶ ಒದಗಿದ್ದರೆ ಅವರು ಎರಡನೆಯದನ್ನೇ ಆಯುತ್ತಿದ್ದರು.

ನಾವು ನಮ್ಮ ಮನಸ್ಸನ್ನು ಕ್ರೋಧ ಇಲ್ಲವೇ ದ್ವೇಷದಿಂದ ಉದ್ರಿಕ್ತಗೊಳಿಸಬಾರದು. ಇಂತಹ ವರ್ತನೆಯು ತಾತ್ಕಾಲಿಕವಾಗಿ ಜನತೆಯ ಮನೋದ್ರೇಕವನ್ನು ಬಡಿದೆಬ್ಬಿಸಬಹುದು. ಆದರೆ, ಇದು ನಮ್ಮ ನೀತಿ ನಡಾವಳಿಗಳ ಮೇಲೆ ಸುಸ್ಥಿರವಾದ ದುಷ್ಪರಿಣಾಮವನ್ನು ಬೀರುವುದು.

ಪರಾಕ್ರಮ ಧೈರ್ಯಗಳ ವಿಖ್ಯಾತಪರಂಪರೆಯಿರುವ ನಾಡು ನಮ್ಮ ಭಾರತ. ಆಯುಧಗಳ ಶಕ್ತಿಯಾದರೂ ಅತ್ಯಧಿಕ; ಅದನ್ನು ಕಡಿಮೆ ಮಾಡುವುದು ಯಾರಿಂದಲೂ ಅಸಾಧ್ಯ. ಆದರೆ, ನೈಜ ಶಕ್ತಿಯು ಹೃನ್ಮನಗಳಿಂದ ಚಿಮ್ಮುವುದು ಎಂಬುದನ್ನು ಮರೆಯಬಾರದು. ನಮ್ಮ ಮಾತೃ ಭೂಮಿಯನ್ನು ಸಂರಕ್ಷಿಸಿ ಸಮಗ್ರತೆಯನ್ನು ಉಳಿಸಿಕೊಳ್ಳುವುದು ನಮ್ಮ ಪ್ರಾಥಮಿಕ ಕರ್ತವ್ಯ.

ನೀವು ಲಾಠಿಗಳಿಂದ ಅವಶ್ಯಕತೆಯೊದಗಿದರೆ ಉಗುರುಗಳಿಂದ, ಹೋರಾಡಲು ಸಿದ್ಧವಿರುವಂತೆ ಭದ್ರಕಾಯರಾಗಬೇಕು; ಆದರೆ ಯಾರೊಬ್ಬರ ವಸಾಹತುವಾದವನ್ನು ಸ್ವೀಕರಿಸಬಾರದು. ಇಂತಹ ಕೆಚ್ಚು ತುಂಬಿರುವ ಒಂದು ಜನಾಂಗವನ್ನು ಯಾವ ಶಕ್ತಿ ಕೂಟವೇ ಇರಲಿ, ಅದು ಎಷ್ಟೇ ಬೃಹತ್ತಿರಲಿ, ಎಂದೆಂದಿಗೂ ಕೂದಲು ಕೊಂಕಿಸಲಾರದು. ಇಂದಿನ ಸಂಕಷ್ಟ ಕಾಲದಲ್ಲಿ ನಾವು ವಿಜಯಭೇರಿಯನ್ನು ಬಾರಿಸಿ ಮುಂದೆ ಬರಬೇಕು.

— ಪಂಡಿತ ನೆಹರು


ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ. ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು
ನವಭಾರತ ಪುಸ್ತಕ ಭಂಡಾರ, ಉಡುಪಿ.
ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

# ಧನ್ಯ ಭಾರತ

ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಭಾರತೀಯರು ಬದ್ಧ ಕಂಕಣರಾಗಿದ್ದಾರೆ. ದೇಶದ ಮೂಲೆ ಮೂಲೆಯಲ್ಲಿಯೂ ದೇಶಕ್ಕಾಗಿ ಹೋರಾಡುವ, ದುಡಿಯುವ, ಉಳಿಸುವ, ದಾನವೀಯುವ ದೃಢ ಪ್ರತಿಜ್ಞಾ ವಾಕ್ಯ ಪ್ರತಿಧ್ವನಿಸುತ್ತಿರುವುದೂ ಅದು ಕಾರ್ಯ ರೂಪದಲ್ಲಿ ಬರುತ್ತಿರುವುದೂ ಅದು ಇದಕ್ಕೆ ಸಾಕ್ಷಿ; ಎಂತಲೇ ಈ ತೆರೆದ ಮಕ್ಕಳನ್ನು ಪಡೆದ ಭಾರತ ಧನ್ಯ.

**ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ.**

ಮನುಷ್ಯನ ನಿಜವಾದ ಸತ್ವ ಪರೀಕ್ಷೆ ಆಗುವದು ಕಷ್ಟ ಕಾಲದಲ್ಲಿಯೇ. "ಕಷ್ಟ ಬಂದಾಗ ವೆಂಕಟರಮಣಾ" ಎಂದು ದೇವರಿಗೆ ಮೊರೆ ಹೋಗುವದು ಹೇಡಿಯ ಲಕ್ಷಣ. ನಿಜವಾದ ವೀರನು ಧೈರ್ಯಗೆಡದೆ ತನ್ನ ಸರ್ವಸ್ವವನ್ನು ಪಣಕ್ಕೆ ಹಚ್ಚಿ ಬಂದ ಕಷ್ಟವನ್ನು ಎದುರಿಸುವನು. ಅಂಥವನಿಗೆ ಯಶಸ್ಸು ನಿಶ್ಚಿತ.

ಈ ಮಾತು ಮನುಷ್ಯನಿಗೆ ಮಾತ್ರವಲ್ಲದೇ ದೇಶಕ್ಕೂ ಅನ್ವಯಿಸುವದು ಎಂಬುದು ನಮ್ಮ ದೇಶದ ಸದ್ಯದ ಪರಿಸ್ಥಿತಿಯು ತೋರಿಸುವದು. ನಮ್ಮ ದೇಶದ ಪುಣ್ಯ ಭೂಮಿಯಲ್ಲಿ ಶತ್ರುಗಳು ಬಂದೆರಗಿದ್ದಾರೆ. ಶಾಂತಿ ಪ್ರಿಯರಾದ ನಮ್ಮ ಸಜ್ಜನತೆಯ ಯುದ್ಧ ಕಾಲಕ್ಕೆ ಇರಬೇಕಾದ ಸುಸಜ್ಜತೆ ಇಲ್ಲದ ದುರ್ಲಾಭ ಪಡೆದು, ನಮ್ಮ ದೇಶದ ಮೇಲೆ ಧಾಳಿ ಮಾಡಿದ್ದಾರೆ. ಆದರೆ ಭಾರತೀಯರು ಎಷ್ಟು ಶಾಂತಿ ಪ್ರಿಯರೋ ಅಷ್ಟೇ ಕ್ರಾಂತಿ ಪ್ರಿಯರೂ ಆಹುದು ಎಂಬುದನ್ನು ಇಡೀ ಜಗತ್ತಿಗೆ ತೋರಿಸಿ, ಜಗತ್ತನ್ನೇ ಆಶ್ಚರ್ಯಚಕಿತಗೊಳಿಸಿದ್ದಾರೆ.

ಸ್ವಾತಂತ್ರ್ಯ ನಂತರ ಈ ೧೫ ವರ್ಷಗಳಲ್ಲಿ ಅನೇಕಾನೇಕ ಬದಲಾವಣೆಗಳಾಗಿದ್ದರೂ, ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಶಾಂತಿ ನೆಲೆಸಿದ್ದರಿಂದ, ನಮ್ಮ ಮೇಲೆ ಹೆಚ್ಚಿನ ಜವಾಬುದಾರಿ ಬಿದ್ದಿರಲಿಲ್ಲ ಎನ್ನಬಹುದು. ಅನೇಕರಿಗೆ ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು ಇನ್ನು ತಾವು ಮಾಡಬೇಕಾದ ಕೆಲಸ ಮುಗಿದಂತಾಯಿತು ಎಂದು ನಿಶ್ಚಿಂತರಾಗಿ ತಮ್ಮ ದೈನಂದಿನ ಕಾರ್ಯದಲ್ಲಿ ತೊಡಗಿದ್ದರು. ಇದನ್ನೇ ಕರ್ನಾಟಕದ ಸುಪ್ರಸಿದ್ಧ ನಾಟಕಕಾರರಾದ ಶ್ರೀ ರಂಗರು ತಮ್ಮ "ಶೋಕಚಕ್ರ" ನಾಟಕದಲ್ಲಿ "ಸ್ವಾತಂತ್ರ್ಯ ಸಿಕ್ಕಿತು ಅಂಬೋ ಹುರುಪಿನಾಗ ತಾವು ಮಾಡೋ ಕೆಲಸ ಮುಗಿತು ಅಂತ ತಿಳಿದಾರ. ಆದರೆ ನಿಜವಾಗಿ ಮಾಡೋ ಕೆಲಸ ಮುಂದೆ ಇದ್ದ ಅನ್ನೋದನ್ನ ಮರತಾರ" ಎಂದು ಒಂದು ಪಾತ್ರ ಮುಖಾಂತರ ಹೇಳಿಸಿದ್ದಾರೆ. ಶ್ರೀ ರಂಗರ ಮಾತು ಅಕ್ಷರಶಃ ನಿಜವೆಂಬುದು ಇಂದಿನ ಪರಿಸ್ಥಿತಿ ತೋರಿಸಿಕೊಟ್ಟಿದೆ.

ಸ್ವಾತಂತ್ರ್ಯ ದೊರಕಿಸಲು ಎಷ್ಟು ಕಷ್ಟ ಪಡಬೇಕಾಯಿತೋ, ಅದಕ್ಕೂ ಹೆಚ್ಚು, ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿ ಕೊಳ್ಳಲು ಪಡಬೇಕಾಗುವದು. ಅದರಲ್ಲಿಯೂ ಯುದ್ಧ ಕಾಲದಲ್ಲಿಯಂತೂ ದೇಶ ರಕ್ಷಣೆಗಾಗಿ ಯಾವ ಸ್ವಾರ್ಥತ್ಯಾಗವೂ ಕಡಿಮೆಯೇ.

ನಮ್ಮ ದೇಶದಲ್ಲಿ ಒಳ ಜಗಳಗಳಿಗೆ ಏನೂ ಕಡಿಮೆ ಇಲ್ಲ. ಅನೇಕಾನೇಕ ರಾಜಕೀಯ ಪಕ್ಷಗಳಿವೆ. ಪ್ರಾಂತ ಪ್ರಾಂತಗಳಲ್ಲಿ ಅನೇಕ ಸಮಸ್ಯೆಗಳಿವೆ. ಆದರೆ ದೇಶಕ್ಕೆ ಗಂಡಾಂತರದ ಪ್ರಸಂಗ ಬಂದಾಗ ಅವುಗಳನ್ನೆಲ್ಲ ಮರೆತು ನಾವು **ಕೇವಲ ಭಾರತೀಯರು** ಎಂಬ ಒಂದೇ ಭಾವನೆಯಿಂದ ಒಂದುಗೂಡಿ ನಮ್ಮೆಲ್ಲ ಶಕ್ತಿಯನ್ನು ದೇಶದ ಗಡಿ ರಕ್ಷಣೆಗಾಗಿ ವಿನಿಯೋಗಿಸುತ್ತಿದ್ದುದು ಅಭಿಮಾನದ ವಿಷಯವೇ. ಎಲ್ಲ ರಾಜಕೀಯ ಪಕ್ಷಗಳು ತಮ್ಮ ತಮ್ಮಲ್ಲಿಯ ಭೇದಗಳನ್ನು ಮರೆತು ಒಂದಾಗಿದ್ದಾರೆ. ಇಂದು ಎಲ್ಲ ಪಕ್ಷಗಳ ಧ್ಯೇಯ ಒಂದೇ. ಅದೆಂದರೆ ಭಾರತದ ಗಡಿ ರಕ್ಷಣೆ ಹಾಗು ವೈರಿಯನ್ನು ತಮ್ಮ ಪುಣ್ಯ ಭೂಮಿಯಿಂದ ಹೊರ ಚೆಲ್ಲುವದು.

ಕರ್ನಾಟಕದ ರಾಜ್ಯಸ್ಥಾಪನೆಯ ಸಮಯಕ್ಕೆ ವಿದ್ಯಾರಣ್ಯರಿಗೆ ಬಂಗಾರದ ಮಳೆ ಆಯಿತೆಂದು ನಾವು ಇತಿಹಾಸದಲ್ಲಿ ಓದಿದ್ದೇವೆ. ಆದರೆ ಇತಿಹಾಸದಲ್ಲಿ ಓದಿದ್ದು ಕಣ್ಣಾರೇ ಕಾಣುವ ಪ್ರಸಂಗ ಮುಂಬೈಯಲ್ಲಿ ಜರುಗಿತು. ರಾಷ್ಟ್ರೀಯ ಸಂರಕ್ಷಣಾ ನಿಧಿಗೆಂದು ನಿಧಿ ಸಂಗ್ರಹಿಸಲು ಚಲಚ್ಚಿತ್ರ ಕಲಾವಿದರ ಭವ್ಯವಾದ ಮೆರವಣಿಗೆಯು ಮುಂಬೈಯಲ್ಲಿ ಹೋದ ತಿಂಗಳು ಹೊರಟಿತ್ತು. ಅದು ಮುಂಬೈಯ ರಾಜ ಮಾರ್ಗದಲ್ಲಿ ಹೊರಟಾಗ ಗಗನಚುಂಬಿತ ಇಮಾರತಿಗಳ ಮೇಲಿಂದ ಹೆಣ್ಣು ಮಕ್ಕಳು ಹಾಗು ಹುಡುಗರು ತಮ್ಮ ಮೈ ಮೇಲಿನ ಚಿನ್ನದ ಆಭರಣಗಳನ್ನೂ ಹಣವನ್ನೂ ಒಗೆಯುತ್ತಿರುವ ದೃಶ್ಯವು ಕಣ್ಣಿಗೆ ಹಬ್ಬವನ್ನುಂಟುಮಾಡಿತು. ಹೀಗೆ ಆಭರಣಗಳನ್ನು ಹಾಗು ಹಣವನ್ನು ಒಗೆದವರೆಲ್ಲ ಸಿರಿವಂತರಲ್ಲ. ಮಾಧ್ಯಮ ವರ್ಗದವರು ಸಾಮಾನ್ಯರು. ಸಂರಕ್ಷಣಾನಿಧಿಗೆ ಸಹಾಯ ಮಾಡಿದವರು ಸುಶಿಕ್ಷಿತರು, ಶಿಕ್ಷಕರು, ಬಡವರು, ಸಿರಿವಂತರು ಎಂಬ ಭೇದಭಾವವಿಲ್ಲದೇ ಹಣವನ್ನು ಉದಾರ ಹಸ್ತದಿಂದ ದಾನಮಾಡಿದರು. ಅಂದು ಒಬ್ಬ ಕುರುಡು ಭಿಕ್ಷುಕಿಯು ತನ್ನ ತಟ್ಟೆಯಲ್ಲಿ ಬೆಳಗಿನಿಂದ ಬಿದ್ದ ಎಲ್ಲ ಹಣವನ್ನು ಸಂರಕ್ಷಣಾ ನಿಧಿಗೆ. ತನ್ನ ಅಲ್ಪ ಕಾಣಿಕೆ ಎಂದು ಸ್ವಸಂತೋಷದಿಂದ ನಗುತ್ತ ದಾನ ಮಾಡಿದ ದೃಶ್ಯವು ಯಾವದೇ ಮನು

(೨೯ನೇ ಪುಟದಿಂದ)

ಮಕ್ಕಳ ಮಮತೆಯ
"ಬಿಕ್ಕೊ"ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು— ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.







ಅಮೇರಿಕನ್ ಪಿಸ್ತೂಲ್ ಆಟೋಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ತೊಂದಾಗದಂತಹ ಲೈಸೆನ್ಸು ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜ್ ರೂ. 2.

**REY ROGAS & CO., 23-A, Anand Nagar, BOMBAY-26**

### ಸ್ವಾತಂತ್ರ್ಯ ಸಮರದಿಂದ ನವಚೇತನಗೊಂಡ

# ಇಂದಿನ ಯುಗಧರ್ಮ

**ಯುಗಗಳುರುಳಿದಂತೆ ಯುಗಧರ್ಮದ ಪುಟಗಳೂ ಮಗುಚುತ್ತವೆ. ಮುಂದೆ ಬಂದ ಪುಟಗಳಲ್ಲಿ ಉತ್ತಮವಾದುವನ್ನು ತಿರಸ್ಕರಿಸದೆ ಅವನ್ನು ಸ್ವೀಕರಿಸುತ್ತ ಮುನ್ನಡೆದರೆ ಬದುಕು ಬಂಗಾರವಾಗುವುದು. ಇದರಿಂದ ಧರ್ಮಗ್ಲಾನಿಯಾಗುವುದಿಲ್ಲ, ದೇಶ ಕಲ್ಯಾಣವಾಗುತ್ತದೆ.**

**ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮಾ**

ರಾಷ್ಟ್ರಧರ್ಮ, ವ್ಯಕ್ತಿಧರ್ಮಗಳಲ್ಲಿ ಕೆಲವೊಂದು ಸಾರೆ ಕೆಲ ಮಟ್ಟಿಗೆ ಭಿನ್ನತೆ ಕಂಡುಬಂದರೂ ಅವುಗಳ ಉದ್ದೇಶ, ಆದೇಶಗಳಲ್ಲಿ ಭಿನ್ನತೆ ಇರುವುದಿಲ್ಲ. ರಾಷ್ಟ್ರಧರ್ಮವು ವ್ಯಕ್ತಿಗೆ ಪೋಷಕವಾಗಿಯೂ ವ್ಯಕ್ತಿಧರ್ಮವು ರಾಷ್ಟ್ರಕ್ಕೆ ಹಿತಕಾರಕವಾಗಿಯೂ ಇದ್ದು "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವದೇ ಅವುಗಳ ಮೂಲತತ್ವವಾಗಿರುತ್ತದೆ.

ಈ ಧರ್ಮಗಳಲ್ಲಿ ಎರಡು ವಿಭಾಗಗಳು. ಯಮಭಾಗ ತ್ರಿಕಾಲಾಬಾಧಿತವಾಗಿದ್ದು, ನಿಯಮ ಭಾಗ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುವಂಥಾದ್ದು. ಸತ್ಯ, ಅಹಿಂಸೆ, ದಯೆ, ದಾನ ಮುಂತಾದ ಹತ್ತು ವಿಧ ಧರ್ಮಗಳು ಎಲ್ಲಾ ಕಾಲದಲ್ಲಿಯೂ ಇರಬೇಕಾದದ್ದೇ. ನಿಯಮಧರ್ಮ ಹಾಗಲ್ಲ. ಜೀವನಕ್ಕೆ, ಕಾಲಕ್ಕೆ ಅಪೇಕ್ಷಣೀಯವಾಗಿದ್ದು ಯಮಧರ್ಮಕ್ಕೆ ಯಾವದೇ ರೀತಿಯ ವ್ಯತ್ಯಯವನ್ನು ತರದೇ ವ್ಯವಹಾರ ಧರ್ಮವಾಗಿದ್ದು ಕಾಲಕಾಲಕ್ಕೆ ಹೊಸ ಧರ್ಮವಾಗಿ ಕಾಣಿಸಿಕೊಳ್ಳುತ್ತಿರುತ್ತದೆ.

ಈ ರೀತಿ ಹೊಸ ಧರ್ಮವಾಗಿ ಕಾಣಿಸಿಕೊಳ್ಳುವುದಕ್ಕೆ ಕಾಲವೂ, ವ್ಯಕ್ತಿಯೂ ಕಾರಣವಾದ ಸಂಗತಿಯನ್ನು ಇತಿಹಾಸವು ಹೇಳುತ್ತದೆ. ಹೀಗೆ ಬೆಳೆಯಲೇ ಬೇಕಾದ ಹೊಸ ಧರ್ಮಗಳ ಹುಟ್ಟುಹರವುಗಳಿಂದಲೇ ಬಾಳಿನ ವ್ಯವಸ್ಥೆ ಸುಗಮಗೊಳ್ಳುತ್ತದೆ.

ಹಿಂದೆ ರಾಮಕೃಷ್ಣ—ವಿವೇಕಾನಂದ, ಬುದ್ಧ—ಶಂಕರ ಮುಂತಾದ ಮಹಾಪುರುಷರು ಆಗಾಗ ದೇಶಕ್ಕೆ ಅಗತ್ಯವಿರುವ ಧರ್ಮಸೂತ್ರಗಳನ್ನು ಸಾರಿದರು. ಅದರಿಂದಾಗಿ ದೇಶದ ಪರಿಸ್ಥಿತಿ ಸುಧಾರಿಸುವುದಕ್ಕೆ ಸಹಾಯಕವಾಯಿತು.

ಹಾಗೆಯೇ ನಮ್ಮ ಸ್ವಾತಂತ್ರ್ಯ ಹೋರಾಟದಿಂದಲೂ ಇಂದಿನ ಯುಗಧರ್ಮಕ್ಕೆ ಚಾಲನೆ ದೊರಕಿದೆಯೆಂದು ಧಾರಾಳವಾಗಿ ಹೇಳಬಹುದು. ಇಂದಿನ ದೇಶದ ಸ್ಥಿತಿ-ಗತಿಗೆ ಸರಿ ಹೊಂದುವಂಥ ದೃಷ್ಟಿ-ಭಾವನೆಗಳು ಬೆಳೆದು ವ್ಯಕ್ತಿಧರ್ಮಕ್ಕೂ-ದೇಶಧರ್ಮಕ್ಕೂ ಅಬಾಧಿತವಾದ ಸಮಾಜ ವ್ಯವಸ್ಥೆಯನ್ನು ಅದು ಸುಭದ್ರವಾಗಿ ರೂಪುಗೊಳಿಸುತ್ತಿದೆಯೆಂದು ತಿಳಿಯಲಡ್ಡಿ ಇಲ್ಲ.

ಜಾತಿ ವರ್ಣಭೇದಗಳು ಅತ್ಯಂತ ಪ್ರಾಚೀನವಾದವು. ನಾಲ್ಕರಿಂದ ಆರಂಭವಾದ ಇವು ಇಂದು ಅಸಂಖ್ಯವಾಗಿ ರಕ್ತಬೀಜನ ಅವತಾರದಂತೆ ಆಗಿವೆ. ಅವುಗಳ ಸಾಧ್ಯ-ಸಿದ್ಧಿಯೆಲ್ಲ ಒಂದೇ ಆಗಿದ್ದರೂ ಸಾಧನೆ ಭಿನ್ನವಾಗಿ ಬೆಳೆದು, ಜಾತಿ-ಜಾತಿಗಳಲ್ಲಿಯೂ, ಮತ-ಮತಗಳಲ್ಲಿಯೂ ಘರ್ಷಣೆ ನಡೆದು-ವ್ಯಕ್ತಿ ಧರ್ಮವೇ ರಾಷ್ಟ್ರ ಧರ್ಮವಾಗಿ ದೇಶದ ಕ್ಷೇಮಕ್ಕೆ ಅಪಾಯ ತಂದ ಸಂಗತಿ ಅನೇಕಸಾರೆ ಇವೆ. ರಾಜ್ಯ ಸಂಪಾದನೆಯ ಆಶೆ—ಆಕಾಂಕ್ಷೆಗಳಿಗಿಂತಲೂ ತನ್ನ ಧರ್ಮವೇ ರಾಷ್ಟ್ರ ಧರ್ಮವಾಗಿ ಬೆಳೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಯುದ್ಧ ನಡೆದ ಸಂದರ್ಭಗಳೂ ಇವೆ. ಈ ವಿಚಾರದಲ್ಲಿ ಸ್ವಾತಂತ್ರ್ಯೋತ್ತರದ ಮನೋಧರ್ಮವು ಮಹತ್ವವಾದುದಾಗಿದೆ. ಗಾಂಧೀಜೀಯವರ ಧರ್ಮ ದೃಷ್ಟಿ-ಧರ್ಮ ಸಮನ್ವಯದ ತತ್ವಗಳು ಮತೀಯ—ಗೊಂದಲವನ್ನು ಬಹಳಷ್ಟು ತಗ್ಗಿಸಿವೆ.

"—ಧರ್ಮ-ದೇವರುಗಳ ಬಗ್ಗೆ ಜಗಳ ನಡೆಸುವುದು ಶುದ್ಧ ಮೂರ್ಖತನ, ಭಗವಂತನನ್ನು ಯಾವ ಹೆಸರಿನಿಂದ ಕರೆದರೂ ಸರಿಯೇ. ರಾಮ ಎನ್ನಿ, ಕೃಷ್ಣ ಎನ್ನಿ, ಯೇಸುವೆನ್ನಿ, ಅಲ್ಲಾ ಎನ್ನಿ. ಬೇರೆ ಬೇರೆ ನಾಮರೂಪ—ಕ್ರಿಯೆಗಳಿಂದ ಆರಾಧಿಸಿದರೆ ಭಗವಂತನು ಬೇರೆ ಬೇರೆಯಾಗಿ ಕಂಡರೂ ಮೂಲದಲ್ಲಿ ಇರುವ ಮಹಾ ಚೈತನ್ಯ ಒಂದೇ. ಅದನ್ನು ನೋಡುವುದಕ್ಕೆ ಮಾತ್ರ ಅನೇಕ ಪಂಥಗಳು ಇವೆ. ಒಬ್ಬ ತೀವ್ರವಾಗಿ ಗಮಿಸಬಹುದು. ಇನ್ನೊಬ್ಬ ನಿಧಾನವಾಗಿ ಸಾಗಬಹುದು. ಹಾಗಿರುವಾಗ ಮತಗಳ ಬಗ್ಗೆ ಮತಿಗೆಟ್ಟು ವರ್ತಿಸುವದೇಕೆ?"

ಧರ್ಮ ಇದು ಗಾಂಧೀಜೀಯವರ ಧರ್ಮ ದೃಷ್ಟಿ ಸಮನ್ವಯ ಸೃಷ್ಟಿ

ಇದರಿಂದಾಗಿ ಪರಮತ ಸಹಿಷ್ಣುತೆಯ ಆದರ್ಶ ಬೆಳೆಯಲು ಸಾಧ್ಯವಾಯಿತು.

ಸತ್ಯಾಗ್ರಹದ ಬಗ್ಗೆ ನವಜಾಗ್ರತಿಯೇ ಉಂಟಾಯಿತೆನ್ನಲಡ್ಡಿ ಇಲ್ಲ. ಎಂಥ ಪ್ರಸಂಗ ಬಂದರೂ ಸತ್ಯವನ್ನು ನಿಗ್ರಹಿಸದೆ ಆಗ್ರಹದಿಂದ ಆರಾಧಿಸಬೇಕೆಂಬುದು ಆಬಾಲವೃದ್ಧರಾದಿಯಾಗಿ ಎಲ್ಲರ ಮನೆ ಮನಗಳಲ್ಲಿಯೂ ಮೂಡಿಬಂದ ಅಪೂರ್ವದೃಶ್ಯ ಸ್ಮರಣೀಯವಾದುದಾಗಿದೆ.

—ಸ್ವಾತಂತ್ರ್ಯ ಸತ್ಯಾಗ್ರಹದ ಸಂದರ್ಭ ಊರಿಗೆ ಊರೇ ಮೆರವಣಿಗೆಯಲ್ಲಿ ಹೊರಟಿದೆ. ವಂದೇ ಮಾತರಂ ಪ್ರತಿಧ್ವನಿಸುತ್ತಿದೆ. ಲಾಠಿಯ ಏಟಿನ ಪರಿವೆಯೂ ಇಲ್ಲ. ಮಡದಿ-ಮಕ್ಕಳ ಮೋಹವೂ ಇಲ್ಲ. ವಿತ್ತ ಸೊತ್ತುಗಳ ಆಶೆ ಇಲ್ಲ. ಸತ್ಯದ ಸಾಕ್ಷಾತ್ಕಾರದಲ್ಲಿ, ದೇಶಕ್ಕಾಗಿ ಸೇವೆ ಎನ್ನುವ ಭಾವದಲ್ಲಿ ಎಲ್ಲವೂ ಕಃ ಪದಾರ್ಥವಾಗಿ ಕಂಡಿತು. ಇಂಥ ಮನೋವೃತ್ತಿಯನ್ನು ಮೈಗೂಡಿಸಿಕೊಳ್ಳುವುದು ಸಂಭವವೇ. ಎಲ್ಲರೂ ಸತ್ಯ ಹರಿಶ್ಚಂದ್ರರಾಗದಿದ್ದರೂ "ಸತ್ಯಕ್ಕೇ ಜಯ" ವೆಂಬ ಸಿದ್ಧಾಂತ ಜೀವಂತವಾಗಿಯೇ ಉಳಿಯಿತು. ರಾಷ್ಟ್ರ, ಸಮಾಜ, ವ್ಯಕ್ತಿಗಳ

(ಎಂಟನೇ ಪುಟ ನೋಡಿರಿ)

Best of Automobile Service
offered by the
Engineers of

MODERN
GARAGE
UDIPI.

Your cars made new
by the most modern
and experienced
spray painters

Phone: 65 Grame: "KARNAD"

[ಹಿನ್ನೆಲೆಯಲ್ಲಿದ್ದು ಕ್ರಮೇಣ ಸ್ಫುಟಗೊಳ್ಳುವ ಘೋಷ]

ಗಂಡು ಧ್ವನಿ— ಯತ್ರನಾರ್ಯಸ್ತು ಪೂಜ್ಯಂತೇ
ರಮಂತೇ ತತ್ರದೇವತಾಃ

ನಿವೇದಿಕೆ— 'ಎಲ್ಲಿ ಸ್ತ್ರೀಯರಿಗೆ ಗೌರವ ಪುರಸ್ಕಾರಾದಿಗಳು ಸಲ್ಲುತ್ತವೋ ಅಲ್ಲಿ ದೇವತೆಗಳು ಸುಪ್ರೀತರಾಗುತ್ತಾರೆ'— ಎಂದು ಮನು ಸಾರಿದ. ಆ ಕಾಲದಲ್ಲಿ ಮಹಿಳೆಗೆ ದೊರೆಯುತ್ತಿದ್ದ ಗೌರವ, ಆದರ, ಮೆಚ್ಚತಕ್ಕದ್ದು. ಮಹಿಳೆ ಮನೆಯಲ್ಲಿನ ದೇವತೆ. ಅವಳಿಲ್ಲದೆ ಯಾವ ಯಜ್ಞಯಾಗಾದಿಗಳೂ ಸಾಂಗವಾಗುತ್ತಿರಲಿಲ್ಲ.

ಸ್ತ್ರೀ - ಇದು ಅನುಕರಣೀಯ ಆದರ್ಶ!

ನಿವೇದಿಕೆ— ಸ್ತ್ರೀಯ ಬಗೆಗೆ ಒಳ್ಳೆಯ ಮಾತನ್ನಾಡಿದ ಮನುವೇ ಬೇರೆಯೂ ಒಂದು ಮಾತನ್ನಾಡಿದ.

ಗಂಡು ಧ್ವನಿ— ನಸ್ತ್ರೀ ಸ್ವಾತಂತ್ರ್ಯ ಮರ್ಹತಿ!

ನಿವೇದಿಕೆ— ತನ್ನ ಮನೆಯಲ್ಲಿ ಕೂಡ ಹೆಣ್ಣು ಸ್ವತಂತ್ರವಾಗಿ ಏನನ್ನೂ ಮಾಡಬಾರದು. ಬಾಲ್ಯದಲ್ಲಿ ತಂದೆಯ ಆಡಳಿತಕ್ಕೂ ಯೌವನದಲ್ಲಿ ಗಂಡನಿಗೂ ಮುಪ್ಪಿನಲ್ಲಿ ಮಕ್ಕಳಿಗೂ ಒಳಪಟ್ಟಿರುವ ಹೆಣ್ಣು, ಎಂದಿಗೂ ಸ್ವಾತಂತ್ರ್ಯವನ್ನನುಭವಿಸಬಾರದು—ಎಂಬುದು ಆಗಿನ ಸಾಮಾಜಿಕ ನೀತಿಯಾಗಿತ್ತು.

ಸ್ತ್ರೀ— ಒಂದು ಉಸಿರಿನಲ್ಲಿ ಹೆಣ್ಣನ್ನು ದೇವತೆ ಎಂದು ಕರೆದ ಗಂಡು, ಅದೇ ಉಸಿರಿನಲ್ಲಿ ಅವಳನ್ನು ತೊತ್ತು ಎಂದು ಪರಿಗಣಿಸುವುದು ವಿಚಿತ್ರವೇ ಸರಿ.

ನಿವೇದಿಕೆ — ವಿದ್ಯಾವಿಹೀನೆಯಾದ ಹೆಣ್ಣಿಗೆ ತನ್ನ ಮನೆಯೇ ಪ್ರಪಂಚವಾಗಿತ್ತು. ಹೊರ ಜಗತ್ತಿನ ಕಾರಭಾರಗಳ ಬಗೆಗೆ ಅವಳಿಗೆ ಯಾವ ಅರಿವೂ ಇರಲಿಲ್ಲ; ತಿಳಿಯಬೇಕೆನ್ನುವ ಆಸಕ್ತಿಯೂ ಇರಲಿಲ್ಲ. ಸಾಮಾಜಿಕ, ರಾಜಕೀಯ ಮುಂತಾದ ಯಾವ ವಿಧವಾದ ಹಕ್ಕುಗಳೂ ಇಲ್ಲದ ಮಹಿಳೆಗೆ, ತನ್ನ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶವೇ ಇರಲಿಲ್ಲ.

ಸ್ತ್ರೀ— ವಾಸ್ತವತೆ ಯಾವಾಗಲೂ ಬಹು ಕ್ರೂರ. ಆದರೆ ಆ ಕಾಲದಲ್ಲೂ ವಿದ್ಯಾಪಾರಂಗತೆಯಾದ ವೇದಶಾಸ್ತ್ರ ಪ್ರವೀಣೆ ಗಾರ್ಗಿ ಇರಲಿಲ್ಲವೇನು? ರಾಜಕೀಯ ಕುಶಲಮತಿಯಾದ ದ್ರೌಪದಿ, ಸ್ವಯಂವರ ಪದ್ಧತಿಯಿಂದ ತಾವೇ ಆರಿಸಿ

# ನಡೆದ ದಾರಿ

ಮುಂದೆ ಹೋಗುವ ಗಡಿಯಾರವನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ; ಅಂತೆಯೇ ಬದಲಾಗುತ್ತಿರುವ ಪದ್ಧತಿಗಳನ್ನೂ ಯಾರೂ ತಪ್ಪಿಸಲಾರರು. ಮುಂದೆ ಹೋಗುವ ಗಡಿಯಾರವನ್ನು ಹಿಂದೆ ಜಗ್ಗುವುದಕ್ಕಿಂತ ಅದನ್ನು ಅನುಸರಿಸುವುದರಿಂದಲೇ ಶ್ರೇಯಸಾಧನೆ ಸಾಧ್ಯ.

ಶ್ರೀಮತಿ ಡಾ| ಅನುಪಮಾ ನಿರಂಜನ, ಬೆಂಗಳೂರು.

ಒಪ್ಪಿದ ವರನ ಕೈಹಿಡಿದ ಸೀತಾ, ಸಾವಿತ್ರಿ, ದಮಯಂತಿಯರನ್ನು ಹಿಂದುಳಿದವರೆನ್ನಲು ಆದೀತೆ?

ನಿವೇದಿಕೆ— ಇವೆಲ್ಲಾ ಅಪವಾದಗಳು ಮಾತ್ರ. ವಾಸ್ತವವಾಗಿ ಜನಾಂಗದಲ್ಲಿ ರೂಢಿಯಲ್ಲಿದ್ದುದು ಬಾಲ್ಯವಿವಾಹ. ವಿಧವಾ ವಿವಾಹವಂತೂ ನಿಷಿದ್ಧವಾಗಿತ್ತು. ಹೆಣ್ಣು ಆಸ್ತಿಗೆ ಹಕ್ಕುದಾರಳಾಗಿರಲಿಲ್ಲ. ದತ್ತಕ ಮಾಡಿಕೊಳ್ಳುವ ಸ್ವಾತಂತ್ರ್ಯ ಅವಳಿಗಿರಲಿಲ್ಲ. ಸತಿ ಸಹಗಮನದಂತಹ ಕ್ರೂರಪದ್ಧತಿಗಳು ರೂಢಿಯಲ್ಲಿದ್ದುವು.

ಸ್ತ್ರೀ— ಆದರೆ ಮಹಿಳೆ ರಾಜ್ಯಗಳನ್ನಾಳಿದ ನಿದರ್ಶನಗಳಿಗೆ ನಮ್ಮ ಇತಿಹಾಸದಲ್ಲಿ ಕೊರತೆಯಿಲ್ಲವಲ್ಲ! ಯುದ್ಧಭೂಮಿಯಲ್ಲಿ ಗಂಡಿಗೆ ನಾಚಿಕೆಯೆನಿಸುವಂತೆ ಹೋರಾಡಿದ ವೀರ ಯೋಧೆಯರಿದ್ದರು.

ನಿವೇದಿಕೆ— ಆ ವೀರ ವನಿತೆಯರೇ ಇಂದಿನ ನಮ್ಮ ಸ್ತ್ರೀಯರಿಗೆ ಸ್ಫೂರ್ತಿಯ ಆಗರ ಹಾಗೆಂದಲ್ಲವೇ ಸ್ವಾತಂತ್ರ್ಯಸಮರದಲ್ಲಿ ಭಾರತ ನಾರಿಯರು ಕಲಿಗಳಂತೆ ಹೋರಾಡಿದ್ದು? ಮನೆಯೊಳಗಿನ ಮಹಿಳೆಗೆ ಗಾಂಧೀಜಿಯ ಕರೆ ಕೇಳಿಸಿತು.

ಗಾಂಧೀಜಿ— ಸ್ತ್ರೀ ಪುರುಷನ ಸಂಗಾತಿ. ಸಮಾನ ಬೌದ್ಧಿಕ ಸಾಮರ್ಥ್ಯಗಳು ಆಕೆಗೂ ಇವೆ. ಅವಳಿಲ್ಲದೆ ಯಾವ ಹೋರಾಟವೂ ಪೂರ್ಣವಾಗುವುದಿಲ್ಲ.

ನಿವೇದಿಕೆ— ಅವರ ಒಂದು ಕರೆಗೆ ಸಾವಿರ ಸಾವಿರ ಜನ ಸ್ವಾತಂತ್ರ್ಯಯೋಧೆಯರು, ಹೋರಾಟದ ಕಣಕ್ಕಿಳಿದ ದೃಶ್ಯ ನೆನೆಸಿಕೊಂಡರೆ........

ಸ್ತ್ರೀ— ಮೈ ನವಿರೇಳುತ್ತದೆ. ಆನಂದದಿಂದ ಹೃದಯ ತುಂಬಿ ಬರುತ್ತದೆ. ಅಬಲೆ ಎನ್ನಿಸಿಕೊಂಡ ಸ್ತ್ರೀ ಅಜೇಯಳು ಎಂಬುದು ಕಣ್ಣಿಗೆ ಕಟ್ಟಿದ ಸತ್ಯವಾಗುತ್ತದೆ.

ನಿವೇದಿಕೆ— ಹೆಣ್ಣಿನ ತ್ಯಾಗ ಬಲಿದಾನಗಳೂ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವ ಸಾಧನಗಳಾದುವು. ೧೯೫೦ರ ಜನವರಿ ೨೬ರಂದು ಭಾರತೀಯ ಗಣರಾಜ್ಯ ಸ್ಥಾಪನೆಯಾಯ್ತು. ಅಂದಿನ ಘೋಷಣೆಯಲ್ಲಿ ಸಮಾನ ಹಕ್ಕಿನ ಮಾತುಗಳು ಕೇಳಿಬಂದುವು.

ಗಂಡಸು ಧ್ವನಿ— ಜಾತಿ, ಕುಲ, ಧರ್ಮ, ಹೆಣ್ಣು, ಗಂಡು, ಭೇದವಿಲ್ಲದ, ಎಲ್ಲ ಜನರಿಗೂ, ಎಲ್ಲ ಕೆಲಸಗಳಿಗೂ ಸ್ವತಂತ್ರ ಭಾರತದ ಗಣರಾಜ್ಯದಲ್ಲಿ ಸಮಾನಾವಕಾಶವುಂಟು.

ಸ್ತ್ರೀ— ಶತಶತಮಾನಗಳಿಂದ ನೊಂದ ಹೆಣ್ಣಿಗೆ ಆಪ್ಯಾಯಮಾನವಾಗುವಂಥ ಮಾತು!

ನಿವೇದಿಕೆ— ಹೆಣ್ಣಿಗೆ ಇಂದು ಸ್ವಾತಂತ್ರ್ಯ ಬಂದಿದೆ ನಿಜ. ಆದರೆ ಅದನ್ನು ಅನುಭವಿಸಬೇಕೆಂಬ ಅರಿವೇ ಅವಳಿಗಿಲ್ಲ. ಪಂಜರದಲ್ಲಿ ಕೂಡಿಟ್ಟ ಹಕ್ಕಿಯನ್ನು ಒಮ್ಮೆಗೇ ಹೊರಬಿಟ್ಟರೆ ಅದಕ್ಕೆ ಹಾರಲು ಬಂದೀತೆ?

ಸ್ತ್ರೀ—ಹಾರಲು ಕಲಿಸಿಕೊಡಬೇಕು!

ನಿವೇದಿಕೆ— ಅದಕ್ಕೆ ತುಸು ಸಮಯ ಹಿಡಿದೀತು. ಸ್ವಚ್ಛಂದ ವಾತಾವರಣದಲ್ಲಿ ಅದು ಸ್ವಲ್ಪ ಕಾಲ ಉಸಿರಾಡಬೇಕು. ಅದರ ಹೃದಯದಲ್ಲಿ ತಿಳಿವು ಮೂಡಬೇಕು.

ಸ್ತ್ರೀ— ವಿದ್ಯೆಯೇ ಹೆಣ್ಣಿನ ತಿಳಿವಳಿಕೆಯನ್ನು ಉದ್ದೀಪನಗೊಳಿಸುವ ಸಾಧನ.

ನಿವೇದಿಕೆ— ಅಡುಗೆ ಮನೆಗಳಿಗೂ ವಿದ್ಯೆಯ, ಜ್ಞಾನದ ಪ್ರಸಾರವಾಗಬೇಕು. ತಮ್ಮನ್ನು ಕವಿದ ಅಜ್ಞಾನದ ಕತ್ತಲೆಯನ್ನು ಸ್ತ್ರೀಯರು ಹೊಡೆದೋಡಿಸಬೇಕು.

o o o

ತಾಯಿ— ಕೇಳಿದಿರಾ? ನಿಮ್ಮ ಮಗಳು ಕಾಲೇಜಿಗೆ ಸೇರ್ತಾಳಂತೆ!

ತಂದೆ— ಸೇರಲಿ ಬಿಡು! ಮನೇಲಿ ಕೂತ್ಕೊಂಡು ಮಾಡೋದಾದ್ರೂ ಏನು?

ತಾಯಿ— ಏನಂದ್ರಿ? ಹೆಣ್ಣು ಮಕ್ಕಳಿಗೆ ಕಾಲೇಜು ಯಾಕೆ ಅಂತೀನಿ? ಎಷ್ಟು ಕಲಿತ್ರೂ ಪಾತ್ರೆ ತಿಕ್ಕೋದಂತೂ ತಪ್ಪೋದಿಲ್ವಲ್ಲಾ?

ತಂದೆ— ಈ ಮಾತೆಲ್ಲಾ ನಿನ್ನ ನನ್ನ ಕಾಲಕ್ಕಾಯ್ತು. ಕಣೇ ನಿಂಗಂತೂ ಒಂದು ಕಾಗ್ದ ಬರಿಯೋಕೆ ಬರ್‍ತಿರಲಿಲ್ಲಾಂತ, ನಿನ್ನ ಮಗಳಿಗೂ ವಿದ್ಯಾಭ್ಯಾಸ ಬೇಡ ಅನ್ನೋದೆ? ಓದಲಿ. ಅವಳಿಗೆಷ್ಟು ಆಸೆಯಿದ್ಯೋ ಅಷ್ಟೂ ಓದಲಿ.

ತಾಯಿ— ಓದಿಗೆ ಬೆಂಕಿ ಹಾಕ್ತು! ಈ ವಿದ್ಯೆ ಕಲ್ತೋರೆಲ್ಲಾ ಹಾಳಾಗಿ ಹೋಗ್ತಾರೆ. ಜಾತಿ, ಮತ, ಧರ್ಮ, ಅನ್ನೋದೆಲ್ಲಾ ಚೂರು ಚೂರಾಗ್ತದೆ. ನನ್ನಾಣೆ! ನನ್ನ ಮಗಳು ಓದೋಕೆ ನಾನು ಬಿಡೋದಿಲ್ಲ. ಕಾಲೇಜು ಸೇರಿ ಕೆಟ್ಟುಹೋಗೋದಕ್ಕೆ ನಾನು ಬಿಡೋದಿಲ್ಲ!

o o o

ಸ್ತ್ರೀ— ಓದಬೇಕೆಂದು ಹುಡುಗಿಯ ಬಯಕೆ. ತಾಯಿಗೆ ಅದು ಒಪ್ಪಿಗೆಯಿಲ್ಲ. ಇದು—ಪರಂಪರೆ ಹಾಗೂ ಪ್ರಗತಿಗಳ ನಡುವಿನ ತಿಕ್ಕಾಟ.

ಆದರೆ ಮನಸ್ಸಿದ್ದಲ್ಲಿ ಮಹದೇವ. ಎಂತಹ ತೊಡರು ಬಂದರೂ ಹೆಣ್ಣು ಮನಸ್ಸು ಮಾಡಿದಳೆಂದರೆ ಅದು ತೃಣಪ್ರಾಯವಾಗ್ತದೆ

ನಿವೇದಿಕೆ— ಹಾಗೆಂದೇ ಸುಶಿಕ್ಷಿತ ಮಹಿಳೆಯರ ಸಂಖ್ಯೆ ಈ ದಿನ ಹೆಚ್ಚುತ್ತಿದೆ. ಶಾಲೆ ಕಾಲೇಜುಗಳಲ್ಲಿ ನೂರಾರು ಸಂಖ್ಯೆಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವ ಬಾಲಿಕೆ, ಯುವತಿಯರಿದ್ದಾರೆ.

ಸ್ತ್ರೀ— ಅಷ್ಟೇ ಅಲ್ಲ. ಇಂದು ಜೀವನದ ವಿವಿಧ ರಂಗಗಳಲ್ಲೂ ಸ್ತ್ರೀಯರನ್ನು ಕಾಣುತ್ತೇವೆ, ಅಲ್ಲವೆ?

ನಿವೇದಿಕೆ— ಹೌದು. ಹೆಣ್ಣು ಉಪಾಧ್ಯಾಯಿನಿಯಾಗಿದ್ದಾಳೆ ಗುಮಾಸ್ತೆಯಾಗಿದ್ದಾಳೆ. ಬಹುಕಷ್ಟತರವಾದ ನರ್ಸ್, ಡಾಕ್ಟರ್ ಪದವಿಗಳನ್ನೂ ಆಕೆ ಅಲಂಕರಿಸಿದ್ದಾಳೆ. ಗಂಡಸರಿಗಷ್ಟೇ ಸೀಮಿತವಾಗಿದ್ದ ಎಂಜಿನಿಯರಿಂಗ್ ಮತ್ತು ಲಾ ಕ್ಷೇತ್ರವನ್ನೂ ಮಹಿಳೆ ಪ್ರವೇಶಿಸಿದ್ದಾಳೆ. ಗಂಡಸಿನಷ್ಟೇ ಜಾಣ್ಮೆಯಿಂದ, ಒಮ್ಮೊಮ್ಮೆ ಅವನಿಗೂ ಹೆಚ್ಚು ಕಾರ್ಯದಕ್ಷತೆಯಿಂದ ದುಡಿಯುತ್ತಾಳೆ. ಮಂತ್ರಿ, ಮೇಯರ್, ರಾಯಭಾರಿ, ಗವರ್ನರ್ ಅಲ್ಲದೆ ನಿ

(೨೭ನೇ ಪುಟ ನೋಡಿರಿ)

**For Bumper Crops**
*USE*
**Kirloskar Pumping Sets**
*Stockists:*
**KERKARA SONS & Co.,**
*MACHINERY DEALERS,*
"KERKARA MANSION", MAIDAN WEST ROAD,
MANGALORE—1.

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿ ರಂಗಿನ ಸೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.
**ಪೂರ್ಣಿಮಾ ಸ್ಟೋರ್ಸ್**
— ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ —
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,
**ಮಂಗಳೂರು - ೧**
ಅಖಿಲ ಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಸೀರೆಗಳನ್ನು ಉಪಯೋಗಿಸಿರಿ.

# ಪ್ರಜಾರಾಜ್ಯ-ಪರೀಕ್ಷಾರಂಗ

ಕಮ್ಯೂನಿಸ್ಟ್ ಮತ್ತು ಕಿರಿಸ್ತಾನ ತತ್ವಗಳ ನಡುವೆ ಬೆಳೆದು ಬಂದ ಸ್ವತಂತ್ರ ಪ್ರಜಾರಾಜ್ಯ ಭಾರತವಿಂದು ವಿಶಾಲ ಪರೀಕ್ಷಾರಂಗದಲ್ಲಿ ಪಾದಾರ್ಪಣ ಮಾಡಿದೆ. ಇದರಲ್ಲಿ ಜಯಗಳಿಸಿ, ತನ್ನತನವನ್ನು ಉಳಿಸಿಕೊಂಡರೇನೇ ಭಾರತೀಯ ಸಂಸ್ಕೃತಿಯು ಉಳಿದುಕೊಳ್ಳಬಹುದು.

**ಬರೆದವರು: ಶ್ರೀ. ಶಿವಶಂಕರ, ಮದ್ರಾಸು.**

'ನೀರ ಸ್ವಾತಂತ್ರ್ಯವ ಬಯಸಿ ನಿಂದವರ್ ಮತ್ತೆ ಬೇರೊಂದ ಕೈಕೊಳ್ವರೋ— ಎಂದೂ' ಎಂದು ವರಕವಿ ಭಾರತಿಯವರು ಭಾರತೀಯರೆಲ್ಲರ ಬಳಿ ಪ್ರಶ್ನೆ ಕೇಳಿರುವರು—ತಮ್ಮ ಕವಿತೆಯೊಂದರಲ್ಲಿ.

ಅಂದು ಅವರು ಕೇಳಿರುವ ಪ್ರಶ್ನೆ ಇಂದೂ ನಮ್ಮ ಮುಂದಿದೆ. ಸ್ವಾತಂತ್ರ್ಯ ಪಡೆದೆವು, ಪ್ರಜಾರಾಜ್ಯವನ್ನು ಕಟ್ಟಿಕೊಂಡೆವು. ಆದರೆ ಕಳೆದ ಹದಿನೈದು ವರ್ಷಗಳಲ್ಲಿ ಅದನ್ನು ಕಾಯುವದಕ್ಕಾಗಿ, ಸಂರಕ್ಷಿಸುವದಕ್ಕಾಗಿ ನಾವೇನು ಮಾಡಿರುವೆವು?

ಸಂರಕ್ಷಣೆ ಎಂದೊಡನೆ ಬಾಹ್ಯ-ಶತ್ರುಗಳಿಂದ, ಅಂದರೆ ಪರ-ರಾಷ್ಟ್ರಗಳಿಂದ ಹಾಗೂ ಆಂತರಿಕ, ಅಂದರೆ ದೇಶದೊಳಗಿನೇ ಹಿತಶತ್ರುಗಳಂತೆ ಇರುವವರಿಂದ ಎಂಬುದು ಬಹಳ ಮುಖ್ಯ. ಬಾಹ್ಯ ಶತ್ರುವನ್ನಾದರೂ ಗುರುತಿಸಬಹುದು. ಆಂತರಿಕ ಶತ್ರುವನ್ನು ಗುರುತಿಸುವದು ಸ್ವಲ್ಪ ಕಷ್ಟ. ಅದರಲ್ಲಿ ಅನುಭವಶಾಲಿಗಳ ಗಣಿಕೆ ಕೂಡಾ ತಪ್ಪುವದಿದೆ. ತಪ್ಪಲು ಹಲವು ಕಾರಣಗಳಿರುತ್ತವೆ. ಮೊದಲನೆಯದಾಗಿ ಅವರು ತಮ್ಮ ದೇಶದಲ್ಲೇ ಇರುತ್ತಾರೆ. ದೇಶದ ರಕ್ಷಣಾ ವಿಭಾಗದಿಂದ ಹಿಡಿದು ಆಡಳಿತಾ ವಿಭಾಗ ಹಾಗೂ ಇತರ ಅನೇಕಾನೇಕ ರಂಗಗಳಲ್ಲಿ ಅವರು ಹಲವಾರು ವೇಷಗಳಲ್ಲಿರುತ್ತಾರೆ. ಎಷ್ಟಾದರೂ ಅವರು ನಮ್ಮವರೇ ತಾನೇ? ಅವರನ್ನು ಶತ್ರುವೆಂದು ಹೇಗೆ ಶಿಕ್ಷಿಸುವದು? ಅಲ್ಲದೆ ಪ್ರಜಾರಾಜ್ಯದಲ್ಲಿ ಗದ್ದುಗೆಯನ್ನೇರಲು, ಯಾವದೇ ರಂಗದಿಂದ ಆರಿಸಿ ಬರಲು, ಅವರ ಸಹಾಯವೂ ಬೇಕಾಗುತ್ತದೆ!

ಪೂರ್ಣ ಪ್ರಪಂಚ ಇಬ್ಬಣದ ಕಾಟಕ್ಕೊಳಗಾಗಿರುವಾಗ ಶಾಂತಿಪ್ರಿಯ, ಜ್ಞಾನ ದೀವಿಗೆ ಭಾರತವು ತನ್ನದೇ ಆದ ವಿಶಿಷ್ಟ ಪಥದಲ್ಲಿ ಮುನ್ನಡೆಯುತ್ತಿತ್ತು. ಅದನ್ನು ಕಬಳಿಸಲು ಆ ಬಣಗಳು ಪೋಟಿ ನಡೆಸುವದು ಸ್ವಾಭಾವಿಕವಿದೆ. ಅಮೇರಿಕ, ಬ್ರಿಟನ್, ಫ್ರಾನ್ಸ್ ಮುಂತಾದ ಕ್ರಿಶ್ಚಿಯನ್ ರಾಷ್ಟ್ರಗಳು ಒಂದು ಬಣ. ರಷ್ಯಾ, ಚೀನಾ ಮುಂತಾದ ಕಮ್ಯೂನಿಸ್ಟ ರಾಷ್ಟ್ರಗಳು ಇನ್ನೊಂದು ಬಣ. ಕ್ರಿಶ್ಚಿಯನ್ ರಾಷ್ಟ್ರಗಳು ಭೌಗೋಲಿಕವಾಗಿ ಒಂದಾಗಿ ಸೇರಿಕೊಂಡಿರುವದಿಲ್ಲ. ಸಾಗರ ಅವುಗಳನ್ನು ವಿಂಗಡಿಸುತ್ತದೆ. ಕಮ್ಯೂನಿಸ್ಟ ರಾಷ್ಟ್ರಗಳು ಹಾಗಲ್ಲ. ಭೌಗೋಲಿಕ ದೃಷ್ಟಿಯಿಂದ ಅವು ಸೇರಿಕೊಂಡಿವೆ. ಎಲ್ಲಾ ನೆಲಪ್ರದೇಶವೇ ಇದೆ. ಅಲ್ಲದೆ ಸಾಗರ ಪ್ರದೇಶಗಳಲ್ಲಿ ಕೂಡಾ ಅಲ್ಲಲ್ಲಿ ಅವುಗಳಿಗೆ ಕೆಲ ತಳಗಳಿವೆ. ಹಾಗಾಗಿ ಕ್ರಿಶ್ಚಿಯನ್ ರಾಷ್ಟ್ರಗಳಿಗೆ ಚಲನೆಗೆ, ವ್ಯಾಪಾರಕ್ಕೆ ಬಹಳ ಕಷ್ಟವಿದೆ. ಮತೀಯ ದೃಷ್ಟಿಯಿಂದಲೂ ಕ್ರಿಶ್ಚಿಯನ್ ರಾಷ್ಟ್ರಗಳು ಚೆನ್ನಾಗಿ ಒಂದಾಗಿರುವದಿಲ್ಲ. ಮೂರನೆಯ ರಾಷ್ಟ್ರವನ್ನು ಕಬಳಿಸಲು ಅವು ಒಂದಾದರೂ ಕೂಡಾ ಅವುಗಳೊಳಗೆ ಕೆಥೋಲಿಕ—ಪ್ರೊಟೆಸ್ಟಂಟ್ ಮುಂತಾದ ಭಿನ್ನಾಭಿಪ್ರಾಯಗಳಿವೆ. ಕಮ್ಯೂನಿಸ್ಟ ರಾಷ್ಟ್ರಗಳಲ್ಲಿ ಹೆಚ್ಚಾಗಿ ಹಾಗೆ ಇರುವದಿಲ್ಲ. ರಷ್ಯಾದ ಸಿತೂರಿಯಿಂದಾಗಿ ರಾಷ್ಟ್ರಗಳು ಕಮ್ಯೂನಿಸ್ಟ್ ಹಿಡಿತಕ್ಕೊಳಗಾಗುವದರಿಂದ ಅಲ್ಲಿಯ ಆಡಳಿತವನ್ನು ತನ್ನ ಮುಷ್ಟಿಯೊಳಗಿರಿಸಿಕೊಳ್ಳಲು ಅದೆಂದಿಗೂ ಮರೆಯದು. ಹಂಗೇರಿಯು ಇದಕ್ಕೆ ಉತ್ತಮ ಉದಾಹರಣೆ. ಹಾಗಾಗಿ ಚೀನ ಇಂದು ಗುರ್‌-ಗುರ್ರೆಂದರೂ ಕೂಡಾ ಇದು ಬಾಹ್ಯ ಜಗತ್ತಿಗೆ ಮನಸ್ತಾಪದಂತೆ ಕಂಡು ಬರಬಹುದು ಅಷ್ಟೆ. ಅವರ ಮಾತಿನಲ್ಲೇ ಹೇಳುವದಿದ್ದಲ್ಲಿ ಅದೇನಿದ್ದರೂ ಅವು ಸಹೋದರ ರಾಷ್ಟ್ರಗಳಿರುತ್ತವೆ.

ಈ ಎರಡು ಕಾರಣಗಳಿಂದ ನೋಡಿದಾಗ ಭಾರತವು ಆ ಬಣಗಳಿಗೆ ಉತ್ತಮ ಕೊಳ್ಳೆಯಂತೆ ಕಂಡು ಬರುವದು ಸ್ವಾಭಾವಿಕವಿದೆ. ಪೆಸಿಫಿಕ್ ಹಾಗೂ ಅಟ್ಲಾಂಟಿಕ್ ಸಾಗರಗಳಲ್ಲಿ ಕಮ್ಯೂನಿಸ್ಟ ರಾಷ್ಟ್ರಗಳಿಗೆ ತಳಗಳಿವೆ. ಹಿಂದೂ ಮಹಾಸಾಗರದಲ್ಲಿ ತಳ ಇರುವದಿಲ್ಲ. ಲಂಕೆಯಂತೂ ಬಹಳ ಚಿಕ್ಕ ಪ್ರದೇಶ ಇರುವದರಿಂದ ಭಾರತವನ್ನೇ ನುಂಗಿ ಬಿಟ್ಟಲ್ಲಿ, ಸಿಂಹಳ ಯಾವ ಮೂಲೆಗೆಂಬುದೇ ಅವುಗಳ ಅಂಬೋಣ. ರಷ್ಯಾವನ್ನು ಶ್ರೀಮಾನ್ ನೆಹ್ರೂಜೀಯವರು 'ಸ್ನೇಹಿಗ'ನನ್ನಾಗಿ ಮಾಡಿಕೊಂಡಿರುವದರಿಂದ ಹಾಗೂ ಪ್ರಬಲ ರಾಷ್ಟ್ರಕ್ಕೆ ನೇರ 'ಅಪವಾದ'ವನ್ನು ಹೊತ್ತುಕೊಳ್ಳಲು ಮನಸ್ಸಿಲ್ಲದಿರುವದರಿಂದ ಹಾಗೂ ಸೇವಕನಿರುವಾಗ ಮಾಲಿಕನು ತಾನು ಕೆಲಸ ಮಾಡದೆ ಅವನಿಂದ ಮಾಡಿಸಿಕೊಳ್ಳುವಂತೆ ರಷ್ಯಾಕ್ಕೆ ಸಾಧ್ಯ ಇರುವದರಿಂದ ರಷ್ಯಾವು ಚೀನಾಕ್ಕೆ ಈ ಕೆಲಸವನ್ನು ಬಿಟ್ಟು ಕೊಟ್ಟಿದೆ.

ಚೀನಾ ತೋರಿಕೆಗೆ ಒಂದು ಪ್ರತ್ಯೇಕ ರಾಷ್ಟ್ರದಂತಿದೆಯಾದರೂ ಒಳಗಿಂದೊಳಗೆ ಅದು ಪೂರ್ಣವಾಗಿ ರಷ್ಯದ ಬಂಧನದಿಂದ ಬಿಡುಗಡೆ ಹೊಂದಿರುವದಿಲ್ಲ. ಮಾವನಾಗಲೀ, ಚಾ ಆಗಲೀ ರಷ್ಯಾಕ್ಕೆ ನಿಜವಾಗಿ ದ್ರೋಹ ಬಗೆದಲ್ಲಿ ನಾಗಿಯ ಗತಿಯೇ ಅವರಿಗೂ ಬಂದೀತು. ಅಲ್ಲದೆ ಚೈನಾದ ಆರ್ಥಿಕ ಪರಿಸ್ಥಿತಿ ಹಾಗೂ ಆಹಾರ ಸ್ಥಿತಿಗತಿಯು ಕುರಿತು ಜಗತ್ತಿಗೇನೇ ಗೊತ್ತಿದೆ. ಭಾರತವಾದರೋ

"ಇನಿಯ ತೋಪುಗಳ ನೀಡು ಬಯಲ್ಗಳ
ಎಣಿಕೆ ಮೀರಿ ಪಡೆದ ನಾಡು;
ಹಣ್ಣು ಕಾಯಿ ಗೆಡ್ಡೆಗೆಣಸು ಧಾನ್ಯಂಗಳೆಲ್ಲವಂ
ಲೆಕ್ಕವಿರದೆ ಕೊಡುವ ನಾಡು—
ಇದು." [ಭಾರತಿ]

ಅದನ್ನು ಆಕ್ರಮಿಸಿಕೊಂಡರೆ ಸಮಸ್ಯೆ ಪರಿಹಾರವಾದಂತೆಯೇ ಸರಿ. ಹೂಣರು, ಶಕರು, ಯವನರು, ಮೊಗಲಾಯಿಗಳು, ಬ್ರಿಟಿಷರು ಕೊಳ್ಳೆಹೊಡೆದುಕೊಂಡು ಸಾಗಿಸಿರುವ 'ಸವಿನೆನಪು' ಅವರಿಗಿದೆ. ಅದವರ ಬಾಯಿಯಲ್ಲಿ ನೀರನ್ನು ಬರಿಸುತ್ತದೆ. ಅವರಿಗಾಗಿರುವ ಸ್ಥಿತಿಯೇ ಇವರಿಗೂ ಬರುತ್ತದೆನ್ನುವದನ್ನು ಮಾತ್ರ ಇವರು ಮರೆತುಬಿಟ್ಟಿರಲಿಕ್ಕೂ ಸಾಕು. ಅಥವಾ ಕಮ್ಯೂನಿಸ್ಟರ ತತ್ವದಂತೆ, ಸಾಲಮಾಡಿಯಾದರೂ, ಕದ್ದಾದರೂ, ಕೊಳ್ಳೆ ಹೊಡೆದಾದರೂ ತುಪ್ಪ ತಿನ್ನಬೇಕೆಂದಿರುವಂತೆ, ಒಂದು ಸಲ ತಿನ್ನೋಣ ಜೀವ ಇರುವವರೆಗೆ ಸುಖಪಡೋಣ-ಭೋಗಿಸೋಣ ಎಂದು ಬರುತ್ತಿರಲೂ ಬಹುದು.

ಅಮೇರಿಕನರಾದರೋ ಪೂರ್ಣ ಭಾರತೀಯರ ಒಳ್ಳೆಯದಕ್ಕಾಗಿ ತಮ್ಮ ಹಿತಾಹಿತಗಳನ್ನು ಲೆಕ್ಕಿಸದೆ ನಮಗೆ ಸಹಾಯ ಮಾಡುತ್ತಿರುವದಿಲ್ಲ. [ಅಮೇರಿಕನರೆಂದರೆ ಪೂರ್ಣ ಕ್ರಿಶ್ಚಿಯನ್ ರಾಷ್ಟ್ರಗಳ ಗುಂಪೇ ಇದೆ, ಇಲ್ಲಿ.] ಬ್ರಿಟಿಷರು ಕಾಲ್ತೆಗೆದ ನಂತರ ಅವರೆಲ್ಲರೂ ಅನೇಕ ವೇಷಗಳಲ್ಲಿ ಇತ್ತ ಬಂದರು. ಭಾರತ ಅವರ ಬಲೆಯೊಳಗೆ ಬೀಳಲಿಲ್ಲ. ಹಾಲಿನ ಪುಡಿಯನ್ನು, ಮಿಶನರಿಗಳನ್ನು, ವಿದ್ಯಾಪಾರಂಗತರನ್ನು, ಮದ್ದುಗಳನ್ನು ಕಳುಹಿಸಿ ನೋಡಿದರು. ತುತ್ತನ್ನು ನುಂಗಲಿಕ್ಕಾಗಲಿಲ್ಲ. ನಾಗಾ ವಿದ್ರೋಹಿಗಳನ್ನು ಎತ್ತಿಕಟ್ಟಿದರು. ಕೇರಳದಲ್ಲಿ ಫಿತೂರಿನಡೆಸಲು ನೋಡಿದರು. ಪೂರ್ಣ ಫಲಕಾರಿಯಾಗಲಿಲ್ಲ. ಸಿಕ್ಕಿದುದರಿಂದಲೇ ತೃಪ್ತಿಪಡಬೇಕೆನ್ನುವಂತೆ ಪಾಕಿಸ್ತಾನವನ್ನು ಕಟ್ಟಿಕೊಂಡು ಅದನ್ನು ತಳವನ್ನಾಗಿ ಉಪಯೋಗಿಸುತ್ತ ಹೊಂಚುಹಾಕುತ್ತಿದ್ದರು. ಮತೀಯದೃಷ್ಟಿಯಿಂದ ಪಾಕಿಸ್ತಾನವನ್ನು ಕ್ರಿಶ್ಚಿಯನ್ ರಾಷ್ಟ್ರವನ್ನಾಗಿ ಮಾಡಲು ಸಾಧ್ಯವಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಆದರೂ ಸಮಯ ಸಾಧನೆಗೆ ಹಾಗೂ ಭಾರತವನ್ನು ಹಣ್ಣುಗೊಳಿಸುವದಕ್ಕಾಗಿ ಅವರು ಅಲ್ಲಿ ಕಾಲ್ಚಾಚಿ ಆಯುಧೋಪಕರಣಗಳ ಸರಬರಾಜಿಗಾರಂಭಿಸಿದರು.

ಈ ಎರಡು ಬಣಗಳ ನಡುವೆ ನಮ್ಮ ಪಾಡು ಅತ್ತ ಹುಲಿ ಇತ್ತ ಹೊಳೆಯಂತಾಗಿದೆ. ಹುಲಿಯನ್ನು ಕೊಲ್ಲಲು ನಾವು ಹೊಳೆಗೆ ಹಾರಲು ಹಿಂಜರಿಯಬಾರದು. ಆದರೆ ಈಜು ಚೆನ್ನಾಗಿ ಗೊತ್ತಿರಬೇಕು. ಆ ಹೊಳೆಯಲ್ಲಿ ಜಲಸಮಾಧಿಸ್ಥರಾಗಬಾರದು. ಹುಲಿಸೋದ ಮೇಲೆ ಮೆಲ್ಲನೆ ದಡಕ್ಕೆ ಬರಲೇ ಬೇಕು.

ಈ ಎರಡು ಬಣಗಳಿಗೂ ಭಾರತದೊಳಗೆ—ನಮ್ಮ ದುರಾದೃಷ್ಟವಶಾತ್—ಟ್ರೋಜನ್ ಕುದುರೆಗಳಿವೆ. ಕಮ್ಯೂನಿಸ್ಟ್ ರಾಷ್ಟ್ರಗಳ ಬಣಕ್ಕೆ ಇಲ್ಲೂ ಕಮ್ಯೂನಿಸ್ಟ್ ಪಾರ್ಟಿ ಇದೆ. ಅವರು ವೇಷ ಮರೆಸಿ [ಕ್ರುಶ್ಚೇವ್ ಭಾರತಕ್ಕೆ ಬಂದು ಇವರ ತಲೆ ಮುಟ್ಟಿ ಹೋದ ನಂತರ] ಬಿಳಿ ಗಾಂಧಿ ಟೊಪ್ಪಿಯನ್ನಿಟ್ಟುಕೊಂಡಿರಬಹುದು. ನಿತ್ಯ ನೆಹ್ರೂಜೀಯವರ ನಾಮೋಚ್ಚಾರಣೆ ಮಾಡುತ್ತಿರಬಹುದು. ಇದು ಮಾರ್ಜಾಲ ಸನ್ಯಾಸವಲ್ಲದೆ ಬೇರೇನೂ ಇರುವುದಿಲ್ಲ. ಬಾಹ್ಯ ರಾಷ್ಟ್ರಗಳ ದೃಷ್ಟಿಯಲ್ಲಿ ಜಗಳಾಡಿಕೊಳ್ಳುವಂತಿರುವ ರಷ್ಯಾದ ಕಮ್ಯೂನಿಸ್ಟ್ ಆಡಳಿತದ ಅತಿರಥರೇ ತಮಗೆ 'ಹೇಗಿದ್ದರೂ ಚೀನಾವು ಭ್ರಾತೃ-ರಾಷ್ಟ್ರ'ವೆನ್ನುತ್ತಿರುವಾಗ ಇದುವರೆಗೂ ಚೀನಾ ಶಾಕೋಣಟಕದ ರಕ್ಷಕರಾಗಿದ್ದವರು ದಿಢೀರನೆ ಇಂದು ಒಂದು ನಿರ್ಣಯವನ್ನು ಪತ್ರಿಕೆಗೆ ಕಳುಹಿಸಿಬಿಟ್ಟು ರಾಷ್ಟ್ರ ಭಕ್ತರಾಗುವದು ಸಾಧ್ಯವೇನು? ಕಳೆದ ಮಹಾ ಯುದ್ಧದ ಸಮಯ ಇವರು ಮಾಡಿದ್ದಾದರೂ ಏನು? ಪ್ರಥಮದಲ್ಲಿ 'ಸಾಮ್ರಾಜ್ಯ ವಾದಿಗಳ ಸಮರ' ಎನ್ನುತ್ತಲಿದ್ದವರು ರಷ್ಯಾದ ಆದೇಶಕ್ಕನುಸಾರವಾಗಿ ಇದ್ದಕ್ಕಿದ್ದಂತೆಯೇ ಅದೇ ನಾಲಗೆಯಲ್ಲಿ ಅದೇ ಯುದ್ಧವನ್ನು "ಜನತಾ ಯುದ್ಧ"ವೆಂದು ಅವರು ಕರೆದಿಲ್ಲವೇನು? ಬ್ರಿಟಿಷರಿಗೆದುರಾಗಿ ಹೋರಾಡುತ್ತ ಸುಭಾಷ ಬಾಬೂರ ಬಳಿ ಇದ್ದ ಕಮ್ಯೂನಿಸ್ಟರು ಕೂಡಾ ಅಂದಿನಿಂದ ಸುಭಾಷರಿಗೆದುರಾಗಿಯೇ ಹೋರಾಡಿಲ್ಲವೇನು? ಅನಂತರ ಅವರು ಭಾರತದೊಳಗೆ ನಡೆಸಿರುವುದಾದರೂ ಏನು? ಆಂಧ್ರದಲ್ಲಿ ಅವರಾಡಿರುವ 'ಆಟ'ವನ್ನು ಮರೆಯಲು ಸಾಧ್ಯವಿರುವುದಿಲ್ಲ. ತ್ರಿಪುರ, ಡಾರ್ಜಲಿಂಗ್, ಜಲಪಾಯಗುರಿ, ನೇಪಾಳಗಳಲ್ಲಿ ಇವರು ಇತ್ತೀಚೆಗೂ ನಡೆಸಿರುವ ಕರಾಳಕೃತ್ಯಗಳವಂಗೆ ಉತ್ತಮ ಕೈಗನ್ನಡಿಯಾಗಿವೆ. ಭಾರತದಲ್ಲಿರುವ ಮುಖ್ಯ ಪತ್ರಿಕೆಗಳು ಆ ಸುದ್ದಿಗಳನ್ನು ಸರಿಯಾಗಿ ಪ್ರಕಟಿಸುತಿದ್ದಲ್ಲಿ ಕಮ್ಯೂನಿಸ್ಟರ ನಿಜವಾದ ಬಣ್ಣ ಗೊತ್ತಾಗುತ್ತಿತ್ತು. ಕೆಲ ಕಾರಣಗಳಿಂದಾಗಿ—ಆಂತರಿಕ ಗಲಾಟೆ ಉಂಟಾಗಕೂಡದೆಂದು—ಆ ಪತ್ರಿಕೆಗಳು ಇಂತಹ ವರ್ತಮಾನಗಳನ್ನು ಜನತೆಯ ಮುಂದಿಡುವದೇ ಇಲ್ಲ. ಡಾರ್ಜಲಿಂಗ್ ಪ್ರದೇಶಗಳಲ್ಲಿ ಇವರು ಸುತ್ತಾಡಿ ಧನಸಂಗ್ರಹ ಮಾಡಿಕೊಂಡು, ಈ ಗುರುತು ಚೀಟನ್ನಿಟ್ಟುಕೊಂಡಲ್ಲಿ ಚೈನೀಯರು ಹಿಂಸಿಸುವದಿಲ್ಲವೆಂಬ ಆಶ್ವಾಸನೆ ಕೊಡುತ್ತಾ ಬಂದಿದ್ದಾರೆ! ಚಾ-ಎನ್-ಲಾಯ್ ಬುದ್ಧನ ಅವತಾರವೆನ್ನುವದಕ್ಕೂ ಅವರು ಹೇಸಿರುವದಿಲ್ಲ. ಚೈನೀಯರ ಸೇನೆಯ ಹಿಂದುಗಡೆ ಸುಭಾಷರೇ ಇರುವರೆಂಬಂತಹ ಭಯಂಕರ ಸುಳ್ಳನ್ನಾಡಲೂ ಅವರು ಅಳುಕಿರುವದಿಲ್ಲ. ಅಂದರೆ ಅವರು ಬಾಹ್ಯ ರಾಷ್ಟ್ರಗಳ ಕಮ್ಯೂನಿಸ್ಟ ಆಕ್ರಮಣಗಾರರೊಂದಿಗೆ ಕೈಕುಲುಕಿಸಿಕೊಳ್ಳಲು ಸಜ್ಜಾಗಿದ್ದರೆಂಬುದು ಸ್ಪಷ್ಟವಾಗಿದೆ. ಅವರಿಗೆ 'ರಾಷ್ಟ್ರ' 'ದೇಶ'ವೆಂಬುದು 'ಸಂಕೋಚ ಮನೋವೃತ್ತಿ' ಇದೆ. ಅಖಿಲ ಜಗತ್ತಿನ 'ಕಾರ್ಮಿಕರೇ ಒಂದಾಗಿರಿ' 'ರಷ್ಯಾದ ನಾಯಕತ್ವದಡಿಯಲ್ಲಿ!' ಇದುವೇ ಅವರ ಗುರಿ ಇದೆ.

ಕ್ರಿಶ್ಚಿಯನ್ [ಬಂಡವಾಳಶಾಹಿ—ಸಾಮ್ರಾಜ್ಯಶಾಹಿ...] ರಾಷ್ಟ್ರಗಳಿಗೂ ಅವರ 'ಪ್ರತಿನಿಧಿ'ಗಳಿದ್ದಾರೆ; ಫಿಡೋಗಳಿದ್ದಾರೆ. ಭಾರತವನ್ನು ಕ್ರಿಶ್ಚಿಯನ್ ರಾಷ್ಟ್ರವನ್ನಾಗಿಸಿಕೊಂಡರೆ ತಮಗೆ ಬೇಳೆ ಬೇಯಿಸಿಕೊಳ್ಳಲು ಸುಲಭವಾಗುತ್ತದೆನ್ನುವರೇ ಅವರೆಣಿಕೆ. ಅದಕ್ಕಾಗಿ ಹಲವಾರು 'ಮರೀಚರು' ಇತ್ತ ಬರುತ್ತಿದ್ದಾರೆ—ಹಲವಾರು ರಂಗಗಳಲ್ಲಿ. ಅದೂ ಸಾಧ್ಯವಾಗದಿದ್ದಲ್ಲಿ ಇತರ ದಾರಿಗೂ ಅವರು ಸಿದ್ಧರಾಗಿದ್ದಾರೆ. ಸಾಮರೂಪದಲ್ಲಿ—ಆ ಸಂಧಾನ, ಈ ಸಂಧಾನ—ಹೇಳಿ ನೋಡಿದರು. ದಾನರೂಪದಲ್ಲಿ ನೋಡಿದರು. ಹಾಲಿನ ಪುಡಿ, ಮದ್ದುಗಳು ಮಾತ್ರವಲ್ಲದೆ ಇತರ ರೂಪದಲ್ಲಿ ಕೃಷಿ ಹಾಗೂ ಔದ್ಯೋ

(ಮುಂದಿನ ಪುಟ ನೋಡಿರಿ)

# ಪರಮಹಂಸರ ಮೆಚ್ಚಿನ ಸ್ತ್ರೀಸಮಾಜ

ಭಾರತೀಯತೆಯ ಪರೀಕ್ಷಾ ಕಾಲದಲ್ಲಿ ರಾಮಕೃಷ್ಣ ಪರಮಹಂಸರ ಜನನವಾಯಿತು. ಅವರು ಸಂಸ್ಕೃತಿ ಪ್ರದೀಪಿಕೆಯರೆನಿಸಿದ ಸ್ತ್ರೀಸಮಾಜವನ್ನು ಕಂಡ ದೃಷ್ಟಿ ದಿವ್ಯವಾದುದು. ಇದನ್ನು ಮನವರಿಕೆ ಮಾಡಿಕೊಂಡು ಇಂದಿನ ನಾರೀ ಸಮಾಜವು ಮುಂದುವರಿಯುವುದು ಅಪೇಕ್ಷಣೀಯ.

**ಬರೆದವರು: ಶ್ರೀಮತಿ ರುಕ್ಮಿಣೀದೇವಿ, ಐರೋಡಿ.**

ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರಂತಹ ವಿಭೂತಿ ಪುರುಷರು ಕೆಲವು ಶತಮಾನಗಳಿಗೊಮ್ಮೆಯೋ— ಸಹಸ್ರಮಾನಗಳಿಗೊಮ್ಮೆಯೋ— ಅವತರಿಸುತ್ತಾರೋ, ಇಲ್ಲವೋ, ಹೇಳಲುಬಾರದು. ಶ್ರೀ ಕೃಷ್ಣನು ಇಂತಹ ಯುಗಪುರುಷರ ದೇವಮಾನವರ—ಅವತಾರದ ಕುರಿತು—

ಶ್ಲೋ|| ಯದಾಯದಾಹಿ ಧರ್ಮಸ್ಯಗ್ಲಾನಿ
ರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯತದಾತ್ಮಾನಂ
ಸೃಜಾಮ್ಯಹಂ || ೧ ||
ಪರಿತ್ರಾಣಾಯ ಸಾಧೂನಾಂ
ವಿನಾಶಾಯಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭ-
ವಾಮಿ ಯುಗೇ ಯುಗೇ || ೨ ||
(ಭ. ಗಿ. ೪-೭,೮)

'ವರ್ಣಾಶ್ರಮ ಧರ್ಮಗಳ ಅವನತಿಯಾಗಿ ಅಧರ್ಮದ ಉನ್ನತಿಯಾದಾಗ ಸಜ್ಜನರ ರಕ್ಷಣೆಗಾಗಿಯೂ, ದುರ್ಜನರ ವಿನಾಶಕ್ಕಾಗಿಯೂ—ಇವೆರಡರ ಮೂಲಕ ಧರ್ಮಸಂಸ್ಥಾಪನೆಗಾಗಿ ಪ್ರತಿಯುಗದಲ್ಲೂ ನಾನು ಅವತರಿಸುತ್ತೇನೆ" ಎಂದು ಘೋಷಿಸಿರುವುದರಿಂದ ಮಹಾ ಪುರುಷರ ಉದಯವೆಲ್ಲಾ ಧರ್ಮದ ಸಂಧ್ಯಾಕಾಲದಲ್ಲೇ ಆಗುವುದೆನ್ನಬೇಕಾಗುವುದು. ಇಂಥವರ ನುಡಿಗಳೇ ವೇದಗಳು; ಉಪದೇಶಗಳೇ ಉಪನಿಷತ್ತುಗಳು. ಹಿಂದಿನಿಂದಲೂ ಭಾರತವು ಇಂಥವರ ಅಭಿಪ್ರಾಯಗಳನ್ನು ಮನ್ನಿಸುತ್ತಾ ಬಂದಿದೆ. ಇದೊಂದು ಭಾರತದ ಸಂಸ್ಕೃತಿ! ಇದೇ ಭಾರತದ ಸಂಪತ್ತು!

**ಸನಾತನ ಸಂಸ್ಕೃತಿಯ ಅನಾರೋಗ್ಯ**

ಪರಮಹಂಸರ ಜನ್ಮ ಕಾಲವು ಬಂಗಾಳಕ್ಕೊಂದು ದುಸ್ಥಿತಿ—ಧರ್ಮದ ಒರಗಾಲ. ಅಂದು ಆಂಗ್ಲ ನಾಗರಿಕತೆಯು ಪುರುಷ ಸಂಘಕ್ಕೆ ಮಾತ್ರವಲ್ಲ—ಸ್ತ್ರೀ ಸಮಾಜಕ್ಕೂ ಮೋಹಕವಾಗಿತ್ತು. 'ಜಗತ್ತಿನಲ್ಲಿ ಸ್ತ್ರೀಯು ಪುರುಷನಿಗಿಂತಲೂ ಕೀಳು ತೂಕ ಮುಂದೆ. ಗೃಹಿಣಿಯ ಪದವಿಯು ಸ್ತ್ರೀಗೆ ಮಾತ್ರ ಗಂಟು ಕಟ್ಟಿಕೊಟ್ಟ ಬುತ್ತಿಯಲ್ಲ. ಪಾತಿವ್ರತ್ಯವು ಭಾರತೀಯರ ಗೊಡ್ಡುತನಕ್ಕೊಂದು ದಿವ್ಯ ದೃಷ್ಟಾಂತ. ಹಿಂದೂ ಸಮಾಜವೇ ನಾರೀರುದ್ರದೇವತೆಗಳ ಕಲಹ ಮೇಳೈಸಿಗೆ... ಕ್ರೈಸ್ತ ಸಂಸ್ಕೃತಿಯು ಈ ಯುಗಕ್ಕೆ ಹೊಂದಿಕೆಯಾದ ಅಚ್ಚುಕಟ್ಟಾದ ಪಂಥ....' ಇಂತಹ ನವ ಧರ್ಮೋಪದೇಶಕರ ಆ ಪಕ್ವ ವಿಚಾರಗಳೆಲ್ಲಾ ನವ ತರುಣರ ತಲೆಯಲ್ಲಿ ಹುಚ್ಚೆಬ್ಬಿಸಿದುವಲ್ಲದೆ, ಸ್ತ್ರೀ ಹೃದಯವನ್ನೂ ಆಕರ್ಷಿಸ ತೊಡಗಿದುವು. ಎಷ್ಟೋ ಮಂದಿ ಹಿಂದೂ ದೇವಾಲಯಗಳಲ್ಲಿ ಶಾಂತಿ ಸುಖಗಳಿಲ್ಲವೆಂದು ಕ್ರೈಸ್ತ ಚರ್ಚುಗಳನ್ನು ಆಶ್ರಯಿಸ ತೊಡಗಿದರು. ಇದೇ ಸಮಯದಲ್ಲಿ ಭಾರತ ಸಂಸ್ಕೃತಿಯು ಕ್ರೈಸ್ತ ಸಂಸ್ಕೃತಿಯ ಬಳಿಗೆ ತೇಲಿ ಹೋಗುವುದನ್ನು ತಡೆಯುವುದಕ್ಕಾಗಿ ಆರ್ಯ ಸಮಾಜ, ಬ್ರಹ್ಮಸಮಾಜಗಳು ತಲೆ ಎತ್ತಿ 'ಭಾರತ ಸಂಸ್ಕೃತಿಯು ಸಂಸ್ಕಾರ ಪೂರ್ಣವಾದದ್ದು. ಇದರ ಮುಂದೆ ಜಗತ್ತಿನ ಎಲ್ಲಾ ಸಂಸ್ಕೃತಿಗಳೂ ಅಂಬೆಗಾಲಿಕ್ಕುವ ಶಿಶುಗಳು—ಮಗನು ಅಪ್ಪನಿಗೆ ಉಣ್ಣಲು ಕಲಿಸಿದಂತೆ! ಈ ಸನಾತನ ಸಂಸ್ಕೃತಿಯಿಂದಲೇ ಕೆಲ ಕೆಲವು ವಿಷಯಗಳನ್ನು ನಕಲೆತ್ತಿ, ಅದಕ್ಕೊಂದು ಹೊಸ ಮುದ್ರೆಯನ್ನೊತ್ತಿ 'ಹೊಸ ಧರ್ಮ, ಹೊಸಪಂಥ' ಎಂದು ಧರ್ಮೋಪದೇಶಕರು ಸಾರುತ್ತಿದ್ದಾರೆ. ಕುರಿಜನಗಳೇ, ಸ್ವಧರ್ಮದಲ್ಲಿ ನಿಧನವಾದರೂ ಶ್ರೇಯಸ್ಸಿದೆ; ಪರಧರ್ಮವು ಭಯಾವಹವಾದುದು" ಎಂದು ಹರಿಕಂಠದಿಂದ ಗರ್ಜಿಸತೊಡಗಿದುವು. ಇದರಿಂದೇನೋ ಸ್ವಲ್ಪ ಪ್ರಯೋಜನವಾಯಿತು. ಆಂಗ್ಲನಾಗರಿಕತೆಯೇ ಈ ಯುಗಧರ್ಮವೆಂದು ನಿರ್ಧಾರಕ್ಕೆ ಬಂದವರೂ, ಶ್ರೀ ದಯಾನಂದ ಸರಸ್ವತಿ, ರಾಜಾರಾಮ ಮೋಹನರಾಯ, ಮಹರ್ಷಿ ದೇವೇಂದ್ರನಾಥ ಠಾಕೂರ, ಕೇಶವ ಚಂದ್ರಸೇನ ಪ್ರಭೃತಿಗಳ ಮಾತುಗಳನ್ನು ಕೇಳಿ, 'ಹಿಂದೂ ಧರ್ಮವು ಜಗತ್ತಿನ ಎಲ್ಲಾ ಧರ್ಮಗಳಿಗಿಂತ ಹಿಂದುಳಿದಿಲ್ಲ; ಇದು ವಿಶಾಲ ಹೃದಯವುಳ್ಳದ್ದು; ಇದಕ್ಕೆ ಸಂಕೋಚ ಭಾವವೇ ಇಲ್ಲ. ಭಳಿರೇ ಶಹಬಾಸ್! ಎಂದು ಆಡಿಬಿದ್ದ ಆಂಗ್ಲಸಂಸ್ಕೃತಿಗೆ ಸಾಮಾನ್ಯ ಜನತೆಯೂ ಎರಡೊಂದು ಗುದ್ದುಗಳನ್ನು ಹೇರತೊಡಗಿತು. ಇಷ್ಟರಿಂದಲೇ ಆಂಗ್ಲಸಂಸ್ಕೃತಿಯು ಪರಾರಿಯಾಗಲಿಲ್ಲ. ಅದು ಧರ್ಮೋಪದೇಶಕರನ್ನು ಕೈಬಿಟ್ಟು, ಶಿಕ್ಷಣರಂಗದಲ್ಲಿ ನುಸುಳಿ ಭಾರತ ಸಂಸ್ಕೃತಿಯನ್ನು ತಾನೂ ಒಂದು ಕೈ ನೋಡತೊಡಗಿತು. ಆಗ ಭಾರತ ಸಂಸ್ಕೃತಿಯ ತಿರುಳಾದ 'ದೇವರು—ಧರ್ಮ ಇವೆಲ್ಲಾ ಮೀಸೆ ಹುಟ್ಟುವ ತರುಣರಿಗೆ 'ನೋನ್ಸೆನ್ಸ್" ವಿಚಾರಗಳಾದುವು. ಸೀತಾ, ಸಾವಿತ್ರಿ, ದ್ರೌಪದಿ, ಲೋಪಾಮುದ್ರೆ, ವಿಶ್ವಾವರೆ, ಮೈತ್ರೇಯಿ,— ಇವರೆಲ್ಲಾ ಪುರುಷರ ಗುಲಾಮರಾಗಿ ಕಂಡರು. 'ಬ್ರಿಟಿಷರ ಆಳಿಕೆಯಿಂದಲೇ ಸ್ತ್ರೀಯರು ದಾಸ್ಯದಿಂದ ಬಿಡುಗಡೆ ಹೊಂದಿದರು. ಇದಕ್ಕಾಗಿ ಬ್ರಿಟಿಷರ ಆಳಿಕೆಯು ಭಾರತದಲ್ಲಿ ಚಿರಾಯುವಾಗಲಿ! ಆಂಗ್ಲ ಸರ್ಕಾರ್ ಜಿಂದಾಬಾದ್!' ಎಂದವರೂ ಆಗ ಇಲ್ಲದಿಲ್ಲ. ಆಗ ಭಾರತ ಸಂಸ್ಕೃತಿಯ ಪ್ರಭಾವವನ್ನು ಜನತೆಯ ಹೃದಯದಲ್ಲೂರಲೂ ಸ್ತ್ರೀ ಸಮಾಜವನ್ನು ಅರ್ಥಪೂರ್ಣವಾಗುವಂತೆ ಸಂಸ್ಕರಿಸಲೂ ದೇವಗಂಗಾ ಸ್ವರೂಪದ ಮಹಾಪುರುಷನ ಆವಶ್ಯಕತೆಯು ಭಾರತಕ್ಕಿತ್ತು. ಈ ಹಂಬಲವು ಪರಮಹಂಸ ದೇವನ ಜನ್ಮದಿಂದ ಸಫಲವಾಯಿತು.

**ದುರ್ದಿನ – ಸುದಿನ**

ಪರಮಹಂಸರ ಜನ್ಮಕಾಲದಲ್ಲಿ ಸ್ತ್ರೀ ಸಮಾಜವು ಮೌನ ವೇಷವನ್ನೆಣಿಸುತ್ತಿತ್ತು. 'ಸ್ತ್ರೀಯರು ಪುರುಷರಂತೆ ಪಾರಮಾರ್ಥಿಕ ಸಾಧನೆಯನ್ನು ಮಾಡಲು ಅರ್ಹರಲ್ಲ. ಅವರನ್ನು ಸಂಸ್ಕರಿಸುವ ಆಗತ್ಯವೇ ಇಲ್ಲ. ನಿತ್ಯ ಸ್ನಾನ ಮಾಡದಿದ್ದರೂ ಮುತ್ತೈದೆಯ ಮಡಿ ಶುದ್ಧ! ಅವರಿಗೆ ಹಾಡು ಹಸೆಯೇ ಸಾಕು..." ಉಪನಿಷತ್ಕಾಲದಲ್ಲಿದ್ದಂತಹ ಗೌರವವನ್ನು ಮುಂದಿನ ಶಾಸ್ತ್ರಕಾರರು ಸ್ತ್ರೀಯರಿಗೆ ಕೊಡಲಿಲ್ಲ. ಮನುವು ಕ್ಷೀಣ ಸ್ವರದಿಂದ ಅಲ್ಲೊಂದು ಇಲ್ಲೊಂದು ಸ್ತ್ರೀಯರಿಗೆ ಪ್ರೋತ್ಸಾಹದ ಮಾತುಗಳನ್ನಾಡಿದರೂ ಅದರಿಂದ ಅವರಿಗೆ ಪ್ರಯೋಜನವಾಗಲಿಲ್ಲ. ನಮ್ಮ ಪುರಾಣಗಳಲ್ಲಿ ಪುರುಷರಲ್ಲಿ ಅನೇಕರು ಮಂತ್ರೋಪದೇಶ ಮಾಡಿಕೊಂಡು ಸಾಧನೆ ಮಾಡಿ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡುದಕ್ಕೆ ಉದಾಹರಣೆಗಳಿವೆಯಾದರೂ ಸ್ತ್ರೀಯು ಭಕ್ತಿಯಿಂದಲೋ ಜ್ಞಾನದಿಂದಲೋ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡುದಕ್ಕೆ ಎಲ್ಲಿಯೂ ನಿದರ್ಶನಗಳು ದೊರೆಯುವುದಿಲ್ಲ. ಸಾವಿತ್ರಿಯೊಬ್ಬಳು ಮೃತ್ಯುವಿನಿಂದ ತನ್ನ ಪತಿಯ ಪ್ರಾಣವನ್ನು ಸೆಳೆದುಕೊಂಡು ಬಂದಳು. ಅರುಂಧತಿಯು ಪಾತಿವ್ರತ್ಯಕ್ಕೆ ಆದರ್ಶ ಎನ್ನಿಸಿದಳು. ಮೈತ್ರೇಯಿಯು ಬ್ರಹ್ಮವಾದಿನಿಯೂ ಗಿದ್ದಳು. ಆದರೆ ದೈವ ಸಾಕ್ಷಾತ್ಕಾರವು ಸ್ತ್ರೀಯರಿಗೆ ಆವಶ್ಯಕವಾದ ವಿಚಾರವಾಗಿರಲಿಲ್ಲ. ಆಕೆಯು ಪತಿವ್ರತೆಯಾಗಿ ಬಾಳಲು ಶಾಸ್ತ್ರಕಾರರು ಹಲವು ನಿಬಂಧನೆಗಳನ್ನು ಅವರ ಮೇಲೆ ಹೇರಿದರು. ಸಾಲದುದಕ್ಕೆ ಅವರ ವೈಧವ್ಯ ದಿನಗಳಂತೂ ದುರಂತ ದುರ್ಭರವಾಗಿದ್ದುವು. ಪರಮಹಂಸರು ಇವುಗಳಲ್ಲಿ ಹಲವನ್ನು ಖಂಡಿಸಿ ಪುರುಷರಂತೆ ಸ್ತ್ರೀಯರಿಗೂ ದೈವ ಸಾಕ್ಷಾತ್ಕಾರವೇ ಪರಮ ಧ್ಯೇಯವೆಂದು ಸಾರಿದರು. ಸ್ತ್ರೀಯರೂ ಪುರುಷನಂತೆ ಸಾಧನೆ ಮಾಡಿ ದೈವಕೃಪೆಗೆ ಪಾತ್ರವಾಗಲು ಸಾಧ್ಯವಿದೆಯೆಂಬುದನ್ನು ಪ್ರತ್ಯಕ್ಷ ತೋರಿಸಿದರು. ಇವರ ಪತ್ನಿಯಾಗಿದ್ದ ಶ್ರೀ ಶಾರದಾ ದೇವಿಯವರು ಪರಮಹಂಸರಿಂದಲೇ ಅನೇಕ ಮಂತ್ರಗಳನ್ನು ಉಪದೇಶಹೊಂದಿ ಸಿದ್ಧಿ ಪಡೆದುದಲ್ಲದೆ ಅನೇಕ ಭಕ್ತರಿಗೆ ತಾವೂ ಮಂತ್ರೋಪದೇಶ ಮಾಡಿದರು. ಸ್ವಾಮಿ ವಿವೇಕಾನಂದರಂತಹ ಮಹಾ ವ್ಯಕ್ತಿಗಳೂ ಈ ಮಹಾ ತಾಯಿಯ ಮುಂದೆ ಆಧ್ಯಾತ್ಮಿಕ ಶಿಶುಗಳೆನ್ನಿಸಿದ್ದರು. ಶಾರದಾ ದೇವಿಯಂತಹ ಸಿದ್ಧ ವ್ಯಕ್ತಿಗಳು ಪುರಾಣ ಯುಗದಿಂದೀಚೆಗೆ—ಅಕ್ಕ ಮಹಾದೇವಿ, ಗಿರಿಯಮ್ಮ, ಮೀರಾ ಬಾಯಿ ಮೊದಲಾದವರನ್ನು ಬಿಟ್ಟು—ಹಲವರು ಜನಿಸಲಿಲ್ಲ. ಆ ಪ್ರಾತಃ ಸ್ಮರಣೀಯರೂ ಪುರುಷ ಸಮಾಜದಿಂದ ಹಿಂಸೆಗೊಳಪಟ್ಟುದನ್ನು ಯೋಚಿಸಿದರೆ ಅಂದು ಸ್ತ್ರೀಗೆ ಸಾಕ್ಷಾತ್ಕಾರ ಮಾರ್ಗದಲ್ಲಿ ಸಾಕಷ್ಟು ಪ್ರೋತ್ಸಾಹವಿಲ್ಲವೆಂದೇ ತೋರುತ್ತದೆ. ಪರಮಹಂಸರು ಆ ನಿರ್ಬಂಧವನ್ನು ಕಿತ್ತೊಗೆದು ಸ್ತ್ರೀ ಸಮಾಜಕ್ಕೆ ಆಧ್ಯಾತ್ಮಿಕ ಸಾಧನೆಯನ್ನು ಮಾಡಲು ಚೆನ್ನು ಚಪ್ಪರಿಸಿದರು. ಇವರ ಈ ಸಂಪ್ರದಾಯವನ್ನು ಶ್ರೀ ರಾಮಕೃಷ್ಣ ಸಂಘದ ಇಂದಿನ ಸನ್ಯಾಸಿಗಳು ಇಂದೂ ಮುಂದುವರಿಸಿದ್ದಾರೆ. ಪ್ರತಿ ವರ್ಷ ನೂರಾರು— ಸಾವಿರಾರು ಸ್ತ್ರೀಯರು ದೇಶದಲ್ಲಿ ಈ ಸಂಘದ ಪರಮ ಪೂಜ್ಯ ಸನ್ಯಾಸಿಗಳಿಂದ ದೀಕ್ಷೆ ಪಡೆಯುತ್ತಿದ್ದಾರೆ. ಇದು ಸ್ತ್ರೀ ಸಮಾಜವು ಎಂದೂ ಮರೆಯಲಾರದ ವಿಚಾರ.

(೨೫ನೇ ಪುಟ ನೋಡಿರಿ)

Prop· S. L· Shet

ಚೀನೀಯರನ್ನು ಹೊರದಬ್ಬುವ ವರೆಗೆ
ನಾವು ವಿರಮಿಸುವುದಿಲ್ಲವೆಂಬುದೇ
ಪ್ರಜಾರಾಜ್ಯ ದಿನದ ನಮ್ಮ ಪ್ರತಿಜ್ಞೆಯಾಗಲಿ!

ಎಸ್. ಎಲ್. ಶೇಟ್
ಡಯಮಂಡ್ ಹೌಸ್
ಕೆ. ಎಸ್. ರಾವ್ ರೋಡು,
ಮಂಗಳೂರು - ೧.
Tele— 'GOLDKING'

*Greetings from:*

**Mangalore Hardware Stores**

*SOLE DISTRIBUTORS:*

**THE MYSORE LAC & PAINT WORKS, LTD., MYSORE.**

MARKET ROAD, MANGALORE-1.

# ಭಾರತೀಯರ ವ್ರತದಿನ

ಸರ್ವತಂತ್ರ ಸ್ವತಂತ್ರವೆನಿಸಿದ ಪ್ರಜಾಪ್ರಭುತ್ವ ಘೋಷಣೆಯ ದಿನ ನಮಗೊಂದು ಪರ್ವದಿನ; ಸ್ವಾತಂತ್ರ್ಯ ರಕ್ಷಣೆಯನ್ನು ಪ್ರತಿಫಲಿಸುವ ವ್ರತದಿನ ಅದು. ಜತೆಗೆ, ದೇಶದ ಗೌರವ, ಸಮಗ್ರತೆ ಮತ್ತು ರಕ್ಷಣೆಯ ಭೀಷ್ಮ ಪ್ರತಿಜ್ಞೆಯು ಎಷ್ಟು ಕೃತಕಾರ್ಯವಾಗಿದೆಯೆಂದು ನೋಡುವ ಪರಿಶೀಲನಾ ದಿನವೂ ಹೌದು.

ಬರೆದವರು: ಶ್ರೀ ಮಾದರಬೆಟ್ಟು ರಂಗ ರಾವ್

### ನೋಟವೇ ಬೇರೆ

"ಇದ್ದುದರಲ್ಲಿ ತೃಪ್ತಿಪಟ್ಟುಕೊಂಡಿರುವುದೇ ಸಂತೋಷ. ಸುಮ್ಮನೆ ಕೈಲಾಗದ್ದಕ್ಕೆಲ್ಲ ಆಸೆಪಟ್ಟುಕೊಂಡು ಒದ್ದಾಡುವುದೇಕೆ? ಮತ್ತೆ ಅದು ಸಿಕ್ಕಿಲ್ಲಾ ಅಂತ ವ್ಯಸನಪಡುವುದು ಬೇರೆ ಏಕೆ ಈ ಕರ್ಮ?" ಎಂದು ಕೈಲಾಗದ ಅಜ್ಜಿ ಅಜ್ಜಂದಿರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಕುರಿತು ಮಾತಾಡಿಕೊಳ್ಳುವುದುಂಟು. ಅದೊಂದು ನೀತಿವಾಕ್ಯವೂ ಹೌದು; ಹಿರಿಯರ ಬಾಯಿಯಿಂದ ಹೊರಟ ಅನುಭವದ ಮಾತೂ ನಿಜ. ಹಾಗೆಂದು ಅದನ್ನೇ ಎಲ್ಲರೂ ಅನುಸರಿಸಿದ್ದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕುತಿತ್ತೆ?

ಏಕೆಂದರೆ ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಕೂಡಾ ಈ ಧೋರಣೆಯಲ್ಲೇ ಅನೇಕರು ಮಾತಾಡಿಕೊಂಡಿದ್ದಾರೆ. "ಸೂರ್ಯನೇ ಅಸ್ತಮಿಸಲು ಹೆದರಿಕೊಳ್ಳುವ ಆ ಬ್ರಿಟಿಷ್ ಚಕ್ರಾಧಿಪತ್ಯವೆಲ್ಲಿ, ಹೆಂಗುಸರ ಹಾಗೆ ಸತ್ಯಾಗ್ರಹ ಮಾಡುವ ಈ ಭಾರತ ದೇಶದ ಪ್ರಜೆಗಳೆಲ್ಲಿ? ಸ್ವಾತಂತ್ರ್ಯವೂ ಇಲ್ಲ, ಸ್ವರಾಜ್ಯವೂ ಇಲ್ಲ. ಇದ್ದುದಕ್ಕೆ ತೃಪ್ತಿಪಟ್ಟುಕೊಂಡು ಬ್ರಿಟಿಷ್ ಚಕ್ರಾಧಿಪತ್ಯವೆಂಬ ಕೊಡೆಯ ನೆರಳಿನಲ್ಲಿ ಶಿವನೇ ಅಂತ ಕುಳಿತುಕೊಳ್ಳುವುದನ್ನು ಬಿಟ್ಟು ಏಕೆ ಈ ಜನತೆಯ ಹುಚ್ಚು ಬೊಬ್ಬೆ?" ಎಂದು ಹಳಿದ ಪಂಗಡಗಳಿಗೇನೂ ಕಡಮೆಯಿಲ್ಲ; ಪೂಜ್ಯ ಬಾಪೂಜಿಯನ್ನು ಬಯ್ದ ಬಾಯಿಗಳೂ ಕಡಮೆಯೇನಲ್ಲ.

ಆದರೇನಾಯಿತು? ಜನತೆಯ ಅತೃಪ್ತಿ ಬೃಹತ್ ಶಕ್ತಿಯಾಗಿ ಕೊನೆಗೂ ಸ್ವರಾಜ್ಯ ಬಂದೇಬಿಟ್ಟಿತು. ಬಂದು ಹದಿನಾಲ್ಕು ವರ್ಷಗಳೂ ತುಂಬಿವೆ. ಭಾರತಮಾತೆಯ ಪುತ್ರರತ್ನ ನೆಹರೂ ನಾಯಕತ್ವದಲ್ಲಿ ಪಂಚವಾರ್ಷಿಕ ಯೋಜನೆಗಳ ಸರಣಿಯಲ್ಲಿ ಹಂತ ಹಂತವಾಗಿ ಇಲ್ಲಿ ಕ್ರಮಾಭಿವೃದ್ಧಿಯೂ ಪ್ರಾರಂಭವಾಗಿದೆ. ಇದನ್ನು ಎಲ್ಲರೂ ನೋಡುತ್ತಿರುವುದು ಒಂದು ದೃಷ್ಟಿಯಿಂದಾದರೆ ನೆರೆಯಲ್ಲಿರುವ ಚೀನಾ ದೇಶವು ಭಾರತವನ್ನು ನೋಡಿದ ದೃಷ್ಟಿಯೇ ಬೇರೊಂದು; ಹದಿನಾಲ್ಕು ವರ್ಷಗಳವರೆಗೂ ಆಸೆಯಿಂದ ಬಾಯಲ್ಲಿ ಜೊಲ್ಲಿಳಿಸಿಕೊಂಡೇ ನೋಡುತಿತ್ತು.

### ನೀತಿಯೇ ಬೇರೆ

ಚೀನಾದೊಳಗೆಲ್ಲಾ ಪ್ರಬಲವಾಗಿರುವ ಬುದ್ಧ ಮತಕ್ಕೆ ಆದಿ ಪುರುಷನಾದ ಭಗವಾನ್ ಬುದ್ಧನ ಜನ್ಮ ಭೂಮಿಯಾದ ಈ ಭಾರತವನ್ನು ಚೀನಾ ದೇಶವು ಬಹಳ ಗೌರವದಿಂದಲೇ ನೋಡಿಕೊಂಡು ಬಂದಿತ್ತು. ಫಾಹಿಯಾನ್, ಹ್ಯೂಯೆನ್‌ತ್ಸಾಂಗ್ ಮೊದಲಾದ ಚೀನಾದೇಶದ ಬೌದ್ಧ ಯಾತ್ರಿಕರು ಪೂಜ್ಯ ಭಾವದಿಂದ ಈ ದೇಶದೊಳಗೆ ಯಾತ್ರೆಮಾಡಿ ಹೋಗಿದ್ದಾರೆ. ಹಾಗೆಯೇ ಚೀನಾ ಎಂಬ ಹೆಸರೂ ಕೂಡ ನಮ್ಮಲ್ಲಿ ಮನೆಮಾತಾಗಿ ಹೋಗಿದೆ. ಪಟ್ಟೆ ಪೀತಾಂಬರಗಳಿಗೆ ಹೆಸರಾದುದು ಚೀನಾಂಬರಗಳೇ. ಚೀನೀ ಸಕ್ಕರೆ ಬಹಳ ಸವಿ. ಚೀನಾ ಕಲ್ಲುಸಕ್ಕರೆ ಔಷಧ ಅನುಪಾನಗಳಿಗೆ ಬೇಕು. ಅಂತೆಯೇ ಚೀನಾ ದೇಶವೆಂಬುದು ನಮಗೊಂದು ಭಾರೀ ದೂರದ ಸಂಬಂಧವೇ ಇಲ್ಲದ ಅಪರಿಚಿತ ದೇಶವೆಂದು ತೋರುವುದಿಲ್ಲ. ಅದೊಂದು ಕೆಟ್ಟ ದೇಶವೆಂದು ಯಾರೂ ಹೇಳಿದ್ದಿಲ್ಲ.

ಹೀಗಿದ್ದೂ ಆ ಚೀನಾ ಸಾಮ್ರಾಜ್ಯವು ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಲೆಳಸಿದ್ದು ಆಶ್ಚರ್ಯವಲ್ಲವೆ? ಎಷ್ಟೋ ವಿಶ್ವಾಸದಿಂದಿದ್ದು, ಸ್ನೇಹಿತನಂತಿದ್ದು, ಪಂಚಶೀಲ, ಧರ್ಮ, ನ್ಯಾಯ ಮುಂತಾದ ಉನ್ನತ ತತ್ವಗಳಿಗೆ ತಲೆವಾಗಿಕೊಂಡಿದ್ದು, ಸವಿ ಸವಿಯಾಗಿ ಮಾತಾಡಿಕೊಂಡಿದ್ದು ಹೀಗೆ ಸಮಯ ಸಾಧಿಸಿ ದುರಾಕ್ರಮಣ ಮಾಡುವುದೆಂದರೆ ಅಲ್ಲಿನ ನಾಯಕರು ಏನೆಂದು ನೀತಿಯ ಅರ್ಥವನ್ನು ಮಾಡಿಕೊಂಡಿರಬಹುದು?

ಇದ್ದುದರಲ್ಲೇ ತೃಪ್ತಿಪಟ್ಟುಕೊಂಡಿರದೆ ನಾವು ಸ್ವರಾಜ್ಯ ಪಡೆದುಕೊಂಡೆವಲ್ಲವೆ? ಇದೇ ನೀತಿಯನ್ನು ಅವರೂ ಅನುಸರಿಸಿದರೆನ್ನೋಣವೆ? ಹೌದು. "ಇದ್ದುದರಲ್ಲೇ ತೃಪ್ತಿಪಟ್ಟುಕೊಂಡಿರುವುದು ಬಲಹೀನರ ಮಾತು. ಅದೊಂದು ದೌರ್ಬಲ್ಯ. ಅಂತೆಯೇ ಬೇರೆ ಬೇರೆ ದೇಶಗಳನ್ನು ಆಕ್ರಮಿಸಿಕೊಳ್ಳುವುದೇ ಪೌರುಷದ ಗುರುತು. ತಪ್ಪೇನು? ಬಲವಿಲ್ಲದವನು ಬಲವಿದ್ದವನ ಅಡಿಯಾಳಾಗಿರಬೇಕಾದ್ದೇ ಲೋಕರೀತಿ ಮತ್ತು ನೀತಿ. ಈ ನೀತಿಯನ್ನು ಅನುಸರಿಸುವ ವಿಷಯದಲ್ಲಿ ಭಾರತಕ್ಕೆ ವಿಶಾಲ ದೃಷ್ಟಿ ಸಾಲದು. ಅದೇನೋ ತಾನು ಸ್ವಾತಂತ್ರ್ಯವನ್ನು ಪಡೆದುಕೊಳ್ಳುವಷ್ಟರಲ್ಲಿಯೇ ಆಯಿತೆಂಬ ತೃಪ್ತಿಯಿಂದ ಸುಮ್ಮನಾಯಿತು. ಅದನ್ನು ನಾವೇಕೆ ಆಕ್ರಮಿಸಿಕೊಳ್ಳಬಾರದು?" ಹೀಗೆ ಅಲ್ಲಿಯ ನಾಯಕರು ಭಾವಿಸಿರಬೇಕು. ಆತ್ಮಸಾಕ್ಷಿಗೆ ಗೌರವಕೊಟ್ಟು ಲೋಕ ನ್ಯಾಯಕ್ಕೆ ತಲೆವಾಗಿ ಕೊಂಡಿರುವ ನೆರೆಯ ಭಾರತವನ್ನು ದುರಾಕ್ರಮಣ ಮಾಡಿಕೊಳ್ಳುವ ಕುತ್ಸಿತ ಬುದ್ಧಿ ಅದಕ್ಕೆ ಬಂದು ಬಿಟ್ಟಿತು.

"ಇದ್ದುದರಲ್ಲೇ ತೃಪ್ತಿ" ಎಂಬ ನ್ಯಾಯಕ್ಕೆ ಭಾರತದ ನಾಯಕರು ಹಚ್ಚಿಕೊಂಡ ಅರ್ಥ ಬೇರೆ; ಚೀನಾ ನಾಯಕರು ಹಚ್ಚಿಕೊಂಡ ಅರ್ಥ ಬೇರೆ. ನಮ್ಮ ಮನೆ, ನಮ್ಮ ಸೊತ್ತು, ನಮ್ಮ ದೇಶ ನಮ್ಮದಾಗಿರಬೇಕು; ಇನ್ನೊಬ್ಬರದಕ್ಕೆ ನಾವು ಆಸೆಪಡಬಾರದು, ಎಂಬ ನ್ಯಾಯ ತಳಹದಿ

(೨೪ನೇ ಪುಟ ನೋಡಿರಿ)


## CANARA SPRINGS

**We have many competitors but no rivals**

**We have many competitors -- But no rivals**

**Yes, that is right.**

**There are springs and Springs but**

## CANARA SPRINGS

**Stand out because they are the only Springs in India manufactured under Scientific quality control to Guarantee Longer Life.**

*Manufacturers*

**THE CANARA WORKSHOPS LTD.**

**MANGALORE-3.**

# ಹೂರಣವೇ ಇಲ್ಲದ ಹೋಳಿಗೆ ಹಬ್ಬ

ಹಬ್ಬವೆಂದೊಡನೆ ಹೋಳಿಗೆ, ಹೋಳಿಗೆಗೆ ಹೂರಣ ಬೇಕು ಎಂಬುದು ಎಲ್ಲರಿಗೂ ಗೊತ್ತು. ಹೂರಣವಿಲ್ಲದ ಹೋಳಿಗೆಯೂ ಇದ್ದ ಹೋಳಿಗೆಗಿಂತಲೂ ಸವಿಯೆಂಬುವಕ್ಕೆ ಶ್ರೀ ಹುರುಳಿಯವರ ಲೇಖವೊಂದು ನಿದರ್ಶನ.

ಬರೆದವರು: ಶ್ರೀ ಹುರುಳಿ ಭೀಮರಾಯರು

ಇದೇ ಸಂವತ್ಸರದ ದೀಪಾವಳಿ ಹೊತ್ತಿಗೋ ಅನಂತರ ಮಕರ ಸಂಕ್ರಾಂತಿ ಕಳೆದ ಒಂದೆರಡು ವಾರಗಳಲ್ಲಿಯೋ ಒಂದು ಕೆಟ್ಟ ಗ್ರಹದ ದೃಷ್ಟಿ ನಿಮ್ಮ ಮೇಲೆ ಬಿದ್ದೀತು—ಹಾಗೆಂದು ನನ್ನ ಜೋಯಿಸ ಮಿತ್ರರೊಬ್ಬರು ಬರೇ ನನ್ನ ನಕ್ಷತ್ರ ಕೇಳಿ ಹೇಳಿದ್ದರು. ದೀಪಾವಳಿ ಬಂತು; ಹೋಯಿತು. ದೃಷ್ಟಿ ತಾಕಲಿಲ್ಲ ಅದನ್ನು ನಾನು ಅನುಮಾನಿಸಿದ್ದು ಹ್ಯಾಗೆ, ಗೊತ್ತೆ? ಕವಿ ಕಲ್ಪನೆಯಿಂದ. ಕವಿಯಂತೆ ನಾನೂ ಒಂದು ಪ್ರಶ್ನೆಯನ್ನು ಕಲ್ಪಿಸಿಕೊಂಡೆ—ನನ್ನಷ್ಟಕ್ಕೆ. ಅದೆಂದರೆ—ದೃಷ್ಟಿ ತಾಕಿದ್ದರೇನಾಗುತ್ತಿತ್ತು? ಎಂಬುದು. ಅದಕ್ಕೆ ಉತ್ತರವನ್ನೂ ನಾನೇ ಕಲ್ಪಿಸಿಕೊಂಡೆ. ಏನು? ದೀಪಾವಳೀ ವಿಶೇಷಾಂಕಕ್ಕೆ ವಿಶೇಷವೇನೂ ಅಲ್ಲದ ಸಾಮಾನ್ಯವಾದರೂ ಆದ ತಮ್ಮ ಒಂದು ಲೇಖನವನ್ನು ಈ ಪತ್ರ ತಮಗೆ ತಲುಪುವಷ್ಟರಲ್ಲೇ ಜರೂರಾಗಿ (ಸಾಧ್ಯವಾದರೆ) ಎರಡು ಕೈಯಿಂದಲೂ ಬರೆದು "ಎಕ್ಸ್‌ಪ್ರೆಸ್ ಟೆಲಿಗ್ರಾಮ್"ನಷ್ಟೆ ಜರೂರಾಗಿ ರವಾನಿಸುವಂತೆ ಆ ಪತ್ರಿಕಾಲಯದವರು ನನಗೊಂದು ಪತ್ರ ಬರೆಯುವ ಸಂಭವವಿರುತ್ತಿತ್ತು; ಆ ಸಂಚಿಕೆ ಹೊರಬೀಳುವ ಮುನ್ನಾ ದಿನ ಶನಿವಾರವೆಂದಾಗಿ ಆ ಪತ್ರ ಆ ರಾತ್ರಿ ಜರೂರು ಬಟವಾಡೆಗಾಗಿಯೇ ಇಲ್ಲಿಗೆ ತಲುಪುವಂತಾಗಿದ್ದರೆ, ಆದು ಮರು ದಿನ ಆದಿತ್ಯವಾರ ರಜೆ ಎಂದು ಅಂಚೆಯವರಲ್ಲಿಯೇ ಉಳಿಸಿ ಮರು ದಿನ ಸೋಮವಾರ ಬೆಳಗ್ಗೆ ಎಷ್ಟು ಹೊತ್ತಿಗೋ ಎಚ್ಚರಗೊಂಡು ಆ ಮಧ್ಯಾಹ್ನ ಎಷ್ಟು ಹೊತ್ತಿಗೋ ನನ್ನ ಕೈಸೇರುತ್ತಿತ್ತು. ಗ್ಯಾರಂಟಿ—ಅನ್ನುವ ಹಾಗೆ.

ಮೇಲ್ಕಂಡ ತರ್ಕಗಳಲ್ಲಿ ನನ್ನ 'ಕವಿ ಕಲ್ಪನೆ' "ಕಪಿ ಕಲ್ಪನೆ"ಗೂ ಕಡೆಯಾಗಿ ಹೋಯ್ತು. ಮತ್ತೆ ಈ ಸಲ ಉಡುಪಿ ಪರ್ಯಾಯವೂ ಇಲ್ಲ. ಆವಿರುತ್ತಿದ್ದರೆ ಅದರ ನೆನಪಿಗಾಗಿ—ಕವಿ ಅಥವಾ—ಕಪಿ ಹೊಂದುವಂತೆ ಇನ್ನೂ ಆಲೋಚನೆಯಲ್ಲೇ ಇದ್ದ ಆ 'ವಿಶೇಷ' ಸಂಚಿಕೆಗಾಗಿ ನಾಳೆಯಾದರೂ ಬರೆಯಬೇಕೋ ಬೇಡವೋ ಅನ್ನುವಂಥ, ಒಂದು ಎಂಥವಾದರೂ ಲೇಖನವನ್ನು ಈ ಪೋಸ್ಟೇ ರವಾನಿಸಿಬಿಡುವಂತೆ ನನಗೆ ಮೂರು ಕಾಗದ ಎರಡು ಜ್ಞಾಪಕ ಪತ್ರ ಅದರ ಮೇಲೊಂದು ಟೆಲಿಗ್ರಾಮ್ ಕೂಡ ಬರುವುದು ಅಸಂಭವವಲ್ಲದ ಸಂಭವನೇ ಆಗುತ್ತಿತ್ತೆಂದು ಹೇಳಬಲ್ಲೆ. ಹ್ಯಾಗೂ ಅವೆರಡು ಸಂಚಿಕೆಗಳನ್ನು ಸ್ವಾಗತಿಸುವ ಭಾಗ್ಯ ನನಗೂ ನನ್ನಂಥವರ ಲೇಖನ ಪ್ರಕಟಿಸುವ ಸುಯೋಗ ಅವಕ್ಕೂ ಇಲ್ಲದೆ ಹೋಯಿತೆಂದು ಅಲ್ಲಿಗೇ ಸುಮ್ಮಗಾದೆ.

ಹಾಗಿದ್ದಾಗ ಬಂತಯ್ಯ ನನಗೊಂದು ಕಾಗದ. ಅದರಲ್ಲಿ ಮೊದಲು ನಾನು ಓದಿಕೊಂಡದ್ದು ನನ್ನ ಹೆಸರು ವಿಳಾಸ ಯಾಕೆನ್ನುತ್ತೀರೋ? ನಮ್ಮ ಕಡೆ ಬೀದಿ ಬಟವಾಡೆಗೊಬ್ಬ ಅಂಚೆ ಜವಾನ. ಅವನಿಗೊಂದು ಅಭ್ಯಾಸ. ಕೈಗೆ ಬಂದ ಕಾಗದ ಪತ್ರದ ವಿಳಾಸ ಸರಿಯಾಗಿ ನೋಡಿಕೊಳ್ಳದೆ ಇದ್ದ ಹೊತ್ತನ್ನೆಲ್ಲ ಹತ್ತು ಸಮಸ್ತರ ಕಾಸೀ ಹೊಟ್ಟೆನ ಪಂಚಾಯ್ತಿ ರಾಜ್ಯದಲ್ಲಿ ಕಳೆದು ಕೊನೆಗೆ ಹೊತ್ತಾಯಿತೆಂಬ ಅವಸರದಲ್ಲಿ ಕಾಗದ ಒಬ್ಬರದೊಬ್ಬರಿಗೆ—ಶ್ಯಾಮರಾಯರದು ಸೋಮಣ್ಣ ಭಟ್ಟರಿಗೆ.

ಆದರೆ ಇತರ ಪೋಸ್ಟ್‌ಮ್ಯಾನರ ನಡುವೆ ಈತನನ್ನು ಗುರುತಿಸುವುದೇನೂ ಕಷ್ಟವಾಗಲಿಲ್ಲ. 'ಟ್ರೇಡ್ ಮಾರ್ಕ್' ಎನ್ನುವಂತೆ ಗರುಡ ದೇವರು ತನ್ನ ಮೂಗನ್ನು ಯಾರಿಗೆ ಎರವಾಗಿ ಕೊಟ್ಟ ಹಾಗಿತ್ತೋ ಹಾಗಿದ್ದವನೇ ಈತ. ಮತ್ತವನೇ ನನಗಾ ಪತ್ರ ತಂದುಕೊಟ್ಟದ್ದರಿಂದ ನನಗೋ ಇತರರಿಗೋ ಎಂಬ ಸಂಶಯದಿಂದ ಆ ಪತ್ರವನ್ನು ಮೂರು ಮೂರು ಸಲ ತಿರುಗಿ ಮುರುಗಿಸಿ (ಗೋಕರ್ಣದ ವರೆಗಿನ ವ್ಯಾಕರಣ ಪಂಡಿತರು 'ರೂಪರೇಖೆ'ಗೆ ಬದಲು 'ರೂಪರೇಷೆ' ಎಂಬ ಪದ ಪ್ರಯೋಗವನ್ನು ಮನ್ನಿಸುವಂತೆ ತಿರುಗಾ ಮುರುಗಾ ನೋಡಿ' ಎನ್ನುವುದರ ಬದಲಿನ ಈ 'ತಿರುಗಿ ಮುರುಗಿಸಿ' ಎಂಬ ಪತ್ರಿಕೆಯ ಈ ಹೊಸ ಪ್ರಯೋಗವನ್ನೂ ಮಂಜೂರು ಮಾಡಲಿ) ನೋಡಿಕೊಂಡೆ.

ಆ ಮೇಲೆ ನಾನು ವಿಚಾರಿಸಿಕೊಂಡದ್ದು ಇದೆಲ್ಲಿಂದ ಯಾರಿಂದ ಎಂಬುದು. ಅದು ಉಡುಪಿ 'ನವಯುಗ' ವಾರಪತ್ರಿಕಾ ಕಚೇರಿಯದು ಎಂದಾಗ ತಿಳಿಯಿತು. ಅದರಲ್ಲಿ ಮುಂದೆ ಹೋದಂತೆ ಕಂಡಿತು— ಯಥಾಪ್ರಕಾರ "ವಿಶೇಷ ಸಂಚಿಕೆ"! ಅಷ್ಟೇನೇ? "ಪ್ರಜಾರಾಜ್ಯದ ಆ ಸಂಚಿಕೆಗೆ ತಮ್ಮದೊಂದು ಲೇಖನ ಕಳುಹಿಸಿ ಕೊಡಿ" ಇದು ಬೇರೆ ಒಗ್ಗರಣೆ. ಮುಖ್ಯ ಈ ವಿಶೇಷ ಸಂಚಿಕೆಗಳಿಗೂ ನನ್ನಂಥ ಲೇಖಕನ ಜಾತಕದ ಹಣೆಯಲ್ಲಿ ಬರೆದ ಕೆಟ್ಟ ಗ್ರಹದ ದೃಷ್ಟಿಗೂ ಏನೋ ಪರಸ್ಪರ ಸಂಬಂಧವಿದ್ದಿರಬಹುದು, ಅದೀಗ ನನಗೆ ತಾಕಿತು ಎಂದು ನಾನು ನಂಬುವಂತಾಯಿತೆನ್ನಿ.

ಇಷ್ಟಕ್ಕೆಲ್ಲ "ಲೇಖನ ಕಳುಹಿಸಿ" ಎಂದಿದ್ದರೆ ಸಾಲುತ್ತಿರಲಿಲ್ಲವೇ? ಅದರ ಜೊತೆಗೆ-'ಅಮೂಲ್ಯ'ವೂ ಸೌದಂ. ಇದು ಶುದ್ಧ ಗಿಲೀಟಿನ ಬಾಬು ಅಂದುಕೊಂಡೆ ಅಮೂಲ್ಯ ಎಂದರೆ ಬೆಲೆ ಇಲ್ಲದ್ದು ಎಂಬ ಅರ್ಥವೂ ಉಂಟು. ಅನ್ನುವಾಗ "ಬೆಲೆ' ಇಲ್ಲದಂಥ ಒಂದು ಲೇಖನವನ್ನು ನಾವು ಬೆಲೆ ಕೊಡದೆ ನೀವೇ ಪುಕಟೆಯಾಗಿ ಬರೆದು ಅದರ ರವಾನೆ ಬಗ್ಗೆ ಬೇಕಾದ ಟಪಾಲು ಖರ್ಚನ್ನೂ ನೀವೇ ಕೈಯಿಂದ ಹಾಕಿ ಕಳುಹಿಸಿ ಬಿಡಿ. ಮುಂದೆ ಆ ಸಂಚಿಕೆಯ ಪ್ರತಿಗಳನ್ನು ಬೆಲೆ ಇಟ್ಟೇ ನಾವು ಮಾರಾಟ ಮಾಡಿಕೊಳ್ಳುತ್ತೇವೆ" ಹ್ಯಾಗಿದೆ ನೋಡಿ ಬುದ್ಧಿವಂತರ ಲಕ್ಷಣ!

ಆದರೆ ಒಂದು ಸಮಾಧಾನ. ಹಿಂದೆ ಸಂಚಾರದ ವಾಹನವಾಗಿ ಎತ್ತಿನ ಗಾಡಿ ಮಾತ್ರವಿದ್ದಾಗ ದೂರದ ಬಂಧುಗಳಿಗೆ ಲಗ್ನ ಮುಹೂರ್ತವನ್ನು ಎರಡು ತಿಂಗಳ ಮುಂಚಿತವಾಗಿ ತಿಳಿಸುತ್ತಿದ್ದರು ಈಗ ವಿದೇಶದ ಮಹಾನುಭಾವರು ನಮ್ಮ ಸನ್ಮಾನ್ಯ ಅತಿಥಿಗಳಾಗಿ ಬರುತ್ತಾರೆ ಎಂದಾದರೆ ಆ ವಾರ್ತೆಯನ್ನು ಎರಡು ತಿಂಗಳ ಮೊದಲೇ ಪತ್ರಿಕೆಗಳು ಪ್ರಕಟಿಸುತ್ತವೆ. ಹಾಗೇ ಈ ಪತ್ರವೂ—ಅತ್ತ ಲೇಖಕರಿಗೆ ಕೊಟ್ಟ ನೋಟೀಸು, ಎರಡು ತಿಂಗಳ ಮೊದಲು-ಪತ್ರದ ತಾರೀಕು 24-11-62 ಸಂಚಿಕೆ ಪ್ರಕಟಣೆ 26—1—63. ಈ ಸರಾಸರಿ ಅರವತ್ತು ದಿನಗಳಲ್ಲಿ ದಿನಕ್ಕೆ ಒಂದು ಸಾಲಿನಂತೆ ಬರೆದು ಹೊಡೆದು ಬಡಿದು ಗುದ್ದಿ ಒದ್ದು ಕಿವಿ ಹಿಂಡಿ ಮತ್ತೆ ದನ್ನೇ ಅಲ್ಲಲ್ಲಿ ರಿಪೇರಿ ಮಾಡಿಕೊಂಡು ಆ ಕಚ್ಚಾ ಪ್ರತಿಯಿಂದ ಅಚ್ಚು ಪ್ರತಿ ತೆಗೆದರೂ ಕೂಡ ಅರವತ್ತು ಸಾಲಿನ ಒಂದು ಲೇಖನ ಮುಗಿಸಲಿಕ್ಕೆ ತುಳ. ನೂತನ ಯಾವ ದೇವ್ವ ಭೂತವೂ ಕನ್ನಡದ ನನ್ನ ಕೈತಡೆಯಲಾರದೆಂದೇ ಧೈರ್ಯ ಮಾಡಿಕೊಂಡೆ.

ಈ ಧೈರ್ಯದಲ್ಲಿ ಒಂದು ಸಣ್ಣ ಅಧೈರ್ಯ. ಈ ವಿಶೇಷಾಂಕದ ಲೇಖನಗಳಿಗೆ ಹೊಂದಿಕೊಳ್ಳುವಷ್ಟು ಒಳ್ಳೇ ದರದ ಜಾಹಿರಾತುಗಳನ್ನು ನಮ್ಮ ಸಂಪಾದಕರು ನಮ್ಮ ವಾಣಿಜ್ಯ ವರ್ಗ ಹಾಗೂ ಸಂಸ್ಥೆಗಳ 'ಧರ್ಮರತ್ನಾಕರ'ರ ಔದಾರ್ಯದಿಂದ ಏನಾದರೂ ಮಾಡಿ—ಕೊನೆಗೆ ಹೊಟ್ಟೆಯೊಳಗೆ ಹೊಕ್ಕು ಬಾಯಿಯಿಂದ ಹೊರಡುವಂಥ ಗೌಡ ಬಂಗಾಳಿ ವಿದ್ಯೆಯಿಂದಾದರೂ ಸಂಪಾದಿಸ ಬಲ್ಲರಾದರೆ ಅವರು ಗೆದ್ದ ಹಾಗೆ. ಹಾಗಲ್ಲದೆ ಹೋದರೆ ಇಂಥ ಸಂಚಿಕೆಯ ಶಾಸ್ತ್ರ ನದಂಥ ಒಂದು 'ಸುಖ ಪ್ರಾರಬ್ಧ' ಮುಂದೆ ಕಟ್ಟಿಕೊಳ್ಳಬೇಡಿ ಅಂತ ಹೇಳಿದರೆ ಅವರು ಕೇಳುವವರೇ? ಆ ನಂಬಿಕೆ ನನಗೆ ಎಳ್ಳಷ್ಟೂ ಇಲ್ಲ.

ಅಲ್ಲ—ಲೇಖನ ಬೇಕೆನ್ನುವಂಥವರು ಒಂದು ಕಾರ್ಡು, ಅದರಬದಲು ಹತ್ತರ ಕೂಡ ಹನ್ನೊಂದು ಅನ್ನುವಂತೆ, ಒಂದು ಮುದ್ರಣದ ಕಾರ್ಡ್ ನನಗೆ ಕಳುಹಿಸ ಬಹುದೇ? ಈ ಕಾರ್ಡ್ ಆ ಪೋಸ್ಟ್‌ಮ್ಯಾನ್ ಕೈ ತಪ್ಪಿ ಇನ್ಯಾರಿಗಾದರೂ ಕೊಟ್ಟು ಅವರು ಅದನ್ನು ಓದಿಕೊಂಡು ಈತ ಯಾವ ದೊಡ್ಡ ಲೇಖಕ ಇವನೇನು ಬರೆದಾನು ಕುಂಬಳ ಕಾಯಿ ಅಂತ ಹಾಸ್ಯ ಮಾಡಲಿಕ್ಕೆ ಅವಕಾಶವಾಗಿದ್ದರೆ ನನಗದರಿಂದ ಕೋಪ ಬಂದು ಸಂಪಾದಕರ ಕೂಡೆ ಜಗಳಕ್ಕೇ ನಿಲ್ಲಬೇಕಾಗುತ್ತಲ್ಲ! ನಾನೇನಾದರೂ ಗಹನವಾದ ವಿಷಯವನ್ನು ವ್ಯಾಸಂಗ ಮಾಡಿ ಉಕ್ಕಿನ ಕಡಲೆಯಂಥ ಲೇಖನಗಳನ್ನು ಬರೆಯ ಬೇಕೆಂದಾಗಿದ್ದರೆ ಸಂಪಾದಕರೇ ಸ್ವತಃ ತಮ್ಮ ಕೈ ಬರಹದಲ್ಲೊಂದು ಪತ್ರ ಬರೆದು ಫೋರ್ಜರಿ ಮಾಡಲಿಕ್ಕಾಗದಂಥ ತಮ್ಮ ದಸ್ಕತು ಹಾಕಿ ಅದನ್ನು ಒಂದು ಲಕ್ಕೋಟೆಯೊಳಗಿಟ್ಟು ನನಗೆ ಕಳುಹಿಸುತ್ತಿದ್ದರು ಅಲ್ಲವೇನು?

(೨೩ನೇ ಪುಟ ನೋಡಿರಿ)

ಫೋನ್ ಸಂಬ್ರ: ಟೆಲಿಗ್ರಾಮ್:
ಮೆನೆಜಿಂಗ್ ಡೈರೆಕ್ಟರ್: 19 "Hanumanco"
ಡೈರೆಕ್ಟರ್ ಇನ್‌ಚಾರ್ಜ ಆಫ ವರ್ಕ್ಸ: 19A ಪೋ ಬಾ. ನಂಬ್ರ 27

## ಜನತಾ ಸೇವೆಯೇ ಜನಾರ್ಧನನ ಸೇವೆ

ಮಧ್ವಪೀಠ ಉಡುಪಿ— ಐತಿಹಾಸಿಕ ದೇವಸ್ಥಾನಗಳಿಂದಲಂಕೃತ ಉಡುಪಿ— ಪ್ರಕೃತಿ ಸೌಂದರ್ಯ ಬೀಡಾದ ಉಡುಪಿ— ಅಷ್ಟಮಠಾಧಿಪತಿ ಭಜಕವೃಂದ ಪ್ರೀತಿಪಾತ್ರ ಶ್ರೀಕೃಷ್ಣನ ಉಡುಪಿ. ಅಂತಹ ಉಡುಪಿಯಲ್ಲಿ ಕಳೆದ 32 ವರ್ಷಗಳಿಂದ ಶ್ರೀಕೃಷ್ಣನ ಸಂದರ್ಶನಾರ್ಥವಾಗಿ ಬರುವಂಥ ಸಾವಿರಾರು ಜನರಿಗೆ ಸಾರಿಗೆ ಸೌಕರ್ಯವನ್ನೊದಗಿಸಿ ಜನತಾ ಸೇವೆಯನ್ನು ಗೈಯುತ್ತಿದೆ. ಶ್ರೀಕೃಷ್ಣನನ್ನು ಸಂದರ್ಶಿಸಿದವರು ಶ್ರೀಮನ್ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಸಾಗರ ಕಿನಾರೆಯಲ್ಲಿರುವ ವಡಭಾಂಡೇಶ್ವರ ಕ್ಷೇತ್ರ, ಪಾಜಕ ಕ್ಷೇತ್ರ, ದಕ್ಷಿಣ ಕನ್ನಡ ಜಿಲ್ಲೆಯ ಇನ್ನೂ ಪ್ರಕೃತಿ ಬೀಡಾಗಿ ಪ್ರಾಚೀನ ಕಾಲದ ಕ್ಷೇತ್ರಗಳಾಗಿರುವ ಶ್ರೀ ಕೊಲ್ಲೂರು ಮತ್ತು ಶ್ರೀ ಧರ್ಮಸ್ಥಳ ಗಳ ದರ್ಶನ ಪಡೆದು ಪಾವನರಾಗಲಿಚ್ಛಿಸುವ ಯಾತ್ರಿಕರ ಸೇವೆಗೆ ಸದಾ ಸಿದ್ಧವಿದೆ. ವಿದ್ಯಾರ್ಥಿವೃಂದಕ್ಕೆ ರಿಯಾಯ್ತಿ ದರದಲ್ಲಿ ಸೌಕರ್ಯವೊದಗಿಸುತ್ತಿದೆ.

## ದಿ ಹನುಮಾನ್ ಟ್ರಾನ್ಸ್‌ಪೋರ್ಟ ಕಂಪೆನಿ

ಪ್ರೈವೇಟ್ ಲಿಮಿಟೆಡ್

ಉಡುಪಿ

ಮೈಸೂರು ಸ್ಟೇಟ್

**ರುಚಿಗೆ!** **ಗುಣಕ್ಕೆ!!** **ತೃಪ್ತಿಗೆ!!!**

ಪ್ರತಿ ದಿನ ಒಂದಕ್ಕೆ

# ಎರಡು ಕೋಟಿಗೂ

## ಮೇಲ್ಪಟ್ಟು ಬೀಡಿಗಳ ತಯಾರಿಕೆಯಿಂದ

ದಕ್ಷಿಣ ಭಾರತದಲ್ಲೇ ಮೊದಲನೇ ಸ್ಥಾನವನ್ನು ಗಳಿಸಿರುವ,
ಭಾರತದ ಬೃಹತ್ ಉದ್ಯಮದ ಉತ್ಪನ್ನಗಳು




ಪ್ರಧಾನ ಕಛೇರಿ:

## ಮಂಗಳೂರು ಗಣೇಶ ಬೀಡಿ ವರ್ಕ್ಸ್

### ಸಂತೇಪೇಟೆ, ಮೈಸೂರು

*Telegrams:* **'AROMA'** *Telephone:* **421**

# ಬಂಕಿಮಚಂದ್ರನ ಕಾದಂಬರಿಗಳು

ಬಂಗಾಳಿ ಸಾಹಿತ್ಯದ ಸಾಮ್ರಾಟ ಬಂಕಿಮಚಂದ್ರನ ಕಾದಂಬರಿಗಳು ಆಧುನಿಕ ಭಾರತೀಯ ಸಾಹಿತ್ಯ ಪಥದಲ್ಲಿ ಮುಖ್ಯ ಮೈಲುಗಲ್ಲುಗಳು. ಅವುಗಳ ಸಂಕ್ಷಿಪ್ತ ವಿವೇಚನೆಯು ಕನ್ನಡ ಸಾಹಿತ್ಯಾಭಿವೃದ್ಧಿಗೆ ಪೋಷಕವಾಗದಿರದು.

**ಬರೆದವರು: ಯು. ನಾ. ಉಡುಪ, ವಿದ್ವಾನ್.**

ವಂಗ ಭಾಷೆಯು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಮಾಗಧಿ ಮತ್ತು ಶೌರಸೇನಿಯ ಅಪಭ್ರಂಶಗಳಿಂದ ಹುಟ್ಟಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದು ಭಾರತದ ಪ್ರಸಿದ್ಧವಾದ ಹದಿನಾಲ್ಕು ಭಾಷೆಗಳಲ್ಲಿ ಒಂದೆನ್ನಿಸಿದೆ. ಇಂದು ಈ ಭಾಷೆಯನ್ನು ಸು. ಎರಡೂವರೆ ಕೋಟಿಗಿಂತ ಹೆಚ್ಚು ಮಂದಿ ಮಾತಾಡುತ್ತಿದ್ದಾರೆ. ಸು. ಒಂದು ಶತಮಾನದ ಕೆಳಗೆ ಈ ಭಾಷೆಯ ಸಾಹಿತ್ಯದಲ್ಲಿ ಕ್ರಾಂತಿಯಾಗಿ, ಫಲಿತಾಂಶವಾಗಿ ಇದು ಭಾರತದ ಸಮಸ್ತ ಭಾಷೆಗಳಲ್ಲೂ ಪ್ರಧಾನ ಸ್ಥಾನವನ್ನು ಪಡೆಯಿತು. ಬಂಕಿಮನ ಕಾಲವೊಂದು ವಂಗ ಭಾಷೆಯ ಸ್ವರ್ಣಯುಗ. ಸುವಿಖ್ಯಾತ ಲೇಖಕನಾದ ಬಂಕಿಮನ ಕಾಲದಲ್ಲೇ ವಂಗ ಸಾಹಿತ್ಯವು ಹಲವು ಸುಪ್ರಸಿದ್ಧ ಲೇಖಕರಿಂದ ಸೇವೆ ಪಡೆದು ಅಜರಾಮರವಾಯಿತು. ಮೈಕೇಲ್ ಮಧುಸೂದನದತ್ತ, ಗಿರೀಶ ಚಂದ್ರಘೋಷ, ದ್ವಿಜೇಂದ್ರಲಾಲರಾಯ ಮೊದಲಾದವರು ಆ ಕಾಲದ ಆ ಸಾಹಿತ್ಯದ ಜ್ವಲಂತ ಜ್ಯೋತಿಗಳು! ಬಂಕಿಮನು ತನ್ನ ಸಮಕಾಲೀನರಾದ ಈ ಸಾಹಿತಿಗಳೆಲ್ಲರ ಮುಂಬಾಯ.ಶೋಪಂಕನು, ಆತನ ಕಾದಂಬರಿಗಳು ಆತನಿಗೆ ಭಾರತದ ವಾಲ್ಟರ್ ಸ್ಕಾಟ್ ಎನ್ನುವ ಹೆಸರನ್ನು ತಂದವು. ಕ್ರಿ. ಶ. ೧೯೩೮ರಲ್ಲಿ ಬಂಗಾಳವು ಆತನ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಆಗ ವಂಗೀಯ ಸಾಹಿತ್ಯ ಪರಿಷತ್ತು ಬಂಕಿಮನ ಬರಹಗಳನ್ನೆಲ್ಲಾ ಸಂಗ್ರಹಿಸಿ ಪರಿಷ್ಕರಿಸಿ ಸೀರಿಕೆಯೊಡನೆ ಒಂಬತ್ತು ದೊಡ್ಡ ಸಂಪುಟಗಳಾಗಿ ಪ್ರಕಟಿಸಿತು. ಇವುಗಳೆಲ್ಲಾ ಒಟ್ಟು ೩೮೦೦ ಪುಟಗಳಷ್ಟಿವೆ. ಇವುಗಳಲ್ಲಿ ಅರ್ಧಾಂಶ ಕಾದಂಬರಿಗಳು; ಉಳಿದರ್ಧ ಗದ್ಯಪದ್ಯ ಪ್ರಬಂಧಗಳು. ಇವನು ತನ್ನ ಸರಕಾರೀ ಉದ್ಯೋಗದ (ಕಲೆಕ್ಟರ್) ನಡುವೆ ಅಪಾರವಾದ ವಂಗ ಸಾಹಿತ್ಯದ ಸೇವೆಯನ್ನು ಮಾಡಿದುದನ್ನು ಕಂಡರೆ, ಈತನಿಗಿದ್ದ ಭಾಷಾಭಿಮಾನ ಮತ್ತು ಪ್ರತಿಭೆಯು ವ್ಯಕ್ತವಾಗುತ್ತದೆ. ಈತನ ಕಾಲದಲ್ಲೇ ಈಶ್ವರಚಂದ್ರ ವಿದ್ಯಾಸಾಗರ, ತಾರಾನಾಥ ತರ್ಕವಾಚಸ್ಪತಿ—ಇವರಂತಹ ಉದ್ದಾಮ ವಿದ್ವಾಂಸರಿದ್ದರೂ ಸಾಮಾನ್ಯ ಜನರ ಮತ್ತು ಪಂಡಿತ ಪ್ರವರರ ಮನೋಹಾರಿಯಾದ ಸರಸ ಕಾದಂಬರಿಗಳನ್ನು ಬರೆಯುವುದರಲ್ಲಿ ಬಂಕಿಮನದು ಮಾತ್ರ ಎತ್ತಿದ ಕೈ. ಅವನ ಕಾದಂಬರಿಗಳೆಲ್ಲಾ ಅವನ ಜೀವಿತ ಕಾಲದಲ್ಲೇ ಎಂಟು-ಹತ್ತು ಮುದ್ರಣಗಳನ್ನು ಕಂಡವು! ಕಲ್ಕತಾ ರಿವ್ಯೂ ಪತ್ರಿಕೆಯು—'ಇಂದು ವಿಷವೃಕ್ಷವೆಂಬ ಅತ್ಯುತ್ಕೃಷ್ಟ ಸಾಮಾಜಿಕ ಕಾದಂಬರಿಯು ಪ್ರತಿಯೊಬ್ಬ ಬಂಗಾಳಿ ಬಾಬುವಿನ ಬೈಠಕ್‌ಖಾನೆಯಲ್ಲೂ ಇದೆ. ಇದರಲ್ಲಿ ಬರುವ ಪಾತ್ರಗಳೆಲ್ಲಾ ಸಹಜತೆಯ ಪರಮಾವಧಿಯಲ್ಲಿವೆ......' ಎಂದಿದೆ. ಬಂಕಿಮನು ಜೀವಿತ ಕಾಲದಲ್ಲೇ ತನ್ನ ಕಾದಂಬರಿಗಳಿಂದ ಪಡೆಯುವಷ್ಟು ಹೆಸರು ಮತ್ತು ಸಂಪತ್ತನ್ನು ಪಡೆದಿದ್ದನು. ಮೈಕೇಲ್ ಮಧುಸೂದನದತ್ತನಂತಹ ದಾರಿದ್ರ್ಯ ಯೋಗ ಈತನಿಗಿರಲಿಲ್ಲ.

ಬಂಕಿಮನ ಕಾದಂಬರಿಗಳಿಗೆ ಕೇವಲ ಜನರಂಜಕ ಶಕ್ತಿ ಮಾತ್ರವಲ್ಲ; ಗ್ರಾಮ್ಯವಾಗಿದ್ದ ಅಂದಿನ ವಂಗಭಾಷೆಗೆ ಶಕ್ತಿ ತುಂಬಿ ರಾಷ್ಟ್ರಾಭಿಮಾನವನ್ನುಂಟುಮಾಡುವ ದಿವ್ಯ ಓಜಸ್ಸೂ ಅದಕ್ಕಿತ್ತು. ಲಾರ್ಡ್ ಕರ್ಜನನು ಬಂಗಾಳವನ್ನು ಎರಡಾಗಿ ಒಡೆದಾಗ ಎದ್ದ ಸ್ವದೇಶೀ ಚಳವಳಿಯಲ್ಲಿ ಬಂಕಿಮನ ಕೈಯೂ ಇತ್ತು. ಅವನು ಅಂದು ಬರೆದ 'ವಂದೇ ಮಾತರಂ' ಗೀತೆಯು ವಂಗೀಯರ ಸುಪ್ತ ಚೇತನವನ್ನು ಹೊಡೆದೆಬ್ಬಿಸಿದುದಲ್ಲದೆ, ಇಂದು ಇದು ಅಖಿಲ ಭಾರತದ ರಾಷ್ಟ್ರಗೀತೆಯಾಗಿ ಪರಿಣಮಿಸಿದೆ.

ಬಂಕಿಮನ ರಾಷ್ಟ್ರಾಭಿಮಾನಕ್ಕೆ ಸರಿದೊರೆಯಾದ ಆತನ ಕಲ್ಪನಾ ಶಕ್ತಿ ಮತ್ತು ಕಲಾ ಕೌಶಲವು ಪ್ರಶಂಸನೀಯವಾದದ್ದು. ಆತನ ಕಾದಂಬರಿಗಳ ಪಾತ್ರಗಳೆಲ್ಲಾ ವಾಸ್ತವದ ಸ್ತ್ರೀ ಪುರುಷರಿಗಿಂತ ಹೆಚ್ಚು ಜೀವಂತವಾಗಿವೆ; ಆತನ ಐತಿಹಾಸಿಕ ವ್ಯಕ್ತಿಗಳೆಲ್ಲ ಆತನ ಪ್ರತಿಭಾಕುಂಚದಿಂದ ಜಾಜ್ವಲ್ಯಮಾನರಾಗಿದ್ದಾರೆ. ಜಗತ್ಸಿಂಹ, ತಿಲೋತ್ತಮೆ, ಹೇಮಚಂದ್ರ ಮೃಣಾಳಿನಿ, ಪ್ರತಾಪ ಶೈವಲಿನಿಯರಿಂದ ಆಯಾ ಕಾದಂಬರಿಗಳು ಅಮರವೆನ್ನಿಸಿವೆ.

ಬಂಕಿಮನು ದೇಶ ವಿದೇಶಗಳ ಚರಿತ್ರೆಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿ ಸ್ಕಾಟ್, ಲಿಟ್ಟನ್ ಮೊದಲಾದವರು ಬರೆದ ಕಾದಂಬರಿಗಳನ್ನು ಓದಿ ಜೀರ್ಣಿಸಿಕೊಂಡಿದ್ದನು. ಆಂಗ್ಲ ಭಾಷೆಯು ದೇಶ ವಿದೇಶೀಯರ ಕಣ್ಣು ಕುಕ್ಕಲು ಸರ್ ವಾಲ್ಟರ್ ಸ್ಕಾಟನ ಕಾದಂಬರೀ ಸಂಪ್ರದಾಯವು ಒಂದು ಪ್ರಬಲ ಕಾರಣ. ಇದು ಜನತೆಗೆ ಆಗ ಮೆಚ್ಚಿನ ಹೊಸ ಮಾರ್ಗವಾಗಿತ್ತು. ಇವನ ಕಾದಂಬರಿಗಳು ಕ್ರಿ. ಶ. ೧೮೨೦ರಿಂದ ೧೮೪೫ರ ವರೆಗೆ ಕಾಲು ಶತಮಾನ ಅಖಂಡ ಯುರೋಪ್ ಖಂಡದ ಮನೆಮಾತಾಗಿತ್ತು. ಆ ಪದ್ಧತಿಯನ್ನು ವಂಗಭಾಷೆಯಲ್ಲಿ ಬಳಸಲು ಬಂಕಿಮನು ನಿರ್ಧರಿಸಿದುದು ವಂಗೀಯರ ಸೌಭಾಗ್ಯವೆನ್ನಬೇಕು.

ಬಂಕಿಮನ ಕಾದಂಬರೀ ವ್ಯವಸಾಯವನ್ನು ಸಾಮಾಜಿಕ ಮತ್ತು ಐತಿಹಾಸಿಕವೆಂದು ಎರಡಾಗಿ ವಿಭಾಗಿಸಬಹುದು. ಸಾಮಾಜಿಕ ಕಾದಂಬರಿಗಳು—೧. ರಾಜಮೋಹನನ ಹೆಂಡತಿ (ಕ್ರಿ ಶ ೧೮೬೪), ೨. ವಿಷವೃಕ್ಷ (೧೮೭೩), ೩. ಇಂದಿರಾ, ಯುಗಳಾಂಗುರೀಯ, ರಾಧಾರಾಣಿ (೧೮೭೨

(೨೧ನೇ ಪುಟ ನೋಡಿರಿ)

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. **44 (ತಿರೂರು Exchange)**

ಶಾಖೆಗಳು:

1 ಕೋಯಿಕೋಡ್ (ಫೋನ್ ನಂ 2155) ಕಲ್ಲಾಯಿ ರೋಡ್
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ,, ಸೇಲ್ಸ್ ಡಿಪೋ, ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ. 674) ಮಹಾತ್ಮಾ ಗಾಂಧೀ ರೋಡ್.
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7 ಈರೋಡು (ಫೋನ್ ನಂ. 172) ಮುನ್ಸಿಪಲ್ ಬಸ್ ಸ್ಟ್ಯಾಂಡಿನ ಎದುರು.
8. ಆಳ್ವಾಯಿ ಸೇಲ್ಸ್ ಡಿಪೊ, ಪೆಲೇಸ್ ರೋಡು.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖಾತ್ರಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝ್ಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ:

**ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.**

# SRI MANJUNATHA MOTOR SERVICE

## UDIPI.

— Phone No· 82 —

*Founder:* **Late Sri K. Gopala Shetty**

*Stands for*

**Efficiency, Promptness and Comfort**

ALWAYS TRAVEL IN OUR BUSES

## RUNNING IN THE FOLLOWING ROUTES:

1. **Udipi—Moolky—Mangalore**
   Ist Service 6—45 A. M.. IInd Service 11—45 A M·
2. **Udipi--Karkal—Dharmastala**
   5—30 A. M.
3. **Udipi—Manchakal—Belman—Karkal**
   Ist Service 8-45 A. M. IInd Service 10—45 A. M.
   IIIrd Service 2—45 P. M. IVth Service 4-45 P. M.
4. **Moolky—Moodabidri—Charmady—Frontier (Kadur Connection)**
   5-15 A. M.
5. **Udipi—Alevoor—Kodavoor—Kemmannu**
   A) Udipi to Alevoor: 7—30 A M., 11—30 A M., 1 30 P M., 4—30 P M., 7—15 P. M
   B) Udipi to Kodavoor: 8—15 A M., 3—45 P M., 6—25 P. M.
   C) Udipi to Kemmannu: 6-20 A. M., 9-10 A M., 10—10 A. M. 12 30 Noon, 2—30 P. M, 5 20 P. M
6. **Uchila—Mudrangady—Belman—Balkunja**
   Ist Service 10 30 A M· IInd Service 3—30 P M.

**OUR TOURIST BUSES FOR EXCURSION AND MARRIAGE PARTY ALWAYS AVAILABLE FOR SPECIAL TRIPS**

# ನಮ್ಮ ಆರ್ಥಿಕ ಸ್ವಾವಲಂಬನ ಸಮಸ್ಯೆಗಳು

ಸ್ವಾವಲಂಬನವೇ ಜೀವನವೆಂದು ತಿಳಿತಿಳಿದೂ ನಾವು ಪರಾವಲಂಬಿಗಳಾಗಿಯೇ ಮುಂದುವರಿದಿದ್ದೇವೆ. ಜನರು ಪರರನ್ನು ವಂಚಿಸಿ ತನ್ನ ಮೇಲ್ಮೆಯನ್ನು ಮಾತ್ರ ಬಯಸುವುದನ್ನು ಬಿಟ್ಟು ವ್ಯಕ್ತಿಯ ಸಂಕುಚಿತ ನೆಲೆಯಿಂದ ರಾಷ್ಟ್ರೀಯನ ವಿಕಸಿತ ನೆಲೆಗೆ ಮುಟ್ಟಿದಂದೇ ಇಂತಹ ಸ್ವಾವಲಂಬನೆ ಸಾಧ್ಯ. ನಮಗಿಂದು ಆರ್ಥಿಕ ಸ್ವಾತಂತ್ರ್ಯ ಲಭಿಸಬೇಕಾದರೆ, ಈ ದಿಸೆಯತ್ತ ಜನಜನವೂ ಮನಹರಿಸಬೇಕು.

**ಶ್ರೀ ಕುತ್ತ್ಯಪಾಡಿ ಗೋಪಾಲಕೃಷ್ಣ ಹೆಗ್ಡೆ.**

ಸ್ವಾರಾಜ್ಯ ಗಳಿಸಿ ಹದಿನೈದು ವರ್ಷ ಸಂದಿತಾದರೂ, ನಮ್ಮ ದೇಶವಿಂದು ಆರ್ಥಿಕ ಸ್ವಾವಲಂಬನವೆಂಬೀ ಸಹಜ ಬಂಧನಗಳ ಸಂದಾಕಟ್ಟಿನಲ್ಲಿ ಸಿಲುಕಿಬಿದ್ದಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯ, ಮೊದನೆಯ ವರ್ಷದಲ್ಲಿ ನಾವು ಸಾಧಿಸಿದ ಪ್ರಗತಿ ಪ್ರಶಂಸನೀಯವಾಗಿಲ್ಲ! ಸಂಯೋಜಿಸಿದ ಗುರಿ ಮುಟ್ಟಲು ವಿವಿಧ ಕ್ಷೇತ್ರಗಳಲ್ಲಿ ಸಾಧ್ಯವಾಗಿಲ್ಲ. ಆಶಾವಾದಿಗಳ ತರ್ಕವನ್ನು ಬದಿಗೊತ್ತಿ, ನಿರಾಶಾವಾದಿಗಳ ಸಾರ್ವತ್ರಿಕ ಸೊಲ್ಲನ್ನೇ ಒಪ್ಪಿಕೊಂಡರೆ ನಮ್ಮ ನಡಿಗೆ ಖಂಡಿತವಾಗಿಯೂ ಕುಂಠಿತವಾಗುತ್ತಾ ಸಾಗುತ್ತಿದೆ.

ಎಚ್ಚೆತ್ತ ವಿಷ್ಯಾದಲ್ಲಿ ನಾವೊಂದು ಸಂತುಷ್ಟ, ಸುಭದ್ರ ಮತ್ತು ಸುಶೀಲ ರಾಷ್ಟ್ರವಾಗಲು ಸಾಧ್ಯವಿಲ್ಲವೆ? ಸಾಧ್ಯವಿದೆ. ಜನರು ಜಾಗೃತರಾಗಬೇಕು. ವಿಚಾರಶೀಲರಾಗಬೇಕು. ಸತತ ಕಾರ್ಯ ತತ್ಪರರಾಗಬೇಕು. ಆಗ ತಾನೆ ನಮ್ಮ ದುರವಸ್ಥೆಗಳು ದೂರ ನೀಗಿಯಾವು.

ನಂಬುವಿರಾದರೆ ನಂಬಿ; ಇಲ್ಲವೆ ತಿರಸ್ಕರಿಸಿ. ನಮ್ಮ ನಾಡು ಅಂಗಡಿಕಾರ ಮತ್ತು ಕೋಮಟಿ, ವಗೆಕಾರ ಮತ್ತು ವಂಚಕ ಜನರಿಂದ ತುಂಬಿದೆ. ನಮ್ಮಲ್ಲಿ ಪ್ರತಿಯೋರ್ವನೂ ಆದೀಗ ಯೋಜನಾ ಜೀವಿಯಾಗಿರುವನು. ಆದರೆ ದೇಶೋನ್ನತಿಯ ಯೋಜನೆಯಲ್ಲಿಲ್ಲ. ಒಬ್ಬ ಇನ್ನೊಬ್ಬನನ್ನು ಸುಲಿಯುವ ಕಾರ್ಯಭಾರ ನಿರಂತರದಿಂದ ಸಾಗುತ್ತಿದೆ. ಕಾರಣ, ನಾವು ಇತರರನ್ನು ಸುಲಿಯದಿದ್ದರೆ, ಬೇರೆ ಜನ ನಮ್ಮನ್ನು ಸುಲಿದು ತಿನ್ನುವರು ಎಂಬ ಅಪನೋಕ್ಷ ಭಯ-ದಿಗಿಲೋಚನೆಯಿಂದ. ಧನಗಳಿಕೆಯೊಂದೇ ನಮ್ಮ ಮನೆ ಮಂತ್ರವಾಗಿದೆ. ಐಶ್ವರ್ಯ ಸಾಧಕರಿಗೆ ನೀತಿ, ನಿಯಮ, ದೇವರು, ಧರ್ಮ, ನ್ಯಾಯ-ಸರಕಾರಗಳ ಭಯವಿಲ್ಲ, ಪರವೆಯೇ ಇಲ್ಲ

ಅಂತಾರಾಷ್ಟ್ರೀಯ ಹಣಕಾಸಿನ ಸಮಸ್ಯೆಗಳ ಹೆಚ್ಚಿನ ವಿಚಾರ ನನಗೆ ತಿಳಿಯದು. ಆದರೆ ಒಂದು ವಿಷಯ ನನಗೆ ತಿಳಿದಿರುತ್ತದೆ. ರಷ್ಯಾ ದೇಶ, ಇತರ ದೇಶಗಳಲ್ಲಿ ಧೀರ್ಘಾಟನ ಗೈಯ್ಯದೆ ತನ್ನ ಆರ್ಥಿಕ—ಸ್ವಾವಲಂಬನ ಸಮಸ್ಯೆಗಳನ್ನು ಸಡಲಿಸಿ ಉತ್ಕೃಷ್ಟ ಸ್ಥಾನವನ್ನು ಕಲ್ಪಿಸಿಕೊಂಡಿರುವಾಗ ನಮಗೆ ಅದು ಸಾಧ್ಯವಾಗದೆ? ವಿದೇಶ ಪಿನಿಮಯಗಳ ಗೊಡವೆಗೆ ನೇ ಹೋಗದೆ, ಆ ದೇಶವಿಂದು ಯಾರಿಗೂ ಪ್ರದನಾದರೂ ಸ್ಪರ್ಧೆಗೆ ಸಿದ್ಧವಿದೆಯೆಂದಾದಲ್ಲಿ, ನಾವೇಕೆ ಹಣಕಾಸಿಗಾಗಿ ತಿರುಪೆ ಬೇಡುತ್ತ ಪೃಥ್ವಿಪರ್ಯಟನ ಗೈಯ್ಯಬೇಕು?

ಇದೇ ರೀತಿ ಅಮೆರಿಕೆಯಿಂದ ಅಕ್ಕಿ-ಗೋದಿ ಮತ್ತು ತಿನಸುಗಳನ್ನು ನಾವು ಆಮದು ಮಾಡುತ್ತ ಹೋದಲ್ಲಿ ನಮ್ಮ ದೇಶ ಎಂದಿಗೂ ಸ್ವಯಂಪೂರ್ಣವಾಗದು. ದೇಶದಲ್ಲಿ ದುಷ್ಕಾಲ ಬೀಳದೆ, ಬರಗಾಲ ಪೀಡಿಸದೆ, ಕ್ಷಾಮ ಭಯ ಹುಟ್ಟಿಸದೆ ನಮ್ಮ ಜನರು ಹೆಚ್ಚು ಬೆಳೆಯನ್ನು ಬೆಳೆಸಿಯಾರೇ? ಉಣ್ಣಲು ತಿನ್ನಲು ಬೇಕಾದ ಧವಸ ಧಾನ್ಯಗಳನ್ನೂ, ಹಣ್ಣು ಹಂಪಲಗಳನ್ನೂ, ಹೈನ ಸಂಪತ್ತನ್ನೂ ನಾವು ಬೆಳೆಸದೆ ಹೋದಲ್ಲಿ ಆಮದು ಎಲ್ಲಿನ ತನಕ ಸಾಗಬೇಕು? ಪ್ರತಿಯೋರ್ವನ ಬಾಳಿನಲ್ಲಿ ಮುಂಜಿ ಮದುವೆಗಳ ಸಂಸ್ಕಾರಗಳಿಗೆ ಪ್ರಾಧಾನ್ಯವಿರುವಂತೆ ಆಹಾರೋತ್ಪಾದನಾ ಕಾರ್ಯಕ್ರಮವೂ ನಮ್ಮ ಜನ ಜೀವನದ ಒಂದು ಅಂಗವಾಗಬೇಕು. ಪ್ರತಿಯೋರ್ವನೂ ಕನಿಷ್ಠ ಒಂದು ಫಲವೃಕ್ಷ ಇಲ್ಲವೇ ಮೋಪಿನ ಮರ ನೆಡುವಂತಾಗಬೇಕು.

ವ್ಯವಸಾಯ ನಮ್ಮ ದೇಶದಲ್ಲಿ ಕಡೆಗಣಿಸಲ್ಪಟ್ಟಿದೆ. ಹಸರಿಗೇನೋ ರೈತರಿಂದ ತುಂಬಿದ ದೇಶ. ನೇಕಡಾ ೭೫ ಜನ ಬೇಸಾಯಗಾರರೇ! ಆದರೆ ಸುಸಂಸ್ಕೃತ ಜನರೂ ಕೃಷಿಯನ್ನು ತಿರಸ್ಕರಿಸುತ್ತಾರೆ! ಉಳುವುದು ತುಚ್ಛವೆಂದು ಬಗೆಯಲಾಗುತ್ತಿದೆ. ಕೈಗಾರಿಕೋದ್ಯಮವೊಂದೇ ನಮ್ಮ ದೇಶವನ್ನು ಮೇಲಕ್ಕೆತ್ತದು. ವಿದ್ಯಾವಂತರು ವ್ಯವಸಾಯೋದ್ಯಮಕ್ಕೆ ತೊಡಗಬೇಕು. ಅನ್ನ ಆಹಾರದ ಸಮಸ್ಯೆಯನ್ನೂ ಬಗೆಹರಿಸಲು ಯತ್ನಿಸಬೇಕು.

ಯಾಂತ್ರಿಕ-ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ತುಂಬಾ ಲಾಭಗಳಿಸಬಹುದೆಂಬ ದೃಷ್ಟಿಯಿಂದ ಜನ ಕಲಿಯುವರಲ್ಲದೆ ದೇಶೋದ್ಧಾರ ಮಾಡಬೇಕು, ಅನಾರೋಗ್ಯ ಸಂಕಟಗಳನ್ನು ಕಿತ್ತೊಗೆಯಬೇಕೆಂಬ ಮಹದಾಸೆ ಆದರ್ಶಗಳಿಂದಲ್ಲ. ಮಾನವತೆಯನ್ನು ತಿಳಿ ಹೇಳುವ ಶಿಕ್ಷಣ ನಮ್ಮಲ್ಲಿ ಬೆಳೆಯಬೇಕು ತಾಂತ್ರಿಕ ಶಿಕ್ಷಣದಲ್ಲಿ ದಾಯದೆಯಿರುವಂತೆ, ಬೇಸಾಯದಲ್ಲೂ ಲಾಭ ಸಿಗುವಂತಾಗಬೇಕು. ಡಾಕ್ಟರ್ ಮತ್ತು ಇಂಜಿನಿಯರ್ ಆದರೆ ಹಣ ಗಳಿಸಬಹುದೆಂಬ ವ್ಯಾಮೋಹ ಅಳಿಯಬೇಕು.

ಮಾನವ ಕಲ್ಯಾಣವೇ ಮನುಷ್ಯ ಧರ್ಮವೆಂದು ಎಷ್ಟು ಜನ ಒಪ್ಪುತ್ತಾರೆ? ಒಪ್ಪಿದರೂ "ಸರ್ವೇ ಜನಾ ಸುಖಿನೋ ಭವಂತು" ಎಂಬ ಮಹಾ ನುಡಿ ಸತ್ಯವಾಗಲು ಕಳಕಳಿಯಿಂದ ಕಾರ್ಯ ತತ್ಪರರಾಗುತ್ತಾರೆ? (ಲೋಕ ಕಲ್ಯಾಣಕ್ಕಾಗಿ ತನು ಮನ ಧನವನ್ನಿತ್ತು ಸದಾ ಕಾಲ ಈ ಪಥದಲ್ಲಿ ದುಡಿಯುವ ಮಹಾನುಭಾವರ ಕ್ಷಮೆ ಯಾಚಿಸಿ) ನಮ್ಮಲ್ಲಿ ಎಷ್ಟು ಜನ ಜನಜಾಂಗುಳಿಗಳ ಸುಖಕ್ಕಾಗಿ ಚಿಂತಿಸುತ್ತಾರೆ? ನಾವು ಹುಟ್ಟಿದ ಗಳಿಗೆಯಿಂದ ಸಾಯುವ ತನಕ ಒಂದಲ್ಲ ಒಂದು ರೀತಿಯಿಂದ ಸಹಾಯ, ಸಹಕಾರ ಮತ್ತು ಪ್ರಯೋಜನವನ್ನು ಅಪ್ರತ್ಯಕ್ಷವಾಗಿ ಪಡೆಯುತ್ತೇವೆ. ಎಷ್ಟೊಂದು ಕ್ರಿಯಾಶಾಲಿಗಳು, ಪುಣ್ಯವಂತರು, ಸಫಲ ಜೀವಿಗಳು ನಮ್ಮೆಲ್ಲರ ಸುಖಸಂಪದ ಸೌಖ್ಯಗಳಿಗಾಗಿ ತಮ್ಮ ಜೀವನವನ್ನು ಮುಡಿಪು ಕೊಟ್ಟಿಲ್ಲ ಎಷ್ಟೊಂದು ಸೌಕರ್ಯ, ಸೌಲಭ್ಯಗಳನ್ನು ನಿರ್ಮಿಸಿಲ್ಲ? ಅವರಿಗೆ ನಾವು ಋಣಿಗಳಲ್ಲವೇ? ಅವೆಲ್ಲವು ಉಪಲಭ್ಯತೆಗೆ ನಾವೇನು ಮಾಡಿರುವೆವು? ಮಾನವ ಕಲ್ಯಾಣವೇ ಸರ್ವ ಧರ್ಮ ಸಂಸ್ಕಾರವೆಂದು ಬಗೆಸರೆ ಮಾತ್ರ ಜೀವನ ಸಾಫಲ್ಯೇನಿನಿಂದ ತುಂಬೀತು. ನಾವು ಅನುಭವಿಸುವ, ಆನಂದಿಸುವ ಸಕಲ ಸವಲತ್ತುಗಳ ಬದಲು ನಾವು ಏನನ್ನು ಕಲ್ಪಿಸುತ್ತೇವೆ; ಕೊಡುತ್ತೇವೆ? ಪ್ರತಿಯೋರ್ವನೂ ಈ ಪಥದಲ್ಲಿ ಯೋಚಿಸಿ, ವಿಚಾರಿಸಿ, ಕ್ರಿಯಾಶೀಲನಾಗದಿದ್ದರೆ ನಾಡು ನಂದನವನ ಎಂದಿಗೂ ಆಗದು. ಮಾನವತೆ ಮುಗಿಯಿತೆಂದರೆ ನ್ಯಾಯ ಮತ್ತು ಧರ್ಮ ನಾಯಿ ಪಾಲಾಗುವುದು!

ಒಂದು ದೃಷ್ಟಿಯಿಂದ ನಾವು ಮೃಗಪಕ್ಷಿಗಳಿಗಿಂತಲೂ ಕೀಳು ಅಥವಾ ನಿಕೃಷ್ಟ ಮಟ್ಟದವರು. ಅವುಗಳೊಳಗಾದರೂ ಅನ್ಯೋನ್ಯ ಸಹಜ ಬಾಂಧವ್ಯವಿದೆ. ಸುಖದುಃಖಗಳನ್ನು ಹಂಚಿ ಉಣ್ಣುವ ಸೌಜನ್ಯವಿದೆ ಅವುಗಳಿಗೆ ಸ್ವಾರ್ಥ ಸೋಂಕದು ಕಾಗೆಯಿಂದ ಕಲಿವ ಪಾಠವನ್ನು ನಾವು ಕಾರ್ಯಕ್ಕಿಳಿಸಿದಲ್ಲಿ ನಮ್ಮ ಅದೆಷ್ಟೋ ಸಮಸ್ಯೆಗಳು ದೂರವಾಗದೆ ಇದ್ದಾವು?

ಪ್ರತಿಯೊಂದು ವಸ್ತು ಪೂಡವೆಯ ಬೆಲೆ ಏರುತ್ತಿದೆ. ಏರುತ್ತಿದೆಯಲ್ಲ ಹಾರುತ್ತಿದೆ. ನಮ್ಮ ಸರಕಾರದ ಪ್ರತಿಯೊಂದು ಕೆಲಸವೂ ಅರ್ಧಮರ್ಧ. ಹಾವು ಸಾಯಬಾರದು; ಕೋಲು ಮುರಿಯಬಾರದು ಎಂಬ ನಾಣ್ಣುಡಿಯಂತೆ. ಸತ್ಯಾಗ್ರಹ ಮುಷ್ಕರಗಳು ನಮ್ಮ ದೇಶದ ಎಲ್ಲೆಡೆಯಲ್ಲೂ ಹಬ್ಬಿ ಹೋಗಿದೆ. ಸಂಪು ಸಾರ್ವತ್ರಿಕ ರೋಗವಾಗಿದೆ. ಕಾರ್ಮಿಕನು ಎಂತಹ ಕೆಲಸ-ಕಸರತ್ತು ಮಾಡಿದರೂ ಒಡೆಯ ಮಣಿಯಲಾರನು. ರೂಪಾಯಿ ಹತ್ತಿಪ್ಪತ್ತು ಅಥವಾ ಹೆಚ್ಚಿನ ಭಡತಿ ಕೊಡಲು ಆತಗೆ ಬೇಸರವಿಲ್ಲ; ದುಃಖವಿಲ್ಲ ಆದರೆ ಕೂಲಿಗಾರ, ಕೆಲಸಗಾರ ಕಾರುಬಾರುದಾರನಾಗುವನಲ್ಲಾ ಎಂದು ಭಯ. ಉಳುವವ ಹೊಲದೊಡೆಯನಾಗಬಾರದೆಂಬ ಹಠ ಸಂಬಳ ಅಥವಾ ಮಜೂರಿ ಹೆಚ್ಚಿದಂತೆ ಎಲ್ಲವುಗಳ ಧಾರಣೆಯೂ ಹೆಚ್ಚುತ್ತಿದೆ. ಸುಲಭದಲ್ಲೇ ಹೇಳುವುದಾದರೆ ಪ್ರತಿಯೋರ್ವನಿಗೂ ನಿರಾಯಾಸ ಮತ್ತು ನಿಶ್ರಮದಿಂದ ಧನ ಸಂಗ್ರಹಿಸಬೇಕೆಂಬ ಹವ್ಯಾಸ ನೆತ್ತಿಗೇರಿದೆ. ತರಕಾರಿ, ಕಾಯಿಪಲ್ಲೆಗಳಿಗೂ, ಹಣ್ಣುಹಂಪಲಗಳಿಗೂ ಮೀನು ಮಾಂಸಗಳಿಗೂ ಬೆಲೆ ಏರುತ್ತಾ ಇದೆ.

(೧೯ನೇ ಪುಟ ನೋಡಿರಿ)

THE SOUTH CANARA CENTRAL CO-OPERATIVE BANK LTD.,

Estd· 1914 KODIALBAIL, MANGALORE-3, S. K.

**ANNOUNCEMENT**

**In response to numerous requests it has been decided to accept "Recurring Deposits" in sums of Re. 1/-, and multiples thereof, upto a maximum of Rs 500/- per mensem and repayable as under: —**

TOTAL AMOUNT PAYABLE AFTER

| Monthly deposits· Rs. | 12 Months Rs. | 24 Months. Rs | 36 Months· Rs· | 48 Months· Rs. | 60 Months. Rs. |
|---|---|---|---|---|---|
| 1 | 12 . 32 | 25 . 25 | 38 . 77 | 52 . 90 | 67 . 62 |
| 5 | 61 . 60 | 126 . 25 | 193 . 85 | 264 . 50 | 338 . 10 |
| 10 | 123 . 20 | 252 . 50 | 387 . 70 | 529 . 00 | 676 . 20 |
| 50 | 616 . 00 | 1,262 . 50 | 1,938 . 50 | 2,645 . 00 | 3 381 00 |
| 100 | 1,232 . 00 | 2,525 . 00 | 3,877 . 00 | 5,290 · 00 | 6,762 . 00 |

Other types of deposits accepted on very attractive rates.
All types of Banking Business transacted

**S. ARANHA**
SECRETARY

# ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, **ಮಂಗಳೂರು-3.**

## ನಿಮ್ಮ ಉಳಿತಾಯಗಳನ್ನು ಈ ಕೆಳಗಿನವುಗಳಲ್ಲಿ ವಿನಿಯೋಗಿಸಿರಿ:

ಸೇವಿಂಗ್ಸ್ ಬ್ಯಾಂಕ್ ಎಕೌಂಟುಗಳು
ಕ್ಯುಮುಲೇಟಿವ್ ಡಿಪೋಸಿಟ್ಸ್
ಹನಿ ಡಿಪೋಸಿಟ್ಸ್
ಫಿಕ್ಸೆಡ್ ಡಿಪೋಸಿಟ್ಸ್

ಡಿಪೋಸಿಟುಗಳಲ್ಲಿ ಸಾಲಿಯಾನ ಸೇಕಡ **5½**% ತನಕ ಬಡ್ಡಿ ಸಂಪಾದಿಸಿರಿ.

**ಈ ಕೆಳಗಿನ ಶಾಖೆಗಳ ಸಂಪರ್ಕ ಬೆಳೆಸಿರಿ:**

ಮಂಗಳೂರು, ಸಿಟಿ-ಮಂಗಳೂರು, ಉಡುಪಿ, ಕುಂದಾಪುರ, ಪುತ್ತೂರು,
ಕಾರ್ಕಳ, ಶಿವಮೊಗ್ಗ, ಬೆಂಗಳೂರು, ಬೆಂಗಳೂರು-ಚಿಕ್ಕಪೇಟೆ,
ಕೊಪ್ಪ, ಹುಣಸೂರು, ಬಾಳೆಹೊನ್ನೂರು, ತುಮ್ಕೂರು,
ಶುಂಠಿಕೊಪ್ಪ, ಹೊಸನಗರ, ಶಿಖಾರಿಪುರ, ಹೊನ್ನಾಳಿ,
ಹೊಳೆನರಸಿಪುರ, ರಾಮನಗರಂ, ಶ್ರಿಂಗೇರಿ,
ತರಿಕೆರೆ, ಕಳಸ, ಜಯಪುರ, ಹೊಸದುರ್ಗ,
ಕಮ್ಮರ್ಡಿ, ಹಾಸನ,
ಮತ್ತು ಮದ್ರಾಸು.

**ಕೆ. ಎನ್. ಶಾಸ್ತ್ರಿ,**
ಜನರಲ್ ಮೆನೇಜರ್.

**ಕೆ. ಎಸ್. ಎನ್. ಅಡಿಗ,**
ಚೇರ್‌ಮೇನ್.

**THE KARNATAKA BANK LIMITED**

# ಪ್ರಜಾರಾಜ್ಯದ ವಾಸ್ತವಿಕ ಸ್ವರೂಪ

ಪ್ರಜಾರಾಜ್ಯವೆಂದ ಮಾತ್ರಕ್ಕೆ ಅಪಾರ್ಥಕಟ್ಟಬಾರದು; ಅನರ್ಥವೆಸಗಲೂ ಬಾರದು. ಅದರ ವಾಸ್ತವಿಕ ಸ್ವರೂಪವನ್ನು ಅರಿತುಕೊಂಡು ನಮ್ಮ ನೀತಿ-ನಡಾವಳಿಗಳನ್ನು ರೂಪಿಸಿಕೊಳ್ಳಬೇಕು.

**ಶ್ರೀ ಬಿ. ಎಚ್. ಶ್ರೀಧರ, ಎಂ. ಎ.**

ಪ್ರಜಾರಾಜ್ಯದ ಒಂದು ವಾಸ್ತವಿಕ ಸ್ವರೂಪವನ್ನು ನಾವಿಂದು ಅನುಭವಿಸುತ್ತಿದ್ದೇವೆ. ನಮ್ಮ ಪ್ರಜೆಗಳಿಗೆ ರಾಜ್ಯಭಾರದ ಪರಿಚಯ ಎಷ್ಟಿದೆ ಎಂಬುದು ಸುಸ್ಪಷ್ಟ. ರಾಜಪ್ರಭುತ್ವದಲ್ಲಿ ಹೇಗೋ ಹಾಗೇ ಆಡಳಿತ ಮಾಡುತ್ತಿರುವ ಅಧಿಕಾರಿಗಳ ಅನೇಕ ಅಗ್ರೇಸರರು ಇಂದಿಗೂ ಮಂತ್ರಿಗಳಿಗೆ (ಹಿಂದೆ ರಾಜರಿಗೆ) ಸರ್ವ ಸಂದರ್ಭಗಳಲ್ಲೂ ವಿಧೇಯರಾಗಿರುವುದೊಂದೇ ಸ್ವಸ್ಥಾನಭದ್ರಯೋಗವೆಂದು ನಂಬಿ ನಡೆಯುತ್ತಿರುವ ಲಕ್ಷಣದ ವ್ಯಕ್ತಿತ್ವವುಳ್ಳವರು. ಆಡಳಿತ ಪರಂಪರೆಯನ್ನು ಬ್ರಿಟಿಷರಿಂದ ಪಡೆದವರು ನಾವು. ಅವರ ಕಾಲದಲ್ಲಿ ಅವರ ಕೈಕೆಳಗೆ ದುಡಿಯುತ್ತಿದ್ದ ನಮ್ಮ ಜನರು ಅವರಿಗೆ ಹೆದರಿ ಸಾಮಾನ್ಯವಾಗಿ ಬ್ರಿಟಿಷ್ ಮೇಲಾಧಿಕಾರಿಗಳಿಗೆ ತೃಪ್ತಿಕರವಾಗುವಂತೆ ಕೆಲಸ ಮಾಡುತ್ತಿದ್ದರು. ಬ್ರಿಟಿಷ್ ಸಾಹೇಬರಲ್ಲಿ ಮತ್ತಾವ ದೋಷವಿದ್ದಿರಬಹುದಾದರೂ ಹೊಣೆಗಾರಿಕೆಯ ಬುದ್ಧಿಯು ನಮ್ಮ ಸಾಹೇಬರುಗಳಲ್ಲಿರುವುದಕ್ಕಿಂತ ಹೆಚ್ಚಾಗಿತ್ತೆಂಬುದು ಎಲ್ಲರ ಅನುಭವಕ್ಕೆ ಬಂದ ವಿಷಯ. ಜನರಲ್ಲೂ ಹೊಣೆಗಾರಿಕೆಯ ಬುದ್ಧಿ ಇರಬೇಕೆಂಬುದು ನಿಜ. ಆದರೆ ಉಚ್ಚಾಧಿಕಾರಿಗಳಲ್ಲಿ ಅದು ಜನರ ಮಟ್ಟಕ್ಕಿಂತ ಮೂರು ಪಟ್ಟು ಅಧಿಕವಾಗಿರಬೇಕಾದುದು ಸರಕಾರವೊಂದರ ಗೌರವಕ್ಕೆ ಅನಿವಾರ್ಯವಾದ ಶರ್ತ. ಈ ಅಂಶವನ್ನು ನಮ್ಮ Public Service Commissionಗಳು ಚೆನ್ನಾಗಿ ಅರಿತಂತೆ ತೋರುವುದಿಲ್ಲ.

ಆಡಳಿತವಿರುವುದು ಯಾರ ಪ್ರಯೋಜನಕ್ಕಾಗಿ? ಪ್ರಜೆಗಳ ಪ್ರಯೋಜನಕ್ಕಾಯೇ ಅಲ್ಲವೇ? ಅವರಿಗೆ ಅದರಿಂದ ಎಷ್ಟರ ಮಟ್ಟಿನ ಪ್ರಯೋಜನವಾಗುತ್ತದೆ ಎಂಬುದನ್ನು ಆಡಳಿತ ನೇತೃಗಳನ್ನು ನಿಯಮಿಸುವ ಅಧಿಕಾರ ಸಂಪನ್ನರು ಪರಿಶೀಲಿಸುವ ಪದ್ಧತಿಯನ್ನಿಟ್ಟುಕೊಳ್ಳದಿರುವುದು ನಮ್ಮ ನಿರಾಶಾವಾದಕ್ಕೆ ನಾಂದಿಯಾಗಿದೆ. ಅಡಿಗೆಯ ರುಚಿಯನ್ನು ಊಟ ಮಾಡಿದವರಿಂದ ತಿಳಿಯಬೇಕಲ್ಲದೆ, ಅಡಿಗೆಯಲ್ಲಿ ಅವರಿಗಿಂತ ಅಡುವವನೇ ತಜ್ಞನೆಂದು ಅವನ ಅಭಿಪ್ರಾಯವನ್ನು ತಿಳಿಯುವುದರಿಂದ ಫಲವೇನು? ಉಣ್ಣುವವರಿಗೆ ತಕ್ಕ ಅಡಿಗೆಯನ್ನು ಮಾಡಿ ಹಾಕಬಲ್ಲವನೇ ಯೋಗ್ಯ ಅಡುವವನೆನ್ನಿಸುವನಲ್ಲದೆ, ಅವರಿಗೆ ರುಚಿಸದ ವಿಜ್ಞಾನನಿಯತ, ಕಲಾಪರಿಪೂರ್ಣ ಅಡಿಗೆಯನ್ನು ಮಾಡಿಬಡಿಸುವವನಲ್ಲ.

ಒಂದು ದೃಷ್ಟಿಯಿಂದ ಯೋಗಕ್ಷೇಮ ಸರಕಾರವೆಂದುಕೊಳ್ಳುವ ನಮ್ಮ ಆಡಳಿತ ವ್ಯವಸ್ಥೆಯು ಸುಧಾರಕನ ಪಾತ್ರವನ್ನು ವಹಿಸಿರುವುದು ನ್ಯಾಯವೆಂದೂ ಅಜ್ಞಕೋಟಿಗಳಿಂದ ಕಿಕ್ಕಿರಿದ ಭಾರತದಲ್ಲಿ ಅದೀಗ ಅನಿವಾರ್ಯವೆಂದೂ ಹೇಳಬಹುದು. ಈಗ ಎಂದರೆ ವಿಪತ್ಕಾಲವನ್ನು ಸಾರಿದ ಇಂದು ಅದರೆ ಅವಿಪತ್ಕಾಲದಲ್ಲೂ ನಮ್ಮ ರಾಜ್ಯ ಸಂವಿಧಾನ ಕೊಟ್ಟ ಅವಕಾಶದ ಬಲದಿಂದ ಜನರಿಗೆ ಅಪ್ರಿಯವೆನ್ನಿಸುವ, ಹಿತವಾಗಿ ಪರಿಣಮಿಸಬಹುದೆಂದು ತಜ್ಞರು ಊಹಿಸಿದ, ಎಷ್ಟೋ ಸುಧಾರಣಾತ್ಮಕ ಕಾಯಿದೆಗಳನ್ನು ಮಾಡುತ್ತ ಬರಲಾಗಿದೆ. ಆದರೆ ಜನರಂತೆಯೇ ಆ ಕಾಯಿದೆಗಳನ್ನು ಜಾರಿಗೆ ತರಲು ನಿಯುಕ್ತರಾದ ಎಷ್ಟೋ ಅಧಿಕಾರಿಗಳಿಗೂ ಅಂತಃಕರಣಪೂರ್ವಕವಾಗಿ ಅವುಗಳಲ್ಲಿ ಹಲವು ಅಪ್ರಿಯವಾಗಿವೆ ಎಂಬುದನ್ನು ನಮ್ಮ ವಿಧಾನ ಲೋಕ ಸಭೆಗಳ ಸದಸ್ಯರು ಅರಿತುಕೊಂಡಿಲ್ಲ. ಅಧಿಕಾರಿಗಳೂ ಪ್ರಜೆಗಳೇ; ಅವರಿಗೂ ಮತಾಧಿಕಾರವಿದೆ, ಅಭಿಪ್ರಾಯ ಸ್ವಾತಂತ್ರ್ಯವಿದೆ ಆದುದರಿಂದ ಅವರಿಗೆ ಗಮನಾರ್ಹವೆನ್ನಿಸದ ಸುಧಾರಣೆಗಳನ್ನು ಜಾರಿಗೆ ತರಲು ಹೇಳಿದಾಗ ಅವರು ಅನಾಸಕ್ತಿಯೋಗ, ಅರ್ಧಾಸಕ್ತಿಯೋಗ ಅಥವಾ ಸ್ವಾರ್ಥಸಾಧನ ಯೋಗ ಎಂಬ ಮೂರು ಯೋಗಗಳಲ್ಲಿ ಯಾವುದಾದರೂ ಒಂದನ್ನು ಹಿಡಿಯುವುದು ಸಹಜವಾಗಿದೆ. ಆದರಿಂದಲೇ ಸಾರ್ವಜನಿಕ ಅಭಿಪ್ರಾಯವು ಒಂದು ಬದಲಾವಣೆಯ ಬಗ್ಗೆ ರೂಪಿತವಾಗುವ ಮೊದಲೇ ಅಂಥ ಬದಲಾವಣೆಯಾಗಬೇಕೆಂದು ಕಾಯಿದೆ ಮಾಡುವುದು ತಪ್ಪೆಂದು ವಿದ್ವಾಂಸರನೇಕರು ಹೇಳುತ್ತ ಬಂದರು. ಹಳೆಯ ಭಾಷೆಯಲ್ಲಿ ಇದೇ ತತ್ವವನ್ನು "ಜನರಿಗೆ ಪ್ರಿಯವಾದುದು ರಾಜನಿಗೆ ಹಿತಕರ; ತನಗೆ ಪ್ರಿಯವಾದುದೆಂದು ಜನರಿಗೆ ಅಪ್ರಿಯವಾದುದನ್ನು ಅವನು ಮಾಡ ಹೋಗಬಾರದು" ಎಂದು ಹೇಳಲಾಗಿದೆ. ಸರಕಾರದ ಹಿತವಿರುವುದು ಜನರ ಗೌರವಕ್ಕೆ ಪಾತ್ರವಾಗುವುದರಲ್ಲಿ. ಜನಾಭಿಪ್ರಾಯವನ್ನು ಹೇಳುವವರು ಸರಕಾರಿ ಅಧಿಕಾರಿಗಳಲ್ಲದೆ ಜನಮಾನ್ಯರಾದ ವಿದ್ವಾಂಸರು. ಆದುದರಿಂದ ಜನಮಾನ್ಯ ವಿದ್ವಾಂಸರನ್ನು ಅಲಕ್ಷಿಸುವ ಸರಕಾರ ತನ್ನ ಗೌರವವನ್ನು ಕಾಯ್ದುಕೊಳ್ಳುವುದು ಕಷ್ಟವಾಗುತ್ತದೆ.

ಜನಮಾನ್ಯ ವಿದ್ವಾಂಸರನ್ನು ಗುರುತಿಸುವ ದೃಷ್ಟಿಯನ್ನು ಪಾರ್ಟಿ ಪಕ್ಷಪಾತವುಳ್ಳ ಇಂದಿನ ಹಲವಾರು ಸರಕಾರ ನಿಯಂತ್ರಿತ ಸಂಸ್ಥೆಗಳು ಕಳೆದುಕೊಂಡಿವೆ. ಬಹು ಸಂಖ್ಯಾ ಸಾರ್ವಜನಿಕ ಪ್ರಾತಿನಿಧ್ಯ ಸ್ಥಳಗಳನ್ನು ಕಾಂಗ್ರೆಸ್ ರಾಜಕೀಯ ಪುರುಷರು ಆಕ್ರಮಿಸಿಕೊಂಡಿರುವುದು ಅವರ ವಿದ್ವತ್ತೆಯ ಬಲದಿಂದಲ್ಲವೆಂಬುದು ಸುಪ್ರಸಿದ್ಧ. ಪ್ರಾಮಾಣಿಕ ಗುಣಪಕ್ಷಪಾತ ಶೀಲದಿಂದಲ್ಲ ಎಂಬುದೂ ಜನಜನಿತ. ಈ ಪರಿಸ್ಥಿತಿಯು ನಮ್ಮ ಆಕಾಶವಾಣಿಯ ವಲಯ ಸಲಹೆ ಸಮಿತಿಗಳಂತೆ ಹಾಸ್ಯಾಸ್ಪದವೆನ್ನಿಸಿದೆ.

"ಒಂಸು ಷೋಕು ಬರಿಯ ಝೋಕು
ಆಳ್ಕೆಯೊಂದು ಜಂಭವು"

ಎಂಬ ಆಪತ್ಕಾಲದ ಕವಿ ಉದ್ಗರಿಸುವಂತಾದುದು ಸರ್ವಕಾಲದಲ್ಲೂ ಪರಿಹರಣೀಯ. ವಿಪತ್ಕಾಲದ ವಿಶೇಷಾಧಿಕಾರ ಬಲದಿಂದಾದರೂ ಅವಿಪತ್ಕಾಲದಿಂದ ನಡೆದು ಬಂದ ಆಡಳಿತಗತವಾದ ದುರಭ್ಯಾಸಗಳನ್ನು ನಿಲ್ಲಿಸಲು ಸರಕಾರದ ಹಿರಿಯ ನೇತೃಗಳು ಪ್ರಯತ್ನಿಸುವುದು ಅವರನ್ನು ಹೆಚ್ಚಿನ ಜನಾನುರಾಗಕ್ಕೆ ಪಾತ್ರರನ್ನಾಗಿ ಮಾಡದಿರದು. ದೇಶಹಿತೈಷಿಗಳಾದ ಪ್ರತಿಯೊಬ್ಬ ಶಾಖಾಧೀಶನೂ ಪ್ರಜಾಸತ್ತೆಯ ಅಂತರ್ಗತವಾದ ಅನಿವಾರ್ಯ ದೌರ್ಬಲ್ಯಗಳ ದೆಸೆಯಿಂದ ಆಡಳಿತವನ್ನು ಶುದ್ಧೀಕರಿಸಲಾರದಂತಾದುದನ್ನು ಕಂಡ ಅನುಭವವಿದ್ದರೆ, ಅವನೀಗ Emergencyಯ ಅವಕಾಶವನ್ನು ಆತ್ಮ ಸಾಕ್ಷಿಗೆ ಸರಿಯೆಂದು ತೋರುವ ಸಮತ್ವ ಸಾಧನೆಗೆ ಬಳಸಿಕೊಳ್ಳದಿರಲಾರನು. ಒಬ್ಬಿಬ್ಬರು ಸರಕಾರಿ ಅಧಿಕಾರಿಗಳೇ ಹೇಳಿದಂತೆ ಚೀನೀಯ ಆಕ್ರಮಣ ನಮ್ಮ ಕಣ್ಣನ್ನು ತೆರೆಯಿಸಿ, ಅಪ್ರತ್ಯಕ್ಷವಾಗಿ ಉಪಕಾರವನ್ನೇ ಮಾಡಿದೆ ಈಗ ನಾವು ಕಣ್ಣನ್ನು ಸರಿಯಾ


## ಉದಾರ ದಾನ ಮಾಡಿರಿ—
## ಪ್ರತಿಯೊಂದು ನಯಾ ಪೈಸಾವೂ ಗಣನೀಯವಾಗಿದೆ
## ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳ ಮನವಿ.

ಎಸ್. ನಿಜಲಿಂಗಪ್ಪ, ಬಿ. ಎ. ಎಲ್ ಎಲ್. ಬಿ,
ಮುಖ್ಯಮಂತ್ರಿ.

"ವಿಧಾನ ಸೌಧ"
ಬೆಂಗಳೂರು—1
ದಶಂಬರ 7, 1962.

ಬೇಂಕುಗಳಲ್ಲಿ ಎಕೌಂಟ್ ಇರುವ ಎಲ್ಲಾ ಜನರು ತಮ್ಮ ತಮ್ಮ ಎಕೌಂಟ್‌ಗಳಲ್ಲಿ ತಿಂಗಳಾಂತ್ಯದಲ್ಲಿ ಉಳಿಯುವ ಪ್ರತಿ ನಯಾ ಪೈಸಾವನ್ನು ರಾಷ್ಟ್ರೀಯ ರಕ್ಷಣಾನಿಧಿಗೆ ತೆರುವಂತೆ ತಮ್ಮ ತಮ್ಮ ಬೇಂಕುಗಳಿಗೆ ಅಧಿಕಾರ ವಹಿಸಿ ಕೊಡಬೇಕಾಗಿ ನಾನು ದೈನ್ಯದಿಂದ ಕೇಳಿಕೊಳ್ಳುತ್ತೇನೆ. ಈ ಚಿಕ್ಕ ಪುಟ್ಟ ಕೊಡುಗೆಗಳೇ ಬಹು ದೊಡ್ಡ ಮೊತ್ತವಾಗಬಲ್ಲವು.

ನಮ್ಮ ಧೀರ ಜವಾನರಿಗಾಗಿ ಈ ರೀತಿಯ ಸೌಹಾರ್ದ-ಸಹಕಾರಗಳನ್ನು ನೀಡಲು ಯಾರೂ ಹಿಂಜರಿಯಲಾರರೆಂಬ ಬಗ್ಗೆ ನನಗೆ ವಿಶ್ವಾಸವಿದೆ.

(ಸಹಿ) **ಎಸ್. ನಿಜಲಿಂಗಪ್ಪ.**

ಮಾನ್ಯ ಮುಖ್ಯ ಮಂತ್ರಿಗಳ ಈ ಮನವಿಯನ್ನು ಮನ್ನಿಸಿ ಆವಶ್ಯವಿರುವ ಅಧಿಕಾರ ಪತ್ರಗಳನ್ನು ನಮ್ಮ ಗೀಯುವಂತೆ **ಕೊರ್ಪೊರೇಶನ್ ಬೇಂಕ್** ತನ್ನ ಎಲ್ಲಾ ಎಕೌಂಟ್‌ದಾರರನ್ನು ಈ ಮೂಲಕ ಅರಿಕೆ ಮಾಡಿಕೊಳ್ಳುತ್ತದೆ.

ಅಧಿಕಾರ ಪತ್ರಗಳ ಮಾದರಿ ಪ್ರತಿಯು ಬೇಂಕಿನ ಎಲ್ಲಾ ಶಾಖೆಗಳಲ್ಲಿ ಸಿಗುವುವು.

## ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು
ಉಡುಪಿ.

(ಸ್ಥಾಪನೆ 1906)

ಆಡಳಿತ ಆಫೀಸು
ಮಂಗಳೂರು

( ರಾಷ್ಟ್ರದ ಪವಿತ್ರ ಸೇವೆಯಲ್ಲಿ )

'ಪಿರಮಿಡ್'

ಗಿ ತೆರೆದು ನೋಡುವುದು ನಮ್ಮ ಅಪರಿಹಾರ್ಯವಾದ ಕರ್ತವ್ಯ.

“ಕಮ್ಯೂನಿಸ್ಟರಲ್ಲಿ ಸರ್ವಾಧಿಕಾರಿತ್ವವಿರುತ್ತದೆ; ಆದುದರಿಂದ ಅಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸುವುದು ಸುಲಭ; ಪ್ರಜಾಸತ್ತೆಯಲ್ಲಿ ಹತ್ತು ಜನರ ಮರ್ಜಿ ಕಾಯಬೇಕಾಗುತ್ತದೆ; ಆದುದರಿಂದ ಅಷ್ಟು ಮಟ್ಟಿಗೆ ಭ್ರಷ್ಟಾಚಾರವನ್ನು ಇಲ್ಲಿ ತಡೆಗಟ್ಟಲು ಸಾಧ್ಯವಿಲ್ಲ— ಅದನ್ನು ಸಹಿಸಿಕೊಂಡಿರ ಬೇಕು” ಎಂಬ ಒಂದು ವಾದವನ್ನು ಆಚರಣೆಯಲ್ಲಿಟ್ಟುಕೊಂಡಿರುವುದಲ್ಲದೆ, ಸಿದ್ಧಾಂತವೆಂದು ಕೆಲವರು ನಂಬಿದಂತೆಯೂ ಇತ್ತೀಚಿಗೆ ಕಂಡು ಬಂದಿದೆ. ಇಂಥ ಸಿದ್ಧಾಂತಿಗಳ ಭ್ರಷ್ಟವಾದಕ್ಕೆ ಸೊಪ್ಪು ಹಾಕುವುದು ಬುದ್ಧಿ ಇದ್ದವರಿಗೆ ಭೂಷಣವಲ್ಲ. ಈ ಸಿದ್ಧಾಂತಕ್ಕೆ ಶರಣು ಹೊಕ್ಕು ಕಟ್ಟುವ ನಾಗರಿಕತೆ ಮನುಷ್ಯ ಸಂಸ್ಕೃತಿಗೆ ಕುಠಾರಪ್ರಾಯವಾದುದು. ಅಂಥ ನಾಗರಿಕತೆ ಅನಾಗರಿಕತೆಗಿಂತ ಕೀಳು. ಅದು ಯಾವ ರಾಜ್ಯಪದ್ಧತಿಯೇ ಆಗಿರಲಿ ಅದಕ್ಕದು ಭೂಷಣವಲ್ಲ, ಘಾತಕ ಎಂಬುದನ್ನು ಅರಿಯಲಾರದವರ ಅಜ್ಞಾನ ಹಿಮಾಲಯೋಧಿಕ, ಮನುಷ್ಯರನ್ನು ಜೀವನ ಪದ್ಧತಿಯೂ ಜೀವನ ಪದ್ಧತಿಯನ್ನು ಮನುಷ್ಯರೂ ರೂಪಿಸುವುದು ಪ್ರತ್ಯಕ್ಷ ಸತ್ಯ. ಜೀವನ ಪದ್ಧತಿಯ ಒಂದು ಮುಖ್ಯಾಂಗವಾದ ಸರಕಾರಿ ಆಡಳಿತವು ಭ್ರಷ್ಟಾಚಾರವನ್ನು ತಡೆಗಟ್ಟಲು ಅಸಮರ್ಥವಾದರೆ, ನಾವು ಪವಿತ್ರವೆಂದು ಕೊಂಡಾಡುತ್ತಿರುವ ನಮ್ಮ ರಾಜಕೀಯ ಸ್ವಾತಂತ್ರ್ಯ ಉಳಿಯಲಾರದು. ಭ್ರಷ್ಟ ರೀತಿನೀತಿಗಳಿಂದ ಸಮಾಜದಲ್ಲಿಯ ಸದಸ್ಯರ ವೈಯಕ್ತಿಕ ನೀತಿಮತ್ತೆ ಅಳಿದು ಅವರು ದಿನೇದಿನೇ ಭಂಡರಾಗುತ್ತ ಹೋಗುತ್ತಾರೆ. ಭಂಡತನವು ಸಂಪೂರ್ಣವಾಗಿ ಅಮಾನುಷ, ಅಸಾಮಾಜಿಕ, ಅರಾಷ್ಟ್ರೀಯ. ಆದುದರಿಂದ ಅದರ ಶತಾಂಶವು ವ್ಯಕ್ತಿಗಳಲ್ಲೂ ಆ ಮೂಲಕ ಅದರ ಕೂಟ ರೂಪದ ಸಮಾಜ (ಅಥವಾ ರಾಷ್ಟ್ರ)ದಲ್ಲೂ ಹೆಚ್ಚುತ್ತ ಹೋಗಲು ಈ ಅಸಾಂದರ್ಭಿಕ ಸಹನೆ ಕಾರಣವಾಗುತ್ತದೆ; ದುಃಶೀಲವನ್ನು ಬೆಳೆಯಗೊಡಲು ಅವಕಾಶ ಕೊಡುವ ಯಾವ ಸಂಸ್ಥೆಯೂ ತನ್ನ ಹಾಗೂ ತನ್ನ ಅವಲಂಬಿಗಳ ಹಿತವನ್ನು ಕಾಯಲಾರದು. ಅವರ ನಶ್ವರತೆ ಆತ್ಯಧಿಕ. ಯಾವ ರಾಜ್ಯ ಧರ್ಮವೂ ಪ್ರಾಮಾಣಿಕ, ದಕ್ಷ ತಜ್ಞ, ಹೊಣೆಗಾರ, ನ್ಯಾಯನಿಷ್ಠರ ಆಡಳಿತ ಸೇವಕರಿಲ್ಲದೆ ತನ್ನ ಆದರ್ಶವನ್ನು ಸಾಧಿಸಿಕೊಳ್ಳಲಾರದು. ಈ ಗುಣಗಳಿಲ್ಲದವರನ್ನು ಮನೆಗೆ ಕಳಿಸದ ಸರಕಾರವೆಂದೂ ಸುರಾಜ್ಯವನ್ನು ಕಟ್ಟಲಾರದು. ಈ ಗುಣಗಳಿದ್ದವರನ್ನು ಶೋಷಿಸುವ ಸರಕಾರ ಜಗತ್ತಿನಲ್ಲಿ ಎಲ್ಲಿದ್ದರೂ ಪಾಪಿ. ಪ್ರಬುದ್ಧ ಭಾರತದಲ್ಲಿಂದು ಈ ಪ್ರಬೋಧ ಚಂದ್ರೋದಯವಾಗುವ ದಿನ ಸನ್ನಿಹಿತವಾಗಿದೆ. ಜಂತರಕ್ರಾಂತಿಯಿಲ್ಲವಾದುದರಿಂದ ಒಹಿಃ ಕ್ರಾಂತಿಯಿಂದ ನಾವಿದನ್ನು ಸಾಧಿಸಿಕೊಳ್ಳಬೇಕು. ಭ್ರಷ್ಟತೆಯನ್ನು ಜೀವನದಲ್ಲಿ ಪಸರಿಸುವ ಪ್ರಥಮಕಾರಣವೆನ್ನಿಸುವ ಆಡಳಿತವನ್ನು ಸುಧಾರಿಸಲು ಭಗೀರಥ ಪ್ರಯತ್ನ ಮಾಡದೆ ಉಳಿದರೆ ಯಾವ ದೇಶದ ಜನತೆಯಾದರೂ ತಲೆಗೆ ಬೇಸರ ಹಿಡಿದಾಗ ಸರ್ವಾಧಿಕಾರವನ್ನು ಸ್ವಾಗತಿಸೀತು!

ಪಾನ ಪ್ರತಿಬಂಧವೊಂದು ಉತ್ತಮ ಆದರ್ಶ. ಆದರಂತೆಯೇ ಸತ್ಯ ಹೇಳುವುದೂ ಅತ್ಯುತ್ತಮ ಆದರ್ಶ ಲಂಚ ತೆಗೆದುಕೊಳ್ಳದಿರುವುದೂ Rash driving ಮಾಡದಿರುವುದೂ ಕಡಿಮೆಯ ಆದರ್ಶಗಳಲ್ಲ. ಹೊಣೆ ಹೊತ್ತು ಕರ್ತವ್ಯವನ್ನು ಪ್ರಾಮಾಣಿಕವಾಗಿಯೂ ಜಯಪ್ರದವಾಗಿಯೂ ನೆರವೇರಿಸುವುದು ಅಷ್ಟೇ ತೂಕದ ಆದರ್ಶ. ಈ ಆದರ್ಶಗಳು ಸರ್ವ ರಾಜ್ಯಧರ್ಮ ಸಾಧಾರಣ ಇವುಗಳಿಗಾಗಿ ಕಾಯಿದೆ ಮಾಡುವುದು ಸರಿ. ಆದರೆ ವಚನಭ್ರಷ್ಟರ ಸಂತಾನವನ್ನು ಪೋಷಿಸಿಕೊಂಡು ಸಾಗುವ ಯಾವ ಸಮಾಜ ಶಾಡಳಿತವೂ ಈ ಒಂದು ಆದರ್ಶವನ್ನೂ ಸಮರ್ಪಕವಾಗಿ ಸಾಧಿಸಲಾರದು. ಸತ್ಯವು ಸರ್ವ ಆದರ್ಶಗಳಿಗೂ ತಳಹದಿ. ಆದರೆ ಸತ್ಯಕ್ಕೆ ಅಪಮಾನ ಮಾಡುವವರಿಗೆ Criminals ಕ್ರೂರ ಅಪರಾಧಿಗಳೆಂದು ದಂಡಿಸುವ ಕಾಯಿದೆಯಿಲ್ಲ. ಸುಳ್ಳುಗಾರರು ಮಾಡುವುದು Cognizable offence ಅಲ್ಲ. ಸುಳ್ಳು ಹೇಳುವುದು (ಕೆಲವೊಮ್ಮೆ ಬರೆಯುವುದೂ) non-cognizable offence ಕೂಡ ಅಲ್ಲ. ಇದರ ಬಗ್ಗೆ ಯಾವ ಪಾರ್ಟಿ ಪತ್ರಿಕೆಯೂ ಆಶ್ಚರ್ಯಪಟ್ಟಿಲ್ಲ, ಗಾಬರಿಗೊಂಡಿಲ್ಲ. ಪಾನ ಪ್ರತಿಬಂಧದ ರದ್ದಿನ ಬಗ್ಗೆ ಆಕ್ರೋಶಪೂರ್ಣ ಸಂಪಾದಕೀಯಗಳು ಅಲ್ಲಿ ಇಲ್ಲಿ ಅತ್ಯಧಿಕ ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ. ಇದು ಬಹಳ ಸೋಜಿಗ. ಏಕೆಂದರೆ ಮಹಾ ಭಾರತವನ್ನು ಎತ್ತಿಹಿಡಿವ ಯಾವ ಸಂಪಾದಕನೂ “ಸತ್ಯೇನ ವಿಧೃತಂ ಸರ್ವಂ, ಸರ್ವಂ ಸತ್ಯೇ ಪ್ರತಿಷ್ಠಿತಂ” ಎಂಬುದನ್ನು ಏಕೆ ಈ ವರೆಗೆ ಶಾಸನವಾಗಬೇಕೆಂದು ಪ್ರತಿಪಾದಿಸಲಿಲ್ಲ?

ಸತ್ಯವೊಂದನ್ನೇ ಸೌಂದರ್ಯ, ಶುಭ, ಪ್ರಯೋಜನ ಎಂಬ ಮೌಲ್ಯಗಳೂ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳೂ ಅವಲಂಬಿಸಿವೆ—ಎಂಬುದನ್ನು ನಮ್ಮ ಪ್ರಜಾಪ್ರಭುತ್ವವು ಗಾಂಧೀಜಿಯನ್ನು ನೆನೆಸಿ ಕೊಂಡಾಗಲಾದರೂ ಹೃದ್ಗತ ಮಾಡಿಕೊಳ್ಳದಿದ್ದರೆ ಹೇಗೆ? ಸತ್ಯವು Being existence—ಯಾವುದರ? ಎಲ್ಲ ಹಿತಕರ ಆದರ್ಶಗಳ, ಮೌಲ್ಯಗಳ, ತತ್ವಗಳ, ನೀತಿಗಳ! “ಅದು ಅಹಿಂಸೆ, ಅಘಾತಕತನ, ಅವಿನಾಶಕತೆ, ಜೀವನಾಧಾಯಕತೆ ಎಂಬುದರ ಮರ್ಮವನ್ನು ಘಂಟಾಘೋಷವಾಗಿ ಹೇಳಿದ ಗಾಂಧಿಯವರನ್ನು ಅವಮಾನಿಸಿದ ಹಾಗಾಗುತ್ತದೆ— ನಾವು ಅಂತರ್ದೇಶೀಯ ಆಡಳಿತದಲ್ಲಿ ತ್ರಿಕರಣಪೂರ್ವಕವಾದ ಸತ್ಯಾಹಿಂಸೆಗಳನ್ನು ಕಾಯಿದೆ ರೂಪದಲ್ಲಿ ಸ್ವೀಕರಿಸದಿದ್ದರೆ” ಎಂಬುದು ಗಾಂಧಿಯವರ ದರ್ಶನದ ಬಗ್ಗೆ ಗೌರವವಿರುವ ಯಾವ ಮುಖ್ಯ ಮುಖಂಡನಿಗೂ ಈ ವರೆಗೆ ಹೊಳೆಯದಾಯಿತೇ? ಪಾನ ಪ್ರತಿಬಂಧ, ಲಂಚನಿರ್ಮೂಲನ ಲಾಭ ಬಡಿಕತನದ ನಿರೋಧನ ಮುಂತಾದವೆಲ್ಲವೂ ಸತ್ಯವನ್ನು ಆಧರಿಸಿದಾಗ ಮಾತ್ರ ಸತ್ಯವಾಗಿ ಜೀವನದಲ್ಲಿ ನಮ್ಮ ಅನುಭವಕ್ಕೆ ಬರುತ್ತವೆ. ವಿದ್ವಜ್ಜನರ ಆತ್ಮತೃಪ್ತಿಗೆ ಮೇಲೆ ಹೇಳಿದ ಯಾವ ಆದರ್ಶವೂ ಕಳೆದ ವಿಷಮಕಾಲಾವಧಿಯ ವರೆಗೂ ನೂರಕ್ಕೆ ಇಷ್ಟು ಪ್ರಮಾಣದಲ್ಲಿ ಸತ್ಯವಾಗಿ ಜೀವನದಲ್ಲಿ ಕಂಡುಬಾರದುದೇ ಕಾರಣ; ಕೇವಲ ಪಾರ್ಟಿ ದ್ವೇಷ, ದೇಶಭಕ್ತ ಭಾವ, ನಿಂದಾನಂದಶೀಲ, ವಾಚಾಲತೆ, ಅಧಿಕಾರ ದೊರಕದುದರಿಂದುಂಟಾದ ಅಸೂಯೆ ಮುಂತಾದ ಕಾಡಾಡಿತನಗಳೇ ಕಾರಣವೆಂದು ವಾದಿಸುವುದು ಭ್ರಷ್ಟತೆಯ ಚರಮಸೀಮೆ. ದೇಶಪ್ರೇಮವು ತನ್ನೊಬ್ಬನ ಅಥವಾ ತನ್ನೊಂದು ಪಾರ್ಟಿಯ Monopoly ಎಂದು ಭ್ರಮಿಸಿಕೊಂಡು ತನ್ನ ಅಭಿಪ್ರಾಯವನ್ನು ಸಕಾರಣವಾಗಿ ವಿರೋಧಿಸುವವರೂ ದೇಶಹಿತ ವಿಮುಖರೆಂದು ಸಾರುವುದು ಯಾವ ಅವಸ್ಥೆಯಲ್ಲಿರುವ ಯಾವ ಪ್ರಭುವಿಗೂ ಹಿತಕರವಲ್ಲ. ಮಹಾ ಪುರುಷತ್ವವೂ ಹಾಗೇ ಗುತ್ತಿಗೆದಾರಿಕೆಯಿಂದ ದಕ್ಕತಕ್ಕದ್ದಲ್ಲ. ಈ ಗುತ್ತಿಗೆದಾರಿಕೆಯ ಭಾವ ಒಡಮೂಡಿದಾಗಲೇ—

“ಕಪಿಲೋ ಯದಿ ಸರ್ವಜ್ಞಃ ಕಣಾದೋನೇತಿ ಕಾ ಪ್ರಮಾ?” ಎಂಬ ಸವಾಲು ಹೊರಟದ್ದು. “ಕವಯಃ ಕಾಳಿದಾಸಾದ್ಯಾಃ ಕವಯೋ ವಯಮಪ್ಯಮೀ” ಎಂಬುದು ದುರಹಂಕಾರಿಗಳ ಘೋಷಣೆಯಾಗುತ್ತ ಬಂದಿರುವುದು. ನಮ್ಮ ಪ್ರಜಾರಾಜ್ಯದ ಸ್ವರೂಪವನ್ನು ಮಲಿನಗೊಳಿಸದಂತೆ ಜಾಗರೂಕರಾಗಿರುವುದು ಇಂದಿನ ಆಪದ್ಧರ್ಮದ ಆತ್ಮ

ಚೀನೀಯರ ಆಕ್ರಮಣವು ನಮ್ಮ ಆಡಳಿತದಲ್ಲಿ ಉಂಟಾದ ರೋಗದ ಸ್ಫೋಟರೂಪ ಎಂಬುದನ್ನೀಗ ಕೆಲ ನಿಜವಾದ ಧೀಮಂತ ದೇಶ ಭಕ್ತ ವೃತ್ತಗಳು ಅರಿಯತೊಡಗಿದುದು ಶುಭ ಚಿಹ್ನೆ. ಈ ಅರಿವು ದೇಶಾದ್ಯಂತ ಸರ್ವ ಪ್ರಜೆಗಳಲ್ಲೂ ಪ್ರಸರಿಸ ಬೇಕು. ಆದೀಗ ಕೇಂದ್ರದ ಒಬ್ಬಿಬ್ಬ ಅಥವಾ ಹತ್ತಾರು ಮಹನೀಯನೇತಾರರಿಗಷ್ಟೇ ಗೊತ್ತಾಗಿದೆ. ಅವರೀಗ ಅದರಿಂದ ಗತಕಾಲೀನ ಆಡಳಿತದ ಲೋಪದೋಷಗಳ ದುಷ್ಫಲದಿಂದ ನಮ್ಮನ್ನು ಬದುಕಿಸಲು ಅಹೋರಾತ್ರಿ ಶ್ರಮಿಸಲಾರಂಭಿಸಿದ್ದಾರೆ. ಅವರ ಶ್ರಮಕ್ಕೆ ಸಾಫಲ್ಯ ದೊರಕಲೆಂದು ನಾವೆಲ್ಲ ಹಾರಯಿಸುತ್ತಿದ್ದೇವೆ. ಈ ಹಾರಯಿಕೆಯು ಕೇವಲ ಭಕ್ತಿಪೂರ್ಣವಾಗಿದ್ದರೆ ಸಾಲದು; ಜ್ಞಾನಪೂರ್ಣವಾಗಿಯೂ ಇರಬೇಕು. Devotion without Knowledge is blind and therefore powerless or harmful—ಅಜ್ಞಾನ ಭಕ್ತಿಯು ಕುರುಡು; ಅದು ಅಶಕ್ತ ಅಥವಾ ಘಾತಕ.

ಆಡಳಿತವು ರಾಜ್ಯ ಧರ್ಮಮೂರ್ತಿಯ ರಕ್ತನಾಡಿ ಮುಂಡ. ಹೇಗೆ ರಕ್ತನಾಡಿಗಳಲ್ಲಿ ಕೆನ್ನೆತ್ತರನ್ನು ಸೋಸುವ ಮತ್ತು ಕೆನ್ನೆತ್ತರನ್ನು ಪೂರಯಿಸುವ ಎರಡು ಜಾತಿಗಳಿರುವುವೋ ಹಾಗೇ ಎಲ್ಲ ಬಗೆಯ ರಾಜಕೀಯ ಪದ್ಧತಿಯ ಆಡಳಿತಕ್ಕೂ ದುಃಸೇವಕ ನಿವರ್ತನ ಮತ್ತು ಸುಸೇವಕ ಪುರಸ್ಕರಣ ಎಂಬ ಎರಡು ಕರ್ತವ್ಯಶಾಖೆಗಳಿವೆ. ಈ ಶಾಖೆಗಳನ್ನು ಅಲಕ್ಷಿಸುವುದು ಅರಾಜಕತೆಗೆ ಹಾದಿ ಮಾಡಿಕೊಡುವ ಶಿಥಿಲದಂಡಶೀಲ ಅಥವಾ ಉಗ್ರದಂಡಶೀಲ. ಸಮದಂಡ ಶೀಲವೊಂದೇ ತಾರಕ. ದಂಡಸಮತ್ವವಿಲ್ಲದುದು ನಮ್ಮ ಗಣಪ್ರಜಾ ಜೀವನದಲ್ಲಿ ಗೊಂದಲವುಂಟಾಗಲು ಆದಿಕಾರಣ ಮತ್ತು ಅಂತ್ಯಕಾರಣ; ನಡುವಣ ಕಾರಣಗಳು ಎಷ್ಟಿದ್ದರೂ ಅವುಗಳ ಸ್ಥಾನವು ತುಲನಾತ್ಮಕವಾಗಿ ಗೌಣ—ಎಂಬ ಸಾರವಾದ ಸತ್ಯವನ್ನು ಪ್ರಜಾರಾಜ್ಯೋತ್ಸವದ ಈ ದಿನ ನಾವು ಮನನ ಮಾಡೋಣ. Politics ಅಂದರೆ ಏನು ಅನ್ನುವುದು ಮನುವಿಗೆ ಗೊತ್ತಿದ್ದಷ್ಟು ಇಂದು ನಮ್ಮ ಭಾರತದಲ್ಲಿ ವ್ಯವಹಾರದೃಷ್ಟ್ಯಾ ಯಾರಿಗಾದರೂ ಗೊತ್ತಿದೆ ಎನ್ನುವ ಧಾರ್ಷ್ಟ್ಯ ತೋರಿಸುವುದು ಕೇವಲ ಭ್ರಮಾವಿಲಾಸ. ದಂಡ ನೀತಿಯು ಅಥವಾ ಆಡಳಿತದ ಬಗ್ಗೆ ಅಪನಿತ್ತ ಉಲ್ಲೇಖ ಅನುಭವೈಕ ವೇದ್ಯ. ಬರಿದೆ ಹಳೆಯ ಕಂದಾಚಾರವೆಂದು ಸಂಸ್ಕೃತದಲ್ಲಿ ಬರೆದುದೆಲ್ಲವನ್ನೂ ನಿಂದಿಸುವ (ಅಥವಾ ವಂದಿಸುವ) ಪೂರ್ಣತೆ ಆಧುನಿಕತೆಯೆನ್ನಿಸಲಾರದು, ಭಾರತೀಯತೆ ಮೊದಲೇ ಆಗಲಾರದು. ರತ್ನಪರೀಕ್ಷಕನೊಬ್ಬನೇ ನಿಜರತ್ನವನ್ನು ಗುರುತಿಸಬಲ್ಲ. ಹಾಗೇ ನಮ್ಮ ಹಿರಿಯರಿತ್ತ ಎಚ್ಚರಿಕೆಯನ್ನು ನಿಜವಾದ ರಾಜ್ಯಧರ್ಮಜ್ಞನೊಬ್ಬನೇ ಈಗ ಅರಿತು ಆಚರಿಸಬಲ್ಲ. ಅಂಥ ಪರೀಕ್ಷಕ ಗುರುವನ್ನು ಗುರುತಿಸಿ, ಅವನ ಮೂಲಕ ನಮ್ಮ ಗತೇತಿಹಾಸದ ನಾಗರಿಕತಾ ವಿಶಾಲಚರಿತ್ರ ರಾಜಕೀಯ ಪ್ರಬೋಧವನ್ನು ಅರಿತು ಅರಗಿಸಿಕೊಳ್ಳುವ ಪ್ರತಿಜ್ಞೆಯನ್ನಿಂದು ಮಾಡೋಣ. ಸಮರದಂಡಶೀಲ ನೇತೃಗಳನ್ನು ಭಾರತವಿಂದು ಬೆಳಕಿಗೆ ತಂದು ಅಂತರ್ದೇಶೀಯ ವ್ಯವಹಾರಗಳ ನೇತೃತ್ವದಲ್ಲಿ ನಿಲ್ಲಿಸುವುದು ಅಂತಾರಾಷ್ಟ್ರೀಯ ಸಂಬಂಧ ಸುಧಾರಣೆಗೆ ಅತ್ಯನಿವಾರ್ಯ, ವಿಶ್ವಶಾಂತಿಗೆ ಆತ್ಮಸಹಕಾರ ಸ್ವಾತಂತ್ರ್ಯ ರಕ್ಷಣೆಯ ಬಲ ನಮ್ಮಲ್ಲಿ ಬೆಳೆದು ಸ್ಥಿರವಾಗಿ ನಿಲ್ಲಲು ಅತ್ಯಂತ ಆವಶ್ಯಕ ಎಂಬ ಧೀಯನ್ನು ಭಾರತ ಸೂರ್ಯನು ಪ್ರಚೋದಿಸಲಿ!

॥ಜಯತು ಭಾರತ ಪ್ರಜಾರಾಜ್ಯ ಪುರುಷ॥



*With the Season's Greetings—*
*To all our Patrons & Well-wishers*
*From*

# JYOTHI TALKIES
**MANGALORE**

ಜ್ಯೋತಿ

12-1-63ರಿಂದ ಪ್ರತಿದಿನ
3 ದೇಖಾವೆಗಳು

ಮೆಹಬೂಬ್ ಪ್ರೊಡಕ್ಷನ್ಸ್‌ರವರ

## ಸನ್ ಆಫ್ ಇಂಡಿಯ
(ಹಿಂದಿ)

(ಟೆಕ್ನಿಕಲರ್ ಮತ್ತು ಫಿಲ್ಮ್ ಸ್ಕ್ರೋಪ್)

ತಾರಾಗಣ. ಸಜಿತ್ ● ಕುಂಕುಂ ● ಕಮಲ್ ಜಿತ್ ● ಜಯಂತ್ ●

ದಿಗ್ದರ್ಶನ. ಮೆಹಬೂಬ್ ಸಂಗೀತ: ನೌಷದ್

**ನಿರೀಕ್ಷಿಸಿರಿ!**

ಆಧುನಿಕ ಸುಸಜ್ಜಿತ
ನವೀನ ಸಿನೇಮಾ ಮಂದಿರ

# ಕಲ್ಪನಾ
## ಥಿಯೇಟರ್

ಉಪೇಂದ್ರ ಭಾಗ್, ಉಡುಪಿ

ಪ್ರಾರಂಭ ದಿನವನ್ನು ನಿರೀಕ್ಷಿಸಿರಿ!

ಪ್ರೊಪ್ರೈಟರ್ಸ್:
## ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್
ಉಡುಪಿ

ಪ್ರಜಾರಾಜ್ಯೋತ್ಸವದ
ಶುಭಾಶಯಗಳು.

ಆಧುನಿಕ ಸೌಕರ್ಯಗಳಿಂದ
ಪ್ರಶಾಂತ ವಾತಾವರಣದಿಂದ
ಗ್ರಾಹಕರ ಸೇವಾತುರದಿಂದ

ಕೂಡಿರುವ ಪ್ರವಾಸಿಗರ ಪ್ರಥಮ ಶ್ರೇಣಿಯ

ಪ್ರಸಿದ್ಧ ಭೋಜನ ಮತ್ತು ವಸತಿ ಗೃಹ

# ರೋಯಲ್ ಮಹಾಲ್
ಉಡುಪಿ

ರುಚಿ-ಶುಚಿಗಳಿಗೆ, ನಯವಿನಯ
ಮೇಲ್ವಿಚಾರಕ್ಕೆ ಹೆಸರಾದುದು.

ಕೆ. ವೆಂಕಟ್ರಮಣ ಭಟ್,
ವ್ಯಾಪಾರಕರು

*Greetings from*
## SRINIVAS BROTHERS
CAR STREET, MANGALORE-1.

●

## J. B. A. PRINTING INKS PRIVATE LTD.,
AGRA ROAD, BHANDUP, BOMBAY—78.

*Manufacturers of*
**Finest Qualities of Printing Inks**
&
**All types of Varnishes.**

●

*For your requirements please contact*

# SRINIVAS BROTHERS
PAPER MERCHANTS,
BOOK-SELLERS & STATIONERS,
POST BOX NO. 130,
MANGALORE-1.

Phone: 449 Grams: ACTIVE

# ನಮ್ಮ ಆರ್ಥಿಕ ಸ್ವಾವಲಂಬನ ಸಮಸ್ಯೆಗಳು

(೧೪ನೇ ಪುಟದಿಂದ)

ಈಗ ಬೆಂಕಿಪೊಟ್ಟಣದ ಉದಾಹರಣೆ ಕೊಳ್ಳೋಣ. ಇದನ್ನು ಕಾಶ್ಮೀರದಲ್ಲಿ ಕೊಳ್ಳಿ; ಕನ್ಯಾ ಕುಮಾರಿಯಲ್ಲಿ ಕೊಳ್ಳಿ. ಬೊಂಬಾಯಿಯಲ್ಲಿಯೂ ಒಂದೇ ಬೆಲೆ. ಬಂಗಾಳದಲ್ಲಿಯೂ ಒಂದೇ ದರ; ಆರು ನಯೇ ಪೈಸೆ. ಈ ಮಾದರಿಯಲ್ಲಿ ವಸ್ತು ಒಡವೆಗಳನ್ನು ವಿಕ್ರಯಿಸಲು ಸಾಧ್ಯವಿಲ್ಲವೆ? ಸಾಧ್ಯವಿದೆ. ಸಾರ್ವಜನಿಕ ಜಗನ್ನೋದ್ಧಾರ ಹೃದಯದಲ್ಲಿದ್ದ ಜನ ಈ ವ್ಯವಹಾರಕ್ಕೆ ತೊಡಗಬೇಕು. ಇದು ಸಹಕಾರ ಸಂಘಗಳಿಂದ ಮಾತ್ರ ಸಾಧ್ಯ. ಪ್ರತಿಯೊಂದು ಹಳ್ಳಿಗೂ ಒಂದು ಸಹಕಾರ ಸಂಘದ ಅಂಗಡಿ ತೆರೆಯಲ್ಪಡಬೇಕು ಅನ್ನ, ವಸ್ತ್ರ ಮತ್ತು ವಸತಿ ಇವು ಮೂರರ ಮೇಲೆ ಸರಕಾರದ ಹಿಡಿತವಿರಬೇಕು ಬೇಕಾದರೆ ಇದನ್ನು ಜನತಾ ಯೋಜನೆಯನ್ನಿ. ಈ ಮೂರು ವಸ್ತು ಜನ ಸಾಮಾನ್ಯರ ಕೈಗೆ ಎಟಕುವಂತಾಗಬೇಕು. ಹೀಗಾಗದಿರಲು ಕಾರಣ ನಮ್ಮ ವ್ಯಾಪಾರೀ ಸಂಸ್ಥೆಗಳು, ಹಣವನ್ನು ಉತ್ಪಾದಿಸದೇನೇ "ಲಾಭ ನಷ್ಟ"ಹಂಚಿ ತಿನ್ನುವ ಸ್ಟಾಕ್ ಎಕ್ಸ್‌ಚೇಂಜಗಳನ್ನು ಮುಚ್ಚಬೇಕು. ದಲಾಲಿಗಳ ನಿರ್ಮೂಲನವಾಗಬೇಕು.

ಅವೆಷ್ಟು ಖಾಸಗಿ ಲಿಮಿಟೆಡ್ ಕಂಪನಿಗಳು ವ್ಯವಸಾಯಕ್ಕೆ ಇಳಿವವೆ? ಅವರಿಗೆ ಬೇಸಾಯ ಬೇಡ. ಅವರು, ಮಹಾರಾಷ್ಟ್ರ ಸರಕಾರ ಮುಂಬಯಿಯ ಆರೇ ಹಾಲಿನೋದ್ಯಮ ಕೇಂದ್ರದಿಂದ ಲಾಭ ಬಧಕತನ ಮಾಡುವುದೆಂದು ಬೊಬ್ಬಿಡುತ್ತಾರೆ. ಆದರೆ ಖಾಸಗಿ ಕಂಪನಿಯವರಿಗೆ ಹಾಲಿನ ಉದ್ಯಮ ದಕ್ಕುವುದಿಲ್ಲ ಅವರಿಗೆ ಉಕ್ಕು ಬೇಕು. ಸಿಮೆಂಟು ಬೇಕು. ಉಣ್ಣೆ ಬೇಕು. ನಿರಂಕುಶ ರೀತ್ಯಾ ಲಾಭ ಗಳಿಸಬಲ್ಲ ಉದ್ಯಮಗಳೆಲ್ಲ ಅವರಿಗೆ ಬೇಕು. ಎಂದೇ ಸರಕಾರದೊಡನೆ ಹೋರಾಟ.

ಮೇಲಿನದನ್ನು ಈ ರೀತಿಯಲ್ಲಿ ವರ್ಣಿಸಲೇ? ಅವರಿಗೆ ಹಾಲಿನ ಉದ್ಯಮ ಬೇಕು. ಅವರು ಹಾಲಿಗೆ ನೀರೆರೆಯುವವರಲ್ಲ! ನೀರಿಗೆ ಹಾಲು ಚಿಮುಕಿಸಿ ಹಾಲೆಂದು ಮಾರುವ ಸವಲತ್ತು ಬೇಕು ಎನ್ನುವವರು! ನಮ್ಮ ನಾಡಿನಲ್ಲಿ ಪ್ರತಿಯೊಂದು ಉದ್ಯಮ ಈ ತೆರನಾಗಿ ಸಾಗುತ್ತಿದೆ. ನಿರಾತಂಕದಿಂದ ಸಾಗುತ್ತಿದೆ. ಆಹಾರ ವಸ್ತುಗಳಿಗೆ ಬೇಕಾದುದನ್ನು ಬೆರೆಸಿ ಮಾರುತ್ತಾರೆ! ತಿನ್ನುವ ಎಣ್ಣೆಗೆ 'ಕಲ್ಲೆಣ್ಣೆ' ಯನ್ನು ಕೂಡಿಸುತ್ತಾರೆ!! ಔಷಧಿಗಳಿಗೂ ಈ ಅಂಟುರೋಗ ತಪ್ಪಿಲ್ಲ. ರೋಗಿ ಸತ್ತರೆ ಯಾರಿಗೂ ದುಃಖವಿಲ್ಲ ಲಾಭ ಬಧಕತನದಿಂದ ಮನುಷ್ಯ ಎಂತಹ ಹೇಯ ಅಥವಾ ನೀಚ ಕೆಲಸಕ್ಕೂ ಸಿದ್ಧ. ಇದಕ್ಕೆಲ್ಲ ಕಾರಣಭೂತರಾರು? ನಮ್ಮ ಜನರೇ! ಜನರ ಹೃದಯ ಪರಿವರ್ತನವಾಗಬೇಕು. ಸಹಕಾರ ಸಂಘ ರೀತ್ಯಾ ವ್ಯಾಪಾರ ಸಾಗಬೇಕು.

ಇನ್ನು ಜನಸಂಖ್ಯಾ ಸಮಸ್ಯೆ. ದಿನದಿಂದ ದಿನ ಹೆಚ್ಚುತ್ತಿದೆ. ಇದು ವರೆಗೆ ಸಾಧಿಸಿದ ಪ್ರಗತಿಯಿಂದ ಮಕ್ಕಳು ಮುಂಗಳ ಮರಣಸಂಖ್ಯೆ ಕಡಿಮೆಯಾಗಿದೆ. ಸರಾಸರಿ ಆಯುಷ್ಯ ಹೆಚ್ಚಿದೆ. ಆದರೆ ಸಂತತಿನಿಯಮದ ಶಿಕ್ಷಣ ನಿರಕ್ಷರ ಕುಕ್ಷಿಗಳಿಗೆ ಎಂತಹ ಲಾಭ ನೀಡೀತು? ಆದೊಬ್ಬ ಐದು ಮಕ್ಕಳ ಖಾರಕಾನೆಯ ಕಸುಬುದಾರ ಹೆಂಡತಿಯನ್ನು ಐದು ವರ್ಷ ಊರಲ್ಲೇ ನಿಲ್ಲಿಸಿದನಂತೆ! ಆರನೆಯ ವರ್ಷ ಮನೆಗೆ ಮರಳಿ ಹೆಂಡತಿಯೊಡನಿದ್ದು ಮರಳಿದಾತ, ಮುಂದೊಂದು ದಿನ ಹತ್ತು ಮಕ್ಕಳ ತಂದೆಯಾದ. ಶಾಂತಿ ಬಂತು. "ಮಡದಿ ಹೆತ್ತು ಐದು ಮಕ್ಕಳ ತಾಯಿ; ತಾಯಿ ಮಕ್ಕಳು ಕ್ಷೇಮ" ಅವನ ಪಾಲಿಗೆ ಸಂತತಿ ನಿಯಮನ ಮೋಸ ಕೊಟ್ಟಿತು ಜನಸಂಖ್ಯಾ ಸಮಸ್ಯೆಯನ್ನು ವ್ಯಾಖ್ಯಾನದಿಂದ ಪರಿಹರಿಸಲು ಬರುವಂತಿಲ್ಲ. ಧವಸ ಧಾನ್ಯಗಳನ್ನು ಹೆಚ್ಚು ಬೆಳೆಸಿ ಇದನ್ನು ನೀಗಿಸಬೇಕು.

ಭಾರತದ ಇನ್ನೊಂದು ಮುಖವನ್ನು ನೋಡಿ. ಪ್ರತಿಯೊಂದು ದೇಶದಲ್ಲೂ ಕರತೆರದ ಕಳ್ಳ-ಕೋರ-ಕದೀಮರು ಇರುವರಂತೆ! ಆದರೆ ನಮ್ಮ ಇಂಡಿಯಾದಲ್ಲಿ ಇದ್ದಷ್ಟು ಬೇರಾವ ದೇಶದಲ್ಲಿಯೂ ಇಲ್ಲ. ಕೋಟ್ಯಂತರ ರೂಪಾಯಿ ನ್ಯಾಯವಾದ ಕರಕೊಡದೆ, ಈ ಹಣ ಸರಕಾರಕ್ಕೆ ಕನ್ನಡಿಯೊಳಗಿನ ಗಂಟಾಗಿದೆ. ಇದಕ್ಕಿಂತಲೂ ಬಹಳ ಸೋಜಿಗದ ಸಂಗತಿಯೊಂದರೆ ಕರಕೊಡದವರು, ಕಳ್ಳ ಸಾಗಾಟದವರು ಮತ್ತು ಕಳ್ಳ ಸಂತೆಯವರು ನಿರ್ಭಯದಿಂದ ತಮ್ಮ ನೀಚ ಕೆಲಸವನ್ನು ಸಾಗಿಸುತ್ತಾರೆ. ಇಂದು ನಿಜಕ್ಕೂ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಸಿಕ್ಕಿದೆಯೆಂದರೆ ಅಂತಹರಿಗೆ. ಲಕ್ಷಾಂತರ ರೂಪಾಯಿಯ ಚಿನ್ನ ಕಳ್ಳ ಸಂತೆಯಿಂದ ಆಮದು ಆಗುತ್ತಿದೆ

ಸರಕಾರ ಈ ಸಮಾಜ ಘಾತುಕರನ್ನು ಕಠಿಣ ಶಿಕ್ಷೆಗೊಳಪಡಿಸಬೇಕು. ನಿರ್ದಾಕ್ಷಿಣ್ಯದಿಂದ ದಂಡಿಸಬೇಕು. ಕಳ್ಳ ಸಂತೆಯವರನ್ನು ದೇಶ ದ್ರೋಹಿಗಳನ್ನು ಬೇಕಾದರೆ ಶೂಲಕ್ಕೇರಿಸಬೇಕು! ಬರೀ ಬಾಯಿ ಮಾತು ನೀತಿಕತೆಗಳಿಂದ ಇಂತಹ ಜನ ಬಗ್ಗುವವರಲ್ಲ. ಎಂದಿನ ತನಕ ಈ ದೇಶದ್ರೋಹೀ, ಜನ ಘಾತುಕೀ ವರ್ಗವಿರುವುದೋ ಅಂದಿನ ವರೆಗೆ ನಮ್ಮ ಹಿಂದೂಸ್ಥಾನ ಮುಂದುವರಿಯಲಾರದು.

ಚಿನ್ನ ಎಲ್ಲಾ ಕೆಡುಕುಗಳಿಗೂ ಮೂಲ ಕಾರಣ! ಚಿನ್ನದ ಬೆಲೆಯನ್ನು ಸರಕಾರಕ್ಕೆ ನಿಯಂತ್ರಿಸಲು ಬಾರದೇ? ಪ್ರತಿಯೊಬ್ಬನೂ ತನ್ನ ಚಿನ್ನದ ಲೆಕ್ಕವನ್ನು ಸರಕಾರಕ್ಕೆ ಒಪ್ಪಿಸುವಂತಾಗಲಿ. ಇದಿಷ್ಟು ಸುಲಭ ಕೆಲಸವನ್ನು ಸಾಧಿಸಲು ನಮಗೆ ಅಣು ಬಾಂಬು ಬೇಕೇ? ಸಾವಿರ ರೂಪಾಯಿ ನೋಟಿನ ಸುಗ್ರೀವಾಜ್ಞೆಯಂತೆ ಕೋಟ್ಯಂತರ ರೂಪಾಯಿ ಸರಕಾರದ ಬೊಕ್ಕಸಕ್ಕೆ ಬೀಳುವ ಯೋಜನೆ ಬಂದರೆ ಮಾತ್ರ ಸರಕಾರ ಸಂಕಟದಿಂದ ಪಾರಾದೀತು. ಆದರೆ ನಮ್ಮ ಸರಕಾರ ಇದನ್ನು ಮಾಡೀತೇ? ಚಿನ್ನದ ಬೆಲೆಯನ್ನು ಇಳಿಸ ಹೋಗಿ ನಮ್ಮ ಆರ್ಥಿಕ ಮಂತ್ರಿ ಚಿನ್ನದ ಬೆಲೆಯನ್ನು ಅಪರೋಕ್ಷವಾಗಿ ಏರಿಸಲು ಕಾರಣಭೂತರಾಗಿದ್ದಾರೆ. ಅರ್ಥಾತ್ ಸರಕಾರವೇ ಬೆಲೆ ಇಳಿಸುವ ಬದಲು ಬೆಲೆ ಏರಿಕೆಗೆ ನೆರವಾಗಿದೆ, ಇಂತಹ ಹಾಸ್ಯಾಸ್ಪದ ಕೆಲಸ ಬೇರಾವ ದೇಶದಲ್ಲಾದರೂ ನಡೆದೀತೇ? ನಮ್ಮ ದೇಶದಲ್ಲಿ ಬೇಕಾದಷ್ಟು ಜನಶಕ್ತಿಯಿದೆ, ಖನಿಜ ಸಂಪತ್ತಿದೆ ಹಣವಿದೆ! ಆದರೆ ದೇಶಕ್ಕಾಗಿ, ನಾಡಿನ ಏಳಿಗೆಗಾಗಿ, ಜನರ ಕಲ್ಯಾಣಕ್ಕಾಗಿ ಒಮ್ಮನಸ್ಸಿನಿಂದ ದುಡಿವ ಜನರ ಸಂಖ್ಯೆ ಬೆಳೆಯಬೇಕು. ಕೆಲಸವಿಲ್ಲದವನಿಗೆ ಕೆಲಸ ಸಿಗುವಂತಾಗಬೇಕು. ಭೂಮಿಯಿಲ್ಲದವನಿಗೆ ಭೂಮಿ ಸಿಗಬೇಕು. ಉಳುವವ ಯೊಲದೊಡೆಯನಾಗಬೇಕು. ಅಂದರೆ ರೈತ ಶೋಷಣೆ ಕಡಿಮೆಯಾಗಬೇಕು. ಶತಮಾನಗಳಿಂದ ಸಾಗಿ ಬಂದ ಕೆಟ್ಟ ಪ್ರವೃತ್ತಿಗಳೆಲ್ಲ ನಮ್ಮ ಸಮಾಜದಿಂದ ತೊಲಗಬೇಕು. ನವಯುಗ ಬರಬೇಕು!

ಇವೆಲ್ಲಕ್ಕೂ ಮೊದಲು ಮಾನವನ ಹೃದಯದಲ್ಲಿ ಪರಿವರ್ತನೆಯಾಗಬೇಕು. ವಿಚಾರವಿಲ್ಲದೆ ಕಾರ್ಯ ಸಾಗದ; ಕಾರ್ಯವಿಲ್ಲದೆ ಕೆಲಸ ಸಾಗದು. ಪ್ರತಿಯೋರ್ವನೂ ಮೊದಲು ವಿಚಾರಶೀಲನಾಗಬೇಕು. ತನ್ನ ಸಮಸ್ಯೆಯನ್ನು ನೀಗುವಾಗ ದೇಶದ ಸಮಸ್ಯೆಗಳತ್ತ ತುಸು ಗಮನವನ್ನು ನಲ್ಲಿಸಬೇಕು. ಎಂತಹ ಕಠಿಣ ಸಮಸ್ಯೆಯಾದರೂ ಸರಿಯೇ. ಅದಕ್ಕೆ ಪರಿಹಾರ ವಿಲ್ಲದಿಲ್ಲ. ಆದರೆ ನಾವು ದುಡಿಯಬೇಕು. ಅವಿಶ್ರಾಂತಿಯಿಂದ, ನಿಸ್ವಾರ್ಥದಿಂದ, ಲೋಕಕಲ್ಯಾಣ ವೃತ್ತಿಯಿಂದ ಅನವರತ ದುಡಿಯಬೇಕು, ಬೆವರಿಳಿಸಬೇಕು, ತ್ಯಾಗಗಳಿಂದ ಈ ಕೆಲಸ ಸಾಗದ..

ಸ್ವಾವಲಂಬನ-ಪರಿಪೂರ್ಣತೆಯ ಗುರಿಯನ್ನು ಸೇರಲು ಒಳ ದಾರಿಯಿಲ್ಲ. ಸುಲಭವಾದ ಮಾರ್ಗವಿಲ್ಲ. ಬೆವರು ಮತ್ತು ಕಷ್ಟ ಇವುಗಳಿಂದಲೇ ಆದ. ಸಾಧ್ಯವಾದ ಕ್ಷೇತ್ರ ಪಸೇ ಇರಲಿ. ಹೆಚ್ಚು ದುಡಿದರೆ ಮಾತ್ರ ಸ್ವಾವಲಂಬನ ಸಾಧ್ಯವಾದೀತು.

---

ಹಿಂದೂ ಧರ್ಮವು ಬೆಲೆಯಿಲ್ಲದ ರತ್ನಗಳಿಂದ ತುಂಬಿದ ಅಪಾರ ಸಾಗರವಾಗಿದೆ.

○ ○ ○

ಹೆಂಡತಿಯು ಗಂಡನ ಗುಲಾಮಳಲ್ಲ, ಸಂಗಾತಿ, ಸಹಕಾರಿಣಿ, ಆತನ ಸುಖ ದುಃಖಗಳ ಸಮಭಾಗಿನಿ. ತನಗೆ ಬೇಕಾದ ಮಾರ್ಗವನ್ನು ಕ್ರಮಿಸಲು ಗಂಡನಷ್ಟೇ ಆಕೆ ಸ್ವತಂತ್ರಳಿದ್ದಾಳೆ.

—ಮ. ಗಾಂಧಿ.


ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾಸೇವೆಯಲ್ಲಿ ತೊಡಗಿರುವ

ಈ ಸಂಸ್ಥೆಯಲ್ಲಿ

**ಲೋಕವಿಖ್ಯಾತಿಗಳಿಸಿರುವ**

ನಂಜನಗೂಡು ಟೂತ್-ಪೌಡರ್

**ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ**

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

**ಚಿತ್ತಾಕರ್ಷಕ ಪರಿಮಳಯುಕ್ತವಾದ**

ಅಗರುಬತ್ತಿ, ಹೇರ್ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧ ದ್ರವ್ಯಗಳೂ ಸಹ

ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

**ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು.**

ಸೋಲ್ ಏಜಂಟರು:— (ಕರ್ನಾಟಕವಾಚಿಗೆ) ದಿ ಯುನೈಟೆಡ್ ಕನ್ಸರ್ನ್ಸ್,
54, ಬಂದರ್ ಬೀದಿ, ಮದ್ರಾಸ್.



ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಸತಿ') ಅವರ ನವೀನ ಜನಪದ ಗೀತಾಸಂಕಲನ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಟಿಪ್ಪಣಿಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ.ಜಿ.ಎಂ. ಕಾಲೇಜು ಕುಂಜಿಬೆಟ್ಟು, ಉಡುಪಿ.

## ಉತ್ತಿಷ್ಠತ ಜಾಗ್ರತ!

[ಕವಿ: ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.]

— ೧ —

ಏಳಿರೆಚ್ಚರಗೊಳಿರಿ! ಭರತ ಪುತ್ರರೆ ಬೇಗ,
ಜಾಡ್ಯ ದುಸ್ವಪ್ನಗಳ ತೆರೆಯು ಸರಿಸಿಹುದು;
ಎಚ್ಚತ್ತು ಕಣ್ಣಾಲಿ ಬಿಚ್ಚುತ್ತ ನೋಡೀಗ
ಎಲ್ಲೆಲ್ಲು ಜಾಗೃತಿಯ ಬೆಳಕು ಹರಿದಿಹುದು.

— ೨ —

ಸುತ್ತಲೂ ಜಗವೆಲ್ಲ ಮಿಗ ಹಕ್ಕಿ ಮರವೆಲ್ಲ,
ಎಚ್ಚರಿನೊಳೆಚ್ಚತ್ತು ಕೂಗಿಡುತಲಿಹವು;
ಪಾಷಾಣ ಪಶು ಹೃದಯವನು ಕಹಳೆ ಕೆರಳಿಸಿವೆ
ವೀರ ರವ ಘೋರ ಹೊಮ್ಮಿ ಮೊರ್ದನಿಸುತಿಹವು!

— ೩ —

ಬಿಡೆ ಬಿಡೆವು ಎಂದೆಂದು ನಮ್ಮದೀ ಸೊತ್ತೆಂದು,
ಕಾದಾಡಿ ತಾಯ್ನಾಡ ಕೀರ್ತಿಯುಳಿಸುವೆವು;
ಸತ್ಯಸಾಧನೆಗಾಗಿ ಮಣ್ಣೊಡಲು ಬಿಡಲಾಗಿ
ನಿತ್ಯ ಶುಭ್ರ ಯಶಶ್ಶರೀರ ಗಳಿಸುವೆವು!

— ೪ —

ಘೋರ ಗರ್ಜನೆಯಿರಲಿ ದಾನವಾರ್ಭಟವಿರಲಿ,
ಮೂರಿಮೃತ್ಯುವೆ ಮುಂದು ಗುಡುಗುಡಿಸಿನಿಂದಿರಲಿ,
ಮಂಗಲೋತ್ಸವದಂದು ಸಂಗೀತಸ್ವರವೆಂದು
ಅದನಾಲಿಸುತ ನುಗ್ಗಿ ನುಗ್ಗುವೆವು ಮುಂದು.

— ೫ —

ಸ್ವರ್ಗ ಸೋಪಾನದಲಿ ಸ್ವಾತಂತ್ರ್ಯಯೋಧರನು
ಸ್ವಾಗತೀಕರಿಸುತಿಹರದೊ ಮುಂದು ಮುಂದು!
ಮಾತೃ ಭೂಮಿಯ ಸೇವೆಯಲಿ ಮಡಿದ ವೀರರಿಗೆ
ಸ್ವರ್ಗ ಸಿರ್ಗಗಳಿಹವು ಕಾಲಡಿಗೆ ಬಂದು.

— ೬ —

ಮುಂದು ಮುನ್ನುಗ್ಗುತಲಿ ಹೆಮ್ಮೆಯಿಂ ಹಿಗ್ಗುತಲಿ
ಸರ್ವ ಸತ್ವದಿ ರಣದ ಭೇರಿ ಹೊಡೆಯುವೆವು;
ಕೆಚ್ಚೆದೆಯ ಕಟ್ಟಾಳುತನದಿ ಬೇಗಲಿ ಬಾಳು
ಸ್ವಾತಂತ್ರ್ಯ ಸ್ವಾವಲಂಬನದಿ ನಡೆಯುವೆವು.

— ೭ —

ವಿಶ್ರಾಂತಿ ವಿಜಯದಲಿ ಕ್ರಾಂತಿ ಕಿಡಿಮಿಂಚಿರಲಿ
ಬಿಸಿರಕುತ ರೋಮರಂಧ್ರದಲಿ ಚಿಮ್ಮಿರಲಿ.
ಧವ್ಯ ಭಾರತಮಾತೆ ಎಚ್ಚತ್ತ ಪುತ್ರರಲಿ
ವರದಹಸ್ತವನಿರಿಸಿ ಹರಸಿನಿಂದಿರಲಿ!

— ೮ —

ತಾಯ ಸೇವೆಯೊಳೆಮ್ಮ ತನುವು ತೃಣವೆನಿಸಿರಲಿ
ಯಜ್ಞಕುಂಡದೊಳಿಂದೆ ಆಹುತಿಗೆ ಸಲಲಿ;
ಧಗ ಧಗಿಸಲೀ ದೇಹ ಸತ್ಯ ಸಂತೋಷದಲಿ
ಅರ್ಪಿಸುವೆವಿದೊ ನಿನ್ನ ಪಾದಪದ್ಮದಲಿ!

Telephone: **140**

*With best compliments from:*

**HOTEL KALPANA**

UP-TO-DATE BOARDING, LODGING
& RESTAURANT,

UPENDRA BAUG, **UDIPI, S. K.**

*Catering for Big Parties
Is Our Speciality.*

*Hotel Kalpana*

*Greetings of the*

**Republic Day**

*From*

**SRI M. MADHVA RAJ,**
*M. L. A.,*

*PROPRIETOR*

**CORONET CANNING COMPANY**

**MALPE (S. INDIA)**



**Phone: 66**

**SRI KRISHNA
JEWELLERY MART**

**Ready Made Jewellery Dept.**

*Commission Agents*

TENKAPET,

**UDIPI,**

S. KANARA



Propr.

**U. Raghavendra Krishna Bhat**

# ಬಂಕಿಮಚಂದ್ರನ ಕಾದಂಬರಿಗಳು

(೧೩ನೇ ಪುಟದಿಂದ)

ರಿಂದ ೧೮೭೩), ೪. ರಜನಿ (೧೮೭೭) ೫. ಕೃಷ್ಣಕಾಂತನ ಉಯಿಲು (೧೮೭೮)

ಐತಿಹಾಸಿಕ ಕಾದಂಬರಿಗಳು.

೧ ದುರ್ಗೇಶನಂದಿನಿ (೧೮೬೫), ೨. ಕಪಾಲಕುಂಡಲಂ (೧೮೬೬), ೩. ಮೃಣಾಳಿನಿ (೧೮೬೯), ೪. ಚಂದ್ರಶೇಖರ (೧೮೭೫). ೫. ಸೀತಾರಾಮ (೧೮೮೭) ೬. ಆನಂದ ಮಠ (೧೮೮೨), ದೇವೀಚೌದುರಾಣಿ (೧೮೮೪), ೮ ರಾಜಸಿಂಹ (೧೮೮೧)(ಇಲ್ಲಿ ಕಂಸದ ಒಳಗೆ ಕಾಣಿಸಿದ ಇಸವಿಗಳೆಲ್ಲಾ ಆಯಾ ಕಾದಂಬರಿಗಳು ಪ್ರಥಮ ಮುದ್ರಣ ಕಂಡ ವರ್ಷವೆಂದು ವಾಚಕರು ಭಾವಿಸಬೇಕು).

ಬಂಕಿಮನ ಸಾಮಾಜಿಕ ಕಾದಂಬರಿಗಳೆಲ್ಲಾ ಅಂದಿನ ವಂಗ ಸಮಾಜದ ಪ್ರತಿಬಿಂಬಗಳಾಗಿದ್ದುವು. ಇವುಗಳಲ್ಲಿ ರಾಮಮೋಹನನ ಹೆಂಡತಿ ಎಂಬ ಕಾದಂಬರಿಯು ಇಂಡಿಯನ್ ಫೀಲ್ಡ್' ಎಂಬ ಆಂಗ್ಲ ಪತ್ರಿಕೆಗಾಗಿ ಬರೆದದ್ದು; ಇದು ಸ್ಕಾಟನ ಮಾದರಿಯ ಆಂಗ್ಲ ಕಾದಂಬರಿ. ಇಂಗ್ಲಿಷಿನಲ್ಲಿ ಬರೆದುದಕ್ಕಾಗಿಯೋ ಏನೋ—ಗ್ರಂಥ ಕರ್ತನಿಗೇ ಈ ಕಾದಂಬರಿಯಲ್ಲಿ ಮೆಚ್ಚುಗೆ ಇರಲಿಲ್ಲ ಇದರಿಂದ ಇವನ ಕಾಲಾನಂತರ ಸಹ ಈ ಕಾದಂಬರಿಯು ಪ್ರಥಮ ಮುದ್ರಣವನ್ನು ಕಾಣುವುದೂ ಕಷ್ಟವಾಯಿತು. ಈ ಕಥೆಯಲ್ಲಿ—ನೀತಿಭ್ರಷ್ಟನಾದ ಮಥುರವದನನೆಂಬ ಸೇವಕನು ತನ್ನ ಯಜಮಾನನ ಪತ್ನಿಯಾದ ಕರುಣಾಮಯಿಯನ್ನು ಕೆಡಿಸಿ, ಅವಳನ್ನು ಕೊಂದು ಆಕೆಯ ಸಂಪತ್ತನ್ನು ಸ್ವಲ್ಪ ಕಾಲ ಅನುಭವಿಸಿದರೂ, ಮುಂದೆ ಆತನ ವಂಶಜರಿಗೆ ಆ ಸಂಪತ್ತು ಹಿತವನ್ನುಂಟುಮಾಡಲಿಲ್ಲ. ಅವರಲ್ಲಿ ಮಾಧವ ಮತ್ತು ಹೇಮಾಂಗಿನಿಯರೆಂಬ ದಂಪತಿಗಳನ್ನು ಬಿಟ್ಟು ಉಳಿದವರೆಲ್ಲಾ ಅನ್ಯಾಯ ಮಾರ್ಗದಲ್ಲಿ ನಡೆದು ಶಿಕ್ಷೆ ಹೊಂದಿದರು ಎಂಬುದೇ ಮುಖ್ಯ ವಸ್ತು. ಇದೊಂದು ಪತ್ತೇದಾರಿ ಕಥೆಯ ಮಾದರಿಯಲ್ಲಿದೆ. ಇದರಲ್ಲಿ ಡಕಾಯಿತಿ ಜನರ ಹಾವಳಿ ಇದೆ. ಮುಂದೆ ಬಂಕಿಮನ ಈ ಅಭಿರುಚಿಯೇ ದೇವೀ ಚೌಧುರಾಣಿಯನ್ನು ಡಕಾಯಿತಿಗಳ ರಾಣಿಯಾಗಿ ನಿರ್ಮಿಸಲು ಮುಖ್ಯ ಕಾರಣ. ಗಂಡನ ಮನೆಗೆ ಹೊರಟಿದ್ದ ಇಂದಿರೆಯು ಡಕಾಯಿತರಿಂದ ಅಪಹೃತಳಾಗುತ್ತಾಳೆ.

ವಿಷವೃಕ್ಷ ಮೊದಲಾದ ಸಾಮಾಜಿಕ ಕಾದಂಬರಿಗಳೂ, ದುರ್ಗೇಶನಂದಿನಿ ಮೊದಲಾದ ಚಾರಿತ್ರಿಕ ಕಥೆಗಳೂ ಸುಂದರ ಪ್ರೇಮದ ಹಾಸುಹೊಕ್ಕುಗಳಿಂದ ನೇಯಲ್ಪಟ್ಟಿವೆ. ಮುಂದೆ ಶರಚ್ಚಂದ್ರನೂ ಜನರ ನರನಾಡಿಗಳನ್ನು ಮಿಡಿಯಲು ಪ್ರೇಮವೇ ಮುಖ್ಯ ಸಾಧನವೆಂದು ಇವನಂತೆಯೇ ಒಂದೊಂದು ಕಾದಂಬರಿಯಲ್ಲಿ ಪ್ರೇಮದ ಒಂದೊಂದು ವಿಧದ ಸುಂದರ ಮುಖವನ್ನು ತೋರಿಸಿ ಭಾರತ ದೇಶದಲ್ಲಿ ಮಾತ್ರವಲ್ಲದೆ ಇದರ ಹೊರಗೂ ವಿಖ್ಯಾತ ಕಾದಂಬರಿಕಾರನೆಂದು ಹೆಸರು ಪಡೆದನು. ವಿಷವೃಕ್ಷದ ಕೆಲವು ಭಾಗಗಳು ಬಂಕಿಮನ ಜೀವನದ ಚಿತ್ರವೆಂದು ಆತನೇ ಒಪ್ಪಿಕೊಂಡಿದ್ದಾನೆ. ಇದರಲ್ಲಿ ಮತ್ತು ಕೃಷ್ಣ ಕಾಂತನ ಉಯಿಲಿನಲ್ಲಿ ಬಾಲವಿಧವೆಯರು ಅನುಕೂಲ ದಾಂಪತ್ಯಕ್ಕೆ ವಿಘಾತಕರಾಗುತ್ತಾರೆ. ವಿಷವೃಕ್ಷದಲ್ಲಿ ನಗೇಂದ್ರ (ವೈ। ನಾ। ವೆಂಕಟಾಚಾರ್ಯರ ಕಾದಂಬರಿಯಲ್ಲಿ ನಾಗೇಂದ್ರನೆಂದಿದೆ) ನು ನಾಯಕ; ಕುಂದನಂದಿನಿಯು ದುರಂತ ನಾಯಿಕೆ. ಸೂರ್ಯಮುಖಿಯಂತಹ ಪ್ರೇಮಪತ್ನಿಯಲ್ಲಿ ಹತ್ತಾರು ವರ್ಷ ಸಂಸಾರ ನಡೆಸಿಯೂ, ನಗೇಂದ್ರನು ಕುಂದನಂದಿನಿಯ ರೂಪಪ್ರವಾಹದಲ್ಲಿ ಬಿದ್ದು ಪತಿತನಾಗಬೇಕಾಯಿತು. ಇದಕ್ಕೆ ವಿಧಿಯು ಕಾರಣವೆನ್ನಬೇಕೆ? ಪ್ರಾಚೀನ ಕರ್ಮವೇ ಹೊಣೆಯೆನ್ನಬೇಕೆ? ಕೃಷ್ಣಕಾಂತನ ಉಯಿಲಿನಲ್ಲಿ ಗೋವಿಂದ ಲಾಲನು ರೋಹಿಣಿಯಲ್ಲಿ ಪ್ರೇಮ ನೆಟ್ಟು, ತನಗೆ ಸುಲಭದಲ್ಲಿ ಪ್ರಾಪ್ತವಾಗತಕ್ಕ ಆಸ್ತಿಯನ್ನು ಕಳೆದುಕೊಂಡು ಪತ್ನಿ ಭ್ರಮರೆಯ ಮತ್ತು ನೆಚ್ಚಿನ ರೋಹಿಣಿಯ ಮರಣಕ್ಕೂ ಕಾರಣನಾದನು. ರಜನಿ, ರಾಧಾರಾಣಿ ಮತ್ತು ಇಂದಿರೆಯು ಸುಖಾಂತವಾಗಿ ಮುಗಿಯುವ ಕಾದಂಬರಿಗಳು. ರಜನಿಯು ಲಾರ್ಡ್ ಲಿಟ್ಟನ್ ಬರೆದ ಆಂಗ್ಲ ಕಾದಂಬರಿಯೊಂದರ ನಿಡಿಯಾ ಎಂಬ ಹೂ ಮಾರುವ ಹುಡುಗಿಯನ್ನು ಆಧರಿಸಿ ಬರೆದ ಗ್ರಂಥ. ಜನ್ಮತಃ ಅಂಧಳಾದ ರಜನಿಯು ಶಚೀಂದ್ರನಲ್ಲಿ ಪ್ರೇಮವನ್ನಿಟ್ಟು ಅನೇಕ ದಾರುಣ ಕಷ್ಟಗಳನ್ನು ಬಾಟಿ ಆತನನ್ನು ವಿವಾಹವಾದದ್ದು ಮಾತ್ರವಲ್ಲದೆ ಅಂಧತ್ವವನ್ನು ಹೋಗಲಾಡಿಸಿಕೊಂಡು ಪುತ್ರರತ್ನವೊಂದರ ಜನನಿಯೂ ಆದಳು. ಇಂದಿರಾ ಉಪೇಂದ್ರರರನ್ನು ಕಾದಂಬರಿಕಾರನು ಅಗಲಿಸಿ ಪುನಃ ಸೇರಿಸುವ ಸನ್ನಿವೇಶಗಳು ಸುಂದರವಾದುವು. ಈ ಕಾದಂಬರಿಯು ಬಂಕಿಮನಿಗೇ ಪ್ರಿಯವಾಗಿತ್ತಂತೆ! ಯುಗಳಾಂಗುರೀಯದಲ್ಲಿ ಹಿರಣ್ಮಯಿ ಮತ್ತು ಪುರಂದರರು ಪುರೋಹಿತರಿಂದ ಕಣ್ಣು ಕಟ್ಟಲ್ಪಟ್ಟು ವಿವಾಹಿತರಾಗಿ ಎರಡು ಗುರುತದ ಉಂಗುರಗಳಿಂದ ಪರಸ್ಪರ ಸೇರಿ ಸುಖಿಗಳಾಗುವುದು ಚಮತ್ಕಾರವಾಗಿದೆ. ರಾಧಾರಾಣಿಯನ್ನು ಪ್ರೀತಿಸಿದ ರಾಜಾದೇವೇಂದ್ರನಾರಾಯಣನು ನಾನಾ ನ್ಯಾಯಕಾರಣಗಳಿಂದ ಅಷ್ಟುಕಾಲ ಆಕೆಯಿಂದ ಅಗಲಿದ್ದುದು ಆಶ್ಚರ್ಯವಾಗಿ ಕಾಣುತ್ತದೆ. ಪ್ರೇಮದ ಪ್ರಬಲ ಪ್ರವಾಹವನ್ನು ಸಂಯಮ ಮತ್ತು ಕಷ್ಟನಿಷ್ಠುರಗಳು ತಡೆಯಲಾರವೆಂಬುದನ್ನು ಬಂಕಿಮನು ತಿಳಿಯದವನಲ್ಲ.

ಬಂಕಿಮನ ಐತಿಹಾಸಿಕ ಕಾದಂಬರಿಗಳಲ್ಲಿ ರಾಜಸಿಂಹವನ್ನು ಬಿಟ್ಟು ಉಳಿದವುಗಳಲ್ಲಿ ಐತಿಹಾಸಿಕಾಂಶವು ಸಾಕಷ್ಟಿಲ್ಲವೆಂದು ಆತನೇ ಒಪ್ಪಿದ್ದರೂ ಇವುಗಳಲ್ಲಿ ಬರುವ ಪಾತ್ರ, ಸನ್ನಿವೇಶ, ಸ್ಥಾನಗಳೆಲ್ಲಾ ಕಲ್ಪನೆಗಳೆನ್ನಲು ಸಾಧ್ಯವೇ ಇಲ್ಲ. ದುರ್ಗೇಶನಂದಿನಿಯ ಮುಖ್ಯ ನಾಯಕನಾದ ಜಗತ್ಸಿಂಹನು ಬಾಲ್ಯದಲ್ಲೇ ಅಂದರೆ ಕ್ರಿ. ಶ. ೧೫೯೯ರಲ್ಲಿ ಮೃತನಾಗಿದ್ದನು ಆದರೆ ಬಂಕಿಮನ ತರುಣ ಜಗತ್ಸಿಂಹನು ನಮಗೆ ಇತಿಹಾಸವನ್ನು ಮುಳುಗಿಸುವಷ್ಟು ವಿಶ್ವಾಸವನ್ನು ಹುಟ್ಟಿಸುತ್ತಾನೆ. ಇದೂ ಕಪಾಲಕುಂಡಲೆಯೂ ಅಕಬರನ ಕಾಲದ ಬಂಗಾಳದ ಸ್ಥಿತಿಯ ಕುರಿತು ಬರೆದ ಕಾದಂಬರಿಗಳು. ದುರ್ಗೇಶನಂದಿನಿಯ ಆಯಷೆ ತಿಲೋತ್ತಮೆಯರು ವಾಚಕರ ಮನಸ್ಸಿನಿಂದ ಎಂದೂ ಮಾಸಲಾರರು. ಕಪಾಲ ಕುಂಡಲದ ನವ ಕುಮಾರನ ಪತ್ನಿ ಪದ್ಮಾವತಿಯು ಕುಲಗೆಟ್ಟು ಮುಸ್ಲಿಮಳಾಗಿ ಲುತ್ಫುಉನ್ನೀಸಳೆಂಬ ಹೆಸರಿನಿಂದ ಸಲೀಮನೊಡನೆ ಶರೀರ ಸಂಬಂಧವನ್ನಿಟ್ಟುಕೊಂಡರೂ ಮುಂದೆ ಸಮ್ರಾಜ್ಞಿಯಾಗಲಾರದೆ ತನ್ನ ಜೀವನವನ್ನೂ ಕಪಾಲಕುಂಡಲೆಯ ಜೀವನವನ್ನೂ ಹಾಳುಮಾಡುತ್ತಾಳೆ ಪದ್ಮಾವತಿಯು ಕುಲಗೆಟ್ಟರೂ ನೀತಿ ಗೆಡಬೇಕಾಗಿರಲಿಲ್ಲ. ಮೃಣಾಳಿನಿಯು ಬಂಗಾಲವು ಮಹಮ್ಮದೀಯರಿಗೆ ಮೊತ್ತಮೊದಲು ವಶವಾದ ರೀತಿಯನ್ನು ತಿಳಿಸುವ ಕಾದಂಬರಿ ಬಖ್ತಿಯಾರ್ ಖಿಲ್ಜಿಯು ಕೇವಲ ಹದಿನೇಳು ಮಂದಿ ಸಮರರೊಡನೆ ಬಂದು ಬಂಗಾಳವನ್ನು ಹೇಗೆ ಗೆದ್ದನೆಂಬುದನ್ನು ಈ ಕಥೆಯು ಮಾರ್ಮಿಕವಾಗಿ ತಿಳಿಸುವುದು.

ರಾಜಸಿಂಹವು ಶುದ್ಧ ಐತಿಹಾಸಿಕ ಮತ್ತು ಬಂಕಿಮನು ಬರೆದ ಕೊನೆಯ ಕಾದಂಬರಿ. ಇದು ಔರಂಗಜೇಬನ ಕಾಲದ ರಾಜಪುತ್ರರ ಶೌರ್ಯವನ್ನು ವರ್ಣಿಸುತ್ತದೆ. ಚಂಚಲ ಕುಮಾರಿಯ ವ್ಯಕ್ತಿತ್ವ ದುರ್ಗಾದಾಸ ರಾಜಸಿಂಹರ ಸಾಹಸವು ನಿಜವಾಗಿಯೂ ಸ್ವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾದುದು ರಾಜಪುತ್ರರು ಒಟ್ಟಾಗಿ ಈ ಕಾದಂಬರಿಯಲ್ಲಿ ಔರಂಗಜೇಬನಿಗೆ ಏಳು ಕೆರೆಯ ನೀರನ್ನು ಕುಡಿಸುತ್ತಾರೆ! ಚಂದ್ರಶೇಖರ, ದೇವೀಚೌಧುರಾಣಿ, ಆನಂದ ಮಠಗಳಲ್ಲಿ ಮಹಮ್ಮದೀಯರ ಅಧಿಕಾರವು ಬ್ರಿಟಿಶರ ವಶವಾಗುತ್ತಿದ್ದ ಸಂಧಿಕಾಲದ ಕಾದಂಬರಿಗಳು. ಚಂದ್ರಶೇಖರ ಮತ್ತು ಶೈವಲಿನಿಯರ ಅನನುಕೂಲದಾಂಪತ್ಯದ ಪರಿಣಾಮಗಳನ್ನು ಚಂದ್ರಶೇಖರ ಕಾದಂಬರಿಯಲ್ಲಿ ಬಂಕಿಮನು ಏನೂ 'ಕಸಿವಿಸಿ' ಮಾಡದೆ ತುಂಬಿದ್ದಾನೆ. ಮೊದಲು ಪ್ರತಾಪ ಶೈವಲಿನಿಯರು ಗಿಡಪಕ್ಕಿಗಳಂತೆ ಬಾಳಿ ವಿವಾಹಕ್ಕೆ ಸಗೋತ್ರಜರೆಂಬ ಒಂದೇ ಕಾರಣದಿಂದ ತಡೆಯಾಗಿ ಚಂದ್ರಶೇಖರನಿಗೆ ಮಾಲೆ ಹಾಕುವಳು ಶೈವಲಿನಿ. ಇದರಿಂದ ಏನೆಲ್ಲಾ ಕಹಿಯಾದ ಫಲಗಳುಂಟಾಗಬೇಕೋ ಅವನ್ನೆಲ್ಲಾ ದಂಪತಿಗಳಿಬ್ಬರೂ ಅನುಭವಿಸುತ್ತಾರೆ. ಇದು ವಾಚಕನ ಕರುಳು ಕರುಳಿನಲ್ಲಿ ವೇದನೆಯನ್ನುಂಟುಮಾಡುವ ದುಃಖಮಯ ಕಥೆ; ಇಂತಹ ಜೀವನವು ನಮ್ಮ ಹಗೆಗಳಿಗೂ ಬರಬಾರದು. ಇಂತಹ ಸಂದರ್ಭದಲ್ಲಿ ಪ್ರೇಮಿಗಳಲ್ಲಿ ಒಬ್ಬರನ್ನು ಇನ್ನೊಂದು ಗೋತ್ರಕ್ಕೆ ಗೊತ್ತು ಮಾಡಿ ಪ್ರತಾಪ ಮತ್ತು ಶೈವಲಿನಿಯರ ವಿವಾಹವನ್ನು ಜರುಗಿಸಿ ಒಪ್ಪುವಿಕೆ ಇಲ್ಲವೆನ್ನಿಸುತ್ತದೆ. ಬಂಕಿಮನಿಗೆ ಈ ಸೂಚನೆ ಹೊಳೆದಿದ್ದರೆ ವಾಚಕರ ವೇದನೆ ತಪ್ಪುತ್ತಿತ್ತೇನೋ! ದೇವೀ ಚೌಧುರಾಣಿಯು ಭವಾನಿ ಠಾಕೂರನಿಂದ ಶಿಕ್ಷಣ ಹೊಂದಿದ ಪ್ರಫುಲ್ಲೆಯ ಇತಿಹಾಸ; ಈಕೆ ಜನ್ಮತಃ ಸಾಮಾನ್ಯ ಸ್ತ್ರೀ. ಭವಾನಿ ಠಾಕೂರನ ಶಿಕ್ಷಣದ ಮಹಿಮೆಯಿಂದ ಈಕೆ ಪ್ರತ್ಯಕ್ಷ ದೇವಿಯೇ ಆದಳು, ಹೀಗೆ ಮಾನವರನ್ನು ಮೇಣದ ಬೊಂಬೆಯಂತೆ ಬೇಕಾದ ಆಕಾರಕ್ಕೆ ತರಲು ಸಾಧ್ಯವುಂಟೆ? ಎಂಬುವನ್ನು ಬಂಕಿಮನು ಯೋಚಿಸಿದಂತೆ ತೋರುವುದಿಲ್ಲ. ಈ ಕಾದಂಬರಿಗೆ ಶ್ರೀ ರಾಮಕೃಷ್ಣ ಪರಮಹಂಸರೂ ಪ್ರಶಸ್ತಿ ಪತ್ರವನ್ನಿತ್ತುದಲ್ಲದೆ, ಆತನ ದರ್ಶನ ಲಾಭಕ್ಕಾಗಿ ಹೋಗಿದ್ದರು!

ಆನಂದಮಠವು ಸನ್ಯಾಸಿಗಳು ಬಂಗಾಳದಲ್ಲಿ ಇಂಗ್ಲಿಷರ ವಿರುದ್ಧ ಹೂಡಿದ ಬಂಡಾಯದ ಕಥೆ 'ಆನಂದ ಮಠ, ದೇವಿ ಚೌದುರಾಣಿ, ಸೀತಾರಾಮದಲ್ಲಿರುವ ಅದ್ಭುತರಸವನ್ನು ಈ ಮೂರು ಗ್ರಂಥಗಳಿಗಿಂತಲೂ ನೂರರಷ್ಟು ಹೆಚ್ಚು ಸಕ್ಯವಿರುವ ಯಾವ ಐತಿಹಾಸಿಕ ಕಾದಂಬರಿಯಿಂದಲೂ ಪಡೆಯಲಾಗುವುದಿಲ್ಲ' ಎಂದು ಯದುನಾಥ ಸರ್ಕಾರರು ಈ ಕಾದಂಬರಿಗಳ ಕುರಿತು ಅಭಿಪ್ರಾಯ ಪಟ್ಟಿದ್ದಾರೆ. 'ವಂದೇ ಮಾತರಂ" ಗೀತೆಯು ಆನಂದ ಮಠದ ಸನ್ಯಾಸಿಗಳ ಮೆಚ್ಚಿನ ಹಾಡು. ಈ ಕಾದಂಬರಿಯಿಂದ ಬಂಕಿಮನು ಆಂಗ್ಲರನ್ನು ದ್ವೇಷಿಸುವಂತೆ ಕಂಡರೂ ಅವರ ಕೆಲವು ಉತ್ತಮ ಗುಣಗಳನ್ನೂ ಧೈರ್ಯವನ್ನೂ ಅವನು ಹಾರ್ದಿಕವಾಗಿ ಮೆಚ್ಚಿದ್ದಾನೆ. ಮುರ್ಷಿದಾಬಾದಿನವರ ಮೇಲೆ ಒಂದೂ ನಾಯಕರು ದಂಗೆ ಎದ್ದ ಪರಿಸ್ಥಿತಿಯನ್ನು ಸೀತಾರಾಮ ಕಾದಂಬರಿಯು ಚಿತ್ರಿಸುತ್ತದೆ. ಇದರಲ್ಲಿ ಬಂಕಿಮನು ಪ್ರಣಯವೆಂದರೇನೆಂದು ಅಲ್ಲಲ್ಲೇ ವಿಚಾರ ಮಾಡಿದ್ದಾನೆ. ಪ್ರೇಮವು ಗುಣಜನ್ಯವಾದದ್ದು; ದೇಹಜನ್ಯವಾದದ್ದಲ್ಲ. ಕಾಲಕ್ರಮದಲ್ಲಿ ಬೆಳೆದು ನಿಲ್ಲಬೇಕಾದದ್ದು ಇದು ಒಂದೇ ದಿನದಲ್ಲಿ ಹುಟ್ಟಿ ಬೆಳೆಯತಕ್ಕದ್ದಲ್ಲ ತಿಲೋತ್ತಮೆ, ಆಯಷೆ, ಶೈವಲಿನಿ, ರಜನಿ ಮೊದಲಾದ ವ್ಯಕ್ತಿಗಳೆಲ್ಲಾ ಈ ಗುಣಕ್ಕೆ ಉತ್ತಮ ನಿದರ್ಶನರು. ಶ್ರೀಯ ಮೇಲಿನ ಹುಚ್ಚುಪ್ರೇಮವು ಸೀತಾರಾಮನ ಮನಸ್ಸನ್ನು ವಶಪಡಿಸಿಕೊಂಡಿತು. ಈ ಕಾದಂಬರಿಯ ಮೂರು ಖಂಡಗಳಿಗೆ ಲೇಖಕನೇ ಕ್ರಮವಾಗಿ 'ಹಗಲು-ಗೃಹಿಣಿ, ಸಂಜೆ—ಜಯಂತಿ, ರಾತ್ರಿ-ಡಾಕಿನಿ, ಎಂದು ಹೆಸರಿಟ್ಟಿದ್ದಾನೆ. ಇದರಿಂದ ಶ್ರೀಯೂ ಜಯಂತಿಯ ಸಂಬಂಧದಿಂದ ಡಾಕಿನಿಯಾದಳೆಂದು ಬಂಕಿಮನ ಸೂಚನೆಯಾಗಿರಬೇಕು.

ಬಂಕಿಮನಿಗೆ ಸ್ವಜನಾಭಿಮಾನವು ತೀವ್ರವಾಗಿತ್ತು. ಹಿಂದುಗಳು ಮುಸ್ಲಿಮರಿಗೆ ಸೋತಿದ್ದರೆ ಅದು ಅವರ ನಿರ್ವೀರ್ಯತೆಯಲ್ಲ; ಬಿಕ್ಕಟ್ಟಿನ ಬುದ್ಧಿ, ನೀಚಸ್ವಾರ್ಥವೇ ಕಾರಣವೆಂದು ಅವನೆಣಿಕೆ. ಸೀತಾರಾಮನು ಕೊನೆಗೆ ವಿಷಯಾಸಕ್ತಿಯಿಂದ ಮತ್ತು ಗಂಗಾರಾಮನ ದ್ರೋಹ ಬುದ್ಧಿಯಿಂದ ಮಹಮ್ಮದ್‌ಪುರವನ್ನು ಕಳೆದುಕೊಂಡನು. ಹಿಂದೂ ಧರ್ಮದ ಉಚ್ಚ ಆದರ್ಶವನ್ನು ನೋಡಬೇಕಾದರೆ ಬಂಕಿಮನ ದೇವೀ ಚೌಧುರಾಣಿ ಮತ್ತು ಸೀತಾರಾಮ ಕಾದಂಬರಿಗಳನ್ನು ಓದಬೇಕು.

ಮುಂದೆ ಈತನ ಕಾದಂಬರಿಯ ಸಂಪ್ರದಾಯವನ್ನು ಆ ಸೇತು ಹಿಮಾಚಲದ ನಡುವಿನ ಪ್ರಾಂತಗಳೆಲ್ಲಾ ಅನುಸರಿಸತೊಡಗಿದುವು. ಕನ್ನಡನಾಡೂ ಹಿಂದುಳಿಯಲಿಲ್ಲ. ವೈ. ನಾ. ಬಿ. ವೆಂಕಟಾಚಾರ್ಯರು ಈಶ್ವರಚಂದ್ರ ವಿದ್ಯಾಸಾಗರರಿಂದ ಬಂಗಾಳಿ ಕಲಿತು ಬಂಕಿಮನ ಒಂದೊಂದೇ ಕಾದಂಬರಿಯನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡಿಗರಿಗೆ ಕಾದಂಬರಿಯ ರಸಾಸ್ವಾದನೆಗೆ ಅನುವು ಮಾಡಿಕೊಟ್ಟರು. ಇದರಿಂದ ಕನ್ನಡ ಕಾದಂಬರಿಕಾರರ ಬೆನ್ನನ್ನು ಚಪ್ಪರಿಸಿದಂತಾಯಿತು.

---

ಉತ್ಪಾದನೆ ಅಧಿಕಗೊಳಿಸಿರಿ!
ಉಳಿತಾಯ ಹೆಚ್ಚು ಮಾಡಿರಿ

# ಆಯುರ್ವೇದಕ್ಕೆ ಸ್ವಾತಂತ್ರ್ಯ ಬಂದಿದೆಯೇ?

ಭಾರತವು ಸ್ವಾತಂತ್ರ್ಯ ಗಳಿಸಿ ಪ್ರಜಾಸತ್ತೆಯೆನಿಸಿದೆ; ಪ್ರಗತಿ ಪಥ ಭ್ರಮಣ ಮಾಡುತ್ತಿದೆ. ಆದರೆ, ಭಾರತೀಯ ವೈದ್ಯ ಪದ್ಧತಿ ಆಯುರ್ವೇದವು ಇನ್ನೂ ಸ್ವಾತಂತ್ರ್ಯ ಗಳಿಸಿಲ್ಲ; ಪ್ರಜಾಸತ್ತೆಯೆನಿಸುವ ಮಾತೆಲ್ಲಿ? ಆಯುರ್ವೇದದ ಹೆಸರಿನಲ್ಲಿ ಅದಕ್ಕೆ ನಡೆಯುತ್ತಿರುವ ಅಪಚಾರವಾದರೂ ನಿಲ್ಲುವುದು ಅವಶ್ಯವಲ್ಲವೆ?

ಬರೆದವರು: ಡಾ। ಎಂ. ಗೋಪಾಲಕೃಷ್ಣ ರಾವ್,
ಪ್ರಿನ್ಸಿಪಾಲ್, ಬೆಂಗಳೂರು ಆಯುರ್ವೇದಿಕ್ ಕಾಲೇಜು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಹದಿನೈದು ವರ್ಷಗಳಾದವು. ಆದರೂ 'ಆಯುರ್ವೇದಕ್ಕೆ ಸ್ವಾತಂತ್ರ್ಯ ಬಂದಿದೆಯೇ?' ಎಂದು ಪ್ರಶ್ನಿಸುವ ಪರಿಸ್ಥಿತಿಯಿದ್ದುದು ದುರ್ದೈವದ ಸಂಗತಿಯಾಗಿದೆ. ಅಲ್ಲದೆ ರಾಷ್ಟ್ರ ಧುರಂಧರರೆಲ್ಲ ಆಯುರ್ವೇದಕ್ಕೆ, ಸಂದರ್ಭ ಸಿಕ್ಕಾಗೆಲ್ಲ ಸನ್ಮಾನ ಸಲ್ಲಿಸುತ್ತಿರುವಾಗ ಆ ಪ್ರಶ್ನೆಯೇ ಕೆಲವರಿಗೆ ಆಶ್ಚರ್ಯವನ್ನು ಹುಟ್ಟಿಸಬಹುದು. ಆದರೆ ಆಯುರ್ವೇದ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಮಾತ್ರ 'ಭಾರತಕ್ಕೆ ಬಂದ ಸ್ವಾತಂತ್ರ್ಯವು ಆಯುರ್ವೇದಕ್ಕಿನ್ನೂ ಬಂದಿಲ್ಲ' ಎಂದೆನಿಸುತ್ತದೆ. ಅಲ್ಲದೆ ಇದ್ದ ಅಲ್ಪ ಸ್ವಾತಂತ್ರ್ಯದ ಮೇಲೆಯೂ ಉಗ್ರವಾದ ದಾಳಿ ನಡೆಯುತ್ತಿದೆ. ಉದಾಹರಣೆಗಳು ಬೇಕೇ? ಕೇಳಿರಿ:—

೧) ಕಳೆದ ಅಕ್ಟೋಬರ್‌ನಲ್ಲಿ ಮಹಾಬಲೇಶ್ವರದ ಪವಿತ್ರ ಪ್ರದೇಶದಲ್ಲಿ ಸೇರಿದ ಅಖಿಲ ರಾಜ್ಯಗಳ ಆರೋಗ್ಯಮಂತ್ರಿಗಳ ಸಮ್ಮೇಲನದಲ್ಲಿ ಆಯುರ್ವೇದದ ವಿಷಯದಲ್ಲಿ ಸ್ವೀಕೃತವಾದ ಗೊತ್ತುವಳಿಯ ಸಾರಾಂಶ ಹೀಗಿದೆ. "ಆಯುರ್ವೇದ ವಿದ್ಯಾಲಯಗಳಲ್ಲಿ ಶುದ್ಧಾಯುರ್ವೇದವನ್ನೇ ಕಲಿಸಬೇಕು. ಆಧುನಿಕ ವೈದ್ಯ ವಿಜ್ಞಾನದ ಯಾವುದೇ ವಿಷಯವನ್ನೂ ಯಾವ ರೂಪದಲ್ಲಿಯೂ ಯಾವ ಭಾಷೆಯಲ್ಲಿಯೂ ಕಲಿಸಕೂಡದು. ಆ ಶಿಕ್ಷಣ ಪಡೆದು ಹೊರಬಿದ್ದ ವೈದ್ಯರು ಶುದ್ಧ ಆಯುರ್ವೇದ ಗ್ರಂಥಗಳಲ್ಲಿ ಹೇಳಿದ ಔಷಧಗಳನ್ನಷ್ಟೇ ಉಪಯೋಗಿಸಬೇಕು. ಆಧುನಿಕ ಔಷಧಗಳನ್ನು ಉಪಯೋಗಿಸಕೂಡದು. ಆಧುನಿಕ ವೈದ್ಯಕೀಯ ಉಪಕರಣಗಳನ್ನು— ಥರ್ಮಾಮೀಟರ್, ಸ್ಟೆಥಸ್ಕೋಪುಗಳನ್ನು ಕೂಡ— ಉಪಯೋಗಿಸಕೂಡದು.'

೨) ಹೋಗಲಿ! ಆಯುರ್ವೇದೀಯ(?)ವೆಂದು ಕರೆಯಲ್ಪಡುವ ಔಷಧಗಳನ್ನಾದರೂ ಉಪಯೋಗಿಸುವ ಸ್ವಾತಂತ್ರ್ಯವಿದೆಯೇ? ಇಲ್ಲ. ಅದರ ಮೇಲೆಯೂ ಇನ್ನೊಂದು ದಿಕ್ಕಿನಿಂದ ದಾಳಿಯ ಸಿದ್ಧತೆಯನ್ನು ಅದೇ ಸಮ್ಮೇಲನದಲ್ಲಿ ಸೂಚಿಸಲಾಯಿತು "ಆಯುರ್ವೇದೀಯ ಔಷಧಗಳನ್ನೂ 'ಡ್ರಗ್ಸ್ ಆ್ಯಕ್ಟ್' ಎಂಬ ಶಾಸನಕ್ಕೆ ಒಳಪಡಿಸಬೇಕು" ಎಂಬುದೇ ಆ 'ಆಯುರ್ವೇದೋದ್ಧಾರಕ ಸೂಚನೆ'ಯಾಗಿದೆ. ಹಾಗೆ ಒಳಪಡಿಸಿದರೆ ಪರಿಣಾಮವೇನಾದೀತು! ಹಾಗೆ ಒಳಪಡಿಸಿದ ಔಷಧಗಳನ್ನು ಎಂದರೆ ರಸ, ಗಂಧಕ, ಕರ್ಪೂರ, ದಾಲ್ಚಿನ್ನಿ, ವತ್ಸನಾಭ ಮುಂತಾದ ಆಯುರ್ವೇದೀಯ ಔಷಧಗಳನ್ನು ಉಪಯೋಗಿಸುವ ಸ್ವಾತಂತ್ರ್ಯವನ್ನು ಆಯುರ್ವೇದೀಯರು ಕಳೆದುಕೊಳ್ಳುತ್ತಾರೆ. ಏಕೆಂದರೆ ಡ್ರಗ್ಸ್ ಆ್ಯಕ್ಟ್‌ನಲ್ಲಿ ಒಳಗೊಂಡ ಔಷಧಗಳನ್ನು ಉಪಯೋಗಿಸುವ ಅಧಿಕಾರವು, ೧೯೧೨ನೆ ಇಸ್ವಿಯ ರೆಜಿಸ್ಟ್ರೇಶನ್ ಶಾಸನದ ಪ್ರಕಾರ ರೆಜಿಸ್ಟರ್ ಆದ ಅ್ಯಲೋಪಥಿಕ್ ಡಾಕ್ಟರುಗಳಿಗೆ ಮಾತ್ರ ಇರುತ್ತದೆ. ಹೀಗೆಯೇ ಮುಂದುವರಿದರೆ ಮನೆಯ ಗೃಹಿಣಿಯರು ನಿತ್ಯವೂ ಉಪಯೋಗಿಸುವ ಅಡುಗೆ-ಸೋಡಾ ಪುಡಿಯನ್ನು, ಐದು ವರ್ಷ ಶಿಕ್ಷಣವನ್ನು ಪಡೆದ ಆಯುರ್ವೇದ ವೈದ್ಯರು ಉಪಯೋಗಿಸುವಂತಿಲ್ಲ. ಜಗತ್ತಿಗೆಲ್ಲ ಬ್ಲಡ್‌ಪ್ರೆಶರ್ ಭೂತದಿಂದ ಮುಕ್ತಿಗೊಳಿಸಿದ 'ಸರ್ಪಗಂಧಾ' ಎಂಬ ಆಯುರ್ವೇದ ಔಷಧಿಯನ್ನು ವೈದ್ಯರು ಉಪಯೋಗಿಸುವಂತಿಲ್ಲ. ಮಧುಮೇಹಕ್ಕೆ ಉತ್ಕೃಷ್ಟ ಗುಣಕಾರಿಯಾದ ಹಾಗಲ ಕಾಯಿಯನ್ನು ಉಪಯೋಗಿಸುವ ಸ್ವಾತಂತ್ರ್ಯವು ಹೋದೀತು! ದಂತಮಂಜನ, ಪೇಸ್ಟು, ಸೋಪ್, ಹೇರ್ ಆಯಿಲ್, ಮುಲಾಮುಗಳನ್ನು, ಪೆಪ್ಪರ್ ಮಿಂಟ್, ಅಜವಾನದ ಸತ್ವ (ಥೈಮೂಲ್), ಗ್ಲಿಸರಿನ್, ಹೆಮ್ಮುಗುಳು, ಬೇವಿನೆಣ್ಣೆಗಳಿಂದ ತಯಾರಿಸಿ ಮಾರಿ ಲಕ್ಷಾಧೀಶರಾಗುವವರಿಗೆ ಇರುವ ಸ್ವಾತಂತ್ರ್ಯವು ಪರೋಪಕಾರಿಯೂ ಜ್ಞಾನಿಯೂ ಆದ ಆಯುರ್ವೇದ ವೈದ್ಯನಿಗೆ ಅವನ್ನು ಉಪಯೋಗಿಸುವಲ್ಲಿ ಇಲ್ಲ!!

(೩) ಯಾವುದೊಂದು ವಿಷಯದ ಬಗ್ಗೆ ಶಾಸನ ಮಾಡುವಾಗ ಸರಕಾರವು ಆ ವಿಷಯದ ತಜ್ಞರ ಸಮಿತಿಯನ್ನು ರಚಿಸಿ ಅದರ ಸಲಹೆಯನ್ನು ಪಡೆಯುತ್ತದೆ. ವಾಣಿಜ್ಯ, ಶಿಕ್ಷಣ, ವಿಜ್ಞಾನ, ಉದ್ಯೋಗ ಮುಂತಾದವುಗಳ ವಿಷಯದಲ್ಲಿ ಸರಕಾರ ಅದೇ ನೀತಿಯನ್ನು ಅನುಸರಿಸುತ್ತದೆ. ಅಲೋಪಥಿ ವೈದ್ಯ ವಿಚಾರದ ಶಾಸನ ರಚಿಸುವಾಗ ಅಲೋಪಥಿ ಡಾಕ್ಟರುಗಳ ಸಮಿತಿಯನ್ನು ರಚಿಸಲಾಗುತ್ತದೆ. ಆದರೆ ಆಯುರ್ವೇದದ ವಿಷಯದಲ್ಲಿ ಆ ಕ್ರಮವಿಲ್ಲ, ಆಯುರ್ವೇದೀಯ ಶಾಸನಗಳನ್ನು ಮಾಡುವವರಲ್ಲಿ ಅಥವಾ ಆ ವಿಷಯಕ ಸಮಿತಿಗಳಲ್ಲಿ ಡಾಕ್ಟರುಗಳೋ, ವಕೀಲರುಗಳೋ, ನಿವೃತ್ತ ಸೈನ್ಯಾಧಿಕಾರಿಗಳೋ ಇರುತ್ತಾರೆ. ಈ ಸ್ವತಂತ್ರವಾದ ಪ್ರಜಾಪ್ರಭುತ್ವವುಳ್ಳ ಭಾರತದಲ್ಲಿ ಮಿಕ್ಕವರಿಗೆಲ್ಲ ಇದ್ದ ಸ್ವಾತಂತ್ರ್ಯವು ಆಯುರ್ವೇದೀಯರಿಗೆ ಮಾತ್ರ ಇಲ್ಲ.

೪) ಭಾರತೀಯ ಸರಕಾರದ, ಮಹಾತ್ಮಾಗಾಂಧೀಜಿಯವರ ಭಕ್ತ ಶಿಖಾಮಣಿಗಳೆಂದು ಮೆರೆಯುವ ಅಧಿಕಾರಿಗಳು ಮದ್ಯಪಾನ ನಿರ್ಮೂಲನಕ್ಕಾಗಿ ಶಾಸನಗಳನ್ನು ರಚಿಸುವಲ್ಲಿ ಮತ್ತು ಅವನ್ನು ಉಳಿಸಿಕೊಳ್ಳುವಲ್ಲಿ ತುಂಬ ಶ್ರದ್ಧೆಯನ್ನು ತೋರಿಸುತ್ತಾರೆ. ಆದರೆ ಆ ಶಾಸನಗಳ ಪರಿಣಾಮವೇನು? ಕುಡುಕರು ಹೆಚ್ಚಾಗಿದ್ದಾರೆ; ಆಯುರ್ವೇದೀಯ, ಮದ್ಯಗಳಲ್ಲದ ಮಾದಕಗಳಲ್ಲದ ಆಸವಾರಿಷ್ಟಗಳ ನಿರ್ಮಾಣ, ಮಾರಾಟ, ಸಾಗಾಟ, ಸೇವನೆಗಳೆಲ್ಲ ನಿಯಂತ್ರಿತವಾಗಿವೆ. ಕುಡುಕತನವನ್ನು ನಿರ್ಬಂಧಿಸಲು ಹೊರಟ ಈ ಸರಕಾರವು ಆಯುರ್ವೇದೀಯರ ಆಸವಾರಿಷ್ಟ ನಿರ್ಮಾಣ ಸ್ವಾತಂತ್ರ್ಯವನ್ನು ಕಡಿದುಕೊಂಡಿದೆ. ಆ ವಿಷಯದಲ್ಲಿ ವೈದ್ಯ ಸಮುದಾಯವು ಅದರಲ್ಲಿಯೂ ದಕ್ಷಿಣ ಕನ್ನಡದ ವೈದ್ಯರು ೧೫-೨೦ ವರ್ಷಗಳಿಂದ ಶಂಖವಾದ್ಯ ನಡೆಸಿದರೂ ಈ ಕಬ್ಬಿಣ-ಕಿವಿಯ ಸರಕಾರಕ್ಕೆ ಕೇಳದಾಗಿದೆ

೫) "ಆಯುರ್ವೇದ" ವೆಂದರೆ ಆಯುಷ್ಯದ ಜ್ಞಾನ, "ಹಿತಾಹಿತಂ ಸುಖಂ ದುಃಖಂ ಆಯುಸ್ತಸ್ಯ ಹಿತಾಹಿತಂ ಮಾನಂ ತಚ್ಚ ಯತ್ರೋಕ್ತಂ ಆಯುರ್ವೇದಃ ಸ ಉಚ್ಯತೇ" ಎಂದು ಆಯುಷ್ಯದ ಹಿತ ಸಾಧಕವಾದುದೆಲ್ಲವನ್ನೂ ಒಳಗೊಳ್ಳುವ ವಿಶಾಲವಾದ, ಆಯುರ್ವೇದ—ವ್ಯಾಖ್ಯೆಯನ್ನು ಚರಕಾಚಾರ್ಯರು ಮೂರು ಸಾವಿರ ವರ್ಷಗಳ ಹಿಂದೆಯೇ ಮಾಡಿದ್ದಾರೆ. ಮತ್ತು ಆ ವ್ಯಾಖ್ಯೆಗನುಸರಿಸಿ ಆಯುಷ್ಯದ ಹಿತಕ್ಕೆ ಪೂರಕವಾದುದನ್ನೆಲ್ಲ ದೇಶವಿದೇಶಗಳಿಂದ ಅರಗಿಸಿಕೊಳ್ಳುತ್ತ ಆಯುರ್ವೇದವು ಶತಶತಮಾನಗಳಿಂದ ಪ್ರಗತಿಹೊಂದುತ್ತ ಬಂದಿತ್ತು. ಮಧ್ಯದಲ್ಲಿ ಒಂದು ಸಾವಿರ ವರ್ಷದ ಪಾರತಂತ್ರ್ಯದಲ್ಲಿ ಆ ಪ್ರಗತಿ ನಿಂತು ಹೋಗಿತ್ತು. ಸ್ವಾತಂತ್ರ್ಯ ಬಂದ ಮೇಲೆ ಮರಳಿ ಆ ಪ್ರಗತಿಯು ಮುಂದುವರಿಯುವ ಅವಕಾಶ ಲಭಿಸುವುದೆಂದು ವೈದ್ಯರೆಲ್ಲ ನಂಬಿ ಕೂತಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಒಬ್ಬ ಸ್ಯಾನಿಟರಿ ಇನ್‌ಸ್ಪೆಕ್ಟರರಿಂದ ಪ್ರಾರಂಭಿಸಿ ಪಂಡಿತ ಜವಾಹರಲಾಲರ ವರೆಗೆ ಎಲ್ಲರೂ ವೈದ್ಯರಿಗೆ "ಆಯುರ್ವೇದವು ಪ್ರಗತಿ ಹೊಂದಬೇಕು! ಆಧುನಿಕ ವಿಜ್ಞಾನದ ಸಿದ್ಧಿಗಳನ್ನು ಆಯುರ್ವೇದ ಪೋಷಣೆಗೆ ಉಪಯೋಗಿಸಿ ಕೊಳ್ಳಬೇಕು! ಹಿಂದೆ ಎಲ್ಲಾ ಇತ್ತು ಎಂಬ ಗೊಡ್ಡು ವೈದ್ಯರಾಗಬಾರದು!!" ಎಂದು ಉಪದೇಶ ಮಾಡುತ್ತಲೇ ಇದ್ದಾರೆ ಆದರೆ ಕೇಂದ್ರ ಆರೋಗ್ಯ ಮಂತ್ರಿಣಿಯರಾದ ಡಾ। ಸುಶೀಲಾ ನಾಯರರು ಆಯುರ್ವೇದಕ್ಕೆ ಪ್ರಗತಿ ಸ್ವಾತಂತ್ರ್ಯವೂ ಇಲ್ಲವೆಂದು ಘೋಷಿಸುತ್ತ ಹೊರಟಿದ್ದಾರೆ. ಅವರ ಅಭಿಪ್ರಾಯ ಮುಕ್ತಾಫಲಗಳನ್ನು ಕೇಳಿರಿ "ಅವರು ಜಾಮನಗರದ ಆಯುರ್ವೇದೀಯ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಯಲ್ಲಿ ಹೀಗೆ ಭಾಷಣ ಮಾಡಿದ್ದಾರೆ" ಆಯುರ್ವೇದೀಯರಿಗೆ ಸರಕಾರಿ ನೌಕರಿ ಸಿಗಲಾರದು! ಅವರು ಲೋಕ ಸೇವೆಯಲ್ಲಿ ನಿರತರಾಗಬೇಕು!(ನೌಕರಿ, ಸಂಬಳಗಳೆಲ್ಲ ಸರಕಾರದ ಮಾನಸಪುತ್ರರಾದ ಅಲೋಪಥಿಯರಿಗೆ ಬೇಕಲ್ಲವೇ? — ಲೇಖಕ). ಆಯುರ್ವೇದ ಪದವೀಧರರಿಗೆ ಅಲೋಪಥಿ ಪದವೀಧರರಷ್ಟು ಸ್ಥಾನ, ಮಾನಗಳನ್ನು ಸರಕಾರವು ಕೊಡಲಾರದು. ನಾನು ಮಂತ್ರಿಪದದಲ್ಲಿರುವ ವರೆಗೆ ಅದಕ್ಕೆ ಆಸ್ಪದ ಕೊಡಲಾರೆ." ಕೇಂದ್ರದಲ್ಲಿ ಇದು ವರೆಗೆ ಆರೋಗ್ಯ ಮಂತ್ರಿಗಳಾಗಿ ಬಂದವರಾರೂ ಆಯುರ್ವೇದದ ಮೇಲೆ ಇಷ್ಟು ಪ್ರೀತಿಯನ್ನು ತೋರಿಸಿರಲಿಲ್ಲ ಸ್ವದೇಶೀ, ಸ್ವತ್ವ, ಸತ್ಯಗಳಿಗಾಗಿ ಪ್ರಾಣಾರ್ಪಣ ಮಾಡಿ ಅಮರರಾದ ಬಾಪೂಜಿಯರ ಶಿಷ್ಯೆ ಈಕೆ!

೬) ಆಯುರ್ವೇದದ ಉದ್ಧಾರವನ್ನು ಹೇಗೆ ಮಾಡುವುದು ಗೊತ್ತೇ? ಮೆಡಿಕಲ್ ಕಾಲೇಜ್‌ಗಳಲ್ಲಿ ಕೊನೆಯ ಆರು ತಿಂಗಳು ಆಯುರ್ವೇದವನ್ನು ಕಲಿಸಿ ಅದರ ಉದ್ಧಾರ ಮಾಡುವರಂತೆ. ಆಯುರ್ವೇದ ಶಿಕ್ಷಣದಲ್ಲಿ ಆಧುನಿಕ ವೈದ್ಯದ ಒಂದೆರಡು ವಿಷಯಗಳನ್ನು ಸಹ ಕಲಿಸಬಾರದೆಂದು ಪೂರ್ವ ಜನ್ಮದ ದ್ವೇಷಿಯಂತೆ ವಿರೋಧಿಸುವ ಆ ಮಾನ್ಯ ಮಹಿಳೆಯು ಅಲೋಪಥಿ ಶಿಕ್ಷಣದಲ್ಲಿ ಆಯುರ್ವೇದವನ್ನು ಕಲಿಸಲು ಯೋಚಿಸುವುದು ಯಾವ ನ್ಯಾಯ? ಆಯುರ್ವೇದವನ್ನು ಅಲೋಪಥಿಯ ದೃಷ್ಟಿಯಿಂದಲೇ ಕಲಿಸಲಾಗುವುದು" ಎಂದು ಅವರು ಗರ್ಜಿಸಬಹುದು. ಹಾಗೆಯೇ ಅಲೋಪಥಿಯ ಕೆಲವು ಉಪಯುಕ್ತ ವಿಷಯಗಳನ್ನು ಆಯುರ್ವೇದ ಕಾಲೇಜುಗಳಲ್ಲಿ ಆಯುರ್ವೇದೀಯ ದೃಷ್ಟಿಕೋನದಿಂದಲೇ ಕಲಿಸಿದರೆ ಇವರೇಕೆ ವಿರೋಧಿಸಬೇಕು?

ಆದರೆ ಆಯುರ್ವೇದಕ್ಕೂ ಆಯುರ್ವೇದೀಯರಿಗೂ ಇನ್ನೂ ಸ್ವಾತಂತ್ರ್ಯ ಬಂದಿಲ್ಲವಲ್ಲವೇ! ಪ್ರಜಾಪ್ರಭುತ್ವ ಬಂದಿಲ್ಲವಲ್ಲವೇ!!

ರಕ್ತ
ದಾನಮಾಡಿ—
ಪ್ರಾಣ
ಉಳಿಸಿ ಕೊಡಿ

# ಹೂರಣವೇ ಇಲ್ಲದ ಹೋಳಿಗೆ ಹಬ್ಬ

(೧೦ನೇ ಪುಟದಿಂದ)

ಹಾಗೆ ಅವರು ಮಾಡಲಿಲ್ಲ. ಆದ್ದರಿಂದ ಅಂಥ ಲೇಖನ ನನ್ನಿಂದ ಬೇಕಿಲ್ಲ ಅಂತಲೇ ನಾನು ಅರ್ಥಮಾಡಿಕೊಂಡೆ. ಒಟ್ಟಿನಲ್ಲಿ ಹೂರಣವೇ ಇಲ್ಲದ ಹೋಳಿಗೆ ತಿರುಳೇ ಇಲ್ಲದ ಒರಟೊರಟು ಹರಟೆಯ ಒಂದು ಲೇಖನ 'ಪುಟ ಭರ್ತಿ'ಗಾಗಿ ಬರೆದರೆ ಸಾಕು ಅಂದುಕೊಂಡೆ. ಆ ಲೇಖನಕ್ಕೆ ಕನ್ನಡ ಭಾಷೆ ಯಾವ ಕಡೆಯದಾಗಬೇಕು? ದಕ್ಷಿಣ ಕನ್ನಡ ಜಿಲ್ಲೆಯದು ದಾಕ್ಷಿಣ್ಯದ ಕನ್ನಡ, ಮೈಸೂರಿನವರು ರಾಗಾಲಾಪನೆ ಕನ್ನಡ, ಆದ್ದರಿಂದ ಧಾರವಾಡದ ಥಪ್ಪ ಒರಟು ಕನ್ನಡವೇ ಸರಿ ಅಂತ ಗುಣಿಸಿಕೊಂಡೆ. ಭರಣಿ ಕೃತ್ತಿಕೆ ರಾಹುಕಾಲ ಗುಳಿಕಕಾಲ ಎಲ್ಲ ಕಂಟಕಗಳನ್ನು ಕಳೆದುಕೊಂಡು ಇನ್ನೇನು ಬರೆಯಲಿಕ್ಕೆ ಪೆನು ಊರಬೇಕೆನ್ನುವ ಹೊತ್ತಿಗೇ ಸರಿಯಾಗಿ ಬಂದರಲ್ಲ ದೂರದ ನೆಂಟರು ಅಪರೂಪವಾಗಿ. ಪೆನು ಕೆಳಗೆ ಹಾಕಿದೆ. ಗ್ರಹದೃಷ್ಟಿ ನನಗೆ ತಾಕಿದ್ದೇ ಹೌದು ಅಂಥ ನನಗೆ ಧೃಡವಾಯಿತು.

ಹೌದು; ನನ್ನ ಪಾಲಿಗೆ ಕಣ್ಣಿಗೆ ಕಾಣದ ಗ್ರಹ ಒಂದೇ. ಆದರೆ ಬರಬಾರದ ಸಮಯಕ್ಕೆ ಮನೆಗೆ ಬಂದು ಝಾಂಡಿ ಊರಿದ ಕಣ್ಣಿಗೆ ಕಾಣುವ ಗ್ರಹಗಳೆರಡು. ಒಂದಕ್ಕೆ ಡಬಲ್ ಕಳ್ಳ ಸಂತೆ ಲಾಭದ ಹಾಗೆ ಈ ಎರಡು ಆಸಾಮಿಗಳೂ ಎರಡು ಇಂಗಿನ ಡಬ್ಬಿ. ಸರಿ, ಬಂದವರೇ ಬಿಚ್ಚಿದರಲ್ಲ ತಮ್ಮ ಪುರಾಣ. ಅವರು ದುಡ್ಡು ತಕ್ಕೊಂಡು ಬೇರೆಯವರಿಗೆ ಜಾಮೀನು ಹಾಕುವ ಒಬ್ಬ ಜಮೀನುದಾರರು. ಒಮ್ಮೆ ಕೀ ಕೊಟ್ಟ ಗಡಿಯಾರ ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿಯೂ ನಿಲ್ಲದೆ ನಡೆಯುವಂತೆ ಒಮ್ಮೆ ಇವರು ಮಾತಿಗೆ ತೊಡಗಿದರೆಂದರೆ ಹಗಲೆಲ್ಲ ಮಾತು ನಿಲ್ಲಿಸದೆ ಉದ್ದಕ್ಕೆ 'ಲೆಕ್ಚರ' ಹೊಡೆಯುತ್ತ ಹೋಗುವುದೊಂದೇ ಅಲ್ಲದೆ ಮತ್ತದನ್ನೇ ನಿದ್ದೆಯಲ್ಲಿಯೂ ಕನವರಿಸುತ್ತಿರುವುದು ಅವರು ಹುಟ್ಟುವಾಗಲೇ ಬೇಡಿ ಪಡೆದ ವರ. ಇವರ ಸ್ವರ ಮೆಲ್ಲಗೆ ದೇವಸ್ಥಾನದ ಗಂಟೆ ಬಾರಿಸಿದಂತೆ. ತಮ್ಮ ಮಾತು ಕೇಳುವ ಕೇಳಿ 'ಹಾಗಲ್ಲ ಹೀಗೆ' ಎಂಬು ನಡುವೆ ಬಾಯಿ ಹಾಕಲು ಬರುವ ಅಧಿಕ ಪ್ರಸಂಗಿಗಳಿರಬಹುದೆಂಬ ಸಂಶಯವಿದ್ದ ಯಾವ ದಿಕ್ಕಿಗೂ ಅವರು ಈ ಜನ್ಮದಲ್ಲೇ ತಲೆ ಹಾಕಿಯೂ ಮಲಗಿದವರಲ್ಲ. ಅವರ ಹಲವು ಮಾತೂ ಅರ್ಥರ್ಥ. ಅಂತೆ ಕಿವಿಯೊಡೆಯುವಂತೆ ಅವರೆನ್ನುವರು — ಆಲಿ ನ್ಯಾಯ (ನ್ಯಾಯ) ಬೆಲೆ ಚುಂಗಡಿ ಅಂಗಡಿ ಸ್ವಾಹಾಕಾರ (ಸಹಕಾರ) ಶೂಕ ಆಳತೆ ಊರಕ್ಕೆ ಸಾವಿರ ಮುಡಿ ದಾಸ್ತಾನು—ಅಂಥವ ಯೋಚ ಗಿರಾಕಿ ಇಲ್ಲ. ಅಡಿಕೆ ನಮ್ಮ ಕಡೆ ಬೆಳೆ ಕಡಿಮೆ ಬೆಲೆ ಊಂಹುಂ. ಹಿಂದಿನ ವರ್ಷಗಳಲ್ಲಿ ದುಡ್ಡು ಮಾಡಿಟ್ಟ—ಮರಿಮಕ್ಕಳ ಮರಿಮಕ್ಕಳೂ ತಿಂದು ಸಾಯುವಷ್ಟು—ದೊಡ್ಡ ಅಡಿಕೆ ತೋಟದವ—ಈಗ ಅವನಿಗೆ ನಿದ್ದೆ ಬಾರದ್ದಕ್ಕೆ ಯಂತ್ರ ಮಂತ್ರ ತಂತ್ರ ಚಿಕಿತ್ಸೆ. ಭೂಕಂದಾಯ + ಸರ್ ಚಾರ್ಜ ವರ್ಗದಾರ ದಿವಾಳಿ......ಹೀಗೇ ಹಲವು ಇತ್ಯಾದಿ ವಗೈರೆ ಮುಂತಾದ್ದು ಮೊದಲಾದ ವಿಷಯಗಳೇ ಅವರದು.

ಅವರ ಸಹೋದರ ಒಬ್ಬ ಉಪಾಧ್ಯಾಯರು. ಅವರ ಒಂದು ವಾಕ್ಯದಲ್ಲಿ ಸೇಕಡಾ ೧೦ ಕನ್ನಡ ೯೦ ಇಂಗ್ಲಿಷ್ ಪದಗಳು. ಎಲ್ಲ ಕಾಲಕ್ಕೂ ನಮ್ಮ ದೇಶಕ್ಕೆ ಇಂಗ್ಲಿಷ್ ಭಾಷೆಯೇ ಕುಲದೇವರಾಗಿರಬೇಕೆಂದು ವಾದಿಸುವ ದೊಡ್ಡ ಬ್ಯಾರಿಸ್ಟರರಲ್ಲಿ ಅವರೊಬ್ಬರು. ಶಾಲಾ ಶಿಕ್ಷಣದಲ್ಲಿ ಎಲ್ಲ ಕನ್ನಡಮಯವಾಗಿ ಇಂಗ್ಲೀಷಿನ ಬಲ ಕುಂದಿತು. ಅದು ತಪ್ಪು. ಎಲ್ಲವನ್ನು ಇಂಗ್ಲಿಷಿನಲ್ಲೇ ಕಲಿಸುವಂತಾಗಬೇಕು. ಕನ್ನಡ ಪದಗಳಿಗೂ ಇಂಗ್ಲಿಷ್ ಭಾಷೆಯ ಅಕ್ಷರ ಮಾಲೆಯನ್ನು ಪ್ರಾಯ್ಮರಿ ಶಾಲೆಗಳಿಂದಲೇ ಬಳಸುವಂತಾಗಬೇಕು. ಉದಾಹರಣೆಗಾಗಿ ಮನೆ=Mana, ಸರ=Sara, ಆಡು=Aadu, ಕುರಿ=Kuri ಹೀಗೆ ಉಪದೇಶ. ಅವರು ನಮ್ಮಲ್ಲಿದ್ದ ಮೂರು ವಾರಗಳಲ್ಲಿಯೂ ಅದು ಮುಗಿಯದೆ ಅವರು ಊರಿಗೆ ಹೊರಟು ನಮ್ಮ ಮನೆಯಿಂದ ಬೀದಿಗಿಳಿದ ಅನಂತರವೂ ಕೊನೆಗಂಡಿರಲಿಲ್ಲ.

ಈ ಹೆಮ್ಮಾರಿಗಳ ಕಾಟ ತೊಲಗಿತು, ಇನ್ನು ಲೇಖನ ಆರಂಭಿಸುವ ಎನ್ನುವಾಗಲೇ ಮನೆಯಲ್ಲಿ ಒಂದು ಮಗುವಿಗೆ ಸ್ವಲ್ಪ ಜ್ವರ. ನಮ್ಮ ದೇಶದಲ್ಲಿ ಹಲವಾರು ರಾಜಕೀಯ ಪಕ್ಷಗಳಿದ್ದರೆ ನನ್ನ ಗೃಹ ರಾಜ್ಯದಲ್ಲಿ ಎರಡು ಪಾರ್ಟಿಯಾದರೂ ಇರಬೇಕೆಂದು ನಾನು ಭಾವಿಸಬಹುದಾದ ಸಾಮಾನ್ಯ ಸಂದರ್ಭಗಳು ಕೆಲವು ಇದ್ದರೂ ಗುಟ್ಟಿನಲ್ಲಿದ್ದದ್ದು ನನ್ನೆದುರಿಗೇ ಬಹಿರಂಗಕ್ಕೆ ಬಂದದ್ದು ಈಗಲೇ. 'ಶೀತ, ಜ್ವರ, ಗಾಬರಿ ಇಲ್ಲ. ಮನೆ ಬೇರು ನಾರಿನ ಕಷಾಯದಿಂದ ವಾಸಿಯಾಗುತ್ತದೆ' ಎಂದು ಹಿರಿಯರಾದ ನನ್ನ ತಾಯಿ ಹೇಳಿದಳು. ಅದನ್ನು ಪ್ರತಿಪಕ್ಷದವಳಾಗಿ ಕಿರಿಯಳಾದ ನನ್ನ ಹೆಂಡತಿ ವಿರೋಧಿಸಿ—'ಮನೆಮದ್ದು ತಂಗಳೂನ್ನದ ನಿಮ್ಮ ಕಾಲಕ್ಕೆ, ಹಾಲಿನ ಪುಡಿ ಟೀ-ಕಾಫಿಯವರಾದ ನಮ್ಮ ಕಾಲಕ್ಕೆ ಯಾಕಾದೀತು? ಆಯುರ್ವೇದದ ವೈದ್ಯರು ಪಕ್ಕದಲ್ಲೇ ಇದ್ದಾರೇನೋ ಸರಿ. ಆದರೆ ಆ ಮಾತ್ರೆ ಅರಿಷ್ಟ ಆಸವಗಳಿಂದ ಗುಣವಾಗಲು ತಿಂಗಳೆರಡು ತಿಂಗಳೇ ಬೇಕು. ಅದರಲ್ಲಿಯೂ 'ಅದು ತಿನ್ನಬಾರದು ಇದು ಕುಡಿಯಬಾರದು'—ಅವರ ಈ ಪಥ್ಯಪಾನಗಳಿಗೆ ಸರಿಯಾಗಿ ಈ ಮಕ್ಕಳ ಬಾಯಿ ಕಟ್ಟಿಸುವವರು ಯಾರು? ನಮ್ಮತ್ತೆಯೋ ನೀವೋ? ಹೋಗಿ ಡಾಕ್ಟರರನ್ನು ಕರೆದು ತನ್ನಿ' ಎಂದು ಅಬ್ಬರಿಸಿದಳು.

ನಮ್ಮ ತಾಯಿ ಮಾತು ಸರಿ ಎಂದು ನಾನದನ್ನು ಸಮ್ಮತಿಸಿದ್ದರೂ ನನ್ನ ಹೆಂಡತಿಯ ಬಾಯಿಗೆ ಹೆದರಿ ನಮ್ಮ ತಾಯಿ ಕಡೆಗೆ ಬಹಿರಂಗವಾಗಿ ಓಟು ಕೊಟ್ಟಿರಲಿಲ್ಲ. ಹೇಗೂ ರಾಣೀ ಸಾಹೇಬರ 'ಹುಕುಂ' ಮೇರೆಗೆ ದೂರದ ಒಬ್ಬ ಡಾಕ್ಟರರನ್ನು ಕಟ್ಟಿಕೊಂಡು ಬಂದೆ. ಅವರು ಮಗುವನ್ನು ಪರೀಕ್ಷಿಸಿ 'ಇದು ಸನ್ನಿವಾತಕ್ಕೆ ತಿರುಗುವ ಲಕ್ಷಣವಷ್ಟು. ಸಣ್ಣ ಮಗು—ಸದ್ಯ 'ಇಂಜೆಕ್ಷನ್' ಬೇಡ 'ಮಿಕ್ಚರ್' ಕೊಟ್ಟು ನೋಡುವ. ಅದನ್ನು ಸ್ವಲ್ಪ ಕಾಲ ಕೊಡಬೇಕಾದೀತು. ನಡುವೆ ನಾನೂ ಬಂದು ಮಗುವನ್ನು ನೋಡಿಕೊಂಡು ಹೋಗಬೇಕಾಗುತ್ತದೆ' ಎಂದು ಅವರು ಹೇಳಿದಾಗ ನಾನು ಸುಮ್ಮನಿದ್ದರೂ ನನ್ನ ಹೆಂಡತಿ 'ಹಾಗೇ ಮಾಡಿ" ಎಂದಳು.

ಮಗು ಎರಡು ದಿನಗಳಲ್ಲೇ ಹುಷಾರಾಗಿ ಹಿಂದಿನಂತೆ ಆಟವಾಡಲು ತೊಡಗಿದರೂ ಡಾಕ್ಟರರು ಔಷಧಿ ೨೪ ದಿನ ಕೊಟ್ಟು ನಡುವೆ ಎರಡು ಸಲ ಮಗುವಿನ ಭೇಟಿಗಾಗಿ ಬಂದು ಎಲ್ಲದಕ್ಕೂ ಬಿಲ್ ಮಾಡಿದರು, ಮರ್ಯಾದೆಗಾಗಿ ತೆತ್ತೆ. ಆದರೆ ಸಣ್ಣದನ್ನು ದೊಡ್ಡದು ಮಾಡಿ ಹೆದರಿಸಿ ದುಡ್ಡು ಸುಲಿಯುವ ಕೆಲವು ಡಾಕ್ಟರರ ಬುದ್ಧಿವಂತಿಗೆ ಹೀಗೇ ಎಂದು, ಮನೆಮದ್ದಿನಿಂದಲೇ ಗುಣವಾಗಬಹುದಾಗಿದ್ದ ಮಗುವಿನ ಜ್ವರದ ವಿಷಯದಲ್ಲಿ ನನ್ನ ತಾಯಿ ಒಬ್ಬಳೇ ಇದ್ದಾಗ ಅವಳೊಡನೆ ಮಾತ್ರ ಮೆಲ್ಲಗೆ ಹೇಳುತ್ತಾ ಇದ್ದೆ.

ನೆಂಟರು ಕಾಹಿಲೆಗಳಿಗೆಂದು ನನಗೆ ಲೇಖ ಬರೆಯಲಿದ್ದ ಆರವತ್ತು ದಿನಗಳಲ್ಲಿ ಜುಮ್ಲಾ ೪೯ ದಿನ ಹಾಗೆ ವ್ಯರ್ಥವಾದ್ದರಿಂದ ಕೂಡಲೇ ಲೇಖನ ಬರೆದು ಕಳುಹಿಸಲು ಕೂತೆ. ಆದರೆ ಹೂರಣದ ಹೋಳಿಗೆಗಿಂತ ಹೂರಣವಿಲ್ಲದ ಹೋಳಿಗೆ ಲೇಖನ ಬರೆಯುವುದೇ ಹೆಚ್ಚು ಕಷ್ಟವೆಂದು ತೋರಿದ್ದು ನನಗಾಗಲೇ.

ಹೌದು; ಹೂರಣದ ಹೋಳಿಗೆ ಲೇಖಕರಲ್ಲಿರಬೇಕಾದ ವಿಶಿಷ್ಟ ಗುಣಗಳೇ ಪ್ರತ್ಯೇಕ. ಜನ ಮೆಚ್ಚುವ ಅವರ ಪ್ರೀತಿಪಾತ್ರ ವಿಷಯಗಳ ಮೇಲೆ ಅವರಿಗೆ ಬಳಕೆಯಾದ ಆ ಭಾಷೆಯ ಪ್ರಜ್ಞೆಯಿಂದ ಅವರ ಮನಮೊಲಿಸುವ ಸುಲಭ ಸರಳ ನಿರೂಪಣಾ ಕ್ರಮದಲ್ಲಿ ಬರೆಯುವ ಶಕ್ತಿ ಅವರಲ್ಲಿರಬೇಕು. ಆ ಶಕ್ತಿ ಬರಬೇಕಾದರೆ ನಾನಾ ಕಡೆ ಅವರು ಸಂಚರಿಸಬೇಕು; ನಾನಾ ಜನರೊಡನೆ ಒಡನಾಡಬೇಕು; ಅವರ ಜೀವನದ ರೀತಿಯ ಯಥಾರ್ಥ ಚಿತ್ರವನ್ನು ಮೈಗೂಡಿಸಿಕೊಂಡಿರಬೇಕು. ಅಂಥ ಸನ್ನಿವೇಶಗಳಲ್ಲಿಯೋ ಇಡಿಯ ಸಮಾಜಗಳ ನಡೆನುಡಿ ಆಚಾರ ಪದ್ಧತಿಗಳಲ್ಲಿಯೋ ಅವರಿಗೆ ಕಂಡುಬರುವ ವಿನೋದ ಪ್ರಸಂಗಗಳಲ್ಲಿ ಯಾವುದರಿಂದ ಜನರಂಜನೆಯ ಕಾರ್ಯ ಅತ್ಯಂತ ಯಶಸ್ವಿಯಾಗಬಲ್ಲದೋ ಅಂಥವುಗಳನ್ನು ಆಯ್ದುಕೊಳ್ಳಬೇಕು. ಹಾಗೆ ಆಯ್ದುಕೊಳ್ಳಲು ಬೇಕಾದ ಸೂಕ್ಷ್ಮ ಗ್ರಹಣಶಕ್ತಿ ಆತನಲ್ಲಿ ಇರಬೇಕು. ಮತ್ತಾ ವಿನೋದದ ಪ್ರಸಂಗಗಳಿಗೆ ಆ ಲೇಖಕನದಲ್ಲಿ ಸ್ವಭಾವಸಿದ್ಧವಾಗಿ ಉಕ್ಕಿ ಹರಿಯುವ ತಿಳಿ ಹಾಸ್ಯದ ಪ್ರವಾಹದಿಂದ ಹದ ಹಾಳತವರಿತು ಅಭಿಷೇಕವನ್ನೋ ಪ್ರೋಕ್ಷಣೆಯನ್ನೋ ಮಾಡಬೇಕಾದ ಔಚಿತ್ಯದ ಮರ್ಮವನ್ನು ತಿಳಿದಿರಬೇಕು.

ಇಷ್ಟೆಲ್ಲ ಗುಣಗಳಿದ್ದರೆ ಹೂರಣದ ಹೋಳಿಗೆ ಸುಲಭವೆಂಬುದನ್ನು, ಜನಜೀವನದ ಮೇಲು ಹೊದಿಕೆಯ ಒಳಗಡೆಯಲ್ಲಿ ಹಾಸ್ಯದ ಹೂರಣ ತುಂಬಿಸಿ ಆ ರಸಕವಳದಿಂದ ರಸಿಕರೊಡನೆ ಅರಸಿಕರನ್ನೂ ಪ್ರಾಜ್ಞರ ಜತೆಗೆ ಅಜ್ಞರನ್ನೂ ತಣಿಸಿ ಕುಣಿಸಲು ಸಾಧ್ಯ ಎಂಬುದನ್ನೂ ಹಾಸ್ಯಸಾಹಿತ್ಯವನ್ನು ಬೆಳೆಯಲೊಲ್ಲದ ಕನ್ನಡ ನಾಡಿನಲ್ಲಿ ತಮ್ಮ ಕೃತಿಗಳಿಂದ ತೋರಿಸಿಕೊಟ್ಟ ಅತ್ಯಂತ ವಿರಳ ಖ್ಯಾತ ಸಾಹಿತಿಗಳಲ್ಲಿ ಶ್ರೀ ಶ್ರೀರಂಗ ಶ್ರೀ ಕಸ್ತೂರಿ, ಶ್ರೀ ಗೋರೂರು, ಶ್ರೀ ನಾಸ್ತಿ, ಶ್ರೀ ಪೀ. ಸಿ. ಶ್ರೀ ಕಾರಂತರಂಥ ಕೆಲವರಾದರೂ ಇದ್ದಾರೆಂದು ಹೆಮ್ಮೆಪಡಲಾಗದಿದ್ದರೂ ಸಂತೋಷಿಸಬಹುದು.

ಪ್ರಜಾರಾಜ್ಯದ ವಿಶೇಷ ಸಮಾರಂಭದ ಸಂಬಂಧ ಹೊರಡುವ ನಾಡ ನುಡಿಯ ನಿಷ್ಠೆಯ 'ನವಯುಗ'ದ ವಿಶೇಷಾಂಕಕ್ಕೆ, ನನ್ನಲ್ಲಿ ಹೂರಣದ ಹೋಳಿಗೆ ಮಾಡಿ ಬಡಿಸುವ ಅರ್ಹತೆ ಇರುತ್ತಿದ್ದರೆ ಹಾಗೇ ಮಾಡುವುದು ಸುಲಭವಾಗುತ್ತಿತ್ತು. ಅಂಥ ಅರ್ಹತೆ ನನ್ನಲ್ಲಿ ಇಲ್ಲವಾದರೂ ರಾಷ್ಟ್ರೀಯ ಹಬ್ಬಕ್ಕೆ ಹೋಳಿಗೆ ಹೆಸರಿನದೇ ನನ್ನಾದರು ಮಾಡಿ ಹಂಚಬೇಕೆಂಬ ಆತುರ ಬೇಕಾದುದಕ್ಕಿಂತ ಅಧಿಕವಾಗಿಯೇ ಇದೆ. ಆದುದರಿಂದ ಹೂರಣವೇ ಇಲ್ಲದ ಹೋಳಿಗೆ —ಅದೂ ಹೊತ್ತಿ ಹೋಗಿರಬಹುದು—ರಾಶಿಮಾಡಿ ಹಾಕುವ ಈ ಕಷ್ಟದ ಕೆಲಸಕ್ಕೆ ಕೈಹಾಕಿದ್ದೇನೆ. ಆ ಸಪ್ಪೆ ಹೋಳಿಗೆ ಯಾರಿಗೂ ಬೇಡ ಎಂಬುದನ್ನು ಬಲ್ಲೆ. ಸಂಪಾದಕರಿಗೂ ಬೇಡವಾದರೆ ಸಂತೋಷವೇ.

'ನವಯುಗ' ಪತ್ರದ ಒಂದು ಮಾತು ಇಷ್ಟು ಹೊತ್ತೂ ಮರೆತೇ ಹೋಗಿತ್ತು. ಅದೆಂದರೆ—'ಸಂದರ್ಭೋಚಿತವಾದ ನನ್ನ ಒಂದು ಲೇಖನ' ಎಂಬುದು. ಈಗ ಅಂಥ ಸಂದರ್ಭಗಳಲ್ಲಿ ಪ್ರಥಮ ಸ್ಥಾನ 'ಚೀನೀಯರ ಉಚ್ಚಾಟನೆ'ಗೆ ಅಂತಲೇ. — —

'ಬನ್ನಿರೋ ಚೀನದಾ ಶರಧಿಯಾ ಗಾಂಟಲ್ಕೆ। ತನ್ನಿರೋ ನಿಮ್ಮೆಲ್ಲ ಧನ ವಸ್ತು ಕನಕಗಳ॥ನ ಸ್ಸಿಸದೆ ಉಳಿವರೇ ಸ್ವಾತಂತ್ರ್ಯದಾ ಕರೆಯ। ಬನ್ನಿ ಬವಣೆಯೇ ನಮಗೆ ಎಂದೆಂದಿಗೂ॥ ಎಂದು ಒಂದಾಗಿ ಹಾಡೋಣ. ಒಂದಾಗಿ ದುಡಿಯೋಣ. ಸರ್ವ ತ್ಯಾಗ ಮಾಡಿ ಚೀನೀಯರನ್ನು ಹೊರತಳ್ಳೋಣ.

ಯುದ್ಧ ಪ್ರಸಕ್ತಿ ಬಿಟ್ಟರೆ ಮತ್ತೆ ನನ್ನ ಪಾಲಿಗುಳಿದದ್ದು ದೇಶಕ್ಕಾಗಿ ರಾಜಕಾರಣಿ ತನ್ನ ಬಾಳಿನಲ್ಲಿ ಮಾಡಿರುವುದೇನೆಂಬುದಲ್ಲ. ಸಾಹಿತಿ ಸಾಹಿತ್ಯಕ್ಕಾಗಿ ತನ್ನ ಬಾಳಿನಲ್ಲಿ ಏನು ಮಾಡಿರುವುದೇನೆಂಬುದು. ಶ್ರೀ ಶಿವರಾಮ ಕಾರಂತರು ಹುಟ್ಟಿದ್ದು ಅರುವತ್ತು ವರ್ಷಗಳ ಹಿಂದೆ ಎಂದು ಗ್ರಾಮ ಉದ್ಯೋಗಸ್ಥರು ತಮ್ಮ ದಾಖಲೆಗಳಲ್ಲಿ ನಮೂದಿಸಿಕೊಂಡಿರಬಹುದು. ಆದರೆ ಅವರ 'ಷಷ್ಟ್ಯಬ್ದಿ ಪೂರ್ತಿ ಸಮಾರಂಭ'ಗಳು ಸನ್ಮಾನಸಭೆಗಳೂ ಪೂರ್ತಿಯಾದಾಗ—ಇನ್ನು ಹತ್ತು ವರ್ಷ ಜರುಗಿದರೂ ಸರಿಯೇ—ಆಗ ಶ್ರೀ ಕಾರಂತರಿಗೆ ೭೦ ಎನ್ನದೆ ಅರವತ್ತರ ಕಾರಂತರೆಂದೂ ಅಲ್ಲದೆ ಮೂವತ್ತರ ಕಾರಂತರೆಂದೇ ಆ ದಾಖಲೆಗಳಲ್ಲಿ ತಿದ್ದಿ ಬರೆಯಲಿ.

ಚಿತ್ತು ಹಂಸಪಾದಗಳಿಂದ ಮುಚ್ಚಿ ಹೋಗಿಯೂ ಕಾಕಾಕ್ಷರಗಳಿಂದ ಓದಲಿಕ್ಕೆ ಬಾರದೆಯೂ ಈ ನನ್ನ ಹಸ್ತಪ್ರತಿಯ ಲೇಖನದ ಮೊಳೆ ಜೋಡಿಸಲು ಅಶಕ್ತ ಎಂಬ ಕಂಪೋಜಿಟರರ ದೂರು ಕೇಳಿ ಸಂಪಾದಕರೇ 60 ಅಲ್ಲ 600 ಸಾಲಿನ ಲೇಖನವನ್ನು ಕಸದ ಬುಟ್ಟಿಗೇ ತಳ್ಳಿ ಬಿಡಬಹುದೆಂದು ಆ ವಿಶ್ವಾಸದೊಳಗಿನ ಅವಿಶ್ವಾಸದ ರಾವನ್ನು ನನ್ನಲ್ಲಿ ಮಂಜೂರು ಮಾಡಿಕೊಂಡೇ ಈ ಲೇಖನ ರವಾನಿಸಿರುವೆ.

# ಭಾರತೀಯರ ವ್ರತದಿನ

(೯ನೇ ಪುಟದಿಂದ)

ಯಲ್ಲಿ ಭಾರತವು ನಡೆದುಕೊಂಡಿದೆ, ನಡೆಯುತ್ತಿದೆ. ನಾವು ಸ್ವಾತಂತ್ರ್ಯ ಪಡೆದುದೂ ಈ ತಳಹದಿಯಲ್ಲಿಯೇ; ಗೋವಾವನ್ನು ವಿಮೋಚನೆಗೊಳಿಸಿದ್ದೂ ಈ ತತ್ವದಲ್ಲಿಯೇ; ಈಗ ಕೂಡಾ ಚೀನಾ ದೇಶದ ದುರಾಕ್ರಮಣವನ್ನು ಇದಿರಿಸುತ್ತಿರುವುದಾದರೂ ಆ ತತ್ವದಲ್ಲಿಯೇ.

**ವಿಚಿತ್ರ ಭಾಷೆ**

ಆದರೆ ಚೀನಾದವರಿಗೆ ನ್ಯಾಯ ಗೊತ್ತಿಲ್ಲವೆಂದು ತಿಳಿಯುವಂತಿಲ್ಲ; ಆತ್ಮಸಾಕ್ಷಿಯಿಲ್ಲವೆಂದು ಹೇಳುವಂತಿಲ್ಲ. ಅವುಗಳನ್ನು ಸಮಾಧಾನಪಡಿಸಲೆಂದೇ ಎಷ್ಟೋ ಅಪಸವ್ಯಗಳನ್ನು ಮಾಡುತಿದ್ದಾರೆ. ಬಹಿರಂಗವಾಗಿ ನಮ್ಮ ಮೇಲೆ ವೈರವನ್ನು ಘೋಷಿಸಿಲ್ಲ; ಅದನ್ನು ಬೇರೆಯಾರಾದರೂ ಘೋಷಿಸಿದರೆ ತಾವು ಜವಾಬ್ದಾರರಲ್ಲವೆಂಬ ರೀತಿಯಲ್ಲಿಯೇ ವರ್ತಿಸಿಕೊಂಡೂ ಮಾಡಿಕೊಂಡೂ ಬರುತ್ತಿದ್ದಾರೆ.

ಹುಚ್ಚು ಮಂದಿಗಳು! ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಹಾಗೆ. ಎಚ್ಚೆತ್ತಿರುವ ಲೋಕವೇ ಅದಕ್ಕೆ ವಿಪರೀತವಾಗಿ ಕಾಣುವುದೇನೋ. ಯಾರಾದರೂ ತನ್ನ ಪರವಾಗಿ ವಾದಿಸಿ ತನಗೆ ನ್ಯಾಯ ಸಮ್ಮತಿ ನೀಡೀತೇನೋ ಎಂದು ಅದು ಕನಸು ಕಾಣುತ್ತ ಒದ್ದಾಡುತ್ತಿದೆ. ಅದು ನೀಡುವ ಭರವಸೆಯೇನು, ಸಂಧಿಯೇನು, ಷರತ್ತುಗಳೇನು, ಉದಾರ ಮನೋಭಾವದ ಹಾಗೆ ಕಾಣುವ ಮಾತಿನ ಮೋಡಿಯೇನು!

ಅಸಲೇ ಚೀನದ್ದು ಅರ್ಥವಾಗದ ಭಾಷೆ. ಇಪ್ಪತ್ತು ವರ್ಷಗಳ ಹಿಂದೆ ಚೀನಾ ವ್ಯಾಪಾರಿಗಳು ನಮ್ಮ ದೇಶದ ಬೀದಿಗಳಲ್ಲಿ ಮನೆ ಮನೆಗಳ ಮುಂದೆ 'ಸ್ನೋ—ಸ್ನಾಂ—ಸ್ನೋಂ' ಎಂಬ ರಾಗ ತೆಗೆಯುತ್ತಿದ್ದಾಗ, ಕಿವಿಗೇನೋ ಇಂಪಾಗಿ ಕೇಳಿಸುತ್ತಿತ್ತೇ ಹೊರತು, ಅರ್ಥವೇನೂ ಆಗುತ್ತಿರಲಿಲ್ಲ. ಅವರ ಬೆನ್ನಿನಲ್ಲಿರುವ ಜವುಳೀ ಮೂಟೆಯನ್ನು ನೋಡಿಯೇ ಗೊತ್ತಾಗಬೇಕು ಇವರು ವ್ಯಾಪಾರಿಗಳೆಂದು. (ಈಗ ಹಾಗೆ ಬರುವ ವಾಡಿಕೆಯಿಲ್ಲ) ಅದಕ್ಕನುಸಾರವಾಗಿ ಅವರ ಅಕ್ಷರಗಳು ಕೂಡ ನಮಗಿರುವ ಹಾಗಲ್ಲವಂತೆ. ನಮಗೆಲ್ಲ ಪ್ರತಿಯೊಂದು ಶಬ್ದಗಳಿಗೂ ಬಿಡಿ ಬಿಡಿ ಅಕ್ಷರಗಳಿದ್ದರೆ, ಅವರಿಗೆ ಒಂದೊಂದು ಶಬ್ದವೇ ಒಂದೊಂದು ಅಕ್ಷರವಂತೆ! ಅದರಿಂದಲೇ ಅಂತ ಕಾಣುತ್ತೆ, ಅವರು ಹೇಳುವ ಮಾತುಗಳಿಗೆ ಹೇಗೆ ಬೇಕಾದರೂ ಅರ್ಥ ಮಾಡಿಕೊಳ್ಳಬಹುದು. "ಇದರ ಅರ್ಥವೇನು, ವಿವರಣೆಯೇನು?" ಎಂದು ಮಾತು ಮಾತಿಗೂ ಕೇಳ ಬೇಕಾಗ ಬಂದರೂ, ಅವರ ಮಾತಿನ ಅರ್ಥವು ಅವರಿಗೇ ಗೊತ್ತು ಎಂಬಂತಿವೆ. ಇದೊಂದು ಸೌಕರ್ಯದಿಂದಲೇ ೮—೧೦ ವರ್ಷಗಳಿಂದ ಸ್ನೇಹಸಲ್ಲಾಪದಂತಹ ಮಾತುಗಳನ್ನಾಡುತ್ತ, ಒಳಗೊಳಗೇ ಕತ್ತಿ ಮಸೆದುಕೊಂಡು, ಈಗ ಹೊರದೆಗೆದು ಝಳಪಿಸಲಾರಂಭಿಸಿದೆ ಆ ದೇಶ!

**ಇದೆಂಥ ಆಕ್ರಮಣ!**

ಸರಿ, ಚೀನಾ ದೇಶವು ಬಹಿರಂಗವಾಗಿಯೇ ನಮ್ಮೊಡನೆ ಯುದ್ಧಕ್ಕೆ ಸಿದ್ಧವಾಯಿತೆನ್ನೋಣವೆ? ಅದೂ ಇಲ್ಲ. ತಾನೇನೋ ಪೂರ್ವ ಸಿದ್ಧತೆ ಮಾಡಿಕೊಂಡೇ ಇದ್ದರೂ ಹಾಗೆಂದು ಢಾಣಾಡಂಗುರವಾಗಿ ಯುದ್ಧ ಘೋಷಣೆ ಮಾಡಿಲ್ಲವದು. ಯುದ್ಧದ ಸೂಚನೆ ಕೊಟ್ಟು, ಇದಿರಾಳಿಯೂ ತಯಾರಾಗಿರಲು ಅವಕಾಶ ನೀಡುವಂತಹ ಯಾವುದೊಂದು ಧರ್ಮ ಯುದ್ಧದ ಕ್ರಮವನ್ನೂ ಅನುಸರಿಸದೆ ಯುದ್ಧದಂತಹ ಅನಾಹುತಗಳನ್ನೇ ಎಬ್ಬಿಸಿ ಹಾಕಿತು! ಕೊರೆಯುವ ಚಳಿಯಲ್ಲಿ, ಸುರಿಯುವ ಹನಿಯಲ್ಲಿ, ಬೆಟ್ಟಗಳ ನಡುವೆ, ಕಾಡುಗಳ ಇಕ್ಕಟ್ಟಿನಲ್ಲಿ, ರಾತ್ರಿಯ ಹೊತ್ತಿನಲ್ಲಿ ಯುದ್ಧ ಮಾಡಲು ಪ್ರಾರಂಭಿಸಿತೆಂದರೆ ಇದೆಂತಹ ಯುದ್ಧ? ಇದು ರಾಕ್ಷಸರ ಮಾಯಾ ನೀತಿಯಲ್ಲದೆ, ಮಾನವರ ನೀತಿಯೆನಿಸೀತೆ?

ಹಿಂದಿನ ಕತೆಯನ್ನು ನೋಡಿದರೆ ಚೀನಾ ಹೀಗೆ ವರ್ತಿಸಿದ್ದು ಹೊಸತೆನಿಸುವುದಿಲ್ಲ. ಹಿಂದೆ ನಮ್ಮ ದೇಶದಲ್ಲಿ ಕೊಲೆ ಕರ್ಮಮಾಡಿ ಅಪಾರಕೊಳ್ಳೆ ಹೊಡೆದುಕೊಂಡುಹೋದ ಚೆಂಗಿಸ್ ಖಾನನೇ ಈಗ ಚೀನಾ ನಾಯಕನಾಗಿ ಅವತರಿಸಿದ್ದಾನೆಂದು ಕೆಲವರನ್ನುತ್ತಾರೆ. ಚೀನಾದಲ್ಲಿ ಜನಸಂಖ್ಯೆ ಜಾಸ್ತಿಯಾಗಿ ಮೇರೆ ಮೀರಿದಾಗ ಯುದ್ಧದಲ್ಲಿಯೋ, ಮತ್ತೇನಾದರೂ ದುಸ್ಸಾಧ್ಯ ಕಾರ್ಯಗಳಲ್ಲಿಯೋ ಜನತೆಯ ಲಕ್ಷ್ಯವನ್ನು ತಿರುಗಿಸಿ ಬಿಡುತ್ತಾರಂತೆ ಅಲ್ಲಿಯ ನಾಯಕರು. ಹಾಗೆ ಎಷ್ಟೋ ಖೈದಿಗಳನ್ನೂ, ಕೂಲಿಗಳನ್ನೂ ದುಡಿಸಿ ಕೊಂಡು ಅವರ ಹೆಣಗಳ ಕಣಿಯಲ್ಲಿಯೇ, ಪ್ರಪಂಚದ ಅದ್ಭುತಗಳಲ್ಲೊಂದಾದ 'ಚೀನಾ ಗೋಡೆ'ಯನ್ನು ಕಟ್ಟಿಸಿದ್ದಾರಂತೆ ೪,೪೦೦ ಮೈಲು ಉದ್ದದ್ದು! ಈಗ ಮತ್ತೆ ಅಂಥ ಬುದ್ಧಿಯಿಂದಲೇ ಅಲ್ಲಿಯ ಜನತೆಯನ್ನು ಮಂಕುಮಾಡಿ ಹಿಮಾಲಯದಲ್ಲಿ ಬಲಿಗೊಡಲು ಹುರಿದುಂಬಿಸಿ ಹಾಕಿದೆಯಂತೆ ಆ ಚೀನಾ!

**ಮೋಸಹೋಯಿತು!**

ಆದರೆ ಅದು ತನ್ನ ೮–೧೦ ವರ್ಷಗಳ ಅನುಭವದಿಂದ ಇನ್ನು ತನ್ನ ಬೇಳೆ ಭಾರತದ ನೀರಿನಲ್ಲಿ ಬೆಂದೀತೆಂದು ಮಾಡಿಕೊಂಡದ್ದು ತಪ್ಪೆಂದು ಈಗ ಅದಕ್ಕೆ ಸುಮಾರಾಗಿ ಗೊತ್ತಾಗಿರಬೇಕು. ಥಟ್ಟನೆ ತಾನಾಗಿಯೇ ಯುದ್ಧವನ್ನು ನಿಲ್ಲಿಸಿ ಹಿಂದೆ ಸರಿಯುವ ದೃಶ್ಯವನ್ನು ತೋರಿಸುತ್ತ, ಇನ್ನೂ ಏನೋ ಪಕ್ಷಮಾಡಲೆಳಸುವ ಹಾಗಿದೆ. ಈ ಸಂದರ್ಭದಲ್ಲಿ ನಮ್ಮ ಹೆಂಗುಸರು ಏನು ಹೇಳುವರು ಗೊತ್ತೇ? "ಬಹುಶಃ ಅವರೆಲ್ಲ ಯಾವುದೊ ಹಾಳು ಕಳ್ಳು ಕುಡಿದರೆಂದು ಕಾಣುತ್ತೆ. ಹೆಂಡ ಕುಡಿದು ಮತ್ತೇರಿ ಹುಚ್ಚುಚ್ಚು ಹೊಡೆದಾಡಿಕೊಂಡು ಹತ್ತಿರ ಇದ್ದವರಿಗೆಲ್ಲ ಕೀಟಲೆಗೊಟ್ಟು, ಮತ್ತಿಳಿದ ಮೇಲೆ ಮನುಷ್ಯ ಜ್ಞಾನ ಬಂತೇನೋ! ಪಾಪ!" ಎಂದು ಕೆಲವರಾಡಿಕೊಂಡರು.

ಅಲ್ಲಿಯ ವರೆಗೂ ನಗೆಗೀಡಾಗಿಹೋಯಿತು ಚೀನಾ!

ಅದು ಮಾಡಿಕೊಂಡ ಯೋಚನೆಯೇ ಒಂದು; ನಡೆದುದೇ ಬೇರೊಂದು.

ನಮ್ಮ ಸ್ನೇಹಿತನ ಹಾಗೆಯೇ ವರ್ತಿಸಿಕೊಂಡಿದ್ದ ಚೀನಾಕ್ಕೆ ಇಲ್ಲಿ ನಡೆಯುವುದೆಲ್ಲಾ ಗೊತ್ತಾಗಿತ್ತು. ಭಾರತವು ಸ್ವತಂತ್ರವಾದ ಮೇಲೆ ಯುದ್ಧಕ್ಕೆ ಮೂಲವಾದ ಸೇನೆ ಗೀನೆ ಮುಂತಾದುವುಗಳಿಗೆ ಮುಖ್ಯತ್ವವನ್ನು ಕೊಡದೆ, ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸುವುದಕ್ಕೇ ಮುಖ್ಯತ್ವವನ್ನು ಕೊಡುತ್ತಾ ಬಂದಿತ್ತು. ಅಲ್ಲದೆ ಹಿಮಾಲಯವನ್ನು ಪ್ರಕೃತಿದತ್ತವಾದ ದುರ್ಭೇದ್ಯ ಕೋಟೆಯಂತೆ ನಾವೆಲ್ಲಾ ತಿಳಿದಿದ್ದೆವು. ನಮ್ಮ ಮನೆ ನಮ್ಮ ದೇಶ, ನಮ್ಮ ಅಧಿಕಾರ, ನಮ್ಮ ಪದವಿ ಎಂದುಕೊಂಡು ನಮ್ಮ ನಮ್ಮೊಳಗೇ ಒಬ್ಬರನ್ನೊಬ್ಬರು ಮೇಲೆ ಕೆಳಗೆ ಮಾಡಿಕೊಂಡು, ಅನೇಕ ಕಕ್ಷಿ, ಪಕ್ಷಗಳನ್ನು ಕಟ್ಟಿಕೊಂಡು, ಸರಕಾರವನ್ನು ಕೂಡ ಯಾವುದೋ ಒಂದು ಪಕ್ಷದ್ದೆಂದು ತಿಳಿದುಕೊಂಡು ಹಾಗೂ ಹೀಗೂ ಹಳಿದಾಡಿಕೊಂಡೇ ಇದ್ದೆವು. ಒಳಗೊಳಗೆ ಹೀಗಿದ್ದರೂ, ದೂರಕ್ಕೆ ನೋಡುವಾಗ ನಮ್ಮ ನಾಯಕಮಣಿ ನೆಹರೂರ ಮುಂದಾಳ್ತನದಲ್ಲಿ ಭಾರತವು ಪ್ರಗತಿಪಥದಲ್ಲಿಯೇ ಸಾಗುತ್ತಿರುವುದು ಸ್ಪಷ್ಟವಾಗಿ ಕಾಣುತಿತ್ತು.

ಅಸೂಯೆಯಿಂದಲೂ ದುರಾಶೆಯಿಂದಲೂ ಇದನ್ನು ನೋಡುತ್ತಾ ಹೊಂಚು ಹಾಕುತ್ತಾ ಇದ್ದ ನೆರೆಯ ಚೀನಾ, ತನ್ನ ನಾಲಗೆಯನ್ನು ಚಾಚಿಯೇ ಬಿಟ್ಟಿತು ಇನ್ನು ತಾಳಲಾರದೆ! ಹಿಮಾಲಯ ಪ್ರಾಂತದ ಕೋಟೆಯ ಬಿರುಕುಗಳೆಡೆಯಿಂದ ತನ್ನ ಚುಂಚು ಪ್ರವೇಶವನ್ನು ಮಾಡಿಯೇ ಬಿಟ್ಟಿತು. ತನ್ನ ಈ ಅಬ್ಬರಕ್ಕೆ ಭಾರತ ಜನತೆಯೆಲ್ಲವೂ ತಲಾ ಒಬ್ಬೊಬ್ಬರೊಂದೊಂದು ದಿಕ್ಕಿಗೆ ಓಡುವರೆಂದು ಅದು ಲೆಕ್ಕ ಹಾಕಿರಬೇಕು. ಮೋಸ ಹೋಯಿತು! ಮರು ನಿಮಿಷದಲ್ಲಿಯೇ ತನ್ನ ಲೆಕ್ಕವು ತಪ್ಪೆಂದು ಅದಕ್ಕೆ ಗೊತ್ತಾಯಿತು.

**ಎಚ್ಚೆತ್ತ ಭಾರತ**

ಭಾರತ ದೇಶವು ಆ ಸೇತು ಹಿಮಾಚಲಪರ್ಯಂತ ಒಂದಾಗಿ ಸೇರಿಕೊಂಡು ಸಿಡಿದೆದ್ದಿತು. ತಮ್ಮ ತಮ್ಮೊಳಗಿನ ಒಳ ಜಗಳಗಳನ್ನೆಲ್ಲಾ ಒದೆದು ಝಾಡಿಸಿ ಒಗ್ಗಟ್ಟಿನಿಂದ ಶತ್ರುವನ್ನು ಇದಿರಿಸಲು ಸಿದ್ಧವಾಗಿದೆಯೇ ಹೊರತು ಹೆದರಿ ಸಾಯಲಿಲ್ಲ. ಈ ಮೊದಲು ಇಲ್ಲಿಯ ನಾಯಕರು ಯಾವ ಬಗೆಯ ಭಾವೈಕ್ಯವನ್ನು ಸಾಧಿಸಲು ಪ್ರಯತ್ನ ಪಡುತ್ತಿದ್ದರೋ ಅದನ್ನು ಈ ಚೀನಾ ಶತ್ರು ನಿಮಿಷ ಮಾತ್ರದಲ್ಲಿ ಸಾಧಿಸಿ ಬಿಟ್ಟಂತಾಯಿತು. ಆ ಮಟ್ಟಿಗೆ ಚೀನಾ ದೇಶಕ್ಕೆ ನಾವು ಕೃತಜ್ಞರಾಗದೆ ವಿಧಿಯಿಲ್ಲ.

ಈ ವಿಚಿತ್ರ ಪಾತದಿಂದ ಭಾರತೀಯರೆಲ್ಲ ಎಚ್ಚೆತ್ತು ಬಿಟ್ಟರು. ನಮ್ಮ ದೇಶಾಭಿಮಾನವು ಕೊಂಚವೂ ಕುಗ್ಗಿಲ್ಲವೆಂಬುದು ನಿಚ್ಚಳವಾಯಿತು. ಯಾವ ಹಿಮಾಲಯವು ಭಾರತದ ಉತ್ತರ ಗಡಿಯ ಅಜೇಯವಾದ ಕೋಟೆಯೆಂದು ಭಾವಿಸಲಾಗಿತ್ತೋ, ಅದೀಗ ಆಧುನಿಕ ಯುದ್ಧ ತಂತ್ರಕ್ಕೆ ಈಡಲ್ಲವೆಂಬುದನ್ನು ಕಂಡ ಹಾಗಾಯಿತು. ಕೋಟೆಯೊಂದು ಭದ್ರವಾಗಿದೆ. ಬಲವಾಗಿದೆಯೆಂದುಕೊಂಡು ಅದರ ಕಡೆಗೆ ಲಕ್ಷ್ಯ ಕೊಡದೇ ಹೋದರೆ ಏನಾಗುತ್ತದೆಂದು ಗೊತ್ತಾದ ಹಾಗಾಯಿತು. ಇನ್ನು ಮೇಲೆ ಎಂದೆಂದಿಗೂ ಅಲ್ಲಿ ತಕ್ಕ ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಂಡು ಕಾಯಲೇಬೇಕಾದುದು ಅನಿವಾರ್ಯ. ಆಗ ತಾನೇ ಭಾರತವು ತನ್ನ ಕಾಲ ಮೇಲೆ ತಾನು ಗಟ್ಟಿಯಾಗಿ ನಿಂತಿದೆಯೆಂದು ಎದೆತಟ್ಟಿ ಹೇಳಬಹುದು.

ಏನೇ ಆದರೂ ಭಾರತದಂತಹ ಪುಣ್ಯಭೂಮಿ ಅಷ್ಟು ಸುಲಭವಾಗಿ ಶತ್ರುಗಳ ಬಾಯಿಗೆ ಎಂದಿಗೂ ಬೀಳದು. ಏನೋ ಅವರಿಷ್ಟು ಬಾಲವಾಡಿಸಿಕೊಂಡು ಲಾಗ ಹಾಕಿ ಬಿಟ್ಟರೆ ಆಯಿತೆ? ಒಂದಿಷ್ಟು ಜಾಗೆಯನ್ನು ಅವರು ಆಕ್ರಮಿಸಿಕೊಂಡು, ಇದು ನಮ್ಮದೆಂದ ಮಾತ್ರಕ್ಕೆ ನಾವು ಒಪ್ಪುವ ವರೆಗೆ ಅದು ಅವರಿಗೆ ದಕ್ಕುವ ಬಗೆ ಹೇಗೆ?

ನಾವು ನೂರಾರು ವರ್ಷ ಹೋರಾಡಿ ಗಳಿಸಿಕೊಂಡ ಸ್ವಾತಂತ್ರ್ಯವನ್ನು ಚೀನಾ ದೊರೆ ಮೂರು ದಿನದೊಳಗೆ ಅಪಹರಿಸಿ ಬಿಡಲು ಸಾಧ್ಯವೆ?

ನಮ್ಮ ನಾಯಕಮಣಿ ನೆಹರೂ ಕತ್ತಿಯ ಅಲಗಿನ ಮೇಲೆ ತೂಕ ತಪ್ಪದೆ ನಡೆಯ ಬಲ್ಲವರೆಂಬುದನ್ನು ನಾವು ಕಂಡೆವು. ಅವರ ಧೈರ್ಯ ಸ್ಥೈರ್ಯ, ಸ್ಥಿತಪ್ರಜ್ಞತೆಗಳನ್ನು ಈ ಸಂದರ್ಭದಲ್ಲಿ ಪ್ರತಿ ಭಾರತೀಯನೂ ಕಂಡು ಮೆಚ್ಚಿ ರೋಮಾಂಚಿತನಾಗುತಿದ್ದಾನೆ. ಚೀನಾವೂ ಕಾಣಲಿದೆ.

ಒಟ್ಟಿನಲ್ಲಿ ಈ ಸಲದ ಪ್ರಜಾರಾಜ್ಯ ದಿನೋತ್ಸವವು ಉಜ್ವಲ ಭಾರತೀಯರ ಸ್ವಾತಂತ್ರ್ಯ ರಕ್ಷಣೆಯನ್ನು ಪ್ರತಿಫಲಿಸುವ ವ್ರತದಿನದಂತೆ ಕಾಣಬೇಕು. ಪ್ರತಿಯೊಬ್ಬ ಭಾರತೀಯನೂ ತನ್ನ ಮಾತೃ ದೇಶವನ್ನು ನೆನೆದು ಪುಳಕಿತನಾಗಬೇಕು.

**ಜೈ ಹಿಂದ್**

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್
ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—
TALES OF IND
ಕಥಾವಳಿಯ ಕನ್ನಡ ಅನುವಾದ
ಭಾರತೀಯ ಕಥೆಗಳು
ಚಿಕ್ಕ ಚೊಕ್ಕ ೧೫೨ ಕಥೆಗಳು ಬೆಲೆ ರೂ. 1-12-0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,
ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

# ಪರಮಹಂಸರ ಮೆಚ್ಚಿನ ಸ್ತ್ರೀಸಮಾಜ

(೨ನೇ ಪುಟದಿಂದ)

**ಪರಮ ಹಂಸರ ಸ್ತ್ರೀ ಸಮಾಜ**

ಕಲಿಯುಗದಲ್ಲಿ ಜನತೆಯಲ್ಲಿ ಎಲ್ಲಾ ವಿಧದ ಶಕ್ತಿಹ್ರಾಸವಾಗುವುದರಿಂದ ಶಕ್ತಿ ಪೂಜೆಯನ್ನು ಉದ್ದೀಪನಗೊಳಿಸುವುದಕ್ಕಾಗಿಯೇ ರಾಣಿರಾಸಮಣಿಯು ಜನ್ಮವೆತ್ತಿದಳೆಂದು ಪರಮ ಹಂಸರೇ ಹೇಳುತ್ತಿದ್ದರು. ಈಕೆ ಕಲ್ಕತ್ತೆಯ ಲಕ್ಷಾಧೀಶನಾದ ರಾಜಚಂದ್ರದಾಸನ ಪತ್ನಿ. ಈಕೆಯು ಪರಮ ಹಂಸರ ಶಿಷ್ಯ ಕೋಟಿಯಲ್ಲೊಬ್ಬಳು. ಇವಳಲ್ಲಿ ಸ್ತ್ರೀಯರ ಚಂಚಲ ಪ್ರಕೃತಿ ಇರಲಿಲ್ಲ. ಕಾರ್ಯದ ದಕ್ಷತೆ, ಬುದ್ಧಿ ಕುಶಲತೆ, ಮುಂದಾಲೋಚನೆ, ಎಂತಹ ಸನ್ನಿವೇಶವನ್ನಾದರೂ ಧೈರ್ಯದಿಂದ ಇದಿರಿಸುವ ಧೀರ ಪ್ರಕೃತಿ, ಇವೆಲ್ಲಕ್ಕಿಂತ ಮಿಗಿಲಾಗಿ ಭಕ್ತಿ ಮತ್ತು ಶರಣಾಗತಿಯಲ್ಲಿ ಅಸಮಾನಳಾಗಿದ್ದಳು. ಅಂದಿನ ಸ್ತ್ರೀ ಸಮಾಜಕ್ಕೆ ಈಕೆಯೊಂದು ಪ್ರಬಲ ಆಧಾರಸ್ತಂಭವಾಗಿದ್ದಳು.

ಗೋಪಾಲಮಾ (ಅಘೋರ ಮಣಿದೇವಿ) ಬಾಲ ವಿಧವೆಯಾಗಿದ್ದು ಸಾಧನೆಯಿಂದಲೇ ಬಾಲ ಗೋಪಾಲನನ್ನು ಪ್ರತ್ಯಕ್ಷ ಮಾಡಿಕೊಂಡಿದ್ದಳು. ಪರಮ ಹಂಸರು ಈಕೆಗೆ—'ನಿನ್ನ ಜೀವನೋದ್ದೇಶವನ್ನು ಪೂರ್ಣ ಮಾಡಿಕೊಂಡೆ, ಮಾನವ ಲೋಕದಲ್ಲಿ ನೀನು ಇನ್ನೇನೂ ಮಾಡಬೇಕಾಗಿಲ್ಲ" ಎಂದಿದ್ದರು. ವೈಧವ್ಯದಿಂದ ಕೊರಗುವ ಸ್ತ್ರೀಯರಿಗೆ ಗೋಪಾಲ ಮಾತೆಯೊಂದು ಉತ್ತಮ ಆದರ್ಶವನ್ನಿತ್ತರು.

ಯೋಗಿನ್ ಮಾ ಪರಮಹಂಸರ ಇನ್ನೊಬ್ಬ ಶಿಷ್ಯೆ. ಈಕೆಗೆ ಅದ್ಭುತ ಏಕಾಗ್ರ ಶಕ್ತಿ ಇತ್ತು. ಇವರು ಧ್ಯಾನಕ್ಕೆ ಕುಳಿತರೆಂದರೆ ಬಾಹ್ಯ ಪ್ರಪಂಚವನ್ನೆಲ್ಲಾ ಮರೆಯುತ್ತಿದ್ದರು. ಇವರ ಬಾಳು ವ್ರತ, ಉಪವಾಸ, ಪ್ರಾರ್ಥನೆ, ಪಾರಾಯಣಗಳಿಂದ ತುಂಬಿತ್ತು. ಬಹು ಕಷ್ಟವಾದ ಪಂಚತಪವನ್ನೂ ಇವರು ಮಾಡಿದ್ದರು. ಇವರು ದಿನದಲ್ಲಿ ಒಂದು ನಿಮಿಷವನ್ನೂ ಹಾಳು ಮಾಡುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರಿಗೆ ಯೋಗಿನ್‌ಮಾರ ಮೇಲೆ ಬಹಳ ವಿಶ್ವಾಸ. ಇವರ ಅಡಿಗೆ ವಿವೇಕಾನಂದರಿಗೆ ತುಂಬಾ ಹಿಡಿಸುತ್ತಿತ್ತು. ಪರಮ ಹಂಸರು ಸ್ತ್ರೀ ಸಮಾಜವು ಹೇಗಿರಬೇಕೆಂಬುದನ್ನು ಲೋಕಕ್ಕೆ ಸಾರಿದುದು ಮಾತ್ರವಲ್ಲ; ಅಂತಹ ಆದರ್ಶ ವ್ಯಕ್ತಿಗಳನ್ನೂ ಪ್ರತ್ಯಕ್ಷ ತಯಾರಿಸಿ ಸ್ತ್ರೀ ಸಮಾಜಕ್ಕೆ ತೋರಿಸಿದುದೊಂದು ಅವರ ವೈಶಿಷ್ಟ್ಯ.

ಗುಲಾಬ್‌ಮಾರವರು ಶ್ರೀ ಶಾರದಾ ದೇವಿಯವರ ಜೊತೆಗಾತಿಯಾಗಿದ್ದು ಪರಮ ಹಂಸರ ಪಾಕ ಶಾಲೆಯ ಆಡಳಿತೆ ನೋಡುತ್ತಿದ್ದರು. ಅಡುಗೆ ಮನೆ ಮತ್ತು ಊಟದ ಮನೆಯಲ್ಲಿ ಯಾರು ಯಾವ ಪದಾರ್ಥವನ್ನೂ ಹಾಳು ಮಾಡದಂತೆ ಇವರು ನೋಡಿಕೊಳ್ಳುತ್ತಿದ್ದರು. ಈಕೆಗೆ ಮನೆಯ ಪ್ರತಿಯೊಂದು ಭಾಗವೂ ಅಚ್ಚುಕಟ್ಟಾಗಿರಬೇಕು. ಇವರು ದಿನವೆಲ್ಲಾ ಎಷ್ಟೊಂದು ಕೆಲಸದಲ್ಲಿ ನಿರತರಾಗಿದ್ದರೂ ಧ್ಯಾನ, ಜಪ ಬಿಟ್ಟಿರಲಿಲ್ಲ. ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದು ಬ್ರಾಹ್ಮೀ ಮುಹೂರ್ತದಲ್ಲಿ ನಾಲ್ಕು ಗಂಟೆಗಳ ವರೆಗೆ ಧ್ಯಾನ ಜಪ ಮಾಡಿ ಅನಂತರ ದಿನದ ಕಾರ್ಯಗಳಿಗೆ ಕೈ ಹಾಕುತ್ತಿದ್ದರು. ಗೃಹಿಣಿಯ ಕಾರ್ಯ ಕೌಶಲ್ಯಕ್ಕೆ ಇವರು ಮೇಲುಪಂಕ್ತಿಯಾಗಿದ್ದರು.

ಪರಮ ಹಂಸರ ಮೆಚ್ಚಿನ ಸ್ತ್ರೀ ಸಮಾಜದಲ್ಲಿ ಗೌರಿಮಾ ಇನ್ನೊಬ್ಬರು. ಇವರಿಗೆ ಪರಮ ಹಂಸರೇ ಕೈ ದೀವಿಗೆಯಾಗಿದ್ದರು. ಇವರು ಸುಖ ಸಂಸಾರದಲ್ಲಿ ಬೆಳೆದರೂ ತ್ಯಾಗ ಜೀವನವನ್ನವಲಂಬಿಸಿ ಎಂತಹ ಕಷ್ಟಕ್ಕೂ ಭಯಪಡುತ್ತಿರಲಿಲ್ಲ. ಸುರೂಪರು ತಮ್ಮ ಸೌಂದರ್ಯದಿಂದ ಆಕರ್ಷಿತರಾಗುತ್ತಾರೆಂದು ತಿಳಿದು ಇವರು ತಮ್ಮ ನೀಳವಾದ ಕೇಶಗಳನ್ನು ಕತ್ತರಿಸಿಕೊಂಡರು. ಕೆಲವು ವೇಳೆ ಪ್ರವಾಸ ಕಾಲದಲ್ಲಿ ತಮ್ಮ ಗೌರವರ್ಣವನ್ನು ಮರೆ ಮಾಡಲು ಮುಖಕ್ಕೆ ಬೂದಿ ಕೆಸರನ್ನು ಬಳಿದುಕೊಳ್ಳುತ್ತಿದ್ದರು. ಸ್ತ್ರೀಯರಿಗೆ ತಮ್ಮ ಸೌಂದರ್ಯದ ಬಲೆಯಲ್ಲಿ ಪುರುಷ ಮೃಗಗಳನ್ನು ಕೆಡಹುದೊಂದು ಹೆಮ್ಮೆಯ ವಿಚಾರವಾಗಿರುವಾಗ, ಇವರು ಅದಕ್ಕೆ ಕುರುಡು ಕಪಡೆಯ ಬೆಲೆಯನ್ನೂ ಕೊಡದಿರುವುದು ಇವರ ಹಿರಿಮೆಗೆ ಉತ್ತಮ ನಿದರ್ಶನ. ಈಕೆಯು ಮದುವೆಯಾಗದೆ ವೈರಾಗ್ಯ ಜೀವನವನ್ನು ನಡೆಸುವ ಸ್ತ್ರೀಯರ ಸಲುವಾಗಿ ಕಲ್ಕತ್ತೆಯಲ್ಲಿ ಶಾರದೇಶ್ವರಿ ಎಂಬ ಆಶ್ರಮವನ್ನು ತೆರೆದರು. ಮಹಾ ವ್ಯಕ್ತಿಗಳಿಗೆ ಒಂದು ಸಂಸ್ಥೆಯನ್ನು ಕಟ್ಟಿ ನಡೆಸುವುದು ಅಸಾಧ್ಯವಾಗಿರುವಾಗ ಇವರು ಜನರಿಂದ ಭಿಕ್ಷೆಬೇಡಿಯೇ ಒಂದು ಆಶ್ರಮ ತೆರೆದು ಸ್ತ್ರೀಯರಲ್ಲಿ ತ್ಯಾಗ ಜೀವಿಗಳನ್ನು ನಿರ್ಮಿಸಿ ಸಮಾಜಕ್ಕೆ ಧಾರೆ ಎರೆದ ಕೆಲಸವೇನೂ ಸಾಮಾನ್ಯವಾದುದಲ್ಲ. ಪರಮ ಹಂಸರ ಮೆಚ್ಚಿನ ಸ್ತ್ರೀ ಸಮಾಜಕ್ಕೆ ಇವರ ಆಶ್ರಮವೊಂದು ಪವಿತ್ರ ಭಾಷ್ಯವಾಗಿತ್ತು.

ಪರಮ ಹಂಸರ ತಂತ್ರ ಶಾಸ್ತ್ರದ ಗುರುವಾದ ಭೈರವೀ ಬ್ರಾಹ್ಮಣಿಯೂ ದೈವೀ ಸಾಕ್ಷಾತ್ಕಾರ ಹೊಂದಿದ ಮಹಾ ವ್ಯಕ್ತಿ. ಈಕೆಯು ಪ್ರಾಚೀನ ಶಾಸ್ತ್ರ ಪುರಾಣಗಳ ವಲಯವನ್ನು ಭೇದಿಸಿಕೊಂಡು ಆಧ್ಯಾತ್ಮಿಕ ಕೇಂದ್ರಕ್ಕೆ ಹಾರಿಕೊಂಡ ದೇವಮಾನವಿ!

**ಸ್ತ್ರೀ ಸಮಾಜದ ಸಂಸ್ಕಾರ**

ಪರಮ ಹಂಸರಂತೆ ಸ್ತ್ರೀಯರಿಗೆ ಬೋಧಿಸಿದವರು ನಮ್ಮ ಸಮಾಜದಲ್ಲಿ ವಿರಳ. ಸ್ತ್ರೀಯೊಂದು ಅಗ್ನಿಕುಂಡ; ಪುರುಷನೊಂದು ತುಪ್ಪದ ಭರಣಿ. ಅಗ್ನಿಕುಂಡದ ಬಳಿಗೆ ತುಪ್ಪದ ಭರಣಿ ಹೇಗೆ ಹೋದೀತು? ಹೋಗಿ ಏನು ಉಪದೇಶ ಮಾಡೀತು? ಉಪದೇಶದ ಮೊದಲು ತುಪ್ಪದ ಗತಿ ಏನಾದೀತು? ಇವೆಲ್ಲಾ ಶಾಸ್ತ್ರಕಾರರ ಅಂಜಿಕೆ. ಸ್ತ್ರೀಯು ಮಾಯೆ ಮಾಯೆಯೊಡನೆ ಸತ್ಪುರುಷನಿಗೆ ವ್ಯವಹಾರ ಸಲ್ಲದು ಅಂದ ಮೇಲೆ ಸ್ತ್ರೀಯರನ್ನು ಸತ್ಪಥದಲ್ಲಿ ನಡೆಸುವವರಾರು? ಪರಮ ಹಂಸರು ಪುರುಷರೊಂದಿಗೆ—'ಸ್ತ್ರೀಯಲ್ಲಿ ಕಾಮಿನಿಯನ್ನು ಕಾಣಬೇಡ; ಜಗನ್ಮಾತೆಯನ್ನು ಕಾಣು' ಎನ್ನುತ್ತಿದ್ದರು. ಸ್ತ್ರೀಯರಿಗೆ—ಪುರುಷರ ಮೋಹಜಾಲದಲ್ಲಿ ಸಿಲುಕಬಾರದೆಂದು ಸಾರಿ ಹೇಳುತ್ತಿದ್ದರು. ಪುರುಷ ಮೋಹವೇ ಸ್ತ್ರೀಯ ಅಧಃಪತನವೆನ್ನುತ್ತಿದ್ದರು. ಪರಮ ಹಂಸರು ತಾವೇ ತಮ್ಮಲ್ಲಿ ರಾಧೆಯ ಭಾವವನ್ನು ಆರೋಪಿಸಿಕೊಂಡು ಆ ಭಾವದಲ್ಲಿ ವಿಲೀನರಾಗಿ ಪರಮ ಪ್ರೇಮಿಕ ಪುರುಷನಾದ ಬೃಂದಾವನದ ಗೋಪಿನಾಥ ಶ್ರೀ ಕೃಷ್ಣನನ್ನು ಪ್ರತ್ಯಕ್ಷ ಮಾಡಿಕೊಂಡಿದ್ದರು. ಇದರಿಂದ ಅವರಿಗೆ ಮಹಿಳೆಯರ ಭಾವದ ಬೆಲೆ—ಅರ್ಥ—ಯೋಗ್ಯತೆ ತಿಳಿದಿತ್ತು. ಅವರು ಸ್ತ್ರೀಯರ ಅಂತರಂಗದ ಸಖಿಯಾಗಿದ್ದರು; ಅಂತಃಪುರದ ಗೆಳತಿಯರೆನ್ನಿಸಿದ್ದರು. ಪರಮ ಪಾವಿತ್ರ್ಯದ ಸಿದ್ಧಿಗೆ ಸ್ತ್ರೀ ಪುರುಷರೆಂಬ ಭೇದವಿಲ್ಲ.

ಸ್ತ್ರೀಯು ಪತಿಯನ್ನು ದೇವತ್ವಕ್ಕೇರಿಸಿ ಪೂಜಿಸುವುದು ಅನಾಗರಿಕ ಸಂಪ್ರದಾಯ—ದಾಸ್ಯ ಪದ್ಧತಿಯ ಪರಾಕಾಷ್ಠತೆ—ಎಂಬ ಭಾವನೆ ಪರಮ ಹಂಸರಿಗಿರಲಿಲ್ಲ. ಅವರು ಯಾವಾಗಲೂ ಪತ್ನಿಯನ್ನು ಬಹುವಚನದಿಂದಲೇ ಸಂಬೋಧಿಸುತ್ತಿದ್ದರು. ಪುರುಷರ ಜೀವನದಂತೆ ಸ್ತ್ರೀ ಜೀವನವೂ ಬೆಳಗುವುದು ಬೆಡಗುಗಳ ಪರಂಪರೆಯಿಂದಲ್ಲ; ಭಗವದ್ವಿಚಾರಗಳ ನೆಲುಕಾಟದಿಂದ. ಪರಮ ಹಂಸರು ತಮ್ಮ ಪತ್ನಿಯಾಗಿದ್ದ ಶ್ರೀ ಶಾರದಾ ದೇವಿಗೆ ಆಧ್ಯಾತ್ಮಿಕ ಜೀವನದ ಶಿಕ್ಷಣವನ್ನು ಕೊಟ್ಟದ್ದು ಮಾತ್ರವಲ್ಲ; ಅದರೊಂದಿಗೆ ದೈನಂದಿನದ ಮನೆವಾರ್ತೆ, ದೇವದ್ವಿಜ ಅತಿಥಿಗಳ ಸೇವೆ, ಗುರುಹಿರಿಯರಲ್ಲಿ ಶ್ರದ್ಧೆ, ಕುಟುಂಬ ಸೇವೆಗೆ ಆತ್ಮಾರ್ಪಣ ಮೊದಲಾದ ಅನೇಕ ವಿಷಯಗಳಲ್ಲಿ ಶಿಕ್ಷಣವಿತ್ತರು.

ಬಾಲ್ಯ ವಿವಾಹಕ್ಕೆ ಪರಮಹಂಸರು ಪ್ರೋತ್ಸಾಹಕರಲ್ಲದಿದ್ದರೂ ಅವರು ಅದನ್ನು ತಿರಸ್ಕರಿಸಿದುದಕ್ಕೆ ಆಧಾರವಿಲ್ಲ. ತುಂಬಾ ಮಕ್ಕಳಿದ್ದ ಗೃಹಸ್ಥರಲ್ಲಿ ಅವರಿಗೆ ತಿರಸ್ಕಾರವಿತ್ತು. ಅವರ ವಿವಾಹ ಕಾಲದಲ್ಲಿ ಅವರಿಗೆ ಇಪ್ಪತ್ತನಾಲ್ಕು ವರ್ಷ ಪ್ರಾಯ; ಶ್ರೀ ಶಾರದೆಗೆ ೬ ವರ್ಷ. ಇಲ್ಲಿ ವಯೋತಾರುಣ್ಯಕ್ಕಿಂತ ಸಂಯಮ ತಾರುಣ್ಯವೇ ಜೀವನದ ಭದ್ರತೆಗೆ ಮುಖ್ಯವೆಂದು ತಿಳಿದುಕೊಳ್ಳಬೇಕು. ಬಂಗಾರದಂತಹ ತಾರುಣ್ಯವನ್ನು ಹಾಳುಮಾಡಿಕೊಂಡ ತರುಣನಿಗೆ ಇಪ್ಪತ್ತರ ವಯಸ್ಸೂ ಎಪ್ಪತ್ತಕ್ಕೆ ಸಮಾನ! ಚುಂಬಕ ಶಕ್ತಿಯು ಜೊಳ್ಳು ತಾರುಣ್ಯದಲ್ಲಿಲ್ಲ; ವಜ್ರಸಂಯಮದಲ್ಲಿದೆ.

ಶ್ರೀ ಶಾರದಾ ದೇವಿಯವರು ದಕ್ಷಿಣೇಶ್ವರದ ವಾದ್ಯ ಕುಟೀರದಲ್ಲಿ ವಾಸಮಾಡುತ್ತಿದ್ದಾಗ ಪರಮಹಂಸರು ತಮ್ಮ ಅಣ್ಣನ ಮಗ ರಾಮಲಾಲನನ್ನೂ ಶಾರದಾ ದೇವಿಯ ಕೋಣೆಗೆ ಹೋಗಿ ಹೆಚ್ಚು ಹೊತ್ತು ಮಾತಾಡಲು ಬಿಡುತ್ತಿರಲಿಲ್ಲ. ಸ್ತ್ರೀಸಮಾಜದ ಅಧಃಪತನಕ್ಕೆ ಹರಟೆಯೇ ಕಾರಣವೆಂದು ಅವರ ಅಭಿಪ್ರಾಯವಾಗಿತ್ತು. ಅವರೂ ಲೌಕಿಕ ಸ್ತ್ರೀಯರೊಂದಿಗೆ ನಿಷ್ಕಾರಣವಾಗಿ ಸಂಭಾಷಿಸುತ್ತಿರಲಿಲ್ಲ. ಅವರ ಅಳಿಯ ಹೃದಯನೊಂದು ದಿನ ಭವತಾರಿಣಿಯ ಮತ್ತು ರಾಧಾಗೋವಿಂದನ ಪ್ರಸಾದವನ್ನು ಶಾರದಾ ದೇವಿಯ ಕೋಣೆಗೆ ಕೊಂಡುಹೋಗಿ ಕೊಟ್ಟು ಅಲ್ಲಿ ಹರಟೆ ಹೊಡೆಯುತ್ತಾ ಕುಳಿತು ಪರಮಹಂಸರ ಬಳಿಗೆ ತಡ ಮಾಡಿ ಬಂದನು. ಆಗ ಪರಮಹಂಸರು ಅವನ ನಡ

(೨೭ನೇ ಪುಟ ನೋಡಿರಿ)


## ವೈದ್ಯಕೀಯ ಸಲಹೆ ಪಡೆಯಿರಿ

ಡಾ. ಸೌ. ರತ್ನಾಬಾಯಿ
Govt. Regd.

- ಪ್ರದರರೋಗ
- ಗರ್ಭಾಶಯದ ವಿಕಾರ
- ಬಂಜೆತನ
- ಮುಟ್ಟುದೋಷ,

ಎಲ್ಲ ತರಹ ಮೂಲವ್ಯಾಧಿ ಇವೆಲ್ಲ ರೋಗಗಳಿಗಾಗಿ ಭೆಟ್ಟಿಯಾಗಿರಿ. ಸ್ತ್ರೀಯರ ಹಾಗೂ ಮಕ್ಕಳ ಯಾವದೇ ತರಹದ ರೋಗಗಳನ್ನು ಖಾತ್ರಿಯಿಂದ ಗುಣಪಡಿಸುತ್ತೇವೆ.

ವೇಳೆ: ಮುಂ. ೯ರಿಂದ ೧೨, ಸಂ ೫ರಿಂದ ೮. ಪರಸ್ಥಳದವರು ವ್ಹಿ.ಪಿ.ಯಿಂದ ಔಷಧ ತರಿಸಿಕೊಳ್ಳಬಹುದು.

ಇಂದೇ ವಿಚಾರಿಸಿರಿ.

## ಭಾರತ ದವಾಖಾನಾ

ಕುಬಸದ ಗಲ್ಲಿ......ಹುಬ್ಬಳ್ಳಿ



## ಭಾರತದ ಪ್ರಜಾಪ್ರಭುತ್ವ ದಿನದಂದು ಭಾರತ ಸ್ವಾತಂತ್ರ್ಯ ರಕ್ಷಣೆಯ ದೃಢ ಪ್ರತಿಜ್ಞೆ ಕೈಕೊಳ್ಳೋಣ

●

ಸ್ಥಳದಾನ: **ಮೊಡರ್ನ್ ಕಾಫಿ ವರ್ಕ್ಸ್**

**ರಥಬೀದಿ, ಮಂಗಳೂರು-1.**

ಸುಪ್ರಸಿದ್ಧ 'ಸೊಪರಿನ್ ಬ್ರಾಂಡ್' ಕಾಫಿ ಹುಡಿ ತಯಾರಕರು.

Telegrams: 'MODERN' Phone No: 495

# ಪ್ರಜಾರಾಜ್ಯ—ಪರೀಕ್ಷಾರಂಗ

(೩ನೇ ಪುಟದಿಂದ)

ಗಿಳ ರಂಗಗಳ ಬೆಳವಣಿಗೆಗೆ ನೆರವಾದರು. ಅಲ್ಲೂ ಅವರಿಗೆ ಉತ್ತಮ ಪ್ರೋತ್ಸಾಹ ಸಿಗಲಿಲ್ಲ. ಬೇಥೋಪಾಯಕ್ಕಿಳಿದರು. ಈ ಉಪಾಯ ವೃಕ್ಷದ ಬೀಜವನ್ನು ಬ್ರಿಟಿಷರೇ ಬಿತ್ತಿದ್ದರು. ಅದಕ್ಕವರು ನೀರೆರೆದರು; ಗೊಬ್ಬರ ಹಾಕಿದರು. ಬ್ರಿಟಿಷರು ವಿದ್ಯೆಯನ್ನು ಹಬ್ಬಿಸುವ ನೆವನದಿಂದ ಇಲ್ಲಿ 'ಬೇಧ"ದ ಬೀಜವನ್ನೇ ಬಿತ್ತಿದ್ದರು. ಆರ್ಯರು-ದ್ರಾವಿಡರು- ಮೂಲನಿವಾಸಿಗಳು ಹಿಂದೂಗಳು-ಸಿಖ್ಖರು- ಬೌದ್ಧರು - ಬ್ರಾಹ್ಮಣರು-ಕ್ರೈಸ್ತರು ಇತ್ಯಾದಿ ಇದರಕ್ಷಿಂದ 'ದ್ರಾವಿಡ' ವಾದ ರೌರವ ರೂಪವನ್ನು ತಾಳಿದೆ. ಇದಕ್ಕೆ ಮೂಲವಾಗಿದ್ದ 'ದ್ರಾವಿಡ ಕಳಗಂ" ಇಂದು ಪ್ರಜ್ಞಾಶೂನ್ಯವಾಗಿದೆಯಾದರೂ, ಇದರ ರಾಜಕೀಯ ಸಂತಾನದಂತಿರುವ 'ದ್ರಾವಿಡ ಮುನ್ನೇಟ್ರ ಕಳಗಂ" ಇಂದು ಕ್ರಿಶ್ಚಿಯನ್ ರಾಷ್ಟ್ರಗಳಿಗೆ ಟ್ರೋಜನ್ ಕುದುರೆಯಾಗಿರಲು ಸಿದ್ಧವಿದೆ. ಇದರ ವೈಶಿಷ್ಟ್ಯವೆಂದರೆ ಇನು ಸಮಯ ಸಾಧಕರ ಕೂಟ ಹಾಗೂ ವಿರೋಧಿ ಮನೋಭಾವನೆಯ ಗುಂಪಾಗಿರುವದರಿಂದ ಕಮ್ಯೂನಿಸ್ಟ ಗುಂಪುಗಳಿಗೂ ಟ್ರೋಜನ್ ಕುದುರೆಯಾಗಲು ಸಿದ್ಧವಿದೆ. ಉತ್ತರ ಭಾರತವನ್ನು ಯಾರು ಬೇಕಾದರೂ ಆಳಲಿ, ಅಮೇರಿಕನರೇ ಬರಲಿ, ಪಾಕಿಸ್ತಾನಿಗಳೇ ಹರಡಲಿ, ಚೈನೀಯರೇ ಕಾಲಿಡಲಿ....ಆದರೆ ದಕ್ಷಿಣ ಭಾರತವನ್ನು ಕನಿಷ್ಟ ಪಕ್ಷ ತಮಿಳುನಾಡನ್ನು ದ್ರಾವಿಡ ನಾಡೆಂದು ಘೋಷಿಸಿ ಇತ್ತ ಕಣ್ಣು ಹಾಕಬಾರದು. ಇದು ಈ ಜಯಚಂದರ ಅಭಿಲಾಷೆ. ಇದರಲ್ಲೂ ಕೆಲವರು ಆ ಚರಿತ್ರೆಯ ಹಾಳೆಗಳನ್ನು ಕಂಡವರಿರುವದರಿಂದ ಆ 'ಕಾರ್ಯಕ್ಕೆ ಒಪ್ಪದಿರಬಹುದು, ಕಮ್ಯೂನಿಸ್ಟರನ್ನು ಮುಂದರಿಯದಿರಬಹುದು. ಜಯಚಂದನ ಗತಿಯೇ ತಮಗೂ ಬರಬಹುದೆಂಬ ಭಯ ಅವರಿಗಿರುವದರಿಂದ, ಆದಷ್ಟು ಅಮೇರಿಕನರ ಕೃಪಾದೃಷ್ಟಿಗೊಳಗಾಗಿ 'ನೆಹ್ರೂ ಸರಕಾರ'ದಿಂದಲೇ 'ದಕ್ಷಿಣ (ಪಾಕಿ)ಸ್ಥಾನ'ವನ್ನು ಪಡೆದುಕೊಳ್ಳುವ ಹವಣಿಕೆಯಲ್ಲಿ ಇವರಿದ್ದಾರೆ. ಇನ್ನು ನಾಗಾಗಳ ನಲಿದಾಟ ಸ್ಪಷ್ಟವಾಗಿದೆ. ಝಾರ್ಕಂಡ, ಪರ್ವತ ರಾಷ್ಟ್ರಗಳ ಬಣ್ಣವೂ ಬಯಲಾಗುವ ಸ್ಥಿತಿಯಲ್ಲಿದೆ. ಪಾಕಿಸ್ತಾನಿಗಳೊಂದಿಗೆ ಕೈಕುಲುಕಿಸಿಕೊಳ್ಳಲು-ದಾಳಿಗೆ ಧಾಡಿ ತಾಗಿಸಿಕೊಳ್ಳಲು!—ಅಕಾಲಿಗಳು ಸಿದ್ಧರಾಗಿದ್ದರು.

ಇವು ಕ್ರಿಶ್ಚಿಯನ್ ಅಥವಾ ಕಮ್ಯೂನಿಸ್ಟ ರಾಷ್ಟ್ರಗಳಿಗೆ ನೇರವಾಗಿ ಟ್ರೋಜನ್ ಕುದುರೆಗಳಾಗಿದ್ದಲ್ಲಿ ಇನ್ನು ಕೆಲವು ಮರೆಯಲ್ಲಿ ಆ ಕೆಲಸವನ್ನು ತಮಗೆ ಗೊತ್ತಿಲ್ಲದೇನೇ ಮಾಡುತ್ತಿವೆ. ಅವೇ ಭಾಷಾವಾರು ಬಡಿದಾಟ, ರಾಜ್ಯವಾರು ರಣದಾಟ, ಮತೀಯ ಮಾರಾಮಾರಿ, ಕಾಲದುದ್ದಕ್ಕೆ ಕಮ್ಯೂನಿಸ್ಟ ಕ್ಷಯಕೀಟಗಳು ಔದ್ಯೋಗಿಕ ದೇಹದಲ್ಲಿ ನುಗ್ಗಿ ಗಲಾಟೆ ಎಬ್ಬಿಸುವಾಗ ಅವುಗಳನ್ನು ಬಂದೂಕಿನಿಂದ ಹೊಡೆಯಲು ಮಾಲಿಕ ವರ್ಗ ಅಮೇರಿಕದತ್ತ ಆಶಾದೃಷ್ಟಿಯಿಂದ (ಕೆಲವರು) ನೋಡುವ ದಾರುಣ ದೃಶ್ಯ.

ಹಾಗಿದ್ದರೂ ಅವೆಲ್ಲವೂ ಭಾರತ ಮಾತೆಯ ಮಂದಿರದಲ್ಲಿ ಕಲೆತಿವೆ. ತಮ್ಮ ಭಿನ್ನಾಭಿಪ್ರಾಯಗಳನ್ನು ಸ್ವಲ್ಪ ಸಮಯದವರೆಗಾದರೂ ಕಟ್ಟಿಡಲು ಅವರು ಸಿದ್ಧರಿದ್ದಾರೆ. ಆದರೆ ಕಮ್ಯೂನಿಸ್ಟರನ್ನು ಮಾತ್ರ ನಂಬಲಂತೂ ಸಾಧ್ಯವಿರುವದಿಲ್ಲ. ಈ ಪರಿಸ್ಥಿತಿಯಲ್ಲಿ, ರಕ್ಷಣಾ ವಿಭಾಗದಲ್ಲಿದ್ದ ಕೃಷ್ಣಮೆನನರ ಉಚ್ಚಾಟನೆಯಾಗಿ ಯಶವಂತರ ಸ್ಥಾಪನೆಯಾಗಿದೆ. ಅವರು ಕಡಿವಾಣವನ್ನು ತಮ್ಮ ಕೈಗೆ ತೆಗೆದುಕೊಂಡೊಡನೆ ಕಮ್ಯೂನಿಸ್ಟರು ಭೂಗತರಾಗಲಾರಂಭಿಸಿದ್ದಾರೆ. ಸಿಕ್ಕಿದ ಕೆಲವರನ್ನು ಅರಸ್ಸ್ಟ್ ಕಾರಾಗೃಹಕ್ಕೆ ಅಟ್ಟಲಾಯಿತು. ಚೈನೀಯರೂ ಮುಂದಕ್ಕೆ ಬರುವದನ್ನು ನಿಲ್ಲಿಸಿರುವರು. ಪೀಕಿಂಗ್ ಆಕಾಶವಾಣಿಯಲ್ಲಿ ಭಾರತದ ಸುದ್ದಿ ಬರುವುದೂ ನಿಂತಿದೆ

ಇದು ಶುಭ ಸೂಚನೆಯೇನೋ ಸರಿ. ಆದರೆ ಇದು ಎತ್ತ ಸಾಗೀತು?

ನಮ್ಮ ಪ್ರಜಾರಾಜ್ಯ ಈ ರೀತಿ ಪರೀಕ್ಷಾರಂಗವಾಗಿದೆ. ಇತರ ರಾಷ್ಟ್ರಗಳಲ್ಲಿಯ ಪ್ರಜಾರಾಜ್ಯದ ದೀಪ ನಂದಿದಂತೆ ಭಾರತದ 'ಅಮರದೀಪ" 'ನಂದಾದೀಪ" ನಂದಿಹೋದೀತೇ? ಹೋಗುವುದಿಲ್ಲವೆನ್ನುತ್ತಾರೆ ಬಲ್ಲವರು. ಎಂದೊಡನೆ ನಾವು ಕೈಕಟ್ಟಿಕುಳಿತು ಕೊಳ್ಳುವುದು ನ್ಯಾಯವೇ? ಮಹಾನ್ ಕಾರ್ಯಗಳನ್ನು ಮಾಡಬೇಕಾಗಿದ್ದಲ್ಲಿ— ಪ್ರಜಾರಾಜ್ಯವನ್ನುಳಿಸುವ ಮಹಾನ್ ಕಾರ್ಯ —ತ್ಯಾಗ ಅತ್ಯಗತ್ಯವೆನ್ನುತ್ತಾರೆ ಸ್ವಾಮಿ ವಿವೇಕಾನಂದರವರು. "ಅಗತ್ಯ ಬಿದ್ದಲ್ಲಿ ಅದೆಲ್ಲವನ್ನೂ ತ್ಯಾಗಮಾಡ ಬೇಕಾದೀತು. ಭಾರತಕ್ಕೆ ಬೇಕಾಗಿರುವ ಸಾವಿರ ತರುಣ ಭಾರತೀಯರ ತ್ಯಾಗ—ಭಾರತೀಯರ, ಜಾಗ್ರತಿ, ಪಶು (ಸಮಾನರ) ಗಳದ್ದಲ್ಲ." ಆದುದರಿಂದ "ಏಳಿರಿ, ಎಚ್ಚತ್ತೇಳಿರಿ, ಎದ್ದೇಳಿರಿ, ಮತ್ತು ಗುರಿಮುಟ್ಟುವ ತನಕವೂ ವಿಶ್ರಮಿಸದಿರಿ" ನಿಮ್ಮಲ್ಲಿದು ಎಂದೆಂದಿಗೂ ಜ್ಞಾಪಕದಲ್ಲಿರಲಿ. "ಭಾರತದ ಕಣಕಣವೂ ಪವಿತ್ರವಿದೆ, ಮಣ್ಣು ಗಂಧವಿದೆ, ನೀರು ತೀರ್ಥವಿದೆ, ವಾಯು ಪರಿಮಳವಿದೆ. ಬೆಂಕಿ ಧೂಪ—ಆರತಿ ಇದೆ. ಭಾರತವೇ ನನಗೆ ಸ್ವರ್ಗವಿದೆ....ಅದನ್ನು ರಕ್ಷಿಸಲು ಶಕ್ತಿಯ ಅವಶ್ಯಕತೆ ಇದೆ. ಪಶು ಶಕ್ತಿಯಲ್ಲ. ಆತ್ಮಿಕ ಶಕ್ತಿ. ಬೇಕಾಗಿರುವುದು ಕಬ್ಬಿಣದ ಮಾಂಸ ಖಂಡಗಳು, ಉಕ್ಕಿನ ನರನಾಡಿಗಳು. ಆದರೆ ಇಂತಹ ಕಬ್ಬಿಣದ ಮಾಂಸ ಖಂಡಗಳು, ಉಕ್ಕಿನ ನರನಾಡಿಗಳು ಒಕ್ಕಟ್ಟಿನಿಂದಿರ ಬೇಕು. ಒಕ್ಕಟ್ಟು ಅದು ಇಂದಿನ ಅತ್ಯಂತ ಅವಶ್ಯಕತೆ ಇದೆ. ಒಕ್ಕಟ್ಟಿನಿಂದ ಮುಂದಡಿ ಇಟ್ಟಲ್ಲಿ ಇಂತಹ ಇನ್ನಷ್ಟು ಪರೀಕ್ಷೆಗಳಲ್ಲೂ ಲೀಲಾಜಾಲವಾಗಿ ಉತ್ತೀರ್ಣರಾಗಬಹುದು, ಅಪರಂಜಿಗಳಾಗಬಹುದು.

---

ಭೂಮಿಗೆ ಫಲ
ರಾಷ್ಟ್ರಕ್ಕೆ ಬಲ

●

ದೇಶಕ್ಕಾಗಿ ತ್ಯಾಗ
ದೇಶಕ್ಕಾಗಿ ದೇಹ

---


ಪ್ರಜಾರಾಜ್ಯದಿನದ ಶುಭಾಶಯಗಳೊಂದಿಗೆ ನಿಮ್ಮ ಮಿತ್ರರಿಗೆ
ಉಚಿತ ಉಡುಗೊರೆ ಕೊಡಲು ಯೋಗ್ಯ ಪುಸ್ತಕ

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ
ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.
ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.
ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್,
ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.



ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ
ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

# ನಡೆದ ದಾರಿ

(೬ನೇ ಪುಟದಿಂದ)

ಶ್ವಸಂಸ್ಥೆಯ ಅಧ್ಯಕ್ಷ ಪದಗಳಿಗೂ ಇಂದಿನ ಭಾರತೀಯ ಮಹಿಳೆ ಅರ್ಹಳಾಗಿದ್ದಾಳೆ.

ಸ್ತ್ರೀ— ಅಖಿಲ ಭಾರತ ಮಹಿಳಾ ಪರಿಷತ್ತಿನ ಕಾರ್ಯ ಚಟುವಟಿಕೆಗಳು ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಹೆಚ್ಚಿದುವು.

ನಿವೇದಿಕೆ— ಅದರ ಫಲವಾಗಿ ಸ್ತ್ರೀಗೆ ಹಿತಕಾರಿಯಾದ ಶಾಸನಗಳು ಬಂದುವು. ಮೊದಲು ಹೆಣ್ಣಿಗೆ ದತ್ತಕದ ಅಧಿಕಾರ ದೊರೆಯಿತು.

ಸ್ತ್ರೀ—೧೯೫೬ರಲ್ಲಿ ಅಲ್ಲವೆ? ಹೆಣ್ಣಿಗೆ ತಂದೆಯ ಆಸ್ತಿಯಲ್ಲಿ ಪಾಲು ದೊರೆತುದೂ ಇದೇ ವರ್ಷದಲ್ಲಿ.

ನಿವೇದಿಕೆ — ಮುಂದೆ ಬಂದುದು ವರದಕ್ಷಿಣಾ ಪ್ರತಿಬಂಧಕ ವಿಧೇಯಕ. ಹೆಣ್ಣಿಗೆ ನೊಗದಂತೆ ಕುಳಿತಿದ್ದ ಈ ವರದಕ್ಷಿಣೆ ಕಳಚಿಬಿದ್ದ ೧೯೬೧ನೇ ಇಸವಿಯನ್ನು ನಾಳಿನ ಮದುವಣಗಿತ್ತಿ ಮರೆಯಲಾರಳು

ಸ್ತ್ರೀ—ಆದರೆ ಅಷ್ಟು ಸುಲಭವಾಗಿ ತೊಲಗುವಂಥದೇ ಈ ವರದಕ್ಷಿಣೆಯ ಪಿಡುಗು? ಹೋದೆಯಾ ಪಿಶಾಚಿ ಅಂದರೆ, ‹ಬಂದೆ ಗವಾಕ್ಷೀಲಿ' ಅಂದಿತಂತೆ.

ಂ ಂ ಂ

ತಂದೆ— ಯಾಕೆ? ಯಾಕೆ ಸುಮ್ಮನೆ ಉಪಟಳ ಹಚ್ಚಿದ್ದಿ?

ತಾಯಿ— ಮಗನಿಗೂ ಮದುವೆ ವಯಸ್ಸಾಯ್ತು. ಅಣಿಯಾದ ಕಡೆ ವಧು ಸಿಕ್ಕಿರೋವಾಗ ಬಿಡೋದುಂಟೇನ್ರೀ?

ತಂದೆ— ಅಣಿಯಾದ ಕಡೆ ಅಂದ್ರೇನೆ ಮಗ ಒಪ್ಪ ಬೇಡ್ವೆ ಮದುವೆಗೆ? ಹುಡುಗೀನ ಅವನು ನೋಡಿ 'ಹೂಂ' ಅನ್ನಬೇಡ್ವೆ?

ತಾಯಿ— ಹತ್ತು ಸಾವಿರ ವರದಕ್ಷಿಣೆ ಕೊಡ್ತೀವಿ ಅಂತ ತಾವಾಗಿ ಮುಂದೆ ಬಂದಿರೋವಾಗ ಬಿಡೋದು ಬುದ್ಧಿಗೇಡಿತನ ಅಲ್ವೆ? ನೀವು ಹೂಂ ಅಂದ್ರೆ, ಮಗಾನೂ 'ಹೂಂ' ಅಂದಾನು!

ತಂದೆ— ಅಯ್ಯೋ ನಿನ್ನ ಲೆಕ್ಕಾಚಾರವೇ! ಮುಹರಾಯ್ತು ಈಗ ಯಾವ ಯುಗದಲ್ಲಿದ್ದೀ ನೀನು? ವರದಕ್ಷಿಣೆ ತಗೊಳ್ಳೋ ಹಾಗಿಲ್ಲ ಈಗ, ಕಾಯದೆ ಮಾಡಿದ್ದಾರೆ ಈಗ—ಕಾಯದೆ!

ಅಧಿಕಾರವಾಣಿ— ವರದಕ್ಷಿಣೆಯನ್ನು ಕೊಡುವುದು, ತೆಗೆದುಕೊಳ್ಳುವುದು, ಕೊಡಲು ಅಥವಾ ತೆಗೆದುಕೊಳ್ಳಲು ಪ್ರಚೋದನೆಯನ್ನು ನೀಡುವುದು, ದಂಡನಾರ್ಹವಾಗಿದೆ.

ತಾಯಿ— ಇದೆಂಥ ಗ್ರಹಚಾರ ಬಂತಪ್ಪಾ. (ತುಸು ಯೋಚಿಸಿ) ಹೋಗ್ಲಿ, ಅವರು ಹಣ ಕೊಡದಿದ್ರೆ ಬೇಡ. ಇಪ್ಪತ್ತು ಸೇರು ಚಿನ್ನಾನಾದ್ರೂ ಕೊಡ್ಲಿ...

ತಂದೆ—ಹಹ್ಹಾ....ಹ್ಹಾ!(ನಗುವನು)

ಂ ಂ ಂ

ನಿವೇದಿಕೆ — ಮಹಿಳೆಗೆ ಅಂಟಿಕೊಂಡ ಅಂಧಶ್ರದ್ಧೆಗಳನ್ನು ಬಿಡಿಸುವುದು. ಬಹು ಕಠಿಣ ಕಾರ್ಯ. ಕಾನೂನು-ಶಾಸನಗಳ ಜೊತೆಗೆ, ಆಕೆಗೆ ತಿಳಿವಳಿಕೆ ಮೂಡಿಸುವ ಸಾಹಸ ಕಾರ್ಯವನ್ನೂ ಮಾಡಿದಾಗಲೇ ಇದೆಲ್ಲದರಿಂದ ವಿಮುಕ್ತಿ.

ಸ್ತ್ರೀ— ಆ ಕಾರ್ಯ ಈಗ ನಡೆದಿದೆ.

ನಿವೇದಿಕೆ—ಹಳೆಯ ಪೀಳಿಗೆಗಿಂತ ಇಂದಿನ ನವ ವಧೂವರರಲ್ಲಿ ನಾವು ನಂಬಿಕೆಯನ್ನಿಡಬೇಕು. ವರದಕ್ಷಿಣೆ ತೆಗೆದುಕೊಳ್ಳುವುದು ಅಪಮಾನವೆಂದು ವರ ತಿಳಿದಾಗ 'ವರದಕ್ಷಿಣೆ ತೆಗೆದುಕೊಳ್ಳುವವನ ಜೊತೆಗೆ ತಾನು ಬಾಳುವುದು ಅವಮಾನವೆಂದು ವಧು ತಿಳಿದಾಗ, ಈ ಪದ್ಧತಿ ಬುಡಮಟ್ಟ ಕಿತ್ತುಹೋಗುತ್ತದೆ.

ಸ್ತ್ರೀ— (ನಗುತ್ತಾ) ಹೀಗಾಗಬೇಕಾದರೆ ಪ್ರೇಮ ವಿವಾಹಗಳು ಜಾರಿಗೆ ಬರಬೇಕಾದೀತು!

ನಿವೇದಿಕೆ-- ಅದೂ ಈಗ ದುಸ್ಸಾಧ್ಯವಾದುದೇನೂ ಅಲ್ಲ.

ಂ ಂ ಂ

ತಾಯಿ— (ಸಿಟ್ಟಿನಿಂದ) ಯಾಕೆ ಸುಮ್ಮನೆ ಕೂತಿದ್ದೀರಿ? ನಿಮ್ಮ ಮಗ ಹೇಳಿದ್ದು ಕೇಳಿದಿರಾ?

ತಂದೆ— (ಶಾಂತನಾಗಿ) ಸುಮ್ಮನೆ ಗಂಟಲೆತ್ತಿ ಚೀರ್ಬೇಡ.

ತಾಯಿ — ಎಲ್ಲಾದ್ರೂ ಉಂಟೇನ್ರೆ? ಬೇರೆ ಜಾತಿ ಹುಡುಗೀನ ಮದುವೆ ಆಗ್ತೀನಿ ಅಂತ ಹೇಳ್ತಾನಲ್ಲಾ ಇವನಿಗೇನು ಕೇಡುಗಾಲ ಬಂತು (ದುಃಖದಿಂದ) ಅಯ್ಯೋ ದೇವ್ರೇ ಇದನ್ನೆಲ್ಲಾ ನೋಡೋಕೆ ನಾನಿನ್ನೂ ಬದುಕಿದೀನಲ್ಲಪ್ಪಾ!

ತಂದೆ— ಮದುವೆ ಅನ್ನೋದು ಹುಡುಗ ಹುಡುಗಿ ಒಪ್ಪಿ ಆಗಬೇಕಾದ್ದು ಅಲ್ವೆ? ನೀನು ಯಾಕಿಷ್ಟು ರಂಪ ಮಾಡ್ತಿ?

ತಾಯಿ— ಕುಲ, ಗೋತ್ರ, ಧರ್ಮ, ಆಚಾರ, ಎಲ್ಲಾ ಹಾಳಾಯ್ತೇ ಇವನಿಗೆ? ನಮಗೊಂದು ಕೆಟ್ಟ ಹೆಸ್ರನ್ನ ತಂದಿಟ್ನಲ್ಲಾ!

ತಂದೆ— ಕುಲ, ಗೋತ್ರ ಎಲ್ಲಾ ನೋಡಿ ಮೊದಲ್ನೇ ಮಗಳಿಗೆ ಮದುವೆ ಮಾಡ್ದೆ. ಏನಾಯ್ತು ಅವಳ ಪಾಡು? ಮಕ್ಕಳಿಲ್ಲಾಂತ ನೆಪ ಹಾಕಿ ಅತ್ತೇ ಮನೇಲಿ ಅವಳ್ನ ಕಾಲ ಕೆಳಗಿನ ಕಸ ಮಾಡಿದ್ರಲ್ಲಾ. ಆಗ ನಿನ್ನ ಕುಲ ಗೋತ್ರ ಕಾಪಾಡ್ತೇ? ಗಂಡ, ಹೆಂಡತೀಲಿ ಪ್ರೀತಿ, ಅನ್ಯೋನ್ಯ ಇದ್ದಿದ್ರೆ ಹೀಗಾಗ್ತಿತ್ತೆ ಹೇಳು?

ತಾಯಿ— (ಅಳುತ್ತಾ) ಅವಳ ಅದೃಷ್ಟ ಹಾಗೇಂತಿದ್ರೆ ಯಾರೇನು ಮಾಡೋಕಾಗುತ್ತೆ? ಅಯ್ಯೋ ನನ್ನದೇ ನನ್ನದೇ ಹೀನ ಅದೃಷ್ಟ! ಕೈಗೆ ಬಂದ ಮಗಾನೂ ಹೀಗಾಗೋದ್ನಲ್ಲಾ!

ಸ್ತ್ರೀ— ಸುಧಾರಣೆಗಳನ್ನು ಹಿರಿಯರು ಸ್ವಾಭಾವಿಕವಾಗಿಯೇ ಟೀಕಿಸುತ್ತಾರೆ ತೆಗಳುತ್ತಾರೆ.

ನಿವೇದಿಕೆ— ಪ್ರತಿಯೊಂದು ಶಾಸನ ಬಂದಾಗಲೂ ನಮ್ಮ ಜನ ಕೆರಳುವುದುಂಟು, ಹಾಹಾಕಾರವೆಬ್ಬಿಸುವುದುಂಟು. ಆದರೆ ಇವೆಲ್ಲಾ ಸ್ವಲ್ಪ ದಿನ ಮಾತ್ರ. ಆ ಬಳಿಕ ಹೊಸ ಜೀವನಕ್ಕೆ ಅಳವಡಿಸಿಕೊಳ್ಳಲು ಜನ ಯತ್ನಿಸುತ್ತಾರೆ.

ಸ್ತ್ರೀ— ವಿವಾಹ ವಿಚ್ಛೇದನ ಶಾಸನಕ್ಕೂ ಈ ಮಾತು ಅನ್ವಯಿಸೀತೆ? ಸನಾತನ ಧರ್ಮದ ಪ್ರದೇಶ ಇದು. ಹೆಂಡತಿ ಗಂಡನಿಂದ ಬೇರ್ಪಡುವಂತಹ ಅನ್ಯಾಯವನ್ನು ಎಂದಿಗಾದರೂ ಯೋಚಿಸುವುದು ಕೂಡಾ ಸಾಧ್ಯವೆ?

ನಿವೇದಿಕೆ — ವಿವಾಹ ವಿಚ್ಛೇದನದ ಶಾಸನ, ಸಂಸಾರವನ್ನು ಒಡೆಯುವುದಕ್ಕಲ್ಲ. ಅಸಹನೀಯವಾದ ದಾಂಪತ್ಯ ಜೀವನದಿಂದ ಬಿಡುಗಡೆ ದೊರಕಿಸಿಕೊಳ್ಳುವುದಕ್ಕೆ.

ಂ ಂ ಂ

ತಂದೆ— ಇವತ್ತಿನ ಪೇಪರಿನಲ್ಲಿ ಏನು ಬಂದಿದೆ ಗೊತ್ತೆ? ಕಳೆದ ವರ್ಷ ಕೇರಳದಲ್ಲಿ ೭೪೩ ಜನ, ಮೈಸೂರು ರಾಜ್ಯದಲ್ಲಿ ೩೫೧ ಜನ ಮತ್ತು ಮಹಾರಾಷ್ಟ್ರದಲ್ಲಿ ೧೦೩೩ ಜನ, ವಿವಾಹ ವಿಚ್ಛೇದನ ಪಡೆದರಂತೆ.

ತಾಯಿ— ಅಯ್ಯಯ್ಯೋ......ಇದೆಂಥಾದ್ದೀ?

ತಂದೆ— ಒಬ್ಬ ಗಂಡನು ತನ್ನ ಹೆಂಡತೀನ ಪಶುವಿಗಿಂತ ಕೀಳಾಗಿ ಕಾಣ್ತಾನೇಂತಿಟ್ಕೋ. ಹೊಡೆಯೋದು, ಬಡಿಯೋದು ಚಿತ್ರಹಿಂಸೆ ಕೊಡೋದು ಇಂಥಾದನ್ನೆಲ್ಲಾ ಹೆಂಡತಿ ಆದವಳು ಎಷ್ಟು ದಿನಾಂತ ತಾನೇ ಸಹಿಸ್ಬಹುದು?

ತಾಯಿ— ಸಾಯೋವರೆಗೂ ಅನುಭವಿಸ್ಲೇಬೇಕು. ಬ್ರಹ್ಮ ಬರೆದದ್ದನ್ನು ಅಳಿಸೋಕಾಗುತ್ತೇ?

ತಂದೆ— ಮನುಷ್ಯ ಜೀವಿಗೆ ಮನಸ್ಸು ಅನ್ನೋದೊಂದಿದೆ ಅಲ್ವೆ? ಹಣೇಲಿ ಬರೆದದ್ದು ಅಂತ ಜೀವಮಾನ ಎಲ್ಲಾ ಸಂಕ

## ಪರಮ ಹಂಸರ ಸ್ತ್ರೀ ಸಮಾಜ

(೨೫ನೇ ಪುಟದಿಂದ)

ತೆಯನ್ನು ನಿಷೇಧಿಸಿದರು. ವ್ಯಭಿಚಾರಿ ಸ್ತ್ರೀ ಪುರುಷರನ್ನು ಅವರು ತಮ್ಮ ಬಳಿಗೆ ಸುಳಿಯಲೂ ಬಿಡುತ್ತಿರಲಿಲ್ಲ ತಿಪ್ಪೆರಾಶಿಗೆ ಊದುಬತ್ತಿಯನ್ನು ಹಚ್ಚಿಡುವ ಕೆಲಸವನ್ನು ಯಾರು ಮಾಡಿಯಾರು? ಹೆಂಗಸರು ನಮ್ರತೆಯನ್ನೂ, ಶಾಂತಚಿತ್ತವನ್ನೂ ಅವಲಂಬಿಸಬೇಕು. ಲಜ್ಜೆಯೇ ಅವರ ಧರ್ಮ ಇದೇ ಪರಮಹಂಸರ ಅಭಿಪ್ರಾಯ.

ಸ್ತ್ರೀಗೆ ಆಭರಣಗಳ ಅವಶ್ಯಕತೆ ಇದೆಯೆಂಬುದು ಪರಮಹಂಸರಿಗೂ ಒಪ್ಪಿತವಾಗಿತ್ತು. ಅವರು ತಮಗೆ ಆರೋಗ್ಯವಿರದ ಕಾಲದಲ್ಲಿ ಶ್ರೀ ಶಾರದ ದೇವಿಗೆ ಇನ್ನೂರು ರೂಪಾಯಿಗಳ ಚಿನ್ನದ ಬಳೆ ಮಾಡಿಸಿ ಹಾಕಿದ್ದರು. ಆಗ ಶ್ರೀ ಮಾತೆಯು ಕೆಂಪು ಅಂಚಿನ ಸಾದಾ ಸೀರೆಯುಡುತ್ತಿದ್ದರು. ಬಯ್ತಲೆಗೆ ಸಿಂಧೂರ ಹಚ್ಚುತ್ತಿದ್ದರು. ಅವರ ಕೊರಳಿಗೆ ರತ್ನಹಾರ; ಮೂಗಿಗೆ ಮೂಗುತಿ; ಕಿವಿಗೆ ಕರ್ಣಕುಂಡಲವಿತ್ತು. ಕಾಮಿನಿಗೆ ಕಾಂಚನದಿಂದ ಶೋಭೆ ಹೆಚ್ಚುವುದು. ಆದರೆ ನಮ್ಮ ಸ್ತ್ರೀ ಸಮಾಜದ ಇಂದಿನ ಭೂಷಣ ದಾರಿದ್ರ್ಯಕ್ಕೆ ಕಾರಣವೇನಿರಬಹುದು? ಸ್ತ್ರೀಯು ಆಧ್ಯಾತ್ಮಿಕ ಸಂಪತ್ತಿನಿಂದ ದೂರ ಸರಿಯುತ್ತಿರುದುದೂ ಒಂದು ಪ್ರಬಲ ಕಾರಣ ವಿರಬಹುದೆ? ಇದನ್ನು ನನ್ನ ಸೋದರಿಯರು ಆಳವಾಗಿ ಯೋಚಿಸ ಬೇಕಾದ ವಿಷಯ.

CHANDARANAS
OFFER
AT THEIR SPACIOUS FIRST FLOOR
WHERE SHOPPING IS BOTH A PLEASURE AND LUXURY
READY-MADE GARMENTS
FOR THE ENTIRE FAMILY.
WE HAVE
EVERYTHING FOR ALL —
FOR ALL OCCASSIONS.
CHANDARANA BROTHERS
ESTD: 1935
HAMPANKATTA, MANGALORE-1

ಟ ಪಡಬಾರ್ದು ಅಂತಲೇ ಈ ಶಾಸನಗಳನ್ನು ಮಾಡಿದಾರೆ ಕಣೇ.

ತಾಯಿ:— ಗಂಡ ಹೆಂಡತಿ ಅಂದ್ಮೇಲೆ ಜಗಳ ಆಗದೆ ಇರುತ್ಯೆ? ಇವತ್ತು ಜಗಳಾಡಿದೋರು ನಾಳೆ ಒಂದಾಗ್ತಾರೆ.

ತಂದೆ— ಸಣ್ಣ ಪುಟ್ಟ ಜನಗಳಿಗೆಲ್ಲಾ ಶಾಸನ ಯಾಕೆ ಬೇಕಾಗುತ್ತೆ? ಈ ವಿವಾಹ ವಿಚ್ಛೇದನ ಇರೋದು ಸಂಸಾರಗಳ್ನ ಹಾಳು ಮಾಡೋದಕ್ಕಲ್ಲ; ಸಹ್ಯವಲ್ಲದ ದಾಂಪತ್ಯ ಜೀವನದಿಂದ ಪಾರು ಮಾಡೋದಕ್ಕೆ

ತಾಯಿ— ಗಂಡನ್ನ ಬಿಟ್ಟು ಬಂದ್ಮೇಲೆ ಹೆಂಡತಿ ಗತಿ ಏನು? ಅವಳಿಗೆ ಅನ್ನ ಬಟ್ಟೆ ಕೊಡೋರ್‍ಯಾರು?

ತಂದೆ— ಗಂಡನೇ ಕೊಡ್ಬೇಕು. ಹಾಗೆಂತಾನೂ ಶಾಸನದಲ್ಲಿದೆ.

ತಾಯಿ— ನೀವು ಏನೇ ಅನ್ನಿ. ಇಂಥಾದ್ದೆಲ್ಲಾ ಒಳ್ಳೇದಲ್ಲ. ಹಿಂದೂ ಸ್ತ್ರೀಗೆ ಒಬ್ಬನೇ ಗಂಡ. ಅವನೆಂಥೋನಾದ್ರೂ ಅವನ್ನ ಬಿಡೋ ಯೋಚ್ನೆ ಆಕೆ ಮಾಡ್ಲೇ ಬಾರ್ದು. ನನ್ಕೈಲೆಂದೂ ಅದು ಸಾಧ್ಯವಿಲ್ಲ.

ತಂದೆ— ಮಹಾರಾಣೀ ನಿನ್ನ ವಿಷ್ಯ ನಾನು ಹೇಳ್ಲಿಲ್ಲ. ಜನ್ಮ ಜನ್ಮಾಂತರಕ್ಕೂ ನಾನೇ ನಿನ್ನ ಗಂಡ. ಆಯ್ತೋ ಇಲ್ಲೋ? ಇಕೋ ನೋಡು, ನಾವು ಬೇಡಾಂದ್ರೂನೂ ಮುಂದೆ ಹೋಗೋ ಗಡಿಯಾರ ನಿಲ್ತದೇನೆ?

೦ ೦ ೦

ನಿವೇದಿಕೆ— ಮುಂದೆ ಹೋಗುವ ಗಡಿಯಾರವನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ಅಂತೆಯೇ ಬದಲಾಗುತ್ತಿರುವ ಪದ್ಧತಿಗಳನ್ನೂ ಯಾರೂ ತಪ್ಪಿಸಲಾರರು

ಸ್ತ್ರೀ— ವಿವಾಹ ವಿಚ್ಛೇದನ ಶಾಸನದೊಂದಿಗೆ ಬಹು ಪತ್ನಿತ್ವ ನಿಷೇಧ ಶಾಸನವೂ ಜಾರಿಗೆ ಬಂದಿದೆ. ಇದರಿಂದಾಗಿ ಅದೆಷ್ಟೋ ದುರ್ದೈವೀ ಮಹಿಳೆಯರ ಕಣ್ಣೀರು ಕೊನೆಗಾಣುತ್ತದೆ.

ನಿವೇದಿಕೆ— ಇನ್ನು ಭಾರತ ಸ್ತ್ರೀ ಧೃತಿಗೆಡದೆ ಭದ್ರವಾದ ಹೆಜ್ಜೆಗಳನ್ನು ಮುಂದಿಟ್ಟು ಸಾಗಬೇಕು.

ಸ್ತ್ರೀ— ಪ್ರಾಚೀನ ಕಾಲದ ಅಸಹಾಯ, ಅಬಲೆ, ವಿದ್ಯಾವಿಹೀನೆ ತಾನಲ್ಲ, ಜಗತ್ತಿನಲ್ಲಿ ಪುರುಷನಿಗಿರುವಷ್ಟೇ ಬುದ್ಧಿವಂತಿಕೆ, ಮನೋದಾರ್ಢ್ಯ ತನಗಿದೆ ಎಂಬುದನ್ನು ಆಕೆ ಸಿದ್ಧಪಡಿಸಿ ತೋರಿಸಬೇಕು.

ನಿವೇದಿಕೆ— ಗಂಡಿನಷ್ಟೇ ಬುದ್ಧಿವಂತಿಕೆ ಹೆಣ್ಣಿಗಿದ್ದರೂ, ತಾಯ್ತನದ ಹೊಣೆಗಾರಿಕೆ ಇರುವುದು ಮಾತ್ರ ಅವಳಿಗೇ.

ಸ್ತ್ರೀ— ಹಾಗೆಂದು ಅವಳ ಜವಾಬ್ದಾರಿ ಇನ್ನೂ ಹೆಚ್ಚಾಯಿತು. ನಾಳಿನ ಬಾಲ ಬಾಲೆಯರನ್ನು ಯೋಗ್ಯ ಪ್ರಜೆಗಳನ್ನಾಗಿ ಬೆಳೆಸುವುದು ಸುಲಭದ ಕೆಲಸವಾಯಿತೇನು?

ನಿವೇದಿಕೆ— ಈ ದಿನ ಸಮಾಜದಲ್ಲಿ ಕಾಣುವ ವಿದ್ಯಾವಂತೆಯರು ನಮ್ಮ ನಾಡಿನ ಸಮಗ್ರ ಚಿತ್ರಣವನ್ನು ಪ್ರತಿ ಬಿಂಬಿಸುವುದಿಲ್ಲ. ಇಪ್ಪತ್ತು ಕೋಟಿ ಮಹಿಳೆಯರಿರುವ ವಿಶಾಲ ಭಾರತದಲ್ಲಿ ಸಾಕ್ಷರ ಸ್ತ್ರೀಯರ ಪ್ರಮಾಣ ಅತ್ಯಲ್ಪ.

ಸ್ತ್ರೀ— ಮೋಡ ಕವಿದ ಆಕಾಶದಂತೆ!

ನಿವೇದಿಕೆ— ಇವರೆಲ್ಲಾ ಸಾಕ್ಷರರಾಗಿ, ಅಜ್ಞಾನದ ಮೋಡ ತೊಲಗಿ, ತಿಳಿವಿನ ಬೆಳಕು ಮೂಡಬೇಕು.

ಸ್ತ್ರೀ— ಇಂದಿನ ಎಲ್ಲ ಶಾಸನಗಳೂ ಆದಿಸೆಯತ್ತ ಬೊಟ್ಟುಮಾಡಿ ತೋರಿಸುತ್ತಿವೆ. ಸರ್ಕಾರ, ಸಮಾಜ—ಕಲ್ಯಾಣ ಕೇಂದ್ರಗಳು, ಮಹಿಳಾ ಪರಿಷತ್ತು, ಎಲ್ಲವೂ ಆ ಗುರಿಯನ್ನೇ ಹಿಡಿದು ಸಾಗಿವೆ.

ನಿವೇದಿಕೆ— ಆ ಗುರಿ ಮುಟ್ಟಿದಾಗ ಭಾರತ ಸುಖ ಸಂಪದಗಳ ಬೀಡಾಗುವುದು. ವಿದ್ಯಾವಂತೆಯಾದ, ಸುಸಂಸ್ಕೃತೆಯಾದ ಮಹಿಳೆಯಿಂದ ಆಕೆಯ ಮನೆಯೂ ಸಮಾಜ, ನಾಡು, ದೇಶಗಳೂ ಉದ್ಧಾರವಾಗುವುವು.

ಸ್ತ್ರೀ ಮತ್ತು ನಿವೇದಿಕೆ— ಹೆಣ್ಣಿನಿಂದಲೆ ಇಹವು । ಹೆಣ್ಣಿನಿಂದಲೆ ಪರವು ಹೆಣ್ಣಿನಿಂದಲೆ ಸಕಲ ಸಂಪದವು । ಸರ್ವಜ್ಞ ।

[ಸ್ಪಷ್ಟವಾಗಿ ಕೇಳಿಸಿ ಕ್ರಮೇಣ ಹಿನ್ನೆಲೆಗೆ ಸರಿಯುವ ಹಾಡು.]

(ಆಕಾಶವಾಣಿ ಪ್ರಸಾರಿತ)

---

ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದ ವಿವಾದ ಮಾಡುವುದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲೂ ವಾದ ವಿವಾದ ಮಾಡಬೇಡಿರೆಂದು ನನ್ನ ಸೂಚನೆ.

—ಮ. ಗಾಂಧಿ.

# ಇಂದಿನ ಯುಗಧರ್ಮ

(೫ನೇ ಪುಟದಿಂದ)

ನ್ಯಾಯ, ಹಕ್ಕು, ಬೇಡಿಕೆಗಳಿಗಾಗಿ ಸತ್ಯಾಗ್ರಹವೊಂದು ಅಪ್ರತಿಹತವಾದ ಸಿದ್ಧ ಅಸ್ತ್ರವಾಯಿತು.

ಅಹಿಂಸೆಯ ಅಧ್ಯಾಯ ನಮಗೆ ಹೊಸದಲ್ಲದಿದ್ದರೂ ಸ್ವಾತಂತ್ರ್ಯ ಸಾಧನೆಯಲ್ಲಿ ಅದು ಹೊಸ ಅಧ್ಯಾಯವನ್ನೇ ಸ್ಥಾಪಿಸಿತು. ಸಹನೆ, ಸ್ನೇಹ, ಸೌಹಾರ್ದಗಳು ನಮ್ಮ ಜೀವನದಲ್ಲಿ ಹೆಚ್ಚು ಸ್ಥಾನಗಳಿಸಿದವು. ಇದರಿಂದಾಗಿ ಅಹಿಂಸೆಯ ಭೂಮಿಕೆ ಹೆಚ್ಚು ವಿಸ್ತಾರವಾಯಿತು. ರಾಷ್ಟ್ರಗಳು ಶಾಂತಿ ಪ್ರಿಯವಾಗ ತೊಡಗಿದವು.

ಇದು ಕೇವಲ ಭಾರತದಲ್ಲಿ ಮಾತ್ರವೇ ಅಲ್ಲ ವಿಶ್ವದಲ್ಲಿಯೇ ಇಂದು ಶಾಂತಿಪ್ರಿಯ ರಾಷ್ಟ್ರಗಳು ಹೆಚ್ಚಾಗಿವೆ "ಪಂಚಶೀಲ"ಗಳು ಜಯಶೀಲವಾಗುತ್ತಿವೆ.

ರಾಷ್ಟ್ರೀಯ ಭಾವನೆಯೊಂದು ನಮ್ಮ ಹೋರಾಟದ ಬಹುದೊಡ್ಡ ಕೊಡುಗೆಯಾಗಿದೆ. ವ್ಯಕ್ತಿಯ ದೃಷ್ಟಿ ಮೇರೆದಪ್ಪಿದಷ್ಟು ವಿಕಾಸವಾಗುತ್ತಾ ವಿಶ್ವದಷ್ಟು ವಿಸ್ತಾರವಾಗಿದೆ. ತನ್ನ ಸುತ್ತಮುತ್ತಲಿನ ಪರಿಸ್ಥಿತಿ ಪ್ರಭಾವದೊಂದಿಗೆ ವಿಶ್ವದೊಡನೆ ಬಾಂಧವ್ಯ ಬೆಳೆಯುವ, ಬೆಳಸುವ ಅವಕಾಶ ಸಂನಿಹಿತವಾಗುತ್ತಿದೆ.

ಅಸ್ಪೃಶ್ಯತೆ ದೀನದಲಿತರ ವಿಚಾರ, ನಮ್ಮ ದೇಶದ ಬಹುದೊಡ್ಡ ವ್ಯಾಧಿ. ಅನೇಕ ಶತಮಾನಗಳಿಂದಲೂ— ರಾಷ್ಟ್ರಧರ್ಮದಲ್ಲಿ ಬಹು ದೊಡ್ಡ ತೊಡಕಾಗಿ— ಸಮಸ್ಯೆಯಾಗಿ ಪರಿಣಮಿಸಿತ್ತು. ದೇಶದ ಐಕ್ಯತೆ, ಭದ್ರತೆಗೆ ಗಂಡಾಂತರಕಾರಿಯಾಗಿತ್ತು. ಇದನ್ನು ರಾಷ್ಟ್ರೀಯವಾಗಿ ತೊಡೆದು ಹಾಕಿರುವುದರಿಂದ ದೇಶಕ್ಕೆ ಭದ್ರ ಬುನಾದಿಯನ್ನೇ ಹಾಕಿದಂತಾಗಿದೆ.

ಇನ್ನು ದೇವದಾಸಿಯೇ ಮುಂತಾದ ಅನೇಕ ಅನಿಷ್ಟ ಮುಖಗಳು, ಸಂಪ್ರದಾಯಗಳು, ಅಳಿಸಿ ಹೋಗುವುದು ಅವಶ್ಯವಿತ್ತು. ಯಾರದೋ ಸ್ವಾರ್ಥಕ್ಕೆ, ಯಾರದೋ ವಿಲಾಸಕ್ಕೆ, ಧರ್ಮದ, ದೇವರ, ದೇಶದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯ—ಅನಾಚಾರಗಳನ್ನು ಎದುರಿಸಿ, ನಿಲ್ಲಿಸುವುದೂ ಬೇಕಾಗಿತ್ತು. ಸ್ವಾತಂತ್ರ್ಯೋತ್ತರದಲ್ಲೇ ಇವುಗಳ ಮೇಲೆ ‘ಕ್ಷ’ಕಿರಣ ಬೀಳುವಂತಾಯಿತು.

ಈ ಬಗೆಯ ಬದಲಾವಣೆ, ಮನೋವೃತ್ತಿಗಳು ಬೆಳೆಯುವದಕ್ಕೆ ಇಂದಿನ ಜೀವನದ ಸ್ಥಿತಿ, ದೇಶದ ಗತಿಗಳು ಕಾರಣಗಳಾಗಿವೆ, ಅದನ್ನು ಇಂದಿನ ಯುಗ ಧರ್ಮವೆಂದೇ ತಿಳಿಯುವಷ್ಟು ಮಹತ್ವದ್ದಾಗಿವೆ. ನಮ್ಮ ಮನೋಭೂಮಿಕೆಯಲ್ಲಿ ಹೆಚ್ಚು ಆಳವಾಗಿ ಇವುಗಳು ಇಳಿಯುವದಕ್ಕೆ ಸ್ವಾತಂತ್ರ್ಯ ಸಮರವೂ—ಅದನ್ನು ನಿಯೋಜಿಸಿದ ಅನೇಕ ಧುರೀಣರೂ ಕಾರಣರಾಗಿದ್ದಾರೆ.

ಒಂದು ಹೊಸ ನಿಯಮ ಹೊಸ ಸಂಪ್ರದಾಯಗಳು ಬೆಳಕು ಕಾಣಬೇಕಾದರೆ ಹಳೆಯದು ಮಲಿನವಾಗಬೇಕಾಗುತ್ತದೆ. ಅದಕ್ಕೆ ಸರಿಯಾದ ಭಾವನೆ ಚೇತನಗೊಳ್ಳಬೇಕಾಗುತ್ತದೆ. ಆಗ ಕೆಲವರಿಗೆ ಅದು ಧರ್ಮವಾಗಿಯೂ ಕೆಲವರಿಗೆ ಅಧರ್ಮವಾಗಿಯೂ ಕಾಣುವುದು ಸ್ವಾಭಾವಿಕ. ಆದರೆ ವ್ಯಕ್ತಿ ಸಮಸ್ಯೆಗಳ ಸಮನ್ವಯದ ಸೃಷ್ಟಿಯಲ್ಲಿ, ವಿಕಾರರಹಿತ ವಿವೇಕ ದೃಷ್ಟಿಯಿಂದ ನೋಡಿದಾಗ ಅಂದಿನ ಯುಗಧರ್ಮದ ಕಲ್ಪನೆ ಮೂಡಿಬರುತ್ತದೆ. ಮನೋಧರ್ಮ ಬದಲಾಗುತ್ತದೆ. ಆಗ ದೇಶಕ್ಕೆ ಅವಶ್ಯವಿರುವ ಯುಗಧರ್ಮವನ್ನು ವಿರೋಧಿಸುವುದು ಸಾಧ್ಯವೆನಿಸಲಾರದು.

ಅಮೃತ ಸಂಪಾದನೆಗಾಗಿ ಸಮುದ್ರ ಮಥನ ನಡಿಸಿದಾಗ ಅನೇಕ ಅನುಕೂಲ ಪ್ರತಿಕೂಲ ವಸ್ತುಗಳು ಹುಟ್ಟಿದಂತೆ ಸ್ವಾತಂತ್ರ್ಯ ಪ್ರಾಪ್ತಿಗಾಗಿಯೂ ಹೂಡಿದ ಸಾಧನೆಯಲ್ಲಿ ಅನೇಕ ತತ್ವವಿಚಾರಗಳು ತೇಲಿಬಂದಿವೆ. ಬೆಳಸಬೇಕಾದ ನಿಯಮ ಧರ್ಮಗಳು ಮೂಡಿನಿಂತಿವೆ. ಸತ್ಯ, ಅಹಿಂಸೆ, ಮುಂತಾದವು ಅನುಷ್ಠಾನದಲ್ಲಿ ಇಳಿದಿವೆ. ಸತ್ಯಾಗ್ರಹವನ್ನು ದುರಾಗ್ರಹಕ್ಕಾಗಿ ಬಳಸಿಕೊಂಡದ್ದೂ ಇದೆ. ಆದರೂ ಅದರಲ್ಲಿ ದೇಶಕ್ಕಾಗಿ ಬೇಕಾದವುಗಳನ್ನು ಇಂದಿನ ಯುಗಧರ್ಮವೆಂದು ಸ್ವೀಕರಿಸಿ ಸ್ವಾಗತಿಸುವದರಲ್ಲಿ ದೇಶದ ಭವ್ಯ ಭವಿತವ್ಯವಿದೆ, ಮಾನವಕೋಟಿಯ ಕಲ್ಯಾಣವಿದೆ. ಇದರಿಂದ ಯಾವ ಧರ್ಮಗ್ಲಾನಿಯೂ ಸಂಭವಿಸಲಾರದು.

---

ಪೂಜೆ ಅಥವಾ ಪ್ರಾರ್ಥನೆಯು ವಾಕ್ ಸಾಮರ್ಥ್ಯದ ದ್ಯೋತಕವಾಗದೆ; ಬಲಕೊಡುವ ಗೌರವವಾಗಿದೆ; ಹೃದಯದಿಂದ ಹುಟಿದುಬರುವಂತಾದ್ದಾಗಿರಬೇಕು

ಕುಮಾರಿ ಬಿಲ್ಲೆಗಳು

( ರಿಜಿಸ್ಟರ್ಡ್ Regd. )

ಪ್ರಕೃತಿಯು ವಿಫಲಗೊಂಡಾಗ
ಉಂಟಾಗುವ ಕಾತರ ನಿವಾರಿಸಲು
ಫಲಪ್ರದವಾದ ಆಯುರ್ವೇದೀಯ ಔಷಧ!!

ಟ್ಯೂಬಿಗೆ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-

ಪ್ರಮುಖ ಕೆಮಿಸ್ಟರಲ್ಲಿ ಸಿಗುತ್ತದೆ ಯಾ ನೇರವಾಗಿ ತರಿಸಿಕೊಳ್ಳಿ.

P. DEVEE & Co. (N.J.) CALCUTTA 40

IDEAL CLOTH STORES

IDEAL BUILDINGS,

TENKAPET, UDIPI.

The reliable house
For all varieties of
Sarees & other pattern of cloth

25 YEARS OF FAITHFULL SERVICE TO THE PUBLIC

# ಭರತ ಮಾತೆ

(ಭಾರತಾಂಬೆ ನಮ್ಮ ಮಾತೆ ಜೀವಕ್ಕಿಂತ ಮೇಲು" ಎಂಬಂತೆ)

೧

ಭಾರತಾಂಬೆ ದೇಶಮಾತೆ
ನೀ ಸ್ವತಂತ್ರ ಮಾತೆಯೈ।
ಭಾರತಾಂಬೆ ವೀರ ಮಾತೆ
ಶಾಂತಿದಾತೆ ಭಾರತಿ ॥ ಪ ॥
ದಾಸ್ಯಬಂಧ ಮುಕ್ತಿಗಾಗಿ
ವೀರರನ್ನು ಹಡೆದೆ ನೀ।
ದೇಶಪ್ರೇಮ ತ್ಯಾಗವೈಕ್ಯ
ತುಂಬಿ ಮಕ್ಕಳಲ್ಲಿ ನೀ।
ಮಾಲವೀಯ, ವೀರ ಭೋಸ
ರಾದಿಗೆಲ್ಲ ಜನ್ಮದಾತೆ ನೀ।
ಗಾಂಧಿ, ನೆಹರು ಪುತ್ರರತ್ನ
ಪಡೆದ ಮಾತೆ ಧನ್ಯೆ ನೀ

೨

ಕ್ರಾಂತಿಕಾರಿ ಬಲಿಗಳನ್ನು
ಶಾಂತಿಯಿಂದ ತಡೆದೆ ನೀ
ರಕ್ತಪಾತ ಕೊಲೆಗಳರಡೆ
ಬಂಧ ಮುಕ್ತಳಾದೆ ನೀ।
ಸತ್ಯ ನ್ಯಾಯ, ಮತ್ತಹಿಂಸೆ
ಯೆಂಬ ಮೂಲ ಮಂತ್ರದಿ।
ಶಾಂತಿ, ಶಾಂತಿ, ಶಾಂತಿಯೆಂಬ
ವರವ ಪಡೆದ ಧನ್ಯೆ ನೀ॥

೩

ದೇಶದಲ್ಲಿ ಅತುಳವಾದ
ರಾಜರೆಲ್ಲರನ್ನು ನೀ।
ಲೇಶಮಾತ್ರ ವಿಲ್ಲದಂತೆ
ಶಾಸನದಲೆಗೈದೆನೀ।
ಪ್ರಜೆಯ ಮೂಲ ಭೂತವಾದ
ಹಕ್ಕುಗಳ ಸ್ಥಾಪಿಸಿ।
ಪ್ರಜಾರಾಜ್ಯ ರಾಜ್ಞಿಯಾಗಿ
ಕೆಚ್ಚಿನಿಂದ ಮೆರೆವೆ ನೀ॥

೪

ಲೋಕ ಶಾಂತಿ ಸೌಖ್ಯಕಾಗಿ
ಸತತವಾಗಿ ದುಡಿವೆ ನೀ।
ಸಕಲ ರಾಷ್ಟ್ರಗಳಿಗೆ ಯೋಗ್ಯ
ನೀತಿ ಪಥವ ತೋರ್ಪೆ ನೀ।
ಸಕಲ ರಾಷ್ಟ್ರಗಳನು ಸ್ನೇಹ
ಭಾವದಿಂದ ನೋಳ್ಪೆ ನೀ।
ಲೋಕ ಖ್ಯಾತಿವೆತ್ತು ನಿತ್ಯ
ಮಾನ್ಯಳಾಗಿ ಮೆರೆವೆ ನೀ॥

೫

ಜಾತಿಭೇದ, ನೀತಿಭೇದ
ಗಳನು ನೀನು ವರ್ಜಿಸಿ।
ಏಕಮಾತ್ರ ರೀತಿಯಿಂದ
ಸಕಲ ಸಮತೆ ಗೈದೆ ನೀ।
ಸರ್ವ ಧರ್ಮಗಳಿಗೆ ಸದಾ
ಮಾನ್ಯವಿತ್ತು ಕಾಣ್ಬೆನೀ।
ಅಂತೆ ಮಾನವತೆಯ ನಿಜದ
ಧರ್ಮವನ್ನು ಕಂಡೆನೀ

೬

ಅಲ್ಪ ಕಾಲದಲ್ಲೆ ಸರ್ವ
ಪ್ರಗತಿ ಪಡೆದೆ ಭಾರತಿ।
ವಿಶ್ವವೆಲ್ಲ ನಿನ್ನ ಕೀರ್ತಿ
ಅಮರವಾಗಿ ಬೆಳಗಲಿ
ಎಮಗೆ ನಿನ್ನ ಪಾದಸೇವೆ
ಸದಾ ಕಾಲ ಕರುಣಿಸಿ
ನಿನ್ನ ರಾಜ್ಯ ನಿನ್ನ ಜನರ
ಪೊರೆಯೊ ತಾಯೆ ಭಾರತಿ

ಕೆ. ರಾಮ ನಾಯಕ್
ಉಪ್ಪಿನಂಗಡಿ

# ಧನ್ಯ ಭಾರತ

(೪ನೇ ಪುಟದಿಂದ)

ಸ್ಯನ ಅಂಧಕರಣವನ್ನು ಕಲಕದೇ ಇರದು. ದಾರಿಯು ಎರಡೂ ಬದಿಯಿಂದ ಹಣ ವಸ್ತ್ರ ಒಡವೆಗಳ ಮಳೆಯೇ ಆಯಿತೆಂದು ಹೇಳಬಹುದು.

ಒಬ್ಬ ಸಾಮಾನ್ಯಗಿರಣಿಯ ಕಾಮಗಾರನು ಕೂಡ ರಜೆಯ ದಿನ ದುಡಿದು ಅಂದಿನ ದುಡಿಮೆಯನ್ನು ದೇಶರಕ್ಷಣೆಯ ಕಾರ್ಯಕ್ಕೆಂದು ಕೊಡುತ್ತಿದ್ದಾನೆ. ಒಂದೊಂದು ದಿನದ ವೇತನವನ್ನು ಕೊಟ್ಟವರೆಷ್ಟೊ ಜನ. ಇಂದು ಪ್ರತಿ ಭಾರತೀಯನು ತನ್ನ ಸ್ವಾರ್ಥತ್ಯಾಗವನ್ನು ಪ್ರದರ್ಶಿಸುತ್ತಿದ್ದಾನೆ.

ಮುಂಬೈಯಲ್ಲಿಂದು ಮಹಿಳಾ ಸಂಸ್ಥೆಯವರು ಜವಾನರಿಗಾಗಿ ಸಿಹಿ ತಿಂಡಿಗಳನ್ನು ಮಾಡಿ ಕಳಿಸಿದರು. ರಾಷ್ಟ್ರಪ್ರೇಮಿಯುವರು ತಮ್ಮ ಜೀವವನ್ನೇ ಪಣಕ್ಕೆ ಹಚ್ಚಿ ಯುದ್ಧಕ್ಕೆ ಹೋಗಲು ತಯಾರಾದರು. ನಮ್ಮ ದೇಶದಲ್ಲಿಯ ಜನತೆಯ ಸಾರ್ಥ ತ್ಯಾಗ, ಒಕ್ಕಟ್ಟು ಹಾಗು ಸಾಹಸಗಳು ಪರದೇಶದವರನ್ನು ಕೂಡ ಬೆರಗುಗೊಳಿಸಿವೆ. ಹೀಗಾಗಿ ನಮಗೆ ನಮ್ಮ ಪ್ರಿಯ ಪಂಡಿತ ಪ್ರಧಾನ ನೆಹರು ಹೇಳಿದಂತೆ ಯಶಸ್ಸು ನಿಶ್ಚಿತ. ಸ್ವಾರ್ಥ ತ್ಯಾಗಕ್ಕೆ ಹೆಸರಾದ ಭಾರತ ಧನ್ಯವೇ ಸರಿ.

---

ನಾನು ಪರಿಪೂರ್ಣನೆಂದು ಹೇಳಿಕೊಳ್ಳುವುದಿಲ್ಲ, ಆದರೆ ದೇವರಿಗೆ ಇನ್ನೊಂದು ಹೆಸರಿನಂತಿರುವ ಸತ್ಯದ ನಿಸ್ಸೀಮ ನಿಷ್ಠೆಯುಳ್ಳ ಉಪಾಸಕನೆಂದು ಮಾತ್ರ ಹೇಳಬಲ್ಲೆನು.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ
ಎಲ್ಲ ಪಾತ್ರೆಗಳಿಗೆ—
ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್
ಎಲ್ಲ ಪಾತ್ರೆಗಳಿಗೆ— ನಮ್ಮಲ್ಲಿಗೆ ಬನ್ನಿ.
ಐರೋಡಿ ರಾಧಾಕೃಷ್ಣ ಶೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - - ಉಡುಪಿ

GANGES PRINTING INKS
FOR BETTER PRINTING...
THEREFORE BE SELECTIVE
PRINT WITH GANGES INKS.
GANGES PRINTING INK FACTORY LTD.
The Largest Printing Ink Manufacturers in India.
CALCUTTA - BOMBAY - MADRAS - DELHI.

# ಭಾರತದಂತೆ ಇಂಗ್ಲೆಂಡು ಅಮೆರಿಕಗಳೂ ಮೋಸಹೋಗುತ್ತಿದ್ದುವು

ಭಾರತವಿಂದು ಸಾಮ್ರಾಜ್ಯಶಾಹಿ ಚೀನೀ ಪೆಡಂಭೂತನಿಂದ ವಂಚಿತವಾದಂತೆ ದ್ವಿತೀಯ ಜಾಗತಿಕ ಸಮರದ ಮೊದಲಿಗೆ ಇಂಗ್ಲೆಂಡು ಅಮೆರಿಕೆಗಳೂ ಶತ್ರುಗಳಿಂದ ಮೋಸಹೋಗುವಂತಿದ್ದುವು. ಆದರೆ, ದಕ್ಷನಾಯಕತ್ವ ಮತ್ತು ಸೈನ್ಯ ಶಕ್ತಿ ಪ್ರಚಾಲನೆಯಿಂದ ಅವು ಬದುಕಿಕೊಂಡವು. ನಾವೂ ಇಂದು ಹಾಗಾಗಲೇಬೇಕಲ್ಲವೆ?

"ಶ್ರೀ ಮ. ಜಾ."

ಪ್ರತಿಯೊಂದು ರಾಷ್ಟ್ರದಲ್ಲಿಯೂ ಸುಗುಣಿಗಳೂ ದುರ್ಗುಣಿಗಳೂ ಇರುತ್ತಾರೆ. ಯಾವ ರಾಷ್ಟ್ರದಲ್ಲಿ ಸುಗುಣಿಗಳು ರಾಜಕೀಯ ಅಧಿಕಾರವನ್ನು ಹಿಡಿಯುತ್ತಾರೋ ಆ ರಾಷ್ಟ್ರದಲ್ಲಿ ದ್ವೇಷಾಸೂಯೆಗಳು ಕಡಮೆಯಾಗಿ ಮನಃಶಾಂತಿಯಿರುತ್ತವೆ. ಅಲ್ಲದೆ ಆ ರಾಷ್ಟ್ರವು ನೆರೆ ರಾಷ್ಟ್ರವನ್ನು ನಂಬಿಯೇ ಇರುತ್ತದೆ; ತನ್ನ ಸೈನ್ಯಶಕ್ತಿಯನ್ನು ಹೆಚ್ಚಿಸದೆ ತನ್ನ ಒಳಾಡಳಿತವನ್ನೇ ಸರಿಪಡಿಸಲೆತ್ನಿಸುತ್ತಿದೆ. ಇಂತಹ ಸಮಯದಲ್ಲಿ ದುರ್ಗುಣಿಗಳಿಂದಾಡಳಿತ ನಡೆಸಲ್ಪಡುವ ರಾಷ್ಟ್ರವು ತನ್ನ ರಾಷ್ಟ್ರವಿಸ್ತರಣವನ್ನು ಮಾಡುವ ಹಂಚಿಕೆಯನ್ನೇ ರಹಸ್ಯವಾಗಿ ಮಾಡಿಕೊಂಡು ಒಂದಾನೊಂದು ದಿನ ಹೇಳಕೇಳದೆ ನಿರ್ಬಲ ರಾಷ್ಟ್ರವನ್ನಾಕ್ರಮಿಸುತ್ತದೆ.

ಭಾರತವು ಚೀನೀಯರಿಂದ ಮೋಸಹೋಗಲಿದ್ದ ಕಥೆಯು ಇಂತಹದ್ದೆ. ೧೯೩೪ರಲ್ಲಿ—ಮೂವತ್ತಮೂರು ವರ್ಷಗಳ ಮೊದಲು ಇಂಗ್ಲಾಂಡು ಅಮೆರಿಕಾಗಳೂ ಭಾರತದಂತೆ ಮೋಸಹೋಗುತ್ತಿದ್ದುವು! ದೈವವಶಾತ್ ಆ ರಾಷ್ಟ್ರಗಳೂ ಕ್ಲಿಷ್ಟ ಕಾಲದಲ್ಲಿ ಎಚ್ಚರಗೊಂಡುದರಿಂದ ಮಾತ್ರ ಬದುಕಿದುವು.

"ಅಮೆರಿಕದ ಆರ್ಥಿಕ ಸ್ಥಿತಿಯು ಸರಿಪಡಿಸಲ್ಪಡದ ವಿನಃ ನಮ್ಮ ಪ್ರಜಾಪ್ರಭುತ್ವವಾಗಲೀ ಸ್ವಾತಂತ್ರ್ಯವಾಗಲೀ ಉಳಿಯಲಾರವು" ಎಂದು ೧೯೩೪ರಲ್ಲಿ ಅಮೆರಿಕಾದ ಅಧ್ಯಕ್ಷರಾದ ಫ್ರಾಂಕ್ಲಿನ್ ರೂಜ್ವೆಲ್ಟರು ಹೇಳುತ್ತಿದ್ದರು. ಅಮೆರಿಕಾವನ್ನು ಶ್ರೀಮಂತ ರಾಷ್ಟ್ರವನ್ನಾಗಿ ಮಾಡುವ ಒಂದೇ ಉದ್ದೇಶದಿಂದ ಕೊಂಗ್ರೆಸ್ಸಿನ ಸರ್ವ ಸದಸ್ಯರು ಕೆಲಸಮಾಡುತ್ತಿದ್ದರು. ವಿದೇಶಗಳಲ್ಲಿ ತಮ್ಮನ್ನು ಸೋಲಿಸಲಿಕ್ಕಾಗಿ ಎಲ್ಲಾ ಸಿದ್ಧತೆಗಳಾಗುತ್ತಿವೆಯೆಂಬ ಸತ್ಯವು ಅವರಿಗೆ ತಿಳಿಯಲೇ ಇಲ್ಲ. ಯುದ್ಧ ಸಿದ್ಧತೆಗಳಿದ್ದರೂ ಅವು ಸಾಕಷ್ಟು ಇರಲಿಲ್ಲ. ಅಮೆರಿಕವು ಯುದ್ಧಶಕ್ತಿಯಲ್ಲಿ ಹಿಂದಿರುವುದನ್ನು ಜಪಾನು, ಜರ್ಮನಿ, ಇಟಲಿಯ ಸರಕಾರಗಳು ತಂತಮ್ಮ ಗುಪ್ತಚಾರರಿಂದ ತಿಳಿದುಕೊಳ್ಳುತ್ತಿದ್ದುವು ಅಮೆರಿಕಾದಲ್ಲಿ ರಿಪಬ್ಲಿಕನ್ ಪಾರ್ಟಿ ಮತ್ತು ಡೆಮೊಕ್ರೆಟಿಕ್ ಪಾರ್ಟಿಗಳೆಂಬ ಎರಡು ರಾಜಕೀಯ ಪಕ್ಷಗಳು ತಂತಮ್ಮ ಸ್ವಾರ್ಥದಿಂದ ಮಹಾ ಚುನಾವಣೆಯಲ್ಲಿ ಮಗ್ನವಾಗುತ್ತಿದ್ದಾಗಲೇ ಜಪಾನು ಮೆಲ್ಲಮೆಲ್ಲನೆ ೧೯೩೧ರಲ್ಲಿ ಮಂಚೂರಿಯವನ್ನು ಆಕ್ರಮಿಸಿತು. ಚೈನಾವನ್ನು ಸೋಲಿಸಿ ಮಂಚುಕುವೊದಲ್ಲಿ ರಾಜ್ಯ ಸ್ಥಾಪಿಸಿತು. ಅತ್ತಲಾಗಿನಿಂದ ಇಟಲಿ ಫೆಸಿಸಂ ತತ್ವಕ್ಕೋಸ್ಕರ ಲಿಬಿಯಾವನ್ನು ಆಕ್ರಮಿಸಿ ೧೯೩೫—೩೬ರಲ್ಲಿ ಇಥಿಯೋಪಿಯಾವನ್ನೂ ವಶೀಕರಿಸಿತು. ಜರ್ಮನಿಯಲ್ಲಿ ಹಿಟ್ಲರನು ರೈನ್‌ಲೇಂಡನ್ನೂ ಹಿಡಿದು ತನ್ನ ದೇಶವನ್ನು ಪರಿಪೂರ್ಣ ಶಸ್ತ್ರ ಸಜ್ಜಿತವನ್ನಾಗಿ ಮಾಡಿದನು. ಇಷ್ಟಾದರೂ ಅಮೆರಿಕಾದ ವಿದೇಶ ನೀತಿ ಬದಲಾಗಲಿಲ್ಲ. ಇವೆಲ್ಲ ಆಕ್ರಮಣಗಳಿಗೂ ತನಗೂ ಏನೂ ಸಂಬಂಧವಿಲ್ಲವೆಂದು ಬಾವಿಸಿತು. ಇಂಗ್ಲಾಂಡೂ ಈ ವಿಷಯಗಳನ್ನು ಹೆಚ್ಚಿನ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ಇದನ್ನೂ ಕಂಡು ಹಿಟ್ಲರನು ಆಸ್ಟ್ರಿಯಾವನ್ನು ವಶೀಕರಿಸಿಕೊಂಡನು ಜೆಕೊಸ್ಲೊವೇಕಿಯಾವನ್ನೂ ಆಕ್ರಮಿಸಿದನು. ಇಷ್ಟಾಗುವಾಗಲೂ "ನಾವು ತಟಸ್ಥರು" ಎಂದು ಇಂಗ್ಲಾಂಡು ಅಮೆರಿಕಾಗಳು ಹೇಳಿದುವು. ವೈರಿಗಳಿಗೆ ಇದೇ ಬೇಕಾಗಿತ್ತು.

ಅಷ್ಟರಲ್ಲಿ ಒಂದು ಮಹಾ ವ್ಯಕ್ತಿ ತನ್ನ ನೋಂಟು ಕಾಲನ್ನೆತ್ತಿಕೊಂಡು ದೇಶವಿಡೀ ಅರ್ಭಟವಿತ್ತಿತು. "ನಮ್ಮ ಈ ತಟಸ್ಥ ಧೋರಣೆಯಿಂದ ಇಂಗ್ಲಾಂಡು ಅಮೆರಿಕಾಕ್ಕೆ ಸೋಲು ಖಂಡಿತ" ಎಂದಿತು ಅವರೇ ರೂಸ್‌ವೆಲ್ಟ್! ಅವರು ಹಾಗೆ ಹೇಳುತ್ತಿರುವಾಗಲೇ— ಬೇಗ ಬೇಗನೇ ಹಿಟ್ಲರ್ ಪೋಲೆಂಡನ್ನು ಹೊಕ್ಕಿದ. ಡೆನ್ಮಾರ್ಕನ್ನು ಹಿಡಿದ. ಹೊಲ್ಲೆಂಡನ್ನು ಮುಕ್ಕಿದ. ಫ್ರಾನ್ಸನ್ನು ಆಕ್ರಮಿಸಿದ ಅಮೆರಿಕಾ ಎಚ್ಚೆತ್ತಿತು! ಇಂಗ್ಲಾಂಡು ಕಣ್ತೆರೆಯಿತು! ೧೯೪೦ರಲ್ಲು ಹಿಟ್ಲರನ ವಿಮಾನಗಳು ಬ್ರಿಟನನ್ನು ಗುಂಡಿಗಾಹುತಿಗೊಳಿಸಿದುವು.

ಒಡನೆ ಅಮೆರಿಕಾವು ಲೇಟಿನ್ ಅಮೆರಿಕಾ ಮತ್ತು ಕೆನಡಾಗಳೊಡನೆ ರಕ್ಷಣಾ ಸಮಿತಿಯನ್ನು ರಚಿಸಿತು. ೧೯೪೦ರಲ್ಲಿ ಪುನಃ ರೂಸ್‌ವೆಲ್ಟರನ್ನೇ ಮೂರನೇ ಸಲದ ಅಧ್ಯಕ್ಷರನ್ನಾಗಿ ಅಮೆರಿಕಾವು ಚುನಾಯಿಸಿ "ನಮ್ಮನ್ನು ರಕ್ಷಿಸು" ಎಂದಿತು.

ಯುರೋಪಿನಲ್ಲಿ ನಡೆಯುತ್ತಿರುವ ಯುದ್ಧದಿಂದ ಅವಾಕ್ಕಾಗಿರುವ ಅಮೆರಿಕನರಿಗೆ ಜಪಾನು "ಹೊಸ ಕ್ರಮ" ಎಂಬ ತತ್ವವನ್ನು ಸಾರಿತು. ಫೆಸಿಫಿಕ್ ಕ್ಷೇತ್ರದಲ್ಲಿ ತಾನು ಸುಖಶಾಂತಿಗಳನ್ನುಂಟುಮಾಡುವೆನೆಂದು ಶಿಂಗೈಗೆ ಹೊಕ್ಕಿತು. ತಂಟೆ ಬೇಡವೆಂದು ಬ್ರಿಟನು ಶಿಂಗೈಯಿಂದ ಹಿಂದೆಗೆಯಿತು. ಫ್ರೆಂಚ್ ಇಂಡೋ ಚೈನಾದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಜಪಾನು ಅನುಮತಿ ಪಡೆಯಿತು. ೧೯೪೦ರ ಸಪ್ಟಂಬರದಲ್ಲಿ ರೋಮ್—ಬರ್ಲಿನ್ ಒಪ್ಪಂದವಾಯಿತು.

ಇಷ್ಟಾಗುತ್ತಿದ್ದಾಗಲೂ ಜಗತ್ತಿನಲ್ಲಿ ಎರಡನೇ ಯುದ್ಧ ಅಷ್ಟೊಂದು ಉದ್ವಿಗ್ನಗೊಳ್ಳುವುದೆಂದು ಯಾರೂ ನಂಬಲಿಲ್ಲ.

ಜಪಾನಿನಲ್ಲಿ ಜನರಲ್ ಟೋಜೋ ಸೈನ್ಯಾಧಿಕಾರ ಹೊಂದಿದನು. ಅವನು "ನಾನು ಶಾಂತಿಪ್ರಿಯ"ನೆಂದು ಹೇಳಿ ಸಬ್ರೋ ಕುರುಸು ಎಂಬ ರಾಯಭಾರಿಯನ್ನು ಅಮೆರಿಕಾಕ್ಕೆ ಕಳುಹಿಸಿದನು. ಅವನು ಅಧ್ಯಕ್ಷ ರೂಸ್‌ವೆಲ್ಟರನ್ನು ಕಂಡು ಜಪಾನಿನ ಚಕ್ರವರ್ತಿಯ ಶಾಂತಿ ನೀತಿಯನ್ನು ಪ್ರಕಟಗೊಳಿಸಿದನು. ಅದನ್ನೊಪ್ಪಿ ಡಿಶಂಬರ ೬ನೇ ತಾರೀಕಿನ ದಿನ ರೂಸ್‌ವೆಲ್ಟರು ಜಪಾನಿನ ಚಕ್ರವರ್ತಿಗೆ ಸಂದೇಶವನ್ನು ಕಳುಹಿಸಿದರು. ಕುರುಸು ಆ ದಿನವೇ ಹಿಂದಿರುಗಿದನು. ಮರುದಿನ ಬೆಳಿಗ್ಗೆ ಪರ್ಲ್ ಹಾರ್ಬರಿನ ಮೇಲೆ ಜಪಾನ್ ಬೊಂಬಿನ ಮಳೆ ಸುರಿಯಿತು. ಅಮೆರಿಕಾದ ವಿಮಾನ ಭೂಮಿಯನ್ನೂ ಯುದ್ಧ ನೌಕೆಗಳನ್ನೂ ನಿರ್ನಾಮಗೈದಿತು. ಒಡನೆ, ಹವಾಯಿ, ಮಿಡ್‌ವೇ ವೇಕ್ ಮತ್ತು ಗುವಾಂ ಪಟ್ಟಣಗಳನ್ನು ಗೆದ್ದಿತು. ಆಗಲೇ ಅಮೆರಿಕಾ ಜಪಾನನ್ನೂ "ವೈರಿ" ಎಂದು ಕರೆಯಿತು ದಶಂಬರ ೮ನೇ ದಿನ ಅಮೆರಿಕನ್ ಕೊಂಗ್ರೆಸ್ ಜಪಾನಿನ ಮೇಲೆ ಯುದ್ಧ ಸಾರಿತು—ಅಷ್ಟಾಗುತ್ತಲೇ—ಮೂರೇ ದಿನಗಳಲ್ಲೇ ಜರ್ಮನಿಯೂ ಇಟಲಿಯೂ ಅಮೆರಿಕಾದ ಮೇಲೆ ಯುದ್ಧ ಸಾರಿದುವು.

ಅಮೆರಿಕಾನರಿಗೆ ಈ ಯುದ್ಧವು ದೊಡ್ಡ ಅಪಜಯವನ್ನುಂಟು ಮಾಡಿದ ವಾತಾವರಣವನ್ನು ಸೃಷ್ಟಿಸಿತು. ಅಮೆರಿಕನರಿಗೆ ನಾಚಿಕೆಯಾಯಿತು" ಒಂದೆರಡು ದಿನಗಳಲ್ಲೇ ರೂಸ್‌ವೆಲ್ಟ ಸರಕಾರಕ್ಕೆ ೬೦ ೦೦೦ ವಿಮಾನ, ೪೫,೦೦೦ ಟ್ಯಾಂಕುಗಳು, ೨೦,೦೦೦ ವಿಮಾನ ಹೊಡೆಯುವ ಬಂದೂಕುಗಳು, ೧೪,೦೦೦೦೦ ಟನ್ ಯುದ್ಧ ನೌಕೆಗಳನ್ನು ಕೊಡಲಾಯಿತು. ೧೫,೧೦೦,೦೦ ಸೈನ್ಯ ಆರು ತಿಂಗಳಲ್ಲಿ ಸಿದ್ಧವಾಯಿತು. ೧೯೪೨ರಲ್ಲಿ ೬೫,೦೦೦,೦೦ ಸೈನಿಕರು ಸುಸಜ್ಜಿತರಾದರು.

ಅತ್ತಲಾಗಿನಿಂದ ಬ್ರಿಟನು ಚರ್ಚಿಲ್ಲರ ಪ್ರಧಾನತ್ವದಲ್ಲಿ ಯುದ್ಧಕ್ಕೆ ಸಿದ್ಧವಾಯಿತು. ೧೯೪೨ರ ಜನವರಿಯಲ್ಲಿ ರೂಸ್‌ವೆಲ್ಟ್ ಚರ್ಚಿಲ್ಲರು ಕಸಬ್ಲಾಂಕದಲ್ಲಿ ಗುಟ್ಟಾಗಿ ಸೇರಿ ಯುದ್ಧವನ್ನು ಮುಂದುವರಿಸಿದರು.

೧೯೪೫ನೇ ಇಸವಿ ಏಪ್ರಿಲ್ ೧೨ನೇ ದಿನ ರೂಸ್‌ವೆಲ್ಟರು ಅಕಸ್ಮಾತ್ ದೈವಾಧೀನರಾಗಲು ಅವರ ಸ್ಥಾನಕ್ಕೇರಿದ ಹೆರ್ರಿ ಎಸ್. ಟ್ರೂಮೆನರು ಯುದ್ಧವನ್ನು ಮುನ್ನಡೆಸಿದರು ಕೊನೆಗೆ ರಶ್ಯಾವೂ ಇಂಗ್ಲಾಂಡು ಅಮೆರಿಕಾಗಳೊಳಗೆ ಕೂಡಿಕೊಂಡು ಎರಡನೇ ಮಹಾ ಯುದ್ಧದಲ್ಲಿ ಹೇಗೆ ವಿಜಯ ದೊರಕಿತೆಂಬ ಮಹಾ ಕಥೆಯು ಜಗತ್ತಿಗೆ ತಿಳಿದ ವಿಷಯ.

ಭಾರತಕ್ಕೂ ಅಂತಹ ಸಂಕಟ ಕಾಲ ಸನ್ನಿಹಿತವಾಗಿದೆ. ಸೈನ್ಯ ಶಕ್ತಿ ಇಲ್ಲದ ಭಾರತ ನಿರ್ಬಲ ಭಾರತ. ಇದಕ್ಕೆ ಯಾವ ಕಾಲಕ್ಕೂ ಉಳಿಗಾಲವಿಲ್ಲ. ಪ್ರಜಾಪ್ರಭುತ್ವ ಉಳಿಯ 'ಬೇಕೋ' ನಮ್ಮ ಸೈನ್ಯ ಶಕ್ತಿ ಅಭೇದ್ಯ ಶಕ್ತಿಯಾಗಬೇಕು! ದುಷ್ಟರ ಆಡಳಿತದಲ್ಲಿರುವ ಹೊರಗಿನ ಸರಕಾರಗಳು ಭಾರತವನ್ನು ಮೋಸಗೊಳಿಸುವ ಮೊದಲು ಭಾರತವು ಎಚ್ಚರವಾಗಬೇಕು!


## ಗೃಹಿಣಿಯರ

ಜವಾಬ್ದಾರಿಯು ಸಂಸಾರ ನಿರ್ವಹಣೆಯಲ್ಲಿ ಮಹತ್ತರವಾದುದು. ಮನೆಯ ಆಯವ್ಯಯಗಳನ್ನು ಸರಿಹೊಂದಿಸಿಕೊಂಡು ತನ್ನ ಮನೆ ಕುಟುಂಬಗಳನ್ನು ಬೆಳಗಿಸುವುದು ಆಕೆಯ ಧರ್ಮ. ಅದಕ್ಕೆ ಆಕೆಯ ಸೇವಿಂಗ್ಸ್ ಬ್ಯಾಂಕ್ ಖಾತೆಯು ಬಹು ವಿಧವಾಗಿ ನೆರವಾಗಬಲ್ಲುದು.

**ಸಿಂಡಿಕೇಟ್ ಬ್ಯಾಂಕು ಸ್ತ್ರೀಯರು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಹೆಚ್ಚಿನ ಪ್ರೋತ್ಸಾಹವನ್ನೀಯುವುದು.**

ನಿಮಗೆ ಸಮೀಪವಿರುವ ನಮ್ಮ ಶಾಖೆಯನ್ನು ಸಂದರ್ಶಿಸಿರಿ.

## ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ,
ಸ್ಥಾಪನೆ: ೧೯೨೫

## ಹೊಸ ವರ್ಷದ ಕೊಡುಗೆ

— ಠೇವಣಾತಿ ಬಡ್ಡಿ ದರಗಳ ಹೆಚ್ಚಳ —

1ರಿಂದ 2 ತಿಂಗಳ ವರೆಗೆ — 4½%
3 ,, 11 ,, ,, — 4¾%
12 ,, 23 ,, ,, — 5%
24 ,, 35 ,, ,, — 5¼%
36 ,, 60 ,, ,, — 5½%

ರೂ. 5,000/- ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ 5½%ಗೆ ಮೀರದಂತೆ ¼% ಹೆಚ್ಚಿನ ಬಡ್ಡಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

# ದಿ ವಿಜಯ ಬೇಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ರೂಪಾಯಿ ಎರಡು ಕೋಟಿಗೂ ಮಿಕ್ಕಿದ ಚಲಾವಣಾ ಸಂಪತ್ತು.



ಜನವರಿ **26** ಪವಿತ್ರ ದಿನ—

## — ಪ್ರಜಾರಾಜ್ಯ ದಿನ —

ಭಾರತದಿಂದ ಚೀನೀಯರನ್ನು ಹೊರತಳ್ಳುವ ವರೆಗೆ ವಿಶ್ರಾಂತಿ ಪಡೆಯುವುದಿಲ್ಲವೆಂದು ಪ್ರತಿಜ್ಞೆ ಮಾಡೋಣ.

ದೇಶದ ಪ್ರಗತಿಗಾಗಿಯೂ ವೈಯ್ಯಕ್ತಿಕ ಉನ್ನತಿಗಾಗಿಯೂ ಅವಿಶ್ರಾಂತವಾಗಿ ದುಡಿಯೋಣ.

**ಸರ್ವರಿಗೂ ಪ್ರಜಾರಾಜ್ಯೋತ್ಸವದ ಶುಭಾಶಯಗಳು!**

— ಸಾರ್ವಜನಿಕರ ಸೇವೆಯಲ್ಲಿ —

# ಗೋವಾ ಸ್ಟೋರ್ಸ್ & ಬೇಕರಿ

ಕೆಥೊಲಿಕ್ ಸೆಂಟರ್ — — ಉಡುಪಿ



*For your requirements in:*

School and College Books
Books on Current Day Politics and fiction etc.
Stationery and office requisites
Paper and Printer's Sundries

*The Reputed Firm in South Kanara*

# School Book Co.

**BookSellers — Publishers — Stationers**

**PRINCIPAL PAPER DEALERS**

| *Head Office:* | *Branch Office:* |
|---|---|
| CAR STREET | K. S. RAO ROAD<br>HAMPANKATTA |
| MANGALORE | MANGALORE |
| Phone No. 229 | Phone No. 229 A |

*Distributors for:*

**The Mysore Paper Mills, Ltd.**
BHADRAVATHI
(For S. Kanara & N. Malabar)

*Agents of:*

**Ganges Printing Ink Factory, Ltd.**
HOWRAH


## THE KARNATAKA BANK LIMITED UDIPI S. K.

Registered Office: MANGALORE-3

## ದಿ ಕರ್ಣಾಟಕ ಬೇಂಕ್ ಲಿಮಿಟೆಡ್, ಉಡುಪಿ, ದ.ಕ.

(ರಿಜಿಸ್ಟರ್ಡ್ ಆಫೀಸು: ಮಂಗಳೂರು-3

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತವಾಯಿದೆಗೆ ಅಸಲು, ಬಡ್ಡಿ ವಗೈರೆ ಪಾವತಿ ಮಾಡದೇ ಬಾಕಿ ಮಾಡಿಕೊಂಡಿರುವುದರಿಂದ ಸದರಿ ಸಾಲಗಳನ್ನು ವಸೂಲು ಮಾಡುವರೇ ಅವರಿಗೆ ರಿಜಿಸ್ಟ್ರ್ ನೋಟೀಸುಗಳನ್ನು ಬಿಟ್ಟಿದ್ದರೂ (ಕೆಲವು ನೋಟೀಸುಗಳು ಬೇರೆ ಬೇರೆ ಕಾರಣಗಳಿಗಾಗಿ ವಾಪಾಸು ಬಂದಿದ್ದು) ಕೂಡಾ ಸದ್ರಿ ಈಡಿಟ್ಟ ನಗಗಳನ್ನು ಬಿಡಿಸದೆ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಇದೇ 1963ನೆಯ ಇಸವಿ ಫೆಬ್ರವರಿ ತಿಂಗಳ 2ನೇ ತಾರೀಖಿನ ಪೂರ್ವಾಹ್ನ 12 ಗಂಟೆಯ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ವಗೈರೆ ಬಾಕಿಗಳನ್ನು ಸಲಾಯಿಸಿ ನಗಗಳನ್ನು ವಾಪಾಸು ಪಡಕೊಳ್ಳದೇ ಇದ್ದ ಪಕ್ಷದಲ್ಲಿ ಸಾದರಿಯವರು ಈಡಿಟ್ಟ ನಗಗಳನ್ನು ಇದೇ 1963ನೆಯ ಇಸವಿ ಫೆಬ್ರವರಿ ತಿಂಗಳ 5ನೆಯ ತಾರೀಕು ಮಂಗಳವಾರ ಅಪರಾಹ್ನ ಗಂಟೆ 3ಕ್ಕೆ ಯೂ ಆನಂತರ ನಮಗೆ ಯುಕ್ತ ಕಂಡ ತಾರೀಖಿನಲ್ಲಿ ನೋಟೀಸು ಶಿವಾಯಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

| ಜಂಬ್ರಾ ನಂಬ್ರ | ಸಾಲದ ನಂಬ್ರ | ಸಾಲ ಪಡೆದವರ ಹೆಸರು | ಸಾಲದ ಮೊಬಲಗು |
|---|---|---|---|
| 1 | 83/61 | ಯು. ಕೇಶವ ಪ್ರಭು, ಶ್ರೀನಿವಾಸ ಪ್ರಭುಗಳ ಮಗ, ಪಾರ್ಟನರ್—ಕೋಲ್ ಕಾರ್ಲ್ಸ್ ಮೆಟಲ್ ವೇರ್, ರಥಬೀದಿ ಉಡುಪಿ | 1000=00 |
| 2 | 206/61 | ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟಮನೆ ಗುಂಡಿಬೈಲು ಉಡುಪಿ. | 120=00 |
| 3 | 254/61 | ಕೆ. ಸಚ್ಚಿದಾನಂದ ಶೆಟ್ಟಿ ಹಿರಿಯಣ್ಣ ಶೆಟ್ಟರ ಮಗ C/o ಮಣಿಪಾಲ ಪವರ್ ಪ್ರೆಸ್ ಮಣಿಪಾಲ. | 165=00 |
| 4 | 346/61 | ಯು. ದತ್ತಾತ್ರೇಯ ಶೇಟ್, ವೆಂಕಟ್ರಮಣ ಶೇಟರ ಮಗ, ತೆಂಕಪೇಟೆ, ಉಡುಪಿ. | 160=00 |
| 5 | 366/61 | ತಾರಾನಾಥ ಹೆಗ್ಡೆ, ವಿಟ್ಠಲ ಹೆಗ್ಡೇರ ಮಗ, ಮೂಡಬೆಟ್ಟು ಮನೆ, ಹಿರೇಬೆಟ್ಟು ಗ್ರಾಮ, ಹಿರಿಯಡ್ಕ ಪೋಸ್ಟ್, ದ. ಕ. | 430=00 |
| 6 | 390/61 | ಸುದಾಮ ಶೆಟ್ಟಿ, ದೇಜಪ್ಪ ಶೆಟ್ಟರ ಮಗ, ಮಣಿಪುರ ಗ್ರಾಮ, ಉಡುಪಿ ತಾಲೂಕು, ಮಣಿಪುರ ಪೋಸ್ಟ್, ದ.ಕ. | 400=00 |
| 7 | 15/62 | ಪಟ್ಟಾಭಿರಾಮ ಮುದ್ದಿ, ಕೃಷ್ಣಯ್ಯ ಮುದ್ದಿಯರ ಮಗ, ಕೊಕ್ಕರ್ಣೆ ಗ್ರಾಮ, ಉಡುಪಿ ತಾಲೂಕು, ಕೊಕ್ಕರ್ಣೆ ಪೋಸ್ಟ್, ದ. ಕ. | 400=00 |
| 8 | 28/62 | ವ್ಯಾಸ ಕುಮಾರ ಕುಂಜೂರು, ಮಾಲಕ, "ಇಲೆಕ್ಟ್ರೊ ನಿಕ್ಸ್" ಮಾರುತಿ ರಸ್ತೆ, ಉಡುಪಿ. | 285=00 |
| 9 | 46/62 | ಯಶೋದಮ್ಮ, ಮೂರ್ಪಳ್ಳಿ ಗುರುರಾಜಾಚಾರ್ಯರ ಹೆಂಡತಿ, ಕೋಳದ ಪೇಟೆ, ಉಡುಪಿ. | 300=00 |
| 10 | 47/62 | ಯಶೋದಮ್ಮ ಮೂರ್ಪಳ್ಳಿ, ಗುರುರಾಜಾಚಾರ್ಯರ ಹೆಂಡತಿ, ಕೋಳದ ಪೇಟೆ, ಉಡುಪಿ. | 350=00 |
| 11 | 84/62 | ವ್ಯಾಸ ಕುಮಾರ ಕುಂಜೂರ್, ರಾಮಚಂದ್ರರಾವ್ ಕುಂಜೂರರ ಮಗ, "ಅನಂತ ನಿವಾಸ್", ಗುಂಡಿಬೈಲು, ಉಡುಪಿ. | 140=00 |
| 12 | 158/62 | ಯು. ರಾಮದಾಸ ಪೈ, ಶ್ರೀನಿವಾಸ ಪೈಗಳ ಮಗ, C/o ಕೋಲ್ ಕಾರ್ಲ್ಸ್ ಮೆಟಲ್ ವೇರ್, ರಥಬೀದಿ, ಉಡುಪಿ, | 500=00 |
| 13 | 181/62 | ಕಾಳಿಂದಿ ಬಾಯಿ C/o. ಚಂದು ಬಾಯಿ ಭಂಡಾರಿ ಓಣಿ ಉಡುಪಿ. | 50=00 |
| 14 | 218/62 | ಕೆ. ರಾಘವ ಆಚಾರ್ಯ, ಶಂಕರಯ್ಯ ಆಚಾರ್ಯರ ಮಗ, ಬಳಕಾಡು, ಉಡುಪಿ. | 100=00 |
| 15 | 227/62 | ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟಮನೆ, ಗುಂಡಿಬೈಲು, ಉಡುಪಿ. | 1250=00 |
| 16 | 243/62 | ಬಿ ಎಸ್. ಸುಬ್ಬಯ್ಯ ರೈ, ವೆಂಕಪ್ಪ ರೈಗಳ ಮಗ, ಬೊಮ್ಮರಬೆಟ್ಟು ಗ್ರಾಮ, ಹಿರಿಯಡ್ಕ ಪೋಸ್ಟ್, ದ.ಕ. | 410=00 |
| 17 | 260/62 | ಕೆ. ಗಣಪತಿ ಭಂಡಾರ್ಕಾರ್, ಕೆ. ಶಾಂತಪ್ಪ ಭಂಡಾರ್ಕಾರ್‌ರ ಮಗ, C/o. ಎಲ್. ಐ ಸಿ. ಆಫ್ ಇಂಡಿಯಾ, ಉಡುಪಿ. | 150=00 |
| 18 | 311/62 | ಎಫ್. ಎಚ್. ಅರಬಿ, C/o. ಎಂ. ನಾಸಿರ್ ಸಾಹೇಬ್ ಎಂ. ಜಿ. ಎಂ. ಕಾಲೇಜಿನ ಎದುರುಗಡೆ ಉಡುಪಿ. | 250=00 |
| 19 | 323/62 | ಯು. ರಾಮರಾಯ ಕಾರಂತ್, ಲಕ್ಷ್ಮೀನಾರಾಯಣ ಕಾರಂತರ ಮಗ, ಉದ್ಯಾವರ ಪೋಸ್ಟ್, ದ. ಕ. | 150=00 |
| 20 | 365/62 | ಎ. ಸಂಜೀವ ಶೆಟ್ಟಿ, ತೀನ ಶೆಟ್ಟರ ಮಗ, ಬಡಗುಮನೆ, ಅಲೆವೂರು, ಉಡುಪಿ ತಾಲೂಕು, ಅಲೆವೂರು ಪೋಸ್ಟ್, ದ.ಕ. | 350=00 |

ಉಡುಪಿ, (*Sd*) K. B. Rama Rao.
19—1—1963. ಏಜಂಟ್.

## ದೇಶವೇ ದೇಗುಲ; ದುಡಿಮೆಯೇ ದೇವರು

# WHEN NEHRU LEADS VICTORY IS OURS

"REVERE THE ETERNAL VEDAS AND READ THE MORALE-BUILDING MAHABHARATHA."

## LAXMAN BABANI PAI MEMORIAL PUBLICATIONS,

Ghodke Building, Jaichamrajnagar, HUBLI.

*Laxman Babani Pai Memorial Publications,*
**MANIPAL.** (S. Kanara)

As you may be knowing, we have undertaken the publication of the RIG VEDA in sixteen volumes, the complete and unabridged MAHABHARATA with 1,00,000 original Sanskrit Shlokas by Lord Krishna Dvaipayana Veda Vyasa Maharshi in fifty volumes, the ATHARVA VEDA in seven volumes, the YAJUR VEDA in five volumes and the SAMA VEDA in two volumes. In all these (16 + 50 + 7 + 5 + 2=80) eighty volumes, the original Sanskrit text is given in beautiful Kannada script and the most authentic translation in sweet Kannada language. In the Vedic volumes in addition, the most scientific and traditional method of chanting the Mantras is given by appropriate and ancient notations.

All these volumes are being published at the rate of one volume for every four months. Each volume in calico bound with an attractive jacket and has about 200 to 500 large, i. e. demy octavo ivorywhite pages. Even though the individual volumes are not sold, as a rule, the price of these volumes varies from Rs. 5/- to Rs. 8/- per volume and the postal charges to send these to any destination in India by Registered Parcel vary from Re. 1/- to Rs. 2/- per volume. Thus the total cost inclusive of the Postal Charges of the WHOLE SET OF EIGHTY VOLUMES OF VEDAS AND MAHABHARATA when published, comes to more than six hundred (600) rupees.

To facilitate the publication of these FAMOUS VOLUMES, we are enrolling LIFE MEMBERS, i. e. those every one of whome sends us once for all IN ADVANCE, a pre-publication-price amount of Rs. 200/- (two hundred rupees) only, by money order. No Further amount whatsoever need be sent in furture. These Life Members are entitled to be presented with a copy of all these PRICELESS EIGHTY VOLUMES by Registered Post to their residential address itself, at our cost, as and when these are published in accordance with our above scheme. Immediately we receive the full amount of Rs. 200/- by M. O, we shall send the *EIGHT VOLUMES ALREADY PUBLISHED:*—1. Rig Vada part 1; 2. Mahabharata part 1; 3. Atharva Veda part I; 4. Mahabharata part II; 5. Mahabharata part III; 6. Rig Veda part II; 7. Mahabharata part IV and 8. Mahabharata part V. The subsequent volumes are in the press.

Hereby, we cordially invite you, in person, to extend your co-operating hand to us in this endeavour by becoming our esteemed Life Member by sending us *by M. O. Rs. 200/. (two hundred rupees)* and thus evince your indestructible faith in these eighty volumes of Vedas and Mahabharata representing the best that our glorious ancestors have left us as the precious heritage. Please see that these no-where-else-available (Sanskrit-Kannada) volumes of Vedas and Mahabharata by their very presence, radiate the homes with happiness, peace and plenty. Also, PLEASE NOTE THAT YOUR NAME WILL BE MADE IMMORTAL BY BEING PRINTED IN ALL THESE ETERNAL VOLUMES OF VEDAS AND MAHABHARATA.

Therefore, may we invite you once again to become our esteemed Life Member by sending us two hundred rupees (Rs. 200/-) by M. O. *at your earliest,* as we are going to increase the Life Membership amount to Rs. 250/- (two hundred and fifty rupees) in the near future?

## TO COMMEMORATE SWAMI VIVEKANANDA CENTENARY YEAR

To commemorate Swami Vivekananda Centenary Year (1962—1963), a 10% (ten per cent) centenary-rebate is offered to you, if you become our Life Member by sending this typed portion along with your remittance of Rs 180/- (one hundred and eighty rupees) by M. O or by Crossed Cheque or Bank Draft, IMMEDIATELY (i. e. within THIRTY DAYS OF THE SEEING OF THIS ADVT.) From the rest, a 10% will be contributed ON YOUR BEHALF, to the NATIONAL DEFENCE FUND.

## ಹೊಸ ವರ್ಷದ ಕೊಡುಗೆ

— ಠೇವಣಾತಿ ಬಡ್ಡಿ ದರಗಳ ಹೆಚ್ಚಳ —

| | | |
|---|---|---|
| 1ರಿಂದ 2 ತಿಂಗಳ ವರೆಗೆ | — | 4½% |
| 3 ,, 11 ,, ,, | — | 4¾% |
| 12 ,, 23 ,, ,, | — | 5% |
| 24 ,, 35 ,, ,, | — | 5¼% |
| 36 ,, 60 ,, ,, | — | 5½% |

ರೂ. 5,000/- ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ 5½%ಗೆ ಮೀರದಂತೆ ¼% ಹೆಚ್ಚಿನ ಬಡ್ಡಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

# ದಿ ವಿಜಯ ಬೇಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ರೂಪಾಯಿ ಎರಡು ಕೋಟಿಗೂ ಮಿಕ್ಕಿದ ಚಲಾವಣಾ ಸಂಪತ್ತು.



## ಜನವರಿ 26 ಪವಿತ್ರ ದಿನ—

— ಪ್ರಜಾರಾಜ್ಯ ದಿನ —

ಭಾರತದಿಂದ ಚೀನೀಯರನ್ನು ಹೊರತಳ್ಳುವ ವರೆಗೆ ವಿಶ್ರಾಂತಿ ಪಡೆಯುವುದಿಲ್ಲವೆಂದು ಪ್ರತಿಜ್ಞೆ ಮಾಡೋಣ.

ದೇಶದ ಪ್ರಗತಿಗಾಗಿಯೂ ವೈಯ್ಯಕ್ತಿಕ ಉನ್ನತಿಗಾಗಿಯೂ ಅವಿಶ್ರಾಂತವಾಗಿ ದುಡಿಯೋಣ.

**ಸರ್ವರಿಗೂ ಪ್ರಜಾರಾಜ್ಯೋತ್ಸವದ ಶುಭಾಶಯಗಳು!**

— ಸಾರ್ವಜನಿಕರ ಸೇವೆಯಲ್ಲಿ —

# ಗೋವಾ ಸ್ಟೋರ್ಸ್ & ಬೇಕರಿ

ಕೆಥೋಲಿಕ್ ಸೆಂಟರ್ — — ಉಡುಪಿ



*For your requirements in:*

School and College Books

Books on Current Day Politics and fiction etc·

Stationery and office requisites

Paper and Printer's Sundries

*The Reputed Firm in South Kanara*

# School Book Co.

**BookSellers — Publishers — Stationers**

## PRINCIPAL PAPER DEALERS

| *Head Office:* | *Branch Office:* |
|---|---|
| CAR STREET | K. S.RAO ROAD HAMPANKATTA |
| MANGALORE | MANGALORE |
| Phone No. 229 | Phone No. 229 A |

*Distributors for:*

**The Mysore Paper Mills, Ltd.**

BHADRAVATHI

(For S. Kanara & N. Malabar)

*Agents of:*

**Ganges Printing Ink Factory, Ltd.**

HOWRAH


## THE KARNATAKA BANK LIMITED UDIPI S. K·

Registered Office: MANGALORE-3

## ದಿ ಕರ್ಣಾಟಕ ಬೇಂಕ್ ಲಿಮಿಟೆಡ್, ಉಡುಪಿ, ದ.ಕ.

(ರಿಜಿಸ್ಟರ್ಡ್ ಆಫೀಸು: ಮಂಗಳೂರು-3

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತವಾಯಿದೆಗೆ ಅಸಲು, ಬಡ್ಡಿ ವಗೈರೆ ಪಾವತಿ ಮಾಡದೇ ಬಾಕಿ ಮಾಡಿಕೊಂಡಿರುವುದರಿಂದ ಸದರಿ ಸಾಲಗಳನ್ನು ವಸೂಲು ಮಾಡುವರೇ ಅವರಿಗೆ ರಿಜಿಸ್ಟ್ರಿ ನೋಟೀಸುಗಳನ್ನು ಬಿಟ್ಟಿದ್ದರೂ (ಕೆಲವು ನೋಟೀಸುಗಳು ಬೇರೆ ಬೇರೆ ಕಾರಣಗಳಿಗಾಗಿ ವಾಪಾಸು ಬಂದಿದ್ದು) ಕೂಡಾ ಸದ್ರಿ ಈಡಿಟ್ಟ ನಗಗಳನ್ನು ಬಿಡಿಸದೆ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಇದೇ 1963ನೆಯ ಇಸವಿ ಫೆಬ್ರವರಿ ತಿಂಗಳ 2ನೇ ತಾರೀಖಿನ ಪೂರ್ವಾಹ್ನ 12 ಗಂಟೆಯ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ವಗೈರೆ ಬಾಕಿಗಳನ್ನು ಸಲ್ಲಾಯಿಸಿ ನಗಗಳನ್ನು ವಾಪಾಸು ಪಡಕೊಳ್ಳದೇ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ಇದೇ 1963ನೆಯ ಇಸವಿ ಫೆಬ್ರವರಿ ತಿಂಗಳ 5ನೆಯ ತಾರೀಕು ಮಂಗಳವಾರ ಅಪರಾಹ್ನ ಗಂಟೆ 3ಕ್ಕೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಖಿನಲ್ಲಿ ನೋಟೀಸು ಶಿವಾಯಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

| ಜಂಜಾಬ್ರ ನಂಬ್ರ | ಸಾಲದ ನಂಬ್ರ | ಸಾಲ ಪಡೆದವರ ಹೆಸರು | ಸಾಲದ ಮೊಬಲಗು |
|---|---|---|---|
| 1 | 83/61 | ಯು. ಕೇಶವ ಪ್ರಭು, ಶ್ರೀನಿವಾಸ ಪ್ರಭುಗಳ ಮಗ, ಪಾರ್ಟನರ್—ಕೋಲ್‌ಕಾರ್ಸ್ ಮೆಟಲ್‌ವೇರ್ ರಥಬೀದಿ ಉಡುಪಿ | 1000=00 |
| 2 | 206/61 | ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟಮನೆ ಗುಂಡಿಬೈಲು ಉಡುಪಿ. | 120=00 |
| 3 | 254/61 | ಕೆ. ಸಚ್ಚಿದಾನಂದ ಶೆಟ್ಟಿ ಹಿರಿಯಣ್ಣ ಶೆಟ್ಟರ ಮಗ C/o ಮಣಿಪಾಲ ಪವರ್ ಪ್ರೆಸ್ ಮಣಿಪಾಲ. | 165=00 |
| 4 | 346/61 | ಯು. ದತ್ತಾತ್ರೇಯ ಶೇಟ್, ವೆಂಕಟ್ರಮಣ ಶೇಟರ ಮಗ, ತೆಂಕಪೇಟೆ, ಉಡುಪಿ. | 160=00 |
| 5 | 366/61 | ತಾರಾನಾಥ ಹೆಗ್ಡೆ, ವಿಟ್ಠಲ ಹೆಗ್ಡೇರ ಮಗ, ಮೂಂಬೆಟ್ಟು ಮನೆ, ಹಿರೇಬೆಟ್ಟು ಗ್ರಾಮ, ಹಿರಿಯಡ್ಕ ಪೋಸ್ಟ್, ದ. ಕ. | 430=00 |
| 6 | 390/61 | ಸುಬ್ರಾಮ ಶೆಟ್ಟಿ, ದೇಜಪ್ಪ ಶೆಟ್ಟರ ಮಗ, ಮಣಿಪುರ ಗ್ರಾಮ, ಉಡುಪಿ ತಾಲೂಕು, ಮಣಿಪುರ ಪೋಸ್ಟ್, ದ. ಕ. | 400=00 |
| 7 | 15/62 | ಪಟ್ಟಾಭಿರಾಮ ಮುದ್ರಿ, ಕೃಷ್ಣಯ್ಯ ಮುದ್ರಿಯರ ಮಗ, ಕೊಕ್ಕರ್ಣೆ ಗ್ರಾಮ, ಉಡುಪಿ ತಾಲೂಕು, ಕೊಕ್ಕರ್ಣೆ ಪೋಸ್ಟ್, ದ. ಕ. | 400=00 |
| 8 | 28/62 | ವ್ಯಾಸ ಕುಮಾರ ಕುಂಜೂರು, ಮಾಲಕ, ಇಲೆಕ್ಟ್ರಿಕ್ಸ್ " ಮಾರುತಿ ರಸ್ತೆ, ಉಡುಪಿ. | 265=00 |
| 9 | 46/62 | ಯಶೋದಮ್ಮ, ಮಾರ್ಪಳ್ಳಿ ಗುರುರಾಜಾಚಾರ್ಯರ ಹೆಂಡತಿ, ಕೋಳದ ಪೇಟೆ, ಉಡುಪಿ. | 360=00 |
| 10 | 47/62 | ಯಶೋದಮ್ಮ ಮಾರ್ಪಳ್ಳಿ ಗುರುರಾಜಾಚಾರ್ಯರ ಹೆಂಡತಿ, ಕೋಳದ ಪೇಟೆ, ಉಡುಪಿ. | 350=00 |
| 11 | 84/62 | ವ್ಯಾಸ ಕುಮಾರ ಕುಂಜೂರ್, ರಾಮಚಂದ್ರರಾವ್ ಕುಂಜೂರರ ಮಗ, "ಅನಂತ ನಿವಾಸ್", ಗುಂಡಿಬೈಲು, ಉಡುಪಿ. | 140=00 |
| 12 | 158/62 | ಯು. ರಾಮದಾಸ ಪೈ, ಶ್ರೀನಿವಾಸ ಪೈಗಳ ಮಗ, C/o ಕೋಲ್‌ಕಾರ್ಸ್ ಮೆಟಲ್‌ವೇರ್, ರಥಬೀದಿ, ಉಡುಪಿ, | 500=00 |
| 13 | 181/62 | ಕಾಳಿಂದಿ ಬಾಯಿ C/o. ಚಂದು ಬಾಯಿ ಭಂಡಾರಿ ಓಣಿ ಉಡುಪಿ. | 50=00 |
| 14 | 218/62 | ಕೆ. ರಾಘವ ಆಚಾರ್ಯ, ಶಂಕರಯ್ಯ ಆಚಾರ್ಯರ ಮಗ, ಒಳಕಾಡು, ಉಡುಪಿ. | 100=00 |
| 15 | 227/62 | ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟಮನೆ, ಗುಂಡಿಬೈಲು, ಉಡುಪಿ. | 1250=00 |
| 16 | 243/62 | ಬಿ ಎಸ್. ಸುಬ್ರಾಯ ರೈ, ವೆಂಕಪ್ಪ ರೈಗಳ ಮಗ, ಬೊಮ್ಮರಬೆಟ್ಟು ಗ್ರಾಮ, ಹಿರಿಯಡ್ಕ ಪೋಸ್ಟ್, ದ.ಕ. | 410=00 |
| 17 | 260/62 | ಕೆ. ಗಣಪತಿ ಭಂಡಾರ್‌ಕಾರ್, ಕೆ. ಶಾಂತಪ್ಪ ಭಂಡಾರ್‌ಕಾರರ ಮಗ, C/o. ಎಲ್. ಐ. ಸಿ. ಆಫೀಸ್ ಇಂಡಿಯಾ, ಉಡುಪಿ. | 150=00 |
| 18 | 311/62 | ಎಸ್. ಎಚ್. ಅರಬಿ, C/o. ಎಂ. ಸಾಹಿಬ್ ಸ್ವದೇಶಿ ಎಂ. ಜಿ. ಎಂ. ಕಾಲೇಜಿನ ಎದುರುಗಡೆ ಉಡುಪಿ. | 250=00 |
| 19 | 323/62 | ಯು. ರಾಮರಾಯ ಕಾರಂತ್, ಲಕ್ಷ್ಮೀನಾರಾಯಣ ಕಾರಂತರ ಮಗ, ಉದ್ಯಾವರ ಪೋಸ್ಟ್, ದ. ಕ. | 150=00 |
| 20 | 365/62 | ಎ. ಸಂಜೀವ ಶೆಟ್ಟಿ, ಶೀನ ಶೆಟ್ಟರ ಮಗ, ಬನಗುಮನೆ, ಆತ್ರಾಡಿ, ಉಡುಪಿ ತಾಲೂಕು, ಆತ್ರಾಡಿ ಪೋಸ್ಟ್, ದ. ಕ. | 350=00 |

ಉಡುಪಿ, (*Sd*) K· B· Rama Rao·
19—1—1963· ಏಜಂಟ್.

## ದೇಶವೇ ದೇಗುಲ; ದುಡಿಮೆಯೇ ದೇವರು

# WHEN NEHRU LEADS VICTORY IS OURS

"REVERE THE ETERNAL VEDAS AND READ THE MORALE-BUILDING MAHABHARATHA."

**LAXMAN BABANI PAI MEMORIAL PUBLICATIONS,**
Ghodke Building, Jaichamrajnagar, HUBLI.

*Laxman Babani Pai Memorial Publications,*
**MANIPAL.** (S. Kanara)

As you may be knowing, we have undertaken the publication of the RIG VEDA in sixteen volumes, the complete and unabridged MAHABHARATA with 1,00,000 original Sanskrit Shlokas by Lord Krishna Dvaipayana Veda Vyasa Maharshi in fifty volumes, the ATHARVA VEDA in seven volumes, the YAJUR VEDA in five volumes and the SAMA VEDA in two volumes. In all these (16 + 50 + 7 + 5 + 2=80) eighty volumes, the original Sanskrit text is given in beautiful Kannada script and the most authentic translation in sweet Kannada language. In the Vedic volumes in addition, the most scientific and traditional method of chanting the Mantras is given by appropriate and ancient notations.

All these volumes are being published at the rate of one volume for every four months. Each volume in calico bound with an attractive jacket and has about 200 to 500 large, i. e. demy octavo ivorywhite pages. Even though the individual volumes are not sold, as a rule, the price of these volumes varies from Rs. 5/- to Rs. 8/- per volume and the postal charges to send these to any destination in India by Registered Parcel vary from Re. 1/- to Rs. 2/- per volume. Thus the total cost inclusive of the Postal Charges of the WHOLE SET OF EIGHTY VOLUMES OF VEDAS AND MAHABHARATA when published, comes to more than six hundred (600) rupees.

To facilitate the publication of these FAMOUS VOLUMES, we are enrolling LIFE MEMBERS, i. e. those every one of whome sends us once for all IN ADVANCE, a pre-publication-price amount of Rs. 200/- (two hundred rupees) only, by money order. No Futther amount whatsoever need be sent in furture. These Life Members are entitled to be presented with a copy of all these PRICELESS EIGHTY VOLUMES by Registered Post to their residential address itself, at our cost, as and when these are published in accordance with our above scheme. Immediately we receive the full amount of Rs. 200/- by M. O, we shall send the *EIGHT VOLUMES ALREADY PUBLISHED:*—1. Rig Vada part I; 2. Mahabharata part I; 3. Atharva Veda part I; 4. Mahabharata part II; 5. Mahabharata part III; 6. Rig Veda part II; 7. Mahabharata part IV and 8. Mahabharata part V. The subsequent volumes are in the press.

Hereby, we cordially invite you, in person, to extend your co-operating hand to us in this endeavour by becoming our esteemed Life Member by sending us *by M. O. Rs. 200/. (two hundred rupees)* and thus evince your indestructible faith in these eighty volumes of Vedas and Mahabharata representing the best that our glorious ancestors have left us as the precious heritage. Please see that these no-where-else-available (Sanskrit-Kannada) volumes of Vedas and Mahabharata by their very presence, radiate the homes with happiness, peace and plenty. Also, PLEASE NOTE THAT YOUR NAME WILL BE MADE IMMORTAL BY BEING PRINTED IN ALL THESE ETERNAL VOLUMES OF VEDAS AND MAHABHARATA.

Therefore, may we invite you once again to become our esteemed Life Member by sending us two hundred rupees (Rs. 200/-) by M. O. *at your earl est,* as we are going to increase the Life Membership amount to Rs. 250/- (two hundred and fifty rupees) in the near future?

## TO COMMEMORATE SWAMI VIVEKANANDA CENTENARY YEAR

To commemorate Swami Vivekananda Centenary Year (1962—1963), a 10% (ten per cent) centenary rebate is offered to you, if you become our Life Member by sending this typed portion along with your remittance of Rs 180/- (one hundred and eighty rupees) by M. O or by Crossed Cheque or Bank Draft, IMMEDIATELY (i. e. within THIRTY DAYS OF THE SEEING OF THIS ADVT.) From the rest, a 10% will be contributed ON YOUR BEHALF, to the NATIONAL DEFENCE FUND.

# ಪ್ರಜಾಪ್ರಭುತ್ವ ದಿನದ ಶುಭಾಶಯಗಳು

# ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಪ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ. ಬಡ್ಡಿ ಶೇಕಡ 5ರಂತೆ; ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕ ಪ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು:
ಬಡ್ಡಿ ಶೇಕಡ 5½ ರವರೆಗೆ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3ರಂತೆ.
ಯಾವತ್ತೂ ನಿರ್ಬಂಧಗಳಿಲ್ಲದೆ ಮರುಪಾವತಿ ಪಡೆಯುವ ಸೌಲಭ್ಯ.

## ರೂ. 1 ಕೋಟಿಗೂ ಮಿಕ್ಕಿದ ಠೇವಣಾತಿಗಳು

ಶಾಖೆಗಳು:

ಮಂಗಳೂರು, ಬೆಂಗಳೂರು, ಬೇಲೂರು, ಶಿವಮೊಗ್ಗ,
ಭದ್ರಾವತಿ, ತುಮಕೂರು, ಕುಣಿಗಲ್, ಉಡುಪಿ,
ಕಾಸರಗೋಡು, ಇತ್ಯಾದಿ.

# THE PANGAL NAYAK BANK LIMITED

REGISTERED OFFICE: UDIPI ESTD: 1920

Regd No B. G. 176
LICENCE No. 31
Licensed to Post without Prepayment

ನಿಮ್ಮ ಉಳಿತಾಯದ ಪ್ರತಿಯೊಂದು ಕಾಸೂ
ತಾಯಿನೆಲವನ್ನು ಆಕ್ರಮಣದಿಂದ ಕಾಪಾಡಲು ಕಾದುವ
ಯೋಧರಲ್ಲಿ ಹೊಸ ಕೆಚ್ಚನ್ನು ಕೆರಳಿಸಬಲ್ಲುದು.

ನಿಮ್ಮ ಉಳಿತಾಯ ರಾಷ್ಟ್ರದ ರಕ್ಷಣೆಯ ಅಭಿಪಾಯ

**ಸಿಂಡಿಕೇಟ್ ಬ್ಯಾಂಕ್** ಇವರ ಪ್ರಕಟಣೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K H Shetty at the Navayuga Press, Udipi, S India

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 21 | ಉಡುಪಿ, 31—1—1963 ಗುರುವಾರ | ಸಂಪುಟ ೪೨ ಸಂಚಿಕೆ ೨೧


ವಿವಾದ ಪರಿಹಾರಕ್ಕೆ

## ಚೀನೀಯರಲ್ಲಿ ಉತ್ಸಾಹವಿಲ್ಲ?

ಜಗತ್ತಿಗೆ ಜಗತ್ತೇ ಎದುರು ನೋಡುತ್ತಿದ್ದ ಷಟ್ ರಾಷ್ಟ್ರಗಳ ಕೊಲಂಬೊ ಸಮ್ಮೇಳನದ ಗೊತ್ತುವಳಿಯು ಈಗ ಸಂಪೂರ್ಣ ಬಹಿರಂಗವಾಗಿದೆ. ಈ ಗೊತ್ತುವಳಿಯು ಚೀನೀಯರಿಗೆ ಪರವಾಗಿದೆಯೆಂದು ಕೆಲವರು ಅಂದುಕೊಂಡಿದ್ದರೂ ಪ್ರಧಾನಿ ನೆಹರೂರವರು ಹೇಳುವಂತೆ ಅದು ಭಾರತೀಯರ ನಿಲುವನ್ನು ಸಂಪೂರ್ಣವಾಗಿ ಬೆಂಬಲಿಸಿದೆ; ಈ ಕಾರಣದಿಂದಲೇ ಇರಬಹುದು, ಭಾರತವು ಸಮ್ಮೇಳನದ ಸೂಚನೆಗಳನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬರಲು ಮುಂದೆ ಬಂದಿದ್ದರೂ ಚೀನವು ಅವನ್ನು ತತ್ವಶಃ ಒಪ್ಪಿಕೊಂಡಿದೆ ಮಾತ್ರ.

### ಕೊಲಂಬೋ ಸೂಚನೆಗಳು

ಕೊಲಂಬೋ ಸಮ್ಮೇಳನದ ಸೂಚನೆಗಳಲ್ಲಿ ಸೇನೆಯನ್ನು ಹಿಂದೆ ಕರೆಸುವ, ನಿಸ್ಸೈನ್ಯೀಕೃತ ಪ್ರದೇಶವನ್ನು ನಿರ್ಮಿಸಿ, ವಿವಾದವನ್ನು ಮಾತುಕತೆಗಳ ಮೂಲಕ ಬಗೆಹರಿಸುವ ಆಶಯವು ಹುದುಗಿರುವುದು. ನೇಫಾ ಪ್ರದೇಶದಲ್ಲಿ ಉಭಯ ಸರಕಾರಗಳೂ ಮನ್ನಿಸಿದ 'ಪ್ರತ್ಯಕ್ಷ ನಿಯಂತ್ರಣ ರೇಖೆ' (ಇದು ಮ್ಯಾಕ್ ಮಹೋನ ರೇಖೆಯಿಂದ ಭಿನ್ನವಿರುವುದಿಲ್ಲ) ಯೇ ಯುದ್ಧ ವಿರಾಮ ರೇಖೆಯಾಗುವುದು. ತಂತಮ್ಮ ವಶದಲ್ಲಿ ಉಳಿಯುವ ಪ್ರದೇಶಗಳ ಬಗೆಗೆ ಮುಂದೆ ಚರ್ಚೆ ನಡೆಸಿ ಒಂದು ಶಾಂತಯುತ ನಿರ್ಧಾರಕ್ಕೆ ಉಭಯ ಸರಕಾರಗಳು ಬರಲು ಇದರಿಂದ ಸಾಧ್ಯವಾಗುವುದು. ಮಧ್ಯ ವಿಭಾಗದಲ್ಲಿ ಬಲ ಪ್ರದರ್ಶನಕ್ಕೆ ಇಳಿಯದೆ ಶಾಂತ ರೀತಿಯಿಂದಲೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಸಾಧ್ಯವಿದೆ. ಚೀನೀಯ ಪ್ರಧಾನಿ ಲಾಯ್‌ಯವರು ಭಾರತ ಸರಕಾರಕ್ಕೆ ಕಳೆದ ನವೆಂಬರ ತಿಂಗಳಲ್ಲಿ ಬರೆದಿದ್ದ ಪತ್ರಗಳಲ್ಲಿ ಸೂಚಿಸಿದ್ದ 'ಚೀನೀ ಸೇನೆಯು ಭಾರತ-ಚೀನಾ ಗಡಿಯ ಪಶ್ಚಿಮ ವಿಭಾಗದಲ್ಲಿ (ಲಡಖ್) ೨೦ ಕಿಲೋಮೀಟರುಗಳಷ್ಟು ಹಿಂದೆ ಸರಿಯುವುದು." ಎಂಬ ಅಂಶವನ್ನು ಚೀನಾವು ಕಾರ್ಯಗತಗೊಳಿಸಬೇಕು. ಭಾರತದ ಸೈನ್ಯವು ಈ ವಿಭಾಗದಲ್ಲಿ ಈಗಿರುವ ಸ್ಥಳಗಳಲ್ಲೇ ಉಳಿಯಬೇಕು. ಚೀನೀ ಸೈನ್ಯದ ಹಿನ್ನಡೆಯಿಂದ ತೆರವಾಗುವ ಪ್ರದೇಶವನ್ನು ಗಡಿ ತಂಟೆಯು ಅಂತಿಮವಾಗಿ ಪರಿಹಾರಗೊಳ್ಳುವ ವರೆಗೆ ಸೇನಾರಹಿತ ವಲಯವನ್ನಾಗಿ ಮಾಡಿ, ಅದರ ಆಡಳಿತವನ್ನು ಉಭಯ ಪಕ್ಷಗಳಿಗೂ ಒಪ್ಪಿಗೆಯಾಗುವ ನಾಗರಿಕ ಠಾಣ್ಯಗಳು ನಿರ್ವಹಿಸಬೇಕು. ಇದರಿಂದ ಯಾವುದೇ ಪಕ್ಷದ ಹಕ್ಕಿಗೂ ವ್ಯತ್ಯಯ ಬರಬಾರದು. ಪರಿಷತ್ತಿನ ಸೂಚನೆಯನ್ನು ಸ್ವೀಕರಿಸಿದುದರಿಂದ ಸಂಬಂಧಿಸಿದ ಪ್ರದೇಶಗಳ ಮೇಲಿನ ಅಧಿಕಾರಕ್ಕೆ ಯಾವ ಸರಕಾರಕ್ಕೂ ಧಕ್ಕೆ ಬರಬಾರದು.

### ಭಾರತದ ನಿಲುವು

ಕೊಲಂಬೋ ಸೂಚನೆಗಳು ವಿವಾದ ಪರಿಹಾರಕವಲ್ಲ; ಪರಿಹಾರ ಮಾರ್ಗವನ್ನು ಸೂಚಿಸುವುವು ಮಾತ್ರವೆಂದು ಮೊದಲೇ ಹೇಳಲಾಗಿತ್ತು. ಇವುಗಳನ್ನು ಒಪ್ಪಿಕೊಂಡರೆ ಆಗುವ ಪರಿಣಾಮ ಹಾಗೂ ಸ್ಥಿತಿಗಳನ್ನು ಪ್ರಧಾನಿ ನೆಹರು ಲೋಕ ಸಭೆಯಲ್ಲಿ ವಿವರಿಸಿದ್ದಾರೆ. ಭಾರತವು ಚೀನೀ ಸೇನೆಯು ಕಳೆದ ಸೆಪ್ಟಂಬರದಲ್ಲಿ ಇದ್ದಲ್ಲಿಗೆ ಮರಳಬೇಕೆಂಬುದನ್ನು ತನ್ನ ಕನಿಷ್ಠ ಬೇಡಿಕೆಯಾಗಿರಿಸಿದೆ; ಹಾಗಾಗದೆ ಸಂಧಾನದ ಮಾತುಕತೆಯೇ ಇಲ್ಲವೆಂದು ಸಾರಿದೆ. ಕೊಲಂಬೋ ಸೂಚನೆಗಳು ಭಾರತದ ನಿಲುವಿಗೆ ಸಂಪೂರ್ಣ ಅನುಗುಣವಾಗಿರುವುದರಿಂದ ಅವನ್ನು ಒಪ್ಪಿಕೊಂಡರೆ, ಅಗೌರವವಿಲ್ಲವೆನ್ನುತ್ತಾರೆ ನೆಹರು. ಥೋಲಾ ಮತ್ತು ಲಾಂಗ್ಜು ಠಾಣೆಗಳ ಮೇಲೆ ಇಕ್ಕಡೆಯವರೂ ಹೋಗುವಂತಿಲ್ಲ. ಎಂದರೆ ವಾಸ್ತವಿಕವಾಗಿ ನೇಫಾ ಪ್ರದೇಶದಲ್ಲಿ ಥೋಲಾ ಠಾಣ್ಯವು ನಮ್ಮ ಕೈ ಬಿಡುವುದು. ಆದರೆ, ಲಡಖ ಪ್ರದೇಶದಲ್ಲಿಯೂ ಒಂದೆರಡು ಠಾಣ್ಯಗಳನ್ನು ಬಿಟ್ಟುಕೊಡಬೇಕಾಗಿ ಬಂದರೂ, ಅಲ್ಲಿ ಚೀನೀ ಸೇನೆಯು ಅಂತಾರಾಷ್ಟ್ರೀಯ ಗಡಿಯಿಂದಲೂ ಹಿಂದೆ ಸರಿಯುವುದರಿಂದ ಒಟ್ಟಿನಲ್ಲಿ ಭಾರತದ ಬೇಡಿಕೆಗೆ ಅನುಗುಣವಾಗಿಯೇ ಇದೆ. ಆದುದರಿಂದಲೇ ವಿವಾದವನ್ನು ಯುದ್ಧವಿಲ್ಲದೇನೇ ಬಗೆಹರಿಸುವಲ್ಲಿ ಉತ್ಸಾಹ ತೋರಿಸುವ ಶಾಂತಿಪ್ರಿಯ ಭಾರತವು ಅವನ್ನು ಸ್ವೀಕರಿಸಲು ಒಪ್ಪಿದರೆ, ಅದು ಅನುಚಿತವಾಗದು; ಅಲ್ಲದೆ, ತಾನು ಶಾಂತ ವಿಧಾನವನ್ನು ಮನ್ನಿಸಲು ಮುಂದೆ ಬರುವುದರಿಂದ ಅದರ ಗೌರವವೂ ಹೆಚ್ಚುವುದು.

### ಚೀನಾದ ಪ್ರತಿಕ್ರಿಯೆಯೆಲ್ಲಿ?

ಆದರೆ, ಪೀಕಿಂಗಿನ ಪ್ರತಿಕ್ರಿಯೆಯು ಇನ್ನೂ ನಿರ್ಧಾರವಾಗಿ ಬಾರದುಳಿದುದು ನೋಡಿಗರನ್ನು ಚಿಂತೆಗೀಡುಮಾಡುತ್ತದೆ. ಸಮ್ಮೇಳನವನ್ನು ಸೇರಿಸುವಲ್ಲಿ ಹೆಚ್ಚಿನ ಆಸಕ್ತಿ ತಳೆದ ಚೀನಾವು ಅದರ ಸೂಚನೆಗಳನ್ನು ಇನ್ನೂ ತತ್ವಶಃ ಮಾತ್ರ ಒಪ್ಪಿದೆಯಲ್ಲದೆ ಸಂಪೂರ್ಣವಾಗಿ ಅಲ್ಲ. ಶಾಂತಿಯ ನೋಗನ್ನು ಹಾಕಿಯೇ ಆಕ್ರಮಣದ ಕತ್ತಿ ಹಿರಿದ ಚೀನದ ನೀತಿಯಲ್ಲಿ ಸ್ಥಿರತೆಯೆಂಬುದಿಲ್ಲವೆಂದು ಈಗಾಗಲೇ ಜಗಜ್ಜಾಹೀರು ಆಗಿದೆ. ಇದಕ್ಕೆ ಅವರ ದಿನದಿನಕ್ಕೆ ಬದಲಾಗುತ್ತಿರುವ ನೈಜ ನಿಯಂತ್ರಣ ರೇಖೆಯೇ ಸಾಕ್ಷಿ. ಆದ್ದರಿಂದ ಭಾರತ ಸರಕಾರವು ಈ ದಿಸೆಯಲ್ಲಿ ಯಾವುದೇ ನಿರ್ಧಾರವನ್ನು ಸಂಸತ್ತಿನ ಮುಂದಿಡಲು ತವಕಪಡುತ್ತಿಲ್ಲ; ಬದಲು ತಾನು ಕೊಲಂಬೊ ಸೂಚನೆಗಳಿಗೆ ಅನುಕೂಲ ಪ್ರತಿಕ್ರಿಯೆಯನ್ನು ತೋರಿಸುತ್ತಿದೆ ಮಾತ್ರ; ಅಂದರೆ, ಚೀನವು ಇವುಗಳನ್ನು ಸಂಪೂರ್ಣವಾಗಿ ಒಪ್ಪಿದರೆ, ಮಾತುಕತೆಯನ್ನು ನಡೆಸಲು ಭಾರತವು ಸಮ್ಮತಿಸುವ ಇರಾದೆಯಿಂದಿದೆ.

### ದ್ವಿಮುಖ ನಿಷ್ಠತೆ

ಚೀನಾವು ನಿಜವಾಗಿ ಶಾಂತರೀತಿಯಿಂದ ವಿವಾದವನ್ನು ಪರಿಹರಿಸುವ ಆಶೆಯುಂದಿರುವುದಾದರೆ, ಅದು ಕೊಲೊಂಬೋ ಸಮ್ಮೇಳನದ ಸೂಚನೆಗಳನ್ನು ಸಂಪೂರ್ಣ ಒಪ್ಪಬೇಕು; ಮತ್ತು ಅವುಗಳನ್ನು ಕಾರ್ಯಗತಗೊಳಿಸಬೇಕು. ಇದಕ್ಕದು ಸಿದ್ಧವಿಲ್ಲವೆಂದಾದರೆ, ವಿವಾದ ವಿವಾದವಾಗಿಯೇ ಉಳಿಯುವುದು; ಶಕ್ತಿ ಪ್ರದರ್ಶನವೂ ಅವಶ್ಯಕವಾದೀತು. ಆದುದರಿಂದ, ಭಾರತವು ತನ್ನ ಸಮಗ್ರತೆಗಾಗಿ ದ್ವಿಮುಖ ಕಾರ್ಯನೀತಿಯನ್ನು ಮುಂದುವರಿಸಬೇಕು. ಒಂದು ಕಡೆ ಸಮಸ್ಯೆಯನ್ನು ಸಂಧಾನಗಳ ಮೂಲಕ ಬಿಡಿಸುವ ಪ್ರಯತ್ನ ಮುಂದುವರಿಸಬೇಕು; ಮತ್ತೊಂದು ಕಡೆ ತನ್ನ ಸೈನಿಕ ಶಕ್ತಿಯನ್ನೂ ಸಂರಕ್ಷಣಾ ಸಾಮಗ್ರಿಗಳನ್ನೂ ಬೆಳೆಸಿಕೊಳ್ಳಬೇಕು; ಏಕೆಂದರೆ, ಒಂದು ಬಾರಿ ಮೋಸ ಹೋದ ನಾವು ಇನ್ನು ಮುಂದೆಂದಿಗೂ ಹಾಗಾಗಬಾರದು. ಇದಕ್ಕಾಗಿ ತ್ರಿಕರಣ ಶುದ್ಧರಾಗಿ ಶ್ರಮಪಡಬೇಕು.

### ಪರಿಣಾಮವೇನು?

ಕೊಲಂಬೋ ಸಮ್ಮೇಳನವು ಜರಗುವುದಕ್ಕೆ ಪೂರ್ವಭಾವಿಯಾಗಿ ಹರಡಿದ ವರ್ತಮಾನಗಳು ಭಾರತದ ನೀತಿಯನ್ನು ಹೆಚ್ಚಾಗಿ ಬೆಂಬಲಿಸಿದಂತೆ ಕಾಣಲಿಲ್ಲ. ಆದರೆ ಸಮ್ಮೇಳನದ ಕೊನೆಯಲ್ಲಿ ಮಾತ್ರ ತುಸು ಉದಾರ ನೀತಿಯು ತೋರಿಬಂತು. ಇದಕ್ಕೆ ಸಂಯುಕ್ತ ಅರಬ ಪ್ರಜಾ ರಾಜ್ಯದ ನಿಲುವೆಯೇ ಪ್ರೇರಕ ಶಕ್ತಿಯೆಂದು ನಂಬಬಹುದು. ವಿವಾದ ಪರಿಹಾರವೆಂದರೆ, ಇಕ್ಕಡೆಯವರೂ ಅಲ್ಪ ಸ್ವಲ್ಪ ತ್ಯಾಗ ಮಾಡಬೇಕಾಗುತ್ತದೆ. ಕೊಲಂಬೊ ಸಮ್ಮೇಳನವು ಚೀನಾವನ್ನು ಆಕ್ರಮಣಕಾರನೆಂದು ಚೀನವನ್ನು ಕರೆಯುವುದನ್ನು ಮುಂದೆ ಬರದಿದ್ದರೂ ಪರೋಕ್ಷವಾಗಿ ಹಾಗೆಯೇ ಆಡಿದೆಯೆಂದರೂ ತಪ್ಪಾಗದು. ಈ ಸಮ್ಮೇಳನದಿಂದ ಹೆಚ್ಚಿನ ಪ್ರಯೋಜನವಾಗುವ ನಿರೀಕ್ಷೆಯಿಲ್ಲವಾದರೂ ಮಾತುಕತೆಯ ದ್ವಾರವನ್ನು ತೆರೆಯಲು ಪ್ರೇರಕ ಶಕ್ತಿಯಾಗಿ ಪರಿಣಮಿಸಿದರೆ ಅದೇ ಸಾಕು ಎಂದು ತೋರುತ್ತದೆ. ಹೀಗಾದರೆ, ಸಭೆ ಸೇರಿದ ರಾಷ್ಟ್ರಗಳು ಕೃತಜ್ಞತಾರ್ಹರು.

— ಗೋಂಡ.


ದೇಶಕ್ಕಾಗಿ
ರಕ್ತ
ಧನ
ಕನಕ
ದಾನ ಮಾಡಿರಿ.



ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—
**ಹಸುರು ಹಂಸ**
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.


**ಪರಾವಲಂಬನೆ ಬೇಡ; ಪರದೂಷಣೆ ಬೇಡ.**

— ಸ್ವಾಮಿ ವಿವೇಕಾನಂದ

ವಾರದ ಕಥೆ

# ಈಡೇರಿ(ರ)ದ ಬಯಕೆ!

ಶ್ರೀ ಹೆಚ್. ರಾಮಕೃಷ್ಣ ಅಡಿಗ.

‘ಜಿಲ್ಲಾ ವಿದ್ಯಾಧಿಕಾರಿಗಳ ಕಛೇರಿಯಿಂದ’ ಎಂಬ ಅಂಕಿತವನ್ನು ಕವರಿನ ಎಡಗಡೆಯಲ್ಲಿ ನೋಡಿದೊಡನೆ, ಮತ್ತೊಮ್ಮೆ ವಿಳಾಸವನ್ನು ಪರಾಂಬರಿಸಿದೆ. ಹೌದು! ಹೆಸರು ನನ್ನದೇ! ಆದರೆ ಹತ್ತಾರು ಊರನ್ನು ತಿರುಗಿ, ಕೆಂಪು ಕೆಂಪಾಗಿ, ಜೀರ್ಣಾವಸ್ಥೆಗೊಂಡಿದ್ದ ಕವರು, ಕೊನೆಗೂ ನಮ್ಮೂರಿಗೆ ಬಂದು, ನನ್ನ ಕೈ ಸೇರಿದ್ದುದರಿಂದ ನನಗಾದ ಆಶ್ಚರ್ಯ, ಆನಂದ, ಅಷ್ಟಿಷ್ಟಲ್ಲ! ಆದರೆ ಒಳಗೆ ಏನಿರಬಹುದು? ನನ್ನ ಮನಸ್ಸೊಮ್ಮೆ ವಿದ್ಯುಚ್ಛಕ್ತಿಯ ಶಕ್ತಿಯನ್ನು ಥಟ್ಟನೆ ಕಡಿದುಕೊಂಡ ಯಂತ್ರದಂತೆ ನಿಶ್ಚೇಷ್ಟಿತಗೊಂಡಿತು! ಕೂಡಲೇ ಚೇತನಗೊಂಡು ಅರೆತೆರೆದ ಕವರಿನೆಡೆಯಲ್ಲಿ ಕಾಣುವ ಬಿಳಿ ಕಾಗದವನ್ನು ಹೊರಗೆಳೆದು ಬಿಡಿಸಿದೆ!!

"ಬಂಕಾಪುರದ ಜೀವನ ಶಿಕ್ಷಣ ಕನ್ನಡ ಗಂಡು ಮಕ್ಕಳ ಶಾಲೆಗೆ ನಿಮ್ಮನ್ನು ಹೆಡ್‌ಮಾಸ್ಟರನ್ನಾಗಿ ನೇಮಿಸಲಾಗಿದೆ"

ಆಜ್ಞೆಯನ್ನು ಹಿಡಿದು ನಿಂತುಕೊಂಡಿದ್ದ ನನಗೆ ನನ್ನನ್ನೇ ನಂಬಿಕೊಳ್ಳಲಾಗಲಿಲ್ಲ. ‘ಭಾಗ್ಯ ಲಕ್ಷ್ಮಿ’, ಒಲಿದು ಬರುವಾಗ ಮೂರು ಬಾಗಿಲಿನಲ್ಲಿ ಬರುತ್ತಾಳೆ ಎನ್ನುವುದು ಸುಳ್ಳಲ್ಲ. ಆಗ್ಗದಿ ಕೆಲಸ ಕೆಲಸವೆಂದು ಅಲವರಿದು, ಕೊನೆಗೆ ಕೆಲಸವೊಂದು ಸಿಕ್ಕಿ, ಆನಂದದಿಂದ ಕಾಲಕಳೆಯುತ್ತಿರುವಾಗ, ಬಹುದಿನದ ಬಯಕೆಯನ್ನು ನೆರವೇರಿಸುವ, ಜೀವನದ ಧ್ಯೇಯವನ್ನು ಸಾಂಗವಾಗಿ ಸಾಗಗೊಳಿಸುವ ಈ ಆಜ್ಞೆ — ನಿಜಕ್ಕೂ ಈ ಸಂದರ್ಭದಲ್ಲಿ ನನಗೆ ಬೇಡವಿತ್ತು.

ಆರು ವರ್ಷಗಳ ಕೆಳಗೆ ಈ ಆಜ್ಞೆಗಾಗಿ ಎಷ್ಟೊಂದು ಪ್ರಯತ್ನಿಸಿದ್ದೆ! ಕೊನೆಗೂ ನನ್ನಾಸೆಯನ್ನೆಲ್ಲಾ ಬದಿಗೊತ್ತಿ, ನಾನು ಬೇರೆ ದಾರಿಯನ್ನು ಹಿಡಿದಾಗ, ಜೀವನದ ಮೇಲೆ ಎಲ್ಲಿಲ್ಲದ ಬೇಸರಗೊಂಡಿದ್ದೆ. ಎಷ್ಟು ಮಂದಿಯನ್ನು ಹಿಡಿದು ಮಾತಾಡಿದ್ದೆ! ಅದೆಷ್ಟು ಮಂದಿಯ ಮನೆ ಮನೆಗೆ ಅಲೆದಿದ್ದೆ!! ಪ್ರಾಯಃ ಆ ನನ್ನ ಕಷ್ಟಗಳನ್ನೆಲ್ಲಾ ದೇವರು ಇಂದು ಪಾರು ಮಾಡಲು ಮುಂಬಂದಿರಬೇಕು.

ಆಗಲಿ! ‘ಉಪಾಧ್ಯಾಯ ವೃತ್ತಿಯಲ್ಲಿ ಆಗಬೇಕಾದ ಸುಧಾರಣೆಯ ಬಗ್ಗೆ ಹಗಲೂ-ರಾತ್ರಿ ಚಿಂತಿಸಿದ್ದೆ. "ನಿಮ್ಮಂಥ ಪುಣ್ಯವಂತರು ಯಾರು ಸ್ವಾಮಿ! ನಾಳಿನ ಜನಾಂಗವನ್ನು ರೂಪಿಸುವ ಮಹಾ ಶಿಲ್ಪಿಗಳು ನೀವು. ಆ ಮುದ್ದು ಮಕ್ಕಳ ಮುಗ್ಧ ಮನದ ವಿವಿಧ ಮುಖವನ್ನು ಕಾಣುವಾಗ, ನಿಜಕ್ಕೂ ನಿಮಗೊಂದು ಅಮೃತಮಯ ಸನ್ನಿವೇಶ" ಎಂದೆಲ್ಲಾ ಗದ್ಗದಿಸಿದ್ದೆ.

ಆದರೆ ಕೆಲವೊಮ್ಮೆ ಉಪಾಧ್ಯಾಯರ ಬಗ್ಗೆ ಟೀಕಿಸುತ್ತಲೂ ಇದ್ದೆ. "ಇಷ್ಟರ ಉನ್ನತಿಯನ್ನು ನೋಡಿದರೆ ಮತ್ತೊಬ್ಬನಿಗೆ ಸಹಿಸಲಿಕ್ಕಾಗದು. ಒಂದೇ ಶಾಲೆಯಲ್ಲಿ ಅಣ್ಣ ತಮ್ಮಂದಿರಂತೆ ದುಡಿಯುವ ಬದಲು, ಕೌರವ-ಪಾಂಡವರಾದರೆ ನಾಳಿನ ಮಕ್ಕಳ ಗತಿಯೇನು ಬಂತು ಸ್ವಾಮಿ! ಕೇವಲ ಪ್ರತಿಫಲಾಪೇಕ್ಷೆಯಿಂದ ಬೇಜಬ್ದಾರಿಯುತ ಕೆಲಸ ಮಾಡಿದರೆ, ಮಕ್ಕಳಿಗೆ ಕಲಿಯುವ ಅಭಿರುಚಿ ಹೇಗೆ ಬರುತ್ತದೆ" ಹೀಗೆ ಹಂಬಲಿಸಿ, ಹಂಬಲಿಸಿ, ಕೊನೆಗೊಂದು ರಾತ್ರಿಶಾಲೆಯನ್ನಾದರೂ ತೆರೆದು, ಒಂದು ಆದರ್ಶ ವಿದ್ಯಾಲಯವನ್ನು ಖಂಡಿತವಾಗಿ ಮಾಡಲೇಬೇಕೆಂದು ದೃಢವಾಗಿ ನಿರ್ಧರಿಸಿಕೊಂಡಿದ್ದೆ! ಅದೇ ಸಮಯದಲ್ಲಿ ಈ ನೇಮಕ ಆಜ್ಞೆ!

ಇಷ್ಟು ತಡವಾಗಿ? ಇರಬಹುದು. ಕೆಲವೊಮ್ಮೆ ವ್ಯಕ್ತಿಗಳು ಮರಣ ಹೊಂದಿ ನಾಲ್ಕಾರು ವರ್ಷಗಳಾದ ಮೇಲೆ ವರ್ಗಾವರ್ಗಿ ಮಾಡುವುದು, ಮದುವೆ ಮುಗಿದು ಮಕ್ಕಳಾದ ಮೇಲೆ ರಜೆ ಮಂಜೂರಾಗಿ ಬರುವುದು. ರೋಗಿ ಮೃತಪಟ್ಟ ಮೇಲೆ ಆತ ಕೇಳಿದ ಸಾಲವನ್ನು ಕಳಿಸಿಕೊಡುವುದು— ವಿ ಧಾ ನ ಸೌ ಧ ವ ಲ್ಲ— ಸಧಾನ ಸೌ ಧ— ಎಂ ದು ಮುಂ ತಾ ಗಿ ಪತ್ರಿಕೆಗಳಲ್ಲಿ ಓದಿದ ನನಗೆ ಆರು ವರ್ಷದ ಹಿಂದಿನ ಅರ್ಜಿ ಈಗ ಬೆಳಕಿಗೆ ಬಂದುದರಲ್ಲಿ ತುಸು ಸಮಾಧಾನವಾಯಿತು.

ಹಾಗಾದರೆ ‘ತರಬೇತಿ’ ಆಗದ ನನಗೆ ಹೆಡ್‌ಮಾಸ್ತರಾಗಿ ನೇಮಿಸಿದ ಸಂಸ್ಕಾರದ ಧೋರಣೆಯೇನು? ತರಬೇತಿ ಹೊಂದಿದ ಹಲವಾರು ಉಪಾಧ್ಯಾಯರು ‘ಶಾಲೆ, ಶಾಲೆ’ ಎಂದು ಬಡಬಡಿಸುತ್ತಿರುವಾಗ, ನನ್ನನ್ನು ಈ ಕೆಲಸಕ್ಕೆ ಹೇಗೆ ಆರಿಸಿದರು! ಎಲ್ಲೋ ಯಾವನೋ! ಪುಣ್ಯಾತ್ಮ ಕೂಲಂಕುಶವಾಗಿ ನನ್ನ ಅರ್ಜಿಯನ್ನು ಪರಾಂಬರಿಸಿರಬೇಕು. ಅಧ್ಯಾಪಕ ವೃತ್ತಿಗಾಗಿ— ಅರ್ಧ ಸಂಬಳದಲ್ಲೂ ಕೆಲಸ ಮಾಡ ಬಯಸುವ ತನ್ನ ಲವಲವಿಕೆಯನ್ನು, ಆತ ಚೆನ್ನಾಗಿ ಮನಗಂಡಿರಬೇಕು. ಅಥವಾ ಆದಾವನೋ ನನ್ನ ಕ್ಲಾಸ್ ಮೇಟೋ ಅಥವಾ ಸ್ಕೂಲ್ ಮೇಟೋ, ಉಚ್ಚ ಅಧಿಕಾರಿಯಾಗಿ ಬಂದಿರಬೇಕು. ಹೀಗೆ ನನ್ನಲ್ಲಿ ಉದ್ಭವಿಸುವ ಸಂದೇಹಗಳನ್ನು ನನ್ನಲ್ಲೇ ತಯಾರಾದ ಉತ್ತರಗಳು ಹತ್ತಿಕ್ಕುತ್ತಿದ್ದುವು.

‘ಆಜ್ಞಾಪತ್ರ’ವನ್ನು ಮಡಚಿ ಕಿಸೆಯೊಳಗಿಟ್ಟು ಕೊಂಡಿದ್ದರೂ, ನನ್ನ ಕಣ್ಣ ಮುಂದೆ ಅದೇ ‘ಬಿಳಿಯ ಕಾಗದ’ ಪ್ರತ್ಯಕ್ಷವಾಗಿ ಕುಣಿಯುತಿತ್ತು. ‘ಬಂಕಾಪುರ’ ಎಲ್ಲಿದ್ದಿರಬಹುದು. ಎಷ್ಟು ದೂರವಿದ್ದಿರಬಹುದು. ಶಾಲೆಗೆ ಅಗತ್ಯವಿದ್ದ ಸಲಕರಣೆಗಳೆಲ್ಲಾ ಇದ್ದಿರಬಹುದೆ? ಹೂಂ! ಕಟ್ಟಡಗಳ ಕೊರತೆ ಇದ್ದೀತೆ? ಹುಡುಗರೆಲ್ಲಾ ಸರಿಯಾಗಿ ಶಾಲೆಗೆ ಬರುತ್ತಿರಬಹುದೆ? ಶಾಲಾ ಆಡಳಿತೆಯಲ್ಲಿ ಏನಾದರೂ ‘ಅತಂತ್ರ’ವಾಗಿರಬಹುದೆ?........

ಇನ್ನು ಹೆಚ್ಚು ಹೊತ್ತು ಆಲೋಚಿಸಿ ಫಲವಿಲ್ಲವೆಂದು ಬಗೆದು, ಒಂದು ವಾರದ ರಜೆ ಅರ್ಜಿಯನ್ನು ಬರೆದು, ಮ್ಯಾನೇಜರರ ಬಳಿ ಹೋದೆ. "ನನಗೆ ಮನೆಗೆ ಅಗತ್ಯ ಬರಬೇಕೆಂತ ಪತ್ರ ಬಂದಿದೆ ಸಾರ್. ತಾಯಿಯವರಿಗೆ ಕಾಯಿಲೆಯಂತೆ ಬರುವ ಸೋಮವಾರ ಖಂಡಿತ ಹಾಜರಾಗುತ್ತೇನೆ" ಎಂದು ಉದ್ವೇಗವನ್ನೆಲ್ಲಾ ಅದುಮಿ ಹಿಡಿದು, ದೀನನಾಗಿ ಕೇಳಿಕೊಂಡೆ. "ರಜೆಯಿಂದ ಮರಳಿ ಬಂದೊಡನೆ ಮಾಡಬೇಕಾದ ಹಲವಾರು ಕೆಲಸಗಳ ಯಾದಿಯೊಂದನ್ನು ನನ್ನ ಮುಂದಿಟ್ಟು ತಾವು ಒಪ್ಪಿದರು. ಮನಸ್ಸಿನೊಳಗೆ ಅವರಿಗೊಂದು ‘ಕೊನೆ ನಮಸ್ಕಾರ’ವನ್ನಿತ್ತು, ಆಫೀಸಿನಿಂದ ಹೊರ ಬಂದೆ.

ಹೊಟೇಲು ಮಾಣಿಯೊಡನೆ ವಿಚಾರಿಸಿದರೆ, ಬಂಕಾಪುರದ ಮಹಾತ್ಮೆ ತಿಳಿಯಬಹುದು ಎಂದು ಅತ್ತ ಧಾವಿಸಿದೆ. ಕಾಫಿಗೆ ಆರ್ಡರಿತ್ತು, ಮೆಲ್ಲನೆ ವಿಚಾರಿಸಿದೆ. "ಬಂಕಾರವೋ, ಸಂಕಾಪುರವೋ?" ಆತ ಸಂದೇಹಿಸಿದ.

ಕಿಸೆಯಿಂದ ಆರ್ಡರನ್ನು ತೆಗೆದು ಪುನಃ ಕಣ್ಣಾರಳಿಸಿ ಓದಿದೆ. ಹೌದು ಬಂಕಾಪುರ ....ಅಂ....ಇವತ್ತೇ ಹೋಗಿ ಸೇರಬೇಕೆಂತ ತಾರೀಕನ್ನೂ ನಮೂದಿಸಿದ್ದಾರೆ! ನನಗೆ ಮತ್ತೆ ದಿಗಿಲು ತಪ್ಪಿದಂತಾಯ್ತು. ಮಾಣಿಕೊಟ್ಟ ವಿವರವನ್ನೆಲ್ಲಾ ಪಡೆದೆ. ಕಾಫಿ ಕುಡಿಯುವುದು ಕೂಡ ನನಗೆ ಬೇಡವಾಗಿತ್ತು. "ಬಾಡಿಗೆ ಸೈಕಲ್"ನ್ನು ಪಡೆದು ಬಂಕಾಪುರಕ್ಕೆ ಹೊರಟೆ.

ಸರಿಯಾಗಿ ವ್ಯವಸ್ಥೆಗಳನ್ನೆಲ್ಲಾ ಮಾಡಿಕೊಂಡು ಹೊರಡಲಿಕ್ಕೆ ಪುರಸೊತ್ತು ಕೊಡದ ಬಗ್ಗೆ "ಅಧಿಕಾರಿ"ಗಳ ಬಗ್ಗೆ ನನಗೆ ತುಂಬಾ ಅಗೌರವವುಂಟಾಯಿತು. ತಾವು ಆಜ್ಞೆಯನ್ನು ಆರು ವರ್ಷದ ಮೇಲೆ ಕಳಿಸಿದ್ದರೂ, ನನಗೆ ಆರು ಗಂಟೆಗಳ ಪುರಸೊತ್ತನ್ನು ಸಹ ಕೊಟ್ಟಿರಲಿಲ್ಲ. ‘ಇಂಟರ್ ವ್ಯೂ’ ಕಾರ್ಡುಗಳಂತೆಯೇ, ಈ ‘ಆಜ್ಞಾಪತ್ರ’ವನ್ನು ಹೊರಡಿಸಿದರಲ್ಲಾ........ ಹೋ... ಪ್ರಾಯಃ ಶಾಲೆಯಲ್ಲಿ ತುಂಬಾ ಗಲಿಬಿಲಿ ಬಿದ್ದಿರಬೇಕು. ಆದಕ್ಕಾಗಿ ಕೂಡಲೇ ಹೋಗಲಿ ಎಂತ ಹಾಗೆ ಬರೆದಿರಬೇಕೆಂಬ ಅಭಿಪ್ರಾಯ ಬಂದು— ನನ್ನ ಹಿಂದಿನ ಬೇಸರಗಳನ್ನೆಲ್ಲಾ ಮರೆಸಿತು.

‘ಬಂಕಾಪುರ" ನಮ್ಮ ಆಫೀಸಿನ ಕಾರ್ಯಕ್ಷೇತ್ರಕ್ಕೆ ಸೇರಿದ ಊರು. ಆದರೆ ಒಬ್ಬ ಉಪಾಧ್ಯಾಯನಾದರೂ ಈ ತನಕ ನಮ್ಮ ಆಫೀಸಿನ ತನಕ ಬಂದಿರಲಿಲ್ಲ. ‘ಬಾವಿಯೊಳಗಿನ ಕಪ್ಪೆ"ಯಂತೆ ಅಲ್ಲೇ ಬಿದ್ದುಕೊಂಡಿರಬೇಕು. ‘ಸಾಮಾನ್ಯ ಜ್ಞಾನ"ದಲ್ಲಿ ಭಾರಿ ಹಿಂದುಳಿದಿರಬೇಕು. ಅಷ್ಟಿದ್ದರೆ ಅಷ್ಟೊಂದು ವಿದ್ಯಾವಂತರು ‘ಉಳಿತಾಯ ಯೋಜನೆ"ಯ ಸಂಪರ್ಕವನ್ನು ಇನ್ನೂ ಮಾಡಿಕೊಂಡಿಲ್ಲವೆಂದರೆ...

ನನ್ನ ಸೈಕಲ್ಲು ಒಂದೇ ಸವನೆ ಓಡುತಿತ್ತು. ನನಗಿಂತಲೂ ಮೊದಲು ಬಂಕಾಪುರವನ್ನು ಸೇರುವ ಲವಲವಿಕೆ ಅದಕ್ಕಿದ್ದಿರಬೇಕು. ಪ್ರಾಯಃ ಕತ್ತಲೆಯಲ್ಲಿ ಕಾಣುವ ಕಣ್ಣು ಅದಕ್ಕಿಲ್ಲದಿದ್ದುದರಿಂದ ಈ ಬೆಳಕಿರುವಾಗಲೇ ‘ನಿಲ್ದಾಣ"ವನ್ನು ಸೇರುವ ಹಂಬಲವೋ ಏನೋ!

ದಾರಿಯಲ್ಲಿ ಒಂದು ಕಡೆ ಹುಡುಗರು ಆಡುತ್ತಿದ್ದರು ‘ಮಾಸ್ತರರು ನಿಮಗೆ ಇದನ್ನೇ ಶಾಲೆಯಲ್ಲಿ ಕಲಿಸಿದ್ದಾರೋ’ ಎಂದೆ ಒಬ್ಬ ಹುಡುಗನೂ ಉತ್ತರಿಸಲಿಲ್ಲ. ಆಡುತ್ತಲೇ ಇದ್ದರು. "ಶಾಲೆಗೆ ಬರುವಾಗ, ಮತ್ತು ಶಾಲೆಯಿಂದ ಹೋಗುವಾಗ, ರಸ್ತೆಯಲ್ಲಿ ಯಾರೂ ಆಟವಾಡಬಾರದು. ಇದು ಪೌರತನದ ಲಕ್ಷಣವಲ್ಲ. ಸಾಲಾಗಿ ಎಲ್ಲರೂ ಒಂದೇ ಬದಿಯಲ್ಲಿ ಪ್ರಯಾಣಿಸಬೇಕು." ಒಂದು ದಿನ ಇಂತಹ ಸಲಹೆಗಳನ್ನು ಕೊಟ್ಟಿದ್ದರೆ ಈ ಹುಡುಗರು ಹೀಗೆ ಹಾಳಾಗುತ್ತಿದ್ದರೆ?

"ಬಂಕಾಪುರ ಪಂಚಾಯತಿ"ನ ಹಳದಿ ಹಲಗೆ ನನ್ನನ್ನು ಸ್ವಾಗತಿಸಿತು. ಇನ್ನೇನು ಎರಡು ನಿಮಿಷದಲ್ಲಿ ನಾನು ಶಾಲೆಗೆ ಹೋಗುತ್ತೇನೆ. ಉಪಾಧ್ಯಾಯರು ಇದ್ದಾರೋ ಇಲ್ಲವೋ.... ಸಂಜೆ ಹೊತ್ತಿನಲ್ಲಿ ಚಾರ್ಜ ಕೊಡುತ್ತಾರೋ ಇಲ್ಲವೋ. ಏನೇ ಆಗಲಿ— ಇವತ್ತಿನ ತಾರೀಕು ಹಾಕಿ, ‘ಶಾಲಾ ಹೊತ್ತಿನ ಬಳಿಕ" ಎಂತ ಬರೆದು ದಸ್ಕತು ಹಾಕುವುದು. ಅಥವಾ ಉಪಾಧ್ಯಾಯರು ಇಲ್ಲದಿದ್ದರೆ ‘ಶಾಲಾ ಹೊತ್ತಿನ ಮುಂಚೆ" ಎಂತ ನಾಳಿನ ದಿನ ಕೆಲಸಕ್ಕೆ ಸೇರಿದರೂ ಇವತ್ತೇ ಸೇರಿದಂತಾಗುತ್ತೆ.

ಪೇಟೆಯಲ್ಲಿ ಎಲ್ಲರೂ ನನ್ನನ್ನೇ ದುರುಗುಟ್ಟಿಕೊಂಡು ನೋಡಿದರು. ತಮ್ಮ ಉದ್ಧಾರಕನೊಬ್ಬ ಬಂದ ಎನ್ನುವ ತೃಪ್ತಿ ಅವರ ಮುಖದಲ್ಲಿ ಕಂಡು ಬಂತು. ಅವರಿಗೆಲ್ಲಾ ಮತ್ತೆ ಭೇಟಿಕೊಟ್ಟರಾಯಿತೆಂದೆಣಿಸಿ, ಸೀದಾ ಸೈಕಲ್ ತುಳಿದೆ.

ಜೀವನ ಶಿಕ್ಷಣ ಶಾಲೆಯನ್ನು ಕರಿಹಲಗೆಯಿಂದ ಗುರುತಿಸಲಾಗದಿದ್ದರೂ ಆ ಕಟ್ಟಡ, ಎದುರಿನ ಚಿಕ್ಕ ತೋಟ— ಅದೊಂದು ಶಾಲೆ ಎಂಬುದನ್ನು ಸಾರುತ್ತಿದ್ದುವು. ನಾನಲ್ಲಿ ಇಳಿದು ಶಾಲೆಯತ್ತ ಧಾವಿಸಿದೆ.

"ಇಲ್ಲಿ ಹೆಡ್ ಮಾಸ್ತರರು ಯಾರು?"

"ಯಾಕೆ? ನಾನೇ ರಾಮರಾವ್ ಅಂತ" ಎಲ್ಲಾ ತರದ ಚಟುವಟಿಕೆಗಳಿಂದ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

# ಜನವರಿ ೨೬ರ ದಿವ್ಯ ಸಂದೇಶ

ಶ್ರೀ ಬಿ. ನಾರಾಯಣ ಜೋಗಿತ್ತಾಯ

ಜನವರಿ ಇಪ್ಪತ್ತಾರು ಭಾರತೀಯರಿಗೆ ಪವಿತ್ರವಾದ ಪರ್ವ ದಿನವಾಗಿದೆ. ಚೀನದ ಆಸುರೀ ಆಕ್ರಮಣದ ಈ ಸಂಧಿಕಾಲದಲ್ಲಿ ಸ್ವಾತಂತ್ರ್ಯರಕ್ಷಣೆಯ ಮಹಾ ಕಾರ್ಯದಲ್ಲಿ ನಮಗೆ ಸ್ಫೂರ್ತಿ-ಚೈತನ್ಯಗಳನ್ನು ಕೊಡುವ ಈ ಪ್ರಜಾಪ್ರಭುತ್ವದಿನ ೧೯೩೦ರಿಂದ ಅನೂಚಾನವಾಗಿ ಶ್ರದ್ಧೆ-ವೈಭವಗಳಿಂದ ಸಾರ್ವತ್ರಿಕವಾಗಿ ಆಚರಿಸಲ್ಪಡುತ್ತ ಬಂದಿದೆ. ೧೯೩೦ರಲ್ಲಿ ಮಾಡಿದ "ಪೂರ್ಣ ಸ್ವಾತಂತ್ರ್ಯವಿಲ್ಲದೆ ಬ್ರಿಟಿಷರೊಡನೆ ಸಂಧಿಯಿಲ್ಲ" ಎಂಬ ಧೀರೋದಾತ್ತ ಘೋಷಣೆಯಂತೆ ಇಂದಿನ ಈ ರಾಷ್ಟ್ರೀಯ ವಿಪತ್ತಿನ ಸಂದಿಗ್ಧ ಪರಿಸ್ಥಿತಿಯಲ್ಲಿ "ಚೀನೀಯರನ್ನು ಹೊರ ದೂಡದೆ ನಮಗೆ ವಿರಾಮವಿಲ್ಲ" ಎಂಬ ಧೀರ ಪ್ರತಿಜ್ಞೆಯನ್ನು ಜನವರಿ ಇಪ್ಪತ್ತಾರನೇ ದಿನದಂದು ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅಂದು ಭಾರತೀಯರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ಹಸಿವನ್ನು ಹೆಚ್ಚಿಸಿದ ದಿನ. ಇಂದು ನಮ್ಮಲ್ಲಿ ಸ್ವಾತಂತ್ರ್ಯ ರಕ್ಷಣೆಯ ಹಸಿವನ್ನು ಹೆಚ್ಚಿಸುತ್ತಿದೆ.

ಪಂಜಾಬಿನ ಆ ಚಳಿಯುಯ್ಯಾದ ರಾವಿ ನದಿಯ ದಂಡೆಯಲ್ಲಿ ಮಧ್ಯರಾತ್ರಿಯ ಸಮಯ ದೇಶದ ಸಮಸ್ತ ಮುಖಂಡರು ಪಂಡಿತ ಜವಾಹರರೊಡನೆ ಕೂಡಿ ಸಂತೋಷದಿಂದ ಚಳಿಯನ್ನು ಲೆಕ್ಕಿಸದೆ ಕುಣಿದು 'ಪೂರ್ಣ ಸ್ವಾತಂತ್ರ್ಯ ದೊರಕದೆ ಬ್ರಿಟಿಷರೊಡನೆ ಮಾತುಕತೆಯಿಲ್ಲ' ಎಂಬ ಮಹಾ ಪ್ರತಿಜ್ಞೆ ಮಾಡಿ, ಈ ದೃಢ ಪ್ರತಿಜ್ಞೆಯನ್ನು ಘಂಟಾಘೋಷವಾಗಿ ಘೋಷಿಸಿದ ದಿನವೇ ಜನವರಿ ೨೬. ಹೀಗೆ ಪೂರ್ಣ ಸ್ವರಾಜ್ಯದ ಪ್ರಾಪ್ತಿಗೋಸ್ಕರ ತನು ಮನ ಧನಗಳನ್ನು ಅರ್ಪಿಸಿ ಬ್ರಿಟಿಷರನ್ನು ಅಲುಗಾಡಿಸಿ, ಜೈಲು, ಲಾಟೀ ಪೆಟ್ಟುಗಳನ್ನು ಲೆಕ್ಕಿಸದೆ ಮತ್ತೆ ಮತ್ತೆ ವೈಭವೋತ್ಸಾಹದಿಂದ ಆಚರಿಸಲ್ಪಟ್ಟು ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಶ್ರೇಯಸ್ಸು ಈ ಜನವರಿ ಇಪ್ಪತ್ತಾರಕ್ಕೆ ಸಲ್ಲಬೇಕಾಗಿದೆ. ಇಂಥ ದಿನ ನಿಜಕ್ಕೂ ನಮಗೆಲ್ಲ ಪ್ರಾತಃಸ್ಮರಣೀಯವೇ ಆಗಿದೆ.

ಆಗಸ್ಟ್ ೧೫ರಂದು ನಮಗೆ ಸ್ವಾತಂತ್ರ್ಯ ಸಿಕ್ಕಿದರೂ ಜನವರಿ ಇಪ್ಪತ್ತಾರರ ಈ ಪ್ರಜಾ ಪ್ರಭುತ್ವದಿನದ ಮಹತ್ವ ಅದಕ್ಕಿಂತಲೂ ಮಿಗಿಲ ಮಿದು. ಯಾಕೆಂದರೆ ಸ್ವಾತಂತ್ರ್ಯ ಸಿಕ್ಕಲು ನಾವು ಮಾಡಿದ ಮಹಾ ಸಂಗ್ರಾಮದ ದೃಢ ಸಂಕಲ್ಪ ಈ ದಿನದಂದು ಮಾಡಿದುದೆಂಬುದನ್ನು ಯಾರೂ ಮರೆಯಲಾರರು. ಇಷ್ಟು ಮಾತ್ರವಲ್ಲದೆ ನಮ್ಮ ರಾಜ್ಯಾಂಗಘಟನೆ ಜ್ಯಾರಿಗೆ ಬಂದುದು ಈ ದಿನದಲ್ಲೇ ಎಂಬುದು ಗಮನಾರ್ಹ ವಿಷಯವಾಗಿದೆ. ೧೯೪೭ರಿಂದ ೧೯೫೦ರ ತನಕ ಸ್ವಾತಂತ್ರ್ಯ ಸಿಕ್ಕಿದ್ದರೂ ಬ್ರಿಟಿಷರ ಶಾಸನ ಪದ್ಧತಿಯನ್ನೇ ಅನುಸರಿಸುತ್ತಿದ್ದ ನಾವು ೧೯೫೦ ಜನವರಿ ೨೬ರಂದು 'ಭಾರತವು ಸಂಪೂರ್ಣ ಸರ್ವತಂತ್ರ, ಮುಕ್ತ ಲೋಕ ತಂತ್ರಾತ್ಮಕ ಗಣ ರಾಜ್ಯವೆಂದು ಘೋಷಿಸಲ್ಪಟ್ಟಿತು. ಹೀಗೆ ಜನವರಿ ಇಪ್ಪತ್ತಾರರ ಪವಿತ್ರತೆ, ಮಹತ್ವ ಅನನ್ಯವಾದುದು.

೧೯೩೦ರ ಪ್ರಜಾಪ್ರಭುತ್ವದಿನದಂದು ರಾಷ್ಟ್ರವು 'ಪೂರ್ಣ ಸ್ವರಾಜ್ಯ ಇಲ್ಲವೇ ಅಳಿವು" ಎಂಬ ದೃಢ ಸಂಕಲ್ಪ ಮಾಡಿತ್ತು. ಅದಕ್ಕಾಗಿ ರಾತ್ರಿ ಹಗಲೆನ್ನದೆ ಪ್ರಾಣದ ಹಂಗು ತೊರೆದು ಹೋರಾಡಿತು. ಮುಂದೆ ೨೦ ವರ್ಷ ಕಳೆದು ಅದೇ ಪ್ರಜಾಪ್ರಭುತ್ವ ದಿನಂದು ಭಾರತವು ಶಾಸನಬದ್ಧ ಲೋಕತಂತ್ರ ಗಣರಾಜ್ಯವೆಂದು ಸಾರಿತು. ಭಾರತದ ರಕ್ಷಣೆಯ ಮಹೋನ್ನತ ಹೊರೆಯನ್ನು ಹೊರುವ ಅಚಲ ಪ್ರತಿಜ್ಞೆ ಭಾರತೀಯರು ಹೊತ್ತು ಅದಕ್ಕಾಗಿ ತನು-ಮನ-ಧನಗಳನ್ನು ಕೂಡ ಅರ್ಪಿಸಲು ಬದ್ಧ ಕಂಕಣರಾದ ಮಹಾ ಪುಣ್ಯ ದಿನ ಜನವರಿ ಇಪ್ಪತ್ತಾರು. ಆದುದರಿಂದ ಇಂದಿನ ಈ ಚೀನಾ ಆಕ್ರಮಣದಿಂದ ಉಂಟಾದ ಗಂಭೀರ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ಮೇಲಿನ ದೃಢ ಪ್ರತಿಜ್ಞೆಯ ಪುನರುಚ್ಚಾರ ಪುನಃ ಆಗ ದೇಶ ರಕ್ಷಣೆಯ ಕಾರ್ಯ ಭರದಿಂದ ಆಗಬೇಕಾಗಿದೆ.

ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನಿಜವಾಗಿಯೂ ಬಹು ಕಷ್ಟವಾಗಿದೆ. ಹಾಗಿರುವಾಗ ಭಾರತದಂತಹ ಪ್ರಜಾಪ್ರಭುತ್ವ ದೇಶದ ನಾಗರಿಕರ ಹೊಣೆ ಮಹೋನ್ನತವಾದುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ದೇಶರಕ್ಷಣೆ ಸಂಪೂರ್ಣ ಹೊರೆ ನಾಗರಿಕರ ಮೇಲಿದೆ. ಆದುದರಿಂದ ಪ್ರಜಾಪ್ರಭುತ್ವ ದಿನವನ್ನು ಸಂಭ್ರಮದಿಂದ, ಆನಂದೋತ್ಸಾಹದಿಂದ ಆಚರಿಸುವಾಗ ನಮ್ಮ ದೇಶದ ಬಗೆಗಿನ ಕರ್ತವ್ಯವನ್ನು, ಜವಾಬ್ದಾರಿಯನ್ನು ಶ್ರದ್ಧೆಯಿಂದ ಮಾಡುವ ದೃಢ ಪ್ರತಿಜ್ಞೆ ಮಾಡುವುದು ಆದ್ಯ ಕರ್ತವ್ಯಗಳಲ್ಲೊಂದಾಗಿದೆ. ಈ ಪವಿತ್ರ ದಿನದಂದು ನಾವು ನಮ್ಮ ತಾಯಿ ಭಾರತ ಮಾತೆಯ ಅಖಂಡ, ಅವಿಚ್ಛಿನ್ನ ಮೂರ್ತಿಯ ಸ್ಮರಣೆ ಮಾಡಿ ಆಕೆಯ ಋಣವನ್ನು ತೀರಿಸಲು ಮನಸಾ, ವಾಚಾ, ಕಾಯಾ ಬದ್ಧ ಮನಸ್ಕರಾಗಿ ಪ್ರಾರ್ಥನೆ ಮಾಡಬೇಕು. ಇದರೊಂದಿಗೆ ದೇಶದ ಆರ್ಥಿಕ, ನೈತಿಕ ಮತ್ತು ಸಾಮಾಜಿಕ ಉನ್ನತಿ ಮಾಡುವುದರಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ಕರ್ತವ್ಯವೇನೆಂಬುದನ್ನು ಯೋಚಿಸಬೇಕು. ದೇಶದ ಶಾಸನಾಧಿಕಾರವು ಕೇವಲ ಕೆಲವೇ ವ್ಯಕ್ತಿಗಳ ಕೈಯೊಳಗಿರದೆ ಅದು ಶುದ್ಧವಾಗಿದ್ದು ಪ್ರಜಾ ಪ್ರಭುತ್ವದ ಪರಂಪರೆಯ ಮರ್ಯಾದೆಯನ್ನು ಸ್ಥಿರಗೊಳಿಸುವುದೂ ಅತ್ಯಗತ್ಯವಾಗಿದೆ.

ಉಪರೋಕ್ತ ಕಥನದಿಂದ ನಮ್ಮ ರಾಷ್ಟ್ರೀಯ ಹಬ್ಬಗಳಲ್ಲಿ ಜನವರಿ ೨೬ರ ಸ್ಥಾನ—ಹಿರಿಮೆ ಅದ್ವಿತೀಯವಾದುದೆಂಬುದು ವಿದಿತವಾಗುತ್ತದೆ. ಅಥವಾ ವೇದದ ಒಂದು ಸೂಕ್ತಿಯಂತೆ:—

ಉದಾರೀಣಾ ಉತಾಸೀನಾಸ್ತಿಷ್ಠಂತಃ
ಪ್ರಕ್ರಾಮಂತಃ ।
ಪದ್ಭ್ಯಾಂ ದಕ್ಷಿಣ ಸವ್ಯಾಭ್ಯಾಂ
ಮಾವ್ಯಥಿಷ್ಮಹಿ ಭೂಮ್ಯಾಂ ||

ಅರ್ಥಾತ್ ನಾವು ಸದಾ ನಡೆಯುತ್ತಿರುವಾಗ ಕುಳಿತುಕೊಳ್ಳುವಾಗ, ಎದ್ದಾಗ, ನಿಲ್ಲುವಾಗ, ನಮ್ಮ ಬಲ ಕಾಲಿನಿಂದಾಗಲೀ ಎಡ ಕಾಲಿನಿಂದಾಗಲಿ ನಮ್ಮ ಮಾತೃ ಭೂಮಿಗೆ, ಜನನಿಗೆ ನೋವಾಗದಂತೆ ಕಷ್ಟವಾಗದಂತೆ ಜಾಗ್ರತೆ ವಹಿಸಬೇಕು. ಇಂದು ಆರ್ಥಿಕ ದೃಷ್ಟಿಯಿಂದ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಸಫಲಗೊಳಿಸುವ ಯತ್ನ ಭರದಿಂದ ಸಾಗುತ್ತಿದೆ. ಪ್ರತಿ ವರ್ಷದ ಪ್ರಜಾಪ್ರಭುತ್ವ ಈ ಪುಣ್ಯ ಕಾಲದಲ್ಲಿ ಯೋಜನೆಗಳ ಸಫಲತೆಗೆ ನಮ್ಮ ಕರ್ತವ್ಯವೇನೆಂಬುದನ್ನು ಪ್ರತಿಯೊಬ್ಬನೂ ಯೋಚಿಸಬೇಕು. ಮಾತ್ರವಲ್ಲದೆ ನಮ್ಮ ತಾಯಿ ಭಾರತಾಂಬೆಯ ವಿಶಾಲವಾದ ಮಡಿಲಲ್ಲಿ ೪೫ ಕೋಟಿ ಸ್ತ್ರೀ ಪುರುಷರು ನಲಿದಾಡುತ್ತಿದ್ದಾರೆ. ಅವರೆಲ್ಲರ ಬಗ್ಗೆ ತನ್ನ ಕರ್ತವ್ಯವನ್ನರಿತು ಪಾಲಿಸುವುದೂ ತನ್ಮೂಲಕ ಐಕ್ಯ ಸಾಧಿಸುವುದೂ ಅತ್ಯಗತ್ಯವಾಗಿದೆ.

ಇಂದು ಭಾರತವು ಹಲವಾರು ಸಮಸ್ಯೆಗಳಿಂದ ಕಂಗೆಡುವಂತಾಗಿದೆ. ಉತ್ತರದಲ್ಲಿ ಚೀನೀಯರ ಪಾಶವೀ ಆಕ್ರಮಣವಾಗಿ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಇನ್ನೊಂದೆಡೆಯಿಂದ ಕಾಶ್ಮೀರ ಸಮಸ್ಯೆಯನ್ನು ದರಬ್ಬಕ್ಕೆ ಮಾಡಿಕೊಂಡು ಪಾಕಿಸ್ಥಾನ ವೈರ ಸಾಧಿಸಲು ಹೊಂಚು ಹಾಕುತ್ತಿದೆ. ಇಷ್ಟು ಮಾತ್ರವಲ್ಲದೆ, ನಮ್ಮ ಆಂತರಿಕ ಶತ್ರುಗಳ ಭಯವೂ ನಮಗಿದೆ. ಅಂತಾರಾಷ್ಟ್ರೀಯ ಸ್ಥಾನವನ್ನು ಉಳಿಸಿಕೊಳ್ಳುವುದೂ ಅವಶ್ಯವಾಗಿದೆ. ಪಡುವಣದ ನೆರವನ್ನು ನಂಬಿ ಪರಾವಲಂಬಿಗಳಾಗುವುದೂ ನಮ್ಮ ಸ್ವಾತಂತ್ರ್ಯ ಪ್ರಿಯತೆಗೆ ಭೂಷಣವಾಗುವುದಿಲ್ಲ. ಇದಕ್ಕಾಗಿ ನಾವಿಂದು ನಮ್ಮ ಆಂತರಿಕ ಶತ್ರುಗಳನ್ನು ಗೆದ್ದು ಐಕ್ಯತೆಯಿಂದ ಇರಬೇಕಾಗಿದೆ. ಚೀನಾದ ಆಕ್ರಮಣವನ್ನೆದುರಿಸಲು ಸಮಗ್ರ ಭಾರತದ ಜನತೆಯೇ ಒಟ್ಟಾಗಿ ಹೋರಾಡುವ ದೃಢ ಪ್ರತಿಜ್ಞೆಯನ್ನು ಈ ದಿನ ಮಾಡುವುದು ಅತ್ಯಂತ ಸೂಕ್ತವಾಗಿದೆ.

ಇಂದು ನಾವು ಪ್ರಜಾಪ್ರಭುತ್ವ ದಿನವನ್ನು ಆಚರಿಸುತ್ತಿದ್ದೇವೆ. ಈ ಪುಣ್ಯಕಾಲದಲ್ಲಿ, ಸುಜಲ, ಸುಫಲ, ಸಸ್ಯಶ್ಯಾಮಲಳಾದ ನಮ್ಮ ತಾಯಿ ಭಾರತ ಮಾತೆಗೆ ಸಾಷ್ಟಾಂಗ ಪ್ರಣಾಮ ಮಾಡಿ, ಆವಳ ಸರ್ವತೋಭಿವೃದ್ಧಿಗೋಸ್ಕರ, ಭೌತಿಕ ನೈತಿಕ ಅಭ್ಯುದಯಕ್ಕೋಸ್ಕರ ಸದಾ ತ್ರಿಕರಣ ಪೂರ್ವಕವಾಗಿ ಪ್ರಯತ್ನಿಸಲಾಗುವಂತೆ ದೃಢ ನಿಶ್ಚಯ ಮಾಡುವ. ಭಾರತೀಯರಿಗೆ ಜನವರಿ ೨೬ರ ಸ್ವಾಧೀನತೆ ಮತ್ತು ಲೋಕತಂತ್ರವೆಂಬ ಎರಡು ಮಹಾನ್ ಸಂದೇಶಗಳೇ ನಮಗೆ ಸದಾ ಉನ್ನತಿ-ಉತ್ಕರ್ಷಗಳ ಪಥ ಪ್ರದರ್ಶನ ಮಾಡುವುದರಲ್ಲಿ ಸಂಶಯವಿಲ್ಲ.

# ಚೀನದ ಚೋರರು

●

ಉತ್ತರದ ಕಡೆಯಿಂದ, ಎತ್ತರದ
ಗಿರಿಯಿಂದ
ವೈರಿಗಳು ನುಗ್ಗಿಹರು ನಮ್ಮ ನೆಲೆಗೆ
ಹಿಮಗಿರಿಯ ಕಣಿವೆಯಲಿ,
ರಕ್ತದೋಕುಳಿ ಸುರಿಸಿ
ಮುಂದೆ ಮುಂದೈತಹರು ನಮ್ಮ
ಕೊಲೆಗೆ
'ಬಿಡುಗಡೆಯಪಡೆ'ಯೆಂದು ಕೊಳಲ
ನೂದುವರಲ್ಲಿ
'ದಾಸ್ಯವೇ ಬಿಡುಗಡೆಯು."
ಆಯಿತೇನೋ?
'ಮಾವೊವಾದ'ದ ತಿರುಳು,
ಮಾನವೀಯತೆಯಿಲ್ಲ;
ವಂಚನೆಯ ಪಶುವೃತ್ತಿ!
ಸಮತೆಯೇನೊ?
ಆಫ್ರೇಷ್ಯ ರಾಷ್ಟ್ರಗಳ ತನ್ನ
ಹಿಡಿತದೊಳಿರಿಸಿ
'ದಾಸ್ಯ ದೀಕ್ಷೆ'ಯ ನೀವ ಚೀನದವರು
ಭಾರತದ ಭವ್ಯತೆಯ ಸ್ಥಾನಮಾನದ
ಸಿರಿಗೆ
ಮುನಿದು ಮುಂದಾಗಿಹರು
ಮೂರ್ಖರವರು
ನೆರೆನಾಡ ಚೀನೀಯರು ದುರುಳ
ಬುದ್ಧಿಯ ಜನರು
ವಂಚನಾಪರ ನೀತಿ ನಿಪುಣರವರು.
ಭಾರತದ ನೆಲವನ್ನು ತಮ್ಮದೆನ್ನುವರವರು
ಗಡಿನಾಡ ಕಬಳಿಸುವ ಚೋರರವರು
ನೆಲದಾಹದಲಿ 'ಅಧಿಕ' ಕೊಳ್ಳೆ
ಹೊಡೆಯುವರಲ್ಲಿ
ಎಣ್ಣೆಯುದೆ ಕಣ್ಣಲ್ಲಿ ನೋಡದಲ್ಲಿ
ಸಾಮ್ರಾಜ್ಯದಾದಾಹದಲಿ
ಕೊಳೆತು ಮಣ್ಣಾಯ್ತು
'ಮಾವೊ-ಚೌ'ಗಳ ಸಮತಾವಾದವಿಲ್ಲಿ.

**ಅನಂತರಾಮ ಯೇತಡ್ಕ**


## ಒಂದೇ ಕಲ್ಲಿನಿಂದ ಎರಡು ಹಣ್ಣುಗಳು!

ರಾಷ್ಟ್ರದ ರಕ್ಷಣೆಗೂ
ಜೀವನದ ಭದ್ರತೆಗೂ
ಉಳಿತಾಯವು
ಅತ್ಯವಶ್ಯ.

ಉಳಿತಾಯ ಮಾಡಿರಿ!
ಒಂದು ಸೇವಿಂಗ್ಸ್ ಖಾತೆ ತೆರೆಯಿರಿ

## ಕೊರ್ಪೊರೇಶನ್ ಬೇಂಕ್

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

# ಓ ಮಹಾತ್ಮ!

[ತಾ. 30.1.1948ರಂದು ಅಪರಾಹ್ನ 5 ಗಂಟೆಗೆ ನವ ಡಿಲ್ಲಿಯ ಬಿರ್ಲಾ ಭವನದ ಅಂಗಣದ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ಮಹಾತ್ಮಾಗಾಂಧಿಯವರು ಗುಂಡಿನೇಟಿಗೆ ಬಲಿಯಾಗಿ ಮರಣ ಹೊಂದಿದ ಸಂದರ್ಭದಲ್ಲಿ ಶ್ರೀ ಎಸ್. ಎಸ್. ಕಿಲ್ಲೆಯವರು (ಈಗ ಅವರೂ ದಿವಂಗತರು) ಬರೆದ ಕವನವಿದು]

ಓ ಮಹಾತ್ಮ! ಭಾರತ ಭಾಗ್ಯವಿಧಾತ!
ಎಪ್ಪತ್ತೊಂಭತ್ತು ವರುಷಗಳ ಮುನ್ನ
ಗುಜರಾಥದಲಿ ಜನಿಸಿ, ಇಂಗ್ಲೆಂಡಿನಲಿ
ಬ್ಯಾರಿಸ್ಟರ್ ಪದವಿಗಳಿಸಿ,
ದಕ್ಷಿಣಾಫ್ರಿಕದಿ ಸತ್ಯಾಗ್ರಹವ
ಸಿದ್ಧಿಗೊಳಿಸಿ,
ಮಾತೃಭೂಮಿಯ ಬಂಧವಿಮೋಚನೆಗೆ
ಅಸಹಕಾರ ಮಂತ್ರವ ಜಪಿಸಿ,
ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯನು
ಜನತಾಸಂಸ್ಥೆಯಾಗಿಸಿ ಬೆಳೆಸಿ,
ಹಿಂದೀಯರ ನರನಾಡಿಗಳಲಿ
ಹೊಸರಕುತ, ಹೊಸಭಾವ,
ಹೊಸಶಕ್ತಿ ಸಾಹಸವ ನೆರೆತುಂಬಿಸಿ;
ಪರದಾಸ್ಯ ಪಾಶದಲಿ,
ಅಜ್ಞಾನದಾಲಸ್ಯದಲಿ,
ಜೀವಂತಶವವಾಗಿ ಸ್ವಾಭಿಮಾನವನೀಗಿ,
ಬೆಂಡಾಗಿ, ಬಡವಾಗಿ, ಜಡವಾಗಿ,
ಹತವಾಗಿ,
ಬಲುಬಳಲಿ ಬಿದ್ದಿದ್ದ ಭಾರತದ
ಜನಜಂಗುಳಿಯ ಜಡಜೀವನದಿ
ನವಚೇತನವತುಂಬಿ, ನವಜ್ಯೋತಿಯನು
ಬೆಳಗಿ,
ರಾಜಕೀಯದಿ ನೀತಿಧರ್ಮಗಳ ಹಿತಮಿತ
ತತ್ವಗಳ ಜೋಕೆಗೊಳಿಸಿ,
ಅಸಹಕಾರ-ಖಿಲಾಫತುಗಳಿಂ
ಅಖಂಡಭಾರತವನೊಂದುಗೂಡಿಸಿ,
ಸ್ವಾತಂತ್ರ್ಯಸಮರಗಳ ಸರ್ವಭಾರವಹೊತ್ತು ಜಯಪಡೆದ ಕರ್ಣಧಾರ!
ನಿನ್ನ ವರ ಅಪ್ರತಿಮ ನಾಯಕತ್ವದಿ,
ನಿನ್ನ ಪಾವನ ದಿವ್ಯತಪೋಬಲದಿ,
ನಿಂತಿಹಳಿಂದು ಭಾರತಾಂಬೆ! ಸ್ವಾಭಿ-
ಮಾನ, ಸ್ವಾವಲಂಬನ ಸ್ವಾತಂತ್ರ್ಯದಿಂ
ತಲೆಯೆತ್ತಿ!
ಆದರೆ ನೀನೆಲ್ಲಿ? ಓನಮ್ಮಜನಾಂಗಜನಕ!
ಓಮಹರ್ಷಿ!
ಹಿಂದುಮುಸಲ್ಮಾನ ಬಾಂಧವ್ಯಕೆ
ಬಲಿದಾನವಾದೆಯೋ
ಅಜಾತಶತ್ರು ನೀನಿಂದು ನವಡಿಲ್ಲಿಯಲಿ!
ಓ ಪೂಜ್ಯ ಬಾಪೂಜಿ! ರೊಟ್ಟಿ ಬಟ್ಟೆ
ಭಾಷೆ, ಸಂಸ್ಕೃತಿಗಳೆಲ್ಲವಕು ಎರವಾಗಿ,
ಭವಿತವ್ಯವೇ ಇರದ ಭಾರತೀಯರಿಗೆ
ಸ್ವದೇಶಿ ಮಂತ್ರವನೆ ಬೋಧಿಸಿ,
ಬಟ್ಟೆಗಾಗಿ ಖಾದಿ, ರೊಟ್ಟಿಗಾಗಿ ಸ್ವತಂತ್ರ
ಕೃಷಿಕೈಗಾರಿಕೆಗಳೇ ಹಾದಿ,
ರಾಷ್ಟ್ರಭಾಷೆಯದೊಂದೇ ಹಿಂದಿ
ಎಂಬೀ ಪಲ್ಲವಿಯ ನೆರೆಹಾಡಿ;
ಜಾತಿಜಾತಿಗಳ ಭೇದಭಾವಗಳ
ಹಾಳುಸಿಡಿತದಲಿ ನುಚ್ಚುನೂರಾದ
ಹಿಂದು ಸಮಾಜವಂ ಸಂಘಟಿಸಿ,
ಮದ್ಯಪಾನದಲಿ ಬಿದ್ದು
ನರಳುವರನುದ್ಧರಿಸಿ,
ದೀನದುಃಖಿತರ ಕಣ್ಣೀರಧಾರೆಗಳನೊರಸಿ
ಆರಿಗೂ ಬೆದರದಿಹ ಆರನೂ ಬೆದರಿಸದ
ನವನೀತಿ ತತ್ವವನು ನೆಲೆಗೊಳಿಸಿ;
ರಾಜಕಾರಣದ ಮಹಾಕೂಟದಲಿ
ಕಂಗೆಡಿಪ ಕತ್ತಲೆಯು ಕವಿದಿರಲು,
ಅತ್ಮಶಕ್ತಿಯ ಭವ್ಯ ಬೆಳಕಿನಿಂ
ಸರಿದಾರಿಯನೆ ತೋರಿ,
ಅನ್ಯಾಯ ಅಧರ್ಮಗಳನಾವಗಂ
ಪ್ರತಿಭಟಿಸಿ,
ನ್ಯಾಯಧರ್ಮಗಳ ಜಯಭೇರಿಯನೆ
ಮೊಳಗಿಸಿ,
ಕಾಣದಾದೆಯಾ ನೀನಿಂದು
ಹರಿಜನೋದ್ಧಾರಕ! ಓ ಯುಗನಾಯಕ!
ಓ ಕರ್ಮಯೋಗಿ! ಹುಟ್ಟಿನಲಿ ವೈಶ್ಯ
ಧೈರ್ಯದಲಿ ಕ್ಷತ್ರಿಯ,
ಸುವಿವೇಕದಾ ತಿಳಿವಿನಲಿ ವಿಪ್ರ,
ಸೇವೆಯಲಿ ಶೂದ್ರ ನೀನಾಗಿ,
ಸತ್ಯ, ಶಾಂತಿ, ಅಹಿಂಸೆಗಳ
ಅಸಿಧಾರಾವ್ರತದಿ
ಪ್ರೇಮಮಯ ಸಂಗ್ರಾಮ ಮಾರ್ಗವನೆ
ತೋರಿ,
ಸರ್ವಧರ್ಮಗಳ ಸಾರವನೆ ಹೀರಿ,
ಜಗದ ಪ್ರವಾದಿಗಳೆಲ್ಲರಲಿ
ನೀನೊಂದುಗೂಡಿ;
ಸದಾಚಾರವೆ ನೆಲೆನಿಂತ
ಕೂರ್ಮಗಡಿಯಾಗಿ,
ಸದ್ಧರ್ಮವೇ ನೀನಿದ್ದ ಭೂವಲಯವಾಗಿ,
ಶಾಂತಿಮಂತ್ರವೇ ಧ್ರುವಮಂಡಲವಾಗಿ,
ಸ್ವತಂತ್ರ ಭಾರತದ ಭಾಗ್ಯಾಕಾಶದಲಿ
ಚಕ್ರಾಂಕಿತ ತ್ರಿವರ್ಣ ಪತಾಕೆಯ
ಹಾರಿಸಿದೆ;
ನಮಗಿರದ ಸ್ವಾತಂತ್ರ್ಯವ ನಿನ್ನ
ಮುಂದಾಳ್ತನದಿ ಪಡೆದವರು ನಾವು,
ನಿನ್ನನು ಮಾತ್ರ ಕಳಕೊಂಡೆವೇ
ನಾವಿಂದು,
ಅಕಟ ಪುರ್ದೈವಿಗಳು!
ನಿನ್ನೆ ತಾನೆ ಜನಿಸಿದ ಸ್ವಾತಂತ್ರ್ಯ
ಶಿಶುವನ್ನು
ಆರು ತಿಂಗಳೂ ತುಂಬದ ಹಸುಗೂಸನ್ನು
ಮತ್ತಾರ ಮಡಿಲಲಿ ಹಾಕಿ ಹೋದೆಯೋ
ತಂದೆ!
ಓ ಜಗದ ಗುರುವೇ! ಇನ್ನೆತ್ತ
ನೀನೆಮಗಾದೆ!
ಓ ಗುರುದೇವ! ನೀವೆಜೀ ತವ ಪಾದ
ಮೂಲ;
ಹಿಂದ-ಸಾಗರದಷ್ಟು ನಿಸ್ಸೀಮವಾಗಲದು,
ಸ್ವಾರ್ಥತ್ಯಾಗವೇ ತವಪೀಠ,
ವಿಂಧ್ಯಾಚಲದಂತಚಲವಾಗಲದು;
ಸತ್ಯವೇ ತವ ದಿವ್ಯ ಮುಕುಟ,
ಹಿಮಾಚಲದಂತುನ್ನತಿಯನೈದಲದು;
ನಿನ್ನೊಸಗೆಯ ದಿವ್ಯ ತಾರೆಯದು
ಲೋಕಲೋಕಗಳ ಬೆಳಗಿಸಲಿ;
ನಿನ್ನಾತ್ಮಶಕ್ತಿಯಿಂ ಪ್ರಕಟವಾಗಿಹ
ಜ್ಯೋತಿ,
ಅನವರತ ಬೆಳಗಿ
ಅನಂತಾನಂತವಾಗುತದು;
ನವ್ಯನಾವಗಂ ಸರಿದಾರಿಯಲಿ
ಮುನ್ನಡೆಸಲಿ;
ತವ ಪವಿತ್ರ ಪಾದಪದ್ಮಂಗಳಿಗಿದೋ
ಭಾಷ್ಪಾಂಜಲಿ—ಶ್ರದ್ಧಾಂಜಲಿ!
ಓ ಜನತಾತ್ಮ!
"ಜೈಹಿಂದ್"—ವಂದೇ ಮಾತರಂ

ಯೆಸ್. ಯೆಸ್. ಕಿಲ್ಲೆ.
ಜಪ್ಪು, ಮಂಗಳೂರು,
೩೦-೧-೪೮.

### ಹುಚ್ಚು ಕಲ್ಪನಾ ವಿಲಾಸ

# ಮದ್ಯಪಾನದಿಂದ ರಾಷ್ಟ್ರಕಲ್ಯಾಣವೆ?

ಇಂದಿನ ಚೀನಾ ಆಕ್ರಮಣದ ಈ ತುರ್ತು ಪರಿಸ್ಥಿತಿಯಲ್ಲಿ ಮದ್ಯಪಾನ ನಿಷೇಧದಂತಹ ರಾಷ್ಟ್ರಕಲ್ಯಾಣ ಹೇತು ಕಾರ್ಯದ ಆಹುತಿ ಮಾಡುವುದು ಸರ್ವಥಾ ಉಚಿತವಲ್ಲ. ಮದ್ಯಪಾನವನ್ನು ನಿಷೇಧಗೊಳಿಸದಿದ್ದರೆ ನಮ್ಮ ನೈತಿಕ ಅಧಃಪತನ ಖಂಡಿತವೆಂದು ಸರ್ವರೂ ಬಲ್ಲ ವಿಷಯ. ಸಂಕುಚಿತ ಮನೋಪ್ರವೃತ್ತಿಗೆ ಈಡಾಗಿಯೋ, ಹಣದಾಸೆಗೆ ಬಲಿಬಿದ್ದೋ, ಕಾನೂನು ಜಾರಿಗೆ ತರುವುದರಲ್ಲಿ ಹಿಂದೆ ಬಿದ್ದೋ ಈ ನೀತಿಯನ್ನು ತ್ಯಜಿಸಿದರೆ ನಮ್ಮ ದೇಶದ ಅಂತಃಸ್ವರೂಪ ಮಲಿನವಾಗಿ, ಗೌರವಕ್ಕೇ ಕಳಂಕ ಬರುವುದೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಜನತೆಯ ಕಲ್ಯಾಣಕ್ಕೆ ಶಾಸನ ವಿರುವುದು ಸರಕಾರವಿರುವುದು ಎಂಬುದು ನಿತ್ಯಸತ್ಯ. ಹಾಗಿರುವಾಗ ಈ ಬಗ್ಗೆ ಸರಕಾರವೇ ಅನುಚಿತವಾಗಿ ನಿರ್ಣಯವನ್ನು ಜಾರಿಗೆ ತರುವುದು ಯಾವೊಂದೂ ಪ್ರಜಾಪ್ರಭುತ್ವವಾದೀ ದೇಶದ ಪ್ರತಿಷ್ಠೆಗೆ ಕಳಶಪ್ರಾಯವಾಗಲಾರದು. ದುಶ್ಶಕ್ತಿಗಳನ್ನು ವಿರೋಧಿಸಿ, ಏನೇ ಬರಲಿ, ಎಷ್ಟೇ ಕಷ್ಟವಾಗಲಿ, ಆಡಳಿತ್ವದ ಕಾನೂನನ್ನು ಬಿಗುಗೊಳಿಸುವುದು ಸರಕಾರದ ಆದ್ಯಕರ್ತವ್ಯ. ಹಾಗಿರುವಾಗ ಜನತೆಯ ನೈತಿಕ, ಶಾರೀರಿಕ ಹಾಗೂ ಸಾರ್ವತ್ರಿಕ ಅಧಃಪತನಕ್ಕೆ ನಾಂದಿಯಾದ ಮದ್ಯಪಾನವನ್ನು ನಿಷೇಧಿಸದಿದ್ದರೆ ನಿಜಕ್ಕೂ ದೊಡ್ಡ ಪ್ರಮಾದವಾಗಬಹುದು.

**ಮಹಾತ್ಮಾಜಿಯವರಿಗೆ ಅಗೌರವ?**

ಗಾಂಧೀಜಿಯವರು ಸ್ವರ್ಗಸ್ಥರಾದಮೇಲೆ ನಾವು ಅವರ ಕೆಲವೊಂದು ನೀತಿಗಳನ್ನು ಮಾಲೆ ಪಾಲಿಸುತ್ತಿದ್ದೇವೆಂದು ನಿರ್ವಾಹವಿಲ್ಲದೆ ಹೇಳಬೇಕಾಗಿದೆ. ಈ ರೀತಿಯ ಬೆಕ್ಕು ಸನ್ಯಾಸಿಗಳಿಂದಲೇ ಇಂದು ಮಹಾತ್ಮಾಜೀಯವರ ರಚನಾತ್ಮಕ ಕ್ರಿಯೆಗಳಲ್ಲೇ ಅತ್ಯಂತ ಪ್ರಮುಖವಾದ ಮದ್ಯಪಾನ ನಿಷೇಧವಿಂದು ಇಂಥ ರದ್ದತಿಯ ಸ್ಥಿತಿಗೆ ಬಂದಿದೆ. ಗಾಂಧೀಜಿಯವರು ಆಮರಣಾಂತ ಮದ್ಯಪಾನ ನಿಷೇಧಕ್ಕಾಗಿ ಹೋರಾಡಿದವರು. ಈ ಬಗ್ಗೆ ಅವರ ಕಾರ್ಯ ಎಂಥ ಸರಕಾರವನ್ನಾದರೂ ಎಚ್ಚರಿಸುವಂಥದ್ದು. ಇಂದು ಗಾಂಧೀಜಿಯವರ ಅನುಯಾಯಿಗಳಾಗಿದ್ದವರೇ ಪಾನನಿರೋಧ ಪದ್ಧತಿಗೆ ಸಮ್ಮತಿಸುವುದೆಂದರೆ ನಿಜಕ್ಕೂ ಮಹಾತ್ಮರಿಗೆ ಅಗೌರವವೆಂದು ಬೇರೆಯಾಗಿ ಹೇಳಬೇಕಿಲ್ಲ. ಇಂಥ ಕಾರ್ಯ ನಿಜಕ್ಕೂ ಸಲ್ಲದು. ಮದ್ಯಪಾನ ನಿಷೇಧ ರದ್ದತಿಯೆಂದರೆ ದೇಶದ ಜನಜನರನ್ನು ಸೂರೆಮಾಡಿ, ನೈತಿಕವಾಗಿ ಅಧಃ ಪತನಕ್ಕೆ ಇಳಿಸುವುದೆಂಬುದನ್ನು ಬೇರೆ ಹೇಳ ಬೇಕಾಗಿಲ್ಲ.

**ದೊಡ್ಡ ದೋಷ!**

ಮದ್ಯಪಾನದಂತಹ, ವಿಷಜ್ವಾಲೆ ಇನ್ನೊಂದಿಲ್ಲ. ಸಮಾಜದ ದೊಡ್ಡ ದೋಷಗಳಲ್ಲಿ ಇದೊಂದು ಆಗಿದೆ. ಜನರು ಕ್ಷಣಿಕ ಉತ್ತೇಜನಕ್ಕಾಗಿ ಕುಡಿದು ಅಮೂಲ್ಯವೂ, ಅನರ್ಘ್ಯವೂ ಆದ ತಮ್ಮ ವಿಪ್ರಕಾಯವನ್ನು 'ತಾಂಬಾರಗೆ ವರ್ಷ ದೋಣಿಗೆ ನಿಮಿಷ' ಎಂಬ ಗಾದೆಯಂತೆ ಒಂದು ಗಳಿಗೆಯಲ್ಲಿ ಕಳೆದುಕೊಳ್ಳುವುದು! ಏನಿದು! ಇಂಥ ವಿಷವ್ಯೂಹ ಈ ಮದ್ಯಪಾನವನ್ನು ಕುಡಿಯುವಂತೆ ಅವಕಾಶವೊದಗಿಸುವುದೇ? ಪ್ರಜಾಪ್ರಭುತ್ವವಾದೀ ದೇಶದ ಜನತೆ ಇದನ್ನು ಬಯಸುತ್ತಿದೆಯೇ? ಸರಕಾರ ಜನತೆಗೆ ಒಂದು ವೇಳೆ ಮದ್ಯಪಾನಪ್ರಿಯವೆಂದು ಕುಡಿಯಲವಕಾಶವೊದಗಿಸುವುದೇ? ಸಮಾಜದಲ್ಲಿನ ಕುಂದು-ಕೊರತೆಗಳನ್ನು ದಮನಗೊಳಿಸುವ ಸರಕಾರ ಇಂದು ಮದ್ಯಪಾನ ನಿಷೇಧವನ್ನು ರದ್ದತಿ ಮಾಡುವಂತೆ ಪರ್ಯಾಲೋಚಿಸುತ್ತಿರುವುದನ್ನು ನೋಡುವಾಗ ಮತ್ತು ಒಂದೆರಡು ಪ್ರಾಂತ್ಯ ಸರಕಾರಗಳು ಈ ಬಗ್ಗೆ ರದ್ದತಿಯ ಕಾನೂನು ಜಾರಿಗೆ ತಂದಿರುವುದನ್ನು ನೋಡುವಾಗ 'ಇದ್ದ ಬಂಗಾರವನ್ನು ಹಾಸಿಗೆಗೆ ದೂಡಿದವನಂತೆ, ಕಳ್ಳನಿಗೆ ಕದಿಯಲು ಬಾಗಿಲು ತೆರೆದು ಕೊಟ್ಟಂತೆ, ಎಂದು ಹೇಳಬಹುದು. ವೈಯುಕ್ತಿ ಸ್ವಾರ್ಥಕ್ಕಾಗ

(೯ನೇ ಪುಟ ನೋಡಿರಿ)

ಕುತೂಹಲಕಾರಿ ಶಾಸನದಿಂದ

# ಬಂಗಾರದ ಸಂಗ್ರಹಕ್ಕೆ ತಡೆ

ಇಂದು ಒಮ್ಮಿಂದೊಮ್ಮೆಗೇ ಬಂಗಾರ ಶಾಸನ ಜಾರಿಗೆ ಬಂದುದರಿಂದ ದೇಶದ ಮೂಲೆ ಮೂಲೆಗಳ ಮನೆಗಳವರು ಬಂಗಾರದ ಬಗ್ಗೆ ಮಾತಾಡುವಂತಾಗಿದೆ. ಮೊದಲಿಂದಲೂ ನಮ್ಮ ಆರ್ಥಿಕ ಮಂತ್ರಿಯವರಿಗೆ ಬಂಗಾರದ ಮೇಲೆ ಬಹಳ ಕಣ್ಣಿತ್ತು. ಬಂಗಾರವೊಂದು ಸರಕಾರದ ವಶಕ್ಕೆ ಸಾಕಷ್ಟು ಬಂದರೆ ದೇಶದ ಸಾಂಪತ್ತಿಕ ಅಭಿವೃದ್ಧಿಯನ್ನು ವಿದೇಶಗಳ ಆಯಾತ ನಿರ್ಯಾತಗಳನ್ನು ಬಹಳವಾಗಿ ವೃದ್ಧಿ ಮಾಡಬಹುದೆಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಬಂಗಾರದ ಶಾಸನದಿಂದ ಯಾರೂ ಭೀತಿ, ದಿಗಿಲುಗೊಳ್ಳಬೇಕಾಗಿಲ್ಲ. ಯಾಕೆಂದರೆ ಮುರಾರ್ಜಿ ದೇಸಾಯಿಯವರು, ಕೆಲವು ತಿಂಗಳುಗಳ ಹಿಂದೆಯೇ ಈ ಬಗ್ಗೆ ಎಚ್ಚರವಿತ್ತು ಬಂಗಾರವನ್ನು ರಾಷ್ಟ್ರೀಯ ರಕ್ಷಣಾನಿಧಿಗೆ ಕೊಡಬೇಕೆಂದು ವಿನಂತಿಸಿದ್ದಾರೆ. ಆದರೆ ಅವರ ಹೇಳಿಕೆಗೆ ಸಾಕಷ್ಟು ಬೆಲೆ ಸಿಕ್ಕಂತೆ ತೋರಲಿಲ್ಲ. ಭಾರತವು ಪ್ರಾಚೀನ ಕಾಲದಿಂದಲೂ ಬೆಳ್ಳಿ ಬಂಗಾರಕ್ಕೆ ಪ್ರಸಿದ್ಧ ನಾಡು. ಆದರ ಚಿನ್ನದ ಮಾರ್ದವ ಹಾಗೂ ಮೋಹಕತೆಗೆ ಮನಸೋತ ಅದನ್ನು ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟುಕೊಳ್ಳುವ ಸಂಪ್ರದಾಯವು ಪರಂಪರಾಗತವಾಗಿ ಬಂದಿದೆ. ನಮ್ಮ ದೇಶದ ಬಡತನಕ್ಕೆ ದಾರಿದ್ರ್ಯಕ್ಕೆ ಒಂದು ಮಹಾ ತಡೆಯೆಂದರೆ ನಾವು ನಮ್ಮ ಸಂಪತ್ತಿನ ಸರಿಯಾದ ಉಪಯೋಗ ಮಾಡಿಕೊಳ್ಳದಿರುವುದು. ನಮ್ಮ ದೇಶದಲ್ಲಿನ ಸಹಸ್ರಗಟ್ಟಲೆ ಮನೆಗಳಲ್ಲಿ ಗಟ್ಟಿ ಬಂಗಾರ ಜೋಪಾನವಿದ್ದಿದೆ. ಇದು ನಿಜಕ್ಕೂ ನಿರುಪಯೋಗ ಎಂಬುದರ ಅತಿಶಯೋಕ್ತಿಯಾಗಲಾರದು. ಕೆಲವು ಮನೆಗಳಲ್ಲಿ ಹೊಟ್ಟೆಗಿಲ್ಲವೆ ಒದ್ದಾಡುತ್ತಿರುವ ಜನರೂ ಇದ್ದಾರೆ. ಹಾಗಿರುವಾಗ ಬಂಗಾರ ನಿಯಂತ್ರಣ ಶಾಸನ ಜಾರಿಗೆ ಬಂದುದು ದೇಶದ ಹಿತದೃಷ್ಟಿಯಿಂದ ನಿಜಕ್ಕೂ ಉತ್ತಮವಾಗಿದೆ.

### ಬಂಗಾರ ಶಾಸನದ ಉದ್ದೇಶ

ತಾ. ೮ನೇ ಜನವರಿಯಂದು ಮುರಾರ್ಜಿಯವರು ಪೂರ್ವ ನಿಶ್ಚಯದಂತೆ ತಮ್ಮ ಬಂಗಾರ ಶಾಸನವನ್ನು ದೇಶದಾದ್ಯಂತ ಜಾರಿಗೊಳಿಸಿ ವಿಸ್ತೃತ ವ್ಯಾಖ್ಯಾನ ಕೊಟ್ಟರು. ಈ ತನಕ ಬಂಗಾರದ ಮೇಲೆ ಇಂಥ ಕಾನೂನು ಬರಬಹುದೆಂದು ಯೋಚಿಸಿದ್ದಿಲ್ಲ. ಈ ಕಾನೂನಿನ ಪ್ರಥಮ ಉದ್ದೇಶವೆಂದರೆ ಕಳ್ಳ ವ್ಯಾಪಾರವನ್ನು ಪೂರ್ಣ ಕೊನೆಗೊಳಿಸಿ ಆಯಾತ-ನಿರ್ಯಾತಗಳನ್ನು ಬಲಪಡಿಸುವುದು. ಇದರಿಂದ ಭಾರತದ ಸಾಂಪತ್ತಿಕ ಪರಿಸ್ಥಿತಿಯ ಮೇಲೆ ಅಗಾಧ ಪರಿಣಾಮವಾಗಲಿದೆ. ಈಗ ಚೀನಾ ಆಕ್ರಮಣದಿಂದಾಗಿ ನಾವು ಪರದೇಶಗಳ ಮೇಲೆ ಪೂರ್ಣ ಹೊಂದಿಕೊಂಡಿರಬಾರದು. ನಮ್ಮ ದೇಶದ ಸಂಪತ್ತನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಇದೊಂದು ಸೂಕ್ತ ಕಾರ್ಯ. ಇದರಿಂದ ನಮ್ಮ ದೇಶದಲ್ಲಿ ಎಷ್ಟು ಬಂಗಾರವಿದೆಯೆಂಬುದು ಗೊತ್ತಾಗಿ ಗಂಡಾಂತರ ಪರಿಸ್ಥಿತಿಯಲ್ಲಿ ಅದರ ಸದುಪಯೋಗ ಮಾಡಿಕೊಳ್ಳಲು ಭದ್ರ ಸಂಚಾಲಕವೆಂದೆನ್ನಬಹುದು. ವ್ಯಾಪಾರಿಗಳ ಮೂಲಕ ಇಂದು ಜನತೆಗೂ ನಿಜವಾದ ಬಂಗಾರ ಸಿಗುತ್ತಿಲ್ಲ. ಬಂಗಾರ ಒಂದೆಡೆಯಲ್ಲಿ ಶೇಖರವಾಗುತ್ತಿದೆ. ಇದು ಸರ್ವಥಾ ಮಾನ್ಯವಲ್ಲ. ದೇಶದ ಅನರ್ಘ್ಯ ಸಂಪತ್ತಾದ ಈ ಬಂಗಾರವನ್ನು ತಮ್ಮ ವಿಲಾಸ-ವೈಭೋಗಗಳಿಗೆ ಉಪಯೋಗಿಸುವುದು ಇಂದು ಸರ್ವತ್ರ ಸಾಮಾನ್ಯವಾಗಿ ಬಿಟ್ಟಿದೆ. ಇದು ಭಾರತದಂತಹ ಬಡ ದೇಶದಲ್ಲಿ ಸಲ್ಲದು. ನಮ್ಮ ಜೀವನ ಮಟ್ಟವನ್ನು ಸರಿಯಾದ ಸ್ಥಿತಿಗೆ ತಂದು, ಬಡತನವನ್ನು ಓಡಿಸಿ ಆ ಮೇಲೆ ನಾವು ಬಂಗಾರ ಶೇಖರ ಮಾಡಿದರೆ ತಪ್ಪಿಲ್ಲ. ಈ ಎಲ್ಲಾ ಕಾರಣಗಳಿಂದ ಬಂಗಾರ ಶಾಸನ ಜಾರಿಗೆ ಬಂದುದು ಸೂಕ್ತವಾಗಿದೆ.

### ಯಾರಿಗೂ ಉಪದ್ರವಿಲ್ಲ!

ಈ ಶಾಸನದಿಂದ ಜನಸಾಮಾನ್ಯರಿಗೆ ಯಾವೊಂದು ರೀತಿಯಿಂದಲೂ ತೊಂದರೆಯಿಲ್ಲ. ಹಿಂದಿಗಿಂತ ಬಂಗಾರದ ಬೆಲೆ ಕಡಿಮೆಯಾಗುವುದು ನಿಶ್ಚಿತ. ಸರಕಾರವು ಆಭರಣಗಳ ಮೇಲೆ ಕಣ್ಣು ಹಾಕಿಲ್ಲ. ಪ್ರತಿಯೊಬ್ಬರೂ ೫೦ ಗ್ರಾಮ್ ಚಿನ್ನ ಉಪಯೋಗಿಸಬಹುದೆಂದೂ, ೧೪ ಕ್ಯಾರಟ್ ಚಿನ್ನದ ಆಭರಣ ಮಾಡಿಸಬಹುದೆಂದೂ ಹೇಳಿದೆ. ಭಾರತದಂತಹ ಬಡ ದೇಶದಲ್ಲಿ ಇದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಜನಸಾಮಾನ್ಯರು ಬಂಗಾರ ಖರೀದಿ ಮಾಡುವುದು ಬಹು ಕಡಿಮೆಯೆಂಬುದು ಸರ್ವಶ್ರುತ. ಜನರು ಆಭರಣ ಮಾಡಿಸುವುದಕ್ಕೆ ಸರಕಾರದ ಆಕ್ಷೇಪವಿಲ್ಲ. ಅದು ಅನುಮತಿಯನ್ನು ಕೊಡುತ್ತದೆ. ಆದರೆ ಬಂಗಾರದ ಶೇಖರಣೆಯನ್ನು ಮಾತ್ರ ಅದು ಕಠೋರವಾಗಿ ವಿರೋಧಿಸುತ್ತದೆ. ಆದುದರಿಂದ ನಮ್ಮ ಶ್ರೀಮಂತ ಬಂಧುಗಳ ಸಂಪತ್ತಿನ ಶೇಖರಕ್ಕೆ ಧಕ್ಕೆ ಬಂದರೆ ಅದು ದೇಶದ ಹಿತದೃಷ್ಟಿಯಿಂದ ಉತ್ತಮವೇ ಆಗಿದೆ. ನಿಜಾಮರ ಅರಮನೆಯಲ್ಲಿ ೧೦೦ ಮಂದಿ ಕುಳಿತು ಉಪಾಹಾರ ಮಾಡಲು ಸೌಕರ್ಯವಿರುವ ಬಂಗಾರದ ಬೃಹತ್ ಮಂಚವಿದೆ. ಇತರ ಬಂಗಾರದ ರಾಶಿಗೆ ಮಿತಿಯೆ ಇಲ್ಲ. ಒಬ್ಬನ ಬಳಿಯಲ್ಲಿ ಇಷ್ಟೊಂದು ಸಂಪತ್ತು ಶೇಖರವಾಗಿರುವುದು ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿ ನಿಜಕ್ಕೂ ಮಹಾ ಅಪರಾಧ. ಸರಕಾರ ಧಾರ್ಮಿಕ ಸಂಸ್ಥೆಗಳ ಬಂಗಾರದಾಭರಣಗಳ ಮೇಲೆ ಈಗ ಪೂರ್ಣ ರಿಯಾಯಿತಿ ತೋರಿಸುವುದರಿಂದ ಜನರ ಸಾರ್ವಜನಿಕ ಜೀವದಲ್ಲೂ ಯಾವೊಂದೂ ತಡೆ ಬರಲಾರದು.

ಈ ತಮ್ಮ ೭೮ ವರ್ಷಗಳ ದೀರ್ಘ ಜೀವನದಲ್ಲಿ ಸಮಾಜೋದ್ಧಾರ ಮತ್ತು ರಾಷ್ಟ್ರಕಲ್ಯಾಣಗಳ ಪರಮ ಧ್ಯೇಯಗಳನ್ನು ತಮ್ಮ ಕೃತಿಗಳ ಮೂಲಕ ಆಚರಿಸಿ ಜನಪ್ರಿಯರಾಗಿದ್ದ, ಮದ್ರಾಸು ಮತ್ತು ರಾಜ್ಯ ಪುನರ್ಘಟನೆಯಾದನಂತರ ಮೈಸೂರು ಸರಕಾರಗಳಲ್ಲಿ ಮಂತ್ರಿಗಳಾಗಿದ್ದ 'ನವಯುಗ' ಪತ್ರಿಕೆಯ ಸಂಸ್ಥಾಪಕ-ಸಂಪಾದಕರೂ ಆಗಿದ್ದ ಎ. ಬಿ. ಶೆಟ್ಟರು ದಿವಂಗತರಾಗಿ ಮೂರು ವರ್ಷಗಳು ಸಂದುವು. ಈ ನಡುವೆ ಎ. ಬಿ. ಶೆಟ್ಟಿ ಸ್ಮಾರಕ ನಿಧಿಯೊಂದು ರಚಿತವಾಗಿ, ಕಳೆದ ವರ್ಷ ಅವರ ಮಾರ್ಬಲ್ ಶಿಲೆಯ ಶಿರಃ ಪ್ರತಿಮೆಯನ್ನು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಲಕ್ಷ್ಮಣಸ್ವಾಮಿ ಮುದಲಿಯಾರ್ ಅವರಿಂದ ೬—೧—೧೯೬೨ರಂದು ಅನಾವರಣ ಮಾಡಿಸಿತು.

ಸ್ಮಾರಕ ನಿಧಿಯ ಉದ್ದೇಶಗಳು ಹಲವಿದ್ದರೂ ಅದೀಗ ತಟಸ್ಥವಾದಂತೆ ತೋರುತ್ತದೆ. ನಮ್ಮ ಸಂಸ್ಥಾಪಕ-ಸಂಪಾದಕ ದಿವಂಗತ ಶೆಟ್ಟರ ಆದರ್ಶ ಜೀವನದ ಸಮಗ್ರ ವಿವರಣೆಯುಳ್ಳ ಕಿರಿದಾದ ಪುಸ್ತಕವೊಂದನ್ನು ನಾವು ಪ್ರಕಟಿಸಬೇಕೆಂದು ಮೊದಲೇ ಯೋಚಿಸಿದ್ದೆವು. ಆ ಕೆಲಸವನ್ನು ಸ್ಮಾರಕ ನಿಧಿಯೇ ಮಾಡುವ ನಿರೀಕ್ಷೆಯಿದ್ದುದರಿಂದ ನಾವು ಆ ಕಾರ್ಯದಲ್ಲಿ ಮುಂದೆ ಮುಂದುವರಿಯಲಿಲ್ಲ. ಈಗ, ಮರಳಿ ಅಂತಹ ಯೋಚನೆಯನ್ನು ಮಾಡುವ ಇರಾದೆಯಿದೆ. ಈ ಸಂಬಂಧದ ಕಾರ್ಯಕ್ರಮಗಳ ವಿವರವನ್ನು ಸಕಾಲದಲ್ಲಿ ತಿಳಿಸುತ್ತೇವೆ; ಮತ್ತು ನಿಮ್ಮೆಲ್ಲರ ಸಹಕಾರವನ್ನು ಬಯಸುತ್ತೇವೆ.

—ಸಂಪಾದಕರು
'ನವಯುಗ'

### ವಿದೇಶೀ ವ್ಯಾಪಾರ

ಸರಕಾರದ ವಶ ಬಂಗಾರ ಸಾಕಷ್ಟು ಬಂದರೆ ನಮ್ಮ ವಿದೇಶ ವ್ಯಾಪಾರ ಬಹು ಸುಗಮವಾಗುವುದರಲ್ಲಿ ಸಂಶಯವಿಲ್ಲ. ಈ ಬಂಗಾರವನ್ನು ವ್ಯಾಪಾರದಲ್ಲಿ ಧಾರಾಳವಾಗಿ ಉಪಯೋಗಿಸಿ ಚೆನ್ನಾಗಿ ಲಾಭ ಗಳಿಸಬಹುದು. ಈಗ ಭಾರತ ಸರಕಾರದ ವಿದೇಶೀ ವ್ಯಾಪಾರ ಹಿಂದೆ ಬೀಳಲು ಕಾರಣ ಬಂಗಾರದ ಕೊರತೆಯೇ ಆಗಿದೆ. ವ್ಯಾಪಾರದಲ್ಲಿ ಬಂಗಾರವನ್ನು ವಸ್ತುವಿನ ಮೂಲ್ಯವಾಗಿ ನಿರ್ಧರಿಸುವುದರಿಂದ ನಮ್ಮ ರಿಜರ್ವ್ ಬ್ಯಾಂಕ್ ಅಷ್ಟೇ ಬೆಲೆಯ ನಾಣ್ಯವನ್ನು ಚಲಾವಣೆಗೆ ತರುವುದರಿಂದ ಒಟ್ಟಿನಲ್ಲಿ ಸಾಂಪತ್ತಿಕ ಭದ್ರತೆ ಹೆಚ್ಚುವುದು. ಈ ಬಂಗಾರ ಶಾಸನದಿಂದ ಜನರು ಶೇಖರಿಸಿಟ್ಟಿರುವ ಬಂಗಾರ ಸರಕಾರದ ವಶಕ್ಕೆ ಬಂದು ನಮ್ಮ ದೇಶದ ಸಾರ್ವತ್ರಿಕ ಸಾಂಪತ್ತಿಕ ಅಭಿವೃದ್ಧಿಯಾಗುತ್ತದೆ. ಅದರ ಸರಿಯಾದ ಉಪಯೋಗ ಆಗುತ್ತದೆ.

### ಕಾನೂನಿನ ಇತಿ—ಮಿತಿ

ಜನವರಿ ೮ರಿಂದ ಒಂದು ತಿಂಗಳ ಒಳಗೆ ವ್ಯಾಪಾರಸ್ಥರಾಗಲೀ, ಇತರ ಬಂಗಾರ ಹೊಂದಿರುವ ಜನರಾಗಲೀ ಸರಕಾರಕ್ಕೆ ಮೇಲೆ ಹೇಳಿದ ಪರಿಮಾಣಕ್ಕೆ ಮಿಕ್ಕಿದ ಬಂಗಾರವಿದ್ದಲ್ಲಿ ಕೂಡಲೇ ತಿಳಿಸಬೇಕು. ಇಲ್ಲವಾದಲ್ಲಿ ಅವರು ಅಪರಾಧಿಗಳಾಗುತ್ತಾರೆ. ಲೈಸನ್ಸ್ ಹೊಂದದೆ ವ್ಯಾಪಾರ ಮಾಡುವವರೂ ತಪ್ಪುಗಾರರಾಗುತ್ತಾರೆ.

(೮ನೇ ಪುಟ ನೋಡಿರಿ)

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

S. E A. 229/62 S. C. 352/59

ನಾಗರಾಜ ಶೆಟ್ಟಿ —ಅರ್ಜಿದಾರ

ಬಟ್ಯಪ್ಪಗೌಡ ಕರಿಯಪ್ಪ ಗೌಡರ ಮಗ, ಪುತ್ತೂರು ತಾಲ್ಲೂಕು ಕಳಂಜ ಗ್ರಾಮದ ತಂಟೆಪ್ಪಾಡಿ ಎಂಬಲ್ಲಿ —ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ —

ಮೇಲಿನ ವ್ಯವಹರಣೆಯಲ್ಲಿ ನಿಮ್ಮನ್ನು ಕೈಹಿಡಿ ವಾರಂಟಿನಲ್ಲಿ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂದು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಗಳನ್ನು 1963ನೇ ಇಸವಿ ಫೆಬ್ರವರಿ ತಿಂಗಳು 8ನೇ ತಾರೀಕಿನ ಹಗಲು 11 ಘಂಟೆಗೆ ನೀವು ಕೋರ್ಟು ಮುಂದೆ ದಾಖಲು ಮಾಡುವುದು ತಪ್ಪಿದಲ್ಲಿ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

ಕೋರ್ಟು ಹುಕುಂ ಪ್ರಕಾರ

(*Sd*) V Anantharaja Ariga
Vdvocate for Petitioner

ಮೊಕ್ಕಾಂ: ಪುತ್ತೂರು ತಾ 16-1-1963

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

**NAVAYUGA**

Kannada Weekly

UDIPI

*Founder:*

**Late Sri A. B. Shetty**

Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೩೧-೧-೧೯೬೩ | ೨೧ |


## ಬಂಗಾರದ ಮಮತೆ

ಬಂಗಾರದ ಮೇಲಿರುವ ಪ್ರೇಮವನ್ನು ಕಡಿಮೆಯಾಗಿಸುವುದು ಮತ್ತು ತನ್ಮೂಲಕ ಬಂಗಾರದ ಕಳ್ಳ ಆಯಾತವನ್ನು ತಡೆಗಟ್ಟುವುದು ಹಾಗೂ ಬಂಗಾರದ ಮಿತಿ ಮೀರುತ್ತಿರುವ ಬೆಲೆಯನ್ನು ಇಳಿಸಿ, ಅದನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತರುವುದು— ಇವು ಸದ್ಯ ಭಾರತ ಸರಕಾರ ಹೊರಡಿಸಿದ ಬಂಗಾರ ನಿಯಂತ್ರಣ ಶಾಸನದ ಮುಖ್ಯ ಉದ್ದೇಶಗಳೆಂದು ಉಲ್ಲೇಖಿಸಲಾಗಿದೆ. ಶಾಸನವು ಜ್ಯಾರಿಗೆ ಬಂದ ತಾರೀಕಿಗೆ ಮೊದಲು ತಯಾರಿಸಲಾದ ಆಭರಣಗಳಿಗೆ ಈ ಶಾಸನವು ಅನ್ವಯಿಸುವುದಿಲ್ಲ. ಬಂಗಾರದ ನಿಕ್ಷೇಪವಿದ್ದವರು ಒಂದು ತಿಂಗಳೊಳಗೆ ತತ್ಸಂಬಂಧದ ದೃಢಪತ್ರವನ್ನು ನೀಡಬೇಕಾಗಿದ್ದು, ಈ ಅವಧಿಯು ಮುಂದಿನ ೯ನೆ ತಾರೀಕಿಗೆ ಕೊನೆಗೊಳ್ಳುವುದು.

ಸರಕಾರವು ಬಂಗಾರದ ಮೇಲೆ ನಿಯಂತ್ರಣವನ್ನು ಹೊರಿಸುವುದರಿಂದ ಕಳ್ಳ ವ್ಯಾಪಾರಕ್ಕೆ ಅನುವಾಗುವುದು ಎಂಬ ಒಂದು ದೂರು ಸರ್ವಸಾಮಾನ್ಯ. ಆದರೆ, ಶಾಸನವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಇಲಾಖೆಯು ನೋಡಿಕೊಂಡರೆ, ಇಂತಹ ದುರ್‍ವ್ಯವಹಾರ ನಡೆಯುವುದು ಸಾಧ್ಯವಿಲ್ಲ. ವಿದೇಶಗಳಿಂದ ಒರುತ್ತಿರುವ ಕಳ್ಳ ಬಂಗಾರವನ್ನು ತಡೆಯಲು ಹೊಂಟ ಈ ಶಾಸನವು ದೇಶದೊಳಗೇನೇ ಕಳ್ಳ ವ್ಯಾಪಾರ ನಡೆಯದಂತೆ ಎಚ್ಚರಿಕೆ ವಹಿಸಬೇಕು, ಶಾಸನವನ್ನು ಭಂಗಿಸುವವರನ್ನು ಪತ್ತೆ ಹಚ್ಚಿ ಉಗ್ರದಂಡನೆಯನ್ನು ನೀಡಬೇಕು, ಇದಕ್ಕೆ ಆವಶ್ಯಕವಾದ ಏರ್ಪಾಡುಗಳನ್ನು ಮಾಡುವಲ್ಲಿ ಸರಕಾರ ಹಿಂದುಳಿಯಬಾರದು ಹೀಗಾದರೆ ಮಾತ್ರ ಹೊರಡಿಸಿದ ಶಾಸನದಿಂದ ಸೂಚಿತ ಫಲಲಭಿಸಬಹುದು.

ವ್ಯಾಪಾರಿಗಳು, ಖಾಸಗಿ ವ್ಯಕ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು ತಮ್ಮಲ್ಲಿರುವ ಆಭರಣೇತರ ಬಂಗಾರದ ಪ್ರಮಾಣಗಳ ಬಗ್ಗೆ ದೃಢಪತ್ರವನ್ನು ನಿಯೋಜಿತ ಅವಧಿಯೊಳಗೆ ನಿಶ್ಚಿತ ಅರ್ಜಿಯಲ್ಲಿ ಕೊಡಬೇಕಾಗಿದೆ. ಅವಧಿಯು ಕಿರಿದು ಎಂದೂ ಅರ್ಜಿಗಳು ಸರಿಯಾಗಿ ಸಿಗುತ್ತಿಲ್ಲವೆಂದೂ ಆರೋಪವಿದೆ; ಅವಧಿಯನ್ನು ವಿಸ್ತರಿಸಬೇಕೆಂಬ ಸಲಹೆಯೂ ಇದೆ. ನಿಯಮಗಳನ್ನು ಸಡಿಲಿಸಬೇಕೆಂಬ ಬೇಡಿಕೆಯೂ ಮುಂದೆ ಬಂದಿದೆ. ಅವಧಿಯನ್ನು ವಿಸ್ತರಿಸುವುದರಿಂದ ವ್ಯಾಪಾರಿಗಳು ಹೊಸ ಆಭರಣಗಳಾಗಿ ತಮ್ಮಲ್ಲಿದ್ದ ಬಂಗಾರವನ್ನು ಪರಿವರ್ತಿಸುವ ಸಾಧ್ಯತೆಯಿದೆ; ಏಕೆಂದರೆ, ಕಿರಿದೆಂದು ಹೇಳುವ ಈ ಅವಧಿಯೊಳಗೇನೇ ಇಂತಹ ಪ್ರಸಂಗಗಳು ನಡೆದಿವೆಯೆಂದು ಬಂಗಾರ ನಿಯಂತ್ರಣ ಮಂಡಲಾಧ್ಯಕ್ಷರು ಹೇಳುತ್ತಾರೆ. ಅರ್ಜಿಗಳನ್ನು ಅಂಚೆ ಮೂಲಕವೂ ತರಿಸಿಕೊಳ್ಳುವ ವ್ಯವಸ್ಥೆ ಈಗ ಆಗಿದೆ. ನಿಯಂತ್ರಣ ಶಿಥಿಲ ಮಾಡುವುದೆಂದರೆ, ಶಾಸನವನ್ನೇ ರದ್ದುಗೊಳಿಸಿದಂತೆಯೆಂಬ ಅಧ್ಯಕ್ಷ ಕೋಟೆಕರ ವಾದವು ನೂರಕ್ಕೆ ನೂರರಷ್ಟು ಸತ್ಯವಾದುದು.

ಇಂದು ದೇಶದಲ್ಲಿ ಬಂಗಾರದ ಬೆಲೆ ವಿಪರೀತ ಹೆಚ್ಚಾಗಿರುವುದಕ್ಕೆ ಜನತೆಯಲ್ಲಿ ಅದರ ಬಗ್ಗೆಗಿರುವ ಆಶೆಯೇ ಕಾರಣವೆನ್ನಬೇಕು. ಬಂಗಾರವನ್ನು ಗಟ್ಟಿಯಾಗಿ ಮನೆಯಲ್ಲಿಡುವುದಕ್ಕಿಂತಲೂ ಆಭರಣಗಳ ರೂಪದಲ್ಲಿ ಅವನ್ನು ಕೂಡಿ ಹಾಕುವುದು ನಮ್ಮಲ್ಲಿ ವಾಡಿಕೆಯಾಗಿದೆ. ಆದುದರಿಂದ ಅಷ್ಟು ಆಕರ್ಷಕವಲ್ಲದ ೧೪ ಕ್ಯಾರೆಟ್ ಬಂಗಾರದ ಒಡವೆಗಳು ಜನಪ್ರಿಯವಾಗಲಾರವು ಮತ್ತು ಇದರಿಂದ ಜನರುಬಳಸಿಕೊಳ್ಳುವ ಬಂಗಾರದ ಪ್ರಮಾಣದಲ್ಲಿ ಗಮನೀಯ ಇಳುವರಿಯಾಗುವುದು ಸಂಭವನೀಯ. ಈ ಕಾರಣದಿಂದ ಕಳ್ಳತನದ ಬಂಗಾರವು ದೇಶದಲ್ಲಿ ಸಿಗದಂತೆ ಮಾಡುವುದು ಸಾಧ್ಯ. ಹೊಸ ಆಭರಣಗಳಾಗಲೀ ಅಥವಾ ಹಳೆಯವುಗಳನ್ನು ಕರಗಿಸಿ ಮರಳಿ ಮಾಡಿಸುವ ಆಭರಣಗಳಾಗಲೀ ೧೪ ಕ್ಯಾರೆಟುಗಳದ್ದೇ ಇರಬೇಕು ಎಂಬುದರಿಂದ ಜನತೆ ಅನಿವಾರ್ಯವಾಗಿ ಅವುಗಳ ಉಪಯೋಗವನ್ನು ಕಡಮೆಗೊಳಿಸಲೇ ಬೇಕಾಗುತ್ತದೆ. ಹೀಗೆ ನಡೆಯುವುದರಿಂದ ಬಂಗಾರದ ಬಳಕೆಯು ಇಳಿದು, ಅದು ಸರಕಾರದ ಉಪಯೋಗಕ್ಕೆ ಬರುತ್ತದೆ; ಜನರಲ್ಲಿ ಮೃತ ಬಂಡವಳದಂತಿರುವ ಸಂಪತ್ತು ಚಲಾವಣೆಯಲ್ಲಿ ಉಳಿಯಲು ಅವಕಾಶ ಹೆಚ್ಚುತ್ತದೆ.

ಹೀಗೆ ಜನತೆಯು ಬಂಗಾರದ ಬಳಕೆಯನ್ನು ಕಡಿಮೆ ಮಾಡಿತೆಂದರೆ, ಅದರ ವ್ಯಾಪಾರಸ್ಥರಿಗೂ ಕೆಲಸಗಾರರಿಗೂ ತುಂಬ ತೊಂದರೆಯುಂಟಾಗುತ್ತದೆ ಎಂಬುದು ಇನ್ನೊಂದು ದೂರು. ಇದನ್ನು ಒಪ್ಪಬಹುದು. ೧೪ ಕ್ಯಾರೆಟ್ ಬಂಗಾರದಿಂದ ಆಭರಣ ಮಾಡುವುದನ್ನು ಹೊಸತಾಗಿ ಕೆಲವರು ಕಲಿತುಕೊಳ್ಳಬೇಕಾಗಲೂ ಬಹುದು. ಆದರೆ, ಇದುವರೆಗೆ ಸರಕಾರವು ಇಂತಹ ಅಸಹಾಯಕರನ್ನು ನಡುನೀರಲ್ಲಿ ಕೈ ಬಿಟ್ಟಿಲ್ಲ ಉದಾಹರಣೆಗಾಗಿ, ನೀರಾವರಿ ಯೋಜನೆಗಳಿಂದಾಗಿ ನಿರಾಶ್ರಿತರಾದವರು, ಪಾನ ಪ್ರತಿಬಂಧದಿಂದ ಕೆಲಸ ಕಳೆದುಕೊಂಡವರನ್ನು ಹೇಳಬಹುದು. ಹಾಗಿರುವಾಗ ಅಕ್ಕಸಾಲಿಗರ ಸಹಾಯಕ್ಕೆ ಸರಕಾರ ಅವಶ್ಯ ಬಂದೇ ಬರುವುದು. ಅವರಿಗೆ ಸೂಕ್ತ ಪರಿಹಾರವನ್ನು ನೀಡಲು ಸಿದ್ಧವಿದೆ. ೧೪ ಕ್ಯಾರೆಟ್ ಬಂಗಾರದಿಂದ ಆಭರಣ ಮಾಡಲು ತರಬೇತಿ ನೀಡುವ, ಯಂತ್ರಾದಿಗಳನ್ನು ಕೊಳ್ಳುವುದಕ್ಕೆ ಸಹಾಯ ನೀಡುವ ಯೋಜನೆಗಳೂ ಸರಕಾರದಲ್ಲಿವೆ. ಆದುದರಿಂದ ಬಂಗಾರದ ಮೇಲೆ ಹೆಚ್ಚಿನ ವ್ಯಾಮೋಹಗೊಳ್ಳದೆ ದೇಶದ ಪ್ರಗತಿಯಲ್ಲಿ ಸಹಯೋಗ ನೀಡುವ ಏಕಮೇವ ಉದ್ದೇಶದಿಂದ ಬಂಗಾರದ ಶಾಸನವನ್ನು ಸ್ವಾಗತಿಸಬೇಕು. ಅದನ್ನು ಸಂಪೂರ್ಣ ಯಶಸ್ವಿಯಾಗುವಂತೆ ನೋಡಿಕೊಳಬೇಕು.

## ಅಲ್ಲಲ್ಲಿಯ ಸುದ್ದಿ ಸಾರ

**ಉಡುಪಿಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು** ನಾಗರಿಕರ ಹಾಗೂ ನಗರ ಸಭೆಯ ಆಶ್ರಯದಲ್ಲಿ ವಿಜೃಂಭಣೆಯಿಂದ ಜರಗಿತು. ಮುಂಜಾನೆ ಗಾಂಧೀ ಮೈದಾನಿನಲ್ಲಿ ನಗರಸಭಾಪತಿಗಳಿಂದ ಧ್ವಜವಂದನೆಯಾಗಿ ಶಾಲಾಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಸಂಜೆ ಎನ್. ಸಿ. ಸಿ., ಎ. ಸಿ. ಸಿ ಪೆರೇಡುಗಳು ಜರಗಿ, ನಗರಸಭಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣ್ಯೆಯವರು ವಂದನೆ ಸ್ವೀಕರಿಸಿದರು. ಬಳಿಕ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭಾರಂಭದಲ್ಲಿ ಶ್ರೀ ಪಿ. ಆರ್. ಶೆಣ್ಯೆಯವರು ಸ್ವಾಗತಿಸಿದ ನಂತರ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಭಾಷಣಮಾಡಿ ರಾಷ್ಟ್ರ ಪುರುಷರ ಜೀವನ ಪಾಠವನ್ನು ವಿದ್ಯಾರ್ಥಿಗಳು ತಿಳಿಯುವುದು ಅವಶ್ಯಕವೆಂದು ಹೇಳಿ ಮುನ್ಸಿಪಲ್ ವ್ಯಾಯಾಮ ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸಿದರು. ಶ್ರೀ ಬಾಗಲೋಡಿ ದೇವರಾಯರು ಮಾತನಾಡಿ ನಮ್ಮ ಮಹಾ ಪುರುಷರ ಕುರಿತು ಹೆಚ್ಚಾಗಿ ಅಭ್ಯಾಸ ಮಾಡಿಕೊಳ್ಳಬೇಕೆಂದರು. ಶ್ರೀಮತಿ ವಿಜಯಾ ಬಾಗಲೋಡಿಯವರಿಂದ ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ, ಬಹುಮಾನ ವಿತರಣೆಯಾಯಿತು.

ಅಧ್ಯಕ್ಷ ಶ್ರೀ ಪೈಗಳು ಮಾತಾಡುತ್ತಾ ನಮ್ಮ ದೇಶದ ಪ್ರಗತಿಗೆ ನಾವು ಹೆಚ್ಚು ಹೆಚ್ಚಾಗಿ ಶ್ರಮಿಸಬೇಕೆಂದರು. ಅಂತ್ಯದಲ್ಲಿ ಶ್ರೀ ಕೆ. ಎಂ. ಮಧ್ಯಸ್ತರು ವಂದಿಸಿದರು.

**ಮಣಿಪಾಲದಲ್ಲಿ ಸೈಂಟ್ ಥೋಮಸ್ ಇಗರ್ಜಿಯ ಶಿಲಾನ್ಯಾಸ—** ಇದೇ ತಾ. 27ರಂದು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕೇರಳದ ಕ್ರಿಶ್ಚಿಯನ್ ವಿದ್ಯಾರ್ಥಿಗಳ ಮತ್ತು ಇತರ ಪ್ರಯತ್ನದಿಂದ ಕಟ್ಟಲಾಗುವ ಕಾಲೇಜಿಗೆ ಸಮೀಪದಲ್ಲಿ ರೂ. 30,000 ವೆಚ್ಚದಲ್ಲಿ ಸೈಂಟ ಥೋಮಸ್ ಇಗರ್ಜಿಯ ಶಿಲಾನ್ಯಾಸ ಸಮಾರಂಭವು ಕೇಂದ್ರದ ಉಪಸಚಿವ ಶ್ರೀ ಎ. ಎಂ. ಥೋಮಸ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಸೆಂಟ್ರಲ್ ಕೇರಳದ ಬಿಶೊಪ್ ರೈ. ರೆ. ಡಾ. ಎಂ. ಎಂ. ಜೋನ್‌ರವರು ಶಿಲಾನ್ಯಾಸ ಗೈದರು.

ಪ್ರಾರ್ಥನಾ ನಂತರ ಶಿವಳ್ಳಿ ಪಂಚಾಯತ್ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ತಮ್ಮ ಪಂಚಾಯತಿನ ಪರವಾಗಿ ಮಾನ್ಯ ಅತಿಥಿಗಳಿಬ್ಬರಿಗೂ ಬೇರೆ ಬೇರೆ ಮಾನಪತ್ರಗಳನ್ನರ್ಪಿಸಿದರು. ಯೂನಿಯನ್ ಕ್ರಿಶ್ಚಿಯನ್ ಕಾಂಗ್ರೆಗೇಶನ್ ಅಧ್ಯಕ್ಷ ಡಾ| ಜೆ. ಅಲೆಕ್ಸಾಂಡರ್ ರವರು ಸ್ವಾಗತ ಭಾಷಣ ಗೈದ ಬಳಿಕ, ಕಾರ್ಯದರ್ಶಿ ಶ್ರೀ ಕೆ. ಎ. ಅಬ್ರಹಾಂರವರು ವರದಿವಾಚನ ಗೈದರು.

ಅಧ್ಯಕ್ಷ ಶ್ರೀ ಎ. ಎಂ. ಥೋಮಸರು ಮಾತಾಡುತ್ತಾ, ಮಣಿಪಾಲವು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿರುವುದು ಮಾತ್ರವಲ್ಲದೇ ಧಾರ್ಮಿಕಾಭಿವೃದ್ಧಿಯನ್ನೂ ಸಾಧಿಸಿರುವುದೂ ಶ್ಲಾಘನೀಯ; ಅದರಲ್ಲೂ ವಿದ್ಯಾರ್ಥಿಗಳ ಸ್ವಂತ ಕಾರ್ಯವು ಎಲ್ಲರಿಗೂ ಮಾರ್ಗದರ್ಶಕವಾಗಿ ಡಾ| ಪೈಗಳಿಂದ ನವೀನವಾಗಿ ರೂಪುಗೊಂಡ ಮಣಿಪಾಲದ ವಿದ್ಯಾಕೇಂದ್ರವು ಸರ್ವರಿಗೂ ಮಾರ್ಗದರ್ಶಕವಾಗಿ ಯುನಿವರ್ಸಿಟಿಯಾಗಲೆಂದು ಹಾರೈಸಿದರು.

ಡಾ. ಟಿ. ಎಂ. ಎ. ಪೈಗಳು ಮಾತನಾಡುತ್ತ ದೇವರ ಪ್ರಾರ್ಥನೆ ಅಗತ್ಯವೆಂದರು.

ರೈ. ರೆ. ಡಾ. ಜಾನ್‌ರವರು ಹಿಂದಿನಿಂದಲೂ ಹಿಂದೂ ಅರಸರು ಕ್ರಿಶ್ಚಿಯನ್ ಧರ್ಮದ ಬೆಳವಣಿಗೆಯಲ್ಲಿ ತೋರಿಸಿದ ಸಹಿಷ್ಣುತೆಯನ್ನು ಶ್ಲಾಘಿಸಿ ಮಾತನಾಡಿದರು.

ಅಂತ್ಯದಲ್ಲಿ ಡಾ. (ಶ್ರೀಮತಿ) ಇ. ಥೋಮಸರು ವಂದನೆಗಳನ್ನು ಸಲ್ಲಿಸಿದರು.

## ರಾಜ್ಯಗಳ ರಾಡಿ

ಮಧ್ಯಪಾನ ಪ್ರತಿಬಂಧವು ಕೇವಲ ಆದರ್ಶವೆಂದೂ ಅದನ್ನು ವ್ಯವಹಾರದಲ್ಲಿರಿಸುವುದರಿಂದ ಸರಕಾರಕ್ಕೆ ದೊಡ್ಡ ನಷ್ಟವಾಗುವುದೆಂದೂ ಆದುದರಿಂದ ರಾಷ್ಟ್ರೀಯ ಗಂಡಾಂತರದ ಪರಿಸ್ಥಿತಿಯಲ್ಲಿ ಪ್ರತಿಬಂಧವನ್ನು ಕಿತ್ತು ಹಾಕಿ ಆದಾಯವನ್ನು ಹೆಚ್ಚಿಸಬೇಕೆಂದೂ ವಾದವಿವಾದ ಒಂದು ಸಮಯದಲ್ಲಿ ಆ ನೇತು ಓಮಾಚಲ ಪ್ರತಿಧ್ವನಿಸಿತು. ಹೆಚ್ಚಿನ ರಾಜ್ಯ ಸರಕಾರಗಳು ಈ ನೀತಿಯನ್ನು ಪುನರ್ವಿಮರ್ಶಿಸುವ ಯೋಚನೆ ಮಾಡಿದುವು. ಆದರೆ, ಗುಜರಾಥ, ಮಹಾರಾಷ್ಟ್ರ, ಮದ್ರಾಸಗಳು ತಮ್ಮ ನಿಲುಮೆಯನ್ನು ಬದಲಾಯಿಸಲು ಯೋಜಿಸಲೇ ಇಲ್ಲ. ಆದುದರಿಂದಲೇ ಮೈಸೂರಿನ ಮುಖ್ಯ ಮಂತ್ರಿಗಳು ಹೇಳಿದರು: "ಈ ವಿಷಯದಲ್ಲಿ ಇಡಿಯ ಭಾರತದಲ್ಲಿ ಒಂದೇ ನೀತಿಯಿರಬೇಕು".

ರಾಜ್ಯಗಳಲ್ಲಿ ಹೊಡೆದಾಟ ನಡೆಯುತ್ತಿದ್ದಂತೆಯೇ ಕೇಂದ್ರ ಸರಕಾರದಿಂದ ಅದಕ್ಕೆ ಪ್ರತಿಗಾಳಿಯು ಬೀಸಿತು. ಪಾನಪ್ರತಿಬಂಧವನ್ನು ಕಿತ್ತೊಗೆಯುವುದೆಂದರೆ, ನೈತಿಕ ಅಧಃಪತನ ಮಾಡಿಕೊಂಡಂತೆ. ಸಂರಕ್ಷಣೆಗೆ ಹೆಚ್ಚಿನ ಹಣ ಬೇಕೆಂದು ಜನತೆಗೆ ಅಮಲು ಕುಡಿಸಿ ಅವರನ್ನು ಸುಲಿಯುವುದಲ್ಲ, ನೈತಿಕ ಅಧಃಪತಿತರನ್ನು ಕೂಡಿಕೊಂಡು ನಾವು ಯಾವ ಸಮರದಲ್ಲಿ ಗೆದ್ದೇವು? ಆದುದರಿಂದ ಪ್ರತಿಬಂಧವು ಸಂಪೂರ್ಣ ಯಶಸ್ವಿಯಾಗುವಂತೆ ಕಾನೂನನ್ನು ಬಲಪಡಿಸಬೇಕೇ ಹೊರತು ಕಿತ್ತು ಹಾಕುವುದಲ್ಲ. ಕೈಯ ಒಂದು ಬೆರಳು ಗಾಯಗೊಂಡಿತೆಂದರೆ, ಇಡಿಯ ಕೈಯನ್ನೇ ಕಿತ್ತು ಹಾಕುವ ಸಾಹಸವನ್ನು ಯಾರೂ ಮಾಡುವುದಿಲ್ಲ. ಗಾಯ ಮುಚ್ಚಲು ಉಪಚಾರ ನಡೆಸುತ್ತಾರೆ. ಹಾಗೆಯೇ ಈ ನಿಟ್ಟಿನಲ್ಲಿಯೂ ತತ್ಪರರಾದರೆ, ಅದೇಕೆ ಅಸಾಧ್ಯವೆನಿಸೀತು? ಕೇಂದ್ರದ ಒಬ್ಬಿಬ್ಬರ ಮಾತುಗಳಿಂದ ರಾಜ್ಯಗಳ ರಾಜಕಾರಣವೇ ಪರಿವರ್ತನೆಗೊಂಡಿದೆ. ರಾಜ್ಯಗಳ ಮನಸ್ಸಿನಲ್ಲಿ ಕೊಳಚೆಯಾಡುತ್ತಿದ್ದ ರಾಡಿಯೀಗ ತುಸು ತಿಳಿಯಾಗಿದೆ. ಮುಂದೆಂದಾದರೂ ಪ್ರತಿಬಂಧ ತೆಗೆಯುವ ಯೋಚನೆ ರಾಜ್ಯಗಳ ಮನದಲ್ಲಿ ಮೂಡದಿರಲಿ.

---

### ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 332/1962

ನಾರಾಯಣ ಪ್ರಭು —ವಾದಿ

ಲಚ್ಚಮ್ಮ ಶೆಡ್ತಿ ಕೂಡಾ—ಪ್ರತಿವಾದಿಯರು.

6ನೇ ಪ್ರತಿವಾದಿ ರಾಧಮ್ಮ ಶೆಡ್ತಿ, ಬಚ್ಚ ಶೆಡ್ತಿರ ಮಗಳು. ಕುಂದಾಪುರ ತಾಲ್ಲೂಕು ಶಾನಾವರ ಗ್ರಾಮದ ಸಳ್ವಾಡಿಯಲ್ಲಿರುವವಳು P. O. ಸಳ್ವಾಡಿ

ವಾದಿಯು ಪ್ರತಿವಾದಿರ ಮೇಲೆ ತಾರೀಕು 10—6—1943ರ ಮೂಲಗೇಣಿ ಎಗ್ರಿಮೆಂಟು ಪ್ರಕಾರ ಬರತಕ್ಕ ವಿಳಂಬಿ, ವಿಕಾರಿ, ಶಾರ್ವರಿ, ಪ್ಲವ ಸಂ|ರಗಳ ಗೇಣಿ ಬಾಕಿ ಬಗ್ಗೆ ವಾದಿಯು ಮೇಲ್ಕಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 11—2—1963ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

**K. Raghunatha Shenoy**

Advocate for Pltf.

Coondapoor, 21—1—1963.

**ಎಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರ ಆಯ್ಕೆ**— ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಬೆಂಗಳೂರಿನಲ್ಲಿ ತಾ. 18—1—1963ರಲ್ಲು ರಾಜ್ಯದ ಸಹಕಾರಿ ಎಪೆಕ್ಸ್ ಬ್ಯಾಂಕಿನ ಡೈರೆಕ್ಟರ ಮಂಡಳಿಯಲ್ಲಿ ನಡೆದ ಚುನಾವಣೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು ವರು ಶ್ರೀಯುತ ಹೆಗ್ಡೆಯವರು ದ. ಕ. ಜಿಲ್ಲಾ ಸಹಕಾರಿ ಬ್ಯಾಂಕಿನ ಪ್ರತಿನಿಧಿಯಾಗಿ ಎಪೆಕ್ಸ್ ಬ್ಯಾಂಕಿನ ಡೈರೆಕ್ಟರರಾಗಿರುವರು.

**ಮುಂಬಯಿ ಕನ್ನಡ ಸಾಹಿತ್ಯ ಕೂಟ**— ಇದರ ಮಾಸಿಕ ಸಭೆಯು 12-1-63ರಂದು ಸಂಘದ ಕಾರ್ಯಾಲಯದಲ್ಲಿ ಜರಗಿದಾಗ ಮುಂಬೈಯ ಸುಪ್ರಸಿದ್ಧ ನಾಟಕ ದಿಗ್ದರ್ಶಕರೆನಿಸಿರುವ ಶ್ರೀ ಆರ್. ಡಿ. ಕಾಮತರು ಬರೆದಿರುವ 'ಹೃದಯ ದೇಗುಲ ಮತ್ತು ತಾಯಿ' ಎಂಬ ಏಕಾಂಕ ನಾಟಕವನ್ನು ಶ್ರೀ ಪಂ. ಮಾಪುಲಿ ಗೋಪಾಲಾಚಾರ್ಯರು ಉದ್ಘಾಟಿಸಿ ಶ್ರೀ ಕಾಮತರನ್ನು ಅಭಿನಂದಿಸಿದರು. ಕೂಟದ ಗೌರವ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಹಾವನೂರರು ಹಿರಿಯ ವಿದ್ವಾಂಸರಾದ ಶ್ರೀ ಶಂ. ಬಾ. ಜೋಶಿಯವರ ಸಾಹಿತ್ಯದ ಕುರಿತು ಮಾತನಾಡಿ ಅವರ ಸಾಹಿತ್ಯ ಸಮೀಕ್ಷೆಯನ್ನು ಮಾಡಬೇಕೆಂದರು.

**'ಕರ್ನಾಟಕ ಥರ್ಮೋಫ್ಲ' ರಾತ್ರಿ ಪ್ರೌಢ ಶಾಲಾ ಹಳೆ ವಿದ್ಯಾರ್ಥಿ ಸಂಘ ಮುಂಬೈ**—ಪ್ರೊ| ಎಮ್. ಕೆ. ವಿ ಶೆಟ್ಟಿ, ಅವರು ಏರ್ಪಡಿಸಿದ ಸಂಘದವರು ಶಾಲಾ ಎಸ್. ಎಸ್. ಸಿ. ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಸತ್ಕಾರ ಕೂಟಕ್ಕೆ ಶ್ರೀ ಸಿ. ವಿ. ರಾಮಚಂದ್ರರಾಯರನ್ನು ಸ್ವಾಗತಿಸಿ ಅವರ ಪರಿಚಯ ಮಾಡಿಕೊಟ್ಟರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಲ್ ಜೆ. ಎಮ್. ಗೋಮ್ಸ್‌ರು ಶಾಲಾ ವಿದ್ಯಾರ್ಥಿಗಳಿಗೆ ಹಳೆ ವಿದ್ಯಾರ್ಥಿ ಸಂಘದ ಮಹತ್ವವನ್ನು ವಿವರಿಸಿದರು. ಶಾಲಾ ಗೌ| ಪ್ರ| ಕಾರ್ಯದರ್ಶಿಯಾದ ಶ್ರೀಗಳಾದ ಜಗನ್ನಾಥ ಪಿ. ಶೆಟ್ಟಿ, ಕೆ. ವಿ ರಾವ್, ಕೆ. ಯನ್. ಶೆಟ್ಟಿ ಹಾಗೂ ಶ್ರೀ ಶ್ರೀಧರ ಇವರು ಭಾಷಣವಿತ್ತರು. ಅಂದಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಶ್ರೀ ರಾವ್ ಅವರು ಹಳೆ ವಿದ್ಯಾರ್ಥಿ ಸಂಘದವರು ನೀಡಿದ ಸತ್ಕಾರಕ್ಕಾಗಿ ಅಭಿನಂದಿಸಿ ಸಂಘದ ಶ್ರೇಯಸ್ಸಿನ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಗೌ| ಪ್ರ| ಕಾರ್ಯದರ್ಶಿ ಶ್ರೀ ಭಾಸ್ಕರ ಜಿ. ಶೆಟ್ಟರು ಅಭಿನಂದನೆಯನ್ನಿತ್ತರು.

**ಶ್ರೀ ಬಾಗ್ಲೋಡಿ ದೇವರಾಯರಿಗೆ ಮಾನಪತ್ರ ಸಮರ್ಪಣೆ**—ಇಟಲಿಯಲ್ಲಿ ಭಾರತದ ಪ್ರಥಮ ಕಾರ್ಯದರ್ಶಿಯಾಗಿರುವ ಶ್ರೀ ಬಾಗ್ಲೋಡಿ ದೇವರಾಯರಿಗೆ, ಇದೇ ತಾ. 23ರಂದು, ಉಡುಪಿ ನಗರ ಸಭೆಯವರು ಮತ್ತು ನಾಗರಿಕರು ಮಾನಪತ್ರವನ್ನು ಸಮರ್ಪಿಸಲು ಸಮಾರಂಭವೊಂದನ್ನೇರ್ಪಡಿಸಿದ್ದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಅತಿಥಿಗಳನ್ನು ಸ್ವಾಗತಿಸಿ, ಮಾನ್ಯ ಅತಿಥಿಗಳ ಖ್ಯಾತಿ ಹಾಗೂ ಸಾಹಿತ್ಯ ಸೇವೆಯ ಕುರಿತು ಉಲ್ಲೇಖವಿರುವ ಮಾನಪತ್ರವನ್ನು ಅವರಿಗರ್ಪಿಸಿದರು.

ಅತಿಥಿಗಳು ಮಾತಾಡುತ್ತಾ, ನಾವು ಮಾತನ್ನು ಕಡಿಮೆ ಮಾಡಿದರೆ, ತುಂಬಾ ಕೆಲಸಗಳನ್ನು ಸಾಧಿಸಬಹುದೆಂದೂ ಇಟಲಿಯನರು ಮಾತಿನ ಜೊತೆಗೆ ಕೆಲಸ ಕೂಡಾ ಮಾಡುತ್ತಾರೆಂದೂ ವಿದೇಶಗಳಲ್ಲಿ ನಮ್ಮ ದೇಶದ ಧೋರಣೆಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಾವು ಹೋಗಲಾಡಿಸಬೇಕೆಂದೂ ಹೇಳಿದರು. ಅಂತ್ಯದಲ್ಲಿ ಶ್ರೀ ಕೆ. ಎಂ. ಮುದ್ಯರು ಧನ್ಯವಾದ ಸಮರ್ಪಣೆಗೈದರು.

**ರೋಟರಿ ಸಭೆಯಲ್ಲಿ ಬಾಗಲೋಡಿಯವರು**-ಇದೇ ತಾ. 22ರಂದು ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ರೋಟರಿ ಸಭೆಯಲ್ಲಿ ಶ್ರೀ ಬಾಗಲೋಡಿ ದೇವರಾಯರು ಮುಖ್ಯ ಅತಿಥಿಗಳಾಗಿ ಭಾಷಣವಿತ್ತರು.

ಪ್ರಾರಂಭದಲ್ಲಿ ಶ್ರೀ ಟಿ ಆರ್. ಎ. ಪೈಗಳು ಸ್ವಾಮಿ ವಿವೇಕಾನಂದರ ಹಿತೋಪದೇಶಗಳನ್ನು ವಾಚಿಸಿದರು. ಶ್ರೀ ಎ. ಜಿ. ಆಳ್ವೆಯವರು ಹಿಂದಿನ ಸಭೆಯ ವರದಿಗಳನ್ನು ಒಪ್ಪಿಸಿದರು. ಶ್ರೀ ಬಿ. ಶೇಷಗಿರಿ ಪ್ರಭುಗಳು ರೋಟರಿ ಸುಗಜಿನ ಕುರಿತು ಪ್ರಸ್ತಾಪಿಸಿದರು ಶ್ರೀ ಕೆ ಕೆ. ಪೈಗಳು ಶ್ರೀ ಬಾಗಲೋಡಿಯವರ ಪರಿಚಯ ಭಾಷಣ ಮಾಡಿದರು

ಶ್ರೀ ಬಾಗಲೋಡಿಯವರು ಮಾತಾಡುತ್ತಾ, ದೀರ್ಘ ಕಾಲದ ನಂತರ ಸ್ವದೇಶಕ್ಕೆ ಬಂದಿರುವ ಅಲ್ಪಾವಧಿಯಲ್ಲಾದರೂ ನಮ್ಮ ದೇಶದ ಪ್ರಗತಿಯ ಕುರಿತು ಅಭ್ಯಾಸ ಪಡೆಯಬೇಕೆಂಬುದೇ ನನ್ನ ಉದ್ದೇಶವೆಂದೂ ಡಾ| ಮಾಧವ ಪೈಗಳ ಬೃಹತ್ ಯೋಜನೆಯು ಎಲ್ಲರಿಗೂ ಆದರ್ಶವಾಗಿದೆ, ಎಂದೂ ಹೇಳಿ ಇಟಲಿಯ ಜನಜೀವನದ ಕುರಿತು ಮಾತನಾಡಿದರು.

ಶ್ರೀ ಎ. ಜೆ. ಆಳ್ವೆಯವರಿಂದ ಧನ್ಯವಾದ ಸಮರ್ಪಣೆಯಾಯಿತು

**ಪ್ರಭಾ ಕ್ಲಿನಿಕ್‌ನ ಆರಂಭೋತ್ಸವ**
ಇದೇ ತಾ. 27ರಂದು ಶಿರ್ವದಲ್ಲಿ ಡಾ|| ಎಮ್ ರಾಜಶೇಖರ ಹೆಗ್ಡೆಯವರ ನೂತನ ಪ್ರಭಾ ಕ್ಲಿನಿಕಿನ ಆರಂಭೋತ್ಸವವನ್ನು ಮಣಿಪಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಯ ಸುಪರಿಂಟೆಂಡೆಂಟ್ ಡಾ| ಟಿ. ಫೋಮಸರು ನೆರವೇರಿಸಿದರು. ಶ್ರೀ ಟಿ. ಎ. ಪೈಯವರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಪಿ. ವಿಠಲ ಶೆಟ್ಟರು ಸ್ವಾಗತಿಸಿದರು ಅಂತ್ಯದಲ್ಲಿ ಡಾ| ರಾಜಶೇಖರ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

**ವಾರ್ಷಿಕ ಮಹಾಸಭೆ**— ಉಡುಪಿ ಪರಿಯಾಳ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವವು ಡಾ. ಸಂಜೀವನಾಥ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ತಾ 25—1—63ರಂದು ಜರಗಿತು ಸಂಘದ ಅಧ್ಯಕ್ಷ ಟಿ. ಟಿ. ಸಾಲಿಯಾನರು ಸ್ವಾಗತಿಸಿದರು. ಶ್ರೀ ಡಿ. ಎಸ್: ಕಡಬಿದ್ರೆಯವರು ಸಂದೇಶಗಳನ್ನು ಓದಿದರು. ಕಾರ್ಯದರ್ಶಿ ಪಿ. ಬಿ. ಬಂಗೇರರು ಓದಿದ ಗತವರ್ಷದ ವರದಿ ಸಭೆ ಅಂಗೀಕರಿಸಿತು, ಮುಂದಿನ ವರ್ಷಕ್ಕೆ ಕಾರ್ಯಕಾರಿ ಸಮಿತಿ ರಚಿಸಿದ ಬಳಿಕ ಸಭಿಕರ ಭಾಷಣಗಳಾದುವು.

**ವಿವೇಕಾನಂದ ದಿನಾಚರಣೆ**-ಉಡುಪಿ ಮೋಡರ್ನ್ ಹಾ| ಎ| ಸ್ಕೂಲಾ ಪ್ರಗತಿಶೀಲ ಸಮಾಜದ ವತಿಯಿಂದ ವಿವೇಕಾನಂದ ಶತಸಾಂವತ್ಸರಿಕ ದಿನಾಚರಣೆಯು ಶ್ರೀ ಯು. ರತ್ನಾಕರ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

**ಅಂಬಲಪಾಡಿ**—ಶ್ರೀ ಲಕ್ಷ್ಮೀ ಜನಾರ್ದನ ಯಕ್ಷಗಾನ ಮಂಡಳಿಯ ವಾರ್ಷಿಕೋತ್ಸವವು ಶ್ರೀ ಆಗ್ಗಾಜಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಆನಂದ ಗಾಣಿಗರು ಸ್ವಾಗತಿಸಿದರು ಶ್ರೀ ಕೆ. ಭೋಜ ಪೂಜಾರಿಯವರು ವರದಿ ಓದಿದರು. ಅಧ್ಯಕ್ಷರು ಯಕ್ಷಗಾನ ಕಲೆಯ ಮೇಲೆ ಅಂಬಲಪಾಡಿಯ ಜನತೆಗಿರುವ ಪ್ರೇಮದ ಸಂಕೇತವಾಗಿರುವ ಈ ಸಂಘವು ಅಭಿವೃದ್ಧಿ ಹೊಂದಲೆಂದರು ಸಂಘದ ಕಲಾವಿದರು ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು.

**ಶಿರ್ವ**— ದಿನಾಂಕ 26ರಲ್ಲು ಶಿರ್ವ ಮಿತ್ರ ಬೆಟ್ಟು ಬೋರ್ಡ್ ಎ. ಶಾಲೆಯಲ್ಲಿ ಪ್ರಜಾರಾಜ್ಯೋತ್ಸವವು ಶ್ರೀ ಎಮ್. ವೆಂಕಟರಮಣ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಅನಸೂಯರವರು ಬಾಲಕರಿಂದ ಹಾಡು ನೃತ್ಯಗಳನ್ನು ನೆರವೇರಿಸಿದರು. ಬಹುಮಾನ ವಿತರಣೆಯ ಬಳಿಕ ಅಧ್ಯಕ್ಷರು ಭಾಷಣವಿತ್ತರು. ಮಕ್ಕಳಿಗೆ ಸಿಹಿತಿಂಡಿ ವಿತರಣೆಯಾದ ಬಳಿಕ ಶ್ರೀ ಶ್ರೀಕರಯ್ಯನವರು ವಂದಿಸಿದರು.

**ರಾಧಾಕೃಷ್ಣನ್**

ಪ್ರಜಾಪ್ರಭುತ್ವದ ಸರ್ವಶ್ರೇಷ್ಠನೆನಿಸಿದ ರಾಷ್ಟ್ರಪತಿ ಡಾ| ರಾಧಾ ಕೃಷ್ಣನ್ ಒಂದು ರಾಷ್ಟ್ರದ ಪ್ರಧಾನರಾಗಲು ತಮ್ಮ ಅರ್ಹತೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾರೆ. "ಚೀನಾದ ಸೈನಿಕ ಒತ್ತಡವು ನಮ್ಮ ಮೇಲೆ ಬಿದ್ದಿರುವುದು ನಿಜ; ಆದರೆ, ಭಾರತವು ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮತ್ತು ರಾಷ್ಟ್ರಗಳೊಡನೆ ಸ್ನೇಹ ಭಾವನೆಯನ್ನು ಕಾಯ್ದುಕೊಂಡಿರುವ ನಮ್ಮ ಮೂಲಭೂತ ಧೋರಣೆಯನ್ನು ಬದಲಿಸ ಬಯಸುವುದಿಲ್ಲ. "ಯುದ್ಧಗಳಿಂದ ತಂಟೆಗಳು ಪರಿಹಾರ ಗೊಳ್ಳುವುದಿಲ್ಲವೆಂಬುದನ್ನು ಅರಿತಿದ್ದೇವೆ. ಆದರೆ, ನಮ್ಮ ಭದ್ರತೆ ಗಂಡಾಂತರಕ್ಕೆ ಗುರಿಯಾದಾಗ, ನ್ಯಾಯವು ಭಂಗವಾದಾಗ ನಾವು ಆತ್ಮ ರಕ್ಷಣೆಗಾಗಿ ಬಲಪ್ರಯೋಗ ಮಾಡಲೇಬೇಕಾಗುತ್ತದೆ" ಎಂದು ಪ್ರಜಾಪ್ರಭುತ್ವ ದಿನದ ಸಂದರ್ಭ ವಿತ್ತ ಸಂದೇಶದಲ್ಲಿ ದೇಶದ ಉಚಿತ ನೀತಿಯನ್ನು ಬೆಟ್ಟು ಮಾಡಿ ತೋರಿಸಿದ್ದಾರೆ.

**ಚೌ. ಎನ್-ಲಾಯ್**

ಕೊಲಂಬೋ ಸಮ್ಮೇಳನದ ಸೂಚನೆಯನ್ನು ಸಮಗ್ರವಾಗಿ ಒಪ್ಪಿಕೊಂಡಿರುವುದಿಂದು ಜಗಜ್ಜ್ಞಾತವಾಗಿದೆ. ಆದರೆ, ಚೀನೀಯ ಪ್ರಧಾನಿ ಚಾಯ್‌ಯವರು ತತ್ವಶಃ ಮಾತ್ರ ಒಪ್ಪಿದ್ದಾರೆ. ಸೂಚನೆಗಳನ್ನು ಅರ್ಥ ಮಾಡಿಕೊಂಡ ಬಗೆಯನ್ನು ವಿವರಿಸಿದ್ದಾರೆ. ಅವರು ಹೇಳುತ್ತಾರೆ: 'ಚೀನಾ ಭಾರತಗಳೆರಡೂ ತೀವ್ರವಾಗಿ ಮಾತುಕತೆಗಳನ್ನಾರಂಭಿಸುವುದು ಮಹತ್ವದ್ದಾಗಿದೆ. ಯುದ್ಧ ವಿರಾಮವನ್ನು ಜ್ಯಾರಿಗೊಳಿಸುವುದು ಮತ್ತು ಗಡಿ ಯುದ್ಧಕ್ಕೆ ಹಿಂದೆ ಸರಿಯುವ ಬಗ್ಗೆ ಚೀನವು ಕೈಗೊಂಡ ಕ್ರಮಗಳಿಂದಾಗಿ ಇಂತಹ ಮಾತುಕತೆ ನಡೆಸಲು ಅನುಕೂಲ ವಾತಾವರಣ ನಿರ್ಮಾಣವಾಗಿದೆ. 'ಭಾರತೀಯ ಸೈನ್ಯ ಪಡೆಗಳು ತಮ್ಮ ಸ್ಥಳದಲ್ಲಿಯೇ ಇರಬೇಕು" ಎಂಬ ಕೊಲಂಬೋ ಸೂಚನೆಯು ಲಡಖ್ಖ್ಕೆ ಮಾತ್ರವಲ್ಲದೆ ಇಡಿಯ ಗಡಿಗೆ ಅನ್ವಯಿಸುವುದು ಎಂದು ಚೀನ ಅರ್ಥ ಮಾಡಿಕೊಂಡಿದೆ." ಅಂದರೆ, ಚೀನ-ಮತ್ತು ಭಾರತಗಳು ಕೊಲಂಬೊ ಸೂಚನೆಗಳನ್ನು ಅರ್ಥ ಮಾಡಿಕೊಂಡ ವಿಧಿ ಪ್ರತಿ ಪ್ರತ್ಯೇಕವೆನ್ನಬಹುದ?

---

**ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ**

## ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

**ಸಾಹಸ ಭೀಮ ವಿಜಯ (ಗದಾಯುದ್ಧ)** ೦—೮—೦

ಯಕ್ಷಗಾನ ಪರಂಪರೆಯ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

**ಭಾರತದ ಗುರುಕುಲ** ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

**ಉತ್ತರಗದೆ** ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿಮ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

**ಭರತೇಶ ದಿಗ್ವಿಜಯ** ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

**ವಾಲಿ ಸುಗ್ರೀವ (ಬಹುಮಾನಿತ)** ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೊಪ್ಪುವಂತೆ ರಚಿತವಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

**ನವಭಾರತ ಪುಸ್ತಕ ಭಂಡಾರ, ಉಡುಪಿ.**

---

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O. S. 409/1962

ಎಮ್. ಎಚ್. ಅಬೀದ್ ಎಂಡ್ ಬ್ರದರ್ಸ್—ವಾದಿ.

ತಿಮ್ಮಪ್ಪ —ಪ್ರತಿವಾದಿ

ಪ್ರತಿವಾದಿ ತಿಮ್ಮಪ್ಪ, ಸುಮಾರು 55ವ ರ್ಷದ ಶಿರಾಲಿ ಅಳ್ವೆಕೋಡಿ ಮೊಗೆರ ಗೋವಿಂದನ ಮಗ ಉತ್ತರ ಕನ್ನಡ ಜಿಲ್ಲಾ ಶಿರಾಲೆ ಗ್ರಾಮದ ಅಳುವೆಕೋಡಿ ಇವರಿಗೆ—

ವಾದಿಯು ನಿಮ್ಮ ಮೇಲೆ ತಾ. 20-8-1959 ರಲ್ಲು ಸಾಲವಾಗಿ ಪಡೆದ ರೂಪಾಯಿ 1500 ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಹಣ ಬಡ್ಡಿ ಬಗ್ಗೆ ಮೇಲ್ಕಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆ ಇದ್ದಲ್ಲಿ ತಾರೀಕು 8—3—1963ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜ್ರಿ ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯ್ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

**K Raghunatha Shenoy,**
Advocate for Plaintiff
Coondapoor 26—1—1963

---

**ಕಾಸ್ರಗೋಡು ಡಿ. ಮುನ್ಸಿಫ್ ಕೋರ್ಟಿನಲ್ಲಿ**

O.S.No. 280/1960 R.E.P. 398/62

ಆಬೋಕ್ರ ಬ್ಯಾರಿ —ವಾದಿ ಅರ್ಜಿದಾರ

&

1 ರುಕ್ಮಿಣಿ ಅಮ್ಮ, ಪುಂಡೂರು ಪದ್ಮನಾಭ ಪುಣಿತ್ತಾಯರ ವಿಧವೆ—

2. ಪಾರ್ವತಿ ಅಮ್ಮ 1ನೇ ಯವರ ಮಗಳು ವ ನಾರಾಯಣ ಅನಂತ ಪದ್ಮನಾಭ ಬಳ್ಳಕುರಾಯರ ವಿಧವೆ— ಉಡ್ಪಿ ತಾಲ್ಕು ಉಡ್ಪಿ ಟೌನ್ —ಡ್ರೈ. ರು.

ಸದ್ರಿ ಡ್ರೆಸಾಂಡೆಂಟ್ರಿಗೆ ತಿಳಿಸುವದೇನೆಂದ್ರೆ,

ಮೇಲ್ಕಂಡ ಅಮಲ್ಜ್ಯಾರಿಯಲ್ಲಿ ಸ್ಥಿರಾಸ್ತಿ ಜಪ್ತಿ ಆಗಿ ನಿಮಗೆ ಜ್ಯಾರಿ ಅಸಕಲ್ ಪ್ರೊ. ಆರ್ಡರ್. ಹುಕುಂ ನೀವು ಜ್ಯಾರಿಗೆ ಶಿಕ್ಕದೆ ಇದ್ದದ್ರಿಂದ ಸದ್ರಿ ಅಮಲ್ಜ್ಯಾರಿಯು ನಿಮ್ಮ ಹಾಜ್ರತಿ ಬಗ್ಗೆ ತಾ. 22—2—1963ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವ ಸಂಗ್ತಿ ಈ ಮೂಲ್ಕ ತಿಳಿಸೋಣಾಗುತ್ತದೆ.

(Sd) K. P. V. B. Ejman
Advocate for Petitioner.
Kasaragod, 29—1—1963

## ಬಂಗಾರದ ಸಂಗ್ರಹಕ್ಕೆ ತಡೆ

(೫ನೇ ಪುಟದಿಂದ)

ಬಂಗಾರ ಕೊಂಡುಕೊಳ್ಳುವವರು, ಆಭರಣ ತಯಾರಿಸುವವರು ಎಲ್ಲವರೂ ಸರಕಾರದಿಂದ ಪರ್ಮಿಟು ಪಡೆಯಲೇ ಬೇಕು ಕಳ್ಳಸಂತೆ ಇನ್ನು ಮುಂದೆ ಪೂರ್ಣವಾಗಿ ಅಂತ್ಯವಾಗುತ್ತದೆ ಇನ್ನೂ ಅಂತ್ಯವಾಗದಿದ್ದರೆ ಬಂಗಾರದ ವ್ಯಾಪಾರವನ್ನೇ ಸರಕಾರ ವಹಿಸಿಕೊಳ್ಳುವ ಎಚ್ಚರಿಕೆಯನ್ನು ವಿತ್ತಮಂತ್ರಿಯವರು ಒತ್ತಿ ಹೇಳಿದ್ದಾರೆ ಇದರಿಂದ ಇನ್ನು ಕಳ್ಳಬಂಗಾರ ಚಲಾವಣೆಯಲ್ಲಿ ಬರುವುದು ದುರ್ಲಭವಾಗುವ ಸಂಭವವಿದೆ ಈ ಶಾಸನಜ್ಯಾರಿಯಿಂದಾಗಿ ಸುಮಾರು ೩ ಲಕ್ಷಕ್ಕಿಂತಲೂ ಮಿಕ್ಕಿ ಅಕಸಾಲೆರಿಗೆ ಕೆಲಸವಿಲ್ಲವಾದಂತಾಗಿರುತ್ತದೆ ಆದರೆ ಅವರಲ್ಲಿ ಯೋಗ್ಯರಾದವರಿಗೆ ಕೆಲಸ ಒದಗಿಸುವ ಯೋಜನೆ ಆಲೋಚಿಸಲಾಗುತ್ತಿದೆಯೆಂದು ಮುರಾರಜಿ ದೇಸಾಯಿಯವರು ಹೇಳಿದ್ದಾರೆ ದೇಶದ ಬಂಗಾರದ ವ್ಯಾಪಾರಿಗಳ ಸ್ಥಿತಿ ಮಾತ್ರ ಸ್ವಲ್ಪ ಚಿಂತಾಜನಕವಾಗಿ ತೋರ ಬಹುದು.

### ಬಂಗಾರ ನಿಯಂತ್ರಣ ಮಂಡಳಿ

ಇಂದು ದೇಶವಿಡೀ "ಕಸ್ಟಮ್ಸ್ ಅಧಿಕಾರಿಗಳು" ಆಗಡಿ ಅಂಗಡಿಗೆ–ಧಾರ್ಮಿಕ ಸಂಸ್ಥೆಗಳಿಗೆ ಹೋಗಿ ಬಂಗಾರದ ಲೆಕ್ಕ ತೆಗೆದುಕೊಳ್ಳುತ್ತಿದ್ದಾರೆ ಈ ಶಾಸನವನ್ನು ಸರಿಯಾಗಿ ಜ್ಯಾರಿಗೆ ತರುವಂತೆ ಬಂಗಾರ ನಿಯಂತ್ರಣ ಮಂಡಳಿಯನ್ನು ಸರಕಾರವು ನಿಯೋಜಿಸಿದೆ ಇದು ದೇಶದ ಬಂಗಾರದ ಚಲನ-ವಲನವನ್ನು ನಿಯಂತ್ರಿಸಿ ಕತ್ತೆ ಹಿಡಿಯಲ್ಪಟ್ಟ ಕೊಳ್ಳುವುದು ಬಂಗಾರದ ಶಾಸನವನ್ನು ಉಲ್ಲಂಘಿಸಿದವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸುವುದು

### ಬಂಗಾರ ವ್ಯಾಪಾರದ ಕುಸಿತ

ದೇಶದ ಪ್ರತಿಯೊಂದು ನಗರದಲ್ಲಿನ ಬಂಗಾರದ ವ್ಯಾಪಾರ ಸ್ತಬ್ಧಗೊಂಡಿದ್ದು ವ್ಯಾಪಾರಿಗಳೆಲ್ಲರೂ ಇಂದು ಈ ವ್ಯಾಪಾರಸ್ಥರ ಸಭೆಗಳು, ಕೂಟಗಳು ಜರಗುತ್ತಿವೆ ಅವರೆಲ್ಲ ತಮ್ಮ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿದ್ದಾರೆ ಮುಂಬೈ–ಮದ್ರಾಸು — ಕಲ್ಕತ್ತಗಳಲ್ಲಿ ಬಂಗಾರ — ಬೆಳ್ಳಿ ವ್ಯಾಪಾರ ಪೂರ್ಣವಾಗಿ ನಿಂತು ಹೋಗಿ ಅಂಗಡಿಗಳಿಗೆ ಬೀಗಮುದ್ರೆಯಾಗಿದೆ ಇದರಿಂದ ಈ ಶಾಸನದ ಪ್ರಭಾವವೆಷ್ಟೆಂಬುದರ ಅರಿವಾಗುತ್ತದೆ ವ್ಯಾಪಾರಸ್ಥರಲ್ಲಿ ನಿರಾಶಾ ಭಾವನೆಯುಂಟಾಗಿದೆ. ವ್ಯಾಪಾರಸ್ಥರ, ಅಕಸಾಲೆರ ಪರಿಸ್ಥಿತಿಯ ಕಡೆಗೂ ಸರಕಾರ ಸ್ವಲ್ಪ ಗಮನ ಕೊಡುವುದು ಅವರ ಹಿತ ದೃಷ್ಟಿಯಿಂದ ಅವಶ್ಯವಾಗಿದೆ

ಈ ಸಂದರ್ಭದಲ್ಲಿ ಸರಕಾರವೂ ಜನರಿಗೆ ಬಹು ತೊಂದರೆಯಾಗುವಂತೆ ಮುಂದೆ ಕಠಿಣ ಕಾನೂನು ಮಾಡಬಾರದು. ಜನರ ಅಭಿಪ್ರಾಯ ಪರಿಸ್ಥಿತಿಗಳನ್ನು ಅದೂ ಸ್ವಲ್ಪ ಗಮನಕ್ಕೆ ತೆಗೆದುಕೊಂಡು ಒಮ್ಮಿಂದೊಮ್ಮೆಲೇ ಇನ್ನು ಅವಸರಪಡಬಾರದು. ಜನರೂ ಸರಕಾರದ ಈ ಮಹಾ ಸತ್ಕಾರ್ಯಕ್ಕೆ ಸಹಕಾರ ಕೊಟ್ಟು ದೇಶದ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕರಾಗಬೇಕೆಂದು ಆಶಿಸೋಣ

—ಶ್ರೀರಾಮತನಯ



ಭಾರತೀಯ ಆಕಾಶವಾಣಿ ನಿಲಯದಿಂದ ಪ್ರಸಾರವಾಗುತ್ತಿರುವ ವಿವಿಧ ಭಾರತೀ ಕಾರ್ಯಕ್ರಮಗಳು ಜನರ ಮೆಚ್ಚುಗೆಯನ್ನು ಗಳಿಸಿವೆ

### ಪ್ರಕಟಣೆ

ಕುಂದಾಪುರ ತಾಲೂಕು ನಂ 74ನೇ ಉಳ್ಳೂರು ಗ್ರಾಮದಲ್ಲಿರುವ ಕಾಳಿಂಗ ಅಡಿಗಳ ಮಗ ಕೃಷ್ಣದೇವ ಅಡಿಗನು ಈ ಮೂಲಕ ಸರ್ವರಿಗೂ ತಿಳಿಸುವದೇನೆಂದರೆ—

ನನ್ನ ತಂದೆಗೆ ನಾನೊಬ್ಬನೆ ಮಗನಾಗಿದ್ದು, ನನ್ನ ಕುಟುಂಬಾರ್ಥವಾಗಿದ್ದ ಸರ್ವ ಸಾಲಗಳನ್ನು ಕುಟುಂಬದ ಬಿಟ್ಟು ಒಂದಂಶದ ಭೂಮಿ ಮಾರಾಟದ ಮೂಲ್ಯ ತೀರಿಸಿರುತ್ತೇನೆ. ವರ್ತಮಾನ ಅರ್ಜನಾರ್ಥ ಮೂಲಗೇಣಿ ವಗೈರೆ ಸಲುವಳಿಗಳನ್ನು ಸಹಾ ನಾನೇ ನನ್ನ ಸ್ವಂತ ಸಂಪಾದನೆ ಹಣಗಳಿಂದ ಸ್ವತಹಾ ಇಲ್ಲವೇ ನನ್ನ ತಂದೆಯವರ ಮುಖಾಂತ್ರ ಈ ತನಕ ಸಲ್ಲಿಸುತ್ತೇನೆ. ಈ ರೀತಿ ನಮ್ಮ ಕುಟುಂಬದಿಂದ ಹೊರಗೆ ಸಲತಕ್ಕ ಸಲುವಳಿಗಳು ಇಲ್ಲವಾದರೂ ಇತ್ತಲಾಗೆ ನನ್ನ ತಂದೆಯವರು ವಿನಾ ಕಾರಣವಾಗಿ ಹೊರಗಿನಿಂದ ಸಾಲ ಪಡೆದು ಕುಟುಂಬಕ್ಕೆ ಇರುವ ಜಾಸ್ತಿ ಆಸ್ತಿಯನ್ನು ಸಾಲಕ್ಕೆ ಹೊಣೆಪಡಿಸುವದು ಇಲ್ಲವೇ ಪರಾಧೀನ ಮಾಡುವ ಇರಾದೆಯಲ್ಲಿದ್ದಾರೆಂಗಿ ನನ್ನ ತಿಳುವಳಿಕೆಗೆ ಬಂದು ಜೀವನೋಪಾಯಕ್ಕಾಗಿ ಬೆಂಗಳೂರಿನಲ್ಲಿರುವ ನಾನು ನನ್ನ ತಂದೆಯವರು ಮಾಡಬಹುದಾದ ಅಕೃತ್ಯಗಳನ್ನು ತಡೆಹಿಡಿಯಲು ಊರಿಗೆ ಬರುವ ಪ್ರಸಂಗವದಗಿ ಹಾಲಿ ಊರಲ್ಲೇ ಇದ್ದೇನೆ ನನ್ನ ತಂದೆಯವರು ವಯೋವೃದ್ಧರು, ಅಲ್ಲದೆ ಇತ್ತೀಚೆಗೆ ಅವರಿಗೆ ಬುದ್ಧಿ ದೌರ್ಬಲ್ಯವುಂಟಾಗಿದೆ. ಅವರು ಮಾಡುವ ವ್ಯವಹಾರವು ಅವರಿಗೇ ತಿಳಿಯದಂತಾಗಿದೆ ನನ್ನ ದ್ವೇಷಿಗಳು ಅವರನ್ನು ಸುಲಭೋಪಾಯದಲ್ಲಿ ಮೋಸಕ್ಕೆ ಗುರಿಪಡಿಸಬಹುದಾಗಿದೆ. ಆದ್ದರಿಂದ ನಾನು ಇದರಿಂದ ಸರ್ವ ಜನರ ಅವಗಾಹನೆಗೆ ತರುವದೇನೆಂದರೆ – ಮುಂದ ಬುದ್ಧಿಯಿಲ್ಲದ ನನ್ನ ತಂದೆಯವರಿಗೆ ಯಾರೂ ಯಾವುದೇ ರೂಪದಲ್ಲಿ ಸಾಲ ಕೊಡಕೂಡದು ಮತ್ತು ನಮ್ಮ ಕುಟುಂಬದ ಎಷ್ಟನ್ನಾದರೂ ಆಸ್ತಿಯನ್ನು ಯಾವುದೇ ರೂಪದಿಂದ ಪರಾಧೀನ ಹೊಂದಕೂಡದು ಆ ರೀತಿ ನನ್ನ ತಂದೆಯವರು ಮಾಡಬಹುದಾದ ಸಾಲಗಳೂ ಆಸ್ತಿ ಪರಾಧೀನಗಳೂ ನನ್ನ ಮೇಲಾಗಲೀ ನಮ್ಮ ಆಸ್ತಿಯ ಮೇಲಾಗಲೀ ಬಾಧಕವಲ್ಲ ನನ್ನ ತಂದೆಯವರ ಪೋಷಣೆಯನ್ನು ಶ್ರದ್ಧೆಯಿಂದ ನಾನೇ ನಡೆಸಿಕೊಂಡು ಬರುತ್ತೇನಾದ ಕಾರಣ ಈ ಅಗತ್ಯತೆ ನಮ್ಮ ಕುಟುಂಬದ ಸಿಸ್ತಿ ಆಸ್ತಿಯನ್ನು ನಾನೇ ನೋಡಿ ಅವುಗಳ ಉತ್ಪತ್ತಿಯನ್ನು ನಾನೇ ಹೊಂದಿ ವರ್ತಮಾನದಿ ಸಲುವಳಿಗಳನ್ನು ನಾನೇ ಪರಿಹರಿಸಿ ಬರಲಿಕ್ಕೆ ಬದ್ಧನಾಗಿದ್ದೇನೆ ಎಂದು. ನನ್ನ ತಂದೆಯವರ ಪತ್ರ ವ್ಯವಹಾರ ನಡೆಸಕೂಡದು ಸರ್ವರಿಗೂ ತಿಳಿದಿರಲಿ

× ಕೃಷ್ಣದೇವ ಅಡಿಗನ ರುಜು

ಮೊಕ್ಕಾಂ ಕುಂದಾಪುರ 16—1—1963.

A HOME AWAY FROM HOME

While on business or pleasure Trip your stay at MANGALORE made more Comfortable & Convenience

HOTEL WOODSIDE

(BOARDING & LODGING)

K S RAO ROAD,

MANGALORE—1.

Aeary and Most Centrally located, Very near to all the Centres.

T No· 1172

ಹೊಸ ಆವೃತ್ತಿ ತಯಾರಾಗುತ್ತಿದೆ

ಕೈಲಾಸವಾಸಿ ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲ ಭಾಷಾಂತರ

೫೦೦ ಅಥವಾ ಹೆಚ್ಚು ಪ್ರತಿಗಳಿಗೆ ಮುಂಗಡದೊಂದಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ

ವಿವರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ.

# THE VIJAYA BANK LTD., UDIPI.

## ದಿ ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ.

ರಿಜಿಸ್ಟರ್ಡ್ ಆಫೀಸು: ವಿಜಯಾ ಬ್ಯಾಂಕ್ ಬಿಲ್ಡಿಂಗ್,
ಲೈಟ್‌ಹೌಸ್ ಹಿಲ್‌ರೋಡು, ಮಂಗಳೂರು-3 ದ. ಕ.

—: ಏಲಂ ನೋಟೀಸು :—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರ್ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 9—2—63ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ, ಅಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಫಶೀಲು.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ಮೊಬಲಗು ಬಡ್ಡಿ ಸಮೇತ 31—12—62 ವರೆಗೆ. |
|---|---|---|
| 374/60 | ಭೋಜ ಸೆಟ್ಟಿ, ರಾಮಪ್ಪ ಸೆಟ್ರ ಮಗ, ಮರ್ನೆ ದೊಡ್ಡಮನೆ, ಪೋಸ್ಟು ಮರ್ನೆ. | 42=85 |
| 330/61 | ಇಸಿದೋರ್ ಮೋನಿಸ್, ಪೀಟರ್ ಮೋನಿಸರ ಮಗ, ಪಡುಬೆಳ್ಳೆ ಗ್ರಾಮ, P. O. ಮೂಡುಬೆಳ್ಳೆ. | 32=60 |
| 411/61 | ಟಿ. ರಘುರಾಮ ಹೆಗ್ಡೆ, ಮುತ್ತಕ್ಕ ಸೆಡ್ತಿಯರ ಮಗ, ಪಡುತೋನ್ಸೆ, P. O. ಕೆಮ್ಮಣ್ಣು. | 840=90 |
| 413/61 | ಬಿ. ಕೃಷ್ಣಪ್ಪ, ರಾಮಪ್ಪರ ಮಗ, ವಳಕಾಡು, ಉಡುಪಿ. | 31=90 |
| 415/61 | ಮಹಾಬಲ ಸೆಟ್ಟಿ, ಸಂಕಯ್ಯ ಸೆಟ್ರ, ಅಳಿಯ, ಬೇಳಂಜೆ ಗ್ರಾಮ, P. O. ಹೆಬ್ರಿ. | 161=25 |
| 431/61 | ಯು. ಹರಿದಾಸ, ಲಕ್ಷ್ಮೀನಾರಾಯಣ ಆಚಾರ್ಯರ ಮಗ, ಲೇಂಡ್‌ಲೋರ್ಡ್, P. O. ಉದ್ಯಾವರ. | 172=05 |
| 408/61 | ಟಿ. ಸತ್ಯಮೂರ್ತಿ, C/o T. ರತ್ನಾಕರ, U. D. C. ಕ್ಲಾರ್ಕ್, ಕಿನ್ನಿಮೂಲ್ಕಿ, ಉಡುಪಿ. | 53/30 |
| 467/61 | — Do — | 74=90 |
| 471/61 | — Do — | 80=15 |
| 484/61 | — Do — | 53=80 |
| 499/61 | — Do — | 129=25 |
| 488/61 | ಮುದ್ದು ಸೆಟ್ಟಿ, ದೇಜು ಸೆಟ್ರ ಮಗ, ಬಡಗುಮನೆ, ಅಲೆವೂರು ಗ್ರಾಮ, P. O. ಅಲೆವೂರು. | 120=70 |
| 10/62 | ಎ. ದೇಜಪ್ಪ ಸೆಟ್ಟಿ. C/o L I C of India, ಬ್ರಾಂಚ್ ಆಫೀಸು, ಉಡುಪಿ. | 157=15 |
| 53/62 | ಡೇನಿಸ್ ಡಿ'ಸಿಲ್ವ, B. A., B. T., ಮಣಿಪಾಲ ಹೈಸ್ಕೂಲ್ P. O. ಮಣಿಪಾಲ. | 276=60 |
| 95/62 | F. ಕರ್ನೆಲಿಯುಸ್, ಬಿ. ಕರ್ನೆಲಿಯುಸ್‌ರ ಮಗ, ಉದ್ಯಾವರ | 112=00 |
| 98/62 | ಯಬ್ ಶಿರಿ, ಇಮಾಮ್ಸಾಯಬ್ ಶಿರಿಯರ ಮಗ, ಅಜ್ಜರಕಾಡು ಉಡುಪಿ. | 81=00 |
| 111/62 | ವಿಲಿಯಮ್ ಆಳ್ವ, ಜೋಸೆಫ್ ಆಳ್ವರ ಮಗ, ತಾಬೈಲು ಮೂಡುಬೆಳ್ಳೆ P. O. ಮೂಡುಬೆಳ್ಳೆ. | 25=10 |
| 139/62 | Do | 219=15 |
| 141/62 | ನಾಗಪ್ಪ ಆಚಾರಿ, ಹಿರಿಯಣ್ಣ ಆಚಾರ್ಯರ ಮಗ, ಉದ್ಯಾವರ ಗ್ರಾಮ P. O. ಉದ್ಯಾವರ. | 29=40 |
| 167/62 | ವಿಲ್‌ಸನ್ ಜತ್ತನ್ನ, ದೇವಪುತ್ರ ಜತ್ತನ್ನರ ಮಗ, ಮಣಿಪಾಲ P. O. ಮಣಿಪಾಲ. | 64=40 |
| 182/62 | ಟಿ. ರತ್ನಾಕರ, ಟಿ. ಲಿಂಗಪ್ಪಯ್ಯನವರ ಮಗ, ತಾಲೂಕು ಆಫೀಸ್, ಉಡುಪಿ. | 188=85 |
| 250/62 | ಶಂಕರ್ ಯನ್. ಸೆಟ್ಟಿಗಾರ, ನಾಗಪ್ಪ ಸೆಟ್ಟಿಗಾರರ ಮಗ, ಕನರ್‌ಪಾಡಿ, ಕಡೆಕಾರು ಗ್ರಾಮ P. O. ಕಡೆಕಾರು. | 253=30 |
| 294/62 | P. ಅಚ್ಚು ಪೂಜಾರಿ, ಅಕ್ಕಣ್ಣ ಪೂಜಾರಿಯವರ ಅಳಿಯ ಹೆರ್ಗ ಗ್ರಾಮ, P. O ಪರ್ಕಳ | 1058=95 |
| 303/62 | ದೇಜು ಸೆಟ್ಟಿ, ಮಂಜಪ್ಪ ಸೆಟ್ಟರ ಮಗ, ಕುಂಜಾಲಗುಡ್ಡೆ, ಕಿದಿಯೂರು ಗ್ರಾಮ P. O. ಕಿದಿಯೂರು. | 81=20 |
| 309/62 | ಮುದ್ದು ಸೆಟ್ಟಿ, ದೇಜು ಸೆಟ್ರ ಮಗ, ಬಡಗುಮನೆ ಅಲೆವೂರು ಗ್ರಾಮ P. O ಅಲೆವೂರು, | 133=50 |
| 326/62 | ಅಬ್ದುಲ್‌ಕಾದರ್ ತೋನ್ಸೆ, ಹಾಜಿ T K ಉಸ್ಮಾನ್ ಸಾಹೇಬರ ಮಗ ಹೂಡೆ, ಕೆಮ್ಮಣ್ಣು P. O ಹೂಡೆ | 185=55 |
| 346/62 | ಮಂಜುನಾಥ ನಾಯ್ಕ, ವೆಂಕಟ್ರಮಣ ನಾಯ್ಕರ ಮಗ ಬೆಳ್ಳಂಪಳ್ಳಿ ಗ್ರಾಮ, P. O. ಬೆಳ್ಳಂಪಳ್ಳಿ. | 158=95 |
| 390/62 | ರಾಜು ಸೇರಿಗಾರ, ಮುತ್ತಯ ಸೇರಿಗಾರರ ಮಗ, ಸೋಡ ಫೇಕ್ಟರಿ, ಉದ್ಯಾವರ. | 83=65 |
| 406/62 | ಮುದ್ದು ಸೆಟ್ಟಿ, ದೇಜು ಸೆಟ್ರ ಮಗ, ಅಲೆವೂರು P. O. | 49=15 |
| 423/62 | M. S. ಪ್ರಭು, ಸುಬ್ಬಣ್ಣ ಪ್ರಭುಗಳ ಮಗ, ಅದಮಾರು ಮಠದ ಬಳಿ, P. O. ಉಡುಪಿ. | 178=15 |
| 447/62 | ಪಿ. ತಾರನಾಥ ರಾವ್, ಪಿ ಶ್ರೀನಿವಾಸ್‌ರಾಯರ ಮಗ ತಾಲೂಕು ಆಫೀಸು ಉಡುಪಿ. | 136=40 |
| 453/62 | ಯಚ್. ಪುರುಷೋತ್ತಮ ಪೈ, ಯಚ್. ರಾಮಕೃಷ್ಣ ಪೈಗಳ ಮಗ, ಪ್ರಮೀಲ್ಲಾ ಬಿಲ್ಡಿಂಗ್ಸ್, ಚಿಟ್ಪಾಡಿ, P. O. ಉಡುಪಿ | 18=25 |
| 464/62 | ಅಚ್ಚು ಪೂಜಾರಿ, ಅಕ್ಕಣ್ಣ ಪೂಜಾರಿಯವರ ಅಳಿಯ, ಹೆರ್ಗ ಗ್ರಾಮ P. O. ಪರ್ಕಳ. | 105=30 |
| 475/62 | ವೀರಣ್ಣ ಸೆಟ್ಟಿ, ಗಿರಿಯು ಸೆಟ್ರ ಅಳಿಯ, ತೆಂಕುಮನೆ, ಮೂಡನಿಡಂಬೂರು ಗ್ರಾಮ, P. O. ಉಡುಪಿ. | 156=70 |
| 485/62 | ಕಿದಿಯೂರು ಮಹಾಬಲ ಸೆಟ್ಟಿ, ಅಣ್ಣಯ್ಯ ಸೆಟ್ರ ಅಳಿಯ, ಲೇಂಡ್ ಲೋರ್ಡ್, ಕೊಕ್ಕರ್ಣೆ P. O. | 218=10 |
| 499/62 | ಪಿ ಬಾಲಕೃಷ್ಣ ರೈ, ಮಹಾಬಲ ರೈಗಳ ಮಗ, ಅತ್ರಾಡಿ ಗ್ರಾಮ, P. O. ಅತ್ರಾಡಿ. | 105=05 |
| 546/62 | ಕಮಲಾ ಬಾಯಿ, ಸುಬ್ರಾಯರ ಮಗಳು, ಕಿನ್ನಿಮೂಲ್ಕಿ, ಉಡುಪಿ. | 53=60 |
| 552/62 | ಲಿಯೋ ಫೆರ್ನಾಂಡೀಸ್, ಬಸ್ತ್ಯಾನ್ ಫೆರ್ನಾಂಡೀಸರ ಮಗ, ಉದ್ಯಾವರ ಗ್ರಾಮ, P. O. ಉದ್ಯಾವರ. | 63=45 |

Office of the
Vijaya Bank Ltd., Udipi.
25—1—1963

B. R. Adyanthaya,
Agent.


## ಮದ್ಯಪಾನದಿಂದ ರಾಷ್ಟ್ರಕಲ್ಯಾಣವೇ?

(೪ನೇ ಪುಟದಿಂದ)

ಲೀ, ದೇಶದ ಆರ್ಥಿಕ ವಿಚಾರದ ಸ್ವಾರ್ಥಕಾಂಕ್ಷೆಗಳಲ್ಲೀ ಕಟ್ಟುಬಿದ್ದು ಇಂಥ, ಕಾನೂನು ಜ್ಯಾರಿಗೆ ತರುವುದು, ಸರ್ವೋದಯವಾದೀ ರಾಷ್ಟ್ರದ ಪ್ರಗತಿಗೆ ಶ್ರೇಯಸ್ಕರವಲ್ಲ.

**ಹಣದಾಸೆಯೋ—?**

ಮದ್ಯಪಾನ ನಿಷೇಧ ರದ್ಧತಿ ಮಾಡುವ ಪ್ರಸ್ತಾವನೆ ಮಾಡಿ ದೇಶದಾದ್ಯಂತ ಕುತೂಹಲವನ್ನರಳಿಸಿತ್ತು. ಅದು ರದ್ಧತಿಗೆ ಕೊಟ್ಟ ಬಲವಾದ ಸಮರ್ಥನೆಯೆಂದರೆ: 'ಇಂದು ಕಳ್ಳಭಟ್ಟಿ ತಯಾರಿ ನಾಕಸ್ಟಿದೆ; ಇದರಿಂದಲೇ ದೇಶಕ್ಕೆ ೩೦೦ ಕೋಟಿ ರೂ.ಗಳಷ್ಟು ಆದಾಯವಾಗುತ್ತಿದೆ. ಹಾಗಿರುವಾಗ ಮದ್ಯಪಾನ ನಿಷೇಧವನ್ನು ರದ್ದುಗೊಳಿಸಿದರೂ ಇನ್ನೂ ಅಧಿಕ ಆದಾಯವಾಗುವುದರಲ್ಲಿ ಸಂಶಯವಿಲ್ಲ'ವೆಂದು ಹೇಳಿದ್ದಾರೆ ಇದು ನಿಜಕ್ಕೂ ಭ್ರಮೆಯಾಗಿದೆ. ಜನರು ತಾವೇನು ಮಾಡುತ್ತಿದ್ದೇವೆಂದು ಅರಿಯದೆ ಮದ್ಯ ತಯಾರಿಸುತ್ತಿರುವಾಗ, ಸರಕಾರ ಕಾರ್ಯಕ್ಕೆ ಇಂಬು ಕೊಟ್ಟು, ಮತ್ತಷ್ಟು ಹೆಚ್ಚಾಗಿ ತಯಾರಿಸುವಂತೆ, ಅನುಕೂಲ ಒದಗಿಸಿಕೊಡುವ, ಮತ್ತು ದೇಶದ ಜನರನ್ನು ಅಧಃಪತನದ ಪರಮಾವಧಿಗಿಳಿಸಿ ಅವರ ಕೈಯಿಂದ ಹಣ ಸೂರೆಗೊಳ್ಳುವ ಈ ಕಾರ್ಯ ಅತ್ಯಂತ ತ್ಯಾಜ್ಯವಾದುದೆಂಬುದನ್ನು ಉಪಾಯವಿಲ್ಲದೆ ಹೇಳಬೇಕಾಗಿದೆ. ೩೦೦ ಕೋಟಿ ಆದಾಯ ಬರಬಹುದೆಂಬ ಯೋಜನೆ ಬರೀ ಕಲ್ಪನಾತೀತ ಮತ್ತು ಭ್ರಮಾತ್ಮಕವಾದುದು. ೫೦ ಕೋಟಿ ಲಾಭವಾದರೆ ದೊಡ್ಡದು.

**ಸತ್ಯ ಪ್ರತಿಜ್ಞೆ!**

ಇತ್ತೀಚೆಗೆ ಬೆಂಗಳೂರಿನಲ್ಲಾದ ಮದ್ಯಪಾನ ನಿಷೇಧ ಸಮ್ಮೇಳನದಲ್ಲಿ ರಾಜ್ಯದ ಸಮಾಜ ಕಲ್ಯಾಣ ಮಂತ್ರಿ ಶ್ರೀಮತಿ ಯಶೋಧರಾದಾಸಪ್ಪನವರ —«ಗಾಂಧೀಜಿಯವರಿಗೆ ಅಗೌರವವಾಗಿರುವ ಈ ಮದ್ಯಪಾನದ ನಿಷೇಧವನ್ನು ನಮ್ಮ ರಾಜ್ಯದ ಎಲ್ಲಾ ಮಹಿಳೆಯರ ಪ್ರತಿನಿಧಿಯಾಗಿ ಪ್ರಬಲವಾಗಿ ಸಮರ್ಥಿಸಿ ಅದರ ರದ್ಧತಿಯನ್ನು ವಿರೋಧಿಸುತ್ತೇನೆ ಇಂಥ ದುಶ್ಶಕ್ತಿಯು ತಾಂಡವ ನೃತ್ಯವಾಡಿದರೆ, ಅಬಲೆಯರಾದ ಸ್ತ್ರೀಯರೂ ಸಬಲೆಯರಾಗಿ, ಪ್ರತಿ ಮನೆ ಮನೆಗಳಲ್ಲಿ ಹೋರಾಟ ಮಾಡಬೇಕು. ಇದು ನನ್ನ ಸತ್ಯ ಪ್ರತಿಜ್ಞೆ' ಎಂದು ಎಚ್ಚರಿಸಿರುವಂಥದ್ದು ನಿಜಕ್ಕೂ ಸ್ತುತ್ಯಾರ್ಹವಾದುದು. ಮೈಸೂರಿನ ಸಚಿವೆಯರ ಈ ಘೋಷಣೆ ಆದರ್ಶವಾದುದು. ಆ ಸಭೆಯಲ್ಲಿ ಮದ್ಯಪಾನ ನಿರೋಧ ರದ್ಧತಿಯನ್ನು ಸಾಮೂಹಿಕವಾಗಿ ವಿರೋಧಿಸುವ ಒಂದು ಠರಾವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

**ಜನತೆಯೂ ವಿರೋಧಿಸುವದು!**

ಒಂದು ವೇಳೆ ಸರಕಾರ ಮದ್ಯಪಾನ ನಿಷೇಧದ ರದ್ಧತಿಯನ್ನು ಮಾಡಿದುದೇ ಆದರೆ ದೇಶದಲ್ಲಿ ಸಾರ್ವತ್ರಿಕ ಆಂದೋಲನಗಳಾಗ ಬಹುದೆಂದು ಕೆಲವು ನಾಯಕಮಣಿಗಳೆಂದಿದ್ದಾರೆ. ನಮ್ಮ ದೇಶದಲ್ಲಿ ಕೇವಲ ಮದ್ಯಕಾಮುಕ ವ್ಯಕ್ತಿಗಳು ಇರುವಲ್ಲೇ ವಿದ್ಯಾವಂತ, ನೀತಿವಂತ ದೇಶಪ್ರೇಮಿಗಳಿದ್ದಾರೆ. ದುಃಶ್ಶಕ್ತಿಗಳು ಸಮಾಜದಲ್ಲಿ ತಾಂಡವಾಡುತ್ತಿರುವುದನ್ನು ಅವರು ಸಹಿಸಲಾರರು. ಪುನಃ ಸಂಘಟನೆ ಮಾಡಿ ಅದನ್ನೂ ವಿರೋಧಿಸುವದು ಖಂಡಿತ. ಸರಕಾರ ಬರೀ ಆದಾಯ ಹೆಚ್ಚಿಸಬಹುದೆಂಬ ಸ್ವಾರ್ಥ ಪಿಪಾಸೆಗೆ ಗುರಿಯಾಗಿ ಜನರನ್ನು ನೀತಿ ಭ್ರಷ್ಟರನ್ನಾಗಿಯೂ ಚಾರಿತ್ರ್ಯ ಹೀನರನ್ನಾಗಿ ಮಾಡುವ ದುಶ್ಶಕ್ತಿಗೆ ಪ್ರೋತ್ಸಾಹಕೊಡಬಾರದು. ಇಂದು ಮದ್ಯ ಸೇವಿಸುತ್ತಿರುವ ಜನತೆ ತೆರೆಯೇ ನಾಳೆ ಮದ್ಯ ಸೇವನೆಯ ಉಪಟಳದಿಂದ, ಸಹನಾತೀತರಾಗಿ ಅದನ್ನು ಕಠೋರವಾಗಿ ವಿರೋಧಿಸುವುದರಲ್ಲಿ ಸಂಶಯವಿಲ್ಲ.

**ಭವಿಷ್ಯದ ಚಿಂತನೆಯಿರಲಿ!**

ಆದುದರಿಂದ ನಮ್ಮ ಸರಕಾರ ದೇಶದ ಸಾರ್ವತ್ರಿಕ ಪ್ರಗತಿಗೆ, ನೈತಿಕ ಬೆಳವಣಿಗೆಗೆ ಕುಠಾರ ಪ್ರಾಯವಾದ ಈ ಮದ್ಯಪಾನವನ್ನು ನಿಷೇಧಿಸದಿದ್ದರೆ ಆಧ್ಯಾತ್ಮ ವಿಕಾಸಕ್ಕೆ ಕೇಂದ್ರ ಬಿಂದುವಾದ ಭಾರತದ ನೈತಿಕ ಅಧಃಪತನವಾಗಿ ಹೇಳ ಹೆಸರಿಲ್ಲದಂತಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಸರಕಾರವೂ ಸಂಕುಚಿತ ಮನೋವೃತ್ತಿಯಿಂದ ಭವಿಷ್ಯದ ಆಲೋಚನೆಯನ್ನು ಮಾಡದೆ ಈ ದುಃಶಕ್ತಿಯನ್ನು ಬೆಳೆಯಬಿಡುವುದು ಸರ್ವಥಾ ಯೋಗ್ಯವಲ್ಲ.

ಒಂದೊಮ್ಮೆ ಬಿರುಗಾಳಿಯಂತೆ ಎದ್ದ ಪಾನ ಪ್ರತಿಬಂಧ ಕಾನೂನಿನ ವಿಸರ್ಜನೆಯ ಕಲಕಮೋಡ ದೂರವಾಗುತ್ತ ಬರುತ್ತಿದೆ, ಇದು ಶುಭ ಚಿಹ್ನೆ. ಇದು ಒಂದು ದೂರ ಸಾಗಿ ಸಂಪೂರ್ಣ ಪ್ರತಿಬಂಧವು ಮುಂದೆ ಬರಲಿ ಎಂದು ಎಲ್ಲ ಕಲ್ಯಾಣ ರಾಷ್ಟ್ರನಿಷ್ಠರ ಹೃದಯಾಂತರಾಳದ ಸದಾಶಯ.

# ಚೀಣೀಯರ ಸವಾಲನ್ನೆದುರಿಸಲು ಸನ್ನದ್ಧರಾಗಿರುವ ವೀರ ಯೋಧರು

ನೇಫಾ ಮತ್ತು ಲಡ್ಡಾಖ್ ರಣರಂಗಗಳಲ್ಲಿ ನಮ್ಮ ಸೈನಿಕರು ಪ್ರದರ್ಶಿಸಿದ ಧೈರ್ಯ ಸ್ಥೈರ್ಯಗಳು, ಸಾಹಸ ಕಾರ್ಯಗಳ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡಬೇಕಾಗಿದೆ

ಬಹುಶಃ ಅಷ್ಟು ಉನ್ನತ ಪ್ರದೇಶದಲ್ಲಿ ಯಾವ ಸೇನೆಯೂ ಯುದ್ಧ ಮಾಡಿರಲಾರದು ಹಿಮಾಲಯ ಪರ್ವತ ಪ್ರದೇಶಗಳಲ್ಲಿ ನಡೆದ ಯುದ್ಧಗಳಲ್ಲಿ ನಮ್ಮ ಸೈನಿಕರು ಮತ್ತು ಸೇನಾಧಿಕಾರಿಗಳು ಪರಮ ಶ್ರೇಷ್ಠ ಮಟ್ಟದ ಪರಾಕ್ರಮವನ್ನು ಪ್ರದರ್ಶಿಸಿದ್ದಾರೆ ನಮ್ಮ ಸೈನಿಕರು ಕ್ರೂರವಾದ ಹವಾಮಾನ ಮತ್ತು ಪ್ರವೇಶ ಅಸಾಧ್ಯವಾದ ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ಕುತಂತ್ರಿಗಳೂ, ವಿಶ್ವಾಸಘಾತಕರೂ, ನೀತಿ ಭ್ರಷ್ಟರೂ ಆದ ಚೀಣೀಯರನ್ನು ಬಹು ದಿಟ್ಟತನದಿಂದ ಎದುರಿಸಿದರು

ಆಕ್ರಮಣಕಾರಿಗಳಿಗೇ ಮೊದಲು ಜಯ ಲಭಿಸುವುದು ಸ್ವಾಭಾವಿಕ. ಇದಕ್ಕೆ ಇತಿಹಾಸದ ಪುಟಗಳತ್ತ ಗಮನ ಹರಿಸಿದರೆ ಸಾಕು, ಹೇರಳವಾದ ದೃಷ್ಟಾಂತಗಳು ದೊರೆಯುತ್ತವೆ ಅದೇ ಪ್ರಕಾರ ಲಡಾಖ್ ಮತ್ತು ನೇಫಾಗಳಲ್ಲಿ ಸಹ ಮೊದ ಮೊದಲು ನಮ್ಮ ಶತ್ರುಗಳಿಗೇ ಜಯ ಲಭಿಸಿತು ಆದರೆ ನಮ್ಮ ಯೋಧರ ಧೈರ್ಯ ಸ್ಥೈರ್ಯಗಳು ಮಾತ್ರ ಅಪಜಯದಿಂದ ಕುಗ್ಗಲಿಲ್ಲ ನಮ್ಮ ಯೋಧರ ಪರಾಕ್ರಮ ಅವರು ನಡಸಿದ ಹೋರಾಟ ಲೋಕಖ್ಯಾತಿ ತಂದುಕೊಟ್ಟಿತು. ಎಲ್ಲೆಲ್ಲೂ ಪ್ರಶಂಸೆಗಳ ಸುರಿಮಳೆಯಾಯಿತು

ಪ್ರಕೃತ ಬಂದೂಕುಗಳು ಸದ್ದಿಲ್ಲದೆ ಬಿದ್ದಿವೆ. ರಣರಂಗದಲ್ಲಿ ನಮ್ಮ ಸೈನಿಕರಿದುರಿಗೆ ಶತ್ರುಪಕ್ಷದ ಯಾವ ನರಪಿಳ್ಳೆಯ ಚಲನವಲನದ ಸುಳಿವೂ ಕಂಡುಬರುತ್ತಿಲ್ಲ ಹೀಗಾದ ಮಾತ್ರಕ್ಕೆ ಯುದ್ಧ ನಿಂತಿತೆಂದು ಸಮಾಧಾನ ಪಟ್ಟುಕೊಳ್ಳುವಂತಿಲ್ಲ ಭಾರತೀಯ ಸಶಸ್ತ್ರ ಸೇನಾದಳಗಳ ಅಧಿಕಾರಿಗಳೂ ಸೈನಿಕರೂ ಅಹೋರಾತ್ರಿಯೆನ್ನದೆ ದೇಶದ ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದಾರೆ ಯಾವ ಗಳಿಗೆಯಲ್ಲಿ ಏನಾಗುವುದೋ, ಪರಿಸ್ಥಿತಿ ಹೇಗೆ ತಿರುಗುವುದೋ ಎಂದು ಭವಿಷ್ಯ ನುಡಿಯಲು ಸಾಧ್ಯವೆ?

ನೀತಿಗೆಟ್ಟ ಚೀಣೀಯರು ಮತ್ತೊಮ್ಮೆ ಧಾಳಿ ನಡೆಸಿದ ಪಕ್ಷದಲ್ಲಿ ಅವರನ್ನು ಹಿಮ್ಮೆಟ್ಟಿಸಲು ದೃಢ ಸಂಕಲ್ಪ ಕೈಗೊಂಡಿದ್ದಾರೆ ನಮ್ಮ ಸೈನಿಕರು. ಚೀಣೀಯರ ಸವಾಲನ್ನೆದುರಿಸಲು ನಮ್ಮ ಸೈನಿಕರು ಸದಾ ಸಿದ್ಧರಾಗಿದ್ದಾರೆ ತಮ್ಮ ಕೈಯಲ್ಲಿ ಪರಿಣಾಮಕಾರಿಯಾದ ಶಸ್ತ್ರಾಸ್ತ್ರಗಳಿರುವುದೊಂದು ಅವರಿಗೆ ಆತ್ಮ ವಿಶ್ವಾಸವನ್ನು ಮೂಡಿಸಿದೆ

ಇಂದಿನ ವಿಷಮ ಪರಿಸ್ಥಿತಿಯಲ್ಲಿ ಚೀಣೀಯರನ್ನೆದುರಿಸಲು ಇಡೀ ದೇಶವೇ ಒಂದಾಗಿ ನಿಂತಿರುವುದು, ಎಲ್ಲ ವರ್ಗಗಳ ಜನರೂ ಭೇದ ಭಾವನೆಗಳನ್ನು ಮರೆತು ಒಗ್ಗಟ್ಟಿನಿಂದ ಕೂಡಿರುವುದು ನಮ್ಮ ಭೂಸಾಗೂ ವಾಯುಸೇನಾದಳಗಳಿಗೊಂದು ಸ್ಫೂರ್ತಿಯನ್ನು ತಂದುಕೊಟ್ಟಿದೆ ಜನರು ನಮ್ಮ ಸೇನಾದಳಗಳ ಬೆಂಬಲವಾಗಿ ನಿಂತಿದ್ದಾರೆ ಪ್ರಧಾನ ಮಂತ್ರಿಗಳು ವೀರ ಯೋಧರಿಗೆ ಹೇಳಿದ ಮಾತುಗಳಿವು:

"ವೀರ ಯೋಧರೇ, 40 ಕೋಟಿ ಜನರು ನಿಮಗೆ ಬೆಂಬಲವಾಗಿರುವರು ಎಂಬುದನ್ನು ನೆನಪಿನಲ್ಲಿಡಿ ಪ್ರತಿಯೊಂದು ವಿಧದಲ್ಲಿಯೂ ಅವರು ನಿಮಗೆ ಬೆಂಬಲ ನೀಡುತ್ತಾರೆ"

---

## —: ಮಧು ಬಿಂದು :—

ಶೃಂಗಾರವು ವಿಶ್ವ ಮೋಹಕವಾದ ರಸ. —ತೀ. ನಂ. ಶ್ರೀ

೦೦ ೦೦ ೦೦

ನಡತೆಯು ಪ್ರತಿಯೊಬ್ಬನ ಯೋಚನೆಗಳನ್ನು ತೋರಿಸುವ ಕನ್ನಡಿಯಾಗಿದೆ.

—ದಿ ವಿಂರ್.

೦೦ ೦೦ ೦೦

ಲೋಕದಲ್ಲಿ ಒಲುಮೆ ಮಾಡದ ಹೃದಯವಿಲ್ಲ; ಮುಸುಕದ ವಿವೇಕವಿಲ್ಲ.

—ತೀ. ನಂ ಶ್ರೀ.

೦೦ ೦೦ ೦೦

ಯಾವುದೊಂದು ರಾಷ್ಟ್ರಕ್ಕೆ ಮುಚ್ಚುಮರೆಯಿಲ್ಲದಂಥ ಆಕ್ರಮಣ ಕೈಕೊಳ್ಳಲು ದಂಡನೆಯೇ ಇಲ್ಲದಂತೆ ಬಿಟ್ಟುದಾದರೆ, ಜಗತ್ತಿನ ಭವಿಷ್ಯಕ್ಕೆ ಘೋರ ಆಪತ್ತು ಬಂದೀತು.

—ಡಾ. ರಾಧಾಕೃಷ್ಣನ್.

೦೦ ೦೦ ೦೦

ಅನ್ಯ ಜನತೆಯ ಮೇಲೆ ಯಾರೇ ಯುದ್ಧ ಸಾರಲಿ, ಹಾಗೆ ಸಾರುವವರು ಅರೆ ಹುಚ್ಚರಾಗಿರುತ್ತಾರೆ

— ಚೀನೀ ಗಾದೆ.

೦೦ ೦೦ ೦೦

ಇತರರನ್ನು ದಾಸ್ಯಕ್ಕೆ ಗುರಿಮಾಡುವ ಜನತೆ ಆ ಮೂಲಕ ಸ್ವತಃ ತಾನೇ ದಾಸ್ಯದ ಸಂಕೋಲೆಗಳನ್ನು ಹೊಸೆಯುತ್ತಾನೆ.

—ಕಾರ್ಲ್ ಮಾರ್ಕ್ಸ್

೦೦ ೦೦ ೦೦

ಎಲ್ಲಾ ಕಡೆಗಳಿಂದಲೂ ಒಳ್ಳೆಯ ಆಲೋಚನೆಗಳೇ ನಮಗೆ ಬರಲಿ.

—ಋಗ್ವೇದ.

೦೦ ೦೦ ೦೦

ಸತ್ಯವನ್ನು ಹೇಳಬೇಕು, ಮತ್ತು ಹಿತವನ್ನು ಹೇಳಬೇಕು ಹಿತಕರವಲ್ಲದ ಸತ್ಯವನ್ನು ಹೇಳಬಾರದು ಇದೇ ಉತ್ಕೃಷ್ಟವಾದ ದರ್ಮಸೂಕ್ತಿ

—ಮಹಾಭಾರತ

೦೦ ೦೦ ೦೦

— ಸುಬ್ರಹ್ಮಣ್ಯ ಭಟ್ಟ ಯೇತಡ್ಕ.

---


## ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

## ಮೂರು ಪ್ರಕಟಣೆಗಳು.

### ಚಂದ್ರಲೋಕಕ್ಕೆ ಪ್ರಯಾಣ

(ಯು ರಾಘವೇಂದ್ರ ಆಚಾರ್ಯ, ಎಂ ಎ)

### ಸಾಮಾನ್ಯ ರೋಗಗಳು

(ಡಾ ಕೆ ಎಲ್ ಐತಾಳ, ಎಂ. ಬಿ ಬಿ ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

### ಭೌತಿಕ ದರ್ಶನ

ಒಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿ ಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ

---

# ನವಯುಗ

## ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

**ಜಾಹೀರಾತು ದರಗಳು**

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1 50

**ಚಂದಾ:**

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

---

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

# ಸುಲಭದಲ್ಲಿ ಇಂಗ್ಲಿಷ್

## (ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ. ರೂ ಎರಡು ಉತ್ತಮ ಪ್ರತಿ ರೂ ಎರಡೂವರೆ

---

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

# ಮನೆ ಮದ್ದು

## (HOME REMEDIES)

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ ಎರಡು

---

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

# LETTER WRITING MADE EASY

# ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ. 1-4-0 (1=25).

ವಿ ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವು

**ನವಭಾರತ ಪುಸ್ತಕ ಭಂಡಾರ, ಉಡುಪಿ**

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

---

ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಜನಪದ ಗೀತಾಸಂಕಲನ

# 'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ ಎಂ ಇನಾಂದಾರರ ಮುನ್ನುಡಿ)

ದ ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ. ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್ ಹೆಬ್ಬಾರ, ಎಂ ಜಿ ಎಂ ಕಾಲೇಜು ಕುಂಜಿಬೆಟ್ಟು ಉಡುಪಿ.

---

## ಈಡೇರಿ(ರ)ದ ಬಯಕೆ!

(೩ನೇ ಪುಟದಿಂದ)

ಹೊರಗಾದ ಹಳೇ ಪ್ರಾಯದ ವ್ಯಕ್ತಿ ಉತ್ತರಿಸಿತು.

"ನೋಡಿ ಈ ಶಾಲೆಯ ಹೆಡ್ ಮಾಸ್ತರರಿಂದ ಕೂಡಲೇ ಚಾರ್ಜು ತೆಗೆದುಕೊಳ್ಳಿರಿ ಎಂತ ನನಗೆ ಆಜ್ಞೆ ಬಂದಿದೆ. ಅದೂ ಇವತ್ತೆ ತೆಗೆದುಕೊಳ್ಳಬೇಕೆಂತ ಬಂದಿದೆ. 'ಶಾಲಾ ವೇಳೆಯ ಬಳಿಕ' ವೆಂತ ಬರೆದು ದಸ್ಕತು ಹಾಕಿದರಾಯಿತು." ಶಾಲೆಯ ಒಳಗೆ ಪ್ರವೇಶಿಸುತ್ತಾ ನಾನೆಂದೆ.

"ಎಂಥದು! ನನಗೇನೂ ತಿಳಿಯದಲ್ಲ" ಅವರು ಆಶ್ಚರ್ಯದಿಂದ ನುಡಿದು—ನನ್ನನ್ನು ಚಕಿತಗೊಳಿಸಿದರು.

"ಎಂಥದೆಂದರೆ, ನಮ್ಮ ಸರಕಾರದ ನೀತಿ ನಿಮಗೆ ತಿಳಿದಿದೆಯೋ? ನಿಮಗೆ ನಾಳೆ ಆರ್ಡರ್ ಬರಬಹುದು. ಅಥವಾ ಬಾರದೆ ಇರಲೂ ಬಹುದು. ಅದಕ್ಕೆ ನಾನು, ಅಥವಾ ನನಗೆ ಬಂದ ಆರ್ಡರ್ ಜವಾಬ್ದಾರಿಯೋ? ನಿಮ್ಮ ಹಳೇ ಕಾಲದ ರಾಮಾಯಣ ಈಗ ನಡೆಯುತ್ತಿಲ್ಲ. ತಿಳಿಯಿತೆ? ಒಂದು ವೇಳೆ ನಿಮಗೆ ಸಾಧ್ಯವಿಲ್ಲವೆಂದಾದರೆ—ಈ ಆರ್ಡರಿನ ಹಿಂದೆ ಹಾಗೆ ಬರೆದು, ದಸ್ಕತು ಹಾಕಿರಿ. ನಾನು ಮುಂದೆ ನೋಡಿಕೊಳ್ಳುತ್ತೇನೆ."

"ಹಾಂ....ಹಾಂ" ಎಂದು ತುಸು ಸಮಾಧಾನಗೊಂಡ ರಾಮರಾಯರು ಮುಂದರಿಸಿದರು.

"ಚಾರ್ಜ್ ಕೊಡಲಿಕ್ಕೆ ಇಲ್ಲಿ ಏನಿದೆ ಅಂತ ಬೇಕಲ್ಲ. ನೋಡಿ ಇದೊಂದು ಆಫೀಸ್ ಟೇಬಲ್. ಇವುಗಳೆಲ್ಲಾ ಖುರ್ಚಿಗಳು, ಬೆಂಚುಗಳು ಇಗೊಳ್ಳಿ. ಮೇಜಿನ ಬೀಗದ ಕೈ ಇಲ್ಲಿದೆ. ಈ ಪಿರಾರಿಯಲ್ಲಿ ಹಳೆಯ ರಿಕಾರ್ಡುಗಳಿವೆ—ಅದರ ಬೀಗದ ಕೈ ಕಳೆದು ಹೋಗಿದೆ. ಅಂದರೆ ನನ್ನ ಮಗಳು ತನ್ನ ತವರಿಗೆ ಮರೆವೆಯಿಂದ ಕೊಂಡು ಹೋಗಿದ್ದಾಳೆ. ಆಕೆ ದೀಪಾವಳಿಗೆ ಬರುತ್ತಾಳೆ. ಆಗ ಮುದ್ದಾಂ ತಂದು ಕೊಡುತ್ತೇನೆ—ಅಥವಾ ಕಾಗದ ಬರೆದಾದರೂ ತರಿಸಿಕೊಡುತ್ತೇನೆ"

ರಾಮರಾಯರ ವಾಕ್ಚಾತುರ್ಯಕ್ಕೆ ನಾನು ಮಾರು ಹೋದೆ. ನಮ್ಮ ಆಫೀಸಿನಲ್ಲಾದರೆ ಚಾರ್ಜು ತಗೊಳ್ಳಲಿಕ್ಕೆ ಕಡಿಮೆ ಪಕ್ಷ ನಾಲ್ಕು ದಿನಬೇಕು. ಬೇಡ, ಅರ್ಜಂಟಿಗೆ ನಾಲ್ಕಾರು ಗಂಟೆಗಳನ್ನಾದರೂ ತೆಗೆದುಕೊಳ್ಳಲಿ! ಊಹುಂ....ನಾಲ್ಕು ನಿಮಿಷವೂ ಬೇಡವಾಗಿತ್ತು. ನನ್ನ ಚಾರ್ಜಿಗೆ ಬೀಗದ ಕೈಗಳಿಗೆ ಬೇರೆಯೇ ರಿಕಾರ್ಡು ಇಡುತ್ತಿದ್ದರು, ನಮ್ಮ ಆಫೀಸಿನಲ್ಲಿ ಇಲ್ಲಿ ಅದಾವುದೂ ಇಲ್ಲ. ಪ್ರಾಯಃ ಕೆಲಸಕ್ಕೆ ಬೇಡದ ಇಂತಹ ಹಳೇ ಮಾಲುಗಳನ್ನು ಬದಿಗೆ ಹಾಕುತ್ತಾರೆಂತ ಕಾಣುತ್ತದೆ!

"ಅದಿರಲಿ ತಾವೆಲ್ಲಿ ಉಳಿದುಕೊಳ್ಳುತ್ತೀರಿ" ರಾಮರಾಯರು ನನ್ನನ್ನು ಎಚ್ಚರಿಸಿದರು.

"ನಾನಿನ್ನೂ ನಿಶ್ಚಯಿಸಿಲ್ಲ. ಈ ಶಾಲೆಯಲ್ಲಿ ಹುಡುಗರೆಷ್ಟು ಮಂದಿ ಇದ್ದಾರೆ. ಸಹ ಅಧ್ಯಾಪಕರೆಷ್ಟು ಮಂದಿ ಇದ್ದಾರೆ. ಇನ್ಸ್ಪೆಕ್ಷನ್ ಯಾವಾಗ ಮುಗಿದಿದೆ? ಬೇರೆಲ್ಲಾ ಸೌಕರ್ಯ ಹೇಗೆ?"

"ಅದೇನು ಕೇಳ್ತೀರಿ. ಇಲ್ಲಿ ಊಟಕ್ಕೆ ಸರಿಯಾದ ಹೋಟೇಲಿಲ್ಲ. ಸ್ನಾನಕ್ಕೆ ಸರಿಯಾದ ವ್ಯವಸ್ಥೆಯಿಲ್ಲ....ಉಳಿದುಕೊಳ್ಳಲಿಕ್ಕೆ ಬಿಡಾರ ಸಿಗಬೇಕಾದರೆ...."

ಮಾಸ್ತರರಿಗೆ ಶಾಲೆ-ಮಕ್ಕಳ ಚಿಂತೆಗಿಂತಲೂ ತಮ್ಮ ಚಿಂತನೆಯೇ ಅಧಿಕವಾದ್ದರಿಂದಲೇ ಶಿಕ್ಷಣ ಕ್ಷೀಣ ದೆಸೆಯಲ್ಲಿ ಸಾಗುತ್ತಿದ್ದಿರಬೇಕೆಂಬ ಅರಿವಾಯ್ತು ನನಗೆ!

"ಅದೆಲ್ಲಾ ಸರಿ! ಅಧ್ಯಾಪಕರು ಏನು ಮಾಡುತ್ತಿದ್ದಾರೆ?"

"ಶಾಲೆಗೆ ಅಧ್ಯಾಪಕರ ಕೊರತೆಯಿದೆ! ನಾಲ್ಕು ಮಂದಿ ಉಪಾಧ್ಯಾಯರು ಏಳು ಕ್ಲಾಸುಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಹುಡುಗರ ಹಾಜರಿ ತೃಪ್ತಿಕರ. ಪ್ರಯತ್ನ ಮಾಡಿದರೆ ಇನ್ನೂ ಹೆಚ್ಚಿಸಬಹುದು."

ಇನ್ಸ್ಪೆಕ್ಷನ್ ರಿಪೋರ್ಟ್ ಓದಿ ಓದಿ ಈ ಗ್ರಾಂಥಿಕ ಭಾಷೆ ಕಂಠ ಪಾಠವಾಗಿರಬೇಕೆಂದು ನನಗೆನಿಸಿತು. ಅವರ ಹತ್ತಿರ ಹೆಚ್ಚಿನ ವಿಚಾರ ಕೇಳುವುದಕ್ಕಿಂತ ನಾಳೆ ಪ್ರತ್ಯಕ್ಷ ನೋಡುವುದೇ ಲೇಸು.

"ನೀವು ಇವತ್ತು ಇಲ್ಲೇ ಮಲಗಿರಿ. ಇಬ್ಬರು ಹುಡುಗರನ್ನು ಕಳಿಸಿ ಕೊಡುತ್ತೇನೆ—ಊಟಕ್ಕೆ ಹೋಟೆಲು ತೋರಿಸುತ್ತಾರೆ."

"ಪರವಾಗಿಲ್ಲ!" ನಾವು ಹುಡುಗರಾಗಿದ್ದ ಕಾಲದ ನೆನಪಾಯಿತು ನನಗೆ! ಶಾಲೆ, ಉಪಾಧ್ಯಾಯರೆಂದರೆ ಎಷ್ಟೊಂದು ಮಮತೆಯಿಂದ ಇದ್ದೆವು ಗುರುಗಳು ಹೇಳಿದ ಮಾತನ್ನು ಎಂತು ಪಾಲಿಸುತ್ತಿದ್ದೆವು!

ರಾಮರಾಯರು ದೀಪ ಹಚ್ಚಿಕೊಟ್ಟು, "ಹಾಗಾದರೆ ನಾನು ಬರುತ್ತೇನೆ" ಎಂದು ಹಳೇ ಶೈಲಿಯಲ್ಲಿ ಹೇಳಿ, ಹೊರಟು ಹೋದರು. ನನಗೆ ಎಲ್ಲಾ ಬಹು ವಿಚಿತ್ರವಾಗಿ ತೋರಿತು. ಪ್ರಾಯಃ ದೇಶದಲ್ಲಿ ಯಾವ್ಯಾವ ತರಹದ ವ್ಯವಹಾರವಿದೆಯೋ ಯಾರಿಗ ಗೊತ್ತು....? ಅದನ್ನೆಲ್ಲಾ ವಿಮರ್ಶಿಸಲು ಅದಾರಿಂದ ಸಾಧ್ಯ!

ಆ ರಾತ್ರಿ ಹೇಗೆ ಕಳೆಯಿತು, ಎಷ್ಟು ಬೇಗ ಬೇಗಾಯಿತು, ಮತ್ತು ನನ್ನ ಪ್ರಾತರ್ವಿಧಿಗಳೆಲ್ಲಾ ಹೇಗೆ ಸಾಂಗವಾಗಿ ನೆರವೇರಿದುವು ಎನ್ನುವುದರ ಪರಿವೆ ನನಗಾಗಲಿಲ್ಲ. ಹತ್ತು ಗಂಟೆಗೆ ಅಧ್ಯಾಪಕರು ಬರತೊಡಗಿದರು.

"ನೋಡಿ, ಇವರೇ, ನಾನೊಬ್ಬ ಹೊಸಬ, ಅಪರಿಚಿತನೆಂತ ನೀವೇನೂ ಅಳುಕುವುದು ಬೇಡ. ಅಲ್ಲದೆ ನನಗೆ ಹಾಗೆ ವರ್ತಿಸುವುದೂ ಅಸಾಧ್ಯ. ಆದರೆ ನಿಮ್ಮೊಡನೆ ನಾನು ಮನಃಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ -ನಿಮಗೆ ನನ್ನ ನಡೆಯಿಂದ, ನಡೆಯಿಂದ ಯಾವ ತರದ ಬೇಸರವಾದರೆ ಕೂಡಲೇ ತಿಳಿಸಬೇಕು ವಿನಾ ಹೊರಗೆ ಬೀದಿಯಲ್ಲಿ, ಹೊಟೇಲಿನಲ್ಲಿ, ನಿಂತು ಚರ್ಚಿಸುವುದು ಯೋಗ್ಯ ಕ್ರಮವಲ್ಲ. ನಮ್ಮ ಒಳಜಗಳವನ್ನು ನಾವೇ ಪರಸ್ಪರ ಪರಿಹರಿಸಿಕೊಳ್ಳಬೇಕು. ಮಾತ್ರವಲ್ಲ—ನಮ್ಮ ಶಾಲೆ, ನಮ್ಮ ಜಿಲ್ಲೆಯಲ್ಲಿ—ಏಕ? ಇಡೀ ದೇಶದಲ್ಲೇ ಆದರ್ಶಪ್ರಾಯವಾಗಿ ಮೆರೆಯಬೇಕು—ನಿಮ್ಮೆಲ್ಲರ ಸಂಪೂರ್ಣ ಸಹಕಾರವಿದ್ದಲ್ಲಿ, ಇದೊಂದು ದೊಡ್ಡ ಕೆಲಸವಲ್ಲ ಎಂಬ ನಂಬಿಕೆ ನನಗಿದೆ. 'ಸಂಬಳ ಬರಲಿಲ್ಲ' 'ಹಣ ಸಾಕಾಗದು" ಎನ್ನುವ ಪ್ರವೃತ್ತಿಯನ್ನು ನಾವು ಬಿಟ್ಟುಬಿಡಬೇಕು. ಶಾಲೆಗೆ ಅರ್ಧ ಗಂಟೆ ಮುಂಚಿತವಾಗಿ ಬರಬೇಕು. ಹುಡುಗರನ್ನು ಶಾಲೆಯಲ್ಲಿ ಮಾತ್ರ ತಮ್ಮ ವಿದ್ಯಾರ್ಥಿಗಳೆಂತ ಪರಿಗಣಿಸದೆ, ಅವರು ಸದಾ ಕಾಲವೂ ತಮ್ಮ ಶಿಷ್ಯರೆಂತ ಭಾವಿಸಿ, ಅವರ ಪ್ರತಿಯೊಂದು ಚಲನ ವಲನಗಳಲ್ಲೂ ಅಧ್ಯಾಪಕನ ಜಾಗರೂಕತೆಯನ್ನು ಪ್ರದರ್ಶಿಸಬೇಕು...." ಹುಡುಗರ ಗಲಾಟೆ ಅತಿಯಾದ್ದರಿಂದ ನಾನು ಮಾತು ಮುಗಿಸಿದೆ. ಹುಡುಗರು ಮತ್ತೆ ನಿಶ್ಶಬ್ದರಾದೊಡನೆ ನಾನೆಂದೆ.

"ನಿಮಗೆ ನನ್ನ ಆದರ್ಶ ಸರಿಹೋಗದಿದ್ದರೆ, ಇಲ್ಲಿಂದ ಬೇರೆ ಕಡೆಗೆ ಹೋಗುವ ಮನಸ್ಸಿದ್ದರೆ— ಹಾಗೇ ಅರ್ಜಿ ಬರೆದು ಕೊಡಿರಿ. ಮೇಲಧಿಕಾರಿಗಳಿಗೆ ರೆಕಮೆಂಡ್ ಮಾಡಿ ಕಳಿಸುತ್ತೇನೆ—ನಾನಿಲ್ಲಿ ಒಬ್ಬನೇ ಆದರೂ ಈ ಶಾಲೆಯನ್ನು ನಡೆಸುವ ಧೈರ್ಯ, ಅಚಲ ವಿಶ್ವಾಸ ನನ್ನಲ್ಲಿದೆ"

ಒಬ್ಬ ಅಧ್ಯಾಪಕನೂ ಎದುರು ಉತ್ತರಿಸಲಿಲ್ಲ. ಪ್ರಾಯಃ ಇವರೆಲ್ಲಾ ಗೋವುಗಳು—ಉಪ್ಪು, ಹುಳಿ, ಖಾರ ತಿನ್ನದ ನಿಸ್ಸತ್ವ ಪ್ರಾಣಿಗಳು ಆಗಲಿ—ಸುಲಭದಲ್ಲಿ ತಿದ್ದಿಕೊಳ್ಳಬಹುದು, ಎನ್ನುವ ಧೈರ್ಯೋಲ್ಲಾಸ ನನ್ನಲ್ಲುಂಟಾಯ್ತು.

ಸಂಜೆ ಶಾಲೆ ಬಿಟ್ಟ ಬಳಿಕ, ಮತ್ತೆ ಉಪಾಧ್ಯಾಯರನ್ನೆಲ್ಲಾ ಕರೆದು ನನ್ನ ಚಿಕ್ಕ ಮನವಿ ಸಲ್ಲಿಸಿದೆ

"ನಾನು ಹೇಳುವ ವಿಚಾರ ತಮ್ಮ ಅವಗಾಹನೆಗೆ ಅತಿಯಾಗಿದ್ದರೆ ತಾವುಗಳೆಲ್ಲ ಹಾಗೇ ಅಭಿಪ್ರಾಯ ವ್ಯಕ್ತಪಡಿಸಬಹುದು ಏಕೆಂದರೆ ಪ್ರಜಾ ರಾಜ್ಯದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ಅವನ ಜನ್ಮಸಿದ್ಧ ಹಕ್ಕು. ಆದ್ದರಿಂದ ತಾವು ಯಾರೂ ಭಯಭೀತರಾಗಿ ಕುಳಿತುಕೊಳ್ಳುವುದು ವಿಹಿತವಲ್ಲ ಇದಕ್ಕೆ ತಮ್ಮೆಲ್ಲರ ಒಪ್ಪಿಗೆ ಇದೆಯೆಂತ ಭಾವಿಸಿ, ನಾನು ನಿಮ್ಮೊಡನೆ ಒಂದು ವಿಷಯವನ್ನು ಬಯಲಿಗೆಳೆಯುವೆ.

"ಚಿಕ್ಕ ಮಕ್ಕಳಿಗೆ ಮುಂದಟ್ಟಾಗಿ ಕಲಿಸುವ ವಿಧಾನವನ್ನು ನಿಮಗೆ ತರಬೇತಿಯಲ್ಲಿ ಚೆನ್ನಾಗಿ ಕಲಿಸಿರಬಹುದು. ಈಗಿನ ಹುಡುಗರಿಗೆ ಗ್ರಹಣ ಶಕ್ತಿ ಕಡಿಮೆಯಾದ್ದರಿಂದ, ಪ್ರತ್ಯಕ್ಷ ಪ್ರಮಾಣವನ್ನಿತ್ತು, ವಿಷಯವನ್ನು ವಿಶದವಾಗಿ ವಿವರಿಸಿದರೆ ತುಂಬಾ ಪ್ರಯೋಜನಕಾರಿಯಾಗಬಹುದೆಂಬ ಯೋಜನಾ ಮಂಡಳಿಯ ಅಭಿಪ್ರಾಯವನ್ನು ತಾವು ಓದಿರಬಹುದು. ಆದರೆ ಮಾನ್ಯ ಸರಕಾರದವರು ಈ ಯೋಜನೆಯನ್ನು ಅಂಗೀಕರಿಸಿ, ಅದನ್ನು ಜಾರಿಗೆ ತೆರಲು ಬಹಳ ವೇಳೆ ತಗಲಬಹುದಾದ್ದರಿಂದ, ತಾವುಗಳು ದಯವಿಟ್ಟು ತಮಗೆ ಬೇಕಾದ ಸಂಪೂರ್ಣ ಸಲಕರಣೆಗಳನ್ನು ಸ್ವಂತವಾಗಿ ಒದಗಿಸಿಕೊಳ್ಳಬೇಕು. ವಿನಃ ಶಾಲೆಯ ಅಧಿಕಾರಿ ವರ್ಗವನ್ನು ಸಾವಿದಕ್ಕೆ ಮರೆ ಹೋಗುವುದು ಉಚಿತವಲ್ಲ. ಈ ದಿಶೆಯಲ್ಲಿ ಖರ್ಚು ಮಾಡಿದ ಹಣವು ವ್ಯರ್ಥವಾಯಿತೆಂದು ತಾವು ಬೇಸರ ಪಡುವುದು ಬೇಡ ಅರ್ಥ ಶಾಸ್ತ್ರದ ಪ್ರಕಾರ ಒಂದು ವಸ್ತುವಿಗಾಗಿ ಖರ್ಚು ಮಾಡಿದ ಹಣ ಆ ವಸ್ತುವು ಸಂಪೂರ್ಣ ನಶಿಸಿ ಹೋಗುವ ತನಕ, ಬೆಲೆಯನ್ನು ಕಳೆದುಕೊಳ್ಳುವುದಿಲ್ಲ ಅಂದರೆ—ತಾವು ತಯಾರಿಸಿಗೊಂಡ ಸಲಕರಣೆಗಳು ತಮ್ಮ ಹತ್ತಿರವಿರುವದೆಂದರೆ ನಿಮ್ಮ ಹಣ ನಿಮ್ಮೊಡನಿದ್ದಂತೆಯೇ...ಆದ್ದರಿಂದ ಅನಕ್ಕಷ್ಟು ಖರ್ಚಾಯಿತು. ಇದಕ್ಕಿಷ್ಟು ವೆಚ್ಚವಾಯಿತೆಂದು, ತಾವು ಹೇಳಿಕೊಳ್ಳುವ ಅವಶ್ಯಕತೆಯಿಲ್ಲ"

ನನ್ನ ಸಹೋದ್ಯೋಗಿಗಳಿಗೆ ಉಪಕಾರದ ಬದುಕೆಯಾಗಿರಬೇಕು. ತುಂಬಾ ದಿನಗಳಿಂದ ಕಲಿತುಕೊಂಡು ಬಂದಹನ್ನ್ಯಾಸವನ್ನು ಪಕ್ಕನೆ ಬಿಡುವುದು ಕಷ್ಟ! ನಾನವರಿಗೆ ಕಣ್ಣಾಸನ್ನೆಯಿಂದಲೇ ಹೊರಹೋಗಲು ಒಪ್ಪಿಗೆಯನ್ನಿತ್ತೆ ಅರ್ಧಾಂಶದಷ್ಟು ಉತ್ಸಾಹ ಇವರಲ್ಲಿದ್ದಿದ್ದರೆ—ನಾನೇನು ಮಾಡುತ್ತಿದ್ದೆ. ಆದರೂ ನಿರಾಶನಾಗದೆ ದಿನಾ ಬೆಳಗ್ಗೆ—ಸಂಜೆ, ಅಧ್ಯಾಪಕರಿಗೆ, ಮಕ್ಕಳಿಗೆ ನನ್ನ ಹಿತ ಬೋಧನೆ ನಡೆದೇ ಇತ್ತು. ಪ್ರತಿ ದಿನ ಒಂದೊಂದು ಹೊಸ ವಿಚಾರದ ಮೇಲೆ—ನನ್ನ ಭಾಷಣ ನಿರರ್ಗಳವಾಗಿ ಸಾಗಿತು.

ಆರನೇ ದಿನ ಮಧ್ಯಾಹ್ನದ ನಂತರ, ಊಟ ಮಾಡಿ ಕುಳಿತು, ಉಪಾಧ್ಯಾಯರ ಬರವನ್ನೇ ಹಾರಯಿಸುತ್ತಿದ್ದಾಗ, ಅಕಸ್ಮಾತ್ತಾಗಿ ಪೋಸ್ಟ್‌ಮನ್‌ನ ಮುಖವು ಕಾಣಿಸಿತು ಮಾತ್ರವಲ್ಲ ತನ್ನ ದಪ್ತರನ್ನು ಬಿಚ್ಚಿ ಉದ್ದನೆಯ ಕವರನ್ನು ನನ್ನ


## ಹೊಸ ವರ್ಷದ ಕೊಡುಗೆ

— ಠೇವಣಾತಿ ಬಡ್ಡಿ ದರಗಳ ಹೆಚ್ಚಳ —

| | | | | |
|---|---|---|---|---|
| 1ರಿಂದ | 2 | ತಿಂಗಳ ವರೆಗೆ | — | 4½% |
| 3 | ,, 11 | ,, ,, | — | 4¾% |
| 12 | ,, 23 | ,, ,, | — | 5% |
| 24 | ,, 35 | ,, ,, | — | 5¼% |
| 36 | ,, 60 | ,, ,, | — | 5½% |

ರೂ. 5,000/- ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ 5½%ಗೆ ಮೀರದಂತೆ ¼% ಹೆಚ್ಚಿನ ಬಡ್ಡಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

# ದಿ ವಿಜಯ ಬೇಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ರೂಪಾಯಿ ಎರಡು ಕೋಟಿಗೂ ಮಿಕ್ಕಿದ ಚಲಾವಣಾ ಸಂಪತ್ತು.

REGD. No. B. G. 17
LICENCE No. 31
Licensed to Post without Prepayment

# ಇಂದಿನ ಆವಶ್ಯಕತೆ
# ಚೀನೀ ಜನರಲ್ಲನಿಗೆ ಭಾರತೀಯ ವೈದ್ಯ

ಗೆಳತಿ,

ಚೈನಾದ ಹಾಂಚೊ ಬಳಿ ಇರುವ ಒಂದು ಜೇಲೆಯಾಸ್ಪತ್ರೆಯಲ್ಲಿ ಭಾರತೀಯ ವೈದ್ಯರೊಬ್ಬರು ತೀವ್ರ ಆಪಾಯ ಪರಿಸ್ಥಿತಿಗೊಳಗಾಗಿದ್ದ, ಕೊಳಕು ಗಾಯಗಳು ಚೈನಿ ಬಾಲಕನೋರ್ವನಿಗೆ ಚಿಕಿತ್ಸೆ ನಡೆ

---

(ಹಿಂದಿನ ಪುಟದಿಂದ)

ಕೈಗಿತ್ತ 'ಜಿಲ್ಲಾ ವಿದ್ಯಾಧಿಕಾರಿಗಳಿಂದ" ಪತ್ರವನ್ನೋ ಒಂದಿರಬೇಕು ಹೊಸ ಆಧ್ಯಾಪಕರನ್ನು ನೇಮಿಸಿರಬೇಕು! ತಡ ಮಾಡದೆ ಕವರನ್ನು ಪರಕ್ಕನೆ ಹರಿದು, ಬಿಳಿ ಕಾಗದವನ್ನು ಹೊರಗೆಳೆದು ಬಿಡಿಸಿದೆ.

''ನಮ್ಮ ತಾ. 2—4—1962ರ ಆಜ್ಞೆಯ ಒಗ್ಗೆ ತುಂಬಾ ವಿಷಾದ ಪಡುತ್ತೇವೆ. ಬೇರೊಬ್ಬರ ಹೆಸರಿನ ಬದಲಿಗೆ, ತಮ್ಮ ಹೆಸರನ್ನು ನಮ್ಮ ಕಾರಕೂನರು ತಪ್ಪಾಗಿ ಬರೆದಿದ್ದರು. ತಮಗೆ ಕೆಲಸಕೊಡಲು ನಮ್ಮಲ್ಲಿ ಪ್ರಸ್ತುತ ಜಾಗವಿಲ್ಲ."

ಆಕಾಶ ಕಳಚಿ, ನನ್ನ ಮೇಲೆ ಧೊಪ್ಪನೆ ಬಿದ್ದಂತಾಯ್ತು. ನನ್ನ ದೇಹದ ಪ್ರತಿಯೊಂದು ಅಂಗಾಂಗಗಳೂ ಸಿಟ್ಟು, ನೋವು, ಮತ್ಸರ, ಉದ್ವೇಗ—ಮೊದಲಾದ ಭಾವಗಳಿಂದ ಕಂಪಿಸತೊಡಗಿದುವು"

ಹೀಗೇನಾದರೂ ಆಗಬಹುದೆಂಬ ಶಂಕೆಯಿಂದಲೇ ನನ್ನ ಆಫೀಸಿನಿಂದ ಒಣ ಒಂದು ಪತ್ರದ ಪ್ರತಿಯನ್ನೇ ಪಡೆದು ಬಿಟ್ಟಿದ್ದೆ. ಮತ್ತೆ ಸಾವಕಾಶವಾಗಿ ಮರುಪರಿಶೀಲಿಸಿ ಕೊಂಡೆನು ... ನನ್ನಂತೆ ಅದೆಷ್ಟು ಮಂದಿ ಇಂತಹ ಅನುಭವಗಳನ್ನು ಪಡೆದು, ಹೈಕೋರ್ಟಿನಲ್ಲಿ 'ರಿಟ್' ಅರ್ಜಿಯನ್ನು ಹಾಕಿದ ವಿಚಾರ ನನಗೆ ತಿಳಿದಿದ್ದುದರಿಂದ ಅಲ್ಲೇ ಚೇತರಿಸಿಕೊಂಡೆ. ಈ ಪ್ರಕರಣವನ್ನು ಇಲ್ಲಿಗೆ ಮುಗಿಸಬಾರದೆಂದು ನಿರ್ಧರಿಸಿ ... ಕೂಡಲೇ ... ವಿದ್ಯಾಧಿಕಾರಿಗಳ ಆಫೀಸಿನತ್ತ ಹೊರಟೆ, ನನ್ನ ನಷ್ಟದ ದಾವೆಯನ್ನಾದರೂ ಮಾಡೋಣವೆಂದು.

ನನಗಾದ ಕಟು ಅನುಭವದ ಸಂಪೂರ್ಣ ಮಾಹಿತಿಯುಳ್ಳ ಸುಸ್ಪಷ್ಟ ಅರ್ಜಿಯನ್ನು ಅವರ ಕೈಯಲ್ಲಿತ್ತಾಗ, ಅವರಿಂದ ನನಗೊಂದು ಉತ್ತರ ಬಂತು.

''ನಾವು ನಿಮಗೆ ಯಾವ ತರಹದ 'ನೇಮಕ ಆಜ್ಞೆ"ಯನ್ನು ಕಳುಹಿಸಿದಂತೆ ತೋರಿಬರುವುದಿಲ್ಲ. ತಮಗಾದ ನೀರಸ ಅನುಭವಕ್ಕೆ, ಯಾರೋ ಕುಹಕಿಗಳು ಮಾಡಿದ ಮೋಸಕ್ಕೆ, ನಾವು ಯಾವ ರೀತಿಯಲ್ಲೂ, ನಿಮ್ಮ ಮಾನನಷ್ಟವನ್ನು ಹೊರಲು, ಜವಾಬ್ದಾರರಲ್ಲ."

ಕೊನೆಯ ಅಕ್ಷರಗಳು ಬರು ಬರುತ್ತಾ, ಸೂರ್ಯಾಸ್ತವಾದಂತೆ, ನನಗೆ ಕಾಣಿಸಲಿಲ್ಲ ಕಗ್ಗತ್ತಲೆಯ ಕಾಡಿಗೆಯಲ್ಲಿ ನನ್ನ ಕಣ್ಣನ್ನು ಮುಳುಗಿಸಿಟ್ಟಂತಿತ್ತು. ಎರಡು ಕೈಗಳಿಂದ ಬಹು ಪ್ರಯತ್ನಪೂರ್ವಕ ನನ್ನ ಕಣ್ಣನ್ನರಳಿಸಿದರೂ, ನನಗೆ ಕತ್ತಲೆ ವಿನಾ ಮತ್ತೇನೂ ಕಾಣಿಸಲಿಲ್ಲ.... ಕತ್ತಲೆ....! ಲೋಕವನ್ನೇ ಆವರಿಸಿಕೊಂಡಂಥ ಮಹಾ ಕಗ್ಗತ್ತಲೆ!

---

ಸುತ್ತಿದ್ದರು. ಬಾಲಕನ ಕಾಲಿಗೆ ಬಲವಾಗಿ ಗಾಯವಾಗಿತ್ತು.

ವಿಮಾನ ದಾಳಿ ನಡೆಯುತ್ತಿದ್ದರೂ ವೈದ್ಯರ ಬೆರಳುಗಳು ನಿರಾತಂಕವಾಗಿ ನಿರ್ದಿಷ್ಟ ಕಾರ್ಯದಲ್ಲೇ ಮಗ್ನವಾಗಿದ್ದುವು. ಶಿಬಿರದ ಬಳಿಯೇ ಜಪಾನಿ ಸಿಡಿಗುಂಡಿನ ಸದ್ದುಂಟಾದಾಗ ಅವರು ಕತ್ತೆತ್ತಿ ಕಂಡು ಮತ್ತೆ ತನ್ನ ಕೆಲಸದಲ್ಲೇ ಒಂದಾದರು.

ಕತ್ತಲಲ್ಲೂ ರೋಗಿಗಳ ಕಠೋರ ಶಬ್ದ ಕೇಳಿಬರುತ್ತಿತ್ತು. ಜಪಾನಿ ಸಿಡಿಗುಂಡುಗಳ ಸದ್ದು ಕೇಳಿಬರುತ್ತಿತ್ತು. ಹಾಂಚೋದ ಪತನ ಪೂರ್ಣವಾದಂತೆಯೇ ಸರ್ವ ಜನರೆಲ್ಲರೂ ಪಲಾಯನ ಮಾಡಿದ್ದರು. ಆದರೂ ಮರಣದ ಮಧ್ಯೆ, ಹಾಳುಬಿದ್ದಿರುವ ಊರಿನಲ್ಲಿ ಡಾಕ್ಟರ್ ಕೊಟ್ನಿಸ್ ಗಂಭೀರವಾಗಿ, ಏಕಾಗ್ರತೆಯಿಂದ ತಮ್ಮ ಕರ್ತವ್ಯದಲ್ಲೇ ನಿರತರಾಗಿದ್ದರು.

ಚೈನಿ ಶಿಷ್ಯ-ವೈದ್ಯನು ಕುತೂಹಲದಿಂದ ಹಾಗೂ ಭಕ್ತಿಯಿಂದ ಅವರನ್ನೇ ಗಮನಿಸುತ್ತಿದ್ದನು.

''ಡಾಕ್ಟರ್" ಅವನೆಂದನು, ''ಭಾರತದಿಂದ ನೀವು ಚೈನಿಯರಿಗೆ ನೆರವು ನೀಡಲಿಕ್ಕಾಗಿ ಬಂದಿರುವಿರಿ. ಹಾಗಿರುವಾಗ, ಆಕ್ರಮಣಗಾರಿ ಜಪಾನಿಯರನ್ನು ಎದುರಿಸಿ ಹೋರಾಡುತ್ತಿರುವ ಚೈನಿ ಸೈನಿಕರ ಶುಶ್ರೂಷೆ-ಚಿಕಿತ್ಸೆಗಾಗಿ ನಿಮ್ಮ ಬಲವನ್ನೇತಕ್ಕಾಗಿ ಕಾದಿರಿಸಬಾರದು?" ಚೈನಿ ಭಾಷೆಯಲ್ಲೇ ಅವನು ಕೇಳಿದನು.

''ಅದು ಸಾಧ್ಯವಿರುವದಿಲ್ಲ," ಡಾ| ಕೊಟ್ನಿಸ್ ಉತ್ತರವಿತ್ತರು— ಬಲವಾಗಿ ಹಾಗೂ ನಿರರ್ಗಳ ಚೈನಿ ಭಾಷೆಯಲ್ಲಿ ''ವೈದ್ಯನಿರುವ ನನಗೆ ಈ ಪುಟ್ಟ ಬಾಲಕನೂ ನಿಮ್ಮ ಸೇನಾಧಿಕಾರಿಗಳಂತೆಯೇ ಗಮನಾರ್ಹನಿರುವನು."

''ಅವರು ಸುಮ್ಮನೆ ನಿಮ್ಮನ್ನು ಚೈನಿ ಮಗನೆಂದೇ [ಚುಂಗೊ ಹೈಜಾ-ಚೈನಿ] ಕರೆಯುತ್ತಿಲ್ಲ...." ಬಳಿಯಲ್ಲೇ ಇದ್ದ ಡಾ| ಬಸು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಚೈನಾಕ್ಕೆ ತೆರಳಿದ್ದ ಭಾರತೀಯ ವೈದ್ಯ ಮಂಡಳಿಯಲ್ಲಿ ಡಾ| ಬಸು ಒಬ್ಬರು.

ಮತ್ತೆ ಮೌನ ಅಲ್ಲಿ ತನ್ನ ಪರದೆಯನ್ನಿಳಿಯಬಿಟ್ಟಿತು. ಯಥಾ ಪ್ರಕಾರ ಕ್ರಿಯಾ ಭಾಸ್ಕರನ ಕಿರಣ ಅಲ್ಲಿ ಆವರಿಸಿತು.

ಆಗ ಅಲ್ಲಿಗೊಬ್ಬಳು ಚೈನಿದಾದಿ ಧಾವಿಸಿಬಂದಳು.

''ಡಾ| ಕೊಟ್ನಿಸ್!" ಆಕೆ ಅತ್ಯಾಶ್ಚರ್ಯ ವ್ಯಕ್ತಪಡಿಸಿದಳು, ಆತನ ತೋಳನ್ನು ಹಿಡಿದು.

ಕಪಟಕೋಪದಿಂದ ತರುಣ ಭಾರತೀಯನು ಹೇಳಿದನು, ''ದಾದಿ, ನಿನಗೆ ನನ್ನ ಹೆಸರು ನೆನಪಿಲ್ಲವೇನು? ನನ್ನ ಹೆಸರನ್ನು ನಾನು ಚೈನಿ ಹೆಸರನ್ನಾಗಿ ಮಾರ್ಪಡಿಸಿಕೊಂಡಿರುವದು ನಿನಗೆ ಜ್ಞಾಪಕವಿಲ್ಲವೇನೇ?"

ಆತುರತೆಯಲ್ಲಿ ಆ ದಾದಿ ಮುಗುಳ್ನಗುತ್ತ ಹೇಳಿದಳು, ''ಹೌದು. ಡಾ| ಕೊಟಿಹೊ!"

'ಕೊಟ್ನಿಸ್ ಮುಗುಳ್ನಗೆ ಬೀರಿದರು." ಈಗ ಹೇಳೀ ನೋಡುವ—ನೀನೇತಕ್ಕಾಗಿ ಇಷ್ಟು ಅವಸರಪಡುತ್ತಿರುವದು? ಅವರು ವಿಚಾರಿಸಿದರು.

''ಅಲ್ಲಿ ಗುಪ್ತ ಕೇಂದ್ರ ಠಾಣ್ಯಗಳಲ್ಲಿ ಸೇನಾಧಿಕಾರಿಯು ಬಲವಾದ ಗಾಯದಿಂದಾಗಿ ಮಲಗಿಕೊಂಡಿರುವರು. ಅವರು ನಿಮ್ಮನ್ನೇ ಎದುರು ನೋಡುತ್ತಿದ್ದಾರೆ...."

''ಆದರೆ, ಸೇನಾಧಿಕಾರಿಯವರ ಶುಶ್ರೂಷೆಯನ್ನು ನೋಡಿಕೊಳ್ಳಲು ಡಾ| ಕಾವ್ರೊರನ್ನು ನೇಮಿಸಿರುವೆನು. ಅಪಾಯ ಪರಿಸ್ಥಿತಿಯಲ್ಲೂ ಚಿಕಿತ್ಸೆ ನಡೆಸುವ ವಿಧಾನವನ್ನು ಅವರಿಗೆ ನಾನು ಕಲಿಸಿಕೊಟ್ಟಿರುವೆನು" ಡಾ| ಕೊಟ್ನೀಸ್ ಹೇಳಿದರು.

''ಡಾ| ಕಾವ್ರೊರವರೇನೋ ಅಲ್ಲೇ ಇದ್ದಾರೆ ಅಲ್ಲದೆ ನಿಮ್ಮ ಇನ್ನೊಬ್ಬ ಶಿಷ್ಯ ಡಾರ್ಲಿಂಗ್ ಕೂಡಾ ಅಲ್ಲೇ ಇದ್ದಾರೆ. ಆದರೂ....' ದಾದಿ ತಿಳಿಸಿದಳು.

ಡಾ| ಕೊಟ್ನಿಸ್ ಮುಗುಳ್ನಗೆ ನಕ್ಕರು

''ನನಗೆ ಗೊತ್ತು ನಿನ್ನ...ರೂ, ದಾದಿ ಆದರೂ ಎಂದರೆ ನಿಮ್ಮ ಸೇನಾಧಿಕಾರಿಯು ಭಾರತೀಯ ವೈದ್ಯರಿಂದ ಶುಶ್ರೂಷೆ ಪಡೆಯಬಯಸುತ್ತಾರೆ. ಅಲ್ಲವೇನು?"

ದಾದಿ ತಲೆಯಲ್ಲಾಡಿಸಿ ಸಮ್ಮತಿ ಸೂಚಿಸಿದಳು.

ಹುಡುಗನ ಗಾಯಕ್ಕೆ ಪಟ್ಟಿ ಕಟ್ಟುವ ಕೆಲಸವೂ ಮುಗಿಯಿತು. ಡಾ| ಕೊಟ್ನಿಸ್ ತನ್ನ ಮದ್ದಿನ ಚೀಲವನ್ನು ಎತ್ತಿಕೊಂಡು ಹೊರಟರು.

ನಿರ್ಜನ, ಭೀಕರ ಬಾಂಬುಗಳಿಗೆ ತುತ್ತಾಗಿರುವ ಸ್ಮಶಾನ ಸದೃಶ ಪ್ರದೇಶದಲ್ಲಿ ಬೇಗ ಬೇಗನೆ ಧಾವಿಸುತ್ತ ಪರ್ವತದಲ್ಲಿದ್ದ ಗುಹಾ ಠಾಣ್ಯಕ್ಕೆ ಅವರು ಆಗಮಿಸಿದರು.

''ಬನ್ನಿ, ಬನ್ನಿ, ಒಳಗೆ ಬನ್ನಿರಿ ಡಾಕ್ಟರೇ" ಕೊಟ್ನಿಸ್ ಕಾಲಿಡುತ್ತಿದ್ದಂತೆ, ಗಾಯಾಳು ಸೇನಾಧಿಕಾರಿ ಅವರನ್ನು ಆಮಂತ್ರಿಸಿದನು—ಕ್ಷೀಣ ಸ್ವರದಲ್ಲಿ.

''ಚಿಂತಾಜನಕ ಸ್ಥಿತಿ ಏನು?" ವೈದ್ಯರು ವಿಚಾರಿಸಿದರು.

''ಚಿಂತಾಜನಕ ಹೌದೋ, ಅಲ್ಲವೋ, ಇದು ನನ್ನದೊಂದು ದೃಢ ಘೋರಣೆ ಇದೆ—ನನ್ನ ಶುಶ್ರೂಷೆಗೆ ಭಾರತೀಯ ಸ್ನೇಹಿತರೇ ಬೇಕು...." ಸೇನಾಧಿಕಾರಿ ಸ್ಪಷ್ಟಪಡಿಸಿದರು.

''ಸೇನಾಧಿಕಾರಿಯವರ ಆದರ ವಚನಗಳಿಗೆ ಅಭಿವಂದನೆಗಳು" ಕೊಟ್ನಿಸ್ ಬದಲಿತ್ತರು ಮಾತಿನಲ್ಲೇ ಕಾಲ ಕಳೆಯುವ ಸಮಯ ಅದಲ್ಲ. ಡಾಕ್ಟರ್ ಕೊಟ್ನಿಸ್‌ರವರು ಒಡನೆ ಸೇನಾಧಿಕಾರಿ ಚಾ. ಎನ್. ಲೈಯ ಶುಶ್ರೂಷೆಗೆ ಮುಂದಾದರು.

[ಹೌದು. ಇಂದೂ ಚಾ. ಎನ್. ಲೈಯ ಶುಶ್ರೂಷೆಗೆ ಭಾರತೀಯ ಯುಕ್ತ ವೈದ್ಯರು ಬೇಕಾಗಿದ್ದಾರೆ. ಅವರಿಗೆ ಗಾಯವಾಗಿದೆ-ಹೃದಯದಲ್ಲಿ. ಚಿಕಿತ್ಸೆ-ಶುಶ್ರೂಷೆಗೆ ಮುಂದಾಗುವ ಬದಲು ತಾತ್ಕಾಲಿಕ ತೃಪ್ತಿಗೆ ಮುಂದಕ್ಕೆ ಬಂದಲ್ಲಿ ಗುರಿಯನ್ನು ಮುಟ್ಟಲು ಸಾಧ್ಯ ಇರುವುದಿಲ್ಲ.........ಶಿ. ಶ.]

(ಮೂಲ: ಸಕಲೇಶ)

— ಶಿವಶಂಕರ ಮುದ್ರಾಸು.

ಮಹಿಳೆಯರಿಗಾಗಿ ಉಳಿತಾಯ ಯೋಜನೆ......೧

ಜೀವನ
ಸುಂದರ..........
ಅದರ ಸವಿನೆನಪು
ಅತಿ ಸುಂದರ....... ....

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ ''ಬ್ಯಾಂಕ್ ಎಕೌಂಟ್" ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ ''ಬ್ಯಾಂಕ್ ಖಾತೆ"ಯೂ ಅಭಿವೃದ್ಧಿಯತ್ತ ಬೆಳೆಯಬಲ್ಲುದು. ''ಬ್ಯಾಂಕ್ ಖಾತೆ"ಯು ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

ಭವಿಷ್ಯತ್ತಿನ ಭದ್ರತೆಗಾಗಿ
ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925 ಶಾಖೆಗಳು: 176

Edited Printed & Published by K. H. Shetty at the Navayuga Press, Udipi, S. India

**CONTRIBUTE YOUR MITE TO OUR NATIONAL DEFENCE FUND**

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-76
Vol. 42 No. 22 | ಉಡುಪಿ, 7—2—1963 ಗುರುವಾರ | ಸಂಪುಟ ೪೨ ಸಂಚಿಕೆ ೨೨

## ಐರೋಪ್ಯ ಮಾರುಕಟ್ಟೆಯಲ್ಲಿ

# ಬ್ರಿಟನ್ನಿನ ಮಾನಭಂಗವೆ?

ಇತ್ತೀಚೆಗಿನ ಅಂತಾರಾಷ್ಟ್ರೀಯ ಘಟನೆಗಳಲ್ಲಿ ಐರೋಪ್ಯ ವಾಣಿಜ್ಯ ಒಕ್ಕೂಟವು ಜಗತ್ತಿನ ಗಮನವನ್ನು ಆಕರ್ಷಿಸಿಕೊಂಡಿದೆ. ಇದೊಂದು ಜಗತ್ತಿಗೇ ಅತ್ಯಂತ ಕುತೂಹಲಕಾರೀ ಮಹತ್ವದ ವಿಷಯವಾಗಿತ್ತು. ಇತ್ತೀಚೆಗೆ ಬ್ರುಸ್ಸೆಲಿನ ಮಾತುಕತೆಯ ನಂತರ ಈಗ ಇದು ಬಹಳ ಮಹತ್ವವನ್ನು ಪಡೆದಿದೆ. ಈ ಸಾಮಾನ್ಯ ಮಾರುಕಟ್ಟೆ ಯುರೋಪಿಗೆ ಮಾತ್ರವಲ್ಲದೆ ಜಗತ್ತಿನ ಎಲ್ಲಾ ಸ್ವತಂತ್ರ ರಾಷ್ಟ್ರಗಳಿಗೂ ಬಹು ಸಮಸ್ಯಾತ್ಮಕ ವಿಷಯವಾಗಿದೆ. ಏಕೆಂದರೆ, ಅವೆಲ್ಲವುಗಳ ವ್ಯಾಪಾರಿಕ ವಾಣಿಜ್ಯ ವ್ಯವಹಾರವು ಈ ವಾಣಿಜ್ಯ ಒಕ್ಕೂಟದ ಮೇಲೆ ಹೊಂದಿಕೊಂಡಿದೆಯೆಂಬುದು ಸರ್ವಶ್ರುತ. ಆದರೆ ಇದಕ್ಕಿಂತಲೂ ಹೆಚ್ಚಾಗಿ ಬ್ರಿಟನ್ನಿನ ಹಿತಸಂರಕ್ಷಣೆಗೆ ಇದು ಅತಿ ಅಗತ್ಯದ್ದಾಗಿತ್ತು. ಯುರೋಪಿನಲ್ಲೇ ಹಿರಿತನಕ್ಕಾಗಿ ಸ್ಪರ್ಧೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಬ್ರಿಟನು ಬಹುಜಾಣಾಕ್ಷನಾಗಿ ವರ್ತಿಸುವುದು ಅವಶ್ಯಕ. ಈ ತರದ ಸ್ಪರ್ಧೆಗೆ ಆ ರಾಷ್ಟ್ರಗಳ ಔದ್ಯೋಗಿಕ ಉನ್ನತಿಯ ಬಗೆಗಿನ ಸ್ಪರ್ಧೆಯೇ ಮೂಲ ಪಂಚಾಂಗ ಎಂದರೆ ತಪ್ಪಲ್ಲ. ಪರಸ್ಪರ ಔದ್ಯೋಗಿಕ ಉನ್ನತಿಯಲ್ಲಿ ಸಹಯೋಗ—ಸಮತೂಕಗಳು ತಪ್ಪಿ ಒಂದರಿಂದ ಮತ್ತೊಂದು ಹಿಂಗಿಲಾಗಿ ಅವುಗಳಿಗೆ ತಾವು ತಯಾರಿಸಿದ ಸಾಮಾನುಗಳಿಗೆ ಮಾರುಕಟ್ಟೆಯೇ ಇಲ್ಲದಾಗಿವೆ.

**ಸಮಸ್ಯೆಯೇನು?**

ಕಳೆದ ಸಲದ ಕಾಮನ್‌ವೆಲ್ತ್ ಸಮ್ಮೇಲನದಲ್ಲಿ ಭಾರತದ ಪ್ರಧಾನಿ ನೆಹರೂರವರು ಬ್ರಿಟನು ಯುರೋಪಿನ ಸಾಮಾನ್ಯ ಮಾರುಕಟ್ಟೆಯಲ್ಲಿ ಮಿಲನವಾಗುವುದನ್ನು ಸಂಪೂರ್ಣವಾಗಿ ವಿರೋಧಿಸಿ ಇದರಿಂದ ಭಾರತದಂತಹ ರಾಷ್ಟ್ರಗಳಿಗೆ ಬಹು ಹಾನಿಯಿದೆಯೆಂದು ಹೇಳಿದ್ದರು. ಅಂದಿನಿಂದ ಈ ಸಮಸ್ಯೆ ಉಲ್ಬಣಿಸುತ್ತಾ ಬಂದಿದೆ. ಬ್ರಿಟನಿಗೆ ಇಂದು ತನ್ನ ಸರಕುಗಳನ್ನು ಮಾರಾಟ ಮಾಡಲು ಮಾರುಕಟ್ಟೆಯೇ ಇಲ್ಲವಾಗಿದೆ. ಹಿಂದೆ ಭಾರತದಂತಹ ರಾಷ್ಟ್ರಗಳು ಆದರ ಕೈಯಲ್ಲಿದ್ದುವು. ದೇಶದಲ್ಲಿನ ಆರ್ಥಿಕ ಸ್ಥಿತಿಯೇ ಇದರಿಂದ ಬಹು ಬಿಗಡಾಯಿಸಿದೆ. ಮಾರುಕಟ್ಟೆಯಿಲ್ಲದಿದ್ದರೆ ಕೈಗಾರಿಕೆ ಎಷ್ಟು ಮಾತ್ರಕ್ಕೂ ಬೆಳೆಯುವಂತಿಲ್ಲ. ಇದಕ್ಕಾಗಿ ಅದು ಯುರೋಪಿನ ಸಾಮಾನ್ಯ ಮಾರುಕಟ್ಟೆಯಲ್ಲಿ ಪ್ರವೇಶಿಸ ಬಯಸಿತು. ಆದರೆ ಯುರೋಪಿನ ಈ ಮಾರುಕಟ್ಟೆಯು ನೆದರ್ಲೆಂಡ್ಸ್, ಪ. ಜರ್ಮನಿ, ಬೆಲ್ಜಿಯಂ, ಲುಕ್ಸೆಂಬರ್ಗ್, ಇಟೆಲಿ ಮತ್ತು ಫ್ರಾನ್ಸ್ ದೇಶಗಳ ಪೂರ್ಣ ಹತೋಟಿ ವ ಅಧಿಕಾರದಲ್ಲಿದೆ. ಇದಕ್ಕಾಗಿ ಅದು ಆ ರಾಷ್ಟ್ರಗಳ ಅನುಮತಿ ಪ್ರಥಮತಃ ಪಡೆಯಬೇಕಾಗಿದೆ. ಬ್ರಿಟನಿನಂತಹ ಕೈಗಾರಿಕಾ ರಾಷ್ಟ್ರವು ಈ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸಿದ್ದೇ ಆದರೆ ತಮ್ಮ ಭವಿಷ್ಯ ಹಾಳಾದಂತೆಯೇ ಎಂದು ಈ ಸದಸ್ಯ ರಾಷ್ಟ್ರಗಳು ಮನಗಂಡು ಪ್ರಾರಂಭದಲ್ಲಿ ಮೌನವಾಗಿಯೇ ವಿರೋಧಿಸಿದುವು. ನಿಜವಾಗಿ ನೋಡಿದರೆ ಬ್ರಿಟನ್ನಿನ ಪ್ರವೇಶದಿಂದ ಈ ದೇಶಗಳ ವ್ಯಾಪಾರಿಕ ವ್ಯವಹಾರ ಕುಂದುವುದರಲ್ಲಿ ಸಂಶಯವಿಲ್ಲ. ಇಂದು ಈ ಸದಸ್ಯ ರಾಷ್ಟ್ರಗಳ ಕೈಗಾರಿಕೆಯಲ್ಲಿ ಪ್ರಗತಿಯಾಗಿ ರಫ್ತನ್ನೂ ಕೂಡಾ ವಿಪರೀತ ಹೆಚ್ಚು ಮುಂದುವರಿದಿವೆ.

**ಮೂರನೆ ಬಣ ಅಗತ್ಯ?**

ಇಂದಿನ ಈ ಸಂದಿಗ್ಧ ಕಾಲದಲ್ಲಿ ಮೂರನೇ ಬಣವೊಂದು ಅಗತ್ಯಬೇಕೆಂದು ಬ್ರಿಟನ್ ಪ್ರಧಾನಿ ಮೆಕ್ಮಿಲನ್ ನುಡಿದಿದ್ದಾರೆ. ರಷ್ಯ ಅಮೇರಿಕಾಗಳಲ್ಲಿ ಪರಸ್ಪರ ವಿರುದ್ಧ ಸ್ವಭಾವಗಳೇ ಬೆಳೆಯುತ್ತಿದ್ದು ಜಗತ್ತಿನ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ರಕ್ಷಣೆಗೆ—ಉದ್ಧಾರಕ್ಕೆ ಮಧ್ಯಸ್ಥ ಬಣವೊಂದು ಅಗತ್ಯವೆಂದೂ ಅದಕ್ಕೆ ಬ್ರಿಟನ್ ಅತಿ ಸಮರ್ಥವೆಂದೂ ಮೆಕ್ಮಿಲನ್ನರು ವಾದಿಸಿ, ಅಂಥ ಬ್ರಿಟನಿಗೆ ಸಾಮಾನ್ಯ ಮಾರುಕಟ್ಟೆಯಲ್ಲಿ ಪ್ರವೇಶ ನೀಡಿ ತನ್ಮೂಲಕ ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಅಭ್ಯುದಯ ಬಯಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

**ಕಾಮನ್‌ವೆಲ್ತ್ ರಾಷ್ಟ್ರಗಳು**

ಈ ವಿಚಾರದ ಬಗ್ಗೆ ಪ್ರಾರಂಭದಿಂದಲೂ ಕಾಮನ್‌ವೆಲ್ತ್ ರಾಷ್ಟ್ರಗಳು ಒಮ್ಮತವಾಗಿ ಬ್ರಿಟನ್ ಪ್ರವೇಶಿಸುವುದನ್ನು ವಿರೋಧಿಸಿವೆ. ಇದರಿಂದ ಅವುಗಳ ವ್ಯಾಪಾರದಲ್ಲಿ ತೀವ್ರ ಕುಸಿತವಾಗುವುದರಲ್ಲಿ ಸಂಶಯವಿಲ್ಲ. ಬ್ರಿಟನ್ ಇಂದು ಅತಿ ಮುಂದರಿದ ರಾಷ್ಟ್ರ. ಆದರ ಪ್ರಗತಿ-ಸಮೃದ್ಧಿಯ ಕಡೆಗೆ ಗಮನ ಕೊಡುವದಕ್ಕಿಂತ ಇತರ ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ಕಡೆಗೆ ಗಮನ ಕೊಡುವದವಶ್ಯವಾಗಿದೆ. ಆದರೆ ಬ್ರಿಟನ್ ಮಾತ್ರ ತನ್ನ ಅಭಿವೃದ್ಧಿಯಿಲ್ಲದೆ ಇತರ ಸದಸ್ಯ ರಾಷ್ಟ್ರಗಳ ಪ್ರಗತಿಯಿಲ್ಲವೆಂದು ತಿಳಿದಿದೆ. ತಾನು ಈ ಸದಸ್ಯ ರಾಷ್ಟ್ರಗಳ ಮೇಲೆ ಅತಿ ಕಡಿಮೆ ತರದ ತೆರಿಗೆ ಹಾಕುತ್ತಿದ್ದೇನೆ. ಅವುಗಳ ಸರಕುಗಳಿಗೂ ಉತ್ತಮ ಮಾರುಕಟ್ಟೆ ಸಿಗುವಂತೆ ಮಾಡುತ್ತಿದ್ದೇನೆ, ಎಂದು ಅದು ವಾದಿಸುತ್ತಿದೆ. ಕಾಮನ್‌ವೆಲ್ತ್ ಸೆಕ್ರೆಟರಿ ಡಂಕನ್ ಸ್ಯಾಂಡಿಸರು ಇದನ್ನೇ ವಾದಿಸಿ ಬ್ರಿಟನ್ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸದಿದ್ದರೆ ಅದೊಂದು ಜಗತ್ತಿಗೇ ಅಮಂಗಲಕರ ಎಂದಿದ್ದಾರೆ. ಐರೋಪ್ಯ ವಾಣಿಜ್ಯ ಒಕ್ಕೂಟದ ಸಂಧಾನಕಾರರಾದ ಎಡ್ವರ್ಡ್ ಹೀಥ್‌ರವರು ಕೂಡಾ ಸಾಮಾನ್ಯ ಮಾರುಕಟ್ಟೆಯಲ್ಲಿ ಬ್ರಿಟನ್ನಿಗೆ ಪ್ರವೇಶ ಸಿಗದಿದ್ದುದರಿಂದ ಜಗತ್ತಿನ ಹಿತಕ್ಕೇ ಧಕ್ಕೆಯಿದೆಯೆಂದು ನುಡಿದಿದ್ದಾರೆ. ಯುರೋಪಿನ ಸಾಮಾನ್ಯ ಮಾರುಕಟ್ಟೆಯ ಜನಕರಾದ ಜೀನ್ ಮೋನೆಟ್ಟೋರವರು ಬ್ರಿಟನ್ನಿಗೆ ಈ ವಾಣಿಜ್ಯ ಒಕ್ಕೂಟದಲ್ಲಿ ಪ್ರವೇಶ ಸಿಗುವುದು ಅತ್ಯಗತ್ಯ ಎಂದು ಸಾರಿದ್ದಾರೆ. ಆದರೆ ವಸ್ತುಸ್ಥಿತಿ ಮಾತ್ರ ತೀರಾ ಬೇರಾಗಿದೆ.

**ಬ್ರುಸೆಲ್ ಮಾತುಕತೆ**

ಇತ್ತೀಚೆಗಿನ ೧೫ ದಿನಗಳಲ್ಲಿ ಈ ವಿಷಯ ಅತ್ಯಂತ ಪ್ರಚುರವಾಗಿ ಹರಡಿದೆ. ಮಾರುಕಟ್ಟೆಯ ಸದಸ್ಯ ರಾಷ್ಟ್ರಗಳಲ್ಲಿ ಪ್ರಧಾನವಾದ ಫ್ರಾನ್ಸ್, ಬ್ರಿಟನ್ನಿನ ಮೊದಲಿನ ವಿರೋಧಿ ರಾಷ್ಟ್ರವಾಗಿದೆ. ಬ್ರಿಟನ್ ಪ್ರವೇಶಿಸಿದ್ದೇ ಆದರೆ ತನ್ನ ಪ್ರತಿಷ್ಠೆಗೆ—ಅಗ್ರಗಣ್ಯತೆಗೆ ಕುಂದು ಬರುತ್ತದೆಂದು ಅದು ತಿಳಿದಿದೆ. ಇದರಿಂದ ತನ್ನ ಸಾರ್ವಭೌಮತ್ವವೂ ಜಾರುವುದು ಎಂಬುದು ಅದರ ಅಭಿಮತ. ಇದಕ್ಕೋಸ್ಕರವೇ ಅದು ಪೂರ್ಣವಾಗಿ ವಿರೋಧಿಸಿದೆ. ಕಳೆದ ತಿಂಗಳ ಕೊನೆಯ ಸಪ್ತಾಹದಲ್ಲಿ ಫ್ರಾನ್ಸಿನ ಬ್ರುಸ್ಸೆಲ್‌ನಲ್ಲಿ ಈ ಬಗ್ಗೆ ೬ ಸದಸ್ಯ ರಾಷ್ಟ್ರಗಳ ಸಮ್ಮೇಲನ ಜರಗಿ ಅದರಲ್ಲಿ ಫ್ರಾನ್ಸ್ ಬ್ರಿಟನ್ನಿನ ಪ್ರವೇಶವನ್ನು ಸ್ಪಷ್ಟವಾದ ವಾಣಿಯಿಂದ ವಿರೋಧಿಸಿತು. ಉಳಿದ ಸದಸ್ಯ ರಾಷ್ಟ್ರಗಳಲ್ಲಿ ಜರ್ಮನಿ, ನೆದರ್ಲೆಂಡ್ಸ್, ಲುಕ್ಸೆಂಬರ್ಗ್‌ಗಳ ಸಹಾನುಭೂತಿ ಬ್ರಿಟನ್ ಪರವಾಗಿದ್ದರೂ ಎಲ್ಲಾ ನೀರ ಮೇಲಣ ಗುಳ್ಳೆಯಂತಾಯಿತು.

**ಅಮೇರಿಕದ ಪ್ರತಿಕ್ರಿಯೆ**

ಈ ಮಧ್ಯೆ ಅಮೇರಿಕೆ ಪ್ರವೇಶಿಸಿ ಬ್ರಿಟನ್ನಿಗೆ ಮಾರುಕಟ್ಟೆಯಲ್ಲಿ ಪ್ರವೇಶ ಸಿಗುವಂತೆ ಪ್ರಭಾವ ಬೀರಿತು. ಬ್ರಿಟನ್ನಿಗೆ ಪ್ರವೇಶ ಸಿಗುವುದು ಅವಶ್ಯವೆಂದು ಡೀನ್ ರಸ್ಕ್ ಅಭಿಪ್ರಾಯಪಟ್ಟು ಫ್ರಾನ್ಸಿಗೆ ತನ್ನ ಧೋರಣೆ ಬದಲಾಯಿಸುವ ಸೂಚನೆ ಕೊಟ್ಟರು. ಇದನ್ನು ಸ್ವೀಕರಿಸದಿದ್ದರೆ, ಪಾಶ್ಚಾತ್ಯ ರಾಷ್ಟ್ರಗಳ-ಅಮೇರಿಕೆಗಳ-ಯುರೋಪಿನ ಐಕ್ಯತೆಗೆ—ಸಖ್ಯತೆಗೆ ತೀವ್ರ ಪೆಟ್ಟಾಗುವುದೆಂದೂ ಅವರು ಹೇಳಿದರು. ಜಗತ್ತಿನ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ನಮ್ಮೊಳಗೆ ಈ ರೀತಿ ಭಿನ್ನಭಾವನೆ ಮೂಡುವುದು ತರವಲ್ಲವೆಂದು ಹೇಳಿದರು. ಇದು ಯಥಾರ್ಥ ವಿಷಯವಾದರೂ ಫ್ರಾನ್ಸ್ ಮಾತ್ರ ಸ್ವಹಿತಕ್ಕೆ ಧಕ್ಕೆ ಬರುವುದೆಂದು ಅವರ ಸಲಹೆಯನ್ನು ತಿರಸ್ಕಾರ ಮಾಡಿದೆ.

**ಭಾರತಕ್ಕೆ ಅನುಕೂಲ**

ಅಂತೂ ಬ್ರಿಟನ್ನಿಗೆ ಪ್ರವೇಶ ಸಿಗದೆ ಮಾನಭಂಗವಾದರೂ ಅದರಿಂದ ಜಗತ್ತಿನ ಹಿತಕ್ಕೆ ಧಕ್ಕೆ ಬಂತೆನ್ನುವುದು ಸರಿಯಲ್ಲ. ಯಾಕೆಂದರೆ ಬ್ರಿಟನ್ ಮಾರುಕಟ್ಟೆಯನ್ನು ಪ್ರವೇಶಿಸಿದ್ದೇ ಆದರೆ ಭಾರತದಂತಹ ರಾಷ್ಟ್ರಗಳಿಗೆ ಮುಂದೆ ಬ್ರಿಟನೇ ಒಂದು ಪ್ರಬಲ ಪ್ರತಿಸ್ಪರ್ಧಿಯಾಗಿ ಅವುಗಳ ಕೈಗಾರಿಕಾ ಪ್ರಗತಿ ಕುಂಠಿತವಾಗುವುದರಲ್ಲಿ ಸಂಶಯವಿಲ್ಲ. ಇಂದು ಭಾರತದ ಸಾಮಗ್ರಿಗಳು ಯುರೋಪಿನ ಮಾರುಕಟ್ಟೆಯಲ್ಲಿ ತೆರಿಗೆಯಿಲ್ಲದೆ ಉತ್ತಮ ಗಿರಾಕಿಗಳನ್ನು ಗಳಿಸುವುದರಲ್ಲಿ ಸಮರ್ಥವಾಗಿದೆ. ಆದರೆ ಅವು ಬ್ರಿಟನಿನೊಡನೆ ಸ್ಪರ್ಧಿಸಲಿಕ್ಕಿಲ್ಲದ ಸ್ಥಿತಿಯಲ್ಲಿ ಇಲ್ಲವಾಗುವುದರಿಂದ ನೆಹರೂರವರು ಇದನ್ನು ವಿರೋಧಿಸಿದ್ದರು.

ಅಂತೂ ಇಂಗ್ಲೆಂಡಿಗೆ ಬಹಳ ಸಂದಿಗ್ಧವಾದ ಕಷ್ಟ ಪರಿಸ್ಥಿತಿ ಈಗ ಬಂದೊದಗಿದೆ. ಅದರಿಂದ ಜಗತ್ತಿಗೆ ಹಾನಿಯಾಗಿದೆಯೆಂಬುದು ಮಾತ್ರ ಸರಿಯಾಗದು. ಬ್ರಿಟನ್ ಈಗ ತನ್ನ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಸಮಾಲೋಚನೆ ನಡೆಸಿ ಮುಂದಿನ ತನ್ನ ಹೆಜ್ಜೆಯ ಬಗೆಗೆ ಆಲೋಚಿಸುವುದು ಸೂಕ್ತವಾಗಿದೆ.

—ಶ್ರೀ ರಾಮತನಯ.

**ಸಂಧಾನ ಸಾಗಿತೆಂದು ಮೈಮರೆಯಬೇಡಿರಿಂದು.**

REGD. No. B. G. 17
LICENCE No. 31
Licensed to Post without Prepayment

## ಇಂದಿನ ಆವಶ್ಯಕತೆ
## ಚೀನೀ ಜನರಲ್ಲನಿಗೆ ಭಾರತೀಯ ವೈದ್ಯ

೧೯೩೮.

ಚೈನಾದ ಹಾಂಕೋ ಬಳಿ ಇರುವ ಒಂದು ಸೇರೆಯಾಸ್ಪತ್ರೆಯಲ್ಲಿ ಭಾರತೀಯ ವೈದ್ಯರೊಬ್ಬರು ತೀವ್ರ ಅಪಾಯ ಪರಿಸ್ಥಿತಿಗೊಳಗಾಗಿದ್ದ, ಕೊಳಕು ಗಾಯಗೊಳ್ಳು ಚೈನಿ ಬಾಲಕನೋರ್ವನಿಗೆ ಚಿಕಿತ್ಸೆ ನಡೆ

(ಹಿಂದಿನ ಪುಟದಿಂದ)

ಕೈಗಿತ್ತ "ಜಿಲ್ಲಾ ವಿದ್ಯಾಧಿಕಾರಿಗಳಿಂದ" ಮತ್ತೇನೋ ಬಂದಿರಬೇಕು. ಹೊಸ ಅಧ್ಯಾಪಕರನ್ನು ನೇಮಿಸಿರಬೇಕು! ತಡ ಮಾಡದೆ ಕವರನ್ನು ಸರಕ್ಕನೆ ಹರಿದು, ಬಿಳಿ ಕಾಗದವನ್ನು ಹೊರಗೆಳೆದು ಬಿಡಿಸಿದೆ.

"ನಮ್ಮ ತಾ. 2—4—1962ರ ಆಜ್ಞೆಯ ಬಗ್ಗೆ ತುಂಬಾ ವಿಷಾದ ಪಡುತ್ತೇವೆ. ಬೇರೊಬ್ಬರ ಹೆಸರಿನ ಬದಲಿಗೆ, ತಮ್ಮ ಹೆಸರನ್ನು ನಮ್ಮ ಕಾರಕೂನರು ತಪ್ಪಾಗಿ ಬರೆದಿದ್ದರು. ತಮಗೆ ಕೆಲಸಕೊಡಲು ನಮ್ಮಲ್ಲಿ ಪ್ರಸ್ತುತ ಜಾಗವಿಲ್ಲ."

ಆ ಕಾಗದ ಕೈಜಾರಿ, ನನ್ನ ಮೇಲೆ ಘೋಷಣೆ ಬಿದ್ದಂತಾಯಿತು. ನನ್ನ ದೇಹದ ಪ್ರತಿಯೊಂದು ಅಂಗಾಂಗಗಳೂ, ಸಿಟ್ಟು, ನಿರಾಶೆ, ಮತ್ಸರ, ಉದ್ವೇಗ—ಮೊದಲಾದವುಗಳಿಂದ ಕತಕತನೆ ಕುದಿಯತೊಡಗಿದುವು.

ಹೀಗೇನಾದರೂ ಆಗಬಹುದೆಂಬ ಶಂಕೆಯಿಂದಲೇ ನನ್ನ ಆಫೀಸಿನಿಂದ ಬರೀ ಒಂದು ವಾರದ ರಜೆಯನ್ನೇ ಪಡೆದು ಬಂದಿದ್ದೆ. ಮತ್ತೆ ನಾಟಕೀಯವಾಗಿ ಮುಂದುವರಿಸಿಕೊಂಡು ಹೋಯಿತೆಂದುಕೊಂಡು. ನನ್ನಂತೆ ಅದೆಷ್ಟು ಮಂದಿ ಇಂತಹ ಅನುಭವಗಳನ್ನು ಪಡೆದು, ಹೈಕೋರ್ಟಿನಲ್ಲಿ 'ರಿಟ್' ಅರ್ಜಿಯನ್ನು ಹಾಕಿದ ವಿಚಾರ ನನಗೆ ತಿಳಿದಿದ್ದುದರಿಂದ ಅಲ್ಲೇ ಚೇತರಿಸಿಕೊಂಡೆ. ಈ ಪ್ರಕರಣವನ್ನು ಅಲ್ಲಿಗೆ ಖಂಡಿತವಾಗಿಯೂ ಮುಕ್ತಾಯ ಮಾಡುವುದಿಲ್ಲವೆಂದು ಬಗೆದು. ಶಿಕ್ಷಾ ವಿದ್ಯಾಧಿಕಾರಿಗಳ ಆಫೀಸಿನತ್ತ ಹೊರಟೆ, ಮಾನನಷ್ಟದ ದಾವೆಯನ್ನಾದರೂ ಮಾಡೋಣವೆಂದು.

ನನಗಾದ ಕಹಿ ಅನುಭವದ ಸಂಪೂರ್ಣ ಮಾಹಿತಿಯುಳ್ಳ ಸುಸ್ಪಷ್ಟ ಅರ್ಜಿಯನ್ನು ಅವರ ಕೈಯಲ್ಲಿತ್ತಾಗ, ಅವರಿಂದ ನನಗೊಂದು ಉತ್ತರ ಬಂತು.

"ನಾವು ನಿಮಗೆ ಯಾವ ತರಹದ 'ನೇಮಕ ಆಜ್ಞೆ'ಯನ್ನು ಕಳುಹಿಸಿದಂತೆ ತೋರಿಬರುವುದಿಲ್ಲ. ತಮಗಾದ ನೀರಸ ಅನುಭವಕ್ಕೆ, ಯಾರೋ ಕುಚೇಷ್ಟೆಗಾರು ಮಾಡಿದ ಮೋಸಕ್ಕೆ, ನಾವು ಯಾವ ರೀತಿಯಲ್ಲೂ, ನಿಮ್ಮ ಮಾನನಷ್ಟವನ್ನು ಹೊರಲು, ಜವಾಬ್ದಾರರಲ್ಲ."

ಕೊನೆಯ ಅಕ್ಷರಗಳು ಬರು ಬರುತ್ತಾ, ಸೂರ್ಯಾಸ್ತವಾದಂತೆ, ನನಗೆ ಕಾಣಿಸಲಿಲ್ಲ. ಕಗ್ಗತ್ತಲೆಯ ಕಾಡಿಗೆಯಲ್ಲಿ ನನ್ನ ಕಣ್ಣನ್ನು ಮುಳುಗಿಸಿಟ್ಟಂತಿತ್ತು. ಎರಡು ಕೈಗಳಿಂದ ಬಹು ಪ್ರಯತ್ನಪೂರ್ವಕ ನನ್ನ ಕಣ್ಣನ್ನರಳಿಸಿದರೂ, ನನಗೆ ಕತ್ತಲೆ ವಿನಾ ಮತ್ತೇನೂ ಕಾಣಿಸಲಿಲ್ಲ.... ಕತ್ತಲೆ....! ಲೋಕವನ್ನೇ ಆವರಿಸಿಕೊಂಡಂಥ ಮಹಾ ಕಗ್ಗತ್ತಲೆ!

ಸುತ್ತಿದ್ದರು. ಬಾಲಕನ ಕಾಲಿಗೆ ಬಲವಾಗಿ ಗಾಯವಾಗಿತ್ತು.

ವಿಮಾನ ದಾಳಿ ನಡೆಯುತ್ತಿದ್ದರೂ ವೈದ್ಯರ ಬೆರಳುಗಳು ನಿರಾತಂಕವಾಗಿ ನಿರ್ದಿಷ್ಟ ಕಾರ್ಯದಲ್ಲೇ ಮಗ್ನವಾಗಿದ್ದುವು. ಶಿಬಿರದ ಬಳಿಯೇ ಜಪಾನಿ ಸಿಡಿಗುಂಡಿನ ಸದ್ದುಂಟಾದಾಗ ಅವರು ಕತ್ತೆತ್ತಿ ಕಂಡು ಮತ್ತೆ ತನ್ನ ಕೆಲಸದಲ್ಲೇ ಒಂದಾದರು.

ಕತ್ತಲಲ್ಲೂ ಕೋವಿಗಳ ಕಠೋರ ಶಬ್ದ ಕೇಳಿಬರುತ್ತಿತ್ತು. ಜಪಾನಿ ಸಿಡಿಗುಂಡುಗಳ ಸದ್ದು ಕೇಳಿಬರುತ್ತಿತ್ತು. ಹಾಂಕೋದ ಪತನ ಪೂರ್ಣವಾದಂತೆಯೇ ಸರಿ. ಜನರೆಲ್ಲರೂ ಪಲಾಯನ ಮಾಡಿದ್ದರು. ಆದರೂ ಮರಣದ ಮಧ್ಯೆ, ಹಾಳುಬಿದ್ದಿರುವ ಊರಿನಲ್ಲಿ ಡಾಕ್ಟರ್ ಕೊಟ್ನಿಸ್ ಗಂಭೀರವಾಗಿ, ಏಕಾಗ್ರತೆಯಿಂದ ತಮ್ಮ ಕರ್ತವ್ಯದಲ್ಲೇ ನಿರತರಾಗಿದ್ದರು.

ಚೈನಿ ಶಿಷ್ಯ-ವೈದ್ಯನು ಕುತೂಹಲದಿಂದ ಹಾಗೂ ಮೆಚ್ಚಿಕೆಯಿಂದ ಅವರನ್ನೇ ಗಮನಿಸುತ್ತಿದ್ದನು.

"ಡಾಕ್ಟರ್" ಅವನೆಂದನು, "ಭಾರತದಿಂದ ನೀವು ಚೈನಿಯರಿಗೆ ನೆರವು ನೀಡಲಿಕ್ಕಾಗಿ ಬಂದಿರುವಿರಿ. ಹಾಗಿರುವಾಗ, ಆಕ್ರಮಣಕಾರಿ ಜಪಾನಿಯರನ್ನು ಎದುರಿಸಿ ಹೋರಾಡುತ್ತಿರುವ ಚೈನಿ ಸೈನಿಕರ ಶುಶ್ರೂಷೆ-ಚಿಕಿತ್ಸೆಗಾಗಿ ನಿಮ್ಮ ಬಲವ

ನ್ನೇತರರಿಗಾಗಿ ಕಾದಿರಿಸಬಾರದು?" ಚೈನಿ ಭಾಷೆಯಲ್ಲೇ ಅವನು ಕೇಳಿದನು.

"ಅದು ಸಾಧ್ಯವಿರುವುದಿಲ್ಲ," ಡಾ| ಕೊಟ್ನಿಸ್ ಉತ್ತರವಿತ್ತರು— ಬಲವಾಗಿ ಹಾಗೂ ನಿರರ್ಗಳ ಚೈನಿ ಭಾಷೆಯಲ್ಲಿ "ವೈದ್ಯನಿರುವ ನನಗೆ ಈ ಪುಟ್ಟ ಬಾಲಕನೂ ನಿಮ್ಮ ಸೇನಾಧಿಕಾರಿಗಳಂತೆಯೇ ಗಮನಾರ್ಹನಿರುವನು."

"ಅವರು ಸುಮ್ಮನೆ ನಿಮ್ಮನ್ನು ಚೈನಿ ಮಗನೆಂದೇ [ಚುಂಗೊ ಹೈಜಾ–ಚೈನಿ] ಕರೆಯುತ್ತಿಲ್ಲ...." ಬಳಿಯಲ್ಲೇ ಇದ್ದ ಡಾ| ಬಸು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಚೈನಾಕ್ಕೆ ತೆರಳಿದ್ದ ಭಾರತೀಯ ವೈದ್ಯ ಮಂಡಳಿಯಲ್ಲಿ ಡಾ| ಬಸು ಒಬ್ಬರು.

ಮತ್ತೆ ಮೌನ ಅಲ್ಲಿ ತನ್ನ ಪರದೆಯನ್ನೆಳೆಯಬಿಟ್ಟಿತು. ಯಥಾ ಪ್ರಕಾರ ಪ್ರಿಯ ಭಾಸ್ಕರನ ಕಿರಣ ಅಲ್ಲಿ ಆವರಿಸಿತು.

ಆಗ ಅಲ್ಲಿಗೊಬ್ಬಳು ಚೈನಿ ದಾದಿ ಧಾವಿಸಿಬಂದಳು.

"ಡಾ| ಕೊಟ್ನಿಸ್!" ಆಕೆ ಅತ್ಯಾಶ್ಚರ್ಯ ವ್ಯಕ್ತಪಡಿಸಿದಳು, ಆತನ ತೋಳನ್ನು ಹಿಡಿದು.

ಕಪಟಕೋಪದಿಂದ ತರುಣ ಭಾರತೀಯನು ಹೇಳಿದನು, "ದಾದಿ, ನಿನಗೆ ನನ್ನ ಹೆಸರು ನೆನಪಿಲ್ಲವೇನು? ನನ್ನ ಹೆಸರನ್ನು ನಾನು ಚೈನಿ ಹೆಸರನ್ನಾಗಿ ಮಾರ್ಪಡಿಸಿಕೊಂಡಿರುವುದು ನಿನಗೆ ಜ್ಞಾಪಕವಿಲ್ಲವೇನೇ?"

ಆತುರತೆಯಲ್ಲಿ ಆ ದಾದಿ ಮುಗುಳ್ನಗುತ್ತ ಹೇಳಿದಳು, "ಹೌದು. ಡಾ| ಕೊಟಿಹೂ!"

'ಕೊಟ್ನಿಸ್ ಮುಗುಳ್ನಗೆ ಬೀರಿದರು." ಈಗ ಹೇಳೇ ನೋಡುವ—ನೀನೇತಕ್ಕಾಗಿ ಇಷ್ಟು ಅವಸರಪಡುತ್ತಿರುವುದು? ಅವರು ವಿಚಾರಿಸಿದರು.

"ಅಲ್ಲಿ ಗುಪ್ತ ಕೇಂದ್ರ ರಾಜ್ಯಗಳಲ್ಲಿ ಸೇನಾಧಿಕಾರಿಯು ಬಲವಾದ ಗಾಯದಿಂದಾಗಿ ಮಲಗಿಕೊಂಡಿರುವರು. ಅವರು ನಿಮ್ಮನ್ನೇ ಎದುರು ನೋಡುತ್ತಿದ್ದಾರೆ...."

"ಆದರೆ, ಸೇನಾಧಿಕಾರಿಯವರ ಶುಶ್ರೂಷೆಯನ್ನು ನೋಡಿಕೊಳ್ಳಲು ಡಾ| ಕಾಪೂರರನ್ನು ನೇಮಿಸಿರುವೆನು. ಅಪಾಯ ಪರಿಸ್ಥಿತಿಯಲ್ಲೂ ಚಿಕಿತ್ಸೆ ನಡೆಸುವ ವಿಧಾನವನ್ನು ಅವರಿಗೆ ನಾನು ಕಲಿಸಿಕೊಟ್ಟಿರುವೆನು" ಡಾ| ಕೊಟ್ನೀಸ್ ಹೇಳಿದರು.

"ಡಾ| ಕಾಪೂರವರೇನೋ ಅಲ್ಲೇ ಇದ್ದಾರೆ ಅಲ್ಲದೆ ನಿಮ್ಮ ಇನ್ನೊಬ್ಬ ಶಿಷ್ಯ ಡಾರ್ಲಿಂಗ್ ಕೂಡಾ ಅಲ್ಲೇ ಇದ್ದಾರೆ. ಆದರೂ ...' ದಾದಿ ತಿಳಿಸಿದಳು.

ಡಾ|| ಕೊಟ್ನಿಸ್ ಮುಗುಳ್ನಗೆ ನಕ್ಕರು "ನನಗೆ ಗೊತ್ತು ನಿನ್ನ...ರೂ, ದಾದಿ ಆದರೂ ಎಂದರೆ ನಿಮ್ಮ ಸೇನಾಧಿಕಾರಿಯು ಭಾರತೀಯ ವೈದ್ಯರಿಂದ ಶುಶ್ರೂಷೆ ಪಡೆಯಬಾರಿಸುತ್ತಾರೆ. ಅಲ್ಲವೇನು?"

ದಾದಿ ತಲೆಯಲ್ಲಾಡಿಸಿ ಸಮ್ಮತಿ ಸೂಚಿಸಿದಳು.

ಹುಡುಗನ ಗಾಯಕ್ಕೆ ಪಟ್ಟಿ ಕಟ್ಟುವ ಕೆಲಸವೂ ಮುಗಿಯಿತು. ಡಾ| ಕೊಟ್ನಿಸ್ ತನ್ನ ಮದ್ದಿನ ಚೀಲವನ್ನು ಎತ್ತಿಕೊಂಡು ಹೊರ ಹೊರಟರು.

ನಿರ್ಜನ, ಭೀಕರ ಬಾಂಬುಗಳಿಗೆ ತುತ್ತಾಗಿರುವ ಸ್ಮಶಾನ ಸದೃಶ ಪ್ರದೇಶದಲ್ಲಿ ಬೇಗ ಬೇಗನೆ ಧಾವಿಸುತ್ತ ಪರ್ವತದಲ್ಲಿದ್ದ ಗುಪ್ತ ರಾಜ್ಯಕ್ಕೆ ಅವರು ಆಗಮಿಸಿದರು.

"ಬನ್ನಿ, ಬನ್ನಿ. ಒಳಗೆ ಬನ್ನಿರಿ ಡಾಕ್ಟರೇ" ಕೊಟ್ನಿಸ್ ಕಾಲಿಡುತ್ತಿದ್ದಂತೆ, ಗಾಯಗೊಳು ಸೇನಾಧಿಕಾರಿ ಅವರನ್ನು ಆಮಂತ್ರಿಸಿದನು—ಕ್ಷೀಣ ಸ್ವರದಲ್ಲಿ.

"ಚಿಂತಾಜನಕ ಸ್ಥಿತಿ ಏನು?" ವೈದ್ಯರು ವಿಚಾರಿಸಿದರು.

"ಚಿಂತಾಜನಕ ಹೌದೋ, ಅಲ್ಲವೋ, ಇದು ನನ್ನದೊಂದು ದೃಢ ಘೋಷಣೆ ಇದೆ—ನನ್ನ ಶುಶ್ರೂಷೆಗೆ ಭಾರತೀಯ ಸ್ನೇಹಿತರೇ ಬೇಕು...." ಸೇನಾಧಿಕಾರಿ ಸ್ಪಷ್ಟಪಡಿಸಿದರು.

"ಸೇನಾಧಿಕಾರಿಯವರ ಆದರ ವಚನಗಳಿಗೆ ಅಭಿನಂದನೆಗಳು" ಕೊಟ್ನಿಸ್ ಬದಲಿತ್ತರು ಮಾತಿನಲ್ಲೇ ಕಾಲ ಕಳೆಯುವ ಸಮಯ ಇದಲ್ಲ. ಡಾಕ್ಟರ್ ಕೊಟ್ನಿಸ್‌ರವರು ಒಡನೆ ಸೇನಾಧಿಕಾರಿ ಚಾ. ಎನ್. ಲೈಯ ಶುಶ್ರೂಷೆಗೆ ಮುಂದಾದರು.

[ಹೌದು ಇಂದೂ ಚಾ. ಎನ್. ಲೈಯ ಶುಶ್ರೂಷೆಗೆ ಭಾರತೀಯ ಯುಕ್ತ ವೈದ್ಯರು ಬೇಕಾಗಿದ್ದಾರೆ. ಅವರಿಗೆ ಗಾಯವಾಗಿದೆ-ಹೃದಯದಲ್ಲಿ. ಚಿಕಿತ್ಸೆ-ಶುಶ್ರೂಷೆಗೆ ಮುಂದಾಗುವ ಬದಲು ತಾತ್ಕಾಲಿಕ ತೃಪ್ತಿಗೆ ಮುಂದಕ್ಕೆ ಬಂದಲ್ಲಿ ಗುರಿಯನ್ನು ಮುಟ್ಟಲು ಸಾಧ್ಯ ಇರುವುದಿಲ್ಲ.........ಶಿ. ಶ.]

(ಮೂಲ: ಸಕಲೇಶ)

— ಶಿವಶಂಕರ ಮದ್ರಾಸು.

ಮಹಿಳೆಯರಿಗಾಗಿ ಉಳಿತಾಯ ಯೋಜನೆ.......೧

ಜೀವನ
ಸುಂದರ............
ಅದರ ಸವಿನೆನಪು
ಅತಿ ಸುಂದರ........ ....

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ "ಬ್ಯಾಂಕ್ ಎಕೌಂಟ್" ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ "ಬ್ಯಾಂಕ್ ಖಾತೆ"ಯೂ ಅಭಿವೃದ್ಧಿಯತ್ತ ಬೆಳೆಯಬಲ್ಲದು. "ಬ್ಯಾಂಕ್ ಖಾತೆ"ಯು ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

ಭವಿಷ್ಯತ್ತಿನ ಭದ್ರತೆಗಾಗಿ
ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925 ಶಾಖೆಗಳು: 176

Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6–76
Vol. 42 No. 22 | ಉಡುಪಿ, 7–2–1963 ಗುರುವಾರ | ಸಂಪುಟ ೪೨ ಸಂಚಿಕೆ ೨೨

## ಐರೋಪ್ಯ ಮಾರುಕಟ್ಟೆಯಲ್ಲಿ

# ಬ್ರಿಟನ್ನಿನ ಮಾನಭಂಗವೆ?

ಇತ್ತೀಚಿಗಿನ ಅಂತಾರಾಷ್ಟ್ರೀಯ ಘಟನೆಗಳಲ್ಲಿ ಐರೋಪ್ಯ ವಾಣಿಜ್ಯ ಒಕ್ಕೂಟವು ಜಗತ್ತಿನ ಗಮನವನ್ನು ಆಕರ್ಷಿಸಿಕೊಂಡಿದೆ. ಇದೊಂದು ಜಗತ್ತಿಗೇ ಅತ್ಯಂತ ಕುತೂಹಲಕಾರೀ ಮಹತ್ವದ ವಿಷಯವಾಗಿತ್ತು. ಇತ್ತೀಚಿಗೆ ಬ್ರುಸ್ಸೆಲಿನ ಮಾತುಕತೆಯ ನಂತರ ಈಗ ಇದು ಬಹಳ ಮಹತ್ವವನ್ನು ಪಡೆದಿದೆ. ಈ ಸಾಮಾನ್ಯ ಮಾರುಕಟ್ಟೆ ಯುರೋಪಿಗೆ ಮಾತ್ರವಲ್ಲದೆ ಜಗತ್ತಿನ ಎಲ್ಲಾ ಸ್ವತಂತ್ರ ರಾಷ್ಟ್ರಗಳಿಗೂ ಬಹು ಸಮಸ್ಯಾತ್ಮಕ ವಿಷಯವಾಗಿದೆ. ಏಕೆಂದರೆ, ಅವೆಲ್ಲವುಗಳ ವ್ಯಾಪಾರಿಕ ವಾಣಿಜ್ಯ ವ್ಯವಹಾರವು ಈ ವಾಣಿಜ್ಯ ಒಕ್ಕೂಟದ ಮೇಲೆ ಹೊಂದಿಕೊಂಡಿದೆಯೆಂಬುದು ಸರ್ವಶ್ರುತ. ಆದರೆ ಇದಕ್ಕಿಂತಲೂ ಹೆಚ್ಚಾಗಿ ಬ್ರಿಟನಿನ ಹಿತಸಂರಕ್ಷಣೆಗೆ ಇದು ಅತಿ ಅಗತ್ಯದ್ದಾಗಿತ್ತು. ಯುರೋಪಿನಲ್ಲೇ ಹಿರಿತನಕ್ಕಾಗಿ ಸ್ಪರ್ಧೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಬ್ರಿಟನು ಬಹುಚಾಣಾಕ್ಷನಾಗಿ ವರ್ತಿಸುವುದು ಆವಶ್ಯಕ. ಈ ತರದ ಸ್ಪರ್ಧೆಗೆ ಆ ರಾಷ್ಟ್ರಗಳ ಔದ್ಯೋಗಿಕ ಉನ್ನತಿಯ ಬಗೆಗಿನ ಸ್ಪರ್ಧೆಯೇ ಮೂಲ ಪಂಚಾಂಗ ಎಂದರೆ ತಪ್ಪಲ್ಲ. ಪರಸ್ಪರ ಔದ್ಯೋಗಿಕ ಉನ್ನತಿಯಲ್ಲಿ ಸಹಯೋಗ—ಸಮತೋಲಗಳು ತಪ್ಪಿ ಒಂದರಿಂದ ಮತ್ತೊಂದು ಮಿಗಿಲಾಗಿ ಅವುಗಳಿಗೆ ತಾವು ತಯಾರಿಸಿದ ಸಾಮಾನುಗಳಿಗೆ ಮಾರುಕಟ್ಟೆಯೇ ಇಲ್ಲದಾಗಿವೆ

### ಸಮಸ್ಯೆಯೇನು?

ಕಳೆದ ಸಲದ ಕಾಮನ್‌ವೆಲ್ತ್ ಸಮ್ಮೇಲನದಲ್ಲಿ ಭಾರತದ ಪ್ರಧಾನಿ ನೆಹರೂರವರು ಬ್ರಿಟನು ಯುರೋಪಿನ ಸಾಮಾನ್ಯ ಮಾರುಕಟ್ಟೆಯಲ್ಲಿ ಮಿಲನವಾಗುವುದನ್ನು ಸಂಪೂರ್ಣವಾಗಿ ವಿರೋಧಿಸಿ ಇದರಿಂದ ಭಾರತದಂತಹ ರಾಷ್ಟ್ರಗಳಿಗೆ ಬಹು ಹಾನಿಯಿದೆಯೆಂದು ಹೇಳಿದ್ದರು. ಅಂದಿನಿಂದ ಈ ಸಮಸ್ಯೆ ಉಲ್ಬಣಿಸುತ್ತಾ ಬಂದಿದೆ. ಬ್ರಿಟನಿಗೆ ಇಂದು ತನ್ನ ಸರಕುಗಳನ್ನು ಮಾರಾಟ ಮಾಡಲು ಮಾರುಕಟ್ಟೆಯೇ ಇಲ್ಲವಾಗಿದೆ. ಹಿಂದೆ ಭಾರತದಂತಹ ರಾಷ್ಟ್ರಗಳು ಅದರ ಕೈಯಲ್ಲಿದ್ದುವು. ದೇಶದಲ್ಲಿನ ಆರ್ಥಿಕ ಸ್ಥಿತಿಯೇ ಇದರಿಂದ ಬಹು ಬಿಗಡಾಯಿಸಿದೆ. ಮಾರುಕಟ್ಟೆಯಿಲ್ಲದಿದ್ದರೆ ಕೈಗಾರಿಕೆ ಎಷ್ಟು ಮಾತ್ರಕ್ಕೂ ಬೆಳೆಯುವಂತಿಲ್ಲ. ಇದಕ್ಕಾಗಿ ಅದು ಯುರೋಪಿನ ಸಾಮಾನ್ಯ ಮಾರುಕಟ್ಟೆಯಲ್ಲಿ ಪ್ರವೇಶಿಸ ಬಯಸಿತು. ಆದರೆ ಯುರೋಪಿನ ಈ ಮಾರುಕಟ್ಟೆಯು ನೆದರ್‌ಲ್ಯಾಂಡ್ಸ್, ಪ. ಜರ್ಮನಿ, ಬೆಲ್ಜಿಯಂ, ಲುಕ್ಸೆಂಬರ್ಗ್, ಇಟಲಿ ಮತ್ತು ಫ್ರಾನ್ಸ್ ದೇಶಗಳ ಪೂರ್ಣ ಹತೋಟಿಯ ಅಧಿಕಾರದಲ್ಲಿದೆ ಇದಕ್ಕಾಗಿ ಅದು ಆ ರಾಷ್ಟ್ರಗಳ ಅನುಮತಿ ಪ್ರಥಮತಃ ಪಡೆಯಬೇಕಾಗಿದೆ. ಬ್ರಿಟನಿನಂತಹ ಕೈಗಾರಿಕಾ ರಾಷ್ಟ್ರವು ಈ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸಿದ್ದೇ ಆದರೆ ತಮ್ಮ ಭವಿಷ್ಯ ಹಾಳಾದಂತೆಯೇ ಎಂದು ಈ ಸದಸ್ಯ ರಾಷ್ಟ್ರಗಳು ಮನಗಂಡು ಪ್ರಾರಂಭದಲ್ಲಿ ಮೌನವಾಗಿಯೇ ವಿರೋಧಿಸಿದುವು. ನಿಜವಾಗಿ ನೋಡಿದರೆ ಬ್ರಿಟನಿನ ಪ್ರವೇಶದಿಂದ ಈ ದೇಶಗಳ ವ್ಯಾಪಾರಿಕ ವ್ಯವಹಾರ ಕುಂದುವುದರಲ್ಲಿ ಸಂಶಯವಿಲ್ಲ. ಇಂದು ಈ ಸದಸ್ಯ ರಾಷ್ಟ್ರಗಳ ಕೈಗಾರಿಕೆಯಲ್ಲಿ ಪ್ರಗತಿಯಾಗಿ ರಷ್ಯವನ್ನೂ ಕೂಡಾ ಮೀರುವಷ್ಟು ಮುಂದುವರಿದಿವೆ.

### ಮೂರನೆ ಬಣ ಅಗತ್ಯ?

ಇಂದಿನ ಈ ಸಂದಿಗ್ಧ ಕಾಲದಲ್ಲಿ ಇನ್ನೊಂದು ಬಣವೊಂದು ಅಗತ್ಯಬೇಕೆಂದು ಬ್ರಿಟನ್ ಪ್ರಧಾನಿ ಮೆಕ್ಮಿಲನ್ ನುಡಿದಿದ್ದಾರೆ. ರಷ್ಯ ಅಮೇರಿಕಾಗಳಲ್ಲಿ ಪರಸ್ಪರ ವಿರುದ್ಧ ಸ್ವಭಾವಗಳೇ ಬೆಳೆಯುತ್ತಿದ್ದು ಜಗತ್ತಿನ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ರಕ್ಷಣೆಗೆ—ಉದ್ದೇಶಕ್ಕೆ ಮಧ್ಯಸ್ಥ ಬಣವೊಂದು ಅಗತ್ಯವೆಂದೂ ಅದಕ್ಕೆ ಬ್ರಿಟನ್ ಅತಿ ಸಮರ್ಥವೆಂದೂ ಮೆಕ್ಮಿಲನ್ನರು ವಾದಿಸಿ, ಅಂಥ ಬ್ರಿಟನಿಗೆ ಸಾಮಾನ್ಯ ಮಾರುಕಟ್ಟೆಯಲ್ಲಿ ಪ್ರವೇಶ ನೀಡಿ ತನ್ಮೂಲಕ ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಅಭ್ಯುದಯ ಬಯಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.

### ಕಾಮನ್‌ವೆಲ್ತ್ ರಾಷ್ಟ್ರಗಳು

ಈ ವಿಚಾರದ ಬಗ್ಗೆ ಪ್ರಾರಂಭದಿಂದಲೂ ಕಾಮನ್‌ವೆಲ್ತ್ ರಾಷ್ಟ್ರಗಳು ಒಮ್ಮತವಾಗಿ ಬ್ರಿಟನ್ ಪ್ರವೇಶಿಸುವುದನ್ನು ವಿರೋಧಿಸಿವೆ. ಇದರಿಂದ ಅವುಗಳ ವ್ಯಾಪಾರದಲ್ಲಿ ತೀವ್ರ ಕುಸಿತವಾಗುವುದರಲ್ಲಿ ಸಂಶಯವಿಲ್ಲ. ಬ್ರಿಟನ್ ಇಂದು ಅತಿ ಮುಂದರಿದ ರಾಷ್ಟ್ರ. ಆದರೆ ಪ್ರಗತಿ-ಸಮೃದ್ಧಿಯ ಕಡೆಗೆ ಗಮನ ಕೊಡುವುದಕ್ಕಿಂತ ಇತರ ಸದಸ್ಯ ರಾಷ್ಟ್ರಗಳ ಅಭಿವೃದ್ಧಿ ಕಡೆಗೆ ಗಮನ ಕೊಡುವುದವಶ್ಯವಾಗಿದೆ. ಆದರೆ ಬ್ರಿಟನ್ ಮಾತ್ರ ತನ್ನ ಅಭಿವೃದ್ಧಿಯಿಲ್ಲದೆ ಇತರ ಸದಸ್ಯ ರಾಷ್ಟ್ರಗಳ ಪ್ರಗತಿಯಿಲ್ಲವೆಂದು ತಿಳಿದಿದೆ. ತಾನು ಈ ಸದಸ್ಯ ರಾಷ್ಟ್ರಗಳ ಮೇಲೆ ಅತಿ ಕಡಿಮೆ ತರದ ತೆರಿಗೆ ಹಾಕುತ್ತಿದ್ದೇನೆ. ಅವುಗಳ ಸರಕುಗಳಿಗೂ ಉತ್ತಮ ಮಾರುಕಟ್ಟೆ ಸಿಗುವಂತೆ ಮಾಡುತ್ತಿದ್ದೇನೆ, ಎಂದು ಅದು ವಾದಿಸುತ್ತಿದೆ. ಕಾಮನ್‌ವೆಲ್ತ್ ಸೆಕ್ರೆಟರಿ ಡಂಕನ್ ಸ್ಯಾಂಡಿಸರು ಇದನ್ನೇ ವಾದಿಸಿ ಬ್ರಿಟನ್ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸದಿದ್ದರೆ ಅದೊಂದು ಜಗತ್ತಿಗೇ ಅಮಂಗಲಕರ ಎಂದಿದ್ದಾರೆ ಐರೋಪ್ಯ ವಾಣಿಜ್ಯ ಒಕ್ಕೂಟದ ಸಂಧಾನಕಾರರಾದ ಎಡ್ವರ್ಡ್ ಹೀಥ್‌ರವರು ಕೂಡಾ ಸಾಮಾನ್ಯ ಮಾರುಕಟ್ಟೆಯಲ್ಲಿ ಬ್ರಿಟನ್ನಿಗೆ ಪ್ರವೇಶ ಸಿಗದಿದ್ದುದರಿಂದ ಜಗತ್ತಿನ ಹಿತಕ್ಕೇ ಧಕ್ಕೆಯಿದೆಯೆಂದು ನುಡಿದಿದ್ದಾರೆ. ಯುರೋಪಿನ ಸಾಮಾನ್ಯ ಮಾರುಕಟ್ಟೆಯ ಜನಕರಾದ ಜೀನ್‌ಮೊನೆಟ್‌ರವರು ಬ್ರಿಟನ್ನಿಗೆ ಈ ವಾಣಿಜ್ಯ ಒಕ್ಕೂಟದಲ್ಲಿ ಪ್ರವೇಶ ಸಿಗುವುದು ಅತ್ಯಗತ್ಯ ಎಂದು ಸಾರಿದ್ದಾರೆ. ಆದರೆ ವಸ್ತುಸ್ಥಿತಿ ಮಾತ್ರ ತೀರಾ ಬೇರಾಗಿದೆ.

### ಬ್ರುಸೆಲ್ಸ್ ಮಾತುಕತೆ

ಇತ್ತೀಚೆಗಿನ ೧೫ ದಿನಗಳಲ್ಲಿ ಈ ವಿಷಯ ಅತ್ಯಂತ ಪ್ರಚಾರವಾಗಿ ಹರಡಿದೆ. ಮಾರುಕಟ್ಟೆಯ ಸದಸ್ಯ ರಾಷ್ಟ್ರಗಳಲ್ಲಿ ಪ್ರಧಾನವಾದ ಫ್ರಾನ್ಸ್, ಬ್ರಿಟನ್ನಿನ ಮೊದಲಿನ ವಿರೋಧಿ ರಾಷ್ಟ್ರವಾಗಿದೆ. ಬ್ರಿಟನ್ ಪ್ರವೇಶಿಸಿದ್ದೇ ಆದರೆ ತನ್ನ ಪ್ರತಿಷ್ಠೆಗೆ—ಅಗ್ರಗಣ್ಯತೆಗೆ ಕುಂದು ಬರುತ್ತದೆಂದು ಅದು ತಿಳಿದಿದೆ. ಇದರಿಂದ ತನ್ನ ಸಾರ್ವಭೌಮತ್ವವೂ ಜಾರುವುದು ಎಂಬುದು ಅದರ ಅಭಿಮತ. ಇದಕ್ಕೋಸ್ಕರವೇ ಅದು ಪೂರ್ಣವಾಗಿ ವಿರೋಧಿಸಿದೆ. ಕಳೆದ ತಿಂಗಳ ಕೊನೆಯ ಸಪ್ತಾಹದಲ್ಲಿ ಫ್ರಾನ್ಸಿನ ಬ್ರುಸ್ಸೆಲ್‌ನಲ್ಲಿ ಈ ಬಗ್ಗೆ ೬ ಸದಸ್ಯ ರಾಷ್ಟ್ರಗಳ ಸಮ್ಮೇಲನ ಜರಗಿ ಅದರಲ್ಲಿ ಫ್ರಾನ್ಸ್ ಬ್ರಿಟನಿನ ಪ್ರವೇಶವನ್ನು ಸ್ಪಷ್ಟವಾದ ವಾಣಿಯಿಂದ ವಿರೋಧಿಸಿತು. ಉಳಿದ ಸದಸ್ಯ ರಾಷ್ಟ್ರಗಳಲ್ಲಿ ಜರ್ಮನಿ, ನೆದರ್ಲೇಂಡ್ಸ್, ಲುಕ್ಸೆಂಬರ್ಗ್‌ಗಳ ಸಹಾನುಭೂತಿ ಬ್ರಿಟನ್ ಪರವಾಗಿದ್ದರೂ ಎಲ್ಲಾ ನೀರ ಮೇಲಣ ಗುಳ್ಳೆಯಂತಾಯಿತು

### ಅಮೇರಿಕದ ಪ್ರತಿಕ್ರಿಯೆ

ಈ ಮಧ್ಯೆ ಅಮೇರಿಕೆ ಪ್ರವೇಶಿಸಿ ಬ್ರಿಟನ್ನಿಗೆ ಮಾರುಕಟ್ಟೆಯಲ್ಲಿ ಪ್ರವೇಶ ಸಿಗುವಂತೆ ಪ್ರಭಾವ ಬೀರಿತು. ಬ್ರಿಟನ್ನಿಗೆ ಪ್ರವೇಶ ಸಿಗುವುದು ಅವಶ್ಯವೆಂದು ಡೀನ್ ರಸ್ಕ್ ಅಭಿಪ್ರಾಯಪಟ್ಟು ಫ್ರಾನ್ಸಿಗೆ ತನ್ನ ಧೋರಣೆ ಬದಲಾಯಿಸುವ ಸೂಚನೆ ಕೊಟ್ಟರು. ಇದನ್ನು ಸ್ವೀಕರಿಸದಿದ್ದರೆ, ಪಾಶ್ಚಾತ್ಯ ರಾಷ್ಟ್ರಗಳ-ಅಮೇರಿಕೆಗಳ-ಯುರೋಪಿನ ಐಕ್ಯತೆಗೆ—ಸಖ್ಯತೆಗೆ ತೀವ್ರ ಪೆಟ್ಟಾಗುವುದೆಂದೂ ಅವರು ಹೇಳಿದರು. ಜಗತ್ತಿನ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ನಮ್ಮೊಳಗೆ ಈ ರೀತಿ ಭಿನ್ನಭಾವನೆ ಮೂಡುವುದು ತರವಲ್ಲವೆಂದು ಹೇಳಿದರು. ಇದು ಯಥಾರ್ಥ ವಿಷಯವಾದರೂ ಫ್ರಾನ್ಸ್ ಮಾತ್ರ ಸ್ವಹಿತಕ್ಕೆ ಧಕ್ಕೆ ಬರುವುದೆಂದು ಅವರ ಸಲಹೆಯನ್ನು ತಿರಸ್ಕಾರ ಮಾಡಿದೆ.

### ಭಾರತಕ್ಕೆ ಅನುಕೂಲ

ಅಂತೂ ಬ್ರಿಟನ್ನಿಗೆ ಪ್ರವೇಶ ಸಿಗದೆ ಮಾನಭಂಗವಾದರೂ ಅದರಿಂದ ಜಗತ್ತಿನ ಹಿತಕ್ಕೆ ಧಕ್ಕೆ ಬಂತೆನ್ನುವುದು ಸರಿಯಲ್ಲ. ಯಾಕೆಂದರೆ ಬ್ರಿಟನ್ ಮಾರುಕಟ್ಟೆಯನ್ನು ಪ್ರವೇಶಿಸಿದ್ದೇ ಆದರೆ ಭಾರತದಂತಹ ರಾಷ್ಟ್ರಗಳಿಗೆ ಮುಂದೆ ಬ್ರಿಟನೇ ಒಂದು ಪ್ರಬಲ ಪ್ರತಿಸ್ಪರ್ಧಿಯಾಗಿ ಅವುಗಳ ಕೈಗಾರಿಕಾ ಪ್ರಗತಿ ಕುಂಠಿತವಾಗುವುದರಲ್ಲಿ ಸಂಶಯವಿಲ್ಲ. ಇಂದು ಭಾರತದ ಸಾಮಗ್ರಿಗಳು ಯುರೋಪಿನ ಮಾರುಕಟ್ಟೆಯಲ್ಲಿ ತೆರಿಗೆಯಿಲ್ಲದೆ ಉತ್ತಮ ಗಿರಾಕಿಗಳನ್ನು ಗಳಿಸುವುದರಲ್ಲಿ ಸಮರ್ಥವಾಗಿದೆ. ಆದರೆ ಅವು ಬ್ರಿಟನಿನೊಡನೆ ಸ್ಪರ್ಧಿಗಿಳಿಯುವ ಸ್ಥಿತಿಯಲ್ಲಿ ಇಲ್ಲವಾದುದರಿಂದ ನೆಹರೂರವರು ಇದನ್ನು ವಿರೋಧಿಸಿದ್ದರು.

ಅಂತೂ ಇಂಗ್ಲೆಂಡಿಗೆ ಬಹಳ ಸಂದಿಗ್ಧವಾದ ಕಷ್ಟ ಪರಿಸ್ಥಿತಿ ಈಗ ಬಂದೊದಗಿದೆ ಅದರಿಂದ ಜಗತ್ತಿಗೆ ಹಾನಿಯಾಗಿದೆಯೆಂಬುದು ಮಾತ್ರ ಸರಿಯಾಗದು. ಬ್ರಿಟನ್ ಈಗ ತನ್ನ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಸಮಾಲೋಚನೆ ನಡೆಸಿ ಮುಂದಿನ ತನ್ನ ಹೆಜ್ಜೆಯ ಬಗೆಗೆ ಆಲೋಚಿಸುವುದು ಸೂಕ್ತವಾಗಿದೆ.

—ಶ್ರೀ ರಾಮತನಯ.

## ಸಂಧಾನ ಸಾಗಿತೆಂದು ಮೈಮರೆಯಬೇಡಿರಿಂದು.

ಮುಗ್ಧ ಮನಸ್ಸಿನ

# ಮಾತಿನ ಮಲ್ಲಿಗೆಯೆದುರು

"ಹೋಗ್ರೀss ... ನೀವು ಬರೋದೇನೆ ಬೇಡ... ಹೋಗ್ರೀ" ನಾನು ಮುಂದಕ್ಕೆ ಕಾಲಿಡುತ್ತಿದ್ದಂತೆ ಆಕೆಯ ಚೀರಿಕದನಿ ನನ್ನನ್ನು ಹಿಡಿದು ನಿಲ್ಲಿಸಿತ್ತು. ಆದರೂ ಅಭ್ಯಾಸಬಲದಿಂದ—ಸ್ನೇಹಿತನ ಮೇಲಣ ಸಲುಗೆಯಿಂದ ನನ್ನ ಕಾಲುಗಳು ಮುಂದೊತ್ತಿದ್ದುವು. ಆಷಾಢ ಮಾಸದ ಜೋಯ್ಯನೆ ಮಳೆಯಲ್ಲಿ ಸಂಪೂರ್ಣವಾಗಿ ನನೆದಿದ್ದರೂ ಶೀತ ಜ್ವರಗಳ ಪರಿವೆಯಿಲ್ಲದೆ ತನ್ನ ಮಾಲಿಕನಿಗಾಗಿ ಕೆಲಸ ಮಾಡುವ ಸೇವಕನಂತೆ—ಸ್ವಾರ್ಥ ಜೀವನದ ಮಾದಕತೆ ಸೋಕದ ಹುತಾತ್ಮನಂತೆ ನನ್ನನ್ನು ರಕ್ಷಿಸಿಕೊಂಡು ಬಂದ ಕೊಡೆಯನ್ನು ಹೆಗಲ ಮೇಲಿಂದಿಳಿಸಿ ಮೂಲೆಯಲ್ಲಿ ವಿರಮಿಸಲು ಇರಿಸಿದೆ. ಕಡಿಮೆ ಸಂಬಳದ ಕಾರಕೂನನ ಅಪೂರ್ಣ ಕೆಲಸದಂತೆ, ತನ್ನ ಕೇಸವಸ್ತ್ರದಲ್ಲಿನ ಕುಂದುಕೊರತೆಗಳನ್ನು ಲೆಕ್ಕಿಸದೆ 'ಪಿಟ್ಟ" ಹೀರಿಕಿತ್ತು ಎದು ಅದಾವುದಕ್ಕೂ ವ್ಯವಧಾನವಿಲ್ಲದವನಂತೆ ಮೈಮೇಲಿನ ನೀರನ್ನು ಕೊಡವಿಕೊಂಡು, ನೀರಿನಲ್ಲಿ ತೋಯ್ದು ಒಟ್ಟೆಯಲ್ಲೇ ಮುಂಬಾಗಿಲ ವರೆಗೆ ಮುಂದುವರಿದಿದ್ದೆ.

'ಯಾಕ್ರಿ ಅಲ್ಲಿ ಒದ್ದೆ ಮಾಡ್ತೀರಿ.... ಅವರಿಲ್ಲ ಹೋಗ್ರಿ".

ನನ್ನ ಸ್ಥಾನದಲ್ಲಿದ್ದ ಯಾರಿಗೂ ಕರ್ಣಕಠೋರವಾಗಿರಬಹುದಾದ ಆಕೆಯ ಮಾತು ನನ್ನನ್ನು ಸೆಳೆದಿತ್ತು. ಆಕೆಯ ಮುಗ್ಧ ಮಾತಿನ ಸವಿಯನ್ನು ಹೀರುತ್ತಾ ಹೊರ ಬಾಗಿಲಲ್ಲೇ ನಿಂತಿದ್ದೆ ನಾನು. ಛಿದ್ರ ಛಿದ್ರವಾಗಿದ್ದ ತೆರೆಯ ಹಿಂದೆ ಅವಿತಿದ್ದ ಆಕೆಯ ದುಂಡು ಮುಖದಲ್ಲಿ ಆನಂದ ಲಾಸ್ಯವಾಡುತ್ತಿತ್ತು — ಬಾಲಚಂದಿರನ ಸಿಂತ ಮಿಶ್ರಿತ ಕೆಂಪು ಬಣ್ಣದಂತೆ ಆಕೆಯ ಮುಖದಲ್ಲಿ ಮೂಡಿದ್ದ ಮುಗಿಗೋಪ ಮುಖಕ್ಕೊಂದು ಅಪೂರ್ವ ಕಳೆಯನ್ನು ನೀಡಿತ್ತು. ಎಣ್ಣೆ ಹಾಕದೆ ತೀಡಿದ್ದ ಕೂದಲು ಹಿಡಿತಕ್ಕೆ ಸಿಕ್ಕದೆ ತಪ್ಪಿಸಿಕೊಂಡ ಕುಂಟಿ ಮುಂಗುರುಳು, ಹುಣ್ಣಿಮೆ ಚಂದಿರನ ಮೇಲೆ ಅನಿರೀಕ್ಷಿತವಾಗಿ ತೇಲಿ ಬಂದ ಮರಿಮೋಡದಂತೆ ಆಕೆಯ ಮುಖದ ಮೇಲೆ ನಲಿಯುತ್ತಿತ್ತು. ಹೆಣ್ಣಿನ ಸಹಜ ವಕ್ರತೆಯನ್ನು ಮೆಟ್ಟಿ, ಮುಗ್ಧತೆಯು ಆಶ್ರಯದಂತಿತ್ತು — ಆಕೆಯ ಪುಟ್ಟ ಬಾಯಿ.

"ಏನ್ರಿ ಹಾಗೆ ನೋಡ್ತೀರಿ....ಹೋಗ್ರಿ ಅಲ್ಲಿಗೆ"

ಈ ಛಾರಿಯ ಮಾತಿನಲ್ಲಿ ನಿರಾಕರಣೆಗಿಂತ—ದುರ್ಜನರ ಮಧ್ಯದಲ್ಲಿನ ಸಜ್ಜನನಂತೆ ಆಹ್ವಾನದ ಚಿಹ್ನೆ ಒಡೆದು ಕಾಣುತ್ತಿತ್ತು. ನಾನು ನಿಂತೇ ಇದ್ದೆ. ಬಿಸಿಲು—ಮಳೆಗಳ ಪರಿವೆ ಯಿಲ್ಲದೆ ಪ್ರಕೃತಿ ಸೌಂದರ್ಯವನ್ನು ಹೀರುತ್ತಾ ಭದ್ರವಾಗಿ ನಿಂತ ಗೋಮಟೇಶ್ವರನ ಅಪರಾವತಾರದಂತಿತ್ತು ನನ್ನ ನಿಲುವು. ಮನದಲ್ಲಿ ಗೆಲುವೂ ಮೂಡಿತ್ತು. ತೀಕ್ಷ್ಣ ಬೇಕನ್ನು ಹಿಂಬಲಿಸುವ ಕರಿನೆಂಳಿನಂತೆ ನನ್ನ ಗಲುವಿಗೂ ರಂಗು ಬಡೆಯುವಂತಾಯ್ತು. ಇನ್ನು ನನ್ನ ಕಡೆ ಗಮನ ಕೊಡುವುದು ಅನಾವಶ್ಯಕವೆಂದು ಕಂಡಿರಬೇಕು ಆಕೆಗೆ. ಕೂಡಲೆ ತನ್ನ ಸ್ನೇಹಿತೆಯರ ಬಳಗದತ್ತ ಮುಖ ತಿರುಗಿಸಿ, ಕೈಯಲ್ಲಿನ ಬಳಪದ ತುಂಡಿನಿಂದ ನೆಲದ ಮೇಲೆಲ್ಲಾ ವಿಚಿತ್ರವಾಗಿ ಗೀಚತೊಡಗಿದಳು. ಕಾಲನ್ನು ನೀಳವಾಗಿ ನೆಲದ ಮೇಲೆ ಚಾಚಿ ಎಡಗೈಯನ್ನು ನೆಲಕ್ಕೆ ಆಧರಿಸಿ ಬಲಗೈಯಿಂದ ನೆಲದ ಮೇಲೆ ಗೀಚುವ ಮಧ್ಯೆ ಸ್ವಲ್ಪ ಬಿಡುವು ಮಾಡಿಕೊಂಡು ತನ್ನ ಎಡಗೈಯ ಮಧ್ಯೆಯಿರುವ ತ್ರಿಕೋಣಾಕೃತಿಯ ಸಂದಿನಿಂದ ನನ್ನನ್ನು ವೀಕ್ಷಿಸುತ್ತಿದ್ದಳು. ಮುಖದ ಆಕಾರಕ್ಕೆ ತಕ್ಕುದಾಗಿ ಕತ್ತರಿಸಿದ ಆಕೆಯ 'ಬಾಬ್' ಮುಖದ ಮೇಲೆಲ್ಲಾ ಹರಡಿಸಿತ್ತು. ನೀಳವಾದ ಆಕೆಯ ಹೊಳೆಯುವ ಕಣ್ಣುಗಳಲ್ಲಿ ತುಂಟ ನಗು ಸೂಸುತ್ತಿತ್ತು. ಅಷ್ಟರಲ್ಲೇ ಆವಳ ಸ್ನೇಹಿತೆಯರ ಬಳಗದ ಇಬ್ಬರು ಸದಸ್ಯರಿಗೆ ಕೈ ಕೈ ಹತ್ತಿತ್ತು. ಒಬ್ಬಳು ಮತ್ತೊಬ್ಬಳ ಕೂದಲು ಹಿಡಿದು ಎಗರುತ್ತಿದ್ದಳು ಕೂದಲು ಹಿಡಿಯಿಸಿಕೊಂಡವಳು ನೋವಿನಿಂದ ಚೀರುತ್ತಿದ್ದಳು, ಮತ್ತು ತನ್ನ ಕೈಯಲ್ಲಿದ್ದ ಕಬ್ಬಿಣದ ಚೂರಿಯಿಂದ ಇದಿರಾಳಿಯನ್ನು ಪ್ರಯತ್ನಪೂರ್ವಕವಾಗಿ ಚುಚ್ಚುತ್ತಿದ್ದಳು. ಜಗಳ ಕೂಗಿನಲ್ಲಿ ಅಂತ್ಯವಾಗಿ, ಕಣ್ಣೀರಾಗಿ ಹರಿಯುತಿತ್ತು. ಇಬ್ಬರೂ ಅಳುತಿದ್ದರು. ಬಳಗದ ಅಧ್ಯಕ್ಷೆ ರೀತಾ ಇಬ್ಬರನ್ನೂ ಸಂತೈಸತೊಡಗಿದಳು.

"ಅಳಬೇಡ ಸುಮಾ ..ನೀನು ಒಳ್ಳೆಯವಳು ...ಅವಳ್ಗೆ ಅಮ್ಮನತ್ರ ಹೇಳ್ತೀನಿ, ಆಯ್ತಾ ಅಳಬೇಡ ..ನಿನಗೆ ಪೆಪ್ಪರ್‌ಮಿಂಟ್ ಕೊಡ್ತೀನಿ ..ಅವ್ಳಿಗೆ ಇಲ್ಲ . ಆಯ್ತಾ ..ss"

ಹೊರಗೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಮಂಗಳೂರು ಹಂಚಿನ ಮೇಲೆ ಬೀಳುತ್ತಿದ್ದ ಮಳೆಯ ದಪ್ಪ ಹನಿಗಳು "ಟಿನ್, ಟಿನ್" ಎಂದು ಸದ್ದು ಮಾಡುತ್ತಿದ್ದುವು. ಕೋಣೆಯಲ್ಲಿದ್ದ ತೆರೆದ ಕಿಟಕಿಯಿಂದ ಇರಚಲು ಒಳಗೆ ನುಗ್ಗುತ್ತಿತ್ತು. ಆದರೂ ಒಳಗೆ ನಾಟಕ ನಿರ್ವಿಘ್ನವಾಗಿ ನಡೆದಿತ್ತು.

'ನೋಡಮ್ಮಾ ರೀತಾ ..ಅಮೃತನನ್ನು ಸ್ವಲ್ಪ ಕರಿಯಮ್ಮ".

— ನಾನು ನಿಂತಲ್ಲಿಂದಲೇ ಕೂಗಿ ಹೇಳಿದೆ. ಅಂಥ ವಿಷಮ ಸನ್ನಿವೇಶದ ತಿಳಿವಿಲ್ಲದ ಆಕೆಯ ಮಹಾಕಾರ್ಯಕ್ಕೆ ವಿಘ್ನವೆಂದ ನನ್ನ ಮಾತು ರೀತಾಳ ತಾಳ್ಮೆಯನ್ನು ಕೆಡಿಸದಿರಲಿಲ್ಲ. ಯಾರಿಗೆ ತಾನೇ ಸಿಟ್ಟು ಬರಲಿಕ್ಕಿಲ್ಲ! ಶಿವ ಪೂಜೆಯಲ್ಲಿ ಕರಡಿ ಬಿಟ್ಟಂತೆ", ಹೊರಗೆ ಬೀಳುವ ಮಳೆಯನ್ನು ನಿರ್ಲಕ್ಷಿಸಿ ಸಫಲವಾಯಿಸುವ ಪೂಜೆಯಲ್ಲಿ ತೊಡಗಿದ ಆಕೆಯ ಏಕಾಗ್ರತೆಗೆ ಭಂಗ ತಂದಾಗ ಆಕೆ ಬೇಗೆ ತಾನೆ ಸುಮ್ಮನಿರಲು ಸಾಧ್ಯ? ಮಾತ್ರ! ಸುಮ್ಮನಿರುವುದು ಆವಳ ಜಾಯಮಾನಕ್ಕೆ ಬಂದುದೇ ಅಲ್ಲ! ಅಂಥ ಅನ್ಯಾಯ ಆಪರಾಧವನ್ನು ಮಾಡಲೆಸಗುವ ಎಂತಹ ಉತ್ತ

(೧೧ನೇ ಪುಟ ನೋಡಿರಿ)

ಚೀನೀಯರ ಕ್ರೂರ ಆಕ್ರಮಣವನ್ನೆದುರಿಸಲು ಸೇನೆಯಲ್ಲಿ ಸೇರಲು ಭಾರತೀಯ ಯುವಕರು ಉತ್ಸಾಹ ತೋರಿಸುತ್ತಿದ್ದಾರೆ. ಎರ್ನಾಕುಲಂನ ಭರ್ತಿ ಕೇಂದ್ರದಲ್ಲಿ ನಿಂತ ಯುವಕರ ಕ್ಯೂ ಇದಕ್ಕೆ ಸಾಕ್ಷಿ


# ನವಯುಗ

**ರಾಷ್ಟ್ರೀಯ ವಾರಪತ್ರಿಕೆ**

**ಉಡುಪಿ**

**ಜಾಹೀರಾತು ದರಗಳು:**

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

**ಚಂದಾ:**

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

# ದಿ. ಹಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ ಕನ್ನಡ.



## ನೈಸರ್ಗಿಕ ಸುಂದರ ಗಂಭೀರ

# ಈಶಾನ್ಯ ಗಡಿಪ್ರದೇಶ—ನೇಫಾ

ಭಾರತವು ೧೯೪೭ರಲ್ಲಿ ಸ್ವತಂತ್ರವಾಯಿತು (ಬ್ರಿಟಿಷರಿಂದ). ಆಗ ನಮ್ಮ ಈಶಾನ್ಯ ಗಡಿ—ಪ್ರದೇಶವು (ಆಂಗ್ಲೇಯ ಹೆಸರಿನ [ನೋರ್ತ್ ಈಸ್ಟ್ ಫ್ರಂಟಿಯರ್ ಏಜನ್ಸಿ] ಮೊದಲ ಅಕ್ಷರಗಳನ್ನು ಮಾತ್ರ ಪೋಣಿಸಿಕೊಂಡು ನೇಫಾ ಎಂದು ಕರೆಯುತ್ತಾರೆ) ವಿಶೇಷವಾಗಿ ಯಾರಿಗೂ ಗೊತ್ತಿರಲಿಲ್ಲ. ಉತ್ತರದಲ್ಲಿ ತ್ರಿವಿಷ್ಟಪ [ಟಿಬೇಟು] ಅಥವಾ ಚೈನಾ, ಪಶ್ಚಿಮದಲ್ಲಿ ಭೂತಾನ, ಆಗ್ನೇಯ ದಿಕ್ಕಿನಲ್ಲಿ ಬ್ರಹ್ಮದೇಶ ಹಾಗೂ ದಕ್ಷಿಣದಲ್ಲಿ ಬ್ರಹ್ಮಪುತ್ರ ಘಾಟಿಯಿಂದ ಆವರಿಸಲ್ಪಟ್ಟುಕೊಂಡು ನೇಫಾ ಇದೆ. ಅದು ಸಾಧಾರಣ ಹತ್ತೊಂಭತ್ತನೆಯ ಶತಮಾನದ ವರೆಗೂ ಪೂರ್ಣ ಅಜ್ಞಾತ ಪ್ರದೇಶವೇ ಆಗಿತ್ತೆನ್ನಬಹುದು. ಇಂದು ವಿಶ್ವದಲ್ಲಿ ಕೆಲ ಕಾರಣಗಳಿಂದಾಗಿ ಅದು ಮಹತ್ವಪೂರ್ಣ ಸ್ಥಾನವನ್ನು ಗಳಿಸಿದೆ. ಈ ಶತಮಾನದಲ್ಲಿ ಚೈನಾವು ಕಂಪಾಗಿ, ಅತ್ತಇತ್ತ ನಾಲಗೆಯನ್ನು ಚಾಚಿರುವದು ಒಂದು ಕಾರಣವಾದರೆ ಇನ್ನೊಂದು ಕಾರಣ ಕ್ರಿಸ್ತೀಯ ಮತ ಪ್ರಸಾರಕರಿದ್ದಾರೆ. ಇವುಗಳಿಂದಾಗಿ ಜನತೆಯ ಗಮನ ಅತ್ತ ಆಕರ್ಷಿಸಲ್ಪಟ್ಟಿರುತ್ತದೆ. ಕ್ರಿಸ್ತೀಯ ಮತ ಪ್ರಚಾರಕರು, ಆಡಳಿತ ವಿಭಾಗವು ಚಹಾ ಬೆಳೆಸಲಿಕ್ಕಾಗಿ ಈ ಕ್ಷೇತ್ರವನ್ನು ಆರಿಸಿಕೊಂಡು ತಮ್ಮ ಕಾರ್ಯದಲ್ಲಿ ಮುನ್ನಡೆದಿದ್ದಾರೆ. ಇಲ್ಲಿಯ ವನವಾಸಿಗಳ ಬಳಿ ತಮ್ಮ ಕಾರ್ಯವು ಚೆನ್ನಾಗಿ ಫಲಿಸುವದನ್ನು ಅವರು ಮನಗಂಡರು. ಈ ಕೃತ್ಯಗಳಿಂದಾಗಿ ಹತ್ತಿರದಲ್ಲಿ ನಾಗಾ ಸಮಸ್ಯೆ ಹೆಡೆ ಎತ್ತಿ ನಿಂತಿದೆ.

೧೯೫೦ರಲ್ಲಿ ತ್ರಿವಿಷ್ಟಪವನ್ನು ಕಮ್ಯೂನಿಸ್ಟ್ ಚೈನಾ ಕಬಳಿಸಿಕೊಂಡಾಗ ನಾವು ಕೇವಲ ಪ್ರೇಕ್ಷಕರಂತೆ ನೋಡುತ್ತಿದ್ದೆವು. ತ್ರಿವಿಷ್ಟಪದ ಧಾರ್ಮಿಕ ಹಾಗೂ ಆಡಳಿತ ನೇತಾರ ದಲಾಯಿ ಲಾಮಾರವರು ಈ ಮಾರ್ಗದಿಂದ ತಲೆಮರೆಸಿ ಓಡಿಕೊಂಡು ಭಾರತಕ್ಕೆ ಶರಣು ಬಂದರು. ಅಂದಿನಿಂದ ನೇಫಾ ಯುದ್ಧ ದೃಷ್ಟಿಯಲ್ಲಿ ಪಡೆದಿರುವ ಮಹತ್ವ ಎಲ್ಲರಿಗೂ ಗೊತ್ತಾಗಿದೆ. ಭಾರತದ ಉತ್ತರ ಎಲ್ಲೆ ನಗಾಧಿರಾಜ ಹಿಮಾಲಯದ ಉನ್ನತೋನ್ನತ ಪರ್ವತ ಶ್ರೇಣಿಗಳು ಶತ್ರುಗಳನ್ನು ತಡೆದು ನಿಲ್ಲಿಸುತ್ತಿವೆ. ಈ ಕಾರಣದಿಂದಾಗಿ ನಾವತ್ತ ಉಪೇಕ್ಷೆಯಿಂದ ಇದ್ದೆವು. ಆ ನೀತಿಯಿಂದಾಗಿ ನಾಡು ಸಂಕಟ ಬಂದೊದಗಿದೆ. ಈಗ ಅಲ್ಲಿ ಚೈನವು ಆಕ್ರಮಣ ನಡೆಸಿ ನಮ್ಮ ಸಾರ್ವಭೌಮತ್ವಕ್ಕೆ ಸವಾಲನ್ನಿತ್ತಿದೆ.

ಹಿಮಾಚ್ಛಾದಿತವಾಗಿರುವ ಹಿಮಾಲಯದ ಉನ್ನತ ಶಿಖರವು ಆಕಾಶದ ನೀಲಬಣ್ಣದೊಂದಿಗೆ ಸ್ಪರ್ಧೆಯನ್ನು ನಡೆಸುತ್ತಿದೆ. ಇಲ್ಲಿಯ ಹವಾಗುಣವು ತಂಪಾಗಿದ್ದು ಆರೋಗ್ಯವರ್ಧಕವಿದೆ. ಸ್ಫಟಿಕ ಸಮಾನ ನದೀನೀರಿನ ಕಲರವದಿಂದ ವನಪ್ರಾಂತದ ಶೋಭೆಯು ದ್ವಿಗುಣಿತವಾಗಿದೆ. ಇಲ್ಲಿಯ ಬೆಟ್ಟಗಳಲ್ಲಿ ಬೆಳ್ಳಿ, ಹಾಗೂ ಬಹು ಅಮೂಲ್ಯವಾದ ಮಣಿಗಳ ಸಂಪತ್ತಿದೆ.

ಚಹಾ ಎಲೆಯ ಕೃಷಿಯು ಸುಗಂಧ ವಾತಾವರಣಕ್ಕೆ ತನ್ನ ಕಾಣಿಕೆಯನ್ನರ್ಪಿಸುತ್ತಿದೆ. ಈ ಭೂಮಿಯು ರೇಷ್ಮೆ, ಕಸ್ತೂರಿ, ಹತ್ತಿ ಬೆಳವಣಿಗೆಯ ದೃಷ್ಟಿಯಿಂದ ಅತ್ಯುತ್ತಮ ಪ್ರದೇಶವಿದೆ.

ಬ್ರಹ್ಮಕುಂಡದಿಂದ ಉದ್ಗಮಿಸಿ ಹೊರಟು ಬರುತ್ತಿರುವ ಶ್ರೀ ಲೋಹಿತ ಪವಿತ್ರ ನದಿಯ ಪ್ರವಾಹ ಈ ಪ್ರದೇಶದಲ್ಲಿ ಎಲ್ಲೆಲ್ಲೂ ಶ್ರದ್ಧೆಯ ರೂಪದಲ್ಲಿ ಕಾಣಲ್ಪಡುತ್ತಿದೆ.

ಡಿರಾಂಗ ಹಾಗೂ ದಿಹಾಂಗ ನದಿಗಳ ದಡ ಪ್ರದೇಶದಲ್ಲಿ ಸುದ್ದಿಯಾ ಹೆಸರಿನ ಸ್ಥಾನದಿಂದ ಸಾಧಾರಣ ೨೪ ಮೈಲು ಉತ್ತರದ ಘೋರಾರಣ್ಯದಲ್ಲಿ ಒಂದು ಪ್ರಾಚೀನ ಕೋಟೆ ಇದೆ. ೧೮೪೮ರ ಜನವರಿಯಲ್ಲಿ ಅಸ್ಸಾಮಿನ ರಾಜಕೀಯ ಪ್ರತಿನಿಧಿ ಹಮಿಲ್ಟನನು ಅದನ್ನು ಕಂಡುಹಿಡಿದನು. ಡಿಬ್ರುಗಡದಲ್ಲಿ ಶಿಬಿರ ಹಾಕಿದ ಮೇಲೆ ಶೋಧನೆಗಾಗಿ ಅವರು ಕಾಡುಕ್ಷೇತ್ರದಲ್ಲಿ ಮೈಲುಗಟ್ಟಲೆ ದೂರ ತಿರುಗಾಡುತ್ತಿದ್ದರು. ಹಾಗಿದ್ದರೂ ಈ ಕೋಟೆಗಾಗಿ ಅವರು ಬಹಳ ಹುಡುಕಾಡುವ ಅಗತ್ಯವಿರಲಿಲ್ಲ. ಅದರ ಕುರಿತು ಅವರು ಅಧಿಕ ಗಮನ ತೆಗೆದುಕೊಳ್ಳಲಿಲ್ಲ. ಅಲ್ಲಿಯ ಶಿಲ್ಪ ಚಮತ್ಕಾರವನ್ನು ಕಂಡು ಅವರು ಅಚ್ಚರಿಪಟ್ಟು ಹೊಗಳಿದರೇ ವಿನಃ ಅದನ್ನು ಕಾಪಾಡಲು ಅವರೇನೂ ಕ್ರಮ ತೆಗೆದುಕೊಳ್ಳಲಿಲ್ಲ. ಈ ದುರ್ಗವನ್ನು "ಬಿಶುರ್ಕ" ಹೆಸರಿನಿಂದ ಕರೆಯುತ್ತಾರೆ.

ಈ ಕೆಲ್ಲೆಯ ಪೂರ್ವ ಭಾಗದ ಸ್ವಲ್ಪ ದೂರದಲ್ಲೇ ಒಂದು ದೊಡ್ಡ ಮಹಾದುರ್ಗ ಇದೆ. ಅದು ಮಹಾಭಾರತ ಕಾಲದಿಂದ ಇತ್ತೆಂದು ಹೇಳಲಾಗುತ್ತದೆ. ಇದನ್ನು ಕೂಡಾ ಆಂಗ್ಲೇಯರು ಕಂಡುಹಿಡಿದರೇ ವಿನಃ ಅದಕ್ಕಿಂತ ಅಧಿಕ ಕಾಪಾಡುವ ಕಾರ್ಯಕ್ಕೆ ಕೈಹಾಕಲಿಲ್ಲ. ಇದು ಶಿಶುಪಾಲನ ಕೋಟೆ ಎಂಬುದಾಗಿ ಅವರು ಕಂಡುಹಿಡಿದಿರುವರು.

ಬ್ರಹ್ಮಕುಂಡದ ಬಳಿ ಇರುವ ದಿಗಾರೂ ನದಿ ದಡದ ಮೇಲೆ ಒಂದು ತಾಮ್ರ ತಗಡಿನ ದೇವಸ್ಥಾನವಿದೆ. ಇಂದಿನಿಂದ ೧೧೬ ವರ್ಷಗಳ ಹಿಂದೆ ಯುರೋಪಿಯನರು ಅದನ್ನು ಕಂಡುಹಿಡಿದಿರುವರು.

ಅದೇ ಶೋಧನಾ ತಂಡವು ಅಭೋರ ಪರ್ವತಗಳ ಬಳಿ ಇರುವ ಬೌದ್ಧರ ಮಂದಿರವನ್ನು ಕೂಡಾ ಕಂಡುಹಿಡಿದಿರುವರು.

ಬ್ರಹ್ಮಕುಂಡವು ದೇವಜಲ ಅಥವಾ ಬ್ರಹ್ಮದೇವರ ಕುಂಡದ ರೂಪದಲ್ಲಿ ಪವಿತ್ರ ಸ್ಥಾನವನ್ನು ಪಡೆದಿದೆ. ಅಲ್ಲಿಗೆ ಹೋಗುವದು ನಿಜವಾಗಿ ಬಹಳ ಕಠಿಣ ಕಾರ್ಯವಿದೆ. ನದಿಯ ಎಡದಡದ ಮೇಲೆ ಏಳು ದೊಡ್ಡ ಬಂಡೆಗಳಿವೆ. ಆ ಬಂಡೆಗಳು ನದಿಗೆ ವಿಚಿತ್ರ ಶೋಭೆಯನ್ನಿತ್ತು, ಅದಕ್ಕೆ ಕಾರಂಜಿಯ ರೂಪವನ್ನಿತ್ತಿವೆ; ಕೊನೆಯವರೆಗೂ ಘೋರಾರಣ್ಯವಿದೆ. ಬಂಡೆಯ ಕೆಳಗ ಒಂದು ಶಿಲೆ ಇದೆ. ಈ ನದಿಯಿಂದಲೇ ದೃಷ್ಟಿಗೆ ಗೋಚರವಾಗುವ ಹಿಮಶಿಖರವನ್ನು ದೇವಬಾರಿ ಎಂದು ಕರೆಯುತ್ತಾರೆ.

ಅಲ್ಲಿ ಎರಡು ಕುಂಡಗಳಿವೆ. ಒಂದು ದೊಡ್ಡದು, ಇನ್ನೊಂದು ಚಿಕ್ಕದು. ಒಂದು ಸಾಧಾರಣ ಎಪ್ಪತ್ತು ಅಡಿ ಉದ್ದ ಹಾಗೂ ಮೂವತ್ತು ಅಡಿ ಅಗಲವಿದೆ; ಇನ್ನೊಂದರ ವ್ಯಾಸ ಸಾಧಾರಣ ಮೂರಡಿ ಇದೆ.

ಅದನ್ನು ಪ್ರಭು ಕುಠಾರವೆಂದೂ ಕರೆಯುವರು. ಪರಶುರಾಮನು ಬ್ರಹ್ಮಪುತ್ರೆಗಾಗಿ ಅಲ್ಲಿ ತನ್ನ ಕೊಡಲಿಯಿಂದ ಪರ್ವತಗಳನ್ನು ಛೇದಿಸಿ ಮಾರ್ಗವನ್ನು ರಚಿಸಿದುದಾಗಿ ಕಥೆ ಇದೆ.

ಪೌರಾಣಿಕ ಮಹತ್ವ ಹಾಗೂ ಪ್ರಾಕೃತಿಕ ಶೋಭೆಯಿಂದ ಪರಿಪೂರ್ಣವಾಗಿರುವ ಈ ಕ್ಷೇತ್ರವು ಹಿಂದಿನ ಕಾಲದಿಂದಲೂ ತ್ರಿವಿಷ್ಟಪ ಹಾಗೂ ಆಸ್ಸಾಮಿನೊಂದಿಗೆ ವ್ಯಾಪಾರ ನಡೆಸಿಕೊಂಡು ಬರುತ್ತಿತ್ತು. [ಈ ರಾಂಕ ಪ್ರದೇಶವಿಂದು ಸೈನಿಕರ ಬೂಟುಗಾಲಿನೊದೆತಕ್ಕೆ ತುತ್ತಾಗಿದೆ. ಶಾಂತವಾದರೂ ಧೀರತೆಯಿಂದ ಇದ್ದ ಪ್ರದೇಶ ಶತ್ರುಗಳ ಕೈಗೆ ಬೀಳಲು ಕಾರಣವೇನು? ನೋಡೋಣ—ಶಿ ಶಂ ]

('ಪಾಂಚಜನ್ಯ' ಹಿಂದಿ ಸಾಪ್ತಾಹಿಕದಿಂದ)

—ಶ್ರೀ ಶಿವಶಂಕರ.

ನಿಸರ್ಗ ರಮಣೀಯ ಪ್ರದೇಶ ನೇಫಾದ ನದಿಯೊಂದನ್ನು ಕೆಚ್ಚೆದೆಯ ಭಾರತೀಯ ಜವಾನರು ತಂತಿಯ ಮೂಲಕ ದಾಟುತಿದ್ದಾರೆ.


ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd 1931.
Phone No. 240. — ಮಂಗಳೂರು — 3



ಹೊಸ ಪುಸ್ತಕ—

ನಚಿಕೇತ'ರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ
ಬೆಲೆ: ರೂ. ಎರಡು.

ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

### ಕೆಚ್ಚೆದೆಯ ಧೀರ ಕಲಿ—

# ನೇತಾಜಿ ಸುಭಾಸಚಂದ್ರ ಭೋಸರು

ಭಾರತದ ಕಣ್ಮಣಿ ನೇತಾಜಿ ಭೋಸರು ಸ್ವಾತಂತ್ರ್ಯ ಸಮರದಲ್ಲಿ ಎಂತಹ ಮಹತ್ವದ ಪಾತ್ರವನ್ನು ವಹಿಸಿದ್ದಾರೆ! ಭಾರತ ದೇಶದ ರಾಜಕೀಯ ರಂಗಮಂಚದ ಶೋಭೆಯನ್ನು ಉಜ್ವಲಗೊಳಿಸಿದ ಅವರ ಜೀವನವು ಚಿತ್ರ—ವಿಚಿತ್ರವಾಯ ಬಣ್ಣ ಬಣ್ಣದ ಉಲ್ಕೆಯಂತೆ ಹೊಳೆಯುತ್ತಿತ್ತು. ಅವರ ಜೀವನದ ತಾರೆಯು ಕೆಲವು ಕಾಲ ಮೋಡ ಮುಸುಕಿದಂತಿತ್ತು. ಆ ಮೇಲೆ ವಿಸ್ತೃದ ಗಗನ ಮಂಡಲದಲ್ಲಿ ಅಸಾಮಾನ್ಯವಾದ ತೇಜಸ್ಸಿನಿಂದ ಪ್ರಕಾಶಮಾನವಾಗಿತ್ತು. ಆಂಗ್ಲರಿಂದ ಭಾರತವನ್ನು ಬಿಡುಗಡೆಗೊಳಿಸಲು ಹೋರಾಟವನ್ನು ಬಿಗುಗೊಳಿಸಿ ಭಾರತದ ವಿಮೋಚನೆಯ ದಿನವನ್ನು ಚುರುಕುಗೊಳಿಸಿದರು.

**ಪರಿವರ್ತಿತ ಯೋಗಿ**

ಬಾಲ್ಯದಿಂದಲೂ ಅವರು ಸ್ವಾಮಿ ವಿವೇಕಾನಂದರಿಂದ ಆಕರ್ಷಿಸಲ್ಪಟ್ಟಿದ್ದರು. ಇವರ ಜೀವನದ ಮೇಲೆ ವಿವೇಕಾನಂದರ ಪ್ರಭಾವ ಬಹುವಾಗಿ ಬಿದ್ದಿದೆ. ಅವರ ಆಧ್ಯಾತ್ಮಿಕ ಶಕ್ತಿಯನ್ನು ಸರಿಯಾಗಿ ಮನಗಂಡ ಜೋನ್ ಗುಂಥರರು ಇವರನ್ನು 'ರಾಜಕಾರಿಣಿಯಾಗಿ ಪರಿವರ್ತಿಸಲ್ಪಟ್ಟ 'ಯೋಗಿ' ಎಂದು ಕರೆದಿದ್ದಾರೆ. ಸುಭಾಸರ ಸ್ವಭಾವದಲ್ಲಿ ಇಂಥ ಕೆಲವು ವ್ಯವಹಾರವಿರುವುದನ್ನು ಸುಲಭವಾಗಿ ಕಾಣಬಹುದು. ಅವರಿಗೆ ದೇವರ ಮೇಲೆ ಅಚಲವಾದ ಶ್ರದ್ಧೆ ಇತ್ತು. ಅಲ್ಲದೆ ರಾಜಾರಾಮ ಮೋಹನರಾಯ್, ತಿಲಕ, ಪರಮಹಂಸ, ವಿವೇಕಾನಂದ, ದಯಾನಂದ, ಸರಸ್ವತಿ, ಠಾಗೂರ್, ಹಾಗೂ ಯೋಗಿ, ಅರವಿಂದರಂತಹ ಆಧ್ಯಾತ್ಮಿಕ ಜ್ಞಾನ ಜ್ಯೋತಿಯನ್ನು ಪುನರುಜ್ಜೀವನಗೊಳಿಸಿದ ಮಹಾನ್ ವ್ಯಕ್ತಿಗಳಿಂದ ಉದ್ಭವಿಸಿದ ಒಂದು ವಿಧದ ಅಲೌಕಿಕ ಶಕ್ತಿಯ, ಸೌಗಂಧವು ಅವರಲ್ಲಿ ಇದ್ದುದನ್ನು ಧಾರಾಳವಾಗಿ ಗಮನಿಸಬಹುದು.

**ಜೀವನ**

ಪ್ರಾತಃಸ್ಮರಣೀಯರಾದ ನೇತಾಜಿಯವರು ಒರಿಸ್ಸದ ರಾಜಧಾನಿ ಕಟಕ್‌ನಲ್ಲಿ ರಾಯ್ ಬಹದೂರ್ ಜಾನಕಿನಾಥರ ಭೋಸರ ಮಗನಾಗಿ ೧೮೯೭ರ ಜನವರಿ ೨೩ರಂದು ಜನ್ಮ ತಾಳಿದರು. ತಾಯಿ ಶ್ರೀಮತಿ ಪ್ರಭಾವತಿ ಭೋಸರು ಧಾರ್ಮಿಕ ಆಚಾರ ವಿಚಾರಗಳಲ್ಲಿ ಶ್ರದ್ಧೆಯುಳ್ಳವರಾಗಿದ್ದು, ಸಹೃದತೆಗೆ ಖ್ಯಾತಿ ಪಡೆದವರಾಗಿದ್ದರು. ಚಿಕ್ಕಂದಿನಲ್ಲೇ ಧರ್ಮದ ಹೆಸರಿನಲ್ಲಾಗುತ್ತಿದ್ದ ಮೋಸ ಕೃತಿಮತೆಗಳಿಂದ ಅವರು ಬಹು ನೊಂದಿದ್ದರು. ಜೀವನ ಪರ್ಯಂತ ದೋಷಾತೀತ ನೈತಿಕ ಜೀವನವನ್ನು ನಡೆಸಿದ ಸುಭಾಸರು ಬಾಲ್ಯದಿಂದಲೇ ಎಲ್ಲರ ಕಣ್ಮಣಿಯಾಗಿ ಬೆಳೆದರು. ೧೯೧೩ರಲ್ಲಿ ಪ್ರಥಮ ಶ್ರೇಣಿಯಲ್ಲಿ ಮೆಟ್ರಿಕ್ ಪಾಸು ಮಾಡಿದಾಗ ಭಯಂಕರ ಆಧ್ಯಾತ್ಮಿಕ ಚಿಂತನೆಗೊಳಗಾಗಿ ಮನೆಬಿಟ್ಟು ಸತ್ಯವನರಸಲು ಕಾಡಿಗೆ ಹೋಗಿ ಯೋಗ್ಯವಾದ ಗುರುವನ್ನು ಅರಸಿದರು. ವಿವೇಕಾನಂದ, ರಾಮಕೃಷ್ಣ ಮಿಶ್ಯನ್ನಿನ ಒಡನಾಟದಲ್ಲಿದ್ದು ಆಸ್ತಿತ ಮನೋಭೀಷ್ಟ ಪೂರ್ತಿಯಾಗದಿರಲು ಮನೆಗೆ ಮರಳಿದರು. ಕಲ್ಕತ್ತೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ ೧೯೨೦ರಲ್ಲಿ ಐ. ಸಿ. ಎಸ್. ಪಾಸಾದರು. ಆದರೆ ಇದರಿಂದಲೂ ಅವರಿಗೆ ತೃಪ್ತಿ ಸಿಗಲಿಲ್ಲ. ಜನ್ಮ ಭೂಮಿಯ ಪುನರುತ್ಥಾನದ ಹೋರಾಟದಲ್ಲಿ ಜೀವನ ಸಮರ್ಪಣೆ ಮಾಡುವ ಅಂತಿಮ ನಿರ್ಧಾರ ಮಾಡಿದರು. ತನ್ನ ಹುದ್ದೆಗೆ ರಾಜಿನಾಮೆಯಿತ್ತು ಭಾರತಕ್ಕೆ ಮರಳಿದರು.

**ಗಾಂಧೀಜಿಯವರಲ್ಲಿ ಭಿನ್ನಾಭಿಪ್ರಾಯ**

ಗಾಂಧೀಜಿಯವರ ರಾಜನೀತಿಯಲ್ಲಿನ ಅಹಿಂಸೆಯನ್ನು ಸುಭಾಸರು ಕೊನೆ ತನಕವೂ ಒಪ್ಪದೆ ಅದು ನಿರ್ಜೀವವೆಂದೇ ಹೇಳಿದ್ದಾರೆ. ನಿಂರಾಶರಾಗದೆ ಚಿತ್ತರಂಜನದಾಸರಿಂದ ಆಕರ್ಷಿಸಲ್ಪಟ್ಟು ಭರದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ದೇವರಲ್ಲಿ ನಿತಾಂತ ಶ್ರದ್ಧೆ, ಜೀವನದಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ ಮಹಾತ್ಮರಲ್ಲಿ ಮತ್ತು ನೇತಾಜಿಯವರಲ್ಲಿ ಸಮಾನ ವಿಚಾರವಾಗಿದ್ದರೂ, ರಾಜಕೀಯ ತಂತ್ರ ಯಾಗ ಕ್ರಿಯೆಯಲ್ಲಿ ಗಂಭೀರವಾದ ಭಿನ್ನಾಭಿಪ್ರಾಯಗಳಿದ್ದವು. ಆದರೂ ಅವರು ಪರಸ್ಪರರನ್ನು ತುಂಬಾ ಗೌರವಿಸುತ್ತಿದ್ದರು. ಧರ್ಮ ಯುದ್ಧದಲ್ಲಿ ಹಿಂಸೆಯನ್ನು ನಿಷೇಧಿಸಲಾಗದೆಂಬ ಗೀತೆಯನ್ನು ಸುಭಾಸರು ತನ್ನ ವಿಚಾರ ಧಾರೆಗೆ ಆಧಾರವಾಗಿಟ್ಟುಕೊಂಡಿದ್ದರು. ೧೯೩೯ರಲ್ಲಿ ಜರಗಿದ ಕಾಂಗ್ರೆಸ್‌ನ ಅಧ್ಯಕ್ಷ ಚುನಾವಣೆಯಲ್ಲಿ ಪಟ್ಟಾಭಿಯವರನ್ನು ಪ್ರಚಂಡ ಮತಗಳಿಂದ ಸೋಲಿಸಿದಾಗ ಗಾಂಧೀಜಿಯವರ "ಸುಭಾಸರ ವಿಜಯವೆಂದರೆ ನನ್ನ ಸೋಲು ಎಂದು ಹೇಳಿದರು. ಇದರಿಂದ ಸುಭಾಸರು ಮಹಾತ್ಮರನ್ನು ವಿರೋಧಿಸದೆ ಸ್ವಲ್ಪವೇ ಸಮಯದಲ್ಲಿ ಕಾಂಗ್ರೆಸ್ಸಿನಿಂದ ಹೊರಬಂದರು.

**ಹೋರಾಟಮಯ ಜೀವನ**

ನಿಷ್ಕಲ್ಮಷ ನಗುವನ್ನು ಹೊರಸೂಸುತ್ತಿದ್ದ ಅವರ ದುಂಡಗಿನ ಮುಖ ಕಮಲದಲ್ಲಿ ಕಲ್ಲಿಗಿಂತ ಕಠೋರವಾಗಿರುವ ಅವರ ವಿಶ್ವಾಸ ಅಡಗಿತ್ತು. ಸಭ್ಯವಾದ ಹಾಗೂ ಆಹ್ಲಾದಕರ ವಿನ್ಯಾಸವುಳ್ಳ ಅವರ ಘನ ವ್ಯಕ್ತಿತ್ವವು ಸಮಯ ಒದಗಿದಾಗ ನಿರ್ದಯವನ್ನೂ ಕಠೋರತೆಯನ್ನೂ ಹೊರಸೂಸುತ್ತಿತ್ತು. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬುದು ಅವರ ವ್ಯಕ್ತಿತ್ವದಲ್ಲಿ ಗೋಚರಿಸುತ್ತಿತ್ತು.

೧೯೩೯ರಲ್ಲಿ "ಫಾರ್ವರ್ಡ್ ಬ್ಲಾಕ್" ಸಂಸ್ಥೆ ರಚಿಸಿ ದ್ವಿತೀಯ ಜಾಗತಿಕ ಯುದ್ಧದ ಸಮಯದಲ್ಲಿ ಜೈಲು ಸೇರಿದಾಗ ತಮ್ಮ ಆ ಮರಣಾಂತ ಉಪವಾಸ ಪ್ರಾರಂಭಿಸಿದರು. ಪರಂತು ಅವರ ಮನೆಯಲ್ಲೇ ಅವರನ್ನು ಸರಕಾರ ಬಂಧಿಸಿತು. ಇಂಥ ಭಯಂಕರ ವಿಪತ್ತುಗಳನ್ನು ಸಹಿಸಿ ಗುಪ್ತವಾಗಿ ೧೯೪೧ರಲ್ಲಿ ಕಾಬೂಲ್—ಪೇಶಾವರ, ಮೋಸ್ಕೋ ಮಾರ್ಗವಾಗಿ ಬರ್ಲಿನ್ ಸೇರಿದರು. ಬರ್ಲಿನಿನಲ್ಲಿ ಅವರು ಹಿಟ್ಲರನನ್ನು ಕಂಡು ಭಾರತದ ಸ್ವಾತಂತ್ರ್ಯದ ಬಗ್ಗೆ ಮಾತಾಡಿ ಅವರ ಅತ್ಯಂತ ಪ್ರೀತಿ—ಗೌರವಗಳಿಗೆ ಪಾತ್ರರಾದರು. ೧೯೪೨ರಲ್ಲಿ ಸ್ವತಂತ್ರ್ಯ ಭಾರತದ ಪೃಥ ಮಸೇನಾಪತಿಯನ್ನು ಸಜ್ಜುಗೊಳಿಸಿ ಪದೇ ಪದೇ ಬರ್ಲಿನ್ ರೇಡಿಯೋ ಮೂಲಕ ಭಾರತೀಯರಲ್ಲಿ ಶಕ್ತಿ ಸಂಚಾರ ಮಾಡಿಸಿ ಅತ್ಯದ್ಭುತವಾದ ಸಂಘಟನೆ ಮಾಡಿದರು. ಅವರ ಪ್ರಖರ ದೇಶ ಭಕ್ತಿ ಸಂಘಟನೆ, ಸಾಹಸಗಳಿಂದ ಜರ್ಮನಿಯ, ಆಸ್ಟ್ರಿಯಾಗಳ ಜನತೆಯೂ ಬಹಳ ಪರಿವರ್ತನೆಗೊಂಡಿತು.

೧೯೪೩ರಲ್ಲಿ ಜಪಾನಿನ ಹೊಡೆತದಿಂದ ಬ್ರಿಟನ್ ನುಗ್ಗು ನುರಿಯಾದಾಗ ಸಂತಸಗೊಂಡ ಸುಭಾಸರು ಜರ್ಮನಿ, ಜಪಾನಗಳ ಸುಭದ್ರ ಸಹಕಾರದಿಂದ ಎಡೆಬಿಡದೆ ೩ ತಿಂಗಳ ಕಾಲ ಗಂಡಾಂತರವಾದ ಸಮುದ್ರಯಾತ್ರೆಯನ್ನು ಸಬ್‌ಮೇರಿನ್ ಮೂಲಕ ಮಾಡಿ ಟೋಂಗೋಗಾಗಿ ಸಿಂಗಾಪುರವನ್ನು ಪ್ರವೇಶಿಸಿದರು. ಈ ಪ್ರಬಲ ಕ್ರಿಯಾತ್ಮಕ ಧುರೀಣನ ಉದಯದಿಂದ ಸಂತೋಷಗೊಂಡ ಅಲ್ಲಿನ ಭಾರತೀಯರು ಭರದಿಂದ ಆಜಾದ್ ಸೇನೆಗೆ ಸೇರಿದರು. ಸುಭಾಸರು ಈ ಸೇನೆಯ ಮಹಾ ದಂಡನಾಯಕರಾಗಿ ಒಕ್ಟೋಬರ ೨೧ರಂದು ಅದರ ಹಂಗಾಮಿ ಸರಕಾರವನ್ನು ಘೋಷಿಸಿ ಅಂಡಮಾನ್ ನಿಕೋಬಾರ್‌ಗಳನ್ನು ಮುಕ್ತಗೊಳಿಸಿದರು. ಅಲ್ಲಿಂದ ರಂಗೂನ್‌ಗಾಗಿ ೧೯೪೪ನೇ ಮಾರ್ಚಿ ೧೮ರಂದು ಸುಭಾಸರು ಆನಂದ ಪುಲಕಿತರಾಗಿ ಭಾರತ ಮಾತೆಯ ಮಣ್ಣನ್ನು ಮುತ್ತಿಟ್ಟರು. ಆಮೇಲೆ ಮುಂದೇನಾಯಿತು? ಭಾರತದಲ್ಲಿ ಮಹಾನ್ ಅಂತಃಜ್ವಾಲೆ ಉರಿಯತೊಡಗಿತು. ಆದರೆ ಈ ಮಧ್ಯೆ ಹಿಟ್ಲರನ ಆಚಾತುರ್ಯದಿಂದ ರಂಗೂನ್ ಬ್ರಿಟಿಷರ ವಶವಾಗಿ ಆಜಾದ್ ಸೇನೆ ಅನಾಯಾಸವಾಗಿ ಬ್ರಿಟಿಷರ ಅಧೀನವಾಯಿತು.

ಆದರೆ ಸುಭಾಸರ ಕ್ರಾಂತಿ ಕಾರಕ ಚಟುವಟಿಕೆಗಳ ಪ್ರಭಾವ ಬ್ರಿಟಿಷರ ಮೇಲೆ ಬೀಳದಿರಲಿಲ್ಲ. ಇನ್ನು ಭಾರತಕ್ಕೆ ಸ್ವಾತಂತ್ರ್ಯ ಕೊಡದೆ ಗತ್ಯಂತರವಿಲ್ಲವೆಂದು ಬ್ರಿಟಿಷ್ ಸರಕಾರಕ್ಕೆ ಮನವರಿಕೆಯಾಯಿತು. ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಅಟ್ಲಿಯವರು—"ಸುಭಾಸರ ಕ್ರಾಂತಿಕಾರಕ ಚಟುವಟಿಕೆಗಳಿಂದ ಭಾರತವನ್ನು ಸ್ತಿಮಿತದಲ್ಲಿಟ್ಟು ಕೊಳ್ಳುವುದು ಇನ್ನು ಅಸಾಧ್ಯವಾಗಿದೆ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಹೊರತು, ಗಾಂಧೀಜಿಯವರ ಅಹಿಂಸಾತ್ಮಕ ವಿಧಾನಗಳಿಂದ ಹೃದಯ ಪರಿವರ್ತನೆಯಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡುತ್ತಿದ್ದೇವೆ ಎಂದು ಅವರು ಹೇಳಲಿಲ್ಲ. ಫಲತಃ ೧೯೪೭ರ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ಪರಂತು ಈ ಸುಖವನ್ನುಣ್ಣಲು ಭೋಸರಿಲ್ಲ!

**ಕೊನೆಯ ಘಳಿಗೆ**

ಸೈಗಾನ್‌ನಿಂದ ಜಪಾನಿಗೆ ಪಯಣಿಸುತ್ತಿದ್ದಾಗ ವಿಮಾನಕ್ಕೆ ಬೆಂಕಿ ತಗಲಿ ಅವರು ಅಪಘಾತಕ್ಕೀಡಾದರು. ಈ ಅವಘಡದಲ್ಲಿ ಲೆಫ್ಟಿನೆಂಟ್ ಜನರಲ್ ಹಬೀಬುರ್ರಹಮಾನರು ಸಿಕ್ಕಿದ್ದರು. ಅವರು ಚಿಕಿತ್ಸಾಲಯದಿಂದ ಹೊರ ಬಂದೊಡನೆ ನೇತಾಜಿಯವರ ಕೊನೆಯ ಘಳಿಗೆ ಬಗ್ಗೆ ವಿಸ್ತೃತ ವಿವರಣೆಯಿತ್ತಿದ್ದಾರೆ. ಸುಭಾಸರು ಇವರನ್ನು ಸಮೀಪಕ್ಕೆ ಕರೆದು—"ಹಬೀಬ್, ಇನ್ನು ನಾನು ಬದುಕಲಾರೆನು. ನಾನು ನಮ್ಮ ಮ್ಮ ಭಾರತ ಮಾತೆಯ ಬಂಧವಿಮೋಚನೆಗಾಗಿ ಮನೋವಾಕ್ಕಾಯಗಳಿಂದ ಕೊನೆ

(೬ನೇ ಪುಟ ನೋಡಿರಿ)

ಮತ್ತೊಂದು ಆಕರ್ಷಣೀಯ
ಉಳಿತಾಯ ಯೋಜನೆ

ರೆಕರಿಂಗ್
ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ. 5/-ರಿಂದ ರೂ. 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು- 12, 24, 36, 46 ಮತ್ತು 60 ತಿಂಗಳುಗಳು.
- ಸಾವಕಾಶವಾಗಿ ಕಟ್ಟುವ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ.
- ವರ್ಷಕ್ಕೆ ಚಕ್ರಬಡ್ಡಿ 4%

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್: ಮಂಗಳೂರು. ಆಡಳಿತ ಕಚೇರಿ: ಬೆಂಗಳೂರು.

**NAVAYUGA**
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೭-೨-೧೯೬೩ | ೨೨ |


## ಭಾರತೀಯರ ಕರೆ

ಆಫ್ರೋ-ಏಷ್ಯದ ಆರು ರಾಷ್ಟ್ರಗಳ ಕೊಲಂಬೋ ಸಮ್ಮೇಳನದ ಸೂಚನೆಗಳನ್ನು ವಿವರಿಸಲು ಶ್ರೀಮತಿ ಭಂಡಾರನಾಯಿಕೆಯವರು ಮೊದಲು ಭೇಟಿಯಿತ್ತದ್ದು ಪೀಕಿಂಗಿಗೆ. ಅಲ್ಲಿಂದ ಮರಳುತ್ತಿರುವಾಗ ಅವರು ಹೊರಡಿಸಿದ ಪ್ರಕಟಣೆಯು ಅವ್ಯಕ್ತವಾಗಿದ್ದರೂ, ಪೀಕಿಂಗಿನ ಪ್ರತಿಕ್ರಿಯೆಯು ನಿರಾಶಾಜನಕವಿರಲಿಲ್ಲವೆಂದೂ ಅದು ಸಂಧಾನ ನಡೆಸಲು ಉತ್ಸುಕವಾಗಿದೆಯೆಂದೂ ಹೇಳಿತ್ತು. ನವದೆಹಲಿಯು ಈ ಸೂಚನೆಗಳನ್ನು ಇದ್ದಕ್ಕಿದ್ದಂತೆಯೇ ಒಪ್ಪಿಕೊಂಡಿತೆಂಬುದು ಭಾರತದ ಹಿರಿಮೆಯನ್ನು ತೋರಿಸುತ್ತದೆ; ವಿವಾದದ ಸಂಧಾನ ಪರಿಹಾರದಲ್ಲಿ ಅದು ವಹಿಸುತ್ತಿರುವ ಕಾಳಜಿಯನ್ನು ಪ್ರದರ್ಶಿಸುತ್ತದೆ. ಆದರೆ, ಇಂದು ಪೀಕಿಂಗಿನ ಅಪಲಾಪವು ಮರಳಿ ಪ್ರತಿಧ್ವನಿಸುತ್ತಿರುವುದು ಅದರ ಹಿಂದಿನ ಪ್ರತಿಕ್ರಿಯೆಗೆ ಭಾಷ್ಯವನ್ನು ಬರೆದಂತಿದೆಯೆನ್ನಬಹುದು.

ಚೀನೀಯರು ಕೊಲಂಬೋ ಸೂಚನೆಗಳನ್ನು ಕೇವಲ ತತ್ವಶಃ ಒಪ್ಪಿಕೊಂಡದ್ದು ಮಾತ್ರ. 'ತತ್ವಶಃ' ಎಂಬ ಶಬ್ದಕ್ಕೆ ವಿಶಿಷ್ಟ ಅರ್ಥವಿರಲೇ ಬೇಕು, ಚೀನೀಯರ ನಿಘಂಟಿನಲ್ಲಿ. ಸೂಚನೆಗಳ ಮುಖ್ಯಾಶಯವು ಸಂಧಾನದ ಮೂಲಕ ವಿವಾದ ಪರಿಹಾರ ಮಾಡುವುದು; ಇದು ತತ್ವವೆಂದು ತಿಳಿದರೆ, ಇದಕ್ಕೆ ಮಾತ್ರ ತನ್ನ ಒಪ್ಪಿಗೆಯನ್ನದು ನೀಡಿದೆಯೇ ಎಂಬ ಸಂದೇಹ ಈಗ ದೃಢವಾಗುತ್ತಿದೆ. ಆದರೆ, ಹಾಗೆಯಾಗ ಬೇಕಾದರೆ, ಇರುವ ಶರ್ತಗಳನ್ನು ಒಪ್ಪಿಕೊಳ್ಳದಿದ್ದರೆ, ಉದ್ದೇಶ ಈಡೇರುವುದಾದರೂ ಹೇಗೆ? ಇಂದು ಚೀನಾದ ಧೋರಣೆಯಲ್ಲಿ ಯಾವ ಪರಿವರ್ತನೆಯೂ ಆಗಿಲ್ಲವೆನ್ನುವಾಗ, ಸಂಧಾನದ ಬಾಗಿಲುಗಳನ್ನು ತೆರೆಯುವ ಆತುರ ಮಾತ್ರವಿದ್ದರೆ ಪ್ರಯೋಜನವೇನು? ಚೀನೀಯರು ತಮ್ಮ ಅಂತರ್ಯದಲ್ಲಿ ಯಾವ ಗುರಿಯನ್ನು ಇಟ್ಟುಕೊಂಡಿದ್ದಾರೆಂದು ಹೇಳುವುದು ಕಷ್ಟ. ಗಡಿಗುಂಟ ಅವರು ಕೈಗೊಂಡ ಕಾರ್ಯಕ್ರಮಗಳಿಗೊಂದು ಅರ್ಥ ಕಟ್ಟುವುದೇ ಕಷ್ಟ. ಅವರು ಹಠಾತ್ತನೆ ಆಕ್ರಮಣ ಮಾಡಿದರು; ಅನಿರೀಕ್ಷಿತವಾಗಿ ಯುದ್ಧವಿರಾಮವನ್ನು ಘೋಷಿಸಿದರು; ಸೇನೆಯನ್ನು ಹಿಂದೆ ಕರೆಸಿಕೊಂಡರು ನೇಫಾದಲ್ಲಿ. ಇವೆಲ್ಲವುಗಳ ಉದ್ದೇಶವೇನು? ಶಾಂತಿ ಸಂಧಾನದ ಬಗೆಗೆ ಮುತುವರ್ಜಿ ತೋರಿಸುತ್ತಿರುವ ಅವರು ಅಶಾಂತಿಯನ್ನು ಹಬ್ಬಿಸುವುದೇಕೆ? ಇದು ಯುಕ್ತಿ ಪ್ರಕ್ರಿಯೆ ಅಲ್ಲವೆ?

ಚೀನಾದ ಸದ್ಯದ ವರ್ತನೆಯಿಂದ ಹೀಗೆ ಅರ್ಥಕಟ್ಟಬಹುದು. ಕೊಲೊಂಬೊ ಸೂಚನೆಗಳು ಸಂಪೂರ್ಣ ಭಾರತಕ್ಕೆ ಅನುಕೂಲವಾಗಿಲ್ಲ. ಆದುದರಿಂದ ಅದು ಅವನ್ನು ಒಪ್ಪಿಕೊಳ್ಳಲಾರದು ಎಂದು ಬಗೆದು ತಮ್ಮ ತಲೆಯಾಡಿಸಿದಂತೆ ತೋರಿಸಿದ್ದರೂ ಇರಬಹುದು. ತಮ್ಮ ಸಂಪೂರ್ಣ ಪ್ರತಿಕ್ರಿಯೆಯನ್ನು ಭಾರತ ತಳೆಯುವ ನೀತಿ ಪ್ರಕಟಗೊಂಡ ನಂತರವೇ ನಿರ್ಧರಿಸುವುದಾಗಿ ಅವರು ಆಗ ಹೇಳಿದ್ದರ ಉದ್ದೇಶವಿಷ್ಟೇ. ಆದರೆ, ಭಾರತವು ಅವನ್ನು, ಸಂಪೂರ್ಣ ತನಗನುಕೂಲವಿಲ್ಲದೆ ಹೋದರೂ ವಿವಾದ ಪರಿಹಾರದ ಸದುದ್ದೇಶದಿಂದ, ಮತ್ತು ತನ್ನ ಬೇಡಿಕೆಯಲ್ಲಿ ಬಹು ಅಂಶವು ಕೈಗೂಡಿರುವುದರಿಂದ ಸಂಪೂರ್ಣವಾಗಿ ಒಪ್ಪಿಕೊಂಡಿತು. ತಮ್ಮ ನಿರೀಕ್ಷೆಯು ಸುಳ್ಳಾದುದರ ಪರಿಣಾಮವಾಗಿ ಚೀನೀಯರಿಗೆ ಮರಳಿ ಮೀನಮೇಷ ಎಣಿಸಲು ತೊಡಗಿದ್ದರೂ ಇರಬಹುದು. ಇಂತಹ ವರ್ತನೆಗೆ ಸೂಚನೆಗಳನ್ನೂ ಅವುಗಳಿಗೆ ನೀಡಲಾದ ವಿವರಣೆಗಳನ್ನೂ ಎರಡು ದೇಶಗಳು ಬೇರೆಬೇರೆಯಾಗಿ ಅರ್ಥಮಾಡಿಕೊಂಡಿರುವುದೇ ಕಾರಣವಾಗಿರುವುದು ಅಸಂಭವವಲ್ಲ. ಹೀಗಾಗಿ ಭಾರತವನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸುವ ಚೀನೀಯರ ಸಾಹಸ ಪರಾಜಯದಲ್ಲಿಯೇ ಕೊನೆಗೊಳ್ಳುವಂತಾಗಿ, ತಾನೇ ಅಪರಾಧಿಯೆಂಬುದನ್ನು ಜಗಜ್ಜಾಹೀರು ಮಾಡುತ್ತಿದೆ ಮಾತ್ರವಲ್ಲದೆ ಮರಳಿ ಧಾಳಿ ಮಾಡುವ ಬಗ್ಗೆ ವಿಶೇಷ ಸಿದ್ಧತೆಗಳನ್ನೂ ನಡೆಸುತ್ತಿರುವಂತೆ ಭಾಸವಾಗುತ್ತದೆ.

ಭಾರತದ ಮೇಲೆ ಹೊಸ ಹೊಸ ರೀತಿಯ ಆಪಾದನೆಗಳನ್ನು ಹೊರಿಸುವುದರಲ್ಲಿ ಚೀನೀಯರ ಆಸಕ್ತಿ ಹೆಚ್ಚು. ಹಿಂದಿನಿಂದಲೂ ಭಾರತವೇ ಆಕ್ರಮಣ ಮಾಡಿದೆಯೆಂದು ವಾದಿಸುತ್ತ ಬಂದ ಲಾಯ್ ಈಗ ಕಾಲಿಪಾಂಗಿನ ಸಂಪತ್ತನ್ನು ಅದು ಚಿಯಾಂಗ ಕೈಶೇಖರ ವಶಕ್ಕೆ ಕೊಟ್ಟಿದೆ ಎಂದು ಅಪರಾಗವೆಬ್ಬಿಸತೊಡಗಿದೆ. ಒಂದಲ್ಲ ಒಂದು ರೀತಿಯಿಂದ ಭಾರತವನ್ನು ದೋಷಿಯೆಂದು ನಿಲ್ಲಿಸುವುದು, ಚೀನಾದ ಹಂಬಲ, ದುರಾಸೆ. ಅದಕ್ಕೆ ಗುರಿಯಾಗುವಷ್ಟು ಭಾರತೀಯರು ದ್ರೋಹಿಗಳಲ್ಲ; ಅತ್ಯವಾದಿಗಳಲ್ಲ. ಆದುದರಿಂದಲೇ ಸಂಧಾನದ ಇಚ್ಛೆಯನ್ನು ಮರೆಮಾಡದೆ ಭಾರತವಿಂದಿಗೂ ಚೌಎನ್ ಲಾಯರಿಗೆ ಕರೆ ಕೊಡುತ್ತಿದೆ: "ನಾವು ಒಪ್ಪಿದಂತೆ ಕೊಲಂಬೋ ಸೂಚನೆಗಳನ್ನು ಸಂಪೂರ್ಣವಾಗಿ ಮನ್ನಿಸಿರಿ; ಮಾತುಕತೆಯ ದಾರಿಯಲ್ಲಿ ಮುಳ್ಳೆಸೆಯಬೇಡಿರಿ." ತನ್ನ ಈ ಕರೆಯನ್ನು ಲಾಯ್ ಕೇಳುತ್ತಾರೆಂಬ ದೃಢ ವಿಶ್ವಾಸ ಭಾರತೀಯರಿಗಿಲ್ಲ. ಎಂತಲೇ ಅವರು ಸಮರ ಸನ್ನಾಹವನ್ನು, ಸ್ವರಾಷ್ಟ್ರ ಭದ್ರತೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲೇ ಬೇಕಾಗಿದೆ. ನಮ್ಮ ದೇಶದ ಒಂದಂಗುಲ ನೆಲವನ್ನೂ ಅಕರ್ಮಣ್ಯರಾಗಿ ಬಿಟ್ಟು ಕೊಡಲಾರೆವು:—ಇದು ಭಾರತೀಯರ ದೃಢ ಪ್ರತಿಜ್ಞೆ; ಇದಕ್ಕಾಗಿ ನಮ್ಮ ಸರ್ವಸ್ವವನ್ನೂ ಪಣವಿಡಲು ನಾವು ಮುಂದಾಗಿದ್ದೇವೆ; ಈ ಉತ್ಸಾಹ ನಮ್ಮಲ್ಲಿ ವಿವಾದದ ಅಂತಿಮಪರ್ಯಂತವೂ ಉಳಿಯಬೇಕು; ಕಾರ್ಯರೂಪದಲ್ಲಿ ಬರಬೇಕು.

## ವಾರ್ತಾವೇದಿಕೆ

### ಸುಶೀಲಾ ನಾಯರ್

ಅಲೋಪಥಿಯು ನಿಗೂಢ ಸ್ಥಿತಿಯಲ್ಲಿದ್ದಾಗ ಭಾರತದಲ್ಲಿ ಪ್ರಚಲಿತವಿದ್ದ ಆಯುರ್ವೇದ ವೈದ್ಯಕ ಕ್ರಮವು ಜನತೆಯ ಆಯುರ್ಮಾನಗಳನ್ನು ಹೆಚ್ಚಿಸಿದುದು ಸುಸ್ಪಷ್ಟ. ಆದರೆ, ಅಲೋಪಥಿಯ ಉದಯ ಮತ್ತು ಅದರ ಪ್ರಸಾರಗಳಿಂದ ಕ್ಷೀಣಗೊಂಡ ಈ ಕ್ರಮದಲ್ಲಿ ಮಾನಸಿಕ ರೋಗವನ್ನೂ ತಕ್ಷಣ ಗುಣಪಡಿಸುವುದು ಸಾಧ್ಯವೆಂಬುದನ್ನು ಬೆಂಗಳೂರಿನ ಮಾನಸಿಕ ಆರೋಗ್ಯ ಸಂಸ್ಥೆಯು ತನ್ನ ಪ್ರಯೋಗಗಳಿಂದ ಪ್ರಕಟಿಸಿದೆ. ಈ ಸುದ್ದಿಯನ್ನು ಬಹಿರಂಗಕ್ಕೆ ತಂದ ಕೇಂದ್ರ ಆರೋಗ್ಯ ಸಚಿವೆ ಡಾ| ಸುಶೀಲಾ ನಾಯರ್ ಕಡೆಗಣಿಸಲ್ಪಟ್ಟ ಆಯುರ್ವೇದದ ಪುನರುಜ್ಜೀವನಕ್ಕೆ ಆಸ್ಪದ ಕಲ್ಪಿಸಿ ಕೊಡುವುದು ಮಾತ್ರ ಅತ್ಯವಶ್ಯವಿದೆ.

### ವೀರೇಂದ್ರ ಪಾಟೀಲ್

ಗೋದಾವರಿಯ ನೀರಿನಿಂದ ತೃಪ್ತಿಪಡದೆ ಕೃಷ್ಣೆಯ ನೀರನಲ್ಲೂ ಸಿಂಹಭಾಗ ಗಳಿಸಿದ ಆಂಧ್ರ ಪ್ರದೇಶವು ಕರ್ನಾಟಕಕ್ಕೆ ನೀರು ದೊರೆಯದಂತೆ ಮಾಡುವ ಹವಣಿಕೆಯಲ್ಲಿದೆ. ಗುಲ್ಹಾಟಿ ಆಯೋಗದ ವರದಿಯು ಯಾವ ಬಗೆಯಲ್ಲಿ ತೀರ್ಮಾನಕ್ಕೆ ಬಂದರೂ ನಮ್ಮ ರಾಜ್ಯವು ಕೃಷ್ಣಾ ಮೇಲ್ದಂಡೆಯ, ಮಲಪ್ರಭಾ ಮತ್ತು ತುಂಗಭದ್ರಾ ಯೋಜನೆಗಳನ್ನು ಖಂಡಿತಕ್ಕೂ ಕೈಗೊಳ್ಳುವುದೆಂದು ವೀರೇಂದ್ರ ಪಾಟೀಲರ ಭರವಸೆ. ಈ ನದಿಗಳ ನೀರಿನ ಬಳಕೆಯ ಬಗ್ಗೆ ಒಂದು ಒಡಂಬಡಿಕೆಯನ್ನು ಮಾಡಲು ಕೇಂದ್ರವು ಪ್ರಯತ್ನಿಸುವುದಂತೆ. 'ನಾವು ಆಂಧ್ರದ ಯೋಜನೆಗಳನ್ನು ವಿರೋಧಿಸುವುದಿಲ್ಲ; ನ್ಯಾಯವಾಗಿ ನಮಗೆ ದೊರೆಯ ಬೇಕಾದ ನೀರು ನಮಗೆ ಲಭಿಸ ಬೇಕು' ಎಂಬ ಪಾಟೀಲರ ವಾದವನ್ನು ೨|| ಕೋಟಿ ಕನ್ನಡಿಗರು ಅವಶ್ಯ ಬೆಂಬಲಿಸುತ್ತಾರೆ.

### ಜವಾಹರಲಾಲ

ಶಾಂತಿ ಮತ್ತು ಸಮರ ಕಾಲಗಳೆರಡರಲ್ಲೂ ಏಕಪ್ರಕಾರವಾಗಿ ನಾಯಕತನವನ್ನು ನಡೆಸುವ ಶಕ್ತಿವಂತರು ಅಪರೂಪ ಮಾತ್ರವಲ್ಲ; ಇಲ್ಲವೇ ಇಲ್ಲವೆಂದರೂ ತಪ್ಪಲ್ಲ. ಆದರೆ, ಪ್ರಧಾನಿ ನೆಹರು ಇದಕ್ಕೆ ಅಪವಾದರೂಪರು. ಕೆಚ್ಚೆದೆಯ ನೆಹರು 'ಬರಿ ಕೂಗಿ ಕೊಂಡರೆ ಏನನ್ನೂ ಸಾಧಿಸಿದಂತಾಗಲಿಲ್ಲ; ಆತ್ಮ ವಿಶ್ವಾಸವಿಲ್ಲದವರು, ದುರ್ಬಲರು ಮಾತ್ರ ಹಾಗೆ ಕೂಗಿಕೊಳ್ಳುತ್ತಾರೆ. ಆದರೆ, ನಿರ್ಭೀತ ಮತ್ತು ದೃಢ ವಿಶ್ವಾಸಿ ಮನುಷ್ಯನು ಹಾಗೆ ಮಾಡದೆ ಕ್ರಮ ಕೈಗೊಳ್ಳುತ್ತಾನೆ' ಎಂದು ನಮ್ಮ ಇಂದಿನ ಆವಶ್ಯಕತೆಯನ್ನು ಎತ್ತಿ ತೋರಿಸುತ್ತಾರೆ.

### ಮ್ಯಾಕಮಿಲನ್

ಯುರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸೇರುವ ಆತ್ಯಾತುರದಿಂದಿದ್ದ ಬ್ರಿಟಿಷ್ ಪ್ರಧಾನಿ ಮ್ಯಾಕಮಿಲನರಿಗೆ ಫ್ರಾನ್ಸು ಆಘಾತವನ್ನು ಉಂಟು ಮಾಡಿತು. ತನ್ನ ಲಾಭಕ್ಕಾಗಿ ಡಿಗಾಲೆಯವರು ಬ್ರುಸೆಲ್ಸ್ ಮಾತುಕತೆಯನ್ನು ಬ್ರಿಟನ್ನನ್ನು ಬೆಂಬಲಿಸುವಷ್ಟು ಕಳಕಳಿ ವಹಿಸಲಿಲ್ಲ ಮಾತ್ರವಲ್ಲ, ಮಾತುಕತೆಯನ್ನೇ ಮುರಿದರು. ಆದರೂ ಮ್ಯಾಕ್‌ಮಿಲನ್ ತನ್ನ ಇಚ್ಛೆಗೆ ತಿಲಾರ್ಪಣವೀಯಲಿಲ್ಲ. ಈ ಸಂಬಂಧದ ಪ್ರಯತ್ನಗಳನ್ನು ಮುಂದೆಯೂ ಮುಂದುವರಿಸುವುದಾಗಿ ಅವರು ಅನ್ನುತ್ತಾರೆ.

### ನಿಕೀಟಾ ಕ್ರುಶೇವ್

ಕ್ರುಶೇವರು ಚೀನೀಯ ಪ್ರಧಾನಿ ಲಾಯರಲ್ಲಿ ಯಾವ ಸಂಬಂಧವಿರಿಸಿಕೊಂಡಿದ್ದಾರೋ ಸರಿಯಾಗಿ ವ್ಯಕ್ತವಿಲ್ಲ. ಆದರೆ, ರಶ್ಯ—ಚೀನ ಕಮ್ಯುನಿಸ್ಟ ಪಕ್ಷಗಳ ನಡುವೆ ಬಗೆಹರಿಯದ ಬಿಕ್ಕಟ್ಟು ತಲೆದೋರಿದೆಯೆಂದು ವದಂತಿಯಿದೆ. ಭಾರತದ ಮೇಲೆ ಅಪ್ರಚೋದಿತ ಆಕ್ರಮಣವನ್ನು ಚೀನ ಮಾಡಿದೆಯೆಂಬುದನ್ನಿಂದು ರಶ್ಯ ಒಪ್ಪಿಕೊಂಡಿದೆ. ಹಾಗಾಗಿ ಚೌ ಎನ್ ಲಾಯರು ತುಂಬ ಆಲೋಚನೆ ಮಾಡಬೇಕಾಗಿ ಬಂದಿದೆ. ಕ್ರುಶೇವರ ನಿಲುವು ಭಾರತಪರವೆಂಬುದು ಈಗ ಹೆಚ್ಚಾಗಿ ಹೊರಪಟ್ಟಿದೆ.

## ಮಲ್ಪೆಯ ಬಂದರ

ಪ್ರಬುದ್ಧ ಬಂದರದ ಸ್ವಪ್ನ ಕಾಣುತಿದ್ದ ಮಲ್ಪೆಯ ಭವಿಷ್ಯವೀಗ ತುಸುವಾದರೂ ಉತ್ತಮಗೊಳ್ಳುವ ನಿರೀಕ್ಷೆಯಿದೆ. ಪಶ್ಚಿಮ ಕರಾವಳಿಯ ಸರ್ವ ಶ್ರೇಷ್ಠ ಪ್ರಕೃತಿದತ್ತ ಬಂದರು ಸ್ಥಳವಾದ ಇದರ ಅಭಿವೃದ್ಧಿಯು ಸಮೀಪದ ಆಗುಂಬೆ—ಕೊಟಚಾದ್ರಿಗಳಲ್ಲಿ ದೊರೆಯುವ ವಿಪುಲ ಖನಿಜ ಸಂಪತ್ತುಗಳಿಂದ, ಆಗುವುದು ಅನಿವಾರ್ಯವೇ ಆಗಿದೆ. ಅದುರುಗಳನ್ನು ಈ ಬಂದರದ ಮೂಲಕ ನಿರ್ಯಾತಗೊಳಿಸುವುದು ಲಾಭಪ್ರದವೆಂಬುದರಿಂದ ಇದಕ್ಕೀಗ ಹೆಚ್ಚಿನ ಪ್ರಾಶಸ್ತ್ಯ ಬಂದಿದೆ. ಇತ್ತೀಚೆಗೆ ಕೇಂದ್ರದ ಆಹಾರೋಪ ಸಚಿವ ಶ್ರೀ ಎ. ಎಂ. ಥಾಮಸರು ಇಲ್ಲಿ ಮೀನುಗಾರಿಕೆಯ ರೇವನ್ನು ಕಟ್ಟಲು ತಗಲುವ ವೆಚ್ಚದಲ್ಲಿ ಸೇ. ೫೦ರಷ್ಟನ್ನು ಕೇಂದ್ರ ಸರಕಾರವು ನೀಡಲು ಸಿದ್ಧವಿದೆಯೆಂದು ಹೇಳಿದುದು ಮತ್ತು ಈ ಸಹಾಯವನ್ನು ಪಡೆದು ಉಳಿದರ್ಧಾಂಶವನ್ನು ರಾಜ್ಯಸರಕಾರವು ನೀಡಲು ಮುಂದೆ ಬರುವುದು ಎಂಬ ರಾಜ್ಯದ ಮೀನುಗಾರಿಕೆ ಸಚಿವ ಶ್ರೀ ಬಿ. ರಾಚಯ್ಯನವರ ಅಂಬೋಣಗಳು ಸ್ವಾಗತಾರ್ಹವಿವೆ. ಉತ್ತಮ ಮೀನುಗಾರಿಕೆಯ ಕೇಂದ್ರವಾಗಲು ಹಾಗೂ ರೇವು ಪಟ್ಟಣವಾಗಲು ಮಲ್ಪೆಯು ಸರ್ವರೀತ್ಯಾ ಸಮರ್ಥವಾದುದು ಎಂಬುದು ಎಂದೋ ವ್ಯಕ್ತಪಟ್ಟಿದೆ. ಆದರೆ, ಇತರ ರಾಜಕೀಯ ಒತ್ತಡಗಳಿಂದ ಮಾತ್ರ ಅದು ಉಪಯೋಗಕ್ಕೆ ಬಾರದುಳಿದಿದೆ. ದೇಶದ ಸಂಪತ್ತನ್ನು ಹೆಚ್ಚಿಸುವುದು ನಮ್ಮ ಪ್ರಥಮ ಗುರಿಯಾಗಿರಬೇಕಾದುದು ಧರ್ಮವೆಂಬುದರಿಂದ, ಮಲ್ಪೆಯ ಉನ್ನತಿ ಮತ್ತು ನೈಸರ್ಗಿಕ ಸಂಪತ್ತು ಹಾಗೂ ಸಾಧನಗಳ ಉಪಯೋಗವಾಗುವುದು ಅತ್ಯವಶ್ಯ. ಆದುದರಿಂದ ತ್ವರಿತದಲ್ಲಿಯೇ ರಾಜ್ಯ ಸರಕಾರವು ಈ ಬಗ್ಗೆ ಯೋಜನೆಯನ್ನು ರಚಿಸಿ, ಅದನ್ನು ಕೃತಕೃತ್ಯವಿಸುವಲ್ಲಿ ಹಿಂದುಳಿಯಬಾರದು.

**ಚಂದಾಹಣ ಬಾಕಿ ಇರುವವರು ಅದಷ್ಟು ಬೇಗನೆ ಕಳುಹಿಸಿಕೊಡುವಂತೆ ಇಲ್ಲವೆ ಅನಿವಾರ್ಯವಾಗಿ ಕಳುಹಿಸುವ ವಿ. ಪಿ ಯನ್ನು ಸ್ವೀಕರಿಸಿ ಸಹಕರಿಸಬೇಕಾಗಿ ವಿನಂತಿ.**

**—ಮೆನೇಜರ್.**

## ಅಲ್ಲಲ್ಲಿಯ ಸುದ್ದಿ ಸಾರ

**ಉಡುಪಿ ಬೋರ್ಡ್ ಹಾಯರ್ ಸೆಕೆಂಡರಿ ಶಾಲೆಯ ವರ್ಧಂತ್ಯುತ್ಸವವು**— ಇದೇ ತಾ. 4ರಂದು, ಡಾ। ಟಿ ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಇದೇ ಸಂದರ್ಭದಲ್ಲಿ ಚಿತ್ರಕಲಾಧ್ಯಾಪಕ ಶ್ರೀ ಬಿ. ಪಿ. ಬಾಯಿರಿಯವರಿಂದ ಚಿತ್ರಿಸಲ್ಪಟ್ಟ ಹತ್ತನೇ ತರಗತಿಯವರಿಂದ ಕೊಡಲಾದ ಮಹಾತ್ಮಾ ಗಾಂಧಿಯವರ ತೈಲಚಿತ್ರದ ಅನಾವರಣವನ್ನು ಶ್ರೀ ಟಿ. ಎ. ಪೈಯವರು ನೆರವೇರಿಸುತ್ತಾ ಮಹಾತ್ಮರು ಮಾಡಿದ ಅಹಿಂಸಾ ಯುದ್ಧ, ಸತ್ಯಾಗ್ರಹ, ದೇಶಕ್ಕಾಗಿ ಸಲ್ಲಿಸಿದ ಸೇವೆ ಮಾಡಿದ ಜನಜಾಗೃತಿ ಹರಿಜನೋದ್ಧಾರ ಕಾರ್ಯ ಹಿಂದೂ ಮುಸ್ಲಿಂ ಐಕ್ಯ ಮೊದಲಾದ ಆದರ್ಶ ವಿಚಾರಗಳನ್ನು ವಿವರಿಸಿ ಮಹಾತ್ಮರ ಜೀವನಾದರ್ಶವು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಲೆಂದು ಹಾರೈಸಿದರು

ಆರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಟ್ಠಪ್ಪನವರು ಸ್ವಾಗತ ಭಾಷಣ ಮಾಡಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಅಲ್ಲದೆ ವಿದ್ಯಾರ್ಥಿಗಳು ಉಪಾಹಾರದ ಖರ್ಚಿನ ಮಾಡಿ ಉಳಿಸಿದ ರೂ.101ನ್ನು ರಕ್ಷಣಾ ನಿಧಿಗಾಗಿ ಶ್ರೀ ಟಿ. ಎ. ಪೈಗಳಿಗೊಪ್ಪಿಸಿದರು. ಅನಂತರ ಶಾಲಾ ಚಟುವಟಿಕೆಗಳ ವಿವರಗಳನ್ನೊಳಗೊಂಡ ಪ್ರಗತಿಪರ ವರದಿಗಳನ್ನೋದಿದರು. ಶ್ರೀ ಕೆ ಅನಂತರಾಮ ಉಪಾಧ್ಯಾಯರು ಸ್ವಸ್ತಿ ವಾಚನಮಾಡಿ ತಮ್ಮ ಕೆಲವು ಶಾಲೆಯ ನೆನಪುಗಳನ್ನು ಪ್ರಸ್ತಾಪಿಸಿದರು. ಅಧ್ಯಕ್ಷ ಡಾ। ಪೈಗಳು ಬಹುಮಾನ ವಿತರಣೆ ಮಾಡಿ ಭಾಷಣ ಮಾಡುತ್ತಾ ಜೀವನದಲ್ಲಿ ವಿದ್ಯಾರ್ಥಿ ಜೀವನವು ಅತ್ಯುತ್ತಮವಾದುದೆಂದೂ ಈ ಸಂದರ್ಭದಲ್ಲಿ ಮಕ್ಕಳು ಮೆದುಳು ಶಕ್ತಿ ಮತ್ತು ದೇಹ ಶಕ್ತಿಯನ್ನು ವರ್ಧಿಸಿಕೊಳ್ಳಬೇಕೆಂದೂ ವಿದ್ಯೆ ಮತ್ತು ಆರೋಗ್ಯ ಮಹಾ ಸಂಪತ್ತೆಂದೂ ಜೀವನದಲ್ಲಿ ಶಿಸ್ತು ನಿಯಮಗಳು ಅತ್ಯಾವಶ್ಯಕವೆಂದೂ ಮಹಾತ್ಮರ ಜೀವನ ದರ್ಶನಮಾಡಿಕೊಳ್ಳಬೇಕೆಂದು ಹೇಳಿದರು. ವಿದ್ಯಾರ್ಥಿ ಮುಖಂಡ ಕೆ. ವಾಮನ ಮೂರ್ತಿಯವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಬಾಲಿಕೆ, ಬಾಲಕರಿಂದ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು.

## ನೇತಾಜಿ ಸುಭಾಸಚಂದ್ರ ಭೋಸರು

(೪ನೇ ಪುಟದಿಂದ)

ಯುಸಿರಿರುವ ತನಕ ಹೋರಾಡಿದೆನು. ನಮ್ಮ ಮಾತೃಭೂಮಿ ಮುಂದೆ ಸ್ವಲ್ಪವೇ ಸಮಯದಲ್ಲಿ ಬಂಧಮುಕ್ತವಾಗುವುದೆಂದು ನನ್ನ ದೇಶಬಾಂಧವರಿಗೆ ಹೇಳಲು ಮರೆಯಬೇಡ!" ಮುಂದೆ ಅವರ ಬಾಯಿಯಿಂದ ಮಾತು ಹೊರಡಲಿಲ್ಲ. ೧೯೪೫ರ ಆಗಸ್ಟ್ ೧೮ರ ರಾತ್ರಿ ಗಂಟೆ ೮-೯ರ ನಡುವೆ ಭಾರತ ದೇಶದ ಕೋಟ್ಯಂತರ ಪ್ರಜೆಗಳ ಕಣ್ಮಣಿ, ನವ ಯುವಕರ ಹೃದಯ ಸಾಮ್ರಾಟ— ಆದರ್ಶ ಕರ್ಮಯೋಗಿ ಪ್ರಾತಃಸ್ಮರಣೀಯ ವೀರ ನೇತಾಜಿ ಸುಭಾಸಚಂದ್ರರು ನಮ್ಮಿಂದ ಅತ್ಯಂತ ದೂರ........!

### ಇಂದು ನೇತಾಜಿ ಇರುತ್ತಿದ್ದರೆ..?

ಇಂದು ನೆಲಸಿರುವ ರಾಜಕೀಯ ಗತ್ತುಗಾರಿಕೆಯನ್ನು ನಾವು ನಿರ್ವಿಕಾರಚಿತ್ತದಿಂದ ಅವಲೋಕಿಸಿದರೆ "ನಮ್ಮ ನೇತಾಜಿ ಬದುಕಿರಬೇಕಿತ್ತು" ಎಂದೆನಿಸುತ್ತದೆ. ಅವರಿಂದು ಜೀವಂತವಾಗಿರುತ್ತಿದ್ದರೆ ಶಿಲಾಚ್ಛಾದಿತ ಸುಭದ್ರವಾದ ಭವ್ಯ ಕಟ್ಟಡದಂತೆ ಭಾರತ ದೇಶವು ಅಭೇದ್ಯವಾಗುತ್ತಿತ್ತು. ಅವರಿಂದು ನಮ್ಮ ಮಧ್ಯೆ ಇರುತ್ತಿದ್ದರೆ ರಾಷ್ಟ್ರ ವಿಭಜನೆಯಾಗದೆ ಭಾರತದ ಶಕ್ತಿ ಸಾಮರ್ಥ್ಯವನ್ನು ಇಮ್ಮಡಿಸಲಸದಳವಾಗುತ್ತಿತ್ತು. ಲಕ್ಷಾಂತರ ಜನರ ಕಗ್ಗೊಲೆಗೆ ಎಂದೂ ಅವಕಾಶ ದೊರೆಯುತ್ತಿದ್ದಿಲ್ಲ. ಚೈನಾ ದೇಶದಿಂದ ಯಾವ ವಿಪತ್ತೂ ಒದಗುತ್ತಿದ್ದಿಲ್ಲ ನೇತಾಜಿಯವರು ಹೆಜ್ಜೆ ಹೆಜ್ಜೆಗೂ ನ್ಯಾಯ ವಾದಿಗಳಾಗಿದ್ದರು ವೈಯುಕ್ತಿಕ ನಿದಾಕ್ಷಿಣ್ಯ, ಒಂದು ಗುಂಪು ಯಾ ಜನಾಂಗವನ್ನು ಸಂತುಷ್ಟಗೊಳಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಹೇಯ ಪ್ರವೃತ್ತಿ ಅವರಲ್ಲಿರಲಿಲ್ಲ. ಅವರು ಭಾರತೀಯರ ಆದರಣೀಯ ನೇತಾಜಿಯವರಾಗಿದ್ದಾರೆ. ಸಮಸ್ತ ಭಾರತೀಯರನ್ನು ತನ್ನ ಕುಟುಂಬವೆಂದು ತಿಳಿಯುವ ಅತಿ ಮಾನವರಾದರು

ಇಂಥ ಅನರ್ಘ್ಯ ರತ್ನವನ್ನು ಹೆತ್ತ ಭಾರತ ಮಾತೆ ಧನ್ಯಳು. ಭಾರತೀಯರು ಧನ್ಯರು. ಸುಭಾಸರು ಜೀವಂತ ಉಳಿದಿರಲಿ ಯಾ ಮರಣವನ್ನಪ್ಪಿರಲಿ ಅವರ ಆತ್ಮ ಹಾಗೂ ಪವಿತ್ರ ಹೆಸರು ಚರಿತ್ರೆಯಲ್ಲಿ ಅನಾದಿ ಅನಂತವಾಗಿ ಉಳಿಯುವುವು. ಅವರ ನೆನಪು ಭಾರತೀಯರಿಗೆ ದಿವ್ಯ ಶಕ್ತಿ ಸ್ಫೂರ್ತಿಯನ್ನೂ ಕೊಡಲಿ.

—ಶ್ರೀ ಬಿ. ನಾರಾಯಣ ಜೋಗಿತ್ತಾಯ.

**ಶಿಕ್ಷಕ ಸಂಘದ ಮಹಾಸಭೆ**—ತಮ್ಮ ಕೋರಿಕೆಗಳಿಗೆ ರಾಜ್ಯಮಟ್ಟದ ಬೆಂಬಲ ಪಡೆಯಲಿಕ್ಕಾಗಿ ಮಂಜೂರಾತಿ ಪಡೆದ ಯಾವುದಾದರೊಂದು ಶಿಕ್ಷಕ ಫೆಡರೇಶನನ್ನು ಸೇರದೆ ಗತ್ಯಂತರವಿಲ್ಲವೆಂದು ತಾ. 27-1-63 ರಂದು ಉಡುಪಿಯಲ್ಲಿ ಶ್ರೀ ಎಸ್. ದುಗ್ಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿದ ತಾಲೂಕು ಶಿಕ್ಷಕರ ಸಂಘದ ಮಹಾ ಸಭೆಯು ಅಭಿಪ್ರಾಯಪಟ್ಟಿತು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಎ. ಪಿ. ಕೆದಿಲ್ಲಾಯರು ವರದಿಯೊಪ್ಪಿಸಿದರು.

ಸಭೆಯಲ್ಲಿ ಎಲ್ಲಾ ಅಧ್ಯಾಪಕರ ನಿವೃತ್ತಿ ವಯಸ್ಸನ್ನು 60ಕ್ಕೇರಿಸುವ ಮುಖ್ಯೋಪಾಧ್ಯಾಯರಿಗೆ ಪ್ರತ್ಯೇಕ ಸಂಬಳ ದರ ನಿಶ್ಚೈಸುವ, ವೃತ್ತಿಪರ ಶಿಕ್ಷಕರಿಗೆ ಯಾವುದಾದರೊಂದು ನಿರ್ದಿಷ್ಟ ವೇತನಮಾನವನ್ನು ನಿರ್ಧರಿಸುವ, ಪ್ರೊಬೇಶನರಿಗೆ ಅಧ್ಯಾಪಕರ ಕೆಲಸಕಾಯಂಗೊಳಿಸಿ ಪ್ರೊವಿಡೆಂಟ್ ಫಂಡ್ ಸೌಲಭ್ಯವನ್ನೊದಗಿಸುವ, ಎಸ್. ಎಸ್. ಎಲ್ ಸಿ ಆದ ಅಧ್ಯಾಪಕರಿಗೆ ಸೆಕೆಂಡರಿ ಟ್ರೈನಿಂಗ್ ಪರೀಕ್ಷೆಗೆ ಕುಳಿತುಕೊಳ್ಳುವ ಅವಕಾಶ ಅಥವಾ ಅವರಿಗೆ ಸೆಕೆಂಡರಿ ದರದ ವೇತನಮಾನ ಅನ್ವಯಿಸುವ, ಕೇಂದ್ರ ಸರಕಾರದ ದರದಲ್ಲಿ, ತುಟ್ಟಿ ಭತ್ತೆ ನೀಡುವಂತೆ ಸಂಬಂಧಪಟ್ಟವರನ್ನು ಕೇಳಿಕೊಳ್ಳುವ ನಿರ್ಣಯಗಳನ್ನು ಮಾಡಲಾಯಿತು.

1963ನೆಯ ಇಸವಿಯ ಆಡಳಿತ ಮಂಡಳಿಗೆ ಶ್ರೀ ಬನ್ನಾಡಿ ಸುಬ್ಬಣ ಹೆಗ್ಡೆ (ಅಧ್ಯಕ್ಷ) ಶ್ರೀ ಪಿ ಮಹಾಲಿಂಗ ಶೆಟ್ಟಿ ಹಾಗೂ ಶ್ರೀಮತಿ ಯು. ರುಕ್ಮಿಣಿ (ಉಪಾಧ್ಯಕ್ಷರು) ಶ್ರೀ ಎಚ್. ಎ ಪಿ. ಕೆದಿಲ್ಲಾಯ (ಪ್ರಧಾನ ಕಾರ್ಯದರ್ಶಿ) ಶ್ರೀ ಕೆ. ಭೋಜ ಪೂಜಾರಿ ಮತ್ತು ಶ್ರೀ ಎಚ್. ಕಾಳು ಶೆಟ್ಟಿ (ಜತೆಕಾರ್ಯದರ್ಶಿಗಳು) ಶ್ರೀ ಜೋನ ಕೊಪ್ರಾಸ್ (ಕೋಶಾಧಿಕಾರಿ) ಶ್ರೀ ಪ್ಪಾ. ಭುಜಂಗ ರಾವ್ (ಲೆಕ್ಕ ಪರಿಶೋಧಕ)ರಾಗಿ ಆರಿಸಲ್ಪಟ್ಟರು.

**ಗಾಂಧೀಜಿಯವರ ಪುಣ್ಯ ದಿನಾಚರಣೆಯು**—ಉಡುಪಿ ಮೋಡರ್ನ್ ಹಾ. ಎ. ಶಾಲೆಯಲ್ಲಿ ತಾ. 30-1-63ರಂದು ಅಧ್ಯಾಪಕಿ ಕುಮಾರಿ ಹೇಮಲತಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯೋಪಾಧ್ಯಾಯ ಶ್ರೀ ಎಚ್ ಎಲ್. ಭಟ್ಟರು ಶಾಲಾ ಧ್ವಜವನ್ನು ಅರಳಿಸಿದರು. ಮಕ್ಕಳ ಸಾಮೂಹಿಕ ಶುಚಿತ್ವವಾದ ಮೇಲೆ, ಗೀತಾ ವಾಚನ, ಬೈಬಲ್ ಹಾಗೂ ಖುರಾನ್ ವಾಚನದೊಂದಿಗೆ ಸಭೆಯು ಪ್ರಾರಂಭವಾಯಿತು. ಶಾಲಾ ಮಕ್ಕಳಲ್ಲಿ ಕೆಲವರು, ಗಾಂಧೀಜಿಯವರ ಜೀವನದ ಕುರಿತು ಭಾಷಣವನ್ನಿತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ಸಾಂಸ್ಕೃತಿಕ ಮಂತ್ರಿ ಸುಧಾಕರ ಧನ್ಯವಾದವನ್ನಿತ್ತು. ಭಜನೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಶ್ರೀ ಪಿ ಎಂ. ಹೆಗ್ಡೆಯವರಿಗೆ ಮಾತೃವಿಯೋಗ**— ಮಂಗಳೂರಲ್ಲಿ ಚಾರ್ಟರ್ಡ್ ಎಕೌಂಟೆಂಟರಾಗಿರುವ ಶ್ರೀ ಪಿ. ಎಂ. ಹೆಗ್ಡೇರ ತಾಯಿ ಸೀತಮ್ಮ ಹೆಗ್ಗಡ್ತಿಯವರು ತಾ. 3-2-1963ನೇ ಆದಿತ್ಯವಾರ ಹಗಲು 11-45ಕ್ಕೆ ಪಳ್ಳಿ ಮನೆಯಲ್ಲಿ ದೈವಾಧೀನರಾಗಿರುತ್ತಾರೆನ್ನಲು ವಿಷಾದವಾಗುತ್ತದೆ. ಅವರಿಗೆ 84 ವರ್ಷ ಪ್ರಾಯವಾಗಿತ್ತು.

**ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯು**— ತಾ. 3ರಂದು ಮಂಗಳೂರಿನಲ್ಲಿ, ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಈ ಸಭೆಯಲ್ಲಿ ಉಪ್ಪಿನಂಗಡಿಯ ಬಳಿಯ ಬಾಗಿಮಲೆಯ ಕಾಡುಗಳಿಂದ ಅಪ್ಪಣೆಯಿಲ್ಲದೆ ನ್ಯಾಯಬಾಹಿರವಾಗಿ ಮರಕಡಿಯುತ್ತಿರುವುದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಈ ಕುರಿತು ಸರಕಾರ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಮುಂದೆ ಮರಕಡಿಯುವ ಕೆಲಸವನ್ನು ಸರಕಾರವೇ ವಹಿಸಿಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು.

ಸ್ವರ್ಣ ನಿಯಂತ್ರಣದಿಂದ ನಿರುದ್ಯೋಗಿಗಳಾದ ಅಕ್ಕಸಾಲಿಗರಿಗೆ ಯೋಗ್ಯ ಕೈಗಾರಿಕಾ ತರಬೇತಿಗೆ ಅವಕಾಶ ಒದಗಿಸಬೇಕೆಂದೂ, ಅವರ ಜೀವನ ನಿರ್ವಹಣೆಗೆ ಸಹಾಯ ಒದಗಿಸಬೇಕೆಂದೂ ಸರಕಾರದ ಕಾಲೇಜುಗಳ ಲೆಕ್ಚರರಿಗೆ ಆಧುನಿಕ ಸೀನಿಯಾರಿಟಿ ಪಟ್ಟಿಯಿಂದಾಗಿ ಆಗಿರುವ ಅನ್ಯಾಯಕ್ಕೆ ವಿನಾ ರೂ ಪರಿಹಾರ ಕೈಕೊಳ್ಳಬೇಕೆಂದೂ ಇಂದಿನ ಕೃಷಿಕರಿಗುಂಟಾದ ಅನ್ಯಾಯವನ್ನು ಸರಿಪಡಿಸಬೇಕೆಂದೂ ಕೇಳಿಕೊಂಡಿದೆ.

**ಸುರತ್ಕಲ್**—ಮುಕ್ಕ ಮಿತ್ರ ಪಟ್ಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲಾ ಮತ್ತು ಅಗ್ಗಿಕರಿ ಹಾ. ಎ ಶಾಲೆಗಳ ಒಡನಾಟದಿಂದ ಪ್ರಜಾಪ್ರಭುತ್ವ ದಿನಾಚರಣೆಯು ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

**ಕಾಲೇಜ್ ದಿನಾಚರಣಾ ಸಮಾರಂಭ**— ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವರ್ಧಂತ್ಯುತ್ಸವವು ಇದೇ ತಾ 1 ರಂದು ಮೈಸೂರು ವಿಧಾನಪರಿಷತ್ತಿನ ಸದಸ್ಯ ಶ್ರೀ ವಿ. ಶ್ರೀನಿವಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು ಪ್ರಿನ್ಸಿಪಾಲ್ ವಿ. ಎಮ್. ಇನಾಮ್‌ದಾರರು ಸ್ವಾಗತಿಸಿ ಕಾಲೇಜಿನ ಅಭಿವೃದ್ಧಿಪರ ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದ ಬಳಿಕ ಮಠಾಧಿಪತಿಗಳ ಸಾಹಸ, ಪರಿಶ್ರಮಗಳಿಂದ ಸ್ಥಾಪಿತವಾದ ಕಾಲೇಜಿನ ಪ್ರಗತಿಗೆ ಮೆಚ್ಚುಗೆ ಸೂಚಿಸಿ ಮಾತನಾಡಿದರಲ್ಲದೆ ವಿಶ್ವವಿದ್ಯಾನಿಲಯದ ಧೋರಣೆಯಲ್ಲಿ ಬದಲಾವಣೆಯಾಗದುದಕ್ಕಾಗಿ ವಿಷಾದ ಸೂಚಿಸಿದರು. ಶ್ರೀ ಕೆ. ಜಿ ತಂತ್ರಿಗಳು ಧನ್ಯವಾದವನ್ನರ್ಪಿಸಿದರು. ಬಳಿಕ ನಾಟಕ, ಯಕ್ಷಗಾನ ಮೊದಲಾದ ಮನೋರಂಜನ ಕಾರ್ಯಕ್ರಮಗಳು ಜರಗಿದುವು.

**ಉಡುಪಿ ಶಾಖಾ ವಿಮಾ ಪ್ರತಿನಿಧಿಗಳ ಸಂಘವೊಂದು**—ತಾ 3-2-63 ರಂದು ಎಲ್. ಐ. ಸಿ.ಯ ಉಡುಪಿ ಶಾಖಾ ಕಚೇರಿಯಲ್ಲಿ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎನ್. ನಂಬಿಯಾರರ ಅಧ್ಯಕ್ಷತೆಯಲ್ಲಿ ಎಡಿಶನಲ್ ಡಿವಿಜನಲ್ ಮೆನೇಜರ್ ಶ್ರೀ ಬಾಸರವರಿಂದ ಉದ್ಘಾಟಿಸಲ್ಪಟ್ಟಿತು ಘಟನೆಯ ಸ್ವೀಕಾರವಾಗಿ, ನಿವೃತ್ತ ಹೆಡ್ಮಾಸ್ಟರ್ ಶ್ರೀ ರೋಕ್ ಫೆರ್ನಾಂಡಿಸರು ಅಧ್ಯಕ್ಷರಾಗಿರುವ ಕಾರ್ಯನಿರ್ವಾಹಕ ಸಮಿತಿಯೊಂದು ರಚಿಸಲ್ಪಟ್ಟಿತು.

**ಉಡುಪಿ: ನಗರ ಸಭೆಯ ಮಾನಪತ್ರ**—ಇದೇ ತಾ. 5ರಂದು, ಕೇಂದ್ರ ಸರಕಾರದ ಉಪ ಆರೋಗ್ಯ ಮಂತ್ರಿ ಕರ್ನಲ್ ಡಿ. ಎಸ್. ರಾಜು ಅವರಿಗೆ ಉಡುಪಿ ನಗರ ಸಭೆಯವರು, ಮಾನಪತ್ರವನ್ನಿತ್ತು ಸ್ವಾಗತಿಸಿ ಗೌರವಿಸಿದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಮಾನಪತ್ರವನ್ನು ಮಂತ್ರಿಗಳಿಗೊಪ್ಪಿಸಿದರು.

ನಗರದಲ್ಲಿ ಹರಡುತ್ತಿರುವ ಫೈಲೇರಿಯಾ ರೋಗ ಪ್ರತಿಬಂಧಕದ ಆವಶ್ಯಕತೆ, ಪ್ರದಕ್ಕಾಗಿ ನೀರು ಸರಬರಾಯಿ, ಚರಂಡಿ ಯೋಜನೆಗಾಗಿ, ಕೇಂದ್ರ ಸರಕಾರವು ಸಹಾಯ ನೀಡಬೇಕೆಂದು ಕೇಳಿಕೊಳ್ಳಲಾಗಿತ್ತು. ಮಂತ್ರಿಗಳು ಉತ್ತರಿಸುತ್ತಾ ಈ ಯೋಜನೆಗಾಗಿ ಒಂದು ಸಮಿತಿಯನ್ನು ರಚಿಸಿ ರಾಜ್ಯ ಸರಕಾರದ ಮೂಲಕ ಕೇಂದ್ರದ ಸಹಕಾರ ಕೋರಿದಾಗ ಸಾಧ್ಯವಾದ ಸಹಾಯ ನೀಡುವ ಭರವಸೆ ಇತ್ತರಲ್ಲದೇ ಉತ್ತರದ ಗಡಿಯಲ್ಲಿ ನಡೆಯುತ್ತಿರುವ ಚೀನೀ ದುರಾಕ್ರಮಣವನ್ನು ಪ್ರಸ್ತಾಪಿಸಿ ನಾವಿಂದು ಸಂಘಟಿತರಾಗಿ ಪ್ರತಿಭಟಿಸುತ್ತಿರುವುದು ಶ್ಲಾಘನೀಯವೆಂದರು. ಉಡುಪಿ ನಗರದ ಅಭಿವೃದ್ಧಿ, ಮಣಿಪಾಲ ಗುಡ್ಡೆಯು ಅತ್ಯುತ್ತಮ ವಿದ್ಯಾಕ್ಷೇತ್ರವಾಗಿ ಕೆಲವೇ ವರ್ಷಗಳಲ್ಲಿ ಮಾರ್ಪಾಟುಹೊಂದಿ, ಆದರ್ಶವಾಗಿ ಬೆಳೆದುಬಂದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿದರು. ಅಂತ್ಯದಲ್ಲಿ ನಗರ ಸಭೆಯ ಉಪಾಧ್ಯಕ್ಷ ಶ್ರೀ ಕೆ. ಎ. ಮಧ್ಯಸ್ಥರು ಧನ್ಯವಾದಗಳನ್ನರ್ಪಿಸಿದರು.

**ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವವು**— ಇದೇ ತಾ. ೬ರಂದು ಮಣಿಪಾಲದಲ್ಲಿ ಕಾಲೇಜಿನ ಸಭಾಮಂದಿರದಲ್ಲಿ ಕೇಂದ್ರದ ಆರೋಗ್ಯ ಉಪಮಂತ್ರಿ ಕರ್ನಲ್ ಡಿ. ಎಸ್. ರಾಜುರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಪ್ರಾರ್ಥನೆಯ ಬಳಿಕ ಶ್ರೀ ಟಿ. ರಮೇಶ ಪೈಯವರು ಶಿವಳ್ಳಿ ಪಂಚಾಯತಿನ ಪತಿಯಿಂದ ಸನ್ಮಾನ ಸ್ವಾಗತ ಪತ್ರವನ್ನರ್ಪಿಸಿದರು. ಡಾ| ಟಿ ಎಮ್. ಎ ಪೈಯವರು ಸ್ವಾಗತ ಭಾಷಣ ಮಾಡುತ್ತಾ ಕಾಲೇಜಿನ ಅಭಿವೃದ್ಧಿಪರ ಚಟುವಟಿಕೆಗಳನ್ನು ವಿವರಿಸಿ ಇಷ್ಟರಲ್ಲೇ 621 ಡಾಕ್ಟರರು ಈ ಕಾಲೇಜಿನಿಂದ ಹೊರಬಂದು ವೈದ್ಯಕೀಯ ಸೇವೆ ಸಲ್ಲಿಸುತ್ತಿರುವರೆಂದೂ ಇಲ್ಲಿ 600 ಬೆಡ್ಡುಗಳ ಆಸ್ಪತ್ರೆಯೊಂದನ್ನು ರಚಿಸಲಾಗುವದೆಂದೂ ಹೇಳಿದರು. ಅಧ್ಯಕ್ಷರು ಮಾತನಾಡುತ್ತಾ ರಾಷ್ಟ್ರದಲ್ಲಿರುವ ಡಾಕ್ಟರರ ಮತ್ತು ದಾದಿಯರ ಕೊರತೆಯನ್ನೂ ಮೆಡಿಕಲ್ ಕಾಲೇಜುಗಳು ಹೆಚ್ಚು ಹೆಚ್ಚು ಸ್ಥಾಪನೆಯಾಗಬೇಕಾದ ಅವಶ್ಯಕತೆಯನ್ನೂ ಹೇಳಿ ಈ ಕಾಲೇಜಿನಂತಹ ಖಾಸಗೀ ಕಾಲೇಜುಗಳು ಮಾಡುತ್ತಿರುವ ಕೆಲಸ ಮಹತ್ತಾದುದೆಂದೂ ರಾಷ್ಟ್ರದಲ್ಲಿಯೇ ಅತ್ಯುತ್ಕೃಷ್ಟವೂ ಸುಸಜ್ಜಿತವೂ ಆದ ಲೆಬರೇಟರಿ ಮತ್ತು ಶ್ರೇಷ್ಟ ವ್ಯವಸ್ಥೆಗಳಿಂದ ಕೂಡಿರುವ ಈ ಕಾಲೇಜಿನ ಸ್ಥಾಪನೆ ಮತ್ತು ಪ್ರಗತಿಯ ಸೂತ್ರಧಾರಿಯಾಗಿರುವ ಡಾ. ಟಿ. ಎಮ್. ಎ. ಪೈಯವರ ಮಹಾವ್ಯಕ್ತಿತ್ವ ಶ್ಲಾಘನೀಯವಾದುದೆಂದೂ ಹೇಳಿದರು ಅಂತ್ಯದಲ್ಲಿ ಪ್ರಿನ್ಸಿಪಾಲ್ ಡಾ. ಜಿ ಡಿ. ವೇಲಿಯತ್ತರು ಧನ್ಯವಾದವನ್ನರ್ಪಿಸಿದರು.

**ಮುಲ್ಕಿ ಕುಟುಂಬಯೋಜನಾ ತರಬೇತಿ ಶಿಬಿರದ ಸಮಾರೋಪ ಸಮಾರಂಭ**— ಮಂಗಳೂರು ತಾಲೂಕು ಬೋರ್ಡಿನ ಆಶ್ರಯದಲ್ಲಿ, ಜಿಲ್ಲಾ ಆರೋಗ್ಯ ಖಾತೆಯಿಂದ ಮುಲ್ಕಿಯಲ್ಲಿ ಏರ್ಪಡಿಸಲಾದ ಮೂರು ದಿನಗಳ ಕುಟುಂಬ ಯೋಜನಾ ತರಬೇತಿ ಶಿಬಿರದ ಮುಕ್ತಾಯ ಸಮಾರಂಭವು ತಾ. 4 ರಂದು ತಾ. ಬೋ. ಅಧ್ಯಕ್ಷ ಶ್ರೀ ಬಿ. ರಾಜೀವ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಎಂ. ಆರ್. ಶೆಟ್ಟಿಯವರಿಂದ ಸ್ವಾಗತಭಾಷಣವಾಯಿತು. ಶ್ರೀ ಟಿ ಸಂಜೀವ ಮಲ್ಲಿ, ಶ್ರೀ ಪಿ ಬಿ. ಪಕೀರಪ್ಪ, ಶ್ರೀಮತಿ ಗುಲಾಬಿ ಮತ್ತು ಶ್ರೀ ಎಂ. ಪಿ. ದೇವರಾವ್‌ರವರು ತರಬೇತಿ ಶಿಬಿರದ ಅನುಭವಗಳ ಕುರಿತು ಮಾತನಾಡಿದರು. ಮೂರು ದಿನಗಳ ಕಾರ್ಯಕಲಾಪಗಳ ವರದಿಗಳನ್ನು ಕುಮಾರಿ ಸುಲೋಚನಾರವರು ವಾಚಿಸಿದರು ಡಾ. ಕೆ. ಬಿ. ಶೆಟ್ಟಿಯವರಿಂದ ಪ್ರಶಸ್ತಿಪತ್ರ ವಿತರಣೆಯಾದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಅಂತ್ಯದಲ್ಲಿ ಡಾ ಕೆ. ಬಾಬು ಶೆಟ್ಟಿಯವರು ಧನ್ಯವಾದಗಳನ್ನರ್ಪಿಸಿದರು. ಈ ಶಿಬಿರದಲ್ಲಿ 75 ಪ್ರತಿನಿಧಿಗಳು ಭಾಗವಹಿಸಿದ್ದರು.

**ಅಳಿಕೆ**— ಲೋಕ ಸೇವಾ ವೃಂದದ ಆಶ್ರಯದಲ್ಲಿ ಇಲ್ಲೊಂದು ಹೈಸ್ಕೂಲು ಸ್ಥಾಪಿಸುವ ಕುರಿತು ತಕ್ಕ ಸಿದ್ಧತೆಗಳಾಗುತ್ತಿವೆ.

# ಲಕ್ಷ್ಮಣ ಬಾಬಣಿ ಪೈ ಮೆಮೋರಿಯಲ್ ಪಬ್ಲಿಕೇಶನ್ಸ್,

## ಮಣಿಪಾಲ, ದ. ಕನ್ನಡ.

ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ, ಕರ್ನಾಟಕಕ್ಕೆ ಸೇರಲಿರುವ ಗೋವೆಯ ಪಂಜಿಂನಲ್ಲಿ, ದಕ್ಷಿಣ ಕನ್ನಡದ ಮಣಿಪಾಲದಲ್ಲಿ ಮತ್ತು ಉತ್ತರ ಕನ್ನಡದ ಅಂಕೋಲೆಯಲ್ಲಿ "ಲಕ್ಷ್ಮಣ ಬಾಬಣಿ ಪೈ ಮೆಮೋರಿಯಲ್ ಪಬ್ಲಿಕೇಶನ್ಸ್" ಎಂಬ ಪ್ರಕಾಶನ ಸಂಸ್ಥೆಯು ಚತುರ್ವೇದ ಮತ್ತು ಮಹಾಭಾರತಗಳನ್ನು ಪ್ರಕಾಶಿಸುವ ಮಹತ್ ಕಾರ್ಯವನ್ನು ಕೈಗೊಂಡಿರುತ್ತದೆ.

ಶ್ರೀ ಲಕ್ಷ್ಮಣ ಬಾಬಣಿ ಪೈ (೧೮೫೩-೧೯೨೭) ಯವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಲ್ಲಿಯ ಆಗರ್ಭ ಶ್ರೀಮಂತ ಮನೆತನದವರು. ಹತ್ತೊಂಬತ್ತನೆಯ ಶತಮಾನದ ಮುಕ್ತಾಯ ಕಾಲದಲ್ಲಿ ಅವರು ರಚಿಸಿದ ಮತ್ತು ಸದ್ಯಕ್ಕೆ ಅವರ ಪೌತ್ರರಾದ ಪ್ರೊ. ಬಾಬಣಿ ಶೇಷಗಿರಿ ಪೈ ಇವರು ಸಂಪಾದಿಸುತ್ತಿರುವ ಭಾರತೀಯ ತಾತ್ವಿಕ ಮಹಾ—ಗ್ರಂಥಗಳಾದ ಚತುರ್ವೇದ ಮತ್ತು ಮಹಾಭಾರತಗಳನ್ನು ಪ್ರಕಟಿಸುವುದೇ ಈ ಸಂಸ್ಥೆಯ ಮುಖ್ಯೋದ್ದೇಶವು.

ಈ ಸಂಸ್ಥೆಯು ಋಗ್ವೇದವನ್ನು ೧೬ ಗ್ರಂಥಗಳಲ್ಲಿಯೂ, ಯಜುರ್ವೇದವನ್ನು ೫ ಗ್ರಂಥಗಳಲ್ಲಿಯೂ, ಸಾಮ ವೇದವನ್ನು ೨ ಗ್ರಂಥಗಳಲ್ಲಿಯೂ, ಅಥರ್ವಣ ವೇದವನ್ನು ೭ ಗ್ರಂಥಗಳಲ್ಲಿಯೂ, ಮಹರ್ಷಿಯೂ, ಕೃಷ್ಣದ್ವೈಪಾಯನನೂ ಆದ ಶ್ರೀ ವೇದವ್ಯಾಸ ಮುನಿ-ರಚಿತವಾದ ಒಂದು ಲಕ್ಷ (೧,೦೦,೦೦೦) ಶ್ಲೋಕಗಳುಳ್ಳ ಶ್ರೀ ಮಹಾಭಾರತವನ್ನು ೫೦ ಗ್ರಂಥಗಳಲ್ಲಿ ಪ್ರಕಾಶಿಸುತ್ತಿರುವುದು. ಈ ಪ್ರಕಾರವಾಗಿ ಈ (೧೬ + ೫ + ೨ + ೭ + ೫೦ = ೮೦) ಎಂಭತ್ತು ಮಹಾಗ್ರಂಥಗಳನ್ನು ಈ ಸಂಸ್ಥೆಯು ಪ್ರಕಟಿಸುತ್ತಿರುವುದು.

ಈ ಎಲ್ಲ ಎಂಭತ್ತು ಗ್ರಂಥಗಳಲ್ಲಿ ಎಲ್ಲ ವೇದಗಳ ಎಲ್ಲ ಮಂತ್ರಗಳು ಕನ್ನಡ ಲಿಪಿಯಲ್ಲಿ ಸುಲಲಿತವಾಗಿ ಮುದ್ರಿಸಲ್ಪಟ್ಟು, ಮತ್ತು ಸಂಪೂರ್ಣ ಮಹಾಭಾರತದ ಸರ್ವ ಶ್ಲೋಕಗಳು ಕನ್ನಡ ಲಿಪಿಯಲ್ಲಿ ಕೊಡಲ್ಪಟ್ಟು, ಕೊನೆಯಲ್ಲಿ ಅವುಗಳ ಸರ್ವೋತ್ತಮವಾದ ಕನ್ನಡ ಭಾಷಾಂತರವು ಹೇಳಲ್ಪಟ್ಟಿರುತ್ತದೆ. ವೇದಗಳ ಮಂತ್ರಗಳನ್ನು ಋಷಿಗಳ ಪರಂಪರೆಗಳಿಗನುಸಾರವಾಗಿ, ತಲೆ ತಲಾಂತರಗಳಿಂದ, ಕಂಠಸ್ಥವಾಗಿ ಬಂದ ಶಾಸ್ತ್ರೀಯ ರೀತಿಯಲ್ಲಿ ಉಚ್ಚರಿಸುವ ಪಠಣದ ವಿಧಿಯು ವೇದಗ್ರಂಥಗಳಲ್ಲಿ ಸುಸ್ಪಷ್ಟವಾಗಿ ಕೊಡಲ್ಪಟ್ಟಿದೆ.

ಈ ಎಂಭತ್ತು ಮಹಾಗ್ರಂಥಗಳನ್ನು ಪ್ರಕಟಿಸಲು ಅನುಕೂಲವಾಗುವಂತೆ ಈ ಸಂಸ್ಥೆಯು ಆಜೀವ ಸದಸ್ಯರನ್ನು (ಅಂದರೆ ಈ ಎಂಭತ್ತು ಮಹಾಗ್ರಂಥಗಳ ಪ್ರಾಕ್—ಪ್ರಕಾಶನ ಬೆಲೆಯಾದ ರೂ. ೨೦೦/-ಗಳನ್ನು ಮುಂಗಡವಾಗಿ ಮನಿಯಾರ್ಡರಿನಿಂದ ಒಂದೇ ಸಲ ಈ ಸಂಸ್ಥೆಗೆ ಕಳುಹಿಸಿ ಕೊಡುವಂಥವರನ್ನು) ಸಂಗ್ರಹಿಸುತ್ತಿರುವುದು.

ಬೃಹದಾಕಾರದ (೮ ೩/೪" × ೫ ೫/೮") ೨೦೦—೪೦೦ ಪುಟಗಳಿಂದಲೂ, ಕ್ಯಾಲಿಕೋ ಬ್ಯಾಂಡಿಂಗಿನಿಂದಲೂ ಸುಸಜ್ಜಿತವಾದ ಈ ಗ್ರಂಥಗಳು ನಾಲ್ಕು ತಿಂಗಳಿಗೊಮ್ಮೆ (ಸಾಧ್ಯವಾದರೆ ಅದಕ್ಕೂ ತ್ವರಿತವಾಗಿ) ಪ್ರಕಟವಾಗುತ್ತವೆ. ಪ್ರತಿಯೊಂದು ಗ್ರಂಥದ ಬೆಲೆ ಐದು ಅಥವಾ ಎಂಟು ರೂಪಾಯಿಗಳು; ಅಂದರೆ (ರೂ. ೫೦೦/- + ರೂ. ೧೦೦/- ಅಂಚೆ ವೆಚ್ಚ; ಹೀಗೆ ಒಟ್ಟು ರೂ ೬೦೦/-) ಆರುನೂರು ರೂಪಾಯಿ ಬೆಲೆ ಬಾಳುವ ಎಲ್ಲರಿಗೂ ಅವಶ್ಯವಾಗಿ ಬೇಕಾಗಿರುವ ಆದರೆ ಅತಿ ದುರ್ಲಭವಾಗಿರುವ ಈ ಎಂಭತ್ತು ಉದ್ಗ್ರಂಥಗಳು ಇದರ ಆಜೀವ ಸದಸ್ಯರಿಗೆ ಕೇವಲ ರೂ ೨೦೦/-ಗಳಿಗೆ ಅವರವರ ಮನೆಯಲ್ಲಿಯೇ ದೊರಕುವುವು. ಅಂಚೆಯ ವೆಚ್ಚವನ್ನು ಪ್ರಕಾಶನ ಸಂಸ್ಥೆಯೇ ವಹಿಸಿಕೊಳ್ಳುವುದು. ಈ ಗ್ರಂಥಗಳು ಇದರ ಆಜೀವ ಸದಸ್ಯರಿಗೆ ಮಾತ್ರ ಕಳುಹಿಸಲ್ಪಡುವುವು.

ಇದರ ಆಜೀವ ಸದಸ್ಯರಲ್ಲದವರಿಗೆ ಈ ಮಹಾಗ್ರಂಥಗಳು ಸರ್ವಥಾ ದೊರಕಲಾರವು. ಆದುದರಿಂದ ಈ ಮಹಾಗ್ರಂಥಗಳನ್ನು ಪಡೆಯಲಿಚ್ಛಿಸುವವರು ಮನಿಯಾರ್ಡರಿನಿಂದ ರೂ. ೨೦೦/- (ಇನ್ನೂರು ರೂಪಾಯಿ)ಗಳನ್ನು ಈ ಸಂಸ್ಥೆಗೆ ಕಳುಹಿಸಿಕೊಟ್ಟರೆ, ಅವರಿಗೆ ಕೂಡಲೇ ಈ ವರೆಗೆ ಪ್ರಕಟಿತವಾದ ಈ ಎಂಟು ಗ್ರಂಥಗಳು ಕಳುಹಿಸಲ್ಪಡುವುವು:—

೧. ಕನ್ನಡ ಋಗ್ವೇದ—ಭಾಗ—೧. (ಪುಟ: ೨೦೦); ೨. ಶ್ರೀ ಮಹಾಭಾರತ ಸಂಹಿತೆ—ಭಾಗ ೧. (ಪುಟ: ೨೮೦); ೩. ಕನ್ನಡ ಅಥರ್ವಣ ವೇದ—ಭಾಗ—೧. (ಪುಟ: ೨೦೮); ೪. ಶ್ರೀ ಮಹಾಭಾರತ ಸಂಹಿತೆ—ಭಾಗ—೨. (ಪುಟ: ೨೦೦); ೫. ಶ್ರೀ ಮಹಾಭಾರತ ಸಂಹಿತೆ—ಭಾಗ—೩. (ಪುಟ: ೨೮೦); ೬. ಕನ್ನಡ ಋಗ್ವೇದ—ಭಾ—೨ (ಪುಟ: ೩೦೦); ೭. ಶ್ರೀ ಮಹಾಭಾರತ ಸಂಹಿತೆ—ಭಾಗ—೪ (ಪುಟ: ೨೮೦); ಮತ್ತು ೮. ಶ್ರೀ ಮಹಾಭಾರತ ಸಂಹಿತೆ—ಭಾಗ—೫. (ಪುಟ: ೩೦೦); ಉಳಿದ ಗ್ರಂಥಗಳು ಅಚ್ಚಿನಲ್ಲಿದ್ದು, ಪ್ರಕಟಿಸಲ್ಪಟ್ಟಂತೆ ಆಜೀವ ಸದಸ್ಯರಿಗೆ ಕಳುಹಿಸಲ್ಪಡುವುವು.

ಈ ಮಹಾಗ್ರಂಥಗಳನ್ನು ಪ್ರಕಟಿಸುವ ಪುಣ್ಯಮಯವಾದ ಮಹಾಕಾರ್ಯದಲ್ಲಿ ತಾವು ರೂ. ೨೦೦/-ನ್ನು ಮನಿಯಾರ್ಡರಿನಿಂದ ಈ ಸಂಸ್ಥೆಗೆ ಕಳುಹಿಸಿ, ಇದರ ಆಜೀವ ಸದಸ್ಯರಾಗಿ, ಸಹಕರಿಸಿ. ಸಹಭಾಗಿಯಾಗುವಂತೆ ಈ ಸಂಸ್ಥೆಯು ಈ ಮೂಲಕ ತಮ್ಮನ್ನು ಆಮಂತ್ರಿಸುತ್ತದೆ. ನಮ್ಮ ಪುಣ್ಯಶಾಲಿಗಳಾದ ಪೂರ್ವಜರು ನಮಗೆ ಇಟ್ಟಿರುವ ಅಮೂಲ್ಯವಾದ ಆಸ್ತಿಯಂತಿರುವ ಈ ಮಹಾಗ್ರಂಥಗಳು ಸ್ವ-ಅಸ್ತಿತ್ವದಿಂದಲೇ ನಮ್ಮ ಮನೆಗಳನ್ನೆಲ್ಲಾ ಸುಖ-ಶಾಂತಿ ಸಮೃದ್ಧಿಗಳಿಂದ ತುಂಬಿ ತುಳುಕಿಸುವುವು. ಅದೂ ಅಲ್ಲದೆ, ಈ ಸಂಸ್ಥೆಯ ಆಜೀವ ಸದಸ್ಯರೆಲ್ಲರ ಹೆಸರುಗಳು ಈ ಶಾಶ್ವತ ಮಹಾಗ್ರಂಥಗಳಾದ ವೇದ ಮಹಾಭಾರತಗಳಲ್ಲಿ ಮುದ್ರಿತವಾಗಿ ಚಿರಕಾಲದ ವರೆಗೂ ಅಮರವಾಗುವುವು.

ಆಜೀವ ಸದಸ್ಯರಾಗಬಯಸುವವರು ತ್ವರೆಮಾಡಿ ಮನಿಯಾರ್ಡರದಿಂದ ರೂ. ೨೦೦/- (ಎರಡುನೂರು ರೂಪಾಯಿ)ಗಳನ್ನು **ಈ ಸಂಸ್ಥೆ ಅಂದರೆ ಲಕ್ಷ್ಮಣ ಬಾಬಣಿ ಪೈ ಮೆಮೋರಿಯಲ್ ಪಬ್ಲಿಕೇಶನ್ಸ್, ಮಣಿಪಾಲ, ದ. ಕನ್ನಡ ಜಿಲ್ಲೆ**)ಯ ವಿಳಾಸಕ್ಕೆ ಕೂಡಲೇ ಕಳುಹಿಸಿ ಮಹಾಭಾಗ್ಯಶಾಲಿಯಾಗಿರಿ. ಆದ್ದರಿಂದ "ಶುಭಸ್ಯ ಶೀಘ್ರಂ".

## ಕವಲು ದಾರಿ ಕೆಂಪು ದೀಪ

# ನಿಮಗೊಂದು ಕಿವಿ ಮಾತು!

— ಸಂದಾಸ

ಸಾಮ್ರಾಜ್ಯ ವಿಸ್ತರಣಾ ದಾಹಕ್ಕೆ ಬಲಿಯಾಗಿರುವ ಚೀನದ ಬಗ್ಗೆ ಭಾರತದಲ್ಲಿ ಉದಾಹರಣೆ ಕೊಡುವದಾದರೆ ಮರಾಠರತ್ತ ಬೊಟ್ಟು ಮಾಡಿ ತೋರಿಸಬಹುದು. ದೇಶಕ್ಕೆ ದೇಶವೇ ಅಸಹ್ಯ ಪಡುವಂತಹ ರೀತಿಯಲ್ಲಿ, ಅವರ ವಿಶಾಲ ಮಹಾರಾಷ್ಟ್ರದ ಕಲ್ಪನೆ ಬೆಳೆದಿದೆ. ಗೋವೆಯನ್ನು ಕಬಳಿಸಲು ಬೇರೆ ಉಪಾಯಕಾಣದೆ ಕೊಂಕಣಿ ಭಾಷೆಯ ಬಲಿ ಕೇಳತೊಡಗಿದ್ದಾರೆ, ಈ ಭಾಷಾಭಿಮಾನಿಗಳು!

ಪಂಜಿಂನಲ್ಲಿ ಕಳೆದ ತಿಂಗಳು ನಡೆದಿದ್ದ ಗೋಮಾಂತಕ ಮರಾಠೀಸಾಹಿತ್ಯಸಮ್ಮೇಳನದಲ್ಲಿ ಕೊಂಕಣಿ ಭಾಷೆಯ ಬಲಿ ಕೇಳಲಾಗಿದ್ದು, ಮರಾಠರ ಕಲ್ಪನೆ ಯಾವ ರೀತಿಯಲ್ಲಿ ಘಾತಕವಾಗಿದೆ ಎಂಬ ಕಲ್ಪನೆಯನ್ನು ನಮಗೆ ಮಾಡಿಕೊಡುತ್ತಿದೆ ನಮ್ಮ ಸಾಹಿತ್ಯ ಸಮ್ಮೇಳನಗಳಿಗೆ ಮತ್ತು ಮರಾಠರ ಸಾಹಿತ್ಯ ಸಮ್ಮೇಳನಕ್ಕೂ ಇರುವ ವ್ಯತ್ಯಾಸವೂ ಇದರಿಂದ ಎದ್ದು ಕಾಣುತ್ತದೆ. ನಾವಾದರೋ ಸಮ್ಮೇಳನಗೇನೇ ಕಚ್ಚಾಡಲು ಅಸ್ಪದ ಮಾಡಿಕೊಡುತ್ತೇವೆ. ಅವರು ಇನ್ನೊಬ್ಬರಿಗೆ ಕಚ್ಚಾಡಲು ಎಡೆಮಾಡಿಕೊಟ್ಟು ಲಾಭ ಪಡೆಯುತ್ತಾರೆ!

ಚೀನಾ ಆಕ್ರಮಣದ ಕುರಿತು ದೇಶದ ಮೂಲೆ ಮೂಲೆಯಿಂದ ಸರ್ವಾರ್ಪಣೆಯ ಸಿದ್ಧತೆ ನಡೆಯುತ್ತಿರುವ ಈ ಹೊತ್ತಿನಲ್ಲಿ, ವೀರ ಮರಾಠರಿಗೆ ಗೋವ ಪ್ರಾಣವಾಯು! ಭಾಷಾಭಿಮಾನಕ್ಕಿಂತ ಹೆಚ್ಚಿನದ್ದು ದೇಶಾಭಿಮಾನವೆಂದ ನಾವಿಲ್ಲ ತಿಳಿದಿರುವದಾದರೆ ಮರಾಠರಿಗೆ ಮರಾಠಿಯೆಂಬುದ, ನಮ್ಮ ಭಗವದ್ ಗೀತೆಗಿಂತ, ಕ್ರೈಸ್ತರ ಬೈಬಲ್ಲಿಗಿಂತ, ಮುಸ್ಲಿಮರ ಕುರಾನಿಗಿಂತ, ಹೆಚ್ಚು ಪವಿತ್ರ!

ದೇಶಕ್ಕಾಗಿ ನಾವೇನು ಮಾಡಬೇಕಾಗಿದೆ ಎನ್ನುವ ಕುರಿತು ಆಲೋಚಿಸುವಲ್ಲಿ, ದೇಶದಿಂದ ನಾವೇನು ಗಳಿಸಬಲ್ಲೆವು ಎಂದು ಮರಾಠರು ಯೋಚಿಸುತ್ತಿರುವಾಗ, ಅವರ ಈ ಉಪಮಾತೀತ ಗುಣವನ್ನು ಕೊಂಡಾಡದ ಇರಲು ಹೇಗೆ ಸಾಧ್ಯ?

ಭಾರತದ ಹೆಬ್ಬಾಗಿಲು-ಗೇಟ್ ವೇ ಆಫ್ ಇಂಡಿಯಾ, ಇರುವದು ಮುಂಬಯಿಯಲ್ಲಿ ಮಹಾತ್ಮಾ ಗಾಂಧಿಯವರ ಪ್ರತ್ಯಕ್ಷಿಯೋ ಸುಭಾಷ್ಚಂದ್ರರ ಪ್ರತ್ಯಕ್ಷಿಯೋ ಅಲ್ಲಿರಬೇಕಾದುದು ಸಹಜ. ಬಹುಮಂದಿ ಅದನ್ನೇ ಆಶಿಸಿದ್ದರು ಬಯಸಿದ ಮಾತ್ರಕ್ಕೆ ಬಂತೇನು? ಮರಾಠರು ಶಿವಾಜಿಯ ಪಂಥವನ್ನಲ್ಲಿ ಬಿಟ್ಟುಕೊಟ್ಟರು?

ಹೋಗಲಿ ಬಿಡಿ, ಎಷ್ಟೆಂದರೂ ಶಿವಾಜಿಯು ಮರಾಠರ ಕುಲದೈವವಿದ್ದ ಹಾಗೆ! ಅವರ ಕಟ್ಟಾಭಿಮಾನವನ್ನು ವ್ಯಕ್ತಪಡಿಸಲು ಹಾಗೆ ಮಾಡಿದರೆಂದೇ ಇಟ್ಟುಕೊಳ್ಳೋಣ!

ಆದರೆ ಅವರ ವಿಶಾಲ ಮಹಾರಾಷ್ಟ್ರದ ಕಲ್ಪನೆಯ ಬಗ್ಗೆಯೂ ಎಚ್ಚರಗೊಳ್ಳದಿದ್ದರೆ ಹೇಗೆ? ಗೋವೆಯು ಮರಾಠರದ್ದೇ ಎಂಬುದು ಅವರ ಈಗಿನ ವಾದ! ಈಗಂತೂ ಮಹಾರಾಷ್ಟ್ರ ಗೋವೆಯನ್ನು ವಿಲೀನಗೊಳಿಸಬೇಕೆಂದು ಅವರು ಹಟ್ಟು ಹಿಡಿದು ಕುಳಿತಿದ್ದಾರೆ! ಗೋವೆಯೊಂದೇ ಅವರಿಗೆ ಸಾಲದು! ಜೊತೆಯಲ್ಲೇ ಕೊಂಕಣವೂ ಬೇಕಾಗಿದೆ!

ಅಂತೆಯೇ ಅವರು ಈಗ ಗೋವೆಯು ಕೊಂಕಣದ ಭಾಗ, ಕೊಂಕಣವು ಮಹಾರಾಷ್ಟ್ರದ ಭಾಗ, ಎಂಬ ಬೊಬ್ಬಾಟಕ್ಕೆ ಆರಂಭಿಸಿದ್ದಾರೆ ಹೇಗಿದೆ ಅವರ ಮರಾಠಾ ಪ್ರೇಮ?

ಮುಂಬಯಿಯು ಗುಜರಾತಿಗೆ ಸೇರಬೇಕೇ ಮಹಾರಾಷ್ಟ್ರಕ್ಕೆ ಸೇರಬೇಕೇ ಎನ್ನುವ ವಾದವನ್ನೆಬ್ಬಿಸಿ, ಅದನ್ನು ಯಶಸ್ವಿಯಾಗಿ ಸಾಧಿಸಿಕೊಂಡಂತೆಯೇ ಸುಲಭವಾಗಿ ಕೊಂಕಣವನ್ನು ಕಬಳಿಸಿಕೊಳ್ಳಬೇಕೆನ್ನುವ ಧೋರಣೆ ಅವರದ್ದು.

ಭಾರತ ಸರಕಾರ ಗೋವೆಯನ್ನು ಸ್ವಾಧೀನಪಡಿಸಿಕೊಂಡ ಕೂಡಲೇ, ಮರಾಠರು ಈ ವಿಷ ಬೀಜವನ್ನು ಬಿತ್ತಿದ್ದರು. ಆದರೆ ಕೇಂದ್ರ ಸರಕಾರ ಸಧ್ಯ ಗೋವೆಯು ಕರ್ನಾಟಕಕ್ಕೆ ಸೇರಬೇಕೋ ಮಹಾರಾಷ್ಟ್ರಕ್ಕೆ ಸೇರಬೇಕೋ ಎನ್ನುವ ವಿಷಯವನ್ನು ಇತ್ಯರ್ಥಿಸುವಂತೆಯೇ ಇಲ್ಲ. ಗೋವೆಯನ್ನು ಸ್ವತಂತ್ರವಾಗಿಯೇ ಇರಿಸಲಾಗುತ್ತದೆ ಎಂದು ಅವರ ಆಸೆಯನ್ನು ಮೊಳಕೆಯಲ್ಲೇ ಚಿಗುಟಿ ಹಾಕಿತು. ಅಂದಿನಿಂದಲೂ ಗೋವೆಯನ್ನು ಕಬಳಿಸಲು ಹೊಂಚು ಹಾಕುತ್ತಲೇ ಬಂದಿರುವ ಮರಾಠರು ಭಾಷೆಯ ಕೊಲೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಕೊಂಕಣಿ ಸ್ವತಂತ್ರ ಭಾಷೆಯೇ ಅಲ್ಲ. ಆದ್ದರಿಂದ ಗೋವೆಯು ಮಹಾರಾಷ್ಟ್ರಕ್ಕೆ ಸಿಗಬೇಕು! ಗೋವೆಯ ಜೊತೆಯಲ್ಲಿ ಕಾರವಾರ, ಬೆಳಗಾಂವ್ ಕೂಡಾ ...

ಇದು ಅಧಿಕಾರದ ಮಾತು. ಎಂಬ ಅರಿವು ಅವರಿಗೆ ಮಾಡಿದಂತಿಲ್ಲ. ಮರಾಠ ಮಯಂ ಜಗತ್! ಅಧಿಕಾರವತ್ತಾಗಿ ಅವರು ಗೋವೆಯನ್ನು ಕಬಳಿಸಿಕೊಳ್ಳಲಾದೀತೇ? ಇದರಿಂದ ಅವರು ಜನತೆಯ ವಿಶ್ವಾಸವನ್ನು ಮಾತ್ರ ಕಳೆದುಕೊಳ್ಳಬಲ್ಲರು. ಅದಕ್ಕಿಂತ ಹೆಚ್ಚಿನ ಲಾಭ ಏನೇನೂ ಆಗಲಿಕ್ಕಿಲ್ಲ

ಅಂದ ಮಾತ್ರಕ್ಕೆ—ಕೊಂಕಣಿಗರು ಸುಮ್ಮಗೆ ಇರಬೇಕೆಂದರ್ಥವಲ್ಲ. ನಮ್ಮಲ್ಲಿ ಇದನ್ನು ಪ್ರತಿಭಟಿಸುವ ಕಾರ್ಯ ನಡೆಯಬೇಕು. ನಮಗೆ ಮುಖವಿದ್ದರೆ ಇದನ್ನು ಪ್ರತಿಭಟಿಸುವ ಯಾವದೇ ಸಿದ್ಧತೆಯತ್ತ ಕಾರ್ಯೋನ್ಮುಖರಾಗಬೇಕು.

---



ಅಮೇರಿಕೆಯ ೧೬ನೆ ಅಧ್ಯಕ್ಷ ಮಹಾಶಯ ಅಬ್ರಾಹಾಂ ಲಿಂಕನ್‌ರ ಚಿತ್ರವಿದು. ೧೮೬೦ರಲ್ಲಿ ನ್ಯೂಯೋರ್ಕ್ ನಗರದ ಬ್ರೇಡೀಸ್ ಸ್ಟುಡಿಯೋದಲ್ಲಿ ಖ್ಯಾತ ಛಾಯಾ ಚಿತ್ರಗಾರ ಮ್ಯಾಥ್ಯೂ ಬ್ರೆಡಿ ಎಂಬವರು ಇದನ್ನು ರಚಿಸಿದ್ದರು. ಇದನ್ನು ಇತ್ತೀಚೆಗೆ ಬೆಳಕಿಗೆ ತರಲಾಯಿತು ಲಿಂಕನ್ ಅಧ್ಯಕ್ಷರಾಗುವುದಕ್ಕೆ ಸುಮಾರು ಆರು ತಿಂಗಳಿಗೆ ಮೊದಲೇ ಈ ಚಿತ್ರ ನಿರ್ಮಾಣವಾಗಿತ್ತು

---

### ಉಡ್ಪಿ ಡಿ ಮು ಕೋರ್ಟಿನಲ್ಲಿ

**O. P No 2/1963**

ಭಾಗೀರಥಿ ಅಮ್ಮ —ಅರ್ಜಿದಾರಳು.

ನೋಟೀಸು.—

ಉಡ್ಪಿ ತಾಲ್ಲೂ ಉಳಿಯಾರಗೋಳಿ ಗ್ರಾಮದಲ್ಲಿರುತ್ತಿದ್ದ ಅರ್ಜಿದಾರಳು ಭಾಗೀರಥಿ ಅಮ್ಮನ ಗಂಡ ನಾರಾಯಣ ಭಟ್ರು ಮೃತಪಟ್ಟದ್ರಿಂದ—ಸದ್ರಿಯವರು ತನ್ನ ಹೆಂಡ್ತಿ ಭಾಗೀರಥಿ ಅಮ್ಮಗೆ ಸಿಕ್ಕುವಂತೆ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಕಾಪು ಬ್ರಾಂಚಿನಲ್ಲಿ ಡಿಪೋಜಿಟ್ ಆಗಿ ಇಟ್ಟಿರುವ ರೂ 4000/- ಮತ್ತು ಬಡ್ಡಿ ಬಾಬ್ತು ರೂ. 17.69 ಕೂಡಾ ರೂ 4017 69ಕ್ಕೆ ತನಗೆ ಸಕ್ಸೆಶನ್ ಸರ್ಟಿಫಿಕೇಟು—ಕೊಡಬೇಕಾಗಿ ಅರ್ಜಿ ಕೊಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವರು ತಾರೀಕು 25-2-63ಕ್ಕೆ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕು ಇಲ್ಲವಾದ್ರೆ ಸದ್ರಿ ಅರ್ಜಿ ಮನ್ನಿಸಲ್ಪಡುವುದು

(By order of Court)

(Sd ) P. Padmanabha Rao,
Vakil for Petitioner.
Udipi, 2—2—63.

---


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು, ಮಂಗಳೂರು.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd )

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 16 ಸಾಮಾನ್ಯ ರೂ. 4/. ಮಧ್ಯಮ ರೂ. 6/.
ಉತ್ತಮ ರೂ.9/-

P. Devee & Co. (N J.) Calcutta—40






ಅಮೇರಿಕನ್ ಪಿಸ್ತೂಲ್ ಆಟೋಮೆಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು

ಕುಂದಾಗದಂತದ ಲೈಸೆನ್ಸು ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು ಬೆಲೆ. ಬೆಲೆ. 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ 15 ಮತ್ತು 50 ಗುಂಡಿನ ಪಿಸ್ತೂಲ್ ನಂ 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಾರ್ಥ ಬೇರೆ 100 ಗುಂಡಿನ ಬೆಲೆ. ರೂ. 5. ಚರ್ಮದ ಚೀಲದ ಬೆಲೆ ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26

## ಮಾತಿನ ಮಲ್ಲಿಗೆಯೆದುರು

(೩ನೇ ಪುಟದಿಂದ)

ಮನಸ್ಸಾದರೂ ಆಕೆ ಷಂಡನೆಂದು ಪರಿಗ್ರಹಿಸದೆ ಬಿಟ್ಟಾಳೆ? ಊದುವ ಶಂಖಕ್ಕೆನ್ನೇನು ಉಳಿಗ—ಊದಿ ಊದಿ, ಜನರನ್ನು ಬಾಧಿಸುವುದೇ ಅಲ್ವೇ?

"ಅಯ್ಯೋ...ಅಲ್ಲಿಗೆ ಹೋಗ್ರಿ ...ಅವರು ಒಳಗಿದ್ದಾರೆ.......ನನ್ನ ಕೆಲಸ ಕೆಡಿಸಬೇಡ್ರಿ."

ಪುನಃ ರೈಲಿನ ಸೀಟಿಯನ್ನು ನಾಚಿಸುವ ಆಕೆಯ ಒಗ್ಗೊರಲ ಏಕನಾದ ಭೀಕರವಾಗಿ ಮೊಳಗಿತು. ಮನೆಯ ಮೂಲೆ ಮೂಲೆಯಿಂದ 'ಚರ ಚರ' ಎಂದು ಮಣ್ಣು ಬಿದ್ದಂತೆ ನನಗೆ ಭಾಸವಾಯಿತು. ಕೊನೆಗೆ ತಿಳಿಯಿತು—ಅದು ಬೀಸುವ ಗಾಳಿ ಕಿಟಿಕಿಗೆ ಬಿಗಿದ ಅತ್ತರು ತಟ್ಟಿಯು ತುಂಡಿನೊಡನೆ ಆಡುವ 'ರೋಕ್ ಎಂಡ್ ರೋಲ್' ಎಂದು. ಇನ್ನು ಮುಂದೆ ಆಕೆಯ ತಂಟೆಗೆ ಹೋದರೆ ಮನೆಯೇ ಮುರಿದುಬೀಳುವಂತಾಗ ಬಹುದೆಂದು ತಿಳಿದು ಸ್ವಲ್ಪ ತಡೆದು ಪುನಃ ಆಕೆಯನ್ನು ಒತ್ತಾಯಿಸ ತೊಡಗಿದೆ ನನ್ನ ಸತತ ಸೂಚನೆಗಳು ಹೊರಗಿನ ಮುಂಗಾರು ಮಳೆಗಿಂತ ಜೋರಾಗುತ್ತಾ ಬಂದಾಗ ಆಕೆ ಒಮ್ಮೆ ಮೇಲಕ್ಕೆದ್ದು ನನ್ನನ್ನು ಶಪಿಸುತ್ತಾ ಒಳಗೋಡಿದಳು. ನನ್ನ ಪ್ರಯತ್ನ ಕೊನೆಗಾದರೂ ಫಲಕಾರಿಯಾಯಿತಲ್ಲಾ ಎಂದು ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಾ ಕುಳಿತೆ. ಅಷ್ಟರಲ್ಲಿ ಹಳೇ ಮೋಟಾರು ಗಾಡಿಯ ಕಿರುಕಲು ಸದ್ದನ್ನು ಹಂಗಿಸುವಂತೆ ಮನೆಯ ಚಿಕ್ಕೊಡತಿ ರೀತಾಳ ಪ್ರವೇಶವಾಯಿತು. ನನಗೆ ನಿರಾಶೆಯೂಯಿತು. ಅಲ್ಲ; ಆಗುವುದರಲ್ಲಿತ್ತು. ಆದರೆ ಅವಳ ಹಿಂದೆಯೇ ನನ್ನ ಸ್ನೇಹಿತ ಅಮೃತ ಕೈಯಲ್ಲೊಂದು ಪೊರಕೆ ಹಿಡಿದು ಬರುತ್ತಿದ್ದುದು ಕಾಣಿಸಿತು. ಇದೇನು ಗ್ರಹಚಾರ ವಕ್ರಿಸಿತಪ್ಪಾ ಎಂದು ಯೋಚಿಸುತ್ತಾ ನಾನು ಹೊರಡಲು ಅಣಿಯಾಗುತ್ತಿದ್ದಂತೆ ಪೊರಕೆ ಧಾರಿ ಸಮೀಪಿಸಿದ. ಆದರೆ ಅಂತಹ ಲಕ್ಷಣವೇನು ಕಾಣಿಸಲಿಲ್ಲ! ಏನೇ ಇರಲಿ; ಮೊದಲೇ ವಿಚಾರಿಸುವುದು ಒಳ್ಳೆಯದೆಂದು ಅವನನ್ನು ಪ್ರಶ್ನಾರ್ಥಕವಾಗಿ ನೋಡಿ ನಗು ಬೆರೆತ ದನಿಯಲ್ಲಿ ಕೇಳಿದೆ—

"ಅದ್ಯಾಕೆ ಮಾರಾಯ...ಇಷ್ಟೊತ್ತು ಕಾದರೂ ಇನ್ನೂ ಗೃಹಚಾರದ ಸೇವೆಗೆ ಸಿದ್ಧವಾದಂತಿದೆಯಲ್ಲಾ" ಎಂದೆ

"ಹೋಗು ಬಿಡೋ ನಿನ್ನ ಹಾಸ್ಯ,—ಇವತ್ತು ಮನೆಗೆಲಸದವಳು ಬಂದಿಲ್ಲ. ಈ ಗೃಹಚಾರವೆಲ್ಲಾ ನನ್ನ ತಲೆಗೆ ಬಿದ್ದಿದೆ. ಹುಂ ...ಮತ್ತೇನು ...ನನಗಿವತ್ತು ಎಲ್ಲಿಯೂ ಬರಲಿಕ್ಕಾಗುವುದಿಲ್ಲ" ಎಂದು ದಪದಪ ಅಂತ ಒದರಿದ ಅಂ...ಇನ್ನು ನಮ್ಮ ಪ್ರೋಗ್ರಾಂ ಮುಗಿದಂತೆಯೇ ಎಂದುಕೊಂಡು ಮನೆಯ ಕಡೆ ತಿರುಗಿದೆ ದಾರಿಯಲ್ಲಿದ್ದ ಸಿನೇಮ ಪೋಸ್ಟರುಗಳು ನನ್ನನ್ನು ಹಂಗಿಸುವಂತೆ ನಿಂತಿದ್ದುವು—ಜಂಗ್ಲಿ"

o o o

ಮಳೆ ನಿಂತಿತ್ತು. ಆಕಾಶವು ಶುಭ್ರವಾಗಿತ್ತು. ಗಿಡ ಮರಗಳೆಲ್ಲಾ ಹಸುರಾಗಿ ನಿಂತು ಕಳಕಳಿಸಿ ನಗುವಂತೆ ಭಾಸವಾಗುತಿತ್ತು. ಪ್ರಕೃತಿಯಲ್ಲಿನ ಪ್ರತಿಯೊಂದು ವಸ್ತುವಿಗೂ ಉಲ್ಲಾಸ ಒಕ್ಕೊಟ್ಟಂತಾಗಿತ್ತು. ಎಲ್ಲವೂ ಆಹ್ಲಾದಕರ— ಹೊಸದು. ಹಿಂದಿನ ದಿನದ ಪರಾಜಯವನ್ನು ಮರೆತು ಸ್ನೇಹಿತನ ಮನೆಯ ಕಡೆ ಹೆಜ್ಜೆ ಹಾಕತೊಡಗಿದೆ.

ನಾನು ಬರುತ್ತಿರುವುದನ್ನು ದೂರದಿಂದ ಕಂಡವಳೇ ರೀತಾ ಗೇಟಿನ ಕಡೆ ಓಡಿ ಬರುತ್ತಿದ್ದಳು. ಪಕ್ಕದಲ್ಲಿದ್ದ ಹಲಸಿನ, ಮಾವಿನ ಮರಗಳ ಸಂದಿನಿಂದ ತೂರಿ ಬಂದ ಬಿಸಿಲ್ಕೋಲುಗಳು ಆಕೆಯ ಮುಖದ ಮೇಲೆ ತಾಕಲಾಟವಾಡುತಿದ್ದುವು ಹರ್ಷದಿಂದ ಉಬ್ಬಿದ ಆಕೆಯ ಹಾಲುಗಲ್ಲದ ಮೇಲೆ ಸೂರ್ಯನ ಕಿರಣ ಪುಂಜಗಳು ಮುತ್ತಿಡುತ್ತಿದ್ದುವು. ಆಕೆ ನನ್ನನ್ನು ಸ್ವಾಗತಿಸಲೆಂದು ಬಂದಿರಲಿಲ್ಲ. ಶಾಲೆಗೆಂದು ಹೊರಟಿದ್ದಳು. ಆಕೆಯ ಕೈಯಲ್ಲಿ ಹಿಡಿದ ಪುಟ್ಟ ಚೀಲದಿಂದ ಬಾಲ ವಿದ್ಯಾಭ್ಯಾಸದ ದ ಕುರುಹಾಗಿ ಬದಿ ಮುರಿದ ಸ್ಲೇಟು ಇಣುಕುತ್ತಿತ್ತು. ನನ್ನನ್ನು ಕಂಡು ಸ್ನೇಹದ ನಗು ಬೀರಿ ತನ್ನ ಕೈಯಲ್ಲಿ ಹಿಡಿದ ಚಿಕ್ಕ 'ಲೇಡಿಸ್' ಕೊಡೆಯನ್ನು ಬೀಸುತ್ತಾ ಬಿರುಸಿನಿಂದ ಹಾದು ಹೋದಳು.

ಆ ದಿನವೂ ನನ್ನ ಗ್ರಹಚಾರ ಕುಲಾಯಿಸಿರಲಿಲ್ಲ. ಅಮೃತ ಮಂಗಳೂರಿನ ತನ್ನ ಮಾವನ ಮನೆಗೆ ಹೋಗಿದ್ದ. ಆತನ ತಾಯಿ ನನ್ನ ಕ್ಷೇಮವನ್ನು ವಿಚಾರಿಸ ತೊಡಗಿದರು. ಮುಂದಿನ ಮಾತ ಗಳೆಲ್ಲಾ ಅಮೃತನ ಕುರಿತಾಗಿಯೇ ನಡೆಯಿತು. ಆತನ ನಡತೆ, ಪಾಠಗಳಲ್ಲಿನ ಶ್ರದ್ಧೆ, ಆಟ ಇತ್ಯಾದಿ., ಅಂತೂ ನನಗೆ 'ಮಾವನ ಮನೆಯಲ್ಲಿ ಕುಳಿತ ಅನುಭವ ಬರುವಂತಾಗಿತ್ತು.

ಸಂಜೆ ನಾಲ್ಕಕ್ಕೆ ಅವರ ಮನೆ ಬಿಟ್ಟು ಹೊರಟೆ. ನಾನು ಎರಡು ಬಾರಿ ನಿರಾಶನಾಗಿದ್ದೆ ಮಾಜಿ ಮಂತ್ರಿಗಳಷ್ಟು ಆತುರವೂ ನನ್ನಲ್ಲಿ ಉಳಿದಿರಲಿಲ್ಲ. ಹಾಗೆಯೇ ಅಂಬಲಪಾಡಿಯ ಕಡೆ ಒಂದು ಸುತ್ತು ಹೊಡೆದು ಬರೋಣವೆಂದು ಅಚ್ಚರಕಾಡಿನಲ್ಲಿದ್ದ ಅವರ ಮನೆಯಿಂದ ಅತ್ತ ಕಡೆ ಹೊರಟೆ. ನಾನು ಹೊರಟದಾರಿ ಕೋನ್ವೆಂಟಿನ ಮಾರ್ಗವಾಗಿ ಹೋಗುತಿತ್ತು.

ಕೋನ್ವೆಂಟಿನ ಗಾಳಿಮರಗಳ ಗುಂಪು ಇಗರ್ಜಿಯ ಗಂಟೆ, ಇತ್ಯಾದಿಗಳು ನನಗೆ ಹತ್ತಿರವಾಗುತಿದ್ದುವು. ಅಷ್ಟರಲ್ಲೇ ದಟ್ಟವಾಗಿ ಮೋಡ ಕವಿದು ಮಳೆ ಹನಿಯಲು ಪ್ರಾರಂಭಿಸಿತು. ಹನಿಧಾರಾಕಾರವಾಗಿ ಬೀಳಲು ಪ್ರಾರಂಭಿಸಿದಾಗ ನಾನು ನಡೆಯುವುದು ಅಸಾಧ್ಯವಾಗಿತ್ತು. ಹತ್ತಿರದಲ್ಲಿ ಆಶ್ರಯಿಸಲು ಯಾವ ಮುಚ್ಚಿದ ಅಂಗಡಿಯ ಜಗುಲಿಯಾಗಲಿ, ಹೋಟೆಲಾಗಲಿ ಇರಲಿಲ್ಲ. ಕೆಲವು ಮಾರು ದೂರದಲ್ಲೊಂದು ಹಳೇ ಮನೆಯಿತ್ತು ಇನ್ನು ಅಲ್ಲಿಗೆ ಹೋಗೋಣವೆಂದು ಅಕಡೆ ಓಡಿದೆ. ಥಟ್ಟನೆ ಸಮೀಪದಲ್ಲಿ ಯಾರೋ ಕಿರುಚುವ ಧ್ವನಿ ಕೇಳಿಸಿತು. ಅದ ನನಗೆ ತೀರಾ ಪರಿಚಿತವಾಗಿದ್ದಂತೆ ತೋರಿತು ನಾನು ಹಿಂದೆ ಮುಂದೆ ನೋಡಿದೆ. ಪಕ್ಕದ ತೋಡಿನಲ್ಲಿ ರಭಸವಾಗಿ ನೀರು ಹರಿಯುತಿತ್ತು ನನ್ನ ಸ್ನೇಹಿತನ ತಂಗಿ, ರೀತಾ ನೀರಿನಲ್ಲಿ ಬಿದ್ದು ತೊಳಲಾಡುತ್ತಿದ್ದಳು. ಆಕೆಯ ಪುಟ್ಟ ಲೇಡಿಸ್ ಕೊಡೆ ನೀರಿನಲ್ಲಿ ತೇಲಿ ಹೋಗುತ್ತಿತ್ತು; ಚೀಲ ಕೈಯಲ್ಲೇ ಇತ್ತು

ನಾನು ಆ ಕಡೆ ಧಾವಿಸಿದೆ ಆಕೆಯನ್ನು ನೀರಿನಿಂದ ಹಿಡಿದೆತ್ತಿದೆ. ಅಷ್ಟರಲ್ಲೇ ನನ್ನ ಶರ್ಟಿನ ಜೇಬಿನಲ್ಲಿದ್ದ ಯಾವುದೋ ಒಂದು ಕಾಗದ ನೀರಿನಲ್ಲಿ ಬಿದ್ದು ತೇಲಿ ಹೋಯಿತು. ರೀತಾ ಅಳತೊಡಗಿದಳು. ಆಕೆಯನ್ನು ಸಂತೈಸಿ ಅವಳ ಮನೆಗೆ ಕರೆದೊಯ್ದೆ.

ಅಮೃತ ಮನೆಗೆ ಹಿಂತಿರುಗಿದ್ದ. ರೀತಾ ಮೌನವಾಗಿದ್ದಳು ನಡೆದ ಸಂಗತಿಯನ್ನು ನನ್ನ ಸ್ನೇಹಿತನಿಗೆ ಕೂಲಂಕಷವಾಗಿ ನಿರೂಪಿಸಿದೆ. ಥಟ್ಟನೆ ನನ್ನ ಜೇಬಿನಲ್ಲಿದ್ದ 'ಹಾಲ್ ಟಿಕೇಟ್'ನ ನೆನಪು ಬಂತು. ಜೇಬಿನಲ್ಲೆಲ್ಲಾ ತಡಕಾಡಿದೆ; ಸಿಗಲಿಲ್ಲ— ಅದು ಸಿಕ್ಕುವಂತೆಯೂ ಇರಲಿಲ್ಲ. ಪ್ರಾಯಃ ಇದಾಗಲೇ ಮಲ್ಪೆ ಯಾತ್ರೆ ಮಾಡಿರಬೇಕು.

ಮನೆಗೆ ಹೊರಡುವ ಮುನ್ನ ರೀತಾಳನ್ನು ಕುರಿತು "ರೀತಾ, ನೀನಾಗ ನನ್ನ ಮಾತನಾಡಿಸಿಯೇ ಇಲ್ಲ,—ಅದಕ್ಕೆ ನಿನಗೆ ಹಾಗಾದುದು' ಎಂದೆ ನಗುತ್ತಾ "ನೀವು ಮತ್ಯಾಕೆ ನನ್ನ ಕೊಡೆ ತರಲಿಲ್ಲ. ಅದಕ್ಕೆ ನಿಮ್ಮ ಚೀಟಿ ಹೋದುದು" ಎಂದಾಕೆ ನಕ್ಕಳು ನಾನು ಅವಳನ್ನೇ ದಿಟ್ಟಿಸಿದ. ಗಲ್ಲ ಉಬ್ಬಿಸಿ ನಗುವಾಗ ಆಕೆಯ ದೇಹವಿಡೀ ನಗುತ್ತಿದ್ದಂತೆ ಕಾಣಿಸುತಿತ್ತು. ಆ ನಗು ಪ್ರಪಂಚದ ಮುಗ್ಧ ಸಾಮ್ರಾಜ್ಯವನ್ನು ಸೂರೆಗೊಂಡಂತಿತ್ತು.

—ಶ್ರೀ ಕೆ. ಭದ್ರಿನಾಥ್


ಹೊಸ ಆವೃತ್ತಿ ತಯಾರಾಗುತ್ತಿದೆ

ಕೈಲಾಸವಾಸಿ ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲ ಭಾಷಾಂತರ

೫೦೦ ಅಥವಾ ಹೆಚ್ಚು ಪ್ರತಿಗಳಿಗೆ ಮುಂಗಡದೊಂದಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿವರಕ್ಕೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

REGD. No. B. G. 176
LICENCE No. 31
Licensed to Post without Prepayment

ನಂಬಿದರೆ ನಂಬಿರಿ

# ಹೊಟ್ಟೆಯಲ್ಲ, ಅದು ಉಗ್ರಾಣ!

ವಿಶ್ವದಲ್ಲಿ ಇಂದು ಹಲವಾರು ಜನರ ಜಠರಗಳಲ್ಲಿ, ಅಚ್ಚರಿಯನ್ನುಂಟು ಮಾಡುವಂತಹ, ವಸ್ತುಗಳ ಸಮೂಹ ದೊರೆತಿದೆ ಏನೇನು ದೊರೆತಿದೆಯೆಂದು ತಿಳಿಸುವುದೇ ನನ್ನ ಉದ್ದೇಶ. ಆಂಗ್ಲ ಲೇಖನವೊಂದರ ಆಧಾರದಿಂದ ಇದನ್ನು ನಿಮಗೆ ತಿಳಿಸಿದ್ದೇನೆ.

**ವಿಚಿತ್ರ ವಸ್ತು—ಸಂಗ್ರಹಾಲಯ!**

ಅಮೇರಿಕದಲ್ಲಿ ಸರ್ಜನರೊಬ್ಬರು ತನ್ನ ಓರ್ವ ರೋಗಿಯ ಜಠರದಿಂದ ಅತ್ಯಾಶ್ಚರ್ಯಕರ ವಸ್ತುಗಳನ್ನು ಹೊರ ತೆಗೆದರು! ಆ ವಸ್ತು ಕೋಶ(!)ದಲ್ಲಿ ೮೮ ನಾಣ್ಯಗಳು, ೨೬ ಬೀಗದ ಕೈಗಳು, ೩೯ ಮೊಳೆ-ಆಣಿಗಳು, ೩ ಮಾಲೆಯ ಮಣಿಗಳ ಜೊತೆಗಳು, ೧ ಉಂಗುರ, ೧ ನೆಕಲೇಸು, ೩ ಚೈನುಗಳು. ೧ ಟಿನ್-ಓಪನರ್, ೧೬ ಧಾರ್ಮಿಕ ಪದಕಗಳು, ೩ ಪೌಂಡು ಭಾರದ ಲೋಹದ ಇತರ ತುಂಡುಗಳೂ ಇದ್ದುವಂತೆ! ಅಂತಹ ವಸ್ತು ಸಂಗ್ರಹಾಲಯ ಆತನ ಜಠರದಲ್ಲಿದ್ದರೂ ಆತನು ಮೃತ್ಯುವಶನಾಗಿರಲಿಲ್ಲ!

**ಸತ್ತು—ಹೋದ!**

ಅಮೇರಿಕದಲ್ಲಿ, ಓರ್ವ ಕೈದಿ ೧೯೫೪ರಲ್ಲಿ ಆತ್ಮಹತ್ಯೆ ಮಾಡಲು ಯತ್ನಿಸಿ ವಿಫಲನಾದನು ಆತನನ್ನು ಪರೀಕ್ಷಿಸಿದ ಡಾಕ್ಟರರು ಕೈದಿಯ ಶರೀರದಿಂದ ೨೫ ಔನ್ಸುಗಳಷ್ಟು ಭಾರವಿರುವ ಬೋಲ್ಟ್-ನಟ್ಟುಗಳು ಮತ್ತು ಸ್ಕ್ರೂಗಳನ್ನು ಕಂಡುಹಿಡಿದರು. ಆದರೆ, ಜರೂರಿನ ಓಪರೇಶನ್ನಿಂದಾಗಿ ಆತನು ಅನಂತರ 24 ಗಂಟೆಗಳೊಳಗಾಗಿ ತೀರಿಹೋದ! ಮೊದಲೇ ಆತ್ಮಹತ್ಯೆಗೆ ಆತನು ಪ್ರಯತ್ನಿಸಿದ್ದನು ಆದರೆ, ವಿಫಲನಾಗಿದ್ದನು !!

**ಹಸಿವೇ—ಆಗಲಿಲ್ಲ!**

೧೯೬೪ರಲ್ಲಿ ಬ್ರಿಟನ್ನಿನ ಅತ್ಯಂತ ವಿಲಕ್ಷಣಕರವಾದ ಕೇಸುಗಳಲ್ಲೊಂದು ಬೆಳಕಿಗೆ ಬಂತು. ಪ್ರಸಿದ್ಧ ಡಾಕ್ಟರ ಮಹಾಶಯರೊಬ್ಬರು ತಮ್ಮ ರೋಗಿಯೊಬ್ಬನಿಗೆ ಹಸಿವೆಯೇ ಆಗುವುದಿಲ್ಲ, ಮತ್ತಾತನು ಏನನ್ನೂ ಸೇವಿಸುವುದಿಲ್ಲವೆಂದರು!

ಅವನ ಕ್ಷ-ಕಿರಣವನ್ನು ತೆಗೆದು ಕೂಡಲೇ ಓಪರೇಷನ್ ಮಾಡಲಾಯಿತು. ಅವನ ಜಠರದಲ್ಲಿ—೩೬೬ ಅರ್ಧ ಪೆನ್ನಿಗಳು; ೩೬ ಆರು ಪೆನ್ನಿ ನಾಣ್ಯಗಳು ೧೭ ಪೆನ್ನಿ ತುಂಡುಗಳು, ೧೧ ಪೆನ್ನಿಗಳು, ೪ ಶಿಲ್ಲಿಂಗುಗಳು ಅಲ್ಲದೆ ೨೭ ಸೂಜಿಯ ತುಂಡುಗಳು—ಇದ್ದುವಂತೆ. ಪೆನ್ನಿ ಬ್ಯಾಂಕ ಒಂದನ್ನು ತನ್ನ ಜಠರದಲ್ಲಿರಿಸಿಕೊಂಡಿದ್ದ ಆ ಮಹಾಶಯನಿಗೆ ಹಸಿವಾದೀತೇ?

**ಲೋಹ—ವಾಹಕ!**

ಲಂಡನ್‌ನಲ್ಲಿ ಓರ್ವ "ಇದೇ ರೀತಿಯ ಸಂಗ್ರಾಹಕನಿದ್ದನು. ಆತನು "ಲೋಹ—ವಾಹಕ"ನಾಗಿದ್ದನು. ಅವನ ದೇಹದಲ್ಲಿ ೨೧೪ ಸ್ಕ್ರೂಗಳು ಮತ್ತು ಮೊಳೆಗಳು, (ಕೆಲವು ಅಂಗುಲಗಳಷ್ಟು ಉದ್ದವಿದ್ದುವು) ೩೬ ಸರಿಗೆ ತುಂಡುಗಳು (ಪ್ರತಿಯೊಂದೂ ೧½ ಇಂಚುಗಳಿಗಿಂತ ಅಧಿಕ ಉದ್ದವಿದ್ದುವು) ೫ ಟೀ ಚಮಚಗಳು, ೩ ಪ್ರತಿಯೊಂದು ಎರಡಾಗಿ ತುಂಡು ಮಾಡಲ್ಪಟ್ಟಂತಹ ಫೋರ್ಕ್ (Fork)ಗಳು, ೩ ಕಿಸೆ ಚೂರಿಗಳು, ೩೭ ಗ್ರಾಂಫೋನು ಸೂಜಿಗಳು, ೧೨ ಲೋಹದ ಕೊಂಡಿಗಳು, ಮಣಿಗಳ ಒಂದು ಸಂಗ್ರಹ, ೭ ನಾಣ್ಯಗಳು, ೧ ರಿವಾಲ್ವರಿನ ತೋಟೆಗಳಿದ್ದುವಂತೆ!

"ಇಂತಹ' ಸಂಗ್ರಾಹಕರ ಮುಖಂಡನಾಗಲು ಅವನೇ ಎಲ್ಲಾ ವಿಧಗಳಿಂದಲೂ ಯೋಗ್ಯನಲ್ಲವೇ?

**ಮೊಳೆ ಸಂಗ್ರಾಹಕ:**

೧೯೫೮ರಲ್ಲಿ ಓರ್ವ ಆಫ್ರಿಕನ್ ಸಮಗಾರನು ಹೊಟ್ಟೆನೋವಿನಿಂದ ನರಳುತ್ತಿದ್ದ ಜಠರದ ಎಕ್ಸ್‌ರೇಯನ್ನು ತೆಗೆಸಿದನು ಅವನ ಜಠರದಲ್ಲಿ ೧,೦೦೦ಕ್ಕಿಂತಲೂ ಅಧಿಕ ಮೊಳೆಗಳಿದ್ದುವು ಅದಕ್ಕೆ ಕಾರಣವೂ ದೊರಕಿತು!! ಆ ಸಮಗಾರನೇ ತಿಳಿಸುತ್ತಾನೆ ಏನೆಂದರೆ—ಆತನಿಗೆ ತಾನು ಕೆಲಸ ಮಾಡುತ್ತಿದ್ದಾಗ ಮೊಳೆಗಳನ್ನು ಬಾಯಲ್ಲಿರಿಸಿಕೊಳ್ಳುವ ವಿಚಿತ್ರ ಹವ್ಯಾಸವಿತ್ತಂತೆ.

**ಪಂಥಕ್ಕಾಗಿ**

೧೯೫೭ರಲ್ಲಿ ಯುಗೋಸ್ಲಾವ್‌ನಲ್ಲಿ ಇನ್ನೂ ವಿಚಿತ್ರ ಸಂಗತಿ ನಡೆಯಿತು. ಮಿತ್ರರೊಡನೆ ಪಂಥಕ್ಕಾಗಿ ಓರ್ವ ಮಹನೀಯನು ಕುಳಿತಲ್ಲಿಂದಲೇ ಗಾಜಿನ ಚೂರುಗಳನ್ನೂ, ಚಮಚಗಳನ್ನೂ, ಫೋರ್ಕುಗಳನ್ನೂ ಸೇವಿಸಿದನಂತೆ!

**ಪೆನ್-ಫ್ರೆಂಡ್ ಅಲ್ಲ; ಪಿನ್-ಫ್ರೆಂಡ್**

೧೯೬೮ರ ಸ್ವೀಡನ್ನಿನಲ್ಲಿ ಒಬ್ಬಾತನ ಜಠರದಿಂದ ೫½ ರಾತ್ತಲುಗಳಿಗಿಂತಲೂ ಅಧಿಕ ಭಾರದ ವಸ್ತುಗಳನ್ನು ಹೊರ ತರಲಾಯಿತು. ಅದರಲ್ಲಿ ೧೫೦೦ ಪಿನ್ನುಗಳು ಮತ್ತು ಸೂಜಿಗಳು, ೧೦೦ ಮೊಳೆಗಳು; ೩೩೦ ಅಂಗಿಗುಂಡಿಗಳು, ೧೬೭ ನಾಣ್ಯಗಳು, ೧೨ ಉಂಗುರಗಳು, ೧೧ ಬೀಗದ ಕೈಗಳು ಮತ್ತು ಸಣ್ಣ ಸಣ್ಣ ಕಲ್ಲುಗಳೂ ಒಳಗೊಂಡಿದ್ದುವಂತೆ! ಈ ಮಹನೀಯ ಪೆನ್-ಫ್ರೆಂಡ್ ಅಲ್ಲ, ಬದಲಾಗಿ, ಪಿನ್-ಫ್ರೆಂಡೂ......

—ಶ್ರೀ ಸುಬ್ರಹ್ಮಣ್ಯ ಭಟ್ಟ.

ಮಹಿಳೆಯರಿಗಾಗಿ ಉಳಿತಾಯ ಯೋಜನೆ.......೨

ನಾಳಿನ
ಸುಂದರ ರೂಪಕ್ಕೆ
ಮುಗ್ಧ ನಿರೀಕ್ಷೆ.......

ಆಹಾರ, ಬಟ್ಟೆಬರೆ, ವಸತಿ, ಮತ್ತು ಸುಖಕರವಾದ ಪ್ರಶಾಂತ ಜೀವನವನ್ನು ನಾವು ಅಪೇಕ್ಷಿಸುವಂತೆ, ಭವಿಷ್ಯತ್ತಿನ ಬಾಳ್ವೆಯು ಸುಖಕರವಾಗಬೇಕೆಂದೂ ಆಶಿಸುತ್ತೇವೆ.

ದಿನನಿತ್ಯದ ಜೀವನಕ್ಕೆ ನಿತ್ಯೋಪಯೋಗಿ ವಸ್ತುಗಳ ಅಗತ್ಯತೆ ಇರುವಂತೆಯೇ ನಮ್ಮ ಸುಂದರ ಸುಗಮ ಭವಿಷ್ಯತ್ತಿಗೆ ಉಳಿತಾಯವೂ ಅಗತ್ಯವಿದೆ.

**"ಸಿಂಡಿಕೇಟ್ ಬೇಂಕಿನ ಸೇವಿಂಗ್ಸ್ ಪಾಸ್ ಪುಸ್ತಕ"** ನಿಮ್ಮ ಭವಿಷ್ಯತ್ತಿಗೊಂದು, ಸುಂದರ ರೂಪು ಕೊಡುತ್ತದೆ.

ಸಿಂಡಿಕೇಟ್ ಬೇಂಕ್

ದಿ. ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ .... 1925. ಶಾಖೆಗಳು .. 176.

—— ನಗುಮುಖದ ಸೇವೆ .......... ಆರ್ಥಿಕ ಭದ್ರತೆ ——

## ಕಲಾಪ್ರಧಾನವಾದ ಅಮೆರಿಕನ್ ನಾಟಕಗಳು

**ಅಮೆರಿಕದ ಆಧುನಿಕ ನಾಟಕ ಕಲೆಯಲ್ಲಿ ಪ್ರಯೋಗಕ್ಕೆ ಆದ್ಯತೆಯಿದೆ; ವಸ್ತು, ಅಭಿನಯ ತಂತ್ರ, ರಂಗ ಸಜ್ಜಿಕೆ, ನಿರ್ದೇಶನ, ಬೆಳಕಿನ ವ್ಯವಸ್ಥೆ ಇವೆಲ್ಲದರಲ್ಲೂ ನಿರಂತರವಾಗಿ ಪ್ರಯೋಗಗಳು ನಡೆಯುತ್ತಲೆ ಇರುತ್ತವೆ; ಈ ಪ್ರಯೋಗ ಅಮೆರಿಕದ ಆಧುನಿಕ ನಾಟಕ ಕಲೆಯ ಮುಖ್ಯ ಲಕ್ಷಣಗಳಲ್ಲಿ ಒಂದು-**

ಇಬ್ಸೆನ್ನನಿಂದ ಪ್ರೇರಿತರಾದ ಪಶ್ಚಿಮದ ನಾಟಕಕಾರರು, ನಿಸರ್ಗವಾದ, ಅಭಿವ್ಯಕ್ತಿವಾದ, ಸಾಂಕೇತಿಕವಾದ ಹಾಗೂ ಅದ್ಭುತವಾದ ಕಲ್ಪನೆಗಳ ಮೂಲಕ ವಸ್ತುಸ್ಥಿತಿಯ ನಿರೂಪಣೆಯನ್ನು ಉದ್ದೀಪನಗೊಳಿಸುವ ಸಲುವಾಗಿ ಹೊಸಬಗೆಯ ನಾಟಕರೂಪಗಳನ್ನು ಹುಡುಕತೊಡಗಿದರು. ಈ ತಂತ್ರಗಳಲ್ಲಿ ಕೆಲವು ಸಾಹಿತ್ಯ ಕ್ಷೇತ್ರಕ್ಕೆ ಸೇರಿದವು. ಮ್ಯಾಕ್ಸ್‌ವೆಲ್ ಆಂಡರ್ಸನ ಅವರ ಕಾವ್ಯದ ಬಳಕೆ ಇದಕ್ಕೊಂದು ನಿದರ್ಶನ. ರಂಗ ಸಜ್ಜಿಕೆಯನ್ನೂ ಈ ಉದ್ದೇಶಕ್ಕೆ ಬಳಸಿಕೊಂಡವರಿದ್ದಾರೆ. ದೃಶ್ಯಗಳೇ ಇಲ್ಲದ ಥಾರನಟನ ವೈಲ್ಡರ್ ಅವರ "ಅವರ್ ಟೌನ" ಇದಕ್ಕೆ ಉದಾಹರಣೆ

ನಾಟಕದಲ್ಲಿ ನಡೆಸಲ್ಪಡುತ್ತಿರುವ ಈ ಪ್ರಯೋಗಗಳ ಫಲವಾಗಿ ನಾನಾ ಕಲಾಸ್ವರೂಪಗಳು ನಾಟಕದಲ್ಲಿ ಸಮಾವೇಶಗೊಳ್ಳುತ್ತಿವೆ. ದೃಶ್ಯಕ್ಕೆ ಅವಶ್ಯಕವಾದ ಸನ್ನಿವೇಶವನ್ನು ಒದಗಿಸುವ ಸಲುವಾಗಿ ಆಧುನಿಕ ಕಲೆಯ ಶೈಲಿಗಳನ್ನು ಅಳವಡಿಸಲಾಗುತ್ತಿದೆ. ಆಧುನಿಕ ನೃತ್ಯ ಪ್ರಚಲಿತ ನಾಟಕದ ಅಂಗವಾಗುತ್ತಿದೆ. ಮಾರ್ಟಿನ್ ಗೋಲ್ಡ್ ಅವರ "ಫಾಲ್ ರಿವರ್ ಲೆಜೆಂಡ್" ಹಾಗೂ ಆಲ್ವಿನ್ ಐಲಿ ಅವರ "ಫೀಸ್ಟ್ ಆಫ್ ಆಷಸ್" ಬ್ಯಾಲೆಗಳು ಈ ಮಾತಿಗೆ ನಿದರ್ಶನ. "ಫೀಸ್ಟ್ ಆಫ್ ಆಷಸ್" ಬ್ಯಾಲೆಯನ್ನು ರಾಬರ್ಟ್ ಜಾಫ್ರಿ ಅವರ ನೇತೃತ್ವದಲ್ಲಿ ಅಮೆರಿಕದ ಬ್ಯಾಲೆ ಕಂಪೆನಿಯವರು ಸದ್ಯದಲ್ಲೇ ಮದರಾಸಿನಲ್ಲಿ ಅಭಿನಯಿಸಲಿದ್ದಾರೆ

ಯೂಜೀನ ಒನೀಲ್ ಮ್ಯಾಕ್ಸ್‌ವೆಲ್ ಆಂಡರ್ಸನ್ ಥಾರನಟನ ವೈಲ್ಡರ್ ಟೆನೆಸ್ಸಿ ವಿಲಿಯಂಸ್ ಹಾಗೂ ಆರ್ಥರ್ ಮಿಲ್ಲರ್ ಈ ಅಮೆರಿಕದ ಪ್ರಮುಖ ನಾಟಕಕಾರರು ಮಹಾ ಸಾಧಕರು ಜನಜೀವನದ ಸಮಸ್ಯೆಗಳನ್ನು ರಂಗಭೂಮಿಯ ಮೇಲೆ ಚಿತ್ರಿಸುವ ಮೂಲಕ ಸಮಾಜದಲ್ಲಿ ಬದಲಾವಣೆಗಳನ್ನು ಉಂಟುಮಾಡುವ ಶಕ್ತಿಯನ್ನು ನಾಟಕಗಳು ಗಳಿಸಿಕೊಂಡಿವೆ.

ಇಂದಿನ ನಾಟಕಕಾರರ ದೃಷ್ಟಿಯಲ್ಲಿ ನಾಟಕಗಳು ಕೇವಲ ಮನರಂಜನೆಯ ಮಾಧ್ಯಮಗಳಲ್ಲ! ಸಮಾಜದ ಒಂದು ಶಕ್ತಿಯನ್ನಾಗಿ ರಂಗಭೂಮಿಯನ್ನು ರಚಿಸಿ ಬೆಳೆಸಬೇಕೆಂಬುದು ಅವರ ಬಯಕೆ, ರಂಗಭೂಮಿ ಸಮಾಜವನ್ನು ಚಿತ್ರಿಸುವ, ವಿಶ್ಲೇಷಿಸುವ, ಟೀಕಿಸುವ ಹಾಗೂ ಸಮಾಜವನ್ನು ಉತ್ತಮಗೊಳಿಸುವ ವಿಧಾನಗಳನ್ನು ಕಂಡು ಹಿಡಿವ ಶಕ್ತಿಯಾಗಬೇಕೆಂಬುದು ಅವರ ಅಪೇಕ್ಷೆ. ಹಾಗೆ ಅದೇ ಕಾಲದಲ್ಲಿ ಕಲಾ ಸಿದ್ಧಿಯನ್ನು ಪಡೆಯಬೇಕೆಂಬುದೂ ಅವರ ಗುರಿ.

(ಜೀನ್ ಫ್ರಿಂಡ್ಲರ ಭಾಷಣದಿಂದ)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty. at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 23 | ಉಡುಪಿ, 14—2—1963 ಗುರುವಾರ | ಸಂಪುಟ ೪೨ ಸಂಚಿಕೆ ೨೩

ಸುಪ್ತದಿಂದ ಚೇತನದೆಡೆಗೆ

## ಕರ್ನಾಟಕದ ಬಂದರು ಯೋಜನೆ

'ಕಣ್ಣಿದ್ದೂ ಕುರುಡರಂತೆ' ನಮ್ಮ ಸರಕಾರವು ರಾಜ್ಯದಲ್ಲಿರುವ ಸ್ವಾಭಾವಿಕ ಬಂದರುಗಳನ್ನು ಅಭಿವೃದ್ಧಿಪಡಿಸಿ ತನ್ಮೂಲಕ ಬಂದರಿನ ಕೊರತೆಯನ್ನು ನೀಗಿಸುವಂತೆ ಸಕ್ರಿಯವಾಗಿ ಕೆಲಸಮಾಡದಿರುವುದು ನಿಜಕ್ಕೂ ಬಹು ಬೇಸರದ ವಿಷಯ. ಎರಡು ನೂರು ಮೈಲು ಉದ್ದದ ಕಡಲ ತೀರವಿದ್ದರೂ ಕರ್ನಾಟಕಕ್ಕೆ ಇದು ವರೆಗೆ ಒಂದಾದರೂ ಉತ್ತಮ ಬಂದರವಿಲ್ಲದುದು ದುರ್ದೈವ. ಹಿಂದು ಹಂಚಿಹೋದ ಕನ್ನಡಮ್ಮನ ಭಾಗಗಳು ಒಂದಾಗಿ ಕರ್ನಾಟಕ ರಾಜ್ಯ ಸ್ಥಾಪನೆಗೊಂಡರೂ ಕನ್ನಡಿಗರು ಇಂದು ಕೆಲವು ಪ್ರಧಾನ ವಿಷಯಗಳಿಗಾಗಿ ಬಹು ವೇದನೆಯಿಂದ ನರಳುತ್ತಿದ್ದಾರೆ. ಸ್ವಭಾವಸಿದ್ಧವಾದ ಬಂದರವನ್ನು ತುಸು ವೆಚ್ಚಮಾಡಿ ಬಂದರ ನಿರ್ಮಿಸದುದು ಅವುಗಳಲ್ಲೊಂದೆಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕಾಗಿಯೇ ಕನ್ನಡಿಗರು ಕಳೆದ ಕೆಲವು ವರ್ಷಗಳಿಂದ ಚಳವಳಿ ಮಾಡುತ್ತ ಬಂದಿದ್ದಾರೆ. ಕರ್ನಾಟಕದ ಕಡಲ ತೀರದಲ್ಲಿನ ಹಲವಾರು ಬಂದರುಗಳ ಅಭಿವೃದ್ಧಿಯಿಂದ ರಾಜ್ಯದ ಸಾಂಪತ್ತಿಕ ಮಟ್ಟವನ್ನು ಮೇಲಕ್ಕೆತ್ತಲೇನೇನೂ ಸಂಶಯವಿಲ್ಲ.

### ಕೇಂದ್ರದ ಆಯೋಗಗಳು

ಕನ್ನಡಿಗರ ಚಳವಳಿಯಿಂದಾಗಿ ಸರಕಾರ ಸುಮ್ಮಗಿರುವಂತಿಲ್ಲ. ಕೇಂದ್ರ ಸರಕಾರವೇ ಕೆಲವು ನಿಯೋಗಗಳನ್ನು ನೇಮಿಸಿ ಈ ಕೊರತೆಯನ್ನು ನೀಗಿಸಲು ಮನಸ್ಸು ಮಾಡಿತು. ಕೇಂದ್ರ ಸರಕಾರ ಕಣ್ಣು ತೆರೆದು ನೋಡಿದರೆ ಕರ್ನಾಟಕದ ಕರಾವಳಿಯಲ್ಲಿ ನೌಕಾಪಡೆ ತಂಗಿಸಲು, ಎಲ್ಲ ಅನುಕೂಲತೆಗಳು ಇರುವುದು ಸ್ಪಷ್ಟವಾಗಿ ಕಂಡುಬರದಿರಲಾರದು. ಕೇಂದ್ರ ಸರಕಾರದಿಂದ ನಿಯೋಜಿಸಲ್ಪಟ್ಟ ಒಂದು ಆಯೋಗದ ಮುಖ್ಯಸ್ಥರಾದ ಶ್ರೀ ಕೆ. ಬಿ. ವೈದ್ಯ ಎಂಬವರು ಮಂಗಳೂರು, ಕಾರವಾರ ಮತ್ತು ಮಲ್ಪೆ ಬಂದರುಗಳು ಈ ಕಾರ್ಯಕ್ಕೆ ಬಹಳ ಉಪಯುಕ್ತವೆಂದು ಸ್ಪಷ್ಟವಾಗಿ ಹೇಳಿ ಹಲವು ವರ್ಷಗಳ ಸಂದವು. ಅವರು—ಕಾರವಾರವಂತೂ ನೌಕಾ ನಿರ್ಮಾಣಕ್ಕೂ ಯೋಗ್ಯವಾಗಿದೆ. ನೌಕಾ ನಿಲ್ದಾಣಕ್ಕಂತೂ ಅದು ಇನ್ನೂ ಶ್ರೇಷ್ಠವಿರುತ್ತದೆ. ಸಮೀಪದಲ್ಲಿಯೇ ಉತ್ತಮವಾದ ಅರಣ್ಯವಿರುವುದರಿಂದ ನೌಕಾನಿರ್ಮಾಣಕಾರ್ಯ ಬಹು ಸುಲಭವಾಗುವುದು ಎಂದಿದ್ದರು. ಅವರು ಮುಂದುವರಿದು ಪಶ್ಚಿಮ ಕರಾವಳಿಯಲ್ಲಿ ವಾಣಿಜ್ಯ ಬಂದರವನ್ನಾರಿಸುವ ನನಗೆ ಅವಕಾಶವಿತ್ತರೆ ಪ್ರಥಮ ಬಂದರವನ್ನಾಗಿ ಮಂಗಳೂರನ್ನೇ ನಾನು ಆರಿಸುವೆ. ಅದು ಮರ್ಮಗೋವಾ ಮತ್ತು ಕೊಚ್ಚಿಯ ಮಧ್ಯದಲ್ಲಿದೆ. ಬಂದರದಲ್ಲಿ ಬಂಡೆಗಳಿಲ್ಲದೆ ವಾಣಿಜ್ಯ ದೃಷ್ಟಿಯಿಂದ ಅದು ಲಾಭಕರವಿದೆಯೆಂದು ಹೇಳಿದ್ದಾರೆ. ಅವರ ಕಣ್ಣಿಗೆ ಮಲ್ಪೆಯಂತಹ ಸ್ವಾಭಾವಿಕ ಬಂದರವು ಬೀಳದಿರಲಿಲ್ಲ. ಮಲ್ಪೆಯು ಮೀನುಗಾರಿಕೆಗೆ ಬಂದರಕ್ಕೆ ಸರ್ವಶ್ರೇಷ್ಠವಾದ ರೇವಾಗಿದೆಯೆಂದು ಅವರು ಅಂದಿದ್ದಾರೆ. ಕಾರವಾರವು ಸಿಂಗಾಪುರ ಬಂದರಿಗಿಂತಲೂ ನೌಕಾ ಬಂದರವಾಗಲು ಯೋಗ್ಯವಾದುದೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ತಜ್ಞರ ಅಭಿಪ್ರಾಯಕ್ಕಿಂತ ಹೆಚ್ಚಿಗೇನು ಹೇಳುವದಿದೆ? ಇದರಿಂದ ಕೇಂದ್ರವಾಗಲೀ ರಾಜ್ಯ ಸರಕಾರವಾಗಲೀ ಇತ್ತ ದೃಷ್ಟಿ ಹೊರಳಿಸಿದರೆ ಚಿನ್ನದ ಗಣಿಯೇ ಸಿಕ್ಕಬಹುದೆಂದು ಧೈರ್ಯವಾಗಿ ಹೇಳಬಹುದು.

### ಮಂಗಳೂರು ಬಂದರ

ಪಶ್ಚಿಮ ತೀರದಲ್ಲಿ ಮುಂಬೈ ಮತ್ತು ಕೊತ್ತು-ಕೊಚ್ಚಿಗಳನ್ನು ಬಿಟ್ಟರೆ ಬೇರೆ ಬಂದರುಗಳೇ ಇರಲಿಲ್ಲ. ಗೋವೆಯೂ ನಮ್ಮ ವಶ ಬಂದಿರಲಿಲ್ಲ. ಕಾಂಡ್ಲಾ ಸ್ಥಾಪನೆಯ ನಂತರವೂ ಮುಂಬೈ ಬಂದರಿನ ಮೇಲಿನ ಭಾರವು ತಗ್ಗಿರುವುದಿಲ್ಲ. ಇದರಿಂದ ಮಂಗಳೂರನ್ನು ಪ್ರಥಮ ತರಗತಿಯ ಬಂದರವನ್ನಾಗಿರಿಸುವ ಅಗತ್ಯ ಬಹಳವಾಗಿದೆ. ಬೆಳೆಯುತ್ತಿರುವ ಕರ್ನಾಟಕ ರಾಜ್ಯಕ್ಕಂತೂ ಇದು ತೀರಾ ಅವಶ್ಯಕವಾಗಿದೆ. ಕೇಂದ್ರ ಸರಕಾರವೂ ಇದಕ್ಕೊಪ್ಪಿ ಮಂಗಳೂರು ಬಂದರವನ್ನಭಿವೃದ್ಧಿಪಡಿಸಲು ಪೂರ್ಣ ಮನ್ನಣೆ ಕೊಟ್ಟಿದೆ. ಆದರೆ 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ'ವೆಂದು ಹೇಳುವಂತೆ ಕನ್ನಡಿಗರ ದುರ್ದೈವವಿನ್ನೂ ಬೆನ್ನು ಬಿಟ್ಟಿಲ್ಲ. ಈ ಬೃಹತ್ ಬಂದರಾಭಿವೃದ್ಧಿಗೆ ಅವಶ್ಯವಾದಷ್ಟು ಹಣವನ್ನು ಒದಗಿಸುವುದು ಸಾಧ್ಯವಾಗಿಲ್ಲ. ಹೀಗಾದರೆ ಕರ್ನಾಟಕಕ್ಕೆ ಶತಮಾನವೊಂದು ಉರುಳಿದರೂ ಬಂದರವಾಗಲಾರದು. ಮಂಗಳೂರು ಸರ್ವಋತು ಬಂದರವಾಗಲು ನಿಜಕ್ಕೂ ಯೋಗ್ಯವಿದೆ. ಎಣ್ಣೆ, ಬೀಜ, ಕಾಫಿ, ಚಾ, ಹಂಚು ಮೊದಲಾದುವುಗಳ ತವರು ಕೇಂದ್ರವಾದ ಇದು [illegible] ಕೇಂದ್ರವಾಗಿದೆ. ಆಮದು ಮತ್ತು ರಫ್ತು ಇವೆರಡಕ್ಕೂ ಮಂಗಳೂರು ಅರ್ಹತೆ ಪಡೆದಿದೆ. ಇದೀಗ ಇದರ ಅಭಿವೃದ್ಧಿಗಾಗಿ ಮಹಾ ಸಮಿತಿಗಳು ನೇಮಕವಾಗಿವೆ. ಕೇಂದ್ರದ ಆರ್ಥಿಕ ಶಾಖೆಯ ಹಿರಿಯ ಇಂಜನಿಯರರು ಬಂದು ಸ್ಥಳ—ವೆಚ್ಚ ಮೊದಲಾದುವುಗಳನ್ನು ನಿರ್ಧರಿಸಿಕೊಂಡು ಹೋಗಿದ್ದಾರೆ. ಪಣಂಬೂರಿನ ಬಳಿ ವಿಶಾಲ ಸ್ಥಳವಿರುವುದರಿಂದ ರೇವು ಕಟ್ಟಬಹುದೆಂದು ಹೇಳಿದ್ದಾರೆ. ಇದರ ಕೆಲಸ ಬಹು ತ್ವರಿತವಾಗಿಯೇ ನಡೆಯುವದೆಂದೂ ಹೇಳಿದ್ದಾರೆ.

### ಕಾರವಾರ ಬಂದರು

ಮಂಗಳೂರಿಗಿಂತಲೂ ಸ್ವಾಭಾವಿಕತೆಗೆ ಕಾರವಾರದ ಸನ್ನಿವೇಶ ನಿಜಕ್ಕೂ ಶ್ರೇಷ್ಠವಾಗಿದೆ. ಆದರೆ ಅದು ಮಂಗಳೂರಿನಷ್ಟು ಕೈಗಾರಿಕಾ ಕೇಂದ್ರವಲ್ಲ. ರಾಜ್ಯದ ಹಿತದೃಷ್ಟಿಯಿಂದ ಕಾರವಾರದ ಬಂದರ ನಿರ್ಮಾಣ ನಿಜಕ್ಕೂ ಅತ್ಯಗತ್ಯವಾಗಿದೆ. ಆದರೆ ಸರಕಾರ ಮಾತ್ರ ಬಹು ಅನಾಸಕ್ತಿಯನ್ನು ತಳೆದಿದೆ. ಕಾರವಾರದ ಸಮೀಪವೇ ಹೊಸ ಪೇಟೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅದುರುಗಳು ಸಿಗುತ್ತವೆ. ಆದರೆ ಇತ್ತ ಲಕ್ಷ್ಯ ಪೂರೈಸುವವರು ಇಲ್ಲ. ಸಾರಿಗೆ ಖಾತೆಯವರು ಬಂದರ ನಿರ್ಮಾಣ ಯೋಜನೆ ಮುಂದೂಡಿದಂತೆ ರೈಲ್ವೇ ಮಂಡಲದವರು ರೈಲು ರಚನೆ ಮುಂದೂಡುತ್ತಿದ್ದಾರೆ. ಈಗ ಒಮ್ಮಿಂದೊಮ್ಮೆಗೆ ಹೊಸ ವಿಚಾರ ಮೂಡಿದಂತೆ ತೋರುತ್ತಿದೆ. ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಕೇಂದ್ರದ ರಕ್ಷಣ ಮಂತ್ರಿ ಶ್ರೀ ಚವ್ಹಾಣರಿಗೆ ಬರೆದ ಪತ್ರದಲ್ಲಿ ನೌಕಾ ನಿಲ್ದಾಣ ಮತ್ತು ನೌಕಾ ನಿರ್ಮಾಣಕ್ಕೆ ಕಾರವಾರವನ್ನು ಆಯ್ದುಕೊಂಡು ಗೋವೆ ಬಂದರು ವಾಣಿಜ್ಯಕ್ಕೆ ಮೀಸಲಾಗಿಡಬೇಕು ಎಂದು ಬರೆದಿದ್ದಾರೆ. ಕೇಂದ್ರ ಸರಕಾರವು ಸ್ವಾಗತಾರ್ಹವಾದ ಈ ಸೂಚನೆಯತ್ತ ಗಮನ ಹರಿಸುವುದು ಅಗತ್ಯವಾಗಿದೆ.

### ಮಲ್ಪೆ ಬಂದರ

ನಿಸರ್ಗ ಸಹಜವಾದ ಮಲ್ಪೆ ಬಹು ಸಮಯದಿಂದ ಪ್ರಬುದ್ಧ ಬಂದರದ ಸ್ವಪ್ನ ಕಾಣುತ್ತಿತ್ತು. ಆದರೆ ಪ್ರಬುದ್ಧ ಬಂದರವಾಗುವಂತಿಲ್ಲವಾದರೂ ಅದರ ಭವಿಷ್ಯವೀಗ ತುಸುವಾದರೂ ಉತ್ತಮವಾಗುವ ನಿರೀಕ್ಷೆಯಿದೆ. ಯಾಕೆಂದರೆ ಮಲ್ಪೆಯ ಸಮೀಪದ ಆಗುಂಬೆಯಲ್ಲಿ, ಕೊಡಚಾದ್ರಿಗಳಲ್ಲಿ ವಿಪುಲವಾದ ಖನಿಜಸಂಪತ್ತು ದೊರೆಯುತ್ತಿದೆ. ಈ ಅದುರುಗಳನ್ನು ಈ ಬಂದರದಿಂದಲೇ ನಿರ್ಯಾತಗೊಳಿಸುವುದು ಅಧಿಕ ಲಾಭಕರವಾದುದರಿಂದ ಮಲ್ಪೆಗೆ ಉಜ್ವಲ ಭವಿಷ್ಯವಿದೆಯೆನ್ನಲಡ್ಡಿಯಿಲ್ಲ. ಇತ್ತೀಚಿಗೆ ಉಡುಪಿಯನ್ನು ಸಂದರ್ಶಿಸಿದ ಕೇಂದ್ರ ಸಚಿವ ಎ. ಎಂ. ಥಾಮಸರು ಇಲ್ಲಿ ಮೀನುಗಾರಿಕೆಯ ರೇವನ್ನು ಕಟ್ಟಲು ತಗಲುವ ವೆಚ್ಚದಲ್ಲಿ ಕೇಂದ್ರವು ನೂರಕ್ಕೆ ಐವತ್ತರಷ್ಟನ್ನು ಕೊಡುವುದೆಂದು ಭರವಸೆಯಿತ್ತಿದ್ದಾರೆ. ಅಂತೆಯೇ ಮೈಸೂರಿನ ಮೀನುಗಾರಿಕೆಯ ಸಚಿವ ಶ್ರೀ ರಾಚಯ್ಯನವರು ಉಳಿದರ್ಧಾಂಶ ಕೊಡುವ ವಚನ ಕೊಟ್ಟಿದ್ದಾರೆ. ಸ್ವಾಗತಾರ್ಹವಾದ ಈ ಅಂಬೋಣಗಳಿಂದ ಮಲ್ಪೆಯು ಸರ್ವ ರೀತಿಯಿಂದಲೂ ಮೀನುಗಾರಿಕೆಯ ರೇವಾಗಲು ಸಮರ್ಥವಾಗಿದೆ ಎಂಬುದು ಸರ್ವ ವ್ಯಕ್ತವಾದಂತಾಯಿತು. ದೇಶದ ಸಾಂಪತ್ತಿಕ ಅಭಿವೃದ್ಧಿಯೇ ನಮ್ಮ ಗುರಿಯಾಗಿರುವುದರಿಂದ ತ್ವರಿತದಿಂದಲೇ ಈ ಬಗ್ಗೆ ಯೋಜನೆಯನ್ನು ರಚಿಸಿ ಅನುಕೃತಿಗಿಳಿಯಬೇಕು.

ಉಪರೋಕ್ತ ಮೂರು ಬಂದರುಗಳ ಅಭಿವೃದ್ಧಿಯಾಗುವುದು ಅತ್ಯಗತ್ಯ. ಆದರೆ ಇತ್ತೀಚೆಗೆ ಕುಂದಾಪುರ ಬಂದರ ರಚನೆಯಾಗುವುದು ಅವಶ್ಯಕವೆಂದು ರಾಜ್ಯ ಸರಕಾರ ಮನಗಂಡಿದೆ. ಭಟ್ಕಳದ ಬಳಿ ಭಾರೀ ಪ್ರಮಾಣದಲ್ಲಿ ಕಬ್ಬಿಣದ ಅದುರು ಇದೆಯೆಂದು ಹೇಳಲಾಗಿದೆ. ಇದರ ಅಭಿವೃದ್ಧಿಯ ಕುರಿತು ಸಾಕಷ್ಟು ಅಧ್ಯಯನ—ವಿಮರ್ಶೆ ಮಾಡದ ಮುನ್ನ ಯಾವ ನಿರ್ಧಾರಕ್ಕೂ ಬರುವಂತಿಲ್ಲ.

### ಕಾರ್ಯ ಭರದಿಂದ ಸಾಗಲಿ!

ಕರ್ನಾಟಕ ರಾಜ್ಯದ ಬೇಡಿಕೆಗಳಿಗೆ ಸದಾ ಅನಾಸಕ್ತಿಯನ್ನೇ ತೋರಿಸುತ್ತ ಬಂದ ಕೇಂದ್ರ ಸರಕಾರವೀಗ ಕಣ್ಣು ತೆರೆದು ನೋಡಬೇಕಾಗಿದೆ. ಕನ್ನಡ ನಾಡಿನ ಭಾವೀ ಅಭಿವೃದ್ಧಿ ರೈಲು ಮತ್ತು ಬಂದರವನ್ನೇ ಅವಲಂಬಿಸಿರುವುದರಿಂದ ಅವು ನಮಗೆ! ಬೇಕೇ ಬೇಕು. ಆದುದರಿಂದ ಮಂಗಳೂರು, ಕಾರವಾರ, ಮಲ್ಪೆ ಬಂದರುಗಳ ಅಭಿವೃದ್ಧಿ ತ್ವರಿತವಾಗಿ ನಡೆಯುವುದು ಸಮಗ್ರ ರಾಜ್ಯದ ಸಾಂಪತ್ತಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ. ಉಳಿದ ರಾಜ್ಯಗಳು ಮುನ್ನಡೆಯುತ್ತಿರುವಾಗ ಮೈಸೂರು ರಾಜ್ಯವು ಕಣ್ಣುಮುಚ್ಚಿ ಕುಳಿತಿರಲು ಇನ್ನು ಸಾಧ್ಯವಿಲ್ಲ

—ಶ್ರೀ ರಾಮತನಯ

ನಾಡಿನ ಶಕ್ತಿ—
ನಮ್ಮ ಶಿಸ್ತಿನಲ್ಲಿದೆ.

●

ಮಾತು ಕಡಿಮೆಯಾಗಲಿ,
ಕೃತಿ ಹೆಚ್ಚು ಹೆಚ್ಚಾಗಲಿ.

## ಹರಟೆ ಮಲ್ಲನ

# ಸಮಯ ಪುರಾಣಂ!

"ಬರೆಯಲು ಟೈಮಿನ ಪೂರೈಕೆಯಿಲ್ಲವಲ್ಲಾ!"—ಎಂದು ನೊಂದ ಸಾಹಿತಿಯು ಮತ್ತು "ಓದಲು ಸಾಕಷ್ಟು ಸಮಯವೆಲ್ಲಿ?"—ಎಂದು ಅಧ್ಯಾಪನಿಗೆ ಹೆದರಿ ಓದುವ ವಿದ್ಯಾರ್ಥಿಯ ಸೊಲ್ಲು; "ಛಿ! ಸಮಯವೇ ಕಳೆಯುವುದಿಲ್ಲ!"—ಎಂದು ಸಂಸಾರಿಗ ತಲೆ ತುರಿಸುತ್ತಾ ಆಡುವ ನುಡಿ, "ಬಸಂತಂ ಪೋದನೆ!"—ಎಂದು ಪ್ರಕೃತಿಯ ವಿಕಾರ ರೂಪವನ್ನು ನೋಡಿ ಕೂಗುವ ಕೋಗಿಲೆ ಇವೆಲ್ಲವೂ ಸಮಯವನ್ನು ಯಾಕೆ ಟೀಕಿಸುತ್ತವೆ? ಪಾಪ! ಆ ಸಮಯವಾದರೂ ಅವರಿಗೇನು ಮಾಡಿದೆ?—ಎಂಬುದು ಬಗೆ ಹರಿಯದ ಪ್ರಶ್ನೆ!

ಮಾನವ ಸುಖಿಯಾಗಿರಲಿ, ದುಃಖಿಯಾಗಿರಲಿ ಆತನ ಜೀವಾವಧಿಯು ಸಮಯವು ಸಾಗುತ್ತಲೇ ಇರುತ್ತದೆ! ಗುರಿಯನ್ನು ಹಿಡಿದೋ ಹಿಡಿಯದೆಯೋ ತನ್ನಿಷ್ಟದಂತೆ ತನ್ನ ಕರ್ಮ ಹಾಗೂ ಧ್ಯೇಯವೇ 'ಗತಿ'ಯೆಂದು ಗಾಡಿಯೆಳೆಯುವ ಎತ್ತಿನಂತೆ ಜೀವನವನ್ನೇ ಎಳೆಯುತ್ತಿದೆ ಅಗೋಚರವಾದ ಸಮಯ! 'ಒಂದು ನಿಮಿಷ, ಒಂದು ಗಂಟೆ ಯಾಕೆ ಒಂದು ವರ್ಷ ಹೋದರೆ ಹೋಗಲಿ' ಎಂದು ನಾವದನ್ನು ಕ್ಷುಲ್ಲಕವಾಗಿ ಪರಿಗಣಿಸಬಹುದು! ಆದರೆ ಅದರ ಮಹತ್ವ ಅದಕ್ಕೇ ಗೊತ್ತು!

"ನನ್ನ ಜೀವನದಲ್ಲಿ ನಡೆಯಲಿರುವ ಮಹತ್ಕಾರ್ಯದ ಅಲ್ಪಾಂಶವಾದರೂ ದಿನವೊಂದರಲ್ಲಿ ಪೂರ್ಣವಾದರೆ ಲಾಭಕರ!" ಎಂದು ರಾಮಕೃಷ್ಣ ಪರಮಹಂಸರು ಹೇಳಿದರೆ; "ನಾನು ಹೇಳಿದಂತೆ ಸಮಯವು ಇರುತ್ತಿದ್ದರೆ ಪ್ರಪಂಚವನ್ನೇ ನನ್ನ ಪಾದತಳದಲ್ಲಿರಿಸುತ್ತಿದ್ದೆ!"—ಎಂದು ನೆಪೋಲಿಯನ್ ಬೋನಾ ಪಾರ್ಟಿಯು ನುಡಿದ ನಮಾಟಿ. ಮೈಕಲ್ ಫ್ಯಾರಡೆ ಇನ್ನೂ ಹಲವು ವರ್ಷ ಜೀವಿಸಿದ್ದರೆ ಸ್ವತಃ ವಿದ್ಯುಜ್ಜನಕ ಸಿದ್ಧಾಂತದಿಂದ ಏನೇನು ತಯಾರಿಸುತ್ತಿದ್ದನೇನೋ! ಭಾರತ ರಾಷ್ಟ್ರಪಿತ ಗಾಂಧೀಜಿಯವರು ಇನ್ನಿನಿಸು ಬಾಳಿದ್ದರೆ! ಭಾರತ ರಾಮರಾಜ್ಯದ ಸುವರ್ಣ ಸಂಧಿಯನ್ನಿದಿರುಗೊಳ್ಳುತ್ತಿದ್ದಳು ಬೇಕು! ಮುದ್ದಣ್ಣನು ಬಾಳಿದ್ದರೆ ಹಿಂದಿನ ನಾಡೋಜ ಸಂಪಾದಿಗಳ ಯಶಸ್ಸು ಪಲಾಯನ ಮಂತ್ರ ಪಠಿಸಬೇಕಾಗಿ ಬರಬೇಕಿತ್ತು ಎನ್ನುವಾಗ ಸಮಯವೆಂಬ ಶನಿಮಹಾರಾಯನ ಕೈವಾಡ ಬಹು ದೊಡ್ಡದೆಂದು ಸಾಹಿತ್ಯಾಭಿಮಾನಿಗಳು ಒಪ್ಪಲೇ ಬೇಕು.

"ಕಳೆದ ನೀರು ಕಟ್ಟಕ್ಕೆ ಬಾರದು!"-ಹಿರಿಯರಾಡಿದ ಮಾತು ವೇದ ವಾಕ್ಯ. ಸಮಾನತೆಯನ್ನು ಸಮಯದ ಸಂಧರ್ಭದಲ್ಲಿ ಕಾಣಬಹುದು. ಮಾನವ ತನ್ನ ಜೀವನದ ಅರ್ಧಾಂಶ ನಿದ್ರೆಗಾಗಿ ಕಳೆಯುತ್ತಾನೆ; ಉಳಿದ ಅರ್ಧಾಂಶದಲ್ಲಿ ತನ್ನ ದೈನಂದಿನ ತ್ರಿಕರ್ಮ (ಸ್ನಾನ, ಊಟ, ಫಲಾಹಾರ)ಗಳಾಗ ಬೇಕು, ಮೇಲೆ ಮನೋರಂಜನೆಯಾಗಬೇಕು! ಉಳಿದ ಸಮಯ ಆತನ ಸತ್ಕಾರ್ಯಕ್ಕಾಗಿ ಹೀಗಿರುವಾಗ "ಪುಡಿದು ಬಾಳ ಬೇಕಾಗಿದ್ದಲ್ಲಿ; ಮರಣ—ಸುಖಶಯ್ಯೆಯಾಗ ಬೇಕಾಗಿದ್ದಲ್ಲಿ ತನ್ನ ಸತ್ಕೃತಿಗೆ ಉಳಿದ ಸಮಯ ಬಹು ಅಲ್ಪ! ಅದರಲ್ಲಿ ಮಾನವನು ಹೋರಾಡಬೇಕಾಗಿದೆ. ತನ್ನ ಹೊಟ್ಟೆಗಾಗಿ ದುಡಿಯಬೇಕು; ಇದಿರು ಬಂದ ವಿಡ್ಡೂರಗಳಿಗೆ ಪ್ರತಿಕ್ರಿಯೆಯೆಸಗಬೇಕು. ಓದಬೇಕು, ಬರೆಯಬೇಕು, ಕೀರ್ತಿಗಾಮಿಯಾಗಬೇಕು! ಇದಕ್ಕೆಲ್ಲ ಉಳಿದ ಸಮಯ ಸ್ವಲ್ಪವಾದರೂ ಇಂದು ಮಾನವ ಏನೇನು ಸಾಧಿಸಿದ್ದಾನೆಯೆನ್ನುವಾಗ ಅವನ ಕಾರ್ಯದಕ್ಷತೆ ಬಹು ದೊಡ್ಡದೆನಿಸುತ್ತದೆ!

ಆದರೂ ಸಮಯದ ಸದುಪಯೋಗ ಹೇಗೆ? ವಿಮರ್ಶಿಸುವ: ನಾವೊಂದು ವಾಹನಾರ್ಥಿಯಾಗಿ ಅದರ ನಿರೀಕ್ಷಣೆಯಲ್ಲಿದ್ದಾಗ, ದಾರಿ ನಡೆಯುತ್ತಿರುವಾಗ, ನಿದ್ರೆ ಹತ್ತದ ವೇಳೆಗಳಲ್ಲಾದರೆ ನುಸಿ ಮಹಾರಾಯನ ಉಪದ್ರವಕ್ಕೆ ಹೆದರಿರುವಾಗ ಸುಮ್ಮನೆ ಹಾಸಿಗೆಯಲ್ಲಿ ಹೊರಳುವಾಗ ಸಾಕಷ್ಟು ಸಮಯವನ್ನು ತನ್ನದಾಗಿ ಮಾಡಬಹುದು. ಒಂದು ವಸ್ತುವಿನ ವಾಬರಹದ ಕುರಿತಾದ ವಿಮರ್ಶಾತ್ಮಕವಾದ ನೋಟವೇ ಚಿಂತನೆ. ಹೀಗೆ ತನ್ನದಾಗಿ ಮಾಡಿಕೊಂಡ ಸಮಯದಲ್ಲಿ ಸಾಕಷ್ಟು ಚಿಂತನೆಯನ್ನು ಗೈದು ಓದಿ ತನಗರಿಯದ ಜಗತ್ತಿನ ವಿಚಿತ್ರ ವಿಚಾರಗಳ ಸಾಕಾರ ರೂಪಜ್ಞಾನವನ್ನು ಮಸ್ತಿಷ್ಕದಲ್ಲಿ ಅಳವಡಿಸಿಕೊಳ್ಳಬೇಕು. 'ಓದು ತೋರಿಕೆಗಲ್ಲ; ಜ್ಞಾನದರಿವಿಗೆ'—ಎಂಬ ನುಡಿಯ ಸತ್ಯತೆಯನ್ನು ನಮ್ಮ ಬಿಡು ಸಮಯದಲ್ಲಿ ನೋಡಬಯಸಬೇಕು!

ಲೋಕವು ಸಮಯದಂತೆ ಅಥವಾ ಪ್ರಯಾಣಿಕರ ಕಷ್ಟಸುಖವನ್ನೆಣಿಸದೆ ಓಗುವ ಉಗಿಬಂಡಿಯಂತೆ ಸಾಗುತ್ತಿದೆ! ಅದಕ್ಕೆ ತನ್ನ ದಾರಿಯಲ್ಲಿರುವ ಮುಳ್ಳು ಕಲ್ಲುಗಳ ಅರಿವಿಲ್ಲ! ಏನೋ ಒಂದು ಗುರಿ ಧ್ಯೇಯ ಹಿಡಿದು ದೂರದಲ್ಲಿ ಕಾಣುವ ಸುಖದ ಛಾಯಾರೂಪಕ್ಕೆ ಮರುಳಾಗಿ ಪ್ರಾಯಶಃ ಸಾಗುತ್ತಿರಬೇಕು. ಇದು ವಿಜ್ಞಾನ ಯುಗದ ಪ್ರಭಾವ! ಈ ಯುಗದಲ್ಲಿ ವಿಜ್ಞಾನ ಹಾಗೂ ವಿಜ್ಞಾನಿ ಇವೆರಡಕ್ಕೂ ಮಹತ್ತರವಾದ ಬೆಲೆ, ಗೌರವ! ಎಲ್ಲವರೂ ಅವರವರ ಮಟ್ಟಕ್ಕೆ ವಿಜ್ಞಾನಿಗಳೇ! ಆದರೆ ಲೋಕವು ಆತನನ್ನು ವಿಜ್ಞಾನಿಯೆಂದು ಕರೆದಾಗ ಆವನ ಹೃದಯದ ಬೆಳಕು ಹೊರಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಚೆಲ್ಲಲ್ಪಡುವುದಷ್ಟೆ! ಯಾವ ವಿಜ್ಞಾನಿಯೇ ಆಗಲೀ ಸ್ವಪ್ರಯತ್ನದಿಂದಲೇ ಮೇಲ್ಮೈಯನ್ನೈದಿದನಷ್ಟೇ ಹೊರತು ವಿಧಿಯವನನ್ನು ಹಾಗೆ ಮಾಡಲಿಲ್ಲ. ಆದರೆ ಸಫಲಾಗಿಯಾಗಿದೆ ಅಷ್ಟೆ! ನಾವೂ ವಿಜ್ಞಾನಿಗಳಾಗಬಹುದು! ಸಾಹಿತ್ಯದಲ್ಲಿ ಸಮಾಜದಲ್ಲಿ ಕೃಷಿ ಕೈಗಾರಿಕೆ ವಿಜ್ಞಾನ ಯಾವುದಾದರೇನು? ಅಂತೂ ಒಂದು ಯಾ ಹೆಚ್ಚು ವಿಷಯಗಳಲ್ಲಿ ವಿಶೇಷ ಜ್ಞಾನ ಪಡೆಯಲು ಯಾಕೆ ಸಾಧ್ಯವಿಲ್ಲ! ಬಿಡುವಿನ ಸಮಯ ಅಲ್ಲಿ ಉಪಯೋಗ ಬೀಳುವುದು. ಬಾನುಲಿಯ ಬ್ರಹ್ಮನಾದ ಮಾರ್ಕೋನಿಯು ಕೂಡಾ ಹುಟ್ಟುವಾಗ ವಿಜ್ಞಾನಿಯಾಗಿರಲಿಲ್ಲ. ಸ್ವಪ್ರಯತ್ನದಿಂದ ಸಮಯದ ಸದುಪಯೋಗದಿಂದ ಸಮಯ ಶನಿಯ ಅನುಗ್ರಹದಿಂದ ಮೇಲೇರಿ ಬಂದ ನಮ್ಮಂತವನೇ ಆದ ಮಾನವನಲ್ಲವೇ?

"ಶರೀರಮಾದ್ಯಂ ಖಲು ಧರ್ಮಸಾಧನಂ"—ಎಂದಂತೆ ಯಾವುದಕ್ಕೂ ಶರೀರವೇ ಮೂಲ ಕಾರಣವಷ್ಟೆ? ಮಾನವನು ಹೆಚ್ಚು ಸೌಲಭ್ಯ ಸೌಕರ್ಯಗಳನ್ನಾದರೂ ಯಾರಿಗಾಗಿ ತಯಾರಿಸಿ, ಉಪಯೋಗಿಸುತ್ತಾನೆ? ತನಗಾಗಿ—ತನ್ನ ಜೀವನದ ಸಮಯದ ಉಳಿತಾಯ ಯೋಜನೆಗಾಗಿ. ಹೀಗಿರುವಾಗ ಆತ ತನ್ನ ಜೀವನ ಸುಖಮಯವಾಗಿರಬೇಕಾದಲ್ಲಿ ಆರೋಗ್ಯಾರ್ಥಿಯೂ ಆಗಿರಬೇಕು! 'ಆರೋಗ್ಯವೇ ಭಾಗ್ಯ!'—ವೆಂಬ ಗಾದೆಯಂತೆ ಆ ಆರೋಗ್ಯಕ್ಕಾಗಿ ಸ್ವಲ್ಪ ಸಮಯವನ್ನು ಉಪಯೋಗಿಸಿ 'ಅಲ್ಪತೆಯಿಂದ ಬಹುತ್ವವನ್ನು ಸಂಪಾದಿಸುವ ಕಾರ್ಯಕ್ಕೆ ಧುಮುಕಿ ಸಮಯದ ಸದುಪಯೋಗವನ್ನು ಸಾಧಿಸಬಹುದು!

ಜಗತ್ತಿನಲ್ಲಿ ಜನಿಸಿದ ಮನುಷ್ಯನು ಜಗತ್ತಿನ ಕೆಲವೊಂದು ನಿಯಮಕ್ಕೆ ಅನುಗುಣವಾಗಿದ್ದರೇನೇ ಅವನಿಗೆ ಉಳಿಯಲು ಸಾಧ್ಯ! ಪಶುತ್ವದಿಂದ ಮೇಲೆದ್ದು ಮಾನವತ್ವವನ್ನೈದಿದ ಅವನು ದೇವತ್ವಕ್ಕೇರಬೇಕಾದರೆ ತನ್ನ ವಾತಾವರಣದ, ರಾಷ್ಟ್ರದ, ವಿಶ್ವದ ಮೂಲೆ ಮೂಲೆಯ ಏಳ್ಗೆ ಔನ್ನತ್ಯವನ್ನು ಬಯಸಬೇಕು; ಪ್ರೀತಿಸಬೇಕು! ರಾಷ್ಟ್ರಪ್ರೇಮವೆಂದರೆ ದೇಶದ ಗಿರಿಶ್ರೇಣಿಗಳ ಹೊಳೆತೊರೆಗಳ ಮರಗಿಡಗಳ ಮೇಲಿನ ಪ್ರೇಮವಲ್ಲ! ಅದರೊಂದಿಗೆ ವಿಶಿಷ್ಟನಾದ ಮಾನವನನ್ನು ಪ್ರೇಮಿಸಬೇಕು. ಅದು ನಿಷ್ಕಾಮವಾಗಿದ್ದು—ಸ್ವಾವಲಂಬನವೂ ಅಲ್ಲ; ಪರಾವಲಂಬನವೂ ಅಲ್ಲ; ಸಹಕಾರ ಜೀವನವೇ ಸಮಾಜದೊಳಿಲ್ಲ!" ಎಂಬಂತಿರಬೇಕು. ಇದಕ್ಕೆ ಸಮಯದ ಸದುಪಯೋಗ ಅನವಿರಬೇಕು!

ಇನ್ನು ಸಮಯ ಮಹಾರಾಯನ ಪ್ರಭಾವದೆಡೆಗೆ ಹರಿಯೋಣ! 'ಸಮಯ'ವೆಂಬ ಈ ಮೂರು ಅಕ್ಷರದ ಮಹತ್ವ ತ್ರಿಮೂರ್ತಿಗಳಿಗೆ ಸಮಾನವಾದುದು. ಸಮಯವಿದ್ದಲ್ಲಿ ಸೃಷ್ಟಿಸಬಹುದು. ಮಾನವನ ಹಿತವನ್ನು ಬಯಸಿ ಪ್ರೇಮಿಸಬಹುದು. ಜಗತ್ತಿನಲಯವನ್ನೂ ಮಾಡಬಹುದು. ಆತಏವ ಅದಕ್ಕೆ 'ಸ' ಅಂದರೆ ಸೃಷ್ಟಿ; 'ಮ' ಅಂದರೆ ಮಮತೆ, 'ಯ' ಅಂದರೆ ಲಯವೆಂದು ಊಹಿಸುವಷ್ಟು ಸ್ಥೈರ್ಯಬಲ ಒಂಬತ್ತು ಗ್ರಹಗಳಲ್ಲದೆ ಹೆಚ್ಚಾದ ವಿಜ್ಞಾನ ಯುಗದ ೧೦ನೇ ಗ್ರಹ ಸಮಯಕ್ಕಿದೆ. ಯಾರೇ ಆಗಲಿ, ಎಂತವನೇ ಆಗಲಿ, ಈ ಸಮಯ ಮಹಾರಾಯನಿಗೆ ತಲೆವಾಗಲೇ ಬೇಕು. ವಸ್ತುವಿನ ಇರುವಿಕೆಯು ಹಲವಾರು ಕಣಗಳಿಂದ ಸೇರಿರುವುದಾದರೂ ಪ್ರತಿಯೊಂದು ಕಣಕ್ಕೆಷ್ಟು ಬೆಲೆಯೋ ಅಷ್ಟೇ ಪ್ರಧಾನ್ಯವೂ ಕೂಡಾ ಸಮಯಕ್ಕಿದೆ. ಅದು ಸಮಯದ ವೈಶಿಷ್ಟ್ಯ, ಅದರ ಲಾಲಿತ್ಯ!

ಸಮಯಕ್ಕೂ ಶನಿಗೂ ನಿಕಟ ಸಂಬಂಧ! ಇವೆರಡೂ ಒಲಿದರೆ ಮಾನವ ಏನನ್ನೂ ಸಾಧಿಸ ಬಹುದು! ಮುಳಿದರೆ ಹೆಜ್ಜೆ ಮುಂದಿಡಲು ಅಸಾಧ್ಯ! ಮಹಾಭಾರತ ಯುದ್ಧ ಕೇವಲ ೧೮ ದಿನವೆಂದೇ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

### ಭಾರತೀಯ ಪತ್ರಿಕೆಗಳ

# ಇತಿಹಾಸ ಪರಿಚಯ

(೧. ರಾಷ್ಟ್ರಜಾಗೃತಿಗೆ ಮೊದಲು)

ಶ್ರೀ ಮ. ರಾಜೀವ, ಎಂ. ಎ., ಬಿ. ಟಿ.

ಭಾರತದ ಪತ್ರಿಕೆಗಳ ಕಥೆಯು ಬಹಳ ಕುತೂಹಲದ್ದಾಗಿದೆ. ಅದಕ್ಕೆ ದೀರ್ಘ ಇತಿಹಾಸವಿದೆ; ದೊಡ್ಡ ಐತಿಹ್ಯವಿದೆ. ಭಾರತದ ಪತ್ರಿಕೆಗಳ ಕಥೆಯು ಸ್ವಾರಸ್ಯಮಯವೂ ಆಗಿದೆ; ಸಾಹಸದ ಚರಿತ್ರೆಯೂ ಆಗಿರುತ್ತದೆ. ಅದು ಪ್ರಾರಂಭದಲ್ಲಿ ಪಡೆದ ಪ್ರಯಾಸ, ಬ್ರಿಟಿಷ್ ಆಡಳಿತೆಯ ಅವಧಿಯಲ್ಲಿ ಮಾಡಿದ ಪ್ರಯತ್ನ, ದಬ್ಬಾಳಿಕೆಯನ್ನು ಲೇಖನಿಯ ಬಲದಿಂದ ಎದುರಿಸಿದ ವೀರ ಕಥೆಯು ಕುತೂಹಲದ್ದೇ ಆಗಿದೆ. ಅದು ಇಂದಿನ ಪ್ರಜಾಪ್ರಭುತ್ವ ಯುಗದ ಹೆಬ್ಬಾಗಿಲುಗಳನ್ನು ತೆರೆಯಲು ಸಹಾಯಕವಾದ ಶಕ್ತಿಯಾಗಿತ್ತು. ಜ್ಞಾನ ಪ್ರಸಾರದ ಮಹಾ ಸಾಧನವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಭಾರತಕ್ಕೆ ಬಂದಿದ್ದ ಪೋರ್ಚುಗೀಸರೊಂದಿಗೆ ಮತ ಪ್ರಚಾರಕ್ಕೆ ತೊಡಗಿದ ಜೆಸುಇಟ್ ಪಾದರಿಗಳು 1550ರಲ್ಲಿ ಮುದ್ರಣ ಯಂತ್ರಗಳನ್ನು ಭಾರತಕ್ಕೆ ತಂದರು. ಅನಂತರ ಈಸ್ಟ್ ಇಂಡಿಯಾ ಕಂಪೆನಿಯೂ 1674-1753ರಲ್ಲಿ ಮುದ್ರಣ ಯಂತ್ರಗಳನ್ನು ಅದರ ಸರಕಾರಿ ಕೆಲಸಕ್ಕಾಗಿ ಉಪಯೋಗಿಸಿತು. 1780ರಲ್ಲಿ ಪ್ರಾರಂಭವಾದ ಬಂಗಾಲ್ ಗಜೇಟ್ ಎಂಬ ಪತ್ರಿಕೆಯು ಭಾರತದ ಮೊದಲನೆಯ ಪತ್ರಿಕೆಯಾಗಿತ್ತು. ಅದು ಜನವರಿ 29, 1780ರಲ್ಲಿ ಬೆಳಕು ಕಂಡಿತು. ನಾಲ್ಕು ವರ್ಷಗಳ ಅನಂತರ ಕಲ್ಕತ್ತಾ ಗಜೆಟ್ ಪ್ರಕಟವಾಯಿತು. 1785ರಲ್ಲಿ ಬೆಂಗಾಲ್ ಜರ್ನಲ್ ಮತ್ತು ಒರಿಯೆಂಟಲ್ ಮ್ಯಾಗಜೀನ್ ಎಂಬ ಪತ್ರಿಕೆಗಳು ಪ್ರಕಟವಾದುವು. ಅದೇ ವರ್ಷ ಮದ್ರಾಸ್ ಕೂರಿಯರ್ ಎಂಬ ಪತ್ರಿಕೆಯೂ ಹೊರಟಿತು. ಕಲ್ಕತ್ತಾದಲ್ಲಿ ಮರು ವರ್ಷ ಕಲ್ಕತ್ತಾ ಕ್ರೋನಿಕಲ್ ಎಂಬ ಪತ್ರಿಕೆಯು ಪ್ರಕಟವಾಯಿತು. 1789ರಲ್ಲಿ ಮುಂಬಯಿಯಲ್ಲಿ ಬೊಂಬೆ ಹೆರಾಲ್ಡ್ ಜನ್ಮತಾಳಿತು. 1795ರಲ್ಲಿ ಮದ್ರಾಸ್ ಗಜೆಟ್ ಪ್ರಕಟಗೊಂಡಿತು ಬ್ರಿಟಿಷ್ ಸರಕಾರದ ಆಡಳಿತೆಯು ಮುಖ್ಯವಾಗಿ ಮಿಲಿಟರಿ ಆಡಳಿತೆಯಾಗಿತ್ತು. ಅದು ಸರಕಾರದ ಆಡಳಿತೆಯ ಕುರಿತಾದ ವಿಮರ್ಶೆಯನ್ನು ಸಹಿಸುವಂತಿಲ್ಲ. ಅದರ ನಿಯಮಗಳು ಬಹಳ ನಿಷ್ಠುರವಾಗಿದ್ದುವು. 1807ರಿಂದ 1813ರ ವರೆಗೆ ಅಧಿಕಾರದಲ್ಲಿದ್ದ ಲೋರ್ಡ್ ಮಿಂಟೊ ಈ ತೆರನಾದ ಆಡಳಿತೆಯಲ್ಲಿ ಯಾವ ಬದಲಾವಣೆಯನ್ನೂ ಮಾಡಲಿಲ್ಲ.

ಮೊತ್ತಮೊದಲಾಗಿ ಭಾರತೀಯ ಪತ್ರಿಕೆಯನ್ನು ಪ್ರಾರಂಭಿಸಿದ ಪ್ರಸಿದ್ಧಿ ಬಂಗಾಳದ ಅಧ್ಯಾಪಕನಾದ ಗಂಗಾಧರ ಭಟ್ಟಾಚಾರ್ಯರಿಗೆ ಸಲ್ಲಬೇಕು. ಅವರು 1816ರಲ್ಲಿ ಬೆಂಗಾಲ್ ಗಜೆಟ್‌ನ್ನು ಪ್ರಾರಂಭಿಸಿದರು ಅವರು ರಾಜಾರಾಮ ಮೋಹನ ರೋಯರ ವಿಚಾರಗಳಿಂದ ಪ್ರಭಾವಿತರಾಗಿ ಪತ್ರಿಕೋದ್ಯಮವನ್ನು ಪ್ರಾರಂಭಿಸಿದರು ಅದರ ಅನಂತರ 1819-20ರಲ್ಲಿ ರೋಯರು ಪ್ರಾರಂಭಿಸಿದ ಸಂವಾದ ಕೌಮುದಿ ಬಹಳವಾದ ಆಸಕ್ತಿಯನ್ನು ಕೆರಳಿಸಿತು 1818ರಲ್ಲಿ ಬಂಗಾಳಿಯಲ್ಲಿ ದಿಗ್ದರ್ಶನ ಹಾಗೂ ಸಮಾಚಾರ ದರ್ಪಣಗಳು ಪ್ರಕಟವಾಗಿದ್ದುವು. ಅದಲ್ಲದೆ ಅದೇ ವರ್ಷ ಫ್ರೆಂಡ್ ಒಫ್ ಇಂಡಿಯಾ ಎಂಬ ಇಂಗ್ಲಿಷ್ ಪತ್ರಿಕೆಯೂ ಜನ್ಮ ತಾಳಿತು. ಅದೇ ಸಮಯದಲ್ಲಿ ಚಂದ್ರಿಕ ಸಮಾಚಾರ ಎಂಬ ಪತ್ರಿಕೆಯೂ ಜಾಮ್-ಎ-ಜಹಾನ್ ನಾಮಾ ಮತ್ತು ಶಮ್ಸ್-ಉಲ್-ಅಕ್ಬಾರ್ ಎಂಬ ಪರ್ಶಿಯನ್ ಪತ್ರಿಕೆಗಳೂ ಜನ್ಮ ತಾಳಿದುವು. ರಾಜಾರಾಮ ಮೋಹನ ರೋಯ ಕೂಡಾ ಮಿರತ್-ಉಲ್-ಅಕ್ಬಾರ್ ಎಂಬ ಪರ್ಶಿಯನ್ ಪತ್ರಿಕೆಯನ್ನು ನಡೆಸುತ್ತಿದ್ದರು. ರಾಜಾರಾಮ ರೋಯರ ಅನಂತರ ದ್ವಾರಕನಾಥ ಟಾಗೋರರು ಬೆಂಗಾಲ್ ಹೆರಾಲ್ಡ್ ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಹೊರಡಿಸಿದರು. ಅವರು ಬಂಗಾಳಿಪತ್ರಿಕೆಯಾದ ಬಂಗದೂತವನ್ನೂ ನಡೆಸುತ್ತಿದ್ದರು. 1823ರಲ್ಲಿ ಮುಂಬಯಿಯಲ್ಲಿ ಮೊದಲನೆಯ ಸರಕಾರೇತರ ಇಂಗ್ಲಿಷ್ — ಮರಾಥಿ ವಾರ ಪತ್ರಿಕೆಯು ಪ್ರಾರಂಭವಾಯಿತು. ಬಾಲಶಾಸ್ತ್ರಿ ಜಂಭೇಕರರು ಅದನ್ನು ಪ್ರಾರಂಭಿಸಿದರು. ಲೋರ್ಡ್ ಬೆಂಟಿಂಕರ ಆಡಳಿತೆಯಲ್ಲಿ ಪತ್ರಿಕೆಗಳ ಬೆಳವಣಿಗೆಗೆ ತಡೆಯಾಗಲಿಲ್ಲ. 1823ರಲ್ಲಿ ಬಂಗಾಳದಲ್ಲಿ ಬೆಂಗಾಲ್ ಹರ್ಕಾರು ಮತ್ತು ಜೋನ್ ಬುಲ್‌ಗಳೆಂಬ ಎರಡು ವಾರ ಪತ್ರಿಕೆಗಳು ಹೊರಟವು. ಅವುಗಳ ಒಟ್ಟು ದೈನಿಕ ಪ್ರಸಾರ 360 ಪ್ರತಿಗಳಾಗಿದ್ದುವು. ಅದಲ್ಲದೆ ಬಂಗಾಳದಲ್ಲಿ ಇಂಡಿಯನ್ ಗಜೆಟ್ ಗವರ್ನ್‌ಮೆಂಟ್ ಗಜೆಟ್ ಮತ್ತು ಕಲ್ಕತ್ತಾ ಕ್ರೋನಿಕಲ್‌ಗಳೆಂಬ ಮೂರು ವಾರ ಪತ್ರಿಕೆಗಳಿದ್ದುವು, 1830ರಲ್ಲಿ ಬೆಂಟಿಂಕ್‌ರವರ ಧೋರಣೆಯಿಂದಾಗಿ ಒಟ್ಟು ಪ್ರಕಟವಾಗುತ್ತಿದ್ದ ಪತ್ರಿಕೆಗಳ ಸಂಖ್ಯೆ ೩೩ಕ್ಕೇರಿತು. ಅವುಗಳ ಚಂದಾದಾರರ ಸಂಖ್ಯೆ 2205 ಆಗಿತ್ತು. ಆಗ ಮದ್ರಾಸಿನಿಂದ ಮೂರು ವಾರಪತ್ರಿಕೆಗಳೂ ಮುಂಬಯಿಯಿಂದ ಎರಡು ವಾ

(೧೧ನೇ ಪುಟ ನೋಡಿರಿ)

ಒಂದು
ಜೀವ ವಿಮಾ
ಪಾಲಿಸಿಯನ್ನು
ಇಂದೇ ಕೊಳ್ಳಿರಿ!

ತ್ವರೆ ಮಾಡಿರಿ. ನಿಮಗೆ ಜೀವ ವಿಮೆಯ ಅಗತ್ಯವಿದೆ. ಇದು ಅನುಮಾನಪಡುವ ಮತ್ತು ವಿಳಂಬಿಸುವ ಸಮಯವಲ್ಲ. ನೀವು ಮತ್ತು ನಿಮ್ಮ ಕುಟುಂಬ ಒಂದು ದಿನವಾದರೂ ಜೀವ ವಿಮಾ ಭದ್ರತೆಯಿಲ್ಲದೆ ಇರುವುದು ಯುಕ್ತವಲ್ಲ. ಅದಲ್ಲದೆ, ರಾಷ್ಟ್ರ ರಕ್ಷಣಾ ಕಾರ್ಯಗಳಲ್ಲಿಯೂ ನೀವು ಜೀವ ವಿಮಾ ಮೂಲಕ ಮಾಡಿರುವ ಉಳಿತಾಯಗಳು ಭಾಗವಹಿಸುವಂತೆ ಮಾಡಲು ನೀವು ಸಹಕರಿಸಿದಂತಾಗುವುದು. ಓರ್ವ ಎಲ್.ಐ.ಸಿ. ಏಜಂಟನನ್ನು ಶೀಘ್ರವಾಗಿ ಕಾಣಿರಿ. ನಿಮ್ಮ ಆವಶ್ಯಕತೆಗಳಿಗೆ ಬೇಕಾದ ಯೋಗ್ಯ ಪಾಲಿಸಿಯನ್ನು ನೀವು ಪಡೆಯುವಂತೆ ಆತನು ನೋಡುವನು. ಇದರ ಬಗ್ಗೆ ಆತನೊಡನೆ ಈಗಲೇ ವಿಚಾರಿಸಿರಿ. ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ನಿಮ್ಮ ದೇಶಕ್ಕಾಗಿ ತ್ವರೆಮಾಡಿರಿ.

ಜೀವ ವಿಮೆಗಿಂತ
ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ASP.LIC.96 KN

## ಸತ್ವಪರೀಕ್ಷೆಯ ವೇಳೆ
# ಉದಾಸೀನತೆಯನ್ನು ತ್ಯಜಿಸಿರಿ

ಇದೀಗ ನಮ್ಮ ಮಾತೃಭೂಮಿಯಾದ ಭಾರತವು ಎಂತಹ ಭಯಂಕರ ಪರಿಸ್ಥಿತಿಯೊಂದನ್ನು ಎದುರಿಸುತ್ತಲಿದೆಯೆಂಬುದನ್ನು ಅರಿಯದವರಿಲ್ಲ. ಚೀನಾ ಆಕ್ರಮಣವು ನಮ್ಮ ಸತ್ವಪರೀಕ್ಷೆಗೊಂದು ಸಾಧನವಾಗಿ ಎದುರು ನಿಂತಿದೆ. ಇದೊಂದು ಭಯಂಕರ ಪರೀಕ್ಷೆಯೇ ಸರಿ. ಸತಿಧರ್ಮಪರಾಯಣಳಾದ ಸೀತೆಯು ಅಗ್ನಿಪರೀಕ್ಷೆಯ ನಂತರ ತಾನು ಪರಿಶುದ್ಧಳೆಂಬುದನ್ನು ಲೋಕಕ್ಕೆ ವಿದಿತಗೊಳಿಸಿದಂತೆ ಆಕೆಯ ಮಾತೆ ಹಾಗೂ ಧರ್ಮಪರಾಯಣೆಯಾದ ಭಾರತ ಮಾತೆಯೂ ಇಂದು ಈ ಸತ್ವಪರೀಕ್ಷೆಯಲ್ಲಿ ಜಯಶೀಲಳಾಗಿ ತನ್ನ ನೆಲವನ್ನು ಮಾತ್ರವಲ್ಲದೆ ತನ್ನ ಸಂಸ್ಕೃತಿ, ಸಭ್ಯತೆ ಹಾಗೂ ಧರ್ಮವನ್ನೂ ಕಾಪಾಡಿಕೊಳ್ಳಬೇಕಾಗಿದೆ.

ಕಾಲಲ್ಲಿಳಿದ ಮುಳ್ಳನ್ನು ಹೂವೆಸಳಿಂದ ನಿವಾಳಿಸಬರುವುದಿಲ್ಲ; ಅದಕ್ಕೆ ಮುಳ್ಳೇ ಬೇಕು. ಭೂತಲದಲ್ಲಿಯ ಸಜೀವ ವಸ್ತುಗಳಲ್ಲಿ ದ್ವಿಪಾದೀಯ ಮಾನವ ಜಾತಿಯು ಅತ್ಯುತ್ಕೃಷ್ಟವಾದುದೆಂದಿದ್ದರೂ ಆ ಜಾತಿಗೆ ಸೇರಿದವರಲ್ಲಿ ಕೆಲವರು ಮಾತ್ರ ಚತುಷ್ಪಾದೀಯ ದಂಷ್ಟ್ರಾಯುಕ್ತವಾದ ರಕ್ತಲೋಲುಪ ವ್ಯಾಘ್ರಗಳಿಗೂ ಮಿಗಿಲಾದವರಿದ್ದಾರೆ. ಚೀನಾ ನಾಯಕರುಗಳಿಗಿಂದು ಭಾರತೀಯರ ಭಾಷೆ ಅರ್ಥವಾಗುವುದಿಲ್ಲ ನಮ್ಮ ಸತ್ಯ, ಧರ್ಮವೆಂಬ ಶಬ್ದಗಳು ಅವರ ಪರಿಹಾಸಕ್ಕೀಡಾಗಿವೆ. ಆದುದರಿಂದ ಸತ್ಯ ಧರ್ಮಾದಿಗಳ ತುತೂರಿಯನ್ನು ಮೇಲಿಂದ ಮೇಲೆ ಊದುವುದರಿಂದ ಕಾರ್ಯ ಸಾಧಿಸದು, ಕೋವಿ ಗುಂಡುಗಳೆದುರಿಗೆ ಮೃದುವಾಣಿ ತಾಳಲಾರದು. ಯುದ್ಧಪರಾಯಣರಾದ ಅವರನ್ನು ನಾವಿಂದು ಯುದ್ಧಮೂಲಕವೇ ಗೆಲ್ಲಲು ಸಾಧ್ಯ.

ನಿಜವಾಗಿಯೂ ನಾವಿಂದು ಯುದ್ಧ ಪ್ರಯತ್ನದಲ್ಲೇ ತೊಡಗಿದ್ದೇವೆ, ಮುಂದರಿಯುತ್ತಲೂ ಇದ್ದೇವೆ ಇದು ವರೆಗೂ ತುಸು ಉದಾಸೀನರಾಗಿದ್ದರೂ ಇದೀಗ ಆಧುನಿಕ ತರದ ಆಯುಧಗಳನ್ನು ತಯಾರಿಸಲಾರಂಭಿಸಿದ್ದೇವೆ. ಪ್ರತಿಯೊಬ್ಬ ಸಶಕ್ತ ರಾಷ್ಟ್ರಕನಿಗೂ ಆಯುಧಗಳ ಉಪಯೋಗದ ಬಗ್ಗೆ ಉಚಿತ ಶಿಕ್ಷಣವೀಯುವ ಏರ್ಪಾಡು ಮಾಡಲ್ಪಡುತ್ತಿದೆ. ಎಲ್ಲಕ್ಕೂ ಮುಖ್ಯವಾಗಿ ಉನ್ನತ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಕಾದಾಡುವ ಕಲೆಯೂ ನಮ್ಮ ಕಾಲಾಳುಗಳಿಗೆ ಕಲಿಸಲ್ಪಡುತ್ತಿದೆ. ಇದು ಅತಿ ಮುಖ್ಯ. ಏಕೆಂದರೆ ಭಾರತದ ಉತ್ತರದ ಗಡಿ ಪರ್ವತ ಪ್ರದೇಶಗಳಲ್ಲೇ ಇರುವುದಾಗಿದೆ. ಇದೀಗ ಶಾಂತಿ ಸಂಧಾನದ ಪ್ರಯತ್ನಗಳು ನಡೆಯುತ್ತಿದ್ದರೂ ರಕ್ಕಸರಲ್ಲಿ ಅಗ್ರಗಣ್ಯರೆಂಬುದಾಗಿ ಈಗಾಗಲೇ ಸಂದೇಹವಿಲ್ಲದಂತೆ ತೋರಿಸಿಕೊಂಡ ಕಮ್ಯೂನಿಸ್ಟ್ ಚೀನಾದವರಿಂದ ಲೋಕತಂತ್ರವಾದೀ ಭಾರತಕ್ಕೆ ಎಂದು ಯಾವ ಹೊತ್ತಿನಲ್ಲಿ ಮುತ್ತಿಗೆ ಬೀಳಲಿರುವುದೋ ಹೇಳ ಬರುವುದಿಲ್ಲ ಆದುದರಿಂದ ಶಾಂತಿ ಸಂಧಾನವಾದ ಪಕ್ಷದಲ್ಲೂ ನಮ್ಮ ಗಡಿ ನಾಡಿನ ಪಡಿಯಾಡಿಗಳನ್ನು ಎಡೆಬಿಡದೆ ಕಾಯ್ದುಕೊಳ್ಳಬೇಕಾದುದು ನಮ್ಮ ದೇಶರಕ್ಷಣೆಯಲ್ಲಿಯ ಆದ್ಯಕರ್ತವ್ಯ ಎಂದರೆ, ಪರ್ವತ ಪ್ರದೇಶಗಳಲ್ಲಿರುವ ಸೀಮೆಯಲ್ಲಿ ನಮ್ಮ ಸೇನೆಯು ಜನರಿರುವುದು ಅವಶ್ಯವೆಂದಾಯಿತು ಗಡಿಯ ರಕ್ಷಣಾ ಕಾರ್ಯದಲ್ಲಿ ಇವರಿಗೆ ವಿರೋಧಿಗಳೊಂದಿಗೆ ಆಗಿಂದಾಗ್ಗೆ ಸಣ್ಣ ಪುಟ್ಟ ಹೋರಾಟಗಳನ್ನು ನಡೆಸ ಬೇಕಾಗಿ ಬರಲೂ ಬಹುದು. ಆದರೆ ಪರ್ವತ ಪ್ರದೇಶದಲ್ಲಿ ಹೋರಾಡುವುದೆಂದರೆ ಕಠಿನ ಕಾರ್ಯವೇ ಸರಿ. ಆದುದರಿಂದಲೇ ಉನ್ನತ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಯುದ್ಧ ಮಾಡಲು ಪ್ರತ್ಯೇಕ ಉತ್ತಮ ತರಬೇತಿನ ಆವಶ್ಯಕತೆ. ಅಲ್ಲದೆ ಈ ಬಾರಿ ಚೀನಾದೊಂದಿಗೆ ನಡೆದ ಹೋರಾಟದಲ್ಲಿಯೂ ಭಾರತೀಯರ ಮೊದ ಮೊದಲ ಸೋಲು ಕೇವಲ ಆ ಪ್ರದೇಶದ ಸ್ಥಿತಿಗತಿಗಳನ್ನೇ ಹೊಂದಿಕೊಂಡದ್ದಾಗಿದೆ. ಹಿಮಾಚ್ಛಾದಿತ ಟಿಬೆಟ್ ಪ್ರದೇಶದಲ್ಲಿ ಹಲ ವರ್ಷಕಾಲ ತರಬೇತು ಹೊಂದಿದ ಹಾಗೂ ಅನುಕೂಲ ಪರಿಸ್ಥಿತಿಯಲ್ಲಿದ್ದ ಬಹುಸಂಖ್ಯಾಕರಾಗಿದ್ದ ಚೀನಾದ ರಕ್ಕಸರೆದುರು ಅಲ್ಪ ಸಂಖ್ಯಾಕರಾದ ಹಾಗೂ ಸರ್ವವಿಧಗಳಲ್ಲಿಯೂ ಅನಾನುಕೂಲತೆಗಳನ್ನೇ ಎದುರಿಸಬೇಕಾಗಿದ್ದ ನಮ್ಮ ಸೈನಿಕರು ನಿಲ್ಲಲಾರದೆ ಹೋದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ರಾವಣನ ರಕ್ಕಸ ಪಡೆಗೆ ಶ್ರೀರಾಮಚಂದ್ರನ ವಾನರ ಪಡೆಯೂ ಎಷ್ಟೋ ಬಾರಿ ಬೆನ್ನು ತೋರಿಸಬೇಕಾಗಿತ್ತು. ಆದರೂ ಕೊನೆಗೆ ಜಯಲಕ್ಷ್ಮಿಯು ಸದ್ಧರ್ಮವನ್ನೇ ಹುಡುಕಿಕೊಂಡು ಬಂದಿಲ್ಲವೇ!

ಉದಾಸೀನವಿಜೇತ ನೆಹರು

ನಮ್ಮ ಯುದ್ಧಸನ್ನದ್ಧತೆಯು ಪೂರ್ಣ ಫಲಕಾರಿಯಾಗಬೇಕಾದರೆ ಮೊತ್ತಮೊದಲು ನಾವು ನಮ್ಮ ಶಿಸ್ತನ್ನು ಕಾಪಾಡಿಕೊಳ್ಳಬೇಕು ಮನೆಮಠಗಳಲ್ಲೂ, ಹಳ್ಳಿಪೇಟೆಗಳಲ್ಲೂ, ಶಾಲೆ ಕಾಲೇಜುಗಳಲ್ಲೂ, ಆಟ ಹೋರಾಟಗಳಲ್ಲೂ ಶಿಸ್ತೆಂಬುದು ಅತಿ ಮುಖ್ಯ ಶಿಸ್ತಿಲ್ಲದ ಶ್ರಮ ವ್ಯರ್ಥ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಾದರೆ ಬಂದೂಕಿನ ಬಲದಿಂದ ಶಿಸ್ತು ಸಾಧಿಸಲ್ಪಡುತ್ತದೆ. ಅಲ್ಲಿ ಮನುಷ್ಯತ್ವಕ್ಕೆ ಬೆಲೆಯಿಲ್ಲ. ಭಾರತದಂತಹ ಲೋಕತಂತ್ರವಾದೀ ದೇಶಗಳಲ್ಲಿ ಮನುಷ್ಯತ್ವಕ್ಕೆ ಗೌರವಾದರಗಳಿವೆ. ಮನುಷ್ಯನಿಗೆ ಧಾರಾಳ ಸ್ವಾತಂತ್ರ್ಯವಿದೆ. ಇಲ್ಲಿ ಶಿಸ್ತೆಂಬುದು ತುಪಾಕಿಯನ್ನು ತೂಗಿಯಲ್ಲ, ಬೌದ್ಧಿಕ ಶಿಕ್ಷಣದ ಮೂಲಕ ಸಿದ್ಧಿಯಾಗಿಸಿಕೊಳ್ಳುವಂತಹುದಾಗಿದೆ. ಇಂತಹ ಶಿಸ್ತು ನಮ್ಮ ಮೇಲೆ ಇತರರಿಂದ (ಅದು ಸರಕಾರವೇ ಆದರೂ ಕೂಡಾ) ವಿಧಿಸಲ್ಪಟ್ಟಲ್ಲಿ ಅದು ನಮಗೆ ಅಷ್ಟೊಂದು ರುಚಿಸದು. ಈಗಿನ ತುರ್ತುಪರಿಸ್ಥಿತಿಯಲ್ಲಿ ನಾವಿಂತಹ ಕೆಲವು ಕಟ್ಟುಪಾಡುಗಳಿಗೆ ಬದ್ಧರಾಗಿದ್ದೇವೆ. ಇರಲಿ, ಅದು ಅನಿವಾರ್ಯ. ಆದರೆ ನಾವು ನಮ್ಮನ್ನು ಸ್ವೇಚ್ಛೆಯಿಂದಲೇ ಶಿಸ್ತಿಗೆ ಒಳಗಾಗಿಸಿಕೊಂಡಲ್ಲಿ ಅದರಿಂದ ಉತ್ಪನ್ನವಾಗುವ ಆಂತರಿಕ ಹಾಗೂ ಬಾಹ್ಯಶಕ್ತಿಯು ಮಿಗಿಲಾಗಿರುವುದು ಮಾತ್ರವಲ್ಲದೆ ಬಹು ಕಾಲ ಬಾಳುವಂತಹುದೂ ಆಗಿರುವುದು. ಪ್ರತ್ಯೇಕ ರಾಷ್ಟ್ರಕನಲ್ಲಿಯ ಇಂತಹ ಶಿಸ್ತು ಒಂದುಗೂಡಿ ಯುದ್ಧಸನ್ನದ್ಧತೆಯಲ್ಲಿ ಕಾರ್ಯೋನ್ಮುಖವಾದರೆ ಅದು ಸಿದ್ಧಿಯಲ್ಲಿ ಪೂರ್ಣತೆಯನ್ನು ಹೊಂದುವುದು.

ನಮ್ಮಲ್ಲಿ ಇರಬೇಕಾದ ಇನ್ನೊಂದು ಆವಶ್ಯಕತೆ—ಕಾರ್ಯತತ್ಪರತೆ. ಭಾರತೀಯರಲ್ಲಿ ಸಾಧಾರಣವಾಗಿ ಇಂದು ಮನೆ ಮಾಡಿರುವ ಒಂದು ರೋಗವೆಂದರೆ—ಆದಷ್ಟು ಕಮ್ಮಿ ಕೆಲಸ ಮಾಡಿ ಆದಷ್ಟು ಹೆಚ್ಚಿನ ಸಂಬಳ ಪಡೆಯುವುದು ಈಗಿನ ತುರ್ತು ಪರಿಸ್ಥಿತಿಯಲ್ಲಿ ಆಫೀಸುಗಳು ಪ್ರತಿದಿನ ಅರ್ಧ ಘಂಟೆ ಹೊತ್ತು ಹೆಚ್ಚು ಕೆಲಸ ಮಾಡಲೆಂದು ಸರಕಾರದಿಂದು ಅಪ್ಪಣೆ ಹೊರಟರೂ ಹೆಚ್ಚಿನ ಆಫೀಸುಗಳಲ್ಲಿ ಆ ಹೊತ್ತನ್ನು (ಮಾಮೂಲಿನದ್ದು ಅಲ್ಲಾಯಿದಾ) ಅತ್ತಿತ್ತ ಸುತ್ತಾಡಿ ವ್ಯರ್ಥ ಕಳೆಯುತ್ತಿರುವರೆಂದೇ ತಿಳಿದುಬಂದಿದೆ. ಕೆಲವರಲ್ಲಂತೂ ಆದಷ್ಟು ಕಮ್ಮಿ ಕೆಲಸ ಮಾಡುವುದೇ ಬಲ್ಲಿದನ ಚಿಹ್ನೆಯೆಂಬ ನಿಕೃಷ್ಟ ಭಾವನೆಯೇ ತಲೆಗೇರಿ ಬಿಟ್ಟದೆ. ಕಾರ್ಯ ಗೌರವವೆಂದರೇನೆಂಬುದು ಅವರಿಗಿನ್ನೂ ಅರಿಯದು. ಆಫೀಸುಗಳಲ್ಲಿ ಮಾತ್ರವೇ ಅಲ್ಲ, ಬೇಸಾಯದ ಗದ್ದೆಗಳಲ್ಲೂ ಇದೇ ಅವಸ್ಥೆ, ಯಜಮಾನನ ಕಣ್ಣು ತಪ್ಪಿಸಿ ಆದಷ್ಟು ಕೆಲಸಗಳ್ಳತನ ಸಾಧಿಸಿ ಹೆಚ್ಚಿನ ಕೂಲಿ ಕಸುಕೊಳ್ಳುವುದರಲ್ಲೇ ನಿಜವಾದ ಬುದ್ಧಿವಂತಿಕೆಯೆಂಬುದಾಗಿ ನಮ್ಮಲ್ಲಿಯ ಹಲ ಕೆಲಸಗಾರರ ಅಭಿಮತ. ಅಷ್ಟು ಮಾತ್ರವಲ್ಲ, ನಮ್ಮ, ಶಾಲಾ ಮಕ್ಕಳ ಬಗ್ಗೆಯಾದರೂ ಇದು ಪೂರ್ಣತಃ ಅನ್ವಯಿಸುವಂತಹುದೇ ಆಗಿದೆ. ಪಾಠ್ಯಪಟ್ಟಿಯಿಂದ ಮುಖ್ಯವೆಂದು ಪರಿಗಣಿಸಲ್ಪಟ್ಟವುಗಳನ್ನಾರಿಸಿ ಅದರಲ್ಲಿ ಪರೀಕ್ಷೆಗೆ ಬೇಕಾದವನ್ನು ಮಾತ್ರ ಹೆಕ್ಕಿ, ಯಾವ ಪ್ರಶ್ನೆ ಬರಬಹುದೆಂಬುದಾಗಿ ಮೊದಲೇ ಊಹಿಸಿ ಆ ಭಾಗವನ್ನು ಮಾತ್ರ ಪರೀಕ್ಷೆಯ ಮೂರು ದಿನ ಮೊದಲು ಓದಲಾರಂಭಿಸಿ ಕೊನೆಗೆ ಪರೀಕ್ಷೆ ಚೆನ್ನಾಗಿ ಬರೆಯಲಾಗದೆ ಹೋದರೆ ಪರೀಕ್ಷೆ ಮುಗಿದ ಮೇಲಾದರೂ ಅವರಿವರನ್ನು ಕಂಡು ಮೊರೆಯಿಟ್ಟು ಹೇಗಾದರೂ ತೇರ್ಗಡೆಯನ್ನು ಗಳಿಸಿಕೊಳ್ಳುವುದೇ ಈಗಿನ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರಿಗೆ ವಿದ್ಯಾರ್ಜನೆಯ ಫಲಭೋಗವಾಯವಾಗಿದೆ ಅವರಲ್ಲಿರುವುದು ಜ್ಞಾನತೃಷೆಯಲ್ಲ, ಬರೀ ಪಾಸುಪಿಪಾಸೆ. ಈ ರೀತಿಯ ಅವಸ್ಥೆಯು ತಡೆಯಿಲ್ಲದೆ ಮುಂದಡಿಯಿಡುತ್ತಾ ನಡೆದರೆ ಮುಂದಕ್ಕೆ ನಮ್ಮ ದೇಶದ ಗತಿಯೇನಾಗ ಬಹುದೆಂದು ಹೇಳ ಬರುವುದಿಲ್ಲ. ಆದುದರಿಂದ ನಿಜವಾಗಿಯೂ ನಾವು ನ

(೯ನೇ ಪುಟ ನೋಡಿರಿ)

## CANARA BANK'S DEPOSITS EXCEED RS. 50 CRORES

The Balance Sheet and the Profit and Loss Acccount of the Canara Bank Limited for the year ended 31st December, 1962 reveal that the deposits of the Bank have crossed the Rs. 50 crore mark to reach Rs. 50 · 86 crores showing an increase of Rs. 13 · 32 crores over last year's figures. The percentage increase under deposits is 35 · 5% (last year 21 · 9%). The Bank in consequence has entered the category of major scheduled banks of the country.

Total advances at Rs. 26 . 93 crores have shown an increase of Rs. 6 · 54 crores (32 · 74%). The ratio of advances to deposits works out to 52 · 93% indicating the high liquidity position traditionally maintained by the Bank. The Bank's investments in Government and other securities appear at Rs. 17 · 80 crores as against Rs. 14 · 38 crores in the previous balance sheet. The net profit for the year at Rs. 20 · 56 lakhs shows only a slight fall from Rs. 21 · 24 lakhs in 1961. This is in spite of the sharp rise in working costs under the impact of implementation of Bank Award, burden of deposit Insurance premium and higher rates of Corporate tax, not to mention handsome contributions to National Defence Fund.

With the last years' carry forward of Rs. 0 · 47 lakh a sum of Rs 21 · 05 lakhs is available for distribution. An amount of Rs. 5·50 lakhs is proposed to be transferred to Statutory Reserves as against Rs. 6 · 70 lakhs last year. Inclusive of Rs. 13 80 lakhs under Share Premium account, the Statutory Reserves will now stand at Rs. 76 lakhs and the paid-up capital at Rs. 75 lakhs as against Rs. 63 lakhs and Rs 50 lakhs respectively at the end of 1961.

Other appropriations recommended are Rs 0 · 59 lakh for payment or Preference Dividend at 6% (Rs.0 · 62 lakh last year) Rs.8 29 lakhs for payment of 15% dividend to equity shareholders (Rs. 5 · 40 lakhs last year), Rs. 1 lakh for contingency (Rs. 4 · 50 lakhs last year) and Rs. 5 · 14 lakhs for bonus to staff (Rs. 4 lakhs last year), leaving a balance of Rs. 0 · 53 lakh to be carried forward.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ ೪೨ | ಉಡುಪಿ ೧೪-೨-೧೯೬೩ | ವಾರ ೨೩ |
|---|---|---|


## ನೀರಿನ ವಿವಾದ

ನಮ್ಮ ರಾಜ್ಯದ ಬೃಹತ್ ಸಮಸ್ಯೆಗಳಲ್ಲಿ ಕೃಷ್ಣಾ ನದಿಯ ನೀರಿನ ಪ್ರಶ್ನೆಯು ದಿನದಿಂದ ದಿನಕ್ಕೆ ಗಡುಚಾಗುತ್ತ ಬರುತ್ತಿದೆ. ಈ ಸಂಬಂಧದಲ್ಲಿ ಸಂಬಂಧಿಸಿದ ರಾಜ್ಯಗಳ ನಡುವೆ ತೀವ್ರ ಭಿನ್ನಾಭಿಪ್ರಾಯವಿದ್ದು ಇದನ್ನು ದೂರ ಮಾಡುವುದು ಇದುವರೆಗೂ ಸಾಧ್ಯವಾಗಿಲ್ಲ ಮಾತ್ರವಲ್ಲ ನಿಕಟ ಭವಿಷ್ಯದಲ್ಲಿ ಅದು ಸಾಧ್ಯವೆನಿಸುವ ಸಲ್ಲಕ್ಷಣಗಳೂ ಗೋಚರಿಸುತ್ತಿಲ್ಲ. ಕೇಂದ್ರ ಸರಕಾರದಲ್ಲಾಗಲೀ ಯೋಜನಾ ಆಯೋಗದಲ್ಲಾಗಲೀ ನಮ್ಮ ರಾಜ್ಯವನ್ನು ಉತ್ತಮ ರೀತಿಯಲ್ಲಿ, ದಿಟ್ಟತನದಿಂದ ಪ್ರತಿನಿಧೀಕರಿಸುವವರು ಇಲ್ಲವೆಂಬುದರಿಂದಲೇ ಪ್ರತಿಯೊಂದು ದಿಸೆಯಲ್ಲಿಯೂ ನಾವು ಹಿಂದೇಟು ಹಾಕುತಿದ್ದೇವೆ; ಇದಕ್ಕೆ ನಮ್ಮ ರಾಜ್ಯ ಸರಕಾರದ ಅಭದ್ರತೆಯೂ ಕಾರಣವೆಂಬ ದೂರುಗಳು ಹಿಂದೆ ಕೇಳಿಬರುತಿದ್ದುವು. ಇಂದಿಗಾದರೂ ಈ ದುಸ್ಥಿತಿಯು ಸಂಪೂರ್ಣ ದೂರವಾಗಿದೆಯೆನ್ನುವಂತಿಲ್ಲ. ಹೇಗಿದ್ದರೂ ನಮ್ಮ ರಾಜ್ಯ ಸರಕಾರವು ಜನಗೆ ನ್ಯಾಯವಾಗಿ ದೊರೆಯಲೇ ಬೇಕಾದ ನೀರಿನ ಅಂಶವನ್ನು ಪಡೆದೇ ತೀರುವ ದೃಢ ಸಂಕಲ್ಪವನ್ನು ಮಾಡಿದ್ದು ಮತ್ತು ಈ ಬಗ್ಗೆ ಅದು ಭಗೀರಥ ಪ್ರಯತ್ನ ನಡೆಸುತ್ತಿರುವುದು ೨॥ ಕೋಟಿ ಕನ್ನಡಿಗರ ಅಭಿಲಾಷೆಯನ್ನು ಪೂರೈಸುವುದಕ್ಕೆ ಸಹಾಯಕವೆನಿಸಿದೆ.

ಈ ಹಿಂದೆ ಗುಲ್ಹಾಟಿ ಆಯೋಗದ ಮುಂದೆ ನಮ್ಮ ರಾಜ್ಯ ಸರಕಾರವು ತನ್ನ ಬೇಡಿಕೆಗಳು ನ್ಯಾಯವೆಂಬುದನ್ನು ಮನವರಿಕೆ ಮಾಡಿಕೊಟ್ಟಿತ್ತು. ಕಾರಣಾಂತರದಿಂದ, ಆ ಆಯೋಗದ ಸುನಿಶ್ಚಿತವಾದ ಅಂಕೆ ಅಂಶಗಳಿಂದ ಆಡಕವಾದ ವರದಿಯು ಎಲ್ಲ ರಾಜ್ಯಗಳಿಗೂ ಮಾನ್ಯವಾಗಲಿಲ್ಲ. ಆದುದರಿಂದಾಗಿ, ಕೇಂದ್ರ ನೀರಾವರಿ ಮಂತ್ರಿ ಹಫೀಜ ಮಹಮ್ಮದರೇ ಸ್ವತಃ ಮಧ್ಯಸ್ಥಿಕೆ ವಹಿಸಬೇಕಾಗಿ ಬಂತು. ಇವರ ಮುಂದೆಯೂ ನಮ್ಮ ಗೋಳನ್ನು ತೋಡಿಕೊಂಡದ್ದಾಯಿತು. ಪರಿಹಾರವು ಮಹಾರಾಷ್ಟ್ರ ಆಂಧ್ರ ರಾಜ್ಯಗಳಿಗೂ ಸಂಬಂಧಿಸಿರುವುದರಿಂದ ಅವರಿಂದ ಯಾವ ನಿರ್ದಿಷ್ಟ ಭರವಸೆಯೂ ದೊರೆಯಲಿಲ್ಲ. ಕೃಷ್ಣಾನದಿಯ ಹೆಚ್ಚಿನ ಅಂಶವು ನಮ್ಮ ರಾಜ್ಯದಲ್ಲಿಯೇ ಹರಿಯುವುದರಿಂದ ನಮಗೆ ಅದರ ನೀರಿನಲ್ಲಿ ನೂರಕ್ಕೆ ೪೭ರಷ್ಟು ದೊರೆಯಬೇಕು ಎಂಬುದೇ ನಮ್ಮ ಬೇಡಿಕೆ. ಇಷ್ಟು ನೀರು ನಮಗೆ ಸಿಕ್ಕಿತೆಂದರೆ ಸದಾ ಬರಗಾಲದ ಜಿಲ್ಲೆಗಳಾದ ಬಿಜಾಪುರ, ಗುಲ್ಬರ್ಗ, ಬೀದರ ರಾಯಚೂರು ಮೊದಲಾದವುಗಳ ಭವಿಷ್ಯತ್ತು ಉಜ್ವಲವಾಗುವುದು ಸಾಧ್ಯ. ಇದುವರೆಗೂ ನಾವು ನದೀ ನೀರನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಮುಂದಕ್ಕಾದರೂ ನಾವು ಕೈಗೊಂಡಿರುವ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರದೆ ಹೋದರೆ ಪರಿಸ್ಥಿತಿಯು ಹದಗೆಡುವುದು. ಆಂಧ್ರ ಸರಕಾರವು ನಾಗಾರ್ಜುನಸಾಗರ ಮತ್ತು ಶ್ರೀ ಶೈಲ ಯೋಜನೆಗಳನ್ನು ಪೂರ್ತಿ ಮಾಡಿಕೊಂಡಿತೆಂದರೆ, ಮತ್ತೆ ನಮಗೆ ನೀರೇ ದೊರೆಯಲಾರದು; ನಮ್ಮ ರಾಜ್ಯದ ಸಾಂಪತ್ತಿಕ ಸ್ಥಿತಿಯೂ ಏರಲಾರದು. ಕೇಂದ್ರ ಯೋಜನಾ ಆಯೋಗದ ಅನುಮತಿಯನ್ನು ಪಡೆದುಕೊಳ್ಳದೇನೇ ಆಂಧ್ರವು ಮುಂದಡಿಯಿಟ್ಟಿರುವುದರಿಂದ ಸಮಸ್ಯೆಯು ಮತ್ತಷ್ಟು ಉಲ್ಬಣಾವಸ್ಥೆಗೇರಿದೆ. ಗೋದಾವರಿ ನದಿಯ ನೀರನ್ನು ಧಾರಾಳವಾಗಿ ಬಳಸಿಕೊಳ್ಳುವ ಸದವಕಾಶ ಆಂಧ್ರಕ್ಕಿರುವುದರಿಂದ ಅದು ಕೃಷ್ಣಾ ನೀರಿನ ಬಗ್ಗೆ ವೃಥಾ ಅನ್ಯಾಯವಾದ ಬೇಡಿಕೆಯನ್ನು ನೀಡುವುದು ಅಸಂಬದ್ಧ ಮತ್ತು ಇದನ್ನು ಕೇಂದ್ರ ಸರಕಾರವಾಗಲೀ ಯೋಜನಾ ಆಯೋಗವಾಗಲೀ ಮನ್ನಿಸಿತೆಂದರೆ, ಅದು ಅಕ್ಷಮ್ಯ ಅಪರಾಧವಾಗುವುದು. ಕರ್ನಾಟಕವನ್ನು ವಂಚಿಸಿ, ಅದಕ್ಕೆ ದ್ರೋಹ ಬಗೆದು ತನ್ನ ಸ್ಥಾನಬಲದಿಂದ ಮತ್ತು ಪ್ರಭಾವ ಬಲದಿಂದ ಆದು ತನ್ನ ಸ್ವಾರ್ಥ ಸಾಧನೆಯು ಕೃತ ಕೃತ್ಯವಾಯಿತೆಂದರೆ, ಕರ್ನಾಟಕಕ್ಕೆ ದ್ರೋಹ ನಡೆದಂತೆ. ಆದುದರಿಂದ ಈ ವಿವಾದದ ಪರಿಹಾರಕ್ಕಿರುವ ಮಾರ್ಗಗಳು ಸರ್ವಮಾನ್ಯವಾಗುವುದು ಅವಶ್ಯವೆಂದಾದರೆ, ಕೇಂದ್ರವು ನಿಷ್ಪಕ್ಷಪಾತತನದಿಂದ ಇಂದು ನ್ಯಾಯದಾನ ಮಾಡಬೇಕು.

ಇದಕ್ಕೆ ಇರುವ ಪರಿಹಾರ ಮಾರ್ಗಗಳು ಕೇವಲ ಎರಡು. ಮೊದಲನೆಯದಾಗಿ, ಆಂಧ್ರವು ಈಗಾಗಲೇ ನೀರನ್ನು ಪಡೆಯುತ್ತಿರುವುದರಿಂದ ಮತ್ತು ಅದು ಗೋದಾವರಿಯ ನೀರನ್ನು ಉಪಯೋಗಿಸಿಕೊಳ್ಳುವುದು ಸಾಧ್ಯವೆಂಬುದರಿಂದ ತನ್ನ ನಾಗಾರ್ಜುನ ಸಾಗರ ಮತ್ತು ಶ್ರೀಶೈಲ ಯೋಜನೆಗಳನ್ನು ಕೈಬಿಡಬೇಕು; ಕಡಿಮೆ ಪಕ್ಷ ಒಂದನ್ನಾದರೂ ಅದು ಕೃತಿಗಿಳಿಸಲೇ ಬಾರದು. ಆದರೆ, ಅದು ತನ್ನ ಕಾರ್ಯವನ್ನು ಮುಂದುವರಿಸಿರುವುದರಿಂದ ಉತ್ತರದಲ್ಲಿ ಹರಿಯುವ ಗೋದಾವರಿಯ ನೀರನ್ನು ಕೃಷ್ಣೆಯ ಮೂಲಕ ಹರಿಸಿಕೊಳ್ಳಬೇಕು. ಎರಡನೆಯ ಉಪಾಯವು ನೋಡಲು ವಿಲಕ್ಷಣವಾಗಿ ಕಂಡರೂ ಅದು ಸಾಧ್ಯವೆಂದು ಗುಲ್ಹಾಟಿ ಆಯೋಗವೂ ಅಭಿಪ್ರಾಯ ಪಟ್ಟಿದೆ. ಆದುದರಿಂದ ಇದನ್ನು ಸ್ವೀಕರಿಸಿದರೆ ಅಪರಾಧವಾಗದು. ಇದುವರೆವಿಗೂ ಕರ್ನಾಟಕದ ಯಾವುದೇ ಯೋಜನೆಗಳು ಸಂಪೂರ್ಣ ಯಶಸ್ವಿಯಾಗಿ ಮುಂದುವರಿದುದು ಇಲ್ಲ. ಹೊಸ ರೈಲು ದಾರಿಗಳ ರಚನೆಯು ನಿದರ್ಶನವೊಂದನ್ನೇ ಇದಕ್ಕೆ ಸಾಕ್ಷಿಯಾಗಿ ಹೇಳಬಹುದು. ಉಳಿದ ರಾಜ್ಯಗಳಲ್ಲಿ ಒಂದಲ್ಲ ಒಂದು ರೀತಿಯಿಂದ ರೈಲುದಾರಿಗಳು ನಿರ್ಮಾಣವಾದರೂ ನಮ್ಮ ರಾಜ್ಯದಲ್ಲಿ ಒಂದು ಫರ್ಲಾಂಗು ಹೊಸ ರೈಲುದಾರಿ

## ವಾರ್ತಾ ವೇದಿಕೆ

### ಚೀನಿಯರ ಹೃದಯದಲ್ಲಿ....

ಕೊಲಂಬೋ ಸಮ್ಮೇಳನದ ಸೂಚನೆಗಳನ್ನು ಭಾರತವು ಇದ್ದಕ್ಕಿದ್ದಂತೆ ಒಪ್ಪಿರುವುದು ಭಾರತದ ಶಾಂತಿ ನೀತಿಯ ಬಗ್ಗಿನ ಕಳಕಳಿಯಿಂದಾದರೆ ಚೀನ ಅವನ್ನು ಸಮಾಧಿ ಮಾಡುತ್ತಿರುವುದು ಅದರ ಸಾಮ್ರಾಜ್ಯವಾದದ ಪ್ರತೀಕ. ಪ್ರಾರಂಭದಲ್ಲೇ ಸೂಚಿಸಿದ್ದಂತೆ ಕೊಲಂಬೋ ಸಮ್ಮೇಳನವು ಆಯಶಸ್ವಿಯೆನಿಸುವ ದಿನ ಪ್ರಾಯಃ ಅತಿ ನಿಕಟವಾಗುತ್ತಿದೆ. ಆದರೂ ಚೀನಾದ ಮನವೊಲಿಸುವ ಪ್ರಯತ್ನವನ್ನು ಮತ್ತಷ್ಟು ಮುಂದುವರಿಸುವ ಆಶಯವನ್ನು ಸಮ್ಮೇಳನದ ಪ್ರತಿನಿಧಿಗಳು ಇಟ್ಟುಕೊಂಡಿದ್ದಾರೆ. ಟಾಂಗನೀಕಾದ ಮೋಶಿಯಲ್ಲಿ ಸೇರಿದ ಆಫ್ರೇಸ್ಯಾ ಮೈತ್ರಿ ಸಮ್ಮೇಳನದ ಸಂದರ್ಭದಲ್ಲಿ ಚೀನೀಯ ಪ್ರತಿನಿಧಿಗಳು 'ನಾವು ಭಾಯಿ-ಭಾಯಿ ಅಲ್ಲ ಹೊಡೆದಾಡುವೆವು' ಎಂದು ಉದ್ಗರಿಸಿ ಭಾರತೀಯ ಪ್ರತಿನಿಧಿಗಳನ್ನು ಬಿರು ನುಡಿಯುದು ಮಾವೋ ಮತ್ತು ಲಾಯರ ಅಂತರಂಗದ ಹವಣಿಕೆಯಿರಬಾರದೇಕೆ?

### ಶಾಂತಿಯಾರಿಗೆ ಬೇಕು?

ಯಾರು ಅದೆಷ್ಟೇ ಪ್ರಯತ್ನಿಸಿದರೂ ಅವರು ಸೋತು ಮೋಶಿಯ ಸಮ್ಮೇಳನದಲ್ಲಿ ಭಾರತವು ವಿಜಯ ಗಳಿಸಿತು. ಕೊಲಂಬೋ ಸೂಚನೆಗಳನ್ನು ಮನ್ನಿಸಿ ಭಾರತ-ಚೀನಾ ಸೀಮಾ ವಿವಾದವನ್ನು ಬಗೆಹರಿಸಿಕೊಳ್ಳಬೇಕೆಂದು ಎರಡೂ ರಾಷ್ಟ್ರಗಳನ್ನು ಕೇಳಿಕೊಳ್ಳುವ ಗೊತ್ತುವಳಿಯೊಂದು ಪ್ರಚಂಡ ಹರ್ಷೋದ್ಗಾರಗಳ ನಡುವೆ ಮಂಜೂರಾಯಿತು. ನಿಜ. ಭಾರತವು ಈಗಾಗಲೇ ಅದನ್ನು ಮನ್ನಿಸಿರುವುದರಿಂದ ಚೀನಾವನ್ನು ಮಾತ್ರ ಹಾಗೆ ಕೇಳಿಕೊಳ್ಳಬೇಕಾಗಿತ್ತಾದರೂ ಸಾಂಪ್ರದಾಯಿಕವಾಗಿ ಈ ಗೊತ್ತುವಳಿಯನ್ನು ಒಪ್ಪಿಕೊಂಡಿತು ಆಫ್ರೇಸ್ಯಾ ಐಕ್ಯ ಸಮ್ಮೇಳನವು ಈಗ ಕೊಲಂಬೋ ಸೂಚನೆಗಳಿಗೆ ತನ್ನ ಮುದ್ರೆಯನ್ನು ಒತ್ತಿದಂತಾಯಿತೇ ಹೊರತು, ಚೀನಾವನ್ನು ಶಾಂತಿ ವಿಧಾನದತ್ತ ಒಲಿಸಿದಂತಾಗಲಿಲ್ಲ. ಚೀನಾ ಶಾಂತಿ ಬಯಸುವುದೇ ಆದರೆ, ತನ್ನ ಮೆಚ್ಚಿದ ಈ ಎರಡನೆಯ ಶಾಂತಿ ಕರೆಯನ್ನಾದರೂ ಮನ್ನಿಸಬೇಕು; ಅದಕ್ಕೆ ಅಶಾಂತಿಯೇ ಬೇಕಾಗಿದ್ದರೆ—?

### ಪತಿತರೂ ಪಾವನರೂ

ಒಂದು ರಾಷ್ಟ್ರದ ಸರಕಾರವು ಪತನಗೊಳಿಸಲ್ಪಟ್ಟಾಗ ಪತಿತರೂ ಪಾವನರಾದವರ ಉತ್ಪತ್ತಿಗೆ ಬೀಳುವುದು ಸಹಜ. ಹೀಗೆ ಅಧಿಕಾರಕ್ಕೆ ಬಂದ ಪಾವನರೆನಿಸಿಕೊಳ್ಳುವವರೂ ಮತ್ತೊಂದು ದಿನ ಪತಿತರಾದರೆ ಆಶ್ಚರ್ಯವಿಲ್ಲ. ಇರಾಕಿನಲ್ಲಿ ನಾಲ್ಕಾವರೆ ವರ್ಷದ ಹಿಂದೆ ಪಾವನರಾದ ಪ್ರಧಾನ ಮಂತ್ರಿ ಕಾಸೀಮರನ್ನು ಗದ್ದುಗೆಯಿಂದಿಳಿಸಿದ ಕ್ರಾಂತಿಕಾರಿ ಪಕ್ಷದ ಧುರೀಣರು ಅವರನ್ನು ಗುಂಡಿಗಾಹುತಿ ನೀಡಿದ್ದು ಮಾತ್ರವಲ್ಲ, ಅವರ ಹಿಂಬಾಲಕರ ಬೇಟೆಯಲ್ಲಿ ವ್ಯಸ್ತರಾಗಿದ್ದಾರೆ. ಕರ್ನಲ್ ಅಬ್ದುಲ್ ಸಲಾಮ ಮಹಮ್ಮದ ಆರೀಫರ ಅಧ್ಯಕ್ಷತೆಯಲ್ಲಿ ಅಲ್ಲಿ ಸ್ಥಾಪಿತವಾದ ಸರಕಾರವು ತಾಟಸ್ಥ್ಯನೀತಿ, ಬಾಡುಂಗ ತತ್ವಗಳಲ್ಲಿ ವಿಶ್ವಾಸವನ್ನು ತೋರಿಸಿದೆ ಮಾತ್ರವಲ್ಲ, ಹೊಸತಾಗಿ ನಿರ್ಮಾಣಗೊಳ್ಳುತ್ತಿರುವ ಸಾಮ್ರಾಜ್ಯ ವಾದದ ವಿರೋಧಿಯಾಗಿ ಮುನ್ನಡೆಯುತ್ತಿದೆಯೆಂದು ಹೇಳಿದೆ. ಅದೇನೇ ಇದ್ದರೂ ಪತಿತ-ಪಾವನರ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಷ್ಟು ಅಂತರವು ಬೆಳೆದುಬಂದಿಲ್ಲವೆಂಬುದು ನಿತ್ಯ ಸತ್ಯ.

### ಆಶಾವಾದಕ್ಕೆ ಜಯ

ಆಶಾವಾದಿಗಳಾಗಬೇಕು ಎಂಬುದು ಭಾರತೀಯರ ರಕ್ತದತ್ತ ತತ್ವ. ಏಕೆಂದರೆ ಮಾನವನು ಭವಿಷ್ಯತ್ತಿನ ಆಸೆಯಿಂದಲೇ ಬದುಕುತ್ತಾನೆ. ಇಂತಹ ಆಶಾವಾದವು ಮಿಥ್ಯೆಯಾಗುವುದಿಲ್ಲವೆಂಬುದಕ್ಕೆ ಇಂದಿಗೂ ನಿದರ್ಶನವೊಂದು ತೋರಿ ಬಂದಿದೆ. ರಶ್ಯವು ಮಿಗ್ ವಿಮಾನಗಳನ್ನು ಕೊಡುವುದಾಗಿಯೂ ಭಾರತದಲ್ಲಿಯೇ ಅವುಗಳ ನಿರ್ಮಾಣವಾಗುವಂತೆ ನೆರವೀಯುವುದಾ

(೬ನೇ ಪುಟ ನೋಡಿರಿ)

ಯಾಗುವ ಅವಕಾಶ ಬಂದಿಲ್ಲ. ನೆರೆಯ ರಾಜ್ಯಗಳ ಸಂಪತ್ತನ್ನು ಕಂಡು ನಾವು ಕರುಬುವುದಲ್ಲ; ಅವರಂತೆಯೇ ನಮಗೂ ನ್ಯಾಯವಾದ ಪಾಲು ಅಭಿವೃದ್ಧಿ ಯೋಜನೆಗಳಲ್ಲಿ ನೀಡಿರಿಯೆಂದು ಕೇಳುವುದು. ಈ ಬಾರಿ ರಾಜ್ಯ ಸರಕಾರದ ನೀರಿನ ವಿಷಯದಲ್ಲಿ ತಳೆದ ಧೋರಣೆಯು ನ್ಯಾಯೋಚಿತವಾದುದು ಮತ್ತು ಕೆಚ್ಚಿನಿಂದ ಕೂಡಿದುದು ಸರಕಾರದ ಈ ನೀತಿಯು ಎಲ್ಲ ಕನ್ನಡಿಗರ ಬೆಂಬಲ ಪಡೆದಿದೆ; ಇದನ್ನು ಕೃತಕಾರ್ಯಗೊಳಿಸುವುದು ಪ್ರಜಾಸರಕಾರದ ಕರ್ತವ್ಯ. ಹಫೀಜ ಇಬ್ರಾಹಿಮರು ತೊಡಗಿದ ವಿಚಾರ ವಿನಿಮಯಗಳು ಸಫಲವಾಗಲಿ.

## ಕಾಶ್ಮೀರದ ಭವಿಷ್ಯ

ಭಾರತ—ಪಾಕ್‌ಗಳ ನಡುವಣ ಮಾತುಕತೆಯ ಮೂರನೆಯ ಸುತ್ತು ಈಗತಾನೇ ಮುಗಿದಿದೆ. ಮೊದಲೆರಡು ಬಾರಿ ಸಮಸ್ಯೆಗಳನ್ನು ತಿಳಿಗೊಳಿಸುವ ಪ್ರಯತ್ನಗಳು ನಡೆದಿದ್ದರೂ, ಈ ಸಲ ಮಾತ್ರ ಕಾಶ್ಮೀರದ ಬಗ್ಗೆ ನಿರ್ದಿಷ್ಟ ಸೂಚನೆಯು ಒಂದು ಬಂದಿದ್ದು ಪಾಕಿಸ್ತಾನವು ತನ್ನ ಹಳೆಯ ಹಾಡನ್ನೇ ಮರಳಿ ಮರಳಿ ಹಾಡತೊಡಗಿದೆ. ಕಾಶ್ಮೀರವು ಯಾರಿಗೆ ಸೇರಬೇಕು ಎಂಬುದರ ಮೇಲೆ ತಾಸುಗಟ್ಟಲೆ ಚರ್ಚೆ ನಡೆಸಿದರೆ, ಪ್ರಶ್ನೆ ದೂರವಾಗುವುದಿಲ್ಲ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ದೃಢೇಚ್ಛೆಯು ಇದ್ದೇ ಇರಬೇಕು. ಕಾಶ್ಮೀರದಲ್ಲಿ ಜನಮತಗಣನೆ ಮಾಡುವುದು ಅಥವಾ ಅದನ್ನು ವಿಭಜಿಸುವುದು ಪಾಕಿಸ್ತಾನದ ಸಲಹೆ. ಆದರೆ, ಇವರಲ್ಲಿ ಜಾತೀಯತೆಯು ಉಲ್ಬಣಗೊಳ್ಳುವುದು ಎಂಬ ಹೆದರಿಕೆಯಿರುವುದರಿಂದ ಭಾರತವಿದನ್ನು ಒಪ್ಪುವುದಿಲ್ಲ. ಮಾತ್ರವಲ್ಲ, ತನ್ನ ದೃಢ ನಿಲುವೆಯನ್ನು ಅದು ಈಗಾಗಲೇ ಬಹಿರಂಗಪಡಿಸಿದೆ. ಹೀಗೆ ಮೂರನೆಯ ಸುತ್ತು ಯಶಸ್ವಿಯಾಗುವುದು ಕಠಿನವಿದೆ. ಇದು ಸಮಾಧಾನಗೊಳ್ಳದಿದ್ದರೆ, ಮುಂದೆ ಮಾತುಕತೆ ನಡೆಯುವುದೂ ಕಷ್ಟಪ್ರದವಿದೆ. ಈ ಮೊದಲೇ ಎಲ್ಲರಿಗೂ ತಿಳಿದಿರುವಂತೆ, ಉಭಯತರ ನಡುವಿರುವ ಮಹಾಸಮಸ್ಯೆಯೆಂದರೆ ಇದು. ಇದು ಮುರಿಯಿತೆಂದರೆ, ಪಾಕಿಸ್ತಾನಕ್ಕೆ ಮಿತ್ರತ್ವ ಮನಸ್ಥಾಪವೂ ಭಾರತದೊಡನೆ ಸ್ಥಾಪಿಸುವುದು ಸಾಧ್ಯವಿಲ್ಲ.

——— —

## ಅಲ್ಲಲ್ಲಿಯ ಸುದ್ದಿಸಾರ

**ಮಹಾ ಶಿವರಾತ್ರಿಉತ್ಸವ**-ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ವರ್ಷಂಪ್ರತಿ ಜರಗುವ ಮಹಾ ಶಿವರಾತ್ರಿ ಉತ್ಸವವು ಇದೇ ತಿಂಗಳ ತಾ.17ರಲ್ಲಿ ಪ್ರಾರಂಭವಾಗಿ ತಾ.24ರ ವರೆಗೆ ವಿವಿಧ ಕಾರ್ಯಕಲಾಪಗಳಿಂದ ಜರಗುವುದು. ತಾ.17ಕ್ಕೆ ಧ್ವಜಾರೋಹಣ, ತಾ 23ಕ್ಕೆ ಜಾಗರಣೆ, ತಾ. 23ಕ್ಕೆ ಸಮಾರಾಧನೆ ಮತ್ತು 24ಕ್ಕೆ ಅವಭೃತ ಸ್ನಾನ (ಓಕುಳಿ).

**ಸಂಗೀತ ಕಛೇರಿ** —ಇದೇ ತಾ. 9ರಂದು ಉಡುಪಿ ಸಂಗೀತ ಸಭೆಯ ಆಶ್ರಯದಲ್ಲಿ ವರದೇಂದ್ರ ಕಲಾಮಂದಿರದಲ್ಲಿ ಸಂಗೀತರತ್ನ ಟಿ. ಚೌಡಯ್ಯನವರ ಸುಶ್ರಾವ್ಯ ಪಿಟೀಲು ಸಂಗೀತ ಕಛೇರಿಯೊಂದು ನೆರವೇರಿತು. ಶ್ರೀ ವಿ. ದೊರೆಸ್ವಾಮಿ ಅಯ್ಯರು ವೀಣಾವಾದಕರಾಗಿದ್ದರು. ಆರಂಭದಲ್ಲಿ ಸಂಗೀತ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿ ಕಲಾಕಾರರ ಪರಿಚಯ ಮಾಡಿಕೊಟ್ಟರು. ಅಂತ್ಯದಲ್ಲಿ ಶ್ರೀ ಎಸ್. ಎಲ್. ನಾರಾಯಣ ಭಟ್ಟರು ವಂದನೆ ಸಲ್ಲಿಸಿದರು.

**ಸತ್ಕಾರಕೂಟ** — ಉಡುಪಿ ಪ್ರಕಾಶ ಇಲೆಕ್ಟ್ರಿಕ್ ಸ್ಟೋರ್ಸ್‌ನ ಮ್ಯಾನೇಜರ್ ಶ್ರೀ ಯು. ಮೋಹನದಾಸರು (ಶ್ರೀ ಶೀನಪ್ಪ ಕುಂದರ್ ಅವರ ಪುತ್ರ) ಕುಮಾರಿ ಇಂದುಮತಿಯನ್ನು (ಶ್ರೀ ವೈ. ಕೆ. ಎ. ಪುತ್ರನ್ನರ ಪುತ್ರಿ) ಇದೇ ಫೆಬ್ರವರಿ 3ರಂದು ಮುಂಬಯಿಯಲ್ಲಿ ಪಾಣಿಗ್ರಹಣಮಾಡಿಕೊಂಡ ಸಲುವಾಗಿ ಇದೇ ತಾ. 10ನೇ ಸಂಜೆ ಉಡುಪಿಯ ತಮ್ಮ ನಿವಾಸದಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಇದಕ್ಕೆ ಮಹನೀಯರನೇಕರು ಚಿತ್ತೈಸಿ ವಧೂವರರನ್ನು ಆಶೀರ್ವದಿಸಿದರು.

**ಡಿ| ರಂಗರಾಯರ ದಿನಾಚರಣೆ**

ತಾ. 30—1—63ರಂದು ಉಡುಪಿ ಬನ್ನಂಜೆ ಶಾಲೆಯಲ್ಲಿ ದಿ| ಕುದ್ಮುಲ್ ರಂಗರಾಯರ 30ನೇ ಪುಣ್ಯ ತಿಥಿಆಚರಣೆಯು ಕೌನ್ಸಿಲರ್ ಶ್ರೀ ಯಂ ಗೋಪಾಲಕೃಷ್ಣ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಹರಿಜನೋದ್ಧಾರದ ಬಗ್ಗೆ ಶ್ರಮಿಸಿದವರ ಕುರಿತು ಭಾಷಣಗಳಾದುವು.

**ಶಾಲಾ ವರ್ಧಂತ್ಯುತ್ಸವ**— ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ 9ರಂದು ಬಾಸೆಲ್ ಮಿಶನಿನ ಫೀಲ್ಡ್ ಸೆಕ್ರೆಟರಿ ರೇ. ಎ ಪೈಗಲ್ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಹೆಡ್ ಮಾಸ್ಟರ್ ಶ್ರೀ ಎ ಜೋಶ್ವರು ಶಾಲಾ ವರದಿಯನ್ನು ಓದಿದರು. ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಶ್ರೀ ಎ. ಲಕ್ಷ್ಮೀನಾರಾಯಣಾಚಾರ್ಯರಿಂದ ಸ್ವಸ್ತಿ ವಾಚನ, ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದ ಬಳಿಕ ಹಿಂದಿ, ಇಂಗ್ಲಿಷ್, ನಾಟಕ ಪ್ರದರ್ಶನವಾಯಿತು. ರಾತ್ರಿ ದುರ್ಗಾದಾಸ್ ಕನ್ನಡ ನಾಟಕಾಭಿನಯವಿತ್ತು.

**ವಾರ್ಷಿಕೋತ್ಸವ**—ಉಡುಪಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕೋತ್ಸವವು ತಾ 10—2—1963ರಂದು ಶ್ರೀ ರಾಮಕೃಷ್ಣ ಥಿಯೇಟರಿನ ಹಿಂದಿನ ಮೈದಾನಿನಲ್ಲಿ ಶ್ರೀ ಉದ್ಯಾವರ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿಕ್ರಮದ ಸಂಪಾದಕ ಶ್ರೀ ಬಿ. ಎಸ್. ಎನ್. ಮಲ್ಯರು ಮುಖ್ಯ ಭಾಷಣ ಕರ್ತರಾಗಿದ್ದರು. ಸಭಾರಂಭದ ಮೊದಲು ಧ್ವಜ ಮೆರವಣಿಗೆ ಇತ್ತು.

**ಭಾಗಿಮಲೆಯ ಪ್ರಕರಣ**—ಈ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನು ದೊಡ್ಡ ತಲೆ ಬರಹದಲ್ಲಿ ಕೊಟ್ಟ ಬಾತ್ಮಿಯನ್ನು ಓದಿ ಆಶ್ಚರ್ಯವಾಯಿತು. ಭಾಗಿಮಲೆಯಂತ ಸರಕಾರಿ ಕಾಡಿನಲ್ಲಿ ಕಾಯದೆ ಹಾಗೂ ನೀತಿಬದ್ಧವಾಗಿ ದಿಮ್ಮಿಗಳನ್ನು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದ್ದ ವಿಚಾರವಾಗಿದ್ದು, ಕೆಲವು ಹಿತಾಸಕ್ತಿಗಳು ಸಾರ್ವಜನಿಕರಲ್ಲಿ ತಪ್ಪು ಕಲ್ಪನೆಯನ್ನು ಉಂಟು ಮಾಡಲು, ಜಿಲ್ಲಾ ಕಾಂಗ್ರೆಸ್ ಕಮಿಟಿಯಂತಹ ಜವಾಬ್ದಾರಿ ಸಂಸ್ಥೆಯನ್ನು ಉಪಯೋಗಿಸುವಲ್ಲಿ ಸಮರ್ಥರಾದದ್ದು ಪ್ರಾಮಾಣಿಕ ಜನರಲ್ಲಿ ಆಶ್ಚರ್ಯವನ್ನು, ಕುತೂಹಲವನ್ನು ಉಂಟುಮಾಡಿವೆ. ಈ ವಿಚಾರದಲ್ಲಿ ಅವಶ್ಯವುಳ್ಳ ಸಾರ್ವಜನಿಕ ಸ್ಪಷ್ಟೀಕರಣವನ್ನು ಕೊಡದಿದ್ದಲ್ಲಿ, ಜಿಲ್ಲಾ ಕಾಂಗ್ರೆಸು ಕಮಿಟಿಯ ವಿಚಾರದಲ್ಲೂ ಸರಕಾರದ ಬಗ್ಗೆಯೂ ಸಾರ್ವಜನಿಕರಲ್ಲಿ ತಪ್ಪು ಕಲ್ಪನೆವುಂಟಾಗಲು ಎಡೆ ಕೊಡುವಂತಹದಿದ್ದುದರಿಂದ ಇದನ್ನು ಸಾರ್ವಜನಿಕರ ಅವಗಾಹನೆಗೆ ತರಬೇಕಾಯಿತು ಎಂದು ಶ್ರೀ ಕೆ. ಚಂದ್ರಶೇಖರ ನಾಯಕ್ ಬಿ. ಕೋಮ್, ಮಂಗಳೂರು ಇವರು ಬರೆಯುತ್ತಾರೆ.

**ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯು**— ತಾ. 6ರಂದು ಜರಗಿತು. ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸಭಿಕರನ್ನು ಸ್ವಾಗತಿಸಿ, ಲಯನ್ಸ್ ಕ್ಲಬ್ಬಿನ ಕಾರ್ಯಗಳನ್ನು ತಿಳಿಸಿದರು.

ಈ ಸಮಾರಂಭದಲ್ಲಿ ಕರ್ನಲ್ ಡಿ. ಎಸ್. ರಾಜುರವರು ಮಾತಾಡುತ್ತಾ ಲಯನ್ಸ್ ಹಾಗೂ ರೋಟರಿ ಕ್ಲಬ್ಬುಗಳು ತಮ್ಮ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಾಚರಣೆಗೆ ತಂದರೆ ದೇಶಕ್ಕೆ ಅದರಿಂದ ತುಂಬಾ ಉಪಯೋಗವಿದೆಯೆಂದೂ ನಮ್ಮ ದೇಶಕ್ಕೋಸ್ಕರ ಶ್ರಮಿಸುವುದು ನಮ್ಮ ಕರ್ತವ್ಯವೆಂದೂ ಜನತಾ ಸೇವೆಯೇ ಭಾರತದ ಪರಂಪರೆಯೆಂದೂ ಕಮ್ಯೂನಿಸ್ಟರ ಈ ಮರಾಕ್ರಮಣದಿಂದ ನಮ್ಮಲ್ಲಿ ಜಾಗೃತಿಯುಂಟಾಗಿ, ಅಧರ್ಮದ ವಿರುದ್ಧ ಹೋರಾಡುವ, ತ್ಯಾಗ ಮಾಡುವ ಮಹಾ ಚೈತನ್ಯೋದಯವಾಗಿದೆಯೆಂದೂ ತಿಳಿಸಿದರು.

ಲಯನ್ಸ್ ಗವರ್ನರ್ ಶ್ರೀ ಶಾಸ್ತ್ರಿಯವರು ಲಯನ್ಸ್ ಕ್ಲಬ್ಬು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು. ಶ್ರೀ ಟಿ ಉಪೇಂದ್ರ ಪೈಗಳು ರೋಟರಿ ಹಾಗೂ ಲಯನ್ಸ್ ಕ್ಲಬ್ಬುಗಳು ಮೈತ್ರಿಯುತವಾಗಿ ದುಡಿಯುತ್ತಿವೆಯೆಂದು ತಿಳಿಸಿದರು.

ಅಂತ್ಯದಲ್ಲಿ ಲಯನ್ಸ್ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಧನ್ಯವಾದ ಸಮರ್ಪಣೆಗೈದರು.

**ರೋಟರಿ ಕ್ಲಬ್ಬಿನ ಸಭೆಯು** —ಕಳೆದ ತಾ 6ರಂದು ಶ್ರೀ ಟಿ ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ಜರಗಿತು ಪ್ರಾರಂಭದಲ್ಲಿ ಡಾ. ಟಿ. ಮಾಧವ ಪೈಗಳು ರೋಟರಿ ಇಂಟರ್ ನ್ಯಾಷನಲ್ ಗವರ್ನರ್ ಶ್ರೀ ಕೆ. ಎಸ್. ಮೆನನ್ನರ ಪರಿಚಯ ಮಾಡಿಕೊಟ್ಟರು.

ಶ್ರೀ ಮೆನನ್ನರು ಪ್ರಜಾಪ್ರಭುತ್ವದ ಅಂಗವಾಗಿ ಏರ್ಪಡಿಸಲಾದ ಭಾಷಣ ಸ್ಪರ್ಧೆಯಲ್ಲಿ ಬಹುಮಾನಿತರಾದವರಿಗೂ, ರಕ್ತ ಬ್ಯಾಂಕಿಗೆ ರಕ್ತ ದಾನ ಮಾಡಿದವರಿಗೂ, ಮತ್ತು ಅಗ್ನಿ ಪ್ರಕೋಪವನ್ನು ತಣಿಸಿದ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ಪ್ರಶಸ್ತಿ ಪತ್ರಗಳನ್ನು ಇತ್ತರು ಅವರು ಮಾತಾಡುತ್ತಾ, ರೋಟರಿ ಕ್ಲಬ್ಬಿನ ಪ್ರಯೋಜನ ಸಮಾಜದಲ್ಲಿ ಅದರ ಪಾತ್ರ ಮುಂತಾದುವುಗಳನ್ನು ತಿಳಿಸಿದರಲ್ಲದೆ ಮಣಿಪಾಲದಲ್ಲಿಯ ವಿದ್ಯಾ ಪ್ರಗತಿಯನ್ನು ಶ್ಲಾಘಿಸಿ, ಉಡುಪಿಯ ರೋಟರಿ ಕ್ಲಬ್ಬು ಚಿಕ್ಕದಾದರೂ ಅದರ ಕಾರ್ಯಗಳು ದೊಡ್ಡದಾಗಿವೆಯೆಂದು ಹೇಳಿದರು.

ಅಂತ್ಯದಲ್ಲಿ ಡಾ| ಎ. ಕೃಷ್ಣರಾಯರು ಧನ್ಯವಾದ ಸಮರ್ಪಿಸಿದರು.

**ಬ್ರಹ್ಮಾವರ**— ಸ್ಥಳೀಯ ಎಸ್. ಎಮ್. ಎಸ್. ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ. 8ರಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎ ವಿಠಲ ಶೆಣೈ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ವ್ಯವಸ್ಥಾಪಕ ರೇ. ಪಾ. ಕೆ. ಕೆ. ಕುರಿಯಾಕೋಸ್‌ರು ಸ್ವಾಗತಿಸಿದ ಬಳಿಕ ಪ್ರಧಾನಧ್ಯಾಪಕ ಶ್ರೀ ಕೆ ಆರ್. ಹಂದೆಯವರು ವರದಿವಾಚನ ಮಾಡಿದರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಶಾಲೆಯ ಪ್ರಗತಿಗಾಗಿ ಮೆಚ್ಚಿಗೆ ಸೂಚಿಸಿ ಜಿಲ್ಲೆಯ ವಿದ್ಯಾಸಮಸ್ಯೆಗಳನ್ನು ಪ್ರಸ್ತಾಪಿಸಿ ಭಾಷಣವಿತ್ತರು. ಮನೋರಂಜನಾ ಕಾರ್ಯಕ್ರಮವಾದ ಮೇಲೆ ಶ್ರೀ ಬಿ. ವಿ. ವಾರಂಬಳ್ಳಿಯವರು ವಂದನೆ ಸಲ್ಲಿಸಿದರು.

**ಹಿರಿಯಡ್ಕ** — ಸ್ಥಳೀಯ ಬೋರ್ಡ್ ಹೈಸ್ಕೂಲಿನ ವರ್ಧಂತಿ ಉತ್ಸವವೂ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವೂ ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಯನ್. ಯಮ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಜನ ಕಿಕ್ಕಿರಿದು ನೆರೆದಿತ್ತು. ಶ್ರೀ ಬಾಲ್ಕಟ್ಟ ಬೀಜು ಕೃಷ್ಣಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಕೆ. ಎಮ್ ಭಂಡಾರಿಯವರು ಶಾಲಾ ವರದಿಯನ್ನೂ ಶ್ರೀ ಎ. ಗಂಗಾಧರರಾಯರು ಹಳೇ ವಿದ್ಯಾರ್ಥಿ ಸಂಘದ ವರದಿಯನ್ನೂ ಓದಿದರು. ಶ್ರೀಮತಿ ಅಡ್ಯಂತಾಯರು ಬಹುಮಾನ ವಿತರಣೆ ಮಾಡಿದರು, ಅಧ್ಯಕ್ಷರು ಶಾಲೆಯ ಅಭಿವೃದ್ಧಿಯನ್ನು ಪ್ರಶಂಸಿಸಿ ಭಾಷಣ ಮಾಡಿದ ಮೇಲೆ ಸಂಗೀತ ಮತ್ತಿತರ ಮನೋರಂಜನಾ ಕಾರ್ಯಕ್ರಮಗಳು ಜರಗಿದವು.

**ಕಾರ್ಕಳ**— ತಾ 3ರಂದು ಜೀವ ವಿಮಾ ಕಾರ್ಪರೇಶನಿನ ಕಾರ್ಕಳ ಯುನಿಟಿನ ಏಜಂಟರ ಸಭೆಯೊಂದು ಡೆವಲಪ್‌ಮೆಂಟ್ ಆಫೀಸರ ಶ್ರೀ ಎ. ಎಸ್. ಕಿದಿಯೂರರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಯುನಿಟಿನಲ್ಲಿ 1962ರ ದಶಂಬರ ತನಕ ಆದ ಒಟ್ಟು ವ್ಯವಹಾರ ರೂ. 16,76500/- ಅದರಲ್ಲಿ ದಶಂಬರ ಅಂತ್ಯದೊಳಗೆ ಪಾಲಿಸಿ ಹೊಂದಿದ ವ್ಯವಹಾರ ರೂ. 13,07500/- ಕಳೆದ ವರ್ಷಕ್ಕಿಂತ ಪ್ರಗತಿ ಹೊಂದಿರುವುದನ್ನೂ ಮಾರ್ಚ್ ಅಂತ್ಯದೊಳಗೆ ಪ್ರತಿಯೊಬ್ಬ ಏಜಂಟರು ಮಾಡಬೇಕಾದ ವಿಮಾ ವಿವರವನ್ನು ಕಿದಿಯೂರರವರು ವಿವರಿಸಿ ಪ್ರತಿ ತಿಂಗಳಲ್ಲಿ ಹಾಕಿದ ವ್ಯವಹಾರವನ್ನು ತಿಳಿಸಿದರು. 1963ರಲ್ಲಿ ಕಡಿಮೆ ಎಂದರೆ ರೂ 20,00,000ದ ವ್ಯವಹಾರವನ್ನು ಮಾಡುವಂತೆ ಪ್ರತಿಯೊಬ್ಬ ಸಿಬ್ಬಂದಿಯೂ ಸಹಕರಿಸ ಬೇಕೆಂದು ಕೇಳಿಕೊಂಡರು.

**ರಕ್ಷಣಾ ನಿಧಿಯ ಸಹಾಯಾರ್ಥ ನಾಟಕಗಳು**—ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿಯ ವತಿಯಿಂದ ರಕ್ಷಣಾ ನಿಧಿಯ ಸಹಾಯಾರ್ಥವಾಗಿ ಮಾರ್ಚ್ ತಿಂಗಳ ಪ್ರತಿ ಆದಿತ್ಯವಾರ ಡಾಕ್ಟರುಗಳಿಂದ, ವಕೀಲರುಗಳಿಂದ, ಎಸ್ಸೆಲ್ ಪಾರ್ಟಿಯವರಿಂದ, ನಾಟ್ಯ ಕೂಟದವರಿಂದ ಮತ್ತು ಮಹಿಳಾ ಸಮಾಜದ ಮಹಿಳೆಯರಿಂದ ಪ್ರತ್ಯೇಕ ನಾಟಕಗಳು ಅಭಿನಯಿಸಲ್ಪಡುವುವು. ವಿವರಕ್ಕೆ ಮುಂದಿನ ಸಂಚಿಕೆ ನಿರೀಕ್ಷಿಸಿರಿ.

**ಗುಂಡಿಬೈಲು** —ಕಿರಿಯ ಬುನಾದಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 9ರಂದು ಶಾಲಾ ಪರೀಕ್ಷಾಧಿಕಾರಿ ಶ್ರೀ ಎ. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿಯೂ ಶಾಲಾ ಹಳೆ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ತಾ 10ರಂದು ಸಿಂಡಿಕೇಟಿನ ಡಿಪ್ಟಿ ಚೀಫ್ ಆಫೀಸರ್ ಶ್ರೀ ಕೆ. ಕೆ. ಪೈ ಅವರ ಅಧ್ಯಕ್ಷತೆಯಲ್ಲಿಯೂ, ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನೆರವೇರಿದವು.


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.


(೫ನೇ ಪುಟದಿಂದ)

ಗಿಯೂ ಎಂದೋ ಹೇಳಿತ್ತು. ಭಾರತ—ಚೀನೀ ಘೋಷಣೆಯ ನಂತರ ಹೆಚ್ಚಿನವರು ಮಿಗ್ ಪೂರೈಕೆಯಿಲ್ಲವೆಂದು ನಂಬಿದ್ದರು; ರಶ್ಯವಾದರೂ ಈಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಆದರೆ, ಪ್ರಧಾನಿ ನೆಹರು ಮಾತ್ರ ಆಶಾವಾದಿಯಂತೆ ರಶ್ಯ ತನ್ನ ವಾಗ್ದಾನವನ್ನು ಪೂರೈಸುವುದೆಂಬುದರಲ್ಲಿ ಆಶೆ ತಳೆದಿದ್ದರು. ನಾಲ್ಕು ಮಿಗ್ ವಿಮಾನೆಗಳನ್ನು ಹೊತ್ತ ಹಡಗ ಮುಂಬಯಿ ಬಂದರದಲ್ಲಿ ತಂಗಿತೆಂಬಾಗ, ರಶ್ಯದ ಭಾಷಾ ಪರಿಪಾಲನೆಗಿಂತಲೂ ನೆಹರೂ ಆಶಾವಾದವನ್ನೆ ಹೆಚ್ಚು ಕೊಂಡಾಡಬೇಕು.

**ಚವನರ ಚುನಾವಣೆ**

ಇರುಕಿನ ಸಮಯದಲ್ಲಿ ವೀರ ಯೋಧನಂತೆ ಕೆಚ್ಚೆದೆಯಿಂದ ಸಂರಕ್ಷಣಾ ಖಾತೆಯನ್ನು ವಹಿಸಲು ಮುಂದಾದ ಯಶವಂತರಾವ್ ಬಲವಂತರಾವ್ ಚವನರು ಪಾರ್ಲಿಮೆಂಟಿನ ಸದಸ್ಯರಲ್ಲ. ನಮ್ಮ ಸಂವಿಧಾನದಂತೆ ಸದಸ್ಯನಲ್ಲದವನು ಮಂತ್ರಿಯಾಗಬಹುದಾದರೂ ಆರು ತಿಂಗಳೊಳಗೆ ಚುನಾವಣೆಯಲ್ಲಿ ಗೆದ್ದು ಬರಬೇಕು. ಇದು ಸಾಮಾನ್ಯ ನಿಯಮ. ಇದರಂತೆ ಚವನರು ಮಹಾರಾಷ್ಟ್ರದಿಂದಲೇ ರಾಜ್ಯ ಸಭೆಗೆ ತೆರವಾದ ಸ್ಥಾನವೊಂದಕ್ಕೆ ಸ್ಪರ್ಧಿಸುವರು. ಅಲ್ಲಿನ ಸಮರ್ಥ ಮುಖ್ಯ ಮಂತ್ರಿಯಾಗಿ ಪ್ರಶಂಸೆಗಳಿಸಿದ ಅವರು ಅವಿರೋಧವಾಗಿಯೇ ಆರಿಸಿ ಬಂದರೆಂಬ ಸುದ್ದಿಯನ್ನು ಇಷ್ಟರಲ್ಲೇ ನಾವು ಕೇಳಲಿದ್ದೇವೆ. ನಮ್ಮ ಇಂದಿನ ಯುದ್ಧ ಸಿದ್ಧತೆಯ ಸಂದರ್ಭದಲ್ಲಿ ಚವನರ ಸೇವೆಯು ಆಗತ್ಯವೆಂದು ದೇಶಕ್ಕೆ ದೇಶವೇ ಮನಗಂಡಿದೆ.

**ಸಲ್ಲದ ಊಹಾಪೋಹ**

ಅಖಿಲ ಭಾರತೀಯ ಕಾಂಗ್ರೆಸ್‌ನ ಕಾರ್ಯದರ್ಶಿ ಕೆ. ಕೆ. ಶಹಾ ಕೇರಳದ ಸಮಸ್ಯೆಗಳನ್ನು ಹೋಗಲಾಡಿಸಲು ಅದನ್ನು ಮದ್ರಾಸು ಇಲ್ಲವೇ ಮೈಸೂರು ರಾಜ್ಯಗಳಲ್ಲಿ ವಿಲೀನಗೊಳಿಸುವುದು ಉತ್ತಮವೆಂಬ ಅಭಿಪ್ರಾಯ ಹೊರಗೆಡಹಿದ್ದರಿಂದ ಅನವಶ್ಯ ತರಲೆ ಎದ್ದಂತಿದೆ. ಭಾಷೆಯ ತಳಹದಿಯಲ್ಲಿ ರಾಜ್ಯಗಳ ಪುನಾರಚನೆಯ ತತ್ವದಂತೆ ನಿರ್ಮಾಣಗೊಂಡ ಕೇರಳವನ್ನು, ಆ ತತ್ವವನ್ನು ಸಮಾಧಿಮಾಡಿ ಇತರತ್ರ ವಿಲೀನಗೊಳಿಸುವುದು ಅವಿವೇಕವೆಂದು ಮದ್ರಾಸದ ಭಕ್ತವತ್ಸಲಂ ಖಂಡಿತವಾಗಿ ಅಂದಿದ್ದಾರೆ. ಶನಿದೆನಿಸಿದ ಕಾಸರಗೋಡೊಂದನ್ನು ಮಾತ್ರ ತನಗೆ ಮರಳಿ ಕೊಡಿಯೆಂದು ಮೈಸೂರು ಕೇಳಬಹುದೇ ಹೊರತು ಅದು ಇಡೀ ರಾಜ್ಯವನ್ನು ಆ ಮಂತ್ರಿಕಲಿಕ್ಕಿಲ್ಲ ಒಂದಾದ ಕರ್ನಾಟಕವನ್ನೇ ಹಾಗೆಂದು ಭಾವಿಸದ ಮೈಸೂರಿಗರು ಇನ್ನು ಮಲೆಯಾಳಿಗಳನ್ನು ಒಳಕರೆದಾರೆ?

**ಈ ಸಂಚಿಕೆಯಲ್ಲಿ—**

12 ಪುಟಗಳಂತೆ ಪುಟ ಸಂಖ್ಯೆ ಕೊಟ್ಟಿದ್ದರೂ ಅನಿವಾರ್ಯ ಕಾರಣಗಳಿಂದಾಗಿ 10 ಪುಟಗಳನ್ನಷ್ಟೇ ಕೊಡುವಂತಾದುದಕ್ಕೆ ವಿಷಾದಿಸುತ್ತೇವೆ.

—ಮೆನೇಜರ್.


ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿ

## ಉದಾಸೀನತೆಯನ್ನು ತ್ಯಜಿಸಿರಿ

(೪ನೇ ಪುಟದಿಂದ)

ಮ್ಮ ದೇಶವನ್ನು ಕಾಪಾಡುವುದಿದ್ದರೆ, ನಮ್ಮಲ್ಲಿ ಕಾರ್ಯತತ್ಪರತೆಯನ್ನು ಬೆಳೆಸಿಕೊಳ್ಳಬೇಕು. ನಾವು ಮಾಡಬೇಕಾಗಿರುವ ಕೆಲಸದ ಆಧಿಕ್ಯವನ್ನು ಕಮ್ಮಿಯಾಗಿಸಿಕೊಳ್ಳಬಾರದು. ಬೀದಿ ಬೀದಿಗಳಲ್ಲಿ ಭಾರಿ ಮೆರವಣಿಗೆ ನಡೆಸುತ್ತಾ ಆವೇಶಗೊಂಡವರಂತೆ ಸಂಕೇತಾತ್ಮಕ ಧ್ಯೇಯ ವಚನಗಳನ್ನು ಐಕಮತ್ಯದಿಂದ ಬೊಬ್ಬಿಡುತ್ತಾ ನಮ್ಮಲ್ಲಿಯ ಅನುಕಂಪಾತ್ಮಕ ಉದ್ವೇಗವನ್ನು ವ್ಯಕ್ತಪಡಿಸುವುದರಲ್ಲಿ ನಾವು ಪ್ರಪಂಚದಲ್ಲೇ ಅಗ್ರಗಣ್ಯರಿರಬಹುದು. ಆದರೆ, ಅಕಟಾ! ಬೊಬ್ಬೆಯ ಅಬ್ಬರದಿಂದಲೇ ಸಿದ್ಧಿ ಕೈಸೇರದಲ್ಲಾ! ರಾಷ್ಟ್ರಕ್ಕಿಂದು ಬೇಕಾದುದು ಆವಶ್ಯಕ ವಸ್ತುಗಳ ಸರಬರಾಯಿ. ಈ ಸರಬರಾಯಿ ಬರಬೇಕಾದುದು ನಮ್ಮ ಗದ್ದೆ-ಕಾರ್ಖಾನೆಗಳಿಂದ, ಕಾರ್ಯಾಲಯ-ಪಂಚಾಯತಗಳಿಂದ, ಶಾಲೆ ಕಾಲೇಜುಗಳಿಂದ ಯುವಕ ಜನಸಮೂಹದ ತುಂಬಿ ತುಳುಕುವ ಉತ್ಸಾಹ ಮತ್ತು ಕ್ರಿಯಾಶಕ್ತಿಗಳ ಯೋಗ್ಯ ಉಪಯೋಗವೇ ಇದಕ್ಕೆ ಮೂಲ ಆಧಾರ, ಆದುದರಿಂದ ದೇಶದ ಸಾದ್ಯಂತ ಪ್ರತಿಯೊಂದು ಕ್ಷೇತ್ರಗಳಲ್ಲೂ ಮಟ್ಟಗಳಲ್ಲೂ ಉಗ್ರಸಂಯಮವನ್ನಂಗೀಕರಿಸಿಕೊಂಡು ನಮ್ಮ ಪ್ರತಿಯೊಂದು ಕಾರ್ಯವನ್ನೂ ಯುದ್ಧ ಸನ್ನದ್ಧತೆಯ ಹಾಗೂ ದೇಶ ರಕ್ಷಣೆಯ ದೃಷ್ಟಿಯಿಂದ ನೆರವೇರಿಸುವುದೇ ಇಂದಿನ ಜನತೆಯಿಂದ ನಾಡಿಗೆ ಸಲ್ಲಬೇಕಾದ ಮೊದಲ ಬೇಡಿಕೆ.

ಕಷ್ಟ ಸಹಿಷ್ಣು ಹಾಗೂ ಕಾರ್ಯತತ್ಪರರಾದ ಪೂಜ್ಯ ಬಾಪೂಜೀಯವರ ದೆಸೆಯಿಂದಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದುದೇನೋ ನಿಜ. ಆದರೆ ಅನಂತರ ನಾವು ತುಸು ಮಟ್ಟಿಗೆ ಉದಾಸೀನರಾದೆವು. ಪ್ರಗತಿ ಉನ್ನತಿಗಳ ದಾರಿಯಲ್ಲಿ ನಾವು ಆರಾಮಕ್ಕಾಗಿ ಮಲಗಿ ನಿದ್ರಿಸಿದುದೂ ಉಂಟು. ಕೈಗಾರಿಕೆ ಮತ್ತು ಇತರ ಉತ್ಪತ್ತಿಗಳನ್ನು ವರ್ಧಿಸಿಕೊಳ್ಳಲು ವಿದೇಶಗಳಿಂದ ಕಡಪಡೆಯುವುದು ಹೆಚ್ಚಾದಂತೆಯೇ ಸ್ವದೇಶದಲ್ಲಿ ಕೆಲವರು ಐಹಿಕ ಸುಖವೇ ಮೊದಲ ಗುರಿಯೆಂಬ ಧ್ಯೇಯವನ್ನಿಟ್ಟುಕೊಂಡು ಕೇವಲ ಸುಖಾನ್ವೇಷಿಗಳಾಗಿ ರಾಷ್ಟ್ರೀಯ ಸಂಪತ್ತನ್ನು ತಮ್ಮ ಖಜಾನೆಯಲ್ಲಿ ಸೇರಿಸುವುದರಲ್ಲೇ ಮಗ್ನರಾದರು. ಸ್ವಾತಂತ್ರ್ಯಲಾಭವೆಂಬುದು ರಾಷ್ಟ್ರೀಯ ಆಂದೋಲನದ ಅಂತ್ಯವಾಗಿರುವುದಕ್ಕಿಂತಲೂ ಮಿಗಿಲಾಗಿ ರಾಷ್ಟ್ರೀಯ ಸ್ವಯಂಸಿದ್ಧಿಯೆಂಬ ಮಹತ್ಕಾರ್ಯದ ಆರಂಭವೇ ಆಗಿದೆ. ಆದುದರಿಂದ ಸ್ವಾತಂತ್ರ್ಯವನ್ನು ಗಳಿಸಿ ಕಾಪಾಡಿಕೊಳ್ಳುವದೆಂಬುದು ಹೂವೆಸಳಿನ ಸುಷ್ಪತ್ತಿಗೆಯಲ್ಲ, ವೇದನಾಮಯ ಪ್ರವೃತ್ತಿ, ಆದರೂ ಅದು ಆವಶ್ಯ. ಏಕೆಂದರೆ ಸ್ವತಂತ್ರ ಜನತೆ ನಿಜವಾದ ಅಭಿವೃದ್ಧಿಯನ್ನು ಹೊಂದಿಕೊಂಡಲ್ಲಿ ಮಾತ್ರ ನಿಜವಾದ ಸುಖವು ಭವಿಷ್ಯದಲ್ಲಿ ಅದನ್ನು ಕಾದುಕೊಂಡಿರುತ್ತದೆ. ಆದರೆ ನಾವೋ, ಪಕ್ಷಾಂತೀಯತೆ, ಆಂತರಿಕ ಮತಭೇದ, ಸ್ವಾರ್ಥಲೋಲುಪತೆ, ಪಾರ್ಟಿಕಲಹ, ಅಧಿಕಾರೇಚ್ಛೆ, ಭಾಷಾಸಮಸ್ಯೆ ಮೊದಲಾದುವುಗಳಲ್ಲಿ ಮೈಮರೆತು ನಮ್ಮ ನಿಜವಾದ ಅಭಿವೃದ್ಧಿಗೆ ತಡಹಾಕಿಕೊಂಡಿದ್ದೆವು. ಅನಿಷ್ಟಪಕ್ಷ ಈಗಲಾದರೂ ಈ ಕುಂದು ಕೊರತೆಗಳಿಂದ ಬಿಡುಗಡೆ ಹೊಂದಿ ಇಡೀ ರಾಷ್ಟ್ರವೇ ಒಂದು ಕುಟುಂಬವೆಂಬಂತೆ ದೇಶರಕ್ಷಣೆಯ ಕಾರ್ಯದ ಪ್ರತಿಯೊಂದು ಭಾಗದಲ್ಲಿಯೂ ಪೂರ್ಣ ಸನ್ನಾಹವನ್ನು ಕೈಗೊಳ್ಳಬೇಕು. ಸಶಕ್ತ ಕಾಯನಿರುವ ಯಾವೊಬ್ಬ ವ್ಯಕ್ತಿಯೂ ಈ ರಾಷ್ಟ್ರೀಯ ಯತ್ನದಿಂದ ದೂರವಿರಲಾಗದು.

ಮನವಿದ್ದರೆ ಮಾರ್ಗವಿದೆ, ಒಗ್ಗಟ್ಟಿನಲ್ಲಿ ಬಲವಿದೆ. ಮನವೂ ಒಗ್ಗಟ್ಟು ಎರಡೂ ಇದ್ದಲ್ಲಿ ಅಸಾಧ್ಯವಾದ ಕಾರ್ಯವಾವುದಿದೆ? ಭಾರತೀಯರಾದ ನಮ್ಮಲ್ಲಿ ಇವೆರಡಕ್ಕೂ ಕೊರತೆಯಿಲ್ಲವೆಂಬುದನ್ನು ನಾವು ಈಗಾಗಲೇ ವ್ಯಕ್ತಪಡಿಸಿದ್ದೇವೆ. ಆದರೆ ನಮ್ಮಿಂದ ಸಲ್ಲಬೇಕಾದ ಪ್ರಚೋದನೆ ಹಾಗೂ ಅದರ ಗತಿ ಇನ್ನೂ ತುಸು ಹೆಚ್ಚಬೇಕು. ಆಹಾರ, ವಸ್ತ್ರ, ಆಯುಧಾದಿ ಆವಶ್ಯಕ ವಸ್ತುಗಳ ಉತ್ಪತ್ತಿ ಮತ್ತು ಸರಬರಾಜಿನ ವಿಷಯದಲ್ಲಿ ನಮ್ಮ ಯತ್ನ ಇನ್ನೂ ಸಾಲದೆಂದೇ ಕಾಣುತ್ತದೆ. ಕಲಹ ಕಲುಷಿತವಾದ ಈ ಜಗತ್ತಿನಲ್ಲಿ ನಮ್ಮ ಈ ಆವಶ್ಯಕತೆಗಳಿಗೆ ನಾವಿನ್ನೂ ಪರರಾಷ್ಟ್ರಗಳ ಮೇಲೆಯೇ ಹೊಂದಿಕೊಂಡಿದ್ದರೆ ನಮ್ಮ ಏಳಿಗೆಯು ಕೇವಲ ಗಾಳಿಗೋಪುರದಲ್ಲೇ ಕೊನೆಗೊಳ್ಳುವಂತಾಯಿತೆಂದೇ ಹೇಳಬೇಕಾಗುತ್ತದೆ. ಸಕ್ರಿಯ ಸಂಕಲ್ಪವೂ ಸುವ್ಯವಸ್ಥಿತ ಸಂಘಟನೆಯೂ ಇಂದು ನಮಗೆ ಸಾಧ್ಯವನ್ನು ಸಿದ್ಧಿಯಾಗಿಸಿಕೊಳ್ಳಲು ಅವಶ್ಯಕವಾದ ಸಾಧನ.

ಚೀನಾದೊಡನೆ ನಡೆದ ಹೋರಾಟದಲ್ಲಿ ಮೊದಮೊದಲು ನಮಗಾದ ಸೋಲಿನಿಂದ ನಾವೆಲ್ಲರೂ ಒಂದೊಮ್ಮೆಗೆ ಎದೆಗೆಟ್ಟೆವು. ಗಡಿ ಪ್ರದೇಶದ ಭಾಗ ಸ್ವಲ್ಪ ಸ್ವಲ್ಪವಾಗಿ ಅರಿಯ ಕರಗತವಾದಂತೆ ನಾವೆಲ್ಲ ನಿರಾಶರಾಗಿ, ಎದೆಯೊಡೆದು ಕುಗ್ಗಿ ಕುಸಿದು ಬಿದ್ದೆವು. ಆಳವಿಲ್ಲದ ಕಳವಳಕ್ಕೆ ಒಳಗಾದೆವು. ನಮ್ಮ ನಾಯಕರುಗಳ ರಾಜನೈತಿಕ ಧೋರಣೆಗಳನ್ನು ಹಳಿಯಲಾರಂಭಿಸಿದೆವು. ಇದಕ್ಕೆ ಕಾರಣವೇನು? ನಮ್ಮಲ್ಲಿ ಧೈರ್ಯವೆಂಬ ಗುಣವು ಒಮ್ಮಿಂದೊಮ್ಮೆಗೆ ಮಾಯವಾಗಿತ್ತು. ಈ ಅಭಾವವನ್ನು ನಮ್ಮ ಪ್ರಧಾನಿ ಶ್ರೀ ನೆಹರೂ ಮತ್ತು ಇತರ ನಾಯಕರು ಆಗಿಂದಾಗ್ಗೆ ರೇಡಿಯೋ ಮೂಲಕ ಭಾಷಣಗಳಿಂದ ಧೈರ್ಯದಾಂಬಿಸುವ ಪ್ರಯತ್ನ ಮಾಡಿದುದು ನಿಜ. ಆದರೆ ತುಂಬಿಸಿದ ಧೈರ್ಯ ಬಹುಕಾಲ ನಿಲ್ಲದು. ಅದು ಹೃದಯದಲ್ಲೇ ಮೊಳೆತು ಬೆಳೆಯಬೇಕಾದುದು. ಇಂತಹ ಧೈರ್ಯವೆಂದರೆ ಏನು? ಪ್ಲೇಟೋ ಯೆಂದಂತೆ "ಅಪಾಯವನ್ನು ಕುರಿತಾದ ಮತಿಯೇ ಧೃತಿ" ಇದುವೇ ಭಯಗಾಬರಿಗಳನ್ನು ನಮ್ಮಿಂದ ದೂರಕ್ಕೊಯ್ಯುವ ನಮ್ಮ ಗುಣ ವಿಶೇಷ. ಭೀತಿ, ವ್ಯಾಕುಲತೆ, ಗಂಡಾಂತರ ಮೊದಲಾದುವುಗಳು ಜನಸಾಮಾನ್ಯರ ಪಾಲಿಗಿರುವಂತೆ ರಾಷ್ಟ್ರದ ಮಟ್ಟದಲ್ಲೂ ಅನುಭವಿಸಿ ಪಾರು ಹೊಂದಬೇಕಾದವುಗಳೇ. ಆದರೆ ಧೈರ್ಯದ ಬಲದಿಂದ ನಾವು ಅವುಗಳನ್ನೆಲ್ಲ ಮಂಸಿ ಜಯಶೀಲರಾಗಿ ಮೇಲೇರಬಹುದು. ವಿಜ್ಞಾನದ ಚಮತ್ಕಾರಗಳು ಹೆಚ್ಚಿದಂತೆ ಇನ್ನು ನಾವು ಎತ್ತರವಾದ ಹಿಮಾಲಯವಾಗಲೀ ಆಳವಾದ ಸಮುದ್ರಗಳಾಗಲೀ ನಮ್ಮ ದೇಶದ ರಕ್ಷಣೆಯ ಕಾರ್ಯಭಾರವನ್ನು ವಹಿಸಿಕೊಳ್ಳುವವೆಂದು ನಿಶ್ಚಿಂತೆಯಿಂದ ಕುಳಿತುಕೊಳ್ಳಬರುವುದಿಲ್ಲ. ಸಂಘರ್ಷಪೂರಿತವಾದ ಈಗಿನ ಪ್ರಪಂಚದ ಸ್ಥಿತಿಗತಿಗಳನ್ನು ನೋಡಿದರೆ ಯಾವಾಗ ಯಾವ ಎಡೆಯಲ್ಲಿದಳ್ಳುರಿ ಏಳಲಿರುವುದೋ ಹೇಳಬರುವುದಿಲ್ಲ. ಭಾರತವಾದರೂ ಇದಕ್ಕೆ ಅಪವಾದವಾಗಲಾರದು. ಗಂಡಾಂತರಗಳನ್ನು ಧೈರ್ಯದಿಂದ ಎದುರಿಸುವುದೇ ಗಂಡಾಂತರಗಳಿಂದ ಪಾರಾಗುವ ಹೆದ್ದಾರಿ.

ಸ್ವತಂತ್ರ ರಾಷ್ಟ್ರದ ಸ್ವದೇಶ ಭಕ್ತಿಯೆಂಬುದು ಸ್ವಭಾವ ಸಿದ್ಧವಾದುದು. ಅದು ಅವನಲ್ಲಿಯ ಶಕ್ತ್ಯುತ್ಸಾಹಗಳ ಮೂಲ ಸ್ರೋತ ಆ ಭಕ್ತಿಯೇ ಅವನ ಗುಣ ಸಮೂಹದ ಘನತೆಯನ್ನು ಹೆಚ್ಚಿಸುವಂತಹುದು.

ಭಾರತದ ಪ್ರತಿಯೊಬ್ಬ ರಾಷ್ಟ್ರಕನು, ಅವನು ಯಾವುದೇ ಮತವನ್ನು ಅಂಗೀಕರಿಸಿದವನೇ ಆಗಿದ್ದರೂ, ಒಂದು ದೇಶದ ಭಾಗ್ಯವು ಸೃಷ್ಟಿಕರ್ತನಾದ ಆ ಸರ್ವಶಕ್ತನ ಕೈಯಲ್ಲಿಯೇ ಇದೆಯೆಂಬ ವಿಷಯದಲ್ಲಿ ಪೂರ್ಣ ವಿಶ್ವಾಸವುಳ್ಳವನಾಗಿದ್ದಾನೆ ಒಂದು ರಾಷ್ಟ್ರಕ್ಕೆ ಸ್ವಧರ್ಮವೆಂಬುದು ಗೋಡೆಗಳಿಗಿಂತಲೂ ಭದ್ರವಾದ ರಕ್ಷಣೆಯ ಸಾಧನವಾಗಿದೆ. ಏಕೆಂದರೆ, ಸಮಾಜದಲ್ಲಿ ನೀತಿ ಸದಾಚಾರಗಳನ್ನು ಭದ್ರವಾಗಿರಿಸುವಂತಹುದು ಅದೇ- ಇದುವೇ ನಮ್ಮ ಧಾರ್ಮಿಕ ಆಯುಧ.

ಮಹನೀಯನೊಬ್ಬನು ಹೇಳಿದ್ದನು:— "ಪ್ರಭುವಿನ ಮನೆಯಿಲ್ಲದ ಮನೆಯನ್ನು ಕಟ್ಟಿದವನ ಶ್ರಮ ವ್ಯರ್ಥ. ಪ್ರಭುವೇ ಸಂರಕ್ಷಕನಾಗಿಲ್ಲದ ನಗರದ ಪಹರೆಯವನು ಮಾಡುವ ಕಾವಲು ವ್ಯರ್ಥ. ಪ್ರಭೋ! ನಿನಗೆ ಪೂಜೆಯನ್ನು ಸಲ್ಲಿಸದ ಪ್ರತಿಯೊಂದು ರಾಷ್ಟ್ರವೂ ನಾಶವಾಗುವುದಲ್ಲವೇ!"

ಆದುದರಿಂದ ಇದೀಗ ನಮ್ಮನ್ನೆದುರಿಸಿರುವ ಮಹಾ ಸಮಸ್ಯೆಯನ್ನು ಬಗೆಹರಿಸಲು ನಮ್ಮ ಮಾನುಷ ಯತ್ನವನ್ನೂ ಧಾರ್ಮಿಕ ಆಯುಧವನ್ನೂ ಪ್ರಯೋಗಿಸಬೇಕಾಗಿದೆ. ಎಂದರೆ ಎಲ್ಲವೂ ನಮ್ಮ ಯತ್ನದ ಮೇಲೆಯೇ ಹೊಂದಿಕೊಂಡಿರುವುದೋ ಎಂಬಂತೆ ಪರಿಶ್ರಮಿಸಿ ರಾಷ್ಟ್ರಕ್ಕಾಗಿ ತನುಮನ ಧನಗಳನ್ನರ್ಪಿಸುತ್ತಾ, ಸರ್ವವೂ ಆತನ ಅನುಗ್ರಹದ ಮೇಲೆಯೇ ಹೊಂದಿಕೊಂಡಿರುವುದೋ ಎಂಬಂತೆ ಆ ಸರ್ವಶಕ್ತನನ್ನು ಪ್ರಾರ್ಥಿಸುವುದು.

ಈ ಪ್ರಾರ್ಥನೆಯೆಂಬುದು ಬರಿಯ ಕಣ್ಣುಕಟ್ಟಿನ ವಿದ್ಯೆಯಲ್ಲ. ಜಗತ್ತಿನಲ್ಲಿ ಪರಾಕ್ರಮವು ನಡೆಸುತ್ತಿದಕ್ಕಿಂತ ಹೆಚ್ಚಿನ ಅದ್ಭುತ ಕಾರ್ಯಗಳನ್ನು ಪ್ರಾರ್ಥನೆಯೇ ನೆರವೇರಿಸಬಲ್ಲುದೆಂಬ ಪ್ರಸಿದ್ಧ ವಚನವಿದೆ. ಪ್ರಾರ್ಥನೆಯಲ್ಲಿ ಅಮಿತಶಕ್ತಿ ಅಡಕವಾಗಿದೆ. ಸಾಮೂಹಿಕ ಪ್ರಾರ್ಥನೆಯಲ್ಲಾದರೋ ಈ ದೈವೀಶಕ್ತಿಯು ಪ್ರಚಂಡವಾಗಿದ್ದು ಅಸಾಧಾರಣವಾದ ಕಾರ್ಯಗಳನ್ನೆಸಗಬಲ್ಲುದು. ಇದಕ್ಕೆ ಇತ್ತೀಚಿನ ದೃಷ್ಟಾಂತಗಳೂ ಇವೆ. ಪರಾಕ್ರಮವು ಪುರುಷನಲ್ಲಿ ಅತ್ಯಾವಶ್ಯಕವೇ ಸರಿ! ಆದರೆ ಅದೊಂದರಿಂದಲೇ ಕಾರ್ಯ ಸಾಗದು; ಅಸಮಯದಲ್ಲಿ ಅದು ಕುಸಿದು ಬೀಳುವುದುಂಟು ಅದಕ್ಕೆ ಪ್ರಾರ್ಥನೆಯಿಂದ ಉತ್ಪನ್ನವಾದ ಶಕ್ತಿಯ ಯೋಗ (ಜೋಡಣೆ) ಇದ್ದರೇನೇ ಅದರ ಕ್ರಿಯಾಶಕ್ತಿಯು ಅಪ್ರತಿಹತವಾಗಿರುವುದು. ನಮ್ಮ ದೇಶದ ಸಂರಕ್ಷಣೆಗೆ ಇಂದು ಮಾನುಷ ಪರಾಕ್ರಮದೊಂದಿಗೆ ದೈವೀ ಶಕ್ತಿಯು ಸೇರಿ ಉಂಟಾದ ಪ್ರಚಂಡ ಶಕ್ತಿ(ನಮ್ಮ ಸತ್ವ!)ಯ ಅವಶ್ಯಕತೆಯಿದೆ.

ಸಂಜಯನು ಧೃತರಾಷ್ಟ್ರನಿಗೆ
ಹೇಳಿಲ್ಲವೇ!
ಯತ್ರ ಯೋಗೇಶ್ವರೋ ಕೃಷ್ಣಃ
ಯತ್ರ ಪಾರ್ಥೋ ಧನುರ್ಧರಃ |
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ
ನೀತಿರ್ಮತಿರ್ಮಮ ||
ನಮ್ಮ ಸತ್ವಪರೀಕ್ಷೆಯಲ್ಲಿ ನಾವು
ವಿಜಯಿಗಳಾಗುವಂತೆ
ಆ ಪಾರ್ಥಸಾರಥಿ (ಭಾರತ
ಸಾರಥಿ!)ಯ ಅನುಗ್ರಹವಿರಲಿ!

— ಜಯ ಭಾರತ —

—ಪಡುಬಿದ್ರಿ ಹರಿದಾಸರಾಯ

ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಜನಪದ ಗೀತಾಸಂಕಲನ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ.ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ. ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ.ಜಿ.ಎಂ. ಕಾಲೇಜು
ಕುಂಜಿಬೆಟ್ಟು ಉಡುಪಿ.

## ಇತಿಹಾಸ ಪರಿಚಯ

(೩ನೇ ಪುಟದಿಂದ)

ರಪತ್ರಿಕೆಗಳೂ ಪ್ರಕಟವಾಗುತ್ತಿದ್ದುವು. ಮುಂಬಯಿಯಲ್ಲಿ ಈಗಾಗಲೇ 1822ರಲ್ಲಿ ಪ್ರಾರಂಭವಾಗಿದ್ದ ಗುಜರಾಥಿ ಪತ್ರಿಕೆ ಮುಂಬಯಿ ನಾ ಸಮಾಚಾರ್ 1832ರಲ್ಲಿ ವಾರಪತ್ರಿಕೆಯಾಯಿತು. 1830ರಲ್ಲಿ ಮುಂಬಯಿ ವರ್ತಮಾನ್ ಎಂಬ ಮತ್ತೊಂದು ಪತ್ರಿಕೆಯೂ ಅದರ ಮರು ವರ್ಷ ಜಮೆಜಮ್ಶೆದ್ ಎಂಬ ಪತ್ರಿಕೆಗಳೂ ಪ್ರಕಟವಾದುವು. 1832ರಲ್ಲಿ ಬಾಲಶಾಸ್ತ್ರಿ ಜಂಭೇಕರರು ಮುಂಬಯಿ ದರ್ಪಣವೆಂಬ ದ್ವಿಭಾಷಾ ಪತ್ರಿಕೆಯನ್ನು ಹೊರಡಿಸಿದರು.

### ಪರಿವರ್ತನೆಯ ಕಾಲ

1857 ಭಾರತೀಯ ಪತ್ರಿಕೆಗಳ ಇತಿಹಾಸದ ಪರ್ವಕಾಲ. ಈ ದೊಡ್ಡ ದಂಗೆಯು ಸರಕಾರದ ಧೋರಣೆಯಲ್ಲಿ ಮುಖ್ಯವಾಗಿ ಪತ್ರಿಕಾ ಸ್ವಾತಂತ್ರ್ಯದ ಧೋರಣೆಯಲ್ಲಿ ದೊಡ್ಡ ಬದಲಾವಣೆಯನ್ನುಂಟು ಮಾಡಿತು. ಸರಕಾರದ ಪರವಾಗಿರುವ ಪತ್ರಿಕೆಗಳನ್ನುಳಿದು ಇತರ ಪತ್ರಿಕೆಗಳ ಬಗ್ಗೆ ಸರಕಾರವು ಕಠಿಣವಾದ ಧೋರಣೆಯನ್ನನುಸರಿಸಿತು. ಪತ್ರಿಕೆಗಳನ್ನು ಅದು ಸಂಶಯದಿಂದ ನೋಡಲಾರಂಭಿಸಿತು. 1857 ಪ್ರೆಸ್ ಶಾಸನವು ಭಾರತೀಯ ಪತ್ರಿಕೆಗಳನ್ನು ಖಂಡಿಸಿತು ವಿಧೇಯತ್ವವನ್ನು ವ್ಯಕ್ತಪಡಿಸಿದ ಯುರೋಪಿಯನ್ ಪತ್ರಿಕೆಗಳು ಮಾತ್ರ ಅದರ ಹೊಗಳಿಕೆ ಪಡೆದುವು.

ಅದರೆ 182 ರಿಂದ 1857ರ ವರೆಗೆ ಅನೇಕ ಪತ್ರಿಕೆಗಳು ಜನ್ಮ ತಾಳಿದ್ದುವು. ಇಷ್ಟು ಪತ್ರಿಕೆಗಳ ಬೆಳವಣಿಗೆಯು ಬಲವಾದ ಒಂದು ಶಕ್ತಿಯನ್ನುಂಟು ಮಾಡಿದುವು. ಅವುಗಳ ಮುಖ್ಯ ವಿಷಯ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಯ ವಿಚಾರವಾಗಿತ್ತು. ಧಾರ್ಮಿಕ ಪ್ರೇರಣೆ, ಸಾಮಾಜಿಕ ಸುಧಾರಣೆ ಪತ್ರಿಕೆಗಳ ಮುಖ್ಯ ಸ್ಫೂರ್ತಿಯಾಗಿತ್ತು. ಆದರೆ ಅವುಗಳು ಆಡಳಿತೆಯ ನ್ಯೂನತೆಗಳನ್ನೂ ಎತ್ತಿ ತೋರಿಸುತ್ತಿದ್ದುವು ಈ ಅವಧಿಯಲ್ಲಿ ಹೊರಟ ಮುಖ್ಯ ಪತ್ರಿಕೆ ದಾದಾಭಾಯಿ ನವರೋಜಿಯವರ ರೋಸ್ತ್ ಗೋಫ್ತಾರ್ (1856) ಆಗಿರುತ್ತದೆ. 1857ರಲ್ಲಿ ಭಾರತದಲ್ಲಿ ಮೊದಲನೆಯದಾದ ಮಹಿಳಾ ಪತ್ರಿಕೆ—ಸ್ತ್ರೀ ಬೋಧಿನಿ ಪ್ರಕಟವಾಯಿತು. ಅದನ್ನು ಕಾರ್ಸೆನ್‌ದಾಸ್ ಮೂಲ್ಜಿಯವರು ಹೊರಡಿಸುತ್ತಿದ್ದರು. ಅದರ ಮುಖ್ಯ ವಿಷಯ ಧಾರ್ಮಿಕ ಸುಧಾರಣೆಗಳ ಕುರಿತಾಗಿತ್ತು. 1858ರಲ್ಲಿ ಈಶ್ವರ ಚಂದ್ರ ವಿದ್ಯಾಸಾಗರರು ಪ್ರಾರಂಭಿಸಿದ ಸೋಮ ಪ್ರಕಾಶವು ಉಜ್ವಲ ರಾಷ್ಟ್ರೀಯ ಪತ್ರಿಕೆಯಾಗಿತ್ತು.

ದೊಡ್ಡ ದಂಗೆಯ ಅನಂತರ ಮತ್ತೊಮ್ಮೆ ಪತ್ರಿಕೆಗಳ ಬೆಳವಣಿಗೆಗೆ ಅವಕಾಶ ದೊರಕಿತು. ಬ್ರಿಟಿಷ್ ಪತ್ರಿಕೆಗಳು ತೀವ್ರವಾದ ಬೆಳವಣಿಗೆ ಹೊಂದುವಂತೆ ಅದು ಅನುಕೂಲತೆಯನ್ನೊದಗಿಸಿತು. 1861ರಲ್ಲಿ ಮುಂಬಯಿ ಟೈಮ್ಸ್, ದಿ ಸ್ಟಾಂಡರ್ಡ್ ಮತ್ತು ದಿ ಟೆಲಿಗ್ರಾಫ್ ಎಂಬ ಮೂರು ಪತ್ರಿಕೆಗಳ ವಿಲೀನೀಕರಣವಾಯಿತು. ಇದು ಬ್ರಿಟಿಷ್ ಪ್ರೆಸ್ಸಿನ ಪ್ರಗತಿಯ ಒಂದು ಹಿರಿಯ ಹೆಜ್ಜೆಯಾಗಿತ್ತು. ಅನಂತರ ಮುಂಬಯಿಯಲ್ಲಿ ಇಂಡಿಯನ್ ಕಮೆಂಟ್ ಮತ್ತು ಬೊಂಬೆ ಸ್ಟೇಟ್ಸ್‌ಮನ್ ಎಂಬ ಪತ್ರಿಕೆಗಳು ಪ್ರಕಟವಾದುವು. ಇಂಡಿಯನ್ ಇಕೊನೊಮಿಸ್ಟ್ ಮತ್ತು ಎಗ್ರಿಕಲ್ಚರಲ್ ಗಜೆಟ್ ಒಫ್ ಇಂಡಿಯಾ ಎಂಬ ಪತ್ರಿಕೆಗಳು ಹೊರಬಂದುವು. ಈ ಎಲ್ಲಾ ಪತ್ರಿಕೆಗಳನ್ನೂ ರೊಬರ್ಟ್ ನೈಟ್ ಎಂಬಾತನೇ ಪ್ರಾರಂಭಿಸಿದನು ಆತನೇ 1875ರಲ್ಲಿ ಇಂಡಿಯನ್ ಸ್ಟೇಟ್ಸ್‌ಮನ್ (ಇಂದಿನ ಸ್ಟೇಟ್ಸ್‌ಮನ್) ಪತ್ರಿಕೆಯನ್ನೂ ಪ್ರಾರಂಭಿಸಿದನು.

### ಹೊಸ ಯುಗದ ಹೊಸ್ತಿಲಲ್ಲಿ

1861 ಭಾರತೀಯ ಪತ್ರಿಕೆಗಳ ಇತಿಹಾಸದಲ್ಲಿ ಮತ್ತೊಂದು ಮುಖ್ಯ ಕಾಲವು ಆರಂಭವಾಯಿತು ಅದರ ಕಾರಣವಿಷ್ಟೆ. ಆ ವರ್ಷದ ಬಳಿಕ ಓದುಗರ ದೃಷ್ಟಿಯೇ ಪ್ರಧಾನವಾಗಿರುವ ಪತ್ರಿಕೆಗಳು ಪ್ರಾರಂಭವಾದುವು ಎನ್ನಬಹುದು. 1860ರಲ್ಲಿ ಮದ್ರಾಸ್ ಟೈಮ್ಸ್ ಪ್ರಾರಂಭವಾಯಿತು. ಎಂಟು ವರ್ಷಗಳ ಬಳಿಕ ಅದರ ನಿವೃತ್ತ ಸಂಪಾದಕರು ಮದ್ರಾಸ್ ಮೈಲನ್ನು ಸಾಯಂಕಾಲದ ವಾರ್ತಾಪತ್ರಿಕೆಯನ್ನಾಗಿ ಮುದ್ರಿಸಿದರು. 1866ರಲ್ಲಿ ಪಂಜಾಬ್ ಟೈಮ್ಸ್ ಮತ್ತು ಇಂಡಿಯನ್ ಪಬ್ಲಿಕ್ ಒಪಿನಿಯನ್ ಪ್ರಕಟವಾದುವು. 1860ರಲ್ಲಿ ಪ್ರಾರಂಭವಾದ ಮದ್ರಾಸ್ ಟೈಮ್ಸ್ ಪತ್ರಿಕೆಯನ್ನು ಎಂಟು ವರ್ಷಗಳ ಬಳಿಕ ಅದರ ಮಾಜಿ ಸಂಪಾದಕರು ಸಾಯಂಕಾಲದ ವಾರ್ತಾಪತ್ರಿಕೆಯನ್ನಾಗಿ ಮಾಡಿದರು. ಬಂಗಾಳದಲ್ಲಿ ಆಗ ಸೋಮ ಪ್ರಕಾಶ, ಗ್ರಾಮವಾರ್ತಾ ಪ್ರಕಾಶಿಕ ಮತ್ತು ಅಮೃತ ಬಜಾರ್ ಪತ್ರಿಕೆಗಳು ಪ್ರಮುಖ ವಾರ್ತಾ ಪತ್ರಿಕೆಗಳಾಗಿದ್ದು ಮೆಚ್ಚುಗೆ ಗಳಿಸಿದ್ದುವು. ಅವುಗಳು ರೈತರ ಪರವಾಗಿದ್ದು ಬ್ರಿಟಿಷ್ ಆರ್ಥಿಕ ಧೋರಣೆಯನ್ನು ಟೀಕಿಸುತ್ತಿದ್ದುವು. ಸುರೇಂದ್ರನಾಥ ಬೆನರ್ಜಿಯವರು ಬೆಂಗಾಲಿ ಎಂಬ ಆಂಗ್ಲ ವಾರಪತ್ರಿಕೆಯನ್ನು ಪ್ರಕಟಿಸಿದರು.

1881ರಿಂದ ಭಾರತೀಯ ಪತ್ರಿಕೆಗಳ ಬೆಳವಣಿಗೆಯು ತೀವ್ರವಾಗತೊಡಗಿತು. ಉತ್ತರ ಭಾರತದಲ್ಲಿ ಹಿಂದಿ, ಉರ್ದು ಭಾಷೆಗಳ ವೃತ್ತಪತ್ರಿಕೆಗಳು ಹೆಚ್ಚಾದುವು. ಅವುಗಳ ಪ್ರಸಾರವೂ ಅಧಿಕವಾಯಿತು. ಸರ್. ಸಯ್ಯದ್ ಅಹಮ್ಮದ್ ಖಾನರ ಸಾಮಾಜಿಕ ಸುಧಾರಣೆಯ ಪ್ರಭಾವದಿಂದಾಗಿ ಡಿಲ್ಲಿ, ಆಗ್ರಾ, ಅಲಿಘರ್ ಮತ್ತು ಲಾಹೋರ್ ನಗರಗಳಲ್ಲಿ 28 ಪತ್ರಿಕೆಗಳು ಪ್ರಕಟವಾದುವು ಹಿಂದಿಯ ಮೊದಲ ಮುಖ್ಯ ಪತ್ರಿಕೆಗಳು ಕವಿ ವಾಚನ ಸುಧಾ (1867) ಹರಿಶ್ಚಂದ್ರ ಪತ್ರಿಕೆ (1873) ಚಂದ್ರಿಕಾ, ಹಿಂದಿ ಪ್ರದೀಪ, ಭಾರತ ಮಿತ್ರ ಮತ್ತು ಭಾರತ ಜೀವನಗಳಾಗಿದ್ದುವು 1884ರಲ್ಲಿ ಹಿಂದುಸ್ಥಾನ್ ಎಂಬ ಪತ್ರಿಕೆಯು ಇಂಗ್ಲಿಷ್, ಹಿಂದಿ, ಮತ್ತು ಉರ್ದು ಭಾಷೆಯಲ್ಲಿ ದೈನಿಕವಾಗಿ ಲಂಡನ್‌ನಲ್ಲಿ ಪ್ರಕಟವಾಗುತ್ತಿತ್ತು. ಅನಂತರ ಭಾರತದಿಂದ ಅದು ಪ್ರಕಟಗೊಂಡಿತು. ಪಂಜಾಬಿನಲ್ಲಿ 1873ರಲ್ಲಿ ಪತ್ರಿಕೋದ್ಯಮ ಪ್ರಾರಂಭವಾಯಿತು. 1880ರಲ್ಲಿ ಗುರುಮುಖಿಯಲ್ಲಿ ಎರಡು ಪತ್ರಿಕೆಗಳು—ಸುಕಾವ್ಯ ಸಮೋಧನಿ ಮತ್ತು ಕಾವ್ಯ ಚಂದ್ರೋದಯ — ಹೊರಡುತ್ತಿದ್ದುವು. ಅಮೃತಸರದ ಸಿಂಘ್ ಸಭಾದ ಬೆಂಬಲವಾಗಿ ಗುರುಮುಖಿ ಅಕ್ಬಾರ್ ಖಾಲ್ಸಾ ಅಕ್ಬಾರ್, ಖಾಲ್ಸಾ ಗಜೆಟ್ ಮತ್ತು ಖಾಲ್ಸ ಹರನಾರ್ ಎಂಬವುಗಳೂ ಪ್ರಕಟವಾಗುತ್ತಿದ್ದುವು. ದಕ್ಷಿಣ ಭಾರತದಲ್ಲಿ ಮಿಶನರಿಗಳು ಧರ್ಮ ಪ್ರಚಾರಕ್ಕಾಗಿ ಪತ್ರಿಕೆಗಳನ್ನು ಹೊರಡಿಸುತ್ತಿದ್ದರು. 1884ರ ವರೆಗೆ ಈ ಪರಿಸ್ಥಿತಿಯು ಬದಲಾಗಲಿಲ್ಲ. 1878ರಲ್ಲಿ ಹಿಂದೂ ಪತ್ರಿಕೆಯೂ 1882ರಲ್ಲಿ ತಮಿಳು ವಾರ ಪತ್ರಿಕೆಯಾದ ಸ್ವದೇಶಿ ಮಿತ್ರನ್ ಜನ್ಮತಾಳಿದುವು. ಸಮಾಜ ಸುಧಾರಕನಾದ ಶ್ರೀ ವೀರೇಶಲಿಂಗ ಪಂತಲು ವಿವೇಕ ವರ್ಧಿನಿಯನ್ನು ಪ್ರಕಟಿಸಿ ತನ್ನ ಸಮಾಜ ಸುಧಾರಣೆಯ ಕಾರ್ಯಕ್ರಮವನ್ನು ತೊಡಗಿದರು. ಮೈಸೂರಿನಲ್ಲಿ ಶ್ರೀನಿವಾಸ ಅಯ್ಯಂಗಾರರು ದೇಶಾಭಿಮಾನಿಯನ್ನೂ ವೆಂಕಟಕೃಷ್ಣಯ್ಯನವರು ಮೈಸೂರು ಹೆರಾಲ್ಡ್ ಮತ್ತು ವೃತ್ತಾಂತ ಚಿಂತಾಮಣಿಯನ್ನೂ, ಸಹೋದರರಾದ ಗೋಪಾಲ ಅಯ್ಯಂಗಾರರು ಮತ್ತು ಶ್ರೀನಿವಾಸ ಅಯ್ಯಂಗಾರರು ಮೈಸೂರು ಸ್ಟಾಂಡರ್ಡ್ ಮತ್ತು ನಾಡಗನ್ನಡಿಗಳನ್ನೂ ಹೊರತಿಸಿದರು. ಗುಜರಾಥಿಯಲ್ಲಿ ಸೂರತ್ ಮಿತ್ರ (1863) ಗುಜರಾಥ್ ಮಿತ್ರ ಮತ್ತು ಗುಜರಾಥಿ ದರ್ಪಣಗಳು ಮುಂಬಯಿ ನಗರದಲ್ಲಿ ಪ್ರಕಟವಾದುವು. 1873ರಲ್ಲಿ ಗುಜರಾಥಿಯ ದೇಶಮಿತ್ರ 1880ರಲ್ಲಿ ಕೈಸರ್ ಹಿಂದ್ ಜನ್ಮತಾಳಿದುವು. ಕಾತ್ಯಾವರ ಟೈಮ್ಸ್ ರಾಜಕೋಟೆಯಿಂದಲೂ ಗುಜರಾಥ್ ಸಮಾಚಾರ ಅಹಮ್ಮದಾಬಾದಿನಿಂದಲೂ ಸಯಾಜಿ ವಿಜಯ ಬರೋಡದಿಂದಲೂ ಹೊರಟವು.

ರ್ಯೂಟರ್ ವಾರ್ತಾ ಸಂಸ್ಥೆಯು ಜಗತ್ತಿನ ವಾರ್ತಾ ಸಂಸ್ಥೆಯಾಗಿ 1859ರಲ್ಲಿ ಭದ್ರ ತಳಹದಿಯಲ್ಲಿ ಬೆಳೆದಿತ್ತು ಮುಂಬಯಿ ಟೈಮ್ಸ್ ಪತ್ರಿಕೆಯು ಈ ವಾರ್ತಾ ಸಂಸ್ಥೆಯೊಂದಿಗೆ ಸಂಬಂಧ ಬೆಳೆಸಿತು. 1865ರಲ್ಲಿ ಭಾರತ ಮತ್ತು ಬ್ರಿಟನ್‌ಗಳೊಳಗೆ ಕೇಬಲ್ ಸಂಪರ್ಕವುಂಟಾಯಿತು ದಿ ಟೈಮ್ಸ್ ಒಫ್ ಇಂಡಿಯಾ ಅದರ ಮೊದಲ ಸಂಪರ್ಕವನ್ನು ಮಾಡಿಕೊಂಡಿತು. ಪತ್ರಿಕೆಗಳು ವಿದೇಶಿ ವಾರ್ತೆಗಳನ್ನು ತರಲು ಪ್ರಯತ್ನಿಸಿದುವು. ಆಗ ವಾರಪತ್ರಿಕೆಗಳು ನಾಲ್ಕು ಪುಟಗಳನ್ನು ಹೊರಡಿಸುತ್ತಿದ್ದುವು. ಸಾಮಾನ್ಯವಾಗಿ ಅವುಗಳ ಬೆಲೆ ಎಂಟಾಣೆಯಾಗಿರುತ್ತಿತ್ತು. ಕಲ್ಕತ್ತಾದ ಸ್ಟೇಟ್ಸ್‌ಮನ್ ಒಂದಾಣೆಯ ಪತ್ರಿಕೆಯಾದಾಗ ಅದೊಂದು ದೊಡ್ಡ ವಾರ್ತೆಯೇ ಆಯಿತು. ಕೇಶವ ಚಂದ್ರ ಸೆನ್‌ರವರು ಬ್ರಿಟನಿನಿಂದ ಬಂದ ಬಳಿಕ ಒಂದು ಪೈಸಾದ ಪತ್ರಿಕೆಯನ್ನು ಹೊರಡಿಸಿದಾಗ ಅದು ಪತ್ರಿಕಾ ಪ್ರಪಂಚದಲ್ಲೊಂದು ಸಣ್ಣ ಕ್ರಾಂತಿಯೇ ಆಗಿತ್ತು. 1890ರ ಸಾಲಿನಲ್ಲಿ ಟೈಮ್ಸ್ ಒಫ್ ಇಂಡಿಯಾ 3000 ಪ್ರತಿಗಳನ್ನು ಮುದ್ರಿಸುತ್ತಿತ್ತು.

(ಮುಂದುವರಿಯುವುದು)

### ಉಡುಪಿ ಸಬ್ ಜಡ್ಜರ ಕೋರ್ಟಿನಲ್ಲಿ

A. S. No. 80/1962

ಸುಬ್ಬ ಸಡ್ತಿ —ಅಪ್ಪಿಲಾಂಟಳು.

ಮತ್ತು

ಸರ್ವೇಶ್ರಿ ಹೆಂಗ್ಸು ಕೂಡಾ —ಎದ್ರಿರು

ಇವರೊಳಗೆ—

2ನೆ ಎದ್ರಿ—ಆಂತ 4ನೆ ಎದ್ರಿ—ನಾರಾಯಣ 5ನೆ ಎದ್ರಿಳು—ದೇವಿ ಹೆಂಗ್ಸು

—ಶೇಷನ ಮಕ್ಕಳು.

ಕುಂದಾಪುರ ತಾಲೂಕು, ತೆಲ್ಲೂರು ಗ್ರಾಮ— ಇವರಿಗೆ ಯೀ ಮೂಲ್ಕ ತಿಳಿಸುವುದೇನೆಂದರೆ —

ಮೇಲ್ಕಂಡ ಅಪ್ಪಿಲಾಂಟಳು—ಕುಂದಾಪುರ ಡಿ. ಮು. ಕೋರ್ಟು O. S. 312/59ನೇ ದಾವೆಯ ತೀರ್ಪಿನ ಮೇಲೆ ಮಾಡಿದ— ಅಪ್ಪಿಲು—ತಾರೀಕು 1—3—63ಕ್ಕೆ ಯಿಡೋಣಾಗಿಯದೆ, ಆ ಕುರಿತು 2, 4, 5ನೆ ಎದ್ರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ— ಕೋರ್ಟು ಮುಂದೆ—11 ಗಂಟೆಗೆ—ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದುಯಂತ—ಯೀ ಮೂಲ್ಕ ತಿಳಿಸೋಣಾಗಿಯದೆ.

N. V. Kamath.
Advocate for Appellant.

ಉಡುಪಿ, 5—2—63.


## ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

**ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.**

## ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— **ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,**

Estd. 1931.
Phone No. 240. — **ಮಂಗಳೂರು—3**

## ● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ।

ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/. ಉತ್ತಮ ರೂ. 9/.

**P. Devee & Co.** (N. J.) Calcutta—40



## ವರ್ಗ—ಊಳಿಗ

**ಮೊದಲಾದ ಯಾವತ್ತೂ ತರದ**

## ಎಕೌಂಟ್ ಪುಸ್ತಕಗಳು, ಶಾಲಾ ರಿಜಿಸ್ಟ್ರಿಗಳು, ಫಾರ್ಮುಗಳು

**ದೊರೆಯುತ್ತವೆ.**

**ನವಯುಗ ಪ್ರೆಸ್, ಉಡುಪಿ.**

## ಸಮಾಜ ಶಿಕ್ಷಕ

# ಉಪಾಧ್ಯಾಯರು

### ಶಿ

ಬರುತ್ತಾ ಇದ್ದಾರೆ—ಮಹಾ ರಾಜ ರಾಜಶ್ರೀ ಎಲಿಮೆಂಟ್ರೀ ಸ್ಕೂಲ್ ಮಾಸ್ತರ್ ಗೋಪಾಲಕೃಷ್ಣಯ್ಯ.

ಆಗೋ ಮೆಟ್ಟಿನ ಶಬ್ದ "ಇಶ್ರ್, ಇಶ್ಶ್". "ಸ್ಟಾಂಡ್ ಸಿಟ್—"....

ಓಹೊ! ಉಪಾಧ್ಯಾಯರಿಲ್ಲ ನಾಲು ಮಕ್ಕಳ ತಂದೆಯಾದ ನನ್ನ ಮುಂದೆ ಅವರೇಕೆ ಬಂದಾರು? ಅದು ಬರೀ ಶಬ್ದ ಮಾತ್ರ. ಈಗಲೂ ನನ್ನ ಕಿವಿಯಲ್ಲಿ ಕೇಳಿಸುತ್ತಾ ಇದೆ ಅವರ ಆ ಶಬ್ದದ ಮುಂದೆ ಎಷ್ಟೋ ಹೈಸ್ಕೂಲು ಟೀಚರ್, ಕಾಲೇಜುಗಳ ಪ್ರೊಫೆಸರ್ ಮೊದಲಾದವರ ಶಬ್ದಗಳೆಲ್ಲಾ ಅಡಗಿ ಹೋಗಿವೆ. ಈ ಆರಂಭದ ಉಪಾಧ್ಯಾಯರ ಧ್ವನಿ ಮಾತ್ರ ಹಾಗೇ ಇದೆ ನನ್ನ ಹೃದಯದಲ್ಲಿ—'ಅ' ಕಾರದೊಂದಿಗೆ ಸೇರಿಕೊಂಡಿದ್ದ ಹಾಗೆ. ಅಷ್ಟರ ಮಟ್ಟಿಗೆ ಗುರು ಭಕ್ತಿಯಿದೆಯಲ್ಲಾ ಎಂಬ ಹೆಮ್ಮೆಯೂ ಅದರೊಂದಿಗೇ ಇಲ್ಲದಿಲ್ಲ. ಅಂಥಾ ನನ್ನ ಗುರು ಮೂರ್ತಿಯನ್ನು, ಇದೋ ಸ್ವಲ್ಪ ಇಲ್ಲಿ ನಿಮಗೂ ತೋರಿಸುತ್ತೇನೆ.

### ಪ್ರಕೃತಿ

ವಯಸ್ಸು ಮೂವತ್ತೈದು. ಎರಡು ಹೆಜ್ಜೆ ಇದ್ದೀತು. ಕನ್ನಡಕದ ಕಂಡಿಗೆ ಜೇಬಿನಲ್ಲಿರುತ್ತಿರಲಿಲ್ಲ; ಮೇಜಿಯ ಬದಿಯಲ್ಲಿರುತ್ತಿತ್ತು. ಅದರೊಳಗಿರುವ ದಾರದ ಕನ್ನಡಕ ಮೂಗಿನ ಮೇಲೆ ಆಸೀನವಾದಾಗ ಅವರು ಬಹುಮಟ್ಟಿಗೆ ಉಪಾಧ್ಯಾಯರಾಗಿರುವುದಿಲ್ಲ; ಜಾತಕ ನೋಡುವ ಜೋಯಿಸರಾಗುತ್ತಿದ್ದರು.

ಅವರ ಎತ್ತರ ನೆಟ್ಟಗೆನಿಂತರೆ ಆರಡಿ; ಇದು ಕ್ಲಾಸಿನಲ್ಲಿ ಕೋಪ ಬಂದಾಗ ಮಾತ್ರ ಆಗುವ ಉದ್ದ. ಎದೆಯ ಅಗಲ ೨೫ ಇಂಚು. ತಲೆಯಲ್ಲಿ ಬಿಳಿಗೂದಲುಗಳೆಡೆಯಲ್ಲಿ ಕೆಲವೊಂದು ಕರಿಗೂದಲುಗಳೂ ಇವೆ. ಅವು ಎಣ್ಣೆ ಮತ್ತು ಹಮೆಯ ಲೇಪನಗಳಿಂದ ಬೆರಳ ಬಾಚಣಿಗೆಯಲ್ಲಿ ಬಾಚಿ ಗಂಟು ಹಾಕಿಕೊಳ್ಳಲ್ಪಟ್ಟಿವೆ. ಹಣೆ ಗೆರೆ ಹಾಕಿದ ಸ್ಲೇಟು ಇದ್ದ ಹಾಗಿರುತ್ತೆ. ಗವಿಯೊಳಗ ದೀಪ ಹೊತ್ತಿಸಿಟ್ಟ ಹಾಗ ಆಳದಲ್ಲಿ ಕುಳಿತು ಸೂಕ್ಷ್ಮವಾಗಿ ನೋಡುವ ಕಣ್ಣುಗಳು. ಹುಬ್ಬುಗಳೇ ಚಾಚಿಕೊಂಡು ಎರಡು ಹೊಳ್ಳೆಗಳನ್ನು ಹಿಡಿದಿಟ್ಟುಕೊಂಡ ಹಾಗೆ ಮೂಗು. ಹೊಳ್ಳೆಗಳ ಇಕ್ಕೆಲಗಳಿಂದ ಹೊರಟ ಎರಡು ಕಿರುಕಾಲುವೆಗಳು ನೋಡಾ ಬಾಡ್ಡಿಯಂತಹ ಎರಡು ಗಲ್ಲಗಳ ಗುಳಿಗಳಲ್ಲಿ ಮಿಲನವಾಗಿವೆ ನಗುವಾಗ ಹುಟ್ಟುವ ಹೊಸ ಕಾಲುವೆಗಳೂ ಅಗುಳಿಗಳಿಂದಲೇ ಹೊರಡುತ್ತವೆ ತಲೆ ಹರಿದ ಹುಲ್ಲಿನ ಸಾಲಿನಂತೆ ಮೀಸೆಯೋಳಿ. ಬೆಳೆಕೊಯ್ದ ಒಡ್ಡುಗಳ ಹಾಗೆ ಹದಿನಾರು ದಿನಗಳ ವರೆಗೆ ಮಾತ್ರ ಬೆಳೆದು ಮಾಯವಾಗುವ ಗಡ್ಡ. ಕೊಕ್ಕರೆಯ ಕೊರಳು. ಹೊಟ್ಟೆಯ ಮೇಲೆ ಯಾವಾಗಲೂ ಅರ್ಧ ಸೇರು ಅಕ್ಕಿ ಹಿಡಿದೀತು. ಹರಕು ಶರಟು ಹಾಕಿದಾಗ ಅದು ಬಹಿರಂಗವಾಗಿ ಕಾಣುತ್ತದೆ

### ಡ್ರೆಸ್ಸು

ಪ್ರಥಮ ಬಾರಿ ಮಾಸ್ತರಾದಾಗಲೇ ಕೊಂಡುಕೊಂಡ ಮೇಲೆ ಅವರನ್ನು ಗಟ್ಟಿಯಾಗಿ ಹಿಡಿದುಕೊಂಡಿರುವಂಥಾ ಬಟ್ಟೆ. ಅಗಸನೆಂದರೆ ಯಾರು ಏನೆಂಬುದನ್ನು ಉಪಾಧ್ಯಾಯರಿಂದ ಅದು ಕಲಿತಿರುವುದಿಲ್ಲ. ಅಚ್ಚಿಯ ಜುಂಗು ಕುಸ್ತೀ ಮಾರ್ಕ್ ನೀಲ ಸೋಪಿನ ಬಣ್ಣವಾಗಿರುತ್ತದೆ. ಇಡೀ ಬಟ್ಟೆಯ ಬಣ್ಣ ಕೆಂಪೂ ಬಿಳುಪೂ ಅಲ್ಲದ ಆಕಾಶದ ಬಣ್ಣ. ಅದರ ಸ್ವಾಭಾವಿಕ ನೆರಿಗೆಗಳನ್ನೆಲ್ಲಾ ಬಿಡಿಸಿ ಆಕಾಶದಂತೆ ಹಿಡಿದರೆ ಅದರಲ್ಲಿ ಅಸಂಖ್ಯ ನಕ್ಷತ್ರ ವಿಲಾಸಗಳೂ ಉಂಟು.. ಆ ಬಟ್ಟೆಯೊಂದಿಗೇ ಪೇಲೇರಿ ನಿಂತದ್ದು ಅಫ್ ಫಾರಂ ಪರ್ಟ್. ತಲೆಯಿಂದಿಳಿಯುವ ಎಣ್ಣೆ, ಮೈಯ ಮಣ್ಣುಗಳನ್ನು ತಿಕ್ಕಿ ತಿಕ್ಕಿ ಅದರ ಕತ್ತು ಕಾಲರುಗಳ ಒಳಭಾಗ ಕರ್ರಗೆ ಹೊಳೆಯುತ್ತಾ ಪುರಂದರ ದಾಸರ "ಮಣ್ಣಿಂದಾ ಕಾಯಾ ಮಣ್ಣಿಂದಾ" ಎಂಬ ದಿವ್ಯ ತತ್ವದ ಹಾಡನ್ನು ನೆನಪಿಗೆ ತರುತ್ತದೆ. ಕಾಗದಗಳ ಹೊರತು ಲೋಹದ ಕಾಸುಗಳನ್ನು ಆ ಷರ್ಟಿನ ಕೇಪೆ ಕಿಸೆ ಇಟ್ಟುಕೊಳ್ಳಲೊಪ್ಪುವುದಿಲ್ಲ. ಅಂಥಾದ್ದೇನಾದರೂ ಇದ್ದರೆ ಅವರ ಸೊಂಟದಲ್ಲಿರುವ ಪುಡಿ ಬಾರುಡೆಯ ಪಕ್ಕದಲ್ಲಿ ಸಿಕ್ಕಿಕೊಂಡಿರುತ್ತದೆ ಸ್ಕೂಲಿಗೆ ಹೊಂಟಾಗ ಕಾಣದೇ ಹೋಗುವ ಷರ್ಟಿನ ಗುಂಡಿಗಳನ್ನು ತ್ಯಾಗಮಾಡಿ, ದಾರದಿಂದ ಬಿಗಿದಿರುತ್ತಾರೆ ಉಪನಯನ ಪೂರ್ವಕವಾಗಿ.

ಕೈಯಲ್ಲಿ ಹಿಡಿಕೆ ಬಿದ್ದು ಹೋದ ನೆಗಣೀ ಬಣ್ಣದ ಕೊಡೆಯುಂಟು. ಮಳೆ ಬಂದರೆ ನೀರೇನೂ ಹೊರಗೆ ಜಾರುವಂಥಾದ್ದಲ್ಲ. ಆದರೂ ಮನಸ್ಸಮಾಧಾನಕ್ಕಾಗಿ ಆ ಕೊಡೆ ಅತೀ ಅಗತ್ಯ. ಅಂಗವಸ್ತ್ರವೂ ಇದೆ. ಅದನ್ನು ಬಿಡಿಸಿದರೆ ಬಿಲಗಳು ಕಂಡಾವೆಂದುಕೊಂಡು ಮಡಚಿ ಹೆಗಲ ಮೇಲೇರಿಸಿರುತ್ತಾರೆ. ಶಾಲೆಯಲ್ಲಿ ಕುರ್ಚಿಯ ಬೆನ್ನ ಮೇಲೆ ಕೂಡಾ ಅದು ವಿಶ್ರಾಂತಿ ಪಡೆಯುತ್ತಿರುತ್ತದೆ. ಪಾದಗಳ ಅಡಿಯಲ್ಲಿ ಅವರ ಹಗುರಾದಾಕೃತಿಯನ್ನು ಲೀಲಾಜಾಲವಾಗಿ ಹೊತ್ತು ನಡೆಯುವ ಬಗೆಬಗೆ ಜಾತಿಯ ಚರ್ಮ, ಆಣಿಗಳನ್ನೊಳಗೊಂಡ ಮೆಟ್ಟುಗಳು ಅವು ಒಂದು ಇನ್ನೊಂದರಂತಿಲ್ಲದಿದ್ದರೂ ಒಗ್ಗಟ್ಟಾಗಿ ಕೆಲಸ ಮಾಡುತ್ತವೆ. "ಇಶ್ರ ಇಶ್ಶ" ಎಂದು ತಾಳಬದ್ಧವಾಗಿ ಧ್ವನಿ ಎಬ್ಬಿಸುತ್ತವೆ. ಎಲ್ಲಿ ಬಿಟ್ಟರೂ ಆ ಪುಣ್ಯಶಾಲೀ ಜೋಡುಗಳನ್ನು ನಾಯಿ ಮುಟ್ಟಿ ಅಶುದ್ಧ ಮಾಡುವುದಿಲ್ಲ ಮನುಷ್ಯರ ಮರಿಗಳನ್ನು ಮೃಗಾಂಶದಿಂದ ಬೇರ್ಪಡಿಸುವ ಮೂಲಗುರುಗಳ ಪಾದಮೂಲವಲ್ಲವೇ ಅವುಗಳು!

### ಜೀವಾಧಾರ

ಅವರ ಮುಖ್ಯ ಜೀವನಾಧಾರವಾದುದು ಅವರ ಟೊಂಕದಲ್ಲೇ ಇರುತ್ತೆ—ತಗರದ ಡಬ್ಬಿಯಲ್ಲಿ ಅದರೊಳಗಿರುವುದನ್ನು ಅವರು ಆಗಾಗ ಮೂಗಿನೊಳಗೇರಿಸುವಾಗ ತೂಕಡಿಸುವ ಹುಡುಗರೂ ಎದ್ದು ನೋಡುತ್ತಾರೆ. ಆಗ ಹಾರಾಡುವ ಕಾಗದದ ಚೂರುಗಳೂ ಮೂಗಿನೊಳಗೆ ಹೋದಾವು. ವಾಯು ದೇವರ ಶಕ್ತಿಯೂ ಅವರ ನಾಸಾ ರಂಧ್ರದೊಳಗೇ ಇತ್ತು.

### ಆಹಾರ

ಬೆಳಗ್ಗೆ ನಾರ್ಣಪ್ಪನ ಹೊಟೆಲಿನ ಚಾ-ಒಂದು ದೋಸೆ; ದುಡ್ಡುಕೊಟ್ಟಲ್ಲ, ಸಾಲವಾಗಿ ಮತ್ತೆ ಒಂಬತ್ತು ಗಂಟೆಗೆ ಟ್ಯೂಶನ್ ಹೇಳುವಲ್ಲಿ ಒಂದು ಚಾ. ಮಧ್ಯಾಹ್ನ ಮನೆಯಲ್ಲಿದ್ದರೆ ಊಟ, ಇಲ್ಲದಿದ್ದರೆ ಹೋಟೆಲ್ಲಿನ ಚಾ ದೋಸೆ. ಹುಡುಗರೇ ಓಡಿ ಹೋಗಿ ತರುತ್ತಾರೆ. ಸಾಯಂಕಾಲ ಶುದ್ಧ ವಾಯು. ರಾತ್ರಿ ಹಲವು ದಿನ ವ್ರತ, ಉಪವಾಸ. ಉಂಡದಿನ ಮಾತ್ರ ವ್ರತ ಭಂಗ.

### ವಾಹನ

ನಡೆಯುವಾಗ ಮೆಟ್ಟಿನ ಮೇಲೆ; ಕುಳಿತಾಗ ಕುರ್ಚಿಯಲ್ಲಿ ಮನೆಯಲ್ಲಿ ಕೆರೆದು ಹೋದ ಜಗಲಿಯೂ, ಎಳಬಿಟ್ಟು ಶಿಥಿಲವಾಗಿ ಅವರ ತಂದೆಯ ಕಾಲದ ಚರಿತ್ರೆಯ ಅಂಶ ಪಡೆದಿರುವ ಬಣ್ಣದ ಚಾಪೆಯೂ ಇವೆ. ಈ ಚಾಪೆ ಸೆಂಟರೋ ಗೆಳೆಯರೋ ಬಂದಾಗ ಮಾತ್ರ ಸೇವೆ ಸಲಿಸಲು ಚಾಚಿಕೊಳ್ಳುತ್ತದೆ.

### ಸಾಧಾರಣ ಲಕ್ಷಣ:

ಕಾಕ ಸ್ನಾನದಿಂದ ಪವಿತ್ರ ಮಾಲಿನ್ಯ ಸಂಶುದ್ಧರಾಗಿರುತ್ತಾರೆ. ಅದೊಂದು ವಿಶಿಷ್ಟ ತರದ 'ಗುರು' ವಾಸನೆ ಯಾರನ್ನಾದರೂ ಮೂರುವರೆ ಅಡಿ ದೂರದಲ್ಲೇ ನಿಲ್ಲಿಸಿರುತ್ತದೆ. ಉಪಾಧ್ಯಾಯರು ತಾನೇ ಹತ್ತಿರ ಹೋಗುವುದು ಅಪಾಯ. ಅವರು ವೀಳ್ಯ ಹಾಕಿಕೊಂಡರಾದರೆ ನಾವಿನ್ನೂ ಜಾಗರೂಕರಾಗಿ ನಿಂತಿರಬೇಕು.

### ವಿಶೇಷಾಲಂಕಾರ:

ಇದು ಡೆಪ್ಯುಟಿ ಇನ್ಸ್‌ಪೆಕ್ಟರ್ ಬರುವ ದಿನವಾಗಿದೆ. ಅವರ ಅಜ್ಜ ಹೊಲಿಸಿದ ಕೋಟು, ಅವರಿಗೆ ಪಾಂಡಿತ್ಯ ಸನ್ಮಾನ ಬಂದದ್ದಂತೆ—ಒಣಗಿ ಕಪ್ಪಾಗಿರುವ ರೊಟ್ಟೀ ರುಮಾಲು—ಇವೆರಡೂ ವಿಶೇಷವಾಗಿ ಅವರ ದೇಹದ ಮೇಲೇರಿಕೊಳ್ಳುತ್ತವೆ. ಕೋಟಿನ ಪಾಕೆಟ್ಟಿನಲ್ಲಿ ವಾಚಿಲ್ಲದ ಬರೀ ಚೈನು.

### ವಂದಿ, ಮಾಗಧರು:

ಬೀದಿಯಲ್ಲಿ ನಡೆಯುವಾಗಲೆಲ್ಲಾ ಊರವರೆಲ್ಲರೂ "ನಮಸ್ಕಾರ ಮಾಸ್ತರೇ" ಎನ್ನುವವರೇ.... ಇಷ್ಟು ಸಾಲದೇ, ನನ್ನ ಆ ಕಾಲದ ಮಾಸ್ತರ್ ಗೋಪಾಲ ಕೃಷ್ಣಯ್ಯನನ್ನು ಈ ಕಾಲದ ನವನಾಗರಿಕ ಟೀಚರ್ರ ಮೇಲೆ ಆಬಾಹನೆ ಮಾಡಿ ನೋಡಿಕೊಳ್ಳಲು?

—ಶ್ರೀ ಎಂ ರಂಗ ರಾವ್.

---

## ಸಮಯ ಪುರಾಣಂ

(೨ನೇ ಪುಟದಿಂದ)

ಯಾಕೆ ನಿಶ್ಚಯವಾಯಿತು! ಅದಕ್ಕೆ ದಿನ ಲೆಕ್ಕವಿಲ್ಲವಾಗಿದ್ದಲ್ಲಿ ಭೀಷ್ಮನೊಬ್ಬನೆ ಶತ ತ ಹೋರಾಡಿ ಪಾಂಡವರನ್ನು ಜಯಿಸುತ್ತಿದ್ದ! ಉಳಿದವರೂ ಅಂತೆಯೇ! ನಿಶ್ಚಯ ದಿವಸ ಯುದ್ಧವಾದ್ದರಿಂದ ಪಾಂಡವರು ಜಯಿಸಿದರು! ಕೌರವರು ಮಡಿದರು; ಎಲ್ಲಾ ಸಮಯದ ದೃಷ್ಟಿಕೋನ! ರಾವಣನೂ ಅಂತೆಯೆ.; ಅವನ ಜೀವನಕ್ಕೆ ಸಮಯದ ದಯಾದೃಷ್ಟಿಯಿದ್ದುದರಿಂದಲೇ ಅವನ ಕ್ರೂರ ಕೃತ್ಯಗಳಿಗೆಲ್ಲಾ ಸಹಾಯವಾಯಿತು! ಇಲ್ಲವಾದರೆ ಏನಾಗುತ್ತಿತ್ತೋ ಏನೋ? ಕೈಕೆ ೧೪ ವರ್ಷ ವನವಾಸವನ್ನು ಅನುಭವಿಸುವಂತೆ ರಾಮನಿಗೆ ವರ ನೀಡಲು ಸಮಯದ ಮಹತ್ವ ಕಾರಣ. ಹೆಚ್ಚೇಕೆ? ನಮ್ಮ ಭಾರತ ಸರಕಾರದ ಪಂಚವಾರ್ಷಿಕ ಯೋಜನೆಯೊಂದೇ ಸಾಲದೇ? ಗೋಪ್ಯವಾಗಿ ಬರುವ ಗುಪ್ತ ಕಾಣಿಕಾ ಸ್ವೀಕಾರದ ನಮ್ಮ ಧುರೀಣರಿಂ! ಇದೆಲ್ಲವೂ ಸಮಯದ ಕೃಪಾದೃಷ್ಟಿ—ಎಂದಾಗ ಯಾರೂ ಇದಕ್ಕೆ ಶರಣಾಗಲೇ ಬೇಕು!

ಏವಂಚ ಸಮಯವೆಂಬುದು ಪರಿಪೂರ್ಣವಾದುದು; ಜೀವದ ಬಾಂದಳದ ಕಾಮನ ಬಿಲ್ಲಿನಲ್ಲಿ ಅದರ ನೆಲೆ ನಟ್ಟಿನಡು! ಅದು ನಮ್ಮ ತಲೆಯನೆತ್ತಿ, ಕಿರೀಟ! ಅಂತೂ ಸಮಯದ ಪುರಾಣವೂ ರಾಮಾಯಣ ಮಹಾ ಭಾರತಾದಿಗಳಿಗಿಂತಲೂ ಆಳವಾದುದು! ಅದು ತೆಗೆದಷ್ಟು ಮುಗಿಯದ ನೀರು! ಜಗತ್ತಿನಲ್ಲಿ ಅದರ ಸ್ಥಾನ ದೊಡ್ಡದು; ಅಂದರೆ ಮೇರುವಿನಷ್ಟೆ?

— ಶ್ರೀ ಮೊಗಸಾಲೆ
ನಾರಾಯಣ ಭಟ್





ಅಮೇರಿಕನ್ ಪಿಸ್ತೂಲ್ ಆಟೋ
ಮೇಟಿಕ್ 6 ಗುಂಡು ಮತ್ತು 50
ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ತುಂಡಾಗದಂತಹ ಲೈಸೆನ್ಸು ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

**REY ROGAS & CO.,** 23-A, Anand Nagar, **BOMBAY-26**

REGD. No. B. G. 176
LICENCE No. 31
Licensed to Post without Prepayment

# ಕವಲು ದಾರಿ–ಕೆಂಪು ದೀಪ

## ಪಕ್ಷ ಕೌರವರಲ್ಲಿ—ಊಟ ಪಾಂಡವರಲ್ಲಿ

ಒಮ್ಮೊಮ್ಮೆ ನಮ್ಮ ಆಕಾಶವಾಣಿ, ಯಾರ ಸೌಜನ್ಯದಿಂದಲೋ ತನ್ನ ಧ್ವನಿಯನ್ನು ಪರಿವರ್ತಿಸಿಕೊಳ್ಳುತ್ತಿದೆ! ಈ ಪರಿವರ್ತನೆಯನ್ನು ಕಂಡು—ಕೇಳಿ, ಆನಂದಿಸಿ ಸುಖಪಟ್ಟದ್ದೂ ಇದೆ! ಅಂತಹ ಅನುಭವ, ನಮ್ಮ ಮಂತ್ರಿಗಳ ಭಾಷಣದ ಮೂಲಕವೂ ಈಗೀಗ ಕಂಡು ಬರುತ್ತಿದೆ.

ಯುದ್ಧದಾಹವನ್ನಡಗಿಸಲು ಭಾರತದ ಮೇಲೆರಗಿ, ಬಂದು, ಭಾರತದ ಜನಕೋಟಿಗೊಂದು ಸವಾಲು, ಎಂದ ಚೀನಕ್ಕೆ, ಪ್ರತಿ ಸವಾಲಿತ್ತು ಅನ್ಯಾಯದ ಪ್ರತಿಭಟನೆಯ ದೀಕ್ಷೆಯನ್ನು ನಾವು ತೊಟ್ಟಿದ್ದೇವೆ. ಭಾರತದ ಘನತೆಗೆಂದೂ ಕುಂದುಂಟಾಗದೊಂದು ಭರತ ಕುಲಕೋಟಿ ಸಿಡಿದೆದ್ದು, ಜಗತ್ತಿಗೆ ಎಚ್ಚರವಿತ್ತಿದೆ. ಜಗತ್ತಿಗೆ ಎಚ್ಚರವಿತ್ತಿದೆ ಮಾತ್ರವಲ್ಲ, ಸುಸ್ಪಷ್ಟವಾಗಿ ಮನಗಾಣಿಸಿಕೊಟ್ಟಿದೆ. ಈ ದಿಶೆಯಲ್ಲಿ ಬಡ ಜನರು ಉತ್ಸಾಹ ತೋರಿದಷ್ಟು ಶ್ರೀಮಂತರು ಮುಂದೆ ಬಂದಿಲ್ಲ. ದೇಶರಕ್ಷಣೆಯೊಂದೇ ನಮ್ಮ ಗುರಿ. ಅದಕ್ಕಾಗಿ ತಗಲಿರುವುದು ದುಡಿಮೆ. ದುಡಿಮೆಯಿಂದ ಉತ್ಪಾದನಾಭಿವೃದ್ಧಿ! ಈ ರೀತಿಯಲ್ಲಾದರೂ ನಾವು ದೇಶ ರಕ್ಷಣೆ ಮಾಡುತ್ತೇವೆ ಎಂದು ದುಡಿಮೆಗಾರರು ಆಶಕ್ತಿ ವಹಿಸಿದ್ದಾರೆ. ಅಷ್ಟು ಸಾಲದು ಎಂಬಂತೆ ತಮ್ಮ ದುಡಿಮೆಯಲ್ಲಿ ಇಂತಿಷ್ಟು ಅಂಶವನ್ನು ರಕ್ಷಣಾ ನಿಧಿಗೆ ಒಪ್ಪಿಸುತ್ತೇವೆಂಬ ಸಂಕಲ್ಪವನ್ನೂ ಹಲವು ಕಡೆಗಳಲ್ಲಿ ಮಾಡಿದ್ದಾರೆ; ಇಂದಿದ್ದರೆ ನಾಳೆಗಿಲ್ಲ ಎಂಬ ರೀತಿಯಲ್ಲಿ ಬದುಕುತ್ತಿರುವ ದುಡಿಮೆಗಾರರು! ಕೆಲವೆಡೆಗಳಲ್ಲಿ ಇದನ್ನೇ ಕಡ್ಡಾಯ ವಿಧಿಯಾಗಿ ಅವರ ಮೇಲೆ ಹೇರಲಾಗಿದೆ.

ಧನ, ಕನಕಗಳನ್ನು ತಾವಾಗಿಯೇ ಕೊಡದಿದ್ದರೆ ಬಲಾತ್ಕಾರದಿಂದಲಾದರೂ ವಶಪಡಿಸಿಕೊಳ್ಳಲಾದೀತು ಎಂದು ಅಂದಿರುವ ನಮ್ಮ ಮಂತ್ರಿಗಳು ಈಗ ಶ್ರೀಮಂತರ ಗೊಡವೆಗೆ ಹೋಗುವುದೇ ಅನಾವಶ್ಯಕ ಎಂದು ಬಗೆದಂತಿದೆ. ರಕ್ಷಣಾ ನಿಧಿಗೆ ನೀಡುವ ಹಣವನ್ನು ಹೇಗೆ ಮರಳಿ ಪಡೆಯಬಹುದೆಂದು ಯೋಚಿಸುವ—ಅಂತಹ ಮನೋಭಾವದ ಶ್ರೀಮಂತರನ್ನು ಪೀಡಿಸುವುದು ಬೇಡ, ಎಂದು ಈಗ ನಮ್ಮ ಮಂತ್ರಿಗಳು ಆಡತೊಡಗಿದ್ದಾರೆ. ಇದು ಅತ್ಯಂತ ಶೋಚನೀಯ ವಿಷಯ ತಮ್ಮ ಕೈಲಾಗದುದಕ್ಕೆ ಇನ್ನೊಬ್ಬರ ಹುಳುಕನ್ನು ಎತ್ತಿ ತೋರಿಸುವಂತಿದೆ ಅವರ ಮಾತು; ಮಾತಿನ ರೀತಿ ಹಾಗಿದೆ.

ಶ್ರೀಮಂತರು ಎಷ್ಟು ಕೊಡಲು ಸಾಧ್ಯವಿದೆಯೋ ಅಷ್ಟನ್ನು ಕೊಟ್ಟಿಲ್ಲವೆಂದೇ ಇಟ್ಟುಕೊಳ್ಳೋಣ. ಎಷ್ಟೋ ಮಂದಿ ಕೂಡಿಟ್ಟವರು, ಕೂಡಿಟ್ಟ ಹಣದಿಂದ ಒಂದು ಕಾಸನ್ನೂ ರಕ್ಷಣೆಗಾಗಿ ಇತ್ತಿಲ್ಲ. ಆ ದೃಷ್ಟಿಯಲ್ಲಿ, ಬಡ ಜನರು ಶಕ್ತಿಮೀರಿ ಉತ್ಸಾಹ ತೋರಿಯೂ ಆಗಿದೆ. ದೇಶಕ್ಕೆ ಇಂದು ಬಂದೊದಗಿದ ವಿಪತ್ತಿನಲ್ಲಿ, ತಮ್ಮ ನಾಳಿನ ಚಿಂತೆಯನ್ನು ಮರೆತವರೆಂದರೆ ಬಡ ಜನರು ಮಾತ್ರ. ಅಂದ ಮಾತ್ರಕ್ಕೆ ಈ ಬಡ ಜನರ ಎಣಿಕೆಯಲ್ಲಿ ನಮ್ಮ ಮಂತ್ರಿಗಳೂ ಬರುತ್ತಾರೆಯೇ? ಅವರು ಈಗ ಆಡುತ್ತಿರುವ ಮಾತು ಈ ಸಂದೇಹಕ್ಕೆಡೆ ಮಾಡಿ ಕೊಡುತ್ತಿಲ್ಲ? ಶ್ರೀಮಂತರನ್ನು ಪೀಡಿಸುವುದು ಬೇಡವೆಂಬ ಮಾತಿನ ಅರ್ಥ ಬಡ ಜನರನ್ನು ಪೀಡಿಸಬಹುದು ಎಂದೇ? ನಮ್ಮ ಮಂತ್ರಿಗಳು ಆಡುವ ರೀತಿಯಲ್ಲಿ, ದೇಶ ರಕ್ಷಣೆಗಾಗಿ ತಮ್ಮಲ್ಲಿರುವುದೆಲ್ಲವನ್ನೂ ಒಪ್ಪಿಸಿ, ಅವರೂ ಬಡವರಾಗಿ ಬಿಟ್ಟಿದ್ದಾರೆಯೇ ಎಂಬ ಸಂದೇಹವುಂಟಾಗುತ್ತಿದೆ!

ದುಂದು ವೆಚ್ಚವನ್ನು ಕಡಿಮೆ ಮಾಡಿರಿ ಎಂದು ಉಪದೇಶ ಕೊಡುವ ಮಂತ್ರಿಗಳು ತಮ್ಮ ಕುರಿತು ಅವಶ್ಯವಾಗಿ ಯೋಚಿಸಬೇಕಾಗಿದೆ. ದೇಶದ ಹಿತರಕ್ಷಣೆಗಾಗಿ ಈಗ ಶ್ರೀಮಂತರು ಬಡವರು ಎಂಬ ಶತಾಯ ಗತಾಯ ವಿಧಿಯನ್ನು ನಿರ್ಮಿಸಿದ ಮಾತ್ರಕ್ಕೆ ತಾವು ಜನಪ್ರಿಯತೆಗಳಿಸಿ ಕೊಂಡೆವು, ಎಂದು ತಿಳಿಯುವುದು ಸರ್ವಥಾ ನ್ಯಾಯವಾಗಿ ತೋರುವುದಿಲ್ಲ. ಇದು ಬಗ್ಗಿದವನಿಗೊಂದು ಗುದ್ದು ಹೆಚ್ಚು ಎಂಬುದರ ಮುನ್ಸೂಚನೆ?

ನಮ್ಮ ಮಂತ್ರಿಗಳು ತಾವೇನನ್ನು ಕೊಟ್ಟಿದ್ದಾರೆ ಎಂಬುದನ್ನು ಜನರೆದುರು ಹೇಳಲಿ. ತಾವು ಯಾವ ರೀತಿಯ ಜೀವನ ನಡೆಸುತ್ತಾರೆ ಎಂಬುದನ್ನು ಸಾರಲಿ. ತಮ್ಮ ಸಂಬಳ (ಮತ್ತು ಗಿಂಬಳ!)ದ ವಿನಿಯೋಗ ಈ ರೀತಿ ಮಾಡುತ್ತೇವೆ ಎಂಬುದನ್ನೂ ತೋರಿಸಿಕೊಂಡಲ್ಲಿ ಮಾತ್ರ ಅವರ ಮಾತುಗಳಿಗೆ ಬೆಲೆ ಸಿಗಬಹುದು! ನಾವು ಎಷ್ಟು ಕೊಡಲು ಸಾಧ್ಯವೋ ಅಷ್ಟನ್ನು ಕೊಟ್ಟಿದ್ದೇವೆ ಎಂದ ಮಾತ್ರಕ್ಕೆ ಅವರ ಮಾತಿನಲ್ಲಿ ರಕ್ಷಣಾ ನಿಧಿಗಾಗಿ ಅವರು ಭವಿಷ್ಯದ ಚಿಂತನೆಯನ್ನೇ ಮರೆತಿದ್ದಾರೆ ಎಂದಂತೆ ಆಗಲಿಲ್ಲ. ಈ ನಾಯಕ ಮಣಿಗಳು ಮನೆ ಮನೆ ಹೊಕ್ಕು ಧನಕನಕಗಳನ್ನು ಶೋಧಿಸಿ ತೆಗೆದು ವಶಪಡಿಸಿಕೊಳ್ಳಲಾದೀತು ಎಂದು ಬೇರೆ ಹೇಳುತ್ತಾರೆ! ಯಾರ ಮನೆಯನ್ನು ಎಂದು ಮಾತ್ರ ಸೌಭಾಗ್ಯವಶಾತ್ ಹೇಳಲಿಲ್ಲ! ಬಹುಶಃ ಬಡವರ ಮನೆ ಹೊಕ್ಕು ಶೋಧನೆ ನಡೆಸಲಾದೀತೋ ಏನೊ?

ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಈಗ ಕಂಡು ಬರುವ ಅಂಶವೆಂದರೆ, ನಮ್ಮ ರಾಜಕಾರಣಿಗಳ ಆವೇಶದ ಅಬ್ಬರ, ಈಗ ಇಳಿಯತೊಡಗಿದೆ. ಅದಕ್ಕೊಂದು ನೆಪ ಬೇಕಾಗಿದೆ. ಜನ ಜಾಗ್ರತಿಯ ದಿಶೆಯಲ್ಲಿ ತಮ್ಮ ಅಸಾಮರ್ಥ್ಯಗುಣವನ್ನು ಪ್ರದರ್ಶಿಸಲು ಅವರಿಗೆ ಇಚ್ಛೆಯಿಲ್ಲ. ಆ ರೀತಿಯಲ್ಲಿ ಅವರು ಪ್ರಲಾಪಿಸತೊಡಗಿದ್ದಾರೆ.

ಅನುಕೂಲ ಶಾಸ್ತ್ರದ ಪಠಣೆಯೇ ನಮ್ಮ ನಾಯಕರುಗಳ ಕರ್ತವ್ಯ ವಿಧಿಯಾದರೆ ನಮ್ಮ ನಾಡಿನ ಭವಿಷ್ಯದ ಗತಿಯೇನು ಎಂಬ ಚಿಂತೆಯೂ ಬಾಧಿಸತೊಡಗಿದೆ. ಮನೆ ಮನೆ ಹೊಕ್ಕು ಬಲವಂತವಾಗಿ ವಶಪಡಿಸಿಕೊಳ್ಳುವ ಸಂದರ್ಭ ಬರಬಾರದು ಎಂದು ಹೇಳಬಲ್ಲ ನಾಯಕರು ತಮ್ಮ ಬಂಧುಗಳ ಕುರಿತು ಚಿಂತಿಸಿದಂತಿಲ್ಲ! ತಮ್ಮ ಮನೆಯನ್ನೂ ಮರೆತಿರಬೇಕು. ಕೆಲವು ಸಹಸ್ರ ರೂಪಾಯಿಗಳನ್ನು ತಾವು ಒಪ್ಪಿಸಿದ ಮಾತ್ರಕ್ಕೆ 'ಸರ್ವಸ್ವ ದಾನ'ದ ಅರ್ಥ ಆ ಮಾತಿಗೆ ಒಪ್ಪುವದಿಲ್ಲ. ಒಂದು ಚುನಾವಣೆಯಲ್ಲಿ ಅದಕ್ಕೆ ಹತ್ತು ಪಾಲು ಹಣವನ್ನು ಪೋಲು ಮಾಡಬಲ್ಲ ಪ್ರಜಾಹಿತಚಿಂತಕರಿಗೇನು ಕಡಿಮೆಯೇ ನಮ್ಮಲ್ಲಿ?

ನಮ್ಮ ಆಕಾಶವಾಣಿಯೂ ಒಮ್ಮೊಮ್ಮೆ ಧ್ವನಿ ಬದಲಿಸುತ್ತದೆ. ಬಲವಂತದ 'ಮಾಘ'ಸ್ನಾನದ ನೆನಪುಂಟು ಮಾಡಿ ಕೊಡುತ್ತದೆ. ಶ್ರಾವಕರ ಮನಸ್ಸನ್ನು ಸುಶ್ರಾವ್ಯ ಸಂಗೀತದ ಮೂಲಕ ತಣಿಸುತ್ತದೆ.

—ಸುದಾಸ

ಗೃಹಿಣಿಯರ

ಜವಾಬ್ದಾರಿಯು ಸಂಸಾರ ನಿರ್ವಹಣೆಯಲ್ಲಿ ಮಹತ್ತರವಾದುದು. ಮನೆಯ ಆಯವ್ಯಯಗಳನ್ನು ಸರಿಹೊಂದಿಸಿಕೊಂಡು ತನ್ನ ಮನೆ ಕುಟುಂಬಗಳನ್ನು ಬೆಳಗಿಸುವುದು ಆಕೆಯ ಧರ್ಮ. ಅದಕ್ಕೆ ಆಕೆಯ ಸೇವಿಂಗ್ಸ್ ಬ್ಯಾಂಕ್ ಖಾತೆಯು ಬಹು ವಿಧವಾಗಿ ನೆರವಾಗಬಲ್ಲುದು.

ಸಿಂಡಿಕೇಟ್ ಬ್ಯಾಂಕು ಸ್ತ್ರೀಯರು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಹೆಚ್ಚಿನ ಪ್ರೋತ್ಸಾಹವನ್ನೀಯುವುದು.

ನಿಮಗೆ ಸಮೀಪವಿರುವ ನಮ್ಮ ಶಾಖೆಯನ್ನು ಸಂದರ್ಶಿಸಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಉಡುಪಿ

ಸ್ಥಾಪನೆ: ೧೯೨೫

### ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. P. 3/1963

ಅರ್ಜಿದಾರರು 1. ಗ್ರಿಗೋರಿ ಡಾಲ್ಮೆಡ, 2. ಜೋನ ಡಾಲ್ಮೆಡ, 3. ಎಡ್ವಿನ್ ಡಾಲ್ಮೆಡ 4. ಫ್ರಾನ್ಸಿಸ್ಕ ಡಾಲ್ಮೆಡ, 5. ಆಗ್ನೇಸ್ ಡಾಲ್ಮೆಡ, 6. ಆಲಿಸ ಡಾಲ್ಮೆಡ, 7. ಮಾರ್ಗರೆಟ್ ಲುಯಿಸ್.

ಈ ಮೂಲಕ ಸಮಸ್ತರಿಗೆ ತಿಳಿಸುವುದೇನೆಂದರೆ ನಾಡಗ್ರಾಮದಲ್ಲಿರುವ ಲಿಯೊಂ ಡಾಲ್ಮೆಡರು ಮೃತಪಟ್ಟದ್ದರಿಂದ ಅವರ ಬಾಬ್ತು ಕುಂದಾಪುರದಲ್ಲಿರುವ ಕೆನರಾ ಬೇಂಕಿನ ಸೇವಿಂಗ್ಸ್ ಎಕೌಂಟಿನಲ್ಲಿರುವ ಹಣವನ್ನು ಪಡೆಯುವ ಬಗ್ಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿ ದಾಖಲು ಮಾಡಿರುವುದರಿಂದ ಸದ್ರಿ ಅರ್ಜಿಯು ತಾರೀಕು 81—2—1963ಕ್ಕೆ ತನಿಖೆಗೆ ಇಟ್ಟದೆ ಸದ್ರಿ ಅರ್ಜಿಯ ಕುರಿತು ಯಾರದ್ದಾದರೂ ಆಕ್ಷೇಪಣೆಯಿದ್ದ ಪಕ್ಷದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದೆಂತ ಈ ಮೂಲಕ ತಿಳಿಸಲಾಗುತ್ತದೆ.

M. Ananthaya
Advocate for petitioners

ಮೊಕ್ಕಾಂ ಕುಂದಾಪುರ, ತಾ. 2. 2—1963

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸ್ಫೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ಸ.

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

# ನವಯುಗ

Estd. 1921 ಸ್ಥಾಪನೆ
Regd. No. B G 176
Vol. 42 No. 24

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 21—2—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ 6-75
ಸಂಪುಟ ೪೨ ಸಂಚಿಕೆ ೨೪

ನಮ್ಮ
ರಾಷ್ಟ್ರೀಯ
ರಕ್ಷಣಾ ನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ನಮ್ಮನ್ನಗಲಿದ

## ಶ್ರೀ ಮಲ್ಲಿಕೇಂದ್ರ ತೀರ್ಥರು



ಉಡುಪಿಯ ಶ್ರೀಕೃಷ್ಣಮಂದಿರದಲ್ಲಿ ಐದನೇ ಬಾರಿಗೆ ಪರ್ಯಾಯ ಪೀಠಾರೂಢರಾಗಿ ಶ್ರೀಕೃಷ್ಣ ಪರಮಾತ್ಮನ ಮಹಿಮೆಯನ್ನೂ ಶ್ರೀಮದಾಚಾರ್ಯರ ತತ್ವಜ್ಞಾನದ ಪ್ರಚಾರವನ್ನೂ ಪ್ರಚುರಪಡಿಸಿ ಜನತೆಯಲ್ಲಿ ಧರ್ಮ ಜಾಗ್ರತಿಯನ್ನುಂಟುಮಾಡಿದ ಮಹಾ ಮೇಧಾವಿ 'ದ್ವೈತ ವೇದಾಂತ ಲಂಕಾರ' ಬಿರುದಾಲಂಕೃತ ಶ್ರೀ ಶೀರೂರು ಮಠದ ಪರಮಪೂಜ್ಯ ಶ್ರೀ ಮಲ್ಲಿಕೇಂದ್ರತೀರ್ಥ ಶ್ರೀಪಾದಂಗಳವರು ಇದೇ ತಾ. 15—2—63ನೇ ಶುಕ್ರವಾರ ದಿವಾಗಂಟೆ 8-15ರಲ್ಲಿ ತಮ್ಮ ಪಂಚಭೂತಾತ್ಮಕ ಶರೀರವನ್ನು ತ್ಯಜಿಸಿ, ತಮ್ಮ ಭಕ್ತ ಸಮೂಹವನ್ನು ದುಃಖಾಂಬುಧಿಯಲ್ಲಿ ಮುಳುಗಿಸಿ ಶ್ರೀಕೃಷ್ಣ ಸಾಯುಜ್ಯವನ್ನೈದಿದ್ದಾರೆನ್ನಲು ಬಹು ವಿಷಾದವಾಗುತ್ತಿದೆ. ಇದರಿಂದ ಮಾಧ್ವ ಜನಾಂಗಕ್ಕೆ ನಷ್ಟವುಂಟಾಗಿದೆ. ಶ್ರೀಮತ್ಪರಮಹಂಸರು ತಮ್ಮ ಪ್ರತಿಭಾಪೂರ್ಣ ಬಹುಮುಖ ಜೀವನದಲ್ಲಿ ಉಡುಪಿಯ ಶ್ರೇಯವನ್ನು ಗುಣಗಾತ್ರದಿಂದ ಹಬ್ಬಿಸಿದ ಮಹಿಮಾನ್ವಿತರೆಂಬುದನ್ನೂ ಎತ್ತಿ ತೋರಿಸಿದ್ದಾರೆ.

### ಜನನ—ಶಿಕ್ಷಣ—ಆಶ್ರಮ

ಶ್ರೀ ಮಲ್ಲಿಕೇಂದ್ರ ತೀರ್ಥರ ಗಣನೀಯ ಶಾಲ್ಯ ಬುದ್ಧಿ ಮತ್ತೆ ಆಗಾಧವಾದುದು. ಅವರು ಬರೆದ ಗ್ರಂಥಗಳು ಮತ್ತು ಸಂಸ್ಕೃತ ಕಾಲೇಜಿನಲ್ಲಿಯ ಅವರ ಪ್ರವಚನಗಳೇ ಅವರ ವಿಚಕ್ಷಣ ಬುದ್ಧಿಯನ್ನು ಸಾರುತ್ತವೆ. ವಿಮುಡ್ತ್ವಾದಿರಾಜೀಯ ಪ್ರಕಾಶನ ಸಮಿತಿಗೆ ಅವರು ಇತ್ತಿರುವ ಕಾಣಿಕೆಗಳೇ ಅವರ ಉದಾರ ಬುದ್ಧಿ ವಿಕ್ಷಣ ಪ್ರೇಮ—ಇವುಗಳಿಗೆ ಜ್ವಲಂತ ಉದಾಹರಣೆಯಾಗಿವೆ.

ಒಂಭತ್ತು ವರ್ಷದ ಹಾಗು ಸನ್ಯಾಸ ದೀಕ್ಷೆ ತೆಗೆದುಕೊಂಡು ಮಾಧ್ವ ನಭೋಮಂಡಲದಲ್ಲಿ ಧ್ರುವ ತಾರೆಯಂತೆ ಜಾಜ್ವಲ್ಯಮಾನವಾಗಿ ಥಳ ಥಳಿಸುವುದೆಂದು ಯಾರು ತಿಳಿದಿದ್ದರು! ವೆಂಕಟರಮಣನೆಂಬ ಈ ಬಾಲಕ ತನ್ನ ಒಂಭತ್ತನೆಯ ವರ್ಷದಲ್ಲಿ ಲಕ್ಷ್ಮೀಂದ್ರ ತೀರ್ಥರಾಗಿ ಶ್ರೀ ಶೀರೂರು ಮಠದ ಪಟ್ಟದ ಪೀಠಾಧಿಪತಿಯಾಗಿ ಬಂದರು. ವೇದಾಂತ, ತರ್ಕ, ಅಥರ್ವವೇದ, ಜ್ಯೋತಿಷ್ಯಗಳಲ್ಲಿ ಅಸಾಮಾನ್ಯ ಪಂಡಿತರೆಂದು ನೆಗಳ್ತೆವೆತ್ತ ಶ್ರೀ ರಾಜಗೋಪಾಲಾಚಾರ್ಯ ಮತ್ತು ಕಮಲಾದೇವಿಯರ ಮಗನಾಗಿ (೧೯೦೭ನೇ ಇಸ್ವಿ) ಪ್ಲವಂಗ ಸಂವತ್ಸರದಲ್ಲಿ ಜನ್ಮವೆತ್ತಿದ ಇವರ (೧೯೧೬ನೇ) ನಳ ಸಂವತ್ಸರದಲ್ಲಿ ಆಶ್ರಮ ಸ್ವೀಕಾರಮಾಡಿ ಶ್ರೀ ಶೀರೂರುಸಂಸ್ಥಾನದ ಅಧಿಪತಿಯಾದರು.

ಶ್ರೀಗಳವರಿಗೆ ಬಾಲ್ಯದಿಂದಲೇ ಯೋಗ್ಯ ವಿದ್ಯಾಭ್ಯಾಸ ದೊರಕಿತು. ತಂದೆ ಮೊದಲೇ ಪಂಡಿತರು. ಶಾಸ್ತ್ರಪಾರಂಗತರಾದ ಬನ್ನಂಜೆ ನಾರಾಯಣಾಚಾರ್ಯರೂ, ಶ್ರೀ ಅಗ್ರಹಾರ ನಾರಾಯಣ ಶಂಕ್ರಿಗಳವರೂ ಬಾಲ್ಯ ವಿದ್ಯಾಭ್ಯಾಸ, ಪೂಜಾದಿಕ್ರಮ, ಮಠ ಸಂಪ್ರದಾಯ, ವೇದಾಂತ ಪುರಾಣಾದಿಗಳ ಯೋಗ್ಯ ಪಾಠ ಮಾಡಿದರು. ಮುಂದೆ ಅವಶಿಷ್ಟ ವಿದ್ಯಾವ್ಯಾಸಂಗಕ್ಕಾಗಿ ಆ ಕಾಲದಲ್ಲಿ ದ್ವೈತ ವೇದಾಂತ ದುಂದುಭಿಯನ್ನು ಆಸೇತು ಹಿಮಾಚಲ ಮೊಳಗಿಸಿದ ಉತ್ತರಾದಿ ಮಠಾಧಿಪತಿ ಕೀರ್ತಿಶೇಷ ಶ್ರೀ ಸತ್ಯಧ್ಯಾನ ತೀರ್ಥರ ಹತ್ತಿರ ಶ್ರೀಮಲ್ಲಿಕೇಂದ್ರ ತೀರ್ಥರು ತಮ್ಮ ಗುರುಗಳ ನೆರವಾಗಿ ನಡೆದು ವಿದ್ಯಾಪಾರಂಗತರಾದರು.

### ಪ್ರಥಮ ಪರ್ಯಾಯ ಪೀಠಾರೋಹಣ

ತದನಂತರ ಶ್ರೀಗಳವರು ತಮ್ಮ ಆಶ್ರಮ ಗುರುಗಳಾದ ಶ್ರೀ ಸೋದೆ ಮಠದ ವಿಶ್ವೇಂದ್ರ ತೀರ್ಥರ ಮಾರ್ಗದರ್ಶನದಲ್ಲಿ ತಮ್ಮ ಪ್ರಥಮ ಪರ್ಯಾಯವನ್ನು ಸಾಂಗವಾಗಿ, ಸಂಭ್ರಮದಿಂದ ನೆರವೇರಿಸಿದರು. ಏಕನಾಥ್ಯೆ ಆಗಿನ ಮೈಸೂರಿನ ಒಡೆಯರಾಗಿದ್ದ ಶ್ರೀ ಕೃಷ್ಣರಾಜರ ಸಹೋದರಿ ಮತ್ತು ಭಾವ, ಕಾಂತರಾಜ ಅರಸರು ಉಡುಪಿಯನ್ನು ಸಂದರ್ಶಿಸಿ ಗುರುಗಳ ಆಶೀರ್ವಾದವನ್ನು ಪಡೆದು ಪುನೀತರಾದರು. ಪ್ರಥಮ ಪರ್ಯಾಯವನ್ನು ಪೂರೈಸಿದ ಬಳಿಕ ಯತಿವರ್ಯರು ನ್ಯಾಯ, ಸುಧಾದಿ ಉದ್ಗ್ರಂಥಗಳನ್ನು ಅಧ್ಯಯನ ಮಾಡುತ್ತ ದೇಶ ಪರ್ಯಟನ ಮಾಡುತ್ತಾ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದರು.

ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು

### ಅಸಾಮಾನ್ಯ ವಿದ್ವಾಂಸರು

ಇವರ ಪಾಂಡಿತ್ಯಕ್ಕೇ ಎಲ್ಲೆಯಿಲ್ಲ. ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ಅನೇಕ ವರ್ಷಗಳ ವರೆಗೆ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ತಮ್ಮ ವಿದ್ವತ್ತಿಗೆ ಜ್ವಲಂತ ಉದಾಹರಣೆ ಕೊಟ್ಟಿದ್ದಾರೆ. ನ್ಯಾಯಸುಧಾ, ನ್ಯಾಯಾಮೃತಾದಿಗ್ರಂಥಗಳು ಇವರ ಮೆಚ್ಚಿನ ಪಾಠಗಳು. ಶ್ರೀಗಳವರಿಗೆ ಆಯುರ್ವೇದದಲ್ಲಿ ಅಗಾಧ ಜ್ಞಾನವಿತ್ತೆಂಬುದಕ್ಕೆ ಮಣಿಪಾಲದಲ್ಲಿ ಜರಗಿದ ಅಖಿಲ ಭಾರತ ಆಯುರ್ವೇದ ಪರಿಷತ್ತಿನಲ್ಲಿ ಅವರು ಅಪ್ಪಣೆ ಕೊಡಿಸಿದ ಅಧ್ಯಕ್ಷ ಭಾಷಣದ ಬಗ್ಗೆ ವೈದ್ಯ ಮಂಡಳದವರು ಮುಕ್ತಕಂಠದಿಂದ ಮಾಡಿದ ಶ್ಲಾಘನೆಯೇ ಪ್ರತ್ಯಕ್ಷ ಸಾಕ್ಷಿ. ಇವರು ವಾತ ರೋಗ ಸಂಬಂಧಿ ಔಷಧವನ್ನು ಉಚಿತವಾಗಿ ಕೊಡುತ್ತಿದ್ದರು. ವಾಯುವಿನ ರೋಗಕ್ಕೆ 'ಶಂಷ್ಟಿಕಾ' ಎಂಬ ಮಾತ್ರೆಯನ್ನು ಅನುಗ್ರಹಿಸಿ ಅಸಂಖ್ಯ ಜನರ ರೋಗ ನಿವಾರಿಸಿದ್ದಾರೆ. ಅವರು ದ್ವೈತ ದರ್ಶನ, ಗೀತಾದರ್ಶ, ಶ್ರೀವಾದಿರಾಜರ ಯುಕ್ತಿ ಮಂಡನ ಎಂಬ ಜನಪ್ರಿಯ ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ದ್ವಿತೀಯ ಪರ್ಯಾಯ ಕಾಲದಲ್ಲಿ ದೇಶದ ನಾನಾ ಮೂಲೆಗಳಿಂದ ವಿದ್ವಾಂಸರುಗಳನ್ನು ಬರಮಾಡಿಕೊಂಡು ಅವರನ್ನು ಗೌರವಿಸಿದುದು ಮಠದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾಗಿದೆ. ಇವರಿಗೆ ವೇದ ಶಾಸ್ತ್ರ ಪುರಾಣಗಳಲ್ಲಿ ಉಚಿತವಾದ ಕರ್ಮನಿಷ್ಠೆ, ಪಕ್ಷವೂ ಪ್ರಸನ್ನವೂ ಆದ ಉದಾರ ಮನಸ್ಸು, ಶತ್ರು ಮಿತ್ರರಿಬ್ಬರನ್ನೂ ಕಲ್ಯಾಣ ದೃಷ್ಟಿಯಿಂದ ಕಾಣುವ ದಯಾರ್ದ್ರ ಹೃದಯವಿತ್ತು. ಇಂಥ ಅಗಾಧ ವಿದ್ವಾಂಸರಿಗೆ ಅನೇಕ ಸ್ತ್ರೀಯ ಸಂಸ್ಕೃತ ಪತ್ರಿಕಾ ಸಂಘದವರು "ದ್ವೈತ ವೇದಾಂತಾಲಂಕಾರ" ಎಂಬ ಬಿರುದನ್ನು ಅರ್ಪಿಸಿದ್ದಾರೆ ಶ್ರೀ ಶ್ರೀಗಳವರು ಆಜೀವ ವಿದ್ಯಾ ಪಕ್ಷಪಾತಿಗಳೂ, ಧರ್ಮಾನುಷ್ಠಾನಪ್ರಿಯರೂ ಆಗಿದ್ದರು.

### ಕಟ್ಟಡಗಳ ನಿರ್ಮಾಣ

ಶ್ರೀಮತ್ಪರಮಹಂಸರು ಉಡುಪಿಯಲ್ಲಿ ವಸಂತ ಮಹಲನ್ನು ಕಟ್ಟಿಸಿ ಶ್ರೀ ಕೃಷ್ಣದೇವರಿಗೆ ಅರ್ಪಿಸಿದ್ದಾರೆ. ವಾದಿರಾಜ ಪ್ರತಿಷ್ಠಿತ ಸುಬ್ರಹ್ಮಣ್ಯ ದೇವರ ಗುಡಿಯನ್ನು ನವೀನವಾಗಿ ಜೀರ್ಣೋದ್ಧಾರಮಾಡಿಸಿದ್ದಾರೆ. ವಸಂತ ಮಹಲಿನ ಎದುರಿನ ಉದ್ದವಾದ ಭಾಗಕ್ಕೆ ಶಿಲಾ ರಸ ಹಾಕಿಸಿದ್ದಾರೆ ಮಾತ್ರವಲ್ಲದೆ ಉಡುಪಿಯ ತಮ್ಮ ಮಠವನ್ನು ಸರ್ವಾಂಗಸುಂದರವಾಗಿ ನಿರ್ಮಿಸಿದ್ದಾರೆ 'ಗೋಪಾಲಪುರ' ಎಂಬ ಕಲ್ಯಾಣಪುರದ ಸಮೀಪದಲ್ಲೂ, ಮಂಜೇಶ್ವರದಲ್ಲೂ ಹೊಸ ಮಠಗಳನ್ನು ನಿರ್ಮಿಸಿದ್ದಾರೆ. ತಮ್ಮ ಮಠದ ದೇವಸ್ಥಾನಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಶ್ರೀಕೃಷ್ಣ ದೇವರಿಗೆ, ಬಂಗಾರದ ಮುಂಟಪವನ್ನು ಅತ್ಯಂತ ನವೀನವಾಗಿ ಸಿದ್ಧಗೊಳಿಸಿ ಅರ್ಪಿಸಿದ್ದಾರೆ. ಶ್ರೀಪಾದರಿಗೆ ಪ್ರಾಣದೇವರ ಗುಡಿಯ ಜೀರ್ಣೋದ್ಧಾರ ಮಾಡುವ ಮತ್ತು ಶ್ರೀಕೃಷ್ಣನ ಮಠವನ್ನು ಸರ್ವಾಂಗ ಸುಂದರವನ್ನಾಗಿ ಮಾಡುವ ಅತುಲ ಅಪೇಕ್ಷೆಯಿದ್ದು, ಅದಕ್ಕೆ ಭರದಿಂದ ಸಿದ್ಧತೆ ಮಾಡಿದ್ದರು. ಅವರ ಆ ಸೌಭಾಗ್ಯವನ್ನು ಕಾಣುವ ಭಾಗ್ಯ ನಮಗಿಲ್ಲ.

ಶ್ರೀಪಾದಂಗಳವರು ಶೀರೂರಿನಲ್ಲಿ ಶ್ರೀ ರಾಮದೇವರ ಮತ್ತು ಮುಖ್ಯಪ್ರಾಣ ದೇವರ ಉತ್ಸವಕ್ಕಾಗಿ ರಥವನ್ನು ಮಾಡಿಸಿದ್ದಾರೆ ಶ್ರೀರಾಮ ನವಮಿಯಂಥ ಪುಣ್ಯ ಮುಹೂರ್ತದಲ್ಲಿ ವಿದ್ವತ್ಸಭೆ

(೫ನೇ ಪುಟ ನೋಡಿರಿ)

## ಗೇಹ ರಾಜ್ಯದಲ್ಲಿ

# ರಾಣೀಕಾಲ ಹೊರಟೇಹೋಯ್ತು

'ನೋಡೀಂದ್ರೆ... ಆಗ ನಮ್ಮ ಸೋಮಿ ಬಂದಿದ್ಲು. ಪಾಪ, ಅವಳ ಗೋಳು ಕೇಳಿದ್ರೆ ಕರುಳೇ ಕಿತ್ತು ಬರುತ್ತೆ.,,

"ಯಾರೇ ಅದು ಸೋಮಿಯೊಂದ್ರೆ? ನಿನಗೇನು ಮಂತ್ರ ಮಾಟ ಮಾಡಿಬಿಟ್ಳೇನು ಕರುಳು ಕೀಳೋಕೆ?,,

'ಅಯ್ಯಯ್ಯೋ, ಹಾಗೆಲ್ಲಾ ಹೇಳ್ಬೇಡೀಂದ್ರೆ. ಏನೋ, ನಿಮ್ಮ ಟೋಪಿಯವರ ಸಂಸ್ಕಾರಕ್ಕಿಂತ ಕಿರೀಟದವರದೇ ಎಷ್ಟೋ ಲಾಯಕ್ಕೊಂತ ಕೊಡಪಾನ ನೀರು ಸುರಿಸಿದ್ಲು ಕಣ್ಣಿಂದ. ಅವಳನ್ನು ಕಂಡದ್ದೇ ತಡ ನನ್ಗೂ ತಡೀಲಾಗಲಿಲ್ಲ ನಾನೂ ನೀರು ಸುರ್‍ಸಿಯೇ ಬಿಟ್ಟೆ ನೋಡಿ.',

'ಒಳ್ಳೇ ನಾಟಕ ಆಡಿಬಿಟ್ರಿ ಅನ್ನಿ. ಅಲ್ಲಿ, ಇವಕ್ಕೆಲ್ಲಾ ಸೂತ್ರಧಾರ ಯಾರೂಂತ ಕೇಳಿದ್ರೆ ಉತ್ತರವೇ ಸಿಗ್ಲಿಲ್ಲ.',

"ಅಳುತ್ತಳುತ್ತ ನಾಲ್ಕು ಸೇರು ಅಕ್ಕಿ ಕೇಳಿದಳು, ಹಿಂದೆ ಕೊಡುವ ಭರವಸೆಯನ್ನೂ ಕೊಡ್ಲಿಲ್ಲ.,,

"ಓ, ಇದು ಒಳ್ಳೆ ರೀತಿಯ ಕಡ ಏನು. ಕೊಟ್ಟೇ ಬಿಟ್ಟೆಯಾ?,,

'ಪಾಪ ಮಕ್ಕಳು ಮರಿಗಳು ಎರಡು ದಿನದಿಂದ ಉಪವಾಸವಂತೆ. ನೀವೇ ಹೇಳಿ, ನಾನು ಕೊಡ್ದೇನು ಮಾಡ್ಲಿ?,,

"ಕಾಳು ಅಕ್ಕಿ ತಂದುಹಾಕೋ ತಾಕತ್ತು ಇಲ್ಲವಾದ್ರೂ ಕಡ ಕೊಡೋ ಉದಾರತೆ ಏನೂ ಕಮ್ಮಿಯಿಲ್ಲ?,,

"ನೋಡಿ, ಅವಳಿಗೆ ಆರು ಮಕ್ಕಳು ಕಾಣೆ?,,

"ಇರಬಹುದು.,,

"ಹೌದು. ಎಲ್ಲಾ ಒಂದು ಒಂದೂವರೆ ವರ್ಷ ಅಂತರದವು. ಅವನ್ನು ಉಪವಾಸ ಹಾಕೋದಕ್ಕಾಗುತ್ತೆಯೆ?,,

"ಏನಂತೆ? ಅವೇಕೆ ಉಪವಾಸ?,,

"ನಾನು ಮತ್ತೇನು ಹೇಳ್ತಾ ಇರೋದು? ಅದೇ ನಿಮ್ಮ ಸರ್ಕಾರದ ಉದಾರತೆಯಂತೆ!,,

"ನೋಡು, ನಿನಗೆ ನಾನು ಎಷ್ಟೋ ಬಾರಿ ಅಂದಿದ್ದೇನೆ. ಒಂದಕ್ಕೂ ಎರಡಕ್ಕೂ ಸರ್ಕಾರ ಸರ್ಕಾರ ಅನ್ನೋದು ಚೆಂದವಾಗಿರೋಲ್ಲ. ಸರ್ಕಾರವೇನು ಯಾರಿಗಾದ್ರೂ ಬೆಳೆಸೋದು ಬೇಡ, ದುಡಿಯೋದು ಬೇಡ, ಉಣ್ಣೋದು ಬೇಡ ಎಂದು ಹೇಳುತ್ತೆಯೆ? ಸುಮ್ಮನೆ ಸರ್ಕಾರವನ್ನು ಗೋಣಗಿಕೊಂಡರೆ ಏನು ಫಲ?,,

'ನಾನು ಸರಿಯಾಗಿ ಹೇಳೋದು ಅದನ್ನೇ. ನಿಮ್ಮ ದೊಡ್ಡವರ ಸರ್ಕಾರ ದುಡಿಯೋದಕ್ಕೇನೇ ತಡೆ ಹಾಕಿದ್ರೆ....?,,

'ಏನೋ ಅದು, ಸರ್ಕಾರವೇನು ಯಾರನ್ನಾದರೂ ಕೈಹಿಡಿದು ತಡೆಯುತ್ತೇ ಹುಚ್ಚಿ....?,,

'ಸಾಕು ಸಾಕು, ನಿಮ್ಮ ಸರ್ಕಾರವೇ ಹುಚ್ಚು ಅದನ್ನು ಹೊಗಳೋ ನೀವೇ ಹುಚ್ಚು. ಅಲ್ಲ, ಬೇಡ ಬೇಡ್ದ ಕಾನೂನು ಕೀನೂನೂಂತ ತಂದು ಜನರನ್ನು ದುಡಿಯೋದಕ್ಕೆ ತಿನ್ನೋದಕ್ಕೆ ಭಂಗಮಾಡಿ ಅವರನ್ನ ಹಸಿವೆಯಿಂದ ಸಾಯುವಂತೆ ಮಾಡುತ್ತಿದೆಯಲ್ಲಾ ನಿಮ್ಮ ಟೋಪೀ ಸರ್ಕಾರ?,

'ಏನಪ್ಪಾ ಅದು, ತುಸು ಬಿಡಿಸಿ ಹೇಳಿದ್ರೆ....?,

'ನಾನು ಹೇಳೋದು ಅದೇ. ಊರವರಿಗೆಲ್ಲಾ ಟೋಪಿ ಹಾಕೋದು, ನಾವು ಹೊಟ್ಟೆ ಬೆಳೆಸೋದು.,,

"ನನ್ಗೊಂದೂ ಅರ್ಥವಾಗೋದಿಲ್ಲ.,,

"ಯಾಕ್ರೀ ಅದು ಅರ್ಥವಾಗ್ಬೇಕು? ನಿಮ್ಮನ್ನ ಯಾರಾದರೂ ದೂರಿದ್ರೆ ಅದು ಹ್ಯಾಗೆ ಅರ್ಥವಾಗುತ್ತೇಂದೆ.,,

"ಸಾಕು ಬಿಡೇ, ನಿನ್ನ ಹಗರಣ.,,

"ಹೌದು, ನಾವು ಕೂಗಿದ್ರೆ ಅದೆಲ್ಲಾ ಹಗರಣ. ನೀವು ಮಾಡಿದ್ದೆಲ್ಲಾ ಹಗರಣವಲ್ಲ.,,

"ಯಾರೇ ಅದು ಬಚ್ಚಾಲಿ, ನಿನ್ನ ಮನ ಕೆಡಿಸಿರೋವ್ಳು?,,

"ಪಾಪ, ಆ ಬಡವಳನ್ನು ಯಾಕೆ ಬಚ್ಚಾಲಿ ಅಂತೀರಿ?,,

'ಮತ್ತೆ ಯಾರೇ ಅದು? ಹೇಳ್ಬಾರ್ದೇ?,,

"ಹೇಳಿದ್ರೆ ಏನು ಮಾಡ್ತೀರಾ? ಕೇಳಿ, ನನ್ನ ಮಾನಿನ್ಯಾಯಿ ಸರ ಮಾಡ್ಕೊಟ್ಟಿಲ್ಲಾ...?,,

"ಹೌದು, ಗುಂಡಾಚಾರಿ. ಅವನ ಹೆಂಡ್ತಿಯೇ?,,

"ಅವನಿಗೆಲ್ಲಿ ಹೆಂಡ್ತಿ? ಅವನ ಮಗಳು ಗಂಡ ಸತ್ತು ತವರು ಮನೆಯಲ್ಲೇ ಬಿದ್ದಿದ್ದಾಳೆ, ಪಾಪ.,,

"ಏನಾಯ್ತಂತೆ?,,

"ಆಗೋದೇನು? ಏನೋ ಬಂಗಾರದ ಒಡವೆ ಮಾಡಬಾರದೂಂತ ನಿಮ್ಮ ಸರ್ಕಾರ ಹೇಳಿದ್ಮೇಲಿಂದ ಗುಂಡಾಚಾರೀಗೆ ಕೆಲಸ್ವೇ ಇಲ್ಲ. ಹೇಳಿ ಈಗ, ಆ ಮಕ್ಳು ಮರಿಗಳ ಸಂಸಾರ ಹೇಗೆ ಸಾಗಬೇಕೊಂತ?,,

"ಮಾಡ್ಬಾರ್ದೂಂತ ಎಲ್ಲಿ ಹೇಳಿದ್ದಾರೆ?,,

"ಇಲ್ಲ, ಹೇಳ್ಲಿಲ್ಲ. ಆದರೆ, ಈಗಿನ ಬಂಗಾರದಾಗೆ ಕೆಲ್ಸ ಮಾಡೋಕೂ ಅವಂಗೆ ಬರೋಲ್ಲ.,,

ನೋಡು, ಅದನ್ನ ಸ್ವಲ್ಪ ಕಲ್ತುಕೊಂಡ್ರೆ...,,

"ಇನ್ನು....ಇವತ್ತೋ ನಾಳೆಯೋ ಸಾಯೋವ! ಇನ್ನು ಕಲ್ತು ಗಿಲ್ತು....,,

"ಹಾಗೆಲ್ಲಾ ಹೇಳಿದ್ರೆ ಆಗುತ್ಯೆ? ಹೊಟ್ಟೆ ತುಂಬಬೇಕಾದ್ರೆ ಕಲೀಬೇಕು.,,

"ಹೌದು, ಮತ್ತೂ ಒಂದಂತೆ. ಈಗಿನ ಬಂಗಾರದ ಒಡವೆಯನ್ನು ಕೊಳ್ಳೋರೂ ಇಲ್ಲಂತೆ. ಅದೇನೋ, ರಾಣೀ ಕಾಲದ ರೂಪಾಯಿ ಹೋಗಿ ನಿಮ್ಮ ಟೋಪೀ ರೂಪಾಯಿ ಬಂತಲ್ಲಾ, ಹಾಂಗೆ. ರಾಣೀ ಕಾಲದ ಬಂಗಾರ ಹೋಗಿ ಟೋಪಿ ಬಂಗಾರ ಬಂತೂಂತೆ.,,

"ಹೌದು, ಏನಂತೆ? ಜನರಿಗೆ ಟೋಪೀ ರೂಪಾಯಿ ಬೇಡಂತೇನು?

"ಅಯ್ಯೋ, ರೂಪಾಯಿ ಇಲ್ದೆ ಹೇಗೆ ಜೀವನ ಸಾಗೀತು?,,

"ನೋಡು ಹಾಗೇನೇ ಬಂಗಾರ ಬೇಕೂಂತಂದ್ರೆ ಮಾಡ್ಸಿಯೇ ಮಾಡಸ್ತಾರೆ.,,

"ಅಂತೂ ಈಗ ಬೇಡವಾಗಿದೆ ನೋಡಿ.,,

"ಬೇಕಾಗುವ ದಿನವೂ ಬರಬಹುದು.,,

"ಬರುವ ವರೆಗೆ ಹೊಟ್ಟೆ ಕೇಳುತ್ತೆಯೆ? ಏನೋ ಮುದುಕನಾದ್ರೂ ಒಳ್ಳೇ ಕೆಲಸ ಮಾಡ್ತಿದ್ದ ನಂಬಿಗಸ್ಥ. ಸಂಘದೂ ತುಂಬಾ ಕೆಲ್ಸ ಕೊಡುತಿದ್ರು. ಬೇಕೂಂತಂದ್ರೆ ಐದು ಹತ್ತು ಮುಂಗಡವೂ ಕೊಡುತಿದ್ರು. ಇನ್ನು ಹೇಗೆ ಜೀವನ ಮಾಡ್ಬೇಕು? ಆ ಸೋಮಿ ನೋಡಿ, ಆರು ಮಕ್ಳ ತಾಯಿ. ಮೇಲೆ ಆರು ತಿಂಗಳಿಗೆ ಮೊದಲು ಗಂಡ್ನೂ ತೀರ್‍ಕೊಂಡ. ಅವಳ ಹೊಟ್ಟೆ ತಣಿಸುವವರು ಯಾರು?,

'ಯಾರು ಯಾಕೆ ಬರ್ತಾರೆ? ಅವರವರ ಹೊಟ್ಟೆಗೆ ಅವರವರದೇ ಕೈ.,

'ರಾಣೀ ಕಾಲ—ಕಾಲದ್ದು ಬೇಡಾಂತ ಎಲ್ಲಾ ಹೊಸ್ತು ಹೊಸ್ತು ತಂದು ಬಿಟ್ರಿ. ಇನ್ನು....,

'ಏನೇ ಅದು ಹೊಸ್ತು ಹೊಸ್ತು ಅಂದದ್ದು?,

'ಮತ್ತೇನು? ಬೆಳ್ಳಿ ರೂಪಾಯಿ ತೆಗೆದು ಕಬ್ಬಿಣ ರೂಪಾಯಿ ತಂದ್ರಿ, ಸೇರು ಮಣ ತೆಗೆದು ಕಿಲೋಗಿಲೊ ತಂದ್ರಿ, ಅಡಿಗಜ ತೆಗೆದು ಮೀಟರ್ ತಂದ್ರಿ. ಬಾಟ್ಲೆ ಗಲನ್ ಕಿತ್ತು ಲೀಟರ್ ತಂದ್ರಿ ಆಣೆ ಪೈ ಬಿಸಾಕಿ ನಯೇ ಪೈಸೆ ತಂದ್ರಿ. ರಾಜ ರಾಣಿಯರನ್ನೇ ಕಿತ್ತು ಹಾಕಿ....,

'ಸಾಕಪ್ಪಾ, ಸಾಕು. ಅಂತೂ ಇಷ್ಟಾದರೂ ನೀನು ಬದಲಾವಣೆ ತಿಳ್ಕೊಂಡೆಯಲ್ಲಾ?,

'ಇಷ್ಟು ಮಾತ್ರವಲ್ಲ, ಇನ್ನೂ ಒಂದಿದೆ.,

"ಏನೋ ಅದು?,,

"ಹೊಟ್ಟೆತುಂಬ ತಿಂದು ಹೊಟ್ಟೆನೋವೂಂತ ಅಳೋದನ್ನು ಕಿತ್ತು ಹೊಟ್ಟೆಗಿಲ್ದೆ ಅಳುವಂತೆ ಮಾಡಿದ್ರಿ.,,

"ನೋಡು, ಹೀಗೆಲ್ಲಾ ಹೇಳಿದ್ರೇ ನಾನು ಒಪ್ಪೋಲ್ಲ. ಯಾರೂ ಹೊಟ್ಟೆಗಿಲ್ದೆ ಅಳಬಾರ್‍ದು ಅನ್ನೋದೇ ನಮ್ಮ ಆಶೆ.,,

"ಈಗ ಹೇಳಿ, ಸೋಮಿ ಮಕ್ಳು ಯಾಕೆ ಅಳ್ತಾರೆ? ಅವರ ಹೊಟ್ಟೆಗೆ ಪೆಟ್ಟು ಹಾಕಿದ್ರಲ್ಲಾ ನೀವು....,

'ಛೆ, ಛೆ, ಏನೇ ಇದು ಚೆನ್ನಿ, ಯಾರ್‍ಯಾರ ಮೇಲ್ನ ಸಿಟ್ನಿಂದ ನನ್ಮೇಲೆ ರೇಗಿಕೊಳ್ತೀಯ?,,

'ಮತ್ತೆ ಅಂತೀರಲ್ಲಾ ಹಸಿ ಹಸಿ ಸುಳ್ಳು! ಹೊಟ್ಟೆಗಿಲ್ದೆ ಅಳ್ಬಾರ್ದಂತೆ? ಮತ್ತೆ ಆ ಪುಟ್ಸೋಮಿ ಮಕ್ಳು ಯಾಕೆ ಅಳೋದೂಂತ? ಪಾಪ, ಬಡವೆ ಸೋಮಿ ಯಾಕೆ ಎರವಲು ಕೊಂಡ್ಳೂಂತ? ಹೇಳಿ, ಹೇಳಿ ನೋಡುವ,,

"..........,

"ಹೇಳೀಂದ್ರೆ? ಟೋಪಿ ಸರ್ಕಾರದ ಕಥೇನೇ ಹೀಗೆ. ಚೀನ ಗೀನಾಂತ ಚಿನ್ನ ಒಯ್ತು. ಆಯುಧಾ ಆಯುಧಾಂತ ಹಣ ಒಯ್ತು. ಹೋಗ್ಲಿ, ಇನ್ನಾದ್ರೂ ದುಡಿಯೋಣಾಂದ್ರೆ ಅದ್ಕೂ ಸಂಚಕಾರ ಕೊಟ್ರು......,,

"ಚೆನ್ನಿ, ಹೀಗೆಲ್ಲಾ ಮಾತಾಡ್ಬಾರ್ದು. ಅದು ತಪ್ಪಾಗುತ್ತೆ. ಎಲ್ಲಾದರೂ ತಿಳೀದೇ ಸಿಕ್ಕಾಪಟ್ಟೆ ಮಾತಾಡಿದ್ರೆ ಜೈಲಿಗೆ ಹೋಗ್ಬೇಕ ದೀತು.,

'ಅದೂ ಬೇರೆಯಿದೆ ತಾನೆ? ಇರ್ಲಿ. ಇರ್ಲಿ ನನ್ಗಿಂತ ಸೋಮಿಯನ್ನೂ ಅವಳ ಮಕ್ಳನ್ನೂ ಒಯ್ದ್ರೆ, ಪಾಪ ಅವರಾದ್ರೂ ಸುಖದಿಂದ ರಾಗಿ ಗಂಜಿ ತಿಂದು ಗಟ್ಟಿ ಮುಟ್ಟಾಗಿ ಬೆಳೆದಾರು.

"ಚೆನ್ನೀ....,,

"ಏನು?,,

"ಇಲ್ಲಿ ನೋಡು...,,

"ಏನನ್ನು?,,

"ಬಂಗಾರದ ನಿಯಂತ್ರಣದಿಂದ ಉದ್ಯೋಗ ಕಳ್ಕೊಂಡವ್ರಿಗೆ ಬೇರೆ ಉದ್ಯೋಗ ಕೊಡ್ತಾರೆ ಸರಕಾರದವರು. ಇನ್ನು ಸಾಧ್ಯವಾದಷ್ಟು ನೆರವನ್ನು ನೀಡ್ತಾರೆ. ಏನು ಮಾಡೋದು? ಅಗ್ಬೇಕಾಗಿತ್ತು ಆಯ್ತು. ನಿನ್ನ ಸೋಮಿಯೂ ಸೋಮಿ ಮಕ್ಳೂ ಸುಖದಿಂದಿರೋ ಕಾಲ ಸ್ವಲ್ಪ ತಡವಾದ್ರೂ ಬಂದೇ ಬರುತ್ತೆ.,

'ಆಣೆ ಹೇಳ್ದಂತೆ ಹೇಳಿ ಬಿಟ್ರಲ್ಲಾ. ಖಂಡಿತಕ್ಕೂ ಬರುತ್ತೆಯೆ?,,

(೧೧ನೇ ಪುಟ ನೋಡಿ)


**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕಿರಿ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



**ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ**

ಭಾರತೀಯ ಪತ್ರಿಕೆಗಳ

# ಇತಿಹಾಸ ಪರಿಚಯ

## ೨. ಜಾಗೃತಿಯ ತರುವಾಯ

ಶ್ರೀ ಮ ರಾಜೀವ, ಎಂ ಎ, ಬಿ. ಟಿ

**ರಾಷ್ಟ್ರೀಯ ಜಾಗೃತಿ.**

ಭಾರತದಲ್ಲಿ ರಾಷ್ಟ್ರೀಯ ಹೋರಾಟವು ಪ್ರಾರಂಭವಾದಾಗ ಇಲ್ಲಿನ ಪತ್ರಿಕೆಗಳ ಸ್ವರೂಪವೇ ಬದಲಾಯಿತು. ಯುರೋಪಿಯನ್ ಪತ್ರಿಕೆಗಳ ಪ್ರತಿಕ್ರಿಯೆಯೂ ತೀರಾ ಬದಲಾಗೊಂಡಿತು ಅಂದಿನ ಅನೇಕ ಪತ್ರಿಕೆಗಳು ತೀವ್ರಗಾಮಿ ರಾಷ್ಟ್ರೀಯ ಪತ್ರಿಕೆಗಳಾಗಿದ್ದುವು. ವ ಲೆಂಟೈನ್ ಚಿರೋಲ್ ತನ್ನ "ಇಂಡಿಯನ್ ಅನ್‌ರೆಸ್ಟ್"ನಲ್ಲಿ ಅಂತಹ ಇಪ್ಪತ್ತು ಪತ್ರಿಕೆಗಳನ್ನು ಹೆಸರಿಸಿರುವರು. ಈ ರಾಷ್ಟ್ರೀಯ ದೃಷ್ಟಿಯಿಂದಲೇ ಭಾರತದ ಹೊರಗೂ ಭಾರತೀಯರು ಪತ್ರಿಕೆಗಳನ್ನು ಹೊರಡಿಸುತ್ತಿದ್ದರು. ಅಮೇರಿಕಾದಿಂದ ಫ್ರೀ ಹಿಂದುಸ್ಥಾನ್ ಪತ್ರಿಕೆಯನ್ನೂ, ಲಂಡನ್ ಮತ್ತು ಪ್ಯಾರಿಸ್ ನಗರಗಳಿಂದ ಶ್ಯಾಮ್‌ಜಿ ಕೃಷ್ಣವರ್ಮನವರು ಇಂಡಿಯನ್ ಸೋಶಿಯೋಲೊಜಿಸ್ಟ್ ಪತ್ರಿಕೆಯನ್ನು ನಡೆಸುತ್ತಿದ್ದರು. ಯುರೋಪಿನಲ್ಲಿ ತಲ್ವಾರ್ ಮತ್ತು ವಂದೇ ಮಾತರಂ ಎಂಬ ಪತ್ರಿಕೆಗಳು ಪ್ರಕಟವಾಗುತ್ತಿದ್ದುವು. ರಾಷ್ಟ್ರೀಯ ಕಾಂಗ್ರೆಸಿನ ಒಂದು ಪತ್ರಿಕೆಯು "ಇಂಡಿಯಾ" ಲಂಡನ್‌ನಲ್ಲಿ ಪ್ರಕಟವಾಗುತ್ತಿತ್ತು. ಭಾರತದಲ್ಲಿ ಪಂಡಿತ ಮದನ ಮೋಹನ ಮಾಲವೀಯರ ಮುಂದಾಳುತನದಲ್ಲಿ 1909ರಲ್ಲಿ ಲೀಡರ್ ಒಫ್ ಅಲ್ಲಾಹಾಬಾದ್ ಹೊರತು 1913ರಲ್ಲಿ ಪಿರೋಜ್ ಷಹಾ ಮೆಹತಾರ ಬೆಂಬಲದಿಂದ ಮುಂಬಯಿ ಕ್ರೋನಿಕಲ್ ಪ್ರಕಟವಾಯಿತು ಮೊಂಟೆಗೂ-ಚೆಮ್ಸ್‌ಫರ್ಡ್ ಸುಧಾರಣೆಗಳ ಅನಂತರ ಸರ್ವೆಂಟ್ಸ್ ಒಫ್ ಇಂಡಿಯಾ ಸಂಸ್ಥೆಯ ಮುಖಪತ್ರವಾಗಿ ದಿ ಸರ್ವೆಂಟ್ ಒಫ್ ಇಂಡಿಯಾ ಪ್ರಕಟವಾಯಿತು.

ಭಾರತದಲ್ಲಿ ಹೊಸ ಪತ್ರಿಕೆಗಳು ಹೊಸ ಪತ್ರಿಕೋದ್ಯಮ ಪ್ರಾರಂಭವಾದ ಕಾಲದಲ್ಲಿಯೇ ಮತ್ತೊಮ್ಮೆ ಬ್ರಿಟಿಷ ನೀತಿಯು ಕಠಿಣವಾಯಿತು. ಸರಕಾರದ ನೀತಿಯು ನಿಷ್ಠುರವಾದಂತೆಯೇ ಪತ್ರಿಕೆಗಳಲ್ಲಿ ಸುಧಾರಣೆಯೂ ಆಯಿತು. ಗೋಪಾಲಕೃಷ್ಣ ಗೋಖಲೆಯವರು ಪತ್ರಿಕೆಗಳ ಹಕ್ಕುಗಳಿಗಾಗಿ ತುಂಬಾ ಪ್ರಯತ್ನಿಸಿದರು ಈ ಅವಧಿಯಲ್ಲಿ ಅನೇಕಮಂದಿ ಸಂಪಾದಕರು ಗಡೀಪಾರು ಮಾಡಲ್ಪಟ್ಟರು. ಪತ್ರಿಕೆಗಳಿಂದ ಭದ್ರತಾ ಹಣವನ್ನು ಸರಕಾರ ಕೇಳಿತು. ಹೆಚ್ಚಿನ ಪತ್ರಿಕೆಗಳು ಈ ಮುಂಜಾಗ್ರತೆಯ ಹಣವನ್ನು ಕಳಕೊಂಡವು ಅದರ ಪರಿಣಾಮವಾಗಿ ಪತ್ರಿಕೆಗಳು ಮುಚ್ಚಲ್ಪಟ್ಟುವು ಆದರೆ ಈ ಅವಧಿಯಲ್ಲಿಯೇ ಅನೇಕ ರಾಷ್ಟ್ರೀಯ ಪತ್ರಿಕೆಗಳು ಪ್ರಾರಂಭವಾದುವು ತಿಲಕರ ಮರಾಠಿ ಪತ್ರಿಕೆ, ಕೇಸರಿ ಹಾಗೂ ಇಂಗ್ಲಿಷ್ ಪತ್ರಿಕೆ ದಿ ಮರಾಟ, ಟಾಗೋರರ ಸಾಧನಾ, ರಮಾನಂದ ಚಟರ್ಜಿಯವರ ಮೋಡರ್ನ್ ರಿವ್ಯೂ ಮತ್ತು ಪ್ರವಾಸಿ, ಸಚ್ಚಿದಾನಂದ ಸಿನ್ಹಾರವರ ಹಿಂದುಸ್ಥಾನ್ ರಿವ್ಯೂ, ನಟೇಶರ ಇಂಡಿಯನ್ ರಿವ್ಯೂ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ವಿಚಾರಗಳನ್ನೊದಗಿಸಿದುವು ಮೊದಲ ಬಾರಿಗೆ ಓದುಗರು ಅತ್ಯುತ್ತಮ ಮಟ್ಟದ ಲೇಖನಗಳನ್ನು ಪಡೆದರು. ಡಾ| ಅನ್ನಿ ಬೆಸೆಂಟರು ಮದ್ರಾಸ್ ಸ್ಟೆಂಡಾರ್ಡ್‌ನ್ನು ಪಡೆದು ಅದನ್ನು ನ್ಯೂ ಇಂಡಿಯಾವನ್ನಾಗಿ ಪರಿವರ್ತಿಸಿದರು. 1911ರಲ್ಲಿ ಪ್ರಾರಂಭವಾದ ದಿ ಕಾಮ್ರೇಡ್ ಪತ್ರಿಕೆಯು ಮೌಲಾನಾ ಮಹಮ್ಮದಾಲಿಯವರ (1918) ಸಂಪಾದಕತ್ವದಲ್ಲಿ ಪ್ರಸಿದ್ಧಿ ಪಡೆಯಿತು ಮಹಾತ್ಮಾ ಗಾಂಧಿಯವರು 1918ರಲ್ಲಿ ಯಂಗ ಇಂಡಿಯಾವನ್ನು ಅನಂತರ ಹರಿಜನ ಪತ್ರಿಕೆಯನ್ನೂ ಪ್ರಾರಂಭಿಸಿದರು. 1910—1920ರ ಅವಧಿಯಲ್ಲಿ ಉರ್ದೂ ಪತ್ರಿಕೋದ್ಯಮವೂ ತೀವ್ರವಾದ ಪ್ರಗತಿಯನ್ನು ಪಡೆಯಿತು. ಮೌಲಾನಾ ಆಜಾದರು 1912ರಲ್ಲಿ ಅಲ್-ಹಿಲಾಲ್ ಪತ್ರಿಕೆಯ, 1913ರಲ್ಲಿ ಅಲ್-ಬಿಲಾಗ್ ಪತ್ರಿಕೆಯ ಸಂಪಾದಕತ್ವವನ್ನು ನಿರ್ವಹಿಸಿದ್ದರು. ಅವರ ರಾಜಕೀಯ ಬರಹಗಳು ವಿದ್ವತ್ಪೂರ್ಣ ಲೇಖನಗಳು ವಿದ್ಯಾವಂತರ ಗಮನ ಸೆಳೆದಿದ್ದುವು. ಮೌಲಾನಾ ಮಹಮ್ಮದಾಲಿಯವರು ಇಂಗ್ಲಿಷ್ ಕಾಮ್ರೇಡ್ ಪತ್ರಿಕೆಯ ಸಹೋದರ ಪತ್ರಿಕೆಯಾಗಿ ಉರ್ದೂ ಹಮ್‌ದರ್ದ್‌ನ್ನು ಹೊರಡಿಸಿದರು ಹಮಿದುಲ್ ಅನ್ಸಾರಿಯವರ ಮದೀನಾ (ಲಕ್ನೋ) ಅಬ್ದುಲ್ ಬಾರಿಯವರ ಹಂದಂ (ಲಕ್ನೋ) ನಿಗಾಂರವರ ಆಜಾತ್ (ಕಾನ್ಪುರ) ಮತ್ತು ಸಜಿದ್ ಜಾನ್‌ರವರ ಪಾಟ್ನಾ ಅಕ್ಬಾರ್ (ಪಾಟ್ನಾ) ಇತರ ಪ್ರಮುಖ ಉರ್ದೂ ಪತ್ರಿಕೆಗಳಾಗಿದ್ದುವು. ದಕ್ಷಿಣ ಭಾರತದಲ್ಲಿ ಪ್ರಕಾಶಂರವರು ಸ್ಥಾಪಿಸಿದ ಸ್ವರಾಜ್ಯವು ರಾಷ್ಟ್ರೀಯ ವಿಚಾರಗಳನ್ನು ಪ್ರತಿಪಾದಿಸುವ ಒಂದು ಹಿರಿಯ ಪತ್ರಿಕೆಯಾಗಿತ್ತು. ವಾಸ್ವಾನಿಯವರು ಸ್ಥಾಪಿಸಿದ ನ್ಯೂ ಟೈಮ್ಸ್ ಬಿಹಾರದ ಸರ್ಚ್‌ಲೈಟ್ ಪತ್ರಿಕೆ, ಮೊಹರೆಯವರ ಕರ್ನಾಟಕ ವೈಭವ, ದಿವಾಕರರು ಮತ್ತು ಹುಕ್ಕೇರಿಕರರು ಸ್ಥಾಪಿಸಿದ ಕರ್ಮವೀರ (1921) ಅನಂತರದ ಸಂಯುಕ್ತ ಕರ್ನಾಟಕ (1924) ರಾಷ್ಟ್ರೀಯ ವಿಚಾರದ ಮುಖ್ಯ ಮುಖಪತ್ರಗಳಾಗಿದ್ದುವು. 1930ರಲ್ಲಿ ಫ್ರಿಪ್ರೆಸ್ ಜರ್ನಲ್ ರಾಷ್ಟ್ರೀಯ ವಾರ್ತೆಗಳಿಗೆ ಮಹತ್ವ ಕೊಡುವ ಪತ್ರಿಕೆಯಾಗಿ ಪ್ರಕಟವಾಯಿತು.

ಭಾರತೀಯ ಯುವಕರು ಸೇನೆ ಸೇರುವುದಕ್ಕೆ ಉತ್ಸಾಹದಿಂದ ಕ್ಯೂ ನಿಂತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

**ಸ್ವತಂತ್ರ ಪತ್ರಿಕೋದ್ಯಮ**

ದ್ವಿತೀಯ ಯುದ್ಧಕಾಲವು ಪತ್ರಿಕೆಗಳ ಬೆಳವಣಿಗೆಯ ಮುಖ್ಯ ಅವಧಿಯಾಗಿದೆ. ಪತ್ರಿಕೆಗಳ ಸ್ವಾತಂತ್ರ್ಯವನ್ನು ಸರಕಾರವು ನಿಯಂತ್ರಿಸಿತು. ಡಿಫೆನ್ಸ್ ಓಫ್ ಇಂಡಿಯಾ ಶಾಸನವುಂಟುಮಾಡಿದ ವಾತಾವರಣ ಸ್ವತಂತ್ರ ಪತ್ರಿಕೋದ್ಯಮಕ್ಕೆ ಪ್ರೋತ್ಸಾಹದಾಯಕವಾದ ಕಾಲವಾಗಲಿಲ್ಲ. ಆದರೂ ಯುದ್ಧವಾರ್ತೆಗಳು ಜನರ ಆಸಕ್ತಿಯನ್ನು ಕೆರಳಿಸಿದುವು. ಜನರು ವಾರ್ತಾಸಕ್ತರಾದರು. ಆದುದರಿಂದಲೇ ಈ ಅವಧಿಯಲ್ಲಿ ಅನೇಕ ಹೊಸ ಪತ್ರಿಕೆಗಳು ಜನ್ಮತಾಳಿದುವು. ಮುಂಬಯಿಯಲ್ಲಿ ಬ್ಲಿಟ್ಸ್ (1941) ಮದ್ರಾಸಿನಲ್ಲಿ ತಮಿಳು ವಾರ ಪತ್ರಿಕೆಯಾದ ಕಲ್ಕಿ (1941) ಮುಂಬಾಯಿಯಲ್ಲಿ ಗುಜರಾತಿ ದೈನಿಕವಾದ ವಂದೇ ಮಾತರಂ (1941) ಪ್ರಕಟವಾದುವು. 1942ರಲ್ಲಿ ಮುಂಬಯಿಯಲ್ಲಿ 'ಪೀಪಲ್ಸ್ ವಾರ್' ಜನ್ಮತಾಳಿತು. ಅದೇ ವರ್ಷ ತಮಿಳು ಪತ್ರಿಕೆ 'ತಂತಿ' ಮದ್ರಾಸ್, ಮಧುರೈ ಮತ್ತು ತಿರುಚಿಯಿಂದ ಹೊರಟಿತು ಸ್ವಾತಂತ್ರ್ಯವು ಬೇರೆ ಬೇರೆ ಭಾಷೆಗಳಲ್ಲಿ ಹೊಸ ಹೊಸ ಪತ್ರಿಕೆಗಳು ಪ್ರಕಟವಾಗಲು ಪ್ರಚೋದನೆಯನ್ನೊದಗಿಸಿತು. 1952ರಲ್ಲಿ ಭಾರತ ಸರಕಾರವು

(೧೦ನೇ ಪುಟ ನೋಡಿರಿ)




ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ. ರೂ. 5. ಚರ್ಮದ ಚೀಲದ ಬೆಲೆ. ರೂ. 6 ಪೋಸ್ಟ್ ಚಾರ್ಜ ರೂ. 2

**REY ROGAS & CO.,** 23-A. Anand Nagar, **BOMBAY-26**

## ಭಾರತೀಯ ಯೋಧನಿಗೆ

# ಭಾರತೀಯರ ಸಹಾಯಸಿದ್ಧಹಸ್ತ

ಓ ವೀರ ಯೋಧ,

ನಿನಗೆ ನಾನು ಅಪರಿಚಿತನಾಗಿರಬಹುದು. ಆದರೆ ನಿನ್ನ ಹೆಸರು ಪ್ರತಿಯೊಬ್ಬ ಭಾರತೀಯನ ನಾಲಿಗೆಯಲ್ಲಿಂದು ಕುಣಿದಾಡುತ್ತಿದೆ. ನಿನ್ನ ಹೆಸರು ಜಗತ್ಪ್ರಖ್ಯಾತವಾಗಿದೆ. ಅಷ್ಟೇಕೆ, ಹಿಮಾಲಯದ ಗವಿ, ಗುಹ್ವರಗಳಲ್ಲಿ ಸಂದು ಸಂದುಗಳಲ್ಲಿ ಪ್ರತಿಧ್ವನಿಸುತ್ತಿದೆ.

ಓ ಭಾರತೀಯ ಯೋಧ, ನೀನಿಂದು ಒಂದು ಜೀವವಲ್ಲ, ನಿನ್ನಲ್ಲಿ ನೂರು ಜೀವ ಅಡಗಿದೆ. ನೂರು ಗಂಡಸರ ಪೌರುಷ ನಿನ್ನಲ್ಲಿ ಹುದುಗಿದೆ.

ಮಡದಿ ಮಕ್ಕಳ, ಬಂಧುಬಾಂಧವರನ್ನು ಅಗಲಿ 'ಭಾರತಾಂಬೆಯೆ ನನ್ನ ತಾಯಿ, ಆವಳ ರಕ್ಷಣೆಯೆ ನನ್ನ ರಕ್ಷಣೆ' ಯೆಂದು ಹೋರಾಡುತ್ತಿದ್ದಿ ನೀನು? ನಿನ್ನ ಘನತೆಗೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೆ?

ಭೀಕರ ಛಳಿಯ ಪರಿವೆ ನಿನಗಿದೆಯೆ? ಹಿಮಾಲಯದ ಜಾರುವ ಭಯಾನಕ ಹಿಮ ಬಂಡೆಗಳೇ ನಿನ್ನ ಕ್ರೀಡಾ ಶೈಲಗಳಾದುವು. ಹಿಮಾಚ್ಛಾದಿತ ಶಿಖರವೇ ಶಸ್ತ್ರಾಗಾರಿಯಾಗಿರುವ ನಿನ್ನ ಮನೆಯಾಯಿತು.

ಬೆಚ್ಚನೆಯ ಉಡುಗೆ-ತೊಡುಗೆ ನಿನಗಿದೆಯೆ? ಹಿತಕರವಾದ ಮನೋಹರ ವಾತಾವರಣ ನಿನಗಿದೆಯೇ ಆದರೆ ನೀನು ಇದಾವುದರ ಕಿಂಚಿತ್ ಗೊಡವೆಯಿಲ್ಲದೆ ಧೂರ್ತ ಚೀನೀಯರನ್ನಟ್ಟುವುದರಲ್ಲಿ ಮಗ್ನನಾಗಿರುವೆಯಲ್ಲವೆ? ಮಾತೆಯ ರಕ್ಷಣೆಗಿಂತಲೂ ಶ್ರೇಷ್ಠ ಪುಣ್ಯ ಬೇರೊಂದಿಲ್ಲವೆಂಬುದನ್ನು ನಮಗೆಲ್ಲ ಮನವರಿಕೆ ಮಾಡಿಕೊಡುತ್ತಿರುವೆಯಲ್ಲವೆ?

ವೃಷ್ಟಾನ್ನ ಭೋಜನವನ್ನು ಮರೆತು ವಿಲಾಸೀ ಜೀವನವನ್ನು ತೊರೆದು ಮನೆ-ಮಾರೆಂಬ ಸಾಂಸಾರಿಕ ಜಂಜಟವನ್ನು ಮರೆತು 'ಭಾರತೀಯರೆಲ್ಲ ನನ್ನ ಸೋದರರು; ಅವರ ರಕ್ಷಣೆ ನನ್ನ ಪವಿತ್ರ ಕರ್ತವ್ಯ' ಎನ್ನುತ್ತಿದ್ದಿ ನೀನು. ಇದಕ್ಕಿಂತಲೂ ಉದಾತ್ತ ಭಾವ ಬೇರೊಂದಿದೆಯೇ? 'ಅಡಿಯ ಮುಂದಿಡೆ ಸ್ವರ್ಗ; ಹಿಂದಿಡೆ ನರಕ' ಎಂಬ ಬಲ್ಲವರ ಬೆಲ್ಲದಂತಹ ಸೊಲ್ಲನ್ನು ಇನ್ನೂ ಮರೆಯದಿರುವವನು ನೀನು.

ನಿನಗೆ ಸಾಕಷ್ಟು ಶಸ್ತ್ರಾಸ್ತ್ರಗಳಿಲ್ಲವೆಂಬುದು ಸ್ಪಷ್ಟವಾಗಿದ್ದರೂ ನೀನು ನಿನ್ನ ಪುಣ್ಯಕಾರ್ಯದ ಪ್ರತಿಯೊಂದು ಅಂಶವನ್ನು ಒಂದೊಂದು 'ಬ್ರಹ್ಮಾಸ್ತ್ರ' ವನ್ನಾಗಿ ಮಾಡಿದ್ದಿ. ಸಾಗರದ ಅಲೆಗಳಂತೆ ಒಂದರ ಹಿಂದೆ ಒಂದಾಗಿ ಬರುತ್ತಿರುವ ಅಪಾರ ಸಂಖ್ಯೆಯಲ್ಲಿದ್ದ ಚೀನೀ ಚೋರರ ನಡುವೆ 'ವೀರ ಅಭಿಮನ್ಯು'ವಿನಂತೆ ನುಗ್ಗಿ ಶತ್ರುಗಳ ಮುಂಡಗಳ ಚೆಂಡಾಡಿದ್ದಿ. "ಹತ್ತು ಚೀನೀ ಸೈನಿಕರಿಗೆ ಓರ್ವ ಭಾರತೀಯ ಸಮ" ಎಂಬ ಮಾತನ್ನು ಸತ್ಯ ವಾಕ್ಯವನ್ನಾಗಿ ಮಾಡಿದ್ದಿ.

ಪ್ರತಿಯೊಬ್ಬ ಭಾರತೀಯ ಯೋಧನೂ ಒಂದೊಂದು ಸಿಂಹ ಚೀನೀನರಿಗಳ ಹಿಂಡಿನ ಮಧ್ಯೆ ಹಿಮಾಲಯವೇ ಅಲ್ಲಾಡುವಂತೆ ವೀರ ಘರ್ಜನೆ ಗೈದು ವನರಾಜನಂತೆಯೇ ನುಗ್ಗಿದವನು ನೀನು. ನಿನ್ನ ಶೌರ್ಯ, ಪರಾಕ್ರಮಕ್ಕೆ ಜಗತ್ತೆ ಬೆರಗಾಗಿ ಬೆಚ್ಚಿತು.

ಪರ್ವತಗಳ ಬುಡದಲ್ಲಿ ನಿಂತು ಮೇಲಿಂದ ಬರುತ್ತಿರುವ ಚೀನೀಯರ ಗುಂಡಿನ ಮಳೆಗಂಜದೆ ಎದೆಕೊಟ್ಟು ತಡೆದು ನಿಲ್ಲಿಸಿದೆ. ಎಂತಹ ಅನುಪಮ ಸಾಹಸಕಾರ್ಯ! ಶೀಲ ನೀನ!

ನಿನ್ನ ಸಹೋದ್ಯೋಗಿಗಳಾದರೋ ಅದೆಷ್ಟು ವೀರರು! ಅದೆಂತಹ ಪರಾಕ್ರಮ ಅವರದಾಗಿತ್ತು! ವೀರ ಚಾಲಕ ವಿಲಿಯಂಸ್; ಬಹದ್ದೂರ್ ಸಿಂಗ್, ಧರಮ್ ಚಂದ, ಶೀವಾರಾಂ, ರಾಘವನ್, ಮನ್ನಿರಾಂ, ಧನ ಸಿಂಗಥಾಪಾ, ಜೋಗೀಂದ್ರಸಿಂಗ್, ಸಿರಿಚಂದ್, ಪ್ರತಾಪ್‌ಸಿಂಗ್ ಅಜಿತ್ ಸಿಂಗ್, ಕಾಂಬ್ಲೀ, ದತ್ತಸಿಂಗ್, ಸೈದಾನ ಸಿಂಗ್, ಸೈನ್ ಸಿಂಗ್; ಜೋಸೆಫ್....ಎಷ್ಟು ಮಂದಿ ಬರೆದು ಮುಗಿಯದಷ್ಟು ಹೆಸರುಗಳು. ಅವರೆಲ್ಲರ ಮಧ್ಯೆ ನೀನಿದ್ದಿ. ಅವರಂತೆ ಹೋರಾಡುತ್ತಿದ್ದಿ. ನೀನಲ್ಲವೆ ಭಾರತ ಭೂಷಣನು!

ಹಿಂದಿನ ಪೃಥ್ವೀರಾಜ್; ಪುರೂರವ; ಟಿಪ್ಪು; ಝಾನ್ಸಿಲಕ್ಷ್ಮೀಬಾಯಿ; ಕಿತ್ತೂರುಚೆನ್ನಮ್ಮರ ದೇಶಭಕ್ತಿ; ಕ್ಷಾತ್ರ ಶಕ್ತಿ ನಿಮ್ಮ ನರನಾಡಿಗಳಲ್ಲಿ; ಹರಿಯುವ ಬಿಸಿ ರಕ್ತದಲ್ಲಿ ಒಂದಾಗಿದೆಯೆಂಬುದರಲ್ಲಿಯೂ ಸಂಶಯವೆ?

ವಿವೇಕಾನಂದ; ಗಾಂಧಿಯವರ ದೃಢ ಚಿತ್ತ ನಿಮ್ಮಲ್ಲೂ ಬರಲಿ, ಮುಂದಿನಿಂದ ಗೆಳೆತನದ ಸೋಗು; ಪಂಚಶೀಲದ ಮುಸುಕು ಹಾಕಿ ಹಿಂದಿನಿಂದ ಹೇಸದೆ ಇರಿಯುವ ಹೀನ ಚೀನೀಯರನ್ನು ಸದೆಬಡಿಯು.

ಓ ಭಾರತೀಯ ವೀರ ಯೋಧ.

ಪ್ರಧಾನಿ ನೆಹರು ಗಾಯಗೊಂಡ ಭಾರತೀಯ ಯೋಧರನ್ನು ವಿಚಾರಿಸಿ ಸಮಾಧಾನದ ಮಾತುಗಳನ್ನಾಡುತ್ತಿರುವುದು.

ನೀನಿಂದು ಮಾತೃ ಭೂಮಿಗಾದ ಅಪಮಾನದಿಂದ ಕೆರಳಿ ಕೆಣಕಿದ ಸಿಂಗನಾಗಿದ್ದೀಯ! ಇದೊಂದನ್ನು ನೆನಪಿನಲ್ಲಿಟ್ಟುಕೊ, ನಿನ್ನ ಹಿಂದೆ ಭಾರತೀಯ ಜನಕೋಟಿ ಒಂದಾಗಿ ಭುಜಕ್ಕೆ ಭುಜಕೊಟ್ಟು ಧನಕನಕ ತೆತ್ತು ಒಂದಾಗಿ ನಿಂತಿದೆ; ನಿನಗೆ ಸಂಪೂರ್ಣ ಬೆಂಬಲವಿತ್ತಿದೆ—ಈ ಯುದ್ಧದ ಇದೆ ಶತ್ರುವಿನ ಮಾಯಾ ಜಾಲಗಳಿಗೆ ಸಿಲುಕದಿರುವ ಚತುರತೆ ನಿನ್ನಲ್ಲಿದೆ."

ಸತ್ಯ; ನ್ಯಾಯಗಳಿಗೆ ಎಂದಾದರೂ ಸೋಲು ಬಂದೀತೇ? ಅಂತಿಮ ಜಯ ನಮ್ಮದು ಖಂಡಿತ. ನಿನ್ನ ವೀರ ಕಾರ್ಯಕ್ಕೆ ಸತ್ಫಲ ಬಂದೇ ತೀರುವುದು; ಬರಲೇ ಬೇಕು.

ನಿನಗಿದೋ ಹೃತ್ಪೂರ್ವಕ ಸಹಾಯ ಸಿದ್ಧಹಸ್ತಗಳಿಂದ ಅಭಿನಂದನೆ, ಅಭಿನಂದನೆ! ಜೈ ಹಿಂದ್.

—ಸುಬ್ರಹ್ಮಣ್ಯ ಭಟ್ಟ, ಯೇತಡ್ಕ


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.





## ಗ್ರಾಮ ರಾಜ್ಯದ ತಾರಕ ಮಂತ್ರ

**-"ಕಾಯಕದಿಂದ ನೀವು ಅಭ್ಯುದಯ ಪಡೆಯಿರಿ."**

"ಜನ ನಿಮ್ಮ ಬಯಕೆ ಎಲ್ಲವನ್ನೂ ತೀರಿಸಲಿ, ಈ ಯಜ್ಞ ಕರ್ಮವನ್ನು ತೀರಿಸದೆ ಯಾವಾತನು ಉಣ್ಣುವನೋ, ಅವನು ಕದ್ದ ಅನ್ನವನ್ನು ಉಂಡಂತೆ!"—ಎಂದು ಬ್ರಹ್ಮ ತನ್ನ ಜನರ ಮೇಲೆ ಯಜ್ಞಕರ್ಮದ ಹೊಣೆಯನ್ನು ಹೊರಿಸಿದ.

೦ ೦ ೦

**"ಹಣೆಯಿಂದ ಬೆವರು ಸುರಿಸಿ ರೊಟ್ಟಿ ಸಂಪಾದಿಸು!"**

ಶರೀರದ ಆವಶ್ಯಕತೆಗಳನ್ನು ಶರೀರವೇ ಸಂಪಾದಿಸಿಕೊಳ್ಳಬೇಕು ಬದುಕುವುದಕ್ಕಾಗಿ ನಡೆದ ಹೋರಾಟದ ಬದಲು ಪರಸ್ಪರ ಸೇವೆಗಾಗಿ ನಡೆವ ಹೋರಾಟವೇ ಪರ್ಟ್ಟರೆ ಅದು ಮಾನವತೆಯ ವಿಜಯ. ಆಗ ಪಾಶವೀಯ ನಿಯಮದ ಜಾಗದಲ್ಲಿ ಮಾನವೀಯ ನಿಯಮ ಬರುತ್ತದೆ.

೦ ೦ ೦

**ಗೀತೆಯಲ್ಲಿ ನಮ್ಮ ಸ್ವಾಮಿ ಹೇಳುತ್ತಾನೆ:**

"ನಿದ್ರೆಯಿಲ್ಲದೆ—ಯಾಗಲೂ ಕರ್ಮ ನಿರತನಾಗದೆ ಹೋದರೆ ಮನುಷ್ಯ ವರ್ಗಕ್ಕೆ ನಾನು ತಪ್ಪು ದೃಷ್ಟಾಂತವನ್ನಿತ್ತಂತೆ."

೦ ೦ ೦

"ದೇಹ ದಾರ್ಢ್ಯವುಳ್ಳ ಒಬ್ಬ ಪುರುಷನಾಗಲಿ ಸ್ತ್ರೀಯಾಗಲಿ ಉದ್ಯೋಗವಿಲ್ಲದೆ ಅಥವಾ ಆಹಾರವಿಲ್ಲದೆ ಇರುವುದು ನಿವಾರಣೆಯಾಗುವ ವರೆಗೂ ನಾವು ವಿಶ್ರಾಮ ಪಡೆಯುವುದು ಅಥವಾ ಹೊಟ್ಟೆ ತುಂಬ ಉಣ್ಣುವುದು ನಮಗೆ ನಾಚಿಕೆಯೆನಿಸಬೇಕು."

—ಮ. ಗಾಂಧಿ.

## ಸೋಮಾರಿತನಕ್ಕಿಂತ ದೊಡ್ಡ ಮಾರಿ ಬೇರಿಲ್ಲ

## ಮರ್ಮಸ್ಪರ್ಶಿ ವಿವೇಚನೆ

# ಸಜ್ಜನರಿಗೆ ಕಷ್ಟ ಏಕೆ ಬರುತ್ತದೆ?

ಈ ನೈತಿಕ ಜಗತ್ತಿನಲ್ಲಿ ಅನ್ಯಾಯವಾಗುತ್ತಿರುವುದನ್ನು ಕಂಡು ನಮಗೆ ಒಮ್ಮೊಮ್ಮೆ ಬಹು ವೇದನೆಯಾಗುತ್ತದೆ. ನಮ್ಮ ಬುದ್ಧಿಯೇ ಕೆಟ್ಟು ಹೋಗುವುದುಂಟು. ಇದಕ್ಕೇನು ಕಾರಣ? ಈ ಜಟಿಲವಾದ ಪ್ರಶ್ನೆ ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದ ತನಕ ಬಗೆ ಹರಿಯದೆ ಉಳಿದಿದೆ. ದುರ್ಜನರಿಗೆ ಯೌವನದಲ್ಲೇ ಮೃತ್ಯು ಬಂದರೆ ಅವರ ಕರ್ಮದ ಫಲವೆಂದು ನಾವು ಹೇಳಿ ಸಮಾಧಾನ ತಾಳಬಹುದು. ಆದರೆ ಸಾಧು ಸಂತರು, ಸಜ್ಜನರು ಕೂಡಾ ಅಕಾಲ ಮೃತ್ಯುವಿಗೀಡಾಗಲು ಕಾರಣವೇನು? ಸಮಾಜ ಕಂಟಕನೋರ್ವನಿಗೆ ಭಯಂಕರ ರೋಗ ಬಂದರೆ ಅದನ್ನು ನಾವು ನ್ಯಾಯ ಸಂಗತವೆಂದು ಒಪ್ಪಬಹುದು. ಆದರೆ ಎಳೆಯ ಅಪ್ರಬುದ್ಧ ಮಕ್ಕಳು ರೋಗಗ್ರಸ್ತವಾಗುವುದೆಂದರೆ ಆಶ್ಚರ್ಯವಲ್ಲದೆ ಮತ್ತೇನು? ಕಳ್ಳನೊಬ್ಬನು ಜೈಲಿನಲ್ಲಿ ಬಿದ್ದು ಒದ್ದಾಡಿದರೆ ಅದರಲ್ಲೇನೂ ವಿಶೇಷವಿಲ್ಲ. ಆದರೆ ಭಕ್ತನೋರ್ವನು ಘೋರ ವ್ಯಾಧಿಯಿಂದ ನರಳಾಡುತ್ತಿದ್ದರೆ ನಮಗೆ ಬೇಸರವಾಗದಿದ್ದೀತೇ?

ಇದಕ್ಕೆ ಸಾಕಷ್ಟು ಪುರಾವೆಗಳನ್ನು ನಾವು ಇತಿಹಾಸದಿಂದ ಸಂಗ್ರಹಿಸಬಹುದು. ಸುಕರಾತನಿಗೆ ವಿಷ ತಿಂದು ಸಾಯಬೇಕಾಗಿ ಬಂತು. ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿ ಕೊಂದರು. ಭಗವಾನ್ ರಾಮಕೃಷ್ಣ ಪರಮಹಂಸರು ಕ್ಯಾನ್ಸರ್ ರೋಗದಿಂದ ಸತ್ತರು. ಶಂಕರಾಚಾರ್ಯರು ೩೦ ವರ್ಷದಲ್ಲೇ ಶಿವಸಾಯುಜ್ಯವನ್ನೈದಿದರು. ದಯಾನಂದರಿಗೆ ವಿಷ ಕೊಡಲಾಗಿತ್ತು. ವಿವೇಕಾನಂದರು ಅತ್ಯಂತ ಎಳೆ ಪ್ರಾಯದಲ್ಲೇ ನಮ್ಮನ್ನಗಲಿದರು. ಶ್ರದ್ಧಾನಂದ, ಮಹಾತ್ಮಾ ಗಾಂಧಿಯವರು ಗುಂಡಿಗಾಹುತಿಯಾದರು. ಇವಕ್ಕೆಲ್ಲ ಕಾರಣವೇನು? ಹಿಂದೂ ಧರ್ಮಶಾಸ್ತ್ರವು ಇದಕ್ಕೆಲ್ಲ ಅವರವರ ಪೂರ್ವಜನ್ಮದ ಪಾಪದ ಫಲ ಎಂದು ಸಮಾಧಾನ ಹೇಳುತ್ತದೆ. ಮುಸಲ್ಮಾನರು ಇದೆಲ್ಲಾ ಅಲ್ಲಾನು ಮಾಡುವ ಸತ್ವಪರೀಕ್ಷೆ ಎಂದು ತಿಳಿಯುತ್ತಾರೆ. ಆದರೆ ಕ್ರಿಶ್ಚಿಯನರ ದೃಷ್ಟಿ ತೀರಾ ಭಿನ್ನವಾದುದು. ಪಾಪಿಯಾಗಲೀ ಸದ್ಗುಣಿಯಾಗಲೀ ಎಲ್ಲರ ಮೇಲೂ ದುಃಖದ ಹೊರೆ ಸಮಾನವಾಗಿಯೇ ಬೀಳುತ್ತದೆ. ಪರಮೇಶ್ವರ ಅದರಲ್ಲಿ ಭೇದ ಮಾಡುವುದಿಲ್ಲ. ದುರ್ಜನರು ಅಸಹಾಯಕರಾಗಿ ಭಗವಂತನ ಸತ್ವ ಪರೀಕ್ಷೆಯಲ್ಲಿ ಒದ್ದಾಡಿದರೆ ಸತ್ಪುರುಷರು ನಭೋಮಧ್ಯದಲ್ಲಿ ಭಾಸ್ಕರನಂತೆ ಉಜ್ವಲವಾಗಿ ಪ್ರಕಾಶಿಸುತ್ತಾರೆ.

ಅಂಟುರೋಗಗಳ ಪ್ರಭಾವ ಎಲ್ಲರ ಮೇಲೂ ಸಮಾನವಾಗಿರುತ್ತದೆ. ಇದು ಸ್ವಾಭಾವಿಕ. ನಿಸರ್ಗ ನಿಯಮದಂತೆ ಆರೋಗ್ಯದ ನಿಯಮಗಳನ್ನು ಕಡೆಗಣಿಸಿದರೆ ರೋಗ ಎಲ್ಲರಿಗೂ ಬರುತ್ತದೆ. ಜಾರಿ ಬಿದ್ದರೆ, ಧರ್ಮಾತ್ಮನಾಗಲೀ ಪಾಪಾತ್ಮನಾಗಲೀ ಇಬ್ಬರಿಗೂ ನೋವಾಗುವುದು ಸಮಾನವಾಗಿದೆ. ಹೀಗಿಲ್ಲದಿದ್ದರೆ ಈ ಜಗತ್ತು ಅವೈಜ್ಞಾನಿಕ ಮತ್ತು ಅಸತ್ಯವಾಗುತ್ತಿತ್ತು.

ಈ ಜಗತ್ತು ವ್ಯವಸ್ಥಿತವಾಗಿ ನಡೆಯುವಂತೆ ಪರಮೇಶ್ವರನ ಉಪರೋಕ್ತ ನಿಯಮ ಮಾಡಿದ್ದಾನೆ. ಇದರಿಂದ ಸಜ್ಜನರಿಗೂ ಅದನ್ನು ಪಾಲಿಸದೆ ಗತ್ಯಂತರವಿಲ್ಲ. ಇವರಲ್ಲಿ ಸತ್ಪುರುಷರಿಗೂ ದುರ್ಜನರಿಗೂ ಇರುವ ವ್ಯತ್ಯಾಸವೆಂದರೆ—ಮೊದಲನೆಯವರು ಕಷ್ಟಗಳನ್ನು ಇದು ತಮ್ಮ ಕರ್ಮದ ಫಲವೆಂದು ಬಗೆದು ಧೈರ್ಯವಾಗಿದ್ದು ಧರ್ಮಾತ್ಮರಾಗುತ್ತ ಶಾಂತವಾಗಿ ಸಹಿಸುತ್ತಾರೆ. ಎರಡನೆಯವರು ಕೂಗಿ, ನರಳಿ ತಮ್ಮ ದಿನ ಕಷ್ಟದಿಂದಲೇ ದೂಡುತ್ತಾರೆ. ಸತ್ಪುರುಷರು ಈ ಕಷ್ಟಗಳ ಸಹಿಷ್ಣುತೆಯಿಂದ ತಮ್ಮ ಪಾಪದ ಹೊರೆ ಕಡಿಮೆಯಾಗುತ್ತದೆಂದು ಬಗೆದು ಸತ್ಯ-ನ್ಯಾಯ ಧರ್ಮದ ಮೂಲಕ ಪರಮೇಶ್ವರನನ್ನು ಅರಸಿದರೆ ದುರ್ಜನರು ಅವನಿಂದ ದೂರ ಸರಿದು ಬಿಡುತ್ತಾರೆ.

ಇಷ್ಟು ಮಾತ್ರವಲ್ಲದೆ ಸಜ್ಜನರಿಗೆ ದುಃಖ ತರುವುದಕ್ಕೆ ಕೆಲವು ಅವರಲ್ಲಿರುವ ಮೌಲಿಕ ದೋಷಗಳೇ ಕಾರಣ. ಸಜ್ಜನರು ತಮ್ಮಲ್ಲಿನ ಸದ್ಗುಣಗಳೊಂದಿಗೆ ಜೀವನಕ್ಕಾವಶ್ಯಕವಾದ ಕೆಲವು ಗುಣಗಳನ್ನು ಪಾಲಿಸುವುದಿಲ್ಲ. ಇದರಿಂದ ನಾವು ಇಂದು ಸುಳ್ಳು, ಸತ್ಯವಾಗುವುದನ್ನೂ, ಸತ್ಯ ಸುಳ್ಳು ಆಗುವುದನ್ನೂ ಕಾಣುತ್ತಿದ್ದೇವೆ. ಉದಾಹರಣೆಗೋಸ್ಕರ ನಮ್ಮ ವಿಧಾನ ಸಭೆಗಳ ಚುನಾವಣೆಯನ್ನೇ ನೋಡುವ. ಯಾರು ಚುನಾಯಿತರಾದರೇನು? ಅದರಲ್ಲೇನಿದೆ? ಎಂದು ಸಜ್ಜನರು ಉದಾಸೀನ ತಾಳಿ ಬಿಡುವುದರಿಂದ ಅಯೋಗ್ಯರಾದವರ ಕೈಯಲ್ಲಿ ಶಾಸನಾಧಿಕಾರ ಸಿಕ್ಕಿ ಅದು ಅವ್ಯವಸ್ಥಿತ ಹಾಗೂ ಭ್ರಷ್ಟವಾಗುತ್ತದೆ. ಇದರ ಕಡು ಹಾಗೂ ಕಹಿ ಅನುಭವವನ್ನು ಮುಂದೆ ಈ ಸಜ್ಜನರೂ ಅನುಭವಿಸಿದರೂ ಅದನ್ನು ಸರಿಪಡಿಸುವ ಗೋಜಿಗೆ ಹೋಗುವುದಿಲ್ಲ. ಆದುದರಿಂದ ಸಜ್ಜನರು ಸರ್ಪದಂತೆ ಚತುರರೂ, ಪಂಡುಕದಂತೆ ಅಹಿಂಸಕರೂ ಆಗಿರಬೇಕು. ಪ್ರತಿಯೊಬ್ಬನಲ್ಲಿಯೂ, ಈಶ್ವರ ಭಕ್ತಿ, ವಿಶ್ವಾಸ-ಪ್ರೇಮ, ದೂರದರ್ಶಿತ್ವ, ಆದರ್ಶವಾದ, ಯಥಾರ್ಥವಾದ, ಮತ್ತು ಆಧ್ಯಾತ್ಮಿಕತೆಯೊಂದಿಗೆ ಪರಿಶ್ರಮ ಮಾಡುವ ಸ್ವಭಾವದ ಬೆಳವಣಿಗೆಯಾಗುವುದಗತ್ಯವಾಗಿದೆ. ಕಣ್ಣಿದ್ದ ಕುರುಡನು ದಾರಿಯಲ್ಲಿ ಬಂಗಾರದ ಗಟ್ಟಿಗೆ ತಾಗಿ ಬಿದ್ದರೂ ಅವನದನ್ನು ಕಲ್ಲೆಂದೇ ತಿಳಿಯುವಂತೆ ನಿಷ್ಕ್ರಿಯಿಂದ ಪರಿಶ್ರಮಿಸದೆ ಯಾವುದೂ ಸಿದ್ಧಿಸಲಾರದು. ಅತಃ ನಿಷ್ಕ್ರಿಯಿಂದ ದಾರಿದ್ರ್ಯಪಡುವುದೇ ಪುರುಷ್ಯೇ ಜೀವನದ ಗಾಳತ್ರಿಯಾಗಿದೆ. ಕೆಲವು ಸಜ್ಜನರು ಬರೇ ರಾಮ ರಾಮ ಎಂದು ಕಾಲಹರಣ ಮಾಡುತ್ತಾರೆ ಹೊರತು ಸಮಯಕ್ಕೆ ತಕ್ಕಂತೆ ತಮ್ಮ ಬುದ್ಧಿಯನ್ನು ಉಪಯೋಗಿಸದಿರುವುದರಿಂದಲೇ ಕಷ್ಟವನ್ನನುಭವಿಸುತ್ತಾರೆ.

ನಮ್ಮೆದುರಿಗೆ ಕ್ರೂರ ಹುಲಿಯೊಂದು ಇರುವಾಗ 'ರಾಮ ರಾಮ' ಎಂದು ಹೇಳಿ ಧ್ಯಾನಮಗ್ನನಾಗಿ ಕೂಡ್ರುವುದು ಬರೇ ಹೇಡಿತನದ ಕಾರ್ಯವಾಗಿದೆ. ಸಾಧು ಪುರುಷರಲ್ಲಿ ಇಂಥ ಮನೋವೃತ್ತಿಯಿರುವದರಿಂದಲೇ ಅವರು ಸದೇ ಸದೇ ಕಷ್ಟವನ್ನನುಭವಿಸುತ್ತಿದ್ದಾರೆ. ಯಾರೇ ಆಗಲಿ ಅವನು ತನ್ನ ಆಹಾರ-ವಿಹಾರಗಳಲ್ಲಿ ಅಸಡ್ಡೆಯನ್ನು ಮಾಡಿದರೆ ಆದರೆ ಅವನಿಗೆ ದುಃಖ ತಪ್ಪಿದುದಲ್ಲ. ಬರೇ ಭಗವತ್ಪ್ರಾರ್ಥನೆಯಿಂದ ಏನೂ ಲಭಿಸಲಾರದು. ನಾವು ಪ್ರಾರ್ಥನೆಯಂತೆ ಕೃತಿಯುಳ್ಳವರಾದಾಗ ಮಧುರ ಫಲ ಸಿಕ್ಕುವುದರಲ್ಲಿ ಸಂಶಯವಿಲ್ಲ.

ಜೀವನದಲ್ಲಿ ನಾವು ಶಾಶ್ವತ ಸುಖವನ್ನು ಪಡೆಯಬೇಕಾಗಿದ್ದರೆ ನಾವು ಮೊದಲು ಚೆನ್ನಾಗಿ ಕಷ್ಟವನ್ನನುಭವಿಸಬೇಕು ಎಂದು ಸಜ್ಜನರ ಅಭಿಪ್ರಾಯ. ದುಃಖ ಕಷ್ಟಗಳನ್ನನುಭವಿಸುವುದರಿಂದ ನಮ್ಮಲ್ಲಿ ಧೈರ್ಯ, ದಯೆ, ಕರುಣೆಯಂಥ ಆತ್ಮವಿಕಸನ ಯೋಗ್ಯ ಗುಣಗಳು ಬೆಳೆಯುತ್ತವೆ. ದುಃಖ-ಕಷ್ಟಗಳೇ ಜೀವನದಲ್ಲಿಲ್ಲದಿದ್ದರೆ ಅದೊಂದು ಬರೇ ಕಾರ್ಖಾನೆಯಂತೆಯೋ ಸರಿ, ಅವನ ಜೀವನ ಪಶು ಜೀವನಕ್ಕಿಂತಲೂ ಕನಿಷ್ಠವಾದುದು. ಅಂಥ ಮನುಷ್ಯನಲ್ಲಿ ದೈವೀ ಸ್ವರೂಪವೆಂದಿಗೂ ಬರಲಾರದು. ಅವನೆಂದಿಗೂ ಆತ್ಮಾನಂದ ಬ್ರಹ್ಮಾನಂದಗಳ ಅಮೃತ ಸುಖವನ್ನು ಸವಿಯಲಾರನು.

ಆದರೆ ಜಗತ್ತನ್ನು ನಡೆಸುವ ಪರಮೇಶ್ವರನ ಮಹಾ ವಿಧಿಯೇ ಈ ದುಃಖವಾಗಿದೆ ಎಂದು ಬಲ್ಲವರು ಹೇಳುತ್ತಾರೆ. ಇದು ಅನುಭವ ಜನ್ಯ ಮಾತೂ ಆಗಿದೆ. 'ಇತರರ ದುಃಖದಲ್ಲಿ ಪಾಲುಗಾರರಾಗದವರ ಹೃದಯ ಕಲ್ಲುಗಳು' ಎಂದು ಕಬೀರ ಹೇಳಿದ್ದಾನೆ. ಅತಃ ದುಃಖ ಕಷ್ಟಗಳು ಧರ್ಮಾತ್ಮರಿಗೂ, ಪಾಪಾತ್ಮರಿಗೂ ಸಮಾನವಾಗಿ ಬರುತ್ತವೆಂಬುದರಲ್ಲಿ ಸಂಶಯವಿಲ್ಲವಷ್ಟೇ. ಆದರೆ ಮಹಾತ್ಮರಿಗೆ ಕಷ್ಟ ಬರುವಾಗ ನಮ್ಮ ಹೃದಯ ದುಃಖಾರ್ದ್ರವಾಗುವಾಗ ನಾವು ಅವರ ಸೇವೆ ಮಾಡಲು ಬಯಸುತ್ತೇವೆ. ನಾವು ಅವರಿಗೋಸ್ಕರ ಏನೂ ಮಾಡಲು ಸಿದ್ಧರಿರುತ್ತೇವೆ, ಪುಣ್ಯ ಪುರುಷರ ಈ ಕಷ್ಟ ಸಹನೆಯು ಅವರನ್ನು ಉತ್ಥಾನದ ಕಡೆಗೆ ಒಯ್ಯುತ್ತದೆ. ಸುಕರಾತನಿಗೆ ವಿಷ ಕೊಟ್ಟಾಗ, ಯೇಸುವನ್ನು ಶಿಲುಬೆಗೇರಿಸಿದಾಗ, ಪರಮಹಂಸರು ಕ್ಯಾನ್ಸರ್ ರೋಗದಿಂದ ಬಳಲಿದಾಗ ಜನರ ಕೋಮಲ ಹೃದಯ ದುಃಖದಿಂದ ಆರ್ತನಾಗುತ್ತದೆ. ತನ್ನ ಹೃದಯದ ಈ ಕನಿಕರದಿಂದ ಅವನು ಅವರಿಗೋಸ್ಕರ ಏನೂ ಮಾಡಲೂ ಸಿದ್ಧನಾಗುತ್ತಾನೆ.

ಇಂದಿನ ಈ ಭೌತಿಕ ಯುಗದ ಪ್ರಗತಿಯನ್ನು ನಾವು ಅಧ್ಯಯನ ಮಾಡಿದ್ದೇ ಆದರೆ ಮಾನವ ಹೆಚ್ಚೆ ಹೆಚ್ಚಿಗೂ ಅಪಾರ ಕಷ್ಟ ಸಹಿಸಿಯೇ ಇಷ್ಟು ಉತ್ಕರ್ಷವನ್ನು ಹೊಂದಿದ್ದಾನೆಂಬುದು ವಿದಿತವಾಗುತ್ತದೆ. ಕಾಳಿದಾಸನು ಹೇಳಿದ "ಸುಖಂ ಹಿ ದುಃಖಾನ್ಯನುಭೂಯ ಶೋಭತೇ ಘನಾಂಧಕಾರೇಷ್ವಿವ ದೀಪದರ್ಶನಮ್." ಎಂಬುದು ಸದಾ ನಿತ್ಯ ಸತ್ಯವಾಗಿದೆ.

(ನವನೀತದ ಆಧಾರದಿಂದ.)

---

### ನಮ್ಮನ್ನಗಲಿದ

## ಶ್ರೀ ಮಲ್ಲಕ್ಷ್ಮೀಂದ್ರತೀರ್ಥರು

(೧ನೇ ಪುಟದಿಂದ)

ಯನ್ನು ಜರಗಿಸಿ ದಾನಧರ್ಮಾದಿಗಳನ್ನು ವರ್ಷಂಪ್ರತಿ ಮಾಡುತ್ತಿದ್ದರು.

ಇಂಥ ಘನಮಾನ್ಯ ಗುರುಗಳು ತಮ್ಮ 56ನೇ ವರ್ಷದಲ್ಲಿ ನಿರ್ಯಾಣರಾದುದು ನಮಗೆಲ್ಲ ಅತ್ಯಂತ ಖೇದಪ್ರದವೆಂಬುದನ್ನು ಪ್ರತ್ಯೇಕ ಹೇಳಬೇಕಾದುದಿಲ್ಲ. ಯೌವನದಲ್ಲಿ ತಮ್ಮ ದೇಹದಾರ್ಢ್ಯತೆಗೆ ಇವರು ಬಹು ಹೆಸರುವಾಸಿಯಾಗಿದ್ದರು. ಕಳೆದ ಐದಾರು ವರ್ಷಗಳಿಂದ ಶ್ರೀಗಳವರ ಆರೋಗ್ಯ ಹದಗೆಡುತ್ತಾ ಬಂದಿದ್ದು ಅವರು ಬಹು ಶಕ್ತಿಹೀನರಾಗುತ್ತ ಬಂದಿದ್ದರು. ಕಳೆದ ಹದಿನೈದು ದಿನಗಳಿಂದ ಅವರ "ರಕ್ತದ ಒತ್ತಡ" ಕಾಯಿಲೆಯು ಅವರನ್ನು ಬಹು ಕಂಗಾಲಾಗಿ ಮಾಡಿತ್ತು. ಶ್ರೀಕೃಷ್ಣನ ಮಹಾಪೂಜೆ ಮಾತ್ರ ಮಾಡುತ್ತಿದ್ದರು. ಕಳೆದ ತಾ. 15 ರಂದು ಅವರ ಸ್ಥಿತಿ ಬಹು ದಾರುಣವಾಗಿತ್ತು. ಉಪ್ಪರಿಗೆಯಿಂದ ಕೆಳಗಿಳಿಯುವಾಗ ಸ್ವಲ್ಪ ಜಾರಿಬಿದ್ದು ಸ್ಮೃತಿಹೀನರಾದರು. ಆಗಲೇ ಅವರ ಮುಖಾರವಿಂದದಿಂದ 'ನಾರಾಯಣ ನಾಮಸ್ಮರಣೆ' ಹೊರಟಿತ್ತು. ಅದೇ ಅವರ ಕೊನೆಯ ದಿವ್ಯ ಸಂದೇಶವಾಗಿತ್ತು.

—ಶ್ರೀ ಬಿ.ಯನ್. ಜೋಗಿತ್ತಾಯ

---


## ಕೇವಲ 10 ರೂಪಾಯಿಗೆ

## 5 ನಾಟಕಗಳು

ಉಡುಪಿ ರಾಷ್ಟ್ರೀಯ ರಕ್ಷಣಾ ನಿಧಿಯ ಸಹಾಯಾರ್ಥವಾಗಿ
ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿಯ ವತಿಯಿಂದ
ಉಡುಪಿ ಡಾ| ಯು. ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ
ರಾತ್ರಿ 9-30ಕ್ಕೆ — ಈ ಕೆಳಗಿನ ದಿನಗಳಲ್ಲಿ

ತಾ. 2-3—1963ನೇ ಶನಿವಾರ ಉಡುಪಿ ಮಣಿಪಾಲ ಪೆರ್ಡೂರು ಕಾಪು ಡಾಕ್ಟರುಗಳಿಂದ = ವ್ಯಾಧಿಗೆ ತಕ್ಕ ವೈದ್ಯ

ತಾ. 9—3 1963ನೇ ಶನಿವಾರ ಉಡುಪಿಯ ವಕೀಲರುಗಳಿಂದ = ಗಗ್ಗಯ್ಯನ ಗಡಿಬಿಡಿ

ತಾ. 16—3—1963ನೇ ಶನಿವಾರ ಎಸ್ಸೆಲ್ ಮತ್ತು ಪಾರ್ಟಿಯವರಿಂದ = ಬಹದ್ದೂರ್ ಗಂಡ

ತಾ. 23—3—1963ನೇ ಶನಿವಾರ ಉಡುಪಿ ನಾಟ್ಯಕೂಟದವರಿಂದ = ಕಾಯಿದೆ ಭಂಗ

ತಾ. 30—3 1963ನೇ ಶನಿವಾರ ಉಡುಪಿ ಮಹಿಳಾ ಸಮಾಜದ ಮಹಿಳೆಯರಿಂದ = ತಿರು ಮಂತ್ರ

**ಈ 5 ನಾಟಕಗಳಿಗೆ ರೂ. 10 ರ ಸೀಸನ್ ಟಿಕೇಟನ್ನು**

ಪಡೆದುಕೊಂಡಲ್ಲಿ ನಿಮಗೂ ಉಳಿತಾಯ—ರಾಷ್ಟ್ರೀಯ ರಕ್ಷಣಾ ನಿಧಿಗೂ ಸಹಾಯ ಸಲ್ಲಿಸಿದಂತಾಗುವುದು

**ರೂ. 25ಕ್ಕೆ ಡೋನರ್ಸ್ ವಿಶೇಷ ತರಗತಿಗಳು**

ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ, ಉಡುಪಿ.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೨೧-೨-೧೯೬೩ | ೨೪ |

## ಕಾಂಗ್ರೆಸಿಗರಿಗೆ ಪಂಚಶೀಲ

ಚೀನೀಯ ಆಕ್ರಮಣದಿಂದ ಭಾರತವು ವಿಭ್ರಾಂತವಾಗದೇಕಾಗಿ ಬಂದರೂ ಭಾವೈಕ್ಯ ಮತ್ತು ಅಭಿವೃದ್ಧಿಯ ಪಥದತ್ತ ಎಲ್ಲರ ದೃಷ್ಟಿ ಹರಿಯುವಂತಾಗಿದೆ. ಆದುದರಿಂದಲೇ ಭಾವೈಕ್ಯ ಸಂರಕ್ಷಣೆಯು ಇಂದಿನ ಪ್ರಥಮ ಕರ್ತವ್ಯವೆಂದು ಎಲ್ಲರೂ ಅರಿತುಕೊಂಡಿದ್ದಾರೆ. ಇದಕ್ಕಾಗಿ ಸರ್ವ ವಿಧದ ಪ್ರಯತ್ನಗಳು ನಡೆಯುತ್ತಿವೆ; ಕಾರ್ಯಕ್ರಮಗಳು ರೂಪಿಸಲ್ಪಡುತ್ತಿವೆ. ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ಮಹಮ್ಮದಾಲಿಯವರು ಕಾಂಗ್ರೆಸ್ ಕಾರ್ಯಕರ್ತರ ಮುಂದೆ ಪಂಚ ಕಾರ್ಯಕ್ರಮಗಳನ್ನು ಮುಂದೆ ಇಟ್ಟಿದ್ದಾರೆ. ಶಿವಮೊಗ್ಗೆಯಲ್ಲಿ ಸೇರಿದ ಆ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರ ಪರಿಷತ್ತಿನಲ್ಲಿ ಮಾತನಾಡುತ್ತಿದ್ದಾಗ ಈ ಅಂಶಗಳನ್ನು ಹೊರಗೆಡಹಿದರು. ಇವುಗಳು ಕೇವಲ ಶಿವಮೊಗ್ಗೆಯ ಕಾಂಗ್ರೆಸಿಗರಿಗೆ ಮಾತ್ರ ಸಂಬಂಧಿಸಿದ ವಿಷಯಗಳಲ್ಲ, ಎಲ್ಲ ಕಾಂಗ್ರೆಸ್ ಕಾರ್ಯಕರ್ತರೂ ಅನುಷ್ಠಾನಕ್ಕೆ ತರಬೇಕಾದ, ಸಾಧ್ಯವೆನಿಸಿದರೆ, ಉಳಿದ ರಾಜ್ಯಕೀಯ ಪಕ್ಷಗಳೂ ಅನುಸರಿಸಬೇಕಾದವುಗಳೆಂದು ಹೇಳಬಹುದು.

ಶ್ರೀ ಮಹಮ್ಮದಾಲಿಯವರು ಸೂಚಿಸಿದ ಐದಂಶಗಳು ಇವು: ರಾಷ್ಟ್ರೀಯ ರಕ್ಷಣಾ ನಿಧಿ ಸಂಗ್ರಹಕ್ಕಾಗಿ ಸಂಯೋಜಿತ ಪ್ರಯತ್ನ ನಡೆಸುವುದು, ಕಾಂಗ್ರೆಸ್ ಪಕ್ಷದಲ್ಲಿ ಜನತೆಗೆ ಇರುವ ವಿಶ್ವಾಸವನ್ನು ಕಳೆದು ಹಾಕಲು ವಿರೋಧಿಗಳು ನಡೆಸುವ ಅಪಪ್ರಚಾರವನ್ನು ಧೈರ್ಯದಿಂದ ಎದುರಿಸುವುದು, ಚೀನೀಯ ಆಕ್ರಮಣದಿಂದ ತಲೆದೋರಿದ ಐಕ್ಯಭಾವವನ್ನು ಉಳಿಸಿಕೊಳ್ಳುವುದು ಮತ್ತು ಅದನ್ನು ಬೆಳೆಸಿಕೊಳ್ಳುವುದು, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಹಾಕಿಕೊಟ್ಟ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗಿಳಿಸುವುದು ಮತ್ತು ದೇಹದಾರ್ಢ್ಯವಿರುವ ಕಾಂಗ್ರೆಸಿಗರು ಶಸ್ತ್ರಾಸ್ತ್ರಗಳ ತರಬೇತಿಯನ್ನು ಪಡೆಯುವುದು.

ಚೀನೀಯರ ಆಕ್ರಮಣವನ್ನು ಎದುರಿಸಲು ಭಾರತವು ತನ್ನನ್ನು ಸರ್ವಸಿದ್ಧಗೊಳಿಸುವುದು ಅನಿವಾರ್ಯವೆಂಬುದು ಸರ್ವವಿದಿತ. ಇದಕ್ಕಾಗಿಯೇ ೧೯೬೩-೬೪ರ ಸಾಲಿನಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳ ಪೂರಕ ಬೇಡಿಕೆಯನ್ನು ಸಂರಕ್ಷಣಾ ಮಂತ್ರಿ ಶಾಖೆಯು ಲೋಕಸಭೆಯ ಮುಂದೆ ಇಡಬೇಕಾಯಿತು. ಈ ಮೊತ್ತವು ಮುಂದಿನ ವರ್ಷಗಳಲ್ಲಿ ಮತ್ತಷ್ಟು ಹೆಚ್ಚುವುದು ಅನಿವಾರ್ಯ. ಪ್ರಸಕ್ತ ವರ್ಷದಲ್ಲಿ ಸಂರಕ್ಷಣೆಯು ವೆಚ್ಚದ ಕಾರಣದಿಂದ ಕರಭಾರವು ಪ್ರತ್ಯೇಕವಾಗಿ ಏರದೆ ಇದ್ದರೂ ಇದೇ ಪರಿಸ್ಥಿತಿ ಮುಂದಕ್ಕೂ ಉಳಿಯುವುದು ಸಾಧ್ಯವಿಲ್ಲ. ಆದುದರಿಂದ ಜನತೆಯು ಸ್ವೇಚ್ಛೆಯಿಂದಲೇ ಸಂರಕ್ಷಣಾ ನಿಧಿಗೆ ದಾನ ನೀಡುವುದಾದರೆ, ಕರಭಾರದ ಮೊತ್ತವಾದರೂ ಕಡಿಮೆಯಾದೀತು. ಆದುದರಿಂದ ದೇಶದ ಮೂಲೆ ಮೂಲೆಯಲ್ಲಿಯೂ ಈ ನಿಧಿಗೆ ಉದಾರವಾಗಿ ವಂತಿಗೆ ಕೂಡಿಸುವಲ್ಲಿ ಸೂಕ್ತ ಪ್ರಯತ್ನ ನಡೆಸಬೇಕು. ಇದು ವರೆಗೆ ಹೀಗೆ ಕೂಡಿದ ಹಣವು ೫೦ ಕೋಟಿ ರೂಪಾಯಿಗಳನ್ನು ಮುಟ್ಟಿಲ್ಲವೆಂಬುದನ್ನೂ, ಶ್ರೀಮಂತರಾದವರು ತಮ್ಮ ದಾನವನ್ನು ಉದಾರಗೊಳಿಸಿಲ್ಲವೆಂಬ ಮಂತ್ರಿ ವರ್ಯರ ಅಂಬೋಣಗಳನ್ನೂ, ನಾವು ಗಮನಿಸುವುದಾದರೆ, ಇಂದು ಎಲ್ಲರು, ಮುಖ್ಯವಾಗಿ ಕಾಂಗ್ರೆಸಿಗರು ಮಾಡಬೇಕಾದ ಕೆಲಸ ಯಾವುದು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಕಾಂಗ್ರೆಸ್ ಪಕ್ಷದ ಕೆಲವೊಂದು ಹುಳುಕುಗಳನ್ನು ಹಿರಿದುಮಾಡಿ ಅಪಪ್ರಚಾರ ಸಾಧನವನ್ನಾಗಿ ಅದನ್ನು ಬಳಸಿ ಕೊಳ್ಳುವ ವಿರೋಧಿಗಳ ಅಬ್ಬರ ಚುನಾವಣಾವೇಳೆಯಲ್ಲಿ ಮಾತ್ರವಲ್ಲ, ಇತರ ಸಮಯಗಳಲ್ಲಿಯೂ ಇದ್ದೇ ಇದೆ. ಇಂತಹ ವಿರೋಧಿ ಭಾವನೆಗೆ ಕಾಂಗ್ರೆಸ್ ಕಾರ್ಯಕರ್ತರು ಹೆದರದೆ, ಪಕ್ಷಧ್ಯೇಯಗಳಲ್ಲಿ ನಿಷ್ಠೆಯನ್ನಿಟ್ಟು, ಅವಿಶ್ರಾಂತವಾಗಿ ದುಡಿದರೆ, ಸ್ವಯಂ ಪ್ರತಿರೋಧವು ನಿರ್ಬಲವಾಗುತ್ತದೆ. ಕಾಂಗ್ರೆಸಿಗರು ಆತ್ಮಶೋಧನೆ ಮಾಡಿಕೊಳ್ಳಬೇಕು — ಎಂಬ ನುಡಿಯಲ್ಲಿ ಅರ್ಥವಿಲ್ಲದೆ ಇಲ್ಲ. ಇದರ ಅರ್ಥವನ್ನು ಮಾತ್ರ ಎಲ್ಲರೂ ಅರಿತುಕೊಂಡು ಕಾರ್ಯತತ್ಪರರಾಗಬೇಕು. ದೇಶದಲ್ಲಿ ಭಾವೈಕ್ಯದ ಗಾಳಿಯಿಂದು ಹರಡಿದೆ— ಇದು ಅಭಿಮಾನ ಪಡಬೇಕಾದುದು. ಸ್ವಾತಂತ್ರ್ಯಪ್ರಾಪ್ತಿಯಾದ ಇಷ್ಟು ಸಮಯದ ಬಳಿಕವಾದರೂ ನಾವು ನಮ್ಮ ಮಾತೃಭೂಮಿಯನ್ನು ಗುರುತಿಸುವ ಪ್ರವೃತ್ತಿ ನಮ್ಮಲ್ಲುಂಟಾದುದು ಸುದೈವ. ಹೀಗೆ ಅನಿರೀಕ್ಷಿತವಾಗಿ ಸಂಘಟಿಸಿದ ಈ ಸತ್ ಪ್ರವೃತ್ತಿ ಕುಚ್ಚು ಹೊಳೆಯಂತೆ ಹೊಂದು ಹೋಗಬಾರದು. ಅದು ಸದಾ ಸರ್ವದಾ ಉಳಿಯಬೇಕು. ಆಡಳಿತ ಪಕ್ಷ ಕಾಂಗ್ರೆಸ್‌ನ ಕಾರ್ಯಕರ್ತರ ಜವಾಬುದಾರಿ ಈ ಸಂಬಂಧದಲ್ಲಿ ಅತಿ ಹೆಚ್ಚಿನದಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನ್ನ ಕಾರ್ಯಕರ್ತರಿಗೆ ಒಪ್ಪಿಸುವ ಉತ್ತರದಾಯಿತ್ವವನ್ನು ಹೊರುವುದಕ್ಕೂ ನಿರ್ದೇಶಿಸಿದ ಸೇವೆಯನ್ನು ಮಾಡುವುದಕ್ಕೂ ಕಾಂಗ್ರೆಸ್ ಸದಸ್ಯರು ತಯಾರಿರಬೇಕು. ಕಾಂಗ್ರೆಸ್ ಒಂದು ರಾಜಕೀಯ ಪಕ್ಷವೆಂಬುದು ನಿಜವಾದರೂ ಅದಿಂದು ದೇಶದ ಭವಿಷ್ಯವನ್ನು ಬರೆಯುವ ಲೆಕ್ಕಣಿಕೆಯನ್ನು ಹಿಡಿದುಕೊಂಡಿದೆ. ಆದುದರಿಂದ ಉಳಿದವರಿಗಿಂತ ಕಾಂಗ್ರೆಸ್ ಕಾರ್ಯಕರ್ತರು ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು ಎಂಬ ಕರೆ ಸಕಾಲಿಕವಾದುದು. ಈ ಕೆಲಸದಲ್ಲಿ ಇವರೇ ಹಿಂದುಳಿದರೆಂದರೆ, ಮತ್ತೆ ಉಳಿದವರ ಪಾಡೇನು? ದೇಹದಾರ್ಢ್ಯವಿರುವ ಕಾಂಗ್ರೆಸಿಗರೆಲ್ಲರೂ ಶಸ್ತ್ರಾಸ್ತ್ರ ತರಬೇತಿಯನ್ನು ಗಳಿಸಿ ಉಳಿದವರಿಗೆ ಮಾರ್ಗದರ್ಶನ ಮಾಡಬೇಕು ಎಂಬ ಅಂಶವಾದರೂ ಉತ್ತಮವಾದದ್ದೇ. ಹೀಗೆ ಈ ಪಂಚ ಶೀಲಗಳನ್ನು ಕಾಂಗ್ರೆಸಿಗರು ಸ್ವೀಕರಿಸಿ ಅವನ್ನು ನಿರ್ವಿಕಲ್ಪ ಬುದ್ಧಿಯಿಂದ ಕಾರ್ಯಕೃತಗೊಳಿಸಿದರೆಂದರೆ, ದೇಶದ ರಾಜಕೀಯ ಸ್ಥಿತಿಗತಿಯು ಬಹಳಷ್ಟು ಸುಧಾರಿಸುವುದು ಸಾಧ್ಯ.

ಕಾಂಗ್ರೆಸ್ ಸಂಸ್ಥೆಯ ಮೇಲೆ ಅಪಚಾರವೆಸಗುವುದಕ್ಕೆ ಅದರ ಕಾರ್ಯಕರ್ತರ ಕಾರ್ಯಭಾರವೇ ಕಾರಣ. ದೇಶವು ಸ್ವತಂತ್ರವಾಗಲು ಹೋರಾಡಿದಾಗ ಇವರು ತೋರಿದ ಉತ್ಸಾಹ ಮತ್ತು ಧೈರ್ಯಗಳು ಪ್ರಶಂಸಾರ್ಹವಾಗಿದ್ದುವು. ಆದರೆ, ಇತ್ತೀಚೆಗಿನ ದಿನಗಳಲ್ಲಿ ಇವು ಹ್ರಾಸಗೊಳ್ಳುತ್ತ ಬರುತ್ತಿರುವುದನ್ನು ನಾವು ಕಡೆಗಣಿಸುವುದಿಲ್ಲ. ಆದುದರಿಂದ ಪ್ರತಿ ಕಾಂಗ್ರೆಸಿಗನೂ ಈ ಪಂಚ ಶೀಲಗಳನ್ನು ಸಂಪೂರ್ಣವಾಗಿ ಕೃತಿಗಿಳಿಸುವ ದೃಢ ಪ್ರತಿಜ್ಞೆಯನ್ನು ಮಾಡಬೇಕು. ದೇಶದ ಕಡೆಗೆ ತನ್ನ ಸೇವೆ ಸಲ್ಲಿಸಲು ಇದೊಂದು ಮಹಾ ಸದವಕಾಶವೆಂದು ತಿಳಿದು ಕಾಂಗ್ರೆಸಿನ ಮತ್ತು ತನ್ಮೂಲಕ ದೇಶದ ಬಲವನ್ನು ಬೆಳೆಸಬೇಕು. ಈ ದಿಟ್ಟಿನಲ್ಲಿ ಮಹಮ್ಮದಾಲಿಯವರ ಪಂಚಶೀಲಗಳು ನಿಜಕ್ಕೂ ಸ್ವಾಗತಾರ್ಹ.

## ಚೀನೀಕತ್ತೆಯ ನಿಜಬಣ್ಣ

ಭಾರತವು ಕೊಲಂಬೋ ಸೂಚನೆಗಳನ್ನು ಇದ್ದಕ್ಕಿದ್ದಂತೆ ಒಪ್ಪಿದುದನ್ನು ತಿಳಿದ ಚೌ ಎನ್ ಲಾಯ್‌ಯವರ ಹೃದಯಕ್ಕೆ ದೊಡ್ಡ ಆಘಾತವಾಗಿರಲೇಬೇಕು. ಏಕೆಂದರೆ, ತನಗೆ ಸಂಪೂರ್ಣ ನ್ಯಾಯವನ್ನೊದಗಿಸದ ಈ ಸೂಚನೆಯನ್ನು ಅದು ಒಪ್ಪುವುದೆಂದು ಅವರು ಕನಸಿನಲ್ಲೂ ಯೋಚಿಸಿರಲಾರರು. ಆದುದರಿಂದಲೇ ಮೊದಲು ತತ್ವಶಃ ಒಪ್ಪಿದ್ದ ಆ ಸೂಚನೆಗಳನ್ನು ಜೀವಂತ ಸಮಾಧಿ ಮಾಡುವುದೇ ಅವರಿಗೆ ಬೇಕಾಯಿತು. ಅದಕ್ಕೆ ಅವರಿತ್ತ ಕಾರಣಗಳು ವಿಲಕ್ಷಣವಾಗಿವೆ: ಕೊಲಂಬೋ ಸೂಚನೆಗಳು ಅಸ್ಪಷ್ಟವಾಗಿವೆಯೆಂಬುದೂ ಇವುಗಳಲ್ಲಿ ಒಂದು. ಈ ಬಗೆಯ ಅಸ್ಪಷ್ಟ ಸೂಚನೆಗಳನ್ನು ಮೊದಲು ಅವರು ತತ್ವಶಃ ಒಪ್ಪಿಕೊಂಡದ್ದಾದರೂ ಏಕೆ? ಇದನ್ನು ಉತ್ತರಿಸಲು ಮುಂದುವರಿಯುವಾಗ, ಚೀನೀಕತ್ತೆಯ ನಿಜಬಣ್ಣದ ಅರಿವಾಗುವುದು. ತನಗೆ ಬಹು ಮಟ್ಟಿಗೆ ಅನ್ಯಾಯವನ್ನೇ ಮಾಡುವ ಈ ಸೂಚನೆಗಳಿಗೆ ಭಾರತವು ಒಪ್ಪುವುದಿಲ್ಲ; ಆದುದರಿಂದ ತಾವದನ್ನು ಒಪ್ಪಿದಂತೆ ನಾಟಕವಾಡಿದರೆ, ಮುಂದೆ ತನ್ನ ಮೊದ್ದುತನವನ್ನು ಪ್ರದರ್ಶಿಸಿ ಮತ್ತೆ ಭಾರತವನ್ನು ನುಂಗಬಹುದು— ಇದು ಲಾಯರ ದುರಾಲೋಚನೆ. ಆದರೆ, ಇದೀಗ ನಿಜವಾದ ಶಾಂತಿ ಪ್ರತಿಪಾದಕರು ಯಾರು, ಆಕ್ರಮಣಕಾರರು ಯಾರು ಎಂಬುದು ಜಗತ್ತಿಗೆ ಜಗತ್ತೇ ತಿಳಿಯುವಂತಾಗಿದೆ. ಇನ್ನೂ ವಿಚಿತ್ರವೆಂದರೆ, ಸಂಧಾನಪ್ರೇರಕವಾದ ಕೊಲೊಂಬೋ ಸೂಚನೆಗಳನ್ನು ತಿರಸ್ಕರಿಸಿದರೂ, ಶಾಂತಿಯುತ ಸೌಹಾರ್ದ ಹಸ್ತವನ್ನದು ಮುಂದೆ ಚಾಚುತ್ತಲೇ ಇದೆ. ಈ ಹಸ್ತವು ಮೊಸಳೆಯದು ಎಂಬುದು ಎಲ್ಲರಿಗೂ ಗೊತ್ತು. ಆದುದರಿಂದ ನಮ್ಮ ಮಾತೃಭೂಮಿಯ ಸಂರಕ್ಷಣೆಗಾಗಿ ನಾವೆಲ್ಲರೂ ಒಂದಾಗಿ ಕತ್ತಿ ಹಿಡಿಯುವುದು ಅನಿವಾರ್ಯವಾಗಲೂ ಬಹುದು. ಇದಕ್ಕೆ ಸಿದ್ಧರಾಗಿಯೇ ಇರಬೇಕು.

---

## ಡಾ| ರಾಧಾಕೃಷ್ಣನ್

ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ಲೋಕ ಸಭೆಯ ಮುಂಗಡ ಪತ್ರದ ಅಧಿವೇಶನವನ್ನು ಉದ್ಘಾಟಿಸುವಾಗ ಮಾಡಿದ ಭಾಷಣವು ಸರಕಾರದ ನೀತಿಯನ್ನು ಮಾತ್ರವಲ್ಲ ಸಮಸ್ತ ಭಾರತೀಯರ ನೀತಿಯನ್ನು ಹೊರಗೆಡಹುತ್ತದೆ. ಸಂಧಾನದ ಮಾತೆತ್ತುತ್ತಲೇ ಸೌಹಾರ್ದ ಹಸ್ತ ಚಾಚುತ್ತಲೇ, ಭಾರತದ ಮೇಲೆ ಆಕ್ರಮಣ ಮಾಡಿದ ಚೀನಾವು ಇಂದಿಗೂ ಸಂಧಾನದ ಹೆಸರನ್ನು ಉಚ್ಚರಿಸುತ್ತ ಭಾರತದ ಪವಿತ್ರ ನೆಲವನ್ನು ನುಂಗಲು ಆತುರವಾಗಿದೆ. ಭಾರತವಾದರೂ ಶಾಂತಿ ಮತ್ತು ಸೌಹಾರ್ದಮಯ ವಾತಾವರಣದಲ್ಲಿಯೇ ಈ ಗಡಿ ತಂಟೆಯು ಪರಿಹಾರಗೊಳ್ಳಬೇಕೆಂದು ಬಯಸುತ್ತದೆ ನಿಜ; ಆದರೆ, ಚೀನಾದ ಸಾಮ್ರಾಜ್ಯಶಾಹಿ ನೀತಿಗೆ ಅಥವಾ ಅದರ ದಬ್ಬಾಳಿಕೆಗೆ ನಾವು ತಲೆಬಾಗಲಾರೆವು, ಎಂದ ರಾಧಾಕೃಷ್ಣನ್ ಭಾರತೀಯರ ಮನಸ್ಸಿನಲ್ಲಿದ್ದುದನ್ನೇ ಹೊರಗೆಡಹಿದ್ದಾರೆ. ಅವರ ಈ ನುಡಿಯ ಗಂಭೀರತೆಯು ನಮ್ಮ ದೃಢನಿರ್ಧಾರವನ್ನು ಮತ್ತೊಮ್ಮೆ ಅನುಮೋದಿಸುತ್ತದೆ.

**ಎಂ. ಜಿ. ಎಂ. ಕಾಲೇಜ್ ದಿನಾಚರಣೆಯು**— ಇದೇ ತಾ. 16ರಂದು ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಶ್ರೀ ಮಹಮ್ಮದ್ ರಹಮತುಲ್ಲಾ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಕರಸ್ಪೊಂಡೆಂಟ್ ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತ ಸ್ನಾತಕೋತ್ತರ ವ್ಯಾಸಂಗ ತರಗತಿಗಳನ್ನು ಬೆಂಗಳೂರು ಮೈಸೂರುಗಳಲ್ಲಿ ಮಾತ್ರ ಮಿತಗೊಳಿಸದೆ ನಮ್ಮ ಮಲೆನಾಡಿನ ಆರು ಜಿಲ್ಲೆಗಳ ಪ್ರಾಕೃತಿಕ ಸಂಪತ್ತನ್ನು ಅಳವಡಿಸಿಕೊಳ್ಳುವ ರೀತಿಯಲ್ಲಿ ಇಲ್ಲಿಯೂ ಹೊಸ ಮಾದರಿಯ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸುವಂತಾಗಬೇಕೆಂದರು. ಡಾ. ಸಾ. ಬಿ. ಸುಮನ ಸಿ. ಗೌಡರು ಮಾಡಿದ ಸ್ವಸ್ತಿವಾಚನಕ್ಕೆ ಡಾ. ಕೆ. ಬಿ. ರಾಮಕೃಷ್ಣರಾಯರು ಉತ್ತರವಿತ್ತರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಭಾಷಣ ಮಾಡುತ್ತ ವಿದ್ಯಾರ್ಥಿಗಳು ಸ್ವಾಭಿಮಾನ ಬೆಳೆಸಿಕೊಳ್ಳಬೇಕೆಂದೂ ಇಲ್ಲಿಯ ಉನ್ನತಮಟ್ಟದ ವಿದ್ಯಾಸಂಸ್ಥೆಗಳನ್ನು ಕಟ್ಟಿದ ಡಾ| ಪೈಗಳು ಆದರ್ಶ ವ್ಯಕ್ತಿಗಳೆಂದೂ ಇಲ್ಲಿಯೂ ಸ್ನಾತಕೋತ್ತರ ವ್ಯಾಸಂಗಕ್ಕೆ ಸೌಕರ್ಯ ಸೌಲಭ್ಯಗಳಿರುವುದರಿಂದ ಏಕೆಡೆಮಿಯಿಂದ ಆ ಕುರಿತು ಅರ್ಜಿ ಬಂದಾಗ ಪರ್ಯಾಲೋಚಿಸಬಹುದೆಂದೂ ಹೇಳಿದರು. ಯೂನಿಯನ್ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣ ಕುಡುವರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ನೃತ್ಯ ಸಂಗೀತ, ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳಾದುವು. ಮರುದಿನ ಕಾಲೇಜು ಯೂನಿಯನ್ ದಿನಾಚರಣೆಯು ಶ್ರೀ ವಿ ಎಂ ಇನಾಮ್‌ದಾರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

**ದ. ಕ. ಜಿಲ್ಲೆಯ ವೈದ್ಯರಲ್ಲಿ ವಿನಂತಿ**— ಇದೇ ಬರುವ ಮಾರ್ಚ್-ಎಪ್ರಿಲ್ ತಿಂಗಳಲ್ಲಿ ೨೪ನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಲನವು ಮಂಗಳೂರಲ್ಲಿ ಜರಗುವ ವಿಚಾರ ತಮಗೆ ತಿಳಿದಿರಬಹುದು.

ಸ್ವಾಗತ ಸಮಿತಿಯ ಅಧಿಕಾರಿಗಳಿಗೆ ಜಿಲ್ಲೆಯಲ್ಲಿರುವ ಸಹೋದ್ಯೋಗಿಗಳೆಲ್ಲರನ್ನೂ ಕಾಣಲು ಸಮಯಾಭಾವ ಮತ್ತು ಅತಿವ್ಯಯ— ಈ ಕಾರಣಗಳಿಂದ ಅಸಾಧ್ಯವಾಗಿದೆ. ತಾವೆಲ್ಲರೂ ವಿಶಾಲಹೃದಯದಿಂದ ಮನ್ನಿಸಿ, ಉದಾರ ಧನಸಹಾಯ ಮಾಡಿ, ಅಧಿಕ ಸಂಖ್ಯೆಯಲ್ಲಿ ಸಮ್ಮೇಲನದಲ್ಲಿ ಉಪಸ್ಥಿತರಾಗಿ ಸಹಕರಿಸಬೇಕಾಗಿ ಸ್ವಾಗತ ಸಮಿತಿಯ ಪ್ರ. ಕಾರ್ಯದರ್ಶಿ ಶ್ರೀ ಎನ್. ವಿ. ಉಪಾಧ್ಯಾಯರು ವಿನಂತಿಸುತ್ತಾರೆ.

## ಅಲ್ಲಲ್ಲಿಯ ಸುದ್ದಿ ಸಾರ

**ಉತ್ತಮ ಶಾಲೆಗಳ ಸ್ಪರ್ಧೆ**— ಉತ್ತಮ ಪ್ರಾಥಮಿಕ ಶಾಲೆಗಳ ದ್ವಿತೀಯ ಸ್ಪರ್ಧೆಯು 1963ನೇ ಮಾರ್ಚ ತಿಂಗಳಲ್ಲಿ ನಡೆಯಲಿರುವುದರಿಂದ, ಸಂಬಂಧಪಟ್ಟ ಡಿಪ್ಟಿ ಇನ್ಸ್ಪೆಕ್ಟರರ ಕಚೇರಿಗಳಲ್ಲಿ ಈ ಕುರಿತು ಅರ್ಜಿ ಸ್ವೀಕಾರದ ಕೊನೆಯ ದಿನವು 25-3-1963 ಎಂದೂ ಈ ಸ್ಪರ್ಧೆಯಲ್ಲಿ ಭಾಗವಹಿಸುವ ಶಾಲೆಗಳ ಮುಖ್ಯಾಧಿಕಾರಿಗಳು ಸಂಬಂಧಪಟ್ಟ ಶಾಲಾಧಿಕಾರಿಗಳಿಂದ ಸ್ವತಃ ಯಾ ಅಂಚೆಯ ಮೂಲಕ ಉಚಿತವಾಗಿ ಅರ್ಜಿಫಾರಮುಗಳನ್ನು ಫೆಬ್ರವರಿ ಕಡೇ ವಾರದೊಳಗೆ ಪಡೆಯಬಹುದೆಂದೂ ಜಿಲ್ಲಾ ವಿದ್ಯಾಧಿಕಾರಿಗಳು ತಿಳಿಸುತ್ತಾರೆ.

**ದ. ಕ. ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘ, ಉಡುಪಿ** — ಖಾಸಗಿ ಶಾಲೆಗಳ ವಿಚಾರದಲ್ಲಿ ತಲೆದೋರಿದ ಮ್ಯೆಂಟನೆನ್ಸ್ ಗ್ರಾಂಟು ಹಾಗೂ ಇನ್ನಿತರ ಸಮಸ್ಯೆಗಳ ಪರಿಹಾರದ ಬಗ್ಗೆ ಕಾರ್ಯನಿರ್ವಾಹಕ ಸಮಿತಿಯು ಸಾಧ್ಯವಿರುವಷ್ಟು ಪ್ರಯತ್ನಿಸಿರುವುದಾದರೂ ನಿರೀಕ್ಷೆಯ ಫಲ ಇಷ್ಟರ ತನಕ ದೊರೆಯದಿರುವುದರಿಂದ ಮುಂದಿನ ವ್ಯಥ ಹೆಜ್ಜೆಯ ನಿರ್ಣಯದ ಬಗ್ಗೆ ಇದೇ ತಾ. 24ನೇ ಆದಿತ್ಯವಾರ ಉಡುಪಿ ಮಹಾತ್ಮಾ ಗಾಂಧಿ ಮೆ. ಹಾ. ಎ. ಶಾಲೆಯಲ್ಲಿ (ಮೈನ್ ಶಾಲೆ) ಪೂರ್ವಾಹ್ನ ಘಂಟೆ 11ಕ್ಕೆ ಜಿಲ್ಲಾ ಸಂಘದ ವಿಶೇಷ ಮಹಾ ಸಭೆಯನ್ನು ಜರಗಿಸುವುದಾಗಿ ತಾ. 7—2—63ರಂದು ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸಿದೆ. ಈ ವಿಶೇಷ ಮಹಾಸಭೆಗೆ ಎಲ್ಲರೂ ಅಗತ್ಯ ಬರಬೇಕಾಗಿ ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ವಿನಂತಿಸುತ್ತಾರೆ.

**ಮುನ್ಸಿಪಲ್ ಕೆಲಸಗಾರರ ಆದರ್ಶ**— ಉಡುಪಿ ಮುನ್ಸಿಪಲ್ ಕೆಲಸಗಾರರು ರೂ. ೮ ಸಾವಿರ ರೂ ಗಳನ್ನು ನಿಧಿಗೆ ಸಹಾಯ ನೀಡುತ್ತಿರುವರಲ್ಲದೆ, ಪ್ರಜಾಪ್ರಭುತ್ವ ದಿನದಿಂದ, ದಿನಕ್ಕೆ 1 ಗಂಟೆ ಕಾಲ ಹೆಚ್ಚು ಕೆಲಸ ಮಾಡಲೂ, ರಜಾ ದಿನಗಳಲ್ಲಿ 3 ಗಂಟೆ ಕೆಲಸ ಮಾಡಲೂ ನಿರ್ಧರಿಸಿ, ಹಾಗೆಯೇ ನಡೆಸುತ್ತಿದ್ದಾರೆಂದು ತಿಳಿದುಬರುತ್ತದೆ.

**ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವವು**- ಇದೇ ತಾ. 8ರಂದು ಕೇಂದ್ರ ಸರಕಾರದ ಸಾಗಾಟ ಮತ್ತು ಸಾರಿಗೆ ವಿಭಾಗದ ಕಾರ್ಯದರ್ಶಿ ಶ್ರೀ ಎಂ. ಎಂ. ಫಿಲಿಪ್, ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಡಾ| ಟಿ. ಮಾಧವ ಪೈಗಳು ಮುಖ್ಯ ಅತಿಥಿಗಳ ಪರಿಚಯ ನೀಡಿದ ತರುವಾಯ ಪ್ರಿನ್ಸಿಪಾಲ್ ಶ್ರೀ ವೆಂಕಟರಾಮಣ ಭಟ್ಟರು ಕಾಲೇಜಿನ ವರದಿವಾಚನಗೈದರು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಮಣಿಪಾಲದ ಶೈಕ್ಷಣಿಕ ಪ್ರಗತಿಯನ್ನು ಶ್ಲಾಘಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯಶಾಲಿಗಳಾದ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಪಾರಿತೋಷಕಗಳನ್ನಿತ್ತ ಬಳಿಕ ಶ್ರೀ ಡಿ. ಕೆ. ಚೆಡ್ಡಾ ದುರವರು ಸ್ವಸ್ತಿವಾಚನಗೈಯಲು ಶ್ರೀ ಜೋನ್ ಅಬ್ರಹಾಂರವರು ಉತ್ತರವಿತ್ತರು. ಅಂತ್ಯದಲ್ಲಿ ಶ್ರೀ ರಾಕಿ ಫೆರ್ನಾಂಡಿಸರು ಧನ್ಯವಾದ ಸಮರ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

**ರಿಫ್ರೇಶರ್ ಕೋರ್ಸು**— ಇದೇ ತಾ. 17ರಂದು, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ನಿನ ದ. ಕ. ಶಾಖೆಯ ಆಶ್ರಯದಲ್ಲಿ 8 ದಿನಗಳ ವರೆಗೆ ಮಂಗಳೂರಲ್ಲಿ ನಡೆಸಲ್ಪಡುವ ರಿಫ್ರೇಶರ್ ಕೋರ್ಸು, ಡಾ| ಟಿ. ಎಂ. ಎ. ಪೈಗಳಿಂದ ಉದ್ಘಾಟಿಸಲ್ಪಟ್ಟಿತು. ಪ್ರಾರಂಭದಲ್ಲಿ ಎಸೋಸಿಯೇಶನಿನ ಅಧ್ಯಕ್ಷ ಡಾ| ವಿ. ಆರ್. ಭಟ್ಟರವರು ಸ್ವಾಗತಿಸುತ್ತಾ ಈ ಎಸೋಸಿಯೇಶನಿನ ಬೆಳವಣಿಗೆಯ ಸೂಕ್ಷ್ಮ ಪರಿಚಯವನ್ನಿತ್ತರು. ಡಾ| ಪೈಗಳು ಮಾತಾಡುತ್ತಾ, "ವೈದ್ಯಕೀಯ ರಂಗದಲ್ಲಾಗುವ ಆಧುನಿಕ ಸಂಶೋಧನೆಗಳು ಅತೀ ವೇಗದಿಂದ ಮುಂದುವರಿಯುತ್ತಿದೆ ಇದಕ್ಕೆ ಇಂತಹ ಸಮ್ಮೇಳನಗಳ ಅಗತ್ಯವಿದೆ. ವೈದ್ಯರ ಅನುಭವ ಮಟ್ಟವನ್ನು ಮೇಲಕ್ಕೇರಿಸುವಂಥಹ ಸಮ್ಮೇಳನಗಳು ಹೆಚ್ಚಿನ ಸಂಖ್ಯೆಯಲ್ಲಿ ಜರಗುವಂತಾಗಬೇಕು" ಎಂದರು. ಅಂತ್ಯದಲ್ಲಿ ಡಾ| ಎಂ. ಕೇಶವ ಪೈಯವರು ವಂದನಾರ್ಪಣೆಯನ್ನು ಸಲ್ಲಿಸಿದರು.

### ಶಾಲಾಭಿವೃದ್ಧಿ ಸಮಿತಿಗಳ ಸಭೆ

ಧರ್ಮಸ್ಥಳದ ವಸಂತ ಮಹಲಿನಲ್ಲಿ ಬೆಳ್ತಂಗಡಿ ಶ್ರೇಣಿಯ ಶಾಲಾಭಿವೃದ್ಧಿ ಸಮಿತಿಗಳ ಸಂಯುಕ್ತ ಸಭೆಯೊಂದು ತಾ 14ರಂದು ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಕೆ. ಸೂರ್ಯನಾರಾಯಣ ರಾವ್‌ರವರು ಸ್ವಾಗತಿಸಿದ ಬಳಿಕ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಜಿ. ಎನ್. ಭಿಡೆ, ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ವಿಠಲ ಶೆಣೈಯವರಿಂದ ಭಾಷಣಗಳಾದುವು ಹಲವರ ಉಪನ್ಯಾಸಗಳಾದ ಬಳಿಕ ಶ್ರೀ ಟಿ. ಎ ಪೈಗಳು ತಮ್ಮ ಭಾಷಣದಲ್ಲಿ ಕಡ್ಡಾಯ ಶಿಕ್ಷಣದ ಅವಶ್ಯಕತೆಗಳನ್ನು ತಿಳಿಸಿ ಇದಕ್ಕಾಗಿ ವಿದ್ಯಾವಂತರು ಶ್ರಮಿಸಬೇಕೆಂದರು.

**ಸಮಾರೋಪ ಸಮಾರಂಭ**—ಯುನಿವರ್ಸಿಟಿ ಕೆಥೋಲಿಕ್ ವಿದ್ಯಾರ್ಥಿ ಸಂಘದ ಮತ್ತು ಹಿರಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ತಾ. 17ರಲ್ಲಿ ಉಡುಪಿಯ ಡೆನೀಸ್‌ಬೊಸ್ಕೊ ಹಾಲ್‌ನಲ್ಲಿ ಶ್ರೀ ತಿರ್ಥಡಿ ವಿಲಿಯಂ ಪಿಂಟೊರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಜೆರೋಮ್ ಲುವಿಸ್, ಜೆರಾಲ್ಡ್ ಲೋಬೊ, ಎಲೆನ್ ಲೋಬೋರವರು ಮಾತನಾಡಿದರು ಮುಖ್ಯ ಅತಿಥಿ ರೆ. ಫಾ. ಸೆರಾಲ್‌ವರು ಸಮಾರೋಪ ಭಾಷಣ ಮಾಡಿದರು.

ರೆ| ಫಾ. ಸಿಲ್ವೆಸ್ಟರ್ ಡಿ'ಸೋಜರವರು ಹಿತವಚನಗಳನ್ನಿತ್ತ ತರುವಾಯ ಶ್ರೀ ಟೋನಿ ಪಸ್ ನೊರೊನ್ಹರವರು ಧನ್ಯವಾದಗಳನ್ನು ಸಮರ್ಪಿಸಿದರು.

ಅಂದೇ ನಡೆದ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ಶ್ರೀ ಜೆರೋಮ್ ಲುವಿಸ್ ಅಧ್ಯಕ್ಷ ಕುಮಾರಿ ಪೋಲಿನ್ ರೊಜಾರಿಯೊ ಉಪಾಧ್ಯಕ್ಷ; ಶ್ರೀ ಎಲ್‌ರಿಕ್ ನಜರೆತ್ ಮತ್ತು ರೆಜಿನಾಲ್ಡ್ ಮಾರ್ಟಿಸ್ ಕಾರ್ಯದರ್ಶಿಗಳು; ಶ್ರೀ ಟೋನಿ ಅಂದ್ರಾದೆ ಮತ್ತು ಕುಮಾರಿ ಬೆರಿಲ್ ಡಿ'ಸೋಜರವರು ಖಜಾಂಚಿಗಳಾಗಿ ಅವಿರೋಧವಾಗಿ ಚುನಾಯಿಸಲ್ಪಟ್ಟರು.

**ಉಡುಪಿ ಬುಲಿಯನ್ ಮರ್ಚೆಂಟ್ಸ್ ಎಸೋಸಿಯೇಶನ್** — ಸಭೆಯು ತಾ. 17—2—63ರಂದು ಶ್ರೀ ಕೃಷ್ಣಾ ಜ್ಯುವೆಲರಿ ಮೋರ್ಟ್ಸಿನ ಮಾಳಿಗೆಯಲ್ಲಿ ಶ್ರೀಯುತ, ರಾಘವೇಂದ್ರ ಕೃಷ್ಣಭಟ್ಟ ಅಧ್ಯಕ್ಷತೆಯಲ್ಲಿ ಜರಗಿ ತಾ. 8ರಿಂದ ತಮ್ಮ ವ್ಯಾಪಾರವು ಪೂರ್ಣ ಸ್ಥಗಿತವಾಗಿದೆ ಎಂದೂ 14 ಕ್ಯಾರೆಟಿನ ಚಿನ್ನ ದೊರಕಿಸಲು ಯಾವ ವ್ಯವಸ್ಥೆಯೂ ಆಗದಿದ್ದರಿಂದ ತುಂಬಾ ತೊಂದರೆಯಾಗಿದೆ ಎಂದೂ ಗಿರಾಕಿಗಳಿಂದ ಹಳೆ ಚಿನ್ನವನ್ನು ಖರೀದಿಸಲಿಕ್ಕೂ ತಾ. 8ರಿಂದ ನೂರಾಟವಾಗದೆ ಉಳಿದಿರುವ (ಡಿಕ್ಲರೇಶನ್) ಆಭರಣಗಳನ್ನು ಮಾರಾಟ ಮಾಡಲಿಕ್ಕೂ ಅನುಮತಿ ನೀಡಬೇಕೆಂದೂ ಇತ್ಯಾದಿ ಠರಾವುಗಳಾದುವು.

**ಉದ್ಯಾವರ**—ಸ್ಥಳೀಯ ಇಗರ್ಜಿ ವಠಾರದಲ್ಲಿ ತಾ. 17ರಲ್ಲಿ ಸೈಂಟ್ ಫ್ರಾನ್ಸಿಸ್ ನಾಟಕ ಸಭಾದವರು ಆದೇ ಸಭಾದ ಸಹಾಯಾರ್ಥವಾಗಿ "ಮಿತ್ರ ಸಂಸಾರ್" ಎಂಬ ಕೊಂಕಣಿ ನಾಟಕವನ್ನು ಶ್ರೀ ಶಿತಾಳಿ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು. ಈ ನಾಟಕವನ್ನು ಶ್ರೀ ಹೆನ್ರಿ ಡಿ'ಸಿಲ್ವಾರವರು ಬರೆದಿದ್ದು ಶ್ರೀ ಆರ್. ಎ. ಎಸ್. ಪಿಂಟೋರವರು ದಿಗ್ದರ್ಶಿಸಿದ್ದರು.

**ಎ ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ**— ಇದೇ ತಾ. 14ರಂದು ಮೈಸೂರಿನ ಎ. ಬಿ ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು, ನಗರದ ಯಾದವಗಿರಿಯಲ್ಲಿರುವ ನಿಲಯದ ಆವರಣದಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ| ಜೆ ಜೆ ಧರ್ಮರಾಜ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರಂಭದಲ್ಲಿ ನಿಲಯದ ಆಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತಿಸಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಬಿ. ರವೀಂದ್ರರವರು ಸಂಘದ ವರದಿಯನ್ನೂ ಉಪಾಧ್ಯಕ್ಷ ಶ್ರೀ ಅಬ್ದುಲ್ ಹಮೀದರು ಸಂದೇಶಗಳನ್ನು ಓದಿದರು.

ಈ ಸಮಾರಂಭದಲ್ಲಿ ಶಿಕ್ಷಣ ಸಚಿವ ಎಸ್. ಆರ್. ಶ್ರೀ ಕಂಠಯ್ಯನವರು ಮಾತಾಡುತ್ತಾ, ವಿದ್ಯಾರ್ಥಿ ನಿಲಯಗಳ ಅವಶ್ಯಕತೆಗಳನ್ನು ವಿವರಿಸಿದರು ಮಾತ್ರವಲ್ಲದೇ ವಿದ್ಯಾರ್ಥಿನಿಲಯಗಳು ಸಾರ್ವಜನಿಕವಾಗಿರಬೇಕೆಂದೂ ಅವುಗಳಲ್ಲಿ ಜಾತೀಯತೆಯ ಪ್ರಶ್ನೆಯೂ ಇರಬಾರದೆಂದೂ ಹೇಳಿದರು. ಅಧ್ಯಕ್ಷರ ಭಾಷಣವಾದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಜಗದೀಶ ಶೆಟ್ಟರು ವಂದನಾರ್ಪಣೆಗೈದರು

**ವಯಸ್ಕರಿಗಾಗಿ ಉಚಿತ ಹಿಂದೀ ತರಗತಿ**—ಉಡುಪಿ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ತಾ. 15—2—1963 ರಿಂದ ವಯಸ್ಕರಿಗಾಗಿ (18 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟವರಿಗೆ ಮಾತ್ರ) ಧರ್ಮಾರ್ಥ ಹಿಂದೀ ಶಿಕ್ಷಣ ನೀಡುವ ಒಂದು ಹೊಸ ಮಧ್ಯಮ ವರ್ಗವು ಪ್ರಾರಂಭಿಸಲ್ಪಟ್ಟಿರುವುದೆಂದೂ ಸೇರಲಿಚ್ಛಿಸುವವರು ಕೋಳದ ಪೇಟೆಯಲ್ಲಿರುವ ಸಮಿತಿಯ ಆಫೀಸಿನಿಂದ ಕೂಡಲೇ ವಿಶೇಷ ಮಾಹಿತಿಗಳನ್ನು ಪಡೆಯಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ

**ಕ್ರೀಡೋತ್ಸವ**—ಪೆರ್ಡೂರು ಹೈಸ್ಕೂಲಿನ ಕ್ರೀಡೋತ್ಸವ ಮತ್ತು ಬಹುಮಾನ ವಿತರಣಾ ಸಮಾರಂಭವು ತಾ. ೧೬ರಂದು ನಡೆಯಿತು. ಪೂರ್ವಾಹ್ನ ಶ್ರೀ ಎ. ಉಪೇಂದ್ರನಾಥ ಹೆಗ್ಡೆಯವರು ಉತ್ಸವವನ್ನು ಉದ್ಘಾಟಿಸಿದರು. ಸಂಜೆ ಶ್ರೀ ಕೆ. ಎಂ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣೆಯು ನಡೆಯಿತು. ಶಾಲಾ ಸಮಿತಿಯ ಪರವಾಗಿ ಡಾ| ಎಂ. ಆರ್ ಹೆಗ್ಡೆಯವರು ಸ್ವಾಗತಿಸಿದ ಮೇಲೆ ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯ ಕೆ. ಗೋಪಾಲಕೃಷ್ಣರು ಓದಿದರು. ವಿದ್ಯಾರ್ಥಿ ಸಂಘದ ವರದಿಯನ್ನು ಕಾರ್ಯದರ್ಶಿ ಸುಬ್ರಹ್ಮಣ್ಯ ಬ್ಯಾರಿಯವರು ಸಾದರಪಡಿಸಿದರು. ಶಾಲಾ ಹಸ್ತಲಿಖಿತ ಪತ್ರಿಕೆ ಪಂಚಾರತಿಯನ್ನು ಶ್ರೀ ಎ. ಉಪೇಂದ್ರನಾಥ ಹೆಗ್ಡೆಯವರು ಉದ್ಘಾಟಿಸಿದರು. ಬಹುಮಾನ ವಿತರಣೆಯ ತರುವಾಯ ಅಧ್ಯಕ್ಷರು ಮಾತನಾಡುತ್ತಾ, ಶಿಕ್ಷಣದ ಪವಿತ್ರ ಕ್ಷೇತ್ರದ ಪಾವಿತ್ರ್ಯವನ್ನು ಉಳಿಸಿಕೊಳ್ಳುವುದು ಅತ್ಯವಶ್ಯವೆಂದೂ ಈ ದಿಸೆಯಲ್ಲಿ ಎಲ್ಲರೂ ಸಹಕಾರ ನೀಡಬೇಕೆಂದೂ ಹೇಳಿ, ಹೈಸ್ಕೂಲಿನ ಪ್ರಗತಿ-ಅಭಿವೃದ್ಧಿ ಜನ ಸಹಾಯಗಳನ್ನು ಪ್ರಶಂಸಿಸಿದರು. ಕೊನೆಗೆ, ಮನರಂಜನೆಯ ವಿವಿಧ ಚಟುವಟಿಕೆಗಳು ಯಶಸ್ವಿಯಾಗಿ ನೆರವೇರಿದುವು.

**ಪ್ರಚಾರೋಪನ್ಯಾಸಗಳು**— ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವತಿಯಿಂದ ಎಂ. ಜಿ. ಎಂ. ಕಾಲೇಜಿನ ವಿಶ್ರಾಂತಿ ಮಂದಿರದಲ್ಲಿ ಇದೇ ತಾ. 17 ಮತ್ತು 18ರಂದು ಶ್ರೀಗಳಾದ ಜೆ. ಆರ್. ಲಕ್ಷ್ಮಣ ರಾವ್, ಕೆ.ವೆಂಕಟರಾಮಪ್ಪ, ಎಚ್. ಎಸ್. ಶಂಕರನಾರಾಯಣ ರಾವ್, ಎಸ್.ವಿ. ರಂಗಣ್ಣ, ಇವರಿಂದ ಪ್ರಚಾರೋಪನ್ಯಾಸಗಳಾದವು.

---


**ಶಾರೀಕು 10 ರ ನಂತರ**

ಹದಿನಾಲ್ಕು ಕ್ಯಾರೆಟ್ ಚಿನ್ನದಿಂದ ಮಾಡಲ್ಪಟ್ಟ ವಿವಿಧ ನಮೂನೆಯ ಹಾಗೂ ಆಧುನಿಕ ಫ್ಯಾಶನಿಗೊಪ್ಪುವ ಒಡವೆ, ಆಭರಣ ಹಾಗೂ ಶೃಂಗಾರ ಸಾಧನಗಳು ತಾ 10-2-1963 ರ ನಂತರ ನಮ್ಮ ಅಂಗಡಿಯಲ್ಲಿ ಮಾರಾಟಕ್ಕೆ ಸಿಗುತ್ತವೆ, ಆರ್ಡರುಗಳನ್ನು ಕೊಟ್ಟಲ್ಲಿ ಬೇಕು ಬೇಕಾದ ನಮೂನೆಗಳಲ್ಲಿ ತಯಾರಿಸಿಯೂ ಕೊಡಲಾಗುತ್ತದೆ.

ವಿವರಗಳಿಗೆ ವಿಚಾರಿಸಿರಿ:

**ಶ್ರೀ ಕೃಷ್ಣಾ ಜ್ಯುವೆಲ್ಲರಿ ಮಾರ್ಟ್**

ಫೋನ್ ನಂಬ್ರ: 66

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.


---

### In the Court of the Subordinate Judge of South Kanara, Mangalore.

R. E. A. No. 250/1962
in O. S. 132/56.

Between:-

The Vijaya Bank Ltd.... Petitioner.
and
Dayananda Shet ... Respondent.

To

The Respondent— Dayananda Shet, son of Sonegar Puttappa Shet residing at Kundapur Kasba.

Whereas the petitioner has made application to this court for transfer of the above decree to District Munsif's Court, Kundapur for execution, this is to give you notice that you are to appear in this court in person or through a pleader at 11 A. M. on 5-3-1963, failing which the petition will be heard in your absence.

(By order of the court)

**B M. Hegde,**
Advocate for petitioner.

Mangalore, 18-2-1963.

---

### In the Court of the District Munsif of Karkala

O. S. No. 588/1962

Sri Mujilnaya Daivada Bhandaram by Managing Trustee K. Lingappa Mudya— Plaintiff.
Seena Shetty — Defendant

To the defendant
Seena Shetty, nephew of Koraga Shetty, residing at Battegundi (Batteni) Idu village of Karkala Taluk.

Whereas the plaintiff has instituted the above suit for arrears of rent and interest claiming Rs. 508-46 and future interest and costs of suit etc. and the said suit stands posted to 23—2—1963 for your appearance. You are hereby informed that you are at liberty to appear before the said Court at 11 A. M. on the said date and plead your defence, if any, failing which you will be declared exparte and the suit will be decided in your absence.

**N. Jinaraja Ajri,**
Advocate for plaintiff.

Karkala. Dated 16-2-63.

---

**ವೆಚ್ಚ ಕಡಿಮೆ ಮಾಡಿರಿ, ಉಳಿತಾಯ ಹೆಚ್ಚು ಮಾಡಿರಿ!**

### ನಿಮಗೆ ಗೊತ್ತೇ?

# ಧರ್ಮಯುದ್ಧವೆಂದರೇನು?

'ಧರ್ಮ' ಎಂಬ ಶಬ್ದವು 'ಧೃ' ಧಾತುವಿನಿಂದ ಬಂದಿದೆ. 'ಧೃ' ಅಂದರೆ 'ಬೆಂಬಲ ನೀಡು' ಎಂದು ಅರ್ಥ. ಧರ್ಮದ ಕಲ್ಪನೆಯು ವ್ಯಕ್ತಿ ಅಥವಾ ಸಮಾಜದ ಅಸ್ತಿತ್ವವನ್ನು ಅನಿವಾರ್ಯಗೊಳಿಸುತ್ತದೆ. ಅದರಲ್ಲಿ ವ್ಯಕ್ತಿಗತ ಹಾಗೂ ಸಾಮಾಜಿಕ ಅಂಶಗಳೆರಡೂ ಸಮ್ಮಿಳಿತವಾಗಿವೆಯೆಂಬುದನ್ನು ಮರೆಯಲಾಗದು. ಮಹಾ ಭಾರತದಲ್ಲಿ ಧರ್ಮವನ್ನು ಕುರಿತು ಹೇಳುವಾಗ, "ಧರ್ಮೋ ಧಾರಯತಿ ಪ್ರಜಾ"— ಧರ್ಮವು ಪ್ರಜೆಗಳನ್ನು ಉದ್ಧಾರ ಮಾಡುತ್ತದೆ ಎಂದು ಧರ್ಮದ ಸಾಮೂಹಿಕ ಅಂಶಕ್ಕೆ ಹೆಚ್ಚು ಪ್ರಾಧಾನ್ಯ ನೀಡಲಾಗಿದೆ. ಧರ್ಮವು ಸಮಾಜ ಹಾಗೂ ವ್ಯಕ್ತಿಗಳ ನಡುವೆ ಸಂಬಂಧ ಕಲ್ಪಿಸುವ ಜೀವತಂತುವೆಂದೂ ವ್ಯಾಖ್ಯೆ ನೀಡಬಹುದು. ಮಾನವೀಯ ಮೌಲ್ಯಗಳ ಸಂಬಂಧವಾದ ಯಾವುದೇ ಕಾರ್ಯಯೋಜನೆ ಪುರುಷಾರ್ಥಗಳಲ್ಲಿ ಧರ್ಮದ ನಿಬಂಧನೆಗಳಿಗೇ ಮಿಗಿಲಾದ ಪ್ರಾಶಸ್ತ್ಯವಿದೆ ಎಂಬುದು ಸರ್ವಸಮ್ಮತವಾಗಿದೆ.

ಧರ್ಮ ಸಂಬಂಧವಾದ ಕಲ್ಪನೆಯೂ ಅಷ್ಟೇ ಅಸದೃಶ್ಯ. ಅದು ಯುಗ ಯುಗಗಳಿಂದಲೂ ಬಂದ ಭಾರತೀಯ ಸಂಸ್ಕೃತಿಯನ್ನು ಮನನಮಾಡಿಕೊಳ್ಳಲು ಒಂದು ಉಪಯುಕ್ತ ಸಾಧನವನ್ನು ಒದಗಿಸುತ್ತದೆ. ಯಾವುದೇ ವಿದೇಶಿ ಭಾಷೆಯಲ್ಲಿಯೇ ಆಗಲಿ ಧರ್ಮ ಎಂಬ ಶಬ್ದಕ್ಕೆ ತತ್ಸಮಾನಾದ ಶಬ್ದವಿದೆಯೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಕರ್ತವ್ಯ ಹಾಗೂ ನ್ಯಾಯಬದ್ಧ ನಡವಳಿಕೆಗಳು ಧರ್ಮದ ಅಂಗಗಳೇ ಆಗಿವೆ. ಧರ್ಮದ ಅರ್ಥ ಇಷ್ಟೇ ಅಲ್ಲ, ಇನ್ನೂ ವ್ಯಾಪಕ ಸ್ವರೂಪವುಳ್ಳದ್ದಾಗಿದೆ. "ಅಹಿಂಸಾ ಪರಮೋ ಧರ್ಮಃ" ಹಾಗೂ "ಸತ್ಯಂ ನಾಸ್ತಿ ಪರೋ ಧರ್ಮಃ" ಇವೇ ಮೊದಲಾದ ಭಾರತದ ಸಾಂಪ್ರದಾಯಿಕ ಪದ ಪ್ರಯೋಗಗಳು ಧರ್ಮವನ್ನೇ ಕುರಿತವುಗಳಾಗಿವೆ. ಅವು ಸಂದರ್ಭಕ್ಕನುಸಾರವಾಗಿ ಮಾನವರು ಅಥವಾ ಪ್ರಾಣಿಗಳ ಸಂಬಂಧದಲ್ಲಿ ವ್ಯಕ್ತಪಡಿಸಿದ ಭಾರತೀಯ ವಿಚಾರ ವೈಖರಿಯನ್ನು ಪ್ರತಿಬಿಂಬಿಸುತ್ತವೆ. ಈ ಪದ ಪ್ರಯೋಗಗಳಿಗೇ ಬೇರೆ ಅರ್ಥ ಕಲ್ಪಿಸುವುದಾದರೆ, ಅವುಗಳಲ್ಲಿನ ಉತ್ತಮ ಅಂಶಕ್ಕೆ ತಿಲಾಂಜಲಿಯಿತ್ತಂತೆ.

ಧರ್ಮದ ತಿರುಳನ್ನು ಯಾವುದೇ ಒಂದು ಸೂತ್ರದಲ್ಲಿ ಕ್ರೋಢೀಕರಿಸುವುದಕ್ಕಾಗುವುದಿಲ್ಲ. ಕಠೋರವಾದ ಅಥವಾ ಸಂಪ್ರದಾಯ ಬದ್ಧವಾದ ರೀತಿಯಲ್ಲಿಯೂ ಅದನ್ನು ಅನ್ವಯಿಸಲು ಸಾಧ್ಯವಿಲ್ಲ. ಕಾಲ ಹಾಗೂ ಪರಿಸ್ಥಿತಿಗನುಗುಣವಾಗಿ ಹೊಂದಿಕೊಳ್ಳುವ ಗುಣವೇ ಧರ್ಮದ ಅಂತರಾತ್ಮ. ಧರ್ಮ ಮಾನವೀಯ ಅನುಭವಗಳು ಹಾಗೂ ಸಾಹಸಗಳ ಸಮಗ್ರ ಕ್ಷೇತ್ರವನ್ನೇ ಅಳವಡಿಸಿಕೊಂಡ ಒಂದು ಜೀವನ ವಿಧಾನ. ಅದು ಪ್ರತಿ ಪರಿಸ್ಥಿತಿಗೆ ಅನ್ವಯಿಸುವ ಸಮಗ್ರ ಕಲ್ಪನೆ ಭಾರತೀಯರ ಪವಿತ್ರ ಗ್ರಂಥವಾದ ಭಗವದ್ಗೀತೆಯಲ್ಲಿ ವರ್ಣಿಸಲಾದ ಸ್ವಧರ್ಮವಾದರೂ ಇದನ್ನು ಬಿಟ್ಟು ಬೇರೆ ಇಲ್ಲ.

### ಧರ್ಮಯುದ್ಧದ ಕಲ್ಪನೆ

ಇಂತಹ ಒಂದು ಹಿನ್ನಲೆಯನ್ನೇ ಆಧಾರವನ್ನಾಗಿಟ್ಟುಕೊಂಡು ಧರ್ಮಯುದ್ಧದ ಬಗೆಗೆ ವಿಚಾರಮಂಥನ ನಡೆಯಬೇಕು. ದುರ್ದೈವದಿಂದ ಸಮರಗಳೇ ಇತಿಹಾಸದಲ್ಲಿನ ಪ್ರಭಾವೀ ಘಟನೆಗಳಾಗಿವೆ. ಭಾರತವೂ ಇತಿಹಾಸದ ಈ ಪರಂಪರೆಗೆ ಅಪವಾದವೆನಿಸದು. ಆದರೆ ಭಾರತೀಯರ ಮನಸ್ಸಿನ ಮೇಲೆ ಪವಿತ್ರ ಪುರಾಣ ಗ್ರಂಥಗಳಲ್ಲಿನ ಧರ್ಮಯುದ್ಧದ ಕಲ್ಪನೆಯಾದ ಅದನ್ನು ಪರಿಣಾಮ ಬೇರೆ ಇನ್ನಾವ ವಾಸ್ತವಿಕ ಇತಿಹಾಸದಿಂದಲೂ ಆಗಿಲ್ಲ. ಧರ್ಮ ಹಾಗೂ ಅಧರ್ಮಗಳ ನಡುವೆ, ಸುರರು—ಅಸುರರ ನಡುವೆ ನಡೆದ ಯುದ್ಧದಲ್ಲಿ ಧರ್ಮ ಯುದ್ಧದ ಕಲ್ಪನೆಯು ಉತ್ತಮ ದೃಷ್ಟಾಂತವಾಗಿದೆ. ಅಸುರರು ಯಾವಾಗಲೂ ಆಕ್ರಮಣಕಾರಿಗಳು. ದೇವತೆಗಳು ಅಸುರರ ಈ ಆಕ್ರಮಣವೃತ್ತಿಯಿಂದಾಗಿ ಪ್ರಾರಂಭದಲ್ಲಿ ಪರಾಭವವನ್ನು ಅನುಭವಿಸುವರು. ಆದರೆ ಕೊನೆಗೆ ವಿಜಯ ಅವರದೇ ಧರ್ಮಕ್ಕೆ ವಿಜಯವೆಂಬಲ್ಲಿ ಭಾರತೀಯರ ದೃಢವಾದ ವಿಶ್ವಾಸವಿದೆ. 'ಯತೋ ಧರ್ಮ ತತೋಜಯಃ' ಧರ್ಮಕ್ಕೆ ಜಯವೆಂಬುದನ್ನು ಇನ್ನೂ ಹೆಚ್ಚು ಸ್ಪಷ್ಟಗೊಳಿಸುತ್ತದೆ. ಇದೊಂದೇ ನಮ್ಮ 18 ಪುರಾಣಗಳು ಹಾಗೂ ಮಹಾ ಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳ ಮುಖ್ಯ ನೀತಿ ತತ್ವವಾಗಿದೆ.

### ಗಡಿ ವಿವಾದವಲ್ಲ

ಇಂದು ಭಾರತದ ಮೇಲೆ ನಡೆದ ಆಕ್ರಮಣವು ಗಡಿ ವಿವಾದವಲ್ಲ. ಅದು ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಹಾಕಿದ ಬೆದರಿಕೆ. ದೀರ್ಘಾವಧಿಯಿಂದಲೂ ನಾವು ಅನುಸರಿಸುತ್ತಾ ಬಂದಿರುವ ಹಾಗೂ ನಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ ಜೀವನ ವಿಧಾನವನ್ನು ಅಂದರೆ ಧರ್ಮವನ್ನು ಅಮೂಲ್ಯವಾಗಿ ನಾಶಗೊಳಿಸುವುದೇ ಚೀಣೀ ಆಕ್ರಮಣದ ಹಿನ್ನೆಲೆಯಲ್ಲಿರುವ ಉದ್ದೇಶ.

ಭಾರತವು ಧರ್ಮವನ್ನು ಉದಾತ್ತವಾದ ರೀತಿಯಲ್ಲಿ ಚೀಣಕ್ಕೆ ಕಾಣಿಕೆಯಾಗಿಯೂ, ಅರ್ಪಿಸಿದೆ. ಶತಮಾನಗಳವರೆಗೂ ಭಾರತ-ಚೀಣಾಗಳೆರಡೂ ಒಂದೇ ಬಗೆಯ ಆದರ್ಶಗಳಿಂದ ಬದ್ಧವಾಗಿದ್ದವು. ಚೀಣಾವು ನಾವು ನೀಡಿದ ಅಮೂಲ್ಯ ಕಾಣಿಕೆಗೆ ಪ್ರತಿಯಾಗಿ ನಮ್ಮ ಮೇಲೆ ಆಕ್ರಮಣಮಾಡಿ ತನ್ನದೇ ಆದ ರೀತಿಯಲ್ಲಿ ಅದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿವೆ. ತನ್ನ ಪರಂಪರೆ ಹಾಗೂ ಉನ್ನತ ಗುಣಾಂಶಗಳಿಗೆ ವ್ಯತಿರಿಕ್ತವಾಗಿ ವರ್ತಿಸಿದೆ. ಅನಾದಿ ಕಾಲದಿಂದಲೂ ಚೀಣಾಕ್ಕೆ ತನ್ನ ಪೂರ್ವಜರಲ್ಲಿ ಅಪಾರ ಭಕ್ತಿಭಾವವಿತ್ತು. ಶ್ರದ್ಧೆ ಇತ್ತು. ಇಂದು ಅವರ ಬಗ್ಗೆ ಚೀಣೀಯರ ಹೃದಯದಲ್ಲಿ ತಿರಸ್ಕಾರ ಹಾಗೂ ಅವಿಧೇಯತೆಗಳು ಮನೆಮಾಡಿಕೊಂಡಿವೆ.

ಧೈರ್ಯಗೆಡಲು ಇದು ಸಮಯವಲ್ಲ. ಭಗವಾನ್ ಶ್ರೀ ಕೃಷ್ಣನ ಉಪದೇಶವು ನಮ್ಮ ಕಿವಿಗಳಲ್ಲಿ ಇನ್ನೂ ಪ್ರತಿಧ್ವನಿತವಾಗುತ್ತಿದೆ. ಭಾರತವು ಶತ್ರುಗಳನ್ನು ಹೊಡೆದೋಡಿಸಲು ಒಂದೇ ವ್ಯಕ್ತಿಯಂತೆ ಮೇಲೆದ್ದು, ಕೇವಲ ಕುರುಕ್ಷೇತ್ರದ ರಣರಂಗದಲ್ಲಿ ಮಾತ್ರವಲ್ಲ—ಈ ಪವಿತ್ರ ಭೂಮಿಯ ಪದತಲದಿಂದ ಹಿಡಿದು ತುದಿಯ ವರೆಗೂ ಈಗ ನಾವು ಸನ್ನದ್ಧರಾಗಬೇಕು. ಧರ್ಮ ನಮ್ಮನ್ನು ರಕ್ಷಿಸುತ್ತದೆ.

'ಧರ್ಮೋ ರಕ್ಷತಿ ರಕ್ಷಿತಃ'

(ಆಕಾಶವಾಣಿ ಬೆಂಗಳೂರು ಕೇಂದ್ರದ ಸೌಜನ್ಯದಿಂದ.)

— ಕೆ. ಗುರುದತ್.

---


## ಯಡ್ತರೆ ಕೊ-ಓಪರೇಟಿವ್ ವ್ಯವಸಾಯಿಕ ಬೇಂಕ್ ಲಿ.,

### ನಂಬ್ರ L 842 ಬೈಂದೂರು, ದ. ಕ.

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲಗಳನ್ನು ಕ್ಲಪ್ತ ಕಾಲದಲ್ಲಿ ಮರುಪಾವತಿ ಮಾಡುವರೇ ತಪ್ಪಿರುವುದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮಪ್ರಕಾರವಾದ ರಿಜಿಸ್ಟ್ರ ನೋಟೀಸುಗಳನ್ನು ಕೊಟ್ಟದ್ದರೂ ಸದ್ರಿ ಲೋನುಗಳ ಬಾಬ್ತು ಅಸಲು ಬಡ್ಡಿ ಮೊಬಲಗನ್ನು ಸಲ್ಲಿಸದೆ ಬಾಕಿಮಾಡಿಕೊಂಡಿರುವುದರಿಂದಲೂ, ಆ ಪೈಕಿ ಕೆಲವು ರಿಜಿಸ್ಟ್ರ ನೋಟೀಸುಗಳು ಅವುಗಳ ವಿಳಾಸದಾರರು ಖಾಲಿ ತಮ್ಮ ವಾಸಸ್ಥಾನದಲ್ಲಿ ಇಲ್ಲವೆಂಬ ಕಾರಣದಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 28-2-1963ನೇ ಗುರುವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ವ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಸಭಾಂಗಣದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬದನ್ನು ಈ ಮೂಲಕ ತಿಳಿಸಲಾಗುತ್ತದೆ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ತಾ. 28-2-1963ರ ವರೇಗೆ ಅಸ್ಲು ಬಡ್ಡಿ ಮೊಬಲಗು. |
|---|---|---|
| 63/1959 | ನಂಬ್ರ 882ನೇ ಕರೀಂ ಮುಹಮ್ಮದ್ ಮೀರಾ ಸಾಹೇಬ ಕರೀಂ ಕಾದೀರ ಸಾಹೇಬರ ಮಗ, ಶಿರೂರ ಗ್ರಾಮ, ಪೋಸ್ಟ್ ಶಿರೂರ | 301=60 |
| 113/1960 | ನಂಬ್ರ 882ನೇ ಕರೀಂ ಮುಹಮ್ಮದ್ ಮೀರಾ ಸಾಹೇಬ ಕರೀಂ ಕಾದೀರ ಸಾಹೇಬರ ಮಗ, ಶಿರೂರ ಗ್ರಾಮ, ಪೋಸ್ಟ್ ಶಿರೂರ | 107=50 |
| 147/1960 | ನಂಬ್ರ B. 32ನೇ ನನ್ನ ಮುಹಮ್ಮದ್ ಅಲಿ ಸಾಹೇಬ ನನ್ನ ಸುಲೇಮಾನ್ ಸಾಹೇಬರ ಮಗ, ಶಿರೂರ ಗ್ರಾಮ, ಹಡವಿನಕೋಣೆ, ಪೋಸ್ಟ್ ಶಿರೂರ | 133=33 |
| 227/1960 | ನಂಬ್ರ 219ನೇ ಕೆಂಚಯ್ಯನ ಕೃಷ್ಣಯ್ಯ ಸೆರೆಗಾರ ಕೆಂಚಯ್ಯನ ಅಣ್ಣಪ್ಪ ಸೇರೆಗಾರರ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 53=06 |
| 256/1960 | ನಂಬ್ರ 890ನೇ ಗೋವಿಂದ ಸೆಟ್ರ ಮನೆ ನಾರಾಯಣ ಸೆಟ್ರ ಟಿಕ್ಕಮ್ಮ ಶೆಡ್ತಿರ ಮಗ, ಶಿರೂರ ಗ್ರಾಮ, ಪೋಸ್ಟ್ ಶಿರೂರ | 28=95 |
| 285/1960 | ನಂಬ್ರ 300ನೇ ಗೋಳಿಹೊಳೆ ಅಬ್ಬು ಮುಹಮ್ಮದ್ ಸಾಹೇಬ ಗೋಳಿಹೊಳೆ ಹಾಜಿ ಸಾಹೇಬರ ಮಗ, ಯಡ್ತರೆ ಗ್ರಾಮ, ಪೋಸ್ಟ್ ಬೈಂದೂರು | 125=10 |
| 310/1960 | ನಂಬ್ರ 1020 ಕೃಷ್ಣಪ್ಪ ಶೆಟ್ಟಿ ಜಟ್ಟಿರಿ ಶೆಟ್ರ ಮನೆ ಕಾವೇರಿ ಶೆಡ್ತಿರ ಮಗ, ಶಿರೂರ ಗ್ರಾಮ, ಪೋಸ್ಟ್ ಶಿರೂರ | 63=05 |
| 329/1961 | ನಂಬ್ರ B. 41ನೇ ಗಣಪಯ್ಯ ಸೇರೆಗಾರ ಹೋಬಳಿದಾರೆ ಬೇಲಪ್ಪ ಸೇರೆಗಾರರ ಮಗ, ಬೈಂದೂರು ಗ್ರಾಮ, ಪೋಸ್ಟ್ ಮಯ್ಯಾಡಿ | 54=95 |
| 442/1961 | ನಂಬ್ರ 335ನೇ ಕಾಜಿ ಮೊಹಿದೀನ್ ಸಾಹೇಬ ಕಾಜಿ ಅಬ್ದುಲ್ ಕಾದೀರ ಸಾಹೇಬರ ಮಗ, ಶಿರೂರ ಗ್ರಾಮ, ಪೋಸ್ಟ್ ಶಿರೂರ | 200=20 |
| 443/1961 | ನಂಬ್ರ 434ನೇ ದೊಂಬೆ ದುಗ್ಗಯ್ಯ ಸೇರೆಗಾರ ದೊಂಬೆ ಮಂಜಯ್ಯ ಸೇರೆಗಾರರ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 247=50 |
| 444/1961 | ನಂಬ್ರ 434ನೇ ದೊಂಬೆ ದುಗ್ಗಯ್ಯ ಸೇರೆಗಾರ ದೊಂಬೆ ಮಂಜಯ್ಯ ಸೇರೆಗಾರರ ಮಗ, ಪಡುವರಿ ಗ್ರಾಮ ಪೋಸ್ಟ್ ಪಡುವರಿ | 200=57 |
| 457/1961 | ನಂಬ್ರ 973ನೇ ತೊಂಡ್ಲೆ ಮಂಜಯ್ಯ ಶೆಟ್ಟಿ ತೊಂಡ್ಲೆ ಅಣ್ಣಪ್ಪ ಸೆಟ್ರ ಅಳಿಯ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 195=57 |
| 528/1961 | ನಂಬ್ರ B. 147ನೇ ಯು. ಶಿವರಾಮ ಶೆಟ್ಟಿ ನೆಲ್ಯಾಡಿ ಕುಪ್ಪಯ್ಯ ಸೆಟ್ರ ಮಗ, ಉಪ್ಪುಂದ ಗ್ರಾಮ, ಪೋಸ್ಟ್ ಉಪ್ಪುಂದ | 70=36 |
| 590/1961 | ನಂಬ್ರ 539ನೇ ಅಗೋಸ್ತಿನ್ ಡಯಾಸ್ ಸಾವೇರ ಡಯಾಸರ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 46=75 |
| 575/1961 | ನಂಬ್ರ 434ನೇ ದೊಂಬೆ ದುಗ್ಗಯ್ಯ ಸೇರೆಗಾರ ದೊಂಬೆ ಮಂಜಯ್ಯ ಸೇರೆಗಾರರ ಮಗ, ಪಡುವರಿ ಗ್ರಾಮ ಪೋಸ್ಟ್ ಪಡುವರಿ | 29=83 |
| 651/1961 | ನಂಬ್ರ 1054ನೇ ಅಂಗಡಿಹಿತ್ಲು ಅಣ್ಣಪ್ಪ ದಾರು ಹೆಂಗ್ಸಿನ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 30=83 |
| 669/1961 | ನಂಬ್ರ B. 116 ಶಿರ್ಶಿ ಕುಬ್ಬನ ಮನೆ ವೆಂಕ್ಟ, ಗುರುವ ನಾಯ್ಕನ ಮಗ, ಗರ್ಜಿನ ಹಿತ್ಲು, ಯಡ್ತರೆ ಗ್ರಾಮ, ಪೋಸ್ಟ್ ಬೈಂದೂರು | 17=30 |
| 671/1961 | ನಂಬ್ರ 434ನೇ ದೊಂಬೆ ದುಗ್ಗಯ್ಯ ಸೇರೆಗಾರ ದೊಂಬೆ ಮಂಜಯ್ಯ ಸೇರೆಗಾರರ ಮಗ, ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 28=43 |

ಯಡ್ತರೆ ಕೊ-ಓಪರೇಟಿವ್ ವ್ಯವಸಾಯಿಕ ಬೇಂಕ್, ಲಿಮಿಟೆಡ್, L. No. 842. ಬೈಂದೂರು, 15—2—63. (Sd.) ಕಾರ್ಯದರ್ಶಿ.

## ಭಾರತದ ಏಳಿಗೆಯಲ್ಲಿ

# ವಿದ್ಯಾರ್ಥಿಗಳ ಗೌರ ಹೊಣೆ

ನಮ್ಮ ಭಾರತವು ಸುಖಸಮೃದ್ಧಿಯ ತವರುಮನೆಯೆಂದೆನಿಸಬೇಕಾದರೆ ಸಭ್ಯತನದ ಆದರ್ಶ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬೇಕೇಬೇಕು.

ಯಾವದೇ ಒಂದು ನಾಡು ಬಲವಾದ ತಳಹದಿಯ ಮೇಲೆ ನಿಲ್ಲುವುದು ಅಲ್ಲಿಯ ವಿದ್ಯಾರ್ಥಿಗಳನ್ನವಲಂಬಿಸಿರುತ್ತದೆ. ಆದುದರಿಂದ ನಮ್ಮ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ, ಒಳ್ಳೆಯ ಸಂಸ್ಕಾರ ದೊರಕಿಸುವದೇ ಪಾಲಕರ ಕರ್ತವ್ಯ, ಪಾಲಕರು ಹಾಕಿಕೊಟ್ಟ ಮಾರ್ಗವೇ ಹೂವು ಚೆಲ್ಲಿದ ಹಾದಿಯೆಂದು ನಡೆದು ತೋರುವದು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಕರ್ತವ್ಯವಾಗಿದೆ

ನಮ್ಮ ಏಳಿಗೆಯಾಗಬೇಕಾದರೆ ಶಿಕ್ಷಣವೇ ಮುಖ್ಯವಾದ ಮೆಟ್ಟಲು. ವಿದ್ಯಾರ್ಜನೆಯು ವಿದ್ಯಾರ್ಥಿಯಾಗಿದ್ದಾಗಲೇ ಸಾಧ್ಯವಾಗುತ್ತದೆ. ನಮ್ಮ ಜೀವಮಾನದಲ್ಲಿ ವಿದ್ಯಾರ್ಥಿಜೀವನವು ಶ್ರೇಷ್ಠವಾದುದೆಂದೂ, (ಬಂಗಾರದ ಕಾಲ) ಮಹತ್ವಪೂರ್ಣವಾದುದೆಂದೂ ಬಲ್ಲವರು ಹೇಳಿದ್ದಾರೆ. ಇಂದಿನ ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಶಿಕ್ಷಣಮಟ್ಟವು ಕಾಲ ಕ್ರಮೇಣ ಮುಂದುವರಿಯುವದಕ್ಕಿಂತ ಹಿಂದೆ ಸರಿಯುತ್ತಲಿದೆ. ಗುರುಹಿರಿಯರಲ್ಲಿ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಭಕ್ತಿಭಾವವು ಕಡಿಮೆಯಾಗುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ

ನಮ್ಮ ಭಾರತವು ಸ್ವತಂತ್ರವಾದ ನಂತರ ಅದು ಮುಖ್ಯವಾಗಿ ವಿದ್ಯಾರ್ಜನೆಗೆ ಹೆಚ್ಚು ಪ್ರಾಧಾನ್ಯತೆಕೊಟ್ಟು, ಇಂದು ನಮ್ಮ ವಿದ್ಯಾರ್ಥಿಗಳಿಗೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ. ಕಾಲೇಜುಗಳು, ಹೈಸ್ಕೂಲುಗಳು, ಪ್ರಾಥಮಿಕ ಶಾಲೆಗಳು, ಉಚಿತ ಪ್ರಸಾದ ನಿಲಯಗಳು ದಿನಕ್ರಮೇಣ ಹೆಚ್ಚುತ್ತ ನಡೆದಿವೆ.

ಇಷ್ಟಾದರೂ ಕೂಡಾ ಅವುಗಳನ್ನು ಉಪಯೋಗ ಕಡಿಮೆ ಮಾಡಿಕೊಳ್ಳುವವರು ತೀರ ಕಡಿಮೆ ಸಂಖ್ಯೆಯಲ್ಲಿ ದೊರಕುವರು.

ಇದೇ ನಮ್ಮ ಭಾರತದಲ್ಲಿ ಹಿಂದಕ್ಕೆ ಶಿಕ್ಷಣ ಪಡೆಯುವದು ಎಷ್ಟೊಂದು ತೊಂದರೆಯಾಗುತ್ತಿತ್ತೆಂದು ಮರೆಯುವಂತಿಲ್ಲ ಶಾಲೆ ಕಲಿಯುತ್ತೇವೆಂದರೆ ಈಗಿನಂತೆ ಅನುಕೂಲತೆಗಳಿರುತ್ತಿದ್ದಿಲ್ಲ. ಕಲಿಸಲು ವಿದ್ವಾಂಸರೂ ಕಡಿಮೆ ಸಂಖ್ಯೆಯಲ್ಲಿದ್ದರು.

ಒಂದು ವೇಳೆ ಅವರು ದೊರಕಿದರೂ ಕೂಡ ಕಲಿಯ ಬಂದವರನ್ನೆಲ್ಲ, ನ್ಯಾಯಾಗಿ ವಿದ್ಯಾದಾನ ಮಾಡುತ್ತಿದ್ದರು. ಇಷ್ಟಾದರೂ ಕೂಡ ಕಾಡಿನಲ್ಲಿ ಪರ್ಣಕುಟಿಯಲ್ಲಿದ್ದು, ಗುರುವಿನಿಂದ ವಿದ್ಯೆಯನ್ನು ಸಂಪಾದಿಸಬೇಕಾಗುತ್ತಿತ್ತು. ಅಂತಹ ಶಿಕ್ಷೆಯನ್ನು ಅನುಭವಿಸಿ ಪಂಡಿತರಾದವರ ಹೆಸರು ಇಂದಿಗೂ ಕಾಲಸಮುದ್ರದಲ್ಲಿ ಮುಳುಗಿ ಹೋಗಿಲ್ಲ. ಅವರಿಂದ ರಚಿತವಾದ ಗ್ರಂಥಗಳು ಇಂದಿಗೂ ಜನರ ಪ್ರೀತಿಗೆ ಪಾತ್ರವಾಗಿ ಪೂಜೆಗೊಳ್ಳುತ್ತಿವೆ. ಇಷ್ಟು ತೊಂದರೆಗೀಡಾಗುವಂಥ ಪರಿಸ್ಥಿತಿ ನಮ್ಮ ವಿದ್ಯಾರ್ಥಿಗಳಿಗೆ ಬಂದಿಲ್ಲ ಇಷ್ಟಾದರೂ ಅವರ ಶಿಕ್ಷಣ ಮಟ್ಟ ಏರದಿದ್ದುದನ್ನು ಕಂಡು ವಿಷಾದವೆನಿಸುತ್ತದೆ.

ಇಂದಿನ ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಿದ್ಯೆಗಿಂತ ವಿಲಾಸವು ಪ್ರಿಯವೆಂದು ಅವರ ಹಾವಭಾವವನ್ನು ನೋಡಿದರೆ ತಿಳಿಯುತ್ತದೆ. ಈ ರೀತಿಯಲ್ಲಿ ಅವರು ಹೆಜ್ಜೆ ಇಡುವದರಿಂದ ಅವರ ಅನಿಸಿಕೆ ಏನು? ಎಂಬುದು ಸ್ಪಷ್ಟಪಡಿಸುತ್ತದೆ.

ಸಿನೇಮಾ—ನಾಟಕ ನೋಡುವದು, ಧೂಮ್ರಪಾನ ಮಾಡುವದು, ನಟ ನಟಿಯರಂತೆ ಉಡುಪು ತೊಡುವದು, ದೇವ ಆನಂದ್—ರಾಜ್ ಕಪೂರರಂತೆ ಕ್ರಾಪ್ ಬೀಳಲೆಂದು ಕೂದಲು ಕತ್ತರಿಸುವದು, ರೇಡಿಯೋ ಸಿಲೋನಿನಿಂದ ಪ್ರಸಾರವಾಗುವ ಸಿನೇಮಾ ಪದ್ಯಗಳನ್ನು ಬೀದಿಗುಂಟ ಆಲಿಸುತ್ತ ತರುಣಿಯರನ್ನು ಹಿಂಬಾಲಿಸುವದು, ಪುಸ್ತಕಗಳ ಮೇಲೆ ತಾರಾಮಣಿಯರ ಫೋಟೊ ಕವ್ಹರ ಹಾಕುವದು ಇಂದಿನ ವಿದ್ಯಾರ್ಥಿಗಳ ಲಕ್ಷಣವಾಗಿದೆ.

ಹೀಗೆಂದ ಮಾತ್ರಕ್ಕೆ ವಿದ್ಯಾರ್ಥಿಗಳು ನಾಟಕ ಸಿನೇಮಾ ನೋಡಬಾರದು, ರೇಡಿಯೋ ಆಲಿಸಬಾರದು ಎಂದಂತಲ್ಲ. ಬಂದ ಬೇಸರ ಕಳೆದುಕೊಳ್ಳಲು ಮನರಂಜನೆ ಅವಶ್ಯ. ಆದರೆ ಅದು ಅತಿಯಾಗಿರದೆ ಮಿತಿಯಾಗಿರಬೇಕು.

ಇಂಡಿಯಾದಲ್ಲಿಯ ರೇಡಿಯೋಗಳು ಬಿತ್ತರಿಸುವ ಮಹತ್ವಪೂರ್ಣವಾದ ಭಾಷಣಗಳನ್ನು, ಐತಿಹಾಸಿಕ ವಿಷಯಗಳನ್ನು ಬಿಡುವಿನ ವೇಳೆಯಲ್ಲಿ ಕೇಳಿದರೆ ಮನರಂಜನೆ ದೊರೆಯುವದಲ್ಲದೆ, ಜೊತೆಗೆ ಜ್ಞಾನಾರ್ಜನೆಯೂ ಬೆಳೆದು ಬರುವದೆಂಬುದನ್ನು ಮರೆಯಬಾರದು.

ತಂದೆ ತಾಯಿಗಳು ಹಗಲಿರುಳು ದುಡಿದು, ಕಂಗಾಲಾಗಿ ಒಂದೊಪ್ಪತ್ತು, ಎರಡೊಪ್ಪತ್ತು, ಉಪವಾಸವಿದ್ದು ತಮ್ಮ ಮಕ್ಕಳು ಜಾಣರಾಗಲೆಂದು, ಕೊಟ್ಟು ಕಳುಹಿದ ದುಡ್ಡಿನ ಮೇಲೆ ಲಾಗ ಹಾಕುತ್ತ ಮುನ್ನಡೆದು, ವಿದ್ಯಾರ್ಥಿ ಜೀವನವನ್ನು ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುತ್ತಾರೆ. ಇದು ಅವರಿಗಷ್ಟೇ ಕೇಡಲ್ಲ ಇಡಿ ದೇಶದ ಅಭಿವೃದ್ಧಿಗೆ ಕುಂದು ಎಂದು ಹೇಳಬಹುದು.

ಮಾನವ ಸಂಪತ್ತಿಯೇ ದೇಶದ ಸಮಸ್ತ ಸಂಪತ್ತು. ಮಾನವನ ಉನ್ನತಿಯೇ ಆ ದೇಶದ ಉನ್ನತಿ. ಇದನ್ನರಿತು ನಮ್ಮ ವಿದ್ಯಾರ್ಥಿ—ವಿದ್ಯಾರ್ಥಿನಿಯರು ಅಚ್ಚುಕಟ್ಟಾದ ವಿದ್ಯಾಭ್ಯಾಸ, ಒಳ್ಳೆಯ ಸಂಸ್ಕಾರ ದೊರೆಯುವಂತೆ ಪ್ರಯತ್ನಿಸಬೇಕು.

ಸ್ತ್ರೀ ಎನ್ನುವದು ಪುರುಷನ ಅರ್ಧಾಂಗೀ ಎಂದು ಅಂದಿನಿಂದಿಂದಿನ ವರೆಗೂ ಸತ್ಯವಾಗಿದೆ. ವಿಶ್ವದಲ್ಲಿಯೇ ಭಾರತೀಯ ಮಹಿಳೆಗೆ ಮಾನವರ್ಯಾದೆ ಏಕೆ ಗೌರವ ಸ್ಥಾನವಿದೆ. ಆದಿ ಕಾಲದಿಂದಲೂ ಇದನ್ನು ನಮ್ಮ ಮಹಿಳೆಯರು ಕಾಪಾಡಿಕೊಂಡು ಬಂದಿದ್ದರಿಂದಲೇ ಇತಿಹಾಸ ಪ್ರಸಿದ್ಧವಿದೆ. ಇದನ್ನು ಮುಂದೆಂದಿಗೂ ಕಾಯ್ದುಕೊಂಡು ಹೋಗುವದು ನಮ್ಮ ಇಂದಿನ ವಿದ್ಯಾರ್ಥಿನಿಯರ ಮೇಲೆ ಗುರುತರವಾದ ಹೊಣೆ ಇದೆ.

ನಮ್ಮ ಇಂದಿನ ವಿದ್ಯಾರ್ಥಿನಿಗಳು, ಸುಂದ ಜಡೆಗೆ ತಾಕಲಾಡುವ ಗೊಂಡೆಯನ್ನು ಕಟ್ಟಿ, ನೋಡಿಗೆಂದು ಅರಿವ್ಯೆ ರವಕೆ (ಬ್ಲೋಜ) ತೊಟ್ಟು, ಅಂಗ ಕಾಣುವ ತೆಳ್ಳಗಿನ ಸೀರೆಯನ್ನುಟ್ಟು, ಹವಾಯಿ ಮೆಟ್ಟು ಮೆಟ್ಟಿ, ತುಟಿಗೆ ಬೆರಳುಗಳಿಗೆ ಕೆಂಪು ಬಣ್ಣ ಬಳೆದು, ಮೋರೆಗೆ ಪುಡಿ ಉಗ್ಗಿಕೊಂಡು, ಪುರುಷರ ಗಮನ ಸೆಳೆಯಲು, ಫ್ಯಾಶನ ಬೀರುತ್ತ, ಕಾಲ ಬದಲಾಗಿದೆ ಎಂದು ಹೇಳುತ್ತ, ಆಧುನಿಕ ಜಗತ್ತಿನೊಂದಿಗೆ ಹೆಜ್ಜೆ ಇಡುತ್ತ ಹೊರಡುವದು ಅವರಿಗೆ ಶ್ರೇಯಸ್ಕರವಲ್ಲ. ಇದೇ ರೀತಿಯನ್ನು ಅಳವಡಿಸಿಕೊಂಡು ಡಿಗ್ರಿ ಪಡೆದು ಹೊರಕ್ಕೆ ಬಂದಾಗ, 'ನನಗೆ ಮದುವೆ ಬೇಡ' ಎಂದು ಹೇಳಿ ಮನೆಯವರನ್ನೆಲ್ಲ ಗೋಳು ಹೊಯ್ದುಕೊಳ್ಳುವವರಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಹೆಣ್ಣು ತಾಯಿಯಾಗಿ, ಆದರ್ಶ ಗೃಹಿಣಿಯಾಗಿ ಬದುಕಬೇಕು. ಇದನ್ನು ಕಡೆಗಣಿಸಿ, ನಾನು ರಾಷ್ಟ್ರಹಿತ ಬಯಸುವೆನೆಂದೂ ಅದಕ್ಕಾಗಿ ದುಡಿಯುವೆನೆಂದೂ ಹೇಳಿದರೆ ಡಾಂಭಿಕವೆಂದು ತೋರುವದು. ಅಂತಹವರು ತಾಯ್ತನ ಕಡೆಗಣಿಸುತ್ತಾರೆಂದರೆ ಅವರಿಂದ ರಾಷ್ಟ್ರದ ಹಿತ ಸಾಧಿಸಲಾರದು. ಮಾನವ ಕುಲವೇ ದೇಶದ ಸಂಪತ್ತು ಎಂದಾಗ, ಅದನ್ನು ಅವರು 'ಮದುವೆ ಬೇಡ' ಎಂದು ಕುಗ್ಗಿಸುತ್ತಾರೆಂದರೆ ಅವರನ್ನೆಲ್ಲ ದೇಶ ರಕ್ಷಕರೆಂದು ಕರೆಯದೇ, ದೇಶ ಭಕ್ಷಕರೆಂದರೆ ತಪ್ಪಾಗಲಾರದು.

ದೇಶದ ಹಿತಕ್ಕಾಗಿ, ನಮ್ಮ ಭಾರತದ ಹಿಂದಿನ ಮಹಿಳೆಯರ ಸಂಸ್ಕೃತಿ ಚಿರಸ್ಮರಣೀಯವಾಗಿ ಬರುವಂತೆ ನಮ್ಮ ವಿದ್ಯಾರ್ಥಿನಿಯರು ಪರದೇಶದ ಸ್ತ್ರೀಯರಂತೆ ಅನುಕರಣೆ ಮಾಡುವದನ್ನು ಬಿಟ್ಟು, ಭಾರತದ ಹಿಂದಿನ ಮಹಿಳೆಯ ಚರಿತ್ರೆ ಓದಿ, ಅವರ ನಡೆ ನುಡಿಗಳನ್ನು ಅಳವಡಿಸಿಕೊಂಡು, ಜ್ಞಾನಾರ್ಜನೆ ಮಾಡಿಕೊಂಡು, ಸ್ತ್ರೀ-ಪುರುಷರು ಸರಿಸಮಾನತೆಯಿಂದ, ಸೋದರ-ಸೋದರಿ ಭಾವ ಬೆಳೆದುಬರುವಂತೆ ಬದುಕಿ, ಭಾರತವು ಸುಖಸಮೃದ್ಧಿಯ ತವರುಮನೆಯಾಗುವಂತೆ, ಒಮ್ಮನಸ್ಸಿನಿಂದ ಒಗ್ಗಟ್ಟಿನಿಂದ ಮುಂದೆ ಬರಬೇಕು. ಇಷ್ಟನ್ನು ಕಾರ್ಯಚರಣೆಯಲ್ಲಿ ತಂದರೆ ನಮ್ಮ ಭಾರತವು ಎಂದೆಂದಿಗೂ ಜಗತ್ತಿನಲ್ಲಿ ಆದರ್ಶವಾಗಿ ರತ್ನದ ಕಳಸವಾಗಿ ತೋರುವದರಲ್ಲಿ ಸಂದೇಹವಿಲ್ಲ.

ನಮ್ಮ ಭಾರತದಲ್ಲಿ ಎಲ್ಲರೂ ಪದವೀಧರರಾಗಬೇಕೆಂದೇನೂ ಇಲ್ಲ. ಆದರೆ ಎಲ್ಲ ಸ್ತ್ರೀ-ಪುರುಷರು ಪ್ರಾಮಾಣಿಕರಾಗಿ ನಿಷ್ಠೆಯಿಂದ ದುಡಿಯುವವರು, ಜೀವನ ಸಾಗಿಸುವವರು ಬೇಕಾಗುವದು ಅವಶ್ಯವಿದೆ.

ನಮ್ಮ ಭಾರತ ಹಿಂದೆ ಹೆಸರುವಾಸಿಯಾಗಿದ್ದಂತೆ ಮುಂದೆಂದಿಗೂ ಹೆಸರುವಾಸಿಯಾಗಿರಿಸಲು ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹೆಣಗಬೇಕು

ಒಣ ಜಂಭವನ್ನು, ಡಾಂಭಿಕ ಪ್ರವೃತ್ತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳದೇ ವಿದ್ಯಾರ್ಥಿ ಜೀವನವನ್ನು ಸರಿಯಾಗಿ ಅರಿತುಕೊಂಡು, ನಿಜಜ್ಞಾನವನ್ನು ಗಳಿಸಿ, ನಮ್ಮ ಭಾರತದ ಹಿತಕ್ಕಾಗಿ, ಪ್ರಗತಿಗಾಗಿ ಉನ್ನತಿಗಾಗಿ, ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹೆಣಗಬೇಕು.

—ಶ್ರೀ ಚಂದ್ರಶೇಖರ ಗ. ಡೂರಳಿ.

ಸಂ| 'ಅಂಕುಶ,' ಧಾರವಾಡ.


ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

**ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.**

**ಸಾಹಸ ಭೀಮ ವಿಜಯ (ಗದಾಯುದ್ಧ)** ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

**ಭಾರತದ ಗುರುಕುಲ** ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

**ಲತ್ತಪಗಡೆ** ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣಪರ್ವೋಕ್ತವಾದ ಕಿಮ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

**ಭರತೇಶ ದಿಗ್ವಿಜಯ** ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ. ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

**ವಾಲಿ ಸುಗ್ರೀವ (ಬಹುಮಾನಿತ)** ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

**ನವಭಾರತ ಪುಸ್ತಕ ಭಂಡಾರ, ಉಡುಪಿ.**



**ಶಾಲೆಗಳಿಗೆ ಬೇಕಾಗುವ**

ಯಾವತ್ತು ಫಾರ್ಮುಗಳೂ ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

## ಭಾರತೀಯ ಪತ್ರಿಕೆಗಳ ಇತಿಹಾಸ ಪರಿಚಯ

(೯ನೇ ಪುಟದಿಂದ)

ಪ್ರೆಸ್ ಆಯೋಗವನ್ನು ನೇಮಕಮಾಡಿತು. ಅದು ಮಾಡಿದ ವರದಿ ಪ್ರಕಾರ ಭಾರತದಲ್ಲಿ 330 ದೈನಿಕಗಳೂ 3203 ಇತರ ಪತ್ರಿಕೆಗಳೂ ಇದ್ದುವು. ಪ್ರಕಟವಾಗುತ್ತಿದ್ದ ಒಟ್ಟು ಪ್ರತಿಗಳು 2,525,000 ವಾಗಿತ್ತು.

1956ರಲ್ಲಿ ಪ್ರಾಂತ ಪುನರ್ ರಚನೆಯಾದ ಬಳಿಕ ಪ್ರೆಸ್ ರಿಜಿಸ್ಟ್ರಾರರು ಮಾಡಿದ ವರದಿ ಪ್ರಕಾರ ಆದರ ವರುಷ 2843 ಪತ್ರಿಕೆಗಳು ಪ್ರಕಟವಾಗುತ್ತಿದ್ದುವು. ದಿನ ಪತ್ರಿಕೆಗಳ ಒಟ್ಟು ಪ್ರಸಾರವು 31 . 5 ಲಕ್ಷಕ್ಕೆ ಮಿಕ್ಕಿದ್ದಿಲ್ಲ. ನಾಲ್ನೂರು ಮಿಲಿಯ ಮಂದಿಯಿರುವ ದೇಶದಲ್ಲಿ ಈ ಪ್ರಸಾರ ಅತ್ಯಂತ ಕಡಿಮೆಯೆಂಬುದರಲ್ಲಿ ಆಶ್ಚರ್ಯವಿಲ್ಲ. ಅಧಿಕ ಸಂಖ್ಯೆಯ ಪ್ರಸಾರ—ಪಾಕ್ಷಿಕಗಳಲ್ಲಾಗುದು ಒಂದು ವಿಶೇಷವೆಂದು ವರದಿ ತೋರಿಸಿತು. ಈ ವರ್ಗದ ಪತ್ರಿಕೆಗಳಲ್ಲಿ ಶೇಕಡಾ 846 ಹೆಚ್ಚಳವಾಗಿತ್ತು' ಪತ್ರಿಕೋದ್ಯಮದಲ್ಲಿ ಸಾರ್ವಜನಿಕ ಕ್ಷೇತ್ರದ ವಿಸ್ತರಣೆ ಒಂದು ಹೊಸ ಹೆಜ್ಜೆಯಾಗಿತ್ತು. ದೇಶದ ಒಟ್ಟು 2843 ಪತ್ರಿಕೆಗಳಲ್ಲಿ 297 ಪತ್ರಿಕೆಗಳನ್ನು ಸರಕಾರವೇ ಪ್ರಕಟ ಮಾಡುತ್ತಿತ್ತು ಇಂಗ್ಲಿಷಿನಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳ ಪ್ರಭಾವ ಇಳಿಮುಖವಾಗಿಲ್ಲ ಎಂಬುದನ್ನು ಈ ವರದಿ ಸ್ಪಷ್ಟಪಡಿಸಿತು ಇಂಗ್ಲಿಷಿನ ಅನಂತರ ಹಿಂದಿ ಪತ್ರಿಕೆಗಳು ಮುಖ್ಯ ಸ್ಥಾನವನ್ನು ಗಳಿಸುತ್ತವೆ.

1957ರ ಪ್ರೆಸ್ ರಿಜಿಸ್ಟ್ರಾರರ ವರದಿಯು ಪತ್ರಿಕೆಗಳ ಮಾಲಿಕತ್ವದ ವಿವರಗಳನ್ನೊದಗಿಸುವತ್ತ ಹೆಚ್ಚಿನ ಪತ್ರಿಕೆಗಳು, ಶೇಕಡಾ 42 ರಷ್ಟು ಪತ್ರಿಕೆಗಳು ವೈಯುಕ್ತಿಕ ಮಾಲ್ಹಿಕತ್ವಕ್ಕೊಳಗಾಗಿವೆ ಎಂಬುದನ್ನು ತಿಳಿಸುತ್ತದೆ. ಶೇಕಡಾ 21ರಷ್ಟು ಪತ್ರಿಕೆಗಳು ಧಾರ್ಮಿಕ, ಸಹಕಾರ ಸಂಸ್ಥೆಗಳ ಮಾಲ್ಹಿಕತ್ವಕ್ಕೊಳಗಾದುವು. ಸುಮಾರು ಶೇಕಡಾ 10 ರಷ್ಟು ಪತ್ರಿಕೆಗಳು ಜ್ಯಾಂಟ್ ಸ್ಟಾಕ್ ಕಂಪೆನಿಗಳಿಗೂ, ಪಾಲುಗಾರ ಸಂಸ್ಥೆಗಳಿಗೂ ಸೇರಿದ್ದುವು. ಉಳಿದುವು ಶೈಕ್ಷಣಿಕ ಸಂಸ್ಥೆಗಳಿಂದ ಹೊರಡಿಸಲ್ಪಡುತ್ತಿದ್ದುವು. ಶೇಕಡಾ 5. 5ರಷ್ಟು ಪತ್ರಿಕೆಗಳು ಸರಕಾರದಿಂದ ಪ್ರಕಟಸಲ್ಪಡುತ್ತಿದ್ದುವು. 1960ರಲ್ಲಿ ಪತ್ರಿಕೆಗಳ ಮಾಲ್ಹಿಕತ್ವದ ದೃಷ್ಟಿಯಿಂದ ಭಾರತೀಯ ಪತ್ರಿಕಗಳ ಪರಿಶೀಲನೆ ಮಾಡಿದಾಗ ದೇಶದಲ್ಲಿ ಹದಿನೇಳು ಒಂದೇ ಮಾಲ್ಹಿಕತ್ವಕ್ಕೊಳಪಡುವ ಪತ್ರಿಕೆಗಳಿದ್ದುವು. (chain paper) ಆದು 103 ಪತ್ರಿಕೆಗಳನ್ನು ನಿಯಂತ್ರಿಸಿತ್ತು, 1956ರಲ್ಲಿ ಈ ವರ್ಗದ ಪತ್ರಿಕೆಗಳು 9 ಆಗಿದ್ದುವು. ಅವುಗಳು ನಿಯಂತ್ರಿಸುತಿದ್ದ ಪತ್ರಿಕೆಗಳ ಸಂಖ್ಯೆಯು 62 ಆಗಿತ್ತು. ಕಳೆದ ಐದು ವರ್ಷಗಳಲ್ಲಿ ಈ ಕರಪಣಿಗಳ ಸಂಖ್ಯೆ ಇಮ್ಮಡಿಯಾಗಿದೆ. ಅವುಗಳು ನಿಯಂತ್ರಿಸುವ ಪತ್ರಿಕೆಗಳಲ್ಲಿ ಶೇಕಡಾ 66ರಷ್ಟು ಹೆಚ್ಚಳವಾಗಿದೆ. 1960ರಲ್ಲಿ ಈ ವರ್ಗದ ಮೂರು ಪತ್ರಿಕೆಗಳು—ಇಂಡಿಯನ್ ಎಕ್ಸ್‌ಪ್ರೆಸ್ (ಒಟ್ಟು ಪ್ರಸಾರ 15 78 ಲಕ್ಷ)ಟೈಮ್ಸ್ ಒಫ್ ಇಂಡಿಯಾ (ಒಟ್ಟು ಪ್ರಸಾರ 5 · 9 ಲಕ್ಷ) ಮತ್ತು ಹಿಂದುಸ್ಥಾನ್ ಟೈಮ್ಸ್ (ಒಟ್ಟು ಪ್ರಸಾರ 2·3 ಲಕ್ಷ)ಗಳಾಗಿವೆ. ಇವುಗಳಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ 20 ಪತ್ರಿಕೆಗಳನ್ನೂ ಟೈಮ್ಸ್ ಒಫ್ ಇಂಡಿಯಾ 11 ಪತ್ರಿಕೆಗಳನ್ನೂ ಹಿಂದುಸ್ಥಾನ್ ಟೈಮ್ಸ್ 12 ಪತ್ರಿಕೆಗಳನ್ನೂ ಹೊರಡಿಸುತ್ತವೆ. 1960 ರಲ್ಲಿ ಎಲ್ಲಾ ಆಂಗ್ಲ ದೈನಿಕಗಳ ಒಟ್ಟು ಪ್ರಸಾರ 11ವರೆ ಲಕ್ಷಗಳಷ್ಟಾಗಿತ್ತು. ಹಿಂದಿ ಪತ್ರಿಕೆಗಳ ಪ್ರಸಾರ 7 · 45 ಲಕ್ಷಗಳಷ್ಟಾಗಿತ್ತು. ಈ ಮೂರು ಪತ್ರಿಕೆಗಳು ಭಾರತದ ಮೂರು ಮುಖ್ಯ ಕೈಗಾರಿಕಾ ಮನೆತನಗಳಿಗೆ — ಬಿರ್ಲಾ-ದಾಲ್ಮಿಯಾ-ಜೈನ್ ಮತ್ತು ಗೋಯೆಂಕಾ ಸೇರಿದ್ದುವು. ಕಮ್ಯೂನಿಸ್ಟ್ ಪಕ್ಷವು 24 ವಿವಿಧ ಪತ್ರಿಕೆಗಳನ್ನು ನಡೆಸುತ್ತದೆ.

ಇತ್ತೀಚಿಗಿನ ಪ್ರೆಸ್ ರಿಜಿಸ್ಟ್ರಾರರ ವರದಿಯಂತೆ (1961) ಭಾರತದಲ್ಲಿ 8305 ಪತ್ರಿಕೆಗಳುಗಳಿರುತ್ತವೆ. ಅವುಗಳ ಒಟ್ಟು ಪ್ರಸಾರವು 187,89 ಲಕ್ಷಗಳಷ್ಟಾಗಿದೆ. ಭಾರತದ ಜನಸಂಖ್ಯೆಯಲ್ಲಿ ಕೇವಲ ಶೇಕಡಾ 20ರಷ್ಟು ಮಂದಿ ಪತ್ರಿಕೆಗಳ ಓದುಗರಾಗಿರುತ್ತಾರೆ. ಪ್ರತಿದಿನ 2·3 ಲಕ್ಷ ಪತ್ರಿಕೆಗಳು ಮಾರಾಟವಾಗುತ್ತವೆ (ಬ್ರಿಟನ್ನಿನಲ್ಲಿ ದಿನವೊಂದಕ್ಕೆ 65 ಲಕ್ಷ ಪತ್ರಿಕೆಗಳು ಮಾರಾಟವಾಗುತ್ತವೆ) ಭಾರತದಲ್ಲಿ 1000 ಮಂದಿಯಲ್ಲಿ 13ಮಂದಿಪತ್ರಿಕೆಗಳನ್ನೋದುತ್ತಾರೆ ಭಾರತದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳ ವೈವಿಧ್ಯತೆಯನ್ನು ಪರಿಶೀಲಿಸಿದರೆ ಹೆಚ್ಚಿನ ಪತ್ರಿಕೆಗಳು ಸ್ವಾಭಾವಿಕವಾಗಿ ವಾರ್ತೆಗಳಿಗೆ ಮಹತ್ವ ಕೊಡುವ ದೈನಿಕಗಳೂ ಸಾಪ್ತಾಹಿಕಗಳೂ ಮಾಸಿಕಗಳೂ ಆಗಿರುತ್ತವೆ. ಇತ್ತೀಚಿಗಿನ ಒಂದು ವೈಶಿಷ್ಟ್ಯ ಮಕ್ಕಳ ಪತ್ರಿಕೆಗಳಾಗಿರುತ್ತವೆ. 30,000ಕ್ಕಿಂತಲೂ ಹೆಚ್ಚಿನ ಪ್ರಸಾರವುಳ್ಳ ಆರು ಮಕ್ಕಳ ಪತ್ರಿಕೆಗಳು ಇಂದು ಪ್ರಕಟವಾಗುತ್ತಿವೆ. ಸಾಮಾಜಿಕ ವಿಚಾರಗಳಿಗೆನೇ ಸಂಬಂಧಿಸಿದ ಪತ್ರಿಕೆಗಳು 250 ಇರುತ್ತವೆ. ಅವುಗಳಲ್ಲಿ ಹೆಚ್ಚಿನವು ಸರಕಾರದ ವಿವಿಧ ಇಲಾಖೆಗಳ ಪತ್ರಿಕೆಗಳಾಗಿರುತ್ತವೆ ಸಿನೆಮಾಕ್ಕೆ ಸಂಬಂಧಿಸಿದ 207 ಪತ್ರಿಕೆಗಳಿರುತ್ತವೆ. ಧಾರ್ಮಿಕ ವಿಚಾರವೇ ಪ್ರಧಾನವಾಗಿರುವ 90 ಪತ್ರಿಕೆಗಳು ಇವೆ. ಸ್ತ್ರೀಯರ ವಿಚಾರಗಳಿಗೆ ಮೀಸಲಾಗಿಟ್ಟ ಪತ್ರಿಕೆಗಳು 46 ಆಗಿರುತ್ತವೆ. ಆರೋಗ್ಯ ಹಾಗೂ ಔಷಧಕ್ಕೆ ಸಂಬಂಧಿಸಿದ ಪತ್ರಿಕೆಗಳು 210. ಕೇಂದ್ರ ಸರಕಾರವು 196 ಪತ್ರಿಕೆಗಳನ್ನೂ ಪ್ರಾಂತೀಯ ಸರಕಾರಗಳು 186 ಪತ್ರಿಕೆಗಳನ್ನೂ ಪ್ರಕಟಿಸುತ್ತವೆ, ಪತ್ರಿಕೆಗಳು ಪ್ರಜೆಗಳ ವಿಚಾರದ ಸಾಧನಗಳಾಗಿ, ಸಂಪರ್ಕ ಹಾಗೂ ಜ್ಞಾನ ಪ್ರಸಾರದ ವಾಹಕಗಳಾಗಿ ಪ್ರಧಾನ ಪಾತ್ರವನ್ನು ವಹಿಸಿವೆ ಅವುಗಳು ನಮ್ಮ ಪ್ರಜಾಪ್ರಭುತ್ವದಲ್ಲಿ ತೀವ್ರ ಪ್ರಗತಿಯನ್ನು ಬೇಗನೆ ಪಡೆಯಲೆಂದು ಬಯಸುವ ಅಂತಹ ಸುದಿನ ಬೇಗನೆ ಬರಲೆಂದು ಹಾರೈಸುವ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**(ENGLISH MADE EASY)**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

**ಮನೆ ಮದ್ದು**

**(HOME REMEDIES)**

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್** ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**LETTER WRITING MADE EASY**

**ಸುಲಭದಲ್ಲಿ ಪತ್ರಲೇಖನ**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಜೆಟ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

## ವೀರ ಭಾರತಿ

ವೀರಳಾಗಿ
ಇಹಳು ನಮ್ಮ
ಜನ್ಮದಾತೆ ಭಾರತೀ ೧

ವೀರಪುತ್ರರನ್ನು
ಪಡೆದು; ವೀರಂತೆ
ಮೆರೆಯುತಿಹಳು ಭಾರತೀ ೨

ಸಮರ ಮಾತ ಬಿಟ್ಟು
ನಿತ್ಯ ಶಾಂತಿಯನ್ನು
ಬಯಸುತಿಹಳು ಭಾರತೀ ೩

ಚೈನದವರ
ವಂಚನೇಗೆ
ಕೆರಳಿಹಳು ಭಾರತೀ ೪

ಚೀನಿಯರನೋಡಿಸಲು ಅಭಯ
ಹಸ್ತನೀಡುತಿಹಳು ಭಾರತೀ ೫

ಕೆಂಪು ಚೈನಿಯರು
ಬಂಲಿ; ಜಯವು
ನಮಗೆಎನುತಲಿಹಳು ಭಾರತೀ ೬

ವೀರಂತೆ ಕಾದಿ
ನೀವು; ವೀರಸ್ವರ್ಗ
ಪಡೆಯಿರೆನುತಲಿಹಳು ಭಾರತೀ ೭

ನನ್ನ ಪುತ್ರರನ್ನ
ಪರರ ಕೈಗೆ
ಬಿಡೆನು ಎನುತಲಿಹಳು
ಭಾರತೀ ೮

ಸತ್ಯ-ಧರ್ಮ
ಬಿಟ್ಟು ಜಯವು
ದೊರಗದೆನುತಲಿಹಳು ಭಾರತೀ ೯

—"ವಾಣಿ ಶರಣ" ಯೋಕಡ್ಕ.

**ಚಂದಾಹಣ ಬಾಕಿ ಇರುವವರು ದಯಮಾಡಿ ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ವಿನಂತಿಸುತ್ತೇವೆ.**

**ವರ್ಗ—ಊಳಿಗ**
ಮೊದಲಾದ ಯಾವತ್ತೂ ತರದ
**ಎಕೌಂಟ್ ಪುಸ್ತಕಗಳು,**
**ಶಾಲಾ ರಿಜಿಸ್ಟ್ರಗಳು,**
**ಫಾರ್ಮುಗಳು**
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

## ರಾಣೀಕಾಲ ಹೊರಟೇ ಹೋಯ್ತು

(೨ನೇ ಪುಟದಿಂದ)

"ಬಂದೇ ಬರುತ್ತೆ. ಬಾರ್ದೆ ಎಲ್ಲಿ ಹೋಗುತ್ತೆ?"

"ಅಂದ್ರೆ, ಈ ಆಶೆಯನ್ನ ಇಟ್ಕೊಂಡು ಈಗ ಉಪವಾಸ ಬಿದ್ದಿರ್ಬೇಕೂಂತ ನೀವನ್ನೋದು ತಾನೆ? ಒಳ್ಳೆ ಸಲಹೆ."

"ಚಿನ್ನಿ, ಜೀವನದಲ್ಲಿ ಕಷ್ಟ—ಸುಖ, ಲಾಭ—ನಷ್ಟ ಎಲ್ಲ ಹಗಲಿರುಳು. ನೋಡು ಹಿಂದಿನ ವರ್ಷ ನಮ್ಗೇ ಏನಾಯ್ತು? ಮಕ್ಳೆಲ್ಲಾ ಬಾಯಿಲೀ ಕಷಾರೆ ಬಿದ್ದಿದ್ವು."

"ಅಯ್ಯಯ್ಯೋ, ಅದನ್ನ ಜ್ಞಾಪಿಸ್ಬೇಡಿ ನಿಮ್ಮ ದಮ್ಮಯ್ಯ."

"ನೋಡು, ಅದನ್ನು ಸೂಚಿಸಿದ್ದೆ ತಡ ನಿನಗೆ ಓಕರಿಕೆ ಬರುತ್ತೆ. ಆವಾಗ ಬಾವ್ಗೆ ಹಾರ್‍ತೀನಿಂತ ಓಡ್ತಿದ್ದೆ...."

"ಸಾಕು, ಅದೆಲ್ಲಾ ಬಿಡೀಂದ್ರೆ...."

"ಒಂದು ವೇಳೆ ನೀನು ಹಾರಿಯೇ ಬಿಡ್ತಿದ್ರೆ ಇಂದಿನ ಸುಖ ಅನುಭವಿಸುವುದಕ್ಕಿತ್ತೆ?"

"ಅದು ಸರಿ. ಅಂದ್ರೆ...."

"ಅಂದ್ರೆ ಏನಿಲ್ಲ. ಪ್ರಪಂಚ ನಿಂತಿರೋದು, ಭೂತಕಾಲದ ಸುಖದುಃಖಗಳ ಮೇಲಲ್ಲ; ಭವಿಷ್ಯತ್ತಿನ ಭವ್ಯತೆಯ ಆಧಾರದಿಂದ."

"ಅದಕ್ಕೇ ಇರ್‍ಬೇಕು ಜ್ಯೋತಿಷ್ಯ ಭವಿಷ್ಯ ನುಡಿವಾಗ ಒಳ್ಳೆದನ್ನೇ ಅಂತಾರೆ."

"ಸರಿ ಸರಿ. ಈಗಾದ್ರೂ ಸಮಾಧಾನವಾಯ್ತೆ? ಕಾನೂನು ಮಾಡಿದ ಸರಕಾರ, ಅದರ ಸಮಸ್ಯೆಯನ್ನು ಅರಿತಿರುತ್ತದೆ. ಅವುಗಳ ಪರಿಹಾರವನ್ನೂ ಯೋಜಿಸಿರುತ್ತದೆ. ಇನ್ನೂ ಎಲ್ಲೋ ಒಂದೆರಡು ಸಂದರ್ಭಗಳಲ್ಲಿ ಅದರ ಊಹನೆ ತಪ್ಪಾದ್ರೆ ಅದಕ್ಕೇನು ಮಾಡೋಕಾಗುತ್ತೆ."

"ಅದು ಸರೀನ್ನಿ. ಆನೆಯಾದ್ರೇನು? ತಿಳೀದೇ ಕಾಲಿಟ್ರೆ ಹೊಂಡಕ್ಕೆ ಬೀಳ್ತದೆ."

"ತಿಳದೇ ಅಲ್ಲ. ಮುಂದೆ ಕಾಲಿಡುವಾಗ ಆನೆಯಿರ್‍ಲಿ, ಆಡಾಯಿರ್‍ಲಿ ಬೀಳೋ ಭಯಸುವುದಿಲ್ಲ. ಆದ್ರೂ ಆಪ್ಪಿತಪ್ಪಿ ಮುಗ್ಗರಿಸಿದ್ರೂ ಮತ್ತೆ ಏಳುತ್ತೇ. ಇದ್ರಿಂದ ಹೆಚ್ಚು ಚಿಂತೆ ಮಾಡ್ಬೇಡ. ನಿನ್ನ ನೋವಿನ ಮಕ್ಳನ್ನ ಕರೆದು ನಾಲ್ಕು ದಿನ ಊಟ ಹಾಕು. ಏನೋ ಭಗವಂತ ನಮ್ಗೆ ಕೊಟ್ಟಿದ್ದಾನೆ, ಅವ ಕೊಟ್ಟಿರೋವಾಗ ನಾಲ್ಕು ಜನರ ಹೊಟ್ಟೆ ತಣ್ಣೆ ಬಿಡೋಣ."

"ಅದು ಖರೆ. ನಾಳೆ ಏನಾಗುತ್ತೋ ಏನೋ ಯಾರಿಗ್ಗೊತ್ತು?"

"ಈಗಲಾದ್ರೂ ಸಮಾಧಾನವಾಯ್ತಲ್ಲ?"

"ಹ್ಞೂ...."

"ಹೀಗೆ ಕೂತುಕೋ, ಹೀಗೆ."

— ಗೋರಾ

## ವಕ್ರದೃಷ್ಟಿಗೆ ಬಿದ್ದ
# ಖಾಸಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರ

ಪ್ರಾಥಮಿಕ ಶಿಕ್ಷಣವನ್ನು ಪ್ರತಿ ಮಗುವಿಗೆ ಕೊಡುವುದನ್ನು ರಾಜ್ಯ ಸರಕಾರದ ಕರ್ತವ್ಯವೆಂದು ನಮ್ಮ ಸಂವಿಧಾನ ಹೇಳುತ್ತದೆ. ಇದರಂತೆ ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ೬ರಿಂದ ೧೧ ವರ್ಷ ಪ್ರಾಯದ ಎಲ್ಲ ಮಕ್ಕಳಿಗೂ ಶಿಕ್ಷಣದ ಸೌಕರ್ಯವನ್ನು ರಾಜ್ಯ ಸರಕಾರವು ಮಾಡಿಕೊಡಬೇಕು; ಇದಕ್ಕೆ ಕರ್ನಾಟಕದ ಸರಕಾರವು ಅಪವಾದವಾಗಿ ನಿಲ್ಲಲಾರದು.

ಸರಕಾರವು ತನ್ನ ಕರ್ತವ್ಯವನ್ನು ಪೂರೈಸಲು ಕೆಲವೊಂದು ಕ್ರಮ ಕೈಗೊಳ್ಳುತ್ತಿದೆ. ಹಳ್ಳಿ ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆಯುವುದು ಇತ್ತಗಳಲ್ಲಿ ಅಗ್ರತಮವಾದುದು. ಇಂತಹ ಶಾಲೆಗಳಲ್ಲಿ ಲಭ್ಯ ಶಿಕ್ಷಣದ ಸ್ತರವೇನೇ ಇರಲಿ, ಸಾಕ್ಷರರಾಗುವ ಅವಕಾಶವು ಪ್ರತಿ ಹಳ್ಳಿಗಳಿಗೂ ಒದಗಿತು ಎಂಬುದು ಸ್ಫೂರ್ತಿಗೊಂಡು ಸಮಾಧಾನ.

ಶಾಲೆಗಳನ್ನು ತೆರೆದ ಮಾತ್ರಕ್ಕೆ ಸರಕಾರದ ಕರ್ತವ್ಯ ಮುಗಿದಂತಾಗಲಿಲ್ಲ. ಸರಕಾರಿ ಶಾಲೆಗಳ ಆವರ್ತ ಹಾಗೂ ಅನಾವರ್ತ ವೆಚ್ಚಗಳನ್ನು ಸಂಪೂರ್ಣವಾಗಿ ಸರಕಾರವೇ ನೋಡಿಕೊಳ್ಳಬೇಕು. ಇಲ್ಲವಾದರೆ, ಇವನ್ನು ಹೊರುವವರು ಯಾರು? ಅದಕ್ಕಾಗಿಯೂ ಸರಕಾರ ಕ್ರಮ ಕೈಗೊಂಡಿತ್ತು. ಇತ್ತೀಚೆಗೆ ಅದೇನೋ ಕಾರಣದಿಂದ ಚಿಲ್ಲರೆ ಖರ್ಚಿಗೆಂದು ಕೊಡಮಾಡುವ ಹಣವನ್ನು ತಡೆಹಿಡಿಯಲಾಗಿದೆಯಂತೆ. ಅಂದರೆ, ಖರ್ಚು ಮಾಡದೆ ಶಾಲೆ ನಡೆಯಬೇಕು ಎಂದಿದರ ಅರ್ಥವಿರಬಹುದು. ಇದು ಸಾಧ್ಯವೆ? ಅಥವಾ ಅಧ್ಯಾಪಕನೇ ತನ್ನ ವೇತನದಲ್ಲಿ ಸರಕಾರವು ನಡೆಸುವ ಶಾಲೆಗಾಗಿ ವೆಚ್ಚ ಮಾಡುವಷ್ಟು ದುರವಸ್ಥೆ ಬಂದಿತೆನ್ನಬೇಕೆ?

ಜಿಲ್ಲಾ ಬೋರ್ಡು (ಬರ್ಖಾಸ್ತುಗೊಂಡ), ಪಂಚಾಯತ ಬೋರ್ಡುಗಳು ನಡೆಸುವ ಶಾಲೆಗಳಿಗೆ ಬೇಕಾದ ವೆಚ್ಚವನ್ನು ಅವು ತಮ್ಮ ತೆರಿಗೆಯ ಆದಾಯದಿಂದ ತುಂಬಿಸಿಕೊಳ್ಳುವುದು ಸಾಧ್ಯ. ಆದರೆ, ಖಾಸಗಿ ಶಾಲೆಗಳಿಗೇನು ಗತಿ?

ನಮ್ಮ ಜಿಲ್ಲೆ ಮದ್ರಾಸು ರಾಜ್ಯದಲ್ಲಿರುವಾಗ, ಕೆಲವು ಪ್ರಾಥಮಿಕ ಶಾಲೆಗಳು ಮಕ್ಕಳಿಂದ ಸಂಬಳ ವಸೂಲುಮಾಡಿ ವೆಚ್ಚವನ್ನು ತೂಗಿಸುತ್ತಿದ್ದುವು. ಉಳಿದುವಕ್ಕೆ ಸರಕಾರವೇ ತನ್ನ ದರದಲ್ಲಿ (ಆ ಶಾಲೆಗೆ ಇಡಿಯ ವರ್ಷದಲ್ಲಿ ಅಧ್ಯಾಪಕ ವೇತನಕ್ಕೆಂದು ಸಹಾಯ ನೀಡಿದ ಮೊತ್ತದ ನೂರಕ್ಕೆ ಮಿಕ್ಕದಂತೆ) ಸಹಾಯ ಧನ ನೀಡುತ್ತಿತ್ತು. ಇವರಲ್ಲಿ ಶಾಲಾ ಕಟ್ಟಡ-ಸಲಕರಣೆಗಳ ಬಾಡಿಗೆ-ರಿಪೇರಿ-ನಿರ್ಮಾಣ, ಅಧ್ಯಾಪಕ ಪ್ರೊವಿಡೆಂಟ್ ಫಂಡ್-ಇತ್ಯಾದಿ ಸಕಲವನ್ನೂ ಶಾಲಾ ವ್ಯವಸ್ಥಾಪಕರು ನೋಡಿಕೊಳ್ಳಬೇಕಿತ್ತು. ಆದರೆ, ಕಳೆದ ಕೆಲವು ವರ್ಷಗಳಿಂದ ನಮ್ಮ ಸರಕಾರ ಖಾಸಗಿ ಶಿಕ್ಷಣ ವಿಭಾಗವನ್ನು ವಕ್ರದೃಷ್ಟಿಯಿಂದ ನೋಡುತ್ತಿರುವಂತಿದೆ. ಕೆಲವೊಂದು ವ್ಯವಸ್ಥಾಪಕರ ಲೋಪದೋಷಗಳಿಂದಾಗಿ ಖಾಸಗಿ ಕ್ಷೇತ್ರವನ್ನೇ ಹೊಡೆಯುವುದು ಮುಖಾಮುಖಿ ಧರ್ಮವಲ್ಲದೆ ಮತ್ತೇನು? ಖಾಸಗಿ ಶಾಲೆಗಳಿಗೆ ನೀಡುವ ಮೈನ್ ಟೆನೆನ್ಸ್ ಗ್ರ್ಯಾಂಟು ಮತ್ತು ಉಚಿತ ಶಿಕ್ಷಣದ ಧೋರಣೆಗನುಸಾರ ಕಂಪನ್ಸೇಶನ್ ಗ್ರ್ಯಾಂಟುಗಳನ್ನು ನೀಡುವಲ್ಲಿ ವಿನಾ ಮೋಸಮಾಡುತ್ತಿರುವುದು ಸರಕಾರದ ಖಾಸಗಿ ಶಿಕ್ಷಣದ ಅವನತಿಗೆ ಕಾರಣವಾಗಬಹುದು.

ಸರಕಾರವು ಮಾಡಬೇಕಾದ ಶಿಕ್ಷಣ ಪ್ರಸಾರದ ಕಾರ್ಯವನ್ನು ನಿಸ್ವಾರ್ಥದಿಂದ ನಿರ್ವಹಿಸುವ ಖಾಸಗಿ ಪ್ರಾಥಮಿಕ ಶಾಲೆಗಳನ್ನು ಸರ್ವರೀತಿಯಿಂದ ಪ್ರೋತ್ಸಾಹಿಸುವುದನ್ನು, ನ್ಯಾಯವಾದ ಸಹಾಯಧನ ನೀಡುವುದನ್ನು ಬಿಟ್ಟು ವ್ಯವಸ್ಥಾಪಕರನ್ನು ಗೋಳುಹೊಯ್ಯುವುದು ಕಲ್ಯಾಣ ರಾಷ್ಟ್ರದ ಧರ್ಮವೆಂದನಿಸಬಾರದು. ಸರಕಾರವು ತಾನು ಅವುಗಳಿಗೆ ನೀಡಬೇಕಾದ ಸಹಾಯಧನಕ್ಕಿಂತ ಕಡಿಮೆ ವೆಚ್ಚದಲ್ಲಿ ಅವನ್ನು ನಡೆಸಬಹುದು ಎಂದು ಬಗೆಯುವುದಾದರೆ, ಪ್ರಾಥಮಿಕ ಶಾಲೆಗಳೆಲ್ಲವನ್ನೂ ಒಂದೇ ಬಾರಿಗೆ ರಾಷ್ಟ್ರೀಕರಿಸಿ ಬಿಡುವುದೇ ಸರ್ವರ ದೃಷ್ಟಿಯಿಂದಲೂ ಕ್ಷೇಮ. ದಕ್ಷಿಣ ಕನ್ನಡದ ಇಂತಹ ಶಾಲಾ ವ್ಯವಸ್ಥಾಪಕರು ಕುಬೇರರಲ್ಲ. ಏನೋ ಶಿಕ್ಷಣ ಪ್ರಸಾರದಲ್ಲಿ ಆಸಕ್ತಿ ಹುಟ್ಟಿ ಆ ರಂಗಕ್ಕೆ ಇಳಿದರು; ಸರಕಾರವೂ ಉತ್ತೇಜನವನ್ನೂ ಸಹಾಯವನ್ನೂ ನೀಡಿತು; ಅವು ಬೆಳೆದುಬಂದುವು. ಇಲ್ಲವಾದರೆ, ಅವೆಂದೋ ಮಣ್ಣು ಸೇರುತ್ತಿದ್ದುವು.

ರಾಜ್ಯ ಸರಕಾರವು ಖಾಸಗಿ ಶಾಲೆಗಳನ್ನು ಮಲತಾಯಿ ಧೋರಣೆಯಿಂದ ನೋಡಬಾರದು. ಅವನ್ನು ಹಿಂದಿನಂತೆಯೇ ಬೆಳೆಸಿಕೊಂಡು ಬರಬೇಕು; ಅದಕ್ಕೆ ಒಪ್ಪುವದಿಲ್ಲವಾದರೆ ತಾನೇ ಅವನ್ನು ವಹಿಸಿಕೊಳ್ಳಬೇಕು. ಇದಕ್ಕೆ ತಪ್ಪಿದರೆ, ಪ್ರಾಥಮಿಕ ಶಾಲಾ ವ್ಯವಸ್ಥಾಪಕರು ತಾವು ನೆಟ್ಟ ಶಾಲಾ ವೃಕ್ಷವು ತಮ್ಮ ಕುತ್ತಿಗೆಗೆ ಹಾಕಿದ ಉರುಳೆಂದು ತಿಳಿದು, ಅವನ್ನು ಅನಿವಾರ್ಯವಾಗಿ ತಾವೇ ಮುಚ್ಚಿಬಿಡಬೇಕಾದ ದಿನ ಬರುವುದು ಖಂಡಿತ.

ಆಗ, ಖಡ್ಡಾಯ ಪ್ರಾಥಮಿಕ ಶಿಕ್ಷಣದ ಉದ್ದೇಶವನ್ನು ಸರಕಾರ ಪೂರೈಸಬೇಕಾದರೆ, ತಾನೇ ಹೊಸ ಶಾಲೆಗಳನ್ನು ತೆರೆಯಬೇಕಾಗುವುದು. ಅಥವಾ ಕಲ್ಯಾಣ ರಾಷ್ಟ್ರದ ಗುರಿಯನ್ನು ನಡುನೀರಿನಲ್ಲಿ ಕೈಬಿಟ್ಟು ಹಗುರ ಮಾಡಿಕೊಳ್ಳಬೇಕಾಗುವುದು.

ಇಂತಹ ಗಂಭೀರ ಪರಿಸ್ಥಿತಿ ತಲೆದೋರಿದರೆ, ತೆರಿಗೆದಾರ ಜನತೆಯೂ ಸುಮ್ಮನುಳಿಯುವುದು ಸಾಧ್ಯವಿಲ್ಲ. ಆದುದರಿಂದ ಪ್ರಾಥಮಿಕ ಶಿಕ್ಷಣಕ್ಷೇತ್ರದಲ್ಲಿ ಖಾಸಗಿ ಶಾಲೆಗಳನ್ನು ಹಿಂದಿನಂತೆಯೇ ಮುಂದಕ್ಕೂ ನಡೆಸಿಕೊಂಡು, ಬೆಳೆಸಿಕೊಂಡು ಬರುವುದು ನಮ್ಮ ಸರಕಾರದ ಆದ್ಯ ಕರ್ತವ್ಯವಿದೆ. ಪರಿಸ್ಥಿತಿಯ ಕೂಲಂಕಷ ಅಧ್ಯಯನ ಮಾಡಿ, ಸರಕಾರವು ಯೋಗ್ಯ ರೀತಿಯಲ್ಲಿ ಮುನ್ನಡೆಯಬೇಕು; ಅನ್ಯಾಯಕ್ಕೆಳೆಯಬಾರದು.

— ಗೋರಾ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.
— ಮಂಗಳೂರು— 3

• ಕುಮಾರಿ ಬಿಲ್ಲೆಗಳು •

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಅಯ ಪೇರಿಯ ಮಿಶ್ರಣ|
ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/.
ಉತ್ತಮ ರೂ. 9/-
P. Devee & Co. (N. J.) Calcutta—40

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ "ನವಯುಗ"ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

REGD. No. B. G. 176
LICENCE No. 31
Licensed to Post without Prepayment

# ಅವಿಭಾಜ್ಯ ಅಂಗ
# ನಂದನವನ ಕಾಶ್ಮೀರ

ವೇದಗಳ ಪ್ರಕಾರ ಪೃಥ್ವಿಯಲ್ಲಿ ಪ್ರಪ್ರಥಮ ಬಾರಿಗೆ 'ಅಪ್' ಅಥವಾ ನೀರು ಮಾತ್ರ ಇತ್ತು. ಅದಕ್ಕೆ ವೇದ-ಮಂತ್ರಗಳ ಕೆಲ ಶ್ಲೋಕಗಳು ಪ್ರಮಾಣವಾಗಿವೆ. ಅದರಲ್ಲಿ ಒಂದು ಶ್ಲೋಕದ ಸಾರಾಂಶ ಈ ರೀತಿ ಇದೆ. ಸತ್ಯದ ನಂತರ ಸಮುದ್ರದ ಸೃಷ್ಟಿಯಾಯಿತು ಅದರ ನಂತರ ವರ್ಷ, ಸೂರ್ಯ-ಚಂದ್ರರಾದಿಯಾಗಿ ಸೃಷ್ಟಿಕಾರ್ಯ ನಡೆಯಿತು ಈ ವಿಶ್ವವನ್ನು ನೀರಿನಿಂದ ಬೇರ್ಪಡಿಸುವದಕ್ಕಾಗಿ ಭಗವಂತನು ಅವತರಿಸಿರುವ ಕಥೆಯು ಪುರಾಣಗಳಲ್ಲಿವೆ

ಕಾಶ್ಮೀರದಲ್ಲಿ ಬಹಳ ದೂರದ ವರೆಗೂ ನೀರು ಆವರಿಸಿಕೊಂಡಿತು. ಶ್ರೀನಗರದಲ್ಲಿ ಎರಡು ಪರ್ವತಗಳಿವೆ ಒಂದು ಹರಿಪರ್ವತದೆ ಅಲ್ಲಿ ಮುಂಚೆ ರಾಜದುರ್ಗವಿತ್ತು ಒಂದೆಡೆ ಅಲ್ಲಿ ಪೂಜಾರಿಗಳು ಒಂದು ಮೂರ್ತಿಯನ್ನಿಟ್ಟಿರುವರು. ಆ ಸ್ಥಳವು ನೀರಿನಿಂದ ಮೊದ ಮೊದಲ ಬಾರಿಗೆ ಮೇಲಕ್ಕೆ ಬಂದಿರುವದೆಂಬುದಾಗಿ ಅವರು ನುಡಿಯುತ್ತಾರೆ. ಇನ್ನೊಂದು ಗಿರಿಯು ಶಂಕರ ಪರ್ವತವೆಂದು ಪ್ರಸಿದ್ಧಿ ಪಡೆದುಕೊಂಡಿದೆ. ಅದು ಹರಿಪರ್ವತದಿಂದ ಬಹಳ ಎತ್ತರವಾಗಿಯೂ ಇದೆ ಆ ಪರ್ವತವನ್ನು ಮುಸಲ್ಮಾನರು 'ತಖ್ತ್ ಸುಲೇಮಾನ'"(ಸುಲೇಮಾನ್ ಎಂದರೆ ಸಿಂಹಾಸನ) ಎಂದು ಕರೆಯುತ್ತಾರೆ ಅದು ಕೂಡಾ ಬಹಳ ಪ್ರಾಚೀನ ಪರ್ವತವಿದೆ ಅದರ ಅಕ್ಕಪಕ್ಕದ ಪ್ರದೇಶವೆಲ್ಲಾ ನೀರಿನಲ್ಲಿ ಮುಳುಗಿಕೊಂಡಿದ್ದಾಗಲೂ ಈ ಗಿರಿಯು ಅಲ್ಲೇ ಇತ್ತು. ಕಾಶ್ಮೀರವು 'ನಂದನ ವನ" ಎಂಬ ಹೆಸರಿನಿಂದ ಪ್ರಾಚೀನ ಕಾಲದಲ್ಲೂ ಪ್ರಖ್ಯಾತವಾಗಿತ್ತು. ಅಲ್ಲಿ ಅನೇಕ ಋಷಿಮುಂಗವರು ತಪಸ್ಸು ಮಾಡುತ್ತಿದ್ದರು. ಈಗ ಕೂಡಾ 'ಶ್ರೀ ಅಮರನಾಥ"ದಂತಹ ತೀರ್ಥ ಕ್ಷೇತ್ರಗಳು ಕಾಶ್ಮೀರದಲ್ಲಿವೆ. ಅಲ್ಲಿ ಅನೇಕ ಯಾತ್ರಿಕರು ಅದೆಂತಹ ಕಷ್ಟ ಕೋಟಲೆಗಳನ್ನು ಸಹಿಸಿಕೊಂಡು, ಕಾಲದ ಬದಲಾವಣೆಯ. ಒವಣೆಯನ್ನು ಲೆಕ್ಕಿಸದೆ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ. ತೀರ್ಥ ಕ್ಷೇತ್ರಗಳು ಹಾಗೂ ದೇವಸ್ಥಾನಗಳು ಕಾಶ್ಮೀರದಲ್ಲಿ ಬಹಳ ಇವೆ ಈಗ ಬಹಳಷ್ಟು ನಾಶಗೊಳಿಸಲ್ಪಟ್ಟಿವೆ

ಕಾಶ್ಮೀರವು ಅದರ ಪ್ರಾಕೃತಿಕ ಸೌಂದರ್ಯ ಹಾಗೂ ಫಲಭರಿತ ಭೂಮಿ, ಸ್ವಾಸ್ಥ್ಯವರ್ಧಕ ಹವಾಗುಣ, ಪುಷ್ಪ-ವನಸ್ಪತಿ-ಫಲಾದಿಗಳಿಗೆ ಪ್ರಖ್ಯಾತಿಯಾಗಿದೆ ಇಲ್ಲಿನ ಜನರ ಕರ-ಕೌಶಲ್ಯ ಹಾಗೂ ಕಲಾ-ಕುಶಲತೆಗಳು ಜಗಜ್ಜಾಹಿರವಿವೆ ಫಾರ್ಸಿ ಭಾಷೆಯಲ್ಲಿ ಒಂದು ಮಾತಿದೆ. ಅದೇನಂದರೆ, ರೆಕ್ಕೆ ಬಾಲಗರಿಗಳೂ ಹುಟ್ಟದಿರುವ ಕೋಳಿಮರಿಯು ಕಾಶ್ಮೀರದಲ್ಲಿ ಕೆಲ ದಿನಗಳಲ್ಲೇ ರೆಕ್ಕೆ ಪುಕ್ಕಗಳನ್ನು ಪಡೆಯುತ್ತದೆ

ಕಾಲಚಕ್ರವು ಕಾಶ್ಮೀರದಲ್ಲಿ ಬಹಳ ಬದಲಾವಣೆಯನ್ನುಂಟು ಮಾಡಿರುತ್ತದೆ; ಮುಸಲ್ಮಾನರ ಆಕ್ರಮಣವು ನಡೆದಿದೆ. ಅವರು ತಮ್ಮ ಸ್ವಭಾವ ಹಾಗೂ ಮತೀಯಃ ಆವೇಶದ ಕಾರಣದಿಂದ ಬಹಳ ನಷ್ಟ, ಕಷ್ಟ, ಭ್ರಷ್ಟಗಳನ್ನುಂಟುಮಾಡಿರುವರು. ಅವರ ಆಳ್ವಿಕೆಯ ಕಾಲದಲ್ಲಿ ಬ್ರಾಹ್ಮಣರನ್ನು ಬಿಟ್ಟು ಬಹುಶಃ ಬಹಳ ಮಂದಿಯನ್ನು ಮತಾಂತರ ಮಾಡಿರುವರು ಬ್ರಾಹ್ಮಣರಲ್ಲಿ ಕೂಡಾ ಕೆಲವರನ್ನು ಮತಾಂತರಗೊಳಿಸಿರುವರು. ಹಾಗಿದ್ದರೂ ಕೆಲವರು ತಮ್ಮ ಕುಟುಂಬ ಅಥವಾ ಗೋತ್ರದ ಹೆಸರನ್ನು ಇನ್ನೂ ಉಳಿಸಿಕೊಂಡಿರುವರು ಉದಾ: ಕಿಚಲೂ, ದರ, ಆಗಾ, ಪಂಡಿತ್ ಇತ್ಯಾದಿ. ಕೆಲವರು ಗೋತ್ರದ ಹೆಸರನ್ನು ಬಳಸಿಕೊಳ್ಳದೆ ನೇ ಮುಸಲ್ಮಾನ ಹೆಸರನ್ನೇ ಇಟ್ಟುಕೊಂಡಿರುವರು. ಉದಾ: ಮೌಲಾನಾ, ಮಹಮ್ಮದ್ ಇಕ್ಬಾಲ್, ಬಕ್ಷಿ ಗುಲಾಂ ಮಹಮ್ಮದ್, ಶೇಕ್ ಅಬ್ದುಲ್ ಇತ್ಯಾದಿ. ಕೆಲವರು ಕಾಶ್ಮೀರವನ್ನು ಬಿಟ್ಟು ಉತ್ತರ ಭಾರತದ ಅನೇಕ ಸ್ಥಳಗಳಿಗೆ ಹೋಗಿರುವರು. ಈಗ ಅಲ್ಲಿಯ ಜನಸಂಖ್ಯೆಯಲ್ಲಿ ಅಧಿಕಾಂಶ ಮಹಮ್ಮದೀಯರಿದ್ದಾರೆ.

ನಮ್ಮ ಈ ಪಾವನ ಮಾತೃ ಭೂಮಿ ಭವಿಷ್ಯ ಏನಿದೆ? ಅದು ದೇವರಿಗೇನೇ ಗೊತ್ತು. ಘಟನೆಗಳು, ವಿಶ್ವ ನಾಟ್ಯ ಶಾಲೆಯಲ್ಲಿ ಅದರ ಸಂಬಂಧದಿಂದ ಘಟಿಸಿರುವ ಇತರ ಘಟನೆಗಳು ಎಲ್ಲರಿಗೂ ಪರಿಚಿತ ಇವೆ. ನಮ್ಮ ಸರಕಾರವು ಕಾಶ್ಮೀರವನ್ನು ಭಾರತದಲ್ಲಿ ಸಂಪೂರ್ಣ ವಿಲೀನಗೊಳಿಸಲು ಕೋಟಿ ಕೋಟಿ ರೂಪಾಯಿಗಳನ್ನು ಹಾಗೂ ಸಹಸ್ರ ಸಂಖ್ಯೆಯ ಮಾನವರ ಪರಿಶ್ರಮವನ್ನುಪಯೋಗಿಸುತ್ತಿದೆ. ಅಲ್ಲಿ ಪಾಕಿಸ್ಥಾನಿಗಳ ಆಕ್ರಮಣಲಾಲಸೆಯ ನೋಟ ಕಾಶ್ಮೀರದ ಮೇಲೆ ಬಿದ್ದಿದೆ. ಕಾಶ್ಮೀರದ ಮೂರನೇ ಒಂದಂಶ ಪಾಕಿಸ್ಥಾನಿಗಳ ಕಪಿಮುಷ್ಟಿಯೊಳಗಿದೆ. ಉಳಿದಿರುವ ಮೂರನೇ ಎರಡಂಶವನ್ನು ಗಿಟ್ಟಿಸಿಕೊಳ್ಳುವದಕ್ಕಾಗಿ ಕುಟಿಲ ಕಾರಸ್ಥಾನಗಳನ್ನು ನಡೆಸಲಾಗುತ್ತಿದೆ ನಾವು ಹಿಂದೂಗಳು ಇತಿಹಾಸದಿಂದ ಏನನ್ನೂ ಕಲಿತುಕೊಂಡಿರುವದಿಲ್ಲ. ಪರಂಪರೆಗಳು ನಮ್ಮನ್ನು ನೋಡ ನೋಡುತ್ತ, ನಾವು ಹಿಂದೂಗಳು ಕ್ರಮಶಃ ಹೊರಗಟ್ಟಲ್ಪಡುತ್ತಿರುವದನ್ನು ಮತ್ತು ಶತಾಬ್ದಿಗಳ ಹಿಂದ ಹಿಂದೂ ಧರ್ಮ ಹಾಗೂ ಸಂಸ್ಕೃತಿಯ ಅನುಸಾರಕರಾಗಿದ್ದವರು ಈಗ ಬೇರೆಯವರ ಕೋಟೆಗೆ ಹೋಗುತ್ತಿರುವದಾಗಿ ಅನ್ಯರು ಭಾವಿಸಿಕೊಂಡಿದ್ದಾರೆ. ಇಂದಿನ ವರೆಗೂ ಭಾರತದ್ದೇ ಆಗಿದ್ದ ಅಂಗವನ್ನು ಛೇದಿಸಿ ನಮ್ಮಿಂದ ಕೃತಕವಾಗಿ ಬೇರ್ಪಡಿಸಲಾಗಿಯದೆ—ಮತ್ತು ಇನ್ನು ಮುಂದಕ್ಕೆ ಹೀಗೆ ನಮ್ಮ ದೇಶದ ಭಾಗಗಳು ಮೆಲ್ಲಮೆಲ್ಲನೆ ನಮ್ಮ ಕೈಬಿಟ್ಟುಬಿಡಲೂ ಬಹುದು ಋಷಿ ಸಂತ ನವೆಂದು ಕರೆಯಲ್ಪಡುತ್ತಿರುವವರು, ಸಭ್ಯತೆ ಹಾಗೂ ಭಾರತೀಯ ಸಂಸ್ಕೃತಿಯ ಮೇಲೆ ಗೌರವವಿಟ್ಟಿದ್ದ ಹಿಂದೂಗಳು, ಯಾರ ಮಹಾಪುರುಷರು ಚೀನಾ, ಜಪಾನು, ಥಾಯಿಲೇಂಡ್, ಕಾಂಬೋಡ, ಮಲಯಾ, ಜಾವಾ, ಬಲಿ ಮುಂತಾದ ದೇಶ ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಸ್ಪಷ್ಟ ಸುಪರಿಚಯ ಮಾಡಿಸಿಕೊಟ್ಟಿರುವರೋ ಆ ಹಿಂದೂಗಳಿಂದು ತಮ್ಮ ದೇಶದಲ್ಲೇ ಸ್ವಾವಲಂಬನೆ ಹಾಗೂ ಸ್ವಾಭಿಮಾನ ಶೂನ್ಯರಾಗಿ ನಿರುತ್ಸಾಹಿಗಳಾಗಿ ಕಾರ್ಯವಿಮುಖರಾಗಿರುವರು ಅಂತಹ ಸಮಯದಲ್ಲಿ ಕಾಶ್ಮೀರ ಹಾಗೂ ಅಲ್ಲಿಯ ತೀರ್ಥಕ್ಷೇತ್ರಗಳು ಎಲ್ಲಿಯ ವರೆಗೆ ಭಾರತೀಯ ವಾಗುಳಿಯುತ್ತವೆಂಬುದನ್ನು ಶಾಂತಿ ಹಾಗೂ ಧೈರ್ಯದಿಂದ ಯೋಚಿಸುವದು ಕಾಲೋಚಿತ ವಿಷಯವಿದೆ

ಪಾಕಿಸ್ತಾನ ನಿರ್ಮಾಣಕ್ಕೆ ಕಾರಣರಾಗಿದ್ದವರು ಇದೀಗ ತಮ್ಮ 'ಶಾಂತಿ ಮಂತ್ರ' ವನ್ನು ಮುಂದಿಡುತ್ತಿದ್ದಾರೆ ಚೈನಾದೊಂದಿಗೂ ಪಾಕಿಸ್ತಾನದೊಂದಿಗೂ ಒಂದೇ ಸಮಯದಲ್ಲಿ ನಮ್ಮಿಂದ ಹೋರಾಡಲು ಸಾಧ್ಯ ಇರುವದಿಲ್ಲ. ಹೋರಾಡುವದೂ ಸರಿ ಇರುವದಿಲ್ಲ, ಆದುದರಿಂದ ಹೇಗಾದರೂ ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ

ಭಾರತದ ರೈಲು ಮಂತ್ರಿ ಸ್ವರ್ಣ ಸಿಂಗರು ಪಾಕಿಸ್ತಾನಕ್ಕೆ ಹೋಗಿ ಬಂದರು. ಪಾಕಿಸ್ತಾನದ ಜೆಡ್. ಎ ಬುಟ್ಟೊ ಭಾರತಕ್ಕೆ ಬಂದು ಹೋದರು ಇದೆಲ್ಲಾ ಒಪ್ಪಂದಕ್ಕಾಗಿ.

ಈ ತೃಪ್ತೀಕರಣ ನೀತಿಯನ್ನೇ ಇದುವರೆಗೂ ಪಾಲಿಸಲಾಗುತ್ತದೆ. ಅಗ್ನಿಗೆ ತುಪ್ಪ ಬಿದ್ದಷ್ಟು ಅದು ಚೆನ್ನಾಗಿ ಉರಿಯುತ್ತದೆ ಹಾಗೆಯೇ ಪಾಕಿಸ್ಥಾನದ ಬೆದರಿಕೆಗೆ ನಾವು ಸಡಿಲು ಬಿಟ್ಟಂತೆ ಅವರು ಮಹಾತ್ವಾಕಾಂಕ್ಷಿಗಳಾಗುತ್ತಾರೆ ಕಾಶ್ಮೀರದ ಭಾಗದಿಂದಲೂ ಅವರಿಗೆ ತೃಪ್ತಿಯಾಗುವದೆಂಬುದಿಲ್ಲ. ನಾಳೆ ಅಸ್ಸಾಮಿನ ಅಂಶವನ್ನು ಕೇಳುವದರಲ್ಲಿ ಸಂದೇಹವೇ ಇಲ್ಲ. ಹೀಗೆ ಅದಕ್ಕೆ ಮಿತಿ ಎಂಬುದಿಲ್ಲ.

ಪಾಕಿಸ್ಥಾನಕ್ಕೂ ಉಳಿದಿರುವ ಭಾರತಕ್ಕು ಚೀನಾವು ಸಮಾನ ಶತ್ರು ಎಂಬುದನ್ನು ಪಾಕಿಸ್ಥಾನ ಅರಿತುಕೊಳ್ಳಬೇಕಾಗಿತ್ತು ಚೀನಾವು ಭಾರತವನ್ನು ನುಂಗಿದಲ್ಲಿ ತಮಗೇನಾದರೂ ಪಾಲು ಸಿಗಬಹುದೆಂದು ಪಾಕಿಸ್ತಾನ ಭಾವಿಸಿಕೊಂಡಿದೆ– ಹುಲಿ ಕೊಳ್ಳೆ ಹೊಡೆದಾಗ ತನಗೇನಾದರೂ ಸಿಗಬಹುದೆಂದು ತೋಳ ತಿಳಿದುಕೊಂಡಿರುವಂತೆ. ಚೈನಿ ಹುಲಿಗೆ ಭಾರತವನ್ನು —ಅಯ್ಯಪ್ಪ ಸ್ವಾಮಿಯ (ಶಬರಿಮಲೆ) ಭಾರತವನ್ನು ಬಗ್ಗುಬಡೆಯಲು ಸಾಧ್ಯವೇ ಇರುವದಿಲ್ಲ. ಚೈನಿ ಚಿರತೆ ಇತ್ತಲಾಗಿಂದ ತೆಗೆದ ಕಾಲನ್ನು ಸಮಯ ನೋಡಿ- ಅಮೇರಿಕನ್ ಕೋವಿ ಬರುವ ಮೊದಲೇ —ಅತ್ತ ಇಡಲೂ ಸಾಧ್ಯವಿದೆ.

ಚೈನಾದವರಿಗೆ ಪಾಕಿಸ್ಥಾನ ಏನೂ ಇರುವದಿಲ್ಲ. ಪಾಕಿಸ್ಥಾನ ಪ್ರಿಯರು 'ಶಾಂತಿ ಮಂತ್ರ' ಹೇಳುವಂತೆ ಚೈನಿ ಚೇಲಾಗಳೂ ಹೇಳುತ್ತಿದ್ದಾರೆ: ಹುಲ್ಲೂ ಬೆಳೆಯದ ಪ್ರದೇಶವನ್ನು ತಾನೇ ಚೈನಿಯರು ಕೇಳುತ್ತಿರುವರು ಯುದ್ಧವೇತಕ್ಕೆ? ಕೊಟ್ಟು ಬಿಡೋಣ ಸಮಾಜವಾದಿರಾಷ್ಟ್ರಗಳೆಲ್ಲಾ ಶಾಂತಿಯಿಂದಿರೋಣ ಇತ್ಯಾದಿ.

ಆದರೆ, ಧೈರ್ಯಗೆಡುವದು ಭಾರತೀಯರ ಲಕ್ಷಣವಲ್ಲ. —ಶಿವಶಂಕರ.

— ಡಾ| ಸೀತಾರಾಮ್

ಮೂಲ—ಪಾಂಚಜನ್ಯದಲ್ಲಿ

ಆಕೆಗೆ ತಿಳಿದಿದೆ

ತನಗೊಂದು ಸೇವಿಂಗ್ಸ್ ಬ್ಯಾಂಕ್ ಖಾತೆ ಬೇಕು ಮತ್ತು ತಾನು ಕ್ರಮವಾಗಿ ಆ ಖಾತೆಯಲ್ಲಿ ಹಣವನ್ನು ಉಳಿಸುತ್ತಾ ಬರಬೇಕು ಎಂಬುದು ಆಕೆಗೆ ಚೆನ್ನಾಗಿ ತಿಳಿದಿದೆ.

ಹೂಗಿಡಗಳು ಕಾಲ ಕಾಲಕ್ಕೆ ಹೂಗಳನ್ನು ಬಿಡುವಂತೆ ಸಮಯಕ್ಕೆ ಸರಿಯಾಗಿ ಹಣವನ್ನು ತನ್ನ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಸಂಗ್ರಹಿಸಿಡುವ ಅಭ್ಯಾಸವು ಆಕೆಗೆ ಸುಲಭವಾಗಿ ಕೈಗೂಡಿದೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 25

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 28—2—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೨೫

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

### ಕೇಂದ್ರ ಆಡಳಿತಕ್ಕೆ

# ಶಿಕ್ಷಣ ಮಂತ್ರಿಶಾಖೆ ಹೋಗಬೇಕೆ?

ಸುನಾಗರಿಕ ಸುಶಿಕ್ಷಿತ ಕಲ್ಯಾಣರಾಷ್ಟ್ರ ಕಟ್ಟುವುದಕ್ಕೆ ಶಿಕ್ಷಣವು ಪರಿಣಾಮಕಾರಿ ಸಾಧನವೆಂದು ಎಲ್ಲರೂ ಒಪ್ಪುತ್ತಾರೆ. ಶಿಕ್ಷಣದ ಕ್ಷೇತ್ರವು ಇತರ ಯಾವುದೇ ಕ್ಷೇತ್ರಕ್ಕಿಂತ ಹೆಚ್ಚು ಕಲುಷಿತವಾಗಿರುವುದನ್ನು ನಾವು ಗಮನಿಸುವುದಾದರೆ, ಕಲ್ಯಾಣ ರಾಷ್ಟ್ರ ರಚನೆಯ ಕನಸು ನನಸಾಗುವುದು. ಸಾಧ್ಯವೇ ಎಂಬ ಸಂದೇಹ ನಮ್ಮಲ್ಲಿ ಅವಶ್ಯ ಉದ್ಭವಿಸುತ್ತದೆ. ವಿನಾಯಕನನ್ನು ರಚಿಸ ಹೋದವನು ಹನುಮಂತನನ್ನು ನಿರ್ಮಿಸಿದಂತೆ ನಮ್ಮ ಸರಕಾರಗಳು ದಾಸ್ಯದಲ್ಲಿದ್ದಾಗಿನ ಶಿಕ್ಷಣವನ್ನು ಕಿತ್ತು ಅದನ್ನು ಪುನಾರೂಪಿಸಲು ಮನದಂದು ಅದೂ ಇಲ್ಲ ಇದೂ ಇಲ್ಲ ಎಂಬಂತಹ ದುರ್ಗತಿ ಈ ಪವಿತ್ರ ಕ್ಷೇತ್ರಕ್ಕೆ ಒದಗಿದೆಯೆಂದರೆ ಅತ್ಯುಕ್ತಿಯಲ್ಲ.

## ದ್ವಿಮುಖ ನಿಯಂತ್ರಣ

ಶಿಕ್ಷಣ ವಿಭಾಗವು ಸಂವಿಧಾನದನ್ವಯ ರಾಜ್ಯ ಸರಕಾರದಡಿ ಬರುತ್ತದೆ; ಆದರೂ ಕೇಂದ್ರದಲ್ಲಿಯೂ ಈ ಖಾತೆಯ ಒಬ್ಬ ಮಂತ್ರಿ ಇದ್ದಾನೆ. ಕೇಂದ್ರ ಶಿಕ್ಷಣ ಶಾಖೆಯೂ ಕೆಲವೊಂದು ವಿದ್ಯಾ ಮಂಡಲಗಳ ಅಧಿಕಾರವನ್ನು ವಹಿಸಿ ತಾನು ಅವನ್ನು ನಡೆಸುತ್ತಿದೆ. ರಾಜ್ಯ ಸರಕಾರಗಳು ತಮ ತಮಗೆ ತೋರಿದಂತೆ ತಂತಮ್ಮ ಪಾಠಪಟ್ಟಿಯನ್ನು ರಚಿಸುತ್ತವೆ, ತಮಗೆ ತೋಚಿದಂತೆ ಶಿಕ್ಷಣದ ಕಾನೂನು ನಿಯಮಗಳನ್ನು ಮಾಡುತ್ತಿವೆ. ಆದರೆ, ಶಿಕ್ಷಣ ಖಾತೆಯ ವೆಚ್ಚಕ್ಕೆ ಮಾತ್ರ ಕೇಂದ್ರದ ಸಹಾಯವನ್ನು ಅವು ಯಾಚಿಸುತ್ತಿವೆ. ಹೀಗಾಗಿ ನಮ್ಮ ರಾಜ್ಯಗಳ ಶಿಕ್ಷಣ ಖಾತೆಯು ಕೇಂದ್ರದ ಸಲಹೆಗಳನ್ನು ಸ್ವೀಕರಿಸಬೇಕಾಗುತ್ತದೆ. ಈ ಗೊಂದಲದಿಂದ ಯದ್ವಾತದ್ವಾ ಕಾರ್ಯಪ್ರಣಾಳಿಗಳು ಉಂಟಾಗುತ್ತವೆ.

## ಹಾಯರ್ ಸೆಕೆಂಡರಿ ಸಮಾಧಿ

ಇದಕ್ಕೆ ಹಾಯರ್ ಸೆಕೆಂಡರಿ ಶಿಕ್ಷಣವನ್ನೇ ಉದಾಹರಣೆಗಾಗಿ ಕೊಡಬಹುದು. ಕೇಂದ್ರ ಸರಕಾರದ ನೇತೃತ್ವದಲ್ಲಿಯೇ ಈ ಪ್ರಣಾಳಿಯನ್ನು ವಿವಿಧ ರಾಜ್ಯಗಳು ಬಲವಂತದಿಂದಲಾದರೂ ಸ್ವೀಕರಿಸಬೇಕಾಯ್ತು. ಇದಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ನೀರಿನಂತೆ ವಿವಿಧ ಹೈಸ್ಕೂಲುಗಳಿಗೆ ಸಹಾಯಧನದ ರೂಪದಲ್ಲಿ ಹಂಚಲಾಯಿತು. ಈಗ ಈ ಪದ್ಧತಿಯು ಸಮಾಧಿಹೊಂದುವ ಮುಹೂರ್ತ ನಿಕಟವಾದಂತಿದೆ; ತುರ್ತು ಪರಿಸ್ಥಿತಿಯಿರುವ ವರೆಗಂತೂ ಹಾಯರ್ ಸೆಕೆಂಡರಿ ಯೋಜನೆಯು ಜೀವಂತ ಸಮಾಧಿ ಸ್ಥಿತಿಯಲ್ಲಿರುವುದು ಖಂಡಿತ. ಹಾಗಿರುವಾಗ ಈ ಯೋಜನೆಗೆ ಇದುವರೆಗೆ ವೆಚ್ಚ ಮಾಡಿದ ಸಂಪತ್ತು ವ್ಯರ್ಥವೆನ್ನದೆ ಗತ್ಯಂತರವಿಲ್ಲ.

## ಅಲ್ಲಾವುದ್ದೀನನ ದೀಪವೇ?

ಶಿಕ್ಷಣದಲ್ಲಿ ಸುಧಾರಣೆ ಬೇಕು ಎಂಬುದು ನಿಜ. ಆದರೆ, ಇಂದಿನ, ಶಿಕ್ಷಣ ಪ್ರಣಾಳಿಯ ದೋಷವೇನು ಎಂಬುದರ ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನ ಮಾಡದೆ ಅವಸರದಿಂದ ಪರಿವರ್ತನೆಗೆ ಇದ್ದರೆ, ಅದರಿಂದ ಯಾರಿಗೂ ಸುಖವಿಲ್ಲ. ಈ ದಿಸೆಯಲ್ಲಿ ವಿಶ್ವವಿದ್ಯಾಲಯಗಳ ನಿರ್ಣಯವನ್ನು ಪ್ರಶಂಸಿಸಬೇಕು. ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗ ಬೇಕು ಎಂಬುದನ್ನು ತತ್ವಶಃ ಒಪ್ಪಿದರೂ ಕೂಡಲೇ ಅದನ್ನು ಕಾರ್ಯರೂಪಕ್ಕೆ ತರಲು ಅವು ಸಿದ್ಧವಿಲ್ಲ. ಪರಿವರ್ತನೆಯೆಂಬುದು ಅಲ್ಲಾವುದ್ದೀನನ ದೀಪವಲ್ಲ; ಒಂದು ರಾತ್ರೆ ಬೆಳಗಾಗುವುದರೊಳಗೆ ಅದನ್ನು ಸಾಧಿಸುವುದು ಎಂದೆಂದಿಗೂ ಸಾಧ್ಯವಿಲ್ಲ. ಸರಕಾರದ ನೇರ ನಿಯಂತ್ರಣವಿಲ್ಲದೆ, ಸದಸದ್ವಿವೇಕ ಬುದ್ಧಿಯ ಸಿನೇಟರುಗಳಿಂದ ನಿರ್ದೇಶನ ಪಡೆಯುವ ವಿಶ್ವವಿದ್ಯಾಲಯಗಳು ಹಾಗಾದರೆ, ಸರಕಾರದ ನೇರ ನಿಯಂತ್ರಣದಲ್ಲಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳು ಗಾಳಿ ತುಂಬಿದ ಚೆಂಡಿನಂತೆ ಬಡಿದತ್ತ ಪುಟ ನೆಗೆಯುತ್ತಿವೆ. ಅಸ್ಥಿರತೆ ಅವ್ಯವಸ್ಥೆಗಳ ಕಾಯ್ಮೆಲದಂತಿವೆ. ಇವುಗಳು. ಇಂತಹ ಹೊಲಸು ತುಂಬಿದ ಕ್ಷೇತ್ರದಲ್ಲಿ ಸುಶಿಕ್ಷಿತ ಜನಾಂಗ ನಿರ್ಮಾಣವಾಗುವುದು ಸಾಧ್ಯವೇ?

## ವಿರೋಧಾಭಾಸವಿದು

ನಮ್ಮ ರಾಜ್ಯದ ಶಿಕ್ಷಣ ಶಾಖೆಯನ್ನೇ ಎತ್ತಿಕೊಳ್ಳೋಣ. ಶಿಕ್ಷಣ ಪ್ರಸಾರವು ಶಿಕ್ಷಣ ಶಾಖೆಯ ಪರಮ ಕರ್ತವ್ಯ. ಅದರ ಸಹಾಯವನ್ನು ಪಡೆದು ಖಾಸಗಿ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳೂ ಈ ದಿಸೆಯಲ್ಲಿ ದುಡಿಯುವುದುಂಟು. ಇದು ಸ್ವಾಗತಾರ್ಹವೇ. ಅದು ಹೊರತು ಮೀನುಗಾರಿಕೆಯೇ ಮೊದಲಾದ ಇತರ ಮಂತ್ರಿ ಶಾಖೆಗಳೂ ಶಿಕ್ಷಣವನ್ನು ಕೊಡಲು ಮುಂದೆ ಬಂದಿವೆ ಇರಲಿ, ಇವೂ ಶಿಕ್ಷಣ ಪ್ರಸಾರದ ತೀವ್ರತೆಯ ದೃಷ್ಟಿಯಿಂದ ಪ್ರಶಂಸಾರ್ಹವೆನ್ನೋಣ. ಶಿಕ್ಷಣದ ಬಗ್ಗೆ ಪ್ರತಿ ವರ್ಷ ನಡೆಯುವ ವೆಚ್ಚವನ್ನು ಇಳಿಸುವುದಕ್ಕಾಗಿ ಶಾಲೆಗಳಲ್ಲಿ ಅಧ್ಯಾಪಕರ ಸಂಖ್ಯೆಯನ್ನು ಕಡಿಮೆಗೊಳಿಸುವುದು, ಶಿಕ್ಷಣದ ಪ್ರಸಾರಕ್ಕಾಗಿ ಹೆಚ್ಚು ಹೆಚ್ಚು ಶಾಲೆಗಳನ್ನು ತೆರೆಯುವುದು ಪರಸ್ಪರ ವಿರೋಧಾಭಾಸ. ಒಂದೊಂದು ತರಗತಿಯಲ್ಲಿ ೫೦—೬೦ ಮಕ್ಕಳನ್ನು ತುಂಬಿಸಿ ಒಬ್ಬೊಬ್ಬ ಅಧ್ಯಾಪಕನಿಗೆ ಎರಡೆರಡು ತರಗತಿಗಳನ್ನೂ ನೋಡಿಕೊಳ್ಳುವ ಅವಕಾಶವೊದಗಿಸುವುದೆಂದರೆ, ಅಧ್ಯಾಪಕರ ಸತ್ವ ಪರೀಕ್ಷೆ ಮಾಡುದುವುದೆಂದರ್ಥ.

## ವಿಲಕ್ಷಣ ನೀತಿ

ನಮ್ಮ ಶಿಕ್ಷಕರ ಪರಿಸ್ಥಿತಿಯಂತೂ ಶೋಚನೀಯವೇ. ಹೆಚ್ಚಿನ ಶಿಕ್ಷಕರು ತಮ್ಮ ತಿಂಗಳ ವೇತನವನ್ನು ಸರಿಯಾಗಿ ಪಡೆಯುತ್ತಿಲ್ಲ. ಆಡಳಿತೆಯವರಿಗೆ ಸರಕಾರದಿಂದ ಹೊತ್ತಿಗೆ ಸರಿಯಾಗಿ ಸಲ್ಲಬೇಕಾದ ಸಹಾಯಧನ ಬರುವುದಿಲ್ಲ. ಈ ಕಾರಣದಿಂದ ಆರ್ಥಿಕವಾಗಿ ದುಸ್ಥಿತಿಗೆ ಆಡಳಿತೆಯವರೂ ಶಿಕ್ಷಕರೂ ಏಕಸಮವಾಗಿ ಬೀಳಬೇಕಾಗುತ್ತದೆ. ಇಂತಹ ಅವ್ಯವಸ್ಥೆಯನ್ನು ಹೋಗಲಾಡಿಸದೆ ಇದ್ದರೆ, ಶಿಕ್ಷಣ ಕ್ಷೇತ್ರದ ಕೊಳಚೆ ಹರಿದು ಹೋಗುವುದು ಸಾಧ್ಯವಿಲ್ಲ. ಇನ್ನು, ಪದೇ ಪದೇ ಪರಿವರ್ತನೆಗೊಳ್ಳುವ ಶಿಕ್ಷಣದ ನಿಯಮಗಳು. ಉದಾಹರಣೆಗೆ, ಹಿಂದೀ ಭಾಷೆಯನ್ನು ಪ್ರಾಥಮಿಕ ೬ನೆ ತರಗತಿಯಿಂದ ಕಂಪಲ್ಸರಿ ಸಬ್‌ಜೆಕ್ಟ್ ಎಂದು ಎರಡು ವರ್ಷ ಸರಕಾರ ಉರು ಹೊಡೆಯಿತು. ಆದರೆ ಏಳನೆ ಮತ್ತು ಹತ್ತನೆಯ ವರ್ಗಗಳ ಪಬ್ಲಿಕ್ ಪರೀಕ್ಷೆಯ ಮಟ್ಟಿಗೆ ಈ ವರ್ಷ ಅದು ಐಚ್ಛಿಕವೆಂಬರ್ಥದ ಆಜ್ಞೆ ಹೊರಡಿಸಿತು. ಹಿಂದೀ ಅಧ್ಯಾಪಕರ ಅಭಾವವೇ ಇದಕ್ಕೆ ಕಾರಣವಂತೆ! ಹಿಂದೀ ಅಧ್ಯಾಪನಕ್ಕೆ ಬೇಕಷ್ಟು ಶೈಕ್ಷಣಿಕ ಅರ್ಹತೆಯುಳ್ಳವರು ರಾಜ್ಯದಲ್ಲಿ ಕಡಿಮೆ ಇಳರು. ಆದರೆ, ಸರಕಾರದ ಮಿನಿಮಂ ಪೀರೇಡ್ ನಿಯಮದಿಂದಾಗಿ ನೇಮಕವಾಗಲಿಲ್ಲವೆಂದು ಹೇಳಬಹುದು.

ಪ್ರತಿ ಶಾಲೆಗೂ ಹಿಂದೀ ಅಧ್ಯಾಪಕರ ನೇಮಕವನ್ನು ಮಾಡದೆ ಹಿಂದೀಯನ್ನು ಐಚ್ಛಿಕಗೊಳಿಸಿದುದು ಸರಕಾರದ ತಪ್ಪು. ಇದಕ್ಕೆ ಯಾವ ಸಬೂಬನ್ನು ಆದು ಇತ್ತರೂ ನಿಷ್ಪ್ರಯೋಜನ. ಮುಂದೆ ಅದನ್ನು ಐಚ್ಛಿಕ ವಿಷಯವೆಂದು ಸಾರಿದರೂ ವಿದ್ಯಾರ್ಥಿಗಳು ಅದನ್ನು ನಂಬುವುದು ಸಾಧ್ಯವಿಲ್ಲದಂತಾಗಿವೆ ಇಂದಿನ ಸ್ಥಿತಿಗತಿ!

ಪ್ರಮೋಶನ್ ನಿಯಮಗಳ. ಇದಕ್ಕಿಂತಲೂ ಮೋಜಿನವು. ಒಂದು ಬಾರಿ ಪ್ರಮೋಶನ್ ದೊರೆಯದೆ ಅನುತ್ತೀರ್ಣರಾದವರನ್ನು ತಿರುಗಿ ಪಾಸ್ ಮಾಡುವ ಹೆಚ್ಚು ಆಜ್ಞೆ ಅಧ್ಯಾಪಕರನ್ನೇ ಹುಚ್ಚರನ್ನಾಗಿ ಮಾಡಿದೆ. ಸರಕಾರವಾಗಲೀ, ವಿದ್ಯಾ ಖಾತೆಯಾಗಲೀ ಯಾವುದೇ ಆಜ್ಞೆಯನ್ನು ಸಾಕಷ್ಟು ಪೂರ್ವ ಭಾವಿಯಾಗಿ ಕೊಡುವ ಪರಿಪಾಠವನ್ನು ಸರ್ವ ಸಾಮಾನ್ಯವಾಗಿ ಇಟ್ಟುಕೊಂಡಿಲ್ಲ. ಇದರಿಂದಾಗಿಯೇ ಶಿಕ್ಷಕರ ಶಿಕ್ಷಣ ಶಾಖೆಯ ಮುಖಕ್ಕೆ ಮಂಗಳಾರತಿ ಎತ್ತುವಂತಾಗಿದೆ. ಜನತೆ. ವಿದ್ಯಾರ್ಥಿಗಳಲ್ಲಿ ಓದ ಬೇಕು; ಪರಿಶ್ರಮ ಪಡಬೇಕು. ಕಲಿಯಬೇಕು — ಎನ್ನುವ ಮನೋವೃತ್ತಿಯನ್ನೇ ಶಿಕ್ಷಣ ನಿಯಮಗಳು ಸಮೂಲ ನಾಶಗೊಳಿಸಿವೆ.

## ಅಧ್ಯಾಪಕರ ಸಂಕಷ್ಟ

ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಶಿಕ್ಷಕನಾದರೂ ಏನು ಮಾಡಬಲ್ಲ? ಆಡಳಿತೆಯವರು ಏನು ಮಾಡಬಲ್ಲರು? ಶಿಕ್ಷಕರನ್ನು ಸರಸ್ವತೀ ಸೇವಕರೆಂದು ಶ್ಲಾಘಿಸುವ ಮಂತ್ರಿವರ್ಯರು ಅವರ ಸೇವೆಗೆ ಯಾವ ಪ್ರತಿಫಲ ನೀಡಲು ಮುಂದೆ ಬಂದಿದ್ದಾರೆ? ಸದ್ಯ ತ್ರಿವಿಧ ಯೋಜನೆಯನ್ನು ನೀಡುವ ವಾಗ್ದಾನ ಬಂದಿದೆ ನಿಜ. ಆದರೆ, ಅಧ್ಯಾಪಕನ ಘನತೆ ಗೌರವಗಳು ಉಳಿಯ ಬೇಕಾದರೆ, ಆತನ ಜೀವನವು ಸುಗಮವಾಗುವಂತೆ ವೇತನ ಮಟ್ಟದಲ್ಲಿ ಏರಿಕೆಯಾಗಬೇಕು; ಔದ್ಯಮಿಕ ಕ್ಷೇತ್ರಗಳಲ್ಲಿ ಜೀವನ ವೆಚ್ಚವನ್ನು ಅನುಸರಿಸಿ ತುಟ್ಟಿಭತ್ತೆ ನೀಡುವ ಕ್ರಮ ಈ ಕ್ಷೇತ್ರಕ್ಕೂ ಕಾಲಿರಿಸಬೇಕು. ಯಾವ ಆಡಳಿತೆಯಲ್ಲಿಯೇ ಇರಲಿ ಪ್ರತಿ ತಿಂಗಳ ಮೊದಲನೆ ತಾರೀಕಿಗೆ ಆತನ ಹಿಂದಿನ ತಿಂಗಳ ಸಂಬಳ ಕೈಸೇರುವಂತಾಗಬೇಕು. ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಅವರಿಗೆ ಸಂಯಾದ ಪಗಾರವೂ ಸಿಗುತ್ತಿಲ್ಲ. ಸರಕಾರವು ವೇತನಕ್ಕೆಂದು ಆಡಳಿತೆದಾರರಿಗೆ ನೀಡುವ ಹಣದಲ್ಲಿ 'ತಮ್ಮ ಪಾಲನ್ನು' ಮುಂದಿಟ್ಟುಕೊಳ್ಳುವ ಕೋಮಟಿಗಳೂ ಇದ್ದಾರೆ. ಆದುದರಿಂದ, ಇಂತಹ ಖಾಸಗಿ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ನೇರವಾಗಿ ಸರಕಾರವೇ ವೇತನವನ್ನು ರವಾನಿಸಬೇಕು; ಇಲ್ಲವೇ ಎಲ್ಲ ಪ್ರಾಥಮಿಕ ಶಾಲೆಗಳನ್ನೂ ಒಂದೇ ಆಡಳಿತಕ್ಕೆ ಒಪ್ಪಿಸಿ, ಅವುಗಳು ಸುಸೂತ್ರವಾಗಿ ಕಾರ್ಯ ವೆಸಗುವಂತೆ ಉಚಿತ ಕಾಲದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಡಬೇಕು.

## ಪರಿಹಾರವೇನು?

ಶಿಕ್ಷಕರ ಜೀವನಸ್ತರದ ಹಿನ್ನಡೆ ಮತ್ತು ಸರಕಾರವು ಅವರ ಕಡೆಗ ತೋರಿಸುತ್ತಿರುವ ಅನಾಸ್ಥೆ, ಶಿಕ್ಷಣದ ಪ್ರಸಾರ — ಪರೋಕ್ಷ ಅದಕ್ಕೆ ತಡೆ — ಶಿಕ್ಷಣ ಕ್ಷೇತ್ರದ ಕಾನೂನು ನಿಯಮಗ

(೪ನೇ ಪುಟ ನೋಡಿರಿ)

# ಮನ ಕಲಕಿದ
# ಸಂದೇಹ ಪರಿಹಾರ

ಯೌವ್ವನವೂ ದೇಹ ಸೌಂದರ್ಯವೂ, ಬಾಳ್ವಿಗೆ ತಕ್ಕ ಸಕಲ ಸೌಕರ್ಯಗಳನ್ನೂ ಪಡೆದ ಪತ್ನಿಯೊಬ್ಬಳು ಬೆಳಗಿನ ಜಾವ ಐದೂವರೆ ಘಂಟೆಗೆ....ಮೋಟಾರ್ ಗ್ಯಾರೇಜಿನಲ್ಲಿ ಏನನ್ನೋ ಹುಡುಕಬೇಕಾದ ಅವಶ್ಯಕತೆಯೇ ಇಲ್ಲ. ಸರೋಜಳೋ ಬೆಳಗಿನ ಝಾವ ಇದನ್ನೇ ಮಾಡುತ್ತಿದ್ದಳು.

ಮಲಗುವ ಮನೆಯಲ್ಲಿ ತನ್ನ ಪತಿಯ ಮಗ್ಗುಲಲ್ಲಿ ಮಲಗಿ ನಿದ್ರಿಸುತ್ತಿರುವಾಗ ಬೆಳಗ್ಗೆ ಐದು ಘಂಟೆಗೆ ಕೆಲಸದವನು ಬಾಗಿಲನ್ನು ತಟ್ಟಿ 'ಅಮ್ಮಾ"! ಹಾಲಿನವನು ಬಂದುಬಿಟ್ಟ" ಎಂದು ಗದ್ದಲ ಮಾಡಿ ಎಬ್ಬಿಸಿದ. ಅಡಿಗೆಯವನು ಊರಿನಲ್ಲಿ ಇಲ್ಲದೆ ಇದ್ದುದರಿಂದ ಸರೋಜ ಅರ್ಧ ನಿದ್ರೆಯಲ್ಲಿ ಎದ್ದು ಕುಳಿತುಕೊಂಡು "ಅಬ್ಬಬ್ಬಾ! ಈವತ್ತು ಎಷ್ಟು ಕೆಲಸವಿದೆ" ಎಂದುಕೊಂಡಳು

"ಇದೋ ಬಂದೆ' ಎಂದು ಕೆಲಸದವನಿಗೆ ಹೇಳಿಬಿಟ್ಟು, ಮಗ್ಗುಲಲ್ಲಿ ಚೆನ್ನಾಗಿ ನಿದ್ರೆ ಮಾಡುತ್ತಿರುವ ಗಂಡನನ್ನು ನೋಡಲು, ಅವಳ ಹುಬ್ಬು ಊದಿ ಮುಖವು ಕಾಂತಿಹೀನವಾಯಿತು. ಆರು ವಾರಗಳಿಂದ ಅವರ ನಡೆ, ಗುಣ, ಭಾವನೆಗಳಲ್ಲಿ ವ್ಯತ್ಯಾಸ ಕಂಡಿತ್ತು, ಅವರ ಉತ್ಸಾಹವೂ, ಧೈರ್ಯವೂ ಮರೆಯಾಗಿದ್ದವು. ಸ್ವಭಾವವಾಗಿ ಸರೋಜ ನಿರೀಕ್ಷಿಸುವ ಆದರ, ಮುದ್ದು, ಪ್ರೀತಿಯೆಲ್ಲಾ ಮಾಯವಾಗಿದ್ದವು.

ಸರಿ, ಹಾಲಿನವನು ಕಾದಿದ್ದಾನೆ ಗಂಡನ ವಿಷಯ ಆ ಮೇಲೆ........ನೋಡೋಣ ಎಂದುಕೊಂಡು ನಿಟ್ಟುಸಿರು ಬಿಡುತ್ತಾ ಹಾಸಿಗೆಯನ್ನು ಬಿಟ್ಟೆದ್ದು ಬಚ್ಚಲ ಮನೆಯೊಳಗೆ ಹೋದಳು. ಸರೋಜ ಹಲ್ಲುಜ್ಜಿ ಹಾಲು ತೆಗೆದುಕೊಂಡು ಅಡಿಗೆ ಮನೆಯೊಳಗೆ ಹೋಗಿ ಸ್ಪಿರಿಟ್ ಸ್ಟೋವ್ ಹಚ್ಚೋಣವೆಂದರೆ ಸ್ಪಿರಿಟ್ ಸೀಸೆಯಲ್ಲಿ ಎಣ್ಣೆಯಿಲ್ಲ. ಮೋಟಾರ್ ಗ್ಯಾರೇಜ್‌ನಲ್ಲಿ ಸ್ಪಿರಿಟ್ ಇರುವುದು ನೆನಪಿಗೆ ಬರಲು ಅಲ್ಲಿ ಹೋದಳು. ಗ್ಯಾರೇಜಿನೊಳಗೆ ಹೋಗಿ .. ಎಲೆಕ್ಟ್ರಿಕ್ ದೀಪ ಹಚ್ಚಿ ಸೀಸೆಯೊಂದರ ಹತ್ತಿರ ಹೋಗಿ ತೆಗೆಯುವುದಕ್ಕೆ ಹೋದಾಗ ಅಲ್ಲಿ ಬಿಡಲ್ಪಟ್ಟಿದ್ದ ಮೋಟಾರ್ ಬಂಡಿಯ ಹಿಂದೆ ಏನೋ ಬೆಳ್ಳಗಿರುವುದು ಕಾಣಿಸಿತು ಸರೋಜ ಹತ್ತಿರ ಹೋಗಿ ನೋಡಿದಳು. ದಿಂಬಿನ ಹಿಂಭಾಗದಲ್ಲಿ ಬಿಳೀ ಬಟ್ಟೆ ಸಿಕ್ಕಿಸಿರುವುದನ್ನು ನೋಡಿ ಅದನ್ನು ಹಿಡಿದು ಎಳೆದಳು.... ಅದು ನಾಗರಿಕ ರಮಣಿಯರು ಕೈಯಲ್ಲಿ ಇಟ್ಟುಕೊಂಡಿರುವ ಕೈಚೌಕವಾಗಿತ್ತು. ಅದರಲ್ಲಿ ಸುವಾಸನೆಯು ಇನ್ನೂ ಇತ್ತು. ಹಾಗೂ ಹೀಗೂ, ಕೈಚೌಕವನ್ನು ತಿರುಗಿಸಿ ತಿರುಗಿಸಿ ನೋಡುತ್ತಿರಲು ಸರೋಜಳ ಮನಸ್ಸಿನಲ್ಲೂ "ಒಬ್ಬ ರಮಣಿಯ ಕೈಚೌಕ ನನ್ನ ಗಂಡನು ಕೂತುಕೊಳ್ಳುವ ಗಾಡಿಯಲ್ಲಿ ಹೇಗೆ ಬಂತು?'' ಎಂಬ ಪ್ರಶ್ನೆ ಎದ್ದು ಅಲ್ಲೋಲ ಕಲ್ಲೋಲ ಮಾಡಿತು.

ಕೂಡಲೇ ಅಲ್ಲೇ ಗೋಡೆಯಲ್ಲಿ ತಗಲು ಹಾಕಿದ್ದ ಎಲೆಕ್ಟ್ರಿಕ್ ಟಾರ್ಚ್ ಲೈಟನ್ನು ಹಚ್ಚಿ ಗಾಡಿ ಪೂರಾ ಪರೀಕ್ಷಿಸಿ ನೋಡಲು ಕೆಲವು ತಲೆ ಸೂಜಿಗಳೂ, ಗುಲಾಬೀ ಎಸಳುಗಳೂ ಸಿಕ್ಕಿದವು. ಅದಕ್ಕೆ ಮೊದಲನೇ ರಾತ್ರಿ ತನ್ನ ಗಂಡ ಮನೆಗೆ ಬರುವ ಮೊದಲೇ ತಾನು ನಿದ್ರೆ ಮಾಡಿದ್ದು ಅವಳಿಗೆ ನೆನಪಾಯಿತು ಕಾರಿನಲ್ಲಿ ಯಾರು ಸವಾರಿ ಮಾಡಿದವರೆಂದು ಮೋಟಾರ್ ಡ್ರೈವರನ್ನು ಕೇಳಿದರೆ ಏನಾದರೂ ಸಮಾಚಾರ ತಿಳಿಯಬಹುದು. ಆದರೆ ಅವನೇನನ್ನುವನೋ? ಎಂದುಕೊಂಡಳು

ಆ ಸೂಜಿಗಳನ್ನೂ ಗುಲಾಬಿ ಎಸಳುಗಳನ್ನೂ ಅದೇ ಕೈಚೌಕದಲ್ಲಿ ಸುತ್ತಿ ಸೊಂಟದಲ್ಲಿ ಇಟ್ಟುಕೊಂಡು, ಸ್ಪಿರಿಟ್ ಸೀಸೆಯನ್ನು ತೆಗೆದುಕೊಂಡು ಸರೋಜಾ ಅಡಿಗೆ ಮನೆಗೆ ಹೋದಳು.

ತನ್ನ ಗಂಡ ಬೇಸತ್ತು ಹೋಗಿ ಬೇರೆಲ್ಲೋ ಒಂದು ಕಡೆ ಆನಂದೋತ್ಸವದಿಂದಿದ್ದಾರೆಂಬುದು ಅವಳಿಗೆ ವ್ಯಕ್ತವಾಯಿತು. "ಯಾರವಳು" ಎಂದು ಕೇಳುತ್ತಾ ಇತ್ತು ಅವಳ ನೊಂದ ಮನಸ್ಸು—ಕಾಫಿಯನ್ನು ತಯಾರು ಮಾಡುತ್ತಿರುವಾಗಲೆಲ್ಲಾ ಅವಳಿಗೆ ಅದೇ ಮನಸ್ಸಿನಲ್ಲಿ ಕೊರೆಯುತ್ತಿತ್ತು.

ಆರೂವರೆ ಘಂಟೆಗೆ ಗಂಡ ಮಹಡಿಯಿಂದ ಇಳಿದು ಬಂದವನು.... ಅಡಿಗೆ ಮನೆಗೆ ಬರಲೇ ಇಲ್ಲ. ಏಳು ಘಂಟೆಯವರೆಗೆ ನೋಡಿಯೂ ಬರದೇ ಇದ್ದುದರಿಂದ, ಒಂದು ಲೋಟಾ ಕಾಫಿಯೊಡನೆ ಅವನನ್ನು ಹುಡುಕಿಕೊಂಡು ಹೋದಳು; ಬೀದಿಯ ಕಡೆಯಿದ್ದ ಒಂದು ಕೊಠಡಿಯಲ್ಲಿ ಉಡುಪು ಧರಿಸಿ ಹೊರಗೆ ಎಲ್ಲೋ ಹೋಗಲು ಸಿದ್ಧವಾಗಿದ್ದುದನ್ನು ಕಂಡು ಮೇಜಿನ ಮೇಲೆ ಕಾಫಿ ಲೋಟ ಇಟ್ಟು ನಿಂತಳು. ಹೊರಗಡೆ ಹೊರಟ ಅವನು ಸರೋಜಳ ಕಡೆ ನೋಡದೆಯೇ, "ಮುಖ್ಯವಾದೊಂದು ಕೆಲಸವಿದೆ. ಈ ದಿನ ಊಟಕ್ಕೆ ಬರೋದು ಸಂದೇಹ—ನನಗಾಗಿ ಅಡಿಗೆ ಮಾಡಬೇಡ. ಊಟ ಮಾಡದೆ ಕಾದಿರಬೇಡ" ಎಂದನು.

"ಓಹೋ! ಹಾಗೋ!" ಎಂದು ಹೇಳಿ ಸರೋಜ ಹೊರಡಲು ಉದ್ಯುಕ್ತಳಾದಳು. ಸ್ವಲ್ಪ ನಿಂತು "ಡ್ರೈವರ್ ಎಲ್ಲೋ?...." ಎಂದು ಗೋಡೆಯ ಕಡೆ ನೋಡಿದಳು,

"ಅವನು ನಿನ್ನೆ ಮಧ್ಯಾಹ್ನ ಕೂಡ ಕೆಲಸಕ್ಕೆ ಬರಲಿಲ್ಲ. ಇಂದೂ ಬರುವುದಿಲ್ಲವೆಂದು ಕಾಣುತ್ತೆ. ಗಾಡಿಯನ್ನು ನಾನು ನೋಡಿಕೊಳ್ಳುತ್ತೇನೆ' ಅಂದರು.

"ಅದಕ್ಕೇನು ಸಂದೇಹ' ಎನ್ನುತ್ತಾ ಕೊಠಡಿಯಿಂದಾಚೆ ಹೋದಳು.

'ಡ್ರೈವರ್ ಕೂಡಾ ಇಲ್ಲವೇ? ಸರಿ ... ಅಯ್ಯಾವರೂ, ಅಮ್ಮಾವರೂ ರಾತ್ರಿ ಖುಷಿಯಾಗಿಯೇ ಇದ್ದಿರಬಹುದು. ಯಾರವಳು!' ಎಂದು ಪದೇ ಪದೇ ಪ್ರಶ್ನೆ ಮಾಡುತ್ತಿತ್ತು ಸರೋಜಳ ಮನಸ್ಸು. ಅಡಿಗೆ ಏಕೆ ಮಾಡಬೇಕು? ಜೀವವೇ ಬೇಡವೆನಿಸಿತು. ಸರೋಜಳಿಗೆ. ಯಾವುದು ಹೇಗಾದರೂ, ಧೈರ್ಯದಿಂದಲೂ, ಆಲಕ್ಷ್ಯದಿಂದಲೂ ಬಂದದ್ದನ್ನು ಅನುಭವಿಸಿಯೇ ತೀರಬೇಕು, ಎಂದು ತೀರ್ಮಾನಿಸಿಕೊಂಡಳು ಸರೋಜ"—ಅಳುವುದಿಲ್ಲ ಅವರು ಹೋಗುವ ದಾರಿಗೆ ಹೋಗಲಿ—ತಾನು ಮಾತ್ರ ತೌರುಮನೆಗೆ ಹೋಗಿ ತಂದೆ ತಾಯಿಯರೊಡನೆ ಇರುವುದಾಗಿ, ತೀರ್ಮಾನಿಸಿದಳು. ಆದರೂ ನೂರು ವರ್ಷಗಳಿಂದ ಅವರೊಡನೆ...ಕಳೆದ ಸುಖ, ಸಂತೋಷಗಳನ್ನೆಲ್ಲಾ ಸ್ಮರಿಸಿದಾಗ ಹೃದಯ ಭಡಪಡಿಸಿತು, ಕಣ್ಣುಗಳು ನೀರಿನಿಂದ ತುಂಬಿದವು. ಒಂದು ಮಗು ಹುಟ್ಟಿದ್ದರೆ ಹೀಗೆಲ್ಲಾ ನಡೆಯುತ್ತಿರಲಿಲ್ಲವೇನೋ? ಎಂದೆಣಿಸಿದಳು.

ಮಧ್ಯಾಹ್ನ ದಾಹವಾದರೆ ಬೇಕಾಗುವುದೆಂದು ಥರ್ಮಾಸ್ ಫ್ಲಾಸ್ಕ್ ತುಂಬಾ ಕಾಫಿಯನ್ನು ಸುರಿದು ಒಂದು ಕಡೆ ಇಟ್ಟಳು. ಸ್ನಾನಮಾಡಿ ಬೇರೆ ಸೀರೆಯನ್ನುಟ್ಟುಕೊಂಡಳು. ಅನಂತರ ತನ್ನ ತಂದೆಗೆ ಒಂದು ದೀರ್ಘವಾದ ಕಾಗದ ಬರೆದಳು. ಆ ಕಾಗದದಲ್ಲಿ ತಾನು ಅವರೊಡನೆ ಕೆಲವು ದಿನ ವಾಸಮಾಡಬೇಕೆಂದು ಆಸೆ ಪಡುವುದಾಗಿ ಸೂಚಿಸಿದ್ದಳು. ಗಂಡನಿಗೂ ನಾಲ್ಕು ಪುಟಗಳ ತುಂಬಾ ವಿಸ್ತಾರವಾದ ಸಿಟ್ಟಿನ ಕಾಗದ ಬರೆದಳು. ಆ ಮೇಲೆ ಕೆಲಸವಿಲ್ಲದೆ ಮನೆಯಲ್ಲೇ ಅಲ್ಲಿಂದ ಇಲ್ಲಿಗೆ ಅಲೆಯುತ್ತಾ ವಿಪರೀತ ಚಿಂತೆಯಲ್ಲಿ ಮುಳುಗಿದಳು.

ತನ್ನ ಕರ್ತವ್ಯವೇನು? ಗಂಡನ ಮಗ್ಗುಲಲ್ಲಿದ್ದುಕೊಂಡೇ ಅವನನ್ನು ಸನ್ಮಾರ್ಗದಲ್ಲಿ ತರುವುದಕ್ಕೆ ಪ್ರಯತ್ನಿಸುವುದೇ? ಅಂತಹ ಯತ್ನವು ಈಗ ಫಲಿಸುವುದೇ?

ಇಷ್ಟು ದಿನಗಳೂ, ಪ್ರೀತಿಯಿಂದಲೂ ಗೌರವದಿಂದಲೂ, ಅವರನ್ನು ಆದರಿಸಿದ ತನ್ನನ್ನು ಈ ರೀತಿ ಅವಮಾನ ಮಾಡಿ ನಡೆಸುವುದು ಸಹಿಸತಕ್ಕದ್ದೇ? ಅವರ ಹತ್ತಿರ ಈ ವಿಷಯವನ್ನು ಪ್ರಸ್ತಾಪಿಸಿದರೆ, ಅವರು ಇನ್ನೂ ತುಂಟಾಟ ಮಾಡಿದ್ದರೆ? ಒರಟುತನದಿಂದ ನಡೆದುಕೊಂಡರೆ ಏನಾಗುವುದು? ತನ್ನ ಮನಸ್ಸು ಇನ್ನೂ ನೋಯಲಾರದೇ? ಯಾರವಳು? ಯಾರವಳು? ಎಂದು ಮನಸ್ಸು ಕೇಳುತ್ತಲೇ ಇತ್ತು. ಯಾರವಳೆಂಬುದನ್ನು ಕಂಡು ಹಿಡಿದು. ಅವಳನ್ನೇ ಕೇಳಿಕೊಂಡರೆ ಏನಾದರೂ ಪ್ರಯೋಜನವಾಗಬಹುದೇನೋ! ಎಂದೆಲ್ಲಾ ನೊಂದುಕೊಂಡಳು ಸರೋಜ.

ಅಂದು ಸಂಜೆ ನಾಲ್ಕು ಘಂಟೆಗೆ ಅವಳ ಅವಸ್ಥೆಯು ತನ್ನ ಸುಖಜೀವನವನ್ನು ನಾಶ ಮಾಡಿದ ಮಹಿಳೆಯನ್ನು ಆಕ್ಷಣವೇ ನೋಡಿದರೆ ಅವಳನ್ನು ಅಲ್ಲಿಯೇ ದೇಹವೇ ಜೇರಿ ಅಂಗಾಂಗಗಳೇ ಬೇರೆಯಾಗಿ ಸಿಗಿದು ಬಿಸಾಡುವಂತಿತ್ತು. ಅದಕ್ಕೆ ಪ್ರತಿಯಾಗಿ ತಾನು, ಅದಕ್ಕೆ ಮೊದಲು ತನ್ನ ಗಂಡನಿಗೆ ಬರೆದಿದ್ದ ನಾಲ್ಕು ಪುಟದ ಕಾಗದವನ್ನು ಚೂರು ಚೂರಾಗಿ ಹರಿದು ಬಿಸಾಡಿದಳು. ಮತ್ತೆ ಕುಳಿತುಕೊಂಡು ಗಂಡನಿಗೆ 'ನಾನು ತೌರುಮನೆಗೆ ಹೋಗುವುದಕ್ಕೆ ಇದರೊಡನೆ ಜಡಕ ಮಾಡಲ್ಪಟ್ಟಿರುವ ಅಮೂಲ್ಯವಾದ ವಸ್ತುಗಳೇ ಕಾರಣ' ಎಂದು ಪುಟ್ಟ ಕಾಗದ ಒರೆದಳು. ಇನ್ನೊಂದು ಲಕ್ಕೋಟೆಯಲ್ಲಿ ಹಾಕಿ ಗೋಂದು ಸವರಿ ಅಂಟಿಸಿ ಅನಾವಶ್ಯವಾಗಿ ಅದನ್ನು ಹಲವು ಸಲ ಪಟ ಪಟವೆಂದು ತಟ್ಟಿದಳು.

ಆ ಸಮಯ ಬೀದಿಯಲ್ಲಿ ಮೋಟಾರ್ ಹಾರನ್ನಿನ ಶಬ್ದ ಕೇಳಿಸಲು ಅದು ತನ್ನ ಮನೆ ಮೋಟಾರೆಂಬುದನ್ನರಿತು. ಅಂಟಿಸಿದ ಲಕ್ಕೋಟೆಯನ್ನು ತಕ್ಷಣ ತನ್ನ ಕುಪ್ಪಸದೊಳಗೆ ಮರೆಯಾಗಿ ಇಟ್ಟುಕೊಂಡು ಕಿಟಕಿಯಿಂದ ಇಣಿಕಿ ನೋಡಲು ಗಂಡ ಕಾರಿನಿಂದ ಧುಮಿಕಿ ವೇಗವಾಗಿ ಮನೆಯೊಳಗೆ ಬರುವುದನ್ನೂ ಕಂಡಳು.

ಎಲ್ಲಿಗ ಹೋಗಿದ್ದರು? ಏಕೆ ಬಂದರು? ಈ ಓಡಾಟವೇಕೆ? ಅವಸರವೇಕೆ? ಎಂದೆಲ್ಲಾ ಮನದಲ್ಲಿ ಚಿಂತಿಸಲು ಅವರು, 'ಸರೋಜ ! ಒಳ್ಳೇ ವೇಳೆ ಬಂತು ನಮಗೆ" ಅನ್ನುತ್ತಾ ಓಡಿ ಬಂದು, ಅವಳನ್ನು ತಬ್ಬಿಕೊಂಡು ಸ್ವಲ್ಪ ಸ್ವಲ್ಪ ಕುಣಿದೂ ಬಿಟ್ಟರು. ಅವರ ಮುಖ ಕೆಂಪಾಗಿತ್ತು ಉಸಿರೂ ಬೇಗ ಬೇಗ ಬರುತ್ತಿತ್ತು. ಸಾವಧಾನದಿಂದ ಅವರ ಆಲಿಂಗನದಿಂದ ತನ್ನನ್ನು ಬಿಡಿಸಿಕೊಂಡು ತನ್ನ ಮನಸ್ಸಿನಲ್ಲಿದ್ದ ಬೇಸರವನ್ನು ತೋರ್ಪಡಿಸಿಕೊಂಡು ಮುಗುಳು ನಗೆಯಲ್ಲಿ ಕುಡಿಯುವದನ್ನೂ ಕೂಡಾ ಕಲಿತುಕೊಂಡಾಯಿತೇ? "ಎಂದು ಕೇಳಿದಳು"

'...ಏನನ್ನು ಎಂದು ಅವರು ಗಾಬರಿಯಿಂದ ಕೇಳಿದರು"

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಸಿಂಹಾವಲೋಕನ

# ನೇಫಾ ನಡುಗಲು ಕಾರಣವೇನು?

ಚೀನಾ—ಭಾರತ ಗಡಿಪ್ರದೇಶದಲ್ಲಿ ಸೈನಿಕರು ಭಯಾನಕ ಚಳಿಯನ್ನೂ ಕಡೆಗಣಿಸಿ ಸ್ವದೇಶ ರಕ್ಷಣೆಗಾಗಿ ಹೋರಾಡಲು ಬದ್ಧಕಂಕಣರಾಗಿದ್ದಾರೆ

ಈಗ ಮುಂಡಾಕ್ರಮಣಗಾರ ಚೈನಿ ಕಮ್ಯೂನಿಸ್ಟರು ಆಕ್ರಮಣವನ್ನು ಮುನ್ನಡೆಸದೆ 'ವಿರಾಮ ರೇಖೆ' ಎಂದು ಹೇಳಿ ಸುಮ್ಮಗಿರುವಂತಿದ್ದಾರೆ ನಮ್ಮ ಸೇನೆ ಕೂಡಾ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಬಂದು ಸೇರಿದೆ, ಇಂತಹ ವಿರಾಮ ಸನ್ನಿವೇಶದಲ್ಲಿ, ನೇಫಾದಲ್ಲಿ ನಮ್ಮ ನಾಶಕ್ಕೆ, ನಾವು ನಡುಗಲು ಕಾರಣವೇನೆಂಬುದರತ್ತ ಸಿಂಹಾವಲೋಕನಗೈದು ಮುಂದೆ ಪ್ರಯೋಜನಕ್ಕೆ ಬರುವ ಪಾಠಗಳನ್ನು ಕಲಿತುಕೊಳ್ಳುವದು ಬಹಳ ಒಳ್ಳೆಯದು. ರಣರಂಗವನ್ನು ವೀಕ್ಷಿಸಿದ ನಮ್ಮ ಪತ್ರಿಕಾ ಪ್ರತಿನಿಧಿಗಳು ನಮ್ಮ ಸೇನೆಯ ಸಿದ್ಧತೆಯ ಕುರಿತು ತಿಳಿಸುವ ಲೇಖನಗಳನ್ನು ತಮ್ಮ ತಮ್ಮ ಪತ್ರಿಕೆಗಳಿಗೆ ಕಳುಹಿಸಲೆಂದು ಅಣುಗೊಳಿಸಿರುವವರ ಶಾಯಿ ಒಣಗಿರಲಿಕ್ಕಿಲ್ಲ, ಅಷ್ಟರಲ್ಲಿ ಸಿಲಾ, ದೆರಾಂಗ್ ಜೋಂಗ್, ಬೊಮ್ಡಿ ಲಾ ಹಾಗೂ ಚಾಕು... ಒಂದರ ಹಿಂದೆ ಇನ್ನೊಂದರ ಪತನದ ಸುದ್ದಿ... ಇನ್ನೇನು ಚೈನಿಯರು ಪರ್ವತದ ಬುಡಕ್ಕನೇ ಬಂದು ಬಿಟ್ಟರೆಂಬ ಸುದ್ದಿಯ ಭೀಕರ ಬಿರುಗಾಳಿಯೇ ಎದ್ದುಬಿಟ್ಟಿತು, ಇದು ಜನತೆಯ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸಿತು. ಅದರ ಪರಿಣಾಮವಾಗಿ ಚೈನಿಯರನ್ನು ಸೋಲಿಸಲು ಸಾಧ್ಯವಿಲ್ಲವೆಂಬ ಕಟ್ಟುಕಥೆ ಹುಟ್ಟಿಕೊಂಡಿತು.

ಅದೃಷ್ಟವಶಾತ್ ನಮ್ಮ ವೀರ ಯೋಧರು ಈ ಕಟ್ಟುಕಥೆಯ ಜೊಂಪನ್ನು ಬಿಡಿಸಿದರು. ಅವರು ಮುಂದೊತ್ತಿ ಬರುತ್ತಿದ್ದ ಭಯಂಕರ ಚೈನಿ ಕಮ್ಯೂನಿಸ್ಟರಪ್ರವಾಹವನ್ನು ಧೈರ್ಯದಿಂದ ತಡೆದು, ಅರಿ ಬಲದ ನಾಶಕ್ಕೆ ಮುಂದಾದರು. ಚೈನಿಯರು ವಿನಾಶ ಕಂಡದ್ದು ಲಡಾಖಿನ ಚುಶೂಲಿನಲ್ಲಿ. ಅಲ್ಲಿ ಚೈನಿ ಕಮ್ಯುನಿಸ್ಟರು ತಮ್ಮ ಪೂರ್ಣ ಬಲದ ಪ್ರಯೋಗನಡೆಸಿರುವರು ಆದರೂ ನಮ್ಮ ಚುಶೂಲ್ ವಿಮಾನ ತಂಗುದಾಣವನ್ನು ವಶಪಡಿಸಿಕೊಳ್ಳಲಿಕ್ಕೆ ಅವರಿಂದಾಗಲಿಲ್ಲ. ಈ ಘಟನೆಯನ್ನು ಕೇಳಿದೊಡನೆ ಜೊಂಪು ಕಳೆಯಿತು, ಭ್ರಮೆ ದೂರವಾಯಿತು. ಯೋಚನಾ ಕುದುರೆ ನಾಗಾಲೋಟಕ್ಕಾರಂಭಿಸಿತು. ನೇಫಾ ನಾಶಕ್ಕೆ ಆದಲ್ಲೇ, ಅದಾವದೋ ಚಮತ್ಕಾರವಾಗಿರಬೇಕೆಂಬ ಅಭಿಪ್ರಾಯಕ್ಕೆ ಬಲ ಬರಲಾರಂಭಿಸಿತು.

ನಮ್ಮ ಅಧಿಕಾರ ವರ್ಗ ಹಾಗೂ ಧೀರ ಯೋಧರಿತ್ತಿರುವ ವರ್ಣನೆಯನ್ನು ವಿಶ್ಲೇಷಿಸಿದಲ್ಲಿ ಕೆಲ ವಿಷಯಗಳು ಬೆಳಕಿಗೆ ಬರುತ್ತವೆ. ಅದರಿಂದ ಚೈನಿಯರ ವ್ಯೂಹರಚನೆ, ಯುಕ್ತಿ ಹಾಗೂ ಯೋಜನಾಬದ್ಧ ಚಟುವಟಿಕೆಗಳ ಸ್ಪಷ್ಟ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಆದುದರಿಂದಾಗಿ ಸಿಲಾ ದೆರ್ರಾಂಗ್ ಮತ್ತು ಬೊಮ್ಡಿಲಾದಲ್ಲಿ ಭಯಂಕರ ನಾಶಕ್ಕೆ ತುತ್ತಾಗಬೇಕಾಯಿತಲ್ಲದೆ ಬಲಾತ್ಕಾರದಿಂದ ಹಿಂದೆಹಜ್ಜೆಯನ್ನಿಡಬೇಕಾಯಿತು ಅಗಣಿತ ಸಂಖ್ಯೆ, ಆಗ್ನೇಯಾಸ್ತ್ರಗಳು, ಉತ್ತಮ ಯುಕ್ತಿ ಅಲ್ಲದೆ ಪ್ರದೇಶದ ಪೂರ್ಣ ಪರಿಚಯ ಅಷ್ಟೇ ಅಲ್ಲ ಗೂಢಚಾರರ ಮೂಲಕ ದೊರಕುತ್ತಿದ್ದ ನಮ್ಮ ಸೇನೆಯ ಚಲನವಲನಗಳ ಸುದ್ದಿ ಇವುಗಳಿಂದಾಗಿ ಚೈನಿಯರಿಗೆ ಆಶ್ಚರ್ಯಕರ ರೀತಿಯಲ್ಲಿ ತಮ್ಮ ಕೈ ಚಳಕವನ್ನು ಕಾಣಿಸಲು ಸಾಧ್ಯವಾಯಿತು

ಕ್ರಮ ತೆಗೆದುಕೊಳ್ಳಲಾರಂಭಿಸಿದಾಗ ಕಾಮೆಂಗ್ ವಿಭಾಗದ ಹಳ್ಳಿ ಹಳ್ಳಿಗಳಲ್ಲಿ ಹಾಗೂ ಕಾಡುಗಳಲ್ಲಿ ಚೈನಿ ಗೂಢಚಾರರು ಮಾತ್ರವಲ್ಲದೆ ಸಿಪಾಯಿಗಳೇ ಇದ್ದರೆಂಬುದನ್ನು ಸ್ಪಷ್ಟಪಡಿಸಲು ಬೇಕಾದಷ್ಟು ಸಾಕ್ಷಿಗಳಿವೆ ಅವರಲ್ಲಿ ಹಲವಾರು ಜನರು ತ್ರಿವಿಷ್ಟಪದ ನಿರಾಶ್ರಿತರಂತೆ ಅಥವಾ ನೇಪಾ ಗುಡ್ಡಗಾಡಿನ ಜನರಂತೆ ವರ್ತಿಸಿಕೊಂಡಿದ್ದು, ಟಪ್ಪರ್ ರಸ್ತೆಯಲ್ಲೇ ಕೆಲಸದಲ್ಲಿದ್ದರು. ಅದೂ ಅಲ್ಲದೆ, ಚೈನಾದೊಂದಿಗಿರುವ ಸಾಧಾರಣ ೨೦೦ ಮೈಲು ಭಯಂಕರ ಕಾಡುಮಯ ಗಡಿಪ್ರದೇಶದಲ್ಲಿ ಚೈನಿಯರ ಚಲನವಲನೆಗಳ ಮೇಲೆ ಕಣ್ಣಿಟ್ಟುಕೊಳ್ಳುವದರಲ್ಲಿ ಕಷ್ಟವಾಗಿದ್ದುದು ಕೂಡ. ಹಿಂದೇಟಿನ ಕಾರಣವಿದೆ ಚೈನಿಯರನ್ನಲ್ಲಿ ಎದುರಿಸಬೇಕಾದಾಗ ಆ ಶೀತವಲಯ ಹವಾ ಗುಣದ ಪೂರ್ಣ ಅನುಭವ ಹಾಗೂ ಅಭ್ಯಾಸ ನಮ್ಮ ಸೈನಿಕರಿಗಿಲ್ಲದಿದ್ದದ್ದೂ ಒಂದು ಕಾರಣವಿದೆ. ಪ್ರಧಾನಿಯವರೇ ಪ್ರಕಟಿಸಿದಂತೆ ಸಮುದ್ರ ಮಟ್ಟಕ್ಕಿಂತಲೂ ಬಹಳ ಎತ್ತರ ಅವರು ಹೋಗಬೇಕಾಗಿತ್ತು. ಕನಿಷ್ಟ ಪಕ್ಷ ಎರಡು ಮೂರು ವಾರವಾದರೂ ಆವರಿಗೆ ಹಿಡಿದಿರಬಹುದು—ಆ ಹವೆಗೆ ನಮ್ಮ ಸೈನಿಕರು ಒಗ್ಗಿಕೊಳ್ಳಲು

ಆಶ್ಚರ್ಯಕರ ರೀತಿಯಲ್ಲಿ ಬಂದ ಚೈನಿ ಸೈನಿಕರ ಭಯಂಕರ ಪ್ರವಾಹದಿಂದಾಗಿ ನಮ್ಮ ಸೈನಿಕರು ಹಿಂದಕ್ಕೆ ಬರಬೇಕಾಯಿತೆಂಬುದನ್ನು ವಿವರಿಸಲಾಗಿದೆ. ಅಮೇರಿಕ ಸೈನಿಕ ವಿಭಾಗದ ತಜ್ಞ ಬ್ರಿಗೇಡಿಯರ್ ಜನರಲ್ ಕೆಲ್ಲಿ— ಕೊರಿಯಾ ಕಾಳಗಕಾಣದ ಅನುಭವವುಳ್ಳ ಸೇನಾಧಿಕಾರಿ ಹಾಗೂ ನೇಫಾದಲ್ಲಿರುವ ನಮ್ಮ ಸೇನಾ ವಿಭಾಗ ಅಧಿಕಾರಿಗಳ ಒಳಿ ಮಾತುಕತೆ ನಡೆಸಿರುವ ಸೇನಾಧಿಕಾರಿ—ತಿಳಿಸಿದಂತೆ ಭಯಂಕರ ಸೇನಾ ಪ್ರವಾಹವು ಯುದ್ಧಕೌಶಲ್ಯದ ಅಂಗವೇ ಇದೆ ಎಂಬುದನ್ನು ಚರಿತ್ರೆ ತಿಳಿಸುತ್ತದೆ. ಅದನ್ನು ಅರಿತುಕೊಳ್ಳದೆ ಆಧುನಿಕ ಕಲೆಯ ಯೆಕರಿನಲ್ಲಿ ಅರೆ ನಿದ್ದೆಗೆ ಎಡೆಗೊಡುವದು ಕಾಳಗಕ್ಕೆ ಶಕ್ಯತೆಯಲ್ಲ. ಕೆಲವು ವಿಷಯಗಳ ಕೆಲವರಿಗೆ ಅಸಾಧಾರಣ ಕಥೆ ಇರಬಹುದು. ಅವರ ಎದುರಾಳಿಗಳಿಗೂ ಇದು ಹಾಗೆ ಎನ್ನುವದು ಜಾಣತನದ ವಾದ ಇರುವದಿಲ್ಲ ಕೊರಿಯಾದಲ್ಲಿ ಪಡೆದಿರುವ ತನ್ನ ಅನುಭವದಿಂದ ಆ ಅಧಿಕಾರಿಯು ಒಂದು ಎಚ್ಚರಿಕೆಯ ಸೂಚನೆಯನ್ನಿತ್ತಿರುವನು. "ಚೈನಿಯರನ್ನೆದುರಿಸಲು ಎಲ್ಲಾ ಕಡೆಗಳಲ್ಲೂ ಎಲ್ಲಾ ವಿಧದಲ್ಲೂ ಸಕಲ ಸಿದ್ಧತೆಯಿಂದಿರಲೇಬೇಕು. ನಮ್ಮ ಅದ್ವಿತೀಯ ಸೈನ್ಯದ ಹೆಮ್ಮೆ ಒತ್ತಟ್ಟಿಗಿರಲಿ, ಚೈನಿಯರು ಕೊರಿಯಾದಲ್ಲಿ ನರಕವನ್ನು ಕಾಣಿಸಿರುವರು" ಚೈನಿಯರ ಕುತಂತ್ರದ ಅನುಭವ ನಮ್ಮ ಸೈನ್ಯದ ಕೆಲ ಅಧಿಕಾರಿಗಳಿಗೆ ಕಟಿದ್ದ ರಾಷ್ಟ್ರ ಸಂಸ್ಥೆಯಲ್ಲಿ ಕೊರಿಯಾದಲ್ಲಿದ್ದ ಅಧಿಕಾರಿಗಳಿಗೆ ಇದ್ದಿರಲೇಬೇಕು.

ಕಾಮೆಂಗ್ ವಿಭಾಗದಲ್ಲಿ ಏನು ಘಟಿಸಿತೆಂಬುದನ್ನು ತಿಳಿದುಕೊಳ್ಳಬೇಕಾದರೆ ಅಲ್ಲಿ ನಮ್ಮ ಸ್ಥಿತಿ ಹೇಗಿತ್ತೆಂಬುದರ ಸ್ಪಷ್ಟ ಅನುಭವ ಇರಬೇಕು. ಪರ್ವತ ಬುಡದಿಂದ ಹದಿನಾಲ್ಕು ಸಾವಿರ ಅಡಿಗಳ ಎತ್ತರದಲ್ಲಿರುವ ಸಿಲಾದ ವರೆಗೆ ಜೀಪು ಹೋಗಬಹುದಾಗಿರುವಂತಹ ರಸ್ತೆಯನ್ನ ರಚಿಸಲಾಗಿಯದೆ. ಅದು ಅತಿ ಕಡಿದಾದ ಪರ್ವತಗಳ ಮೇಲಿಂದಲೂ, ಆಳದ ಕಣಿವೆಗಳ ಮೂಲಕವೂ ಹಾದುಹೋಗುತ್ತದೆ. ಸಿಲಾದಿಂದ ದಕ್ಷಿಣಕ್ಕೆ ಕೆಳಕ್ಕಿಳಿದು ಬಂದಾಗ ದೆರ್ರಾಂಗ್ ಜೋಂಗ್ ಸಿಗುತ್ತದೆ. ಅಲ್ಲಿ ನಮ್ಮ ಸೇನಾ ವಿಭಾಗ ಒಂದರ ಮುಖ್ಯ ಕೇಂದ್ರವಿದೆ. ಇನ್ನೂ ಕೆಳಗೆ ದಕ್ಷಿಣದಲ್ಲಿ ಬೊಮ್ಡಿಲಾ ಇದೆ, ಹಾಗೆ ತೇಂಗಾ ಕಣಿವೆ ಮತ್ತು ಚಾಕು ಇವೆ. ಸಿಲಾ ದಕ್ಷದ ನಮ್ಮ ಸೇನಾ ವಿಭಾಗದ ಬಳಿ ಆಯುಧಗಳಿದ್ದು ಅವರು ಶತ್ರುಗಳನ್ನು ಬಹಳ ಹೊತ್ತಿನ ವರೆಗೆ ತಡೆದಿದ್ದರು. ತವಾಂಗಿನಿಂದ ಬಂದ ಚೈನಿ ಸೈನಿಕರು ಇಲ್ಲಿ ಸ್ವಲ್ಪ ಸಮಯದ ವರೆಗೆ ತಂಗಿದ್ದರು. ಅಲ್ಲಿ ರಸ್ತೆಯ ಇಬ್ಬದಿಗಳಲ್ಲೂ ಭಯಾನಕ ದಪ್ಪ ಕಾಡುಗಳಿವೆ. ಅಲ್ಲಿ ನಡು ಮಧ್ಯಾಹ್ನದಲ್ಲಿ ಸೂರ್ಯನನ್ನು ಕಾಣುವವಂತಿರಲಿ, ಅವನ ಕಿರಣವೂ ಒಳಗೆ ಪ್ರವೇಶಿಸುವಂತಿರುವದಿಲ್ಲ.

ಸಿಲಾದ ಇಬ್ಬದಿಗಳಲ್ಲಿ ಚೈನಿ ಸೈನಿಕರನ್ನು ಎದುರಿಸಬೇಕಾಗಿತ್ತು. ಅಲ್ಲಿ ಚೈನಿಯರು ಆಗಾಗ ದಿಢೀರನೆ ಬಂದು ಮುತ್ತಿಗೆ ಹಾಕುತ್ತಿದ್ದರು. ಆದರೆ ಅದೇ ಸೈನಿಕರಿಗೆ ನಮ್ಮ ಧೀರರು ಎದುರಾದಾಗ ಚೈನಿಯರು ಯುದ್ಧ ಮಾಡುತ್ತಿರಲಿಲ್ಲ. ಅವರ ಉದ್ದೇಶವಾದರೂ ಸೇನಾ ಪ್ರವಾಹವನ್ನು ಭಾರತೀಯ ಜವಾನರಿಂದ ಕಾದು ಹಿಡಿಯಲಿಕ್ಕಾಗ ಕೊಡದೆಂಬುದಾಗಿತ್ತು. ಜಂಗಿನಿಂದ ಬರುತ್ತಿದ್ದ ಸೇನಾ ಪ್ರವಾಹಕ್ಕೆ ಸಹಾಯವು ಬೊಮ್ಡಿಲಾದತ್ತ ಕಡೆಯಿಂದ ಮಾತ್ರ ಬರುತ್ತಿತ್ತಲ್ಲದ ಭೂತಾನದಿಂದಲೂ ಬರುತ್ತಿತ್ತು. ಸಿಲಾದ ಪೂರ್ವದ

(೧೦ನೇ ಪುಟ ನೋಡಿರಿ)

ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.
ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ
ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

## ಶುದ್ಧ ಹರಟೆ

# ಹೋಟೇಲಾರಾಧಕರಾಗಿರಿ

**ಹೋಟೇಲುಗಳಿಗೆ ಹೋಗುವುದು** ಕೆಟ್ಟದೆಂದು ಪ್ರಪಂಚವೇ ಒಪ್ಪುತ್ತದೆ. ಹೋಟೇಲಿನವರು ಕೇವಲ ಹಣದಾಸೆಗಾಗಿ ಕೆಲಸ ಮಾಡುವವರು. ನಮ್ಮ ಆರೋಗ್ಯ ಸೌಖ್ಯ. ಅವರಿಗೇನು ಬೇಕು? ಅಲ್ಲ, ನಾವು ವ್ಯರ್ಥವಾಗಿ ಒಂದಕ್ಕೆ ನಲ್ಕರಷ್ಟು ಹಣ ವೆಚ್ಚ ಮಾಡುವುದಕ್ಕಿಂತ ಮನೆಯಲ್ಲಿ ಎಲ್ಲರಿಗೆ ಮೃಷ್ಟಾನ್ನ ಮಾಡಿಸ ಬಹುದು. ಈ ಆಹಾರದಲ್ಲಿ ಮುಖ್ಯವಾಗಿರಬೇಕಾದ ನೈರ್ಮಲ್ಯವೇ ಈ ಹೋಟೇಲುಗಳಲ್ಲಿಗುವುದಿಲ್ಲ—ಎಂಬುದನ್ನು ಯೋಚಿಸಿದಾಗ ಹೋಟೇಲುಗಳಿಗೆ ಹೋಗಲೇ ಬಾರದೆಂದು ತೋರುತ್ತದೆ ನಮ್ಮ ಹಿರಿಯರಂತೂ ಹೋಟೆಲುಗಳಿಗೆ ಹೋಗುವುದು ಪಂಚ ಮಹಾ ಪಾತಕಗಳಲ್ಲಿ ಒಂದೆಂದು ಸಾರಿ ಹೇಳಿದ್ದಾರೆ. ಹೋಟೆಲು, ಇಸ್ಪೀಟು, ಸಿನೇಮಾ, ಹರಟೆಗಾರಿಕೆ ಇತ್ಯಾದಿಗಳು ಒಂದೇ ವರ್ಗಕ್ಕೆ ಸೇರಿದವುಗಳೆಂದು ಅವರು ತಮ್ಮ ಮಕ್ಕಳಿಗೆ ಸಾಯುವ ತನಕ ಉಪದೇಶಿಸಿದ್ದಾರೆ. ನಮ್ಮ ಹಿರಿಯರು ಪುರೋಹಿತರು ಈ ಹುಡುಗರಿಗೆ ಮೋಲ್ಪಂಕ್ತಿಯನ್ನು ಹಾಕಿಕೊಡ ಬಾರದೆಂಬ ಸದುದ್ದೇಶದಿಂದಲೇ ಹೋಟೆಲುಗಳಿಗೆ ಗುಟ್ಟಾಗಿಯೇ ಹೋಗುತ್ತಿದ್ದರು.

ನಮ್ಮ ಮನೆಯಲ್ಲಿ ಸಿಗುವ ತಿಂಡಿಯು ಔಷಧಿಯ ಪ್ರಮಾಣದಲ್ಲಿರುತ್ತದೆ ಅಷ್ಟು ಕೂಡಾ ಸಿಗುವುದು 'ಹೆಚ್ಚು ತಿಂದರೆ ಅಜೀರ್ಣವಾದೀತೆಂದು" ಜಾಗೃತೆ ಹೇಳಿದ ನಂತರ. ಇದರಿಂದಲೇ ನಮ್ಮ ಯುವಕರಿಗೆ ಹೋಟೆಲಿನ ದಾರಿ ನೋಡಬೇಕಾಗಿ ಬಂದುದು ಮನೆಯಲ್ಲಿ ಅಜೀರ್ಣಕ್ಕೆ ಎಡೆಯಿಲ್ಲವಾದುದರಿಂದ ನಾವದನ್ನು ಈ ಹೋಟೆಲುಗಳಿಂದ ಕೊಂಡುಕೊಳ್ಳಬೇಕಾಯಿತು. ಹೋಟೆಲುಗಳಲ್ಲಿಯ ತಿಂಡಿಗಳ ಹೆಸರು ಅದೆಷ್ಟು ಮನೋರಂಜಕವಾಗಿರುವುದು! ನಮ್ಮ ಮನೆಯವರಿಗೆ ಹಾಗೆ ಹೆಸರು ಕೊಡುವ ಕಲೆ ಬಾರದು. ಅನುಪಮ ಸುಂದರಿಯನ್ನು ಸುಬ್ಬಿ ಎಂದಾಗಲೀ ತಿಮ್ಮಕ್ಕ ಎಂದಾಗಲೀ ಕರೆಯುವುದಕ್ಕಿಂತ ರಾಗಿಣಿ (ಬೋಗುಣಿ....?) ಲಲಿತ, ಮೋಹಿನಿ. ಎಂದು ಕರೆಯುವುದು ಚಂದವಲ್ಲವೆ? ಮನೆಯ ಸಜ್ಜಿಗೆ ಉಪ್ಪಿಟ್ಟು ರುಚಿಯಾಗಿರಬಹುದು ಆದರೆ ಅದನ್ನೇ ಕೇಸರೀ ಭಾತ್, ಕಾಂದಾ ಭಾತ್, ಎಂಬ ಹೆಸರಿನಿಂದ ಕರೆದರೆ, ಈ ಹೆಸರಿಗೇ ನಮ್ಮ ಮನ ಸೋತು ಹೋಗಿ ಆ ತಿಂಡಿಯನ್ನು ಅನಾಯಾಸವಾಗಿ ಮತ್ತೆ ಮತ್ತೆ ತಿನ್ನುತ್ತೇವೆ ಮನೆಯವರ ಈ ಮೌಢ್ಯದಿಂದಲೇ ಇಂದಿನ ಕಲಾಪ್ರೇಮಿಗಳಾದ ಜನರು, ಯುವಕರು, ವಿದ್ಯಾರ್ಥಿಗಳು ಹೋಟೆಲುಗಳಿಗೆ ಧಾಳಿಯಿಡಲು ಪ್ರಾರಂಭಿಸಿದುದು.

ಸಾಮಾನ್ಯವಾಗಿ ವಿದ್ಯಾರ್ಥಿಗಳೇ ಹೋಟೇಲುಗಳಿಗೆ ೧ನೇ ನಂಬ್ರದ ಗಿರಾಕಿಗಳು ಬಾದಶಹರಿಗೆ ದೊಡ್ಡ 'ಜವಾನ' ಹೇಗೆ ಇಷ್ಟವೋ, ಅಂತೇನೇ ಪಟ್ಟಣದ ನವನಾಗರಿಕತೆಯ ಗಾಳಿ ಸೋಂಕಿದವರಿಗೆ ಅನೇಕ ಹೋಟೇಲುಗಳನ್ನು ಚಾಲ್ತಿಯಲ್ಲಿಟ್ಟುಕೊಳ್ಳುವುದೆಂದರೆ ಬಹು ಸಂತೋಷ. ಒಂದೂರಲ್ಲಿ ಸಿಹಿ ತಿಂಡಿಗಳಿಗೆ....ವಿಲಾಸ, ಖಾರದ ತಿಂಡಿಗೆ, ಎಣ್ಣೆ ತುಪ್ಪದ ತಿಂಡಿಗಳಿಗೆ....ಪಾಹಲು, ಕಾಫಿ, ಚಾ, ಮಸಾಲೆ ದೋಸೆ, ತುಪ್ಪದೋಸೆಗಳಿಗೆ ಉಡುಪಿ ಶ್ರೀ ಕೃಷ್ಣ ಭವನವೆಂದು ಹೀಗೆ ಹೋಟೇಲುಗಳಿಗೆ ಅವುಗಳ(ಯಾ ತಮ್ಮ) ಯೋಗ್ಯತಾನುಸಾರವಾಗಿ ಕೃಪಾಕಟಾಕ್ಷವನ್ನು ಪಟ್ಟಣಿಗರು ಬೀರುತ್ತಾರೆ.

ಈ ಹೋಟೆಲುಗಳಿಗೆ ನಮ್ಮ ದರ್ಶನ ಭಾಗ್ಯ ದೊರಕುವುದಕ್ಕೆ ಅಲ್ಲಿಯ ತಿಂಡಿಯು ಮಾತ್ರ ಕಾರಣವಲ್ಲ. ಅಲ್ಲಿರುವ ಸಪ್ಲಾಯರ್ (ಮಾಣಿ) ಕೂಡಾ ಒಂದು ಮುಖ್ಯ ಕಾರಣವಾಗಿದ್ದಾನೆ. ಪ್ರಪಂಚದಲ್ಲಿ ನಾವು ಯಾರ ಮೇಲೆ ಬೇಕಾದರೂ ನಮ್ಮ ಜೋರು ಜಬರ್ದಸ್ತಿ, ನಡೆಸ ಬಹುದು. ಆದರೆ ಈ ಮಾಣಿಗಳ ಮೇಲೆ ನಮ್ಮದೇನೂ ಬೇಯುಲಾರದು. ನನ್ನ ಮಿತ್ರನೊಬ್ಬನು ಬಂದು ಹೋಟೇಲಿನ ಒಬ್ಬ ಮಾಣಿಗೆ ಪೆಪ್ಪರುಮೆಂಟು ಕೊಟ್ಟು ಬೆನ್ನು ಚಪ್ಪರಿಸಿದ್ದನ್ನು ಕಂಡಿದ್ದೇನೆ. ಆದರೇ ಅದೇ ಮಿತ್ರ ಇನ್ನೊಂದು ಬಾರಿ ಬೇರೊಬ್ಬ ಮಾಣಿ ತಂದು ಕೊಟ್ಟ ಹಂಳಿಣ್ಣೆ ವಾಸನೆಯ ಕಾಫಿಯನ್ನು ಚಪ್ಪರಿಸುತ್ತಾ ಕುಡಿಯುವುದನ್ನು ನೋಡಿದ್ದೇನೆ ಮಾಣಿಯೊಡನೆ ಅಷ್ಟು ಭಯ ಅವನಿಗೆ!

ಹೋಟೇಲಿನ ರಚನಾತ್ಮಕ ಸೂತ್ರಧಾರನಾದ ಈ ಮಾಣಿಯ ವಯಸ್ಸು ೨೦ಕ್ಕೆ ಮೀರಿರ ಬಾರದು. ಮೀರಿದರೆ ಅವನಲ್ಲಿರುವ ಚಪಲತೆ, ಮಾನುಷ ಗುಣವೇ ಮೊದಲಾದುವುಗಳು ಮಾಯವಾಗುತ್ತವೆ. ತಾನೊಬ್ಬ ಗಣ್ಯನಾದ ಮನುಷ್ಯನೆಂದು ಭಾವಿಸುತ್ತಾನೆ ಅವನು ತಿಂಡಿ ತಂದಿಟ್ಟರೂ, ನಮ್ಮ ಇರವನ್ನೇ ತಿಳಿಯದವನಂತೆ ಸಾವಕಾಶದಿಂದ ತಂದಿಟ್ಟು ಪರಾರಿಯಾಗುತ್ತಾನೆ. ತಿಂಡಿಯ ಲೆಕ್ಕ ಸಿಗಬೇಕಾದರೆ ಅವನಿಗೆ ನಾವು ಚಕ್ರವರ್ತಿಯ ಬಿರುದನ್ನು ದಯಪಾಲಿಸದೆ ನಿರ್ವಾಹವಿಲ್ಲ. ಇಷ್ಟಾಗುವಾಗ ಅವನ ವದನಾರವಿಂದಕ್ಕೆ ಸರ್ವ ವಿಧ ಪಾರಂಗಳಿಕತನದ ಕಳೆ ಬರುತ್ತದೆ. ಆಗ ನಿಮ್ಮ ಕೋಪ, ಜಿಗುಪ್ಸೆ, ಯಾವುದೂ ಅವನ ಮೇಲೆ ಸೋಂಕಲಾರದು.

ಈ ಮಾಣಿ ನಾವು ಬಂದುದನ್ನು ಕಂಡೊಡನೆಯೇ ತ್ಯಾಗ ರಾಜರ ಒಂದು ಕೀರ್ತನವನ್ನಾಗಲೀ ಯಾ ಸಿನೇಮಾದ ಒಂದು ತುಂಡು ಪದ್ಯವನ್ನು ಮೆಲುಕು ಹಾಕುತ್ತಲಾಗಲೀ 'ಚಿಟಿಕೆ' ಹೊಡೆದುಕೊಂಡು ಬರುತ್ತಾನೆ. ಬಂದವನೇ 'ಏನು ಬೇಕು ಸಾರ್?' ಎಂದು ಕೇಳುತ್ತಾನೆ. ಏನಿದೆ? ಎಂದು ಕೇಳುವುದೇ ತಡ! ಬಟಾಟೆ ಅಂಬಡೆ, ಅವಲಕ್ಕಿ, ಸಜ್ಜಿಗೆ, ಕಾಂದಾಬಾತ್, ಮೊಸರು ಒಡೆ, ಜಿಲೇಬಿ (ಇತ್ಯಾದಿ) ಎಂದು ಒಂದೇ ಉಸುರಿನಲ್ಲಿ ಹೇಳಿ ಬಿಡುತ್ತಾನೆ. ಈ ಶಬ್ದ ಸಾಗರದಲ್ಲಿ ಮುಳುಗಿ ಹೆಣಗಾಡುವುದನ್ನು ನೋಡಿ ಅವನು ಮತ್ತೇ ಬೇಗ ಬೇಗ ಎಂದು ಎಚ್ಚರಿಕೆ ಕೊಡುತ್ತಾನೆ. ಪೇಚಾಟದಲ್ಲಿ ಸಿಕ್ಕ ನೀವು ಬಾಯಿಗೆ ಬಂದ ಒಂದು ತಿಂಡಿಯ ಹೆಸರು ಹೇಳದೆ ಉಪಾಯವೇ ಇಲ್ಲ.

ಹಾಗೆಂದು ಕೆಲವು ಹೋಟೇಲುಗಳ ಮಾಣಿಗಳು ಒಳ್ಳೆಯವರಿರುತ್ತಾರೆ. ನಮಗಾಗುವಂತೆ ಉಪಚಾರ ಮಾಡುತ್ತಾರೆ. ಮನೆಯಲ್ಲಿ ನಮ್ಮ ಇನಿಯರೂ ಮಾಡದಷ್ಟು ಉಪಚಾರವನ್ನು ರಾಗವಾಗಿ ಮಾಡಿಬಿಡುತ್ತಾರೆ. ಒಮ್ಮೆ ತನ್ನ ಹುಳ ತುಂಬಿದ ಹಲ್ಲುಗಳನ್ನು ತೋರಿಸಲು ವದನಾರವಿಂದವನ್ನೂ ತೆರೆಯುತ್ತಾರೆ.

ಆಧುನಿಕ ಕಾಲಗಲ್ಲಿ ಹೋಟೆಲಿಗೆ ಹೋಗದ ವ್ರತವನ್ನು ಯಾರೂ ಇಟ್ಟುಕೊಳ್ಳಬೇಡಿರಿ ಒಂದು ವೇಳೆ ಇಟ್ಟುಕೊಂಡಿರಾದರೆ ಈಗಿನ ಕಾಲದಲ್ಲಿ ತಾವು ಮಾಡುವ ಒಂದು ಪಾತಕವೇ ಆಗಬಹುದು. ಹೋಟೆಲಿಗೆ ಹೋಗಿ ಸಾಕಷ್ಟು ತಿಂದು 'ಡಣ್' ಎಂದು ಹಣ ಬಿಸಾಡಿ ಬರುವುದು ಒಳ್ಳೆಯದೋ, ಮನೆಯಲ್ಲಿ ಕಾದು, ಕಾದು, ಬೈತಿಂದು ಕೊನೆಗೆ, ಅರದ ಮುದ್ದೆಯೂ ಖಾರವೂ ಆದ ಸಜ್ಜಿಗೆ ತಿನ್ನುವುದು ಒಳ್ಳೆಯದೋ? ಮನೆಯಲ್ಲೇನು ಧರ್ಮಕ್ಕಾಗುತ್ತದೆಯೋ? ಆದುದರಿಂದ ಯಾರಾದರೂ ಹೋಟೆಲಿಗೆ ಹೋಗದವರಿದ್ದರೆ ಇಂದಿನಿಂದಲೇ ಹೋಟೆಲಿಗೆ ಹೋಗಲು ಪ್ರಾರಂಭಿಸಿ ಆದಾಯ ಹೆಚ್ಚಿಸಿಕೊಳ್ಳಿರಿ ದೇಶದ ಈಗಿನ ಪರಿಸ್ಥಿತಿಯಲ್ಲಿ ಮನೆಯಲ್ಲಿ ತಿಂಡಿ ತಯಾರಿಸುವುದನ್ನು ತ್ಯಜಿಸಿರಿ. ಹೆಚ್ಚು ಉಳಿಸಿರಿ.

**—ಶ್ರೀ ಬಿ ನಾರಾಯಣ ಜೋಗಿತ್ತಾಯ.**

---

(೧ನೇ ಪುಟದಿಂದ)

ಳ ಅಸ್ಥಿರತೆಗಳೇ ಇಂದಿನ ಶಿಕ್ಷಣದ ಕೆಳಮಟ್ಟಕ್ಕೆ ಮೂಲ ಕಾರಣ. ಒಂದು ಗಿಡ ನೆಟ್ಟು ಪ್ರತಿ ದಿನ ಅದನ್ನು ಕಿತ್ತು ನೋಡುವ ಹವ್ಯಾಸ ಸರಿಯಲ್ಲ. ಈ ಕುಂದು ಕೊರತೆಗಳು ಮುಖ್ಯವಾದುವು. ಇವನ್ನು ತಿದ್ದಿಕೊಂಡು ಸರಕಾರ ತನ್ನ ಕರ್ತವ್ಯವನ್ನು ನಿರ್ವಹಿಸುವುದು ಅತ್ಯಗತ್ಯ.

ಇಡಿಯ ಭಾರತಕ್ಕೆ ಅನ್ವಯವಾಗುವಂತೆ ಏಕ ರೂಪದ ಶಿಕ್ಷಣ ಕ್ರಮವು ಜ್ಯಾರಿಗೆ ಬಂದು, ಈ ವಿಭಾಗವು ಕೇಂದ್ರ ಸರಕಾರದ ಕೈಯಲ್ಲೇ ಉಳಿದರೆ ಕ್ಷೇಮವಾದೀತೇ ಎಂಬುದು ಕೂಡ ವಿಚಾರಾರ್ಹ ಸೂಚನೆ.

---

**ಉಡುಪಿ ಸಬೋರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ**

O. S. 42/1962.

ಗೋಪಾಲಕೃಷ್ಣ ಉಪಾಧ್ಯ ಕೂಡಾ —ವಾದೀರು,

ಮತ್ತು

ಪದ್ಮಯ್ಯ ಶೆಟ್ಟಿ ಕೂಡಾ—ಪ್ರತಿವಾದಿರು.

ಇವರೊಳಗೆ

ಪ್ರತಿವಾದಿರು:— (೫) ನರಸಿಂಹ ಶೆಟ್ಟಿ—
(೯) ವೆಂಕಪ್ಪ ಯಾನೆ ಮಂಜಯ್ಯ ಶೆಟ್ಟಿ
—೨ನೇ ಪ್ರತಿವಾದಿ ಕೃಷ್ಣಮ್ಮ ಶೆಟ್ತಿ ಮಕ್ಕಳು,

೫ನೇಯವನು ಕುಂದಾಪುರ ತಾಲೂಕು ಉಳ್ಳೂರು ಗ್ರಾಮದಲ್ಲಿಯೂ —

೯ನೇಯವನು ಬಸ್ರೂರು ಗ್ರಾಮದ ಪಾನಕಕಟ್ಟೆಯಂಬಲ್ಲಿಯೂ ಇರುವವರು—

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ನೀವು ಪಗ್ಯೆರೆರು ವಾದಿರಿಗೆ ತಾರೀಕು 28—5—1951ರಲ್ಲು ರಿಜಿಸ್ಟ್ರಿ ನಿಶಿಂ ರೂಪಾಯಿ 100/-ಕ್ಕೆ ಬರಕೊಟ್ಟ ಕಡುಪತ್ರಾ ವೇಜಿನ ಬಾಬ್ತು ಅಸಲು ಬಡ್ಡಿ ಖರ್ಚುಗಳನ್ನು ಬರಮಾಡಿಕೊಳ್ಳುವರೆ ವಾದಿರು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು 6.3.1963ಕ್ಕೆ ಇಟ್ಟಿರುತ್ತದೆ. ಉದಾಹರಿಸುವಂಥಾದ್ದಿದ್ದರೆ ಅದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

P. N. Madhava Rao,
Vakil for Plaintiffs.
Udipi, 19—2—1963.

---

**ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ**

A. S. No. 102/1962

ಸದಾನಂದ ಯಾನೆ ಶಿವಾನಂದ ಕೋಟ್ಯಾಯಾನ್ —ಅಪೆಲಾಂಟ್

ಮತ್ತು

ಸೀನ ಪೂಜಾರಿ ಕೂಡ —ಎದ್ರಿರು.

ಮೇಲಿನ ಅಪೀಲಿನಲ್ಲಿ 4ನೇ ಎದ್ರಿ ಕಾರ್ಕಳ ತಾಲ್ಲೂಕು ಕುಕ್ಕುಂದೂರು ಗ್ರಾಮದ ನಕ್ರೆ ಹೊಸಮಕ್ಕಲು ಸೀನ ಪೂಜಾರಿಗಳ ಮಗ ವಿಠಲ ಸೀನರಿಗೆ ತಿಳಿಸುವುದೇನಂದ್ರೆ,

ಕಾರ್ಕಳ ದಿ. ಮು. ಕೋರ್ಟಿನ O. S. No. 59/1961ನೇ ದಾವೆಯ ಡಿಕ್ರಿ ಮೇಲೆ ಮಾಡಿದ ಮೇಲಿನ ಅಪೀಲು ನಿಮಗೆ ನೋಟೀಸಿನ ಬಗ್ಗೆ ತಾರೀಕು 8—3—1963ಕ್ಕೆ ಇಟ್ಟಿರುತ್ತದೆ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

(Sd) Baikadi Vasudeva Rao
Advocate for Appellant
ಕಾರ್ಕಳ, ತಾ. 19—2—1963

---

**ಇಂದಿನ ಅಪವ್ಯಯವು ಮುಂದಿನ ಅಪಾಯಕ್ಕೆ ದಾರಿ**

## ಸ್ವಾತಂತ್ರ್ಯದ ಮಹಾಚಾರ್ಯ

# ಜಾರ್ಜ್ ವಾಷಿಂಗ್‌ಟನ್

ಅಮೇರಿಕದ ಆಚೆಯೊಂದರ ಕಾಲದ ಅವಧಿಯಲ್ಲಿ ತಮ್ಮ ಹೆಜ್ಜೆಯ ಗುರುತುಗಳನ್ನು ಶಾಶ್ವತವಾಗಿ ಉಳಿಸಿ ಹೋಗಿರುವ, ರಾಷ್ಟ್ರವನ್ನು ಮುನ್ನಡೆಸಿದ ಅದರ ಮಹಾ ಅಧ್ಯಕ್ಷರುಗಳ ಕತೆಯೇ ಆಗಿದೆ.

ಅಮೇರಿಕದ ಅಧ್ಯಕ್ಷರುಗಳಲ್ಲಿ ಹಲವರು ಗುಡಿಸಲುಗಳಿಂದ ಹಲವರು ಮಹಲುಗಳಿಂದ ಬಂದರು. ಹೀಗೆ ಎಲ್ಲ ಮಜಲುಗಳವರೂ ಅಮೇರಿಕದ ಅಧ್ಯಕ್ಷರುಗಳಾಗಿದ್ದಾರೆ. ಸಾಧಾರಣ ವರ್ಗದಿಂದ ಬಂದವರಿಗೆ ಪ್ರತಿಕೂಲವೇನೂ ಆಗಲಿಲ್ಲ; ಹಾಗೆ ಅಗಾಧ ಐಶ್ವರ್ಯವಂತರಿಗೆ ಅನುಕೂಲವೂ ಇರಲಿಲ್ಲ; ಅವರು ಬಂದುದು ಸಮಾಜದ ಯಾವ ವರ್ಗದಿಂದಲೇ ಆಗಿರಲಿ ಉನ್ನತಮಟ್ಟ ಅಥವಾ ಕೆಳಗಿನ ಮಟ್ಟ—ಅವರಲ್ಲಿ ಒಂದು ವಿಷಯದಲ್ಲಿ ಸಮಾನಧರ್ಮವಿತ್ತು. ಸ್ವಾತಂತ್ರ್ಯ ವ್ಯಕ್ತಿ ಸ್ವಾತಂತ್ರ್ಯ, ತಮ್ಮ ದೇಶದ ಸ್ವಾತಂತ್ರ್ಯ, ಜಗತ್ತಿನ ಸ್ವಾತಂತ್ರ್ಯಗಳಲ್ಲಿ ಅವರಿಗಿದ್ದ ಪ್ರೀತಿಯೇ ಆ ಸಮಾನಧರ್ಮ. ಅವರೆಲ್ಲಾ ಸೇರಿ ಅಮೇರಿಕದ ಪ್ರಜಾಪ್ರಭುತ್ವಕ್ಕೆ—ಸ್ವಾತಂತ್ರ್ಯ ಮತ್ತು ಸಮಾನತೆಗಳಿಗೆ ಎಲ್ಲ ಜನರಿಗಿರುವ ಹಕ್ಕಿಗೆ—ಬುನಾದಿ ಹಾಕಿದರು.

ಥಾಮಸ್ ಜೆಫರ್ಸನ್, ಜೇಮ್ಸ್ ಮನ್ರೋ, ಅಬ್ರಹಾಂ ಲಿಂಕನ್, ವುಡ್ರೋ ವಿಲ್ಸನ್, ಫ್ರಾಂಕ್ಲಿನ್ ರೂಸ್‌ವೆಲ್ಟ್ ಒಬ್ಬೊಬ್ಬರೂ ಸ್ವಂತ ಗುಣಗಳಿಂದ, ತಮ್ಮದೇ ರೀತಿಯಲ್ಲಿ ಮಹಾಪುರುಷರು.

ಇವರ ಪಂಕ್ತಿಯ ಅತ್ಯಂತ ಶ್ರೇಷ್ಠರಲ್ಲಿ ಜಾರ್ಜ್ ವಾಷಿಂಗ್‌ಟನ್ ಒಬ್ಬ. ಅಮೇರಿಕದ ರಾಷ್ಟ್ರಪಿತ ಆತ; ಆತ ಅಮೇರಿಕಕ್ಕೆ ಅತ್ಯಮೂಲ್ಯವಾದ ಎರಡು ಕೊಡುಗೆಗಳನ್ನಿತ್ತ; ಒಂದು ಸ್ವಾತಂತ್ರ್ಯ; ಕ್ರಾಂತಿಕಾರೀ ಸೈನ್ಯದ ಪ್ರಧಾನ ಸೇನಾನಿಯಾಗಿ ಇತ್ತುದು; ಎರಡನೆಯದು ಪ್ರಜಾಪ್ರಭುತ್ವ—ಅಮೇರಿಕದ ಪ್ರಥಮ ಅಧ್ಯಕ್ಷನಾಗಿ ದೇಶಕ್ಕೆ ಇತ್ತುದು.

ಸ್ವಾತಂತ್ರ್ಯ ವಿಷಯ ಮೊದಲು ವಿವೇಚಿಸೋಣ. ಅಮೇರಿಕದ ಕ್ರಾಂತಿಗೆ ಆತನಿಂದ ಸಂದ ಕಾಣಿಕೆ ಯಾವುದು? ಭಾರತದ ಸ್ವಾತಂತ್ರ್ಯಕ್ಕೆ ಗಾಂಧೀಜಿಯ ಕೊಡುಗೆಯಂತೆ ಅದೂ ಅಪಾರ. ಸೈನಿಕನೂ ರಾಜಕಾರಣಿಯೂ ಆಗಿದ್ದ ಆತ ಇಲ್ಲದಿದ್ದರೆ ಅಮೇರಿಕಕ್ಕೆ ಸ್ವಾತಂತ್ರ್ಯ ಲಭಿಸುತಿತ್ತೇ ಎಂದು ಈಗಲೂ ಜನರು ಆಶ್ಚರ್ಯಪಡುತ್ತಾರೆ.

ಸ್ವಾತಂತ್ರ್ಯ ಯುದ್ಧದಲ್ಲಿಯ ಆತನ ಸಾಧನೆಗಳು ದಂತಕತೆಗಳೇ ಆದವು. ಈ ಕತೆಗಳು ಆತನ ಯಶಸ್ಸಿನ, ಸೋಲಿನ, ಆತ ಪಟ್ಟ ಕಷ್ಟ ಕಾರ್ಪಣ್ಯಗಳ ಹೆಚ್ಚು ದಂತೆಲ್ಲಾ ಬೆಳೆದವು ಕೊನೆಗೆ ದೇಶ ಬಾಂಧವರ ದೃಷ್ಟಿಯಲ್ಲಿ ಆತ ದೇವಪ್ರೇಮದ ಸಂಕೇತವಾದ.

ರಾಜಕೀಯಕ್ಕೆ ಮತ್ತು ಯುದ್ಧರಂಗಕ್ಕೆ ಧುಮುಕುವ ಮೊದಲೇ ವಾಷಿಂಗ್‌ಟನ್ ವರ್ಜೀನಿಯದಲ್ಲಿನ ತನ್ನ ಮೌಂಟ್ ವರ್ನಾನ್ ಎಸ್ಟೇಟಿನಲ್ಲಿ ಸುಸಂಸ್ಕೃತ ಕೃಷಿಕನಾಗಿ ಶಾಂತ ಜೀವನ ನಡೆಸುತ್ತಿದ್ದ. ಕೆಲಕಾಲ ರಾಜ್ಯ ಶಾಸನ ಸಭೆಯ ಸದಸ್ಯನಾಗಿ ಸೇವೆ ಸಲ್ಲಿಸಿದ.

ಆ ಸಮಯದಲ್ಲಿ ಜನರಲ್ಲಿ ಅಸಂತೃಪ್ತಿ ಮತ್ತು ಅಶಾಂತಿ ತಾನೇತಾನಾಗಿ ಅಮೇರಿಕದ ಕಾಲೋನಿಗಳಲ್ಲೆಲ್ಲಾ ಹರಡಿತು. ಇದಕ್ಕೆ ಬ್ರಿಟನ್ನಿನ ರಾಜಕೀಯ ಮತ್ತು ಆರ್ಥಿಕ ನೀತಿಗಳೇ ಕಾರಣವಾಗಿದ್ದವು. ೧೭೭೫ರ ಹೊತ್ತಿಗೆ ಈ ಬಿಕ್ಕಟ್ಟು ಆಸ್ಫೋಟಕ ಅವಸ್ಥೆಗೇರಿತು. ಪರಿಸ್ಥಿತಿಯನ್ನೆದುರಿಸಲು ಜನತೆ ತನ್ನ ಶಕ್ತಿಸಂಗ್ರಹ ಮಾಡತೊಡಗಿತು.

ಇದಾದನಂತರ ೧೭೭೫ರಲ್ಲಿ ಬ್ರಿಟನ್ನಿಗೂ, ಅಮೇರಿಕನ್ ಕಾಲೋನಿಗಳಲ್ಲಿನ ರೈತರಿಗೂ ಯುದ್ಧ ಪ್ರಾರಂಭವಾಯಿತು, ಈ ಯುದ್ಧವೇ ಕೊನೆಗೆ ಅಮೇರಿಕಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟದ್ದು.

ಯುದ್ಧ ನಾಯಕತ್ವ ವಹಿಸುವಂತೆ ತನ್ನ ಜಮೀನಿನ ಮನೆಯಲ್ಲಿದ್ದ ವಾಷಿಂಗ್‌ಟನ್ನನಿಗೆ ಕರೆ ಬಂತು. ಆ ಕರೆ ಬಂದಾಗ ಪರಿಸ್ಥಿತಿ ತೀರ ನಿರಾಶಾದಾಯಕವಾಗಿತ್ತು. ಎರಡನೇ ಕಾಂಟಿನೆಂಟಲ್ ಕಾಂಗ್ರೆಸ್ಸಿನಲ್ಲಿ ಆತನನ್ನು ಸರ್ವಾನುಮತದಿಂದ ಜನರಲ್ ಆಗಿಯೂ ಪ್ರಧಾನ ಸೇನಾನಿಯಾಗಿಯೂ ಆರಿಸಲಾಯಿತು.

ಅನಂತರದ ಆರು ವರ್ಷಗಳಂತೂ ತುಂಬಾ ತೊಡಕಿನವು ಬರೀ ಕಷ್ಟಕಾರ್ಪಣ್ಯ, ಹೋರಾಟ, ಅಪಮಾನ, ಬರಿಗಾಲಿನ ಸೈನ್ಯಯಾತ್ರೆ, ಹಸಿವಿನ ಯಾತನೆ, ಗುಂಡುಗಳೇ ಇಲ್ಲದಂತಹ ಬಂದೂಕುಗಳು, ಇಂಥ ಉತ್ಕಟ ಪರಿಸ್ಥಿತಿ.

ಈಗ ಊಹೆಗೂ ಕಡಿಮೆಯಿಲ್ಲದಷ್ಟು, ಮುಂದಿಕೆಲ ಮಾಡಲಾಗದಂತಹ ಸ್ಥಿತಿಯಲ್ಲಿ ಶಿಬಿರದಲ್ಲಿದ್ದಾರೆ ಇದಕ್ಕೆ ಕಾರಣ ಅವರ ಕಾಲುಗಳಿಗೆ ಪಾದರಕ್ಷೆಗಳಿಲ್ಲ ಅವರು ಹೆಚ್ಚು ಕಡಿಮೆ ನಗ್ನಸ್ಥಿತಿಯಲ್ಲಿಯೇ ಇದ್ದಾರೆ. ಇಂತಹ ಕಾರ್ಪಣ್ಯ ಪರಿಸ್ಥಿತಿಯಿಂದ ನನ್ನ ಹೃದಯ ದುಃಖಿಸುತ್ತಿದೆ' ಇದು ವಾಷಿಂಗ್‌ಟನ್ ಬರೆದಿದ್ದ.

ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಆತ ತಾನೊಬ್ಬ ಮಹಾ ದಂಡನಾಯಕ ಎಂಬುದನ್ನು ರುಜುಪಡಿಸಿದ. ಕಾಂಟಿನೆಂಟಲ್ ಸೈನ್ಯಕ್ಕೆ ಜಯ ಅತ್ಯವಶ್ಯಕವಾಗಿದ್ದಾಗ ಹಠಾತ್ತಾಗಿ ಮತ್ತು ಆಶ್ಚರ್ಯಕರ ರೀತಿಯಲ್ಲಿ ಶತ್ರುಸೈನ್ಯದ ಮೇಲೆ ಧಾಳಿಮಾಡುತ್ತಿದ್ದ.

ಯುದ್ಧ ಮುಗಿದ ಕೂಡಲೆ ವಾಷಿಂಗ್‌ಟನ್ ತನ್ನ ಮೌಂಟ್ ವರ್ನಾನ್ ಜಮೀನಿಗೆ ಹಿಂತಿರುಗಿದ. ಆಗ ಆತನಿಗೆ ದೇಶವನ್ನು ಒಡೆಯುವಂತಹ ಪ್ರವೃತ್ತಿಯನ್ನೆದುರಿಸಲು ಮತ್ತು ರಾಜಕೀಯ ಪ್ರಜಾಪ್ರಭುತ್ವದಲ್ಲಿ ತನ್ನ ಪ್ರಯೋಗಗಳನ್ನು ಪ್ರಾರಂಭಿಸಲು ಮತ್ತು ದೇಶದ ನಾಯಕತ್ವ ವಹಿಸಲು ಶೀಘ್ರವೇ ಕರೆ ಬರುತ್ತದೆ ಎಂಬುದು ಸ್ವಲ್ಪವೂ ಗೊತ್ತಿರಲಿಲ್ಲ.

ಯುದ್ಧದಿಂದ ದೊರಕಿದ ಜಯ ಎಲ್ಲೆಲ್ಲೂ ಅಸಾಯಕತೆಗೆ ಎಡೆಗೊಟ್ಟಿತು. ಎಲ್ಲೆಲ್ಲೂ ಅನಿಷ್ಟ ಸಮಸ್ಯೆಗಳು ತಲೆ ಎತ್ತಿದವು. ಜನತಾಕ್ರಾಂತಿಯ, ಸೈನ್ಯ ಸರ್ವಾಧಿಕಾರತ್ವದ ಯೋಜನೆಗಳ ವದಂತಿಗಳು ಹರಡಿದವು. ಜನರಲ್ ವಾಷಿಂಗ್‌ಟನನ್ನು ಅಮೇರಿಕದ ದೊರೆಯನ್ನಾಗಿ ಮಾಡಬೇಕೆಂಬ ಮಾತುಗಳು ಸೈನ್ಯದ ವೃತ್ತಗಳಲ್ಲಿ ಕೇಳಿ ಬಂದವು.

ವಾಷಿಂಗ್‌ಟನ್ ಸಿಂಹಾಸನವನ್ನು ತಿರಸ್ಕರಿಸಿದ "ಯುದ್ಧದಲ್ಲಿನ ಬೇರೆ ಯಾವ ವಿಷಯವೂ ನನಗೆ ಇಂತಹ ಯಾತನೆಯನ್ನುಂಟುಮಾಡಲಿಲ್ಲ. ಇದನ್ನು ಕಂಡು ನನಗೆ ಅಸಹ್ಯವಾಗಿದೆ........ ....ಇದು ತೀವ್ರ ಖಂಡನೀಯ. ಇಂತಹ ಪ್ರವೃತ್ತಿಗೆ ನನ್ನ ಯಾವ ವರ್ತನೆ ಉತ್ತೇಜನಕೊಟ್ಟಿತೆಂಬುದನ್ನು ನಾನು ಅರಿಯಲಾರದವನಾಗಿದ್ದೇನೆ" ಎಂದು ನುಡಿದ.

ಸ್ಥಾಪಿಸಬಯಸಿದ ಸ್ವಾತಂತ್ರ್ಯವನ್ನು ನುಂಗಿ ನೀರು ಕುಡಿಯುವಂತಹ ಬುಡಮೇಲು ಪ್ರವೃತ್ತಿಯಿಂದ ಈ ಕ್ರಾಂತಿಯನ್ನು ರಕ್ಷಿಸಿದ ಅಂಶ ಒಬ್ಬ ವ್ಯಕ್ತಿಯ ಸದ್ಗುಣ, ಸಂಯಮ ಎಂದು ಕೆಲಕಾಲದ ನಂತರ ಥಾಮಸ್ ಜೆಫರ್ಸನ್ ಹೇಳಿದರು.

ವಾಷಿಂಗ್‌ಟನ್ನನ ವಿಶ್ರಾಂತಿ ತುಂಬಾ ಅಲ್ಪ ಕಾಲದ್ದು. ದೇಶದಲ್ಲಿನ ದುಷ್ಟ ಪ್ರವೃತ್ತಿಗಳಿಂದ ಗಾಬರಿಗೊಂಡ ಆತ ಮತ್ತೆ ರಾಜಕೀಯ ಚಟುವಟಿಕೆಗೆ ಇಳಿದು ಶಕ್ತವಾದ ಕೇಂದ್ರ ಸರಕಾರದ ಸ್ಥಾಪನೆಯ ಕಡೆಗೆ ತನ್ನ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿದ ೧೭೮೭ರ ಮೇ ತಿಂಗಳಿಂದ. ಅಮೇರಿಕಕ್ಕೆ ಸಂವಿಧಾನವೊಂದನ್ನು ತಯಾರಿಸಲು ಫಿಲಡೆಲ್ಫಿಯದಲ್ಲಿ ಇತರ ರಾಜ್ಯಗಳ ಪ್ರತಿನಿಧಿಗಳೊಡನೆ ಸೇರಿದ.

ಒಕ್ಕೂಟ ಸಾಧ್ಯವಾಗುವ ಮುನ್ನವೇ ಅಮೇರಿಕದ ಪ್ರಥಮ ಅಧ್ಯಕ್ಷನಾಗಬೇಕೆಂದು ಕೋರಿ ಜನಗಳಿಂದ ಪತ್ರಗಳ ಮೇಲೆ ಪತ್ರಗಳು ಬಂದುವು. ಕೊನೆಗೆ ಇಷ್ಟವಿಲ್ಲದಿದ್ದರೂ ಕರ್ತವ್ಯ ದೃಷ್ಟಿಯಿಂದ ಅಧ್ಯಕ್ಷತೆಗೆ ಬರಲು ೧೭೮೯ರ ಫೆಬ್ರವರಿಯಲ್ಲಿ ಒಪ್ಪಿದ.

ಅಮೇರಿಕದ ಸ್ಥಾಪನೆಗೆ ಕಾರಣವಾದ ಮೂಲಭೂತ ತತ್ವಗಳ ಘೋಷಣೆಯನ್ನೊಳಗೊಂಡ ವಾಷಿಂಗ್‌ಟನ್ನನ ಬೀಳ್ಕೊಡಿಗೆ ಭಾಷಣ ಐತಿಹಾಸಿಕವಾದುದು. ಕಳೆದ ೬೦ ವರ್ಷಗಳಿಂದಲೂ ಪ್ರತಿ ವರ್ಷವೂ ಆತನ ಹುಟ್ಟು ಹಬ್ಬದ ದಿನದಂದು ಅದನ್ನು ಅಮೇರಿಕದ ಸೆನೆಟ್ ಸಭೆಯಲ್ಲಿ ಮತ್ತು ಪ್ರತಿನಿಧಿ ಸಭೆಯಲ್ಲಿ ಓದಲಾಗುತ್ತದೆ.

ಈ ಬೀಳ್ಕೊಡುಗೆಯ ಭಾಷಣದಲ್ಲಿ ಉಳಿದ ವಿಷಯಗಳೊಡನೆ ಸಂಘಟಿತ ಸರಕಾರದ ಪ್ರಾಮುಖ್ಯತೆಯನ್ನೂ ಒತ್ತಿ ಹೇಳಿದೆ. 'ಇದೇ ನಿಮ್ಮ ಸ್ವಾತಂತ್ರ್ಯ ಸ್ತಂಭದ ಆಧಾರ; ನಿಮ್ಮ ಮನೆಯಲ್ಲಿನ ಶಾಂತಿಗೆ ಒತ್ತಾಸೆ; ಹೊರಗಿನ ಶಾಂತಿಯ, ನಿಮ್ಮ ಭದ್ರತೆಯ, ನಿಮ್ಮ ಸ್ವಾತಂತ್ರ್ಯಕ್ಕೆ ಇದು ಆಧಾರಸ್ತಂಭ' ಎಂದು ಅದರಲ್ಲಿ ಹೇಳಲಾಗಿದೆ.

ಈ ಸಂಘಟನೆಯನ್ನು, ಜನತೆಯ ಅಭಿಪ್ರಾಯದಿಂದ ಮಾತ್ರ ಬದಲಾಯಿಸಲು ಸಾಧ್ಯವಾಗುವ ಸಂವಿಧಾನದ ರಚನೆಯಿಂದ ರೂಪುಗೊಳ್ಳಬೇಕೆಂದು, ಅದರ ಮೂಲಕ ಈ ಸಂಘಟನೆಯನ್ನು ವ್ಯಕ್ತಪಡಿಸಬೇಕೆಂದೂ ಆತನಿಗೆ ಮನವರಿಕೆಯಾಗಿತ್ತು.

ವಾಷಿಂಗ್‌ಟನ್ ತನ್ನ ದೇಶಕ್ಕೆ ಮಾತ್ರವಲ್ಲದೆ ವಿಶ್ವಕ್ಕೇ ಸ್ಫೂರ್ತಿದಾಯಕನಾಗಿದ್ದ. ಅನೇಕ ದೇಶಗಳು ಆತನ ತತ್ವಗಳನ್ನು ಸ್ವತಂತ್ರ ಸರಕಾರಗಳ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡಿವೆ. ಎಲ್ಲರಿಗೂ ನ್ಯಾಯ ತತ್ವದ ಮೇಲೆ ಆಧರಿತ ಸರಕಾರ ಮಾನವ ಕುಲಕ್ಕೆ ಸಾಧ್ಯವಾಗಬಹುವಾದ ಗುರಿಯಾಗಬಹುದು ಎಂದು ಆತ ನಡೆಸಿದ ಪ್ರಯೋಗದಿಂದ ಅನೇಕ ರಾಷ್ಟ್ರಗಳು ಧೈರ್ಯಪಡೆದಿವೆ.

ಆತನ ತ್ಯಾಗ ಅಸಮಾನವಾದುದು. ಆತನ ಸಾಧನೆಗಳು ದಂತಕಥೆಗಳಂಥವು. ವಿಶ್ವವೂ ಆತನಿಗೆ ಕೃತಜ್ಞತೆ ಬೀರುವುದೇನೂ ಇಲ್ಲ ಆತನಿಗೆ ವಿವಿಧ ದೇಶಗಳು ವಿವಿಧ ರೀತಿಯಲ್ಲಿ ಗೌರವ ಸಲ್ಲಿಸಿವೆ. ರಿಯೋಡಿ ಜನೈರೋ ಬ್ಯೂನೋಸ್ ಐರ್ಸ್, ಲಂಡನ್, ಪ್ಯಾರಿಸ್ ಬುಡಾಪೆಸ್ಟ್, ಟೋಕಿಯೋಗಳಲ್ಲಿ ಆತನ ಶಿಲಾ ಪ್ರತಿಮೆಗಳಿವೆ

(೬ನೇ ಪುಟ ನೋಡಿ)


## SYNDICATE BANK REPORTS ALL-ROUND PROGRESS.

The Balance Sheet of The Canara Industrial & Banking Syndicate Ltd., as on 31st December, 1962 presents a picture of overall progress achieved during the course of the year. The total deposits of the Bank which were Rs. 24·60 Crores as on 31st December, 1961 increased to 32·65 Crores, the rise being 37% over last year's figures. The total advances have increased to Rs 18·27 Crores. The Paid-up Capital of the Bank stands at Rs. 76·64 lakhs and Reserves including share premium have risen to Rs. 66 lakhs, a rise of 21% over last year's figures. The net profits of the current year amount to Rs. 30·33 lakhs after donating Rs. 1·51 lakhs to the National Defence Fund and an amount of Rs. 6½ lakhs out of the profits have been transferred to statutory reserves and Rs. 3 lakhs has been set apart for bonus. An amount of Rs. 8·4 lakhs is required for payment of dividend which is being paid at the same rate as in last year, i. e., 8 57% and 7·15% on PreferenceShares of Rs. 100 and Rs. 10 each respectively and 20% on Equity Shares (A, B and C Class). An amount of Rs. 12 lakhs is set apart for payment of taxes and Rs. 77,782 is being carried forward to next year as against Rs 34,750 last year. The Syndicate has a net work of 176 branches, inclusive of 8 Branches, opened in December, 1962 and 1 Branch in January, 1963. The Bank has received licences from the Reserve Bank of India for opening of 2 Branches in Curchorum and Sanquelim both in Goa and these branches will be opened shortly.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
| --- | --- | --- |
| ೪೨ | ೨೮-೨-೧೯೬೩ | ೨೫ |

## ಪಾಕ್ ವಂಚಕ ನೀತಿ

ಮುಂದಿನ ತಿಂಗಳಿನ ಮೊದಲ ವಾರದಲ್ಲಿ ಭಾರತ—ಪಾಕಿಸ್ತಾನಗಳ ನಡುವಣ ಸಮಸ್ಯೆಗಳ ಕುರಿತಾದ ಮಾತುಕತೆಗಳ ನಾಲ್ಕನೆಯ ಸುತ್ತು ಕಲಕತ್ತೆಯಲ್ಲಿ ಪ್ರಾರಂಭವಾಗಲಿರುವಾಗ, ಪಾಕಿಸ್ತಾನವು ದಾರ್ಷ್ಟ್ಯತನದ ಒಂದು ಕಾರ್ಯವನ್ನು ಮಾಡುವ ದೃಢ ನಿರ್ಧಾರಕ್ಕೆ ಬಂದಿದೆ. ಪಾಕ್ ವಿದೇಶ ಮಂತ್ರಿ ಭುಟ್ಟೋ ಅವರು ಚೀನ—ಪಾಕಿಸ್ತಾನ ಗಡಿ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕಾಗಿ ಕರಾಚಿಯ ಮೇಲಿಂದ ಪೀಕಿಂಗಿಗೆ ತೆರಳಿದ್ದಾರೆ. ಈ ತಿಂಗಳ ಕೊನೆಯಲ್ಲೇ—ಅಂದರೆ ಇಷ್ಟರಲ್ಲೇ ಒಡಂಬಡಿಕೆಗೆ ಉಭಯ ರಾಷ್ಟ್ರ ಪ್ರತಿನಿಧಿಗಳು ಸಹಿಮಾಡಿದರೆಂದು ನಂಬುವಂತಾಗಿದೆ. ಪಾಕಿಸ್ತಾನದ ಈ ವರ್ತನೆಯು 'ನ್ಯಾಯ ವಿರುದ್ಧವಿರುವುದು ಮಾತ್ರವಲ್ಲ, ಈ ಘಟನೆಯಿಂದ ಭಾರತದೊಡನೆ ಅದು ನಡೆಸಬಹುದಾದ ಮಾತುಕತೆಗಳ ಮೇಲ್ಕೆ ತೀವ್ರತರವಾದ ಪ್ರತಿಕ್ರಿಯೆಗಳು ಮೂಡುವುದು ಸ್ವಾಭಾವಿಕ.

ಈ ಒಡಂಬಡಿಕೆಯ ಮಾತು ಕೆಲವು ಕಾಲಕ್ಕೆ ಮೊದಲೇ ಕೇಳಿ ಬರುತ್ತಿತ್ತು. ಚೀನಾ-ಭಾರತದ ಮೇಲೆ ಬೃಹತ್ ಆಕ್ರಮಣ ನಡೆಸಿದ ಸಮಯದಲ್ಲಿ ಇದು ಮತ್ತಷ್ಟು ಸ್ಫುಟವಾಗಿ ಕಾಣಿಸಿತು. ನಿಜ ಹೇಳುವುದಾದರೆ, ಪಾಕಿಸ್ತಾನಕ್ಕೂ ಚೀನಕ್ಕೂ ನಡುವೆ ಯಾವ ಗಡಿಯೂ ಇರುವುದಿಲ್ಲ. ಆದರೆ, ಪಾಕಿಸ್ತಾನವು ತಾನು ಆಕ್ರಮಿಸಿರುವ ಕಾಶ್ಮೀರದ ೩೦೦ ಮೈಲುದ್ದದ ಸಿಂಕಿಯಾಂಗಿನೊಡನಿರುವ ಗಡಿಯ ಸಂಬಂಧದಲ್ಲಿ ಒಡಂಬಡಿಕೆ ಮಾಡಿಕೊಳ್ಳುವಷ್ಟು ಮುಂದುವರಿದಿದೆ. ಭಾರತ ಸರಕಾರಕ್ಕೆ ಈ ಸಂಗತಿಯು ತಿಳಿದೊಡನೆಯೇ ಈ ಸಂಧಿಯನ್ನು ಕಾರ್ಯರೂಪಕ್ಕೆ ತರಲು ಪಾಕಿಸ್ತಾನಕ್ಕೆ ಹಕ್ಕಿರುವುದಿಲ್ಲವೆಂದು ತಿಳಿಸಿ, ಅದು ಚೀನಾದೊಡನೆ ಗಡಿ ಸಂಬಂಧದಲ್ಲಿ ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದವು ಭಾರತವನ್ನು ಬಾಧಿಸಲಾರದೆಂದು ಎಚ್ಚರಿಸಿತ್ತು ಮಾತ್ರವಲ್ಲ, ಪಾಕಿಸ್ತಾನದ ಈ ದುಷ್ಟ ಸಾಹಸಕ್ಕೆ ತನ್ನ ಪ್ರತಿಷೇಧವನ್ನೂ ಸೂಚಿಸಿತ್ತು. ಆದರೆ, ಕಾಶ್ಮೀರವನ್ನು ನುಂಗಿಯೇ ಬಿಡಬೇಕೆಂದು ಕನಸು ಕಾಣುತ್ತಿರುವ ಪಾಕ್ ನಾಯಕರು ತಮ್ಮ ಆಕ್ರಮಿತ ಆಜಾದ ಕಾಶ್ಮೀರವನ್ನಾದರೂ ಭದ್ರವಾಗಿಟ್ಟುಕೊಳ್ಳುವ ಇರಾದೆಯಿಂದ, ಭಾರತದ ನ್ಯಾಯವಾದ ಎಚ್ಚರಿಕೆಯನ್ನೂ ಅದರ ಪ್ರತಿಭಟನೆಯನ್ನೂ ಕಡೆಗಣಿಸಿ ದಿಟ್ಟತನದ ದಿಟ್ಟ ಹೆಜ್ಜೆಯನ್ನೇ ಇಟ್ಟಿತು. ಇಷ್ಟರಿಂದಲೇ ಪಾಕಿಸ್ತಾನವು ಭಾರತದೊಡನೆ ಇಟ್ಟುಕೊಳ್ಳ ಬಯಸುವ ಸಂಬಂಧವೆಂತಹುದು ಎಂದು ಮನವರಿಕೆ ಮಾಡಿಕೊಳ್ಳಬಹುದು. ಕಾಶ್ಮೀರವು ಭಾರತದ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟಿರುವಾಗ ಅದರ ಒಂದು ಭಾಗವನ್ನು ತಾನು ಆಕ್ರಮಿಸಿರುವಾಗ, ಈ ಬಗೆಯ ಗಡಿಯೊಪ್ಪಂದವೆಂದರೆ ಅದು ಹಾಸ್ಯಾಸ್ಪದವಲ್ಲದೆ ಮತ್ತೇನು? ಪಾಕ್ ಕುತಂತ್ರಿಗಳು ತಾವು ನಿರ್ಮಲ ಹೃದಯರೆಂದೂ ಶಾಂತಿಪ್ರಿಯರೆಂದೂ ಸಮಸ್ಯಾಪರಿಹಾರೇಚ್ಛುಗಳೆಂದೂ ಹೇಳುತ್ತಿರುವುದು ರಂಗಿನ ಬುರುಬುರಿಕೆ ಮಾತ್ರವೆಂಬುದೀಗ ಸಂಪೂರ್ಣ ವ್ಯಕ್ತವಾಯಿತು. ನೇಫಾ—ಲಡಖಗಳ ಮೇಲೆ ಮಾಡಿದ ನಗ್ನ ಆಕ್ರಮಣದಿಂದ ಚೀನೀಯರ ನಿಜ ಬಣ್ಣ ಬಯಲಾದಂತೆ ಇದೀಗ ಪಾಕಿಸ್ತಾನದ ಕತ್ತೆಯ ನಿಜರೂಪ ಬಹಿರಂಗವಾಯಿತು. ಇಡಿಯ ಕಾಶ್ಮೀರವೇ ತನ್ನದು—ಅದಲ್ಲವಾದರೂ 'ಆಜಾದ ಕಾಶ್ಮೀರ"ವಂತೂ ತನ್ನದಾಗಲೆಂದು ಸುಂದರ ಸ್ವಪ್ನ ಕಂಡು ಈ ಬಗೆಯ ಹೇಯ ಕೃತ್ಯವನ್ನೇ ಮೆಲುಕು ಹಾಕುತ್ತ ಇದ್ದ ಪಾಕ್ ನಾಯಕರು ಸಮಸ್ಯಾ ಪರಿಹಾರದ ಮಾತುಕತೆಗಳಲ್ಲಿ ಉತ್ಸಾಹ ತೋರಿಸಿದ್ದಾದರೂ ಏತಕ್ಕೆ? ಅದರ ಅಗತ್ಯವಾದರೂ ಏನಿತ್ತು? ಎಂಬ ಪ್ರಶ್ನೆಗಳಿಂದು ತಲೆದೋರಿವೆ.

ಬ್ರಿಟಿಷ್ ಮತ್ತು ಅಮೆರಿಕನ್ ಪ್ರತಿನಿಧಿಗಳ ಮಾತನ್ನು ಮನ್ನಿಸಿ ಕಮ್ಯುನಿಸ್ಟ ಚೀನಾವು ಭಾರತ ಉಪಖಂಡದ ಶತ್ರುವೆಂದು ಅರಿತು, ಅದರೊಳಗಿನ ಪಾಕಿಸ್ತಾನ—ಭಾರತಗಳ ನಡುವೆ ಹುಟ್ಟಿ ಹೊಗೆಯುತ್ತಿದ್ದ ದ್ವೇಷ ಭಾವನೆಯನ್ನು ದೂರ ಮಾಡಲು ಮಾತುಕತೆಯಾಗಬೇಕೆಂದಂತೆ ಭಾರತವು ಇದನ್ನು ನಿಜವೆಂದು ನಂಬಿ ಮುಂದುವರಿಯಿತು. ಇವುಗಳಲ್ಲಿ ಯಶಸ್ವಿ ಪರಿಹಾರವನ್ನು ಕಂಡು ಹಿಡಿಯುವುದು ಸಾಧ್ಯವಾಗಲಿಲ್ಲವಾದರೂ ಮುಕ್ತ ಮನಸ್ಸಿನ ಬಿಚ್ಚು ಹೃದಯದ ವಿಚಾರ ವಿನಿಮಯ ಮಾತ್ರ ನಡೆಯಿತ; ಮುಂದಕ್ಕಾದರೂ ಒಂದಲ್ಲ ಒಂದು ದಿನ ಇದ್ದ ಸಿಕ್ಕುಗಳು ದೂರವಾಗಿ ಒಂದು ಇತ್ಯರ್ಥಕ್ಕೆ ಬರಬಹುದೆಂಬ ಆಶೆಯಾದರೂ ಇತ್ತು. ಆದರೆ, ಪಾಕಿಸ್ತಾನದ ಈ ಅವಿವೇಕ ಪೂರ್ಣ ಕೃತ್ಯದಿಂದ ಮಾತುಕತೆಗಳು ಮತ್ತಷ್ಟು ದ್ವೇಷಪೂರ್ಣವಾಗುವ ಸಂಭವವೇ ಹೆಚ್ಚಲ್ಲದೆ ಶಾಂತಗೊಳ್ಳುವ ನಿರೀಕ್ಷೆಯಿಲ್ಲವೇ ಇಲ್ಲವೆನ್ನಬೇಕು. ಕಾಶ್ಮೀರದ 'ಭವಿಷ್ಯ'ದ ಕುರಿತಾದ ಮಾತುಕತೆ ಇನ್ನು ಅಪೂರ್ಣವಾಗಿರುವಾಗಲೇ ತನ್ನ ಆಕ್ರಮಿತ ಭಾಗದ ಬಗ್ಗೆ ಭಾರತೀಯ ಶತ್ರುವಿನೊಡನೆ ಪಾಕಿಸ್ತಾನವು ಮಾಡಿಕೊಂಡ ಸಂಧಿ ಅನ್ಯಾಯದ್ದು ಮಾತ್ರವಲ್ಲ, ಅದೂರದರ್ಶಿತನದ್ದು ಎಂದು ಹೇಳಲೇ ಬೇಕಾಗುತ್ತದೆ. ಕೆಂಪು ಚೀನದ ವಂಚಕ ಮನೋವೃತ್ತಿಯ ಗಾಳಕ್ಕೀಗ ಪಾಕಿಸ್ತಾನವೂ ಸಿಕ್ಕಿಬಿದ್ದುದು ಖೇದಜನಕವಿದೆ.

ಅಮೆರಿಕ ಮತ್ತು ಬ್ರಿಟನ್‌ಗಳು ಭಾರತದಂತೆಯೇ ಪಾಕಿಸ್ತಾನದ ಮಿತ್ರರಾಷ್ಟ್ರಗಳು ಒಂದು ರೀತಿಯಿಂದ ಹೇಳುವುದಾದರೆ, ಅವು ಪಾಕಿಸ್ತಾನಕ್ಕೆ ಭಾರತಕ್ಕಿಂತ ಬಹು ಹತ್ತಿರವಾದುವುಗಳು. ಅವುಗಳೂ ಈ ಸೀಮಾ ಸಂಧಿಯನ್ನು ಅನುಚಿತವೆಂದು ತಿಳಿದಿವೆ ಮಾತ್ರವಲ್ಲ, ಭಾರತದೊಡನೆ ಪಾಕಿಸ್ತಾನ ಮಾಡಲಿರುವ ಮಾತುಕತೆಯ ಮೇಲೆ ದುಷ್ಟ ಪರಿಣಾಮ ಬೀರುವುದೆಂದು ಸ್ಪಷ್ಟವಾಗಿ ತಿಳಿಸಿವೆ. ಹಾಗಿದ್ದರೂ ಅದನ್ನು ಕೇಳದೆ ದುಡುಕಿದ ಪಾಕಿಸ್ತಾನ ಭಾರತವನ್ನು ದ್ವೇಷಿಸುವ ತನ್ನ ಸಂಪ್ರದಾಯವನ್ನು ಬಿಟ್ಟುಕೊಡಲು ಸಿದ್ಧವಿಲ್ಲವೆಂಬುದನ್ನು ಮತ್ತೊಮ್ಮೆ ಪ್ರಕಟಿಸಿದಂತಾಯ್ತು. ಆದುದರಿಂದ ನಾವು ಭಾರತೀಯರು ನಮ್ಮ ನಿಲುವೆಯನ್ನು ದೃಢಪಡಿಸಿಕೊಂಡು ನಮ್ಮ ಸಾರ್ವಭೌಮತೆಗೆ ಚ್ಯುತಿಯಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು; ಈ ದಿಸೆಯಲ್ಲಿ ಅದೆಷ್ಟು ಎಚ್ಚರಿಕೆಯನ್ನು ವಹಿಸಿದರೂ ಸಾಲದು. ದೇಶ ಸಂರಕ್ಷಣೆಯ ಮಹಾಕಾರ್ಯದಲ್ಲಿ ಎಲ್ಲರೂ ಮುಂದಾಗ ಬೇಕು.

## ಕೊಲಂಬೋ ಸೂಚನಾ ಸಮಾಧಿ

ಚೀನಾದ ಪ್ರತಿಕ್ರಿಯೆಯಿಂದ ಕೊಲಂಬೋ ಸೂಚನೆಗಳನ್ನು ಅದು ಒಪ್ಪುವುದಿಲ್ಲವೆಂಬುದೀಗ ದಿನದಿಂದ ದಿನಕ್ಕೆ ತಿಳಿಯಾಗುತ್ತ ಬರುತ್ತಿದೆ. ಈ ಸೂಚನೆಗಳನ್ನು ಮನ್ನಿಸದೆ ಚೀನದೊಡನೆ ಸಂಧಾನದ ಮಾತೆತ್ತುವಂತಿಲ್ಲವೆಂದು ಭಾರತವೂ ದೃಢ ನಿಲುವು ತಳೆದಿದೆ. ಮೊದಲೇ ಊಹಿಸಿದಂತೆ ಕೊಲಂಬೋ ಸಮ್ಮೇಳನ ವ್ಯರ್ಥ ಕಾಲಹರಣವೆಂಬುದು ಸತ್ಯವಾಗುವಂತಾಗಿದೆ. ಆದರೂ ಕೊಲಂಬೋ ರಾಷ್ಟ್ರಗಳು ತಮ್ಮ ಪ್ರಯತ್ನವನ್ನು ಕೈಬಿಡುವುದಿಲ್ಲವೆಂದೂ ಮುಂದಿನ ಎಪ್ರಿಲ್ ತಿಂಗಳಲ್ಲಿ ಮರಳಿ ಅವು ಸಭೆ ಸೇರಿ ಪರಿಸ್ಥಿತಿಯನ್ನು ವಿವೇಚಿಸುವುವೆಂದೂ ಆ ನಡುವೆ ಚೀನಾದ ಮನವನ್ನೊಲಿಸುವ ಭಗೀರಥ ಪ್ರಯತ್ನವನ್ನು ನಡೆಸುತ್ತಿವೆಯೆಂದೂ ಗೊತ್ತಾಗಿದೆ. ಆಫ್ರೇಸ್ಯಾ ರಾಷ್ಟ್ರಗಳ ಸಾಹಸವು ಪ್ರಶಂಸಾರ್ಹವೆನ್ನಲೇ ಬೇಕು; ಆದರೆ ಅವುಗಳು ತಮ್ಮ ಕಾರ್ಯದಲ್ಲಿ ಯಶಸ್ವಿಯಾಗುವುದು ಮತ್ತಷ್ಟು ಕಗ್ಗಂಟಿನ ಕಥೆಯಾಗಿದೆ.

ಚಳಿಗಾಲವು ಜಾರಿ ಸೆಖೆಗಾಲವು ಹಿಮಾಲಯದ ತಪ್ಪಲಲ್ಲಿ ಕಾಲಿರಿಸುವ ಸಮಯವೀಗ ನಿಕಟವಾಗುತ್ತಿದೆ. ಆದುದರಿಂದಲೇ ಸಾಮ್ರಾಜ್ಯವಾದಿ ಕಮ್ಯುನಿಸ್ಟ್ ಚೀನಾವು ತನ್ನ ವಿಸ್ತರಣ ದಾಹವನ್ನು ಶಮನಿಸುವ ಸಲುವಾಗಿ ಸೈನಿಕ ಶಕ್ತಿಯನ್ನು ಒಗ್ಗೂಡಿಸುತ್ತಿದೆ. ಒಂದು ಬಾರಿ ಆಕ್ರಮಣ ಮಾಡಿ ಭಾರತೀಯ ವೀರಯೋಧರನ್ನು ಹಿಮ್ಮೆಟ್ಟಿಸಿದರೂ ಅವರ ಅತುಲ ಸಾಹಸವನ್ನು ಕಂಡು, ಮತ್ತೆ ಕಾರಣಾಂತರಗಳಿಂದ ಅದು ಹಿಮ್ಮೆಟ್ಟಿತು ನಿಜ. ಇದೀಗ ತನ್ನ ಅತುಲ ತರಬೇತಿ ಪಡೆದ ಮಹಾಸೇನೆಯೊಡನೆ ಆಕ್ರಮಣ ನಡೆಸುವ ಇರಾದೆಯೂ ಅದಕ್ಕಿರದಿರಲಾರದು. ಆದುದರಿಂದ ಯುದ್ಧ ಭೀತಿ ತೊಲಗಿಲ್ಲ. ಆಂತರಿಕ ಶಕ್ತಿಯನ್ನೂ ಬಹಿರಂಗದ ಸ್ನೇಹಹಸ್ತಬಲವನ್ನೂ ಒಂದುಗೂಡಿಸಿ ಶತ್ರುಗಳನ್ನು ಹಿಮ್ಮೆಟ್ಟಿಸಿ ಮಾತೆಯ ಉದ್ಧಾರವನ್ನು ಮಾಡಿಕೊಳ್ಳುವುದಕ್ಕೆ ನಾವು ಸಿದ್ಧರಾಗಿರಬೇಕಾದುದು ಅತ್ಯಗತ್ಯ. ಭಾರತೀಯರ ದೇಶಪ್ರೇಮ ಅದ್ವಿತೀಯ, ದೇಶರಕ್ಷಣೆಯ ನೀತಿ ಅತಿ ದೃಢವೆಂದು ಚೀನೀಯ ದುರಾಕ್ರಮಣಕಾರರಿಗೆ ಕಲಿಸಿಕೊಡುವ ಎಲ್ಲ ಏರ್ಪಾಡುಗಳೂ ನಡೆಯಬೇಕು.

---

## ವಾರ್ತಾ ವೇದಿಕೆ

### ದೇಶರಕ್ಷಣೆಗೆ ಕರೆ

ಕೊಲಂಬೋ ಸೂಚನೆಗಳನ್ನು ಒಪ್ಪಿಕೊಳ್ಳಬಾರದೆಂದು ವಿರೋಧೀ ಪಕ್ಷದವರು ಪತ್ತಾಯಿಸಿದರೂ ಅವನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದ ಪ್ರಧಾನ ಮಂತ್ರಿ ನೆಹರು ಮೊದಲೇ ಮುಂದಿನ ಗತಿಯೇನೆಂದು ಯೋಚಿಸಿರಬಹುದು. ಏಕೆಂದರೆ, ಅವರಂತಹ ದೂರದರ್ಶಿ ರಾಜಕಾರಣಿ ಭಾರತದಲ್ಲಿ ಮತ್ತೊಬ್ಬನಿಲ್ಲ. ಈಗ ಚೀನಾ ಅದನ್ನು ಒಪ್ಪಿಕೊಳ್ಳದೆ ಹೋದರೆ, ಸಂಧಾನದ ಮಾತಂತೂ ಇಲ್ಲ; ಮಾತ್ರವಲ್ಲ ಶಾಂತಿ ಪಾಠ ಹೇಳುತ್ತಿರುವ ಚೀನೀಯರ ಕುತಂತ್ರ ಮತ್ತೊಮ್ಮೆ ಬಯಲಿಗೆ ಬಂದಂತಾಯಿತು. ಚೀನಾ ಸೂಚನೆಗಳನ್ನು ಒಪ್ಪುವುದೆಂಬ ಆಶೆಯಿಂದು ಯಾರಿಗೂ ಇಲ್ಲ; ಆದುದರಿಂದಲೇ ದೇಶ ರಕ್ಷಣೆಗೆ ಬದ್ಧಕಟಿಯಾಗಬೇಕೆಂಬ ಕರೆಯನ್ನೂ ನಾಯಕ ನೆಹರೂರ ಕಂಠದಿಂದ ಹೊರಬರುತ್ತಿದೆ. ಭಾರತೀಯ ೪೪ ಕೋಟಿ ಪ್ರಜಾಜನರು ಅದಕ್ಕೆ ಕಿವಿಗೊಡುತ್ತಾರೆ, ತನುಮನ ಧನದಿಂದ ಸ್ವಾತಂತ್ರ್ಯ ಮತ್ತು ಸ್ವದೇಶ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ.

### ಕಂಠಿ ಕಂಠವೆತ್ತುವರೆ?

ಕರ್ನಾಟಕ ಸರಕಾರವು ಭದ್ರವಾಗಿರುವಂತೆ ಗೋಚರವಾಗುತ್ತಿದೆಯಾದರೂ ಅದರಲ್ಲಿ ಛಿದ್ರಗಳು ಮೂಡಿರಲೇ ಬೇಕು ಎಂದು ಭಾವಿಸುವಂತಾದೆ. ಸರಕಾರದ ನೀತಿಯು ತೀರ ಅಸ್ಪಷ್ಟವಾಗುವಂತಿದೆ. ಮುಖ್ಯವಾಗಿ ಶಿಕ್ಷಣ ಮಂತ್ರಿ ಕಂಠಿಯು ತನ್ನ ಕಾರ್ಯನೀತಿಯಲ್ಲಿ ಯಾವ ದೃಢನಿಲುವೆಯನ್ನೂ ತಳೆಯದಿರುವುದರಿಂದ ಅದು ತೂಗುಯ್ಯಾಲೆಯಾಡುವಂತಿದೆ. ಸರಕಾರಿ ಹೈಸ್ಕೂಲು-ಕಾಲೇಜುಗಳನ್ನು ಮುಚ್ಚಿಬಿಡುವುದೂ ಅವನ್ನು ಖಾಸಗಿ ಕ್ಷೇತ್ರಕ್ಕೊಪ್ಪಿಸುವುದೂ ಶಾಖೆಯ ನೀತಿಯೇ ಎನ್ನುವುದಕ್ಕೆ ಮಂತ್ರಿ ಕಂಠಿಯವರ ಹೇಳಿಕೆ ಪ್ರಮಾಣ ವಾಕ್ಯವೆಂಬಂತಿದೆ. ಪ್ರಾಥಮಿಕ ಶಿಕ್ಷಣವು ಸರಕಾರದ ಹೊಣೆ. ಅದು ಗ್ರಾಮ ಗ್ರಾಮಗಳಲ್ಲಿ ಶಾಲೆಗಳನ್ನು ತೆರೆಯುತ್ತಿರುವಂತೆಯೇ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಹಾಯಧನ ನೀಡುವಲ್ಲಿ ಚೌಕಾಶಿ ಮಾಡುವುದರಿಂದ ಅವುಗಳಿಗೆ ಬಾಗಿಲು ಹಾಕಬೇಕಾಗುವ ದಿನವೂ ಹತ್ತಿರ ಬರುವಂತಾಗಿದೆ. ಈ ಜಂಜಾಟದಿಂದ ಕಂಠಿ ಕಂಠವೆತ್ತಿ ಹೇಗೆ ನಿಲ್ಲುವರು ಎಂಬುದು ಕುತೂಹಲಕಾರಕವಲ್ಲವೆ?

### ನಿಜಲಿಂಗಪ್ಪರ ನಿಲುವು

ರಾಜ್ಯದ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸಲು ಕಾಳೀ ನದಿಯ ಯೋಜನೆಯನ್ನು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿತ್ತು. ತುರ್ತು ಪರಿಸ್ಥಿತಿಯ ಕಾರಣದಿಂದ ಯೋಜನೆಯ ವೆಚ್ಚವನ್ನು ಪುನರಾವಲೋಕಿಸುವುದು ಅತ್ಯವಶ್ಯವಿದ್ದುದರಿಂದ ಈ ಬಗ್ಗೆ ತುಸು ಸಂದೇಹ ಬೀಳುತ್ತಿದೆ. ಕಾಳೀ ನದಿ ಯೋಜನೆಯಿಂದ ಅತಿ ಕಡಿಮೆ ವೆಚ್ಚದಲ್ಲಿ ಶಕ್ತ್ಯುತ್ಪಾದನೆಯಾಗುತ್ತದೆ ನಿಜ, ಆದರೂ ಆರು ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸುವ ಈ ಬೃಹತ್ಯೋಜನೆಯು ಪೂರ್ಣಗೊಳ್ಳಲು ಸುಮಾರು ೫೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ೧೯೬೪-೬೫ನೆಯ

(೭ನೇ ಪುಟಕ್ಕೆ)

# ಅಲ್ಲಲ್ಲಿಯ ಸುದ್ದಿ ಸಾರ

**ಮೂಲ್ಕಿ ಕಾಲೇಜು ಪ್ರಾರಂಭದ ಬಗ್ಗೆ ತ್ವರಿತದ ಕಾರ್ಯಕ್ರಮ:—** ಮೂಲ್ಕಿ ಕಾಲೇಜು ಎಡ್ಯುಕೇಶನ್ ಕಮಿಟಿಯ ವಿಶೇಷ ಸಭೆಯು ಮೂಲ್ಕಿ ಯೂನಿಯನ್ ಕ್ಲಬ್‌ನಲ್ಲಿ ತಾ. 24ರಂದು ಕಮಿಟಿಯ ಅಧ್ಯಕ್ಷ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಬರುವ 1963ನೇ ಜೂನ್ ತಿಂಗಳಲ್ಲಿ ಮೂಲ್ಕಿಯಲ್ಲಿ ಪ್ರಾರಂಭವಾಗಲಿರುವ ಮೂಲ್ಕಿ ಕಾಲೇಜಿನ ಪ್ರಾರಂಭಿಕ ಕಾರ್ಯಕ್ರಮಗಳ ವಿಮರ್ಶೆಯನ್ನು ಮಾಡಿ ಈ ಕಮಿಟಿಯವರು ಸಂಗ್ರಹಿಸಬೇಕಾಗಿರುವ ಎರಡು ಲಕ್ಷ ರೂಪಾಯಿಗಳ ಮೊತ್ತವನ್ನು ಇದೇ ಮಾರ್ಚ ತಿಂಗಳ ಅಂತ್ಯದೊಳಗೆ ಸಂಗ್ರಹಿಸುವರೇ ಈ ಕೆಳಗಿನ ಮಹನೀಯರುಗಳ ಉಪಸಮಿತಿಗಳನ್ನು ರಚಿಸಲಾಯಿತು

. ಡಾ. ಯಂ. ರಾಯಪ್ಪ ಕಾಮತರ ನೇತೃತ್ವದಲ್ಲಿ ಡಾ. ಯಂ. ರಾಮಣ್ಣ ಶೆಟ್ಟಿ, ಡಾ. ಬಿ. ಸಂಜೀವನಾಥ್, ಶ್ರೀ ಪಿ. ದೇವದಾಸ ಶ್ರೀಧರ ಕಾಮತ್ ಇವರು ಮಡಿಕೇರಿ, ಮೈಸೂರು, ಬೆಂಗಳೂರು, ಮದರಾಸು ಈ ಎಲ್ಲಾ ಸ್ಥಳಗಳನ್ನು ಸಂದರ್ಶಿಸಿಯೂ, ಡಾ. ಕೆ ಪಿ. ಮಧ್ಯಸ್ಥರವರ ನೇತೃತ್ವದಲ್ಲಿ ಡಾ. ಬಿ. ಎಚ್. ಸೋಮಶೇಖರ ರಾವ್, ಡಾ. ಯಂ. ದಾಮೋದರ, ಡಾ. ಬಿ. ಸೀತಾರಾಮ ಶೆಟ್ಟಿ, ಇವರು ಮೂಲ್ಕಿ ಮತ್ತು ಆಸುಪಾಸಿನ ಸ್ಥಳಗಳನ್ನು ಸಂದರ್ಶಿಸಿಯೂ ಡಾ. ಕೆ. ಶ್ಯಾಮ ಶೆಟ್ಟಿ ಇವರ ನೇತೃತ್ವದಲ್ಲಿ ಶ್ರೀಗಳಾದ ಪಿ ಎಸ್. ಮುಂಡ್ಕೂರ್, ಯಂ. ಪಿ. ದೇವರಾವ್, ಯಂ. ಸತ್ಯನಾಥ ಶೆಟ್ಟಿ, ಇವರು ಶಿವಮೊಗ್ಗ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವ್, ಈ ಎಲ್ಲಾ ಸ್ಥಳಗಳನ್ನು ಸಂದರ್ಶಿಸಿಯೂ ಶ್ರೀ ಯು. ಕೃಷ್ಣರಾಜ್‌ರವರ ನೇತೃತ್ವದಲ್ಲಿ ಶ್ರೀಗಳಾದ ಬೋಳ ನಾರಾಯಣ ರಾವ್, ಕೆ. ಸಂಜೀವ ಶೆಟ್ಟಿ, ಬಿ ಪುಂಡಲೀಕ ಕಾಮತ್, ಇವರು ಜಿಲ್ಲೆಯನ್ನು ಸಂದರ್ಶಿಸಿಯೂ ನಿಧಿ ಸಂಗ್ರಹಿಸಬೇಕೆಂದು ನಿರ್ಣಯಿಸಲಾಯಿತು.

ಈ ಬೇರೆ ಬೇರೆ ನಿಧಿ ಸಂಗ್ರಹ ಸಮಿತಿ ಸದಸ್ಯರು ಆಯಾಯ ಸ್ಥಳಗಳನ್ನು ಸಂದರ್ಶಿಸುವಾಗ ಆಯಾಯ ಊರಿನ ಮಹಾ ಜನರು ಕಾಲೇಜು ಹಿತೈಷಿಗಳು ಸಮಿತಿಯ ಸದಸ್ಯರೊಡನೆ ಸಹಕರಿಸಿ ತಮ್ಮ ಅಮೂಲ್ಯವಾದ ಸಹಾಯ, ಸಹಕಾರ, ಸಲಹೆಗಳನ್ನು ಕೊಡುವಂತೆ ವಿನಂತಿಸಬೇಕೆಂದು ನಿರ್ಣಯಿಸಲಾಯಿತು.

ಕಾರ್ಯದರ್ಶಿಯವರ ಧನ್ಯವಾದದೊಂದಿಗೆ ಸಭಾಕಾರ್ಯಕ್ರಮವು ಕೊನೆಗೊಂಡಿತು.

**ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವ—** ಸನ್ಯಾಸಿಗುಡ್ಡದಲ್ಲಿರುವ ಆರ್ಯ ಸಮಾಜ ಮಂದಿರದಲ್ಲಿ ಫೆಬ್ರವರಿ ತಾ. 24ರಂದು 'ಮಹರ್ಷಿ ಬೋಧೋತ್ಸವ'ವೂ 'ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವೂ' ಜಿಲ್ಲಾ ಸರ್ಜನ್ ಡಾ| ಎಸ್. ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆ ಮತ್ತು ಭಜನೆ ಆದ ಬಳಿಕ ಸ್ವಾಮಿ ಸದಾನಂದ ಸರಸ್ವತಿಯವರು ಸ್ವಾಗತ ಭಾಷಣವನ್ನೂ, ಆಶ್ರಮದ ವರದಿವಾಚನವನ್ನು ಗೈದು, ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದ ಮಕ್ಕಳಿಗೆ ಪುರಸ್ಕಾರ ವಿತರಣೆಯಾದ ಬಳಿಕ, ಮಹರ್ಷಿ ದಯಾನಂದರ ಹುಟ್ಟು ಅವರಿಗೆ ಜ್ಞಾನೋದಯ ಉಂಟಾದ ಘಟನೆ, ತದನಂತರ ರಾಷ್ಟ್ರ ನಿರ್ಮಾಣಕ್ಕಾಗಿ ಅವರು ಗೈದ ಸೇವೆ ಮೊದಲಾದುವುಗಳನ್ನು ಸವಿಸ್ತಾರವಾಗಿ ವಿವರಿಸಿದರು, ಈಗ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಆಗುವ ಅನಾಚಾರಗಳನ್ನೂ, ಜನರಲ್ಲಿರುವ ಮೂಢ ನಂಬಿಕೆಗಳನ್ನೂ, ವಿಗ್ರಹಾರಾಧನೆಯನ್ನು ಖಂಡಿಸಿದ ಶ್ರೀ ಅನಂತಯ್ಯನವರು ಪಂಚ ಮಹಾ ಯಜ್ಞ, ಅಸ್ಪೃಶ್ಯತಾ ನಿವಾರಣೆ, ಸ್ತ್ರೀ ಶಿಕ್ಷಣ ಮೊದಲಾದ ಆರ್ಯ ಸಮಾಜದ ಧ್ಯೇಯಗಳನ್ನು ಒತ್ತಿ ಹೇಳಿ, ಹಿಂದುಗಳು ಅನ್ಯ ಮತಾವಲಂಬಿಗಳಾಗದಂತೆ ನೋಡಬೇಕೆಂದು ಹೇಳಿದರು. ಮುಂದುವರಿಸುತ್ತಾ ಜನರು ಪವಾಡ ಹರಕೆ ದರ್ಶನ ಮೊದಲಾದುವುಗಳಲ್ಲಿ ನಂಬಿಕೆ ತೊಡೆದು ಹಾಕಬೇಕೆಂದೂ, ಶಿವರಾತ್ರಿ ಹೋಳಿ ಮುಂತಾದ ಹಬ್ಬಗಳ ಹೆಸರಿನಲ್ಲಿ ಉಂಟಾಗುವ ಅನಾಹುತಗಳನ್ನೂ, ವಿವರಿಸಿ ಅದನ್ನು ನಿವಾರಿಸ ಬೇಕೆಂದೂ ಹೇಳಿದರು. ಶ್ರೀ ಅತ್ತಾವರ ರಾಮಪ್ಪನವರ ಶಿಷ್ಯರೂ, ಅಶ್ವಸಾದೆ ನಿವಾಸಿಗಳೂ ಆದ ಜಯಮ್ಮ, ಇಂದಿರಾ, ಪ್ರಮೀಲಾ ಮತ್ತು ಪಣಂಬೂರಿನ ಶ್ರೀ ಮುಕುಂದ—ಇವರಿಂದ ಸಂಗೀತ ಕಾರ್ಯಕ್ರಮವಾದ ಬಳಿಕ ಅಧ್ಯಕ್ಷರು ಆಶ್ರಮದ ಕಾರ್ಯಗಳನ್ನು ಹೊಗಳಿ ಪ್ರತಿಯೊಬ್ಬ ಮಾನವನಲ್ಲಿಯೂ ಆಸ್ತಿಕತೆ ಮೂಲಭೂತವಾಗಿ ಇರುವುದೆಂದೂ ಮಾನವರೆಲ್ಲರೂ ವೇದೋಕ್ತಿಯಂತೆ ಅನಾಶಕ್ತಿಯಿಂದ ತಮ್ಮ ಕಾರ್ಯಗಳನ್ನು ಪಾಲಿಸಬೇಕೆಂದೂ ಹೇಳಿದರು.

**ರಾಷ್ಟ್ರೀಯ ಉಳಿತಾಯ ಪಕ್ಷ-** ಉಡುಪಿ ತಾಲೂಕಿನಲ್ಲಿ ತಾ 22—2—63 ರಿಂದ ತಾ 7—3—63ರ ವರೆಗೆ ರಾಷ್ಟ್ರೀಯ ಉಳಿತಾಯ ಪಕ್ಷವು ಆಚರಿಸಲ್ಪಡುವುದೆಂದೂ ಒಂದು ಸಂಚಾರಿ ಅಂಚೆ ಕಟ್ಟೆಯು ತಾಲೂಕಿನಲ್ಲೆಲ್ಲಾ ಸಂಚರಿಸಿ ರಕ್ಷಣಾ ಸರ್ಟಿಫಿಕೇಟುಗಳನ್ನೂ ಪ್ರೀಮಿಯಮ್ ಬಹುಮಾನ ಪತ್ರಗಳನ್ನೂ ಉಳಿತಾಯ ಚೀಟುಗಳನ್ನೂ ವಿತರಣೆ ಮಾಡುವುದೆಂದೂ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಸಂಪೂರ್ಣ ಸಹಕಾರವನ್ನು ಕೊಡುವುದರ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನೆರವಾಗಬೇಕೆಂದೂ ಕೇಳಿಕೊಳ್ಳಲಾಗಿದೆ.

**ಉಡುಪಿ ತಾಲೂಕು ಶಾಲಾಭಿವೃದ್ಧಿ ಸಮಿತಿಗಳ ಅಧಿವೇಶನವು-** ಇದೇ ತಾ. 25ರಂದು ಮಣಿಪಾಲದಲ್ಲಿ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಪರಿಸರದಲ್ಲಿ ಮೈಸೂರು ಸರಕಾರದ ವಿದ್ಯಾ ಮಂತ್ರಿ ಶ್ರೀ ಎಸ್. ಆರ್. ಕಂಠಿ ಇವರಿಂದ ಉದ್ಘಾಟಿಸಲ್ಪಟ್ಟಿತು ಡಾ. ಟಿ. ಎಮ್. ಎ. ಪೈಯವರು ಸಭಾಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಎ. ಜೆ. ಅತ್ತಿಯವರು ಪರಿಚಯ ಭಾಷಣ ಮಾಡಿದ ಬಳಿಕ ಶ್ರೀ ಟಿ. ರಮೇಶ ಪೈಗಳು ಶಿವಳ್ಳಿ ಪಂಚಾಯತಿನ ಪರವಾಗಿಯೂ ಶ್ರೀ ಎಂ. ಮಧ್ವರಾಜ ಎಂ. ಎಲ್. ಎ ಅವರು ಸ್ವಾಗತ ಸಮಿತಿಯ ಪರವಾಗಿಯೂ ಸ್ವಾಗತ ಭಾಷಣ ಮಾಡಿದರು ಶ್ರೀ ಶ್ರೀರಂಗ ರಾಜುರವರು ನೂತನವಾಗಿ ಉಡುಪಿ ತಾಲೂಕಿನ ಶಾಲೆಗಳಿಂದ ರಕ್ಷಣಾ ನಿಧಿಗೆ ಸಂಗ್ರಹವಾದ ಸುಮಾರು 2,500 ರೂಪಾಯಿಗಳನ್ನು ರಕ್ಷಣಾ ನಿಧಿಗೆಂದು ಸಚಿವರಿಗೆ ಒಪ್ಪಿಸಿದರು ಪರೀಕ್ಷಾಧಿಕಾರಿ ಶ್ರೀ ನರಸಿಂಹಯ್ಯನವರು ಕಡ್ಡಾಯ ಶಿಕ್ಷಣದ ವರದಿಯನ್ನೊಪ್ಪಿಸಿದರು ಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಭಿವೃದ್ಧಿ ಸಮಿತಿಗಳ ಅಧಿವೇಶನಗಳು ಇದೇ ರೀತಿಯ ಉತ್ಸಾಹದಿಂದ ಎಲ್ಲೆಡೆ ಜರಗಿದರೆ ಸರಕಾರದ ಹೊರೆ ಕಡಿಮೆಯಾದೀತೆಂದೂ ಜನತೆಯು ಉತ್ಸಾಹದಿಂದ ಮುಂದೆ ಬಂದರೆ ಸಾರ್ವತ್ರಿಕ ಶಿಕ್ಷಣ ಸುಲಭ ಸಾಧ್ಯವಾದೀತೆಂದೂ ಹೇಳಿದರು. ಉಚಿತ ಶಿಕ್ಷಣ ಅಂದರೆ ಏನೆಂಬುದನ್ನು ವಿವರಿಸಿ ಶಾಲೆಗಳ ಆಡಳಿತದ ಕುರಿತು ಅಂತಿಮ ನಿರ್ಧಾರವನ್ನು ಬೇಗನೆ ಕೈಕೊಳ್ಳಲಾಗುವುದೆಂದರು. ಶ್ರೀಮಂತರು ಬಡ ವಿದ್ಯಾರ್ಥಿಗಳನ್ನು ದತ್ತಕ ಸ್ವೀಕರಿಸಿ ಅವರ ಶಿಕ್ಷಣದ ಜವಾಬ್ದಾರಿ ವಹಿಸಿದರೆ ತುಂಬಾ ಉಪಕಾರ ಮಾಡಿದಂತಾಗುವುದೆಂದೂ ತಿಳಿಸಿದರು. ಆನಂತರ ಪಂಗಡ ವಿಚಾರ ಗೋಷ್ಠಿ ನಡೆದು ಅವುಗಳ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು, ಪ್ರಶಸ್ತಿ ಪತ್ರಗಳ ವಿತರಣೆಯಾದ ಬಳಿಕ ಅಧ್ಯಕ್ಷ ಡಾ. ಪೈಗಳು ಭಾಷಣ ಮಾಡುತ್ತಾ ಕಡ್ಡಾಯ ಶಿಕ್ಷಣ ಕ್ರಮದಿಂದ ತಲೆದೋರುವ ಸಮಸ್ಯೆಗಳನ್ನು ವಿವರಿಸಿ ವಿದ್ಯಾರ್ಥಿಯಿಂದ ಪ್ರವೇಶ ಧನ ಪಡೆಯುವುದು ಯೋಗ್ಯವೆಂದೂ ಮೈಂಟೆನೆನ್ಸ್ ಗ್ರಾಂಟ್ ಪದ್ಧತಿಯನ್ನು ಮುಂದುವರಿಸಬೇಕೆಂದೂ ಹೇಳಿ ಎಕೆಡೆಮಿಯ ವಿದ್ಯಾಸಂಸ್ಥೆಗಳ ಬೆಳವಣಿಗೆಯನ್ನು ವಿವರಿಸಿದರು. ಅಂತ್ಯದಲ್ಲಿ ಶ್ರೀ ಎ. ಜೆ. ಅತ್ತಿಯವರು ವಂದನೆಗಳನ್ನು ಸಲ್ಲಿಸಿದರು.

**ರಕ್ಷಣಾ ಬೋರ್ಡುಗಳಲ್ಲಿ ಎಲ್. ಐ. ಸಿ ಯ ಇನ್ನೆರಡು ಕೋಟಿ ವಿನಿಯೋಗ—** ಲೈಫ್ ಇನ್ಸೂರೆನ್ಸ್ ಕೋರ್ಪರೇಶನ್ ಆಫ್ ಇಂಡಿಯಾದವರು ಶೇಕಡಾ 4½ ದರದ ರಾಷ್ಟ್ರೀಯ ರಕ್ಷಣಾ ಬೋರ್ಡುಗಳಿಗೆ ಪ್ರಾರಂಭಿಕವಾಗಿ ರೂ 5 ಕೋಟಿಯನ್ನು ವಿನಿಯೋಗಿಸಿದ್ದಲ್ಲದೆ ತಿರುಗಿ ರೂ. 2 ಕೋಟಿಯನ್ನು ತೊಡಗಿಸುವುದಾಗಿ ಸಾರಿದ್ದಾರೆ. ಹೀಗೆ ಎಲ್ ಐ ಸಿ.ಯು ರಕ್ಷಣಾ ಬೋರ್ಡುಗಳಲ್ಲಿ ವಿನಿಯೋಗಿಸಿದ ಮೊತ್ತ ರೂ. 7 ಕೋಟಿಯಾಗಿರುತ್ತದೆ.

**ವಿದೇಶ ಪ್ರಯಾಣ—** ಬೊಂಬಾಯಿಯ ಪ್ಲಾಸ್ಟಿಕ್ ಮತ್ತು ಲಿನೋಲಿಯಮ್ಸ್ ಎಕ್ಸ್‌ಪೋರ್ಟ್ ಪ್ರೊಮೋಶನ್ ಕೌನ್ಸಿಲಿನ ಸಹಾಯಕ ಕಾರ್ಯದರ್ಶಿ ಶ್ರೀ ಡಯನ್ ಫೆರ್ನಾಂಡಿಸರು (ಉಡುಪಿಯ ಶ್ರೀ ರೋಕಿ ಫೆರ್ನಾಂಡಿಸರ ಪುತ್ರ) ಇದೇ ತಾ. 20ರಂದು ಏರ್ ಇಂಡಿಯಾ ಇಂಟರ್ ನೇಶನಲ್ ಮೂಲಕ ಈಜಿಪ್ಟ್, ಲಿಬಿಯಾ, ಬ್ರಿಟಿಷ್ ಈಸ್ಟ್ ಆಫ್ರಿಕ ಮತ್ತು ಏಡನ್‌ಗಳಿಗೆ ಎಕ್ಸ್‌ಪೋರ್ಟ್ ಪ್ರೊಮೋಶನ್ ಸಂಚಾರ ಕೈಕೊಂಡಿರುವರು, ಅವರು ಟ್ರಿಪೋಲಿಯಯಲ್ಲಿ ಇದೇ ತಾ. 20ರಂದ ಪ್ರಾರಂಭವಾದ ಇಂಟರ್ ನೇಶನಲ್ ಫೇರಿನಲ್ಲಿಯೂ ಭಾಗವಹಿಸುವರು.

**ಸತ್ಕಾರ ಸಮಾರಂಭ—** ಎಲ್. ಐ. ಸಿ. ಯ ಸುಪರಿಂಟೆಂಡೆಂಟ್ ಶ್ರೀ ಬಿ. ಪುಟ್ಟಣ್ಣಯ್ಯನವರು ತಮ್ಮ ಪುತ್ರ ಜ್ಞಾನೇಶ್ವರನಿಗೆ ಇದೇ ತಾ. 11ರಂದು ತಿರುಪತಿಯಲ್ಲಿ ಬ್ರಹ್ಮೋಪದೇಶ ಜರಗಿದ ಸಂತೋಷಾರ್ಥವಾಗಿ ಇದೇ ತಾ. 25ನೇ ಸಂಜೆ ಕಡಿಯಾಳಿಯ ಮಹಿಷಮರ್ದಿನಿ ಕಲಾಮಂದಿರದಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಇದಕ್ಕೆ ಗಣ್ಯ ಮಹನೀಯರನೇಕರು ಆಗಮಿಸಿದ್ದರು.

**ಕವಿ ಸಮ್ಮೇಳನ—** ಭಾರತ ಸರಕಾರದ ಸಾಂಸ್ಕೃತಿಕ ಶಾಖೆ ಹಾಗೂ ರಾಜ್ಯದ ರಾಷ್ಟ್ರೀಯ ರಕ್ಷಣಾ ಸಮಿತಿಯು ವ್ಯವಸ್ಥೆಗೊಳಿಸಿದ ಕವಿ ಸಮ್ಮೇಳನವು ಮಂಗಳೂರಿನ ಗವರ್ನಮೆಂಟ್ ಕಾಲೇಜಿನಲ್ಲಿ ಇದೇ ತಾ 23ನೇ ಸಂಜೆ ಸ್ಪೀಕರು ಶ್ರೀ ಬಿ. ವೈಕುಂಠ ಬಾಳಿಗ ಇವರಿಂದ ಉದ್ಘಾಟಿಸಲ್ಪಟ್ಟಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಶಿವರಾಮ ಕಾರಂತರು ವಹಿಸಿದ್ದರು ಇದರಲ್ಲಿ ಶ್ರೀಗಳಾದ ಕಡೆಗೊಂಡ್ಲು ಶಂಕರ ಭಟ್, ಕಯ್ಯಾರ ಕಿಞ್ಞಣ್ಣ ರೈ, ಎನ್ ತಿರುಮಲೇಶ್ವರ ಭಟ್ಟ, ಎಸ್. ವೆಂಕಟರಾಜ ಅ ಗೌ. ಕಿನ್ನಿಗೋಳಿ, ಬನ್ನಂಜೆ ಗೋವಿಂದಾಚಾರ್ಯ, ಅಮ್ಮೆಂಬಳ ಶಂಕರ ನಾರಾಯಣ ನಾವುಡ, ಪಿ.ಕೆ. ನಾರಾಯಣ ಬಿ.ಎಂ. ಇದಿನಬ್ಬ ಇವರು ಭಾಗವಹಿಸಿದ್ದರು.

**ವರ್ಧಂತ್ಯುತ್ಸವ—** ಉಡುಪಿಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವ ತಾ 23ರಂದು ಉಡುಪಿ ರೇಂಜಿನ ಶಾಲಾ ಪರಿಶೀಲನಾಧಿಕಾರಿ ಶ್ರೀ ಎ ನರಸಿಂಹ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀ ವಿ ಗುರುರಾಜ ಭಟ್ಟರು ಶಾಲೆಯ ವರದಿಯನ್ನೂ ಶ್ರೀ ಡೇನಿಸ್ ಸೋಜರು ಸಂದೇಶಗಳನ್ನೂ ಶ್ರೀ ಐ. ಕೆ. ಕುಮಾರಸ್ವಾಮಿಯವರು ಸ್ವಸ್ತಿವಾಚನ ಮಾಡಿದರು ಅಧ್ಯಕ್ಷರು ಬಹುಮಾನ ವಿತರಿಸಿ, ಶಾಲೆಯ ಪ್ರಗತಿಯು ದಿನದಿಂದ ದಿನಕ್ಕೆ ಬೆಳೆಯುತ್ತಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ, ವಿದ್ಯಾರ್ಥಿಗಳು ದೇಶಕ್ಕೆ ಸಲ್ಲಿಸ ಬೇಕಾದ ಆನುಕೂಲ್ಯ ಸೇವೆಯನ್ನು ವಿವರಿಸಿದರು, ನಮ್ಮ ಜಿಲ್ಲೆಯಲ್ಲಿಯೇ ಈ ಶಾಲೆ ಬ ಉತ್ತಮವಾದ ಪ್ರಾಥಮಿಕ ಶಾಲೆಯೆಂದು ಹೇಳಿ ಇದರ ಅಧ್ಯಾಪಕ ವ್ಯವಸ್ಥಾಪಕ ವರ್ಗವನ್ನು ಪ್ರಶಂಸಿಸಿದರು ಪೂರ್ವಾಹ್ನ ಉಡುಪಿ ನಗರ ಸಭಾ ಸದಸ್ಯ ಶ್ರೀ ಟಿ. ದೇವದಾಸ ಪೈ ಅವರು ಧ್ವಜಾರೋಹಣವನ್ನು ಮಾಡಿದರು. ಮನರಂಜನೆಯ ಕಾರ್ಯಕ್ರಮಗಳೂ ಶ್ರೀ ಕೃಷ್ಣಗಾರುಡಿ ಎಂಬ ಸಂಗೀತನಾಟಕವೂ ರಾತ್ರಿ ವಿದ್ಯಾರ್ಥಿಗಳಿಂದ ಜರಗಿದುವು.

**ವಾರ್ಷಿಕೋತ್ಸವ—** ಕಡಿಯಾಳಿ ಹಾ| ಎ| ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 24ರಂದು ನಡೆಯಿತು. ಉಡುಪಿಯ ಸಬ್ ಜಡ್ಜ್ ಶ್ರೀ ಜಿ ಬಿ. ಕುಲಕರ್ಣಿ ಅವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸ್ವಾಗತಿಸಿದ ಬಳಿಕ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದರಾಯರು ಸಂಘದ ವರದಿಯನ್ನು ಓದಿದರು ಶ್ರೀ ವಿ ಗುರುರಾಜಭಟ್ಟರು ಸಂದೇಶವಾಚಿಸಿದರು. ಶ್ರೀಮತಿ ಕುಲಕರ್ಣಿ ಅವರು ವಿವಿಧ ಆಟೋಟಗಳ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು. ಅಧ್ಯಕ್ಷರು ಮಾತಾಡಿ, ಸಂಘವು ಎಳೆತನದಲ್ಲಿಯೇ ತನ್ನ ಅನುಪಮ ಸಾಧನೆಯಿಂದ ಯಶಸ್ವಿಯಾಗಿದೆಯೆಂದು ಪ್ರಸನ್ನತೆಯನ್ನು ವ್ಯಕ್ತಪಡಿಸಿ ಅದಕ್ಕೆ ಉತ್ತಮ ಭವಿಷ್ಯವನ್ನು ಕೋರಿದರು. ವಿವಿಧ ಮನರಂಜನೆಯ ಕಾರ್ಯಕ್ರಮಗಳು ನಡೆದ ಮೇಲೆ 'ವಿವಾಹಬಂಧನ' ವೆಂಬ ಸಂಗೀತ ನಾಟಕವು ಸಮುಚಿತವಾಗಿ ಅಭಿನಯಿಸಲಾಯಿತು.

**ಮಹಾಸಭೆ-** ಕಡಿಯಾಳಿ ಹಾ| ಎ| ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಸದಸ್ಯರ ವಾರ್ಷಿಕ ಮಹಾಸಭೆಯು ತಾ. 24ರಂದು ಅಧ್ಯಕ್ಷ ಶ್ರೀ ಕೆ. ಕೆ ಪೈ ಅವರ ನೇತೃತ್ವದಲ್ಲಿ ನಡೆಯಿತು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದರಾಯರು ಗತ ವರ್ಷದ ವರದಿಯನ್ನೂ ಪರಿಶೋಧಿತ ಲೆಕ್ಕಪತ್ರಗಳನ್ನೂ ಮುಂದಿಟ್ಟರು ಸಂಘವು ವರದಿ ವರ್ಷದಲ್ಲಿ ಡಾ|| ಯು ಎಲ್ ನಾರಾಯಣಾಚಾರ್ಯರ ಸಹಾಯದಿಂದ ಕಮಲಾಬಾಯಿ ಹಾಲ್‌ನ್ನು ರಚಿಸುವಲ್ಲಿ ಹಿಂದೆ ತೊಡಗಿದ್ದ ಪುಸ್ತಕ ಭಂಡಾರ ಮತ್ತು ಹಿಂದೀ ವರ್ಗಗಳನ್ನು ನಡೆಸಿಕೊಂಡು ಹೋಗುವಲ್ಲಿ ಯಶಸ್ವಿಯಾದುದನ್ನೂ ಆಸುಪಾಸಿನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹೈಸ್ಕೂಲೊಂದನ್ನು ತೆರೆಯುವ ಪ್ರಸ್ತಾಪವನ್ನೂ ವರದಿಯಲ್ಲಿ ಮಾಡಲಾಗಿತ್ತು. ಮಹಾಸಭೆಯು ಅವನ್ನು ಸ್ವೀಕರಿಸಿ, ಮುಂದಿನ ವರ್ಷಕ್ಕೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಲೆಕ್ಕಪತ್ರ ಪರಿಶೋಧಕರಾಗಿ ಶ್ರೀ ಎಂ. ವಿ. ಪಡಿಯಾರರನ್ನೂ ಆರಿಸಿತು. ಅಧ್ಯಕ್ಷರು ನಿಯೋಜಿತ ಕಡಿಯಾಳಿ ಹೈಸ್ಕೂಲಿನ ವಿಚಾರವಾಗಿ ವಿವರಗಳನ್ನಿತ್ತು ಈ ಕಾರ್ಯದಲ್ಲಿ ಸಹಕಾರವನ್ನು ಯಾಚಿಸಿದರು.

(೬ನೇ ಪುಟದಿಂದ)

ವರ್ಷದಲ್ಲಿ ಈ ಯೋಜನೆಗಾಗಿ ಕಡಿಮೆ ಪಕ್ಷ ೫ ಕೋಟಿ ರೂಪಾಯಿಗಳನ್ನಾದರೂ ಒದಗಿಸ ಬೇಕು ಎಂದು ನಿಜಲಿಂಗಪ್ಪ ಸರಕಾರದ ಕೇಳಿಕೆ ಮತ್ತು ಒತ್ತಾಯ. ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರಯಿಸಲು ಈ ಯೋಜನೆಯು ಅನಿವಾರ್ಯವೆಂಬುದರಿಂದ ನಿಜಲಿಂಗಪ್ಪನವರು ಈ ದಿಸೆಯಲ್ಲಿ ಬಹು ಪ್ರಯತ್ನಿಸಿ ಜಯಶೀಲರಾಗ ಬೇಕು.


**ತಾರೀಕು 10 ರ ನಂತರ**

ಹದಿನಾಲ್ಕು ಕ್ಯಾರಟ್ ಚಿನ್ನದಿಂದ ಮಾಡಲ್ಪಟ್ಟ ವಿವಿಧ ನಮೂನೆಯ ಹಾಗೂ ಆಧುನಿಕ ಫ್ಯಾಶನಿಗೊಪ್ಪುವ ಒಡವೆ, ಆಭರಣ ಹಾಗೂ ಶೃಂಗಾರ ಸಾಧನಗಳು ತಾ 10_2_1963 ರ ನಂತರ ನಮ್ಮ ಅಂಗಡಿಯಲ್ಲಿ ಮಾರಾಟಕ್ಕೆ ಸಿಗುತ್ತವೆ. ಆರ್ಡರುಗಳನ್ನು ಕೊಟ್ಟಲ್ಲಿ ಬೇಕು ಬೇಕಾದ ನಮೂನೆಗಳಲ್ಲಿ ತಯಾರಿಸಿಯೂ ಕೊಡಲಾದೀತು

ವಿವರಗಳಿಗೆ ವಿಚಾರಿಸಿರಿ:

**ಶ್ರೀ ಕೃಷ್ಣಾ ಜ್ಯುವೆಲ್ಲರಿ ಮಾರ್ಟ್**

ಫೋನ್ ನಂಬ್ರ: 66

ತೆಂಕಪೇಟೆ — ಉಡುಪಿ.



ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ [illegible]

ಪುಣ್ಯಕ್ಷೇತ್ರ

# ತಿರುವಣ್ಣಾಮಲೈ

ದಕ್ಷಿಣ ಭಾರತದ ಪ್ರಸಿದ್ಧವಾದ ಪುಣ್ಯ ಕ್ಷೇತ್ರಗಳಲ್ಲಿ ತಿರುವಣ್ಣಾಮಲೈಯೂ ಒಂದಾಗಿದೆ. ತಿರುವಣ್ಣಾಮಲೈಯು ದಕ್ಷಿಣ ರೈಲ್ವೇಯ ವಿಲ್ಲುಪುರಂ ಜಂಕ್ಷನ್‌ನಿಂದ ೪೨ ಮೈಲು ದೂರದಲ್ಲಿದೆ. ದಿನಂಪ್ರತಿ ಭಾರತದ ಮೂಲೆ ಮೂಲೆಗಳಿಂದ ಯಾತ್ರಾರ್ಥಿಗಳು, ಭಕ್ತರು ಇಲ್ಲಿಗೆ ಬಂದು ದೇವರ ದರ್ಶನವನ್ನು ಪಡೆಯುತ್ತಾರೆ.

ಜನರ ಮಧ್ಯೆ ತಿರುವಣ್ಣಾಮಲೆಯು "ಅರುಣಾಚಲಂ" ಎಂದೇ ಕರೆಯಲ್ಪಡುತ್ತಿದೆ. ಬೆಟ್ಟ ೩,೦೦೦ ಅಡಿ ಎತ್ತರವಿದ್ದು ದೇವಾಲಯವು ಬೆಟ್ಟದ ಬುಡದಲ್ಲಿದೆ. 'ಸಾಹಿತ್ಯ ರತ್ನಾಕರ'ದಲ್ಲಿ ಅರುಣಾಚಲವು ಸೋಣಾಚಲವೆಂದೂ ಕರೆಯಲ್ಪಟ್ಟಿದೆ

ಈ ಬೆಟ್ಟದ ಬಗ್ಗೆ ಕುತೂಹಲಪೂರ್ಣವಾದ ಕತೆಯೊಂದಿದೆ. ಬ್ರಹ್ಮ ಮತ್ತು ವಿಷ್ಣುರವರು ತಮ್ಮಿಬ್ಬರೊಳಗೇ 'ತಾನು ಮೇಲು, ತಾನು ಮೇಲು' ಎಂದು ಜಗಳ ಮಾಡಿಕೊಂಡರು. ಅವರು ಶಿವನೊಡನೆ ತೀರ್ಪನ್ನೀಯಲು ಕೇಳಿಕೊಂಡಾಗ ಶಿವ ಒಂದು ಉಪಾಯವನ್ನು ಹೂಡಿದನು. 'ನಾನು ಒಂದು ಜ್ಯೋತಿಯಾಕಾರವನ್ನು ತಾಳುವೆ—ಆಗ ಬ್ರಹ್ಮನು ಅದರ ತುದಿಯನ್ನು ವಿಷ್ಣು ತ್ತ ಜ್ಯೋತಿಯ ಬುಡವನ್ನು ಶೋಧಿಸಬೇಕು. ಯಾರು ಮೊದಲು ಕಂಡು ಹುಡುಕುವರೋ ಅವರೇ ಶ್ರೇಷ್ಠರು" ಎಂದು ಶಿವ ಪರಮಾತ್ಮ ನುಡಿದನು.

ಕೆಲವು ಯುಗಗಳೇ ಕಳೆದರೂ ಬ್ರಹ್ಮ ವಿಷ್ಣುಗಳಿಬ್ಬರಿಗೆ ತಮ್ಮ ಕೆಲಸವನ್ನು ಪೂರೈಸಲಾಗಲಿಲ್ಲ. ಇಬ್ಬರೂ ವಿಫಲವಾದರು. ಜ್ಯೋತಿಯ ತುದಿ, ಬುಡ ಕಂಡು ಹುಡುಕಲು ತಾವು ಪಟ್ಟಶ್ರಮ ನಿಷ್ಫಲವಾದ ನಂತರ ಅವರಿಬ್ಬರೂ ಶಿವನಲ್ಲಿಗೆ ಬಂದು ಅವನ ಕ್ಷಮೆಯನ್ನು ಯಾಚಿಸಿ ಶಿವನೇ ಅತಿ ಶ್ರೇಷ್ಠನೆಂದು ಮನ್ನಿಸಿದರು. ಜ್ಯೋತಿ ರೂಪದಲ್ಲಿದ್ದ ಒಂದು ಬೆಟ್ಟನಾಗಿ ಬಿತ್ತರದ ಬುಡದಲ್ಲಿ ಲಿಂಗಾಕಾರವನ್ನು ತಾಳಿ ತನ್ನ ರೂಪ ಬದಲಾಯಿಸಿದನು ಈ ಬೆಟ್ಟವೇ ಈಗ 'ಅರುಣಾಚಲ" ವಾಗಿದೆ. ಮತ್ತೀಗಿನ ದೇವಾಲಯ ಲಿಂಗವನ್ನು ಕಾಪಾಡುತ್ತಾ ಬರುತ್ತಿದೆ.

ಶಿವನು ತನ್ನ 'ಜ್ಯೋತಿ" ಆಕಾರವನ್ನು ಕಾರ್ತಿಕ ಮಾಸದ ಕೃತ್ತಿಕೆಯಂದು ಪಡೆದ ಕಾರಣ ಅರುಣಾಚಲದಲ್ಲಿ ಈ ಮಾಸದಲ್ಲಿ ಒಂದು ದೊಡ್ಡ ಉತ್ಸವವನ್ನು ಆಚರಿಸಿ ದೇವರನ್ನು ಪೂಜಿಸಿ ಕೊಂಡಾಡುವರು.

ಶಿವನು ಹೇಳಿದ್ದನು: 'ವರ್ಷಕ್ಕೊಂದು ಸಾರಿ ಆತನು 'ಅದೇ' ದಿನದಲ್ಲಿ ಜ್ಯೋತಿ ಆಕಾರವನ್ನು ತಾಳಿ ತನ್ನ ಭಕ್ತರಿಗೆ ದರ್ಶನವನ್ನೀಯುವೆ"ನೆಂದು.

ಇನ್ನೊಂದು ವಿಶಿಷ್ಟತೆಗಾಗಿಯೂ ತಿರುವಣ್ಣಾಮಲೈ ಪ್ರಸಿದ್ಧವಾಗಿದೆ. ಇಲ್ಲಿ ಶಿವ ಪಾರ್ವತಿಯರು ಒಟ್ಟಿಗೇ ಇದ್ದಾರೆ. ಎಂದರೆ ಶಿವನು 'ಅರ್ಧ ನಾರೀಶ್ವರ'ನಾಗಿದ್ದಾನೆ.

ಇದಕ್ಕೂ ಒಂದು ದಂತಕಥೆಯಿದೆ ಕಾರಣಾಂತರದಿಂದ ಶಿವ-ಪಾರ್ವತಿಯರ ಮಧ್ಯೆ ಕಲಹವೇರ್ಪಟ್ಟು ಅಗಲಿದಾಗ ಪಾರ್ವತಿ ಕಾಂಚೀಪುರಕ್ಕೆ ತೆರಳಿ ಅಲ್ಲಿ ಶಿವಲಿಂಗವನ್ನು ಪೂಜಿಸುತ್ತಾ ಕಾಲ ಕಳೆದಳು. ಅವಳ ಅನಂತ ಅಪಾರ ಭಕ್ತಿಯನ್ನು ನೋಡಿ ಮೆಚ್ಚಿದ ಪರಮೇಶ್ವರ ಪುನಃ ತನ್ನಲ್ಲಿಗೇ ಅರುಣಾಚಲಕ್ಕೆ ಕರೆಸಿದನು. ಅಂದಿನಿಂದ ಅವಳನ್ನಗಲಲು ಇಚ್ಛಿಸದ ಗಂಗಾಧರ 'ಅರ್ಧ ನಾರೀಶ್ವರ'ನಾದನು.

ಇದೂ ಕೂಡ ಕಾರ್ತಿಕ ಮಾಸದ ಕೃತ್ತಿಕೆಯಂದೇ ಸಂಭವಿಸಿತು!

ಆದುದರಿಂದ ಕಾರ್ತಿಕದಲ್ಲಿ ವಿಜೃಂಭಣೆಯಿಂದ ಅರುಣಾಚಲದಲ್ಲಿ ಸುತ್ತುಮುತ್ತಲಿನ ದೇವಾಲಯಗಳಲ್ಲಿ ಮತ್ತು ಹಿಂದೂ ಮನೆತನಗಳಲ್ಲಿ ಉತ್ಸವ ನಡೆವುದು. ಈ ದಿನ ಎಣ್ಣೆಯ ಅಸಂಖ್ಯಾತ ದೀಪಗಳನ್ನೆಲ್ಲೆಡೆಗಳಲ್ಲೂ ಬೆಳಗುವರು.

ಶಿವಾಲಯವಾದ ಆ ದೇವಾಲಯವು ೨೫ ಎಕರೆಗಳಷ್ಟು ಜಾಗದಿಂದ ಸುತ್ತುವರಿದಿದೆ. ದೂರದಿಂದ ನೋಡುವಾಗ ಒಂದು ಫೋರ್ಟಿನಂತೆ ಕಂಡುಬರುತ್ತದೆ.

ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳಿಗೆ ಗೋಪುರಗಳಿವೆ. ಮೂಡು ದಿಕ್ಕಿನಲ್ಲಿ ನಲ್ಲಿರುವ ಮುಖ್ಯ ದ್ವಾರದ ಗೋಪುವು ೧೧ ಮಾಳಿಗೆಯಿಂದ ೨೧೬ ಅಡಿ ಎತ್ತರಕ್ಕೆ ನಿಂತಿದೆ. ಇಷ್ಟೆತ್ತರದ ಗೋಪುರಗಳ ದೇವಾಲಯಗಳು ದಕ್ಷಿಣ ಭಾರತದಲ್ಲಿ ಕೇವಲ ಕೆಲವೇ ಇವೆಯಷ್ಟೆ. ಈ ಗೋಪುರ ನಿರ್ಮಾಣಕಾರ್ಯ ವಿಜಯನಗರದ ಕೃಷ್ಣದೇವರಾಯನಿಂದ ೧೫೧೬ರಲ್ಲಿ ಆರಂಭವಾಯಿತಾದರೂ ತಂಜಾವೂರಿನ ಶಿವಪ್ಪ ನಾಯಕನು ಅದನ್ನು ಸಂಪೂರ್ಣ ಮಾಡಿಸಿದನು.

ಈ ದೇವಾಲಯದಲ್ಲಿ ಐದು ಪ್ರಕಾರಗಳಿವೆ. ಈಶಾನ್ಯ ಭಾಗದಲ್ಲಿರುವ ಐದನೆಯ ಪ್ರಾಕಾರದಲ್ಲಿ ಸಾವಿರ ಕಂಬಗಳುಳ್ಳ ಮಂಟಪವಿದೆ. ಮತ್ತು ಇದೂ ಕೂಡ ಕೃಷ್ಣದೇವರಾಯನಿಂದಲೇ ಕಟ್ಟಲ್ಪಟ್ಟಿದೆ. ಇದರಲ್ಲಿ ಒಂದು ಲಿಖಿತವಿದೆ ಏನೆಂದರೆ ಕೃಷ್ಣದೇವರಾಯನು ತನ್ನ ಪೂರ್ವದ ವಿಜಯವನ್ನಾಚರಿಸುವಾಗ ಗುಂಟೂರು ಜಿಲ್ಲೆಯ ಅಮರಾವತಿ ದೇವಸ್ಥಾನದಲ್ಲಿ ತನ್ನ ತುಲಾಭಾರವನ್ನು ಮಾಡಿಸಿದ್ದಾನೆ ಎಂಬುದಾಗಿ.

ತಿರುವಣ್ಣಾಮಲೈಯಲ್ಲಿಯೇ ಪ್ರಖ್ಯಾತ ತಮಿಳು ಕವಿ ಅರುಣಗಿರಿ ಜನನವಾಯಿತು. ಅವನು ಕಾರಣಾಂತರಗಳಿಂದ ಯಾವುದೋ ಒಂದು ಗೋಪುರದಿಂದ ಕೆಳಗೆ ಹಾರಿದನೆಂದೂ ಆದರೆ ಅವನು ಸಾಯದೆ ಮುರುಗನಿಂದ ರಕ್ಷಿಸಲ್ಪಟ್ಟು ಮುಕ್ತಿಯನ್ನು ಪಡೆದನೆಂದೂ ಕಥೆಯಿದೆ. ದೇವರ ಮೇಲಿನ ಅಪಾರ ಭಕ್ತಿ, ವಿಶ್ವಾಸಗಳಿಂದ ಆತ ಹಲವಾರು ಭಕ್ತಿಪೂರ್ಣ ಅಮರ ಗೀತೆಗಳನ್ನು ರಚಿಸಿದನಂತೆ. ಬೆಟ್ಟದ ಮೂರು ಭಾಗದಲ್ಲಿ ಸುಬ್ರಹ್ಮಣ್ಯ ಸ್ವಾಮಿಯೊಡನೆ ಅರುಣಗಿರಿ ನಿಂತಿರುವುದನ್ನು ಕೆತ್ತಿದ್ದು ಇದು ಬಹಳ ಸುಂದರವಾಗಿದೆ.

ನಾಲ್ಕನೇ ಪ್ರಕಾರದ 'ಬ್ರಹ್ಮ-ತೀರ್ಥ'ದ ಗೋಪುರದ ಎಲ್ಲಾ ಕಲಶಗಳ ಮೇಲೆ ಗಿಳಿಯ ಮೂರ್ತಿಯನ್ನು ಕೆತ್ತಿದ್ದಾರೆ. ಅರುಣಗಿರಿಯು ಒಂದು ಗಿಳಿ ರೂಪ ತಾಳಿ ಇದೇ ಗೋಪುರದಲ್ಲಿ ದೇವಸ್ತುತಿಗೈದನೆಂದೂ ದಂತಕಥೆಯಿದೆ.

ಶಿವನು "ಜ್ಯೋತಿ"ಯಾದ ಕಾರ್ತಿಕದಲ್ಲಿ ನಡೆಯುವ ಅಪ್ರತಿಮ ಉತ್ಸವವೂ ಬಹಳ ಪ್ರಸಿದ್ಧಿಯನ್ನು ಪಡೆದಿದೆ, ಲಕ್ಷಾಧಿ ಲಕ್ಷ ಯಾತ್ರಿಕರು, ಭಕ್ತರು ಆ ದಿನದಂದು ಜ್ಯೋತಿಯ ರೂಪದಲ್ಲಿ ಶಿವ ದರ್ಶನವನ್ನು ಪಡೆಯುವುದಕ್ಕಾಗಿ ಅರುಣಾಚಲದಲ್ಲಿ ಒಟ್ಟುಗೂಡುತ್ತಾರೆ.

ಈ ಉತ್ಸವದ ಆರಂಭದ ದಿನ ಬೆಟ್ಟದ ತುದಿಯಲ್ಲಿ ತುಪ್ಪದ ಒಂದು ದೊಡ್ಡ ದೀಪವನ್ನು ಉರಿಸುತ್ತಾರೆ ಅದು ಹಲವು ದಿನಗಳ ವರೆಗೆ ಉರಿಯುತ್ತ ಸುಮಾರು ೫ ಮೈಲು ಸುತ್ತುಮುತ್ತಲಿನ ಪ್ರದೇಶಗಳಿಗೆ ಬೆಳಕಿನ ಕಿರಣಗಳನ್ನು ಹರಡಿಸುತ್ತದೆ.

ಹತ್ತು ದಿನಗಳ ತನಕ ನಡೆಯುವ ಉತ್ಸವದಲ್ಲಿ ಸುಂದರವಾಗಿ ರಚಿಸಲ್ಪಟ್ಟ ಮತ್ತು ಅಲಂಕರಿಸಲ್ಪಟ್ಟ ರಥದಲ್ಲಿ ದೇವರ ಪ್ರತಿಮೆಯನ್ನು ಸ್ಥಾಪಿಸಿ ನಾಲ್ಕು ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನು ಕೊಂಡೊಯ್ಯುತ್ತಾರೆ. ಇದು ಅತಿ ರಮಣೀಯ ದೃಶ್ಯವಾಗಿದೆ.

ದೀಪೋತ್ಸವ ದಿನ ೧೧ ಮಾಳಿಗೆಯ ಗೋಪುರದಲ್ಲಿ ಬಹು ಸಂಖ್ಯೆಯಲ್ಲಿ ದೀಪಗಳನ್ನುರಿಸುತ್ತಾರೆ.

ಅರುಣಾಚಲ ಬೆಟ್ಟದ ಸುತ್ತಲೂ ಒಂದು ಮಾರ್ಗ ಹಬ್ಬಿಕೊಂಡಿದೆ. ಆದರುದ್ದ ಕೇವಲ ಎಂಟು ಮೈಲುಗಳಾಗಿವೆ. ಭಕ್ತರು ಉತ್ಸವದ ಸಮಯದಲ್ಲಿ ಮತ್ತಿನ್ನಿತರ ಸಂದರ್ಭಗಳಲ್ಲಿ ನಡೆದುಕೊಂಡೇ ಬೆಟ್ಟಕ್ಕೆ ಒಂದು ಸುತ್ತು ಬರುತ್ತಾರೆ ಇದಕ್ಕೆ 'ಗಿರಿ ಪ್ರದಕ್ಷಿಣೆ' ಎನ್ನುತ್ತಾರೆ ತಮ್ಮ ರೋಗರುಜಿನಗಳ ನಿವಾರಣೆಗಾಗಿ ಪ್ರದಕ್ಷಿಣೆ ಹಾಕುವ ಹರಕೆ ಹೊತ್ತ ಭಕ್ತ ಸಮುದಾಯ ದೀಪ ಉತ್ಸವದ ಸಮಯದಲ್ಲಿ ಈ ಮಾರ್ಗದ ಮೂಲಕ 'ಗಿರಿ ಪ್ರದಕ್ಷಿಣೆ' ಹಾಕುವರು.

ತಿರುವಣ್ಣಾಮಲೆಯ ಇನ್ನೊಂದು ಮಹತ್ವವೇನೆಂದರೆ ಪ್ರಸಿದ್ಧ ಜ್ಞಾನವಂತರಾಗಿದ್ದ ರಮಣ ಮಹರ್ಷಿಗಳ ಆಶ್ರಮ ಇಲ್ಲೇ ಇವೆ, ರಮಣ ಮಹರ್ಷಿಗಳು ಇಲ್ಲಿಯೇ ಮುಕ್ತಿಯನ್ನು ಪಡೆದರಂತೆ. ತಿರುವಣ್ಣಾಮಲೈಯನ್ನು ಸಂದರ್ಶಿಸುವವರು ರಮಣ ಮಹರ್ಷಿ ಆಶ್ರಮಕ್ಕೆ ಭೇಟಿಯೀಯದೆ ಹೋಗುವುದಿಲ್ಲ.

ತಿರುವಣ್ಣಾಮಲೈ ಭಾರತದ ಪವಿತ್ರ ಯಾತ್ರಾ ಸ್ಥಳ ಮತ್ತು ದೇವಮಂದಿರವಾಗಿದ್ದು ಅಖಿಲ ಭಾರತ ಪ್ರಸಿದ್ಧಿಯನ್ನು ಪಡೆದಿದೆ.

[ಸಂಗ್ರಹ]

—ಶ್ರೀ ಸುಬ್ರಹ್ಮಣ್ಯ ಭಟ್,

## ಜಾರ್ಜ್ ವಾಷಿಂಗ್‌ಟನ್

(ಹಿನೇ ಪುಟದಿಂದ)

ವಾಷಿಂಗಟನ್ ಕಾಲದ ಫ್ರೆಂಚ್‌ರಾಯಭಾರಿ ಮೆಟೊಬ್ರಿಘೋಂಡ್ ಅಮೇರಿಕದ ಪ್ರಥಮ ಅಧ್ಯಕ್ಷರ ವಿಷಯವಾಗಿ ಸಂಕ್ಷಿಪ್ತವಾಗಿ ಭವಿಷ್ಯವಾದಿಯಂತೆ ಈ ರೀತಿ ನುಡಿದ—"ಯಾವ ಉದ್ದೇಶ ಆತನ ಕರ್ತವ್ಯವಾಗಿತ್ತೋ ಅದೇ ಅವನ ಉದ್ದೇಶವಾಗಿತ್ತು....ದೇಶವೊಡನೆ ತನ್ನ ವ್ಯಕ್ತಿತ್ವದ ಅಸ್ತಿತ್ವವನ್ನು ಸಂಯೋಜಿಸಿದ ಸ್ವಾತಂತ್ರ್ಯದ ಜೊತೆಗೆವಾಷಿಂಗಟನ್ ಎಂಬ ಹೆಸರೂ ಯುಗಂಯುಗಾಂತರಗಳ ಉದ್ದಕ್ಕೂ ಉಳಿದು ಹೋಗುವದು."

—ಶ್ರೀ ಕೃಷ್ಣನ್ ಗುಜ್ರಾಲಿ


ರಾಷ್ಟ್ರೀಯ ರಕ್ಷಣಾ ನಿಧಿಯ ಸಹಾಯಾರ್ಥವಾಗಿ

**ಸುಪ್ರಸಿದ್ಧ ಡಾಕ್ಟರರುಗಳಿಂದ ನಾಟಕ ಪ್ರದರ್ಶನ**

**ವ್ಯಾಧಿಗೆ ತಕ್ಕ ವೈದ್ಯ**

**ತಾ. 2—3-63ನೇ ಶನಿವಾರ ರಾತ್ರಿ 9-30ಕ್ಕೆ**

**ವಿಕ್ಟೋರಿಯಾ ಜುಬಿಲೀ ಯೂನಿಯನ್ ಕ್ಲಬ್ಬಿನ**

**ಡಾ| ಎಸ್. ಆರ್. ಪೈ ರಂಗಮಂಟಪದಲ್ಲಿ**

**ಮುಖ್ಯ ಭೂಮಿಕೆಯಲ್ಲಿ**

ಡಾ| ಎಂ. ಎಸ್. ಶೆಟ್ಟಿ, ಡಾ| ಕೆ. ಎಲ್. ಐತಾಳ್, ಡಾ| ಯು. ಮೋಹನದಾಸ ಪೈ, ಡಾ| ಬಿ. ಬಿ ಶೆಟ್ಟಿ, ಡಾ| ಕೃಷ್ಣಸ್ವಾಮಿ, ಡಾ| ಥೋಮಸ್, ಡಾ| ಪದ್ಮಾ ರಾವ್, ಡಾ| ಅನ್ನಪೂರ್ಣ, ಡಾ| ಎಂ. ಆರ್. ಹೆಗ್ಡೆ, ಡಾ| ಎಂ ಬಿ. ಶೆಟ್ಟಿ ಮತ್ತು ಡಾ| ಕೇಳು ನಂಬಿಯಾರ್ ಮತ್ತಿತರು.

**ರೂ. 10ಕ್ಕೆ 5 ನಾಟಕಗಳ ಸೀಸನ್ ಟಿಕೇಟುಗಳು**

**ರೂ. 25ಕ್ಕೆ ಡೋನರ್ಸ್ ವಿಶೇಷ ತರಗತಿಗಳು**

**ಟಿಕೇಟಿನ ದರ: ರೂ. 5, 3, 2 ಮತ್ತು 1.**

**ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ, ಉಡುಪಿ.**



**ಶ್ರೀ ಪಿ. ಎಸ್. ಹೆಬ್ಬಾರ ('ಸಿರಿಪತಿ')**

ಅವರ ನವೀನ ಜನಪದ ಗೀತಾಸಂಕಲನ

**'ಕೋಕಿಲವಾಣಿ'**

**(ಪ್ರಿನ್ಸಿಪಾಲ್ ವಿ.ಎಂ. ಇನಾಂದಾರರ ಮುನ್ನುಡಿ)**

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ.ಜಿ.ಎಂ. ಕಾಲೇಜು ಕುಂಜಿಬೆಟ್ಟು ಉಡುಪಿ.

## ದೇವವಾಣಿ

# ಸಂಸ್ಕೃತ ಭಾಷೆಯ ಶ್ರೇಷ್ಠತ್ವ

ಸಂಸ್ಕೃತ ಭಾಷೆಯನ್ನು ದೇವ ಭಾಷೆಯೆಂದು ಕರೆಯಲು ಎರಡು ಕಾರಣಗಳಿವೆ. ಒಂದನೆಯದಾಗಿ ಅದು ಇಡಿ ಜಗತ್ತಿನಲ್ಲಿ ಮೊದಲಾಗಿ ಮಾನವರು ಆಡಿದ ಭಾಷೆ. ಎರಡನೆಯದಾಗಿ ದೇವಕೃತಿಯೆನ್ನಲ್ಪಡುವ ವೇದಗಳ ಭಾಷೆ ವೇದಗಳಿಂದಲೂ ಪ್ರಾಚೀನವಾದ ಇತರ ಗ್ರಂಥಗಳಲ್ಲಿ ವೇದಗಳ ಪ್ರವಚನವು ಸುರರಿಂದ ಉತ್ಪನ್ನವಾದುದು ಎಂದು ನಮ್ಮ ಅಭಿಪ್ರಾಯವು. ಭೂಲೋಕದ ಯಾವತ್ತು ಲಿಖಿತಗಳನ್ನು ಪರಾಮರ್ಶಿಸಿದರೂ 'ಶಬ್ದಬ್ರಹ್ಮ"ನೆಂದು ಭಾವಿಸಲ್ಪಟ್ಟ ಈ ದೇವ ಭಾಷೆಯೇ ಜ್ಞಾನಿಗಳೂ, ವಿವೇಕಿಗಳೂ ಆದ ಮಾನವ ಪುಂಗವರನ್ನು ನೀತಿ ತತ್ವದ ಕಡೆಗೆ ಸೆಳೆದು, ಮಾನವವರ್ಗದಲ್ಲಿ ಸದಾಚಾರ, ನೀತಿ ಧರ್ಮ ಮತ್ತು ಮಾನಸಿಕ ಅಭ್ಯುದಯವನ್ನು ಸ್ಥಾಪಿಸಿದ್ದು.

ಸಂಪೂರ್ಣ ಸಂಸ್ಕೃತಿ ಹೊಂದಿದ ಭಾಷೆಯಾದುದರಿಂದಲೇ ಈ ಭಾಷೆಗೆ 'ಸಂಸ್ಕೃತ ವೆಂದು ಹೇಳುವರು. ಅದರ ಪ್ರತಿಯೊಂದು ಶಬ್ದದಲ್ಲೂ ಅರ್ಥಸಂಪನ್ನತೆಯು ಅಡಕವಾಗಿದೆ. ಒಂದೇ ಪದಕ್ಕೆ ಸಂದರ್ಭಕ್ಕನುಸರಿಸಿ ಭಿನ್ನಾರ್ಥವೂ ಇದೆ. ಗ್ರೀಕ್ ಭಾಷೆಯ ಸೌಲಭ್ಯ, ಲಿಟಿನ್ ಭಾಷೆಯ ಅಚ್ಚುಕಟ್ಟುತನ ಮತ್ತು ಸಂಕ್ಷೇಪ ರೋಮನ್ ಭಾಷೆಯ ಶಕ್ತಿ, ಹೀಬ್ರೂ ಭಾಷೆಯ ದೈವಪ್ರೇರಣೆ— ಇವೆಲ್ಲ ಸಂಸ್ಕೃತ ಭಾಷೆಯಲ್ಲಿ ಒಂದಾಗಿ ಸೇರಿರುವವು ಅತಿ ಗೂಢವಾದ ತತ್ವ ವಿಚಾರಗಳನ್ನು ಈ ಭಾಷೆಯಲ್ಲಿ ವಿಶೇಷ ಪ್ರಯತ್ನ ಸಾಧನವಿಲ್ಲದೆ ವಿವರಿಸಬಹುದು.

ಮಾನವರಲ್ಲಿ ಮನಸ್ಸೂ, ಹೃದಯವೂ ಒಂದಾಗಿ ವರ್ತಿಸಿದರೆ ಮಾತ್ರ ತತ್ವಜ್ಞಾನವಾಗಬಹುದು. ಅಂತಹ ತತ್ವ ಜ್ಞಾನಕ್ಕೆ ಅವಕಾಶಗೊಡುವ ವಿಚಾರಗಳನ್ನು ವಿವರಿಸಲಿಕ್ಕೆ ಕ್ರಮವಾದ ಭಾಷೆಯು ಸಂಸ್ಕೃತಕ್ಕೆ ಮಿಕ್ಕ ಬೇರೊಂದಿಲ್ಲ. ಇದ್ದರೂ ಅದಕ್ಕೆ ದ್ವಿತೀಯ ಸ್ಥಾನ. ನಮ್ಮ ಸಕಲ ಊಹನೆ, ಭಾವನೆಗಳಿಗೂ, ನಮ್ಮ ಸನಾತನ ಧರ್ಮದ ಸಂರಕ್ಷಣೆಗೂ, ನಮ್ಮ ಧರ್ಮದ ಯೋಗ್ಯತೆಯನ್ನು ಮನವರಿಕೆ ಮಾಡಿಕೊಳ್ಳುವುದಕ್ಕು ಬೇಕಾದ ಸಾಹಿತ್ಯವನ್ನು ನಾವು ಸಂಸ್ಕೃತ ಸಾಹಿತ್ಯದಲ್ಲಿ ಸಾಕಷ್ಟು ಕಂಡು ಹಿಡಿಯಬಹುದು ನಾಲ್ಕು ವೇದಗಳನ್ನು ಒಳಗೊಂಡ ಸಾಹಿತ್ಯವು ಅಗಾಧವಾಗಿದೆ. ಮಾನವ ಸೃಷ್ಟಿಯ ಏಳಿಗೆಯನ್ನು ಕೂಲಂಕಷವಾಗಿ ಜನತೆಗೆ ತೋರಿಸುವ ಆದಿ ಪ್ರವಚನವೇ ವೇದಪ್ರವಚನ. ಮಾನವ ಸಂಸ್ಕೃತಿಯು ಅಡಿಗಲ್ಲೆ ಈ ಆದಿ ಸಾಹಿತ್ಯರತ್ನವೆನ್ನಬಹುದು. ಆತ್ಮ ಜ್ಞಾನಕ್ಕೆ ಉಪನಿಷತ್ತುಗಳೂ ಪ್ರಥಮ ಪಾ‌ರವೆನ್ನಲು ಸಂಶಯವಿಲ್ಲ. ಜನನ ಕಾಲದಿಂದ ಮರಣ ಕಾಲದ ವರೆಗೆ ಮಾನವನ ಜೀವನಕ್ಕೆ ಶಾಂತಿ ಕೊಡುವ ಅಮೂಲ್ಯ ಸಾಹಿತ್ಯವು ಉಪನಿಷತ್ತುಗಳಲ್ಲಿದೆ. ಒಂದೊಂದು ಭಾಗದಲ್ಲಿ ಒಂದೊಂದು ಗುಣ ವೈಶಿಷ್ಟ್ಯವಿದೆ. ಅರ್ಥಗರ್ಭಿತವಾದ ಈ ಸಾಹಿತ್ಯದಲ್ಲಿ ಅಣುಶಕ್ತಿಯಿಂದಲೂ ಮಿಗಿಲಾದ ಪಶುಪತ ಶರದ ಶಕ್ತಿಯಿದೆ. ಕೋದಂಡ ಶರದ ಬಲವಿದೆ. 'ನಾನು', 'ನನ್ನಿಂದದಾಯಿತು', ನನ್ನಿಂದಲೇ ಆಗುವದು ಎಂಬ ಈ 'ನಾನು' ಅಹಂ ಭಾವವನ್ನು ಬಿಡುವ ತನಕ ಈ ಸಾಹಿತ್ಯದ ಗೂಢಾರ್ಥವು ಯಾರಿಗೂ ಮನನವಾಗದು ಎಂಬುದು ನಿಶ್ಚಯವು.

ಸಂಸ್ಕೃತ ಪದ್ಯ ಕಾವ್ಯಗಳು ಇಡಿ ಭರತ ಖಂಡವನ್ನು ಯಾವಾಗಲೂ ಆಳುವವು. ಶ್ರೀಮದ್ ರಾಮಾಯಣ ಮತ್ತು ಮಹಾ ಭಾರತಕ್ಕೂ ಮಿಗಿಲಾದ ಬೇರೆ ಕಾವ್ಯಗಳಿಲ್ಲ ಗಂಗಾ ನದಿಯಿಂದ ಉತ್ತಮವಾದ ನದಿಯಿಲ್ಲ. ಭಗವದ್ ಗೀತೆಯಿಂದ ಉತ್ತಮವಾದ ಗೀತೆಯಿಲ್ಲ, ಇದು ಹಿಂದುಗಳ ಮಟ್ಟಿಗೆ ನಿರ್ವಿವಾದವು.

ಸಂಸ್ಕೃತ ಭಾಷೆಯು 'ಶಬ್ದ ಗಾಂಭೀರ್ಯದಂತೆ 'ನಾದ ಗಾಂಭೀರ್ಯವೂ ಇದೆ. ಪ್ರತಿ ಧ್ವನಿಗೂ ಶಾಸ್ತ್ರ ವೈದ್ಯನೆ ಸಿಲಾಕೆ ಇದೆ. ಸಮುದ್ರದಷ್ಟು ಆಳವಿರುವ ಭಾವನೆಗಳನ್ನು ವಿವರಿಸುವ ಶಬ್ದಾರ್ಥಗಳಿವೆ. ಅತ್ಯಂತ ಸಾರವುಳ್ಳ ಈ ಹಿರ್ವಾಣ ಭಾಷೆಯನ್ನು ತಿಳಕೊಳ್ಳುವುದೂ ನಮ್ಮ ಆದಿ ಕರ್ತವ್ಯವು. ಕಾಳಿದಾಸ, ಭವಭೂತಿ, ಜಯದೇವ, ಭರ್ತೃಹರಿ, ಬಾಣಭಟ್ಟ, ಭಾರವಿ ಮೊದಲಾದ ಕವಿಗಳಿಂದ ಭೂಷಿತವಾದ ದಿವ್ಯ ಭಾಷೆಯು ಸಂಸ್ಕೃತವು. ಪ್ರತಿಯೊಬ್ಬ ಭಾರತೀಯನ ನರನಾಡಿಗಳಲ್ಲೂ, ರಕ್ತದಲ್ಲೂ ಈ ದಿವ್ಯ ಭಾಷೆಯು ಕಾರ್ಣಿಕವಿದ್ದೇಯಿದೆ. ಪಾಶ್ಚಿಮಾತ್ಯರು ಕೂಡ ಈ ಭಾಷೆಯನ್ನು ಕಲಿತು ಆನಂದಪಟ್ಟಿರುವರು. ಸಂಸ್ಕೃತವನ್ನು ವೃದ್ಧರು ಕೂಡ ಕಲಿಯಬಹುದು ಆಂಗ್ಲೇಯನಾದ 'ಗ್ರಿಫಿಕ್ಸ್' ಎಂಬವನು 108 ವರ್ಷಗಳ ಮೊದಲು ಉತ್ತರ ಹಿಂದುಸ್ಥಾನಕ್ಕೆ ಬಂದು ಸಂಸ್ಕೃತದಲ್ಲಿ ಅಗಾಧವಾದ ಪಾಂಡಿತ್ಯವನ್ನು ಪಡೆದು, ರಾಮಾಯಣವನ್ನೂ, ವೇದಗಳನ್ನೂ, ಆಂಗ್ಲ ಭಾಷೆಯಲ್ಲಿ ಶ್ರದ್ಧೆಯಿಂದಲೂ, ಪ್ರಾಮಾಣಿಕವಾಗಿಯೂ ಭಾಷಾಂತರ ಮಾಡಿ ದಕ್ಷಿಣ ಹಿಂದುಸ್ಥಾನದ ನೀಲಗಿರಿ ಜಿಲ್ಲೆಯಲ್ಲಿ ತನ್ನ ಸನ್ಯಾಸ ಕಾಲವನ್ನು ಮುಗಿಸಿ ಸ್ವರ್ಗವಾಸಿಯಾದನು. ಎಂದ ಮೇಲೆ ಭಾರತೀಯರಾದ ನಾವು ಈ ಭಾಷೆಗೆ ಸದಾಕಾಲ ಮನ್ನಣೆಯನ್ನು ಕೊಡುವುದು ಅಗತ್ಯವು

—ಶ್ರೀ ಎಂ. ಬಿ ಶಂಕರ ರಾವ್,

---

### ಕಾಸರಗೋಡು ಮುನ್ಸಿಫ್ ಕೋರ್ಟಿನಲ್ಲಿ

O. S. 358/1962

ಅಬೋಕ್ರ ಬ್ಯಾರಿ — ವಾದಿ.

ಪಾತುಮ್ಮ ಕೂಡಾ — ಪ್ರತಿವಾದಿರು.

D 7. ಮೂಸೆ ಬ್ಯಾರಿ, ಕೊಳ್ಕೆ ಪ್ಯಾದಿನೆ ಬ್ಯಾರಿ ಮಗ, ಹಾಸನ ಜಿಲ್ಲಾ ಒಡೆಳ್ಳಿ ಎಸ್ಟೇಟಿನಲ್ಲಿರುವವ. D 8. ಕೆ. ಯಂ. ಮೊಯಿದಿನ್ ಕುಂಞ ಬ್ಯಾರಿ, ಮಮ್ಮು ಬ್ಯಾರಿ ಮಗ, ಹಾಸನ ಜಿಲ್ಲಾ ಗೋದು ಗ್ರಾಮದ ದೊಡ್ಡಗದ್ದೆಯಲ್ಲಿರುವವ.

ರಿಜೆಂಶನ್ ಮತ್ತು ಖಿತೆ ಬಗ್ಗೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 5—3—1963ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದಲ್ಲಿ ಸದರಿ ದಿವಸ ಹಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದು.

(*Sd*) M. A Krishna Rao,
Advocate for Plaintiff.

ಕಾಸರಗೋಡು, ತಾ. 20—2—1963.

---


### ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

### ಮೂರು ಪ್ರಕಟಣೆಗಳು.

### ಚಂದ್ರಲೋಕಕ್ಕೆ ಪ್ರಯಾಣ

ಯು.ರಾಘವೇಂದ್ರ ಆಚಾರ್ಯ,ಎಂ.ಎ.)

### ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ತಿಳಿಸುವ ಉಪಯುಕ್ತ ಪುಸ್ತಕ

### ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ


---


ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

# ಸುಲಭದಲ್ಲಿ ಇಂಗ್ಲಿಷ್

## (ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

# ಮನೆ ಮದ್ದು

## (HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

# LETTER WRITING MADE EASY

# ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗುವಂತಹ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಕಳುಹಿಸಿದರೆ ಪುಸ್ತಕ ರವಾನಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕಾಲೇಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.


---

### ಪುತ್ತೂರು ಡಿ ಮು. ಕೋರ್ಟಿನಲ್ಲಿ

S. C. 521/62.

ದೇರಣ ಗೌಡ —ವಾದಿ.

ದೆಯ್ಯಕ್ಕ ಕೂಡಾ —ಪ್ರತಿವಾದಿರು.

2ನೇ ಪ್ರತಿವಾದಿ:—ಸೀತಾರಾಮ ಶೆಟ್ಟಿ, ದೆಯ್ಯಕ್ಕ ಮಗ ಕಾಸರಗೋಡು ತಾಲೂಕು ನೆಟ್ಟಣಿಗೆ ಗ್ರಾಮದ ವಾಸರು.

ಸದ್ರಿ 2ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವದೇನೆಂದ್ರೆ,

ನೀವು ಮತ್ತು 1ನೇ ಪ್ರತಿವಾದಿ ಕೂಡಾ ತಾ 22-3-60ಕ್ಕೆ ವಾದಿಗೆ ರೂ. 150/-ಕ್ಕೆ ಬರಕೊಟ್ಟ ಡಿ. ಪ್ರೋ. ನೋಟಿನ ಅಸಲು ಬಡ್ಡಿ ಖರ್ಚುಗಳನ್ನು ಬರಮಾಡಿಕೊಳ್ಳುವದೇ ಮಾಡಿದ ದಾವೆಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 2-3-63ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಪಸ್ಥಿತರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷವಾಗಿ ಯುಕ್ತಕಂಡಂತೆ ತೀರ್ಪು ನೀಡಲಾದೀತು.

(Sd.) M. Sadashiva Rao,
Vakil for Plaintiff.

ಪುತ್ತೂರು, 16-2-63.

---


### ಹೊಸ ಪುಸ್ತಕ—

ನಚಿಕೇತ'ರ,

ನವೀನ ಕಾದಂಬರಿ—

# ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

# ನೇಫಾ ನಡುಗಲು ಕಾರಣವೇನು?

(೩ನೇ ಪುಟದಿಂದ)

ಲ್ಲಿದ್ದ ಚೈನಿ ಸೈನಿಕರು ಪ್ರವಾಹ ರೂಪದಲ್ಲಿ ಬಾರದೆ ಇದ್ದುದಕ್ಕೆ ಕಾರಣವೆಂದರೆ ಸಿಲಾವನ್ನು ಮುತ್ತಿಗೆ ಹಾಕಿ ವಶಪಡಿಸಿಕೊಳ್ಳಲು ಸಾಧ್ಯವಿಲ್ಲವೆಂಬುದಾಗಿತ್ತು. ಇದುವೇ ನಿಜವಾಗಿ ಘಟಿಸಿದ್ದು. ತವಾಂಗಿಗೂ ಜಂಗಿಗೂ ನಡುವಣ ರಸ್ತೆಯನ್ನು ಚೈನಿಯರು ಇನ್ನು ಕಟ್ಟಿಲ್ಲವೆಂದು ಕಾಣುತ್ತದೆ. ಹಾಗಾಗಿ ಸಿಲಾವಲ್ಲಿದ್ದ ಚೈನಿಯರು ಯುದ್ಧಕ್ಕೆ ಸಿದ್ಧವಾಗಿರಲಿಲ್ಲ. ಅವರ ಬಳಿ ದೊಡ್ಡ ತೋಪು, ಗುಂಡುಗಳಿದ್ದಿರಲಿಲ್ಲ.

ಬೊಮ್ಡಿಲಾವನ್ನು ಮುತ್ತಲು ಚೈನಿ ಸೈನಿಕರು ಕಳ್ಳ ರಸ್ತೆಯಿಂದ ಬಂದಿದ್ದರು. ಹಾಗಾಗಿ ಮುಖ್ಯ ಪ್ರದೇಶದಲ್ಲಿ ಕಾಯುತ್ತಿದ್ದ, ಕಾದುತ್ತಿದ್ದ ನಮ್ಮ ಸೈನಿಕರು ಹಾಗೆಯೇ ಅಲ್ಲೇ ಇದ್ದರು. ಚೈನಿ ಸೈನಿಕರು ರಾತ್ರಿ ಹೊತ್ತು ಮುಂದರಿಯುತ್ತ, ಹಗಲಿನಲ್ಲಿ ತೆವಳುತ್ತ ಗುಡ್ಡವನ್ನೇರಿ, ಕಾಡುಗಳಲ್ಲಿ ನಡೆದು ಬೊಮ್ಡಿಲಾವನ್ನು ಮುತ್ತಿರುವರು. ಈ ಸೈನಿಕ ತಂಡವಾದರೋ ಒಂದೇ ಕಡೆಯಿಂದ ಬಂದಿರದೆ ಹಲವಾರು ವಿಭಾಗಗಳಾಗಿ ಹಲವಾರು ಸ್ಥಳಗಳಿಂದ ಒಮ್ಮೆಲೆ ಬಂದು ಅಕಸ್ಮಾತ್ ಆಕ್ರಮಣ ನಡೆಸಿರುವರು. ಈ ಆಕ್ರಮಣದ ಸಮಯ ಅವರು ಸೇತುವೆಗಳನ್ನು ನಾಶಗೈದಿರುವರಲ್ಲದೆ, ರಸ್ತೆಗಳನ್ನು ಹಾಳುಗೆಡವಿರುವರು. ಹಾಗಾಗಿ ಅವರ ಮುತ್ತಿಗೆಯ ನಡುವೆ ಸಿಕ್ಕಿಬಿದ್ದ ನಮ್ಮ ಜವಾನ ಬಂಧುಗಳಿಗೆ ಹಿಂದಿನಿಂದ ಸಾಮಾಗ್ರಿಗಳನ್ನೊದಗಿಸಲಾಗಲಿಲ್ಲ. ಈ ರೀತಿ ಅವರು ಬಂದು ತಂಗಿ ಸೇತುವೆ, ರಸ್ತೆಗಳನ್ನು ಕ್ರಮಶಃ ಹಾಳುಗೆಡವಬೇಕಾಗಿದ್ದಲ್ಲಿ ಅವರಿಗೆ ಕಳ್ಳರಸ್ತೆ, ಸೇತುವೆಗಳ ಪೂರ್ಣ ಪರಿಚಯ ಇರಬೇಕಲ್ಲದೆ, ಸೇನಾ ಚಲನವಲನ ವ್ಯವಸ್ಥೆಗಳ ಪೂರ್ಣ ಸಮಾಚಾರವೂ, ಅದನ್ನು ತಿಳಿದುಕೊಳ್ಳಲೂ ಏರ್ಪಾಡೂ ಇತ್ತೆಂಬುದು ಗೊತ್ತಾಗುತ್ತದೆ.

ಆ ಪ್ರದೇಶಗಳಲ್ಲಿದ್ದ ನಮ್ಮ ಪಡೆಗಳಿಗೆ ವಿಮಾನಗಳ ಮೂಲಕ ಆಹಾರವನ್ನೊದಗಿಸಲಾಗುತ್ತಿತ್ತು. ಈ ವಿಮಾನ ಚಾಲಕ-ನಿರ್ದೇಶಕರಿಗೂ ಶತ್ರುಗಳ ವಾಸನೆ ಹತ್ತಿರಲಿಲ್ಲವೆಂಬುದು ಆಶ್ಚರ್ಯಪಡಬೇಕಾಗಿರುವ ವಿಷಯವಿದೆ. ಮೊದಮೊದಲು ಚೈನಿ ಸೈನಿಕ ಚಲನವಲನದ ಕುರಿತು ತ್ರಿವಿಷ್ಟಪದ ನಿರಾಶ್ರಿತರು, ಮೋಂಪಾ ವನಚರರು ನಮಗೆ ಸುದ್ದಿಯನ್ನು ತಿಳಿಸುತ್ತಿದ್ದರು. ಆದರೆ ಅವರಲ್ಲಿ ಒಬ್ಬನನ್ನೂ ಬಿಡದೆ ಎಲ್ಲರನ್ನೂ ಚೈನಿ ಸೈನಿಕರು ಬಂಧಿಸಿದ್ದರು. ಹಾಗಾಗಿ ನಮಗೆ ಸುದ್ದಿ ಸಿಗುವದೂ ನಿಂತು ಹೋಯಿತು. ಅವರಿಗೆ ತುಪಾಕಿ ತುದಿ ತೋರಿಸಿ ದಾರಿಯ ಪರಿಚಯ ಹಾಗೂ ಚಲನವಲನ ಸಹಾಯವನ್ನು ಅವರಿಂದ ಚಮತ್ಕಾರವಾಗಿ ಚೈನಿಯರು ಪಡೆದುಕೊಂಡಿರುವರು. ಅಲ್ಲದೆ ಅವರ ಬಳಿ ಬಹಳ ಚೆನ್ನಾಗಿ ಪಳಗಿದ್ದ ದೊಡ್ಡ ಬಲಿಷ್ಠ ನಾಯಿಗಳಿದ್ದುವು. ಇವು ವಿಚಿತ್ರ ರೀತಿಯಲ್ಲಿ ನಮ್ಮ ಸೈನಿಕರ ಪತ್ತೆ ಹಚ್ಚುತ್ತಿದ್ದುವು.

ಆಕ್ರಮಣ ನಡೆಸಿದ ಚೈನಿ ಸೈನಿಕರೆಲ್ಲರೂ ಮೋಂಪಾ ಉಡುಗೆ-ತೊಡುಗೆಗಳನ್ನುಟ್ಟುಕೊಂಡಿದ್ದರೆಂಬುದು ಸರಿಯಲ್ಲ. ಆದರೂ ದಳಮುಖದಲ್ಲಿದ್ದ ಬಹು ಸೈನಿಕರು ಮೋಂಪಾ ಉಡುಗೆಯಲ್ಲಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅವರನ್ನು ಹಿಂಬಾಲಿಸಿದ ಸೈನಿಕರು ನಮ್ಮ ದಳದ ಗಣವೇಷದಂತಿದ್ದ ಕಾಖಿ ಬಟ್ಟೆಯ ಉಡುಪುಗಳನ್ನು ಧರಿಸುವ ತಂತ್ರವನ್ನುಪಯೋಗಿಸಿದ್ದರು. ಅವರ ಸಾಮಾಗ್ರಿಗಳನ್ನು ಹೊತ್ತುಕೊಂಡಿದ್ದವರು ತ್ರಿವಿಷ್ಟಪದ ನಿರಾಶ್ರಿತರಂತೆ ಉಡುಗೆಗಳನ್ನು ಧರಿಸಿಕೊಂಡಿದ್ದರು. ಇದಕ್ಕಿಂತಲೂ ಮುಖ್ಯ ವಿಷಯವೆಂದರೆ, ಸಾಲುದ್ದಕ್ಕೂ ಹಳ್ಳಿಗಳಲ್ಲಿ—ಆಡುಗಳಲ್ಲಿ ಬಹಳ ಸಮಯದಿಂದ ಚೈನಿಯರು ವಾಸವಾಗಿದ್ದು, ಅವರು ಆ ಸ್ಥಳದ ಪೂರ್ಣ ಅನುಭವ ಪಡೆದುಕೊಂಡು ಚೈನಿ ಸೈನಿಕರಿಗೆ ಸಹಾಯ ಮಾಡಿರುವರು. ಆದರಲ್ಲಿ ಕೆಲವರು ರಸ್ತೆ ನಿರ್ಮಾಣ ಕಾರ್ಯದಲ್ಲಿ ಭಾಗ ವಹಿಸಿರುವರೆಂಬ ಸತ್ಯಾಂಶವೂ ಪ್ರಕಟವಾಗಿದೆ. ಅವರು ಆ ಸಮಯದಲ್ಲಿ ಮೋಂಪಾಗಳಂತೆ, ತ್ರಿವಿಷ್ಟಪದ ನಿರಾಶ್ರಿತರಂತೆ ಅಲ್ಲದೆ ಶಾಂತ ಲಾಮಾಗಳಂತೆ ಕೂಡಾ ವೇಷ ಮರೆಸಿಕೊಂಡಿದ್ದರು. ಈ ಜನರು ಒಮ್ಮೆಲೆ ತಮ್ಮ ವೇಷವನ್ನು ಬದಲಾಯಿಸಿಕೊಂಡು, ಮರೆಯಿಂದ ಹೊರಬಂದು, ರೈಫಲ್ಲುಗಳನ್ನು ಹಿಡಿದುಕೊಂಡು ನಮ್ಮ ಸೈನಿಕರಿಗೆ ಎದುರಾಗಿರುವರು. ಈ ಜನರೇ ಅಲ್ಲಿನ ಸಂಪರ್ಕ ವ್ಯವಸ್ಥೆಯನ್ನು ಹಾಳುಗೆಡವಿದವರು. ಚೈನಿ ಸೈನಿಕರು ಎಲ್ಲಿಯವರೆಗೆ ತಂತ್ರವನ್ನು ಹೂಡಿದ್ದರೆಂದರೆ ನಮ್ಮ ಸೈನಿಕರ ಬಳಿ ಅವರು ಭಾರತೀಯ ಗ್ರಾಮ್ಯ ಭಾಷೆಗಳಲ್ಲಿ ಮಾತಾಡಿರುವರು. ಇದಕ್ಕೆ ಚೈನಿಯರು ಬಹಳ ವರ್ಷಗಳ ಹಿಂದಿನಿಂದ ಸಿದ್ಧತೆ ನಡೆಸಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಮಾನಸಿಕ ಘಟನೆ ಕೂಡಾ ಚೈನಿಯರಿಗೆ ಸಹಾಯ ಮಾಡಿದೆ. ತಾಗ್ ಲಾರಿಡ್ಜಿಯ ಮೇಲೆ ಆಕ್ರಮಣ ನಡೆದಂದಿನಿಂದ, ಅವರು ಗುಂಪುಗುಂಪಾಗಿ, ಶತ್ರುವಿಗೆ ಶೋಕಪಡದೆ—ಅತ್ತ ಇಸಿತೂ ಗಮನವೀಯದೆ, ಪ್ರವಾಹ ರೂಪದಲ್ಲಿ ಮುಂದರಿಯುತ್ತಿರುವರೆಂಬ ಸುದ್ದಿ ಹಬ್ಬಿತ್ತು. ಈ ವಿಷಯ ಚೈನಿಯರಿಗೆ ಗೊತ್ತಾಯಿತು. ಅನಂತರ ಅವರು ಹಾಗೆ ಬರದೆ ಚಿಕ್ಕ ಪುಟ್ಟ ಗುಂಪುಗಳಾಗಿ ಹಲವಾರು ದಿಕ್ಕುಗಳಿಂದ ಬಂದು ಒಮ್ಮೆಲೆ ಮುತ್ತಿಗೆ ಹಾಕಿದರು. ಆಗ ಸೇನಾ ಸಮುದ್ರದಲ್ಲಿ ತಾವು ಮುಳುಗಿರುವೆವೆಂಬ ಕಲ್ಪಭಿಪ್ರಾಯ ನಮ್ಮ ಸೈನಿಕರಲ್ಲಿ ಉಂಟಾಯಿತು. ಅಲ್ಲಿಗೆ ನಮ್ಮ ಸೇನಾಧಿಕಾರಿಗಳು ದೂರದರ್ಶಕಗಳ ಮೂಲಕ ವೀಕ್ಷಿಸುತ್ತಿದ್ದಾಗ ಒಲಿವ್ ಕಾಖಿ ಉಡುಗೆಯ ಅಥವಾ ತ್ರಿವಿಷ್ಟಪದ ನಿರಾಶ್ರಿತರಂತಿದ್ದ ಜನರು ಕತ್ತೆಗಳ ಸಹಾಯದಿಂದ ಸಾಮಾಗ್ರಿ ಸಾಗಿಸುತ್ತಿರುವದನ್ನು ಕಂಡು ಸುಮ್ಮಗೆ ಇರಬೇಕಾಗುತ್ತಿತ್ತು.

ಶತ್ರುಗಳು ಹತ್ತಿರಕ್ಕೆ ಬಂದಾಗ ಏನು ಮಾಡುವದೆಂದು ದಿಕ್ಕು ತೋಚದೆ ನಮ್ಮ ಸೇನಾ ವಿಭಾಗ ಕೈಕಾಲು ಬಿಡಬೇಕಾಗುತ್ತಿತ್ತು.

ಸಾಮಾನ್ಯ ನಂಬಿಕೆಗೆ ವಿರೋಧವಾಗಿ ಚೈನಿಯರಿದ್ದರು. ನಮ್ಮಲ್ಲಿರುವ ಸಾಮಾನ್ಯ ನಂಬಿಕೆ ಎಂದರೆ ಅವರು ಗಾತ್ರದಲ್ಲಿ ಚಿಕ್ಕವರಾಗಿದ್ದು, ಅವರಿಂದ ಹೊರೆಯನ್ನು ಹೊರಲು ಸಾಧ್ಯವಿರುವದಿಲ್ಲ. ಅವರ ಸೇನಾ ವ್ಯವಸ್ಥೆಯಲ್ಲಿ ಅರ್ಧ ಪಾಲು ಹೊರೆ ಹೊರುವವರೂ, ಕತ್ತೆಗಳೂ ಇದ್ದುವು. ಸೈನಿಕರಿಗೆ ಆ ಕೆಲಸವೇ ಇದ್ದಿರಲಿಲ್ಲ. ಸೈನಿಕರು ಅವರವರ ಆಯುಧಗಳನ್ನು ಮತ್ತು ಅವುಗಳ ಮತ್ತು ಅವುಗಳ ಮದ್ದುಗಳನ್ನು ಹೊತ್ತುಕೊಳ್ಳುತ್ತಿದ್ದರು; ಉತ್ತಮ ಬಟ್ಟೆಯನ್ನವರು ಧರಿಸಿಕೊಂಡಿದ್ದರು. ಅವರ ಬಳಿ ಉತ್ತಮ ದೂರ ಪ್ರಕಾಶವೀಯುವ ದೀಪಗಳಿದ್ದುವು ಮರದ ಮೇಲಿನಿಂದ ಅವುಗಳ ಸಹಾಯದಿಂದ ಅವರು ನಮ್ಮ ಸೇನಾ ಚಲನ ವಲನಗಳನ್ನು ಕಂಡು ಹಿಡಿಯುತ್ತಿದ್ದರು. ಅಲ್ಲದೆ ಅವರಿಗೆ ಗೊರಿಲ್ಲಾ ಯುದ್ಧ ಪದ್ಧತಿಯಲ್ಲಿ ಹಾಗೂ ಕಾಡು ಯುದ್ಧ ಪದ್ಧತಿಯಲ್ಲಿ ಚೆನ್ನಾಗಿ ಅಭ್ಯಾಸವಿತ್ತು.

ಹಾಗಿದ್ದರೂ ನಮ್ಮ ಸೈನಿಕರು ಧೃತಿಗೆಟ್ಟಿರುವದಿಲ್ಲ. ವಿಮಾನವಿಭಾಗವೂ ಉತ್ತಮ ರೀತಿಯಲ್ಲಿ ಕ್ರಿಯಾ ಮಗ್ನವಾಗಿತ್ತು. ಹಿಂದಕ್ಕೆ ಬಂದು ಮುಖ ತೋರಿಸುವದಕ್ಕಿಂತ ವೀರನಂತೆ ಹೋರಾಡಿ ಸ್ವರ್ಗವನ್ನು ಸೇರುವದೇ ಮೇಲೆಂಬ ಭಾವನೆ ಅವರಲ್ಲಿತ್ತು. ತಮ್ಮಲ್ಲಿದ್ದ ಕೊನೆಯ ಗುಂಡು ಉಪಯೋಗಿಸಲ್ಪಡುವ ವರೆಗೂ ಬೊಮ್ಡಿಲಾದಲ್ಲಿ ಹೋರಾಡಿರುವ ಸುದ್ದಿ ಬೆಳಕಿಗೆ ಬಂದಿದೆ.

ಇವುಗಳಿಂದ ನಾವು ಪಾಠ ಕಲಿತುಕೊಳ್ಳಬೇಕಾಗಿಯದೆ. ಇಷ್ಟರ ವರೆಗೆ ನೇಫಾ ವಿಭಾಗವನ್ನು ಭಿನ್ನವಾಗಿ ಒಂದು ಗುಪ್ತ ಸ್ಥಳದಂತೆ ಕಾಪಾಡಲ್ಪಟ್ಟಿತ್ತು. ಅಲ್ಲಿ ಹೋದವರಿಗೆಲ್ಲರಿಗೂ ನೇಫಾ ಒಂದು ಮಾನುಷ್ಯ ವಿಜ್ಞಾನದ ಪ್ರದರ್ಶನಾಲಯದಂತೆ ಕಂಡು ಬರುತ್ತದೆ. ನೇಫಾದತ್ತ ನಡೆಸಿರುವ ಯೋಜನೆಗಳನ್ನು ಬದಲಾಯಿಸಬೇಕಾಗುತ್ತದೆಂಬುದನ್ನು ಪ್ರಧಾನಿಯವರೇ ಒಪ್ಪಿರುವರು.

ತಾವು ಆಕ್ರಮಣಗೈಯುತ್ತ ಮುನ್ನುಗ್ಗುವ ದಾರಿಗಳಲ್ಲಿ ಚೈನಿ ಕಮ್ಯೂನಿಸ್ಟರು ಕೆಲಸಮಯದ ಹಿಂದೆಯೇ ಬಂದು ತಂಗಿದ್ದು, ಅಲ್ಲಿಯ ಪರಿಸ್ಥಿತಿಯ ಪೂರ್ಣ ಅನುಭವ ಕೊಂಡಿರುವರು. ಸ್ಥಳೀಯ ಗುಡ್ಡಗಾಡಿನ-ಹಳ್ಳಿಯ ಜನರೊಂದಿಗೆ ಬೆರೆತು ಅವರ ತಲೆಯಲ್ಲಿ ಕಮ್ಯೂನಿಸಂ ಹೊರೆಯನ್ನು ಹೇರಿ ತಮ್ಮ ಕಾರ್ಯಕ್ಕೆ ಕೈಗೊಂಬೆಗಳನ್ನಾಗಿ ಉಪಯೋಗಿಸಲು ತಂಗಿರುವರು, ಪ್ರಯತ್ನಿಸಿರುವರು. ಅವರು ಸಮಾಚಾರ ಕೇಂದ್ರಗಳಂತೆ ರಹಸ್ಯವಾಗಿ ಕಾರ್ಯ ಪ್ರವೃತ್ತರಾಗಿದ್ದರು. ಅಲ್ಲದೆ ಚೈನಿ ಕಮ್ಯೂನಿಸ್ಟರಿಗೆ ಇಲ್ಲಿಂದ ಸುದ್ದಿ ತಲುಪಿಸಲು, ಸೇನೆಯ ಚಲನವಲನಗಳನ್ನು ತಿಳಿಸುವ ಪಂಚಮ ಸ್ತಂಭೀಯರೂ ಇಲ್ಲಿ ಇರುವರು. ಯಾವ ದೇಶದವರೇ ಇರಲಿ ಯಾವ ಸಂಘದವರೇ ಇರಲಿ ಕಮ್ಯೂನಿಸ್ಟರು ಕಮ್ಯೂನಿಸ್ಟರು ಒಂದಾಗುವದು ಸಹಜವೇ ಇದೆ. ಆದರಿಂದ ಯಾರಿಗಾದರೂ ಆಶ್ಚರ್ಯವಾಗುವದಿದ್ದಲ್ಲಿ ಅದೇ ಆಶ್ಚರ್ಯಕರವಿದೆ. ಈ ಪಂಚಮ ಸ್ತಂಭೀಯರು ಗಡಿನಾಡುಗಳಲ್ಲಿ ಮಾತ್ರ ಇರುವದಲ್ಲದೆ ಒಳನಾಡಿನಲ್ಲೂ ಇದ್ದಾರೆ ಇಲ್ಲದಿದ್ದಲ್ಲಿ ಅಲಪ್ಪಿ, ಖಾನಪುರಾದಿ ಊರುಗಳಲ್ಲಿ ಜರಗಿದ ಘಟನೆ ಅತೀ ಶೀಘ್ರ ಪಿಕಿಂಗ್ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿರಲಿಲ್ಲ. ಇದೂ ಮುಖ್ಯ ವಿಷಯವಿದೆ. ಈ ಸಕ್ಕಸಂಗತಿ ಪಾಕಿಸ್ಥಾನಕ್ಕೂ ಅನ್ವಯಿಸುತ್ತದೆ.

ಈ ಸಿಂಹಾವಲೋಕನದಿಂದ ದೋಷವೆಲ್ಲಡಿಗಿದೆಂಬುದನ್ನು ಗುರುತಿಸಿಕೊಂಡು ಮುಂದಣ ಜಾಗರೂಕತೆಗೆ ಅದರ ಲಾಭವನ್ನು ಪಡೆದುಕೊಳ್ಳಬೇಕು. ಚೈನಿಯರು ಹಿಂದಿನ ಸೇನೆಯನ್ನು ಹಿಂದಕ್ಕೆ ಕಳುಹಿಸಿ ಹೊಸ ಸೈನ್ಯದಿಂದ, ಹೊಸ ಉತ್ಸಾಹದಿಂದ, ಹೊಸ ಆಯುಧಗಳಿಂದ ದೊಡ್ಡ ಪ್ರಮಾಣದಲ್ಲಿ ಆಕ್ರಮಣ ನಡೆಸಲೂಬಹುದೆಂಬ ಯೋಚನೆ ಸೇನಾಧಿಕಾರಿಗಳಿಗೂ ಗೊತ್ತಾಗಿಯದೆ ಇದರೊಂದಿಗೆ ತೇಜಪುರದ ತೇಜೋವಧೆಗೇನು ಕಾರಣ, ಬೊಮ್ಡಿಲಾ ಬೀಳಲೇನು ಕಾರಣ ಎಂಬತ್ತವೂ ಗಮನ ಹರಿಸಿ ಪ್ರಯೋಜನವನ್ನು ಪಡೆದುಕೊಳ್ಳಬಹುದು........ಶಿ. ಶ.]

(ಇ. ಕೆ. ರಾಮಸ್ವಾಮಿ—'ದಿ ಹಿಂದೂ')

—ಶಿವಶಂಕರ.


ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

**ವಿಜಯ ಬೇಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.

— ಮಂಗಳೂರು— 3

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮುಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/. ಉತ್ತಮ ರೂ. 9/.

**P. Devee & Co.** (N. J.) Calcutta—40



**ಶಾಲೆಗಳಿಗೆ ಬೇಕಾಗುವ**

**ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ**

**ನವಯುಗ ಪ್ರೆಸ್ ಉಡುಪಿ.**

# ಸಂದೇಹ ಪರಿಹಾರ

(೨ನೇ ಪುಟದಿಂದ)

"ನಿಶ್ಚಯ .... ಹಲವು ವಾರಗಳಿಂದ ನಾನಿರುವ ದಿಕ್ಕನ್ನು ಕೂಡಾ ತಿರುಗಿನೋಡಲಿಲ್ಲ....ಮೊಳದುದ್ದ ಮುಖವನ್ನು ಇಟ್ಟುಕೊಂಡು ಬೆಳಗ್ಗೆ ಎಲ್ಲೋ ಹೋದದ್ದಾಯಿತು ....ಇದ್ದಕ್ಕಿದ್ದ ಹಾಗೆ ಓಡಿಬಂದು ತಬ್ಬಿಕೊಂಡು ಗಾಢಾಲಿಂಗನ ಮಾಡಿದರೆ, ಕುಡಿತದ ಮಹಿಮೆ ಎನ್ನಬೇಕೇ? ಕೂಲಿ ಮಕ್ಕಳ ಕೆಲಸವೆನ್ನಬೇಕೇ?"

"ಹೌದು" ನನ್ನ ಅಪರಾಧವೇ! ಇಷ್ಟು ದಿನವೂ ನಾನೊಂದು ದೊಡ್ಡ ಚಿಂತೆಯಲ್ಲಿ ಮುಳುಗಿದ್ದೆ....ಇದನ್ನು ಕೇಳು..."

"ಈ ಕಥೆಯೆಲ್ಲಾ ಬೇಡ ನನಗೆ"

"ಏನದು! ಹೋಗಲಿ....ಈ ದಿನ ನನಗೆ ಯೋಗದ ದಿನ....ನೀನೀರೀತಿ ಅದನ್ನು ಕೊಂಡಾಡಲಾಗದಂತೆ ಕೆಡಿಸುತ್ತಿದ್ದೀಯಲ್ಲ ನನ್ನ ತಪ್ಪನ್ನು ನಾನು ಒಪ್ಪಿಕೊಂಡೆನಲ್ಲಾ....ನೀನು ಮಾತ್ರ ಈ ಕೆಲವು ವಾರಗಳಿಂದ ನಾನನುಭವಿಸಿದ ಅನುಭವಗಳನ್ನು ಕೇಳಿದೆಯಾದರೆ ನನ್ನ ಮೇಲೆ ಎಷ್ಟೋ ಪರಿತಾಪಗೊಳ್ಳುವೆ."

"ಗೊತ್ತು....ನಿಮ್ಮ ಅನುಭವಗಳು ನನಗೆ...."

"ಅರೆ! ನೀನೇನನ್ನುತ್ತೀ? ... ನನಗೇನೂ ಅರ್ಥವಾಗುತ್ತಲೇ ಇಲ್ಲ. ಸರೋಜ ಗಾಬರಿಗೊಂಡಳು.... "ಹೀಗೊಂದು ಕೆಲಸವನ್ನು ಮಾಡಿಬಿಟ್ಟು ಇಲ್ಲಿ ಬಂದು ಸಾಹಸ ಮಾಡುವುದೇ?....ಅನ್ನುತ್ತಾ ತಲೆ ಬಗ್ಗಿಸಿಕೊಂಡು ಕಣ್ಣೀರು ಸುರಿಸಲಾರಂಭಿಸಿದಳು. ಅವರು ಹತ್ತಿರ ಬಂದು ಆಲಿಂಗಿಸಿ ತಲೆಯನ್ನೆತ್ತಿ" "ಪ್ರಿಯೇ, ಸಹಿಸಿಕೋ...ಅಳಬೇಡ....ನನ್ನ ತಪ್ಪು....ನನ್ನ ಕಷ್ಟಗಳನ್ನು ನಿನ್ನೊಡನೆ ಹೇಳಿದರೆ ನೀನು ನೊಂದುಕೊಳ್ಳುವೆಯಲ್ಲಾ ಎಂದೆಂದುಕೊಂಡ ನಾನು ಬುದ್ಧಿಹೀನ....ಅಂದರು.

ಸಮೀಪದಲ್ಲಿದ್ದ ಒಂದು ಕುರ್ಚಿಯ ಮೇಲೆ ಸರೋಜ ಕುಳಿತುಕೊಂಡು ಕಣ್ಣೀರನ್ನು ಒರಸಿಕೊಂಡಳು

"ಮಾಡಿದ ತಪ್ಪನ್ನು ಅವರು ಒಪ್ಪಿಕೊಳ್ಳುವರೇ? ಅವರನ್ನು ಮನ್ನಿಸದಿದ್ದರೆ ಪಾಪ! ಇದು ಮೊದಲನೇ ತಪ್ಪು ತಾನೇ ಏಕೆ ಮನ್ನಿಸಬಾರದು' , ಅನ್ನುತಿತ್ತು ಆಕೆಯ ಮನಸ್ಸು ನೆಲದ ಮೇಲೆ ಅವಳ ಕಾಲಬಳಿ ಕುಳಿತುಕೊಂಡು ಅವಳ ಕೈಗಳೆರಡನ್ನೂ ಹಿಡಿದುಕೊಂಡು ಮುದ್ದಾಡಿದರು.

"ಎಲ್ಲಾ ನನ್ನ ತಪ್ಪು, ನನ್ನನ್ನು ಮನ್ನಿಸಲಾರೆಯಾ? ಒಂದು ವರ್ಷದಿಂದ ನನಗೆ ವರಮಾನವಿಲ್ಲ. ಏನೋ ಇದ್ದುದನ್ನು ಇಟ್ಟುಕೊಂಡು ಕಾಲಕಳೆಯುತ್ತಿದ್ದೇನೆ. ನಾನು ಒಪ್ಪಿಕೊಂಡಿರುವ ಕಟ್ಟಡದ ಕಂಟ್ರಾಕ್ಟರ್ ಕೆಲಸ ಸಿಕ್ಕುವುದು ದಿನದಿನಕ್ಕೆ ಕಷ್ಟವಾಗುತ್ತಿದೆ. ಮೂರು ತಿಂಗಳ ಹಿಂದೆ ಒಂದು ಭಾರೀ ಕಟ್ಟಡಕ್ಕೆ ಟೆಂಡರ್ ....ಕೊಟ್ಟೆ ಅದು ಮಾತ್ರ ಸಿಕ್ಕಿದರೆ ನಮ್ಮ ಕಷ್ಟವೆಲ್ಲಾ ತೀರುವುದು ಸುಖಪಡಲೂ ಬಹುದು ಆದರೆ ಅದು ಸಿಕ್ಕಲು ಶಿಫಾರಸ್ಸು ಬಹಳ ಬೇಕು ಇದಕ್ಕೆ ದಾರಿಯಿಲ್ಲದೆ ಏನುಮಾಡುವುದೆಂದು ಒದ್ದಾಡುತ್ತಿದ್ದೆ", ಸರೋಜ, ತನ್ನ ಕೈಯನ್ನು ಮೆಲ್ಲಗೆ ಅವರ ಕೈಯಿಂದ ಬಿಡಿಸಿಕೊಂಡು ತನ್ನ ಮುಖವನ್ನು ತಿರುಗಿಸಿಕೊಂಡು; 'ನಿಮ್ಮ ಕಂಟ್ರಾಕ್ಟರ್ ಕೆಲಸವೂ, ಸಂಪಾದನೆಯೂ, ಇಲ್ಲಿ ಯಾರಿಗ ಬೇಕಾಗಿದೆ? ,, ಎಂದಳು.

"ನಾನು ಹೇಳುತ್ತಿರುವುದನ್ನು ಕೇಳು. ಶಿಫಾರಸಿಲ್ಲದೆ ಈ ಕೆಲಸ ಸಿಕ್ಕದಲ್ಲಾ ಎಂಬ ಚಿಂತೆಯೂ, ಏನಾದರೂ ಮಾಡಿ ಈ ಕೆಲಸವನ್ನು ಸಂಪಾದಿಸಬೇಕೆಂಬ ಆಸೆಯೂ, ಕಷ್ಟ ದಿನಗಳಿಂದ ನನ್ನನ್ನು ಕೊಲ್ಲುತ್ತಿತ್ತು. ಇನ್ನೇ ಒಂದು ಸುಖ್ಯ ನವ ಸ್ತ್ರೀ

"ಹೌದು' ವಿಷಯವೇನೂ ಬಹಳ ಸುಲಭವಿದ್ದೀತೇ? ಹೋಗಿ ಸಿಕ್ಕಿಕೊಂಡರೆ ಬಿಡಿಸಿಕೊಂಡು ಬರುವುದು ಬಹಳ ಕಷ್ಟ" ಅಂದಳು ಸರೋಜ ಬಿಸಿ ಬಿಸಿಯಾಗಿ,

"ನಿನ್ನೆ ಸಾಯಂಕಾಲ ...ನೀನು ನಂಬಿದರೂ ಸರಿ,ಬಿಟ್ಟರೂ ಸರಿ" ನಮ್ಮನದ ದೃಷ್ಟಿ ಕೆಲಸ ಮಾಡಲಾರಂಭಿಸಿತು. ಅಲ್ಲಿ ಬಾಗಿಸ ಕೇರಿಯ ದಡದ ಕೊನೆಯಲ್ಲಿ ಗಾಡಿಯನ್ನು ನಾನು ನಿಲ್ಲಿಸಿ ವಿಪರೀತವಾಗಿ ಚಿಂತಿಸುತ್ತಿರುವಾಗ ಸ್ವಲ್ಪ ದೂರದಲ್ಲಿದ್ದ ಸ್ತ್ರೀ ನಿಂತುಕೊಂಡು ನನ್ನನ್ನೇ ದೃಷ್ಟಿಸಿ ನೋಡುತ್ತಿರುವುದನ್ನು....ಕಂಡೆನು.

ಸರೋಜ...ಥಟ್ಟನೆ ಎದ್ದು ನಿಂತುಕೊಂಡು...."ಬಹಳ ಸ್ವಾರಸ್ಯವಾಗಿದೆಯಲ್ಲಾ....ಹೇಳಿ ...ಹೇಳಿ .. ಆ ಮೇಲೆ"

"ಪೂರ್ತಿ ಕೇಳು...ಅವಳ ಕೈಯ್ಯಲ್ಲೊಂದು ಮಗು ಇತ್ತು. ಅವಳ ಮುಖ ."

"ಗೊತ್ತು—ಚಂದ್ರಬಿಂಬದಂತಾಗಿತ್ತು ಎಂದು ಹೇಳಿ ವಾಕ್ಯವನ್ನು ಪೂರೈಸಿದಳು ಸರೋಜ.

'ಅರೇ—ಆತುರಪಡಬೇಡ —ಕೇಳು. ಅವಳೇನೋ ನನ್ನನ್ನು ಬೇಡಿದ್ದಳೆಂತ್ತಿಸುವಂತಿತ್ತು ಆನೋಟವಿಂದ ನಾನು ಅರಿತೆ.'

ಏನೋ ಬೇಕೆಂದೇ ? ಚ್ಚೂ, ಚ್ಚೂ, ಇದುಕೊಡಲೇ ತಿಳಿಯಲಿಲ್ಲ!

"ಹೇಗೆ ತಿಳಿದೀತು.? ವಿಚಾರಿಸಿದ್ದಲ್ಲಿ ಅವಳ ಡ್ರೈವರ್ ಪೆಟ್ರೋಲ್ ಇಲ್ಲದೆ ಬಂದುಬಿಟ್ಟಿದ್ದಾಗಿಯೂ, ಕತ್ತಲಾದ್ದರಿಂದ ಮಗು ಊಟ ಮಾಡಲು ಅಳುತ್ತಿರುವುದಾಗಿಯೂ ತಿಳಿದು ಬಂತು. ಅವಳನ್ನೂ ಮಗುವನ್ನು ನಾನು ಅವರ ಮನೆಗೆ ತಲುಪಿಸುವುದಾಗಿ, ಅವಳ ಡ್ರೈವರನ್ನೂ ಕಾರನ್ನೂ ಅಲ್ಲಿಯೇ ಇರ ಹೇಳಿ ಎಲ್ಲಿಗೆ ಹೋಗಬೇಕೆಂದು ಕೇಳಲು ಅವಳು ಬೆಂಗಳೂರು ದಂಡಿಗೆ ಎನ್ನಲು ಬೇಗ ಕಾರನ್ನು ನಡೆಸಿಕೊಂಡು ಅಲ್ಲಿಗೆ ಹೋದಾಗ ಅವಳೊಂದು ದೊಡ್ಡ ಬಂಗಲೆಯನ್ನು ತೋರಿಸಲು ನನ್ನ ಎದೆ ಝಲ್ಲೆಂದಿತು ... ಝಲ್ಲೆಂದಿತೇ? ಎನ್ನದೇ ಇದ್ದೀತೇ? ಮತ್ತೆ ಸಮೀಪದಲ್ಲಿದ್ದು ಹಳಗಿಬಿಟ್ಟು ಆಗಲು ವುದೆಂದರೆ ದುಃಖ ತಾನೇ? "ಅಂದಳು ಸರೋಜ"

"ಹಾಸ್ಯ ಮಾಡಬೇಡಾ—ಸರೋಜಾ —ಆ ಬಂಗಲೆ ನನಗೆ ಕೆಲಸಕೊಡಬೇಕೆಂದಿರುವ ಶ್ರೀಮಂತನ ಬಂಗಲೆ ನಾನು ಕರೆದುಕೊಂಡು ಹೋದವಳು ಅವರಿಗೆ ಹೇಗೆ ಸಂಬಂಧಪಟ್ಟಿರಬಹುದು- ಹೀಗೆ ಮಾಡುವುದರಿಂದ ಏನಾದರೂ ಸೌಕರ್ಯ ದೊರೆಯಬಹುದೇ? ಎಂದೆಲ್ಲಾ ಮನಸ್ಸಿನಲ್ಲಿ ನೆನಸಿಕೊಂಡೇ ಕಾರನ್ನು ಕೊಂಡು ಹೋಗಿ ನಿಲ್ಲಿಸಿದೆ. ಅವಳು ನಾನು ಮಾಡಿದ ಉಪಕಾರಕ್ಕೆ ತನ್ನ ಕೃತಜ್ಞತೆಯನ್ನು ಸೂಚಿಸಿದ್ದು ಮಾತ್ರವಲ್ಲದೇ "ಒಳಗೆ ಬಂದು ಏನಾದರೂ ಸ್ವಲ್ಪ ಫಲಾಹಾರ ತೆಗೆದುಕೊಂಡೇ ಹೋಗಬೇಕೆಂದು ಒತ್ತಾಯಪಡಿಸಿದಳು. ಒಳಗಡೆ ಹೋಗಿ ಒಂದು ಸೋಫಾದಲ್ಲಿ ಕುಳಿತುಕೊಂಡೆ. ಅವಳು ಒಳಗಡೆ ಹೋಗಿ ಸ್ವಲ್ಪ ಹೊತ್ತಿಗೆಲ್ಲಾ ಅವಳೂ ಒಬ್ಬ ಪುರುಷನೂ, ಕಾಫಿ ಟಂಬ್ಲರ್‌ಗಳನ್ನು ಕೈಲಿ ಹಿಡಿದ ಪರಿಚಾರಕನೂ ಬಂದರು. ನಾನೆದ್ದು ನಿಂತೆ ಅವರು ನನ್ನನ್ನು ಕಾಣುತ್ತಲೇ '

' ಕೂತುಕೊಳ್ಳಿ. ಇವಕ್ಕೆ ಮೊದಲು ನಿಮ್ಮನ್ನೆಲ್ಲೋ ನೋಡಿದ್ದೇನೆ' ಎಂದರು

"ನಿಮ್ಮ ಕಂಪನಿಯವರಿಂದು ಹೊಸದಾಗಿ ಕಟ್ಟಲು ತೀರ್ಮಾನಿಸಿರುವ ಕಟ್ಟಡದ ಕಂಟ್ರಾಕ್ಟಿಗೆ ಟೆಂಡರ್ ಕೊಟ್ಟಿರುತ್ತೇನೆ. ಆ ವಿಷಯವಾಗಿ ಕೆಲವು ನಿಮಿಷಗಳು ನಿಮ್ಮೊಡನೆ ಮಾತನಾಡುವುದಕ್ಕೆ ಎರಡುಬಾರಿ ದಿನ ನಿಮ್ಮ ಆಫೀಸಿಗೆ ಬಂದಿದ್ದೆ......ಅಂದೆ' ನಾನು. "ಕಾಫೀ ತೆಗೆದುಕೊಳ್ಳಿ". ಎನ್ನುತ್ತ ಅವರು "ಮಗುವನ್ನೂ, ಇವಳನ್ನೂ ಇಲ್ಲಿಗೆ ಕರೆತಂದು ಬಿಟ್ಟಿದ್ದಕ್ಕಾಗಿ ಬಹಳ ವಂದನೆಗಳು ಆ ಡ್ರೈವರ್ ಇಷ್ಟು ಅಜಾಗರೂಕತೆಯಿಂದ ಇರುವನೆಂದು ನಾನೆಣಿಸಿರಲೇ ಇಲ್ಲ. ಆಹಾರದ ವೇಳೆ ತಪ್ಪಿದ್ದರಿಂದ ಮಗು ಬಿಕ್ಕಿ ಬಿಕ್ಕಿ ಅತ್ತಿತು. ಬಹಳ ವಂದನೆಗಳು. ನಿಮಗೆ ಶ್ರಮಕೊಟ್ಟಿದ್ದಕ್ಕಾಗಿ ಮನ್ನಿಸ ಬೇಕು. ನಾಳೆ ಬೆಳಗ್ಗೆ ಆಫೀಸಿನಲ್ಲಿ ಬಂದು ನನ್ನನ್ನು ನೋಡಿ. ನಾನು ನನ್ನ ಕಾರ್ಯದರ್ಶಿಯವರೊಡನೆ ಮಾತನಾಡಿ ಆ ಕೆಲಸವನ್ನು ನಿಮಗೆ ಕೊಡಿಸುವುದು ಸಾಧ್ಯವಾದರೆ ನಿಮಗೇ ಕೊಡಿಸುತ್ತೇನೆ ಎಂದರು."

"ಬಹಳ ವಂದನೆ" ಎಂದೆ ನಾನು.

"ಇವರು ಈ ಕೆಲಸವನ್ನು ಕೊಡದೇ ಇದ್ದರೆ ನನ್ನ ಹತ್ತಿರ ಬಂದು ಹೇಳಿ ಅಂದಳು ಅವರ ಹೆಂಡತಿ"

ಇದಕ್ಕಿಂತ ಶಿಫಾರಸ್, ಯೋಗ್ಯತಾ ಪತ್ರ ಬೇರೇನು ಬೇಕು ಸರೋಜಾ....

"ಅವರ ಮನೆಯನ್ನುಬಿಟ್ಟು ವಾಯು ವೇಗದಲ್ಲಿ ಹೊರಟೆ ಎರಡು ಡಬ್ಬಿ ಪೆಟ್ರೋಲ್ ತೆಗೆದು ಅವರ ಡ್ರೈವರ್ ಹತ್ತಿರಕೊಟ್ಟೆ—ನಿನ್ನ ಹತ್ತಿರ ಈ ಸಂತೋಷ ಸಮಾಚಾರವನ್ನು ಹೇಳಬೇಕೆಂದು ಓಡೋಡಿ ಬಂದೆ ನೀನು ಮಲಗಿ ಬಿಟ್ಟಿದ್ದೆ ಎಬ್ಬಿಸೋಣಾ ಎಂದು ಕೂಡಾ ನೆನಸಿದೆ. ಕಂಟ್ರಾಕ್ಟ್ ಕೆಲಸ ಸಿಕ್ಕಿದ ಮೇಲೆ ಹೇಳೋಣವೆಂದು ಎಣಿಸಿ ಎಬ್ಬಿಸಲಿಲ್ಲ ಈ ವಿಷಯವಾಗಿಯೇ ಬೆಳಗ್ಗೆ ಜಾಗ್ರತೆಯಾಗಿ ಅವರನ್ನು ಕಾಣಲು ಹೊರಟುಹೋಗಿ ನೋಡಿದೆ. ಕಂಟ್ರಾಕ್ಟ್ ಕೆಲಸ ಸಿಕ್ಕಿತು. ಇದೋ ನೋಡು "ಆರ್ಡರ್" ಎಂದು ಹೇಳಿ, ಅಂಗಿ ಜೇಬಿನಿಂದ ಒಂದು ಕಾಗದವನ್ನು ತೆಗೆದು ಸರೋಜಳ ಮುಂದೆ ಇಟ್ಟರು; ಅವಳ ಗಂಡ ಬಾಗಿದ ತಲೆ ಮೇಲೆ ಎತ್ತದೆ ಮೌನವಾಗಿ ಓದಿ ನೋಡಿದ ಸರೋಜಳ ಕಣ್ಣುಗಳಿಂದ ಎರಡು ಹನಿಗಳು ಆ ಕಾಗದದ ಮೇಲೆ ಬಿದ್ದು ಅದನ್ನು ಕರೆಮಾಡಿದವು. "ಎಷ್ಟು ಸಂದೇಹಪಟ್ಟೆ!" ಎಂದು ದುಃಖದಿಂದ ಅತ್ತಳು.

"ನನ್ನ ಚಿನ್ನಾ! ನಿನ್ನನ್ನು ಅಳುವಂತೆ ಮಾಡಿದ ಪಾಪಿಗ ನಾನು, ನನ್ನ ಕಷ್ಟಗಳನ್ನು ನಿನಗೆ ಹೇಳದೇ ಇದ್ದುದರಿಂದುಂಟಾದ ಅನಾಹುತವಲ್ಲವೇ ಇದು? "ಎಂದು ಅವಳನ್ನು ಬಾಚಿ ಎದೆಗೆ ಅಪ್ಪಿ ಮುದ್ದಿಟ್ಟು ಗಟ್ಟಿಯಾಗಿ ಸರದೊಳಗಿಟ್ಟ ಕೈಚೀಲ, ತುರುಬಿನ ಸೂಜಿ, ಗುಲಾಬಿ ಎಸಳುಗಳು ಅದಗಿದ್ದ ಕವರು....ಎಲ್ಲಾ ಉತ್ಸಾಹವನ್ನು ಹೆಚ್ಚಿಸಿ ಕಲ, ಕಲ, ಶಬ್ದ ಮಾಡಿದವು

"ಕುಪ್ಪಸದೊಳಗಡೆ ಏನು ಎಂದರು" ಸರೋಜಳ ಗಂಡ.

"ನಾಕು ಸುಮ್ಮನೆ ಇರಿ. " ಯಾರ ಕಿವಿಗಾದರೂ ಬಿದ್ದೀತು ನಿಮ್ಮ ಜಾಣತನದ ಪ್ರಶ್ನೆ! ಎನ್ನುತ್ತಾ ಸರಸರನೆ ಹೊರಟು ಹೋದಳು ಸರೋಜ.

ಶ್ರೀಮತಿ ಎಸ್. ಎನ್. ಸಾವಿತ್ರಮ್ಮ.





ಅಮೇರಿಕನ್ ಪಿಸ್ತೂಲ್ ಆಟೋ
ಮೆಟಿಕ್ 6 ಗುಂಡು ಮತ್ತು 50
ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ
ಹಣ ವಾಪಾಸು ಕೊಡಲಾಗುವುದು.

ಕೊಂಡಾಗದಂತೆ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ:6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ 20 ಆರ್ಡರೊಂದಿಗೆ 100 ಗುಂಡು ಧರ್ಮಾರ್ಥ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26



PHONE 203 ESTD 1926

FOUNDATION STONE

Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.


## ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸ್ವಚ್ಛವಾದ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ. ನ.

REGD. No. B. G. 176
LICENCE No. 31
Licensed to Post without Prepayment

ಉತ್ತಿಷ್ಠಿತ ಜಾಗ್ರತ

# ವೀರ ರಾಣಿ ಚೆನ್ನಮ್ಮನ ಮಕ್ಕಳೇ......

ಮಿತ್ರನಂತೆ ಮುಸುಕು ಹಾಕಿಕೊಂಡು ಭಾರತೀಯರ ಕಣ್ಣಲ್ಲಿ ಮಣ್ಣೆರಚಿದ ಮಿತ್ರ ದ್ರೋಹಿ ಚೀನೀಯರನ್ನು ಹೊರ ದಬ್ಬಲು ಸರ್ವಸಿದ್ಧತೆಗಳಿಂದ ಮುಂದಾಗಬೇಕಾಗಿದೆ. ತನುಮನಧನಗಳನ್ನು ರಣಕ್ಕೆ ಹಚ್ಚಬೇಕಾಗಿದೆ. ಅಪೂರ್ವವಾದ ತ್ಯಾಗಕ್ಕೆ ಸಿದ್ಧರಾಗಬೇಕಾಗಿದೆ. ದೇಶದ ಕ್ಷೇಮಕ್ಕಾಗಿ ಪ್ರತಿಯೊಬ್ಬ ಭಾರತೀಯನು ಹೋರಾಡುವ ಪ್ರಸಂಗ ಬಂದೊದಗಿದೆ. ಮೋಸಗಾರ ಚೀನಿಯರನ್ನು ತಳ್ಳಲು ಸಕಲ ಪ್ರಯತ್ನವನ್ನೂ ಮಾಡಬೇಕು.

ಯುದ್ಧ ಎಂದ ಕೂಡಲೆ, ನಮಗೆ ಹೊಳೆಯುವದು ಸಿಪಾಯಿ, ಮದ್ದು ಗುಂಡು, ಕತ್ತಿ, ಗುರಾಣಿಯ ಅವಶ್ಯಕತೆ, ನಿಜ. ಇವು ಅವಶ್ಯವಾಗಿ ಬೇಕು. ಸಾಕಷ್ಟು ಬೇಕು. ಉತ್ತಮ ಮಟ್ಟದ ಸಿಪಾಯಿಗಳು ನವೀನವಾದ ಆಯುಧಗಳು ಬಹಳ ಅವಶ್ಯ. ಆದರೆ! ಇಷ್ಟಕ್ಕೆ ಮುಗಿಯಲಿಲ್ಲ ಯುದ್ಧದಸಿದ್ಧತೆ. ಇದರಷ್ಟೇ ಪ್ರಾಮುಖ್ಯವಾದ ಅಂಶಗಳು ಇವೆ. ಎಂಬುದನ್ನು ಮರೆಯ ಬಾರದು. ಆಹಾರ, ಆರ್ಥಿಕ, ಯಾಂತ್ರಿಕ, ಮಾನಸಿಕ, ಈ ನಾಲ್ಕೂ ಶಕ್ತಿಗಳು ಬಲಗೊಳ್ಳಬೇಕು, ಇದರಲ್ಲಿ ಯಾವುದೂ ಹಿಂದೆ, ಬೀಳಬಾರದು, ಈ ನಾಲ್ಕೂ ಶಕ್ತಿಗಳೂ ಯುದ್ಧದ ಬೆನ್ನೆಲಬು.

ಆಹಾರ ಸಂಗ್ರಹ ಹೆಚ್ಚಾಗ ಬೇಕು. ಅದಕ್ಕಾಗಿ ಹಗಲಿರುಳು ದುಡಿಯ ಬೇಕು, ಬೀಳು ಬಿದ್ದ ಭೂಮಿಯಲ್ಲಿ ಆಹಾರ ಬೆಳೆಸಲು ಪ್ರಯತ್ನಿಸಬೇಕು, ನೀರಾವರಿಯ ಉಪಯೋಗವನ್ನು ತೆಗೆದುಕೊಳ್ಳಬೇಕು. ಉತ್ತಮಮಟ್ಟದ ಬೆಳೆಯನ್ನು ಬೆಳೆಯಲು ಪ್ರತಿಯೊಬ್ಬ ರೈತನು ಮುಂದಾಗಬೇಕು. ನಮಗೆ ಯುದ್ಧ ಭೂಮಿಯಲ್ಲಿ ಜಯಬೇಕಾದರೆ, ಮೊದಲು ನಾವು ಹೊಲದಲ್ಲಿ ಜಯಿಸ ಬೇಕಾಗಿದೆ, ಮಾತಿಗಿಂತ ಕೃತಿ ಹೆಚ್ಚಾಗ ಬೇಕು. ಅದಕ್ಕಾಗಿಯೆ ಹೇಳುವದು ಪ್ರತಿಯೊಬ್ಬ ಹಲಾಯುಧನು ಯೋಧನೆಂದು.

ಉಣ್ಣುವ ಒಂದು ತುತ್ತು, ಕೂಡ ಅನಾವಶ್ಯಕವಾಗಿ ಹಾಳಾಗದಂತೆ ನೋಡಬೇಕು. ಆಹಾರದ ಆವಶ್ಯಕತೆ ಎಷ್ಟು ಎಂದು ಹೇಳುವದೆ, ಬೇಡ" ಯುದ್ಧದ ಉಸಿರೆ, ಆಹಾರ!"

ಆರ್ಥಿಕವಾಗಿ ದೇಶ ಬಲಗೊಳ್ಳಬೇಕಾದರೆ ಯುವಕ, ಯುವತಿ- ಹುಡುಗ, ಹುಡಿಗಿ, ಮುದುಕ, ಮುದುಕಿ, ಕೂಸು ಕುನ್ನಿ, ಎಲ್ಲರಿಗೂ ಒಂದೇ ಮಂತ್ರ. ನಾವು ದುಡಿಯಬೇಕ, ದುಡಿಯ ಬೇಕು ಹೆಚ್ಚೆಚ್ಚು ದುಡಿಯ ಬೇಕು. ಹಗಲಿರುಳು ದುಡಿಯಬೇಕು.

ಹೊಲದಲ್ಲಿ, ನೆಲದಲ್ಲಿ, ಶಾಲೆಯಲ್ಲಿ, ಕಾಲೇಜನಲ್ಲಿ, ಆಫೀಸಿನಲ್ಲಿ, ಕಾರ್ಖಾನೆಯಲ್ಲಿ, ಮಠದಲ್ಲಿ ಎಲ್ಲಿಲ್ಲೂ ದುಡಿಯಬೇಕು ಅವರವರ, ಕೆಲಸವನ್ನೂ ಮನಸ್ಸುಗೊಟ್ಟು ಮಾಡಬೇಕು. ಇಮ್ಮಡಿ, ಮುಮ್ಮಡಿ, ನಾಲ್ಮಡಿ, ಕೆಲಸ ಹೆಚ್ಚಾಗಬೇಕು, ಯುದ್ಧದ ಬಲಗೈ, ಎಡಗೈಗಳೆ, ಆಹಾರ ಸ್ಥಿತಿ ಮತ್ತು ಆರ್ಥಿಕ ಸ್ಥಿತಿ, ಚಾಂಡಾಲ ಚೀನಿಯರನ್ನು ದೇಶದಿಂದ ದಬ್ಬಲು ನವೀನ ಆಯುಧಗಳು ಬೇಕು. ಅದಕ್ಕಾಗಿ ದುಡ್ಡು ಬೇಕು, ಕಾರಣ ನಾವೆಲ್ಲರೂ ದುಡಿಯಲೇ ಬೇಕು, ಅದೇ ಚೀನಿ ದುರಾಕ್ರಮಣವನ್ನು ಹಿಮ್ಮೆಟ್ಟಿಸುವ ರಾಮಬಾಣ.

ಯಾಂತ್ರಿಕವಾಗಿ ನಾವು ತೀರಾ ಹಿಂದುಳಿದಿದ್ದೇವೆ, ಆದರೆ, ಅದನ್ನೆ, ಮುಂದು ಮಾಡಿ ದೇಶದಲ್ಲಿ ಗುಲ್ಲೆಬ್ಬಿಸಬಾರದು, ಬಲವಂತವಾಗುವದಕ್ಕೆ ಪ್ರಯತ್ನಿಸಬೇಕು, ನಮ್ಮ ಯೋಜನೆಗಳನ್ನು ಅದಕ್ಕನುಗುಣವಾಗಿ ರೂಪಿಸಬೇಕು ತರುಣ, ನುರಿತ, ತಂತ್ರಜ್ಞರು ಹೆಚ್ಚು ಹೆಚ್ಚು ಜಾಣ್ಮೆಯಿಂದ ದುಡಿಯಬೇಕು, ಉಕ್ಕು, ಕಬ್ಬಿಣ, ಸಿಮೆಂಟು ಈ ಮೂರರ ಉತ್ಪನ್ನ ಹೆಚ್ಚಾಗಬೇಕು. ಸರ್ಕಾರ ಹೆಚ್ಚು ಲಕ್ಷ್ಯ ವಹಿಸಬೇಕು. ಪ್ರಸಂಗ ಬಂದರೆ, ವೈಯಕ್ತಿಕ ಹಿತವನ್ನು ಬದಿಗೊತ್ತಿ ಜನರು ಸರ್ಕಾರದ ಜೊತೆಗೆ ಸಹಕರಿಸಬೇಕು, ತ್ಯಾಗಕ್ಕೂ ಸಿದ್ಧರಾಗಬೇಕು.

ಆಹಾರ, ಆರ್ಥಿಕ, ಯಾಂತ್ರಿಕ ವಿಷಯಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಮಾನಸಿಕ ಬಲ; ಯುದ್ಧ ಬಂದಿದೆ ಎಂದು ಜನರು ಕಾಕು ಪೋಕು ಸುದ್ದಿಗಳ ಪ್ರಸರಣಕ್ಕೆ ತೊಡಗಬಾರದು "ಧೈರ್ಯಂ ಸರ್ವತ್ರ ಸಾಧನಂ" ಎಂಬಂತೆ, ನಮಗೆ ಧೈರ್ಯ ಮುಖ್ಯ ಸಂಘಟನೆ ಮುಖ್ಯ. ಜನರು ಯಾವ ರೀತಿಯಿಂದಲೂ ಭಯ ಭೀತರಾಗದಂತೆ ಸರ್ಕಾರ ಮುಂಜಾಗ್ರತೆ ವಹಿಸಬೇಕು, ಆ ಮೂರರ ಬಲವಿದ್ದರೂ ಮಾನಸಿಕ ಬಲ ಜನರಲ್ಲಿ ಸ್ಥಗಿತಗೊಂಡರೆ, ಏನೂ ಮಾಡಲಿಕ್ಕೆ ಆಗುವದಿಲ್ಲ. ಮನಶಕ್ತಿ ಬಲವಾಗಿದ್ದಲ್ಲಿ ಎಂಥ ಎದುರಾಳಿಯನ್ನು ಹಿಮ್ಮೆಟ್ಟಿಸಬಹುದು. ಓ! ಭಾರತ ಪುತ್ರರೆ, ನೀವು ಮನಸ್ಸು ಮಾಡಿದಲ್ಲಿ ಚೀನಿಯರನ್ನು ನೊರಜಿನಂತೆ ಮರಸಿ ಬಿಡಬಹುದು.

ಸತ್ಯಕ್ಕೆ ಎಂದಿಗೂ ಚ್ಯುತಿ ಇಲ್ಲ ಭಾರತದ ಜನ ಜೀವನದ ಬೆನ್ನೆಲಬು ಧರ್ಮ, ಧರ್ಮದ ಹಾದಿಗೆ ಜಯ ಖಂಡಿತ ಪ್ರಾರಂಭಕ್ಕೆ ಕಷ್ಟವೆನಿಸಬಹುದು, ಅಂತಿಮ ಜಯ ಮಾತ್ರ ನಮ್ಮದು. ಹತ್ತು ತಲೆಯ ರಾವಣ, ರಾಮನಿಗೆ ಆಹುತಿ ಆಗಬೇಕಾಯಿತು. ನೂರೊಂದು ಜನ ಕೌರವರು ಪಂಚಪಾಂಡವರಿಗೆ ಆಹುತಿಯಾದರು ನಮ್ಮ ರಾಮಾಯಣ, ಮಹಾ ಭಾರತ, ಸತ್ಯಕ್ಕೆ, ಧರ್ಮ ಯುದ್ಧಕ್ಕೆ ಜಯ ಖಂಡಿತ ಎಂದು ಸಾರಿ, ಸಾರಿ ಹೇಳುತ್ತಿದೆ.

ಓ! ಭಾರತ ವೀರರೆ ಚೈತನ್ಯ ಪುರುಷರೆ! ಏಳಿ! ಎದ್ದೇಳಿ! ನಿಮ್ಮ ಗುರಿ ನೆಲಗಳ್ಳ ಕಳ್ಳ ಚೀನೀಯರನ್ನು ದಬ್ಬುವದಾಗಲಿ, ನಿಮ್ಮ ಕೃತಿ ರಾಕ್ಷಸ ಚೀನೀಯರನ್ನು ನಮ್ಮ ಪವಿತ್ರ ಭೂಮಿಯಿಂದ ತಳ್ಳಲು ಸಹಾಯವಾಗಲಿ. ನಿಮ್ಮ ಧ್ವನಿ ದುರಾಕ್ರಮಣಿ ಚೀನಿಯರನ್ನು ತಲೆತಗ್ಗಿಸುವಂತೆ ಮಾಡಲಿ. ಪೃಥ್ವಿರಾಜ ರಾಣಾ ಪ್ರತಾಪ ಸಿಂಹ ಶಿವಾಜಿಯಂಥ ಧೀರರು ಹುಟ್ಟಿದ ದೇಶ ನಮ್ಮದು. ಅವರ ಶುಭ ಹಾರೈಕೆ ನಮಗೆ ಇದೆ ಎಂಬುದನ್ನು ಮರೆಯದಿರಿ.

ಭಾರತಾಂಬೆಯ ಹೊಚ್ಚಲು ಮಗಳ ಮಕ್ಕಳೇ! ಓ! ಕನ್ನಡಿಗರೆ, ಎದ್ದೇಳಿರಿ, ಎದ್ದೇಳಿ. ವೀರ ಮಾತೆ ಚೆನ್ನಮ್ಮನ ಮಕ್ಕಳೆ! ನಿಮ್ಮ ಪಾಲು ಇದರಲ್ಲಿ ಹಿಂದಾಗ ಬೇಕು ಮನೆಗೆ ಬೆಂಕಿ ಹತ್ತಿದಾಗ ಹಲ್ಲು ಕಿರಿಯುತ್ತಾ ನಿಲ್ಲಬಾರದು. ಸಾಕಿನ್ನು ನಿದ್ರೆ. ಬೆಳವಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮರಂತ ವೀರ ಮಾತೆಯರು, ಸಂಗೊಳ್ಳಿ ರಾಯಣ್ಣ, ಟಿಪ್ಪು ಸುಲ್ತಾನರಂತಹ ವೀರ ಪುತ್ರರು ಮಹಾದೇವ ಮೈಲಾರ, ಗರುಡ ಸದಾಶಿವರಾಯರಂತಹ ಅಪ್ರತಿಮ ದೇಶ ಭಕ್ತರು ಆಗಿ ಹೋಗಿದ್ದಾರೆ. ಅವರ ಆದರ್ಶವನ್ನು ನಾವು ಎತ್ತಿ ಹಿಡಿಯೋಣ. ನಿಮ್ಮ ಅಡಿ ಮುಂದಾಗಲಿ. "ಹತ್ತರ ಹುಲ್ಲುಕಡ್ಡಿ ಒಬ್ಬನ ಹೊರೆ" ಎಂಬಂತೆ ಎಲ್ಲರೂ ಒಂದೇ ಆಗಿ ಕೂಗಿದರೆ, ಚೀನಿಯರನ್ನು ಹೊಡೆದೋಡಿಸುವದು ದೊಡ್ಡದಲ್ಲ.

ಭಾರತದ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೂ, ಎಲ್ಲಿಯೂ ಕಾಣ ಸಿಗುವದಿಲ್ಲ. ಇಂತಹ ಸಂದರ್ಭ, ಭಾಷೆ, ಜಾತಿ, ವೈಯುಕ್ತಿಕ ಆಕಾಂಕ್ಷೆ ಇಂದು ದೂರವಾಗಿವೆ. ಪಂಡಿತ ಜವಾಹರರ ಕೈಯಲ್ಲಿ ದೇಶ ಸುರಕ್ಷಿತವಾಗಿದೆ; ಇಂದು ಎಲ್ಲರೂ ಒಗ್ಗಟ್ಟಾಗಿದ್ದೇವೆ. ಇಡಿ ಭರತ ಖಂಡವೆ, ಪುಟದೆದ್ದಿದೆ, ಮಲಗಿದ ಸಿಂಹವನ್ನ ಎಚ್ಚರಿಸಿದ ಚೀನಿಯರು, ತಾವೇ, ಕೈ ಸುಟ್ಟುಕೊಂಡಿದ್ದಾರೆ.

ಗ್ರೀಕ್ ತತ್ವಜ್ಞಾನಿ ಡೆಮಾಕ್ರೆಟಿಸ್‌ನು ಹೇಳಿದಂತೆ ಇತರ, ಎಲ್ಲಾ ವಿಧವಾದ ಹವಣಿಕೆಗಳಿಗಿಂತಲೂ, ದೇಶೋನ್ನತಿಯ ಹಂಬಲ ನಮಗೆ ಹೆಚ್ಚಾಗ ಬೇಕು. ಏಕಂದರೆ, ನಮ್ಮ ನಮ್ಮ ಸ್ವಂತ ಮೇಲ್ಮೆಗಿಂತಲೂ ಸಮಗ್ರ ಜನಾಂಗದ ಏಳಿಗೆಯೆ ಮುಖ್ಯವಾದದ್ದು, ಈ ನುಡಿ ಇಂದು ನಮ್ಮ ಬಾಳಿನಲ್ಲಿ ಸಿದ್ಧ ಆಚ್ಚಾಗ ಬೇಕು.

ಕನ್ನಾಡ ಕುವರರೆ! ಸಿಂಹಗರ್ಜನೆ ಮಾಡಿರಿ, ನಿಮ್ಮ ಕೃತಿ ನಿಮ್ಮ ಮಾತು, ನಿಮ್ಮ ಮನಸ್ಸು ಒಂದೇ ಮಂತ್ರ ನುಡಿಯಲಿ.

**ಬಸವರಾಜ, ಕುಂಚೂರು.**


ಮಹಿಳೆಯರಿಗಾಗಿ ಉಳಿತಾಯ ಯೋಜನೆ....೧

ಜೀವನ
ಸುಂದರ.... ..
ಅದರ ಸವಿನೆನಪು
ಅತಿ ಸುಂದರ......

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ "ಬ್ಯಾಂಕ್ ಎಕೌಂಟ್" ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ ಬ್ಯಾಂಕ್ ಖಾತೆಯೂ ಅಭಿವೃದ್ಧಿಯತ್ತ ಬೆಳೆಯಬಲ್ಲುದು. "ಬ್ಯಾಂಕ್ ಖಾತೆಯು" ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

ಭವಿಷ್ಯತ್ತಿನ ಭದ್ರತೆಗಾಗಿ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ. ೧೯೨೫. ಶಾಖೆಗಳು: ೧೭೬.

— ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ —


**ಚಂದಾಹಣ ಬಾಕಿ ಇರುವವರು ದಯಮಾಡಿ ಅದಷ್ಟು ಬೇಗನೆ ಕಳುಹಿಸಿ ಕೊಡುವಂತೆ ವಿನಂತಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಯನ್ನು ಸ್ವೀಕರಿಸುವಂತೆ ಅಪೇಕ್ಷಿಸುತ್ತೇವೆ.**

Edited, Printed & Published by K. H. Shetty, at the Navayuga Press, Udipi, S. India.

...NTRIBUTE
...OUR MITE
...O OUR
...ATIONAL
...EFENCE
...UND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 26 | ಉಡುಪಿ, 7—3—1963 ಗುರುವಾರ | ಸಂಪುಟ ೪೨ ಸಂಚಿಕೆ ೨೬


### ರಾಷ್ಟ್ರಪತಿ ಉವಾಚ

# ಪ್ರಾಪ್ಯ ವರಾನ್ನಿಬೋಧತ

ಕೆಲವು ವರ್ಷಗಳಿಗೆ ಮೊದಲು ಚೀನಾವು ಲಡಖದ ಮೇಲೆ ವಂಚಕತನದ ಆಕ್ರಮಣವನ್ನು ಮಾಡಿತು; ಅದುವೇ ಮುಂದೆ ಎರಡೂ ದೇಶಗಳ ನಡುವಣ ಸಂಘರ್ಷಕ್ಕೆ ಕಾರಣವಾಯಿತು. ಈ ಸಮಸ್ಯೆಯನ್ನು ಶಾಂತಿಯಿಂದಲೇ ಪರಿಹರಿಸಿಕೊಳ್ಳಬಹುದೆಂದು ನಾವು ನಂಬಿದ್ದೆವು. ಕಳೆದ ಸಪ್ಟಂಬರ ಎರಂದು ನೇಫಾ ಗಡಿಯಲ್ಲಿ ಹೊಸತಾಗಿ ಒಂದು ಆಕ್ರಮಣವನ್ನು ಗೆಯ್ದಿತು; ಚಿಕ್ಕ ಪುಟ್ಟ ಕೆಲವು ಆಕ್ರಮಣಗಳ ಬಳಿಕ ಮುಂದೆ ಎಂಟನೆಯ ಅಕ್ಟೋಬರದಂದು ದೊಡ್ಡ ಪ್ರಮಾಣದಲ್ಲಿ ನೇಫಾ ಮತ್ತು ಲಡಖಗಳ ಗಡಿಯಲ್ಲಿ ಧಾಳಿ ನಡೆಸಿತು. ನವಂಬರ ಮಧ್ಯದಲ್ಲಿ ಇನ್ನೊಂದು ಬೃಹದಾಕ್ರಮಣ ಕೈಗೊಂಡುದರಿಂದ ನಮ್ಮ ಸೇನೆಗಳು ಹಿಂದೆ ಸರಿಯ ಬೇಕಾಯಿತು. ಇದೇ ಸಮಯದಲ್ಲಿ ಚೀನೀಯ ಸರಕಾರವು ಏಕಪಕ್ಷೀಯವಾಗಿ ಯುದ್ಧ ವಿರಾಮವನ್ನೂ ಸೇನೆಯ ವಾಪಸಾತಿಯನ್ನೂ ಘೋಷಿಸಿತು.

### ಆಕ್ರಮಣದ ಪರಿಣಾಮ

ಈ ದೊಡ್ಡ ಆಕ್ರಮಣವೂ ನಮ್ಮ ಭೂಪ್ರದೇಶದ ಮೇಲಾದ ದಾಳಿಯೂ ನಮ್ಮ ಜನತೆಯ ಮೇಲೆ ಪರಿಣಾಮಕಾರಿ ಪ್ರಭಾವಬೀರಿದುವು. ಇಡಿಯ ದೇಶದಲ್ಲಿ ವಿಶಾಲ ತಳಹದಿಯ ಐಕ್ಯ ಮನೋಭಾವ ಮೂಡಿ ಬರುವುದಕ್ಕೆ ಪ್ರೇರಕವಾದುವು. ಚಿಕ್ಕ ಪುಟ್ಟ ಆಂತರಿಕ ಭಿನ್ನಾಭಿಪ್ರಾಯಗಳೆಲ್ಲವೂ ಮಾಯವಾದುವು. ದೇಶದ ಐಕ್ಯ ಮತ್ತು ಸ್ವಾತಂತ್ರ್ಯಕ್ಕೆ ಬಂದ ಆಹ್ವಾನವನ್ನು ಸ್ವೀಕರಿಸಲು ಜನತೆ ಸಿದ್ಧವಾಯಿತು. ಕಳೆದ ನವಂಬರದಲ್ಲಿ ಪಾರ್ಲಿಮೆಂಟು ರಾಷ್ಟ್ರಕ್ಕೆ ಆದೇಶವಿತ್ತಿತು. ಮತ್ತು ಈ ಆದೇಶವನ್ನು ಆಸೇತು ಹಿಮಾಚಲದ ಜನತೆಯು ಬೆಂಬಲಿಸಿತು.

### ಅನಿವಾರ್ಯ ಧರ್ಮ

ದೇಶದ ಐಕ್ಯಕ್ಕೆ ವ್ಯತ್ಯಯವಾಗುವುದು ವೇದನಾ ಜನಕ, ಆದರೆ, ನಾವು ಸ್ನೇಹ ಸೂತ್ರದಿಂದ ಬಿಗಿದುಕೊಂಡಿದ್ದು, ಅಂತಾರಾಷ್ಟ್ರೀಯ ಸಮಿತಿಗಳಲ್ಲಿ ಎತ್ತಿ ಹಿಡಿದ ಒಂದು ಬಾಹ್ಯದೇಶದಿಂದ ಒದಗುವ ಆಕ್ರಮಣವು ಬಲುದೊಡ್ಡ ಆಘಾತ ಮತ್ತು ನಮ್ಮ ಜನತೆಗೊಂದು ವಿಸ್ಮಯ ಘಟನೆ. ಇಂತಹ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿಯಾದರೂ ಅನುಸರಿಸಲೇ ಬೇಕಾದ ಧರ್ಮವೊಂದೇ —ಆಕ್ರಮಣವನ್ನು ಪರಿಣಾಮಕಾರಿಯಾಗಿ ಎದುರಿಸುವುದು ಮತ್ತು ರಾಷ್ಟ್ರವನ್ನು ಆದಕಾಗಿ ಸಿದ್ಧಗೊಳಿಸುವುದು.

### ನಮ್ಮ ದೃಢ ಪ್ರತಿಜ್ಞೆ-

ಇಂದು ಪ್ರತ್ಯಕ್ಷ ಹೋರಾಟವೂ ನಡೆಯುತ್ತಿಲ್ಲ. ಆದರೆ, ಕಳೆದ ಕೆಲವು ತಿಂಗಳುಗಳ ಅನುಭವವು ನಮ್ಮನ್ನು ಎಚ್ಚರಿಸಿದೆ; ಆಕ್ರಮಣದಿಂದ ನಮ್ಮನ್ನು ರಕ್ಷಿಸಿಕೊಳ್ಳುವೆವು ಎಂದು ನಮ್ಮಿಂದ ಪ್ರತಿಜ್ಞೆ ಮಾಡಿಸಿದೆ; ನಮ್ಮ ರಕ್ಷಣಾ ಬಲವನ್ನೂ ಆರ್ಥಿಕ ಸ್ಥಿತಿಗತಿಯನ್ನೂ ಉನ್ನತೀಕರಿಸುವ ದೃಢತೆ ನಮ್ಮಲ್ಲಿ ಮೂಡುವಂತೆಸಗಿದೆ. ಅತ್ಯವಶ್ಯ ಮತ್ತು ಅನಿವಾರ್ಯವಾದ ಈ ಗುರಿಗಳನ್ನು ಮುಟ್ಟಲು ನಮ್ಮ ಸರಕಾರವು ಕಾರ್ಯಮಗ್ನವಾಗಿದೆ.

### ಸರ್ವತ್ರ ಸಹಾನುಭೂತಿ

ಚೀನೀಯ ಆಕ್ರಮಣವಾದ ಕೂಡಲೇ ನಮ್ಮ ಸರಕಾರವು ಜಗತ್ತಿನ ವಿವಿಧ ದೇಶಗಳ ಸಹಾನುಭೂತಿಯನ್ನೂ ಬೆಂಬಲವನ್ನೂ ಬಯಸಿ ವಿನಂತಿಸಿಕೊಂಡಿತು. ನಮ್ಮ ಕೇಳಿಕೆಯನ್ನು ಮನ್ನಿಸಿ ಸಹಾನುಭೂತಿ ಪ್ರದರ್ಶಿಸಿದ ಅಧಿಕ ಸಂಖ್ಯಾಕ ರಾಷ್ಟ್ರಗಳಿಗೆ ನಾವು ಕೃತಜ್ಞರು. ಅವುಗಳಲ್ಲಿ ಕೆಲವು ಪ್ರತ್ಯಕ್ಷ ಸಹಾಯವನ್ನೂ ನೀಡಿವೆ; ಅವರಿಗೆ ನಾವು ಆಭಾರಿಗಳು. ಸಂಘರ್ಷದ ವೇಳೆ ಅತಿ ಶೀಘ್ರವಾಗಿ ನಮ್ಮ ನೆರವಿಗೆ ಧಾವಿಸಿಬಂದ ಅಮೆರಿಕೆ ಮತ್ತು ಬ್ರಿಟನ್ನುಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸೂಚಿಸಬಯಸುತ್ತೇನೆ.

### ತಲೆತಗ್ಗಿಸುವರು ನಾವಲ್ಲ

ಪಾರ್ಲಿಮೆಂಟಿನ ಹಿಂದಿನ ಅಧಿವೇಶನವು ಸಿಂಹಳ ಮತ್ತಿತರ ಐದು ರಾಷ್ಟ್ರಗಳು ಮುಂದಿಟ್ಟ ಕೆಲವು ಸಲಹೆಗಳ ಮೇಲೆ ಸಂಪೂರ್ಣವಾಗಿ ಚರ್ಚಿಸಿದೆ ಈ ಸಲಹೆಗಳು ಭಾರತ–ಚೀನಾ ವಿವಾದದ ಮೂಲವನ್ನು ಕೆಂರಿಕಾಗಿರುವುದಿಲ್ಲ, ಆದರೆ, ಮೂಲಭೂತ ಪ್ರಶ್ನೆಗಳನ್ನು ಚರ್ಚಿಸಲು ಸೂಕ್ತ ವಾತಾವರಣವನ್ನು ನಿರ್ಮಿಸುವುದು ಮಾತ್ರ ಇವುಗಳ ಉದ್ದೇಶ. ಕೂಲಂಕಷ ಪರಿಶೀಲನೆ ಮತ್ತು ಪಾರ್ಲಿಮೆಂಟಿನ ಆಶಯವನ್ನು ತಿಳಿದುಕೊಂಡ ಬಳಿಕ ನಮ್ಮ ಸರಕಾರವು ಕೊಲಂಬೋ ರಾಷ್ಟ್ರಗಳ ಸ್ಪಷ್ಟೀಕರಣವನ್ನು ಅನುಲಕ್ಷಿಸಿ ಯಾವುದೇ ಹಿನ್ನಡೆಯಿಲ್ಲದೆ ಆ ಸಲಹೆಗಳನ್ನು ಸಂಪೂರ್ಣವಾಗಿ ಸ್ವೀಕರಿಸಿತು. ಚೀನೀಯ ಸರಕಾರವು ಅವನ್ನು ಒಪ್ಪಿಕೊಳ್ಳುವ ಸ್ಥಿತಿಯೊದಗಿಲ್ಲವಾದುದರಿಂದ, ಭವಿಷ್ಯದಲ್ಲಿ ಯಾವ ಮುನ್ನಡೆಗಳಾಗಬಹುದೆಂದು ಈಗಲೇ ಹೇಳುವಂತಿಲ್ಲ. ನಮ್ಮ ದೇಶವು ಶಾಂತ ವಿಧಾನಗಳನ್ನು ಒಪ್ಪುತ್ತದೆ; ಅದು ವಿವಾದ ಪರಿಹಾರಕ್ಕೆ ಇದೇ ರೀತಿಯನ್ನು ಬಯಸುತ್ತದೆ, ಆದರೆ, ಚೀನೀಯ ಆಕ್ರಮಣವೆಂಬುದು ನಮ್ಮ ಗೌರವ ಮತ್ತು ಸ್ವಾತಂತ್ರ್ಯಕ್ಕೊದಗಿದ ಆಹ್ವಾನವೆಂಬುದನ್ನು ಮರೆಯಬಾರದು. ಏನೇ ಸಂಭವಿಸಲಿ, ನಾವು ಸೈನಿಕ ಶಕ್ತಿಯ ಸರ್ವಾಧಿಕಾರದ ಮುಂದೆ ಎಂದೆಂದಿಗೂ ಶಿರಬಾಗೆವು.

### ರಕ್ಷಣಾ ನಿಧಿ

ಚೀನೀಯ ಆಕ್ರಮಣವು ನಮ್ಮ ಮುಂದಿರುವ ವಿಲಕ್ಷಣ ಪ್ರಸಂಗ; ಇದನ್ನು ಪ್ರತಿಭಟಿಸಲು ಏನನ್ನಾದರೂ ಮಾಡಲೇಬೇಕು. ಒಂದು ರಾಷ್ಟ್ರವು ತನ್ನ ಘನತೆಯನ್ನು ಸ್ವಾತಂತ್ರ್ಯವನ್ನೂ ಅಗ್ರಪ್ರಾಶಸ್ತ್ಯವಿತ್ತು ಉಳಿಸಬೇಕು; ಇವಿಲ್ಲವೆಂದಾದರೆ ಮತ್ಯಾವ ಮಹತ್ವವಿದ್ದರೂ ಅವು ಹೇಳ ಹೆಸರಿಲ್ಲದಂತಾಗುವುವು. ದೇಶದ ಜನತೆಯ ಮನಸ್ಸನ್ನು ಈ ಬಗ್ಗೆ ಕೇಂದ್ರೀಕರಿಸಲಾಗಿದೆ. ರಾಷ್ಟ್ರೀಯ ಸಂರಕ್ಷಣಾ ಸಮಿತಿಯೊಂದು ಸ್ಥಾಪಿತವಾಗಿದೆ; ರಾಷ್ಟ್ರೀಯ ರಕ್ಷಣಾ ನಿಧಿಯನ್ನು ಪ್ರಾರಂಭಿಸಲಾಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಹಲವಾರು ನಾಗರಿಕ ಸಮಿತಿಗಳು ನಿರ್ಮಾಣಗೊಂಡಿವೆ. ಇತರ ಸಮಿತಿಗಳ ಚಟುವಟಿಕೆಗಳನ್ನು ಹೊಂದಿಸಿಕೊಳ್ಳಲು ಕೇಂದ್ರ ನಾಗರಿಕ ಸಮಿತಿಯೊಂದನ್ನು ರಚಿಸಲಾಗಿದೆ.

### ಔದ್ಯಮಿಕ ಕ್ಷೇತ್ರ

ನಮ್ಮ ಸೈನಿಕ ಬಲವನ್ನು ಹೆಚ್ಚಿಸುವುದಕ್ಕೆ ನಾನಾ ಕ್ರಮಗಳನ್ನು ಕೈಗೊಂಡಿದ್ದೇವೆ; ನಮ್ಮ ರಕ್ಷಣೋಪಕರಣ ಕಾರಖಾನೆಗಳಲ್ಲಿ ಅಧಿಕ ಉತ್ಪಾದನೆಗೆ ಕ್ರಮ ತೆಗೆದುಕೊಂಡಿದ್ದೇವೆ. ನಾಗರಿಕ ಉದ್ಯಮಿಗಳ ಸಹಾಯವನ್ನೂ ಇದಕ್ಕಾಗಿ ತೆಗೆದುಕೊಳ್ಳಲಾಗುತ್ತಿದೆ. ಈ ಯೆಲ್ಲಾ ಕಾರಖಾನೆಗಳ ಕರ್ಮಚಾರಿಗಳಿಗೆ ನಮ್ಮ ಸರಕಾರದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ರಾಷ್ಟ್ರಕ್ಕಾಗಿ ಅವರು ಅತ್ಯುದ್ಭುತವಾಗಿ ದುಡಿಯುತ್ತಿದ್ದಾರೆ. ಮಾತೃ ಭೂಮಿಯ ವಿಪನ್ನಾವಸ್ಥೆಯ ಸನ್ನಿವೇಶದಲ್ಲಿ ಸಮಗ್ರ ದೇಶದ ಎಲ್ಲ ಉದ್ಯಮ ಕ್ಷೇತ್ರದವರೂ ಉತ್ಸಾಹದಿಂದ ಇದನ್ನು ಎದುರಿಸಲು ಮುಂದೆ ಬಂದಿದ್ದಾರೆ ಎಂಬುದು ಸತ್ಯ.

(೧೨ನೇ ಪುಟ ನೋಡಿರಿ)

ಹರಟೆ

# ಹರಕೆ

ಹೌದು ಹರಕೆಗಳನ್ನು ಮಾಡ್ಕೊಳ್ಳೋದು ಸುಲಭಾನೆ. ಆದರೆ ಅದರಂತೆ ನಡೆಯೋದು ಕಷ್ಟಾನೇ. ಹರಕೆ ಮಾಡ್ಕೊಬೇಕಾದ್ರು ಕಷ್ಟಾನೆ ಇದೆ. ಯಾಕೆ ಅಂದ್ರೆ ಏನಾದ್ರು ಅವಿವೇಕ ಮಾಡಿಕೊಂಡು ಆ ಮೇಲೆ ತಪ್ಪಿನ ಅರಿವಾಗಿ ಆ ಮೇಲೆ ಅದನ್ನು ಸರಿಪಡಿಸ್ಕೊಬೇಕಂದ್ರೆ ತಾನೆ. ಮನುಷ್ಯ ಜೀವಿಗಳು ಸ್ವಾರ್ಥಿಗಳು ಅಂತ ಸುಮ್ನೆ ಹೇಳ್ತಾರೆಯೆ ದೊಡ್ಡವರೆನಿಸಿಕೊಂಡವರು. ಜೀವಿತದಲ್ಲಿ ತೊಡಕು ಕ್ಲೇಶ ಉಂಟಾದ್ರೇನೆ ನಾವು ಹರಕೆ ಹೊತ್ತುಕೊಳ್ಳುವುದು. ಇದು ಕೇವಲ ಅನುಭವದ ಮಾತುಗಳೆಂದರೆ ಅತಿಶಯೋಕ್ತಿಯೇನಲ್ಲ.

ಕಷ್ಟ ಕಾಲದಲ್ಲಿ ಹರಕೆ ಹೊತ್ತುಕೊಳ್ಳುವುದು ಅನೂಚಾನವಾಗಿ ನಡೆದುಬಂದಿರುವುದೆಂಬುದು ಆಧಾರಗಳಿಂದ ತಿಳಿದು ಬರುವುದು, ಈ ಇಪ್ಪತ್ತನೆಯ ಶತಮಾನ ಅದಕ್ಕೇನು ಹೊರತಾಗಿಲ್ಲ. ಈ ರೂಢಿಯನ್ನು ವೃದ್ಧಿಪಡಿಸಿದೆ ಎಂದರೆ ತಪ್ಪೇನಿಲ್ಲ. ಉದಾಹರಣೆಗೆ ನೋಡಿ ವಸೂಲಾದ ವಸ್ತುಗಳ ಲೆಂಕೆ ಅಂಶವನ್ನಿಡಲು ಒಂದು ಟ್ರಸ್ಟನ್ನು ರಚಿಸಿದ್ದಾರೆ.

ಕೆಲವರು ಹರಕೆ ಮಾಡಿಕೊಳ್ಳುವುದು ಮಾಡಿಕೊಂಡು ಒಳ್ಳೇದು ಆಗೋದ್ರೆ ಮರೆತುಬಿಡ್ತಾರೆ ಏನಾದ್ರು ಕೇಡಾದ್ರೆ ಹೀನಾಮಾನವಾಗಿ ಅನ್ನಲು ಹಿಂದು ಮುಂದು ನೋಡುವವರಲ್ಲ. ಇದಕ್ಕೆ ಶಿಕ್ಷೆಯಾಗಿ ಆ ಕಾಲಕ್ಕೆ ಸರಿಯಾಗಿ ಏನಾದರೂ ವಿಪತ್ತನ್ನು ದೇವರು ತರ್ತಾನೆ ಅಂತ ಹೇಳ್ತಾರೆ. ಆ ಕಾಲದಲ್ಲಿ ಅಂದರೆ ಆ ರೀತಿ ಪರಿಸ್ಥಿತಿ ಅನಿವಾರ್ಯವಾದರೆ 'ತಪ್ಪು ಕಾಣಿಕೆ' ಎಂಬ ದಂಡವನ್ನು ಕೊಟ್ಟುಬಿಟ್ಟರೆ ಸರಿಹೋಗುತ್ತೆ. ಇಲ್ಲದೆ ದೇವ್ರೇ ಏನಾದರೂ ಮರೆತುಹೋದರೆ ತೀರಿಹೋಯಿತು. ಈ ವಸೂಲಿಯ ಬಗ್ಗೆ ಯೋಚನೆಯನ್ನು ಬಿಟ್ಟೇಬಿಡಬೇಕು, ಆ ಮಹಾನುಭಾವ.

ಸಾಧಾರಣವಾಗಿ ನನ್ನ ಸೆನ್ಸಸ್ ಪ್ರಕಾರ ಹೆಂಗಸರೇ ಈ ರೀತಿ ಹರಕೆ ಮಾಡಿಕೊಳ್ಳುವುದು ಜಾಸ್ತಿ. ಈ ಹೆಂಗಸರ ಬಲಾತ್ಕಾರದಿಂದ ಗಂಡಸರೂ ಹರಕೆ ಹೊತ್ತುಕೊಳ್ಳುವುದುಂಟು. ಗಂಡನಿಗೆ ಕೆಲಸದಲ್ಲಿ ಬಡ್ತಿ ಅಥವಾ ವ್ಯಾಪಾರದಲ್ಲಿ ಲಾಭವಾದರೆ ಅಥವಾ ಸೊಸೆಗೆ ಇನ್ನೂ ಮಗು ಹುಟ್ಟದೆ ಇದ್ದರೆ ಮಗ ನಾಪಾಸಾಗುತ್ತಿದ್ದರೆ ಮಗಳ ಲಗ್ನವಾಗದಿದ್ದರೆ, ಇತ್ಯಾದಿ ಪ್ರಮುಖ ಕಾರಣಗಳಿಗೂ ಮತ್ತು ಹಲ ಕೆಲವು ಕ್ಷುಲ್ಲಕ ಕಾರಣಗಳಿಗೂ ಹರಕೆ ಹೊತ್ತುಕೊಳ್ಳುವರು. ಅಷ್ಟೆ ತಪ್ಪಿ ಈ ಕೆಲಸಗಳೇನಾದರೂ ಸುಸೂತ್ರವಾಗಿ ಬಿಟ್ಟರೆ ತೀರಿತು. ಅದೇ ವಿಷಯವನ್ನು ಗಂಡಂದಿರಿರುತನ್ನ ಹಾಗೂ ದೇವರಿಂದಲೇ ಈ ಕೆಲಸವಾಯಿತೆಂದು ಹೇಳಿ ಹೇಳಿ ಬೇಸರ ತರಿಸುತ್ತಾರೆ. ಆ ಗಂಡಸು ಕೆಲಸಕ್ಕಾಗಿ ಎಷ್ಟು ಜನ ಮೇಲಧಿಕಾರಿಗಳಿಗೆ ಹರಕೆ ಹೊತ್ತುಕೊಂಡಿದ್ದನೋ ಅದು ಆ ಪಾಪಿಗೇ ಗೊತ್ತು ಅಷ್ಟೆ. ಆ ಮಾತನ್ನು ಅವನೇನಾದರೂ ಪ್ರತ್ಯಕ್ಷವಾಗಿ ತಿಳಿಸಿದರೆ, ದೇವರಿಗೆ ತಿಳಿದು ಅವಿವೇಕವಾಗುತ್ತದೆಂದೇನೇ ಇರಲಿ, ಎಷ್ಟರ ಕರ್ಮನು ಪಡೆದರೆ ತಾನೆ ಕೆಲಸಗಳು ಸುಸೂತ್ರವಾಗಿ ಸಾಗುವುದು ಅಂತ ವೇದಾಂತಿಗಳ ಹಾಗೆ ಗೊಣಗುಟ್ಟುತ್ತಾರೆ, ಅತಿ ಜೋರಾಗಿ ಆ ಮಾತು ಹೇಳಿದರೆ ಕಾಣದ ದೇವರಿಂದ ತಪ್ಪು. ಈ ಮಾತು ಕಾಣುವ ದೇವರ ಅನ್ನಪೂರ್ಣೇಶ್ವರಿಯಾದ ಹೆಂಡತಿ ಕಿವಿಗೆ ಬಿದ್ದರೆ ಇನ್ನೂ ಕಷ್ಟ ಅಲ್ಲವೇ? ಅದಕ್ಕಾಗಿ ಗೊಣಗುಟ್ಟಬೇಕು.

ಕೆಲವು ವಿದ್ಯಾರ್ಥಿಗಳು (ವಿಹಾರಾರ್ಥವಾಗಿ ಶಹರುಗಳಿಗೆ ಬಂದವರು) ತಾನೇ ನೋಡ್ರೊ ಪಾಸಾದ್ರೆ ಇಂತಿಷ್ಟು ತೆಂಗಿನ ಕಾಯಿ ಒಡೆಸ್ತೀನಿ ಅಂತಾರೆ ಪಾಸಾದ್ಮೇಲೆ ಕೆಲ್ಸ ಸಿಕ್ಕಿದ್ರೆ ಅಂತ. ಸಿಕ್ಕಿದ್ರೆ ತಿಂಗಳ ಸಂಬಳ ಬರಲಿ, ಅದೂ ಆದರೆ ಮತ್ತೊಂದು ಕೋರಿಕೆ ಇಡ್ತಾರೆ. ನಮ್ಮಪ್ಪ, ಅಮ್ಮ, ನಾನ್ಹೇಳಿದ ಹುಡುಗಿನ ನನಗೆ ಮದುವೆ ಮಾಡಿಸೊ ಹಾಗಿದ್ರೆ ಅಂತ ದೇವರಿಗೆ ಆಮಿಷಗಳನ್ನು ತೋರಿಸುತ್ತಾರೆ. ಇವೆಲ್ಲಾ ಆಗೋ ಹೊತ್ತಿಗೆ ಅದು ಎಷ್ಟು ತೆಂಗಿನ ಕಾಯಿಗಳಿಗೆ ಏರಿರುತ್ತೆ ಅಂದರೆ ಒಂದೂವರೆ ಲಾರಿ ಲೋಡ್, ಅಷ್ಟು ಧಾರಾಳವಾಗಿ. ಅದು ಆಗೋ ಹೋಗೋ ಕೆಲ್ಸ ಅಲ್ಲ ಎಂತ ಸುಮ್ನಿದ್ದು ಬಿಡುತ್ತಾರೆ. ಇನ್ನು ಹೇಳುವುದಾದರೆ ಬೊಂಬೆಗೆ ಹುಲ್ಲು ಸಿಕ್ಕಿಸಿ ಕುದುರೆಯ ಮೇಲೆ ಸವಾರಿ ಮಾಡಿದಂತೆ.

ಇನ್ನು ಕೆಲವು ತೆಂಗಿನ ಕಾಯಿಯ ಬೆಲೆ ದುಬಾರಿಯಾಗಿದೆ ಎಂದು ಕಡಿಮೆ ಖರ್ಚಿನಲ್ಲಿ ಕೆಲಸ ಪೂರೈಸುವುದಕ್ಕೆ ಯೋಚಿಸಿರುತ್ತಾರೆ.

ಇವರನ್ನು ಬುದ್ಧಿಶಾಲಿಗಳೆಂದು ಕರೆಯಬೇಕೋ ಅಥವಾ ಜಿಪುಣರೆನ್ನಬೇಕೋ ತಿಳಿಯುವುದಿಲ್ಲ. ಸುಮ್ಮನೆ ಉಗುರಿನಲ್ಲಿ ಹೋಗುವದಕ್ಕೆ ಕೊಡಲಿಯಾಕೆ ಅಂದು ಗಡ್ಡ ಮೀಸೆ ಕೊಡ್ತೀನಿ, ತಲೆ (ಇದ್ದಲ್ಲವೇ?) ಕೊಡ್ತೀನಿ, ಉಗುರು ಕೊಡ್ತೀನಿ ಅಂತ ಹರಕೆ ಮಾಡಿಕೊಂಡು ಇಬ್ಬಗೆ ಲಾಭ ಮಾಡಿಕೊಳ್ಳುತ್ತಾರೆ. ದೇವರನ್ನು ತೃಪ್ತಿಪಡಿಸಿದ ಹಾಗಾಯಿತು. ವರ್ಷಗೂಡಿ ಬೆಳೆದುದನ್ನು ಖರ್ಚಿಲ್ಲದೆ ಕೊಟ್ಟ ಹಾಗಾಯಿತು.

ಸರ್ಕಾರಿ ವಲಯಗಳಲ್ಲಿ ಪರ್ಮಿಟು ಹಾಗೂ ಕಂಟ್ರಾಕ್ಟು ಗಿಟ್ಟಿಸುವುದಕ್ಕಾಗಿ ವಿಲಕ್ಷಣವಾದ ಹರಕೆಗಳನ್ನು ಮಾಡಿಕೊಳ್ಳುತ್ತಾರೆ. ಉದ್ಧರಣೆಯಿಂದ ತೆಗೆದು ಪಂಚಪಾತ್ರೆಯ ತುಂಬ ತೆಗೆದುಕೊಳ್ಳುವ ಕಲೆ ಅವರಿಗೆ ಗೊತ್ತು. ಅದೇ—ಲಂಚ, ಮನುಷ್ಯ ತಗೊಂಡ್ರೆ ಲಂಚ—ರುಷುವತ್ತು, ದೇವರು ತೆಗೊಂಡರೆ ಹರಕೆ, ತಪ್ಪು ಕಾಣಿಕೆ.

ಇನ್ನು ಕೋರ್ಟು ಕಛೇರಿ ಕೇಳ್ತೀರೋ, ಅಲ್ಲೂ ಇದೆ, ಹರಕೆ ದೇವರಿಗೆ ಹೊತ್ತರೆ ಪ್ರಯೋಜನವಿಲ್ಲ. ನ್ಯಾಯಾಧೀಶರಿಗೆ ಹರಕೆ ಮಾಡಿಕೊಂಡರೆ ಬಿಟ್ಟ ನಮ್ಮಂತೆಯೇ, ಅವರ ಕೈ ಕೆಳಗಿನ ಚಿಕ್ಕ ಪುಟ್ಟ ದೇವರನ್ನು ಮರೆಯ ಬಾರದಷ್ಟೆ.

ಕಾಶಿ, ಮತ್ತಿತರ ಪುಣ್ಯಕ್ಷೇತ್ರವೆನಿಸಿಕೊಳ್ಳುವಂತಹ ಸ್ಥಳಗಳಿಗೆ ಹೋಗಿ ಬಂದು ತಮಗೆ ಸೇರದೆ ಇರುವ ಪದಾರ್ಥವನ್ನು ವಿಸರ್ಜಿಸುವಂತೆ ಈಗೀಗ ಹರಕೆಹೊತ್ತುಕೊಳ್ಳುವವರು ತಮಗೆ ಯಾವುದು ಬೇಡವೋ ಅದನ್ನು ಕೊಡ್ತೀನಿ ಅಂತಾರೆ.

ಈಗ ನಾನು ಕೂಡ ಒಂದು ಹರಕೆ ಮಾಡಿಕೊಳ್ಳಬೇಕಾಗಿ ಬಂತು ನೋಡಿ. ನಮ್ಮ ಅಪ್ಪ ಅಮ್ಮ ಚಿಕ್ಕ ವಯಸ್ಸಿನಲ್ಲಿ ತೀರಿದುದರಿಂದ ನಮ್ಮಜ್ಜೀನೇ ನನ್ನ ಸಾಕಿದಳು. ಪುಣ್ಯಕ್ಕೆ ನಾನು ಮಾಡುವ ಅನಾಚಾರಗಳು ಅವಳ ಕಣ್ಣಿಗೆ ಬೀಳದೆ ಇರಲಿ ಅಂತ ಅವಳ ಕಣ್ಣುಗಳು ಮತ್ತು ಕಿವಿಗಳೆರಡು ಹೊರಟುಹೋದವು.

ಆ ಮೇಲೆ ಶುರುಮಾಡಿದ್ಲು ಮಗು ಸಾಯೋದ್ರೊಳಗೆ ಕಾಶಿಯಾತ್ರೆ ಮಾಡಿಸಪ್ಪ ಎಂದು. ದೇವರನ್ನು ನೋಡಲು ಕಣ್ಣಿಲ್ಲ, ಜೊತೆಗೆ ಅವಳ ಕಿವಿಲಿ ಬಾಯಿಟ್ಟು ರನ್ನಿಂಗ್ ಕಾಮೆಂಟ್ರಿ ಕೊಡೋದು ಬೇರೆ. ಬಲವಂತಮಾಡಿದ ಮೇಲೆ ನಾನು ಒಂದು ಉಪಾಯ ಯೋಚಿಸಿದೆ. ನಾನು ಬೊಂಬಾಯಿ ನೋಡಿರಲಿಲ್ಲ ಆದ್ದರಿಂದ ಅವಳನ್ನು ಬೊಂಬಾಯಿಗೆ ಕರೆದುಕೊಂಡು ಹೋಗಿ, ಅಲ್ಲಿಂದ ಅಲ್ಲಿ ಒಂದು ಘಂಟೆ ಶಬ್ದ ಮಾಡಿ ಅದನ್ನೇ ಕಾಶಿಎಂದು ಹೇಳಿದೆ. ಅದನ್ನು ನಂಬಿ ನಮ್ಮಜ್ಜಿ ಅಕ್ಕಪಕ್ಕದವರ ಕೈಯ್ಯಲ್ಲೆಲ್ಲ ಕಾಶಿಯ ದೇವರನ್ನು ವರ್ಣಿಸಿ ಒಂದು ವಾರದಲ್ಲಿ ಸತ್ತೇ ಹೋಗಿಬಿಟ್ಟಳು. ನನಗೆ ಕಣ್ಣೀರು ಬಂತು ಮುದುಕಿಗೆ ಮೋಸ ಮಾಡಿದುದಕ್ಕೆ. ಸ್ನೇಹಿತರ ತಾಯಿಯಿಂದ ತಿರುಪತಿ ದೇವರಿಗೆ ದೀಪೋತ್ಸವ ಮಾಡಿಸುತ್ತೇನೆಂದು ಹರಕೆ ಮಾಡಿಕೊಂಡಿದ್ದೇನೆ ತಾತ್ಕಾಲಿಕ ನೆಮ್ಮದಿ ಅಷ್ಟೇ. ಇದನ್ನ ನನ್ನ ಮುಂದಿನ ಪೀಳಿಗೆಯವರು ನೆರವೇರಿಸುತ್ತಾರೆ ಸಗರನ ಮಗ ಭಗೀರಥನ ಹಾಗೆ.

ಶ್ರೀ ಸತ್ಯನ್ ಕುಮಾರ್.

---

In the Court of the District Munsif of Coondapoor.

O. S- No. 176/1962

Between:

K. Srinivasa Rao ... Plaintiff

and

Bagga alias Suryanna Shetty and others ... Defendants.

To

1. Puttumma Shedthy (28th Defendant) widow of Bagga alias Suryanna Shetty.
2. Lachamma Shedthy (29th th defendant)
3. Padmayya Shetty (30th defendant)
4. Sadhu Shedthy (31st defendant)
5. Manjamma Shedthy (32nd defendant.

Defendants 29 to 32 are the children of Bagga alias Suryanna Shetty. All are residing at Mallayadi of Thekkatte village, Coondapoor Taluk.

Whereas the plaintiff above named had filed a suit against you for recovering the mulgeni rents due to him and the said suit stands posted to 8—3—1963 before the above court. This is to call upon you to appear before the said court on 8—3—1963 at 11 A. M. either in person or through a duly instructed pleader, failing which you will be declared expaite and further orders will be passed.

(By order of the court)

(*Sd.*) K. Ramappayya, *B. A., B. L.,*

Advocate for plaintiff.

Coondapoor, 27-2-1963.

---


ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:

ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ!

ರೂ. 2ನ್ನು M O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿಗೆ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:

ನವಯುಗ ಪ್ರೆಸ್ ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

## ಚೀನಾ ದಾಳಿಯ ಆಗು ಹೋಗು:

# ತಟಸ್ಥ ಧೋರಣೆಯ ಪರೀಕ್ಷೆ

ಜಾಗತಿಕ ರಂಗದಲ್ಲಿ ತಟಸ್ಥ ಧೋರಣೆಯನ್ನು ಬೆಳಕಿಗೆ ತಂದ ಕೀರ್ತಿ ಭಾರತಕ್ಕೆ ಸಲ್ಲತಕ್ಕದ್ದು. ಬ್ರಿಟಿಷರ ಕೈಯೊಳಗಿರುವ ತನಕ ನಮ್ಮ ದೇಶಕ್ಕೆ ತನ್ನದೇ ಆದ ವಿದೇಶ ಧೋರಣೆ ಇಲ್ಲದಿದ್ದರೂ ಕಾಂಗ್ರೆಸಿನ ಧುರೀಣರಲ್ಲಿ ಹಲವರು, ಮುಖ್ಯವಾಗಿ ಪಂಡಿತ ನೆಹರು ಸ್ವತಂತ್ರ ಭಾರತವು ಯಾವ ದಾರಿಯನ್ನು ವಿದೇಶ ವ್ಯವಹಾರದ ಸಲುವಾಗಿ ಅನುಸರಿಸಬೇಕೆನ್ನುವ ವಿಷಯದ ಕುರಿತು ತುಂಬಾ ಆಸಕ್ತಿಯನ್ನು ತೋರುತಿದ್ದರು. ಹೀಗಾಗಿ ನೆಹರೂರವರು ಭಾರತದ ಮುಖ್ಯ ಮಂತ್ರಿಯಾದ ಕೂಡಲೆ ತನ್ನ ಭಾವನೆಯನ್ನು ಕಾರ್ಯರೂಪಕ್ಕೆ ತಂದರು. ಆಗ ಜಗತ್ತಿನ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರು ಮತ್ತು ಇತರರು ಎನ್ನುವ ಎರಡು ಪಂಗಡಗಳಾಗಿದ್ದುದಲ್ಲದೆ ಎಲ್ಲಾ ವಿಷಯಗಳಲ್ಲೂ ಅವುಗಳು ಒಂದನ್ನೊಂದು ವಿರೋಧಿಸುತಿದ್ದುವು. ಇದರಿಂದಆಗಾಗ ಘರ್ಷಣೆಯುಂಟಾಗಿ ಜಾಗತಿಕ ಶಾಂತಿಗೆ ಧಕ್ಕೆ ಬರುವಂತಿತ್ತು. ಈ ಸಂದರ್ಭದಲ್ಲಿ ಭಾರತವು ಯಾವುದಾದರೊಂದು ಗುಂಪಿಗೆ ಸೇರುವುದರಿಂದ ಇನ್ನೊಂದು ಪಂಗಡದ ದ್ವೇಷಗಳಿಸಬೇಕಾಗುವುದೆಂದೂ ಇದು ಭಾರತದ ಏಳಿಗೆಗಾಗಲೀ ಜಾಗತಿಕ ಶಾಂತಿಗಾಗಲೀ ಒಳಿತಲ್ಲವೆಂದು ನಿರ್ಧರಿಸಿದರು ಭಾರತವು ಜಗತ್ತಿನ ಎಲ್ಲಾ ದೇಶಗಳೊಡನೆ ಸ್ನೇಹದಿಂದಿರಲು ಬಯಸುತ್ತದೆಂದು ಅವರು ಸಾರಿದರು. ಇದು ತಟಸ್ಥ ಧೋರಣೆಯ ಬುನಾದಿಯೆನ್ನಬಹುದು.

ತಟಸ್ಥ ಧೋರಣೆಯ ಅರ್ಥವೇನೆಂಬುದನ್ನು ಇನ್ನೂ ಸ್ವಲ್ಪ ವಿಚಾರಿಸುವ. ಈ ಧೋರಣೆಯು ಇತ್ತೀಚೆಗೆ ಪ್ರಚಾರಕ್ಕೆ ಬಂದಿದ್ದರೂ ಪುರಾತನ ಭಾರತದಲ್ಲೂ ರಾಜರು ಇದನ್ನು ಅನುಸರಿಸುತಿದ್ದರೆನ್ನಲು ಆಧಾರವಿದೆ. ಕೌಟಿಲ್ಯನು ವಿದೇಶ ಧೋರಣೆಯಲ್ಲಿ ಆರು ರೀತಿಗಳನ್ನು ನಮೂದಿಸಿದ್ದನು. ಅವು ಯಾವುವೆಂದರೆ 1) ಶಾಂತಿ 2) ಯುದ್ಧ 3) ತಟಸ್ಥ 4) ಸನ್ನತಿ 5) ಒಪ್ಪಂದ, ಮತ್ತು 6) ದ್ವಿಧೋರಣೆ. ಈ ಆರು ಧೋರಣೆಗಳಲ್ಲಿ ಒಬ್ಬ ರಾಜನು ಯಾವುದನ್ನು ಯಾವ ಕಾಲದಲ್ಲಿ ಉಪಯೋಗಿಸಬೇಕೆಂಬುದನ್ನು ಕೌಟಿಲ್ಯನು ವಿವರಿಸುತ್ತಾ ತಟಸ್ಥ ಧೋರಣೆಯ ಕುರಿತು ಹೀಗೆ ಹೇಳುತ್ತಾನೆ, "ಯಾವ ಶತ್ರುವೂ ನನ್ನನ್ನು ನೋಯಿಸಲಾರ ಮತ್ತು ನಾನು ಕೂಡಾ ಯಾವ ಶತ್ರುವನ್ನೂ ನಾಶ ಮಾಡಲು ಶಕ್ತನಲ್ಲ" ಎಂದು ಎಣಿಸುವ ರಾಜನು ತಟಸ್ಥ ಧೋರಣೆಯನ್ನು ಅನುಸರಿಸಬೇಕು. ಇದರಿಂದ ಕೌಟಿಲ್ಯನ ತಟಸ್ಥ ಧೋರಣೆಗೂ ನೆಹರೂರವರ ತಟಸ್ಥ ಧೋರಣೆಗೂ ತುಂಬಾ ವ್ಯತ್ಯಾಸವಿದೆಯೆಂಬುದು ಸ್ಪಷ್ಟವಾಗುತ್ತದೆ.

ಆಳವಾಗಿ ಪರಿಶೀಲಿಸುವುದಾದರೆ ಭಾರತದ ಇಂದಿನ ವಿದೇಶ ಧೋರಣೆಯನ್ನು ತಟಸ್ಥ ಧೋರಣೆಯೆಂದು ಕರೆಯುವುದು ತಪ್ಪು. ಕೌಟಿಲ್ಯನ ಪ್ರಕಾರ ಇದನ್ನು ಶಾಂತಿ ಧೋರಣೆಯೆಂದು ಕರೆಯುವುದೇ ಸರಿ ಎಂದು ಕಾಣುತ್ತದೆ. ಜಗತ್ತಿನ ಸರ್ವ ರಾಷ್ಟ್ರಗಳೊಡನೆ ಮೈತ್ರಿಯನ್ನು ಬೆಳೆಸುವುದು ನಮ್ಮ ಇಚ್ಛೆಯಾಗಿರುವುದರಿಂದ ಯಾವ ಗುಂಪಿಗೂ ನಾವು ಸೇರುವಂತಿಲ್ಲವೆಂದು ಸಾರಿದ ನೆಹರೂ ಧೋರಣೆಯನ್ನು ತಟಸ್ಥ ಧೋರಣೆಯೆಂದು ಪರರಾಷ್ಟ್ರಗಳೇ ಕರೆಯತೊಡಗಿದರು. ನಿಜವಾದ ತಟಸ್ಥ ಧೋರಣೆಯೆಂದರೆ, ನೆರೆಮನೆಯನ್ನು ಕಳ್ಳರು ನುಗ್ಗಿದರೂ ನಮ್ಮ ಮನೆಯ ಬಾಗಿಲು ತೆರೆಯದೆ ಸುಮ್ಮನಿರುವುದು. ಇದು ಭಾರತದ ಧೋರಣೆಯೆಂದೂ ಆಗಿರಲಿಲ್ಲ. ಬಲಿಷ್ಠ ದೇಶವು ಬಡ ದೇಶದ ಮೇಲೆ ಅನ್ಯಾಯ ಮಾಡಿದಾಗ ಭಾರತವು ಸುಮ್ಮನೆ ಕುಳಿತಿರಲಿಲ್ಲ. ಇಂಗ್ಲೆಂಡು ಸುಯೆಜ್ ಕಾಲುವೆಯ ಮೇಲೆ ಧಾಳಿ ಮಾಡಿದಾಗ ಇದನ್ನು ಖಂಡಿಸಿದ ರಾಷ್ಟ್ರಗಳಲ್ಲಿ ಭಾರತವು ಮೊದಲನೆಯದು. ಅಂತೆಯೇ ಪ್ರೆಸಿಡೆಂಟ್ ಕೆನಡಿಯು ಕ್ಯೂಬವನ್ನು ಬಗ್ಗಿಸಬೇಕೆಂದು ಬಗೆದಾಗ ಅದು ತಪ್ಪು ಧೋರಣೆಯೆಂದು ನೆಹರು ಸ್ಪಷ್ಟವಾಗಿ ನುಡಿದಿದ್ದರು. ಪ್ರತಿಯೊಂದು ದೇಶವನ್ನೂ ಅದರ ಪ್ರವೃತ್ತಿಗೆ ಸರಿಯಾಗಿಯೂ ಪ್ರತಿಯೊಂದು ಪ್ರಕರಣವನ್ನು ಅದರ ಯೋಗ್ಯತೆಗೆ ತಕ್ಕಂತೆಯೂ ತೀರ್ಮಾನಿಸುವುದು ನಮ್ಮ ವಿದೇಶ ಧೋರಣೆಯ ಗುಟ್ಟಾಗಿತ್ತು.

ನಮ್ಮ ವಿದೇಶ ಧೋರಣೆಯು ಎಲ್ಲಾ ಪರರಾಷ್ಟ್ರಗಳ ಮೆಚ್ಚುಗೆಯನ್ನು ಪಡೆಯದಿದ್ದರೂ ಕಳೆದ ಹದಿನೈದು ವರ್ಷಗಳಿಂದ ಸುಸೂತ್ರವಾಗಿಯೇ ನಡೆದಿತ್ತೆನ್ನಬಹುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೆಲವು ನಮ್ಮ ತಟಸ್ಥ ಧೋರಣೆಯು ಸ್ವಾರ್ಥದ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆಯೆಂದೂ ಇನ್ನು ಕೆಲವು ಇಂದಿನ ಜಾಗತಿಕ ವಾತಾವರಣದಲ್ಲಿ ಯಾವ ದೇಶವೂ ಈ ಧೋರಣೆಯನ್ನು ಬಹುಕಾಲ ಅನುಸರಿಸಲು ಶಕ್ಯವಿಲ್ಲವೆಂದೂ ಹೇಳಿಕೊಳ್ಳುತ್ತಿದ್ದರೂ ಇತ್ತೀಚೆಗೆ ಸ್ವತಂತ್ರವಾದ ಹಲವಾರು ದೇಶಗಳು ತಟಸ್ಥ ಧೋರಣೆಯನ್ನೇ ಅನುಸರಿಸುತಿದ್ದವು. ಹೀಗಿರುವಾಗ ಚೀನವು ಭಾರತದ ಮೇಲೆ ದಾಳಿ ಮಾಡಿ ತಟಸ್ಥ ಧೋರಣೆಯನ್ನು ಒರೆಗಲ್ಲಿಗೆ ಹಚ್ಚಿತು.

ಚೀನಾ ದಾಳಿಯು ತಟಸ್ಥ ಧೋರಣೆಯ ಮೇಲೆ ಮಾಡಿದ ಪರಿಣಾ

(೧೦ನೇ ಪುಟ ನೋಡಿರಿ)

ನೀವು ಒಂದು
ಜೀವ ವಿಮಾ ಪಾಲಿಸಿಯನ್ನು
ಇಂದೇ
ಏಕೆ ಪಡೆಯಬೇಕು?
ನಾಲ್ಕು
ಕಾರಣಗಳು

1. ನೀವು
2. ನಿಮ್ಮ ಪತ್ನಿ
3. ನಿಮ್ಮ ಮಕ್ಕಳು
4. ನಿಮ್ಮ ರಾಷ್ಟ್ರ

ತ್ವರೆ ಮಾಡಿರಿ. ನಿಮಗೊಂದು ಜೀವ ವಿಮಾ ಪಾಲಿಸಿ ಈಗಲೇ ಅಗತ್ಯವಿದೆ

* ನಿಮಗಾಗಿ, ನೀವು ಅವಿವಾಹಿತರಾಗಿದ್ದಲ್ಲಿ.
* ನಿಮಗಾಗಿ ಮತ್ತು ನಿಮ್ಮ ಮಡದಿ ಮಕ್ಕಳಿಗಾಗಿ, ನೀವು ವಿವಾಹಿತರಾಗಿದ್ದಲ್ಲಿ.
* ನಿಮ್ಮ ರಾಷ್ಟ್ರಕ್ಕಾಗಿ. ಜೀವ ವಿಮೆಯ ಮೂಲಕ ನೀವು ಉಳಿಸುವ ಹಣ ರಾಷ್ಟ್ರ ರಕ್ಷಣಾ ಕಾರ್ಯಗಳಿಗಾಗಿ ಬೇಕಾಗಿದೆ.

ಇದು ಅನುಮಾನಪಡುವ, ವಿಳಂಬಿಸುವ ಮತ್ತು ನೆವ ಹೇಳುವ ಸಮಯವಲ್ಲ. ಓರ್ವ ಎಲ್.ಐ.ಸಿ. ಏಜೆಂಟನನ್ನು ಇಂದೇ ಕಾಣಿರಿ. ನಿಮ್ಮ ಆವಶ್ಯಕತೆಗಳಿಗೆ ಬೇಕಾದ ಯೋಗ್ಯ ಪಾಲಿಸಿಯನ್ನು ನೀವು ಪಡೆಯುವಂತೆ ಆತನು ನೋಡುವನು. ಇದರ ಬಗ್ಗೆ ಆತನೊಡನೆ ಈಗಲೇ ವಿಚಾರಿಸಿರಿ. ನಿಮಗಾಗಿ, ನಿಮ್ಮ ಮಡದಿ ಮಕ್ಕಳಿಗಾಗಿ, ನಿಮ್ಮ ರಾಷ್ಟ್ರಕ್ಕಾಗಿ ತ್ವರೆಮಾಡಿರಿ.

ಜೀವ ವಿಮೆಗಿಂತ
ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ASP/LIC 55 Kn.

ನಿಮಗೆ ಗೊತ್ತಿರಲಿ

# ಸ್ವಾತಂತ್ರ್ಯವಿರುವಲ್ಲಿ ಶಾಂತಿ

೧

**ಕ್ಷತ್ರಿ ಧರ್ಮ**

ವೀರ ಕ್ಷತ್ರಿಯರನ್ನು ಪಡೆದ ಭಾರತದ ಮೇಲೆ ಅನ್ಯಾಯವಾಗಿ ಆಕ್ರಮಣ ಮಾಡಿರುವ ಕಮ್ಯೂನಿಸ್ಟ್ ಚೀನಿಯರ ಅಸುರ ವರ್ತನೆಯು ಪ್ರತಿಯೊಬ್ಬನಿಗೂ ತಿಳಿದ ವಿಷಯವಾಗಿರುತ್ತದೆ. ಭಾರತದ ಮೇಲೆ ಅನ್ಯಾಯವಾಗಿ ಆಕ್ರಮಣ ಮಾಡಿ ಜಯಶೀಲನಾಗಿ ಭಾರತದಲ್ಲಿ ವಿಜಯ ಪತಾಕೆಯನ್ನು ಹಾರಿಸುವೆನೆಂದು ನೆನಸುವದಿದ್ದರೆ ಅದು ಅಸಾಧ್ಯವೇ ಸರಿ. ವೀರ ಕ್ಷತ್ರಿಯರಾದ ನಾವು ಇಂತಹ ಸಮಯಗಳಲ್ಲಿ ನಮ್ಮ ಕರ್ತವ್ಯ ಯಾವುದೆನ್ನುವದನ್ನು ಮರೆತು ನಮ್ಮ ಗೌರವಕ್ಕೆ ಕುಂದು ಬರುವ ಯಾವುದೇ ತರದ ಸಂಧಾನಗಳನ್ನು ಮಾಡದೆ ಕ್ಷತ್ರಿಯನಿಗೆ ಮುಖ್ಯ ಧರ್ಮವಾದ ("ಸಮೋತ್ತಮಾಧಮೈ ರಾಜಾ ತ್ವಾಹೂತಃ ಪಾಲಯನ್ ಪ್ರಜಾಃ ನನಿವರ್ತೇತ ಸಂಗ್ರಾಮಾತ್ ಕ್ಷಾತ್ರಂ ಧರ್ಮ ಮನುಸ್ಮರನ್") [ಮನುಸ್ಮೃತಿ] ಪ್ರಜೆಗಳನ್ನು ರಕ್ಷಿಸುತ್ತಿರುವ ರಾಜನು ತನಗೆ ಸಮಾನನಾದವನೇ ತನಗಿಂತ ಹೆಚ್ಚಿನ ಬಲದಿಂದ ಉನ್ನತನಾದವನಾಗಲೀ ಅಥವಾ ತನಗಿಂತ ಬಲದಲ್ಲಿ ಕಡಿಮೆಯವನಾಗಲೀ ಯುದ್ಧಕ್ಕೆ ಕರೆದರೆ ಕ್ಷತ್ರಿಯಧರ್ಮವನ್ನು ನೆನೆಸಿ ಯುದ್ಧಕ್ಕೆ ಹಿಂಜರಿಯಬಾರದು. ಕ್ಷತ್ರಿಯಧರ್ಮವನ್ನು ಬಿಡದೆ ಮಾತೃಭೂಮಿಯನ್ನು ವೈರಿಗಳಿಂದ ರಕ್ಷಿಸುವದು ನಮ್ಮ ಮುಖ್ಯ ಕರ್ತವ್ಯವೆಂಬುದನ್ನು ಪ್ರತಿಯೊಬ್ಬರೂ ಮರೆಯಬಾರದು.

**ನಮ್ಮ ಜಾಗ್ರತೆಯನ್ನು ಬಿಡಬಾರದು**

ಭಾರತವನ್ನು ಅನ್ಯಾಯದಿಂದ ಆಕ್ರಮಿಸಲು ಬಂದ ವಂಚಕ ಚೀನಿಯರು ಕಾರಣಾಂತರಗಳಿಂದ ಭಾರತದ ಸೂಚನೆಯನ್ನೊಪ್ಪಿ ಸಂಧಾನವನ್ನು ಮಾಡಿ ಶಾಂತ ರೀತಿಯಿಂದ ಭಾರತ ಚೀನಾ ಗಡಿ ವಿವಾದವು ಪರಿಹರಿಸಲ್ಪಟ್ಟರೂ ಇನ್ನೊಂದು ಸಮಯದಲ್ಲಿ ಯುದ್ಧ ಸನ್ನಾಹ ಮಾಡಿಕೊಂಡು ಭಾರತದ ಮೇಲೆ ವಂಚಕತನದಲ್ಲಿ ಧಾಳಿ ಮಾಡುವರೆಂಬುದರಲ್ಲಿ ಸಂದೇಹವಿಲ್ಲ. ಆದ ಕಾರಣ ವಂಚಕ ಕಮ್ಯೂನಿಸ್ಟ್ ಚೀನಿಯರ ವಂಚಕ ಸಂಧಾನದ ಮಾತುಗಳನ್ನು ನಂಬಿ ಈ ಮೊದಲಿನಂತೆ, ನಾವು ಶಾಂತಿ ಪ್ರಿಯರು; ನಾವು ತಟಸ್ಥ ಭಾವದಿಂದಿರುವವರು; ನಾವು ಇನ್ನೊಬ್ಬರಿಗೆ ವಂಚನೆ ಮಾಡಲಾರೆವು ಆದರಿಂದ ನಮಗೂ ಇನ್ನೊಬ್ಬರು ವಂಚನೆ ಮಾಡಲಾರರು ಎಂದು ಇನ್ನು ಮುಂದೆಯೂ ಶಾಂತಿ ಮಂತ್ರವನ್ನೇ ಜಪಿಸುತ್ತಾ ರಕ್ಷಣಾ ಖಾತೆಗಳ ಕಡೆಗೆ ವಿಶೇಷ ಗಮನ ಕೊಡದೆ ಇದ್ದರೆ ಇನ್ನೊಂದು ದಿವಸ ಇದೇ ವಿಶ್ವಾಸ ಘಾತುಕ ಕಮ್ಯೂನಿಸ್ಟ್ ಚೀನಿಯರಿಂದ ಇಂದು ಅನುಭವಿಸಿರುವ ಕಷ್ಟಗಳ ಇಮ್ಮಡಿ ಕಷ್ಟನಷ್ಟಗಳನ್ನು ಎದುರಿಸುವ ಸಂಸ್ಥಿತಿಯು ಖಂಡಿತವಾಗಿ ಬರುವದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ನಾವು ಮಾಡುವ ಎಲ್ಲಾ ಬಗೆಯ ರಕ್ಷಣೆಯ ಚಟುವಟಿಕೆಗಳನ್ನು ಭಾರತ—ಚೀಣಾ ಗಡಿ ವಿವಾದವು ಪರಿಹರಿಸಲ್ಪಟ್ಟರೂ ನಿಲ್ಲಿಸದೆ ಮುಂದುವರಿಸುವದು ಅತೀ ಅಗತ್ಯ. ವಂಚಕರನ್ನು ವಂಚನೆಯಿಂದಲೇ ಗೆಲ್ಲಬೇಕಲ್ಲದೆ ಸತ್ಯ ಧರ್ಮದಿಂದ ಗೆಲ್ಲುವದು ಅಸಾಧ್ಯ. ಪ್ರಜೆಗಳ ಸುಖಕ್ಕಾಗಿ ಸತ್ಯವಂತನಾಗಿರುವ ಧರ್ಮರಾಯನೂ ಒಂದು ಸುಳ್ಳು ಮಾತನ್ನಾಡಿ ಸತ್ಯವಂತನೆಂಬ ಬಿರುದಿಗೆ ಕಲಂಕವನ್ನು ತಂದಿರುವನು. ಆದುದರಿಂದ ಸತ್ಯ ಧರ್ಮ ಬಿಟ್ಟು ನಡೆದ ವಿಶ್ವಾಸಘಾತುಕರನ್ನು ಯಾವತ್ತೂ ವಂಚನೆಯಿಂದಲೇ ಗೆಲ್ಲಬೇಕಲ್ಲದೆ ಶಾಂತಿ ಮಾತುಗಳಿಂದ ಗೆಲ್ಲುವುದು ಅಸಾಧ್ಯ. ಯಾಕೆಂದರೆ ನಾವು ಸತ್ಯ ಹೇಳಿದರೂ ಅವರು ನಂಬುವದಿಲ್ಲ. ಮಿತ್ರವಲ್ಲದೆ ಸ್ನೇಹದ ಬೆಲೆಯನ್ನು ಅರಿತಿದ್ದರಲ್ಲವೇ ನಂಬುವದು.? ವಂಚನೆಯಿಂದಲೇ ಇನ್ನೊಬ್ಬರನ್ನು ಸೋಲಿಸಬೇಕೆಂದು ಆಶಿಸುವಂತಹವರಿಗೆ ನಮ್ಮ ಸತ್ಯ (ಶಾಂತಿ) ಮಾತುಗಳು ಯಾವ ರೀತಿಯಲ್ಲಿ ಹಿಡಿದೀತು?

**ಸ್ವಾತಂತ್ರ್ಯವೇ ಶಾಂತಿಯ ಮೂಲ**

ಶಾಂತಿಯಿಂದ ಸುಖವಾದ ಜೀವನ ನಡೆಸಲು ಮನಸ್ಸಿದೆಯೋ ಹಾಗಿದ್ದರೆ ಸ್ವತಂತ್ರ ವ್ಯಕ್ತಿಯಾಗುವ ದಾರಿಯನ್ನು ಹುಡುಕಿರಿ; ವ್ಯಕ್ತಿ ಸ್ವಾತಂತ್ರ್ಯವಿದ್ದರೆ ಮನಸ್ಸಿಗೆ ಶಾಂತಿ ಲಭಿಸುವದು. ಇನ್ನೊಬ್ಬರ ಅಧೀನದಲ್ಲಿರುವವರು ಯಾವತ್ತೂ ಬಣ್ಣಕೊಟ್ಟ ಗೊಂಬೆಯಂತೆ ಅಂದರೆ ನೋಡುವವರ ಕಣ್ಣಿಗೆ ಉತ್ಸಾಹದಲ್ಲಿದ್ದರೂ ಅವನ ಮನಸ್ಸಿಗೆ ಶಾಂತಿ ಇರಲಾರದು. ತದ್ರೀತಿಯಲ್ಲಿ ಭಾರತದ ಪ್ರಜೆಗಳಿಗೆ ಶಾಂತಿ ಇರಬೇಕಾದರೆ ಈಗ ಭಾರತಕ್ಕೆ ಇರುವಂತೆ ಸ್ವಾತಂತ್ರ್ಯವು ಇರಬೇಕು. ಈ ಸ್ವಾತಂತ್ರ್ಯವನ್ನು ವಿಶ್ವಾಸಘಾತುಕರಾದ ಕಮ್ಯೂನಿಸ್ಟ್ ಚೀನಿಯರು ಅಪಹರಿಸಲು ಹೊರಟಿರುವರು. ಅದನ್ನು ತಡೆಹಿಡಿಯುವದು ನಮ್ಮ ಕರ್ತವ್ಯ. ಇಲ್ಲವಾದರೆ ನಮಗೆ ಖಂಡಿತವಾಗಿಯೂ ಶಾಂತಿ ಇರಲಾರದು. ಭಾರತ ಚೀನಾ ಗಡಿ ವಿವಾದದ ಸಮಯದಲ್ಲಿ ಎಷ್ಟೋ ಜನರು ನಮಗೆ ಭಾರತದ ಆಡಳಿತವಾದರೇನು ಚೀನದವರ ಆಡಳಿತವಾದರೇನು ನಮ್ಮ ಭೂಮಿಯನ್ನು ಅವರಿಗೆ ಹೊತ್ತುಕೊಂಡು ಹೋಗಲು ಸಾಧ್ಯವಿದೆಯೇ ಎಂದು ಹೇಳುವ ಮಾತನ್ನು ನಾನು ಹಲವರಿಂದ ಕೇಳಿರುವೆನು. ಆದರೆ ಈ ಮಾತನ್ನು ಆಡುವಂತಹ ಮಹನೀಯರುಗಳಿಗೆ ಭಾರತಕ್ಕೆ ಸ್ವಾತಂತ್ರ್ಯವಿದ್ದರೇ ಮನಶ್ಶಾಂತಿಯಿದ್ದು ಸುಖದಿಂದ ಜೀವನ ನಡೆಸಲು ಸಾಧ್ಯವಿದೆ. ವೈರಿಗಳು ನಮ್ಮ ಸ್ವಾತಂತ್ರ್ಯವನ್ನು ಅಪಹರಿಸಿದರೆ ಅವರಿಂದ ನಮಗೆ ಬರುವ ಕಷ್ಟನಷ್ಟಗಳು ಖಂಡಿತವಾಗಿಯೂ ಅವರು ತಿಳಿದಿಲ್ಲ, ಯಾಕೆಂದರೆ ಭಾರತದಂತಹ ಶಾಂತಿಯುತ ರಾಷ್ಟ್ರದಲ್ಲಿದ್ದು ಸುಖದ ಜೀವನ ಮಾಡಿಯೇ ಅನುಭವಿಸಿದ್ದವರಿಗೆ ಕಮ್ಯೂನಿಸ್ಟ್ ಚೀನೀಯರ ಅಸುರ ವರ್ತನೆಗಳು ಯಾವ ರೀತಿ ಅರ್ಥವಾಗಬೇಕು?

**ಹೆಸರು ಬರಲುಬೇಕು ಅಸಲು ಹೋಗಲೂ ಬಾರದು**

ಹಾವು ಸಾಯಲೂ ಬೇಕು ಕೋಲು ಮುರಿಯಲೂ ಬಾರದೆಂಬಂತೆ ಅಸಲಿಗೆ ನಷ್ಟವಾಗಲೂ ಬಾರದು ಹೆಸರು ಬರಲೂ ಬೇಕು ಅಸಲು (ಹಣ) ಹಾಕುವವನಿದ್ದರೆ ಯೋಚನೆ ಕೊಡಲು ಜನರಿಗೇನೂ ಕಡಿಮೆಯಿಲ್ಲ. ಕಷ್ಟನಷ್ಟಗಳನ್ನು ಬಡವನು ಅನುಭವಿಸಬೇಕು ಹೆಸರು ದೊಡ್ಡ ಮಹನೀಯರುಗಳಿಗೆ ಬರಬೇಕು. ಇದು ನಮ್ಮಲ್ಲಿ ಈಗ ನಡೆಯುವ ಕ್ರಮ. ರಾಷ್ಟ್ರ ರಕ್ಷಣಾ ನಿಧಿಗೆ ಸಹಾಯ ಮಾಡುವವರಿಂದ ಜಾಸ್ತಿ ಅವನ್ನು ಖರ್ಚು ಮಾಡಲು ಅನುಭವ ಕೊಡುವ ಮಹನೀಯರುಗಳು ಇರುವರು. ಅನುಭವ ಹೇಳುವಂತಹ ಮಹಾನುಭಾವರು ರಕ್ಷಣಾ ನಿಧಿಗೆ ಭಕ್ತಿ ಪೂರ್ವಕ ತನು;ಮನಧನವನ್ನರ್ಪಿಸಲು ಸಿದ್ಧರಿರುವ ಬಡ ಜನರ ಮುಂದೆ ಉದ್ದುದ್ದದ ಉಪನ್ಯಾಸದಿಂದಲೇ ರಾಷ್ಟ್ರಸೇವೆ ಮಾಡುವವರೇ ಹೆಚ್ಚು. ಅವರ ದೇಶಸೇವೆಯೆಲ್ಲಾ ಬಾಯಾಡಂಬರದಲ್ಲೇ ಮುಗಿಯಿತು. ಎಲ್ಲಿಯಾದರೂ ಒಂದು ರೂಪಾಯಿ ಕೊಟ್ಟು ಬಿಟ್ಟರೆ ನೂರು ರೂಪಾಯಿ ಹೋದಷ್ಟು ಕನಿಕರಪಡುತ್ತಾರೆ. ಬಡ ಜನರು ಹೊಟ್ಟೆಗಿಲ್ಲದೆ ಉಳಿಸಿಕೊಟ್ಟದ್ದನ್ನು ನೆನಸುವವರೇ ಕಡಿಮೆ. ಆದರೆ ರಾಷ್ಟ್ರಕ್ಕಾಗಿ ತನ್ನ ಜೀವವನ್ನೆ ಬಲಿಕೊಡುವ ಪುಣ್ಯಾತ್ಮರುಗಳನ್ನು ನೆನಸಿ ದುಃಖಿಸುವವರು ಕಡಿಮೆ. ಹಣವನ್ನು ಯಾರೂ ಸಾಯುವಾಗ ತೆಗೆದುಕೊಂಡು ಹೋದವರಿಲ್ಲ. ವೈರಿಗಳಿಂದ ಮಾತೃ ಭೂಮಿಯನ್ನು ರಕ್ಷಿಸಲು ಶ್ರೀಮಂತರು ಮುಂದೆ ಬರಬೇಕು.

**ಸ್ವಾರ್ಥ ಚಿಂತನೆ**

ಹದಿನಾಲ್ಕು ಕ್ಯಾರೇಟ್ ಚಿನ್ನದ ಕಾನೂನನ್ನು ಸರಕಾರವು ಜಾರಿಗೆ ತಂದಾಗ, ಅದರಿಂದಲೇ ಜೀವನ ಮಾಡುತ್ತಿದ್ದ ಅಕ್ಕಸಾಲಿಗರಿಂದ ಅಧಿಕ ಬೇಸರ ಪಟ್ಟವರೆಂದರೆ ಅದನ್ನು ಧರಿಸುವಂತಹ ಮಹನೀಯರು ವರ್ಷಂಪ್ರತಿ ಹೊಸ ಹೊಸ ಚಿನ್ನಾಭರಣಗಳನ್ನು ಮಾಡಿ ತೊಟ್ಟು ಮೈಯಲ್ಲಿ ಸಾಧ್ಯವಾಗದೆ ಪೆಟ್ಟಿಗೆಯಲ್ಲಿ ತುಂಬಿಸುತ್ತಿದ್ದ ಮಹಾನುಭಾವರು ಹದಿನಾಲ್ಕು ಕ್ಯಾರೇಟ್‌ನ್ನು ಸರಕಾರವು ಜಾರಿಗೆ ತರುತ್ತದೆಂದಾಗ ಸಂಘಕಟ್ಟೆಗಳಲ್ಲಿ ಕ್ಯಾಸಿಸ್ಟಮಿನಲ್ಲಿ ಹೋಗಿ ವ್ಯಾಪಾರ ಮಾಡಿದರು, ಮೊದಲೆಲ್ಲ ಆಭರಣಗಳನ್ನು ಮಾಡಿಸುವದಿದ್ದರೆ ಚಿನ್ನವನ್ನು ಪರೀಕ್ಷಿಸುತ್ತಿದ್ದ ಮಹಾನುಭಾವರು ಇಂತಹ ಸಂದರ್ಭದಲ್ಲಿ ಪರೀಕ್ಷಿಸಲು ಅವಕಾಶವಿಲ್ಲದೆ ಉತ್ತಮ ತರದ ಚಿನ್ನವೆಂದು ನಂಬಿ ತೆಗೆದು ಕಡೆಗೆ ಮೋಸಹೋದದ್ದು ವಿಶೇಷವೇನಲ್ಲ. ಎಷ್ಟೋ ಸಾವಿರ ಸಂಖ್ಯೆಯಲ್ಲಿ ಚಿನ್ನದ ಕೆಲಸದಿಂದಲೇ ಜೀವನ ನಡೆಸುತ್ತಿದ್ದ ಅಕ್ಕಸಾಲಿಗರ ಕುಟುಂಬಗಳು ಇಂದು ಪಡುತ್ತಿರುವ ಕಷ್ಟನಷ್ಟಗಳನ್ನು ಕಂಡು ಕನಿಕರಪಡುವವರಿಂದ ಹೆಚ್ಚಿಗೆ ಜನರು ಇನ್ನು ಉತ್ತಮ ಚಿನ್ನಾಭರಣಗಳನ್ನು ಧರಿಸಲು (ತೆಗೆಯಲು) ಅಸಾಧ್ಯವಾಯಿತೆನ್ನುವವರೇ ಜಾಸ್ತಿ. ಇನ್ನೊಬ್ಬರ ಸುಖದುಃಖಗಳ ಕಡೆಗೆ ಗಮನವಿಡದೆ ಸ್ವಾರ್ಥ ಬಯಸುವವರೇ ಹೆಚ್ಚೆಂದರೆ ಆಶ್ಚರ್ಯವೇನಿಲ್ಲ. ಹಲವು ಜನರ ಸುಖಕ್ಕಾಗಿ ಒಬ್ಬನು ಕಷ್ಟವನುಭವಿಸಿದರೂ ಚಿಂತೆಯಿಲ್ಲವೆಂದು ಹಿಂದಿನ ಮಾತು. ಆದರೆ ಈಗ ಒಬ್ಬ ಶ್ರೀಮಂತನ ಸುಖಕ್ಕಾಗಿ ಹಲವು ಜನರು ಕಷ್ಟಪಡುವ ಪರಿಸ್ಥಿತಿಯು ಸಂದರ್ಭಗಳು ಬಂದೊದಗಿದೆ. ಈ ಪರಿಸ್ಥಿತಿ ದೂರವಾಗಬೇಕು.

—"ವಾಣಿ ವರಾ"

---

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 551/62 (S. C. 452/62)

ಲ್ಯಾನ್ಸು — ಅರ್ಜಿದಾರರು

ಬೀಫಾತುಮ್ಮ— ಹಾಜಿ ಉಮ್ಮರೆ ಬ್ಯಾರಿಗಳ ವಿಧವೆ— ಬಂಟ್ವಾಳ ತಾಲೂಕು ನಾವೂರು ಗ್ರಾಮದ ಕೂಡಿಬೈಲು — ಎದ್ರಿಳು.

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಮೇಲಿನ ಅಮಲ್ದಾರಿಯಲ್ಲಿ ನಿಮ್ಮ ಹಕ್ಕಿನ ಕಡೇಶ್ವಾಲ್ಯ ಗ್ರಾಮದ ಆಸ್ತಿಯು ಜಪ್ತಾಗಿರುವುದರಿಂದ, ಆ ಕುರಿತು ಪ್ರೊಹಿಬಿಟರಿ ಆರ್ಡರ್ ನೋಟೀಸು ಬಗ್ಗೆ ತಾ. 21—3—63 ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಕೋರ್ಟಿನ ಮುಂದೆ ಹಾಜರಾಗಿ ಉದಪಡಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Sadashiva Rao,
Vakil for petr.

ತಾ. 2—3—63.

**ಜೀವನದ ಉಳಿತಾಯಕ್ಕೆ ಭದ್ರವಾದ ಮನೆ**

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "**ವಿಜಯ ಬೇಂಕ್**" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯುಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

**ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.**

**ವಿಜಯ ಬೇಂಕ್ ಲಿಮಿಟೆಡ್**

ರಿಜಿಸ್ಟರ್ಡ್ ಆಫೀಸ್:— **ವಿಜಯ ಬೇಂಕ್ ಬಿಲ್ಡಿಂಗ್,**
**ಲೈಟ್ ಹೌಸ್ ಹಿಲ್ ರೋಡ್,**

Estd. 1931.
Phone No. 240.
— **ಮಂಗಳೂರು— 3**

**ಹೊಸ ಪುಸ್ತಕ—**
**ನಚಿಕೇತ'ರ,**
ನವೀನ ಕಾದಂಬರಿ—

**ಹಸುರು ಹಂಸ**

**ಇದೀಗ ಪ್ರಕಟವಾಗಿದೆ.**
ಬೆಲೆ: ರೂ. ಎರಡು.
ವಿಚಾರಿಸಿರಿ.
**ನವಯುಗ ಪ್ರೆಸ್, ಉಡುಪಿ.**

## ಮಾನವರತ್ನ

# ರಾಜೇಂದ್ರ ಪ್ರಸಾದರ ಸಂಸ್ಮರಣೆ

ದೇಶರತ್ನ ಭಾರತರತ್ನ ಮಾನವರತ್ನ ಡಾ| ರಾಜೇಂದ್ರ ಪ್ರಸಾದರು ತಮ್ಮ ಸದಾಖತ್ ಆಶ್ರಮದಲ್ಲಿಯೇ ೭೯ನೆಯ ವಯಸ್ಸಿನಲ್ಲಿ ಕೊನೆಯುಸಿರನ್ನು ಎಳೆದು ಭಾರತೀಯರನ್ನು ಶೋಕಸಾಗರದಲ್ಲಿ ಮುಳುಗಿಸಿದರು. ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿ ಕೊಡುವಲ್ಲಿಯೂ ಗಳಿಸಿಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಡುವಲ್ಲಿಯೂ ಡಾ| ಪ್ರಸಾದರು ಆಯುಷ್ಯದ ಬಹುಭಾಗವನ್ನು ವ್ಯಯಿಸಿ, ಸಕಲ ಭಾರತೀಯರ ಹೃನ್ಮನಗಳಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿದ್ದಾರೆ.

ಗಾಂಧೀಜಿಯವರ ನಿಕಟವರ್ತಿಗಳಾಗಿದ್ದ ಡಾ| ರಾಜೇನ್ ಬಾಬುರವರು ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ತೋರಿ ಮಹಾತ್ಮರ ಉತ್ತಮಾದರ್ಶವನ್ನು ಮನಸ್ವಿಯಾಗಿ ಒಪ್ಪಿ ಅವರ ಧ್ಯೇಯ ಪೂರ್ತಿಗಾಗಿ ಶ್ರಮಿಸತೊಡಗಿದರು. ದೇಶವು ಸ್ವಾತಂತ್ರ್ಯ ಗಳಿಸಿದ ತರುವಾಯ ಸಂವಿಧಾನ ಸಮಿತಿಯ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆಯು ಅದ್ವಿತೀಯವಾದುದು. ಅವರ ಮಾರ್ಗದರ್ಶನದಿಂದಲೇ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆಲ್ಲ ಉತ್ತಮ ಮಾರ್ಗದರ್ಶನವಾಗಬಲ್ಲ ವಿಶಾಲ ಮನೋವೃತ್ತಿಯ, ಸಂಪೂರ್ಣ ಸ್ವಾತಂತ್ರ್ಯ ಪ್ರತಿಪಾದನೆ ಮಾಡುವ ಘಟನೆಯು ಭಾರತಕ್ಕೆ ದೊರೆಯುವಂತಾಯಿತು.

ರಾಜೇಂದ್ರ ಬಾಬುರವರು ಪ್ರಜಾಪ್ರಭುತ್ವ ಭಾರತದ ಪ್ರಥಮ ರಾಷ್ಟ್ರಪತಿಗಳು ದೇಶದ ಅತ್ಯುಚ್ಚ ನಾಗರಿಕಾಧಿಕಾರಿಯೂ ಆಗಿದ್ದರೂ ಅವರು ತಮ್ಮ ಸರಳಜೀವನ, ಸರಳ ವರ್ತನೆಗಳಿಂದ ಜನಪ್ರಿಯರಾದರು. ೧೨ ವರ್ಷಗಳ ದೀರ್ಘ ಕಾಲದ ವರೆಗೆ ಈ ಪದವಿಯಲ್ಲಿದ್ದುಕೊಂಡು ಅವರು ಉತ್ತಮಾದರ್ಶವನ್ನೂ ಭವ್ಯ ಪರಂಪರೆಯನ್ನೂ ನಿರ್ಮಿಸಿಕೊಟ್ಟರು. ಕೊನೆಕೊನೆಗೆ ತನ್ನ ದೇಹಾರೋಗ್ಯವು ಕೆಟ್ಟು ಹೋದುದರಿಂದಾಗಿ ಹಿಂದಿನಷ್ಟು ಶ್ರಮಪಡುವುದು ಅಸಾಧ್ಯವೆನಿಸಿದರೂ, ತನ್ನ ಕರ್ತವ್ಯವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿ, ಡಾ| ರಾಧಾಕೃಷ್ಣನ್ನರಂತಹ ದಾರ್ಶನಿಕರಿಗೆ ತನ್ನ ಸ್ಥಾನವನ್ನು ಒಪ್ಪಿಸಿ ವಿಶ್ರಾಂತಿ ಹೊಂದಿದರು. ಅವರು ನಡೆದ ದಾರಿಯಲ್ಲಿಯೇ ನಡೆದು ರಾಧಾಕೃಷ್ಣನ್ ದೇಶ-ವಿದೇಶಗಳಲ್ಲಿಯೂ ಪ್ರಶಂಸಾರ್ಹರಾಗಿದ್ದಾರೆ.

ಡಾ| ಪ್ರಸಾದರು ನಿವೃತ್ತಿಯ ನಂತರ ಸರ್ವೋದಯಕ್ಕಾಗಿ ದುಡಿಯುವ ಆಶೆಯಿಟ್ಟುಕೊಂಡಿದ್ದರು; ಆದರೆ, ಈ ಅಲ್ಪಾವಧಿಯಲ್ಲಿಯೇ ಅವರು ಪತ್ನಿ ವಿಯೋಗವನ್ನು ಅನುಭವಿಸಬೇಕಾಯಿತು ತನ್ನ ಅಂತಿಮ ಆಸೆಯನ್ನು ಸಂಪೂರ್ಣ ಈಡೇರಿಸುವುದಕ್ಕೆ ಮೊದಲು ಶ್ರಮಶೀಲವಾದ ಪಾರ್ಥಿವ ಶರೀರವನ್ನು ಬಿಟ್ಟು ಪವಿತ್ರಾತ್ಮವು ಹೊರಟುಹೋಯಿತು. ದಿವಂಗತ ಪ್ರಸಾದರ ಜೀವನ ಸುಶಿಕ್ಷತಲ್ಯವಾದುದು; ರಾಜೇಂದ್ರರಾಗಿ ಮೆರೆದ ಪ್ರಸಾದರು ರಾಜರ್ಷಿಯೂ ಹೌದು, ದೇವರ್ಷಿಯೂ ಹೌದು.

ಡಾ| ರಾಜೇನ್ ನಮ್ಮನ್ನಗಲಿಹೋದರು, ನಿಜ. ಅವರ ಮರಣದಿಂದ ಭಾರತ ಒಂದು ಅನರ್ಘ್ಯ ಮಣಿಯನ್ನು ಕಳೆದುಕೊಂಡಂತಾಯಿತು. ಇದೂ ಸಹಜ. ಆದರೆ, ಮಣಿ ಕಳೆದರೂ ಹೊಳೆಗೆ ಮುಗಿಯದು. ರಾಜೇನ್ ನಮ್ಮ ತೊರೆದು ಹೋದರೂ ತನ್ನ ಆದರ್ಶವನ್ನು ನಮ್ಮ ಮುಂದಿಟ್ಟಿದ್ದಾರೆ. ಆ ಉನ್ನತಾದರ್ಶಗಳ ದಾರಿ ಬೆಳಕಿನಲ್ಲಿ ಮುನ್ನಡೆದು, ಭವ್ಯ ಭಾರತ ನಿರ್ಮಾಣಕಾರ್ಯದಲ್ಲಿ ವ್ಯಸ್ತರಾಗೋಣ; ರಾಷ್ಟ್ರೀಯತೆಯ ಪ್ರೇಮ ಪಾಶದಿಂದ ಪರಸ್ಪರರನ್ನು ಬಂಧಿಸಿ 'ನಾವೆಲ್ಲಾ ಒಂದೇ' ಎಂಬ ಸರ್ವೋದಯ ವಾಣಿಯನ್ನು ಉಚ್ಚರಿಸುತ್ತ ಅದರಂತೆ ನಡೆಯೋಣ. ಹೀಗೆ ಮಾಡಿ ದಿವಂಗತ ಪ್ರಸಾದರ ಪ್ರಸಾದ ಪಡೆದು ಭಾರತವನ್ನು ಪುನಾರಚಿಸೋಣ. ಆಗ, ರಾಜೇನ್ ಬಾಬುಗಳ ಉನ್ನತ ಪವಿತ್ರಾತ್ಮವು ಚಿರಶಾಂತಿಯನ್ನು ಪಡೆಯುವುದು; ಇದು ನಿಶ್ಚಯ.

## ನುಡಿಚಿತ್ರ

# ನಾ ಕಂಡ ತ. ರಾ. ಸು.

ಚಪ್ಪಟೆಯಾಗಿ ಸಾಧಾರಣ ಉದ್ದದ ಈ ಬಡಕಲು ವ್ಯಕ್ತಿ ತ. ರಾ. ಸು. ಎಂದರೆ ನನಗೆ ಫಕ್ಕನೆ ನಂಬಿಕೆಯಾಗಲಿಲ್ಲ.

ಸಿಗರೇಟನ್ನು ವಿಪರೀತವಾಗಿ ಸೇದುವ, ಅದರೊಂದಿಗೆ ಭಯಂಕರವಾಗಿ ಕೆಮ್ಮುವ ಈ ಗೋಧಿ ಬಣ್ಣದ ವ್ಯಕ್ತಿ ಕಾಲೇಜಿನ ಹುಡುಗನಂತೆ ಕಂಡರೂ, ಜೀವನದ ವಿರುದ್ಧ ದಿಕ್ಕಿನಲ್ಲಿ ಈಜಿ ಸೋತವರಂತೆ ಅವರ ಮುಖಮುದ್ರೆ ಹೇಳುತ್ತದೆ.

ನಾನು ಅವರನ್ನು ಪ್ರಥಮವಾಗಿ ಸಂಧಿಸಿ, ಮಾತುಕತೆಯಾಡಿದ್ದು ಉಡುಪಿಯಲ್ಲಿ. ಅದೂ ವಿಶಾಲವಾದ ಮಲ್ಪೆಯ ಸುಂದರ ಪಡುಕಡಲ ಕರೆಯ ಮರಳ ರಾಶಿಯಲ್ಲೇ. ಆಗ ಅವರು ನಮ್ಮ ನಿಸರ್ಗ ಸುಂದರ ಸೂರ್ಯಾಸ್ತದ ವಿಹಂಗಮ ದೃಶ್ಯವನ್ನು, ಅದರ ಸೊಬಗನ್ನು ಸವಿಯುತ್ತಿದ್ದರು.

ಶ್ರೀ ತ. ರಾ. ಸು. ಉಡುಪಿಗೆ ಬಂದಿದ್ದಾರೆಂದೂ, ಅವರ ಸಂಗಡ ನಾನು ಸ್ವಲ್ಪ ಸಹಕರಿಸಬೇಕೆಂದೂ 'ಪ್ರಕಾಶ'ದ ಮಾನ್ಯ ಸಂಪಾದಕರು ಫೋನಿನಲ್ಲಿ ಕೇಳಿದಾಗ ನನಗೆ ಆನಂದವೂ ಆಶ್ಚರ್ಯವೂ ಏಕಕಾಲದಲ್ಲಾಯಿತು. ಶ್ರೀ ತ. ರಾ. ಸು. ಬಂದುದು ಒಂದು ಆಕಸ್ಮಿಕವಾಗಿದ್ದಂತೆ ಅವರ ಸಂದರ್ಶನ ಲಾಭ ಆನಂದದಾಯಕವೇ ಎನ್ನಬಹುದು.

ಸಾಮಾನ್ಯವಾಗಿ ನಾನು ಮೆಚ್ಚುವ ಕೆಲವೇ ಕನ್ನಡ ಸಾಹಿತಿಗಳಲ್ಲಿ ಶ್ರೀ ತ. ರಾ. ಸು. ಒಬ್ಬರು. ಅವರ ಕಥನ ತಂತ್ರ, ಆ ಶೈಲಿಯ ಭಾವಾವೇಶ, ನಿರೂಪಣೆಯ ಹೃದಯಂಗಮ ಸಾಮರ್ಥ್ಯ ನನಗೂ ಆವೇಗಾನಂದವನ್ನು ತಂದಿಕ್ಕುತ್ತಿತ್ತು.

ಶ್ರೀ ತ. ರಾ. ಸು. ಸಮರ್ಥ ಕಾದಂಬರಿಕಾರ ಅವರು ಸಾಮಾಜಿಕವಾದ ಹಲವಾರು ಸಮಸ್ಯೆಗಳ ಮೇಲೆ ಸಾಹಿತ್ಯ ರಚಿಸಿದ್ದಾರೆ. ಅವರ ಕಥನ ಕಲೆಯ ವೈಶಿಷ್ಟ್ಯವೆಂದರೆ ವಾಸ್ತವಿಕ ನಿರೂಪಣೆಯ ಹಿನ್ನೆಲೆಯಲ್ಲೇ ಓದುಗರ, ಓದುತ್ತ ಹೋದ ಹಾಗೆ ಮನಸ್ಸಿಗೆ ಹೊಳೆಯಬಹುದಾದ ಸಮಸ್ಯೆಗಳನ್ನು ಊಹಿಸಿ ತನ್ನಷ್ಟಕ್ಕೆ ಉತ್ತರಿಸುವ ಒಂದು ಅದ್ಭುತ ಜಾಣ್ಮೆ. ಅವರು "ಮನೆಗೆ ಬಂದ ಮಹಾಲಕ್ಷ್ಮಿ"ಯಿಂದ ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸಿದರು. ಆ ಕಾದಂಬರಿಯ ವಸ್ತುವಿನ ಬಗ್ಗೆ ಹಿರಿ ಸಾಹಿತಿಗಳು ಒಂದು ಆಂದೋಲನವನ್ನೇ ಎಬ್ಬಿಸಿದರೂ, ಶ್ರೀ ತ. ರಾ. ಸು.ರವರ ಕೆಚ್ಚಿನ ಲೇಖನಿ ನಿರ್ಭಿಡೆಯಿಂದ ಮುಂದರಿಯಿತು. ಪತ್ರಿಕೋದ್ಯಮಿಯ ಜೀವನವನ್ನು ಕುರಿತಾದ 'ಮುಂಜಾವಿನಿಂದ ಮುಂಜಾವು' ಅವರ ಪತ್ರಿಕೋದ್ಯಮದ ದುರ್ಭರ ಅನುಭವದ ಪರಿಪೂರ್ಣ ಚಿತ್ರವೆನ್ನಬಹುದು.

'ಸೂಳೆ' ಸಮಾಜದ ಒಂದು ವ್ಯಂಗ್ಯ ಟೀಕಾ ವಸ್ತು. ಆ ಟೀಕೆಯನ್ನು ನಡೆಸುವ ಮಂದಿಯೇ ಸೂಳೆಯ ಭವ್ಯ ಆರಾಧಕರು. ಈ ಆರಾಧನೆಯಲ್ಲೇ ಸೂಳೆ ಒಂದು ಹೆಂಗಸೆಂದು ತಾಯ್ತನದ ಗೌರವ, ಸ್ತ್ರೀ ಸಹಜ ಮಾನವೀಯತೆ ಇದೆ ಎಂಬುದನ್ನು ಮರೆಯುತ್ತಾರೆ. ಈ ವಿಷಯ ಪ್ರತಿಪಾದನೆಯ ಜಾಲದಲ್ಲಿ ಅವರು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ ಉತ್ತಮ ಕಾದಂಬರಿಯೇ "ಮಸಣದ ಹೂ."

'ಸೂಳೆ'ಯ ಜೀವನದ ಬಗ್ಗೆ, ಅವರ ಬೇರೆ ಬೇರೆ ಪ್ರಕಾರದ ಇಣಿಕು ನೋಟಗಳನ್ನು ಕುರಿತು ಕನ್ನಡದ ಪ್ರಖ್ಯಾತ ಸಾಹಿತಿಗಳು ಬರೆದಿದ್ದಾರೆ. ಈ ವೇಶ್ಯಾ ಕಾದಂಬರಿಗಳಿಂದಲೇ ಜನಪ್ರಿಯತೆಯನ್ನೂ, ಹಣವನ್ನೂ ಸಾಹಿತ್ಯರಂಗದಲ್ಲಿ ಸಂಪಾದಿಸಿದವರೂ ಉಂಟು.

ಆದರೆ ಶ್ರೀ ತ. ರಾ. ಸು.ರವರ "ಮಸಣದ ಹೂ" ಕಾಮ ಪ್ರಚೋದಕ ಕಾದಂಬರಿಯಲ್ಲ. ಕಾಮಜೀವನದ ಬೀಭತ್ಸ ಚಿತ್ರ. ಈ ಕಾದಂಬರಿಯ ವ್ಯಕ್ತಿಗಳನ್ನು ನೋಡಿ ನಾವು ಅನುಕಂಪ ಸೂಚಿಸುತ್ತೇವೆ, ದುಃಖಿಸುತ್ತೇವೆ, 'ಅಯ್ಯೋ, ಪಾಪ!' ಎನ್ನುತ್ತೇವೆ. ಹೊರತು ನಮ್ಮ ಮನಸ್ಸು ಕಾಮಪೂರಿತವಾಗುವುದಿಲ್ಲ. ಜೀವನದ ಅಧಃಪತನದ ಒಂದು ನಿತ್ಯನೂತನ ಚಿತ್ರವನ್ನು ಕೊಡುವುದರ ಜೊತೆಗೆ ಕನ್ನಡ ಕಾದಂಬರಿ ಪರಂಪರೆಯಲ್ಲಿ ಸರ್ವಕಾಲೀನವೂ ಉಳಿಯಬಲ್ಲ ಒಂದು ಅತಿ ಉನ್ನತವಾದ ಸಾಹಿತ್ಯ ಕಾಣಿಕೆಯನ್ನು ನೀಡಿದ್ದಾರೆ.

ಶ್ರೀ ತ. ರಾ. ಸು. ಪತ್ರಿಕೋದ್ಯಮಿಯಾಗಿದ್ದರು ಶ್ರೀಯುತ ತಿ. ತಾ. ಶರ್ಮರ ಗರಡಿಯಲ್ಲಿ ತಮ್ಮ ಲೇಖನಿಗೆ ಕೆಚ್ಚನ್ನು ತುಂಬಿಕೊಂಡರು. ಅವರ ನಿರರ್ಗಳವಾದ ವಿಚಾರ ಧಾರೆಗೆ ಶ್ರೀ ತಿ. ತಾ. ಶರ್ಮರ ಮಾರ್ಗದರ್ಶನವೇ ಕಾರಣವೆಂಬುದನ್ನು ಇಂದಿಗೂ ಇವರು ಒಪ್ಪುತ್ತಾರೆ 'ವಿಶ್ವ ಕರ್ನಾಟಕ'ದಲ್ಲಿ ಪತ್ರಿಕಾ ಲೇಖಕನಾಗಿ ಹಾಗೆಯೇ 'ವಾಹಿನಿ' ಎಂಬ ಅತೀ ಉಚ್ಚ ತರದ ವಾರ ಪತ್ರಿಕೆಯನ್ನು ಹೊರಡಿಸಿ, ಸ್ವಂತವಾಗಿಯೂ ಸಾಂಸ್ಕೃತಿಕ ಮಾಸಪತ್ರಿಕೆ ಹೊರಡಿಸಿ, ಎಲ್ಲದರಲ್ಲೂ 'ಅತಿ ಮೇಧಾವಿ' ಯೋಗ್ಯತೆಯನ್ನು ಪ್ರದರ್ಶಿಸಿದ ಶ್ರೀ ತ. ರಾ. ಸು. ಕನ್ನಡ ಸಾಹಿತ್ಯದ ಪ್ರತಿಭಾವಂತ ಶಕ್ತಿ ಎನ್ನುವಲ್ಲಿ ಯಾವ ಅನುಮಾನವೂ ಇಲ್ಲ.

ಅವರು ಇತಿಹಾಸದ ಬಗ್ಗೆ ಬರೆದ ಕಾದಂಬರಿಗಳು ನಿಜವಾಗಿಯೂ ನಮ್ಮ ಕನ್ನಡ ಸಾಹಿತ್ಯಕ್ಕೆ ನೀಡಿದ ದೇಣಿಗೆಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ಕಾದಂಬರಿಗಳಲ್ಲಿ ಒಂದು ಹೊಸ ಪರಂಪರೆಯನ್ನು ಆಕರ್ಷಿಸಿದ ಕೀರ್ತಿ ಇವರಿಗೇ ಸಲ್ಲಬೇಕು. ಇತಿಹಾಸವು ಸಾಮಾನ್ಯವಾ

(ಆನೇ ಪುಟ ನೋಡಿರಿ)


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೭-೩-೧೯೬೩ | ೨೬ |

## ನಿರಾಸೆ—ಆಸೆ

ಕರ್ನಾಟಕದ ವಿತ್ತ ಮಂತ್ರಿ ಜತ್ತಿಯವರು ಯಾವ ಹೊಸ ತೆರಿಗೆಯನ್ನೂ ಹೊರಿಸದೆ ಉಂಟಾಗುವ ಕೊರತೆಯನ್ನು ಇದ್ದ ವರಮಾನದಲ್ಲೇ ತುಂಬಿಸಿಕೊಳ್ಳುವ ಔದಾರ್ಯವನ್ನು ತೋರಿಸಿದ್ದರೆ, ಕೇಂದ್ರ ಮಂತ್ರಿ ಮುರಾರ್ಜಿಯವರು ತೆರಿಗೆಗಳನ್ನು ಹೊರಿಸುವಲ್ಲಿ ಅಪ್ರತಿಮ ತ್ರಿವಿಕ್ರಮಾವತಾರವನ್ನೇ ತಳೆದಿದ್ದಾರೆ. ರಕ್ಷಣಾ ವ್ಯವಸ್ಥೆಯ ಬಗ್ಗೆ ತೀವ್ರ ಗಮನ ಹರಿಸಬೇಕಾಗಿರುವುದರಿಂದ ಮತ್ತು ಸಂರಕ್ಷಣಾ ಕಾರ್ಯಕ್ರಮಗಳಲ್ಲಿ ದೇಶದ ಯೋಜನೆಗಳನ್ನು ಏಕಪ್ರಕಾರವಾಗಿ ಮುಂದುವರಿಸುವುದೂ ಅನಿವಾರ್ಯವೆಂಬುದರಿಂದ ಈ ಬಗೆಯ ಕರಭಾರವು 'ನ ಭೂತಃ' ಎಂಬಂತೆ ಬೀಳುವುದು ಅತ್ಯವಶ್ಯವಾಯಿತು. ತೆರಿಗೆ ಹೊರಿಸಲು ಸರಕುಗಳೇ ದೊರೆಯದಿದ್ದುದರಿಂದಲೋ ಏನೋ, ಈ ವರ್ಷ ಸರ್ ಚಾರ್ಜ್‌ಗಳ ಯಾದಿಯೇ ದೊಡ್ಡದು. ಅಂತೂ ೨೭೫ ಕೋಟಿ ರೂಪಾಯಿಗಳ ಹೊಸ ಕರಗಳನ್ನು ಆಕರಿಸುವ ಸೂಚನೆಗಳೊಂದಿಗೆ ಕೇಂದ್ರದ ಮುಂಗಡ ಪತ್ರವು ಮುಂದೆ ಬಂದಿದೆ. ಇಂದಿನ ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ ಇಷ್ಟೊಂದು ಭಾರ ಹೊರುವುದು ಅವಶ್ಯವೆಂದೂ ಜನತೆ ತೆರಿಗೆಗಳನ್ನು ಸ್ವಾಗತಿಸಬೇಕೆಂದೂ ಒಂದು ವರ್ಗದವರು ಪ್ರತಿಪಾದಿಸಿದರೆ, ಇದಕ್ಕೆ ಇನ್ನೊಂದೆಡೆಯಿಂದ ಪ್ರತಿಭಟನೆಯೂ ಇದೆ. ಹಿರಿಯ ರಾಜಕಾರಣಿ ರಾಜಾಜಿ ಎರಡನೆಯ ಪಂಗಡದ ಧುರೀಣತ್ವ ವಹಿಸಿದಂತೆ ಕಾಣುತ್ತದೆ. ಮುರಾರ್ಜಿ ದೇಸಾಯರು ಅರ್ಥ ಮಂತ್ರಿಯಾದಂದಿನಿಂದಲೂ ತಮ್ಮ ಜನ್ಮದಿನದಂದು ಜನತೆಗೆ ತೆರಿಗೆಯ ವಿಷವನ್ನೇ ಊಡಿಸುತ್ತ ಬಂದಿದ್ದಾರೆ. ಈ ಬಾರಿಯದನ್ನು ಕಾಳಕೂಟವೆಂದೇ ಹೇಳಬೇಕಾಗುತ್ತದೆ. ಆದರೆ, ದೇಶರಕ್ಷಣೆಯ ಹೆಸರಿನಿಂದ ಹೊರಬಂದ ಈ ಕಾಳಕೂಟವನ್ನು ನುಂಗಿ ನೀಲಕಂಠರಾಗುವ ಅವಶ್ಯಕತೆಯಿಂದು ಭಾರತೀಯರಿಗಿದ್ದೇ ಇದೆ. ಆದುದರಿಂದ ಜನತೆ ತ್ಯಾಗಕ್ಕೂ ಪರಿಶ್ರಮಕ್ಕೂ ಸಮಾನಾವಕಾಶವನ್ನು ನೀಡಲೇ ಬೇಕಾಗುತ್ತದೆ. ಮುಂದೆ ಚರ್ಚೆಯ ವೇಳೆ ಕೆಲವೊಂದು ರಿಯಾಯತಿಗಳು ದೊರೆಯಬಹುದಾದರೂ ಕರಭಾರದ ಹೊರೆಯ ಪ್ರಮಾಣವು ಇಳುವರಿಯಾಗಲಾರದು ಎಂತಲೇ ಮುರಾರ್ಜಿಯಿಂದು ಎಲ್ಲರಿಂದಲೂ ನಿಂದೆಗೆ ಪಾತ್ರರಾಗಿದ್ದಾರೆ.

ಆದರೆ, ಜತ್ತಿಯವರು ತಮ್ಮ ಸಹಜ ಪ್ರವೃತ್ತಿಯಂತೆ ಜಾರಿಕೊಂಡಿದ್ದಾರೆ. ಕರ ಹೇರದೆ ಎಲ್ಲರಲ್ಲೂ ವಿಸ್ಮಯ ಮತ್ತು ಸಂತೋಷವನ್ನು ಏಕಕಾಲದಲ್ಲಿ ಹುಟ್ಟಿಸಿದ್ದಾರೆ. ಸರಕಾರಿ ನೌಕರರಿಗೆ ತುಟ್ಟಿ ಭತ್ತೆಯಲ್ಲಿ ಹೆಚ್ಚಳವನ್ನು ಅವರು ಘೋಷಿಸಿದ್ದಾರಲ್ಲದೇ ಸ್ಥಳೀಯ ಸಂಸ್ಥೆಗಳಿಗೂ ಖಾಸಗಿ ಶಾಲಾ ಅಧ್ಯಾಪಕರಿಗೂ ಅದನ್ನು ಅನ್ವಯಿಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ತೆಯು ಜೀವನಾವಶ್ಯಕ ಪದಾರ್ಥಗಳ ಬೆಲೆಯೇರಿಕೆಯ ಶಿಫಾರಸಿನಂತೆ ಪುನರ್ವಿಮರ್ಶಿತಗೊಳ್ಳುವಂತೆಯೇ ಈಗ ರಾಜ್ಯ ಸರಕಾರವು ಈ ದಿಸೆಯಲ್ಲಿ ತುಸು ಆಸಕ್ತಿ ತೋರಿಸಿತು. ಎನ್. ಜಿ. ಓ.ಗಳು ಕೇಂದ್ರದ ದರದಲ್ಲಿಯೇ ಇದನ್ನು ಹೆಚ್ಚಿಸಬೇಕೆಂದು ಕೇಳಿಕೊಂಡಿದ್ದರೂ, ಅವರ ಕೇಳಿಕೆಯು ಆಂಶಿಕವಾಗಿ ಮಾತ್ರ ಈಡೇರಿದೆಯೆಂದು ಹೇಳಬಹುದು. ಅದೇನೇ ಇದ್ದರೂ ಸದ್ಯದ ಕ್ರಮದಿಂದ ನೌಕರರು ತುಸುವಾದರೂ ತೃಪ್ತಿಪಡುವಂತಾಯಿತು.

ಮುಂಗಡ ಪತ್ರವು ನೀಡಿದ ಮತ್ತೊಂದು ಕೊಡುಗೆಯೆಂದರೆ ತ್ರಿವಿಧ ಲಾಭ ಯೋಜನೆಯನ್ನು ಖಾಸಗೀ ಶಾಲಾ ಅಧ್ಯಾಪಕರಿಗೂ ಅನ್ವಯಿಸಿದ ಘೋಷಣೆ. ಈ ವಿಚಾರವಾಗಿ ಕಳೆದ ಕೆಲವೊಂದು ವರ್ಷಗಳಿಂದ ಭರವಸೆಯ ಮೇಲೆ ಭರವಸೆಗಳು ದೊರೆತಿದ್ದುವು; ಅವೀಗ ನನಸಾಗುವಂತಾಯಿತು, ಇದು ಸ್ವಾಗತಾರ್ಹ. ಪ್ರೊವಿಡೆಂಟ್ ಫಂಡ್, ಪೆನ್ಶನ್ ಮತ್ತು ಖಡ್ಡಾಯ ವಿಮಾ ಯೋಜನೆಗಳಿಂದ ಕೂಡಿದ ತ್ರಿವಿಧ ಸೌಲಭ್ಯಗಳು ಕೆಲವೆಡೆಯ ಅಧ್ಯಾಪಕರಿಗೆ ಹೊಸತೆನಿಸಿರಬಹುದು; ಆದರೆ, ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಮದ್ರಾಸ ಸರಕಾರವು ಮೊದಲಿನೆರಡು ಸೌಲಭ್ಯಗಳನ್ನು ಕೊಟ್ಟಿತ್ತು. ವಿಮೆಯ ಪ್ರಶ್ನೆ ಮಾತ್ರ ಇರಲಿಲ್ಲ. ಅನಿವಾರ್ಯ ವಿಮೆಗೆ ಅಧ್ಯಾಪಕನೇ ಪ್ರೀಮಿಯಂ ತುಂಬಿಸಬೇಕೆಂಬುದನ್ನು ನಾವು ಗಮನಿಸುವುದಾದರೆ, ಅದರಿಂದ ಯಾವ ಲಾಭವೂ ಅವನಿಗಿಲ್ಲವೆನ್ನಬಹುದು. ಸರ್ವಸಾಮಾನ್ಯವಾಗಿ ಎಲ್ಲ ಅಧ್ಯಾಪಕನೂ ಈಗಾಗಲೇ ವಿಮೆಯಿಳಿಸಿಯೇ ಇರುತ್ತಾನೆ; ಆದಕ್ಕೆ ಕಂತು ತುಂಬಿ ಉಳಿತಾಯ ಮಾಡುವವನು ಮತ್ತೆ ಈ ಖಡ್ಡಾಯ ವಿಮೆಗೆ ಪ್ರೀಮಿಯಂ ತುಂಬಿಸುವುದು ಸಾಧ್ಯವೇ ಎಂಬ ಪ್ರಶ್ನೆಯೊಂದಿದೆ. ಆದುದರಿಂದ ಈ ಯೋಜನೆಯನ್ವಯ ಖಡ್ಡಾಯ ವಿಮೆಯಿಳಿಸಬೇಕಾಗಿ ಬಂದಾಗ, ಈಗಾಗಲೇ ಮೊದಲಿನ ಕಂಪೆನಿಗಳಲ್ಲಿ ಸದ್ಯದ ಅಥವಾ ಎಲ್. ಐ. ಸಿ. ಯಲ್ಲಿ ಆತನು ಹೊಂದಿರುವ ವಿಮಾ ಮೌಲ್ಯದಷ್ಟಕ್ಕೆ ವಿನಾಯತಿ ನೀಡುವಂತೆ ಕೇಳಿಕೊಳ್ಳುವ ಅವಕಾಶ ಅಧ್ಯಾಪಕನಿಗೆ ದೊರೆಯುವುದು ಅನೇಕಬಾರಿ ಪ್ರಯೋಜನಕ್ಕೆ ಬೀಳಬಹುದು. ಸಂಬಂಧ ಪಟ್ಟವರು ಈ ಕಡೆಗೆ ಗಮನಕೊಡಬೇಕು.

ಸರಕಾರವಿಂದು ತ್ರಿಲಾಭಯೋಜನೆಯನ್ನು ಕೊಡಮಾಡುವ ನಿಶ್ಚಯ ಮಾಡಿದುದರಿಂದಾಗಿಯೋ ಏನೋ, ಈ ಸಂಬಂಧದಲ್ಲಿ ಅಸತೃಪ್ತಿ ಅಲ್ಲಲ್ಲಿ ಕೇಳಬರುತ್ತಿದೆ. ಅದೇನೇ ಇದ್ದರೂ ಕಲವು ವರ್ಷಗಳಿಗೆ ಮೊದಲೇ ಅಧ್ಯಾಪಕರು ತಮಗೆ ಈ ಲಾಭ ದೊರೆಯಬೇಕೆಂದು ಕೇಳಿಕೊಳ್ಳುತ್ತಿದ್ದುದನ್ನು ನಾವು ಮರೆಯಬಾರದು. ಇಂದು ದೊರಕಿಕೊಳ್ಳುವುದಕ್ಕಿರುವ ಕಾರಣವೆಂದರೆ, ನಿವೃತ್ತಿಯಾದ ಬಳಿಕ ದೊರೆಯುವ ಸೌಲಭ್ಯಗಳಿವು ಎಂಬುದು. ಹೀಗಿದ್ದರೂ ಸರಕಾರದ ಉದಾರತೆಯನ್ನು ವ್ಯರ್ಥಟೀಕಿಸುವುದು ಅಪೇಕ್ಷಣೀಯವಲ್ಲ. ಆದರೂ ಒಂದು ಸಲಹೆ ನೀಡಬಹುದೆಂದು ತೋರುತ್ತದೆ; ಇತ್ತೀಚಿನ ವರ್ಷಗಳಲ್ಲಿ ಅಧ್ಯಾಪಕರ ಹಿತಚಿಂತನೆಗಾಗಿ ಅನೇಕಾನೇಕ ಯೋಜನೆಗಳನ್ನು ಸರಕಾರ ಮಾಡಿದೆ; ಇದನ್ನು ಅವಶ್ಯ ಒಪ್ಪಲೇಬೇಕು. ಆದರೂ ಅನಿವಾರ್ಯ ವಿಮೆಯನ್ನು ಕಿತ್ತುಹಾಕಿ ಟರ್ಮ್ ಇನ್‌ಶೂರೆನ್ಸನ್ನು ಕೊಡಮಾಡಿದ್ದರೆ, ಉತ್ತಮವಿತ್ತು. ಅಧ್ಯಾಪಕನು ಸೇವೆಸಲ್ಲಿಸುತ್ತಿರುವ ಅವಧಿಯಲ್ಲಿ ಮಡಿದನೆಂದರೆ ಈ ವಿಮೆಯ ಮೊಬಲಗು ಆತನನ್ನು ಹೊಂದಿ ಕೊಂಡಿರುವರಿಗೆ ದೊರೆಯುವಂತಾಗಬೇಕು. ಈ ವಿಮೆಯ ಮೊತ್ತವು ಆತನ ಸರ್ವಿಸ್ ಹೆಚ್ಚಿದಂತೆ ಹೆಚ್ಚುತ್ತ ಹೋಗಬೇಕು; ಮತ್ತು ಇದಕ್ಕಾಗಿ ಆತನಿಂದ ಯಾವ ಪ್ರೀಮಿಯವನ್ನೂ ವಸೂಲು ಮಾಡಬಾರದು. ಹೀಗೆ ಮಾಡಿದರೆ ಅಧ್ಯಾಪಕರಿಗೆ ಅನುಕೂಲತೆಯೂ ಲಾಭವೂ ಹೆಚ್ಚುವುದು.

ಖಾಸಗಿ ಮತ್ತು ಕೆಲವೊಮ್ಮೆ ಸ್ಥಳೀಯ ಸಂಸ್ಥೆಗಳ ಅಧ್ಯಾಪಕರಿಗೆ ಸರಿಯಾದ ಕ್ರಮದಲ್ಲಿ ವೇತನ ಸಿಗುತ್ತಿಲ್ಲವೆಂಬುದು ಸರ್ವಕಾಲೀನ ಆರೋಪ, ಉಳಿದವರಿಗೆಲ್ಲ ಮೊದಲನೆಯ ತಾರೀಕಿನಂದೇ ಹಿಂದಿನ ತಿಂಗಳ ಸಂಬಳ ಕೈಸೇರುತ್ತಿರುವಾಗ, ಈ ಒಂದು ವರ್ಗಕ್ಕೆ ಯಾಕೆ ತೊಂದರೆಯಾಗಬೇಕು? ಆದುದರಿಂದ, ಸರಕಾರವು ಈ ಕಡೆಗೆ ವಿಶೇಷವಾಗಿ ತಲೆ ಹಾಕಬೇಕು. ಮಳೆಯನ್ನೇ ಕಾಯುತ್ತಿರುವ ರೈತನನ್ನು ಉದ್ಧರಿಸುವಂತೆ ಅಧ್ಯಾಪಕರನ್ನೂ ಎತ್ತರಿಸಬೇಕು.

## ಕಳ್ಳನೂ ಕತ್ತಲೆಯೂ

ಪಾಕ್ ವಿದೇಶ ಮಂತ್ರಿ ಅಲಿಭುಟ್ಟೊ ಅವರು ಚೀನೀಯ ಮಂತ್ರಿ ಚೆನ್‌ಯಿಯವರು ಒಂದುಗೂಡಿ ಯಾವ ಕಾಲದಲ್ಲೂ ತಮ್ಮದಾಗಿರದ ಮತ್ತು ಈಗಲೂ ತಮ್ಮದಲ್ಲದ ವ ಎಂದಕ್ಕೂ ತಮ್ಮದಾಗದ ಕಾಶ್ಮೀರದ ಭಾಗವನ್ನು ತಮ್ಮ ತಮ್ಮಲ್ಲಿ ಹಂಚಿ ಜಾಗತಿಕ ಇತಿಹಾಸದಲ್ಲಿಯೇ ಅಪ್ರತಿಮ ದಾಖಲೆಯನ್ನು ನಿರ್ಮಿಸಿದರು. ಪಾಕಿಸ್ತಾನವು ತಾನು ಅನ್ಯಾಯವಾಗಿ ಆಕ್ರಮಿಸಿಕೊಂಡು ನಾಮಕರಣ ಮಾಡಿದ ಅಜಾದ ಕಾಶ್ಮೀರದಲ್ಲಿ ೨,೦೫೦ ಚದರ ಮೈಲುಗಳಷ್ಟು ವಿಶಾಲ ಪ್ರದೇಶವನ್ನು ಚೀನೀಯರಿಗೆ ಬಿಟ್ಟುಕೊಡುವುದಕ್ಕೆ ಉದಾರವಾಗಿ ಸಮ್ಮತಿಸಿತು. ಅಂದರೆ, ಕಾಶ್ಮೀರದಲ್ಲಿ ಮೊದಲು ಒಬ್ಬನೇ ಆಕ್ರಮಣಕಾರನಿದ್ದರೆ, ಇದೀಗ ಇಬ್ಬರಾದಂತಾಯಿತು. ಈ ವಿಧದ ಒಡಂಬಡಿಕೆಗೆ ಭಾರತವು ಮಾತ್ರ ಆಕ್ಷೇಪ ಸೂಚಿಸಿದ್ದಲ್ಲದೆ ಮತ್ತಾರೂ ಏತಿ ಅಲ್ಲವೆನ್ನುವ ಪಾಕ್ ವಾದ ತೀರ ಬೇಜವಾಬ್ದಾರಿಯದಿದೆ. ಏಕೆಂದರೆ, ಅಜಾದ ಕಾಶ್ಮೀರವಾದರೂ ಜಮ್ಮು ಕಾಶ್ಮೀರದಂತೆ ಭಾರತದ ಅಂಗ. ಅದನ್ನು ಅನ್ಯಾಯವಾಗಿ ಅತಿಕ್ರಮಿಸಿ ಅಲ್ಲಿ ಪಾಕಿಸ್ತಾನ ಕುಳಿತಿದ್ದರೆ, ಅದು ಅಪರಾಧ, ಕಳ್ಳಮಾಲನ್ನು ಮಾರುವುದಕ್ಕೆ ಕಳ್ಳನಿಗೂ ಕೊಳ್ಳುವುದಕ್ಕೆ ಇತರರಿಗೂ ಎಂದಿಗೂ ಅಧಿಕಾರವಿಲ್ಲ. ಆದುದರಿಂದ ಪಾಕ್—ಚೀನಾ ಗಡಿ ಒಪ್ಪಂದವೆಂದರೆ, ಅದು ಅಂತಾರಾಷ್ಟ್ರೀಯ ನ್ಯಾಯೋಲ್ಲಂಘನೆ, ಅಪರಾಧ. ಬ್ರಿಟನ್—ಅಮೆರಿಕೆಗಳ ಪ್ರತಿರೋಧವನ್ನೂ ಕಡೆಗಣಿಸಿ ಮುಂದುವರಿದ ಪಾಕಿಸ್ತಾನವು ಮಾಡಿದುದು ಆಶ್ಚರ್ಯ ಮತ್ತು ಅಚಾತುರ್ಯ ಕೃತ್ಯವೆಂದು ಅದು ಸದ್ಯದಲ್ಲಿಯೇ ತಿಳಿದುಕೊಳ್ಳದಿರದು. ಕಳ್ಳನಿಗೂ ಕತ್ತಲೆಗೂ ಇರುವ ನಂಟುತನವಿಂತಹುದೇ ತಾನೆ?

## ವಾರ್ತಾವೇದಿಕೆ

### ವಿದ್ಯಾವಿನಯೋಪೇತ

೭೯ ವರುಷದ ಭಾರತಮಾತೆಯ ನೊಸಲತಿಲಕ ಡಾ. ಬಾಬು ರಾಜೇಂದ್ರ ಪ್ರಸಾದರು ವಿಶ್ವಪ್ರಜೆ, ಅಜಾತ ಶತ್ರು. ಅವರಾಗಿ ಅಧಿಕಾರವನ್ನು ಬಯಸಿ ಹೋಗಲಿಲ್ಲ; ಅವರ ಸದ್ಗುಣಗಳಿಗೆ ಮಾರು ಹೋಗಿ ಅಧಿಕಾರ ಪದವಿಗಳೇ ಅವರನ್ನು ಅರಸಿ ಬಂದುವು. ತನ್ನಿಂದ ಸಲ್ಲಬಹುದಾದ ಯಾವ ಕೆಲಸವನ್ನಾದರೂ ತಡೆಯಿಲ್ಲದೆ ಮಾಡುವ ಪ್ರಸಾದರು ಅವನ್ನು ಎಡಹೊಡೆಯುವಷ್ಟು ಕಠಿಣ ಮನಸ್ಕರೂ ಅಲ್ಲ; ಆದುದರಿಂದಲೇ ಸರಳತೆ ಮತ್ತು ಸ್ನೇಹಗಳೇ ಮೂರ್ತಿವೆತ್ತಂತೆ ಗೋಚರಿಸುವ ಪ್ರಸಾದರು ಮೃತ್ಯುಮುಖರಾದೊಡನೆಯೇ ಲೋಕವಿಡಿ ಕಳವಳಿಸಿತು; ಅಧಿಕಾರದಿಂದ ಮಾನವ ಹಿರಿಯನಾಗುವುದಿಲ್ಲ, ವಿದ್ಯಾ ವಿನಯೋಪೇತನಾಗಿದ್ದರೆ ಮಾತ್ರ ಹಿರಿಯನಾಗುತ್ತಾನೆ ಎಂದು ತೋರಿಸಿಕೊಟ್ಟ ರಾಜೇಂದ್ರರ ಆದರ್ಶವನ್ನು ಉಳಿದವರು ಅನುಕರಿಸುವುದು ಅವಶ್ಯವಿದೆ.

### ಮುರಾರ್ಜಿ ಸೋತರೆ?

ದೇಶದಲ್ಲಿರುವ ಸುಮಾರು ೧೫೦೦ ಕೋಟಿ ರೂಪಾಯಿ ಬೆಲೆಯ ಬಂಗಾರದಲ್ಲಿ ಬಾಂಡುಗಳಲ್ಲಿ ವಿನಿಯೋಗಕ್ಕೆ ಬಂದುದು ಹತ್ತು ಕೋಟಿಯಷ್ಟು ಮಾತ್ರ ಎಂದರೆ, ಮುರಾರ್ಜಿಯವರ ಈ ಯೋಜನೆ ಸಂಪೂರ್ಣ ಅಯಶಸ್ವಿಯಾಯಿತು ಎಂದೇ ಅರ್ಥ. ಇದಕ್ಕೆ ಕಾರಣಗಳಿಲ್ಲದಿಲ್ಲ. ಭಾರತೀಯ ಸಮಾಜ ಪದ್ಧತಿಯಲ್ಲಿ ಬಂಗಾರಕ್ಕಿರುವ ಪ್ರಧಾನ ಸ್ಥಾನವೊಂದಾದರೆ, ಬಂಗಾರವು ಎಲ್ಲ ಭಾರತೀಯ ಸಂಸಾರಗಳಲ್ಲಿ ಹಂಚಿ ಹೋಗಿರುವುದು ಎರಡನೆಯದು.

**ಉಡುಪಿ ಡಿ ಮು ಕೋರ್ಟಿನಲ್ಲಿ**
ಕ್ರಮಸಂಖ್ಯೆ 550/1962
R. I. A 7/1963
ಗೋವಿಂದ ಮುಕ್ತಿಯಾರ — ವಾದಿ
ಮತ್ತು
ನಾಗ ನಾಯ್ಕ—ಚಂದ್ರನಾಯ್ಕನ ಮಗ ಯನ್ನಂಜೆ ಗ್ರಾಮ — ಪ್ರತಿವಾದಿ
ಪ್ರತಿವಾದಿಗೆ ಯನ್ನಂಜೆ ಬೋಳು ಸಟ್ಟಿ ಅವಿಯ ನಾತು ಸಟ್ಟಿಯಿಂದ ಪ್ಲವ ಸಂವತ್ಸರಕ್ಕೆ ಸಲ್ಲತಕ್ಕ ಗೇಣಿ ಮುಕ್ತಿ ಅಕ್ಕಿ ಮುಡಿ 9 ಶುಭಕೃತು ಸಂವತ್ಸರದ ಗೇಣಿ ಮುಕ್ತಿ ಅಕ್ಕಿ ಮುಡಿ 10½ ಕೂಡಾ ವ್ಯಾಲುವೂಟ್ ಹಕ್ಕು ಜಡ್ಜ್‌ಮೆಂಟು ಮುಂಚೆ ಜಪ್ತಿಮಾಡಿಯೂ ಡ್ರ ಬೇಕೆಂತ ದಾಖ್ಲೆ ಮಾಡಿದ ಮೇಲ್ಕಂಡ ಅರ್ಜಿಯು ತಾ. 14—3—63ಕ್ಕೆ ಸದರಿ ನಾತು ಸಟ್ಟಿಗೆ ಪ್ರೊಹಿಬಿಟರಿ ಆರ್ಡರ ಮಾಡಿಸುವ ಬಗ್ಗೆ ಇಟ್ಟಿದೆ ಆತಗೆ ಆಕ್ಷೇಪವಿರುವುದಾದರೆ ಸದ್ರಿ ತಾರೀಕಿನ ಬೆಳಿಗ್ಗೆ 11 ಗಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೂ ಮಾಡಿಕೊಳ್ಳತಕ್ಕದ್ದು
**K. Laxminarayana Aithal**
Vakil for plaintiff.
ಉಡುಪಿ. ತಾ. ೬—೩—೬೩.

## ಅಲ್ಲಲ್ಲಿಯ ಸುದ್ದಿ ಸಾರ

**ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ**- ವಿಶೇಷ ಮಹಾಸಭೆಯು ತಾ. 24-2-63ರಲ್ಲು ಉಡುಪಿಯಲ್ಲಿ ಶ್ರೀ ಟಿ. ರಮೇಶ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಶಂಕರ್‌ಲು ಗಣಪಯ್ಯ ಸೆಟ್ಟರು ಸಂಘದ ಪರವಾಗಿ ಸರಕಾರಕ್ಕೂ, ವಿದ್ಯಾ ಮಂತ್ರಿಗಳಿಗೂ, ಈ ವರೆಗೆ ಆಗಾಗ್ಗೆ ಹಲವು ಸಲ ಮನವಿಗಳನ್ನು ಸಮರ್ಪಿಸಿದ್ದಾದರೂ, ಆ ಬಗ್ಗೆ ಬಾಯ್ದೆರೆ ಆಶ್ವಾಸನಗಳನ್ನು ಕೊಟ್ಟದ್ದಲ್ಲದೆ ವ ನವಿಯು ಕೇಳಿಕೆಗಳ ಕುರಿತು ನಿಗಾ ಕೊಡದಿರುವ ವಿಚಾರವನ್ನು ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ನೂರಾರು ಮೆಂಬರರು ಶಾಲಾ ಆಡಳಿತದ ಕರ್ಚಿನ ಬಗ್ಗೆ ಸರಕಾರದಿಂದ ದೊರೆಯುತ್ತಿದ್ದ ಮೈಂಟೆನೆನ್ಸ್ ಗ್ರೆಂಟನ್ನು ಮಾದರಾಸು ಸರಕಾರದ ಕ್ರಮದಂತೆ ಸಂಪೂರ್ಣ ಕೊಡದಿದ್ದರೆ ತಮ್ಮ ಶಾಲೆಗಳನ್ನು ನಡೆಸಲು ಸಾಧ್ಯವಿಲ್ಲದ ಕಾರಣ ಮುಚ್ಚಬೇಕಾಗುವುದಾಗಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು ಸಭೆಗೆ ಬತ್ತೈಸಿದ್ದ ಶ್ರೀ ಎಸ್. ಧರ್ಮಸಾಮ್ರಾಜ್ಯ ಎಂ. ಎಲ್. ಎ ಇವರು ತಮ್ಮ ಭಾಷಣದಲ್ಲಿ ಸಂಘದ ಕಡೆಯಿಂದ ಬೆಂಗಳೂರಿಗೆ ಮುಖ್ಯ ಮಂತ್ರಿಗಳ ಬಳಿಗೆ ಇನ್ನೊಮ್ಮೆ ನಿಯೋಗ ಬರಬೇಕೆಂತಲೂ ಆ ಸಮಯದಲ್ಲಿ ಜಿಲ್ಲೆಯ ವಿಧಾನಮಂಡಳಗಳ ಸದಸ್ಯರು ಸಂಘದ ಮನವಿಯು ಫಲದಾಯಕವಾಗುವಂತೆ ಸಹಕರಿಸಿ ಪ್ರಯತ್ನಿಸುತ್ತೇವೆ ಯೊಗಿಯೂ, ಹಿತ ಸೂಚನೆಗಳನ್ನಿತ್ತರು. ಆ ಬಳಿಕ ಈ ಕೆಳಗಿನ ನಿರ್ಣಯವು ಸರ್ವಾನುಮತಿಯಿಂದ ಪಾಸಾಯಿತು.

"ಶಾಲಾ ಪ್ರಾಯದ ಮಕ್ಕಳಿಗೆ ಧರ್ಮಾರ್ಥ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವುದು. ಸರಕಾರದ ಹೊಣೆಗಾರಿಕೆಯಾಗಿರುತ್ತದೆ. ಇದನ್ನು ಪರಿಪೂರ್ಣಗೊಳಿಸುವುದಕ್ಕೆ ಸಹಕರಿಸಿದ ಜಿಲ್ಲೆಯ ಖಾಸಗಿ ಶಾಲಾ ಮೆನೇಜರಿಗೆ ಆ ಖರ್ಚಿನ ಬಗ್ಗೆ ಮೈಂಟೆನೆನ್ಸು ಗ್ರೇಂಟು ಅಥವಾ ಕ ಪೆನ್‌ಸೇಶನ್ ಗ್ರೇಂಟು ಕೊಡುತ್ತಿದ್ದ ಕ್ರಮವನ್ನು ಮೈಸೂರು ಸರಕಾರವು ಕೊಡದೆ ನಿಲ್ಲಿಸಿದರೆ ಯಾ ಕುಂಠಿತಗೊಳಿಸಿದರೆ ಮುಂದಕ್ಕೆ ಖಾಸಗಿ ಶಾಲೆಗಳನ್ನು ನಡೆಸುವರೆ ಆಡಳಿತದಾರರಿಗೆ ಅಸಾಧ್ಯವಾಗಿರುವುದರಿಂದ ಮುಂದಿನ ಶಾಲಾ ವರ್ಷದಿಂದ ತಮ್ಮ ಶಾಲೆಗಳನ್ನು ಮುಚ್ಚುವ ನಿರ್ಧಾರಕ್ಕೆ ಬಂದಿರುತ್ತಾರೆ. ಅದ ಕಾರಣ ಸರಕಾರವು ಕೂಡಲೇ ತನ್ನ ಧೋರಣೆಯನ್ನು ಬದಲಾಯಿಸಿ ವಿದ್ಯಾಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳ ಆವಶ್ಯಕತೆಯನ್ನು ಅಂಗೀಕರಿಸಿ ಮೆನೇಜುಮೆಂಟುಗಳಿಗೆ ಮದರಾಸು ಪ್ರಾಂತ್ಯದಲ್ಲಿ ಸಿಗುತ್ತಿದ್ದಂತೆ ಮೈಂಟೆನೆನ್ಸು ಮತ್ತು ಕಂಪೆನ್‌ಸೇಶನ್ ಗ್ರೇಂಟುಗಳನ್ನು ಕೊಡಿಸುವಂತೆ ಕೂಡಲೇ ಹುಕುಮು ದಯಪಾಲಿಸದಿರುವಲ್ಲಿ ಮುಂದಿನ ಶಾಲಾ ವರ್ಷದಿಂದ ತಮ್ಮ ಶಾಲೆಗಳನ್ನು ಮುಚ್ಚುವ ಬಗ್ಗೆ ಸರಕಾರಕ್ಕೆ ಇದೇ ನೋಟೀಸು ಎಂದು ಪರಿಗಣಿಸತಕ್ಕದ್ದು.

ಈ ಮನವಿಯನ್ನು ಇಂದಿನ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರ ಮುಂದಾಳುತನದಲ್ಲಿ ನೇಮಿಸಲ್ಪಟ್ಟ ಸಮಿತಿಯು ತಾ. 25-2-63 ರಲ್ಲಿ ಮಣಿಪಾಲದಲ್ಲಿ ವಿದ್ಯಾ ಸಚಿವರನ್ನು ಭೇಟಿ ಮಾಡಿ ಅರ್ಪಿಸುವಂತೆಯೂ, ತರುವಾಯ ಸಂಘದ ಕಾರ್ಯಕಾರಿ ಸಮಿತಿಯ ಮೆಂಬರರು ಜಿಲ್ಲೆಯ M. L. A. ಮತ್ತು M. L C ಗಳೊಡನೆ ಸೇರಿ ಈ ವಿಷಯವನ್ನು ಮುಖ್ಯ ಮಂತ್ರಿಗಳು ವ ಇತರ ಅಧಿಕಾರಿಗಳ ಬಳಿಗೆ ಕೊಂಡು ಹೋಗಿ ಅಗತ್ಯವುಳ್ಳ ಕಾರ್ಯಚರಣೆ ಕೈಗೊಳ್ಳುವಂತೆಯೂ, ಅಧಿಕಾರ ಕೊಡಲಾಯಿತು.

ಚಿನ್ನದ ನಿಯಂತ್ರಣ ಕಾಯಿದೆಯ ಬಗ್ಗೆ ... ಬೇಡದ ಮಾತು. ಇವಕ್ಕೆ ಸೂರಕವಾಗಿ ಸರಕಾರವು ನಿರ್ಧರಿಸಿದ ಬೆಲೆ. ಬಂಗಾರದ ಬೋಂಡುಗಳನ್ನು ತಂದು, ಜನರಲ್ಲಿ ಆಭರಣಗಳ ಮೋಹವನ್ನು ಕಡಿಮೆ ಮಾಡಲು ಇದು ವರೆಗೆ ಯಾವ ಸರಕಾರಕ್ಕೂ ಅಸಾಧ್ಯವಾದುದನ್ನು ಗಮನಿಸಿದರೆ, ದೇಸಾಯಿಯವರ ಸೋಲು ಸೋಲಲ್ಲ. ಇಷ್ಟಾದರೂ ಬಂಗಾರ ಒಟ್ಟು ಸೇರಿದುದರಿಂದ ಅದೇ ದೊಡ್ಡ ಗೆಲು.

### ತುಕ್ಕು ಹಿಡಿದ ಕಬ್ಬಿಣ

ತುಕ್ಕು ಹಿಡಿದ ಸರಕಾರದ ವಾರೀಸುದಾರರು ಎಂದು ತಮ್ಮನ್ನು ಕರೆದುಕೊಂಡ ನಿಜಲಿಂಗಪ್ಪನವರು ಆ ಹಳೆಯ ಯಂತ್ರಕ್ಕೆ ಎಣ್ಣೆ ಸವರಿ ತಿಕ್ಕಿ ಸರಿಪಡಿಸುವ ದೊಡ್ಡ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ಆದರೆ, ಕರ್ನಾಟಕದ ಸರಕಾರವಿಂದು ತುಕ್ಕು ಹಿಡಿದ ಕಬ್ಬಿಣವನ್ನೇ ಮತ್ತೂ ಮತ್ತೂ ತಿಕ್ಕಿಕೊಡುತ್ತಿದೆಯೇ. ಹೊರತು ತಿಕ್ಕುವ ಕೆಲಸ ಮುಗಿಯುವುದೂ ಇಲ್ಲ; ಯಂತ್ರ ಸಾಬೀತಿನಲ್ಲಿ ಕೆಲಸ ಮಾಡುವುದಕ್ಕೂ ಬಿಡುವುದಿಲ್ಲ ಆದುದರಿಂದ ಯಂತ್ರವನ್ನೇ ಹೊಸತಾಗಿ ಖರೀದಿಸೋಣ ಎನ್ನುವವರೂ ಇದ್ದಾರೆ. ಆದುದರಿಂದ ಹರಿದು ಹೋದ ಹಾಸಿಗೆಗೆ ಮತ್ತೂ ಮತ್ತೂ ತೇಪೆ ಹಾಕುತ್ತ ಕುಳಿತುಕೊಳ್ಳುವುದು ನ್ಯಾಯವಲ್ಲ. ನಾಗರಿಕರ ತಾಳ್ಮೆಯನ್ನು ಪರೀಕ್ಷಿಸುವುದು ಯಾರಿಗೂ ಭೂಷಣವಲ್ಲ.

### ಪುತ್ತೂರು ಡಿ ಮು ಕೋರ್ಟಿನಲ್ಲಿ

O. S 655/62.

ಈಶ್ವರ ಭಟ್ಟ— ವಾದಿ.

N ಶಂಕರನಾರಾಯಣ ಮಯ್ಯ—ಸಹಾ

—ಪ್ರತಿವಾದಿರು.

4ನೇ ಪ್ರತಿವಾದಿರು: ಪರಮೇಶ್ವರ ಮಯ್ಯ ಲಿಂಗಯ್ಯ ಮಯ್ಯರ ಮಗ Head Master S. S. L. P. School Badoor Village Kasaragod Taluk-

ಸದ್ರಿ 4ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ತಾ. 2—12—47 ರಲ್ಲು ಆದ ಮೂಲ ಗೇಣಿಚೀಟಿನ ಪ್ರಕಾರ, 61-62ನೇ ವರ್ಷಕ್ಕೆ 7ನೇ ಪ್ರತಿವಾದಿ ವೆಂಕಟೇಶ್ವರ ಭಟ್ಟರಿಗೆ ಸಲ್ಲತಕ್ಕ ಮೂಲಗೇಣಿ ವ್ಯಲಿ ಹಕ್ಕನ್ನು ಸದ್ರಿ ವೆಂಕಟೇಶ್ವರ ಭಟ್ಟರಿಂದ ವಾದಿಗೆ ತಾರೀಕು 17—11—62ರಲ್ಲು ಆದ ಪರಬಾರೆ ಪ್ರಕಾರ, 61—62ನೇ ವರ್ಷದ ಮೂಲಗೇಣಿ ಬಾಕಿ ಬಗ್ಗೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯನ್ನು ತಾ. 8-3-63ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಯಿಟ್ಟಿರುತ್ತದೆ. ಸದ್ರಿ ದಿವಸ ನೀವು ಈ ಕೋರ್ಟುಮುಂದೆ ಹಾಜ್ರಾಗಿ ಉದಪರಿಸಿತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತವಿಂದಂತೆ ತೀರ್ಮಾನಿಸಲಾದೀತು.

Sd/- M. Sadashiva Rao,
Vakil for plff.

ಪುತ್ತೂರು ತಾ. 2—3—63.

**ಬೆಂಗಳೂರಿಗೆ ನಿಯೋಗ**—ಮೇಲಿನ ನಿರ್ಣಯವನ್ನು ಶ್ರೀ ಟಿ ರಮೇಶ ಪೈಯವರ ನೇತೃತ್ವದಲ್ಲಿ ಸಂಘದ ಪ್ರತಿನಿಧಿಗಳು ತಾ. 25—2—1963ರಲ್ಲು ಮಣಿಪಾಲದಲ್ಲಿ ಮಾನ್ಯ ವಿದ್ಯಾಮಂತ್ರಿಯವರಿಗೆ ನಿವೇದಿಸಿಕೊಂಡದ್ದಾದರೂ ಸರಕಾರದ ನಿರ್ದಿಷ್ಟ ಉತ್ತರವು ದೊರೆಯುವ ಕಾರಣ್ಯತಿರುಗಿ ತಾರೀಕು 12—3—63ರಲ್ಲು ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ ಪೈಯವರ ಮುಂದಾಳುತನದಲ್ಲಿ ನಿಯೋಗವೊಂದು ಬೆಂಗಳೂರಿನಲ್ಲಿ ಅಗತ್ಯವುಳ್ಳ ಮಂತ್ರಿಗಳನ್ನು ಭೇಟಿ ಮಾಡಲಿಕ್ಕಿದೆ. ಈ ಸಂದರ್ಭದಲ್ಲಿ ದ. ಕ. ಜಿಲ್ಲೆಯ ಎಂ ಎಲ್: ಎ. ಮತ್ತು ಎಂ. ಎಲ್. ಸಿಯವರ ಸಹಕಾರವನ್ನು ಸಹ ಅಪೇಕ್ಷಿಸಲಾಗಿದೆ.

**ಸಂತಾಪ ಸೂಚನೆ**—ಇದೇ ತಾರೀಕು 1ರಂದು ಭಾರತೀಯ ಜನಸಂಘದ ಉಡುಪಿ ಮಂಡಲ ಸಮಿತಿಯು ಶ್ರೀ ಯು. ಅನಂತಕೃಷ್ಣರವರ ಅಧ್ಯಕ್ಷತೆಯಲ್ಲಿ ಸೇರಿ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದ, ದೇಶಭಕ್ತ ಬಾಬು ರಾಜೇಂದ್ರ ಪ್ರಸಾದರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿತು. ಬಾಬು ರಾಜೇಂದ್ರ ಪ್ರಸಾದರ ನಿಸ್ವಾರ್ಥ ಜನತಾ ಸೇವಾಬುದ್ಧಿ ದೇಶ ಪ್ರೇಮ, ಧರ್ಮನಿಷ್ಠೆಗಳ ಬಗ್ಗೆ ಶ್ರೀ ಯು. ಅನಂತಕೃಷ್ಣ, ಪಾಂಡುರಂಗ ಕಿಣಿ ಮತ್ತು ಲಕ್ಷ್ಮಣ ಪೈಗಳು ಮಾತನಾಡಿದರು. ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸುವಂತೆ ಪರಮಾತ್ಮನೊಡನೆ ಈ ಸಭೆಯಲ್ಲಿ ಕೋರಲಾಯಿತು

**ಬೆಳ್ತಂಗಡಿಯಲ್ಲಿ ಉಮಾ ಕ್ಲಿನಿಕ್‌ನ ಉದ್ಘಾಟನೆ**— ಡಾ। ಕೆ ಗಂಗಾಧರ ಶೇಕರ ಉಮಾ ಕ್ಲಿನಿಕ್‌ನ್ನು ಇದೇ ತಾ. 3 ರಂದು ಬೆಳ್ತಂಗಡಿ ತಾಲೂಕುಬೋರ್ಡಿನ ಅಧ್ಯಕ್ಷ ಶ್ರೀ ಜಿ. ಎನ್ ಭಿಡೆಯವರು ಉದ್ಘಾಟಿಸಿದರು. ಆರಂಭದಲ್ಲಿ ಬಿ. ನಾರಾಯಣ ಶೇಕರು ಸ್ವಾಗತ ಭಾಷಣ ಮಾಡಿದರು. ಉದ್ಘಾಟನಾ ಭಾಷಣ ಮಾಡುತ್ತಾ, ಶ್ರೀ ಭಿಡೆಯವರು ಶ್ರೀ ನಾರಾಯಣ ಶೇಕರನ್ನು ತಾನು ಕೆಲವು ವರ್ಷಗಳಿಂದ ಬಲ್ಲೆನೆಂದೂ ಅವರು ಆರೇಳು ಮೈಲು ದೂರದ ಕುಳ್ಳೂಡಿಯ ಬಂಜರು ಬಿದ್ದ ಸಾವಿರಾರು ಭೂಮಿಯನ್ನು ಇತ್ತೀಚೆಗೆ ಆದರ್ಶ ಕೃಷಿ ಕ್ಷೇತ್ರವನ್ನಾಗಿ ರೂಪಾಂತರಿಸಿದ ಸಾಹಸಿ ಕೃಷಿಕರೆಂದೂ ಅವರ ಪುತ್ರ ಡಾ। ಗಂಗಾಧರ ಶೇಕರು ಹಳ್ಳಿಗರ ಸೇವೆಗಾಗಿ ಬೆಳ್ತಂಗಡಿಯಲ್ಲಿ ವೈದ್ಯಕೀಯ ವೃತ್ತಿ ತೊಡಗಿದ್ದು ಹಳ್ಳಿಗರ ಭಾಗ್ಯವೆಂದೂ ಅವರು ತನ್ನ ವೃತ್ತಿಯಲ್ಲಿ ಯಶಸ್ಸನ್ನು ಪಡೆಯಲೆಂದೂ, ಹೇಳಿದರು. ಸ್ಥಳೀಯ ಇಗರ್ಜಿಯ ಗುರುಗಳು ಆಶೀರ್ವದಿಸಿದ ನಂತರ ಡಾ। ನಾರಾಯಣ ರಾಯರು ಮಾತಾಡುತ್ತಾ ಬೆಳೆಯುತ್ತಿರುವ ಈ ಪ್ರದೇಶಕ್ಕೆ ವೈದ್ಯರ ಸಂಖ್ಯೆ ಬೆಳೆದಷ್ಟೂ ಉತ್ತಮವೆಂದು ಹೇಳಿ ವೈದ್ಯಕೀಯ ವೃತ್ತಿಯ ತನ್ನ ಕೆಲವು ಅನುಭವಗಳನ್ನು ವಿವರಿಸಿದರು. ಸಭಿಕರಲ್ಲಿ ಕೆಲವರು ಮಾತಾಡಿದ ಮೇಲೆ ಸಭಾಧ್ಯಕ್ಷತೆ ವಹಿಸಿದ್ದ ಡಾ। ಯು ಉಮಾನಾಥ ಪ್ರಭುಗಳು ಹಳ್ಳಿಯ ಉದ್ಧಾರವೇ ದೇಶದ ಉದ್ಧಾರವೆಂದೂ, ಡಾಕ್ಟರರು ಹಳ್ಳಿಗಳಿಗೆ ಹೋಗಲು ಹಿಂಜರಿಯುತ್ತಿರುವ ಈ ಕಾಲದಲ್ಲಿ ಡಾ। ಶೇಕರು ಇಲ್ಲಿಗೆ ಬಂದುದು ಸಂತೋಷಕರವೆಂದೂ, ಅವರಿಗೆ ಯಶಸ್ಸಾಗಲೆಂದೂ ಹಾರೈಸಿ ಕೆಲಹಿತವಚನಗಳನ್ನಾಡಿದರು.

ಅಂತ್ಯದಲ್ಲಿ ಡಾ। ಕೆ. ಗಂಗಾಧರ ಶೇಕರು ಧನ್ಯವಾದಗಳನ್ನು ಸಮರ್ಪಿಸಿದರು. ಉಪಾಹಾರವಾದ ಬಳಿಕ ಸಮಾರಂಭ ಸಮಾಪ್ತಿಯಾಯಿತು

**ಸತ್ಕಾರ ಸಮಾರಂಭ**— ಭವ್ಯವಾಣಿಯ ಸಂಪಾದಕ ಶ್ರೀ ಕೆ. ಎಲ್. ಭಟ್ಟರು ಇದೇ ತಾ. 4ರಂದು ತಮ್ಮ ಪುತ್ರ ಶ್ರೀ ವಿಶ್ವೇಂದ್ರನ ಬ್ರಹ್ಮೋಪದೇಶ ಜರಗಿದ ಸಲುವಾಗಿ ಸಂಜೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

**ಪೂರ್ಣಿಮಾ ಸ್ಟೋರ್ಸ್**— ಮಂಗಳೂರಿನ ಪ್ರಸಿದ್ಧ ಕೈಮಗ್ಗದ ಬಟ್ಟೆ ವ್ಯಾಪಾರಿಗಳಾದ ಪೂರ್ಣಿಮಾ ಸ್ಟೋರ್ಸಿನ ಸೀರೆಗಳಿಗೆ 1962ನೇ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಬಂಗಾರದ ಪದಕ ಬಹುಮಾನ ದೊರೆತಿರುವುದಾಗಿ ತಿಳಿದುಬರುತ್ತದೆ.

**ಅಂಚೆ ನೌಕರರ ಉಳಿತಾಯ ಯೋಜನೆ**—ಮೈಸೂರು ಸರ್ಕಲ್ ಪೋಸ್ಟಲ್ ಯೂನಿಯನಿನ ಅಧ್ಯಕ್ಷ ಶ್ರೀ ಕೆ. ವಿ. ಶ್ರೀಪಾದರಾವ್ ಮತ್ತು ಕಾರ್ಯದರ್ಶಿ ಶ್ರೀ ಕೆ. ರಾಮಚಂದ್ರರಾವ್ ಇವರು ಬೆಂಗಳೂರಿನಿಂದ, ರಾಜ್ಯ ಸಂಚಾರಾವಧಿಯಲ್ಲಿ ತಾ. 27-2-63ರಂದು ಉಡುಪಿಗೆ ಬಂದಾಗ ಉಡುಪಿ ಪ್ರಧಾನ ಅಂಚೆ ಕಚೇರಿಯಲ್ಲಿ ಪೋಸ್ಟ್ ಮಾಸ್ತರ ಶ್ರೀ ಎಸ್. ಎನ್. ರಾಯರ ಅಧ್ಯಕ್ಷತೆಯಲ್ಲಿ ಅಂಚೆ ನೌಕರರನ್ನು ಉದ್ದೇಶಿಸಿ ಸಂಜೆ ಜರಗಿದ ಸಭೆಯಲ್ಲಿ ಭಾಷಣವಿತ್ತರು. ತಾವು ರಾಜ್ಯದಲ್ಲೆಲ್ಲಾ ಯೂನಿಯನ್ ವ್ಯವಸ್ಥಾ ಪದ್ಧತಿಯನ್ನು ಪ್ರವರ್ತಿಸಲಿಕ್ಕೂ ಅಂಚೆ ನೌಕರರಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯನ್ನು ವ್ಯವಸ್ಥಾಪಿಸಲಿಕ್ಕೂ ಬಂದಿರುವುದಾಗಿ ತಿಳಿಸಿದರು. ಬೆಂಗಳೂರಲ್ಲಿ ಪೋಸ್ಟ್ ಮಾಸ್ತರ್ ಜನರಲರು ಅಧ್ಯಕ್ಷರಾಗಿಯೂ ಯೂನಿಯನ್ ಸರ್ಕಲ್ ಕಾರ್ಯದರ್ಶಿಯೂ ಕಾರ್ಯದರ್ಶಿ ಯಾಗಿಯೂ ಮತ್ತಿತರ ಯೂನಿಯನ್ ಪ್ರತಿನಿಧಿಗಳು ಸದಸ್ಯರಾಗಿಯೂ ಸ್ಥಾಪಿತವಾಗಿರುವ ಸರ್ಕಲ್ ಡಿಫೆನ್ಸ್ ಕಮಿಟಿಯ ನಿರ್ಧಾರದಂತೆ ಪ್ರತಿಯೊಬ್ಬ ಇಲಾಖಾ ನೌಕರನು ಪ್ರತಿ ತಿಂಗಳೂ ಸಿ. ಟಿ. ಡಿ ಯಲ್ಲಿ ಕನಿಷ್ಠ ರೂ. 5-00ರಂತೆ ವಿನಿಯೋಗಿಸಬೇಕೆಂದೂ ಕೇಳಿಕೊಂಡರು.

**ರೋಟರಿ ಸಭೆ**— ಜಗತ್ತಿನ ರೋಟರಿ ಕ್ಲಬ್ಬಿನ 57ನೇ ವಾರ್ಷಿಕೋತ್ಸವವನ್ನು ಕಳೆದ ತಾ. 23ರಂದು ಮಣಿಪಾಲದ ಲಾಡ್ಜಿಂಗಿನ ಉದ್ಯಾನದಲ್ಲಿ ಉಡುಪಿ ರೋಟರಿ ಅಧ್ಯಕ್ಷ ಶ್ರೀ ಟಿ ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಪ್ರಾರ್ಥನೆಯಾದ ಬಳಿಕ ಅತಿಥಿಗಳ ಪರಿಚಯವನ್ನು ಸಭೆಗೆ ಮಾಡಿಕೊಡಲಾಯಿತು. ಶ್ರೀ ಎಸ್. ಎಸ್. ಪ್ರಭುಗಳು ಕ್ಲಬ್ಬಿನ ಇತಿಹಾಸವನ್ನು ತಿಳಿಸಿದರು. ನವ ಸದಸ್ಯ ಡಾ! ಎಫ್. ಅಲೆಗ್ಸಾಂಡರರ ಪರಿಚಯವನ್ನು ಶ್ರೀ ವೆಂಕಟರಮಣ ಭಟ್ಟರೂ ಅಂದಿನ ಮುಖ್ಯ ಅತಿಥಿಗಳಾದ ಡಾ. ಜೆ. ಡಿ. ವೇಲಿಯಾತ್‌ರವರ ಪರಿಚಯವನ್ನು ಡಾ. ಟಿ. ಎಂ. ಎ ಪೈಗಳೂ, ಡಾ. ಶ್ರೀನಿವಾಸನ್‌ರವರ ಪರಿಚಯವನ್ನು ಡಾ. ಕೃಷ್ಣಸ್ವಾಮಿಯವರೂ ಸಭೆಗೆ ಮಾಡಿಕೊಟ್ಟರು.

ಡಾ. ವೇಲಿಯತ್ ಡಾ. ಶ್ರೀನಿವಾಸನ್ ರವರ ಭಾಷಣವಾದ ಬಳಿಕ ಕಮ್ಯುನಿಟಿ ಸರ್ವಿಸಿಗಾಗಿ ಉಡುಪಿಯ ರೋಟರಿ ಕ್ಲಬ್ ಇತ್ತೀಚೆಗೆ ಪಡೆದ ಶೀಲ್ಡನ್ನು ಶ್ರೀ ರಮೇಶ ಪೈಗಳು ಕಮ್ಯುನಿಟಿ ಸರ್ವಿಸಿನ ಅಧ್ಯಕ್ಷ ಶ್ರೀ ಪಿ. ಶ್ರೀಪತಿ ಆಚಾರ್ಯರಿಗೆ ಒಪ್ಪಿಸಿದರು. ಡಾ! ಶಾಂತಾರಾಂರವರಿಂದ ಸ್ವಸ್ತಿವಾಚನವಾಯಿತು. ಅಂತ್ಯದಲ್ಲಿ ಶ್ರೀ ಎ. ಕೃಷ್ಣರಾಯರು ಆಭಾರ ಮನ್ನಿಸಿದರು

**ತೈಲಚಿತ್ರದ ಅನಾವರಣ**— ಕಳೆದ ತಾ. 27ರಂದು ಉಡುಪಿ ಬೋರ್ಡು ಹಾಯರ್ ಸೆಕೆಂಡರಿ ಶಾಲೆಯಲ್ಲಿ ಶ್ರೀ ಪಿ. ಎಂ ಇನಾಂದಾರರ ಅಧ್ಯಕ್ಷತೆಯಲ್ಲಿ ಶ್ರೀ ಪಿ. ಕುಪ್ಪಣ್ಣಾಚಾರ್ಯರು ಡಿ. ಕಡೆಕಾರು ರಾಜಗೋಪಾಲಕೃಷ್ಣ ರಾಯರ ತೈಲಚಿತ್ರವನ್ನೂ ಶ್ರೀ ಕೆ. ರಾಮಚಂದ್ರ ಮೂರ್ತಿಯವರು ದಿ. ಬಿ. ಎಂ. ಶ್ರೀ ಕಂಠಯ್ಯನವರ ತೈಲಚಿತ್ರವನ್ನೂ ಅನಾವರಣ ಮಾಡುವ ಸಮಾರಂಭವು ನೆರವೇರಿತು.

**ಅಂಬಲಪಾಡಿ**—ಉಡುಪಿಯ ಸಮೀಪದ ಅಂಬಲಪಾಡಿಯಲ್ಲಿ ಕಳೆದ ತಾ. 26ರಂದು ಒಂದು ಸಬ್ ಪೋಸ್ಟಾಫೀಸನ್ನು ಶ್ರೀ ಟಿ. ಆರ್. ಎ. ಪೈಗಳ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ಶ್ರೀ ಆನ್ನಾಜಿ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಈ ಶುಭ ಸಮಾರಂಭದ ನೆನಪಿಗಾಗಿ ದೇವಸ್ಥಾನಗಳ ಪರವಾಗಿ ರೂ. 51ನ್ನು ರಾ. ರ. ನಿಧಿಗೆ ಮನಿಯಾರ್ಡರ ಮೂಲಕ ಕಳಿಸಲಾಯಿತು


ತಾ. **9—3—63**ನೇ ಶನಿವಾರ
ರಾತ್ರಿ **9-30**ಕ್ಕೆ
ರಾಷ್ಟ್ರೀಯ ರಕ್ಷಣಾ ನಿಧಿಯ
ಸಹಾಯಾರ್ಥವಾಗಿ
ಉಡುಪಿಯ ಪ್ರಸಿದ್ಧ
ವಕೀಲರುಗಳಿಂದ

# ಗಗಯನ ಗಡಿಬಿಡಿ

ಎಂಬ ನಕ್ಕು ನಲಿಸುವ ಹಾಸ್ಯಪೂರ್ಣ
ನಾಟಕ ಪ್ರದರ್ಶನ.
ಜತೆಯಲ್ಲಿ ಶ್ರೀ ದೇವಪ್ಪ ರಾಮಣ್ಣ
ಶೆಟ್ಟರ ಹಾಸ್ಯ ಪ್ರದರ್ಶನ ಬೇರೆ ಇದೆ
ಸ್ಥಳ: ಡಾ। ಯು. ಸುಂದರರಾವ್ ಪೈ
ಸ್ಮಾರಕ ರಂಗಮಂಟಪ, ಉಡುಪಿ.


# ರಾಷ್ಟ್ರ ರಕ್ಷಣೆಯೇ ನಮ್ಮ ಧ್ಯೇಯವಾಗಿರಲಿ

## ನಾಕಂಡ ತ.ರಾ.ಸು.

(೫ನೇ ಪುಟದಿಂದ)

ಗಿ ಜಡ ಹಾಗೂ ಚರ್ವಿತ ಚರ್ವಣ ವಸ್ತು ವಿಶೇಷದಿಂದ ಕೂಡಿರುವಂತಹುದು. ಇಂತಹ ವಸ್ತುವಿನಲ್ಲೂ ಚೈತನ್ಯ ತುಂಬಿ ನಮ್ಮ ನರನಾಡಿಗಳಲ್ಲೂ ಆವೇಶ ಹೊರ ಸೂಸುವಂತೆ ಮಾಡಿ, ಜನರ ಪ್ರಜ್ಞೆಯಲ್ಲಿ ಹೊಸ ಮಾರ್ಗದರ್ಶನ ಸಾಧಿಸಿದ ಶ್ರೀಯುತರು ಬರೆದಂತೆ ಯಾರಿಗೂ ಐತಿಹಾಸಿಕ ಕಾದಂಬರಿಯಲ್ಲಿ ಪ್ರಭುತ್ವ ಉಳಿಸಿಕೊಳ್ಳಲು ಆಗಲಿಲ್ಲ ಚಿತ್ರದುರ್ಗದ ಕುರಿತು ಬರೆದ ಕಾದಂಬರಿಗಳು ಹಾಗೂ ನೃಪತುಂಗ, ಹಂಸ ಗೀತೆ, ಸಿಡಿಲ ಮೊಗ್ಗು— ಇವು ಕನ್ನಡ ಸಾಹಿತ್ಯರಂಗದ ಅನರ್ಘ ರತ್ನಗಳು ಅವರ ಸಾಮಾಜಿಕ ಕಾದಂಬರಿಗಳೂ ಒಂದು ಹೊಸ ವೈಚಾರಿಕ ದಿಗ್ದರ್ಶನವನ್ನು ನೀಡುತ್ತವೆಂಬುದನ್ನು ಒಪ್ಪಬಹುದು

ಶ್ರೀ ತ. ರಾ. ಸು.ರವರಲ್ಲಿ ನಾನು ಮೆಚ್ಚುವುದು ಅವರ ಶೈಲಿಯನ್ನು. ಜಲಪಾತದ ನಿರರ್ಗಳ ಧಾರೆಯಂತೆ ಓತಪ್ರೋತವಾಗಿ ಹರಿದುಬರುವ ಅವರ ಶಬ್ದ ಸಂಪತ್ತು ನಮ್ಮ ನರನಾಡಿಗಳಲ್ಲಿ ಸತತ ಭಾವೋದ್ವೇಗವನ್ನುಂಟು ಮಾಡುತ್ತದೆ ಅವರದು ಚೇತನಾತ್ಮಕವಾದ ಬರಹಡಿಲು

ಶ್ರೀ ತ. ರಾ. ಸು. ಉತ್ತಮ ವಾಗ್ಮಿಯೂ ಹೌದು. ಅವರ ಭಾಷಣ ನಿರರ್ಗಳವಿರುವಂತೆ ಸಮರ್ಥ ಪ್ರತಿಪಾದನೆಯದೂ, ಆಕರ್ಷಣೀಯ ಮಾಧ್ಯಮವೂ ಆಗಿದೆ. ಆದ್ದರಿಂದಲೇ ಶ್ರೀ ಸುಬ್ಬರಾಯರ ಭಾಷಣವೆಂದೊಡನೆ ಮೈಸೂರಿನಲ್ಲಿ ಕಿಕ್ಕಿರಿದು ಜನ ಸೇರುತ್ತಾರೆ.

ಅವರು ಆಳವಾದ ಅಭ್ಯಾಸಿಗಳು; ಸತತ ವಿಚಾರ ವಿಮರ್ಶಕರು; ಜೀವನದ ದೃಷ್ಟಿಯನ್ನು ಆಳವಾಗಿ ಅಭ್ಯಸಿಸುವಂತೆ, ಸ್ವತಃ ಪರಿಶೀಲಕರೂ ಆಗಿದ್ದಾರೆ.

ಕರಾವಳಿ ಬಳಿಯ ಮೀನುಗಾರ ಜೀವನದ ಒಂದು ಸುಂದರ ಕಾದಂಬರಿಯನ್ನು ಬರೆಯುವ ಅಭಿಲಾಷೆ ಇದೆಯಾಗಿ ಅವರು ನನ್ನೊಡನೆ ಹೇಳಿದರು. ಅದಕ್ಕಾಗಿ ಅವರು ವಿಶೇಷವಾದ ಅಭ್ಯಾಸ ನಡೆಸಲು ಸದ್ಯವೇ ಇನ್ನೊಮ್ಮೆ ಬರುವುದಾಗಿ ಹೇಳಿದ್ದಾರೆ. ಶ್ರೀಯುತರು ಈ ಕಾರ್ಯದಲ್ಲಿ ಕೃತಕೃತ್ಯರಾಗುವರೆಂಬುದರಲ್ಲಿ ಅನುಮಾನವಿಲ್ಲ.

ಕನ್ನಡದ ಈ ಪ್ರತಿಭಾವಂತ ವ್ಯಕ್ತಿಯ ನಿಜ ಯೋಗ್ಯತೆ ಇನ್ನಷ್ಟು ಪ್ರಕಾಶಿಸಬೇಕಾದರೆ ಅವರಿಗೆ ಸಹಕಾರಿ ನೆಲೆಯಲ್ಲಿ ಸ್ವತಂತ್ರ ಪ್ರಚೋದನೆಯು ಸರಕಾರ ದೊರೆಯಬೇಕು.

ಕನ್ನಡದ ಜನ ಇನ್ನೂ ಕತ್ತಲಲ್ಲಿದ್ದಾಗ ಹಿಂದೀ ನಿರ್ಮಾತೃಗಳು ಇವರ 'ಹಂಸಗೀತೆ'ಯನ್ನು "ಬಸಂತಬಹಾರ್" ಎಂಬ ಹಿಂದೀ ಚಿತ್ರವಾಗಿ ರೂಪಾಂತರಿಸಿದರು. ಅದು ಹಿಂದೀ ಚಿತ್ರರಂಗದಲ್ಲಿ ಯಶಸ್ವಿಯೂ ಆಯಿತು. ಇದೀಗ ಕನ್ನಡದ ಹೆಸರಾಂತ ನಿರ್ಮಾತೃ ಶ್ರೀ ಜಿ ವಿ. ಅಯ್ಯರ್‌ರವರು ಅವರ ಚಿತ್ರದುರ್ಗದ ಕಾದಂಬರಿಗಳ ಚಿತ್ರೀಕರಣವನ್ನು ಮಾಡಲು ಮುಂದೆ ಬಂದಿದ್ದಾರಾಗಿ ತಿಳಿಯುತ್ತೇವೆ.

ಶ್ರೀ ತ. ರಾ. ಸು. ಮಣಿಪಾಲಕ್ಕೆ ಬಂದು ಅಲ್ಲಿನ ವಿವಿಧ ಶೈಕ್ಷಣಿಕ ಕೇಂದ್ರಗಳನ್ನೂ, ಅದು ಬೆಳೆದುಬಂದ ಬಗೆಯನ್ನೂ ನೋಡಿ ತುಂಬ ಅಭಿಮಾನ ಪ್ರದರ್ಶಿಸಿದರು. ಡಾ॥ ಪೈಗಳ ಕಾರ್ಯ ಸಾಮರ್ಥ್ಯವನ್ನು ಪ್ರಶಂಸಿಸುತ್ತಾ 'ಮಣಿಪಾಲದ ಮಾಂತ್ರಿಕ' ಎಂದು ಹೇಳಿದ ಅವರ ಮಾತಿನಲ್ಲಿ ನೂರು ಸತ್ಯ ಅಡಗಿದೆ.

ಹತ್ತು ವರ್ಷಗಳ ಹಿಂದೆ ಮಣಿಪಾಲಕ್ಕೆ ಬಂದು, ಇಲ್ಲಿ ಇದ್ದ ಅನಾಟಮಿ ಬ್ಲಾಕಿನ ಸಂದರ್ಶನದಿಂದ 'ಶೇದಿಗೆ ವನ'ದ ಸ್ಫೂರ್ತಿ ಬಂತೆಂದು ಹೇಳಿದ ಶ್ರೀ ತ.ರಾ.ಸು. ಮಣಿಪಾಲದ ಇಂದಿನ ಮಹಾ ಭವ್ಯ ಬೆಳವಣಿಗೆ ಒಂದು ವ್ಯಕ್ತಿಯ ಕಲ್ಪನಾ ವೈಭವತೆ ತನ್ನ ತಲೆಯಲ್ಲಿ ಅಪೂರ್ವ ಕ್ರಾಂತಿ ಎಬ್ಬಿಸಿದೆ ಎಂದೂ, ಜೀವನದ ಅತಿ ಸುಂದರ ಸಾಹಿತ್ಯಕ್ಕೆ ತನಗೆ ಇದು ಶಕ್ತಿಯೊದಗಿಸಬಹುದೆಂದೂ ತ.ರಾ.ಸು. ಅಭಿಮಾನದಿಂದ ಹೇಳಿದಾಗ ಕೇಳುತ್ತಿದ್ದ ನಮಗೂ ಸ್ಫೂರ್ತಿ ಸಂಚಾರವಾಯಿತು.

—ಶ್ರೀ ಎನ್. ನಾರಾಯಣ ಬಲ್ಲಾಳ

ವಿವೇಚನೆ

## ಹಳ್ಳಿಗಳ ಪ್ರಗತಿ — ದೇಶ ಪ್ರಗತಿ

ಸ್ವಾತಂತ್ರ್ಯ ಪಡೆದು ಹದಿನೈದು ವರ್ಷಗಳ ಮೇಲೆ ಭಾರತ ಎದುರಿಸುತ್ತಿರುವ ಗಂಡಾಂತರವೇನೂ ಸಾಮಾನ್ಯವಾದುದಲ್ಲ. ಇಂದಿನ ಸ್ಥಿತಿಯನ್ನು ಅರಿಯುವಾಗ ಭಾರತ ಅನ್ಯ ರಾಷ್ಟ್ರಗಳ ಮೇಲೆ ತಾನಿಟ್ಟ ಭರವಸೆಯನ್ನು ಉಳಿಸಿಕೊಳ್ಳುವುದು ಕಷ್ಟವಾಗಿ ಕಾಣುತ್ತಿದೆ. ಹಾಗೆಯೇ ತನ್ನ ಧೋರಣೆಯನ್ನು ಕೂಡಾ ಬದಲಿಸುವ ಪ್ರಸಂಗ ಒದಗಿದೆ. ಭಾರತೀಯರು ಸದಾ ಶಾಂತಿ ಪ್ರಿಯರು. ಆದರೆ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಪ್ರಸಂಗ ಒದಗಿದಲ್ಲಿ ಪ್ರಾಣಾರ್ಪಣೆಗೆಂದೂ ಹಿಂಜರಿಯುವವರಲ್ಲ.

ಸಕಲ ಸನ್ನಾಹದೊಡನೆ ಪ್ರಬಲ ರಾಷ್ಟ್ರವೊಂದು ಭಾರತದ ಮೇಲೆ ಆಕ್ರಮಣವೆಸಗಿದಾಗ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರಿ ನೆರವಿತ್ತ ಮಿತ್ರ ರಾಷ್ಟ್ರಗಳಿಗೆ ಭಾರತ ಸದಾ ಋಣಿಯಾಗಿರಬೇಕಾಗಿದೆ. ಅದನ್ನು ಯೋಚಿಸುತ್ತಾ ಇಂದು ಕುಳಿತರೆ ಮುಂದಿನ ಗುರಿ ಸಾಧನೆಯಾಗಲಾರದು. ಆದ್ದರಿಂದ ಇಂದು ಜನತೆ ದೇಶದ ಸ್ವತಂತ್ರತೆ ಉಳಿಸಿಕೊಳ್ಳಲಿಕ್ಕಾಗಿ ಮೊದಲಿಗಿಂತ ಇಮ್ಮಡಿ ದುಡಿಯಲು ಮುಂದಾಗ ಬೇಕಾಗಿದೆ.

ಭಾರತದ ಪ್ರತಿಯೊಬ್ಬ ಪ್ರಜೆಯೂ ತನ್ನ ಹೊಣೆಗಾರಿಕೆಯನ್ನು ಅರಿತಿರಬೇಕು. ಹಾಗೆ ಅರಿಯುವಂತೆ ಮಾಡುವ ಜವಾಬ್ದಾರಿ ಇಂದು ಹಳ್ಳಿಗಳ ಸಂಘ; ಸಂಸ್ಥೆಗಳಿಗೆ ಸೇರಿದ್ದಾಗಿದೆ ನಮ್ಮ ಪ್ರಧಾನಿಗಳಿಗೆ ಇಂದು ದುಡಿಯುವ ವಯಸ್ಸಲ್ಲವಾದರೂ ಅವರು ದೇಶಕ್ಕಾಗಿ ಹಗಲಿರುಳು ದುಡಿಯುವುದನ್ನು ನೋಡಿದರೆ ಇಂದಿನ ತರುಣರು ನಾಚಬೇಕಾಗಿದೆ. ಅವರ ಅನುಕರಣವನ್ನೇ ಇಂದಿನ ಜನತೆ ಅನುಸರಿಸಬೇಕಾಗಿದೆ. ಇಂದು ಹಳ್ಳಿಗಳು ಪಟ್ಟಣಗಳಂತೆ ವಿದ್ಯೆ; ಆರ್ಥಿಕ; ಕೃಷಿ; ಮೊದಲಾದ ರಲ್ಲಿಯೂ ನಮ್ಮೆಣಿಕೆಯಂತೆ ಸಾಕಷ್ಟು ಮುಂದರಿದು ಬಂದಿಲ್ಲ. ಬದಲು ಅಜ್ಞಾನ; ಬಡತನ ಇವುಗಳಿಂದಲೇ ತುಂಬಿವೆ. ದೇಶದ ಜೀವಾಳವಾದ ಹಳ್ಳಿಗಳು ಮುಂದುವರಿಯ ಬೇಕು ಹಳ್ಳಿಗರ ಅಜ್ಞಾನ ದೂರಾಗಲು ವಿದ್ಯೆಯೇ ಮೂಲ ಸಾಧನವಾಗಿದೆ. ಅದಕ್ಕಾಗಿ ಇಂದು ಸರಕಾರ ಕಡ್ಡಾಯ ಹಾಗೂ ಧರ್ಮಾರ್ಥ ಶಿಕ್ಷಣವನ್ನು ಜಾರಿಗೆ ತಂದಿರುವುದಾಗಿದೆ ಸರಕಾರ ಆ ಬಗ್ಗೆ ವ್ಯಯಿಸುವ ಹಣವು ಹಾಳಾಗದಂತೆ ಅದರ ಸಂಪೂರ್ಣ ಪ್ರತಿಫಲವು ಜನತೆಗೆ ಸಿಗುವಂತೆ ಹಳ್ಳಿಗಳ ಸಂಘ ಸಂಸ್ಥೆಗಳು ಸಹಕರಿಸ ಬೇಕು.

ದೇಶದ ಪರಿಸ್ಥಿತಿಯನ್ನು ವಿವರಿಸಿ; ಇಂದು ಕೃಷಿಕರಿಗೆ ಬಂದೊದಗಿದ ಕಷ್ಟಗಳನ್ನು ವಿಚಾರಿಸಿ ಸಾಧ್ಯವಿದ್ದಷ್ಟು ಮಟ್ಟಿಗೆ ಆ ಕಷ್ಟಗಳನ್ನು ಪರಿಹರಿಸುವ ಉಪಾಯವನ್ನು ಸೂಚಿಸಿ; ಕೃಷಿಗೆ ಪ್ರೋತ್ಸಾಹವನ್ನೀಯುವ ಜವಾಬ್ದಾರಿ ಹಳ್ಳಿಗಳ ಸಂಸ್ಥೆಗಳದ್ದಾಗಿದೆ.

ಹಳ್ಳಿಗಳ ಸಂಸ್ಥೆಗಳಲ್ಲಿ ದುಡಿಯುವವರು ಆಯಾಯ ಊರಿನವರೇ ಆದ್ದರಿಂದ ತಮ್ಮ ತಮ್ಮ ಊರವರ ಕಷ್ಟಗಳೇನೆಂಬುದನ್ನು ಅರಿಯುವುದು ಅವರಿಗೆ ಕಷ್ಟವಾಗಲಾರದು. ಹಳ್ಳಿಗಳ ಬೆಳವಣಿಗೆ ಸಾಧಿಸಲು ಸಂಘ ಸಂಸ್ಥೆಗಳೇ ಹೆಚ್ಚಿನ ಹೊಣೆಗಾರಿಕೆ ಹೊರಬೇಕಾಗಿದೆ. ಆದರೆ ಇಂದು ಹಳ್ಳಿಗಳ ಸಂಘ ಸಂಸ್ಥೆಗಳ ದುಡಿಮೆ ಏನೂ ಸಾಲದು. ಅದರಿಂದ ಹಳ್ಳಿಗರು ಸಾಕಷ್ಟು ಪ್ರಯೋಜನ ಪಡೆಯುತ್ತಿಲ್ಲ. ಸರಕಾರದ ಧೋರಣೆಯೇನೋ ಉತ್ತಮವಾಗಿದ್ದರೂ ಕೂಡಾ ಆ ಧ್ಯೇಯ ಸಾಧನೆ ಸಾಕಷ್ಟು ಬೆಳೆದು ಬಂದಿಲ್ಲ.

ಈ ಸಂಧಿಗ್ದ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ನಿಸ್ವಾರ್ಥತೆಯಿಂದ ದುಡಿಯುವ ದೃಢ ಪ್ರತಿಜ್ಞೆಯನ್ನು ನಮ್ಮ ಸಂಘ ಸಂಸ್ಥೆಗಳು ಸ್ವೀಕರಿಸಬೇಕು.

ಪಂಚಾಯತ ಬೋರ್ಡು; ಯುವಕ ಮಂಡಲ; ಸಮಾಜ ಕಲ್ಯಾಣ ಕೇಂದ್ರ; ಸಹಕಾರಿ ಸಂಘ ಮೊದಲಾದ ಅನೇಕ ಸಂಸ್ಥೆಗಳು ಇಂದು ಹಳ್ಳಿಗರಿಗಾಗಿ ತಲೆ ಎತ್ತಿ ನಿಂತಿವೆ. ಆದರೆ ಅವುಗಳಿಂದ ಹಳ್ಳಿಗರೆಷ್ಟು ಪ್ರಯೋಜನ ಪಡೆಯುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಈ ಸಂಸ್ಥೆಗಳ ಹೆಸರನ್ನೇ ಕೇಳದವರು ಅನೇಕರಿರಬಹುದು.

ಜನತೆ ಕೂಡಾ ಇಂದು ಸಂಘ ಸಂಸ್ಥೆಗಳಿಗೆ ತಮ್ಮ ಪೂರ್ಣ ಬೆಂಬಲವನ್ನು ನೀಡಬೇಕು. ಜನತಾ ಬೆಂಬಲ ಪಡೆಯುವ ಆಸಕ್ತಿ ಆ ಸಂಸ್ಥೆಗಳು ಗಳಿಸಿರಬೇಕು ಆದಕ್ಕೆ ಪರೋಪಕಾರ; ಪ್ರಾಮಾಣಿಕತನ; ಶಿಸ್ತು; ನಿಸ್ವಾರ್ಥತೆ ಮೊದಲಾದವುಗಳೇ ಕಾರಣವಾಗಿವೆ.

ವಿದ್ಯಾವಂತ ತರುಣರಿಂದು ಹಳ್ಳಿಗಳಲ್ಲಿ ದುಡಿಯಲು ಮುಂದಾಗಬೇಕು. ಹಳ್ಳಿಗರ ಅಂಧ ಶ್ರದ್ಧೆಯನ್ನೋಡಿಸಿ ನೂತನ ಕೃಷಿ ಕ್ರಮ; ವಿದ್ಯಾ ಪ್ರಸಾರ; ಬಿಡುವಿನ ಸಮಯದ ಉಪವೃತ್ತಿ; ಜೀವನದಲ್ಲಿ ಶಿಸ್ತು; ಮೊದಲಾದುವುಗಳನ್ನು ಹಳ್ಳಿಗರಿಗೆ ಮನಗಾಣಿಸಬೇಕು. "ತನ್ನನ್ನು ಮಾರಿ ಪರರನ್ನು ಕೊಳ್ಳು" ಎಂಬ ನಾಣ್ಣುಡಿಯಂತೆ ಸ್ನೇಹದಿಂದ ಇನ್ನೊಬ್ಬರ ಮನಸ್ಸನ್ನು ಸೆಳೆಯಬೇಕೇ ಹೊರತು ಬಲಾತ್ಕಾರದಿಂದಲ್ಲ. ಇಂದಿನ ಈ ಪರಿಸ್ಥಿತಿಯಲ್ಲಿ ಹಳ್ಳಿಗಳು ಸಾಕಷ್ಟು ಬೆಳೆದು ಬಂದರೆ ನಮ್ಮ ದೇಶವು ಇನ್ನೂ ಹೆಚ್ಚು ಸಮರ್ಥವಾಗಿ ನಿಲ್ಲಬಹುದು.

ದೇಶದ ಉನ್ನತಿಗಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನಿಂದಾದಷ್ಟು ಹೆಚ್ಚು ದುಡಿಯಲು ದೃಢ ಪ್ರತಿಜ್ಞೆ ಸ್ವೀಕರಿಸುವಂತೆ ಪ್ರೋತ್ಸಾಹಿಸಬೇಕು.

ಅಕಾಲಿಕವಾಗಿ ಯುದ್ಧ ವಿರಾಮವನ್ನು ಚೀನಾ ಆಹ್ವಾನಿಸಿದ್ದರೂ ಕೂಡಾ ಮುಂದೆ ತಮಗನುಕೂಲವಾದ ಕಾಲದಲ್ಲಿ ಪುನಃ ಆಕ್ರಮಣ ಮಾಡಲಾರರೆಂಬುದಕ್ಕೇನೂ ಆಧಾರವಿಲ್ಲ. ಆದ್ದರಿಂದ ಇನ್ನು ಮುಂದೆ ನಮ್ಮ ರಕ್ಷಣಾ ಖಾತೆ ಸುಭದ್ರವಾಗಿರಬೇಕು. ಅದಕ್ಕಾಗಿ ಆರ್ಥಿಕ ನೆರವಿನೊಟ್ಟಿಗೆ ಸೈನಿಕ ಶಿಕ್ಷಣ ಪಡೆಯಲು ಕೂಡಾ ತರುಣರಿಂದು ಹೆಚ್ಚು ಹೆಚ್ಚಾಗಿ ಮುಂದೆ ಬರಬೇಕಾಗಿದೆ. ಆದ್ದರಿಂದ ಹಳ್ಳಿಯ ಜನರ ಪ್ರೀತಿ ಸಂಪಾದಿಸಿ ಹಳ್ಳಿಗರ ಅಜ್ಞಾನ ಬಡತನವನ್ನೋಡಿಸಿ ಹಳ್ಳಿಗಳ ಮೇಲ್ಮೆಯನ್ನು ಸಾಧಿಸುವ ಪ್ರಬಲವಾದ ಹೊಣೆಯೊಂದು; ಇಂದು ಹಳ್ಳಿಗಳ ಸಂಘ ಸಂಸ್ಥೆಗಳದ್ದಾಗಿದೆ. ಹಾಗೆ ದುಡಿದದ್ದೇ ಆದರೆ ಖಂಡಿತವಾಗಿಯೂ ಹಳ್ಳಿಗಳು ಇಂದಿಗಿಂತಲೂ ಹೆಚ್ಚು ಸಮರ್ಥವಾಗಿ ಬೆಳೆದು ದೇಶದ ಪ್ರಗತಿಗೆ ಕಾರಣವಾಗಲು ಸಾಧ್ಯವಾಗಬಹುದು.

ಹಳ್ಳಿಗಳ ಪ್ರಗತಿಗೆ ಜನನ ನಿಯಂತ್ರಣ ಕೂಡಾ ಒಂದು ಸಾಧನವಾಗಿದೆ. ಅದನ್ನು ಕೂಡಾ ಸಾಕಷ್ಟು ಪ್ರಚಾರಗೊಳಿಸಿ ಜನತೆಯ ಅಂಧ ಶ್ರದ್ಧೆಯನ್ನೋಡಿಸಲು ಹಳ್ಳಿಗಳ ಸಂಘ ಸಂಸ್ಥೆಗಳು ಸಹಕರಿಸಬೇಕು. ಸಕಲ ವಿಧದಿಂದ ಹಳ್ಳಿಗಳ ಮೇಲ್ಮೆ ಸಾಧಿಸಲು ರಾಷ್ಟ್ರದ ಶಕ್ತಿ ಹೆಚ್ಚಿಸಲು ಪ್ರತಿಯೊಬ್ಬ ಪ್ರಜೆಯೂ ತನ್ನ ಶಕ್ತಿ ಮೀರಿ ದುಡಿಯಲು ಮುಂದಾಗ ಬೇಕು. ಅದುವೇ ಆತನ ದೇಶ ಸೇವೆ; ಅದುವೇ ಆತನ ದೇಶಭಕ್ತಿ; ಅದುವೇ ಆತನ ರಾಷ್ಟ್ರದ ಶಕ್ತಿ; ಅದರಿಂದಲೇ ಭಾರತಕ್ಕೆ ಮಹಾ ಮುಕ್ತಿ.

**— ಹಳನಾಡು ಸುಬ್ರಾಯ ಭಟ**



## ಸೌಂದರ್ಯ ದೇವತೆ

# ಕುಬೇರನ ಮಣಿ-ಮಾಣಾಗ್ರಾಮ

ಬದ್ರಿನಾಥದಿಂದ ಮೂರು ಮೈಲು ದೂರದಲ್ಲಿದೆ ಮಾಣಿಯೆಂಬ ಸಣ್ಣೂರು. ಭಾರತ-ಟಿಬೇಟು (ಈಗ ಚೀನಾ ಸಾಮ್ರಾಜ್ಯ)ಗಳ ಸೀಮೆಯ ಕಟ್ಟಕಡೆಯ ಗ್ರಾಮವಿದು. ಇದಕ್ಕೆ ಮೂರು ಮೈಲಿನಲ್ಲಿಯೇ ೪೦೦ ಅಡಿ ಎತ್ತರದಿಂದ ಜಿಗಿಯುತ್ತಿದೆ ವಸುಧಾರಾವೆಂಬ ನದಿ. ಧರ್ಮರಾಯ ಜೀವಂತ ಸ್ವರ್ಗಾರೋಹಣ ಮಾಡಿದನೆಂಬ ಕಥೆ ಜೀವಂತವಿನ್ನೂ ಇದೆ. ಆಗ ವಸು ಮೊದಲಾದ ದೇವತೆಗಳು ಇಲ್ಲಿಯೇ ಆತನಿಗೆ ಮಾಡಿದರಂತೆ ಅಭಿಷೇಕ. ಇಲ್ಲಿಂದಲೇ ಸ್ವರ್ಗದ ಮೆಟ್ಟಲು ಏರಬೇಕಂತೆ. ಹಿಮಾಚ್ಛಾದಿತ ಪರ್ವತದಲ್ಲಿಯೇ ಈ ಸೋಪಾನಗಳು ಇಂದಿಗೂ ಕಾಣಸುತ್ತವೆಯೆನ್ನುತ್ತಾರೆ ಕೆಲವರು. ಆದರೆ ಮಾತ್ರೆ ಕೆಲವರು ವಸುಧಾರೆಯ ದರ್ಶನ ಸಿಗುತ್ತದೆ; ಅದರ ಮೇಲೆ ಅಲಕಾಪುರಿಯ ಅನುಪಮ ಸೌಂದರ್ಯ ಆಸ್ವಾದಿಸಬಹುದು. ಇದಕ್ಕಿಂತ ಹೆಚ್ಚಿನದು ಏನೂ ಗೋಚರಿಸುವುದಿಲ್ಲವೆನ್ನುತ್ತಾರೆ.

ಅಲಕನಂದೆಯ ಉಗಮ ಸ್ಥಾನ ಅಲಕಾಪುರಿ, ಅದು ಸಹಜ ಸೌಂದರ್ಯ ರಾಶಿ ವಿತ್ತೇಶ ಕುಬೇರನ ರಾಜಧಾನಿ ತಾನೇ ಅದ? ಮತ್ತೇನು ಕಡಿಮೆ? ಈ ವೈಭವದ ಕಲ್ಪನೆಯೇ ಹೊಸ ಕಲ್ಪನೆಯೊಂದಕ್ಕೆ ಕಾರಣವಾಯಿತು. ಹಿಮಕನ್ಯೆ ಅಲಕನಂದೆಯು ತನ್ನ ಮನೆಯನ್ನು ಬಿಟ್ಟು ಹೊರಟಾಗ, ಕುಬೇರನು ಆಕೆಯ ತಂದೆಯ ರೂಪದಲ್ಲಿ ಅನೇಕ ಗಿಡಮೂಲಿಕೆಗಳ ಹೊರೆಯನ್ನೇ ಕಟ್ಟಿ ಕೊಟ್ಟನಂತೆ, ಆಕೆಯ ತಾಯಿ ತನ್ನ ಪ್ರೇಮ ರಸವನ್ನೇ ಹಿಂಡಿ ಹರಿಬಿಟ್ಟಳಂತೆ! ಹಾಗಿರುವಾಗ ಅಲಕನಂದೆಯು ವೈಭವ ಶಾಲಿಯೂ ಸುಂದರಿಯೂ ಎನಿಸಿದರೆ ವಿಸ್ಮಯವೇಕೆ? ಅಲಕನಂದೆಯ ನಿರ್ಮಲ ಧಾರೆ ಮನೋಹಾರಕ. ಬದ್ರಿನಾಥ ಯಾತ್ರೆಯು ಅಲಕನಂದೆಯ ಯಾತ್ರೆಯನ್ನು ಅವಶ್ಯ ಮಾಡಿಸಿಯೇ ಬಿಡುತ್ತದೆ

ಮಾಣಾ ಅಲಕನಂದೆಯ ಉತ್ತರ ತಟದಲ್ಲಿದೆ. ಕಟ್ಟಿಕೊಂಡ ಗುಡಿಸಲುಗಳಲ್ಲಿ ಸುಮಾರು ಐದು ನೂರು ಗ್ರಾಮೀಣರು ವಾಸಿಸಿಕೊಂಡಿದ್ದಾರೆ. ಇವರು ಹೇಗೆ ದಿನ ದೂಡುತ್ತಾರೆ. ಒಟ್ಟು ಕೃಷಿ ಮಾಡುತ್ತಾರೆ. ಅದೇ ರೀತಿಯ ಶಾಲು, ಕಂಬಳಿ ನೇಯುತ್ತಾರೆ. ಗುಡ್ಡ ಮೈದಾನುಗಳಲ್ಲಿ ದನಕರುಗಳನ್ನು ಮೇಯಿಸುತ್ತಾರೆ;

ಗ್ರಾಮದ ಜನರು ಸೀಮಾಂತರ ಜನರೊಡನೆ ಸಂಬಂಧವಿರಿಸಿಕೊಳ್ಳುತ್ತಾರೆ; ಪ್ರತಿ ಮನೆಯೂ ಸರಳವಾಗಿದೆ. ಎಲ್ಲ ಮನೆಯಲ್ಲೂ ಒಂದು ಕೈಬಂಡಿ ಮತ್ತು ಕಲ್ಲಿನ ಚಿಕ್ಕ ಗಾಡಿಯುಂಟು. ಇಲ್ಲಿನ ನಾರಿಯರು ಅತಿ ಸುಂದರಿಯರು, ಯೂನಾನಿಗಳನ್ನು ಹೋಲುವವರು. ಪುರುಷರ ಬಗ್ಗೆ ಹೇಳುವುದು ತುಸು ಕಠಿಣ. ಬಡತನದ ಭಾರ ಮತ್ತು ಕಠಿಣ, ಆದರೆ, ನಿಷ್ಫಲ ಶ್ರಮಗಳಿಂದಾಗಿ ಅವರ ಮುಖವಾಗಿದೆ ಅತಿ ಕಠೋರ. ಹಾಗಿದ್ದರೂ ಆ ಕಠೋರತೆಯೆಡೆಯಲ್ಲೇ ಇಣುಕುತ್ತಿದೆ ಸರಳಸಹಜತೆ.

ವ್ಯಾಸ ಮತ್ತು ಗಣೇಶರ ಗುಹೆಯಿರುವುದು ಮಾಣಾದ ಒಂದು ಗುಡ್ಡದಲ್ಲಿ. ವ್ಯಾಸ ಮಹರ್ಷಿ ಮಹಾಭಾರತವನ್ನೂ ಪುರಾಣಗಳನ್ನೂ ಇಲ್ಲಿಯೇ ಬರೆಸಿದನೆನ್ನುತ್ತಾರೆ ಜನ. ಈ ಗುಹೆಯ ಬಳಿಯಲ್ಲೇ ಕಲಕಲನಾದದಿಂದ ಹರಿಯುತ್ತಾಳೆ ಸರಸ್ವತಿ; ಆಕೆಯ ಅಕ್ಕಪಕ್ಕಗಳಲ್ಲಿ ತಲೆಯೆತ್ತಿ ನಿಂತಿವೆ ನರನಾರಾಯಣರ ಶಿಖರಗಳು. ಈ ಗುಹೆಯಾದರೋ ಅತಿ ಶಾಂತ; ಪ್ರಣಾರೂಪದ ಪಾವನ ಸಮೀರವೇ ಸುಳಿಯುತ್ತಿರಬಹುದು. ವ್ಯಾಸ ಪೀಠವೂ ಇದೆಯಿಲ್ಲಿ. ಅದರ ಎದುರಲ್ಲಿಯೇ ಕಲ್ಲು ಕಡಿದು ನಿರ್ಮಿಸಿದ ಒಂದು ಕಿಟಿಕಿಯಿದೆ; ಇದರಿಂದಲೇ ಒಳಹೋಗಬೇಕು. ಸೂರ್ಯಪ್ರಕಾಶ ಅಲ್ಲಿನ ಬಂಡೆಯಾದರೋ ಅತಿ ವಿಚಿತ್ರ! ಯುಗ ಯುಗಾಂತರಗಳ ಇತಿಹಾಸ ಗ್ರಂಥಪತ್ರಗಳನ್ನು ಒಂದರ ಮೇಲೊಂದಿಟ್ಟಂತೆ ಗೋಚರಿಸುತ್ತದೆ. ಅದುವೇ ಗಟ್ಟಿಯಾಗಿ ಬಂಡೆಯಾದಂತೆ ಭಾಸವಾಗುತ್ತದೆ. ಅಲ್ಲದೆ, ಜನ ಅನ್ನುವುದಾದರೂ ಹಾಗೇನೇ.

ಇದು ಇದ್ದರೂ ಇರಬಹುದು, ಇಲ್ಲದೆಯೂ ಇರಬಹುದು. ಆದರೆ, ಯುಗಯುಗಗಳಿಂದಲೂ ಈ ಬಂಡೆಯ, ಸರಸ್ವತೀ ನದಿಯ ಪರಿಚಯ ಮಾತ್ರ ಇತಿಹಾಸಕ್ಕಿತ್ತು. ಈ ಗುಹಾ ಮಧ್ಯೆ ವ್ಯಾಸನು ನಿತ್ಯ ವಾಣಿಯ ನರನಾರಾಯಣ ಸಹಿತ ಸರಸ್ವತೀ ವಂದನೆಯ ರೂಪದಲ್ಲಿ ಈ ಪರ್ವತ ಪ್ರದೇಶದಲ್ಲಿ ಪ್ರತಿಧ್ವನಿಸಿತು:

ನಾರಾಯಣಂ ನಮಸ್ಕೃತ್ಯ
ನರಂ ಚೈವ ನರೋತ್ತಮಂ
ದೇವೀಂ ಸರಸ್ವತೀಂ ಚೈವ
ತತೋ ಜಯಮುದೀರಯೇತ್ ||

ಪಾವನ ಪ್ರಕೃತಿ ಮತ್ತು ಏಕಾಂತವಾಸಿ ಹಿಮಶೃಂಗಗಳ ಮಧ್ಯೆ ಕಲಕಲನಿನಾದಿತ ನಯನಾಭಿರಾಮವೂ ಈ ದೃಶ್ಯದ ಪ್ರತ್ಯಕ್ಷ ದರ್ಶನ ಮಾಡುವುದರಿಂದ ಈ ಶ್ಲೋಕವು ಯಥಾರ್ಥವಾದುದು ಎಂಬ ಪರಿಜ್ಞಾನ ನಮಗೆ ಬರುತ್ತದೆ. ಇದೇ ಶಾಶ್ವತ ಸತ್ಯ, ಶಾಶ್ವತ ಜ್ಞಾನವೆನಿಸಿ ಜಗನ್ಮಾನ್ಯವಾಗಿದೆ.

ಈ ಗುಹೆಯ ಬಳಿಯಲ್ಲೇ ಗಣೇಶ ಗುಹೆಯಿದೆ. ಸ್ವಗ್ರಂಥ ಲೇಖನಕ್ಕಾಗಿಯೇ ಗಣೇಶನನ್ನು ಶಿಷ್ಯನನ್ನಾಗಿ ವ್ಯಾಸನು ನೇಮಿಸಿದನೆನ್ನುತ್ತಾರೆ. ಇದರ ವಸ್ತುಸ್ಥಿತಿಯೇನೇ ಇದ್ದರೂ ಪ್ರಾರಂಭಿಕ ಕಾಲದಿಂದಲೂ ಲೇಖನ ಕಾರ್ಯಕ್ಕೆ ಇಂತಹ ಪ್ರಶಾಂತ ವಾತಾವರಣವು ಅನಿವಾರ್ಯ ಮತ್ತು ಅತ್ಯವಶ್ಯಕವೆಂಬುದನ್ನು ಜನತೆ ಕಂಡುಕೊಂಡಿತ್ತು ಎಂಬುದು ನಿಜ.

ಮಾಣಾ ಗ್ರಾಮದ ಬದಿಯಲ್ಲೇ ಸರಸ್ವತಿಯು ಅಲಕನಂದೆಯಲ್ಲಿ ವಿಲೀನವಾಗುತ್ತಾಳೆ, ಪ್ರಬುದ್ಧ ಜ್ಞಾನಪ್ರೌಢಗಿರೆಂದರೆ ಆತ್ಮವು ಪರಮಾತ್ಮನಲ್ಲಿ ಲೀನಗೊಳ್ಳುವುದಿಲ್ಲವೇ, ಹಾಗೆ. ಮಾಣಾದಿಂದ ಮರಳಿ ಬರುವಾಗ, ದಾರಿಯಲ್ಲಿ ನರನಾರಾಯಣರ ನಡುವೆ ಚಂಚಲಗತಿಯಿಂದ ಓಡೋಡುತ್ತಾ ಓಡುವ ಅಲಕನಂದೆಯನ್ನು ನೀಲಕಂಠನು ನಿರ್ನಿಮೇಷನಾಗಿ ನೋಡುತ್ತಾ ನಿಂತಿರುತ್ತಾನೆ; ಗಿರಿಜೆಯು ಶಿವಪೂಜೆಯ ವೇಳೆ ಸತತ ನೃತ್ಯಮಾಡುತ್ತಾ ಇಂದಿಗೂ ನಿಂತಿದ್ದಾಳೆ.

ಮಾಣಾದ ಈ ದೃಶ್ಯ ಮನಸ್ಸನ್ನು ಮುಗ್ಧಗೊಳಿಸುತ್ತದೆ; ಮಾನವನು 'ಸತ್ಯಂ ಶಿವಂ ಸುಂದರಂ'ನ ಸಾಕ್ಷಾತ್ ದರ್ಶನ ಪಡೆದು ತನ್ನ ತಾನು ಮರೆತು ಬಿಡುತ್ತಾನೆ. ಮಾಣಾ ಕುಬೇರನ ಒಂದು ಅಮೂಲ್ಯ ಮಣಿ, ಭಾರತದ ಮೂಲ. ಅದರ ರಕ್ಷಣೆ ನಮ್ಮ ಸಹಜ ಕರ್ತವ್ಯ. ಅದನ್ನು ಕಳೆದು ಕೊಂಡೆವೆಂದರೆ, ಅದು ತೊಳೆಯಲಾರದ ಅವಮಾನ.

—ಗೋಪಾ.




ಕ್ಯೂಬಾದ ರೆಮೆಡಿಯೊಸ್‌ನ ಸ್ಥಳದಲ್ಲಿ ರಷ್ಯವು 5-9-1962 ರ ಮೊದಲು ಉಡಾಯಿಸುವ ರಾಕೆಟ್ಟಿಗೆ ಸಂಬಂಧಿಸಿದ ಯಂತ್ರಗಳನ್ನು ಸ್ಥಾಪಿಸಿತ್ತು.

---

**In the Court of the Subordinate Judge of South Kanara Mangalore**

R. E. P. No. 121/1962
In O. S. No. 92/1961

Between:

Mukunda Prabhu ... Petitioner
and
Sundari Amma and others ... Respondents.

To

3rd Respondent— U. H. Moosabba, S/o Smathkal Hasane Beary, residing at Ujre Kasba of Belthangady Taluk.

Please take notice that the above Execution Petitioner has applied for sale of the immovable properties fully described in sale proclamation and you are hereby informed that the 23rd day of March 1963 has been fixed for settling the terms of the proclamation of sale, failing which to appear before the said court on the day mentioned same will be decided in your absence.

(*Sd*) M. A. Kamath,
Advocate for Petitioner.
Mangalore, 2—3—1963.

**Statement about ownership and other particulars about Newspaper: NAVAYUGA**

FORM IV (Rule 8)

| | | | |
|---|---|---|---|
| 1. | *Place of Publication* | ... | UDIPI |
| 2. | *Periodicity of its Publication* | ... | WEEKLY |
| 3. | *Printers' Name* | ... | K. H. SHETTY |
| | *Nationality* | ... | INDIAN |
| | *Address* | ... | Palukote, Udipi (S. K.) |
| 4. | *Publishers' Name* | ... | K. H. SHETTY |
| | *Nationality* | ... | INDIAN |
| | *Address* | ... | Palukote, Udipi (S. K.) |
| 5. | *Editor's Name* | ... | K. H. SHETTY |
| | *Nationality* | ... | INDIAN |
| | *Address* | ... | Palukote, Udipi (S. K) |
| 6. | *Names and addresses of individuals who own the news-paper and partners or shareholders holding more than one percent of the total capital.* | | K. H. SHETTY Palukote, Udipi (S. K.) (Prop.) |

I, K. H. Shetty, hereby declare that the particulars given above are true to the best of my knowledge and belief.

(*Sd.*) K. H SHETTY,
*Signature of Publisher.*

Date 1—3—1963.

**ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ವಿನಂತಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಯನ್ನು ಸ್ವೀಕರಿಸುವಂತೆ ಅಪೇಕ್ಷಿಸುತ್ತೇವೆ.**

## ತಟಸ್ಥ ಧೋರಣೆಯ ಪರೀಕ್ಷೆ

(೯ನೇ ಪುಟದಿಂದ)

ಮದಲ್ಲಿ ಒಂದು ಸ್ವಾರಸ್ಯದ ಸಂಗತಿಯೆಂದರೆ ಇಷ್ಟು ದಿನಗಳ ವರೆಗೆ ನಮ್ಮ ಧೋರಣೆಯನ್ನು ಟೀಕಿಸುತ್ತಿದ್ದ ಪಾಶ್ಚಾತ್ಯ ದೇಶಗಳು ಇಂದು ಅದನ್ನು ಹೊಗಳಲು ಆರಂಭಿಸಿರುವಾಗ ಈ ತನಕ ನೆಹರೂ ಧೋರಣೆ ಆದರ್ಶವೆಂದು ಕೊಂಡಾಡುತ್ತಿದ್ದ ನಮ್ಮ ದೇಶದ ಮುಖಂಡರೇ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಲು ಕಾರಣವೇನೆಂದು ಸ್ವಲ್ಪ ವಿಚಾರಿಸುವ.

ನಮ್ಮ ದೇಶದಲ್ಲಿ ಹಲವರಿಗೆ ತಟಸ್ಥ ಧೋರಣೆಯ ಮೇಲೆ ಅತೃಪ್ತಿ ಉಂಟಾಗಲು ಕಾರಣವೇನೆಂದರೆ, ಚೀನವು ಭಾರತದ ಮೇಲೆ ಯುದ್ಧಕ್ಕೆ ಹೊರಟಾಗ ನಾವು ಯಾರಿಂದ ಸಹಾಯ ನಿರೀಕ್ಷಿಸುತ್ತಿದ್ದೆವೋ ಅವರು ಹಿಂದುಳಿದರು. ರಷ್ಯವು ನಮಗೆ ಕಾಶ್ಮೀರ ಪ್ರಶ್ನೆಯಲ್ಲಿ ಯಾವಾಗಲೂ ಸಹಾಯ ಮಾಡಿತ್ತಾದರೂ ಚೀನದ ವಿಷಯದಲ್ಲಿ ಸುಮ್ಮನುಳಿಯಿತು ಇದಕ್ಕಿಂತಲೂ ಹೆಚ್ಚಿನ ನಿರಾಶೆಯೆಂದರೆ ತಾವು ತಟಸ್ಥರೆಂದು ಕರೆದುಕೊಳ್ಳುತ್ತಿದ್ದ ಏಶ್ಯಾ ಮತ್ತು ಆಫ್ರಿಕ ಖಂಡದ ಹಲವು ರಾಷ್ಟ್ರಗಳು ನಮಗೆ ಸಾಕಷ್ಟು ಬೆಂಬಲ ಕೊಡದೆ ಉಳಿದುದು. ಇತ್ತೀಚೆಗೆ ಕೆಲವು ತಟಸ್ಥ ರಾಷ್ಟ್ರಗಳು ಮಧ್ಯಸ್ಥಿಕೆಯ ಸಲುವಾಗಿ ಪ್ರಯತ್ನ ಮಾಡುತ್ತಿದ್ದರೂ ಚೀನವು ಭಾರತದ ಮೇಲೆ ಏರಿ ಬರುತ್ತಿದ್ದಾಗ ಚೀನ ತಪ್ಪು ಮಾಡಿದೆಯೆಂದು ಸ್ಪಷ್ಟವಾಗಿ ನುಡಿಯದೆ ಉಳಿದದ್ದು ಈ ದೇಶಗಳ ತಪ್ಪೆನ್ನಬೇಕು ಆದರೆ ಇದು ತಟಸ್ಥ ಧೋರಣೆಯ ತಪ್ಪೆಂದೂ ಭಾರತವು ತನ್ನ ವಿದೇಶ ಧೋರಣೆಯನ್ನು ಬದಲಾಯಿಸಬೇಕೆಂದೂ ಹೇಳುವಂತಿಲ್ಲ. ಏಕೆಂದರೆ ನಾವು ನಮ್ಮ ತಟಸ್ಥ ಧೋರಣೆಯನ್ನು ಬಿಟ್ಟು ಪಾಶ್ಚಾತ್ಯರ ಪಂಗಡವನ್ನು ಸೇರುವುದರಿಂದ ಯಾವ ಪರಿಣಾಮವಾಗುವುದು ನೋಡುವ. ಮೊದಲನೆಯ ಪರಿಣಾಮವೆಂದರೆ ನಾವು ರಷ್ಯದ ಸ್ನೇಹವನ್ನು ಸಂಪೂರ್ಣ ಕಳೆದುಕೊಳ್ಳಬೇಕಾಗುವುದು. ಈ ತನಕ ರಷ್ಯವು ನಮ್ಮ ಸಹಾಯಕ್ಕೆ ಬರದಿದ್ದರೂ ಚೀನದ ಕಡೆಗೂ ಬಹಿರಂಗವಾಗಿ ಹೋಗಲಿಲ್ಲ. ಚೀನವು ತನ್ನ ಸಂಬಂಧಿಕನೆಂದೂ ಭಾರತವು ಮಿತ್ರನೆಂದೂ ಇವರಿಬ್ಬರ ಜಗಳದಲ್ಲಿ ತಾನು ಕೈ ಹಾಕಲು ಅನುಕೂಲವಿಲ್ಲವೆಂದೂ ರಶ್ಯವು ವಾದಿಸಿದೆ. ನಾವು ಪಾಶ್ಚಾತ್ಯರ ಗುಂಪನ್ನು ಸೇರಿದರೆ ರಶ್ಯವು ಮುಂದೆಂದೂ ನಮ್ಮ ಸಹಾಯಕ್ಕೆ ಬರುವುದು ಶಕ್ಯವಿಲ್ಲ. ನಮಗೆ ರಶ್ಯದ ಸಹಾಯವಿಲ್ಲವೆಂದು ಸ್ಪಷ್ಟವಾದ ನಂತರ ಪಾಶ್ಚಾತ್ಯರ ಹಿಡಿತ ನಮ್ಮ ಮೇಲೆ ಹೆಚ್ಚುವುದು ಸ್ವಾಭಾವಿಕ. ಹಲವು ಪಾಶ್ಚಾತ್ಯರೇ ಇಂದು ನಮ್ಮ ಧೋರಣೆ ಸರಿಯಾದುದೆನ್ನುತ್ತಾರೆ. ಅವರನ್ನುವಂತೆ ರಶ್ಯ ಮತ್ತು ಚೀನಗಳು ಸಂಪೂರ್ಣ ಮೈತ್ರಿಯುಳ್ಳರದಿರಲು ನಮ್ಮ ತಟಸ್ಥ ಧೋರಣೆಯೇ ಕಾರಣ.

ತಟಸ್ಥ ಧೋರಣೆಯನ್ನು ವಿರೋಧಿಸುವವರಲ್ಲಿ ಇನ್ನು ಕೆಲವರ ಅಭಿಪ್ರಾಯವೆಂದರೆ ಈ ಧೋರಣೆ ಆದರ್ಶಕರವಾಗಿದ್ದರೂ ಇರಬಹುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ನಮಗೆ ಅದರ ಉಪಯೋಗವಿಲ್ಲ. ಅದೇಕೆಂದರೆ ಇಂದು ಮದೋನ್ಮತ್ತವಾದ ಚೀನದ ಸೊಕ್ಕನ್ನು ಮುರಿಯಲು ಬೇರೆಯವರ ಸಹಾಯವಿಲ್ಲದೆ ನಮ್ಮಿಂದ ಅಸಾಧ್ಯ. ಇನ್ನು ಹಲವು ವರ್ಷಗಳ ತನಕ ಚೀನದ ಉಪಟಳ ತಪ್ಪಲಿಕ್ಕಿಲ್ಲವಾದ್ದರಿಂದ ನಮಗೆ ಯಾರು ಹಿತವರೋ ಅವರಿಂದ ತಾತ್ಕಾಲಿಕ ಸಹಾಯವನ್ನು ಪಡೆಯುವುದು ಮಾತ್ರವಲ್ಲದೆ ಅವರೊಡನೆ ದೃಢವಾದ ಸಂಬಂಧವನ್ನು ಬೆಳೆಸಬೇಕು; ಇದು ರಾಜಾಜಿಯವರ ವಾದ. ಅಲ್ಲದೆ ನಾವು ಪ್ರಜಾಪ್ರಭುತ್ವವನ್ನು ಅನುಸರಿಸುವುದರಿಂದ ಕಮ್ಯುನಿಸ್ಟರ ವಿರುದ್ಧ ಪಾಶ್ಚಾತ್ಯರ ತಂಡವನ್ನು ಸೇರುವುದು ಸ್ವಾಭಾವಿಕವಲ್ಲವೆ? ಪ್ರಕೃತದ ದೃಷ್ಟಿಯಿಂದ ಇದು ಸರಿಯೆಂದು ಕಂಡರೂ ಹಲವು ವರ್ಷಗಳಿಂದ ಅನುಸರಿಸಿಕೊಂಡಿದ್ದ ಒಂದು ಧೋರಣೆಯನ್ನು ಹಿಂದು ಮುಂದಿನ ಆಲೋಚನೆಯಿಲ್ಲದೆ ಬಿಟ್ಟುಬಿಡುವುದರಲ್ಲಿ ಅರ್ಥವಿಲ್ಲ. ಒಂದು ಸಿಟ್ಟಿಗೆ ಒಂದು ಹೆಂಡತಿಯನ್ನು ಬಿಡಲು ಆರಂಭಿಸಿದರೆ ಅದು ಎಲ್ಲಿಯ ತನಕ ನಡೆದೀತೆಂದು ಹೇಳ ಬರುವುದಿಲ್ಲ. ಬಹು ಸಮಯದಿಂದ ಪಾಶ್ಚಾತ್ಯರ ಪಂಗಡದಲ್ಲಿದ್ದ ಪಾಕಿಸ್ಥಾನವು ಇಂದು ಅತೃಪ್ತಿಗೊಂಡು ತಟಸ್ಥ ಧೋರಣೆಯನ್ನು ಅನುಸರಿಸಲು ಪ್ರಯತ್ನಿಸುತ್ತಿರುವುದನ್ನು ನೆನಪಿಗೆ ತಂದುಕೊಳ್ಳುವುದು ಅಗತ್ಯ. ಒಂದು ದೇಶಕ್ಕೆ ಎಲ್ಲದಕ್ಕೂ ಹೆಚ್ಚಿನ ಮಹತ್ವದ ವಿಷಯವೆಂದರೆ ರಾಜಕೀಯ ಸ್ವಾತಂತ್ರ್ಯ ಇಂದು ಮಿಲಿಟರಿ ಸಹಾಯದ ಸಲುವಾಗಿ ಪರಕೀಯರ ಕೈಯೊಳಗಾಗುವ ಸನ್ನಿವೇಶ ಬರಕೂಡದು.

ಒಟ್ಟಾರೆ ನೋಡುವುದಾದರೆ ತಟಸ್ಥ ಧೋರಣೆಯಿಂದ ನಾವು ಎಲ್ಲಾ ದೇಶಗಳ ಮೈತ್ರಿಯನ್ನು ಗಳಿಸಲು ಅಸಾಧ್ಯವಾಗಿರಬಹುದಾದರೂ ನಮ್ಮ ವಿರೋಧಿಗಳ ಸಂಖ್ಯೆಯನ್ನು ತೀರಾ ಕಡಿಮೆ ಮಾಡಲು ಸಾಧ್ಯವಾಗಿದೆ. ಇತರ ದೇಶಗಳೂ ಇದೇ ಧೋರಣೆಯನ್ನು ಅನುಸರಿಸಿದರೆ ಇಂದಿರುವ ಎರಡು ಒಂದನ್ನೊಂದು ವಿರೋಧಿಸುವ ಪಕ್ಷಗಳು ಮಾಯವಾಗಿ ಜಾಗತಿಕ ಶಾಂತಿಯು ಇನ್ನಷ್ಟು ಸ್ಥಿರವಾಗುವುದರಲ್ಲಿ ಸಂದೇಹವಿಲ್ಲ.

—ವಿ. ವಿ. ಶೆಟ್ಟಿ


# ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

## ಸುಲಭದಲ್ಲಿ ಇಂಗ್ಲಿಷ್

**(ENGLISH MADE EASY)**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

## ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

## LETTER WRITING MADE EASY

## ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಟೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿ ಕೂಡ ದೊರೆಯುತ್ತವೆ.


## ಕರ್ತವ್ಯದ ಕರೆ

ಮುಂದೆ ಹೆಜ್ಜೆಯನೆತ್ತಿ ನಡೆಯಿರಿ
ಭಾರತಾಂಬೆಯ ಮಕ್ಕಳೇ,
ಕೊಂಬು ಕಹಳೆಯ ಊದಿ ಮೆರೆಯಿರಿ,
ಮುಂದೆ ನುಗ್ಗಿರಿ ಜನಗಳೇ.

ಮಿತ್ರ ರಾಷ್ಟ್ರವು ಇತ್ತ ನೆರವನು
ಸದುಪಯೋಗ ಪಡಿಸಿರೀ,
ಮತ್ತೇ ಚೀನರು ಇತ್ತ ತಲೆಯನು
ಇಕ್ಕದಂತೆ ಮಾಡಿರೀ.

ಹಿಮದ ಗಿರಿಯಲಿ ಹಿಮದ ಮರೆಯಲಿ
ಅಡಗಿ ಕುಳಿತಿಹ ವೈರಿಯೂ,
ಯಮನ ಧೈರ್ಯದಿ ಸಮನ ಹಸ್ತದಿ
ಹಿಂದಕಟ್ಟಿರಿ ವೈರಿಯೂ

ಚೀನಾ ದೇಶದ ಧೂರ್ತ ರಾಕ್ಷಸ
ಕೊಟ್ಟ ನಮಗೇ ಕೈಯ್ಯನೂ
ಮಿತ್ರದ್ರೋಹ ಗೈದ ತಪ್ಪಿಗೆ ಬಡಿಯಲೀ
ಬಾಯ್ ಬಾಯನು

ಹೆದರದಿರಿ ಓ ವೀರ ಯೋಧರೆ
ನುಗ್ಗಿ ಮುಂದೆ ಮುಂದಕೇ
ನಿಮ್ಮ ಶೌರ್ಯವ ಕಂಡ ವೈರಿಯು
ಸರಿಯಲೀ ಆವ ಹಿಂದಕೇ.

ನಮ್ಮ ತಾಯಿಯು ನೊಂದು ಬೆಂದರೆ
ಶಾಂತಿ ನಮಗದು ಎಲ್ಲಿದೇ ?
ರಾಜಪುತ್ರರ ವೀರಯೋದರೆ
ಧೈರ್ಯ ನಮಗೇ ಬಾರದೇ ?

ಒಂದು ಕ್ಷಣ ಮೈ ಮರೆತ ತಪ್ಪಿಗೆ
ಬಂದಿತೀ ಸರಿ ಶಿಕ್ಷೆಯು
ಒಂದೆ ಭಾವದಿ ಮುಂದೆ ನಡೆದರೆ
ಇಹುದು ದೇವರ ರಕ್ಷೆಯು,

ನಮ್ಮ ರೈತರು ಬೆಳೆವ ಬೆಳೆಯೇ
ವೀರ ಯೋಧರ ಶಕ್ತಿಯು,
ನಮ್ಮ ಮಾತೆ ಭಾರತಾಂಬೆಗೆ
ಇಂದೆ ದೊರೆಯುವ ಮುಕ್ತಿಯು.

— 'ಗಾಯತ್ರೀ ಅನುಜ'
ಬೆಳವಿನ ಕೊಡಿಗೆ.

ಸವಿಸ್ಮರಣೆ

# ಪರಮಹಂಸರನ್ನು ನೆನೆದುಕೊಂಡಾಗ

ರಾಮಕೃಷ್ಣ ಪರಮಹಂಸ........

ಆ ಸೌಮ್ಯ ಮುಖ....ಒಂದಿಷ್ಟು ಕೂದಲು....ಒಂದಿಷ್ಟು ಗಡ್ಡ-ಮೀಸೆ....ಎಡೆಯ ವೇಳೆ ಒಂದು ತುಂಡು ಬಟ್ಟೆ....ನಡುವಿನಲ್ಲಿ ಒಂದು ತುಂಡು ಬಟ್ಟೆ....ಸರಳತೆಯ ಮೂರ್ತಿ....

ಸರಿ. ಅದೆಲ್ಲಾ ತಿಳಿದುಕೊಂಡು ಈಗೇನು ಮಾಡುವದು?— ಸೌಮ್ಯತೆಯನ್ನು ನಿರ್ಬಲತೆ ಎಂದು ಪರಿಗಣಿಸುತ್ತಿರುವಾಗ ಆತ್ತಿಗಳಿಂದೇನು ಪ್ರಯೋಜನ? ಹೊಟ್ಟೆ ತುಂಬಾ ಊಟ, ದೇಹ ಪೂರ್ತಿ ಬಟ್ಟೆ, ಮೆದುಳು ತುಂಬಾ ವಿದ್ಯೆ, ಕೈ ತುಂಬಾ ಕೆಲಸ....ಹೀಗೆ ಪರಿಪೂರ್ಣತೆಗೆ ಪಡಿಯಲ್ಲಿರುವ ಆಧ್ಯಾತ್ಮಿಕ ಭಾರತಕ್ಕೆ ಆ ಮೂರ್ತಿಯ ಜ್ಞಾಪಕ ಬರುವದು ಸಹಜ. ಈಗಾದರೋ, ಉತ್ತರದಲ್ಲಿ ಮಾತೃಭೂಮಿಯನ್ನು ನುಂಗಲು ರಕ್ತ ಪಿಪಾಸಿಗಳು ಸಾಮ್ರಾಜ್ಯದಾಹದಿಂದ ಧಾವಿಸುತ್ತ ಇತ್ತ ಬರುತ್ತಿದ್ದಾರೆ ದೇಶದೊಳಗೋ ಬಿಕ್ಕಟ್ಟು ಬೀಡು ಬಿಟ್ಟುಕೊಂಡಿದೆ—ಹಲವಾರು ವೇಷಗಳಲ್ಲಿ. ಹೊಟ್ಟೆ ತುಂಬಾ ಊಟದಿಂದ ಹಿಡಿದು ಎಲ್ಲದಕ್ಕೂ ಮಿತಿ ಮಾತ್ರವಲ್ಲದೆ ಕೊರತೆಯೇ ಬಂದಿರುವಾಗ ಆ ಸೌಮ್ಯ ಮೂರ್ತಿಯ ಜ್ಞಾಪಕ ಬರುವದೆಂತು? ಇದೂ ಒಂದು ಪ್ರಶ್ನೆ.

ರಾಮಕೃಷ್ಣ ಪರಮಹಂಸರ ಕುರಿತು ತಿಳಿದುಕೊಂಡಿರುವ ರಾಷ್ಟ್ರಪ್ರೇಮಿಗಳಿಗೆ ಅದೊಂದು ಪ್ರಶ್ನೆಯಾಗಿರಲಾರದು ಅವರಿಗೆ ರಾಮಕೃಷ್ಣರ ದಿವ್ಯ ನಾಮ ಸ್ಫೂರ್ತಿಯ ಸೆಲೆಯಾಗಿರುತ್ತದೆ. ಅಂದು ಅವರು ಸ್ವಾಮಿ ವಿವೇಕಾನಂದರನ್ನು ನರೇಂದ್ರನಿಂದ ನಿರ್ಮಾಣ ಮಾಡಿರುವರಾದಲ್ಲಿ ಇಂದು ಅವರ ಜ್ಞಾಪಕ ಮಾತ್ರದಿಂದಲೇ ಹಲವಾರು ಭಾರತೀಯ ನರರು ವಿವೇಕಿಗಳಾಗಿ ಮಾತೃ ಮಂದಿರದಲ್ಲಿ ಪೂಜಾರಿಗಳಾಗಲು ಸಹಜ ಸಿದ್ಧರಾಗಿರುವರು. ಅವರಗಾದರೋ ಕಾಳಿಯೇ ಇದ್ದಾಳೆ ಭಾರತ ಮಾತೆ. ಅವಳ ಪಾದಗಳಲ್ಲಿ ಅವರ ಜೀವನ ಪುಷ್ಪವನ್ನು ಅರ್ಪಿಸಲು ಅವರು ಸಂತೋಷದಿಂದ ಮುಂದೆ ಬರುವಂತಹವರಾಗಿದ್ದಾರೆ.

ರಾಮಕೃಷ್ಣರೊಮ್ಮೆ 'ಅಯ್ಯೋ' ಅಂದರಂತೆ ಕಾರಣ ಕೇಳಿದಾಗ ಅವರು ಬೈಮೇಲಿನ ಬಟ್ಟೆಯನ್ನು ತೆಗೆದು ತೋರಿಸಿದರಂತೆ. ಅಲ್ಲಿ ಬಾಸುಂಡೆಗಳಿದ್ದುವು. ಅದೆಲ್ಲಿಯೋ ಯಾರೋ ಒಬ್ಬನ ಒಂದು ದನಕ್ಕೆ ಹೊಡೆಯುತ್ತಿದ್ದನು. ಆ ಪೆಟ್ಟಿನ ಗುರುತು ಅಲ್ಲಿತ್ತು. ಅದರ ನರಕ ಯಾತನೆಯನ್ನು ಅವರು ಅನುಭವಿಸಿದರು. ಇಂದು ಇದೇ ದೃಶ್ಯವಲ್ಲವೇ ನಾವು ಕಂಡದ್ದು? ಉತ್ತರದ ಹಿಮಗಿರಿಯ ತಪ್ಪಲಲ್ಲಿ ನೇಫಾ ನಡುಗಿದಾಗ, ಲಡಾಖಿನಲ್ಲಿ ಚಳಿಕಾರನೆದ್ದಾಗ, ತೇಜಪುರದ ತೇಜೋನಷ್ಟವಾದಾಗ. ಬೊಮ್ಡಿಲಾದಲ್ಲಿ ಬೊಬ್ಬೆ ಎದ್ದಾಗ ಅಲ್ಲಿಯವರ ಹೃದಯ ಮಾತ್ರ ಹಿಸುಕಲ್ಪಟ್ಟಿಲ್ಲ, ದಕ್ಷಿಣದ ತುದಿಯಲ್ಲಿ ಕನ್ಯಾಕುಮಾರಿಯ ಮಡಿಲಲ್ಲಿರುವವರ ಹೃದಯವೂ ಘಾಸಿಗೊಳಗಾದುದು ಕಣ್ಮುಂದೆ ನಡೆದಿರುವ ಸ್ಪಷ್ಟ ಉದಾಹರಣೆ. ಹಾಗಾಗದಿದ್ದಲ್ಲಿ ನಾವೆಂತು ರಾಮಕೃಷ್ಣ ಪರಮಹಂಸರ ಮಾತೃಭೂಮಿಯ ಮಕ್ಕಳೆನಿಸಿಕೊಳ್ಳಲು ಸಾಧ್ಯ? ನಮ್ಮ ಧಮನಿ-ಅಭಿದಮನಿಗಳಲ್ಲಿ ಹರಿಯುತ್ತಿರುವದೂ ಅದೇ ಹಿಂದೂ ರಕ್ತವಲ್ಲವೇನು? ನಾವೂ ಅದೇ ಕಾಳಿಮಾತೆಯ ವೀರಮಕ್ಕಳಲ್ಲವೇನು? ಈ ನೋವು ಕೇವಲ ತಾತ್ಕಾಲಿಕವಾಗಿರಬಾರದು. ಹಿಮಾಲಯ ಗಡಿ ಪ್ರದೇಶದ ಭಾರತೀಯರು ಕನ್ಯಾಕುಮಾರಿಯ ಕರಾವಳಿಯ ಭಾರತೀಯ ಸೋದರರಿಗಿಂತ ಭಿನ್ನರಾಗುವದಿಲ್ಲ. ಆ ಹಿಮಪ್ರದೇಶದವರಿಗೂ ಕಾಳಿಯೇ ವೀರಮಾತೆ ಇರುವಳು. ಕರಾವಳಿಯವರಿಗೂ ಆಕೆಯೇ ವೀರ ಜನನಿ ಇರುವಳು. ಆ ಹಿಮ ಪ್ರದೇಶದವರಿಗೂ ಶ್ರೀ ರಾಮಕೃಷ್ಣ ಪರಮಹಂಸರು ಪೂರ್ವಜರು ಹಾಗೂ ಮಹಾ ಪುರುಷರಾಗಿರುವಂತೆ ಕರಾವಳಿಯವರಿಗೂ ಅವರ ನಾಮೋಚ್ಚಾರಣೆ ಪವಿತ್ರ ಇದೆ, ಗೌರವವನ್ನುಂಟುಮಾಡುವಂತಹದ್ದಿದೆ. ಹಲವಾರು ಪಂಥದ ಭಾರತೀಯ ಮಣಿಗಳನ್ನು ಒಂದೇ ಆಧ್ಯಾತ್ಮಿಕ, ಧಾರ್ಮಿಕ,ರಾಷ್ಟ್ರೀಯ ದಾರದಲ್ಲಿ ಪವಣಿಸಿ, ಚಂದವಾಗಿ ಪೋಣಿಸಿದ ಮಹಾ ಪುರುಷರೇ ರಾಮಕೃಷ್ಣ ಪರಮಹಂಸರು.

"ಯೋಚನೆಯಲ್ಲೂ ದ್ರೋಹಿಯಾಗದಿರು ಪ್ರಾಮಾಣಿಕನಾಗಿರು; ಯೋಚನೆಯಂತೆಯೇ ಕಾರ್ಯವನ್ನು ನಡೆಸುತ್ತಿರು ಆಗ ಜಯವು ಕಟ್ಟಿಟ್ಟ ಗಂಟಾಗಿರುತ್ತದೆ ...." ಇದು ಶ್ರೀರಾಮಕೃಷ್ಣ ಪರಮಹಂಸರ ದಾರಿದೀಪದಂತಿರುವ ಹಿತೋಕ್ತಿ. ಹಾಗೂ ಮಾರ್ಗದರ್ಶಕ ಅಮೂಲ್ಯ ವಾಣಿ. ನಾವಿಂದು ದೇಶದ್ರೋಹಿಗಳಾಗದಿರೋಣ ಜಯಚಂದ್ರರಿಗಳ ಸಾಲಿಗೆ ಸೇರದಿರೋಣ, ಶಿವ, ಪ್ರತಾಪ, ಕೃಷ್ಣ, ತಿಲಕ, ಸುಭಾಷ, ಕೇಶವರ ಸಾಲಿಗೆ ಸೇರೋಣ. ಶಾಸ್ತ್ರಿಯ ಒಂದಂಗುಲವನ್ನೂ ಬಿಟ್ಟು ಕೊಡುವ ಯೋಚನೆ ನಮ್ಮ ತಲೆಯಲ್ಲಿ ಬಾರದಿರಲಿ. ಒಂದಂಗುಲ ನೆಲದಿಂದಲೂ ಕೊನೆಯ ಶತ್ರು ಕಾಲ್ತೆಗೆದ ತರಣ ಬರುವ ವರೆಗೂ ಕಾರ್ಯಮಗ್ನರಾಗಿರೋಣ, ಇದರಲ್ಲಿ ಮೀನಮೇಷ ಎಣಿಸುವದು ರಾಮಕೃಷ್ಣ ಪರಮಹಂಸರ ಪವಿತ್ರ ಮಾತೃಭೂಮಿಯ ಮಕ್ಕಳ ಲಕ್ಷಣವಲ್ಲ. ಧೀರತೆಯಿಂದ, ಏಕಾಗ್ರತೆಯಿಂದ, ಒಕ್ಕಟ್ಟಿನಿಂದ ಅಡಿಯ ಮುಂದಿಡೆ ಸ್ವರ್ಗ. ಅದನ್ನೇ ಹಿಂದಿಟ್ಟಲ್ಲಿ ನರಕ—ಘೋರ ನರಕ, ಶತ್ರುಗಳ ಕಾಲ್ತುಳಿತದ ರೌರವ ನರಕ. ಹಾಗಿರುವದರಿಂದ ನಾವು ಮುಂದಡಿಯಿಡೋಣ. ರಾಮಕೃಷ್ಣರು ನಮ್ಮನ್ನು ಹರಸುತ್ತಿದ್ದಾರೆ. ಜೈ ಭವಾನಿ,ಜೈ ಮಹಾಂಕಾಳಿ ಜಯ ಘೋಷ ಕೇಳಿ ಬರಲಿ. ತಾಯಿ ಮಹಾಂಕಾಳಿಯೇ ನೆಲವನ್ನೆತ್ತಿಕೊಂಡು ಶತ್ರುಗಳ ರಕ್ತದಿಂದ ಅಸುರೀ ಶಕ್ತಿಯ ನಿರ್ನಾಮ ಗೈಯ್ಯುವಂತೆ ಭಾರತೀಯರ ಮಹಾಶಕ್ತಿ ಸಿದ್ಧವಾಗಲಿ.

"ಆಧ್ಯಾತ್ಮಿಕ ಪ್ರಗತಿಗೆ ಮಹಾ ಪುರುಷರ ಹಾಗೂ ಮಹಾಜ್ಞಾನಿಗಳ ಸಹವಾಸವು ಪ್ರಮುಖ ಸಹಾಯಕವಿಷಯವಿದೆ"- ಇದು ಶ್ರೀ ರಾಮಕೃಷ್ಣ ಪರಮಹಂಸರ ಪವಿತ್ರವಾಣಿ ಇದೆ. ಇಂದಿನ ರಾಜಕೀಯದಲ್ಲೂ ಅದರ ಅನುಭವ ನಮಗಾಗುತ್ತದೆ. ಆಧ್ಯಾತ್ಮಿಕ ಪ್ರಗತಿಯ ಪ್ರಥಮ ಪಡಿಯಾಗಿ ರಾಷ್ಟ್ರದ ಅಭ್ಯುದಯವಿದೆ ಇದು ಒಂದರ್ಥದಲ್ಲಿ ದಾಸ್ಯಮುಕ್ತವಾಗಿ ಇದೆ ರಾಷ್ಟ್ರ ಸುಭದ್ರವಾಗಿದ್ದು, ಶಾಂತಿ—ಸಮೃದ್ಧಿ ಅಲ್ಲಿ ಮನೆಮಾಡಿಕೊಂಡಿದ್ದಲ್ಲಿ ಆ ನಾಡಿನವರು —ಅದರಲ್ಲೂ ಪಾರಮಾರ್ಥಿಕ ಯೋಚನೆಯುಳ್ಳವರು—ಆಧ್ಯಾತ್ಮಿಕತೆಯತ್ತ ಅಡಿಯಿಡುವದು ಸುಲಭಸಾಧ್ಯವಾಗುತ್ತದೆ. ಆದುದರಿಂದಲೇ ವಸಿಷ್ಠ ಸಮರ್ಥ ರಾಮದಾಸ, ವಿದ್ಯಾರಣ್ಯಮುಂತಾದ ಮಹಾಪುರುಷರು, ಚಾಣಕ್ಯನಂತಹ ಮಹಾನುಭಾವರೂ ತಮ್ಮ ಪರಲೋಕದ ಜಾಗಕ್ಕಾಗಿ ತಪಸ್ಸುಮಾಡದೆ ಅಖಂಡ ಭಾರತದ ಅಭ್ಯುದಯಕ್ಕಾಗಿ ಪ್ರಯತ್ನಪಟ್ಟಿರುವರು, ಅಂತಹ ಮಹಾಪುರುಷರ ಹಾಗೂ ಮಹಾಜ್ಞಾನಿಗಳನ್ನು ನಾವಿಂದು ಅತ್ಯವಶ್ಯವಾಗಿ ಸ್ಮರಿಸಿಕೊಳ್ಳಬೇಕಾಗಿರುತ್ತದೆ. ಆ ಮಹಾಪುರುಷರ ಅಡಿಗಳನ್ನು ಹಿಂಬಾಲಿಸುತ್ತಿರುವ ದೇಶವೀರರನು ನಾವು ಪೂರ್ಣ ನಂಬಬೇಕಾಗಿರುತ್ತದೆ. ಅವರ ಸಹವಾಸವೇ ನಾಡಿನ ಅಭ್ಯುದಯಕ್ಕೆ, ರಾಷ್ಟ್ರದ ಪ್ರಗತಿಗೆ ಉತ್ತಮ ಸಹಾಯಕ ವಿಷಯವಿರುತ್ತದೆ. ಇತರರು ನಮ್ಮನ್ನು ಹಾನಿ ತಪ್ಪಿಸುವವರೇ ಇದ್ದಾರೆ. ಅವರಿಂದೂ ಚೈನಾವನ್ನು, ಪಾಕಿಸ್ತಾನವನ್ನು ಆಕ್ರಮಣ ರಾಷ್ಟ್ರವೆನ್ನಲು ಸಿದ್ಧರಿರುವದಿಲ್ಲ. ಅವರ ನಾಲಿಗೆ ಚೈನಾವೂ ಪಾಕಿಸ್ತಾನವೂ ಮಿತ್ರ ರಾಷ್ಟ್ರಗಳೇ ಇವೆ. ದೇಶ ಭಕ್ತರಿಗಾದರೋ ವಸ್ತುಸ್ಥಿತಿ ಹಾಗಿರುವದಿಲ್ಲ. ಅವರ ರಕ್ತ ಕುದಿಯುತ್ತಿದೆ. ಅವರಿಗೆ ಕಾಳಿಯ ಜ್ಞಾಪಕ ಬರುತ್ತಿದೆ; ರಾಮಕೃಷ್ಣ ಪರಮಹಂಸರ ಮಾರ್ಗದರ್ಶನದತ್ತ ಯೋಚನೆ ಹರಿಯುತ್ತಿದೆ. ಮಾತೃಭೂಮಿಯ ಕಣವನ್ನೂ ಶತ್ರುಗಳ ಕಾಲ್ತುಳಿತಕ್ಕೊಳಪಡಿಸಲು ಅವರು ಸಿದ್ಧರಿರುವದಿಲ್ಲ. ಶಾಂತಿ-ಸಂಧಾನಗಳಂತಹ ಮೋಹಕ ಶಬ್ದಗಳತ್ತ ಅವರು ಕಿವಿಗೊಡಲು ಬಿಡುವದಿಲ್ಲ. ಮಾತೃಮಂದಿರದ ಪ್ರತಿಯೊಂದು ಇಟ್ಟಿಗೆಯೂ ಅವರಿಗೆ ಪವಿತ್ರವಿದೆ. ಅಲ್ಲಿ ಹುಲ್ಲು-ಮುಳ್ಳು ಬೆಳೆಯಲಿ, ಬೆಳೆಯದಿರಲಿ, ದನ-ಕರು ಮೇಯುತ್ತಿರಲಿ, ಇಲ್ಲದಿರಲಿ ಆ ಕಾರಣಕ್ಕಾಗಿ ಪವಿತ್ರ ನೆಲದ ಒಂದಂಗುಲವನ್ನೂ ಪರಕೀಯರ ಪಾದಾಘಾತಕ್ಕೊಳಪಡಿಸಲು ಅವರು ಬಯಸುವದಿಲ್ಲ.

"ಸ್ವಾರ್ಥಮಯ, ಪರಸ್ಪರ ಹಾಗೂ ನಿಸ್ವಾರ್ಥ...ಹೀಗೆ ಮೂರು ವಿಧದ ಪ್ರೇಮ ಇದೆ. ಇದರಲ್ಲಿ ಸ್ವಾರ್ಥಮಯ ಪ್ರೇಮವು ಕೀಳ್ಮಟ್ಟದ್ದಿದೆ. ತನ್ನ ಪ್ರೇಮಿಗೆ ಏನೇ ಆಗಲೀ, ಅತ್ತ ಗಮನ ಇರುವದಿಲ್ಲ. ತನ್ನ ಸುಖದತ್ತ ಮಾತ್ರ ಗಮನವಿರುತ್ತದೆ ಸ್ವಾರ್ಥಮಯ ಪ್ರೇಮದಲ್ಲಿ. ಪರಸ್ಪರ ಪ್ರೇಮದಲ್ಲಿ ಇನ್ನೊಂದು ಪಕ್ಕದವರ ಯೋಗಕ್ಷೇಮದತ್ತವೂ ಗಮನವಿಡಲಾಗುತ್ತದೆ. ನಿಸ್ವಾರ್ಥ ಪ್ರೇಮವು ಉಚ್ಚಮಟ್ಟದ್ದಿರುತ್ತದೆ. ಅದರಲ್ಲಿ ಸ್ವಸುಖದತ್ತ ಗಮನವೀಯಲಾಗುವದೇ ಇಲ್ಲ" ಇದು ಶ್ರೀರಾಮಕೃಷ್ಣ ಪರಮಹಂಸರ ಸ್ಪಷ್ಟ ಅಭಿಪ್ರಾಯವೇ ಇದೆ. ಪ್ರತಿಯೊರ್ವ ಭಾರತೀಯನೂ ಇಂದು ತನ್ನಲ್ಲಿ ತಾನೇ ಕೇಳಿಕೊಳ್ಳಬೇಕಾಗಿರುತ್ತದೆ— ಮಾತೃಭೂಮಿಯ ಮೇಲೆ ತನಗಿರುವ ಪ್ರೀತಿಯ ಮಹಿಮೆ ಇದೆ ಎಂದು. ಸ್ವಾರ್ಥಮಯ ಮಮತೆಯೇ? ಕಮ್ಯೂನಿಸ್ಟರು ಆಳಿದರೇನು ಮಹಮ್ಮದೀಯರು ಆಳಿದರೇನು? ತಾನು ಸಂತೋಷದಿಂದ ಇದ್ದರೆ ಸಾಕು ಇದು ಕೇವಲ ಕಲ್ಪನೆ ಇದೆ ನಾಗಿಯ ಗತಿ ಏನಾಯ್ತು? ಸ್ಟೇಲಿನನ ಶವದ ಪಾಡು ಏನಾಯಿತು? ಮಧ್ಯ ಯುರೋಪಿನಲ್ಲಿ—ಪಾಕಿಸ್ತಾನದಲ್ಲಿ ಅಧಿಕಾರದಲ್ಲಿರುವವರ ತಲೆಗಳು ಏಕೆ ಉರುಳುತ್ತಿವೆ?

ಕುಮಾರಿ ಬಿಲ್ಲೆಗಳು
(ರಿಜಿಸ್ಟರ್ಡ Regd.)
ಪ್ರಕೃತಿಯ ನಿಯಮಗಳಿಂದಾಗ ಉಂಟಾಗುವ ಕಷ್ಟ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ ೧೮ ಸಾಮಾನ್ಯ ರೂ. 1/. ಮಧ್ಯಮ ರೂ. 6/. ಉತ್ತಮ ರೂ 9/.
P. Devee & Co. (N.J) Calcutta—40

REGD. No. B. G. 176
LICENCE No. 31
Licensed to Post without Prepayment

ಅದು ನಿಸ್ವಾರ್ಥಮಯ ಪ್ರೇಮದ ಪಾಡಿರುತ್ತದೆ. ತಾವೇ ದಬ್ಬಾಳಿಕೆ, ದರ್ಬಾರ ನಡೆಸುತ್ತಿರಬೇಕೆಂಬವರ ಸ್ಥಳವೂ ಅಲ್ಲೇ ಇರುತ್ತದೆ. ಅಲ್ಲಿ ತನ್ನ ದೃಷ್ಟಿಗೆ ಸರಿಕಂಡು ಬಾರದಿರುವವರು ಬದುಕಲು ಸಾಧ್ಯವೇ ಇರುವದಿಲ್ಲ. ಪರಸ್ಪರ ಪ್ರೇಮದಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸವನ್ನು ಕಾಣಬಹುದು ಇದು ಮಿಶ್ರ ಆಡಳಿತ (ಕೊಲಬರೇಶನ್) ಇರುವಂತೆ ಆಸ್ತಿಯ ಒಂದು ಭಾಗ ನನಗೆ, ಇನ್ನೊಂದು ಭಾಗ ನಿನಗೆ; ಕೀರ್ತಿಯ ಒಂದು ಭಾಗ ನನಗೆ ಇನ್ನೊಂದು ಭಾಗ ನಿನಗೆ, ಅಧ್ಯಕ್ಷಸ್ಥಾನ ನನಗೆ, ಪ್ರವಿಶ ನಾಡು ನಿಮಗೆ ....ಈ ರೀತಿ ಪರಸ್ಪರ ಪ್ರೇಮ ನಾಟಕ ಮಾಡುತ್ತ ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವ ರಾಜನೀತಿ! ರಾಷ್ಟ್ರೀಯ ಶಕ್ತಿಗಳನ್ನು ಸೋಲಿಸಲು ಕಮ್ಯೂನಿಸ್ಟರು ಕಾಂಗ್ರೆಸ್ಸಿಗರೊಡನೆ ಸೇರಿಕೊಳ್ಳುವದೂ ಪರಸ್ಪರ ಪ್ರೇಮ (ಸ್ವಾರ್ಥ)ದಿಂದಾಗಿರುತ್ತದೆ. ನಿಸ್ವಾರ್ಥ ಪ್ರೇಮ ಹಾಗಿರುವದಿಲ್ಲ. ಅವರ ಎದುರಿಗಿರುವದು ಅಖಂಡ ಭಾರತಮಾತೆ—ಆಸೇತು ಹಿಮಾಚಲ ತನ್ನ ದೇಹ ಇರುವ—ಹಿಮಾಚಲ ಶಿರವಾಗಿಯೂ ಕನ್ಯಾಕುಮಾರಿ ಪಾದವಾಗಿಯೂ ಇರುವ ಭಾರತಮಾತೆ. ಅಲ್ಲಿರುವ ನಲ್ವತ್ತು ಕೋಟಿ ಭಾರತೀಯರೂ ಅವರಿಗೆ ಜನತಾ ಜನಾರ್ಧನರಿದ್ದಾರೆ. ಅಂತಹವರು ತಮ್ಮ ನಶ್ವರ ದೇಹವನ್ನು ತೃಣಸಮಾನವಾಗಿ ಕಾಣುತ್ತಿರುವದರಲ್ಲಿ ಅಚ್ಚರಿ ಏನು? ಮಾತೆಯ ಪೂಜೆಗಾಗಿ ತಮ್ಮ ಜೀವನ ಪುಷ್ಪವನ್ನು ನಗುನಗುತ್ತ ಆಕೆಯ ಅಂಘ್ರಿಯಲ್ಲಿ ಅರ್ಪಿಸಲು ಅವರು ಮುಂದಾಗುವದರಲ್ಲಿ ಆಶ್ಚರ್ಯವೇನಿದೆ? ಮಾತೃಭೂಮಿಯ ಮೇಲಣ ಮಮತೆಯ ಎದುರು ಎಲ್ಲವೂ ಕ್ಷುಲ್ಲಕವಿದೆ ಅವರಿಗೆ.

ಇವು ಕೇವಲ ಉದಾಹರಣೆಗಳಾಗಿವೆ. ಇಂದು ಶ್ರೀರಾಮಕೃಷ್ಣ ಪರಮಹಂಸರನ್ನು ಸ್ಮರಿಸಿಕೊಂಡಾಗ ಇಂತಹ ಅನೇಕ ವಿಷಯಗಳು ಜ್ಞಾಪಕಕ್ಕೆ ಬರುವದು ಸ್ವಾಭಾವಿಕವಿದೆ. ಆದುದರಿಂದಲೇ ಪ್ರಾತಃಸ್ಮರಣೀಯರಲ್ಲಿ ಅವರಿಗೆ ವಂದನೆಯನ್ನು ಸಲ್ಲಿಸಲಾಗುತ್ತಿದೆ..... ಶ್ರೀಮತ್ಪರಮಹಂಸ ಚ ರಾಮಕೃಷ್ಣಂ ಸತಾಂ ವರಂ | ಪ್ರಾತಃಕಾಲೇ ಪ್ರಣಾಮಸ್ಯ ವಿಲಯಂ ಯಾತಿ ಪಾತಕಮ್ ||

ಸಂತಶ್ರೇಷ್ಠ ಶ್ರೀರಾಮಕೃಷ್ಣ ಪರಮಹಂಸರಿಗೆ ಪ್ರಾತಃಕಾಲದಲ್ಲಿ ವಂದಿಸುವದರಿಂದ ಪಾತಕಗಳು ಶೀಘ್ರವಾಗಿ ವಿಲಯವಾಗುತ್ತವೆ.

—ಶಿವಶಂಕರ ಮುದ್ರಾಸು

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ. ನ.

## ಪ್ರಾಪ್ಯ ವರಾನ್ನಿಬೋಧತ

(೧ನೇ ಪುಟದಿಂದ)

### ಸರ್ವರ ಸಹಕಾರ

ತುರ್ತು ಪರಿಸ್ಥಿತಿಯ ಘೋಷಣೆ ಹೊರಟೊಡನೆಯೇ ಕೂಲಿಗಾರ ಮತ್ತು ಆಡಳಿತಗಳ ಕೇಂದ್ರ ಸಂಸ್ಥೆಗಳು ಔದ್ಯಮಿಕ ವಿವಾದವನ್ನು ತಡೆ ಹಿಡಿಯುವ ಉತ್ಪಾದನೆಯನ್ನು ಹೆಚ್ಚಿಸುವ ಬೆಲೆಯ ಏರಿಕೆಯನ್ನು ತಡೆಹಿಡಿಯುವ ಒಮ್ಮತದ ನಿರ್ಧಾರಕ್ಕೆ ಬಂದುವು. ಇದರ ಮೇಲೆ ತುರ್ತು ಉತ್ಪಾದನಾ ಸಮಿತಿಗಳನ್ನು ಕೇಂದ್ರದಲ್ಲಿಯೂ ಇತರ ಔದ್ಯಮಿಕ ಸಂಸ್ಥೆಗಳಲ್ಲಿಯೂ ರಚಿಸಿಕೊಳ್ಳಲಾಯಿತು

### ಯೋಜನೆಯೇ ಸೈನಿಕ ಶಕ್ತಿ

ಚೀನೀಯರ ದಾಳಿಯನ್ನು ಎದುರಿಸುವ ಬಹು ದೊಡ್ಡ ಯೋಚನೆಯಿಂದಾಗಿ ಯಾವುದೇ ದೊಡ್ಡ ಬದಲಾವಣೆಯಿಲ್ಲದೆ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಹೇಗೆ ಕೊನೆಮುಟ್ಟಿಸಬಹುದು ಎಂಬ ಪ್ರಶ್ನೆ ಮುಂದೆ ಬಂತು. ಪೂರ್ಣ ವಿವೇಚನಾನಂತರ ನಮ್ಮ ಸರಕಾರವು ರಾಷ್ಟ್ರವನ್ನು ಬಲಯುತವಾಗಿ ಕಟ್ಟುವುದಕ್ಕೆ ಯೋಜನೆಯ ಹೆಚ್ಚಿನ ಅಂಶಗಳೆಲ್ಲವೂ ಅತ್ಯವಶ್ಯವೆಂದೂ ಸಂರಕ್ಷಣೆಯ ದೃಷ್ಟಿಯಿಂದಲೂ ಅದು ಅನಿವಾರ್ಯವೆಂದು ನಿರ್ಧರಿಸಿತು. ಆರ್ಥಿಕ ಮತ್ತು ಔದ್ಯಮಿಕ ಬೆಳವಣಿಗೆಯೇ ನಮ್ಮ ರಕ್ಷಣಾ ಕ್ರಮದ ಮೂಲ. ಇದನ್ನು ನಿರ್ಲಕ್ಷಿಸಿದರೆ ಅಥವಾ ಸಂಕ್ಷೇಪಿಸಿದರೆ ದೇಶವನ್ನೆ ದುರ್ಬಲಗೊಳಿಸಿದಂತೆ. ಆದುದರಿಂದ ಅಗತ್ಯ ಬೀಳುವ ಚಿಕ್ಕ ಬದಲಾವಣೆಗಳನ್ನು ಮಾತ್ರ ಮಾಡಿಕೊಂಡು ಮೂರನೆಯ ಯೋಜನೆಯನ್ನು ಕಾರ್ಯಗತಗೊಳಿಸಲು ಮತ್ತು ಸಂರಕ್ಷಣಾವಶ್ಯಕತೆಗಳಿಗೆ ಅಗ್ರಪ್ರಾಶಸ್ತ್ಯ ದೊರೆಯುವಂತೆ ಔದ್ಯಮೀಕರಣದ ಗುರಿಯನ್ನೂ ಮುಂದುವರಿಸಲು ನಿರ್ಧರಿಸಲಾಯಿತು. ಹೀಗೆ ಕೃಷಿ, ಉದ್ಯಮ, ಸಾರಿಗೆ, ಸಂಪರ್ಕ, ಶಕ್ತಿ, ತಾಂತ್ರಿಕ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ನಮ್ಮ ಶಕ್ತಿ ಮೀರಿ ಮುಂದುವರಿಯುವ ಗುರಿಯಿದೆ. "ದೃಢವಾದ ವ್ಯಾವಸಾಯಿಕ ಪಂಚಾಂಗವೇ ರಾಷ್ಟ್ರರಕ್ಷಣೆಯ ಮೂಲ ಬುನಾದಿ. ಉದ್ಯಮಗಳೂ ರಕ್ಷಣೆಗೆ ಅತ್ಯವಶ್ಯ. ಹಾಗೆಯೇ ಶಕ್ತಿ, ಸಾರಿಗೆ ಸಂಪರ್ಕಗಳ ಮತ್ತು ತಾಂತ್ರಿಕ ಶಿಕ್ಷಣಗಳ ಆವಶ್ಯಕತೆಗಳೂ ಪ್ರಮುಖವಾದುವುಗಳು.

### ಗುರಿ ಸೇರೋಣ

ದೇಶದ ಮತ್ತು ಜಗತ್ತಿನ ಜನತೆಯ ಒಳಿತಿಗಾಗಿ ನಿಮ್ಮ ಪ್ರಯತ್ನವು ಸಾರ್ಥಕವಾಗಲಿ ಎಚ್ಚರಾಗಿ, ಎದ್ದೇಳಿ ಇರುವ ಅವಕಾಶಗಳನ್ನರಿತುಕೊಳ್ಳಿ ಮತ್ತು ಗುರಿ ಮುಟ್ಟುವನಕ ನಿಲ್ಲಬೇಡಿ.

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ

(ಪಾರ್ಲಿಮೆಂಟನ್ನು ಉದ್ದೇಶಿಸಿ ಮಾಡಿದ ಭಾಷಣದಿಂದ)

ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಕಡೆಯ ಬಂಗಾರದ ತುಂಡನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಅರ್ಪಿಸಿದರು

ದಿನನಿತ್ಯದ
ವೆಚ್ಚದಲ್ಲಿ
ಉಳಿತಾಯವೂ....ಒಂದು ಆವಶ್ಯಕತೆಯೆ? ?

ಆಹಾರ, ವಸತಿ ಮತ್ತು ಬಟ್ಟೆಬರೆ, ನಮ್ಮ ಜೀವನಾವಶ್ಯಕ ವಸ್ತುಗಳಂತೆ, ಉಳಿತಾಯವೂ ಅತೀ ಅವಶ್ಯವೆಂದು, ನೀವೆಂದಾದರೂ ಯೋಚಿಸಿದ್ದೀರಾ??

ಭವಿಷ್ಯತ್ತಿನ ಭದ್ರತೆ, ಸಮೃದ್ಧಿ ಮತ್ತು ಮನಸ್ಸಿಗೆ ನೆಮ್ಮದಿ, ನಿಮ್ಮ ಇಂದಿನ ದೂರ ದೃಷ್ಟಿಯ ಉಳಿತಾಯವನ್ನೇ ಹೊಂದಿಕೊಂಡಿದೆ.

ವಿವಿಧ ಉಳಿತಾಯ ಯೋಜನೆಗಳಿಗೆ.......

ಸಿಂಡಿಕೇಟ್ ಬ್ಯಾಂಕ್ ಸಹಕರಿಸಬಲ್ಲುದು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಟಿ ಎ. ಪೈ,
ಮ್ಯಾನೇಜಿಂಗ್ ಡೈರೆಕ್ಟರ್. ಬಿ.ಜಿ.ನಂ. 176

—ಒಟ್ಟು ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ—

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ,ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್.ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 27 | ಉಡುಪಿ, 14-3-1963 ಗುರುವಾರ | ಸಂಪುಟ ೪೨ ಸಂಚಿಕೆ ೨೭

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ಯೋಜನೆಯ ಯಶಸ್ಸಿಗೆ

# ಎದುರು ಬರುವ ಸಮಸ್ಯೆಗಳು

ರಾಷ್ಟ್ರೀಯ ತುರ್ತು ಪರಿಸ್ಥಿತಿ ಪರಿಣಾಮವಾಗಿ ಹಿಂದಿನಿಂದಲೂ ಗಮನಕ್ಕೆ ಬಾರದೆ ಇದ್ದ ಎಷ್ಟೋ ಲೋಪದೋಷಗಳು ಗಮನಕ್ಕೆ ಬರುವುದು ಸಾಧ್ಯವಾಗಿದೆ. ಈ ಪೈಕಿ ಮುಖ್ಯವಾದುದು ಎಂದರೆ ಆಡಳಿತ ಯಂತ್ರದ ಲೋಪದೋಷಗಳು. ಇನ್ನೊಂದು ಅತಿ ಮುಖ್ಯ ವಿಚಾರವೆಂದರೆ ಯೋಜನೆಯನ್ನು ಕಾರ್ಯಗತ ಮಾಡಲು ಇರುವ ಆತಂಕಗಳು. ಪರಸ್ಪರ ಸಮನ್ವಯ ಕಾರ್ಯ ಮತ್ತು ಸಲಹಾ ವ್ಯವಸ್ಥೆ ಇವೂ ಮುಖ್ಯವಾಗುತ್ತವೆ.

ಒಂದು ಯೋಜಿತ ವ್ಯವಸ್ಥೆಯ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಿಕೊಳ್ಳುವ ಕಾರ್ಯ ನಿರಂತರವಾಗಿ ನಡೆಯುತ್ತಿರುವಾಗ ನಾವು ಅಪೇಕ್ಷಿಸುವ ಆಡಳಿತ ದಕ್ಷತೆಗೂ ದೇಶವು ತುರ್ತು ಪರಿಸ್ಥಿತಿಯನ್ನು ಎದುರಿಸುವಾಗ ನಾವು ಅಪೇಕ್ಷಿಸುವ ಆಡಳಿತ ದಕ್ಷತೆಗೂ ಸ್ವಲ್ಪ ಮಟ್ಟಿನ ವ್ಯತ್ಯಾಸವಿದೆಯಾದರೂ ಮೂಲತಃ ಇರುವಂತಹ ಕಾರ್ಯ ನಿರ್ವಾಹಕ ಸೂತ್ರಗಳು ಒಂದೇ ಆಗುತ್ತವೆ. ದೇಶದ ಮುಂದಿರುವ ತುರ್ತು ಪರಿಸ್ಥಿತಿಯ ಫಲವಾಗಿ ಆಡಳಿತ ದಕ್ಷತೆ ಹೆಚ್ಚುತ್ತದೆ ಎಂಬ ನಿರೀಕ್ಷೆ ಇರುವುದು ಸಹಜ.

### ನಮ್ಮ ಅನುಭವ

ಹತ್ತು ವರ್ಷಗಳಕ್ಕೂ ಹೆಚ್ಚಿನ ನಮ್ಮ ಅನುಭವವಾದರೂ ಏನು ಹೇಳುತ್ತದೆ? ಯೋಜನೆಗಳನ್ನು ತಯಾರಿಸುವ ಮತ್ತು ಕಾರ್ಯಗತ ಮಾಡುವ ಸಮಯದಲ್ಲಿ ಆಡಳಿತ ವಿಚಾರಗಳಿಗೂ ಗಮನಕೊಟ್ಟು ಅವುಗಳ ಅಂದಾಜನ್ನು ತೆಗೆಯುವುದು ಅವಶ್ಯಕವಾಗುತ್ತದೆ. ಇಂತಹ ಒಂದು ಅಂದಾಜೂ ಸಿದ್ಧವಾಗಿದ್ದರೆ ಹೆಚ್ಚಿನ ಸಾಧನೆ ಸುಲಭಸಾಧ್ಯವಾಗಬಹುದು. ಯೋಜನೆ ತಯಾರಿಸುವುದು ಒಂದು, ಅದನ್ನು ಕಾರ್ಯಗತ ಮಾಡುವುದು ಇನ್ನೊಂದು. ಈ ಎರಡು ವಿಚಾರಗಳ ಮಧ್ಯೆ ಅಂತರವಿರುತ್ತದೆ. ನೀತಿಯ ನಿರೂಪಣೆ ಬೇರೆ, ಅದನ್ನು ಕಾರ್ಯ ರೂಪಕ್ಕಿಳಿಸುವ ಚೈತನ್ಯ ಕುಂಠಿತವಾದರೆ ನಮ್ಮ ಸಾಧನೆಯ ಗುಣ ಮೌಲ್ಯ ಕೂಡ ತಾನೇ ತಾನಾಗಿ ಇಳಿಮುಖವಾಗುತ್ತದೆ ಎಂದೇ ಈ ಅಂತರ ಆದಷ್ಟು ಕಡಿಮೆಯಾಗಬೇಕು.

ಆಡಳಿತ ಹೊಣೆ ಒಂದೊಂದು ಹೊಸ ಯೋಜನೆಯೊಂದಿಗೆ ಹೆಚ್ಚುತ್ತಾ ಹೋಗಿರುವುದು ಅನುಭವಕ್ಕೆ ಬಂದಿರುವಮಾತೇ ಆಗಿದೆ. ತರಬೇತಿಗೆ, ಸಿಬ್ಬಂದಿಯ ವಿಸ್ತರಣೆಗೆ ಮತ್ತು ಕಾರ್ಯ ವಿಧಾನದ ಸುಧಾರಣೆಗಳಿಗೆ ಹೆಚ್ಚು ಹೆಚ್ಚು ಗಮನ ಕೊಡಲಾಗಿದೆ ಮತ್ತು ಆಡಳಿತ ಹೊಣೆ ಹೇಗೆ ಹೆಚ್ಚುತ್ತಿದೆ ಎಂಬುದನ್ನು ಮನದಟ್ಟು ಮಾಡಿಕೊಡಲಾಗಿದೆ.

ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಕಾರ್ಯ ವಿಧಾನ ಬೃಹತ್ ರೂಪ ತಾಳುವುದೇ ಅಲ್ಲದೆ ಕೆಲಸ ನಡೆಯುವುದೂ ಕೂಡ ತುಂಬಾ ನಿಧಾನವಾಗಬಹುದು. ಸಾರ್ವಜನಿಕ ಉತ್ಸಾಹವನ್ನು ಕೆರಳಿಸುವ ಕಾರ್ಯ ಕೂಡ ಸಾಧ್ಯವಾಗಿದೆ. ಈ ವಿಚಾರದಲ್ಲಿ ನಮ್ಮ ನಿರೀಕ್ಷೆಗನುಗುಣವಾದ ಫಲ ದೊರಕಿದೆ ಎಂದೂ ಹೇಳುವಂತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯ ವಿಧಾನದ ಲೋಪವಿರುತ್ತದೆ ಆದುದರಿಂದಲೇ ಕಾರ್ಯನೀತಿ ಸಂಬಂಧವಾದ ನಿರ್ಣಯಗಳನ್ನು ನಾವು ಹೆಚ್ಚು ವ್ಯವಸ್ಥಾಬದ್ಧವಾಗಿ ಯೋಚಿಸಿಯೇ ಕೈಗೊಳ್ಳಬೇಕು. ಹಣ ಒದಗಿಸುವ ವಿಚಾರ, ಪರಸ್ಪರ ಸಮಾಲೋಚನಾ ವ್ಯವಸ್ಥೆಯನ್ನು ಮಾಡುವ ವಿಚಾರ, ಜವಾಬ್ದಾರಿಯನ್ನು ಗೊತ್ತುಮಾಡುವ ವಿಚಾರ ಆಡಳಿತ ಸೂತ್ರಗಳನ್ನೂ ಕಾರ್ಯ ವಿಧಾನಗಳನ್ನೂ ಗೊತ್ತುಮಾಡುವ ವಿಚಾರ—ಇವೇ ಮೊದಲಾದವುಗಳ ಬಗ್ಗೆ ಸಾಕಷ್ಟು ಯೋಚಿಸಿ ಅವುಗಳಿಗನ್ವಯಿಸಿದಂತೆ ಒಂದು ಪರಿಪೂರ್ಣ ವ್ಯವಸ್ಥೆಯನ್ನು ಕೈಗೊಳ್ಳಬೇಕಾದುದು ಆವಶ್ಯಕವಾಗುತ್ತದೆ.

### ಮೂರು ಮುಖ್ಯ ಸಮಸ್ಯೆಗಳು

ಸದ್ಯದ ಅಭಿವೃದ್ಧಿ ಘಟ್ಟದಲ್ಲಿ ಈ ವಿಚಾರಗಳಿಗನ್ವಯಿಸಿದಂತೆ ಮೂರು ಮುಖ್ಯ ಸಮಸ್ಯೆಗಳನ್ನು ನಾವು ಬಗೆಹರಿಸಿಕೊಳ್ಳಬೇಕಾಗುತ್ತದೆ, ಎಂದು ಹೇಳಬಹುದು. ೧ ಆರ್ಥಿಕ ವ್ಯವಸ್ಥೆಯ ಬೇರೆ ಬೇರೆ ಕ್ಷೇತ್ರಗಳಲ್ಲಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ಸಮನ್ವಯ ವ್ಯವಸ್ಥೆ ೨ ಸಾರ್ವಜನಿಕ ಕೈಗಾರಿಕೋದ್ಯಮಗಳ ಆಡಳಿತ ಸಂಬಂಧವಾದ ಸುವ್ಯವಸ್ಥೆ ೩. ಬೇಸಾಯ ಮತ್ತು ಸಣ್ಣ ಕೈಗಾರಿಕಾ ಕ್ಷೇತ್ರಗಳಲ್ಲಿ ವಿಸ್ತರಣಾ ಕಾರ್ಯ ಮತ್ತು ಸಮಾಜ ಕಲ್ಯಾಣಕ್ಷೇತ್ರದಲ್ಲಿ ಸಹಕಾರಿ ಪಾತ್ರ. ಈ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಇದೀಗ ಯೋಜನೆಗೂ ಅದನ್ನು ಕಾರ್ಯಗತ ಮಾಡುವುದಕ್ಕೂ ಮಧ್ಯೆ ಇರುವ ಅಂತರವನ್ನು ಹೋಗಲಾಡಿಸುವ ಪ್ರಯತ್ನಕ್ಕೆ ವಿಶೇಷ ಗಮನ ಕೊಡಲಾಗುತ್ತಿದೆ ಎಂದೂ ಹೇಳಬಹುದು.

ಯಾವುದೇ ಒಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಪರಸ್ಪರ ಹೊಂದಿಕೊಂಡು ನಡೆಯುವಂತೆ ಮಾಡುವ ಪ್ರಯತ್ನ ಮುಂದೆ ಇನ್ನೂ ಹೆಚ್ಚು ಜಟಿಲವಾಗಲೂಬಹುದು. ಪ್ರತಿಯೊಂದು ಕ್ಷೇತ್ರಕ್ಕನ್ವಯಿಸಿ ಇದಕ್ಕಾಗಿಯೇ ವಿಶೇಷ ಯೋಜನಾ ಪ್ರಯತ್ನ ನಡೆಯುವುದು ಆವಶ್ಯಕವಾಗುತ್ತದೆ. ಯಾವ ಒಂದು ಕಾರ್ಯ ಯೋಜನೆಯನ್ನು ತಯಾರಿಸುವಾಗಲೂ ಅದಕ್ಕೆ ಸಂಬಂಧಪಟ್ಟಂತಿರುವ ಇತರ ಎಲ್ಲಾ ಕಾರ್ಯ ಯೋಜನೆಗಳ ಪೂರ್ಣ ಅರಿವು ಆವಶ್ಯಕವಾಗುತ್ತದೆ. ಹೀಗೆ ಪರಸ್ಪರ ಹೊಂದಿಕೊಂಡಿರುವ ಕಾರ್ಯ ಯೋಜನೆಗಳು ಯಶಸ್ವಿಯಾಗಬೇಕಾದರೆ ಮೂಲತಃ ಕೆಲವು ವಿಷಯಗಳಿಗೆ ನಾವು ಗಮನ ಕೊಡಬೇಕಾಗುತ್ತದೆ ಬಂಡವಾಳ ಸಿಗುವ ಸಾಧ್ಯತೆ, ವಿದೇಶೀ ವಿನಿಮಯ ಸಂಬಂಧವಾದ ಆಗತ್ಯಗಳು ಮತ್ತು ಲಭ್ಯವಿರುವ ಸಂಪನ್ಮೂಲಗಳಿಗೆ ಸಂಬಂಧಪಟ್ಟಂತಿರುವ ಮೂಲ ಆವಶ್ಯಕತೆಗಳನ್ನು ಪೂರೈಸಿಕೊಳ್ಳದೆ ಕಾರ್ಯಯೋಜನೆ ಸಿದ್ಧಗೊಳಿಸುವುದು ಅನುಚಿತವಾಗುತ್ತದೆ.

ಯೋಜನೆಯನ್ನು ಕಾರ್ಯಗತ ಮಾಡುವ ಹೊಣೆ ಯೋಜನಾ ಆಯೋಗ, ಹಣಕಾಸು ಮಂತ್ರಿಶಾಖೆ ಮತ್ತು ಸಂಪನ್ಮೂಲಗಳನ್ನು ಗೊತ್ತುಮಾಡುವ ಸಮಿತಿಗಳು—ಇವುಗಳ ಪಾಲಿಗೆ ಇರುತ್ತದೆ. ಆದರೆ ಮೇಲೆ ತಿಳಿಸಿದಂತಹ ಸಮನ್ವಯ ಕಾರ್ಯ ಇವುಗಳ ವ್ಯಾಪ್ತಿಗೆ ಒಳಪಡುವುದಿಲ್ಲ. ಸಮಸ್ಯೆಗಳ ಸ್ವರೂಪವನ್ನು ಪ್ರತಿಯೊಂದು ಹಂತದಲ್ಲಿಯೂ ತಿಳಿದಿರುವುದು ಯೋಜನೆಯನ್ನು ಕಾರ್ಯಗತ ಮಾಡುವ ಸಂಸ್ಥೆಗಳ ಸಾಮರ್ಥ್ಯ ನಿರ್ಧರಿಸುವುದು, ಅವುಗಳು ಎದುರಿಸಬೇಕಾಗುವ ಸಮಸ್ಯೆಗಳ ಪೂರ್ಣ ಪರಿಚಯ ಪಡೆದಿರುವುದು, ಆಧುನಿಕ ಕಾರ್ಯ ವಿಧಾನಗಳನ್ನು ತಿಳಿದಿರುವುದು, ಕಾರ್ಯದಕ್ಷತೆಯನ್ನು ಹೆಚ್ಚಿಸುವುದು—ಇವು ಸಾಧ್ಯವಾದಂತೆಲ್ಲ ಸಮನ್ವಯ ಕಾರ್ಯವೂ ಹೆಚ್ಚು ಸುಲಭ ಸಾಧ್ಯವಾಗುತ್ತದೆ. ಸದ್ಯದ ಕಾರ್ಯವಿಧಾನಗಳು ಉತ್ತಮಗೊಳ್ಳಲು ಇನ್ನೂ ಅವಕಾಶವಿದೆ. ಸದ್ಯಕ್ಕೆ ಸಾಧ್ಯವಾಗಿರುವ ಸಮನ್ವಯ ಕಾರ್ಯ ಈ ದಿಶೆಯಲ್ಲಿ ಪ್ರಥಮ ಹೆಜ್ಜೆ ಎಂದೂ ಹೇಳಬಹುದು.

### ಕಾರ್ಯನಿರ್ವಾಹಕ ಘಟ್ಟ

ಕಾರ್ಯನಿರ್ವಾಹಕ ಘಟ್ಟಗಳಲ್ಲಿ, ನಾವು ಕಾರ್ಯನೀತಿ ನಿರ್ಣಯ ಹಾಗೂ ಯೋಜನಾ ಕಾರ್ಯಗಳಿಂದ ದೂರ ದೂರ ಹೋದಂತೆ ಪರಸ್ಪರ ಸಮಾಲೋಚನೆ ಹಾಗೂ ಸಮನ್ವಯ ಕಾರ್ಯದ ಆವಶ್ಯಕತೆ ಅನೇಕ ಕಡೆಗಳಲ್ಲಿ ಕಂಡುಬರುತ್ತದೆ. ಆದರೆ ಕೊರತೆಯ ರೂಪದಲ್ಲಿ ಅದರ ಆವಶ್ಯಕತೆ ಕಂಡುಬರುತ್ತದೆ ಎಂದೂ ಹೇಳಬಹುದು.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾರ್ಯನಿರ್ವಹಿಸುವ ಹೊಣೆಯನ್ನು ಕೆಲವರಿಗೆ ಸಂಪೂರ್ಣವಾಗಿ ವಹಿಸಿಕೊಟ್ಟು ಅವರನ್ನು ಜವಾಬ್ದಾರರನ್ನಾಗಿ ಮಾಡುವುದು ಪ್ರಯೋಜನಕಾರಿಯಾಗುತ್ತದೆ. ಅಗತ್ಯ ಕಂಡು ಬಂದಲ್ಲಿ ಅವರು ಸಲಹೆ ಪಡೆಯುವುದಕ್ಕೆ ಅವಕಾಶವಿರಬೇಕು. ಈ ರೀತಿ ಮಾಡುವುದರಿಂದ ತಾವು ನಿರ್ವಹಿಸಬೇಕಾಗಿರುವ ಜವಾಬ್ದಾರಿಗನುಗುಣವಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತವೆ. ಮೇಲ್ಮಟ್ಟಗಳಲ್ಲಿ ತುಂಬಾ ಭಾಗಿಯಾದ ಒಂದು ಸಮನ್ವಯ ವ್ಯವಸ್ಥೆ ಇರುವುದರಿಂದ, ಅದರ ಮೂಲ ಯಾವುದೇ ಇರಲಿ, ಇಡಿ ಆಡಳಿತ ವ್ಯವಸ್ಥೆ ಯಾಂತ್ರಿಕವಾಗಿ ಕೊನೆಗೆ ಉತ್ಸಾಹವೇ ಕುಗ್ಗುತ್ತದೆ.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾರ್ಯಯೋಜನೆ ಮುಖ್ಯ ಘಟಕವಾಗುತ್ತದೆ. ಪ್ರತಿಯೊಂದು ಕಾರ್ಯಯೋಜನೆಗೇ ಸಂಬಂಧಪಟ್ಟಂತೆ ಪ್ರತ್ಯೇಕ ಸಮನ್ವಯ ಸಮಸ್ಯೆಗಳಿರುತ್ತವೆ. ಕಾರ್ಯಯೋಜನೆಯ ಸಂಬಂಧವಾದ ಕಾಮಗಾರಿ ಹಾಗೂ ವಿವಿಧ ಹಂತದ ಉತ್ಪಾದನಾ ಕಾರ್ಯ ಇಲ್ಲಿ ಬರುತ್ತದೆ. ಸಾಕಷ್ಟು ತಾಂತ್ರಿಕ, ಆಡಳಿತ ಹಾಗೂ ಹಣಕಾಸು ಸಂಬಂಧವಾದ ವಿಚಾರಗಳನ್ನು ಪ್ರತಿಯೊಂದು ಕಾರ್ಯಯೋಜನೆಗೂ ಸಂಬಂಧಪಟ್ಟಂತೆ ನಾವು ಸಾಕಷ್ಟು ಯೋಚಿಸುತ್ತಿಲ್ಲವಾದ ಕಾರಣ ನಮ್ಮ ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗುವುದಕ್ಕೆ ಆತಂಕಗಳು ಬರುತ್ತವೆ. ಇದರ ಪರಿಣಾಮವಾಗಿ ಕೆಲವು ಅನಿಶ್ಚಿತ ಪರಿಸ್ಥಿತಿಗಳು ಉದ್ಭವಿಸುತ್ತವೆ, ಉತ್ಪಾದನಾ ವೆಚ್ಚ ಹೆಚ್ಚುತ್ತದೆ ಮತ್ತು ಕಾರ್ಯಯೋಜನೆಗಳ ಪ್ರಯೋಜ

([illegible]ನೇ ಪುಟ ನೋಡಿರಿ)

## ಆತ್ಮ ಶುದ್ಧವಾಗಿರಬೇಕು; ಆಡಂಬರ ಜೀವನ ಬಿಡಬೇಕು.

## ಜಾನಪದ ಕಥೆ

# ಬಾಲ ಬೆಳ್ಳಗಾಯಿತು

ಹಿಂದೊಮ್ಮೆ ಒಂದೂರಿನಲ್ಲಿ ಒಬ್ಬಳು ಅಜ್ಜಿ ಇದ್ದಳು. ಆವಳ ಬಳಿ ಅನೇಕ ಕುರಿಗಳಿದ್ದುವು. ಆದರೆ ಅವುಗಳನ್ನು ಕಾಯಲು ಕುರುಬನ್ಯಾರೂ ಆಕೆಗೆ ಸಿಗಲಿಲ್ಲ. ಹಾಗಾಗಿ ಒಂದು ದಿನ ಆಕೆ ಒಬ್ಬ ಕಾಯುವವನನ್ನು ಕಂಡುಹಿಡಿಯಬೇಕೆಂದು ಮನೆಬಿಟ್ಟು ಹೊರಟಳು. ಆವಳು ಅನೇಕರ ಬಳಿ ವಿಚಾರಿಸಿ ನೋಡಿದಳು. ಅವರೆಲ್ಲರಿಂದಲೂ ಒಂದೇ ಒಂದು ಉತ್ತರ ಸಿಗುತಿತ್ತು: ತಮಗೆ ಆ ಕೆಲಸವಿದೆ, ನಮಗೆ ಈ ಕಾರ್ಯವಿದೆ ಎಂದು. ತಮಗೆ ಬಿಡುವೇ ಇಲ್ಲವೆಂದು ಅವರೆಲ್ಲರೂ ಸ್ಪಷ್ಟವಾಗಿ ಸೂಚಿಸಿದರು. ಆಕೆಗೆ ಕುರುಬನೇ ದೊರಕಲಿಲ್ಲ. ತಿರುಗಾಡಿ ಸುತ್ತಾಡಿ ಆಕೆ ದಣಿದಳು, ಅಲ್ಲದೆ ಹೊತ್ತು ಕಳೆದಿತ್ತು. ಕುರಿಗಳು ಆಕೆಯ ಆಗಮನವನ್ನೇ ಎದುರು ನೋಡುತ್ತಿದ್ದುವು. ಇನ್ನು ಸುತ್ತಾಡಿ ಪ್ರಯೋಜನವಿಲ್ಲವೆಂದು ಆಕೆ ಮನೆಯ ದಾರಿ ಹಿಡಿದಳು. ಆಕೆಯ ಮನಸ್ಸು ಮನೆಯತ್ತ ಧಾವಿಸುತ್ತಿತ್ತಾದರೂ ಬಳಲಿ ಸೋತುಹೋಗಿದ್ದ ಕಾಲುಗಳು ಹಿಂದೆ ಬೀಳುತ್ತಿದ್ದುವು; ವಿಶ್ರಾಂತಿಗಾಗಿ ಆಕೆ ರಸ್ತೆಯ ಬದಿಯಲ್ಲಿ ಕುಳಿತುಕೊಂಡಳು.

ಹಾಗೆ ಆಕೆ ಸಾವರಿಸಿಕೊಳ್ಳುತ್ತಿದ್ದಾಗ ಅಲ್ಲಿಗೊಂದು ಕಾಡು ಹಂದಿ ಬಂತು. ಆ ವನವರಾಹವು ಆಕೆಯ ಬಳಿ, "ಅಜ್ಜೀ, ಅಜ್ಜೀ, ನೀನೇತಕ್ಕಾಗಿ ಇಲ್ಲಿ ಕುಳಿತುಕೊಂಡಿರುವೆ?" ಎಂದು ವಿಚಾರಿಸಿತು. ಮುದುಕಿಯು ಉತ್ತರವಿತ್ತಳು—"ಮಿತ್ರನೇ, ಕುರಿ ಮಂದೆ ಕಾಯುವವನೊಬ್ಬನನ್ನು ಕೆಲಸಕ್ಕೆ ಕಂಡುಹಿಡಿಯಬೇಕೆಂದು ಪಕ್ಕದ ಗ್ರಾಮಕ್ಕೆ ಹೋಗಿದ್ದೆ. ಆದರೆ ನನಗೆ ಯಾರೂ ಸಿಗಲಿಲ್ಲ."

ಕಾಡು ಹಂದಿಯು ಹೇಳಿತು, "ಬೇಕಾದಲ್ಲಿ ನಿನ್ನತ್ತ ನೋಡಿ ಆ ಕೆಲಸಕ್ಕೆ ನಾನು ಒಪ್ಪಿಕೊಳ್ಳುತ್ತೇನೆ."

ಅಜ್ಜಿಗೆ ಸ್ವಲ್ಪ ಸಂಶಯ ಉಂಟಾಯಿತು. ಆದರೂ ಆಕೆ "ಸರಿ, ಅವುಗಳನ್ನು ಕರೆಯಲು ನೀನು ಹೇಗೆ ಕೂಗುತ್ತೀ?" ಎಂದು ಪ್ರಶ್ನಿಸಿದಳು.

ಕಾಡುಹಂದಿಯು ಕರ್ಣಕಠೋರವಾಗಿ ಗುರುಗುಟ್ಟಿತು. "ಓ! ನಿನ್ನ ಸ್ವರವು ಭಯಾನಕವಿದೆ ನನ್ನ ಕುರಿಮಂದೆಯು ನಿನ್ನ ಈ ಸ್ವರವನ್ನು ಕೇಳಿದೊಡನೆ ಅಲ್ಲೇ ಭಯದಿಂದ ಸತ್ತುಹೋದೀತು." ಎಂದು ಆಕೆಯು ಹೇಳಿದಳು.

ಮಾತುಮುಗಿಯುತ್ತಿದ್ದಂತೆ ಆಕೆ ಎದ್ದು ತನ್ನ ದಾರಿ ಹಿಡಿದಳು. ಇನ್ನೊಂದು ಕಡೆ ದಾರಿಯಲ್ಲಿ ಹಾಗಿಯೇ ಪುನಃ ವಿಶ್ರಾಂತಿಗಾಗಿ ಆಕೆ ಕುಳಿತುಕೊಂಡಾಗ ಅಲ್ಲಿಗೊಂದು ತೋಳ ಬಂತು. "ಅಜ್ಜೀ, ಅಜ್ಜೀ, ನೀನಿಲ್ಲೇನು ಮಾಡುತ್ತಿರುವುದು?" ತೋಳ ವಿಚಾರಿಸಿತು. "ಕುರಿಮಂದೆ ಕಾಯುವವನೊಬ್ಬನು ಬೇಕಾಗಿದ್ದಾನೆ. ಅದಕ್ಕಾಗಿ ಪಕ್ಕದ ಗ್ರಾಮಕ್ಕೆ ಹೋಗಿದ್ದೆ. ನನಗಾರೂ ಸಿಗಲೇ ಇಲ್ಲ. ನಾನೀಗ ಮನೆಯ ದಾರಿ ಹಿಡಿದಿರುವೆನು. ದಣಿವಾರಿಸಿಕೊಳ್ಳಲಿಕ್ಕಾಗಿ ನಾನಿಲ್ಲಿ ತಂಗಿದ್ದೇನೆ." ಆಕೆ ತಿಳಿಸಿದಳು.

"ಅಯ್ಯೋ, ಪಾಪ! ಯಾರೂ ಸಿಗಲಿಲ್ಲವೇನು? ಆದರೂ ಬೆದರಬೇಡ ಅಜ್ಜಿ, ನಾನೇ ನಿನ್ನ ಕುರಿಗಳನ್ನು ಕಾಯುತ್ತೇನೆ." ತೋಳ ಸ್ಪಷ್ಟಪಡಿಸಿತು.

ಸಂಶಯದಿಂದಲೇ ಮುದುಕಿಯು ಕೇಳಿದಳು, "ಕುರಿಗಳನ್ನು ಹೇಗೆ ಕರೆಯುತ್ತಿ ಎನ್ನುವದನ್ನು ಹೇಳು."

ತೋಳವು ಕರ್ಕಶವಾಗಿ ಕೂಗಿತು. "ಓ, ಇಲ್ಲ. ನನ್ನ ಕುರಿಗಳು ನಿನ್ನ ಈ ಕರ್ಕಶ ಶಬ್ದವನ್ನು ಕೇಳಿದಲ್ಲಿ ಹುಲ್ಲು ತಿನ್ನುವದನ್ನೂ ಬಿಟ್ಟುಬಿಟ್ಟಾವು" ಎಂದಾಕೆ ಉತ್ತರ ಕೊಟ್ಟು ತನ್ನ ದಾರಿಯನ್ನು ಹಿಡಿದಳು.

ಹಾಗೆ ಸಾಗುತ್ತಿದ್ದಾಗ ದಾರಿಯಲ್ಲಿ ಒಂದು ನರಿಯು ಆಕೆಗೆ ಇದಿರಾಯಿತು.

"ಏನಜ್ಜೀ, ಇಷ್ಟು ಅವಸರ?" ನರಿ ಪ್ರಶ್ನೆ ಹಾಕಿತು.

"ನಾನು ಒಬ್ಬ ಕುರುಬನನ್ನು ಗೊತ್ತುಹಚ್ಚಬೇಕೆಂದು ಹುಡುಕಾಡಿ ಅಲೆದು ಸೋತು ಇದೀಗ ಹಿಂತಿರುಗುತ್ತಿದ್ದೇನೆ. ಕುರಿಗಳು ನನ್ನ ದಾರಿಯನ್ನೇ ಎದುರು ನೋಡುತ್ತಿರುವದರಿಂದ ಅವಸರ ಅವಸರವಾಗಿ ಹೆಜ್ಜೆ ಹಾಕುತ್ತಿದ್ದೇನೆ."

"ನಿನಗಾಗಿ ಆ ಕೆಲಸಕ್ಕೆ ನಾನೊಪ್ಪಿಕೊಳ್ಳಲೇ?" ನರಿ ಕೇಳಿತು. "ಉಹೂಂ, ಅದು ಸಾಧ್ಯ ಇರುವದಿಲ್ಲ ಸ್ವಲ್ಪ ಸಮಯದ ಹಿಂದೆ ಒಂದು ಕಾಡು ಹಂದಿ, ಹಾಗೆ ಮತ್ತೊಮ್ಮೆ ಒಂದು ತೋಳವು ಆ ಕೆಲಸಕ್ಕಾಗಿ ಮುಂದೆ ಬಂದಿದ್ದುವು. ಅವುಗಳ ಸ್ವರ ಭಯಾನಕವಾಗಿತ್ತು. ನಿನ್ನ ಸ್ವರ ಕೂಡಾ ಹಾಗೆಯೇ ಇರಬಹುದು" ಮುದುಕಿಯು ವಿವರಿಸಿದಳು.

ನರಿಯು ಕುತಂತ್ರ ಹಾಗೂ ಉಪಾಯಗಾರ ಪ್ರಾಣಿ ಇದೆ. "ಅಮ್ಮಾ ನಿನ್ನ ಸ್ವರದ ಹಾಗೆ ನನ್ನ ಸ್ವರವು ಮಧುಮಧುರವಾಗಿರಲಿಕ್ಕಿಲ್ಲವೆಂಬುದನ್ನು ನಾನೊಪ್ಪಿಕೊಳ್ಳಲೇ ಬೇಕು. ಆದರೆ ನನ್ನ ಸ್ವರದಿಂದ ನಿನ್ನ ಕುರಿಗಳು ದಿಗಿಲುಗೊಳ್ಳಲಿಕ್ಕಿಲ್ಲ" ನರಿ ಸಿಧಾನವಾಗಿ ತಿಳಿಸಿ, ಬಾಯಿ ಮುಚ್ಚಿಕೊಂಡೇ ಮೆಲ್ಲನೆ ರಾಗವೆಳೆಯಿತು.

ತನ್ನ ಕಂಠದ ಕುರಿತು ನರಿಯು ಹೊಗಳಿದುದರಿಂದ ಸಂತೋಷಗೊಂಡ ಮುದುಕಿಯು ನರಿಯನ್ನು ಕೆಲಸಕ್ಕೆ ನೇಮಿಸಿಕೊಂಡಳು.

ಮರುದಿನದಿಂದ ನರಿಯು ತನ್ನ ಕಾರ್ಯವನ್ನಾರಂಭಿಸಿತು. ಅದು ಬೇಗ ಮುಂಜಾನೆ ಎದ್ದು ಕುರಿಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗುತ್ತಿತ್ತು ಮತ್ತು ರಾತ್ರಿ ಬಹಳ ತಡವಾಗಿಯೇ ಹಿಂತಿರುಗಿಸಿಕೊಂಡು ಬರುತ್ತಿತ್ತು. ನರಿಯ ಕಾರ್ಯಶೀಲತೆ ಕಂಡು ಮುದುಕಿ ಮುದಗೊಂಡಳು, ಆಕೆಗೆ ಆನಂದವಾಯಿತು. ಮೆಲ್ಲಮೆಲ್ಲನೆ ಆಕೆ ತನ್ನ ಮೇಲ್ವಿಚಾರಣೆಯ ಕೆಲಸವನ್ನೂ ಬಿಟ್ಟುಕೊಟ್ಟಳು.

ಹೀಗೆ ಕೆಲದಿನಗಳು ಕಳೆದುವು. ಹಾಗಿದ್ದಾಗ ಒಮ್ಮೆ ಕಣ್ಣೀರು ಸುರಿಸುತ್ತ ನರಿಯು ಬಂದು 'ಅಯ್ಯೋ', ಅಜ್ಜಿ! ನಿನ್ನೆ ಒಂದು ಕಾಡು ಹಂದಿ ಬಂದು ಒಂದು ಕುರಿಯನ್ನು ತಿಂದುಬಿಟ್ಟಿತು— ಅದೂ ಚಿಕ್ಕಾಗಿ ಕೊಬ್ಬಿದ್ದ ಕುರಿಯನ್ನು......

ಅತಿ ನಾಚಿಕೆಯಿಂದ ಮುಖ ಕೆಳಗೆ ಹಾಕಿಕೊಂಡಿರುವಂತೆ ನಿಂತುಕೊಂಡ ನರಿ ಅಲ್ಲಿಂದ ಅಲುಗಾಡಲೇ ಇಲ್ಲ. ನರಿ ನುಡಿದುದರಲ್ಲಿ ಸತ್ಯಾಂಶ ಇರಬೇಕೆಂದು ಮುದುಕಿ ನಂಬಿದಳು. "ಹೋಗಲಿ, ಇನ್ನು ನೀನು ಬಹಳ ಜಾಗ್ರತೆಯಿಂದಿರಲೇ ಬೇಕು......"

ನರಿ ತನ್ನ ಕಾರ್ಯವನ್ನು ಮುಂದುವರಿಸಿತು, ಕೆಲವು ದಿನಗಳ ನಂತರ ಪುನಃ ಆ ನರಿಯು ಅಳುತ್ತ ಒಂದು ತೋಳ ಒಂದು ಬಂದು ಕುರಿಯನ್ನು ತಿಂದು ಬಿಟ್ಟಿತೆಂದು ವರದಿಯನ್ನೊಪ್ಪಿಸಿತು. ಆ ನರಿಯು ಕರುಣೆ ಹುಟ್ಟುವಂತೆ ಕಣ್ಣೀರು ಸುರಿಸಿತು. ನರಿ ನುಡಿಯುವುದೆಲ್ಲಾ ಸತ್ಯವೆಂದೇ ನಂಬಿ ಮುದುಕಿಯು ಅದನ್ನು ಕ್ಷಮಿಸಿದಳು. ಆದಾದ ನಂತರ ನರಿಯು ಆಗಾಗ ಮುದುಕಿಯ ಬಳಿ ಬಂದು ಕಾಡು ಹಂದಿ ಕುರಿಯನ್ನು ತಿಂದಿತು. ತೋಳ ಬಂದು ಕುರಿಯನ್ನು ತೆಗೆದುಕೊಂಡು ಹೋಯಿತೆಂದು ಹೇಳಲಾರಂಭಿಸಿತು. ಅಂತಹ ವೇಳೆಯಲ್ಲೆಲ್ಲ ಮುದುಕಿ ಕ್ಷಮಿಸುವ ವರೆಗೂ ನರಿ ಕಣ್ಣೀರ ಕೋಡಿಯನ್ನು ನಿಲ್ಲಿಸುತ್ತಿರಲಿಲ್ಲ.

ಒಂದು ದಿನ ಮುಂಜಾನೆಯೇ ಎದ್ದ ಮುದುಕಿಯು ಬೇಗ ಬೇಗನೆ ಎಲ್ಲಾ ಕೆಲಸಗಳನ್ನು ಮುಗಿಸಿ ನರಿಗೆ ಸಹಾಯ ಮಾಡಲು ಹೋಗಬೇಕೆಂದು ನಿಶ್ಚಯಿಸಿಕೊಂಡಳು. ಆಕೆ ತನ್ನ ತಿಂಡಿಯನ್ನು ಮುಗಿಸಿ ತನ್ನಷ್ಟಕ್ಕೇನೇ," ಆ ಬಡ ನರಿಗೆ ಏನನ್ನಾದರೂ ತೆಗೆದುಕೊಂಡು ಹೋಗಲೇ ಬೇಕು. ಅದು ಬಹಳ ಕಷ್ಟದಿಂದ ತನ್ನ ಕೆಲಸವನ್ನು ನೋಡಿಕೊಳ್ಳುತ್ತಿದೆ" ಎಂದು ಹೇಳಿಕೊಂಡಳು. ನರಿಗೆ ಬೆಣ್ಣೆ ಎಂದರೆ ಬಹಳ ಪ್ರೀತಿ. ಆಕೆಯೂ ಒಂದು ಮುದ್ದೆ ಬೆಣ್ಣೆಯನ್ನೇ ನರಿಗಾಗಿ ಕಟ್ಟಿಕೊಂಡಳು.

ಅಡವಿಗೆ ಬಂದಾಗ ಕುರಿಗಳ ಸಂಖ್ಯೆ ಕಮ್ಮಿಯಾಗಿದ್ದುದು ಆಕೆಯ ಗಮನಕ್ಕೆ ಬಂತು. ನರಿಯು ಅಲ್ಲೆಲ್ಲಾ ಆಕೆಯ ಕಣ್ಣಿಗೆ ಬೀಳಲಿಲ್ಲ. ಹಾಗೆ ಹುಡುಕುತ್ತಿದ್ದಾಗ, ದೂರದಲ್ಲಿ ಇತ್ತ ಬೆನ್ನು ಹಾಕಿ ನರಿ ಕುಳಿತುಕೊಂಡಿರುವದನ್ನು ಆಕೆ ಕಂಡಳು. ನರಿ ಅದೇನನ್ನೋ ಗಬಗಬನೆ ತಿನ್ನುತ್ತಿದೆಂಬುದು ಆಕೆಗೆ ಗೊತ್ತಾಯಿತು.

'ಪಾಪ! ನರಿಗೆ ಬಹಳ ಹಸಿವಾಗಿದೆಯೆಂದು ಕಾಣುತ್ತದೆ. ಪಾಪ! ಮರದ ಬೇರುಗಳನ್ನು ತಿನ್ನುತ್ತಿರಬಹುದು ...." ಎಂದು ಹೇಳಿಕೊಳ್ಳುತ್ತಿದ್ದಂತೆ ಆಕೆ ನರಿಯ ಸಮೀಪಕ್ಕೆ ಬಂದಳು, ಅಲ್ಲಿ ನೋಡಿದಾಗ ನರಿಯು ಕುರಿಮಾಂಸದಿಂದ ಔತಣವನ್ನೇ ಏರ್ಪಡಿಸಿಕೊಂಡಿರುವದು ಆಕೆ ಕಂಡಳು.

ರೇಗಿದ ಮುದುಕಿಗೆ ಏನು ಮಾಡಬೇಕೆಂದು ತೋಚಲಿಲ್ಲ ಹಾಳಾಗಿ ಹೋಗೆಂದು ಕೈಯ್ಯಲ್ಲಿದ್ದ ಬೆಣ್ಣೆಮುದ್ದೆಯಿಂದಲೇ ನರಿಗೆ ಗುರಿ ಇಟ್ಟಳು. ನರಿ ಪೆಟ್ಟನ್ನು ತಪ್ಪಿಸಿಕೊಂಡಿತು. ಅದು ಓಡಿಹೋಯಿತು. ಆದರೂ ಬೆಣ್ಣೆ ಮುದ್ದೆಯು ಅದರ ಬಾಲದ ತುದಿಗೆ ತಾಗಿತು. ಆದರ ಬಾಲದ ತುದಿಯು ಬೆಳ್ಳಗಾಯಿತು.

ಅಂದಿನಿಂದ ನರಿಗಳ ಬಾಲದ ತುದಿ ಬೆಳ್ಳಗಾಗಿದೆ.

(ಆಧಾರದಿಂದ.)

—ಶ್ರೀ ಶಿವಶಂಕರ, ಮದ್ರಾಸು.





**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

**ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ**

**ಹೊಸ ಪುಸ್ತಕ—**
**ನಚಿಕೇತ'ರ,**
ನವೀನ ಕಾದಂಬರಿ—

**ಹಸುರು ಹಂಸ**

**ಇದೀಗ ಪ್ರಕಟವಾಗಿದೆ.**
ಬೆಲೆ: ರೂ. ಎರಡು.
ವಿಚಾರಿಸಿರಿ,
**ನವಯುಗ ಪ್ರೆಸ್, ಉಡುಪಿ.**

ನಿಸರ್ಗಸುಂದರ

# ಅಂಡಮಾನ ನಿಕೋಬಾರ ದ್ವೀಪಗಳು

ಫೆಬ್ರುವರಿ ತಿಂಗಳ ಆದಿ ಭಾಗದಲ್ಲಿ ಗೃಹ ಮಂತ್ರಿ ಲಾಲ್ ಬಹಾದೂರ್ ಶಾಸ್ತ್ರಿಯವರು ಅಂಡಮಾನ್ ನಿಕೋಬಾರ್ ದ್ವೀಪಗಳ ಪ್ರವಾಸಕ್ಕೆಂದು ಹೊರಟು ನಿಂತಾಗ ಪ್ರಧಾನಿ ನೆಹರೂರವರು, "ಕಾಲಾಪಾನಿ ಶಿಕ್ಷೆ ಅನುಭವಿಸಲು ನೀವೇನು ಅಪರಾಧ ಮಾಡಿರುವಿರಿ?" ಎಂದು ತಮಾಷೆ ಮಾಡಿದರು.

ಪ್ರಧಾನಿಯವರ ಮಟ್ಟಿಗೆ ಅದು ತಮಾಷೆಯ ಒಂದು ಪ್ರಸಂಗವಾಯಿತು. ಆದರೆ ಶ್ರೀ ಲಾಲ್‌ಬಹಾದೂರ್‌ರವರ ದೊಡ್ಡಪ್ಪನವರಿಗೆ ಮಾತ್ರ ಈ ಪ್ರವಾಸದ ವಿಚಾರ ತುಂಬಾ ಗಂಭೀರವೆನಿಸಿತು. ಕಾತರಗೊಂಡ ಧ್ವನಿಯಲ್ಲಿ ಅವರು ಕೇಳಿದರು: "ಲಾಲ್, ಈ ಶಿಕ್ಷೆ ಅನುಭವಿಸಲು ಬೇರೆ ಯಾವ ಮಂತ್ರಿಗಳೂ ಸಿಗಲಿಲ್ಲವೇ? ನೀನೇ ಏಕೆ ಹೋಗಬೇಕು?"

ಅಂಡಮಾನ್ ದ್ವೀಪಗಳು ಅಷ್ಟು ಸುಂದರವೆಂಬ ಕಲ್ಪನೆ ಶ್ರೀ ಲಾಲ್‌ಬಹಾದೂರರಿಗೂ ಇರಲಿಲ್ಲ. ಅಂಡಮಾನ್ ದ್ವೀಪಗಳು ಭಾರತದಲ್ಲಿಯೇ ಅತ್ಯಂತ ಸುಂದರವಾದ ಹಾಗೂ ದೃಶ್ಯಗಳನ್ನು [illegible]ವಂತಹ ನಿಸರ್ಗ ಸಂಪತ್ತಿರುವ ಪ್ರದೇಶವೆಂದು ಹೇಳಬಹುದು.

ಈ ಸೌಂದರ್ಯ ಶ್ರೀಯನ್ನು ನೋಡುತ್ತಾ ಮೂಕರಾಗಿ ನಿಂತ ಶ್ರೀ ಲಾಲ್‌ಬಹಾದೂರ್ ಶಾಸ್ತ್ರಿಯವರು, "ಎಂತಹ ರಮ್ಯ ಪ್ರದೇಶ, ಇದರ ಬಗ್ಗೆ ನಾವು ನಿಜಕ್ಕೂ ಹೆಮ್ಮೆ ಪಡಬಹುದು." ಎಂದು ಉದ್ಗಾರ ತೆಗೆದರು.

ಬಂಗಾಳಕೊಲ್ಲಿಯ ಮಧ್ಯೆ ಸಣ್ಣ ಚುಕ್ಕೆಗಳಂತೆ ಕಾಣುವ ಅಂಡಮಾನ್ ನಿಕೋಬಾರ್ ದ್ವೀಪಗಳ ಒಟ್ಟು ಸಂಖ್ಯೆ ೨೦೪. ಇವುಗಳ ವಿಸ್ತೀರ್ಣ ೩,೨೧೫ ಚ. ಮೈಲು ದೆಹಲಿಗಿಂತ ಆರುಪಟ್ಟು ಹೆಚ್ಚು!

ಅಂಡಮಾನ್ ನಿಕೋಬಾರ್ ದ್ವೀಪಗಳ ರಾಜಧಾನಿ ಪೋರ್ಟ್ ಬ್ಲೇರ್. ಸುಮಾರಾಗಿ ಒಂದು ಆಧುನಿಕ ನಗರ. ಈ ದ್ವೀಪಗಳಿಗೇ ವಿಶಿಷ್ಟವಾದ ಒಂದು ಸಂಸ್ಕೃತಿಯೂ ಇದೆ. ಕಾರ್ ನಿಕೋಬಾರ್ ಇಲ್ಲಿಯ ಸಂಸ್ಕೃತಿಯ ಮುಖ್ಯ ಕೇಂದ್ರ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ನಾಲ್ಕು ದಿನಗಳ ಪ್ರವಾಸಕ್ಕೆಂದು ಬಂದ ಗೃಹ ಮಂತ್ರಿಗಳು ಈ ಎರಡೂ ಸ್ಥಳಗಳಿಗೆ ಭೇಟಿ ಕೊಟ್ಟರು.

### ರಾಜಧಾನಿ ಪೋರ್ಟ್ ಬ್ಲೇರ್

ರಾಜಧಾನಿ ಪೋರ್ಟ್ ಬ್ಲೇರ್ ನಗರವನ್ನು ನೀವು ನೋಡಬೇಕು. ದಟ್ಟವಾಗಿ ಬೆಳೆದಿರುವ ತೆಂಗಿನ ಮರಗಳ ಮಧ್ಯೆ ಸಣ್ಣಪುಟ್ಟ ಬೆಟ್ಟಗಳ ಮೇಲೆ ಹರಡಿಕೊಂಡಿರುವ ಈ ನಗರ ನೋಡಲು ತುಂಬಾ ರಮ್ಯವಾಗಿದೆ. ಸುತ್ತಲೂ ಆ ಅರಣ್ಯಗಳು ಮತ್ತು ಸಮುದ್ರದ ಆ ನೀಲ ಜಲ! ಯಾವುದೋ ಬೇರೊಂದು ಲೋಕಕ್ಕೆ ಬಂದಿರುವಂತೆ ಭಾಸವಾಗುತ್ತದೆ.

ಈ ಪ್ರಕೃತಿ ಸೌಂದರ್ಯವನ್ನು ದಿಟ್ಟಿಸುತ್ತಾ ನಿಂತಿರುವ ಹಾಗೆಯೇ ಇತಿಹಾಸದ ನೆನಪುಗಳು ಮರುಕಳಿಸಿ ಬರುತ್ತವೆ. ಪ್ರಾಯಶಃ ಸಮುದ್ರದ ಈ ನೀಲ ಜಲವನ್ನು ಕಂಡೇ ಅದಕ್ಕೆ ಕಾಲಾಪಾನಿ ಎಂದು ಕರೆದಿರಬೇಕು. ೧೮೫೭ರ ಹೋರಾಟದಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಪ್ರೇಮಿಗಳನ್ನು ಬ್ರಿಟಿಷರು ಈ ದ್ವೀಪಗಳಲ್ಲಿ ಕೊಳೆ ಹಾಕಿದ್ದರು. ರಾಜಕೀಯ ಬಂದಿಗಳಾಗಿ ಈ ಏಕಾಂತ ಪ್ರದೇಶಕ್ಕೆ ಬರುವುದಕ್ಕೆ ಬದಲಾಗಿ ಸ್ವತಂತ್ರ ಜೀವಿಗಳಾಗಿ ಇಲ್ಲಿಗೆ ಅವರು ಬಂದಿದ್ದರೆ ಇದನ್ನೇ ಪ್ರಾಯಶಃ ಅವರು ಭೂಸ್ವರ್ಗವೆಂದು ಕರೆಯುತ್ತಿದ್ದರು. ಮುಂದೆ ಈ ಪ್ರದೇಶ ಖೈದಿಗಳನ್ನು ನೆಲೆಗೊಳಿಸುವ ಪ್ರದೇಶವೇ ಆಯಿತು; ಮತ್ತು ದೇಶಭ್ರಷ್ಟರಾದವರನ್ನೆಲ್ಲ ಈ ಏಕಾಂತ ಪ್ರದೇಶಕ್ಕೆ ಹಾಕತೊಡಗಿದರು. ಕಾಲಾಪಾನಿ ಶಿಕ್ಷೆ ಹೀಗೆ ಅತ್ಯಂತ ಘೋರ ಶಿಕ್ಷೆಯೂ ಆಯಿತು. ಭಾರತದಲ್ಲಿ ಯಾರ ಇರುವಿಕೆ ಬ್ರಿಟಿಷ ಸಾಮ್ರಾಜ್ಯಶಾಹಿ ಶಕ್ತಿಗೆ ಆತಂಕಕಾರಿಯಾಗಿತ್ತೋ ಅವರನ್ನೆಲ್ಲ ಈ ದ್ವೀಪಗಳಲ್ಲಿ ಕೊಳೆಹಾಕುವುದು ಆ ಶಿಕ್ಷೆಯ ಉದ್ದೇಶವಾಗಿತ್ತು.

ಆದರೆ ಇಂದು ಪೋರ್ಟ್ ಬ್ಲೇರ್ ನಗರ ಆಧುನಿಕ ರೂಪ ತಳೆದಿದೆ. ಡಾಂಬರು ಬೀದಿಗಳಲ್ಲಿ ಬಸ್ಸುಗಳು ಟ್ಯಾಕ್ಸಿಗಳು ಓಡಾಡುತ್ತವೆ, ವಿದ್ಯುಚ್ಛಕ್ತಿ ಇದೆ ಮತ್ತು ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಇದೆ. ಇಟ್ಟಿಗೆ ಸಿಗುವುದಿಲ್ಲವಾದ ಕಾರಣ ಮನೆಗಳನ್ನು ಕಟ್ಟುವುದಕ್ಕೆ ಮರಮಟ್ಟುಗಳನ್ನೇ ಉಪಯೋಗಿಸುತ್ತಾರೆ.

ಉಷ್ಣ ವಲಯ ಪ್ರದೇಶವಾದ ಕಾರಣ ಬಿಸಿಲು ಹೆಚ್ಚು. ಆದರೆ ಸಮುದ್ರದ ತಂಗಾಳಿ ಇಲ್ಲಿಯ ಹವಾಗುಣವನ್ನು ತಂಪಾಗಿಸುತ್ತದೆ. ಭಾರತದ ಪಶ್ಚಿಮ ತೀರವನ್ನು ಮತ್ತು ಪಶ್ಚಿಮ ಘಟ್ಟಗಳನ್ನು ನೋಡಿರುವವರಿಗೆ ಇಲ್ಲಿ ಅವುಗಳ ಹೋಲಿಕೆ ಸಿಗುತ್ತದೆ. ಬಿಸಿಲು ಎಷ್ಟು ಅಧಿಕವೋ, ಮಳೆಯೂ ಅಷ್ಟೇ ಅಧಿಕ. ವರ್ಷಕ್ಕೆ ೧೨೦ ಅಂಗುಲ. ಇಷ್ಟಾದರೂ ಈ ಪ್ರದೇಶ ತೇವ ಪ್ರದೇಶವಲ್ಲ. ಇಡೀ ವರ್ಷ ಕಣ್ಮನಗಳನ್ನು ತಣಿಸುವ ಹಚ್ಚನೆಯ ಹಸಿರು ಬಣ್ಣ ಎಲ್ಲೆಲ್ಲೂ ಎದ್ದು ಕಾಣುತ್ತಿರುತ್ತದೆ.

ಪೋರ್ಟ್ ಬ್ಲೇರ್ ನಗರದಲ್ಲಿ ಗುಡ್ಡಗಾಡಿನ ಮೂಲ ನಿವಾಸಿಗಳು ಕಾಣಸಿಗುವುದಿಲ್ಲ. ಇಲ್ಲಿಯ ೧೪,೦೦೦ದಷ್ಟು ಜನಸಂಖ್ಯೆಯಲ್ಲಿ ಬಹು ಮಂದಿ ಮುಖ್ಯ ಭಾರತ-ಭೂಪ್ರದೇಶದಿಂದ ಬಂದಿರುವವರೇ ಆಗಿದ್ದಾರೆ. ಪ್ರಾಯಶಃ ಭಾರತದ ಪ್ರತಿಯೊಂದು ರಾಜ್ಯದಿಂದ ಬಂದವರೂ ಇಲ್ಲಿದ್ದಾರೆ ಎಂದು ಹೇಳಬಹುದು.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿನ ಮೂಲ ನಿವಾಸಿಗಳಾದ ಓಂಗೇ ಒಂದು ಜಾರ್‌ವಾ ಗುಡ್ಡಗಾಡು ಜನರು ಸಾಮಾನ್ಯವಾಗಿ ದಟ್ಟವಾದ ಕಾಡುಗಳ ಮಧ್ಯೆ ವಾಸಿಸುತ್ತಾರೆ. ಅವರದೇ ಒಂದ ಲೋಕ. ಹೊರ ಜಗತ್ತಿನೊಡನೆ ಅವರ ಸಂಪರ್ಕ ಬಹಳ ಕಡಿಮೆಯೆಂದೇ ಹೇಳಬಹುದು. ಅವರು ಇಂದಿಗೂ ಒಂದು ಸಮಸ್ಯೆಯೇ ಆಗಿದ್ದಾರೆ. ಅವರನ್ನು ನಾಗರಿಕ ಜಗತ್ತಿಗೆ ತರುವುದು ಇನ್ನೂ ಸಾಧ್ಯವಾಗಿಲ್ಲ.

ಭಾರತ-ಭೂಪ್ರದೇಶದಿಂದ ಪ್ರತ್ಯೇಕವಾಗಿ ಹೋಗಿರುವ ಈ ಪ್ರದೇಶದ ಜನರು ಮುಖ್ಯ ಭೂಪ್ರದೇಶದ ಜೊತೆಗೆ ಹೆಚ್ಚು ನಿಕಟವಾದ ಸಂಬಂಧವನ್ನು ಅಪೇಕ್ಷಿಸುತ್ತಾರೆ. ವಾರಕ್ಕೊಂದು ಹಡಗು ಬರುತ್ತದೆ; ವಾರಕ್ಕೊಂದು ವಿಮಾನ ಬರುತ್ತದೆ. ಉಳಿದ ದಿನಗಳಲ್ಲಿ ಹೊರಗಿನ ಸಂಪರ್ಕವೇ ಇಲ್ಲ. ದೆಹಲಿ, ಮದರಾಸ್, ಕಲ್ಕತ್ತ ಈ ನಗರಗಳ ಜೀವನಕ್ಕೆ ಹೊಂದಿಕೊಂಡಿರುವವರಿಗಂತೂ ಅಂಡಮಾನದಲ್ಲಿ ಆ ಪಟ್ಟಣಗಳ ನೆನಪು ಮರುಕಳಿಸುತ್ತದೆ.

### ಗೃಹ ಮಂತ್ರಿಗಳ ಭೇಟಿ

ಅಂಡಮಾನ್ ನಿಕೋಬಾರುಗಳಿಗೆ ಪ್ರಮುಖ ವ್ಯಕ್ತಿಗಳು ಆಗಮಿಸುವುದು ತುಂಬ ಅಪರೂಪದ ಸಂಗತಿ. ಆದುದರಿಂದಲೇ ಇರಬೇಕು, ಗೃಹ ಮಂತ್ರಿಗಳನ್ನು ಸ್ವಾಗತಿಸಲು ಮತ್ತು ಅವರ ದರ್ಶನ ಪಡೆಯಲು ಜನರ ಭಾರಿ ಜನಸಂದಣಿ ಸೇರಿತ್ತು. ೧೯೫೨ರಲ್ಲಿ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಈ ದ್ವೀಪಗಳಿಗೆ ಭೇಟಿ ಕೊಟ್ಟಿದ್ದರು. ಅವರ ನಂತರ ಇಲ್ಲಿಗೆ ಆಗಮಿಸಿದ ಪ್ರಥಮ ಕೇಂದ್ರ ಮಂತ್ರಿಗಳೆಂದರೆ ಗೃಹಮಂತ್ರಿ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿ. ಹೆಜ್ಜೆ ಹೆಜ್ಜೆಗೂ ಸ್ವಾಗತ ಮಂಟಪಗಳನ್ನು ರಚಿಸಲಾಗಿತ್ತು. ಮತ್ತು ಗೃಹ ಮಂತ್ರಿಗಳನ್ನು ಜೈ ಹಿಂದ್, ಭಾರತ ಮಾತಾಕಿ ಜೈ ಈ ಜಯಘೋಷಗಳನ್ನು ಹಾಕುತ್ತಾ ನೆರೆದಿದ್ದ ಜನಸ್ತೋಮ ಸ್ವಾಗತಿಸುತ್ತಿತ್ತು.

ಶ್ರೀ ಶಾಸ್ತ್ರಿಯವರ ಪ್ರಥಮ ಭೇಟಿ ಸೆಲ್ಯುಲರ್ ಜೈಲಿಗೆ. ವೀರ ಸಾವರ್ಕರರಂತಹ ಕ್ರಾಂತಿಕಾರರು ಇದ್ದ ಸ್ಥಳ. ಈಗ ಅದು ಸರ್ಕಾರಿ ನೌಕರರ ಹಾಸ್ಟೆಲ್ ಆಗಿದೆ. ಈಗ ಈ ದ್ವೀಪದಲ್ಲಿ ಖೈದಿಗಳಿಲ್ಲ. ಹಿಂದಿದ್ದ ಕ್ರಾಂತಿಕಾರಿ ಖೈದಿಗಳನ್ನು ತಮ್ಮ ಪೂರ್ವಜರೆಂದು ಕರೆದುಕೊಳ್ಳುವರು ನಿಮಗಿಲ್ಲಿ ಸಿಗಬಹುದು ಅಷ್ಟೆ.

ಗೃಹ ಮಂತ್ರಿಗಳು ಅನಂತರ ಒಂದು ಆಸ್ಪತ್ರೆಯ ಉದ್ಘಾಟನೆಯನ್ನು ನೆರವೇರಿಸಿದರು. ಗೋವಿಂದ ವಲ್ಲಭ ಪಂತರ ಹೆಸರಿನಲ್ಲಿ ಇದು ಆರಂಭವಾಗಿದೆ. ಅನಂತರ ಗೃಹ ಮಂತ್ರಿಗಳು ಕುಡಿಯುವ ನೀರಿನ ರಿಸರ್ವಾಯರ್ ಒಂದನ್ನು ಉದ್ಘಾಟಿಸಿದರು. ಇದು ಶ್ರೀ ನೆಹರೂರವರ ಹೆಸರಿನಲ್ಲಿ ಆರಂಭವಾಗಿದೆ.

ಇಲ್ಲಿ ನೆಲೆಸಬಯಸುವವರಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮದ ಅಂಗವಾಗಿ ಸರ್ಕಾರ ಐದೈದು ಎಕರೆ ಗದ್ದೆಯನ್ನು ಹಂಚಿದೆ. ಜೊತೆಗೆ ಇನ್ನೈದು ಎಕರೆ ಭೂಮಿಯನ್ನೂ ಬೇಸಾಯ ಸಲಕರಣೆಗಳನ್ನೂ ಒದಗಿಸಲಾಗಿದೆ. ಇವುಗಳ ಪ್ರಯೋಜನ ಪಡೆಯುತ್ತಿರುವ ಹಲವರನ್ನೂ ಗೃಹ ಮಂತ್ರಿಗಳು ಭೇಟಿ ಮಾಡಿದರು.

### ಆಡಳಿತ ಸಲಹಾ ಸಮಿತಿ

ಪ್ರಮುಖ ಭೂಭಾಗದಿಂದ ಈ ದ್ವೀಪಗಳು ದೂರದಲ್ಲಿರುವುದಷ್ಟೇ ಅಲ್ಲದೆ, ಸ್ಥಳೀಯ ಆಡಳಿತ ವಿಚಾರಗಳಲ್ಲಿ ತಮಗೆ ಸಾಕಷ್ಟು ಅವಕಾಶ ನೀಡಿಲ್ಲವೆಂಬ ಅಸಮಾಧಾನ ಇಲ್ಲಿಯ ಜನರಲ್ಲಿ ತೀವ್ರವಾಗಿದೆ. ಗೃಹ ಸಲಹಾ ಸಮಿತಿ ಇದೂ ದೂರದ ದೆಹಲಿಯಲ್ಲಿ ವರ್ಷಕ್ಕೆ ಎರಡು ಬಾರಿ ಮಾತ್ರ ಸಭೆ ಸೇರುತ್ತದೆ, ಇದು ಸಂಯುಕ್ತ —ಎಂದು ಅವರು ಭಾವಿಸುತ್ತಾರೆ.

ಈ ವಿಚಾರವನ್ನು ಪ್ರಸ್ತಾಪಿಸಿದ ಗೃಹ ಮಂತ್ರಿಗಳು ಸ್ಥಳೀಯವಾಗಿಯೂ ಒಂದು ಸಲಹಾ ಸಮಿತಿಯನ್ನು ರಚಿಸಲಾಗುವುದೆಂದೂ ಈ ಸಮಿತಿಯು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಕೈಗೊಳ್ಳಬಹುದಾದಂತಹ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಜನಹಿತದ ಕಾರ್ಯಕ್ರಮಗಳ ಬಗ್ಗೆ ಚೀಫ್ ಕಮಿಷನರ್ ಅವರಿಗೆ ಸಲಹೆಗಳನ್ನು ನೀಡುವುದು ಎಂದೂ ಭರವಸೆ ನೀಡಿದರು.

ಗೃಹ ಮಂತ್ರಿಗಳು ಈ ದ್ವೀಪಗಳ ಒಳಭಾಗಗಳಿಗೂ ಭೇಟಿ ಕೊಟ್ಟು ಮರದ ದಿಮ್ಮಿಗಳನ್ನು ಸಾಗಿಸುವ ಕಾರ್ಯಾಚರಣೆ

(೩ನೇ ಪುಟದಿಂದ)

ವರ್ಗ — ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

## ಕರ್ತವ್ಯಕ್ಕೊಂದು ಕರೆ

# ಹೆಚ್ಚಿನ ತೆರಿಗೆ ಮತ್ತದರ ಸದ್ವಿನಿಯೋಗ

ದೇಶದ ಮೇಲೆ ನಡೆದಿದೆ ಕ್ರೂರ ಕೆಂಪು ಚೀನೀಯರ ಆಕ್ರಮಣ, ಇದರಿಂದ ನಮಗಾಗಿದೆ ಅಪಮಾನ. ಈ ಅಪಮಾನದಿಂದ ತೊಳೆದುಕೊಳ್ಳದೆ ಗತ್ಯಂತರವಿಲ್ಲ; ಗೌರವವಿಲ್ಲ; ಏಕೆಂದರೆ, ಚೀನೀಯರು ಭಾರತವನ್ನು ಕಬಳಿಸಲೆಸಗಿದ ಕುತಂತ್ರ ಸಾಧನ ಮಾತ್ರವಿದಲ್ಲ, ಭಾರತೀಯ ಶಕ್ತಿಗೆ, ಜನಕ್ಕೆ, ಐಕ್ಯಕ್ಕೆ, ಅಭಿವೃದ್ಧಿ ಯೋಜನೆಗಳಿಗೆ ನೀಡಿದ ಪಂಥಾಹ್ವಾನ. ನಮ್ಮ ಪ್ರಧಾನಿ ನೆಹರು ಹೇಳುವಂತೆ ನಮಗೆ ಬೇರಾಗಿಯೇ ಈ ಆಹ್ವಾನವನ್ನು ಸ್ವೀಕರಿಸಲೇಬೇಕು; ಸ್ವೀಕರಿಸಿದ್ದೇವೆ.

ಶಾಂತಿಯನ್ನು ಬಯಸುವ ನಾವು, ಪಂಚಶೀಲಗಳನ್ನು ನೆಮ್ಮಿ ಮುನ್ನಡೆಯುತ್ತಿರುವ ನಾವು ವಾಸ್ತವಿಕವಾಗಿಯೇ ಸೈನ್ಯ ಶಕ್ತಿಯ ಕಡೆಗೆ ಗಮನ ಹರಿಸಲಿಲ್ಲ. ನಮ್ಮೆಲ್ಲ ಸಾಧನ ಸಂಪತ್ತುಗಳನ್ನು ಯೋಜನೆಗಳಲ್ಲಿಯೇ ಕೂಡಿಹಾಕಿದೆವು; ಏಕೆಂದರೆ, ಒಬ್ಬನ ಶಕ್ತಿಯನ್ನು ಆತನು ಹಿಡಿದ ಬಡಿಗೆಯಿಂದಳೆಯುವುದಲ್ಲ, ಮೆಯ್ಕಟ್ಟಿನಿಂದ ಎಂದು ನಾವು ಬಲ್ಲೆವು. ಸಮೃದ್ಧವಾದ ಸಮೈಕ್ಯಯುತವಾದ ದೇಶನಿಷ್ಠ ಪ್ರಜಾಕೋಟಿಯಿರುವ ಒಂದು ರಾಷ್ಟ್ರವನ್ನು ಯಾವ ಸೈನಿಕಬಲವೂ ಎದುರಿಸಲಾರದು. ಬೆರಳೆಣಿಕೆಯ ರೋಮನರು ಟಾರ್ಕ್ವಿನರ ವಿಶಾಲ ಸೈನ್ಯಸಾಗರವನ್ನು ಎದುರಿಸಲಿಲ್ಲವೇ ಹಾಗೆ.

ಆದರೆ ಇಂದು ನಮ್ಮ ಗಮನ ದ್ವಿಮುಖವಾಗಿ ಹರಿಯಬೇಕಾಗಿದೆ. ಸ್ವಾಭಾವಿಕ ಶಕ್ತಿ ಸಂವರ್ಧನೆಗೆ ಅಜೇಯ ವಿಜಯಪ್ರಾಪ್ತಿಗೆ ಪಂಚವಾರ್ಷಿಕ ಯೋಜನೆಯನ್ನು ಕಡಿತಗೊಳಿಸದೆ ಏಕಪ್ರಕಾರವಾಗಿ ಮುಂದುವರಿಸಬೇಕು; ಜೊತೆಗೆ ಚೀನಿಯ ದುಷ್ಟ ಸೈನಿಕ ಶಕ್ತಿಯನ್ನು ಎದುರಿಸಿಕೊಳ್ಳಲು ತಾತ್ಕಾಲಿಕವಾಗಿಯಾದರೂ ಸೈನ್ಯ ಬಲವನ್ನು ಹೆಚ್ಚಿಸಿಕೊಳ್ಳಬೇಕು. ಇದಕ್ಕಾಗಿ ಅತೀವ ವೆಚ್ಚವನು ನಾವು ಮಾಡಬೇಕಾಗುವುದು.

ಅವಸರದ ಪರಿಸ್ಥಿತಿಯಿಲ್ಲದೆ ಇದ್ದರೂ ನಮ್ಮ ಮಹತ್ವಾಕಾಂಕ್ಷೆಯಿಂದ ಕೂಡಿದ ಯೋಜನೆಗಳನ್ನು ಪೂರ್ತಿಗೊಳಿಸುವುದು ಅತ್ಯವಶ್ಯವಿರುವುದರಿಂದ ಪ್ರತಿ ವರ್ಷವೂ ಕರಭಾರ ಹೆಚ್ಚುತ್ತ ಹೋಗುತ್ತಿರುವುದು ಸಹಜ. ಜನತೆಗೆ ಜೀವನ ಸೌಕರ್ಯಗಳು ಹೆಚ್ಚು ಹೆಚ್ಚಾಗಿ ದೊರೆತಂತೆ ತೆರಿಗೆಗಳ ಮೊತ್ತವೇರುವುದು ತಪ್ಪಲ್ಲ; ಹಾಗಾಗಿ ಪ್ರತಿ ವರ್ಷವೂ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೊರತೆಯ ಮುಂಗಡ ಪತ್ರಗಳನ್ನು ಮಂಡಿಸುವುದೂ ಅದನ್ನು ತುಂಬಿಸಿಕೊಳ್ಳಲು ಕರಗಳನ್ನು ಹೇರುವುದೂ ಸಂಪ್ರದಾಯವಾಗಿದೆ. ಅಂತೆಯೇ ಈ ಬಾರಿಯ ನಮ್ಮ ದ್ವಿಮುಖ ಆವಶ್ಯಕತೆಗಳ ದೆಸೆಯಿಂದ ಅತೀವ ಎಂಬಂತೆ ತೆರಿಗೆಗಳನ್ನು ಹೇರುವುದು ಅರ್ಥ ಮಂತ್ರಿಗಳಿಗೆ ಅನಿವಾರ್ಯವಾಗಿದೆ.

ಕೇಂದ್ರ ಸರಕಾರವೀಗ ರೂ. ೨೭೫ ಕೋಟಿ ಮೊತ್ತದ ಬೇರೆ ಬೇರೆ ತೆರಿಗೆಗಳನ್ನು ಹೊಸತಾಗಿ ಹೇರುವ ಸೂಚನೆಗಳನ್ನು ಪಾರ್ಲಿಮೆಂಟಿನ ಮುಂದೆ ಇಟ್ಟಿದೆ. ಭಾರತದ ಇತಿಹಾಸದಲ್ಲಿಯೇ ಇಷ್ಟೊಂದು ದೊಡ್ಡ ಪ್ರಮಾಣದ ತೆರಿಗೆಗಳು ಮೊತ್ತಮೊದಲಿಗೆ ಬೀಳುತ್ತಿವೆ. ಭಾರತದ ಅಜೇಯ ಶಕ್ತಿಗೆ ದೊರೆತ ಪಂಥಾಹ್ವಾನವು ಮೊತ್ತಮೊದಲಿಗೆ ಬಂದಾಗ ಇದೇನೂ ತಪ್ಪೆನಿಸದು. ಇದುವರೆಗೆ 'ತುರ್ತಿನ ಪರಿಸ್ಥಿತಿ'ಯೆಂಬುದು ದೇಶದಲ್ಲಿ ಘೋಷಿತವಾಗಿದ್ದರೂ ಅದರ ಸಂಪೂರ್ಣ ಪ್ರಭಾವ ಜನತೆಯ ಮೇಲೆ ಆಗಿಲ್ಲ; ಅವರ ಜೀವನ ಹಿಂದಿನಂತೆಯೇ ಏಕಪ್ರಕಾರವಾಗಿ ಮುಂದುವರಿಯುತಿತ್ತು. ಆದರೆ, ಇಂದು ಇಂತಹ ಗಂಭೀರ ಪರಿಸ್ಥಿತಿಯು ಜನರ ಆರ್ಥಿಕ ಜೀವನದ ಮೇಲೆ ಪ್ರತ್ಯಕ್ಷವಾಗಿ ಪ್ರಭಾವ ಬೀರುವಂತಾಯಿತು; ಜನತೆಗೆ ಚೀನಾ ಆಕ್ರಮಣದ ಭಯೋನ್ಮತೆಯಷ್ಟು, ಅದು ಮುಂದುವರಿದರೆ, ತಾನು ಎಂತಹ ರುದ್ರ ಪರಿಸ್ಥಿತಿಯನ್ನು ಎದುರಿಸಬೇಕಾದೀತು ಎಂಬುದರ ಕಲ್ಪನೆ ಮೂಡುವಂತಾಯಿತು. ರಾಜಕೀಯ ಕ್ಷೇತ್ರದಲ್ಲಿನ ತುರ್ತು ಪರಿಸ್ಥಿತಿಯು ಆರ್ಥಿಕ ಕ್ಷೇತ್ರದ ಮೂಲಕ ಜನರ ನರನಾಡಿಗಳಲ್ಲಿಯೂ ಹರಿಯುವಂತಾಯಿತು.

ಯಾವುದೇ ರೀತಿಯ ಹೊಸ ಕಾನೂನುಗಳು ಬಂದಾಗ ಅವನ್ನು ಪ್ರತಿಭಟಿಸುವುದು ಸಹಜ. ಹಳೆಯದು ಮಾತ್ರ ಸರಿ, ಹೊಸತೆಲ್ಲಾ ತಪ್ಪು ಎಂಬ ಭಾವನೆ ಇರುವವರು ಇದನ್ನು ಬೆಂಬಲಿಸುತ್ತಾರೆ. ಹಾಗಿರುವಾಗ ಕರಭಾರವು ಬಿದ್ದಾಗ, ಅವನ್ನು ಹೊರಲು ಅಸಮ್ಮತಿಯನ್ನು ಸೂಚಿಸುವುದೆಂತು ತಪ್ಪೀತು? ಎಂತಲೇ ಮುಂಗಡ ಪತ್ರದಲ್ಲಿ ಸೂಚಿಸಿದ ಕರಗಳನ್ನು ವಿರೋಧಿಸುವುದು ಹಿಂದೆಯೂ ನಡೆದಿದೆ, ಇಂದಿಗೂ ನಡೆಯುತ್ತಿದೆ, ಎಂದೇ ವರದಿಯಾದಂತೆ ಮುಂಗಡ ಪತ್ರಕ್ಕೆ ಯಾವಾಗಲೂ ಮಿಶ್ರ ಸ್ವಾಗತ.

ಅಭಿವೃದ್ಧಿ ಯೋಜನೆಗಳು ಅಧಿಕಾಧಿಕ ಕಾರ್ಯರೂಪಕ್ಕೆ ಬಂದಂತೆ ಜನರ ಸಾಂಪತ್ತಿಕ ಸ್ಥಿತಿಯು ಉತ್ತಮವಾಗುವುದು, ಜೀವನದ ವೆಚ್ಚ ಹೆಚ್ಚುವುದು ಮತ್ತು ತನ್ಮೂಲಕ ಸರಕಾರದ ವೆಚ್ಚವೂ ಏರುವುದು. ಹಾಗಾಗಿ, ತನ್ನ ನೌಕರರ ವೇತನವನ್ನು ಅದು ಹೆಚ್ಚಿಸಬೇಕಾಗುತ್ತದೆ. ಇದರಿಂದಾಗಿ ಸರಕಾರವು ಹೊಸ ಕರಗಳನ್ನು ಹೇರಲೇ ಬೇಕಾಗುತ್ತದೆ. ಇದೇ ರೀತಿಯಾಗಿ ಸುಸೂತ್ರವಾಗಿ ಸಮರ್ಥ ರೀತಿಯ ಆಡಳಿತೆಯನ್ನು ನಿರ್ವಹಿಸಲು ಸರಕಾರಕ್ಕೆ ಜನತೆಯೇ ತೆರಿಗೆಗಳ ಮೂಲಕ ಹಣ ಒದಗಿಸಬೇಕಾಗುತ್ತದೆ. ಆದುದರಿಂದ ಸರಕಾರವು ಜನಹಿತಕ್ಕಾಗಿ ಹೇರಿದ ತೆರಿಗೆಗಳನ್ನು ತೆರುವುದು ಜನರ ಕರ್ತವ್ಯ, ನಿಜ.

ಆದರೆ, ಇಂದು ಕರಗಳ ಪ್ರಮಾಣವು ಮಿತಿಮೀರಿದೆ, ಕರವಿಲ್ಲದ ಹುಲ್ಲು ಕಡ್ಡಿಯೂ ಉಳಿದಿಲ್ಲ. ಯೋಜನೆಗಳಿಗೆ ಹಣವೊದಗಿಸುವುದಕ್ಕಾಗಿ, ಎಲ್ಲ ಸಾಧನ ಸಂಪತ್ತನ್ನು ಕೂಡಿಹಾಕುವ ಪ್ರಯತ್ನದಲ್ಲಿರುವ ನಮ್ಮಲ್ಲಿ ಜನಸಾಮಾನ್ಯನ ಜೀವನ ಸ್ಥಿತಿಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಹಾಗಿರುವಾಗ, ಆತನಿಂದ ಇನ್ನೂ ಹೆಚ್ಚಿನ ತ್ಯಾಗವನ್ನು ಬಯಸುವುದೆಂದರೆ, ಅದು ಅಸಾಧ್ಯವೆನಿಸೀತು ಎನ್ನುತ್ತಾರೆ ಕೆಲವರು. ಬೆನ್ನನ್ನು ಬಗ್ಗಿಸಬಹುದು—ಭೂಮಿಯ ತನಕ; ಅದಕ್ಕೂ ಕೆಳಗೆ ಅದು ತಗ್ಗಬಹುದೆ? ಅಥವಾ ಅದನ್ನು ತಗ್ಗಿಸಬಹುದೆ? ನಿಜ; ಆದರೆ ಆತ್ಮಾಭಿಮಾನವಿರುವವರು ಆಡುವ ಮಾತಿದಲ್ಲವೆಂದು ಗತ್ಯಂತರವಿಲ್ಲದೆ ಹೇಳಲೇ ಬೇಕಾಗಿದೆ.

ಅವನೆಷ್ಟು ಬಡವನೇ ಇರಲಿ, ದಟ್ಟದರಿದ್ರನೇ ಇರಲಿ, ತನ್ನ ಮನೆಗೆ ಬೆಂಕಿಬಿದ್ದು ಸುಟ್ಟು ಹೋದರೆ, ಆ ಮನೆಯನ್ನು ಮರಳಿ ಕಟ್ಟದಿರಲಾರನು — ಆತ್ಮಬಲ ಮಾತ್ರ ಆತನಲ್ಲಿರಬೇಕು. ವಾಸಿಸಲು ಮನೆಯೊಂದು ಬೇಕೇಬೇಕು. ಇದನ್ನು ನಿರ್ಮಿಸಲು ಆತ ಬದ್ಧಕಟಿಯಾಗುತ್ತಾನೆ, ಸರ್ವ ತ್ಯಾಗಕ್ಕೂ ಮುಂದೆ ಬರುತ್ತಾನೆ; ಕೆಲವೊಮ್ಮೆ ಅನ್ನವನ್ನೂ ಬಿಡಬೇಕಾಗುತ್ತದೆ. ಗೌರವ, ಅಭಿಮಾನ— ಮಾನವಂತರು ಉಪವಾಸ ಬಿದ್ದರೂ ಹೆರವರೆದುರು ತಮ್ಮತನವನ್ನು ರಕ್ಷಿಸಿಕೊಳ್ಳುತ್ತಾರೆ. ಇದರಿಂದ ತಾವೂ ಉಳಿದವರಿಗೆ ಯಾವ ದೃಷ್ಟಿಯಿಂದಲೂ ಕಡಿಮೆಯಲ್ಲವೆಂದು ತೋರಿಸಿಕೊಳ್ಳುತ್ತಾರೆ. ನಾವು, ನಮ್ಮ ದೇಶ ನಮ್ಮ ದಾರಿಯಲ್ಲೇ ಮುಂದುವರಿದಾಗ ಎದುರು ಬಂದ ಈ ಚೀನೀಯ ದುರಾಕ್ರಮಣದಿಂದ ಉಂಟಾದ ಅಪಮಾನವನ್ನು ನಾವು ಮರೆಯುವುದು ಸಾಧ್ಯವಿಲ್ಲ. ಅಂದರೆ, ನಾವು ಚೀನೀಯರಿಂದ ಪ್ರತೀಕಾರ ಬಯಸುತ್ತಿಲ್ಲ; ನಮ್ಮ ದೇಶದ ಪ್ರತಿ ಅಂಗುಲ ನೆಲವನ್ನೂ ಅವರು ಬಿಟ್ಟುಕೊಡಬೇಕೆಂದು ಮಾತ್ರ ಹೇಳುತ್ತೇವೆ. ಅದನ್ನು ಮರಳಿ ಪಡೆಯುದು ಮಾತ್ರ ನಮಗೆ ಬೇಕಾಗಿದೆ ಎಂಥ ಕಷ್ಟವೆ ಬರಲಿ ಎಂಥ ನಷ್ಟವೆ ಬರಲಿ ನಮ್ಮ ಅಭಿಮಾನಕ್ಕೆ ಕೊರತೆಯಾಗಗೊಡೆವು ಎಂಬ ವೀರ ಪ್ರತಿಜ್ಞೆ ತೊಟ್ಟಿರುವ ನಾವು ಕರಭಾರಗಳನ್ನು ಹೊರದೆ ಅನ್ಯತ್ರ ಗತಿಯಿದೆಯೆ? ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ನಾವೇ ಹಣ ಒದಗಿಸದೆ ಹೋದರೆ ಮತ್ತಾರು ಮುಂದೆ ಬರುತ್ತಾರೆ?

ಇಲ್ಲಿ ಕರ ತೆರುವುದು ಜನತೆಯ ಕರ್ತವ್ಯವಿರುವಂತೆಯೇ ತನ್ನ ಸಂಪತ್ತನ್ನು ಸಮುಚಿತವಾಗಿ ಬಳಸುವುದು ಸರಕಾರದ ಕರ್ತವ್ಯವೆಂಬುದನ್ನೂ ಜ್ಞಾಪಿಸಬೇಕಾಗಿದೆ. 'ಮಿತವ್ಯಯ ಮಿತ ವ್ಯಯ'ವೆಂದು ಧ್ವನಿ ಕೆಲವು ವರ್ಷಗಳಿಂದ ಕೇಳಬರುತ್ತಿದ್ದರೂ ಅದು ಸಮುಚಿತವಾಗಿ ಕಾರ್ಯರೂಪದಲ್ಲಿ ಇಳಿದುದು ಮಾತ್ರ ಅಪರೂಪ; ಅಥವಾ ಅತ್ಯಲ್ಪ. ವಿಶಾಲ ತಳಹದಿಯ ಮಂತ್ರಿಮಂಡಲ, ಅಧಿಕಾರ ಕೇಂದ್ರೀಕರಣ, ಅನಾವಶ್ಯಕ ಪತ್ರ ವ್ಯವಹಾರ, ಆಜ್ಞೆ ಮತ್ತು ತತ್‌ಕ್ಷಣ ಪ್ರತಿ ಆಜ್ಞೆಗಳು ಈ ಮೊದಲಾದುವುಗಳಲ್ಲಿ ಯೋಚಿಸಿದರೆ, ತುಂಬ ಮಿತವ್ಯಯವನ್ನು ಸಾಧಿಸಬಹುದೆನಿಸುತ್ತದೆ. ಒಂದು ವಾರದಲ್ಲೇ ಹತ್ತಾರು ಜಿಲ್ಲೆಗಳ ಸಂಚಾರ ಮಾಡುವ ಮಂತ್ರಿವರೇಣ್ಯರು ಲೋಕದಲ್ಲಿರುವಾಗ, ಮಂತ್ರಿಗಳ ಪ್ರವಾಸಕ್ಕೊಂದು ಮಿತಿಯಿರಬೇಕು ಎಂದು ಜನ ಬಯಸಿದರೆ ಅದನ್ನು ತಪ್ಪೆನ್ನುವಂತಿಲ್ಲ. ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ದೊಡ್ಡ ದೊಡ್ಡ ಮೊತ್ತವು ಸೋರಿಹೋಗುತ್ತಿದೆ, ಹಾಳಾಗುತ್ತಿದೆಯೆಂದು ಹೇಳಲಾಗುತ್ತಿದೆ. ಕೆಲವೊಮ್ಮೆ ಇದಕ್ಕೆ ಪ್ರತ್ಯಕ್ಷ ನಿದರ್ಶನಗಳೂ ದೊರೆಯುವುದುಂಟು; ಇಂತಹ ದುಸ್ಥಿತಿಯನ್ನು ದೂರಮಾಡುವಂತೆ ಆಡಳಿತ ಯಂತ್ರವನ್ನು ಬಿಗಿಗೊಳಿಸಬೇಕು. ಇದಕ್ಕೆ ತಕ್ಕ ಕ್ರಮಗಳನ್ನು ಅವಶ್ಯ ಕೈಗೊಳ್ಳಬೇಕು.

ತೆರಿಗೆ ತೆರುವುದು ನಾಗರಿಕರ ಕರ್ತವ್ಯವಿರುವಂತೆಯೇ ಅದನ್ನು ಸದ್ವಿನಿಯೋಗಗೊಳಿಸುವುದು ಸರಕಾರದ ಆದ್ಯ ಕರ್ತವ್ಯ. ದೇಶ ರಕ್ಷಣೆಯು ಅತ್ಯಗತ್ಯದ ಈ ಸಂದಿಗ್ಧ ಸಂದರ್ಭದಲ್ಲಿ ಕರ್ತವ್ಯಪಾಲನೆಗಿಂತ ಅನ್ಯಪರದೈವವಿಲ್ಲವೆಂಬುದನ್ನು ಮರೆಯದೆ ಅದರಂತೆ ನಡೆದುಕೊಳ್ಳೋಣ.

— ಗೋರಾ.

ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,
ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಉಪಯೋಗಕರವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-

**P. Devee & Co.** (N. J.) Calcutta—40

ಶ್ರೀ ಪಿ. ಎನ್. ಹೆಬ್ಬಾರ ('ಸಿರಿಪತಿ') ಅವರ ನವೀನ ಜನಪದ ಗೀತಾಸಂಕಲನ

'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ. ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧–೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎನ್. ಹೆಬ್ಬಾರ, ಎಂ. ಜಿ. ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ.

ಪಂಚಶೀಲದ ಮಹಾಯಾತ್ರೆ

# ಬಾಡುಂಗದಿಂದ ಕೊಲಂಬೊ ವರೆಗೆ

ಭಾರತದ ಮೇಲೆ ಚೀನವು ಆಕ್ರಮಣ ಮಾಡಿತು. ಪ್ರಧಾನ ಮಂತ್ರಿ ನೆಹರ ರವರ ಜೀವನದಲ್ಲಿ ದಿಗ್ಭ್ರಮೆಗೊಳಿಸಿದ ಏಕಮೇವ ಘಟನೆಯೆಂದರೆ ಇದೊಂದೇ. ಭಾರತೀಯ ಪಡೆಗಳು ಪರಾಭವಗೊಂಡುವು, ಭಾರತದ ಪವಿತ್ರ ನೆಲ ಶತ್ರು ವಶವಾಯಿತು:—ಆದರೆ, ಇವೆಲ್ಲ ಕೇವಲ ತಾತ್ಕಾಲಿಕ. ಶಾಶ್ವತವಾಗಿ ಉಳಿಯುವಂತಾದುದು ಚೀನೀಯರ ಮಿತ್ರದ್ರೋಹ ಮಾತ್ರ.

ಆಫ್ರೇಸ್ಯನ್ ಸಂಘಟನೆಯನ್ನು ಬಲಪಡಿಸಲು, ಹದಿನೈದು ವರ್ಷಗಳಿಂದ ದುಡಿಯುತ್ತಿರುವ ನೆಹರು ಚೀನಕ್ಕೆ ಇತರ ರಾಷ್ಟ್ರಗಳ ಸಮಾನ ಸ್ಥಾನ ಕಲ್ಪಿಸಿ, ಮೈತ್ರಿ ಹಸ್ತವನ್ನು ಮುಂಚಾಚಿದರು. ಚೀನೀಯರು ಶಾಂತಿಯ ಮುಸುಕನ್ನು ಹಾಕಿ ಕೈಗೆ ಕೈ ತಾಗಿಸಿದರು. ಕೆಲವೊಮ್ಮೆ ತಮ್ಮ ಸಹಜ ಪ್ರವೃತ್ತಿಯನ್ನು ಸ್ವಲ್ಪ ಸ್ವಲ್ಪವಾಗಿ ತೋರ್ಪಡಿಸಿದರೂ ನೆಹರು ತಮ್ಮ ಮೈತ್ರಿಯಲ್ಲಿಟ್ಟಿದ್ದ ವಿಶ್ವಾಸ ಭಾವವನ್ನ ಸಂಶಯದಿಂದ ಕಾಣಲಿಲ್ಲ. ಜಾಗತಿಕ ರಾಜಕಾರಣದಲ್ಲಿ ಚೀನವನ್ನೂ ಸಮಾನ ಸ್ಥಾನಮಾನಗಳಿಗೇರಿಸಲು ಜನತಾಚೀನಕ್ಕೆ ಮನ್ನಣೆಯನ್ನೂ ಅದಕ್ಕೆ ಸಂ.ರಾ. ಸಂಘದಲ್ಲಿ ಸ್ಥಾನವನ್ನೂ ನೀಡಬೇಕೆಂದ ಮೊತ್ತಮೊದಲ ಪ್ರವಾದಿ ನೆಹರು.

ಉಭಯ ಸರಕಾರಗಳು ಮೈತ್ರಿ ಸಂವರ್ಧನೆಗೆಂದು ೧೯೫೪ರಲ್ಲಿ ಪಂಚಶೀಲ ಒಡಂಬಡಿಕೆಗೆ ಸಹಿಮಾಡಿದುವು 'ವಿಶ್ವಶಾಂತಿ ಸ್ಥಾಪಿತವಾಗಲು ಏಶ್ಯದ ರಾಷ್ಟ್ರಗಳಲ್ಲಿ ಶಾಂತಿಯುತ ಅಭಿವೃದ್ಧಿಕಾರ್ಯಗಳ ಸಾಧನೆಗೆ ಪಂಚಶೀಲ ತತ್ವಗಳು ಸಹಾಯಕವೆಂದ ಚೌ ಎನ್ ಲಾಯರ ಹೇಳಿಕೆ ಭಾರತದ ಸ್ವಪ್ನವನ್ನು ಸತ್ಯವಾಗಿಸುವುದೆಂದು ನಂಬಿದರು ನೆಹರು.

ಆದರೆ, ಹದಿನೈದು ದಿನಗಳು ಕೂಡ ಕಳೆಯಲಿಲ್ಲ. ಚೀನಾ ಬಾರಾ ಹೋಟಿಯಲ್ಲಿ ಭಾರತೀಯ ನೆಲನುಂಗಲೆಳಸಿತು; ಅದರ ಮೇಲೆ ಆರೋಪವನ್ನು ಭಾರತದ ಮೇಲೆ ಹೊರಿಸಿತು. ೧೯೫೪ರಲ್ಲಿ ನೆಹರು ಪೀಕಿಂಗ್‌ನ್ನು ಸಂದರ್ಶಿಸಿದಾಗ, ಚೀನೀಯ ಭೂಪಟಗಳಲ್ಲಿ ೫೦ ೦೦೦ ಚದರ ಮೈಲು ಭಾರತದ ನೆಲ ಚೀನೀಯರದ್ದೆಂದು ತೋರಿಸುತ್ತಿರುವುದು ಗಮನಕ್ಕೆ ಬಂತು. ಪಂಚಶೀಲ ತತ್ವಗಳನ್ನು ಪುರಸ್ಕರಿಸಿ, ಸಖ್ಯಭಾವವನ್ನು ಪ್ರದರ್ಶಿಸುವ ಚೀನಾ ಪರದೇಶದ ನೆಲ ತನ್ನದೆಂದು ಹೇಳಿಕೊಂಡೀತೆ?- ಪ್ರಮಾದದಿಂದ ಹಾಗಿರಬೇಕು ಎಂದುಕೊಂಡ ನೆಹರೂರವರು 'ಹಳೆಯ ಭೂಪಟಗಳವು' ಎಂಬ ಲಾಯರ ಉತ್ತರದಿಂದ ಸಮಾಧಾನಗೊಳ್ಳದಿರುವುದು ಅಸಾಧ್ಯವಾಯ್ತು.

ಆ ಮೇಲೆ ನಡೆಯಿತು ಬಾಡುಂಗ ಸಮ್ಮೇಳನ ದಾಸ್ಯಬಂಧ ವಿಮುಕ್ತವಾಗಿ ತಲೆಯೆತ್ತಿ ನಿಂತ ಆಫ್ರೇಸ್ಯಾ ದೇಶಗಳು ಶಾಂತಿಯುತ ಸಹಜೀವನದ ತತ್ವಗಳನ್ನು ಸ್ವೀಕರಿಸಿ ಪರದೇಶಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡುವಂತಾದುದಕ್ಕೆ ನೆಹರು ಹರ್ಷಪುಲಕಿತಗಾತ್ರರಾದರು. ತಮ್ಮ ಘೋಷಣೆಯಿಂದ ನೆರೆದವರಲ್ಲಿ ತೃಪ್ತಿತಂದವರೆಂದರೆ ಚೌ. ಎನ್. ಲಾಯ್ ಅವರು ಎಲ್ಲ ಸೂಚನೆಗಳನ್ನೂ ಒಪ್ಪಿಕೊಂಡು, ಯಾವುದೇ ದೇಶದ ಪ್ರಾದೇಶಿಕ ಸಮಗ್ರತೆಯನ್ನು ಉಲ್ಲಂಘಿಸುವುದಿಲ್ಲ, ಆ ದೇಶದ ಒಂದಂಗುಲದಲ್ಲಿಯೂ ಚೀನೀಯರು ಕಾಲಿಡುವುದಿಲ್ಲವೆಂದು ಸಾರಿ, ಪ್ರಮಾದವಶದಿಂದ ನೆರೆಹೊರೆಯ ದೇಶಗಳ ಗಡಿಯನ್ನು ದಾಟಿದ್ದೇ ಆದರೆ, ಚೀನೀಯರನ್ನು ದಂಡಕ್ಕೆ ಗುರಿಪಡಿಸಲಾಗುವುದು ಎಂದು ಭರವಸೆಯಿತ್ತರು. ಚೀನಾ-ಭಾರತ ಸೀಮೆಯಲ್ಲಿ ನಡೆದ ಕೆಲವು ಘಟನೆಗಳು ತಮಗರಿಯದವೆಂದು ಸಾರಿಕೊಂಡರು. ಸಮಯಕ್ಕೆ ಸರಿಯಾಗಿ ಮಾತನ್ನಾಡುವವರುಎಂದು ಯಾರಿಗೆ ಹೇಗೆ ಗೊತ್ತಾಗಬೇಕು? ಎಂತಲೇ ಯಾವ ದೇಶದವರೂ ಅವರ ಘೋಷಣೆಯಲ್ಲಿ ಸಂದೇಹ ಪಡುವುದು ಅಸಾಧ್ಯವಾಯ್ತು.

ಬಾಡುಂಗದಿಂದ ಉತ್ತೇಜಿತರಾಗಿ ಭಾರತಕ್ಕೆ ಮರಳಿದರು ನೆಹರು. ಆ ಆಫ್ರೇಸ್ಯನ್ ದೇಶಗಳು 'ಸಹನೆ ಹಾಗೂ ಪರಸ್ಪರ ಸ್ನೇಹದಿಂದ ಬಾಳುವುದಾಗಿ ಪ್ರತಿಜ್ಞೆ ಮಾಡಿದುವು ಚೀನಾವನ್ನು ಸಂಶಯದಿಂದ ನೋಡುತ್ತಿದ್ದವರೂ ಅದೂ ನಮ್ಮೊಂದಿಗಿದೆ ಎಂದು ಧೈರ್ಯಗೊಂಡರು.

ಮುಂದೆ ೧೯೫೫ರ ಎಪ್ರಿಲ್‌ನಲ್ಲಿ ಬಾಡುಂಗದ ಸಮ್ಮೇಳನ ಯಶಸ್ವಿಯಾಗಿದೆ ಎಂದು ಉದ್ಗರಿಸಿದ್ದರು ನೆಹರು. ಚೀನಾವು ಕೊರಿಯಾದಲ್ಲಿ ಸಮರ ವಿರಾಮಕ್ಕೆ ನೀಡಿದ ಅನುಮತಿಯನ್ನವರು ಸ್ವಾಗತಿಸಿದ್ದರು. ಚೀನಾದ ವರ್ತನೆ ಅತೀ ರ ಸಹಜವೆಂದೇ ಅವರ ತಿಳುವಳಿಕೆಯಿತ್ತು. ಬಾಡುಂಗ—ಪಂಚಶೀಲಗಳನ್ನು ತನ್ನ ಕುತಂತ್ರಕ್ಕೆ ಬಳಸಿಕೊಳ್ಳುವುದೆಂದು ಅಂದಾರು ಊಹಿಸಿದ್ದರು? ಆದರೆ, ಚೀನಾ ಪಂಚಶೀಲ ತತ್ವಗಳನ್ನು ಪರಿಪಾಲಿಸುತ್ತೇನೆನ್ನುತ್ತಾ ಭಾರತದ ಭೂಪ್ರದೇಶಗಳ ಮೇಲೆ ಆತಿಕ್ರಮಣ ಮಾಡುತ್ತಲೇ ಇತ್ತು.

ಚೀನಾದ ಕುತಂತ್ರ ಹೊರಬಂದುದು

(ಎದೇ ಪುಟ ನೋಡಿರಿ)


ಮತ್ತೊಂದು ಆಕರ್ಷಣೀಯ

ಉಳಿತಾಯ ಯೋಜನೆ

ರೆಕರಿಂಗ್ ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ 5/- ರಿಂದ ರೂ 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು—12, 24, 36, 48 ಮತ್ತು 60 ತಿಂಗಳುಗಳು.
- ಸಾವಕಾಶವಾಗಿ ಕಟ್ಟಿದ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ,
- ವರ್ಷಕ್ಕೆ ಚಕ್ರಬಡ್ಡಿ 4%.

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ರಿಜಿಸ್ಟರ್ಡ್ ಆಫೀಸ್, ಮಂಗಳೂರು, ಆಡಳಿತ ಕಛೇರಿ: ಬೆಂಗಳೂರು.



ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ ಎಲ್ ಐತಾಳ, ಎಂ. ಬಿ. ಬಿ. ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು. ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೭೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

ನವಯುಗ

| ವರುಷ ೪೨ | ಉಡುಪಿ ೧೪-೩-೧೯೬೩ | ವಾರ ೨೭ |
|---|---|---|

# ಕೃಷ್ಣಾ ನದಿಯ ನೀರು

ಕರ್ನಾಟಕ ರಾಜ್ಯವು ಅಸ್ತಿತ್ವಕ್ಕೆ ಬಂದ ಬಳಿಕ ಉತ್ತರ ಕರ್ನಾಟಕದ ಬರುನಾಡನ್ನು ಉನ್ನತೀಕರಿಸುವುದು ಅದರ ಪರಮ ಕರ್ತವ್ಯವಾಯಿತು. ಕೃಷ್ಣಾ ನದೀ ನೀರಿನಲ್ಲಿ ಸಮಪಾಲನ್ನು ಪಡೆದು ಆ ಜಿಲ್ಲೆಗಳನ್ನು ಹಸನುಗೊಳಿಸದೆ ಹೋದರೆ, ರಾಜ್ಯದ ಪ್ರಗತಿ ಕನಸಿನ ಗಂಟು ಮಾತ್ರವಾದೀತು. ಅದರಿಂದ ಒಂದೇ ಮಾತಿನಲ್ಲಿ ಹೇಳುವುದಾದರೆ, ಕೃಷ್ಣಾ ನದಿಯ ನೀರನ್ನು ಪಡೆಯುವ ಪ್ರಶ್ನೆ ನಮ್ಮ ಜೀವನ ಮರಣದ ಪ್ರಶ್ನೆ. ಶರಾವತಿ ಯೋಜನೆಯು ಎಷ್ಟು ಮಹತ್ವಪೂರ್ಣವಾಗಿದೆಯೋ ಹಾಸನ—ಮಂಗಳೂರು ರೈಲು ದಾರಿ ಅದು ಹೇಗೆ ಮುಖ್ಯವಾಗಿದೆಯೋ ಇವೆಲ್ಲಕ್ಕೂ ಮಿಗಿಲದುದು ಕೃಷ್ಣಾ ನದೀ ನೀರು.

ಈ ನೀರಿನ ಸಂಬಂಧದಲ್ಲಿ ತೀವ್ರವಾದ ವಾದವಿವಾದಗಳು ಎದ್ದಿವೆ. ಇದಕ್ಕೆ ಆ ನದಿಯು ಹಲವು ರಾಜ್ಯಗಳಲ್ಲಿ ಹರಿಯುತ್ತಿರುವುದೇ ಮುಖ್ಯ ಕಾರಣ. ಇಂದು ತಲೆದೋರಿ, ಭೂತಾಕಾರ ತಾಳಿರುವುದೆಂದರೆ ಆಂಧ್ರದ ಸಿಂಹಪಾಲಿನ ಬೇಡಿಕೆ ಮತ್ತು ಅದರ ಹಿಂದೆ ಹುದುಗಿರುವ ಆಗ್ರಹ. ಮೊದಲಿನ ವರ್ಷಗಳಲ್ಲಿ ನಮ್ಮ ರಾಜ್ಯದ ವಿಧಾನಸಭೆಗಳು ಸರಕಾರ ಕಟ್ಟುವುದು ಮತ್ತು ಉರುಳಿಸುವುದರಲ್ಲಿಯೇ ವ್ಯಸ್ತವಾಗಿದ್ದುದರಿಂದಲೋ ಅಥವಾ ವಿವಾದವು ಚಿಗುರಿನ ರೂಪದಲ್ಲಿ ಮಾತ್ರವಿದ್ದುದರಿಂದಲೋ ಈ ಸಂಬಂಧದಲ್ಲಿ ಪರಿಣಾಮಕಾರಿ ಕಾರ್ಯ ನಡೆಯಲಿಲ್ಲ. ಅತ್ತ ಆಂಧ್ರರು ನಮ್ಮ ಅಕರ್ಮಣ್ಯತೆಯ ಪೂರ್ಣ ಪ್ರಯೋಜನವನ್ನು ಪಡೆದು ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲ ಯೋಜನೆಗಳನ್ನು ಅಳವಡಿಸಿಕೊಂಡುಬಿಟ್ಟುದು ಸರ್ವವಿಶ್ರುತ. ಇನ್ನು ಕಾರ್ಯ ರೂಪಕ್ಕಿಳಿವಾಗಲೇ ನಮಗಾದುದು ಎಚ್ಚರ. ನೀರಡಿಕೆಯಾದಾಗ ಬಾವಿ ತೋಡ ಹೊರಟವರಂತಾಯಿತು ನಮ್ಮ ಪರಿಸ್ಥಿತಿ. ಕೇಂದ್ರ ಸರಕಾರಕ್ಕೂ ನಮ್ಮ ದೂರು ಹೋಯಿತು; ಸಚಿವ ಮಂಡಳದ ಪ್ರತಿನಿಧಿ ಗುಲ್ಜಾರಿಲಾಲ ನಂದರೆದುರೂ ನಮ್ಮ ಗೋಗರೆತ ನಡೆಯಿತು. ಆದರೆ, ಅವಾವುಗಳಿಂದಲೂ ನಿರೀಕ್ಷಿತ ಪರಿಣಾಮ ಲಭಿಸಿದಂತಾಗಲಿಲ್ಲ. ಈಗಂತೂ ಕೃಷ್ಣಾ ನದಿಯ ನೀರು ನಮ್ಮ ಕೈ ಬಿಡುವ ಲಕ್ಷಣಗಳು ಸುಸ್ಪಷ್ಟವಾಗಿ ಗೋಚರವಾಗುತ್ತಿವೆ. ಮನೆಗೆ ಬೆಂಕಿ ಬಿದ್ದಾಗ, ಅದನ್ನು ಆರಿಸುವುದನ್ನು ಬಿಟ್ಟು, ಬೆಂಕಿ ಹಿಡಿಯಲು ಕಾರಣವೇನಿರಬಹುದೆಂದು ಊಹಾಪೋಹ ಮಾಡಿ, ತಮ್ಮ ತಲೆಯ ಹೊರೆಯನ್ನು ಮತ್ತೊಬ್ಬರ ಮೇಲೆ ಹೇರುವಲ್ಲಿ ನಾವು ತಲ್ಲೀನರಾಗಿದ್ದೇವೆ. ಈ ಬಿಕ್ಕಟ್ಟಿನ ಸ್ಥಿತಿಗೆ ಕಾರಣರು ಯಾರು, ಇಂದಿನ ಮಂತ್ರಿ ಮಂಡಳವೋ, ಹಿಂದಿನವೋ ಎಂಬ ಪ್ರಶ್ನೆಯೆತ್ತಿ ನಮ್ಮ ಶಕ್ತಿಯನ್ನು ಅಪವ್ಯಯಗೊಳಿಸುತ್ತೇವೆ. ಇದು ಅನಗತ್ಯವೆಂಬುದನ್ನು ಯಾರೂ ಮರೆಯ ಬಾರದು.

ನಮಗಿಂದು ಬೇಕಾಗಿರುವುದು ನೀರಿನಲ್ಲಿ ನ್ಯಾಯವಾಗಿ ದೊರೆಯಬೇಕಾದ ಪಾಲು. ಆಂಧ್ರದ ಯೋಜನೆಗಳು ಈ ನೀರನ್ನು ಬಳಸಿಕೊಂಡರೆ ನಮಗೆ ಅನ್ಯಾಯವಾಗುವುದು. ಇದನ್ನು ಸರ್ವಶಕ್ತಿಯಿಂದ ಪ್ರತಿಭಟಿಸಬೇಕೇ ಹೊರತು, ಆರೋಪ ಪ್ರತ್ಯಾರೋಪ ಹೊರಿಸುತ್ತ ದಿನ ದೂಡುವುದು ನಮಗೆ ಬೇಕಾಗಿಲ್ಲ; ಅಥವಾ ಆಂಧ್ರದ ಯೋಜನೆಗಳನ್ನು ನಿಲ್ಲಿಸುವಂತೆ ಆಗ್ರಹ ಪಡಬೇಕಾದುದೂ ಇಲ್ಲ. ಅವರು ತಮ್ಮ ಪಾಲನ್ನು ಪಡೆಯಬೇಕು; ನಮಗೆ ನಮ್ಮದು ಬೇಕು. ಗೋದಾವರೀ ನದಿಯ ನೀರನ್ನು ಅವರ ಯೋಜನೆಗಳಿಗೆ ಬಳಸುವುದು ಸಾಧ್ಯವೆಂದು ತಿಳಿಯುವುದರಿಂದ, ಅವರು ಅನ್ಯಾಯವಾಗಿ ನಮ್ಮ ನೀರಿಗೆ ಕೈಹಾಕುವುದನ್ನು ಬಿಟ್ಟುಬಿಡಬೇಕು; ಇದಕ್ಕಾಗಿ ಸರ್ವ ಪ್ರಯತ್ನವನ್ನೂ ನಾವು ನಡೆಸಬೇಕು. ಈ ನಿಟ್ಟಿನಲ್ಲಿ ಈ ಮೊದಲೂ ಹಲವು ಬಾರಿ ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರವು ದೂರಿತ್ತಿತ್ತು. ಆದರೆ, ಅದರಿಂದ ನಿರೀಕ್ಷಿತ ಪರಿಣಾಮ ಮಾತ್ರ ದೊರೆಯಲಿಲ್ಲ. ಈಗ ಮಂತ್ರಿವರ್ಯರಿಂದ ಕೂಡಿದ ನಿಯೋಗವೊಂದು ತಮ್ಮ ರಾಜ್ಯದ ನ್ಯಾಯವಾದ ಕೇಳಿಕೆಯನ್ನು ಮನ್ನಿಸುವಂತೆ ಅನುಕೂಲ ವಾತಾವರಣ ನಿರ್ಮಿಸಲು ಕೇಂದ್ರದತ್ತ ಹೋಗುವುದೆಂದು ಕೇಳುತ್ತೇವೆ. ಈ ನಿಯೋಗವು ತನ್ನ ಕಾರ್ಯದಲ್ಲಿ ಯಶಸ್ವಿಯಾಗಲಿ, ಕನ್ನಡಿಗರ ನ್ಯಾಯವಾದ ಬೇಡಿಕೆಗಳು ಈಡೇರುವಂತಾಗಲಿ ಎಂದು ಹಾರೈಸುತ್ತೇವೆ.

## ಪೀಕಿಂಗದ ಪೀಕಲಾಟ

ತನ್ನ ಭಾರತವನ್ನು ನುಂಗುವ ಅಭಿಲಾಷೆಯನ್ನು ಪೂರ್ತಿ ಮಾಡಲು ಭಾರತೀಯರನ್ನು ಒಡೆಯುವ ಕುತಂತ್ರದಲ್ಲಿ ಚೀನಾವು ಅಸಮರ್ಥವಾಯಿತು. ಅದು ಆಕ್ರಮಣ ಮಾಡಿದೊಡನೆಯೇ ದೇಶದ ಎಲ್ಲ ರಾಜಕೀಯ ಪಕ್ಷಗಳೂ ಸಂಪೂರ್ಣ ಜನತೆಯೂ ದೇಶ ರಕ್ಷಣೆಯ ಮಹಾ ಕಾರ್ಯವನ್ನು ನಿರ್ವಹಿಸಲು ತಮ್ಮಲ್ಲಿ ಭೇದಭಾವಗಳನ್ನು ತೊರೆದು ಮುಂದಾದುದೇ ಇದಕ್ಕೆ ನಿದರ್ಶನ. ಭಾರತೀಯ ಕಮ್ಯುನಿಸ್ಟ ಪಕ್ಷದ ಒಂದು ಪಂಗಡವನ್ನು ತನ್ನ ಚೇಲರಂತೆ ನಡೆಸಿಕೊಂಡು ನೇಫಾ ಪ್ರದೇಶದಲ್ಲಿ ಕಾರಸ್ಥಾನ ನಡೆಸಿದ ಚೀನೀಯರ ತಂತ್ರಜಾಲವಿನ್ನು ನಡೆಯುವಂತಿಲ್ಲ. ಅದಕ್ಕಾಗಿಯೇ ಭಾರತದ ಐಕ್ಯ ಸಾಧನೆಗಾಗಿ ಸಂರಕ್ಷಣೆಗಾಗಿ ತನ್ನ ಪಕ್ಷವು ಸಿದ್ಧವಿದೆ ಎಂದ ಎಸ್. ಎ. ಡಾಂಗೆಯವರ ಮೇಲೆ ಚೀನಾದ ಪೀಪಲ್ಸ್ ಡೈಲಿ ವಿಷಕಾರತೊಡಗಿದೆ. ಡಾಂಗೆಯವರು ತನ್ನ ಪಕ್ಷದ ಸಹಾನುಭೂತಿಯನ್ನೂ ಬೆಂಬಲವನ್ನೂ ಪ್ರಧಾನಿಯವರಿಗೆ ನೀಡಿ ಬಂಡವಾಳವಾದಿಗಳ ಗುಲಾಮರಾಗಿ ಭಾರತೀಯ ಕಮ್ಯುನಿಸ್ಟ ಪಕ್ಷವನ್ನು ತಪ್ಪು ದಾರಿಯಲ್ಲಿ ಒಯ್ಯುತಿದ್ದಾರೆಂದೂ ಮಾರ್ಕ್ಸ್ ವಾದ, ಲೆನಿನ್ ವಾದಗಳಿಗೆ ತಿಲಾಂಜಲಿ ಕೊಡಿಸಿ ಶ್ರೀಮಂತರ ಕೈಗೊಂಬೆಯನ್ನಾಗಿ ಅದನ್ನು ಮಾಡಿದ್ದಾರೆಂದೂ ಅದು ದೂರಿದೆ. ಕಮ್ಯೂನಿಸ್ಟ ನಾಯಕರಾದರೂ ಡಾಂಗೆಯವರು ಹಿಂದಿನಿಂದಲೂ ರಾಷ್ಟ್ರೀಯವಾದಿಗಳು. ಈ ಹಿಂದೆ ಕೆಲವೊಮ್ಮೆ ಅವರಿಗೂ ಪಕ್ಷದ ಉಚ್ಚ ಮಟ್ಟದ ಸದಸ್ಯರಿಗೂ ಅಭಿಪ್ರಾಯ ಭೇದ ತಲೆದೋರಿತ್ತು. ಚೀನೀ ಆಕ್ರಮಣ ನಡೆದಾಗ ಇವರೇ ಆ ಪಕ್ಷದ ಅಧ್ಯಕ್ಷರಾಗಿದ್ದರು. ಉಜ್ವಲ ರಾಷ್ಟ್ರೀಯವಾದಿ ಡಾಂಗೆಯವರ ಸರಿಯಾದ ನೀತಿಯನ್ನು ತಪ್ಪೆಂದು ಪ್ರಚಾರ ಮಾಡಿ ಕಮ್ಯುನಿಸ್ಟ ಪಕ್ಷದಲ್ಲಿಯೇ ಮಹಾಭೇದ ನಡೆಯುವಂತೆ ಮಾಡಿದ ಕುತಂತ್ರವೇ ಈ ಬಗೆಯ ಅಪಪ್ರಚಾರ ಎಂದೆಲ್ಲರೂ ಬಲ್ಲರು. ದೇಶದ್ರೋಹಿಗಳಾದವರು ಮಾತ್ರ ಚೀನಾದ ಈ ಪ್ರಚಾರ ವೈಖರಿಗೆ ತಲೆದೂಗಬಹುದಲ್ಲದೆ ಮತ್ತಾವ ಭಾರತೀಯನೂ, ಅವನು ಕಮ್ಯುನಿಸ್ಟನಿರಲಿ ಅಥವಾ ಕಾಂಗ್ರೆಸಿಗನಿರಲಿ ಮರುಳಾಗಲಾರನು. ದೇಶ ಪ್ರೇಮದಿಂದ ಪ್ರಚೋದಿತರಾಗುವುದು ದೇಶೀಯರ ಕರ್ತವ್ಯ. ಆದರೆ, ಭಾರತೀಯರ ಈ ಕರ್ತವ್ಯ ಪಾಲನೆಯು ಅಚಲ ನಿರ್ಧಾರ ತಮ್ಮ ಕುತಂತ್ರ ಸಾಧನೆಗೆ ವಿಘ್ನಕಾರಕವಾಗುವುದರಿಂದಲೇ ಇಂತಹ ವಿಲಕ್ಷಣ ಪ್ರಚಾರ ನೀತಿಗೆ ಚೀನ ಪರವಾಗಿದೆ. ಇದರಿಂದ ಪಕ್ಷದೊಳಗೇನೇ ಪಂಗಡಗಳನ್ನು ನಿರ್ಮಿಸಿ, ಅವುಗಳು ಪರಸ್ಪರ ಕಾದಾಡುವಂತೆ ಮಾಡಿ ತಮ್ಮ ಕಾರ್ಯಸಿದ್ಧಿಗೈಕೊಳ್ಳಬೇಕೆಂದು ಕೆಂಪು ಕಮ್ಯುನಿಸ್ಟರು ಬಯಸಿದ್ದರೆ, ಅವರ ಆಸೆ ಹುಸಿ ವ್ಯರ್ಥ. ಏಕೆಂದರೆ, ಚೀನೀಯರನ್ನು ಹೊಡೆದಟ್ಟಲು ಜನಜನವೂ ಸೈನಿಕವಾಗುವುದು. ಶತ್ರುಗಳ ಅಪಪ್ರಚಾರಕ್ಕೆ ಕಿವಿಗೊಡದೆ ಆತ್ಮರಕ್ಷಣೆಯ ಪವಿತ್ರ ಕಾರ್ಯದಲ್ಲಿ ವ್ಯಸ್ತವಾಗುವುದು ಭಾರತೀಯರೆಲ್ಲರ ಪರಮ ಕರ್ತವ್ಯ.

## ವಾರ್ತಾವೇದಿಕೆ

### ಝುಡ್. ಎ. ಭುಟ್ಟೋ

ಪಾಕಿಸ್ತಾನವು ಶತ್ರು ಚೀನಾದೊಡನೆ ಅನ್ಯಾಯವಾದ ಗಡಿಯೊಡಂಬಡಿಕೆಯನ್ನು ಮಾಡಿಕೊಂಡು ಈಗ ಕಾಶ್ಮೀರದ ಸಮಸ್ಯಾ ಪರಿಹಾರಕ್ಕೆಂದು ಮಾತುಕತೆಗೆ ನಾಲ್ಕನೆಯ ಬಾರಿಗೆ ಮುಂದೆ ಬಂದಿದೆ. ವಿಚಿತ್ರ ಒಡಂಬಡಿಕೆಯಿಂದ ಮಾತುಕತೆಯ ಮೇಲೆ ವಿಚಿತ್ರ ಪರಿಣಾಮ ಬೀಳುವುದು ಸಾಧ್ಯವಾದರೂ ಅದರ ಪ್ರತಿನಿಧಿ ಝುಡ್. ಎ. ಭುಟ್ಟೋ ಕರಾಚಿಯಿಂದ ಸುಪ್ರಸನ್ನ ವದನದಿಂದಲೇ ಕಲಕತ್ತೆಗೆ ಹೊರಟಿದ್ದಾರೆ. ಬ್ರಿಟನ್ ಮತ್ತು ವಾಶಿಂಗ್‌ಟನ್‌ಗಳ ಪ್ರತಿನಿಧಿಗಳು ಅವರನ್ನು ರಹಸ್ಯವಾಗಿ ಕಂಡು ಮಾತಾಡಿದುದರಿಂದ ಮಾತುಕತೆಯ ಘಾಟಿ ಬೇರಾದೀತೆಂದು ಊಹಿಸಲಾಗಿತ್ತಾದರೂ ಭುಟ್ಟೋ ಮಾತ್ರ ತಾನು ಹೊಸ ಸೂಚನೆಗಳನ್ನು ಕಲಕತ್ತೆಗೊಯ್ಯುತ್ತಿಲ್ಲವೆಂದು ಅಂದಿದ್ದಾರೆ. ಆದುದರಿಂದಲೇ ಕಲಕತ್ತೆಯ ಮಾತುಕತೆಯ ಪರಿಣಾಮ ಹೊರಬೀಳುವುದನ್ನೇ ಎಲ್ಲರೂ ಕಾಣುತಿದ್ದಾರೆ.

### ನಿಜಲಿಂಗಪ್ಪ

ಅಧಿಕಾರವೆಂಬುದು ಹೂವಿನ ಸುಪ್ಪತ್ತಿಗೆಯಲ್ಲ ಸರಳ ಮಂಚ. ಇದನ್ನು ತಿಳಿದು ಜಾರಿ ಬೀಳದೆ ಉಳಿಯುವವರು ನಿಜಲಿಂಗಪ್ಪನವರು. ಆದರೆ, ಕೃಷ್ಣಾ ನದೀ ನೀರಿನ ಹಂಚೋಣದ ವಿಚಾರದಲ್ಲಿ ಅವರ ತಲೆಯಿಂದು ಬಿಸಿಯಾಗಿದೆ. ಪ್ರಭಾವಶಾಲಿಯಾದ ಮಂತ್ರಿ ಮಂಡಳವಿರುವ ಉತ್ತರ ಭಾರತದಲ್ಲಿ ಈ ಪ್ರಶ್ನೆಯೇ ಬರಲಾರದು. ಯಾರು ಮಾಡಿದ ಕರ್ಮಫಲವೋ ನಿಜಲಿಂಗಪ್ಪನವರು ನವದೆಹಲಿಗೆ ನಿಯೋಗ ಹೋಗಲೇ ಬೇಕಾಯ್ತು. ಒಟ್ಟು ಆಂಧ್ರರನ್ನು ಸಾಮದಾನಭೇದೋಪಾಯಗಳಿಂದ ನಿಗ್ರಹಿಸಲು ಅಸಾಧ್ಯರಾದ ಅವರು ದಂಡವನ್ನೇ ಬಿಗಿಹಿಡಿದಿದ್ದಾರೆ. ಅವರ ಈ ಉದ್ಯಮದಲ್ಲಿ ಜಯವಾಗಲಿ ಎಂದು ೨। ಕೋಟಿ ಕನ್ನಡಿಗರು ಒಕ್ಕೊರಲಿನಿಂದ ದನಿಗೂಡಿಸುತ್ತಾರೆ.

### ಸಂಜೀವ ರೆಡ್ಡಿ

ಆಂಧ್ರ ಪ್ರದೇಶದ ಮಂತ್ರಿಗಳು ಕೇಂದ್ರದ ಮೇಲೆ ಪರಿಣಾಮಕಾರಿ ಪ್ರಭಾವ ಬೀರ ಬಲ್ಲವರಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರೀಗ ಮುಖ್ಯ ಮಂತ್ರಿಯಾದರೆ ಮಾಜಿ ಮುಖ್ಯ ಮಂತ್ರಿಗಳೇ ಕಾಂಗ್ರೆಸ್ ಅಧ್ಯಕ್ಷರು. ಹಾಗಾಗಿ ಆಂಧ್ರ ತನ್ನ ಕಲ್ಪನೆಗಳನ್ನೆಲ್ಲ ಕಾರ್ಯರೂಪಕ್ಕಿಳಿಸುತ್ತಿದೆ. ಯಾರಿಗೇನೇ ಆಗಲಿ ತನ್ನ ಸಾಧನೆಯಿಂದ ಆತಂಕ ಸಂಭವಿಸಬಹುದಾದರೆ, ಅಂತಹ ಸಾಧನೆಯನ್ನು ಬೆಳೆಸುತ್ತ ಹೋಗಬಾರದು. ಆಂಧ್ರದ ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲ ಯೋಜನೆಗಳು ಕೃಷ್ಣಾ ನದಿಯಿಂದ ನೀರುಂಡರೆ, ಮೈಸೂರಿಗಾದ ಅಪಚಾರವನ್ನು ಹೇಳಲಸಾಧ್ಯ. ಇಂತಹ ವಿಲಕ್ಷಣ ನೀತಿಯನ್ನು ಆಂಧ್ರದ ವರಿಷ್ಠರು ಬಿಟ್ಟುಕೊಡಬೇಕು.

### ಗಮಾಲ ನಸ್ಸೇರ

ಸಿರಿಯಾ ಕ್ರಾಂತಿಯೆಬ್ಬಿಸಿ ಸ್ವತಂತ್ರವಾಗಿ ಸಂಯುಕ್ತ ಅರಬ ಪ್ರಜಾರಾಜ್ಯ

---

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**
**O.S. 628/62 ಮತ್ತು R.I.A. 1952/62**

ಶಂಕರನಾರಾಯಣ ಭಟ್ಟ ಕೂಡಾ—ವಾದಿರು
ಶಾರದಾ ದೇವಿ ಕೂಡಾ —ಪ್ರತಿವಾದಿರು.

೨ನೇ ಪ್ರತಿವಾದಿ ಪಡುಬಿದ್ರೆಯಲ್ಲಿರುವ ಡಾಕ್ಟರ್ ವಿಟ್ಠಲ ರಾಯರ ಹೆಂಡತಿ, ಶ್ರೀಮತಿ ಅಹಲ್ಯಾ ದೇವಿಯವರಿಗೆ

ವಾದಿಯರು ನಿಮ್ಮ ಒಂದು ಮತ್ತು 3ನೇ ಪ್ರತಿವಾದಿಯರ ಮೇಲೆ ನೀವು ಮೂರು ಜನರ ಬಗ್ಗೆ ಪುತ್ತೂರು ಡಿ ಮು ಕೋರ್ಟಿನ R E. P 219/62ರಲ್ಲು ವಸೂಲುಕೊಟ್ಟ ಐವೇಜಿನ ವಸೂಲಿ ಬಗ್ಗೆ ದಾಖಲುಮಾಡಿದ ಮೇಲೆ ಕಂಡ ದಾವೆಯು ತಾ 18.3.'63ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಅಲ್ಲದೇ ಸದ್ರಿ ದಾವೆಯಲ್ಲಿ R I A. 1952/62ರಲ್ಲಿ ನೀವು ಮೂರು ಜನರಿಗೂ ಸೇರಿದ ಮೇಲಂತಬೆಟ್ಟು ಗ್ರಾಮದಲ್ಲಿರುವ ಒಂದು ಆಸ್ತಿಯನ್ನು ಡಿಕ್ರಿ ಮುಂಚಿತವಾಗಿ ಜಪ್ತಿಗೆ ವಾದಿರು ಅಪೇಕ್ಷಿಸಿರುವುದರಿಂದ ಆ ಕುರಿತೂ ಕೂಡಾ ನಿಮಗೆ ಆಕ್ಷೇಪವೇನಾದರೂ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ನೀವು ತಾರೀಖು 18—3—1963ರಲ್ಲು ಹಗಲು ಗಂಟೆ 10ಕ್ಕೆ ಖುದ್ದು ಯಾ ವಕೀಲರ ದ್ವಾರಾ ಹಾಜರಾಗಿ ಉಜ್ರು ಹೇಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆ ಮತ್ತು ಜಪ್ತಿ ಅರ್ಜಿಯನ್ನು ತೀರ್ಮಾನಿಸಲಾದೀತು.

(R I A 434/63ರಲ್ಲಿ ಆದ ಕೋರ್ಟು ಹುಕುಂ ಪ್ರಕಾರ)

(*Sd*) ಪಿ. ರಾಮಚಂದ್ರ ಭಟ್ಟ,
ವಾದಿರ ಕಡೆ ಎಡ್ವೊಕೇಟ್.

ಪುತ್ತೂರು, 6—3—1963

# ಅಲ್ಲಲ್ಲಿಯ ಸುದ್ದಿ ಸಾರ

## ನಾಟಿ ಹಾಕುವ ಪದ್ಧತಿಯಿಂದ ಕಬ್ಬಿನ ಬೆಳೆ

ಕಬ್ಬಿನ ತುಂಡುಗಳನ್ನು ಪಾರದರ್ಶಕ ಪಾಲಿಥೀನ್ ಚೀಲ ಕೊಡಿಕೆಗಳೊಳಗಿಟ್ಟು ಮೊಳಕೆ ಬಂದು ಚೆನ್ನಾಗಿ ಚಿಗುರಿದ ನಂತರ ಅವನ್ನು ನಾಟಿ ಹಾಕಿ ಸಾಗುವಳಿ ಮಾಡುವ ನೂತನ ವಿಧಾನವನ್ನು ಲಕ್ನೋದಲ್ಲಿರುವ ಭಾರತೀಯ ಕಬ್ಬು ಸಂಶೋಧನಾ ಸಂಸ್ಥೆಯಲ್ಲಿ ಕಂಡು ಹಿಡಿಯಲಾಗಿದೆ.

ಪ್ರತಿ 40 ಎಕರೆ ಕಬ್ಬಿನ ಸಾಗುವಳಿಗೆ ಒಂದು ಎಕರೆ ಸಸಿಮಡಿ ಸಾಕು. ಕಬ್ಬಿನ ತುಂಡುಗಳನ್ನು ಒಂದರ ಪಕ್ಕದಲ್ಲಿ ಇನ್ನೊಂದರಂತೆ ಇಟ್ಟು, ನೀರು ಚಿಮುಕಿಸಿ ಅದರ ಮೇಲೆ ಪಾರದರ್ಶಕ ಪಾಲಿಥೀಲೀನ್ ಹೊದಿಕೆಯನ್ನು ಹೊದಿಸಬೇಕು.

ಸುಮಾರು ನಾಲ್ಕು ವಾರಗಳಲ್ಲಿ ಮೊಳಕೆಗಳು ಹುಲುಸಾಗಿ ಬೆಳೆಯುವುವು ಈ ಮೊಳಕೆ ಬಂದ ತುಂಡುಗಳನ್ನು ನಾಟಿ ಹಾಕಬಹುದು.

ಈ ಪದ್ಧತಿಯಲ್ಲಿ ಅನುಕೂಲಗಳು ಅನೇಕವಿವೆ. ಕಬ್ಬಿನ ಮೊಳಕೆ ಶೇಕಡ 30ರಿಂದ 75ಕ್ಕೆ ಏರುತ್ತದೆ. ಚಳಿಗಾಲದಲ್ಲೂ ಕಬ್ಬಿನ ಸಾಗುವಳಿ ಮುಂದುವರಿಸಬಹುದಾಗಿದೆ. ನಾಟಿ ಹಾಕಿದ ನಂತರ ಸಾಲುಗಳ ಮಧ್ಯೆ ಖಾಲಿ ಜಾಗಗಳಿಲ್ಲದಂತಾಗುವುದು. ಗೆದ್ದಲಿನ ಪೀಡೆಯೂ ದೂರವಾಗುವುದು.

ಉತ್ತರ ಭಾರತದಲ್ಲಿ ಈ ಪದ್ಧತಿಯಿಂದ ಒದಗುವ ಇನ್ನೊಂದು ವಿಶೇಷ ಅನುಕೂಲವೆಂದರೆ ಇದು- ಬೇಳೆಗಳು, ಗೋಧಿ, ಮತ್ತಿತರ ರಬಿ ಧಾನ್ಯಗಳನ್ನು ತೆಗೆದ ನಂತರ ಕಬ್ಬನ್ನು ಸಾಗುವಳಿ ಮಾಡಬಹುದು

ನಾನಾ ವಿಧವಾದ ಪರಿಸ್ಥಿತಿಗಳಿಗೂ ಕೃಷಿ ವಿಧಾನಗಳಿಗೂ ಈ ನೂತನ ಪದ್ಧತಿ ಹೊಂದಿಕೊಳ್ಳಬಲ್ಲದು ಅತ್ಯಂತ ಶೀತ ಹಾಗೂ ಉಷ್ಣ ಪರಿಸ್ಥಿತಿಗಳಲ್ಲಿ ಬೆಳೆ ತೆಗೆಯಬೇಕಾದ ರೈತರಿಗೆ ಇದರ ಪ್ರಯೋಜನ ಹೆಚ್ಚು ಈ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಗೆ 'ಡೈರೆಕ್ಟರ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸುಗರ್ಕೇನ್ ರಿಸರ್ಚ್, ಲಕ್ನೋ'—ಈ ವಿಳಾಸದೊಡನೆ ವ್ಯವಹರಿಸಬಹುದು.

**ವ್ಯಕ್ತಿಗಿಂತ ಕೃತಿಗೆ ಗೌರವ**— ಶ್ರೀ ಶಂ. ಬಾ. ಜೋಶಿ ಸಂಶೋಧನಾ ಸಮೀಕ್ಷೆಯ ಮೂಲಕ ಮುಂಬಯಿ ಕನ್ನಡಿಗರ ಹೊಸ ಉಪಕ್ರಮ.

ಖ್ಯಾತನಾಮ ಸಂಶೋಧಕರಾದ ಶ್ರೀ ಶಂ. ಬಾ. ಜೋಶಿಯವರು ೪೦ ವರ್ಷಗಳಿಂದ ಸಂಶೋಧನ ಕಾರ್ಯದಲ್ಲಿ ತೊಡಗಿದವರು. ನಾಡು, ನುಡಿ, ಸಮಾಜ, ಸಾಹಿತ್ಯ, ದೇವತಾ ದರ್ಶನ, ತಾತ್ವಿಕಲಹರಿ, ತತ್ವಾನುಸರಣ, ಶಿಕ್ಷಣ, ವಿಭೂತಿ—ಪುರುಷರ ವೀಕ್ಷಣ-ಇವೇ ಮುಂತಾದ ಅವರ ಸಮಗ್ರ ಬರವಣಿಗೆಯ ವಿಷಯಗಳ ಮೇಲೆ, ಸಾಹಿತ್ಯಕೂಟ ಹಾಗೂ ಮುಂಬಯಿ ಕನ್ನಡ ಸಂಘಗಳ ಪರವಾಗಿ, ಫೆಬ್ರುವರಿ ೨೪ರಂದು ಒಂದು ವಿಶೇಷ ವಿಚಾರಗೋಷ್ಠಿಯು ನೆರವೇರಿತು. ಈ ಗೋಷ್ಠಿಗೆಂದು ಪ್ರಾಚಾರ್ಯ ರಂ. ಶ್ರೀ ಮುಗಳಿಯವರನ್ನು ಆಮಂತ್ರಿಸಲಾಗಿದ್ದಿತು. ನ್ಯಾಯ ವೇದಾಂತ ವಿದ್ವಾನ್ ಶ್ರೀ ಮೂಡಲಿ ಗೋಪಾಲಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಶಂ. ಬಾ. ಜೋಶಿಯವರ ಸಂಶೋಧನೆ, ಇತರ ವಿಚಾರಗಳನ್ನು ಇಂದಿನ ಸಾಮಾನ್ಯ ಕನ್ನಡ ಜನತೆಗೆ ಮಾಡಿಕೊಡುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಕೈಕೊಂಡದ್ದಾಗಿದೆ. ಇದು ಶುದ್ಧ ಸಮೀಕ್ಷೆ. ಹೊಗಳಿಕೆ, ವಿಮರ್ಶೆಗಳು ಇಲ್ಲಿ ಅತಿ ಗೌಣ. ವ್ಯಕ್ತಿಗಿಂತ ಕೃತಿಗೆ ಗೌರವ ಸಲ್ಲುವ ಪರಿಪಾಠ ನಮ್ಮಲ್ಲಿ ಬೆಳೆಯಬೇಕಾಗಿದೆ-ಎಂದು ಬೇರೊಂದು ಸಮಯದಲ್ಲಿ ಮಾನ್ಯ ಶ್ರೀ ಮುಗಳಿಯವರು ಹೇಳಿದ್ದನ್ನು ನಾವು ನಮ್ಮ ನಿಲುವೆಯನ್ನಾಗಿ ಇಟ್ಟುಕೊಂಡಿದ್ದೇವೆ"—ಎಂಬುದಾಗಿ ಶ್ರೀ ಹಾವನೂರ ಶ್ರೀನಿವಾಸರು ಸಭಾರಂಭದಲ್ಲಿ ತಿಳಿಯಪಡಿಸಿದರು.

ಸಾಹಿತ್ಯ ಕೂಟದ ಸದಸ್ಯರಾದ ಸರ್ವ ಶ್ರೀ ಸಿ. ಎಂ. ಕುಲಕರ್ಣಿ, ಬ್ಯಾತನಾಳ, ಜಿ. ವಿ. ಕುಲಕರ್ಣಿ, ಡಿ. ಆರ್. ಗುಡಿ, ಸಿ. ಕೆ. ದೀಕ್ಷಿತ, ವ್ಯಾಸರಾಯ ಬಲ್ಲಾಳ್, ರಾಮಚಂದ್ರ ಉಚ್ಚಿಲ್ ಅವರು ಈ ಗೋಷ್ಠಿಯಲ್ಲಿ ಭಾಷಣಗಳನ್ನಿತ್ತರು. ಸರ್ವ ಶ್ರೀ ಗೌರೀಶ ಕಾಯ್ಕಿಣಿ, ಬಜೆ ಶ್ರೀಧರ, ನೆಗಳೂರ ರಂಗನಾಥ, ವ್ಹಿ. ಎಸ್. ದೇಶಪಾಂಡೆ ಮತ್ತು ಜೋಳೀಕಟ್ಟಿ— ಇವರು ತಮ್ಮ ಲೇಖನಗಳ ಮೂಲಕ ಈ ಪರಿಸಂವಾದದಲ್ಲಿ ಭಾಗವಹಿಸಿದ್ದರು. ಎಲ್ಲರೂ ಶ್ರೀ ಶಂ. ಬಾ. ಅವರ ಬಹುರೂಪೀ ಕೃತಿಗಳ ಒಂದೊಂದು ವಿಷಯವನ್ನು ಆಳವಾಗಿ ಮತ್ತು ನಿಷ್ಠೆಯಿಂದ ಅಭ್ಯಾಸಿಸಿ ಶ್ರೀಯುತರ ವಿಚಾರ ಸಾರವನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಮಂಡಿಸಿದರು.

ಶ್ರೀ ರಂ. ಶ್ರೀ. ಮುಗಳಿಯವರು ಮಾತನಾಡುತ್ತ—"ಶಂ. ಬಾ. ಅವರಂತಹ ವಿದ್ವಾಂಸ— ಆದರೆ ಉಪೇಕ್ಷಿತ ಸಾಹಿತಿಗಳು ನಮ್ಮ ನಾಡಿನಲ್ಲಿ ಇನ್ನೂ ಹಲವರು ಇದ್ದಾರೆ. ಅವರ ಕೃತಿಗಳ ಮೌಲ್ಯಮಾಪನ ಆಗುವುದು ಅವಶ್ಯವಿದೆ. ಕನ್ನಡದಲ್ಲಿ ವಿಮರ್ಶೆಯೆಂಬುದೇ ಇಲ್ಲ. ಕಲ್ಲಿಗೂ ಕೂಡ ಪ್ರತಿಧ್ವನಿಯ ಗುಣವಿದೆಯಾದ್ದರಿಂದ ಕೆಲಸವು—ಒಳ್ಳೆಯದೇ ಇರಲಿ, ಕೆಟ್ಟದ್ದಾಗಲೀ ನಮ್ಮ ಜನ ನಿರ್ಜೀವರೂ ಎಂಬಂತೆ-ಯಾವ ಧ್ವನಿಯನ್ನೂ ಕೊಡುವುದಿಲ್ಲ. ಸದುದ್ದೇಶದಿಂದ ಕೂಡಿದ ವಿಮರ್ಶೆ—ಅದರ ವಿಧಾನ ಹೇಗೇ ಇರಲಿ, ನಡೆಯುವುದು ಅವಶ್ಯವಿದೆ. ಒಳನಾಡಿನಲ್ಲಿ ಆಗಬೇಕಾಗಿದ್ದ ವಿಧಾಯಕ ಕಾರ್ಯಕ್ರಮದ ಆರಂಭವು ಮುಂಬಯಿಯಲ್ಲಿ ಆಗುತ್ತಿರುವುದು ಬಹು ಪ್ರಶಂಸನೀಯ" ಎಂದು ಪೀಠಿಕೆಯಾಗಿ ಹೇಳಿ ಆ ನಂತರ ಶ್ರೀ ಶಂ. ಬಾ. ಜೋಶಿಯವರ ಸಂಶೋಧನ ಕ್ರಮದ ಗುಣ-ದೋಷಗಳನ್ನು ಸ್ಥೂಲವಾಗಿ ನಿರೂಪಿಸಿದರು. ಶಂ. ಬಾ. ಪ್ರಣೀತ ಕಂದಮೀಳಿನ ಕಲ್ಪನೆ, ಕರ್ನಾಟ-ಮರಾಟ ಸಂಬಂಧಗಳನ್ನು ಪ್ರಸ್ತಾಪಿಸಿದರು. ಮುಂದುವರಿದು "ಶಂ. ಬಾ. ಅವರಲ್ಲಿ ಸತ್ಯವನ್ನು ಕಂಡುಹಿಡಿಯುವ ಜಿಜ್ಞಾಸೆ ಪ್ರಾಮಾಣಿಕವಾಗಿ ಇದ್ದರೂ, ಆಧಾರಗಳ ಕೊರತೆಯ ಮೂಲಕ, ಅವರ ಸಂಶೋಧನೆಯು ಸಂಪೂರ್ಣ ಸತ್ಯದ ತಳಹದಿಯ ಮೇಲೆ ನಿಲ್ಲದೆ, ಊಹನಾ ಪ್ರಧಾನವಾಯಿತು. ಆ ಊಹನೆಯಲ್ಲಿಯೂ ಸತ್ಯದ ಕಿಡಿ ಇಲ್ಲದಿಲ್ಲ. ಅವರ ಸಂಶೋಧನೆಯ ಮಾರ್ಗವನ್ನು ತರುಣ ಅಭ್ಯಾಸಿಗಳು ಮುಂದುವರಿಸಿಕೊಂಡು ಹೋಗಬೇಕು" ಎಂಬರ್ಥದ ಮಾತುಗಳನ್ನು ಹೇಳಿದರು.

ಇದೇ ಕಾಲಕ್ಕೆ ಮುಂಬಯಿಯ ಉದಯೋನ್ಮುಖ ಕವಿ ಶ್ರೀ ಆನಂದ ನಾಡಕರ್ಣಿಯವರ ಚೊಚ್ಚಲು ಕೃತಿಯಾದ 'ಕಾವ್ಯಾರ್ಪಣ'ದ ಪ್ರಕಟನ ಸಮಾರಂಭವು ಮುಖ್ಯ ಅತಿಥಿಗಳ ಹಸ್ತದಿಂದ ಜರಗಿತು.

**ಉಡುಪಿ ರಾಷ್ಟ್ರೀಯ ಉಳಿತಾಯ ಪಕ್ಷದ ಸಮಾರೋಪ ಸಮಾರಂಭವು**—ಶ್ರೀ ಎಸ್. ಡಿ ಪೆಜತ್ತಾಯರ ಅಧ್ಯಕ್ಷತೆಯಲ್ಲಿ ಇದೇ ತಾ. 7ರಂದು ಮುನ್ಸಿಪಲ್ ಮ| ಗಾ| ಬೇಸಿಕ್ ಶಾ| ಎ| ಶಾಲೆಯಲ್ಲಿ ನೆರವೇರಿತು. ಆರಂಭದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ ಪಿ ರಂಗನಾಥ ಶೆಣೈಯವರು ಸ್ವಾಗತಿಸುತ್ತಾ, ಉಡುಪಿಯಲ್ಲಿ ಹಲವಾರು ಯೋಜನೆಗಳಿಂದ ಸಂಗ್ರಹವಾದ ಹಣದ ವಿವರವನ್ನಿತ್ತರು. ಶ್ರೀ ಎ. ಜೆ. ಅಲ್ಸೆಯವರು ಮುಖ್ಯ ಅತಿಥಿಗಳಾಗಿ ಮಾತಾಡುತ್ತಾ, ಬೆಲೆಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ಉಳಿತಾಯವು ಅವ್ಯವಹಾರಿಕವೆಂದು ಜನತೆಗೆ ಕಂಡು ಬಂದರೂ, ಉಳಿತಾಯವು ಆತನ ಶಿಸ್ತು, ಸಂಯಮದ ಮೇಲೆ ಹೊಂದಿಕೊಂಡಿದೆಯಲ್ಲದೆ, ಆದಾಯದ ಮೇಲಲ್ಲ. ಜನತೆ ತನ್ನ ಉಳಿತಾಯದ ಹಣವನ್ನು ರಾಷ್ಟ್ರಕ್ಕೆ ಅರ್ಪಿಸಿದರೆ, ತನ್ನ ಅಭ್ಯುದಯದ ಜೊತೆಗೆ ರಾಷ್ಟ್ರಾಭಿವೃದ್ಧಿಯನ್ನೂ ಮಾಡಿದಂತಾಗುತ್ತದೆ. ಒಂದು ವೇಳೆ ಜನತೆಯು ಉಳಿತಾಯ ಮಾಡದೆ ಹೋದರೆ, ತೆರಿಗೆ ಹೊರಿಸುವುದರ ಮೂಲಕ ಸರಕಾರ ಹಣ ಸಂಗ್ರಹಿಸ ಬೇಕಾಗುವುದು ಎಂದು ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಪೆಜತ್ತಾಯರು ಮಾತಾಡುತ್ತಾ ನಮ್ಮ ದೇಶದ ಆಪತ್ತಿಯ ವಾತಾವರಣವನ್ನು ವಿವರಿಸಿ, ಪ್ರತಿಯೊಬ್ಬರೂ ಆದಾಯವನ್ನು ಹೆಚ್ಚಿಸಿ, ಉಳಿತಾಯವನ್ನು ಹೆಚ್ಚು ಮಾಡುವುದು ಜನತೆಯ ಕರ್ತವ್ಯವೆಂದು ಹೇಳಿದರು. ಅಂತ್ಯದಲ್ಲಿ ಶ್ರೀ ಕೆ. ಎಂ. ಮಧ್ಯಸ್ಥರು ವಂದನೆಗಳನ್ನರ್ಪಿಸಿದರು.

**ಕುಂಜಾಲು**— ಸ್ಥಳೀಯ ಬಂಟ ಸಮಾಜದ ಆದ್ಯ ಮುಖಂಡರಾದ, ಶ್ರೀ ಇವರ್ಡಿ ನಾರಾಯಣ ಶೆಟ್ಟರು- ತಾ. 3.3.63ರಂದು, ತಮ್ಮ 62ನೇ ವಯಸ್ಸಿನಲ್ಲಿ ನಿಧನಹೊಂದಿರುವರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಹಾವಂಜೆ ಗ್ರಾಮದ ಪಟೇಲರೂ, ಆ ಗ್ರಾಮದ ಪಂಚಾಯತ್ ಅಧ್ಯಕ್ಷರೂ, ಹಾಗೂ ಅಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರೂ ಆಗಿದ್ದರು. ಮೃತರು ಇಲ್ಲಿಯ ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯಿಂದ ಭಾಗವಹಿಸುತ್ತಿದ್ದರು ಹಾಗೂ ಈ ಭಾಗದಲ್ಲಿ ಜನಪ್ರಿಯರಾಗಿದ್ದರು.

**ಸಿಂಡಿಕೇಟ್ ಬೇಂಕಿನಲ್ಲಿ ಶ್ರದ್ಧಾಂಜಲಿ**—ಮಾಜಿ ರಾಷ್ಟ್ರಪತಿ ಡಾಕ್ಟರ್ ರಾಜೇಂದ್ರ ಪ್ರಸಾದರ ನಿಧನಕ್ಕಾಗಿ, ಕೆನರಾ ಇಂಡಸ್ಟ್ರಿಯಲ್ ಬೇಂಕ್ ಸಿಂಡಿಕೇಟಿನ ಪ್ರಧಾನ ಕಚೇರಿ ಮುಕುಂದ ನಿವಾಸದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಡೆಪ್ಯುಟಿ ಚೀಫ್ ಆಫೀಸರು ಶ್ರೀ ಕೆ. ಕೆ. ಪೈಯವರು ಮಾತಾಡುತ್ತಾ, ಸ್ವಾತಂತ್ರ್ಯ ಸಂಗ್ರಾಮದಿಂದ ಜೀವನ ಕೊನೆಯುಸಿರಿನ ತನಕ ದೇಶಕ್ಕಾಗಿ ದುಡಿದ ಪ್ರಸಾದರು ಬಾಪೂಜಿಯವರ ನಂತರ ದೇಶಕ್ಕಾಗಿ ಶ್ರಮಿಸಿದ ಮಹಾನುಭಾವರಲ್ಲಿ ಒಬ್ಬರಾಗಿದ್ದರೆಂದೂ ಹೇಳಿದರು.

---

ದಿಂದ ಬೇರ್ಪಟ್ಟು ಹೋದರೂ ಅಧ್ಯಕ್ಷ ನಸ್ಸೇರರು ತಮ್ಮ ರಾಷ್ಟ್ರದ ಹೆಸರನ್ನು ಬದಲಾಯಿಸಿಲಿಲ್ಲ. 'ಇಂದು ಸಿರಿಯನರು ಬೇರ್ಪಟ್ಟು ಹೋದರು; ಇನ್ನೊಂದು ದಿನ ಅವರು ಮರಳಿ ಒಂದಾಗಲೂ ಬಹುದು' ಎಂಬಾಗ ಅವರೆಂದಿದ್ದರು. ಇಂದು ಅವರ ಭವಿಷ್ಯವಾಣಿ ಸತ್ಯವಾಗುವ ಕಾಲ ನಿಕಟವಾಗುತ್ತಿರುವಂತೆ ಭಾಸವಾಗುತ್ತಿದೆ. ಅಲ್ಲಿ ಪ್ರಧಾನಿ ಖಲೀನ್ ಎಲ್ ಅಜಿಮ್‌ರವರ ವಿರುದ್ಧವೆದ್ದ, ರಕ್ತರಹಿತ ಕ್ರಾಂತಿಕಾರರು ಅಧಿಕಾರವನ್ನು ತಮ್ಮ ವಶಕ್ಕೆ ತಂದುಕೊಂಡಿದ್ದಾರೆ ಇರಾಕಿನ ಕ್ರಾಂತಿಯಾದ ಒಂದು ತಿಂಗಳಲ್ಲಿಯೇ ನಡೆದ ಸಿರಿಯನ್ ಕ್ರಾಂತಿಯಿಂದ ನಸ್ಸೇರರು ಬಲಗೊಂಡರೆನ್ನಬೇಕು. ಆದುದರಿಂದಲೇ ಸಿರಿಯಾದ ಮೇಲೆ ಪರಕೀಯರು ಹಸ್ತಕ್ಷೇಪ ನಡೆಸಿದರೆ ಅದನ್ನು ಸಂಯುಕ್ತ ಅರಬ ರಾಜ್ಯದ ಮೇಲೆ ಮಾಡಿದ ಹಸ್ತಕ್ಷೇಪವೆಂದು ಪರಿಗಣಿಸುವ ಹೇಳಿಕೆ, ಕೈರೋದಿಂದ ಹೊರಟಿದೆ. ಐಗುಪ್ತ, ಸಿರಿಯಾ, ಇರಾಕ್, ಯೆಮೆನ್‌ಗಳು ಅರಬ ರಾಜ್ಯಗಳ ಏಕತೆಯಲ್ಲಿ ವಿಶ್ವಾಸವಿಟ್ಟಂತೆ ಭಾಸವಾಗುತ್ತದೆ.

---

## ಎಡ್ತರೆ ಸಹಕಾರಿ ವ್ಯವಸಾಯಿಕ ಬೇಂಕ್ ಲಿಮಿಟೆಡ್.

## No, L. 842 ಬ್ಯೆಂದೂರು.

—: ಏಲಂ ನೋಟೀಸು :—

ಈ ಕೆಳಗೆ ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲಗಳನ್ನು ಕ್ಲುಪ್ತ ಕಾಲದಲ್ಲಿ ಮರುಪಾವತಿ ಮಾಡುವರೆ ತಪ್ಪಿರುವುದರಿಂದಲೂ ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮಪ್ರಕಾರವಾದ ರಿಜಿಸ್ಟ್ರ ನೋಟೀಸುಗಳನ್ನು ಕೊಟ್ಟದ್ದರೂ ಸದ್ರಿ ಸಾಲಗಳ ಬಾಬ್ತು ಅಸಲು ಬಡ್ಡಿ ಮೊಬಲಗನ್ನು ಸಲ್ಲಿಸದೇ ಬಾಕಿಮಾಡಿಕೊಂಡಿರುವುದರಿಂದಲೂ ಆ ಪೈಕಿ ಕೆಲವು ರಿಜಿಸ್ಟ್ರ ನೋಟೀಸುಗಳು ಅವುಗಳ ವಿಳಾಸದಾರರು ಹಾಲಿ ತಮ್ಮ ವಾಸಸ್ಥಾನದಲ್ಲಿ ಇಲ್ಲವೆಂಬ ಕಾರಣದಿಂದ ಜಾರಿಯಾಗದೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ತಾ. 31—3—1963ನೇ ಆದಿತ್ಯವಾರ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ವ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ಮೊಬಲಗು ಬಡ್ಡಿ ಸಮೇತ 31—3—63 ವರೆಗೆ. |
|---|---|---|
| 790 | ಹೊಬಳಿದಾರ್ ಮಂಜುನಾಥ ಶೆರೆಗಾರರ ಹೆಂಡತಿ, ಮೃತ ನಾರಾಯಣ ಶೆರೆಗಾರರ ವಾರೀಸುದಾರರು ಲಕ್ಷ್ಮೀ ಶೆರೆಗಾರ್ತಿಯವರಿಗೆ ಪಡುವರಿ P O ಪಡುವರಿ. ಹೊಬಳಿದಾರ್ ನಾರಾಯಣ ಶೆರೆಗಾರರ ಹೆಂಡತಿ, ಲಕ್ಷ್ಮೀ ಶೆರೆಗಾರ್ತಿ ಪಡುವರಿ ಗ್ರಾಮ P. O. ಪಡುವರಿ | 481=50 |
| 792 | ಮೃತ ಹೊಬಳಿದಾರ್ ನಾರಾಯಣ ಶೆರೆಗಾರರ ವಾರೀಸುದಾರರು ಹೊಬಳಿದಾರ್ ಮಂಜ ನಾಥ ಶೆರೆಗಾರರ ಹೆಂಡತಿ ಲಕ್ಷ್ಮೀ ಶೆರೆಗಾರ್ತಿ ಪಡುವರೀ ಗ್ರಾಮ P O ಪಡುವರಿ. ಹೊಬಳಿದಾರ್ ನಾರಾಯಣ ಶೆರೆಗಾರರ ಹೆಂಡತಿ, ಲಕ್ಷ್ಮೀ ಶೆರೆಗಾರ್ತಿ, ಪಡುವರಿ ಗ್ರಾಮ, P O. ಪಡುವರಿ. (ದ. ಕ.) | 86=10 |
| 684 | ಮೃತ ಸಣ್ಣ ಸಾಂತ ವೆಂಕಟ್ರಮಣ ಶೆರೆಗಾರರ ಮಗ, ನಾರಾಯಣ ಶೆರೆಗಾರ, P. O. ಪಡುವರಿ. | 69=60 |
| 740 | ನಂ. 50ನೇ ಅಪ್ಪಯ್ಯನ ತಿಮ್ಮಪ್ಪ ಶೆರೆಗಾರ, ಅಪ್ಪಯ್ಯನ ನಾಗಪ್ಪ ಶೆರೆಗಾರರ ಮಗ, ಪಡುವರಿ ಗ್ರಾಮ, P O ಪಡುವರಿ. | 154=00 |
| 709 | ನಂ. 173 ಕಲ್ಯಾಣಿ ಅಂಣಪ್ಪ ಶೆಟ್ಟಿ, ಕಲ್ಯಾಣಿ ವೆಂಕಪ್ಪಶೆಟ್ಟರ ಅಳಿಯ, ಎಡ್ತರೆ ಗ್ರಾಮ, P. O ಬ್ಯೆಂದೂರು., ದ ಕ | 83=00 |
| 710 | — Do — | 219=70 |
| 711 | — Do — | 154=03 |
| 712 | — Do — | 55=50 |
| 725 | B 39 ವಂಡ್ಸೆ ಮಹಮ್ಮದ್ ಮಿರಾ ಸಾಹೇಬ್, ವಂಡ್ಸೆ ಮಹಮ್ಮದ್ ಸಾಹೇಬರ ಮಗ, ಎಡ್ತರೆ P. O, ಬ್ಯೆಂದೂರು. | 104=33 |
| 521 | 386 N. ಹಸನ್ ಸಾಹೇಬ್, ಮೂವಡ ಉಮ್ಮರ್ ಸಾಹೇಬರ ಮಗ, ಬ್ಯೆಂದೂರು, P. O, ಬ್ಯೆಂದೂರು. | 210=50 |
| 522 | — Do — | 215=70 |
| 525 | — Do — | 250=60 |

Office of the Yedthare
Cooperative Agrl Bank Ltd.
P. O. Byndoor
D/d 10—3—63

Y A Hussain
ಕಾರ್ಯದರ್ಶಿ

# ಬಾಡುಂಗದಿಂದ ಕೊಲಂಬೊ ವರೆಗೆ

(೫ನೇ ಪುಟದಿಂದ)

೧೯೫೯ರ ನವಂಬರ ೭ರಂದು ೮ ದಿನ ಭಾರತದ ೫೦೦೦೦ ಚ ಮೈ. ನೆಲ ತನ್ನದೆಂದು ಅದು ಬಹಿರಂಗವಾಗಿ ಸಾರಿತು ಇದರಿಂದ 'ಭಾಯಿ ಭಾಯಿ' ಘೋಯ ವಾಕ್ಯಕ್ಕೆ ಸಮಾಧಿಯಾದಂತಾಯಿತು. ಇದನ್ನು ಉಲ್ಲೇಖಿಸಿ ಚೀನಾ ಬಗೆದ ದ್ರೋಹವನ್ನು ಪ್ರಕಟಿಸಿ ನೆಹರು ಲಾಯರಿಗೊಂದು ಪತ್ರವನ್ನು ಬರೆದರು ಘೋಷಣೆಗಳಿಂದಲೇ ಸ್ನೇಹಭಾವ ಹುಟ್ಟುವುದಿಲ್ಲವೆಂದೂ ಕೃತಿಯು ಅದಕ್ಕೆ ಸಹಕಾರಿಯಾಗಬೇಕೆಂದೂ ಅವರು ಎತ್ತಿ ಹೇಳಿದರು. ಅದೇನೇ ಇದ್ದರೂ ಒಪ್ಪಿಕೊಂಡ ಸಿದ್ಧಾಂತಗಳಿಗನುಗುಣವಾಗಿ ಉಭಯ ರಾಷ್ಟ್ರಗಳೂ ಮೈತ್ರಿಯುತ ಸಹ ಜೀವನವನ್ನು ಬಾಳಬೇಕು ಎಂದವರು ಸ್ಪಷ್ಟಪಡಿಸಿದರು.

ಚೌ ಎನ್ ಲಾಯ್ ತಮ್ಮ ತಂತ್ರಜಾಲವನ್ನು ಲಗುಬಗೆಯಿಂದ ನೇಯ್ದರು ೧೯೫೪ರಲ್ಲಿ ಭಾರತಕ್ಕೆ ಬಂದು "ಮೈತ್ರಿ ಚಿರಸ್ಥಾಯಿ" ಎಂದರು. ಉದ್ಭವಿಸಿದ ಗಡಿ ಪ್ರಶ್ನೆಯನ್ನು ಉಭಯತರರ ನಡುವೆ ಮೈತ್ರಿಪೂರ್ಣ ಸಮರ್ಥಿಸಿಕೊಂಡು ಬರುವ ಮೂಲಭೂತ ಪ್ರಶ್ನೆಯೊಂದಿಗೆ ಹೋಲಿಸುವಾಗ ಅದು ಕ್ಷುಲ್ಲಕ ಮತ್ತು ತಾತ್ಕಾಲಿಕವೆಂದು ನುಡಿದರು.

ಚೌರವರ ಹೇಳಿಕೆಯಿಂದ ತುಸು ತೃಪ್ತಿಯೇನೋ ದೊರಕಿದಂತಾಯಿತು ಆದರೆ, ಆದರ ಹಿಂದೆ ಭಾರಿಯ ತಂತ್ರಜಾಲ ವಿಕ್ಸಿತ್ತ್ಯೊಂದು ಮುಂದೆ ತಿಳಿಯಿತು. ೧೯೬೦ರ ಏಪ್ರಿಲ್‌ನಲ್ಲಿ ಈ ಸಂಬಂಧವಾಗಿ ಲೋಕ ಸಭೆಯಲ್ಲಿ ಮಾತಾಡಿದ ನೆಹರು 'ನಾವು ಅಗಾಧ ಪ್ರಮಾಣದ ಸಮಸ್ಯೆಯನ್ನು ಪೀಡೆಯನ್ನೂ ಎದುರಿಸಬೇಕಾಗಿದೆ' ಎಂದು ಉದ್ಗರಿಸಿದರು. ಆದರೂ ಇದರ ಪರಿಹಾರಕ್ಕೆ ಪಂಚಶೀಲಗಳೇ ಶಕ್ತಿಯುತವೆಂದೂ ಅವರು ಭಾವಿಸಿದರು.

ಚೀನೀಯರು ಭಾರತವನ್ನು ಆಕ್ರಮಿಸುವ ಸಂಚು ಹೂಡುತಿದ್ದಾರೆಂದು ಆಗಲೇ ತಿಳಿಯ ತೊಡಗಿತು. ಹಾಗಿದ್ದರೂ ಚೀನಾವು ತನ್ನ ಒಪ್ಪಿದ ಸಿದ್ಧಾಂತದಂತೆ ಶಾಂತ ವಿಧಾನಗಳಿಂದಲೇ ಸಮಸ್ಯೆಗಳನ್ನು ಪರಿಹರಿಸುವುದು ಎಂದು ನೆಹರು ವಿಶ್ವಸಿದರು. ನೆಹರು ಇಟ್ಟ ವಿಶ್ವಾಸ ಎರಡು ವರ್ಷಗಳಲ್ಲಿಯೇ ಸ್ಫೋಟವಾಯಿತು. ೧೯೬೨ರ ಅಕ್ಟೋಬರದಲ್ಲಿ ಚೀನಾ ದೊಡ್ಡ ಪ್ರಮಾಣದ ಆಕ್ರಮಣ ಮಾಡಿದಾಗ, ನೆಹರೂ ಆಶಾ ಭಾವನೆಯು ವಿಶಾಲ ಭವನದಲ್ಲಿ ಕೀಲಿ ಹೋಯಿತು.

ಹೃದಯ ಘಾತಗೊಂಡ ನೆಹರು ತಮ್ಮ ಮೃದು ಲೇಖನಿಯನ್ನೂ ವಜ್ರದಂತೆ ಬಳಸಿ ಬರೆಯಲೇಬೇಕಾಯ್ತು ಲಾಯರಿಗೆ—ತಮ್ಮ ದೀರ್ಘ ರಾಜಕೀಯ ಜೀವನದಲ್ಲಿ ಜನತಾ ಚೀನಾ ಗಣರಾಜ್ಯದ ಸ್ಥಾಪನೆಯೊಂದಿಗೇನೇ ಚೀನಾದೊಂದಿಗೆ ಶಾಂತಿ ಹಾಗೂ ಮೈತ್ರಿಪೂರ್ಣ ಸಂಬಂಧವನ್ನು ಹೊಂದಿರುವಲ್ಲಿ ತಾವೂ ತಮ್ಮ ಸಹೋದ್ಯೋಗಿಗಳೂ ಇಟ್ಟುಕೊಂಡಿರುವ ಆಶೋತ್ತರಗಳು ಕಳೆದ ಕೆಲ ವರ್ಷಗಳಿಂದ ಮಣ್ಣುಪಾಲಾಗಿವೆ ಇದಕ್ಕೆ ಉಭಯ ರಾಷ್ಟ್ರಗಳ ಸಂಬಂಧ ವಿರಸಗೊಳ್ಳುತ್ತಿರುವುದೇ ಕಾರಣ ಭಾರತದ ಮೇಲೆ ಚೀನಾದ ದುರಾಕ್ರಮಣದಿಂದ ಎರಡು ದೇಶಗಳ ನಡುವಣ ಸಂಬಂಧವು ಸಂಪೂರ್ಣ ಹದಗೆಟ್ಟಿದೆ ಎಂದು.

ಬಾಡುಂಗದಲ್ಲಿ ಸ್ನೇಹ ಹಸ್ತ ನೀಡಿದ ಚೀನಾ ಬೊಂಬ್ಡಿಲಾದಲ್ಲಿ ಭಾರತೀಯ ಹಸ್ತವನ್ನೇ ನುಂಗತೊಡಗಿತು. ಮೈತ್ರಿ ಭಾವನೆಯನ್ನು ಛಿದ್ರಗೊಳಿಸಿತು. ಮತ್ತೆ ಮುಂದೆ ಬಂದಿತು ಕೊಲಂಬೊ ಸಲಹೆಗಳು. ಇವನ್ನು ಲಾಯರು ಜೀವಂತ ಸಮಾಧಿ ಮಾಡಿದರು. ಚೀನಾವು ಶಾಂತಿ ಸ್ಥಾಪನೆಯ ಬಗ್ಗೆ ತನಗಿರುವ ಅಪೇಕ್ಷೆಯನ್ನು ಸಾರುತ್ತಿದೆ, ಆದರೆ, ಸಮಸ್ಯೆಗಳನ್ನೂ ಮುಂದೆ ಹಾಕುತ್ತಿದೆ. ಆ ಸೂಚನೆಗಳಿಗೆ 'ಖಚಿತ ಒಪ್ಪಿಗೆ' ಸೂಚಿಸಿತು, ಅನಂತರ ಹೆಜ್ಜೆ ಕೀಳಲು ಹವಣಿಸಿತು. ಚೀನಾದ ಪ್ರತಿಮಾತೂ ಅಸ್ಪಷ್ಟ. ಅಸಮರ್ಪಕ. ಇವನ್ನು ನೀಗಿಸಿಕೊಂಡು ಅದು ಭಾರತದೊಂದಿಗೆ ಶಾಂತಿಯಿಂದ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ತನ್ನ ಪ್ರಾಮಾಣಿಕತೆಗೆ ನಿಶ್ಚಿತ ಪ್ರಮಾಣ ನೀಡುವ ದಿನವೊಂದಿದೆಯೇ ಎಂದು ಇಡಿಯ ವಿಶ್ವದ ಜನತೆ ಕೇಳುತ್ತಿದೆ. ಇದನ್ನು ಉತ್ತರಿಸಿ ನಡೆಯಬೇಕಾದವರು ಚೌ ಎನ್ ಲಾಯ್ ಒಬ್ಬರೇ ಅಲ್ಲವೆ? ಆದರೆ, ಇತ್ತೀಚಿಗಿನ ಆದರ ವರ್ತನೆಯಿಂದ ಮತ್ತು ಪಾಕಿಸ್ತಾನದೊಡನೆ ಮಾಡಿಕೊಂಡ ಅನ್ಯಾಯದ ಗಡಿ ಒಡಂಬಡಿಕೆಯಿಂದ ಆದಿನ ಇಲ್ಲವೇ ಇಲ್ಲವೆಂದು ಹೇಳಿದರೆ, ತಪ್ಪಾಗದು.

## ಕು. ಶಿ. ಹರಿದಾಸ ಭಟ್

'ನವಯುಗ'ದ ಆಪ್ತ ಹಿತ ಚಿಂತಕರಲ್ಲಿ ಅಗ್ರಗಣ್ಯರಾದ ಪ್ರೊ| ಕು ಶಿ ಹರಿದಾಸ ಭಟ್ಟರು ಸದ್ಯ ನೇಪಲ್ಸ್‌ನಲ್ಲಿ 'ಆರ್ಥಿಕ ಅಭಿವೃದ್ಧಿ ಅಭ್ಯಸನ ಸಂಸ್ಥೆ'ಯಲ್ಲಿ ವಿಶೇಷ ಅಧ್ಯಯನವನ್ನು ನಡೆಸುತಿದ್ದಾರೆ. ಇವರು ವಾಶಿಂಗ್‌ಟನ್ನಿನಲ್ಲಿ ಜೂನ್ ಪೂರ್ವಾರ್ಧದ ಸುಮಾರಿಗೆ ನಡೆಯಲಿರುವ ಹಸಿವೆಯನ್ನು ಕುರಿತ ಜಾಗತಿಕ ಸಮ್ಮೇಳನದಲ್ಲಿ ಭಾಗವಹಿಸಲು ಪ್ರತಿನಿಧಿಯಾಗಿ ಆಯ್ಕೆಗೊಂಡಿರುವರು. ಈ ಸಮ್ಮೇಳನ ಜಾಗತಿಕ ಆಹಾರ ಮತ್ತು ಕೃಷಿ ಸಂಸ್ಥೆಯವರು ಏರ್ಪಡಿಸಿದ್ದು, ಆದರಲ್ಲಿ ೪೦ ಜನ ಪ್ರತಿನಿಧಿಗಳು ಭಾಗಿಗಳಾಗುವರು.

ಶ್ರೀ ಭಟ್ಟರು ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ವೈಸ್ ಪ್ರಿನ್ಸಿಪಾಲರೂ ಆರ್ಥಶಾಸ್ತ್ರ ಮತ್ತು ಇತಿಹಾಸ ವಿಭಾಗದ ಪ್ರಧಾನರೂ ಆಗಿದ್ದು ಕನ್ನಡದ ಉತ್ತಮ ಸಾಹಿತಿಗಳೆಂದು ಹೆಸರು ಪಡೆದಿದ್ದಾರೆ. ಹಲವಾರು ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿಯೂ ಇವರು ಸೇವಾತತ್ಪರರಾಗಿದ್ದಾರೆ


ರಾಷ್ಟ್ರೀಯ ರಕ್ಷಣಾ ನಿಧಿಯ ಸಹಾಯಾರ್ಥವಾಗಿ
ಎಸ್ಸೆಲ್ ಎಂಡ್ ಪಾರ್ಟಿಯವರಿಂದ

**ಬಹದ್ದೂರ್ ಗಂಡ**

ನಾಟಕ ಪ್ರದರ್ಶನ

ತಾ. 16—3—63 ನೇ ರಾತ್ರಿ 9-30

ಡ| ಯು. ಸುಂದರರಾವ್ ಸ್ಮಾರಕ ರಂಗಮಂಟಪದಲ್ಲಿ

— ಮುಖ್ಯ ಭೂಮಿಕೆಯಲ್ಲಿ —

ಶ್ರೀಗಳಾದ ಪಿ ಸೀನ ಶೆಟ್ಟಿ, ಕೆ. ಅನಂತ ಭಟ್ಟ, ಆರ್. ಎಂ. ಕೆ. ಶೆಣೈ, ಕು. ಯಶೋಧರಾ, ಸತ್ಯಭಾಮಾ, ಯು. ದಾಮೋದರ್, ಬಿ ಎ., ವಿಲಿಯಂ ಪಿಂಟೋ, ಬಿ. ಎ., ಬಾಲಕೃಷ್ಣ ಪಾಂಗಣ್ಣಾಯ, ಬಿ. ಎ., ಜೋರ್ಜ್ ಎಚ್. ಅಮ್ಮಣ್ಣ, ಎಂ. ವಿಕ್ಟರ್, ಎಂ ಮಾಧವ ರಾವ್, ಯು. ಶ್ರೀನಿವಾಸ ರಾವ್, ಮತ್ತು ಎಸ್ಸೆಲ್.

ಪ್ರವೇಶ ದರ: ರೂ 5, 3, 2 ಮತ್ತು 1.

**ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ, ಉಡುಪಿ.**



**ಅಪವ್ಯಯದ ವಿರುದ್ಧ ಹೂಡಿರಿ ಯುದ್ಧ!**
**ದುಂದು ವೆಚ್ಚ ನಿಲ್ಲಿಸಿ ರಾಷ್ಟ್ರ ರಕ್ಷಣೆಗೆ ಆಗಿರಿ ಸಿದ್ಧ!**



ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್
ಎಂ. ಎ., ಐ. ಸಿ. ಎಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—

**TALES OF IND**

ಕಥಾವಳಿಯ ಕನ್ನಡ ಅನುವಾದ

**ಭಾರತೀಯ ಕಥೆಗಳು**

ಚಿಕ್ಕ ಚೊಕ್ಕ ೧೫೩ ಕಥೆಗಳು ಬೆಲೆ ರೂ 1-12-0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

**ನವಭಾರತ ಪುಸ್ತಕ ಭಂಡಾರ, ಉಡುಪಿ**



ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

**ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.**

**ಸಾಹಸ ಭೀಮ ವಿಜಯ (ಗದಾಯುದ್ಧ)** ೦-೮-೦
ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

**ಭಾರತದ ಗುರುಕುಲ** ೦-೬-೦
ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ

**ಲತ್ತಪಗಡೆ** ೦-೬-೦
ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಆರಣ ಸರ್ವೋತ್ತಮವಾದ ಕಿಮ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

**ಭರತೇಶ ದಿಗ್ವಿಜಯ** ೦-೮-೦
ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

**ವಾಲಿ ಸುಗ್ರೀವ (ಬಹುಮಾನಿತ)** ೦-೮-೦
ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ವ ನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

**ನವಭಾರತ ಪುಸ್ತಕ ಭಂಡಾರ, ಉಡುಪಿ.**

## ಭಾರತೀಯ ಮಹಾ ವಿಭೂತಿ

# ಅಬುಲ್ ಕಲಂ ಆಜಾದ್

ಭಾರತ ಮಾತೆಯನ್ನು ದಾಸ್ಯಶೃಂಖಲೆಯಿಂದ ವಿಮುಕ್ತಗೊಳಿಸಲು ಭಾರತೀಯರಲ್ಲದವರೂ ಹೋರಾಡಿದ್ದಾರೆ. ತಮ್ಮ ಪ್ರಾಣದ ಹಂಗು ತೊರೆದು ಕಾದಾಡಿದ್ದಾರೆ. ಅವರಲ್ಲಿ ಶ್ರೇಷ್ಠರಾದವರು ಅನ್ನಿಬೆಸೆಂಟ್ ಮತ್ತು ಆಜಾದರು. ಆಝಾದರ ಸೇವೆ ಕಾರ್ಯ ವಿಶಿಷ್ಟವಾದುದು. ಶಿಕ್ಷಣ ತಜ್ಞನಾಗಿ ಭಾರತದ ಏಳಿಗೆಗೆ ತನ್ನ ಪ್ರಾಣವನ್ನೇ ಅರ್ಪಿಸಿದ ಮತ್ತು ಭಾರತದ ಮಣ್ಣಿನಲ್ಲಿ ಮಣ್ಣಾಗಿ ಹೋಗಿ ಕೀರ್ತಿಶೇಷರಾದ ಮೌಲನ ಅಬುಲ್ ಕಲಂ ಆಝಾದರ ಜೀವನ— ಕಾರ್ಯತತ್ಪರತೆ ಆದರ್ಶವಾದುದು.

ಇವರ ಹೆಸರಿನಲ್ಲಿನ 'ಆಝಾದ್' ಎಂಬ ಶಬ್ದದ ಅರ್ಥ ಸ್ವತಂತ್ರ' ಎಂದು. ಆಝಾದರು ತಮ್ಮ ಈ ಉಪನಾಮದ ಉಪಯುಕ್ತತೆಯನ್ನು ತಮ್ಮ ಜೀವನದಲ್ಲಿ ಎತ್ತಿ ತೋರಿಸಿದರು. ಅವರು ತಮ್ಮ ಸರ್ವ ಕಾರ್ಯದಲ್ಲಿಯೂ, ಸರ್ವ ತಂತ್ರ ಸ್ವತಂತ್ರರು. ಭಾರತದ ಸ್ವಾತಂತ್ರ್ಯ ಪ್ರಾಪ್ತಿಗೆ ರಾತ್ರಿಹಗಲೆನ್ನದೇ ಹೋರಾಡಿದ ಅಮರರ ಪಂಕ್ತಿಯಲ್ಲಿ ಇವರು ಸ್ಮರಣೀಯರಾಗಿದ್ದಾರೆ.

ವಿಶಾಲವಾದ ಹಣೆ, ಕನ್ನಡಕದ ಒಳಗಿನಿಂದ ಹೊಳೆಯುವ ಕಣ್ಣುಗಳು, ತೇಜೋಪೂರ್ಣ ಮುಖಮಂಡಲ, ತಲೆಯ ಮೇಲೆ ಟೊಪ್ಪಿ, ಖಾದಿ ಬಟ್ಟೆಯ ದೊರಗಾದ ಒಂದು ಕೋಟು ಮತ್ತು ಒಂದು ಪಂಚೆ ಇವುಗಳನ್ನು ಧರಿಸಿ ಧೃಢ ಪ್ರತಿಜ್ಞರಂತೆ ಕಾಣುವ ಮಹಾವ್ಯಕ್ತಿ ಆಝಾದರು ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಅನರ್ಘ್ಯ ಸ್ಥಾನ ಗಳಿಸಿದ್ದಾರೆ. ಭಾಷಣ ಕಲೆಯಲ್ಲಿ ಬಹುಮುಖ ಪ್ರತಿಭಾ ಸಂಪನ್ನರು. ಭಾಷೆಯ ಮೇಲಿನ ತಮ್ಮ ಅಧಿಕಾರದಿಂದ ಅದನ್ನು ಎಲ್ಲಿ ಬೇಕೋ ಅಲ್ಲಿಗೆ ಎಳೆದುಕೊಂಡು ಹೋಗಬಲ್ಲರು. ಇವೆಲ್ಲವುಗಳಿಂದ ಕೂಡಿದ ಆಝಾದರನ್ನು ನೋಡಿ ಆಕರ್ಷಿಸಲ್ಪಡದವರಾರು? ಇವರು ಮುಸಲ್ಮಾನರಾದರೂ, ಗೀತೆಯನ್ನು ಬಹು ಪ್ರೀತಿಸುತ್ತಿದ್ದುದನ್ನು ನೋಡುವಾಗ ಇವರ ಘನತೆಯು ಅರಿವಾಗದಿರಲಿಕ್ಕಿಲ್ಲ. ತಾವು ಸಂಸ್ಕೃತ ಭಾಷೆಯನ್ನು ತಿಳಿದಿರದಿದ್ದರೂ, ಗೀತೆಯ 'ಪಾರ್ಸಿ' ಅನುವಾದವನ್ನು ನೋಡಿ ಪ್ರತಿದಿನ ಅಭ್ಯಸಿಸುತ್ತಿದ್ದರು. ಹೀಗೆ ಮುಸಲ್ಮಾನರಾಗಿ ಉಚ್ಚ, ಉದ್ದೇಶ, ಆಕಾಂಕ್ಷೆಗಳನ್ನಿರಿಸಿದ ಆಝಾದರ ಜೀವನವನ್ನು ಸ್ವಲ್ಪ ಒಳಹೊಕ್ಕು ನೋಡುವ.

ಇವರು ಪ್ರಸಿದ್ಧರಾದ ಹಜರತ್ ಶೇಖ್ ಜಮಾಲುದ್ದೀನ್‌ರ ವಂಶಜರು. ೧೬ನೇ ಶತಮಾನದ ವಿದ್ಯುನ್ಮಣಿಗಳಲ್ಲಿ ಹಜರತ್ ಶೇಖರು ಒಬ್ಬರು. ಇವರು ಅರೇಬಿಯಾದ ಮಕ್ಕಾದ ಬಳಿ ವಾಸಿಸುತ್ತಿದ್ದರು. ಒಮ್ಮೆ ಭಾರತಕ್ಕೆ ಬಂದವರು ಅಕ್ಬರನನ್ನು ಕಂಡು ಆತನ ಔದಾರ್ಯಕ್ಕೆ ಬಲಿಯಾಗಿ ಭಾರತದಲ್ಲಿ ವಾಸಿಸುವುದಾಗಿ ನಿರ್ಧರಿಸಿದರು. ಘನ ವಿದ್ವಾಂಸರಾದ ಇವರಿಗೆ ಅಕ್ಬರನು ಸ್ಥಾನ, ಮಾನಗಳನ್ನೂ, ಧನದಾನವನ್ನು ಇತ್ತು ಗೌರವಿಸಿದನು. ಒಮ್ಮೆ ಅಕ್ಬರನು ತನ್ನ "ದಿನ್ ಇಲಾಹಿ" ಮತವನ್ನು ಪ್ರಚಾರ ಮಾಡಲು ಇವರಲ್ಲಿ ಹೇಳಿದಾಗ ಇವರು ಒಪ್ಪಲಿಲ್ಲ. ಆಗ ಅಕ್ಬರನು ಅತೃಪ್ತನಾದನು. ಶೇಖರು ಈ ಮತವನ್ನು ಖಂಡಿಸಿದರು. ಇದರಿಂದ ಅವರು ಅಕ್ಬರನ ಆಸ್ಥಾನವನ್ನು ಬಿಟ್ಟು ತಮ್ಮ ಊರಾದ ಮಕ್ಕಾಕ್ಕೆ ತೆರಳಿದರು. ಅಲ್ಲಿಯೇ ಇವರಿಗೆ "ಖೈರುದ್ದೀನ್" ಎಂಬ ಒಬ್ಬ ಮಗನು ಜನಿಸಿದನು. ಇವರೂ ಅರಬೀ, ಪಾರಸಿ ಭಾಷೆಗಳಲ್ಲಿ ಘನ ವಿದ್ವಾಂಸರಾಗಿ ಮಹತ್ವಪೂರ್ಣ ಗ್ರಂಥ ರಚನೆ ಮಾಡಿದ್ದಾರೆ. ೧೮೫೭ರ ಸಿಪಾಯಿ ದಂಗೆಯಿಂದಾಗಿ ಅವರು ಭಾರತಕ್ಕೆ ಬಂದವರೂ ಹಿಂತೆರಳಿದರು. ಅಲ್ಲಿಯೇ ಅವರು ಓರ್ವ ವಿದುಷಿ ಕನ್ಯೆಯನ್ನು ಮದುವೆಯಾದರು. ಮರು ವರ್ಷವೇ ಆಝಾದರ ಜನನವಾಯಿತು. ತಾಯಿ ತಂದೆಯವರ ಲಾಲನೆ ಪಾಲನೆಯಲ್ಲಿ ಬಾಲಕ ಆಝಾದರು ಶುಕ್ಲಪಕ್ಷದ ಚಂದಿರನಂತೆ ಬೆಳೆದರು. ತಾಯಿ ತಂದೆಯರಿಂದ ಪ್ರಾರಂಭಿಕ ಶಿಕ್ಷಣವನ್ನು ಪಡೆದರು. ಅರಬೀ, ಉರ್ದು ಭಾಷೆಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದರು. ತದನಂತರ ಮಿಶ್ರ ದೇಶದ "ಅಲ್ ಹಜರ್" ಎಂಬ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾ ವ್ಯಾಸಂಗವನ್ನು ಮುಂದರಿಸಿದರು.

ಆಝಾದರು ೧೧ ವರ್ಷದವರಿರುವಾಗಲೇ ಅವರ ಕುಟುಂಬವು ಭಾರತಕ್ಕೆ ಮರಳಿತು. ಆಗಲೇ ಆಝಾದರು ಘನ ವಿದ್ವಾಂಸರೆಂದು ಕೀರ್ತಿ ಪಡೆದಿದ್ದರು. ಭಾರತಕ್ಕೆ ಬಂದ ಮೊದಲನೇ ವರ್ಷದಲ್ಲಿಯೇ ಒಂದು ಉರ್ದು ಪತ್ರಿಕೆಯ ಸಂಪಾದಕರಾದರು. ಈ ಪತ್ರಿಕೆಯಲ್ಲಿ ಕೆಲವು ಲೇಖನಗಳನ್ನು ಬರೆದು ಅನೇಕ ಸುಪ್ರಸಿದ್ಧ ವ್ಯಕ್ತಿಗಳ ಪ್ರಶಂಸೆಗೆ ಪಾತ್ರರಾದರು. ಕೆಲವು ಕೃತಿಗಳನ್ನು ಉರ್ದು ಭಾಷೆಯಲ್ಲಿ ರಚಿಸಿದರು. ಅದರ ಅನುವಾದ ಶೀಘ್ರದಲ್ಲಿಯೇ ಎಲ್ಲಾ ಭಾಷೆಯಲ್ಲಿಯೂ ಆಗಿ ಅವರ ಕೀರ್ತಿಯನ್ನು ಸುತ್ತಲೂ ಹಬ್ಬಿಸಿತು.

೧೯೧೨ರಲ್ಲಿ ಆಝಾದರು ತಮ್ಮ ಹೃದಯದ ಭಾವನೆಗಳನ್ನು ಜನತೆಯ ಹೃದಯಕ್ಕೆ ಮುಟ್ಟಿಸಲು "ಅಲ್ ಹಿಲಾಲ್" ಎಂಬ ಒಂದು ಪತ್ರಿಕೆಯನ್ನು ಹೊರಡಿಸಿದರು. ಇದರಿಂದ ಪತ್ರಿಕೆಯು ಬಲು ಬೇಗನೆ ಪ್ರಚಾರಗೊಂಡಿತು. ಈ ಪತ್ರಿಕೆಯಲ್ಲಿ ಮುಸ್ಲೀಮರು ತಮ್ಮ ಸ್ವಜಾತಿಯ ಭ್ರಾಂತತೆಯನ್ನು ತೊರೆದು ಭಾರತದ ಹಿಂದುಗಳೊಡನೆ ಬೆರೆತು ಐಕ್ಯದಿಂದಿರಬೇಕೆಂದು ವಿನಂತಿಸುತ್ತಾ ಇವರು ಬರೆದ ಲೇಖನಗಳು ಬಹು ಮಹತ್ವವಾದುವು. ರಾಜನೈತಿಕ, ಸಾಹಿತ್ಯಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಇವರು ತಮ್ಮ ಲೇಖನಗಳಿಂದಾಗಿ ಒಂದು ಕ್ರಾಂತಿಯನ್ನೇ ಎಬ್ಬಿಸಿದರು. ಇದರಿಂದ ಇವರ ಪತ್ರಿಕೆಯು ಜನಾನುರಾಗವನ್ನು ಸಂಪಾದಿಸಿತು.

ಅದೇ ಸಮಯದಲ್ಲಿ ಸಯ್ಯದ್ 'ಅಹಮ್ಮದ್‌ಖಾನ್' ಇವರ ನೇತೃತ್ವದಲ್ಲಿ ಮುಸಲ್ಮಾನರು ಕಾಂಗ್ರೆಸ್ಸಿನಿಂದ ದೂರವಾಗಿ ಮುಸ್ಲಿಂ ಲೀಗನ್ನು ಸ್ಥಾಪಿಸಲು ಅಲೀಘಡ್ ವಿಶ್ವವಿದ್ಯಾಲಯದಲ್ಲಿ ಸೇರಿದ್ದರು, ಅಂತೆಯೇ ೧೯೦೬ರಲ್ಲಿ ಮುಸ್ಲಿಂ ಲೀಗಿನ ಸ್ಥಾಪನೆಯಾಯಿತು. ಈ ಲೀಗ್ ಯಾವಾಗಲೂ, ಆಂಗ್ಲೇಯರ ಪ್ರತಿ ಪ್ರೇಮ ಪೂರ್ಣ ವರ್ತನೆಯನ್ನೇ ಮಾಡಿ ಅವರ ಸ್ವಾಮಿ ಭಕ್ತರಾಗಲು ಪ್ರಯತ್ನಿಸುತ್ತಿತ್ತು. ಆಝಾದರಿಗೆ ಇದು ಸರಿ ತೋರಲಿಲ್ಲ. ಅವರು 'ಲೀಗು' ತನ್ನ ಧೋರಣೆಯನ್ನು ಬದಲಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುನ್ನುಗ್ಗುವಂತೆ ಪ್ರೇರೇಪಿಸಿದರು. ಲೀಗೂ ಇದನ್ನು ಸ್ವೀಕರಿಸಿ ಸಂಗ್ರಾಮದಲ್ಲಿ ಭಾಗಿಯಾಯಿತು.

ಕೀರ್ತಿ ಶಿಖರದಲ್ಲಿ ಮಹೋನ್ನತ ಸ್ಥಾನ ಪಡೆದಿದ್ದ "ಅಲ್ ಹಿಲಾಲ್" ಪತ್ರಿಕೆಯನ್ನು ಕಂಡ ಆಂಗ್ಲೇಯರು ಅದರ ಪ್ರಭಾವವನ್ನು ತಡೆಯಲು ಬಯಸಿದರು. ಆಝಾದರು ಈ ಕಷ್ಟಗಳಿಗೆಲ್ಲ ಕುಗ್ಗಲಿಲ್ಲ; ಬಗ್ಗಲಿಲ್ಲ. ಆದರೆ ೧೯೧೪ರಲ್ಲಿ ಬ್ರಿಟಿಷರ 'ಡಿಫೆನ್ಸ್ ಓಫ್ ಇಂಡಿಯಾ ಆ್ಯಕ್ಟ್'ನಂತೆ ತಮ್ಮ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು.

ಅಲ್ ಹಿಲಾಲ್ ಪತ್ರಿಕೆಯ ನಂತರ ಆಝಾದರು ತಮ್ಮ 'ಅಲ್ ಬಲಾಗ್' ಪತ್ರಿಕೆಯನ್ನು ಪ್ರಾರಂಭಿಸಿದರು. ಬ್ರಿಟಿಷ್ ಸರಕಾರವು ಇದು ಪ್ರಚಾರಕ್ಕೆ ಬಾರದಂತೆ ತನ್ನ ಸರ್ವ ಯತ್ನವನ್ನು ಮಾಡಿತು. ಇಷ್ಟು ಮಾತ್ರವಲ್ಲದೆ ಆಝಾದರನ್ನು ಅವರ ಲೇಖನಗಳಿಗಾಗಿ ಜೈಲಿಗೂ ಕರೆದೊಯ್ದಿತು.

ಜೈಲಿನಿಂದ ಬಿಡುಗಡೆ ಹೊಂದಿದ ನಂತರ ಅವರು ಮಹಾತ್ಮಾ ಗಾಂಧೀಜಿಯವರ ಅಹಿಂಸಾ ನೀತಿಯನ್ನು ಸಮರ್ಥಿಸಿದರು. ಪತ್ರಿಕಾ ಜೀವನದಿಂದ ಬಿಡುಗಡೆ ಹೊಂದಿ ರಾಜಕೀಯ ಜೀವನದಲ್ಲಿ ದೀಕ್ಷಾಬದ್ಧರಾದರು. ಮುಸ್ಲಿಂ ಲೀಗ್, ಕಾಂಗ್ರೇಸ್, ಧಾರ್ಮಿಕ ಸಂಸ್ಥೆಗಳ ಅಧ್ಯಕ್ಷ ಪದವಿಯನ್ನು ಹಲವು ಬಾರಿ ಅಲಂಕರಿಸಿದರು. ಕಾಂಗ್ರೆಸ್ಸಿನ ಪ್ರತಿಭಾಶಾಲಿ ಮುಖಂಡರಲ್ಲಿ ಇವರು ಒಬ್ಬರೆಂದು ಖ್ಯಾತಿ ಪಡೆದರು. ಹೆಚ್ಚಿನ ಮುಸ್ಲಿಮರೆಲ್ಲರೂ ಕಾಂಗ್ರೆಸ್ಸನ್ನು ಬಿಟ್ಟು ಲೀಗನ್ನು ಸೇರಿದರೂ ಆಝಾದರು ಕಾಂಗ್ರೆಸ್ಸನ್ನು ಬಿಡಲಿಲ್ಲ. ಕಾಂಗ್ರೆಸ್ ಬಹುಜನರ ಪಕ್ಷವಾಗಿವೆಯೆಂದೂ, ಲೀಗ್ ಅಲ್ಪ ಸಂಖ್ಯಾಕರ ಮತ್ತು ಸ್ವಧರ್ಮವಾತ್ಸಲ್ಯವಿರುವ ಪಕ್ಷವೆಂದೂ ಇವರ ಅಭಿಪ್ರಾಯವಾಗಿತ್ತು.

ಆಝಾದರು ಉಚ್ಚ ಪದಾಭಿಲಾಷಿಯೂ ಆಗಿರಲಿಲ್ಲ. ಇದರಿಂದ ಅವರು ಅಧ್ಯಕ್ಷನಾಗಬೇಕಾದರೂ ಒತ್ತಾಯ ಪಡಿಸಬೇಕಾಗುತ್ತಿತ್ತು. ಇದರಿಂದ ಅವರ ಸಂಕೋಚ ಸರಳತನ ಇನ್ನಷ್ಟು ಸ್ಪಷ್ಟವಾಗುತ್ತಿತ್ತು. ಕೆಲವರು ಆಝಾದರು ತಮ್ಮ ಗರ್ವದಿಂದ ಈ ರೀತಿ ವರ್ತಿಸುತ್ತಾರೆಂದು ಭಾವಿಸುತ್ತಿದ್ದರು. ಆದರೆ ಈ ಹೇಳಿಕೆ ಅನುಚಿತವೆಂದರೆ ಹೆಚ್ಚಾಗಲಾರದು. ಆಝಾದರಿಗೆ ಬೇರೊಬ್ಬನನ್ನು ವ್ಯಂಗ್ಯಮಾಡುವುದನ್ನೂ ನಿಂದಿಸುವುದನ್ನೂ ಸಹಿಸುವುದು ಅಸಾಧ್ಯವಾಗಿತ್ತು. ಇದರಿಂದ ಅವರಿಗೆ ತುಂಬಾ ಕಷ್ಟ ಸಹಿಸಬೇಕಾದರೂ ತಾವು ಕೀರ್ತಿಶೇಷರಾಗುವ ವರೆಗೆ ತಮ್ಮ ಈ ವರ್ತನೆಯನ್ನು ಎಂದೂ ಬಿಟ್ಟಿರಲಿಲ್ಲವಂತೆ; ಆಝಾದರು ಕುಲಭದಲ್ಲಿ ಸೋಲೊಪ್ಪಿಕೊಳ್ಳುವವರಲ್ಲ ಅವರಿಗೆ ತಮ್ಮ ಆತ್ಮಗೌರವವನ್ನು ಉಳಿಸಿಕೊಳ್ಳುವುದು ಅಗತ್ಯವಾಗಿತ್ತು. ಬೇರೆಯವರಿಗೆ ಗೌರವ ಕೊಡುವುದನ್ನು ಅವರು ಕಲಿತಿದ್ದರು. ತಮ್ಮ ಯೋಗ್ಯತೆಯ ಬಗ್ಗೆ ಸೂಕ್ಷ್ಮ ಅಹಂಕಾರ ಮನಸ್ಸಿನಲ್ಲಿದರೂ ಅದು ವ್ಯಕ್ತವಾಗುತ್ತಿರಲಿಲ್ಲ.

ಮೌಲನಾ ಆಝಾದರು ಸರಳ ಸ್ವಭಾವದ ಅತಿಮಾನವರು. ಒಮ್ಮೆ ಒಬ್ಬ ವ್ಯಕ್ತಿ ಆಝಾದರನ್ನು ಭೇಟಿಯಾಗಲು ಬಂದಿತು. ಆಝಾದರ ಮೇಜಿನ ಮೇಲೆ ೨೦೦ ರೂಪಾಯಿಗಳಿದ್ದವು. ಬಂದ ಆ ಮನುಷ್ಯ ಆಝಾದರ ಕಣ್ಣು ತಪ್ಪಿಸಿ ಆ ಹಣವನ್ನು ತನ್ನ ಜೇಬಿನಲ್ಲಿ ತುಂಬಿಸಿಕೊಂಡನು. ಆಝಾದರಿಗೆ ಇದು ತಿಳಿದರೂ ಅವರು ಮಾತಾಡಲಿಲ್ಲ. ಯಾಕೆಂದರೆ ಆ ಮನುಷ್ಯನಿಗೆ ಆ ಹಣದ ಅಗತ್ಯ ಬಹಳವಿರಬೇಕಿತ್ತು. ಇಲ್ಲದಿದ್ದರೆ ಅವನು ನನ್ನ ಮೇಜಿನ ಮೇಲಿನಿಂದ ಕದಿಯುತ್ತಿರಲಿಲ್ಲ ಎಂದು ಅವರ ಅಭಿಪ್ರಾಯವಾಗಿತ್ತು.

ಆಝಾದರು ೧೯೨೦ರಿಂದ ರಾಜನೈತಿಕ ಜೀವನದಲ್ಲಿದ್ದರೂ ಸಾಹಿತ್ಯ ಪ್ರಪಂಚದಿಂದ ದೂರವಿರಲಿಲ್ಲ. ಅವರು ಉರ್ದು ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆಂಬುದಕ್ಕೆ ಉರ್ದು ಸಾಹಿತ್ಯವೇ ಯಾವ ಲೇಖಕನಿಗೂ ಕೊಡದಷ್ಟು ಗೌರವ ಇವರಿಗೆ ಕೊಟ್ಟಿದ್ದೇ ಒಂದು ನಿದರ್ಶನ. ಇವರ ಕೃತಿಗಳನ್ನು ಪೋಲೀಸರು ತುಂಬಾ ಸಲ ಹಾಳು ಮಾಡಿದ್ದಾರೆ.

ಆಝಾದರು ಘನವೆತ್ತ ವ್ಯಕ್ತಿಯಾಗಿದ್ದರೂ, ಅವರಲ್ಲಿ ಕೆಲವು ಕೊರತೆಗಳಿದ್ದವು. ಇವರು ಕೋಪಗೊಂಡರೆ ಶಾಂತರಾಗಲು ಬಹಳ ಕಷ್ಟವಾಗಿತ್ತು. ಅವರ ಹೃದಯದಲ್ಲಿಯೋದ್ದ ಭಾವನೆ ಇತ್ತೆ ಹೊರತು ಗಾಂಧೀಜಿಯವರಂತೆ ಸಂತ ಮನೋವೃತ್ತಿಯಿರಲಿಲ್ಲ. ಒಬ್ಬನನ್ನು ತಿರಸ್ಕರಿಸಿದರೆ ಅವನ ಸಂಪೂರ್ಣ ಅವನತಿಯನ್ನೇ ನೋಡಲು ಬಯಸುತ್ತಿದ್ದರು ಮಹಾಪುರುಷರಲ್ಲಿ ಬೇಕಾದ ಕ್ಷಮಾ ಶೀಲ ಗುಣವೂ ಅವರಲ್ಲಿರಲಿಲ್ಲ ಆದರೆ 'ಬಹು ಗುಣಗಳಿರಲೊಂದು ದೋಷವಿದ್ದರೂ ಕೂಡಾ ಅಡಗುವುದು ಚಂದಿರನ ಮರೆವ ಕಲೆಯಂತೆ' ಎಂಬಂತೆ ಈ ದುರ್ಗುಣಗಳೆಲ್ಲ ಅವರ ಮಹೋತ್ತಮ ಗುಣಗಳೆದುರು ಕಾಣುವುದಿಲ್ಲ.

ಆಝಾದರು ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ವಿದ್ಯಾಮಂತ್ರಿಯಾಗಿ ತನ್ನ ಹೊಣೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದರು.

—ಶ್ರೀ ಬಿ ಎನ್ ಜೋಗಿತ್ತಾಯ.

---

**ವೆಚ್ಚ ಕಡಿಮೆ ಮಾಡಿರಿ,**
**ಉಳಿತಾಯ ಹೆಚ್ಚುಮಾಡಿರಿ!**

## ಅಂಡಮಾನ ನಿಕೋಬಾರ ದ್ವೀಪಗಳು

(೧ನೇ ಪುಟ ನೋಡಿರಿ)

ಯನ್ನು ವೀಕ್ಷಿಸಿದರು. ಆನೆಗಳ ನೆರವಿನಿಂದ ಮರಗಳನ್ನು ಬೀಳಿಸಿ ಅವುಗಳನ್ನು ಖಾರಿ ಪ್ರದೇಶಕ್ಕೆ ಉರುಳಿಸಿ ಅಲ್ಲಿಂದ ಅವುಗಳನ್ನು ಬೇಕಾದ ಸ್ಥಳಕ್ಕೆ ತೇಲಿಸುವ ಈ ಕಾರ್ಯಕ್ರಮ ತುಂಬಾ ರೋಮಾಂಚಕವಾದುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನೀರಿನಲ್ಲಿ ತೇಲಿ ಹೋಗುವ ಈ ತೊಲೆಗಳು ಪೋರ್ಟ್ ಬ್ಲೇರ್ ಮರಕೊಯ್ಯುವ ಕಾರ್ಖಾನೆಗೆ ಹೋಗಿ ತಲುಪುತ್ತವೆ. ಈ ಕಾರ್ಖಾನೆ ಪೂರ್ವಾರ್ಧಗೋಳಗಳಲ್ಲಿಯೇ ಅತಿ ದೊಡ್ಡದು.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಸುಮಾರು ೧೫೦೦ ಚ. ಮೈಲಿಗಳಷ್ಟು ಭಾಗ [illegible] ಪ್ರದೇಶವಾಗಿದೆ. ೧೪—೧೫ ದ. ಲಕ್ಷ ಟನ್‌ಗಳಷ್ಟು ದಿಮ್ಮಿಗಳು ಇಲ್ಲಿ ಸಿಗುವ ಅಂದಾಜಿದೆ. ಪ್ರತಿ ವರ್ಷ ೬೦೦೦೦ ಟನ್‌ಗಳಷ್ಟು ದಿಮ್ಮಿಗಳನ್ನು ಬಳಕೆಗೆ ಸಂಗ್ರಹಿಸಲಾಗುತ್ತಿದೆ. ಇದರಿಂದ ಬರುತ್ತಿರುವ ವರಮಾನ ಸುಮಾರು ಒಂದು ಕೋಟಿ ರೂ.ಗಳು.

### ಕಾರ್ ನಿಕೋಬಾರ್‌ಗೆ ಭೇಟಿ

ಗೃಹ ಮಂತ್ರಿಗಳು ಎರಡು ಬಾರಿ ಕಾರ್ ನಿಕೋಬಾರ್‌ಗೆ ಭೇಟಿ ಕೊಟ್ಟರು. ಒಂದು ಅಂಡಮಾನ್ ದ್ವೀಪಗಳಿಗೆ ಹೋಗುವಾಗ, ಇನ್ನೊಂದು ಅಲ್ಲಿಂದ ಹಿಂದಿರುಗುವಾಗ. ಇಲ್ಲಿ ಕೂಡ ಸುಮಾರು ಎಂಟು ಸಹಸ್ರದಷ್ಟು ಜನ ವಿಮಾನ ನಿಲ್ದಾಣದಲ್ಲಿ ಗೃಹ ಮಂತ್ರಿಗಳ ದರ್ಶನ ಪಡೆಯಲು ಕಾದು ನಿಂತಿದ್ದರು. ಈ ದ್ವೀಪದಲ್ಲಿ ಆಡುವ ಭಾಷೆ 'ನಿಕೋಬಾರಿ'ಯಾದರೂ ಜನ ಹಿಂದಿ ಭಾಷೆಯಲ್ಲಿಯೇ ಜಯಘೋಷಗಳನ್ನು ಮಾಡುತ್ತಿದ್ದರು.

ಅಂಡಮಾನ್ ದ್ವೀಪಗಳ ಈ ಮೂಲೆಯಿಂದ ಆ ಮೂಲೆಯ ವರೆಗೆ ದಟ್ಟವಾದ ಅರಣ್ಯಗಳು ಹಾಗು ಬೆಟ್ಟ ಗುಡ್ಡಗಳೇ ಪ್ರಾಮುಖ್ಯವಾಗಿವೆ. ನಿಕೋಬಾರ್ ದ್ವೀಪಗಳು ಅವುಗಳ ಸಂಖ್ಯೆ ೧೯ ಹಾಗಲ್ಲ. ಅವುಗಳ ತುಂಬಾ ಪಟ್ಟಸವಾಗಿದ್ದು ತೆಂಗಿನ ಮರಗಳಿಂದ ತುಂಬಿಕೊಂಡಿವೆ. ದ್ವೀಪವನ್ನು ಬಳಸಿಕೊಂಡು ೪೦ ಮೈಲು ಉದ್ದದ ರಸ್ತೆಯೂ ಇದೆ. ಸಮುದ್ರದ ತೀರ ಕಡಿದ ಕಡಿದಾಗಿಲ್ಲ; ಪಟ್ಟಸವಾಗಿದೆ.

### ಪ್ರಶಾಂತ ವಾತಾವರಣ

ಇಲ್ಲಿಯ ಪ್ರಶಾಂತ ವಾತಾವರಣ ಪ್ರಕೃತಿ ಮಲಗಿ ನಿದ್ರಿಸುತ್ತಿದೆಯೋ ಎಂಬ ಭ್ರಮೆಯನ್ನು ಕಲ್ಪಿಸುತ್ತದೆ. ಪ್ರಾಯಶಃ ಜನರ ಜೀವನ ಕ್ರಮದ ಮೇಲೆ ಇದರ ಪ್ರಭಾವ ಸಾಕಷ್ಟು ಆಗಿರಬಹುದು. ಅವರ ಜೀವನದಲ್ಲಿ ತೃಪ್ತಿ ಇದೆ. ಅವರ ಜೀವನೋಪಾಯಕ್ಕೆ ಅವಶ್ಯವಿರುವ ತೆಂಗಿನ ಗಿಡಗಳೂ ಅಷ್ಟೇ ಹುಲುಸಾಗಿ ಬೆಳೆಯುತ್ತವೆ. ಹೆಚ್ಚಿನ ಆಕಾಂಕ್ಷೆಯು ಅಗತ್ಯವಿಲ್ಲ. ಜನರ ಜೀವನ ಅವಶ್ಯಕತೆಗಳೂ ಕಡಿಮೆ. ಆದರೆ ಈಗೀಗ ಫೇಸ್ ಪೌಡರ್, ಟೂತ್‌ಬ್ರಷ್ ಇತ್ಯಾದಿಗಳ ಆಕರ್ಷಣೆ ಹೆಚ್ಚುತ್ತಿದೆಯೆಂಬುದೂ ನಿಜ. ರೋಗಗಳ ಹಾವಳಿ ಇಲ್ಲ; ದುಷ್ಕೃತ್ಯಗಳೂ ಇಲ್ಲ. ಹೋದ ವರ್ಷ ಅಪರಾಧಗಳ ದಾಖಲೆಗಳೇ ಇಲ್ಲದೆ ಹೋದ ಕಾರಣ ಇಲ್ಲಿರುವ ಪೋಲೀಸರಿಗೆ ಹಿಂದಿ ಕಲಿಸುವ ಕಾರ್ಯವನ್ನೊಪ್ಪಿಸಲಾಗಿದೆ.

ಈ ದ್ವೀಪಗಳಲ್ಲಿ ಭೂಮಿಯ ಸಮಸ್ಯೆ ಕೂಡ ಇಲ್ಲ. ಭೂಮಿ ಕುಟುಂಬದ ಪ್ರತಿಯೊಬ್ಬರಿಗೂ ಸೇರಿದ್ದು. ಭೂಮಿಯಲ್ಲಿ ಕೆಲಸ ಮಾಡುವವರೂ ಸಾಂಘಿಕವಾಗಿಯೇ ಮಾಡುತ್ತಾರೆ. ಅವರು ಸರ್ಕಾರದ ನೆರವಿಗೆ ಕಾದು ಕುಳಿತುಕೊಳ್ಳುವ ಬದಲು ತಮ್ಮ ಸಂಪತ್ತಿನ ಸಾಧನಗಳನ್ನು ಸಂಘಟಿಸಿ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾರೆ. ಜನರೇ ಶಾಲೆಗಳನ್ನೂ ದವಾಖಾನೆಗಳನ್ನೂ ರಸ್ತೆಗಳನ್ನೂ ಕಟ್ಟಿಕೊಂಡಿದ್ದಾರೆ. 'ಸಬ್ಸಿಡಿ' ಅಥವಾ ಸಹಾಯ ಧನ ಎಂಬ ವಿಚಾರವೇ ಅವರ ಮನಸ್ಸಿಗೆ ಹಿಡಿಸದು.

ಅವರದೇ ಬೇರೆ ಭಾಷೆಯೊಂದು ಇದ್ದರೂ ಹಿಂದಿ ಕಲಿಯುವ ಆಸಕ್ತಿ ಅವರಿಗಿದೆ. ಗೃಹ ಮಂತ್ರಿಗಳೊಡನೆ ಹಿಂದಿಯಲ್ಲೇ ಮಾತನಾಡುವ ಉತ್ಸಾಹವನ್ನೂ ಅವರು ಪ್ರದರ್ಶಿಸಿದರು. ಗೃಹ ಮಂತ್ರಿಗಳು ಅವರ ಆಟೋಟಗಳನ್ನೂ ನೋಡಿ ಆನಂದಿಸಿದರು. 'ಹಂದಿಗಳ ಕಾಳಗ' ಅಂತಹ ಒಂದು ವಿಶೇಷ ಆಟ. ಗೃಹ ಮಂತ್ರಿಗಳ ಜೊತೆಗೆ ತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತಾ ಹೆಚ್ಚು ಶಾಲೆಗಳನ್ನೂ ಉಪಾಧ್ಯಾಯರನ್ನೂ ಪುಸ್ತಕಗಳನ್ನೂ ಕೊಡುವಂತೆ ಅವರನ್ನು ಕೇಳಿಕೊಂಡರು. ಅವರ ಪರಸ್ಪರ ಸಹಕಾರ ತತ್ವದ ಜೀವನ ಕ್ರಮಕ್ಕೆ ಅಡ್ಡಿಯಾಗುವಂತಹ ಯಾವ ಹೊರಗಿನ ಪ್ರಭಾವವೂ ಅವರಿಗೆ ಬೇಕಿಲ್ಲ; ಹೊರಗಿನ ಗಡಿಬಿಡಿ ಜೀವನ ಅವರಿಗೆ ಬೇಕಿಲ್ಲ. ತಮ್ಮ ಆತ್ಮವಿಕಾಸ ಮಾತ್ರ ಬೇಕು.

## ವೀರರಾಗಿಹೆವು ನಾವು

ಕಾಲನೆಲ್ಲ ತಾಯ್ನಾಡ
ಮಾನವನು ರಕ್ಷಿಸಲು
ವೀರರಾಗಿಹೆವು ನಾವೂ || ೧ ||

ಪರರಾಷ್ಟ್ರವಾಗಿರುವ
ಚೀನಿಯರ ಕೈಯೊಳಗೆ
ಮಾತೆ ಭಾರತವನ್ನು ಬಿಡೆವೂ || ೨ ||

ಪೂಜ್ಯ ಭಾರತ ಜನನಿಯೂ
ಶೀರ್ವಾದ ನಮಗಿರಲು
ಇನ್ನಾರ ಭಯವಿಹುದು ನಮಗಿನ್ನು || ೩ ||

ಶಕ್ತಿಯಲಿ ಯುಕ್ತಿಯಲಿ
ಶೌರ್ಯದಲಿ ಸಾಹಸದಲಿ
ಚೀನಿಯರ ಬಿಟ್ಟಿಲ್ಲ ನಾವೂ || ೪ ||

ಶಾಂತಿಮಾನ ಬಿಟ್ಟು
ಜೀವದಾಶೆಯ ತೊರೆದು
ಚೀನಿಯರನೆದುರಿಸುವ ನಾವೂ || ೫ ||

ಅಡಿಯ ಮುಂದಿಡೆ ಸ್ವರ್ಗ
ಯೆಂಬ ವಚನವನು
ಮರೆಯದೇ ಕಾದುವೆವು ನಾವೂ || ೬ ||

ಮಾತೆ ನಿನಗಿದು ಊನ
ವೇಗ ತಿಹ ಚೀನಿಯರ
ನೋಡಿಸಲು ಶಕ್ತಿಯನು ನೀಡು ತಾಯೇ
|| ೭ ||

—ವಾಣಿಶರಣ ಯೋತಡ್ಕ.

### ನೋಟೀಸು

ಬಾಳ್ಕುದ್ರು ಗ್ರಾಮದ ಕೆಳಮನೆ ಲಿಂಗಮ್ಮ ಹೆಗ್ಗಡ್ತಿಯವರ ಮಗ ಶೀನ ಶೆಟ್ಟಿ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದ್ರೆ: ನನ್ನಿಂದ ತಾ 5-3-63ರಲ್ಲಿ ನನ್ನ ಸೊಸೆ ಚಿಕ್ಕಮ್ಮ ಯಾನೆ ಲಕ್ಷ್ಮಿ ಹೆಗ್ಗಡ್ತಿಯು ಅವಳ ಹೆಸರಿಗೆ ಬರಸಿ ಕೊಂಡ ಅಶನಾರ್ಥ ಮತ್ತು ಬಾಳಿನ ಬಗ್ಗೆ ರಶೀದಿಯಲ್ಲಿ ಸದ್ರಿಯವಳ ಗಂಡ ಹೆಗ್ಗುಂಜೆ ಎಂಕಪ್ಪ ಹೆಗ್ಡೆಯೂ, ಅವರ ಮಕ್ಕಳು ಮತ್ತು ಅಳಿಯಂದಿರು ಕೂಡಾ ನನಗೆ ನ್ಯಾಯವಾಗಿ ಸಿಕ್ಕತಕ್ಕ ವಾರೀಸು ಮತ್ತು ಅಶನಾರ್ಥಕ್ಕೆ [illegible] ನಾನು ಹಿಂದೆ ನನ್ನ ಅಣ್ಣನಿಗೆ ತಾ 2-11-61ರಲ್ಲಿ ಬಿಟ್ಟ ರಿಜಿಸ್ಟ್ರ ವಕೀಲ್ ನೋಟೀಸಿಗೆ ಅನುಸರಿಸಿ ನನ್ನ ಅಣ್ಣ ಅದಕ್ಕೆ ಉದಾಹರಿಸಿ ಬಿಟ್ಟ ನೋಟೀಸಿಗೆ ಅನುಸರಿಸಿ ಸದ್ರಿ ಅವರ ಹೆಂಡತಿ ಸದ್ರಿ ಭೂಮಿಯನ್ನು ಅನುಭವಿಸಿರುವವಳಾಗಿರುವಳೆಂದು ತಿಳಿಸಿದ ಪ್ರಕಾರ ಸದ್ರಿಯವಳ ಗಂಡ ಎಂಕಪ್ಪ ಹೆಗ್ಡೆ ಅವಳ ಅಳಿಯಂದಿರು ಮತ್ತು ಮಕ್ಕಳು ಕೂಡಾ ನಾನು ಅಸೌಖ್ಯದಲ್ಲಿರುವಾಗ, ನನ್ನ ಬುದ್ಧಿಬಲ್ಲ ಮಕ್ಕಳನ್ನು ಬಿಟ್ಟು ನನ್ನ ಇಚ್ಛೆಗೆ ವಿರುದ್ಧವಾಗಿ ನನ್ನನ್ನು ಮರುಳಾಯಿಸಿ ನನ್ನಿಂದ ಎಲ್ಲಿಯೂ [illegible] ಪಡಿಸಿ, ಸದ್ರಿ ರಶೀದಿಗೆ ನನ್ನ ಹೆಬ್ಬೆಟ್ಟು ಹಾಕಿಸಿ ಪಡೆದು ನನಗೆ ಋಣ ಸಹಾ ಕೊಡದೆ ನನಗೆ ಮೋಸಗೊಳಿಸಿರುವರು. ಆದುದರಿಂದ ಸದ್ರಿ ರಶೀದಿ ಈಗ ಅವರ ವಶದಲ್ಲಿದ್ದು ಅದು ನ್ಯಾಯಸ್ಥಾನದಲ್ಲಿ ಸಿಂಧುವಾಗತಕ್ಕದ್ದಲ್ಲವೆಂದು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುತ್ತೇನೆ.

ಶೀನ ಶೆಟ್ಟಿ ರುಜು.

7—3—1963.

### ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಅವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸ್ಕೈಪಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ಪ

ಉಚಿತ ಉಡುಗೊರೆ ಕೊಡಲು ಯೋಗ್ಯ ಪುಸ್ತಕ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲೀಷ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು. ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಶ್ರೀನಿವಾಸ್ ಬ್ರದರ್ಸ್ ಇವರಲ್ಲಿಯೂ ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಹರಟೆ

# ಮಾಸ್ತರರು ಬೇಸ್ತುಬಿದ್ದರು

ಹೊಸದಾಗಿ ನಾನು ಆ ಊರಿಗೆ ಉಪಾಧ್ಯಾಯನಾಗಿ ಹೋಗಿದ್ದೆ. ಅನೇಕ ದಿನಗಳ ಕಾಲ ಕೆಲಸವಿಲ್ಲದೆ ಅಲೆದಾಡಿ ಕೊನೆಗೆ ಆ ಕೆಲಸ ಸಿಕ್ಕಿತ್ತು. ಅದೂ ಗೆಳೆಯನಾದ ಹರಿ (ದಪಂಚಿ) ನಾರಾಯಣನ ದಯದಿಂದ. ಹರಿನಾರಾಯಣ ಉಪಾಧ್ಯಾಯನಾಗಿ ಈಗ ರಿಟೈರ್ಡ್ ಆಗಿದ್ದ.

ನಾನು ಮೊದಲ ದಿನ ಶಾಲೆಗೆ (ಉಪಾಧ್ಯಾಯನಾಗಿ) ಹೊರಟಾಗ ನನಗೆ ಕೆಲವು ನೀತಿ ಮಾತುಗಳನ್ನೂ, ಶಾಲೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನೂ ಹೇಳಿದ್ದ.

"ನೀನು ಹುಡುಗರಲ್ಲಿ ಸ್ವಲ್ಪ ಹೆದರಿಕೆ ಹುಟ್ಟಿಸ್ಕೊಂಡಿರಬೇಕು. (ಅಂದರೆ ಹುಡುಗರಿಗೇ ನಾನು ಹೆದರಬೇಕೆಂದು ಅರ್ಥವಲ್ಲ.) ಹುಡುಗಿಯರ ತಂಟೆಗೆ ಮಾತ್ರ ಎಂದಿಗೂ ಹೋಗಬೇಡ. ಅವರ ಬಗ್ಗೆ ನೀನು ಒಂದು ಒಳ್ಳೆಯ ಮಾತನ್ನಾಡಿದರೂ ಹುಡುಗರು, 'ಇವರು ಗರ್ಲ್ಸ್ ಪಾರ್ಟಿ' ಎಂದು ನಿನ್ನ ಮೇಲೆ ತಿರುಗಿಬಿದ್ದಾರು. ಯಾವ ಹುಡುಗರಿಗೂ ಸಲಿಗೆ ಕೊಡಬೇಡ" ಇವೇ ಅವನ ಅಮೃತ ನುಡಿಗಳು.

ಅವನ ಮಾತುಗಳಿಗೆಲ್ಲವೂ ಒಪ್ಪಿಕೊಳ್ಳಲಾಗದಿದ್ದರೂ ಒಪ್ಪಿಕೊಂಡು ಶಾಲೆಯ ಕಡೆ ಹೊರಟೆ. ನನ್ನ ಮನಸ್ಸಿನಲ್ಲಿ ಅನೇಕ ಆಶಾಗೋಪುರಗಳನ್ನು ಕಟ್ಟಿಕೊಂಡಿದ್ದೆ. ಹಣದ ಖರ್ಚಿಲ್ಲದೇ ಕಟ್ಟಬಲ್ಲ ಗೋಪುರ ಅದೊಂದೇ.

ನಾನು ಹಿಂದೆ ವಿದ್ಯಾರ್ಥಿಯಾಗಿದ್ದಾಗ ಅನೇಕ ಜನ ವಿದ್ಯಾರ್ಥಿಗಳು ಉಪಾಧ್ಯಾಯರ ಬಗ್ಗೆ ಮನಬಂದಂತೆ ಮಾತನಾಡುವುದನ್ನು ನೋಡಿದ್ದೆ. ಹಿಂಭಾಗದ ಬೆಂಚಿನಲ್ಲಿ ಕುಳಿತುಕೊಂಡು ಪಾಠದ ಪುಸ್ತಕದೊಳಗೆ ಪತ್ತೇದಾರಿ ಕಾದಂಬರಿಗಳನ್ನೋ ಅಥವಾ ಬೇರೆ ಯಾವುದೋ ಅಶ್ಲೀಲ ಪುಸ್ತಕಗಳನ್ನೋ ಇಟ್ಟುಕೊಂಡು ಓದುತ್ತಾ ಮಾಸ್ತರ ಕಣ್ಣಿಗೆ ಮಣ್ಣೆರಚುವ ವಿದ್ಯೆಯನ್ನು ಅವರು ಚೆನ್ನಾಗಿ ಅಭ್ಯಾಸ ಮಾಡಿಕೊಂಡಿದ್ದರು.

ಹುಡುಗಿಯರಂತೂ ಯಾವಾಗಲೂ ಗುಡುಗುತ್ತಲೇ ಇರುತ್ತಿದ್ದರು. 'ನಾವು ಏನು ಮಾಡಿದರೂ ಉಪಾಧ್ಯಾಯರು ಹೊಡೆಯುವುದಿಲ್ಲ. ಅಕಸ್ಮಾತ್ ಬಯ್ದರೂ ನಮಗೆ ಮರ್ಯಾದೆ ಹೋಗುವುದಿಲ್ಲ. (ಇದ್ದರೆ ತಾನೇ ಹೋಗುವುದು) ಅಕಸ್ಮಾತ್ ಯಾರಾದರೂ ದೊಡ್ಡ ಮನುಷ್ಯರು ಶಾಲೆಗೆ ಬಂದಾಗ ಅವರನ್ನು ಸ್ವಾಗತಿಸಲು ನಾವೇ ಹೋಗಬೇಕು. (ಆಗ ತಾನೆ ಬನ್ನಿ ಬನ್ನಿ ಸ್ವಾಗತವು ನಿಮಗೆ ಎಲ್ಲಾ) ಆದ್ದರಿಂದ ಯಾರೂ ನಮ್ಮ ವಿಷಯದಲ್ಲಿ 'ಚೌಕರವೆಕ್ತ್ತವ ಹಾಗಿಲ್ಲ' ಎಂಬುದು ಅವರ ನಂಬಿಕೆ.

ಈ ರೀತಿ ಕೊಬ್ಬಿರುವ ವರನ್ನೆಲ್ಲಾ ದಾರಿಗೆ ತಂದು ಬುದ್ಧಿ ಕಲಿಸಬೇಕೆಂಬುದೇ ನನ್ನ ಆಶಯವಾಗಿತ್ತು. ಅಲ್ಲಿಗೇ ನನ್ನ ಕಲ್ಪನೆ ಮುಗಿಯಲಿಲ್ಲ.

ಎಲ್ಲ ವಿದ್ಯಾರ್ಥಿಗಳೂ ನನ್ನನ್ನು ಕಂಡೊಡನೆ ಗಂಭೀರವಾಗಿ ಎದ್ದುನಿಂತು "ನಮಸ್ತೆ ಸಾರ್" ಎನ್ನಬೇಕು. ನಾನು ತರಗತಿಯ ಕೋಣೆಯೊಳಗೆ ಹೆಜ್ಜೆಯಿಟ್ಟೊಡನೆ ಪ್ರತಿಯೊಬ್ಬನೂ 'ಥಟ್ಟನೆ' ಒಂದೇ ಬಾರಿಗೆ ಎದ್ದುನಿಲ್ಲಬೇಕು. ನಾನು ಹೇಳುವವರೆಗೂ ಅವರು ಕುಳಿತುಕೊಳ್ಳಬಾರದು. ಟೈಂ ಟೇಬಲ್ ಪ್ರಕಾರ ಎಲ್ಲಾ ಪುಸ್ತಕಗಳನ್ನೂ ತಂದಿರಬೇಕು. ಅದಕ್ಕೆ ಸರಿಯಾಗಿ ಪಾಠ ಮಾಡಲಾಗುವುದು. ಪಾಠ ನಡೆಸುವ ಸಮಯದಲ್ಲಿ ವಿದ್ಯಾರ್ಥಿಗಳು ಅದರ ಕಡೆಯೇ ಗಮನವಿಟ್ಟಿರಬೇಕು. ಉಪಾಧ್ಯಾಯರು ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳು ನಿಂತುಕೊಂಡೇ ಉತ್ತರ ಕೊಡಬೇಕಲ್ಲದೇ ಹೇಳಿದ ನಂತರ ಉಪಾಧ್ಯಾಯರ ಅಪ್ಪಣೆಯಿಲ್ಲದೇ ಕುಳಿತುಕೊಳ್ಳಬಾರದು.

ಹೀಗೆಲ್ಲಾ ಆಲೋಚಿಸುತ್ತಾ ಬರುತ್ತಿರುವಾಗ ಯಾರೋ ಅಳುವ ಧ್ವನಿ ಕೇಳಿಸಿತು. ನೋಡುತ್ತೇನೆ! ಆಗಲೇ ನಾನು ಹೋಗಬೇಕಾದ ಶಾಲೆ ಬಂದುಬಿಟ್ಟಿದೆ. ಶಾಲೆಯ ಗೇಟಿನ ಹೊರಗೆ ಒಬ್ಬ ಹುಡುಗ ಅಳುತ್ತಾ ನಿಂತಿದ್ದ. ಅವನ ಪಕ್ಕದಲ್ಲೇ ಇದ್ದ ಮತ್ತೊಬ್ಬ ಹುಡುಗನನ್ನು ಕೇಳಿದೆ.

"ಯಾಕೋ ಅವ್ನು ಅಳ್ತಾ ಇದ್ದಾನೆ?"

"ಮೇಷ್ಟ್ರು ಅವ್ನಿಗೆ ಒಂದು ನಂಬರು ಕೊಟ್ಟಿದ್ರು. ಅದನ್ನ ಐದು ಅಂತ ಬದಲಾಯಿಸಿ ಸಿಕ್ಕಿಹಾಕಿಕೊಂಡು ಬಿಟ್ಟ. ಹೊಡೆದರು. ಅದಕ್ಕೆ ಅಳ್ತಾ ಇದ್ದಾನೆ."

"ನೀನು ಹಾಗೆಲ್ಲಾ ಮಾಡ್ತಿಯೇನು ತಿಳೀತಾ?"

"ಛೆ! ಖಂಡಿತಾ ಇಲ್ಲ ಒಂದರ ಪಕ್ಕದಲ್ಲಿ ಸೊನ್ನೆ ನ ಸುತ್ತಿ ಬಿಡ್ತೀನಿ. ಗೊತ್ತೇ ಆಗಲ್ಲ. ಅವ್ರಿಗ"

ಅವನ ಮಾತನ್ನು ಕೇಳಿ ನನಗೆ ಸಾಕಷ್ಟು ಅನ್ನಿಸಿತು. ಹಾಗೇ ಮುಂದೆ ನಡೆದೆ. ಅಲ್ಲಿ ಕೆಲವು ಹುಡುಗರು ಏನೋ ಹರಟೆ ಹೊಡೆಯುತ್ತಾ ನಗುತ್ತಾ ಕುಳಿತುಕೊಂಡಿದ್ದರು. ನನ್ನನ್ನು ಕಂಡರೂ ಅವರು ಎದ್ದು ನಿಲ್ಲಲಿಲ್ಲ. ಅದಕ್ಕೆ ಬದಲಾಗಿ "ಇವ್ರೇ ಹೊಸ ಮಾಷ್ಟ್ರಂತೆ ಇವತ್ತು ಬರ್ತೀದಾರೆ. ಇವ್ರ ಮೋರೆ ನೋಡಿದ್ರೆ ಸಾಕು. 'ಸಿಡಿಮೋರೆ ಶಾಮರಾಯ' ಅನ್ನೋದು ಗೊತ್ತಾಗುತ್ತೆ. ಇದೆಲ್ಲಾ ಒಂದೆರಡು ದಿನ. ನಮ್ಮ ಕ್ಲಾಸಿಗೆ ಬಂದ ಮೇಲೆ ಎಲ್ಲಾ ಇಳಿದು ಹೋಗುತ್ತೆ". ಎಂದು ಮಾತನಾಡಿಕೊಂಡರು. "ತಡೀರಿ ಕ್ಲಾಸಿಗೆ ಬನ್ನಿ ನಿಮಗೆಲ್ಲಾ ಸರಿಯಾಗಿ ಬುದ್ಧಿ ಕಲಿಸ್ತೀನಿ" ಎಂದುಕೊಂಡು ಶಾಲೆಯ ಆಫೀಸು ರೂಮಿನತ್ತ ನಡೆದೆ.

ಅಲ್ಲಿ ನನಗಿಂತ ಮೊದಲೇ ಇಬ್ಬರು ಮಾಸ್ತರು ಬಂದು ಏನೋ ಬರೆದುಕೊಳ್ಳುತ್ತಾ ಕುಳಿತುಕೊಂಡಿದ್ದರು. ನಾನು ಅವರನ್ನು ಸಮೀಪಿಸಿ, "ನಮಸ್ಕಾರ" ಎಂದೆ. ಅವರು ನನ್ನನ್ನು ಯಾರೋ ಬೀದಿ ದಾಸಯ್ಯನನ್ನು ನೋಡುವಂತೆ ದಿಟ್ಟಿಸಿ ಮತ್ತೆ ತಮ್ಮ ಕೆಲಸದಲ್ಲಿ ನಿರತರಾದರು.

ನನಗೆ ಮುಖದ ಮೇಲೆ ಹೊಡೆದಂತಾಯಿತು. ಶಾಲೆಯನ್ನಾದರೂ ಸುತ್ತಿಕೊಂಡು ಬರೋಣವೆಂದು ಹೊರಟೆ.

ಶಾಲೆಯ ಪ್ರತಿಯೊಂದು ಕೋಣೆಯಲ್ಲೂ ಕಸತುಂಬಿ ತುಳುಕಾಡುತ್ತಿತ್ತು. ಅಲ್ಲೇ ನಿಂತಿದ್ದ ಒಬ್ಬ ಹುಡುಗನನ್ನು ಕೇಳಿದೆ.

"ಈ ಶಾಲೆಗೆ ಜವಾನನಿಲ್ಲವೇನಯ್ಯಾ?"

"ಇಬ್ಬರಿದ್ದಾರೆ ಸಾರ್,,

"ಮತ್ತೆ? ಎಲ್ಲೂ ಕಾಣೋದಿಲ್ಲವಲ್ಲ!,,

"ಅವ್ರು ಇಲ್ಯಾಕಿರ್ತಾರೆ? ಹೆಡ್ಮಾಸ್ಟ್ರು ಮನೇಲಿ ಅವ್ರಿಗೆ ಕೆಲ್ಸ ಬೆಳಗ್ನಿಂದ ಸಂಜೇ ವರೆಗೆ,,

"ಅಲ್ಲೇನಿದೆ ಅಂಥಾ ಕೆಲಸ?,,

"ಅಯ್ಯೋ ಕೆಲಸಕ್ಕೆ ಬರಗಾಲವೇ ಸಾಮಾನು ತರೋದು, ದನ ಮೇಯಿಸೋದು, ಅವುಗಳಿಗೆ ಹುಲ್ಲು ತರೋದು, ನೀರು ಕೊಡೋದು, ಕಸ ಗುಡಿಸೋದು, ಮುಸುರೆ ತಿಕ್ಕೋದು, ಮಕ್ಕಳನ್ನ ಆಡಿಸೋದು....,,

"ಓಹೋ ಹೀಗಿದ್ಯೋ ವಿಷ್ಯ. ಇರ್ಲಿ.... ನಾನು ಮೇಲಧಿಕಾರಿಗಳಿಗೆ ರಿಪೋರ್ಟ್ ಮಾಡಿ ತಿಳಿಸ್ತೀನಿ.,,

"ಅಯ್ಯೊ ಸುಮ್ನಿರಿ ಸಾರ್,,

ಅಲ್ಲೇ ನಿಂತಿದ್ದ ಒಬ್ಬ ಹುಡುಗ ಹೇಳಿದ

"ಯಾಕೋ?,, ಎಂದು ಕೇಳಿದೆ

"ನೀವು ಇಷ್ಟು ಹೊತ್ತು ಮಾತಾಡ್ತಾ ಇದ್ರಲ್ಲ ಆ ಹುಡುಗನೇ ಹೆಡ್ಮಾಸ್ಟ್ರು ಮಗ. ಎಲ್ಲಾದ್ರೂ ಅವನ 'ಅಪ್ಪಯ್ಯ'ನ ಹತ್ರ ಹೇಳಬಿಟ್ಟಾನು,,

"ದೇವಾ, ರಕ್ಷಿಸು ನಮ್ಮ ಅನವರತ!,, ಎಂದು ಹೇಳಿ ಅಲ್ಲಿಂದ ಮತ್ತೊಂದು ಕಡೆಗೆ ಕಾಲಿಟ್ಟೆ. ಅದೇ ರೀಡಿಂಗ್ ರೂಮ್ ಅಂತೆ. ಪುಸ್ತಕಗಳೆಲ್ಲ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ದಿನ ಪತ್ರಿಕೆಗಳಲ್ಲಿದ್ದ ಸುಭಾಷಿತಗಳನ್ನೆಲ್ಲಾ ಯಾರೋ ಹರಿದುಕೊಂಡು ಹೋಗಿದ್ದರು. ಅದರಲ್ಲಿರುವ ನೀತಿಯನ್ನು ಕಲಿಯದ ಇವರಿಗೆ ಸುಭಾಷಿತವೇಕೆ? ಎಂದುಕೊಂಡೆ. ವಾರಪತ್ರಿಕೆಗಳಲ್ಲಿದ್ದ ಸಿನಿಮಾ ನಟ ನಟಿಯರ ಚಿತ್ರಗಳು ಬ್ಲೇಡಿನಿಂದ ಬೇರ್ಪಡಿಸಲ್ಪಟ್ಟಿದ್ದವು (ಹೆಣ್ಣು) ದೇವರ ಚಿತ್ರಕ್ಕೆ ಗಡ್ಡ ಮೀಸೆಗಳನ್ನ ಬಿಡಿಸಿದ್ದರು. ಇವನ್ನೆಲ್ಲಾ ನೋಡುತ್ತಿರುವಾಗ ಶಾಲೆಯ ಬೆಲ್ ಆಯಿತು. ನಮ್ಮ ತರಗತಿಯ ಕಡೆ ಹೊರಟೆ.

ನಾನು ತರಗತಿಯನ್ನು ಪ್ರವೇಶಿಸಿದಾಗ ಎದುರುಗಡೆಯ ಬೆಂಚಿನಲ್ಲಿ ಹುಡುಗರಿರಲಿಲ್ಲ. ಹಿಂದುಗಡೆಯ ಬೆಂಚುಗಳು ಖಾಲಿ ಇದ್ದುವು. ಮಧ್ಯದ ಬೆಂಚುಗಳಲ್ಲಿದ್ದ ಕೆಲವು ಹುಡುಗರು ಗುಂಪಾಗಿ ಸೇರಿಕೊಂಡು ಏನೋ ತಲೆಹರಟೆ ಮಾಡುತ್ತಿದ್ದರು. ನಾನು ಒಳಗೆ ಪ್ರವೇಶಿಸಿದೊಡನೆ ಹುಡುಗರೆಲ್ಲಾ ಒಬ್ಬೊಬ್ಬರಾಗಿ ಎದ್ದು ಹೋಗದೇ ಗುಂಪು ಗುಂಪಾಗಿ ಎದ್ದು ಹೋಗಲಾರಂಭಿಸಿದರು.

ನಾನು ಪ್ರತಿಯೊಬ್ಬನನ್ನೂ ರಟ್ಟೆ ಹಿಡಿದು ಎಳೆದುಕೊಂಡು ಬಂದು ಬೆಂಚಿನ ಮೇಲೆ ಕೂರಿಸಿದೆ ನಂತರ ನನ್ನ ಕುರ್ಚಿಯ ಬಳಿ ಹೋಗಿ "ಈಗ ಯಾವ ಪಾಠ ಇದೆ?" ಎಂದು ಕೇಳಿದೆ. 'ಕನಡ' ಎಂದು ಉತ್ತರ ಬಂದಿತು. ಯಾವ ಪಾಠವನ್ನು ಇದುವರೆಗೆ ಮಾಡಿದ್ದಾರೆ? ಎಂದೆ. 'ಶ್ರೀರಾಮನ ಪಂಥ' ಎಂದು ಹೇಳಿದ ಒಬ ಹುಡುಗ. ಹಳೇ ಪಾಠವನ್ನೇ ಇನ್ನೊಮ್ಮೆ ಮಾಡೋಣವೆಂದು ಯೋಚಿಸಿ ಒಬ್ಬನನ್ನು ಪ್ರಶ್ನಿಸಿದೆ.

"ಜನಕನ ಹತ್ತಿರವಿದ್ದ ಶಿವಧನುಸ್ಸನ್ನು ಮುರಿದವರು ಯಾರು?

"ನಾನಲ್ಲ ಸಾರ್" 'ನಾನಲ್ಲ ಸಾರ್" ಎಂದು ಪ್ರತಿ ಹುಡುಗರೂ ಕೂಗಿಕೊಂಡರು. ನಾನು ಎದುರಿಗಿದ್ದ ಮೇಜನ್ನು ಬಲವಾಗಿ ಗುದ್ದಿದೆ. ಗಲಾಟೆ ನಿಲ್ಲಲಿಲ್ಲ, ಕೈಗೆ ಸಿಕ್ಕಿದ ಒಬ್ಬನಿಗೆ ನಾಲ್ಕು ಬಾರಿಸಿದೆ. ಅವನು ಮಹಡಿಯ ಹೆಂಚುಗಳು ಕಿತ್ತು ಹೋಗುವ ಹಾಗೆ ಕಿರುಚಿದ. ನಾನು ಅವನಿಗೆ, ಹೀಗೆಲ್ಲಾ ಗಲಾಟೆ ಮಾಡಬಾರದೆಂದೂ ನೀವು ಪರೀಕ್ಷೆಯಲ್ಲಿ ಪಾಸಾಗಬೇಕೆಂದಿದ್ದರೆ ಈಗಿನಿಂದಲೇ ಗಮನವಿಟ್ಟು ಪಾಠ ಕೇಳಬೇಕೆಂದೂ ಹೇಳಿದೆ. ಅವನು ಅಳುತ್ತಲೇ 'ಹಾದೌದು. ಪಾಸಾಗಬೇಕಾದರೆ ಹೆಡ್ಮಾಸ್ಟ್ರು ಕೈ ಬೆಚ್ಚಗೆ ಮಾಡಿದ್ರೆ ಸರಿ. ಓದೋದು ಬೇಡ, ಪಾಠ ಕೇಳೋದು ಬೇಡ" ಎಂದ.

ನಾನು ಮಾರನೆಯ ದಿನವೇ ರಾಜಿನಾಮೆ ಕಳಿಸುತ್ತಾ ಮೇಲಧಿಕಾರಿಗಳಿಗೆ ಈ ರೀತಿ ಪತ್ರ ಬರೆದೆ—

"ಶಾಲೆಗಳಲ್ಲಿ ಇಂದಿನ ದಿನಗಳಲ್ಲಿ ಅಧ್ಯಾಪಕನು ಹೆಡ್ಮಾಸ್ಟ್ರಿಗೆ ಹೆದರುತ್ತಾನೆ ಹೆಡ್ಮಾಸ್ಟ್ರು ಮೇನೇಜರಿಗೆ ಹೆದರುತ್ತಾರೆ. ಮೇನೇಜರು ಮೇನೇಜಿಂಗ್ ಬೋರ್ಡಿಗೆ ಹೆದರುತ್ತಾರೆ. ಮೇನೇಜಿಂಗ್ ಬೋರ್ಡ್ ಮಕ್ಕಳನ್ನು ಹೆತ್ತವರಿಗೆ ಹೆದರುತ್ತದೆ. ಮಕ್ಕಳನ್ನು ಹೆತ್ತವರು ಮಕ್ಕಳಿಗೇ ಹೆದರುತ್ತಾರೆ. ಮಕ್ಕಳು ಯಾರಿಗೂ ಹೆದರುವುದಿಲ್ಲ.,,

ಈಗ ನಾನು ಮಾಜಿ ಉಪಾಧ್ಯಾಯನಾಗಿದ್ದೇನೆ. ಮತ್ತೆ ಕೆಲಸವಿಲ್ಲದೆ ಅಲೆಯಬೇಕಾಗಿದೆ. ಹೀಗೇ ಅಲೆಯುತ್ತಿದ್ದರೂ ಚಿಂತೆಯಿಲ್ಲ. ಆದರೆ ಶಾಲಾ ಮಾಸ್ತರನಾಗುವುದು ಬೇಡ.

—ಶ್ರೀ 'ಗಾಯತ್ರಿ ಅನುಜ'

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ — ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ನಮ್ಮ 3 ಹೊಸ ಶಾಖೆಗಳು— ಅಲ್ಸೂರು, (ಬೆಂಗಳೂರು) ಕೋಲಾರ ಮತ್ತು ಕೃಷ್ಣರಾಜ ಪೇಟೆಗಳಲ್ಲಿ ತೆರೆಯಲ್ಪಡುವವೆಂದು ತಿಳಿಸಲು ಸಂತೋಷಪಡುತ್ತೇವೆ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರಸ್ತೆ,

ಮಂಗಳೂರು—3.

REGD. No. B. G. 176
LICENCE No. 31
Licensed to Post without Prepayment

### ಮುಕ್ತಿಸಾಧನೆಯ ದಾರಿಯಲ್ಲಿ

# ವೈಷ್ಣವ ಜನತೋ ತೇಣೆ ಕಹಿಯೇ

"ನಾನು ನನಗೆ ವಿಶ್ವಾಸವುಳ್ಳ 'ಭಗವದ್ಗೀತೆ'ಯನ್ನು ಮರೆತರೂ, ನನಗೆ ಅತಿಪ್ರಿಯವಾದ 'ವೈಷ್ಣವ ಜನತೊ' ಪದ್ಯಸ್ತೋತ್ರವನ್ನೂ ಎಂದೂ ಮರೆಯೆನು" ಎಂದು ಹೇಳುತ್ತಾ ಇದ್ದ ಮಹಾತ್ಮಾ ಗಾಂಧಿಯವರು ಹಲವು ಸಹಸ್ರ ಸಲ ಈ ಸ್ತೋತ್ರವನ್ನು ತನ್ನ ಜೀವನದಲ್ಲಿ ಹಾಡಿ ಇದೇ ಹಾಡಿನಿಂದ ಜೀವನ್ಮುಕ್ತರಾದರು. ಅದು ಏಳು ಜನ್ಮಗಳ ಸಂಸ್ಕೃತಿಯ ಬಲದಿಂದವೆಂದೂ ಹೇಳಬಹುದು. ತಾನು ಚಿಕ್ಕ ಹಸುಳೆಯಾಗಿದ್ದಾಗ ತನ್ನ ಮಾತೆಯು ಈ ಸ್ತೋತ್ರವನ್ನು ತನಗೆ ಬಾಯಿಪಾಠ ಮಾಡಿಸಿದರು ಎಂದು ಮಹಾತ್ಮರು ಪದೇ ಪದೇ ಹೇಳುತಿದ್ದರು. ಈ ಸ್ತೋತ್ರದ ಶಕ್ತಿಯಿಂದಲೇ ಅವರ ಮನಸ್ಸು, ಶರೀರ ಮತ್ತು ಆತ್ಮವು ಏಕಭಾವದ ಐಕ್ಯತೆಯಿಂದ ಶುದ್ಧಗೊಂಡವು. ಈ ಸ್ತೋತ್ರದಲ್ಲಿರುವ ರಸವು ಪ್ರೇಮರಸ ಮಾತ್ರ. ಇಲ್ಲದೆ ಆ ಶುದ್ಧ ಪ್ರೇಮದಲ್ಲಿ ಸಮರಸ ಭಾವವು, ಆತ್ಮ ಶುದ್ಧಿಯು ಸತ್ಯ ತ್ಯಾಗ ಮತ್ತು ಅಹಿಂಸೆಯು ಒಂದಾಗಿ ಸಲಸಿದ್ದುವು. ಈ ಪದ್ಯವು ಹಾಡಿದಾಗ ಕೇಳಲಿಕ್ಕೆ ಇಂಪಾಗಿದ್ದು, ಕೇಳುವವರಿಗೂ, ಹಾಡುವವರಿಗೂ ಶಾಂತಿಯನ್ನು ಒದಗಿಸುತ್ತಿತ್ತು. ವಿವೇಕವೂ, ವೈರಾಗ್ಯವೂ ಮಿಳಿತವಾದ ಈ ಪದ್ಯದಲ್ಲಿ ಸ್ವಾರ್ಥದ ಸಂಪೂರ್ಣ ನಿರಾಕರಣೆಯು ಸ್ಪಷ್ಟವಾಗುತಿತ್ತು. ಮಹಾತ್ಮರಿಗೆ ಇದು ಗೀತಾರ್ಥಸಾರವಾಗಿಯೇ ತೋರುತಿತ್ತು. ಈ ಹಾಡಿನ ಶಕ್ತಿಯಿಂದ ಮಹಾತ್ಮರ ಮನೋಶಕ್ತಿಯು ದಿವ್ಯವಾಗಿ ಪ್ರಕಾಶಿಸ ತೊಡಗಿತು. ಅವರು ಕರ್ಮಯೋಗಿಯೂ, ಜ್ಞಾನಯೋಗಿಯೂ, ತ್ಯಾಗಿಯೂ ಆಗಿ ಉಳಿದರು. ದೈವಬಲವಿಲ್ಲದೆ ಯಾವ ಕರ್ಮದಲ್ಲಿಯೂ ಜಯವು ಲಭಿಸದು, ಎಂಬುದೇ ಇದರ ಮೂಲ ತತ್ವ. ಪರಂಜ್ಯೋತಿ ಪರಮಾತ್ಮನ ಕರುಣವು ವಿಚಿತ್ರವಾಗಿರುವುದಲ್ಲದೇ ಸಂಪೂರ್ಣ ಫಲದಾಯಕವಾಗಿರುವುದು ಎಂಬುದರಲ್ಲಿ ಆಸ್ತಿಕರಿಗೆ ಸಂಶಯವೇಕೆ?

ಮುಕ್ತಿ ಸಾಧನೆಯ ಈ ಸ್ತೋತ್ರವನ್ನು ದಿನನಿತ್ಯ ಹಾಡಿ ತನ್ನ ಜೀವನವನ್ನು ಪವಿತ್ರಗೊಳಿಸಿದ ಮಹಾತ್ಮಾ ಗಾಂಧಿಯವರಿಗೆ ಅದೊಂದು ತಪಸ್ಸೆ ಆಗಿ ಪರಿಣಮಿಸಿತ. ಅನೇಕ ಕಷ್ಟಗಳಿಂದ ಪಾರಾದರು. ಕೊನೆಗೆ ವೃದ್ಧಾಪ್ಯದಲ್ಲಿ ಇದೇ ಶ್ಲೋಕವು ತಾನೇ ಹಾಡಿ ತೋರಿಸಿದ ಚರಮ ಶ್ಲೋಕವೂ ಆಯಿತು. ಈ ದಿನ ಆ ಪುಣ್ಯ ಜೀವಿಗೆ ಭೂಲೋಕದ ಯಾವತ್ತೂ ಜನಾಂಗದವರೂ ಮನ್ನಣೆಕೊಟ್ಟು 'ರಾಜಘಾಟ್'ವು ಒಂದು ಪುಣ್ಯ ಕ್ಷೇತ್ರವಾಗಿಯಿದೆ. ದರಿದ್ರರ ಸಂಕಷ್ಟಗಳೂ ಬಳಲಿಕೆಗಳನ್ನೂ ಮನವರಿಕೆ ಮಾಡಿಕೊಂಡು ತಾನು ಸ್ವತಹ ದರಿದ್ರ ಜೀವನವನ್ನು ನಡೆಸಿದರು. ದರಿದ್ರರ ನಾರಾಯಣರಾದರು. ಇದಕ್ಕೂ ಮಿಗಿಲಾದ ಸನ್ಯಾಸವೆಲ್ಲಿ? ಸಂತತಿಯು ಹೆಚ್ಚಿದಂತೆ ಪತ್ನಿಯು ಇರುವಾಗಲೇ ಬ್ರಹ್ಮಚರ್ಯವನ್ನು ವಹಿಸಿ ಕೊಂಡರು. ಅಂತೂ ಪತ್ನಿಯಲ್ಲಿ ಸಂಪೂರ್ಣ ಪ್ರೇಮ ಭಾವವನ್ನಿಟ್ಟು ಕೊಂಡಿದ್ದರು. ಪತ್ನಿಯು ಸತ್ತಾಗ ಬೆಂಡಾದರು. ಬಹಳ ವ್ಯಸನಗೊಂಡರು. ಪಾತಿವ್ರತ್ಯದ ಮಹಿಮೆಯನ್ನು ಕೊಂಡಾಡಿದರು. ಗಾಂಧೀಜಿಯವರು ಮೃತರಾದರೂ ಅವರ ತತ್ವಗಳು ಮೃತವಾಗಲಿಲ್ಲ. ಅವರ ಪರಿಶುದ್ಧಾತ್ಮವು ಭರತ ದೇಶದ ಸ್ಥಿತಿಗತಿಗಳನ್ನು ನೋಡುತ್ತಲೇ ಇದೆ. ನಿಷ್ಕಾಮ ಕರ್ಮಕ್ಕೆ ಮಿಗಿಲಾದ ಯೋಗವು ಇನ್ನೊಂದಿಲ್ಲ. ಈ ವಿಚಾರವು ಇಡೀ ಧರಣಿ ಮಂಡಲಕ್ಕೆ ಸರ್ವ ಸಮ್ಮತವಾದ ಸುಜ್ಞಾನವು ಮಾತ್ರವಲ್ಲ ವಿಜ್ಞಾನವು ಕೂಡ.

— ಎಂ. ಬಿ. ಶಂಕರ ರಾವ್

### ಯೋಜನೆಯ ಯಶಸ್ಸಿಗೆ ಎದುರು ಬರುವ ಸಮಸ್ಯೆಗಳು

(೧ನೇ ಪುಟದಿಂದ)

ನ ಕೂಡ ನಿಧಾನವಾಗುತ್ತದೆ. ಕಾರ್ಯ ನಿರ್ವಹಣೆಯ ಗಡಿಬಿಡಿ ಹಾಗೂ ಆತುರದಲ್ಲಿ ನಿರ್ವಿಕಾರಚಿತ್ತದಿಂದ ಆಗಿಂದಾಗೆ ಕೈಗೊಳ್ಳುವ ಕೆಲವು ತೀರ್ಮಾನಗಳ ಪ್ರಭಾವ ಕೂಡ ಕಡಿಮೆಯಾಗುತ್ತದೆ. ಆದರೆ ಯೋಜನಾ ಪ್ರಯತ್ನದಲ್ಲಿ ನಾವು ಇಂದು ಒಂದು ಪ್ರಬುದ್ಧ ಘಟ್ಟವನ್ನು ಮುಟ್ಟಿದ್ದೇವೆ. ಗೊತ್ತಾದ ಹಾಗೂ ಸ್ಥಿರಪಟ್ಟ ಸೂತ್ರಗಳನ್ನು ಬಿಟ್ಟು ಹೋಗುವುದರಿಂದ ಕಾಲವ್ಯಯ ಮತ್ತು ಅನಾವಶ್ಯಕವಾದ ವೆಚ್ಚ ಎರಡೂ ಅನಿವಾರ್ಯವಾಗುತ್ತದೆಯೆಂಬುದು ಅನುಭವಕ್ಕೆ ಬಂದಿರುವ ಮಾತೇ ಆಗಿದೆ.

#### ವಿಸ್ತರಣಾ ಸೇವೆಗಳು

ಪ್ರಜಾಸತ್ತಾತ್ಮಕ ಅಭಿವೃದ್ಧಿ ಕಾರ್ಯ ಯೋಜನೆಯಲ್ಲಿ ವಿಸ್ತರಣಾ ಹಾಗೂ ಸಮಾಜ ಕಲ್ಯಾಣ ಸೇವೆಗಳಿಗೆ ಒಂದು ಪ್ರಮುಖ ಸ್ಥಾನವಿದೆ. ಜನ ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಾಗುವ ಕಾರ್ಯ ಮಹತ್ವಪೂರ್ಣವಾದ್ದಾಗಿದೆ. ಇದಕ್ಕೆ ಸಂಬಂಧಪಟ್ಟಂತಹ ಸಾಮಾಜಿಕ, ಶೈಕ್ಷಣಿಕ ಹಾಗೂ ಆಡಳಿತ ಕಾರ್ಯಕ್ರಮಗಳು ಬಹಳ ತೊಡಕಿನದಾಗಿರುತ್ತವೆ. ಅವುಗಳ ಬಗ್ಗೆ ನಮ್ಮ ತಿಳುವಳಿಕೆ ಸಹ ಸೀಮಿತವಾಗಿದೆ ಮತ್ತು ಪೂರ್ವ ಗ್ರಹ ಪೀಡಿತವಾಗಿದೆ. ಸಾಮಾಜಿಕ ಸಂಶೋಧನೆ ಮತ್ತು ವಿಶೇಷ ಅಧ್ಯಯನ ಕಾರ್ಯಕ್ರಮಗಳ ಮೂಲಕ ಪ್ರಗತಿಯ ಹೊಸ ಹೊಸ ಮಾರ್ಗಗಳನ್ನು ತಿಳಿಯುವುದು ಸಾಧ್ಯವಾಗುತ್ತದೆ. ಸಮಸ್ಯೆಯ ಮೂಲಕ್ಕೆ ನಾವು ಹೋಗುವುದು ಇದರಿಂದ ಸಾಧ್ಯವಿರುತ್ತದೆ. ನಮ್ಮ ಗುರಿಯ ಬಗ್ಗೆ ದೃಢ ಸಂಕಲ್ಪಬೇಕು. ಯಾವ ವಿಷಯಗಳಿಗೆ ಪ್ರಾಮುಖ್ಯತೆ ಕೊಡಬೇಕೆಂಬ ಅರಿವು ಇರಬೇಕು. ಸಂದರ್ಭಕ್ಕೆ ತಕ್ಕಂತೆ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಮುನ್ನಡೆಯುವ ಚೈತನ್ಯವೂ ಬೇಕು. ನಿರೀಕ್ಷೆಯನ್ನೂ ಹಿಂದಕ್ಕೆ ಹಾಕಿ ಮುಂದಕ್ಕೆ ನಡೆಯುವ ಪ್ರಯತ್ನಬೇಕು.

ಒಟ್ಟಿನಲ್ಲಿ ಹೇಳುವುದಾದರೆ, ನಾವು ನಮ್ಮ ಗುರಿಗಳನ್ನು ಗೊತ್ತುಮಾಡಿಕೊಳ್ಳುವಾಗ ತಾಂತ್ರಿಕ ಹಾಗೂ ಆಡಳಿತ ವಿಚಾರಗಳ ಪೂರ್ವ ಪ್ರಜ್ಞೆಯನ್ನೂ ಇಟ್ಟುಕೊಂಡು ನಮ್ಮ ಗುರಿಗಳನ್ನು ಹಾಕಿಕೊಳ್ಳಬೇಕು. ವಿಶಾಲವಾದ ಒಂದು ಮಟ್ಟದಲ್ಲಿ ಗುರಿಗಳನ್ನು ಗೊತ್ತುಮಾಡಿಕೊಂಡಾದ ಮೇಲೆ ಅವುಗಳನ್ನು ಸಾಧಿಸಲು ಸಾಧ್ಯವಾಗುವಂತೆ ಖಚಿತವಾದ ಆಡಳಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಪ್ರತಿಯೊಂದು ಹಂತದಲ್ಲಿಯೂ ಜವಾಬ್ದಾರಿಯನ್ನು ನಿರ್ದಿಷ್ಟವಾಗಿ ಗೊತ್ತುಮಾಡಬೇಕು. ಹೀಗೆ ಒಂದು ದ್ವಿಮುಖವಾದ ಕಾರ್ಯಕ್ರಮ ಕೈಗೊಳ್ಳುವುದರಿಂದ ಯೋಜನೆ ಹಾಕಿಕೊಳ್ಳುವುದು ಮತ್ತು ಅದನ್ನು ಕಾರ್ಯಗತ ಮಾಡುವುದು ಇವೆರಡರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಭಾರತದಲ್ಲಿ ಇಂದು ಈ ವಿಚಾರಕ್ಕೆ ಗಮನ ಕೊಡುವುದೇ ಅಭಿವೃದ್ಧಿ ಆಡಳಿತ ವ್ಯವಸ್ಥೆಯ ಮುಖ್ಯ ಅವಶ್ಯಕತೆ ಆಗಿದೆಯೆಂದೂ ಹೇಳಬಹುದು.

—'ಯೋಜನಾ' ಕೃಪೆಯಿಂದ.

ಚಿಕ್ಕ ಮಗುವಿಗೊಂದು ಸಂತಸದ ಕೊಡುಗೆ ....ಆ ಸುಂದರ ಪಾಸ್ ಪುಸ್ತಕ

ನಿಮ್ಮ ಮಕ್ಕಳ ಕೈಯಲ್ಲಿ ಹಣ ಕೊಡುವಿರಾ??
ನೀವು ಪ್ರೀತಿಯಿಂದ, ಅಕ್ಕರೆಗಾಗಿ ಕೊಡುವ "ಹಣ" ನಿಮ್ಮ ಮಗುವನ್ನು ತಪ್ಪು ದಾರಿಯಲ್ಲಿ ಕೊಂಡೊಯ್ಯುತ್ತದೆಯೆಂದು ಎಂದಾದರೂ ಯೋಚಿಸಿದ್ದೀರಾ??

ಮಕ್ಕಳ ಕೈಯಲ್ಲಿ ಹಣ ಕೊಡುವ ಬದಲು, ಅವರ ಹೆಸರಿನಲ್ಲೊಂದು, ಬೇಂಕಿನಲ್ಲಿ, ಖಾತೆ ತೆರೆಯಿರಿ. ಅದರಿಂದ ನಿಮ್ಮ ಮಗುವಿಗೊಂದು ಉತ್ತಮ ಭವಿಷ್ಯ, ಮತ್ತು ಮಗುವಿನಲ್ಲಿ ಉಳಿತಾಯ ಪ್ರವೃತ್ತಿಯನ್ನು ಉಂಟುಮಾಡಿದಂತಾಗುತ್ತದೆ.

ಚಿಕ್ಕ ಮಕ್ಕಳ ಸುಂದರ ಭವಿಷ್ಯಕ್ಕೆ.......

ಸಿಂಡಿಕೇಟ್ ಬೇಂಕ್......ಸಹಕರಿಸಬಲ್ಲದು

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ. 1925. ಶಾಖೆಗಳು: 176
ಒಟ್ಟು ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ.

**ನವಯುಗ**
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು.
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

CONTRIBUTE
YOUR MITE
TO OUR
NATIONAL
DEFENCE
FUND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 28 | ಉಡುಪಿ, 21—3—1963 ಗುರುವಾರ | ಸಂಪುಟ ೪೨ ಸಂಚಿಕೆ ೨೮

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

ಬಕಧ್ಯಾನ ನಿರತ

## ಚೀನೀಯರು ಏನು ಬಯಸುತ್ತಾರೆ?

ಭಾರತದ ನೆಲದ ಮೇಲೆ ದುರಾಕ್ರಮಣಗೆಯ್ದ ಚೀನೀಯರು ತಮ್ಮ ಅಪರಾಧವನ್ನು ಭಾರತದ ಮೇಲೆಯೇ ಹೊರಿಸಿ ಆಡಿನ ಮುಖಕ್ಕೆ ಮೊಸರ ಕೈ ಒರಸಿದ ಕೋತಿಯಂತೆ ಆಚರಿಸುತ್ತಿದ್ದಾರೆ ತಾನು ಸಂಧಾನವನ್ನೇ ಬಯಸುವುದಾದರೂ ಭಾರತವೇ ಅದಕ್ಕೆ ವಿಘ್ನವನ್ನು ತಂದು ಹಾಕುತ್ತಿದೆಯೆಂಬ ತನ್ನ ಪಲ್ಲವಿಯನ್ನವರು ಪುನರುಚ್ಚರಿಸುತಿದ್ದಾರೆ. ತನಗೆ ಸಂಪೂರ್ಣ ಅನುಕೂಲವಿಲ್ಲವಾದರೂ ಭಾರತವು ಕೊಲಂಬೋ ಸೂಚನೆಯ ಎಲ್ಲ ಅಂಶಗಳನ್ನು ಒಪ್ಪಿಕೊಂಡಿರುವುದೆಂದರೆ, ಅದು ಅದರ ಶಾಂತಿ ಸ್ಥಾಪನೆ ಮತ್ತು ಸೌಹಾರ್ದ ರಕ್ಷಣೆಯ ಪೂರ್ಣೋದ್ಯೋತಕವಾಗಿರುವಾಗ, ಅದರ ತಾತ್ವಿಕ ಅಂಶವನ್ನು ಮಾತ್ರ ಒಪ್ಪಿ ಮಾತುಕತೆಗೆ ಆಹ್ವಾನ ನೀಡುವ ಚೀನಾದ ನೀತಿಯು ಅದರ ಅಂತರ್ಯ ಜಪ್ತೇಕಲುಷಿತವಾದುದು ಭಾರತದ ಬಗ್ಗೆ, ಅದರ ನೀತಿಯ ಬಗ್ಗೆ ನಿರಂತರ ಅಪಪ್ರಚಾರದಲ್ಲಿಯೇ ನಿರತವಾಗಿರುವ ಚೀನೀಯ ಶಾಸಕರ,ಇಂಗಿತವೆಂದರೆ, ಬೆರಳು ತೋರಿಸಿ ಕೈಯನ್ನೇ ನುಂಗುವುದೆಂಬುದಕ್ಕೆ ಈ ವಿವಾದವೊಂದು ಜ್ವಲಂತ ನಿದರ್ಶನ.

### ಕೊಲಂಬೋ ಪುಟ ಚೆಂಡು

ಕೊಲಂಬೋ ಸೂಚನೆಗಳ ತತ್ವನ್ನು ತಾನು ಒಪ್ಪಿಕೊಂಡಿರುವುದರಿಂದ, ಅವುಗಳನ್ನು ಒತ್ತಟ್ಟಿಗಿಟ್ಟು ನೇರ ಮಾತುಕತೆಗಳಿಗೆ ತೊಡಗಲು ಭಾರತವು ಮುಂದೆ ಬರಬೇಕು ಎಂದು ಚೀನೀಯ ಪ್ರಧಾನಿ ಚೌ. ಎನ್. ಲಾಯ್ ಇತ್ತೀಚೆಗೊಂದು ಪತ್ರ ಬರೆದಿದ್ದಾರೆ. ಇದನ್ನೂ ಇದಕ್ಕೆ ನಮ್ಮ ಪ್ರಧಾನಿ ನೆಹರುರವರಿತ್ತ ಸ್ಪಷ್ಟೋತ್ತರವನ್ನೂ ಲೋಕಸಭೆಯ ಮುಂದೆ ಇಡಲಾಗಿದೆ. ಭಾರತವು ತನ್ನ ಉತ್ತರದಲ್ಲಿ ನಿಜವಾಗಿಯೂ ಚೀನಕ್ಕೆ ವಿವಾದವನ್ನು ಸಂಧಾನ ಮೂಲಕ ಪರಿಹರಿಸಿಕೊಳ್ಳಬೇಕೆಂಬ ಆತುರವಿರುವುದಾದರೆ, ಭಾರತದಂತೆಯೇ ಅದೂ ಕೊಲಂಬೋ ಸಲಹೆಗಳನ್ನು ಇದ್ದಕ್ಕಿದ್ದಂತೆ ಪರಿಪೂರ್ಣವಾಗಿ ಮನ್ನಿಸಬೇಕು ಎಂದು ಒತ್ತಿಹೇಳಿದೆ. ಆರು ರಾಷ್ಟ್ರಗಳ ಕೊಲಂಬೋ ಸಮ್ಮೇಳನದ ಸೂಚನೆಗಳು ವಿವಾದವನ್ನು ಬಗೆಹರಿಸುವುದಕ್ಕಿರದೆ ಪರಿಹಾರ ಸಂಬಂಧದಲ್ಲಿ ಉಭಯ ರಾಷ್ಟ್ರಗಳೂ ಆಸಕ್ತಿ ತಳೆದು, ಆ ಮಾರ್ಗದಲ್ಲಿನ ಅಡೆತಡೆಗಳನ್ನು ದೂರಮಾಡಿ ಅನುಕೂಲ ವಾತಾವರಣವನ್ನೇರ್ಪಡಿಸುವುದು ಮಾತ್ರ ಅವುಗಳ ಉದ್ದೇಶವೆಂಬುದನ್ನ ನಾವು ನೆನೆಪಿನಲ್ಲಿಡಬೇಕು.

### ಭಾರತಕ್ಕೆ ಚೌ ವಿನಂತಿ

ಚೀನವು ಏಕಪಕ್ಷೀಯವಾಗಿ ಮಾಡಿದ ಯುದ್ಧ ವಿರಾಮಘೋಷಣೆ ಅದರಂತೆ ತನ್ನ ಸೇನೆಯನ್ನು ೧೯೫೯ರ ನವಂಬರ ೭ರಂದಿದ್ದ ನೈಜನಿಯಂತ್ರಣ ರೇಖೆಯಿಂದಲೂ ೨೦ ಕಿಲೋಮೀಟರ್ ಹಿಂದಕ್ಕೆ ಕರೆಸಿಕೊಳ್ಳುವ ಕಾರ್ಯದ ಪರಿಪೂರ್ಣತೆ, ತನಗೆ ನೇರ ಮಾತುಕತೆಯ ಮಾರ್ಗದಿಂದಲೇ ಸಮಸ್ಯೆ ಪರಿಹರಿಸುವಲ್ಲಿರುವ ಆಸ್ಥೆ ಮೊದಲಾದುವನ್ನು ಉತ್ತಮವಾದ ರೀತಿಯಲ್ಲಿ ವಿವರವಾಗಿ ವರ್ಣಿಸಿದ ಚೌ ಎನ್ ಲಾಯ್ ಅವರು ಇದು ಭಾರತದ ಕನಿಷ್ಠ ಕೇಳಿಕೆಯಾಗಿದೆ' ೧೯೬೨ರ ಸಪ್ಟಂಬರ ೮ರ ನಿಯಂತ್ರಣ ರೇಖೆಯಿಂದರ ಚೀನೀ ಸೇನೆಯು ಹಿಂದೆ ಸರಿಯಬೇಕೆಂಬುದಕ್ಕೆ — ಯಾವ ರೀತಿಯಿಂದಲೂ ವ್ಯತಿರಿಕ್ತವಾಗುವುದಿಲ್ಲ. ಅಷ್ಟು ಮಾತ್ರವಲ್ಲದೆ ಸಮರ ವಿರಾಮ ವ್ಯವಸ್ಥೆಯಲ್ಲಿ ವಿವಾದಾಸ್ಪದವಿರುವ ನಾಲ್ಕು ಪ್ರದೇಶಗಳಲ್ಲಿ ತಮ್ಮ ನಾಗರಿಕ ಠಾಣ್ಯಗಳನ್ನು ನಿಲ್ಲಿಸದಿರಲು ಚೀನಾ ನಿರ್ಧರಿಸಿದೆ. ಹೀಗೆ ಚೀನಾವು ಭಾರತ—ಚೀನಾ ಗಡಿ ವಿವಾದವನ್ನು ನೇರ ಮಾತುಕತೆಗಳ ಮೂಲಕ ತೀರಿಸಲು ಏನೆಲ್ಲಾ ಮಾಡಬಹುದೋ ಅವೆಲ್ಲವನ್ನೂ ಮಾಡಿದೆ. ಹಾಗಿರುವಾಗ ಮಾತುಕತೆ ಎನ್ನು ತೊಡಗಲು ವಿಲಂಬ ಮಾಡಬೇಕಾದುದಿಲ್ಲ. ಕೊಲಂಬೋ ಸಮ್ಮೇಲನದ ಎರಡು ಸೂಚನೆಗಳು ಅಸ್ಪಷ್ಟವಿದ್ದು ಅವುಗಳನ್ನು ನಮ್ಮ ಮಾತುಕತೆಗಳ ಮೇಲೆ ಖಚಿತಪಡಿಸಬಹುದು." ಎಂದು ಬರೆದಿದ್ದಾರೆ. "ಮಾನ್ಯ ಪ್ರಧಾನ ಮಂತ್ರಿಗಳೇ, ಚೀನಾ—ಭಾರತ ಸೀಮೆಯಲ್ಲಿ ಶಸ್ತ್ರ ತಿಕ್ಕಾಟ ನಡೆಯುವಂತಾದುದು ದುರದೃಷ್ಟ. ಸೇನೆಯ ಬಳಕೆಯು ನಮ್ಮ ಪ್ರಶ್ನೆಯನ್ನು ಪರಿಹರಿಸಲಾರದು; ನಮ್ಮ ಗಡಿತಂಟೆಯು ಕೊನೆಯಲ್ಲಿ ಶಾಂತಿಯಿಂದಲೇ ಬಗೆಹರಿಯಬೇಕು. 'ಚೀನೀಯ ಸರಕಾರದ ಸೂಚನೆಗಳಿಗೆ ನೀವು ಅನುಕೂಲ ಪ್ರತಿಕ್ರಿಯೆ ತೋರಿಸುತ್ತೀರೆಂದು ನಂಬಿದ್ದೇನೆ". ಎಂದವರು ಪತ್ರದಲ್ಲಿ ನಿರೂಪಿಸಿದ್ದಾರೆ.

### ಸೂಚನೆಗಳನ್ನು ಒಪ್ಪಿಕೊಳ್ಳಿ

ಪ್ರಧಾನ ಮಂತ್ರಿ ಜವಾಹರಲಾಲ ನೆಹರುರವರು ಭಾರತ ಸರಕಾರದ ದೃಢ ನಿಲುವೆಯನ್ನು ಇದಕ್ಕುತ್ತರವಾಗಿ ಬರೆದ ಪತ್ರದಲ್ಲಿ ಸ್ಪಷ್ಟಗೊಳಿಸಿದ್ದಾರೆ. "ಚೀನಾದ ಸಮರವಿರಾಮ ಘೋಷಣೆಯ ಬಗೆಗೆ ಭಾರತದ ನಿಲುವೆ ಯೇನೆಂಬುದನ್ನು ೧೯೬೨ರ ದಶಂಬರ ೧೦ನೆ ತಾರೀಕಿನ ಪತ್ರದಲ್ಲಿಯೇ ಭಾರತವು ತಿಳಿಸಿತ್ತು. ಆ ಮೇಲೆ ಕೊಲಂಬೋ ಸಲಹೆಗಳು ಬಂದುವು. ಮಾತ್ರವಲ್ಲ ಶ್ರೀಮತಿ ಭಂಡಾರ ನಾಯಿಕೆಯವರು ಇಕ್ಕಡೆಯವರಿಗೂ ಅವುಗಳನ್ನು ಸ್ಪಷ್ಟಪಡಿಸಿದರು. ಇದರ ಆಧಾರದ ಮೇಲೆ ಭಾರತೀಯ ಲೋಕಸಭೆಯ ಅಭಿಪ್ರಾಯವನ್ನು ಪಡೆದುಕೊಂಡು ನಮ್ಮ ಸರಕಾರವು ಅವನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿತು ಮತ್ತು ಶ್ರೀಮತಿಯವರಿಗೆ ಅದನ್ನು ತಿಳಿಸಿತು. ಅಲ್ಲದೆ ನೇರ ಮಾತುಕತೆ ನಡೆಸಲು ಚೀನೀಯ ಸರಕಾರವಾದರೂ ಯಾವ ಸೂಚನೆಯನ್ನೂ ಕಾಯ್ದಿಡದೆ ಭಾರತದಂತೆಯೇ ನಿಶ್ಶರ್ತವಾಗಿ ಅವನ್ನು ಒಪ್ಪಬೇಕೆಂದು ಕೇಳಿಕೊಂಡಿದೆ. ಈ ವಿಷಯಕ ಪತ್ರವನ್ನು ಭಾರತ ಸರಕಾರವು ಎದುರು ನೋಡುತ್ತಿದೆ. ನೀವು ನೇರ ಮಾತುಕತೆಯ ಮೂಲಕ ಪರಿಹಾರಗೊಳ್ಳಬೇಕೆಂಬುದನ್ನು ಮಾತ್ರ ಒಪ್ಪಿದ್ದೀರಿ. ಇದು ಕೊಲಂಬೋ ಸೂಚನೆಗಳನ್ನು ಒಪ್ಪಿದಂತಾಗಲಿಲ್ಲ. 'ಭಾರತ-ಚೀನಾ ಸೀಮಾ ವಿವಾದವನ್ನು ವಿಚಾರ ವಿನಿಮಯದಿಂದ ಬಿಡಿಸಲು ಸಾಧ್ಯವಿದ್ದುದನ್ನೆಲ್ಲ ಮಾಡಿದ್ದೇವೆ' ಎಂಬ ನಿಮ್ಮ ಮಾತು ಸನಗರ್ಭವಾಗುವುದಿಲ್ಲ, ನಿಜವಾಗಿ ನಿಮಗೆ ಶಾಂತ ಪರಿಹಾರದಲ್ಲಿ ಆಸಕ್ತಿಯಿರುವುದಾದರೆ, ಭಾರತದಂತೆಯೇ ಕೊಲಂಬೋ ಸೂಚನೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಿರಿ; ಆ ಮೇಲೆಯೇ ಮಾತುಕತೆಯ ದ್ವಿತೀಯ ಹಂತವೇರುವುದು ಸಾಧ್ಯ."

### ಹಿಂಜರಿಯದೆ ಮುಂದೆ ಬನ್ನಿ

"ಭಾರತಕ್ಕೆ ಇಂತಹ ಪರಿಹಾರದಲ್ಲಿ ಆಸ್ಥೆಯಿರುವುದರಿಂದಲೇ ನಮ್ಮ ಹಿಂದಿನ ಪತ್ರದ ಸೂಚನೆಗಳನ್ನು ಸಡಿಲಿಸಿ ಕೊಲಂಬೋ ಸೂಚನೆಗಳನ್ನು ನಿಶ್ಶರ್ತವಾಗಿ ಒಪ್ಪಿದ್ದೇವೆ ಆದರೆ, ಚೀನೀಯ ಸರಕಾರ ಹಾಗೆ ಮಾಡಲಿಲ್ಲ. ತನ್ನ ಸಮರ ವಿರಾಮ ಸಂಬಂಧದ ಯೋಜನೆಯನ್ನೇ ಮೇಲುಕು ಹಾಕುತ್ತಿದೆ. ಶಾಂತ ಪರಿಹಾರ ಮಾರ್ಗದಲ್ಲಿರುವ ಅಡ್ಡಿಯೆಂದರೆ ಇದೊಂದೇ. ಪಾರ್ಲಿಮೆಂಟು ಅನುಮತಿಸಿದರೆ, ಈ ವಿವಾದವನ್ನು ದಿಹೇಗಿನ ಅಂತಾರಾಷ್ಟ್ರೀಯ ನ್ಯಾಯಾಲಕ್ಕೆ ಒಯ್ಯುವುನೇ ಸರ್ವೋಚಿತ ಕ್ರಮವಾಗಬಹುದು. ಸಮರ್ಪಕ ವಾತಾವರಣ ನಿರ್ಮಾಣವಾದರೆ, ಇದು ಯಶಸ್ವಿಯಾಗಬಹುದು. ನೀವು ಪತ್ರದಲ್ಲಿ ಸಮರವಿರಾಮ ಸಂಬಂಧದಲ್ಲಿ ನಾಲ್ಕು ಪ್ರದೇಶಗಳ ತಂಟೆಯ ಕುರಿತು ಪ್ರಸ್ತಾಪಿಸಿದ್ದೀರಿ. ಈ ವಿಷಯದಲ್ಲಿ ಕೊಲಂಬೋ ಸೂಚನೆಗಳನ್ವಯ ಯಾವ ವಿವಾದವೂ ಇರುವುದಿಲ್ಲ. ಅವುಗಳನ್ನು ಒಪ್ಪದಿರುವುದರಿಂದಲೇ ಚೀನಾ ಸರಕಾರಕ್ಕಲ್ಲಿ ತಂಟೆ ತೋರುತ್ತದೆ. ಈ ಆಗ್ರಹವನ್ನು ತೊರೆದರೆ, ನೇರ ಮಾತುಕತೆಯು ತೊಡಗಿ, ತನ್ಮೂಲಕ ಪೂರ್ವದ ಥಾಗ್ಲಾರಿಜ್ ಮತ್ತು ಲೋಂಗ್ಜುಗಳಲ್ಲಿ ಸಮರ ವಿರಾಮ ವ್ಯವಸ್ಥೆ, ಮಧ್ಯ ಪ್ರದೇಶದಲ್ಲಿ ಯಥಾ ಸ್ಥಿತಿಸ್ಥಾಪನೆ, ಪಶ್ಚಿಮದಲ್ಲಿ ನಿಸ್ಸೈನ್ಯೀಕೃತ ೨೦ ಕಿಲೊ ಮೀಟರ್ ಪ್ರದೇಶದಲ್ಲಿ ನಾಗರಿಕ ಠಾಣೆಗಳ ರಚನೆಯ ಕುರಿತು ಕೊಲಂಬೋ ಸಲಹೆಗಳಂತೆ, ನಿರ್ಧರಿಸಬಹುದು. ಆದುದರಿಂದ, ಕೊಲಂಬೋ ಸೂಚನೆಗಳಿಗೆ ಒಪ್ಪಿ, ಅವನ್ನು ಕಾರ್ಯಗತಗೊಳಿಸಲು ಮತ್ತು ಶಾಂತ ಪರಿಹಾರವರಸಲು ಸೂಕ್ತ ಪರಿಸ್ಥಿತಿ ನಿರ್ಮಿಸಲು ಚೀನಿಯ ಸರಕಾರವು ಮುಂದೆ ಬರುವುದೆಂದು ನಂಬಿದ್ದೇನೆ" ಎಂದು ನೆಹರೂರ ಪತ್ರ ತಿಳಿಸುತ್ತದೆ.

### ಇತಿಹಾಸದ ಪುನರಾವೃತ್ತಿ

ಬೆಕ್ಕು ಇಲಿಯನ್ನು ಒಂದೇ ಬಾರಿಗೆ ಹಿಡಿದು ಕೊಂದು ತಿನ್ನುವುದಿಲ್ಲ. ಅದನ್ನು ಆಟವಾಡಿಸಿ ಆಡಿಸಿಯೇ ಕೊನೆಗೆ ಕುತ್ತಿಗೆ ಮುರಿಯುತ್ತದೆ. ಇದು ಅದರ ಸ್ವಭಾವ ಹಾಗೆಯೇ ಕೆಂಪು ಚೀನಾದ ವಿಸ್ತರಣಾ ದಾಹ ಮತ್ತು ಸಮರ ನೀತಿಗಳು ಯುದ್ಧ ಮಾಡುವುದು—ಹಿಂದೆ ಸರಿಯುತ್ತಿರುವುದು; ಮುಂದೆ ಅವಕಾಶ ಪಡೆಸಿ ಒಂದೇ ಬಾರಿಗೆ ಬರ್ಬರಾಕ್ರಮಣ ನಡೆಸುವುದು ಅದರ ರಕ್ತಗುಣ. ಅಂತೆಯೇ ಏಕಪಕ್ಷೀಯವಾಗಿ ಸಮರವಿರಾಮ ಘೋಷಿಸಿದ ಚೀನವು ಕೊಲೊಂಬೋ ಸೂಚನೆಗಳನ್ನು ಒಮ್ಮೆ ಒಪ್ಪಿದಂತೆ ಮಾಡಿ ಈಗ ಮರಳಿ ಅವನ್ನು ನಿರಾಕರಿಸುತ್ತಿದೆ. ಸದ್ಯ ಸೀಮೆಯಲ್ಲಿ ಚಕಮಕಿ ನಡೆಯದೆ ಹೋದರೂ ವಿವಾದ ಪರಿಹಾರದಲ್ಲಿಯೂ ಕಳಕಳಿ ವಹಿಸುತ್ತಿಲ್ಲ. ಮಿಕ್ಕೆಲ್ಲ ರಾಷ್ಟ್ರಗಳೊಡನೆ, ಪಾಕಿಸ್ತಾನದೊಡನೆ ನ್ಯಾಯಬಾಹಿರವಾಗಿಯಾದರೂ, ಸೀಮಾ ಒಡಂಬಡಿಕೆ ಮಾಡಿಕೊಂಡ ಚೀನಾ ಭಾರತದೊಡನೆ ಮಾತ್ರ ಜಗಳ ಕರೆಯುತ್ತಿದೆ. ಅಲಂಘ್ಯವೆನಿಸಿದ ಹಿಮಾಲಯವನ್ನೂ ಹಾರಿ ಭಾರತದ ಪವಿತ್ರ ನೆಲವನ್ನು ಕಳಂಕಗೊಳಿಸಿ, ತಮಗಿದಿರು ಯಾರಿಲ್ಲವೆಂದು ತೋರಿಸಿಕೊಂಡಿದೆ. ಅಂತಾರಾಷ್ಟ್ರೀಯ ರಾಜಕಾರಣದ

(೬ನೇ ಪುಟ ನೋಡಿ)

## ಭಾರತ ಮಾತೆಯ

# ಕರ್ತವ್ಯ ಅವರನ್ನು ಕರೆಯಿತು

ಪೂರ್ವ ದಿಕ್ಕಿನಲ್ಲಿ ದೇವಕನ್ನೆಯರು ಆಗಸವನ್ನು ಕುಂಕುಮಕೇಸರಿ ಬಣ್ಣಗಳಿಂದ ಅಲಂಕರಿಸಿ ಕಾಳರಾತ್ರಿ ಎಂಬ ಕಾಳರಾತ್ರಿಯನ್ನು ಹೊಡೆದೋಡಿಸಲು ಬರುವ ದಿನಮಣಿಯನ್ನು ಸ್ವಾಗತಿಸಲು ಆರತಿ ಬೆಳಗುತ್ತಾರೋ ಎಂಬಂತೆ ಆ ನಸು ಬೆಳಕಿಗೆ ತಮ್ಮ ಕಿಲ ಕಿಲ ಮಧುರಧ್ವನಿಯನ್ನು ಮರದ ಪೊಟರೆಯೊಳಗೆ ಹಕ್ಕಿಗಳು ಹಾಡುತ್ತಾ ಭಾನುವನ್ನು ಸ್ವಾಗತಿಸಲು ಅಣಿಯಾಗುತ್ತಿದ್ದವು. ಆ ಸಮಯದಲ್ಲಿ ಒಂದು ಹಳ್ಳಿಯ ಮನೆಯಲ್ಲಿ ಓರ್ವ ಯುವಕ ಮತ್ತು ಆತನ ಸಹಧರ್ಮಿಣಿಯರು ತಂತಮ್ಮೊಳಗೆ ಮಾತಾಡಿಕೊಳ್ಳುತಿದ್ದರು.

“ಪ್ರಿಯೇ, ನೀನು ಹೆದರದಿರು. ಈ ನನ್ನ ದೇಹದಲ್ಲಿ ಜೀವಾತ್ಮನು ಎಂದಿನ ವರೆಗೆ ಇರುವನೋ ಆ ತನಕ ನೀನು ಯಾವ ಕಷ್ಟಕ್ಕೊಳಗಾಗಬೇಕಿಲ್ಲ. ನಿನ್ನ ಯಾವತ್ತು ಆಶೆ ಆಕಾಂಕ್ಷೆಗಳಿದ್ದರೂ ನನ್ನೊಡನೆ ಮುಚ್ಚುಮರೆ ಇಲ್ಲದೆ ಹೇಳು. ನಾನು ಖಂಡಿತವಾಗಿಯೂ ಯಾವ ಸಂದರ್ಭದಲ್ಲಿಯಾದರೂ ಅವನ್ನು ನಡೆಸಿ ಕೊಡುವೆನು.,, ಎಂದು ಹೇಳುತ್ತಾ ಯುವಕನು ತನ್ನ ಅರ್ಧಾಂಗಿಯನ್ನು ಸಮಾಧಾನಪಡಿಸುತಿದ್ದನು. ಇದನ್ನು ಕೇಳಿದ ಆವನ ಪ್ರಿಯ ಪತ್ನಿಯು, “ಪ್ರಿಯ ನಾನು ನಿಮ್ಮನ್ನು ಪ್ರೀತಿಸುತ್ತೇನೆ, ನಿಮ್ಮನ್ನು ನಂಬುತ್ತೇನೆ. ಆದರೆ ನನಗೇಕೋ ಮನವಳುಕುತ್ತದೆ, ನಾನು ಹೇಳಿದ ಕಾರ್ಯ ಮಾಡುವಿರೋ ಇಲ್ಲವೋ ಎಂಬುದಾಗಿ. ಆದುದರಿಂದ ಹೇಳಲಾರೆ”ನೆಂದು ಬಿನ್ನವಿಸಿಕೊಂಡಳು.

ಇದನ್ನು ಕೇಳಿದ ಪತಿಯು ಪತ್ನಿಯನ್ನು ಕುರಿತು ‘ಉದಯಿಸಿಕೊಂಡು ಬರುವ ರವಿಯಾಣೆ ನನಗೆ ನೀನಲ್ಲದೆ ಈ ಜಗತ್ತಿನಲ್ಲಿ ಇಲ್ಲಿ ಯಾವುದೂ ಇಲ್ಲ. ನಿನಗಾಗಿ ನಿನ್ನ ಕ್ಷೇಮಕ್ಕಾಗಿ ಈ ದೇಹವು ನಿನ್ನ ಮಡಿಲಲ್ಲಿದೆ. ಈಗಲಾದರೂ ಹೇಳಬಾರದೆ?” ಎಂದು ಅಂಗಲಾಚಿದನು. ಪತ್ನಿಯು ಸಂತೋಷದಿಂದ ‘ನಾಥ ಹೇಳುವೆನು ಕೇಳು. ನಾವು ಪವಿತ್ರವಾದ ಈ ಭಾರತ ಭೂಮಿಯಲ್ಲಿ ಹುಟ್ಟಿ ಭಾರತ ಮಾತೆಯ ಅನ್ಯೋನ್ಯ ಪ್ರೀತಿಯ ಮಕ್ಕಳಾಗಿ ಈ ತನಕ ಆಕೆಯ ಕೂಳನ್ನು ತಿಂದು ಬದುಕಿ ದೇಶದ ಸೇವೆಯನ್ನು ಮಾಡಿದೆವು. ಆದರೆ ನಾಥಾ, ಇಂದು ನನ್ನ ಹೃದಯದಲ್ಲೇಕೋ ಸಮುದ್ರದ ಅಲೆಯಂತೆ ಭಾವನಾತರಂಗಗಳು ಎದ್ದು ಮನಸ್ಸನ್ನು ಕದಡಿಸಿಬಿಡುತ್ತಾ ಇವೆ. ಈ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಎಷ್ಟೋ ನಾರೀಮಣಿಯರು ತಮ್ಮ ತನುಮನ ಧನಗಳನ್ನು ಅರ್ಪಿಸಿದ್ದರು. ಎಷ್ಟೋ ವೀರ ಬಾಲಕರು ಪರಕೀಯರ ದಾಳಿಗೆ ಒಳಗಾಗಿ ಪ್ರಾಣವನ್ನು ಮಾತೆಯ ಮಡಿಲಲ್ಲಿ ಅರ್ಪಿಸಿ ಕೃತಾರ್ಥರಾದರು. ಪೂಜ್ಯ ಬಾಪೂಜಿಯವರೂ ತನ್ನ ಅಂತಿಮ ಶ್ವಾಸವನ್ನು ಮಾತೆಗೋಸ್ಕರ ಅರ್ಪಿಸಿರುವರು. ಹೀಗೆ ಎಷ್ಟೋ ಪೂಜ್ಯರ ಬಲಿದಾನದಿಂದ ಬೆಳೆದು ನಿಂತ ನಮ್ಮ ಈ ಭಾರತ ಭೂಮಿಯು ಇಂದು ನಮ್ಮ ಕೈಯಿಂದ ತಪ್ಪಿ ಹೋಗುತ್ತಿದಲ್ಲಾ ವೆಂಬ ಕಳವಳವು ಹೆಚ್ಚಾಗುತ್ತಿದೆ. ನಾಥಾ, ಆ ಕೆಂಪು ಬಣ್ಣದ ಕೆಂಗೋತಿಗಳನ್ನು ಸದೆಬಡಿಯಲು ನಮ್ಮಿಂದ ಸಾಧ್ಯವೇ? ಪ್ರಿಯನೇ ಜೀವಕ್ಕಿಂತಲೂ ಮೇಲಾಗಿ ಕಾಪಾಡಿಕೊಂಡು ಬಂದಿರುವ ಈ ಭಾರತ ಮಾತೆಯನ್ನು ಪರಕೀಯರ ಕೈವಶ ಮಾಡಲು ಮನ ಒಪ್ಪುವದೋ? ಹೇಳಿ” ಎಂದು ತನ್ನ ಹೃದಯ ವೇದಕ ಚಿಂತೆಯನ್ನು ತೋಡಿ ಕೊಂಡಳು. ತನ್ನ ಪತ್ನಿಯ ದೇಶಭಕ್ತಿಯನ್ನೂ ಪ್ರೇಮವನ್ನೂ ಕಂಡು ಪತಿಯು ಸಂತೋಷದಿಂದ ಬರಸೆಳೆದು, ಅಪ್ಪಿಕೊಂಡು ಆಕೆಯನ್ನು ಸಂತೈಸುತ್ತಾ ಭಾರತ ಮಾತೆಯನ್ನು ರಕ್ಷಿಸುವುದಕ್ಕೋಸ್ಕರ ಪತ್ನಿಯ ಮುಂದೆ ಪ್ರತಿಜ್ಞೆಯನ್ನು ತೆಗೆದುಕೊಳ್ಳುವೆನೆಂದು ಯೋಚಿಸಿ ಈ ರೀತಿ ಹೇಳಿದನು.

“ಪ್ರಿಯೇ ಚಿಂತಿಸದಿರು. ನಿನ್ನ ದೇಶಪ್ರೇಮವನ್ನು ನಾನು ಬಲ್ಲೆನು. ದೇಶದ ರಕ್ಷಣೆಯನ್ನು ಮಾಡಬೇಕಾದ್ದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವು ಆದರೆ ಇಂದು ನಾನು ಭಾರತ ಮಾತೆಯ ಪ್ರೇಮದಿಂದಲೂ ನಿನ್ನ ಅನನ್ಯ ಪ್ರೋತ್ಸಾಹದ ಪ್ರೇರಣೆಯಿಂದಲೂ ಭಾರತ ಮಾತೆಯ ರಕ್ಷಣೆಯನ್ನು ಮಾಡಲು ಕಂಕಣಬದ್ಧನಾಗುವೆನು. ಆದರೆ ಅಬಲೆಯಾದ ನಿನ್ನನ್ನು ಇಲ್ಲಿ ಬಿಟ್ಟು ಹೇಗೆ ಹೋಗಲಿ? ನಿನ್ನನ್ನು ನೋಡಿಕೊಳ್ಳುವರಾರು? ಆರೋಗ್ಯದ ವಿಷಯ ಎಚ್ಚರಿಕೆ ವಹಿಸುವರಾರು?” ಎಂದು ಪ್ರಶ್ನಿಸಿದನು.

“ಪ್ರಿಯನೇ, ನನ್ನನ್ನು ಅಬಲೆ ಎಂದು ಪರಿಗಣಿಸಿದಿರಾ? ಸ್ತ್ರೀ ಜನ್ಮ ಎತ್ತಿದರೆ ಅಬಲೆ ಎಂದು ತಿಳಿಯುತ್ತೀರಾ? ಅಬಲೆಯಾದ ಸೀತಾದೇವಿಯು ಕ್ರೂರ ರಾವಣನ ಮಧ್ಯದಲ್ಲಿದ್ದೂ ತನ್ನ ಪತಿ ಪ್ರೇಮದಿಂದ ಪವಿತ್ರಳಾಗಲಿಲ್ಲವೇ? ಚಾಂದಾಬೀಬಿ ಝಾನ್ಸಿ ಲಕ್ಷ್ಮೀಬಾಯಿಯರು ದೇಶದ ರಕ್ಷಣೆಗೋಸ್ಕರ ದೇಶಕ್ಕೋಸ್ಕರ ರಣರಂಗದಲ್ಲಿ ಹೋರಾಡಿ ಅಮರರಾಗಲಿಲ್ಲವೇ? ನಾರಿಯಾದರೇನು? ದೇಶಪ್ರೇಮವು ನನ್ನಲ್ಲಿ ಕಡಿಮೆಯಾಗಿದೆಯೋ? ಎಂದು ಮರುಪ್ರಶ್ನಿಸಿದಳು.

ಈ ಮಾತುಗಳನ್ನು ಕೇಳಿ ಪತಿಯು ಆನಂದ ಬಾಷ್ಪಗಳನ್ನು ಸುರಿಸಿದನು. ಕೆಂಗೋತಿಗಳ ಆಕ್ರಮಣದ ಸಂಗತಿ ಕೇಳಿದ್ದರಿಂದ ಅವನ ಎಳೆಕೆನ್ನೆತ್ತರು ಬಿಸಿಯೇರಿತು ಆಕ್ರಮಣಕಾರರನ್ನು ಯಮಪುರಿಗೆ ಅಟ್ಟುವೆನೆಂದು ಯೋಚಿಸುತ್ತಿರುವಾಗಲೇ ಸಾಕ್ಷಾತ್ ಮುಕ್ಕಣ್ಣನೇ ರುದ್ರಾವತಾರವನ್ನು ತಾಳಿ ಪ್ರತ್ಯಕ್ಷನಾಗಿ ಕಣ್ಣುಗಳಿಂದ, ಕೆಂಡಗಳನ್ನು ದುರಿಸುತ್ತಿರುವನೋ ಎಂಬಂತೆ, ಕಂಪಗಾದ ಕಣ್ಣಾಲಿಗಳು ಗರಗರನೆ ತಿರುಗುತಿದ್ದವು “ಪರಕೀಯರ ದುರಾಕ್ರಮಣವನ್ನು ಎಂದಿಗೂ ಸಹಿಸಲಿಕ್ಕಿಲ್ಲ, ಭಾರತ ಮಾತೆಯ ಒಂದಂಗುಲ ನೆಲವನ್ನೂ ಬಿಟ್ಟು ಕೊಡಲಿಕ್ಕಿಲ್ಲ ದೇಹದಲ್ಲಿ ಶ್ವಾಸ ಇರುವ ತನಕ. ಭಾರತ ಮಾತೆಗೋಸ್ಕರ ಹೋರಾಡುವೆ”ನೆಂದು ಅಲ್ಲಿಯೇ ಸಮೀಪದ ಗೋಡೆಯ ಮೇಲೆ ತೂಗುಹಾಕಿದ ಸುಭಾಷ್ಚಂದ್ರಬೋಸರ ಭಾವಚಿತ್ರವನ್ನು ನೋಡಿ ತಲೆಬಾಗಿ ಕೈಮುಗಿದು ಸ್ಥಿರ ಪ್ರತಿಜ್ಞೆಯನ್ನು ಕೈಕೊಂಡನು.

ಪತಿಯ ಈ ದೃಢ ನಿಶ್ಚಿತವಾದ ಪ್ರತಿಜ್ಞೆಯನ್ನು ನೋಡಿ ಸಹಧರ್ಮಿಣಿಯು ಪತಿಯ ಅಡಿಗೆರಗಿ ದೇವಾ ನನಗೂ ಈ ಭಾರತ ಮಾತೆಯ ಸೇವೆಯನ್ನು ಮಾಡಲು ಸಂದರ್ಭವನ್ನು ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದಳು. ಪತಿಯು ಕೂಡಲೇ ಮತ್ತೊಮ್ಮೆ ಸುಭಾಸ್ ಚಂದ್ರಭೋಸರ ಭಾವ ಚಿತ್ರಕ್ಕೆ ಮನಃಪೂರ್ವಕವಾಗಿ ವಂದಿಸಿ ತನಗೆ ಮುನ್ನಡೆಯಲು, ಆಜ್ಞೆಯೀಯುವಂತೆ, ಬೇಡಿ ಕೊಂಡನು. ಪಕ್ಕನೆ ಏನೋ ಒಂದು ಹೊಸ ಆಲೋಚನೆ ಹೊಳೆದವನಂತೆ ಪತ್ನಿಯನ್ನು ಕರೆದು ಈ ರೀತಿ ಹೇಳಿದನು.

“ಪ್ರಿಯೆ ನಿನಗೋಸ್ಕರ ನನ್ನ ಗುರುಗಳು ಮಹತ್ತರವಾದ ಕೆಲಸ ಮಾಡುವುದಕ್ಕೋಸ್ಕರ ಪ್ರೇರೇಪಿಸುತ್ತಿರುವರು. ನೀನು ಭಾರತ ದೇಶದ ಮಕ್ಕಳ ತಾಯಿಯಾಗಿ ಆರೈಕೆ ಮಾಡೆಂದು ಆಜ್ಞಾಪಿಸುತ್ತಿರುವರು. ಒಪ್ಪುವೆಯಾ?” ಎಂದು ಕೇಳಿದನು.

ಈ ಮಾತುಗಳನ್ನು ಕೇಳಿ ಪತ್ನಿಯು ಪತಿಯ ಪಾದಗಳನ್ನು ಮುಟ್ಟಿ ತನ್ನ ಹಣೆಗೆ ಒತ್ತಿಕೊಂಡು, ‘ದೇವಾ ಇಂಥ ಸಂಧರ್ಭವನ್ನು ಕಲ್ಪಿಸಿಕೊಟ್ಟಿರುವುದಕ್ಕಾಗಿ ನಾನು ಅನವರತವೂ ಚಿರಋಣಿ’’ ಎಂದು ಹೇಳಿದಳು. ಸತಿಪತಿಯರು ತಮ್ಮ ಪಾಲಿನ ದೇಶದೆಡೆಯ ಕರ್ತವ್ಯದ ಕರೆಗೆ ಓಗೊಟ್ಟು ತೆರಳುತ್ತಿರುವುದನ್ನು ಕಂಡ ಭಾರತ ಮಾತೆ ಕೋಗಿಲೆಯ ಪಂಚಮದಿಂದ ಮೆಚ್ಚುಗೆ ವ್ಯಕ್ತಪಡಿಸಿದಳು.

—ಶ್ರೀ ವಿ. ಬಿ. ಶೆಟ್ಟಿ, ಗಾಂಧಿಗ್ರಾಮ


## ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಸಕಪ್ರಕಾರದ ಸೌಜನ್ಯದ ಸೇವೆ.

# ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.


ಚಿಣಿಗತೆ

## ನಿರ್ಭಯದ ಜಯ

ಬಿಹಾರದ ಚಂಪಾರಣ್ಯದಲ್ಲಿ ಗಾಂಧಿಯವರ ಮೊದಲನೇ ಯಶಸ್ವಿಯಾದ ಸತ್ಯಾಗ್ರಹ ನಡೆಯಿತು. ನೀಲಿ ಬೆಳೆಸುವ ಯುರೋಪಿಯನ್ನರು ಅಲ್ಲಿಯ ಜನರನ್ನು ಪರಿಪರಿ ಪೀಡಿಸುತ್ತಿದ್ದರು. ಅದರ ನಿವಾರಣೆ ಮಾಡಲು ಗಾಂಧಿಯವರು ಅಲ್ಲಿಗೆ ಹೋಗಿದ್ದರು. ಗಾಂಧಿಯವರ ಕೆಲಸದಿಂದ ಜನತೆ ಜಾಗ್ರತವಾಯಿತು, ಜನತೆಯ ಸಾಹಸ ಬೆಳೆಯಿತು.

ಇದರಿಂದ ಯುರೋಪಿಯನ್ನರು ವ್ಯಾಕುಲರಾದರು ಅವರು ಈ ವರೆಗೆ ಸ್ವೇಚ್ಛೆಯಿಂದ ನಡೆಯುತ್ತಿದ್ದರು. ಯಾರೂ ಅವರ ಮೇಲೆ ತಕರಾರು ಹೇಳುವ ಸಾಹಸವನ್ನು ಮಾಡುತ್ತಿರಲಿಲ್ಲ. ಆದರೆ ಒಬ್ಬ ಗಾಂಧಿ ಇಷ್ಟೆಲ್ಲ ಬಿರುಗಾಳಿ ಎಬ್ಬಿಸಿದ್ದ. ಯುರೋಪಿಯನ್ನರು ಸಿಟ್ಟಿನಿಂದ ಕೆಂಡವಾದರು. ಅದೇ ಸಮಯ ಒಬ್ಬ ಬಂದು ಗಾಂಧಿಯವರ ಹತ್ತಿರ ಹೇಳಿದ-ಒಬ್ಬ ಯುರೋಪಿಯನ್ನನು ನಿಮ್ಮನ್ನು ಕೊಲ್ಲುವ ಸಿದ್ಧತೆ ನಡೆಸಿದ್ದಾನೆ-ಆ ಬಗ್ಗೆ ಜನರನ್ನು ನೇಮಿಸಿದ್ದಾನೆ- ಎಂದು.

ಗಾಂಧಿಯವರು ಕೇಳಿಕೊಂಡು ಒಂದು ರಾತ್ರಿ ಆ ಯುರೋಪಿಯನ್ನನ ಮನೆಗೇ ನಡೆದರು. ರಾತ್ರಿಯ ಹೊತ್ತು ಒಬ್ಬರೇ ಹೊರಟಿದ್ದರು. ಯುರೋಪಿಯನ್ನನು ನೋಡಿ ‘ನೀವು ಯಾರು ಎಂದ ಕೇಳಿದ.

‘ನಾನು ಗಾಂಧಿ’ ಎಂದುತ್ತರಿಸಿದರು.

ಕೇಳಿ ಯುರೋಪಿಯನ್ನನಿಗೆ ದಿಗಿಲೇ ಬಿತ್ತು!

ಗಾಂಧಿ ಹೇಳಿದರು. ‘ಹೌದು, ನಾನು ಗಾಂಧಿ, ನೀವು ನನ್ನನ್ನು ಕೊಲ್ಲಬೇಕೆಂದು ಇಚ್ಛಿಸುತ್ತಿದ್ದೀರಿ ಎಂದು ನನಗೆ ತಿಳಿದಿದೆ, ಅದರ ಬಗ್ಗೆ ಜನರನ್ನು ನೇಮಿಸಿದ್ದೀರಂತೆ. ನಾನು ಯಾರಿಗೂ ಹೇಳಿಲ್ಲ. ಒಬ್ಬನೇ ನಿಮ್ಮ ಹತ್ತಿರ ಬಂದಿದ್ದೇನೆ”

ಸ್ವಪ್ನವನ್ನು ಕಾಣುತ್ತಿದ್ದೆನೋ ಎನ್ನುವ ಮಟ್ಟಿಗೆ ಆ ಯುರೋಪಿಯನ್ ಸ್ತಬ್ಧನಾಗಿ ಬಿಟ್ಟ! ಮಿಕಿ ಮಿಕಿ ನೋಡುತ್ತಲೇ ನಿಂತುಬಿಟ್ಟ. ಆವನ ಬಾಯಿಂದ ಮಾತೂ ಹೊರಡಲಿಲ್ಲ. ಈ ತೆರದ ನಿರ್ಭೀತ ಮನುಷ್ಯನನ್ನು ಆವನೆಂದೂ ನೋಡಿರಲಿಲ್ಲ.


# ನವಯುಗ

**ರಾಷ್ಟ್ರೀಯ ವಾರಪತ್ರಿಕೆ**

**ಉಡುಪಿ**

**ಜಾಹೀರಾತು ದರಗಳು:**

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

**ಚಂದಾ:**

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ ‘ನವಯುಗ’ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

## ದೇಶ ರಕ್ಷಣೆಯಲ್ಲಿ

# ಹಿಮಾಲಯ ನಮ್ಮ ಶಿವಾಲಯ

ಹಿಮಾಲಯವು ನಮ್ಮ ಶಿವಾಲಯ ಇದೆ. ಮಹಾ ದೇವನ ಪಾವನ ಮನೆಯೂ ಅದೇ ಇದೆ. ಪಾರ್ವತಿಯನ್ನು ಬಿಟ್ಟು ಭಾರತೀಯ ಧರ್ಮ ಹಾಗೂ ಸಾಹಿತ್ಯ ಭಿನ್ನವಾಗಿರಲು ಸಾಧ್ಯವಿದೆ ಏನು? ಕೈಲಾಸವನ್ನು ಹೇಗೆ ಮರೆತು ಬಿಡಲು ಸಾಧ್ಯವಿದೆ? ಮಾನಸ ಸರೋವರವನ್ನು ಬಿಟ್ಟು ಭಾರತೀಯ ಸಾಹಿತ್ಯ ತೃಷೆ ತೀರಿಸಿಕೊಳ್ಳಲು ಸಾಧ್ಯ ಇರುವದಿಲ್ಲ. ಟಿಬೇಟು ಹಿಂದಿನ ತ್ರಿವಿಷ್ಟಪ ಅಂದರೆ ಸ್ವರ್ಗ ಇದೆ. ಅಲ್ಲೇ ಕುಬೇರನ ರಾಜ್ಯ ಇತ್ತು. ಈ ಹಿಮಾಲಯವು ನಮ್ಮೊಂದಿಗೆ ಇರದಿದ್ದಲ್ಲಿ ಮೇಘದೂತ ಹಾಗೂ ಕುಮಾರ ಸಂಭವದ ರಚನೆ ಹೇಗಾಗುತ್ತಿತ್ತು? ಗಂಗಾವತರಣದ ಪೂರ್ಣ ಸಾಹಿತ್ಯ ಹೇಗೆ ನಿರ್ಮಾಣ ಆಗುತ್ತಿತ್ತು? ರಾಮಚರಿತ ಮಾನಸದ ಹೆಸರು ಕೂಡಾ ಯಾರಿಗೆ ಗೊತ್ತಾಗುತ್ತಿತ್ತು? ಈ ನಗರಾಜನು ನಮ್ಮ ಹಿಡಿತದಲ್ಲಿರದೆ ಇರುತ್ತಿದ್ದಲ್ಲಿ ಯುಧಿಷ್ಠರನಿಗೆ ಸ್ವರ್ಗ ಹೇಗೆ ಸಿಗುತ್ತಿತ್ತು? ಚೀನಿ-ತ್ರಿವಿಷ್ಟಪ ಹಾಗೂ ಪೂರ್ಣ ಹಿಮಾಲಯ ನಮ್ಮ ಪ್ರಭಾವಕ್ಕೊಳಗಾಗಿತ್ತು. ಏನು ಸಹಾಯಬೇಕಾಗಿದ್ದರೂ ನಮ್ಮತ್ತ ಅವರು ನೋಟ ಬೀರುತ್ತಿದ್ದರು. ದುಷ್ಯಂತನಿಗೆ ಸಹಾಯಮಾಡಿದವರ್ಯಾರು? ಮಹಾರಾಜಾ ದಶರಥನಿಗೆ ನೆರವು ನೀಡಿದವರ್ಯಾರು? ತ್ರಿವಿಷ್ಟಪ ಹಾಗೂ ಚೈನಾ ನಮ್ಮೊಂದಿಗೆ ಮಿತ್ರತ್ವದಿಂದಿದ್ದುವು.

ಹಾಗಿದ್ದರೂ ಚೈನಾದ ವ್ಯವಹಾರ ನಮ್ಮ ಬಗ್ಗೆ ಯಾವಾಗಲೂ ಸೌಮ್ಯವಾಗಿರಲಿಲ್ಲ. ಕನಿಷ್ಕನ ಕಾಲದಲ್ಲಿ ನಮ್ಮ ಮೇಲೆ ಚೈನಾವು ಕಾಲು ಕೆದರಿ ಕಾಳಗಕ್ಕೆ ಬಂದಿತ್ತು ಹಾಗೂ ಅದರ ಪ್ರತಿಫಲವಾಗಿ ಸೋಲಿನ ಹೊರೆಯನ್ನು ಹೊತ್ತುಕೊಂಡು ಹೋಗಿತ್ತು. ಹರ್ಷವರ್ಧನನ ಕಾಲಾನಂತರ ಚೈನಾವು ಕನೋಜದ ಮೇಲೆ ಕಂದೃಷ್ಟಿ ಹಾಯಿಸಿತ್ತಾದರೂ ಅದರ ಕಣ್ಣು ತಾಗಿತ್ತೇನು? ಅದಕ್ಕೆ ಶೂಲ, ತ್ರಿಶೂಲಗಳು ದೊರೆತುವು. ಚಂಗೀಜ ಖಾನ ಹಾಗೂ ಕುಂಟ ತೈಮೂರನು ಚೈನಾದತ್ತ ಕಡೆಯಿಂದಲೇ ಇತ್ತ ಬಂದಿದ್ದನು. ಇಂದು ಚೈನಾವು ನಡೆಸಿರುವದಾದರೂ ಅದು ಅದರ ಕಪಟ ಹಾಗೂ ಬರ್ಬರ [ರೂಕ್ಷ ಪರಂಪರೆಯ ಅಭ್ಯಾಸಬಲವೇ ಇದೆ. ಈ ವಿಶ್ವಾಸಘಾತುಕತನಕ್ಕೆ ಅದು ಪ್ರತಿಫಲವನ್ನು ಪಡೆದೇ ತೀರುತ್ತದೆ. ಒಂದುಕಡೆ ಅದು ನಮ್ಮ ಪ್ರಧಾನಿಯವರೊಡನೆ ಟೊಪ್ಪಿ ಬದಲಾಯಿಸಿಕೊಂಡು ಮಿತ್ರತ್ವ ಹಾಗೂ ಬಂಧುತ್ವದ ಮಾತನ್ನೆತ್ತಿ 'ಹಿಂದೀ ಚೀನಿ ಭಾಯಿ ಭಾಯಿ' ಎಂದು ಬೊಬ್ಬಿಡುತ್ತ ಇನ್ನೊಂದೆಡೆ ಹಿಮಾಲಯದ ನಿಮ್ನ ಭೂಭಾಗದ ಮೇಲೆ ತನ್ನ ಅಧಿಕಾರ ಸೂಚಿಸುವ ಭೂಪಟಗಳನ್ನು ಪ್ರಕಟಿಸಿತ್ತು. ಒಂದೆಡೆ ಅದು ಪಂಚಶೀಲದ ಡೋಲನ್ನು ಕುತ್ತಿಗೆಗೆ ಕಟ್ಟಿಕೊಂಡು ಬಡಿಯುತ್ತಿತ್ತು. ಇನ್ನೊಂದೆಡೆ ಮೆಲ್ಲ ಮೆಲ್ಲನೆ ತ್ರಿವಿಷ್ಟಪ ಹಾಗೂ ಭಾರತೀಯ ಭೂಮಿಯ ಮೇಲೆ ಪವಿತ್ರ ನದಿಗಳ, ಧೀರ ಘಟ್ಟಗಳ, ಅಚಲ ಪರ್ವತಗಳ ಹಾಗೂ ಆಶ್ರಮಗಳ ಮೇಲೆ ತನ್ನ ನೃಶಂಸ, ಅಧಿಕಾರ ಲೋಲುಪತೆಯ ಹಾಗೂ ರಕ್ತರಂಜಿತ ಪಾಪಿ ಪಾದಗಳನ್ನಿಡುತ್ತ ಕ್ರಮಶಃ ಮುಂದುವರಿಯುತ್ತಿತ್ತು. ಒಂದೆಡೆ ಭಾರತವು ಮಿತ್ರನೆಂದು ಭಾವಿಸಿಕೊಂಡಿದ್ದ ಚೈನಾಕ್ಕೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಪ್ರವೇಶ ದೊರಕಿಸಿಕೊಡಲು ಪ್ರಯತ್ನಿಸುತ್ತಿತ್ತು. ಇನ್ನೊಂದೆಡೆ ಚೈನಾವು ತನ್ನ ತೋಳುಗಳನ್ನು ಮಜ್ಜಿಕೊಂಡು ಸಿದ್ಧತೆ ನಡೆಸುತ್ತಿತ್ತು— ಭಾರತೀಯ ನಗ್ನ ಹೃದಯದ ಮೇಲೆ ಘೋರ ಆಘಾತವನ್ನುಂಟುಮಾಡಲು ನಾವು ಸಂಪೂರ್ಣ ವಿಶ್ವಾಸವನ್ನಿರಿಸಿದ್ದೆವು— ಚೈನಾ ನಮ್ಮ ಸ್ನೇಹಿಗನೆಂದು, ಅದು ನಮ್ಮ ಸಂಗಾತಿ ಎಂದು. ಅದರ ಕೈಯನ್ನು ನಾವೆಂದೆಂದಿಗೂ ಬಿಟ್ಟುಬಿಡಬಾರದೆಂದಿದ್ದೆವು.

ಅರ್ಥಶಾಸ್ತ್ರಜ್ಞ ಚಾಣಕ್ಯನ ರಾಜನೀತಿಯಲ್ಲಿ ಗುಪ್ತಚಾರ ವಿಭಾಗಕ್ಕೆ ಇತರ ವಿಭಾಗಗಳಿಗಿಂತ ಉತ್ತಮ ಪ್ರಾಧಾನ್ಯತೆ ಇತ್ತು. ಅದರಲ್ಲಿ ವಾರಾಂಗನೆಯರಿಗೂ ವೈಶಿಷ್ಟ್ಯಪೂರ್ಣ ಪಾತ್ರವಿತ್ತು. ಭಾರತೀಯ ಗುಪ್ತಚಾರ ವಿಭಾಗವನ್ನು ನಮ್ಮ ನಾಡಿನ ರಾಜನೀತಿಯ ರಂಗದಲ್ಲಿ ಉತ್ತಮ ಸ್ಥಾನ ದೊರಕಿರುವದಿಲ್ಲ—ಹಾಗಲ್ಲದಿದ್ದಲ್ಲಿ, ಚೈನಾವು ನೇರ ಚಟ್ಟನೆ ಬಂದು ನಮ್ಮ ಕುತ್ತಿಗೆಯ ಮೇಲೆ ಕುಳಿತುಕೊಳ್ಳುವ ವರೆಗೂ ದಿಲ್ಲಿ ಗದ್ದುಗೆಗೆ ಗೊತ್ತಾಗದಿರಲು ಕಾರಣವೇನು? ಅದಕ್ಕಾಗಿ ಭಾರತೀಯರನ್ನು ಗುಪ್ತಚಾರರನ್ನಾಗಿ ಚೈನಾಕ್ಕೆ ಕಳುಹಿಸುವ ಆವಶ್ಯಕತೆ ಇರುವದಿಲ್ಲ. ಚೈನಾ, ಜಪಾನು, ರಷ್ಯಾ, ಪಾಕಿಸ್ಥಾನ ಈ ರೀತಿ ಯಾವ ದೇಶದವರನ್ನಾದರೂ ಆ ಕಾರ್ಯಕ್ಕಾಗಿ ಬಳಸಿಕೊಳ್ಳಲು ಸಾಧ್ಯವಿದೆ.

ಈಗಂತೂ ನಾವು ಪಾಠ ಕಲಿತುಕೊಳ್ಳಬೇಕಾಗಿದೆ—ಅತ್ತ ನಾವು ಗಮನ ನೀಡಲೇಬೇಕಾಗಿರುತ್ತದೆ. ಈ ಪ್ರಕಾರ ನಮ್ಮ ವಿಜ್ಞಾಪನೆ ಹಾಗೂ ಪ್ರಚಾರ ಅತ್ಯಂತ ಅಸಂತೃಪ್ತ ರೀತಿಯಲ್ಲಿ ಇವೆ. ವಿದೇಶಗಳ ವಿಷಯವಂತಿರಲಿ ನಮ್ಮ ದೇಶವಾಸಿಗಳಲ್ಲೇ ಅನೇಕರಿಗೆ ಈ ವಿಷಯ ಏನೂ ತಿಳಿದಿರುವದಿಲ್ಲ. ವಿಜ್ಞಾಪನೆಯು ವಿ

(೧೦ನೇ ಪುಟ ನೋಡಿರಿ)

ಒಂದು
ಜೀವ ವಿಮಾ
ಪಾಲಿಸಿಯನ್ನು
ಇಂದೇ ಕೊಳ್ಳಿರಿ!

ತ್ವರೆ ಮಾಡಿರಿ. ನಿಮಗೆ ಜೀವ ವಿಮೆಯ ಅಗತ್ಯವಿದೆ. ಇದು ಅನುಮಾನಪಡುವ ಮತ್ತು ವಿಳಂಬಿಸುವ ಸಮಯವಲ್ಲ. ನೀವು ಮತ್ತು ನಿಮ್ಮ ಕುಟುಂಬ ಒಂದು ದಿನವಾದರೂ ಜೀವ ವಿಮಾ ಛತ್ರಿಯಿಲ್ಲದೆ ಇರುವುದು ಯುಕ್ತವಲ್ಲ. ಅದಲ್ಲದೆ, ರಾಷ್ಟ್ರ ರಕ್ಷಣಾ ಕಾರ್ಯಗಳಲ್ಲಿಯೂ ನೀವು ಜೀವ ವಿಮಾ ಮೂಲಕ ಮಾಡಿರುವ ಉಳಿತಾಯಗಳು ಭಾಗವಹಿಸುವಂತೆ ಮಾಡಲು ನೀವು ಸಹಕರಿಸಿದಂತಾಗುವುದು. ಓರ್ವ ಎಲ್.ಐ.ಸಿ. ಏಜಂಟನನ್ನು ಶೀಘ್ರವಾಗಿ ಕಾಣಿರಿ. ನಿಮ್ಮ ಅವಶ್ಯಕತೆಗಳಿಗೆ ಬೇಕಾದ ಯೋಗ್ಯ ಪಾಲಿಸಿಯನ್ನು ನೀವು ಪಡೆಯುವಂತೆ ಆತನು ನೋಡುವನು. ಇದರ ಬಗ್ಗೆ ಆತನೊಡನೆ ಈಗಲೇ ವಿಚಾರಿಸಿರಿ. ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ನಿಮ್ಮ ದೇಶಕ್ಕಾಗಿ ತ್ವರೆಮಾಡಿರಿ.

ಜೀವ ವಿಮೆಗಿಂತ
ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

A.F.LIC.76 KN

# ಯೋಧ ಗಾಥ‡

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ. ಎಂ. ಎ.]

(ಒಬ್ಬ ತರುಣ ಯೋಧ, ಉತ್ತರಕ್ಕೆ ಧವಳಗಿರಿಯೆತ್ತರಕ್ಕೆ ನಾಡಗಡಿಗುಡಿ ಕಾಯಲು ಹೋಗಿದ್ದನು. ಒಳಗೆ ಸ್ವಾತಂತ್ರ್ಯದ ಬೆಂಕಿ; ಹೊರಗೆ ಕೊರೆವ ಛಳಿ. ಆತನ ನಿಲುವನ್ನು ನಕ್ಷತ್ರ ಸೂರ್ಯ ಚಂದ್ರರೂ ಈಕ್ಷಿಸುತ್ತಿದ್ದರು. ದಿವದ ಗಂಗೆ ಇಳಿದು ಬಂದು ಆತನ ಮೈಮನಗಳನ್ನು ಪ್ರೋಕ್ಷಿಸುತ್ತಿತ್ತು. ಅಂತು ಆ ಯೋಧ ಗಡಿ ಕಾಯುತ್ತಾ ಶತಪಥ ತಿರುಗುತಿದ್ದಾಗ, ಅನತಿ ದೂರದಲ್ಲಿ ಓರ್ವ ಬೌದ್ಧ ಸನ್ಯಾಸಿ ಕಾಣ ಬಂದನು. 'ಬುದ್ಧಂ ಶರಣಂಗಚ್ಛಾಮಿ' ಎಂಬ ವಾಣಿ ಆ ಸನ್ಯಾಸಿಯ ಮುಖದಿಂದ ಕೇಳಿದ್ದೇ, ತರುಣ ಯೋಧನು, ಆತನಿಗೆ ಮಣಿದನು. ವಂಚಕನಾದಾ ಸ್ವಾಮಿ ಯೋಧನ ಬೆನ್ನಿಗೆ ಇರಿದನು. ಉರಿದೆದ್ದ ಯೋಧನು ಕೈಯ ಕೋವಿಯಿಂದ ಆ ಹಗೆಯನ್ನು ಸುಟ್ಟು 'ಜಯಭಾರತಂ ಯುದ್ಧಂ ಶರಣಂ ಗಚ್ಛಾಮಿ' ಎಂದು ಘೋಷಿಸಿ ಸ್ವರ್ಗ ಸೋಪಾನವೇರಿದನು.

ಈ ಯೋಧನ ತಾಯಿ, ತಾಯ್ನೆಲದಲ್ಲಿ ಹಳೆಯ ಗುಡಿಸಲು ಒಂದರಲ್ಲಿ ವಾಸವಾಗಿದ್ದಾಳೆ. ತನ್ನ ಕಂದನು ಗೆದ್ದು ಬರುವನೆಂದೇ ನಂಬಿದ್ದಾಳೆ. ತನ್ನ ಹಟ್ಟಿಯ ದನದ ಕರು ಸತ್ತು ಹೋಗಿರಲು ಅದರ ಬಳಿ ಹೋಗಿ ತಾಯ್ದನದ ಕಣ್ಣೀರು ಒರೆಸುತ್ತಿದ್ದಾಳೆ. ಅವಳಿಗೆ ಆಗ ಮೂವತ್ತು ವರ್ಷಗಳ ಹಿಂದಿನ ನೆನಪು ಒಂದೊಂದೇ ಬಂದುವು. ಸ್ವಾಮಿ ಸೆರಗನ್ನು ಹಿಡಿದು ಈ ಗುಡಿಸಲಿಗೆ ಬಂದೆನು. ಈ ದನದ ತಾಯ್ದನವನ್ನು ಕರೆದು ಸ್ವಾಮಿಗೆ ಹಾಲನ್ನ ಉಣ್ಣಿಸಿದೆನು. ಗಾಂಧಿ ಸ್ವಾತಂತ್ರ್ಯ ಸಮರಕ್ಕೆ ಕರೆದರು; ಗಾಂಧಿ ದೇವರ ಕರೆಗೆ ತನ್ನ ದೇವರು ಓಗೊಟ್ಟರು. ಸ್ವಾಮಿಯ ಹಣೆಗೆ ಕುಂಕುಮವಿಟ್ಟು ಕಳುಹಿಸಿದೆ. ಬಳಸಿ ಕಾಲು ಹಿಡಿದು ತೊದಲುವ ಕಂದನನ್ನು ಮುದ್ದಾಡಿ ನನ್ನ ಕೈಗಿತ್ತರು. ಕಂದನನ್ನು ಎದೆಗೊತ್ತಿ ಮುತ್ತಿಕ್ಕಿದೆನು. ಸ್ವಾಮಿ ಹೊರಳಿ ನೋಡದೆ ಹೊರಟೇ ಹೋದರು. ಸಂಜೆಯ ಸಮಯ ಸತ್ಯಾಗ್ರಹ ಸಮರದಲ್ಲಿ ಹಿಡಿದಬಾವುಟ ಬಿಡದೆ ಮಡಿದರೆಂಬ ಸುದ್ದಿ ಬಂತು. ಮುಂದೆ ಮಗುವೆ ಮೂಜಗವೆಂದು ಮುದ್ದಾಗಿ ಆತನನ್ನು ಸಾಕಿದೆನು. ಅವರದೇ ಪ್ರತಿಬಿಂಬವಾಗಿ ಆತನು ಬಳೆದು ನನ್ನೆತ್ತರವನ್ನೂ ಮೀರಿ ನಿಂತನು. ಮನಃ ಕಾಳಗದ ಕರೆ ಬಂತು; ಉತ್ತರದ ಗಡಿ ಕಾಯಲು ತನ್ನ ಕಂದನು ಹೋಗಿದ್ದಾನೆ....' ಈ ರೀತಿ ಚಿಂತಿಸುತ್ತಿದ್ದಾಕೆ ಅಲ್ಲಿಯೇ ಮೈಮರೆತು ಒರಗಿದಳು. ಅದೇ ಹಸು ಮೊಗ ಚಾಚಿ ತನ್ನ ಅಮೃತರಸನೆಯಿಂದ ಅವಳನ್ನು ನೆಕ್ಕಿತು.

ನಾಲ್ಕು ದಿನಗಳ ಹಿಂದೆ, ಕವಿ, ಗಡಿ ಕಾಯುವ ಯೋಧರಿಗೆ ನೆರವು ನೀಡಿರಿಯೆಂದು ಕೇಳುತ್ತಾ ಅದೇ ಗುಡಿಸಲಿಗೆ ಹೋಗಿದ್ದ. ನಮ್ಮ ಯೋಧರ ಸಾಹಸವನ್ನು ವರ್ಣಿಸುತ್ತಿದ್ದಾಗ, ಆಕೆ ಬೆರಗಾಗಿ ಕೇಳುತ್ತಿದ್ದಳು. ಕೊನೆಗೆ ಒಂದು ನಿಟ್ಟುಸಿರುಬಿಟ್ಟು ಗುಡಿಸಲಿನ ಒಳ ಹೋಗಿ ಮರಳಿ ಬಂದು ಒಂದು ಹಳೆಯ ಬಟ್ಟೆಯಲ್ಲಿ ಸುತ್ತಿರುವ ಗಂಟನ್ನು ಬಿಚ್ಚಿದಳು. ಅದರಲ್ಲಿ ಗಿಳಿಯೋಲೆ, ಮೂಗುತಿ, ನತ್ತು, ತಾಳಿ ಇವೆಲ್ಲಾ ಇದ್ದುವು. 'ಪುಣ್ಯಾತ್ಮರೇ, ನನಗೆ ನನ್ನ ಮಗುವನ್ನು ಒಮ್ಮೆ ಕಂಡಂತೆ ಆಯಿತು. ಅವನೇ ನನ್ನ ಸಂಪತ್ತು; ಈ ಸೊತ್ತನ್ನು ಕೊಳ್ಳಿರಿ' ಎಂದು ಆಭರಣಗಳನ್ನೆಲ್ಲಾ ಕವಿಯ ಕೈಗೆ ಇತ್ತಳು.

ಆಕೆಯ ಕಥೆಯನ್ನು ಕೇಳಿ ರೋಮಾಂಚನವಾಯಿತು; ದೇಹ ಕಂಪಿಸಿತು; ಆ ತಪಸ್ವಿನಿಗೆ ಕವಿ ಮಣಿದನು; ಆಕೆಯ ಸ್ವಾಮಿಯನ್ನು ಸ್ಮರಿಸಿದನು. ಆವರಾ ಅಭಿಮನ್ಯು ಪುತ್ರನನ್ನು ಕೊಂಡಾಡಿದನು. ಇದು ಈ ಯೋಧಗಾಥ ಎಂಬ ಕವನದ ಸಂದರ್ಭ—ಸಾರಾಂಶ)

‡ ದಿನಾಂಕ ೨೩–೩ ೧೯೬೩ರಂದು ಭಾರತ ಸರಕಾರದ ಪ್ರಚಾರ ಶಾಖೆಯವರು ಮಂಗಳೂರಲ್ಲಿ ಏರ್ಪಡಿಸಿದ ಕವಿ ಸಮ್ಮೇಳನದಲ್ಲಿ ಹಾಡಿದುದು.

— ಪಲ್ಲವಿ —

ಇದು ಯೋಧರ ಗಾಥ,
ಕವಿ ಕಲ್ಪಿತ ಗೀತ,
ಬಾಷ್ಪಾಗ್ನಿ ಸ್ರೋತ!
ಜಯ ಭಾರತ ಮಾತ.

## I

ಹಿಮಗಿರಿಯ ಶಿರದಲ್ಲಿ ಧವಳ ದೀಧಿತಿ ಚೆಲ್ಲಿ–
ತಾಯ ಹರಕೆಯ ಹೊತ್ತು ಹಿಗ್ಗಿ ನಡೆದೆ;
ಉತ್ತರೋತ್ತರ ಹೋಗಿ, ಎತ್ತರೆತ್ತರ ಸಾಗಿ-
ಬಾನಾಡಿ ಬಾವುಟವ ನೆಗ್ಗಿ ಹಿಡಿದೆ!
ಲಕ್ಷ ನಕ್ಷತ್ರಾಕ್ಷಿ ಸೂರ್ಯಚಂದ್ರಮ ಸಾಕ್ಷಿ
ಅನಿಮಿಷೋನ್ಮೇಷದಲಿ ವೀಕ್ಷಿಸುತಿರೆ;
ದಿವದಿಂದಿಳಿದ ಗಂಗೆ ಪಾವನ ಜಲತರಂಗೆ
ನಿನ್ನ ಮೈಮನಗಳಂ ಪ್ರೋಕ್ಷಿಸುತಿರೆ;
ಅಂತರಂಗದಿಶಿಖಿಯು ಬಹಿರಂಗ ಹಿಮಸಖಿಯು
ಶೀತೋಷ್ಣ ಸುಖದುಃಖಸಮರಸಂಪತ್ತಿ;
'ಕಾಯಕವೆ ಕೈಲಾಸ ಮರಣವೇ ಮಾನವಮಿ'
ಎಂದು ಗಡಿಗುಡಿ ಕಾದೆ ಶತಪಥಂ ಸುತ್ತಿ.
ಅದೊ ಅಲ್ಲಿ ಸನ್ಯಾಸಿ! ಬೌದ್ಧವಸನದ ವೇಷಿ,
ಕೇಳಿಸಿತು ವಾಣಿಃ 'ಬುದ್ಧಂ ಶರಣಂ ಗಚ್ಛಾಮಿ'
ಹೆದೆಗೆ ಬಿಲ್ ಮಣಿವಂತೆ ತಲೆವಾಗಿ ನೀನಿಂತೆ,
ಇರಿದನಹ ಬೆನ್ನಿಂದೆ ವಂಚಕ ಸ್ವಾಮಿ!
'ಜಯಭಾರತಂ ಜಯತು ಜಯ ಭಾರತಂ'—ಎದ್ದೆ,
ಢಂ ಢಣಂ ಮೊಳಗಿತ್ತೆ ಕೈಯ ಕೋವಿ!
ಹಗೆಯನ್ನು ಧಗೆಯನ್ನು ಸುಟ್ಟುರುಹಿ ನೀ ಬಿದ್ದೆ!
ಘೋಷಿಸುತ ಮಂತ್ರಃ ಯುದ್ಧಂ ಶರಣಂ
ಗಚ್ಛಾಮಿ!
ಬುದ್ಧನಿಗೆ ಶರಣೆಂದು ಧರ್ಮಕ್ಕೆ ಶರಣೆಂದು,
ಭಾರತದ ದನಿಗೆ ಮಾರ್ದನಿಸಿತ್ತು ಚೀನ;
ಯುದ್ಧವೇ ಶರಣೆಂದು, ಮೋಸವೇ ಶರಣೆಂದು,
ಶಿಷ್ಯ ಕಲಿಸಿದ ಗುರುಗೆ—ತಿರುಗುಬಾಣ!
ಮೋಸ ತಿಳಿಸಿದ ಮಂತ್ರ, ವಂಚಕನೆ ತಿರುತಂತ್ರ,
ವೀರರ್ಗೆ ಶೂರರ್ಗೆಯಿದೆ ರಣಾಹ್ವಾನಂ!
ನಿನ್ನ ಜೀವಿತ ಶಿಖಿಯಃ ಹಿಮವು ತಣಿಸಲು ಸುಖಿಯ
ರಂಭೆ ಕರೆದಳೆ? ಏರ್ದೆ ಸ್ವರ್ಗಸೋಪಾನಂ!

## II

ನೀನಾರೆನುತ ಜನರು ಗುರುತಿಸಲರಿಯದಿಹರು
ನಾ ಬಲ್ಲೆ ನಿನ್ನ ಕಥೆ ಮರೆಯಲೊಲ್ಲೆ:
ಎನ್ನ ತುಳುನಾಡಿನಲಿ ಎನ್ನ ಕನ್ನಡದಲ್ಲಿ
ಎನ್ನ ಕೇರಳದಲ್ಲಿ—ತಾಯ್ನೆಲದೊಳಲ್ಲೆ—
ಒಂದು ಹಳೆಗುಡಿಸಲಲಿ ಹಡೆದಮ್ಮನಿಹಳಲ್ಲಿ
ಗೆದ್ದುಬರುವನು ಕಂದನೆಂದು ನಂಬಿ,
ಕರು ಸತ್ತುಹೋದ ಹಟ್ಟಿಯ ದನದ ಕಣ್ಣೀರ
ಒರೆಸುತಿರುವಳು ಬಾಷ್ಪ ತುಂಬಿ ತುಂಬಿ.
ಮೂವತ್ತು ವರ್ಷಗಳ ಕೆಳಗೆ ಈ ಗುಡಿಸಲಿಗೆ
ಸ್ವಾಮಿ ಸೆರಗಂ ಹಿಡಿದೆ ಬಿಡದೆ ಬಂದೆ;
ಈ ತಂಗಿ ತುಂಗೆಯೂ ತಾಯ್ಗಂಗೆಯುಂ ಕರೆದು
ಹಾಲುಣಿಸಿ ನಾನವರ ತಣಿಸುತಿದ್ದೆ!
ಇಳಿದುಬಂದರೆ—ಗಾಂಧಿ ದೇವರೀ ತಾಯ್ನೆಲಕೆ?
ನಮ್ಮ ನೆತ್ತರಿನೆ ಬಂಧನವೆಲ್ಲ ಬಿಡಿಸೆ,
ಆ ದೇವ ಕರೆದಾಗ ಈ ದೇವ ಹೊರಡಲ್ಕೆ
ಕುಂಕುಮವ ತೊಡಿಸಿದೆನು—ಸ್ವಾಮಿ ಹಣೆಗೆ
ಬಳಸಿ ಕಾಲ್ವಿಡಿದು ತೊದಲುವ ಕಂದ ಚಂದ್ರಮನ
ಎತ್ತಿ ತಲೆ ಮೂಸಿ ಕೊಟ್ಟರು ಎನ್ನ ಕೈಗೆ;
ಎದೆಗೊತ್ತಿ ಹಿಡಿದಪ್ಪಿ ನಾ ಮುತ್ತನಿಕ್ಕಿದೆನು
ಮೊಲೆಹಾಲಿನಿಂದೊದ್ದೆ ರವಕೆ!
ಹೊರಟುಹೋದರು ಸ್ವಾಮಿ-ಕೊರಳುದ್ದ ಮಾಡಿದೆನು,
ಹೊರಳಿ ನೋಡಲೆ ಇಲ್ಲ-ಮರಳಲಿಲ್ಲ;
ನೇಸರಿಳಿಯುವ ಹೊತ್ತು—ಸಿಡಿಲ ಸುದ್ದಿಯು ಬಂತು;
ಹಿಡಿದ ಬಾವುಟ ಬಿಡದೆ ಮಡಿದರಲ್ಲ!
ಮಾನಸ ಸರೋವರಕೆ ಮೋಹ ಸಕ್ಕರೆ ಬೆರಸಿ
ಶಿಶುರಾಜ ಹಂಸನಂ ತೇಲಿಸಿದೆನು;



ಬಳೆದು ನಿಂದನು ಕಂದ—ಅವರದೇ ರೂಪಿಂದ
ಮಗುವೆ ಮೂಜಗವೆಂದು ಮುದ್ದಿಸಿದೆನು!
ತುಂಬ ಹರೆಯದ ತರುಣ, ಮೀಸೆ ಮೂಡಿದವದನೆ
ಎತ್ತರದಿಯೆನ್ನನ್ನೆ ಮೀರಿನಿಂದ;
ಕರೆಬಂತು ಕಾಳಗಕೆ ಹೊತ್ತು ಹೋದನು ಹರಕೆ
ಉತ್ತರದ ಗಡಿಗಾಗಿ ನಡೆದ ಕಂದ!
—ಇಂತು ಚಿಂತಿಸಿ ಮೈಯಮರೆದು ನೆಲ ಕೊರಗಿದಳು.
ನೀಳ್ದವೊಗದಿಂಬಾಗಿ ಹಸು ಮೂಸಿತು;
ಬೆಂದೊಡಲ ಬೇಗೆಯನು ತಣಿಸೆ ನಾಲಿಗೆ ಚಾಚಿ,
ಅಮೃತ ರಸದಿಂದವಳ ಮೆದು ನೆಕ್ಕಿತು!

## III

ನಾಲ್ಕು ದಿನಗಳ ಹಿಂದೆ ಗಡಿಕಾವ ಯೋಧರಿಗೆ
ನೆರವು ನೀಡಿರಿಯೆಂದು ಕೇಳಿ ಬಂದು—
ಅದೆ ಗುಡಿಸಲಂ ಸೇರ್ದೆ ಆತಾಯ ಬಳಿ ಸಾರ್ದೆ
ನಮ್ಮ ಯೋಧರ ಸಾಸ ಹೇಳುವೆಂದು--
ಬೆರಗಾಗಿ ಕೇಳುತಿದ್ದಳು ತಾಯಿ, ಕೊನೆಗೊಮ್ಮೆ
ನಿಟ್ಟುಸಿರುಬಿಟ್ಟು ಒಳ ಹೋಗಿ ಮರಳಿ,
ಹಳೆಯ ಪಟ್ಟೆಯ ಒಟ್ಟೆಯಲಿ ಸುತ್ತಿ ಕಟ್ಟಿರುವ
ಗಂಟು ಬಿಚ್ಚಿದಳಾಕೆ—ಸುರುಳಿ ಸುರುಳಿ!
ಗಿಳಿಯೋಲೆ, ಮೂಗುತಿಯು, ನತ್ತು, ತಾಳಿಯು—ಇತ್ತು
ಹಣೆಗೊತ್ತಿ ಮೊಗವೆತ್ತಿ ನುಡಿದಳಿಂತು:
'ಪುಣ್ಯವಂತರೆ! ಎನಗೆ ಮಗುವ ಕಂಡಂತಾಯ್ತು
ಅವನೆನ್ನ ಸಂಪತ್ತು—ಕೊಳ್ಳಿರೀಸೊತ್ತು!'
ಕೇಳ್ದೆನಾಕೆಯ ಕಥೆಯ—ಶೋಕವೇ ವೀರವೇ?
ದೇಹ ಪುಲಕಿತವಾಯ್ತು; ಕಂಪಿಸಿತ್ತು!
ಆ ತಪಸ್ವಿನಿಗೆ ನಾ ಮಣಿದೆ ನಾಕೆಯ ಸ್ವಾಮಿ—
ಯಂ ನೆನೆದೆಂ-ಸುತನಿಗಭಿಮನ್ಯುಗತಿಯಾಯ್ತು!

## IV

ಆ ತಂದೆಯ ಆ ತಾಯಿಯ ಆ ತರುಣನ ತ್ಯಾಗ!
ಕಾಳಗದಲಿ ಕಾಳಿಗೆ ಬಲಿ ಸ್ವಾತಂತ್ರ್ಯವೆಯಾಗ!
ಸ್ವಾತಂತ್ರ್ಯಂ ಮೂರಕ್ಷರ ಮೂಲೋಕದ ಸಾರ;
ವೈಕುಂಠದ ಕೈಲಾಸದ ಮುಕ್ತಿಯ ಮಹಾದ್ವಾರ!
ಇದು ಧರ್ಮವು ಇದು ಕರ್ಮವು ನಡೆ ಮುಂದಕೆ ಧೀರ!
ಇದು ಭೋಗವು ಇದು ಯೋಗವು ದೌರ್ಬಲ್ಯವು ದೂರ!
ನಾಡಿನ ಗಡಿ ಕಾಯಲು ಹಿಡಿ ನೀ ಕೋವಿಯ ನಿಕ್ಕ
ನಾಡುಳಿದರೆ ನೀನುಳಿಯುವೆ ನಾನುಳಿಯುವೆ ಸತ್ಯ.
ಜಯ ಕೋವಿಗೆ ಜಯ ಸಾವಿಗೆ ಜಯ ದೇವಿಗೆ ಜಯತು:
ಜಯ ದೇಶಕೆ ಜಯ ಕೋಶಕೆ ಜಯ ಭಾರತ ಜಯತು!
ಓಂ ಯುದ್ಧಕೆ ಓಂ ಯೋಧಗೆ ಓಂ ಕ್ರಾಂತಿಯ ಕಿಡಿಗೆ!
ಓಂ ಬುದ್ಧಗೆ ಓಂ ಬೋಧಕೆ ಓಂ ಶಾಂತಿಯ ನುಡಿಗೆ!
ಇದು ಯೋಧರ ಗಾಥ, ಕವಿ ಕಲ್ಪಿತ ಗೀತ,
ಬಾಷ್ಪಾಗ್ನಿ ಸ್ರೋತ! ಜಯ ಭಾರತ ಮಾತ.

### ಕುತಂತ್ರಕ್ಕೊಂದು ಪಂಥಾಹ್ವಾನ

# ಟಿಬೇಟಿಗೆ ಹೊಸ ಸಂವಿಧಾನ ಘೋಷಣೆ

ಹಿಮಾಲಯೋತ್ತರದ ಟಿಬೇಟದ ಮೇಲೆ ದಲಾಯ್‌ಲಾಮಾರಿಗಿದ್ದ ಅಧಿಕಾರವನ್ನು ಕಿತ್ತೆಗೆದು ಅವರ ಸ್ಥಾನದಲ್ಲಿ ಪಂಚೆನ್‌ಲಾಮಾರನ್ನು ನಿಯುಕ್ತಿಗೊಳಿಸಿದ ಕೆಂಪು ಚೀನಾವು ಅಲ್ಲಿ ತನ್ನ ಬೇರನ್ನು ಸಭದ್ರವಾಗಿ ಹರಡಿಸಿದೆ. ಭಾರತದ ಪುಣ್ಯ ನೆಲವನ್ನು ಚೀನಾ ಆಕ್ರಮಿಸಲು ಆಶ್ರಯ ನೀಡಿದುದೇ ಟಿಬೇಟು. ಸಹಜವಾಗಿ ಟಿಬೇಟಿಯನ್ನರಿಗೆ ಬೇಕಾಗಿರಲಿ, ಬೇಡವಾಗಿರಲಿ ಕೆಂಪು ಚೀನೀಯರು ನೀಡುತ್ತಿರುವ ಚಿತ್ರಹಿಂಸೆಯನ್ನು ಅನುಭವಿಸಲೇ ಬೇಕಾಗಿದೆ. ರಣಕಣ ಯೋಧರ ಸೇನಾ ಶಿಬಿರವಾಗಿ ಅದು ರೂಪುಗೊಳ್ಳುತ್ತಿದೆ. ಏಕೆಂದರೆ, ಅಲ್ಲಿ ಇಂದು ಚೀನೀಯರು ತಮ್ಮ ಸೇನೆಯನ್ನು ಬೃಹತ್ ಪ್ರಮಾಣದಲ್ಲಿ ಒಗ್ಗೂಡಿಸುತ್ತಿದ್ದಾರೆ. ಒಂದು ಕಾಲದಲ್ಲಿ ಶಾಂತಿ-ಅಹಿಂಸೆಗಳ ನರ್ತನದಿಂದ ಪವಿತ್ರವಾದ ಟಿಬೇಟು ಇಂದು ರಕ್ತ ನದಿಗಳ ಬೀಡಾಗಿ ಭೈರವ ನರ್ತನ ಮಾಡತೊಡಗಿದೆ.

ನಾಲ್ಕು ವರ್ಷಗಳಿಗೆ ಮೊದಲು ಟಿಬೇಟವನ್ನು ಚೀನೀಯರು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ದಲಾಯ್‌ಲಾಮಾರನ್ನು ಪದಚ್ಯುತಗೊಳಿಸಿದ್ದುದು ಲೋಕವಿದಿತ. ಕಂಗೆಟ್ಟ ಲಾಮಾ ತನ್ನ ಪರಿವಾರದೊಡನೆ ಭಾರತಕ್ಕೆ ಬಂದುದು ಮತ್ತು ನಮ್ಮ ಸರಕಾರವು ಅವರಿಗೆ ಆಸರೆಯಿತ್ತುದಾದರೂ ಸರ್ವಶ್ರುತ. ಅಂದಿನಿಂದಲೇ ಬಿತ್ತು ಭಾರತದ ಮೇಲೆ ಚೀನೀಯರ ವಕ್ರದೃಷ್ಟಿ. ತಾನು ಕಳೆದುಕೊಂಡ ಅಧಿಕಾರವನ್ನು ಮರಳಿ ಪಡೆಯುತ್ತೇನೆ ಎನ್ನುತ್ತಾರೆ, ಈ ನಾಲ್ಕು ವರ್ಷಗಳ ನಂತರವಾದರೂ ದಲಾಯ್ ಲಾಮಾ. ಚೀನೀಯ ಷಡ್ಯಂತ್ರದಿಂದ ತಪ್ಪಿ ಸ್ವತಂತ್ರ ಟಿಬೇಟಿನ ಕನಸನ್ನು ಕಾಣುತಿದ್ದರೆ ಅವರು ಮತ್ತು ಇಂದೇ ಆ ಕನಸು ನನಸಾಗಿಯೇ ಬಿಟ್ಟಿತು ಎಂಬಂತೆ ಹೇಳುತ್ತಲೂ ಇದ್ದರೆ ಅವರು ತಮ್ಮ ಪದಚ್ಯುತಿಯಾದ ನಾಲ್ಕನೆಯ ವರ್ಷಾಂತ್ಯದಲ್ಲಿ ಅವರು ಭಾರತದಿಂದಲೇ ಟಿಬೇಟದ ಸಂವಿಧಾನವನ್ನು ಪ್ರಕಟಿಸಿದುದೇ ಇದಕ್ಕೊಂದು ನಿದರ್ಶನ.

ಚೀನೀಯರ ಕಪಿ ಮುಷ್ಟಿಯಿಂದ ಮುಕ್ತವಾದ ಮೇಲೆ ಮಾತ್ರ ಈ ಸಂವಿಧಾನವು ಆಚರಣೆಗೆ ಬರಬಹುದೆಂಬುದನ್ನು ನಾವು ಮರೆಯುವಂತಿಲ್ಲ. ಆದರೆ, ಈಗ ಟಿಬೇಟು ಚೀನೀಯ ಸೇನೆಯ ವಶದಲ್ಲಿಯೇ ಇರುವುದು ನಿಜವಾದರೂ ಅದರ ಜನರ ಅಪೇಕ್ಷೆಯಂತೆ ಅದರಿಂದ ಮುಕ್ತವಾಗುವ ಒಂದಲ್ಲ ಒಂದು ದಿನ ಅವಶ್ಯ ಬರುವುದು ಎಂಬ ಆಶೆಯನ್ನು ಲಾಮಾ ಇಂದು ಜಗತ್ತಿಗೆ ತೋರಿಸಿದಂತಾಗಿದೆ. 'ನಾವು ಸದಾಕಾಲವೂ ಟಿಬೇಟಿನ ಆಂತರಿಕ ಅಭಿಪ್ರಾಯವನ್ನು ಮನ್ನಿಸುತ್ತೇವೆ'' ಎಂದು ಅಂದೇ ಚೀನೀ ಪ್ರಧಾನಿಗಳು ಅಂದಿದ್ದರು. ಆದರೆ, ಚೀನೀಯ ಸೇನೆಯು ಟಿಬೇಟಿಗೆ ಕಾಲಿಟ್ಟು ಲಾಮಾರನ್ನು ಓಡಿಸಿದ ಮೇಲೆ 'ಟಿಬೇಟಿನ ಸರಕಾರವು ಜನತೆಯನ್ನು ಕಾಡಿಕೊಂಡು ಪ್ರಜಾಪ್ರಭುತ್ವ ಮಾದರಿಯ ಆಡಳಿತೆಯನ್ನು ಸ್ಥಾಪಿಸಲು ಒಯಸುವುದಿಲ್ಲ ಆದುದರಿಂದಲೇ ನಾವು ಇದರ ಸಾಧನೆಗೆ ಮಾಡತೊಡಗಿದ ಪ್ರಾರಂಭಿಕ ಕಾರ್ಯಕ್ರಮಗಳಿಗೆ ಅದು ವಿಘ್ನವನ್ನೊಡ್ಡಿತು'' ಎಂದು ದೂರಿಯೂ ದೂರಿದರು. ಈ ಉದ್ಗಾರವು ಚೀನೀಯರು ಅದನ್ನು ತಮ್ಮ ವಶಕ್ಕೆ ತಂದ ಎಂಟು ವರ್ಷಗಳ ನಂತರ ಹೊರಟುದರಿಂದ ಕೆಂಪು ಚೀನೀಯರ ಅಭಿಪ್ರಾಯವು ಸ್ಪಷ್ಟವಾದಂತಾಯಿತು.

ಚೀನೀಯರು ಪ್ರಜಾಪ್ರಭುತ್ವ ಮಾದರಿಯ ಗುರಿಯನ್ನು ಸಾಧಿಸಲು ಮಾಡಿದ್ದೇನು? ಟಿಬೇಟಿನ ಜನತೆಯ ಕೈಗೆ ಅಧಿಕಾರವನ್ನು ಹಸ್ತಾಂತರಿಸುವ ಯಾವ ಕ್ರಮವನ್ನಾದರೂ ಅವರು ಕೈಗೊಂಡದ್ದಿಲ್ಲ. ಆದರೆ, ಹಲವಾರು ಸುಧಾರಣೆಗಳನ್ನು, ಟಿಬೇಟಿಯನ್ನರ ಅಭಿಪ್ರಾಯಕ್ಕೆ ವಿರೋಧವಾಗಿ, ವ್ಯವಹಾರಕ್ಕೆ ತಂದರು. ಜನತೆಯ ಪ್ರತಿಭಟನೆಯನ್ನು ಕಡೆಗಣಿಸುವಷ್ಟು ಕಿವುಡುತನದಿಂದ ತಮ್ಮ ಬೇಳೆ ಬೇಯಿಸಲು ಸೂಕ್ತವಾದ ಬೆಂಕಿಯೂದಿದರು. ಭೂಮಿಯನ್ನು ಕೂಡಹಾಕುವುದು ಬೌದ್ಧ ವಿಹಾರಗಳನ್ನು ನಿರ್ಮೂಲ ಮಾಡುವುದು ಚೀನೀಯ ಸುಧಾರಣೆಯ ಕೆಲವು ಮಾದರಿಗಳು.

ದಲಾಯ್ ಲಾಮಾರು ಈಗ ಪ್ರಕಟಿಸಿದ ಸಂವಿಧಾನವು ಟಿಬೇಟಿನ ಅಧಿಕಾರಿಗಳು ಆಧುನಿಕತೆಯ ವಿರೋಧಿಗಳು, ಜನತೆಯನ್ನು ಸುಲಿದು ಜೀವಿಸುವವರು ಎಂಬ ಅಪವಾದಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ, ಈ ನೂತನ ಸಂವಿಧಾನವು ಬಹು ಕ್ರಾಂತಿಕಾರಿಯೊಂದೇ ಅನ್ನಬೇಕು. ಏಕೆಂದರೆ, ಎಲ್ಲ ಭೂಮಿಯನ್ನು ರಾಷ್ಟ್ರೀಕರಣ ಮಾಡುವ ಮತ್ತು ಆಡಳಿತೆ ನಡೆಸಲು ಚುನಾಯಿತ ರಾಷ್ಟ್ರೀಯ ಸಭೆಯೊಂದನ್ನು ರಚಿಸುವಷ್ಟಕ್ಕೆ ಇದು ಮುಂದುವರಿದಿದೆ. ಅಂದರೆ, ಜನತೆಯ ಮೂಲಭೂತ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಆಧುನಿಕತೆಯತ್ತ ಧಾವಿಸುವ ಇಂತಹ ಪ್ರಜಾಪ್ರಭುತ್ವವು ಕೆಂಪು ಚೀನಾದಲ್ಲಿಯೂ ಇರುವುದಿಲ್ಲ. ಅಲ್ಲಿ ಆಧುನಿಕತೆಯಿದೆ, ಆದರೆ ಕಮ್ಯೂನಿಸ್ಟ್ ಪಕ್ಷವು ಜನತೆಯ ಮೂಲಭೂತ ಅಧಿಕಾರಗಳನ್ನು ಮನ್ನಿಸುವಷ್ಟು ಉದಾರವಾಗಿರುವುದಿಲ್ಲ. ಹಾಗಿರುವಾಗ ಜನತಾ ಚೀನಾದ ಸಾಮ್ರಾಜ್ಯವಾದಕ್ಕೂ ನಿಯೋಜಿತ ಟಿಬೇಟಿನ ಸಂವಿಧಾನಕ್ಕೂ ಹೊಂದಿಕೆಯಾಗುವುದೇ ಎಂದು ನೋಡಬೇಕಷ್ಟೆ.

ದಲಾಯ್ ಲಾಮಾರು ಚೀನಾವು ಭಾರತದ ಮೇಲೆ ಮಾಡಿದ ದುರಾಕ್ರಮಣವನ್ನು ಬಲವಾಗಿ ಖಂಡಿಸಿದವರಲ್ಲಿ ಒಬ್ಬರು. ಅವರ ಆ ಕೃತ್ಯದಿಂದ ಭಾರತೀಯ ಜನತೆಯು ತೃಪ್ತಿಗೊಂಡಿದೆ. "ಚೀನೀಯರು ಅಧಿಕಾರ ಅಥವಾ ಕಾರಣಗಳಲ್ಲಿ ಒಂದೂ ಇಲ್ಲದೆ ಭಾರತೀಯ ಗಡಿಪ್ರದೇಶವನ್ನು ಆಕ್ರಮಿಸಿ, ಜನತೆಯ ಮರಣಕ್ಕೂ ನಾಶಕ್ಕೂ ಮುಂದುವರಿದಿದ್ದಾರೆ'' ಎಂದಿದ್ದಾರೆ ಅವರು. ಇಲ್ಲಿ ಒಂದು ವಿಷಯವನ್ನು ನಾವು ನೆನಪಿಡಬೇಕು. ಚೀನೀಯರು ನೇಫಾ ಪ್ರದೇಶದಲ್ಲಿ ಮುಂದಿಡುವ ಯಾವುದೇ ಬೇಡಿಕೆಯು ಟಿಬೇಟ ಸರಕಾರದ ಪರವಾಗಿಯೇ ಇರಬೇಕಾಗುತ್ತದೆ. ಆದುದರಿಂದ ಇಂದವರು ಎಬ್ಬಿಸಿರುವ ಗಡಿ ವಿವಾದವು ಟಿಬೇಟದ ಪರವಾಗಿ ಎಂದಾಯಿತು. ಟಿಬೇಟಿನ ನ್ಯಾಯವಾದ ಅಧಿಕಾರಿ ಲಾಮಾ ಅನಧಿಕಾರ ಪ್ರವೇಶ ಮಾಡಿದರೆಂದು ಚೀನೀಯರನ್ನು ದೂರುವಾಗ ಅವರ ವಾದದಲ್ಲಿನ ಹುರುಳೆಷ್ಟು ಎಂದು ಸುಸ್ಪಷ್ಟವಾಗುವುದು. ದಲಾಯ್ ಲಾಮಾರು ಭಾರತಕ್ಕೆ ಬಂದ ದಾರಿಯಲ್ಲಿಯೇ ಚೀನೀಯ ಪಡೆಯೂ ಭಾರತದೊಳಕ್ಕೆ ನುಗ್ಗಿತು. ಲಾಸಾದಲ್ಲಿ ಅವರು ಪಂಚೆನ್ ಲಾಮಾರನ್ನು ನಾಮಮಾತ್ರಕ್ಕೆ ಪ್ರಧಾನಾಧಿಕಾರಿಯಾಗಿ ಕಮ್ಯುನಿಸ್ಟರು ನಿರಿಸಿದ್ದಾರೆ, ನಿಜ.

ಆದರೆ, ಈ ಪಂಚೆನ್ ಲಾಮಾ ಕಮ್ಯುನಿಸ್ಟ್ ಚೀನಾದ ಕೈಗೊಂಬೆಯೆಂದೂ ಅವರಿಗೆ ಟಿಬೇಟಿನ ಮೇಲೆ ಅಧಿಕಾರವಾಗಲೀ, ಟಿಬೇಟಿಯನರಿಗೆ ಅವರ ಮೇಲೆ ಗೌರವವಾಗಲೀ ಎಳ್ಳಷ್ಟೂ ಇರುವುದಿಲ್ಲ. ಈಗ ಚೀನೀಯರು ಲಾಸಾದಲ್ಲೂ ಸುತ್ತಮುತ್ತಲೂ ತಮ್ಮ ನೆಲೆಯನ್ನು ಭದ್ರಪಡಿಸಿದ್ದಾರೆ. ಟಿಬೇಟ ಕೈದುಗಳಾಟದ ಕೇಂದ್ರವಾಗಿದೆ. ಭಾರತದ ಮೇಲೆ ಮಾಡಿದ ಧಾಳಿಯು ಇದರ ಮೂಲಕವೇ, ಈಗ ಹಿಂದೆ ಸರಿದುದೂ ಅಲ್ಲಿಗೇನೇ. ಮುಂದಕ್ಕೆ ಮರಳಿ ಮಾಡಿದ ಸಮರವಿರಾಮವನ್ನು ಮುರಿಯುವುದಾದರೂ ಅದೇ ದಾರಿಯಲ್ಲಿ. ಅಂದರೆ ಲಾಮಾಗಳ ಪವಿತ್ರ ದೇಶವಾಗಿ ಮೆರೆದಾಡಿದ್ದ ಟಿಬೇಟು ಇಂದು ಕೆಂಪು ಚೀನೀಯರ ಕುತಂತ್ರಗಳಿಗೆ ಮಂತ್ರಾಲೋಚನಾ ಪ್ರದೇಶವಾಗಿ ಪರಿಣಮಿಸಿದೆ.

ಆದರೆ, ಒಂದು ಮಾತನ್ನು ಜನತೆಯು ಗಾಲ್ಲಿ ಮರೆಯುವಂತಿಲ್ಲ. ಅಲ್ಜೀರಿಯಾ, ಸೈಪ್ರಸ್ ಮತ್ತಿತರ ವಸಾಹತುಗಳನ್ನು ತಮ್ಮ ಭದ್ರಮುಷ್ಟಿಯಲ್ಲಿಟ್ಟುಕೊಳ್ಳಲು ಸಾಮ್ರಾಜ್ಯವಾದಿಗಳು ಹೂಡಿದ ಪ್ರತಿ ತಂತ್ರವೂ ವ್ಯರ್ಥವಾಯಿತು ಎಂಬುದನ್ನು ಸ್ಮರಿಸಿಕೊಂಡರೆ, ಇಡಿಯ ವಿಶ್ವದಲ್ಲಿ ಮಾತ್ರವಲ್ಲ. ಜಗತ್ತಿನಲ್ಲಿಯ ಸರ್ವ ದೇಶಗಳೂ ಟಿಬೇಟಿನಲ್ಲಿ ನಡೆದ ಚೀನೀಯ ಕಾರಸ್ಥಾನಗಳ ಕಡೆಗೆ ವಕ್ರಭಾವವನ್ನು ಪ್ರದರ್ಶಿಸುತ್ತಿರುವಾಗ, ತಮ್ಮ ಕಾರ್ಯಕ್ರಮಗಳಿಗೆ ಚರಿತ್ರೆಯ ಬೆಂಬಲವನ್ನು ಪಡೆಯಲಿಚ್ಛಿಸಿದರೂ ೧೯೧೧ರಿಂದ ಸುಮಾರು ೪೦ ವರ್ಷಗಳ ಕಾಲ ಸ್ವತಂತ್ರನಾಗಿ, ಶಾಂತವಾಗಿ ಬಾಳಿದ ಟಿಬೇಟಿಯನ್ನರ ಚೀನೀಯ ಸರ್ವಾಧಿಕಾರಕ್ಕೆ ಇಂದು ಮಣಿಯಲೇ ಬೇಕಾಗಿ ಬಂದರೂ ಎಷ್ಟು ನಿಲ್ಲುವ ದಿನವೊಂದು ಬಾರದುಳಿಯದು. ಚೀನೀಯ ಮೂಸೆಯಲ್ಲಿ ಟಿಬೇಟನ್ನು ಕಮ್ಯುನಿಸ್ಟ ಗೊಂಬೆಯಾಗಿ ರೂಪಿಸುವ ಚೀನೀಯರ ಹೇರಾಸೆ ಗಗನಕುಸುಮವಾಗುವ ದಿನ ದೂರವಿಲ್ಲ. ಈಗ ಟಿಬೇಟಿನಲ್ಲಿ ಜನತೆಯು ಸ್ತಬ್ಧಗೊಂಡಂತೆ ಭಾಸವಾಗುವುದು ಹೌದು, ಇದು ಜನರ ಹತವೀರ್ಯತೆಯಿಂದಲ್ಲ, ಅಸಹಾಯಕ ಪರಿಸ್ಥಿತಿಯಿಂದ. ಒಳಗೊಳಗೆ ಎದ್ದಿರುವ ಸಂತಾಪವು ಉರಿದು ಭಗ್ಗೆಂದು ಕೆಂಪು ಚೀನೀಯರನ್ನು ದೇಶದಿಂದ ಓಡಿಸುವಂತೆ ದಲಾಯ್ ಲಾಮಾರು ರಚಿಸಿದ ಹೊಸ ಸಂವಿಧಾನ ಅವ್ಯಕ್ತವಾಗಿ ಪ್ರೇರಣೆ ನೀಡುವುದಿಲ್ಲವೆ?

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ .. .
ಇಂದೇ ಪ್ರಾರಂಭಿಸಿರಿ — ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ
ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ
ನಮ್ಮ 3 ಹೊಸ ಶಾಖೆಗಳು— ಆಲ್ಸೂರು, (ಬೆಂಗಳೂರು) ಕೋಲಾರ ಮತ್ತು ಕೃಷ್ಣರಾಜ ಪೇಟೆಗಳಲ್ಲಿ ತೆರೆಯಲ್ಪಡುವವೆಂದು ತಿಳಿಸಲು ಸಂತೋಷಪಡುತ್ತೇವೆ

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು ಲೈಟ್ ಹೌಸ್ ಹಿಲ್ ರಸ್ತೆ,
ಮಂಗಳೂರು—3

## ಬಲ್ಲವರ ಸೊಲ್ಲು

ರವಿ ಕಾಣದುದನ್ನು ಕವಿ ಕಂಡ ಆದರೆ ಕವಿ ಕಾಣದುದನ್ನು ಕವಿಯ ಮಡದಿ ಕಂಡಳು

o o

ಸಾಹಿತ್ಯಂ ಸಮಯ ಲಕ್ಷಣಂ.

o o

ಹೆಣ್ಣು ನಕ್ಕರೆ ಮನೆ ತುಂಬ ಮುತ್ತು ಚೆಲ್ಲಿದಂತೆ

o o

ಹೆಣ್ಣಿಗೆ ವಿವಾಹ ಶುಭಂ, ಗಂಡಿಗೆ ಉದ್ಯೋಗ ಶುಭಂ

o o

ಸಿರಿವಂತರ ಹೆಣ್ಣಿಗೆ ಪ್ರಣಯದ ಶಕ್ತಿ ತಿಳಿಯದ.

o o

ಶಕ್ತರಾದರೆ ನೆಂಟರೆಲ್ಲರೂ ಹಿತವರು; ಅಶಕ್ತನಾದರೆ ಜಗದ ಸರ್ವ ಜೀವವೂ ಕಡುವೈರಿಗಳು.

o o

ಪ್ರಸಿದ್ಧಿಯಾಗ ಮಂತಹ ಸಾಹಿತ್ಯಕ್ಕಿಂತಲೂ ಸಿರಿತನವೇನೂ ದೊಡ್ಡದಲ್ಲ.

o o

ಹರಿತವಾಗಬೇಕಾದರೆ ಕತ್ತಿ ಮಸೆಯಬೇಕ .

o o

ಜೀವನವೆಂಬ ದೀಪಕ್ಕೆ ಹೆಂಡತಿ ಸುರಿದ ಎಣ್ಣೆ ಮಾದರೆ ಗಂಡನು ಹೊಸೆದ ಬತ್ತಿಯಂತೆ!

o o

ಮಗಳ ಮನೆಗೆ ಹೇಳಿ ಹೋಗಬಾರದ; ನೆಂಟರ ಮನೆಗೆ ತಿಳಿಸಿ ಹೋಗಬೇಕು

ಸಂಗ್ರಹ: ಸುಬ್ರಹ್ಮಣ್ಯ ಭಟ್ಟ,
ಯೋಕಡ್ಕ.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೨೧-೩-೧೯೬೩ | ೨೮ |

## ನಾಲ್ಕರಿಂದ ಐದಕ್ಕೆ

"ಕಾಶ್ಮೀರ ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ಕುರಿತು ಕರಾಚಿಯಲ್ಲಿ ಭಾರತ—ಪಾಕಿಸ್ತಾನಗಳ ನಡುವೆ ನಡೆದ ಮೂರನೆ ಸುತ್ತಿನ ಮಾತುಕತೆಯ ಕೊನೆಯಲ್ಲಿ ಭಾರತದ ರೇಲ್ವೆ ಮಂತ್ರಿ ಸರದಾರ ಸ್ವರ್ಣ ಸಿಂಗರು ಪಾಕ್ ವಿದೇಶ ಮಂತ್ರಿ ಝುಲ ಫಕೀರ ಅಲಿ ಭುಟ್ಟೋರವರನ್ನು ಮಾತುಕತೆ ಮುಂದುವರಿಸಲು ಕಲಕತ್ತೆಗೆ ಬರಬೇಕೆಂದು ಆಮಂತ್ರಿಸಿದ್ದರು. ಶ್ರೀ ಭುಟ್ಟೋ ಅದನ್ನು ಸ್ವೀಕರಿಸಿ ತಮ್ಮ ಪ್ರತಿನಿಧಿ ಮಂಡಳದೊಡನೆ ಮಾರ್ಚ ೧೨ರಂದು ಕಲಕತ್ತೆಗೆ ಆಗಮಿಸಿದರು. ದಿ. ೧೨, ೧೩ ಮತ್ತು ೧೪ರಂದು ಸರ್ದಾರ ಸಿಂಗ ಮತ್ತು ಭುಟ್ಟೋರ ಅನೇಕ ಸಲ ಭೆಟ್ಟಿಯಾಗಿ ಚರ್ಚಿಸಿದರು. ಇನ್ನೂ ಹೆಚ್ಚಿನ ಚರ್ಚೆ ನಡೆಸಲು ಎಪ್ರಿಲ್ ೨ರಂದು ಕರಾಚಿಗೆ ಆಗಮಿಸಬೇಕೆಂದು ಭುಟ್ಟೋರು ಸಿಂಗರನ್ನು ಆಮಂತ್ರಿಸಿದ್ದು, ಸ್ವರ್ಣಸಿಂಗರು ಅದನ್ನು ಸ್ವೀಕರಿಸಿದ್ದಾರೆ"— ಮೂರು ದಿನಗಳ ವರೆಗೆ ಹಲವು ಕಾಲ ಮಾತುಕತೆ ನಡೆದು ಕೊನೆಯಲ್ಲಿ ಹೊರಟ ಅಧಿಕೃತ ಪತ್ರಿಕಾ ಪ್ರಕಟಣೆಯಿದು. ಭಾರತ—ಪಾಕಿಸ್ತಾನಗಳ ನಡುವೆ ಬಹು ದೀರ್ಘ ಸಮಯದಿಂದಲೂ ಇರುವುದೆಂದು ಹೇಳಲಾದ ಕಾಶ್ಮೀರ ಸಂಬಂಧಿ ವಿವಾದವನ್ನು ತ್ವರಿತವಷ್ಟೆ ಬಗೆಹರಿಸುವುದು ಭಾರತ ಉಪಖಂಡದ ಹಿತ ದೃಷ್ಟಿಯಿಂದ,ಮುಖ್ಯವಾಗಿ ಕಮ್ಯುನಿಸ್ಟರನ್ನು ತಡೆ ಹಿಡಿಯುವುದಕ್ಕಾಗಿ, ಅತಿ ಆಗತ್ಯವೆನಿಸಿದುದರಿಂದ ತೊಡಗಿದ ಮಾತುಕತೆಯ ನಾಲ್ಕನೆ ಸುತ್ತು ನೀರಸ ಪರಿಣಾಮವನ್ನು ಮಾಡಿದೆಯೆಂಬುದಕ್ಕೆ ಮೇಲಿನ ವರದಿಯೇ ಸಾಕ್ಷಿ. 'ಕಾಶ್ಮೀರ'ವನ್ನು ಸುತ್ತಿಕೊಂಡು ಹಲವಾರು ಸಿಕ್ಕುಗಳು ಇದ್ದು, ಅವುಗಳನ್ನು ಬಿಡಿಸುವಲ್ಲಿ ತಿಲಾಂಶದಷ್ಟಾದರೂ ಕಾರ್ಯವೇ ಬಾರಿ ನಡೆಯಲಿಲ್ಲವೆಂದರೆ, ಈ ವಿಷಯವು ವಿಷಮವಾಗುತ್ತಲೇ ನಡೆದಿದೆಯೆನ್ನಲೇ ಬೇಕಾಗುತ್ತದೆ. ಮೂರನೆ ಸುತ್ತಿನ ಮಾತುಕತೆಯ ನಂತರ, ಪಾಕಿಸ್ತಾನವು ಚೀನಾದೊಡನೆ 'ಇಲ್ಲದ ಗಡಿ'ಯ ಕುರಿತು ಒಡಂಬಡಿಕೆಯನ್ನು ಮಾಡಿಕೊಂಡ ದುರ್ಘಟನೆ ಅನುಸರಿಸಿದ ದುಸ್ಥಿತಿಯು ಇಂತಹ ವಿರಸ ಪ್ರಕರಣಕ್ಕೆ ಕಾರಣವೆನ್ನಲೇ ಬೇಕಾಗುತ್ತದೆ. ಏಕೆಂದರೆ, ಈ ಪ್ರಶ್ನೆಯಲ್ಲಿ ಕಗ್ಗಂಟುಗಳೇ ತುಂಬಿವೆಯಾದರೂ ಈ ಮೊದಲ ಸುತ್ತುಗಳಲ್ಲಿ ಅವನ್ನು ಸಡಿಲುಗೊಳಿಸುವ ಕಾರ್ಯವಾದರೂ ನಡೆಯಿತೆಂಬ ತೃಪ್ತಿ ಇದೆ. ಹೀಗಿರುವಾಗ ಮುಂದೆ ಮುಂದೆ ಐದನೇ ಸುತ್ತಿನ ಮಾತುಕತೆಯಿಂದ ಪ್ರಯೋಜನ ಪ್ರಾಪ್ತವಾದೀತೆಂದು ನಂಬುವುದು ಹೇಗೆ?

ಚೀನೀಯರ ದುರಾಕ್ರಮಣವು ಭಾರತಕ್ಕೆ ಮಾತ್ರವಲ್ಲ ಪಾಕಿಸ್ತಾನಕ್ಕೂ ಇತ್ತ ಆಹ್ವಾನ; ಇಡಿಯ ಉಪಖಂಡ ಭಾರತವನ್ನೇ ಕಬಳಿಸುವ ಪಂಥ. ಇಂದು ಚೀನಾವು ಅನ್ಯಾಯವಾಗಿಯಾದರೂ ಪಾಕಿನೊಡನೆ ಸೀಮಾ ಒಡಂಬಡಿಕೆ ಮಾಡಿಕೊಂಡಿದೆ. ಆದರೆ, ೧೯೫೪ರಲ್ಲಿ ಅದು ಭಾರತದೊಡನೆಯೂ ನ್ಯಾಯಬದ್ಧವಾದ ಪಂಚಶೀಲ ಒಡಂಬಡಿಕೆಯನ್ನು ಸಹಿ ಮಾಡಲಿಲ್ಲವೆ? ಆದುದರಿಂದ ಸಾಮ್ರಾಜ್ಯವಾದೀ ಚೀನಾವನ್ನು ತಡೆಹಿಡಿಯುವುದು ಎರಡೂ ದೇಶಗಳ ಹಿತದೃಷ್ಟಿಯಿಂದ ಆಗತ್ಯ. ಇದಕ್ಕಾಗಿ ಎರಡೂ ದೇಶಗಳ ನಡುವೆ ಸಮರಸ ಹೆಚ್ಚಬೇಕು; ವಿವಾದಗಳು ಪರಿಹಾರ ಕಾಣಬೇಕು. ಉಭಯತರರ ಸ್ನೇಹಿತರ ಸಲಹೆಯಂತೆ ಈ ವಿಚಾರ ವಿನಿಮಯಕ್ಕೆ ತೊಡಗಲಾಯಿತು. ಕೇವಲ ಕಾಶ್ಮೀರ ಸಂಬಂಧದ ವಿಚಾರ ಮಾತ್ರ ಮುಂದೆ ಬರಬೇಕೆಂದು ಭುಟ್ಟೋ ಹಠ ಹಿಡಿದರು. ಇದರೊಂದಿಗೆ ಉಳಿದ ಇತರ ವಿಚಾರಗಳನ್ನೂ ತರಬೇಕೆಂದು ಭಾರತ ಬಯಸಿತ್ತು. ಆದರೆ, ಅದು ಸಾಧ್ಯವಾಗಲಿಲ್ಲ.

ಮೂರನೆಯ ಸುತ್ತಿನ ನಂತರ ನಡೆದ ಅನ್ಯಾಯ ಘಟನೆಯಿಂದ ನಾಲ್ಕನೆಯ ಸುತ್ತಿನ ಮಾತುಕತೆ ಪ್ರಾರಂಭವಾಗುವುದೇ ಇಲ್ಲವೇ ಎಂಬ ಬಗ್ಗೆಯೂ ಸಂದೇಹವಿದ್ದಿತ್ತು; ಆದರೆ, ನಿಯೋಜಿತ ಕಾರ್ಯಕ್ರಮದಂತೆ ಅದ ಸೇರಿತು; ಮುರಿದು ಹೋಗುವುದರಲ್ಲಿತ್ತು; ಪಾಕ್ ಇಟ್ಟ ಹೆಜ್ಜೆ ಅಂತಹುದು. ಆದರೆ, ಭುಟ್ಟೋರವರು ಹೊಸ ಸೂಚನೆಯೊಂದನ್ನು ಮುಂದಿಟ್ಟುದರಿಂದ ಹಾಗಾಗಲಿಲ್ಲವೆನ್ನಲಗುತ್ತದೆ. ಮೊದಲು ಕಾಶ್ಮೀರೇತರ ವಿಚಾರ ಚರ್ಚಿಸಬಾರದೆಂದು ಆಗ್ರಹ ತೊಟ್ಟ ಭುಟ್ಟೋ ಆದರೊಡನೆ ಇನ್ನೂ ಪರಿಹಾರಗೊಳ್ಳದೆ ಉಳಿದಿರುವ ಸಮಸ್ಯೆಗಳನ್ನೂ ಪರಿಶೀಲಿಸಬಹುದೆಂಬ ಸಲಹೆಯನ್ನು ತಾವಾಗಿಯೇ ಮುಂದಿಟ್ಟರು. ಇದರಿಂದಾಗಿ, ಭಾರತವಾದರೂ ತುಸು ಸಮಾಧಾನ ತಾಳಲೇ ಬೇಕಾಯಿತು. ಪಾಕಿಸ್ತಾನದಿಂದ ಏಕ ಪ್ರಕಾರವಾಗಿ ತ್ರಿಪುರಾದೊಳಗೆ ನುಗ್ಗುತ್ತಿರುವ ನಿರಾಶ್ರಿತರ ಸಮಸ್ಯೆ ಭಾರತವನ್ನು ಕಾಡುವ ಮಹಾಪೀಡೆ. ಈ ಸಂಬಂಧದಲ್ಲಿಯೂ ಮಾತುಕತೆ ನಡೆಸಲು ಭುಟ್ಟೋ ಭರವಸೆಯಿತ್ತರು. ತನ್ನ ಕಡೆಯಿಂದ ಮಾತುಕತೆ ಮುರಿಯುವಂತಾಗಬಾರದು ಎಂದು ಪಾಕಿಸ್ತಾನ ಬಯಸಿದೆ ಮತ್ತು ಅದು ಒಂದು ವೇಳೆ ಮುರಿಯುವುದಾದರೂ (ಏಕೆಂದರೆ, ಈ ಮಾತುಕತೆ ನಡೆಸಲು ಪಾಕಿಸ್ತಾನದಲ್ಲಿ ಎಳ್ಳಷ್ಟೂ ಆತುರವಿರುವುದಿಲ್ಲ) ಅದರ ಪಾಪ ಭಾರತದ ತಲೆಯ ಮೇಲೆ ಇರಲಿ ಎನ್ನುವ ನೀತಿ ಅದರದು. ಪಾಕಿಸ್ತಾನವು ಈ ನಿಟ್ಟಿನಲ್ಲಿ ಆಸಕ್ತಿಯಿಟ್ಟಿರುವುದಾದರೆ, ಅಲ್ಲಿ ಭಾರತದ ಬಗ್ಗೆ ಅಪಪ್ರಚಾರಗಳು ನಡೆಯುವ ಅಗತ್ಯವಿರುವುದಿಲ್ಲ. ಅಥವಾ ವಿವಾದವನ್ನು ಕೊನೆಗೊಳಿಸಲು ಇಚ್ಛೆಯೂ ಪಾಕಿಸ್ತಾನಕ್ಕಿರುವುದಿಲ್ಲ; ಅದು ಗಂಟನ್ನು ಶಿಥಿಲಗೊಳಿಸುವ ಹೆಸರಿನಲ್ಲಿ ಮತ್ತೂ ಮತ್ತೂ ಭದ್ರಗೊಳಿಸುವಂತಹ ಕ್ರಮಗಳನ್ನೇ ಕೈಗೊಳ್ಳುತ್ತಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಸಮಾಧಿ ಹೊಂದುವಂತಹ ಪರಿಸ್ಥಿತಿಯಲ್ಲಿದ್ದ ಕಲಕತ್ತೆಯ ಮಾತುಕತೆಗಳನ್ನು ಅಮೆರಿಕನ್ ಮತ್ತು ಬ್ರಿಟಿಷ್ ರಾಯಭಾರಿಗಳು ಅತ್ಯಾಸಕ್ತಿಯಿಂದ ಗಮನಿಸಿದ್ದರು. ಅವರ ಪ್ರೇರಣೆಯಿಂದಾಗಿಯೇ ಅದು ಮೂರು ದಿನಗಳ ಕಾಲ ಉಸಿರು ಹಿಡಿಯಿತು ಎಂದರೂ ಆಶ್ಚರ್ಯವಲ್ಲ. ಮುರಿದುಹೋಗುವುದೆಂಬ ನಿರಾಶೆಯಲ್ಲಿ, 'ಅದು ಮುಂದೆಯೂ ಸೇರುವುದು ಮತ್ತು ಕಾಶ್ಮೀರದೊಡನೆ ಉಳಿದ ಸಮಸ್ಯೆಗಳನ್ನೂ ಪರಿಶೀಲಿಸುವುದು"ಎಂಬ ಮಂದ ಆಶಾಕಿರಣವೊಂದು ಮೂಡಿದುದನ್ನುಳಿದರೆ, ಕಲಕತ್ತೆಯ ನಾಲ್ಕನೆ ಸುತ್ತು ನಾಲ್ಕು ಕಾಸಿನ ಪ್ರಯೋಜನಕ್ಕೂ ಬರಲಿಲ್ಲವೆಂದರೆ, ಅತ್ಯುಕ್ತಿಯಾಗದು.

## ಸತ್ಯಕ್ಕೆ ಜಯ

ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ವಿವಾದಕ್ಕೆ ಬಿದ್ದ ಕೃಷ್ಣಾ ನದೀ ನೀರಿನಲ್ಲಿ ತನ್ನ ರಾಜ್ಯದ ನಿಜವಾದ ಬೇಡಿಕೆಯನ್ನು ಮುಂದಿಟ್ಟು, ಕೇಂದ್ರ ಸರಕಾರದಿಂದ ನ್ಯಾಯ ಪಡೆಯುವ ಉದ್ದೇಶದಿಂದ ಡಿಲ್ಲಿಯಾತ್ರೆ ಮಾಡಿ ನೀರಾವರಿ ಮಂತ್ರಿ ಶ್ರೀ ಹಫೀಜ್ ಮಹಮ್ಮದ ಇಬ್ರಾಹಿಂ ಮತ್ತು ಉಪಮಂತ್ರಿ ಶ್ರೀ ಅಲಗೇಶನ್‌ರವರನ್ನು ಭೆಟ್ಟಿ ಮಾಡಿ ಮರಳಿ ಬಂದಿದ್ದಾರೆ. ಕೇಂದ್ರದ ಇಬ್ಬರು ಮಂತ್ರಿಗಳಿಗೂ ತಮ್ಮ ನ್ಯಾಯ ವಾದವನ್ನು ಮನಗಾಣಿಸಿರುವುದು ಮಾತ್ರವಲ್ಲ, ಪ್ರಧಾನ ಮಂತ್ರಿ ಶ್ರೀ ನೆಹರುರವರನ್ನೂ ಕಂಡು ಅವರಿಗೂ ಈ ವಿಷಯವು ಮನವರಿಕೆಯಾಗುವಂತೆ ಮಾಡಿದ್ದಾರೆ. ಇದರಿಂದಾಗಿಯೋ ಏನೋ ಇಷ್ಟರಲ್ಲೇ ಹೊರಬೀಳಲಿದ್ದ ಕೇಂದ್ರ ಸರಕಾರದ ನಿರ್ಣಯವು ಈ ಮಾಸಾಂತ್ಯದ ವರೆಗೆ ಸ್ಥಗಿತಗೊಂಡಿದೆ. ಕರ್ನಾಟಕದ ರಾಜ್ಯ ಸರಕಾರದ ನ್ಯಾಯವಾದ ಪ್ರಯತ್ನಕ್ಕೆ ರಾಜ್ಯದ ಪಾರ್ಲಿಮೆಂಟ್ ಸದಸ್ಯರ ಬೆಂಬಲವೂ ಇದ್ದು ಅವರೂ ಈ ದಿಸೆಯಲ್ಲಿ ಶಕ್ತಿ ಮೀರಿ ಪ್ರಯತ್ನಿಸುತ್ತಿರುವರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಒಂದು ರಾಜ್ಯದ ಶಾಸಕರು ಸಮರ್ಥರೂ ಯೋಗ್ಯರೂ ಕಾರ್ಯದುರಂಧರರೂ ಆಗಿ ಎಲ್ಲರೂ ಒಂದಾಗಿ ಕಾರ್ಯಮಗ್ನರಾದರೆ ಆ ರಾಜ್ಯಕ್ಕೆ ನ್ಯಾಯ ದೊರೆಯುವುದು ಖಂಡಿತ. ಶರಾವತಿ ಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವಲ್ಲಿ ಕೃತಕೃತ್ಯವಾದ ನಮ್ಮ ರಾಜ್ಯ ಈಗ ಮತ್ತೊಂದು ಮಹಾ ಸಾಹಸದಲ್ಲಿ ಯಶಸ್ವಿಯಾಗುವುದೆಂದು ನಂಬುತ್ತೇವೆ. ನಾವು ಮೊದಲೇ ಹೇಳಿರುವಂತೆ ಕೃಷ್ಣಾ ನದಿಯಲ್ಲಿ ನಾವು ಸಿಂಹದ ಪಾಲು ಬೇಡುತ್ತಿಲ್ಲ; ಇತರ ನೆರೆಯ ರಾಜ್ಯಗಳಿಗೆ ಅಪಚಾರವನ್ನು ಮಾಡ ಬಯಸುವುದಿಲ್ಲ. ನಮ್ಮ ರಾಜ್ಯಕ್ಕೆ ನ್ಯಾಯವಾಗಿ ದೊರೆಯಲೇ ಬೇಕಾದ ಪ್ರಮಾಣವನ್ನು ಮಾತ್ರ ಯಾಚಿಸುತ್ತೇವೆ. ಸತ್ಯದ ಪಕ್ಷ ನಮ್ಮದು ಸತ್ಯಕ್ಕೆ ವಿಜಯ ನಿಶ್ಚಿತ. ಅದು ಕೆಲಕಾಲ ಮರೆಯಾಗಬಹುದು; ಆದರೆ ಅದೆಂದಿಗೂ ಮುಸುಕಾಗದು. ಪ್ರಧಾನಿ ನೆಹರೂರವರು ಸಂಬಂಧಪಟ್ಟವರಿಗೆ ಸತ್ಯದ ಪಕ್ಷ ಬಿಡದಿರುವಂತೆ ಮಾರ್ಗದರ್ಶನ ಮಾಡದುಳಿಯರು.

## ವಾರ್ತಾವೇದಿಕೆ

### ಪ್ರತಾಪಸಿಂಹ

ಪಂಜಾಬದ ಮುಖ್ಯ ಮಂತ್ರಿ ಪ್ರತಾಪಸಿಂಹ ಕೈರೋನರು ನಿಜಕ್ಕೂ ಪ್ರತಾಪಿಗಳೇ; ಸಿಂಹರೇ. ಆದುದರಿಂದಲೇ ತನ್ನ ರಾಜ್ಯದಲ್ಲಿ ತನ್ನ ಹುದ್ದೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಭಿನ್ನಾಭಿಪ್ರಾಯ— ಅಂತಃಕಲಹಗಳ ತವರೂರು ಪಂಜಾಬದಲ್ಲಿನ ಸಮಸ್ಯೆಗಳನ್ನು ಎದುರಿಸಲು ಬೇಕು ಸಿಂಹದ ಕೆಚ್ಚು. ವಿಷಮ ಪರಿಸ್ಥಿತಿ ಘೋಷಣೆಯೊಡನೆಯೇ ಮಿತವ್ಯಯವನ್ನು ಸಾಧಿಸುವುದು ಅನಿವಾರ್ಯವೆಂದಾಗ, ತನ್ನ ಮಂತ್ರಿ ಮಂಡಳಿಯ ಪ್ರಮಾಣವನ್ನು ಕನಿಷ್ಠ ರೂಪಕ್ಕೆ ಇಳಿಸಿ, ಉಳಿದ ರಾಜ್ಯಗಳಿಗೆ ಮಾದರಿಯಾಗಿ ನಿಂತ ಸಿಂಹ ಅವರು. ಇದೀಗ ಹಿಂದುಳಿದವರನ್ನು ಆರ್ಥಿಕ ತಳಹದಿಯ ಮೇಲೆ ನಿರ್ಧರಿಸುವ ಘೋಷಣೆಯು ಅವರ ಪ್ರತಾಪ ಪ್ರದರ್ಶಿಸುತ್ತಿದೆ; ೧,೦೦೦ ರೂಪಾಯಿ ವಾರ್ಷಿಕ ಆದಾಯಕ್ಕಿಂತ ಕಡಿಮೆ ಉತ್ಪನ್ನವಿರುವವರನ್ನು ಹಿಂದುಳಿದವರು ಎಂದು ಸಾರಿದ ಪ್ರತಾಪಸಿಂಹ ಕೈರಾನ್ ಸರಕಾರವು ಇನ್ನೂ ಜಾತೀಯ ಜಾಡಿನಲ್ಲಿ ಮುಂದುವರಿಯುತ್ತಿರುವ ಇತರ ರಾಜ್ಯಗಳಿಗೆ ಆದರ್ಶಪ್ರಾಯವಾಗಿದೆ. ಆದರೆ, ಒಬ್ಬನಲ್ಲಿರುವ ಒಳ್ಳೆಯ ಗುಣವನ್ನು ಸ್ವೀಕರಿಸಬೇಕಾದರೆ, ಎಳ್ಳಿನ ಏಳು ಭಾಗದಷ್ಟಾದರೂ ಒಳ್ಳೆಯತನವಿರಬೇಕಾಗುತ್ತದೆ. ಅದಿಲ್ಲದ ಸರಕಾರಗಳು ಏನು ತಾನೇ ಕಲಿತುಕೊಂಡಾವು?

### ಲಾಲ ಬಹದೂರ ಶಾಸ್ತ್ರಿ

ಕೇಂದ್ರ ಮಂತ್ರಿಗಳ ವಿದ್ಯುತ್ ಮತ್ತು ನೀರಿನ ವೆಚ್ಚವೆಲ್ಲವನ್ನೂ ಕೂಡಿಸಿದ ಸಂಸತ್ ಸದಸ್ಯರುಒಮ್ಮೆಗೆ ಕಂಗಾಲಾದರು. ಪ್ರತಿಯೊಬ್ಬ ಮಂತ್ರಿಯೂ ಈ ಸಂಬಂಧದ ವೆಚ್ಚದಲ್ಲಿ ಪರಸ್ಪರ ಸ್ಪರ್ಧೆಗೆ ನಿಂತಿದ್ದಾರೆಯೇ ಎಂಬ ಸಂದೇಹ ಹಲವರಲ್ಲಿ ಹುಟ್ಟಿತು. ಹೇಳಿ ಕೇಳಿ, ತಿಂಗಳಲ್ಲಿ ಮೂರ್ನಾಲ್ಕು ಪಾಲು ದಿನ ಸಂಚಾರದಲ್ಲೇ ಭತ್ತೆಗಿಟ್ಟಿಸುವ ಮಂತ್ರಿವರ್ಯರು ಉಳಿದ ದಿನಗಳಲ್ಲಿ ವಿದ್ಯುತ್ತನ್ನೇ ಸೇವಿಸುತ್ತಾರೆಯೋ ಎಂದು ಪ್ರಶ್ನಿಸಿದವರು ಇದ್ದರೂ ಇರಬಹುದು. ಇಂತಹ ಊಹಾಪೋಹಗಳಿಗೆ ಸರಕಾರಿ ಬೊಕ್ಕಸಕ್ಕೆ ಬೀಳುವ ತೂತೇ ಕಾರಣವಿರುವುದರಿಂದ, "ನನ್ನ ವೆಚ್ಚವನ್ನು ನಾನೇ ಕೊಡುತ್ತೇನೆ" ಎಂದ ಗೃಹ ಮಂತ್ರಿ ಲಾಲಬಹದೂರ ಶಾಸ್ತ್ರಿಗಳು ತಮ್ಮ ಬಹದೂರತನವನ್ನೇನೋ ತೋರಿಸಿದರು; ಆದರೆ ಉಳಿದ ಮಂತ್ರಿಗಳಿಗೆ ಮಾತ್ರ ದೊಡ್ಡ ಶಾಸ್ತಿಯನ್ನೇ ಮಾಡಿ ಬಿಟ್ಟರು.

### ಅಯ್ಯೂಬ ಖಾನ್

ಅನ್ಯಾಯಕ್ಕೂ ಮಿತಿಬೇಕು. ನೆಲಬೇಕು ಎಂಬುದು ಪ್ರಾಜ್ಞರ ಮಾತು. ಪಾಕಿಸ್ತಾನವು ಮಿತಿಮೀರಿದ ನೆಲೆಗಾಣದ ಅನ್ಯಾಯವನ್ನು ಮಾಡಿ ಅಪಚಾರವೆಸಗಿದುದು ಭಾರತಕ್ಕೆ ಮಾತ್ರವಲ್ಲ, ಭದ್ರತಾ ಸಮಿತಿಗೆ ಕೂಡ. ಕಾಶ್ಮೀರವನ್ನು ಅನ್ಯಾಯವಾಗಿ ಆಕ್ರಮಿಸಿದ ಪಾಕಿಸ್ತಾನವು ಭದ್ರತಾ ಮಂಡಳದ ಗೊತ್ತುವಳಿಯಂತೆ ಅದನ್ನು ತೆರವು ಮಾಡಬೇಕಾಗಿರುವಾಗ, ತಾನು ದಾಳಿ ನಡೆಸಿ ಅಕ್ರಮವಾಗಿ ವಶಪಡಿಸಿಕೊಂಡಿರುವ ಭಾರತದ

## ಅಲ್ಲಲ್ಲಿಯ ಸುದ್ದಿ ಸಾರ

**55ನೇ ವಯಸ್ಸಿಗೆ ನಿವೃತ್ತಿಮಾಡಲ್ಪಟ್ಟ ಉಪಾಧ್ಯಾಯರ ಸಮ್ಮೇಳನ** ಮೈಸೂರು ರಾಜ್ಯದಲ್ಲಿ ಉಪಾಧ್ಯಾಯರ ನಿವೃತ್ತಿಯ ವಯಸ್ಸು 58 ವರ್ಷವೆಂಬ ಆಜ್ಞೆಯನ್ನು 1957ರಲ್ಲಿ ಸರ್ಕಾರ ಸ್ವಲ್ಪ ಕಾಲ ರದ್ದುಗೊಳಿಸಿ ಮತ್ತೆ ಜಾರಿಗೆ ತಂದುದರಿಂದ ಸಾವಿರಾರು ಮಂದಿ ಉಪಾಧ್ಯಾಯರು ತಮ್ಮ 55ನೇ ವಯಸ್ಸಿಗೇ ನಿವೃತ್ತಿಮಾಡಲ್ಪಟ್ಟರು. ಸರ್ಕಾರದ ಈ ನೀತಿಯನ್ನು ಪ್ರಶ್ನಿಸಿ ಕೆಲವರು ಹೈಕೋರ್ಟಿನಲ್ಲಿ ರಿಟ್ ಹಾಕಿ ತಮ್ಮ ಪಕ್ಷವನ್ನು ಸ್ಥಾಪಿಸಿಕೊಂಡರೂ ಅವರಿಗೂ ಇನ್ನೂ ಪರಿಹಾರ ದೊರಕಿಲ್ಲ. ಆದುದರಿಂದ ಈ ಬಗ್ಗೆ ಮುಂದೆ ಏನು ಮಾಡಬೇಕೆಂಬುದನ್ನು ನಿರ್ಧರಿಸಲು 55ನೇ ವಯಸ್ಸಿಗೇ ನಿವೃತ್ತಿಗೊಳಿಸಲ್ಪಟ್ಟ ಉಪಾಧ್ಯಾಯರ ಸಮ್ಮೇಳನವನ್ನು 1963ನೇ ಎಪ್ರಿಲ್ ತಿಂಗಳು ಮೊದಲನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿದೆ. ಸಂಬಂಧಪಟ್ಟ ನಿವೃತ್ತ ಉಪಾಧ್ಯಾಯರೆಲ್ಲರೂ ತಮ್ಮ ಹೆಸರು ವಿಳಾಸಗಳೊಡನೆ ಮರುಪತ್ರಕ್ಕೆ ತಕ್ಕ ಸ್ಟ್ಯಾಂಪು ಸಹಿತ- ಮತಿಘಟ್ಟ ಕೃಷ್ಣಮೂರ್ತಿ, ಸಂಪಾದಕ, ಕ್ರಾಂತಿಕಾರಿ ಪತ್ರಿಕೆ, ಸಂಚಾಲಕ, ನಿವೃತ್ತ ಉಪಾಧ್ಯಾಯರ ಸಮ್ಮೇಳನ, ದತ್ತಾತ್ರೇಯ ಬಡಾವಣೆ, ಬೆಂಗಳೂರು 19 ಈ ವಿಳಾಸಕ್ಕೆ ಪತ್ರ ಬರೆಯಬೇಕಾಗಿ ಕೋರಿದೆ.

**ಶಿವಮೊಗ್ಗದಲ್ಲಿ ಡಾ| ಪೈಗಳಿಗೆ ಸತ್ಕಾರ ಕೂಟ** -- ಶಿವಮೊಗ್ಗದಲ್ಲಿ ಕರ್ನಾಟಕ ಸಂಘವು ಡಾ. ಟಿ ಎಂ ಎ. ಪೈಗಳಿಗೆ ಏರ್ಪಡಿಸಲಾದ ಸತ್ಕಾರ ಕೂಟವು ಜಿಲ್ಲಾ ಮುಖ್ಯಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಆದಿಯಲ್ಲಿ ಶ್ರೀ ಎಸ್ ನರಸಿಂಹ ಮೂರ್ತಿಯವರು ಸ್ವಾಗತಿಸಿದರು. ಆಮೇಲೆ ಡಾ ಪೈಗಳು ಮಾತಾಡುತ್ತಾ, ಮಣಿಪಾಲದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ತಮ್ಮ ಯೋಜನೆಯನ್ನು ಸಭಿಕರಿಗೆ ತಿಳಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಯು. ಎಸ್. ಶೆಣೈಯವರು ವಂದನೆಗಳನ್ನರ್ಪಿಸಿದರು.

---

ಭೂ ಭಾಗದ ಮೇಲೆ ಅಧಿಕಾರ ತೋರಿಸುವುದರಿಂದಲೇ ತೃಪ್ತವಾಗದೆ ಭಾರತದ ಭದ್ರತೆ ಮತ್ತು ಸಮಗ್ರತೆಗೆ ಧಕ್ಕೆ ಬರುವಂತೆ ಭಾರತದ ಸಾರ್ವಭೌಮತೆಯನ್ನು ಚೀನಾಕ್ಕೆ ಮಾರಲು ಹೊರಟಿದೆ. ಮಾರ್ಶಲ್ ಅಯೂಬ ಖಾನರ ತಮ್ಮ ಸರಕಾರದಿಂದಾದ ಈ ಅನ್ಯಾಯವನ್ನು ನ್ಯಾಯವೆಂದು ಸಮರ್ಥಿಸಲೇ ಬೇಕು. ಅದರ 'ನ್ಯಾಯ'ವೆಂಬುದಕ್ಕೊ ಒಂದು ನಿರ್ದಿಷ್ಟವಾದ ಅರ್ಥವಿವರಣೆಯಿದ್ದೇ ಇದೆಯಲ್ಲವೆ?

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

O. S. 576/1962.

ವಾದಿ— ಬಿ. ರಘುರಾಮ ಶೆಟ್ಟಿ.

ಮತ್ತು

ಪ್ರತಿವಾದಿಗಳು—1. ನಂಜಪ್ಪ ಗೌಡ(ಪೋತಿ)

2. ಸುಂದರ

ಇವರೊಳಗೆ

2ನೇ ಪ್ರತಿವಾದಿ ಕುಂದಾಪುರ ತಾಲ್ಲೂಕು ಉಳ್ತೂರು ಗ್ರಾಮದ ಕಾಮಣ್ಣನ ಮನೆ ಪಾರ್ವತಿ ಶೆಟ್ಟಿ ಮಗ ಹಾಲಿ ಹಾಸನ ಜಿಲ್ಲಾ ಚನ್ನರಾಯ ಪೇಟೆ ಚಂದ್ರಾಯ ಪಟ್ಟಣ ತಾಲ್ಲೂಕು ದೇವಸ್ಥಾನ ಕಾಳಿನಲ್ಲಿರುವವ.

2ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದರೆ—

ನೀವು ಕೂಡಾ ಪ್ರತಿವಾದಿಯು ತಾ 5.12.'49 ರಲ್ಲಿ ವಾದಿಗೆ ರೂ 600-00ಕ್ಕೆ ಬರಕೊಟ್ಟ ರಿ. ನೋ. ಈಡಿನ ಬಾಬಿನಲ್ಲಿ ಅಸ್ಲು ಬಡ್ಡಿ ಪೂರ್ಣ ಸಂಪೂರ್ಣ ಬಾಕಿ ಇದ್ದು ಆ ಬಗ್ಗೆ ಮೇಲಿನ ದಾವೆ ಮಾಡಿದ್ದಾಗಿರುತ್ತದೆ ಸದ್ರಿ ದಾವೆ ತಾ 27-3-1963ಕ್ಕೆ ತನ್ನಿಗೆ ಇದೆ. ನಿಮಗೇನಾದರೂ ಆಕ್ಷೇಪ ಇದ್ರೆ ಆ ದಿನ ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿರುತ್ತದೆ.

**G Kushala Hegde**

Advocate for Plff.

Coondapoor, 17—3—63.

---

**ಶಿವಮೊಗ್ಗ ರೋಟರಿ ಕ್ಲಬ್ಬಿನಲ್ಲಿ ಡಾ| ಟಿ ಎಂ. ಪೈಗಳು** – ಇದೇ 12ರಂದು ಮಾತಾಡುತ್ತಾ, ತೆರಿಗೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಜನತೆಯು ಈ ಭಾರವನ್ನು ಕಡಿಮೆಮಾಡಿಕೊಳ್ಳಲು 'ತೆರಿಗೆ ರಹಿತ ಸಮಾಜವ'ನ್ನು ಸೃಷ್ಟಿಸಬಹುದು, ಪ್ರತೀ ವರ್ಷವೂ ಜನತೆಯ ಆದಾಯದ ಮೇಲೆ ಶೇಕಡಾ 50ರಿಂದ 70ರ ವರೆಗೆ ಠೇವಣಿ ಹಣವನ್ನು ಅವರವರ ಉತ್ಪತ್ತಿಯನ್ನನುಸರಿಸಿ ಸಂಗ್ರಹಿಸಿ ಇಪ್ಪತ್ತು ವರುಷಗಳ ನಂತರ ಹಿಂದೆ ಕೊಡುವ ನೀತಿಯನ್ನನುಸರಿಸಿದರೆ ಸರಕಾರಕ್ಕೆ ಹಣವೂ ದೊರೆಯುವುದು ಜೊತೆಗೆ ಜನತೆಗೂ ಅನುಕೂಲವಾಗುವುದು ಎಂದು ಹೇಳಿದರು. ಸಮಾರಂಭದ ಆದಿಯಲ್ಲಿ ಅಧ್ಯಕ್ಷ ಶ್ರೀ ಎಚ್. ಆರ್. ರಂಗನಾಥರಾಯರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ರಾಮರಾಯರು ವಂದನಾರ್ಪಣೆಗೈದರು.

**ಭಾರಂಗಿ ಕೂಡ್ಲಿ** – ವರ್ಷಂಪ್ರತಿಯಂತೆ ತಾ 23-2 63ರಲ್ಲಿ ಶಿವರಾತ್ರಿ ಉತ್ಸವವು ಶ್ರೀ ಭಾರಂಗಿ ಕೂಡ್ಲಿ ಮಠದಲ್ಲಿ ವಿಜೃಂಭಣೆಯಿಂದ ಜರಗಿತ್ತಾದರೂ ಅನಾದಿಕಾಲದಿಂದಲೂ ಗುಮ್ಮನ ಗುಂಡಿಯ ಮಾರ್ಗದ ನೂರಾರು ಸಾಕಂ ಕಿನ್ನುಗಳು ಯಾತ್ರಾರ್ಥಿಗಳು ಕೊಟ್ಟ ಅಕ್ಕಿ ವಗೈರೆಗಳನ್ನು ಶೃಂಗೇರಿಯಂತೆ ಕೈಯಾರೆ ತಿಂದು ಹೋಗುತ್ತಿದ್ದರೂ ಸದ್ರಿ ಉಪ್ಪಾರ ಜನಾಂಗದ ಕೂಡ್ಲಿ ಮಠ ಮೂಳುಗಡೆಯ ದುಃಖ ಸೂಚನೆ ಎಂಬಂತೆ ಈ ಸಲದ ಜಾತ್ರೆಯ ದಿನ ತೋರಿಸಿಕೊಳ್ಳದಿರುವುದೇ ಅತೀ ವಿಶೇಷ ಹಾಗೂ ಪಟ್ಟದ ನವೀನ ಶ್ರೀ ಪಾದಂಗಳವರು ಜಿಲ್ಲಾ ಪ್ರವಾಸ ಬಳಿಗಳ ಕನ್ನಿ ಸ್ವೀನರುಗಳನ್ನಾಗಿ ಶ್ರೀಗಳಾದ ಮುದ್ದು ಮಾಸ್ತರು ನಾರಾಯಣ ಮತ್ತು ಕೌನ್ಸಿಲರ್ ಯು. ಗೋಪಾಲಕೃಷ್ಣ ಇವರನ್ನು ಮಾಡಿರುತ್ತಾರೆಂಬುದನ್ನು ಶಿಷ್ಯವೃಂದಕ್ಕೆ ಈ ಮೂಲಕ ತಿಳಿಸೋಣಾಗುತ್ತದೆ.

**ಡಾ. ಒಡೆಯರಿಗೆ ಷಷ್ಟ್ಯಬ್ಧಿ ಸನ್ಮಾನ**— ಇದೇ ತಾ 17ರಂದು ಮಂಗಳೂರಿನ ಕೆ. ಎಂ ಸಿ ಸಭಾಭವನದಲ್ಲಿ, ಡಾ ಎಂ. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಸಮರದ ವೀರರೂ, ದ. ಕ. ಜಿಲ್ಲೆಯ ಹೆಸರಾಂತ ಯಕ್ಷಗಾನ ಕಲಾವಿದರೂ ಆದ ಡಾ. ಎಸ್. ಎಚ್. ಒಡೆಯರವರಿಗೆ ಮಂಗಳೂರಿನ ಜನತೆ ಷಷ್ಟ್ಯಬ್ಧಿ ಸನ್ಮಾನವನ್ನೇರ್ಪಡಿಸಿತು.

ಆದಿಯಲ್ಲಿ ಸನ್ಮಾನ ಸಮಿತಿಯ ಅಧ್ಯಕ್ಷ ಶ್ರೀ ಕಯ್ಯಾರ ಕಿಂಞಣ್ಣ ರೈಗಳು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಅವರ ಸಾರ್ಥಕ ಜೀವನದ ಪರಿಚಯ ಮಾಡಿದರು ಡಾ ಎಂ ಎ . ಸಾಬಿಹಿಯವರು ಮಾನಪತ್ರ ಸಮರ್ಪಿಸಿದ ಬಳಿಕ ಶ್ರೀ ಎಚ್ ಮಾನವೋಹನ್ ಕಾಮತರು ಸಂದೇಶ ವಾಚನಗೈದರು ಶ್ರೀ ಶೆಣೈ ಕೃಷ್ಣ ಮೂರ್ತಿಯವರು ಅಭಿನಂದನಾ ಭಾಷಣ ಮಾಡುತ್ತಾ, ಒಡೆಯರವರ ಜೊತೆಗೆ ತನಗಾದ ಕೆಲವು ಅನುಭವಗಳನ್ನು ಸಭಿಕರಿಗೆ ತಿಳಿಸಿ, ಅವರು ಸಾಧಿಸಿರುವ ಹಿರಿಮೆಯನ್ನು ಸ್ಮರಿಸಿದರು.

ಶ್ರೀ ಹುರುಳಿ ಭೀಮರಾಯರು ಒಡೆಯರರವರ ನಿಷ್ಕಾಮ ಸೇವೆಯನ್ನು ವಿವರಿಸಿ ಇದೀಗ ಕಷ್ಟದಲ್ಲಿರುವ ಒಡೆಯರರವರಿಗೆ ಸರಕಾರದ ಸಹಾಯ ದೊರೆತರೆ, ಅದು ಸಾರ್ಥಕತೆ ಪಡೆದೀತು. ಅದಕ್ಕಾಗಿ ಎಲ್ಲರೂ ಶ್ರಮಿಸಬೇಕು ಎಂದು ಹೇಳಿದರು

ಡಾ| ಒಡೆಯರರವರು ಮಾತಾಡುತ್ತಾ, ಒಕ್ಕಟ್ಟಿನಲ್ಲಿ ದೇಶಕ್ಕಾಗಿ ಶ್ರಮಿಸಿದರೆ ಮಾತ್ರ ದೇಶ ಒಂದಾಗುವುದು. ಸುಮ್ಮನೆ ಒಳಗಿನ ಸಣ್ಣ ಸಣ್ಣ ಕಲಹಗಳಿಗೆ ಆಸ್ಪದ ಕೊಟ್ಟು ದೇಶವನ್ನು ಪುನಃ ದಾಸ್ಯತ್ವಕ್ಕೊಪ್ಪಿಸ ಬೇಡಿರಿ. ಎಂದು ಹೇಳಿದರು. ಬಳಿಕ ಸಮಿತಿಯ ಅಧ್ಯಕ್ಷರು ಒಡೆಯರರವರಿಗೆ ಉಡುಗೊರೆಗಳನ್ನರ್ಪಿಸಿದರು. ಸಭಾಧ್ಯಕ್ಷರ ಭಾಷಣವಾದ ಬಳಿಕ ಒಡೆಯರ್ ಮತ್ತು ಬಳಗದವರಿಂದ ಸಮರ ಸನ್ನಾಹವೆಂಬ ಯಕ್ಷಗಾನ ನೆರವೇರಿತು. ಅಂತ್ಯದಲ್ಲಿ ಶ್ರೀ ಮುನಿಪಾಲರಾಜುರವರು ವಂದನಾರ್ಪಣೆಗೈದರು.

**ಡಾ ಪೈಗಳ ನೇತೃತ್ವದಲ್ಲಿ ಮುಂಬಯಿಯಲ್ಲಿ ಶಾಲೆ ಕಾಲೇಜುಗಳ ಸ್ಥಾಪನಾಯೋಜನೆ** — ಮಣಿಪಾಲದ ಅಕಾಡೆಮಿ ಓಫ್ ಜನರಲ್ ಎಜ್ಯುಕೇಶನಿನವರ ಮುಂದಾಳುತನದಲ್ಲಿ ಮುಂಬಯಿಯಲ್ಲಿ ಹಲವಾರು ಶಾಲೆ, ಆರ್ಟ್ಸ್, ಸಾಯನ್ಸ್ ಮತ್ತು ತಾಂತ್ರಿಕ ಕಾಲೇಜುಗಳ ಸ್ಥಾಪನೆಯಾಗಲಿದೆ ಇದಕ್ಕಾಗಿ ಮುಂಬಯಿಯಲ್ಲಿ, ಜನರಲ್ ಎಜ್ಯುಕೇಶನ್ ಸೊಸೈಟಿಯ ಸಂಸ್ಥೆಯೊಂದು ಸ್ಥಾಪನೆಯಾಗಿದೆ ಈ ಯೋಜನೆಗೆ ಪ್ರಾರಂಭದಲ್ಲಿ ಬೇಕಾಗುವ 1 ಕೋಟಿ ರೂಗಳ ಮೊತ್ತವನ್ನು 8% ಬಡ್ಡಿಯಲ್ಲಿ ಸಾಲವಾಗಿ ಸಂಗ್ರಹಿಸಲಾಗುವುದು ಎಂದು ಡಾ. ಟಿ. ಎಂ. ಎ. ಪೈಗಳು ಸುದ್ದಿಗಾರರ ಪರಿಷತ್ತಿನಲ್ಲಿ ಇತ್ತೀಚೆಗೆ ಪ್ರಕಟಿಸಿದ್ದಾರೆ ಶ್ರೀ ಪೃಥ್ವಿರಾಜ ಕಪೂರರು ಮುಂಬಯಿಯ ಆಡಳಿತ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅಲ್ಲಿನ 25 ಲಕ್ಷ ರೂಪಾಯಿಗಳ ವಾಗ್ದಾನ ಮಾಡಿದ್ದಾರೆ.

**ಲಕ್ನೋದ ನೇತ್ರ ಚಿಕಿತ್ಸಾಶಿಬಿರದಲ್ಲಿ ಡಾ. ಪಿ ಎನ್, ಶ್ರೀನಿವಾಸ ರಾಯರ ದಕ್ಷಸೇವೆ**— ಲಕ್ನೋದ ಸಮೀಪ ಚಿನಹಟ್ ಎಂಬಲ್ಲಿ ಲಕ್ನೋದ ರೋಟರಿ ಕ್ಲಬ್ಬಿನವರು ಇದೇ ಕಳೆದ ಜನವರಿ 26ರಿಂದ ಎರಡು ವಾರಗಳ ವರೆಗೆ ಏರ್ಪಡಿಸಿದ ನೇತ್ರ ಚಿಕಿತ್ಸಾ ಶಿಬಿರದಲ್ಲಿ 800ಕ್ಕೂ ಮಿಕ್ಕಿ ನೇತ್ರ ರೋಗಿಗಳು ಪೂರ್ತಿ ಗುಣಹೊಂದಿದರು. ಈ ಶಿಬಿರದಲ್ಲಿ ಚಿಕಿತ್ಸೆ ಪಡೆದ 825 ಹೊರ ರೋಗಿಗಳಲ್ಲಿ 129 ಮಂದಿಗೆ ಶಸ್ತ್ರಚಿಕಿತ್ಸೆ ನಡೆಯಿತು ಈ 129ರಲ್ಲಿ 55 ಕಣ್ಣು ಪರೆಯವುಗಳಾಗಿದ್ದವು ಹಿಂದೆಂದೂ ನಡೆಯದ ಈ ಯಶಸ್ವಿ ಶಿಬಿರದ ಸಂಘಟನಾ ಕಾರ್ಯವು ಶ್ರೀಮತಿ ಸುಚೇತಾ ಕೃಪಲಾನಿ ಮೊದಲಾದವರ ಪ್ರಶಂಸೆಗೂ ಪಾತ್ರವಾಗಿತ್ತು. ಈ ಶಿಬಿರದಲ್ಲಿ ಚಿಕಿತ್ಸೆ ನಡೆಸಿದ ಡಾಕ್ಟರರುಗಳಲ್ಲಿ ಉಡುಪಿಯ ಡಾ. ಪಿ ಎನ್. ಶ್ರೀನಿವಾಸರಾಯರು ಪ್ರಮುಖರಾಗಿದ್ದರು. ಉಡುಪಿಯ ಎಡ್ವೋಕೇಟ್ ಶ್ರೀ ಪಿ ಎನ್ ಕೃಷ್ಣಮೂರ್ತಿರಾಯರ ಸಹೋದರರಾದ ಡಾ. ಪಿ. ಎನ್. ಶ್ರೀನಿವಾಸರಾಯರು ಲಕ್ನೋವಿನ ಕಿಂಗ್ ಜಾರ್ಜ್ಸ್ ಮೆಡಿಕಲ್ ಕಾಲೇಜಿನಲ್ಲಿ ಎಂ. ಎಸ್ ಪದವಿ ಅಧ್ಯಯನ ಮಾಡುತ್ತಿದ್ದ ಇದೇ ತಿಂಗಳಲ್ಲಿ ವ್ಯಾಸಂಗ ಮುಗಿಸಿ ಉಡುಪಿಗೆ ಹಿಂತಿರುಗಲಿರುವರೆಂದು ತಿಳಿದು ಬರುತ್ತದೆ.

**ಮುಂಬಯಿಯಲ್ಲಿ ಸರ್ವಜ್ಞ ಸಾಹಿತ್ಯ ಪರಿಚಯ** -- ಮುಂಬಯಿಯ ಕರ್ನಾಟಕ ಧರ್ಮಾರ್ಥ ಪ್ರೌಢ ರಾತ್ರಿ ಶಾಲಾ ಹಿರಿಗನ್ನಡ ಕೂಟವು ದಿನಾಂಕ 10-3-63 ರಂದು ಪ್ರಿನ್ಸಿಪಾಲ್ ಎಂ ಕೆ. ಪಿ ಶೆಣೈಯವರ ಅಧ್ಯಕ್ಷತೆಯಲ್ಲಿ "ಸರ್ವಜ್ಞ ಸಾಹಿತ್ಯ ಪರಿಚಯ" ಎಂಬ ಸಾಹಿತ್ಯಿಕ ಕಾರ್ಯಕ್ರಮವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿತು.

ಶಾಲಾ ವಿದ್ಯಾರ್ಥಿ ಶ್ರೀ ಅನಂತಯ್ಯ ಕನ್ನಡ ನಾಡ ಗೀತೆಯನ್ನು ಹಾಡಿದ ಬಳಿಕ ಶ್ರೀ ಶೇಖರ ಇಡ್ಯ ಅವರು ಸ್ವಾಗತ ಭಾಷಣ ಮಾಡಿದರು. ಕರ್ನಾಟಕ ಧರ್ಮಾರ್ಥ ಪ್ರೌಢ ರಾತ್ರಿ ಶಾಲೆಯ ಹಳೆ ವಿದ್ಯಾರ್ಥಿ ಶ್ರೀ ರತ್ನವರ್ಮ ಅವರು ರಚಿಸಿದ ಸರ್ವಜ್ಞ ಕವಿಯ ಭವ್ಯ ತೈಲ ಚಿತ್ರ ಮತ್ತು ದಿ ರೆ ಚೆನ್ನಪ್ಪ ಉತ್ತಂಗಿ ಅವರ ಭಾವ ಚಿತ್ರವನ್ನು ಮುಖ್ಯ ಅತಿಥಿ ಪ್ರಾ| ಚಿದಂಬರ ದೀಕ್ಷಿತ ಎಂ. ಎ. ಅವರು ಅನಾವರಣಗೈದರು. ದಿ. ರೆ ಚೆನ್ನಪ್ಪ ಉತ್ತಂಗಿ ಅವರ ಕುರಿತು ಶ್ರೀ ಶ್ರೀನಿವಾಸ ಹಾವನೂರ ಅವರು ಬರೆದು ಕಳುಹಿಸಿದ ಭಾಷಣವನ್ನು ಶ್ರೀ ರಾಮಚಂದ್ರ ಉಚ್ಚಿಲ್ ಅವರು ಓದಿದರು. ಆ ಬಳಿಕ ಶ್ರೀಮತಿ ಸುನೀತಾ ಶೆಟ್ಟಿ ಬಿ ಎ ಎಲ್ ಟಿ. ಅವರೂ ಶ್ರೀ ರಾಮಾಚಾರ್ಯ ಜೋಶಿ ಅವರೂ 'ಸರ್ವಜ್ಞ ಸಾಹಿತ್ಯದ ಕುರಿತು ಮಾತನಾಡಿದರು. ಮುಖ್ಯ ಅತಿಥಿ ಪ್ರಾ. ಚಿದಂಬರ ದೀಕ್ಷಿತ ಅವರು ಸರ್ವಜ್ಞ ಕವಿ ಮತ್ತು ರೆವರೆಂಡ್ ಉತ್ತಂಗಿಯವರ ಕುರಿತು ವಿದ್ವತ್ಪೂರ್ಣ ಭಾಷಣ ಗೈದರು ಶ್ರೀ ಶ್ರೀಪತಿ ಭಟ್ಟರೂ ಶ್ರೀ ತಿಮ್ಮಪ್ಪ ಎಸ್. ಶೆಟ್ರು ಕಾವ್ಯವಾಚನ ಗೈದರು. ಅಧ್ಯಕ್ಷ ಶ್ರೀ ಶೆಣೈಯವರು ಭಾಷಣ ಮಾಡಿದ ಬಳಿಕ ಶ್ರೀ ಎಸ್ ಎಂ ಶೆಟ್ಟಿ ಶಿವುಂಜೆ ಪಡಾರಿ ಇವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

**ದೇಲಂಪಾಡಿ** — ತಾ 13ರಂದು ರಾಷ್ಟ್ರೀಯ ರಕ್ಷಣಾ ನಿಧಿಯ ಸಹಾಯಾರ್ಥವಾಗಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಡಿ. ಕೃಷ್ಣಯ್ಯ ಕಾಟೂರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ನಾಟಕ ಪ್ರದರ್ಶನವೊಂದು ಜರಗಿ ಸಂಗ್ರಹವಾದ ರೂ. 309ನ್ನು ರಾ ನಿಧಿಗಾಗಿ ಒಪ್ಪಿಸಲಾಯಿತು. ಆರಂಭದಲ್ಲಿ ಶ್ರೀ ಕೇರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಸ್ವಾಗತಿಸಿದರು. ಶ್ರೀ ಮುಕಾಲಿಂಗನವರು ಮಾತನಾಡಿದ ಮೇಲೆ ಅಧ್ಯಕ್ಷರ ಭಾಷಣವಾಯಿತು.

---


# ರಾಷ್ಟ್ರೀಯ ರಕ್ಷಣಾನಿಧಿಯ ಸಹಾಯಾರ್ಥವಾಗಿ

## ಉಡುಪಿ ನಾಟ್ಯ ಕೂಟದವರಿಂದ ಹೊಸ ನಾಟಕ

# ದಾರಿ ತೋರಿದ ದಾದಿ

ತಾ. **23-3-63**ನೇ ಶನಿವಾರ ರಾತ್ರಿ **9-30**ಕ್ಕೆ

ಡಾ| ಯು ಸುಂದರರಾವು ಪೈ ಸ್ಮಾರಕ ರಂಗಮಂಟಪದಲ್ಲಿ

— ಮುಖ್ಯ ಭೂಮಿಕೆಯಲ್ಲಿ —

ಡಾ| ಕೆ. ಎಲ್. ಐತಾಳ್, ಎ. ಜೆ ಆಳ್ವ, ಪಿ. ಶೀನ ಶೆಟ್ಟಿ, ಎಸ್. ಡಿ ಪೆಜತ್ತಾಯ, ಟಿ. ಗಣೇಶ ಯು. ಪೈ, ಎಂ ಎಸ್. ಇಬ್ರಾಹಿಮ್ ಸಾಹೇಬ್, ಪಿ ಕಾಳಿಂಗ ಹೆಬ್ಬಾರ್, ಬಾಲಕೃಷ್ಣ ಪಾಂಗಣ್ಣಾಯ, ಕೆ. ಅನಂತರಾಮ ಉಪಾಧ್ಯಾಯ ಮೊದಲಾದವರು

ಪ್ರವೇಶ ದರ: ರೂ 5, 3, 2, ಮತ್ತು 1.

ಮುಂದಿನ ನಾಟಕ: ಉಡುಪಿ ಮಹಿಳಾ ಸಮಾಜದವರಿಂದ

ತಿರುಮಂತ್ರ ಮತ್ತು ಕೂಡಲಾರದ ಕಣ್ಣು.

ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ, ಉಡುಪಿ


---

**ಕಾಸರಗೋಡು**

**ಮುನ್ಸಿಫ್ ಕೋರ್ಟಿನಲ್ಲಿ**

R. E. P. 549/62.

ಐತಪ್ಪ —ಅರ್ಜಿದಾರ.

ಶಾಂತರಾಮ ಶೆಟ್ಟಿ ಕೂಡಾ—ರೈಸಾಂಡೆಂಟರು.

RI. ಶಾಂತರಾಮ ಶೆಟ್ಟಿ, ಸೂಲಿಂಗ ಶೆಟ್ಟಿಯ ಮಗ, ಕಾಸರಗೋಡು ತಾಲೂಕಿನ ಮಂಗಲ್ಪಾಡಿಯಲ್ಲಿರುವವ.

ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅಮಲ್ಜಾರಿ ತಾರೀಕು 3-4 1963 ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದರೆ ಸದ್ರಿ ದಿನ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

By order of Court.

(*Sd*). **P. Narayana Bhat,**

Advocate for Petitioner.

ಕಾಸರಗೋಡು, 16—3—1963.

## ಲೇಖನ ಕಲೆಯಲ್ಲಿ ತರಬೇತಿ

# ಅಯೋವಾ ವಿಶ್ವವಿದ್ಯಾಲಯದ ಲೇಖನ ಕಾರ್ಯಾಲಯ

ಲೇಖನವೂ ಒಂದು ಕಲೆ. ಇದು ಎಲ್ಲರಲ್ಲಿಯೂ ಇರವುದಿಲ್ಲ ಇದ್ದವರಿಗಾದರೂ ಅದನ್ನು ಬೆಳೆಸಿಕೊಂಡು ಹೋಗುವ ಮತ್ತು ಅದನ್ನು ಹದನು ಮಾಡುವ ಅವಕಾಶಗಳು ಕಡಿಮೆ. ಲೇಖನ ಸಾಮರ್ಥ್ಯವುಳ್ಳವರು ತಮ್ಮಲ್ಲಿ ಹುದುಗಿರುವ ಚೇತನಾಶಕ್ತಿಯನ್ನು ಬೆಳೆಸಿಕೊಳ್ಳಲು ಸರಿಯಾದ ವಾತಾವರಣವನ್ನು ನಿರ್ಮಿಸಿಕೊಟ್ಟರೆ, ಅದರಿಂದ ಉತ್ತಮ ಸಾಹಿತ್ಯ ಸೃಷ್ಟಿಯಾಗಬಹುದು. ಇದಕ್ಕಾಗಿ ಲೇಖನ ಕಾರ್ಯಾಲಯಗಳು ಸ್ಥಾಪನೆಗೊಳ್ಳಬೇಕು. ಅಮೆರಿಕೆಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಈಗ ಇಂತಹ ಕಾರ್ಯಾಲಯಗಳು ಸ್ಥಾಪಿತವಾಗಿವೆ. ಇದಕ್ಕೆ ಮೂಲ ಪ್ರೇರಕರಾದವರು ಅಯೋವಾ ರಾಜ್ಯ ವಿಶ್ವವಿದ್ಯಾನಿಲಯದ ಲೇಖನ ಕಾರ್ಯಾಲಯದ ಡೈರೆಕ್ಟರಾಗಿರುವ ಪಾಲ್ ಎಂಗಲ್ ಅಯೋವಾ ಎಂಬ ಮಹನೀಯರು.

ಲೇಖನ ಕಾರ್ಯಾಲಯಗಳೆಂದರೇನು? ಅವು ಮಾಡಬಹುದಾದ ಕಾರ್ಯಗಳು ಯಾವುವು? ಮತ್ತು ಅವುಗಳಿಂದ ಏನು ಪ್ರಯೋಜನ?—ಎಂಬ ಪ್ರಶ್ನೆಗಳೇಳುವುದು ಸ್ವಾಭಾವಿಕ. ಈ ಕಾರ್ಯಾಲಯಗಳಲ್ಲಿ ನುರಿತ ಲೇಖಕರುಗಳಿಂದ ಕೂಡಿದ ಅಧ್ಯಾಪಕ ವರ್ಗದವರು ಪ್ರತಿಭಾವಂತ ವಿದ್ಯಾರ್ಥಿಗಳೊಡನೆ ಕೆಲಸ ಮಾಡಿ ಸಾಹಿತ್ಯದ ಮೇಲೆ ಭಾಷಣಗಳನ್ನೂ ವಿಚಾರ ಗೋಷ್ಠಿಗಳನ್ನೂ ನಡೆಸುತ್ತಾರೆ. ವಿಚಾರ ಗೋಷ್ಠಿಗಳಲ್ಲಿ ವಿದ್ಯಾರ್ಥಿಗಳು ನುರಿತ ಕಾದಂಬರಿಕಾರರ ಮತ್ತು ಕವಿಗಳ ಕೃತಿಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸುತ್ತಾರೆ. ಕಾರ್ಯಾಲಯದಲ್ಲಿ ಅವರ ಲೇಖನಗಳನ್ನು ಪ್ರತ್ಯೇಕಿಸಿ ವಿಮರ್ಶಿಸುತ್ತಾರೆ. ಅಮೆರಿಕೆಯ ಲೇಖನ ಕಾರ್ಯಾಲಯಗಳಲ್ಲಿ ರಾಬರ್ಟ್ ಪೆನ್ ವಾರೆನ್, ರಾಬರ್ಟ್ ಲೋವೆಲ್, ವಾನ್ಸ್ ಬೊರ್ಜೈಲಿ, ವರ್ಲಿನ್ ಕ್ಯಾಸಿಲ್, ಡೊನಾಲ್ಡ್ ಜಸ್ಟಿಸ್ ಮೊದಲಾದ ಸುವಿಖ್ಯಾತ ಲೇಖಕರೂ ಭಾಗವಹಿಸುತ್ತಾರೆ.

ವಿಶ್ವದ ಬೇರೆ ಬೇರೆ ದೇಶಗಳಿಂದ ತರುಣ ಲೇಖಕರು ತಮ್ಮ ಲೇಖನ ಕಲೆಯನ್ನು ಇಲ್ಲಿ ಮುಂದುವರಿಸಲು, ಮಾರ್ಗದರ್ಶನ ಪಡೆಯಲು ಉತ್ಸಾಹವನ್ನು ತೋರಿಸುತ್ತಾರೆ. ಆದರೆ, ಆರ್ಥಿಕ ಕಾರಣಗಳಿಂದ ಅವರ ಉತ್ಸಾಹಕ್ಕೆ ತಣ್ಣೀರೆರಚ ಬೇಕಾಗಿ ಬಂದಿದೆ. "ಅನೇಕ ದೇಶಗಳು ತಮ್ಮ ತರುಣ ಎಂಜಿನಿಯರರನ್ನು, ಡಾಕ್ಟರರುಗಳನ್ನು, ವಿಜ್ಞಾನಿಗಳನ್ನು ಹೆಚ್ಚಿನ ಅಧ್ಯಯನಕ್ಕಾಗಿ ವಿದೇಶಗಳಿಗೆ ಕಳಿಸುವ ಪರಿಪಾಠವಿದೆ. ಈ ದೇಶಗಳಲ್ಲಿ ಕಲೆಗಳಲ್ಲಿ ಪ್ರತಿಭಾ ಸಂಪನ್ನರಾದವರೂ ಇದ್ದಾರೆ. ಇಂತಹರನ್ನು ಆಯ್ದು ಅಮೆರಿಕೆಯ ಲೇಖನ ಕಾರ್ಯಾಲಕ್ಕೆ ಕಳಿಸುವುದು ಅಪೇಕ್ಷಣೀಯ" ಎನ್ನುತ್ತಾರೆ ಪ್ರೊ| ಎಂಗಲ್.

ಪ್ರೊ| ಎಂಗಲ್‌ರವರು ಅಯೋವಾ ವಿಶ್ವವಿದ್ಯಾಲಯಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಅಪೂರ್ವ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರ ಸಾಧನೆಯು ಸಾಹಿತ್ಯ ಮತ್ತು ಜನ ಸಂಪರ್ಕದ ವಿಚಕ್ಷಣೆಗಳ ಸಂಮಿಶ್ರಣ. ಅವರ ಲೇಖನ ಕಾರ್ಯಾಲಯವು ವಿಶ್ವದ ಉದಯೋನ್ಮುಖ ಲೇಖಕರನ್ನು ಆಕರ್ಷಿಸಿದೆ. ತರುಣ ಲೇಖಕರಿಗೆ ಸಹಾಯ ಮಾಡುವುದೊಂದು ಒಳ್ಳೆಯ ಕೆಲಸವೆಂಬುದನ್ನು ಉತ್ಪಾದಕರಿಗೆ, ವಿಮಾ ಕಂಪೆನಿಗಳಿಗೆ, ಬ್ಯಾಂಕುಗಳಿಗೆ, ಖಾಸಗಿ ಸಭೆಗಳಿಗೆ, ಸಣ್ಣ ದೊಡ್ಡ ವ್ಯಾಪಾರಿಗಳಿಗೆ ಮಾತ್ರವಲ್ಲ, ಜನಸಾಮಾನ್ಯರಿಗೆ ಕೂಡ ಮನವರಿಕೆ ಮಾಡಿಕೊಟ್ಟವರೆಂದರೆ ಪ್ರೊ| ಎಂಗಲ್. ಇದರಿಂದಾಗಿಯೇ ಅಯೋವಾ ಇಂಡಸ್ಟ್ರೀಸ್ ಫೆಲೋಷಿಪ್‌ಗೆ ಇವರೆಲ್ಲರೂ ನೆರವು ನೀಡುತ್ತಾರೆ, ಅನೇಕ ವಿದ್ಯಾರ್ಥಿಗಳು ಲೇಖನ ಕಾರ್ಯಾಲಯಗಳಲ್ಲಿದ್ದಾರೆ.

"ಪ್ರತಿಭಾವಂತ ಲೇಖಕರನ್ನು ಕಂಡು ಅವರ ಲೇಖನ ಸಾಮರ್ಥ್ಯದ ಬೆಳವಣಿಗೆಗೆ ನೆರವಾಗುವುದಕ್ಕಿಂತ ಸಂತೋಷಪ್ರದವಾದ ಕಾರ್ಯ ಬೇರೊಂದಿಲ್ಲ"ವೆನ್ನುವ ಕಳೆದ ವರ್ಷ ಪ್ರಿಯುದ ಪ್ರೊ. ಎಂಗಲ್ ಐದು ದಿನಗಳ ಭಾರತ ಸಂಚಾರವನ್ನು ಮುಗಿಸಿದರು. ಮುಂದೆ ಅವರು ಥ್ಯಾಲೇಂಡ್, ಫಿಲಿಫೈನ್ಸ್, ಜಪಾನ್, ಹಾಂಗ್ ಕಾಂಗ್ ಮತ್ತು ಜನತಾ ಚೀನಗಳ ಸಂಚಾರ ಮಾಡಲಿದ್ದಾರೆ. ಇವರ ಸಂಚಾರದ ಮೂಲೋದ್ದೇಶ ಆಧುನಿಕ ಏಶ್ಯಾದಲ್ಲಿನ ಸಾಹಿತ್ಯ ಬೆಳವಣಿಗೆಯನ್ನು ಅಧ್ಯಯನ ಮಾಡುವುದು ಮತ್ತು ತರುಣ ಲೇಖಕರನ್ನು ಭೆಟ್ಟಿಮಾಡುವುದು ಈ ಬಗೆಯ ಪರಸ್ಪರ ಅಭಿಪ್ರಾಯ ವಿನಿಮಯದಿಂದ ತನಗೂ ಇತರರಿಗೂ ಒಳ್ಳೆಯದಾಗುವುದೆಂದವರ ಆಶಯ. "ನನಗೆ ಕಲಿಯಲು ಇದೊಂದು ದೊಡ್ಡ ಅವಕಾಶ"ವೆನ್ನುವ ಪ್ರೊ| ಎಂಗಲ್ ತನ್ನಿಂದಲೂ ಏಶ್ಯನ್ನರು ಏನನ್ನಾದರೂ ಕಲಿತುಕೊಳ್ಳಬಹುದು ಎಂಬ ಭಾವನೆಯನ್ನೂ ಇಟ್ಟುಕೊಂಡಿದ್ದಾರೆ. ತರುಣ ಲೇಖಕರು ಎದುರಿಸಬೇಕಾಗಿರುವ ಸಮಸ್ಯೆಗಳ ಅಧ್ಯಯನ ನಡೆಸುವುದರೊಂದಿಗೆ ಏಶ್ಯನ್ ದೇಶಗಳ ವೈಭವಯುತ ದೃಶ್ಯಗಳನ್ನು ನೋಡುವ, ಅವುಗಳ ಸುಮಧುರ ನಾದಗಳನ್ನೂ ಕೇಳುವ ಮತ್ತು ಜನತೆಯನ್ನು ಸರಿಯಾಗಿ ಅರಿತುಕೊಳ್ಳುವ ಬಯಕೆಯನ್ನೂ ಇಟ್ಟುಕೊಂಡಿದ್ದಾರೆ.

ಏಶ್ಯನ್ ಪ್ರವಾಸ ಕಾಲದಲ್ಲಿ ಪ್ರೊ| ಎಂಗಲ್ ಇನ್ನೊಂದು ಕಾರ್ಯವನ್ನೂ ಮಾಡುತಿದ್ದಾರೆ ಅಯೋವಾ ವಿಶ್ವವಿದ್ಯಾಲಯದ ಹೊಸ ಭಾಷಾಂತರ ವಿಭಾಗವನ್ನು ಕುರಿತು ಅವರು ಭಾಷಣಗಳನ್ನು ಏರ್ಪಡಿಸುತಿದ್ದಾರೆ, ಇಂತಹ ಕಾರ್ಯಾಲಯವಿರುವುದು ಇಲ್ಲೇ ಮೊದಲು. ಈ ಭಾಷಾಂತರ ಕಾರ್ಯಾಲಯದಲ್ಲಿ ಏಶ್ಯನ್ ಭಾಷೆಗಳಿಂದ ಪಾಶ್ಚಿಮಾತ್ಯ ಭಾಷೆಗಳಿಗೆ ಅನುವಾದ ಮಾಡುವ ಕಾರ್ಯ ನಡೆಯುತ್ತಿದೆ.

ಲೇಖಕರ ಮತ್ತು ಸಾಹಿತ್ಯದಲ್ಲಿ ಆಸಕ್ತಿ ತಾಳಿ. ಅದನ್ನು ಬೆಳೆಸಿಕೊಂಡ ಪ್ರೊ| ಎಂಗಲ್ ಮಧ್ಯ ಪಶ್ಚಿಮ ಅಮೆರಿಕೆಯಲ್ಲಿ ಜನಿಸಿದ್ದರು. ಕುದುರೆಗಳನ್ನು ಸಾಕುತಿದ್ದ ತಮ್ಮ ತಂದೆಗೆ ಇವರು ಬಾಲ್ಯದಲ್ಲಿ ಸಹಾಯಕರಾಗಿದ್ದರು. ಇತರ ಅನೇಕ ಅಮೆರಿಕನ್ ಬಾಲಕರಂತೆ ವಿದ್ಯಾರ್ಥಿ ದೆಸೆಯಲ್ಲಿ ತಮ್ಮ ವೆಚ್ಚಕ್ಕಾಗಿ ವೃತ್ತ ಪತ್ರಿಕೆಗಳನ್ನು ಮಾರುವುದೇ ಮೊದಲಾದ ಅನೇಕ ಚಿಕ್ಕ ಪುಟ್ಟ ಕೆಲಸಗಳನ್ನು ಇವರು ಮಾಡಿದ್ದರು.

ಪ್ರೊ| ಎಂಗಲ್‌ರವರಲ್ಲಿ ಹುದುಗಿದ್ದ ಸಾಹಿತ್ಯಶಕ್ತಿ ಪ್ರೌಢ ಶಾಲೆಯಲ್ಲಿರುವಾಗಲೇ ವಿಕಸಿತವಾಗಿತ್ತು. ಅಂದು ಅವರು ತೊಡಗಿದ ಕವನ ಲೇಖನವನ್ನು ಇಂದಿಗೂ ಮುಂದುವರಿಸುತ್ತ ಬಂದಿದ್ದಾರೆ. ತಮ್ಮ ಹುಟ್ಟೂರು ಅಯೋವಾದ ಸೆಡಾರ್ ರಾಪಿಡ್ಸ್‌ನ ಕೋ ಕಾಲೇಜಿನಿಂದ ಪದವೀಧರರಾದ ಬಳಿಕ ಅಯೋವಾ ವಿಶ್ವವಿದ್ಯಾಲಯವನ್ನಿವರು ಸೇರಿದರು. "ವೋರ್ನ್ ಅರ್ತ್" ಎಂಬ ಪ್ರಥಮ ಕವಿತಾ ಸಂಕಲನವು ಇವರಿಗೆ ಮಾಸ್ಟರ್ ಆಫ್ ಆರ್ಟ್ಸ ಪದವಿಯನ್ನು ಗಳಿಸಿಕೊಟ್ಟಿತು. ಆಗ, ಇಂತಹ ಕೃತಿಗಳನ್ನು ಉನ್ನತ ಪದವಿಗಳಿಗೆ ಅಂಗೀಕರಿಸುವ ಪರಿಪಾಠ ಅಮೆರಿಕೆಯಲ್ಲಿಯೂ ಇದ್ದಿರಲಿಲ್ಲ ಪದವೀದಾನದಲ್ಲಿ ಸಾಹಿತ್ಯ ಕೃತಿಗಳಿಗೆ ಮನ್ನಣೆ ನೀಡುವುದಕ್ಕೆ ಒಪ್ಪಿಗೆಯಿತ್ತ ಅಮೆರಿಕೆಯ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅಯೋವಾ ಪ್ರಪ್ರಥಮವಾದುದು

ನ್ಯೂಯಾರ್ಕಿನ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಅಧ್ಯಯನ ಮಾಡಿದ ಎಂಗಲ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ರೋಡ್ಸ್ ಪ್ರಾಧ್ಯಾಪಕರಾದರು. ಮುಂದೆ ಅಯೋವಾಕ್ಕೆ ಮರಳಿ ಅಲ್ಲಿ ಲೇಖಕರ ಕಾರ್ಯಾಲಯದ ಪ್ರಧಾನರಾದರು.

'ವೋರ್ನ್ ಅರ್ತ್' ಸಂಕಲನದ ಮೇಲೆ ಪ್ರೊ| ಎಂಗಲ್ ಏಳು ಇಂತಹ ಸಂಗ್ರಹವನ್ನೂ ಒಂದು ಕಾದಂಬರಿಯನ್ನೂ ಒಂದು ಸ್ಮರಣ ಸಂಕಲನವನ್ನೂ ಅನೇಕ ಸಂಗೀತ ಪದ್ಯ ಪುಸ್ತಕಗಳನ್ನೂ ರಚಿಸಿದ್ದಾರೆ ಹಲವಾರು ಪುಸ್ತಕಗಳ ಸಂಪಾದಕರಾಗಿ ದುಡಿದಿದ್ದಾರೆ; ವಿಮರ್ಶೆಗಳನ್ನು ಬರೆದಿದ್ದಾರೆ. ಬೇರೆ ಬೇರೆ ರೇಡಿಯೋ ಮತ್ತು ಟೆಲಿವಿಜನ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ ಅಮೆರಿಕೆಯ ಎಲ್ಲ ಭಾಗಗಳಲ್ಲೂ ಭಾಷಣಗಳನ್ನು ಮಾಡಿ ಏಶ್ಯನ್ ಪ್ರತಿಭಾವಂತರ ಭೇಟಿಗಾಗಿ ಬಂದ ಈ ಅಮೆರಿಕನ್ ಪ್ರತಿಭಾವಂತರಿಗೆ ಸರ್ವತ್ರ ಶುಭಾಗಮನವು ಕಾದಿದೆ.

---

## ಚೀನೀಯರು ಏನು ಬಯಸುತ್ತಾರೆ?

(೧ನೇ ಪುಟದಿಂದ)

ಲ್ಲಿ ಕೀರ್ತಿಗಳಿಸಿದ ಭಾರತದ ಮುಖಕ್ಕೆ ಮಸಿ ಬಳೆಯುವುದಷ್ಟೇ ಸದ್ಯದ ಅದರ ಉದ್ದೇಶ. ಇಡಿಯ ಏಶ್ಯಾದಲ್ಲಿ ತಾನೊಬ್ಬನೇ ಮಹಾಶಕ್ತಿ ಸಂಪನ್ನನೆಂದು ಎಲ್ಲರನ್ನೂ ಹೆದರಿಸಿ ಅವರನ್ನು ತನ್ನ ಪ್ರಭಾವದಡಿಯಿಡಲು ಬಯಸುವ ಚೀನಾದ ಮಹತ್ವಾಕಾಂಕ್ಷೆ ಹಿಟ್ಲರನದಕ್ಕಿಂತ ಹೆಚ್ಚಿನದಲ್ಲ. ಆದರೆ ಅವನ ಗತಿ ಯೇನಾಯಿತು? ಇತಿಹಾಸದಿಂದ ಪಾಠ ಕಲಿಯುವ ಬದಲು ಅದನ್ನೇ ಪುನರಾವೃತ್ತಿಗೊಳಿಸುವ ತವಕ ಮಾವೋ ಮತ್ತು ಚೌ. ಎನ್. ಲಾಯರಿಗೆ ಇದ್ದಂತೆ ಭಾಸವಾಗುತ್ತದೆ.

**ಭಾರತೀಯರೇ ಕಟ್ಟಿ ರಾಷ್ಟ್ರ**

ರಾಷ್ಟ್ರಗಳನ್ನು ನುಂಗುವ ಚೀನೀ ರಾಹಿಯು ಕೊಲಂಬೋ ಸೂಚನೆಗಳನ್ನು ಒಪ್ಪುವುದು ಕಷ್ಟ. ಹೇಗೆಯೋ ಸದ್ಯದಲ್ಲಿ ಶಾಂತಿಯ ಸೋಗನ್ನು ಹಾಕಿ ಒಂದುದಿನ ತನ್ನ ನಿಜರೂಪವನ್ನು ಪ್ರದರ್ಶಿಸಲೂ ಬಹುದು, ಇಲ್ಲವೇ ಕೊಲಂಬೋ ಸೂಚನೆಗಳನ್ನೂ ಒಪ್ಪಿದಂತೆ ಮಾಡಿ (ಪಂಚಶೀಲವನ್ನೊಪ್ಪಿದಂತೆ) ಧಾಳಿ ಮುಂದುವರಿಸಲೂ ಸಾಕು ಎಂತಲೇ ಪ್ರಧಾನಿ ನೆಹರು ಹೇಳುವಂತೆ ಈ ಗಡಿ ವಿವಾದ ಮುಂದಿನ ಐದು ವರ್ಷಗಳ ಕಾಲ ಉಳಿದೇ ಉಳಿಯುವ ನಿರೀಕ್ಷೆಯಿದೆ. ನಮ್ಮ ಸ್ವಾತಂತ್ರ್ಯಕ್ಕೆ ಕಂಟಕ ಪ್ರಾಯವೆನಿಸುವ ಈ ಸಮಯದಲ್ಲಿ ನಾವೆಲ್ಲರೂ ಎಚ್ಚರಿಕೆಯಿಂದಿರಬೇಕು; ಕಾರ್ಯಶೀಲರಾಗಬೇಕು. ಮಾತೃ ಭೂ ರಕ್ಷಣೆಗೆ ಮುಂದಾಗಿ ಸ್ವಾರ್ಥ ಸಾಧನೆಯಲ್ಲಿ ಹಿಂದಾಗಿ ಸ್ವಾತಂತ್ರ್ಯ ಉಳಿಸಲಿಕ್ಕೆ ಒಂದಾಗಿ ನಾವು ದುಡಿಯಬೇಕು. ಬಲಿಷ್ಠ ಹಾಗೂ ಸಮೃದ್ಧ ಭಾರತ ನಿರ್ಮಾಣವೊಂದೇ ಕೊಬ್ಬಿದ ರಾಕ್ಷಸನನ್ನು ನಡೆಹಿಡಿಯಬಲ್ಲುದೆಂಬುದರಿಂದ ಅಂತಹ ಭವ್ಯದಿವ್ಯ ಭಾರತ ರಚನೆಯಲ್ಲಿ ತನುಮನಧನಗಳಿಂದ ಪರಿಶ್ರಮಿಸಬೇಕು.

---


## ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

**ಉಳಿತಾಯ ಮಾಡಿದರೆ,**

**ನಿಮಗೆ ನೀವೇ ಉಪಕಾರ ಮಾಡಿದಂತೆ.**

**ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!**

## ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

**(ರಿಜಿಸ್ಟರ್ಡ್ ಆಫೀಸು: ಉಡುಪಿ)**

**ಆಡಳಿತ ಆಫೀಸು: ಮಂಗಳೂರು.**



## ವರ್ಗ — ಊಳಿಗ

**ಮೊದಲಾದ ಯಾವತ್ತೂ ತರದ**

## ಎಕೌಂಟ್ ಪುಸ್ತಕಗಳು,

## ಶಾಲಾ ರಿಜಿಸ್ಟ್ರಿಗಳು,

## ಫಾರ್ಮುಗಳು

**ದೊರೆಯುತ್ತವೆ.**

**ನವಯುಗ ಪ್ರೆಸ್, ಉಡುಪಿ.**



**ಹೊಸ ಪುಸ್ತಕ—**

**ನಚಿಕೇತರ,**

**ನವೀನ ಕಾದಂಬರಿ—**

# ಹಸುರು ಹಂಸ

**ಇದೀಗ ಪ್ರಕಟವಾಗಿದೆ.**

ಬೆಲೆ: ರೂ. ಎರಡು.

ವಿಚಾರಿಸಿ.

**ನವಯುಗ ಪ್ರೆಸ್, ಉಡುಪಿ.**

## ಮುಂದಿನ ಆರ್ಥಿಕ ವರ್ಷದಿಂದ
# ಶಿಕ್ಷಕರಿಗೆ ಮುಬ್ಬಗೆಯ ಸವಲತ್ತು

ಶಿಕ್ಷಕರಿಗೆ ಪ್ರೊವಿಡೆಂಟ್ ಫಂಡ್, ಪೆನ್‌ಶನ್ ಮತ್ತು ಜೀವವಿಮೆಯ ತ್ರಿವಿಧ ಸೌಲಭ್ಯಗಳನ್ನು ಮುಂಗಡ ಪತ್ರದಲ್ಲಿ ಕೊಡ ಮಾಡಿದವರು ಅರ್ಥ ಮಂತ್ರಿ ಜತ್ತಿಯವರು. ಅದರ ವಿವರಣೆಯನ್ನು ಶಿಕ್ಷಣ ಸಚಿವ ಕಂಠಿಯವರು ವಿಧಾನ ಸಭೆಯಲ್ಲಿ ಮಂಡಿಸಿದರು. ಈ ಸೌಕರ್ಯವನ್ನು ಇದೇ ವರ್ಷ ಎಪ್ರಿಲ್ ಮೊದಲನೆ ದಿನಾಂಕದಿಂದ ಒದಗಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಎರಡು ವರ್ಷ ಸೇವೆ ಸಲ್ಲಿಸಿದ ಅಧ್ಯಾಪಕನು ಪ್ರೊವಿಡೆಂಟ್ ಫಂಡಿಗೆ ಸೇರಲು ಅರ್ಹನಾಗುತ್ತಾನೆ. ತನ್ನ ವೇತನದಲ್ಲಿ ಸೇ. ೬ರಷ್ಟನ್ನು ಆತನು ವಂತಿಗೆ ತೆರಬೇಕು. ಇಷ್ಟೇ ಪಾಲನ್ನು ಶಾಲೆಯ ಆಡಳಿತವೂ ಸರಕಾರವೂ ಕೂಡಿಸಿಕೊಡುವುವು.

ಅಧ್ಯಾಪಕರ ನಿವೃತ್ತಿ ವಯಸ್ಸು ರಾಜ್ಯದಲ್ಲಿ ಬೇರೆ ಬೇರೆಯಾಗಿದೆ. ಮದ್ರಾಸ ಕರ್ನಾಟಕದಲ್ಲಿ ಖಾಸಗಿ ಶಾಲೆಗಳಲ್ಲಿ ಇದು ೬೦ ಇದ್ದರೆ ಸರಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ೫೫ ಇದೆ. ಆದರೆ, ಇಂತಹ ಅಂತರ ಮೈಸೂರು (ಹಳೆಯ) ರಾಜ್ಯದಲ್ಲಿಲ್ಲ. ಈ ಸಂಬಂಧದಲ್ಲಿ ವಿವರಣೆ ನೀಡಿದ ಕಂಠಿಯವರು ೧೯೬೨ನೆ ಇಸವಿಗೆ ಮೊದಲು ನೇಮಿಸಲ್ಪಟ್ಟ ಖಾಸಗಿ ಶಾಲೆಗಳ ಅಧ್ಯಾಪಕರ ನಿವೃತ್ತಿ ವಯಸ್ಸು ಆಯಾ ವಿಲೀನಗೊಂಡ ರಾಜ್ಯಗಳಲ್ಲಿ ಇದ್ದಂತೆಯೇ ಉಳಿಯುವುದೆಂದು ಹೇಳಿದ್ದಾರೆ. ಈ ಯೋಜನೆಯಂತೆ ಹತ್ತು ವರ್ಷ ಸೇವೆ ಸಲ್ಲಿಸಿದವರಿಗೆ ಪೆನ್‌ಶನ್ ಸೌಲಭ್ಯವು ದೊರೆಯುವುದೆಂದೂ ಹತ್ತಕ್ಕಿಂತ ಕಡಿಮೆ, ಆದರೆ ಐದಕ್ಕಿಂತ ಹೆಚ್ಚು ವರ್ಷ ಸೇವೆಯಲ್ಲಿದ್ದವರಿಗೆ ಅವರ ಸರ್ವಿಸಿನ ಪ್ರತಿ ಪೂರ್ಣ ವರ್ಷಕ್ಕೆ ಒಂದೂವರೆ ತಿಂಗಳ ವೇತನದಂತೆ ಗ್ರ್ಯಾಚುವಿಟಿಯನ್ನು ಕೊಡಲಾಗುವುದೆಂದೂ ಭರವಸೆ ನೀಡಿದ್ದಾರೆ. ಪೆನ್‌ಶನ್ ವೇತನದ ನಾಲ್ಕರಲ್ಲಿ ಒಂದಂಶದಷ್ಟಾದರೂ ಮುಖ್ಯೋಪಾಧ್ಯಾಯರು ಪರಮಾವಧಿ ಮಾಸಿಕ ರೂ. ೭೫ನ್ನೂ ಇತರರು ರೂ. ೬೦ನ್ನೂ ಮಾತ್ರ ಪಡೆಯಲು ಅರ್ಹರೆಂದೂ ಅವರು ಅಂದರು.

ಜೀವವಿಮೆಯ ಸೌಲಭ್ಯ ದೊರೆಯಬೇಕಾದರೆ, ಅಧ್ಯಾಪಕರು ೫ ವರ್ಷಗಳ ಸೇವೆ ಸಲ್ಲಿಸಿರಬೇಕು. ಇವರು ತಮ್ಮ ೫೫ನೆಯ ವಯಸ್ಸಿಗೆ ಕಂತು ಮುಗಿಯುವಂತೆ ರೂ. ೧,೫೦೦ದಿಂದ ರೂ. ೩,೫೦೦ರ ವರೆಗೆ ಜೀವವಿಮೆ ಮಾಡಬೇಕು. ಇದಕ್ಕೆ ಕಟ್ಟಬೇಕಾದ ಪ್ರೀಮಿಯಂ ಹಣವನ್ನು ಅವರ ಪ್ರೊವಿಡೆಂಟ್ ಫಂಡಿನಿಂದ ತೆಗೆಯಲಾಗುವುದು. ಯಾವ ಅಧ್ಯಾಪಕನು ಜೀವ ವಿಮೆಯನ್ನು ಇಳಿಸುವುದಿಲ್ಲವೋ ಅಂತಹವನಿಗೆ ಪ್ರೊವಿಡೆಂಟ್ ಫಂಡ್ (?) ಮತ್ತು ಪೆನ್‌ಶನ್ ಸೌಲಭ್ಯಗಳೂ ದೊರೆಯಲಾರವು.

ಮುಂಬಯಿ ಪ್ರಾಥಮಿಕ ಶಿಕ್ಷಣ ನಿಯಮಗಳಂತೆ ಪೆನ್‌ಶನ್ ಪಡೆಯುವುದಕ್ಕೆ ಅರ್ಹರಾದ ಅಧ್ಯಾಪಕರಿಗೆ ಮಾತ್ರ ಈ ತ್ರಿವಿಧ ಲಾಭ ಯೋಜನೆಯು ಅನ್ವಯಿಸುವುದಿಲ್ಲ.

ಹೈಸ್ಕೂಲುಗಳಲ್ಲಿರುವ ಅಧ್ಯಾಪಕೇತರ ನೌಕರರಿಗೂ ಈ ತ್ರಿವಿಧ ಸೌಲಭ್ಯಗಳನ್ನು ಒದಗಿಸುವ ಉದಾರತೆಯನ್ನು ನಮ್ಮ ಸರಕಾರ ತೋರಿಸಿದೆ. ಇದರಿಂದಾಗಿ ಸರಕಾರಕ್ಕೆ ವಾರ್ಷಿಕ ರೂ. ೧೫,೦೦೦ದಷ್ಟು ಮಾತ್ರ ಅಧಿಕ ವೆಚ್ಚ ಬರುವುದೆಂದು ತಿಳಿಯುತ್ತದೆ.

ಹೀಗೆ ಅಧ್ಯಾಪಕರ ಹಿತದ ಕಡೆಗೆ ಹೆಚ್ಚಿನ ಕಾಳಜಿಯನ್ನು ಸರಕಾರವು ತೋರಿಸುತ್ತಿರುವುದು ಸ್ತುತ್ಯಾರ್ಹ. ಆದರೆ, ಇಷ್ಟರಿಂದಲೇ ಅಧ್ಯಾಪಕರ ಆರ್ಥಿಕ ಸ್ಥಿತಿಗತಿಗಳು, ಸುಧಾರಿಸುವುವೆನ್ನುವುದು ಸಾಧ್ಯವಿಲ್ಲ. ತಮ್ಮ ಸೇವೆಯಲ್ಲಿ ಯಾವ ಉನ್ನತಿಯ ಸ್ಥಾನವನ್ನೂ ಪಡೆಯಲು ಅವಕಾಶವಿಲ್ಲದ ಇವರ ಜೀವನದಲ್ಲಿ ಉನ್ನತಿಯನ್ನು ಪಡೆಯುವುದೂ ಕಷ್ಟಸಾಧ್ಯ. ಆದುದರಿಂದ ಅವರ ಸರ್ವಿಸು ಹೆಚ್ಚಿದಂತೆ ಸ್ಥಾನವಲ್ಲವಾದರೂ ವೇತನ ಮಟ್ಟವು ಹೆಚ್ಚುವಂತಾಗಬೇಕು. ಉದಾಹರಣೆಗೆ ಒಬ್ಬ ಗ್ರೇಜುವೇಟನು ತನ್ನ ವೇತನದ ಪರಮಾವಧಿಯನ್ನು ಈಗ, ೧೩ ವರ್ಷಗಳಲ್ಲಿ ಮುಟ್ಟುತ್ತಾನೆ ಉಳಿದ ವಿಭಾಗಗಳಲ್ಲಾದರೆ ಇಷ್ಟು ಹೊತ್ತಿನಲ್ಲಿ ಆತನು ಒಂದಲ್ಲ ಒಂದು ಹುದ್ದೆಗೆ ಭಡ್ತಿ ಹೊಂದಿಯೇ ಹೊಂದುತ್ತಾನೆ. ಆದುದರಿಂದ ಯೋಗ್ಯರನ್ನು ಶಿಕ್ಷಣ ಕ್ಷೇತ್ರಕ್ಕೆ ಆಕರ್ಷಿಸಲು ಹೆಚ್ಚಿನ ವೇತನವನ್ನು ಪ್ರಾರಂಭದಲ್ಲಿ ಅಲ್ಲವಾದರೂ ನಾಲ್ಕಾರು ವರ್ಷಗಳ ನಂತರ — ಕೊಡಮಾಡುವುದು ಆವಶ್ಯಕ.

ಇನ್ನು ಖಾಸಗಿ ಶಾಲಾ ಶಿಕ್ಷಕರಿಗೆ ಪ್ರತಿ ತಿಂಗಳೂ ಸಮುಚಿತವಾಗಿ ವೇತನ ದೊರೆಯುತ್ತಿಲ್ಲವೆಂಬುದು ಇಂದು ನಿನ್ನೆಯ ದೂರಲ್ಲ. ಈ ಸಂಬಂಧದಲ್ಲಿ ಸೂಕ್ತ ವ್ಯವಸ್ಥೆಯನ್ನು ಸರಕಾರ ಮಾಡಲೇಬೇಕು. ಇದಕ್ಕೆ, ತಾನು ಅಂತಹ ಸಂಸ್ಥೆಗಳಿಗೆ ನೀಡಬೇಕಾದ ಸಹಾಯ ಧನವನ್ನು ಸಾಕಷ್ಟು ಪೂರ್ವಭಾವಿಯಾಗಿ ನೀಡುವುದೊಂದೇ ಪರಿಹಾರೋಪಾಯ. ತಾಂತ್ರಿಕ ಅಡಚಣೆಗಳು ತಲೆಯೆತ್ತಿ ಶಿಕ್ಷಕ ಬಂಧುಗಳು ಗೋಳು ಹೊಯ್ದುಕೊಳ್ಳುವಂತಾಗಬಾರದು. ಏಕೆಂದರೆ, ಹಸಿದ ಹೊಟ್ಟೆಯ ಮನುಷ್ಯನಾವನೇ ಇರಲಿ ತನ್ನ ಕರ್ತವ್ಯವನ್ನು ಪರಿಪೂರ್ಣಗೊಳಿಸುವುದು ಅಸಾಧ್ಯವಾಗುತ್ತದೆ. ಈ ಮಾತನ್ನು ಕೆಲವೆಡೆ ಸ್ಥಳೀಯ ಸಂಸ್ಥೆಗಳ ಮತ್ತು ಸರಕಾರಿ ಶಾಲೆಗಳ ಮಟ್ಟಿಗೂ ಅನ್ವಯಿಸಬಹುದು.

ಶಿಕ್ಷಕರ ಉನ್ನತಿಯಿಂದ ಶಿಕ್ಷಣದ ಉನ್ನತಿ, ಇದರಿಂದಲೇ ದೇಶೋನ್ನತಿ. ಆದುದರಿಂದ ದೇಶೋನ್ನತಿ ಮಾಡುವ ಸಾಕಾರ ನೇಶೋದ್ಧಾರದ ಸೂತ್ರಧಾರ ಅಧ್ಯಾಪಕರ ಉದ್ಧಾರವನ್ನು ಮೊತ್ತ ಮೊದಲು ಮಾಡಬೇಕು.

---

## ಚರಿತ್ರ ನಿರೂಪಿಸುವ
# ಮೌಲಾ ಆಲಿ ಬಯಲು ಸೆರೆಮನೆ

ಸೆರೆಮನೆಯೆಂದೊಡನೆಯೇ ಮೈ ರೋಮಾಂಚಗೊಳ್ಳುವ ಸಮಯವೊಂದಿತ್ತು. ಆ ನರಕಯಾತನೆಯನ್ನನುಭವಿಸುವುದೆಂದರೆ ಮಹಾ ಭೀಭತ್ಸವೆನಿಸುತ್ತಿದ್ದ ಕಾಲವದು. ಅಷ್ಟು ಮಾತ್ರವಲ್ಲ, ಕಾರಣಾಂತರಗಳಿಂದ ಕೈದಿಯಾದವನು ಕೈದಿ ಖಾನೆಯಿಂದ ಮರಳಿ ಬರುವಾಗ, ಮೊದಲು ಇದ್ದಿರಬಹುದಾದ ಅಲ್ಪ ಸ್ವಲ್ಪ ಮಾನವತೆಯನ್ನೂ ಕಳೆದುಕೊಂಡು ಶುದ್ಧ ಪಶುವಾಗಿ,ಪರಿಣಮಿಸುತ್ತಿದ್ದ ಸಮಯವದು ಆದರೆ,ಇಂದು ಅಂತಹ ಪರಿಸ್ಥಿತಿಯಿರುದಿಲ್ಲ. ಜೇಲುಗಳಲ್ಲಿಯೂ ಸೆರೆಯಾಳುಗಳನ್ನು ಕಾಣುವ ಪರಿಕ್ರಮದಲ್ಲಿಯೂ ಸಾಕಷ್ಟು ಪರಿವರ್ತನೆಯಾಗಿದೆ. ಅವರೂ ಮಾನವರೇ. ಮಾನವನು ಹುಟ್ಟಿನಿಂದ ಕೈದಿಯಾಗುವುದಲ್ಲ, ಪರಿಸ್ಥಿತಿವಶದಿಂದ ಹಾಗಾಗುತ್ತಾನೆ ಎಂಬ ಮನೋವೃತ್ತಿ ಬೆಳೆದಿದೆ. ದುರ್ದೈವದಿಂದ ಜೇಲು ಸೇರಿದವರು ತಾವು ಕೈದಿಗಳು—ಅಪರಾಧಿಗಳು ಎಂಬ ಹೀನ ಭಾವನೆಯನ್ನು ಮರೆತು ಇತರರಂತೆಯೇ ಮಾನವರು ಎಂಬ ಭಾವನೆಯನ್ನು ಬೆಳೆಸಿ ಅವರ ಚರಿತ್ರಕ್ಕಂಟಿದ ಕರಿಕಲೆಯನ್ನು ಅಳಿಸಿ ಅವರನ್ನು ಸಚ್ಚರಿತ್ರರನ್ನಾಗಿ ಪುನಾರೂಪಿಸಲು ಸರಳುಕಾಣದ ಸೆರೆಮನೆಗಳು ಕೆಲವೊಂದು ದೇಶಗಳಲ್ಲಿ ರೂಪುಗೊಂಡಿವೆ. ಇಂತಹ ಆದರ್ಶ ಸೆರೆಮನೆಗಳಲ್ಲಿ ನಮ್ಮ ದೇಶದ ಹೈದರಾಬಾದಿಗ ಸಮೀಪದ ಮೌಲಾ ಆಲಿ ಸೆರೆಮನೆಯೂ ಒಂದು.

೧೯೫೪ರಲ್ಲಿ ಮೌಲಾ ಆಲಿ ಸರಳುಕಾಣದ ಸೆರೆಮನೆಯು ಪ್ರಾಯೋಗಿಕವಾಗಿ ಸ್ಥಾಪನೆಗೊಂಡಿತು. ಸುಮಾರು ೯೪ ಎಕ್ರೆ ಬೇಲಿಯಿಲ್ಲದ ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವ ೪೦ ಕೈದಿಗಳನ್ನು ನೋಡಿಕೊಳ್ಳಲು ಒಬ್ಬ ಡಿಪ್ಯುಟಿ ಜೇಲರ ಮತ್ತು ಆರು ನಿಶ್ಶಸ್ತ್ರ ಮೇಲ್ವಿಚಾರಕರು ಇಲ್ಲಿರುತ್ತಾರೆ. ಕೈದಿಗಳ ಪುನರ್ವಸತಿ ಮತ್ತು ಅವರನ್ನು ತಿದ್ದುವುದಕ್ಕಾಗಿ ದೇಶದಲ್ಲಿ ಮೊತ್ತಮೊದಲು ಸ್ಥಾಪಿತಗೊಂಡ ಇಂತಹ ಸೆರೆಮನೆಗಳಲ್ಲಿ ಮೌಲಾ ಆಲಿ ಕೂಡ ಒಂದು. ಕೊಲೆಯೇ ಮೊದಲಾದ ಕಾರಣಗಳಿಂದ ದಂಡಿತರಾದವರೊಡನೆ ಇತರ ಸಾಮಾನ್ಯ ಕೈದಿಗಳೂ ಸಾಮಾನ್ಯ ಜೇಲುಗಳಲ್ಲಿ ಕಾಯಲ್ಪಡುತ್ತಾರೆ ಇಲ್ಲಿ ಉತ್ತಮ ನಡತೆಯಿಂದ ನಡೆದು ತಮ್ಮ ಮೇಲ್ವಿಚಾರಕರ ತೃಪ್ತಿಗೆ ಪಾತ್ರರಾಗಿ ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವ ಆಶಯ ಪ್ರದರ್ಶಿಸಿದರೆ, ಅಂತಹರನ್ನು ಸರಳು ಕಾಣದ ಈ ಸೆರೆಮನೆಗೆ ಕಳಿಸುವ ವ್ಯವಸ್ಥೆಯಿದೆ. ಸಾಮಾನ್ಯವಾಗಿ ದರೋಡೆಗಾರರನ್ನೂ ಕನ್ನ ಕೊರೆವವರನ್ನೂ ಇಂತಹ ಸೌಲಭ್ಯದಿಂದ ಬಾಹಿರರನ್ನಾಗಿ ಮಾಡಲಾಗುತ್ತದೆ.

ಜೇಲುಗಳೊಳಗೆ ಯಾವ ಮಹತ್ತರ ಉಪಯೋಗಕ್ಕೂ ಬಾರದ ಕೈದಿಗಳ ಸಮಯವನ್ನಿಲ್ಲಿ ಸದುಪಯೋಗ ಪಡಿಸುತ್ತಾರೆ. ಕ್ಷೇತ್ರದಲ್ಲಿನ ಮರಮಟ್ಟುಗಳನ್ನು ಕಡಿದು ಸಣ್ಣ ಗುಡಿಸಲುಗಳನ್ನು ಕಟ್ಟಿದ್ದಾರೆ. ಗೋಡೆಗೆ ಬೇಕಾದ ಇಟ್ಟಿಗೆ ಮತ್ತು ಮಾಡಿನ ಹಂಚುಗಳನ್ನೂ ಅವರೇ ತಯಾರಿಸಿದ್ದಾರೆ. ಸರಕಾರಕ್ಕೆ ಯಾವ ವೆಚ್ಚವೂ ಇಲ್ಲದಂತೆ ಪ್ರಾರಂಭಿಕ ವರ್ಷಗಳಲ್ಲಿ ಕೈದಿಗಳು ೩೫ ಎಕ್ರೆ ನೆಲವನ್ನು ವ್ಯವಸಾಯ ಯೋಗ್ಯವನ್ನಾಗಿ ಮಾಡಿದ್ದಾರೆ ಮತ್ತು ೫ ಬಾವಿಗಳನ್ನು ತೋಡಿದ್ದಾರೆ. ಇಲ್ಲಿರುವವರು ಸಾಧಾರಣವಾಗಿ ದೀರ್ಘ ಕಾಲದ ಶಿಕ್ಷೆಗೆ ಗುರಿಯಾದ ರೈತರು, ಭೂಮಾಲಿಕರು ಅಥವಾ ಬೇಸಾಯದ ಕೂಲಿಯಾಳುಗಳು. ಆದುದರಿಂದ, ಇಂದಿನ ಸುಧಾರಿತ ಗ್ರಾಮೀಣ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಮತ್ತು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವಂತೆ ಅವರಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ.

ಮೌಲಾ ಆಲಿಯ ಈ ಕ್ಷೇತ್ರದ ಹತ್ತು ಎಕ್ರೆ ಜಮೀನಿನಲ್ಲಿ ಭತ್ತವನ್ನು ಬೆಳೆಸುತ್ತಾರೆ; ಹೈದರಾಬಾದಿನ ಸೆಂಟ್ರಲ್ ಜೇಲಿಗೆ ಆರು ತಿಂಗಳುಗಳಿಗೆ ಬೇಕಾದ ಘಟ ತರಕಾರಿಗಳನ್ನೂ ಬೆಳೆಯುತ್ತಾರೆ. ೧೯೬೧-೬೨ರಲ್ಲಿ ಇಲ್ಲಿ ಒಟ್ಟು ರೂ. ೨೬,೦೦೦ ದಷ್ಟು ಉತ್ಪನ್ನಗಳು ಬಂದಿವೆ. ಇನ್ನು ೨೫ ಎಕ್ರೆ ಯಲ್ಲಿ ಗೇರು ಬೀಜದ ಕೃಷಿಯನ್ನು ಮಾಡುವ ಆಲೋಚನೆಯಿದೆ.

ಈ ಸರಳಿಲ್ಲದ ಸೆರೆಮನೆಯನ್ನು ಕಂಡವರು ಕೈದಿಗಳಿಗೆ ಸಂಪೂರ್ಣ ಸ್ವಾತಂ

(೧೨ನೇ ಪುಟ ನೋಡಿರಿ)

### ಶುದ್ಧ ಹರಟೆ

# ನಮ್ಮೂರ ಕೆರೆ ಬಾವಿಗಳು

[ವಿ. ಸೂ:—ಇದನ್ನು ಬರೆದವನು ಇತ್ತೀಚಿಗೆ ಕೆರೆ—ಬಾವಿಯನ್ನು ಹುಡುಕುತಿದ್ದಾನೆ ಎಂಬ ವಾರ್ತೆ ಅನಧಿಕೃತ.]

೦ ೦ ೦

ಸಾಮಾನ್ಯವಾಗಿ ನೀರಿನ ಆಸರೆಯಿರುವ ಸ್ಥಳವೇ ಕೆರೆ, ಬಾವಿಯೆನ್ನುವುದು ಲೋಕ ರೂಢಿ. ಆದರೆ ಕೆರೆ ಬಾವಿಗಳಲ್ಲಿ ನೀರು ಮಾತ್ರವೇ ಇರಬೇಕು—ಯೂ ಇದುತ್ತದೆಯೆಂಬ ಕಲ್ಪನೆ ಯಾರಿಗಾದರೂ ಇದ್ದರೆ ಒಮ್ಮೆ ನಮ್ಮೂರ ಕೆರೆಗೆ ಬನ್ನಿ. ನೀವು ನವ್ಯ ಕಾದಂಬರಿಗಳನ್ನು ಓದಿ, ನೂತನ ಚಲಚ್ಚಿತ್ರಗಳನ್ನು ನೋಡಿ (ಪರೀಕ್ಷೆಯ ಮುಂಚಿನ ದಿನ ಕೂಡಾ), ಮನಸ್ಸಿನಲ್ಲಿ ನೂರಾರು ಬಯಕೆಗಳನ್ನಿರಿಸಿಕೊಂಡು, ಆ ನಂತರ ಕಡುಬೇಸಗೆಯ ದಿನ, ಪರೀಕ್ಷಾ ಫಲಿತಾಂಶ ಅಚ್ಚಾಗಿ ಬಂದಾಗ ಅದರಲ್ಲಿ ನಿಮ್ಮ ನಂಬ್ರವೇ ಕಾಣಬರದಿದ್ದಲ್ಲಿ, ಮಿತ್ರರೇ, ನೀವು ಒಡನೆಯೇ, ಏನೂ ಯೋಚಿಸದೆಯೇ, ನಮ್ಮೂರ ಕೆರೆಗೆ ಬಂದು ಧುಮುಕಿ. ಕೊಂಚ ಹೊತ್ತಿನಲ್ಲಿ ನಿಮಗೆ ಅರಿವಾಗುವುದು—ನೀವೀಗ ಒಂದು ವಿಚಿತ್ರವಾದ ಪ್ರಪಂಚದಲ್ಲಿರುವಿರಿ ಆಗೋ—ಅಲ್ಲಿ ನಿಮ್ಮ ಮುಂದೆ ಯಮಧರ್ಮರಾಯನ ದೂತನೆನಿಸಿದ ಸಾಕ್ಷಾತ್ 'ಕೋಣ ಮಹಾರಾಯನು' ನಿಮ್ಮನ್ನು, ತನ್ನ ಸಂಗೀತ ಜ್ಞಾನದಿಂದಲೂ, ಕಂಠ ಮಾಧುರ್ಯದಿಂದಲೂ ಬೆರಗುಗೊಳಿಸಿ ಸ್ವಾಗತ ಗೀತೆಯನ್ನು ಹಾಡುತ್ತಿರುವನು. ಆಗ ನೀವೆಲ್ಲಿರುವಿರೆಂಬುದರ ನೈಜಕಲ್ಪನೆ ನಿಮಗಾಗುವುದು. ನೀವೆಣಿಸಿದಂತೆಯೇ ನೀವು ಯಮಪುರಿಯಲ್ಲೇ ಇರುವಿರಿ. ಆದರೆ ವಿಚಿತ್ರವೇನೆಂದರೆ, ಆ ಯಮಧರ್ಮರಾಯನ ಅರಮನೆಯು ಈ ಭೂಮಿಯೊಳಗೇ ಇದೆ—ಅದೇ ನನ್ನ ಪ್ರೀತಿಯ, ಅಭಿಮಾನದ ಊರು—ಹಾಳೂರು—ಹೌದು, ನನ್ನ ಊರಿನ ಹೆಸರು ಹಾಳೂರು—ಊರಿನ ಹೆಸರು ಹಾಳಾಗಿದ್ದರೇನಂತೆ? ಊರೂ ಹಾಳಾಗಿರಬೇಕೆಂಬ ನಿಯಮವೇನು ಇಲ್ಲ ತಾನೇ! ಕೋಣನೂರಿನಲ್ಲಿ ಜನಗಳೆಲ್ಲಾ ಕೋಣನಂತಹ ಬುದ್ಧಿಯವರು ಎನ್ನುವ ಮಹಾ ಮೇಧಾವಿಗಳ ಪಾದವು ವಿಶ್ವವಿದ್ಯಾಲಯಗಳ ಪರೀಕ್ಷಾ ಫಲಿತಾಂಶ ಪ್ರಕಟಣೆಯಿಂದ ವರ್ಷ ವರ್ಷವೂ ಸುಳ್ಳಾಗಿಸಲ್ಪಡುವುದು. ಹಾಗೆಯೇ ನಮ್ಮೂರಿನ ಹೆಸರು ಹಿಂದೆ ಹಾಲೂರೆಂದಾಗಿತ್ತೆಂದೂ, ಇದಕ್ಕೆ ಕಾರಣ ನಮ್ಮೂರ ಇದೇ ಕೆರೆಯ ನೀರು, ಹಾಲಿನಂತೆ ಬೆಳ್ಳಗಾಗಿತ್ತೆಂದೂ, ಅದರಲ್ಲೂ, ಮಕರ ಸಂಕ್ರಮಣದ ದಿನ, ಸಾಕ್ಷಾತ್ ಗಂಗೆಯು, ಕಾಶಿಯಿಂದ ಇಲ್ಲಿಯವರೆಗೆ ಆಗಮಿಸಿ, ಈ ಮಹಾ ಕ್ಷೇತ್ರವನ್ನು ಇನ್ನಷ್ಟು ಪಾವನವಾಗಿ ಮಾಡುತಿದ್ದಳೆಂದೂ ದೇವಸ್ಥಾನದ ಪೂಜೆಯ ಅಡಿಗಳು ಹೇಳುತಿದ್ದಾರೆ.

ಅದೇನೇ, ಇರಲಿ, ನೀವೀಗ ನಮ್ಮೂರ ಕೆರೆಯ ಮಧ್ಯೆಯಲ್ಲಿದ್ದೀರಿ (ಎಂದು ಭಾವಿಸಿ.) ಅರ್ಥಾತ್ ಈಗ ನಿಮ್ಮ ಕೈಬಾಯಿಗಳೆಲ್ಲಾ ಕೆಸರಿನಲ್ಲಿವೆಯೆನ್ನಿ. ಚಿಂತೆಯೇಕೆ? ಕೆಕೆ ಸಂದರೆ ಬಾಯಿ ಮೊಸರೆಂಬ ಗಾದೆಯೇ ಇದೆಯಲ್ಲವೇ? ಅದರೆ ಇಲ್ಲಿಯೂ ನೀವೆಣಿಸಿದಂತೆ ನಮ್ಮೂರಲ್ಲಿ. ಹಾಳೂರಿನಲ್ಲಿ ಕೆಸರೇ ಮೊಸರು, ನಮ್ಮೂರ ನಾರ್ಣಪ್ಪಯ್ಯ. ತಾನು ಬೆಳಗ್ಗೆ ಇಡಲಿ ಮೊಸರು ತಿನ್ನುವೆನೆಂದು ಪೇಟೆಯಲ್ಲಿ ಪಟ್ಟಾಕಿ ತರಿಸಿದರೂ, ಅವರ ಹೆಂಡತಿಯೇ. ಮೊನ್ನೆ ಗುಟ್ಟಿನಲ್ಲಿ—ಇದೇ ಕೆರೆಯ ದಂಡೆಯಲ್ಲಿ—ಸ್ವಲ್ಪ ಗಟ್ಟಿಯಾಗಿ—ಕೆರೆಯ ಆಚೆಯ ದಡದಲ್ಲಿ, ಮನೆಮಾಡಿಕೊಂಡಿರುವ ಕಸ್ತೂರಿ ಜಲಜಮ್ಮನಿಗೆ ಕೇಳಿಸುವಷ್ಟು ಗಟ್ಟಿ ಮಾತ್ರ—ಮುಂಚಿನ ದಿನ ರಾಯರ ಮನೆಯಲ್ಲಿ ದಾನಕೊಟ್ಟ ಕಡಲೆಯನ್ನೇ ದೇವಸ್ಥಾನದ ಬಾವಿಯ ಪವಿತ್ರೋದಕದಲ್ಲಿ ನೆನೆಯಿಸಿ, ಶ್ರೀ ರಾಮನ ಧ್ಯಾನ ಮಾಡುತ್ತಾ ತಿನ್ನುವುದಂತೆ ಎಂದು ಹೇಳಿದ್ದಳು. ಕಸ್ತೂರಿ ಜಲಜಮ್ಮನೆಂದರೆ ಯಾರೆಂದು ಕೇಳಿದಿರಾ? ಅವಳೇನೂ ಕಸ್ತೂರಿಯಂತೆ ಪರಿಮಳ ದ್ರವ್ಯಗಳನ್ನು ಮೈಗೆ ಲೇಪಿಸಿಕೊಳ್ಳುವ ಅಭ್ಯಾಸ ಮಾಡಿಲ್ಲನೆಂದೂ ಅವಳ ಗಂಡ ಚಿನ್ನಯ್ಯನೇ ಮೊನ್ನೆ ಬಾವಿಕಟ್ಟೆಯಲ್ಲಿ ಸ್ನಾನಮಾಡುತಿರುವಾಗ ಹೇಳುತಿದ್ದುದನ್ನು ನಮ್ಮ ನಮ್ಮ ರಂಗಂಭಟ್ಟರು, ಅಧ್ಯಾತ್ಮ ರಾಮಾಯಣ ಓದುತ್ತಾ ಕೇಳಿದರಂತೆ! [ಅದೆಲ್ಲಾ ಅವರ ವೈಯಕ್ತಿಕ ವಿಚಾರಗಳು ನಾವೇಕೆ ಅದರಲ್ಲಿ ಬಾಯಿ ಹಾಕಬೇಕು?] ಅದೇನೇ ಇರಲಿ ಅವಳಿಗೆ ಕಸ್ತೂರಿ ಜಲಜಮ್ಮನೆಂಬ ಹೆಸರು ಬರಲು ಕಾರಣವಿಷ್ಟೆ—"ಜಲಜಮ್ಮನ ಬಾಯಿಗೆ ಬಿದ್ದ ಸುದ್ದಿ ಕ್ಷಣಾರ್ಧದಲ್ಲಿ—ಕೊಂಚ ಮಾತ್ರ ಉಪ್ಪುಖಾರ ಸೇರಿ—ಕಸ್ತೂರಿಯಂತೆ ಊರಲ್ಲೆಲ್ಲಾ ಹಬ್ಬುತ್ತದೆ ಆದುದರಿಂದಲೇ ಅವಳಿಗೆ ಕಸ್ತೂರಿ ಜಲಜಮ್ಮ ಎಂಬ ಬಿರುದನ್ನು ಮಹಾಕವಿ ಶೇಖರ ಮಹಾರಾಜರು ದಯಪಾಲಿಸಿದ್ದಾರೆ. ಆದರಲ್ಲಿಯೂ ಇನ್ನೊಂದು ವಿಚಾರ ಬಹಳ ರಹಸ್ಯವಾದ ವಿಚಾರ—ಯಾರೊಡನೆಯೂ ಹೇಳಬಾರದೆಂದು ಮೊನ್ನೆ ನಮ್ಮೂರ ಅಧಿಕ ಪ್ರಸಂಗಿ ಕರಿಯ ಗಂಡು" ನನ್ನೊಡನೆ ಸಂತೆಯಲ್ಲಿ ಹೇಳಿದ್ದು—ಕೆಲವು ವರ್ಷಗಳ ಕೆಳಗೆ—ಕೆರೆಯ ಮೂಡುಬದಿಯಲ್ಲಿ ಮನೆಮಾಡಿಕೊಂಡಿರುವ ಕಾಯಮ್ಮನಿಗೂ, ಪಡುಬದಿಯಲ್ಲಿ ಮನೆಮಾಡಿಕೊಂಡಿರುವ ಜಲಜಮ್ಮನ ಒಡತಿ ರಾಧಮ್ಮನಿಗೂ ಬೇಸಗೆಯಲ್ಲೊಂದು ದಿನ ಕೆರೆಯ ನೀರಿನ ಬಗ್ಗೆ ಜಗಳವಾಯಿತಂತೆ. ಇಬ್ಬರ ಜಗಳ ಎಲ್ಲಿಯ ವರೆಗೆ ಬೆಳೆಯಿತೆಂದರೆ ಅವರು ನೀರಿನ ಗಡಿಗೆಗಳಿಂದಲೇ ಯುದ್ಧ ಮಾಡಿಕೊಂಡರು. ಅವರ ಎರಡೂ ಗಡಿಗೆಗಳು ಢಣ ಢಣ ಶಬ್ದದೊಂದಿಗೆ ಪುಡಿ ಪುಡಿಯಾದುವು. [ಈ ಜಗಳವನ್ನು ನೋಡಿ ಸ್ಫೂರ್ತಿ ಹೊಂದಿ ಶೇಖರ ಮಹಾರಾಜರು, ಭಾರತ-ಚೀನಾ ಯುದ್ಧದಲ್ಲಿ ಸ್ತ್ರೀಯರ ಪಾತ್ರವನ್ನು ವರ್ಣಿಸುತ್ತಾ ಕವಿತೆಯೊಂದನ್ನೇ ಬರೆದನಂತೆ.]

ಹೀಗೆ ಗಡಿಗೆಗಳೆಲ್ಲಾ, ಪುಡಿಯಾಗುವುದನ್ನು ನೋಡಿ ವ್ಯಥಿತನಾದ ಜಲಜಕನ ಗಂಡ ಚಿನ್ನಯ್ಯನು ಅಲ್ಲಿಗೆ ಓಡಿ ಬಂದು ಅವರಿಬ್ಬರ ಕೈಯಲ್ಲಿ ಉಳಿದಿದ್ದ ಗಡಿಗೆಗಳ ಕುತ್ತಿಗೆಯನ್ನು ಕಿತ್ತುಕೊಂಡನಂತೆ ಹೀಗೆ ಕೆರೆಯ ದಂಡೆಯಲ್ಲಿ ನಿಶ್ಶಸ್ತ್ರೀಕೃತರಾದ ಸ್ತ್ರೀಯರು ಒಡನೆ ತಮ್ಮ ಮನೆಗಳಿಗೆ ಹೋಗಲು. ಚಿನ್ನಯ್ಯನು ಆ ಗಡಿಗೆಯ ಕುತ್ತಿಗೆಗೇ ಕಾಗದವೊಂದನ್ನು ಅಂಟಿಸಿ, ಅದನ್ನೇ ಮದ್ದಲೆಯಾಗಿ ಬಾರಿಸಿದನಂತೆ—ಅದರಲ್ಲಿಯೂ ಒಂದು ವಿಚಾರವಿದೆ — ಬಹಳ ಗಹನವಾದುದು. ಚಿನ್ನಯ್ಯನು ತನ್ನ ಮದ್ದಲೆಯನ್ನು ಸಾಂಗ್ರಾಮ ಹಬ್ಬದ ಖರ್ಚಿಗಾಗಿ ಕಾಯಮ್ಮನಲ್ಲೂ, ತನ್ನ ಕಿವಿಯ ಒಂಟೆಗಳೆರಡನ್ನು ಕೊಡಿ ಹಬ್ಬದ ಖರ್ಚಿಗೆಂದು, ರಾಧಮ್ಮನೆಯೂ ಅಡ ಇಟ್ಟಿದ್ದನಂತೆ ಹೀಗೆ ಇನ್ನೇನೆಲ್ಲಾ ಕತೆಗಳಿವೆಯೋ—ನಮಗೇಕೆ ಅದೆಲ್ಲಾ ಶಾಂತಂ 'ಪಾಪಂ' 'ಶಾಂತಂ' ಎಂದೊಡನೆ ನನಗೆ ಶಾಂತಳ ನೆನಪಾಯಿತು.

ಹೌದು, ಶಾಂತಳು ನಿಜವಾಗಿಯೂ ಪಾಪದ ಹುಡುಗಿ ಅರ್ಥಾತ್ ಅವಳು ಪಾಪ' ಮಾಡಿಷಳೆಂದಲ್ಲ. ಮಳೆಗಾಲದ, ಲ್ಲೊಂದು ಆಕೆ ತರಕಾರಿ ಸಿಪ್ಪೆಯನ್ನು ಗೊಬ್ಬರದ ಗುಂಡಿಗೆ ಎಸೆಯಬೇಕೆಂದು, ಅಡಿಗೆಯ ಮನೆಯಿಂದ ಅಂಗಳಕ್ಕೆ ಬಂದಾಗ, ಚಿನ್ನಯ್ಯನು ಪೇಟೆಯಿಂದ ಬರುತ್ತಾ ಮೈ ಮುಹಬ್ಬತ್ ಕರೂಂಗಾ, ದುನಿಯಾ ಕ್ಯಾ ಕಹೇಗಿ" ಪದ್ಯ ಹಾಡುತ್ತಾ ಬಂದುದೂ ಸರಿ ಹೊಂದಿಕೆಯಾಯಿತು. ಚಿನ್ನಯ್ಯನು ಶಾಂತಳನ್ನು ತನ್ನ ಕೆಂಪು ಕಣ್ಣುಗಳನ್ನು ಮಿಳಿಕಿಸುತ್ತಾ ಕಂಡನಂತೆ. ಶಾಕುಂತಳೀ ನ್ಯಾಯವೆಂಬತೆ ಸದಾ ನೆಲವನ್ನೇ ನೋಡುತ್ತಾ ನಡೆಯುತ್ತಿರುವ ಶಾಂತಳು ಅವನನ್ನೊಮ್ಮೆ ನೋಡಿಬಿಟ್ಟಳು. 'ಶಾಂತ ಪಾಪಂ' ಎಂತಹ ಘೋರ ಪಾಪ! ಬಾವಿಯ ದಡದಲ್ಲಿ ಮಾಧ್ಯಾಹ್ನಿಕ ಮಾಡುತ್ತಿದ್ದ ಪುರೋಹಿತ ರಾಮಕೃಷ್ಣಯ್ಯನವರು ಇದನ್ನು ನೋಡಿದವರು ಒಡನೆಯೇ—"ನೆರೆಮನೆಯಲ್ಲಿ ಇಪ್ಪೀಟು (ನವ್ಯ ಭಗವದ್ಗೀತೆ)ಯ ಪಾರಾಯಣ ಮಾಡುತಿದ್ದ ಶಾಂತಳ ತಂದೆ ಗೋಪಾಲಯ್ಯನ ಮುಂದೆ ಗರುಡ ಪುರಾಣದ ಮಹಾ ಶ್ಲೋಕಗಳನ್ನು ಉದುರಿಸಿ (ಉದ್ಧರಿಸಿ) ಶಾಂತಳಿಗೆ ತಕ್ಕ ಶಾಸ್ತಿ ಮಾಡಿಯೇ ಬಿಟ್ಟನಂತೆ.

ಪಾಪ! ಮರುದಿನ ಶಾಂತಳ ಹೆಣ ನಮ್ಮೂರ ಕೆರೆಯಲ್ಲೇ ತೇಲುತಿತ್ತು. ಅಂದು ಸಂಜೆ ಗೀತಾಚಾರ್ಯ ಸುಬ್ಬ ಶಾಸ್ತ್ರಿಗಳು ಕೆರೆಯ ದಡದಲ್ಲಿ ಸಂಧ್ಯಾವಂದನೆ ಮಾಡಲು ಸ್ನಾನ ಮಾಡುತ್ತಾ ಹೀಗೆ ಹೇಳುತಿದ್ದರು.

"ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯ ತತೋ ಯುದ್ಧಾಯ, ಯುಜ್ಯಸ್ವನೈವಂ, ಪಾಪ ಮವಾಪ್ಯತಿ ||",

ಈ ಶ್ಲೋಕದ ಅರ್ಥ ಶಾಸ್ತ್ರಿಗಳಿಗೆ ಗೊತ್ತಿಲ್ಲವೆನ್ನುವುದು ಕರಿಯ ಗಂಡಿನ ಉದ್ಧಟತನವಲ್ಲದೇ ಇನ್ನೇನು? ಅಲ್ಲೇ ಪಕ್ಕದ ದಾರಿಯಲ್ಲಿ ಹೋಗುತಿದ್ದ ಸರಾಫ ಸೀತಾರಾಮ ರಾಯರು ಚೀನಾ ಭಾರತ ಯುದ್ಧದಿಂದ ಚಿನ್ನದ ಮಾರ್ಕೆಟಿನಲ್ಲಿ ಆದ ಬದಲಾವಣೆಯ ಬಗ್ಗೆ ಗಹನವಾಗಿ ಚಿಂತಿಸುತಿದ್ದರು—ಸಾಕ್ಷಾತ್ ಋಷಿಗಳ ಚಿಂತನದಂತಹದೇ ಚಿಂತೆ ಇದಿದೂ ಅಲ್ಲವೇ?

—ಶ್ರೀ ಪಾ ಚಂ ಚಡಗ, ಸಾಸ್ತಾನ್.

## ದೇಶ ರಕ್ಷಣೆಯಲ್ಲಿ

(೩ನೇ ಪುಟದಿಂದ)

ಶಿಸ್ತು ಬಲದಿಂದ ಡಾಲ್ಡಾವನ್ನು ಶುದ್ಧ ತುಪ್ಪವೆಂದು ಮಾರುತ್ತಾರೆ, ಪಾಕಿಸ್ತಾನಿ ಪ್ರತಿನಿಧಿ ಲಂಕೆಯ ಪ್ರತಿನಿಧಿಗಿಂತ ಅಧಿಕ ಮತಗಳನ್ನು ಪಡೆಯುತ್ತಾನೆ; ಪಾಕಿಸ್ಥಾನದ ಗೋಣಿನಾರು ರೇಷ್ಮೆಯ ಸಿಂಹಾಸನವನ್ನು ಕಸಿದುಕೊಳ್ಳುತ್ತದೆ. ಆಚಾರ್ಯ ವಿನೋಬಾರವರು ಪ್ರಪಂಚದಲ್ಲಿ ಒಂದು ವಿಧದ ಅದ್ವಿತೀಯ ವ್ಯಕ್ತಿ ಇದ್ದಾರೆ. ಈ ವಿಷಯ ವಿದೇಶಿಯರಿಗೆ ಹಾಗಿರಲಿ, ನಮ್ಮ ನಾಡಿನ ಬಂಧುಗಳಿಗೆನೇ ಗೊತ್ತಿರುವದಿಲ್ಲ ಇಂದೂ ಚೈನಾ ಪ್ರಕಟಿಸುತ್ತಿರುವ ಭೂಪಟ ಪ್ರಪಂಚದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇತ್ತ ನಾವು ಗಮನ ಹರಿಸಲೇ ಬೇಕಾಗಿರುತ್ತದೆ. ನಾವು ಸಿಂಹಾವಲೋಕನ ಮಾಡದಿದ್ದಲ್ಲಿ ಪುನಃ ಸೋಲಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ.

ಈ ರೀತಿ ಡಾ॥ ಗೋಪಿನಾಥ ತಿವಾರಿಯವರು ಹಿಂದೀ ಸಾಪ್ತಾಹಿಕ 'ಪಾಂಚಜನ್ಯ'ದಲ್ಲಿ ಲೇಖನವನ್ನು ಬರೆದು ಜನತೆಗೂ ಸರಕಾರಕ್ಕೂ ಎಚ್ಚರಿಕೆ ನೀಡಿರುವರು. ಜಗತ್ತಿನ ದೃಷ್ಟಿ ಇಂದು ಹಿಮಾಲಯದತ್ತ ಹರಿದಿದೆ ಅದನ್ನು ಸುರಕ್ಷಿತವುದಲ್ಲಿ ಬಳಸಿಕೊಳುವದು ಸರಕಾರದ ಘನ ಜವಾಬ್ದಾರಿ ಇದೆ. ಅದನ್ನು ಮರೆತು ಮಿತ್ರನ್ಯಾರು, ಹಿತಶತ್ರುಯಾರು, ವೈರಿಯಾರು ಎಂಬುದನ್ನು ಆಲೋಚಿಸದೆ, ತಗಣೆಗಳಿಗೆ ಹೆದರಿ ಮನೆಗೆ ಬೆಂಕಿಕೊಡುವ ದುಷ್ಕಾರ್ಯ ನೂತನ ಜವಾಬ್ದಾರಿಯುತ ಸರಕಾರವೂ ಮಾಡದು. ನಮ್ಮದು ಪ್ರಜಾಪ್ರಭುತ್ವ ರಾಜ್ಯ ಇದೆ ಹಾಗಿರುವದರಿಂದ ಪ್ರಜೆಗಳು ಸದಾ 'ಹಿಮಾಲಯದ ದೋಷ'ದತ್ತ ಸದಾ ಎಚ್ಚರಿಕೆಯಿಂದಿರಲೇ ಬೇಕಾಗುತ್ತದೆ.

ಹಿಮಾಲಯವು ನಮ್ಮ ಶಿವಾಲಯವೇ ಇದೆ. ಆದರ ಮೇಲೆ ಆಕ್ರಮಣ ನಡೆದಲ್ಲಿ ಪೂರ್ಣ ಭಾರತಕ್ಕೇನೇ ಅಪಮಾನವಾಗುತ್ತದೆ ಅದನ್ನು ಸಹಿಸಿಕೊಳ್ಳಲು ಯಾವ ಭಾರತೀಯನೂ ಸಿದ್ಧನಿರಲಿಕ್ಕಿಲ್ಲ. ಸೋಮನಾಥ ನಮ್ಮೆದುರಿಗೇನೇ ಇರುವ ಸ್ಪಷ್ಟ ಸಾಕ್ಷಿ ಇದೆ. ಜನತೆ ಅದನ್ನು ಪುನಃ ಕಟ್ಟಿಸಿರುತ್ತದೆ—ಕಳಂಕವನ್ನು ತೊಡೆದು ಹಾಕಿರುತ್ತದೆ. ಹಾಗೆಯೇ ಈ ವಿಶಾಲ ಶಿವಾಲಯದ ಮೇಲೆ ಬಂದಿರುವ ಆಪತ್ತನ್ನು ಭಾರತೀಯರು ನಗುನಗುತ್ತ ಹಸನ್ಮುಖಿಗಳಾಗಿ ಎದುರಿಸುವದರಲ್ಲಿ ಯಾರಿಗೂ ಸಂದೇಹವಿರುವದಿಲ್ಲ. ಆದಕ್ಕೆ ಹಿಮಾಲಯವು ನಮ್ಮ ಶಿವಾಲಯವಿದೆಂಬ ವಾಕ್ಯ ಜ್ಞಾಪಕದಲ್ಲಿರಲೇ ಬೇಕಾಗಿದೆ.

—ಶ್ರೀ ಶಿವಶಂಕರ, ಮದ್ರಾಸು.

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ ೧೮ ಸಾಮಾನ್ಯ ರೂ. 4/. ಮಧ್ಯಮ ರೂ. 6/- ಉತ್ತಮ ರೂ. 9/-

**P. Devee & Co.** (N. J.) Calcutta—40

## ಗೇಹ ರಾಜ್ಯದಲ್ಲಿ

# ಯಥಾ ಮಂತ್ರಿ ತಥಾ ಜನತಾ

"ನೋಡೀಂದ್ರೆ....ನಿಮ್ಮ ಸರಕಾರದಲ್ಲಿ ನಡೆಯೋ ಕೆಲಸ್ನೆಲ್ಲ ಕಂಡ್ರೆ, ಅವರು ಮಾತಾಡೋ ಮಾತನ್ನೆಲ್ಲಾ ಕೇಳಿದ್ರೆ ಕಾಗೆಯೂದ್ರೂ ಅಗುಳು ಬಿಟ್ಟು ಓಡಿ ಹೋದೀತು."

"ಏನೇ ಅದು, ಅಂಥದ್ದೇನಾದದ್ದು?"

"ಮತ್ತಿನ್ನಾಗಬೇಕಾದ್ದಾದ್ರೂ ಏನು? ಪ್ರೈಮರಿ ಒಂದೆರಡನೆಯ ತರಗತಿಯ ಮಕ್ಕಂತೆ, ಬೀದೀ ಭಿಕಾರಿಗಳಂತೆ ಆಡಿಕೊಂಡ್ರೆ...."

"ಏನೇನು ಆಡಿಕೊಂಡ್ರು?"

"ಆಡಿಕೊಳ್ಳೋದೇನು, ಇನ್ನೇನು ಆಡಿಕೊಳ್ಬೇಕೂಂತ? ನೋಡಿ, ಆ ಸಲ ನೀವೇ ಹೇಳಿದ್ರಿ, ನಮ್ದೇಶದ ಸಂಸ್ಕಾರ ಜನತಾ ಸಂಸ್ಕಾರ, ನಂ ಜನ ಯೋಗ್ಯರು, ಅಂತ್ಲೇ ನಂ ಪ್ರತಿನಿಧಿಗಳೂ ಯೋಗ್ಯರೂಂತ"

"ಮತ್ತೆ ಇವತ್ತಾರು ಹೇಳಿದ್ರು, ಅವರು ಅಯೋಗ್ಯರೂಂತ?"

"ಯಾರ್ಯಾರು ಯಾಕ್ಯಾಕೆ ಹೇಳ್ಬೇಕು, ನೋಡಿ. ಅವರ ಮಾತನ್ನೇ ಕೇಳಿದ್ರೆ ಸಾಲ್ದೆ? ನಮ್ಮವ್ರು ಎಂಥವ್ರು, ನಾವು ಎಂಥವ್ರನ್ನ ಆರಿಸ್ದು ಕಳ್ಸಿದ್ದೇವೆ ಅಂತ ತಿಳಿಯೋಕೆ ಮತ್ತೆ ಯಾವ ಸಾಕ್ಷಿ ತಾನೇ ಬೇಕೂಂತ?"

"ಏನೇ ಅದ? ನಿನ್ನ ಪೀಠಿಕೆ ಉದ್ದವಾಗ್ತಾ ಹೋಗಿದೆಯೇ ಹೊರತು ವಿಷಯಾನೇ ಬರೋಲ್ಲಲ್ಲಾ?"

"ಮೊನ್ನಿನ ಪೇಪ್ರು ಓದಿಲ್ವಾ ನೀವು?"

"ಓದಿರ್ಬೇಕು, ಮತ್ತೆ, ಅದ್ರಲ್ಲೇನಿದೆಯೆ?"

"ಇನ್ನಿರ್ಬೇಕೇನೂಂತ? ನಿಮ್ಮ ಟೋಪೀಸರ್ಕಾರ ಎಲ್ಲದಕ್ಕೂ ಟೋಪಿ ಹಾಕ್ತೊಂತ್ನಿ. ಇನ್ನು ಮಾತಿಗೂ ಟೋಪಿ ಹಾಕಿ ಕೊಂಡ್ರೆ ಜನನಾದ್ರೂ ನೆಮ್ಮದಿಯಿಂದ ಉಸಿರಾಡೋದು ಸಾಧ್ಯವಾದೀತು."

"ಏನೇ ಏನೇ ನೀನು ಬಗುಳೋದು?"

"ವಾಕ್ ಸ್ವಾತಂತ್ರ್ಯ ನಮಗೆಲ್ಲರಿಗೂ ಸಂವಿಧಾನದಲ್ಲಿ ಕೊಡಲಿಲ್ಲವೆ?"

"ಕೊಟ್ಟಿದೇನ್ನಿ. ಒಂದ್ರೀತಿಯಿಂದ ನೋಡಿದ್ರೆ ಹಾಗೆ ಕೊಟ್ಟಿದ್ದೇ ತಪ್ಪೂಂತ ಅನ್ನಿಸ್ತದೆ. ಇಲ್ಲವಾದ್ರೆ ಮಂತ್ರಿಗಳು ಕೂತು ಅಪ್ಪ ಅಮ್ಮ ಅನ್ನೋವೆ? ಪ್ರಜಾ ಜನರು ಅವರನ್ನ ಶುನಕ, ದೇಶದ್ರೋಹಿ ಎಂತ ಅನ್ನೋದೆ?"

"ಏನೋ ಸಾಯೋಕಾಲಕ್ಕೆ ದೇವ್ರ ಹೆಸ್ರೆತ್ತೋ ಬದ್ಲು ಅಮ್ಮ ಅಪ್ಪನ ನೆಪ್ಪ ಮಾಡಿರ್ಬಹುದೂನ್ನಿ. ನನ್ಗೂ ನಿನ್ಗೂ ಕೆಲವೊಮ್ಮೆ ಹಾಗಾಗುತ್ತಿಲ್ವೆ?"

"ಆಗುತ್ತೆ ಆಗುತ್ತೆ...."

"ನೋಡು ಇಷ್ಟು ಹೇಳಿದ್ದೇ ತಡ ಬಂದುಬಿಟ್ತು ಮೂಗಿನ್ತುದೀಲಿ ಸಿಟ್ಟು."

"ಅಲ್ಲ, ಮೊನ್ನೆ ನಿಮ್ಮ ಫ್ರೆಂಡ್ ಶ್ರೀಶ ಬಂದಿದ್ನಲ್ಲ? ಅವ ಮರಳಿ ಹೋಗ್ತಿರೋವಾಗ, ಇವನ್ನ ನೋಡಿ ಕೂಗೋ ಬದ್ಲು ಪ್ಪ, ಪ ಅಂತ ನನ್ನ ಕೂಗ್ಬಿಟ್ರೆ ನೋಡಿ. ಹೀಗೇ ಅಲ್ಲಾ ನಿಮ್ಮನೆಪ್ಪು. ಮತ್ತೆ ಮಂತ್ರಿಗಳಿಗೆ ತಾನು ಮಾಡಿದ್ದಾಪ ಕಾರೋ ಕಾಲಕ್ಕೆ ಅಮ್ಮ ಅಪ್ಪನೆನಪ್ಪು ಬರದೆಲ್ಲಿ ಹೋಗುತ್ತೆ? ಬರ್ಲೇ ಬೇಕು ಕಣ್ರಿ."

"ಎಲಾ, ಇದೇನೋ ಪಾಪಗೀಪಾಂತ ಅಂತೀಯಾ? ಪಾಪ ಮಾಡಿದವ್ರು ಯಾರು, ಮಾಡಿದ್ಪಾಪವಾದ್ರೂ ಎಂಥದು?"

"ಓ, ಸರಿ ಅನ್ನಿ. ಈಗ ಗೊತ್ತಾಯ್ತು. ನೀವು ಪೇಪರ್ ಓದಿಯೇ ಇಲ್ಲ. ಮೊದ್ಲೇ ಒಪ್ಕೊಳ್ಬಾರದಿತ್ತೆ, ಓದ್ಲಿಲ್ಲಾಂತ. ಗಂಡು ಮನುಷ್ಯರ ಸ್ವಭಾವವೇ ಹೀಗೇನೇ. ತಿಳೀದೇ ಇದ್ರೂ ಎಲ್ಲಾ ತಿಳಿದಿದೇಂತ ಮೀಸೆ ಹುರಿಯೋದಕ್ಕೆ ಮಾತ್ರ ಅವ್ರು ಸರಿ."

"ನೋಡು, ನೀನು ನಿನ್ನ ಗಂಡನ್ನ ಬೇಕಾದ್ರೆ ಬಯ್ದು ತೃಪ್ತಿಪಟ್ಕೊ. ಆದ್ರೆ ಪ್ರಪಂಚದಲ್ಲಿರೋ ಎಲ್ಲ ಗಂಡಸ್ರನ್ನ ಒಬ್ಬನ ಮಾನದಂಡದಿಂದ ಅಳೀ ಬೇಡ."

"ಒಪ್ಪಿಕೊಂಡ್ರಲ್ಲ ಈಗ್ಲಾದ್ರೂ..."

"ಆಯ್ತು ಮಾರಾಯ್ತಿ, ಆಯ್ತು. ಮತ್ತೆ ಏನಿತ್ತು ಪೇಪ್ರಲ್ಲಿ ಅಷ್ಟನ್ನಾದ್ರೂ ಹೇಳು."

"ನೋಡಿ ತುಂಬ ಮಾತಾಡೋ ಮುಕ್ಕಣ್ಣಪ್ಪನವ್ರಿಗೂ ಶಿಕ್ಷಣ ಮಂತ್ರಿ ಕಂಠಿಯವರಿಗೂ ಮಾತಾಮಾತಿಯಾಯ್ತಂತೆ. ಮಾನ್ಯ ಟೋಪೀ ಸರ್ಕಾರದ ಮಂತ್ರಿವರ್ಯರು 'ನಿಮ್ಮ ಅಪ್ಪನಿಂದ್ಲೂ ನನ್ನನ್ನ ಅಧಿಕಾರದಿಂದ ಇಳಿಸಲು ಸಾಧ್ಯವಿಲ್ಲಾ'ಂತ ಗುಡುಗಿದ್ರಂತೆ. ಅಷ್ಟೇ, ಒಂದು ಮಾತು ನಿಮ್ಮನ್ನ ಕೇಳ್ಬೇಕೂಂತ...."

"ಅಷ್ಟೇ ತಾನೆ? ಏನದು?"

"ಅಲ್ಲ, ಮುಕ್ಕಣ್ಣಪ್ಪನವರ ಅಪ್ಪನವ್ರು ಎಂ. ಎಲ್. ಎ. ಆಗಿದ್ದಾರೆಯೇ ಅಂತ?"

"ಛಿ, ಹುಚ್ಚಿ, ಏನು ಹೇಳ್ತಿಯೋ ನೀನು? ಅವ್ರೇ ಮಗುವಿನ ಅಪ್ಪನ ಅಪ್ಪಾಗಿದ್ದಾರೇಂತ ಕೇಳಿದ್ದೆ. ಅವ್ರ ಅಪ್ಪ ಬದುಕಿದ್ದಾರೆಯೋ ಇಲ್ವೋ ಅಂತ ಸಂದೇಹ ಮತ್ತೆ ನೋಡು, ಅವ್ರು ಎಂ. ಎಲ್. ಎ. ಅಂತೂ ಖಂಡಿತಕ್ಕೂ ಅಲ್ಲ."

"ಅದು ಮಂತ್ರಿಗಳಿಗೆ ಗೊತ್ತಿಲ್ಲವೇಂತ?"

"ಗೊತ್ತಿದ್ದಿರಬಹುದು ಅಥವಾ ಇಲ್ಲದಿರಬಹುದು. ನೀನ್ಯಾಕೆ ಅಷ್ಟೆ ತಲೆ ಚಚ್ಚಿಕೊಳ್ತಿ?"

"ಮಂತ್ರಿಗಳನ್ನ ಉರುಳಿಸುವುದು ಎಂ. ಎಲ್. ಎ. ಗಳಿಂದ ಮಾತ್ರ ಸಾಧ್ಯಾಂತ ಕೇಳಿದ್ದೇನೆ ನಾಗಿರುವಾಗ, ಮುಕ್ಕಣ್ಣಪ್ಪನವರ ಅಪ್ಪ ಉರುಳಿಸೋದು ಹೇಗೇಂತ ಯೋಚ್ನೆ ಮಾಡಿಕೊಳ್ತಾ ಇದ್ದೆ."

"ಅಯ್ಯೋ ಹುಚ್ಚಿ, ಏನೋ ಸಿಟ್ಟಿಗೆ ಮಾತು ಬಂದು ಹಾಗೆ ಅಂದಿರ್ಬಹುದು. ಅದನ್ನೆಲ್ಲಾ ಹಿಡಿದುಕೊಂಡ್ರೆ ವ್ಯರ್ಥ ತಲೆಬಿಸಿ."

"ಅದು ಹಿರೀ ಅನ್ನಿ. ಮಂತ್ರಿಗಳು ಅಂದದ್ದನ್ನೆಲ್ಲಾ ಕೋರ್ಟಿನ ಮುಂದಿಡಬೇಕಾದ್ರೆ ಒಬ್ಬ ಜಡ್ಜರಿಗೇನೇ ಹುಚ್ಚು ಹಿಡಿಯುತ್ತದೆ, ಇಲ್ಲಾ ಮಂತ್ರಿಗಳಿಗೇನೆ ಹುಚ್ಚು ಎಂಬ ತೀರ್ಮಾನ ಹೊರಡುತ್ತದೆ."

"ಇರ್ಬಹುದು...."

"ಬಹುದು ಅಲ್ಲ, ಇದೆ ನೋಡಿ, ಮೊನ್ನೆ ಮೊನ್ನೆ ಒಂದು ಕಡೆ ಸುದ್ದಿ ಭಾಷಣ ಮಾಡ್ತಾ ಅವ್ರ, ಅಂದ್ರು ಸರಕಾರಿ ಕಾಲೇಜುಗಳನ್ನು, ಹೈಸ್ಕೂಲುಗಳನ್ನು ಕೂಡಾ ಖಾಸಗಿಯವರಿಗೆ ಬಿಟ್ಟು ಕೊಡ್ತೇವೆ ಅಂತ."

"ಹೌದು, ಶಿಕ್ಷಣದ ಮಟ್ಟ ಖಾಸಗಿ ಶಾಲೆಗಳಲ್ಲಿ ಚೆನ್ನಾಗಿರುತ್ತದೇಂತ. ಮತ್ತು ಸಂಸ್ಕಾರಕ್ಕೂ ಇದು ನಷ್ಟದ ಖಾತೆ ನೋಡು. ಜನ ಮುಂದೆ ಬಂದ್ರೆ ಯಾಕೆ ಕೊಡ್ಬಾರ್ದು? ಪ್ರಜಾಪ್ರಭುತ್ವದಲ್ಲಿ ಸರಕಾರ ಆದಷ್ಟು ಕಡಿಮೆ ವ್ಯವಹಾರಗಳಿಗೆ ಕೈಹಾಕ್ಬೇಕು."

"ಸರಿ, ಸರಿ ಲಾಭ ಬರುವಂಥದ್ದು ನಮಗೆ ಬಿಡ್ಲಿ, ನಷ್ಟವಾಗ ನಂತದ್ದು ನಿಮಗೆ ಕೊಡ್ತೇನೆ ಅಂತ ನಿಮ್ಮ ಸರ್ಕಾರದ ನೀತಿ ತಾನೆ? ಗೊತ್ತಾಯ್ತು. ನಾಳೆ ಆಸ್ಪತ್ರೆಗಳನ್ನು, ಪೋಲೀಸುಗಳನ್ನು ನಿಮ್ಮ ಯೋಜನೆಯನ್ನ ಕಾರ್ಯಕ್ಕಿಳಿಸುವುದನ್ನ ಎಲ್ಲಾ ಜನರಿಗೆ ಕೊಡ್ಲಿ. ದುಡ್ಡು ಬರೋ ಕಂದಾಯ-ತೆರಿಗೆಗಳನ್ನು ಮಾತ್ರ ತಾವಿಟ್ಕೊಂಡು ಟೊರುಮಾಡಿ ಹಂಚಿಕೊಳ್ಳಲಿ ಸರಿಯಾಗುತ್ತೆ ಆಗ. ಆಗ ಮುಕ್ಕಣ್ಣಪ್ಪನವರ ಅಪ್ಪನೂ ಬೇಡ, ಮಗನೂ ಬೇಡ ಅವ್ರನ್ನ ಅಧಿಕಾರದಿಂದ ಇಳಿಸೋಕೆ. ಒಂದಿನ ಹಾರ ಹಾಕಿಕೊಳ್ಳೋಕೆ ಕತ್ತುಬಗ್ಗಿಸಿದಾಗ್ಲೇ ಜನಾ ಹಾಕ್ತಾರೆ ಕತ್ತೀನ."

"ಏ, ಏನೇ ಇದು ನಾಲಿಗೆ ಕಡಿಬೇಳ್ತಾ ಇದೆಯಲ್ಲ? ಸ್ವಲ್ಪ ಎಚ್ಚರವಾಗಿರು."

"ಎಚ್ಚರವಾಗಿಯೇ ಇದ್ದೇನೆ ಖಾಸಗಿ ಪ್ರೈಮರಿ ಶಾಲೆಗಳನ್ನು ನಡೆಸಿಕೊಂಡು ಬರುವ ಪಾಪದ ಮೇನೇಜುಮೆಂಟುಗಳಿಗೆ ಮೈಂಟೆನೆನ್ಸ್ ಗ್ರಾಂಟು ಕೊಡದೆ ಅವ್ರನ್ನೂ ಅವ್ರ ಅಧ್ಯಾಪಕರನ್ನೂ ಗೋಳು ಹೊಯ್ಕೊಳ್ಳೋ ಸರ್ಕಾರ ಶಿಕ್ಷಣ ಶಾಖೆಯನ್ನೇ ಬಂದ್ ಮಾಡಿ ಬಿಟ್ರೆ ತುಂಬ ಉಪ್ಕಾರಾಂತ ತೋರುತ್ತೆ. ಜನತವ್ಗೆ ಬೇಕಾದಂತೆ ಕಲ್ತುಕೊಳ್ತಾರೆ."

"ನಮ್ಮ ಸಂವಿಧಾನ ಖಡ್ಡಾಯ ಪ್ರಾಥಮಿಕ ಶಿಕ್ಷಣವನ್ನ ಸಾರುತ್ತಲ್ಲಾ. ಅದ್ರಿಂದ...."

"ಬರೀ ಸಾರೋದ್ರಿಂದ ಫಲವಾಗೋದುಂಟೆ? ನಾಲ್ಕು ಸಲ ಸಾರೋದು 'ಹಾಗ್ಮಾಡ್ತೇವೆ, ಹೀಗ್ಮಾಡ್ತೇವೇಂತ. ಮತ್ತೊಂದ್ಸಲ 'ಸಾರಿ' ಅನ್ನೋದು. ಹಾಡೋದೂ ಅವ್ರೆ, ಕುಣಿಯೋದೂ ಅವ್ರೆ"

"ಏನ್ಮಾಡೋದು, ಅಂತು ದೇಶದ ಗ್ರಹಚಾರ ನೆಟ್ಟಗಿಲ್ಲಾಂತ ಪಂಚಾಂಗ ಕರ್ತರು ಬರೆದಿದ್ದಾರೆ. ಅದು ಸರಿಯೂ ಗೋತನ್ನ ಸಹಿಸಿಕೊಂಡಿರ್ಬೇಕು."

"ದೇಶದ ಗ್ರಹಚಾರ ಅಲ್ಲ ನಿಮ್ಮ ಕಂಠಿಯಂತಹ ಟೋಪೀ ಭಕ್ತರ ಗ್ರಹಚಾರಾನ್ನಿ. ನಮ್ಮಿಂದೇನಾಗುತ್ತೆ? ಅಂತೂ ಸಹಿಸಿಕೊಳ್ಳೋದು. ಆದ್ರೂ ಅದಕ್ಕೂ ಒಂದು ಮಿತಿಯಿದೆ ತಾನೇ? ಇಲ್ಲಿ ಬನ್ನಿ ಕಾಲ್ತೊಳ್ಕೊಳ್ಳಿ ಅಗ್ಲೆ ಬಂದು ಅಪ್ಪು ಹೊತ್ತಾಯ್ತು."

"ಹೂಂ........"

—ಗೋರಾ.

## ಸಹನೆ ಬೇಕು

ಅಸಹನೆಯೇ ಧರ್ಮದ ದೊಡ್ಡ ಕುತ್ತು.

ಶೈವ ಭಕ್ತನೊಬ್ಬನಿದ್ದ. ಅವನ ಹೆಸರು ಘಂಟಾ ಕರ್ಣ. ಅವನ ಶಿವನ "ಘೋರ ಭಕ್ತ". ಅವನ ಭಕ್ತಿ ಅದೆಷ್ಟು ತೀವ್ರವಾಗಿತ್ತೆಂದರೆ, ಶಿವನ ನಾಮವಲ್ಲದೆ ಬೇರಾವ ಹೆಸರನ್ನು ಆತ ಸಹಿಸಲಾರದಾಗಿದ್ದ.

ಇತರ ದೇವರುಗಳ ಹೆಸರೇ ಕಿವಿಗೆ ಕೇಳಿಸದಂತೆಮಾಡಲು ತನ್ನ ಕಿವಿಗಳಿಗೆ ಗಂಟಾಮಣಿಯನ್ನು ತೂಗಹಾಕಿಕೊಂಡಿದ್ದ.

ಪರಮೇಶ್ವರನು ಈ ಭಕ್ತನ ರೋಗ ಗುಣಪಡಿಸಲು ಬಯಸಿ ಮುಂದಾರ ಅದೊಂದು ದಿನ ಘಂಟಾಕರ್ಣನು ಶಿವನಿಗೆ ಧೂಪಾರತಿ ನಡೆಸುತ್ತಿದ್ದಾಗ ಶಿವನ., ಅರ್ಧ ಶಿವ ಮತ್ತು ಅರ್ಧ ವಿಷ್ಣು ರೂಪದಲ್ಲಿ ಪ್ರತ್ಯಕ್ಷನಾದ. ಗಂಟಾಕರ್ಣನು ವಿಷ್ಣುವಿಗೆ ಧೂಪದ ಸುವಾಸನೆ ಸೇರದಿರಲೆಂದು ಆ ವಿಷ್ಣುವಿನ ಭಾಗದ ಮೂಗನ್ನೇ ಚಚ್ಚಿದ ಈತನನ್ನು ತಿದ್ದಲಾಗದೆ ಶಿವನೇ ಸೋತ.

—ಸ್ವಾಮಿ ವಿವೇಕಾನಂದ

**ಉತ್ತಮ ಗುಣ ನಡತೆಗಳಿಗಿಂತ ದೊಡ್ಡ ಒಡವೆ— ಆಭರಣಗಳಿಲ್ಲ**






REGD. No. B. G. 176
LICENCE No. 31
Licensed to Post without Prepayment

## ಮೌಲಾ ಆಲಿ ಬಯಲು ಸೆರೆಮನೆ

(೯ನೇ ಪುಟದಿಂದ)

ತೃಪ್ತರಿರುವುದನ್ನು ಮನಗಾಣಬಹುದು. ಅವರು ತಮ್ಮ ಹೆಚ್ಚಿನ ಸಮಯವನ್ನು ಗದ್ದೆಗಳಲ್ಲಿಯೇ ಕಳೆಯುತ್ತಾರೆ. ಕೆಲವರು ಪಶು ಶಾಲೆಯ ಮೇಲ್ವಿಚಾರಣೆ ನಡೆಸುತ್ತಾರೆ. ಸಹಕಾರಿ ಮನೋವೃತ್ತಿ ಕೈದಿಗಳಲ್ಲಿ ಉತ್ತೇಜನ ಮೂಡಿಸಿದಂತೆ ತೋರುತ್ತದೆ. ಅವರಿಗೂ ಸಾಮಾನ್ಯ ರೈತರಿಗೂ ಇರುವ ಏಕ ಮಾತ್ರ ವ್ಯತ್ಯಾಸವೆಂದರೆ ಕೈದಿಗಳ ಉಡುಗೆ ಮಾತ್ರ. ಆಂಧ್ರ ಪ್ರದೇಶ ಸರಕಾರವು ಈ ಪ್ರದೇಶದ ಸುತ್ತಲಿನ ಇನ್ನೂ ೫೦೦ ೬೦೦ ಎಕ್ರೆ ಜಮೀನನ್ನು ಇದಕ್ಕೆ ಸೇರಿಸಿ ಅರೆ ಯಾಂತ್ರಿಕ ಕೃಷಿ, ಕೋಳಿ ಸಾಕಣೆ, ಹಾಲು ಸರಬರಾಯಿ ಕೇಂದ್ರಗಳನ್ನು ರಚಿಸುವ ಆಲೋಚನೆಯಲ್ಲಿದೆ. ಆಗ ಇನ್ನೂ ಸುಮಾರು ೧೦೦ ಕೈದಿಗಳು ಈ ಬಯಲು ಸೆರೆಮನೆಯಲ್ಲಿ ಅವಕಾಶ ಪಡೆಯುವುದು ಸಾಧ್ಯವಾಗುವ ನಿರೀಕ್ಷೆಯಿದೆ.

ಮೌಲ ಆಲಿ ಭಿತ್ತಿರಹಿತ ಕಾರಾಗೃಹವು ಈ ಯೋಜನೆಯ ಯಶಸ್ವಿತೆಗೊಂದು ನಿದರ್ಶನ. ಇಲ್ಲಿಂದ ಇದುವರೆಗೆ ಕೇವಲ ಏಳು ಮಂದಿ ಮಾತ್ರ ತಪ್ಪಿಸಿ ಹೋಗಿರುವರು. ಈ ಸಂಖ್ಯೆಯು ತೀರ ಅತ್ಯಲ್ಪ. ನಗರದ ಜೇಲುಗಳು, ಪ್ರಾಮಾಣಿತ ಶಾಲೆಗಳು ಮತ್ತು ಆಸ್ಪತ್ರೆಗಳ ಆವಶ್ಯಕತೆಗಳನ್ನು ಪೂರೈಸುವುದಕ್ಕೆ ಶಕ್ತವಾಗುವಂತೆ ಈ ವ್ಯವಸಾಯ ಕ್ಷೇತ್ರವನ್ನು ನಾನಾ ಮುಖಗಳಿಂದ ಅಭಿವೃದ್ಧಿಗೊಳಿಸುವ ವಿಚಾರವಿದೆ. ಹೆಚ್ಚಾಗುವ ಹಾಲನ್ನೂ ಕ್ಷೀರ ವಿತರಣಾ ಕೇಂದ್ರಕ್ಕೆ ಒಪ್ಪಿಸಬಹುದೆಂಬ ಆಶೆಯಿದೆ. ನಾಗಾರ್ಜುನ ಸಾಗರ ಯೋಜನೆಯಲ್ಲಿಯೂ ಕಾಲುವೆಗಳನ್ನು ತೋಡುವ ಕೆಲಸದಲ್ಲಿ ಕೈದಿಗಳನ್ನು ಉಪಯೋಗಿಸುವ ಸಲಹೆಯೂ ಪರಿಶೀಲನೆಯಲ್ಲಿದೆ. ಇಲ್ಲಿಯ ಕೈದಿಗಳಲ್ಲಿ ಉತ್ಸಾಹವನ್ನು ಹೆಚ್ಚಿಸಲು ಅವರಿಗೆ ಹೆಚ್ಚಿನ ವೇತನವನ್ನೂ ನೀಡುವ ಉದ್ದೇಶವಿದೆ.

ಕ್ಷೇತ್ರದಲ್ಲಿ ದುಡಿಯುತ್ತಿರುವ ಕೈದಿಗಳ ನಡತೆ ತೃಪ್ತಿಕರವಾಗಿಯೇ ಇದೆಯೆನ್ನಲಾಗಿದೆ. ಕೈದಿಗಳಲ್ಲಿ ನವ ಜೀವನವನ್ನು ರೂಪಿಸಲು ಈ ಪರಿಯ ಬಯಲು ಸೆರೆಮನೆಗಳು ತುಸು ಅಪಾಯಕರವೆನಿಸಿದರೂ ತುಂಬ ಲಾಭ ಪ್ರದವಿವೆಯೆಂದೇ ಅನ್ನಬೇಕಾಗುತ್ತದೆ. ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗುವಂತೆ ತರಬೇತಿ ನೀಡುವ ಈ ಸೆರೆಮನೆಗಳು ದುರದೃಷ್ಟಶಾಲಿಗಳಾಗಿ ಜೇಲು ಕಂಡವರ ಜೀವನವನ್ನು ಅವಶ್ಯ ಸುಧಾರಿಸುವುವೆಂದು ನಿರೀಕ್ಷಿಸಿದರೆ ತಪ್ಪಾಗಲಾರದು.

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೃಜನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

## ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

೧. **ಶ್ರೀ ಕೃಷ್ಣ ಪಂಚಾಂಗ**—ಸಾಲಿಗ್ರಾಮ ಸಂಸ್ಕೃತ ಪಾಠಶಾಲೆಯ ಪ್ರಾಧ್ಯಾಪಕ ಶ್ರೀ ಪಾರಂಪಳ್ಳಿ ಲಕ್ಷ್ಮೀನಾರಾಯಣ ಅಡಿಗರಿಂದ ಗುಣಿಸಿ ಪರಿಶೋಧಿತವಾದ ಈ ಪಂಚಾಂಗದಲ್ಲಿ ಆರ್ಯಭಟ ವ್ಯಾಕರಣ ರೀತ್ಯಾ ನಿತ್ಯ ಪಂಚಾಂಗವೂ ನವೀನ ದೃಕ್ಸಿದ್ಧಾಂತರೀತ್ಯಾ ಗ್ರಹಣ ಸ್ಪಷ್ಟಾದಿಯೂ ಅಳವಡಿಸಿಕೊಳ್ಳಲ್ಪಟ್ಟಿದೆ. ನಮ್ಮಲ್ಲಿ ಆಚರಣೆಯನ್ನು ಇಂದಿಗೂ ಆರ್ಯಭಟ ವ್ಯಾಕರಣ ರೀತಿಯಿಂದಲೇ ಮಾಡುತ್ತಿರುವುದರಿಂದ, ಈ ಪದ್ಧತಿಯಲ್ಲಿ ಸುಧಾರಣೆಯಾಗದೆ ಪಂಚಾಂಗ ಕ್ರಮವನ್ನು ಪರಿವರ್ತಿಸುವುದು ಸಾಧ್ಯವಿಲ್ಲದಾಗಿದೆ. ಪಂಚಾಂಗ ವಿಷಯಕ ವಿಚಾರಗಳಲ್ಲದೆ ದ್ವಾದಶ ರಾಶಿಯವರ ಭವಿಷ್ಯವನ್ನೂ, ನಿತ್ಯೋಪಯೋಗಿ ಅವಶ್ಯಕ ಜ್ಯೋತಿಷ್ಯ ವಿಚಾರವನ್ನೂ ಇಲ್ಲಿ ಸಂಗ್ರಹರೂಪವಾಗಿ ಕೊಡಲಾಗಿದೆ. ಈ ಹಿಂದಿನಂತೆಯೇ ಉಡುಪಿಯ ಮೆಜೆಸ್ಟಿಕ್ ಪ್ರೆಸ್ಸಿನವರು ಹಿಂದೂ ಜನರ ಅವಶ್ಯಕತೆಯೊಂದನ್ನು ಈ ಪಂಚಾಂಗವನ್ನು ಪ್ರಕಟಿಸಿ ಪೂರೈಸಿಕೊಟ್ಟಿದ್ದಾರೆ. ಇದರ ಬೆಲೆ: ರೂ. ೦—೨೫.

೨. **ಶೋಭಕೃತ್ ಸಂವತ್ಸರಸ್ಯ ಪಂಚಾಂಗಂ**—ಉಡುಪಿಯ ಶ್ರೀಕೃಷ್ಣ ಪ್ರಸಾದ ಜ್ಯೋತಿಃಪ್ರಕಾಶ ಮಂದಿರದಿಂದ ಪ್ರಕಟವಾದ ಈ ಪಂಚಾಂಗದ ಹೆಸರು ಸಂಸ್ಕೃತ ಭಾಷೀಯವಾಗಿದ್ದರೂ ಒಳಗಡೆಯ ಪಂಚಾಂಗ, ಜ್ಯೋತಿಷ್ಯ ವಿಮರ್ಶಾದಿ ವಿಚಾರಗಳು ಪ್ರಾದೇಶಿಕ ಭಾಷೆಯಲ್ಲಿಯೇ ಇವೆ. ಶ್ರೀ ಅತ್ತೂರು ಶ್ರೀಪತಿ ಉಡುಪ ಮತ್ತು ಹೆರಗ ಸುಬ್ರಾಯ ಭಟ್ಟರು ಈ ಪಂಚಾಂಗವನ್ನು ಗುಣಿಸಿದ್ದು ಉಡುಪಿ ಸಂಸ್ಕೃತ ಕಾಲೇಜಿನ ಜ್ಯೋತಿಷ ಪ್ರಾಧ್ಯಾಪಕ ಶ್ರೀ ಪಿ. ಕೆ. ರಾಮಕೃಷ್ಣ ಆಚಾರ್ಯರು ಅದನ್ನು ಪರಿಶೋಧಿಸಿದ್ದಾರೆ. ಆಚಾರಕ್ಕೆ ಹೊಂದಿಕೊಂಡು ಮಾನ್ಯ ಸಂಪ್ರದಾಯವನ್ನೇ ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಂವತ್ಸರ ಫಲ, ಇತರ ಜ್ಯೋತಿಷ ವಿಚಾರಗಳೊಡನೆ ವರ್ಷ ಭವಿಷ್ಯವನ್ನು ಮಾಸ ಕ್ರಮವಾಗಿ ಕೊಟ್ಟಿರುವುದೂ ತೃತೀಯ ಪಂಚವಾರ್ಷಿಕ ಯೋಜನೆ, ಉಳಿತಾಯ ಯೋಜನೆಗಳು, ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯ ಕ್ರಮಗಳು ಸಂಗ್ರಹಿತವಾಗಿರುವುದೂ ಇಲ್ಲಿ ನಾವು ಕಾಣುವ ವೈಶಿಷ್ಟ್ಯ. ಇದರಿಂದ ಈ ಪಂಚಾಂಗವು ಜನಸಾಮಾನ್ಯರಿಗೆ ಹೆಚ್ಚಿನ ಉಪಯೋಗಕ್ಕೆ ಬರುವುದೆಂದು ನಂಬಬಹುದು. ಶೋಭಕೃತ್ ಸಂ|ದಲ್ಲಿ ಕಾರ್ತಿಕ ಮಾಸ. ನಂತರ ಮಾರ್ಗಶಿರ ಮಾಸವು ಶೂನ್ಯಮಾಸವಾಗುವುದರಿಂದ ಈ ಸಂಬಂಧದ ಆಚಾರ ಸಂಬಂಧಿ ವಿವರಗಳನ್ನೂ ಫಲವನ್ನೂ ಇಲ್ಲಿ ಪಡೆಯಬಹುದು. ಪಂಚಾಂಗದ ಬೆಲೆ: ರೂ. ೦—೪೫.

೩. **ಶ್ರೀ ಸುರಪುರದ ಭುವನೇಶ್ವರೀ ಪಂಚಾಂಗ**—ಆರ್ಯವೈಶ್ಯ ಸಂಘ, ರಂಗಂಪೇಟೆ (ಸುರಪುರ) ಇವರು ಪ್ರಕಾಶಪಡಿಸಿದ ಈ ಪಂಚಾಂಗವನ್ನು ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರೀ, ಹೆಬ್ಬಾಳ್, ಸುರಪುರ ಇವರು ರಚಿಸಿದ್ದಾರೆ. ಬೆಲೆ: ರೂ. ೧—೦೦. ಇದು ಸಂವತ್ಸರದ ಸರ್ವ ವಿಸ್ತೃತ ಮತ್ತು ಸವಿವರ ಪಂಚಾಂಗ. ಈ ಮೊದಲ ವರ್ಷಗಳದರಂತೆಯೇ ಈ ವರ್ಷದ ಪಂಚಾಂಗವೂ ನಿತ್ಯ ಪಂಚಾಂಗವಲ್ಲದೆ ಹಸ್ತ ಸಾಮುದ್ರಿಕ ಭವಿಷ್ಯ, ಹಲ್ಲಿಯ ಶಕುನ, ಅಂಗಸ್ಫುರಣ ಫಲ, ಮತ್ತಿತರ ಜ್ಯೋತಿಷ, ಶಾಸ್ತ್ರೀಯ ವಿಷಯ ಸಂಗ್ರಹಗಳೂ ಹನ್ನೆರಡು ರಾಶಿಗಳ ವರ್ಷ ಭವಿಷ್ಯವೂ ಭಾರತಾದಿ ದೇಶಗಳ ಭವಿಷ್ಯವೂ ಅಡಕವಾಗಿವೆ. ಜನತೆಯ ಕಾಲೋಚಿತ ಉಪಯೋಗಕ್ಕೆ ಅತ್ಯವಶ್ಯವೆನಿಸಿದ ಜಾತಕ, ವಧೂ—ವರರ ಘಟನಾಯೋಗ, ಮಳೆಯ ಭವಿಷ್ಯ ಮತ್ತು ಬೆಳೆಗಳ ಲಕ್ಷಣಾದ್ಯಾದಿಗಳೂ ಸಂಗ್ರಹಿತವಾಗಿವೆ. ಕ್ಷಯ ಮಾಸದ ವಿಷಯದಲ್ಲಿ ಸುದೀರ್ಘವಾದ ವಿವರಣೆ ಮತ್ತು ಸ್ಪಷ್ಟೀಕರಣಗಳನ್ನು ಶ್ರೀ ಶಾಸ್ತ್ರಿಗಳು ಕೊಟ್ಟಿದ್ದಾರೆ. ಹಿಂದೂ ಧರ್ಮಾವಲಂಬಿಗಳ ಜೀವನದಲ್ಲಿ ಅನಾದಿಯಿಂದಲೂ ಅಳವಟ್ಟ ಜ್ಯೋತಿಷ್ಯದ ಕೂಲಂಕಷ ಪರಿಚಯವನ್ನು ಮಾಡಿಕೊಡುವ ಈ ಪಂಚಾಂಗ ಕನ್ನಡಿಗರಿಗೆ ಅತ್ಯುಪಯುಕ್ತವಾಗಿದೆ. ಸರ್ವಾಂಗ ಸುಂದರವಾದ ಈ ಪಂಚಾಂಗವು ಸರ್ವ ವಿಷಯಗಳ ಕೈಪಿಡಿಯಂತಿದ್ದು ಕನ್ನಡಿಗರ ಜ್ಯೋತಿರ್ಗನ್ನಡಿಯೆನಿಸಿದೆ ಎಂದು ಹೇಳಬಹುದು. ಪ್ರಸಿದ್ಧ ಜ್ಯೋತಿಷಿಗಳಾದ ಶಾಸ್ತ್ರಿವರ್ಯರ ಈ ಪಂಚಾಂಗ ಸೇವೆಯು ಕನ್ನಡಿಗರಿಗೆ ಪಂಚಪ್ರಾಣ ಸದೃಶವಾಗುವುದೆಂದು ಧೈರ್ಯವಾಗಿ ಹೇಳಬಹುದು. ಪಂಚಾಂಗ ಭಕ್ತರು ಅವಶ್ಯ ಕೊಂಡು ಮನೆಯಲ್ಲಿಟ್ಟು ಉಪಯುಕ್ತ ಲಾಭ ಪಡೆದುಕೊಳ್ಳುವರೆಂದು ಆಶಿಸುತ್ತೇವೆ.

— ಗೋರಾ

ಚಿಕ್ಕ ಮಗುವಿಗೊಂದು ಸಂತಸದ ಕೊಡುಗೆ

.... ಆ ಸುಂದರ ಪಾಸ್ ಪುಸ್ತಕ

ನಿಮ್ಮ ಮಕ್ಕಳ ಕೈಯಲ್ಲಿ ಹಣ ಕೊಡುವಿರಾ??
ನೀವು ಪ್ರೀತಿಯಿಂದ, ಅಕ್ಕರೆಗಾಗಿ ಕೊಡುವ "ಹಣ" ನಿಮ್ಮ ಮಗುವನ್ನು ತಪ್ಪು ದಾರಿಯಲ್ಲಿ ಕೊಂಡೊಯ್ಯುತ್ತದೆಯೆಂದು ಎಂದಾದರೂ ಯೋಚಿಸಿದ್ದೀರಾ??

ಮಕ್ಕಳ ಕೈಯಲ್ಲಿ ಹಣ ಕೊಡುವ ಬದಲು, ಅವರ ಹೆಸರಿನಲ್ಲೊಂದು, ಬೇಂಕಿನಲ್ಲಿ, ಖಾತೆ ತೆರೆಯಿರಿ. ಅದರಿಂದ ನಿಮ್ಮ ಮಗುವಿಗೊಂದು ಉತ್ತಮ ಭವಿಷ್ಯ, ಮತ್ತು ಮಗುವಿನಲ್ಲಿ ಉಳಿತಾಯ ಪ್ರವೃತ್ತಿಯನ್ನು ಉಂಟುಮಾಡಿದಂತಾಗುತ್ತದೆ.

ಚಿಕ್ಕ ಮಕ್ಕಳ ಸುಂದರ ಭವಿಷ್ಯಕ್ಕೆ.......

ಸಿಂಡಿಕೇಟ್ ಬೇಂಕ್...... ಸಹಕರಿಸ ಬಲ್ಲದು

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ. 1925 ಶಾಖೆಗಳು: 176
ಒಟ್ಟು ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಬಿತ್ತಾಳ್, ಎಂ. ಬಿ. ಬಿ. ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. ೬–೫೦
Vol. 42 No. 29 | ಉಡುಪಿ, 28—3—1963 ಗುರುವಾರ | ಸಂಪುಟ ೪೨ ಸಂಚಿಕೆ ೨೯

## ವಿಶ್ವ ಅಮಿತ್ರ

# ಚೀನೀಯರ ವಿಧ್ವಂಸಕ ಕಾರ್ಯಕ್ರಮ

ನಾಗರಿಕ ಪ್ರಪಂಚದಲ್ಲಿ ದೇಶಗಳು ಪರಸ್ಪರ ಸ್ನೇಹ ಸೌಹಾರ್ದವನ್ನು ಬೆಳೆಸುವುದಕ್ಕಾಗಿ ರಾಯಭಾರಿ ಸಂಬಂಧವನ್ನು ಇಟ್ಟುಕೊಳ್ಳುವುದು ಸಂಪ್ರದಾಯವಾಗಿದೆ. ಇದರಿಂದ ದೇಶ ದೇಶಗಳ ನಡುವಣ ಸಂಬಂಧವು ದೃಢಗೊಂಡು ಅವುಗಳಲ್ಲಿ ಹೆಚ್ಚಿನ ತಿಳುವಳಿಕೆಯು ಹುಟ್ಟುವುದು ಸಾಧ್ಯವಾಗಿದೆ. ಇದರಿಂದಾಗಿಯೇ ಇಂದು ಸರ್ವಸಾಮಾನ್ಯವಾಗಿ ಎಲ್ಲ ರಾಷ್ಟ್ರಗಳಲ್ಲಿಯೂ ಉಳಿದ ರಾಷ್ಟ್ರಗಳ ರಾಯಭಾರಿ ಕಛೇರಿಗಳಿವೆ. ಅಂತೆಯೇ ಚೀನೀಯ ದೂತಾವಾಸಗಳೂ ಹೆಚ್ಚಿನ ದೇಶಗಳಲ್ಲಿವೆ.

### ನೋಜಿನ ಪ್ರಸಂಗ

ಸ್ವೀಡನ್ ದೇಶದ ಸ್ಟಾಕ್‌ಹೋಮ್ ನಗರದಲ್ಲಿಯೂ ಚೀನೀಯ ರಾಯಭಾರಿ ಕಛೇರಿಯಿದೆ. ಆದರೆ, ಇಲ್ಲೊಂದು ಮೋಜಿನ ಪ್ರಸಂಗ ನಡೆಯಿತು. ಅಲ್ಲಿಯ ವರಿಷ್ಠ ಅಧಿಕಾರಿಯೊಬ್ಬರು ಕಛೇರಿಯಿಂದ ಪಲಾಯನ ಮಾಡಿದರು; ಪಾಶ್ಚಾತ್ಯ ರಾಷ್ಟ್ರವೊಂದರಲ್ಲಿ ಆಶ್ರಯ ಪಡೆದರು. ವಿದೇಶಗಳಲ್ಲಿರುವ ಚೀನೀಯ ಪ್ರತಿನಿಧಿ ಕಛೇರಿಗಳು ಎಂತಹ ದುಷ್ಕೃತ್ಯಗಳಲ್ಲಿ ನಿರತವಾಗಿವೆಯೆಂದು ಈ ವಿಶಿಷ್ಟ ಘಟನೆಯಿಂದ ತಿಳಿಯಬಹುದು.

### ಮಿತ್ರದ್ರೋಹದ ಮಾದರಿ

ಎಲ್ಲ ರಾಷ್ಟ್ರಗಳೂ ರಾಯಭಾರಿ ಕಛೇರಿಗಳೂ ಒಂದು ರೀತಿಯ ಕೆಲಸ ಮಾಡುತ್ತಿರುವುದಾದರೆ, ಚೀನೀಯ ಕಛೇರಿಯ ಕಾರ್ಯಕ್ರಮವೇ ಬೇರೆಯಾಗಿದೆ. ಪೇಕಿಂಗ್ ಈ ಕಛೇರಿಯ ಮೂಲಕ ಆಯಾ ದೇಶಗಳ ಜನತೆಯ ಮೇಲೆ ಪ್ರಭಾವ ಬೀರಲು ಹಾಗೂ ಅವರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಲೇ ಬಂದಿದೆ. ಸ್ವೀಡಿಷ್ ಸರಕಾರವನ್ನು ಉರುಳಿಸಲು ಪ್ರಯತ್ನ ನಡೆಸಬೇಕೆಂದು, ಪೇಕಿಂಗ್ ಸ್ಟಾಕ್‌ಹೋಮಿನಲ್ಲಿ ತನ್ನ ರಾಯಭಾರಿ ವರ್ಗಕ್ಕೆ ನಿರ್ದೇಶಿಸಿದ ಸಂಗತಿಯು ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಪಶ್ಚಿಮ ರಾಷ್ಟ್ರವೊಂದರಲ್ಲಿ ಆಶ್ರಯ ಪಡೆದ ಚೀನೀಯ ಅಧಿಕಾರಿಯಿಂದಲೇ ಸುಸ್ಪಷ್ಟವಾಗಿ ತಿಳಿದು ಬಂದಿತು.

### ಪೇಕಿಂಗ್ ಸೂಚನೆಗಳು

೧೯೬೧—೬೨ರಲ್ಲಿ ಸ್ಟಾಕ್‌ಹೋಮಿನಲ್ಲಿನ ಚೀನೀಯ ರಾಯಭಾರಿ ಕಛೇರಿಗೆ ಮೂರು ಮಹತ್ವದ ಉದ್ದೇಶಗಳನ್ನು ಸಾಧಿಸಬೇಕೆಂದು ಸೂಚಿಸಲಾಯಿತು. ಕಮ್ಯೂನಿಸ್ಟ್ ಚೀನೀಯರ ಆಳ್ವಿಕೆ ಹಾಗೂ ಅವರ ನೀತಿಗೆ ಸ್ವೀಡಿಷ್ ಜನರ ಬೆಂಬಲ ದೊರೆಯುವಂತೆ ಅಲ್ಲಿನ ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರುವುದು, ಪಶ್ಚಿಮ ರಾಷ್ಟ್ರಗಳ ಬಗೆಗೆ ಸ್ವೀಡನ್ ಇಟ್ಟುಕೊಂಡಿರುವ ವಿಶ್ವಾಸ ಹಾಗೂ ವಿಧೇಯತೆಗಳಿಂದ ಅದನ್ನು ವಿಮುಖಗೊಳಿಸುವುದು, ಅಮೇರಿಕ ಹಾಗೂ ಸ್ವೀಡನ್‌ಗಳ ನಡುವಣ ಮಧುರ ಸಂಬಂಧಗೆಡಿಸಿ ಸ್ವೀಡಿಷ್ ಸರಕಾರವನ್ನು ಪದಚ್ಯುತಗೊಳಿಸುವುದು ಇವೇ ಮೂರು ಉದ್ದೇಶಗಳನ್ನು ಸಾಧಿಸುವ ಹೊಣೆಯನ್ನು ಚೀನೀಯ ಸರಕಾರವು ಸ್ಟಾಕ್‌ಹೋಂನಲ್ಲಿ ಚೀನೀ ರಾಯಭಾರಿ ವರ್ಗ ವಹಿಸಿಕೊಟ್ಟಿತ್ತು.

### ಪ್ರಚಾರ ಆಂದೋಲನ

ಮೊದಲಿನ ಎರಡು ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ರಾಯಭಾರಿ ವರ್ಗವು, ವ್ಯಾಪಕ ಸ್ವರೂಪದ ಪ್ರಚಾರವನ್ನು ಆರಂಭಿಸಿತು. ಸ್ವೀಡನ್ನಿನೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬಲಗೊಳಿಸಿತು. ಇವುಗಳೆಲ್ಲ ಮುಖ್ಯವಾಗಿ ರಾಜನೈತಿಕ ಹಾಗೂ ಪ್ರಚಾರ ಮೌಲ್ಯಗಳಿಂದ ಕೂಡಿದ್ದವು.

ಸ್ವೀಡನ್ನಿನ ಕಮ್ಯೂನಿಸ್ಟ್ ಪಕ್ಷದ ನಾಯಕ ಹಿಲ್ಡಿಂಗ್ ಹಾಗ್‌ಬರ್ಗ್‌ರ ವಿಷಯದಲ್ಲಿ ಚೀನೀಯರು ಅಸಮಾಧಾನಗೊಂಡಿದ್ದರು. ೨೨ನೇ ಕಾಂಗ್ರೆಸ್ ಸಮ್ಮೇಳನ ಮುಗಿಸಿಕೊಂಡು ಮಾಸ್ಕೋದಿಂದ ಹಿಂದಿರುಗಿ ಬಂದನಂತರ ಹಾಗ್‌ಬರ್ಗ್‌ರು ಚೀನೀಯರನ್ನು ಟೀಕಿಸಿ ಲೇಖನಗಳನ್ನು ಬರೆದುದೇ ಪೇಕಿಂಗ್ ಅಸಮಾಧಾನಕ್ಕೆ ಮೂಲ ಕಾರಣ. ಆಗ ಚೀನೀಯರು ಹಾಗ್‌ಬರ್ಗ್‌ರ ವಿರುದ್ಧ ಅವರ ಪ್ರಬಲ ವಿರೋಧಿಯಾದ ಕಾರ್ಲ್ ಎಕ್ಸೆಲ್‌ಜಾನ್‌ಸನ್‌ರನ್ನು ಎತ್ತಿಕಟ್ಟಿದರು. ಜಾನ್‌ಸನ್‌ರು ಸ್ಟಾಕ್‌ಹೋಂನಲ್ಲಿನ ಚೀನೀ ರಾಯಭಾರಿ ಕಚೇರಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಚೀನೀ ಅಧಿಕಾರಿಗಳೊಂದಿಗಿನ ಅವರ ಸಭೆಗಳು ಗೋಪ್ಯವಾಗಿಯೇ ನಡೆಯುತ್ತಿದ್ದವು. ಭಾಷಾಂತರಕಾರನೊಬ್ಬನನ್ನು ಬಿಟ್ಟರೆ ಅಲ್ಲಿ ಹೊರಗಿನವರು ಯಾರೂ ಇರುತ್ತಿರಲಿಲ್ಲ.

ಚೀನಾ ಸರಕಾರದ ವಿದೇಶಾಂಗ ವ್ಯವಹಾರ ಮಂತ್ರಿ ಶಾಪೆಯು, ಉದ್ದೇಶಗಳನ್ನು ಹೇಗೆ ಸಾಧಿಸಬೇಕೆಂಬ ಬಗೆಗೆ ಮಾರ್ಗದರ್ಶನ ಮಾಡುತ್ತಿತ್ತು. ಚೀನೀ ರಾಯಭಾರಿಯು ವರ್ಷದಲ್ಲಿ ಎರಡು ಸಲ ಕಚೇರಿ ಸಿಬ್ಬಂದಿಯ ಸಭೆ ಸೇರಿಸಿ, ಕಾರ್ಯಸಂಬಂಧವಾಗಿ ವಿವರಿಸುತ್ತಿದ್ದರು. ಉತ್ಸಾಹದಿಂದ ಕಾರ್ಯ ನಿರತರಾಗಲು ಉತ್ತೇಜನ ನೀಡುತ್ತಿದ್ದರು.

ಚೌ, ಫು ಅವರು ಉಪಸ್ಥಿತರಿದ್ದ ಕೊನೆಯ ಸಭೆಯೊಂದರಲ್ಲಿ ಸ್ಟಾಕ್‌ಹೋಂನಲ್ಲಿನ ಚೀನೀ ರಾಯಭಾರಿಯು, ಸ್ವೀಡಿಷ್ ಸರ್ಕಾರದ ನಡವಳಿಕೆಯು ಸ್ವೀಡನ್-ಚೀನಗಳ ನಡುವಿನ ಸಂಬಂಧಗಳಿಗೆ ಧಕ್ಕೆ ತರುವುದೆಂದು ಹೇಳಿದರಲ್ಲದೆ, ಕಮ್ಯೂನಿಸ್ಟ್ ಚೀನ ಹಾಗೂ ಅದರ ನೀತಿಗಳನ್ನು ಟೀಕಿಸುತ್ತಿದ್ದ ಪತ್ರಿಕೆಗಳ ಬಗೆಗೂ ಅವರು ತಮ್ಮ ಅಸಂತೃಪ್ತಿಯನ್ನು ವ್ಯಕ್ತಪಡಿಸಿದರು.

ಪೇಕಿಂಗ್ ಸರಕಾರದ ವಿದೇಶಾಂಗ ವ್ಯವಹಾರ ಮಂತ್ರಿ ಶಾಪೆಯು ಇಟ್ಟುಕೊಂಡಿದ್ದ ಉದ್ದೇಶಗಳನ್ನು ಸಂಪೂರ್ಣವಾಗಿ ಸಾಧಿಸಲಾಗದಿದ್ದರೂ, ರಾಯಭಾರಿ ವರ್ಗದ ಸ್ಥೈರ್ಯ ಉನ್ನತ ಮಟ್ಟದ್ದಾಗಿತ್ತೆಂದು ರಾಯಭಾರಿಗಳು ಪ್ರಶಂಸಿಸಿದರು. ಇನ್ನೊಂದು ಸಂದರ್ಭದಲ್ಲಿ ಕೌನ್ಸಿಲರ್ ಲಿ. ಟಿ. ಹು. ಆ ಅವರು, ರಾಯಭಾರಿ ವರ್ಗದ ಕೆಲವು ಅಧಿಕಾರಿಗಳೊಂದಿಗೆ ಸ್ವೀಡನ್ನಿನ ಕಾರ್ಮಿಕರಲ್ಲಿ ಹೇಗೆ ಜಾಗೃತಿಯುಂಟುಮಾಡಬೇಕೆಂಬ ಬಗೆಗೆ, ಸಮಾಲೋಚನೆಗೆ ನಡೆಸಿದರೆಂದು ಚೌಫು ಹೇಳಿದರು. ಚೀನಾದ ಜನತೆಗೆ ಅನ್ನಾಹಾರವಿಲ್ಲದೆ ಉಪವಾಸದಿಂದ ಬಾಳುವ ಪರಿಸ್ಥಿತಿ ಒದಗಿದೆಯೆಂಬುದು ಅವರಿಗೆ ತಿಳಿದ ವಿಷಯವಾಗಿತ್ತು.

ಮಾತೃ ಭೂಮಿಯಾದ ಚೀನಾದಿಂದ ಬಂದ ಪತ್ರಗಳು, ಆಗಾಗ್ಗೆ ರಜೆ ತೆಗೆದುಕೊಂಡು ಚೀನಕ್ಕೆ ಹೋಗಿ ಮರಳಿ ಬಂದ ರಾಯಭಾರಿ ವರ್ಗದ ಅಧಿಕಾರಿಗಳ ಅನುಭವದಿಂದ ಅಲ್ಲಿನ ಆಂತರಿಕ ಪರಿಸ್ಥಿತಿ ವಿಷಮಿಸ ತೊಡಗಿದೆಯೆಂಬುದು ಕಚೇರಿಯ ಸಿಬ್ಬಂದಿಗೆ ವಿದಿತವಾಗಿತ್ತು.

### ಮಿತವ್ಯಯದ ಕ್ರಮಗಳು

ರಾಯಭಾರಿ ಕಚೇರಿಯ ಅಧಿಕೃತ ವೆಚ್ಚದ ಪ್ರಮಾಣದಲ್ಲಿ ಭಾರೀ ಮಿತವ್ಯಯ ಸಾಧಿಸಲು ಕ್ರಮ ಕೈಗೊಳ್ಳಲಾಯಿತು. ೧೯೬೧ರಲ್ಲಿ ರಾಯಭಾರಿ ವರ್ಗದ, ವಾರ್ಷಿಕ ಆದಾಯ ಹಾಗೂ ವೆಚ್ಚದ ಅಂದಾಜಿನ ಮುಂಗಡ ಪತ್ರದಲ್ಲಿ ೩೦೦,೦೦೦ ಸ್ವಿಡಿಷ ಕ್ರೋನರ್‌ಗಳಷ್ಟು ಹಣ ತೆಗೆದಿರಿಸಲಾಗಿತ್ತು. ೧೯೬೨ರಲ್ಲಿ ಮುಂಗಡ ಪತ್ರಕ್ಕೆ ಮಂಜೂರು ನೀಡುವಲ್ಲಿ ವಿಲಂಬವಾಯಿತಲ್ಲದೆ, ಕಚೇರಿಯ ವೆಚ್ಚದಲ್ಲಿ ಹೆಚ್ಚು ಮಿತವ್ಯಯ ಸಾಧಿಸಬೇಕೆಂದು ಪೇಕಿಂಗ್ ಸರಕಾರವು ರಾಯಭಾರಿಗೆ ತಿಳಿಸಿ, ಮುಂಗಡ ಪತ್ರದಲ್ಲಿ ಕಡಿಮೆ ಹಣ ಒದಗಿಸುವುದಾಗಿ ಬೆದರಿಕೆ ಹಾಕಿತು.

೧೯೬೨ರ ಮೊದಲ ರಾಯಭಾರಿ ವರ್ಗದ ಸಿಬ್ಬಂದಿಗೆ ಕ್ರೋನರ್‌ಗಳಲ್ಲಿ ವೇತನ ನೀಡಲಾಗುತ್ತಿತ್ತು. ಆ ವರ್ಷ ಜನವರಿಯಿಂದ ವೇತನ ನೀಡುವಲ್ಲಿ ಪೇಕಿಂಗ್ ಹೊಸ ಕ್ರಮವೊಂದನ್ನು ಅನುಸರಿಸತೊಡಗಿದೆ. ಸಿಬ್ಬಂದಿಯ ಆರು ತಿಂಗಳ ವೇತನವನ್ನು ಮಾತ್ರ ಕ್ರೋನರ್‌ಗಳಲ್ಲಿ ನೀಡಿ ಇನ್ನುಳಿದ ಆರು ತಿಂಗಳ ವೇತನವನ್ನು ಅವರ ಪರವಾಗಿ ಪೇಕಿಂಗ್ ವಿದೇಶಾಂಗ ವ್ಯವಹಾರ ಮಂತ್ರಿ ಶಾಖೆಯ ಲೆಕ್ಕ ಪತ್ರ ವಿಭಾಗದಲ್ಲಿ ಠೇವಣಿಯನ್ನಾಗಿಯಿಟ್ಟುಕೊಂಡಿದೆ. ರಾಯಭಾರಿ ವರ್ಗದ ಸಿಬ್ಬಂದಿಯವರು ಚೀನಕ್ಕೆ ಮರಳಿಬಂದಾಗ ಅದನ್ನು ಬಳಸಬೇಕೆಂದು ಸೂಚಿಸಲಾಗಿದೆ.

### ಸಂಸಾರದಿಂದ ಬೇರೆಯಿರಿ

ಸ್ಟಾಕ್‌ಹೋಂನಲ್ಲಿನ ರಾಯಭಾರಿ ವರ್ಗದ ಒಂದು ಕಾರನ್ನು ಮಾರಾಟ ಮಾಡಲಾಯಿತು. ಸಿಬ್ಬಂದಿಯ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಕಡಿತ ಮಾಡಿದ ನಂತರ; ಕಚೇರಿಯ ನಿವಾಸಿಗಳು ಉಪಯೋಗಿಸುತ್ತಿದ್ದ ಮೂರು ಕಟ್ಟಡಗಳಲ್ಲಿ ಒಂದನ್ನು ಮಾರಾಟಕ್ಕೆ ಇಡಲಾಯಿತು. ಸಿಬ್ಬಂದಿಯ ಕಿರಿಯ ಉದ್ಯೋಗಿಗಳು, ಸ್ಟಾಕ್‌ಹೋಂಗೆ ಬರುವಾಗ ತಮ್ಮೊಂದಿಗೆ ತಮ್ಮ ಪತ್ನಿ ಹಾಗೂ ಮಕ್ಕಳನ್ನು ಕರೆದುಕೊಂಡು ಬರಬಾರದೆಂದು ನಿರ್ಬಂಧ ಹಾಕಲಾಯಿತು.

ಚೀನೀ ರಾಯಭಾರಿ ವರ್ಗದ, ಬಹುಮಟ್ಟಿಗೆ ಎಲ್ಲ ಅಧಿಕಾರಿಗಳು ಸಾರ್ವಜನಿಕ ಸಭೆಗಳಲ್ಲಿ ಚೀನದ ಆಂತರಿಕ ಪರಿಸ್ಥಿತಿಯು "ತಾತ್ಕಾಲಿಕ"ವಾಗಿ ಹದಗೆಟ್ಟಿದೆಯೆಂದು ಹೇಳುತ್ತಿದ್ದರೂ, ಅದನ್ನು ಅರಿತು ಅವರು ಉದ್ವಿಗ್ನರಾಗಿದ್ದರೆಂಬುದು ಸ್ಪಷ್ಟವಾಗಿತ್ತೆಂದು ಚೌಫು ಹೇಳುತ್ತಾರೆ.

### ಆಹ್ವಾನ ಮನ್ನಿಸಬಾರದು

ರಾಯಭಾರಿಯು ಕೈಗೊಂಡ ಅಲ್ಪ ಪ್ರಮಾಣದ ಮಿತವ್ಯಯ ಕ್ರಮಗಳಲ್ಲಿ, ರಾಜಕೀಯ ನಿಯೋಗಗಳ ಆಹ್ವಾನವನ್ನು ನಿರಾಕರಿಸುವುದು ಸಾಗರೋತ್ತರ ಪ್ರದೇಶದಲ್ಲಿನ ಚೀನೀಯರು ಆಚರಿಸುವ ವಸಂತೋತ್ಸವ (ಚೀನೀಯರ ಹೊಸ ವರ್ಷ) ಸಮಾರಂಭಗಳ ಆಹ್ವಾನಗಳನ್ನು ಸ್ವೀಕರಿಸಬಾರದೆಂಬುದು ಮಿತವ್ಯಯ ಕ್ರಮಗಳಲ್ಲಿ ಮುಖ್ಯವಾಗಿದ್ದವು.

(೧೨ನೇ ಪುಟ ನೋಡಿ)

## ಮನಸಾರೆ ಬಯಸಿದ

# ಭಾಗ್ಯಲಕ್ಷ್ಮಿ ದೂರವಾದಳು

ಅರುವತ್ತು ವರ್ಷ ವಯಸ್ಸಿನ ರಾಜಮ್ಮನಿಗೆ ಒಮ್ಮೆಯೇ ತಾರುಣ್ಯ ಬಂದಂತಾಗಿತ್ತು. ವೃದ್ಧಾಪ್ಯದಲ್ಲಿ ಯಾವ ಸುಖವೂ ಇಲ್ಲವೆಂದು ಕೊರಗಿ ಸೊರಗಿದ್ದಾಕೆ ಒಮ್ಮೆಯೇ ವ್ಯೈತುಂಬಿಕೊಂಡ ನವ ಯುವತಿಯಂತೆ ಓಡಾಡಲಾರಂಭಿಸಿದರು.

"ಏನು ರಾಜಮ್ಮ! ನಿಮ್ಮ ಉತ್ಸಾಹ ನೋಡಿದ್ರೆ ವರ್ಷ ಹದಿನೆಂಟೋ ಇಪ್ಪತ್ತೋ ಇರ್ಬೇಕು ಅಂತ ತೋರುತ್ತೆ. ಅಲ್ಲ, ಸೊಸೆಯೊಂದಿಗೆ ಯೌವನವೂ ಬಂತೆ ಅಂತ" ಎಂದು ನೆರೆಕರೆಯ ಯಾರಾದರೂ ಹೆಂಗಸರು ಹಾಸ್ಯ ಮಾಡಿದಾಗ ರಾಜಮ್ಮನ ಪ್ರತ್ಯುತ್ತರ ಸಿದ್ಧವಾಗಿತ್ತು.

"ಸೊಸೆ! ಅಷ್ಟೇ ಅಲ್ಲಮ್ಮ, ಅವಳು ನಮ್ಮ ಮನೆಲಕ್ಷ್ಮಿ ಭಾಗ್ಯಲಕ್ಷ್ಮಿ! ಎಂದ ಮೇಲೆ ಮುದುಕಿಗೆ ಯೌವನ ಬರೋದೇನು ಹೆಚ್ಚು?" ಯಾರಾದರೂ ರಾಜಮ್ಮನೊಡನೆ "ನಿಮ್ಮ ಕಿರಿ ಸೊಸೆ ಹೇಗೆ ರಾಜಮ್ಮ?" ಎಂದರೆ, "ಅಯ್ಯೋ... ಅವಳ ಗುಣದೆದಿರು ನನ್ನದೇನಮ್ಮ? ಯಾವ ಗಳಿಗೇಲಿ ಆ ಮಾದೇವಿ ಶಾಂತ ಕಾಲಿಟ್ಟಳೋ ಆ ಗಳಿಗೇಲಿ ನನ್ನನೆ ಲಕ್ಷ್ಮಿ ಇನ್ನಿಲ್ಲ ಎಂದ್ಕೊಂಡಿದ್ದೆ. ಆದರೆ ದೇವರು ದೊಡ್ಡವ. ಸಾಕ್ಷಾತ್ ಭಾಗ್ಯಲಕ್ಷ್ಮಿ ಹಾಗೇ ನನ್ನ ಸುಶೀಲ", ಎಂದು ತೆರೆದ ಬಾಯಿಯಲ್ಲಿ ವರ್ಣಿಸುತ್ತಿದ್ದರು.

ರಾಜಮ್ಮನಿಗಿರುವುದೇ ಇರ್ವರು ಸುಪುತ್ರರು. ಹಿರಿಯವ 'ಸುಬ್ಬು' ಸ್ವಲ್ಪ ಮಂದ ಬುದ್ಧಿಯವ. ರಾಜಮ್ಮನಂತೂ ಇತ್ತೀಚೆಗೆ ಎಲ್ಲರೊಡನೆಯೂ ಅವನ ಮಂಕುತನವನ್ನೇ ವರ್ಣಿಸುತ್ತಿದ್ದರು. ಕಿರಿಯವ ವಾಸುದೇವ, ವಾಸು ಅತಿ ಚುರುಕು ಬುದ್ಧಿಯವ, ಎಂದೇ ವಿಧವೆ ರಾಜಮ್ಮನ ಸ್ಥಿತಿಯನ್ನರಿತ ಅವರ ಸಂಬಂಧಿಕರು ವಾಸುವಿನ ಬುದ್ಧಿ ಕುಶಲತೆಯನ್ನು ವ್ಯರ್ಥಗೊಳಿಸಬಾರದೆಂದು ಬಿ. ಎ. ವರೆಗೆ ಓದಲು ಸಹಾಯ ನೀಡಿ ಪ್ರೋತ್ಸಾಹಿಸಿದ್ದರು. ಆದರೆ ಅಷ್ಟರಲ್ಲಿಯೇ ಮನೆಯ ಸ್ಥಿತಿಗತಿಯನ್ನರಿತ ವಾಸು ಮುಂದೆ ಓದಲಿಚ್ಛಿಸದೆ ನಾಲ್ಕಾರು ಮೈಲು ದೂರದ ಹೈಸ್ಕೂಲೊಂದರಲ್ಲಿ ಅಧ್ಯಾಪಕನಾಗಿ ಕೆಲಸ ಪ್ರಾರಂಭಿಸಿದ. ಆ ವರೆಗೆ ಮನೆ ವೆಚ್ಚವೆಲ್ಲವೂ ಸುಬ್ಬುವಿನ ಮುವತ್ತು ರೂಪಾಯಿ ಸಂಬಳದಲ್ಲಿ ನಡೆಯಬೇಕಿತ್ತು. ಪಿತ್ರಾರ್ಜಿತವಾಗಿ ಉಳಿದ ಸ್ವಂತ ಮನೆಯೊಂದಿತ್ತು ಅಷ್ಟೆ. ಸುಬ್ಬು ಒಂದು ಮೈಲು ದೂರದ "ಶ್ರೀ ಕೃಷ್ಣ ಭವನ"ಕ್ಕೆ ನಾಲ್ಕು ಗಂಟೆ ಹೊತ್ತಿಗೆ ಅಂದರೆ ಬೆಳಗಾಗುವ ಮೊದಲೇ ಹೊರಟು ಹೋದರೆ ಕೆಲಸ ಮುಗಿಸಿ ಮನೆ ಸೇರುವುದು ರಾತ್ರಿ ಹನ್ನೆರಡರ ಹೊತ್ತಿಗೆ. ಅವನ ಮಡದಿ ಶಾಂತ ಬಡವರ ಮನೆಯಲ್ಲಿ ಹುಟ್ಟಿ ಬೆಳೆದರೂ ಹತ್ತಿರದ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನಷ್ಟೆ ಓದಿದ್ದರೂ ಒಳ್ಳೆಯ ತಿಳುವಳಿಕೆಯುಳ್ಳ ಹುಡುಗಿ. ಆದರೆ ರಾಜಮ್ಮನಿಗೆ ಮೊದಲಿನಿಂದಲೂ ಶಾಂತಳೆಂದರೆ ತಿರಸ್ಕಾರ. ಬಡವರ ಹುಡುಗಿ ಶಾಂತೆಗೆ ಗರಿಯಾದ ವರ ಸಿಕ್ಕದೆ ಸುಬ್ಬುವಿನ ಸ್ಥಿತಿಗತಿಯನ್ನು ವಿಚಾರಿಸದೆಯೇ ಕನ್ಯಾದಾನ ಮಾಡಿ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದರು. ಎಂದೇ ಬರಿಯ ಬೆಂಡೋಲೆಯೊಂದಿಗೆ ಬಂದ 'ಶಾಂತ"ಳೆಂದರೆ, ತಾವೂ ಬಡವರೇ ಆಗಿದ್ದರೂ "ಹುಡುಗನ ತಾಯಿ" ಎಂಬ ಅಹಂಕಾರದಿಂದಾಗಿ ರಾಜಮ್ಮ ಅವಳನ್ನು ತಿರಸ್ಕರಿಸುತ್ತಿದ್ದರು. ಆದರೆ ಶಾಂತ ಹೆಸರಿಗೆ ತಕ್ಕ ಸ್ವಭಾವದವಳು. ಮನೆಯ ಎಲ್ಲ ಕಷ್ಟ ನಿಷ್ಠುರಗಳನ್ನು ದುಡಿದು ಬಳಲಿ ಬರುವ ಪತಿಯೆದಿರು ತೋರ್ಪಡಿಸುತ್ತಿರಲಿಲ್ಲ. ಆದರೂ ರಾಜಮ್ಮ ಶಾಂತಳ ತಪ್ಪುಗಳನ್ನೆಲ್ಲ ಹುಡುಕಿ ತೆಗೆದು ಮಗ ಮನೆಯಲ್ಲಿರುವ ಕೆಲವೇ ಗಂಟೆಗಳಲ್ಲಿ ಹೇಳಿ ಮುಗಿಸುತ್ತಿದ್ದರು. ಆಯಾಸಗೊಂಡು ಬಂದ 'ಸುಬ್ಬು' ವಿಚಾರಿಸುವ ತಾಳ್ಮೆಯಿಲ್ಲದೆ ಒಮ್ಮೊಮ್ಮೆ ಶಾಂತೆಯನ್ನೇ ಬೈಯ್ದು ಹೊಡೆಯುತ್ತಿದ್ದ. ಮೊದಲಿನಿಂದಲೂ ರೂಢಿಯಾಗಿದ್ದ ಅತ್ತೆ—ಸೊಸೆ ಕಾಳಗ, ಇವರ ಮನೆಯಲ್ಲಿ ನಡೆಯುತಿತ್ತು. ಸೊಸೆ ಮೌನವಾಗಿದ್ದರೂ ಅತ್ತೆ ಕಾಳಗದ ಕಹಳೆಯೂದುತ್ತಿದ್ದಳು. ಆದರೆ....ಇದೆಲ್ಲ ಹಿಂದೆ. ವಾಸುವಿನ ಮದುವೆಯಾಗುವ ಮೊದಲು. ಆಗ ಸುಬ್ಬು ತಾಯಿ ಪಕ್ಷವಹಿಸಿಯೋ, ಅಥವಾ ಯೋಚಿಸುವ ಶಕ್ತಿಯಿಲ್ಲದೆಯೋ ಪತ್ನಿಯನ್ನು ಶಿಕ್ಷಿಸುತ್ತಿದ್ದ. ಆದರೆ ಒಂದೆರಡು ತಿಂಗಳಿಂದೀಚೆಗೆ ಆತ ತುಂಬ ಬದಲಾಯಿಸಿದ್ದ. ರಾಜಮ್ಮನ ಮಾತಿನಂತೆ ಹೇಳುವುದಾದರೆ ಆತ ಹೆಂಡತಿ ಗುಲಾಮನಾಗಿ ಬಿಟ್ಟಿದ್ದು ಅಷ್ಟೆ ಎಂದೇ ಅವರು ಆಗಾಗ ಹೇಳುತ್ತಿದ್ದರು.

"ಎಷ್ಟಾದರೂ ಸುಬ್ಬ ಪೆಪ್ಪ. ಮೊದಲು ಸ್ವಲ್ಪವಾದ್ರೂ ಬುದ್ಧಿ ಇದೆಯೇನೋ ಅಂತಿದ್ದೆ. ಆದ್ರೆ ಇದ್ದ ಬುದ್ಧಿಯನ್ನೆಲ್ಲ ಶಾಂತ ಕೆಡಿಸಿ ಬಿಟ್ಟಿದ್ದಾಳೆ. ಇಲ್ಲದಿದ್ರೆ ಇದೀ ರಾತ್ರಿ ಗಂಡನೊಂದಿಗೆ ಹರಟೆ, ಚೆಲ್ಲಾಟ ಇದೆಲ್ಲ ಏನು ಮರ್ಯಾದೆ ಹೇಳಿ? ರಜೆ ಇದ್ದರಂತೂ ಅತಿರೇಕ. ಇದೊಂದು ಮಂಕು! ಹೆಂಡತಿ ಮಾತು ನಂಬಿಬಿಡುತ್ತೆ. ಆದರೆ....ನಮ್ಮ ವಾಸು ಹಾಗಲ್ಲ. ಕಲಿತವನಾದ್ರೂ ಅವ ಎಲ್ಲರಂತಲ್ಲ. ಅವಳೂ ಹಾಗೆ. ನಮ್ಮ ಕಾಲದಂತೆ ನಾಚಿಕೆ, ಮರ್ಯಾದೆ ಎಲ್ಲ ಗಂಡನೊಡನೆ ಒಂದೆರಡು ಮಾತನಾಡಿದ್ರೆ ಹೆಚ್ಚು",

ಶಾಂತ ಮತ್ತು ಸುಶೀಲರಿಬ್ಬರೂ ಕೇಳುವಂತೆಯೇ ರಾಜಮ್ಮ ಈ ಮಾತುಗಳನ್ನೆಲ್ಲ ಗಟ್ಟಿಯಾಗಿ ಹೇಳುತ್ತಿದ್ದರು. ಒಮ್ಮೊಮ್ಮೆ ಸುಬ್ಬುವಿಗೂ ಈ ಮಾತುಗಳು ಕೇಳಿಸುತ್ತಿದ್ದವು. ಆದರೆ ಅವನು ಅದಕ್ಕೆ ಪ್ರತ್ಯುತ್ತರವನ್ನೀಯುವ ಗೋಜಿಗೆ ಹೋಗುತ್ತಿರಲಿಲ್ಲ. ಒಮ್ಮೊಮ್ಮೆ ಇದರಿಂದ ಬೇಸರಗೊಂಡ ಕಿರಿಮಗ ವಾಸುದೇವ ಹೇಳುತ್ತಿದ್ದ.

"ಎಷ್ಟಮ್ಮ ಹೊಗಳೋದು? ಸೊಸೆಯನ್ನು ಹೊಗಳೋದಕ್ಕೂ ಮಿತಿ ಬೇಡವೇ? ಎಲ್ಲ ಹೊಸತಿನಲ್ಲೋ ಏನೋ ಮತ್ತೆ ಅತ್ತಿಗೇನ ದೂರಿದ ಹಾಗೇ....,,

ಮಾತು ಪೂರೈಸುವ ಮೊದಲೇ ರಾಜಮ್ಮನ ಉತ್ತರ ಸಿದ್ಧವಾಗಿರುತ್ತಿತ್ತು. "ಹೊಸತಿನಲ್ಲಿ! ನೀನು ನೋಡಿಲ್ವೆ ವಾಸೂ? ಶಾಂತನ ಗುಣ ನನಗೆ ಹೊಸತಿನಲ್ಲಾಗಿತ್ತೆ? ಮನುಷ್ಯರ ಗುಣ ಒಮ್ಮೆ ನೋಡಿದ್ರೆ ತಿಳಿಯೋದಿಲ್ವಾ?,, 'ಏನೋಮ್ಮ ನಿನೇನೇ ಅನ್ನು. ನಾನು ನಿಜವಾಗ್ಲೂ ನಿನ್ನ ಮನಸ್ಸಿಗೆ ಬೇಜಾರಾಗ್ಬಾರ್ದು ಅಂತ ಮದುವೆಗೊಪ್ಪಿದೆ. ಆದ್ರೆ ಮನೇಲಿ ಒಬ್ರನ್ನು ಹೊಗಳೋದು ಮತ್ತೊಬ್ರನ್ನು ದೂರೋದು ಅಂತ ಜಗಳವೆಬ್ಬಿಸ್ಬೇಡ ಅಷ್ಟೆ. ಅಷ್ಟಕ್ಕೂ ನಿನ್ನೆ ಅತ್ತಿಗೆ ಮಾಡಿದ್ದೇನು? ಇವಳು ಮಾಡಿದ್ದೇನು?,,

ಯಾರು ಏನೂ ಮಾಡಿರಲಿಲ್ಲ ಅದು ರಾಜಮ್ಮನಿಗೂ ಗೊತ್ತಿದೆ. ಆದರೆ ಮೊದಲಿನಿಂದಲೂ ಆ ತಾಯಿಗೆ ಬುದ್ಧಿವಂತನಾದ ಕಲಿತ ಮಗನೆಂದರೆ ತುಂಬ ಆದರ. ವಾಸುವಿನ ಚತುರತೆಯನ್ನು ಒಮ್ಮೊಮ್ಮೆ ಉಪಾಧ್ಯಾಯರೇ ಹೊಗಳುತ್ತಿದ್ದಾಗ ಆಕೆ ಆನಂದದಿಂದ ಉಬ್ಬಿ ಹೆಮ್ಮೆಪಡುತ್ತಿದ್ದಳು. ಕ್ರಮೇಣ ಆ ಹೆಮ್ಮೆ ವಾಸುವಿನಲ್ಲಿ ಆದರವನ್ನು ಹುಟ್ಟಿಸಿತು. ಅಲ್ಲದೆ ಸುಬ್ಬು ಚಿನ್ನಾಭರಣವಿಲ್ಲದ ಬಡವರ ಹುಡುಗಿಯನ್ನು ಮದುವೆಯಾಗಲೊಪ್ಪಿದಾಗ ಆತ ನಿಜವಾಗಿಯೂ ಮಂಕನೆಂಬುದು ಸ್ಥಿರವಾಯಿತು. ಅದೂ ಅಲ್ಲದೆ ಸುಬ್ಬುವಿಗೆ ಹೆಣ್ಣು ಕೊಡಲು ಬಂದ ಉಮೇದ್ವಾರರು ಕೂಡ ಬಡವರೇ. ಆದರೆ ವಾಸುದೇವನಿಗೋ...... ಅದನ್ನು ಯೋಚಿಸಿದರೆ ಹೆಮ್ಮೆಯಿಂದ ಅವರ ಮುಖವರಳುವುದು. ಎಷ್ಟೋ ಮಂದಿ ಬಂದಿದ್ದರು. ಅವರಲ್ಲಿ ಬಡವರ್‍ಯಾರೂ ಇರಲಿಲ್ಲ ಬಿ. ಎ. ಓದಿದ ಹುಡುಗ ಆ ಊರಲ್ಲಿ ಅತಿ ವಿದ್ಯಾವಂತನೇ ಆಗಿದ್ದ. ಎಂದಮೇಲೆ ವರದಕ್ಷಿಣೆ ಕೊಡಲು ಅಶಕ್ತರಾದವರಿಗೆ ಅವನ ಮದುವೆ ಪ್ರಸ್ತಾಪವೆತ್ತುವ ಧೈರ್ಯ ಎಲ್ಲಿಂದ ಬರಬೇಕು. ಶ್ರೀಮಂತಿಕೆಯಲ್ಲಿ ಸುತ್ತುಮುತ್ತಲೆಲ್ಲ ಹೆಸರುವಾಸಿಯಾದ ಸಾಹುಕಾರ ರಂಗಯ್ಯನವರು ಸ್ವತಃ ರಾಜಮ್ಮನ ಮನೆಬಾಗಿಲಿಗೆ ದಯಮಾಡಿಸಿದಾಗ ಆಶ್ಚರ್ಯದಿಂದ ರಾಜಮ್ಮನಿಗೆ ಮಾತೇ ಹೊರಡಲಿಲ್ಲ. ಆಕೆ ಕಣ್ಣರಳಿಸಿ ತನ್ನ ಮಗನ ಯೋಗ್ಯತೆ ಅದೃಷ್ಟವನ್ನು ಅಳೆದು ನೋಡಿದಳು. ಮದುವೆ ವಿಚಾರದಲ್ಲಿ ಏನೂ ನಿರ್ಧಾರ ಮಾಡದ ವಾಸುವನ್ನು ಕಣ್ಣುಗಳಿಂದಲೇ ನುಂಗುವವರಂತೆ ನೋಡಿ ನಗುನಗುತಾ, "ಅಯ್ಯೋ! ನಿಮ್ಮ ಮನೆ ಭಾಗ್ಯಲಕ್ಷ್ಮಿ ಬರೋದಾದ್ರೆ ನಾವು ಬೇಡ ಅನ್ನೇವೆಯೇ? ಏನೋ ವಾಸುವಿನ ಅದೃಷ್ಟ ಚೆನ್ನಾಗಿದೆ" ಎಂದು ಒಂದೇ ಮಾತಿನಲ್ಲಿ ಪೂರೈಸಿದ್ದರು.

ವಾಸುವಿಗಾದರೋ ಅಷ್ಟು ದೊಡ್ಡ ಶ್ರೀಮಂತರ ಮಗಳನ್ನು ಕೈಹಿಡಿಯಲು ಭಯ. ಬಡತನದ ಕಷ್ಟಗಳನ್ನರಿತಿದ್ದ ಅವನಿಗೆ ಶ್ರೀಮಂತಿಕೆಯ ಸುಖದಲ್ಲಿ ಮೆರೆದಾಡಿದ್ದ ಹುಡುಗಿಯನ್ನು ಕರೆತರಲು ಸ್ವಲ್ಪವೂ ಇಷ್ಟವೆನಿಸಲಿಲ್ಲ ಆದರೆ ತಾಯಿ ಅವನ ಅವಿವೇಕವನ್ನು ಜರಿದು ಹೇಳಿದರು.

"ಮನೆ ಬಾಗಿಲಿಗೆ ಬಂದ ಲಕ್ಷ್ಮೀನ ಓಡಿಸಿದ್ರೆ ಒಳ್ಳೇದಾಗೋಲ್ಲ ವಾಸೂ ಅಲ್ಲದೆ ನಿನಗೆ ಎಲ್ಲಿ ಬೇಕಾದ್ರಲ್ಲಿ ಕೆಲಸ ಕೊಡಿಸ್ತಾರಂತೆ. ಮತ್ತೆ ವರದಕ್ಷಿಣೆ ಅಂತ ಐದು ಸಾವಿರ! ಐದು ಸಾವಿರ! ಅಂದ್ರೆ ಸುಮ್ಮನಾಗ್ತದೆಯೇ?,,

ಬಡತನದ ಬೆಂಕಿಯಲ್ಲಿ ಬೆಂದ ತಾಯಿ ಅವಿವೇಕವನ್ನು ವಾಸು ಮೌನವಾಗಿ ಸಹಿಸಿಕೊಂಡ. ಜತೆಗೆ ಆತ ಆಗ ನಿರುದ್ಯೋಗಿಯಾಗಿದ್ದ. ಮನೆಯ ಸ್ಥಿತಿಗತಿ ಸುಬ್ಬುವಿನೊಬ್ಬನ ಸಂಬಳದಿಂದ ಶೋಚನೀಯವೆನಿಸಿತ್ತು. ಎಷ್ಟೋ ಕಡೆ ಉದ್ಯೋಗಕ್ಕಾಗಿ ಅಲೆದಾಡೂ ನಿರಾಸೆಗೊಂಡಿದ್ದ. ಎಂದೇ ಮಾವನ ಸಹಾಯ ಅವನಿಗೆ ಅಗತ್ಯವೆನಿಸಿತು ಅಲ್ಲದೆ ಸುಶೀಲೆ ಕುರೂಪಿಯಾಗಿರಲಿಲ್ಲ ಕ್ರಮೇಣ ಅಭ್ಯಾಸವಾದಂತೆ ಬಡತನದ ಜೀವನ ಸಹ್ಯವಾದೀತು ಎಂದುಕೊಂಡ ಒಪ್ಪಿಕೊಂಡ ಹೊಂಗಟ್ಟಿದ.

ಮದುವೆಯ ವೈಭವ ನೋಡಿದರೆ ಸಾಲದೇ? ಕಿರಿ ಸೊಸೆ ಮನೆಯೊಳಗೆ ಕಾಲಿಡುವಾಗಲೇ ಮುಖ ಮುದುಡಿಕೊಂಡು ಮೂಲೆ ಸೇರಿದ್ದ ರಾಜಮ್ಮ ಸುಶೀಲೆ ಕಾಲಿರಿಸಿದಂದು ಉತ್ಸಾಹದ ಪ್ರತಿಮೂರ್ತಿಯಾಗಿ ಪುನರ್ಜನ್ಮ ಪಡೆದವರಂತಾಗಿದ್ದರು.

ಸುಶೀಲೆ ಯಾರೊಂದಿಗೂ ಹೆಚ್ಚಿಗೆ ಬೆರೆಯುವವಳಲ್ಲ. ಎಂದರೆ ಯಾರೊಡನೆಯೂ ಒಂದೆರಡು ಶಬ್ದಗಳಿಗಿಂತ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ ಶ್ರೀಮಂತರ ಪುತ್ರಿ ಸುಶೀಲೆಗೆ ಆ ಚಿಕ್ಕ ಮನೆಯಲ್ಲೂ ಪ್ರತ್ಯೇಕವಿರುವ ಕೋಣೆಯೊಂದನ್ನು ಬಿಟ್ಟುಕೊಟ್ಟಿದ್ದಳು ಅತ್ತೆ. ಬೆಳಗ್ಗಿನಿಂದ ಸಂಜೆಯವರೆಗೆ ಸಿಂಗರಿಸಿಕೊಳ್ಳುವುದೊಂದೇ ಸುಶೀಲೆಗಿದ್ದ ಕೆಲಸ. ಆದರೆ ಅತ್ತೆಗೆ ಅದರಿಂದ ಸ್ವಲ್ಪವೂ ಬೇಸರವಿದ್ದಿರಲಿಲ್ಲ.

"ಪಾಪ! ಸಣ್ಣ ಹುಡುಗಿ ಸುಖದಲ್ಲಿ ಬೆಳೆದವಳು. ನಿಧಾನವಾಗಿ ಕಲೀತಾಳೆ".

ಸಣ್ಣ ಹುಡುಗಿಗೆ ಇಪ್ಪತ್ತು ವರ್ಷ ಮೀಕ್ಕಿತ್ತಂತೆ. ಆದರೆ ಮಮತೆಯ ಅತ್ತೆಗೆ ಆಕೆಯಿನ್ನೂ ಸಣ್ಣವಳು. ಮಮತೆ! ಸುಶೀಲೆಯ ಯಾವ ಗುಣವನ್ನು ಆ ಅತ್ತೆ ಮೆಚ್ಚಿದ್ದಳೋ ಎಂಬುದನ್ನು ಯಾರೂ ಅರಿಯರು. ಆದರೆ ಆಕೆಯ ದೃಷ್ಟಿಯಲ್ಲಿ ಪ


**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ **5**
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ **5½** ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ **3**

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920 ಪ್ರಧಾನ ಕಚೇರಿ: ಉಡುಪಿ. ದ. ಕನಡ.

## ಕನ್ನಡ ಕಾದಂಬರೀ ಪ್ರವರ್ತಕರು

# ಶ್ರೀ ಬಿ. ವೆಂಕಟಾಚಾರ್ಯರು

ಕನ್ನಡದ ಕಾದಂಬರೀ ಪ್ರವರ್ತಕರೆಂಬ ಹೆಸರನ್ನು ವಿಮರ್ಶಕರು ಬೇರೆ ಬೇರೆ ಅರ್ಥದಲ್ಲಿ ಬೇರೆ ಬೇರೆಯ ಲೇಖಕರಿಗೆ ಅನ್ವಯಿಸುತ್ತಾರೆ. ಕನ್ನಡದ ಮೊದಲ ಸ್ವತಂತ್ರ ಕಾದಂಬರಿ 'ಇಂದಿರಾ ಬಾಯಿ'ಯನ್ನು ಬರೆದರೆಂದು ಶ್ರೀ ಗುಳವಾಡಿ ವೆಂಕಟರಾಯರಿಗೆ ಆ ಕೀರ್ತಿಯನ್ನು ಸಲ್ಲಿಸುತ್ತಾರೆ. ಕನ್ನಡತನವನ್ನು ತಮ್ಮ ಕಾದಂಬರಿಗಳಲ್ಲಿ ಪ್ರದರ್ಶಿಸಿದರೆಂದು ಶ್ರೀ ಎಂ. ಎಸ್. ಪುಟ್ಟಣ್ಣನವರಿಗೆ ಗೌರವವನ್ನು ಸಲ್ಲಿಸುವವರು ಕೆಲವರು. ಶ್ರೀ ಬಿ. ವೆಂಕಟಾಚಾರ್ಯರು ವಂಗ ಭಾಷೆಯಿಂದ ಅನೇಕ ಗ್ರಂಥಗಳನ್ನು ಅನುವಾದ ಮಾಡಿ ಕಾದಂಬರಿಯ ಮಾರ್ಗವನ್ನು ಸಮೆದರೆಂದು ಅವರಿಗೂ ಈ ಮನ್ನಣೆಯು ಸಂದಿದೆ. ಶ್ರೀಗಳಗನಾಥರ ಹೆಸರಿಗೂ ಈ ಕೀರ್ತಿಯು ಹೊಂದಿಕೊಂಡಿದೆ.

ಶ್ರೀ ಗುಳವಾಡಿಯವರು ಹುಟ್ಟಿದುದು ೧೮೫೩. ಬಿ ವೆಂಕಟಾಚಾರ್ಯರು ಹುಟ್ಟಿದುದು ೧೮೪೫. ಗುಳವಾಡಿಯವರ ಮರಣ ೧೯೩೩ರಲ್ಲಿ. ವೆಂಕಟಾಚಾರ್ಯರು ದಿವಂಗತರಾದುದು ೧೯೨೧ರಲ್ಲಿ. ಗುಳವಾಡಿಯವರು 'ಇಂದಿರಾ ಬಾಯಿ' ಕಾದಂಬರಿಯನ್ನು ಬರೆದುದು ೧೮೯೯ರಲ್ಲಿ. ವೆಂಕಟಾಚಾರ್ಯರು ತಮ್ಮ ಮೊದಲ ಅನುವಾದವನ್ನು ಮಾಡಿದುದು ಸು. ೧೮೮೫ರಲ್ಲಿ. ಎಂ ಎಸ್. ಪುಟ್ಟಣ್ಣನವರೂ ಶ್ರೀಗಳಗನಾಥರೂ ಕಾಲಮಾನದಲ್ಲಿ ಈಚಿನವರು. ಆದರೆ ಅವರ ಗ್ರಂಥಗಳ ಪರಿಣಾಮವು ಅಗಾಧವಾಗಿದೆ. ಈ ಕಾರಣಗಳಿಂದ ಇವರೆಲ್ಲರೂ ನಮಗೆ ಗೌರವಾರ್ಹರಾಗಿದ್ದಾರೆ.

ಸಾಹಿತ್ಯದಲ್ಲಿ ಒಂದು ತಲೆಮಾರಿಗೂ ಇನ್ನೊಂದು ತಲೆಮಾರಿಗೂ ಅಷ್ಟು ಖಚಿತವಾದ ವ್ಯತ್ಯಾಸ ಕಾಣಬರುವುದಿಲ್ಲ. ಸಾಹಿತ್ಯವು ಒಂದು ಪ್ರವಾಹ. ಆ ಪ್ರವಾಹಕ್ಕೆ ಬೇರೆ ಬೇರೆ ಕಡೆಯಿಂದ ನೀರು ಬಂದು ಸೇರಬಹುದು. ಆ ಎಲ್ಲ ನೀರಿನ ದೆಸೆಯಿಂದ ಪ್ರವಾಹದ ಪಾತ್ರ ಹಿರಿದಾಗುತ್ತದೆ. ಅದರ ಪ್ರಭಾವ ವಿಶಾಲವಾಗುತ್ತದೆ. ಹೊಸ ರಸ ನಿರ್ಮಾಣವೊಂದು ತಲೆಯೆತ್ತಿ ಮೆರೆಯುವಾಗ ಅದರ ಹಿಂದಣ ಕೃತಿಯೊಂದು ಅದರಷ್ಟೇ ಪ್ರಭಾವ ಶಾಲಿಯಾಗಿ ನಿಂತಿರುತ್ತದೆ. ಓದುಗರ ಅಭಿರುಚಿಯಲ್ಲಿಯೂ ಅಷ್ಟೆ! ಯಾವೊಂದು ಕಾಲದಲ್ಲಿಯೂ ಒಂದೇ ರುಚಿಯ ಓದುಗರಿರುವುದಿಲ್ಲ. ಉಪನಿಷತ್ತನ್ನು ಅಭ್ಯಾಸ ಮಾಡುವ ಯುವಕರೂ, ಮಕ್ಕಳ ಕಥೆಗಳನ್ನೇ ಮತ್ತೆ ಮತ್ತೆ ಓದುವ ಮುದುಕರೂ ಒಟ್ಟಿಗೆಯೇ ಕಂಡು ಬರುತ್ತಾರೆ.

**ಲೋಕದ ರೀತಿಯೇ ಹೀಗೆ!**

ಇಂದು ಹೊಸ ಕಾದಂಬರಿಗಳನ್ನು ಓದುವ ಜನ ಹೆಚ್ಚಾಗಿರಬಹುದು. ಆದರೆ ವೆಂಕಟಾಚಾರ್ಯರ ಕಾದಂಬರಿಗಳೇ ಬೇಕೆಂದು ಅದಕ್ಕಾಗಿ ಹುಡುಕುವವರೂ ಉಂಟು. ಇಂದು ಸಾವಿರಾರು ಆಧುನಿಕ ಕಾದಂಬರಿಗಳು ಮಾರಾಟಕ್ಕೆ ಸಿದ್ಧವಾಗಿದ್ದರೂ 'ವಿಷವೃಕ್ಷ'ವನ್ನೂ 'ವಂಗವಿಜೇತ'ವನ್ನೂ 'ದೇವಿ ಚೌಧುರಾಣಿ'ಯನ್ನೂ ಹುಡಿಕಿಕೊಂಡು ಹೋಗುವ ವಾಚಕರು ಇದ್ದೇ ಇದ್ದಾರೆ.

ಸುಮಾರು ಎಪ್ಪತ್ತು ಗ್ರಂಥಗಳನ್ನು ಬರೆದು ನಮ್ಮ ಸಾರಸ್ವತ ಸಂಪತ್ತನ್ನು ಹೆಚ್ಚಿಸಿದ ಬಿ. ವೆಂಕಟಾಚಾರ್ಯರು ೭೬ ವರ್ಷಗಳ ಉಪಯುಕ್ತವಾದ ಬಾಳನ್ನು ಬದುಕಿದರು. ಕೊಳ್ಳೆಗಾಲಕ್ಕೆ ಸೇರಿದ ಇವರು ಕಾರಣಾಂತರದಿಂದ ಚಿತ್ರದುರ್ಗವನ್ನು ಸೇರಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು; ೧೮೬೫ರ ವೇಳೆಗೆ ಸರಕಾರದಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿ ೧೯೦೨ರಲ್ಲಿ ಮುನ್ಸೀಫ್ ಗಿರಿಯಿಂದ ನಿವೃತ್ತರಾದರು.

ಸುಮಾರು ೧೮೭೫ನೇ ಇಸವಿಯ ವೇಳೆಗೆ ಬಿ. ವೆಂಕಟಾಚಾರ್ಯರು ಬಂಗಾಳಿ ಭಾಷೆಯ ಪರಿಚಯವನ್ನು ಪಡೆದರು. ಬಂಗಾಳದ ಪ್ರಸಿದ್ಧ ವಿದ್ವಾಂಸರಾದ ಈಶ್ವರ ಚಂದ್ರ ವಿದ್ಯಾಸಾಗರರ ಸಹಾಯದಿಂದ ಪತ್ರಮುಖೇನ ಬಂಗಾಳಿ ಭಾಷೆಯ ಅಭ್ಯಾಸವನ್ನು ಮುಂದುವರಿಸಿ, ಅದರಲ್ಲಿ ವಿದ್ವತ್ತನ್ನು ಸಂಪಾದಿಸಿದರು. ಇದನ್ನು ಕಂಡ ಈಶ್ವರ ಚಂದ್ರರು ತಮ್ಮ "ಭ್ರಾಂತಿವಿಲಾಸ"ವೆಂಬ ಕಾದಂಬರಿಯನ್ನು ವೆಂಕಟಾಚಾರ್ಯರಿಗೆ ಕಳುಹಿಸಿ ಕೊಟ್ಟರು. ಅವರು ಅದನ್ನು ಕನ್ನಡಕ್ಕೆ ಅನುವಾದ ಮಾಡಿದರು. ಇದೇ ಅವರು ಕನ್ನಡಕ್ಕೆ ಅನುವಾದ ಮಾಡಿದ ಮೊದಲ ಗ್ರಂಥ. ಈ ಗ್ರಂಥಕ್ಕೆ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಪಠ್ಯ ಪುಸ್ತಕವಾಗುವ ಸುಯೋಗವು ಒದಗಿತು. ಇದರಿಂದ ಪ್ರೋತ್ಸಾಹಿತರಾಗಿ ವೆಂಕಟಾಚಾರ್ಯರು ಈಶ್ವರಚಂದ್ರರ 'ಸೀತಾವನವಾಸ', 'ಶಾಕುಂತಳ' ಎಂಬ ಮತ್ತೆರಡು ಗ್ರಂಥಗಳನ್ನೂ ಅನುವಾದ ಮಾಡಿದರು.

ಇದಾದ ಕೆಲವು ವರ್ಷಗಳಲ್ಲಿಯೇ ವೆಂಕಟಾಚಾರ್ಯರಿಗೆ ಬಂಕಿಂಚಂದ್ರನ ಬಂಗಾಳಿ ಕಾದಂಬರಿಗಳ ಪರಿಚಯವಾಯಿತು. ಅವುಗಳ ಸತ್ವವನ್ನೂ ಓದುಗರ ಮೇಲೆ ಅವುಗಳಿಂದಾಗುವ ಪರಿಣಾಮವನ್ನೂ ಕಂಡು ಅವರು ಅವುಗಳನ್ನು ಕನ್ನಡಕ್ಕೆ ತರಬೇಕೆಂದು ನಿಶ್ಚಯಿಸಿದರು. ಮೊದಲು "ದುರ್ಗೇಶ ನಂದಿನಿ"ಯನ್ನೂ ಆ ಬಳಿಕ "ದೇವಿಚೌಧುರಾಣಿ"ಯನ್ನೂ ಅನುವಾದ ಮಾಡಿದರು. 'ದುರ್ಗೇಶನಂದಿನಿ'ಯು ಬಂಕಿಮನು ಬರೆದ ಮೊದಲ ಕಾದಂಬರಿ. ಬರೆದ ವರ್ಷ ೧೮೬೫. ದೇವಿಚೌಧುರಾಣಿಯ ಕಾಲ ೧೮೮೪. 'ದುರ್ಗೇಶ ನಂದಿನಿ'ಯ ಕಥೆಯು ಮುಂದುವರಿಯುವುದಕ್ಕೆ ಅರ್ಹವಾದುದೆಂದು ತಿಳಿದು ದಾಮೋದರ ಮುಖ್ಯೋಪಾಧ್ಯಾಯ ಎಂಬವನು, ಅದರ ಮುಂದಿನ ಕಥೆಯನ್ನು 'ನವಾಬನಂದಿನಿ' ಎಂಬ ಹೆಸರಿನಿಂದ ಮತ್ತೊಂದು ಕಾದಂಬರಿಯನ್ನಾಗಿ ರಚಿಸಿದನು. ಅದನ್ನೂ ವೆಂಕಟಾಚಾರ್ಯರು ಕನ್ನಡಿಸಿದ್ದಾರೆ.

ಬಂಕಿಮನ ಕಾದಂಬರಿಗಳಲ್ಲಿ ವೆಂಕಟಾಚಾರ್ಯರ ಆಸಕ್ತಿ ಹೆಚ್ಚಿದ ಹಾಗೆಲ್ಲ ಆತನ ಪ್ರತಿಯೊಂದು ಕಾದಂಬರಿಯನ್ನೂ ಕನ್ನಡಕ್ಕೆ ತಂದುಬಿಟ್ಟರು. ಅವರು ಕನ್ನಡಕ್ಕೆ ತಂದ ಬಂಕಿಮನ ಕಾದಂಬರಿಗಳು ಇವು:

ದುರ್ಗೇಶ ನಂದಿನಿ, ದೇವಿಚೌಧುರಾಣಿ ರಾಜಸಿಂಹ, ವಿಷವೃಕ್ಷ, ಚಂದ್ರಶೇಖರ ಸೀತಾರಾಮ, ಕಪಾಲ ಕುಂಡಲ ಕೃಷ್ಣಕಾಂತನ ಉಯಿಲು, ಮೃಣಾಳಿನಿ, ಆನಂದ ಮಠ, ರಜನಿ, ಯುಗಳಾಂಗುರೀಯ, ಇಂದಿರಾ, ರಾಧಾರಾಣಿ.

ಇವಲ್ಲದೆ ಬಂಕಿಮನ ಅನೇಕ ವಿಡಂಬನ ಲೇಖನಗಳನ್ನು 'ಕಮಲಾಕಾಂತ' ಮತ್ತು 'ಲೋಕರಹಸ್ಯ' ಎಂಬ ಗ್ರಂಥಗಳಾಗಿ ಅನುವಾದ ಮಾಡಿದ್ದಾರೆ. ಲೋಕ ರಹಸ್ಯವು ಎರಡು ಭಾಗಗಳಾಗಿ ಪ್ರಕಟವಾಗಿತ್ತು.

ಬಂಕಿಮನ ಗ್ರಂಥಗಳಲ್ಲದೆ ವೆಂಕಟಾಚಾರ್ಯರು ಯೋಗೀಂದ್ರನಾಥ ಬಸು ಬರೆದ "ಅಹಲ್ಯಾಬಾಯಿ"ಯನ್ನೂ ರಮೇಶ ಚಂದ್ರದತ್ತನ 'ವಂಗವಿಜೇತ', 'ಮಾಧವೀಲತಾ' ಎಂಬ ಕಾದಂಬರಿಗಳನ್ನೂ ಅನುವಾದ ಮಾಡಿದ್ದಾರೆ. ಕನ್ನಡಕ್ಕೆ ಶ್ರೀಯುತರು ಇನ್ನು ಯಾವ ಯಾವ ಗ್ರಂಥಕರ್ತರ ಪರಿಚಯ ಮಾಡಿಕೊಟ್ಟಿರಬಹುದೆಂಬುದನ್ನು ಹೇಳುವುದು ಈಗ ಕಷ್ಟವಾಗಿದೆ. ಅವರ ಅನೇಕ ಗ್ರಂಥಗಳು ಈಗ ಅನುಪಲಬ್ಧವಾಗಿವೆ. Arabian Nights ಗ್ರಂಥವನ್ನು 'ಯಾವನ ಯಾಮಿನೀ ವಿನೋದಗಳು' ಎಂಬ ಹೆಸರಿನಿಂದ ಅನುವಾದ ಮಾಡಿರುವಂತಿದೆ. ಇವಲ್ಲದೆ ಸ್ವಂತವಾಗಿ ಕೆಲವು ಲೇಖನಗಳನ್ನೂ ಬರೆದಂತಿದೆ. ಚರಿತ್ರೆ, ಸಮಾಜವಿಜ್ಞಾನ, ಸಮಾಜ ಸುಧಾರಣೆ ಇವುಗಳ— ವಿಚಾರದಲ್ಲಿರುವ ಗ್ರಂಥಗಳು ಪ್ರಾಯಶಃ ಅವರ ಸ್ವಂತವಿರಬೇಕು. 'ವೆನಿಸು ನಗರದ ವರ್ತಕ'ನೆನ್ನುವುದು ಷೇಕ್ಸ್‌ಪಿಯರನ ನಾಟಕದ ಅನುವಾದ. ಹೀಗೆ ಅವರ ಸಾಹಿತ್ಯರಚನೆಯಲ್ಲಿ ಸ್ವಂತ ಕೃತಿಗಳಿಗಿಂತ ಅನುವಾದಗಳೇ ಬಹಳವಾಗಿವೆ. ಅದರಲ್ಲಿಯೂ ಇತರ ಅನುವಾದಗಳಿಂದ ಬಂಕಿಮ ಸಾಹಿತ್ಯದ ಅನುವಾದವೇ ಹೆಚ್ಚು. ಈ ಗ್ರಂಥಗಳು ಯಾವ ಕ್ರಮದಲ್ಲಿ ಅನುವಾದಗೊಂಡವೆಂಬುದನ್ನು ಹೇಳುವುದೂ ಈಗ ದುಸ್ತರ.

ವಿಷವೃಕ್ಷವು ವರ್ಣನಾ ಪ್ರಧಾನವಾದ ಕಾದಂಬರಿ. ಅಲ್ಲಿ ಆತ್ಮ ಸಂಯಮದ ಪ್ರಾಧಾನ್ಯವನ್ನು ದೃಷ್ಟಾಂತ ಪೂರ್ವಕವಾಗಿ ಕಾದಂಬರಿಕಾರನು ವಿವರಿಸಿದ್ದಾನೆ. 'ಕೃಷ್ಣಕಾಂತನ ಉಯಿಲ'ನಲ್ಲಿ ಉಯಿಲುಗಳ ದುಷ್ಪರಿಣಾಮದ ಚಿತ್ರವಿದೆ. 'ರಜನೀ' ಕಾದಂಬರಿಯು ಕುರುಡು ಹುಡುಗಿಯೊಬ್ಬಳು ದೃಷ್ಟಿ ಪಡೆಯುವ ಪುಣ್ಯಸಂದರ್ಭವನ್ನು ಚಿತ್ರಿಸುತ್ತದೆ. 'ಇಂದಿರೆ'ಯಲ್ಲಿ ನವ ತರುಣಿಯ ಬುದ್ಧಿ ಚಾತುರ್ಯ ಸಾಹಸಗಳ ಕಥೆಯಿದೆ. 'ಯುಗಳಾಂಗುರೀಯ'ದಲ್ಲಿ ಗಂಡಹೆಂಡಿರು ಉಂಗುರಗಳ ದೆಸೆಯಿಂದ ಒಂದುಗೂಡಿಸುವ ಘಟನೆಯಿದೆ. 'ರಾಧಾರಾಣಿ'ಯು ಒಬ್ಬ ಹುಡುಗಿಯ ಕಷ್ಟ ಸುಖಗಳನ್ನು ವರ್ಣಿಸುತ್ತದೆ. ಇವೆಲ್ಲವೂ ಸಾಮಾಜಿಕ ಚಿತ್ರಗಳು.

'ದುರ್ಗೇಶನಂದಿನಿ'ಯು ಅಕ್ಬರನ ಕಾಲದ ಒಂದು ಕಥೆ. ಚಾರಿತ್ರಿಕ ಹಿನ್ನೆಲೆಯಿದ್ದರೂ ಇದು ಚಾರಿತ್ರಿಕ ಕಾದಂಬರಿಯಲ್ಲ. ಕಪಾಲಕುಂಡಲೆಯಲ್ಲಿ ಅದೃಷ್ಟದ ಪರಿಣಾಮದ ವಿವರಣೆಯಿದೆ. 'ಮೃಣಾಳಿನಿ'ಯಲ್ಲಿ ಬಂಗಾಳದ ಪತನದ ನಿಜವಾದ ಅರ್ಥವಿದೆ. "ಚಂದ್ರಶೇಖರ" ಒಂದು ಚಾರಿತ್ರಿಕ ಕಥೆ. ಮೀರ್ ಖಾಸಿಮನ ಕಾಲದ ಬಂಗಾಳದ ಜೀವನವನ್ನು ಇದು ಚಿತ್ರಿಸುತ್ತದೆ. ಇಲ್ಲಿ ರಾಜಕೀಯ ಸಾಮಾಜಿಕ ಜೀವನಗಳೆರಡೂ ಬೆರೆದುಕೊಂಡಿವೆ. "ರಾಜಸಿಂಹ"ದಲ್ಲಿ ಔರಂಗಜೇಬನ ಕಾಲದ ರಜಪೂತರ ಹೋರಾಟವನ್ನು ಕಾಣಬಹುದು. "ಆನಂದಮಠ"ವು "ಸನ್ಯಾಸಿಗಳ ದಂಗೆ"ಯೆಂದು ಇಂಗ್ಲಿಷರು ಕರೆದ ಹಿಂದೂ ಮತದ ಪುನರುತ್ಥಾನದ ಧೈರ್ಯದೃಶ್ಯಗಳನ್ನು ಚಿತ್ರಿಸುತ್ತದೆ. 'ದೇವಿ ಚೌಧುರಾಣಿ'ಯಲ್ಲಿ 'ಆನಂದಮಠ'ದ ಕಥೆಯು ಮುಂದುವರಿಯುತ್ತದೆ. 'ಸೀತಾರಾಮ'ವೆಂಬುದು ಹಿಂದೂ ಧರ್ಮದ ಆದರ್ಶವನ್ನು ಎತ್ತಿಹಿಡಿಯುತ್ತದೆ.

ಒಂದು ಮಾತಿನಲ್ಲಿ ಒಂದು ಗ್ರಂಥವನ್ನು ವಿವರಿಸಲು ಹೊರಟರೆ ಆಗುವುದೇ ಹೀಗೆ. ಈ ಒಂದೊಂದು ಗ್ರಂಥವೂ ಒಂದೊಂದು ಜೀವರತ್ನದಂತಿದೆ. ಕನ್ನಡದಲ್ಲಿ ವಾಚನಾಭಿರುಚಿ ಬೆಳೆಯುವಂತೆಯೂ, ಸ್ವಭಾಷಾ ಪ್ರೇಮವು ಮೂಡುವಂತೆಯೂ, ಕಾದಂಬರಿಗಳೆಂಬ ನೂತನ ಕಥಾ ಸೃಷ್ಟಿಯಲ್ಲಿ ಸಾಹಿತಿಗಳ ಮನಸ್ಸು ಪ್ರವರ್ತಿಸುವಂತೆ ಮಾಡಿದ ಹಿಂದಣವರಲ್ಲಿ ನಾವು ವೆಂಕಟಾಚಾರ್ಯರನ್ನು ಸರ್ವಥಾ ನೆನೆಸಬೇಕು.

ವೆಂಕಟಾಚಾರ್ಯರು ಗತಿಸಿ ೫೦ ವರ್ಷಗಳಾದರೂ ಅವರ ಗ್ರಂಥಗಳ ಶೈಲಿಯು ನಮಗೆ ಹಳೆಯದಾಗಿ ಕಾಣುತ್ತಿಲ್ಲ. ಮೂಲ

(೧೦ನೇ ಪುಟ ನೋಡಿರಿ)

ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,

ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

## ಭಾರತ ಒಕ್ಕೂಟದ

# ನೇಹಿಂಗ ನೇಪಾಲ

ಭಾರತದ ಗೃಹಮಂತ್ರಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರೀ ಜೀಯವರು ನೇಪಾಲಕ್ಕೆ ಭೇಟಿಕೊಡಬೇಕೆಂಬ ಉದ್ದೇಶದಿಂದ ಪಾಟ್ನಾಕ್ಕೆ ಬಂದಿದ್ದಾಗ, ಆಕಸ್ಮಾತ್, ಡಾ| ರಾಜೇಂದ್ರ ಪ್ರಸಾದರು ಸ್ವರ್ಗಸ್ಥರಾದುದರಿಂದ ಮಾರ್ಚ್ ಒಂದರಂದು ಪ್ರಯಾಣ ಮುಂದರಿಸದೆ, ಮರುದಿನ ಬೆಳಗ್ಗೆ ತಮ್ಮ ಪ್ರಯಾಣವನ್ನು ಅವರು ಮುಂದರಿಸಿದರು. ಇತ್ತೀಚೆಗೆ ಕೆಲ ರಾಜಕಾರಣೆಗಳಿಂದಾಗಿ ಹಾಗೂ ಚೈನಾದ ಆಸುರೀ ಶಕ್ತಿಯಿಂದಾಗಿ ಭಾರತ-ನೇಪಾಲ ನಡುವಣ ಮೈತ್ರಿಗೆ ಧಕ್ಕೆ ಬಂದಿರುವದನ್ನು ಸರಿಪಡಿಸುವ ಆಲೋಚನೆಯಿಂದ ಭಾರತದ ಗೃಹಮಂತ್ರಿಯವರು ಅತ್ತ ಪ್ರಯಾಣ ಕೈಗೊಂಡರು. ಅದೂ ಅಲ್ಲದೆ, ನೇಪಾಲದ ಮೂಲಕ ಚೈನಾಕ್ಕೆ ಭಾರತದಿಂದ ಹಲವಾರು ವಸ್ತುಗಳು ಕಳ್ಳರಸ್ತೆಯಿಂದ ಸರಾಗವಾಗಿ ಸಾಗುತ್ತಿರುವದರ ಕುರಿತು ಮಾತುಕತೆಯಾಡುವ ಇಚ್ಛೆಯಿಂದಲೂ ಅವರು ಅತ್ತ ಹೋಗಿದ್ದರು. ನೇಪಾಲದ ಮಂತ್ರಿಮಂಡಲ ಅವರಿಗೆ ಗೋಚರ ವಿಮಾನ ನಿಲ್ದಾಣದಲ್ಲಿ ಉತ್ತಮ ಸ್ವಾಗತವನ್ನಿತ್ತಿತು. ಅವರು ಅಂದೇ ಅಪರಾಹ್ನ (ದಿ. ೨) ರಾಜಾ ಮಹೇಂದ್ರರನ್ನು ಭೇಟಿಯಾದರು. ಅಂದು ಅವರು ಪತ್ರಿಕಾ ಪ್ರತಿನಿಧಿಗಳ ಬಳಿ ಮಾತಾಡುತ್ತ „ನೇಪಾಲಕ್ಕೆ ಬರಲು ನನಗೆ ಬಹಳ ಸಂತೋಷವಾಗುತ್ತದೆ. ನೇಪಾಲದ ವಿಷಯ ಗೊತ್ತಿದ್ದರೂ ಕಣ್ಣಾರೆ ಕಾಣಬೇಕೆಂಬ ಇರಾದೆಯಿಂದ ಇಲ್ಲಿಗೆ ಬಂದಿರುವೆನು" ಎಂದು ತಿಳಿಸಿದರು.

ಪ್ರಾಚೀನ ಕಾಲದಿಂದಲೂ ಅನೇಕ ಹಿಮಾಚಲ ತನಕ ಇರುವ ಪುಣ್ಯಭೂಮಿ ಭಾರತದಲ್ಲಿ ವೀರ ಜನಾಂಗವೊಂದು ಉತ್ತಮ ರೀತಿಯಲ್ಲಿ ವಾಸಿಸಿಕೊಂಡಿತ್ತು. ಅವರು ಈ ದೇಶವನ್ನು ಆಡಳಿತೆಯ ದೃಷ್ಟಿಯಿಂದ ಹಲವಾರು ರೀತಿಯಲ್ಲಿ ವ್ಯವಸ್ಥೆಗೊಳಪಡಿಸಿಕೊಂಡಿದ್ದರು. ದೇಶವನ್ನು ಆಡಳಿತ ದೃಷ್ಟಿಯಿಂದ ಅಂಚಲಗಳನ್ನಾಗಿ ಗುರುತಿಸಿಟ್ಟುಕೊಂಡಿದ್ದಂತೆ ಈ ಫಲಭರಿತ ಹೊನ್ನ ತಾಯಿನೆಲವನ್ನು ಕಾಯುವುದಕ್ಕಾಗಿ 'ದ್ವಾರಪಾಲ'ರನ್ನು ಗಡಿಗಳಲ್ಲಿಟ್ಟುಕೊಂಡಿದ್ದರು. ಆದರೆ ಕ್ರಮೇಣ ದುರಾದೃಷ್ಟವಶಾತ್ ಶತ್ರು ಪ್ರವಾಹದಲ್ಲಿ ಈ ಗಡಿರಕ್ಷಕರು ಕೊಚ್ಚಿಕೊಂಡು ಹೋಗಲ್ಪಟ್ಟರು. ಆದರಲ್ಲಿ ಕೆಲವರು ಶತ್ರುಗಳ ಬಣಕ್ಕೆ ಸೇರಿಕೊಳ್ಳಬೇಕಾಯಿತು. ಆವುಗಳೆಲ್ಲವನ್ನೂ ತಡೆದು ಸ್ವಾತಂತ್ರ್ಯ ನಾಡಾಗಿ ನಿಂತುಕೊಂಡಿದೆ ನೇಪಾಲ. ಇದನ್ನು ಭಾರತದ ಹಣೆಗಣ್ಣೆಂದರೂ ತಪ್ಪೇನಿರುವದಿಲ್ಲ. ಇಂದಿಗೂ ಭಾರತೀಯ ಜೀವನ ಪದ್ಧತಿಯನ್ನೇ ನಾವಲ್ಲಿ ಕಾಣಬಹುದು. ಇಂದೂ ಅಲ್ಲಿಯ ಪಶುಪತಿನಾಥ ದೇವಸ್ಥಾನ ಹಾಗೂ ಇತರ ಮಂದಿರಗಳು ಭಾರತೀಯರ ಪವಿತ್ರ ಕ್ಷೇತ್ರಗಳಿವೆ. ಅಲ್ಲಿಗೆ ಭಾರತೀಯ ಜನಮನಗಣ ಅಧಿನಾಯಕರೂ ತೀರ್ಥಯಾತ್ರೆಯಾಗಿ ಹೋಗಿ ಬರುತ್ತಿದ್ದಾರೆ.

ನೇಪಾಲವು ಹಿಂದಿನ ಕಾಲದಲ್ಲಿ ಒಂದೇ ಛತ್ರದಡಿಯಲ್ಲಿಟ್ಟರಲಿಲ್ಲ. ಹಿಮಾಲಯದ ಆ ತಪ್ಪಲಲ್ಲಿ ಗಡಿ ರಕ್ಷಣೆಯ ಪವಿತ್ರ ಕರ್ತವ್ಯದಿಂದ ಅಲ್ಲಲ್ಲಿ ವೀರ ಸ್ವಯಂ ಸೇವಕರು ವಾಸಿಸುತ್ತಿದ್ದರು ಕ್ರಮಶಃ ಅವರ ಜನಸಂಖ್ಯೆ ಬೆಳೆದಂತೆ ಅವರು ಅಲ್ಲಲ್ಲಿ ಸ್ವತಂತ್ರ ರಾಜ್ಯಗಳನ್ನು ಕಟ್ಟಿಕೊಂಡಿದ್ದರು ಸಾಧಾರಣ ಹದಿನೆಂಟನೆಯ ಶತಮಾನದಲ್ಲಿ ರಾಜಾ ಪೃಥ್ವಿ ನಾರಾಯಣ ಷಾರು ಅವೆಲ್ಲವನ್ನು ಒಂದೇ ಆಡಳಿತ ಸೂತ್ರದಲ್ಲಿ ಪೋಣಿಸಿದರು. ಅವರಲ್ಲಿ ಅನೇಕ ಜನರು ಆಡುವ ಭಾಷೆ ನೇಪಾಲಿ. ಒಂದೇ ಆಡಳಿತ ಸೂತ್ರ, ಒಂದೇ ಮತ, ಒಂದೇ ಸಂಸ್ಕೃತಿ (ಕಲಾಚಾರ, ನಾಗರೀಕತೆ), ಒಂದೇ ಭಾಷೆ, ಒಂದೇ ಪ್ರದೇಶ, ಒಂದೇ ಧ್ವಜ.... ಇವೆಲ್ಲಾ ಇಂದು ಸೇರಿ ಬಂದಿರುವದರಿಂದ ನೇಪಾಲಕ್ಕೆ ಸ್ವತಂತ್ರ ಪ್ರತ್ಯೇಕ ರಾಷ್ಟ್ರೀಯ ಸ್ವರೂಪ ಬಂದಿರುತ್ತದೆ.

ನೇಪಾಲ ಮತ್ತು ಭಾರತದ ನಡುವೆ ವಿಭಜನೆಯ ಕಲ್ಪನಾ ಗೋಡೆಯನ್ನು ಕಟ್ಟಲು ದೂರ್ತ ಬ್ರಿಟಿಷ್ ರಾಜಕಾರಣಿಗಳು ಬಹಳ ಪ್ರಯಾಸಪಟ್ಟಿರುವರು. ಇದೀಗ ಚೈನಿ ಕಮ್ಯೂನಿಸ್ಟರು ಅದೇ ದಾರಿಯಲ್ಲಿ ತ್ವರಿತ ಗತಿಯಲ್ಲಿ ಸಾಗುತ್ತಿದ್ದಾರೆ. ಅದಕ್ಕಾಗಿ, ನೇಪಾಲದಲ್ಲಿರುವ ವಿಷವೃಕ್ಷ ಕಮ್ಯೂನಿಸ್ಟರನ್ನು ಅವರು ಬೇಕಾದಂತೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅವರು ಚೈನಿ ಆಕ್ರಮಣಗಾರರ ದಾರಿಯನ್ನು ಸುಗಮಗೊಳಿಸಿಕೊಡುವ ಕಾರ್ಯದಲ್ಲಿ ಮಗ್ನರಾಗಿರುವರು. ಅದಕ್ಕಾಗಿ ಅವರು ಪಡುತ್ತಿರುವ ಪಾಡು ಅಷ್ಟಿಷ್ಟಲ್ಲ; ಹಾಕಿಕೊಳ್ಳುತ್ತಿರುವ ವೇಷ ಒಂದೆರಡಲ್ಲ. ಅವರು ರಾಜಾರ ವಲಯದಲ್ಲಿ ಅವರಿಗೆ ಬೇಕಾದ ವೇಷವನ್ನು ಹಾಕಿಕೊಳ್ಳುತ್ತಿದ್ದಾರೆ. ಹಾಗೆಯೇ, ಜನತಾ ವಲಯದಲ್ಲಿ ಅರಸರಿಗೆ ತೀರಾ ವಿರೋಧವಾಗಿ ಕುಪ್ರಚಾರ ನಡೆಸುತ್ತಿದ್ದಾರೆ ಈ ಎರಡು ರಂಗಗಳಲ್ಲಿ ಅವರು ಆಡಳಿತ ವರ್ಗ ಹಾಗೂ ಜನತೆಯನ್ನೂ ಭಾರತದ ವಿರುದ್ಧ ಎತ್ತಿ ಕಟ್ಟುವದರಲ್ಲಿ ಅಹೋರಾತ್ರಿ ದುಡಿಯುತ್ತಿದ್ದಾರೆ ಅವರು ಕ್ರಾಂತಿಯ ನೆಪದಲ್ಲಿ ಕೊಲೆ ಸುಲಿಗೆಗಳನ್ನು ನಡೆಸುತ್ತಿದ್ದಾರೆ. ಅವರ ಸಹಾಯಕ್ಕೆ ಅಕ್ಕಪಕ್ಕದ ರಾಷ್ಟ್ರಗಳಲ್ಲಿರುವ ಕಮ್ಯುನಿಸ್ಟರು ಸದಾ ಸಿದ್ಧರಾಗಿದ್ದಾರೆ. ಗಡಿ ಪ್ರದೇಶಗಳಲ್ಲಿ ಗಲಭೆ ಎಬ್ಬಿಸಿ ಆ ಅಪವಾದವನ್ನು ಭಾರತೀಯರ ಮೇಲೆ ಅವರು ಹಾಕುತ್ತಿದ್ದಾರೆ. ಅವರ ಕೂಗಿಗೆ ಸರಿಯಾಗಿ ಇಲ್ಲಿಯ ಕಮ್ಯೂನಿಸ್ಟರು ಚಪ್ಪಾಳೆ ತಟ್ಟುತ್ತಾರೆ. ರಾಜರ ವಲಯದಲ್ಲೂ ಅವರು ಕಿವಿ ಚುಚ್ಚುತ್ತ ಭಾರತ ವಿರೋಧ ಎಡೆಬಿಡದೆ ಕುಪ್ರಚಾರ ನಡೆಸುತ್ತಿದ್ದಾರಲ್ಲದೆ, ರಾಜರ ಕುರಿತಾದ ಕುಪ್ರಚಾರವು ಭಾರತದಲ್ಲಿ ಹಬ್ಬುವಂತೆ ಇಲ್ಲಿಯ ಕಮ್ಯೂನಿಸ್ಟರ ಪತ್ರಿಕೆಗಳ ಮೂಲಕವೂ ಬಹಳಪ್ರಯತ್ನಿಸುತಿದ್ದಾರೆ. ಖಟಮಂಡುವಿನಲ್ಲಿ ಅಧಿಕ ಸಂಖ್ಯೆಯಲ್ಲಿ ನೇವಾರರಿದ್ದಾರೆ. ಅವರ ಬಳಿ ಕಮ್ಯೂನಿಸ್ಟರು ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಅವರು ಮಂಗೋಲಿಯನರ ಸಂತಾನವೆಂದೂ, ಅವರ ಪೂರ್ವಜರು ಹಿಂದೂಗಳಲ್ಲವೆಂದು ದೇಶದ್ರೋಹಿ ಕಮ್ಯೂನಿಸ್ಟರು ಕಿವಿ ಚುಚ್ಚುತ್ತಿದ್ದಾರೆ. ಅಲ್ಲಿಯ ಚೈನಿ ರಾಯಭಾರಿಯಂತೂ ಅದಕ್ಕಾಗಿಯೇ ತನ್ನ ಜೀವನವನ್ನು ಮುಡುಪಾಗಿಟ್ಟುಕೊಂಡಿದ್ದಾನೆ. ಅವರ ಬೆಂಕಿಗೆ ಉತ್ತಮ ತುಪ್ಪವಾಗಿ ಬಿಟ್ಟದೆ ರಾಜಾ ಮಹೇಂದ್ರರ ಇತ್ತೀಚಿಗಿನ ರಾಜಕೀಯ ಕ್ರಮ. ರಾಜಾ ಮಹೇಂದ್ರರ ಪಿತಾಜಿ ತ್ರಿಭುವ ವೀರ ವಿಕ್ರಮ ಷಾಹರವರು ೧೯೫೧ರಲ್ಲಿ ರಾಣಾದರ್ಬಾರನ್ನು ನಿಷ್ಕಾಸಿ ಆಡಳಿತ ಲಗಾಮನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡಂತೆ, ರಾಜಾ ಮಹೇಂದ್ರರ ೧೯೬೦ರಲ್ಲಿದ್ದ ಪ್ರತಿನಿಧಿ ಸಭೆಯನ್ನು ಸ್ಥಗಿತಗೊಳಿಸಿ ನೇಪಾಲಿ ಕಾಂಗ್ರೆಸ್ಸಿಗರ ಕೈಯ್ಯಿಂದ ಶಾಸನವನ್ನು ತಮ್ಮ ಕೈಯ್ಯಲ್ಲಿ ತೆಗೆದುಕೊಂಡಂದಿನಿಂದ ದೇಶವಿದ್ರೋಹಿಗಳ ಚಟುವಟಿಕೆ ಹೆಚ್ಚುತ್ತಿದೆ. ಒಡನೆ ಕೆಲವು ಮುಖಂಡರೆನಿಸಿಕೊಂಡಿದ್ದವರು ತಲೆ ಮರೆಸಿಕೊಂಡು ಇತ್ತ ಭಾರತಕ್ಕೆ ಓಡಿಬಂದರು. ಅವರು ಇಲ್ಲಿಂದಲೇ ಅಲ್ಲಿರುವ ದೇಶ ದ್ರೋಹಿಗಳಿಗೆ ಸಹಾಯ ಮಾಡುತ್ತಿದ್ದಾರೆ. ಭೂಗತವಾಗಿರುವ ದೇಶವಿದ್ರೋಹಿಗಳು ಅಲ್ಲಲ್ಲಿ ಆಗಾಗ ರಕ್ಷಕ ಪಡೆಗೆ ಕಿರುಕುಳ ಕೊಡುವದರಲ್ಲಿ, ಕಟ್ಟಡಗಳನ್ನು ಸುಡುವಂತಹ ಕುಕೃತ್ಯಗಳನ್ನು ನಡೆಸುತ್ತ ಜನತೆಯನ್ನು ಆಡಳಿತ ಮಂಡಲಕ್ಕೆ ವಿರುದ್ಧವಾಗಿ ಎತ್ತಿಕಟ್ಟುವದರಲ್ಲಿ ಪ್ರಯತ್ನಿಸುತ್ತಿದ್ದಾರೆ. ಕಮ್ಯೂನಿಸ್ಟರ ಕಾರಸ್ಥಾನದಿಂದಾಗಿ ನೇಪಾಲದಲ್ಲಿ ಅರಾಜಕೀಯತೆಯ ನಡುಕ ಉಂಟಾಗಿತ್ತು. ಕ್ಯೊರಾಲಾ ಸಹೋದರರ ಆಳ್ವಿಕೆಯ ಅನುಭವವೂ ನೇಪಾಲಕ್ಕೆ ಸಾಕಾಗಿ ಹೋಗಿತ್ತು. ಕೆಲವು ಕಮ್ಯೂನಿಸ್ಟ್ ಮುಖಂಡರಂತೂ ಚೈನಾಕ್ಕೆ ಹೋಗಿ ಬರಲಾರಂಭಿಸಿದ್ದರು. ಇಂತಹ ಕೆಲವಾರು ಕಾರಣಗಳಿಂದಾಗಿ ಪ್ರತಿನಿಧಿ ಸಭೆಯನ್ನು ಸ್ಥಗಿತಗೊಳಿಸಬೇಕಾಯಿತಲ್ಲದೆ ಕೆಲವು ರಾಜಕೀಯ ಮುಖಂಡರನ್ನೂ ಕಾರಾಗೃಹಕ್ಕೆ ಕಳುಹಿಸಬೇಕಾಗಿ ಬಂತು. ಹಾಗಿದ್ದರೂ ಕ್ಯೊರಾಲಾ ಸಚಿವ ಸಂಪುಟದಲ್ಲಿದ್ದ ಕೆಲವು ಮಂತ್ರಿ

(೯ನೇ ಪುಟ ನೋಡಿರಿ)

**ಪುತ್ತೂರು ಡಿ. ಮುನ್ಸೀಫ ಕೋರ್ಟಿನಲ್ಲಿ**

R. C. O. P. 16/62

V. K ಸುಲೇಮಾನ್ — ಅರ್ಜಿದಾರ

ಎದ್ರಿ

M. ಮಂಜುನಾಥ ಆಚಾರಿ— ವೆಂಕಟ್ರಮಣ ಆಚಾರಿ ಮಗ- ಪುತ್ತೂರು ಕಸಬಾ ಪಾಂಗಳ್ಯಾ Also residing at c/o Chandrayya Achary, Gold Smith, Jain Road, Veerarajapet.—ಎದ್ರಿದಾರ.

ಅರ್ಜಿದಾರನ ಹಕ್ಕಿನ ಬಾಬ್ತು ನೀವು ಬಾಡಿಗೆಗೆ ಅನುಭವಿಸುತ್ತಿರುವ ಮನೆಯ ಬಾಡಿಗೆ ಬಾಕಿಯಿರುವದ್ರಿಂದಲೂ ಅರ್ಜಿಯಲ್ಲಿ ತೋರುವ ಇತರ ಕಾರಣಗಳಿಂದಲೂ ನಿಮ್ಮನ್ನು ಸದ್ರಿ ಮನೆಯಿಂದ ಹೊರಪಡಿಸಿ ಸ್ವಾಧೀನ ಕೊಡಿಸಬೇಕಾಗಿ ಮಾಡಿದ ಮೇಲಿನ ಅರ್ಜಿಯು ತಾ. 4-4-63ಕ್ಕೆ ಇರುವದ್ರಿಂದ ನೀವು ಆ ದಿನ ಈ ಕೋರ್ಟಿನ ಮುಂದೆ ಹಾಜರಾಗಿ ಉಜರಿಸಿಕೊಳ್ಳದಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

ಕೋರ್ಟಿನ ಹುಕುಂ ಪ್ರಕಾರ,

Sripathi Rao B.,
Advocate for Petr.

**ಕುಮಾರಿ ಬಿಲ್ಲೆಗಳು**

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-

**P. Devee & Co.** (N. J.) Calcutta—40

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್

ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

**TALES OF IND**

**ಕಥಾವಳಿಯ ಕನ್ನಡ ಅನುವಾದ**

# ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫೩ ಕಥೆಗಳು ಬೆಲೆ ರೂ. 1—12—0

ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

# ನವಯುಗ

**ರಾಷ್ಟ್ರೀಯ ವಾರಪತ್ರಿಕೆ**

**ಉಡುಪಿ**

**ಜಾಹೀರಾತು ದರಗಳು:**

ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿ ಮೀಟರಿಗೆ 1-00

ಅನಿಯಮಿತ (ಕೆಜುವಲ್)
ಕಲಂ ಸೆಂಟಿ ಮೀಟರಿಗೆ 1-50

**ಚಂದಾ:**

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು.

# ಅರ್ಥವತ್ವಾರ್ತೆಗಳು

ಸೆರೆಕುಡಿದು ಆ ಮತ್ತಿನಲ್ಲಿ ರೈಲ್ವೇ ಸ್ಟೇಶನಿಗೆ ಹೋಗಿ ರೈಲಿನ ಮಹಿಳಾ ಕಂಪಾರ್ಟ್‌ಮೆಂಟಿಗೆ ನುಗ್ಗಿ ಗಲಾಟೆ ಮಾಡಿದನೆಂಬ ಆರೋಪಕ್ಕಾಗಿ ಒಬ್ಬ ಪೋಲೀಸನನ್ನು ಬಂಧಿಸಿದ್ದಾರಂತೆ! ಅಧಿಕಾರಿಗಳೇ ಕುಡಿಯುತ್ತಾರೆಂದ ಮೇಲೆ ಜನ ಸಾಮಾನ್ಯರು ಕುಡಿಯುವುದನ್ನು ನಿಲ್ಲಿಸಬೇಕಿದ್ದರೆ ಅದಕ್ಕಾಗಿ ಯಂತ್ರಗಳೇ ತಯಾರಾಗಬೇಕಾಗುತ್ತದೋ ಏನೋ?

o o o o

ಚಿನ್ನ ನಿಯಂತ್ರಣಾ ಕಾನೂನನ್ನು ಸರಕಾರವು ಜ್ಯಾರಿಗೆ ತಂದದ್ದರಿಂದ ಅಕ್ಕಸಾಲಿಗರಿಗೆ ಸ್ವಲ್ಪ ಕಷ್ಟವಾಗಿ ಪರಿಣಮಿಸಿದೆ. ಆದರೆ ಜನರಿಗೆ ಸ್ವಲ್ಪ ಬೇಸರವಾದರೂ ಹದಿನಾಲ್ಕು ಕ್ಯಾರೇಟ್‌ನಿಂದ ತಯಾರಾದ ಚಿನ್ನಾಭರಣಗಳನ್ನು ಮಾಡಿಯಾದರೂ ಧರಿಸಲು ಸಾಧ್ಯವಿದೆ. ಆದರೆ ಪಾನನಿರೋಧ ಕಾನೂನನ್ನು ಸಂಪೂರ್ಣ ಜ್ಯಾರಿಗೊಳಿಸಿದರೆ ಪಾಟೀಲ್ ಪ್ರಿಯರಿಗೆ ಕಾಫಿ ಕುಡಿಯುವುದರಿಂದಲೇ ತೃಪ್ತಿಯಾದೀತೇ?

o o o o

ಚಿನ್ನವನ್ನು ಮಣ್ಣಿನ ಅಡಿಯಲ್ಲಿ ಅಡಗಿಸಿಟ್ಟಿದ್ದರೂ ಸಹ ಕಂಡು ಹಿಡಿಯುವ ಯಂತ್ರವನ್ನು ತಯಾರಿಸಿದ್ದಾರಂತೆ! ಆದರೆ ಮಣ್ಣಿನ ಅಡಿಯಲ್ಲಿ ಅಡಗಿಸಿ ಹುಗಿದಿಟ್ಟಿರುವ ಶರಾಬಿನ ಬಾಟ್ಲಿಗಳನ್ನು ಪತ್ತೆ ಹಚ್ಚುವ ಯಂತ್ರಗಳನ್ನು ತಯಾರಿಸಲು ವಿಜ್ಞಾನಿಗಳು ಹೊರಡದಿರುವುದು ಆಶ್ಚರ್ಯ! ಕಳ್ಳ ಶರಾಬಿನ ಭಟ್ಟಿಗಳನ್ನು ಪತ್ತೆಮಾಡಿ ತೋರಿಸುವ ಯಂತ್ರಗಳನ್ನು ತಯಾರು ಮಾಡುತ್ತಿದ್ದರೆ ಪ್ರೊಹಿಬಿಷನ್ ಅಧಿಕಾರಿಗಳ ಅಂಗಿಯ ಕಿಸೆ ಸ್ವಲ್ಪ ಸಣ್ಣದು ಮಾಡಲು ಸಾಧ್ಯವಿತ್ತೋ ಏನೋ?

o o o o

ಕೇಂದ್ರ ಸರಕಾರವು ಮನರಂಜಕ ವಸ್ತುಗಳ ಮೇಲೆ ಅಧಿಕ ತೆರಿಗೆಗಳನ್ನು ಹೊರಿಸಿದರೆ ಸರಕಾರಕ್ಕೆ ಹೆಚ್ಚಿನ ಲಾಭವಾಗದೆಂದು ಮನಗಂಡು ಬೆಂಕಿಪೆಟ್ಟಿಗೆ ಎಣ್ಣೆ, ಬೆಲ್ಲ, ಸಾಬೂನ್, ಕಾಗದ, ಥೀಸೇಲು, ಪೆಟ್ರೋಲು ಮೊದಲಾದ ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆಯ ಮೇಲೆ ಪುನಃ ತೆರಿಗೆಗಳನ್ನು ಹೊರಿಸಿ ಜನಸಾಮಾನ್ಯರಿಗೆ ಆಗುವ ಕಷ್ಟನಷ್ಟಗಳ ಕಡೆಗೆ ಗಮನ ಕೊಡದೆ ಇನ್ನೂ ಯಾವ ವಸ್ತುಗಳಿಗೆ ಯಾವ ರೀತಿಯಲ್ಲಿ ಅಧಿಕ ಭಾರ, ಹೆಚ್ಚಿನ ಚಾರ್ಜು ಹೊರಿಸಬಹುದೆಂದು ಆಲೋಚಿಸುವ ಬದಲು ಈ ತುರ್ತು ತೆರಿಗೆಗಳನ್ನು ಗಾಳಿ ಮತ್ತು ನೀರಿನ ಮೇಲೆ ಹೊರಿಸಿದರೆಂದಾದರೆ ಸರಕಾರಕ್ಕೆ ಸಿಕ್ಕುವ ಲಾಭವೆಷ್ಟಾದೀತು?

o o o

ದಲವೈಪಟ್ಟಂ ಎಂಬ ಹಳ್ಳಿಯಲ್ಲಿ ವಿಷಮಿಶ್ರಿತ ಆಹಾರ ಸೇವನೆಯಿಂದಾಗಿ ಹತ್ತು ಜನರು ಆಸ್ಪತ್ರೆ ಸೇರಿದರಂತೆ! ವಿಷದಿಂದಾಗುವ ಪರಿಣಾಮಗಳೂ ಭಯಂಕರ; ವಿಷಯಗಳಿಂದಾಗುವ ಪರಿಣಾಮಗಳೂ ಭಯಂಕರ! ಆದ್ದರಿಂದ ವಿಷಕ್ಕೂ ವಿಷಯಗಳಿಗೂ ವಿಶೇಷ ಅಂತರವೇನೂ ಇಲ್ಲವಷ್ಟೇ?

o o o

ಚೀಣೀಯರನ್ನು ಅಟ್ಟಲು ಯಾವ ತ್ಯಾಗಕ್ಕೂ ಸಿದ್ಧರಿದ್ದೇವೆಯೆಂಬು ವ್ಯಾಪಾರಿಗಳ ಪರವಾಗಿ "ಶ್ರೀ ಬಿರ್ಲಾ" ಅವರು ಆಶ್ವಾಸನೆ ನೀಡಿದ್ದಾರಂತೆ! ಭಾರತ ಚೀಣಾ ಗಡಿ ವಿವಾದವು ಪ್ರಾರಂಭವಾದಂದಿನಿಂದಲೇ ವ್ಯಾಪಾರಸ್ಥರು ಹತ್ತು ನಯೇಪೈಸೆ ಇರುವ ವಸ್ತುವಿಗೆ ಇಪ್ಪತ್ತು ನಯೇಪೈಸೆಯಂತೆ ಬೆಲೆ ಏರಿಸಿ ಚೀಣೀಯರನ್ನು ಅಟ್ಟಲು ಮಾಡಿದ ತ್ಯಾಗವು ಪ್ರತಿಯೊಬ್ಬನಿಗೂ ತಿಳಿಯದಿದ್ದೀತೇ?

o o o

ಮಾಜಿ ರಕ್ಷಣಾ ಮಂತ್ರಿಯಾದ ಶ್ರೀ ಕೃಷ್ಣಮೆನನ್ನರ ಕಾರಿಗೆ ಇಟ್ಟಿಗೆ ಚೂರು (ಕಲ್ಲು)ಗಳನ್ನು ಬಿಸಾಡಿದರಂತೆ! ದೇವರ ದಯೆಯಿಂದ ಶ್ರೀ ಕೃಷ್ಣಮೆನನ್ನರಿಗೆ ಏನೂ ಅಪಾಯವಾಗದೆ ಅಲ್ಲಿ ಹಾಜರಿರುತ್ತಿದ್ದ ಅಡಿಶನಲ್ ಜಲ್ಲಾ ಮೆಜಿಸ್ಟ್ರೇಟರಾದ ಶ್ರೀ ಗಿರೀಶ ಚಂದ್ರರಿಗೆ ತಾಗಿತ್ತಂತೆ! ಏನಾದರೂ ವಿಧಿಲಿಖಿತವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿದೆಯೇ?

o o o

ಕೆಲ ನೆರೆ ರಾಷ್ಟ್ರಗಳು ನಮ್ಮ ಮೇಲೆ ಕಣ್ಣಿಟ್ಟಿವೆ ದೀರ್ಘ ಹೋರಾಟದ ಸಿದ್ಧತೆ ಬೇಕೆಂದೆನ್ನುತ್ತಾರೆ ರಕ್ಷಣಾ ಮಂತ್ರಿ ಶ್ರೀ ವೈ. ಬಿ. ಚವ್ಹಾಣ್; ಆದರೆ ಈ ಮಾತುಗಳನ್ನು ಜನಸಾಮಾನ್ಯರಿಗೆನ್ನುವ ಬದಲು ಅಧಿಕಾರಿಗಳಿಗೆನ್ನುತ್ತಿದ್ದರೆ ಸ್ವಲ್ಪ ಹೆಚ್ಚಿನ ಪ್ರಯೋಜನವಿತ್ತೋ ಏನೋ! ಆದರೆ ಶ್ರೀಯುತರ ಮಾತು ಕಿವುಡರ ಮುಂದೆ ತಮಟೆ ಬಾರಿಸಿದಂತಾಗಬಾರದಷ್ಟೇ?

o o o

ಜನರಿಗೆ ಆ ಮರಣಾಂತರ ಪ್ರಿಯ ವಸ್ತುಗಳೆಂದರೆ ಹೆಣ್ಣು, ಹೊನ್ನು, ಮಣ್ಣು ಅದರಲ್ಲಿ ಹೊನ್ನಿನ ಮೇಲೆ ಜನರಿಗಿರುವ ಪ್ರೇಮ ಚಿನ್ನ ನಿಯಂತ್ರಣ ಕಾನೂನಿನಿಂದಾಗಿ ಕಡಿಮೆಯಾಗುತ್ತದೆ. ಈ ತುರ್ತು ಪರಿಸ್ಥಿತಿಯ ಅಧಿಕ ತೆರಿಗೆಗಳಿಂದಾಗಿ ಜನರಿಗೆ ಮಣ್ಣಿನ ಮೇಲೆ ಇರುವ ಪ್ರೇಮವೂ ಕಡಿಮೆಯಾಗುವ ಸಂದರ್ಭ ಇದೆಯಷ್ಟೇ! ಕಡೆಯದಾಗಿ ಉಳಿದ ವಸ್ತುವೆಂದರೆ ಹೆಣ್ಣು ಮಾತ್ರ ಹೆಣ್ಣಿನಲ್ಲಿರುವ ಮೋಹವು ಆ ಮರಣಾಂತವೂ ನಿಲ್ಲುವದಷ್ಟೇ? ಸ್ತ್ರೀಯರಿಗೆ ಮೋಹದ ವಸ್ತುವೆಂದರೆ ಚಿನ್ನ! ಈಗಿನ ಹದಿನಾಲ್ಕು ಕ್ಯಾರೇಟ್‌ನಿಂದಾಗಿ ಅದರಲ್ಲಿರುವ ಮೋಹವು ಕಡಿಮೆಯಾಗುತ್ತಾ ಬರುತ್ತದೆ. ಆದರೆ ಮಹಿಳೆಯರಿಗೆ ಆಮರಣಾಂತರವೂ ಮೋಹದ ವಸ್ತು ಯಾವುದು?

—ವಾಣೀಶರಣ, ಏತಡ್ಕ.


ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 228/1961 R. I. A. 1976/62

ಪದ್ಮಾವತಿ ಅಮ್ಮ— ವಾದಿ ಅರ್ಜಿದಾರಳು

ಅಂತಮ್ಮ ಕೂಡಾ— ಪ್ರತಿವಾದಿರು ಎದ್ರಿರು

8ನೆ ಪ್ರತಿವಾದಿ ಜಗತ್ಪಾಲ ಭಂಡಾರಿ, ಅಂತಮ್ಮನ ಮಗಳು ಮೃತ ಗುಣವತಿಯ ಮಗ— ಬೆಳ್ತಂಗಡಿ ತಾಲ್ಕು ಬೆಳಾಲ ಗ್ರಾಮದ ಇರಂತಾರು ಎಂಬಲ್ಲಿ—Post—ಬೆಳ್ತಂಗಡಿ-ಎದ್ರಿ

ಪ್ರಿಲಿಮಿನೆರಿ ಡಿಕ್ರಿಗನುಸಾರವಾಗಿ ದಾವಾ ಆಸ್ತಿ ಪಾಂಟದಿಂದ ಲೈವಜು ಹೊಂದುವಂತೆ ಫ್ಯಾನಲ ಡಿಕ್ರಿ ಕೊಡಿಸಬೇಕಾಗಿ ಮಾಡಿದ ಅರ್ಜಿಯು ನೋಟೀಸಿನ ಖ್ಯಾದಿ ತಾ. 5-4-1963ಕ್ಕೆ ಇಟ್ಟಿರುವದರಿಂದ ಅದಕ್ಕೆ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ದಿನ ಈ ಕೋರ್ಟಿನ ಮುಂದೆ 11 ಘಂಟೆಗೆ ಹಾಜ್ರಾಗಿ ಬರಹ ಮೂಲಕ ಉದಹರಿಸತಕ್ಕದ್ದು. ತಪ್ಪಿದರೆ ಮುಂದಿನ ತಕ್ಕಿಯಿಂದ ಮುಂದರಿಸಲಾದೀತು ಎಂತ ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(*Sd*) B. Ramachandra Rao,
M. A., B. L.
Pleader for Pltf.

ಪುತ್ತೂರು, 22—3—63.


## ನವಯುಗ

### ವಿನಂತಿ

ಕನ್ನಡದಲ್ಲಿ ವಾರಪತ್ರಿಕೆಗಳೇ ಇಲ್ಲದ ಆ ಕಾಲದಲ್ಲಿ ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಪಸರಿಸಿ ನವಯುಗದ ಸಂದೇಶವನ್ನೂ ಅವರೆಲ್ಲರಿಗೆ ತಲಪಿಸಿ ರಾಷ್ಟ್ರೋದ್ಧಾರಕ್ಕಾಗಿ ಕಳೆದ ೪೨ ವರ್ಷಗಳಿಂದಲೂ ದುಡಿಯುತ್ತಿರುವ ಪತ್ರಿಕೆ ನವಯುಗ. ಕಾಲಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ, ಜನಮನೋರಂಜಕವಾದ ವಿಷಯಗಳಿಂದಲೂ ವಿಷಯ ಪರಿಪ್ಲುತ ಲೇಖನಾಗಿಗಳಿಂದಲೂ ಆಡಕವಾಗಿದ್ದು ಪ್ರತಿವಾರವೂ ನಿಶ್ಚಿತ ದಿನದಂದು ಪ್ರಕಟವಾಗಿ ಚಂದಾದಾರರ ಕೈ ತಪ್ಪದೆ ಸೇರುತ್ತದೆ.

ಪತ್ರಿಕೆಗಳು ಸ್ವಾವಲಂಬಿಯಾಗಬೇಕಾದರೆ, ಚಂದಾದಾರರ ಸಂಖ್ಯೆ ಹೆಚ್ಚಿರಬೇಕಲ್ಲದೇ, ಇವರೆಲ್ಲರೂ ತಮ್ಮ ಚಂದಾಹಣವನ್ನು ಸಕಾಲದಲ್ಲಿ ರವಾನಿಸುತ್ತಿರಬೇಕು. ಪತ್ರಿಕೋದ್ಯಮವೇ ಕಷ್ಟಮಯವಾಗಿ ಪರಿಣಮಿಸುತ್ತಿರುವ ಈ ಸಮಯದಲ್ಲಿ ಚಂದಾದಾರರೆಲ್ಲರೂ ತಮ್ಮ ಬಾಕಿ ಚಂದಾವನ್ನು ಈ ಕೂಡಲೇ ಮನಿಆರ್ಡರ್ ಮೂಲಕವಾಗಲಿ, 'ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್'ನ ಯಾವ ಶಾಖೆಯಲ್ಲಾದರೂ ನವಯುಗದ ಖಾತೆಗೆ ತುಂಬುವುದರ ಮೂಲಕವಾಗಲಿ ಕಳಿಸಿ ನೆರವಾಗಬೇಕಾಗಿ ವಿನಂತಿ

ಹಾಗೆಯೇ ತಮ್ಮ ಚಂದಾವನ್ನು ಕ್ರಮವಾಗಿ ಮುಂದುವರಿಸಿಕೊಂಡು ಹೋಗುವುದಲ್ಲದೆ ತಮ್ಮ ಮಿತ್ರರು, ಬಂಧುಗಳಲ್ಲಿಯೂ ನವಯುಗದ ವಿಶಾಲವಾದ ರಾಷ್ಟ್ರೀಯ ಗುರಿಯನ್ನು ವಿವರಿಸಿ ಅವರನ್ನೂ ಚಂದಾದಾರರಾಗುವಂತೆ ಪ್ರೇರೇಪಿಸಿ ಈ ಪ್ರೇರಣೆಯು ಸಫಲವಾಗುವಂತೆ ನೋಡಬೇಕಾಗಿ ಕೋರುತ್ತೇವೆ. ನವಯುಗವು ನಿಮ್ಮದೇ ಪತ್ರಿಕೆಯಾದುದರಿಂದ ಅದರಲ್ಲಿ ಪ್ರಕಟವಾಗುವ ಲೇಖನಾದಿಗಳ ಬಗ್ಗೆ ಆಗಾಗ್ಗೆ ತಮ್ಮ ಅಭಿಪ್ರಾಯಗಳನ್ನೂ ಸಲಹೆ ಸೂಚನೆಗಳನ್ನೂ ಕೊಟ್ಟರೆ, ತಕ್ಕ ಕಾರ್ಯಕ್ರಮ ಕೈಗೊಳ್ಳಲು ಅನುಕೂಲವಾಗುವುದು.

ಚಂದಾದಾರರೇ ಒಂದು ಪತ್ರಿಕೆಯ ನಿಜವಾದ ಆಸ್ತಿ. ಚಂದಾದಾರರು ಕ್ರಮವಾಗಿ ತಮ್ಮ ಹಣವನ್ನು ತೆರುತ್ತ ಬಂದರೆ, ಇವರ ಸಂಖ್ಯೆಯು ಹೆಚ್ಚುತ್ತ ಬಂದರೆ, ಆಗ, ಪತ್ರಿಕೆಯೂ ನಿರ್ಭೀತವಾಗಿದ್ದು, ಸ್ವತಂತ್ರವಾಗಿದ್ದು ಬೆಳೆದು ಬರಲು ಅನುಕೂಲವಾಗುವುದು. ತಾವು ನಮ್ಮ ಈ ನಮ್ರ ವಿನಂತಿಯನ್ನು ಸಹಸಾ ಮನ್ನಿಸಿ ತಮ್ಮ ಬಾಕಿ ಚಂದಾಹಣವನ್ನು ಇನ್ನೂ ತಡಮಾಡದೆ ಕೂಡಲೇ ಕಳುಹಿಸಿ ಕೊಡಬೇಕಾಗಿ ವಿನಂತಿಸುತ್ತೇವೆ.

ಇಂತು ತಮ್ಮ ವಿಶ್ವಾಸಿ,
ಕೆ. ಹೊನ್ನಯ್ಯ ಶೆಟ್ಟಿ,
ವ್ಯವಸ್ಥಾಪಕ—ಸಂಚಾಲಕ.

ವಿ. ಸೂ — ಸಕಾಲದಲ್ಲಿ ಚಂದಾ ಬಾರದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಯನ್ನು ಸ್ವೀಕರಿಸುವಂತೆ ವಿನಂತಿ.


**25,000**

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ

ಹೊಸಕೆರೆ ಚಿದಂಬರಯ್ಯನವರ

**ಗೀತೆಯ ಕೈಗನ್ನಡಿ**

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ,

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

**ಋಣ ಯಾತ್ರೆ**

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ

**ಭಾವಾರ್ಚನೆ**

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ ೪೨ | ಉಡುಪಿ ೨೮-೩-೧೯೬೩ | ವಾರ ೨೯ |
|---|---|---|

## ನ್ಯಾಯದಾನವೆಂತು?

ಕೇಂದ್ರ ನೀರಾವರಿ ಮಂತ್ರಿ ಹಫೀಜ್ ಮಹಮ್ಮದ ಇಬ್ರಾಹಿಂರವರು ಲೋಕಸಭೆಯಲ್ಲಿ ನದೀ ಮಂಡಳಿಗಳ ವಿಚಾರವಾಗಿ ವಿವರವಾದ ಹೇಳಿಕೆ ನೀಡಿದರು. ಇದರಲ್ಲಿ ಅವರು ಶತಶತಮಾನಗಳಿಂದ ನದೀನೀರಿನ ಉಪಯೋಗದಲ್ಲಿ ಯಾವ ವಿವಾದಗಳೂ ಹುಟ್ಟಿಕೊಳ್ಳದೆ ಇರುವಾಗ, ಇನ್ನು ಮುಂದಕ್ಕೂ ನಿರ್ವಿವಾದವಾಗಿ ಸುವ್ಯವಸ್ಥೆಯಿಂದ ವ್ಯವಹಾರಗಳು ನಡೆಯಬೇಕೆಂದು ಅವರು ಹೇಳುತ್ತ ಗೋದಾವರಿ ಮತ್ತು ಕೃಷ್ಣಾ ನದೀ ನೀರಿನ ಸಂಬಂಧದ ವಿವಾದವನ್ನು ಆಮೂಲವಾಗಿ ವಿವರಿಸಿದರು. ೧೯೫೧ರಲ್ಲಿ ನಡೆದ ಒಡಂಬಡಿಕೆ, ಆ ಮೇಲೆ ನಡೆದ ರಾಜಕೀಯ ಸ್ಥಿತ್ಯಂತರಗಳು ಮತ್ತು ತತ್ಪರಿಣಾಮವಾಗಿ ಉಲ್ಬಣಾವಸ್ಥೆಗೇರಿದ ನೀರಿನ ವಿವಾದಗಳನ್ನು ಅವರು ಪ್ರಸ್ತಾಪಿಸುತ್ತ ಎಲ್ಲ ರಾಜ್ಯಗಳೂ ಸೌಹಾರ್ದಮಯ ವಾತಾವರಣದಲ್ಲಿ ಈ ವಿವಾದವನ್ನು ಬಗೆಹರಿಸಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಅಪೇಕ್ಷಣೀಯವೆಂದೂ, ರಾಷ್ಟ್ರವು ಗಂಡಾಂತರವನ್ನೆದುರಿಸುತ್ತಿರುವ ಈ ಸಂದರ್ಭದಲ್ಲಿ ಸಂಯುಕ್ತವಾಗಿ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಗೊಳಿಸುವುದು ಅತ್ಯಗತ್ಯವೆಂದೂ ಅವರು ಹೇಳಿದರು.

ಮಾನ್ಯ ಮಂತ್ರಿವರ್ಯರ ಆಶಯವು ಯಥಾರ್ಥವಾದುದೆಂದು ಯಾರೂ ಹೇಳಬಹುದು. ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ಮಾತ್ರವಲ್ಲ, ದೇಶದೇಶಗಳ ನಡುವಣ ವಿವಾದಗಳು ಶಾಂತ ರೀತಿಯಲ್ಲಿಯೇ ಮಿತ್ರತ್ವದ ತಳಹದಿಯಲ್ಲಿಯೇ ಬಗೆಹರಿಯಬೇಕೆಂದು ಬಯಸುತ್ತಿರುವ ನಾವು, ರಾಜ್ಯರಾಜ್ಯಗಳು ಹೊಡೆದಾಡುವುದನ್ನು ಸಹಿಸುವುದು ಸಾಧ್ಯವಿಲ್ಲ. ಮಹಾರಾಷ್ಟ್ರ, ಮಧ್ಯ ಪ್ರದೇಶ, ಆಂಧ್ರಪ್ರದೇಶ, ಮದ್ರಾಸು, ಕರ್ನಾಟಕ, ಒರಿಸ್ಸಾ—ಈ ಆರು ರಾಜ್ಯಗಳಿಗೆ ಗೋದಾವರೀ-ಕೃಷ್ಣಾ ನದೀ ನೀರಿನ ಪ್ರಶ್ನೆಯು ಸಂಬಂಧಿಸಿದೆ ಇಂದಿನ ರಾಜ್ಯಕೀಯ ಸ್ಥಿತ್ಯಂತರಗಳಿಂದ ಮೊದಲಾದ ಒಡಂಬಡಿಕೆಯನ್ನು ಪುನರ್ವಿಮರ್ಶಿಸುವುದು ಅತ್ಯಗತ್ಯವಿದೆ. ಆದರೆ, ಹೀಗೆ ನೀರಿನ ಹಂಚಿಕೆಯನ್ನು ಮರುಮಾಡುವಾಗ ಎಲ್ಲ ರಾಜ್ಯಗಳಿಗೂ ನ್ಯಾಯ ದೊರಕಿಸುವ ಪ್ರಯತ್ನ ಮಾಡಬೇಕು. ಯಾವುದೇ ರಾಜ್ಯಕ್ಕೆ ಯಾವ ರೀತಿಯಲ್ಲೂ ಅನ್ಯಾಯವಾಗಗೊಡಬಾರದು—ಇದು ಮುಖ್ಯ. ಆದರೆ, ಇಂದು ಕೃಷ್ಣಾ ನದೀ ನೀರಿನ ವಿಷಯದಲ್ಲಿ ಕರ್ನಾಟಕ-ಆಂಧ್ರ ಪ್ರದೇಶಗಳ ನಡುವೆ, ಸ್ವಲ್ಪ ಮಟ್ಟಿಗೆ ಮಹಾರಾಷ್ಟ್ರದಲ್ಲಿ ಕೂಡ, ದೊಡ್ಡ ವಿವಾದವೆದ್ದಿದ್ದು ದಿಲ್ಲಿಯ ವರೆಗೂ ಇದರ ಕಾವು ಹರಡಿದೆ. ಅಪರಿಹಾರ್ಯವೋ ಎಂಬಂತೆ ಅದು ತನ್ನ ವಿಶ್ವರೂಪವನ್ನು ತೋರಿಸಿದೆ. ಕೇಂದ್ರಸರಕಾರವಾದರೂ ಈ ಸಂಬಂಧದ ತನ್ನ ನಿರ್ಧಾರವನ್ನು-ಅಥವಾ ನಿರ್ಣಯವನ್ನು ಇಷ್ಟರಲ್ಲಿಯೇ ಹೊರಗೆಡಹಬೇಕಾಗಿದ್ದರೂ, ಅದು ಹಾಗೆ ಮಾಡುವಲ್ಲಿಯೂ ಅಸಮರ್ಥವೆಂದಾಗಿದೆ; ಅಂದರೆ, ಕೇಂದ್ರವಿಂದು ಅಸಹಾಯ ಪರಿಸ್ಥಿತಿಯಲ್ಲಿದೆ. ನ್ಯಾಯದಾನ ಮಾಡಹೋದರೆ, ಅದು ಆಂಧ್ರ ಪ್ರದೇಶದ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ಆದರೆ ಮುಖ್ಯ ಮಂತ್ರಿ ಸಂಜೀವ ರೆಡ್ಡಿಯವರ ವಿರೋಧವನ್ನು ಕಟ್ಟಿಕೊಳ್ಳಲು ಕೇಂದ್ರ ಸರಕಾರವು ಅದೇಕೋ ಅಂಜುವಂತಿದೆ.

ಆಂಧ್ರ ಸರಕಾರವು ಕೈಗೊಂಡ ನೀರಾವರಿ ಮತ್ತು ವಿದ್ಯುದ್ಯೋಜನೆಗಳನ್ನು ಪೂರ್ಣಗೊಳಿಸುವಂತೆ ಕೃಷ್ಣಾ ನದಿಯ ನೀರನ್ನು ಒದಗಿಸುವುದಾದರೆ, ಕರ್ನಾಟಕ ರಾಜ್ಯಕ್ಕೆ ಮಹಾಪರಾಧವೆಸಗಿದಂತಾಗುವುದು. ಆದುದರಿಂದಲೇ ಕೇಂದ್ರವು ತೂಗುಯ್ಯಾಲೆಯಲ್ಲಿ ತೂಗುತ್ತಿದೆ. ಗುಲ್ಹಾಟಿ ಆಯೋಗದ ವರದಿ ಮತ್ತು ಹಫೀಜ ಇಬ್ರಾಹಿಮರ ಮಾತುಕತೆಗಳು ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡುವುದರಲ್ಲಿ ಸಮರ್ಥವಾದರೂ ಒಂದು ನಿರ್ಣಯಕ್ಕೆ ಬರಲು ಅಸಮರ್ಥವಾದವು ಎಂದೇ ಹೇಳಬೇಕಾಗುತ್ತದೆ. ಮನದಲ್ಲಿ ಅಳುಕುತ್ತ ನಿರ್ಣಯವನ್ನು ಹೊರಗೆಡಹಲು ಹಿಂಜರಿಯುವ ಕೇಂದ್ರ ಸರಕಾರದ ಪ್ರವೃತ್ತಿ ಉಚಿತವೆನ್ನುವಂತಿಲ್ಲವಾದರೂ ಅದು ಖಚಿತ ನಿರ್ಣಯವನ್ನು ಘೋಷಿಸದಿರುವುದು ಒಂದು ಬಗೆಯಿಂದ ಸಮರ್ಥನೀಯವೆನ್ನುವುದೂ ನ್ಯಾಯವೇ. ಇಲ್ಲಿ ಯಾವ ರಾಜ್ಯದ ಬೇಡಿಕೆಯು ಎಷ್ಟರ ಮಟ್ಟಿಗೆ ನ್ಯಾಯವೆಂಬುದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರಿಸಿದ್ದರೆ, ಕೇಂದ್ರವು ಕಂಡುಕೊಂಡಿದೆ; ಮತ್ತು ಯಾರ ಬೇಡಿಕೆಯು ಅನ್ಯಾಯದ್ದೆಂದೂ ತಿಳಿದಿದೆ. ತನ್ನ ನಿರ್ಣಯವನ್ನು ರಾಜ್ಯಗಳ ಮೇಲೆ ಹೇರುವುದರಿಂದ ಪ್ರತಿಕೂಲ ಪರಿಣಾಮವಾಗಬಹುದೆಂದು ಕೇಂದ್ರವು ಹೆದರುವುದು ನಿಜವಾದರೆ, ಅದು ಅನ್ಯಾಯದ ಬೇಡಿಕೆಯನ್ನು ಮಂಡಿಸುವವರನ್ನು ಸಮಾಧಾನಪಡಿಸಬೇಕಾಗುತ್ತದೆ. ವಿಭಿನ್ನ ರಾಜ್ಯಗಳಲ್ಲಿ ಹರಿಯುವ ನದೀ ಯೋಜನೆಗಳು ವಿವಾದಗ್ರಸ್ತವಾಗುವುದು ನಿಜವಾದರೂ ಅವನ್ನು ವಿವಾದಕ್ಕೆಡೆ ಇಲ್ಲದಂತೆ ಮುಂದುವರಿಸಿಕೊಂಡು ಹೋಗುವುದೇ ರಾಷ್ಟ್ರೀಯತೆಯ ಸುಮಾರ್ಗ. ಆಂಧ್ರ ಸರಕಾರವು ಇಂದು ತನ್ನ ಒಂದೇ ರಾಜ್ಯದ ಹಿತವನ್ನು ಬಯಸಿ, ಕೃಷ್ಣಾ ನದೀನೀರಿನಲ್ಲಿ ಬಹುಪಾಲನ್ನು ಬೇಡುವುದರಿಂದ ದುರ್ಭಿಕ್ಷಕ್ಕೊಳಗಾಗುವ ಕರ್ನಾಟಕಕ್ಕೆ ಅಪಚಾರವೆಸಗಿದಂತಾಗುವುದು. 'ಇರು, ಇರಗೊಡು'ವೆಂಬ ಕರ್ತವ್ಯದ ಕರೆಯನ್ನು ಅಲ್ಲಗಳೆದು ಆಂಧ್ರ ಸರಕಾರವು ಕನ್ನಡಿಗರ ಅಹಿತ ಬಯಸುವುದಾದರೆ, 'ಇಡಿಯ ಭಾರತವು ಏಕದೇಶ'ವೆಂಬ ಭಾವನೆಯು ಮೂಡುವುದಾದರೂ ಹೇಗೆ? ಹಿಂದೊಮ್ಮೆ ಕಾಂಗ್ರೆಸ್ ಅಧ್ಯಕ್ಷರಾಗಿ, ರಾಷ್ಟ್ರೀಯತೆ— ಸಮಗ್ರತೆ

ವಾಚಕರ ವೇದಿಕೆ

## ನಿವೃತ್ತ ಅಧ್ಯಾಪಕರಿಗೆ ಪೆನ್‌ಶನ್

ಕರ್ನಾಟಕ ರಾಜ್ಯ ಸರಕಾರವು ಮುಂದಿನ ಆರ್ಥಿಕ ವರ್ಷದಿಂದ ಎಲ್ಲ ಶಿಕ್ಷಕರಿಗೂ ಮುಬ್ಬಗೆಯ ಸವಲತ್ತನ್ನು ನೀಡಿದ್ದು ಅದು ಜಂಟಿ-ಜನಹಿತ ಸರಕಾರಕ್ಕೆ ನಿಜವಾಗಿಯೂ ಭೂಷಣ. ಇತ್ತೀಚೆಗೆ ರಾಜ್ಯ ಶಿಕ್ಷಣ ಸಚಿವರು ಮಣಿಪಾಲಕ್ಕೆ ಆಗಮಿಸಿದಾಗ, ಈ ಮೊದಲೇ ನಿವೃತ್ತಿಗೊಂಡು ಈಗ ಜೀವನ್ಮೃತಾವಸ್ಥೆಯಲ್ಲಿರುವ ಕೆಲವೇ ಮಂದಿ ಅಧ್ಯಾಪಕರಿಗೂ ನಿವೃತ್ತಿವೇತನವನ್ನು ಅದೇ ವರ್ಷದಿಂದ ನೀಡಬೇಕೆಂದು ಒಂದು ಸಲಹೆಯನ್ನು ಅವರಿಗೆ ಈಯಲಾಗಿತ್ತು. ಮುಬ್ಬಗೆಯ ಸವಲತ್ತು ವ್ಯವಹೃತವಾಗುವುದಕ್ಕೆ ಮೊದಲೇ ನಿವೃತ್ತಿಹೊಂದಿ, ನಿವೃತಿ ವೇತನವು ದೊರೆಯದೆ ಇಂದೋ ನಾಳೆಯೋ ಸಾಯಲಿಕ್ಕಿರುವ ಎಲ್ಲಾ ಮಟ್ಟದ ಶಿಕ್ಷಕರಿಗೂ ನಿವೃತ್ತಿ ವೇತನವು ದೊರೆಯುವಂತಾದರೆ, ಅದು ಇನ್ನೂ ಜಂಟ-ಪಡೆಯಲಿರುವ ಅಧ್ಯಾಪಕರಿಗೆ ಇದು ಭಾಗ್ಯ—ಸರಕಾರಕ್ಕೆ ನಿಜವಾಗಿಯೂ ಅತಿ ಶ್ಲಾಘ್ಯ. ಧಾರ್ಮಿಕ ಮತ್ತು ಮಾನವತೆಯ ದೃಷ್ಟಿಯಲ್ಲಿ ಇದು ಅಭಿನಂದನೀಯ—ಉಳಿದವರಿಗೆ ಅನುಕರಣೀಯ.

ಈ ಯೋಜನೆಯನ್ನು ವ್ಯವಹಾರಕ್ಕೆ ತರುವುದು ಅವ್ಯವಹಾರ್ಯವೆನ್ನುವಂತಿಲ್ಲ. ಹೇಳಿಕೇಳಿ ಶಿಕ್ಷಕರು ಉಳಿದ ನೌಕರರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದವರು ಕಷ್ಟಮಯ ಜೀವನವನ್ನು ಬದುಕಿದವರು, ಇಂದಿಗಾದರೂ ಒಂದು ಬಗೆಯ ಸ್ಮಶಾನ ಗಂಭೀರಪರಿಗ್ರಹ ಬುದ್ಧಿಯಿಂದ ತಮ್ಮ ಆವಶ್ಯಕತೆಗಳನ್ನು ಕಾಣುತ್ತ ಸಂಕಷ್ಟದಿಂದ ತೊಳಲಾಡುತ್ತಿರುವವರು. ತ್ರಿವಿಧ ಸೌಲಭ್ಯಗಳು ಜ್ಯಾರಿಗೆ ಬರುವುದಕ್ಕೆ ಮೊದಲು ನಿವೃತ್ತರಾಗಿ ಜೀವಂತವಿರುವ ಅಧ್ಯಾಪಕರ ಸಂಖ್ಯೆ ಕಡಿಮೆ. (ಪ್ರಾಥಮಿಕ ಶಿಕ್ಷಕರಿಗೆ ಮದ್ರಾಸು ನಿಯಮದಂತೆ ಪೆನ್‌ಶನ್ ದೊರಕುವುದೆಂದು ಆಶೆ.) ಈ ಸಂಖ್ಯೆ ದಿನದಿಂದ ದಿನಕ್ಕೆ ಕ್ಷಯವಾಗುತ್ತ ಬರುತ್ತಿದೆ ಅವರು ನಿವೃತ್ತರಾಗ ಪಡೆಯುವ ವೇತನವಾದರೂ ಅಲ್ಪ. ಆದುದರಿಂದ ಸರಕಾರಕ್ಕೆ ಈ ನಿವೃತ್ತ ಅಧ್ಯಾಪಕರಿಗೆ ಪೆನ್‌ಶನ್ ಕೊಡಲು ಬೀಳುವ ವೆಚ್ಚವೂ ಅತ್ಯಲ್ಪ. ಈ ವೆಚ್ಚ ದಿನ ದಿನಕ್ಕೆ ಕಡಿಮೆಯಾಗುತ್ತ ಬರುತ್ತದೆ. ಆದುದರಿಂದ ಶಿಕ್ಷಕರ ಬಗೆಗೆ ಗೌರವ ಭಾವನೆಯಿರುವ ಸರಕಾರವು ಈ ಸಲಹೆಯನ್ನು ಗಂಭೀರವಾಗಿ ಪರಿಶೀಲಿಸುವುದು ಅಗತ್ಯವಿದೆ.

—ಓರ್ವ ನಿವೃತ್ತ ಅಧ್ಯಾಪಕ

ಏಕತೆಗಳ ಪಾಠಗಳನ್ನು ಭಾರತೀಯರಿಗಿತ್ತು, ವಿವಾದ ಗ್ರಸ್ತ ವಿಚಾರಗಳಿಗೆ ಸೌಹಾರ್ದಯುತ ಪರಿಹಾರ ಬಯಸುತ್ತಿದ್ದ ಸಂಜೀವ ರೆಡ್ಡಿಯವರು ಇಂದು ತನ್ನಂತೆಯೇ ಪರರನ್ನೂ ಬಗೆದರೆ ವಿವಾದವು ಪರಿಹಾರಗೊಳ್ಳುವುದೆಂಬ ಸಾರ ಕಲಿಯಬೇಕಾದುದು ದುರ್ದೈವದ ಸಂಗತಿ. ಎಲ್ಲ ರೀತಿಯಿಂದ ವಿಚಾರಿಸಿದರೂ ರೆಡ್ಡಿಯವರು ತಮ್ಮ ಬೇಡಿಕೆಯಲ್ಲಿ ಕಡಿತ ಮಾಡಬೇಕಾಗುತ್ತದೆ—ಹೀಗಾಗುವಂತೆ ಕೇಂದ್ರವು ಪ್ರಯುಕ್ತಿಸುವುದು ಅಸಾಧ್ಯವೆ?

## ಇದೆಂತಹ ಚಿನ್ನಾಟ?

ಕರ್ನಾಟಕದ ಶಿಕ್ಷಣ ಮಂತ್ರಿ ಎಸ್. ಆರ್. ಕಂಠಿಯವರು ಶಿಕ್ಷಣ ರಂಗದಲ್ಲಿ ರಾತ್ರಿ ಬೆಳಗಾಗುವುದರೊಳಗೆ ದೊಡ್ಡ ಕ್ರಾಂತಿಯನ್ನೇ ಎಬ್ಬಿಸುವ ಇರಾದೆಯಿಂದಿರುವವರು ಎಂದು ಇತ್ತೀಚಿನ ಅವರ ವರ್ತನೆ ಮತ್ತು ಭಾಷಣಗಳಿಂದ ತೋರಿಬರುತ್ತದೆ. 'ಆಡದೇ ಮಾಡುವನು ರೂಢಿಯೊಳಗುತ್ತಮನು, ಆಡಿ ಮಾಡುವನು ಮಧ್ಯಮನು, ಅಧಮನು ತಾನಾಡಿಯೂ ಮಾಡ' ಎಂಬ ಸರ್ವಜ್ಞ ವಾಕ್ಯವನ್ನವರು ಅವಶ್ಯ ತಿಳಿದುಕೊಳ್ಳಬೇಕೆನಿಸುತ್ತದೆ. ಸರಕಾರಿ ಕಾಲೇಜು ಮತ್ತು ಹೈಸ್ಕೂಲುಗಳನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸುತ್ತೇವೆ. ಎಂಬರ್ಥ ಬರುವಂತೆ ಭಾಷಣ ಒಪ್ಪಿಸುವ ಕಂಠಿಯವರು ಖಾಸಗಿ ಕ್ಷೇತ್ರಕ್ಕೆ ನೀಡುವ ವಿವಿಧ ಸಹಾಯ ಧನಗಳಿಗೆ ತತ್ಕ್ಷಣ ತರುವ ಮಾತನ್ನೂ ಆಡುತ್ತಾರೆ. ಹೈಸ್ಕೂಲುಗಳಿಗೆ ನೀಡುವ ಸಹಾಯ ಧನ ನಿಯಮಗಳನ್ನೆಲ್ಲ ತಿಪ್ಪೆಗೆಸೆದು ಅವರು ಹೊಸ ಹೈಸ್ಕೂಲುಗಳಿಗೆ ಸಹಾಯ ಧನವನ್ನು ಮೂರು ವರ್ಷಗಳ ವರೆಗೆ ನೀಡುವುದಿಲ್ಲವೆಂದು ಕೆಲವು ತಿಂಗಳುಗಳ ಮೊದಲೇ ಘೋಷಿಸಿದ್ದರು; ಶಾಲಾ ಕಟ್ಟಡಗಳಿಗೆ ನೀಡಬಹುದೆಂದು ಇರುವ ಗ್ರಾಂಟನ್ನು ಕೊಡಲಾಗುವುದಿಲ್ಲವೆಂದು ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸಾರಿದ್ದಾರೆ. ಶಾಲಾ ಕಟ್ಟಡಗಳು ಸ್ವಂತದ್ದಾದರೆ, ಅವಕ್ಕೆ ಬಾಡಿಗೆಯನ್ನು ಕೊಡಲಾಗುವುದಿಲ್ಲವೆಂಬ ಆಜ್ಞೆಯನ್ನೀಗ ಸರಕಾರ ಹೊರಡಿಸಿದೆ. ಇದೇ ಬಗೆಯಲ್ಲಿ ಕೊಡಮಾಡುವ ಸಹಾಯವೆಲ್ಲವನ್ನೂ ಒಂದಲ್ಲ ಒಂದು ಬಗೆಯಿಂದ ತಡೆಹಿಡಿಯುವ ಪ್ರಯತ್ನವನ್ನು ನಡೆಸಿ, ಗ್ರಾಂಟ್-ಇನ್-ಏಡನ್ನು ಆಕಾಶ ಕುಸುಮವನ್ನಾಗಿ ಮಾತ್ರವಿರಿಸುವ ಹವಣಿಕೆ ಸರಕಾರದ್ದಿರುವಂತೆ ತೋರುತ್ತದೆ. ಇದೇ ಮಾದರಿಯ ಚಿಂಡಾಟ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲೂ ನಡೆಯುತ್ತಿದೆ. ಇಂತಹ ಚಿನ್ನಾಟದಲ್ಲಿ ಶಿಕ್ಷಣ ರಂಗವು ಪ್ರಗತಿ ಹೊಂದುವುದು ಹೇಗೆ? ಇದನ್ನು ಯಾವ ಹೆಸರಿನಿಂದ ಕರೆಯಬೇಕು?

ಅಖಿಲ ಭಾರತೀಯ ಕೃಷಿ ಉಪಕರಣ ಸ್ಪರ್ಧೆ— ಸುಧಾರಿತ ಕೃಷಿ ಉಪಕರಣಗಳ ಉತ್ಪನ್ನಕ್ಕೆ ಪುಷ್ಟಿ ನೀಡುವ ದೃಷ್ಟಿಯಿಂದ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅಖಿಲ ಭಾರತೀಯ ಕೃಷಿ ಉಪಕರಣ ಸ್ಪರ್ಧೆಯೊಂದನ್ನು ಇತ್ತೀಚೆಗೆ ನಡೆಸಿ, ಅತ್ಯುತ್ತಮ ಉಪಕರಣಗಳಿಗೆ ಚಿನ್ನದ ಪದಕವನ್ನೂ ನಗದು ಬಹುಮಾನಗಳನ್ನೂ ಕೊಡಬೇಕೆಂದು ನಿರ್ಧರಿಸಿತು. ಪ್ರಾಣಿಗಳು ಎಳೆಯುವ ಉಪಕರಣಗಳಾವುವೂ ಸ್ಪರ್ಧೆಯ ಮಟ್ಟಕ್ಕೆ ಬರಲಿಲ್ಲವಾದ್ದರಿಂದ ೩,೦೦೦ ರೂಪಾಯಿಗಳ ನಗದು ಬಹುಮಾನವನ್ನೂ ಚಿನ್ನದ ಪದಕವನ್ನೂ ಯಾರಿಗೂ ಕೊಡಲಾಗಲಿಲ್ಲ. ಎರಡನೆ ಬಹುಮಾನವಾಗಿ ಉತ್ತರ ಪ್ರದೇಶದ ಲಕ್ನೋವಿನ ಸರಕಾರಿ ಕೃಷಿ ಕಾರ್ಯಾಗಾರದಲ್ಲಿ ಸಿದ್ಧಗೊಂಡ "ಸಿಂಗ್ ಕೈ ಸಲಿಕೆ"ಗೆ ಎರಡು ಸಾವಿರ ರೂಪಾಯಿಗಳನ್ನು ನೀಡಲಾಯಿತು.

"ಸಿಂಗ್ ಕೈ ಸಲಿಕೆ" ಮೂರು ಮುಳ್ಳುಗಳುಳ್ಳ ಒಂದು ಸಲಿಕೆ. ಈ ಮೂರುಮುಳ್ಳುಗಳನ್ನು ಅರ್ಧ ಅಂಗುಲ ಚದರವುಳ್ಳ ಕಬ್ಬಿಣದಿಂದ ಮಾಡಿ ತುದಿಯನ್ನು ಮೊಂಡುಮಾಡಲಾಗಿದೆ. ಈ ಸಲಿಕೆಗೆ ಉದ್ದನಾದ ಹಿಡಿ ಇರುವುದರಿಂದ ನಿಂತುಕೊಂಡೇ ಕೆಲಸ ಮಾಡಲು ಅನುಕೂಲವಿದೆ. ಈ ಸರಳ ರೀತಿಯ ಸಲಿಕೆ ಈಗಾಗಲೇ ಕೃಷಿ ಕ್ಷೇತ್ರದಲ್ಲಿ ಬಹಳ ಜನಪ್ರಿಯವಾಗಿದೆ.

## ಅಲ್ಲಲ್ಲಿಯ ಸುದ್ದಿ ಸಾರ

**ಆಯುರ್ವೇದ ಸಮ್ಮೇಲನ**— ಇಪ್ಪನಾಲ್ಕನೇಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಲನವು ಎಪ್ರಿಲ್ ತಾ. 20 ಮತ್ತು 21ನೇ ಶನಿವಾರ ಮತ್ತು ಭಾನುವಾರಗಳಲ್ಲಿ ಮಂಗಳೂರಿನ ಉರ್ವ ಶಾಖೆಯ ಕೆನರಾ ಹೈಸ್ಕೂಲಿನಲ್ಲಿ ಭಿಷಗ್ವರ ಪದ್ಮ ಶ್ರೀ ಡಾ| ಎಂ. ಸಿ. ಮೋದಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗುವುದು ವೈದ್ಯರೂ ಮಹಾಜನರೂ ಅದರಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಬೇಕಾಗಿ ಪ್ರಧಾನ ಕಾರ್ಯದರ್ಶಿ ಡಾ| ಎನ್. ವಿ. ಉಪಾಧ್ಯಾಯರು ವಿನಂತಿಸುತ್ತಾರೆ.

**ಬೆಂಗಳೂರಿಗೆ ನಿಯೋಗ**— ಕಳೆದ ಸಾಲು, ಸರಕಾರವು ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಶಾಲೆಗಳಿಗೆ ಚಾಲ್ತಿ ವರ್ಷದಲ್ಲಿ ಕೊಡಬೇಕಾಗಿದ್ದ ಮೈಂಟೆನೆನ್ಸ್ ಗ್ರಾಂಟಿನಲ್ಲಿ ಬರೇ ⅓ ಅಂಶ ಮಾತ್ರ ಕೊಟ್ಟಿರುವ ದೆಸೆಯಿಂದ ಶಾಲೆಗಳನ್ನು ನಡಿಸುವರೆ ಸಾಧ್ಯವಿಲ್ಲದೆ ಮುಚ್ಚಬೇಕಾದೀತೆಂಬ ವಿಚಾರದಲ್ಲಿ ಜಿಲ್ಲಾ ಸಂಘದ ಮಹಾಸಭೆಯಲ್ಲಿ ಮಾಡಿದ ನಿರ್ಣಯದ ಮೇರೆಗೆ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ. ಪೈಯವರ ನೇತೃತ್ವದಲ್ಲಿ ಶ್ರೀಗಳಾದ ಕುರುಕಾಲು ಗಣಪಯ್ಯ ಸೆಟ್ಟಿ, ಕೋಟಿಕಾರ್ ರಮೇಶರಾವ್, ರೆ. ಫಾ. ಬಿ. ಎಸ್. ಡಿಸೋಜ ಕೂಡಾ ತಾ. 11-3.63ರಲ್ಲಿ ಬೆಂಗಳೂರಿಗೆ ನಿಯೋಗ ಹೋಗಿ ಒಂದು ವಾರವಿದ್ದು ಮಾನ್ಯ ಸ್ಪೀಕರ್, ಆರೋಗ್ಯ ಮಂತ್ರಿ ಮತ್ತು ಜಿಲ್ಲೆಯ ಹಲವು M. L. A. ವ, M. L. C. ಗಳ ಸಹಕಾರವನ್ನು ಪಡೆದು ಅವರ ಮುಖಾಂತ್ರ ಮಾನ್ಯ ಮುಖ್ಯ ಮಂತ್ರಿ, ವಿದ್ಯಾ ಮಂತ್ರಿ, ವಿದ್ಯಾ ಸೆಕ್ರೆಟರಿ ಡೈರೆಕ್ಟರ್, ಜ್ಯೋಂಟ್ ಡೈರೆಕ್ಟರ್ ವಗೈರೆ ಅಧಿಕಾರಿಗಳನ್ನು ಭೇಟಿಯಾಗಿ ಪರಿಸ್ಥಿತಿಯನ್ನು ನಿವೇದಿಸಿಕೊಳ್ಳಲು ಮೇಲ್ಕಂಡ ಅಧಿಕಾರಿಗಳಿಂದ ಬರುವ ಎಪ್ರಿಲ್ ತಿಂಗಳಲ್ಲಿ ಪರಿಹಾರಕರವಾದ ಆಜ್ಞೆಯನ್ನು ನೀಡುತ್ತೇವಾಗಿ ಆಶಾದಾಯಕ ಉತ್ತರವು ದೊರೆತಿರುತ್ತದೆ. ಮಾತ್ರವಲ್ಲದೆ ಈ ವಿಷಯದಲ್ಲಿ ಕೊನೆತನಕ ಪ್ರಯತ್ನಿಸುವ ಬಗ್ಗೆ ಸಂಘದ ಪ್ರೆಸಿಡೆಂಟರು ತಿರುಗಿ ಬೆಂಗಳೂರಿಗೆ ಹೋಗಲಿದ್ದಾರೆ.

**ಜಿಲ್ಲಾ ಗೃಹರಕ್ಷಕ ದಳ ನಾಯಕರಾಗಿ ಡಾ| ವೇಣುಗೋಪಾಲ ಶೆಟ್ಟರ ನೇಮಕ**— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 600 ಮಂದಿಯಿರುವ ಗೃಹರಕ್ಷಕ ದಳವೊಂದು ರಚಿಸಲ್ಪಟ್ಟು, ಅದರ ಕಮಾಂಡೆಂಟ್ ಆಗಿ ಸರಕಾರ ಡಾ| ಎಂ. ವೇಣುಗೋಪಾಲ ಶೆಟ್ಟರನ್ನು ನೇಮಿಸಿದೆಯೆಂದು ಜಿಲ್ಲಾಧಿಕಾರಿ ಶ್ರೀ ಸಿ. ಜಿ. ಪದ್ಮನಾಭನವರು ತಿಳಿಸಿದ್ದಾರೆ. ಈ ಗೃಹರಕ್ಷಕ ದಳದ ಸದಸ್ಯರನ್ನು ಕಮಾಡೆಂಟ್, ಡೆಪ್ಯೂಟಿ ಕಮಿಶನರ್ ಮತ್ತು ಸುಪರಿಟೆಂಡೆಂಟ್ ಆಫ್ ಪೋಲೀಸ್. ಈ ಮೂರು ಮಂದಿಯನ್ನೊಳಗೊಂಡ ಸಮಿತಿಯೊಂದು ಆರಿಸುವುದು. ಮತ್ತು ಅದನ್ನು 6 ಪಂಗಡಗಳಾಗಿ ವಿಂಗಡಿಸಲಾಗುವುದು ಎಂದು ತಿಳಿದುಬಂದಿದೆ.

**ಸಾಹಿತ್ಯ ಮತ್ತು ಸಂಗೀತ ಸ್ಪರ್ಧೆ**
ಬೆಂಗಳೂರಿನ ಮಲ್ಲೇಶ್ವರದ ಪ್ರಧಾನ ಮಿತ್ರಮಂಡಳಿಯ ನೂರನೆಯ ವಾರ್ಷಿಕೋತ್ಸವದ ಅಂಗವಾಗಿ ಈ ಕೆಳಗಿನ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಸಾಹಿತ್ಯ:— ಸಣ್ಣ ಕಥೆ, ಕವನ, ಪ್ರಬಂಧ ಕೈ ಬರವಣಿಗೆ. ಪ್ರತಿ ವಿಭಾಗಕ್ಕೂ ಪ್ರವೇಶ ಧನ ಒಂದು ರೂ ಪ್ರವೇಶಗಳನ್ನು ಕಳುಹಿಸಲು ಕೊನೆಯ ದಿನಾಂಕ 5—4—63

ಸಂಗೀತ:- ಚಿತ್ರಗೀತೆ, ಭಾವಗೀತೆ, ಜನಪದಗೀತೆ, ಮತ್ತು ದೇವರನಾಮ ಇವುಗಳನ್ನು ಮಲ್ಲೇಶ್ವರದ 'ಸೇವಾಸದನ'ದಲ್ಲಿ ತಾ. 14—4—63ನೆಯ ಭಾನುವಾರ ಪ್ರಾತಃಕಾಲ 10 ಗಂಟೆಗೆ ನಡೆಸಲಾಗುವುದು ಪ್ರತಿ ವಿಭಾಗಕ್ಕೂ ಪ್ರವೇಶಧನ ಒಂದು ರೂ. ಪ್ರವೇಶಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 6-4-63. ವಿವರಗಳಿಗೆ: ಜಿ. ಎನ್: ಪ್ರಧಾನ್ ಮಿತ್ರಮಂಡಳಿ, 1993, ಮಲ್ಲೇಶ್ವರಂ, ಬೆಂಗಳೂರು-3

**ಮಿತ್ತಬಾಗಿಲು ಪಂಚಾಯತು**— ತಾ. 16-3-63ರಂದು ಪಂಚಾಯತು ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರಕಾರಿ ಶಾಲಾ ವಾರ್ಷಿಕೋತ್ಸವವು ಶ್ರೀ ಪಾ. ಉಮಾನಾಥ ಪ್ರಭುರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೆಂಕಟಸುಬ್ಬರಾವ್ ಮತ್ತು ಕೆ. ಎನ್. ಭಟ್, ವಿದ್ವಾನ್ ಶಿರಾಡಿಬಾಲ್‌ರವರು ಶಾಲಾ ಏಳಿಗೆಗೆ ಹೆತ್ತವರ— ಅಧ್ಯಾಪಕರ — ಆಡಳಿತೆಯವರ ಗುಣಾವಗುಣಗಳ ಕುರಿತು ಭಾಷಣವಿತ್ತರು. ಬೆಟರ್‌ಮೆಂಟ್ ಕಮಿಟಿಯ ಅಧ್ಯಕ್ಷ ಶ್ರೀ ವಳಂಬ್ರ ಎಲ್ಯಂಣ ಗೌಡರು ಶಾಲೆಗಾಗಿ ಶ್ರಮಿಸಿದ ಕುರಿತು ಪ್ರಶಂಶಿಸುತ್ತಾ, ಸಭಾಧ್ಯಕ್ಷರು ಶಾಲೆಯು ಗ್ರಾಮೀಣ ಅಭಿವೃದ್ಧಿಯ ನಿರ್ಮಾಣ ಕೇಂದ್ರವೆಂಬುದನ್ನು ವಿವರಿಸಿ ಭಾಷಣವಿತ್ತರು. ಮಕ್ಕಳಿಂದ ಜ್ಞಾನೋದಯವೆಂಬ ಕನ್ನಡ ನಾಟಕ— ವಿವಿಧ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟವು. ಶ್ರೀ ಸಿದ್ಧಿ ವಿನಾಯಕ ಸರಸ್ವತಿ ಸಂಗೀತ ಸಮಾಜ ಶಾಲೆ ಬಂಡಾಜೆಯ ವಿದ್ಯಾರ್ಥಿನಿಯರು ಸಂಗೀತ ಕಾರ್ಯಕ್ರಮವನ್ನು ಶ್ರೀ ಗೋಪಾಲಕೃಷ್ಣರಾವ್, ಸಂಗೀತ ವಿದ್ವಾನ್‌ರವರ ದಿಗ್ದರ್ಶನದಿಂದ ನೆರವೇರಿಸಿದರು ಸ್ಥಳೀಯ ಯುವಕರಿಂದ ಕೃಷಿಕಲ್ಯಾಣವೆಂಬ ಯಕ್ಷಗಾನ ನಾಟಕವು ಶ್ರೀ ಕೆ. ವಿ. ಪ್ರಭುರವರ ಹಾಡುಗಾರಿಕೆಯಿಂದ ಅಭಿನಯಿಸಲ್ಪಟ್ಟಿತು. ಹಳೇ ವಿದ್ಯಾರ್ಥಿಯರಿಂದ "ಬಂಡಾಜೆದ ರಾಜಿ" ಎಂಬ ತುಳು ಪ್ರಹಸನವು ಜರಗಿದ ಮೇಲೆ ನಾಟಕಕ್ಕೆ ಬಹುಮಾನಗಳನ್ನು ಬಿ. ಕೆ. ಎಮ್. ಕೆ. ಆರ್. ಪ್ರಭುರವರು ವಿತರಣೆ ಗೈದರು. ಮಂಗಲ ಗೀತದೊಂದಿಗೆ ಸಮಾರಂಭ ಕೊನೆಗೊಂಡಿತು.

**ಮಂಜೇಶ್ವರ**— ದಿನಾಂಕ 18ರಂದು ಸ್ಥಳೀಯ ಯಸ್. ಎ. ಟಿ. ಪ್ರಾಥಮಿಕ ಶಾಲಾ ನಾಲ್ಕನೇ ತರಗತಿಯ ಮಕ್ಕಳ ಬೀಳ್ಕೊಡುವ ಸಮಾರಂಭ ಸಹಾಯಕ ವಿದ್ಯಾಧಿಕಾರಿ ಶ್ರೀ ಯಂ. ಶಿವರಾಮ ಆಚಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಕೆ. ವಾಸುದೇವ ನಾಯಕರಿಂದ ಸ್ವಾಗತ, ಮಕ್ಕಳಿಂದ ವಿವಿಧ ವಿನೋದಾವಳಿ, ಭಾಷಣಗಳಾದುವು.

**ಪುತ್ರಸಂತಾನ ಪಡೆಯಲು 'ಲಕ್ಷ್ಮಣ' ಗಿಡಮೂಲಿಕೆ**— 'ಲಕ್ಷ್ಮಣ' ಗಿಡಮೂಲಿಕೆಯ ಸೇವನೆಯಿಂದ ಗಂಡು ಮಗುವೇ ಜನಿಸುವ ವಿಷಯವು ಪ್ರಪಂಚವಾದ್ಯಂತ ಕುತೂಹಲವನ್ನು ಕೆರಳಿಸಿದೆ. ಇದು ತನಕ ಈ ಬೇರು ಬಂಜೆತನವನ್ನು ಹೋಗಲಾಡಿಸುವ ಅತ್ಯುತ್ತಮ ಔಷಧಿ ಎಂಬುದಾಗಿ ಮಾತ್ರ ತಿಳಿಯಲಾಗಿತ್ತು.

ಆಯುರ್ವೇದ ಶಾಸ್ತ್ರದಲ್ಲಿ ಲಕ್ಷ್ಮಣ ಗಿಡಮೂಲಿಕೆಯನ್ನು ಪುತ್ರದಾ (ಸುತೋತ್ಪಾದಕ) ಹಾಗೂ ಗರ್ಭದಾ (ಗರ್ಭೋತ್ಪಾದಕ) ಎಂಬುದಾಗಿ ಕರೆಯಲಾಗಿದೆ. ಆದರೆ ಹಲವು ಶತಮಾನಗಳ ತನಕ ಈ ಬೇರು ಕಾಣಸಿಕ್ಕಿರಲಿಲ್ಲ. ಅದರ ಬದಲಿಗೆ ಶ್ವೇತ ಕಂಟಕಾರೀ ಎಂಬ ಗಿಡಮೂಲಿಕೆಯನ್ನು ಉಪಯೋಗಿಸಲಾಗುತ್ತಿತ್ತು. ಈ ಗಿಡಮೂಲಿಕೆ ಕೂಡಾ ಪರಿಣಾಮಕಾರಿ ಎಂದು ಕಂಡುಬಂದಿದೆ.

ಕೆಲವೇ ವರ್ಷಗಳ ಹಿಂದೆ ದಿಲ್ಲಿಯ ಆಯುರ್ವೇದ ರಿಸರ್ಚ್ ಕೌನ್ಸಿಲ್ ಹಾಗೂ ಇತರ ಕೆಲವು ಸಂಸ್ಥೆಗಳ ಸಂಯುಕ್ತ ಪರಿಶೋಧನೆಗಳಿಂದಾಗಿ ಲಕ್ಷ್ಮಣ ಗಿಡಮೂಲಿಕೆಯನ್ನು ಪುನಃ ಕಂಡುಹಿಡಿಯಲಾಯಿತು. ಈ ಗಿಡ ಮೂಲಿಕೆಯು ಮನುಷ್ಯಾಕಾರದ ಕವಲು ಬೇರಿನ ರೂಪದಲ್ಲಿದೆ.

ನ್ಯೂಯಾರ್ಕಿನ 'ಮಾಡರ್ನ್ ಡ್ರಗ್ಸ್' ಹಾಗೂ ಲಂಡನಿನ 'ಮೆಡಿಕಲ್ ಹಿಸ್ಟರಿ' ಎಂಬ ಪತ್ರಿಕೆಗಳು ಈ ಗಿಡಮೂಲಿಕೆಯ ಸಮಾಚಾರವನ್ನು ವಿಶೇಷ ಪ್ರಾಧಾನ್ಯ ಕೊಟ್ಟು ಪ್ರಕಟಿಸಿದುವು.

'ಭ್ರೂಣದ ಲಿಂಗಪರಿವರ್ತನೆ' ಮಾಡಬಲ್ಲಂಥ ಲಕ್ಷ್ಮಣ ಬೇರಿನ ಶಕ್ತಿ ತುಂಬಾ ಆಶ್ಚರ್ಯಜನಕವಾಗಿದೆ. ಇದನ್ನು ಪರೀಕ್ಷಿಸಲು ಆಯುರ್ವೇದ ರಿಸರ್ಚ್ ಕೌನ್ಸಿಲಿನ ಕವಿರಾಜ ಕೆ. ಎಲ್. ಪೇತಲ್ ಅವರು ಉಪಯೋಗಿಸುವ ವಿಧಾನವನ್ನು ತಿಳಿಯಬಲ್ಲವಾದರೆ ತುಂಬಾ ಸಂತೋಷ' ಎಂಬುದಾಗಿ 'ಡೆವಲಪ್‌ಮೆಂಟಲ್ ಮೆಡಿಸಿನ್' ಎಂಬ ಲಂಡನಿನ ಪತ್ರಿಕೆಯೊಂದು ಬರೆದಿದೆ.

ಕವಿರಾಜ ಪೇತಲ್‌ರ ಸಂಶೋಧನೆಯ ಯಥಾಪ್ರತಿಗಳನ್ನು ಕೊಡುವಂತೆ ಅಮೆರಿಕಾದ ಇಲಿನಾಯ್ ವಿಶ್ವವಿದ್ಯಾಲಯವು ಕೇಳಿಕೊಂಡಿತು. ಚಿಕಾಗೋದ ಕಾಲೇಜ್ ಆಫ್ ಫಾರ್ಮಸಿಯ ಪ್ರೊಫೆಸರ್ ಡಾ. ಡಿ ಲಾ. ಟೋರೆ ಅವರು ಪ್ರಾಣಿಗಳ ಸಂತಾನೋತ್ಪತ್ತಿಯಲ್ಲಿ ಲಕ್ಷ್ಮಣ ಬೇರಿನ ಉಪಯೋಗನ್ನು ಪರೀಕ್ಷಿಸಿ ನೋಡುವರು.

ಈ ವಿಷಯದಲ್ಲಿ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪಾಶ್ಚಾತ್ಯ ಔಷಧಿ ತಯಾರಿಕೆ ಕಂಪೆನಿಗಳ ಪ್ರತಿನಿಧಿಗಳು ಆಯುರ್ವೇದ ರಿಸರ್ಚ್ ಕೌನ್ಸಿಲಿನೊಡನೆ ಮಾತುಕತೆ ನಡೆಸುತ್ತಿದ್ದಾರೆ


ರಾಷ್ಟ್ರೀಯ ರಕ್ಷಣಾನಿಧಿಯ ಸಹಾಯಾರ್ಥವಾಗಿ
ಉಡುಪಿ ಮಹಿಳಾ ಸಮಾಜದವರಿಂದ
ಉತ್ಕೃಷ್ಟ ಮನರಂಜನಾ ಕಾರ್ಯಕ್ರಮ
ತಾ. 30-3-63ನೇ ಶನಿವಾರ ರಾತ್ರಿ 9-30ಕ್ಕೆ
ಡಾ| ಯು. ಸುಂದರರಾವ ಪೈ ಸ್ಮಾರಕ ರಂಗಮಂಟಪದಲ್ಲಿ

ತಿರುಮಂತ್ರ ಕುತೂಹಲಪೂರ್ಣ ಸಂಗೀತ ನಾಟಕ

ಮುಖ್ಯ ಭೂಮಿಕೆಯಲ್ಲಿ:— ಕುಮಾರಿ ಅಂಬುಜಾ ವೆಂಕಟ್ರಾವ್, ಎಂ. ಎ., ಕು ಮುಕ್ತಾ ಪೈ, ಕು. ವಸಂತಿ ನಾಯಕ್, ಕು ಕಿಶೋರಿ, ಕು. ಸಾವಿನಿ ಶೆಟ್ಟಿ, ಕು. ಶ್ರೀಮತಿ ನಾಯಕ್.

ಅತ್ತೆ ಸೊಸೆ ಮತ್ತು ಗಂಡನ ಸಾಂಸಾರಿಕ ಚಿತ್ರವನ್ನು ತೋರಿಸುವ ಇನ್ನೊಂದು ಚಿಕ್ಕ ಮತ್ತು ಚೊಕ್ಕವಾದ ಸಂಗೀತ ನಾಟಕ

ಕೂಡಲಾರದ ಕಣ್ಣು

ಮುಖ್ಯ ಭೂಮಿಕೆಯಲ್ಲಿ:— ಶ್ರೀಮತಿ ಜಲಜಾಕ್ಷಮ್ಮ ಆರೂರು, ಶ್ರೀಮತಿ ಇನಾಂದಾರ್, ಬಿ ಎ. (ಆನರ್ಸ್), ಶ್ರೀಮತಿ ಲೀಲಾ ಎಂ. ಪೈ, ಶ್ರೀಮತಿ ಅನಸೂಯಾ ಬಿ. ಶೆಟ್ಟಿ, ಶ್ರೀಮತಿ ಕುಸುಮಾ ನಾಯಕ್, ಬಿ. ಎ., ಕುಮಾರಿ ಅಂಬುಜಾ ವೆಂಕಟ್ರಾವ್, ಎಂ. ಎ., ಕುಮಾರಿ ಶರತ್ ಭಟ್, ಮತ್ತು ಶ್ರೀಮತಿ ಮನೋರಮಾಚಾರ್.

ಇಷ್ಟಲ್ಲದೆ ಕುಮಾರಿ ವಿಜಯಲಕ್ಷ್ಮಿಯವರ ನೃತ್ಯ
ಮತ್ತು ಮಂಗಳೂರು ಕರ್ನಾಟಕ ಥಿಯೇಟರ್ಸ್‌ನ ಖ್ಯಾತ ಹಾಸ್ಯನಟ
ಶ್ರೀ ಲಕ್ಷ್ಮೀನಾರಾಯಣ ರಾವ್ ಇವರ ಸಂಗೀತ ಹಾಸ್ಯಪ್ರದರ್ಶನ ಬೇರೆಯಿದೆ.
ಜಿಲ್ಲಾಧಿಕಾರಿ ಶ್ರೀ ಸಿ ಜಿ. ಪದ್ಮನಾಭ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿರುವರು.
ಪ್ರವೇಶ ದರ: ರೂ. 5, 3, 2, ಮತ್ತು 1.
ಉಡುಪಿ ತಾಲೂಕು ರಾಷ್ಟ್ರೀಯ ರಕ್ಷಣಾ ಸಮಿತಿ, ಉಡುಪಿ.

ಜವಾಹರಲಾಲ

ಕೊಲಂಬೊ ಸಲಹೆಗಳನ್ನು ಸ್ವೀಕರಿಸದ ಮುನ್ನ ಯಾವ ಒಡಂಬಡಿಕೆಯೂ ಕಮ್ಯುನಿಸ್ಟ ಚೀನಾದೊಡನೆ ಸಾಧ್ಯವಿಲ್ಲವೆಂಬ ದೃಢ ನಿಲುವೊಗೆ ಪ್ರಧಾನಿ ನೆಹರು ಬಂದಿದ್ದು ಇದಕ್ಕೆ ಭಾರತೀಯರೆಲ್ಲರ ಬೆಂಬಲವಿದ್ದೇಯಿದೆ. ಟಿಬೇಟಿನಲ್ಲಿ ಚೀನೀಯರು ಬಹು ದೊಡ್ಡ ಪ್ರಮಾಣದಲ್ಲಿ ಸೇನೆಯನ್ನೂ ಶಸ್ತ್ರಾಸ್ತ್ರಗಳನ್ನೂ ಕೂಡಹಾಕಿರುವರು ಮತ್ತು ಅವನ್ನು ಇನ್ನೂ ಬೆಳೆಸುತ್ತಲೇ ಇರುವರು ಎಂಬ ಸುದ್ಧಿಯಿಂದ ಕೆಂಪು ಚೀನೀಯರಲ್ಲಿ ಶಾಂತಿಯತ್ತ ಒಲವೆಷ್ಟಿದೆಯೆಂಬುದನ್ನು ಜಗತ್ತಿಗೆ ಜಗತ್ತೇ ಮನಗಂಡಿದೆ. ಮೀನನ್ನು ಹಿಡಿಯಲು ಬೆಸ್ತರು ಗಾಳದ ತುದಿಗೆ ಆಹಾರ ಕಟ್ಟುವಂತೆ ಶಾಂತಿಯನ್ನು ಮುಂದಿಟ್ಟು ಚೀನೀಯರು ಸಮರ ಸನ್ನಾಹ ಮಾಡುತಿದ್ದಾರೆ ಆದರೆ, ಅವರ ಗಾಳಕ್ಕೆ ಸಿಕ್ಕಿ ಬೀಳುವನ್ನು ತಿಳಿಗೇಡಿ ಮೀನು ಭಾರತವಲ್ಲವೆಂಬುವನ್ನು ಮನಗಾಣದಿರುವುದು ಶೋಚನೀಯ. ಇಂದು ಶಾಂತಿ ಬಯಸುವ ಚೌವರಿಗೆ ೪೫ ಕೋಟಿ ಭಾರತೀಯರ ಕರೆ ಒಂದೆ ಒಂದು-ಕೊಲಂಬೋ ಸಲಹೆಗಳನ್ನು ಸಂಪೂರ್ಣ ಸ್ವೀಕರಿಸಿ, ಸಂಧಾನಕ್ಕೆ ಮುಂದೆ ಬನ್ನಿ.

**ತೆರಿಗೆರಹಿತ ರಾಜ್ಯ ಸಾಧ್ಯವಿಲ್ಲವೆ?**

ಸಂಪಾದನೆಯು ಸೇ. 10ಂದ 750 ತನಕ ಸರಕಾರದೊಡನೆ 20 ವರ್ಷಗಳ ವರೆಗೆ ಠೇವಣಿ ಕೊಡುತ್ತ ಬಂದರೆ ಯಾವದೇ ತರದ ತೆರಿಗೆ ಇಲ್ಲದ ರಾಜ್ಯ ಸಾಧ್ಯವೆಂಬ ಕುರಿತು ಅರ್ಥಿಕ ತಜ್ಞ ಡಾ| ಬಿ. ಎಂ. ಎ. ಪೈಯವರು ಹೊಸ ಯೋಜನೆಯೊಂದನ್ನು ತಯಾರಿಸಿದ್ದು ಅದನ್ನು ತಾ. 26ರಂದು ಉಪೇಂದ್ರ ಭಾಗದಲ್ಲಿ ಸೇರಿದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು. (ಈ ಆಕರ್ಷಕ ಯೋಜನೆಯ ವಿವರಗಳನ್ನು ಮುಂದಿನ ವಾರ ಕೊಡಲಾಗುವುದು. ಸಂ. ನ.)

**ಕ್ಲಬ್ಬಿನ ವಾರ್ಷಿಕೋತ್ಸವ**— ರಿಕ್ರಿಯೇಶನ್ ಕ್ಲಬ್ (ರಿ) ಶಿರ್ವ, ಇದರ ವಾರ್ಷಿಕೋತ್ಸವವು 23-3-63ರಂದು, ಸಿಂಡಿಕೇಟ್ ಬೇಂಕಿನ ಡಿವಿಜನಲ್ ಮೆನೇಜರಾದ ಶ್ರೀ ಎ. ಕೃಷ್ಣರಾವ್, ಎಂ. ಎ. ಎಂ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಬ್ಬಿನ ವಾರ್ಷಿಕ ಸಂಚಿಕೆಯಾದ 'ರಂಜಿನಿ'ಯನ್ನು ಯುಗ ಪುರುಷದ ಸಂಪಾದಕರಾದ ಶ್ರೀ ಕೆಡಿತ್ತಾಯರು ಅನಂತಪದ್ಮನಾಭ ಉಡುಪರು ಬಿಡುಗಡೆಗೊಳಿಸಿದರು. ಕ್ಲಬ್ಬಿನ ಅಧ್ಯಕ್ಷರಾದ ಡಾ. ವೈ. ಆರ್. ಶೆಟ್ಟರು ಸ್ವಾಗತಿಸಿದರು. ಜೊತೆ ಕಾರ್ಯದರ್ಶಿಗಳಾದ ಶ್ರೀ ಕೆ. ಕೃಷ್ಣ ಶೆಟ್ರು ವರದಿ ಮತ್ತು ಸಂದೇಶಗಳ ವಾಚನಗೈದರು. ಮೂಡಬಿದ್ರೆ ಶ್ರೀ ಕೃಷ್ಣಗೋಪಾಲ ವಿರಚಿತ 'ಶಾಜಹಾನ' ಚಾರಿತ್ರಿಕ ನಾಟಕವು ಅಭಿನಯಿಸಲ್ಪಟ್ಟಿತು. ರಾಷ್ಟ್ರೀಯ ರಕ್ಷಣಾ ನಿಧಿಗೆ ಧನ ಸಂಗ್ರಹಿಸಲಾಯಿತು. ಶ್ರೀ ಕೆ. ಕೃಷ್ಣ ಶೆಟ್ಟರು ಧನ್ಯವಾದವಿತ್ತರು.

### ದೇಶ ಪುನಾರಚನೆಯಲ್ಲಿ

## ಉಕ್ಕಿನ ಕಾರಖಾನೆಗಳ ಸ್ಥಾಪನೆ

ರಶ್ಯ ಮತ್ತು ಜೆಕೊಸ್ಲೊವಾಕಿಯಾಗಳಲ್ಲಿ ಉಕ್ಕಿನ ಕೈಗಾರಿಕೆಯ ಬೆಳವಣಿಗೆಯನ್ನು ಅಧ್ಯಯನ ನಡೆಸಿಬಂದ ತಜ್ಞರ ತಂಡವೊಂದು ರಾಷ್ಟ್ರೀಯ ಉತ್ಪಾದಕ ಮಂಡಳಿಗೆ ತನ್ನ ವರದಿಯನ್ನು ಸಲ್ಲಿಸಿದೆ. ಉಕ್ಕಿನಂತಹ ಮೂಲ ಉದ್ಯೋಗಗಳಿಗೆ ಅಗ್ರಪ್ರಾಶಸ್ತ್ಯವನ್ನು ನೀಡದೆ ಭಾರತದಂತಹ ಅಭಿವೃದ್ಧಿ ಹೊಂದುವ ರಾಷ್ಟ್ರಕ್ಕೆ ಬೇರೆ ನಿರ್ವಾಹವೇ ಇಲ್ಲ ಎಂದು ಈ ವರದಿಯು ಹೇಳುತ್ತದೆ. ಭಾರತದಲ್ಲಿ ಧಾರಾಳ ಪ್ರಮಾಣದಲ್ಲಿ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳು ದೊರೆಯುತ್ತವೆ; ಹೆಚ್ಚಿನ ಉದ್ಯಮಗಳಿಗೆ ಇಲ್ಲಿ ಸಾಕಷ್ಟು ಅವಕಾಶಗಳೂ ಇವೆ; ಉಕ್ಕಿನ ಉತ್ಪಾದನೆಗೆ ಅನುಕೂಲ ಪರಿಸ್ಥಿತಿಗಳೂ ಇಲ್ಲಿವೆ. ಆದುದರಿಂದ ದೃಢತೆಯೊಡನೆ ಸಾಧನೆ ಮಾಡತೊಡಗಿದರೆ, ಪ್ರಪಂಚದ ಉಕ್ಕಿನ ರಾಷ್ಟ್ರಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲುವಂತೆ ನಮ್ಮ ಭಾರತದಲ್ಲಿಯೂ ಈ ಕೈಗಾರಿಕೆಯನ್ನು ಉನ್ನತಪಡಿಸುವುದು ಸಾಧ್ಯ. ಆದರೆ, ಹೀಗಾಗುವುದಕ್ಕೆ ನಾವು ಅತ್ಯಾಧುನಿಕ ರೀತಿ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಮುಂದುವರಿದ ಉಕ್ಕು ಉತ್ಪಾದಕ ರಾಷ್ಟ್ರಗಳು ಬಳಸಿಕೊಂಡ ತಂತ್ರಗಳನ್ನೇ ನಾವೂ ಅರಗಿಸಿಕೊಳ್ಳುವುದು ಅವಶ್ಯವೆನಿಸುತ್ತದೆ.

ರಶ್ಯ ಮತ್ತು ಜೆಕೊಸ್ಲೊವಾಕಿಯಾಗಳು ಇಂದು ಜಾಗತಿಕ ಉಕ್ಕು ಉತ್ಪಾದನೆಯಲ್ಲಿ ಗಣ್ಯ ರಾಷ್ಟ್ರಗಳಾಗಿ ರೂಪಾಂತಿವೆ. ತಮ್ಮ ರೂಪ ಪರಿವರ್ತನೆಗೆ ಇವುಗಳು ಹೆಚ್ಚಿನ ಸಮಯವನ್ನೇನೂ ತೆಗೆದುಕೊಳ್ಳಲಿಲ್ಲ. ಹೀಗಿರುವಾಗ, ನಮ್ಮ ಅಭಿವೃದ್ಧಿಗೆ ದೇಶದ ಪುನಾರಚನೆಗೆ ಅತ್ಯಮೂಲ್ಯವಾದ ಔದ್ಯಮಿಕ ರಂಗವನ್ನು ವರ್ಧಿಸುವುದಕ್ಕಾಗಿ ಉಕ್ಕಿನ ಕೈಗಾರಿಕೆಯನ್ನು ಅತ್ಯಲ್ಪ ಕಾಲದಲ್ಲಿಯೇ ಬಲಪಡಿಸುವುದು ಅತ್ಯಗತ್ಯ ಮತ್ತು ಅದು ಸುಲಭಸಾಧ್ಯ.

ಆದರೆ, ಭಾರತದಲ್ಲಿ ಉಕ್ಕಿನ ಕೈಗಾರಿಕೆಯ ಬೆಳವಣಿಗೆಗೆ ಇರುವ ಒಂದೇ ಒಂದು ಸಮಸ್ಯೆಯೆಂದರೆ, ಬಂಡವಳದ ಪ್ರಶ್ನೆ. ನಮ್ಮಲ್ಲಿ ಕೂಲಿಯಾಳುಗಳ ಪ್ರಶ್ನೆಗಿಂತ ಬಂಡವಳದ ಪ್ರಶ್ನೆಯೇ ಅತಿ ಹಿರಿದು. ಇದಕ್ಕಾಗಿ ಈ ಉದ್ಯಮಕ್ಕೆ ಬೇಕಾಗಬಹುದಾದ ಬಂಡವಳವನ್ನು ಕ್ಷಿತಿಜಕ್ಕೆ ಮುಟ್ಟಿಸುವುದು ನಾವು ಮಾಡಬೇಕಾದ ಮೊತ್ತ ಮೊದಲ ಕಾರ್ಯ. ಕಾರ್ಮಿಕ ಸಂಘಟನೆ ಮತ್ತು ಶಿಸ್ತುಗಳು ಪರ್ಯಾಪ್ತ ಪ್ರಮಾಣದಲ್ಲಿ ಎತ್ತರವಾಗಬೇಕು; ಕಚ್ಚಾ ಮಾಲುಗಳು, ಅವುಗಳ ಸಾಗಾಣಿಕೆ, ಆಡಳಿತೆ, ಆಧುನಿಕ ತಂತ್ರಗಳ ಬಳಕೆ—ಇವುಗಳನ್ನು ಕೂಡ ನಾವು ಪರಿಣಾಮಕಾರಿಯಾಗಿ ಸುಧಾರಿಸಬೇಕು. ಕಾರ್ಮಿಕ ಸಂಘಟನೆ ಮತ್ತು ಶಿಸ್ತುಗಳನ್ನು ನಾವು ಅತಿ ಪ್ರಯಾಸವಿಲ್ಲದೆ ಸಾಧಿಸಬಹುದು. ಉದ್ದಿಮೆಯ ಲಾಭಾಂಶದಲ್ಲಿ ಯೋಗ್ಯವಾದ ಒಂದು ಪಾಲನ್ನು ಕಾರ್ಮಿಕರಿಗಾಗಿ ನೀಡುವುದರಿಂದ ಮತ್ತು ಟ್ರೇಡ್ ಯೂನಿಯನ್‌ಗಳ ಸಹಕಾರ ಪಡೆಯುವುದರಿಂದ ಈ ಪ್ರಶ್ನೆಯನ್ನು ಸಮಾಧಾನಕರವಾಗಿ ಬಗೆಹರಿಸಬಹುದು. ಆದರೆ, ಉಳಿದುವು ಹಾಗಲ್ಲ. ಇವಕ್ಕೆ ಪೂರ್ವ ಯೋಜನೆಯು ಬೇಕಾಗುತ್ತದೆ. ಆಡಳಿತ ವರ್ಗವು ಉತ್ಸಾಹದಿಂದ ತನ್ನ ತಯಾರಿಸಲಾದ ಯೋಜನೆಯನ್ನು ಹಂತಹಂತವಾಗಿ ಸಾಧಿಸಬೇಕಾಗುತ್ತದೆ. ಉಕ್ಕಿನ ಕಾರಖಾನೆಯ ವ್ಯವಸ್ಥಾಪಕನಿಗೆ ಹೆಚ್ಚಿನ ಅಧಿಕಾರವನ್ನು ನೀಡಬೇಕಾಗುತ್ತದೆ.

ರಶ್ಯ ಮತ್ತು ಜೆಕೊಸ್ಲೊವಾಕಿಯಾಗಳಲ್ಲಿ ಉಕ್ಕಿನ ಉದ್ಯಮವು ಪ್ರಾದೇಶಿಕ ಮಟ್ಟದಲ್ಲಿ ಹರಡಿ ಬೆಳೆದಿದೆ. ಆದರೆ, ನಮ್ಮ ದೇಶದಲ್ಲಿ ಅದು ಕೇಂದ್ರೀಕೃತವಾಗಿಯೇ ಉಳಿದಿದೆಯೆಂದರೆ ಅತಿಶಯೋಕ್ತಿಯಲ್ಲ. ಪೂರ್ವ ಪ್ರದೇಶದಲ್ಲಿ ಮಾತ್ರ ಈ ಉದ್ಯಮವು ಈಗ ಹರಡಿರುವುದನ್ನು ನಾವು ಗನಿಸಬಹುದು. ದೇಶದ ಸಮಗ್ರತೆಯ ದೃಷ್ಟಿಯಿಂದ ಇನ್ನು ಮುಂದಕ್ಕೆ ಉಕ್ಕಿನ ಕೈಗಾರಿಕೆಯನ್ನು ನಾವು ಸರ್ವತ್ರ ಚೆಲ್ಲಿದಂತೆ ಬೆಳೆಸಬೇಕು. ಮಧ್ಯ ಪ್ರದೇಶದಲ್ಲಿ ಎರಡನೆಯ ಸುತ್ತಿನ ಕಾರಖಾನೆಗಳನ್ನು ಕಟ್ಟಬಹುದು; ಭಿಲ್ಲಾ—ಬೈಲಡಿಲ್ಲ-ಚಂದಾ ಇವು ಇದಕ್ಕೆ ಅನುಕೂಲ ಸ್ಥಳಗಳು. ಮೂರನೆಯ ಪೆಟ್ಟಲನ್ನು ದಕ್ಷಿಣ ಪ್ರದೇಶಕ್ಕೆ ಕಟ್ಟಬೇಕು. ದಕ್ಷಿಣದಲ್ಲಿ ಇಂದು ಹೇಳಿಕೊಳ್ಳುವ ಔದ್ಯಮಿಕ ರಂಗವಿರುವುದಿಲ್ಲ. ನಾಲ್ಕನೆಯದಾಗಿ ಗೋವೆ—ವಿಶಾಖಪಟ್ಟಣ ಮತ್ತಿತರ ಕರಾವಳಿ ಕೇಂದ್ರಗಳಲ್ಲಿಯೂ ಉಕ್ಕಿನ ಕಾರಖಾನೆಗಳನ್ನು ಕಟ್ಟಬೇಕು.

ಹೀಗೆ ಇಡಿಯ ಭಾರತದಲ್ಲಿ ಕಾರಖಾನೆಗಳನ್ನು ಅಲ್ಲಲ್ಲಿ ಕಟ್ಟುವುದರಿಂದ ತಲ್ಲಕ್ಷಿನ ಇತರ ಉದ್ಯಮಗಳಿಗೆ ಉಕ್ಕಿನ ಪೂರೈಕೆ ಮಾಡುವುದು ಸುಲಭವಾಗುವುದು. ಇದರಿಂದ ಉದ್ದಿಮೆಗಳ ಬೆಳವಣಿಗೆಯ ದಾರಿಯೂ ಸುಗಮವಾಗುವುದು.

ಇಂದು ನಾವು ರಾಷ್ಟ್ರೀಯ ಸಮಗ್ರತೆಯೊಡನೆ ಸಂರಕ್ಷಣೆಯ ಗುರುತರ ಉತ್ತರದಾಯಿತ್ವವನ್ನೂ ಹೊರ ಬೇಕಾಗಿದೆ. ಆಧುನಿಕ ಉದ್ದಿಮೆಗಳಿಗೆ ಅತ್ಯವಶ್ಯವಾದ ಯುದ್ಧ ಶಸ್ತ್ರಾಸ್ತ್ರಗಳಿಗೆ ಅನಿವಾರ್ಯವಾದ ಉಕ್ಕಿನ ಕೈಗಾರಿಕೆಯನ್ನು ನಾವು ಬೆಳೆಸಿಕೊಳ್ಳುವುದು ಅಪೇಕ್ಷಣೀಯ. ಈ ದಿಸೆಯಲ್ಲಿ ಅಮೆರಿಕೆಯ ಸಹಾಯದಿಂದ ವ. ಕಾರ್ಪುರದಲ್ಲಿ ಕಟ್ಟಲಿರುವ ಕಾರಖಾನೆಯು ಮಹತ್ವದ ಪಾತ್ರ ವಹಿಸಬಲ್ಲುದು. ಇದೇ ರೀತಿಯಲ್ಲಿ ಬಂಡವಳ ಶೇಖರಿಸಿ ಉಕ್ಕಿನ ಕಾರಖಾನೆಗಳನ್ನು ಕಟ್ಟಿಸಿ ದೇಶದ ಆವಶ್ಯಕತೆಯನ್ನು ನಾವೇ ಪೂರಯಿಸಿಕೊಳ್ಳುವುದು ನಮಗೆ ಹಿತಕಾರಿ.

### ವಿವಾದಜನಕ

## ಅವಿಭಾಜ್ಯ ಯೋಜನೆಗಳು

ಕರ್ನಾಟಕ ಸರಕಾರವು ತನ್ನ ರಾಜ್ಯಕ್ಕೂ ಮದ್ರಾಸ ರಾಜ್ಯಕ್ಕೂ ಜತೆಯಾಗಿ ಉಪಯೋಗಕ್ಕೆ ಬೀಳುವಂತೆ ಕಾವೇರಿ ಜಲವಿದ್ಯುದ್ಯೋಜನೆಯೊಂದರ ಪ್ರಾಥಮಿಕ ಅಂಶಗಳನ್ನು ಕಲೆ ಹಾಕುವ ಮಹಾ ಸಾಹಸಮಾಡಿದೆ. ಮದ್ರಾಸ ಸರಕಾರವು ಮೊದಲು ತಯಾರಿಸಿದ ಹೊಗನೆಕಲ್ ಯೋಜನೆಗೆ ಪ್ರತಿ ಸೂಚನೆಯಿದು. ಹೊಗನೆಕಲ್ ಯೋಜನೆಯು ೨೦೦ ಮಿರಿಯಾ ವ್ಯಾಟ್ (೯,೦೦೦ ಕಿಲೋ ವ್ಯಾಟ್) ವಿದ್ಯುಚ್ಛಕ್ತಿಯನ್ನು ಒದಗಿಸಬಹುದೆಂದು ಅಂದಾಜು ಮಾಡಲಾಗಿತ್ತು. ಕರ್ನಾಟಕ ಸರಕಾರವು ಕೂಡಿ ಹಾಕಿದ ಅಂಶಗಳಂತೆ ಹೊಸ ಯೋಜನೆಯಿಂದ ೧,೨೦೦ ಮಿರಿಯಾ ವ್ಯಾಟ್‌ನಷ್ಟು ಶಕ್ತಿಯು ಉತ್ಪಾದಿತವಾಗುವುದೆಂದು ತಿಳಿಯುತ್ತದೆ. ಈ ಸೂಚಿತ ಯೋಜನೆಯು ಉಭಯ ಸರಕಾರಗಳಿಗೂ ಮಾನ್ಯವಾದರೆ ಎರಡೂ ರಾಜ್ಯಗಳು ಸಂಯುಕ್ತವಾಗಿ ಅದನ್ನು ಕೈಗೊಂಡು ಮುಂದುವರಿಸುವ ನಿರೀಕ್ಷೆಯಿದೆ.

ಮದ್ರಾಸದ ಮುಖ್ಯ ಮಂತ್ರಿ ಕಾಮರಾಜರು ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರಿಗೆ ಹೊಗನೆಕಲ್ ಯೋಜನೆಯ ದತ್ತಾಂಶಗಳನ್ನು ಕಳಿಸಿಕೊಟ್ಟಿದ್ದರು. ಕರ್ನಾಟಕದ ತಂತ್ರಜ್ಞರು ಈ ಅಂಶಗಳನ್ನು ಅಧ್ಯಯನಮಾಡಿ ಕಾವೇರಿ ಜಲವಿದ್ಯುದ್ಯೋಜನೆಯನ್ನು ರೂಪಿಸಿದರು. ಇದರ ರೂಪರೇಷೆಯು ಇಷ್ಟರಲ್ಲೇ ಮದ್ರಾಸಕ್ಕೆ ಹೋಗಲಿದೆ.

ನಿಯೋಜಿತ ಕಾವೇರಿ ಯೋಜನೆಯು ಹೊಗನೆಕಲ್ಲಿನಿಂದ ಪಶ್ಚಿಮಕ್ಕೆ ಆದರೆ ಶಿವಸಮುದ್ರಕ್ಕಿಂತ ಪೂರ್ವಕ್ಕೆ ರೂಪಗೊಳ್ಳುವುದು. ಮತ್ತು ಮದ್ರಾಸ ರೂಪಿತ ಯೋಜನೆಗಿಂತ ಒಂದೂವರೆ ಪಟ್ಟು ಉಪಯುಕ್ತವಾಗುವುದು. ಕರ್ನಾಟಕದ ನೀರಾವರಿ ಸೌಕರ್ಯಗಳಿಗೂ ಈ ಯೋಜನೆಯು ಉಪಕರಿಸುವುದು.

ಎರಡು ರಾಜ್ಯಗಳ ನಡುವೆ ಈ ಹೊಸ ಯೋಜನೆಯು ಬಾಂಧವ್ಯವನ್ನು ಬೆಳೆಸಬಲ್ಲುದು; ಆದರೆ, ಅದು ಕಲಹಕ್ಕೂ ಕಾರಣವಾಗಬಹುದು. ಕೃಷ್ಣ ಮತ್ತು ಗೋದಾವರಿ ನದೀ ನೀರನ್ನು ಹಂಚಿಕೊಳ್ಳುವಲ್ಲಿ ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವೆ ಹೊಯ್ ಕೈಯ್ ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ. ಪ್ರಧಾನ ಮಂತ್ರಿ ನೆಹರುರವರೇ ಈ ವಿವಾದದಲ್ಲಿ ಸಿಲುಕಿ ಅಪ್ರಿಯರಾಗಬೇಕಾದ ಪ್ರಮೇಯವೂ ಬಂದಿದೆ. ಅಂತಾರಾಜ್ಯ ನದೀ ಮಂಡಲ ರಚನೆಯಾಗುತ್ತದೆಂಬ ಮಾತು ಕೇಳಿ ಬರುತ್ತಿದೆಯಾದರೂ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೆಂದು ಹೇಳುವಂತಿಲ್ಲ. ಆದುದರಿಂದ ಕಾವೇರಿ ಜಲವಿದ್ಯುದ್ಯೋಜನೆಯು ಉಭಯ ರಾಜ್ಯಗಳ ಒಡಕಿಗೆ ಕಾರಣವಾಗದೆ ಮೈತ್ರಿ ಸಂವರ್ಧನೆಗೆ ನೆರವಾಗಬೇಕು ಎಂಬುದನ್ನು ಭರತ ವಾಕ್ಯವಾಗಿಟ್ಟುಕೊಂಡು ಮುಂದಿನ ಕ್ರಮಕೈಗೊಳ್ಳಬೇಕೆನಿಸುತ್ತದೆ.

ನಮ್ಮಲ್ಲಿ ದೇಶವೊಂದಾಗಿದ್ದರೂ, ಪ್ರಾದೇಶಿಕ ಭಾವನೆಯು ತಾಂಡವವಾಡುತ್ತಿರುವುದೇ ಇಂದೆದ್ದಿರುವ ಹಲವಾರು ವಿವಾದಗಳಿಗೆ ಮೂಲಕಾರಣ. ಇದರಿಂದಲೇ ದೇಶದಲ್ಲಿ ಛಿದ್ರಗಳು ಮೂಡಿ ಅದು ದುರ್ಬಲವಾಗುವುದು; ಅಂತಃಕಲಹ ಪ್ರೇರಕವಾಗುವುದು. ಆದುದರಿಂದ ನಮ್ಮ ರಾಜ್ಯ ಸರಕಾರಗಳು ಯಾವ ಕಾರ್ಯವನ್ನೇ ಮಾಡಲಿ, ಅವು ಇತರ ರಾಜ್ಯಗಳೊಡನೆ ದೃಢ ಸಂಬಂಧವೇರ್ಪಡುವಂತಹವಿರಬೇಕು. ಅದು ಬಿಟ್ಟು ರಾಜ್ಯಗಳ ನಡುವೆ ಭಿನ್ನತೆಯೂ ಭಿನ್ನಾಭಿಪ್ರಾಯಗಳೂ ಹೆಚ್ಚುತ್ತ ಬಂದಲ್ಲಿ, ರಾಜ್ಯಗಳ ನಡುವಣ ವಿವಾದಗಳು ಮುಂದಿಟ್ಟವೆಂದಾಗುವಂತೆ ರಾಜ್ಯ ಪುನರ್ವಿಂಗಡಣೆಯೂ ಆಗುವುದು ಅನಿವಾರ್ಯವಾದೀತು; ವಲಯ ರಚನೆಯಲ್ಲಿ ಅಡಗಿರುವ ರಹಸ್ಯವಾದರೂ ಇದಕ್ಕಿಂತ ಬೇರೆಯಿರಲಾರದು

—ಗೋರಾ.


**ಪ್ರಣಯ ಮಾದರಿಯಿಂದ ವಿಭಿನ್ನವಾಗಿ,**
**ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,**
**ಬೆಳಕು ಕಂಡ ನಿತ್ಯನೂತನ ಕಥೆಗಳು!**

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

**ಕಥಾ ಕೌಮುದಿ**

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)



**‘ಕೋಕಿಲವಾಣಿ’**

(ಪ್ರಿನ್ಸಿಪಾಲ್ ವಿ.ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎಸ್. ಹೆಬ್ಬಾರ, ಎಂ.ಜಿ.ಎಂ. ಕಾಲೇಜು ಕುಂಜಿಬೆಟ್ಟು ಉಡುಪಿ.

## ನೇಹಿಗ ನೇಪಾಲ

(೪ನೇ ಪುಟದಿಂದ)

ಗಳು ಇಂದೂ ಮಂತ್ರಿಗಳಾಗಿ ಇದ್ದಾರೆ. ಗತ ಸಚಿವ ಸಂಪುಟದಲ್ಲಿದ್ದ ಡಾ| ತುಳಸಿಗಿರಿ ಇಂದು ರಾಜಾರ ಬಲಗೈಯಂತಿದ್ದ ಮಂತ್ರಿಮಂಡಲದ ಉಪಾಧ್ಯಕ್ಷರಾಗಿದ್ದಾರೆ. ಕಳೆದ ಮಂತ್ರಿಮಂಡಲದಲ್ಲಿದ್ದ ಶ್ರೀ ವಿಶ್ವಬಂಧು ಥಾಪಾ ಇಂದು ಗೃಹ ಮಂತ್ರಿಯಾಗಿದ್ದಾರೆ. ಪ್ರಜೆಗಳಿಗಂತೂ ರಾಜಾರ ಮೇಲೆ ಮಮತೆ ಹಾಗೂ ವಿಶ್ವಾಸ ಇದೆ. ಇದನ್ನು ನೇಪಾಳದಲ್ಲಿರುವ ವಿರೋಧಿ ಬಣದ ಮುಂದಾಳುಗಳೂ ಒಪ್ಪುತ್ತಾರೆ. ಹಾಗಿದ್ದರೂ 'ಪ್ರಜಾಪ್ರಭುತ್ವ'ದ ತಿರುಳನ್ನು ಪೆದ್ದವರಿನಿಸಿಕೊಳ್ಳುತ್ತಿರುವ ಕೆಲವು ರಾಜಕೀಯ ಪುಢಾರಿಗಳು ನೇಪಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಯಿತೆಂದು ಬೊಬ್ಬೆ ಹಾಕಲಾರಂಭಿಸಿದ್ದರು. ಇದೀಗ ಅಲ್ಲಿ ಹಲವಾರು ರೀತಿಯ ಚುನಾವಣೆಗಳು ನಡೆಯುತ್ತಿದ್ದು ಕ್ರಮಶಃ ಬಲಶಾಲಿ ಪ್ರಜಾಪ್ರಭುತ್ವದ ಸೂರ್ಯನ ಉದಯದ ಸೂಚನೆ ಕಂಡು ಬರುತ್ತಿದೆ.

ತ್ರಿವಿಷ್ಟಪವನ್ನು ತನ್ನ ದಾಸ್ಯಕ್ಕೊಳಪಡಿಸಿಕೊಂಡು ಲ್ಹಾಸದ ವರೆಗೆ ರಸ್ತೆಯನ್ನು ರಚಿಸಿರುವ ಚೈನಿ ಕಮ್ಯೂನಿಸ್ಟರು ಖಟ್ಮಂಡುವಿಗೆ ರಸ್ತೆ ರಚಿಸಲು ಅಪ್ಪಣೆಯನ್ನು ಕೇಳಿ ಅದರ ಮೇಲೆ ಆ ಕೆಲಸ ನಡೆಸುತ್ತಿದ್ದಾರೆ. ಭಾರತದ ಭೂಮಿಯ ಮೇಲೆ ಹೇಳದೆ ಕೇಳದೆ ರಸ್ತೆ ಹಾಕಿರುವಂತೆ ಅಲ್ಲಿ ಪುಣ್ಯವಶಾತ್ ಹಾಕಿರುವದಿಲ್ಲ. ತ್ರಿವಿಷ್ಟಪದ ದೈನ್ಯಾವಸ್ಥೆಯನ್ನು ಕಂಡೂ ಭಾರತ ಸರಕಾರ ಒಂದು ರೀತಿಯಲ್ಲಿರುವದರಿಂದ ನೇಪಾಲ ಸರಕಾರವಂತೂ ರಸ್ತೆ ರಚನೆಗೆ ಒಪ್ಪಿಗೆ ಕೊಡಬೇಕಾಗಿ ಬಂದಿರುತ್ತದೆ. ನೇಪಾಲಕ್ಕೆ ಹಲವಾರು ವಿಧದಲ್ಲಿ ಸಹಾಯ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಚೈನಿ ಕಮ್ಯೂನಿಸ್ಟರು ಕೊಡುತ್ತಿದ್ದಾರೆ. ನೇಪಾಲದೊಂದಿಗೆ ಭೀಕರ ರೀತಿಯ ವಾಪಕ್ಕೆ-ಘರ್ಷಣೆಗೆ ಅವರು ಮುಂದಾಗಿರುವದೂ ಇಲ್ಲ. ಭಾರತವನ್ನು ಬಗ್ಗು ಬಡಿದಲ್ಲಿ ನೇಪಾಲವನ್ನು ನೆಕ್ಕಿಬಿಡಬಹುದೆಂಬ ಮಹಾಕಾಂಕ್ಷೆ ಚೈನಿ ಕಮ್ಯೂನಿಸ್ಟರಿಗಿದೆ. ಹಿಮಾಲಯದ ಕುರಿತೂ ಒಂದು ರೀತಿಯ ಒಪ್ಪಂದಕ್ಕೆ ಬಂದಿದ್ದಾರೆ ಹೀಗಿದ್ದರೂ ಚೈನಿ ಕಮ್ಯುನಿಸ್ಟರ ಮೇಲೆ ಎಳ್ಳಿನಷ್ಟು ವಿಶ್ವಾಸ, ನಂಬಿಕೆ ನೇಪಾಲದವರಿಗಿರುವದಿಲ್ಲ. ಈ ಹಿಂದೆ ಪೂಜೆಗೆ ಇಂತಿಷ್ಟು ಆಡು-ಕುರಿಗಳನ್ನು ಒದಗಿಸಿಕೊಡುತ್ತೇವೆಂದು ಜವಾಬ್ದಾರಿ ವಹಿಸಿಕೊಂಡಿದ್ದ ಚೈನಾ ಸರಿಯಾದ ಸಮಯದಲ್ಲಿ ಮೋಸಮಾಡಿರುವದನ್ನು ನೇಪಾಲಿಗಳು ಮರೆಯುವಂತಿಲ್ಲ. ಚೈನಾದ ದ ಜನತೆ ಉಪವಾಸದಿಂದ ಸಾಯುತ್ತಿರುರುವಾಗ ಅವರು ಅಕ್ಕಪಕ್ಕದ ರಾಷ್ಟ್ರಗಳಿಗೆ ಅದೆಷ್ಟು ಆಹಾರ ಸಾಮಾಗ್ರಿಗಳನ್ನು ಸರಬರಾಯಿ ಮಾಡಲು ಸಾಧ್ಯವಿದೆ?

ರಷ್ಯನರು ಅಲ್ಲಿ ಆಸ್ಪತ್ರೆ ಸೌಕರ್ಯಗಳನ್ನೊದಗಿಸಿ ಕೊಡುತ್ತಿರುವಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಇತರ ರೀತಿಯಲ್ಲಿ ನೇಪಾಲಕ್ಕೆ ಸಹಾಯ ಮಾಡುತ್ತಿವೆ.

ಭಾರೀ ನೀರಾವರಿ ಯೋಜನೆಯ ಪೂರ್ಣ ಭಾರವನ್ನು ಭಾರತ ಸರಕಾರ ವಹಿಸಿಕೊಂಡಿದೆ. ಭಾರತೀಯ ಯಂತ್ರಶಾಸ್ತ್ರಜ್ಞರು ಅಲ್ಲಿ ಸಹಾಯ ಮಾಡುತ್ತಿದ್ದಾರೆ. ಅಲ್ಲಿಗೆ ಶ್ರೀ ಶಾಸ್ತ್ರಿಯವರು ಭೇಟಿಕೊಟ್ಟಿದ್ದರು. ಅವರೊಂದಿಗೆ ನೇಪಾಲದ ವಿದ್ಯುತ್ ಹಾಗೂ ಕೃಷಿ ಮಂತ್ರಿ ಡಾ| ನಾಗೇಶ್ವರ ಪ್ರಸಾದ ಸಿಂಗ್, ನೇಪಾಲದಲ್ಲಿರುವ ಭಾರತದ ರಾಯಭಾರಿ ಹರೀಶ್ವರ ದಯಾಳ್ ಹಾಗೂ ದಿಲ್ಲಿಯಲ್ಲಿರುವ ನೇಪಾಲದ ರಾಯಭಾರಿ ಪ್ರಾ| ಖನಾಲ ಕೂಡಾ ಇದ್ದರು. ಇದು ತ್ರಿಶೂಲ ನದಿಯ ದಡದಲ್ಲಿದೆ. ಇಷ್ಟು ದೊಡ್ಡ ಪ್ರಮಾಣದ ಅಭಿವೃದ್ಧಿ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಬೇರಾವದೂ ಇರುವದಿಲ್ಲ. ನೇಪಾಲದ ಅಂಚೆ-ತಂತಿ ವ್ಯವಸ್ಥೆ ಭಾರತ ಸರಕಾರದ ಜವಾಬ್ದಾರಿಯಲ್ಲಿದೆ.

ಈ ಹಿಂದೆ ಅದೆಂದೂ ನೇಪಾಲ-ಭಾರತದ ನಡುವೆ ಅದ್ಯಾವ ರೀತಿಯ ವೈಮನಸ್ಸುಂಟಾಗಿರುವದಿಲ್ಲ. ಇದೀಗ ಉಂಟಾಗಿರುವ ಭಿನ್ನಾಭಿಪ್ರಾಯವನ್ನೂ ಬಹಳ ಸುಲಭವಾಗಿ ತೊಡೆದು ಹಾಕಬಹುದೆಂಬ ಧೈರ್ಯ ಗೃಹಮಂತ್ರಿ ಶಾಸ್ತ್ರೀಜೀಯವರಿಗೂ ಬಂದಿದೆ. ಇದಕ್ಕೆ ಸ್ಪಷ್ಟ ಧೋರಣೆ ಅತ್ಯಗತ್ಯ.

— ಶಿವಶಂಕರ, ಮದ್ರಾಸು.

### ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಅವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸ್ಥಳ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ.

## ಮಾತೃ ಭೂಮಿ ಭಾರತ

ಮಾತೃಭೂಮಿ ಭಾರತ
ಇವಳ ಹಿರಿಮೆಯದ್ಭುತ ‖ ಪ ‖
ವೇದವನ್ನು ಕೊಟ್ಟಿದೆ
ಸ್ವರ್ಗ ಸಮತೆ ಗಳಿಸಿದೆ
ಸಾಧು ಸಂತ ಜನನದೆ
ಪುಣ್ಯ ಭೂಮಿ ಎನಿಸಿದೆ ‖
ಗಂಗೆ ಬ್ರಹ್ಮ ನದಿಗಳ
ಗೋದೆ ಕೃಷ್ಣ ಜಲಗಳ
ಪುಣ್ಯತೀರ್ಥ ಸ್ಥಳಗಳ
ಒದಗಿಸಿಹುದು ವರಗಳ ‖
ಬದರಿ ಹರಿ ದ್ವಾರವು
ನಮ್ಮ ಭವ್ಯ ತಾಣವು
ಮುತ್ತಿನವರ ಕೇಂದ್ರವು
ಇದುವೆ ನಮ್ಮ ರಾಷ್ಟ್ರವು ‖
ವಿಶ್ವದಲ್ಲೆ ಖ್ಯಾತಿಹ
ಶಿಖರವೀ ಹಿಮಾಲಯ
ನಮ್ಮ ದೇಶ ರಕ್ಷೆಯ
ಭೂರಿ ಕರುಣೆಯಾಶ್ರಯ ‖
ಖನಿಜ ದೊರೆವ ನಾಡಿದು
ಕರ್ಮ ಭೂಮಿ ನಮ್ಮದು
ಅಮಿತ ಧನದ ಬೀಡಿದು
ಸುಖದ ಕಣಜ ನಿಜವಿದು ‖
ಮಳೆಯ ಭಾಗ್ಯ ಪಡೆದಿದೆ
ಬೆಳೆಯ ಭೂಮಿ ಹಾಗಿದೆ
ಕಾಡು ಸಿರಿಯ ತುಂಬಿದೆ
ಕಾಮಗಾರಿ ಬಲವಿದೆ ‖
ಹಿಂದು ಜೈನ ಬೌದ್ಧವು
ಕ್ರಿಸ್ತ ಇಸ್ಲಾಮ ಧರ್ಮವು
ಒಂದುಗೂಡಿ ಸ್ನೇಹವು
ಹಿಂದು ಮೆರೆವ ದೇಶವು ‖
ಶಾಂತಿ ಮಂತ್ರಪಠಿಸುತ
ಜಗದ ಕಣ್ಣು ತೆರೆಸುತ
ಪಾರತಂತ್ರ್ಯ ಕಳೆಯುತ
ಕೀರ್ತಿಪಡೆದ ಭಾರತ ‖
ಪಂಚ ಶೀಲ ರಚಿಸಿದೆ
ಯುದ್ಧ ಭಯವನಿಳಿಸಿದೆ
ಭಾವವೈಕ್ಯ ಹೊಂದಿದೆ
ಸರ್ವ ಸಮತೆ ಬೆಳೆಸಿದೆ ‖
ನೆರೆಯ ದೇಶ ಸಖ್ಯವ
ಸತತವಾಗಿ ಬಯಸುವ
ಅಬಲರನ್ನು ಪೊರೆಯುವ
ನಮ್ಮ ನಿಷ್ಠೆ ಮುಳಿಸುವ ‖
ವೀರವನಿತೆಯೀಕೆಯು
ಪುಣ್ಯ ಉದರ ವಿಮಲದು
ಇವಳೆ ನಮ್ಮ ಜನನಿಯು
ತಾಯಿ ಮಹಿಮೆ ಹಿರಿಯದು ‖
ಶರಣು ನಾವು ನ್ಯಾಯಕೆ
ಮನವು ಇಲ್ಲ ಲೋಭಕೆ
ಶತ್ರು ಜನರ ಮೋಸಕೆ
ಸಿದ್ಧರಿಹೆವು ಸಮರಕೆ ‖
ವರ್ಗ ಭೇದ ತ್ಯಜಿಸುವ
ತೊರೆದು ಪಕ್ಷ, ಸ್ವಾರ್ಥವ
ಕಾಯಕಷ್ಟ ಗೈಯುವ
ದುಡಿವ ನಾವು ಸಂತತ ‖
ವ್ಯಯವ ಕಡಿಮೆ ಗೈವೆವು
ನಾವು ನಿಧಿಯ ಕೊಡುವೆವು
ಚಿನ್ನವನ್ನೆ ತೊರೆವೆವು
ದೇಶ ಸೇವೆ ಗೈವೆವು ‖
ನಮ್ಮ ನಾಡು ಪೋಷಕ
ದುಷ್ಟ ಜನರ ಬಾಧಕ
ನಿರುತ ವಿಹದು ಮಂಡಿತ
ತಳೆಯಿರೆಲ್ಲ ಜಾಗ್ರತ ‖
ತಾಯಿನಾಡನುಳಿಸಿರಿ
ಸೈನ್ಯ ಶಕ್ತಿ ಬೆಳೆಸಿರಿ
ತಾಯ ಋಣವ ಸಲಿಸಿರಿ
ಹೃದಯ ಧೈರ್ಯ ತುಂಬಿರಿ ‖
ವಿದೇಶಿಯರ ತಡೆಯುವ
ಸದೆದು ಒದೆದು ಬಡಿಯುವ
ನಮ್ಮ ಶೌರ್ಯ ತೋರುವ
ರಣದಿ ಮುಂದೆ ಸಾಗುವ ‖

ಸಾ. ಲ. ನಾ. ಉಪಾಧ್ಯಾಯ


ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**(ENGLISH MADE EASY)**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

**ಮನೆ ಮದ್ದು**

**(HOME REMEDIES)**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**LETTER WRITING MADE EASY**

**ಸುಲಭದಲ್ಲಿ ಪತ್ರಲೇಖನ**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕಾಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.


ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 4/1963

1) ಭಾರತಿ 2) ರಾಮಚಂದ್ರ 3) ಮೈನರ್ ಸೀತಾರಾಮ 4) ಮೈ. ಚಂದ್ರಕಲಾ 5) ಮೈ. ವಸಂತಿ— 3ರಿಂದ 5ನೇ ಮೈನರ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳು ಗಾರ್ಡಿಯನ್ನಳಾಗಿಯೂ ಕೂಡಾ— ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದ್ರೆ:—

ಮೇಲೆ ಹೇಳಿದ ಅರ್ಜಿದಾರರು ತಮ್ಮ ತಾಯಿ ಕೊಲ್ಲೂರಿ ಜಿಂಗ್ರನ ಮಗಳು ಯೂ ನಾರಾಯಣ ಮಡಿವಾಳರ ಹೆಂಡತಿ, ಬಿಜಾಡಿ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಟೀಚರ್ ಆಗಿದ್ದ ಮೃತ ಕೆ. ಕಮಲಾ ಬಾಬು ದಕ್ಷಿಣ ಕನ್ನಡ ಜಿಲ್ಲಾ ಡಿಫೆನ್ಸ್ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿರುವ ಪ್ರೊವಿಡೆಂಟ ಫಂಡ A/C. ನಂಬ್ರ 3059ರಲ್ಲಿರುವ ಹಣ ರೂ. 665/-ನ್ನು ಪಡೆಯಕೊಳ್ಳುವರೆ ಸದ್ರಿ ಮೇಲೆ ಹೇಳಿದ ಕೋರ್ಟಿನಲ್ಲಿ ವಾರೀಸ ಸರ್ಟಿಫಿಕೇಟಿಗೆ ಅರ್ಜಿ ಮಾಡಿಕೊಂಡಿರುತ್ತಾರೆ. ಅಲ್ಲದೆ ಸದ್ರಿ ಅರ್ಜಿಯ ತಾರೀಕು 29—3—63ಕ್ಕೆ ತನಿಖೆಗೆ ಇಟ್ಟಿರುತ್ತದೆ. ಮೇಲೆ ಹೇಳಿದ ಅರ್ಜಿದಾರರು ವಾರಿಸು ಸರ್ಟಿಫಿಕೇಟು ಪಡೆಯಕೊಳ್ಳುವ ಬಗ್ಗೆ ಆಕ್ಷೇಪಣೆ ಹೇಳುವವರು ತಾ.29-3-63 ಹಗಲು 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಆಕ್ಷೇಪಣೆ ದಾಖಲುಮಾಡತಕ್ಕದ್ದು.

G Ramakrishna Rao,
B. A., L. L. B.,
*Advocate for Petitioner.*

Coondapoor, 6—3—63

# ರಾಷ್ಟ್ರ ಧ್ವಜದಲ್ಲಿ ಚರಕದ ಚಿಹ್ನೆ

**ಕವಿತೆಯ ಕುರಿತು ಟೀಕಿಸಿದ ಎಸೆಂಬ್ಲಿ ಸದಸ್ಯರಿಗೆ ಉತ್ತರ**

ಬೆಂಗಳೂರಿನ 'ಪ್ರಜಾವಾಣಿ' ಪತ್ರಿಕೆಯ ಮಾರ್ಚಿ ತಿಂಗಳ ೧೧ನೇ ದಿನಾಂಕದ ಸಂಚಿಕೆಯ ಐದನೇ ಪುಟದ ಆರನೇ ಕಾಲಂನಲ್ಲಿ ಪ್ರಕಟವಾದ ವರದಿಯಂತೆ, ಮೈಸೂರು ಎಸೆಂಬ್ಲಿಯಲ್ಲಿ ಸದಸ್ಯರು ಮಾಡಿದ ಆಪಾದನೆಗಳಿಗೆ ಉತ್ತರ ನೀಡುತ್ತಿದ್ದ ಮಾನ್ಯ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರು 'ರಾಷ್ಟ್ರಧ್ವಜದ ಬಗ್ಗೆ ಚರಕದ ಪ್ರಸ್ತಾಪವಿರುವ ಕವನವನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿದ ವಿಚಾರದಲ್ಲಿ ಸದಸ್ಯರೊಬ್ಬರು ಟೀಕಿಸಿದ' ಕುರಿತು ವಿವರಣೆ ನೀಡುತ್ತಾ, ತಾವು ವಿವರಣೆ ನೀಡದಿದ್ದಲ್ಲಿ ಕನ್ನಡ ಕವಿ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರಿಗೆ ಅವಮಾನ ಮಾಡಿದಂತಾಗುವುದು ಎಂದು ತಿಳಿಸಿ ಆ ಕವಿತೆಯ ಕುರಿತು ಸಮರ್ಥಿಸಿದ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಕೃತಜ್ಞನಾಗಿದ್ದೇನೆ.

ನನ್ನ ಕವಿತೆಯ ಕುರಿತು, ಎಂದರೆ ರಾಷ್ಟ್ರಧ್ವಜದಲ್ಲಿ ಚರಕದ ಚಿಹ್ನದ ವಿಷಯ ಬರೆದುದರ ಬಗ್ಗೆ, ಟೀಕಿಸಿದ ಮಾನ್ಯ ಸದಸ್ಯರ ಯೋಗ್ಯತೆಗೆ ಯಾವುದೇ ಕೊರತೆಯನ್ನು ನಾನು ಹೇಳಲು ಸರ್ವಥಾ ಇಚ್ಛಿಸುವುದಿಲ್ಲ. ಮಾತ್ರವಲ್ಲ, ಅವರ ಸದಸ್ಯತ್ವದ ಗೌರವವನ್ನು ಸಂಪೂರ್ಣ ಒಪ್ಪಿಕೊಂಡೇ ನಾನು, ಅಂತಹ ಅವಿಚಾರಿತ ಅಪ್ರಬುದ್ಧ ಟೀಕೆಯಿಂದ ನನ್ನ ಕವಿತೆಯ ಕುರಿತು ಮಾತ್ರವಲ್ಲ ವಿಶೇಷತಃ ನಮಗೆಲ್ಲರಿಗೂ ಪರಮ ಪವಿತ್ರವಾದ ರಾಷ್ಟ್ರಧ್ವಜದ ಕುರಿತು ಜನಸಾಮಾನ್ಯರಲ್ಲಿ ಉಂಟಾಗಬಹುದಾದ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು, ಈ ವಿಚಾರವಾಗಿ ನಾನು ಸ್ಪಷ್ಟವಾದ ವಿವರವನ್ನು ಸಾರ್ವಜನಿಕರಿಗೆ ಕೊಡುವುದು ಕರ್ತವ್ಯವೆಂದು ಈ ಕಾರ್ಯಕ್ಕೆ ಕೈ ಹಚ್ಚಿರುವೆನು.

'ನಮ್ಮ ಬಾವುಟ' ಎಂಬುದು ನನ್ನ ಕವಿತೆಯ ಹೆಸರು. ಆ ಕವಿತೆಯ ಭಾಗ ಇಂತಿದೆ.

“ಏರುತಿಹುದು ಹಾರುತಿಹುದು
ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ
ಕೇಸರಿ ಬಿಳಿ ಹಸುರು ಮೂರು ಬಣ್ಣ
ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು
ಇಂಥ ಧ್ವಜವು ನಮ್ಮ ಧ್ವಜವು
ನೋಡು ಹಾರುತಿರುವುದು
ಧ್ವಜದ ಭಕ್ತಿ ನಮ್ಮ ಶಕ್ತಿ ನಾಡ
ಗುಡಿಯು ಮೆರೆವುದು.
ಕೆಂಪು ಕಿರಣ ತುಂಬಿ ಗಗನ
ಹೊನ್ನ ಬಣ್ಣವಾಗಿದೆ
ನಮ್ಮ ನಾಡ ಗುಡಿಯ ನೋಡ
ನೋಡಿರಣ್ಣ ಹೇಗಿದೆ!”

ಮೈಸೂರು ವಿದ್ಯಾ ಇಲಾಖೆಯವರು ೧೯೫೯ರಲ್ಲಿ ಪ್ರಕಟಿಸಿದ ಕನ್ನಡ ಎರಡನೆಯ ಪುಸ್ತಕದಲ್ಲಿ ಈ ಪದ್ಯವಿದೆ. ಮೈಸೂರು ವಿದ್ಯಾ ಇಲಾಖೆಯವರು ಪ್ರಕಟಿಸುವುದಕ್ಕಿಂತ ಬಹಳ ಹಿಂದೆ ಎಂದರೆ ೧೯೫೩ರಲ್ಲಿಯೇ ನಾನು ಬರೆದ 'ಸರ್ವೋದಯ ಕನ್ನಡ ವಾಚನ ಮಾಲೆ'ಯ ಎರಡನೆಯ ಪುಸ್ತಕದಲ್ಲಿ ಈ ಪದ್ಯ ಪ್ರಕಟವಾಗಿದ್ದು ೧೯೫೯ಕ್ಕೆ ಆ ವಾಚನ ಮಾಲೆ ಹತ್ತು ಮುದ್ರಣಗಳಾಗಿದ್ದು, ಸರಕಾರ ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ ನಂತರವೂ ಆ ಪುಸ್ತಕ ಪುನರ್ಮುದ್ರಣವಾಗುತ್ತಾ ಇದ್ದು, ದಕ್ಷಿಣ ಕನ್ನಡ, ಕೊಡಗು, ಬಳ್ಳಾರಿ, ಹೈದರಾಬಾದು ಕರ್ನಾಟಕ, ಕೇರಳ ಈ ಭಾಗಗಳಲ್ಲಿ ಜನಪ್ರಿಯವಾಗಿ ಪ್ರಚಾರದಲ್ಲಿದ್ದಿತು. ಅಷ್ಟು ವರ್ಷಗಳಲ್ಲಿಯೂ, ಆ ಯಾವ ಕಡೆಗಳಿಂದಲೂ, ಅಷ್ಟು ಪುನರ್ಮುದ್ರಣಗೊಂಡಿದ್ದರೂ, ನನ್ನ ಕವಿತೆ ಕುರಿತು ಕೇಡು ಬರದ ಈ ಟೀಕೆ ಮೈಸೂರಲ್ಲಿ, ಅದೂ ಎಸೆಂಬ್ಲಿಯಲ್ಲಿ ಮುಂದೆ ಬರಬೇಕಾಗಿದ್ದರೆ, ನಮ್ಮ ವಿಚಾರ ಶಕ್ತಿಯ ಹೆಚ್ಚಳಕ್ಕೆ ಇದು ನಿದರ್ಶನವೇ—ಹೇಗೆಂದು ನಾವು ಪರ್ಯಾಲೋಚಿಸ ತಕ್ಕದ್ದಿದೆ.

ನಮ್ಮ ರಾಷ್ಟ್ರ ಧ್ವಜವು ರೂಪಿತವಾದುದು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ದೆಹಲಿಯಲ್ಲಿ ಸೇರಿದ ಘಟನಾ ಸಮಿತಿಯ Constituent Assembly) ಸಭೆಯಲ್ಲಿ. ನಮ್ಮ ದೇಶಕ್ಕೆ ಗೌರವಾರ್ಹವಾದ ಒಂದು ಘಟನೆಯನ್ನು ರೂಪಿಸಿದ್ದೂ, ಅದೇ ಪರಮೋನ್ನತ ಪರಮಾಧಿಕಾರ ಪಡೆದ ಪ್ರಾತಿನಿಧಿಕ ಸಂಸ್ಥೆ. ಅಂದು, ಅಲ್ಲಿ, ದೇಶದ ಮಹಾಮೇಧಾವಿಗಳು, ಧೀಮಂತರು, ಧುರೀಣರು ಪ್ರತಿನಿಧಿಗಳು ಎಲ್ಲರೂ ಕೂಡಿ ಈ ನಮ್ಮ ಬಾವುಟದ ಕುರಿತು ಕೂಲಂಕಷ ಚರ್ಚೆಮಾಡಿ ಒಂದು ಯೋಗ್ಯ ನಿರ್ಧಾರಕ್ಕೆ ಬಂದರು. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಅಪ್ರತಿಮ ನೇತೃತ್ವದಲ್ಲಿ ಚರಕಾಂಕಿತ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದು, ಬಾಲವೃದ್ಧರಾದಿಯಾಗಿ ಸ್ತ್ರೀ ಪುರುಷರೆನ್ನದೆ, ಲಾಠಿ ಗುಂಡುಗಳ ಸೆರೆಮನೆ ಸಂಕಷ್ಟಗಳ, ಪಡಬಾರದ ವಿವಿಧ ಬವಣೆಗಳನ್ನನುಭವಿಸಿ, ತ್ಯಾಗದೀಕ್ಷೆ ತೊಟ್ಟು, ರಾಷ್ಟ್ರದ ಬಂಧವಿಮೋಚನೆಗಾಗಿ ಹೂಡಿದ ಹೋರಾಟ, ಆ ಹೋರಾಟದ ಕಾಲಗಳಲ್ಲಿ ದಿವ್ಯ ಪ್ರೇರಣೆಯಿತ್ತ ಆ ತ್ರಿವರ್ಣ ಚರಕಾಂಕಿತ ಧ್ವಜ, ನಮ್ಮ ಜನತೆಯ ಅಸದೃಶ ಬಲಿದಾನ, ಕೊನೆಗೆ ಸ್ವಾತಂತ್ರ್ಯ ಪ್ರಾಪ್ತಿ— ಈ ರೋಮಾಂಚಕ ಚರಿತ್ರೆಯನ್ನು ಎಂದೆಂದಿಗೂ ನಾವು ಮರೆಯತಕ್ಕದ್ದಲ್ಲ. ಹಾಗಾಗಿ ಅದೇ ಚಿಹ್ನೆ ನಮ್ಮ ರಾಷ್ಟ್ರ ಧ್ವಜದಲ್ಲಿ ಸೂಚ್ಯವಾಗಿ ಉಳಿಯುವುದು ಸಮಂಜಸವೂ, ನ್ಯಾಯೋಚಿತವೂ ಆಗಿದೆಯೆಂದು, ರಾಷ್ಟ್ರಕ್ಕೆ ಧ್ವಜವನ್ನು ನಿರ್ಣಯಿಸಲು ಸೇರಿದ ಘಟನಾ ಸಮಿತಿಯ ಸಭೆಯಲ್ಲಿ ನಮ್ಮ ದೇಶದ ನಾಯಕರು ಒಪ್ಪಿಕೊಂಡರು ಎಂಬುದನ್ನು ನಾವು ತಿಳಿದಿರದಿದ್ದರೆ, ನಮ್ಮ ಇಂದಿನ ಎಸೆಂಬ್ಲಿಗಳು, ಎಸೆಂಬ್ಲಿ ಸದಸ್ಯತ್ವಗಳು, ಯಾವ ಆ ಮಹಾ ಮಾತೃ ಸಂಸ್ಥೆಯಿಂದ ರೂಪಿತವಾಯಿತೋ, ಆ ಹಿರಿಯ ಸಂಸ್ಥೆಯ ಗೌರವಕ್ಕೆ ಕುಂದು ತಂದಂತೆ ಆದೀತೆಂದು ಎಲ್ಲರೂ ಚೆನ್ನಾಗಿ ವಿಚಾರಿಸಿಕೊಳ್ಳಬೇಕಾಗಿದೆ.

ಘಟನಾ ಸಮಿತಿಯಲ್ಲಿ ರಾಷ್ಟ್ರ ಧ್ವಜವನ್ನು ಅಂಗೀಕರಿಸುವ ಸಂದರ್ಭದಲ್ಲಿ ನಮ್ಮ ಮುಂದಾಳುಗಳು ಮಾಡಿದ ಭಾಷಣಗಳನ್ನು ನಾವಿಂದು ಮನನ ಮಾಡತಕ್ಕದ್ದಿದೆ. ಆ ಸಭೆಯಲ್ಲಿ ರಾಷ್ಟ್ರ ಧ್ವಜವನ್ನು ಮಂಡಿಸುತ್ತಾ ಪ್ರಧಾನ ಮಂತ್ರಿ ಶ್ರೀ ನೆಹರು ಮಾಡಿದ ಭಾಷಣದ ಭಾಗ ಇಂತಿದೆ.

“ನಾನೀ ಧ್ವಜದ ಕುರಿತು ಕೆಲ ಮಾತುಗಳನ್ನು ಹೇಳಲೆ? ನಮ್ಮಲ್ಲಿ ಹಲವರು ಈ ಹಿಂದೆ ಉಪಯೋಗಿಸುತ್ತಿದ್ದ ಧ್ವಜಕ್ಕಿಂತ ಇದರಲ್ಲಿ ತುಸು ವ್ಯತ್ಯಾಸ ಕಾಣಬಹುದು. ಬಣ್ಣಗಳು ಅವೇ, ಕೇಸರಿ, ಬಿಳಿ, ಹಸುರು. ಬಿಳಿಯ ಭಾಗದಲ್ಲಿ ಹಿಂದೆ ಚರಕವಿತ್ತು. ಆ ಚರಕ—ಭಾರತದ ಸಾಮಾನ್ಯ ಜನತೆಯ ಪ್ರತೀಕವಾಗಿ, ಭಾರಿ ಜನರ ಪ್ರತೀಕವಾಗಿ, ಜನರ ಕೈಗಾರಿಕೆಯ ಪ್ರತೀಕವಾಗಿ, ಮಹಾತ್ಮಾ ಗಾಂಧಿಯವರು ಇತ್ತ ಸಂದೇಶದಿಂದ ನಮಗೆ ಬಂದಿತ್ತು. ಈ ಚರಕವು, ಈಗ, ಈ ಧ್ವಜದಲ್ಲಿ ತುಸು ಮಾತ್ರ ವ್ಯತ್ಯಾಸಗೊಂಡಿದೆ ಹೊರತು ಅದು ಇಲ್ಲದೆ ಆಗಿಲ್ಲ. ಹಾಗಾದರೆ ಈ ವ್ಯತ್ಯಾಸವೇಕೆ ಬಂತು? ಸಾಮಾನ್ಯವಾಗಿ ಹೇಳುವುದಿದ್ದರೆ, ಧ್ವಜದ ಒಂದು ಪಾರ್ಶ್ವವು ಇನ್ನೊಂದು ಪಾರ್ಶ್ವದಂತೆಯೇ ಇರಬೇಕು. ಈ ಧ್ವಜದಲ್ಲಿ ಹಿಂದೆ ಚರಕ ಇದ್ದಾಗ ಒಂದು ಕಡೆಯಲ್ಲಿ ಚಕ್ರವಿತ್ತು; ಇನ್ನೊಂದು ಕಡೆ ಕದಿರು ಇತ್ತು. ಆದ ಕಾರಣ ಎರಡೂ ಬದಿಗಳೂ ಒಂದೇ ರೀತಿ (ಸಿಮೆಟ್ರಿ) ಆಗಬೇಕಾದ್ದಕ್ಕೆ ತೊಂದರೆಯಾಯಿತು. ಹಾಗಾಗಿ ಸಾಕಷ್ಟು ವಿಚಾರ ಮಾಡಿದ ಮೇಲೆ (ಚರಕದ) ಆ ಮಹಾ ಚಿಹ್ನೆ ಕೇವಲ ಸ್ವಲ್ಪ ವ್ಯತ್ಯಾಸಪೂರ್ವಕ ನವೀನ ಧ್ವಜದಲ್ಲಿ ಮುಂದುವರಿಯಬೇಕೆಂದು ನಾವು ನಿರ್ಣಯ ಮಾಡಿದೆವು. ಹಾಗಾಗಿ ಚರಕ ಮತ್ತು ಅದರ ಚಕ್ರದ ಆ ಹಳೆಯ ಸಂಪ್ರದಾಯವೇ ಈ ಧ್ವಜದಲ್ಲಿಯೂ ಮುಂದುವರಿಯುತ್ತದೆ.” (ಕನ್ನಡ ಅನುವಾದ)

ಗಾಂಪರೊಡೆಯರಾದವರಿಗೂ ಮೇಲಿನ ಸ್ಪಷ್ಟವಾದ ಮಾತುಗಳಿಗೆ ವಿವರಣೆ ಅವಶ್ಯ ಬೀಳಲಾರದು. ಹಾಗಾಗಿ ಮಾನ್ಯ ಸದಸ್ಯರು ಕವಿತೆಯನ್ನಾಗಲಿ, ಕವಿಗಳನ್ನಾಗಲಿ, ವಿದ್ಯಾ ಇಲಾಖೆಯನ್ನಾಗಲಿ, ವಿದ್ಯಾ ಮಂತ್ರಿಗಳನ್ನಾಗಲಿ, ಸರಕಾರವನ್ನಾಗಲಿ ಈ ಕುರಿತು ಟೀಕಿಸಿದುದು ನಿರಾಧಾರವಾದುದೆನ್ನದೆ ನಿರ್ವಾಹವಿಲ್ಲ. ಅವರಿಗೆ ಇನ್ನೂ ಟೀಕಿಸುವ ಹಕ್ಕಿದೆಯೆಂದು ಮಾನ್ಯ ಸದಸ್ಯರು ಭಾವಿಸುವುದಿದ್ದರೆ ನಮ್ಮ ರಾಷ್ಟ್ರಕ್ಕೆ ಧ್ವಜವನ್ನೂ ಘಟನೆಯನ್ನೂ ರೂಪಿಸಿದ ಆ ಪರಮಾಧಿಕಾರದ ಸಭೆಯನ್ನ—ಘಟನಾಸಮಿತಿಯನ್ನು—ಟೀಕಿಸಿದಂತೆ ಆಗುತ್ತದೆಯೆಂದು ಗಮನಕ್ಕೆ ತಂದುಕೊಳ್ಳಬೇಕಾಗಿ ವಿನಂತಿ.

ಮೈಸೂರು ಸರಕಾರದ ವಿದ್ಯಾ ಇಲಾಖೆಯ ಅಧಿಕಾರಿಗಳು ಈ ಕುರಿತಾಗಿ ನನ್ನೊಡನೆ ಚರ್ಚಿಸಿದ್ದರು. ಆ ಸಂದರ್ಭದಲ್ಲಿ ನಾನವರಿಗೆ ಸೂಕ್ತ ಆಧಾರ ವಿವರಣೆಗಳನ್ನು ನೀಡಿದ್ದೆನು. ರಾಷ್ಟ್ರಧ್ವಜದಲ್ಲಿ ಚರಕದ ಪ್ರಸ್ತಾಪ ಮಾಡಿದುದು ತಪ್ಪಲ್ಲವೆಂದೂ ಆ ಕುರಿತು ಪ್ರಸ್ತಾಪಿಸದೆ ಇದ್ದರೆ ತಪ್ಪಾಗುವುದೆಂದೂ, ಚರಕದ ವಿಷಯ ಪ್ರಸ್ತಾಪಿಸುವ ಮೂಲಕ ವಿದ್ಯಾರ್ಥಿಗಳಿಗೆ ಧ್ವಜದ ಇತಿಹಾಸ ತಿಳಿಯಲು ಅಸ್ಪದ

## ಬಿ. ವೆಂಕಟಾಚಾರ್ಯರು

(೨ನೇ ಪುಟದಿಂದ)

ವನ್ನು ಅನುಸರಿಸುವುದರಿಂದ ಶೈಲಿಯ ಗುಣವು ಮೂಲಕ್ಕೆ ಸಲ್ಲಬೇಕಾದರೂ ಕನ್ನಡದ ಬಿಗಿಯಲ್ಲಿ ನಾವು ವೆಂಕಟಾಚಾರ್ಯರ ವಿದ್ವತ್ತನ್ನೂ ಕಲ್ಪನೆಯನ್ನೂ ಕಾಣಬಹುದು. ಅವರ ಕಾದಂಬರಿಗಳಲ್ಲಿ ಇಂದಿಗೂ ಅಚ್ಚಳಿಯದ ತಾರುಣ್ಯ, ರಮ್ಯತೆ, ರುಚಿಗಳು ಉಳಿದಿವೆ. ಹೊಸ ರುಚಿಗಳು ಒಂದನೂ ಅವುಗಳ ಕಾಂತಿಯ ಕಳೆದಿಲ್ಲ. ಈಗ ಹೇಳಿದ ಕೆಲವು ಕಾದಂಬರಿಗಳು ಇಂದು ನಮ್ಮ ನಾಡಿನಲ್ಲಿ ಮನೆಮಾತಾಗಿವೆ.

ಈ ಸಂದರ್ಭದಲ್ಲಿ ಡಾ|| ಎ. ಆರ್. ಕೃಷ್ಣ ಶಾಸ್ತ್ರಿಗಳು ಹೇಳಿರುವ ಒಂದು ವಾಕ್ಯವನ್ನು ಉದ್ಧರಿಸುವುದು ಉಚಿತವಾಗಿ ಕಾಣುತ್ತದೆ.

“ಬಂಗಾಳವು ಆಧುನಿಕ ಭರತಖಂಡಕ್ಕೆ ಹಲವು ಕ್ಷೇತ್ರಗಳಲ್ಲಿ ಮಾರ್ಗದರ್ಶನ ಮಾಡಿದೆ, ಸ್ಫೂರ್ತಿಕೊಟ್ಟಿದೆ, ಮೇಲ್ಪಂಕ್ತಿಯನ್ನು ಹಾಕಿದೆ. ಭಾಷಾಂತರಗಳಾದ ಬಂಕಿಂಚಂದ್ರನ ಲೇಖನಗಳು ಆಧುನಿಕ ಕನ್ನಡ ಸಾಹಿತ್ಯಕ್ಕೆ ಒದಗಿಸಿಕೊಟ್ಟಿರುವ ಸಂಪತ್ತು ಅಲ್ಪವೇನಲ್ಲ. ಆದರೆ ಅದು ಈಗ ಅಗೋಚರವಾಗಿ ಅಗೆದು ತೆಗೆಯಬೇಕಾಗಿದೆ.”

ಈ ಅಗೆದು ತೆಗೆಯುವ ಕಾರ್ಯ ಬೇಗ ಯಶಸ್ವಿಯಾಗಲೆಂದು ಹಾರೈಸೋಣ.
(ಸೌಜನ್ಯ: ಆಕಾಶವಾಣಿ, ಬೆಂಗಳೂರು)

**ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......**

**ಇಂದೇ ಪ್ರಾರಂಭಿಸಿರಿ — ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ನಮ್ಮ **3** ಹೊಸ ಶಾಖೆಗಳು— ಆಲ್ಸೂರು, (ಬೆಂಗಳೂರು) **ಕೋಲಾರ** ಮತ್ತು **ಕೃಷ್ಣರಾಜ ಪೇಟೆ**ಗಳಲ್ಲಿ ತೆರೆಯಲ್ಪಡುವವೆಂದು ತಿಳಿಸಲು ಸಂತೋಷಪಡುತ್ತೇವೆ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರಸ್ತೆ,
**ಮಂಗಳೂರು—3.**

## ಭಾಗ್ಯಲಕ್ಷ್ಮಿ ದೂರವಾದಳು

(೨ನೇ ಪುಟದಿಂದ)

ಣಕ್ಕಿಂತ ಮಹತ್ವ ಬೇರಾವ ಗುಣಗಳಿಗೂ ಇಲ್ಲ. ಅದನ್ನು ಸ್ಪಷ್ಟವಾಗಿ ನುಡಿಯಲಾರದ ಆಕೆ ಆ ಹಣವನ್ನೇ ಗುಣವೆಂದು ಮಾರ್ಪಡಿಸಿ ಹೊಗಳುತ್ತಿದ್ದಳು ಅಷ್ಟೆ.

ಶಾಂತಳಿಗೆ ತನ್ನತೆಗಳಿಕೆ, ಕಿರಿ ಸೊಸೆಯ ಹೊಗಳಿಕೆ, ಕೇಳಿ, ಕೇಳಿ ಬೇಸರ ಬಂದಿತ್ತು. ಆಕೆ ಮೌನವಾಗಿ ಸಹಿಸಿಕೊಳ್ಳುತ್ತಿದ್ದಳು. ಸುಬ್ಬುವಂತೂ ರಾತ್ರಿ ಬಂದು ಬೆಳಗಾಗುವ ಮೊದಲು ಹೋಗುವವ. ತಾಯಿಯ ಯಾವ ಮಾತನ್ನೂ ಲಕ್ಷ್ಯಕ್ಕೆ ತರುವವನಲ್ಲ. ಯೋಚಿಸುವ ಸಮಯವಂತೂ ಮೊದಲೇ ಇರಲಿಲ್ಲ. ಇನ್ನು ವಾಸು, ತಾಯಿಯ ವರ್ತನೆಯನ್ನು ಎಷ್ಟೋ ಸಲ ವಿರೋಧಿಸಿದ್ದ. ಅಲ್ಲದೆ ಸುಶೀಲೆಯ ಗುಣವೂ ಕ್ರಮೇಣ ತಿಳಿಯುತ್ತಾ ಬಂತು. ಅವಳ ಐಶ್ವರ್ಯದ ಅಹಂಕಾರ ಗಂಡನಿದಿರೂ ತಲೆ ಎತ್ತುತಿತ್ತು, ತನಗೆ ಇಲ್ಲಿಯ ಯಾವ ಸಹಾಯ, ಸಹಕಾರಗಳೂ ಅಗತ್ಯವಿಲ್ಲ, ಎಂಬ ದರ್ಪದಿಂದಿದ್ದಳವಳು. ತನ್ನ ತಾಯಿಯೇ ಸೊಸೆಯನ್ನು ಹೊಗಳಿ ಅವಳ ಹೆಮ್ಮೆಯನ್ನು ಹೆಚ್ಚಿಗೇರಿಸುವವಳು ಎಂದರಿತಿದ್ದ ವಾಸು ತಾನಾಗಿಯೇ ಬುದ್ಧಿ ಬರಲಿ ಎಂದುಕೊಂಡ, ಅಲ್ಲದೆ ಬರಿಯ ಅಹಂಕಾರದ ಮುದ್ದೆಯಂತಿದ್ದ ಅವಿವೇಕಿ ಪತ್ನಿಯನ್ನು ಒಂದೆರಡು ಮಾತುಗಳಿಂದ ತಿದ್ದುವುದು ಅಸಾಧ್ಯವೆಂಬುದನ್ನು ತಿಳಿದಿದ್ದ. ಸುಶೀಲೆ ಗಂಡನೊಡನೆಯೂ ಒಂದೆರಡು ಮಾತನಾಡಿದರೆ ಹೆಚ್ಚು. ಆದರೆ ಆಕೆ ಹುಟ್ಟಿ ಬೆಳೆದದ್ದು ಹಳ್ಳಿಯಲ್ಲಿ ಎಂಬುದನ್ನರಿತಿದ್ದ ವಾಸು ಆ ವಿಚಾರವಾಗಿ ಹೆಚ್ಚು ಯೋಚಿಸಲಿಲ್ಲ.

ಮದುವೆಯಾಗಿ ಎರಡೇ ಎರಡು ತಿಂಗಳುಗಳಲ್ಲೇ ಇಷ್ಟೆಲ್ಲ ಗದ್ದಲ ನಡೆಯಿತು. ಆ ಮೇಲೊಮ್ಮೆ ತವರೂರಿಗೆ ಹೋದ ಸುಶೀಲ ಅನಾರೋಗ್ಯದಿಂದಿರುವಳೆಂಬ ಪತ್ರ ತಲುಪಿತು. ವಾಸು ಹೋಗಿ ನೋಡಿ ಬಂದ. ಹೇಳಿಕೊಳ್ಳುವಂತಹ ಕಾಯಿಲೆಯೇನೂ ಕಂಡುಬರಲಿಲ್ಲ. ಆದರೂ ಶ್ರೀಮಂತರ ಮಗಳು. ಇನ್ನೂ ಒಂದೆರಡು ತಿಂಗಳು ವಿಶ್ರಾಂತಿಗಾಗಿ ತವರು ಮನೆಯಲ್ಲಿರಲಿ ಎಂದರು. ವಾಸು ದಿಗ್ಭ್ರಾಂತನಾದ. ಸುಶೀಲೆ ಅಲ್ಲಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಆದರೆ ಇವನ ಯೋಚನೆಗೆ ಮಾವ ಕಡಿವಾಣ ಹಾಕಿದರು. "ಅವಳಿಗೆ ದಿನಕ್ಕೆ ನಾಲ್ಕಾರು ಕುಡ್ತೆ ಹಾಲು ಎಲ್ಲ ಉಪಯೋಗಿಸಿ ಅಭ್ಯಾಸ. ಅಲ್ಲಿಯ ಆಹಾರ ಹಿಡಿಸಲಿಲ್ಲ." ವಾಸು ಉತ್ತರವನ್ನೇನೂ ಕೊಡಲಿಲ್ಲ. ಆದರೆ ಅಂತಹ ಶ್ರೀಮಂತ ಪುತ್ರಿಯನ್ನು ಕೈ ಹಿಡಿದ ತನ್ನ ಅಪರಾಧದ ಪ್ರಜ್ಞೆ ಬಂತು. ಅವಳನ್ನು ತಾನು ಪ್ರೀತಿಸುವುದು ಸಾಧ್ಯವೇ? ಅಬ್ಬ! ಅಹಂಕಾರವೇ ತನ್ನ ತಾಯಿ ಮೇಲೆ. ಮಡದಿಯ ಮೇಲೆ. ಎಲ್ಲರ ಕೈಗೊಂಬೆಯಾಗಿ ಕುಣಿದ ಮೇಲೆಯೇ ಕ್ರೋಧವುಕ್ಕಿತು. ಆದರೆ ಆಗಲೂ ಆ ತಾಯಿ ಸಿಟ್ಟುಗೊಳ್ಳಲಿಲ್ಲ.)

"ಅಯ್ಯೋ ಪಾಪ......ಮೊದಲೇ ಗೊತ್ತಿದ್ದರೆ....ಏನಾದರೂ ಮಾಡಿ ಹಾಲು ಒದಗಿಸಬಹುದಿತ್ತು" ವಾಸು ಕೋಪದಿಂದಲೇ ಕೂಗಿದ.

"ಅಮ್ಮ ಈ ಮನೇಲಿ ಯಾರಿಗೂ ಇಲ್ಲದ ಸುಖ ಅವಳಿಗೆ ಸಿಗಲಾರದಮ್ಮ. ನೆನಪಿರಲಿ. ನಾವು ಹೇಗೋ ಅವಳೂ ಹಾಗೆಯೇ."

"ಆದರೆ ವಾಸೂ.......ಅವಳು ನಮ್ಮ ಹಾಗಲ್ಲ."

"ಅಮ್ಮಾ.......ನಿನ್ನೊಡನೆ ವಾದಿಸಿ ಫಲವೇನಿಲ್ಲ ಮುಖ್ಯ ನಿನ್ನ ಮಾತು ಕೇಳಿದ ನನ್ನ ಮೂರ್ಖತೆಗೆ ಯಾರನ್ನೇಕೆ ದೂರಲಿ? ರಾಜಕುಮಾರಿಯನ್ನು ಕರೆತಂದ ತಪ್ಪು ನನ್ನದು" ಎಂದೂ ವಾದಿಸಿದ ಮಗನ ಮಾತು ಕೇಳಿ ರಾಜಮ್ಮ ವಿಸ್ಮಯದಿಂದ ಮೌನ ತಾಳಿದರು

ಪತ್ನಿ ತವರೂರಲ್ಲಿರುವುದರಿಂದ ಮನೆಯಲ್ಲಿ ಶಾಂತಿ ನೆಲಸಿತ್ತು. ಕಾರಣ ಅವಳ ಹೊಗಳಿಕೆ ಆದರಿಂದಾಗಿ ಉಳಿದವರ ತೆಗಳಿಕೆ ಕಡಿಮೆಯಾಗಿತ್ತು. ಆದರೂ ಹೃದಯ ತಡೆಯದ ಅತ್ತೆ ಕೇಳುತ್ತಲೇ ಇದ್ದರು.

"ಹೇಗಿದ್ದಾಳೆ ಸುಶೀಲ? ಈಗದ ಬಂತೇ? ನೀನು ಶಾಲೆಗೆ ಹೋಗುವಾಗ ಒಮ್ಮೆ ನೋಡಿ ಬಾ."

ಶಾಂತೆಗೆ ಅತ್ತೆಯ ವರ್ತನೆಯಿಂದಾಗಿ ಸಿಟ್ಟೂ ಬರುತಿತ್ತು. ಒಮ್ಮೆ ನಿಜವಾಗಿಯೂ ವಿಪರೀತ ಜ್ವರದಿಂದ ನರಳುತ್ತಿದ್ದಾಗಲೂ ಆ ಅತ್ತೆ "ಕೆಲಸ ಮಾಡಲು ಸೋಮಾರಿತನ"ವೆಂದು ಬಯ್ದು ಜಗಳವಾಡಿ ಮಲಗಿದ್ದಾಕೆಯನ್ನು ಎಬ್ಬಿಸಿ ದುಡಿಸಿದ್ದರು. ಆದರೆ ಅದೇ ಅತ್ತೆ ಏನೂ ಕಾಯಿಲೆಯಿಲ್ಲದ ಶ್ರೀಮಂತ ಸೊಸೆಯನ್ನು ದಿನಕ್ಕೆರಡು ಬಾರಿ ವಿಚಾರಿಸುತ್ತಿದ್ದಾರೆ ಎಷ್ಟೊಂದು ಅಂತರ?

ಅಂದು ಕತ್ತಲಾಗುವಾಗ ಮನೆ ಪ್ರವೇಶಿಸಿದ ವಾಸುವಿನ ಮೊಗ ನೋಡಿಯೇ ರಾಜಮ್ಮ ಭಯಗೊಂಡರು.

"ಏನಾಯ್ತು ವಾಸೂ? ಸೌಖ್ಯವಿಲ್ಲವೇ?"

ವಾಸು ಮೌನವಾಗಿಯೇ ಕೋಣೆ ಸೇರಿ ಅಲ್ಲಿದ್ದ ಕುರ್ಚಿಯಲ್ಲಿ ಕುಸಿದು ಕುಳಿತ. ಸುಶೀಲೆಯ ಕೋಣೆ! ತಮ್ಮಿಬ್ಬರ ನಗುತ್ತಿರುವ ಫೋಟೊಗಳ! ಊಹ್ಞ್.........ಅಲ್ಲಿಯೂ ಸುಶೀಲೆ ನಗುತ್ತಿರಲಿಲ್ಲ. ತನ್ನ ತಂದೆಯೇ ಹಣ ತೆತ್ತು ತೆಗೆಸಿದ ಭಾವಚಿತ್ರವೆಂದಂತಿದ್ದ ಆಕೆ ದರ್ಪದಿಂದ ಸೆಟೆದುಕುಳಿತಿದ್ದಳು. ವಾಸು ಮೇಜಿಗೆ ತಲೆಯೊರಗಿಸಿ ಯೋಚಿಸತೊಡಗಿದ.

ರಾಜಮ್ಮ ಗಾಬರಿಗೊಂಡರು. ಬಳಿಗೆ ಬಂದು ತಲೆಯ ಮೇಲೆ ಕೈಯಾಡಿಸುತ್ತಾ ಕೇಳಿದರು.

"ಏನಾಯ್ತು ವಾಸು? ಏನಾಯ್ತು? ಸುಶೀಲ ಹೇಗಿದ್ದಾಳೆ?" ವಾಸು ತಲೆ ಎತ್ತಿ ತಾಯಿಯನ್ನೊಮ್ಮೆ ಕ್ರೂರವಾಗಿ ನೋಡಿದ ಅವನ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದವು.

"ಏನಾಯ್ತು ವಾಸೂ? ಸುಶೀಲ..."

"ಅವಳು ಸತ್ತುಹೋಗಿ ಬಿಟ್ಟಳಮ್ಮ" ವಾಸು ಕರ್ಕಶವಾಗಿ ಕೂಗಿದ.

"ಅಯ್ಯೋ.... ವಾಸೂ.... ಏನೆಂದೆ? ನಮ್ಮ ಭಾಗ್ಯಲಕ್ಷ್ಮಿ....."

"ಹೌದಮ್ಮ....ಅವಳೇ ಹೋಗಿಬಿಟ್ಟಳು. ನನ್ನ ಪಾಲಿಗೆ ಸತ್ತಳು. ಆಕೆ ಈಗ ತುಂಬಿದ ಬಸುರಿ. ಮದುವೆಯಾಗಿ ತಿಂಗಳು ನಾಲ್ಕು ಅಲ್ಲವೇ ಅವಳ ತಂದೆ ವಿಷಯವನ್ನು ಗೌಪ್ಯವಾಗಿರಿಸಿ ಮಗುವಿನ ತಂದೆ ನಾನೇ ಎಂದು ಒಪ್ಪಿದರೆ ಇನ್ನು ನಾಲ್ಕು ಸಾವಿರ ರೂಪಾಯಿ ಕೊಡುತ್ತಾರಂತೆ. ಏನಮ್ಮ? ಏನನ್ನುತ್ತಿ ಇದಕ್ಕೆ?" ತಾಯಿಯನ್ನು ಕ್ರೂರವಾಗಿ ದಿಟ್ಟಿಸುತ್ತಾ ಕೇಳಿದನವ.

"ವಾಸು....ನಿಜವೇ ಇದು?"

"ಹೌದಮ್ಮ. ನೀನೇ ನೋಡಿಬಾ. ನಿನ್ನ ಭಾಗ್ಯಲಕ್ಷ್ಮಿ

ಆ ಹಾ....ಎಷ್ಟು ಹೊಗಳಿದ್ದೆ........ ಥೂ...."

ರಾಜಮ್ಮ ಅಲ್ಲಿ ನಿಲ್ಲದೆ ಹೋದರು. ವಾಸು ಮೇಜಿಗೆ ತಲೆಯೊರಗಿಸಿದ. ಶಾಂತ ದೂರದಿಂದ ತಾಯಿ ಮಗನ ಸಂಭಾಷಣೆಯನ್ನಾಲಿಸಿದಳು. ಸುಬ್ಬು ಕೇಳಿ ತಿಳಿದ. ಮನೆಯಲ್ಲಿ ಸ್ಮಶಾನ ಮೌನವಾವರಿಸಿತ್ತು. ಮಾಡಿದ ಅಡುಗೆ ದಣಿದು ಬಂದ ಸುಬ್ಬುವೊಬ್ಬನೇ ಉಣ್ಣುವಂತಾಯಿತು. ಮತ್ತೆಲ್ಲ ಮೌನ, ಉಪವಾಸ, ಯಾರೂ ಉಸಿರೆತ್ತಲಿಲ್ಲ ಕುಳಿತಲ್ಲೇ ಒರಗಿ ನಿದ್ದೆ ಮಾಡಿದರು.

ಮರುದಿನ ಬೆಳಗಾಗುವಾಗಲೇ ವಾಸು ತನ್ನೆಲ್ಲ ಉಡುಪನ್ನು ಒಟ್ಟುಗೂಡಿಸುತ್ತಿದ್ದ. ರಾಜಮ್ಮ ಬಳಿಗೆ ಬಂದು ಪಿಸುದನಿಯಲ್ಲಿ ಕೇಳಿದರು.

"ವಾಸೂ ... ಹಾಗಾದ್ರೆ .... ಏನಪ್ಪ ಮಾಡೋಣಾಂತಿದ್ದಿ?"

"ನೀನೇನು ಯೋಚ್ನೆ ಮಾಡ್ತೆ?"

"ಅಲ್ಲ...ಆ ಹಣ ತಕೊಂಡದ್ದು ಎ

(೧೨ನೇ ಪುಟ ನೋಡಿರಿ)

---

ವಾಗುತ್ತದೆಂದೂ ವಿವರಿಸಿ ಹೇಳಿದ್ದೆನು. ಈ ಅಭಿಪ್ರಾಯ ಕೇವಲ ನನ್ನದಲ್ಲ, ನಮ್ಮ ಪ್ರಧಾನ ಮಂತ್ರಿ ನೆಹರುಗಳದ್ದು ಮಾತ್ರವಲ್ಲ, ಘಟನಾ ಸಮಿತಿಯದೇ ಆಗಿದೆಯೆಂದೂ ಖಚಿತಪಡಿಸಿದ್ದೆನು. ಅದೇ ಅಭಿಪ್ರಾಯವನ್ನು ಮಾನ್ಯ ಸದಸ್ಯರ ಟೀಕೆಯ ನಿಮಿತ್ತ—ಈಗ ಪುನಃ ವಿವರವಾಗಿ ಸಾರ್ವಜನಿಕರ ಅವಗಾಹನೆಗಾಗಿ ಮುಂದಿಟ್ಟಿರುತ್ತೇನೆ

ಹೀಗಿದ್ದರೂ ನಮ್ಮ ರಾಷ್ಟ್ರದಲ್ಲಿ ಕೆಲವು ಪ್ರತಿಗಾಮಿ ಶಕ್ತಿಗಳಿವೆಯೆಂದು ನಾವು ತಿಳಿದಿರಬೇಕು; ಅವುಗಳು ಚರಕವನ್ನಾಗಲಿ, ತ್ರಿವರ್ಣವನ್ನಾಗಲಿ, ತ್ರಿವರ್ಣಾಂಕಿತ ಚರಕಧ್ವಜವನ್ನು ಹಿಡಿದು ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ನೀಡಿದ ರಾಷ್ಟ್ರಪಿತನನ್ನಾಗಲಿ—ನಮ್ಮ ರಾಷ್ಟ್ರಧ್ವಜವನ್ನಾಗಲಿ, ಅಂತಃಕರಣ ಪೂರ್ವಕ ಒಪ್ಪುವ ಸ್ಥಿತಿಯಲ್ಲಿಲ್ಲವೆಂಬುದನ್ನು ವಿಷಾದಪೂರ್ವಕ ನಾವು ಗಮನಿಸಬೇಕು. ನಮ್ಮ ಪ್ರಜಾಪ್ರಭುತ್ವವು ಅಂತಹ ದುಶ್ಶಕ್ತಿಗಳ ಕುರಿತು ತೀವ್ರ ಎಚ್ಚರಗೊಳ್ಳದಿದ್ದಲ್ಲಿ ನಮ್ಮ ಮನೆಯ ಬಾಗಿಲಿಗೆ ಬಂದ ಅಪಾಯ ಮನೆಯ ಒಳನುಗ್ಗಿ ಹಾನಿಯನ್ನುಂಟುಮಾಡುವುದೆಂಬುದನ್ನು ನಾವು ಮರೆಯತಕ್ಕುದಲ್ಲ. ನನ್ನ ಕವಿತೆಯನ್ನು ಟೀಕಿಸಿದ ಮಾನ್ಯ ಸದಸ್ಯರಿಗೆ ಮೇಲಿನ ಮಾತುಗಳು ಸರ್ವಥಾ ಅನ್ವಯಿಸುವುದಿಲ್ಲವಾದರೂ, ನಿರಾಧಾರ ಟೀಕೆಗಳ ತಪ್ಪು ಹಾದಿ ಹಿಡಿದು ನಮ್ಮ ಜನ ಮುನ್ನಡೆದಲ್ಲಿ ಆಗಬಹುದಾದ ಅನರ್ಥಗಳ ಕುರಿತು ಎಚ್ಚರಿಸಲು ಮಾತ್ರ ಈ ಪ್ರಾರ್ಥನೆ ಮಾಡಿಕೊಂಡಿದ್ದೇನೆ.

'ಅರಸಿಕೇಷು ಕವಿತ್ವ ನಿವೇದನಂ
ಶಿರಸಿ ಮಾಲಿಖ ಮಾಲಿಖ ಮಾಲಿಖ'

—ಎಂದು ಭರ್ತೃಹರಿ ಕವಿ ಬಹಳ ಹಿಂದೆಯೇ ಹೇಳಿದ್ದ 'ರಸಿಕರಲ್ಲದವರ ಮುಂದೆ ಕವಿತೆ ಹೇಳುವ ಸಂದರ್ಭವನ್ನು ಓ ವಿಧಿಯೇ ನನ್ನ ಹಣೆಯಲ್ಲಿ ಬರೆಯಬೇಡ—ಬರೆಯಬೇಡ ಬರೆಯಬೇಡ ಎಂದ. ವಿಧಿಯೊಡನೆ ಆತ ಮೂರು ಮೂರು ಸಲ ಮೊರೆಯಿಟ್ಟದ್ದನು. ಆದರೆ ನನ್ನ ಪ್ರೀತಿಯ ಕನ್ನಡ ನಾಡಿನ ಬಂಧು ಭಗಿನಿಯರೆಲ್ಲರೂ ರಸಿಕರೇ ಎಂದು ನಾನು ನಂಬಿದವನು. ಆ ನಂಬಿಕೆಯ ಬಲದಿಂದಲೇ ಆರ್ಥಿಕವಾಗಿ ಲಾಭದಾಯಕವಲ್ಲದಿದ್ದರೂ—ಕನ್ನಡ ಭಾಷಾ ಕ್ಷೇತ್ರದಲ್ಲಿ ನನ್ನ ಪಾಲಿನ ದುಡಿಮೆ ಮಾಡುತ್ತಾ ಬಂದಿದ್ದೇನೆ ಈ ನನ್ನ ನಂಬಿಕೆಗೆ ಭಂಗ ಬರದಿರಲೆಂದು ಆಶಿಸುತ್ತೇನೆ

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ.ಎ.



REGD. No. B. G. 176
LICENCE No. 31
Licensed to Post without Prepayment

## ಚೀನೀಯರ ವಿಧ್ವಂಸಕ ಕಾರ್ಯಕ್ರಮ

(೧ನೇ ಪುಟದಿಂದ)

ಈ ಹಿಂದೆ ರಾಯಭಾರಿ ವರ್ಗದ ಸಿಬ್ಬಂದಿಯವರು ಸಾಮಾನ್ಯವಾಗಿ ಕನಿಷ್ಠ ಇಬ್ಬರು ಸದಸ್ಯರು ಒಟ್ಟಿಗೆ ಹೋಗುವಂತಿದ್ದರೆ ಮಾತ್ರ ಇಂತಹ ಆಹ್ವಾನಗಳನ್ನು ಸ್ವೀಕರಿಸಬೇಕಾಗಿತ್ತು. ಆದರೆ ಆ ಜನವರಿ ತಿಂಗಳಿನಿಂದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಹ್ವಾನ ಸ್ವೀಕರಿಸಬೇಕೆಂದೂ, ರಾಯಭಾರಿಯು ಪರವಾನಿಗೆ ಇತ್ತರೆ ಮಾತ್ರ ಸಮಾರಂಭಗಳಿಗೆ ಹೋಗಬೇಕೆಂದೂ ಪ್ರತಿಬಂಧಕ ಹಾಕಲಾಯಿತು.

ಚೀನೀ ರಾಯಭಾರಿ ವರ್ಗದ ಸಿಬ್ಬಂದಿಯವರಿಗೆ ಚೀನದ ಆರ್ಥಿಕ ಸ್ಥಿತಿ ಶೋಚನೀಯವಾಗಿದೆಯೆಂಬುದು ಗೊತ್ತಿತ್ತು. ಸ್ವಯಂಮಿತ ವ್ಯಯದಿಂದ ಅವರು ಜೀವನ ನಡೆಸುತ್ತಿದ್ದರು. ಚೀನೀ ರಾಯಭಾರಿ ವರ್ಗದ ಸಿಬ್ಬಂದಿಯವರು, ೧೯೬೧ರಲ್ಲಿ ಸ್ಟಾಕ್ ಹೋಂನಲ್ಲಿ ಸಮಾವೇಶಗೊಂಡಿದ್ದ ವಿಶ್ವಶಾಂತಿ ಸಮ್ಮೇಳನಕ್ಕೆ ಆಗಮಿಸಿದ ಚೀನೀ ಪ್ರತಿನಿಧಿಗಳ ದುಂದುಗಾರಿಕೆಯನ್ನು ನೋಡಿ ದಿಗ್ಭ್ರಮೆಗೊಂಡರು. ಚೀನೀ ಪ್ರತಿನಿಧಿಗಳು ಸಮ್ಮೇಳನದಲ್ಲಿ ದೀರ್ಘವಾದ ಭಾಷಣಗಳನ್ನು ಮಾಡುವ ಗೋಜಿಗೆ ಹೋಗದೆ ಅಧಿಕ ವೇಳೆಯನ್ನು, ಸ್ಟಾಕ್ ಹೋಂ ಮಾರುಕಟ್ಟೆಯಲ್ಲಿ ಮನಬಂದಂತೆ ವಸ್ತುಗಳ ಖರೀದಿ ಮಾಡುವಲ್ಲಿಯೇ ವ್ಯಯ ಮಾಡಿದರು ಸಾಗರೋತ್ತರ ಚೀನೀಯರ ಸಂಘದ ಅಧ್ಯಕ್ಷರಾಗಿದ್ದ ಲಿಯಾವೋ ಚೆಂಗ್ ಚಿ ಅವರು ಸ್ಟಾಕ್ ಹೋಂನ ಅಂಗಡಿಗಳಿಂದ ಆಕರ್ಷಿತರಾದರು. ಛಾಯಾ ಚಿತ್ರಗ್ರಹಣ ಯಂತ್ರ, ಚಿತ್ರವಸ್ತ್ರಗಳು ಹಾಗೂ ಇನ್ನೂ ಅನೇಕ ಕಾಣಿಕೆಗಳು ಇವೇ ಮೊದಲಾದ ಹೊರಲಾರದ ಹೊರೆಯನ್ನು ಹೊತ್ತುಕೊಂಡು ಮರಳಿದರು.

### ವಿಧ್ವಂಸಕ ಕಾರ್ಯ

ಚೀನವು ವಿಶ್ವದಾದ್ಯಂತ ರಾಜಕೀಯ ಹಾಗೂ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳ ಸೋಗಿನಲ್ಲಿ, ಇಂತಹ ದುಷ್ಕೃತ್ಯಗಳನ್ನು ಮಾಡುತ್ತಲೇ ಬಂದಿದೆ.

ಬ್ರೆಝಿಲ್‌ನ ನಿಯೋಗವೊಂದು ಪೇಕಿಂಗಿಗೆ ಭೇಟಿ ನೀಡಿದಾಗ, ಅವರಿಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಿತ್ತು. ಚೀನದ ಪ್ರಧಾನ ಮಂತ್ರಿ ಚೌ ಎನ್. ಲಾಯ್‌ರವರು ಮಂದಹಾಸದಿಂದ, ಉಭಯ ರಾಷ್ಟ್ರಗಳ ನಡುವಣ ಮೈತ್ರಿಯು ಶಾಶ್ವತವಾಗಲೆಂದು ಹಾರೈಸಿದರು.

ಹೆಚ್ಚು ಕಡಿಮೆ ಅದೇ ವೇಳೆಗೆ; ಬ್ರೆಝಿಲ್‌ನ ಪೋಲೀಸರು, ಬ್ರೆಝಿಲ್—ಚೀನ ಸ್ನೇಹ ಸಂಘದ ಮೇಲೆ ದಾಳಿಮಾಡಿ, ಪೇಕಿಂಗದ್ದೆಂದು ಹೇಳಲಾದ ವಿದ್ರೋಹಕ ಸಾಹಿತ್ಯವನ್ನು ವಶಪಡಿಸಿಕೊಂಡರು ವಿಧ್ವಂಸಕ ಕೃತ್ಯಗಳ ಸಂಬಂಧವಾದ ಕೈಪಿಡಿಯೂ ಅವುಗಳಲ್ಲಿ ಒಂದಾಗಿತ್ತು.

ಚೀನೀಯರ ಧನ ಸಹಾಯದಿಂದ ನಡೆಯುವ ಇದೇ ಬಗೆಯ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಮೇಲೆ, ಮೆಕ್ಸಿಕೋ ಹಾಗೂ ಅರ್ಜೆಂಟೈನಾ ಸರಕಾರಗಳು ಪ್ರತಿಬಂಧಕ ಹೇರಿದವು.

## ಭಾಗ್ಯಲಕ್ಷ್ಮಿ ದೂರವಾದಳು

(೧೧ನೇ ಪುಟದಿಂದ)

ಲ್ಲ... ಆದ್ರಿಂದ ... ಹೇಗಾದ್ರು ... ಇನ್ನು ಕೂಗಿ ಪ್ರಯೋಜನವೇನು? ಆದದ್ದು ಆಗಿಹೋಯ್ತು ....”

“ಅಯ್ಯೊ ಅಮ್ಮ ... ನಿನ್ನ ಧನ ಪಿಪಾಸೆಯೇ ಹಣ ವಿದ್ರೆ ಯಾವುದೂ ನಡೆಯುತ್ತೆ. ಮಾನಮರ್ಯಾದೆ ಎಲ್ಲ ಥೂ... ನಿನ್ನೊಡನೆ ಏನು ವಾದಿಸೋದು? ಅಮ್ಮ! ನಾನ. ಎಲ್ಲಾದ್ರೂ ಊರು ಬಿಟ್ಟು ಹೋಗಿ ಕೆಲಸಕ್ಕೆ ಸೇರಿ ನಿನ್ಗೆ ಹಣ ಕಳಸ್ತೇನೆ. ನಿನ್ನ ಭಾಗ್ಯ ಲಕ್ಷ್ಮಿ ನಿನಗೇ ಇರ್ಲಿ. ಬರ್ತೀನಮ್ಮ” ಎನ್ನುತ್ತಾ ಚೀಲದೊಂದಿಗೆ ಹೊರಟೇಬಿಟ್ಟ. ಶಾಂತ ಬಾಗಿಲಲ್ಲಿ ನಿಂತು ನೋಡುತ್ತಿದ್ದಳು.

“ಅತ್ತಿಗೆ! ಅಮ್ಮನನ್ನು ಕ್ಷಮಿಸಿಬಿಡು....” ಎಂದು ವಾಸು ಹೋಗಿಯೇ ಬಿಟ್ಟ.

“ವಾ....ಸೂ....”, ರಾಜಮ್ಮ ಅಳುತ್ತಳುತ್ತಾ ಕೂಗಿದಳು. ವಾಸು ಹಿಂತಿರುಗಿ ನೋಡಿದ. ಆ ನೋಟದಲ್ಲಿದ್ದುದು ಕಾರುಣ್ಯವೋ ನೋವೋ ರಾಜಮ್ಮನಿಗೆ ತಿಳಿಯಲಿಲ್ಲ. ಅವರ ಮಿದುಳು ‘ಭಾಗ್ಯಲಕ್ಷ್ಮಿ’ಯ ವಿಚಾರವಾಗಿ ಯೋಚಿಸುತಿತ್ತು.

**ಶ್ರೀಮತಿ ಪಿ ಯಶೋದಾ ಎಸ್. ಜೆನ್ನಿ**

## ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

**ನಿಯೋಗ**— ಮೂಲ ಲೇಖಕರು: ಶ್ರೀ ಈಶ್ವರ ಸಿಂಹ ಬೈಸ್. ಅನುವಾದಕರು ಮತ್ತು ಪ್ರಕಾಶಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆ ಪಂಜಾರಿ. ಪುಟಗಳು; ೨೪. ಬೆಲೆ: ರೂ. ೦—೩೦.

ಪುನ್ನಾಮ ನರಕದಿಂದ ಪಿತೃಗಳನ್ನುದ್ಧರಿಸುವುದರಿಂದಲೇ ಮಗನಿಗೆ ಪುತ್ರನೆಂದು ಹೆಸರು, ಆದುದರಿಂದಲೇ ಕುಟುಂಬದಲ್ಲಿ ಪುತ್ರನ ಸ್ಥಾನ ಅತಿ ಹಿರಿದು. ಆದರೆ, ದುರ್ದೈವವಶದಿಂದ ಅಪುತ್ರವತಿಯಾಗಿ ವಿಧವೆಯೆನಿಸಿದಾಕೆಯು ಪರ ಪುರುಷ ಸಂಗದಿಂದ ಪುತ್ರವತಿಯಾಗುವ ಸೌಲಭ್ಯವನ್ನು ಪ್ರಾಚೀನ ಭಾರತದಲ್ಲಿ ಪಡೆದಿದ್ದಳು. ಈ ಪ್ರಣಾಳಿಯು ‘ನಿಯೋಗ’ವೆಂದು ಕರೆಯಲ್ಪಡುತಿತ್ತು. ಆದರೆ, ಸಮಾಜದ ಕುದೃಷ್ಟಿಯಿಂದಾಗಿ, ದುರ್ವ್ಯವಹಾರದಿಂದಾಗಿ ಅದು ವ್ಯಭಿಚಾರವಾಗಿ ರೂಪಾಂತರ ಪಡೆಯಿತು. ಕ್ರಿಸ್ತಶಕದ ಆರಂಭದಿಂದ ಜನ ಮನೋಭಾವವು ಪರಿವರ್ತನೆಗೊಳ್ಳುತ್ತ ಬಂದು ೧೦ನೆಯ ಶತಮಾನದ ಸುಮಾರಿಗೆ ಅದು ದುರಾಚರಣೆಯೆಂಬ ಭಾವನೆಯು ಮೂಡಿತು; ತತ್ಪರಿಣಾಮವಾಗಿ ‘ನಿಯೋಗ’ ಪದ್ಧತಿಯೇ ನಿಂತುಹೋಯಿತು. ಆದರೂ ವ್ಯಭಿಚಾರ ಮಾತ್ರ ಬೆಳೆದು ಬಂದುದು ಸಮಾಜದ ದುರದೃಷ್ಟ.

‘ನಿಯೋಗ’ದ ಇತಿಹಾಸವನ್ನು ಸಾಧಾರವಾಗಿ ಸಂಗ್ರಹಿಸಿದ ಹಿಂದೀ ಲೇಖಕ ಶ್ರೀ ಈಶ್ವರ ಸಿಂಹ ಬೈಸರ ಲೇಖನವೊಂದನ್ನು ಶ್ರೀ ಶಿವಮುಂಜೆ ಪಂಜಾರಿಯವರು ಅನುವಾದಿಸಿ ಕನ್ನಡಿಗರಿಗೆ ಪುಸ್ತಕ ರೂಪದಲ್ಲಿ ಕೊಟ್ಟಿದ್ದಾರೆ. ಅನುವಾದ ಕಾರ್ಯವು ಚಲೋದಾಗಿಯೇ ಇದೆ, ಶ್ರೀಯುತರ ಈ ಕೃತಿಯನ್ನು ತಪ್ಪು ತಿಳಿಯದೆ ‘ನಿಯೋಗ’ ಪ್ರೇರಿತ ವ್ಯಭಿಚಾರವೂ ನಿಂತುಹೋಗಿ ಜನತೆಯು ಸುಸಂಸ್ಕೃತವಾಗುವುದು ಅತ್ಯವಶ್ಯವಿದೆ.

ಪೇಕಿಂಗ್‌ನ ವಿಷಯದಲ್ಲಿ ಇವೆಲ್ಲ ಆಕಸ್ಮಿಕವಾಗಿ ಸಂಭವಿಸಿದ ಘಟನೆಗಳಲ್ಲ. ಅದು ಅನುಸರಿಸುತ್ತಿರುವ ಪ್ರದೇಶ ವಿಸ್ತರಣೆ ನೀತಿಯ ಅಂಗಗಳವು. ನಮ್ಮ ದೇಶದಲ್ಲೂ ಅದರ ಕಛೇರಿ ಪ್ರಚಾರ ಮಾಡಿದ ಪ್ರಕಾಶಗೊಳಿಸಿದ ಸಾಹಿತ್ಯಗಳು ಇದಕ್ಕಿಂತ ಬೇರೆಯಲ್ಲ.

**ಹೂ ಮಾಲೆ**—(ಶಿಶುಗೀತೆಗಳ ಸಂಕಲನ) ಲೇಖಕರು: ಶ್ರೀ ಗದಿಗೆಯ್ಯ ಗುರುಸಾತಯ್ಯ ಶಿವಪೂಜಿ ಮಠ. ಪ್ರಕಾಶಕರು ಬಾಲಸಾಹಿತ್ಯ, ಕ. ಗಂ. ಶಾಲೆ, ಬೂದಿಹಾಳ್ ಬೈಲಹೊಂಗಲ ತಾಲೂಕು (ಬೆಳಗಾವಿ) ಪುಟಗಳು: ೪೨ ಬೆಲೆ: ರೂ. ೦-೫೦.

ಪ್ರಾಥಮಿಕ ಶಾಲೆಯ ಮಕ್ಕಳಿಗೆ ಉಪಯುಕ್ತವಾದ ಶಿಶು ಗೀತೆಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರೇ ಬರೆಯುವುದು ಉಪಯುಕ್ತ. ಆ ದಿಸೆಯಲ್ಲಿ ಈ ಸಂಗ್ರಹವು ಪರಿಣಾಮಕಾರಿಯೆನಿಸಿದೆ. ನಿಸರ್ಗದತ್ತ ಪ್ರತಿಭೆಯಿರುವ ಶಿವಪೂಜಿ ಮಠರು ಮಕ್ಕಳ ಮನೋಭಾವವನ್ನು ಸರಿಯಾಗಿ ತಿಳಿದುಕೊಂಡು, ಅವುಗಳು ಮೆಚ್ಚುವಂತಹ ಗೀತೆಗಳನ್ನು ರಚಿಸಿದ್ದಾರೆ. ಮಕ್ಕಳಿಗೆ ಸಹಜವಾದ ಶಬ್ದಗಳನ್ನು ಹೆಕ್ಕಿ ಅವನ್ನು ಹೆಣೆದು ಭಾವ ವ್ಯಂಜನಗೊಳಿಸಿದ ರೀತಿಯು ಉತ್ತಮವಾಗಿದೆ. ‘ಬಗೆಬಗೆ ಗಿಡಗಳ ಬಣ್ಣದ ಹೂಗಳ ಎತ್ತುತ ಬುಟ್ಟಿಯ ತುಂಬಿ ಅಂದದ ತೊಂಡಿಲನ್ನು ಕಟ್ಟಿ, ಬಾಲಿಕೆಗೊಪ್ಪುವ ಬಾಲರು ಬಯಸುವ ಹೂಗಳನ್ನು’ ಮಾತೆ ಸರಸ್ವತಿಯ ಕೊರಳಿಗೆ ಹಾಕಿದ್ದಾರೆ. ಶಿಕ್ಷಕರಿಂದ ರಚಿತವಾಗುವ ಇಂತಹ ಉತ್ತಮ ಕೃತಿಗಳನ್ನು ಶಿಕ್ಷಣ ಪಕ್ಷಪಾತಿಗಳು ಸಾಕಷ್ಟು ಪ್ರೋತ್ಸಾಹಿಸಬೇಕು. —**ಗೋರಾ.**


# ಸಿಂಡಿಕೇಟ್ ಬ್ಯಾಂಕಿನ

**ಭಟ್ಕಲ ಶಾಖೆಯ ಕಾರ್ಯಾಲಯವನ್ನು ತಾರೀಕು 7ನೇ ಎಪ್ರಿಲ್ 1963 ರಿಂದ ಬ್ಯಾಂಕಿನ ಸ್ವಂತ ನವೀನ ಕಟ್ಟಡಕ್ಕೆ ವರ್ಗಾಯಿಸಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ.**

**ಸಮಾರಂಭದ ಅಧ್ಯಕ್ಷಸ್ಥಾನವನ್ನು ಶ್ರೀಯುತ J. H. ಶಮ್‌ಸುದ್ದೀನ್‌ರವರು (ವಿದ್ಯುತ್ ಇಲಾಖೆಯ ಉಪಮಂತ್ರಿಗಳು) ವಹಿಸಲು ದಯಮಾಡಿ ಒಪ್ಪಿರುತ್ತಾರೆ.**

**T. A. Pai**
ಮ್ಯಾನೇಜಿಂಗ್ ಡ್ಯಾರೆಕ್ಟರ್.

**A. Srinivasa Rao**
ಮೆನೇಜರ್.

# “ಸಿಂಡಿಕೇಟ್ ಬ್ಯಾಂಕ್”

**— ನಗುಮುಖದ ಸೇವೆ... ಆರ್ಥಿಕ ಭದ್ರತೆ.**

**— ಒಟ್ಟು ಠೇವಣಿ ನಿಧಿ 40 ಕೋಟಿಗೂ ಮಿಕ್ಕಿದೆ.**

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್



# ವರ್ಗ—ಊಳಿಗ

**ಮೊದಲಾದ ಯಾವತ್ತೂ ತರದ**

## ಎಕೌಂಟ್ ಪುಸ್ತಕಗಳು, ಶಾಲಾ ರಿಜಿಸ್ಟ್ರಗಳು, ಫಾರ್ಮುಗಳು

**ದೊರೆಯುತ್ತವೆ.**

**ನವಯುಗ ಪ್ರೆಸ್, ಉಡುಪಿ.**


Edited, Printed & Published by K. H. Shetty. at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 30

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 4—4—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೩೦

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ಪ್ರಗತಿಯ ದಾರಿಯಲ್ಲಿ

# ಕರ್ನಾಟಕದ ಔದ್ಯಮಿಕರಂಗ

ಔದ್ಯಮಿಕವಾಗಿ ಭಾರತವನ್ನು ಪುನಾರಚಿಸುವುದರಿಂದಲೇ ದೇಶವು ಉದ್ಧಾರವಾಗಬಹುದು. ಕೃಷಿಯು ಪುನಾರಚನೆಯ ಬಲಗೈಯಾದರೆ ಉದ್ಯಮವು ಎಡಗೈಯೆನಿಸುವುದು. ಇದಕ್ಕಾಗಿ ಇವೆರಡರಲ್ಲಿಯೂ ಪ್ರಗತಿಯನ್ನು ಸಾಧಿಸಿ, ನಮ್ಮ ಮುಂದಿರುವ ಹತ್ತಾರು ಸಮಸ್ಯೆಗಳನ್ನು ಅತಿಯಶಸ್ವಿಯಾಗಿ ಬಗೆಹರಿಸುವುದು ಅತ್ಯಗತ್ಯವಿದೆ. ವಿಜ್ಞಾನಯುಗದಲ್ಲಿ ಉದ್ದಿಮೆಗಳ ಸ್ಥಾನಮಾನಗಳು ಬಹು ಮುಖ್ಯವಾದುವು. ಅವುಗಳಲ್ಲಿಯೂ ನಮ್ಮ ಯೋಜನೆಗಳಿಗೂ ದಿನನಿತ್ಯೋಪಯೋಗಕ್ಕೂ ಬೇಕಾಗುವ ಉಕ್ಕಿನ ಕೈಗಾರಿಕೆಯು ಅಗ್ರಗಣ್ಯವಾದುದು. ಇದಕ್ಕಾಗಿ ದೇಶದ ಆವಶ್ಯಕತೆಗಳನ್ನು ಪೂರಯಿಸಿಕೊಳ್ಳುವುದಕ್ಕಾಗಿ ನಾವು ಹೆಚ್ಚಿನ ಸಂಖ್ಯೆಯಲ್ಲಿ ಉಕ್ಕಿನ ಕಾರಖಾನೆಗಳನ್ನು ಸ್ಥಾಪಿಸಿಕೊಳ್ಳುವ ಅಗತ್ಯವಿದೆ.

**ಅದ್ಭುತ ಪ್ರಗತಿ**

ಸ್ವಾತಂತ್ರ್ಯ ಪೂರ್ವದಲ್ಲಿ ಜಮಶೆಡ್‌ಪುರ ಮತ್ತು ಭದ್ರಾವತಿಗಳಲ್ಲಿ ಮಾತ್ರ ಉಕ್ಕಿನ ಕಾರಖಾನೆಗಳಿದ್ದುವು. ಬಳಿಕ, ವಿದೇಶೀಯ ಮಿತ್ರರ ನೆರವಿನಿಂದ ದುರ್ಗಾಪುರ, ರೂರ್ಕೇಲಾ ಮತ್ತು ಭಿಲ್ಲೈಗಳಲ್ಲಿ ಮೂರು ದೊಡ್ಡ ಕಾರಖಾನೆಗಳನ್ನು ಕಟ್ಟಿಕೊಂಡಿದ್ದೇವೆ. ಮೋರ್ಕಪುರ ಮತ್ತು ಬುಕಾರೊಗಳಲ್ಲಿಯೂ ಸದ್ಯದಲ್ಲಿಯೇ ಕಾರಖಾನೆಗಳು ರೂಪುಗೊಳ್ಳುವ ನಿರೀಕ್ಷೆಯಿದೆ. ಉಕ್ಕಿನ ಅಧ್ಯಯನ ಮಂಡಳಿಯ ಅಭಿಪ್ರಾಯದಂತೆ ಇ[illegible]ಯು ದೇಶದಲ್ಲಿ ಅಲ್ಲಲ್ಲಿ ಇವುಗಳನ್ನು ಕಟ್ಟುವುದರಿಂದ ಪೂರೈಕೆಯ ಪ್ರಶ್ನೆ ಸರಳವಾಗುತ್ತದೆ. ಅದಕ್ಕಾಗಿಯೇ ಈಗೀಗ ಈ ದಿಸೆಯಲ್ಲಿ ಕಾರ್ಯ ಪ್ರಾರಂಭವಾಗಿದೆ.

**ಹೊಸಪೇಟೆಗೊಂದು ಕಾರಖಾನೆ**

ನಮ್ಮ ರಾಜ್ಯದ ಹೊಸಪೇಟೆಯ ಆಸುಪಾಸಿನಲ್ಲಿ ಅತ್ಯುತ್ತಮ ಮಟ್ಟದ ಕಬ್ಬಿಣದ ಅದುರು ದೊರೆಯುತ್ತಿದೆ ಎಂಬುದು ಸರ್ವ ಶ್ರುತ. ಈ [illegible] ಈ ಅದುರು ಇಲ್ಲಿ ಉಪಯೋಗಕ್ಕೆ ಬೀಳುವುದಿಲ್ಲ. ಅಲ್ಲದೆ ಅದನ್ನು ಇತರತ್ರ ಸಾಗಿಸುವುದೂ ಪ್ರಯಾಸಕರವಾಗಿದೆ. ಹಾಗಾಗಿ ಹೊಸಪೇಟೆಯಲ್ಲಿಯೇ ಸಕಲ ಅನುಕೂಲತೆಗಳಿರುವಾಗ ಒಂದು ಉಕ್ಕಿನ ಕಾರಖಾನೆಯನ್ನೇಕೆ ಸ್ಥಾಪಿಸಬಾರದು? ನಮ್ಮ ರಾಜ್ಯ ಸರಕಾರವು ಈ ವಿಷಯದಲ್ಲಿ ತುಂಬ ಆಸಕ್ತಿ ತಳೆದಿದೆ; ಭಾರತ ಸರಕಾರಕ್ಕೆ ಈ ಸಂಬಂಧದಲ್ಲಿ ಸಲಹೆ ಮಾಡಿದೆ. ಕರಾವಳಿಯ ಗೋವೆಯಲ್ಲಿ ಒಂದನ್ನು ಕಟ್ಟುವ ವಿಚಾರ ಕೇಂದ್ರ ಸರಕಾರಕ್ಕಿರುವುದು ನಿಜವಾದರೂ ಅದನ್ನುಳಿದು ಹೊಸಪೇಟೆಯನ್ನೂ ಆರಿಸಿಕೊಳ್ಳಬೇಕೆಂದು ರಾಜ್ಯ ಸರಕಾರ ಒತ್ತಾಯ ಪಡಿಸಬೇಕಾಗಿದೆ. ಹೊಸಪೇಟೆಯ ವಿಷಯವನ್ನು ಅಧ್ಯಯನ ಮಂಡಳಿಯೊಂದು ತಿಳಿದುಕೊಂಡಿದೆ; ಕೇಂದ್ರ ಉಕ್ಕು ಮತ್ತು ಘನೋದ್ಯಮ ಮಂತ್ರಿಗಳೂ ಅನುಕಂಪ ತೋರಿಸಿದ್ದಾರೆ; ಉಕ್ಕಿನ ಕಾರಖಾನೆಯ ನಿರ್ಮಾಣವೆಂದರೆ, ಒಂದು ದೊಡ್ಡ ಬಂಡವಳವನ್ನು ತೊಡಗಿಸುವುದು ಎಂದರ್ಥ. ಇಂತಹ ಕಾರ್ಯ ಖಾಸಗಿ ಕ್ಷೇತ್ರದಿಂದ ಅಸಾಧ್ಯವಾದುದರಿಂದ ಸಾರ್ವಜನಿಕ ರಂಗವೇ ಮುಂದೆ ಬರಬೇಕಾಗಿದೆ. ಉಚ್ಚಸ್ತರದ ಅದುರು ಧಾರಾಳವಾಗಿ ದೊರೆಯುತ್ತಿರುವಾಗ, ಇಲ್ಲಿಯೇ ಬಂಡವಳವನ್ನು ತೊಡಗಿಸಿದರೆ, ಲಾಭವಾಗದುಳಿಯದು. ಆದುದರಿಂದಲೇ ಕೇಂದ್ರ ಸರಕಾರದ ಸಹಾಯದಿಂದ ರಾಜ್ಯವು ಈ ಯೋಜನೆಯನ್ನು ಮುಂದುವರಿಸಬೇಕಾಗಿದೆ.

**ಕಾರಖಾನೆಗಳ ವಿಸ್ತರಣೆ**

ಆಂಧ್ರ ಮತ್ತು ಕರ್ನಾಟಕ ಸರಕಾರಗಳ ಸಂಯುಕ್ತ ಸಾಧನೆಯೆನಿಸುವ ತುಂಗಭದ್ರಾ ಉಕ್ಕಿನ ಕಾರಖಾನೆಯಾದರೂ ವಿಸ್ತರಣೆಯನ್ನು ಬಯಸುತ್ತಿದೆ. ಸುಮಾರು ೫೦ ಲಕ್ಷ ರೂಪಾಯಿಗಳು ಇದಕ್ಕೆ ಬೇಕಾಗಬಹುದು. ಅದು ಮಾತ್ರವಲ್ಲದೆ, ಭದ್ರಾವತಿಯ ಕಾರಖಾನೆಯು ತೀವ್ರವಾಗಿ ದೊಡ್ಡದಾಗುತ್ತಿದೆ. ೭ ಕೋಟಿ ರೂಪಾಯಿಗಳ ವೆಚ್ಚದಿಂದ ಕಾರಖಾನೆಯ ವಿಸ್ತರಣೆಯನ್ನೂ ರೂ. ೧೦ ಕೋಟಿಯಿಂದ ಸಾಮಾನ್ಯ ಉಕ್ಕನ್ನು ವಿಶಿಷ್ಟವನ್ನಾಗಿಸುವ ಯಂತ್ರೋಪಕರಣಗಳ ಸ್ಥಾಪನೆಯನ್ನೂ ಕೈಗೊಳ್ಳಲಾಗುತ್ತಿದೆ. ಹಂದಿ ಕಬ್ಬಿಣ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವುದರೊಡನೆ ಕಬ್ಬಿಣದ ತಯಾರಿಯನ್ನೂ ಈಗ ಭದ್ರಾವತಿಯಲ್ಲಿ ಸಾಧಿಸಲಾಗುತ್ತಿದೆ. ಹೀಗೆ ಪ್ರಕೃತ ರಾಜ್ಯದಲ್ಲಿನ ಕಾರಖಾನೆಗಳನ್ನು ಮತ್ತಷ್ಟು ಬೆಳೆಸುವುದು ಕೂಡ ಬೇಡಿಕೆಯನ್ನು ಪೂರೈಸುವ ಒಂದು ಪ್ರಯತ್ನವಾಗಿದೆ.

**ಇತರ ಉದ್ಯಮಗಳು**

ಕರ್ನಾಟಕಕ್ಕೆ ಸರಳು ಇತ್ಯಾದಿಗಳನ್ನು ತಯಾರಿಸುವ ಯಂತ್ರವನ್ನು ಸ್ಥಾಪಿಸಲು ಅನುಮತಿ ದೊರಕಿದ್ದ (೧೫ ಸಾವಿರ ಟನ್‌ಗಳಷ್ಟು) ಈ ಸಂಬಂಧದ ಲೈಸನ್ಸನ್ನು ಪಡೆಯುವತ್ತ ಪ್ರಯತ್ನ ನಡೆಯುತ್ತಿದೆ. ಶಹಬಾದಿನಲ್ಲಿ ಸಿಮೆಂಟಿನ ಕಾರಖಾನೆಯು ಇದೆ. ದಿನದಿಂದ ದಿನಕ್ಕೆ ಸಿಮೆಂಟಿನ ಬೇಡಿಕೆಯು ಹೆಚ್ಚುತ್ತ ಬರುವುದರಿಂದ, ಈ ಬಗ್ಗೆ ಸರ್ವೆ ನಡೆಸಿದಾಗ ಹೊಸದುರ್ಗದ ಬಳಿ ಇನ್ನೊಂದು ಕಾರಖಾನೆ ಕಟ್ಟುವುದಕ್ಕೆ ಪ್ರಕೃತಿ ಅನುಕೂಲವಿದೆಯೆಂದು ತಿಳಿದುಬಂದಿದೆ. ಆದುದರಿಂದ ಈ ಪ್ರಕೃತಿಯ ವರದಾನವನ್ನು ಉಚಿತವಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಕೈಗೊಳ್ಳಬೇಕು. ಸರಕಾರವಾದರೂ ಆವಶ್ಯಕವೆನಿಸಿದರೆ, ತನ್ನ ಸಂಪೂರ್ಣ ಸಹಕಾರ ನೀಡುವುದು ಅತ್ಯಗತ್ಯ. ಇಂದು ನಮ್ಮ ರಾಜ್ಯದಲ್ಲಿ ದಿನಕ್ಕೆ ೧೦,೦೦೦ ಟನ್ ಪ್ರಮಾಣದ ಸಕ್ಕರೆಯನ್ನು ಉತ್ಪಾದಿಸುವ ೮ ಕಾರಖಾನೆಗಳಿವೆ. ಇವುಗಳನ್ನು ವಿಸ್ತರಿಸುವ ಮತ್ತು ಗೌರಿಬಿದನೂರಿನಲ್ಲಿ ಹೊಸತೊಂದನ್ನು ಸ್ಥಾಪಿಸುವ ಬಗ್ಗೆ ಅನುಮತಿಯನ್ನು ಸರಕಾರವು ಇತ್ತಿದೆ. ಇದರಿಂದ ಸಕ್ಕರೆಯ ಪೂರೈಕೆಯು ಸುಗಮವಾಗುವ ನಿರೀಕ್ಷೆಯಿದೆ.

**ನಿರೀಕ್ಷಿತ ಕಾರಖಾನೆಗಳು**

ಡಚ್ಚ್ ಸಂಸ್ಥೆಯೊಂದರ ನೆರವಿನಿಂದ ಮಂಗಳೂರಿನಲ್ಲಿ ಕರ್ನಾಟಕ ಸರಕಾರವು ಗೊಬ್ಬರದ ಕಾರಖಾನೆಯೊಂದನ್ನು ಸದ್ಯದಲ್ಲಿಯೇ ಸ್ಥಾಪಿಸುವ ಆಶೆಯಿದೆ. ಇದಕ್ಕೆ ೨೮ ಕೋಟಿ ರೂಪಾಯಿಗಳ ಬಂಡವಳ ವೆಚ್ಚವು ಬರುವ ನಿರೀಕ್ಷೆಯಿದೆ. ಸೆಲ್ಯುಲೋಸ್ ಅಸಿಟೇಟ್ ಕಾರಖಾನೆಗೆ ಅನುಮತಿ ದೊರಕಿದೆ; ತಾಂತ್ರಿಕ ವಿವರಣೆಗಳೂ ಸರಕಾರದ ಕೈಸೇರಿವೆ; ಮಂಡ್ಯ ಸಕ್ಕರೆ ಕಾರಖಾನೆಯ ಮೆನೇಜಿಂಗ್ ಡೈರೆಕ್ಟರರು ಫೋಟೋ ಫಿಲ್ಮ್ ತಯಾರಿಯ ಸಂಬಂಧದ ಮಾತುಕತೆಗಳಿಗೆ ಅಂತಿಮ ರೂಪವೊಂದನ್ನೀಯಲು ಶೀಘ್ರದಲ್ಲಿಯೇ ಜರ್ಮನಿಗೆ ತೆರಳಲಿದ್ದಾರೆ. ವರ್ಣ ಫಿಲ್ಮ್‌ಗಳನ್ನು ನಿರ್ಮಿಸುವ ಇನ್ನೊಂದು ಸಲಹೆಯೂ ಸರಕಾರದ ಪರಿಶೀಲನೆಯಲ್ಲಿದೆ. ಹಲವು ವರ್ಷಗಳಿಂದಲೂ ನೆನೆಗುದಿಗೆಬಿದ್ದಿರುವ ಅಲ್ಯುಮಿನಿಯಂ ಕಾರಖಾನೆಯು ನಮಗೆ ಬೇಕೆಂದು ಕೇಂದ್ರ ಸರಕಾರವನ್ನು ನಮ್ಮ ರಾಜ್ಯ ಕೇಳಿಕೊಂಡಿದೆ. ಅದು ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣಗೊಳ್ಳುವ ಸಾಧ್ಯತೆಯಿದೆ.

**ಕೇಂದ್ರದ ಸ್ಥಾವರಗಳು**

ಕರ್ನಾಟಕದ ಒಂದು ಭಾಗ ಮೈಸೂರು ಒಂದು ಕಾಲದಲ್ಲಿ ಉದ್ದಿಮೆಗಳಿಗೆ ಹೆಸರಾದ 'ದೇಶ'ವಾಗಿತ್ತು. ಇಂದಿಗಾದರೂ ಅದು ಅದೇ ನಿಟ್ಟಿನಲ್ಲಿ ಮುಂದರಿಯುತ್ತಿದೆ. ಕೇಂದ್ರ ಸರಕಾರದವರೂ ನಮ್ಮ ರಾಜ್ಯದಲ್ಲಿ ಹಲವಾರು ಉದ್ದಿಮೆಗಳನ್ನು ಸ್ಥಾಪಿಸಿದೆ. ವಿಮಾನ ಸಾಮಗ್ರಿ, ಯಂತ್ರೋಪಕರಣ ಕಾರಖಾನೆಗಳು, ಭಾರತ ಇಲೆಕ್ಟ್ರಾನಿಕ್ಸ್ ಇಂಡಿಯನ್ ಟೆಲಿಫೋನ್ ಕಾರಖಾನೆಗಳು ಇವುಗಳಲ್ಲಿ ಮುಖ್ಯವಾದವುಗಳು. ಇಲ್ಲಿ ತೊಡಗಿಸಲಾದ ಬಂಡವಳವು ೩೯ ಕೋಟಿ ರುಪಾಯಿಗಳು. ಉತ್ಪಾದನೆಯ ಮೊತ್ತ ರೂ. ೨೬ ಕೋಟಿ. ಇಂದು ಈ ಕಾರಖಾನೆಗಳಲ್ಲಿ ಸುಮಾರು ೩೫ ಸಾವಿರ ನೌಕರರು ಇದ್ದಾರೆ. ಕೇಂದ್ರವು ಸ್ಥಾಪಿಸಲಿರುವ ಇನ್ನೂ ಕೆಲವು ಔದ್ಯಮಿಕ ರಂಗಗಳನ್ನು ನಮ್ಮ ರಾಜ್ಯಕ್ಕೆ ತರುವ ಪ್ರಯತ್ನ ನಡೆಯುತ್ತಿರಲೇಬೇಕು.

**ಸಾರಿಗೆಯ ಕೊರತೆ**

ಕಾರಖಾನೆಗಳಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಒದಗಿಸಲು ಮತ್ತು ಅಲ್ಲಿಂದ ಸಿದ್ಧವಸ್ತುಗಳನ್ನು ಒಯ್ಯಲು ಸಾರಿಗೆಯ ವ್ಯವಸ್ಥೆ ಅತ್ಯಗತ್ಯವಾಗಿದೆ; ಮತ್ತು ನಮಗಿರುವ ದೊಡ್ಡ ತೊಂದರೆಯೆಂದರೆ ಇದೇ ಆಗಿದೆ. ರೇಲ್ವೆ ದಾರಿಗಳು ನಮ್ಮಲ್ಲಿ ಕಡಿಮೆ; ಗಿಡ್ಡದಾದ ಕರಾವಳಿಯಲ್ಲಿ ಉತ್ತಮ ಬಂದರಗಳಿವೆಯೇನೋ ನಿಜ, ಆದರೆ, ಅವು ಅಪೇಕ್ಷಿತ ಪ್ರಮಾಣದಲ್ಲಿ ಬೆಳೆದುಬಂದಿಲ್ಲ. ಇತ್ತೀಚೆಗೆ ಕೇಂದ್ರ ಸರಕಾರ ಬಂದರುಗಳ ಅಭಿವೃದ್ಧಿಯ ದಾರಿಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದೆ ನಿಜ, ಆದರೆ ಇಷ್ಟರಿಂದಲೇ ತೃಪ್ತಿಪಡುವುದು ಸಾಧ್ಯವಿಲ್ಲ. ರೇಲುದಾರಿಗಳ ಪ್ರಮಾಣ ಅತೃಪ್ತಿಕಾರಕವೇ ಸರಿ. ಆದುದರಿಂದ ರಾಜ್ಯ ಸರಕಾರ ಉದ್ದಿಮೆಗಳ ಸ್ಥಾಪನೆಗೆ ಮಹತ್ವ ನೀಡುವಂತೆಯೇ ಸಾರಿಗೆ ವ್ಯವಸ್ಥೆಗೂ ಕೇಂದ್ರದ ಮೇಲೆ ಒತ್ತಾಯ ಹೇರುವುದು ಅತ್ಯಗತ್ಯ. ಬಲವಾದ ಸರಕಾರವುಳ್ಳ ರಾಜ್ಯಗಳು ಕೇಂದ್ರದ ಸಹಾಯವನ್ನು ಸರ್ವರೀತ್ಯಾ ಪಡೆಯುವುದು ಸಾಧ್ಯವೆಂಬುದು ಅನುಭವ ವೇದ್ಯ. ಹಾಗಿರುವಾಗ ನಮ್ಮ ರಾಜ್ಯ ಮಾತ್ರ ಹಿಂದುಳಿಯಬೇಕಾದುದೂ ಏಕೆ?

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

## ಎರಡು ನಿಮಿಷದ ಪ್ರೇಯಸಿಗೆ

# ಅಂತಿಮ ನಿಧಿಯ ಸಮರ್ಪಣೆ

"ನೀನಿನ್ನು ಸಾಯಲಾರೆ ಜೀವನ! ಡಾಕ್ಟರ್ ಹೇಳಿದ್ದಾರೆ........

"ಸಾಯಲಾರೆ......." ಸಣ್ಣ ನಗುವಿನೊಡನೆ ವ್ಯಂಗ್ಯವಾಗಿ ಮಧ್ಯದಲ್ಲಿಯೇ ತಡೆದು ಹೇಳಿದನು. "ಡಾಕ್ಟರ್‌ರು ಏನು ಹೇಳಿರುವರೆಂದು ನನ್ಗೆ ಗೊತ್ತಿದೆ ಸಂಧ್ಯಾ. ಒಂದೇ ಕ್ಷಣ ಎರಡು ಕ್ಷಣಕ್ಕಾಗಿ ಇದ್ದ ನಂಟನೆಂದಲ್ಲವೆ...... ಹೊತ್ತು ಮೂಡಿದ ನೀನು. ಕೈಯ ಬಾಣ ಬಿಟ್ಟಾಗಿದೆ. ಸ್ನೇಹಹೀನವಾದ ದೀಪದ ಬತ್ತಿಯು ಉರಿದು ಹೋದ ಮೇಲೆ ಅದಕ್ಕೆ ಪುನಃ ಸ್ನೇಹದಾನವಿತ್ತರೂ ಅದು ಉರಿಯಲಾರದು."

"ಇದನೇನು ನೀ ಮಾಡಿಕೊಂಡಿ ಜೀವನ!"

"ಏನಿಲ್ಲ; ಸಾತ್ವಿಕ ಪ್ರೇಮದಲೆಲ್ಲರಗಿದ ಪ್ರತಿಯೊಬ್ಬನಿಗೂ ಈ ಪುರಸ್ಕಾರ ಸಿಕ್ಕಿಯೇ ಸಿಗುತ್ತದೆ ಸಂಧ್ಯಾ! ಮೃತ್ಯುವಿನಲ್ಲೆನಗೆ ದುಃಖವಿಲ್ಲ. ಪ್ರತಿ ಬೆಳಗಿನ ಮೇಲೂ ಸಂಜೆ ಬಂದೇ ಬರುತ್ತದೆ. ಆದರೆ ದುಃಖವಿಷ್ಟೇ— ಜಗತ್ತಿನ ಈ ಕರಾಳ ಸಂಜೆಯಲ್ಲೇ ಕಾಲವು ಅದನ್ನು ತನ್ನ ಜೀವನದಧಿಕಾರದಿಂದ ವಂಚಿಸಿ ಕೊಂಡೊಯ್ಯುತ್ತಿದೆಯಲ್ಲಾ ಎಂದು."

"ಹೆದರಬೇಡ ಜೀವನ, ಪ್ರತೀ ಸಂಜೆಯ ಮೇಲೆ ಬೆಳಗೂ ಬರುತ್ತದಲ್ಲವೆ?"

"ಅವಶ್ಯ ಬರುತ್ತದೆ. ಆದರೆ ಆ ಹಿಂದಿನ ಸಂಜೆಗೆ ಸಿಗುವುದೇನು? ಏನೂ ಇಲ್ಲ; ಶೂನ್ಯ. ಅದು ತನ್ನ ಜೀವನದ ಉಳಿದ ಕ್ಷಣವನ್ನು ದುಃಖಿಸುತ್ತ ಕಳೆಯುತ್ತದೆಯಲ್ಲವೆ! ಈ ಇಂದಿನ ಸಂಜೆಯಲ್ಲಿ ಏನೂ ಬೆದರಿಕೆ ಇಲ್ಲ. ನನಗೆ ನೀ ಬರುವ ಆಸೆ ಇದ್ದಿಲ್ಲ. ಅಲ್ಲದೆ ಈ ನಿರ್ಜನ ಸ್ಥಳದಲ್ಲಿ, ಪರ್ವತಖಂಡ ಸ್ಥಿತ "ಸೆನಿಟೋರಿಯಮ" ದನಾಲ್ಕು ಗೋಡೆಯ ಆವಾಂತರದ ಈ ಕೊಳಕು ಕೋಣೆಯಲ್ಲಿ, ಜೀವನದಿಂದ ನಿರಾಶೆ ಹೊಂದಿದ ವ್ಯಕ್ತಿ, ಬದುಕು ಹಾಗು ಮರಣದ ಮಧ್ಯೆ ಬಿದ್ದು ತುಯ್ದಾಡುತ್ತಿರುವ ಕೋಣೆಯೊಳಗೆ ಬರಲು ಯಾರೂ ಒಪ್ಪಲಾರರು. ಆದರೂ ನೀ ಬಂದಿರುವಿ; ಇನ್ನೆನಗೆ ಓಡಿ ಬರುತ್ತಿರುವ ಮರಣದ ನಾಶಿಯು ಅಷ್ಟು ಬೀಭತ್ಸವಾಗಿ ತೋರಲೊಲ್ಲದು. ಆದರ ನೆನಪಾದರೆ ನನ್ನ ಹೃದಯದಲ್ಲಿ ಅವುದೋ ಅವರ್ಣನೀಯವಾದೊಂದು ಸಂತೋಷದ ತೆರೆಯು ಉತ್ಪನ್ನವಾಗುತ್ತಿದೆ. ಈ ನರಕ ಜೀವನದಿಂದ ಬಹು ದೂರವಾಗಿ ಶಾಂತಿಯ ಸದನದಲ್ಲಿ ವಿಶ್ರಮಿಸಬಹುದಲ್ಲಾ ಎಂದು.

"ಸಂಧ್ಯಾ, ನನ್ನ ಹತ್ತಿರಕ್ಕೆ ಬಾ; ಕ್ಷಣ ಮಾತ್ರಕ್ಕಾಗಿ; ಎನ್ನ ಹೃದಯದಾಳದಲ್ಲಿ ಬಿರುಗಾಳಿ ಏಳುತ್ತಿದೆ.

"ನಿನ್ನನ್ನು ನಾನೀ ಅಸಹ್ಯ ವಾತಾವರಣದಲ್ಲಿ ಹೆಚ್ಚು ಸಮಯ ನಿಲಿಸಿಕೊಳ್ಳಲು ಬಯಸುವುದಿಲ್ಲ. ಯಾಕೆಂದರೆ ಇಲ್ಲಿಯ ಜಂತುಗಳು ಮಾನವೀಯತೆಯ ಜ್ಯೋತಿಯ ಪತಂಗಗಳಾಗಿರುತ್ತವೆ. ಅವು ಒಂದು ಜ್ಯೋತಿಯನ್ನು ನಂದಿಸಿ ಅಷ್ಟರಿಂದಲೇ ಸಂತೋಷ ಹೊಂದಲಾರವು. ಇನ್ನುಳಿದವರನ್ನೂ ಕಾಡುತ್ತವೆ. ಅಲ್ಲದೆ ನಿನಗಿನ್ನು ಅದೆಷ್ಟು ದೀರ್ಘಕಾಲ ಬಾಳಬೇಕಾಗಿರುವುದೋ!

........ನೋಡಲ್ಲಿ, ಎದುರಿನಲ್ಲಿ ಭಗವಂತನ ಮೂರ್ತಿ ತೂಗಾಡುತ್ತಿದೆ. ಅದರ ಮೇಲೆ ಎಂತಹ ನೈಸರ್ಗಿಕ ಪ್ರಕಾಶವು ಮಿನುಗುತ್ತಿರುವುದೆಂದು ತಿಳಿಯಲೊಲ್ಲದು. ನಾನೆಂದೂ ಆ ಮೂರ್ತಿಯ ಮೇಲೆ ಭರವಸೆ ಇಟ್ಟಿಲ್ಲ. ಆದರೂ ನಾನಿಂದು ಅದರ ಮೇಲೆ ಆಣೆ ಇಟ್ಟು ಹೇಳುತ್ತಿರುವೆನು ಸಂಧ್ಯಾ—ನಾನು ನಿನ್ನನ್ನು ಎಂದೆಂದಿಗಾಗಿಯೂ ಪ್ರೀತಿಸಿರುವೆನು. ಹನುಮಂತನಂತೆ ನನ್ನೆದೆಯನ್ನು ಬಗಿದು ತೋರಿಸಲು ಸಾಧ್ಯವಿದ್ದಿದ್ದರೆ, ನೀನಲ್ಲಿ ನೋಡುತಿದ್ದಿ—ನಿನ್ನದೇ ಮೂರ್ತಿ ಪ್ರತಿಷ್ಠಿತವಾಗಿರುವುದನ್ನು.

"ನಾನೆಂದೂ ನಿನಗೆ ಯಾವ ರೀತಿಯ ವಂಚನೆಯನ್ನೂ ಮಾಡಿಲ್ಲ. ಎನ್ನ ಹೃದಯ ಹಂದರದಲ್ಲಿ ಯಾವಾಗಲೂ ಅದೇ ಸ್ನೇಹ ಸಂಧ್ಯೆಯು ವಾಸಿಸುತಿದ್ದಾಳೆ. ನನ್ನ ಪಾದಗಳು ಮೃತ್ಯುವಿನ ಮಾರ್ಗದಲ್ಲಿ ನಡೆದು ಮಹಾ ಭವನವನ್ನು ಸೇರಲು ಆತುರಪಡುತ್ತಿವೆ. ನೀನೆನ್ನ ಮಾತನ್ನು ನಂಬಲೇ ಬೇಕೆಂದು ನಾನೇನು ಅಧಿಕಾರ ವಾಣಿಯಿಂದ ಹೇಳುತ್ತಿಲ್ಲ. ಆದರೆ ಮರೆಯದಿರು— ಮರಣದ ಮಹಾಮಾರ್ಗದಲ್ಲಿ ನಿಂತ ಯಾವುದೇ ವ್ಯಕ್ತಿಯು, ತನ್ನ ಜೀವನದ ಆರಾಧ್ಯ ದೇವತೆಯೊಡನೆ ಸುಳ್ಳನ್ನು ಹೇಳುವುದು ಅಸಾಧ್ಯ. ನಾ ನಿನಗೆ ಜೀವನದಲ್ಲಿ ಎಂದೂ ಸುಖ ಕೊಟ್ಟಿಲ್ಲ ಸಂಧ್ಯಾ. ಅಲ್ಲದೆ ಕೊಡುವ ಸಂದರ್ಭವನ್ನಾದರೂ ನೀನು ಒದಗಿಸಿಕೊಡಲಿಲ್ಲ. ನಾನಾದರೋ ಆ ಸಮಯದಲ್ಲಿ ನನ್ನ ಜೋಳಿಗೆಯನ್ನು ಮುಂದಕ್ಕೆ ಪಸರಿಸಿ, ನಿನ್ನಲ್ಲಿಯೇ ಭಿಕ್ಷೆಯಾಚಿಸುತಿದ್ದೆ. ಆದರೆ ಭಾಗ್ಯದ ಬಿರುಗಾಳಿಯಲ್ಲಿ ನಿಂತ ನನ್ನ ಪಾದವು ಇಂದಿನ ವರೆಗೆ ನಿಲ್ಲಲಿಲ್ಲ. ನಾ ಕೊಡುತ್ತಿರುವ ಈ ಕಾಗದದ ಲಕೋಟೆಯು ನನ್ನ ಅಂತಿಮ ನಿಧಿಯಾಗಿದೆ, ಇದರಲ್ಲೆನ್ನ ಹೃದಯ ಹುದುಗಿದೆ. ಅದೂ, ಒಂದು ರೋಗಗ್ರಸ್ತ ಹೃದಯ. ಮುಟ್ಟುವಾಗ ಮೆಲ್ಲಗೆ ಕೈ ಹಾಕು. ಎನಗೆ ಸಂಪೂರ್ಣ ಭರವಸೆ ಇದ್ದಿತ್ತು— ಎನ್ನ ಜೀವನ ದೀಪವು ನಂದುವ ಮೊದಲೊಮ್ಮೆ ಸಂಧ್ಯಾಳಲ್ಲಿಗೆ ಬಂದೇ ಬರುವಳೆಂದು.

"ಭಗವಂತ ನಿನ್ನನ್ನು ಚಿರ ಸುಖಿಯನ್ನಾಗಿ ಮಾಡಲಿ ಸಂಧ್ಯಾ. ಸಾಯುವಾಗ ಇದರಿಂದ ಹೆಚ್ಚಿನದೇನನ್ನೂ ಕೊಡಲಾರೆ........

"ಜೀವನ!"

"ಮೇಡಮ್, ಪೇಷಂಟ್‌ಗೆ ಹೆಚ್ಚು ತೊಂದರೆ ಕೊಡಬೇಡಿ. ಅವರ ಬ್ಲಡ್ ಪ್ರೆಷರ್ ಹೆಚ್ಚಾಗಿದೆ. ಈಗವರಿಗೆ ಕಂಪ್ಲೀಟ್ ರೆಸ್ಟಿನ ಅಗತ್ಯವಿದೆ."

"ಥಾಂಕ್ಯೂ. ಓ ಕೇ ನರ್ಸ್."

ಸಂಧ್ಯಾ ಕೋಣೆಯಿಂದ ಹೊರ ಹೋದಳು ಅವಳ ಕಣ್ಣೆದುರಲ್ಲಿ ಜಗತ್ತೆಂದು ಶೂನ್ಯವಾಗಿ, ಆದರೆ ಜೀವನನ ರೂಪದಲ್ಲಿ ತೋರತೊಡಗಿತು. ಅವಳ ಹೃದಯವು ಭವಿಷ್ಯದ ಅಂತಿಮ ಪೃಷ್ಠದ ಮೇಲೆ ದೃಷ್ಟಿ ಓಡಿಸುತಿತ್ತು. ಜೀವನ ಹಾಗು ಅವನಿಂದ ಕೊಡಲ್ಪಟ್ಟ ಈ ಕಾಗದದ ಲಕೋಟೆ! ಅವಳ ತಲೆ ಸುತ್ತಲಾರಂಭಿಸಿತು. ಅವಳು ಪಕ್ಕದಲ್ಲಿದ್ದ ಎದುರಿದ್ದ ಒಂದು ಮುರುಕು ಕುರ್ಚಿಯ ಮೇಲೆ ಕುಳಿತು ಕವರನ್ನು ಒಡೆದು ಅದರಲ್ಲಿದ್ದ ಕಾಗದ ಪನ್ನೋದತೊಡಗಿದಳು. ಅವಳ ಹೃದಯದಲ್ಲಿ ಭಯದ ತರಂಗಗಳುತ್ಪನ್ನವಾಗಿ ಅವಳನ್ನು ಪ್ರಶ್ನಿಸುತಿದ್ದುವು— "ನಿನಗೇನು ಅಧಿಕಾರವಿದೆ ಜೀವನನಿಂದ ಪುರಸ್ಕಾರ ಪಡೆಯಲು?"

○○ ○○

"ಸಂಧ್ಯಾ,

"ಮರಣದ ಮಹಾದ್ವಾರದಲ್ಲಿ ನಿಂತಾಗಲೂ ಮನುಷ್ಯನಲ್ಲಿ ಬದುಕಬೇಕೆಂಬಾಸೆ ಎಷ್ಟರ ವರೆಗಿರುತ್ತದೆಂಬುದು ನನಗಿಂದು ಮನವರಿಕೆಯಾಗಿದೆ. ಈ ಸ್ಥಳದಲ್ಲಿ ಮರಣದ ಭವನದಲ್ಲಿ ಕುಳಿತು ಯೋಚಿಸುತ್ತಿರುವೆನು— ಏನೋ ನನ್ನ ಬಗ್ಗೆ...... ಏನೋ ನಿನ್ನ ಬಗ್ಗೆ. ನಾ ಬಲ್ಲೆ, ನನ್ನ ಹೃದಯದಲ್ಲಿ ನೆಟ್ಟ ಮುಳ್ಳುಗಳನ್ನು ಇಲ್ಲಿಯ ಔಷಧೋಪಚಾರ ಎಂದೂ ತೆಗೆಯಲಾರದೆಂದು. ನಾಲ್ಕು ನಿಟ್ಟಿನಿಂದಲೂ ನನ್ನಾತ್ಮವನ್ನು ಹಲವು ತರದ ವಿಷ ಮುಳ್ಳುಗಳು ಮುತ್ತಿಕೊಂಡಿವೆ. ಚಿರ ನವೀನವಾಗಿರುವ ಈ ಆತ್ಮದ ಜರ್ಜರಿತ ದೇಹ ಕೊರಡು. ಇಲ್ಲಿಗೆ ಬಂದ ಪ್ರತಿಯೊಬ್ಬ ಮನುಷ್ಯನೂ ಮನುಷ್ಯನಾರರದೆ ಒಂದು ಗೊಂಬೆಯಾಗಿರುತ್ತಾನೆ. ಅದೂ ಆಜ್ಞಾಗಾರಿ ಗೊಂಬೆ.

"ನನ್ನ ಸಾವಿನ ಬಗ್ಗೆ ನನಗೇನೂ ದುಃಖವಿಲ್ಲ. ಆದರೆ—ದುಃಖವಿಷ್ಟೇ— ಈ ಜಗತ್ತಿನ ಬಗ್ಗೆ ಒಂದು ವಿಡಂಬನೆಯ ಘೋರಣೆಯನ್ನು ಹಿಡಿದು ಹೋಗುತ್ತಿರುವೆನಲ್ಲಾ ಎಂದು. ನಿನಗೆ ಇಂದಲ್ಲ ನಾಳೆ ಒಪ್ಪಲೇಬೇಕಾದೀತು ಸಂಧ್ಯಾ— ನಿರಾಕಾರ ಪರಮಾತ್ಮನೊಬ್ಬ ದೂರದಲ್ಲಿ ಕುಳಿತು ಜೀವಕೋಟಿಯಿಂದ ನಡೆಯುವ ಪ್ರತಿಯೊಂದು ಕಾರ್ಯವನ್ನೂ ತನ್ನ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಿರುವನೆಂದು. ಸತ್ಯ ಹೇಳು— ನಿಜವಾಗಿಯೂ ನೀನೆನ್ನ ಪ್ರೀತಿಸಿರುವೆಯಾ?

"ಎನಗೆ ಗೊತ್ತಿದೆ ಇದರುತ್ತರವು ನಿನ್ನಲ್ಲಿಯೇ ಇದೆ ಎಂದು. ಆದರೆ ಉತ್ತರ ಕೊಡಲು ನಿನಗಿಷ್ಟವಿಲ್ಲ. ಸಾವಿರಾರು "ಜೀವನ"ರನ್ನು ವಂಚಿಸಿ "ಸಂಧ್ಯೆ"ಯ ಗಾಢ ಆಲಿಂಗನದಲ್ಲಿ ವಿಲೀನಗೊಳಿಸುವಂತಹ ಕಾರ್ಯ ನಿನಗೊಂದು ಆಟ. ನೀನು ಆ ನೀರತ್ವದ ಅಮರ ಪ್ರೇಮ ಹಾಗು ಸೌಂದರ್ಯದ ಪ್ರಯೋಗವನ್ನು ದುಷ್ಟ ಮಾರ್ಗದಲ್ಲಿ ಮಾಡಿರುವಿ. ನನ್ನ ಪ್ರಭಾತದ ಹೊಮ ಕಿರಣದಂತೆ ಪರಿಶುದ್ಧವಾಗಿದ್ದ ಮುಗ್ಧ ತಾರುಣ್ಯವನ್ನು ಚೇಷ್ಟೆಯ ವಸ್ತುವೆಂದು ಗ್ರಹಿಸಿ ಓರ್ವ ಸಾಧ್ವಿಯಂತೆ ಒಂದಿರುವಿ. ನಿನ್ನ ಸಂಪರ್ಕದಲ್ಲಿದ್ದಾಗ ನನ್ನಲ್ಲಿ ನಾರೀ ಜಾತಿಯ ಮೇಲೆ ಅದೆಷ್ಟು ಗೌರವವಿದ್ದಿತೆಂಬುದು ನಿನಗೆ ತಿಳಿದಿದ್ದರೆ, ನಾನಂದು ನತಮಸ್ತಕನಾಗಿ ಪ್ರಣಾಮಿಸಿದ್ದ ನಿನಗಿಂದು ನೆನಪುಳಿಯುತಿತ್ತು. ನಾ ಬಲ್ಲೆ ನೀ ವಿಧವೆಯೆಂದು. ಸಮಾಜದಿಂದ ತಿರಸ್ಕೃತಳಾದ, ಯಾರೂ ಮುಟ್ಟದಿದ್ದ ಹರಿಜನರಂತೆ ನಿನ್ನ ಬಾಳೆಂದು ನನಗೆ ಸರಿಯಾಗಿ ಗೊತ್ತಿದ್ದಿತ್ತು. ಆದರೂ ನಾನಿಂದು ನಿನ್ನಲ್ಲಿ ಕೇಳಬಯಸುತ್ತೇನೆ—ವಾಸ್ತವದಲ್ಲಿ ನಿಜವಾಗಿಯೂ ನೀ ವಿಧವೆಯೆ? ನಿನ್ನ ಗಂಡ ಇದ್ದಿಲ್ಲವೆ? ನೀನು ನಿನ್ನದ್ದೇ ಆಲೋಚನೆ

(೧೧ನೇ ಪುಟ ನೋಡಿರಿ)

**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

**25,000**
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
**ಹೊಸಕೆರೆ ಚಿದಂಬರಯ್ಯನವರ**

**ಗೀತೆಯ ಕೈಗನ್ನಡಿ**

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ,

## ಭಾರತದ ಮುಕುಟಮಣಿ

# ಕಶ್ಯಪ ವರಪ್ರಸಾದಿತ ಕಾಶ್ಮೀರ

ಭಾರತಕ್ಕೆ ಕಾಶ್ಮೀರದ ಮಹತ್ವವು ಕೇವಲ ಭೌಗೋಲಿಕ ದೃಷ್ಟಿಯಿಂದ ಮಾತ್ರವಲ್ಲ ಐತಿಹಾಸಿಕ ದೃಷ್ಟಿಯಿಂದ ಕೂಡ ಬಹಳ ವೈಶಿಷ್ಟ್ಯಪೂರ್ಣವಿದ್ದಿದೆ. ಅದು ನಮ್ಮ ಸಂಸ್ಕೃತಿ ಅಥವಾ ಸಭ್ಯತೆಯ ಪ್ರತೀಕವಿದೆ. ಭಾರತೀಯ ಅಥವಾ ವೈದಿಕ ಸಂಸ್ಕೃತಿಯ ಉದ್ಗಮ ಸ್ಥಾನ ಕಾಶ್ಮೀರವೆಂದೂ ಹೇಳಲಾಗುತ್ತದೆ. ಅಲ್ಲಿ ಕುಳಿತುಕೊಂಡು ನಮ್ಮ ಪೂರ್ವಜರು ಭಾರತೀಯ ಸಂಸ್ಕೃತಿಯ ರೂಪರೇಖೆಗಳನ್ನು ನಿಶ್ಚಯಿಸಿರುವರು. ಮಹಾ ಕವಿ ಕಾಳಿದಾಸನ ಮೇಘದೂತ, ಕುಮಾರಸಂಭವ ಹಾಗೂ ಅಭಿಜ್ಞಾನ ಶಾಕುಂತಲ ಇದೇ ಪ್ರದೇಶದ ಫಲ ಇದೆ. ಈ ಭೂಭಾಗವು ಕೈಯ್ಯಟ ನಂತರ ವೈಯ್ಯಾಕರಣ, ವಾಮನ, ಅಥವಾ ಉದ್ಭಟನಂತಹ ಸಾಹಿತ್ಯ ಶಾಸ್ತ್ರಜ್ಞ ಹಾಗೆಯೇ ಕಲ್ಹಣ ಅಥವಾ ಬಿಲ್ಹಣನಂತಹ ಕವಿಗಳನ್ನು ಸಂಸ್ಕೃತ ಸಾಹಿತ್ಯಕ್ಕೆ ದಾನಮಾಡಿರುತ್ತದೆ.

ಒಮ್ಮೆ ಇಂದ್ರನ ಸಭೆಯಲ್ಲಿ ಮಹರ್ಷಿ ದೂರ್ವಾಸರನ್ನು ಹಾಡಲು ಕೇಳಿಕೊಂಡರು. ದೂರ್ವಾಸರು ತಮ್ಮ ಗರಗರ ಕಂಠದಿಂದ ರಾಗಾಲಾಪನೆಗಾರಂಭಿಸಿದರು. ಅದನ್ನು ಕಂಡು ಭಗವತೀ ಶಾರದೆಗೆ ನಗೆ ಬಂತು. ಶಾರದೆ ನಗುವದನ್ನು ನೋಡಿ ದೂರ್ವಾಸರಿಗೆ (ಮೂಗಿನ ಮೇಲೆಯೇ ಕೋಪ ಇರುವವರಿಗೆ) ಕೋಪ ಬಂತು. ಕೂಡಲೆ ಅವರು ಶಾರದೆಗೆ ಮರ್ತ್ಯಲೋಕದಲ್ಲಿ ಹೋಗಿ ಜೀವಿಸಲು ಶಾಪಕೊಟ್ಟರು. ಆಗ ಶಾರದೆಯು ಬಂದು ಈ ಭೂಭಾಗದ ಮೇಲೆ ತಂಗಿದ್ದಳೆಂದ ಒಂದು ಕಥೆ ಇದೆ.

ಕಾಶ್ಮೀರದ ಇತಿಹಾಸದ ನಾಲ್ಕು ಭಾಗಗಳನ್ನು ಕಾಶ್ಮೀರ್ ವಾಸಿ ಕವಿಗಳು ಬರೆದಿರುವರು. ಉಳಿದ ಐದನೇ ಭಾಗವನ್ನು ಆಂಗ್ಲೀಯ ಸಾಹಿತಿಗಳು ಬರೆದಿರುವರು. …ನೇ ಇಸವಿಯ ವರೆಗಿನ ಇತಿಹಾಸವನ್ನು ಮಹಾಕವಿ ಕಲ್ಹಣನು ತನ್ನ 'ರಾಜ-ತರಂಗಿಣಿ'ಯಲ್ಲಿ ಚಿತ್ರಿಸಿರುವನು. ೧೪೫೦ರ ವರೆಗಿನ ಇತಿಹಾಸವನ್ನು 'ಜೋನ್ ರಾಜ" ಕವಿಯು ಬರೆದಿರುವನು. ೧೪೮೬ ಇಸವಿಯ ವರೆಗಿನ ಇತಿಹಾಸವನ್ನು "ಶ್ರೀಧರ" ಕವಿಯು ಬರೆದಿರುವನು. ಇವನ ನಂತರ ೧೬ನೆ ಶತಮಾನದ ವರೆಗಿನ ಇತಿಹಾಸವನ್ನು 'ಪ್ರಜ-ಭಟ್ಟ' ಕವಿಯು ಬರೆದಿರುವನು. ಈ ನಾಲ್ಕು ಕವಿಗಳು ಚಿತ್ರಿಸಿರುವ ಇತಿಹಾಸವು ಪ್ರಾಮಾಣಿಕತನದ್ದಿರುತ್ತದೆ. ಉಳಿದಿರುವ ಆಂಗ್ಲೀಯ ರಚಿತ ಭಾಗವು ವಿಕೃತಿಗೊಳಿಸಲ್ಪಟ್ಟಿರುವ ಇತಿಹಾಸದ ಚಿತ್ರವಿದೆ. ಕಲ್ಹಣನ 'ರಾಜ ತರಂಗಿಣಿ'ಯಲ್ಲಿ ಕಾಶ್ಮೀರದ ಉತ್ಪತ್ತಿಯ ಕುರಿತು ಕೊಟ್ಟಿರುವ ವರ್ಣನೆ ಈ ರೀತಿ ಇದೆ:—

"ಸೃಷ್ಟಿಯ ಪ್ರಾರಂಭದಿಂದ ಆರು ಮನ್ವಂತರಗಳ ವರೆಗೆ ಹಿಮಾಲಯದ ಬಳಿ ಇರುವ ಭೂಭಾಗವು ನೀರಿನಿಂದ ಪೂರ್ತಿ ತುಂಬಿಕೊಂಡಿತ್ತು. ಶಂಕರ-ಪ್ರಿಯೆ ಭಗವತಿ ಪಾರ್ವತಿಯು ಅಲ್ಲಿ ಆಗಮಿಸಿ ಆನಂದಕ್ಕಾಗಿ ದೋಣಿಯಲ್ಲಿ ಜಲವಿಹಾರ ಮಾಡುತ್ತಿದ್ದರು ಆದುದರಿಂದ ಆ ಸ್ಥಾನವನ್ನು ಅವರು ಬಹಳ ಮೆಚ್ಚುತ್ತಿದ್ದರು. ಆ ಸರೋವರದ ಹೆಸರು ಇಂದು ಕೂಡಾ 'ಸತೀ ಸರೋವರ'ವೆಂದೇ ಇದೆ. ಆ ಸರೋವರದಲ್ಲಿ 'ಜಲೋದ್ಭವ' ಎಂಬ ಹೆಸರಿನ ಒಬ್ಬ ರಾಕ್ಷಸನು ವಾಸಮಾಡುತ್ತಿದ್ದನು. ಅವನು ಸರೋವರದ ಆಸುಪಾಸಿನಲ್ಲಿ ಬಹಳ ಉಪದ್ರಕೊಡುತ್ತಿದ್ದನು. ಪ್ರಜಾಪತಿ ಕಶ್ಯಪನು ಆ ರಕ್ಕಸನನ್ನು ಕೊಂದು ಕಾಶ್ಮೀರದ ತಳಹದಿ ಹಾಕಿದನು. ರಾಕ್ಷಸನು ಸತ್ತುಹೋದ ನಂತರ ಜನರು ಬಂದು ಅಲ್ಲಿ ವಾಸಿಸಲಾರಂಭಿಸಿದರು. ಈ ರೀತಿ ಕಾಶ್ಮೀರ ಉಂಟಾಯಿತು.

"ಈ ಪ್ರದೇಶದಲ್ಲಿ ಆರಂಭದಿಂದಲೂ ೧೩೩೯ನೇ ಇಸವಿಯ ವರೆಗೆ ಹಿಂದೂ ರಾಜರೇ ಆಳಿಕೊಂಡು ಬಂದಿದ್ದರು. ಅನಂತರ ಮೊಗಲ ರಾಜರು ಆಳಲಾರಂಭಿಸಿದರು

೧೩೩೯ನೇ ಇಸವಿಯ ವರೆಗೆ ಅಲ್ಲಿಯ ಜನಸಂಖ್ಯೆಯಲ್ಲಿ ಹಿಂದೂಗಳಿಗೆನೇ ಬಹುಮತವಿತ್ತು. ಮೊಗಲರ ಆಳ್ವಿಕೆ ಆರಂಭವಾದ ನಂತರ ಕ್ರಮಶಃ ಮುಸಲ್ಮಾನರ ಸಂಖ್ಯೆ ಹೆಚ್ಚುತ್ತ ಹೋಗಿ ಈಗ ಅವರದ್ದೇ ಬಹುಮತವಿದೆ.

ಕಾಶ್ಮೀರದ ಹಿಂದೂ ರಾಜರಲ್ಲಿ ಲಲಿತಾದಿತ್ಯ'ನು ಭಾರತದಿಂದ ಎಲ್ಲಾ ವಿದೇಶಿ ವೈರಿಗಳನ್ನು ಹೊರಗಟ್ಟಿ ಸಾರ್ವಭೌಮ ರಾಜ್ಯವನ್ನು ಸ್ಥಾಪಿಸಿದನು. ಆದರೆ ಅವನು ಅತಿ ಮಹತ್ವಾಕಾಂಕ್ಷಿ ಇದ್ದ ಕಾರಣ ಇನ್ನೂ ಉತ್ತರದತ್ತ ದೃಷ್ಟಿಹಾಯಿಸಿದನು. ಆ ಯುದ್ಧದಲ್ಲಿ ಅವನು ಮಡಿದನು. ಅವನು ಧರ್ಮಾಭಿಮಾನಿ ರಾಜನಾಗಿದ್ದುದರಿಂದ ಅನೇಕ ದೇವ-ಮಂದಿರಗಳನ್ನು ಕಟ್ಟಿಸಿರುವನು."

ಸಂಪೂರ್ಣ ಕಾಶ್ಮೀರವು (ಇಂದು ಆಕ್ರಮಣಕಾರರ ದಾಳಿಗೆ ತುತ್ತಾಗಿರುವ ಭಾಗ ಕೂಡ) ಭಾರತದ್ದೇ ಇದೆ. ಇಂದಿನ ಮಹೀಯ ದುಸ್ಥಿತಿಗೆ ಅದು ಬರಲು ಕಾರಣ ಆಗಿದ್ದ ಕೆಲ ತೀವ್ರ ಸಂಧಿ, ಅಜ್ಞಾನಿ ಬ್ರಾಹ್ಮಣರಿಂದಾಗಿ ಇದೆ. ಘಟನೆ ಈ ರೀತಿ ಇದೆ:—

ಕಾಶ್ಮೀರದ ಇಂದಿನ ಸದರ-ರಿಯಾಸತ್ ಶ್ರೀ ಕರಣಸಿಂಹಜೀಯವರ ದಾದಾ ಶ್ರೀ ಗುಲಾಬಸಿಂಹಜೀಯವರು ತನ್ನ ರಾಜ್ಯಭಾರ ಕಾಲದಲ್ಲಿ ಒಂದು ಸಭೆಯನ್ನು ಕರೆದು ಮುಸಲ್ಮಾನ ಪ್ರಜೆಗಳ ಮುಂದೆ ಒಂದು ವಿನಂತಿಯನ್ನಿಟ್ಟರು. 'ನಿಮ್ಮ ಪೂರ್ವಜರು ಮೂಲತಃ ಹಿಂದೂಗಳಾಗಿದ್ದರು. ಅವರು ಮಹಮ್ಮದೀಯರ ಬಲಾತ್ಕಾರದಿಂದಾಗಿ ಮುಸಲ್ಮಾನ ಮತಕ್ಕೆ ಸೇರಿದರು. ಈಗ ನಿಮಗೊಂದು ಸುಸಂಧಿ ಬಂದೊದಗಿಯದೆ. ಆಕ್ರಮಣಗಾರರ ಮತವನ್ನು ತೊರೆದು ನಿಮ್ಮ ಮೂಲ ಧರ್ಮಕ್ಕೆ ನೀವು ಹಿಂತಿರುಗಬಹುದು. ನಿಮ್ಮನ್ನು ಪುನಃ ಸ್ವೀಕರಿಸಿಕೊಳ್ಳುವದಕ್ಕೆ ನಾವು ಸಿದ್ಧರಿದ್ದೇವೆ' ಆ ಸಮಯದಲ್ಲಿ ಕಟ್ಟಾ ಬ್ರಾಹ್ಮಣರು ಎದುರು ನಿಂತರು. ಮತಾಂತರ ಹೊಂದಿರುವವರ್ಯಾರಿಗೂ ಪುನಃ ಬರುವ ಅಧಿಕಾರವಿಲ್ಲವೆಂದವರು ಪಟ್ಟು ಹಿಡಿದರು ಮಹಾರಾಜರ ಮಹಾಪ್ರಯತ್ನ ಈ ರೀತಿ ಅಸಫಲವಾಯಿತು. ಫಲರೂಪವಾಗಿ ಕಾಶ್ಮೀರದ ರಾಜ ಹಿಂದೂವಿದ್ದಾರೆ. ಮತ್ತು ಅಧಿಕ ಸಂಖ್ಯೆಯ ಪ್ರಜೆಗಳು ಮುಸಲ್ಮಾನರಿದ್ದಾರೆ.

ಆ ಅಜ್ಞಾನಿ ಬ್ರಾಹ್ಮಣರ ಅಕೃತ್ಯದ ಫಲಿತಾಂಶವನ್ನು ನಾವಿಂದು ಭೋಗಿಸಬೇಕಾಗಿದೆ ನಮ್ಮ ಕಾಶ್ಮೀರದ ಅರ್ಧ ಭಾಗವನ್ನು ಶತ್ರು ಬಲಾತ್ಕಾರದಿಂದ ವಶಪಡಿಸಿಕೊಂಡಿರುವನಾದಲ್ಲಿ ಉಳಿದರ್ಧವನ್ನು 'ಜನಮತ'ದ ಹೆಸರಿನಲ್ಲಿ ಕಸಿದುಕೊಳ್ಳ ಹೊಡೆಯಲು ಹೊಂಚು ಹಾಕುತ್ತಿದ್ದಾನೆ.

ಈ ಭೂಭಾಗವು ಹಿಂದೂಗಳದ್ದೇ ಎಂಬುದಕ್ಕೆ ಸಾಕ್ಷಿಯಾಗಿ ನಿಂತಿವೆ ಅಲ್ಲಿಯ ಮಂದಿರಗಳು. ಅನೇಕ ಹಿಂದೂ ರಾಜರು ತಮ್ಮ ಜ್ಞಾಪಕಾರ್ಥವಾಗಿ ಅನೇಕ ಮಂದಿರಗಳನ್ನು ಕಟ್ಟಿಸಿರುವರು. ಅವುಗಳಲ್ಲಿ ಕೆಲವು ಬಹಳ ವಿಶಾಲವಾಗಿದ್ದು ಇಂದು ಕೇವಲ ಅವಶೇಷ ರೂಪದಲ್ಲುಳಿದಿವೆ. ಶ್ರೀನಗರದ ಈಶಾನ್ಯ ಭಾಗದಲ್ಲಿ ಶಂಕರ ಪರ್ವತದಲ್ಲಿ ಶಿವನ ದೇವಾಲಯವಿದೆ. ಇದನ್ನು ಅಶೋಕನ ಮಗ ಕಟ್ಟಿಸಿದುದಾಗಿ ಹೇಳಲಾಗುತ್ತದೆ ಶಂಕರ ಪರ್ವತದ ಪಕ್ಕದಲ್ಲಿ, ದಕ್ಷಿಣ ಭಾಗದಲ್ಲಿ, 'ಪನದ್ರತನ'' ಎಂಬ ಹೆಸರಿನ ಪುರಾತನ ದೇಗುಲವಿದೆ. ಇದನ್ನು ಪಚ್ಚೆ ಹಾಗೂ ನೀಲ ಕಲ್ಲುಗಳಲ್ಲೇ ಕಟ್ಟಿಸಿರುವರು. ಇದನ್ನು ಕಾಶ್ಮೀರ ರಾಜನಾಗಿದ್ದ ಪಾರ್ಥನ ಪ್ರಧಾನಿ ಮೇರು ಎಂಬವನು (೯೧೩—೯೩೯) ಕಟ್ಟಿಸಿರುವದಾಗಿ ಹೇಳಲಾಗುತ್ತದೆ.

ಝೇಲಂ ನದಿಯ ತಟಾಕದಲ್ಲಿ ಬಹಳ ದೇವಸ್ಥಾನಗಳಿವೆ ಮಹಾ ಶ್ರೀ, ಸ್ಕಂದ ಭಗವಾನ್ ಹಾಗೂ ಗಿರೀಶ್ವರರ ದೇವಸ್ಥಾನಗಳು ಅವುಗಳಲ್ಲಿ ಬಹಳ ಮುಖ್ಯ ಇವೆ.

ಈ ಎಲ್ಲಾ ದೇಗುಲಗಳಲ್ಲಿ ವಿಶಾಲ ಹಾಗೂ ಭವ್ಯ ಮಂದಿರವು 'ಮಾರ್ತಾಂಡ' ಗುಡಿಯೇ ಇದೆ. ಅದನ್ನು ಲಲಿತಾದಿತ್ಯನು ಕಟ್ಟಿಸಿರುವದಾಗಿ ಹೇಳಲಾಗುತ್ತದೆ. ಅದೇ ಅರಸನು 'ಭೂತೇಶ' ಹೆಸರಿನ ಒಂದು ಶಿವಮಂದಿರವನ್ನು ಕಟ್ಟಿಸಿರುವನು. ಈ ದೇಗುಲವನ್ನು ಕಟ್ಟಿಸಲಿಕ್ಕಾಗಿ ರಾಜನ ಹನ್ನೊಂದು ಕೋಟಿ ರೂಪಾಯಿ ಖರ್ಚು ಮಾಡಿರುವದಾಗಿ ಹೇಳಲಾಗುತ್ತದೆ. ಈ ರೀತಿ ಇನ್ನೂ ಅನೇಕ ಮಂದಿರಗಳನ್ನು ಅದೇ ಅರಸನು ಕಟ್ಟಿಸಿರುವನು. ಆದರೆ ಈ ಎಲ್ಲಾ ದೇವಸ್ಥಾನಗಳೂ ಇಂದು ಪಾಳುಗುಡಿಗಳಂತಿವೆ. ಅಮರನಾಥನ ನಾಮದಿಂದಾಗಿ ಈ ಸ್ಥಳವು ತೀರ್ಥಕ್ಷೇತ್ರವಾಗಿ ಉಳಿದಿದೆ

ಈ ರೀತಿ ಕಾಶ್ಮೀರವು ದೇಗುಲಗಳ ಬೀಡಾಗಿರುವದರಿಂದ ಎಂದೆಂದಿಗೂ ಭಾರತದ ನಾಡಾಗುಳಿಯುವದರಲ್ಲಿ ನಿತಾಂ ಸಂದೇಹವಿಲ್ಲ. ವಿಶ್ವದ ಯಾವ ಶಕ್ತಿಗೂ ಅದನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯ ಇರುವದಿಲ್ಲ.

(ಪಾಕಿಸ್ತಾನಮತ್ತು ಭಾರತಗಳ ನಡುವೆ ನಾಲ್ಕು ಬಾರಿ ಸಂಧಿ ಪ್ರಸ್ತಾವನೆ ನಡೆಯಿತು. ಶ್ರೀ ಸ್ವರ್ಣ ಸಿಂಗರು ಕರಾಚಿಗೆ ಹೋಗಿಬಂದರು. ಬುಟ್ಟೋ ಕಲ್ಕತ್ತಕ್ಕೆ ಬಂದರು; ಮುಂದೆ ಹೋಗುತ್ತಾರೆ ಕರಾಚಿಗೆ ಈ ಸಂಧಾನಕ್ಕೆ ಮುಖ್ಯ ವಿಷಯವಾಗಿ ನಿಂತಿದೆ ಕಾಶ್ಮೀರ. ಭಾರತ ಬೇರ್ಪಡುತ್ತ, ಛಿನ್ನ ಭಿನ್ನವಾಗುತ್ತ ಹೋಗಬೇಕೆ ಎನ್ನುವದನ್ನು ಕರಾಚಿಯಲ್ಲಿ ನಡೆಯಲಿರುವ ಸಂಧಿ-ಸಭೆಯು ನಿಶ್ಚಯಿಸುತ್ತದೆ.

ಕಾಶ್ಮೀರವು ಪಾಕಿಸ್ಥಾನಕ್ಕೆ ಸೇರಬೇಕೆನ್ನುವದಕ್ಕೆ ಒಂದೇ ಒಂದು ಕಾರಣ — ಮತ. ಆದರಿಂದಾಗಿಯಲ್ಲವೇ ಇಸ್ಲಾಂ ರಾಷ್ಟ್ರವೆನಿಸಿ ಪಾಕಿಸ್ಥಾನ ನಿಂತಿದೆ? ಅದೇ ಪಲ್ಲವಿಯನ್ನು ಅದು ಹಾಡುವದರಲ್ಲಿ ಏನು ಆಶ್ಚರ್ಯವಿದೆ!

ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂಬುದನ್ನು ಈ ಲೇಖನ ಸ್ಪಷ್ಟಪಡಿಸುತ್ತದೆ. ಪಾಕಿಸ್ಥಾನದಲ್ಲೇ ಇದ್ದು ಅಲ್ಲಿಯ ಪಂಜಾಯ ಮಾಡಿಕೊಂಡಿರುವ ಭಾರತದ ಮಾಜಿ ರಾಯಭಾರಿಯವರು 'ನಮ್ಮ ನಂದನ ವನ—ಕಾಶ್ಮೀರ' ಎಂಬ ಲೇಖನದಲ್ಲಿ ಇನ್ನೂ ಕೆಲ ವಿಷಯಗಳನ್ನು ಜನತೆಯ ಮುಂದಿಟ್ಟಿರುವದನ್ನು ಮುಂದಿನ ವಾರ ನೋಡೋಣ.—ಸಂ.]

(ಪಾಂಚಜನ್ಯದಿಂದ)

—ಶಿವಶಂಕರ, ಮದ್ರಾಸು.




ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, **ಮಂಗಳೂರು—3.**

ನವಯುಗಕ್ಕೆ
**ಚಂದಾದಾರರಾಗಿ**
**ಪ್ರೋತ್ಸಾಹಿಸಿರಿ**

## ಗೇಹ ರಾಜ್ಯದಲ್ಲಿ

# ದೇವರಿಲ್ಲದ ದೇವಕುಲ

'ನೋಡಿ, ಇಲ್ಲಿ ನೋಡೀಂದ್ರೆ ಸ್ವಲ್ಪ...'

'ಊಂ....'

'ಏನಪ್ಪ ಭಾರಿ ಪೇಪರು ಓದುವುದ್ರಲ್ಲೇ ಧ್ಯಾನಸಕ್ತರಾಗಿದ್ದೀರೀಂತೆ?'

'ಹಾಂ...ಏನಂದೆ?'

'ಮುಖದ ಮುಂದೆ ಪೇಪ್ರು ಹಿಡ್ಕೊಂಡು ಬಕಧ್ಯಾನವೇನೂಂತ ಕೇಳ್ದೆ'

'ಹಾ, ಹಾ, ತಿಳೀತು. ತಿಳೀತು. ಏನು ಓದ್ತಾ ಇದ್ದೆ ಅಂತ ತಾನೇ ನೀನು ಕೇಳ್ತೋದು?'

'ಹೌದು, ಹೌದು, ಅದನ್ನೇ.'

'ಮತ್ತೇನೂ ಇಲ್ಲ. ಏನೋ ಈ ಬಾರಿಯ ಎಸ್ಸೆಸ್ಸೆಲ್ಸಿ ಪಬ್ಲಿಕ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯೆಲ್ಲ ಪರೀಕ್ಷೆಗೆ ಮೊದಲೇ ಪಬ್ಲಿಕ್ ಆಗಿ ಬಿಟ್ಟಿವಂತೆ.'

'ಹೇಗೂ ಪಬ್ಲಿಕ್ ಪರೀಕ್ಷೆ ಅಂತೀರಿ. ಏನಾಯ್ತು ಪಬ್ಲಿಕ್ ಆದ್ರೆ ತಪ್ಪೇನು? ಅದ್ರಲ್ಲಿ ಅಂತ ವಿಶೇಷವೇನೂಂತ.'

'ಅಯ್ಯೋ ಹುಚ್ಚಿ, ಪಬ್ಲಿಕ್ ಪರೀಕ್ಷೆ ಅಂದ್ರೆ ಏನು ಗೊತ್ತೆ ನಿನ್ಗೆ?'

'ಇಲ್ಲ ಇಲ್ಲ. ಗೊತ್ತಿರೋದೆಲ್ಲಾ ನಿಮ್ಗೆ ಮಾತ್ರ.'

'ನೋಡು ಇಷ್ಟಕ್ಕೇನೇ ಸಿಟ್ಟು ಮಾಡ್ಕೊಂಡ್ರೆ ಹೇಗೆ? ಅಲ್ಲ, ಸರ್ಕಾರದವ್ರೇ ನಡ್ಸೋ ಪರೀಕ್ಷೆ ಹೀಗೆಲ್ಲಾ ನಡದು ಬಿಟ್ರೆ, ಮುಂದೆ ಗತಿಯೇನೂಂತ.......'

'ಗತಿಗಿತಿಯೆಲ್ಲ ತಿಥಿಯಾಗ್ಲಿ. ನೋಡಿ, ಸೋಮು ಇವತ್ತು ಶಾಲೆಗೆ ಹೋದವ ಬೇಗ್ನೇ ಬಂದುಬಿಟ್ಟ. ಅಳ್ತಾ ಇದ್ದ. ಏನೂ ಅಂದೆ. ನಮ್ಮ ಪರೀಕ್ಷೆ ಇವತ್ತು ಇಲ್ಲ, ಇನ್ನೊಂದು ದಿನಾಂತ ವಾಪಸ ಬಂದದಂತ ಅಂದ. ಅಲ್ಲ, ಪರೀಕ್ಷೆ ಮಾಡೋದಿಲ್ಲಾಂತಾದ್ರೆ ದಿನ ಯಾಕಿಡೋದೂಂತ ನಾನು ಕೇಳ್ತೀನಿ. ನಿಮ್ಮ ಟೋಪಿ ಸರ್ಕಾರದ ಹಣೆಬರಹವೇ ಇದು!"

'ಪರೀಕ್ಷೆ ಮುಂದೆ ಹೋದ್ರೆ ಇವ ಯಾಕೆ ಅಳ್ಬೇಕು?'

'ಅಳ್ದೆ ಪಾಪ ಮತ್ತೇನು ಮಾಡ್ತಾನು ಅತ?"

'ಏನಂತೆ?"

'ಮತ್ತಿನ್ನೇನು? ಓದಿ ಓದಿ ತಲೆ ಕೆಡ್ಸಿಕೊಂಡು ಪರೀಕ್ಷೆ ಮುಗ್ದು ಬಿಟ್ರೆ ಸಾಕಂತಿದ್ರೆ ತಿರ್ಗಿ ಮುಂದೆ ಹೋಗಿ ಬಿಡ್ತಲ್ಲಾಂತ ಸಬಿಬಿಂದ ಮಗು ಚಿಂತೇನೆಲ್ಲಾ ಬಿಟ್ಟು, ಹಾಯಾಗಿ ನಾಲ್ಕು ದಿನ ನಿದ್ರೇನಾದ್ರು ಮಾಡ್ತಿದ್ದ, ಅದಕ್ಕೂ ಕಲ್ಲು ಹಾಕ್ತು ನಿಮ್ಮ ಸರ್ಕಾರ.

'ನೋಡು, ನಿನ್ಗೆ ಹಿಂದೆ ಅದೆಷ್ಟೋ ಬಾರಿ ಹೇಳೀನಿ. ಸರ್ಕಾರಾನ್ನ ಬಯ್ಬೇಡಾಂತ. ಯಾಕೆ ನಿನ್ಗೆ ಬುದ್ಧೀನೇ ಬರೊಲ್ಲಾಂತ?'

'ಹೌದಾದು, ಬುದ್ಧೀಯೆಲ್ಲಾ ನಿಮ್ಮ ಟೋಪಿಯವರ್ಗೇನೇ ಹಂಚಾಗಿದೆ. ಮತ್ತೆ ನಮ್ಗೆಲ್ಲಿಂದ್ಬರ್ಬೇಕು ಅಲ್ವೆ?"

ಅಲ್ಲ, ನೋಡು ನಾನೂ ಅದನ್ನೇ ಓದ್ತಾ ಇದ್ದೆ. ವಿಧಾನ ಸಭೇಲಿ ಪ್ರಶ್ನೆ ಪತ್ರಿಕೆಗಳನ್ನ ಮುಖ್ಯಮಂತ್ರಿಯವರು ಅಧ್ಯಕ್ಷರುಗಳಿಗೆ ಕೊಟ್ರಂತೆ.'

'ಅಂದ್ರೆ ಅವರೂ ಕೂತಿದ್ದಾರೇನು ಪರೀಕ್ಷೆಗೆ?'

'ಅಯ್ಯೊಯ್ಯೋ ಬೆಪ್ಪಿ, ಬೀದೀಲಿ ಎರಡು ರೂಪಾಯಿಗೆ ಮಾರೋ ಪ್ರಶ್ನೆ ಪತ್ರಿಕೆಯನ್ನ ಅವರಿಗೆ ನೋಡೀಂತ ಕೊಟ್ರಂತೆ. ಬರಿಯೋದಕ್ಕಲ್ಲ."

'ಪಾಪ, ಅವರಿಗೆ ಬರಿಯೋದಕ್ಕೆಲ್ಲಿ ಬರುತ್ತೆ? ಅವರು ಕಲ್ತದ್ದು ಮರ್ತಾಬಿಟ್ಟು ಅಂತ ಮೊನ್ನೆ ಹೇಳಿದ್ರಲ್ಲಾ ನೀವು?

'ಸರ್ಕಾರದ ಕೆಲಸ ಯಾವ ರೀತಿ ನಡಿಯುತ್ತೇಂತ ಅವರಿಗೆ ಗೊತ್ತಾಗ್ಲೀಂತ ಕೊಟ್ಟಿದ್ದು."

'ಆಯ್ತಪ್ಪ. ಗೊತ್ತಾಗಿ ಆದದ್ದೇನೂಂತ. ನಂಸೋಮು ಇನ್ನೂ ಅದೆಷ್ಟು ದಿನ ನಿದ್ದೆ ಬಿಡ್ಬೇಕೋ ಏನೋ. ಈಗ್ಲೆ ಪುಸ್ತಕ ಹೊರೆ ಹೊತ್ತು ಹೊತ್ತು ಚಿಮಣಿ ಬತ್ತಿ ಕರಟ್ಟೆ ಕರಟ್ಟೆ ಸೋತು ಸುಣ್ಣವಾಗಿ ಬಳಲಿ ಬೆಂಡಾಗಿದ್ದಾನೆ. ಇನ್ನಾದ್ರೂ ಮುರ್ತಿಂಗ್ಳು ಹಾಯಾಗಿರ್ಲೀಂತಂದಿದ್ರೆ ಅದ್ಕೂ ನೀರು ಸುರೀತು ನಿಮ್ಸರ್ಕಾರ.'

'ನೋಡು, ಅಕ್ಷಗೇ ಮುಗೀಲಿಲ್ಲ ಕತೆ. ಬೆಂಗ್ಳೂರು ಕಾರ್ಪೊರೇಟರರೊಬ್ರು ತಮ್ಮ ಮಗನಿಗೆ ಪೇಪ್ರು ಮೊದ್ಲೆ ಸಿಗ್ಲಿಲ್ಲ, ಅವ ಫೈಲಾದರೆ ಪಾಸು ಮಾಡ್ಬೇಕೂಂತ ಕೇಳ್ತಿದ್ದಾರಂತೆ."

'ಯಾಕೆ?'

'ಮತ್ಯಾಕೆ? ಪೇಪ್ರು ಮೊದ್ಲೇ ಸಿಗ್ತಿದ್ರೆ ಅವ್ನೂ ಪಾಸಾಗ್ತಿದ್ದಾಂತ."

'ಹಾಗಾದ್ರೆ ಸರ್ಕಾರ ಒಂದು ಕೆಲ್ಸ ಮಾಡ್ಬೇಕಿತ್ತಾನ್ನಿ."

'ಏನದು?"

'ಪೇಪ್ರನ್ನ ಒಂದು ತಿಂಗ್ಳು ಮೊದ್ಲೆ ಮಕ್ಳಿಗೆ ಹಂಚಿ ಬಿಡೋದು. ಬೇಕಾದ್ರೆ ಅದಕ್ಕೂ ಫೀಸು ತೊಗೊಳ್ಳಾಲ್ಲಿ. ಸರ್ಕಾರಕ್ಕೂ ದುಡ್ಡು ಮಕ್ಳಿಗೂ ಪಾಸು.'

'ಆ ಕಾಲಾನು ಬರಬಹುದೂಂನ್ನು. ಆದ್ರೆ ಹಾಗೆ ಪಾಸಾಗಿ ಯೇನು ಪ್ರಯೋಜನಾಂತ?'

'ಪ್ರಯೋಜನ? ಆಯುಷ್ಯ ದಂಡವಾಗೋದು ಉಳೀತಲ್ಲ? ಮತ್ತೆ ನೋಡಿ, ನನ್ನಪ್ಪ ನಾಲ್ಕಕ್ಷರ ನನ್ಗೆ ಕಲಿಸ್ಲಿಲ್ಲ. ಅದ್ರೂ ನಮ್ಮೋರೂ ನನ್ನಪ್ಪ ಇಲ್ಲಾಂದ್ರೆ?'

'ಯಾಕೆ ಹಾಗಂತೀಯ?"

'ಮತ್ಯಾಕೆ? ಇಲ್ವಾದ್ರೆ ಇನ್ನು ನಾನು ಓದೋದಿಲ್ಲಾಂತ ಪಟ್ಟು ಹಿಡಿದಿದ್ದಾನೆ ಕಂಡ್ರಿ. ಅಲ್ಲಾ, ಪರೀಕ್ಷೆ ಹಿಂದೆ ಹೋದ್ರೆ ಓದ್ಲು ಸಮಯ ಸಿಕ್ತೂಂತ ಸಂತೋಷ ಪಡ್ಬೇಕೆ? ಅತ್ವಾ...."

"ಅದು ಸರೀನ್ನು. ಪ್ರಶ್ನೆ ಪತ್ರ ಬಹಿರಂಗವಾದದ್ರಿಂದ ಇಡೀ ಪರೀಕ್ಷೇನ ತಿರುಗ ಮಾಡ್ತಾರೆಂತ ಸುದ್ಧಿ. ಹಾಗಾದ್ರೆ, ಮಕ್ಳಿಗೆ ನಿಜಕ್ಕೂ ಕಷ್ಟಾನ್ನಿ?

'ಮಾಡನೆ ಇದ್ರೆ ಏನಾಗುತ್ತೆ?"

'ಆಗೋದೇನು? ಪೇಪ್ರು ಸಿಕ್ತಿದ್ರೆ ನಾವೂ ಪಾಸಾಗ್ತಿದ್ವಿಂತ.ಫೇಲಾದವ್ರೆಲ್ಲ ರಂಪಾಟ ಮಾಡ್ತಾರೆ. ರಿಟ್ ಇಡ್ತಾರೆ, ಮತ್ತೆ ಸರ್ಕಾರಕ್ಕೂ ಅದು ಅಪಮಾನ ಅಲ್ವೆ?"

'ಟೋಪೀ ಸರ್ಕಾರಕ್ಕೂ ಮಾನಾಪಮಾನ ಇದೆಯೆ? ಇನ್ನು ನಾನಾಸ ದವ್ರ ಗಲಾಟೆ ಹುಡೀದಿದ್ದಾಂಗೆ ಮಾಡಬೇಕು'

'ಅದು ಹೇಗೆ?"

'ಎಲ್ರನ್ನೂ ಪಾಸು ಮಾಡೋದು. ಆಗ ಯಾರು ತುಟಿ ಬಿಚ್ತಾರೆ? ಅಥ್ವಾ ಇನ್ನೊಂದು ಯೋಚ್ನೆ ಮಾಡಬಹುದು. ಹಣ ಕಟ್ಟಿದ್ರೆ ಸಾಕು—ಪರೀಕ್ಷೇನೇ ಇಲ್ಲ—ಎಲ್ರೂ ಪಾಸೂಂತ ಹೇಳಿಬಿಡೋದು. ಇದ್ರಿಂದ ಸರ್ಕಾರಕ್ಕೆ ಹಣಾನು ಸಿಗುತ್ತೆ, ಖರ್ಚೂ ಇಲ್ಲ, ಮತ್ತೆ ಮಕ್ಳಿಗೆ ಓದೋ ಕಲಿಯೋ ಪ್ರಸಂಗಾನೂ ಎಳೋಲ್ಲ. ಮಕ್ಳು ಇದ್ರೂ ಒಂದೇ, ಇಲ್ದಿದ್ರೂ ಸರಿಯೇ, ಕಲ್ತಿದ್ರೂ ಹೂಂ, ಇಲ್ದಿದ್ರೂ ಹೂಂ."

'ಇದು ಒಳ್ಳೇ ಯೋಚ್ನೆ. ನಿನ್ನನ್ನೇ ಎಜುಕೇಶನ್ ಮಿನಿಸ್ಟರ್ ಮಾಡಿಬಿಟ್ರೆ ಅವಿದ್ಯಾವ ಹುಟ್ಟೋಕೇ ಎಡೆಯಿಲ್ಲಾನ್ನು."

"ಅಯ್ಯಯ್ಯೊ, ನಿಮ್ಗೆ ಯಾವಾಗ್ಲೂ ಹೀಗೇ. ಅಲ್ಲ, ನಾನು ಹೇಳಿದ್ರಲ್ಲಿ ತಪ್ಪಾದ್ರು ಏನಾಯ್ತು?,,

"ಆಗೋದೇನು? ಪಾಪ, ಅದ್ರಿಂದ ತುಂಬ ಜನ ಪಜೀತಿಗಿಟ್ಟುಕೊಳ್ತಾರೆ ಹ ಣೇ, ಮತ್ತೇನೂ ಇಲ್ಲ. ,,

"ಅವರಿಗೇಕ್ರಿ ಚಿಂತೆ? ಮುದ್ದು ಮಕ್ಳು ತಲೆ ಹಚ್ಚಿ ಹುಚ್ಚರಾಗೋದಕ್ಕಿಂತ ಇದೇ ಮೇಲಲ್ವೇ? ,,

"ಹಾಗಲ್ಲ ಚೆನ್ನಿ ... ವಿದ್ಯೆ ಮನುಷ್ಯಗೆ ಬೇಕು ತಾನೆ ,,

'ಸಾಕ್ರಿ ನಿಂ ವಿದ್ಯಾ. ಬಿ. ಎ. ಎಂ. ಎ. ಮಾಡೋದು, ಲಾಟ್ ಫೋಟ್ ಹಾರಿಸ್ಸೋದು. ಇಷ್ಟೇ ತಾನೇ ನಿಂ ವಿದ್ಯಾ, ನಾಲ್ಕಕ್ಷರ ಸುಲಕ್ಷಣವಾಗಿ ಬರಿಯೋಕೆ ಬರೋಲ್ಲ ಮತ್ತೆ ವಿದ್ಯಾ ಅಂತೆ."

'ನೋಡು ಚೆನ್ನಿ, ಕಲಿಯದಿದ್ದವ್ರ ಮೇಲ್ನ ಸಿಟ್ಟಿಂದ ಸರಸ್ವತೀನ ಯಾಕೆ ಬಯ್ತೀಯ? ಸರಸ್ವತಿ ವರಪ್ರಸಾದಾಂದ್ರೆ ದೇವಸ್ಥಾನದಲ್ಲಿ ಪೂಜಾರಿ ಕೊಡೋ ಪ್ರಸಾದಾಂತ ತಿಳ್ಕೊಂಡೆಯೇನು?"

'ಮತ್ತೇನೂಂತ?"

'ಯಾಕೆ ಹಾಂಗೆ ಹೇಳ್ತೀಯ?"

'ಮತ್ತಿನ್ನೇನೂಂತ. ದೇಗುಲದಲ್ಲಿ ಪೂಜಾರಿ ಕೈಗೆ ನಾಲ್ಕು ಕಾಸು ಹಾಕ್ಬಿಟ್ರೆ ಭಕ್ತಿಯಿಲ್ದೇನೇ ದೇವ್ರ ಪ್ರಸಾದ ಸಿಗುತ್ತೆ. ವಿದ್ಯಾದಲ್ಲಿ ದುಡ್ಡು ಸುರಿದ್ರೆ ಕಲಿಯದೇನೇ ಪಾಸಾಗಿ ಬಿಡುತ್ತೆ. ಅಂತೂ ಎರಡೂ ಕಡೆ ದುಡ್ಡು ಮುಖ್ಯಾನ್ನಿ."

'ಏನಂತೀಯಾ ನೀನು? ಭಕ್ತಿಯಿಲ್ಲದವರು ದೇವಸ್ಥಾನಕ್ಕೆ ಹೋಗ್ತಾರೇನು?"

'ಆ ಕಾಲಾನೆಲ್ಲಾ ಹೋಯ್ತು. ಎಲ್ರೂನೂ ಹೋಗಿಯೇ ಹೋಗ್ಬೇಕೂಂ ಹೇಳ್ದ ಮೇಲೆ ಭಕ್ತಿಯಿರ್ಲಿ ಇಲ್ಲದೆ ಹೋಗಲಿ ದೇಗುಲಕ್ಕೆ ಹೋಗ್ಲೇ ಬೇಕಲ್ಲಾ? ಆದ್ರಿದ್ಲೇ ದೇವ್ರೆಲ್ಲ ಅಲ್ಲಿಂದ ಎಂದೋ ಪರಾರಿಯಾಗಿ ಬಿಟ್ಟಿದ್ದಾರೆ. ಮತ್ತೆ ಹೋಗೋವರ ಭಕ್ತಿಯನ್ನು ಶ್ರದ್ಧೆಯನ್ನು ನೋಡ್ತಾರೆ ಯಾರು ಕೇಳ್ತಾರೆ ಯಾರು?'

'ಅದು ಸರೀಬಿಡಿನ್ನು. ಮೊನ್ನೆ ನವ ಹೆಡ್ಮಾಸ್ಟ್ರು ಸಿಕ್ಕಿದ್ರು. ಅವರಂತಾರೆ ಶಾಲೆ ಅಂದ್ರೆ ಜಾತ್ರೆ ಸಮಯದ ದೇಗುಲಾಗೀದೆಂತ.'

'ಯಾಕೋ?"

'ಇರೋದು ಐದು ಜನ. ಅವ್ರಲ್ಲಿ ಒಬ್ರು ದೀರ್ಘ ರಜಾ ಹಾಕಿದ್ದಾರಂತೆ. ಮತ್ತೊಬ್ರು ತಲೆ ನೋವೂಂತ ಕೂತಿದ್ದಾರಂತೆ, ಇನ್ನೊಬ್ರು ದಾರಿಲಿ ಬರೋವಾಗ ಎಡವಿ ಬಿದ್ದು ಕಾಲು ನೋಯ್ಸಿ ಕೊಂಡ್ರಂತೆ. ಮತ್ತೇನು?"

'ಇದೇ ನಮ್ಮ ಸರಸ್ವತಿಯ ಸಂಸಾರ

'ನಾನೂ ಇದನ್ನೇ ಯೋಚ್ನೆ ಮಾಡ್ತಾ ಇದ್ದೀನಿ. ಸರಸ್ವತಿಯ ಸಂಸಾರವೋ ಸಂಹಾರವೋಂತ "

'ನೀವು ಏನೇ ಹೇಳಿ, ಯಾವತ್ತು ಸರ್ಕಾರ ಸರಸ್ವತಿಯನ್ನ ಕಾಲಿಂದ ಮೆಟ್ಟೋ ಸಾಹಸ ಮಾಡ್ತೋ ಆ ಮೇಲೆ ಆಕೆ ಯಾಕೆ ಅಲ್ಲಿ ಇರ್ತಾಳೆ? ಪರೀಕ್ಷೇನೂ ಕೆಡುತ್ತೆ ವಿದ್ಯಾನೂ ಕೆಡುತ್ತೆ ಅಂತ ನೂರು ಪರೀಕ್ಷೆ ಮಾಡಿ ಜಾಣಾ ಎನ್ನಿಸಿಕೊಳ್ಳೋಕ್ಕಿಂತ ನನ್ನ ಹಂಗಿರೋದೇ ಉತ್ತಮ."

"ಸರಿಯಪ್ಪ. ನಿನ್ನ ಹಂಗಿರೋದೆ ಮೇಲು. ಹಂಕುನ್ನೆ ನಾನು ನೀನು ಹೇಳಿಕೊಂಡ್ರೆ ಯಾರು ಕೇಳ್ತಾರೆ. ಎಂ ಎಲ್ಲೆಗಳನ್ನೇ ಮಂತ್ರಿಗಳನ್ನೇ ಕೇಳ್ದವರ ಯಾರನ್ನೂ ಗಣಿಸೋದಿಲ್ಲಾನ್ನು. ಆದ್ರಿದ ನಿನ್ನಹಂಗಿರೋದೇ ಉತ್ತಮ. ನೋಡ್ತಾ ನೀನಾದ್ರೂ ಹೇಗಿದ್ದೀಂತ?'

"ಚಿ, ಛಿ, ಇವತ್ತೇನೇ ನೀವು ನನ್ನ ನೋಡೋದು?,

'ಅಲ್ಲಲ್ಲ. ಆಗ್ಲೂನೂ ಇವತ್ತು ಹೇಳಿದ್ದೀಂತ್ಲೂ ನೋಡ್ಬೇಡ್ದೇ?'

"ಹೋಂ, ಅಯ್ಯಪ್ಪ, ಆಯ್ತು. ಸರಿಯಾಗಿ ನೋಡ್ಬಿಡಿ ಮತ್ತೆ ಎಲ್ಲಾದ್ರೂ

— ಗೋರಾ


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,

ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.



ವರ್ಗ — ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು,

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೪-೪-೧೯೬೩ | ೩೦ |


## ನೀರಿನಲ್ಲಿನ ಪಾಲು

ಕರ್ನಾಟಕ ರಾಜ್ಯದ ಪ್ರತಿ ಪ್ರಜೆಯೂ ಕುತೂಹಲದಿಂದ ಎದುರು ನೋಡುತ್ತಿದ್ದ ಕೃಷ್ಣಾ ಗೋದಾವರಿ ನದಿಗಳ ನೀರಿನ ಹಂಚಿಕೆಯ ಸಂಬಂಧದಲ್ಲಿ ಕೇಂದ್ರ ಸರಕಾರವು ತನ್ನ ನಿರ್ಣಯವನ್ನು ಈಗಾಗಲೇ ಘೋಷಿಸಿದೆ; ಆದರೆ, ಇದು ಅವರಲ್ಲಿ ಸಂಪೂರ್ಣ ನಿರಾಶೆಯನ್ನುಂಟು ಮಾಡಿದೆ. ಕರ್ನಾಟಕಕ್ಕೆ ನ್ಯಾಯವಾಗಿ ಸಿಗಬೇಕಾದಷ್ಟು ನೀರನ್ನು ಒದಗಿಸದ ಈ ನಿರ್ಣಯವು ಅನ್ಯಾಯವನ್ನೆಸಗಿದ್ದರಿಂದಾಗಿ ಅದನ್ನು ಒಪ್ಪಿಕೊಳ್ಳಬಾರದು ಎಂಬ ಕೇಳಿಕೆಗಳು ದಶದಿಸೆಗಳಲ್ಲಿಯೂ ಪ್ರತಿಧ್ವನಿಸುತ್ತಿದೆ; ಮತ್ತು ಇದು ನ್ಯಾಯೋಚಿತವೂ ಆಗಿದೆ. ಒಂದು ರೀತಿಯಿಂದ ನೋಡಿದರೆ, ಕೇಂದ್ರದ ನಿರ್ಣಯವು ೧೯೫೧ರಲ್ಲಿ ಈ ನೀರಿನ ವಿಷಯದಲ್ಲಾದ ಒಡಂಬಡಿಕೆಯನ್ನೇ ತನ್ನ ಮುದ್ರೆಯನ್ನೊತ್ತಿ ಮರಳಿಸಿದೆಯೆಂದು ಹೇಳಬೇಕಾಗುವುದು. ಆದರೆ, ಆ ಬಳಿಕ ನಡೆದ ರಾಜಕೀಯ—ಆರ್ಥಿಕ ಪುನಾರಚನೆಯಿಂದ ಮತ್ತು ಅದಕ್ಕೆ ಜೀವದಾನ ಮಾಡುವಂತಹ ನಿರ್ಣಯವು ರಾಜ್ಯದ ಆ ಪಾಲು ಹೇಯತನಕ್ಕೊಂದು ಆಹ್ವಾನವೆಂದೂ ತಿಳಿಯಬಹುದು.

ರಾಜ್ಯದ ಉತ್ತರದ ಜಿಲ್ಲೆಗಳ ಜೀವನ ಮರಣದಂತಹ ಈ ಪ್ರಶ್ನೆಯನ್ನು ಉತ್ತರಿಸುವಲ್ಲಿ ಡೊಂಬರಾಟ ನಡೆಯುವುದೆಂಬ ಸುಳಿವು ಹತ್ತಿದ ಒಡನೆಯೇ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಡಿಲ್ಲಿಯಾತ್ರೆ ಮಾಡಿಬಂದರು; ಅನುದಾಯಕ ನಿರ್ಣಯ ಹೊರಬಿದ್ದೀತೆಂದು ಆಶೆಯಿಟ್ಟುಕೊಂಡರು. ತಮ್ಮ ಬಳಿಗೆ ಬಂದವರನ್ನು ಸಂಪೂರ್ಣ ನಿರಾಶರಾಗಿಸಿ ಮರಳಿಸುವ ಪರಿಪಾಠ ಯಾವ ಮಂತ್ರಿಗಳಲ್ಲೂ ಇಲ್ಲ. ಇದಕ್ಕೆ ನಿಜಲಿಂಗಪ್ಪನವರೂ ಹೊರತಾಗಿರಲಾರರು. ಆದರೆ, ಪ್ರಕಟವಾದ ನಿರ್ಣಯ ಆಶಾಲತೆಗೆ ಬೆನ್ನೀರನ್ನೇ ಹೊಯ್ದಿತೆಂಬಾಗ ಈಗ ಕೈಕಾಲು ಬಿಡಬೇಕಾದ ಪ್ರಸಂಗ ಒದಗಿದೆ. ನೀರಿನ ವಿವಾದದಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಿಸುವುದರಲ್ಲಿ ತೋರಿಸಿದ ರಾಜ್ಯ ಸರಕಾರದ ಅಸಮರ್ಥತೆ ಅದರ ಅಕರ್ಮಣ್ಯತೆಯ ದ್ಯೋತಕವೆನ್ನುವವರೂ ಇದ್ದಾರೆ. ಕೇಂದ್ರ ನಿರ್ಣಯದಿಂದ ಉಳಿದವರು ತೃಪ್ತರಾಗಬಹುದು; ಆಗಲಿಕ್ಕೇಬೇಕು; ಆದರೆ ೨॥ ಕೋಟಿ ಕನ್ನಡಿಗರ ಕಣ್ಣೀರ ಕಥೆ ಇನ್ನೂ ದಾರುಣವಾಗುವುದು ಖಂಡಿತ.

ಹಿಂದೆ ನೆ. ಲಹರನ್ನು ಹರಿಯುವ ನೀರನ್ನು ಗಣನೆಗೆ ತಂದುಕೊಂಡು, ಕೃಷ್ಣಾ ನದಿಯಲ್ಲಿ ೧,೭೧,೫೦೦ ಕೋಟಿ ಘ. ಅ. ನೀರು ಹರಿಯುತ್ತದೆಂದು ಅಂದಾಜು ಹಾಕಿದ್ದರೆ, ಇಂದು ನೆ. ಒಹರ ಭರವಸೆಯ ಆಧಾರ ಹಿಡಿದದ್ದರಿಂದ ೧,೯೫,೦೦೦ ಕೋಟಿ ಘ. ಅ. ನೀರು ಹರಿಯುವುದು ಖಂಡಿತ. ಈ ನೀರಿನಲ್ಲಿ ನಮಗೆ ನ್ಯಾಯವಾಗಿ ೮೫,೫೦೦ ಕೋಟಿ ಘ. ಅ. ನೀರು ದೊರೆಯಬೇಕು ಎನ್ನುತ್ತಾರೆ, ಮಾಜಿ ಮಂತ್ರಿ ಹೆಚ್. ಎಮ್. ಚೆನ್ನಬಸಪ್ಪನವರು. ಆಗ, ಆಂಧ್ರವು ೪೪,೯೦೦ ಕೋಟಿ ಘ. ಅ. ನೀರು ಮಾತ್ರ ಪಡೆಯುವುದಕ್ಕೆ ಹಕ್ಕುದಾರವಾಗುತ್ತದೆ. ಆದರೆ, ಇಂದು ಈ ನ್ಯಾಯವೇ ಬುಡ ಮೇಲಾದಂತೆ ತೋರುತ್ತದೆ. ೧೯೫೧ರಲ್ಲಿ ನೀರಿನ ವಿವಾದವು ಕಾಣಿಸಿಕೊಂಡ ಬಳಿಕ ಕೇಂದ್ರ ನೀರಾವರಿ ಮಂಡಳಿಯು ೧೯೫೧ರ ಒಪ್ಪಂದದ ಮೇರೆಗೆ ನೀರು ಹಂಚಲು ಪ್ರಯತ್ನಿಸಿತ್ತು. ಆಗ ನಾವು ಅದನ್ನು ಒಪ್ಪಿಕೊಂಡಿದ್ದರೆ, ಇಷ್ಟು ನೀರೂ ಸಿಗುತ್ತಿತ್ತು, ವಿವಾದವೂ ಪರಿಹಾರಗೊಳ್ಳುತ್ತಿತ್ತು. ಆದರೆ, ತನ್ನ ನ್ಯಾಯವಾದ ಪಾಲನ್ನು ಪಡೆಯುವ ಸಲುವಾಗಿ ನಮ್ಮ ರಾಜ್ಯ ಸರಕಾರವು ಅದಕ್ಕೆ ಒಪ್ಪಲಿಲ್ಲ. ಅದೇನೇ ಇದ್ದರೂ ಕೇಂದ್ರದ ನಿರ್ಣಯವು ಆಂಧ್ರಕ್ಕೆ ನ್ಯಾಯವಾಗಿ ಸಿಗಬೇಕಾದ ಅಂಶಕ್ಕಿಂತ ಸುಮಾರು ಇಮ್ಮಡಿಯಷ್ಟನ್ನು ಒದಗಿಸಿದೆ.

ನಾವು ಕೈಗೊಳ್ಳಲಿರುವ ಯೋಜನೆಗಳಿಗೆ ಈಗ ದೊರೆತಿರುವ ನೀರು ಏನೇನೂ ಸಾಲದು. ಸರಿಯಾಗಿ ಗಣಿಸಿದರೆ, ಕೃಷ್ಣಾ ಮೇಲ್ದಂಡೆ ಯೋಜನೆಗೂ ಇದು ಅಪರಿಪೂರ್ಣವಾಗುವುದು. ಕ್ಷಾಮ ಡಾಮರಗಳು ಸದಾ ತಾಂಡವವಾಡುವ ಉತ್ತರದ ಜಿಲ್ಲೆಗಳ ಜೀವಾಳವಾದ ನೀರಾವರಿ ಯೋಜನೆಗಳಿಗೆ ಮತ್ತು ವಿದ್ಯುದ್ಯೋಜನೆಗಳಿಗೆ ಈ ನೀರಿನ ಪ್ರಮಾಣ ಭೀಮನಿಗೆ ಕಾಸಿನ ಮಜ್ಜಿಗೆಯಾದೀತು. ಈ ಮೊದಲು ಹಲವು ವರ್ಷಕ್ಕೆ ಸಂದುದ್ದೋ ಅದೇ ಘಟನೆಯಿಂದು ನಡೆದಿದೆ. ಆದುದರಿಂದ ಇಂತಹ ನಿರ್ಣಯವನ್ನು ರಾಜ್ಯ ಸರಕಾರ ಸ್ವೀಕರಿಸಿಕೊಳ್ಳುವುದು ಸಾಧ್ಯವಿಲ್ಲ. ಸಂಬಂಧಪಟ್ಟ ರಾಜ್ಯಗಳಲ್ಲಿ ಒಂದು ಇದನ್ನು ಸ್ವೀಕರಿಸದಿದ್ದರೆ, ನಿರ್ಣಯವು ವ್ಯರ್ಥವಾಗುವುದರಿಂದ, ತನ್ನ ನ್ಯಾಯೋಚಿತ ಪಾಲು ಪಡೆಯಲು ರಾಜ್ಯ ಸರಕಾರದ ಪ್ರಯತ್ನ ಇನ್ನೂ ತೀವ್ರವಾಗಿಯೇ ಮುಂದುವರಿಯಬೇಕೆಂದು ಹೇಳಬೇಕಾಗುತ್ತದೆ.

ಇಬ್ಬರ ನಡುವಣ ವಿವಾದದ ಮಧ್ಯೆ ಮೂರನೆಯವನು ಪ್ರವೇಶಿಸಿ ಒಂದು ತೀರ್ಮಾನವನ್ನು ಕೊಡುವುದು ಯಾವಾಗಲೂ ಕಷ್ಟ. ನಮ್ಮ ಪ್ರಧಾನಿ ನೆಹರು ಚೀನಾ-ಭಾರತ ಗಡಿ ತಂಟೆಯಲ್ಲಾಗಲೀ, ಪಾಕ್-ಭಾರತ ವಿವಾದಗಳಲ್ಲಿಯಾಗಲೀ ನೇರ ಮಾತುಕತೆಗಳೇ ನಡೆಯುವುದನ್ನು ಬೆಂಬಲಿಸುತ್ತಾರೆಯೇ ಹೊರತು ಮೂರನೆಯವರು ಪ್ರವೇಶಿಸುವುದನ್ನು ಪ್ರಬಲವಾಗಿ ಪ್ರತಿಭಟಿಸುತ್ತಾರೆ. ಹಾಗಿದ್ದರೂ ಮಧ್ಯಸ್ಥರು ನೇರ ಮಾತುಕತೆ ನಡೆಯಲು ವಾತಾವರಣವನ್ನು ಕಲ್ಪಿಸಿ ಕೊಡಬಹುದು. ಅಂತೆಯೇ ಕರ್ನಾಟಕ-ಆಂಧ್ರಗಳ ನಡುವಣ, ಮದ್ರಾಸವೂ ಆಸಕ್ತಿವಹಿಸಿದ, ಮಹಾರಾಷ್ಟ್ರಕ್ಕೂ ಸಂಬಂಧಿಸಿದ, ಇನ್ನು ಮಧ್ಯಪ್ರದೇಶ ಮತ್ತು ಒರಿಸ್ಸಾಗಳೂ ಪಾಲುಗೊಳ್ಳುವ ಕೃಷ್ಣಾ ಗೋದಾವರಿ ನೀರಿನ ಹಂಚಿಕೆಯಲ್ಲಿ ಕೇಂದ್ರ ಸರಕಾರವು ನಿರ್ಣಯವನ್ನು ಕೊಡುವ ಬದಲು, ಸಂಬಂಧಿಸಿದ ರಾಜ್ಯಗಳು ಒಂದಾಗಿ ಜತೆಗೂಡಿ, ಮಾತುಕತೆ ನಡೆಸಿ ಯಾರಿಗೂ ಅನ್ಯಾಯವಾಗದಂತೆ ಒಂದು ನಿರ್ಣಯಕ್ಕೆ ಬರುವಂತೆ ಮಾಡುತ್ತಿದ್ದರೆ, ಹೆಚ್ಚಿನ ಪ್ರಯೋಜನವಾಗುತಿತ್ತೇ ಎಂಬ ಸಂದೇಹ ಹುಟ್ಟುತ್ತದೆ. ಇದೀಗ ಮಹಾರಾಷ್ಟ್ರೀಯರೂ ಕನ್ನಡಿಗರಂತೆ ನಿರ್ಣಯದಿಂದ ರೊಚ್ಚಿಗೆದ್ದಂತೆ ಭಾಸವಾಗುತ್ತದೆ. ಪ್ರಾಯಃ ಆಂಧ್ರವೊಂದೇ ಮಾತ್ರ ನೆಮ್ಮದಿಯ ಉಸಿರು ಬಿಡುತ್ತಿರಬೇಕು. ಕೇಂದ್ರ ಸರಕಾರವು ನಿಷ್ಪಕ್ಷಪಾತತನದಿಂದ ಇಡಿಯ ವಿಚಾರವನ್ನು ಪುನರ್ವಿಮರ್ಶಿಸಬೇಕು—ಎಲ್ಲ ರಾಜ್ಯಗಳಿಗೂ ಗ್ರಾಹ್ಯವಾಗುವ ನಿರ್ಧಾರವನ್ನು ಕೈಗೊಳ್ಳಲು ಮುಂದಾಗಬೇಕು. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದಕ್ಕೆ ಎಣ್ಣೆ—ತಿಳಿದಾಗಲಿ ತಿಳಿಯದಾಗಲಿ ಹಚ್ಚುವುದು ಯಾರಿಗೂ ಶೋಭೆ ತರುವುದಿಲ್ಲ.

## ಕರ್ತವ್ಯ ಬಾಹಿರತೆ

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನಪತ್ರಿಕೆಗಳು ಪರೀಕ್ಷೆಗೆ ಮೊದಲೇ ಪ್ರಕಟವಾದುದರಿಂದ ವಿಧಾನ ಸೌಧದಲ್ಲಿ ಮಾತ್ರವಲ್ಲ, ಇಡಿಯ ರಾಜ್ಯದಲ್ಲಿಯೇ ಗೊಂದಲವೆದ್ದಿದೆ. ಉಪಾಯಗಾಣದೆ ಪರೀಕ್ಷೆಯನ್ನು ಪುನಃ ನಡೆಸಲು ನಿರ್ಧರಿಸಬೇಕಾಗಿ ಬಂತು. ಪ್ರಶ್ನಪತ್ರಗಳು ಪ್ರಕಟವಾಗುವುದಕ್ಕೆ ಸರಕಾರದ ಮತ್ತು ಅದರ ನೌಕರರ ಅನಾಸ್ಥೆಯೇ ಕಾರಣವೆನ್ನಬೇಕಾಗುತ್ತದೆ. ಇಲ್ಲವಾದರೆ ಎಲ್ಲ ಪ್ರಶ್ನಪತ್ರಿಕೆಗಳೂ ವೇಳಾಪಟ್ಟಿಗೆ ಸಾಕಷ್ಟು ಪೂರ್ವಭಾವಿಯಾಗಿ ಇಡಿಯ ರಾಜ್ಯದಲ್ಲಿಯೇ ಮಾರಾಟಕ್ಕೆ ದೊರೆಯುವುದು ಸಾಧ್ಯವಾಗುತ್ತಿದ್ದಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದು, ತಯಾರಿಯ ಅವಧಿ ಕಡಿಮೆಯಿರುವುದರಿಂದ ಹೀಗಾಗಬಹುದು ಎಂಬ ಕಾರಣವು ಸಮಾಧಾನಕರವಾಗಿಲ್ಲ ಮತ್ತು ಅದಕ್ಕೆ ಅರ್ಥವೂ ಇರುವುದಿಲ್ಲ. ಸೂಕ್ತ ಕಾಲದಲ್ಲಿ ಸೂಕ್ತ ಕ್ರಮದಲ್ಲಿ ತನ್ನ ಕಾರ್ಯವನ್ನು—ಕರ್ತವ್ಯವನ್ನು—ನಿರ್ವಹಿಸುವುದು ಪ್ರತಿಯೊಬ್ಬರ ಕರ್ತವ್ಯ. ಅದಕ್ಕೆ ತಪ್ಪಿದವರು ಕರ್ತವ್ಯ ಬಾಹಿರರು; ಅವರಿಗೆ ತಕ್ಕ ಶಾಸ್ತಿಯಾಗಲೇಬೇಕು. ಪ್ರಶ್ನೆಪತ್ರಗಳೇನೋ ಬಹಿರಂಗವಾದವು; ಸರಕಾರ ಮರು ಪರೀಕ್ಷೆ ಮಾಡುವ ವ್ಯವಸ್ಥೆ ಮಾಡುತ್ತಿದೆ. ಆದರೆ, ಇದರಿಂದ ವಿದ್ಯಾರ್ಥಿಗಳಿಗೂ ಜನತೆಗೂ ಆದ ನಷ್ಟ. ಪರೀಕ್ಷೆಯ ತಂಟೆ ಮುಗಿಸಿ, ಕೆಲವರು ಉದ್ಯೋಗದ ಬೇಟೆಯೂ ಹೂಡಿರಬಹುದು; ಅದಕ್ಕಿಂತಲೂ ಹೆಚ್ಚಾಗಿ, ಒಮ್ಮೆ ಓದಿದ ವಿಷಯವನ್ನು ಮತ್ತೊಮ್ಮೆ ಓದುವುದೆಂದರೆ, ಅದು ಅನಿಷ್ಟವಲ್ಲವೆ? ಈ ಪುನರ್ವ್ಯವಸ್ಥೆಗಾಗಿ ನಡೆಯುವ ವೆಚ್ಚವು ಜನತೆಗಾದ ನಷ್ಟವಲ್ಲವೆ? ಮಿತವ್ಯಯದ ಅವಶ್ಯಕತೆಯ ಈ ಕಾಲದಲ್ಲಿ ಇಂತಹ ಅಪವ್ಯಯದ ಭಾರ! ಕರ್ತವ್ಯ ಪರಿಪಾಲನೆಯ ಅವಶ್ಯಕತೆಯು ಸದಾ ಇದ್ದೇ ಇದೆ; ಕರ್ತವ್ಯಬಾಹಿರತೆ! ಒಂದು ಕೆಲಸವನ್ನು ಎರಡು ಬಾರಿ ಮಾಡುವ ಸಂದರ್ಭ ಯಾವಾಗಲೂ ಬರಬಾರದು; ಬಂದರೆ ಅದೊಂದು ದುರ್ಭಾಗ್ಯವಷ್ಟೆ. ಆದರೆ, ಸಾಮಾನ್ಯ ಜನರೂ ತಿಳಿದಿರುವ ಈ ಪಾಠವು ನಮ್ಮ ಸರಕಾರಕ್ಕೆ ಮೊದಲು ಗೊತ್ತಿರಬೇಕಿತ್ತು. ಅಪಹಾಸ್ಯಕ್ಕೆ ಕಾರಣವಾಗುವ ಕಾರ್ಯಕ್ರಮಗಳಿಂದ ಸದಾ ಜಾಗರೂಕವಾಗಿರಬೇಕು. ಕರ್ತವ್ಯ ಭ್ರಷ್ಟರಿಗೆ ದಂಡನೆ ವಿಧಿಸಬೇಕು.

## ವಾರ್ತಾವೇದಿಕೆ

### ಗುಲ್ಜಾರಿಲಾಲ

ರಾಜ್ಯ ಸರಕಾರಗಳು ಪಾನನಿರೋಧ ನೀತಿಯ ಬಗ್ಗೆ ತೂಗುಯ್ಯಾಲೆಯಾಡುತ್ತಿರುವಾಗ ಕೇಂದ್ರವು ಅದನ್ನು ಕಟ್ಟುನಿಟ್ಟಾಗಿ ಅನುಸರಿಸಲು ನಿರ್ಧಾರ ಮಾಡುತ್ತಿದೆ. ಮದ್ಯಪಾನ ನಿರೋಧವು ಎಷ್ಟರ ಮಟ್ಟಿಗೆ ಸಾರ್ವಜನಿಕರ ಉತ್ಸಾಹವನ್ನು ಕೆರಳಿಸಿದೆಯೆಂಬುದನ್ನು ಅಭ್ಯಸಿಸಲು ವರಿಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಪತಿಗಳೊಬ್ಬರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲು ಅದು ನಿರ್ಧರಿಸಿದೆ. ಯೋಜನಾ ಮಂತ್ರಿ ಗುಲ್ಜಾರಿಲಾಲ ನಂದಾರು 'ಈ ಅಭ್ಯಾಸ ನಡೆಸುವುದರ ಉದ್ದೇಶವು ಪಾನ ನಿರೋಧವನ್ನು ರದ್ದುಗೊಳಿಸುವ ಅಥವಾ ಬದಲಿಸುವ ವಿಚಾರಕ್ಕಾಗಿಯಲ್ಲ. ಆದರೆ, ಪಾನ ನಿರೋಧವನ್ನು ಯಶಸ್ವಿಯಾಗಿ ವ್ಯವಸ್ಥಿತಗೊಳಿಸುವಂತೆ ಅದರ ಬಗ್ಗೆ ಜನಬೆಂಬಲಗಳಿಸಲು ಜನಾಭಿಪ್ರಾಯವನ್ನು ಸ್ವೀಕರಿಸಿ ಯಾವ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸುವುದೇ ಆಗಿದೆ' ಎಂದು ಸುಸ್ಪಷ್ಟವಾಗಿ ಹೇಳಿದ್ದಾರೆ. ಇನ್ನುಳಿದ ರಾಜ್ಯಗಳು ಕೊಟ್ಟಿಲ ಹಗ್ಗವನ್ನು ಕೈ ಬಿಡುವುದೇನೋ ಕಾದಿದೆ.

### ಹೇಮು ಬರುವಾ

ನೇಫಾ ಪ್ರದೇಶವು ಭಾರತದ ಇತರ ರಾಜ್ಯಗಳಿಂದ ಪ್ರತ್ಯೇಕವಾಗಿಯೇ ಇರುವುದನ್ನು ವಿರೋಧಿಸಿ, ಅದನ್ನು ಅಸ್ಸಾಮುದಲ್ಲಿ ವಿಲೀನಗೊಳಿಸುವ ಮತ್ತು ಭಾರತೀಯರೊಡನೆ ಹೆಚ್ಚಿನ ಸಂಪರ್ಕ ಬೆಳೆಸುವ ಕ್ರಮ ಕೈಗೊಳ್ಳಬೇಕು ಎಂಬರ್ಥದ ಗೊತ್ತುವಳಿಯೊಂದನ್ನು ಲೋಕಸಭೆಯಲ್ಲಿ ಹೇಮು ಬರುವಾ ಅವರು ಮಂಡಿಸಿದರು. ಇದಕ್ಕೆ ಉತ್ತರವಿತ್ತ ನೆಹರು ಸರಕಾರವು ಈ ನಿಟ್ಟಿನಲ್ಲಿ ಕೈಗೊಳ್ಳುತ್ತಿರುವ ಕ್ರಮಗಳನ್ನು ವಿವರಿಸಿದರು. ವಾಸ್ತವಿಕವಾಗಿ ಗುಡ್ಡಗಾಡು ಜನಾಂಗಗಳಿಗೆ ಸೇರಿದ ನೇಫಾ ಜನರನ್ನು ಮನಃಪರಿವರ್ತನೆಯ ದಾರಿಯಿಂದ ಭಾರತೀಯರೊಡನೆ ಹೆಚ್ಚಿನ ಸಂಪರ್ಕಕ್ಕೆ ತರುವುದೇ ತಮ್ಮ ಉದ್ದೇಶವೆಂದವರು ಸ್ಪಷ್ಟಪಡಿಸಿ, ಅಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳಿಂದ ಭಾರತದ ಕಡೆಗವರಲ್ಲಿ ಪ್ರೇಮಭಾವ ಬೆಳೆಯುತ್ತಿದೆಯೆಂದೂ ಇದಕ್ಕೆ ಚೀನೀ ದುರಾಕ್ರಮಣದ ವೇಳೆ ಅವರು ತೋರಿದ ಭಾರತನಿಷ್ಠೆಯೇ ನಿದರ್ಶನವೆಂದೂ ಹೇಳಿದರು. ಬರುವಾರೂ ತೃಪ್ತರಾದರೆಂದರೆ ಉಳಿದವರು ಅತೃಪ್ತರಾಗಲಾರರು.

### ರಾಧಾಕೃಷ್ಣನ್

ಡಾ| ರಾಧಾಕೃಷ್ಣನ್ ಇಂದಿನ ಯುಗದ ಪರಮ ಶ್ರೇಷ್ಠದಾರ್ಶನಿಕರು; ಅಂತೆಯೇ ರಾಜಕಾರಣಿಗಳೂ ಕೂಡ. ಅದುದರಿಂದಲೇ ಅವರು ಯುಗವಾಣಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಮರ್ಥರು. "ಭಾರತವು ಶಾಂತಿ ಬಯಸುವ ರಾಷ್ಟ್ರವಾದರೂ ಸ್ವಸೀಮಾ ರಕ್ಷಣೆಯ

(೬ನೇ ಪುಟ ನೋಡಿರಿ)

## ಅರ್ಧವತ್ವಾರ್ತೆಗಳು

ನನ್ನ ನೋಟ್ವಿಂದ ಇಂಡೋನೇಶ್ಯ ... ವಿಮಾನ ಪಾಲಿಗೆ ಆ ... ಲಕ್ಷ್ಯವಾ ಮಂತ್ರಿ ... ರೋಮೆಲಿನ್ ... ಮಾನೆನೋವಸ್ಕಿ" ಆವ ... ಗಂಟೆಗಳು ವಿಶ್ರಾಂತಿಯ ... ರಾಯಭಾರಿ ... ಭಾರತದ ಜನರಿಗೆ ... ಉಭಾರಯುಗಳನ್ನು ತಂ ... ಹೇಳಿದರಲ್ಲವೆ ಹೆ ... ಅವಕಾಶವಿತ್ತಿಲ್ಲ ... ನೋಡಲು ನೋಸ್ಕೊ ... ತನಕ ಬಂದ ಪ್ರಯಾಣದ ... ಎಷ್ಟಾದರೂ ರಕ್ಷ ... ಕ್ಲವೇ ... ರಕ್ಷಣೆಯ ಜೊತೆಗೆ ದೇಹ ರಕ್ಷಣೆಯೂ ಆಗ ಬೇಕಷ್ಟೇ?

○○ ○○

ತನ್ನ ಚಿನ್ನದ ಧೋರಣೆಯಿಂದ ಕ್ರಾಂತಿ ಸಾಧ್ಯವೆನ್ನುತ್ತಾರಂತೆ ಶ್ರೀ ಮೊರಾರ್ಜಿ ದೇಸಾಯಿಯವರು ಈಗಿನ ಪ್ರಚಲಿತ ತುರ್ತು ಚಿನ್ನದ ಧೋರಣೆಯಿಂದಾಗಿ ಎಷ್ಟೋ ಅಕ್ಕಸಾಲಿಗರ ಕುಟುಂಬವು ಯಮಧರ್ಮರಾಯನ ಪಟ್ಟಣ ಸೇರುತ್ತಿರುವ ವಿಷಯ ಪ್ರತಿ ದಿನವೂ ಕೇಳುತ್ತದಷ್ಟೇ! ಇದೇ ರೀತಿ ಮುಂದುವರಿದುದಾದರೆ ಯಮಧರ್ಮರಾಯನು ಸಹ ವಿಶ್ರಾಂತಿಗಾಗಿ ರಜೆ ಅರ್ಜಿ ಬರೆಯಬೇಕಾಗುವದೋ ಏನೋ ಗಂಟೆಗೆ ಒಂದೇ ಸ್ವರ!

○○ ○○

ಪಾಕ್ ಚೀಣಾ ಗಡಿ ಒಪ್ಪಂದವು ಮಾವೋರವರ ಮತ್ತೊಂದು ನಾಟಕವೆಂದು ಮಲಯಾ ಪತ್ರಿಕೆಗಳು ಅಭಿಪ್ರಾಯಪಟ್ಟವೆಯಂತೆ! ಕಪಟ ನಾಟಕ ಪ್ರಿಯರಾದ ಮಾವೋರವರು ಪಾಕಿಸ್ತಾನದೊಡನೆ ಆಡಿದ ನಾಟಕವು ಕಪಟವಾಗಿರದ, ಏನಾದರೇನ! ಮಾಗಿಲ್ಲದವನಿಗೆ ಬೆಣ್ಣೆಯ ಪರಿಮಳವಾದರೇನು! ಎಣ್ಣೆಯ ಪರಿಮಳವಾದರೇನು!

○○ ○○

ರಶ್ಯಾದ ಕರ್ನಲ್ ಜನರಲ್ ಆಗಿರುವ ಮಿ| ಐವಾನ್ ಯುಸ್. ಬ್ಯಾಕೋವ್ ರವರು ಭಾರತ ಚೀಣಾ ಗಡಿ ವಿವಾದವು ಶಾಂತ ರೀತಿಯಿಂದ ಬಗೆಹರಿಯಲಿ ಎಂದು ಮಾಸ್ಕೋದಲ್ಲಿ ಎಂದಿದ್ದಾರೆಂಬ ವಾರ್ತೆಯೊಂದು ಹೈದರಾಬಾದಿನ ಕಡೆಯಿಂದ ಬಂದಿದೆ ಆದರೆ ಕಮ್ಯೂನಿಸ್ಟ್ ಚೀಣವು ಕ್ರಾಂತಿ ಪ್ರಿಯ ರಾಜ್ಯ! ಭಾರತವು ಶಾಂತಿ ಪ್ರಿಯ ರಾಜ್ಯ ಕ್ರಾಂತಿಗೂ ಶಾಂತಿಗೂ ಪ್ರಥಮ ದ ಒಂದಕ್ಷರಕ್ಕೆ ಮಾತ್ರ ವ್ಯತ್ಯಾಸವಲ್ಲದೆ ಸಂಖ್ಯೆಯಲ್ಲಿ ಎರಡೂ ಒಂದೇ ರೀತಿ ಇವೆ ಆದರಂತೆ ಚೀನದ ಮಾರ್ಜಿಗೂ ಭಾರತದ ಮಾರ್ಜಿಗೂ ಸ್ವಲ್ಪ ವ್ಯತ್ಯಾಸವಲ್ಲದ ಎಂದು ರಾಜ್ಯದವರಿಗೂ ಯುದ್ಧವು ಈಗಿನ ಪರಿಸ್ಥಿತಿಯಲ್ಲಿ ಬೇಡವೆಂಬ ಅಭಿಪ್ರಾಯವೇ ಇವೆ ತಾನೆ?

○○ ○○

ಮನುಷ್ಯರಂತೆ ವಾಹನಗಳಿಗೂ ಅಂಗಡಿಗಳಲ್ಲಿ ವ್ಯಾಪಾರ ಮಾಡಬೇಕೆಂಬ ಮನಸ್ಸು ಇದೆಯೋ ಏನೋ! ಇತ್ತೀಚೆಗೆ ಅಂಗಡಿ ನುಗ್ಗಲು ಒಂದು ಕಾರು ಪ್ರಯತ್ನಪಟ್ಟಿದೆಯೆಂಬ ವಾರ್ತೆ ಮಂಗಳೂರಿನಿಂದ ಬಂದಿದೆ ಏನಾದರೂ ವಾಹನಗಳಿಗೆ ಬಿಟ್ಟು ಮಾಡದೇ ಹೋಗಿ ಕಳ್ಳತನ ಮಾಡಿ ನಷ್ಟಪಡಿಸಲು ಸಾಧ್ಯವಿಲ್ಲ ಮನುಷ್ಯರು ಪ್ರಯತ್ನ ಮಾಡದೆ ವಾಹನಗಳಿಗೆ ಎಂದಿಗೂ ಸಾಧ್ಯವಿಲ್ಲವೆಂಬುದು ಖಂಡಿತ.

○○ ○○

ಹಾಲಿಗೆ ನೀರು ಬೆರಸಿದ ಅಪರಾಧಕ್ಕೆ ಯ ಮೇಲೆ, ಆ ಹಾಲು ಮಾರುವವನಿಗೆ ೫೦ ರೂ. ದಂಡ ತಪ್ಪಿದರೆ 2 ತಿಂಗಳ ಕಠಿಣ ಸಜೆಯಾಗಿದೆಯೆಂಬ ವಾರ್ತೆಯೊಂದಿದೆ. ಆದರ ಜೇಸಿಗೆ ಬೆಲ್ಲದ ರವೆ ಬೆರಸಿ ಮಾರುವವರಿದ್ದಾರೆಂಬ ವಾರ್ತೆಯೂ ಇದೆ. ಇಂತವರಿಗೆ ಯಾವ ಶಿಕ್ಷೆಯೋ ದೇವರೇ ಬಲ್ಲ

—ಶ್ರೀ ನಾರಾಯಣರಾವ್, ಐತಣ್ಣ.

## ಅಲ್ಲಲ್ಲಿಯ ಸುದ್ದಿಸಾರ

**ಮುಂಬೈಯ ಸಾಹಿತ್ಯ ಕೂಟದವರಿಂದ ರಾಷ್ಟ್ರಕವಿಯ ಹುಟ್ಟು ಹಬ್ಬದ ಆಚರಣೆ**— ತಾ 24—8—63 ರಂದು ಮುಂಬೈ ಕನ್ನಡ ಸಂಘದ ಕಾರ್ಯಾಲಯದಲ್ಲಿ ಕನ್ನಡದ ಸುಪ್ರಸಿದ್ಧ ಕವಿ ಹಾಗೂ ಹಿರಿಯ ಸಂಶೋಧಕ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರ 81ನೇ ಹುಟ್ಟುಹಬ್ಬವನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು ಆರಂಭದಲ್ಲಿ ಶ್ರೀ ಮ ಎ ನಾಯಕ ಅವರು ಮಾತಾಡುತ್ತಾ ಗೋವಿಂದ ಪೈಯವರು ಇಂತಹ ಯಾವ ಹಬ್ಬವನ್ನೂ ಮೆಚ್ಚುವುದಿಲ್ಲ ಆದರೆ ನಾವು ನಮ್ಮ ಕವಿಯನ್ನು ಗೌರವಿಸುವುದು ಎಂದರೆ ನಮ್ಮ ಬೆನ್ನನ್ನು ನಾವು ತಟ್ಟಿಕೊಂಡಂತೆ ಎಂದೇ ನಾವಿಂದು ಈ ಹಬ್ಬವನ್ನು ಆಚರಿಸುತ್ತಿದ್ದೇವೆ ಎಂದರು ಅನಂತರ ಶ್ರೀ ಎಸ್ ಎಂ ಶೆಟ್ಟಿ ಶಿಮುಂಜೆ ಪರಾರಿಯವರು ಮಾತಾಡುತ್ತಾ—ಕಾಗದ ಬರೆದವರಿಗೆಲ್ಲ ಶೀಘ್ರ ಮಾರೋಲೆಯನ್ನು ಬರೆಯುವ ಹಾಗೂ ತಪ್ಪಿದ್ದರೆ ತಿದ್ದಿ, ಅದನ್ನು ಸೂಚಿಸಿ ಮುಂದೆ ತಪ್ಪದಂತೆ ಎಚ್ಚರಿಸಿ ಎಳೆಯ ಲೇಖಕರನ್ನು ಪ್ರೋತ್ಸಾಹಿಸುವ ಕುಶಲಕಲೆ ಗೋವಿಂದ ಪೈಯವರಂತೆ ಇನ್ನಾರಿಗೂ ಕರಗತವಾಗಿಲ್ಲ ಎಂದರಲ್ಲದೆ ಶ್ರೀ ಪೈಯವರ ಕಾವ್ಯ-ಕವನಗಳ ಅಲ್ಪ ಪರಿಚಯವನ್ನಿತ್ತರು ತದನಂತರ ಶ್ರೀ ಶ್ರೀನಿವಾಸ ಹಾವನೂರ ಅವರು— ಒಬ್ಬ ಲೇಖಕ ಇನ್ನೊಬ್ಬ ಲೇಖಕನ ಟೀಕೆಯನ್ನು ಎಂದೂ ಸಹಿಸಲಾರ, ಆದರೆ ಎಲ್ಲಾ ಲೇಖಕರು ಶ್ರೀ ಪೈಗಳವರ ಟೀಕೆಯನ್ನೂ ಅವರು ತೋರಿಸಿದ ತಪ್ಪನ್ನೂ ಒಪ್ಪುತ್ತಾರೆ ಏಕೆಂದರೆ ಅವರು ದೊಡ್ಡ ಕವಿಗಳು ಎಂದಲ್ಲ, ಅವರು ನಿಸ್ಪೃಹರು, ಅವರಲ್ಲಿ ಮಾತ್ಸರ್ಯವಿಲ್ಲ ಇದ್ದುದನ್ನು ಇದ್ದಕ್ಕಿದ್ದಂತೆಯೇ ಹೇಳುವುದು ಅವರ ಸ್ವಭಾವ ಎಂದು ಎಲ್ಲರಿಗೂ ಗೊತ್ತು ಎಂದೇ ಎಲ್ಲರೂ ಅವರನ್ನು ಪ್ರೀತಿಸುತ್ತಾರೆ ಎಂದರು

ಅನಂತರ ಕೂಟದ ಮುಂದಿನ ವರ್ಷದ ಕಾರ್ಯಕಲಾಪಗಳಿಗಾಗಿ ಶ್ರೀ ಸಿ ಎಂ ಕುಲಕರ್ಣಿ ಅವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಶೇಖರ ಇಡ್ಯ ಅವರನ್ನು ಕಾರ್ಯನಿರ್ವಾಹಕರನ್ನಾಗಿಯೂ ಆರಿಸಲಾಯಿತು ಶ್ರೀ ವ್ಯಾಸರಾಯ ಬಲ್ಲಾಳ ಶ್ರೀನಿವಾಸ ಹಾವನೂರ ರಾಘವೇಂದ್ರರಾಯ ಇವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರೆಂದು ನಿಯೋಜಿಸಲಾಯಿತು

**ವಿದ್ಯಾರ್ಥಿ ಸತ್ಕಾರ**— ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರೀ ಶಾಲಾ 7 ನೇ ಮತ್ತು 8ನೇ ತರಗತಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಉಡುಪಿ ಸಬ್ ಡಿವಿಜನ್ನಿನ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಜಿ ವಿ ಸಿದ್ದೇಶ್ವರ ಇವರ ಅಧ್ಯಕ್ಷತೆಯಲ್ಲಿ ತಾ 29ರಂದು ನಡೆಯಿತು. ಪ್ರಾರಂಭದಲ್ಲಿ ಮೆನೇಜರ್ ಶ್ರೀ ಕೆ ಜಗನ್ನಾಥ ನಾಯಕ್ ರವರು ಸ್ವಾಗತಿಸಿದರು ಅಧ್ಯಕ್ಷರ ಮುಖಾಂತರ ಕೊಡಲ್ಪಟ್ಟ ಒಂದು ಶಾಲಾ ಗೋಲ ಶೀಲ್ಡ್ ರಕ್ಷಕ ...

ಕ್ಷತಾಮಾಪಕ, ರಾಷ್ಟ್ರಧ್ವಜ ಭಾವಚಿತ್ರ ಪ್ರಥಮ ಚಿಕಿತ್ಸಾ ಉಪಕರಣಗಳನ್ನು ಶಾಲಾ ಮೆನೆಜರಿಗೆ ಅರ್ಪಿಸಿದರು ಮುಂದೆ ಮುಖ್ಯ ಭಾಷಣವಾಗಿ ಶಾಲಾ ಅಧ್ಯಾಪಕರುಗಳಾದ ಶ್ರೀ ಎನ್ ಕೆ ತನಿಯಪ್ಪನವರು ಹಾಗೂ ಶ್ರೀ ಯು ರತ್ನಾಕರ ಅಡಿಗರು ಹಿತೋಪದೇಶಗಳನ್ನು ಹೇಳಿದರು ಅಧ್ಯಕ್ಷರ ಭಾಷಣಾ ನಂತರ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್ ಭಟ್ಟರು ಧನ್ಯವಾದ ಸಮರ್ಪಿಸಿದರು

**ಯಕ್ಷಗಾನ ಕಲಾಕ್ಷೇತ್ರದ ಮಹಾಧಿವೇಶನ**— ಉಡುಪಿ ಯಕ್ಷಗಾನ ಕಲಾಕ್ಷೇತ್ರದ ವಾರ್ಷಿಕ ಮಹಾ ಅಧಿವೇಶನವು ತಾ. 24ರಂದು ಸಂಘದ ಕಾರ್ಯಾಲಯದಲ್ಲಿ ಯಶಸ್ವಿಯಾಗಿ ಜರುಗಿತು ಶ್ರೀ ಮಾಧವ ಶೆಣೈಯವರು ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿ ಸಂಜೀವನವರು ವರದಿಯೋದಿದ ಬಳಿಕ ಲೆಕ್ಕಪತ್ರದ ಪರಾಮರ್ಶನವಾಗಿ ಸರ್ವಾನುಮತದಿಂದ ಅಂಗೀಕೃತವಾಯಿತು

ಮುಂದಿನ ವರ್ಷದ ಕಾರ್ಯಕಾರೀ ಸಮಿತಿಗೆ ಚುನಾವಣೆ ನಡೆದು ಶ್ರೀ ನೋರ್ಸ್ ರಾಮ್ ನೀಲೇಶ್ವರ ಅಧ್ಯಕ್ಷರಾಗಿಯೂ, ಶ್ರೀ ಶಂಭು ಸೆಟ್ಟಿಗಾರರು ಉಪಾಧ್ಯಕ್ಷರಾಗಿಯೂ, ಶ್ರೀ ಯು. ಗೋಪಾಲಕೃಷ್ಣ ಗುಲ್ಕಿ ಇವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಶ್ರೀ ಎನ್ ವೆಂಕಟ್ರ ಸುವರ್ಣರು ಕಲಾ ಕಾರ್ಯದರ್ಶಿಗಳಾಗಿಯೂ, ಶ್ರೀ ಮಾಧವ ಶೆಣೈ ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು

**ಬೆಳ್ತಂಗಡಿ ಸಮಾಜ ಮಂದಿರದ ಉದ್ಘಾಟನೆ**— ಕಳೆದ ತಾ 23ನೇ ಸಂಜೆ, ಬೆಳ್ತಂಗಡಿಯಲ್ಲಿ ನಿರ್ಮಿತವಾದ ಸಮಾಜ ಮಂದಿರದ ಹಾಗೂ ಅದಕ್ಕೊದಗಿಸಿದ ವಿದ್ಯುತ್ ದೀಪಗಳ ಉದ್ಘಾಟನೆಯನ್ನು, ಆರ್ಥಿಕ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಶ್ರೀ ಟಿ ಎ ಪೈಗಳವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು

ಇದಿಯಲ್ಲಿ ಡಾ ಉಮಾಸಾಧರಾಯರು ಸ್ವಾಗತಿಸಿದ ಬಳಿಕ ಶ್ರೀ ಬಿ ನರಸಿಂಹ ಭಟ್ಟರು ಮಂದಿರದ ಸಮಿತಿಯ ಕಾರ್ಯಕಲಾಪಗಳ ವರದಿಯನ್ನೋದಿದರು

**ಧರ್ಮಸ್ಥಳ**— ಮೈಸೂರು ರಾಜ್ಯದ ಆರ್ಥಿಕ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಶ್ರೀ ಧರ್ಮಸ್ಥಳಕ್ಕೆ ಜೋಗ್ ವಿದ್ಯುತ್ ಪ್ರಾಪ್ತಿಸುವ ವ್ಯವಸ್ಥೆಯ ಉದ್ಘಾಟನೆಯನ್ನು ತಾ 23ರಂದು ಸಂಜೆ ಶ್ರೀ ಬಿ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಆರಂಭದಲ್ಲಿ ಶ್ರೀ ಎಸ್ ಸೂರ್ಯನಾರಾಯಣರಾಯರು ಸ್ವಾಗತಿಸಿದರು ಸಮಾರಂಭಕ್ಕಾಗಮಿಸಿದ್ದ ಶ್ರೀ ಟಿ ವೆಂಕಯ್ಯನವರು ಭಾಷಣವಿತ್ತರು ಅಂತ್ಯದಲ್ಲಿ ಶ್ರೀ ಕೃಷ್ಣಸ್ವಾಮಿ ನಾಯ್ಡುರವರು ಅಭಿನಂದಿಸಿದರು

**ಸಹಕಾರಿ ಮಾರಾಟ ಸಂಘಗಳು**- ಶ್ರೀ ಡಿ ಎಸ್ ಮಿತ್ರರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಹೋಲ್‌ಸೇಲ್ ಸ್ಟೋರನ್ನು ಉದ್ಘಾಟಿಸಿದರು ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಶ್ರೀ ಎಸ್ ನರ್ಸಪ್ಪಯ್ಯನವರು ಸ್ವಾಗತಿಸುತ್ತ ಸಹಕಾರಿ ಸಂಘಗಳ ಆವಶ್ಯಕತೆಗಳನ್ನು ವಿವರಿಸಿದರು ಶ್ರೀ ಮಿತ್ರರು ಉದ್ಘಾಟನಾ ಭಾಷಣ ಮಾಡುತ್ತಾ ಆರ್ಥಿಕ ಸಂಕಟಗಳಿಗೆ ಸಹಕಾರವೇ ದಿವ್ಯವಾದ ಔಷಧವೆಂದು ತಿಳಿಸಿದರು ಅಧ್ಯಕ್ಷ ಶ್ರೀ ಬಸಪ್ಪನವರು, ಪ್ರಾಮಾಣಿಕತೆಯಿಂದ ಸಹಕಾರಿ ಸಂಸ್ಥೆಗಳಲ್ಲಿರುವವರು ದುಡಿಯಬೇಕೆಂದು ತಿಳಿಸಿದರು ಶ್ರೀ ಆರ್ ಬಲಮಯ್ಯನವರು ಕಾರ್ಯಕರ್ತರನ್ನು ಅಭಿನಂದಿಸಿದರು

**ಶಂಕುಸ್ಥಾಪನಾ ಸಮಾರಂಭ**— ಪೆರ್ಡೂರು ಹೈಸ್ಕೂಲಿನ ನಿಯೋಜಿತ ಶಾಲಾ ಭವನದ ಶಂಕುಸ್ಥಾಪನೆಯು ತಾ 31ರಂದು ... ಆಫೀಸ್ ಆಫ್ ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರ್ ಡಾ ಮಾಧವ ಪೈಯವರಿಂದ ನೆರವೇರಿತು ಶ್ರೀ ಎಂ ಮಧ್ವರಾಜ್, ಎಂ ಎಲ್ ಎ ಅವರು ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ವಿಧ್ಯುಕ್ತವಾಗಿ ಶಿಲಾನ್ಯಾಸವಾದ ಬಳಿಕ ಸಭೆಯು ನಡೆಯಿತು ಶಾಲಾ ಸಮಿತಿಯ ಅಧ್ಯಕ್ಷ ಶ್ರೀ ಅಲಂಗಾರು ನಾರಾಯಣ ಹೆಗ್ಡೆಯವರು ಪ್ರಾರ್ಥನೆ ಮಾಡಿದ ನಂತರ ಕರೆಸ್ಪೋಂಡೆಂಟ್ ಶ್ರೀ ಕೆ ಕೆ ಪೈಯವರು ಸ್ವಾಗತ ಭಾಷಣ ಮಾಡಿದರು ಡಾ ಎಂ ಆರ್. ಹೆಗ್ಡೆಯವರು ಶಾಲಾ ಸಮಿತಿಯು ಮಾಡಿದ ಕಾರ್ಯಕಲಾಪಗಳ ವಿವರವನ್ನಿತ್ತು ಶಾಲಾ ಭವನ ನಿರ್ಮಾಣವು ಶೀಘ್ರದಲ್ಲಿಯೇ ಆಗುವುದೆಂದರು. ಡಾ ಪೈಯವರು ವಿದ್ಯಾಭ್ಯಾಸದ ಮಹತ್ವವನ್ನು ವಿವರಿಸಿ ಪೆರ್ಡೂರು ಹೈಸ್ಕೂಲು ಮಾದರಿ ಶಾಲೆಯಾಗಲೆಂದು ಹಾರೈಸಿ, ಊರವರೆಲ್ಲರ ಸಹಕಾರವನ್ನು ಬಯಸಿದರು ನಮ್ಮ ರಾಜ್ಯದ ಮತ್ತು ಮುಖ್ಯವಾಗಿ ಜಿಲ್ಲೆಯ ಶಿಕ್ಷಣರಂಗದ ಕಾರ್ಯಕ್ರಮವನ್ನು ಸಿಂಹಾವಲೋಕನ ಮಾಡುತ್ತ ಅವರು ಎಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ ಶಾಲೆಯನ್ನು ತೆರೆಯುವ ಆಗತ್ಯವನ್ನು ಒತ್ತಿ ಹೇಳಿದರು ಶ್ರೀ ಮಧ್ವರಾಜರು, ಶಿಕ್ಷಣರಂಗದಲ್ಲಿ ಯಾವ ಕಾರಣದಿಂದಲೂ ಹಿಂದುಳಿಯಬಾರದೆಂದು ಹೇಳಿ ತನ್ನ ಸಂಪೂರ್ಣ ಸಹಕಾರವನ್ನು ಈಯುವ ಭರವಸೆಯಿತ್ತರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ ಗೋಪಾಲಕೃಷ್ಣ ಉಪಾಧ್ಯಾಯರು ವಂದನಾರ್ಪಣೆಗೈದರು

ಮಧ್ಯಾಹ್ನ ಪ್ರಸಿದ್ಧ ಪತ್ರವ್ಯವಹಾರಿ ಶ್ರೀ ರಾಘವೇಂದ್ರ ನುಲರು ಡಾ| ಪೈಯವರ ಗೌರವಾರ್ಥ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು

**ಅಷ್ಟಬಂಧ ಮುಹೂರ್ತ**— ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಾಲಯದಲ್ಲಿ ಮೇ 6ರಂದು ನಡೆಯಲಿರುವ ಅಷ್ಟಬಂಧ ಕಾರ್ಯಕ್ರಮದ ಮುಹೂರ್ತವು ತಾ 31ರಂದು ... ನಾದಿ ವಿಧ್ಯುಕ್ತವಾಗಿ ನೆರವೇರಿತು

**ಕುರುಕಾಲು**— ಸೇವಾ ಸಹಕಾರಿ ಸಂಘದ ಕಟ್ಟಡದಲ್ಲಿ ತಾ 7 4 63ರಂದು ಬ್ಲೋಕ್ ಲೆವೆಲ್ ಫಂಡು ರೂರಲ ಡಿಸ್ಪೆನ್ಸರಿಯು ಶ್ರೀ ಎಂ ಮಧ್ವರಾಜ, ಎಂ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಶ್ರೀ ಟಿ ಎ ಪೈಗಳಿಂದ ಉದ್ಘಾಟಿಸಲ್ಪಡುವುದು

**ಉಚ್ಚಿಲ**— ಮೊಗವೀರ ಮಹಾಜನ ಸಂಘದ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ತಾ. 8ರಂದು ವಾರ್ಷಿಕ ಪ್ರತಿಷ್ಠೋತ್ಸವವು ವಿವಿಧ ಕಾರ್ಯಕ್ರಮಗಳಿಂದ ನೆರವೇರಲಿದೆ.

**ಅಳಿಕೆ**— ಅಳಿಕೆ ಹಾ. ಎ ಶಾಲೆಯ 1962 63ನೇ ವರ್ಷದ 7ನೇ ಮತ್ತು 8ನೇ ತರಗತಿಗಳ ಮಕ್ಕಳ ವಿದಾಯ ಕೂಟವು ತಾ 31-8 63ರಂದು ಶಾಲಾ ಮೆನೇಜರ್ ಶ್ರೀ ಮಾಣಿ ಮಧ್ಯೋಳ ಗೌರಮ್ಮನವರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು ಅದೇ ದಿನ ಬೆಳಿಗ್ಗೆ ರಕ್ಷಕರ ಸಭೆಯು ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು ಬಹುಮಾನ ವಿತರಣೆಯಾದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು

(೨ನೇ ಪುಟದಿಂದ)

ನ್ನು ಹೆಚ್ಚಿಸಿ ಭದ್ರತೆಯನ್ನು ಉಳಿಸಿಕೊಳ್ಳಬೇಕು; ಹಾಗಾದಾಗಲೇ ನಮ್ಮ ಗೌರವ ಪ್ರತಿಷ್ಠೆಗಳು ಹೆಚ್ಚುತ್ತವೆಯೆಂದವರು ಹೇಳುತ್ತಾರೆ ವಿನಯ, ತ್ಯಾಗ ಮತ್ತು ಸೇವಾ ಭಾವನೆಗಳೊಡನೆ ದಿಟ್ಟತನವನ್ನೂ ನಾವು ಬೆಳೆಸಿಕೊಳ್ಳಬೇಕು ಎನ್ನುತ್ತಾರೆ ಅವರು ಭಾರತೀಯ ಸಂಸ್ಕೃತಿಯು ನಿತ್ಯ ನೂತನವಾದುದು, ಹಳೆಯದನ್ನೆಲ್ಲ ತೊಡೆದು ಹಾಕುವ ಮತ್ತು ಹೊಸದಾಗಿಯೇ ಹೊಸ ಸ್ವರೂಪವನ್ನು ತಾಳುವ ಸತ್ವಶಾಲಿ ಸಂಸ್ಕೃತಿ ಬೇರೆ ಬೇರೆ ಕಾಲ ಮಾನ ಪರಿಸ್ಥಿತಿಯಲ್ಲಿ ಬೇರೆ ಬೇರೆ ವಿದ್ವಜ್ಜನರು ತಿಳಿಯಪಡಿಸಿದ ಸನಾತನ ಧರ್ಮವಿದು ಈ ಧರ್ಮದ, ಸಂಸ್ಕೃತಿಯ ಪ್ರದೀಪಕರು ಡಾ| ರಾಧಾಕೃಷ್ಣನ್ ಎಂಬುದಕ್ಕೆ ಅವರ ಅಭಿಪ್ರಾಯವೇ ದೃಷ್ಟಾಂತ

**ಸೂಚನೆ**—

ಈ ಸಂಚಿಕೆಯಲ್ಲಿ ಎಂದಿನಂತೆ ಪುಟಗಳಂತೆ ಪುಟ ಸಂಖ್ಯೆ ಕೊಟ್ಟಿದ್ದರೂ ಕಲವು ಅನಾನುಕೂಲತೆಗಳಿಂದ 10 ಪುಟಗಳನ್ನಷ್ಟೇ ಕೊಡಲಾಗಿದೆ.

## ಡಾ। ಪೈಗಳ ಹೊಸ ಯೋಜನೆ

# ತೆರಿಗೆಯಿಲ್ಲದ ಸುಖೀರಾಜ್ಯ ಸ್ಥಾಪನೆ

ಸರಕಾರದ ಕರಾಕರಣೆಯ ನೀತಿಯು ಶ್ರೀಮಂತರಿಂದ ತೊಡಗಿ ದಟ್ಟ ದರಿದ್ರರಿಗೂ ಶಿರೋವೇದನೆಯನ್ನುಂಟುಮಾಡುತ್ತಿದೆ. ಯಾರೊಬ್ಬರಲ್ಲೂ ಮಾನಸಿಕ ಶಾಂತಿಯಿಲ್ಲದಂತಾಗಿದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ತೆರಿಗೆಯೇ ಇಲ್ಲದ ರಾಷ್ಟ್ರ ಕಟ್ಟುವುದು ಹುಚ್ಚುತನವೆಂದೆನಿಸಬಹುದಾದರೂ ಅದು ಸಾಧ್ಯ ಮತ್ತು ಈ ಆದರ್ಶ ಜಗತ್ತಿನ ಇತರತ್ರ ಇಲ್ಲವಾದರೂ ನಾವದನ್ನು ಅನುಷ್ಠಾನಕ್ಕೆ ತಂದು ಇತರರಿಗೆ ಮಾದರಿಯಾಗಬಹುದು—ಎಂದು ಅಕೆಡೆಮಿ ಆಫ್ ಜನರಲ್ ಎಜುಕೇಶನ್‌ನ ರಿಜಿಸ್ಟ್ರಾರ್ ಡಾ। ಟಿ. ಮಾಧವ ಪೈ ಅವರು ತನ್ನ ಒಂದು ಯೋಜನೆಯಲ್ಲಿ ಸ್ಪಷ್ಟಗೊಳಿಸಿದ್ದಾರೆ.

ಒಂದು ಅಂಗಡಿಗೆ ನಾವು ಹೋಗಿ ಒಂದು ಧೋತಿಯನ್ನು ಕ್ರಯ ಮಾಡಿದರೆ ಗಿರಣಿಯಲ್ಲಿ ಬೆಲೆ ರೂ. ೯ ಎಂದು ಮೊಹರು ಮಾಡಿದ್ದರೂ ರೂ. ೬ ಅಬಕಾರಿ ತೆರಿಗೆ ಕೊಡಿಸಿಯೇ ನಾವು ರೂ. ೧೪ ತೆರಬೇಕಾಗುತ್ತದೆ. ಹಾಗೆಯೇ ರೂ ೧೫,೦೦೦ ಬೆಲೆಯ ಮೋಟಾರು ಕಾರನ್ನು ರೂ. ೨೪,೦೦೦ ತೆತ್ತೇ ಪಡೆದುಕೊಳ್ಳಬೇಕಾಗುತ್ತದೆ. ವಾರ್ಷಿಕ ೪ ಲಕ್ಷ ಉತ್ಪನ್ನವಿರುವವನೊಬ್ಬನು ಅದರಲ್ಲಿ ರೂ. ೩,೯೪,೦೦೦ ತೆರಿಗೆ ತೆತ್ತು ಉಳಿದ ರೂ. ೬,೦೦೦ ದಲ್ಲಿಯೇ ಜೀವನ ನಡೆಸಬೇಕಾಗುತ್ತದೆ. ಒಬ್ಬ ತನ್ನ ಮಾಲಕತ್ವದ ಸಂಸ್ಥೆಯೊಂದರಲ್ಲಿ ಒಂದು ಲಕ್ಷ ಆದಾಯ ಮಾಡಿಕೊಂಡರೆ, ರೂ. ೫೨,೦೦೦ ವನ್ನು ತೆರಿಗೆಯಾಗಿ ನೀಡಬೇಕಾಗುತ್ತದೆ. ಅದೇ ಮಾಲಕನು ಒಬ್ಬನ ಬದಲು ಐವರ ಪಾಲುಗಾರಿಕೆಯಿಂದ ಅದೇ ಸಂಸ್ಥೆಯನ್ನು ನಡೆಸಿ, ಅಷ್ಟೇ ಲಾಭ ಗಳಿಸಿದರೆ ಕೇವಲ ರೂ. ೧೩,೦೦೦ ಮಾತ್ರ ತೆರಿಗೆ ತೆತ್ತರೆ ಸಾಕು. ಇದರಿಂದ ಸರ್ವರಿಗೂ ನ್ಯಾಯ ಸಿಗುತ್ತಿಲ್ಲವೆಂದು ಹೇಳಬಹುದು. ಆದರೆ, ತೆರಿಗೆಯೇ ಇಲ್ಲದ ಯೋಜನೆಯಲ್ಲಿ ಇಂತಹ ಲೋಪದೋಷಗಳಾವುದಕ್ಕೂ ಆಸ್ಪದವಿಲ್ಲ. ಶ್ರೀಮಂತರ ಸಂಪತ್ತು ಕಾಲಕ್ರಮದಲ್ಲಿ ಕುಂದುತ್ತ ಬಡವರ ಸಂಪತ್ತು ಏರುತ್ತ ಬರುತ್ತದೆ. ಕಲ್ಯಾಣ ರಾಷ್ಟ್ರ ರಚನೆಗೆ ಇದು ಕಾರಣವಾಗುತ್ತದೆ.

ಇಂದು ದೇಶದಲ್ಲಿ ತೆರಿಗೆಗಳ ಕಾಟ ಅಪರಿಮಿತ. ಇದರಿಂದಲೇ ಪದಾರ್ಥಗಳ ಬೆಲೆಯೇರುವುದು. ಆಡಳಿತ ನಿರ್ವಹಣೆಗೆ ಸರಕಾರಕ್ಕೆ ಹಣ ಬೇಕು ನಿಜ ಈ ಹಣವನ್ನು ಕೂಡಿಸುವ ನೂತನ ನೀತಿಯಿಂದ ಅಸಮಾಧಾನವು ಹುಟ್ಟುವುದಿಲ್ಲ; ವಸೂಲಿಯೂ ಕಷ್ಟವಾಗುವುದಿಲ್ಲ. ಮುಂಗಡ ಪತ್ರ ತಯಾರಿಸುವ ತಲೆ ಸಿಡಿತವೂ ಇಲ್ಲ. ಜನರಾದರೂ ತಮ್ಮ ಲೆಕ್ಕ ಪತ್ರಗಳನ್ನು ಅಡಗಿಸುವ ಪ್ರಮೇಯವೂ ಬರುವುದಿಲ್ಲ. ಸರಕಾರದವರಿಂದು ವಸೂಲು ಮಾಡುವ ಕರಗಳ ಮೊತ್ತಕ್ಕಿಂತ ಈ ಮೊತ್ತ ಹೆಚ್ಚಿನದಾಗುವುದು; ಆಡಳಿತದಲ್ಲಿ ಮಿತವ್ಯಯವನ್ನೂ ಸಾಧಿಸಿದಂತಾಗುವುದು. ಇಂತಹ ಆತ್ಮಮೌಲ್ಯ ನೀತಿಯಾವುದು?

ಸರಕಾರಗಳು ಇಂದು ಸುಮಾರು ರೂ. ೧,೭೦೦ ಕೋಟಿಯಷ್ಟು ತೆರಿಗೆಗಳ ರೂಪದಲ್ಲಿ ರೂ. ೧,೦೦೦ ಕೋಟಿಯಷ್ಟು ಸಾಲ ರೂಪದಲ್ಲಿಯೂ ಕೂಡಿಸುತ್ತವೆ. ಆದರೆ, ಹೊಸ ಯೋಜನೆಯನ್ವಯ ರಾಷ್ಟ್ರೀಯ ಆದಾಯದ ಸೇ. ೨೫ನ್ನು ಅಂದರೆ, ರೂ. ೩,೫೦೦ನ್ನು ಕೂಡಿಸುವುದು ಸಾಧ್ಯವಾಗುತ್ತದೆ. ಅಂದರೆ, ಸರಕಾರಗಳ ಆವಶ್ಯಕತೆಗಿಂತಲೂ ರೂ. ೮೦೦ ಕೋಟಿಯಷ್ಟು ಅಧಿಕ! ಇಷ್ಟೊಂದು ಹಣ ಹೇಗೆ ಬರುತ್ತದೆ? ಪ್ರತಿಯೊಬ್ಬನೂ ತನ್ನ ಆದಾಯದ ಸೇ. ೫ರಿಂದ ೭೫ರ ವರೆಗೆ, ತಂತನ್ನ ಆದಾಯಕ್ಕನುಸಾರವಾಗಿ ಸರಕಾರದಲ್ಲಿ ನಿಬಡ್ಡಿಯಿಂದ ಠೇವಣಿಯಿಡಬೇಕು. ಈ ಠೇವಣಿಯು ೨೦ ವರ್ಷಗಳ ಬಳಿಕ ಆತನಿಗೆ ಮರಳಿ ದೊರೆಯುವುದು. ಹೀಗೆ ಪ್ರತಿ ವರ್ಷವೂ ಠೇವಣಿಯಿಡುತ್ತ ಬರುವುದರಿಂದ, ೨೦ ವರ್ಷಗಳ ನಂತರ ಪ್ರತಿ ವರ್ಷವೂ ಆತನಿಗೆ ಅಥವಾ ಆತನ ಉತ್ತರಾಧಿಕಾರಿಗಳಿಗೆ ಈ ಠೇವಣಿಯ ಮೊಬಲಗು ದೊರೆಯುತ್ತ ಬರುವುದರಿಂದ ಅವನಿಗದೊಂದು ನಿಶ್ಚಿತ ಆದಾಯವೇ ಆದಂತಾಯಿತು.

೩೦ ವರ್ಷ ವಯಸ್ಸಿನ ಒಬ್ಬನ ಆದಾಯವು ವರ್ಷಕ್ಕೆ ರೂ. ೧೦,೦೦೦ ಇದೆಯೆಂದಿಟ್ಟುಕೊಳ್ಳಿ. ಇವನು ರೂ ೩,೦೦೦ ವನ್ನು ಬಡ್ಡಿರಹಿತ ಠೇವಣಾತಿಯಾಗಿಡುತ್ತಾನೆ ಅವನ ೫೦ನೆಯ ವರ್ಷಾನಂತರ ಪ್ರತಿ ವರ್ಷವೂ ಅವನಿಗೆ ರೂ. ೩,೦೦೦ ದೊರೆಯುತ್ತ ಹೋಗುವುದು. ಇದರಿಂದ ಆತನಿಗೆ ಸಂತೃಪ್ತಿಯಾಗದಿರುವುದೆ? ಅಷ್ಟು ಮಾತ್ರವಲ್ಲ, ಆದಾಯ ಹೆಚ್ಚಾದಂತೆ ಠೇವಣಿಯ ಮೊತ್ತವೂ ಹೆಚ್ಚಾಗುವುದು. ಇದರಿಂದ ಸರಕಾರಕ್ಕಾದರೂ ಹಣದ ಕೊರತೆಯೆಂಬುದೇ ಇರುವುದಿಲ್ಲ.

ಈ ಯೋಜನೆಯನ್ನು ಸ್ವೀಕರಿಸುವುದರಿಂದ ಸರಕಾರಕ್ಕಾದರೂ ನಷ್ಟವಾಗುವುದಿಲ್ಲ. ಆದರೆ, ಅದು ಒಂದು ಕೆಲಸವನ್ನು ಮಾಡಬೇಕು. ತಾನು ವಸೂಲು ಮಾಡುವ ಬಡ್ಡಿರಹಿತ ಠೇವಣಿಯಲ್ಲಿ ಎರಡು ವಿಭಾಗ ಮಾಡಿಕೊಳ್ಳಬೇಕು. ಮೊದಲನೆಯದು ರೂ ೨,೦೦೦ ಕೋಟಿಯದ್ದು. ಇದನ್ನು ಆವರ್ತ ವೆಚ್ಚಕ್ಕೆ ವಿನಿಯೋಗಿಸಬಹುದು ಎರಡನೆಯ ರೂ. ೧,೫೦೦ ಕೋಟಿಯನ್ನು ದೇಶಾಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಬೇಕು. ಅಂದರೆ, ಮೊದಲ ಮೊತ್ತ ವಸೂಲಿ ಮಾಡಿದ ಕರದಂತೆಯೂ ಎರಡನೆಯದು ಪಡೆಕೊಂಡ ಸಾಲದಂತೆಯೂ ಇಟ್ಟುಕೊಳ್ಳಬೇಕು.

೨೦ ವರ್ಷ ನಂತರ ಸರಕಾರವು ಈ ರೂ. ೩,೫೦೦ ಕೋಟಿಯನ್ನು ಮರುಪಾವತಿ ಮಾಡಬೇಕು ತಾನೆ? ಅದಕ್ಕಾಗಿಯೇ ರೂ. ೧,೫೦೦ ಕೋಟಿಯನ್ನು ಸೇ. ೪ರಂತೆ ಜನತೆಯಿಂದ ಪಡೆಕೊಂಡ ಸಾಲವೆಂದು ಪರಿಗಣಿಸಬೇಕು. ಈ ೧,೫೦೦ ಕೋಟಿಯು ಸೇ. ೪ರ ಬಡ್ಡಿ ಸೇರಿ ೨೦ ವರ್ಷಗಳಲ್ಲಿ ರೂ. ೩,೫೦೦ ಕೋಟಿಯಷ್ಟಾಗುವುದು. ಈ ಹಣವನ್ನು ಮರುಪಾವತಿಗಾಗಿ ಉಪಯೋಗಿಸುವುದರಿಂದ ಜನತೆಯು ತೆರುವ ರೂ. ೨,೦೦೦ ಕೋಟಿಯು ಸರಕಾರಕ್ಕೆ ಪುಕ್ಕಟೆ ಸಿಕ್ಕಂತಾಗುವುದು; ಜನತೆಗಾದರೂ ತಾನು ತೆತ್ತ ಹಣವು ಪೂರ್ಣವಾಗಿ ಹಿಂದೆ ದೊರೆಯುವಂತಾಗುವುದು. ಅವರು ತಮಗರಿವಿಲ್ಲದಂತೆಯೇ ರೂ ೨೦೦೦ ಕೋಟಿಯಷ್ಟು ತೆರಿಗೆಯನ್ನು ತೆತ್ತಂತಾಗುವುದು.

ಸರಕಾರವಿಂದು ಕರಾಕರಣೆಗೆ ಪಡುವಷ್ಟು ತ್ರಾಸವನ್ನು ಈ ಯೋಜನೆಯನ್ನು ಜಾರಿಗೆ ತಂದರೆ ವಹಿಸಬೇಕಾಗುವುದಿಲ್ಲ. ಇಂದು ಜನರು ತಮ್ಮ ಲೆಕ್ಕಪತ್ರಗಳನ್ನು ಅಡಗಿಸುತ್ತಾರೆ ಏಕೆ? ತೆರಿಗೆಯ ರೂಪದಲ್ಲಿ ತಮ್ಮ ಹಣವನ್ನು ತೆತ್ತುಬಿಡಬೇಕಾಗುವುದೆಂದು. ಆದರೆ, ಹೊಸ ಯೋಜನೆಯಂತೆ ಅವರು ತೆರುವ ಪ್ರತಿ ಕಾಸೂ ೨೦ ವರ್ಷಾನಂತರ ಮರಳಿ ದೊರೆಯುವುದರಿಂದ, ಮತ್ತೆ ಯಾವ ಕರಗಳ ಉಪದ್ರವೂ ಇಲ್ಲದಿರುವುದರಿಂದ ಆತ್ಮಸಂತೋಷದಿಂದಲೇ ನಿಬಡ್ಡಿ ಠೇವಣಿಯಿಡಲು ಮುಂದೆ ಬರುವರು.

ಕೂಲಿ ಮತ್ತು ನೌಕರರೇ ಮೊದಲಾದವರ ವಿಷಯದಲ್ಲಿ ಕಷ್ಟ ವಹಿಸಬೇಕೆನ್ನಬಹುದು. ಆದರೆ ಅದೂ ಅಗತ್ಯವಿಲ್ಲ. ಪ್ರತಿ ನೌಕರರೂ ಕಡಿಮೆ ಪಕ್ಷ ರೂ. ೧ ತೆತ್ತು ಪರವಾನಿಗೆ ಪಡೆದುಕೊಳ್ಳಬೇಕು. ಅವರ ಮಾಲಿಕನು ಅವರ ಆದಾಯದ ಮೇಲೆ ಸಲ್ಲತಕ್ಕ ಠೇವಣಿಯನ್ನು ಮುರಿದಿಟ್ಟು ಸರಕಾರಕ್ಕೆ ತುಂಬಬೇಕು. ರೂ. ೧೦೦ ಆದಾಯವಿರುವವನು ರೂ. ೧ನ್ನು, ಉಳಿದವರು ಇದೇ ದಾಮಾಶಯದಲ್ಲಿ ಪರವಾನಿಗೆ ಮೊಬಲಗನ್ನು ತೆರಬೇಕು.

ಹೀಗೆ ಸರಕಾರವು ತೆರಿಗೆಗಳನ್ನೆಲ್ಲ ಕಿತ್ತು ಹಾಕಿ, ೨೦ ವರ್ಷಗಳ ನಿಬಡ್ಡಿ ಠೇವಣಾತಿಯ ಯೋಜನೆಯನ್ನು ವ್ಯವಸ್ಥಿತಗೊಳಿಸಿದರೆ, ಅದು ಕ್ರಾಂತಿಕಾರಿಯೆನಿಸಬಹುದಾದರೂ ಸರಕಾರ ಮತ್ತು ಜನತೆಯ ಪರಿಸ್ಥಿತಿಯು ಖಂಡಿತಕ್ಕೂ ಸುಧಾರಿಸುವುದು. ಇಂದು ಆದಾಯ ತೆರಿಗೆಗೊಳಪಡದೆ ವಾರ್ಷಿಕ ರೂ. ೧,೫೦೦ ಆದಾಯಕ್ಕಿಂತ ಹೆಚ್ಚಿರುವವರಿಗೆ ಖಡ್ಡಾಯ ಉಳಿತಾಯ. ಯೋಜನೆಯನ್ನು ಸರಕಾರವು ತರಲು ಯೋಜಿಸಿರುವುದನ್ನು ನಾವು ಗಮನಿಸುವುದಾದರೆ, ಡಾ। ಮಾಧವ ಪೈಯವರು ಮುಂದಿಟ್ಟ ಯೋಜನೆಯೇಕೆ ಗ್ರಾಹ್ಯವಾಗದು ಎಂಬ ಪ್ರಶ್ನೆಯೇಳುವುದು ಸಹಜ. ಡಾ। ಪೈಯವರೇ ಹೇಳುವಂತೆ, ಅವರು ತನ್ನ ಯೋಜನೆಯನ್ನು ಜನತೆಯ ಮುಂದೆ ಇಟ್ಟಿದ್ದಾರೆ, ಅದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿ ಸೂಕ್ತ ನಿರ್ಧಾರಕ್ಕೆ ಬರುವುದು ಜನತೆಯ ಕೈಯಲ್ಲಿದೆ. ಅದು ಸಮುಚಿತವೆಂದು ಕಂಡರೆ, ಸರಕಾರವನ್ನು ತನ್ನ ಪ್ರತಿನಿಧಿಗಳ ಮೂಲಕ ಒತ್ತಾಯಿಸಲು ಪ್ರಜೆಗಳಿಗೆ ಅಧಿಕಾರವಿದ್ದೇ ಇದೆ.

---

### ಪ್ರಕಟಣೆ

**ಉದಿಯಾವರ ಗ್ರಾಮ ಪಂಚಾಯತು ಕೋರ್ಟಿನಲ್ಲಿ.**

ಸಿ. ವ್ಯಾ. ನಂಬ್ರ 2/1963.

ಅಬ್ದುಲ್ ಕರೀಂ ಸಾಹೇಬ್ — ವಾದಿ.

ಮತ್ತು

ಅಂಗರ ಮರಕಾಲ-ದಾಸು ಮರಕಾಲನ ಅಳಿಯ, ಉದಿಯಾವರ ಗ್ರಾಮದಲ್ಲಿರುವವ — ಪ್ರತಿವಾದಿ,

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ವಾದಿಯು ತನ್ನ ಅಂಗಡಿಯಲ್ಲಿ ನಡ್ಸಿದ ಲೇವಾದೇವಿ ಬಗ್ಗೆ ನಿಮ್ಮಿಂದ ವಾದಿಗೆ ಬರತಕ್ಕ ಅಸಲು ಬಡ್ಡಿಗೆ ದಾಖಲು ಮಾಡಿದ ಸದ್ರಿ ದಾವೆಯನ್ನು ಪ್ರತಿವಾದಿಯ ಅಪ್ಪೈರು ಸರ್ ನೋಟೀಸು ಬಗ್ಗೆ ತಾ. 8—4—'63 ಕ್ಕೆ ಇಡೋಣಾಗಿಯದೆ. ಈ ಕುರಿತು ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಆ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಅಪರಾಹ್ನ ಘಂಟೆ 3ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದ್ರಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂಬುದನ್ನು ಈ ಮೂಲಕ ತಿಳಿಯಪಡಿಸೋಣಾಗಿಯದೆ.

**ಫಾ. ಸೈಮನ್ ಕ್ಲೆಮೆಂಟ್ ಲೂವಿಸ್**
ಚೇರ್‌ಮೇನ್.,
ಉದಿಯಾವರ ಗ್ರಾಮ ಪಂಚಾಯತು,
**ಉದಿಯಾವರ, 19—3—1963.**

---

**ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ**

**A. S. No. 105/1962**

ರಾಜೀವಿ ಹೆಗ್ಗಡ್ತಿ ಕೂಡ—ಅಪಿಲಾಂಟರು,

ಮತ್ತು

ನೇಮಯ್ಯ ಹೆಗ್ಡೆ ಕೂಡ— ಎದ್ರಿರು.

ಇವರೊಳಗೆ

ಈ ಅಪೀಲಿನ 14ನೇ ಎದ್ರಿಯಾದ ಕಾರ್ಕಳ ತಾಲೂಕು ಕಾರ್ಕಳ ಕಸಬಾ ಗ್ರಾಮದ ಕಾಬೆಟ್ಟು ತುಂಗಮ್ಮ ಹೆಗ್ಗಡ್ತಿಯ ಮಗ ಹಾಲಿ ದಾಸನ ಜಿಲ್ಲೆ ಅಲೂರಿನ ಮುಸ್ಲಿಂ ಹೊಟೇಲಿನಲ್ಲಿರುವ ಮಹಾಬಲ ಹೆಗ್ಗಡೆಗೆ ತಿಳಿಸುವುದೇನಂದ್ರೆ ನಿಮ್ಮ ಮೇಲೆ ಕೂಡ ಆದ ಕಾರ್ಕಳ ಡಿ. ಮು. ಕೋರ್ಟಿನ O. S. No. 459/1961ನೇ ಹಿಸೆ ದಾವೆಯ ತೀರ್ಪಿನ ಮೇಲೆ ಅಪೆಲಾಂಟರು ನಿಮ್ಮ ಮೇಲೆ ಕೂಡ ಮಾಡಿದ ಮೇಲಿನ ಅಪೀಲನ್ನು ತಾರೀಕು 5-6-1963ಕ್ಕೆ ಇಟ್ಟಿರುವುದರಿಂದ ಅದರಲ್ಲಿ ನಿಮಗೇನಾದರೂ ಉಜರು ಹೇಳುವುದಿದ್ದರೆ ನೀವು ಆ ದಿವಸ ಬೆಳಗ್ಗೆ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು, ತಪ್ಪಿದಲ್ಲಿ ಸದ್ರಿ ಅಪೀಲು ನಿಮ್ಮ ಪರೋಕ್ಷದಲ್ಲಿ ತೀರ್ಮಾನಿಸಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

ಬೈಕಾಡಿ ವಾಸುದೇವರಾವ್,
ಅಪೆಲೆಂಟರ ಎಡ್ವೊಕೇಟ್.

ಕಾರ್ಕಳ ತಾ. 30-3 1963.




● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-
**P. Devee & Co.** (N. J.) Calcutta—40

**ಶಾಲೆಗಳಿಗೆ ಬೇಕಾಗುವ**
**ಯಾವತ್ತೂ ಫಾರ್ಮುಗಳೂ**
**ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ**
**ನವಯುಗ ಪ್ರೆಸ್ ಉಡುಪಿ.**

### ಬುದ್ಧಿಗೊಂದು ಪರೀಕ್ಷೆ

# ಇವಳಾರೆಂದು ಗೊತ್ತಾಯಿತೆ?

ಆಕೃತಿ – ನಾಲ್ಕರಿಂದ ಐದೂವರೆ ಅಡಿ ಪರಿಮಾಣವಿರಬಲ್ಲ ಗಾತ್ರ, ಕಟಿ ಪ್ರದೇಶದ ಗಾತ್ರ ಇಪ್ಪತ್ತೆರಡರಿಂದ ಐವತ್ತಾರು ಇಂಚುಗಳ ವರೆಗೂ ಇರಬಹುದು. ಎದೆಯ ಇಬ್ಬದಿಗಳನ್ನೊಳಗಿಟ್ಟು ಕಟ್ಟಿಕೊಳ್ಳಲಿಕ್ಕಿರುವ ಸಾಧನಗಳಿಗೆ ಸೌಕರ್ಯವಾಗುವಂತೆ ಆ ಪ್ರದೇಶವು ಇಳಿದೋ ಒಳಸೇರಿಯೋ ಇದ್ದೀತು. ಸೊಂಟವು ತನ್ನ ಮೇಲೆ ಹೊರುವ ಅಥವಾ ಸುತ್ತುವ ಭರಗಳನ್ನು ಲೀಲಾಜಾಲವಾಗಿ ತಡೆದುಕೊಳ್ಳುವ ತ್ರಾಣವುಳ್ಳದಾಗಿರುತ್ತದೆ. ಮೈಯ ಸ್ವಾಭಾವಿಕ ಬಣ್ಣ ಹೇಗಿದ್ದರೂ ಕಣ್ಣಿಗೆ ಕಾಣಿಸುವಲ್ಲೆಲ್ಲಾ ಬಿಳಿಗೆಂಪಾಗಿಯೇ ಇರುತ್ತೆ. ತಲೆಮುಡಿಯೂ ಕಣ್ಣಿಗೆ ಕಪ್ಪಾಗಿಯೇ ಕಾಣಿಸುತ್ತೆ. ಕೂದಲುಗಳು ಕಲಬೆರಕೆಯಾಗಿರುವುದನ್ನೂ, ಅವುಗಳ ರಾಶಿಯಲ್ಲಿ ಹೂಗಳರಳಿಕೊಂಡಿರುವುದನ್ನೂ, ಆ ಹೂಗಳ ಮಾಲೆ ಅಲಕ್ಷ್ಯವಾಗಿ ಕೆಳಗಿಳಿದು ಕಚಗುಳಿ ಮಾಡುವುದನ್ನೂ ಕುತ್ತಿಗೆ ಸಹಿಸಿಕೊಳ್ಳಲೇ ಬೇಕು. ಸೀರೆಯ ಸೆರಗಿನ ಜಾಂಗು ಕೂಡಾ ಆಗಾಗ ಅಲ್ಪಮಾತ್ರ ತಲೆಯ ಅರ್ಧ ಭಾಗದ ಮೇಲೆ ಏರಿಕೊಂಡು ಜಂಬ ಕಾಣಿಸುತ್ತೆ.

ಮೇಕಪ್ — ನಾಯಿ ತಾಳೆಯ ಹಣ್ಣನ್ನು ಕಚ್ಚಿ ಎಳೆದಂತೆ ಹರಡಿದ ತಲೆಗೂದಲನ್ನು ಇವಳ ಪ್ರಪಂಚ ಪಡೆಯದ ಹೇರಾಯಿಲಿನಿಂದಲೇ ಬಾಚಿರುತ್ತದೆ. ಕೆಲವೇಳೆ ಜಾಗಗಳ ಸಮ್ಮೇಳನದಿಂದ ಎರಡು ಬದಿಗಳಲ್ಲಿ ಜಡೆಗಳು ನೇತಾಡುತ್ತಿರುತ್ತವೆ. ಲಗ ಲಗಾಮಿನಿಂದೊಪ್ಪುವ ಕುದುರೆಯ ಜ್ಞಾಪಕ ನಮಗೆ ಬಂದೀತು. ಅದನ್ನು ಆನಂದದಿಂದ ಸಹಿಸಿಕೊಳ್ಳುತ್ತೇವೆ. ಬ್ಲಾಜು ಮತ್ತು ಸೀರೆಗಳ ಹಿಡಿತಕ್ಕೆ ಸಿಕ್ಕದೆ ಉಳಿದ ದೇಹದಲ್ಲಿಯೂ ಮುಖದಲ್ಲಿಯೂ ವಾಯುರಾಯ ಒಂದೂವರೆ ಫರ್ಲಾಂಗ ದೂರ ಸಾಗಿಸಬಲ್ಲ ಪರಿಮಳ ಪೌಡರ್ ಅಂಟಿರುತ್ತೆ. ನೆತ್ತಿಯಲ್ಲಿ ಕಿವಿಗಳ ಮುಂದಿನ ಕೆನ್ನೆಯಲ್ಲಿ ತಿದ್ದಿಬರೆದ ನಿಶ್ಚಲವಾದ ಅಳಕಸುಳಿಗಳುಂಟು. ಭ್ರೂವನ್ನು ಪೂರ ಬಳಿದು ಕಾಳಿದಾಸೋಕ್ತವಾದ ಕಾಮನ ಬಿಲ್ಲಿನ ಲಕ್ಷಣವನ್ನೊಳಗೊಂಡ ಪೆನ್ಸಿಲ್ ಹುಬ್ಬುಗಳಿರುತ್ತವೆ. ಕಾಡಿಗೆಯ ಕೋಟೆಯೊಳಗೆ ಕಣ್ಣುಗಳು ಕುಳಿತ್ತಿರುತ್ತವೆ. ಅದರ ಮೇಲೆ ಕಣ್ಣಿನ ವಿಕಾರಗಳು ತಿಳಿಯದಿರಲಿಕ್ಕೋ, ಅಥವಾ ತನ್ನ ನೋಟವನ್ನು ಮರೆಯಿಸಿಕೊಳ್ಳಲಿಕ್ಕೋ, ಅಲ್ಲ, ಚಂಚಲ ಸ್ವಭಾವದ ನಯನ ತಾರೆಗಳು ಎಲ್ಲಾದರೂ ಹಾರಿಯೋ ಜಾರಿಯೋ ಹೋಗದಿರಲೆಂತಲೋ ಕೂಲಿಂಗ್ ಗ್ಲಾಸಿನ ಗೂಡು ಕೆಲವರಿಗುಂಟು. ಅವರ ತುಟಿಗಳಲ್ಲಿ ಲಿಪ್‌ಸ್ಟಿಕ್ ಇಟ್ಟು ಅದು ಕೆಂಪಗಾಗಿ ಪ್ರತ್ಯೇಕತೆಯನ್ನು ಪಡೆದು ಮುಖದಲ್ಲಿ ಜೋಡಿಸಿಟ್ಟುಕೊಂಡು ಅಂಟಿಸಿದಂತಿರುತ್ತೆ. ದಪ್ಪತುಟಿಯಾಗಿದ್ದರೂ ಕಿರುತುಟಿಯಾಗಿದ್ದರೂ ಈ ಕೊರತೆಗಳನ್ನು ಆ ರಂಗು ಸರಿಮಾಡಿರುತ್ತೆ. ಅವಳ ಹತ್ತಿರ ಹೋಗಿ ಯಥಾರ್ಥವನ್ನು ನೋಡಬಿಡದಹಾಗೆ ಆ ಕೆಂಪುರಂಗು ಜನರನ್ನು ತಡೆದು ದೂರ ನಿಲ್ಲಿಸುತ್ತದೆ. ಗಲ್ಲದಲ್ಲೊಂದು ಕರಿಯಚುಕ್ಕೆ; ಅದು ನೈಸರ್ಗಿಕವಲ್ಲ, 'ಬ್ಯೂಟೀ ಸ್ಪಾಟ್'! ಕೊರಳಲ್ಲಿ ಆಭರಣಗಳಿದ್ದರೂ ಇಲ್ಲದಿದ್ದರೂ ಆಗಬಹುದು. ಏರಿಯಲ್ ವ್ಯೂವಿಂದ ನೋಡಿದರೆ ಎದೆಯ ನಟ್ಟ ನಡುವೇ ಬ್ಲಾಜಿನೆಡೆಯಿಂದ ತ್ರಿಕೋಣಾಕೃತಿಯ ಕಿಸೆದಾರಿಯೊಂದು ಇದ್ದೀತು. ಚೂಚಾಕ ಸೂಚಕವಾಗುವಂತೆ ಕಟ್ಟಿ ಎತ್ತರಿಸಿಟ್ಟ ವಕ್ಷಪ್ರದೇಶ. ಸೀರೆಯನ್ನು ಆದಷ್ಟು ಒತ್ತೊತ್ತಿ ಕಟ್ಟಿಕೊಂಡಿರುತ್ತಾಳೆ. ಇಲ್ಲದಿದ್ದರೆ ಕಟೀತಟವು ಘನತೆಯನ್ನು ಮೀರಿಸಿಕೊಂಡು ಮುಂದೆಬಾರದು ಸುಳಿಬೀಳದಂತೆ ನಿಲ್ಲಿಸಿಟ್ಟ ಹೊಟ್ಟೆ ಎತ್ತರಿಸಿದ್ದೋ ಅಗಲಿಸಿದ್ದೋ ಆದ ಪೀರಯುಗ್ಮ. ರಂಭೋರುಗಳ ನಡುವಿನಲ್ಲಿಯೇ ಸೇರಿನಿಲ್ಲುವಂತಹ ಸೀರೆಯ ನಿರಿಗೆಗಳು. ಕಾಲಿನ ನಖಗಳನ್ನು ಕ್ಯೂಟಿಕ್ಸಿನಿಂದ ಕೆಂಪಾಗಿಸಿ ಕೊಂಡಿರುತ್ತಾಳೆ. ಪಾದಯುಗ್ಮಗಳು ಬಿಳೀ ಹುಡಿಯ ತಿಕ್ಕಾಟದಿಂದ ಬೆಳ್ಳಗಿರುತ್ತವೆ. ಸೀರೆಯ ಬಣ್ಣಕ್ಕೆ ತಕ್ಕುದಾಗ ಹೊಳೆಯುವ ರೇಖೆಗಳ ಹೈಹೀಲ್ ಶೂ. ಮೊಣಕೈಗಳನ್ನು ಮರೆಸುವಂತಹ ಬ್ಲಾಜಿನ ಒಂದು ಕೈ, ಅಥವಾ ಎರಡು ಕೈಗಳಿಗೂ ತಂಡಬಳೆಗಳಿರುತ್ತವೆ. ಸಮಯ ನೋಡಲು ಗೊತ್ತಿಲ್ಲದಿದ್ದರೂ ಪರವಾಯಿಲ್ಲ, ಕಡೇ ಪಕ್ಷ ಸೇಲ್ಸ್ ಟ್ಯಾಕ್ಸ್ ಸಹ ತಿಂಗಳ ಬೆಲೆಯ ಲೇಡಿಸ್ ರಿಸ್ಟ್ ವಾಚ್. ಎಡಗೈಯ ನಖಗಳನ್ನು ಶೃಂಗಾರಶಾಸ್ತ್ರಾನುಸಾರವಾಗಿ ಕತ್ತರಿಸಿ ಕೋಣಾಕೃತಿಗೊಳಿಸಿರುತ್ತವೆ. ಬಲಗೈನಖಗಳನ್ನು ಪೂರಾಬೋಳಿಸಿ ಮೇಲೆ ಕ್ಯೂಟೆಕ್ಸ್ ಬಳಿದಿರುತ್ತೆ. ಕೈಯಲ್ಲಿ ಬ್ಲಾಜಿನ ಬಣ್ಣಕ್ಕೆ ಒಪ್ಪುವಂತಹ ಹ್ಯಾಂಡ್ ಬ್ಯಾಗ್ ಅದರಲ್ಲಿ ಪುಟ್ಟಂದದ ಕನ್ನಡಿ, ಪೌಡರ್ ಡಬ್ಬಿ, ಲಿಪ್‌ಸ್ಟಿಕ್, ಹೇರ್ ಪಿನ್, ಸೇಫ್ಟಿ ಪಿನ್, ಬ್ಲಾಟಿಂಗ್, ಕರ್ಚೀಫ್, ಕಿರುಬಾಚಣಿಗೆ ಇತ್ಯಾದಿಗಳಿರುತ್ತವೆ ಕೆಲವರಲ್ಲಿ ಪ್ಯಾರೀಸ್ ಟಾಫೀ, ಛ್ಯೂವಿಂಗ್ ಗಮ್ಸ್, ಜಿಂಟಾನ್‌ಗಳೂ ಇದ್ದಾವು. ಈ ಸಿಥಗಳಲ್ಲಿ ಹೆಚ್ಚೋ ಕಡಮೆಯೋ ಕಂಡರೆ ಆ ಕಾಕೆಯ (ಕಾಗೆಯಲ್ಲ-ಅವರಾಯ ವರವರ ಎಂಬಂತೆ ಆಕೆ ಆಕೆಯ ಎಂದರ್ಥ) ಮನೋ ಧರ್ಮ ಅಥವಾ ಅಭಿರುಚಿ. ಏನಾದರೂ ಹೋದರೂ ಮನಸ್ಸೊಂದು ಅವಳಲ್ಲಿ ಅಡಗಿಕೊಂಡೇ ಇರುತ್ತದೆ.

ಪ್ರಕೃತಿ ವಿಶೇಷ—ಕಂಡರೆ ಮುಖದಲ್ಲಿ ತೇಲಾಡುವ ಶೃಂಗಾರ ಗಾಂಭೀರ್ಯ. 'ಲೋಲಾಕ್ಷಿ' ಎಂಬುದರ ಅರ್ಥವು ಎಂಥ ಬೆಪ್ಪನಿಗೂ ಸ್ಫುರಿಸುವಂತಹ ನೋಟ. ಇದು ಸುತ್ತಲಿರುವ ಜಡವಸ್ತುಗಳನ್ನೋ, ಜನರನ್ನೋ ನೋಡುವ ನೋಟವಾದರೂ ಆಗ ಬಹುದ. ಹಾಲಿಗೆ ಕೂಡಾ ನಾಚಿಗೆ ಬರುವಂತಹ ಮೃದುನಗು ಮಾಡುವ ಕೆಂದುಟಿಗಳಿಗೆ ಆಗಾಗ ಎಡಕ್ಕೊಮ್ಮೆ ಬಲಕ್ಕೊಮ್ಮೆ ಧುಮುಕಿಕೊಳ್ಳುವ ಚೇಷ್ಟೆಯುಂಟು. ಅಡಿಗಡಿಗೊಂದು ಅಲಕ್ಷ್ಯಭಾವ; ಕಂಡೂ ಕಾಣದ ಕಣ್ಣದೊಂದು ಭೀರುತೆ.

ಪ್ರತ್ಯೇಕಲಕ್ಷಣ!—ಇತರರ ಮನದಲ್ಲಿ ಅವ್ಯಕ್ತವಾದ ಕೋರಿಕೆಗಳನ್ನೆಬ್ಬಿಸುವಂತಹ ದೃಷ್ಟಿವೀಕ್ಷಣ, ಕೂಲಿಂಗ್ ಗ್ಲಾಸನ್ನು ಆಗಾಗ ಕಳಚಿಕೊಂಡು ಅದರ ಹಿಡಿಕೆ ಹಿಡಿದುಕೊಂಡು ಲೀಲೆಯಿಂದ ತಿರುಗಿಸುತ್ತಾಳೆ. ಆಗ ಇತರರ ಹೃದಯದೊಳಗೂ ಏನೋ ತಿರುಗಿದ ಹಾಗಾಗುತ್ತದೆ. ಅದನ್ನು ಇನ್ನಷ್ಟು ಚುರುಕುಮಾಡುವಂತೆ, ಕಣ್ಣೇ ಪುಳಕ್ಕನೆದ್ದು ಹಾರಿಬರುವುದೋ ಎಂಬಂತಿರುವ ಬಾಣನೋಟಗಳು. ಆಗಾಗ ಸಮುದ್ರದ ಮೇಲೆ ಸಂಧ್ಯಾಕಿರಣಕಾಂತಿ ನರ್ತಿಸುವಂತೆ, ಮಿರುಗುವ ಸೀರೆಯನ್ನು ಹದವಾಗಿ ಚಲಿಸುತ್ತಾಳೆ. ದೇಹದೊಂದಿಗೆ ಅಂಟಿಸಿದಂತಹ ಬ್ಲಾಜು ಪ್ರತ್ಯೇಕಾಕರ್ಷಣೆ. ಏರಿಸಿ ಬರೆದ ಪೆನ್ಸಿಲ್ ಭ್ರೂಗಳು ಹುಬ್ಬೇರಿಸುವಾಗ ಬೋಳಿಸಿದ ಹುಬ್ಬುಗಳೊಡನೆ ಚೆಲ್ಲಾಟವಾಡುತ್ತವೆ. ಪಕ್ಕದಲ್ಲಿ ನಾಯಿಮರಿಗಳನ್ನಿಟ್ಟುಕೊಂಡು ನಯವಾಗಿ ತಡವುತ್ತಾಳೆ. ಅದೂ ಅವಳ ಗಲ್ಲವನ್ನು ನೆಕ್ಕೀತು.

ವಾಹನ— ಮಾರ್ಕೆಟ್ಟಿಗೆ ಬಂದಿರುವ ಎಲ್ಲಕ್ಕಿಂತ ದೊಡ್ಡ ಹೊಳಪಿನ ಕಾರು. ಕುಷಾನ್ ಸೀಟಿನಲ್ಲಿ ಕುಳಿತಿದ್ದರೂ ಕೈ ಕಾಲು ತಲೆ ಸೊಂಟಗಳಿಗೆ ಪ್ರತ್ಯೇಕ ವೆಲ್ವೆಟ್ ದಿಂಬುಗಳು. ಮಿಲಿಟ್ರೀ ಡ್ರೈವರಿಗೂ ಸಾಧ್ಯವಾಗದಷ್ಟು ಸ್ಪೀಡುಗಾರನಾದ ಡ್ರೈವರ್ರಾಯನಿರುತ್ತಾನೆ. ಆ ಕಾರಿಗೆ ಭೂ ವಿಮಾನದೊಂದು ನೂತನ ಒಯ್ಯಾರ. ಗಂಡ-ಡ್ರೈವರ್ ಒಬ್ಬನೇ, ಅಥವಾ ಬೇರೆ ಬೇರೆಯೂ ಇರುವುದುಂಟು. ಪಕ್ಕದ ಸೀಟಿನಲ್ಲಿ ಗಂಡನೋ ತಂದೆಯೋ ಸಹೋದರನೋ ಇದ್ದಾರು; ಇಲ್ಲದೆಯೂ ಹೋದಾರು.

ಕಂಪೆನಿ— ಪ್ರೊಡ್ಯೂಸರ್, ಡೈರೆಕ್ಟರ್, ಧನ ಪ್ರಭುಗಳು, ಸಹೋದ್ಯೋಗಿಗಳು—ಮೊದಲಾದವರು ಮಾತ್ರ. ಮನೆಯಲ್ಲಿ ಕುಟುಂಬದ ಬಾಗಿಲಲ್ಲಿ ಘೂರ್ಕಾ.

ಕಾಣುವ ಸ್ಥಳ— ಸ್ಟುಡಿಯೋ, ಮುತ್ತು ರತ್ನ ವ್ಯಾಪಾರ ಸ್ಥಳ, ಕುದುರೆ ಪಂದ್ಯ, ಸಿನೀಮಾ ನಟರ ಮದುವೆ ಮನೆ ಒಂದನೇ ಕ್ಲಾಸು ಹೋಟೆಲು—ಮೊದಲಾದಲ್ಲಿ.

ಸಂಸಾರ ವಿಷಯ:—ಇದು ಹಚ್ಚಾಗಿ, ಹೇಳುವವರಿಗೂ ಕೇಳುವವರಿಗೂ ಅರ್ಥವಾಗದ ವಿಷಯ. ಆದರೂ ವಸ್ತ್ರಭೂಷಣಗಳು, ಆಭರಣಗಳು, ಪಂದ್ಯಾಟಗಳು ಮತ್ತು ಇವುಗಳಿಗೆ ಸಂಬಂಧಪಟ್ಟ ಸಾಧನಗಳೆಲ್ಲಾ ಇರುತ್ತವೆ.

ಹಾಬೀ—ಇದರಲ್ಲಿ ಎರಡು ವಿಧ. ಹೇಳುವಂಥಾದ್ದೊಂದು ಹೇಳಬಾರದಂಥಾದ್ದಿನ್ನೊಂದು. ವೀಣಾವಾದನ, ಪುಸ್ತಕ ವಾಚನ, ಗಾರ್ಡನಿಂಗ್ ಹೊಲಿಗೆ, ಪತಿಸೇವೆ, ಧರ್ಮ ಬುದ್ಧಿ ಇತ್ಯಾದಿ ಹೇಳುವಂಥಾ ವಿಷಯ. ಸಿದ್ರೆ, ತೀಸಿ, ಪಾಸ್, ಪರ್ಮಿಟ್ ಇದ್ದರೆ ಕುಡಿತ, ಹರಟೆ, ಗಂಡನ ಸೇವಾನುಕರಣೆ ನವ ರಸ, ಚಿನ್ನದ ಗಟ್ಟಿಗಳನ್ನು ಸಂಗ್ರಹಿಸುವುದು ಮೊದಲಾದ್ದು ಹೇಳಬಾರದಂಥವು.

ಜಗತ್ತು – ಅವಳನ್ನು ಪ್ರತ್ಯಕ್ಷ ಕಾಣಲು ಸಾರ್ವಜನಿಕ ತುಡಿಸುತ್ತಾ ಇದೆ. ಕಂಡವರೆಲ್ಲೋ ಒಪ್ಪಿಬಿಟ್ಟರೇ. ಉಳಿದವರಿಗೆ ಅವಳು ದೇವರಂತೆ ಹೃದಯ ಸಂಬಂಧದ ಮೂರ್ತಿ. ಆರಾಧ್ಯ ಇಷ್ಟ ದೈವ. ಛಾಯಾ ಚಿತ್ರ. ಚಲನ ಚಿತ್ರಗಳಿಂದಲೇ ಜಗತ್ಪರಿಚಿತಳು. ಪತ್ರಿಕೆಗಳೆಲ್ಲಾ ಅವಳನ್ನು ಮುಖದಲ್ಲಿಯೂ, ನಡುವಿನಲ್ಲಿಯೂ ಬುಡಕಾತಿ ಎಡೆಯೆಡೆಗಳಲ್ಲಿಯೂ 'ಚಿತ್ರವಧೆ' ಮಾಡುತ್ತಾ 'ಸಚಿತ್ರಗಳೆಂಬ ಕೀರ್ತಿಗೆಭಾಜನವಾಗುತ್ತವೆ.

ಇವಳಾರೆಂದು ನಿಮಗಿನ್ನೂ ತಿಳಿದಿಲ್ಲವೆ? ಹಾಗಿದ್ದರೆ ನೀವು ಈ ಜಗತ್ತಿನಲ್ಲಿದ್ದೂ ಇಲ್ಲದಂಥ ಕೂಪಮಂಡೂಕರೇ ಸರಿ!

—ಶ್ರೀ ಎಂ. ರಂಗ ರಾವ್




## ಅಂತಿಮ ನಿಧಿಯ ಸಮರ್ಪಣೆ

(೩ನೇ ಪುಟದಿಂದ)

ಯ ಮೇರೆಗೆ ಓರ್ವ ರಜತ ಪರದೆಯ ನಟಿಯಂತೆ ಗ್ರಹಿಣಿ ಪದಕದ ತಿಲಕವನ್ನು ಹಣೆಯಿಂದ ಕಿತ್ತೊಗೆದು ಸಮಾಜದ ಮುಂದಿಟ್ಟೆ.

“ಈ ಮೊದಲು ನಾನೆಂದೂ ನನ್ನ ಕರ್ತವ್ಯದಿಂದ ತಪ್ಪಿ ಬಿದ್ದವನಲ್ಲ ಈಗಲೂ ತಪ್ಪಿ ಬೀಳುವವನಲ್ಲ. ಪತಿ ಸತ್ತ ಮೇಲೆ ಪತ್ನಿಯಿಂದ ಸರ್ವ ಅಧಿಕಾರವನ್ನೂ ಕಿತ್ತು, ಅವಳನ್ನು ಅಸಹಾಯಕಳನ್ನಾಗಿ ಮಾಡುವ ಅಂತಹ ನಿರ್ಧಯ ಸಮಾಜದ ಅತಿ ಕ್ರೂರ ವೈರಿಯು ನಾನು ನಿನ್ನ ತಿಲಕವಿಲ್ಲದ ನೊಸಲಿಗೆ ಸಿಂಧೂರ ಹಚ್ಚಿದ್ದೇ ನನ್ನ ಅಸಹಾಯಕತನವಾಗಿತ್ತು! ಆ ಮಹತ್ವಪೂರ್ಣ ರಾತ್ರಿಯಲ್ಲಿ ಭಗವಂತನೆದುರಲ್ಲಿ ಆಣೆ ಇಟ್ಟೆನು. ನಿನ್ನನ್ನು ಪತ್ನೀ ರೂಪದಲ್ಲಿ ಸ್ವೀಕರಿಸಿದೆನು.

“ನಾನು ಸಮಾಜವನ್ನೆದುರಿಸಿ ಬಾಳಬೇಕೆಂದಿದ್ದೆ. ಸಮಾಜದ ಸರ್ವ ಪತಿತೆಯರ ಉದ್ಧಾರವಾಗಲು ಬೇಕಾದಂತಹ ಶಕ್ತಿಯನ್ನು ನನ್ನಲ್ಲಿ ಅಡಗಿಸಿಕೊಳ್ಳಬೇಕೆಂದು ಬಯಸಿದ್ದೆ. ಆ ಸಮಯ ನಿನ್ನ ಕೈಯಲ್ಲಿ ಕೈಯಿಟ್ಟು ಸ್ವಪ್ನ ನೋಡುತಿದ್ದೆ ಸಂಧ್ಯಾ-ಸಮಾಜವು ನನ್ನೀ ಘೋಷಣೆಯ ಬಗ್ಗೆ ಅನುಮತಿಯ ಹಸ್ತಾಕ್ಷರವನ್ನೆಳೆದಿದೆ ಅದರ ಫಲ-ಸ್ವರೂಪವೆಂಬಂತೆ ಸಾವಿರಾರು ಅಸಹಾಯ ನಾರೀ ಕುಲಮಣಿಗಳು ಒಂದು ಹೊಸ ಜೀವನದ ಮಧುರ ಉಲ್ಲಾಸಮಯ ಜಗತ್ತಿನಲ್ಲಿ ಪ್ರವೇಶಿಸುತ್ತಿದ್ದಾರೆ. ಆಗ ನೀನು.........

“ಆ ನಾರೀ ಕುಲಮಣಿಗಳಿಗೆಲ್ಲಾ ಆದರ್ಶಳಾಗುತಿದ್ದಿ; ಪವಿತ್ರಳಾಗುತಿದ್ದಿ ತಾಯಿ ಯಾಗುತಿದ್ದಿ!

“ಇಂದೆನಗೆ ಗೋಚರಿಸುತ್ತಿದೆ—ನಿನ್ನ ಆ ಪ್ರೇಮವೆಲ್ಲಾ ಬರೇ ಕಪಟ ಹಾಗೂ ನಾಟಕಮಯವಾದದ್ದೆಂದು. ಧರ್ಮಿಣಿಯ ಸಂಕೇತದ ನೊಸಲ ತಿಲಕದ ಬೆಲೆಯು ಮಣ್ಣಿಗಿಂತಲೂ ಕಡೆಯಾದದ್ದು. ನೀನೆನ್ನನ್ನು ಕಡೆಗಣಿಸಿದಕ್ಕೆ ನನಗೇನೂ ದುಃಖವಿಲ್ಲ ಆದರೆ ದುಃಖ ಮಾತ್ರ, ನಾರೀ ಕುಲಕ್ಕೆ ಕಳಂಕವನ್ನು ಹಚ್ಚಿದ ನಿನ್ನ ದುಶ್ಕೃತ್ಯದ ಬಗ್ಗೆ ಆ ಸಾವಿರಾರು ಅಬೋಧ ತಾಯಂದಿರ ಅಕ್ಕ ತಂಗಿಯರ ಉದ್ಧಾರದ ಮಹಾ ದ್ವಾರವನ್ನು ನಿನ್ನೀ ಕೈಯಿಂದಲೇ ಮುಚ್ಚಿದಿ. ಅಪರ ಆ ಸಮಾಜ ಸಂಕೋಲೆಯಿಂದ ಪರಿತಪಿಸುತ್ತಿರುವ ಆತ್ಮಗಳು ನಿನಗೆಂದೂ ಸುಖದಲ್ಲಿರಲು ಬಿಡಲಾರವು ಸಂಧ್ಯಾ! ನಿನ್ನಾ ಬಣ್ಣದ ಜೀವನ, ಸೌಂದರ್ಯದ ರಂಗ ಭೂಮಿ, ನಿನ್ನಾ ಶೃಂಗಾರ ಇವೆಲ್ಲವೂ ಒಂದು ದಿನ ಎಂದೆಂದಿಗಾಗಿಯೂ ನಿರ್ಮೂಲನ ಹೊಂದುವವು. ನಿನ್ನಂತ್ಯ ಸಮಯದಲ್ಲಿ ಇವುಗಳೆಲ್ಲವೂ ಮರಣದ ಒಂದೊಂದು ಗಂಟಾಗಿ ಬಳೆಯಂತೆ ನಿನ್ನ ಜೀವನವನ್ನು ಕಬಳಿಸಿಕೊಳ್ಳುವವು.

“ಒಪ್ಪುವೆನು, ಜೀವನ ಒಂದು ನಾಟಕವೆಂದು. ಅದೂ ಸಂಪೂರ್ಣ ನಾಟಕ ಒಬ್ಬ ನಾಯಕ ಹಾಗೂ ಒಬ್ಬ ನಾಯಿಕೆ ಇರುವ ನಾಟಕ. ಆದರೆ ನೀನದನ್ನು ಅನೆಷ್ಟು ಭಾಗದಲ್ಲಿ ಹಂಚಿರುವಿ!”

“ಜೀವನ ರಂಗದ ಮೇಲೆ ನನ್ನ ಪಾತ್ರವಿಂದು... ಮುಗಿದುಹೋಗಿದೆ. ನಾಟಕ ಆಡಿ ಆಗಿದೆ. ನಾನೀಗ ನಿನ್ನ ಆ ಮೊದಲಿನ ಪ್ರೇಮಿ ನಾಯಕನಲ್ಲ. ಪೂರ್ತದ ಓರ್ವ ಭಿಕಾರಿಯು.

“ಹೃದಯವೆನ್ನ ತುಂಡಾಗಿತ್ತು. ಅದರಿಂದ ಸಮಾಜವನ್ನು ಎದುರಿಸುವ ಶಕ್ತಿಯೂ ಇದ್ದಿಲ್ಲ. ನಾನೀ ನಿರರ್ಥಕ ಜೀವನವನ್ನು ಯಾವುದಾದರೊಂದು ಏಕಾಂತದಲ್ಲಿ ವಿಲೀನಗೊಳಿಸಲು ಹವಣಿಸುತಿದ್ದೆ. ನಾನು ಜೀವನದಲ್ಲಿ ನಿನ್ನಲ್ಲಿ ಮಾತ್ರ ಪ್ರೇಮ ಮಾಡಿದ್ದೆ ಸಂಧ್ಯಾ! ಅದೂ, ಓರ್ವ ಮಿತ್ರನಂತೆ; ಓರ್ವ ಸಹೋದರನಂತೆ; ಓರ್ವ ಪತಿಯಂತೆ. ನೀನಲ್ಲದೆ ಜಗತ್ತಿನಲ್ಲಿ ನನಗೇನೂ ಇದ್ದಿಲ್ಲ. ಎನ್ನ ಹೃದಯ ಶಿಲೆಯಂತೆ ಗಡುತರವಾದದ್ದು. ಅದರ ಮೇಲೆ ಆವೊಂದು ವಸ್ತುವೂ ಸುಲಭದಲ್ಲಿ ಅಂಕಿತವಾಗಲೊಲ್ಲದು. ಒಂದು ಸಾರಿ ಆದರೆ ಮತ್ತೆಂದೂ ಮಾಸಲಾರದು. ಆಗಾಗ ಈ ಗೋಡೆಗಳೊಡನೆ ಎನ್ನ ಹೃದಯದ ಆಂದೋಳನವನ್ನು ಬಿಚ್ಚಿಹೇಳುತಿದ್ದೇನೆ. ಒಂದೊಮ್ಮೆ ನಾನು ಸಹ ನಿನ್ನಂತೆ ಒಬ್ಬ ನಟನಾಗಿದ್ದಿದ್ದರೆ...! ನಾ ನಿನ್ನಲ್ಲಿ ಪಡೆಯ ಬಯಸಿದ್ದು ನಿನ್ನ ಶರೀರವಷ್ಟಲ್ಲ ಬದಲು ಒಂದು ಪವಿತ್ರ ಕಾರ್ಯಕ್ಕಾಗಿ ನಿನ್ನ ಶುದ್ಧ ಪ್ರೇಮ ಹಾಗೂ ನಿನ್ನ ಪ್ರೇರಣೆಯನ್ನು. ಅದು ನನ್ನಲ್ಲಿ ಹೊಸ ಸ್ಫೂರ್ತಿಯನ್ನು ತುಂಬುವುದೆಂದು ನಂಬಿದ್ದೆ ನಾ ಅದೆಷ್ಟೋ ಸ್ಥಳಗಳನ್ನೆಲ್ಲಾ ಸುತ್ತಾಡಿದೆ ಸಂಧ್ಯಾ ಆದರೆ ನಿನ್ನ ನೆನಪು ಮಾತ್ರ ನನ್ನನ್ನು ಎಲ್ಲಿಯೂ ಶಾಂತಿಯಿಂದಿರಲು ಬಿಡಲಿಲ್ಲ.”

“ಕೆಲವು ದಿನಗಳ ಅನಂತರ ಒಂದು ಸಾರಿ, ನಿನ್ನನ್ನು ನೋಡಬೇಕೆಂಬಾಸೆಯಿಂದ ನಿನ್ನಲ್ಲಿಗೆ ಬಂದೆ. ಆದರೆ ನೀನೆಷ್ಟು ಪರಿವರ್ತಿಸಿದ್ದಿ! ನಿನ್ನ ಪರಿವರ್ತನೆಯಿಂದ ನನಗೆ ಪರಿಚಯವೇ ಹತ್ತಲಿಲ್ಲ. ನಾನೀ ನನ್ನ ಕಣ್ಣಿಂದಲೇ, ನೀನು ಬೇರೆಯವರೊಡನೆ ಪ್ರೇಮಚೇಷ್ಟೆ ಮಾಡುವುದನ್ನು, ಮದ್ಯ ಕುಡಿಯುವದನ್ನು, ಕಾರಿನಲ್ಲಿ ತಿರುಗುವುದನ್ನು, ನೋಡಿದೆನು. ನನ್ನಂತಹ ಅದೆಷ್ಟು ಮುದ್ದು ಹಕ್ಕಿಗಳನ್ನು ನಿನ್ನಾ ಮಾಯಾ ಜಾಲದಲ್ಲಿ ಸಿಲುಕಿಸಿ ಅವರ ಜೀವನವನ್ನು ನಾಶಮಾಡಿರುವೆಯೋ ಆ ಭಗವಂತನೇ ಬಲ್ಲ...ಏನೇನಾಸೆ ಅವರಲ್ಲಿದ್ದಿರಬಹುದು ...ಏನೇನು ಮಹಾ ಕಾರ್ಯ ಮಾಡುವವರಾಗಿರಬಹುದು ಅವರು. ಯಾರಿಗೆ ಗೊತ್ತು, ಅವರಲ್ಲಿಯೇ ಮುಂದೆ ಒಬ್ಬ ಬುದ್ಧನಾಗಬಹುದು, ಗಾಂಧಿಯಾಗಬಹುದು,...ಸುಭಾಸನಾಗಬಹುದು ...ನೀನು ನಿನ್ನದ್ದೇ ಮಾತೃಭೂಮಿಗೆ ಕಪಟ ಮಾಡಿರುವಿ...ದೇಶದ ಸಂಗಡ ವಿಶ್ವಾಸ ಘಾತಕತನವನ್ನೆಸಗಿರುವಿ.......ಭಾರತದ ಭಾವೀ ಸಂತಾನವನ್ನು ನಿನ್ನಾ ಕಠೋರ ಕೈಯಿಂದ ಹಿಸುಕಿಹಾಕಿರುವಿ. ನೀ ನಾರಿಯಲ್ಲ, ಪಿಶಾಚಿನಿಯಾಗಿರುವಿ!”

“ಆ ದಿನದಿಂದೀಚೆಗೆ ನಿನ್ನಮೇಲೆ ನಗೆ ತಿರಸ್ಕಾರ ಹುಟ್ಟಿದೆ. ಬರೀ ನಿನ್ನೊಬ್ಬಳ ಬಗ್ಗೆ ಅಲ್ಲ – ಸಂಪೂರ್ಣ ನಾರೀ ಜಾತಿಯ ಬಗ್ಗೆ. ಅಂದಿನಿಂದ ನಾನು ಇನ್ನೊಂದು ಹೆಂಗಸಿನ ಮೇಲೂ ಭರವಸೆ ಇಡಲು ಅಸಮರ್ಥನು. ಈ ಔಷಧಾಲಯದ ಬಿಳಿ ವಸ್ತ್ರದಿಂದ ಮುಚ್ಚಲ್ಪಟ್ಟ ಆ ಪಿಶಾಚಿನಿಯರ ಮೇಲೂ ನನಗೆ ತಿರಸ್ಕಾರ ಉಂಟಾಗಿದೆ. ಅವರ ಪ್ರತಿಯೊಬ್ಬರ ಮುಖದ ಮೇಲೂ ನಿನ್ನದ್ದೇ ಪ್ರತಿಬಿಂಬ ಒಡೆದು ತೋರುತ್ತದೆ. ನೀನೆನ್ನ ಹೃದಯದಲ್ಲಿ ನೆಟ್ಟ ಆ ಘೋರ ಅಸಂತೋಷದ ಮುಳ್ಳಿಂದು ಸ್ವತಃ ನನ್ನ ಅಕ್ಕ-ತಂಗಿ, ತಾಯಿಯ ಮೇಲೂ ಭರವಸೆ ಇಡಲು ಬಿಡಲೊಲ್ಲದು

“ಎನ್ನ ಹೃದಯದಲ್ಲಿ ನೆಟ್ಟ ವಿಷದ ಮುಳ್ಳು ಮೆಲ್ಲ—ಮೆಲ್ಲನೆ ಒಳಗೊಳಗೇ ಸೇರುತ್ತಿದೆ. ಜೀವನದ ಕೊನೆಯ ಘಟ್ಟದಲ್ಲಿಯೂ ನನಗೆ ಶಾಂತಿಯನ್ನು ಪಡೆಯಲಾಗಲಿಲ್ಲ. ಎನ್ನ ಹೃದಯ ಉರಿಯುತ್ತಿದೆ. ಅದರದರಲ್ಲಿ ನೆಣೆ ಮಾತ್ರ ಇಲ್ಲ. ಯಾರಿಗಾದರೂ ಮಾರ್ಗದರ್ಶನ ಮಾಡುವೆನೆಂದರೆ ಅದೂ ಅಸಾಧ್ಯ ಇಂತಹ ಸ್ಥಿತಿಯಲ್ಲಿಂದು ಮಾರ್ಗದರ್ಶನ ಮಾಡುವುದಾದರೂ ಸಾಧ್ಯವೆ ಸಂಧ್ಯಾ?

“ತಿರಸ್ಕಾರದ ಸಾಮ್ರಾಜ್ಯದಲ್ಲಿ ವಾಸಿಸಿ, ಈಗ ನಾನು ನನ್ನನ್ನೇ ತಿರಸ್ಕರಿಸಲಾರಂಭಿಸಿರುವೆನು.

“ಇಲ್ಲಿದ್ದೂ ನಾ ನಿನ್ನನ್ನು ಮರೆಯಲಾರೆನು. ವ್ಯಕ್ತಿಯ ಭವನವು ಹತ್ತಿರದಲ್ಲಿಯೇ ಗೋಚರಿಸುತ್ತದೆ. ನಾನೀಗ ನಿನ್ನನ್ನು ತಿರಸ್ಕರಿಸುವುದನ್ನೂ ನಿಲ್ಲಿಸಿರುವೆನು. ಹಾಗೆಂದು ನಿನ್ನ ಮೇಲೆ ಪ್ರೇಮವೂ ಇಲ್ಲ. ಎನ್ನ ಹೃದಯದಲ್ಲೀಗ ವಿಕಾರವೂ ಇಲ್ಲ. ನಿನ್ನೊಡನೆ ಕಳೆದ ನನ್ನ ಜೀವನದ ಆ ಎರಡು ಕ್ಷಣದ ಮಧ್ಯದಲ್ಲಿ ನಿನಗೇನನ್ನೂ ನಾ ಕೊಡಲಾರನಾದೆ ಸಂಧ್ಯಾ! ನನಗೇನು ಗೊತ್ತಿದ್ದಿತು—ನೀನಿಷ್ಟು ಬೇಗನೇ ಶೂನ್ಯ ಸಂಪತ್ತಿನ ನನ್ನೊಡನೆ ಆ ಆತುರ ಪ್ರೇಮವನ್ನು ಚದುರಿಸಿ ಸಮಾಜದ ಕಣ್ಣೆದುರಲ್ಲಿ ಇನ್ನೊಂದು ರೂಪ ಧರಿಸುವಿ ಎಂದು?

“ನಾನಿಂದು ನನ್ನ ನಿಜ ಸಂಪತ್ತನ್ನು ನಿನಗೆ ಕೊಡುತ್ತಿರುವೆನು—ನಾ ಬಡವನಾಗಿರುವೆ ಸಂಧ್ಯಾ ...ಒಂದು ಮಹಾ ಘೋರ ತಪ್ಪು ನನ್ನಿಂದಾಯಿತು. ಬಹುಶಃ ಬಡವರಿಗೆ ಇನ್ನೊಬ್ಬರೊಡನೆ ಪ್ರೇಮ ಮಾಡುವಂತಹ ಆವ ಅಧಿಕಾರವೂ ಇಲ್ಲ. ಅಂತವರಿಗೆ ತಮ್ಮ—ತಮ್ಮ ಹೃದಯವನ್ನು ಒಪರೇಷನ್ ಮಾಡಿಸಿಕೊಳ್ಳಬೇಕಾಗಿತ್ತು.

“ಈ ಪತ್ರ ನಿನಗೆ ತಲುಪುವದೋ ಯೂ ಇಲ್ಲವೋ ಎಂದು ನಾನು ಹೇಳಲಾರೆ ಆದರೂ ಒಂದಾಸೆ ಇದೆ, ನನ್ನಂತ್ಯದ ಸುದ್ದಿಯನ್ನಾದರೂ ಕೇಳಿ ನೀನು ನಿಶ್ಚಯವಾಗಿಯೂ ಇಲ್ಲಿಗೆ ಬಂದೇ ಬರುವಿ. ತನ್ನ ಜೀವನಕ್ಕಾಗಿ...ತನ್ನ ಭೂತಪೂರ್ವ ಸಹನಾಯಕನಿಗಾಗಿ; ಎಂದೋ ಈ ಮೊದಲು ಬರೀ ಎರಡು ಕ್ಷಣಕ್ಕಾಗಿ ನಿನ್ನ ಜೀವನದಲ್ಲಿ ರಶ್ಮಿಯಂತೆ ಬೆಳಗಿರುವವನಿಗಾಗಿ ನೀ ಬಂದೇ ಬರುವಿ ಎಂದು ನಂಬಿಗೆ ಇದೆ.

“ರಕ್ತ ಪ್ರಸರಣದಲ್ಲಿ ರಕ್ತವು ಹೆಚ್ಚಾಗಿಯೇ ಹೊರ ಬರುತ್ತಿದೆ. ಆದರೂ ನನಗೀಗ ಭಾಸವಾಗುತ್ತಿದೆ—ನಾನೀಗ ಸರಿಯಾಗಿ ಆರೋಗ್ಯನಾಗಿರುವೆನೆಂದು. ಅದು ಬಿರುಗಾಳಿ ಏಳುವ ಮೊದಲಿನ ಸನ್ನಾಟವಿದ್ದರೂ ಇರಬಹುದು

“ಸಂಧ್ಯಾ. ಸಾಯುವ ಮೊದಲು ನಿನ್ನಲ್ಲೊಂದು ಭಿಕ್ಷೆ ಬೇಡುವೆನು—ಇನ್ನು ಮುಂದೆ ನನ್ನಂತೆ ಇನ್ನಾರ ಜೀವನವನ್ನೂ ನಾಶಮಾಡಬೇಡ. ಅವರಿಗೆ ಬದುಕಲು ಬಿಡು ಈ ಜೀವನ ಯಾವಾಗಲೂ ಸಿಗಲೊಲ್ಲದು. ಈ ಮಾತನ್ನು ನಾನಿಂದು ನನ್ನ ಜೀವನವನ್ನು ನಾಶಪಡಿಸಿಕೊಂಡು ಹೇಳುತ್ತಿರುವೆನು.

“ಡಾಕ್ಟರರು ತಡೆ ಹಾಕಿದ್ದರು. ಆದ್ದರಿಂದ ಈ ಪತ್ರವನ್ನು ಮರೆಯಲ್ಲಿ ಬರೆಯುತ್ತಿರುವೆನು ...ಈಗ ಪುನಃ ಅದೇ ಆ ನಿನ್ನ ಚಿರ—ಪರಿಚಿತ ಚಪ್ಪಲಿಯ ಚರ-ಚರ ಧ್ವನಿಯು ಕೇಳ ಬರುತ್ತಿದೆ....

ನಮಸ್ತೆ; ಬಿಳ್ಕೊಳ್ಳುವೆ.”

“ಸಂಧ್ಯಾ!”...ಕ್ಷೀಣ ಸ್ವರದಲ್ಲಿ ಚೀರಲು ಧ್ವನಿಯೊಂದು ರೋಗಿಯ ಕೊಟಡಿಯೊಳಗಿಂದ ಮೊಳಗಿತು. ಸಂಧ್ಯಾ ಬೆಚ್ಚಿಬಿದ್ದಳು. ಕೈಯಿಂದ ಕಾಗದ ಜಾರಿ ಕೆಳಗೆ ಬಿದ್ದಿತು

“ಡಾಕ್ಟರ್!”—ನರ್ಸ್ ಕೂಗಿದಳು.

ಓಡಿ ಬಂದು ಡಾಕ್ಟರ್ ನೋಡಿದರು—ಅಷ್ಟೇ...ಮತ್ತೆ ಮೌನವಾಗಿ, ತಲೆಗಿಟ್ಟ ರಕ್ತ ಪತ್ತದ ಯಂತ್ರವನ್ನು ಕೆಳಸರಿಸಿ ಕೋಣೆಯಿಂದ ಹೊರಬಂದರು. ನರ್ಸಳು, ಹೊದೆದ ವಸ್ತ್ರವನ್ನು ತಲೆ ವರೆಗೂ ಎಳೆದು ಪೂರ್ಣ ದೇಹವನ್ನು ಮುಚ್ಚಿದಳು.

‘ಜೀವನ!” ಹೃದಯ ಭೇದಕವಾದ ಚೀತ್ಕಾರ ಮಾಡುತ್ತಾ ಸಂಧ್ಯೆಯು ಹೆಣದ ಮೇಲೆ ಬಿದ್ದಳು.

ಈಗಲೂ, ಕಡೆಯ ಗಳಿಗೆಯಲ್ಲಿ ನುಡಿದ, ಜೀವನನ ಆ ಕೊನೆಯ ಶಬ್ದವು ಕೋಣೆಯಲ್ಲೆಲ್ಲಾ ಗುಂಯ್ ಗುಡುತಿತ್ತು—

“ಸಂಧ್ಯಾ! ಸಂಧ್ಯಾ!! ಸಂಧ್ಯಾ!!!”

—“**ಗಿರಿಬಾಲ**”, **ಮುಂಬಯಿ.**

(ಆಧಾರದಿಂದ)

NAVAYUGA 4-4-1963

REGD. No. B G. 176
LICENCE No. 31
Licensed to Post without Prepayment

ಗೀತೆ ಬೋಧಿಸುವ

# ಶಾಶ್ವತ ಸೌಭಾಗ್ಯದ ರಹಸ್ಯ

ನರನೂ, ನಾರಾಯಣನೂ ತಪಸ್ಸು ಮಾಡುತ್ತಿದ್ದರು. ನಾರಾಯಣನು ಸಾಕ್ಷಾತ್ ವಿಷ್ಣುವಿನ ಅವತಾರ. ನರನು ದೈವೀ ಪ್ರಭೆಯನ್ನು ಹೊಂದಿದ ಮಾನವ. ಪುರುಷರಲ್ಲಿ ಅತ್ಯುತ್ತಮ ಪುರುಷನಾಗಿದ್ದನು. ಅದು ಕಾರಣ, ಆತನನ್ನು ನರನೆಂದು ಸಂಬೋಧಿಸುತ್ತಿದ್ದರು. ಇವರೇ ಮುಂದಕ್ಕೆ ಅರ್ಜುನ, ಕೃಷ್ಣರಾಗಿ ಅವತರಿಸಿದರು.

ನರ ನಾರಾಯಣರು ತಪಸ್ಸಿನಲ್ಲಿ ಮಗ್ನರಾಗಿದ್ದ ಕಾಲದಲ್ಲಿ ಇಂದ್ರನು ಸುರಪತಿಯಾಗಿ ಸುರಲೋಕವನ್ನು ಆಳುತಿದ್ದನು. ದೇವ ವರ್ಗದಲ್ಲಿ ಉತ್ಕರ್ಷ ಸ್ಥಾನವನ್ನು ಪಡೆದಿದ್ದನು. ತಪಸ್ಸಿನ ಬಲದಿಂದ ದೇವೇಂದ್ರ ಪದವಿಯು ಲಭಿಸುವುದು ಎಂದು ಪುರಾಣಗಳು ಸಾರುತ್ತಿವೆ. ತನ್ನ ಉನ್ನತವಾದ ಸ್ಥಾನವು ತಪ್ಪೀತು ಎಂಬ ನಿರಂತರ ಭಯದಿಂದ ಸುರಪತಿಯು ನಿರ್ಮಲಚಿತ್ತದಿಂದ ತಪಶ್ಚರಣೆಯನ್ನು ಆಚರಿಸುವವರಿಗೆ ಅಭ್ಯಂತರವನ್ನು ಒಡ್ಡುತಿದ್ದನು. ಇದೇ ರೀತಿಯ ವರ್ತನವು ಈ ಕಾಲದಲ್ಲಿ ಜಗತ್ತಿನಲ್ಲಿ ನಡೆಯುತ್ತಲೆ ಇರುವುದನ್ನು ನಾವು ಕಾಣುತ್ತೇವೆ. ಒಬ್ಬ ಮನುಷ್ಯನು ಶಿಷ್ಟಾಚಾರದಲ್ಲಿ ಆಸಕ್ತನಾಗಿ, ಯೋಗ್ಯವಾದ ಜೀವನ ಮಾರ್ಗದಲ್ಲಿ ನಡೆದು, ಪರೋಪಕಾರ ಬುದ್ಧಿಯಿಂದ ಜೀವನ ಕಲೆಯನ್ನು ಉಬ್ಬಿಸಿ, ಪರರ ಅನುರಾಗಕ್ಕೆ ಪಾತ್ರನಾದಾಗ ಆತನಿಗೆ ಅನೇಕಾನೇಕ ಅನುಯಾಯಿಗಳು ಸಿಕ್ಕುವರು. ಅವನು ಜನರ ಮುಂಖಂಡನಾಗಿ ಬೆಳಗುವನು. ಅವನ ತಪಸ್ಸಿನಿಂದಲೂ ಮಿಗಿಲಾದ ಜನಸೇವೆಯ ಸಾಧನ ಮಾಡಿದ ಇನ್ನೊಬ್ಬನು ಎದುರು ಬಂದಾಗ ಈತನು ಮೊದಲಿನವನನ್ನು ಸೋಲಿಸಿ ಆತನ ಮುಖಂಡ ಸ್ಥಾನವನ್ನು ತಾನು ವಹಿಸಿಕೊಳ್ಳುವನು. ಜನವರ್ಗವು ಅವನನ್ನು ಹಿಂಬಾಲಿಸುವುದು. ಪುರಾಣದಲ್ಲಿ ದರ್ಶಿತವಾಗುವ ಅಧಿಸತ್ತೆ ಅಧಿಕಾರ ಕೂಡ ಇದೇ ರೀತಿಯಲ್ಲಿ ನಡೆಯುತಿತ್ತು. ಈ ಕಟ್ಟಳೆಯು ಭೂಲೋಕಕ್ಕೆ ಮಾತ್ರ ಸಮರ್ಥಿಸಿದ್ದಲ್ಲ. ದೇವಲೋಕದಲ್ಲಿ ಕೂಡ ಇದೇ ವರ್ತನೆಯು ಸ್ವಾಭಾವಿಕವಾಗಿ ಚಲಿಸುತಿತ್ತು.

ಅದು ಕಾರಣ, ನರ ನಾರಾಯಣರು ಉಗ್ರತಪಸ್ಸಾಧನೆಯಲ್ಲಿದ್ದಾಗ, ಉನ್ನತವಾದ ಪದವಿಯು ತಪ್ಪಬಹುದು ಎನ್ನುವ ಹೆದರಿಕೆಯು ಇಂದ್ರನಲ್ಲಿ ಹುಟ್ಟಿತು. ಭಯೋತ್ಪಾದನೆಯಿಂದಲೂ, ಕಾಮೋತ್ಪ್ರೇರಕದಿಂದಲೂ ನರನಾರಾಯಣರ ತಪಸ್ಸನ್ನು ಭಂಗಮಾಡಲು ಪ್ರಯತ್ನಿಸಿದನು. ಮೊದಲಾಗಿ ತನ್ನ ಸ್ವಾಧೀನವಿದ್ದ ಸುಂದರಿಯರಾದ ಅಪ್ಸರೆ ಕನ್ಯೆಯರನ್ನು ಅವರಿದ್ದಲ್ಲಿ ಕಳುಹಿಸಿದನು. ಈ ಕನ್ಯೆಯರು ಅದಿಯಲ್ಲಿ ನರನಿದ್ದಲ್ಲಿ ಹೋದರು. ನರನು ದೋಷರಹಿತನಾಗಿದ್ದರೂ ಮಾನವನಾಗಿದ್ದುದರಿಂದ ಈ ಸ್ತ್ರೀಯರನ್ನು ದೃಷ್ಟಿಸಿದೊಡನೆ ದೊಡ್ಡ ಶಬ್ದವನ್ನೆಬ್ಬಿಸಿದನು. ಗಂಭೀರವಾದ ಆತನ ಗರ್ಜನೆಯಿಂದ ಭೀತಿಗೊಂಡ ಅಪ್ಸರ ಕನ್ಯೆಯರು ಅಲ್ಲಿಂದ ಪಲಾಯನರಾದರು ನರನ ಮುಖವನ್ನು ನೋಡಿ ಭಯಭ್ರಾಂತರಾದರು. ನರನಲ್ಲಿ ರೋಷವು ಉತ್ಪನ್ನವಾಯಿತು.

ಅನಂತರ ಈ ಸುಂದರಿಯರು ಶಾಂತಸ್ವರೂಪಿ ಯಾದ ನಾರಾಯಣನಿದ್ದೆಡೆಗೆ ಬಂದು ನಿಂತರು. ಅವರ ಮುಖಾವಲೋಕನವಾದಾಗ ನಾರಾಯಣನು ತನ್ನ ಹಸ್ತವನ್ನು ತನ್ನ ತೊಡೆಗೆ ತಟ್ಟಿದನು. ಆ ತೊಡೆಯ ಒಳಭಾಗದಿಂದ ಅತ್ಯಂತ ಮನೋರಂಜಕದ ರೂಪವುಳ್ಳ ನಾರಿಯೊಬ್ಬಳು ಹೊರಬಂದಳು ಅವಳೇ ಊರ್ವಶಿ. ಇಂದ್ರನ ಅಪ್ಸರೆಯರು ಊರ್ವಶಿಯನ್ನು ಕಂಡೊಡನೆ ಆಶ್ಚರ್ಯಚಕಿತರಾಗಿ ಆಕೆಯ ಮುಂದೆ ತಮ್ಮ ಸೌಂದರ್ಯಕ್ಕೆ ಏನೂ ಬೆಲೆಯಿಲ್ಲವೆಂದು ತಿಳಿದುಕೊಂಡರು. ನಾಚಿಕೆಗೊಂಡು ಅಲ್ಲಿಂದ ಒಡನೆಯೆ ಪಲಾಯನರಾದರು.

"ಎಲ್ಲಾ ವಿಧದ ಆಶೆಗಳು, ಸೌಂದರ್ಯವು ಮತ್ತು ಸುಖವು ಮಾನವನ ಒಳಪ್ರವೃತ್ತಿಯಲ್ಲೂ, ಆತ್ಮನಲ್ಲೂ ಅಡಕವಾಗಿವೆ ಎಂಬುದೇ ಮೇಲಿನ ವಿಷಯದ ಸಾರವು. ಈ ಸಾರವೇ ಪ್ರೇಮಭಾವವು ಪ್ರೇಮಭಾವ ಸೌಂದರ್ಯ ಮತ್ತು ಆನಂದವು ನಮ್ಮ ಆತ್ಮದ ಭಾಗಗಳು. ಆತ್ಮವನ್ನು ಬಿಟ್ಟರೆ ಅದರ ಹೊರಗೆ ಏನೂ ಕಾಣದು." ಎಂಬುದಾಗಿ ಅವತಾರಿಯಾದ ನಾರಾಯಣನು ಊರ್ವಶಿ ಜನ್ಮದಿಂದ ಸ್ಪಷ್ಟಗೊಳಿಸಿದಾಗ, ಇಂದ್ರನ ಅಪ್ಸರ ಕನ್ಯೆಯರು ನಾರಾಯಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಆತನಲ್ಲಿ ಕ್ಷಮೆಯನ್ನು ಯಾಚಿಸಿದರು. ಮುಂದಕ್ಕೆ ಇಂದ್ರನ ಸಭೆಗೆ ಎಂದೂ ಹೋಗಲಾರೆವು ಎಂದೂ ನುಡಿದರು. ಮಾತ್ರವಲ್ಲ ಆತ್ಮಜ್ಞಾನದ ಪೂರ್ಣ ಬೋಧೆಯನ್ನು ಪಾಲಿಸಬೇಕಾಗಿ ಶ್ರೀಮನ್ನಾರಾಯಣನಲ್ಲಿ ಬೇಡಿಕೊಂಡರು. ಇದು ಚಿಕ್ಕ ಕತೆಯು. ಆದರೆ ಇದರಿಂದ ಲಭಿಸುವ ಬುದ್ಧಿವಾದವು ಅಪಾರವಾಗಿದೆ ಇದೇ ಬೋಧವು ಭಗವದ್ಗೀತೆಯ ದ್ವಿತೀಯ ಅಧ್ಯಾಯದ ೭೦ನೇ ಶ್ಲೋಕದಲ್ಲಿ ಸ್ಪಷ್ಟವಾಗಿಯದೆ

"ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ
ಯದ್ವತ್ ||
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ
ಸ ಶಾಂತಿ ಮಾಪ್ನೋತಿ ನ
ಕಾಮಕಾಮೀ ||"

ಆತ್ಮನ ಹೊರಗೆ ಇರುವುದನ್ನು ಅಪೇಕ್ಷಿಸುವುದೇ ಕಾಮವು. ಕಾಮವು ಇಚ್ಛಿಸುವ ವಸ್ತು ಆತ್ಮಕ್ಕೆ ಬಾಹಿರವಾದುದು. ಅಂತಹ ಇಚ್ಛೆಯಿಂದ ಶಾಂತಿಯು ಲಭಿಸದು ಅಂತಹ ವಸ್ತುವು ಲಭಿಸಿದಷ್ಟೆ ಬೇಗ ಮಾಯವಾಗುವುದು. ಅದು ಎಂದೂ ಸ್ಥಿರವಲ್ಲ. ಅದು ಮಾಯವಾಗದೇ ಬಾಹ್ಯದಲ್ಲಿರುವಷ್ಟೇ ಬಲವಾಗಿ ಅಂತರ್ಯದಲ್ಲಿದ್ದರೆ ಅಂತಹ ಕಾಮದಿಂದ ಬಾಧಕವಿಲ್ಲ ಹಲವು ನದಿಗಳು ಕೂಡಿ ಸಮುದ್ರವಾಗುವುದು. ಹಲವು ಸಮುದ್ರಗಳ ಬಲದಿಂದ ಸಾಗರವಾಯಿತು. ಈ ಎಲ್ಲಾ ನದಿಗಳನ್ನು ಸಾಗರವು ತನ್ನ ಒಡಲಲ್ಲಿ ಅಪ್ಪಿಕೊಂಡಿದೆ. ಸಾಗರದ ಹೊರಗಿದ್ದಾಗ ಅವು ನದಿಗಳು. ಸಾಗರಕ್ಕೆ ಸೇರಿದಾಗ ಅವು ಸಾಗರವೇ. ಅದೇ ರೀತಿ ನಮ್ಮ ಇಚ್ಛೆಗಳಲ್ಲಿ ಸತ್ವಭಾವವು ಮುಖ್ಯವಾಗಿದೆ ಈ ಸತ್ವಭಾವದಿಂದ ಮನಸ್ಸಿಗೆ ಆನಂದವುಂಟಾಗುವುದು. ಈ ಆನಂದವನ್ನು ಅನ್ವೇಷಿಸುವುದು ಕೇವಲ ತಪ್ಪು. ತನ್ನೊಳಗೆನೇ ಆ ಆನಂದವು ಸ್ಫೂರ್ತಿಯಾಗುವಾಗ 'ಶಾಂತಿ'ಯ ಲಾಭವು ನಿಶ್ಚಯವು. (ಸ ಶಾಂತಿ ಮಾಪ್ನೋತಿ)

ಅಧಿಕಾರ, ಐಶ್ವರ್ಯ, ಕೀರ್ತಿಗಳು ಬಾಹ್ಯ ಆಡಂಬರಗಳು, ಅವು ಮಾನವಗೆ ಶಾಂತಿ ಗೊಡುವುದು ಸ್ವಲ್ಪ ಸಮಯದ ವರೆಗೆ ಮಾತ್ರ. ಅವುಗಳಿಂದ ನೈಜ ಮನೋಶಾಂತಿಯು ಲಭಿಸದು. ಇಂದ್ರನು ಅನುಭವಿಸಿದ ಆನಂದವು ಸಂಪೂರ್ಣನಂದವಲ್ಲ ನರನಾರಾಯಣರು ಅನುಭವಿಸಿದ ಆನಂದವೇ ಪರಮಾನಂದವು. ಬಾಹ್ಯ ಸುಖದಿಂದ ಲಭಿಸಿದ ಆನಂದವನ್ನು ಒಳಶಾಂತಿಗೆ ಸೇರಿಸಿದರೆ ಮಾತ್ರ ಅಧಿಕಾರ, ಧನ ಮತ್ತು ಕೀರ್ತಿಗಳಿಗೆ ಬೆಲೆಯಿದೆ. ಆಶೆಗಳಲ್ಲೇ ಮಗ್ನನಾದವನಿಗೆ ಶಾಂತಿಯಿಲ್ಲ. ತನ್ನ ಏಕಮಾತ್ರ ಆತ್ಮನನ್ನು ಪರಮಾತ್ಮನಲ್ಲಿ ತಲ್ಲೀನ ಮಾಡಿ ಸುಖ ದುಃಖಗಳನ್ನು ಏಕರೀತಿಯಲ್ಲಿ ತುಲನೆ ಗೊಳಿಸಿ, ದೇಶಸೇವೆ, ಸಂಸಾರ ಸೇವೆ, ಲೋಕ ಸೇವೆ ಸಮಾಜ ಸೇವೆ ಮಾಡುವ ಮಾನವನಿಗೆ ಸಂಪೂರ್ಣ ಅಥವಾ ಪರಮ ಶಾಂತಿಯು ಲಭಿಸಲೇ ಬೇಕು. ಲಭಿಸದೇ ಇದ್ದರೂ ಅದು ಕೂಡ ಒಂದು ವಿಧದ ನಿಷ್ಕಾಮಶಾಂತಿಯಾಗಿ ಪರಿಣಮಿಸುವದು. ಯೋಗಗಳ ಶಕ್ತಿಯಿಂದ ಈ ತರಹದ ಶಾಂತಿಯು ಉತ್ಪನ್ನವಾಗುವ ಕಾರಣ ಯೋಗಾವಳಿಯನ್ನು ಸ್ಥಾಪಿಸಿ ವಿವರಿಸಿದ ಗೀತಾಮೃತವೇ ನಿಜವಾದ ಅಮೃತವು. ಇದಕ್ಕೂ ಮಿಗಿಲಾದ ಅಮೃತ ರಸವು ಬೇರಿಲ್ಲ.

— ಶ್ರೀ ಎಂ. ಬಿ. ಶಂಕರ ರಾವ್,
ಐ. ಎ. ಎಸ್. (ನಿವೃತ್ತ).


ದಿನನಿತ್ಯದ
ವೆಚ್ಚದಲ್ಲಿ
ಉಳಿತಾಯವೂ.....ಒಂದು ಆವಶ್ಯಕತೆಯೆ??

ಆಹಾರ, ವಸತಿ, ಮತ್ತು ಬಟ್ಟೆಬರೆ, ನಮ್ಮ ಜೀವನಾವಶ್ಯಕ ವಸ್ತುಗಳಾದಂತೆ, ಉಳಿತಾಯವೂ ಅತೀ ಅವಶ್ಯವೆಂದು, ನೀವೆಂದಾದರೂ ಯೋಚಿಸಿದ್ದೀರಾ??

ಭವಿಷ್ಯತ್ತಿನ ಭದ್ರತೆ, ಸಮೃದ್ಧಿ ಮತ್ತು ಮನಸ್ಸಿಗೆ ನೆಮ್ಮದಿ, ನಿಮ್ಮ ಇಂದಿನ ದೂರ ದೃಷ್ಟಿಯು ಉಳಿತಾಯವನ್ನೇ ಹೊಂದಿಕೊಂಡಿದೆ.

ವಿವಿಧ ಉಳಿತಾಯ ಯೋಜನೆಗಳಿಗೆ.......

ಸಿಂಡಿಕೇಟ್ ಬ್ಯಾಂಕ್ ಸಹಕರಿಸಬಲ್ಲುದು

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಟಿ. ಎ. ಪೈ,
ಮ್ಯಾನೇಜಿಂಗ್ ಡೈರೆಕ್ಟರ್. ಶಾಖೆಗಳು....176

—ಒಟ್ಟು ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ—



## 'ಕೋಕಿಲವಾಣಿ'

(ಪ್ರಿನ್ಸಿಪಾಲ್ ವಿ. ಎಂ. ಇನಾಂದಾರರ ಮುನ್ನುಡಿ)

ದ. ಕ. ಜಿಲ್ಲೆಯ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದ್ದ ಕೆಲವೊಂದು ಹಾಡುಗಳನ್ನು ಉದ್ಧರಣೆಗಳೊಂದಿಗೆ ಕೊಡಲಾಗಿದೆ

ಬೆಲೆ: ರೂ ೧—೦೦

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಲೇಖಕರಿಗೆ ಬರೆಯಿರಿ.

ಪಿ. ಎನ್. ಹೆಬ್ಬಾರ, ಎಂ. ಜಿ. ಎಂ. ಕಾಲೇಜು
ಕುಂಜಿಬೆಟ್ಟು, ಉಡುಪಿ.


Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 31

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 11—4—1963 ಗುರುವಾರ

13 ನ ಪೈಸೆ
ವಾ. ಚಂದಾ ರೂ. 6-75
ಸಂಪುಟ ೪೨ ಸಂಚಿಕೆ ೩೧

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ಸ್ವತಂತ್ರ ಭಾರತವು
# ಶಕ್ತಿಕೂಟಕ್ಕೆ ಸೇರಿಕೊಳ್ಳಬೇಕೆ?

ಚೀನಾವು ನಮ್ಮ ಮೇಲೆ ಆಕ್ರಮಣ ನಡೆಸಿದೆ. ತನ್ನದೇ ಗುಪ್ತಪಥವೊಂದರಲ್ಲಿ ತನ್ನ ಸ್ವಪ್ನವನ್ನು ಸಾಕಸಿದ್ಧಗೊಳಿಸುವ ಗುರಿಯತ್ತ ಧಾವಿಸುತ್ತಿದೆ ಚೀನೀ ಸಾಮ್ರಾಜ್ಯವಾದವನ್ನು ಬೆಳೆಸಿ ಇಡಿಯ ಏಶ್ಯಾ ಖಂಡವನ್ನೇ ತನ್ನ ಮುಷ್ಟಿಯೊಳಗಿಟ್ಟುಕೊಳ್ಳುವ ಹೆಬ್ಬಯಕೆ ಅದರದು. ಇದಕ್ಕೆ ಪಂಚಶೀಲಗಳನ್ನು ಸ್ವೀಕರಿಸುವ ಸೋಗು ಮಾಡಿಕೊಂಡು ಬೆನ್ನ ಹಿಂದೆ ಇರಿಯುವ ಕುಸಾಹಸವನ್ನೂ ಮಾಡುತ್ತಿದೆ. ಚೀನೀಯ ತೋಳದ ಉಗುರಿಗೆ ಸಿಕ್ಕ ಕುರಿಮರಿ ಭಾರತವೆಂದರೆ, ಯಾರೂ ಅಲ್ಲಗಳೆಯಲಾರರು. ಕಳೆದ ಕೆಲವು ವರ್ಷಗಳಿಂದ ಚೀನೀಯರು ಭಾರತದ ನೆಲದ ಮೇಲೆ ತಮ್ಮ ಅಧಿಕಾರವನ್ನು ಜಮಾಯಿಸುತ್ತ ಬರುತ್ತಿರುವುದು, ಸಮರ ವಿರಾಮದ ನೆಪದಲ್ಲಿ ಸಮರ ಸಿದ್ಧತೆ ನಡೆಸುತ್ತಿರುವುದು, ಸಂಧಾನದ ಹೆಸರಿನಲ್ಲಿ ಸಂಗ್ರಾಮಕ್ಕೇನೇ ಆಹ್ವಾನ ನೀಡುತ್ತಿರುವುದು ಕಾರಿದ ಮೇಲೆ ಬೊಕ್ಕೆಯಂತೆ, ಆ ಬೊಕ್ಕೆಯ ಮೇಲೆ ಎರೆದ ಉಪ್ಪುನೀರಂತೆ ಭಾರತೀಯ ಜನಮನವನ್ನು ಇರಿದಿದೆ. ಚೀನೀಯರು ವಾಸ ಅಯೋಗ್ಯವಾದ ಭೂಮಿಯ ಮೇಲೆ ತಮ್ಮ ಪ್ರಭುತ್ವವನ್ನು ಹೇರುತ್ತಿರುವುದೆಂದರೆ ೪೪ ಕೋಟಿ ವಿಶ್ವಾಸಯೋಗ್ಯ ಭಾರತೀಯರನ್ನು ಮಾನಸಿಕವಾಗಿ ನೋಯಿಸಿದಂತೆ. ಈ ಕಾರಣದಿಂದಾಗಿಯೇ ಚೀನೀಯ ದುರಾಕ್ರಮಣ ಭಾರತದ ಗುರಿಯನ್ನೂ ನೀತಿಯನ್ನೂ ಬದಲಾಯಿಸಿದ ಮಹಾ ದುರಂತ ಪ್ರಕರಣವೆಂದು ಇಂದು ಜಗತ್ತಿಗೆ ಜಗತ್ತೇ ಹೇಳುವಂತಾಗಿದೆ.

### ನಿರ್ಲಿಪ್ತತೆಯ ನೀತಿ

ಪಂಚಶೀಲಗಳನ್ನು ರಾಜಕೀಯ ರಂಗಕ್ಕೆ ತಂದು ಸಹೋದರತೆಯಿಂದ ಅವಿಕಸಿತ ದೇಶಗಳು ಪೂರ್ಣವಿಕಾಸಗೊಳ್ಳುವಂತೆ ಮಾಡಿದ ಮಹಾ ಪುರುಷ ಪ್ರಧಾನಿ ನೆಹರು ಇಂದು ಅವರು ಸೃಷ್ಟಿಸಿದ ಪಂಚಶೀಲ ಅವರನ್ನೇ ತಿವಿಯಲು ರೌದ್ರ ಗಂಭೀರ ರೂಪದಾಳಿ ಬಂದಂತಾಗಿದೆ. ನಮ್ಮ ನಿರ್ಲಿಪ್ತ ಅಥವಾ ತಾಟಸ್ಥ್ಯ ನೀತಿಯ ಮುಂದೆ ಪ್ರಶ್ನಾರ್ಥಕ ಚಿಹ್ನೆಗಳು ನಿಂತಿವೆ. ಈ ಘಳಿಗೆಯಲ್ಲಿ ದೇಶದ ಅಂತರಿಕ ಮುತ್ಸದ್ದಿಗಳಲ್ಲಿ ಕೆಲವರು ನಿರ್ಲಿಪ್ತತೆಯೆಂಬುದು ರಾಜಕೀಯದಲ್ಲಿ ಅರ್ಥಹೀನವೆಂಬ ವಾದಕ್ಕೆ ತೊಡಗಿದ್ದಾರೆ. ಭಾರತದ ವಿದೇಶ ನೀತಿಯು ಪರೀಕ್ಷೆಯಲ್ಲಿ ಅನುತ್ತೀರ್ಣವಾಯಿತು ಮಾತ್ರವಲ್ಲ, ಅದು ಮುಂದಕ್ಕಾದರೂ ಅತೀವ ಅಪಾಯಕಾರಿಯೆಂಬುದರಿಂದ ಅದನ್ನು ತೊರೆದುಬಿಡಬೇಕು, ಮತ್ತು ಇಂದಿನ ಪರೀಕ್ಷಾಕಾಲದಲ್ಲಿ ಪಾಶ್ಚಾತ್ಯ ಮಿತ್ರರ ನೆರವು ಪಡೆಯುವಲ್ಲಿ ಉತ್ಸಾಹ ತೋರಿಸಬೇಕು; ನಮ್ಮ ಮಿತ್ರರು ಯಾರು, ಶತ್ರುಗಳಾರು ಅಥವಾ ಹಿತಶತ್ರುಗಳು ಯಾರು ಎಂಬುದನ್ನು ಕೂಲಂಕಷ ಪರೀಕ್ಷಿಸಿ ನಮ್ಮ ನೀತಿಯನ್ನು ನವೀಕರಿಸಿಕೊಳ್ಳಬೇಕು ಎನ್ನುತ್ತಾರೆ ಇವರು. ಈ ಮಾತುಗಳಲ್ಲಿಯೂ ತುಸು ಅರ್ಥವಿರುವುದು ನಿಜ; ಇವರಲ್ಲಿ ಅಸ್ವಾಭಾವಿಕತೆಯಿಲ್ಲ

### ಪಂಚಶೀಲಕ್ಕೆ ಅಪಮಾನ

ಸರಕಾರದ ನೀತಿಯನ್ನು ಪಕ್ಷವು ನಿರೂಪಿಸುವುದು— ಪಕ್ಷೀಯ ಪದ್ಧತಿಯ ಪ್ರಜಾಸತ್ತೆಯಲ್ಲಿ ಸಂಪ್ರದಾಯ. ನಮ್ಮ ದೇಶದ ಮಟ್ಟಿಗೆ ಸರಕಾರ ಮತ್ತು ಪಕ್ಷಗಳ ನಡುವೆ ಮಧ್ಯ ಸೇತುವೆಂತಿದ್ದಾರೆ ಪ್ರಧಾನಿ ನೆಹರು. ಅವರ ನೀತಿಯನ್ನು ಎರಡು ಕಡೆಯವರೂ ಒಪ್ಪುತ್ತಾರೆ ಆದುದರಿಂದಾಗಿ, ಸರಕಾರವೇ ಮೊದಲು ನೀತಿಯನ್ನು ರೂಪಿಸಿಕೊಂಡು ಮುಂದೆ ಪಕ್ಷದ ಒಪ್ಪಿಗೆ ಪಡೆದ ನಿದರ್ಶನಗಳಿಗೂ ಕೊರತೆಯಿಲ್ಲ. ಇದು ನಮಗೊಂದು ಭೂಷಣವೂ ಹೌದು, ನಮ್ಮ ದೌರ್ಬಲ್ಯದ ಕುರುಹೂ ಹೌದು. 'ಪಂಚಶೀಲ ನಿರ್ಮಾಪಕ'ನನ್ನೇ ಪಂಚಶೀಲದ ಹೆಸರಿನಿಂದ ಚೀನಾವು ಚುಚ್ಚಿದಾಗ ವಿರೋಧೀ ಪಕ್ಷಗಳಲ್ಲಿ ಮಾತ್ರವಲ್ಲ, ಕಾಂಗ್ರೆಸ್ ಪಕ್ಷದಲ್ಲಿಯೇ ಪಂಚಶೀಲ ನೀತಿಯ ಬಗೆಗೆ ವಿಮರ್ಶನೆ ಹುಟ್ಟಿಕೊಂಡಿತು. ಇದೀಗ, ಆ ಉದ್ವೇಗದ ಕಾವು ಎ. ಐ. ಸಿ. ಸಿ.ಯ ಸಭೆಯಲ್ಲೂ ಪ್ರತಿಧ್ವನಿಸುತ್ತದೆ.

### ಗೋಮುಖವ್ಯಾಘ್ರ ನೀತಿ

ಭಾರತ— ಭಾರತೀಯ ಕಾಂಗ್ರೆಸ್— ಭಾರತೀಯ ಸರಕಾರ— ಈ ಮೂರೂ ಇಂದು ಬ್ರಹ್ಮ ವಿಷ್ಣು ಶಿವಾತ್ಮಕನಾದ ಕೇಶವ "ನೆಹರು"ಗಳೊಬ್ಬರಲ್ಲಿ ಐಕ್ಯಾವೇಶವಾಗಿದೆ ಇದರಿಂದಾಗಿಯೇ ಪ್ರಧಾನಿಯವರ ನೀತಿಗೆ ವಿರೋಧಾಭಿಪ್ರಾಯ ಅಂತರಂಗದಲ್ಲಿ ಹೊರಟಿದ್ದರೂ ಬಹಿರಂಗದಲ್ಲಿ ಎಂದೂ ಬರುವುದಿಲ್ಲ. ಪಕ್ಷದ ನೀತಿ ನಿರೂಪಣೆಯ ಬಗ್ಗೆ ಅಸಮಾಧಾನವಿರುವವರು ಸುಸ್ಪಷ್ಟವಾಗಿ ಅದನ್ನು ವ್ಯಕ್ತಪಡಿಸಬೇಕೆಂದು ಬಾರಿ ಬಾರಿ ಹೇಳಿದರೂ ಯಾರೂ ಅದನ್ನು ಕಿವಿಗೆ ಹಾಕಿಕೊಂಡಿಲ್ಲ. ತಾಟಸ್ಥ್ಯ ನೀತಿಯನ್ನು ಹೊರಗಡೆ ಖಂಡಿಸುತ್ತಿರುವ ಮಹಾವೀರರು ಕಾಂಗ್ರೆಸ್ ಸಭೆಯಲ್ಲಿ ಮೌನವಾಗಿಯೇ ಉಳಿಯುತ್ತಾರೆ, ಏಕೆ? ಇವರ ಮೌನವ್ರತಧಾರಣೆ ಮತ್ತು ಹಿಂದುಗಡೆ ನೀತಿ ಖಂಡನೆಗಳು ಗೋಮುಖವ್ಯಾಘ್ರ ಪ್ರವೃತ್ತಿಯಂತೆ ಘಾತಕವೆನಿಸಿದೆ. ಇದು ಅಪಾಯಕಾರಿ ಮಾತ್ರವಲ್ಲ ಒಂದು ಬಗೆಯ ಕುತಂತ್ರವೆಂದರೂ ಅನುಚಿತವಲ್ಲ

### ನಿರ್ದಾಕ್ಷಿಣ್ಯ ವ್ಯಕ್ತಿ ಹನುಮಂತಯ್ಯ

ಆದರೆ, ಕರ್ನಾಟಕದ ಕೆಂಗಲ್ ಹನುಮಂತಯ್ಯನವರು ಹಿಂದಿನಿಂದಲೂ ನಿರ್ದಾಕ್ಷಿಣ್ಯ ಪ್ರವೃತ್ತಿಯವರು. ತಮಗೆ ಸರಿಯೆಂದು ಕಂಡುಬಂದುದು ಇತರರಿಗೆ ಶೂಲಪ್ರಾಯವೇ ಏಕೆ ಆಗಿರಬಾರದು, ಅದನ್ನು ಖಡಾಖಂಡಿತವಾಗಿ ಅಂದು ಬಿಡುವ ಧೈರ್ಯವಂತರು. ಈ ಧೈರ್ಯ ಅಥವಾ ಕೆಚ್ಚಿನಿಂದಾಗಿಯೇ ವಿಧಾನ ಸೌಧದಂತಹ ಭವನವನ್ನು ಕಟ್ಟಿಸಿದರು. ಅವರು ಅದೇ ಕೆಚ್ಚಿನಿಂದ ಸೌಧದೊಳಗಿನ ಪ್ರಧಾನತೆಯನ್ನೂ ದೂರಮಾಡುವವರಿದ್ದರು ಆದರೆ, ಅಷ್ಟರಲ್ಲೇ ಅವರ ಚಿಗರಿಯ ನೆಗೆತ ಅನೇಕ ನಡಿಗೆಯವರಿಗೆ ಸರಿಬರಲಿಲ್ಲ; ಏಕೆಂದರೆ, ಅದರಿಂದ ಅವರ ಸ್ವಾರ್ಥಕ್ಕೆ ಅಡ್ಡಿಯಾಗುತ್ತಿತ್ತು, ಹನುಮಂತಯ್ಯ ಅಧಿಕಾರದಿಂದ ನಿವೃತ್ತರಾಗಲೇ ಬೇಕಾಯ್ತು. ಜನತೆಯ ಹೃದಯ ಅದು ರೂಪಿಸುವ ಸರಕಾರದಲ್ಲಿ ಪ್ರತಿಬಿಂಬಿಸುತ್ತದೆ ತಾನೆ?

### ಕೆಂಗಲ್ಲರ ಪ್ರಥಮ ವಿಜಯ

ಅಧಿಕಾರ ಗದ್ದುಗೆಯಿಂದ ಇಳಿದ ನಂತರವಾದರೂ ಹನುಮಂತಯ್ಯನವರು ಸುಮ್ಮನಿರಲಿಲ್ಲ. ಮಹಾತ್ಮಾ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಿಗೆ ಅಗ್ರ ಪ್ರಾಶಸ್ತ್ಯ ನೀಡುವವರಲ್ಲಿ ಒಬ್ಬರಾದ ಕೆಂಗಲ್ ಕಾಂಗ್ರೆಸ್ಸಿಗೆ ರಚನಾತ್ಮಕ ಸಲಹೆಗಳನ್ನೂ ನೀಡುತ್ತಾರೆ ಎ. ಐ. ಸಿ. ಸಿ.ಗೆ ಚುನಾಯಿತ ಸದಸ್ಯರು ಮೂರರಲ್ಲೊಂದರಷ್ಟಿರಬೇಕೆಂದು ಸೂಚನೆಯಿತ್ತವರು. ಮೊಟ್ಟಮೊದಲು ಇದು ನೆಹರೂಗೆ ಸರಿಬರಲಿಲ್ಲ; ಆದುದರಿಂದ ಕಾಂಗ್ರೆಸಿಗೂ ಸರಿಬರಲಿಲ್ಲ. ಪಕ್ಷದಲ್ಲಿ ಯುವ ಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದಕ್ಕೆ ಮಾರ್ಗವಾಗುವ ಸಂದರ್ಭದಲ್ಲಿ ನೆಹರು ಈ ಸಲಹೆಗೆ ಒಪ್ಪಿದರು; ಕಾಂಗ್ರೆಸ್ ಸಂವಿಧಾನಕ್ಕೂ ತಿದ್ದುಪಡಿಯಾಯಿತು. ಅಂದರೆ, ಪ್ರಧಾನಿಯವರ ಅಥವಾ ಮತ್ತಾವ ನಾಯಕರ ಅಭಿಪ್ರಾಯವೇನೇ ಇರಲಿ, ತನ್ನ ಮನದೊಳಗೆ ಹೊಳೆದ ವಿಚಾರವನ್ನು ನಿರ್ಭೀಡೆಯಿಂದ ಹೊರಗಿಡುವ ಧೈರ್ಯವಂತರು ಹನುಮಂತಯ್ಯ.

### ಎಐಸಿಸಿ ಗೊತ್ತುವಳಿ

ಅವರ ಕೆಚ್ಚಿಗೆ ಇನ್ನೊಂದು ನಿದರ್ಶನ ಇಂದು ದೊರೆತಿದೆ. ಎ. ಐ. ಸಿ. ಸಿ. ಯಲ್ಲಿ ಮುರಾರ್ಜಿ ದೇಸಾಯಿಯವರೊಂದು ಗೊತ್ತುವಳಿಯನ್ನು ಮಂಡಿಸಿ, ಚೀನೀಯ ಆಕ್ರಮಣದ ಸಂಬಂಧದಲ್ಲಿ ಭಾರತ ಸರಕಾರವು ಇದುವರೆಗೆ ತಳೆದ ನೀತಿಯನ್ನು ಸಮರ್ಥಿಸಿದರು. ಚೀನೀಯರು ಮಾಡಿದ ವಿಶ್ವಾಸಘಾತವನ್ನು ಎದುರಿಸಲು ನ್ಯಾಯಸಮ್ಮತವಾದ ಶಾಂತಿ ವಿಧಾನವನ್ನು ಅನುಸರಿಸುವುದಕ್ಕೆ ಅಥವಾ ಅವರು ಸಂಗ್ರಾಮವನ್ನೇ ಬಯಸುವುದಾದರೆ ಅದಕ್ಕೂ ಸಿದ್ಧರಾಗಿರುವುದಕ್ಕೆ ಸಂಬಂಧಿಸಿತ್ತು ಇದು. ಆಸ್ಸಾಮದ ಮುಖ್ಯಮಂತ್ರಿ ಚಾಲಿಹಾ ಇದನ್ನು ಅನುಮೋದಿಸಿದರು. ಈ ಗೊತ್ತುವಳಿಯಲ್ಲಿ ವಿಶೇಷವೇನೂ ಇರುವುದಿಲ್ಲ. ಸಂಧಾನ-ಸಂಗ್ರಾಮಗಳಲ್ಲೊಂದನ್ನು ಅನುಸರಿಸದೆ ವಿವಾದ ಬಗೆಹರಿಯುವುದೂ ಇಲ್ಲ. ಆದರೆ, ಇದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡುವ ವೇಗವು ಮಾತ್ರ ದ್ವಿಗುಣಿತ, ತ್ರಿಗುಣಿತವಾಗ ಬೇಕಾಗಿದೆ.

### ನಿರ್ಲಿಪ್ತತೆ ಬೇಡ

ಈ ಗೊತ್ತುವಳಿಯನ್ನು ಅನುಮೋದಿಸಿ, ಭಾರತ ಸರಕಾರದ ನೀತಿಯನ್ನು ಸಂಪೂರ್ಣವಾಗಿ ಸಮರ್ಥಿಸಿದವರು ಹೆಚ್ಚು ಮಂದಿ. ಇದನ್ನು ತಪ್ಪೆಂದೂ ಹೇಳುವಂತಿಲ್ಲ. ಆದರೆ, ಕೆಂಗಲ್‌ರವರು ಮಾತ್ರ ಇದಕ್ಕೆ ಅಪವಾದ. 'ನಿರ್ಲಿಪ್ತತೆಯ ಬಗ್ಗೆ ನಾವು ಮರುವಿಚಾರ ಮಾಡಬೇಕು. ಕೆಲವು ವರ್ಷಗಳವರೆಗದು ಸಮರ್ಥಕವೆನಿಸಿದರೂ ಅದರಿಂದ ಇಂದು ಭಾರತವು ಅಪಮಾನಕ್ಕೀಡಾಗಿದೆ; ಆದುದರಿಂದ ಆ ವಿಚಾರವನ್ನೇ ಬಿಟ್ಟುಬಿಡಬೇಕು' ಎಂದು ಧೈರ್ಯದಿಂದ ನುಡಿದವರಿರುವರು. ನಾವು ಕೂಡ ಯಾವುದಾದರೊಂದು, ಮುಖ್ಯವಾಗಿ ರಾಜಾಜಿ ಹೇಳಿದಂತೆ ಪಾಶ್ಚಾತ್ಯರ ಶಕ್ತಿಕೂಟದಲ್ಲಿ ಸೇರಿಕೊಳ್ಳುವುದನ್ನು ಪ್ರಸ್ತಾಪಿಸಿದ ಅವರು ಈ ಮೊದಲೇ ಈ ಕೂಟಕ್ಕೆ ಸೇರಿದ ಪಾಕಿಸ್ತಾನ, ಫಾರ್ಮೋಸಾ ಮೊದಲಾದವುಗಳ ಮೇಲೆ ಕೈಮಾಡುವ ಸಾಹಸ ಚೀನಕ್ಕೆ ಬರಲಿಲ್ಲವೆಂದು ಹೇಳಿದರು.

### ಉಪ ಸಂಹಾರ

ಎಲ್ಲರೂ ನಿರೀಕ್ಷಿಸಿದಂತೆ ಹನುಮಂತಯ್ಯನವರ ಸಲಹೆ ಬಿದ್ದುಹೋಯಿತು. ನಿರ್ಲಿಪ್ತ ನೀತಿಯಿಂದ ಭಾರತಕ್ಕೆ ತುಂಬಾ ಲಾಭವಾಗಿದೆಯೆಂದೂ ಅದನ್ನು ನಿರುಪಯುಕ್ತವೆಂದೊಂದು ಕಾಲದಲ್ಲಿ ಜರೆಯುತ್ತಿದ್ದ ಪಾಶ್ಚಾತ್ಯರೂ ಈಗದರ ಅರ್ಥವನ್ನು ಕಂಡುಕೊಂಡು ಮೂಗಿಗೆ ಬೆರಳೇರಿಸಿರುವರೆಂದೂ ಆ[illegible]ಯಂತಹ ಮ

(೧೦ನೇ ಪುಟ ನೋಡಿರಿ)

# ಸಾವು - ಉಳಿವು

ಮುಬ್ಬುಗತ್ತಲೆಯಲ್ಲಿ ದೂರದ ಬಯಲಂಚಿನಲ್ಲಿ ಬರುವ ವ್ಯಕ್ತಿ, ತನ್ನ ಮಗನೆಂದೇ ಆ ಮುದುಕಿಗೆ ದೃಢವಾಯಿತು. ಕತ್ತನ್ನು ತಗ್ಗಿಸಿ, ಕೈಯನ್ನು ಹುಬ್ಬಿಗೇರಿಸಿ, ಎಂಡು ಮೆಟ್ಟಲುಗಳಷ್ಟು ಕೆಳಗಿಳಿದು ಕಂಡಾಗ

"ಶಾಮೂ...ಶಾಮೂ" ಎಂದು ಮೂವತ್ತು ವರ್ಷದ ಮುದ್ದು ಮಗನನ್ನು ಕೂಗಿ ಕರೆದರು.

"ನಾನೇ ಅಮ್ಮಾ ಸೋಗಿದೆ ಅವರಿಗೆ.. ಡಾಕ್ಟರು ಮತ್ತೆರಡು ಮಾತ್ರೆ, ಔಷಧಿಗಳನ್ನು ಕೊಟ್ಟಿದ್ದಾರೆ ...ತೆಗೆದುಕೊಂಡು ಬಂದಿಸ್ವೇನೆ..." ವೇಗವಾಗಿ ಬರುತ್ತ ಮಗನುತ್ತರಿಸಿದ...

"ನಿನ್ನ ಔಷಧಿ ಅವರ ಕಾಹಿಲೆಗೆ ಬೇಡ...ಅವರು ಮಹಾಂಗಿ ಕಣ್ಣು ತೆರೆದರು ಈಗ ಮನೆಗೆ ಸೋಗ್ತೇನೆ ಎಂತ ಹಟಹಿಡಿದಿದ್ದಾರೆ...ಅದಕ್ಕೇನಾದರೂ ಔಷಧಿ ಇದೆಯೇ..." ಮಾತನ್ನು ಮುಗಿಸಿದ ತಾಯಿ, ಚಾವಡಿಯತ್ತ ಸರಿದ ಮಗನನ್ನು ಹಿಂಬಾಲಿಸಿದರು.

"ಅಬ್ಬಾ, ನಿಮಗೆ ಜೀವ ಬಂದಂತೆ ನನಗೂ ಜೀವ ಬಂದಹಾಗಾಯ್ತು ಅಂತೂ ನಮ್ಮನ್ನೆಲ್ಲ ಕಾಣುವಂತಾದಿರಲ್ಲ...." ಶಾಮಣ್ಣ ಮುಖವನ್ನರಳಿಸಿ, ಹಾಸಿಗೆಯ ಮೇಲೆ ಕುಳಿತ ವ್ಯಕ್ತಿಯೊಡನೆ ಎದೆ ತೆರೆದು ಮಾತನಾಡಿದ

"ಶಾಮೂ....ಅವರಿಗೆ ಬಾಯಾರಿಕೆಗೆ ಬೇಕೇ ಕೇಳು"

"ನನಗೇನೂ ಬೇಡ ಶಾಮಣ್ಣ....ನೀವಿಷ್ಟೊಂದು ಆದರ ತೋರಿದುದೇ ಅತೀ ಮಹತ್ತಾದುದು. ನಾನು ಜನ್ಮಾಂತರದಲ್ಲೂ ಮರೆಯಲಾಗದಂತಹದು...ನಾನೀಗ ಹೋಗ್ತೇನೆ, ಮನೆಗೆ..." ಅತ್ಯಂತ ಕೃತಜ್ಞ ಭಾವವನ್ನು ವ್ಯಕ್ತಪಡಿಸಿದ ದನಿಯಲ್ಲಿ ನುಡಿದ ಮಾತನ್ನು ಕೇಳಿದ ಶಾಮಣ್ಣ "ನಿಮ್ಮ ಹೆಸರು?...." ಎಂದು ಹುಬ್ಬು ಮೇಲಕ್ಕೇರಿಸಿದ.

ಒಲಸಿನ ರಸವೇ ಹರಿದುಬಿಟ್ಟಂತೆ ಆತನೆಂದ "ಚಂದ್ರ ಶೇಖರ..."

"ಚಂದ್ರಣ್ಣ ನಾನಿಷ್ಟು ನಿಮ್ಮ ಸೇವೆ ಮಾಡಿದ್ದಕ್ಕೆ ನನ್ನೊಂದು ಮಾತನ್ನು ಕೇಳಿ ನೀವಿವತ್ತು ರಾತ್ರಿ ನಮ್ಮನ್ನಗಲಿ ಹೋಗಬಾರದು."

ಆಗ್ರಹವನ್ನು ಮೀರಲಾರದೆ ವಿಲಿವಿಲ ಒದ್ದಾಡುತ್ತಿದ್ದ ಚಂದ್ರಶೇಖರನನ್ನು ಕಂಡ ತಾಯಿ, "ಶಾಮೂ ಎಲೆ ಹಾಕು....ಆಗಲೇ ಕತ್ತಲಾಗಿತ್ತಲ್ಲ .."ಎಂದೊಂದು ಚಿಮಿಣಿ ದೀಪವನ್ನು ಚಾವಡಿಯಲ್ಲಿಟ್ಟು ಮತ್ತೆ ಅಡಿಗೆ ಮನೆಗೆ ನಡೆದರು.

ಶಾಮಣ್ಣನ ಹಿಂದೆಯೇ ಚಂದ್ರಶೇಖರ ನಡೆದ ತುಂಬಿ ಬಂದ ಹೃದಯ ಕೊರಳನ್ನು ಒತ್ತಿ ಹಿಡಿದು ಮಾತನಾಡಬಿಡಲಿಲ್ಲ....ಯಂತ್ರದಂತೆ ಊಟಮಾಡಿ ಹೊರ ಬಂದರು....' ಜೀವನವೆನ್ನುವುದು ಹ್ಯಾಗೆ ಎಂತ ಯಾರಿಗೂ ಹೇಳೋಕೆ ಬರೋಲ್ಲ....ಸುಖ ಕಷ್ಟ-ನಮ್ಮನ್ನೋಡಿಸಿಕೊಂಡು ಬರುವ ಬೇತಾಳಗಳು ಒಮ್ಮೊಮ್ಮೆ ನಿರಾಶೆಯ ದರಿಯಲ್ಲಿ ಬಿದ್ದರೆ,ಒಮ್ಮೊಮ್ಮೆ ಸುಖದ ಮೇರುವನ್ನೇರುತ್ತೇವೆ. ಹೆಬ್ಬಾಗಿಲಿನ ಹೊರಗಿನ ಸದ್ದನ್ನು ಕೇಳಿ ಶಾಮಣ್ಣ ಹೊರಗೆ ಹೋದದ್ದರಿಂದ ಚಂದ್ರಶೇಖರ ಮಾತನ್ನು ಮುಗಿಸಿದ.

ನಾಳೆ ಬೆಳಗ್ಗಿನ ಬಸ್ಸಿಗೆ ಘಟ್ಟಕ್ಕೆ ಹೋಗುತ್ತೀರಾ....ಹೊಂ.... ಮಲಗಿಕೊಳ್ಳಿ....ಏನೂ ತೊಂದರೆಯಿಲ್ಲ ಎನ್ನುತ್ತಾ ಒಳಗೆ ಬಂದ ಶಾಮಣ್ಣ.

"ಅನಿರೀಕ್ಷಿತ ಘಟನೆಗಳು ಹೇಗೆಲ್ಲಾ ಬಂದು ಬಿಡುತ್ತವೆ ನೋಡಿ..." ನಿನ್ನೆ ನಾನೆಲ್ಲಿದ್ದೆ ಇವತ್ತೆಲ್ಲಿದ್ದೇನೆ..." ಗತಿಸಿ ಹೋದ ತನ್ನ ದುರಂತ ಕತೆಗೆ ಪೀಠಿಕೆ ಹಾಕಿದ ಚಂದ್ರಣ್ಣ.

"ಹೌದ್ದಾದು ಎಂದು ಹಾಸುವುದನ್ನು ನಿಲ್ಲಿಸಿ, ಎಲೆಯಡಿಕೆಯನ್ನು ಜಗಿಯಲು ಅಣಿಮಾಡುತ್ತಾ ರಾಗವೆಳೆದ ಶಾಮಣ್ಣ. ಮತ್ತೆ ಹಾಗೆ ಮೆಲ್ಲನೇ ಇಬ್ಬರೂ ಚಾಪೆಯ ಮೇಲೆ ಕುಳಿತರು. ಗೋಡೆ ದೀಪವನ್ನು ಚಿಕ್ಕದನ್ನಾಗಿಸಿದ ನಂತರ ಚಂದ್ರಣ್ಣ ಹೇಳ ತೊಡಗಿದ, ಶಾಮಣ್ಣನ ಆತುರವನ್ನು ಹಿಂಗಿಸಲು "ನೋಡಿ...ನಿನ್ನೆ ನಾನು ಶಿವಮೊಗ್ಗದಿಂದ ಹೊರಟಿದ್ದೆ; ಈ ದಾರಿಯಾಗಿ ಮಂಗ್ಳೂರಿಗೆ ಹೋಗೋಣಾ ಎಂತ. ಎಂಟು ವರ್ಷವಾಯ್ತು ಈ ದಾರೀನ ಕಾಣದೆ? ದಾರಿಯನ್ನೇಕೆ ಊರನ್ನೇ ಕಾಣದೆ ಏಳು ವರ್ಷವಾಯ್ತು ನನ್ನ ದೂರದ ಗೆಳೆಯನೊಬ್ಬನಿಂದ ನನಗೆ ಊರಿನ ಸಮಾಚಾರ ತಿಳಿಯುತ್ತಿತ್ತು. ಮನೆಯಲ್ಲಿ ಸಿಟ್ಟು ಮಾಡಿಕೊಂಡು ಹೊರಟುಬಿಡಬೇಕಾದ ಪ್ರಸಂಗ ಬಂದಿತ್ತು, ಅಂದು....ಚಿಕ್ಕವ. ಆಗಿನ್ನೂ ಹದಿನೆಂಟರ ಪ್ರಾಯ. ಚಿಕ್ಕ ಪ್ರಾಯದ ಹುಡುಗಿಯೊಡನೆ ತಂದೆ ಒತ್ತಾಯಪೂರ್ವಕ ನನ್ನ ವಿವಾಹವನ್ನು ಪೂರೈಸಿದರು. ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದೆನಷ್ಟೆ. ನನಗೆ ಕೈಯಲ್ಲಿ ಖರ್ಚಿಗೆ ದುಡ್ಡಿರಲಿಲ್ಲ. ಕೆಲಸ ಮಾಡಲಿಕ್ಕೆ ಮನಸ್ಸಿರಲಿಲ್ಲ—ಪ್ರಾಯವೂ ಅಲ್ಲವೆನ್ನಿ. ಅಂತೂ ಆಗಾಗ ತಂದೆಯವರಿಂದ ಹಣ ತೆಗೆದುಕೊಳ್ಳುತ್ತಿದ್ದೆ. ಒಂದು ದೀಪಾವಳಿಗೆ ಹೆಂಡತಿಗೆ ಹೊಸ ಸೀರೆ ಕೊಡುವುದಿಲ್ವೇನೊ" ಎಂದು ಒಂದು ಜವಳಿ ಅಂಗಡಿಯವರು ಸೀರೆಯೊಂದನ್ನು ತೋರಿಸಿ ಅಂದಾಗ, 'ನನಗೆ ಅದನ್ನೇ ತೆಗೆದುಕೊಳ್ಳಬೇಕು" ಎಂದೆನಿಸಿತು. ಆದರೆ ಹಣ? ಚಿಕ್ಕ ಮಕ್ಕಳ ಬುದ್ಧಿ ನೋಡಿ.... ತಂದೆಯೊಡನೆ ಕೇಳಿದ್ರೆ ತಂದೆ ಹಣ ಕೊಡಲಿಲ್ಲವೆಂದು ಆ ರಾತ್ರಿ ನಾನು ಪೆಟ್ಟಿಗೆಯಿಂದ ಹಣವನ್ನು ಕದ್ದಿಟ್ಟುಬಿಟ್ಟೆ. ಸೀರೆ ತಗೊಂಡೇ ದೀಪಾವಳಿಗೆ ಹೋದೆ.... ಮುಗಿಸಿಕೊಂಡು ಬರುವಾಗ ಮನೆಯಲ್ಲಿ ದೊಡ್ಡ ರಾದ್ಧಾಂತವೇ ತೊಡಗಿತ್ತು. ಸಿಟ್ಟಿನಿಂದ ಕಿಡಿ ಕಾರುತ್ತಿದ್ದ ತಂದೆಯವರು ನನ್ನನ್ನು ಕಂಡೊಡನೇ ಒಮ್ಮೆಲೇ ಬಂದು ಬಡಿಯ ತೊಡಗಿದರು ಆ ದಿನ ಎಷ್ಟು ಹೊಡೆದರೆಂದರೆ ನಾನೀ ತನಕ ಅಂತಹ ಹೊಡೆತಗಳು ಬೀಳುವುದನ್ನು ಕಂಡೂ ಇಲ್ಲ, ಕೇಳಿಯೂ ಇಲ್ಲ.... ಮರುದಿನ ಬೆಳಗ್ಗೆ ಇದ್ದಕ್ಕಿದ್ದಂತೆ ಊರಿಂದ ಪರಾರಿಯಾದೆ...

ಸಿಟ್ಟುಸಿರೊಂದನ್ನು ಬಿಟ್ಟು ಮತ್ತೆ ಮುಂದರಿಸಿದೆ, ಮನೆಯ ಜ್ಞಾಪಕವಾಯಿತೋ ಏನೋ ...

"ಅಲ್ಲಿಂದ ಏಳು ವರ್ಷಗಳ ಕಾಲ ಅಜ್ಞಾತವಾಸದಲ್ಲಿರಬೇಕಾಯ್ತು. ಊರಿಗೇ ಹೋಗುವುದಿಲ್ಲವೆಂದು ನಿಶ್ಚಯಿಸಿ ಅಂದು ಹೊರಬಿದ್ದೆ. ಮೊದಲು ಒಂದು ಹೋಟೆಲಿನಲ್ಲಿ ಸಪ್ಲೈಯರ್ ಆಗಿ ದುಡಿಯತೊಡಗಿದವನು, ಕೊನೆಗೆ ಒಂದು ಚಿಕ್ಕ ಹೋಟೇಲನ್ನೇ ಕೊಳ್ಳುವಷ್ಟು ಶಕ್ತನಾದೆ.... ಈಗ ನೋಡಿ ಒಂದು ಹೋಟೇಲ್ ಮೆನೇಜರ್ ನಾಗುವಷ್ಟು ಪುಣ್ಯವಂತ ನಾನಾಗಿದ್ದೆ. ಆದ್ರೂ ಬಹಳ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಆದರೆ ಒಂದಿಷ್ಟು ಹಣ ಮಾಡಿ ತಂದೆಗೆ ತೋರಿಸಿಕೊಡಬೇಕೆಂಬ ನನ್ನ ಹಂಬಲ ಕಾರ್ಯರೂಪಕ್ಕೆ ಬರುತ್ತಲೇ ನನ್ನ ಕನಸು ನನಸಾಗಬೇಕೆ! ನನ್ನ ಸ್ನೇಹಿತ ಕಾಗ್ದ ಬರೆದಿದ್ದ "ನೀನು ಕೂಡಲೇ ಹೊರಟು ಬಾ. ನಿನ್ನ ಹೆಂಡತಿ ಮುತ್ತೈದೆಯಾಗಿದ್ದಾಳೆ. ಈ ಬಾರಿಯೂ ನೀನು ನನ್ನ ಮಾತನ್ನು ನೀನು ಮೀರುವುದಿಲ್ಲವೆಂದು ತಿಳಿಯುತ್ತೇನೆ ತಂದೆ ತಾಯಂದಿರಿಗೂ ಈ ಪ್ರಸ್ತಾಪ ತಿಳಿಸಿದ್ದೇನೆ" ಎಂದು. ನೋಡಿ ಶಾಮಣ್ಣ.... ಅಂದೇ ಹೋಟೇಲನ್ನೆಲ್ಲ ಮಾರುವ ಮನಸ್ಸು ನನಗಾಯಿತು... ಹಣವನ್ನೆಲ್ಲ ಕೂಡಿಸಿ ತಂದೆಗೆ ಕೊಡಬೇಕು. ತಾಯಿಯನ್ನು ಕಾಣಬೇಕು, ಹೆಂಡತಿಯನ್ನು ನೋಡಬೇಕು ಎಂಬ ಆಸೆ ನನ್ನನ್ನು ಬಲವತ್ತರವಾಗಿ ಪೀಡಿಸತೊಡಗಿತು. ಆಚೀಚೆ ನೋಡದೆ ನನ್ನ ಹೋಟೇಲನ್ನು ಮಾರಿದೆ. ನಿನ್ನೆ ಬೆಳಗ್ಗೆ ಅಲ್ಲಿಂದ ಹೊರಟೆ... ದಾರಿಯಲ್ಲಿ ಅದೇ ಪತ್ರ ನನ್ನ ಕಣ್ಣೆದುರು ಬಂದು ಕುಣಿಯುತಿತ್ತು ನೋಡಿ ಶಾಮಣ್ಣ ..... ...'

ಉಗುಳು ನುಂಗಿಕೊಂಡು ಮತ್ತೆ ಆತ ಹೇಳತೊಡಗಿದ.. "ಬಸ್ಸು ಅಲ್ಲಿಯೇ ತಪ್ಪಿ ಹೋಗಿತ್ತು. ಆದರೆ ಹಾಗೆಲ್ಲ ಆಗುವುದು ಸರ್ವಸಾಮಾನ್ಯವೆಂದು ಹಣವನ್ನು ಹಿಡಿದುಕೊಂಡು, ಮರುಬಸ್ಸಿಗೆ ನಾನಲ್ಲಿಂದ ಹೊರಟೆ ಆದರೆ ಬಸ್ಸು ಸೀತಾನದಿಯ ತನಕ ಬಂದಾಗ ಕತ್ತಲೆಯಾಗಿತ್ತು. ನಾನೊಬ್ಬನೇ ಹೊಳೆ ದಾಟಬೇಕಾದವನಿದ್ದೆ.... ಆದರೆ ಆವಸಿಗ ಕತ್ತಲೆಯಲ್ಲಿ ಜಲ್ಲಿ ಊರಲಿಕ್ಕೆ ತಿಳಿಯದ್ದರಿಂದ ನಾನು ಹೊಳೆಗೆ . ಬಿದ್ದುಬಿಟ್ಟೆ...

ಚಂದ್ರು ಮೆಲ್ಲನೆ ತಡೆತಡೆದು ನುಡಿದ .... ಶಾಮಣ್ಣನೊಡನೆ ತಾಯಿಯೂ "ಪಾಪ" ಎಂದು ದನಿಗೂಡಿಸಿದಳು...

"ದುಡ್ಡೆಲ್ಲಾ ಹೋಯ್ತು.... ಅಂತೂ ಜೀವವುಳಿತಲ್ಲ...." ಎಂದು ಶಾಮಣ್ಣ ನುಡಿದು, ಕುಳಿತ....

"ದುಡ್ಡು ಹೋದರೆ ಹೋಗಲಿ.... ಅಂತೂ ಜೀವವುಳಿಯಿತು. ನಿಮ್ಮೆಲ್ಲರ ದಯೆಯಿಂದ...." ಚಂದ್ರು ತಾನೂ ಕುಳಿತು ನುಡಿದ.

"ಏನು ದಯೆಯೋ... ಅಲ್ಲದಿದ್ದರೆ ಇವತ್ತು ಬೆಳಗ್ಗೆ ನಿಮ್ಮನ್ನು ಹೊಳೆಯಿಂದ ಎತ್ತಿಹಾಕಿ ಮನೆಗೆ ಸಾಗಿಸಲು ಒಬ್ಬರು ಬನ್ನಿ ಎಂದರೆ ನನ್ನ ಮಾತ್ನ ಕೇಳಬೇಕೇ...ಪರೋಪಕಾರವೆಂಬುದು ನಮ್ಮ ಜನರಿಗಿರುವಷ್ಟು

(೯ನೇ ಪುಟ ನೋಡಿರಿ)

## ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ನ್ಯಾಶೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

# ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.



# ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ. ಕಲಂ ಸೆಂಟಿ ಮೀಟರಿಗೆ 1-00

ಅನಿಯಮಿತ (ಕೆಜುವಲ್) ಕಲಂ ಸೆಂಟಿ ಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

### ಇತಿಹಾಸಾವಲೋಕನ

# ಆರ್ಯರ ಮೂಲಸ್ಥಾನ ಯಾವುದು?

ವೈದಿಕ ಕಾಲದ ಮಹಾ ಸಭ್ಯತೆಗೆ ಕಾರಣೀಭೂತರಾಗಿದ್ದ ಆರ್ಯರ ಜನ್ಮಭೂಮಿಯ ಬಗ್ಗೆ ಸಂದೇಹ—ಸಂಶಯಗಳು ಇನ್ನೂ ಹಾಗೆಯೇ ಉಳಿದಿವೆ. ಎಷ್ಟೋ ಶೋಧನೆಗಳಾದುವು. ಮಹಾನ್ ಸಂಶೋಧನಕಾರರು—ಇತಿಹಾಸಜ್ಞರು ಈ ವಿಚಾರದಲ್ಲಿ ಬಹು ಪರಿಶ್ರಮ ಮಾಡಿಯೂ ಕೊನೆಗೂ ಒಮ್ಮತದ ಒಂದೇ ಉತ್ತರವನ್ನೀಯಲು ಅಸಮರ್ಥರಾಗಿದ್ದಾರೆ. ಇದಕ್ಕೆ ಕಾರಣವೇನೆಂದರೆ ಈ ಆರ್ಯರ ಜನ್ಮಭೂಮಿಯ ಬಗ್ಗೆ ಸ್ಪಷ್ಟ ಉಲ್ಲೇಖವು ನಮಗೆ ವೈದಿಕ ಸಾಹಿತ್ಯದಲ್ಲಿ ಕಂಡುಬರುದಿಲ್ಲ. ಆದಾಗ್ಯೂ ಯುರೋಪ ಮತ್ತು ಭಾರತೀಯ ವಿದ್ವಾಂಸರು ಮಧ್ಯ ಏಷ್ಯಾ, ಯುರೋಪು, ಮತ್ತು ಭಾರತದ ಸಭ್ಯತೆಗಳನ್ನು ಅಭ್ಯಸಿಸಿ ಅದರ ಆಧಾರದ ಮೇಲೆ ಬೇರೆ ಬೇರೆ ಸ್ಥಳಗಳನ್ನು ಈ ಆರ್ಯರ ಮೂಲಸ್ಥಾನವೆಂಬುದಾಗಿ ಹೇಳುತ್ತಾರೆ. ಇದಕ್ಕೆ ಅವರಲ್ಲಿ ಪೂರ್ಣವಾದ ಸ್ಪಷ್ಟವಾದ ಪುರಾವೆಗಳು ಇಲ್ಲ, ಅವರು ಒಂದು ಸಾಹಸವನ್ನಷ್ಟೇ ಮಾಡುವ ಪ್ರಯಾಸ ವಹಿಸಿದ್ದಾರೆ.

**ಭಾರತೀಯ ವಿದ್ವಾಂಸರ ಮತ**

ಭಾರತದ ಸುಪ್ರಸಿದ್ಧ ಇತಿಹಾಸಜ್ಞರಾದ ಡಾ| ಅವಿನಾಶ ಚಂದದಾಸ್ ಮತ್ತು ಶ್ರೀ ಸಂಪೂರ್ಣಾನಂದರ ಅಭಿಪ್ರಾಯದಂತೆ ಆರ್ಯರ ಮೂಲ ಸ್ಥಾನ ಭಾರತವೇ ಆಗಿದೆ. ಅವರು ಹೊರಗಿಂದ ಬಂದವರೇ ಅಲ್ಲ. ಪಂಚ ನದಿಗಳ ಪಂಜಾಬವೇ ಅವರ ಮೂಲ ನಿವಾಸ ಸ್ಥಾನವಾಗಿತ್ತು. ತಮ್ಮ ಈ ಅಭಿಪ್ರಾಯಕ್ಕೆ ಅವರು ಋಗ್ವೇದದ ಕೆಲವು ಭೌಗೋಳಿಕ ಹಾಗೂ ಸಾಮಾಜಿಕ ಸಂಬಂಧಿ ವಿವರಗಳನ್ನೊಳಗೊಂಡ ಋಕ್‌ಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

ಋಗ್ವೇದದ ಈ ಭೌಗೋಳಿಕವರ್ಣನೆಯು ಸಪ್ತ ಸಿಂಧೂವಿನ ಪ್ರದೇಶದ್ದಾಗಿದೆ. ಮತ್ತು ರಾಜನೈತಿಕ ವಿವರಣೆಯು ಯಯಾತಿಯು ಮತ್ತು ಪಾಂಚಾಲದ ರಾಜವಂಶದೊಡನೆ ಸಂಬಂಧಿಸುವುದಾಗಿ ಭಾಸವಾಗುತ್ತಿದೆ. ಆದರೆ ಈ ಕಲ್ಪನೆಯು ಸರಿಯಲ್ಲವೆಂಬುದು ಋಗ್ವೇದದಲ್ಲಿನ ಮುಂದಿನ ಕೆಲವು ಋಕ್‌ಗಳಿಂದ ಸ್ಪಷ್ಟವಾಗುತ್ತದೆ. ಅವುಗಳ ಆಧಾರದ ಮೇಲೆ ಉಪರೋಕ್ತ ಭಾಗಗಳ ರಚನೆಯು ಆರ್ಯರ ಆ ಪ್ರದೇಶದಲ್ಲಿ ವಾಸಮಾಡಿದ ನಂತರ ಆದುದೆಂಬುದು ನಿರ್ಧಾರಮಾಡಬಹುದು ಆದರೆ ಆ ಸ್ಥಳವನ್ನು ಆರ್ಯರ ಮೂಲ ಸ್ಥಾನವೆಂದು ತೀರ್ಮಾನ ಮಾಡುವುದು ಬರೇ ಒಂದು ಭ್ರಮಾತ್ಮಕ ಮಾತ್ರವೇ ಅಲ್ಲ, ಭಯಂಕರವೂ ಆಗಿದೆ.

ಆರ್ಯರೇ ಭಾರತದ ಮೂಲ ನಿವಾಸಿಗಳೇ ಆಗಿದ್ದರೆ ಅವರು ತಮ್ಮ ವಾಸಸ್ಥಾನಕ್ಕೆಂದು ಪಂಜಾಬದ ಮೂಲ ನಿವಾಸಿಗರೊಡನೆ ಜಗಳ ಏಕೆ ಮಾಡಿದರು? ಅವರೊಳಗೆ ಪರಸ್ಪರ ಸಂಘರ್ಷ ಏಕೆ ಉಂಟಾಯಿತು ಅವರು ತಮ್ಮ ಶತ್ರುಗಳನ್ನು ದಸ್ಯು, ರಾಕ್ಷಸರೆಂಬ ಕೆಟ್ಟ ಹೆಸರಿನಿಂದ ಯಾಕೆ ಕರೆದರು? ಋಗ್ವೇದದಲ್ಲಿ ಈ ವಿಚಾರವಾಗಿ ಸ್ಪಷ್ಟ ವಿವರಣೆಗಳು ಸಿಗುತ್ತವೆ. ಮತ್ತು ಆರ್ಯರು ಯಾರನ್ನು ದಸ್ಯುಗಳು, ರಕ್ಷಸರೆಂದು ಕರೆದಿದ್ದಾರೆಯೋ ಅವರನ್ನು ಪಂಜಾಬದ ಮೂಲ ನಿವಾಸಿಗಳೆಂದು ಹೇಳುವ 'ಋಕ್'ಗಳು ಋಗ್ವೇದದಲ್ಲಿವೆ.

ಆರ್ಯರು ಭಾರತದ ಮೂಲ ನಿವಾಸಿಗಳಾಗಿರಲಿಲ್ಲವೆಂಬುದಕ್ಕೆ ಅವರ ವಿಸ್ತೃತ ಸಭ್ಯತೆಯೇ ಸಾಕ್ಷಿಯಾಗಿದೆ. ಋಗ್ವೇದದಲ್ಲಿ ಆರ್ಯರ ಸಭ್ಯತೆಯು ಪೂರ್ವದಿಂದ ಪಶ್ಚಿಮ ಮತ್ತು ಉತ್ತರದ ತನಕ ಹಬ್ಬುತ್ತೆಂಬುದಕ್ಕೆ ಸಾಕಷ್ಟು ಪ್ರಚುರ ಸಾಮಗ್ರಿಗಳು ಇವೆ. ಈ ಎಲ್ಲಾ ವಿಷಯಗಳಿಂದ ಆರ್ಯರ ಉಗಮಸ್ಥಾನ ಭಾರತವಲ್ಲವೆಂಬುದು ವಿದಿತವಾಗುತ್ತದೆ. ಸಪ್ತ ಸಿಂಧೂವು ಅವರ ಮೂಲ ನಿವಾಸ ಸ್ಥಾನವಲ್ಲ—ಅದು ಅವರು ಶತ್ರುಗಳೊಡನೆ ಹೋರಾಡಿ ಪಡೆದ ಒಂದು ರಾಜ್ಯವಷ್ಟೇ ಆಗಿದೆ.

**ಆರ್ಯರು ಮತ್ತು ಧ್ರುವ ಪ್ರದೇಶ**

ಈ ದಿಶೆಯಲ್ಲಿ ಲೋಕಮಾನ್ಯ ತಿಲಕರ ಮತ ಇನ್ನೊಂದಿದೆ. ಅವರು ಋಗ್ವೇದದಲ್ಲಿ ಕಂಡುಬರುವ ೬ ತಿಂಗಳು ರಾತ್ರಿ, ೬ ತಿಂಗಳು ಹಗಲು ಮೊದಲಾದುವುಗಳನ್ನು ಕಂಡು ಈ ಆರ್ಯರ ಮೂಲಸ್ಥಾನ ಧ್ರುವ ಪ್ರದೇಶವೇ ಆಗಿರಬೇಕೆಂದು ಹೇಳಿದರು. ಆರ್ಯರು ಮೊದಲು ವಾಸಿಸಿ ಕ್ರಮೇಣ ದುರ್ಗಮವೂ ವಾಸಕ್ಕೆ ಅಯೋಗ್ಯವೂ ಆದ ಸ್ಥಳವನ್ನು ಬಿಟ್ಟು ಭಾರತದ ಫಲವತ್ತಾದ ಗಂಗಾ ಬಯಲಿಗೆ ಬಂದರೆಂಬುದು ಲೋಕಮಾನ್ಯರ ಅಭಿಪ್ರಾಯವಾಗಿದೆ.

ಆದರೆ ವೇದದಲ್ಲಿ ಬಂದ ಒರೇ ಪ್ರಾಕೃತಿಕ ದೃಶ್ಯಗಳ ಆಧಾರದ ಮೇಲೆ ಆರ್ಯರು ಧ್ರುವಪ್ರದೇಶದ ನಿವಾಸಿಗಳು ಎಂದು ಉಚಿತವಾಗಿ ಹೇಳುವಂತಿಲ್ಲ. ಇದೊಂದು ವಿಚಿತ್ರ ಕಲ್ಪನೆಯೆಂದರೂ ಅತಿಶಯೋಕ್ತಿಯಲ್ಲ. ಯಾಕೆಂದರೆ ಋಗ್ವೇದವು ಒಂದು ಸಾಹಿತ್ಯ ಗ್ರಂಥವಾಗಿದೆ. ಇಂಥ ಶ್ರೇಷ್ಠ ಸಾಹಿತ್ಯ ಗ್ರಂಥದಲ್ಲಿ ಪ್ರತ್ಯಕ್ಷ ಕಂಡ ದೃಶ್ಯಗಳ ಆಧಾರದ ಮೇಲೆ ಸರ್ವ ವಿಷಯಗಳೂ ಪೋಣಿಸಿಯೆನ್ನಲಾಗುವುದಿಲ್ಲ ಮಾತ್ರವಲ್ಲದೆ, ಪರಂಪರೆಯಾಗಿ ಕಂಠಸ್ಥವಾಗಿ ಬಂದ ವಿಚಾರಗಳೂ ಈ ವೇದದಲ್ಲಿದೆ. ಆದುದರಿಂದ ಉಪರೋಕ್ತ ೬ ತಿಂಗಳು ರಾತ್ರಿ ೬ ತಿಂಗಳು ಹಗಲೆಂಬ ವಿಚಾರವೂ ಇದೇ ಆಧಾರದ ಮೇಲೆ ಬರೆದಿರಬಹುದು. ನಾವು ಕೂಡಾ ಇಂದು ಇಲ್ಲಿ ಕುಳಿತುಕೊಂಡರೂ ಧ್ರುವಪ್ರದೇಶದಲ್ಲಿರುವ ಒಂದು ಅಪ್ರಾಪ್ತವಾದ ವಸ್ತುವಿನ ದೃಶ್ಯವನ್ನು ಸೃಜಿಸಬಹುದು. ಆದುದರಿಂದ ಆರ್ಯರು ಕೂಡಾ ಹಾಗೆಯೇ ಮಾಡಿರಬಹುದೆಂದು ಹೇಳಲು ಅವಕಾಶವಿದೆ. ಒಂದು ವೇಳೆ ಅವರು ಧ್ರುವ ಪ್ರದೇಶದ ನಿವಾಸಿಗಳಾಗಿದ್ದರೆ ವೇದದಲ್ಲಿ ಈ ಧ್ರುವ ಪ್ರದೇಶದ ಬಗ್ಗೆ ಪ್ರಸ್ತಾಪ ಬರಬೇಕಿತ್ತು. ಆದ ದರಿಂದ ಆರ್ಯರ ಮೂಲಸ್ಥಾನ ಧ್ರುವ ಪ್ರದೇಶವೆನ್ನಲು ಏನೇನೂ ಆಧಾರ ಸಿಕ್ಕುವುದಿಲ್ಲ.

**ಆರ್ಯರು ಮತ್ತು ಮಧ್ಯ ಏಶಿಯಾ**

ಋಗ್ವೇದದ ಕೆಲವೊಂದು ಮಂತ್ರಗಳಲ್ಲಿ ಮತ್ತು ಪ್ರಾಚೀನ ಇರಾನಿಯರ ಧಾರ್ಮಿಕ ಗ್ರಂಥ 'ಜೆಂದ್ ಅವಸ್ಥಾ'ದ ಕೆಲವು ವಚನಗಳಲ್ಲಿ ಸಾಮ್ಯತೆಯು ಕಂಡುಬರುತ್ತಿದೆ. ಕೆಲವು ದೇವತೆಗಳ ಹೆಸರುಗಳಲ್ಲಿ ಈ ಸಾಮ್ಯತೆಯು ನಿಕಟವಾಗಿ ಗೋಚರವಾಗುವುದನ್ನು ಕಂಡ ಪಾಶ್ಚಾತ್ಯ ವಿದ್ವಾಂಸರು ಆರ್ಯರ ಮೂಲಸ್ಥಾನ 'ಮಧ್ಯ ಏಶಿಯಾ' ಆಗಿದೆಯೆಂದು ಹೇಳಿದ್ದಾರೆ.

ಆದರೆ ಈ ಭಾಷೆ ಮತ್ತು ದೇವತೆಗಳ ಹೆಸರುಗಳಲ್ಲಿ ಸಮಾನತೆಯುಂಟೆಂದು, ಆರ್ಯರನ್ನು ಮಧ್ಯ ಏಶಿಯದವರೆಂದು ಹೇಳುವುದು ಸಮ್ಮತವಾಗಲಾರದು. ಆರ್ಯರು ಸ್ವಲ್ಪ ಸಮಯ ಮಧ್ಯ ಏಶಿಯಾದಲ್ಲಿ ಇರಾನಿಗಳೊಡನೆ ಒಟ್ಟಿಗೆ ಇದ್ದಿರಬಹುದು. ಆನಂತರದಿಂದ ಉಪರೋಕ್ತ ಸಮಾನತೆಗಳು ಉಂಟಾಗಿರ ಬಹುದು. ಮಾತ್ರವಲ್ಲದೆ ಆರ್ಯರು ಮತ್ತು ಇರಾನಿಗಳ ಮಧ್ಯೆ ವಿಶ್ವಾದ ವರೆಗೆ ಪಟ್ಟಿಗೆ ಒಂದುನೆಂಬುದಕ್ಕೆ ಕೂಡಾ ಪುರಾವೆಗಳಿರುವಾಗ ಆರ್ಯರ ಮೂಲ ಸ್ಥಾನ ಮಧ್ಯ ಏಶಿಯಾ ಎನ್ನುವುದು ನಿರಾಧಾರವಾದ ಮಾತಾಗಿದೆ.

ಇಲ್ಲಿ ನಮ್ಮ ಮನಸ್ಸಿಗೆ ಹೊಳೆಯುವ ಇನ್ನೊಂದು ವಿಚಾರವೆಂದರೆ, ಮಧ್ಯ ಏಶಿಯಾದಂತಹ ಮರು ಭೂಮಿ ಪ್ರದೇಶವು ಗೋಪಾಲಕರಾದ ಆರ್ಯರ ಮೂಲ ಸ್ಥಾನವಾಗಬಹುದೇ? ಎಂಬುದು. ಇದೊಂದು ಕಲ್ಪನೆ ಮಾತ್ರ. ಇಂಥ ಕಲ್ಪನೆಯಿಂದ ಈ ಮಹಾ ಸಮಸ್ಯೆ ಪರಿಹಾರವಾಗುವುದು ಅಸಾಧ್ಯವಾದ ವಿಚಾರವಾಗಿದೆ.

**ಇತರ ಆಧಾರಗಳು**

ಆರ್ಯರ ಉತ್ಪತ್ತಿಯ ಬಗ್ಗೆ ಜಗತ್ತಿನ ಎಲ್ಲಾ ಇತಿಹಾಸಜ್ಞರ ಸಂಶೋಧನೆ ಕಾರರ ಕುತೂಹಲ ದೃಷ್ಟಿ ಹರಿದಿದೆ. ಅವರಲ್ಲಿ ಕೆಲವರು ಈ ಆರ್ಯರ ಮೂಲಸ್ಥಾನ ಫಿನ್‌ಲೇಂಡ್ ಮತ್ತು ದಕ್ಷಿಣ ರಷ್ಯಾ ಆಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ತಮ್ಮ ಈ ಧಾರಣೆಯನ್ನು ಪ್ರಮಾಣೀಕರಿಸಲು ಅವರಲ್ಲಿ ಪ್ರತ್ಯಕ್ಷ ಪುರಾವೆಗಳಿಲ್ಲ; ವೇದಗಳಲ್ಲಂತೂ ಈ ಬಗ್ಗೆ ಪ್ರಸ್ತಾಪವಿಲ್ಲ. ಹಾಗಿರುವಾಗ ಊಹನೆ ಮಾಡಿದ ಈ ಸ್ಥಳಗಳನ್ನು ಆರ್ಯರ ಉತ್ಪತ್ತಿಯ ಮೂಲಸ್ಥಾನವೆಂದು ಹೇಳುವುದಾದರೂ ಹೇಗೆ? ಆದುದರಿಂದ ರಷ್ಯಾ ಫಿನ್‌ಲೇಂಡ್ ಆರ್ಯರ ಉಗಮ ಸ್ಥಾನವಲ್ಲವೆಂದು ಉಚಿತವಾಗುತ್ತದೆ.

**ಸಮಸ್ಯಾ ಪರಿಹಾರ**

ಇಂಥ ವಿವಾದ ಪೂರ್ಣ ವಿಷಯವನ್ನು ಪರಿಹರಿಸಲು ಈ ವರೆಗೆ ಮೊದಲು ಹೇಳಿದಂತೆ ಯಾವೊಂದೂ ಸ್ಪಷ್ಟ ಪ್ರಮಾಣ ದೊರೆತಿಲ್ಲ. ಆದರೂ ಆರ್ಯರ ದೈನಂದಿನ ಜೀವನ, ಉದ್ಯೋಗ, ಕೃಷಿ ಪಶು ಪಾಲನೆ ಮತ್ತು ಸಾಮಾಜಿಕ ಜೀವನವನ್ನು ಅಧ್ಯಯನ ಮಾಡಿದಾಗ ನಾವೊಂದು ನಿಷ್ಕರ್ಷೆಗೆ ಬರುವುದು ಸಾಧ್ಯವಾಗುತ್ತದೆ.

ಆರ್ಯರು ಬೀಚ್', ಓಕ್', ಮತ್ತು ವಿಲೋಸ್'' ಎಂಬ ಮೊತ್ತನೆಯ ಮರಗಳ ಹೆಸರಿನಿಂದ ಸುಪರಿಚಿತರಾಗಿದ್ದರು. ಈ ಮರಗಳು ಸಮಶೀತೋಷ್ಣ ಪ್ರದೇಶದಲ್ಲಿ ಬೆಳೆವವುಗಳಾಗಿವೆ. ಇದರಿಂದ ಆರ್ಯರಿಗೆ ಸಮಶೀತೋಷ್ಣ ಪ್ರದೇಶದ ಪರಿಚಯವಿತ್ತೆಂಬುದು ಉಚಿತವಾಗುತ್ತದೆ.

ಆರ್ಯರು ಗೋದಿಯನ್ನು ಆಹಾರವಾಗಿ ಸೇವಿಸುತ್ತಿದ್ದರೆಂಬುದು ಋಗ್ವೇದದಿಂದ ಸ್ಪಷ್ಟವಾದ ವಿಚಾರವಾಗಿದೆ. ಹಾಗಿರುವಾಗ ಅವರಿಗೆ ಗೋದಿಯ ಕೃಷಿ ಮಾಡುವುದು ಗೊತ್ತಿತ್ತು. ಗೋದಿಯ ಕೃಷಿ ಮಾಡಬೇಕಾದರೆ ಒಂದು ಸ್ಥಳದಲ್ಲಿ ಸ್ಥಿರವಾಗಿ ವಾಸ ಮಾಡುವವರಾಗಿರಬೇಕು. ಇದರಿಂದ ಆರ್ಯರು ಗೋದಿ ಬೆಳೆಯುವ ಪ್ರದೇಶದಲ್ಲಿನ ನಿವಾಸಿಗಳಾಗಿದ್ದರೆಂಬುದು ವಿದಿತವಾಗುತ್ತದೆ.

ಆರ್ಯರು ದನ, ಆಡು, ಕುರಿ ಮತ್ತು ಕುದುರೆಗಳನ್ನು ಸಾಕುತ್ತಿದ್ದರು. ಈ ಸಾಕು ಪ್ರಾಣಿಗಳನ್ನು ಪಾಲಿಸಲು ವಿಶಾಲವಾದ ಹುಲ್ಲುಗಾವಲು ಯುಕ್ತ ಭೂಮಿ ಬೇಕು. ಆದುದರಿಂದ ಆರ್ಯರು ವಿಶಾಲವಾದ ಹುಲ್ಲುಗಾವಲು ಪ್ರದೇಶದಲ್ಲಿ ವಾಸಮಾಡಿಕೊಂಡಿದ್ದರು. ಅದೇ ಅವರ ಮೂಲ ಸ್ಥಾನ ಎನ್ನಲು ಆಸ್ಪದವಿದೆ. ಇವರಿಗೆ ಸಮುದ್ರದ ಜ್ಞಾನವೂ ಇತ್ತೆಂದು ವೇದದಲ್ಲಿ ಹೇಳಿದೆ.

ಮೇಲೆ ಹೇಳಿದ ಎಲ್ಲಾ ಆಧಾರಗಳ ಮೇಲೆ ಆರ್ಯರು ಸಮಶೀತೋಷ್ಣ ವಲಯದ ವಿಶಾಲವಾದ ಬಯಲು ಪ್ರದೇಶದಲ್ಲಿ ಪ್ರಧಾನವಾಗಿ ವಾಸಿಸಿದ್ದರು ಎಂದು ಉಚಿತವಾಗಿ ಹೇಳಬಹುದು. ಇದರಿಂದ ದಕ್ಷಿಣ ರಷ್ಯಾ, ಫಿನ್‌ಲೇಂಡ್ ಯಾ ಉತ್ತರ ಧ್ರುವ ಪ್ರದೇಶವು ಅವರ ಮೂಲಸ್ಥಾನವಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಪಾಶ್ಚಾತ್ಯ ವಿದ್ವಾಂಸ ಶ್ರೀ ಜಾಯಿಲ್ಸ್ ಮತ್ತು ಭಾರತೀಯ ವಿದ್ವಾಂಸ ಡಾ| ರಾಧಾಕುಮುದ ಮುಖರ್ಜಿಯವರು ಉಪರೋಕ್ತ ಆಧಾರದ ಮೇಲೆ ಆರ್ಯರ ಉಗಮ ಸ್ಥಾನವು ಡೆನ್ಯೂಬ್ ನದಿ ಬಯಲು (ಆಸ್ಟ್ರಿಯ) ಹಂಗೇರಿ ಮತ್ತು ಬೊಹೇಮಿಯಾದ ಮೈದಾನಗಳೆಂದು ನಿರ್ಧರಿಸಿದ್ದಾರೆ. ಇದಕ್ಕೆ ಮಿಂಥಾಭೂ ಪ್ರಾಯವಿದ್ದರೂ ಅದೆಲ್ಲ ನಿರಾಧಾರವಾಗಿರುವುದರಿಂದ ಆ ಪ್ರದೇಶಗಳೇ ಆರ್ಯರ ಮೂಲಸ್ಥಾನವೆಂದು ನಿರ್ಧರಿಸಲಾಗಿದೆ.

— ಬಿ. ನ ರಾಯಣ ಜೋಯಿಸ್ತಾಯ.


ನಿಮ್ಮ ಉಪಕಾರಕ್ಕಾಗಿ.......ಉಳಿತಾಯ.

ಉಳಿತಾಯ ಮಾಡಿದರೆ,

ನಿಮಗೆ ನೀವೇ ಉಪಕಾರ ಮಾಡಿದಂತೆ.

ಉಳಿತಾಯ ಮಾಡಿರಿ; ಉಪಕಾರ ಪಡೆಯಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

### ಇಂದು ನಮಗೆ ಬೇಕೆನಿಸುತ್ತದೆ

# ಮಹಾತ್ಮರ ರಚನಾತ್ಮಕ ಕಾರ್ಯಕ್ರಮಗಳು

ಮಹಾತ್ಮ ಗಾಂಧೀಜಿಯವರು ನಮ್ಮ ರಾಷ್ಟ್ರಪಿತನೆಂದೆನಿಸಿಕೊಳ್ಳಲು ಅವರ ರಚನಾತ್ಮಕ ಕಾರ್ಯಕ್ರಮಗಳು ಮೂಲಾಧಾರವಾಗಿವೆ. ೧೯೩೦ರಲ್ಲಿ ಗಾಂಧೀಜಿಯವರ ಸತ್ಯ ಅಹಿಂಸೆಯ ವಿಧಾನದ ಸ್ವಾತಂತ್ರ್ಯ ಚಳವಳಿಯನ್ನು ಕಾಂಗ್ರೆಸ್ ಪಾರ್ಟಿಯೂ ಇತರ ದೊಡ್ಡ ಮಹನೀಯರೂ ಅರ್ಥಮಾಡಿಕೊಳ್ಳಲಿಲ್ಲ. ಇದರಿಂದ ಮಹಾತ್ಮರು ಕಾಂಗ್ರೆಸ್ ಪಕ್ಷದಿಂದ ಹೊರಬಂದು ಹಳ್ಳಿಗಳ ಸರ್ವತೋಮುಖವಾದ ಅಭಿವೃದ್ಧಿಗೆ ಬದ್ಧಕಂಕಣರಾದರು. ಅದಕ್ಕೋಸ್ಕರ ಅವರು ಮಾಡಿದ ಕಾರ್ಯಕ್ರಮಗಳು ರಚನಾತ್ಮಕವಾಗಿದ್ದುವು. ಈ ಸಮಯದಲ್ಲಿ ಅವರು ಸೇವಾಗ್ರಾಮ ಆಶ್ರಮದಲ್ಲಿದ್ದರು. ಅವರು ತೊಡಗಿದ್ದ ೧೯ ರಚನಾತ್ಮಕ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರವನ್ನು ಕೊಡಲು ಯತ್ನಿಸಲಾಗುವುದು. ಈ ರಚನಾತ್ಮಕ ಕಾರ್ಯಕ್ರಮಗಳನ್ನು ಸತ್ಯ ಮತ್ತು ಅಹಿಂಸಾತ್ಮಕ ಸಾಧನೆಗಳ ಮೂಲಕವಾದ ಸ್ವಾತಂತ್ರ್ಯ ಭಾರತದ ರಚನೆಯೆಂದು ಹೇಳಬಹುದು. ಅವುಗಳ ಪ್ರತಿಯೊಂದು ಅಂಗವೂ ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ.

**ಮತೈಕ್ಯ:** ಐಕ್ಯವೆಂಬುದು ಆತ್ಮೀಯ ಗೆಳೆತನದಂತಿದ್ದು ಎಂತಹ ಸಂದರ್ಭದಲ್ಲಿಯೂ, ತುಂಡಾಗುವಂತಿರಬಾರದು. ಮತ್ತು ರಾಜನೈತಿಕಒಕ್ಕಟ್ಟು ಮಾತ್ರವೂ ಆಗಬಾರದು. ಇದಕ್ಕೋಸ್ಕರ ಹಿಂದೂ, ಮುಸ್ಲಿಂ, ಸಿಖ್ಖ, ಕ್ರಿಶ್ಚನ್, ಪಾರಸಿ, ಯಹೂದಿ ಮೊದಲಾದ ಎಲ್ಲಾ ಜಾತಿಯವರು ತಮ್ಮ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ನಮ್ಮ ದೇಶದ ಕಾಲ, ಸನ್ನಿವೇಶಕ್ಕೆ ಅನುಗುಣವಾಗುವಂತೆ ಹೊಂದಿಕೊಂಡಿರಬೇಕು. ಇದಕ್ಕೋಸ್ಕರ ಮಹಾತ್ಮಾಜಿಯವರು ಜೀವನಪರ್ಯಂತ ಹೋರಾಡಿದರೂ, ಹಿಂದೂ ಮುಸ್ಲಿಂ ಐಕ್ಯತೆಯನ್ನು ಸ್ಥಾಪಿಸಲು ಅಶಕ್ತರಾದರು.

**ಅಸ್ಪೃಶ್ಯತಾ ನಿವಾರಣೆ:** ನಮ್ಮ ದೇಶದಲ್ಲಿ ಹೊಲೆಯರನ್ನು ತೋಟಿಗಳನ್ನು ಅಸ್ಪೃಶ್ಯರೆಂದು ಪರಿಗಣಿಸುತ್ತಿದ್ದುದನ್ನು ಗಾಂಧೀಜಿಯವರಿಗೆ ಕಂಡು ಸಹಿಸಲಾಗಲಿಲ್ಲ. ಅವರು ಈ ಹೊಲೆಯರನ್ನು ಹರಿಜನರೆಂದು ಕರೆದು ಅವರಿಗೆ ಮನೆ, ಮಠ, ಶಾಲೆ, ಆಸ್ಪತ್ರೆಗಳನ್ನು ಒದಗಿಸಲು ಸಹಾಯಕರಾದರು. ಹಿಂದುಗಳ ದೇವಾಲಯಕ್ಕೆ ಪ್ರವೇಶಿಸಿ ಹಿಂದುಗಳೂ ಹರಿಜನರನ್ನು ಸ್ವೀಕರಿಸುವಂತೆ ಮಾಡಿದರು. ಹೀಗೆ ಹರಿಜನರ ಜೀವನದ ಉದ್ಧಾರಕ್ಕೋಸ್ಕರ ದುಡಿದು ಅವರ ಜೀವನ ಮಟ್ಟವನ್ನು ಏರಿಸಿ ಸುಧಾರಿಸಿದರು. ಹರಿಜನರ ಉದ್ಧಾರಕ್ಕೋಸ್ಕರ ಪ್ರತಿಯೊಬ್ಬ ಹಿಂದೂವು ಅವರ ಕೆಲಸವನ್ನು ತಮ್ಮ ಪವಿತ್ರ ಕೆಲಸವೆಂದು ತಿಳಿದು ಶ್ರದ್ಧೆಯಿಂದ ಮಾಡಬೇಕೆಂದು ಹೇಳಿದ್ದಾರೆ.

**ಮಧ್ಯ ನಿಷೇಧ;** ಭಾರತದ ಜನರು ಬಡವರಾದರೂ, ಮಧ್ಯ, ಅಫೀಮು, ಬೀಡಿ, ಸಿಗರೇಟು ಮುಂತಾದುವುಗಳ ಸೇವನೆಯಗುಲಾಮರಾಗಿರುವದನ್ನು ಮಹಾತ್ಮರಿಗೆ ಕಾಣಲಾಗಲಿಲ್ಲ. ಇದರಿಂದ ಭಾರತೀಯರ ಭವಿಷ್ಯವೇ ಅಂಧಕಾರಮಯವಾಗಲು ಸಾಧ್ಯವಿದೆ. ಇವುಗಳನ್ನು ಮಹಾತ್ಮರು ಪ್ರಬಲವಾಗಿ ವಿರೋಧಿಸಿದರು.

**ಖಾದಿ:** ಖಾದಿ ಕೇವಲ ಪ್ರದರ್ಶನಕ್ಕೆ ತೊಡುವದಲ್ಲ. ಖಾದಿಯ ಪ್ರತಿಯೊಂದು ಅಂಗ ಅಂಗಗಳಲ್ಲಿಯೂ ದೇಶಭಕ್ತಿಯ ಭಾವಗಳು ತುಂಬಿವೆ. ಇದರಿಂದ ಭಾರತದ ಗುಡಿ ಕೈಗಾರಿಕೆಯು ಉನ್ನಯನ ಸ್ಥಿತಿಗೇರಿ, ನಾವು ಸ್ವಾವಲಂಬಿಗಳಾಗುತ್ತೇವೆ. ಖಾದಿಯಿಂದ ಆರ್ಥಿಕ, ಸಮಾನತೆ ತರಲು ಮತ್ತು ಸ್ವತಂತ್ರರಾಗಿ ಬಾಳಲು ಸಾಧ್ಯವಿದೆ. ಮಹಾತ್ಮಾಜಿಯವರು ಈ ಉದ್ದೇಶದಿಂದ ಎಲ್ಲರೂ ಖದ್ದರ್ ಬಟ್ಟೆ ಧರಿಸಬೇಕೆಂದು ಹೇಳಿದರು.

**ಗ್ರಾಮೋದ್ಯೋಗ:** ಭಾರತದ ಆರ್ಥಿಕ, ಔದ್ಯೋಗಿಕ, ಸಾಮಾಜಿಕ ಸುಧಾರಣೆಯಾಗಲು ಗುಡಿ ಕೈಗಾರಿಕೆಗಳು ಮೊದಲು ಉಚ್ಛ್ರಾಯ ಸ್ಥಿತಿಗೇರಬೇಕು. ಜೇಂಕಿಪೆಟ್ಟಿಗೆ, ಕಾಗದ ತಯಾರಿ, ಬಟ್ಟೆ ತಯಾರಿ, ಸಾಬೂನ್ ತಯಾರಿ, ಚರ್ಮದ ಕೆಲಸಗಳು, ಕುಸ್ಕ ಬುಟ್ಟಿಗಳ ತಯಾರಿ, ಮೊದಲಾದುವುಗಳಿಗೆ ಪ್ರೋತ್ಸಾಹ ಕೊಡಬೇಕು ಎಂದು ಮಹಾತ್ಮರ ಪ್ರಬಲ ಅಪೇಕ್ಷೆಯಾಗಿತ್ತು. ಇಂತಹ ಗ್ರಾಮೋದ್ಯೋಗಗಳಿಗೆ ವ್ಯಾಪಾರಿಗಳೂ, ಪಟ್ಟಣಿಗರೂ, ಸರಕಾರವೂ ಸಹಕಾರ ಪ್ರೋತ್ಸಾಹಗಳನ್ನು ಕೊಡಬೇಕಾದುದು ಅತ್ಯಗತ್ಯವಾಗಿದೆ.

**ಗ್ರಾಮ ಸ್ವಚ್ಛತೆ:** ನೈಸರ್ಗಿಕ ಸೌಂದರ್ಯದಿಂದ ಕಂಗೊಳಿಸುತ್ತಿರಬೇಕಾದ ಗ್ರಾಮಗಳು ಹೊಲಸಾಗಿರದೆ ಅವುಗಳ ಸ್ವಚ್ಛತೆ ಮಾಡುವುದಕ್ಕೋಸ್ಕರ ಪ್ರತಿಯೊಬ್ಬ ಗ್ರಾಮಸ್ಥನೂ, ತನ್ನ ಸ್ವಲ್ಪ ಸಮಯವನ್ನು ಉಪಯೋಗಿಸಿ, ಎಲ್ಲರೊಡನೆ ಕಲೆತು ಕೆಲಸ ಮಾಡಬೇಕು. ಇದರಿಂದ ಗ್ರಾಮಸ್ಥರ ಆರೋಗ್ಯ ಮಟ್ಟವೇ ಉತ್ತಮವಾಗುತ್ತದೆ.

**ಬುನಿಯಾದಿ ಶಿಕ್ಷಣ:** ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ವಿಕಾಸವಾಗಲು ಬುನಿಯಾದಿ ಶಿಕ್ಷಣವು ಆಗತ್ಯವೆಂದು ಶ್ರೀ ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಅದಕ್ಕೋಸ್ಕರ ಬುನಾದಿ ತರಬೇತಿಯ ಶಾಲೆಗಳನ್ನು ಮಾತ್ರವಲ್ಲದೆ ಎಲ್ಲಾ ಶಿಕ್ಷಣ ಕ್ರಮದಲ್ಲಿಯೂ, ಶಿಕ್ಷಣವು ಬುನಾದಿಯ ರೂಪದಲ್ಲಿಯೇ ದೊರಕುವಂತೆ ಆಗಬೇಕೆಂದು ಅವರ ಅಭಿಪ್ರಾಯವಾಗಿತ್ತು.

**ಪ್ರೌಢ ಶಿಕ್ಷಣ:** ಪ್ರೌಢರಿಗೆ ಶಿಕ್ಷಣ ದೊರಕಿಸುವ ಏರ್ಪಾಡು ಮಾಡಿದ ಗಾಂಧೀಜಿಯವರ ಕಾರ್ಯ ಅತ್ಯಂತ ಶ್ಲಾಘ್ಯವಾಗಿದೆ. ಇವರಿಗೆ ಅವರ ಮಾತೃಭಾಷೆಯೂ ದೇಶದ ರಾಷ್ಟ್ರ ಭಾಷೆಯ ಮೂಲಕ ಶಿಕ್ಷಣ ಕೊಡಬೇಕು ಎಂದು ಗಾಂಧೀಜಿಯವರ ಅಭಿಪ್ರಾಯ. ಅವರಿಗೆ ರಾಜಕೀಯ ಮತ್ತು ವ್ಯಾವಹಾರಿಕ ಶಿಕ್ಷಣ ಕೊಡಬೇಕು ಎಂದೂ ಹೇಳಿದ್ದರು. ಇದಕ್ಕೋಸ್ಕರ ಗ್ರಾಮ ಗ್ರಾಮಗಳಲ್ಲಿನ ವಿದ್ಯಾವಂತರು ಶಾಲೆಗಳನ್ನು ತೆರೆದು ಅವಿದ್ಯಾವಂತ ಪ್ರೌಢರನ್ನು ಸುಶಿಕ್ಷಿತರನ್ನಾಗಿ ಮಾಡಬೇಕೆಂದೂ ಮಹಾತ್ಮರು ಹೇಳಿದರು.

**ಸ್ತ್ರೀಯರು:** ಪ್ರಾಚೀನ ಮೂಢಪದ್ಧತಿಗಳಿಂದ ಸಂಕಷ್ಟಗಳಿಗೀಡಾಗಿರುವ ಸ್ತ್ರೀಯರನ್ನು ಗಾಂಧೀಜಿಯವರು ಅವರ ಯೋಗ್ಯ ಸ್ಥಾನದಲ್ಲಿರಿಸಲು ಬಯಸಿದರು. "ಪರದಾ" ಪದ್ಧತಿಯನ್ನು ಬಿಡಲು ಹೇಳಿದರು, ಪುರುಷನು ಸ್ತ್ರೀಯನ್ನು ತಾಯಿಯೂ ಸಹೋದರಿಯಂತೆ ಕಾಣಬೇಕು ಎಂದು ಹೇಳಿದರು. ಇದಕ್ಕೋಸ್ಕರ ಕಾಂಗ್ರೆಸ್ಸಿನವರು ಹೆಚ್ಚು ಆಸ್ಥೆಯಿಂದ ಕೆಲಸ ಮಾಡಬೇಕೆಂದೂ ಹೇಳಿದರು.

**ಆರೋಗ್ಯದ ನಿಯಮಗಳ ಪಾಲನೆ:** ಭಾರತದಲ್ಲಿ ಆರೋಗ್ಯವಂತ ಜನರ ಸಂಖ್ಯೆ ಅತಿ ವಿರಳ, ಇಲ್ಲಿರುವವರು ತಮ್ಮ ಆರೋಗ್ಯದ ಕಡೆಗೆ ಏನೂ ಲಕ್ಷ್ಯ ಕೊಡುವದಿಲ್ಲ. ಮಾನಸಿಕ ಶಕ್ತಿಯ ವಿಕಾಸಕ್ಕೂ ಸ್ಥಿರತೆಗೂ ಈ ಆರೋಗ್ಯ ಕಾರಣೀಭೂತವಾಗಿದೆ. ಪ್ರತಿಯೊಬ್ಬನೂ ಸರಳ, ಶಿಸ್ತಿನ, ವ್ಯವಸ್ಥಿತ ದಿನಚರಿಯನ್ನಿರಿಸಿಕೊಂಡು ಉತ್ತಮ ಆಹಾರವನ್ನು ಸ್ವೀಕರಿಸಿ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಯಾವದುವ್ಯಸನಗಳಿಗೂ ಕೆಟ್ಟಚಾಳಿಗಳಿಗೂ, ಆರೋಗ್ಯವನ್ನು ಬಲಿಗೊಡಬಾರದು. ಅದಕ್ಕೋಸ್ಕರ ಮಕ್ಕಳಿಗೆ ಚಿಕ್ಕಂದಿನಿಂದಲೆ ಆರೋಗ್ಯ ನಿಯಮಗಳ ಕುರಿತು ಶಿಕ್ಷಣ ಕೊಡುವುದು ಆಗತ್ಯವೆಂದು ಮಹಾತ್ಮಾಜಿಯವರು ಸಾರಿದ್ದರು. ಇದಕ್ಕೆ ಪ್ರಾಕೃತಿಕ ಚಿಕಿತ್ಸೆಯೇ ಯೋಗ್ಯವೆಂದೂ ಹೇಳಿದ್ದರು.

**ಪ್ರಾಂತೀಯ ಭಾಷೆಗಳು:** ಪ್ರಾಂತ್ಯಗಳಲ್ಲಿನ ಭಾಷೆಗಳೇ ಅಲ್ಲಿಯ ರಾಜ್ಯ ಭಾಷೆಯಾಗಿರಬೇಕು. ಭಾರತದಲ್ಲಿ ಭಾಷೆಗಳ ಕುರಿತು ಜಗಳವಾಗುವದನ್ನು ನಿಲ್ಲಿಸುವಂತೆ ಜನರಿಗೆ ತಿಳಿಸಬೇಕು. ಭಾಷೆಗಳಿಗಾಗಿ ಜನರು ಜಗಳವಾಡುವುದು ನಿಲ್ಲಬೇಕು. ಇದಕ್ಕಾಗಿ ಹೆಚ್ಚಿನ ಎಲ್ಲಾ ಪ್ರಾಂತೀಯ ಭಾಷೆಗಳ ಶಿಕ್ಷಣ ಜನರಿಗೆ ದೊರೆತರೆ ಉತ್ತಮ.

**ರಾಷ್ಟ್ರ ಭಾಷೆ:** ಸಮಗ್ರ ಭಾರತದ ವ್ಯವಹಾರಕ್ಕೆ ಒಂದು ಬಹುಜನಭಾಷೀ ಸುಲಭ ಹಾಗೂ ಯೋಗ್ಯ ಭಾಷೆಯ ಆಗತ್ಯವಿದೆ. ಇದಕ್ಕೆ ಹಿಂದಿಯೇ ಯೋಗ್ಯವೆಂದು ಗಾಂಧೀಜಿಯವರ ಮತ. ಹಿಂದಿಯನ್ನು 20 ಕೋಟಿಗಿಂತಲೂ ಹೆಚ್ಚು ಮಂದಿ ಮಾತೃ ಭಾಷೆಯಾಗಿ ಮಾತಾಡುತ್ತಾರೆ. ಇದರಿಂದ ಹಿಂದೀ ದೇಶದ ರಾಷ್ಟ್ರ ಭಾಷೆಯಾಗಲು ಸರ್ವ ವಿಧದಿಂದಲೂ ಯೋಗ್ಯ. ಅದರ ಪ್ರಚಾರಕ್ಕಾಗಿ ಸರಕಾರ, ಜನತೆ ಒಮ್ಮನಸ್ಸಿನಿಂದ ದುಡಿಯುವುದು ಆಗತ್ಯ.

**ಆರ್ಥಿಕ ಸಮಾನತೆ:** ಶ್ರೀಮಂತರ ಮತ್ತು ಮಜೂರರ ಜಗಳಗಳನ್ನು ನಿಲ್ಲಿಸಿ ನಿವಾರಿಸುವುದೇ ಆರ್ಥಿಕ ಸಮಾನತೆಯ ಮೊದಲನೆಯ ಮೆಟ್ಟಲು. ಶ್ರೀಮಂತರು ತಮ್ಮ ಸಂಪತ್ತನ್ನು "ಟ್ರಸ್ಟ್" ಆಗಿ ಮಾಡಿ ಬಡ ಜನರ ಹಿತಕ್ಕೆ ಉಪಯೋಗಿಸದಿದ್ದರೆ ದೇಶದ ಕಲ್ಯಾಣವಾಗಲಾರದು. ಇತರ ದೇಶಗಳಲ್ಲಿ ಬಲಾತ್ಕಾರದಿಂದ ಆರ್ಥಿಕ ಸಮಾನತೆಯನ್ನು ಮಾಡಿದ್ದಾರೆ. ಭಾರತದಲ್ಲಿ ಶಾಂತಿ ಸೌಹಾರ್ದದಿಂದ ಈ ಕೆಲಸವಾಗಬೇಕು ಎಂದು ಗಾಂಧೀಜಿಯವರು ಹೇಳಿದ್ದರು. ಆರ್ಥಿಕ ಸಮಾನತೆಗೆ ಬಡವರ ಏಳಿಗೆಯಾಗಬೇಕಾದುದು ಅತ್ಯಗತ್ಯ.

**ರೈತರು:** ನಮ್ಮ ದೇಶದ ಆಧಾರಸ್ತಂಭದಂತಿದ್ದಾರೆ. ನಮ್ಮ ದೇಶದ ಏಳಿಗೆ, ಸುಖ ಎಲ್ಲವೂ ಇವರನ್ನು ಹೊಂದಿಕೊಂಡಿದೆ. ರೈತರ ಸಂಖ್ಯೆ ಭಾರತದಲ್ಲಿ ತುಂಬಾ ಇದೆ. ರೈತರ ಸುಖವೇ ನಮ್ಮ ಸುಖವೆಂಬುದನ್ನು ಮರೆಯಕೂಡದು. ನಮ್ಮ ಎಲ್ಲಾ ಕಾನೂನುಗಳು, ಸಾಕ

(೭ನೇ ಪುಟ ನೋಡಿರಿ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

**ಮನೆ ಮದ್ದು**

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**LETTER WRITING MADE EASY**

**ಸುಲಭದಲ್ಲಿ ಪತ್ರಲೇಖನ**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ವಿ. ಸೂ.— ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಲೇಜ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೧೧-೪-೧೯೬೩ | ೧೩ |

## ಲತ್ತೆ ಕೊಡುವ ಕತ್ತೆ

ಕೊಲಂಬೋ ಸಮ್ಮೇಳನದ ನಿರ್ಣಯಗಳನ್ನು ಹೊತ್ತುಕೊಂಡು ಚೀನ ಮತ್ತು ಭಾರತಗಳ ರಾಜಧಾನಿಗಳಿಗೆ ಹಾರಿ, ಅಲ್ಲಿ ಸಾಕಷ್ಟು ವಿವರಣೆಗಳನ್ನಿತ್ತು ಗಡಿ ತಂಟೆಯನ್ನು ಸಂಧಾನದ ಮೂಲಕವೇ ಪರಿಹರಿಸುವ ಪ್ರಯತ್ನವನ್ನು ಸಿಂಹಳದ ಪ್ರಧಾನಿ ಶ್ರೀಮತಿ ಭಂಡಾರ ನಾಯಕೆಯವರು ಮಾಡಿದರು. ಅವರ ಪ್ರಯತ್ನ ಕೋನೆಂತಹ ಕೆಂಪು ಚೀನಾದ ಮುಂದೆ ಯಶಸ್ವಿಯಾಗುವುದೇ ಎಂಬ ಸಂದೇಹವು ಮೊದಲಲ್ಲಿಯೇ ಎದ್ದಿತ್ತು. ಭಾರತದಂತಹ ದೇಶವನ್ನು ಕೂಡ ಪಂಚಶೀಲದ ಸೋಗಿನಿಂದ ವಂಚಿಸಿ, ಅದರ ಮೇಲೆ ಅನ್ಯಾಯವಾಗಿ ಬಲಪ್ರಯೋಗ ಮಾಡಿದ ಚೀನಾವು ಕೊಲಂಬೋ ಸೂಚನೆಗಳನ್ನು ಕೂಡ ಗಾಳಿಗೆ ತೂರಿದರೆ, ಅದರಲ್ಲಿ ಅಚ್ಚರಿಯಿಲ್ಲ. ಸಿರಿಮಾವೋರವರು ಉಭಯ ದೇಶಗಳ ಪ್ರಧಾನಿಗಳನ್ನು ಕಂಡು ಅವರಿಬ್ಬರಿಗೂ ಕೊಲಂಬೊ ಸೂಚನೆಗಳ ಅರ್ಥವನ್ನು ವಿವರಿಸಿದರೆಂದೂ, ಈ ವಿವರಣೆ ಪಡೆದ ಬಳಿಕ ಭಾರತವು ಅವನ್ನು ಇದ್ದಕ್ಕಿದ್ದಂತೆ ಒಪ್ಪಿಕೊಂಡಿತೆಂದೂ ಜಗಜ್ಜಾಹೀರಾಗಿದೆ ಆದರೆ ಚೀನವು ಮಾತ್ರ ಸೂಚನೆಗಳನ್ನು ಒಪ್ಪದೆ, ಗಡಿ ತಂಟೆ ಶಾಂತ ರೀತಿಯಲ್ಲೇ ಪರಿಹಾರವಾಗಬೇಕು ಎಂಬಂತಿನನ್ನು ಮಾತ್ರ ಒಪ್ಪಿಕೊಂಡಿದೆ

ಸಂಧಾನದ ಪ್ರಶ್ನೆಯನ್ನು ಮುಂದಿಡುವ ಚೀನಾವು ನೇರ ಮಾತುಕತೆಯನ್ನು ಬಯಸುತ್ತದೆ. ಆದರೆ, ಕೊಲಂಬೋ ಸೂಚನೆಗಳನ್ನು ಅದು ಒಪ್ಪಿಕೊಳ್ಳದ ಲೋದರೆ, ತಾನು ಸಂಧಾನ ಮಾತುಕತೆಗೆ ತೊಡಗುವುದು ಸಾಧ್ಯವಿಲ್ಲವೆಂದು ಭಾರತವು ಪದೇ ಪದೇ ಹೇಳುತ್ತ ಬಂದಿದೆ, ಇಂದೂ ಹೇಳುತ್ತಿದೆ. ಜಗತ್ತಿನ ಕಮ್ಯುನಿಸ್ಟೇತರ ರಾಷ್ಟ್ರಗಳು ಮಾತ್ರವಲ್ಲ, ಕಮ್ಯುನಿಸ್ಟ್ ರಾಷ್ಟ್ರಗಳೂ ಚೀನಾದ ಅಸಭ್ಯ ವರ್ತನೆಯಿಂದ ನೊಂದಿವೆ; ಕಳವಳಗೊಂಡಿವೆ ಇಂದು ಚೀನಾವು ಭಾರತದ ಮೇಲೆ ಇನ್ನಿಲ್ಲದ ಅಪಪ್ರಚಾರ ಮಾಡುತ್ತಿರುವುದಲ್ಲದೆ, ತನ್ನ ಸಂಭಾವಿತಗಿರಿಯನ್ನೂ ಅದು ಪ್ರದರ್ಶಿಸಿಕೊಳ್ಳುತ್ತಿದೆ. ವಿವಾದವನ್ನು ಶಾಂತ ವಿಧಾನಗಳಿಂದ ಪರಿಹರಿಸಿಕೊಳ್ಳಬೇಕೆಂಬುದೇ ತನ್ನ ಮನೋಭಿಲಾಷೆಯೆಂದೂ ಅದಕ್ಕಾಗಿಯೇ ಏಕಪಕ್ಷೀಯವಾಗಿ ಸಮರ ವಿರಾಮವನ್ನು ಘೋಷಿಸಿದ್ದು ಮಾತ್ರವಲ್ಲ, ಕೈದಿಗಳ ಬಿಡುಗಡೆಯೇ ಮೊದಲಾದ ತನ್ನ ಕೈಲಾದ ಪ್ರಯತ್ನಗಳನ್ನು ಕಾರ್ಯರೂಪಕ್ಕೆ ತಂದು, ಸಂಧಾನದ ಹಾದಿಯನ್ನು ನಿರ್ಮಲಗೊಳಿಸುತ್ತಿರುವುದಾಗಿ ಹೇಳಿದೆ, ಯುದ್ಧದ ಸಮಯ ಹಸ್ತಗತ ಮಾಡಿಕೊಂಡ ನೆಲದಿಂದ ಮಾತ್ರವಲ್ಲ, ೧೯೫೯ರ ನವಂಬರ ೭ರ ವಾಸ್ತವಿಕ ನಿಯಂತ್ರಣ ರೇಖೆಯಿಂದಲೂ ೨೦ ಕಿಲೊ ಮೀಟರುಗಳಷ್ಟು ಹಿಂದೆ ಸರಿಯುವ ತಂತ್ರ ಮಾಡಿದೆ. ಅದರ ಯಾವದೇ ವರ್ತನೆಯು ವಿಲಕ್ಷಣವಾಗಿರುವುದೇ ಒಂದು ವೈಶಿಷ್ಟ್ಯ. ಇಂತಹ ವಿಲಕ್ಷಣತೆಯಿಂಗಲೇ ಎಲ್ಲರನ್ನೂ ಮರುಳು ಮಾಡಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಕುತಂತ್ರ ಚೀನಾದರಕ್ತದಲ್ಲಿ ಅಡಗಿದೆಂಬುದಕ್ಕೆ ಇತಿಹಾಸವೇ ಸಾಕ್ಷಿ.

ಭಾರತವು ಕೊಲಂಬೋ ಸೂಚನೆಗಳನ್ನು ಇದ್ದಕ್ಕಿದ್ದಂತೆ ಒಪ್ಪಿದ್ದರೆ, ಚೀನಾವು ಅವನ್ನು ಅಂಶತಃ ಒಪ್ಪಿಕೊಂಡಿದೆ. ಇದಕ್ಕೆ ಚೀನಾ ಹೇಳುವ ಕಾರಣವೆಂದರೆ, 'ಶ್ರೀಮತಿ ಭಂಡಾರ ನಾಯಕೆಯವರು ತನಗೆ ಮತ್ತು ಭಾರತಕ್ಕೆ ನೀಡಿದ ಸ್ಪಷ್ಟೀಕರಣಗಳು ಬೇರೆ ಬೇರೆಯಾಗಿವೆ' ಎಂದು. ಇಂತಹ ಅಪವಾದವನ್ನು ಮಧ್ಯಸ್ಥಗಾರರೊಬ್ಬರ ಮೇಲೆ ಹೊರಿಸುವುದು ಮಹಾ ದಾರ್ಷ್ಟ್ಯ. ಅದನ್ನೂ ಚೀನವು ಮಾಡಿದೆ ಎಂದ ಮೇಲೆ ಸುತ್ತಲೂ ಲತ್ತೆ ಕೊಡುವ ಕತ್ತೆಯದು ಎಂದು ಬೇರೆ ಹೇಳಬೇಕಾಗಿಲ್ಲ. ಈ ಅಪವಾದ ಭಂಡಾರ ನಾಯಕೆಯವರಿಗೆ ಮಾಡಿದ ದಲ್ಲ, ಅಥವಾ ಸಿಲೋನಿನ ನಾಗರಿಕ ಜನತೆಗೆ ಗೆಯ್ದುದಲ್ಲ, ಶ್ರೀಮತಿಯವರು ಆರು ರಾಷ್ಟ್ರಗಳ ಪ್ರತಿನಿಧಿಗಳ ಪ್ರತಿನಿಧಿಯಾಗಿ ಲಾಯ್-- ನೆಹರುಗಳನ್ನ ಭೆಟ್ಟಿಯಾದುದರಿಂದ ಈ ಆರು ಸ್ವತಂತ್ರ ರಾಷ್ಟ್ರಗಳ ಕೋಟ್ಯಂತರ ನಾಗರಿಕರಿಗೆಸಗಿದ ಅಪಮಾನ. ಸಿಂಹಳದ ಪ್ರತಿನಿಧಿ ಸಭೆಯಲ್ಲಿ ಈ ಸಂಬಂಧದ ಪ್ರಶ್ನೆಯೊಂದೂ ಎತ್ತಲ್ಪಟ್ಟಿತು, ಭಿನ್ನ ವಿವರಣೆಗಳು ಈಯಲ್ಪಟ್ಟಿಲ್ಲವೆಂದು ಸುಸ್ಪಷ್ಟವಾದ ಉತ್ತರವೂ ಬಂತ. ಅಂತೂ ಸಂಧಾನದ ಪ್ರಯತ್ನ ನಡೆಸಿದುದಕ್ಕೆ ದೊರೆತ ಉಪಹಾರವೆಂದರೆ ಈ ಬಗೆಯ ಅಪಚಾರ ಕಮ್ಯುನಿಸ್ಟ್ ಸಾಮ್ರಾಜ್ಯವಾದಿ ಚೀನಾವು ಇದಕ್ಕಿಂತ ಹೆಚ್ಚಿನ ಉಡುಗೊರೆಯನ್ನು ಎಂದಿಗೂ ಕೊಡಲಾರದು. ಮುಂದೆ ಯಾರಿಗೆ ಯಾವ ರೀತಿಯ ಕೃತಜ್ಞತೆ ಲಭಿಸಲಿದೆಯೋ ದೇವರೇ ಬಲ್ಲ.

ತನಗೆಸಗಿದ ಅಪಚಾರದಿಂದಲೂ ವಿಮುಖರಾಗದೆ ಭಂಡಾರ ನಾಯಕೆಯವರು ಸಂಧಾನ ಪ್ರಯತ್ನಗಳನ್ನ ಮುಂದುವರಿಸುವದಾಗಿ ತಿಳಿದು ಬಂದಿದೆ. ಇದು ಸಂತೋಷದ ಸಂಗತಿ. ಚೀನವೂ ಭಾರತವನ್ನು ಸಂಧಾನಕ್ಕೆ ನಿಶ್ಶರ್ತವಾಗಿ ಬರಬೇಕೆಂದು ಆಮಂತ್ರಿಸುತ್ತಿದೆ. ಆದರೆ ನಮ್ಮ ನೆಲದ ಮೇಲೆ ಬಲಾತ್ಕಾರವಾಗಿ ಮಾಡಿದ ಚೀನ ಆಕ್ರಮಣವನ್ನು ನಡೆಸುತ್ತಿರುವಾಗಲೇ ಯಾವ ಶರ್ತವೂ ಇಲ್ಲದೆ ಮಾತುಕತೆಗೆ ತೊಡಗುವುದೆಂದರೆ, ಅದು ದುರ್ಬಲತೆ ಮತ್ತು ಅಪಮಾನದ ದ್ಯೋತಕ. ಅದುದರಿಂದ ಮೊತ್ತ ಮೊದಲು ನಮ್ಮ ಸಾರ್ವಭೌಮತೆಯನ್ನು ಮನ್ನಿಸಿ, ಮಾಡಿದ ಆಕ್ರಮಣವನ್ನು ತೆರವು ಮಾಡಿರಿ, ಮುಂದ ಸಂಧಾನದ ಮಾತುಕತೆ—ಎನ್ನುತ್ತದೆ ನ್ಯಾಯಪಕ್ಷಪಾತಿ ಭಾರತ. ಸಂಧಾನ, ಶಾಂತಿ, ಒಡಂಬಡಿಕೆ ಮೊದಲಾದ ಉತ್ತಮೋತ್ತಮ ಪದಗಳೊಡನೆ ಚೆಂಡಾಡುತ್ತಿರುವ ಚೀನಾವನ್ನು ನಂಬಿದ ಭಾರತ ಕೆಟ್ಟು ಹೋಯ್ತು; ನಂಬಿ ಹೋದ ಸಿಂಹಳ ಅಪಮಾನಿತವಾಯ್ತು ರಕ್ತದೊಡನೆ ವಿವಾದ ಬೆಳೆದು ಹೋಯ್ತು. ಪಾಶ್ಚಾತ್ಯ ರಾಷ್ಟ್ರಗಳ ವಿರೋಧ ಪ್ರಬಲವಾಯ್ತು. ಸಾಮ್ರಾಜ್ಯವಾದಿ ಚೀನಕ್ಕೆ ಇಂದು ಜಾಗತಿಕ ಸನ್ಮಾನವಿಲ್ಲ; ಅದು ಎಷ್ಟೇ ವಿಶಾಲವಿರಲಿ, ಉತ್ತಮ ನಡತೆಯಿಲ್ಲದ ರಾಷ್ಟ್ರವನ್ನು ಯಾರು ತಾನೇ ಸನ್ಮಾನಿಸುತ್ತಾರೆ, ಗೌರವಿಸುತ್ತಾರೆ?

## ವಾರ್ತಾವೇದಿಕೆ

### ಎಸ್. ಆರ್. ಕಂಠಿ

ಎಸ್ಸೆಸ್ಸೆಲ್ಸಿ ಸರಕಾರಿ ಪರೀಕ್ಷೆಗಳ ಪ್ರಶ್ನ ಪತ್ರಿಕೆಗಳು ಬಹಿರಂಗವಾಗಿವೆಯೆಂಬುದರ ಬಗ್ಗೆ ವಾದ ನಡೆದಾಗ ಮತ್ತು ಸಂಗತಿಯು ನಿಜವೆಂದು ಸರಕಾರಕ್ಕೆ ಮನವರಿಕೆಯಾದಾಗ ಉತ್ತರಕೊಡಲು, ಪರೀಕ್ಷೆಯನ್ನು ಮುಂದುವರಿಸಿದ ಘೋಷಣೆ ಹೊರಡಿಸಲು ಶಿಕ್ಷಣಮಂತ್ರಿ ಎಸ್ಸಪ್ಪರು ದ್ರಪ್ಪ ಕಂಠಿಯವರು ಇಲ್ಲವಾದರು. ಆದರೆ, ಆಪಾದ ತತ್‌ಕ್ಷಣವೇ ಹಾಜರಾದರು. ಶಿಕ್ಷಣ ಖಾತೆಯೆಂಬುದು ಗೊಬ್ಬರಗುಂಡಿಯೆಂದು ಜನ ಅಂದುಕೊಳ್ಳುತ್ತಾರೆ. ಈ ಖಾತೆಯಲ್ಲಿ ಸಾಮರ್ಥ್ಯ ಕಡಿಮೆಯಾಗಿದೆಯೆಂಬ ದೂರು ವಿಧಾನ ಸಭೆಯಲ್ಲೂ ಎದ್ದಿತ್ತು. ಖಾತೆಯು ಸರ್ವ ಸಮರ್ಥವಿದೆಯೆಂದು ಕಂಠಿಯವರು ತಮ್ಮನ್ನು ತಾವೇ ಸಮರ್ಥಿಸಿಕೊಂಡರು ನಿಜ; ಆಗ ಅವರು ಅಸಾಮರ್ಥ್ಯವನ್ನೂ ಆರೋಪಗಳನ್ನೂ ಒಪ್ಪಮಾಡಿದರೆ, ರಾಜಿನಾಮೆ ಕೊಡುವವನಾಗಿ ಅಂದಿದ್ದರು. ಆ ರಾಜಿನಾಮೆಯನ್ನು ಇಂದು ಕೇಳಿದರೆ ತಪ್ಪಾದೀತೇ ಎನ್ನುತ್ತಾರೆ ವಿಚಾರಶೀಲರು.

### ಗಂಡಾಂತರದಿಂದ ಲಾಭ

ಚೀನಾವು ನಡೆಸಿದ ಆಕ್ರಮಣದಿಂದ ಭಾರತಕ್ಕೆ ನಷ್ಟ, ಕಷ್ಟ, ಭ್ರಷ್ಟ ಸಂಭವಿಸಿತಾದರೂ ಒದಗಿದ ಗಂಡಾಂತರ ಪರಿಸ್ಥಿತಿಯಿಂದ ಹಲವರಿಗೆ ಹಲವು ರೀತಿಯಲ್ಲಿ ಲಾಭವೇ ಆಗಿದೆ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಒಳಗೊಳಗೆ ಹೊಗೆಯುತ್ತಿದ್ದ, ಆಗಾಗ ತಕಪ್ಪತ್ತಾಗಿ ಭುಗಿಲೆನ್ನುತ್ತಿದ್ದ ರಾಜ್ಯಗಳ ಗಡಿತಂಟೆ, ಭಾಷಾ ವಿವಾದ ಇತ್ಯಾದಿ ದುರ್ಬಲತೆಗಳು ತಾತ್ಕಾಲಿಕವಾಗಿ ಶಮನಗೊಂಡಿವೆ, ಇದರಿಂದ ಕೆಲವೊಬ್ಬರು ಮುಖ್ಯಮಂತ್ರಿಯವರು (ಅವ್ಯಕ್ತ ಆನಂದ ಪಡೆದಿರಲೇ ಬೇಕು. ಇಂತಹರಲ್ಲಿ ನಮ್ಮ ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರೂ ಒಬ್ಬರಲ್ಲವೆ? ಕಳೆದ ಬಾರಿ ವಿಧಾನ ಸಭೆಯಲ್ಲಿ ಸಾಕಷ್ಟು ಉದ್ರೇಕಕರ ಪರಿಸ್ಥಿತಿಯನ್ನುಂಟು ಮಾಡಿದ ರಾಜ್ಯದ ಹೆಸರಿನ ಪ್ರಶ್ನೆಯ ಮೇಲೆ ಆ ಬಾರಿ ನಿರ್ಣಯ ತೆಗೆದುಕೊಳ್ಳಲೇಬೇಕಾಗಿದ್ದರೂ ನಿಜಲಿಂಗಪ್ಪನವರು ಸದಸ್ಯರು ಶಾಂತವಾಗಿ ವಿಚಾರ ಮಥನ ಮಾಡುವುದಕ್ಕೆ ಅನುಕೂಲವಾಗುವಂತೆ ಅದನ್ನು ಮುಂದುವರಿಸಿ ಪಾರಾದರು. ಏಕೆಂದರೆ ನಿಜಲಿಂಗಪ್ಪ ಸರಕಾರದ ಭವಿಷ್ಯವು ಆ ಪ್ರಶ್ನೆಯಲ್ಲಿ ಹುದುಗಿದಂತಿತ್ತು. ಒಂದು ವೇಳೆ ಅಂದು 'ಕರ್ನಾಟಕ'ವೆಂಬ ಹೆಸರಿಗೆ ಮುನ್ನ ಬೀಳುತಿದ್ದರೆ! ಮೈಸೂರು ವಾದಿಗಳ ರಾಜ್ಯ ಒಡೆಯುವ ಕಲಹೆಯನ್ನಾ ಮುಂದೆ ತರುತಿದ್ದರೋ ಏನೋ! ಸಂಪ್ರದಾಯದಂತೆ, ಆ ಪ್ರಶ್ನೆ ಈ ಬಾರಿ ಬಂದಾಗ, ಸಾಕಷ್ಟು ಗಂಭೀರವೂ ಉದ್ರಿಕ್ತವೂ ಆದ ಈ ಪ್ರಶ್ನೆಯನ್ನು ದೇಶದಲ್ಲಿ ಗಂಡಾಂತರ ಪರಿಸ್ಥಿತಿಯಿರುವಾಗ ಎತ್ತಿಕೊಳ್ಳುವುದು ಉಚಿತವಲ್ಲವೆಂಬ ಕಾರಣವನ್ನು ಮುಂದಿಟ್ಟು ತನ್ನ ಮೇಲೆ ಎರಗಲಿದ್ದ ಗಂಡಾಂತರವನ್ನು ಅವರು ದೂರ ಮಾಡಿಕೊಂಡರು. ಅಂತೂ ಕನ್ನಡಿಗರ ಮೇಲೆ ದೈವದ ಕೃಪಾದೃಷ್ಟಿ ಎಂದು ಬೀಳುವುದೋ! ಇದಕ್ಕಾಗಿಯೇ ನೆಹರು ಅಂದದ್ದಿರಬಹುದು—ಹೆಸರಿನಲ್ಲೇನಿದೆ? ಎಂದು.

### ದೇಶಕ್ಕೆ ಕರೆ

ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಚೀನೀಯ ಆಕ್ರಮಣದಿಂದ ಉಂಟಾದ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಸರ್ವತ್ಯಾಗವನ್ನು ಮಾಡಲು ರಾಷ್ಟ್ರಕ್ಕೆ ಕರೆಯಿತ್ತಿದೆ 'ಚೀನವು ಗಡಿ ತಂಟೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ಶಾಂತಿ ಸಾಧನೆಯ ನಟನೆ ಮಾಡುತ್ತಲೇ ಮತ್ತೊಂದು ಬದಿಗೆ ಕೊಲಂಬೋ ಪರಿಷತ್ತು ಸರ್ವಾನುಮತದಿಂದ ಮುಂದಿಟ್ಟ ವಿವೇಕ ಪೂರ್ಣವಾದ ಸೂಚನೆಗಳನ್ನು ಸ್ಪಷ್ಟವಾಗಿ ನಿರಾಕರಿಸಿದೆಯಲ್ಲದೆ ಇಡಿ ಗಡಿಯುದ್ದಕ್ಕೂ ಸೈನ್ಯ ಶೇಖರಣೆ ಪ್ರಾರಂಭಿಸಿದೆ. ತಂಟೆಯನ್ನು ಶಾಂತಿಯುತವೂ ವಿವೇಕಯುತವೂ ಆದ ರೀತಿಯಲ್ಲಿ ಬಗೆಹರಿಸುವುದು ಅದಕ್ಕೆ ಬೇಕಾಗಿಲ್ಲವೆಂದೂ ತನ್ನ ಕಾಮಗಳನ್ನೇ ಸಾಧಿಸಲು ಅದು ಬಯಸುತ್ತಿದೆಯೆಂದೂ' ಒಂದು ಗೊತ್ತುವಳಿಯಲ್ಲಿ ಹೇಳಿ, ಆಕ್ರಮಣದಿಂದ ವಿಮೋಚನೆ ಹೊಂದಲು ನಡೆಯುವ ಹೋರಾಟವು ಇದೆಷ್ಟು ದೀರ್ಘವೇ ಇರಲಿ, ಕಠಿಣವೇ ಆಗಲಿ ಮುಂದುವರಿಯಲೇ ಬೇಕು ಎಂದು ಘೋಷಿಸಿದೆ.

### ಗುಲ್ಜಾರೀಲಾಲ

ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ ನಂದಾರವರು ಹೊತ್ತಿರುವ ಜವಾಬ್ದಾರಿ ಅತಿ ಹಿರಿಯದು. ಹಲವಾರು ಟೀಕೆ ಟಿಪ್ಪಣಿಗಳಿಗೆ ಅವರು ಉತ್ತರಿಸಬೇಕಾಗುತ್ತವೆ. ಮಹತ್ವಾಕಾಂಕ್ಷೆಯಿಂದ ಕೂಡಿದ ಮೂರನೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಾಗುತ್ತಿರುವ ಎಡರು ತೊಡರುಗಳನ್ನು ಗಮನಿಸಿದರೆ, ಯೋಜನೆಯು ನಿರೀಕ್ಷಿತ ಫಲವನ್ನು ಕೊಡಬಹುದೇ ಎಂದು ಕೆಲವರಲ್ಲಿ ಸಂದೇಹವೇಳುವುದು ಸ್ವಾಭಾವಿಕ. ಅ. ಭಾ. ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಒಕ್ಕಲತನ ಮತ್ತು ಉದ್ದಿಮೆಗಳ ಉತ್ಪಾದನೆಯಲ್ಲಿ ಹೆಚ್ಚಳದ ಬಗೆಗಿನ ವರದಿಯ ಮೇಲೆ ಚರ್ಚೆಗೆ ಉತ್ತರಕೊಡುತ್ತಿರುವಾಗ ನಂದಾ ವಿದ್ಯುಚ್ಛಕ್ತಿಯ ಉತ್ಪಾದನೆಯ ಗುರಿಯ ಮುಟ್ಟುತಲ್ಲೂ ಸಾಧ್ಯವಾಗುತ್ತದೆ. ಉಳಿದ ವಿಭಾಗದಲ್ಲಿ ತಿಳಿಯಕೊಂಡಿರುವಷ್ಟು ಪರಿಸ್ಥಿತಿ ಕೆಟ್ಟಿಲ್ಲ ಸರಿಯಾಗಿ ವಿಚಾರ ನಡೆಸಿದರೆ, ಸಮಾಜ ವಿಕಾಸ ಯೋಜನೆಯು ಯಶಸ್ವಿಯಾಗಿದೆ ಮಾತ್ರವಲ್ಲ, ಅದನ್ನು ಕೈಬಿಟ್ಟರೆ, ಅನರ್ಥವಾದೀತು ಎಂಬ ಸಮಾಧಾನೋಕ್ತಿಗಳನ್ನಾಡಿದರು.

### ವ್ಯಾವಸಾಯಿಕ ವಿಶ್ವವಿದ್ಯಾಲಯ

ಹೆಬ್ಬಾಳದಲ್ಲಿ ವ್ಯಾವಸಾಯಿಕ ವಿಶ್ವ [illegible] ಪಿಸುವ ಸಲು

(೬ನೇ ಪುಟ ನೋಡಿ)

# ಅಲ್ಲಲ್ಲಿಯ ಸುದ್ದಿಸಾರ

**ಜಿನರಾಜ ಹೆಗ್ಡೆಯವರಿಗೆ ಮಾನ ಪತ್ರ ಸಮರ್ಪಣೆ** – ಮಂಗಳೂರಿನ ಶ್ರೀ ಮಹಾಗಣಪತಿ ದೇವಾಲಯದ ವಾರ್ಷಿಕೋತ್ಸವದ ಅಂಗವಾಗಿ, ಕಳೆದ ತಾ. ೭ರಂದು ದೇವಾಲಯದ ವಠಾರದಲ್ಲಿ, "ಅಂಗದ ಸಂಧಾನ" ಎಂಬ ಯಕ್ಷಗಾನ ಬಯಲಾಟವನ್ನು ಏರ್ಪಡಿಸಲಾಯಿತು. ಯಕ್ಷಗಾನದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೀ ಜಿನರಾಜ ಹೆಗ್ಡೆಯವರಿಗೆ ಈ ಸಮಾರಂಭದಲ್ಲಿ ಮಾನಪತ್ರವನ್ನು ಅರ್ಪಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಸೂರ್ಯನಾರಾಯಣ ಅಡಿಗರು ವಹಿಸಿದ್ದರು. ಯಕ್ಷಗಾನ ಸಂಘದ ಕಡೆಯಿಂದ ಅಧ್ಯಕ್ಷ ಶ್ರೀ ಬಿ. ಲಕ್ಷ್ಮಣರಾವ್‌ರವರು ಮಾನಪತ್ರವನ್ನು ಓದಿ ಅರ್ಪಿಸಿ ಗೌರವಿಸಿದರು.

ಶ್ರೀ ಅಡಿಗರು ಮಾತಾಡುತ್ತಾ ಜಿನರಾಜ ಹೆಗ್ಡೆಯವರು ಕರ್ನಾಟಕ ಸಾಂಸ್ಕೃತಿಕ ಕ್ಷೇತ್ರಕ್ಕಾಗಿ ಸಲ್ಲಿಸಿರುವ ಸೇವೆಯನ್ನೂ, ಈಗ ಮಾಡುತ್ತಿರುವ ಸೇವೆಯನ್ನೂ ವಿವರಿಸಿ ಪ್ರಶಂಸಿಸಿದರು. ಮಾತ್ರವಲ್ಲದೆ ಅಂದಿನ ಸಮಾರಂಭದಲ್ಲಿ ಭಾಗವಹಿಸಿದ ಕಲಾವಿದರನ್ನು ಅಭಿನಂದಿಸಿದರು. ಜಿನರಾಜ ಹೆಗ್ಡೆಯವರು ಯಕ್ಷಗಾನದ ಪ್ರಯೋಜನಗಳನ್ನು ತಿಳಿಸಿ ತನ್ನನ್ನು ಗೌರವಿಸಿದುದಕ್ಕೆ ಕೃತಜ್ಞತೆಗಳನ್ನರ್ಪಿಸಿದರು.

**ಶ್ರೀ ಸುಬ್ರಹ್ಮಣ್ಯ ಸಭಾ** — ತಾರೀಕು 31–3–63ರಲ್ಲಿ ಜರಗಿದ ಕಾರ್ಯನಿರ್ವಾಹಕ ಸಮಿತಿಯ ಅಧಿವೇಶನದಲ್ಲಿ ಶ್ರೀ ಸುಬ್ರಹ್ಮಣ್ಯ ಸಭೆಯ ಮಹಾಧಿವೇಶನವನ್ನು ತಾ. 19–5–63ನೇ ಭಾನುವಾರ ಪೂರ್ವಾಹ್ನ ಘಂಟೆ 10.30ಕ್ಕೆ ಮಂಗಳೂರಿನ ಸಭಾಸದನದಲ್ಲಿ ಜರಗಿಸುವುದೆಂದೂ ತಾರೀಕು 28–4–63ನೇ ಭಾನುವಾರ ಶ್ರೀ ಶಂಕರ ಜಯಂತಿ ದಿನದ ಪೂರ್ವಾಹ್ನ ಘಂಟೆ 10ಕ್ಕೆ ಸಭಾ ಸದನದಲ್ಲಿ ಶ್ರೀ ಶೃಂಗೇರಿ ಜಗದ್ಗುರು ಪಾರಿತೋಷಕಗಳ ಬಗ್ಗೆ ಶ್ರೀ ಭಗವದ್ಗೀತೆಯ 2ನೇ ಅಧ್ಯಾಯದಲ್ಲಿ ಸ್ಪರ್ಧೆಯನ್ನು ಏರ್ಪಡಿಸಬೇಕೆಂದೂ ನಿರ್ಣಯಿಸಲಾಯ್ತು.

**ಪಾವಂಜೆ** — ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ತಾರೀಕು 13–4–63ರಿಂದ ತಾ. 18ರ ತನಕ ವರ್ಷಾವಧಿ ಉತ್ಸವಗಳು ನಡೆಯಲಿರುವವು.

**ಉಡುಪಿಗೆ ನಳ್ಳಿ ನೀರು** — ಉಡುಪಿ ಹಾಗೂ ಮಣಿಪಾಲಗಳಿಗೆ ನಳ್ಳಿ ನೀರನ್ನೊದಗಿಸುವ ಯೋಜನೆ ಸ್ಥಳ ಮೊದಲಾದವುಗಳನ್ನು ಪರಿಶೀಲಿಸಲು, ಚೀಫ್ ಇಂಜಿನಿಯರ್ ಶ್ರೀ ಕೆ. ಎಂ. ಜೋಶಿಯವರು ಕಳೆದ ತಾ. 5ರಂದು ಉಡುಪಿಗಾಗಮಿಸಿದ್ದರು. ಡಾ. ಟಿ. ಎಂ. ಎ. ಪೈ, ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ., ಶ್ರೀ ಪಿ. ಆರ್. ಶೆಣೈ ಇವರು ಶ್ರೀ ಜೋಶಿಯವರಿಗೆ, ಸ್ವರ್ಣಾ ನದಿಗೆ ಸಣ್ಣ ಪ್ರಮಾಣದಲ್ಲಿ ಅಣೆಕಟ್ಟು ಕಟ್ಟುವುದರಿಂದ ಆಸುಪಾಸಿನ ಸಾಧಾರಣ 4000 ಎಕ್ರೆ ಜಮೀನಿಗೆ ನೀರಾವರಿ ಸೌಕರ್ಯ ದೊರೆಯುವುದು. ಉಡುಪಿ ಮಣಿಪಾಲಗಳಿಗೆ ನೀರಿನ ಸರಬರಾಜಾಗುವ ದ್ವಿವಿಧ ಪ್ರಯೋಜನಗಳನ್ನು ವಿವರಿಸಿದರು. ಮೊದಲು ಶಕ್ತಿಗಿರಿಯಲ್ಲಿಂದ ಒದಗಿಸುವ ಯೋಜನೆಯಿತ್ತು. ಅದಕ್ಕೆ ಸಮಾರು 35 ಲಕ್ಷ ರೂಪಾಯಿ ವೆಚ್ಚ ತಗಲಬಹುದೆಂದು ಅಂದಾಜುಮಾಡಲಾಗಿತ್ತು. ಆದರೆ ಇದಕ್ಕೆ 25 ಲಕ್ಷ ರೂಪಾಯಿ ಬೇಕೆಂದು ಅಂದಾಜು ಮಾಡಲಾಗಿದೆ. 45 ಸಾವಿರ ಜನರಿಗೆ ಸರಾಸರಿ 30 ಗೆಲನ್ ನೀರು ಒದಗಿಸಬಹುದೆಂದೂ ಲೆಕ್ಕ ಹಾಕಲಾಗಿದೆ. ಚೀಫ್ ಇಂಜಿನಿಯರ್ ಸ್ಥಳ ಪರಿಶೀಲಿಸಿ ಸಂತುಷ್ಟರಾಗಿರುವರು ಹಾಗೂ ಸರಕಾರವು ಸಾಲವಾಗಿ 25 ಲಕ್ಷ ರೂಪಾಯಿ ಕೊಡಲು ಸಿದ್ಧವಾಗಿರುವುದು ಎಂದೂ ತಿಳಿಸಿರುವರು. ಈ ವರ್ಷಾಂತ್ಯದೊಳಗೇ ಕೆಲಸ ಪ್ರಾರಂಭವಾಗುವುದೆಂದು ನಿರೀಕ್ಷಿಸಲಾಗಿದೆ.

**ಕಮಲಾ ನೆಹರೂ ಇನ್ಸ್ಟಿಟ್ಯೂಟ್**

ಮಣಿಪಾಲದ ಕಸ್ತೂರ್ಬಾ ಜನರಲ್ ಹಾಸ್ಪಿಟಲಿನಲ್ಲಿ ಕ್ಷಯರೋಗ ಥೊರಸಿಕ್ ರೋಗಗಳಿಗಾಗಿ ಕಮಲಾ ನೆಹರೂ ಇನ್ಸ್ಟಿಟ್ಯೂಟಿನ ಶಂಕು ಸ್ಥಾಪನಾ ಸಮಾರಂಭವನ್ನು ಕೇಂದ್ರ ಸರಕಾರದ ಆರೋಗ್ಯ ಸಚಿವೆ ಡಾ| ಸುಶೀಲಾ ನಾಯರ್‌ರವರು ಇದೇ ತಾ. 13ನೇ ಸಂಜೆ 6 ಗಂಟೆಗೆ ನೆರವೇರಿಸಲಿರುವರು. ಈ ಸಂಬಂಧ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ಜರಗುವ ಸಮಾರಂಭದ ಅಧ್ಯಕ್ಷತೆಯನ್ನು ಬೊಂಬಾಯಿಯ ಡಾ. ಎ. ವಿ. ಬಾಳಿಗರು ವಹಿಸಲಿರುವರು.

**ಪೆರ್ಡೂರು** — ಮಹತೋಬಾರ ಶ್ರೀ ಅನಂತ ಪದ್ಮನಾಭ ಸ್ವಾಮಿಯ ಸನ್ನಿಧಾನದಲ್ಲಿ ತಾ. 26–4–63ರಿಂದ ತಾ. 23–5–63ರವರೆಗೆ ಅಷ್ಟಬಂಧ ಮಹೋತ್ಸವದ ಕಾರ್ಯಕ್ರಮಗಳು ನಡೆಯಲಿರುವವು.

**ಕಿನ್ನಿಮುಲ್ಕಿ ಹಿರಿಯ ಬುನಾದಿ ಶಾಲೆಯ** — ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಕೆ. ಪೈಗಳಿಂದ ಇದೇ ತಾ. 7ನೇ ಬೆಳಿಗ್ಗೆ ನೆರವೇರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ಶ್ರೀ ಎ. ಎಲ್. ಎನ್. ರಾಯರ ಉದಾರ ದಾನವಾದ ಅಶೋಕ ಸ್ತಂಭದ ಹಸ್ತಾಂತರ, ಶ್ರೀ ಎ. ಎಲ್. ಎನ್. ರಾಯರಿಂದ ಧ್ವಜಾರೋಹಣ, ದಿ| ಗೋಪಾಲ ಸೆಟ್ಟರ ಸ್ಮಾರಕಾರ್ಥ ಅವರ ಧರ್ಮಪತ್ನಿಯವರು ಕೊಟ್ಟ ರೇಡಿಯೋದ ಉದ್ಘಾಟನೆ (ಡಾ. ಕೆ. ವಿ. ಆಚಾರ್ಯರಿಂದ) ಶ್ರೀ ಎಲಿಯಾಸ್ ಅಂದ್ರಾದೆ ಅವರಿಂದ ಕೊಡಲ್ಪಟ್ಟ ವಿದ್ಯುಚ್ಛಕ್ತಿಯ ಉದ್ಘಾಟನೆ (ಶ್ರೀ ದೇವೇಂದ್ರ ಪೆಜತ್ತಾಯರಿಂದ) ನೆರವೇರಿಸಲ್ಪಟ್ಟವು. ಸಂಜೆ ಶಾಲಾ ವರ್ಧಂತಿ ಉತ್ಸವವು ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭ ಶ್ರೀ ಟಿ. ಆರ್. ಎ. ಪೈಯವರು ಶ್ರೀಗಳಾದ ಕೆ. ಕೇಶವ ಕಾಮತ್ ಮತ್ತು ಶ್ರೀ ಡೇವಿಡ್ ಸಲ್ಡಾನರು ಒದಗಿಸಿದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್ ಮತ್ತು ಡಾ. ಕೆ. ಎಲ್. ಐತಾಳರ ತೈಲ ಚಿತ್ರಗಳನ್ನು ಅನಾವರಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಸೀತಾ ಬಾಯಿಯವರಿಂದ ವರದಿವಾಚನ, ಶ್ರೀ ಕೆ. ಮಹಾಬಲ ಪದ್ಮಸಾಲಿ ಮತ್ತು ಕೆ. ಆರ್. ಉಪಾಧ್ಯಾಯ ಭಟ್ ಇವರಿಂದ ಸ್ವಸ್ತಿವಾಚನ, ವಾರ್ಷಿಕ ಬಹುಮಾನ ವಿತರಣೆ, ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳು ಜರಗಿದವು.

**ವಿವಾಹ** — ಉಡುಪಿ ಮುನ್ಸಿಫ್ ಕೋರ್ಟಿನ ಅಮೀನ್ ಶ್ರೀ ಎಂ. ದೇಜಪ್ಪ ಸೆಟ್ರ ಪುತ್ರಿ ಚಿ| ಅನುಸೂಯಳನ್ನು ಕಾರ್ಕಳ ಸೋಮಯ್ಯ ಸೆಟ್ರ ಪುತ್ರ ಚಿ| ಜಗನ್ನಾಥನೂ ಕಾರ್ಕಳ ಸೋಮಯ್ಯ ಸೆಟ್ರ ಪುತ್ರಿ ಚಿ| ಸೌ| ಲೀಲಾವತಿಯನ್ನು ಉಡುಪಿಯವರ ದಿ| ಪಟೇಲ್ ಗೋವಿಂದ ಸೆಟ್ರ ಪುತ್ರ ಚಿ| ಸದಾಶಿವನೂ ಇದೇ ತಾ. 7ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು.

**ಇಪ್ಪತ್ತು ವರ್ಷ ಹಳೆಯ ಬೆಲ್ಲ** — ಶ್ರೀ ತೇಜಾಸಿಂಗ್ ಎಂಬ ಪಂಜಾಬೀ ವೈದ್ಯರೊಬ್ಬರು ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಬೆಲ್ಲ ತುಂಬಿರುವ ಪಾತ್ರೆಯೊಂದನ್ನು ದಿಲ್ಲಿಯ ಆಯುರ್ವೇದ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಕವಿರಾಜ ಕೆ. ಎಲ್. ಖೇತಲ್ ಅವರಿಗೆ ಒಪ್ಪಿಸಿದ್ದಾರೆ.

ಹಳೆಯ ಬೆಲ್ಲವು ಪರಿಣಾಮಕಾರಿಯಾದ ರಕ್ತಶುದ್ಧಿಕಾರಕವಾಗಿದೆ ಮಾತ್ರವಲ್ಲ, ಅದು ಸಾಮಾನ್ಯ ಗುಣಕಾರಿ ಔಷಧಿಯೂ ಆಗಿದೆ. ವಿವಿಧ ರೋಗಗಳಿಗೆ ಕೊಡಲಾಗುವ ಔಷಧಿಯ ಮಿಶ್ರಣವೊಂದಿಗೆ ಹಳೆಯ ಬೆಲ್ಲ ಸೇರಿಸಿದಲ್ಲಿ ಅದರ ಚಿಕಿತ್ಸಾ ಗುಣ ವೃದ್ಧಿಯಾಗುತ್ತದೆ. ಮುಖ್ಯವಾಗಿ ಪಿತ್ತರೋಗ, ವಾತರೋಗ ಹಾಗೂ ಜೀರ್ಣಾಂಗ ಮತ್ತು ಮೂತ್ರಾಂಗಗಳಿಗೆ ಸಂಬಂಧಿಸಿದ ರೋಗ ಚಿಕಿತ್ಸೆಗೆ ಇದು ತುಂಬಾ ಸಹಾಯಕವಾಗುತ್ತದೆ. ಲಾಹೋರಿನ ವೈದ್ಯರೊಬ್ಬರು ಹಳೆಯ ಬೆಲ್ಲದಿಂದ ಸಪ್ತಸಿದ್ಧ ಟಾನಿಕ್ಕೊಂದನ್ನು ತಯಾರಿಸಿ ಭಾರತ ಹಿಂದಿನ ರಾಜ ಮಹಾರಾಜರಿಗೆ ಅದನ್ನು ಮಾರಾಟ ಮಾಡಿ ಸಾವಿರಗಟ್ಟಲೆ ಹಣ ಸಂಪಾದಿಸಿದ್ದಾರೆ.

(೫ನೇ ಪುಟದಿಂದ)

ವಾಗಿ ವಿಘಟನೆ ಸಂಭವಿಸದಂತೆ ಜಾಗ್ರತೆ ವಹಿಸಲಾಗುತ್ತಿದೆ. ಹೀಗೆ ಇವೆಲ್ಲ ಆಯ್ಕೆಯ ಸಂಬಂಧದಲ್ಲಿಯೇ (ಈಗ ರಚಿಸಲ್ಪಟ್ಟ ಭಿನ್ನಾಭಿಪ್ರಾಯ ಕಂಡುಬರುತ್ತಿದೆ. ಆದರೆ, ಕೃಷಿ ಮಂತ್ರಿ ಜಿ. ನಾರಾಯಣಗೌಡರು ಹೇಳುತ್ತಾರೆ—ಭೂಮಿಯ ಅಭ್ಯಾಸದ, ಸಂಶೋಧನೆ ಆಗಿ ಮಾತ್ರವಲ್ಲ ಬೀಜ, ರೈತ ಜನರಿಗೆ ಸಲಹೆಗಳನ್ನು ನೀಡುವ ಕೃಷಿ ವಿದ್ಯಾಲಯದ ಸಂಬಂಧ, ಈ ಸ್ಥಳಕ್ಕೆ ಭಾರತ ಸರಕಾರದ ತಜ್ಞರು ತಂದವು ತನ್ನ ಒಪ್ಪಿಗೆಯನ್ನು ನೀಡಿದ್ದರಿಂದಲೂ ವಿಶ್ವವಿದ್ಯಾಲಯವಾಗಿ ಹೆಬ್ಬಾಳದಲ್ಲಿ ಅದಂ ಎಲ್ಲಾ ಸೌಕರ್ಯ ಸವಿಸ್ತರ ಸೇರಿಸಲ್ಪಟ್ಟಿದ್ದು ಈ ಸ್ಥಿರ ಭೂಮಿಯ ಸೌಲಭ್ಯ ದೊರೆಯುವದರಿಂದಲೂ ಇಲ್ಲಿಯೇ ವಿಶ್ವ ವಿದ್ಯಾಲಯ ಸ್ಥಾಪಿಸುವುದು ಯುಕ್ತವೆಂದೂ ಸರಕಾರದ ನಿಲುವಾಗಿದೆ.

**ಜಾನ್ ಕೆನ್ನೆಡಿ**

ವಿದೇಶಗಳಿಗೆ, ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯ ನೀಡುವ ಕುರಿತು ಅಮೇರಿಕನ್ ಅಧ್ಯಕ್ಷ ಕೆನ್ನೆಡಿಯವರಿಗಿದ್ದ ಆದರ, ಅದು ಇದಕ್ಕಾಗಿ ಅಮೇರಿಕನ್ ಕಾಂಗ್ರೆಸ್ಸಿನ ಅನುಮತಿಯನ್ನು ಪಡೆದಿರಬೇಕಾಗುತ್ತದೆ. ಭಾರತದ ಅಭಿವೃದ್ಧಿ ಯೋಜನೆಗಳಿಗೆ ಹಿಂದಿನಿಂದಲೂ ಉದಾರವಾಗಿ ಅಮೇರಿಕೆಯು ಸಹಾಯವನ್ನು ನೀಡುತ್ತ ಬಂದಿದೆ. ಇಂದು ಭಾರತವು ಚೀನೀಯರಿಂದಾಗಿ ಬಂದಿರುವ ಗಂಡಾಂತರದ ಪರಿಸ್ಥಿತಿಯಲ್ಲಿ ಸೈನಿಕ ಶಕ್ತಿಯನ್ನು ಬಲಪಡಿಸುವ ಅಗತ್ಯವೂ ಇರುವುದರಿಂದ ಈ ದಿಸೆಯಲ್ಲಿಯೂ ಅದರ ನೆರವು ಅತ್ಯವಶ್ಯವಾಗಿದೆ. ಅಧ್ಯಕ್ಷ ಕೆನ್ನೆಡಿಯವರು ಭಾರತದ ಬಗೆಗೆ ಅತಿ ಉದಾರ ನೀತಿಯನ್ನು ಅನುಸರಿಸುವುದೆಂದು ರಾಯಿಟರ್ ಬ್ರಿಟಿಷ್ ವಾರ್ತಾ ಸಂಸ್ಥೆ ಹೇಳಿದ್ದಾರೆ. ಅಲ್ಲಿನ ಕಾಂಗ್ರೆಸ್ಸು ಕೂಡಾ ಇದಕ್ಕೆ ವಿರೋಧವನ್ನು ಪ್ರದರ್ಶಿಸದು ಎಂದು ನಂಬಬಹುದು.


# ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

Regd. Office. Vijaya Bank Building,
Light House Hill Road, MANGALOR—3 S Kanara

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿಯಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನು ಮ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇರುವುದರಿಂದ ಸದ್ರಿಯವರಿಗೆ ರಿಜಿಸ್ಟ್ರೀ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳು ಕಾರಣಾಂತರಗಳಿಂದ ಜಾರಿಯಾಗದೆ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇರುವುದರಿಂದಲೂ ಸದ್ರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 18–4–1963ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 20–4–1963ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ಅಥವಾ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬಹಿರಂಗ ಏಲಂ ಮೂಲಕ ಯಾ ಖಾಸಗಿಯಾಗಿ ಮಾರಾಟ ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ನಷ್ಟಗಳನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

| ಲೋನ್ ನಂಬರು | ಸಾಲಗಾರನ ಹೆಸರು ಮತ್ತು ವಿಳಾಸ | ಬರತಕ್ಕ ಮೊಬಲಗು (ತಾ. 31–3–63ರ ವರೆಗಿನ ಬಡ್ಡಿ ಕೂಡಾ) ರೂ | ನಪೈ |
|---|---|---|---|
| 868/60 | ರಾಮಕೃಷ್ಣ, ಟೀಚರ್, ಬೋರ್ಡ್ ಹಿಂದೂಸ್ಥಾನಿ ಶಾಲೆ, ಶಿರೂರು | 56 | 10 |
| 278/61 | ಶೇಷ ಶೆಟ್ಟಿ, ದಾರ ಶೆಟ್ರ ಅಳಿಯ, ನಾಕಟ್ಟೆ, ಯಡ್ತರೆ ಗ್ರಾಮ, ಪೋಸ್ಟ್ ಬೈಂದೂರು | 68 | 95 |
| 378/61 | ಗೋವಿಂದ ಶೇರೆಗಾರ ತಿಮ್ಮಪ್ಪ ಶೇರೆಗಾರರ ಮಗ ಉಪ್ಪುಂದ ಗ್ರಾಮದ ಬಿಜೂರು, ಪೋಸ್ಟ್ ಬಿಜೂರು | 109 | 80 |
| 418/61 | ಅಣ್ಣಪ್ಪ ಶೇರೆಗಾರ, ಮಂಜಯ್ಯ ಶೇರೆಗಾರರ ಮಗ ಪಡುವರಿ ಗ್ರಾಮ ಪೋಸ್ಟ್ ಪಡುವರಿ | 33 | 20 |
| 819 61 | ವಾಸನಾದಿ ಮಹಾಲಿಂಗ ಶೆಟ್ಟಿ, ನಾಗಪ್ಪ ಶೆಟ್ರ ಅಳಿಯ, ಶಿರೂರು, ಪೋಸ್ಟ್ ಶಿರೂರು | 207 | 20 |
| 1141/61 | ಟಿ. ಹಸನ್ ಸಾಹೇಬ, ಹಾಜಿ ಸಾಹೇಬರ ಮಗ ಉಪ್ಪುಂದ, ಪೋಸ್ಟ್ ತಾರಾಪತಿ | 53 | 25 |
| 1147/61 | ನರಸಿಂಹ ಶೆಟ್ಟಿ, ಚೆನ್ನಮ್ಮ ಶೆಡ್ತಿಯರ ಮಗ ಹೊಸಮನೆ, ಶಿರೂರು, ಪೋಸ್ಟ್ ಶಿರೂರು | 53 | 15 |
| 121/62 | ಶೀನಪ್ಪ ಶೆಟ್ಟಿ, ಅಣ್ಣಪ್ಪ ಶೆಟ್ರ ಅಳಿಯ ನೆಲ್ಯಾಡಿ ಮೂಡುಮನೆ, ಪೋಸ್ಟ್ ಮಯ್ಯಾಡಿ | 63 | 50 |
| 163/62 | ತರಸಿಲ್ಲಿ ಅಬ್ದುಲ್ ಖಾದರ್ ಸಾಹೇಬ್ ಇಸ್ಮಾಯಿಲ್‌ಜಿ ಇವರ ಮಗ, ಕಳಿಹಿತ್ಲು, ಪೋಸ್ಟ್ ಶಿರೂರು | 90 | 60 |
| 173/62 | ಮಡ್ಡೋಡಿ ವೆಂಕಟರಮಣ ಶೇರೆಗಾರ, ತಿಮ್ಮಯ ಶೇರಗಾರರ ಮಗ ಬೈಂದೂರು ಗ್ರಾಮ, ಪೋಸ್ಟ್ ಮಯ್ಯಾಡಿ | 18 | 65 |
| 179/62 | ನಾರಾಯಣ ಗಾಣಿಗ ನಾಗಿ ಹೆಂಗ್ಸಿನ ಮಗ ಉಪ್ಪುಂದ ಗ್ರಾಮ ಪೋಸ್ಟ್ ಉಪ್ಪುಂದ | 91 | 20 |
| 187/62 | ತಿಮ್ಮಪ್ಪ ಶೇರೆಗಾರ, ಸುಬ್ರಾಯ ಶೇರೆಗಾರರ ಮಗ ಹೋಬಳಿದಾರ್ ಪಡುವರಿ ಗ್ರಾಮ, ಪೋಸ್ಟ್ ಪಡುವರಿ | 40 | 60 |
| 169/62 | ನರಸಿಂಹ ವ್ಯಾಸ ಭಂಡಾರ ಶ್ರೀನಿವಾಸ ವ್ಯಾಸ ಭಂಡಾರರ ಮಗ ನಾಗೂರು, ಪೋಸ್ಟ್ ಕಿರಿಮಂಜೇಶ್ವರ | 65 | 40 |
| 521/62 | ಗುಡಿಹೊಳ ಮಹಾಬಲ ಶೆಟ್ಟಿ ವೆಂಕಪ್ಪ ಶೆಟ್ರ ಅಳಿಯ, ಬಿಜೂರ ಗ್ರಾಮ, ಪೋಸ್ಟ್ ಬಿಜೂರು | 486 | 30 |

*Office of:* The Vijaya Bank Ltd, Byndoor.
6–4–1963.

ಕೆ. ಭೋಜರಾಜ ಹೆಗ್ಡೆ,
ಏಜೆಂಟ್

# The Karnataka Bank Ltd., Udipi., S. K.

Regd. Office: Dongerkery, MANGALORE—3.

## ದಿ. ಕರ್ನಾಟಕ ಬೇಂಕ್, ಲಿ., ಉಡುಪಿ., ದ. ಕ.

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ವಗೈರೆ ಬಾಬತು ಮಾಡದೇ ಬಾಕಿ ಮಾಡಿಕೊಂಡಿರುವುದರಿಂದ, ಸದ್ರಿ ಸಾಲಗಳನ್ನು ವಸೂಲು ಮಾಡುವರೆ ಅವರಿಗೆ ರಿಜಿಸ್ಟ್ರ ನೋಟೀಸುಗಳನ್ನು ಬಿಟ್ಟಿದ್ದರೂ (ಕೆಲವು ನೋಟೀಸುಗಳು ಬೇರೆ ಬೇರೆ ಕಾರಣಗಳಿಗಾಗಿ ವಾಪಾಸು ಬಂದಿದ್ದು) ಕೂಡಾ, ಸದ್ರಿ ಈಡಿಟ್ಟ ನಗಗಳನ್ನು ಬಿಡಿಸದೇ ಇರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಇದೇ 1963ನೇಯ ಇಸವಿ, ಎಪ್ರೀಲ್ ತಿಂಗಳ 25ನೇ ತಾರೀಕಿನ ಅಪರಾಹ್ನ 2 ಗಂಟೆಯ ಒಳಗೆ, ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು, ವಗೈರೆ ಬಾಕಿಗಳನ್ನು ಸಂದಾಯಿಸಿ ನಗಗಳನ್ನು ವಾಪಾಸು ಪಡಕೊಳ್ಳದೆ ಇದ್ದ ಪಕ್ಷದಲ್ಲಿ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1963ನೇಯ ಇಸವಿಯ ಎಪ್ರೀಲ್ ತಿಂಗಳ 27ನೇ ತಾರೀಕು ಶನಿವಾರ ದಿನ ಅಪರಾಹ್ನ ಗಂಟೆ 2ಕ್ಕೆ ಯೂ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನೋಟೀಸು ಸಿವಾಯಿ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

| ಜಂಜಾಡ್ರಿ ನಂಬ್ರ | ಸಾಲದ ನಂಬ್ರ | ಸಾಲ ಪಡೆದವರ ಹೆಸರು | ಸಾಲದ ಮೊಬಲಗು ರೂ. |
|---|---|---|---|
| 1. | 83/61 | ಯು. ಕೇಶವ ಪ್ರಭು. ಶ್ರೀನಿವಾಸ ಪ್ರಭುಗಳ ಮಗ, C/o. ಕೋಲ್ಕಾರ್ಸ್ ಮೆಟಲ್ ವೇರ್, ರಥಬೀದಿ, ಉಡುಪಿ. | 1000=00 |
| 2. | 116/61 | ಪಿ. ಗೋವಿಂದರಾಯ ನಾಯಕ್, ರಘುರಾಮ ನಾಯಕರ ಮಗ, ಪುತ್ತೂರು ಗ್ರಾಮ, ಉಡುಪಿ ತಾಲೂಕು, P. O ಪುತ್ತೂರು. | 100=00 |
| 3. | 133/61 | ಪಿ. ಮಂಜಯ್ಯ ರೈ, ಪಾಲೀಕಾ ಮನೆ, ಅತ್ರಾಡಿ ಗ್ರಾಮ, ಉಡುಪಿ ತಾಲೂಕು, P O ಪರ್ಕಳ, ದ. ಕ. | 120=00 |
| 4. | 148/61 | ಶ್ರೀರಾಮಶರ್ಮ, ನಾರಾಯಣ ಭಟ್ಟರ ಮಗ, ಹಿರೇಬೆಟ್ಟು ಗ್ರಾಮ, ಉಡುಪಿ ತಾಲೂಕು, P O ಹಿರೇಬೆಟ್ಟು ದ. ಕ | 425=00 |
| 5. | 195/61 | ಕೆ. ಆನಂದ ಹೆಗ್ಡೆ, ವೆಂಕಟಯ್ಯ ಹೆಗ್ಡೆರ ಮಗ, ಅತ್ರಾಡಿ ಗ್ರಾಮ, ಉಡುಪಿ ತಾಲೂಕು, ಪೋಸ್ಟ್ ಪರ್ಕಳ ದ. ಕ. | 140=00 |
| 6 | 254/61 | ಕೆ. ಸಚ್ಚಿದಾನಂದ ಶೆಟ್ಟಿ, ಓರಿಯಣ್ಣ ಶೆಟ್ಟರ ಮಗ, C/o ಮಣಿಪಾಲ್ ಪವರ್ ಪ್ರೆಸ್, ಉಡುಪಿ ತಾಲೂಕು P. O ಮಣಿಪಾಲ್ ದ. ಕ. | 166=00 |
| 7. | 313/61 | ಪಿ. ಮಂಜಯ್ಯ ರೈ, ಮಹಾಬಲ ರೈಗಳ ಮಗ, ಪರಿಕಾ ಮನೆ, ಅತ್ರಾಡಿಗ್ರಾಮ, ಉಡುಪಿ ತಾಲೂಕು, P. O ಪರ್ಕಳ, ದ ಕ. | 100=00 |
| 8. | 363/61 | ಕೆ. ಆನಂದ ಹೆಗ್ಡೆ, ವೆಂಕಟಯ್ಯ ಹೆಗ್ಡೆಯವರ ಮಗ, ಅತ್ರಾಡಿ ಗ್ರಾಮ, ಉಡುಪಿ ತಾಲೂಕು, P. O ಪರ್ಕಳ, ದ ಕ. | 375=00 |
| 9. | 375/61 | ಮೇರಿ ಡಿಸೋಜ, ವಿಕ್ಟರ್ ಡಿಸೋಜರ ಹೆಂಡತಿ, ಅಂಬಲಪಾಡಿ, ಉಡುಪಿ ದ. ಕ | 130=00 |
| 10. | 383/61 | ಕೆ. ಅಂಣಪ್ಪ ಗಾಣಿಗ, ನಾಗಪ್ಪಗಾಣಿಗರ ಮಗ, ಹಿಂದಿ ಪಂಡಿತ ಬೋರ್ಡ್ ಹೈಸ್ಕೂಲ್, ಉಡುಪಿ ದ ಕ. | 100=00 |
| 11. | 389/61 | ಸುಧಾಮ ಶೆಟ್ಟಿ ದೇಜಪ್ಪ ಶೆಟ್ಟರ ಮಗ, ಮಣಿಪುರ ಗ್ರಾಮ, ಉಡುಪಿ ತಾಲೂಕು, P. O. ಮಣಿಪುರ ದ. ಕ. | 460=00 |
| 12. | 413/61 | H. ರಘುವೇಂದ್ರ ರಾವ್, ವೆಂಕಟರಾಯರ ಮಗ, ಪಡುಹಿತ್ಲು ಪಡುಪೇಟೆ, ಉಡುಪಿ, ದ ಕ. | 125=00 |
| 13 | 75/62 | ಯು ನರಸಿಂಹ ಪೈ, ರಾಮಚಂದ್ರ ಪೈಗಳ ಮಗ, ರಥಬೀದಿ, ಉಡುಪಿ, ದ. ಕ. | 170=00 |
| 14. | 101/62 | ಪಿ. ಗೋವಿಂದರಾಯ ನಾಯಕ್, ರಘುರಾಮ ನಾಯಕರ ಮಗ, ಪುತ್ತೂರು ಗ್ರಾಮ, ಉಡುಪಿ ತಾಲೂಕು, ಪುತ್ತೂರು ಪೋಸ್ಟ್., ದ. ಕ. | 200=000 |
| 15. | 102/62 | — do — | 70=00 |
| 16. | 130/62 | H. ಸದಾಶಿವ ಶೆಟ್ಟಿ, ತ್ಯಾಂಪ ಹೆಗ್ಡೆಯವರ ಅಳಿಯ, ಹಿಳಿಯೂರು ಗ್ರಾಮ, ಉಡುಪಿ ತಾಲೂಕು, P O. ಹಿಳಿಯೂರು., ದ. ಕ. | 235=00 |
| 17. | 176/62 | ಚಂದು ಕೋಟಿಯಾನ್, ಕಾಡಿಯಪೂಜಾರಿಯ ಅಳಿಯ, ಅಂಕುದ್ರು, ಉದ್ಯಾವರ, ಪೋಸ್ಟ್, ದ. ಕ. | 200=00 |
| 18. | 324/62 | ಜೋಗಿ ಶೆಟ್ಟಿ, ನಾರಾಯಣ ಶೆಟ್ಟರ ಮಗ, ತೋಟಮನೆ ಗುಂಡಿಬೈಲು, ಉಡುಪಿ., ದ ಕ | 300=00 |
| 19. | 247/62 | ಸುಧಾಮ ಶೆಟ್ಟಿ ದೇಜಪ್ಪ ಶೆಟ್ಟರ ಮಗ ಮಣಿಪುರ ಗ್ರಾಮ, ಉಡುಪಿ ತಾಲುಕು, ಪೋಸ್ಟ್ ಮಣಿಪುರ ದ. ಕ. | 300=00 |
| 20 | 320/62 | ಗಣಪತಿ ಶಾನ್ಭೋಗ್, ಸುಬ್ಬಣ್ಣ ಶ್ಯಾನುಭೋಗರ ಮಗ, ಮಣಿಪಾಲ, ಉಡುಪಿ ತಾಲೂಕು, ಪೋಸ್ಟ್ ಮಣಿಪಾಲ, ದ. ಕ. | 100=00 |

Udipi,
6-4 1963

K. B. Rama Rao,
Agent


## ಮಹಾತ್ಮರ ರಚನಾತ್ಮಕ ಕಾರ್ಯಕ್ರಮಗಳು

(೪ನೇ ಪುಟದಿಂದ)

ಯಗಳು ರೈತನಿಗೆ ಹಿತಕರವಾಗುವಂತಹುಗಳಾಗಿರಬೇಕು ಎಂದು ಗಾಂಧೀಜಿಯವರು ಒತ್ತಿ ಹೇಳಿ, ಪ್ರತಿಯೊಬ್ಬನೂ ಭಾರತದ ಬಡ ರೈತನಂತೆಯೇ ಜೀವಿಸಬೇಕೆಂದೂ ಹೇಳಿದ್ದಾರೆ.

**ಮಜೂರರು:** ಮಜೂರರು ಕೆಲಸ ಮಾಡಿದುದರಿಂದ ಶ್ರೀಮಂತರ ತ್ರಿಜರಿ ಬರ್ತಿಯಾಗುತ್ತದೆ, ಹೊರತು ಮಜೂರರ ಸಂಕಷ್ಟಗಳು ಕಡಿಮೆಯಾಗುವದಿಲ್ಲ ಮಜೂರರ ಹಿತಸಾಧನೆಯನ್ನೇ ಮಾಲಿಕರು ತಮ್ಮ ಕರ್ತವ್ಯವೆಂದು ಭಾವಿಸಬೇಕು. ಅದಕ್ಕೋಸ್ಕರ ಮಜೂರರ ಸಂಘಗಳನ್ನು ಸ್ಥಾಪಿಸಬೇಕು. ಗಾಂಧೀಜಿಯವರು ಅಹಮ್ಮದಾಬಾದಿನಲ್ಲಿರುವ ಮಜದೂರ ಸಂಘವನ್ನು ಮಾದರಿಯಾಗಿಟ್ಟುಕೊಂಡು ದೇಶದ ಎಲ್ಲಾ ಭಾಗದ ಮಜದೂರರ ಮಜೂರ ಸಂಘಗಳನ್ನು ಸ್ಥಾಪಿಸಬೇಕೆಂದು ಹೇಳಿದ್ದರು.

**ಮೂಲ ನಿವಾಸಿಗಳು:** ಭಾರತದಲ್ಲಿ ಎರಡು ಕೋಟಿಗಿಂತಲೂ ಹೆಚ್ಚು ಮೂಲ ನಿವಾಸಿಗಳಿದ್ದಾರೆ. ಇವರ ಅಭಿವೃದ್ಧಿ ಸೇವೆ ಆಗ ಬೇಕಾದುದು ಅತ್ಯಗತ್ಯ. ಅವರನ್ನು ಭಾರತದ ಸಭ್ಯ ಪ್ರಜೆಗಳನ್ನಾಗಿ ಮಾಡುವದಕ್ಕೆ ಬೇಕಾದಷ್ಟು ಶಾಲೆಗಳನ್ನು ಆಧುನಿಕ ಸೌಕರ್ಯಗಳನ್ನು ಒದಗಿಸಬೇಕು. ಅವರ ಸೇವೆಗೆ ಸಾಕಷ್ಟು ಮಂದಿ ಸೇವಕರನ್ನು ನೇಮಿಸಬೇಕಾದುದು ಅತ್ಯಗತ್ಯವಾಗಿದೆ.

**ಕುಷ್ಠ ರೋಗಿ:** ಕುಷ್ಟ ರೋಗಿಗಳ ಸೇವೆ ಶುಶ್ರೂಷೆಗಳನ್ನು ಮಾಡಲು ಎಲ್ಲರೂ ಹೇಸುತ್ತಾರೆ. ಬಡವರಾಗಿ ಇಂತಹ ರೋಗಿಗಳಿಗೆ ತುತ್ತಾದರೆ ಅವರ ಪಾಡು ಹೇಳನೀಯವೇ ಸರಿ ಗಾಂಧೀಜಿಯವರು ಸ್ವತಃ ತಾವೇ ಕುಷ್ಟ ರೋಗಿಗಳ ಸೇವೆ ಮಾಡಿ ಅವರಿಗೊಂದು ಶುಶ್ರೂಷಾಲಯವನ್ನೇ ನಿರ್ಮಿಸಿದ್ದರು.

**ವಿದ್ಯಾರ್ಥಿ:** ಭಾರತದ ಭವಿಷ್ಯದ ಆಶಾಂಕುರರೇ ವಿದ್ಯಾರ್ಥಿಗಳು. ಇಂತಹ ವಿದ್ಯಾರ್ಥಿಗಳು ಉತ್ತಮವಾದ ಶಿಕ್ಷಣವನ್ನು ಪಡೆದು ವಿದ್ವಾಂಸರಾಗಬೇಕು. ಅವರು ಯಾವ ರಾಜಕೀಯ ದಳಗಳಿಗೂ ಸೇರಿರ ಕೂಡದು. ಗ್ರಾಮೋದ್ಧಾರವೇ ಮೊದಲಾದುವುಗಳ ಕೆಲಸಗಳಲ್ಲಿ ಮುಂದಾಗಿರಬೇಕು. ಸೇವೆ ಮಾಡಲು ಸದಾ ಮುಂದಾಗಿರಬೇಕು. ವ್ಯವಸ್ಥಿತ, ಉತ್ತಮ ಜೀವನವನ್ನು ನಡೆಸಬೇಕು. ಇದಕ್ಕಾಗಿ ಗಾಂಧೀಜಿಯವರು ಪ್ರೋತ್ಸಾಹ ಕೊಟ್ಟು ವಿದ್ಯಾರ್ಥಿಗಳು ತಮ್ಮ ದೈಹಿಕ, ಮಾನಸಿಕ ಬೆಳವಣಿಗೆಯನ್ನು ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

**ಗೋಸೇವೆ**—ಗೋರಕ್ಷಣೆಯು ಗಾಂಧಿಯವರಿಗೆ ಅತ್ಯಂತ ಪ್ರಿಯವಾಗಿತ್ತು. ಹಿಂದೂ ಧರ್ಮದ ಪ್ರಮುಖ ಬಾಹ್ಯರಕ್ಷೆಯೇ ಈ ದನಗಳೆಂದು ಅವರು ತಿಳಿದಿದ್ದರು. ದನವು ಒಂದು ಪವಿತ್ರ ಕಲ್ಪಕರು. ಅದು ನಿಜವಾಗಿ ನಮ್ಮ ವಂದನೆಗೆ ಅರ್ಚನೆಗೆ ಯೋಗ್ಯವಾಗಿದೆ ಎಂದು ಗಾಂಧೀಜಿಯವರ ಭಾವನೆಯಾಗಿತ್ತು.

ಈ ನವ ಮಂತ ರಚನಾತ್ಮಕ ಕಾರ್ಯಕ್ರಮಗಳಿಂದ ಭಾರತದಲ್ಲಿ ರಾಮರಾಜ್ಯದ ಕನಸನ್ನು ನನಸಾಗಿ ಮಾಡಲು ಗಾಂಧೀಜಿಯವರು ಬಯಸಿದ್ದರು. ಆದರೆ ಈ ಎಲ್ಲಾ ಕಾರ್ಯಕ್ರಮಗಳು ಅವರು ನೆನಸಿದಂತೆ ಸಾಧ್ಯವಾಗಲಿಲ್ಲ. ಪ್ರತಿಯೊಂದೂ ಪ್ರಚಾರಕ್ಕೆ ಬಂದು ಕಾರ್ಯರೂಪಕ್ಕೆ ಒಂದರೆ ಬಡವರ ಭಾರತ ಆರ್ಥಿಕ ಪರಿಸ್ಥಿತಿಯಲ್ಲಿ ಮತ್ತು ಇತರ ಎಲ್ಲಾ ವಿಷಯಗಳಲ್ಲಿ ಉನ್ನತದ ಉತ್ತುಂಗ ಶಿಖರದ ಮೇಲೆ ತನ್ನ ಕೀರ್ತಿಧ್ವಜವನ್ನು ರಾರಾಜಿಸುವಂತೆ ಮಾಡಲು ಸಾಧ್ಯವಿದೆ.

(ಆಧಾರ)

## ತುರ್ತು ಪರಿಸ್ಥಿತಿ

ಬಂಗಾರ ದರಿಸಿ ದೇಹ ಸಿಂಗರಿಸಿಕೊಂಬ
ನಾಟಕ ಸಾಕು।
ಭಾರತಕೆ ಬಂದಿರುವ ಸಂಕಟವೀಗ
ನೀಗಬೇಕು ॥ ೧ ॥
ಮಾತು ಮಾತಿಗೆ ಸರಕಾರವನು
ನಿಂದಿಸುವುದ ನಿಲಬೇಕು।
ಮಾತೆ ಭಾರತಿಗೆ ತನ್ನಿಂದ ಸೇವೆ
ಯೇನೆಂದರಿಯಬೇಕು ॥ ೨ ॥
ಕಟ್ಟೆ ಕಟ್ಟೆಯಲಿ ಕುಳಿತು ಕೆಟ್ಟ
ಮಾತುಗಳಾಡುವದು ಸಾಕು।
ಒಟ್ಟಾಗಿ ಸರಕಾರವನು ಬಲಪಡಿಸಿ
ಕೀರ್ತಿ ಗಳಿಸಬೇಕು ॥ ೩ ॥
ಘೋಷಣೆ ಭಾಷಣ ನಾಲಿಗೆ ಪ್ರದರ್ಶನ
ಮಿತಿಯಿಂದಿರಬೇಕು।
ದೇಶಪ್ರೇಮ ನಿಸ್ವಾರ್ಥ ಬುದ್ಧಿ
ಬೆಳೆದು ಬರುವಂತೆ ನೋಡಬೇಕು ॥ ೪ ॥
ಮೊಟೆ ಮಂತ್ರಗಳೆಂದು ಜನರ ಸುಲಿವ
ಆಟ ನಿಲ್ಲಬೇಕು।
ಮಠ ಮಂದಿರಗಳಲ್ಲಿ ಹೂತುಕೊಂಡಿಹ
ಹೊನ್ನು ಧನ ಹೊರ ಬರಬೇಕು ॥ ೫ ॥
ಮತಿವಂತರೆಲ್ಲ ಮಡಿಜೀವನ
ಮಾಡಲೆತ್ನಿಸಬೇಕು।
ಅತಿ ಭಕ್ತಿಯಲಿ ದೇಶವೇ ದೇಗುಲವೆಂದು
ಪೂಜಿಸಬೇಕು ॥ ೬ ॥
ತುರ್ತುಕಾಲದಲಿ ಕಿರಿಭರ್ತಿ ಮಾಡಿ
ಕೊಂಬರ ಮಟ್ಟಿಕಾ ಕಲಿಕೆಲಬೇಕು;
ಕರೆ ಬಂದಾಗ ಸೈನ್ಯಕ್ಕೆ ಸಿದ್ಧರಾಗಿ
ಮುಂದೆ ಬರುತಿರಬೇಕು ॥ ೭ ॥
ಚೋರ ಚೈನಿಯರು ಹಿಂದೆ ನೋಡ
ದಂಡದಿ ಓಡಿಸಬೇಕು।
ಭಾರತಾಂಬೆಗೆ ನಮ್ಮ ಸರ್ವಶಕ್ತಿಯನ್ನು
ಧಾರೆ ಎರೆಯಲುಬೇಕು ॥ ೮ ॥
ಬಲವಂತರೆಲ್ಲ ಅಬಲರಲಿ ತಾರುಣ್ಯ
ತೋರಲೆಬೇಕು।
ಫಲಕಟ್ಟೆ ಭಾರತದೊಳಿಂಮಂಗುಲವು
ಚೀನರಿಗಾಗದಂತೆ ನೋಡಬೇಕು ॥ ೯ ॥
ದೇಶಕೋಸುಗ ಮಡಿದ ಹುತಾತ್ಮರ
ನೆನಪು ಮಂದಿಸುತಿರಬೇಕು।
ದೇಶವೇ ಮಿಗಿಲೆಂದು ಮಡಿದ ಶೂರರ
ಋಣವ ತೀರಿಸಬೇಕು ॥ ೧೦ ॥
ಜಾತಿಮತಪಂಥ ಭೇದ ಮಸದಿ
ಅಳಿಯಲೇ ಬೇಕು।
ಮಾತೆ ಭಾರತಿಗೆ ನಾವೆಲ್ಲ ಮಕ್ಕಳೆಂದರಿತು
ವರ್ತಿಸಬೇಕು ॥ ೧೧ ॥

ಡಾ। ಯು ಚಂದ್ರಶೇಖರ,
ಕುಡುಮಲ್ಲಿಗೆ


## ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ

### ವಿವೇಚಿಸಿ ನೋಡಿದರೆ

# ನಮ್ಮ ನಂದನವನ -- ಕಾಶ್ಮೀರ

ವೇದಗಳು ತಿಳಿಸುವಂತೆ ನೋಡಹೋದರೆ ಪೃಥ್ವಿಯಲ್ಲಿ 'ಆಪ್' ಅಥವಾ ನೀರು ಮಾತ್ರ ಇತ್ತು. ಇದನ್ನು ತಿಳಿಸುವ ಹಲವಾರು ಶ್ಲೋಕಗಳು ವೇದಗಳಲ್ಲಿವೆ. ಅವುಗಳಲ್ಲಿ ಒಂದು ಶ್ಲೋಕದ ಅರ್ಥ ಈ ರೀತಿ ಇದೆ — ಸತ್ಯದ ನಂತರ ಸಮುದ್ರದ ಸೃಷ್ಟಿಯಾಯಿತು. ಅದರ ನಂತರ ವರ್ಷ ಮತ್ತು ಸೂರ್ಯ-ಚಂದ್ರಾದಿಗಳ ಸೃಷ್ಟಿ ಕಾರ್ಯ ನಡೆಯಿತು. ಈ ಸೃಷ್ಟಿಯನ್ನು— ಪೃಥ್ವಿಯನ್ನು—ನೀರಿನಿಂದ ಎತ್ತುವುದಕ್ಕಾಗಿ ಭಗವಂತನು ಅವತಾರವೆತ್ತಿರುವ ಕಥೆಯು ಪುರಾಣಗಳಲ್ಲಿದೆ.

ಕಾಶ್ಮೀರ, ಅದರಲ್ಲೂ, ಅದರ ರಾಜಧಾನಿ ಶ್ರೀನಗರದ ವಿಷಯದಲ್ಲಿ ಹೇಳಲಾಗುತ್ತದೆ. ಏನೆಂದರೆ, ಅಲ್ಲಿ ದೂರದವರೆಗೂ ನೀರು ತುಂಬಿಕೊಂಡಿತ್ತು. ಶ್ರೀನಗರದಲ್ಲಿ ಎರಡು ಪರ್ವತಗಳಿವೆ. ಒಂದು 'ಹರಿಪರ್ವತ' ಅಲ್ಲಿ ಮುಂಚೆ ರಾಜದುರ್ಗವಿತ್ತು. ಅಲ್ಲಿ ಒಂದೆಡೆ ಪೂಜಾರಿಗಳು ಒಂದು ಮೂರ್ತಿಯನ್ನು ಇಟ್ಟುಕೊಂಡಿರುವರು. ಈ ಸ್ಥಳ ನೀರಿನಿಂದ ಪ್ರಪ್ರಥಮ ಬಾರಿಗೆ ಮೇಲಕ್ಕೆ ಬಂದುದಾಗಿ ಅವರು ಹೇಳುತ್ತಾರೆ. ಇನ್ನೊಂದು ಪರ್ವತ 'ಶಂಕರ ಶೈಲ' ಹೆಸರಿನಿಂದ ಪ್ರಖ್ಯಾತವಿದೆ. ಅದು 'ಹರಿಗಿರಿ'ಯಿಂದ ಬಹಳ ಎತ್ತರವಾಗಿಯೂ ಇದೆ. ಆ ಪರ್ವತವನ್ನು ಮುಸಲ್ಮಾನರು 'ತಖ್ತ್ ಸುಲೇಮಾನ್' (ಸುಲೇಮಾನ್—ಸಿಂಹಾಸನ) ಎಂದು ಕರೆಯುತ್ತಾರೆ. ಅದು ಕೂಡಾ ಅತೀ ಪ್ರಾಚೀನ ಪರ್ವತವಿದೆ. ಇದರ ಅಕ್ಕಪಕ್ಕದ ಪ್ರದೇಶವೆಲ್ಲ ನೀರಿನಲ್ಲಿ ಮುಳುಗಿಕೊಂಡಿದ್ದಾಗಲೂ ಆ ಪರ್ವತವು ಅಲ್ಲೇ ಇತ್ತು. ಕಾಶ್ಮೀರವು 'ನಂದನ ವನ' ಹೆಸರಿನಿಂದ ಪ್ರಾಚೀನ ಕಾಲದಲ್ಲಿ ವಿಖ್ಯಾತವಾಗಿತ್ತು. ಅಲ್ಲಿ ಅನೇಕ ಋಷಿ-ಮುನಿವರ್ಯರು ತಪಸ್ಸು ಮಾಡಿದ್ದರು. ಈಗಲೂ ಶ್ರೀ ಅಮರನಾಥದಂತಹ ತೀರ್ಥಕ್ಷೇತ್ರಗಳು ಕಾಶ್ಮೀರದಲ್ಲಿವೆ. ಅಲ್ಲಿಗೆ ಅನೇಕ ಯಾತ್ರಿಕರು ಅದೆಂತಹ ಕಷ್ಟಕೋಟಲೆಗಳನ್ನು ಸಹಿಸಿಕೊಂಡು ಸಹ ಕಾಲದ ಬದಲಾವಣೆಯತ್ತ ಗಮನವೀಯದೆ, ಸಹಸ್ರ ಸಂಖ್ಯೆಯಲ್ಲಿ ಹೋಗುತ್ತಾ ಇದ್ದಾರೆ. ತೀರ್ಥಕ್ಷೇತ್ರಗಳು ಹಾಗೂ ದೇವಸ್ಥಾನಗಳು, ಕಾಶ್ಮೀರದಲ್ಲಿ ಅನೇಕ ಇವೆ. ಈಗ ಬಹುಶಃ ಹೆಚ್ಚಿನವು ನಾಶಕ್ಕೆರವಾಗಿವೆ.

ಕಾಶ್ಮೀರವು ಅದರ ಪ್ರಾಕೃತಿಕ ಸೌಂದರ್ಯ ಹಾಗೂ ಫಲಭರಿತ ಭೂಮಿ, ಸ್ವಾಸ್ಥ್ಯವರ್ಧಕ ಹವಾಗುಣ, ಪುಷ್ಪ ವನಸ್ಪತಿ—ಫಲ ಮುಂತಾದವುಗಳಿಗೆ ಹೆಸರುವಾಸಿ ಪ್ರದೇಶವಾಗಿದೆ. ಇಲ್ಲಿಯ ಪ್ರಜೆಗಳ ಕರ ಕೌಶಲ್ಯ ಹಾಗೂ ಕಲಾ ಕುಶಲತೆಗಳು ಜಗಜ್ಜಾಹಿರವಾಗಿವೆ. ಇಲ್ಲಿಯಲ್ಲಿ ಒಂದು ಮಾತಿದೆ. ಅದೇನೆಂದರೆ, ರೆಕ್ಕೆ - ಪುಕ್ಕಗಳೂ ಮೂಡದಿರುವ ಕೋಳಿಮರಿ ಕಾಶ್ಮೀರದಲ್ಲಿ ಕೆಲ ದಿನಗಳಿದ್ದಲ್ಲಿ ಅದಕ್ಕೆ ಒಡನೆ ರೆಕ್ಕೆ—ಪುಕ್ಕಗಳು ಬರುತ್ತವೆ.

ಕಾಲಚಕ್ರವು ಕಾಶ್ಮೀರದಲ್ಲಿ ಬಹಳ ಬದಲಾವಣೆಯನ್ನುಂಟು ಮಾಡಿರುತ್ತದೆ. ಮುಸಲ್ಮಾನರಿಂದ ಆಕ್ರಮಣಗಳು ನಡೆದಿವೆ. ಅವರು ತಮ್ಮ ಸ್ವಭಾವ ಹಾಗೂ ಮತೀಯ ಆವೇಶದ ಕಾರಣದಿಂದ ಬಹಳ ನಷ್ಟ-ಭ್ರಷ್ಟಗಳನ್ನುಂಟುಮಾಡಿರುವರು. ಅವರ ಆಳ್ವಿಕೆಯ ಕಾಲದಲ್ಲಿ ಬ್ರಾಹ್ಮಣರನ್ನುಳಿದು (ಬಹುಶಃ) ಬಹಳ ಮಂದಿಯನ್ನು ಮತಾಂತರ ಮಾಡಿರುವರು. ಬ್ರಾಹ್ಮಣರಲ್ಲಿ ಕೂಡಾ ಕೆಲವರನ್ನು ಮತಾಂತರಗೊಳಿಸಿರುವರು. ಅದರಲ್ಲಿ ಕೆಲವರು ತಮ್ಮ ಕುಟುಂಬ ಅಥವಾ ಗೋತ್ರದ ಹೆಸರುಗಳನ್ನುಳಿಸಿ ಕೊಂಡಿರುವರು.

ಉದಾ:— ಕಿಚಲೂ, ದರ, ಆಗಾ, ಪಂಡಿತ...ಇತ್ಯಾದಿ. ಕೆಲವರು ಗೋತ್ರದ ಹೆಸರನ್ನೂ ಉಳಿಸಿಕೊಳ್ಳದೆ ನೇರ ಇಸ್ಲಾಮಿ ಹೆಸರನ್ನೇ ಹಚ್ಚಿಕೊಂಡಿರುವರು ಉದಾ: ಮೌಲಾನಾ ಮಹಮ್ಮದ್ ಇಕ್ಬಾಲ, ಬಕ್ಷಿ ಗುಲಾಮ ಗುಲಾಮ ಮಹಮ್ಮದ್, ಶೇಖ್ ಅಬ್ದುಲ್ಲ....ಇತ್ಯಾದಿ. ಕೆಲವು ಬ್ರಾಹ್ಮಣರಂತೂ ಕಾಶ್ಮೀರವನ್ನೂ ತೊರೆದು ಹೊರಗೆ ಉತ್ತರ ಭಾರತದ ಇತರ ಸ್ಥಳಗಳಿಗೆ ಹೋಗಿ ವಾಸಿಸಲಾರಂಭಿಸಿರುವರು. ಈಗ ಅಲ್ಲಿಯ ಜನಸಂಖ್ಯೆಯಲ್ಲಿ ಅಧಿಕಾಂಶ ಮುಸಲ್ಮಾನರಿದ್ದಾರೆ.

ನಮ್ಮ ಪುಣ್ಯ ಭೂಮಿಯ ಭವಿಷ್ಯತ್ತು ಏನಿದೆ? ಅದು ದೇವರಿಗೇನೇ [ಅಮೆರಿಕ-ಧನಿಗೇನೇ] ಗೊತ್ತು. ಘಟನೆಗಳು ವಿಶ್ವ-ನಾಟ್ಯ ಶಾಲೆಯಲ್ಲಿ ಅದರ ಸಂಬಂಧದಿಂದ ಘಟಿಸುವ ಘಟನೆಗಳು ಎಲ್ಲರಿಗೂ ಪರಿಚಿತ ಇವೆ. ನಮ್ಮ ಸರಕಾರವು ಕಾಶ್ಮೀರವನ್ನು ಭಾರತದಲ್ಲಿ ಸಂಪೂರ್ಣ ವಿಲೀನಗೊಳಿಸಿಕೊಳ್ಳಲು ಕೋಟಿ ಕೋಟಿ ರೂಪಾಯಿಗಳನ್ನು ಹಾಗೂ ಸಹಸ್ರ ಸಂಖ್ಯೆಯ ಮಾನವರ ಪರಿಶ್ರಮವನ್ನುಪಯೋಗಿಸುತ್ತಿದೆ. ಅಲ್ಲಿ ಪಾಕಿಸ್ಥಾನಿಗಳ ಆಕ್ರಮಣಕಾರಿ ಕ್ರೂರ ದೃಷ್ಟಿ ಕಾಶ್ಮೀರದ ಮೇಲೆ ಬಿದ್ದಿದೆ. ಕಾಶ್ಮೀರದ ಮೂರನೇ ಒಂದಂಶ ಪಾಕಿಸ್ತಾನಿಗಳ ಕಪಿಮುಷ್ಟಿಯೊಳಗಿದೆ. ಉಳಿದಿರುವ ಮೂರನೇ ಎರಡಂಶವನ್ನು ಗಿಟ್ಟಿಸಿಕೊಳ್ಳುವುದಕ್ಕಾಗಿ ಕುಟಿಲ ಕಾರಸ್ಥಾನಗಳನ್ನು ಎಡೆಬಿಡದೆ ನಡೆಸಲಾಗುತ್ತಿದೆ. ಆಗಾಗ ಈ ಮಾತು ಕೇಳಿಬರುತ್ತಿದೆ. ನಾವು, ಹಿಂದೂಗಳು, ಇತಿಹಾಸದಿಂದ ಏನನ್ನೂ ಅರಿತು ಕೊಂಡಿರುವುದಿಲ್ಲ. ನಮ್ಮನ್ನು ನೋಡ-ನೋಡುತ್ತಾ ಪರದೇಶಿಗಳು, ನಾವು ಹಿಂದುಗಳು, ಕ್ರಮಶಃ ಹೊರಗಟ್ಟಲ್ಪಡುತ್ತಿರುವುದನ್ನು ಮತ್ತು ಶತಮಾನಗಳಿಂದ ಹಿಂದೂ ಧರ್ಮ ಹಾಗೂ ಸಂಸ್ಕೃತಿಯ ಅನುಯಾಯಿಗಳಾಗಿದ್ದವರಿಂದು ಬೇರೆಯವರ ಕೋಟೆಗೆ ಹೋಗುತ್ತಿರುವುದಾಗಿ ತಿಳಿದುಕೊಂಡಿದ್ದಾರೆ. ಇಂದಿನ ತನಕವೂ ಭಾರತದ್ದೇ ಆಗಿದ್ದ ಅಂಗವನ್ನು ಛೇದಿಸಿ ನಮ್ಮಿಂದ ಬೇರ್ಪಡಿಸಲಾಗಿದೆ ಮತ್ತು ಇನ್ನು ಮುಂದಕ್ಕೆ ಹೇಗೆಯೇ ನಮ್ಮ ಮಾತೃ ಭೂಮಿಯ ಭಾಗಗಳು ನಮ್ಮ ಕೈ ಬಿಟ್ಟು ಬಿಡಬಹುದು. ಋಷಿ ಸಂತಾನವೆಂದು ಕರೆಯಲ್ಪಡುತ್ತಿರುವವರು ಸಭ್ಯತೆ, ಹಾಗೂ ಭಾರತೀಯ ಸಂಸ್ಕೃತಿಯ ಮೇಲೆ ಗೌರವವಿಟ್ಟಿದ್ದ ಹಿಂದೂಗಳು—ಯಾರ ಹಿಂದಿನ ಮಹಾ ಪುರುಷರು ಚೀನಾ, ಜಪಾನು, ಥಾಯಿಲೇಂಡ್, ಕಾಂಭೋಜ, ಮಲಯಾ, ಜಾವಾ, ಬಲಿ ಮುಂತಾದ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಪರಿಮಳವನ್ನು ಹಬ್ಬಿಸಿರುವರೋ—ಆ ಹಿಂದೂಗಳಿಂದು ತಮ್ಮ ದೇಶದಲ್ಲೇ ಸ್ವಾವಲಂಬನೆ ಹಾಗೂ ಸ್ವಾಭಿಮಾನಶೂನ್ಯರಾಗಿ, ನಿರುತ್ಸಾಹಿಗಳಾಗಿ ಕಾರ್ಯವಿಮುಖರಾಗಿರುವರು. ಅಂತಹ ಸಮಯದಲ್ಲಿ ಕಾಶ್ಮೀರ ಹಾಗೂ ಅಲ್ಲಿಯ ತೀರ್ಥಕ್ಷೇತ್ರಗಳು ಅದೆಂತು ಭಾರತೀಯವಾಗಿ ಉಳಿದಾವು? ಇದನ್ನಿಂದು ಸ್ಪಷ್ಟವಾಗಿ ಹಾಗೂ ಧೈರ್ಯದಿಂದ ಯೋಚಿಸುವ ಕಾಲ ಬಂದೊದಗಿರುತ್ತದೆ.

ಹಿಂದೆ ಪಾಕಿಸ್ಥಾನದಲ್ಲಿ ಭಾರತದ ರಾಯಭಾರಿಯಾಗಿದ್ದ ಡಾ| ಸೀತಾರಾಮರು ಜನತೆಯ ಮುಂದೆ ಈ ಪ್ರಶ್ನೆಯನ್ನಿಟ್ಟಿರುವರು. ಅದಕ್ಕೆ ಉತ್ತರ ಕೊಡುವ ಕಾಲವೂ ಸನ್ನಿಹಿತವಾಗಿರುತ್ತದೆ. ಚಿರತೆಯಂತೆ ಹೊಂಚುಹಾಕಿಕೊಂಡಿದ್ದ ಪಾಕಿಸ್ಥಾನವು ಇದೀಗ ಕಾಶ್ಮೀರವೆಂಬ ಕರುವನ್ನು ಕಡಿದು ತಿನ್ನಲು ಮುಂದೆ ಬಂದಿದೆ. ಅದಕ್ಕಂತೂ ಕರುವಿನಿಂದ ತೃಪ್ತಿ ಯಾಗುವಂತಿಲ್ಲ. ಅದನ್ನು ಚರಿತ್ರೆಯೇ ಸಾರುತ್ತಿದೆ. ಆದುದರಿಂದ ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಟ್ಟಲ್ಲಿ ಏನು ಪ್ರಯೋಜನ? ಇಂದು ಕಾಶ್ಮೀರವನ್ನು ಬಿಟ್ಟುಕೊಟ್ಟಲ್ಲಿ ನಾಳೆ ಅದು ಅಸ್ಸಾಮನ್ನು ಕೇಳುವುದರಲ್ಲಿ ಸಂದೇಹವೇ ಇಲ್ಲ. ಅದಕ್ಕಾಗಿ ಬೇಕಾಗುವ ಪೂರ್ವಸಿದ್ಧತಾ ಕೆಲಸವನ್ನವರು ನಡೆಸುತ್ತ ಬಂದಿದ್ದಾರೆ. ಇದಾಗಲೇ ಅಸ್ಸಾಂ ಅಂತಹ ಮತೀಯ ಗಲಭೆಗೆ ಅನೇಕ ಬಾರಿ ತುತ್ತಾಗಿರುತ್ತವೆ.

ಭಾರತದ ಒಂದಂಗುಲವನ್ನೂ ಬಿಟ್ಟುಕೊಡುವುದಿಲ್ಲವೆಂದು ಪೌರುಷದ ಮಾತನ್ನಾಡುವವರು ಈಗ ಸುಮ್ಮಗಿರಲು ಸಾಧ್ಯವೇ?

— ಶಿವಶಂಕರ.

(ಪಾಂಚಜನ್ಯದಿಂದ.)

ಕಾಶ್ಮೀರದ ಒಂದು ಸುಂದರ ನೋಟ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಕಾದಲ್ಲಿ 1 ರೂ, ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್
ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಟಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

## ಸಾವು—ಉಳಿವು

(೨ನೇ ಪುಟದಿಂದ)

ಇಲ್ಲ ಚಂದ್ರಣ್ಣ...ಪ್ರತಿಫಲಾಪೇಕ್ಷೆಗಳಾಗದೆ ಯಾವ ಕೆಲಸಕ್ಕೂ ಕೈ ನೀಡುವುದಿಲ್ಲ....ಹಣ ದೊರೆಯುತ್ತೆಂತಿದ್ದರೆ ಎಂತಹ ಕಾರ್ಯವನ್ನು ಬೇಕಾದರೂ ಮಾಡುತ್ತಾರೆ, ಜನರು....ಯುಗ ಅಂತಹದಾರಿಯಲ್ಲೀಗ ಮುಂದರಿಯುತ್ತಿದೆ. ಎಲ್ಲಿವೂ ದಯ ವಾತ್ಸಲ್ಯಗಳ ಸೋಂಕಿಲ್ಲದ ಹೃದಯ ಅವರದು....

ಹಿಂದಿನಿಂದ ಶಾಮಣ್ಣ ಮಾತು ನಿಲ್ಲಿಸಿ, ಬಾವಿಗಟ್ಟೆಗೆ ಹೋಗಿ ಉಗುಳಿಬಂದ. ಅತೀ ಹಿಂದಿನ ಸಂಸ್ಕೃತಿಯನ್ನು ಎತ್ತಿ ತೋರುವ ತೋರ ಗಂಬಗಳು, ಗೋಡೆಗಳು, ಚಿತ್ರಪಟಗಳು—ಎಲ್ಲವೂ ಚಂದ್ರಣ್ಣನ ಕಣ್ಣಿಗೆ ಅಸ್ಪಷ್ಟವಾಗಿ ತೋರಿ, ಆ ಮಾತಿನ ಸತ್ಯತೆಯನ್ನು ಸಾರಿದವು.

"ಅಷ್ಟಿದಿದ್ರೆ ನೋಡಿ..." ಶಾಮಣ್ಣ ಮತ್ತೆ ತೊಡಗಿದ—

"ಡಾಕ್ಟರು ಬುಡಕ್ಕೆ ಹೋಗಿದ್ದೆನಲ್ಲ ಆಗ ಒಂದು ವಿಚಿತ್ರ ಕಥೇನ ಅವ್ರು ಹೇಳಿದ್ರು ನೋಡಿ ಯಾರೋ ಒಬ್ಬ ಪ್ರವಾಸಿ ಊರಿಗೆ ಹೋಗ್ತಿದ್ದನಂತೆ. ಪಾಪ ಪಕ್ಕದ ಹಳ್ಳೀಲಿ ಬಸ್ ಹಾಳಾಗಿಹೋಯ್ತಂತೆ. ಆದರೂ ಆತ ಮನೆಗೆ ಬೇಗನೆ ಹೋಗಬೇಕಾದ್ದರಿಂದ, ತನ್ನ ಚೀಲ ಹಿಡ್ಕೊಂಡು ಹೊರ ಬರುವಾಗ ಮಧ್ಯ ದಾರೀಲಿ ಒಂದು ಅಂಗಡಿಯವ ಬಾಗಿಲು ಹಾಕ್ತಾ ಇದ್ದನಂತೆ. ಅವನ ಹತ್ರಲೆ ಪ್ರವಾಸಿ ತನ್ನ ಕತೇನ ಹೇಳಿದ್ನಂತೆ. ಮುಂದಿನ ಊರಿಗೆ ಕಳ್ಸಿಕೊಡಲು ಒಂದು ಜನವನ್ನಾತ ಹುಡುಕುತ್ತ ಇರಲು, ಯಾರೋ ಒಬ್ಬ ಸೆಟ್ಟಿ ಆ ದಾರೀಲಿ ಬಂದನಂತೆ. ಮತ್ತೆ ಸುಮ್ಮನೆ ಜನ ಯಾಕೆಂತ ಆತನೊಡನೇ ಕಳ್ಸಿದನಂತೆ. ಆದರೆ ಆತ ಪ್ರವಾಸೀನ ವಿಚಾರ್ಸಿ ಮುಂದಿನವಾರಿಕರಿಸಿ ಭಯ ಗ್ರಸ್ತನೆಂದು ಬೆದರಿಸಿ, ತನ್ನ ಮನೆಗೆ ಕರೆದುಕೊಂಡು ಹೋದನಂತೆ. ಆದರೆ ಹಣದಾಸೆ ಮಾಡಿದನಾತ, ತನ್ನ ಆಳನ್ನು ಕರೆಸಿ, ಆ ಪ್ರವಾಸೀನ ಕೊಲ್ಲುವುದಕ್ಕೆ ಅಣಿಮಾಡಿದ್ನಂತೆ. ಆ ಜೀತದಾಳು ಅವನ ಕಟ್ಟಿದ ಶಿಷ್ಯನಂತಿದ್ದನಂತೆ. ಅಲ್ಲದೆ ತುಂಬಾ ಬಡವನಂತೆ. ಈ ಯಜಮಾನ ಹಣದಾಸೆಯನ್ನು ತೋರಿಸಿ, ಕೊಲ್ಲಲೇಬೇಕೆಂದು ಒತ್ತಾಯಿಸಿದಾಗ ಆತ ಕೊಲ್ಲುವುದಕ್ಕೆ ಒಪ್ಪಿಕೊಂಡು, ಸ್ನಾನಕ್ಕೇಂತ ಆ ಪ್ರವಾಸಿಯನ್ನು ತನ್ನ ಮನೆಗೊಯ್ದು ಮಧ್ಯ ರಾತ್ರಿಗೆ ಎದೆಗೆ ಚೂರಿ ತಿವಿದು ಕೊಂದು ಹುಗಿದುಹಾಕಿದನಂತೆ. ಕೆಲವರು ಕುತ್ತಿಗೆ ಹಿಸುಕಿ ಹೊಳೆಗೆಸೆದನೆಂದೆನ್ನುತ್ತಾರೆ...ಆ ಯಜಮಾನ ಇದಾದ್ಮೇಲೆ...ಅವನು ತಮ್ಮ ಗ್ರಾಮದ ಪಟೇಲ ಎಲ್ಲಾದರೂ ಇದನ್ನು ತಿಳಿದು ರಿಪೋರ್ಟು ಮಾಡಿದರೆ ತನ್ನ ಪ್ರಾಣಕ್ಕೆ ಸಂಚಕಾರ ಬಂದೀತೆಂದು ಅವರಿಗೂ ಕಿಸೆ ತುಂಬಿಸಿದನಂತೆ... ಆದರೆ ಗುಡ್ಡಕ್ಕೆ ಗುಡ್ಡ ಅಡ್ಡ ಉಂಟೇ ಉಂಟು ನೋಡಿ....ಅಷ್ಟೊತ್ತಿಗೆ ಶ್ಯಾನುಭೋಗರು ಬಂದು, ನನಗೇನೂ ಇಲ್ವೇ ಎಂದರಂತೆ. ಅವನಿಗೂ ಒಂದಷ್ಟು ಕೊಟ್ಟನಂತೆ ಯಜಮಾನ ಆದರೆ ಆತ ಆ ಹಣದಿಂದ ತೃಪ್ತಿಯಾಗದೆ ಮತ್ತೂ ಕೊಡಬೇಕೆಂದನಂತೆ. ಪಟೇಲರು ಆತನಿಗೆ ಬೇಡ ತನಗೇ ಹೆಚ್ಚು ಹಣ ಕೊಡಬೇಕಾದುದು ಎಂದು ವಾದಿಸಿದರಂತೆ. ನೋಡಿ ನೋಡಿ ಚಂದ್ರಣ್ಣ...ಕೋಣಗಳೆರಡು ಹೋರಾಡಿದರೆ ನಡುವಿನ ಗಿಡಕ್ಕೆ ಪ್ರಾಣಕ್ಕೆ ಬರುತ್ತೆಂತ ಗಾದೆ...ಅಷ್ಟು ಹೊತ್ತಿಗೆ ಆತನಲ್ಲಿದ್ದ ಹಣವೆಲ್ಲ ಮುಗಿದಿತ್ತು. ಆಂದರೆ ಊರ ಆಢ್ಯ ಮಹನೀಯರೆಲ್ಲ ಬಂದು ಬೆದರಿಸಿದರು....ಕಡೆಗಾತ ಏನು ಮಾಡಿದ ಗೊತ್ತೇ...."ನಾನು ಕೊಲ್ಲಲಿಲ್ಲ...ನಮ್ಮ ಮನೆಯಾಳು ಕೊಂದದ್ದು...ನನಗೀ ವಿಷಯ ಗೊತ್ತೇ ಇಲ್ಲ." ಅನ್ನತೊಡಗಿದನಂತೆ. ನೋಡಿ ಚಂದ್ರಣ್ಣ....ಮನುಷ್ಯ ಹಣಕ್ಕಾಗಿ ಎಂತೆಂತಹ ಪಶುವೃತ್ತಿಗಳನ್ನೂ ಮಾಡಲು ಮುಂದಾಗುತ್ತಾನೆ ಆ ಜೀತದಾಳು.....ಆತನಿಗೂ ಬುದ್ಧಿ ಬೇಡವೇ.... ಒಡೆಯ ಹಣದಾಸೆ ತೋರಿಸಿದಾಗ, ಮುಂದಿನದನ್ನು ಸ್ವಲ್ಪವಾದರೂ ಎಣಿಸಬೇಡವೇ? ಪಾಪದ ಕೂಪದಲ್ಲಿ ತಾನು ಬೀಳುತ್ತೇನೆ...ಎಸೆಗಬಾರದ ಕಾರ್ಯವದು ಎಂದಾದರೂ ಬಗೆಯ ಬೇಡವೇ....ಥೂ...ಇಂತಹ ಜನರಿಂದ ತುಂಬಿ ಹೋಗಿದೆ ಚಂದ್ರಣ್ಣ ಜಗತ್ತು....ಇವರಿಗೆಲ್ಲ ಯಾವಾಗ ಬುದ್ಧಿ ಬರತ್ತೋ....ಆಗ ಜಗತ್ತಿನ ಕಲ್ಯಾಣವಾಗುತ್ತೆ..." ಶಾಮಣ್ಣ ಯಾರಾದರೂ ಕೂಲಿಗಳು ಸಂಜೆ ಹೊತ್ತಿಗೆ ಬಂದರೆ, ಹೀಗೆ ಏನಾದರೂ ಕತೆಯನ್ನು ಹೇಳಿದೊಡನೆ ನುಡಿಯುವ ಭರತ ವಾಕ್ಯವನ್ನೇ ಈಗಲೂ ಅಭ್ಯಾಸ ಬಲದಿಂದ ನುಡಿದ....

"ಹೌದು...ಆದರೆ ಅಂತಹ ಘಟನೆಗಳು ನಡೆದು ಹೋದರೆ, ನಾವು ತಿದ್ದಿಕೊಂಡು, ಅವನ ಮನಸ್ಸಿಗೆ, ತನ್ನದು ತಪ್ಪು ಎಂದು ತೋರಿಸಿಕೊಡಬೇಕು....ಆಗ ಆತನಿಗೆ ತನ್ನೊಳಗೇ ವಿಚಾರಮಂಥನವಾಗಿ, ಆತ್ಮ ಪರಿಶುದ್ಧವಾಗದೇ .... ನನಗಂತೂ ಹೀಗೆ ಮಾಡುವುದೇ ಉತ್ತಮವೆಂದು ಕಾಣುತ್ತದೆ...' ಚಂದ್ರಣ್ಣ ನಿರ್ಧಾರಿತ ದನಿಯಲ್ಲಿ ನುಡಿದ. ಶಾಮಣ್ಣನೂ ದನಿಗೂಡಿಸಿದ....

"ಹೂಂ...ಹೊತ್ತು ಸುಮಾರಾಯಿತು. ಮಲಗಿಕೊಳ್ಳಿ ತಾಯಿ ಮೆಲ್ಲನೆಯಲ್ಲಿ ನುಡಿದು ಒಳಗೆ ಹೋದಳು

ಇಬ್ಬರೂ ಮಲಗಿದರು ಚಂದ್ರಣ್ಣನಿಗೆ ತುಂಬಾ ಹೊತ್ತಿನ ತನಕ ನಿದ್ದೆ ಹತ್ತಲಿಲ್ಲ ..ಹೊರಗಿನ ಯಾತ್ರಿಕರ ಪಿಸುಪಿಸು ದನಿಯನ್ನು ಗಾಳಿ ಕಿವಿಯ ತನಕ ತಂದು ತೂರುತ್ತಿತ್ತು....ಹಾಗೆ ಅದೆಷ್ಟು ಹೊತ್ತು ಕೇಳಿ ಮುಗಿತಾಯವಾಯಿತೋ, ಚಂದ್ರಶೇಖರನಿಗೆ ತಿಳಿಯಲಿಲ್ಲ!

೦೦ ೦೦ ೦೦

ಬೆಳಿಗ್ಗೆ ಶಾಮಣ್ಣನೇ ಗಡಿಬಿಡಿಯಿಂದ ಬಂದು ಆತನನ್ನು ಎಚ್ಚರಿಸಿದ' ಆಂ—ಆಂ—" ಎಂದು ಯಾವುದು ಅರ್ಥವಾಗದ ಚಂದ್ರಣ್ಣ ಮೆಲ್ಲಗೆ ರಾಗವೆಳೆದ ಅಯ್ಯೋ ಚಂದ್ರಣ್ಣ ನಮ್ಮನೇ ಹಿಂದಿನ ಆ ಪಕ್ಕದ ಹಾಳು ಕೆರೇಲಿ ಯಾವುದೋ ಎರಡು ಹೆಣ ತೇಲುತ್ತಿವೆ ಯಾರದ್ದೆಂದು ಗೊತ್ತಿಲ್ಲ—ಯಾವ ಪಾಪಿಗಳು ಕೊಂದು ಹಾಕಿದರೋ ಏನೋ....ಬನ್ನಿ ಚಂದ್ರಣ್ಣ ಯಾರೂಂತ ಸರಿಯಾಗಿ ನೋಡ್ಕೊಂಡ್ಬರೋಣ..." ಒಂದೇ ಸವನೆ ಶಾಮಣ್ಣ ಕೂಗ ತೊಡಗಿದ....ದಡಬಡನೆ ಎದ್ದ ಚಂದ್ರಶೇಖರ ಕೂಡಲೇ ಆತನ ಹಿಂದೆ ಭರದಿಂದ ಸಾಗಿದ.

ವಿಸ್ತಾರವಾದ ಬದಿಯಲ್ಲಿ ಮುಳ್ಳುಗಳು ಬೆಳೆದ ಪುರಾತನ ಕೆರೆ. ಮೂಡಿ ಬರುವ ಸೂರ್ಯನಿಗೆ ಭೂಕಲಶ ಕನ್ನಡಿಯನ್ನು ಹಿಡಿದಂತಿತ್ತು. ಇಬ್ಬರೂ ಹೆಣಗಳು ತೇಲುವ ಸ್ಥಳಕ್ಕೆ ಹೊರಟರು .... ಗುರುತು ಹಿಡಿಯಲೆಂದು. ಚಂದ್ರಣ್ಣ ಉದ್ದವಾದ ಬಿದಿರಿನಿಂದ ಶವಗಳನ್ನು ಹತ್ತಿರಕ್ಕೆಳೆದ...

ದೂರದಿಂದೊಂದು ಹೆಂಗಸು ಅವರಿದ್ದಲ್ಲಿಗೆ ಓಡಿ ಬರುತ್ತಿದ್ದದನ್ನೇ ಕಾಣುತ್ತಿದ್ದ ಚಂದ್ರಣ್ಣನನ್ನು "ನೋಡಿ' ಎಂದು ಹತ್ತಿರ ಬಂದ ಹೆಣಗಳನ್ನು ತೋರಿಸಿ ಹೆಗಲು ತಟ್ಟಿದ ಶಾಮಣ್ಣ ..."ಅಂತೂ, ನಿನ್ನೆ ರಾತ್ರಿ ನಮ್ಮ ಮನೆಯಲ್ಲಿ ಮಲಗಿದವರೇ ಇವ್ರ ...

"ಅಯ್ಯೋ ...ಇವರನ್ನು ಕೊಂದವನು ನಾನೇ ಶಾಮಣ್ಣ ನನ್ನ ಮೂರ್ಖತನವೇ ಇವರಿಬ್ಬರ ಸಾವಿಗೆ ಕಾರಣವಾಯ್ತು. ಇವರ ಪ್ರಾಣಗಳನ್ನುಳಿಸಲೆಂದು ನಾನಿವುಗೆ ಸುಳ್ಳು ಕತೆಯನ್ನು ಹೇಳಬೇಕಾಯ್ತು ಎರಡು ಜೀವಗಳನ್ನು ವ್ಯರ್ಥ ಕೊಂದೆ"

"ಎರಡು ಜೀವಗಳನ್ನು ವ್ಯರ್ಥ ಕೊಂದಿಲ್ಲ ನೀವಿನ್ನೂ ... ನಾಯುಳಿರುವ ಎಷ್ಟೋ ಜೀವಿಗಳನ್ನುಳಿಸಿದಿರಿ ..." ಆ ಹೆಂಗಸು ನೋವಿನ ದನಿಯಿಂದ ನುಡಿಯಿತು. ಚಂದ್ರಣ್ಣ ಅತ್ತ ತಿರುಗಿ ನೋಡಿದ....ಆ ಮುಖವನ್ನೆಲ್ಲೋ ಕಂಡಂತಿತ್ತವನಿಗೆ....

"ಸ್ಮೃತಿ....' ಎಂದು ಜ್ಞಾಪಿಸ ತೊಡಗಿದ....

"ಹೌದು... ನಿನ್ನೆ ರಾತ್ರಿ ಮಲಗಿ ನಮ್ಮ ಮನೆಯಲ್ಲಿ ಕಳೆಯಬೇಕೆಂದು ಬಂದಾಕೆ..." ಎಂದು ಏನೊಂದೂ ಅರ್ಥವಾಗದೆ ಶಾಮಣ್ಣ ಚಂದ್ರಣ್ಣನಿಗಾಕೆಯನ್ನು ಜ್ಞಾಪಿಸಿ ಕೊಟ್ಟ!!

—ಎಚ್ ರಾಮಕೃಷ್ಣ ಅಡಿಗ

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ. ನ

**25,000**

ಪ್ರತಿಗಳಿಗೂ ಮಿಕ್ಕಿ ಈ ವರೆಗೆ ಕರ್ನಾಟಕದಲ್ಲೆಲ್ಲ ವಿಕ್ರಯವಾಗಿರುವ

**ಹೊಸಕೆರೆ ಚಿದಂಬರಯ್ಯನವರ**

# ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ ಇದೀಗ ಮಾರಾಟಕ್ಕೆ ಸಿದ್ಧವಾಗಿದೆ

360 ಪುಟಗಳಿಗೂ ಮಿಕ್ಕಿದ ಪಾಕೆಟ್ ಎಡಿಶನ್!

ದಪ್ಪವಾದ ಬಿಳಿ ನುಣುಪು ಕಾಗದ!

ಬೆಲೆ: ಸಾದಾ ಪ್ರತಿ ರೂ. ೧-೦೦

ಉತ್ತಮ ಪ್ರತಿ ರೂ. ೧-೫೦

ರಖಂ ಪ್ರತಿಗಳ ವರಕ್ಕೆ ಬರೆಯಿರಿ:

ನವಯುಗ ಪ್ರೆಸ್. ಉಡುಪಿ, ದ. ಕ.

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1-1-1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

## ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು. "ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

**ವರ್ಗ—ಊಳಿಗ**

ಮೊದಲಾದ ಯಾವತ್ತೂ ತರದ

**ಎಕೌಂಟ್ ಪುಸ್ತಕಗಳು, ಶಾಲಾ ರಿಜಿಸ್ಟ್ರಿಗಳು, ಫಾರ್ಮುಗಳು**

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.



● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!

ಟ್ಯೂಬ್ 1ರ ಸಾಮಾನ್ಯ ರೂ. 4/. ಮಧ್ಯಮ ರೂ. 6/- ಉತ್ತಮ ರೂ 9/-

**P. Devee & Co.** (N. J.) Calcutta—40

REGD. No. B G. 176
LICENCE No. 31
Licensed to Post without Prepayment

### ಆದರ್ಶ ಚರಿತ್ರ ಪುರುಷ

# ಮಾನವ ಕುಲೋದ್ಧಾರಕ ಬಸವಣ್ಣ!

ಮಹಾನುಭಾವಿ ಶ್ರೀ ಬಸವಣ್ಣನವರು ಪ್ರಪಂಚದ ಹಿರಿಯ ಮಾನವ ಕುಲೋದ್ಧಾರಕರಲ್ಲಿ ಒಬ್ಬರು. ೧೨ನೆಯ ಶತಮಾನದಲ್ಲಿ ಅವತರಿಸಿದ ಇವರು ಮಾನವ ಕುಲೋದ್ಧಾರಕ್ಕಾಗಿ ತಿಳಿಗನ್ನಡದಲ್ಲಿ ವಚನ ಸಾಹಿತ್ಯವನ್ನು ನಿರ್ಮಿಸಿ ಜನರಿಗೆ ತತ್ವ ಬೋಧನೆ ಮಾಡಿದರು. ಇವರ ವಚನಗಳಲ್ಲಿ ನಾವು ಪ್ರೇಮ, ವಿಶ್ವಬಂಧುತ್ವ, ಶರಿಸಮಾನತೆ, ಸ್ವತಂತ್ರ ವೃತ್ತಿ ಮೊದಲಾದ ವಿಶ್ವ ಧರ್ಮದ ತತ್ವಗಳನ್ನು ಕಾಣುತ್ತೇವೆ. ಸಮಾಜ ಮತ್ತು ರಾಜಕೀಯ ಜೀವನದಲ್ಲಿ ನೈತಿಕ ಅವನತಿ ಹಾಗೂ ಚಾರಿತ್ರ್ಯ ಹೀನತೆ ಬೆಳೆಯುತ್ತಿರುವ ಇಂದಿನ ಜನತೆಗೆ ಬಸವಣ್ಣನವರ ತತ್ವಗಳೇ ತಾರಕವೆಂದು ಹೇಳಬಹುದು. ಅವರ ತತ್ವಗಳಲ್ಲಿ ಕೆಲವನ್ನು ಕೆಳಗೆ ವಿವರಿಸಲಾಗಿದೆ.

**ಪರ ಚಿಂತೆ ಎಮಗೆ ಏಕೆ ಅಯ್ಯಾ?**

“ಎಮ್ಮ ಚಿಂತೆ ಎಮಗೆ ಸಾಲದೆ ಪರ ಚಿಂತೆ ಎಮಗೆ ಏಕೆ ಅಯ್ಯಾ?” ಎಂದು ಕೇಳಿ ಬಸವಣ್ಣನವರು ತನ್ನ ಬಗ್ಗೆ, ತನ್ನ ವಿಕಾಸದ ಬಗ್ಗೆ ವಿಚಾರ ಮಾಡುವಂತೆ ಮಾಡಿದ್ದಾರೆ. ತನ್ನ ಉದ್ಧಾರ ಮಾಡಿಕೊಳ್ಳಲಾರದ ಮನುಷ್ಯ ಇನ್ನೊಬ್ಬರ ಉದ್ಧಾರಕ್ಕೆ ಕೈಹಾಕುತ್ತಾನೆ. ಆದರೆ ಅಂಥ ಪ್ರಯತ್ನ ವ್ಯರ್ಥ. ಇದರಿಂದ ತನ್ನ ಉದ್ಧಾರವೂ ಆಗದೆ ಇನ್ನೊಬ್ಬರ ಉದ್ಧಾರವೂ ಆಗದೆ ಮನುಷ್ಯ ಕೆಟ್ಟು ಹೋಗುತ್ತಾನೆ. ಇಂದಿನ ಸಮಾಜ ಸುಧಾರಕರಲ್ಲಿ ಇಂಥ ಪರಿಸ್ಥಿತಿಯೇ ಕಂಡು ಬರುತ್ತದೆ. ಅಂತಲೇ ಬಸವಣ್ಣನವರು ಮೊದಲು ತನ್ನ ಬಗ್ಗೆ ವಿಚಾರ ಮಾಡಲು ಹೇಳಿದ್ದು

**ಎನಗಿಂತ ಕಿರಿಯರಿಲ್ಲ ..**

ತನ್ನ ಬಗ್ಗೆ ವಿಚಾರ ಮಾಡಲು ಹೊರಟ ಮನುಷ್ಯ ಅಹಂಕಾರಿಯಾಗುವ ಸಂಭವವುಂಟು. ತನ್ನ ಪ್ರಯತ್ನಕ್ಕೆ ಸಿಕ್ಕ ಅಲ್ಪಸ್ವಲ್ಪ ಯಶದಿಂದ ಉಬ್ಬಿ ಹೋಗಿ, ತಾನೇ ದೊಡ್ಡವನೆಂದು ಸಾಧಿಸಬಹುದು. ಅದಕ್ಕಂತಲೆ ಬಸವಣ್ಣನವರು ‘ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ’ ಎಂಬ ತತ್ವವನ್ನು ಸಾರಿದ್ದು. ಪ್ರತಿಯೊಬ್ಬ ಸಾಧಕನೂ ಇಂಥ ಭಾವನೆಯನ್ನು ತಳೆದಿರಬೇಕು. ಅಂದರೆ ಅತನಲ್ಲಿಯ ಅಹಂಭಾವವು ನಷ್ಟವಾಗಿ ತನ್ನ ಸಾಧನೆಯಲ್ಲಿ ಬಹು ಬೇಗನೆ ಸಿದ್ಧಿ ಹೊಂದುತ್ತಾನೆ

**ಅಯ್ಯಾ ಎಂದಡೆ ಸ್ವರ್ಗ**

‘ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ.’ ಎಂದು ಬೋಧಿಸಿ ಮನುಷ್ಯನು ಸದಾಚಾರಿಯಾಗಿರಬೇಕೆಂದು ಹೇಳಿದ್ದಾರೆ ಮನುಷ್ಯನಲ್ಲಿ ನಮ್ರತೆಯಿರುವದು ಒಳ್ಳೆಯದು. ಅದು ಅವನಿಗೆ ಇಹದಲ್ಲಿಯೆ ಸ್ವರ್ಗ ಸುಖವನ್ನು ಕೊಡುತ್ತದೆ. ಎಲವೋ ಎಂಬುದು ಕಠೋರತೆಯ ಕುರುಹು. ಅದು ನರಕ ಸಮಾನವಾದುದು. ಆದರಿಂದ ಮನುಷ್ಯ ದುಃಖವನ್ನೇ ಹೊಂದುತ್ತಾನೆ

**ಅಂತರಂಗ — ಬಹಿರಂಗ ಶುದ್ಧಿ**

ಮನುಷ್ಯನ ಉನ್ನತಿಯಾಗಬೇಕಾದರೆ ಆತನ ಸಾಧನೆಗೆ ಯೋಗ್ಯ ಫಲ ಸಿಕ್ಕಬೇಕಾದರೆ ಆತನಲ್ಲಿ ಅಂತರಂಗ ಶುದ್ಧಿ ಹಾಗೂ ಬಹಿರಂಗ ಶುದ್ಧಿ ಎರಡೂ ಬೇಕು. ಇವಿಲ್ಲದೆ ಮನುಷ್ಯ ಜೀವನ ಸಫಲವಾಗದು. ಅಂತರಂಗ ಬಹಿರಂಗ ಶುದ್ಧಿಗಾಗಿ ಬಸವಣ್ಣನವರು ಏಳು ಮಾತು ಹೇಳಿದ್ದಾರೆ, ಅವು ಯಾವುವೆಂದರೆ ‘ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ನಿಂದಿಸಬೇಡ ಇದಿರು ಹಳಿಯಲು ಬೇಡ” ಮುಂತಾದವು. ಇವುಗಳನ್ನು ಆಚರಿಸಿ ತನ್ನ ಜೀವನವನ್ನು ಮನುಷ್ಯನು ಸಫಲಗೊಳಿಸಿಕೊಳ್ಳಬೇಕು

**ಕಾಯಕವೇ ಕೈಲಾಸ**

ಅಂತರಂಗ ಬಹಿರಂಗ ಶುದ್ಧಿಯಾದಾಕ್ಷಣವೇ ಮನುಷ್ಯನು ತನ್ನ ಜೀವನದ ಅತ್ಯುಚ್ಚ ಧ್ಯೇಯವಾದ ಮುಕ್ತಿಯನ್ನು ಪಡೆಯಲಾರ. ಅದಕ್ಕಾಗಿ ಆತ ಪ್ರಯತ್ನ ಮಾಡಬೇಕು. ನಿಷ್ಕಾಮ ಕರ್ಮವನ್ನು ಮಾಡಬೇಕು. ನಿಷ್ಕಾಮ ಕರ್ಮವೇ ಸುಲಭವಾದುದು. ಅದುವೇ ಮನುಷ್ಯನಿಗೆ ಶಿವನ ಸಾನಿಧ್ಯವನ್ನು ದೊರಕಿಸಿಕೊಡಬಲ್ಲದು, ಅಂತಲೆ ಬಸವಣ್ಣನವರು ಕಾಯಕವೇ ಕೈಲಾಸವೆಂದು ಹೇಳಿದರು.

ಇಂಥ ಅಪೂರ್ವ ತತ್ವಗಳನ್ನು ಬಸವಣ್ಣನವರು ತಾವೂ ಆಚರಿಸಿದ್ದಲ್ಲದೆ ಇತರರಿಗೂ ಆಚರಿಸಲು ಹಚ್ಚಿದ್ದರಿಂದ ಅಂದಿನ ಸಮಾಜ ಆದರ್ಶ ಸಮಾಜವಾಗಿ ಪರಿಣಮಿಸಿತು ಅವರು ವಾಸಿಸುತ್ತಿದ್ದ ಕಲ್ಯಾಣ, ಕಲ್ಯಾಣ ರಾಜ್ಯವಾಯಿತು. ಇಂದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆ ಬಗೆಯ ಸಮಾಜ ರಚನೆಯ ಅವಶ್ಯಕತೆಯುಂಟಾಗಿದೆ ಜನತೆ ಬಸವಣ್ಣನವರ ತತ್ವಗಳನ್ನು ಅರಗಿಸಿಕೊಂಡು, ತಾವೂ ಆಚರಿಸಿ ಇತರರನ್ನೂ ಆಚರಿಸಲು ಪ್ರೇರೇಪಿಸಿದರೆ, ಭಾರತವು ಕಾಣುತ್ತಿರುವ ಕಲ್ಯಾಣ ರಾಜ್ಯದ ಕನಸು ನನಸಾಗುವುದರಲ್ಲಿ ಸಂದೇಹವಿಲ್ಲ

**— ದಿಗಂಬರ ಜೋಶಿ, ಬೆಳಗಾವಿ**

---

### ಸ್ವತಂತ್ರ ಭಾರತ

## ಶಕ್ತಿಕೂಟಕ್ಕೆ ಸೇರಿಕೊಳ್ಳಬೇಕೆ?

(೧ನೇ ಪುಟದಿಂದ)

ಹಾ ರಾಷ್ಟ್ರವೇ ಹೇಳತೊಡಗಿರುವಾಗ, ನಾವದನ್ನು ಬಿಟ್ಟುಕೊಡುವಷ್ಟು ಮೂರ್ಖರಲ್ಲ. ಆದರೆ, ಪ್ರಶಂಸನೀಯವಾದುದು ಹನುಮಂತಯ್ಯನವರ ಸಲಹೆಯಲ್ಲ. ಅವರ ಪ್ರಸ್ತಾವದ ತನ ಮುಖಕ್ಕೆ ಸರಿಯಾಗಿ ಮಾತಾಡುವ ಮಂಗೋತಿಗಳ ಸಹವಾಸಕ್ಕಿಂತ ಇಂತಹದು ಉತ್ತಮ ಎಲ್ಲ ವಿಚಾರ ಶೀಲರೂ ತಮ್ಮ ವಿಚಾರ ಧಾರೆಯನ್ನು ಹರಿಸಿದಾಗಲೇ ಯಾವುದರಲ್ಲಿ ಯಾವ ಶಕ್ತಿಯಿದೆಯೆಂಬುದರ ಪರಿಶೀಲನೆಗೆ ಅವಕಾಶವೊದಗುವುದು ಆಗಲೇ ಯಶಸ್ವೀ ಪ್ರಜಾಪ್ರಭುತ್ವವೆನಿಸುವುದು ಆದರೆ, ಆಸೇತೋ ನಮ್ಮ ಜನತೆಗೆ ವಾಕ್ ಸ್ವಾತಂತ್ರ್ಯ— ಅಭಿಪ್ರಾಯ ಸ್ವಾತಂತ್ರ್ಯಗಳಿದ್ದರೂ ಅವು ಅನವಶ್ಯಕವಿಷಯಗಳಲ್ಲಿ ಮಾತ್ರ ಪ್ರಕಟವಾಗುತ್ತಿವೆ. ಇದು ಶೋಚನೀಯ. ಒಂದು ದೇಶವನ್ನು ರೂಪಿಸುವ ಶಿಲ್ಪಿಗಳು ನಿರ್ವಂಚಕ ಮನೋವೃತ್ತಿಯವರಾಗಬೇಕು — ತಾವು ಕಂಡ ಸತ್ಯವಾದಿಗಳಾಗಬೇಕು.

ನ ಶ್ರೇಯಃ ಸತತಂ ತೇಜೋ
ನ ನಿತ್ಯಂ ಶ್ರೇಯಸೀ ಕ್ಷಮಾ
ಇತಿ ತಾತ ವಿಜಾನೀಹಿ
ದ್ವಯಮೇತದ ಸಂಶಯಮ್ ||

“ಶಕ್ತಿ ಪ್ರಧಾನ ಕ್ಷಣಗಳಲ್ಲಿ ಯಾವುದೇ ಒಂದು ಸರ್ವ ಕಾಲಗಳಲ್ಲೂ ಶ್ರೇಯಸ್ಕರವಲ್ಲ”ವೆಂಬರ್ಥದ ಶ್ಲೋಕವನ್ನು ಹನುಮಂತಯ್ಯನವರು ನೆನೆದುಕೊಂಡಿರಲೂ ಬಹುದು. ಆದರೆ, ಇಂದು ಶಕ್ತಿ ಪ್ರದರ್ಶನವು ಅವಶ್ಯಕ ಮತ್ತು ಅನಿವಾರ್ಯವೇ ಎಂಬುದರ ಬಗ್ಗೆ ತುಂಬ ವಿವೇಚನೆ ಮಾಡಬೇಕು.

**— ಗೋರಾ**

---

ಮಹಿಳೆಯರಿಗಾಗಿ ಉಳಿತಾಯ ಯೋಜನೆ....೧

ಜೀವನ
ಸುಂದರ.......
ಅದರ ಸವಿನೆನಪು
ಅತಿ ಸುಂದರ ......

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ **“ಬ್ಯಾಂಕ್ ಎಕೌಂಟ್”** ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ ಬ್ಯಾಂಕ್ ಖಾತೆಯೂ ಅಭಿವೃದ್ಧಿಯತ್ತ ಬೆಳೆಯಬಲ್ಲುದು. **“ಬ್ಯಾಂಕ್ ಖಾತೆಯು”** ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

**ಭವಿಷ್ಯತ್ತಿನ ಭದ್ರತೆಗಾಗಿ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ**

# ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: ೧೯೨೫ ಶಾಖೆಗಳು, ೧೭೬

**— ಚಲಾವಣಾ ಸಂಪತ್ತು 39 ಕೋಟಿಗೂ ಮಿಕ್ಕಿದೆ —**

---

ಕಿರು ಹರಟೆ

## “ನೋಡ್ತಾ ಇದ್ದೆ....”

ಗುಂಡ ಎಸ್. ಎಸ್. ಎಲ್. ಸಿ ಯಲ್ಲಿ ಮೂರು ಬಾರಿ “ಡುಂಕಿ” ಹೊಡೆಯುತ್ತಲೇ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನು ಕೊಟ್ಟು ಮನೆ ಸೇರಿ ಕುಳಿತ!

ಒಂದು ವಾರ ಕಳೆಯಿತು,

ಒಂದು ದಿನ ಅವನ ತಂದೆ “ವಿದ್ಯೆ ಕಲಿಯುವುದಂತೂ ನಿನ್ನಿಂದ ಸಾಧ್ಯವಾಗಲಿಲ್ಲ. ಹೇಗೂ ಮನೆಯಲ್ಲೇ ಇರುತ್ತೀಯಲ್ಲ ನಾಳೆ ಭಾನುವಾರ ನಾನು ಕೊಪ್ಪದ ಸಂತೆಗೆ ಹೋಗಬೇಕು. ಪ್ರತಿದಿನ ಗದ್ದೆಗೆ ಜಾನುವಾರುಗಳು ನುಗ್ಗುವುದು ಒಂದು “ಚಾಳಿ”ಯಾಗಿ ಹೋಗಿದೆ. ಅದನ್ನು ಸ್ವಲ್ಪ ನೋಡಿಕೊಂಡಿರು ”

— ಎಂದು ಹೇಳಿ ಅವನ ತಂದೆ ಹೊರಟುಹೋದರು.

ಮಾರನೆಯ ದಿನ ಬೆಳಗ್ಗೆ ಗುಂಡ ಕಾಫಿ ತಿಂಡಿ ಮುಗಿಸಿಕೊಂಡು ಮಧ್ಯಾಹ್ನಕ್ಕೆ ಬುತ್ತಿ ಕಟ್ಟಿಕೊಂಡ ಗದ್ದೆಗೆ ಹೋಗಿ ಕುಳಿತ.

ಸಂಜೆ ಮನೆಗೆ ಬಂದ

ತಂದೆ ಕೊಪ್ಪದಿಂದ ಬಂದವರು ಮಾರನೇಯ ದಿನ ಗದ್ದೆಗೆ ಹೋಗಿ ನೋಡಿದರೆ ಗದ್ದೆಗೆಲ್ಲಾ ದನಗಳು ನುಗ್ಗಿ ಹಾಳುಮಾಡಿದ್ದವು. ಮನೆಗೆ ಬಂದವರೇ ಕೋಪದಿಂದ ಗುಂಡನನ್ನು ಕೇಳಿದರು

“ಏಯ್! ನಿನ್ನೆಯೆಲ್ಲಾ ಏನು ಮಾಡ್ತಾ ಇದ್ದೀಯೋ!”

“ಗದ್ದೆಯಲ್ಲೇ ಇದ್ದೆನಪ್ಪಾ!”

‘ಅಲ್ಲೇನು ನಿನ್ನೆ ಮಾಡ್ತಾ ಇದ್ದಿಯೂ? ದನಗಳು....!’

“ದನಗಳು ಬೆಳೆಯನ್ನೆಲ್ಲಾ ತಿನ್ನುತ್ತಿದ್ದವು ನಾನು ನೋಡ್ತಾ ಇದ್ದೆ!”

**— “ಗಾಯತ್ರೀ ಅನುಜ”**
**ಬೆಳವಿನಕೊಡಿಗೆ.**

Edited, Printed & Published by K. H. Shetty. at the Navayuga Press, Udipi, S. India

ONTRIBUTE
OUR MITE
O OUR
IATIONAL
EFENCE
UND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ವಂತಿಗೆ ರೂ. 6-75
Vol. 42 No. 32 | ಉಡುಪಿ, 18—4—1963 ಗುರುವಾರ | ಸಂಪುಟ ೪೨ ಸಂಚಿಕೆ ೩೨

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ಸಾಮ್ರಾಜ್ಯವಾದಿ ಚೀನದ

# ಅಪಪ್ರಚಾರದ ಅಪೂರ್ವ ದರ್ಶನ

ಕೊಲಂಬೋ ಸಲಹೆಗಳನ್ನು ತತ್ವಶಃ ಮಾತ್ರ ಒಪ್ಪಿಕೊಂಡಿರುವ ಕೆಂಪು ಚೀನಾವು ತನ್ನ ಹಾಗೂ ಭಾರತದ ನಡುವೆ ಇರುವ ಗಡಿ ತಂಟೆಯನ್ನು ಸ್ನೇಹಮಯ ವಿಧಾನದಲ್ಲಿಯೇ ಬಗೆಹರಿಸಿಕೊಳ್ಳುವಲ್ಲಿ ಆಸಕ್ತಿ ತಾಳಿದಂತೆ ಹಿಂದಿನಿಂದಲೇ ಹೇಳಿಕೊಳ್ಳುತ್ತ ಬರುತ್ತಿದೆ. ಆದರೆ, ಶಾಂತಿಯಲ್ಲಾಗಲೀ ಸ್ನೇಹದಲ್ಲಿಯಾಗಲೀ ಅದಕ್ಕಿರುವ ಕಳಕಳಿಯು ಅದು ಭಾರತದ ಮೇಲೆ ಮಾಡಿದ ದುರಾಕ್ರಮಣ ಮತ್ತು ಅಲ್ಲಿಂದ ಮೇಲೆ ಭಾರತಕ್ಕೆ ನೀಡುತ್ತಿರುವ ಬೆದರಿಕೆಗಳಿಂದಲೇ ವ್ಯಕ್ತವಾಗುತ್ತದೆ. ತನ್ನ ದುರುದ್ದೇಶವನ್ನು ಸಾಧಿಸುವ ಮಹತ್ವಾಕಾಂಕ್ಷೆಯುಳ್ಳ ಚೀನಾವು ಅದಕ್ಕಾಗಿ ಯಾರ ಹೆಗಲಿಗೂ ಕೈ ಹಾಕಬಲ್ಲುದು, ಯಾರ ಕಾಲನ್ನಾದರೂ ಎಳೆದು ಕೆಡವಬಲ್ಲುದು. ಇದು ಸಾಮ್ರಾಜ್ಯವಾದದ ಪದ್ಧತಿಯಾದುದರಿಂದ, ಚೀನಾವು ಇದನ್ನು ಅನುಸರಿಸುವುದನ್ನು ಅನ್ಯಾಯವೆಂದು ಹೇಳುವಂತಿಲ್ಲವಾದರೂ ಅದನ್ನು ಸಾಮ್ರಾಜ್ಯವಾದಿಯೆಂದು ಖಂಡಿತವಾಗಿ ಹೇಳಬೇಕಾಗುತ್ತದೆ. ತಾನು ಆಕ್ರಮಣ ಮಾಡಿ, ಮತ್ತೆ ತೆರವು ಮಾಡಿದ ಭಾರತೀಯ ಅವಿಭಾಜ್ಯ ಭೂಭಾಗದಲ್ಲಿ ಭಾರತವು ತನ್ನ ಸೇನೆಯನ್ನು ಕಳಿಸಿತೆಂದರೆ, ಚೀನಾವು ಅದನ್ನು ಹೊಡೆದೋಡಿಸುವುದು—ಎಂಬ ಗದರಿಕೆ-ಬೆದರಿಕೆಯ ಹೇಳಿಕೆಯನ್ನು ಕೆಂಪು ಪ್ರಧಾನಿ ಲಾಯಿಯವರು ಹೊರಡಿಸಿರುವುದರಿಂದ, ನೇಫಾ-ಲಡಾಖ ಪ್ರದೇಶದಲ್ಲಿನ ತನ್ನ ಅನ್ಯಾಯದ ಬೇಡಿಕೆಯನ್ನು ಅವರೆಂದಿಗೂ ಬಿಟ್ಟುಕೊಡಲು ಸಿದ್ಧರಿಲ್ಲವೆಂಬುದನ್ನು ಮತ್ತೊಮ್ಮೆ ದೃಢಪಡಿಸುತ್ತದೆ.

### ವ್ಯರ್ಥ ಠೇಂಕಾರ

ಇಷ್ಟರಿಂದಲೇ ಒಂದು ಮಾತನ್ನು ನಾವು ತಿಳಿಯಬಹುದು. ಲಾಯಿಯವರ ಶಾಂತಿಮಂತ್ರ ಪಠನವು ಬರೀ ಠೇಂಕಾರ ಮಾತ್ರ; ಅವರ ಅಂತರ್ಯವು ಕ್ರಾಂತಿಯನ್ನೇ ಬಯಸುತ್ತಿದೆ. ಆದಕ್ಕಾಗಿಯೇ ಯೋಗ್ಯ ಅವಕಾಶವನ್ನು ಅವರು ಕಾಯುತ್ತಿದ್ದಾರೆಯೆಂಬ ಸಂದೇಹವು ಸತ್ಯಸಿದ್ಧವಾಗುವ ಸಂಭವವೇ ಹೆಚ್ಚಾಗುತ್ತಿದೆ. ಆದುದರಿಂದ ಪಂಚಶೀಲದ ಸಹ ಅಸ್ತಿತ್ವ ಸಹಕಾರ ಶಬ್ದಗಳೆಲ್ಲವೂ 'ಸಹ' ನಷ್ಟವಾಗಿವೆ. ಚೀನಾದ ಹೆಬ್ಬಯಕೆಯನ್ನು, ಹೇರಾಸೆಯನ್ನು ತಿಳಿದು ನಮ್ಮ ಸಾರ್ವಭೌಮತೆಯನ್ನು ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳಲೇ ಬೇಕಾಗಿದೆ. ಶಠನಿಗೆ ಶಾಠ್ಯದಿಂದಲೇ ಉತ್ತರಿಸಬೇಕೆಂಬುದು ಪ್ರಾಚೀನೋಕ್ತಿ. ಅಂತೆಯೇ ಚೀನೀಯ ಸಾಮ್ರಾಜ್ಯವಾದಿಗಳ ಅನ್ಯಾಯವನ್ನು ಬೆನ್ನಲ್ಲಿ ಇರಿಯುವ ನೀತಿಯನ್ನು ನಾವು, ಭಾರತೀಯರು ಕಟ್ಟೆದೆಯಿಂದ, ಸರ್ವ ಶಕ್ತಿಯಿಂದ ಎದುರಿಸಲೇ ಬೇಕು. ಶಾಂತಿಯಿಂದ ಪ್ರಶ್ನೆಗೆ ಉತ್ತರವರಸುವ ಸಾಧ್ಯತೆಗಳು ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಬರುತ್ತಿರುವುದರಿಂದ, ನಾವು ನಮ್ಮ ಶಕ್ತಿಯನ್ನು ಕೂಡಿಸುವತ್ತ ಧಾವಿಸುತ್ತ ಇರಲೇ ಬೇಕಾಗುತ್ತದೆ. ಕನ್ನಡಿ ಹಾವಿನೊಡನೆ ಸರಸವು ಅದೆಷ್ಟು ದಿನ ನಡೆಯಬಲ್ಲುದು? ದುರ್ಜನರ ಸಹವಾಸಕ್ಕಿಂತ ಸಜ್ಜನರೊಡನೆ ಜಗಳವೇ ಲೇಸು ಎಂಬ ಸರ್ವಜ್ಞೋಕ್ತಿಯಿದೆ ತಾನೆ?

### ಅಪೂರ್ವ ಸಂದರ್ಶನ

ಕಳೆದ ಸುಮಾರು ಎರಡು ವರ್ಷಗಳಿಂದ ಪ್ರಧಾನಿ ಚೌ. ಎನ್. ಲಾಯಿಯವರು ವಿದೇಶೀಯ ಪತ್ರಿಕಾ ಪ್ರತಿನಿಧಿಗಳಿಗೆ ಸಂದರ್ಶನವೀಯುತ್ತಿಲ್ಲ. ಆದರೆ, ಅದೇನೋ ಆಕಸ್ಮಾತ್ತಾಗಿ ಪಾಕಿಸ್ತಾನದ ಅಸೋಸಿಯೇಟೆಡ್ ಪ್ರೆಸ್‌ನ ವರದಿಗಾರರಿಗೆ ಒಂದು ಭೆಟ್ಟಿಯಿತ್ತರು; ಮಾತ್ರವಲ್ಲ, ಈ ಭೆಟ್ಟಿಯ ಅವಧಿಯಾದರೂ ಮೂರು ಗಂಟೆಗಳಷ್ಟು ಸುದೀರ್ಘವಾಗಿತ್ತು. ಈ ಸಂದರ್ಶನದಲ್ಲಿ ಲಾಯಿಯವರತ್ತ ಹೇಳಿಕೆ, ಉಚ್ಚರಿಸಿದ ಪ್ರತಿ ಶಬ್ದವು ಭಾರತಕ್ಕೆ ಬೆದರಿಕೆ ಹಾಕುವುದರೊಡನೆ, ಪಾಕಿಸ್ತಾನವನ್ನು ನಂಬಿಸುವ ಕೆಲಸವನ್ನೂ ಮಾಡುವಂತಿದೆ. ಪಾಕಿಸ್ತಾನವನ್ನು ತನ್ನ ಸಾಮ್ರಾಜ್ಯವಾದ ಪ್ರಶಸ್ತಿ ಮತ್ತು ಭಾರತ ವಿರೋಧೀ ಪ್ರಚಾರ ಕ್ಷೇತ್ರವನ್ನಾಗಿ ಬಳಸಿಕೊಳ್ಳುತ್ತಿರುವ ಲಾಯಿಯವರ ಕುತಂತ್ರಬೀಜವು ಫಲಿಸುವುದಕ್ಕೆ ತಕ್ಕ ವಾತಾವರಣ ನಿರ್ಮಾಣ ಮಾಡುವುದೇ ಲಾಯಿಯವರ ಈಗಿನ ಉದ್ದೇಶವಿರುವಂತೆ ತೋರುತ್ತದೆ.

### ಕುಚೋದ್ಯದವಾದ ಸರಣಿ

ತನ್ನ ಸಂದರ್ಶನದಲ್ಲಿ ಲಾಯಿಯವರು ಮಾಡಿದ ಕಾರ್ಯವೇನು? 'ಮೊದಲೊಂದು ಕಾಲದಲ್ಲಿ ತಟಸ್ಥವಾಗಿದ್ದ ಭಾರತವೀಗ ತಾಟಸ್ಥ್ಯ ನೀತಿಯನ್ನು ಬಿಟ್ಟುಕೊಡುತ್ತಿದೆ. ಯುಗೊಸ್ಲಾವಿಯಾವು ತಾಟಸ್ಥ್ಯದ ಹೆಸರಿನಲ್ಲಿ ಭಾರತವನ್ನೇ ಬೆಂಬಲಿಸುತ್ತಿದೆ. ಇದರಿಂದ ಏಶಿಯದಲ್ಲಿ ಅಮೇರಿಕನ್ ಶಕ್ತಿ ಕಾಲೂರುವುದು ಸಾಧ್ಯವಾಗುತ್ತದೆ. ಬಂಡವಳಗಾರರ ಬಾಲಬಡುಕತನವನ್ನು ತೋರಿಸುವ ಈ ರಾಷ್ಟ್ರಗಳು ಸಮಾಜವಾದಿಯೆನಿಸುವುದು ಸರ್ವಥಾ ಸಾಧ್ಯವಿಲ್ಲ'—ಎಂಬುದು ಲಾಯಿಯವರ ಅಂಬೋಣ, ತನ್ನ ಸ್ವಾರ್ಥ ಸಾಧನೆಗೆ ತಕ್ಕಹಾಗೆ ಭಾರತವು ಅನುಸರಿಸಿದ ಚೀನಾ ನೀತಿಯು ಅಹಂಕಾರಕವೆನಿಸುವುದರಿಂದ ಅವರು ಭಾರತೀಯ ನೀತಿಯನ್ನು ಕಟುವಾಗಿ ಟೀಕಿಸುವುದನ್ನು ತಪ್ಪೆನ್ನುವಂತಿಲ್ಲ. ಆದರೆ, ಮಾನವತೆಯನ್ನು ಗಾಳಿಗೆ ತೂರಿದ ಲಾಯಿಯವರ ಕುಚೋದ್ಯ ಜಗತ್ತಿಗೆ ಮನವರಿಕೆಯಾಗಿದೆ.

### ಕಳ್ಳ ಕಳ್ಳಗೆನಂಟು

ಆಯೂಬರ ಪಾಕಿಸ್ತಾನವು ಚೀನಾದೊಡನೆ ಮೈತ್ರಿಯುತ ನೀತಿಯನ್ನು ಅನುಸರಿಸುತ್ತಿದೆಯೆನ್ನುತ್ತಾರೆ ಚೌ. ಕಾಶ್ಮೀರ ಮತ್ತು ಚೀನಾದ ಗಡಿಯಲ್ಲಿ ಅನ್ಯಾಯವಾಗಿ ಪಾಕಿಸ್ತಾನವು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಎಲ್ಲರ ವಿರೋಧವನ್ನೂ ಲೆಕ್ಕಿಸದೆ ಮುಂಬಂದ ಆಯೂಬರನ್ನು ಲಾಯಿ ಹೊಗಳದಿರಲಾದೀತೆ? ತನ್ನ ಸ್ವಾರ್ಥ ಸಾಧನೆಗೆ ಸೂಕ್ತ ಧಾರಣೆಯಂತೆ ವರ್ತಿಸಲು ಹಲವಾರು ರೀತಿಗಳಿಂದ ಒಪ್ಪಿಕೊಂಡಿರುವ ಆಯೂಬಖಾನರು ಲಾಯಿಯವರಂತೆಯೇ ಕುತಂತ್ರವಾದಿಗಳು. ಭಾರತೀಯ ದೃಷ್ಟಿಯಿಂದ ಹೇಳುವುದಾದರೆ, ಚೀನಾದಂತೆಯೇ ಪಾಕಿಸ್ತಾನವೂ ಆಕ್ರಮಣ ಮಾಡಿದ ದೇಶ, ಭಾರತವು ಆಕ್ರಮಣಕ್ಕೆ ಗುರಿಯಾದ ದೇಶ. ಕಳ್ಳ ಕಳ್ಳಗೆ ನಂಟು ಎಂಬಂತೆ ಲಾಯಿ-ಆಯೂಬರು ಈಗ ಸ್ನೇಹಶೀಲರಾದುದರಲ್ಲಿ ವಿಸ್ಮಯವೇನಿಯದು? ಇಂದು ಅನಧಿಕಾರ ಒಡಂಬಡಿಕೆಯನ್ನು ಪಾಕಿಸ್ತಾನವು ಚೀನಾದೊಡನೆ ಮಾಡಿಕೊಂಡು ಸ್ನೇಹಿತನಂತೆ ತೋರಿಬಂದರೂ ಈ ಸ್ನೇಹದ ಅಪಚಾರವನ್ನು ಒಂದಲ್ಲ ಒಂದು ದಿನ ಅಯ್ಯೂಬರು ಎದುರಿಸಲೇ ಬೇಕಾಗುತ್ತದೆ. ಚೀನಾದ ಗತೇತಿಹಾಸದ ಸಾಕ್ಷಿಗೆ ಭಾರತದ ಅನುಭವ ಪುಟವಿಡುತ್ತದೆ. ಲೋಕದ ಕಣ್ಣಿಗೆ ಮಣ್ಣೆರಚಲು ಅನ್ಯಾಯದ ಸೀಮಾ ಒಡಂಬಡಿಕೆಯು ಸದ್ಯ ತಾತ್ಕಾಲಿಕವಾದುದೆಂದೂ ಕಾಶ್ಮೀರ ವಿವಾದವು ಬಗೆಹರಿದ ನಂತರ ಮುಂದೆ ಪುನರ್ವಿಮರ್ಶೆ ನಡೆಸಬಹುದೆಂದೂ ಅವರು ಹೇಳುತ್ತಾರೆ. ಆದರೆ, ಅಂತಾರಾಷ್ಟ್ರೀಯ ನ್ಯಾಯವನ್ನು ಕಡೆಗಣಿಸಿ ಅನ್ಯಾಯದ ಪರಮಾವಧಿಯನ್ನು ಮುಟ್ಟುವಲ್ಲಿ ಉತ್ಸಾಹ ತೋರಿದ ಲಾಯಿ—ಆಯೂಬರು ಆಕ್ರಮಣವನ್ನೇ ಬೆಂಬಲಿಸುವವರು ಎಂದು ನಿಸ್ಸಂದೇಹವಾಗಿ ಹೇಳಬಹುದು.

### ಅಪಪ್ರಚಾರದ ವಿಧಾನ

ಭಾರತವು ತಾಟಸ್ಥ್ಯವನ್ನು ತೊರೆಯುತ್ತ ಬರುತ್ತಿರುವುದರಿಂದ ಕೆಲವೊಂದು ದೇಶಗಳು ತಮ್ಮ ಚೀನಾ ಧೋರಣೆಯನ್ನು ಬದಲಾಯಿಸಿಕೊಂಡಿವೆ. ಬ್ರಿಟನ್ ಮತ್ತು ಜಪಾನುಗಳು ಕಮ್ಯುನಿಸ್ಟೇತರ ರಾಷ್ಟ್ರಗಳಾದರೂ ಈಗ ಚೀನಾಕ್ಕೆ ಸಹಾನುಭೂತಿಯನ್ನು ತೋರಿಸಹತ್ತಿವೆ. ಹಾಗಾಗಿ ಹೆಚ್ಚಾಗಿ, ಭಾರತವೇ ಏಶ್ಯದಲ್ಲಿಂದ ಏಕೈಕ ರಾಷ್ಟ್ರವಾಗಿ ಪರಿಣಮಿಸುತ್ತಿದೆ. ಚೀನಾದ ವಿರುದ್ಧ ಭಾರತವು ಆಕ್ರಮಣಕಾರಿ ಯುದ್ಧವನ್ನು ಪ್ರಾರಂಭಿಸುವಾಗ, ಸಮಾಜವಾದಿ ರಾಷ್ಟ್ರಗಳು ಭಾರತವನ್ನು ಬಹಿರಂಗವಾಗಿ ಬೆಂಬಲಿಸುವುದು ಕಲ್ಪನಾತೀತವಾದುದು— ಆದುದರಿಂದ ಯುಗೊಸ್ಲಾವಿಯಾದಂತಹ ಕೆಲವೊಂದು ಸಮಾಜವಾದಿಯೆಂದು ಹೇಳಿಕೊಳ್ಳುವ ದೇಶಗಳು ತಮ್ಮನ್ನೇ ತಾವು ವಂಚಿಸುತ್ತಿವೆ—ಎನ್ನುತ್ತಾರೆ ಚೌ ಎನ್ ಲಾಯಿ.

### ಸಾಮ್ರಾಜ್ಯವಾದಿಗಳ್ಯಾರು?

ಭಾರತವು ಸಾಮ್ರಾಜ್ಯವಾದಿ ರಾಷ್ಟ್ರವಂತೆ. ಈ ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಅದು ಗಡಿ ತಂಟೆಯನ್ನು ಕಾಮ್ಯುನ್ಯನೆ ಪ್ರಾರಂಭಿಸಿದೆಯಂತೆ, ಅಮೇರಿಕೆಯ ಆರ್ಥಿಕ ಮತ್ತು ಸೈನಿಕ ಸಹಾಯವನ್ನು ಪಡೆದುಕೊಳ್ಳುತ್ತಿದೆಯಂತೆ. ಹೀಗೆ ಭಾರತವು ಅಮೇರಿಕೆಯಿಂದ ನಾನಾ ರೀತಿಯ ನೆರವು ಪಡೆಯಲು ಹವಣಿಸುವುದರಿಂದಾಗಿ, ಅಮೇರಿಕೆಯು ಏಶ್ಯದಲ್ಲಿ ಹೆಚ್ಚು ಪ್ರವೇಶಿಸುವಂತೆ ಮಾಡಿ, ತನ್ನ ಆಕ್ರಮಣದ ಹವಣನ್ನು ಈಡೇರಿಸ ಹತ್ತಿದೆಯಂತೆ. ಇದರಿಂದ ಏಶ್ಯನ್ನರು ಇನ್ನೊಮ್ಮೆ ಯುದ್ಧದಲ್ಲಿ ಅನಿವಾರ್ಯವಾಗಿ ಸಿಲುಕಿಕೊಂಡು ತಮ್ಮ ಸರ್ವನಾಶ ಮಾಡಿಕೊಳ್ಳಬೇಕಾಗಿ ಬರುವ ಭಯವಿದೆಯಂತೆ. ಅಮೇರಿಕೆಯನ್ನು ಏಶ್ಯದಿಂದ ಹೊರಗಿಡುವುದರಿಂದಲೇ ಏಶ್ಯಾದ ಅಭ್ಯುದಯವಿದೆಯಂತೆ. ಆದರೆ, ಭಾರತದ ನೀತಿಯು ಮಾತ್ರ ಇದಕ್ಕೆ ಪ್ರತಿಗಾಮಿಯಾಗಿರುವುದರಿಂದ ಏಶ್ಯನ್ ರಾಷ್ಟ್ರಗಳು ಎಚ್ಚರಿಕೆಯಿಂದಿರಬೇಕಂತೆ— ತನ್ನ ಸ್ವಾರ್ಥ ಸಾಧನೆಗೆ ಅನುಕೂಲ ನೀತಿಯನ್ನು ಅನುಸರಿಸುವವರನ್ನು ಸ್ನೇಹಿತರೆಂದು ಕರೆಯುವುದು ಮತ್ತು ಅದನ್ನು ಪ್ರತಿಭಟಿಸುವವರನ್ನು ಪ್ರತಿಗಾಮಿಗಳೆಂ

(೩ನೇ ಪುಟ ನೋಡಿರಿ)

ಏಕಾಂಕ ನಾಟಕ

# ಅಂಗಡಿ ಸಾಲ

ಪಾತ್ರವರ್ಗ:

ಕವಿ— ನಾಟಕಕಾರ

ಶೆಟ್ಟಿ— ಕಿರಾಣಿ ಅಂಗಡಿ ಯವನು

‡

[ಕವಿಯ ಮನೆ ಕವಿಯು ಕುಳಿತು ಕೊಂಡು ಒಂದು ನಾಟಕ ಬರೆಯುತ್ತಿರು ತ್ತಾನೆ ಅನಂತರ ಶೆಟ್ಟಿಯು ಬಾಕಿ ಪುಸ್ತಕ ಹಿಡಿದು ಪ್ರವೇಶ]

ಶೆಟ್ಟಿ— ನಮಸ್ಕಾರವು ಕವಿಗಾರಿಕೇ

ಕವಿ— (ತಲೆ ಎತ್ತಿ) ಓ! ಬಲರಾಮ ಶೆಟ್ಟರೇ. ಬನ್ನಿ ಬನ್ನಿ ಕುಳಿತುಕೊಳ್ಳಿ

ಶೆಟ್ಟಿ— ಏನ್ರೀ ಏನು ಬರೆಯುತ್ತಿದೀರಾ?

ಕವಿ— ಒಂದು ಸಣ್ಣ ನಾಟಕ ಬರೆಯುತ್ತಿದ್ದೇನೆ.

ಶೆಟ್ಟಿ— ನಾಟಕವೆ? ಅದಾವ ಹೆಸರಿನದು?

ಕವಿ— ಯಾರ ಕೊರಳಿಗೆ ತಾಳಿ ಅಥವಾ ಆಧುನಿಕ ಮದುವೆ.

ಶೆಟ್ಟಿ— ಓ! ಮಾಂಗಲ್ಯ ಬಲವೋ?

ಕವಿ— ಅಲ್ಲ ಶೆಟ್ಟರೇ, ಇದು ಹೊಸ ನಮೂನೆಯ ನಾಟಕ. ಈ ನಾಟಕದಲ್ಲಿ ಒಂದು ಮದ್ವೆಯಾಗುತ್ತೆ ಅದು ನಮ್ಮ ನಿಮ್ಮ ಪದ್ಧತಿಯಂತಲ್ಲ.

ಶೆಟ್ಟಿ— ಅದು ಹೇಗೆ?

ಕವಿ— ಹೇಳುತ್ತೇನೆ ಕೇಳಿ

ಶೆಟ್ಟಿ— ಚಪ್ಪಂಡಿ ಪರಮೇಶ್ವರಗಾರು,

ಕವಿ— ಹಿಂದಿನ ಪದ್ಧತಿ ಮದ್ವೆಯಂದ್ರೆ, ಗಂಡು ಹೆಣ್ಣಿನ ಕೊರಳಿಗೆ ತಾಳಿ ಕಟ್ಟಬೇಕು ಈ ಮದ್ವೆ ಹೆಣ್ಣು ಗಂಡಿನ ಕೊರಳಿಗೆ ತಾಳಿ ಕಟ್ಟುವುದು.

ಶೆಟ್ಟಿ— (ನಗುತ್ತಾ) ಇದು ಎಲ್ಲಿಯಾದ್ರೂ ಉಂಟೇ ಏನು?

ಕವಿ— ಅದೇ ಮಂಡಿ ಕೊತ್ತ ಮೇರೇಜು. ಇಂತಹ ಮದ್ವೆಗಳಿಗೆ ಆಧುನಿಕ ಮದ್ವೆ ಎನ್ನುತ್ತಾರೆ

ಶೆಟ್ಟಿ— ಬಹಳ ಒಳ್ಳೆದು. ಹೆಸರೇನೋ ಸರಿಯಾಗಿ ಒಪ್ಪುತ್ತದೆ. ಈ ನಾಟಕ ಪೂರ ಆಗುವುದು ಯಾವಾಗ?

ಕವಿ— ಕೆಲವೇ ದಿನಗಳಲ್ಲಿ ಆಗುತ್ತೆ.

ಶೆಟ್ಟಿ— ನಿಧಾನಕ್ಕೆ ಆಗಲಿ. ಆದರಲ್ಲೇನು?

ಕವಿ— ಆಗಲಿ ಶೆಟ್ಟರೆ, ಏನು ಹೀಗೆ ಬಂದ್ರಲ್ಲಾ?

ಶೆಟ್ಟಿ— ಅದೇ ಮಂಡೀ. ನಮ್ಮ ಬಾಕೀ ಯಾವಾಗ ತೀರಿಸುತ್ತೀರಾ?

ಕವಿ— ಕೊಡುತ್ತೇನೆ ಬಲರಾಮ ಶೆಟ್ಟರೇ. ಅಷ್ಟು ಏಕೆ ಆತುರ ಪಡುತ್ತೀರಾ?

ಶೆಟ್ಟಿ— ಮೂರು ತಿಂಗಳ ಬಾಕಿಕೊಡಬೇಕು.

ಕವಿ— ನಾನೇನು ಮಾಡಲಿ ಶೆಟ್ಟರೇ, ನನ್ನ ನಾಟಕಗಳನ್ನು ಪಬ್ಲಿಷರ್ ಒಬ್ಬರೂ ತೆಗೆದುಕೊಳ್ಳುತ್ತಿಲ್ಲ. ಪ್ರಿಂಟ್ ಆಗಿ ಹೋದು ಕಷ್ಟವಾಗುತ್ತಿಲ್ಲ

ಶೆಟ್ಟಿ— ನೀವು ಕೊಟ್ಟಲ್ಲೇ ಕೊಡ್ತ್ರೆ ಕರ್ಚು ಆಗುತ್ತೈ? ನಾಲ್ಕು ಅಂಗಡಿಗೆ ಹೋಗಿ ನೋಡಬೇಕು.

ಕವಿ— ನಿಮ್ಮ ಮಾತು ಸರಿಯಾಗಿದೆ ಶೆಟ್ಟರೇ.

ಶೆಟ್ಟಿ— ನೀವೇ ಸ್ವಂತಾಗಿ ಪ್ರಿಂಟ್ ಮಾಡಬಹುದು. ಆದರ ಹೆಸರು?

ಕವಿ— "ದೇವರಾಣೆ ನೀ ನನ್ನ ಮುಟ್ಟಬೇಡ"

ಶೆಟ್ಟಿ—ಇನ್ನೂ ಪುಸ್ತಕ ಎಷ್ಟುಂಟ್ರೀ?

ಕವಿ— ಎರಡು ಸಾವಿರ ಇದೆ.

ಶೆಟ್ಟಿ— ನೀವು ನಾಲ್ಕು ಬೀದಿ ತಿರುಗಿದರೇ ಒಂದೊಂದು ಅಂಗಡಿಯವರು ಒಂದೊಂದು ನೂರು ಎರಡು ನೂರು ಕೊಂಡುಕೊಳ್ಳುತ್ತಾರೆ.

ಕವಿ— ತೆಗೆದುಕೊಳ್ಳುತ್ತಾರೆ ಶೆಟ್ಟರೇ ಒಬ್ಬ ಅಂಗಡಿಯವನು ಎರಡು ಸಾವಿರನೂ ತೆಗೆದ ಕೊಳ್ಳುತ್ತೇನೆ ಅಂದಾ.

ಶೆಟ್ಟಿ— ಕೊಟ್ಟುಬಿಡಿ. ನನ್ನ ಬಾಕಿ ತೀರ್ಸಿಬಿಡಿ.

ಕವಿ— ತೂಕಮಾಡಿ ತೆಗೆದುಕೊಳ್ಳುತ್ತೇನೆ ಅಂದಾ ಮುಂಡೆ ಮಗಾ ತಿಂಡಿ ಅಂಗಡಿ ಶೆಟ್ಟಿ

ಶೆಟ್ಟಿ— ಹೇಗಾದ್ರೇನು? ಅಂತೂ ಕೊಟ್ಟರಾಯಿತು.

ಕವಿ— ಶೆಟ್ಟರೇ, ಒಂದು ವಾರ ತಡೆಯಿರಿ. ಎಲ್ಲಾ ಬಾಕೀ ತೀರಿಸಿಬಿಡುತ್ತೇನೆ

ಶೆಟ್ಟಿ— ಇನ್ನು ಸಾಧ್ಯವಿಲ್ಲ. ಎಷ್ಟು ಸಮಯ ಆಯ್ತು

ಕವಿ— ನಾನು ಗಡಿಯಾರ ಕಟ್ಟಿಕೊಂಡಿಲ್ಲ ಶೆಟ್ಟರೇ

ಶೆಟ್ಟಿ— ಗಡಿಯಾರ ತೆಗೆದುಕೊಳ್ಳೋದು.

ಕವಿ— ಹನುಮಂತರಾಯ ಹಗ್ಗ ಕಡಿಯುತ್ತಿರಬೇಕಾದರೆ ಪೂಜಾರಿ ಬಂದು ಶ್ಯಾವಿಗೆ ಕೇಳಿದಂತಾಯಿತು. ಗಡಿಯಾರ ತೆಗೆದುಕೊಳ್ಳಬೇಕು ಅಂತಾ ಮನಸ್ಸೇನೋ ಮಾಡಿದ್ದೆ ನಮ್ಮಪ್ಪ ಸಾಯುವ ತನಕ ಗಡಿಯಾರ ಕಟ್ಟಿಕೊಳ್ಳಲಿಲ್ಲ ನೋಡಿ. ಮಾ— ಬೇರೆ ಗಡಿಯಾರ ಕೊಡಿಸಲಿಲ್ಲ ದೊಡ್ಡವರೇ ಕಟ್ಟಿಕೊಂಡಿಲ್ಲ. ನಾನೇಕೆ ಕಟ್ಟಿಕೊಳ್ಳಬೇಕು ಅಂತಾ ತೆಗೆದುಕೊಳ್ಳಲಿಲ್ಲ ನೋಡಿ

ಶೆಟ್ಟಿ— ಇರ್‍ಲಿ, ಮತ್ತೇನಾದ್ರೂ ಇದೆಯೆ?

ಕವಿ— ಶೆಟ್ಟರೇ ಸ್ವಲ್ಪ ಮನೆಯ ಸಾಮಾನು ಬೇಕಾಗಿತ್ತು.

ಶೆಟ್ಟಿ— ಈಗಲೇ ಅಂಗಡಿ ಸಾಲ ಬಹಳವಿದೆ. ಅದನ್ನು ಫೈಸಲ್ ಮಾಡುವ ವರೆಗೆ ಒಂದು ನಯಾ ಪೈಸಾದ ಸಾಮಾನು ಕೊಡುವುದಿಲ್ಲ.

ಕವಿ— ನೀವೇ ಹೀಗೆ ಹೇಳಿದರೇ ಹೇಗೆ ಶೆಟ್ಟರೇ, ಮೊದಲಿನಿಂದಲೂ ನಿಮ್ಮ ಅಂಗಡಿಯಲ್ಲಿ ಸಾಲತಂದು ಸಾಲ ತೀರಿಸುತ್ತಾ ಇದ್ದೇನೆ. ನೀವು ಕೊಡಲಿಲ್ಲ ಅಂದ್ರೆ ನಾವೆಲ್ಲಿಗೆ ಹೋಗಬೇಕು?

ಶೆಟ್ಟಿ— ನೀವು ಹೇಳುವುದು ನಿಜವೇ ನಾನು ಮಾತ್ರ ಸಾಮಾನು ಕೊಡವುದಿಲ್ಲ.

ಕವಿ— ಶೆಟ್ಟರೇ, ಇವತ್ತು ಸಾಮಾನು ಕೊಡಲಿಲ್ಲದಿದ್ದರೇ ಸಂಜೆಗೆ ಊಟವೇ ಇಲ್ಲ. ಮಧ್ಯಾಹ್ನ ಸಾಮಾನು ತರಬೇಕೆಂದು ಆಗಲೇ ರಾಣಿ ಸಾಹೇಬರು ಲಿಸ್ಟ್ ಬರೆದು ಕೊಟ್ಟಿದ್ದಾರೆ ನಾನೇ ಸ್ವಲ್ಪ ಹೊತ್ತು ಬಿಟ್ಟು ಬರಬೇಕಾಗಿತ್ತು. ಸದ್ಯ ನೀವೇ ಬಂದ್ರಿ.

ಶೆಟ್ಟಿ— ನಾನು ಮಾತ್ರ ಸಾಮಾನು ಕೊಡುವುದಿಲ್ಲರೀ. ಇದೇ ರೀತಿ ಕೊಡುತ್ತಾ ಹೋದರೇ ಅಂಗಡಿಸಾಲ ಹನುಮಂತರಾಯನ ಬಾಲ ಬೆಳೆದಂತೆ ಬೆಳೆಯುತ್ತದೆ ನನ್ನ ಅಂಗಡಿಗೆಸಾಮಾನು ಹಾಗೇ ಬರೋದಿಲ್ಲ ತಿಳಿಯಿತೇ?

ಕವಿ— ನೋಡಿ, ಬಲರಾಮ ಶೆಟ್ರೇ. ನನ್ನ ನಾಟಕಗಳನ್ನು ಈಗ ರಾವ್ ಬ್ರದರ್‍ಸ್‌ಗೆ ಕಳಿಸಿರುತ್ತೇನೆ. ಅವರ ಸಂಪಾದಕ ಮಂಡಲಿಯು ತೀರ್ಮಾನವಾದಮೇಲೆ ತಕ್ಷಣ ಹಣವನ್ನು ಕಳಿಸುತ್ತಾರೆ. ಬಂದ ತಕ್ಷಣ ಮುಂದಿನದು ಹಿಂದಿನದು ಎಲ್ಲಾ ಫೈಸಲ್ ಮಾಡಿ ಬಿಡುತ್ತೇನೆ. ಒಂದು ಪಕ್ಷ ಹಣ ಬರಲಿಲ್ಲದಿದ್ದರೆ ನನ್ನ ಮನೆ ಕ್ರಯಕ್ಕೆ ಬರೆಸಿಕೊಳ್ಳಿ.

ಶೆಟ್ಟಿ— ನಿಮ್ಮ ಪುರಾಣವೇ ಹೇಳುತ್ತೀರಲ್ಲಾ ಪರಮೇಶ್ವರಪ್ಪನವರೇ.

ಕವಿ— ನಮ್ಮಂತಾ ಬಡವರ ಮೇಲೆ ದಯ ತೋರಿಸಬೇಕು.

ಶೆಟ್ಟಿ— ಪಟ್ಟಿ ಇಲ್ಲಿ ಕೊಡಿ (ತೆಗೆದುಕೊಂಡು, ನೋಡುತ್ತ) ಏನಿದು ಕಲ್ಯಾಣವೇ ಸಾಮಾನು ಪಟ್ಟಿ ನೋಡಿದ್ರೆ ಒಂದು ವರುಷದ ಸಾಮಾನು ಬರೆದಾಗಿದೆ. ಇನ್ನೂರು ರೂಪಾಯಿ ತಿಂದುಜು ಆಗುತ್ತೆ.

ಕವಿ— ಎಷ್ಟಾದರೂ ಕೊಡುತ್ತೇನೆ ಶೆಟ್ಟರೆ ಹೆದರಬೇಡಿ ನಿಮ್ಮ ಅಂಗಡಿ ಎದುರಿಗೆ ಮನೆ ಇದೆ

ಶೆಟ್ಟಿ— ಬಾಡಿಗೆ ಮನೆ

ಕವಿ— ಅಹುದು ಶೆಟ್ಟರೇ. ಅವರಿಗೂ ಆರು ತಿಂಗಳು ಬಾಡಿಗೆಕೊಡಬೇಕು ಅವನ ಕಾಟ ಬಹಳವಾಗಿದೆ ಬೇರೆ ಮನೆ ಬಾಡಿಗೆ ಸಿಗುವಂತಿದ್ದರೆ ತಿಳಿಸಿ.

ಶೆಟ್ಟಿ— ಅದಕ್ಕೇನಂತೆ? (ಪಟ್ಟಿ ಮತ್ತೊಮ್ಮೆ ನೋಡಿ) ಒಂದು ಮಣ ಈರುಳ್ಳಿ ಅಷ್ಟೊಂದು ಏತಕ್ಕೆ?

ಕವಿ— ಬೇಕಾಗುತ್ತೆ ಶೆಟ್ಟರೇ. ನನಗೆ ಈರ್ಳ್ಳಿ ಬೋಂಡ ಅಂದರೆ ಪ್ರೀತಿ. 'ಹಾಲು ಇದ್ದಾಗ ಹಬ್ಬ ಮಾಡಿಬಿಡಬೇಕು' ಅಂತ ಗಾದೆ. ಕೇಳಿಲ್ಲವೆ? ಇಲ್ಲದೆ ಇದ್ದಾಗ ಇದ್ದೇ ಇದೆಯಲ್ಲ ಮುದ್ದೆ ಚಟ್ನಿ ಊಟಕ್ಕೆ ಉಪ್ಪಿನ ಕಾಯಿಯಿಲ್ಲದಿದ್ದರೇ ಈರುಳ್ಳಿನೇ ಉಪ್ಪಿನಕಾಯಿಯಾಗುತ್ತೆ

ಶೆಟ್ಟಿ— ಒಂದು ಡಬ್ಬಿ ಎಣ್ಣೆ! ಇರೋರಿಬ್ಬರಿಗೆ ಒಂದು ಡಬ್ಬಿ ಎಣ್ಣೇನೇ?

ಕವಿ— ಗೌರಿ ಗಣೇಶ ಹಬ್ಬ ಬಂತಲ್ಲ. ರುಚಿಕಟ್ಟಾಗಿ ತಿಂಡಿ ಮಾಡ ಬೇಕಾದರೇ ಎಣ್ಣೆಯಿಲ್ಲದಿದ್ದರಾಗುತ್ತದೆಯೇ? ನಿಮ್ಮ ವಿನಾಕ ಮಿಲ್ಲಿನ ಎಣ್ಣೆ ಬಹಳ ಚನ್ನಾಗಿರುತ್ತೆ. ಯಾರೋ ಅಂದ್ರು, ಎಣ್ಣೆ ರೇಟು ಜಾಸ್ತಿ ಆಗುತ್ತೆ ಅಂತಾ, ಅದಕ್ಕೆ ಒಂದು ಟಿನ್ ಎಣ್ಣೆ ಬರೆದಿದ್ದಾಳೆ ರಾಣಿ ಸಾಹೇಬರು.

ಶೆಟ್ಟಿ— ಪರವಾ ಇಲ್ಲ ನಿಮ್ಮ ಹೆಂಗ್ಸು, ಶಾನೇ ಬುದ್ಧಿವಂತಳು. ಈಗ ಒಂದು ಟಿನ್ ಎಣ್ಣೆಗೆ 28=50 ನಯಾ ಪೈಸೆ ಇನ್ನೂ ಮೂವತ್ತು ರೂಪಾಯಿ ಆಗುತ್ತೆ.

ಕವಿ— ಅಹುದು ಶೆಟ್ಟರೇ. ಮೂವತ್ತು ಹೋಗಿ ಮೂವತ್ತೆರಡು ಆದರೂ ಆಗಬಹುದು.

(೧೧ನೇ ಪುಟ ನೋಡಿರಿ)


# ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ

ಕಲಂ ಸೆಂಟಿ ಮೀಟರಿಗೆ 1-00

ಅನಿಯಮಿತ (ಕೆಜುವಲ್)

ಕಲಂ ಸೆಂಟಿ ಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

೨

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.




## ಭೂತಪೂರ್ವ ರಾಷ್ಟ್ರಪತಿ

# ಶ್ರೀ ರಾಜೇಂದ್ರ ಪ್ರಸಾದರು

ಶ್ರೀ ರಾಜೇಂದ್ರ ಪ್ರಸಾದರಿಗೆನ್ನಯ |
ಸಾದರ ಪ್ರೇಮ ಪ್ರಣಾಮಗಳು ||
ರಾರಾಜಿಸಿ ರಾಷ್ಟ್ರಾಧ್ಯಕ್ಷಾಸನ |
ಭಾರತಮಾತೆಯ ಮೆರೆಯಿಸಿದ ||
ತನು ಮನ ಧನದಿಂದನುದಿನ ಗುರುತರ |
ಸೇವೆಯ ಚಳುವಳಿಯಲಿ ಸಲಿಸಿ |
ಘನತರ ಸಿದ್ಧಿಯ ಹೊಂದಿ ಸಕಲ ಜನ- |
ಗೌರವ ಭಾರ ವಿನೀತ ಮುಖ ||
ಅತಿ ದುಸ್ತರ ಪಥದಲಿ ಗಾಂಧೀಯೊಂ- |
ದಿಗೆ ನಡೆದುನ್ನತ ವ್ರತಧಾರಿ |
ಶತಶಃ ಭಾರತೀಯ ಸಂಸ್ಕೃತಿ ಪ್ರತಿ- |
ನಿಧಿ ಭಾರತ ರತ್ನ ಬಿಹಾರಿ ||

ಭಾರತೀಯ ಇತಿಹಾಸಾಕಾಶವು ಮಗುದೊಮ್ಮೆ ಕಾರ್ಮೋಡಗಳಿಂದ ದಟ್ಟವಾಗಿ ಆವರಿಸಲ್ಪಟ್ಟಿತು. ಭೂತಪೂರ್ವ ರಾಷ್ಟ್ರಪತಿ ಶ್ರೀ ರಾಜೇಂದ್ರ ಪ್ರಸಾದರ ನಿಧನದಿಂದ ಲಕ್ಷಾಂತರ ದೇಶಭಕ್ತರ ಹಾಗೂ ಮುಖ್ಯವಾಗಿ 'ರಾಜೆನ್ ಬಾಬು' ಎಂಬ ಪ್ರಿಯ ನಾಮ ಮಾತ್ರದಿಂದ ಉತ್ಸಾಹಿತರಾಗುತ್ತಿದ್ದ ಬಿಹಾರದ ಸಾವಿರಾರು ರೈತ ಪ್ರಜೆಗಳ ಕಂಬನಿಯು ಮಳೆಗರೆಯಿತು. ಯಾವನೇ ಆದರೂ ಒಬ್ಬ ವ್ಯಕ್ತಿಯ ನಿಧನದ ಸಮಯದಲ್ಲಿ ಆತನ ಜೀವನದ ಸಾದ್ಯಂತ ಚಿತ್ರ ಆತನನ್ನರಿದವರ ಕಣ್ಣ ಮುಂದೆ ಸುಳಿಯುವುದು ಸ್ವಾಭಾವಿಕವೇ ಆಗಿದೆ. ಹಾಗಿರಲು ಮಹಾ ಪುರುಷರ ಬಗ್ಗೆ ಬೇರೆ ಹೇಳಬೇಕೇ!

ಶ್ರೀ ರಾಜೇಂದ್ರ ಪ್ರಸಾದರು ಕ್ರಿ. ಶ. ೧೮೮೪ನೇ ಡಿಸೆಂಬರ್ ಮೂರರಂದು ಉತ್ತರ ಬಿಹಾರದ ಸಾರನ ಜಿಲ್ಲೆಯ ಪ್ರಸಿದ್ಧ ರೈತ ಕುಟುಂಬವೊಂದರಲ್ಲಿ ಜನ್ಮವೆತ್ತರು. ತನ್ನ ತಂದೆಯ ಮಕ್ಕಳೆಲ್ಲರಲ್ಲಿ ಅತಿ ಕಿರಿಯರಾಗಿದ್ದ ಅವರು ಆರಂಭದಿಂದಲೂ ಮೇಧಾವಿಯಾಗಿದ್ದರು. ಅವರ ವಿದ್ಯಾರ್ಥಿ ಜೀವನದ ವೈಭವವೇ ಇದಕ್ಕೆ ದ್ಯೋತಕ. ೧೯೦೨ರ ಆ ಸಮಯದಲ್ಲಿ ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಮ ಹಾಗೂ ಬರ್ಮಾದ ವರೆಗೂ ಹಬ್ಬಿ ವಿಸ್ತೃತ ಕ್ಷೇತ್ರವನ್ನೊಳಗೊಂಡ ವಿಶ್ವವಿದ್ಯಾಲಯದ "ಎಂಟ್ರೆನ್ಸ್" ಪರೀಕ್ಷೆಯಲ್ಲಿ ಮೊದಲಂಕೆಯಲ್ಲೇ ತೇರ್ಗಡೆಹೊಂದಿ, ಕಲ್ಕತ್ತೆಯಲ್ಲಿಯ ಪ್ರೆಸಿಡೆನ್ಸಿ ಕಾಲೇಜ್‌ನಲ್ಲಿ ಅಧ್ಯಯನ ಮಾಡಿ "ಇಂಟರ್‌ಮೀಡಿಯೆಟ್" ಪರೀಕ್ಷೆಯಲ್ಲೂ ಸರ್ವಪ್ರಥಮತೆಯಿಂದ ಉತ್ತೀರ್ಣರಾಗಿ ಅನಂತರ ೧೯೦೬ರಲ್ಲಿ ನಡೆದ ಬಿ. ಎ. ಪರೀಕ್ಷೆಯಲ್ಲೂ ಇದೇ ಸಮ್ಮಾನವನ್ನು ಗಳಿಸಿದ ಮಹಾ ಮೇಧಾವಿ ರಾಜೆನ್ ಬಾಬು. ಆ ಮೇಲೆ ಎಮ್. ಎ. ಪರೀಕ್ಷೆ ಪಾಸು ಮಾಡಿದ ಬಳಿಕ ಮುಜಫ್ಫರ್‌ಪುರದ ಗ್ರೀಯರ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಿಸಲ್ಪಟ್ಟರು. ಎಮ್. ಎ.ಗೆ ಓದುತ್ತಿದ್ದಾಗಲೇ ವಕಾಲತ್ತಿನ ವ್ಯಾಸಂಗದಲ್ಲಿ ವ್ಯಸ್ತರಾಗಿದ್ದ ಇವರು ಒಂದು ವರ್ಷದ ಅಧ್ಯಾಪಕೀಯ ಸೇವೆಯ ನಂತರ ವಕಾಲತ್ತಿನ ಕ್ಷೇತ್ರದಲ್ಲಿ ಕಾಲಿಡುವ ಉದ್ದೇಶದಿಂದ ಕಲಕತ್ತೆಗೆ ತೆರಳಿದರು.

ರಾಜೆನ್‌ರವರ ಜೀವನದಲ್ಲಿ ಅತ್ಯಂತ ಪ್ರಭಾವವನ್ನು ಬೀರಿದ ಮಹಾನ್ ವ್ಯಕ್ತಿಗಳಲ್ಲಿ ಶ್ರೀ ಗೋಪಾಲಕೃಷ್ಣ ಗೋಖಲೆಯವರೊಬ್ಬರು. ಅವರಲ್ಲಿ ಅಮಿತಭಕ್ತಿಭಾವವನ್ನು ತಳೆದಿದ್ದ ರಾಜೆನ್ 'ಭಾರತ ಸೇವಕ ಸಂಘ' (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟೀ)ದ ಮೂಲಕ ಸಮಾಜ ಸೇವೆಯನ್ನು ಕೈಗೊಳ್ಳಲು ಅವರ ಆಮಂತ್ರಣವನ್ನು ಸ್ವೀಕರಿಸಿ ಸ್ವೇಚ್ಛೆಯಿಂದ ತಯಾರಾಗಿದ್ದರೂ ತನ್ನ ಹಿರಿಯಣ್ಣನಾದ ಮಹೇಂದ್ರ ಪ್ರಸಾದರ ಆಣತಿಯಿಂದಾಗಿ ಈ ವಿಚಾರವನ್ನೇ ತೊರೆಯಬೇಕಾಯಿತು. ಈ ಸಮಯದಲ್ಲಿ ತನ್ನ ಮನಸ್ಸಿನ ಬೇಗೆಯನ್ನು ಹೊರಹೊಮ್ಮಿ ಅಣ್ಣನಿಗೆ ಬರೆದ ಪತ್ರವೊಂದರ ಸಾರಾಂಶ ಇಂತಿದೆ—"ಅಣ್ಣಯ್ಯಾ! ನಾನೊಬ್ಬ ಭಾವುಕ ವ್ಯಕ್ತಿಯಾದುದರಿಂದ ನಿಮ್ಮೊಡನೆ ಎದುರೆದುರು ಕೂತು ಮಾತನಾಡಲಾರದವನಾಗಿದ್ದೇನೆ. ನನಗೊಂದು ಅತಿ ಪ್ರಮುಖ್ಯವಾದ ಕರೆ ಬಂದಂತೆ ಭಾಸವಾಗುತ್ತಿದೆ. ಕಷ್ಟಕಾಲದಲ್ಲಿ ನಿಮ್ಮನ್ನು ಬಿಟ್ಟು ಹೋಗುವುದೆಂಬುದು ನನ್ನ ಪಾಲಿಗೆ ಕೃತಘ್ನತೆಯ ಕೃತ್ಯವೇ ಸರಿ! ಆದರೂ ಮೂವತ್ತು ಕೋಟಿ ಭಾರತೀಯರಿಗಾಗಿ ನೀವು ನನ್ನನ್ನು ಬಲಿ ಕೊಡುವುದಾಗಿ ನನ್ನ ಕೋರಿಕೆ........ನೀವು ನನ್ನ ಬಗ್ಗೆ ಎಷ್ಟೋ ಉಚ್ಚಾಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತೀರಿ. ಆದರೆ ಅವೆಲ್ಲವೂ ನಿಮಿಷದಲ್ಲೇ ನೆಲಕ್ಕುರುಳುವುದನ್ನು ನೋಡಲಿದ್ದೀರಿ. ಕ್ಷಣ ಭಂಗುರವಾದ ಈ ಸಂಸಾರದಲ್ಲಿ ಧನ, ಸ್ಥಾನ, ಮಾನ ಇವೆಲ್ಲವೂ ಕ್ಷಣ ಕಾಲ ತಂಗಿ ಮಾಯವಾಗುತ್ತವೆ ಧನ ಕರಗಿದಷ್ಟೂ ಅವಶ್ಯಕತೆಗಳ ಪರಿಮಿತಿ ಏರುತ್ತದೆ......ಸುಖವೆಂಬುದು ಹೊರಗಿನ ವಸ್ತುಗಳು ನಮಗಾಗಿ ಹೊರುವಂಥದ್ದಲ್ಲ; ಒಳಗಿಂದಲೇ ಬೆಳೆಯುವಂಥದ್ದು. ಕೆಲವೇ ಚಿಕ್ಕಾಸುಳ್ಳ ಬಡವನು ಧನಕೋಟಿಗಿಂತಲೂ ಸಂತೃಪ್ತನಾಗಿರುತ್ತಾನೆ. ಆದುದರಿಂದ ನಾವು ಬಡತನವನ್ನು ಕಡೆಗಣಿಸುವುದು ಬೇಡ. ಭಾರತಮಾತೆಯ ಸೇವೆಯೊಂದನ್ನುಳಿದು ಇತರ ಹಂಬಲ ನನಗಿಲ್ಲ. ಶ್ರೀ ಗೋಖಲೆಯವರಿಗಿರುವ ಪ್ರಭಾವ, ಗೌರವ ಹಾಗೂ ಸ್ಥಾನಮಾನ ಇನ್ನಾರಿಗಿದೆ? ಇಷ್ಟಾಗಿ ಅವರೂ ಅತಿ ಬಡವರಲ್ಲವೇ!" ೧೯೧೦ರಲ್ಲಿ ತನ್ನ ಇಪ್ಪತ್ತಾರರ ಹರೆಯದಲ್ಲಿ ಬರೆದ ಈ ಪತ್ರದಲ್ಲಿ ರಾಜೆನ್‌ರವರ ಮಾನಸಿಕ ಪ್ರವೃತ್ತಿಯು ಎದ್ದು ಮೂಡುತ್ತದೆ.

ಅಣ್ಣನ ಬಯಕೆಯಂತೆ ೧೯೧೧ರಲ್ಲಿ ಕಲ್ಕತ್ತೆಯ ಹೈಕೋರ್ಟಿನಲ್ಲಿ ವಕಾಲತ್ತಿಗೆ ಆರಂಭಿಸಿದರು. ೧೯೧೫ರಲ್ಲಿ ಎಮ್. ಎಲ್. ಪರೀಕ್ಷೆಯಲ್ಲಿ [illegible] ಮೊದಲಿಗರಾಗಿ ಗೆದ್ದು ೧೯೧೬ರಲ್ಲಿ ಪಾಟ್ನಾದಲ್ಲಿಯ ಹೈಕೋರ್ಟಿನ ಸ್ಥಾಪನೆಯಾದೊಡನೆಯೇ ತನ್ನ ವಕಾಲತ್ತನ್ನು ಅಲ್ಲಿ ಮುಂದುವರಿಸಿ ತನ್ನ ಗಿರಾಕಿಗಳಲ್ಲಿ ಮಾತ್ರವೇ ಅಲ್ಲ, ತನ್ನ ಸಹವ್ಯವಸಾಯಿಗಳಾದ ವಕೀಲರಲ್ಲೂ, ಜಜ್ಜುಗಳಲ್ಲೂ ಅತಿ ಪ್ರಿಯರಾದರು. ಅಂತೆಯೇ ಅವರ ಆದಾಯವೂ ಅತ್ಯುನ್ನತಿಯ ಮಟ್ಟವನ್ನೈದಿತು. ಆದರೆ, ಅವರು ಮೊದಲ ದರ್ಜೆಯ ವಕೀಲರಾಗಿದ್ದರೂ ಸಾವಿರಾರಿನ ವರಮಾನವಿದ್ದರೂ ಆ ವೃತ್ತಿಯನ್ನು ಕೊನೆಯ ವರೆಗೆ ಜಾರಿಯಲ್ಲಿಟ್ಟುಕೊಳ್ಳದಾದರು; ಭಗವಂತನಿಗೆ ಅವರಿಂದ ಇನ್ನೂ ಮಹತ್ವದ ಕಾರ್ಯಗಳನ್ನು ನೆರವೇರಿಸಬೇಕಾಗಿತ್ತು. ದಲಿತ ಜನತೆಯ ಸೇವೆಗಾಗಿ ತನ್ನನ್ನೊಡ್ಡಿಕೊಳ್ಳುವ ಕಾಲ ಬಂದಿತ್ತು!

೧೯೧೭ರಲ್ಲಿ ಆಗಿನ ಭಾರತ ಸರಕಾರವು ಪಾಟ್ನಾ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಮಸೂದೆಯೊಂದನ್ನು ಜಾರಿಗೆ ತರುವುದರಲ್ಲಿತ್ತು. ಅಸಂಬದ್ಧವೂ ಸಂಕುಚಿತವೂ ಆದ ಆ ಮಸೂದೆಯನ್ನು ಖಂಡಿಸಿ ಸಮಾಚಾರ ಪತ್ರಗಳಲ್ಲಿ ಲೇಖನ ಬರೆದು ಹಾಗೂ ಸಾರ್ವಜನಿಕ ಸಭೆಗಳಲ್ಲಿ ಧೈರ್ಯವಾಗಿ ಮಾತಾಡಿ ಸರಕಾರದ ವಿರುದ್ಧ ಬಹಿರಂಗವಾಗಿ ತೀವ್ರ ಪ್ರಚಾರ ಕೈಗೊಂಡವರು—ರಾಜೆನ್ ಬಾಬು. ಇದರ ಪರಿಣಾಮವಾಗಿ ಸರಕಾರಕ್ಕೆ ನಿರ್ಬಂಧದಿಂದ ಮಸೂದೆಯಲ್ಲಿ ಹಲವು ಸುಧಾರಣೆಗಳನ್ನು ತರಬೇಕಾಯಿತು.

ರಾಜೇಂದ್ರರ ಜೀವನದಲ್ಲಿ ಒಂದು ಹೊಸ ಸ್ಥಿತ್ಯಂತರವನ್ನು ತಂದೊಡ್ಡಿದ ಪ್ರಸಂಗವೆಂದರೆ— ಚಂಪಾರಣ್ಯದ ಸತ್ಯಾಗ್ರಹ. ಬಿಹಾರದಲ್ಲಿ ನಿಜವಾಗಿಯೂ ಜನಜಾಗೃತಿ ಶುರುವಾದುದು ಈ ಸಂದರ್ಭದಿಂದಲೇ. ಬೆಳ್ಳರ ದಬ್ಬಾಳಿಕೆಯಿಂದಾಗಿ ಅಲ್ಲಿಯ ಬಡ ಬೇಸಾಯಗಾರರ ಹಾಗೂ ಕೂಲಿಯಾಳುಗಳ ಅವಸ್ಥೆ ಅತ್ಯಂತ ಶೋಚನೀಯವಾಗಿತ್ತು. ೧೯೧೭ರ ಏಪ್ರಿಲ್ ತಿಂಗಳಲ್ಲಿ ಅವರನ್ನು ಸಂದರ್ಶಿಸಲು ಬಂದ ಗಾಂಧೀಜಿಯವರು ತನ್ನ ಕೆಲವು ಕೃತ್ಯಗಳಿಂದಾಗಿ ಬ್ರಿಟಿಷರ ಕೋಪಕ್ಕೊಳಗೊಂಡು ಒಡನೆ ಚಂಪಾರಣ್ಯವನ್ನು

ಬಿಟ್ಟು ಹೊರಡಬೇಕೆಂದು ಆದೇಶಿಸಲ್ಪಟ್ಟರು. ಆದನ್ನು ಅಲ್ಲಗಳೆದ ಗಾಂಧಿಯವರು ಬಂಧಿಸಲ್ಪಟ್ಟು ಅನಂತರ ಒಡನೆ ಬಿಡುಗಡೆ ಹೊಂದಿದರು. ಈ ಸಂದರ್ಭದಲ್ಲಿ ಮೊದಲಿಂದ ಕೊನೆಯ ವರೆಗೂ ಅವರೊಡನಿದ್ದು ಸರ್ವವಿಧಗಳಲ್ಲಿಯೂ ಅವರಿಗೆ ಸಹಕಾರ ನೀಡಿದವರು ರಾಜೆನ್ ಬಾಬು. ಅವರಾದರೋ ಬಡವರ ಬಂಧುವಲ್ಲವೇ! ಅದು ವರೆಗೂ ಬ್ರಿಟಿಷ್ ದಬ್ಬಾಳಿಕೆಯ ಕುತಂತ್ರದಿಂದ ದಬ್ಬಿ ಹೋಗಿದ್ದ ಬಿಹಾರಿನ ಬಡ ಜನತೆ ಇದೀಗ ರಾಜೆನ್ ಬಾಬುರವರ ಆಶ್ರಯದಲ್ಲಿ ಧೈರ್ಯದ ಊರುಗೋಲನ್ನೂರಿ ಪ್ರಾಂತ್ಯದ ಉದ್ದಗಲಕ್ಕೂ ಸರಕಾರದ ವಿರುದ್ಧವಾಗಿ ಒಂದಾಗಿ ಎಸೆಯುತ್ತ ಎದ್ದು ನಿಂತಿತು. ಇದರಿಂದ ಪರಿಸ್ಥಿತಿಯು ಹತೋಟಿಗೆ ಹೊರಗಾಗಿ ವಿಷಮತೆಯನ್ನು ಶಮನಮಾಡಲೋಸುಗ ಒಂದು ವಿವೇಚನಾ ಸಮಿತಿ ನಿರ್ಮಿಸಲ್ಪಟ್ಟಿತು. ತನ್ಮೂಲಕ ಗಾಂಧಿಯವರೊಂದಿಗೆ ಸೇರಿ ರಾಜೇಂದ್ರ ಪ್ರಸಾದರು ಮಾಡಿದ ಪ್ರಯತ್ನದಿಂದ ಅಲ್ಲಿಯ ಪ್ರಜೆಗಳ ಒಂದಷ್ಟು ತಾಪ ತಣ್ಣಗಾಯಿತು. ಇಂತು ಭಾರತೀಯ ಇತಿಹಾಸದಲ್ಲಿ ಚಂಪಾರಣ್ಯದ ಸತ್ಯಾಗ್ರಹವು ಸಣ್ಣದಾದರೂ ಮಹತ್ವದ್ದಾಗಿದೆ.

೧೯೧೯ರಲ್ಲಿ ರೌಲೆಟ್ ಆಕ್ಟ್ ಜಾರಿಗೆ ಬಂದಾಗ ಅದರ ವಿರುದ್ಧವಾಗಿ ನಡೆದ ವ್ಯಾಪಕ ಆಂದೋಲನದ ಸಮಯದಲ್ಲಿ

(೧೦ನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

**25,000**
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ
**ಹೊಸಕೆರೆ ಚಿದಂಬರಯ್ಯನವರ**

**ಗೀತೆಯ ಕೈಗನ್ನಡಿ**

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:
**ನವಯುಗ ಪ್ರೆಸ್, ಉಡುಪಿ, ದ. ಕ.**

## ನಮ್ಮ ನಾಡಿನ

# ಸೀಮೆ ಸುಸ್ಪಷ್ಟವಾಗಿಲ್ಲವೇನು?

ಮಾನವೀಕೃತ ಸೀಮೆಯು ಕಟ್ಟಲ್ಪಡುತ್ತದೆ, ಹಾಗೆಯೇ ಮಣ್ಣುಪಾಲೂ ಆಗುತ್ತದೆ, ಆದರೆ ಪ್ರಕೃತಿದತ್ತ ಗಡಿಗಳು ಹಾಗಲ್ಲ ಅವು ಸಮುದ್ರ ತಟ ಅಥವಾ ಪರ್ವತಗಳ ರೂಪದಲ್ಲಿ ಸುಸ್ಪಷ್ಟವಾಗಿರುತ್ತವೆ. ಭಾರತದ ಉತ್ತರ ಭಾಗದ ಸೀಮೆಯು ಕೈಲಾಸ ಹಾಗೂ ಹಿಮಾಲಯಗಳಂತಹ ವಿಶ್ವದಲ್ಲೇ ಉನ್ನತತಮ ಪರ್ವತಗಳಿಂದ ಸ್ಪಷ್ಟವಾಗಿ ಗುರುತಿಸಲ್ಪಟ್ಟಿರುತ್ತವೆ. ಇನ್ನು ಪರ್ವತಗಳಿಲ್ಲದಿರುವಲ್ಲಿ ಜಲವಿಭಾಜಕ ಜಲಪ್ರದೇಶಗಳನ್ನು ಗಡಿಗಳನ್ನಾಗಿ ತೀರ್ಮಾನಿಸಿಕೊಳ್ಳಲಾಗಿರುತ್ತವೆ. ಈ ಸಿದ್ಧಾಂತಕ್ಕೆ ಅಂತಾರಾಷ್ಟ್ರೀಯ ಮಾನ್ಯತೆಯೂ ಇದೆ. ಗಡಿ ವಿವಾದವೆದ್ದಾಗ ಚೀನೀಯ ಅಧಿಕಾರಿಗಣವು ಈ ಮಹತ್ವಪೂರ್ಣ ಭೌಗೋಲಿಕ ಆಧಾರಕ್ಕೆ ಮನ್ನಣೆಯನ್ನೀಯುತ್ತದೆ.

ಮಳೆಯ ನೀರು ಅಥವಾ ಹಿಮ ಜಲವು ಕ್ರಮಶಃ ಮೇಲಿಂದ ಕೆಳಗೆ ಪ್ರವಹಿಸುತ್ತ ಬರುತ್ತದೆ. ಇಬ್ಬದಿಗಳಲ್ಲಿಯ ಪ್ರವಾಹ ಕ್ಷೇತ್ರಗಳ ನಡುವೆ ಇರುವ ಯಾವದಾದರೂ ಉನ್ನತ ಭಾಗವನ್ನು ಜಲವಿಭಾಜಕವೆಂದು ಕರೆಯಲಾಗುತ್ತದೆ. ಪ್ರಪಂಚದ ಅನೇಕಾನೇಕ ದೇಶಗಳಲ್ಲಿ ಪರ್ವತಗಳಿಂದ ಗಡಿಗಳನ್ನು ನಿಶ್ಚಯಿಸಿಕೊಳ್ಳುತ್ತಾರೆ. ಜಲ ವಿಭಾಜಕ ರೇಖೆಗಳಿಗೆ ಕೂಡಾ ಅಂತಾರಾಷ್ಟ್ರೀಯ ಸೀಮೆಯ ಮನ್ನಣೆ ದೊರಕಿರುತ್ತದೆ. ಅಮೇರಿಕ, ಫ್ರಾನ್ಸ್, ಸ್ಪೇನ್, ಆಫ್ರಿಕ ಮುಂತಾದೆಡೆಗಳಲ್ಲಿ ಜಲವಿಭಾಜಕ ರೇಖೆಗಳಿಗೆ ಬೆಲೆ ಇದೆ, ಮರ್ಯಾದೆ ಇದೆ.

ಅಂತಾರಾಷ್ಟ್ರೀಯ ಮಾನ್ಯತೆ ದೊರಕಿಸಿಕೊಂಡಿರುವ ಈ ಸೈದ್ಧಾಂತಿಕ ಆಧಾರದ ಮೇಲೆ ಭಾರತದ ಉತ್ತರ ಸೀಮೆಯನ್ನು ಕೂಡಾ ನಿಶ್ಚಯಿಸಬೇಕಾಗಿತ್ತು. ಉತ್ತರದಲ್ಲಿ ಯಾರ್ಕಂಡ ನದಿ ಇದೆ. ತ್ರಿವಿಷ್ಟಪದಲ್ಲಿ ಸಾಂಪೋ ಇದೆ. ತ್ರಿವಿಷ್ಟಪದಲ್ಲಿ ಹರಿಯುತ್ತಿರುವ ಬ್ರಹ್ಮಪುತ್ರ ನದಿಯ ಭಾಗದ ಹೆಸರು ಸಾಂಪೋ ಇದೆ. ತ್ರಿವಿಷ್ಟಪದ ಸಂಸ್ಕೃತಿ, ಕಲಾಚಾರ ಅಥವಾ ನಾಗರೀಕತೆಯು ಸಾಂಪೋ ದಡದಲ್ಲಿಯೇ ವಿಕಸಿತವಾಗಿರುವದು. ಅದುವೇ ಎಲ್ಲದಕ್ಕಿಂತಲೂ ಅಧಿಕ ಫಲವತ್ತಾದ ಪ್ರದೇಶವಿದೆ. ಚೈನಾ ಹಾಗೂ ಆಗ್ನೇಯೇಷ್ಯಗಳನ್ನು ಇಂತಹ ನದಿಗಳು ವಿಂಗಡಿಸುತ್ತಿವೆ

ಪೂರ್ವ ಹಾಗೂ ಆಗ್ನೇಯ ದಿಕ್ಕಿನತ್ತ ಪ್ರವಹಿಸುತ್ತಿರುವ ನದಿಗಳ ಪ್ರವಾಹ ಕ್ಷೇತ್ರವನ್ನು ತಮ್ಮ ಅಧೀನದೊಳಗಿರುವ ಪ್ರದೇಶವೆಂದು ಚೈನಾ ಘೋಷಿಸುತ್ತ ಬಂದಿರುತ್ತದೆ. ಈ ಕ್ಷೇತ್ರವು ಚೈನಾದ ಚಿಂಗಾಈ ಅಥವಾ ಸೈಚವಾನ್ ಪ್ರಾಂತ್ಯದೊಳಗೆ ಬರುತ್ತದೆ. ಕಾರಾಕೋರಮ್ ಅಥವಾ ಯಾರ್ಕಂಡದ ಪ್ರವಾಹ ಕ್ಷೇತ್ರ ಭೌಗೋಲಿಕ ದೃಷ್ಟಿಯಲ್ಲಿ ಸಿಂಕಿಯಾಂಗಿನಲ್ಲಿ ಬರುತ್ತದೆ. ಇದೇ ಜಲವಿಭಾಜಕ ಸೈದ್ಧಾಂತಿಕ ಆಧಾರದ ಮೇಲೆ ಭಾರತದ ಉತ್ತರ ಗಡಿಯ ವಿಚಾರ ಮಾಡಿದಲ್ಲಿ ಸ್ಪಷ್ಟವಾಗುವದೇನೆಂದರೆ ಉತ್ತರ ಸೀಮೆಯ ಪಶ್ಚಿಮ ಹಾಗೂ ಮಧ್ಯಭಾಗದ ಉತ್ತರ ಸೀಮೆ ಕೈಲಾಸ ಪರ್ವತವಿರುತ್ತದೆ.

ಸಿಂಧೂ ಅಥವಾ ಸಟ್ಲೇಜಿನ ಪ್ರವಾಹ ಕ್ಷೇತ್ರವು ಸಂಪೂರ್ಣ ಮಾನಸ ಖಂಡವನ್ನು (ಕೈಲಾಸ—ಮಾನಸ ಸರೋವರ ಕ್ಷೇತ್ರ) ಸೇರಿಸಿಕೊಂಡಿರುತ್ತದೆ. ಭೂಪಟದಲ್ಲಿ ಈ ಕ್ಷೇತ್ರವನ್ನು ಹೊರ ದೇಶದ ರೂಪದಲ್ಲಿ ತೋರಿಸಲಾಗಿರುತ್ತದೆ. ಪೌರಾಣಿಕ ಸಾಹಿತ್ಯದ ಅನುಸಾರ ಮಾನಸ ಖಂಡವು ಭಾರತದ ಅವಿಚ್ಛಿನ್ನ ಅಂಗ ಮಾತ್ರವಲ್ಲ ಅದರ ತಪೋ ಭೂಮಿಯೂ ಇರುತ್ತದೆ. ಹಿಂದೀ ಹಾಗೂ ಸಂಸ್ಕೃತ ಸಾಹಿತ್ಯವು ಕೈಲಾಸ ಹಾಗೂ ಮಾನಸಸರೋವರದ ವಿವರಣೆ ಹಾಗೂ ಉಪಮೆಗಳಿಂದ ತುಂಬಿಕೊಂಡಿದೆ. ಕೈಲಾಸ ಹಾಗೂ ಮಾನಸರೋವರವು ಭಾರತ ನಿವಾಸಿಗಳ ಪೂಜ್ಯತಮ ತೀರ್ಥಸ್ಥಾನ ಇವೆ. ಯಾವ ಕ್ಷೇತ್ರವು ಭೌಗೋಲಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಭಾರತದ ಅಂಗವಾಗಿದೆಯೋ, ಮಾನಬಿಂದುವಾಗಿದೆಯೋ ಆ ಪ್ರದೇಶವು ಪರಕೀಯ ದೇಶದ ಭಾಗವಾಗಿರಲು ಅದು ಹೇಗೆ ಸಾಧ್ಯವಿದೆ?

ಭಾರತವು ಶತಮಾನಗಳಿಂದ ಗುಲಾಮಿ ಸ್ಥಿತಿಯಲ್ಲಿದ್ದುದೇ ಅದಕ್ಕೆ ಕಾರಣವಿದೆ. ಮುಸಲ್ಮಾನ ಆಡಳಿತಗಾರರು ಉತ್ತರ ಭಾಗದ ಎಲ್ಲೆಗಳತ್ತ ಅಧಿಕ ಜಾಗರೂಕತೆಯಿಂದಿರಲಿಲ್ಲ. ಚೈನಿ ರಾಜಾ ಕಾಂಗ್‌ಲೀಯು (೧೬೬೧—೨೨) ಈ ಭೂಭಾಗವನ್ನು ತನ್ನ ಆಡಳಿತೆಗೊಳಪಡಿಸಿಕೊಂಡಾಗ ಔರಂಗಜೇಬನು ತನ್ನ ಜೀವನದ ಅಂತಿಮ ದಿನಗಳನ್ನೆಣಿಸುತ್ತಿದ್ದನು. ಆಗ ಉದಯೋನ್ಮುಖ ಭಾಸ್ಕರನಂತಿದ್ದ ರಾಷ್ಟ್ರೀಯ ಶಕ್ತಿಯನ್ನು ಸದೆಬಡಿಯುವದಕ್ಕಾಗಿ ಪ್ರಯತ್ನಿಸುವದರಲ್ಲೇ ಅವನು ಸೋತು ಹೋಗಿದ್ದನು. ೧೭೦೭ನೇ ಇಸವಿಯಲ್ಲಿ ಔರಂಗಜೇಬನು ಅಂತಿಮ ಉಸಿರನ್ನೆಳೆದನು. ಈ ಕಾಲವು ಭಾರತದ ರಾಜನೀತಿಯ ಅಸ್ಥಿರತೆಯ ಕಾಲವಾಗಿತ್ತು. ಹಾಗಿದ್ದುದರಿಂದ ಈ ಕ್ಷೇತ್ರವನ್ನು ಚೈನಾ ರಾಜಾ ಆಕ್ರಮಿಸಿಕೊಂಡಾಗ ಭಾರತೀಯ ಶಾಸಕಗಣಕ್ಕೆ ಅತ್ತ ಗಮನವೀಯಲಾಗಲಿಲ್ಲ. ಯುರೋಪಿನಲ್ಲಿ ಡಿ'ಅನ್ವಿಲೆಯು ೧೭೩೫ರಲ್ಲಿ ಒಂದು ಭೂಪಟವನ್ನು ಪ್ರಕಟಪಡಿಸಿದನು. ಅದನ್ನು ಕ್ರಿಸ್ತೀಯ ಮತಾಧಿಕಾರಿ ಪಸಟಸ್ಟೈರಗಿಸ್ ಬಿಡಿಸಿದ್ದನು. ಅದರಲ್ಲಿ ತ್ರಿವಿಷ್ಟಪದ ಭಾಗವನ್ನಾಗಿ ಸಾಂಪೋದ ದಡವನ್ನೂ ತೋರಿಸಲಾಗಿರುತ್ತದೆ ಉಳಿದ ಪ್ರದೇಶವನ್ನು ಅನುಮಾನಾಸ್ಪದ ಭೂಪ್ರದೇಶವೆಂದು ಚಿತ್ರಿಸಲಾಗಿರುತ್ತದೆ. ಅಷ್ಟೇ ಅಲ್ಲದೆ ಆ ಭೂಪಟದಲ್ಲಿ ಇನ್ನೂ ಹಲವಾರು ದೋಷಗಳಿರುತ್ತವೆ. ಮುಖ್ಯವಾಗಿ ನದಿಗಳನ್ನು ಸರಿಯಾಗಿ ತೋರಿಸಿರುವುದಿಲ್ಲ. ಆನಂತರ ಭೂಪಟಗಳನ್ನು ಬಿಡಿಸಿದವರು ಕೂಡಾ ಇದೇ ದೋಷವನ್ನು ಮಾಡಿರುವರು. ರೆನೆಲ್ಸನು ೧೭೮೨ರಲ್ಲಿ ಒಂದು ಭೂಪಟವನ್ನು ಪ್ರಕಟಪಡಿಸಿರುವನು. ಅದರಲ್ಲಿ ಬಂಗಾಲ, ಬಿಹಾರ ಮತ್ತು ಅಸ್ಸಾಮಗಳನ್ನು ಚೆನ್ನಾಗಿ ತೋರಿಸಿರುವನು. ಏಕೆಂದರೆ ಆ ಪ್ರದೇಶಗಳಾಗ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತಕ್ಕೊಳಗಾಗಿದ್ದುವು. ಉಳಿದ ಭಾಗವನ್ನು ಡಿ'ಅನ್ವಿಲೆಯ ದೋಷಪೂರಿತ ಭೂಚಿತ್ರದಂತೆಯೇ ಗುರುತಿಸಲಾಗಿರುತ್ತದೆ. ಈ ರೀತಿ ಇರುವ ದೋಷಪೂರ್ಣ ಭೂಪಟಗಳನ್ನು ಅದೆಂದಿಗೂ ಗಡಿನಿರ್ಧಾರಣೆಗೆ ಆಧಾರವನ್ನಾಗಿ ತೆಗೆದುಕೊಳ್ಳಲು ಸಾಧ್ಯವಿರುವದಿಲ್ಲ. ೧೮೧೮ನೇ ಇಸವಿಯಲ್ಲಿ ಭೂ-ಅಳತೆಯ ಕಾರ್ಯ ಪ್ರಾರಂಭವಾಯಿತು. ಆಗ ಸರಿಯಾದ ಭೂಪಟ ಪ್ರಕಟವಾಗಿರುತ್ತದೆ. [ಇಂಡಿಯನ್ ಫ್ರಂಟಿಯರ್ ಎಂಡ್ ಟಿಬೇಟ್ ಮೇಪ್ಸ್—ಬೀನಾ ಬೆನರ್ಜಿ ೨೦-೯-೫೮ ಹಿಂದೂಸ್ಥಾನ್ ಟೈಮ್ಸ್]

ಈಶಾನ್ಯ ಎಲ್ಲೆಯ ನಿರ್ಧಾರವನ್ನು ಎಫ್. ಎಂ ಬಲಿ ಮತ್ತು ಎಚ್. ಟಿ. ಮೋರ್ಸ್ ಹೆಡ್ಡೆಯವರು ಮೆಕ್‌ಮಹೋನರ ಮುಂದಾಳ್ತನದಲ್ಲಿ ಪ್ರಕಟಪಡಿಸಿರುವರು. ಈ ಎಲ್ಲೆಯು ತ್ರಿವಿಷ್ಟಪಕ್ಕೂ ಭಾರತಕ್ಕೂ ನಡುವೆ ಇರುವ ಸಾಧಾರಣ ೧೮೦೦೦—೨೦,೦೦೦' ಎತ್ತರದ ಶಿಖರದ ಮೇಲಿದೆ ಎಂದು ತಿಳಿಸಲಾಗಿರುತ್ತದೆ. ಅದಕ್ಕೆ ಬ್ರಹ್ಮಪುತ್ರ ಹಾಗೂ ಸಾಂಪೋ ನದಿ ಶಾಖೆಗಳ ಸಹಾಯವನ್ನು ತೆಗೆದುಕೊಳ್ಳಲಾಗಿರುತ್ತದೆ ಈ ರೀತಿ ಭೂಪಟಗಳನ್ನು ಸೂಕ್ಷ್ಮದೃಷ್ಟಿಯಿಂದ ಅಭ್ಯಾಸಿಸುತ್ತ ಹೋದಂತೆ ನಮಗೆ ಒಂದು ವಿಷಯ ಸ್ಪಷ್ಟವಾಗುತ್ತದೆ—ಸಾಮ್ರಾಜ್ಯವಾದಿ ಬ್ರಿಟಿಷರು ತಮ್ಮ ಹೊಸ ಗೆಳೆಯ ಟಿಬೇಟಿನ ತೃಪ್ತೀಕರಣಕ್ಕಾಗಿ ಅಧೀನಕ್ಕೊಳಗಾಗಿದ್ದ ಭಾರತದತ್ತ ಉಪೇಕ್ಷಾ ದೃಷ್ಟಿಯಿಂದ ನೋಡಿರುವರು. ಮೆಕ್‌ಮಹೋನ್ ರೇಖೆ ಕೂಡಾ ಜಲ ವಿಭಾಜಕ ಎಲ್ಲೆಯ ಬಳಿ ಬರುವದಿಲ್ಲ. ತೃಪ್ತೀಕರಣದ ಕಾರಣದಿಂದಾಗಿ ಇಲ್ಲಿ ವಿಶ್ವಮಾನ್ಯ ಅಂತರಾಷ್ಟ್ರೀಯ ನಿಯಮಗಳ ಉಲ್ಲಂಘನೆ ನಡೆದಿರುತ್ತದೆ.

ಸುಖಾನ ಸಿರಿಯ ಉದ್ಗಮ ಸ್ಥಾನ ಇಂದಿನ ಟಿಬೇಟಿನವರ ಒಂದು ಮಹತ್ವಪೂರ್ಣ ತೀರ್ಥಸ್ಥಾನವಿದೆ. ಅಲ್ಲಿ ಪ್ರತೀ ಹನ್ನೆರಡು ವರ್ಷಗಳಿಗೊಮ್ಮೆ ದೊಡ್ಡ ಧಾರ್ಮಿಕ ಮೇಳ ಸೇರುತ್ತದೆ. ಬ್ರಿಂಗ್ಝಾನ ಬಳಿ ಲೋಪ ವನವಾಸಿಗಳ ಪ್ರಭುತ್ವ ಇದೆ. ತ್ರಿವಿಷ್ಟಪದ ಸರಕಾರ ಪ್ರತೀ ಮೇಳದ ನಂತರ ಲೋಪಾ ವನವಾಸಿಗಳಿಗೆ ಕಪ್ಪಕಾಣಿಕೆ-ಬಹುಮಾನಾದಿಗಳನ್ನೊಪ್ಪಿಸುತ್ತಿದ್ದರು. ಯಾಕೆಂದರೆ ಈ ಮೇಳ ನಡೆಯುವದು ಲೋಪಾ ಗಿರಿಜನರ ಕ್ಷೇತ್ರದಲ್ಲಿ. ಮೆಕ್‌ಮಹೋನ್ ರೇಖೆಯ ಉತ್ತರದಲ್ಲಿರುವ ಮಿಗ್ಯಿಟೂನ್ ಜನರು ೧೪೪ ಆಡುಗಳನ್ನು ಪ್ರತೀ ವರ್ಷವೂ ಕರದ ರೂಪದಲ್ಲಿ ಲೋಪಾ ಗಿರಿ ಜನರಿಗೆ ಕೊಡುತ್ತಿದ್ದರು. ಮಿಗ್ಯಿಟೂನ್‌ನಿಂದ ನಲ್ವತ್ತು ಮೈಲು ದೂರದಲ್ಲಿರುವ ಯಾಮೆ ಗ್ರಾಮದ ನಿವಾಸಿಗಳು ಲೋಪಾ ಗಿರಿಜನರಿಗೆ ಖಡ್ಗ, ಭಲ್ಲೆ, ಉಪ್ಪು ಹಾಗೂ ಇತರ ವಸ್ತುಗಳನ್ನು ೧೯೫೯ನೇ ಇಸವಿಯ ವರೆಗೂ ಕಪ್ಪಕಾಣಿಕೆಯ ರೂಪದಲ್ಲಿ ಸಲ್ಲಿಸುತ್ತಿದ್ದರು. ಸುಖಾನ್ ಸಿರಿಯ ಸಂಪೂರ್ಣ ಜಲಪ್ರವಾಹ ಕ್ಷೇತ್ರವು ಭಾರತದ ಅಂಗವಾಗಿತ್ತು. ಜಲ ವಿಭಾಜಕ ರೇಖಾ ಸಿದ್ಧಾಂತದ ಪ್ರಕಾರ ಈಶಾನ್ಯ ಸೀಮೆಯೊಂದಿಗೆ ನ್ಯಾಯವಾಗಿ ಮಿಗ್ಯಿಟೂನ್, ಬಾಯೂಲ ಮತ್ತು ಯಾಮೆ ಮುಂತಾದ ಗ್ರಾಮಗಳು ಭಾರತೀಯ ಕ್ಷೇತ್ರದೊಂದಿಗೆ ಅಂತರ್ಗತವಾಗಿರಲೇಬೇಕು. ಈ ಕ್ಷೇತ್ರದಲ್ಲಿ ಹೆಚ್ಚಾಗಿ ಎಬೋರಾ ಹಾಗೂ ಮಿಶ್ಮಿ ಗಿರಿವಾಸಿ ಜಾತಿಯ ಜನರಿದ್ದಾರೆ ಈ ಜನರ ಪದ್ಧತಿ-ಸಂಪ್ರದಾಯಗಳು ತ್ರಿವಿಷ್ಟಪದ ಜನರಿಂದ ಸರ್ವ ರೀತಿಯಲ್ಲೂ ಭಿನ್ನವಾದುವೇ ಇವೆ.

ಮೆಕ್‌ಮಹೋನ್‌ರೇಖೆಯು ಸಾಮ್ರಾಜ್ಯಶಾಹಿಗಳ ಕೃತಿಯೆಂಬುದನ್ನು ಚೈನಿ ಕಮ್ಯೂನಿಸ್ಟರೂ ಒಪ್ಪಿರುವರು. ಇದರಲ್ಲಿ ಸಂದೇಹವೇ ಇರುವದಿಲ್ಲ. ಈ ಕಾರ್ಯದಿಂದಾಗಿ ಭಾರತೀಯರಿಗೆ ಬಹಳ ಅನ್ಯಾಯವಾಗಿರುತ್ತದೆ. ಸಿಮ್ಲಾ ಸಮ್ಮೇಳನದಲ್ಲಿ

(೯ನೇ ಪುಟ ನೋಡಿರಿ)

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಕುಮಾರಿ ಬಿಲ್ಲೆಗಳು
(ರಿಜಿಸ್ಟರ್ಡ Regd.)
ಪ್ರಕೃತಿಯು ನಿಷ್ಫಲಗೊಂಡಾಗ ಉಂಟಾಗುವ ಇತರ ನಿವಾರಣೆಗೆ
ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 10ರ ಸಾಮಾನ್ಯ ರೂ. 4/- ಮಧ್ಯಮ ರೂ. 6/-
ಉತ್ತಮ ರೂ. 9/-
P. Devee & Co. (N. J.) Calcutta—40

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

### ನಮ್ಮ ದೇಶದಲ್ಲಿ

# ನಾಗ ಪೂಜೆಯ ಪೂರ್ವೋತ್ತರ

ನಾಗಪೂಜೆ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿ ವಿಸ್ತೃತವಾದ ಪದ್ಧತಿ. ಹಳೆಯ, ಹೊಸ ಜನಾಂಗಗಳಲ್ಲಿ ಒಂದಲ್ಲ ಒಂದು ಬಗೆಯಲ್ಲಿ ನಾಗ ಕಲ್ಪನೆ ನಾಗಾರಾಧನೆಗಳು ಇದ್ದೇ ಇವೆ. ಹಿಂದಿನ ಗ್ರೀಸ್, ರೋಂ, ಈಜಿಪ್ಟ್, ಇಂಕ—ಪೆರು ಸಂಸ್ಕೃತಿಗಳಲ್ಲೂ ನಾಗಪೂಜೆ ಇದ್ದುದಕ್ಕೆ ಸಾಕ್ಷ್ಯಗಳಿವೆ. ಕ್ರೈಸ್ತ ಪುರಾಣಗಳಲ್ಲಿ ಕೂಡ ಆದಾಂ ಈವರಿಗೆ ಆದಿಮ ಪಾಪವನ್ನು ಮಾಡಲು ಪ್ರೇರಕವಾದದ್ದು ನಾಗವೇ. ನಮ್ಮ ಯುಗದಲ್ಲಿ ಸಿಗ್ಮಂಡ್ ಫ್ರಾಯ್ಡರ ಮನೋವಿಶ್ಲೇಷಣ ಪದ್ಧತಿಯ ಪರಿಕಂದಲ್ಲಿ ನಾಗದ ಸಂಕೇತ, ನಾಗಕ್ಕೂ ಕಾಮಕ್ಕೂ ಇರುವ ಸಂಬಂಧ ನಾಗಕಲ್ಪನೆ ಪ್ರಚಲಿತವಾಗಿರುವುದರ ಅರ್ಥಗಳಿಗೆ ಮಹತ್ವವುಂಟು.

ಅಂತೂ ಮನುಷ್ಯನ ಮಾನಸಿಕ ಜೀವನದ ರಂಗಭೂಮಿಯಲ್ಲಿ ನಾಗಾರಾಧನೆಯ ಪ್ರಾಶಸ್ತ್ಯ ನಿರ್ವಿವಾದವಾಗಿ ಕಾಣುತ್ತದೆ.

ನಮ್ಮ ದೇಶದಲ್ಲಿ, ಅದರಲ್ಲೂ ದಕ್ಷಿಣಭಾಗದಲ್ಲಿ ನಾಗಪೂಜೆ ವಿಶಿಷ್ಟವಾಗಿ ಹರಡಿದೆ. ಹಾವಿನ ಹುತ್ತಕ್ಕೆ ಹಾಲೆರೆಯುವುದು, ಅರಳಿ ಮರದಡಿ ನಾಗ ಕಲ್ಲುಗಳನ್ನು ಪ್ರತಿಷ್ಠೆ ಮಾಡುವುದು, ಭೀತಿಯ ಪರಿಹಾರಕ್ಕೆಂದು ನಾಗ ಬಂಧಮಾಡಿಸುವುದು ಇವೆಲ್ಲ ನಮ್ಮಲ್ಲಿ ಎದ್ದು ಕಾಣುವ ಸಂಪ್ರದಾಯಗಳು ತಾನೆ? ಸುಬ್ರಹ್ಮಣ್ಯನು ನಾಗರೂಪಿಯೆಂದೇ ವ್ಯವಹಾರ, ಚಂಪಾಷಷ್ಠಿಯ ದಿನವನ್ನು ಸುಬ್ಬರಾಯನ ಷಷ್ಠಿ ಎಂದು ಕರೆದು ಅಂದು ನಾಗಪೂಜೆಯನ್ನು ವಿಶೇಷವಾಗಿ ಮಾಡುತ್ತಾರೆ. ಹಾವು ಶಿವನ ಏಕೈಕ ಆಭರಣ; ಸರ್ಪ ಭೂಷಣನಾದ ಶಿವನ ಜಟ ಬಂಧ, ವಲಯಗಳು, ಕಟಿಸೂತ್ರ ಎಲ್ಲವೂ ಹಾವುಗಳೇ. ಶಿವಲಿಂಗಕ್ಕೆ ಹಾವಿನ ಹೆಡೆಗಳ ಛತ್ರವೂ ಉಂಟಷ್ಟೇ. ವಿಷ್ಣುವನ್ನು ಶೇಷಶಾಯಿಯೆಂದು ಕಲ್ಪಿಸಿಕೊಂಡಿದ್ದೇವೆ. ಹಾವಿನ ಹಾಸಿಗೆಯಲ್ಲಿ ಮಲಗಿ, ಅನಂತ ಫಣೆಫಣದ ಛತ್ರದ ಅಡಿಯಲ್ಲಿ ತಲೆಯಿಟ್ಟು ಯೋಗನಿದ್ರೆಯಲ್ಲಿ ಮಲಗಿರುವ ರಂಗನಾಥ ಪ್ರಸಿದ್ಧನಲ್ಲನೇ? ಕೃಷ್ಣನನ್ನೂ ಹಲವೆಡೆ ನಾಗ ಛತ್ರದಡಿಯಲ್ಲಿ ನಿರೂಪಿಸಿರುವ ಶಿಲ್ಪಗಳುಂಟು. ಗಣೇಶನಿಗೂ ಹಾವೇ ಕಟಿಬಂಧ; ಅವನಿಗೆ ಹಾವಿನ ಹೆಡೆಯ ಪ್ರಭಾವಳಿ ಶಾಸ್ತ್ರಸಮ್ಮತವಾದದ್ದೇ. ಹಿಂದೂಗಳಲ್ಲಿ ಮಾತ್ರವಲ್ಲದೆ ಬೌದ್ಧರಲ್ಲೂ ಜೈನರಲ್ಲೂ ಈ ನಾಗ ಸಂಬಂಧವುಂಟು. ಮುಚಲಿಂದ ಬುದ್ಧನ ಮೂರ್ತಿಯನ್ನು ಹಾವಿನ ಹೆಡೆಯ ಅಡಿಯಲ್ಲಿ ಮಾಡಿಸಿರುವ ಕಲ್ಪನೆ ಕಾಂಬೋಡಿಯ ಜನಾಂಗಗಳಲ್ಲಿ ಕಾಣುತ್ತದೆ. ಜೈನತೀರ್ಥಂಕರರಲ್ಲಿ ಪಾರ್ಶ್ವನಾಥನನ್ನು ನಾಗ ಪ್ರಭೆಯಲ್ಲಿ ತೋರಿಸಿ ಚಿತ್ರಿಸುತ್ತಾರೆ ಹೀಗೆ ಅನ್ಯದೇವತಾ ಸಂಬಂಧವಲ್ಲದೆ ನಾಗಕ್ಕೆ ಸ್ವತಂತ್ರವಾದ ಸ್ಥಾನವನ್ನು ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಪ್ರಸಿದ್ಧವಾಗಿರುವ ಸುಬ್ರಹ್ಮಣ್ಯ ಕ್ಷೇತ್ರವಲ್ಲದೆ ಬಳ್ಳಮಂಜೆ, ಕಾಡುಕುಕ್ಕೆ, ಕುಡುಪು, ಮಂಜೇಶ್ವರ, ವಿಟ್ಲ, ಕಟ್ಟಿಂಗೇರಿ ಮುಂತಾದ ದೇವಾಲಯಗಳೂ ನಾಗಪೂಜೆಗೇ ಮೀಸಲಾದದ್ದು. ಆ ಪ್ರದೇಶದಲ್ಲಿ ಮನೆ ಮನೆಗಳಲ್ಲೂ — ನಾಗಬನಗಳಿರುತ್ತವೆ. ಉಡುಪಿ ತಾಲೂಕಿನ ಪುರಾಲುವಿನ ಸುತ್ತಮುತ್ತ ಇರುವ ಭಕ್ಕಿಯರು ಅಥವಾ ವೈದ್ಯರೆಂಬ ಜನ ಸರ್ಪ ವಿದ್ಯೆಯಲ್ಲಿ ನಿಪುಣರು. ಅವರಿಂದ ನಾಗಮಂಡಲಕ್ಕೆ ನೃತ್ಯರೂಪದ ಪೂಜೆ ಸಲ್ಲುತ್ತದೆ.

ನಾಗಪೂಜೆ ಆರ್ಯರು ನಮ್ಮ ದೇಶಕ್ಕೆ ಬರುವ ಮೊದಲೇ ಇದ್ದ ಪದ್ಧತಿ. ಋಗ್ವೇದದಲ್ಲಿ ವೃತ್ರನನ್ನು ಅಹಿಯೆಂದು ವರ್ಣಿಸಿ ಇಂದ್ರನಿಂದ ಮತ್ತೆ ಮತ್ತೆ ಕೊಲ್ಲಿಸಿದ ಕಥೆಗೆ ಆರ್ಯ-ಅನಾರ್ಯ ಜನಾಂಗಗಳ ಪೂಜೆಗಳಲ್ಲಿದ್ದ ವೈವಿಧ್ಯವೇ ಮೂಲ. ಪ್ರಾಚೀನ ಮೆಸೆಪೊಟೇಮಿಯಾ ಕಡೆಯಲ್ಲಿದ್ದಂತೆಯೇ ನಾಗವಿಧನವನ್ನು ಚಿತ್ರಿಸುವ ಕಲ್ಲುಗಳು ನಮ್ಮ ದೇಶದಲ್ಲೂ ಆರ್ಯರು ಬರುವ ಮುನ್ನವೇ ಇದ್ದುವು. ಈ ನಾಗಕಲ್ಲುಗಳು ನಮ್ಮ ಕಾಲದ ವರೆಗೂ ಉಳಿದು ಊರ್ಜಿತವಾಗಿ ಬಂದಿವೆಯಷ್ಟೆ. ಊರಿನ ತಲೆಬಾಗಿಲ ಬಳಿ, ಅಶ್ವತ್ಥ ಮರ, ಬೇವಿನ ಮರಗಳ ಕೆಳಗೆ, ಕೆರೆಕೊಳಗಳ ದಂಡೆಯ ಮೇಲೆ ಮತ್ತು ದೇವಾಲಯಗಳ ಪರಿಸರದಲ್ಲಿ ನಾಗಕಲ್ಲುಗಳನ್ನು ಕಾಣಬಹುದು. ಮಕ್ಕಳಿಲ್ಲದವರು ನಾಗಕಲ್ಲುಗಳನ್ನು ಪ್ರತಿಷ್ಠೆ ಮಾಡಿಸಿದರೆ, ಅಥವಾ ಪ್ರತಿಷ್ಠಿತ ನಾಗಕಲ್ಲುಗಳ ಸೇವೆ ಮಾಡಿದರೆ ಮಕ್ಕಳಾಗುವುದೆಂಬ ನಂಬಿಕೆ ಹಿಂದಿನಿಂದ ಬಂದಿದೆ. ಆರ್ಯರು ಹೀಗೆ ಪ್ರಚಲಿತವಾದ ಕಲ್ಪನೆಗಳನ್ನು ಉಳಿಸಿಕೊಂಡು ಅದರ ಸುತ್ತ ಆಧ್ಯಾತ್ಮಿಕವಾದ, ಸಾಂಕೇತಿಕವಾದ ಹಂದರವನ್ನು ಹಬ್ಬಿಸಿದರು.

ಗೋತ್ರಕಾರಕನಾದ ಮಹರ್ಷಿಯೆಂದು ಪ್ರಸಿದ್ಧನಾದ ಕಾಶ್ಯಪನ ಹೆಂಡತಿಯಲ್ಲಿ ಕದ್ರು ಎಂಬಾಕೆ ಒಂದು ಸಾವಿರ ನಾಗಗಳಿಗೆ ಜನ್ಮವಿತ್ತಳಂತೆ; ಆ ಸಾವಿರದ ಸಂತತಿಯೇ ಇಂದಿನ ಹಾವುಗಳೇ. ಈ ನಾಗಗಳ ಮುಖ್ಯ ವಸತಿ ಪಾತಾಳದಲ್ಲಿರುವ ಭೋಗವತೀ ಎಂಬ ನಾಗಲೋಕ. ಸಮುದ್ರದ, ನದಿಗಳ, ತಟಾಕಗಳ ತಳದಲ್ಲೂ ನಾಗಗಳು ವಾಸಿಸುತ್ತವೆಯೆಂದು ಶ್ರದ್ಧೆ, ಮನುಷ್ಯರಿಗೆ ಮೀರಿದ ಮಟ್ಟದ ಜೀವಿಗಳಾದ ಯಕ್ಷರು, ರಾಕ್ಷಸರು, ಪಿಶಾಚಗಳು, ಗಂಧರ್ವರೂ, ಅಪ್ಸರರೂ ಇದ್ದಂತೆಯೇ ನಾಗಗಳೂ ದಶ ಪ್ರಜಾಪತಿಗಳ ಸೃಷ್ಟಿಯಲ್ಲಿ ಸೇರಿದ್ದಾರೆಂದು ಕಲ್ಪನೆ.

ಈ ನಾಗಲೋಕದ ನಿವಾಸಿಗಳಿಗೆ ಶೇಷ, ವಾಸುಕಿ, ತಕ್ಷಕರೆಂಬ ಮೂವರು ಹಿರಿಯರು. ಸಾವಿರ ಹೆಡೆಯ ಶೇಷನನ್ನು ಆದಿಶೇಷನೆಂದೂ, ಅನಂತನೆಂದೂ ವ್ಯವಹರಿಸುತ್ತಾರೆ. ಸೃಷ್ಟಿ ಕ್ರಮದಲ್ಲಿ ಸರ್ಪ ಪ್ರಥಮನಾಗಿ ಉದ್ಭೂತನಾದುದರಿಂದ ಆದಿಶೇಷ. ನಿರವಧಿಯಾದ ಕಾಲತತ್ತ್ವದ ಸಂಕೇತವಾದುದರಿಂದ ಅನಂತ. ಸೃಷ್ಟಿಸ್ಥಿತಿ ನಿಯಾಮಕನಾದ ಮಹಾ ವಿಷ್ಣು ಸಮಾಸೀನನಾಗಿರುವುದು ಶೇಷನ ಮೇಲೆಯೇ. ಕೃಷ್ಣಾವತಾರದಲ್ಲಿ ಬಲರಾಮನೂ ರಾಮಾವತಾರದಲ್ಲಿ ಲಕ್ಷ್ಮಣನೂ ಶೇಷನ ಅವತಾರಗಳೆಂದು ಪ್ರತೀತಿ. ಬಲರಾಮನ ಅವತಾರ ಸಮಾಪ್ತಿಯ ಕಾಲದಲ್ಲಿ ಅವನು ಸಮುದ್ರದ ದಡದಲ್ಲಿ ಧ್ಯಾನಮಗ್ನನಾಗಿ ಕುಳಿತಿದ್ದನೆಂದೂ, ಆಗ ಅವನ ಬಾಯಿಯಿಂದ ದೊಡ್ಡ ಹಾವೊಂದು ಹೊರಹರಿದು ಸಮುದ್ರವನ್ನೆಲ್ಲ ಆವರಿಸಿ ಬಲರಾಮನನ್ನು ಸ್ತುತಿಸುತ್ತ ಮೇಲೆದ್ದು ಆಕಾಶವನ್ನು ಮುಟ್ಟಿತೆಂದೂ, ಸಮುದ್ರದ ಉಬ್ಬರ-ಅರ್ಭಟಗಳು ಇಳಿದಾಗ ಬಲರಾಮನು ಅದೃಶ್ಯನಾಗಿದ್ದನೆಂದೂ ಕಥೆಯಿದೆ. ಯೋಗಸೂತ್ರ ಪ್ರವರ್ತಕರಾದ ಪತಂಜಲಿಯೂ ವಿಶಿಷ್ಟಾದ್ವೈತ ಸಂಘದ ರಾಮಾನುಜಾಚಾರ್ಯರೂ ಶೇಷಾಂಶ ಸಂಭೂತರೆಂದು ಪ್ರತೀತಿ.

ವಾಸುಕಿಯೇ ನಾಗರಾಜ; ಸಮುದ್ರದ ಮಂಥನ ಕಾಲದಲ್ಲಿ ಮಂದರ ಪರ್ವತಕ್ಕೆ ಸುತ್ತಿಕೊಂಡು ದೇವಾಸುರರು ಕಡೆಯಲು ಎಡೆಮಾಡಿ ಕೊಟ್ಟ ದೊಡ್ಡ ಹಾವು ವಾಸುಕಿ. ಇದು ಕೂರ್ಮಾವತಾರದ ಕಥೆ. ತಕ್ಷಕನ ಕಥೆ ವಿಚಿತ್ರವಾಗಿದೆ. ನಾಗ ಕುಲವನ್ನೇ ನಾಶಮಾಡಲು ಸರ್ಪಯಾಗವನ್ನು ಮಾಡಿದ ಜನಮೇಜಯನ ಹಿಡಿತದಿಂದ ತಪ್ಪಿಸಿಕೊಂಡ ತಕ್ಷಕ ಈಗ ಜೀವಂತವಾಗಿರುವ ಸರ್ಪವಂಶದ ಮೂಲಪುರುಷ. ಈ ಸರ್ಪಯಾಗವೇ ಮಹಾಭಾರತದ ಕಥೆಯ ಹಿನ್ನೆಲೆ. ಈ ಸಂದರ್ಭದಲ್ಲಿ ತಕ್ಷಕನಿಗೆ ಜೀವದಾನ ಮಾಡಿದ ಆಸ್ತಿಕನ ಕಥೆಯನ್ನು ಎಲ್ಲರೂ ಬಲ್ಲರು.

ನಾಗಲೋಕದ ನಿವಾಸಿಗಳಿಗೂ ಮನುಷ್ಯರಿಗೂ ಸಂಬಂಧ ಪುರಾಣ ಪ್ರಸಿದ್ಧವಾದದ್ದು. ಮಹಾಭಾರತದಲ್ಲಿ ಒಂದು ಕಥೆ ಬರುತ್ತದೆ. ಪಾಂಡವರೂ, ಕೌರವರೂ ಹುಡುಗರಾಗಿದ್ದಾಗಲೇ ಅವರಲ್ಲಿ ಈರ್ಷ್ಯೆಯ ಸೆಣಸಾಟವಿದ್ದಿತಂತೆ. ಯಾವುದೋ ಪಂದ್ಯವೊಂದರಲ್ಲಿ ಪಾಂಡವರು ಗೆದ್ದಾಗ ದುರ್ಯೋಧನ ಆಗಲೇ ಹಗೆತನವನ್ನು ಸಾಧಿಸಿ ಭೀಮನಿಗೆ ವಿಷವುಣಿಸಿ ಅವನನ್ನು ನದಿಯಲ್ಲಿ ಮುಳುಗಿಸಿದನಂತೆ. ಭೀಮನು ನೇರವಾಗಿ ನದಿಯ ತಳದಲ್ಲಿದ್ದ ನಾಗಲೋಕಕ್ಕೆ ಹೋಗಿ ವಿಷ ಪರಿಹಾರಮಾಡಿಕೊಂಡು ಮೇಲೆದ್ದು ಬಂದನಂತೆ. ನಾಗಕನ್ನಿಕೆಯರು ಮನುಷ್ಯರೊಡನೆ ಮದುವೆ ಮಾಡಿಕೊಂಡು ಬಾಳುವುದೂ ಪ್ರಸಿದ್ಧವೇ. ಉಲೂಪಿ ಎಂಬ ನಾಗಕನ್ನಿಕೆ ಅರ್ಜುನನನ್ನು ಗಂಗಾ ನದಿಯ ತಳಕ್ಕೊಯ್ದು ಅಲ್ಲಿ ಅವನನ್ನು ಮದುವೆಮಾಡಿಕೊಂಡ ಕಥೆಯೂ ಮಹಾಭಾರತದಲ್ಲಿ ಬರುತ್ತದೆ. ಮೊನ್ನೆ ಮೊನ್ನೆಯ ವರೆಗೆ ಕೇರಳದಲ್ಲಿ ಹೆಣ್ಣು ಮಕ್ಕಳನ್ನು ನಾಗಗಳಿಗೆ ಮದುವೆಮಾಡಿಕೊಟ್ಟು ನಾಗಾಲಯಗಳಲ್ಲಿ ಬಿಡುವ ವಿಚಿತ್ರ ಪದ್ಧತಿಯಿದ್ದಿತು.

ನಾಗ-ಮನುಷ್ಯರ ಸಂಬಂಧ ಬರಿಯ ಪುರಾಣ ಸಿದ್ಧವೆನ್ನುವಂತಿಲ್ಲ. ನಾಗರೆಂಬ ಪ್ರಾಚೀನ ಜನಾಂಗ ಚಾಳುಕ್ಯ ಸೀಮೆಯಲ್ಲಿ ನೆಲೆಸಿದ್ದುದು ಇತಿಹಾಸ ಸ್ಪಷ್ಟವಾಗಿದೆ. ಇವರಿಂದ ಒಂದು ಪಂಗಡವಾಗಿ ಒಡೆದು ಬಂದ ಆಳುಪರು ತುಳುದೇಶವೆಲ್ಲೆಲ್ಲ ಹರಡಿದ್ದರು. ಆಳುಪವೆಂಬ ಪದ ಶೇಷನಿಗೆ ಪರ್ಯಾಯ ಪದವಾದ ಆಳುಕ ಎಂಬುದರ ತದ್ಭವ. ಮಂಗಳೂರಿನ ಗೊಲ್ಲರ ಗಣಪತಿ ದೇವಾಲಯದಲ್ಲಿ ದೊರೆತಿರುವ ಹಳೆಯ ಆಳುಪ ಶಾಸನವೊಂದರಲ್ಲಿ ಹೆಡೆಯೆತ್ತಿ ನಿಂತಿರುವ ಹಾವಿನ ಚಿತ್ರವಿದೆ. ಹಸ್ತಿ ಪುರಾಣದಲ್ಲಿ ಕೂಡ ಈ ಪಂಗಡದ ಜನನ್ನ ಮಹಿಪಾಲವರೆಂದು ಉಲ್ಲೇಖಿಸಿ

(೬ನೇ ಪುಟ ನೋಡಿರಿ)

**OUR TWO BRANCHES IN GOA**

**PANJIM** Branch

**The Hon'ble Shri B. R. Bhagat, Deputy Minister for Finance, Government of India, inaugurated the Branch on 31-3-1963**

*Business commenced from 1-4-1963*

**VASCO-DA-GAMA** Branch **was opened on 18-2-1963**

**CANARA BANK LIMITED**

(Estd: 1906)

**For World-Wide Banking**

Regd. Office: MANGALORE Admn. Office: BANGALORE

- OVER 120 BRANCHES IN INDIA
- WORKING FUNDS EXCEED Rs. 55 CRORES

NAVAYUGA
Kannada Weekly
UDIPI
Founder
Late Sri A. B. Shetty
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೩ | ೧೮-೪-೧೯೬೩ | ೩೨ |

## ಅರಬ ಮಹಾಮಂಡಳ

'ಸಂಯುಕ್ತ ಅರಬ ಪ್ರಜಾರಾಜ್ಯ'ದಿಂದ ಹಿಂದೊಮ್ಮೆ ಸಿರಿಯಾವು ಸಿಡಿದು ದೂರ ಹೋದಾಗ, ಐಗುಪ್ತದ ಅಧ್ಯಕ್ಷ ಗಮಾಲ ನಸ್ಸೇರರು ಒಂದು ದಿನ ಅದು ಮರಳಿ ಸಂಯುಕ್ತ ಅರಬ ಪ್ರಜಾರಾಜ್ಯವನ್ನು ಸೇರುವ ಆಶಯವನ್ನು ವ್ಯಕ್ತಪಡಿಸಿ, ಐಗುಪ್ತದ ಬದಲಾದ ಹೆಸರನ್ನು ಹಾಗೆಯೇ ಉಳಿಸಿಕೊಂಡಿದ್ದರು. ಆ ದ ಘಟನೆ ನಡೆದ ಸುಮಾರು ಎರಡು ವರ್ಷಗಳ ನಂತರ ಪ್ರತ್ಯೇಕಿತ ಸಿರಿಯಾದಲ್ಲಿ ಮರಳಿ ಬಂಡೆದ್ದಿತು; ಅಧಿಕಾರ ಸೂತ್ರವು ನಸ್ಸೇರ ವಾದಿಗಳ ಕೈಸೇರಿತು;ಅಥವಾ ಅಧಿಕಾರ ಗ್ರಹಣ ಮಾಡಿದವರುನಸ್ಸೇರವಾದಿಗಳಾದರು. ಸುಮಾರ ಇದೇ ಸಮಯದಲ್ಲಿ ಇರಾಕದಲ್ಲಿಯೂ ಕ್ರಾಂತಿ ನಡೆಯಿತು ಇಲ್ಲಿಯ ಕ್ರಾಂತಿಯಲ್ಲಿಯೂ ನಸ್ಸೇರ ಪರವಾದಿಗಳ ಕೈವಾಡ ಸಾಕಷ್ಟು ಇತ್ತು ಎಂಬುದಕ್ಕೆ ಅವು ಒಂದು ಸೇರಿ ಅರಬ ಮಹಾಮಂಡಳದ ಸ್ಥಾಪನೆಯಲ್ಲಿ ಆಸಕ್ತಿ ತೋರಿಸುತ್ತಿರುವುದನ್ನೇ ನಿದರ್ಶನವಾಗಿ ಕೊಡಬಹುದು.

ನಿಯೋಜಿತ ಮಹಾಮಂಡಳದ ಘಟನಾತ್ಮಕ ಸ್ವರೂಪವು ಎಂತಿರಬೇಕು ಎಂಬುದನ್ನು ನಿರ್ಧರಿಸುವ ಸಲುವಾಗಿ ಕೈರೋವಿನಲ್ಲಿ ಮೂರೂ ದೇಶಗಳ ಪ್ರತಿನಿಧಿ ಮಂಡಳಗಳು ಒಮ್ಮತಕ್ಕೆ ಬಂದಿರುವುದು ನಿಜಕ್ಕೂ ಪ್ರಶಂಸನೀಯ. ಉದ್ದೇಶ ಸಾಧನೆಗಾಗಿ ಒಂದು ಸಂವಿಧಾನವನ್ನು ರಚಿಸಲಾಗುವುದೆಂದೂ, ಈ ಸಂವಿಧಾನದ ಮೇಲೆ ಮೂರೂ ದೇಶಗಳಲ್ಲಿ ಜನಮತ ಗಣನೆಯು ನಡೆಯುವುದೆಂದೂ ಜನತೆಯು ಸಂವಿಧಾನಕ್ಕೆ ತನ್ನ ಒಪ್ಪಿಗೆಯನ್ನು ನೀಡಿದರೆ ಮಾತ್ರ ಮಹಾಮಂಡಳದ ರಚನೆಯನ್ನು ಘೋಷಿಸಲಾಗುವುದೆಂದೂ ಹೇಳಲಾಗಿದೆ ಈ ಬಗೆಯ ಏಕೀಕರಣದೊಂದಿಗೆ ಏಕೀಕೃತ ಸೇನಾಧಿಪತ್ಯ, ಏಕೀಕೃತ ವಿದೇಶ ನೀತಿ ಮತ್ತು ಸಾಮಾನ್ಯ ಪೇಟೆಯ ನಿರ್ಮಾಣ ಹಾಗೂ ಆರ್ಥಿಕ ಸಾಂಸ್ಕೃತಿಕ ವಿಷಯ ಗಳ ಏಕೀಕರಣ— ಮೊದಲಾದುವುಗಳನ್ನೂ ಕಾರ್ಯಾಚರಣೆಗೊಳಿಸುವ ಬಗ್ಗೆ ಉಚಿತ ಕಾರ್ಯಕ್ರಮಗಳನ್ನು ಈಗಾಗಲೇ ರೂಪಿಸಲು ತೊಡಗಲಾಗುತ್ತಿದೆಯೆಂದು ಗೊತ್ತಾಗಿದೆ. ಸಂವಿಧಾನವನ್ನು ಜನತೆಯು ಸ್ವೀಕರಿಸಿತೆಂದರೆ, ಮುಂದಿನ ಎಲ್ಲ ಕೆಲಸಗಳೂ ತ್ವರಿತಗತಿಯಲ್ಲೇ ಸಾಗುವುವು; ಆದರೆ, ಎಲ್ಲಕ್ಕಿಂತ ಕ್ಲಿಷ್ಟತಮವಾದ ಕಾರ್ಯವೆಂದರೆ, ಮೂರು ದೇಶಗಳಿಗೂ ಒಪ್ಪಿತವಾಗುವಂತಹ ಸಂವಿಧಾನದ ನಿರ್ಮಾಣ. ಇದಕ್ಕಾಗಿ ಉಚಿತವಾದ ಸಮಿತಿಯು ಬಹು ಜಾಣಾಕ್ಷತೆಯಿಂದ ನಡೆದುಕೊಳ್ಳಬೇಕಾಗುತ್ತದೆ ಏಕೆಂದರೆ, ಹಿಂದೊಮ್ಮೆ ನಡೆದಿದ್ದ ಒಕ್ಕೂಟ ಕಾರಣಾಂತರದಿಂದ ಉರುಳಿ ಭಿನ್ನವಾಗಿ ಹೋಯ್ತು. ಅಂದು ಒಕ್ಕೂಟವು ಮುರಿದುಹೋಗುವುದಕ್ಕೆ ಇದ್ದ ನೈಜ ಕಾರಣಗಳು ಸುಸ್ಪಷ್ಟವಾಗಿಲ್ಲ. ಆದುದರಿಂದ, ಅದನ್ನು ಅರಿತುಕೊಂಡು, ತಮ್ಮ ಬಂಧು ಭಾವನೆಯ ಪರಿಣಾಮವಾಗಿ ಮೂಡಲಿರುವ ಮಹಾಮಂಡಳ ಮುಂದೆಂದೂ ಮುರಿದು ಹೋಗದಂತೆ ಎಚ್ಚರಿಕೆಯಿಂದ ನಡೆಯುವುದು ಅಗತ್ಯವೆನಿಸುತ್ತದೆ.

ಚಿಕ್ಕ ಪುಟ್ಟ ರಾಜ್ಯಗಳ ಅಸ್ತಿತ್ವವು ಸ್ವತಂತ್ರ ಜಗತ್ತಿನಲ್ಲಿ ಪರಿಣಾಮಕಾರಿಯಾಗಿವೆ ನಿಜ ಆದರೆ, ಕೆಲವೊಂದು ಸಾಮ್ರಾಜ್ಯವಾದಿಗಳ ಬೆದರಿಕೆಯಿಂದಾಗಿ ಅವು ಸಂರಕ್ಷಣಾ ಒಡಂಬಡಿಕೆಗಳಲ್ಲಿ ಅನಿವಾರ್ಯವಾಗಿ ಸೇರಿಕೊಂಡಿರಲೇಬೇಕಾಗುತ್ತದೆ. ಏಶ್ಯದ ಅರಬ ರಾಜ್ಯಗಳು ಒಂದಲ್ಲ ಒಂದು ರೀತಿಯ ಗೊಂದಲದ ರಾಜ್ಯಗಳಾಗಿಯೇ ಇವೆ. ಇದರಿಂದಾಗಿ ಅವೂ ಉನ್ನತವಾಗುವುದಿಲ್ಲ; ಅವುಗಳ ಶಕ್ತಿ ವರ್ಧನೆಯಾಗುವುದೂ ಇಲ್ಲ. ಇದಕ್ಕಾಗಿ ಏಕ ಮಹಾಮಂಡಳದ ಯೋಜನೆಯು ನಿಜಕ್ಕೂ ಸ್ವಾಗತಾರ್ಹ. ದೇಶದೇಶಗಳ ನಡುವೆ ಭಿನ್ನತೆಯೂ ವೈಮನಸ್ಯವೂ ಅಧಿಕವಾಗಿ ಪರಸ್ಪರ ಶತ್ರುಭಾವವನ್ನು ಪ್ರಕಟಿಸುವ ಪ್ರವೃತ್ತಿಯಲ್ಲಿ ಒಂದೆರಡು ರಾಷ್ಟ್ರಗಳು ನಿಮಗ್ನರಾಗಿರುವಾಗ, ಈ ಬಗೆಯ ಏಕೀಕರಣವು ಆತ್ಮಪೂರ್ವವೆಂದು ಮತ್ತು ಮಹತ್ವಪೂರ್ಣವಾಗಿರುವುದು. ಭಿನ್ನತೆಯನ್ನು ಏಕತೆಯಲ್ಲಿ ಪರ್ಯವಸಾನಗೊಳಿಸುವ ಇರಾದೆಯೊಂದು ಸರ್ವತ್ರ ಮಾನ್ಯವಾಗಿದೆ ಸಿರಿಯಾ-ಐಗುಪ್ತಗಳು ಒಂದಾಗಿ ಸೇರ್ಪಡೆಗೊಂಡಾಗ ಅದೊಂದು ಹೊಸ ಹೆಜ್ಜೆಯೆಂದು ಉಲ್ಲಖಿತವಾಗಿತ್ತು. ಆದರೆ, ಆ ಸೇರ್ಪಡೆಯು ಕೊನೆಗೊಂಡಾಗ ಮೊದಲು ಪ್ರಶಂಸಿಸಿದವರು ನಿರಾಶರಾಗಬೇಕಾಗಿ ಬಂತು ಎರಡು ದೇಶಗಳ ನಡುವಣ ಒಡಂಬಡಿಕೆಯು ಮರಳಿನ ಮೇಲೆ ಬರೆಯಲ್ಪಟ್ಟಿದ್ದೋ ಎಂಬ ಸಂದೇಹಕ್ಕೂ ಅದು ಕಾರಣವೆನಿಸಿತು. ಆದರೆ, ಇಂದು ಆ ಪರಿಸ್ಥಿತಿ ಉಳಿದಿಲ್ಲ ನಸ್ಸೇರ ವಿರೋಧಿಗಳೇ ಅಂದಿನ ಅಲ್ಲಿನ ಬಂಡಿಗೆ ಕಾರಣಪುರುಷರಾಗಿದ್ದರೆಂದು ಎಲ್ಲರಿಗೂ ಮನವರಿಕೆಯಾಗಿತ್ತು. ಐಗುಪ್ತ, ಸಿರಿಯಾ ಮತ್ತು ಇರಾಕ್‌ಗಳು ಮಿತ್ರ ಭಾವದಿಂದ ಒಗ್ಗೂಡಿ ಅರಬ ಪ್ರದೇಶಗಳಲ್ಲಿ ಬಂಧುತ್ವದ ಭಾವನೆಯಂ ಹುಟ್ಟಿ, ಅದು ಬೆಳೆಯುವಂತೆ ಮಾಡಲಿ ಮುಂದಕ್ಕಾದರೂ ಸುಸಂಘಟಿತವಾಗಿ ಆ ಪ್ರದೇಶದ ಪ್ರಮುಖ ರಾಷ್ಟ್ರವಾಗಿ ಬೆಳೆದು ಉಳಿದವರಿಗೆ ಮಾರ್ಗದರ್ಶಕವೆನಿಸಲಿ

## ಮಿಗ್ ಕಾರಖಾನೆಗಳು

ತಾಗುವ್ಯಾಲಿಯಾಡುತ್ತಿದ್ದ ರಶ್ಯದ ಮಿಗ್ ವಿಮಾನಗಳು ಕಣ್ಣುಮುಚ್ಚಾಲೆಯಾಡತ್ತಲೇ ಭಾರತ ಸೇರಿದುವು ತಾನಿತ್ತ ವಾಗ್ದಾನದಂತೆ ರಶ್ಯವು ಕೊನೆಗಾದರೂ ನಡೆದುಕೊಂಡುದರಿಂದಲೇ ಭಾರತದಲ್ಲಿಯೇ ಮಿಗ್ ವಿಮಾನಗಳನ್ನು ತಯಾರಿಸುವ ಕಾರಖಾನೆಗಳನ್ನು ತೆರೆಯುವ ಸಾಧ್ಯತೆಯೊಗ ಇದೆ. ಮಹಾರಾಷ್ಟ್ರದ ನಾಸಿಕದಲ್ಲಿ ವಿಮಾನ ಚೌಕಟ್ಟುಗಳನ್ನೂ ಒರಿಸ್ಸಾದ ಕೋರಾಪಟಿಲ್ಲಿ ವಿಮಾನ ಯಂತ್ರಗಳನ್ನೂ ನಿರ್ಮಿಸುವ ಕಾರಖಾನೆಗಳನ್ನು ತೆರೆಯುವ ಯೋಜನೆಯೀಗ ತಯಾರಾಗಿದೆ. ಈ ನಿಯೋಜಿತ ಕಾರಖಾನೆಗಳು ಪೂರ್ಣಗೊಂಡು ಅವು ಉತ್ಪಾದನೆಗೆ ತೊಡಗಲು ಇನ್ನೆರಡು ವರ್ಷಗಳು ಬೇಕಾಗಬಹುದು. ಭಾರತದಲ್ಲಿ ಮಿಗ್ ಮಾದರಿಯ ವಿಮಾನಗಳು ಅತ್ಯುಪಯುಕ್ತವೆಂದು ಕಂಡುಬಂದುದರಿಂದಲೇ ಈ ಕಾರಖಾನೆಗಳನ್ನು ತೆರೆಯುವಲ್ಲಿ ಸರಕಾರವು ತೀವ್ರಾಸಕ್ತಿ ತಳೆದಿದೆಯೆಂಬುದೀಗ ಸರ್ವಶ್ರುತ. ಭಾರತವಿಂದು ಕೆಂಪು ಚೀನಾದಿಂದ ಬಂದ ತನ್ನ ಸ್ವಾತಂತ್ರ್ಯಕ್ಕೊಂದು ಆಹ್ವಾನವನ್ನು ಸ್ವೀಕರಿಸಲೇ ಬೇಕಾದದರಿಂದ, ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸಲೇ ಬೇಕಾಗಿದೆ. ಮನೆಗೆ ಬಿದ್ದ ಬೆಂಕಿಯನ್ನು ಆರಿಸುವುದು ನಮ್ಮ ಆದ್ಯ ಕರ್ತವ್ಯ; ಅದಕ್ಕಾಗಿಯೇ ಮಿಗ್ ಮಾದರಿಯ ವಿಮಾನಗಳನ್ನು ತಯಾರಿಸುವ ಅಗತ್ಯವೂ ನಮ್ಮದಿದೆ, ಮದ್ರಾಸದ ಎನ್ನೋರವನ್ನು ಮರೀನ್ ಡೈಸೆಲ್ ಎಂಜಿನುಗಳನ್ನು ನಿರ್ಮಿಸುವುದಕ್ಕಾಗಿ ಆರಿಸಲಾಗಿದೆಯೆಂದೂ ಗೊತ್ತಾಗಿದೆ. ಈ ವಿಚಾರಗಳನ್ನು ಲೋಕಸಭೆಯಲ್ಲಿ ಸಂರಕ್ಷಣಾ ಶಾಖೆಯ ಉಪಮಂತ್ರಿ ಶ್ರೀ ಡಿ ಆರ್. ಚವನರು ಬಹಿರಂಗ ಪಡಿಸಿದರು. ಭಾರತದ ಸಂರಕ್ಷಣಾ ಶಕ್ತಿಯ ಹೆಚ್ಚಳದಲ್ಲಿ ವಿಮಾನಗಳ ಕಾರಖಾನೆ ರಚನೆಯೊಂದು ಅತ್ಯಂತ ಮಹತ್ವದ ಹೆಜ್ಜೆ ಭಾರತವು ತನ್ನ ಸ್ವಾತಂತ್ರ್ಯವನ್ನು, ಸಮಗ್ರತೆಯನ್ನು, ಸಾರ್ವಭೌಮತೆಯನ್ನು ಉಳಿಸಿಕೊಳ್ಳಲು ಅದೆಂತಹ ಕ್ರಮವನ್ನಾದರೂ ಅದೆಷ್ಟು ಪರಿಶ್ರಮಕಾರಕವೆನಿಸಿದರೂ ಯೋಜಿಸಬಹುದು ಎಂಬುದರ ಪ್ರತೀಕವಿದು.ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕು ಅಲ್ಲವೆ?

## ವಾರ್ತಾವೇದಿಕೆ

### ಸುಶೀಲಾ ನಾಯರ್

ಜನಸಂಖ್ಯೆಯ ಹೆಚ್ಚಳವನ್ನು ತಡೆಗಟ್ಟ ಯೋಜನೆಗಳಿಂದ ಸಾಕಷ್ಟು ಲಾಭ ಪಡೆದು ಜೀವನ ಮಟ್ಟವನ್ನು ಎತ್ತರಿಸುವುದಕ್ಕಾಗಿ ಸಂತಾನ ನಿರೋಧ ಶಸ್ತ್ರಕ್ರಿಯೆಯನ್ನು ಪುರುಷರು ಮಾಡಿಕೊಳ್ಳಲು ಮುಂದೆ ಬರಬೇಕು ಎನ್ನುತ್ತಾರೆ ಕೇಂದ್ರ ಆರೋಗ್ಯ ಸಚಿವೆ ಡಾ। ಸುಶೀಲಾ ನಾಯರ್. ಮಕ್ಕಳು ಸಮಾರಜನಕವುಳ್ಳ ಆಹಾರ ಪದಾರ್ಥಗಳನ್ನು ತಿನ್ನದೆ ಅವುಗಳ ಆರೋಗ್ಯ ನೆಟ್ಟಗಿರುವುದಿಲ್ಲವಾದುದರಿಂದ ಶಾಲಾ ಮಕ್ಕಳ ಮಟ್ಟಿಗಾದರೂ ಒಂದು ಆರೋಗ್ಯ ಯೋಜನೆಯನ್ನು ರೂಪಿಸುವ ವಿಚಾರ ಕೇಂದ್ರ ಸರಕಾರಕ್ಕಿದೆ ಎಂದು ತಿಳಿಸಿದರು ಅವರು. ಕುಟುಂಬದ ಆರ್ಥಿಕ ಪರಿಸ್ಥಿತಿಯಲ್ಲಿ ಉನ್ನತಿ, ಸ್ತ್ರೀಯರ ಸಾಮಾನ್ಯ ಆರೋಗ್ಯ ಮತ್ತು ಮಕ್ಕಳ ದೇಹದಾರ್ಢ್ಯದ ದೃಷ್ಟಿಯಿಂದಲೂ ಸಂತಾನ ನಿರೋಧವು ಪರಿಣಾಮಕಾರಿಯಾಗುದರಿಂದ ಅದನ್ನು ಪ್ರೋತ್ಸಾಹಿಸಲವರು ಕರೆಯಿತ್ತರು. ಮುಂದೆ ಪ್ರಕಟಿಸಿದಾಗ ಪ್ರತ್ಯೇಕ ಪುಟ್ಟ ಶಸ್ತ್ರಚಿಕಿತ್ಸೆಯನ್ನು ಮಾಡಿಸಿ ಮಕ್ಕಳನ್ನು ಪಡೆಯುವುದು ಸಾಧ್ಯವಿದೆಯೆಂಬ ರಹಸ್ಯವನ್ನೂ ಅವರು ಸ್ಫೋಟಗೊಳಿಸಿದರು.

### ನಿಜಲಿಂಗಪ್ಪ

ವಿಧಾನ ಸಭೆಯಲ್ಲಿ ಎಸ್. ಎಸ್. ಎಲ್. ಸಿ ಪರೀಕ್ಷೆಗಳ ಪ್ರಶ್ನೆ ಪತ್ರಗಳು ಪೂರ್ವಭಾವಿಯಾಗಿ ಸ್ಫೋಟಗೊಂಡ ದುರ್ಘಟನೆಯು ಸಿದ್ಧವಾದೊಡನೆಯೇ ನಡೆದ ಮತ್ತು ನಡೆಯುತ್ತಿದ್ದ ಪರೀಕ್ಷೆಗಳನ್ನು ರದ್ದುಪಡಿಸಿ, ಮರು ಪರೀಕ್ಷೆ ನಡೆಸುವ ಘೋಷಣೆಯನ್ನು ಹೊರಡಿಸುವ ಧೈರ್ಯ ತೋರಿದವರು ಮುಖ್ಯ ಮಂತ್ರಿ ನಿಜಲಿಂಗಪ್ಪನವರ. ಗೋದಾವರಿ—ಕೃಷ್ಣ ನದೀ ನೀರ ಹಂಚಿಕೆಯಲ್ಲಿ ರಾಜ್ಯಕ್ಕಾದ ಅನ್ಯಾಯವನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಟ್ಟು, ಅಲ್ಲಿ ನ್ಯಾಯವನ್ನು ದೊರಕಿಸಿಕೊಂಡು ಸಿಕ್ಕ ನೀರನ್ನು ಯಥಾ ಯೋಗ್ಯವಾಗಿ ಬಳಸಿಕೊಳ್ಳುವ ದಿಟ್ಟ ಹೆಜ್ಜೆಯನ್ನವರು ಈಗ ಇಡಬೇಕಾಗಿದೆ; ಕನ್ನಡಿಗರ ಜೀವನ—ಮರಣ ಪ್ರಶ್ನೆಯನ್ನು ಸೂಕ್ತವಾಗಿ ಉತ್ತರಿಸ ಬೇಕಾಗಿದೆ.

### ಮಲ್ಲಪ್ಪ

ರಾಜ್ಯದ ಸರಕಾರಿ ಪಿಂಗಾಣಿ ಕಾರಖಾನೆ ಮತ್ತು ರೆಮ್ಕೊ ಕಾರಖಾನೆಗಳ ವಿಸ್ತರಣೆ ಮತ್ತು ರಾಜ್ಯದಲ್ಲೊಂದು ಒಕ್ಕಲು ತನೋಪಕರಣ ಕಾರಖಾನೆ ಸ್ಥಾಪನೆಯ ವಿಚಾರದಲ್ಲಿ ಜಪಾನದ ಸಹಾಯ ಪಡೆಯುವ ವಿಚಾರವನ್ನಿಟ್ಟುಕೊಂಡು ಉದ್ದಿಮೆ ಮಂತ್ರಿ ಕೆ. ಮಲ್ಲಪ್ಪನವರ. ದೂರ ಪ್ರಾಚ್ಯದ ಸಂಚಾರಕ್ಕೆ ಹೊರಟಿದ್ದಾರೆ. ಕಬ್ಬಿಣ ಮತ್ತು ಮ್ಯಾಂಗನೀಸ ಅದುರು ವಿನಿಮಯವಾಗಿ ರಾಜ್ಯದ ಕೆಲವು ಸಣ್ಣ ಬಂದರಗಳ ಅಭಿವೃದ್ಧಿಗೂ ನೆರವು ಪಡೆಯುವ ವಿಚಾರದಲ್ಲಿ ಅವರು ಅಲ್ಲಿನ ಉದ್ದಿಮೆದಾರರನ್ನು ಪ್ರಸ್ತಾಪಿಸಲಿದ್ದಾರೆ.ರಾಜ್ಯದ ಉತ್ಪನ್ನಗಳಾದ ಗಂಧದ ಎಣ್ಣೆ, ರೇಷ್ಮೆ ಮತ್ತು ಗಂಧದ ಸಾಬೂನುಗಳಿಗೆ ಗಿರಾಕಿಗಳನ್ನು ಪಡೆಯುವ ಪ್ರಯತ್ನವನ್ನೂ ಅವರು ಮಾಡಲಿದ್ದಾರೆ. ಮಲ್ಲಪ್ಪನ ಜರೊಡನೆ ಪಿಂಗಾಣಿಯ ಕಾರಖಾನೆಯ ಮೆನೇಜಿಂಗ್ ಡೈರೆಕ್ಟರರ. ಹೊರಟಿದ್ದಾರೆ, ಮತ್ತೊಂದು ಕಡೆ ಉದ್ದಿಮೆ ಶಾಖೆಯ ಡೈರೆಕ್ಟರರ ನೇತೃತ್ವದಲ್ಲೊಂದು ನಿಯೋಗವು ಯುರೋಪವನ್ನು ಹೊಕ್ಕಿದೆ. ಇವರ ಸಂಚಾರವು ಸಫಲವಾಯಿತೆಂದರೆ, ರಾಜ್ಯದ ಉತ್ಪನ್ನ ಹೆಚ್ಚುವುದು ಸಾಧ್ಯ ಸವ್ಯಸಾಚಿಯಾಗಿ ಅಭಿವೃದ್ಧಿಪಥ ಗಮನ ಮಾಡಿದರೆ ಮಾತ್ರ ನಮ್ಮ ದಾರಿದ್ರ್ಯ ದೂರವಾದೀತು.

### ಶ್ರೀಮಾಲಿ

ಕೇಂದ್ರ ಸರಕಾರದ ತ್ರಿಭಾಷಾ ಸೂತ್ರವನ್ನು ರಾಜ್ಯ ಸರಕಾರಗಳು ಮನ್ನಿಸುವುದು ಸ್ವಾಭಾವಿಕ ಭಾಷಾ ಅಭ್ಯಾಸದ ವಿಷಯದಲ್ಲಿ ದೇಶದಾದ್ಯಂತ ಏಕರೂಪತೆಯಿರಬೇಕು ಎಂಬ ಒಂದು ಅಭಿಪ್ರಾಯವು ಮೊದಲಿದ್ದಿತ್ತು ಇದಕ್ಕಾಗಿ ಪಠ್ಯ ಪುಸ್ತಕಗಳ ರಾಷ್ಟ್ರೀಕರಣ ಮಾಡುವ ವಿಚಾರವೂ ಇತ್ತು. ಇದು ಅನಪೇಕ್ಷಣೀಯ. ಮತ್ತು ಅವ್ಯವಹಾರ್ಯವೆಂಬುದಕ್ಕೆ ಇಂದೆಲ್ಲರೂ ಒಪ್ಪಿಯಿತ್ತುದು ಸುದೈವ. ಆದರೆ, ಶಿಕ್ಷಣದ ಸಿಲೆಬಸ್ಸಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಏಕರೂಪತೆ

(೭ನೇ ಪುಟಕ್ಕೆ)

# ಅಲ್ಲಲ್ಲಿಯ ಸುದ್ದಿ ಸಾರ

## ಡಾ ಸುಶೀಲಾ ನಯ್ಯರ್‌ರಿಗೆ ಉಡುಪಿ ನಗರ ಸಭೆಯ ಮಾನಪತ್ರ

ಕೇಂದ್ರ ಸರಕಾರದ ಆರೋಗ್ಯ ಸಚಿವೆ ಡಾ ಸುಶೀಲಾ ನಯ್ಯರ್‌ರವರು ಬೊಂಬಾಯಿಯ ಡಾ| ಎ. ವಿ ಬಾಳಿಗರೊಂದಿಗೆ ತಾ 13ನೇ ಮಧ್ಯಾಹ್ನ ವಿಮಾನ ಮೂಲಕ ಬಜ್ಪೆಗೆ ಬಂದು ಅಲ್ಲಿಂದ ಮಣಿಪಾಲಕ್ಕೆ ತೆರಳಿ, ಅಲ್ಲಿ ಭೋಜನ, ವಿಶ್ರಾಂತಿ ಪಡೆದು ಮಣಿಪಾಲದ ಸಂಸ್ಥೆಗಳನ್ನು ಸಂದರ್ಶಿಸಿ, ಎಂ ಜಿ ಎಂ ಕಾಲೇಜಿನಲ್ಲಿ ಉಪಾಹಾರ ಸ್ವೀಕರಿಸಿ ಸಂಜೆ ಉಡುಪಿಗೆ ಆಗಮಿಸಿದರು ಮಹಾತ್ಮಾ ಗಾಂಧಿ ಜೇಸಿಕ್ ಶಾಲೆಯಲ್ಲಿ ಏರ್ಪಡಿಸಲಾದ ಸಭೆಯಲ್ಲಿ ನಗರ ಸಭಾಪತಿ ಶ್ರೀ ಪಿ ರಂಗನಾಥ ಶೆಣೈಯವರು ಸ್ವಾಗತಿಸಿ ನಗರ ಸಭೆಯ ಪರವಾಗಿ ಮಾನಪತ್ರವನ್ನರ್ಪಿಸಿದರು ಅದರಲ್ಲಿ ನೀರು ಸರಬರಾಯಿ, ಅನೇಕಾಲು ರೋಗ ನಿರೋಧ ಕಾರ್ಯಕ್ರಮ ಮೊದಲಾದ ಸಮಸ್ಯೆಗಳ ಕುರಿತು ತಿಳಿಸಲಾಗಿತ್ತು ಉಡುಪಿ ತಾಲೂಕು ಬೋರ್ಡಿನ ಪರವಾಗಿ ಶ್ರೀ ಎಂ ಮಧ್ವರಾಜ್ ಎಂ ಎಲ್ ಎ ಯವರು ಪ್ರೈಮರಿ ಹೆಲ್ತ್ ಸೆಂಟರುಗಳಿಗೆ ಸರಕಾರದ ನೆರವನ್ನು ಕೋರುವ ಮನವಿಯನ್ನರ್ಪಿಸಿದರು

ಡಾ| ನಯ್ಯರ್‌ರವರು ಉತ್ತರ ಕೊಡುತ್ತಾ 'ನೀರು ಸರಬರಾಯಿ ಯೋಜನೆಯ ಜೊತೆಗೆ ಭೂಗತ ಚರಂಡಿ ಯೋಜನೆಯನ್ನೂ ಕೈಕೊಳ್ಳಬೇಕು ಆರೋಗ್ಯ ಸಂವರ್ಧನೆಗೆ ಕ್ರಿಮಿನಾಶಕ ಮದ್ದುಗಳನ್ನು ಉಪಯೋಗಿಸಬೇಕು' ಎಂದು ಹೇಳಿದರು ಸ್ಮಾತ್ರವಲ್ಲದೆ, ಕೇಂದ್ರದಿಂದ ಪ್ರಾಂತಿಕ ಸರಕಾರಗಳಿಗೊದಗಿಸಿದ ಹಣವನ್ನು ಸಹಾಯವಾದ ಅದನ್ನು ಪ್ರಾಮಾಣಿಕತೆಯಿಂದ ಖರ್ಚು ಮಾಡಬೇಕು ಎಂದು ಹೇಳಿದರು ಇಲ್ಲಿಯ ಜನರು ಸಾಹಸಪ್ರಿಯರೆಂಬುದಕ್ಕೆ ಇಲ್ಲಿಯ ಮೆಡಿಕಲ್ ಕಾಲೇಜು ಮುಂತಾದ ಶಿಕ್ಷಣ ಸಂಸ್ಥೆಗಳು ಉದಾಹರಣೆ ಎಂದು ಹೇಳಿದರು

ಕೊನೆಯಲ್ಲಿ ಶ್ರೀ ಕೆ ಎಂ ಮಧ್ಯಸ್ಥರು ವಂದನಾರ್ಪಣೆಗೈದರು ಅನಂತರ ಸಚಿವೆಯರು ಮುಂದಿನ ಕಾರ್ಯಕ್ರಮಕ್ಕೆ ಮಣಿಪಾಲಕ್ಕೆ ತೆರಳಿದರು ಮೈಸೂರಿನ ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರೂ ಜೊತೆಗಿದ್ದರು.

**ಮಣಿಪಾಲದಲ್ಲಿ ಡಾ|| ಸುಶೀಲಾ ನಯ್ಯರ್**— ಕೇಂದ್ರದ ಆರೋಗ್ಯ ಸಚಿವೆ ಡಾ ಸುಶೀಲಾ ನಯ್ಯರ್‌ರವರಿಂದ ಕಳೆದ ತಾ 18ರಂದು ಮಣಿಪಾಲದಲ್ಲಿ ಹೃದ್ರೋಗಗಳಿಗೆ ಸಂಬಂಧಿಸಿದ ರೋಗಗಳ ಚಿಕಿತ್ಸೆಗಾಗಿ "ಕಮಲಾ ನೆಹ್ರು ಇನ್‌ಸ್ಟಿಟ್ಯೂಟ್"ನ ಶಂಕುಸ್ಥಾಪನೆಯು ನೆರವೇರಿತು.

ಸಮಾರಂಭದ ಆದಿಯಲ್ಲಿ ಶ್ರೀ ಟಿ. ರಮೇಶ ಪೈಗಳು ಶಿವಳ್ಳಿ ಪಂಚಾಯಿತಿನ ಪರವಾಗಿ ಮಾನಪತ್ರವನ್ನರ್ಪಿಸಿದರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಡಾ ಕೊಪ್ಪಿಕರ್‌ರವರು ಶುಭಕೋರಿ ಬಂದ ಸಂದೇಶಗಳನ್ನು ಓದಿದರು ಡಾ. ಟಿ ಮಾಧವ ಪೈಗಳು ಸ್ವಾಗತ ಭಾಷಣ ಮಾಡುತ್ತಾ ಎಕೆಡೆಮಿ ಓಫ್ ಜನರಲ್ ಎಜ್ಯುಕೇಶನಿನ ವಿವಿಧ ಸಂಸ್ಥೆಗಳ ಕಾರ್ಯಕಲಾಪಗಳನ್ನು ವಿವರಿಸಿದರು.

ಡಾ ನಯ್ಯರ್ ರವರು ಮಾತನಾಡುತ್ತಾ, "ವಿದ್ಯಾರ್ಥಿಗಳ ಆಯ್ಕೆಯನ್ನು ಯೋಗ್ಯತಾನುಸಾರ ಮಾಡಬೇಕು, ಜಾತೀಯತೆಯ ಪ್ರಶ್ನೆಗೆ ಎಡೆ ಇರಬಾರದು ಎಂದರಲ್ಲದೆ "ನಮ್ಮ ದೇಶದಲ್ಲಿ ಈಗ 71 ಮೆಡಿಕಲ್ ಕಾಲೇಜುಗಳಿದ್ದರೂ ನಮಗೆ ವೈದ್ಯರ ಅಭಾವವಿದೆ ಇದೆ ಗ್ರಾಮಾಂತರ ಪ್ರದೇಶಗಳಿಗೆ ಹೋಗಲು ಹೆಚ್ಚಿನ ಪದವೀಧರರು ಇಚ್ಛಿಸುವುದಿಲ್ಲ ಆದಕ್ಕಾಗಿ ಕಡ್ಡಾಯವಾಗಿ ಗ್ರಾಮಾಂತರಗಳಲ್ಲಿ ಸೇವೆ ಸಲ್ಲಿಸಬೇಕೆಂಬ ನಿಯಮವಿರಬೇಕು. ಡಾಕ್ಟರರ ಧ್ಯೇಯವು ಕೇವಲ ಧನಪ್ರಾಪ್ತಿ ಯೊಂದೇ ಆಗಿರದೇ ದೇಶ ಸೇವೆಯೂ ಆಗಿರಬೇಕು ಎಂದು ಹೇಳಿದರು ಮಾತ್ರವಲ್ಲದೇ, ಮಣಿಪಾಲದ ಮೆಡಿಕಲ್ ಕಾಲೇಜಿನ ವಾತಾವರಣವನ್ನು ಅವರು ತುಂಬಾ ಮೆಚ್ಚಿಕೊಂಡು, ಅದನ್ನು ಪ್ರಶಂಸಿಸುತ್ತಾ "ಈ ಕಾಲೇಜಿನ ಆದರ್ಶವು ಮುಂದಿನ ತರುಣಪೀಳಿಗೆಗಳಿಗೆ ಸ್ಫೂರ್ತಿದಾಯಕವಾಗಬೇಕು ಉನ್ನತ ಮಟ್ಟದ ಇಂತಹ ಕಾಲೇಜುಗಳು ಅತ್ಯಾವಶ್ಯಕ ಎಂದರು

ಮೈಸೂರು ಆರೋಗ್ಯ ಸಚಿವ ಡಾ ನಾಗಪ್ಪ ಆಳ್ವರೂ ಡಾ ಮಾಧವ ಪೈಗಳ ಕ್ರಿಯಾಶೀಲತೆ ಪ್ರತಿಭೆಗಳನ್ನು ಕೊಂಡಾಡಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ| ಎ ವಿ ಬಾಳಿಗಾರವರು ಮಾತನಾಡುತ್ತಾ ಸ್ವಾತಂತ್ರ್ಯಾನಂತರ ಮೆಡಿಕಲ್ ವಿದ್ಯಾ ವಿಭಾಗದಲ್ಲಿ ಆಶಾದಾಯಕ ಪ್ರಗತಿಯಾಗಿರುವುದೆಂದೂ ಅದರ ಯಶಸ್ಸಿಗೆ ಈ ತೆರನ ಸಂಸ್ಥೆಗಳ ಸಾಹಸ ಪ್ರಯತ್ನ, ಸಾರ್ವಜನಿಕರ ಸಹಕಾರ ಹಾಗೂ ಸ್ವಯಂ ಪ್ರೇರಣೆ ಅತ್ಯಾವಶ್ಯಕವೆಂದೂ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯ ಭಾವನೆಯಿರಕೂಡದೆಂದೂ ಹೇಳಿದರು

ಅಂತ್ಯದಲ್ಲಿ ಶ್ರೀ ಟಿ ಎ ಪೈಗಳು ಧನ್ಯವಾದ ಸಮರ್ಪಿಸುತ್ತಾ ಇದೊಂದು ವ್ಯಾಪಾರಿ ಸಂಸ್ಥೆಯಲ್ಲವೆಂದೂ ಈ ಸಂಸ್ಥೆಗಾಗಿ ಎಕೆಡೆಮಿಯು ವಿಪುಲ ಹಣವನ್ನು ವ್ಯಯಿಸಿರುವುದೆಂದೂ ಸಹಕಾರ ಪದ್ಧತಿಯಿಂದ ಪ್ರಯತ್ನದಿಂದ ನಡೆವ ಈ ಸಂಸ್ಥೆ ದೇಶದ ಆವಶ್ಯಕತೆಯೆಂದು ಹೇಳಿದರು.

**ಶಿಶು ಪಶು-ಕೋಳಿ ಪ್ರದರ್ಶನ**— ಬೆಳ್ತಂಗಡಿಯ ಡಾ ಗಂಗಾಧರ ಶೇಖರರವರ ಅಧ್ಯಕ್ಷತೆಯಲ್ಲಿ ಕಳೆದ ತಾ 13ರಂದು, ಮಿತ್ತಬಾಗಿಲು ಗ್ರಾಮದ ಕೊಲ್ಲಿ ಎಂಬಲ್ಲಿ ಪಂಚಾಯತದ ಆಶ್ರಯದಲ್ಲಿ ಶಿಶು, ಪಶು ಹಾಗೂ ಕೋಳಿಗಳ ಪ್ರದರ್ಶನವೊಂದು ನೆರವೇರಿತು ಡಾ ಬಿ ನಾರಾಯಣ ರಾಯರು ಪ್ರದರ್ಶನವನ್ನು ಉದ್ಘಾಟಿಸಿದರು ಡಾ. ಉಮಾನಾಥ ಪ್ರಭುಗಳು ಬಹುಮಾನ ವಿತರಣೆಗೈದರು.

ಪುತ್ತೂರಿನ ಶ್ರೀ ಬಿ ಕೆ ನಾರ್ಯನಾರಾಯಣ ರಾಯರಿಂದ ಹಾಗೂ ಶ್ರೀ ಜ್ಞಾನಚಂದ್ರರಿಂದ ಭಾಷಣವಾದ ಬಳಿಕ ಶ್ರೀ ಬಿ ಕೆ ವೆಂಕಟಸುಬ್ಬರಾಯರು ಧನ್ಯವಾದ ಸಮರ್ಪಿಸಿದರು

## ರೂರಲ್ ಡಿಸ್ಪೆನ್ಸರಿ ಪ್ರವೇಶ ಸಮಾರಂಭ

**ಕುರುಕಾಲು**— ಈ ಗ್ರಾಮದ ಪಾಜಕಾ ಕ್ಷೇತ್ರ ಪರಿಸರದಲ್ಲಿ ಕುರ್ಕಾಲು ಸೇವಾ ಸಹಕಾರಿ ಸಂಘದ ಕಟ್ಟೋಣದಲ್ಲಿ ತಾರೀಕು 7 4—1963ರಂದು ಲೋಕಲ್ ಫಂಡು ರೂರಲ್ ಡಿಸ್ಪೆನ್ಸರಿಯ ಪ್ರವೇಶ ಸಮಾರಂಭವು ಉಡುಪಿ ತಾಲೂಕು ಬೋರ್ಡು ಪ್ರೆಸಿಡೆಂಟರಾದ ಶ್ರೀ ಯಂ ಮಧ್ವರಾಜ್, ಎಂ ಎಲ ಎ, ರವರ ಅಧ್ಯಕ್ಷತೆಯಲ್ಲಿ ಜರಗಿತು ಡಿಸ್ಪೆನ್ಸರಿಯ ಉದ್ಘಾಟನೆಯನ್ನು ಸಿಂಡಿಕೇಟ್ ಬ್ಯಾಂಕಿನ ಜನರಲ ಮ್ಯಾನೇಜರರಾದ ಶ್ರೀ ಕೆ ಕೆ ಪೈಯವರು ನೆರವೇರಿಸಿದರು

ಕುರ್ಕಾಲು ಸೇವಾ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಕೆ ಗಣಪತಿ ಶೆಟ್ಟಿ ಸ್ವಾಗತ ಭಾಷಣ ಮಾಡುತ್ತಾ [illegible] ಜನತೆಗೆ ವೈದ್ಯಕೀಯ ಸೌಕರ್ಯವನ್ನು ಒದಗಿಸುವರೇ ಮಾಡುತ್ತಿದ್ದ ಅವಿರತ ಪ್ರಯತ್ನವು ಇಂದು, ತಾಲೂಕು ಬೋರ್ಡು ರೂರಲ್ ಡಿಸ್ಪೆನ್ಸರಿ ತೆರೆಯುವುದರ ಮೂಲಕ ಕೈಗೂಡಿದ್ದಕ್ಕಾಗಿ ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರನ್ನ, ಸದಸ್ಯರನ್ನೂ ಅಧಿಕಾರಿಗಳನ್ನು ಅಭಿನಂದಿಸಿ ಭಾಷಣಗೈದರು

ತರುವಾಯ ಶ್ರೀ ಕೆ ಕೆ ಪೈಯವರು ಈ ಪವಿತ್ರ ಕ್ಷೇತ್ರದಲ್ಲಿ ಅವತರಿಸಿದ ಶ್ರೀ ಮಧ್ವಾಚಾರ್ಯರ ಆದೇಶ [illegible] ಪ್ರಭಾವದಿಂದ ಈ ಕಾರ್ಯವು ಅಭಿವೃದ್ಧಿಗೊಳ್ಳುವುದೆಂದರು ಬಳಿಕ ಡಾ [illegible] ಶ್ರೀ ದೇವೇಂದ್ರ [illegible] ಅನಂತಕೃಷ್ಣ [illegible] ಡಿಸ್ಪೆನ್ಸರಿಯ ಡಾಕ್ಟರ್ [illegible] ಕೃಷ್ಣ [illegible] ಅವಶ್ಯಕತೆ [illegible] ಉತ್ತರೋತ್ತರ ಅಭಿವೃದ್ಧಿ [illegible] ಹಾರೈಸಿ ಭಾಷಣಗೈದರು

ನಂತರ ಅಧ್ಯಕ್ಷರು ಈ ರೂರಲ್ ಡಿಸ್ಪೆನ್ಸರಿಯು ಹೊಸದಾಗಿ [illegible] ಆಸ್ಪತ್ರೆಗಳು ಪ್ರಾರಂಭವಾದ [illegible] ಈ ಗ್ರಾಮಸ್ಥರ ಅಪೇಕ್ಷೆ [illegible] ಗ್ರಾಮದ [illegible] ಕ್ಷೇತ್ರ [illegible] ಸ್ಥಳೀಯ [illegible] ಅಭಿವೃದ್ಧಿ [illegible] ಅದನ್ನು [illegible] ಫಂಡು ಆಸ್ಪತ್ರೆಯಾಗಿ [illegible] ಮುಂದಿನ [illegible] ಈ ಪಾಜಕಾ ಕ್ಷೇತ್ರ [illegible] ಪರಿಸರ ಸುಗಮವಾದ ಭಾಷಣಗೈದರು

ಕೊನೆಗೆ ಕುರ್ಕಾಲು ಪಂಚಾಯತಿ [illegible] ದಿನ ಪ್ರೆಸಿಡೆಂಟ್ ಶ್ರೀ ಕೆ [illegible] ಸಿಂಹ [illegible] ರು ಧನ್ಯವಾದಗಳನ್ನರ್ಪಿಸಿದರು

**ಭಡ್ತಿ**— ಎಲ್ ಐ ಸಿ ಯ ಉಡುಪಿಯ ಡಿವಿಜನಿನ ಅತ್ಯಗ್ರ [illegible] ಅಧಿಕಾರಿಯಾಗಿದ್ದ ಶ್ರೀ ಎಸ್ [illegible] ಯವರು ಅಸಿಸ್ಟೆಂಟ್ [illegible] ಮೆನೇಜರರಾಗಿ (ಡೆವಲಪ್‌ಮೆಂಟ್) ಭಡ್ತಿ ಹೊಂದಿ ಉಡುಪಿ ಶಾಖೆಯಲ್ಲಿ ಮುಂದುವರಿಯುವರೆಂದು ತಿಳಿದು ಬರುತ್ತದೆ

**ಯಕ್ಷಗಾನ ಕೂಟ**— ಉಡುಪಿ ಯಕ್ಷಗಾನ ಕಲಾಕ್ಷೇತ್ರದ ಕಲಾವಿದರು ತಾ. 14ರಂದು [illegible] ಗದಾಯುದ್ಧ ಪ್ರಯುಕ್ತ ತಮ್ಮ ಕಾರ್ಯಾಲಯದಲ್ಲಿ ರುಕ್ಮಾಂಗದ ಕಲ್ಯಾಣ ಎಂಬ ಯಕ್ಷಗಾನ ಕೂಟವನ್ನು ಶ್ರೀ ಅಮ್ಮಾಜಿ ಮುತಾಲಿಕ [illegible] ಸಾನ್ನಿಧ್ಯದಲ್ಲಿ [illegible] ಶ್ರೀ ಯು ಗೋಪಾಲಕೃಷ್ಣ ಮಲ್ಯರು ಸಂದರ್ಭ ಸಲ್ಲಿಸಿದರು

**ಪ್ರಾದೇಶಿಕ ಆಯುರ್ವೇದ ಸಮ್ಮೇಲನ**— ಇದೇ ತಾ 20 ಮತ್ತು 21ಕ್ಕೆ ಮಂಗಳೂರಿನ [illegible] ನಗರದ ಹೈಸ್ಕೂಲಿನ [illegible] ಶ್ರೀನಿವಾಸ ಮಲ್ಯ ಮಂಟಪದಲ್ಲಿ [illegible] ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನ ಮತ್ತು ವಸ್ತು ಪ್ರದರ್ಶನಗಳು [illegible] ಶ್ರೀ ಡಾ| ಎಂ [illegible] ಅಧ್ಯಕ್ಷತೆ ವಹಿಸುವರು [illegible] ಸಭಾಧ್ಯಕ್ಷ ಶ್ರೀ ಬಿ. [illegible] ಬಾಳಿಗರು ಸಮ್ಮೇಲನವನ್ನು ಉದ್ಘಾಟಿಸುವರು.

**ವಿದೇಶ ಪ್ರಯಾಣ**— ಉಡುಪಿಯಲ್ಲಿ ಇದೇ ತಾ. 30ಕ್ಕೆ [illegible] 12ನೇ [illegible] [illegible] ತಾ. 11ರಂದ [illegible]

(ಜಗದೀಶ ಕವಿಯಿಂದ)

[illegible] ತ್ರಿಯಿಂದ [illegible] ಕವಿತೆ ಮತ್ತು [illegible] ಶ್ರೀ [illegible] ಇತ್ತ [illegible]

ವಿಜಯಾನಂದ

[illegible] ಮಂತ್ರಿ [illegible] ಅಮೇರಿಕೆಯಲ್ಲಿ [illegible] ಲೋಕಸಭೆಯ ತಜ್ಞರೂ ಸರಕಾರವನ್ನು ಟೀಕಿಸಿದರು. ದೇಶದಲ್ಲೂ ಹೊರಗಿಡಕದ [illegible] ಸಂಗತಿಗಳನ್ನು ಅಮೇರಿಕೆಯಲ್ಲಿ ಬಹಿರಂಗಪಡಿಸಿದರೆಂಬುದೇ ಅವರ ಮೇಲಿನ ಆಪಾದನೆ ಪಟ್ನಾಯಕರು ಅನುಚಿತವಾದ ದನ್ನೇನೂ ಮಾಡಿರಲಾರರು, ವ್ಯವಹಾರದ ನಡಾವಳಿ ಅವರು ತಿಳಿದುಕೊಂಡು ದು ಸಾಲದಿರಬಹುದು, ಆದರೆ, ಅಮೇರಿಕನ್ ಸಂಪರ್ಕದಿಂದಾಗಿ ಭಾರತಕ್ಕೆ ಮಾತ್ರ ಲಾಭವಾಗಿದೆ ಎಂಬುದು ನಿರ್ವಿವಾದ ಎಲ್ಲಿ ಹೇಗೆ ವರ್ತಿಸಬೇಕು ಎಂದು ಪಟ್ನಾಯಕರು ಇನ್ನು ಮುಂದೆ ಚೆನ್ನಾಗಿ ತಿಳಿದುಕೊಳ್ಳುವುದು ಅವಶ್ಯವೆನಿಸಿದೆ, ಅವರಿಂದು ಆಯಿತು ಭಾರತದ ಪ್ರತಿನಿಧಿಗಳ


## ಟೆಂಡರ್ ನೋಟೀಸು

ಯು ಬಿ ಯಂ ಸಿ ಐ ಟ್ರಸ್ಟ್ ಎಸೋಸಿಯೇಶನಿನ ಕೆಳಗೆ ವಿವರಿಸಿದ ಸ್ಥಳವನ್ನು ವ್ಯಾಪಾರ ಯಾ ಕೃಷಿ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವ ಬಗ್ಗೆ 3 ವರ್ಷದ ಮ್ಯಾದೆಗೇಣಿಗೆ ಟೆಂಡರ್ ಮೂಲಕ ಕೊಡಲು ನಿಶ್ಚಯಿಸಲಾಗಿದೆ ಇಷ್ಟವುಳ್ಳವರು ತಾವು ಕೊಡಲಿಕ್ಕೆ ಸಿದ್ಧವಿರುವ ತಿಂಗಳೊಂದರ ಬಾಡಿಗೆ ದರವನ್ನು ಅವರವರ ಟೆಂಡರುಗಳಲ್ಲಿ ನಮೂದಿಸಿ ಮುದ್ರೆ (Seal) ಹಾಕಿದ ಲಕೋಟೆಗಳಲ್ಲಿ ಹಾಕಿ ಕೆಳಗೆ ಸಹಿ ಹಾಕಿದವರಿಗೆ ತಾರೀಕು 26—4—1963ರ ಸಂಜೆ 5 ಗಂಟೆಯೊಳಗೆ ತಲ್ಪುವಂತೆ ರವಾನಿಸುವುದು ಗೇಣಿದಾರರು ಈ ಬಾಗದಲ್ಲಿ ರೂಪಾಯಿ 30,000/ ರಷ್ಟು ಕೃಷಿ ಮಾಡುವರೆ ಗೇಣಿಚೀಟಿನ ಮುಖಾಂತರ ಕೊಡಲಾಗುವುದು ಟೆಂಡರುಗಳ ಫಲಿತಾಂಶವನ್ನು ಬಲ್ಮಠದಲ್ಲಿರುವ ಯು ಬಿ ಯಂ ಟ್ರಸ್ಟ್ ಆಫೀಸಿನ ನೋಟೀಸು ಬೋರ್ಡಿನಲ್ಲಿ ತಾ 30—4 1963ರ ಸಂಜೆ 5 ಗಂಟೆಗೆ ಪ್ರಕಟಿಸಲಾಗುವುದು

ಯಾವುದಾದರೊಂದು ಟೆಂಡರನ್ನು ಕಾರಣ ಕೊಡದೆ ತಿರಸ್ಕರಿಸುವ ಅಧಿಕಾರವನ್ನು ಯು ಬಿ ಯಂ ಸಿ ಐ ಟ್ರಸ್ಟಿನ ಜಿಲ್ಲಾ ಸಬ್ ಕಮಿಟಿಯವರು ಇಟ್ಟುಕೊಂಡಿರುತ್ತಾರೆ

ಸ್ಥಳದ ವಿವರ

76 ಬಡಗಬೆಟ್ಟು ಗ್ರಾಮದ ಸರ್ವೆ ನಂಬ್ರ 83—7 & 8ರ ಅಂಶಗಳು ಕಾಯಿದ ಕಟ್ಟು ಕಡಿಮೆ 30 ಸೆಂಟ್ಸ್ ವಿಸ್ತೀರ್ಣದ ಮು

ಗಡಿಗಳ ಬದಿಗು— ಶ್ರೀಮತಿ ಪಿಲ್‌ಫ್ರೀದ್ [illegible] ಅನುಭೋಗದ ಸ್ಥಳ

ಮೂಡು— ರುದ್ರಿ ಆನಂದ ಇವರ ಸ್ವಾಧೀನವಿರುವ ಕೆರೆ ಮತ್ತು ಬೆಟ್ಟುಗದ್ದೆ

ತೆಂಕು— ಶ್ರೀ ಎಲ್ಯಾಸ ಆನಂದರ [illegible] ಇರುವ ಬಾಲಿಗೆ ಸ್ಥಳ ಪಡು ಕರಾವಳಿ ರಸ್ತೆ

(Sd) George E Aiman, Convener,
U B M C I Trust Sub Committee,
South Kanara

Mangalore—1
10—4—1963



# ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

## ಎಕೌಂಟ್ ಪುಸ್ತಕಗಳು, ಶಾಲಾ ರಿಜಿಸ್ಟ್ರಗಳು, ಫಾರ್ಮುಗಳು

ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ

### ನದೀನೀರ ಹಂಚಿಕೆಯಲ್ಲಿ

# ಕರ್ನಾಟಕಕ್ಕಾದ ಅನ್ಯಾಯ ಅನಿವಾರ್ಯವೆ?

ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರ ಹಂಚಿಕೆಯಲ್ಲಿ ಕೇಂದ್ರವು ತಳೆದ ನೀತಿಯ ಬಗ್ಗೆ ಆಂಧ್ರವನ್ನುಳಿದು ಎಲ್ಲ ರಾಜ್ಯಗಳೂ ಅಸಮಾಧಾನಗೊಂಡಿರುವುದರಿಂದ, ಕೇಂದ್ರವು ತನ್ನ ಹಂಚಿಕೆಯನ್ನು ಈಗ ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದೆ. ಅಣ್ಣತಮ್ಮಂದಿರು ಒಂದು ದನವನ್ನು ಹಂಚಿ ಮಾಡಿಕೊಳ್ಳಬೇಕಾಗಿತ್ತಂತೆ. ಹುಚ್ಚು ಮಾನಸೀಪರು ದನವು ತಂಗಿಗೆ ಸೇರಬೇಕಾದುದು ಎಂದು ತೀರ್ಪ ಇತ್ತರಂತೆ. ಕೇಂದ್ರದ ನಿರ್ಣಯವಾದರೂ ಇದಕ್ಕಿಂತ ಹೆಚ್ಚು ದೂರವಿಲ್ಲ. ಆದರೆ, ಈಗ ತಾನು ಘೋಷಿಸಿದ ನಿರ್ಣಯವು ಕೇವಲ ತಾತ್ಕಾಲಿಕವಾದದೆಂದೂ ಈ ಸಂಬಂಧದ ಮಾಸ್ಟರ್ ಯೋಜನೆ ಸಿದ್ಧವಾದಾಗ ಎಲ್ಲವೂ ಸರಿಹೊಂದುವುದೆಂದೂ ಕೇಂದ್ರದ ವಕ್ತಾರನೊಬ್ಬನ ಅಭಿಪ್ರಾಯ. ಅಷ್ಟು ಮಾತ್ರವಲ್ಲದೆ, ಸಂತುಷ್ಟ ರಾಜ್ಯಗಳು ನೀರ ವಿಭಜನೆಯಲ್ಲಿ ಹೊಸ ಯೋಜನೆಗಳನ್ನು ಮುಂದಿಟ್ಟಲ್ಲಿ ಅವನ್ನು ಪರಿಶೀಲಿಸುವ ಆಶ್ವಾಸನೆಯನ್ನೂ ಅವನು ನೀಡಿದ್ದಾನೆ.

ಕೇಂದ್ರವೊಂದು ಬಾರಿ ನಿರ್ಣಯವನ್ನು ಹೊರಗೆಡಹಿದ ಬಳಿಕ, ರಾಜ್ಯ ಸರಕಾರಗಳು ಯಾವ ಯೋಜನೆಯನ್ನಾದರೂ ಮುಂದಿಟ್ಟಲ್ಲಿ ಅದು ವ್ಯರ್ಥವೇ ಆಗುವುದು. ಎಲ್ಲರನ್ನೂ ಸಮಾಧಾನಪಡಿಸಲು ಪರಬ್ರಹ್ಮನಿಗೂ ಸಾಧ್ಯವಿರುವುದಿಲ್ಲವೆನ್ನುವಾಗ ಇಂತಹ ಯೋಜನಾ ಮಂಡನೆಯಿಂದ ರಾಜ್ಯರಾಜ್ಯಗಳ ನಡುವೆ ಭಿನ್ನತೆಯ ಬೀಜಾಂಕುರವೊಡೆಯುವುದೇ ಅಧಿಕ ಸಾಧ್ಯ. ಘೋಷಣೆಗೆ ಮೊದಲೇ ಒಂದು ಒಡಂಬಡಿಕೆಯನ್ನು ತಾವಾಗಿಯಾಗಲೀ, ಕೇಂದ್ರದ ಸಹಾಯದಿಂದಾಗಲೀ ಮಾಡಿಕೊಳ್ಳಲು ಅಸಮರ್ಥರಾದ ರಾಜ್ಯ ಸರಕಾರಗಳು ತಯಾರಿಸುವ ಯೋಜನೆಯ ಸ್ವರೂಪವೆಂತಿದ್ದೀತೆಂದು ಯಾರಾದರೂ ಊಹಿಸಬಹುದು.

ಕೇಂದ್ರ ಸರಕಾರವು ತನ್ನ ನಿರ್ಣಯವನ್ನು ಹೀಗೆ ಸಮರ್ಥಿಸಿಕೊಳ್ಳುತ್ತಿದೆ: ೧೯೫೧ರ ಒಡಂಬಡಿಕೆಗೆ ಮೊದಲು ಮಹಾರಾಷ್ಟ್ರಕ್ಕೆ ೪೩ ಟಿ ಎಂ ಸಿ ನೀರು ದೊರೆಯುತ್ತಿತ್ತು. ಅನಂತರ ೨೧ ಟಿ ಎಂ ಸಿ ಯಷ್ಟು ಮಾತ್ರ ಅದು ಉಪಯೋಗಿಸುತ್ತಿತ್ತು. ನಮ್ಮ ನಿರ್ಣಯದಂತೆ ಅದಕ್ಕೆ ಈಗ ೧೦೪ ಟಿ ಎಂ ಸಿ ಯಷ್ಟು ನೀರು ದೊರೆಯುವುದು. ಮಾಸ್ಟರ್ ಯೋಜನೆಯು ಸಿದ್ಧವಾದಾಗ ಅದಕ್ಕೆ ೪೦೦ ಟಿ ಎಂ ಸಿ ನೀರು ಗೋದಾವರಿ ನದಿಯಿಂದ ಪೂರೈಸಲ್ಪಡುವುದು. ಕರ್ನಾಟಕ ಸರಕಾರವು ಕಾಳಿ ನದಿಯ ನೀರನ್ನು ವಿದ್ಯುದುತ್ಪಾದನೆಗೆಂದು ಮಹಾರಾಷ್ಟ್ರಕ್ಕೆ ನೀಡಲು ಒಪ್ಪಿದೆ. ಮಾಸ್ಟರ ಯೋಜನೆಯು ವ್ಯವಸ್ಥಿತವಾಗುವಾಗ, ಕೃಷ್ಣಾನದೀ ನೀರನ್ನಾದರೂ ಪಶ್ಚಿಮಕ್ಕೆ ತಿರುಗಿಸುವ ಕುರಿತು ಪರಿಶೀಲಿಸುವುದು ಸಾಧ್ಯವಾಗುವುದು — ಹೀಗಿರುವಾಗ ಮಹಾರಾಷ್ಟ್ರ ಸರಕಾರಕ್ಕೆ ಯಾವ ಅನ್ಯಾಯವೂ ಆಗಿಲ್ಲ, ಲಾಭವೇ ಆಗಿದೆ, ಮತ್ತೇಕೆ ಅಳುವುದೇಕೆ?

ಆಂಧ್ರ ರಾಜ್ಯವು ಶ್ರೀ ಶೈಲಮ್, ನಾಗಾರ್ಜುನಸಾಗರ ಮತ್ತಿತರ ಮಹತ್ವದ ಯೋಜನೆಗಳನ್ನು ಕೈಗೊಂಡಿದೆ. ಇದಕ್ಕಾಗಿ ಸುಮಾರು ೭೫೦ ಟಿ ಎಂ. ಸಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡುವ ವಾಗ್ದಾನವನ್ನು ಕೇಂದ್ರವು ಹಿಂದೆಯೇ ಮಾಡಿದೆ. ಈಗ ಅದಕ್ಕೆ ಒಟ್ಟು ೮೦೦ ಟಿ ಎಂ. ಸಿ ನೀರನ್ನು ಕೊಡಮಾಡಿದೆಯೇನೋ ನಿಜ. ಇದರಲ್ಲಿ ವಾಗ್ದಾನದ ನೀರು ಕೂಡ ಸೇರಿದೆಯೆಂಬುದನ್ನು ಗಮನಿಸಬೇಕು. ಒಂದು ಬಾರಿ ವಾಗ್ದಾನ ಮಾಡಿ ಈಗ ಯೋಜನೆಗಳನ್ನು ಬಿಟ್ಟುಕೊಡಿರೆಂದು ಹೇಳುವುದು ಅನ್ಯಾಯವಾಗುವುದು. ಆದುದರಿಂದ ಆಂಧ್ರಕ್ಕೆ ನೀಡಿದ ನೀರಿನ ಪ್ರಮಾಣ ನ್ಯಾಯೋಚಿತವಾದುದು; ಅನಿವಾರ್ಯವೆನಿಸಿದುದು.

ಇನ್ನು ಕರ್ನಾಟಕದ ಸಂಗತಿ. ಕರ್ನಾಟಕವು ನಿರ್ಣಯದಲ್ಲಿ ಹೇಳುವುದಕ್ಕಿಂತ ಸುಮಾರು ೨೦೦ ಟಿ. ಎಂ ಸಿ ನೀರನ್ನು ಹೆಚ್ಚಾಗಿ ಕೇಳುತ್ತದೆ (ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲವಾದರೂ ಅದು ಅಷ್ಟು ನೀರನ್ನು ಉಪಯೋಗಿಸಿಕೊಳ್ಳಲಾರದ) ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ಸರಕಾರವು ನೀರಾವರಿ ಕಾರ್ಯಕ್ರಮಗಳಿಗೆ ಮೀಸಲಾಗಿರಿಸಿದ ಹಣ ಕೇವಲ ರೂ ೪೧ ಕೋಟಿ. ಒಂದು ಟಿ. ಎಂ ಸಿ ನೀರನ್ನು ಬಳಸಿಕೊಳ್ಳಲು ಸುಮಾರು ರೂ ೫೦ ಲಕ್ಷ ಬೇಕಾಗುವುದು. ಇದು ವರೆಗೆ ಈ ರಾಜ್ಯವು ೩೦೦ ಟಿ ಎಂ. ಸಿ.ಯಷ್ಟು ನೀರನ್ನು ಮಾತ್ರ ಬಳಸಿಕೊಂಡಿದೆ. ಹಾಗಿರುವಾಗ ಅಧಿಕ ನೀರನ್ನು ಉಪಯೋಗಿಸಿಕೊಳ್ಳುವ ಶಕ್ತಿಯೇ ಇಲ್ಲದ ಕರ್ನಾಟಕಕ್ಕೆ ಹೆಚ್ಚು ನೀರಾದರೂ ಈಗ ಬೇಕೇಕೆ? ಗೋದಾವರೀ ನದಿಯಿಂದ ೩೦೦ ಟಿ ಎಂ. ಸಿ ನೀರನ್ನು ಬಳಸುವ ಯೋಜನೆಗಳನ್ನದು ರೂಪಿಸಬಹುದು. ಹೀಗಾಗಿ ೧೯೭೫ರ ವರೆಗೆ ಕರ್ನಾಟಕಕ್ಕೆ ಬೇಕಾಗುವಷ್ಟು ನೀರು ನಮ್ಮ ನಿರ್ಣಯದಿಂದ ದೊರೆಯುವುದು. ೪೦೦ ಟಿ ಎಂ ಸಿ ನೀರು ಕೇಳುವ ಕರ್ನಾಟಕ ಸರಕಾರವು ನೀರಾವರಿಗೆಂದು ಸುಮಾರು ೪೦೦ ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ೪೧ ಹಿಡಿದುಕೊಂಡು ೪೦೦ರ ಯೋಚನೆಯೇಕೆ?

ಕೇಂದ್ರದ ವಾದಸರಣಿ ಯುಕ್ತಿಯುಕ್ತವಾದುದು. ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡುವ ಮುಖ್ಯ ಮಂತ್ರಿಗಳು ಯಾವ ರಾಜ್ಯದಲ್ಲಿದ್ದಾರೆ?

---

## ನಾಗ ಪೂಜೆಯ ಪೂರ್ವೋತ್ತರ

(೫ನೇ ಪುಟದಿಂದ)

ದ್ವಾರೆ ವೈದಿಕ ಯುಗದಲ್ಲೇ ಅನಾರ್ಯರಾದ ನಾಗ ಜನರಿದ್ದು ಅವರನ್ನು ಆರ್ಯರು ಸೆಣಸಿ ಗೆದ್ದ ವೃತ್ತಾಂತ ವೃತ್ತಾಸುರ ವಧೆಯಲ್ಲಿ ಸೂಚಿತವಾಗಿದೆ. ವೃತ್ರನನ್ನು ಗೆದ್ದ ವೈದಿಕ ಇಂದ್ರ ಮುಂದೆ ಪೌರಾಣಿಕ ಯುಗದಲ್ಲಿ ಕಾಲಿಯ ನಾಗನನ್ನು ದಮನ ಮಾಡಿದ ಕೃಷ್ಣನಾಗುತ್ತಾನೆ. ವಿಷ್ಣು ಪುರಾಣದಲ್ಲಿ ಬರುವ ಕಥೆ ಎಲ್ಲರಿಗೂ ತಿಳಿದಿದೆಯಷ್ಟೆ. ಕಾಶ್ಯಪನ ಪತ್ನಿಯಬ್ಬ ಹೆಂಡತಿಯಾದ ವಿನತೆಯಲ್ಲಿ ಹುಟ್ಟಿದ ಗರುಡ ಹಾವಿನ ವಂಶದ ಕಡು ವೈರಿಯೆಂದು ಕಲ್ಪನೆ. ಗರುಡ ಆರ್ಯದೇವತೆಯಾದ ವಿಷ್ಣುವಿನ ವಾಹನ. ಅಂತೂ ಕಾಲಕ್ರಮದಲ್ಲಿ ಎರಡೂ ಜನಾಂಗಗಳ ನಡುವೆ ವೈಮನಸ್ಯ ಮರೆಯಾಗಿ ಸಾಮರಸ್ಯ ಒದಗಿದಾಗ ನಾಗ ಸಂಬಂಧವಾದ ಕಲ್ಪನೆಗಳು ಆರ್ಯಧರ್ಮದಲ್ಲಿ ಅಂಗೀಕೃತವಾದುವು.

ಯೋಗಶಾಸ್ತ್ರದಲ್ಲಿಯೂ ನಾಗಕಲ್ಪನೆಯ ಆವೇಶವಿದೆ. ಮನುಷ್ಯನ ಸತ್ವಸ್ವರೂಪವಾದ ಶಕ್ತಿಯನ್ನು ಸರ್ಪದಂತೆ ಚಿತ್ರಿಸಿ, ಅದನ್ನು ಪ್ರಸುಪ್ತಾವಸ್ಥೆಯಿಂದ ಜಾಗ್ರದವಸ್ಥೆಗೆ ಉದ್ಬೋಧನ ಮಾಡುವ ವಿಧಾನವನ್ನು ಕುಂಡಲಿ ನಿಯೋಗದಲ್ಲಿ ಹೇಳುತ್ತಾರೆ. ಕುಂಡಲಿನಿಯೆಂದರೆ ಕುಂಡಲದಂತೆ ಸುತ್ತಿಕೊಂಡಿರುವುದೆಂದರ್ಥ. ಮೂಲಾಧಾರ ಚಕ್ರದಲ್ಲಿ ಸ್ವಯಂಭೂ ಲಿಂಗವನ್ನು ಸುತ್ತಿಕೊಂಡು ಮಲಗಿರುವ ಈ ಶಕ್ತಿಗೆ 'ಭುಜಂಗಿ' (ಹಾವಿನ ಸ್ತ್ರೀಲಿಂಗ) ಎನ್ನುತ್ತಾರೆ. ಯೋಗವಿಧಿಯಿಂದ ಈ ಮಲಗಿದ ಹಾವನ್ನು ಎಬ್ಬಿಸಿದರೆ ಅದು ಶಕ್ತಿಯಾಗಿ ಹೆಡೆಯೆತ್ತಿ ಆರೂ ಚಕ್ರಗಳನ್ನು ಶೋಧಿಸಿ, ಭೇದಿಸಿ ಮೇಲೆ ಮೇಲೆ ಹೋಗಿ ಸಹಸ್ರಾರ ಚಕ್ರದಲ್ಲಿರುವ ಶತದಲ ಪದ್ಮವನ್ನು ಮುಟ್ಟಿ ಅಲ್ಲಿ ಶಿವನೊಂದಿಗೆ ಬೆರೆಯುತ್ತದೆ. ಈ ವಿಧಿಗೆ ಸರ್ಪವಿದ್ಯೆಯೆಂಬ ಹೆಸರುಂಟು. ಥಿಯಾಸಫಿಸ್ಟರು ಈ ಶಕ್ತಿಯನ್ನು Serpent-Fire (ಸರ್ಪಜ್ವಾಲೆ) ಎಂದು ಕರೆಯುತ್ತಾರೆ. ಅವರ ಲಾಂಛನ ಚಕ್ರದಲ್ಲಿ ಸರ್ಪವೊಂದು ಸಂಪೂರ್ಣ ವೃತ್ತವಾಗಿ ಚಿತ್ರಿತವಾಗಿರುತ್ತದೆ. ರಾಮಕೃಷ್ಣ ಸಂಘದವರು ಕೂಡ ವೃತ್ತಾಕಾರದ ಉತ್ಥಿತ ಫಣೆಯ ಹಾವನ್ನೇ ಜಾಗ್ರತವಾದ ಕುಂಡಲಿನಿಯ ಸಂಕೇತವಾಗಿ ತಮ್ಮ ಸಂಸ್ಥೆಯ ಲಾಂಛನದಲ್ಲಿ ಬಳಸಿಕೊಂಡಿದ್ದಾರೆ. ಇವು ಆಧ್ಯಾತ್ಮಿಕ ಪ್ರತೀಕಗಳು.

ಶಿವನನ್ನು ಗೋಪನ ಮಾಡಿಟ್ಟುಕೊಂಡಿರುವ ಶಕ್ತಿಯನ್ನು ಲಿಂಗವನ್ನು ಸುತ್ತಿರುವ ಸರ್ಪದಂತೆ ಸಂಕೇತ ಮಾಡಿದ್ದಾರೆ. ಗುಪ್ತ ಧನವನ್ನು ಪಾಲನೆ ಮಾಡಲು ಸರ್ಪಗಳಿರುತ್ತವೆಯೆಂಬುದೂ ನಮ್ಮ ಪ್ರಚಲಿತ ಕಲ್ಪನೆಯಷ್ಟೆ. ಸರ್ಪದ ಹೆಡೆಯಲ್ಲಿ ಮಣಿಯಿರುತ್ತದೆಯೆಂಬುದು ಇನ್ನೊಂದು ಕಲ್ಪನೆ. ಮಣಿಯೆಂದರೆ ಸಾಂಕೇತಿಕವಾಗಿ ಯೋಗ ಸಾಮರ್ಥ್ಯ—ವಿಶ್ವಜನನ ವ್ಯಾಪಾರಬದ್ಧಳಾದ ಕುಂಡಲಿನೀ ಶಕ್ತಿಯ ಸಾಮರ್ಥ್ಯದಿಂದ ಯೋಗಸಿದ್ಧಿಗಳು ಒದಗುತ್ತವೆಂದು ತಾಂತ್ರಿಕರ ಮತ.

ಬಸವಣ್ಣನವರು ಹೇಳಿದಂತೆ, ಕಲ್ಲನಾಗರ ಕಂಡರೆ ಹಾಲೆರೆದು, ನಿಜವಾದ ನಾಗರ ಕಂಡರೆ ಕೊಲ್ಲೆತ್ತಿಕೊಳ್ಳುತ್ತೇವೆ, ನಿಜ. ಆದರೆ ನಮ್ಮ ದೇಶದ ಹಲವು ಪ್ರದೇಶಗಳಲ್ಲಿ ತತ್ರಾಪಿ ಮಲೆನಾಡಿನಲ್ಲಿ ಮನೆಮನೆಗಳಲ್ಲಿ ಹಾವುಗಳು ನಿಶ್ಚಿಂತೆಯಿಂದ ಹರಿದಾಡುತ್ತಿರುತ್ತವೆ, ಜನಗಳೂ ನಿರ್ಭೀತಿಯಿಂದ ಓಡಿಯಾಡುತ್ತಾರೆ. ಭಯವಿಲ್ಲದೆಡೆ ಯಾವ ಪ್ರಾಣಿಯೂ ಭಯಾನಕವಾಗುವುದಿಲ್ಲ. ಹೀಗೆ ದುಷ್ಟ ಜೀವಿಯೊಂದಿಗೆ ಮನುಷ್ಯರು ಸಹಬಾಳ್ವೆ ನಡೆಸುವ ಕೌತುಕ ನಮ್ಮ ದೇಶದಲ್ಲಿ ಅದ್ಭುತವೆನಿಸುವುದಿಲ್ಲ. ನಮ್ಮ ದೇಶದಲ್ಲಿರುವಷ್ಟು ಹಾವಿನ ವೈವಿಧ್ಯ ಮತ್ತಾವ ದೇಶದಲ್ಲೂ ಇಲ್ಲ; ನಮ್ಮ ಹಾವುಗಳಿಗೆ ವಿಷದ ತೀಕ್ಷ್ಣತೆಯೂ ಹೆಚ್ಚು. ಈ ಹಿನ್ನೆಲೆಯಲ್ಲಿ ನಾವು ಹಾವಿಗೆ ಕಟ್ಟಿರುವ ಹಚ್ಚಳವನ್ನು ವಿಶ್ಲೇಷಣ ಮಾಡಬೇಕು.

— ಶ್ರೀ ಎಸ್. ಕೆ ರಾಮಚಂದ್ರ ರಾವ್

(ಸೌಜನ್ಯ: ಆಕಾಶವಾಣಿ–ಬೆಂಗಳೂರು.)

---

## ಅಪಪ್ರಚಾರದ ಅಪೂರ್ವ ದರ್ಶನ

(೧ನೇ ಪುಟದಿಂದ)

ದು ಉಲ್ಲೇಖಿಸುವುದು ಸಂಪ್ರದಾಯ. ಸಾಮ್ರಾಜ್ಯವಾದಿ ಚೀನಾವು ಈ ಪರಂಪರೆಯನ್ನು ಬಿಟ್ಟುಕೊಡುವುದು ಸಾಧ್ಯವೆ?

**ಭಾರತಕ್ಕೆ ಬೆದರಿಕೆ**

'ಭಾರತ-ಚೀನಾಗಳ ನಡುವಣ ಗಡಿ ತಂಟೆಯನ್ನು ಮಾತುಕತೆಗಳಿಂದ ಪರಿಹರಿಸಲು ಚೀನವು ಸಿದ್ಧವಿದೆ; ಆದರೆ, ಭಾರತಕ್ಕೆ ಈ ಇಚ್ಛೆಯಿರುವುದಿಲ್ಲ. ನಾವು ಕಾಯಲು ಸಿದ್ಧರಿದ್ದೇವೆ, ಆದರೆ, ಭಾರತವು ಕಾದು ನೋಡಲು ತಯಾರಿಲ್ಲ. ಸಂಧಾನ ವಿಧಾನವನ್ನು ಮುಂದ ಮರೆಸಲು ಉತ್ಸುಕತೆ ತೋರಿಸಿ, ಮುಂದುವರಿದರೆ, ಪರಿಸ್ಥಿತಿಯು ಪ್ರಕೋಪಕ್ಕೇರಲಾರದು. ಆದರೆ, ಭಾರತವು, ಚೀನಾವು ತೆರವು ಮಾಡಿದ ಪ್ರದೇಶಗಳನ್ನು ಹಿಡಿದುಕೊಳ್ಳಲು ತನ್ನ ಸೇನಾಪಡೆಗಳನ್ನು ಕಳಿಸಿದರೆ ಮತ್ತು ಹಿಂದ ಸರಿಯಲು ಕೊಲಂಬೊ ಪರಿಷತ್ತಿನ ಸಲಹೆಗಳನ್ನು ದುರ್ಲಕ್ಷಿಸಿದರೆ, ಪರಿಸ್ಥಿತಿಯು ಖಂಡಿತವಾಗಿಯೂ ಹದಗೆಡುವುದು. ಏಕೆಂದರೆ, ಆತ್ಮರಕ್ಷಣೆಯ ತನ ಅಧಿಕಾರವನ್ನು ಚೀನವೆಂದಿಗೂ ಬಿಟ್ಟುಕೊಡಲಾರದು'— ಇದು ಲಾಯಿಯವರ ಬೆದರಿಕೆಯಲ್ಲದೆ ಮತ್ತೇನು?

**ಉಪಸಂಹಾರ**

ಭಾರತದ ನೆಲದ ಮೇಲೆ ಆಕ್ರಮಣ ಮಾಡಿದುದು ಚೀನ, ಇದನ್ನು ಎಮರಿಸಲು ಭಾರತ ಮಾತ್ರವಲ್ಲ, ಸೀಟೋ ಶಕ್ತಿಕೂಟದ ದೇಶಗಳೇ ಸಿದ್ಧವಾಗುವಂತಿವೆ. ಚೀನದ ಆಕ್ರಮಣದಿಂದ ಏಶ್ಯವನ್ನುಳಿಸಬೇಕೆಂದು ಸೀಟೊ ರಾಷ್ಟ್ರಗಳ ಪರಿಷತ್ತಿನಲ್ಲಿ ಲಾಯಿಯವರ ಪ್ರಾಣಮಿತ್ರ (ಸದ್ಯದ) ಪಾಕಿಸ್ತಾನವೂ ವಾದಿಸಿದೆ, ಆದುದರಿಂದ ಇಂದು ಆತ್ಮರಕ್ಷಣೆ ಮಾಡಿಕೊಳ್ಳಬೇಕಾದವರು ಚೀನೀಯರೇ ಅಥವಾ ಭಾರತೀಯರೇ ಎಂದು ಜಗತ್ತಿಗೆ ಗೊತ್ತಿದೆ. ಏಕೈಕ ಸಾಮ್ರಾಜ್ಯವಾದಿಯಾಗಿ ಬೆಳೆಯುತ್ತಿರುವವರು ಯಾರೆಂದು ಲೋಕಕ್ಕೆ ತಿಳಿದಿದೆ. ಅನ್ಯಾಯದ ಆಕ್ರಮಣದಿಂದ ದ್ರೋಹ ಬಗೆದ ಅವಿವೇಕಿ ಚೀನಾವೆಂದು ಎಲ್ಲರೂ ಹೇಳುತ್ತಾರೆ. ಹಾಗಿರುವಾಗ, ಟಾಕ್ ವರದಿಗಾರರ ಮುಂದೆ ಲಾಯಿಯವರು ಮಾಡಿದ ಪರ್ ಪ್ರಶಸ್ತಿ ಭಾರತ ನಿಂದೆಗಳು ಅವರು ಅನುಸರಿಸುವ ಭಾರತದ ಬಗ್ಗೆ ಅಪಪ್ರಚಾರದ ಇನ್ನೊಂದು ಮಾದರಿ. ಆದುದರಿಂದ ಈ ಮಾದರಿಯ ಕಪಟದಿಂದ ನಾವು ಎದೆಗೆಡಬಾರದು. ಅಪಪ್ರಚಾರಗಳಿಗೆ ಕಿವಿಗೊಡದೆ, ನಮ್ಮ ಶಕ್ತಿಯನ್ನು ದುರುಪಯೋಗಗೊಳಿಸದೆ, ದೇಶಾಭಿವೃದ್ಧಿ ಮತ್ತು ದೇಶರಕ್ಷಣೆಯ ಮಹಾ ಪವಿತ್ರ ಕಾರ್ಯದಲ್ಲಿ ಮಗ್ನರಾಗೋಣ.

— ಗೋರಾ

# ಕರುಣಾಳು ಬಾ ಬೆಳಕೆ……..

ಕಾಲಿನ ಕಸಕ್ಕೆ ಕಡೆಯಾಗಿ ಗಾಳಿ ಬೀಸಿದತ್ತ ಹಾರಿಹೋಗುವಂತಿದ್ದ ಛಲ, ಬಲ, ನೆಲವಿಲ್ಲದ ಭಾರತೀಯರನ್ನು ಮೇಲೆತ್ತಿ ಛಲದ ಗೌರವವನ್ನು, ಬಲದ ಗುಟ್ಟನ್ನು, ನೆಲದ ಸ್ವಾತಂತ್ರ್ಯವನ್ನು ತಿಳಿಯ ಹೇಳಿದವರು ಬಾಪೂಜಿ.

ಒಬ್ಬರೊಬ್ಬರನ್ನು ತುಳಿದು, ಸ್ವಾರ್ಥತಾಮಸದಲ್ಲಿ ಕಣ್ಣಿದ್ದೂ ಕುರುಡರಂತೆ ಸಂಕೀರ್ಣ ಮಾನಸರಾಗಿ ಸಮಾಜ, ದೇಶ, ಗೌರವಗಳನ್ನು ಸ್ವಾರ್ಥಕ್ಕೆ ಬಲಿ ಕೊಡುತ್ತಿದ್ದವರ ಕಣ್ಣಿನ ಪರ ಇಳಿಸಿ, ಹೃದಯ ವೈಶಾಲ್ಯ ಬೆಳೆಸಿ, ದರಿದ್ರನಲ್ಲಿ ನಾರಾಯಣನನ್ನೂ, ಹೊಲೆಯನಲ್ಲಿ ಹರಿಯ ಜನನನ್ನೂ ತೋರಿಸಿದ ಪರಪುರುಷ ಬಾಪೂಜಿ.

ಗುಲಾಮಗಿರಿಯ ಚಿನ್ನದ ಸಂಕೋಲೆಗಳಾದ ರಾವ್ ಬಹದ್ದೂರ್, ದಿವಾನಬಹದ್ದೂರ್, ಹಾಗ್ ಅಧಿಕಾರಗಳಿಂದ ಬಂಧಿತರಾಗಿ ತಮ್ಮ ಸ್ವಾತಂತ್ರ್ಯದೊಂದಿಗೆ ಚಿಂತನಾಶಕ್ತಿಯನ್ನೂ ಕಳಕೊಂಡು ಆಳುವವರ ಕೈಗೊಂಬೆಗಳಾಗಿ ತಮ್ಮ ದೇಶದಲ್ಲೇ ಪರಕೀಯರಂತೆ ವರ್ತಿಸುತ್ತಾ ಮೈಮರೆತಿದ್ದವರಿಗೆ ತಮ್ಮ ದೇಶ, ತಮ್ಮ ಜನ, ತಮ್ಮ ಹಕ್ಕುಬಾಧ್ಯತೆಗಳ ಪ್ರಜ್ಞೆಯನ್ನು ತಂದು ಚೇತನ ತುಂಬಿದವರು ಬಾಪೂಜಿ.

ಗಾಂಧೀಜಿ ಚಿಂತಿಸಿದ ಚಿಂತನೆ ಭವಿಷ್ಯದ ರಾಜಕೀಯವಾಯಿತು. ಅವರ ಮುಟ್ಟಿದ್ದೆಲ್ಲವೂ ಪವಿತ್ರಗೊಂಡಿತು. ಅವರು ಹೇಳಿದ್ದೆಲ್ಲವೂ ನಿತ್ಯ ಸತ್ಯವಾಯಿತು. ಅವರು ನಿಂತಲ್ಲಿ ತೀರ್ಥಕ್ಷೇತ್ರವಾಯಿತು. ಅವರು ಕರೆಸಿದವರು ಪುನೀತ ಪುಣ್ಯ ಪುರುಷರಾದರು. ಅವರು ಬಯಸಿದ ಬಯಕೆ ಸಫಲವಾಯಿತು. ಜಾದೂಗಾರನಂತೆ ಅವರು ಎಲ್ಲವನ್ನು ನಮ್ಮ ಕಣ್ಣ ಮುಂದೆಯೇ ಮಾಡಿ ತೋರಿಸಿದರು.

## ಈ ಸಾಧನೆಯ ಗುಟ್ಟೇನು?

ಮಹಾತ್ಮರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಂದು ಅದ್ವಿತೀಯ ಶಕ್ತಿಯಾಗಿದ್ದರು. ವ್ಯಕ್ತಿಯು ಸ್ವಾರ್ಥತೆ, ಅಧಿಕಾರಪ್ರಿಯತೆ, ಆಪಟ್ಯ, ದಂಭಾಚಾರ, ಭೋಗಲಾಲಸೆಗಳನ್ನು ತೊರೆದಾಗ ಆತನು ಒಂದು ಶಕ್ತಿಯಾಗಿ ಪರಿಣಮಿಸುತ್ತಾನೆ. ಅಂಥಾ ಶಕ್ತಿರೂಪಿ ಮಾನವನು ನಮ್ಮಂತೆ ಶರೀರಧಾರಿಯಾದರೂ ಸರ್ವರ ಮನದಲ್ಲಿ ಸ್ಥಾನಪಡೆದು, ಸರ್ವರ ಆಕರ್ಷಕ ವಸ್ತುವಾಗಿ ಸರ್ವ ವ್ಯಾಪಿಯಾಗುತ್ತಾನೆ. ಇದೇ ವಿರಾಟ್‌ರೂಪ ದರ್ಶನ. ಇದೇ ವಿಶ್ವಕುಟುಂಬೀ ಜೀವನ. ಅಂಥಾ ಸಾಧನೆ ಬಾಪೂಜಿಯವರದಾಗಿತ್ತು.

ಆದ್ದರಿಂದ ಬಾಪೂ ನೋಡಿದಲ್ಲಿ ಸಹಸ್ರ ಮುಖಗಳು ನೋಡುತ್ತಿದ್ದವು. ಬಾಪು ಕೈಹಾಕಿದಲ್ಲಿ ಕೋಟಿಕೈಗಳು ದುಡಿಯುತ್ತಿದ್ದವು. ಬಾಪು ಹೆಜ್ಜೆ ಹಾಕಿದಲ್ಲಿ ಕೋಟಿ ಕಾಲುಗಳು ಹಿಂಬಾಲಿಸುತ್ತಿದ್ದವು. ಅಂಥಾ ಶಕ್ತಿಶಾಲಿ ಬಾಪುವಿನ ಕೈಯಲ್ಲಿ ಅಹಿಂಸೆ ಮಹಾಹಿಂಸೆಗಿಂಥಾ ಹಿರಿದೆನಿಸಿತು. ಸತ್ಯವೆಂಬುದು ದೇವರ ರೂಪುಪಡೆಯಿತು. ಅವರನ್ನು ಎದುರಿಸಲು ಬ್ರಿಟಿಷ್ ಸಾಮ್ರಾಜ್ಯಕ್ಕೂ ಶಕ್ತಿ ಇಲ್ಲದಾಯಿತು. ಅವರು ಮಾಡಿದ್ದೆಲ್ಲವೂ ಸಾರ್ಥಕಗೊಂಡಿತು.

ಬಾಪೂ ಉಜ್ವಲ ತೋರಿ ಬೆಳಗುತಿದ್ದ ಕೆಂಡದಂತೆ. ಆ ಕೆಂಡದ ಸುತ್ತುಮುತ್ತು ಸುಳಿದವರೆಲ್ಲರೂ ಕೆಂಡದ ಕಾವಿನಿಂದ ಬಿಸಿಗೊಂಡು ತೇಜಪಡೆದು ಅವರೂ ತ್ಯಾಗಿಗಳಾಗಿ, ದೇಶದ ನಮ್ರ ಸೇವಕರಾಗಿ ತ್ಯಾಗ, ಬಲಿದಾನಗಳನ್ನು ಮಾಡಿದರು. ಆ ದಿವ್ಯಜ್ಯೋತಿ ಕೆಂಡವು ನಂದಿ ಹೋದ ನಂತರ ಆ ಕೆಂಡದಿಂದ ಕಾವು ಪಡೆದಿದ್ದ ಎಲ್ಲವೂ ತಣ್ಣಗಾಗಿದೆ. ತೇಜಸ್ಸು ಮಾಯವಾಗಿದೆ. ದೇಶದಲ್ಲಿ ಇಂದು ತೋರಿ ಬರುತ್ತಿರುವ ದುಷ್ಪ್ರಭಾವ ಹಾಗೂ ದುಷ್ಟಶಕ್ತಿಗಳಿಗೆ ಇದೇ ಕಾರಣವಾಗಿದೆ.

"ಕರುಣಾಳು ಬಾ ಬೆಳಕೆ  
ಮುಸುಕಿದೀ ಮಬ್ಬಿನಲಿ  
ಕೈಹಿಡಿದು ನಡೆಸೆನ್ನನು……"

—"G"

## ಸೀಮೆ ಸುಸ್ಪಷ್ಟವಾಗಿಲ್ಲವೇನು?

(೪ನೇ ಪುಟದಿಂದ)

ಟಿಬೆಟ್ಟಿನ ಹಾಗೂ ಬ್ರಿಟನಿನ ಪ್ರತಿನಿಧಿಗಳಿದ್ದರೇ ವಿನಃ ಭಾರತೀಯ ಭಾವನೆಯನ್ನು ಪ್ರತಿನಿಧಿಸುವವರ್ಯಾರೂ ಇರಲಿಲ್ಲ. ಕೈಲಾಸ, ಮಾನಸಸರೋವರ, ಮಿಂಗ್ಯಾಟ್ ಬಾಯಾಲ್ ಇವುಗಳನ್ನೆಲ್ಲಾ ಭಾರತದ ಅಂಗವನ್ನಾಗಿ ಮನ್ನಣೆ ಕೊಡಬೇಕಾಗಿದ್ದದ್ದೇ ನ್ಯಾಯವಾಗಿತ್ತು. ಟಿಬೆಟ್ಟದವರಿಗೆ ತಮ್ಮ ತೀರ್ಥಸ್ಥಾನಗಳು ಬೇಕಾಗಿರುವಂತೆ ಭಾರತೀಯರಿಗೆ ಮಾನಸ ಸರೋವರ, ಕೈಲಾಸಗಳಂತಹ ಪವಿತ್ರ ಕ್ಷೇತ್ರಗಳು ಬೇಕಾಗಿರುವದಿಲ್ಲವೇನು? ಜಲವಿಭಾಜಕ ಸಿದ್ಧಾಂತದ ಮೇಲೆ ಟಿಬೆಟ್ಟದ ಆಜೆಟ್ ಬಕ್ಕದ ಸೀಮೆಯು ನಿರ್ಧಾರಣೆ ಮಾಡಲಾಗಿರುತ್ತದೆ. ಈ ಸಿದ್ಧಾಂತವನ್ನು ಚೈನಾ—ಟಿಬೆಟ್—ಭಾರತದ ಗಡಿಯ ವಿಷಯದಲ್ಲಿ ಅನುಸರಿಸಲಾಗಿರುವದಿಲ್ಲ. ಬ್ರಿಟಿಷರ ಸಾಮ್ರಾಜ್ಯವಾದದ ಹೆಸರಿನಲ್ಲಿ ಚೈನಿ ಕಮ್ಯೂನಿಸ್ಟರು ಸಾಮ್ರಾಜ್ಯ ವಿಸ್ತರಣೆಗಾಗಿ 'ಪಂಚಶೀಲ'ದ ಜಪವನ್ನು ಮಾಡುತ್ತ ಹಿಂದೀ-ಚೀನಿ ಭಾಯಿ, ಭಾಯಿಯ ವೇಷವನ್ನು ಹಾಕುತ್ತ ಜಲವಿಭಾಜಕ ರೇಖಾ ಸಿದ್ಧಾಂತವನ್ನು ಧಿಕ್ಕರಿಸಿ ಅಧಿಕಾಧಿಕ ಲಾಭವನ್ನು ಪಡೆಯುತ್ತಿದ್ದಾರೆ. ಸಾಮ್ರಾಜ್ಯದಾಹದಿಂದ ಚೈನಾವು ಭಾರತದ ಮೇಲೆ ಧಾಳಿ ನಡೆಸುವ 'ಉದಾರತೆ'ಯನ್ನು ನಾಚಿಕೆ ಇಲ್ಲದೆ ಪ್ರದರ್ಶಿಸಿದೆ. ಅದು ಶಾಂತಿಪ್ರಿಯ ಹಾಗೂ ತಟಸ್ಥ ಭಾರತದ ದುರ್ಲಾಭ ಪಡೆದುಕೊಂಡು ೫೦,೦೦೦ ಚದರ ಮೈಲು ಪ್ರದೇಶವನ್ನು ಆಕ್ರಮಿಸಿಕೊಂಡಿರುತ್ತದೆ. ಅದು ಕಾಡಿನ ನ್ಯಾಯವೆಂಬುವದರಲ್ಲಿ ನಿತರಾ ಸಂದೇಹವೇ ಇರುವುದಿಲ್ಲ. ಅವರಿಗೆ ಬಲ ಶಕ್ತಿಯ ಭಾಷೆ ಮಾತ್ರ ಅರ್ಥವಾಗುತ್ತದೆ; ವಿನಃ ಬೇರೆ ಯಾವದೂ ಅರ್ಥವಾಗುವದಿಲ್ಲ.

ರಂಗೂನಿನಲ್ಲಿ ನಡೆದ ಸೀಮಾ-ವಿವಾದದ ಸಮಯದಲ್ಲಿ ಎರಡು ಪಕ್ಷದಿಂದಲೂ ಅನೇಕ ಸಾಕ್ಷ್ಯಗಳನ್ನು ತೋರಿಸಲಾಯಿತು. ಭಾರತೀಯ ಕಡೆಯಿಂದ ೬೩೦ ಮತ್ತು ಚೀನದ ಪಕ್ಷದಿಂದ ಕೇವಲ ೨೪೫ ಪ್ರಮಾಣ ಪತ್ರಗಳು ಮುಂದೆ ಬಂದಿದ್ದುವು. ಚೀನಾದ ವಾದಕ್ಕೆ ಬಲ ಬರಲು ಒಂದು ನೆವನ ಸಿಕ್ಕಿತು—ಭಾರತೀಯ ಸರ್ವೆಯವರು ಪ್ರಕಟಿಸಿರುವ ಭೂ ಚಿತ್ರ ಒಂದರಲ್ಲಿ ಲಡಾಖಿನ ಪೂರ್ವಭಾಗವನ್ನು 'ನಮೂದಿಸಿರುವ' ['ನ'ಡಿಮಾರ್ಕ್ಡ್'] ಮತ್ತು ನೇಫಾ ಪ್ರದೇಶವನ್ನು 'ಗುರುತಿಸದಿರುವ' [ಅನ್ ಡಿ ಮಾರ್ಕೇಟೆಡ್] ಪ್ರದೇಶವೆಂದು ಚಿತ್ರಿಸಲಾಗಿರುತ್ತದೆ. ಆ ಪ್ರದೇಶದ ಕೆಂಪು ಪರದೆಯ [ರೆಡ್ ಕರ್ಟನ್] ಹುಸಿ ಭಾವನೆ ಹಾಗೆಯೇ ಹಾಗಿದ್ದು ಗೊತ್ತಿಲ್ಲದೆ ವೈಜ್ಞಾನಿಕ ವರದಿಗಳೂ ದೊರಕುತ್ತವೆ. ಜನ ಸಂಖ್ಯೆಯ ವಿವರಣೆಯೂ ಸರಕಾರದ ಬಳಿ ಇದೆ. ೧೯೦೮ರ ಕಾಶ್ಮೀರದ ಗಜೆಟನಲ್ಲಿ ಕೂಡಾ ವಿವರಿಸಿರುವ ಪ್ರದೇಶವನ್ನು ಇಂದು ಚೈನಾದ ಭಾಗವೆಂದು ಹೇಳಲಾಗುತ್ತಿದೆ. ೧೯೨೫ರ ವರೆಗೆ ಚೀನಾದ ಒಳಗೇನೇ ಪ್ರಕಾಶಿತವಾಗಿರುವ ಅನೇಕ ಭೂಪಟಗಳಲ್ಲಿ ಭಾರತೀಯ ಸೀಮೆಯನ್ನು ಸ್ಪಷ್ಟವಾಗಿ ಸೂಚಿಸಲಾಗಿರುತ್ತದೆ.

ಉದಾ: - ಎಟ್ಲಾಸ್ ಆಫ್ ಚೈನೀಸ್ ಎಂಪಾಯರ್—೧೯೦೮.

ನ್ಯೂ ಎಟ್ಲಾಸ್ ಎಂಡ್ ಕಮರ್ಶಿಯಲ್ ಗಜೆಟಿಯರ್ ೧೯೧೭ [ಶಾಂಘಾಯ]

ಪೋಸ್ಟಲ್ ಎಟ್ಲಾಸ್ ಆಫ್ ಚೈನಾ ೧೯೧೭, ೧೯೧೯, ೧೯೩೩

ದಿ ನ್ಯೂ ಎಟ್ಲಾಸ್ ಆಫ್ ಚೈನಾ ೧೯೩೫.

ಆದ್ದರಿಂದ ಈ ಚೀನಾ ಕ್ಷೇತ್ರದ ವಿಷಯದಲ್ಲಿ ಹರಡಿಕೊಂಡಿರುವ ಭ್ರಾಂತಿ ಏನೆಂದರೆ ಅಲ್ಲಿ ಇದುವರೆಗೂ ಆಡಳಿತ ವ್ಯವಸ್ಥೆ ಎಂಬುದೇ ಇದ್ದಿರಲಿಲ್ಲವೆಂಬುದು. ೧೮೭೫ರ ಕಾಶ್ಮೀರ ರಾಜ್ಯದ ಭೂಪಟದಲ್ಲಿ ಅಕ್ಸಾಯ್ ಚಿನದ ತುದಿಯಲ್ಲಿರುವ ರಕ್ಷಕರ ಠಾಣೆ [ಪೊಲೀಸ್ ಠಾಣೆ]ಯನ್ನು ತೋರಿಸಲಾಗಿರುತ್ತದೆ. ಎಲೆಕ್ಸಾಂಡರ್ ಕನಿಂಗಹಾಮ್ ೧೮೫೪ರಲ್ಲಿ ಪ್ರಕಟಿಸಿರುವ ಲಡಾಖಿನ ಕುರಿತಾದ ಪುಸ್ತಕದಲ್ಲಿ [೨೬೧, ೩೩೮—೩೯ನೇ ಪುಟಗಳು] ೧೮೪೭ನೇ ಇಸವಿಯಲ್ಲಿಯೇ ಲಡಾಖ್—ಟಿಬೆಟ್ಟಗಳ ನಡುವಣ ಗಡಿಯನ್ನು ಕಲ್ಲುಗಳ ಮೂಲಕ ಸ್ಪಷ್ಟವಾಗಿ ಸೂಚಿಸಲಾಗಿರುತ್ತದೆಂಬುದರ ವರ್ಣನೆ ಇದೆ. ಹೀಗೆ ಯೋಚಿಸುತ್ತ ಹೋದಂತೆ ಅನೇಕ ಪ್ರಮಾಣಗಳನ್ನು ನಾವು ಕಂಡ ಕೊಳ್ಳಬಹುದು. ನಿಷ್ಪಕ್ಷಪಾತ ದೃಷ್ಟಿಯಿಂದ ಅವುಗಳ ಮನನ ಮಾಡಿದಲ್ಲಿ ಗಡಿ—ವಿವಾದದ ಮೇಲೆ ನ್ಯಾಯ ರೀತಿಯ ವಿವಾದಕ್ಕೂ ಆಸ್ಪದವೇ ಇರುವದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಸ್ಪಷ್ಟವಿಷಿ ಭಾರತದ ಗಡಿ ಪ್ರದೇಶ

**ಶಿವಶಂಕರ, ಮದ್ರಾಸು.**

(ಮೂಲ: ಶ್ರೀ ನಿತ್ಯಾನಂದ ಸ್ವಾಮಿ ಪಾಂಚಜನ್ಯ)


**ಶಾಲೆಗಳಿಗೆ ಬೇಕಾಗುವ**

**ಯಾವತ್ತೂ ಫಾರ್ಮುಗಳೂ**

**ಹಾಜರಿ ರಿಜಿಸ್ಟರುಗಳೂ ಸಿಗುತ್ತವೆ**

**ನವಯುಗ ಪ್ರೆಸ್ ಉಡುಪಿ.**



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

# ಸುಲಭದಲ್ಲಿ ಇಂಗ್ಲಿಷ್

**(ENGLISH MADE EASY)**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

# LETTER WRITING MADE EASY

# ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25).

ವಿ. ಸೂ.—ಅಷ್ಟೂ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ. ಕೆನರಾ ಕೊಓಪ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಬಿಜಿನೆಸ್ ಬ್ಯೂರೊ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ



# ನವಯುಗಕ್ಕೆ

**ಚಂದಾದಾರರಾಗಿ**

**ಪ್ರೋತ್ಸಾಹಿಸಿರಿ**

## ಶ್ರೀ ರಾಜೇಂದ್ರ ಪ್ರಸಾದರು

(೩ನೇ ಪುಟದಿಂದ)

ಪ್ರಸಾದರು ಸಾವಿರಾರಿನ ಹುಟ್ಟುವಳಿಯಿರುವ ವಕೀಲ ವೃತ್ತಿಗೆ ತಿಲಾಂಜಲಿಯನ್ನಿತ್ತು, ದುರ್ಗಮವಾದ ಕಲ್ಲುಮುಳ್ಳಿನ ದಾರಿಯಲ್ಲಿ ಕಾಲಿಟ್ಟು, ತನ್ನ ಸರ್ವಸ್ವವನ್ನೂ ಗಾಂಧಿಯವರ ಅಡಿದಾವರೆಗಳಲ್ಲಿ ಧಾರೆಯೆರೆದ, ಸಂಪೂರ್ಣವಾಗಿ ಅವರ ಅನುಯಾಯಿಯಾದರು. ಆ ಆಂದೋಲನಕ್ಕೆ ಹೊಂದಿಕೆಯಾಗಿ ಸರಕಾರಿ ಕಾಲೇಜುಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳಿಗೆ "ಬಿಹಾರ ವಿದ್ಯಾಪೀಠ"ವನ್ನು ಸ್ಥಾಪಿಸಿದರು. ಆಗ ೬೦೦ ಸಂಸ್ಥೆಗಳು ಈ ವಿದ್ಯಾಪೀಠದೊಂದಿಗೆ ಸಂಬಂಧಿತವಾಗಿದ್ದು ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೬೦,೦೦೦ವಾಗಿತ್ತು. ವಿದ್ಯಾದಾನ ಮಾಡುವುದು ಮಾತ್ರವಲ್ಲದೆ ಈ ವಿದ್ಯಾಪೀಠವು ಆಂದೋಲನಕ್ಕೆ ಬೇಕಾದ ವ್ಯಕ್ತಿಗಳನ್ನು ತರಬೇತು ಮಾಡುವ ಕೇಂದ್ರವೂ ಆಗಿತ್ತು.

ಇಂತು ಭಾರತಮಾತೆಯ ಸುಪುತ್ರರಾದ ಶ್ರೀ ರಾಜೇಂದ್ರ ಪ್ರಸಾದರು ೧೯ ಗದ ಕರೆಗನುಕೂಲವಾಗಿ ತಾವು ಸೇವೆ ಸಲ್ಲಿಸುವುದರಲ್ಲಿ ಎಳ್ಳಷ್ಟು ಜಿಗುಣತೆಯನ್ನು ತೋರಿದವರಲ್ಲ. ಎಲ್ಲದರೊಂದಿಗ ತನ್ನ ಆರೋಗ್ಯವನ್ನೂ ಬಲಿಯೆರೆದ ಇವರು ಮಹಾ ತ್ಯಾಗಿಯೇ ಸರಿ! ಗಾಂಧೀಜಿಯವರೊಂದಿಗೆ ಅವಿರತವಾಗಿ ಶ್ರಮಿಸಿದ ಹಾಗೂ ಅಸಹಯೋಗ ಸತ್ಯಾಗ್ರಹ ಆದಿ ಚಳವಳಿಗಳ ಪ್ರಬಲ ಸಮರ್ಥಕರೆನಿಸಿದ ಇವರಿಗೆ ಆರು ಬಾರಿ ಕಾರಾಗೃಹದ ಕಪ್ಪು ಗೋಡೆಗಳನ್ನು ಕಾಣುವ ಕಾಲ ಬಂದಿತ್ತು. ಇಂತಹದೇ ಒಂದು ಸಂದರ್ಭದಲ್ಲಿ ಗೂರುಬ್ಬಸವು ಇವರನ್ನು ಅತಿಯಾಗಿ ಬಾಧಿಸುತ್ತಿರಲು ಆರೈಕೆಗಾಗಿ ಜೈಲಿನಿಂದ ಹೊರಬಿಟ್ಟು ಪಾಟ್ನಾದ ಸರಕಾರೀ ಆಸ್ಪತ್ರೆಯಲ್ಲಿರಿಸಲಾಯಿತು. ಆದರೂ ರೋಗವು ಇನ್ನೂ ಉಲ್ಬಣಾವಸ್ಥೆಗೇರುತ್ತಿರಲು ಸೆರೆಯಿಂದ ಬಿಟ್ಟುಬಿಡಲಾಯಿತು. ಆಗಲೂ ಕೂಡಾ ವಿಶ್ರಾಂತಿ ತೆಗೆದುಕೊಳ್ಳುವ ಯೋಚನೆಯನ್ನೇ ಮಾಡದೆ, ಬಾಲಿಕೆಯನ್ನೆಣಿಕೆಗೆ ತಾರದೆ, ಗಾಳಿ ಬಿಸಿಲೆನ್ನದೆ, ಹಳ್ಳಿ ಹಳ್ಳಿಗಳಲ್ಲಿ ಸುತ್ತಾಡುತ್ತಾ, ಅಂಧಕಾರದಲ್ಲಿ ಮುಳುಗಿ ನಿರಾಶೆಯನ್ನೇ ಅಂತಿಮ ಆಶ್ರಯವನ್ನಾಗಿ ಅಪ್ಪಿಹಿಡಿದಿದ್ದ ಬಿಹಾರದ ಪ್ರಾಂತವನ್ನು ರಕ್ಷಿಸಿದ ಕರ್ಮವೀರ— ಶ್ರೀ ರಾಜೇಂದ್ರ ಪ್ರಸಾದ್.

ಇಂತಹ ಮಹಾಪುರುಷನನ್ನು ಭಾರತವು ತಕ್ಕಂತೆ ಗೌರವಿಸಿದೆಯೆಂದೇ ಹೇಳಬಹುದು. ಎರಡು ಬಾರಿ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವು ಅವರಿಗೊಪ್ಪಿಸಿ ಕೊಡಲ್ಪಟ್ಟಿತು. ೧೯೪೬ರಲ್ಲಿ ಭಾರತ ಸರಕಾರದ ಆಹಾರ ಮಂತ್ರಿಗಳಾಗಿಯೂ ನೇಮಿಸಲ್ಪಟ್ಟರು. ಭಾರತ ರಾಷ್ಟ್ರ ತನ್ನ ಭಾಗ್ಯ ನಿರ್ಮಾಣದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅವರ ಕೈಯಲ್ಲೇ ಒಪ್ಪಿಸಿಕೊಟ್ಟಿತೋ ಎಂಬಂತೆ ಸಂವಿಧಾನ ರಚನಾ ಸಭೆಯ ಅಗ್ರಪೀಠದಲ್ಲೂ ಅವರನ್ನೇ ಕುಳ್ಳಿರಿಸಿತು. ಅನಂತರ ಹನ್ನೆರಡು ವರ್ಷಗಳವರೆಗೆ ಪ್ರಜಾಸತ್ತಾತ್ಮಕವೂ, ಮಹಾನ್ ದೇಶವೂ ಆದ ಭಾರತದ ಅಧ್ಯಕ್ಷಾಸನದಲ್ಲಿ ಕುಳ್ಳಿರಿಸಿ ಈ ಬೃಹತ್ ರಾಷ್ಟ್ರದ ಪ್ರಥಮ ರಾಷ್ಟ್ರಪತಿಯ ಪೂಜೆ ಸಲ್ಲಿಸಿ ನಿವೃತ್ತಿ ಸಮಯದಲ್ಲಿ 'ಭಾರತರತ್ನ'ವೆಂಬ ಉತ್ಕೃಷ್ಟತಮ ಉಪಾಧಿಯಿಂದ ಅವರನ್ನಲಂಕರಿಸಿರುದು ಅವರ ಮಹಾನ್ ಯೋಗ್ಯತೆಗೆ ನಿದರ್ಶನವಾಗಿದೆ.

ಮಾತಿನಲ್ಲಿ ಮಿತ, ಮುಖದಲ್ಲಿ ಮಂದಸ್ಮಿತ ಇವುಗಳನ್ನೊಳಗೊಂಡ ರಾಜೇಂದ್ರ ಪ್ರಸಾದರಲ್ಲಿ ಎದ್ದು ತೋರುವ ಇನ್ನೊಂದು ಗುಣವೆಂದರೆ—ಅವರ ಜನ್ಮಜಾತ ಸರಳತೆ. ಸಾಧಾರಣವಾಗಿ ಹಳ್ಳಿಗನಂತೆಯೇ ಕಾಣುವ. ಜವಾಹರಲಾಲರೊಂದಿಗೆ ತೆಗೆದ ಇವರ ಫೋಟೋವೊಂದನ್ನು ನೋಡಿದ ಒಡನೆ ನೆಹರೂರವರ ಡ್ರೈವರ್ ಅವರ ಪಕ್ಕದಲ್ಲೇ ನಿಂತಿದ್ದಂತೆ ಡಾ। ಸಚ್ಚಿದಾನಂದ ಸಿಂಹಾರವರಿಗೊಮ್ಮೆ ಭ್ರಮೆಯಾಯಿತಂತೆ. ಬಾಹ್ಯ ಆವರಣದ ಮಟ್ಟಿಗೆ ಅಷ್ಟು ಉದಾಸೀನತೆಯನ್ನು ತಳೆದಿದ್ದ ವ್ಯಕ್ತಿ— ರಾಜೇನ್ ಬಾಬು—ಸರಳತೆಯ ಅವತಾರವೇ ಸರಿ!

ಕರ್ತವ್ಯ ಪರಿಪಾಲನೆಯ ವಿಷಯದಲ್ಲೂ ಅವರನ್ನು ಗಾಂಧಿಯವರೊಂದಿಗೆ ಹೋಲಿಸಬಹುದು. ಜನತೆಯ ಸೇವೆಯೇ ಜನಾರ್ಧನ ಸೇವೆಯೆಂಬ ನಿಯಮವನ್ನು ಚಾಚೂ ತಪ್ಪದೆ ಪರಿಪಾಲಿಸುತ್ತಿದ್ದ ಅವರು ನಾನಾ ಜನಿಕ ಕಾರ್ಯಗಳಲ್ಲಿ ತತ್ಪರರಾದರೆಂದರೆ ತನ್ನ ಆರೋಗ್ಯವನ್ನೂ ಕಡೆಗಣಿಸುವವರೇ ಆಗಿದ್ದರು. ಬಿಹಾರ ಪ್ರಾಂತ್ಯಕ್ಕೆ ವಿಶೇಷ ಕೊಡುಗೆಯಾಗಿದ್ದ ಅತಿವೃಷ್ಟಿ ಅನಾವೃಷ್ಟಿ ಮೊದಲಾದ ಪ್ರಾಕೃತಿಕ ಆಪತ್ತುಗಳ ಸಮಯದಲ್ಲಾದರೋ ತನ್ನ ವ್ಯಕ್ತಿಗತ ಅಸ್ತಿತ್ವವನ್ನೇ ಮರೆತುಬಿಡುವ ಸಾಧಾರಣೀ ತರಣೀಯು ಹೃದಯ ಅವರದು.

ವ್ರತಪರಿಪಾಲನೆಯ ಕ್ಷೇತ್ರದಲ್ಲೂ ಅವರು ಅಗ್ರಗಣ್ಯರಲ್ಲಿ ಸೇರಿದವರು. ತನಗೆ ಉಟ್ಟುಕೊಳ್ಳಲು ಎಷ್ಟು ಧೋತ್ರಗಳ ಆವಶ್ಯಕತೆಯಿದೆಯೋ ಕನಿಷ್ಟಪಕ್ಷ ಅಷ್ಟಕ್ಕೆ ಬೇಕಾಗುವ ನೂಲನ್ನಾದರೂ ತಾನೇ ಸ್ವತಃ ತಯಾರಿಸಬೇಕೆಂಬ ನಿಯಮ ಅವರದು. ನೂಲಾಗಲೀ ಧೋತ್ರವಾಗಲೀ ಇತರರಿಂದ ಪ್ರೇಮ ಪೂರ್ವಕ ಉಪಹಾರ ದೊರೆತರೆ ಅದನ್ನು ಉಪಯೋಗಿಸಿಕೊಳ್ಳುವಂತೆಯೇ ತಾನೂ ನೂಲು ತೆಗೆದು ಧೋತಿ ಹೊಲಿಸಿ ಆಗತ್ಯವಿದ್ದವರಿಗೆ ಕೊಡದಿಲ್ಲ. ಕಾರ್ಯಭಾರ ಎಷ್ಟಿದ್ದರೂ ಇಂತಹ ವ್ರತ ಪರಿಪಾಲನೆಯ ಕಡೆಗೆ ಅಚಲ ಧ್ಯಾನ ಅವರದು.

ರಾಜೇಂದ್ರ ಪ್ರಸಾದರು ಕಡೆಯ ವರೆಗೂ ಶ್ರದ್ಧೆಯೆಂಬ ದೀಪದ ಬೆಳಕಿನಲ್ಲಿ ಜನತಾ ಸೇವೆಯೆಂಬ ಕರ್ತವ್ಯಪಥದಲ್ಲಿ ಶಾಂತಿ ಹಾಗೂ ಅನುದ್ವೇಗದ ವೇಗದಿಂದ ಸದ್ದಿಲ್ಲದೆ ಮುನ್ನಡೆದ ಜೀವನ ಯಾತ್ರಿಕ. ಗಾಂಧಿಯವರ ಸಾಹಚರ್ಯದಿಂದ ಈ ಯಾತ್ರೆಯು ಉಜ್ವಲವಾಯಿತು; ಈ ಯಾತ್ರೆಯೊಂದು ಸಾಧನೆಯಾಯಿತು. ಹಾಗೆಯೇ ಮಾನವ ಜನ್ಮದಲ್ಲಿ ಸುಸಂಸ್ಕೃತ ಮಾನವನು ಹೊಂದಬೇಕಾದ ಸಿದ್ಧಿಯನ್ನು ಅವರು ಹೊಂದಿದರು.

ಜ್ಞಾನಿಯ ಪ್ರಜ್ಞೆ! ಭಕ್ತನ ತ್ಯಾಗ! ಕರ್ಮವೀರನ ಸೇವೆ! ಹಾಗೂ ಇವೆಲ್ಲರಲ್ಲೂ ವ್ಯಾಪಿಸಿಕೊಂಡಿರುವ ಅಚಲ ಶ್ರದ್ಧೆ!! ನಿಜವಾಗಿಯೂ ಭಾರತೀಯ ಸಂಸ್ಕೃತಿಯ ಪ್ರತೀಕ— ಶ್ರೀ ರಾಜೇಂದ್ರ ಪ್ರಸಾದ್!!!

೧೯೬೩ನೇ ಫೆಬ್ರವರಿ ೨೮ರಂದು ನಶ್ವರ ಕಾಯವನ್ನು ತೊರೆದು ವಿಧಿವಶರಾದ ಈ ಪುಣ್ಯಜೀವಿಗೆ ನಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತಿದ್ದೇವೆ. ಲೋಕಕ್ಕೆ ಹಿತವೂ ಪ್ರಿಯವೂ ಆಗುವಂತೆ ಅವರು ನಡೆದ ಪಥದಲ್ಲಿ ನಡೆಯುವ ಅಸಾಧಾರಣ ಶಕ್ತಿ ನಮ್ಮಲ್ಲೂ ಸ್ಫುರಣೆಗೊಂಡು ಉದಯಿಸಲೆಂಬುದಾಗಿ ಹಾರೈಸುತ್ತೇವೆ, ಪ್ರಾರ್ಥಿಸುತ್ತೇವೆ.

**— ಪಡುಬಿದ್ರಿ ಹರಿದಾಸ ರಾಯ.**

## 'ನಿನ್ನವರು ನಾವು'

ಅಮ್ಮ ಭಾರತ೿
ನೆಮ್ಮದಿಯಿಂದಿರು
ವೀರರು, ಶೂರರು, ನಿನ್ನವರು ನಾವು.
ಕುಗ್ಗದಿರು, ಬಗ್ಗದಿರು
ಬಗ್ಗದ ಬಿಗುವಿಗೆ
ಬೆದರುವೆವೆ! ಒದರುವಿಗೆ
ನಿನ್ನವರು ನಾವು.
ಬಲವಿಲ್ಲವೆಂದು
ಬಂದಿಹರು ಮುಂದು
ತಟ್ಟುವೆವು, ಮೆಟ್ಟುವೆವು
—ನಿನ್ನವರು ನಾವು.
ಶಾಂತಿ ಕೆರಳದೆ,
ಕ್ರಾಂತಿ ಅರಳಿದೆ,
ಶಾಂತಿ ತರುವೆವು, ನಿನ್ನವರು ನಾವು
ಸೋದರ ಭಾವನೆಯ
ಸವೆದಿಹರು ಅವರು
ಮರೆದಿಲ್ಲ, ಮೆರೆದಿಲ್ಲ. ನಿನ್ನವರು ನಾವು,
ಭಾರತದ ಸ್ವಾತಂತ್ರ್ಯ ಫಲಕ್ಕೆ
ಬಲಿಯಾದ ವೀರರ
ನೆನೆನೆನೆದು ನಡೆವೆವು ನಿನ್ನವರು
ನಾವು.
ದಮದ ದಮನಿಯಲಿ
ದುಮು ದುಮುಕುತಿಹುದು—
ಬಿಸಿ ರಕ್ತ—ಬಳಸು, ನಿನ್ನವರು ನಾವು,
ಒಂದಾಗಿ ಬಂದಿಹೆವು,
ಸಂದ ದಿನಗಳ ನೆನೆದು—
ಕೊರಗದಿರು, ಕರಗದಿರು
ನಿನ್ನವರು ನಾವು
ಮೂಡಿಹುದು ದೇಶಾಭಿಮಾನ,
ಬೆಳದಿಹುವುದು ಬಾಹುಗಳು
ಹರಸಿ ಕಳುವಮ್ಮಾ ನಿನ್ನವರ ನಮ್ಮ.

— ಭೋಜ ಎನ್. ಶೆಟ್ಟಿ
**ಬೊಂಬಾಯಿ**

## ಅಮೃತ ಬಿಂದು

ಸುಟ್ಟ ಬೀಜ ಮೊಳಕೆಯೊಡೆಯದು. ಆಗರಂತೆ ಪಾರಮಾರ್ಥಿಕ ಅಮೃತ ಸಿಂಚನ ಪಡೆದ ಜೀವ ಮರಳಿ ಹುಟ್ಟದು.

೦ ೦ ೦

ಶರೀರವೆಂಬ ದೋಣಿಯಲ್ಲಿ ಆತ್ಮನೆಂಬ ನಾವಿಕನು ಈ ಸಂಸಾರವೆಂಬ ಶರಧಿಯನ್ನು ದಾಟುವದೇ ಜೀವನ ಧ್ಯೇಯ ಯೂ ಧರ್ಮ.

೦ ೦ ೦

ಬಿಡುಗಡೆಯ ಗುರಿ ತಲಪಲು ಜ್ಞಾನ ಶೀಲ, ಭಕ್ತಿ, ಪ್ರಾರ್ಥನೆ, ಪೂಜೆಗಳೆಂಬ ದಾರಿಯಲ್ಲದೆ ಬೇರೆ ದಾರಿಗಳಿಲ್ಲ.

೦ ೦ ೦

ಸಂಸಾರ ಸಾಗರದಲ್ಲಿ ಗುರಿಯಿಲ್ಲದ ಹಡಗಿನಂತೆ ಅತ್ತಿಂದಿತ್ತ ಇತ್ತಿಂದತ್ತ ತೊಳಲಿ, ಓಡಾಡಿ, ಕಾಮಿನಿ ಕಾಂಚನಗಳ ಬೆಂಬತ್ತಿ ನಿರಾಶರಾದವರಿಗೆ ವೃದ್ಧಾಪ್ಯದಲ್ಲಿ ಧರ್ಮವೇ ಶಾಂತಿಪ್ರದ ಬಂದರು.

೦ ೦ ೦

ವೃದ್ಧಾಪ್ಯ ಪಸರಿಸುವ ಮೊದಲು, ರೋಗರುಜೆಗಳು ಶಕ್ತಿ ಹ್ರಾಸ ಮಾಡುವ ಮೊದಲು, ಶರೀರದ ವಿವಿಧ ಭಾಗಗಳು ಕರ್ತವ್ಯ ಮಾಡಲಾರದಾಗುವ ಮೊದಲು ಒಬ್ಬನು ಧರ್ಮದ ಆಚರಣೆಗೆ ತೊಡಗಬೇಕು

೦ ೦ ೦

ಐಶ್ವರ್ಯ, ಜೀವನ, ಹೆಂಗಸು ಮತ್ತು ಮೃಷ್ಟಾನ್ನ ಇವುಗಳ ವಿಚಾರದಲ್ಲಿ ಅಂದು, ಇಂದು, ಮುಂದೂ ಕೂಡ ಎಲ್ಲರೂ ಅತೃಪ್ತರಾಗಿಯೇ ಇರುತ್ತಾರೆ.

೦ ೦ ೦

ಅಸಹನೆಯಿಂದ ಕೂಡಿದ ಇತರರ ಮನೋಭಾವವನ್ನು ಅರಿಯದ, ಇತರರಲ್ಲಿ ತಪ್ಪನ್ನು ಹುಡುಕಿ ಹೇಳಲು ಹಿಂಜರಿಯದ ಪ್ರೇಮ, ಪ್ರೇಮವಲ್ಲ, ಇದು ಕಾಮ.

೦ ೦ ೦

ಕತ್ತಲೆ ಆವರಿಸಿದೆಯೆಂದೂ ಅದನ್ನು ಓಡಿಸಲು ವಿದ್ಯುತ್ ಬೇಕಿಲ್ಲನೆಂದೂ ಕಸಲುವದಕ್ಕಿಂತ ತಮ್ಮದೇ ಆದ ಮೋಣದ ಬತ್ತಿ ಉರಿಸಲೆತ್ನಿಸುವುದು ಹಿತ

೦ ೦ ೦

ಮನುಷ್ಯಕುಲ ನಿಜಕ್ಕೂ ಅದೃಷ್ಟಶಾಲಿ, ಏಕೆಂದರೆ ಮಾನವರಾರೂ ತಮ್ಮ ತಪ್ಪಿನಿಂದಲ್ಲದೆ ಅಸುಖಿಗಳಲ್ಲ.


ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58¼% ಶುದ್ಧ ಪುತ್ತಳಿ ಚಿನ್ನ ಇರುತ್ತದೆ
ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

**ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್**

**ತೆಂಕಪೇಟೆ — ಉಡುಪಿ.**

ಪ್ರಾಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ 66

## ಅಂಗಡಿ ಸಾಲ

(೨ನೇ ಪುಟದಿಂದ)

ಶೆಟ್ಟಿ - ಐವತ್ತು K. G. ಇರ್ಲಿ.

ಕವಿ— ಅದು ಕಡಮೆಯಾಗುತ್ತೆ ಶೆಟ್ರೇ. ಹಬ್ಬಕ್ಕೆ ಮಾವನ ಮನೆಯವರು ಬರುತ್ತಾರೆ. ಮನೆ ಬರಿದಾಗೋ ತನಕ ಹೋಗುವುದಿಲ್ಲ ನೋಡಿ.

ಶೆಟ್ಟಿ— ಆಯಿತು ಆಯಿತು ಅಂಗಡಿ ಹತ್ತಿರ ಬನ್ನಿ. ಎಲ್ಲಾ ತೆಗೆದುಕೊಂಡು ಹೋಗಿವಿರಂತೆ.

ಕವಿ— ಹಾಗೇ ಆಗಲೀ?

ಶೆಟ್ಟಿ— ನಾನು ಬರಲೇ

ಕವಿ— ನಿಲ್ಲಿ ಶೆಟ್ರೇ. ಹಾಳಾದ್ದು ಮರೆತೇ ಹೋಯಿತು ನೋಡಿ. ನಿಮ್ಮಂಗಡಿಯಲ್ಲಿ ಪೌಡರ್, ಸ್ನೋ, ಲಿಪ್‌ಸ್ಟಿಕ್ ಹೇರ್ ಹಾಯಿಲ್ ಇದೆಯೋ?

ಶೆಟ್ಟಿ— ಹೌದ ಇದೆ.

ಕವಿ— ನಾನು ಹೇಳಿದ್ದೆಲ್ಲಾ List ನಲ್ಲಿ ಬರೆದುಕೊಳ್ಳಿ

ಶೆಟ್ಟಿ— (ಬರೆದುಕೊಳ್ಳುತ್ತಾ) ಇದೇನು ಕಾಫಿ ಪೌಡರ್ ಬರೆದಿಲ್ಲ.

ಕವಿ— ಥೂ! ಥೂ!! ಒಳ್ಳೆ ಐನಾತಿ Pointನ್ನೇ ಮರತ್ತಿದ್ದಾಳೆ ಒಂದು ಪೌಂಡ್ ಕಾಫಿ ಪೌಡರ್, ಅದರ ಜತೆಗೆ ಐದು K. G. ಸಕ್ಕರೇನೂ ಸೇರಿಸಿಬಿಡಿ.

ಶೆಟ್ಟಿ— ಆಯಿತೇ ಏನಾದರೂ ನೆನಸಿಕೊಳ್ಳಿ.

ಕವಿ— ಒಂದು ಕೈಚೀಲಾನೂ ಬರೆದು ಬಿಡಿ. ಇಲ್ಲದೆ ಇದ್ರೆ ಸಮಾನು ತರುವುದು ಕಷ್ಟವಾಗುತ್ತದೆ.

ಶೆಟ್ಟಿ— ಕವಿಗಳೇ ಒಂದು ಚಿಕ್ಕ ಸಹಾಯ ಮಾಡ್ತೀರಾ?

ಕವಿ— ಇದೇನು ಶೆಟ್ರೇ ಹೀಗೆ ಕೇಳುತ್ತೀರಲ್ಲಾ. ನೀವು ನನಗೆ ಇಷ್ಟುಉಪಕಾರ ಮಾಡ ಬೇಕಾದರೆ ನಾನು ಸಣ್ಣ ಸಹಾಯ ಮಾಡುವುದಕ್ಕಾಗುವುದಿಲ್ಲವೇ? ಹೇಳಿ, ನನ್ನ ದೇಹದಲ್ಲಿ ಉಸುರು ಇರುವವರೆಗೂ, ಮಾಡಿಕೊಡುತ್ತೇನೆ.

ಶೆಟ್ಟಿ— ಪಾಠ ಹೇಳಿ ಕೊಡುವುದಕ್ಕೆ ಬರುತ್ತದೆಯೇ?

ಕವಿ— ಪಾಠ ಒಂದೇ ಯಲ್ಲ. ಸಂಗೀತ ನೃತ್ಯ ಬೇಕಾದರೂ ಹೇಳಿ ಕೊಡಬಲ್ಲೆ.

ಶೆಟ್ಟಿ— ಹಾಗಾದರೆ ನನ್ನ ಮಗಳಿಗೆ ಸಂಗೀತ, ನೃತ್ಯ, ಪಾಠ ಹೇಳಿ ಕೊಡಿ.

ಕವಿ— ಆಗತ್ತವಾಗಲಿ ಶೆಟ್ರೇ. ಈ ರೀತಿಯಾದರೂ ಕೆಲಸ ಸಿಕ್ಕರೆ ನಿಮ್ಮ ಅಂಗಡಿ ಸಾಲವನ್ನು ಜಾಗ್ರತೆಯಾಗಿ ತೀರಿಸಿಬಿಡುತ್ತೇನೆ.

ಶೆಟ್ಟಿ— ಏನಂದ್ರಿ? ಸಂಬಳ ಬೇರೆ ಕೊಡ ಬೇಕಾ!

ಕವಿ— ಕೊಡಲಿಲ್ಲದಿದ್ದರೇ ಆಗುತ್ತದೆಯೇ? ನನ್ನ ಜೀವನ ಹೇಗೆ ನಡೆಯ ಬೇಕು ಶೆಟ್ರೇ.

ಶೆಟ್ಟಿ— ನನ್ನ ಮಗಳಿಗೆ ಪ್ರೀಯಾಗಿ ಹೇಳಿಕೊಡಬೇಕು.

ಕವಿ— ಎಲ್ಲಿಯಾದರೂ ಉಂಟೇ ಶೆಟ್ರೇ.

ಶೆಟ್ಟಿ— ಹಾಗಾದರೇ ಸಾಮಾನು ಕೊಡುವುದಿಲ್ಲ. ನನ್ನ ಅಂಗಡಿ ಸಾಲವನ್ನೆಲ್ಲ ತೀರಿಸಿಬಿಡಿ.

ಕವಿ— ಇದೇನು ಬಂತಪ್ಪಾ ಗ್ರಹಚಾರಾ. ಬಡ್ಡಿ ಕೇಳಿದರೇ ಕೊಡುವುದಿಲ್ಲ ಅಂತಾ, ಪಾಠದಿಂದ ಬಡ್ಡಿವಸೂಲು ಮಾಡಿಕೊಳ್ಳುತ್ತಾನೆ. ವಿಷಾಸಿನ ಮುಂಗೆ ಹೀಜುವುದನ್ನು ಕಲಿಸಿಕೊಡಬೇಕಾ ಹೊಂ! ಏನು ಮಾಡುವುದು ಇಲ್ಲದೆ ಇದ್ರೆ ಸಿಗುವುದಿಲ್ಲ. ಹೇಳಿಕೊಡುತ್ತೇನೆ ಶೆಟ್ರೇ.

ಶೆಟ್ಟಿ— ಯಾವ Time ನಾಗೆ ಬರುತ್ತೀರಾ

ಕವಿ— ಪಾಠಕ್ಕೆ ಬೆಳಿಗ್ಗೆ 7 ಗಂಟೆಗೆ ಸಂಗೀತ 12 ಗಂಟೆಗೆ ನೃತ್ಯ ರಾತ್ರಿ 11 ಗಂಟೆಗೆ

ಶೆಟ್ಟಿ— ಹಾಗೇ ಮಾಡಿ. ಬನ್ನಿ ಸಾಮಾನು ತೆಗೆದುಕೊಂಡು ಹೋಗಿವಿರಂತೆ.

ಕವಿ— ನಡೆಯಿರಿ. ಇಂತಹ ಸಮಯ ಬಿಟ್ರೆ ಬೇರೆ ಚಾನ್ಸ್ ಸಿಗುವುದಿಲ್ಲ

(ಇಬ್ಬರೂ ನಿರ್ಗಮನ ನಂತರ ತೆರೆ ಸರಿಯಬೇಕು)

'ಸಂಪೂರ್ಣಂ'

—ಸಿ ಜಿ ಪರಮೇಶ್ವರಪ್ಪ,
ಚಿತ್ರದುರ್ಗ.

ಸೂಚನೆ— ಈ ನಾಟಕವನ್ನು ಅಭಿನಯಿಸುವ ಇಚ್ಛೆಯುಳ್ಳವರು ಲೇಖಕರಾದ ಸಿ.ಜಿ ಪರಮೇಶ್ವರಪ್ಪ,C/o.ಸಿ.ಗುರು ಶಾಂತಪ್ಪ ಅಂಡ್ ಸನ್ಸ್, ಜವಳಿ ವ್ಯಾಪಾರಿಗಳು, ಸಂತೆಪೇಟೆ, ಚಿತ್ರದುರ್ಗ. ಇವರಿಗೆ ಬರೆದು ಅನುಮತಿ ಪಡೆಯಿರಿ.

## ವಿವೇಕಾನಂದರ
# ವೀರ ವಾಣಿ

ನಾನು ಹೇಡಿತನವನ್ನು ದ್ವೇಷಿಸುತ್ತೇನೆ. ಹೇಡಿಗಳು ಮತ್ತು ರಾಜಕಾರಿಣಿಗಳನ್ನು ನನ್ನಿಂದ ಸಹಿಸಲಸಾಧ್ಯ. ರಾಜಕೀಯದಲ್ಲಿ ನನಗೆ ವಿಶ್ವಾಸವಿಲ್ಲ. ದೇವರು ಮತ್ತು ಸತ್ಯ ಇವೆರಡೇ ಈ ಜಗತ್ತಿನಲ್ಲಿರುವ ರಾಜಕೀಯ!

o o o

ಬನ್ನಿ, ಮನುಷ್ಯರಂತೆ ದುಡಿಯಿರಿ. ಮೌನವಾಗಿ, ನಿಶ್ಚಲತೆಯಿಂದ ದುಡಿಯಿರಿ. ಹೆಸರಿಗಾಗಿ, ಕೀರ್ತಿಗಾಗಿ, ಧನಕ್ಕಾಗಿ ಅಧಿಕಾರಕ್ಕಾಗಿ, ಪತ್ರಿಕೆಗಳ ಹೊಗಳಿಕೆಗಾಗಿ ದುಡಿಯದಿರಿ. ಇದು ಜ್ಞಾಪಕದಲ್ಲಿರಲಿ.

o o o

ಏಕೆ ಹೇಗೆ ಎಂದು ಪ್ರಶ್ನಿಸುವುದು ನಮ್ಮ ಪಾಲಿಗಲ್ಲ; ದುಡಿದು ಅಂತಿಮವನ್ನಪ್ಪುವುದು ನಮ್ಮ ಕರ್ತವ್ಯ. ನಮ್ಮ ಇಚ್ಛೆಯಿಂದ ಇಲ್ಲಿ ನಾವು ಹುಟ್ಟಲಿಲ್ಲ. ಆತನ ಇಚ್ಛೆಯಂತೆ ಬಂದಿದ್ದೇವೆ. ಆತನ ಇಚ್ಛೆಯಂತೆ ನಮ್ಮ ಪಾತ್ರ ನಿರ್ವಹಿಸುವುದೇ ನಮ್ಮ ಪಾಲಿಗಿರುವ ಕರ್ತವ್ಯ.

o o o

ಬಡವರೆಂದು ನೀವು ಚಿಂತಿಸದಿರಿ. ಜಗತ್ತಿನಲ್ಲಿ ಹಣವೇ ಸರ್ವಸ್ವವಲ್ಲ. ಸದಾಚಾರ, ನಮ್ರತೆ, ಪವಿತ್ರತೆಗಳ ಎದುರು ಹಣಕ್ಕೆ ಬೆಲೆಯಿಲ್ಲ. ಜಗತ್ತಿನಲ್ಲಿ ಹಣವಂತರ ಹೆಸರನ್ನು ಯಾರೂ ಜಪಿಸುತ್ತಿಲ್ಲ ಗುಣವಂತರು ಸತ್ತರೂ ಚಿರಂಜೀವಿಗಳಾಗಿದ್ದಾರೆ.

o o o

ಅಡಿಗೆಯಾದಾಗ ಊಟಕ್ಕೆಸಿದ್ಧವಾಗಿ ಬರುವವರು ಸಾವಿರಾರು ಜನರಿರುತ್ತಾರೆ. ಆದರೆ ಅಡಿಗೆ ಮಾಡಲು ಯಾರಿಗೂ ಬೇಕಿಲ್ಲ. ಸುಖಕ್ಕೆ ಪಾಲುದಾರರಿರುತ್ತಾರೆ. ಆದರೆ ಕಷ್ಟಕ್ಕಿಲ್ಲ. ನೀನೇ ನಿನ್ನ ಶಕ್ತಿಯಲ್ಲಿ ನಿಂತು ಸರ್ವವನ್ನು ಎದುರಿಸಬೇಕು.

o o o

ಧರ್ಮವೆಂದರೇನು? ಪುಸ್ತಕ ಸಿದ್ಧಾಂತವೇನಲ್ಲ ಒಳ್ಳೆಯವನಾಗಿರುವುದು,ಒಳ್ಳೆಯದನ್ನು ಮಾಡುವುದು ಅದೇ ಧರ್ಮ. ಇದಕ್ಕಾಗಿ ಸಹಸ್ರ ಪುಟಗಳ ಪುಸ್ತಕ ಓದುವ ಅಗತ್ಯವಿಲ್ಲ. ಇತರರ ಮುಕ್ತಿಗಾಗಿ ತಾನು ನರಕಕ್ಕೆ ಹೋಗುವ ನಿರ್ಧಾರವಿರುವವನೇ ನಿಜವಾದ ಧಾರ್ಮಿಕ

o o o

ಹೃದಯದಲ್ಲಿ ಪ್ರೇಮವಿರಲಿ. ಅದೇ ವೇದಾಂತ! ಪ್ರೇಮವಿಲ್ಲದವನ ಪುಸ್ತಕ ಜ್ಞಾನ, ಯೋಗ, ತಪಸ್ಸು ಪ್ರತಿಷ್ಠೆ, ಪ್ರಭಾವಗಳು ಅರ್ಥಹೀನ. ಅವು ಧೂಳಿಗಿಂತಲೂ ಕಡೆ!

ಕಿರು ಹರಟೆ

# ವಧು ಪರೀಕ್ಷೆ

ಈಗ ಒಂದು ತಿಂಗಳಿಂದ ರಂಗಣ್ಣನಿಗೆ ಇದ್ದಕ್ಕಿದ್ದಂತೆಯೇ ತಲೆ ನೋವು ಕಣ್ಣುರಿ, ಆಲಸ್ಯ, ನಿದ್ರೆ ಬಾರದು ಎಲ್ಲ ಒಂದೇ ಬಾರಿ ಪ್ರಾರಂಭವಾಯಿತು!

ಅವನ ಕಂಡರೆ ಗೊತ್ತಾಯಿತು ಇದರ ಕಾರಣ.

ಆ ದಿನವೇ ಗೆಳೆಯ ರಾಮರಾಯರಿಗೊಂದು ಕಾಗದ ಬರೆದು ತಾವು ನಾಡಿದ್ದು ರಂಗಣ್ಣನಿಗೆ ಹೆಣ್ಣು ನೋಡಲು ಅವರಲ್ಲಿಗೆ ಬರುವುದಾಗಿ ತಿಳಿಸಿದರು

ರಾಯರಿಗೆ ಸ್ವರ್ಗ ಮೂರು ಸೆಂಟಿಮೀಟರ್ ಮಾತ್ರ ಉಳಿಯಿತು ಏಕೆಂದರೆ ಅವರ ಮಗಳು ಕುರೂಪಿ, ಬಣ್ಣ ಕಪ್ಪು, ಮಾತು ಬಿಡ್ಡು, ಜೊತೆಗೆ ಒಂದು ಕಣ್ಣು ಸಹ ಇರಲಿಲ್ಲ! ಅವಳನ್ನು ಸೊಗಸಾಗಿ ಅಲಂಕರಿಸಿ ರಂಗಣ್ಣನೆದುರಿಗೆ ನಿಲ್ಲಿಸಬೇಕೆಂದು ಆಲೋಚಿಸಿದರು.

ಆ ನಾಡಿದ್ದು ಬಂದೇ ಬಂತು!

ರಂಗಣ್ಣ ಹೆಣ್ಣು ನೋಡಲು ತಂದೆಯವರೊಡನೆ ರಾಯರ ಮನೆಯಲ್ಲಿ ಹಾಜರಾದ. ವಧು ಕಣ್ಣಿಗೆ ಕನ್ನಡಕ, ಕೈಗೆ ವಾಚು, ತಲೆಗೆ ಹೇರ್‌ಪಿನ್, ಮೈತುಂಬ ಆಭರಣ ತೊಟ್ಟು, ಮುಖಕ್ಕೆ ಪೌಡರ್ ಬಳಿದು, ಕಪ್ಪು ಜಾಕೆಟ್ ತೊಟ್ಟು(ಅದು ಸರಿಯಾಗಿ ಗೊತ್ತಾಗುತ್ತಿರಲಿಲ್ಲ.) ರಂಗಣ್ಣನೆದುರು ಬಂದು ಎಲ್ಲರಿಗೂ ಕಾಫಿಯ ಕೊಟ್ಟು ಒಮ್ಮೆ ತನ್ನ ಸೀರೆಯನ್ನೇ ಎಡವಿ ಬಿದ್ದು ಒಳಗೆ ಓಡಿದಳು ರಂಗಣ್ಣನ ತಂದೆ ಕೇಳಿದರು!

"ನೋಡಿದೆಯೇನೋ ಹುಡುಗೀನ?"

"ನೋಡಿದೆ ಆದರೆ ಅವಳ ಆಭರಣ, ಅಲಂಕಾರಗಳ ನಡುವೆ ಅವಳು ಎಲ್ಲಿದ್ದಳೆಂಬುದೇ ಕಾಣಿಸಲಿಲ್ಲ!' ಎಂದ ರಂಗಣ್ಣ.

—"ಗಾಯತ್ರಿ ಅನುಜ,"
ಬೆಳವಿನ ಕೊಡಿಗೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಒಡೆಕ್ಕಿಲ ಕೃಷ್ಣ ಭಟ್ಟ ಎಲ್. ಟಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



REGD. No. B. G. 176
LICENCE No. 31
Licensed to Post without Prepayment

### ಯೂರೋಪಿನ ಹೆಬ್ಬಾಗಿಲಿಗೆ

# ೧೦೦೦ ರೇವುಗಳ ಸಂಬಂಧ

ಜಗತ್ತಿನ ಅತ್ಯಂತ ಸಣ್ಣ ದೇಶಗಳಲ್ಲೊಂದಾದ ನೆದರ್‌ಲೇಂಡ್ಸಿನಲ್ಲಿದ್ದರೂ ಪ್ರಪಂಚದ ರೇವು ಪಟ್ಟಣಗಳಲ್ಲಿಯೇ ಎರಡನೆಯ ಸ್ಥಾನವನ್ನು ಗಳಿಸಿದೆ ರಾಟರ್‌ಡ್ಯಾಮ್. ಯೂರೋಪಿನ ಅತ್ಯಂತ ಮುಖ್ಯವಾದ ಎರಡು ನದಿಗಳ ಮುಖಜ ಭೂಮಿಯಲ್ಲಿರುವುದರಿಂದ ಆ ಖಂಡದ ಜಲಸಾರಿಗೆ, ಸಂಪರ್ಕಗಳಲ್ಲಿ ಈ ನಗರವು ಬಹು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಆದರೆ, ಕೇವಲ ಪ್ರಕೃತಿ ದತ್ತವಾದ ಸೌಲಭ್ಯಗಳಿಂದ ಮಾತ್ರ ಈ ರೇವು ಪಟ್ಟಣವು ಇಂತಹ ಹೆಸರನ್ನು ಗಳಿಸಿಲ್ಲ; ಅದರ ಹಿಂದೆ ಮನುಷ್ಯನೂ ಹೆಣಗಾಡಿದ್ದಾನೆ. ಮಾನವ, ಪ್ರಕೃತಿಗಳ ಸಹಕಾರದಿಂದ ರಾಟರ್‌ಡ್ಯಾಂ ಇಂದು ಯೂರೋಪಿನ ಹೆಬ್ಬಾಗಿಲು ಎಂದು ಪ್ರಖ್ಯಾತವಾಗಿದೆ.

ಹದಿನಾಲ್ಕನೆಯ ಶತಮಾನದಲ್ಲಿ ಕೇವಲ ಮೀನುಗಾರಿಕೆಯ ಕೇಂದ್ರವಾಗಿದ್ದ ರಾಟರ್‌ಡ್ಯಾಮ್ ಕಾಲಕ್ರಮೇಣ ಪ್ರಗತಿಯ ಹಾದಿಯಲ್ಲಿ ಸಾಗಿ, ಎರಡನೆಯ ಮಹಾ ಯುದ್ಧದ ನಂತರದಲ್ಲಿ ಜಗತ್ತಿನ ಗಮನವನ್ನು ಸೆಳೆಯ ತೊಡಗಿತು. ವಿನಾಶಕಾರಕ ಯುದ್ಧದಿಂದ ನೆಲಸಮವಾಗಿ ಹೋಗಿದ್ದ ನಗರ, ಕುಶಾಗ್ರಮತಿಯ ಆಡಳಿತ ವರ್ಗ ಹಾಗೂ ಅತ್ಯುತ್ಸಾಹಯುತ ಜನತೆಯ ಒಮ್ಮುಖ ಪರಿಶ್ರಮದ ಕಾರಣದಿಂದಾಗಿ ಮತ್ತೆ ತಲೆಯೆತ್ತಿ ನಿಂತಿತು. ೧೯೬೧ರಲ್ಲಿ ನೆದರ್‌ಲೇಂಡ್ಸಿನ ಎಲ್ಲಾ ರೇವುಗಳಿಂದಲೂ ಸಾಗಿಸಲ್ಪಟ್ಟ ೧೧೬೦ ಲಕ್ಷ ಟನ್ ತೂಕದ ಸಾಮಾನುಗಳಲ್ಲಿ ೯೦೦ ಲಕ್ಷ ಟನ್‌ಗಳಷ್ಟನ್ನು ರಾಟರ್‌ಡ್ಯಾಮ್ ರೇವಿನಿಂದಲೇ ಸಾಗಿಸಲಾಯಿತು. ಫ್ರಾನ್ಸಿನ ಎಲ್ಲಾ ರೇವುಗಳನ್ನು ಸೇರಿಸಿದರೂ ರಾಟರ್‌ಡ್ಯಾಂ ರೇವನ್ನು ಮೀರಿಸಲಾಗದು. ಆ್ಯಂಟ್‌ವರ್ಪ್, ಆಮ್‌ಸ್ಟರ್‌ಡಾಂ, ಬ್ರಿಮೆನ್ ಹಾಗೂ ಹ್ಯಾಂಬರ್ಗ್ ರೇವುಗಳೆಲ್ಲದರ ಒಟ್ಟು ರಫ್ತನ್ನು ರಾಟರ್‌ಡ್ಯಾಂ ರೇವು ಪಟ್ಟಣವೊಂದೇ ಸೋಲಿಸುತ್ತದೆ

ಕೈಗಾರಿಕೆಯಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸಿರುವ ಪಶ್ಚಿಮ ಯೂರೋಪಿನ ಉತ್ಪಾದಿತ ವಸ್ತುಗಳು ವಿಶ್ವದ ಎಲ್ಲೆಡೆಯೂ ಬೇಕಾಗಿವೆ. ಅಲ್ಲಿ ದುಡಿಯುವ ಕಾರ್ಮಿಕರಿಗೆ ವಿಶ್ವದ ಎಲ್ಲಾ ಭಾಗಗಳಿಂದಲೂ ಆಹಾರ ಬರಬೇಕಾಗಿದೆ. ಉತ್ಪನ್ನ ವಸ್ತುಗಳನ್ನು ಹೊರಗೆ ಕಳುಹಿಸಲೂ, ಆಹಾರ ವಸ್ತುಗಳನ್ನು ಆಮದು ಮಾಡಿಕೊಳ್ಳಲೂ ರಾಟರ್‌ಡ್ಯಾಂ ರೇವು ಕೇಂದ್ರವಾಗಿದೆ. ಆಮದು ವಸ್ತುಗಳ ಜಲಯಾನ ರಾಟರ್‌ಡ್ಯಾಂನಲ್ಲಿ ಅಂತ್ಯಗೊಳ್ಳುತ್ತದೆ. ಆ ವಸ್ತುಗಳನ್ನು ಸಾಗಿಸಲು ರೈಲು, ಕೊಳವೆಗಳು ಚಿಕ್ಕ ಪುಟ್ಟ ಜಲಯಾನಗಳು ಮುಂತಾದವು ರಾಟರ್‌ಡ್ಯಾಂ ನಗರದಲ್ಲಿ ಹೇರಳವಾಗಿವೆ.

ಪ್ರತಿವರ್ಷವೂ ರಾಟರ್‌ಡ್ಯಾಂ ರೇವನ್ನು ಜಗತ್ತಿನ ೫೦ ವಿವಿಧ ದೇಶಗಳು ಬಳಸಿಕೊಳ್ಳುತ್ತಿವೆ. ರಾಟರ್‌ಡ್ಯಾಂ ವಿಶ್ವದ ಒಂದು ಸಾವಿರ ರೇವುಗಳೊಂದಿಗೆ ಸಂಪರ್ಕ ಹೊಂದಿದ್ದು, ಈ ರೇವನ್ನು ೨೫೦೦೦ ಹಡಗುಗಳೂ, ೨೦೦,೦೦೦ ಸಣ್ಣ ಸಾರಿಗೆ ಹಡಗುಗಳೂ, ಇವಲ್ಲದೆ ಅಸಂಖ್ಯ ಸಣ್ಣ ಪುಟ್ಟ ಜಲಯಾನಗಳೂ ಬಳಸಿಕೊಳ್ಳುತ್ತಿವೆ.

ಕೈಗಾರಿಕಾ ಪ್ರಮುಖ ಪಶ್ಚಿಮ ಜರ್ಮನಿಗೆ ರಾಟರ್‌ಡ್ಯಾಂ ರೇವು ಜೀವನಾಡಿಯಂತಿದೆ ಉಕ್ಕಿನ ತೆರೆಯ ಆಚೆಗಿನ ಕೆಲವೊಂದು ಕಮ್ಯೂನಿಸ್ಟ್ ದೇಶಗಳು ಈ ರೇವನ್ನು ನಂಬಿಕೊಂಡಿವೆ.

ರೈನ್ ನದಿಯ ಎರಡೂ ಬದಿಯ ದೇಶಗಳಿಗೂ, ವಿಶ್ವದ ಉಳಿದ ದೇಶಗಳಿಗೂ ರಾಟರ್‌ಡ್ಯಾಂ ಸೇತುವೆಯಂತಿದೆ. ಬೇರೆ ದೇಶಗಳಿಂದ ರಾಟರ್‌ಡ್ಯಾಂಗೆ ಬರುವ ತೈಲವನ್ನು ರೈನ್ ಪ್ರದೇಶಗಳಿಗೆ ಕೊಳವೆಗಳ ಮೂಲಕ ಹರಿಯಬಿಡಲಾಗುವುದು. ರೈನ್ ಲ್ಯಾಂಡಿನ ಕೈಗಾರಿಕೆಗಳಿಗೆ ಬೇಕಾದ ಕೋಟ್ಯಂತರ ಟನ್ನುಗಳಷ್ಟು ಅದಿರನ್ನು ರಾಟರ್‌ಡ್ಯಾಂ ರೇವಿನಿಂದ ರೈನ್ ನದಿಯಲ್ಲಿ ಸಾಗುವ ಹಡಗುಗಳ ಮೂಲಕ ಸಾಗಿಸಲಾಗುವುದು. ಪಶ್ಚಿಮ ಯೂರೋಪಿನ ಕಾರ್ಖಾನೆಗಳು ಅನವರತ ಹೊಗೆಯುಗುಳುತ್ತಿರುವುದಕ್ಕೂ, ಅಲ್ಲಿನ ಜನತೆಯು ತಿನ್ನುವ ರೊಟ್ಟಿಗೆ ಬೇಕಾದ ಹಿಟ್ಟಿಗೂ ರಾಟರ್‌ಡ್ಯಾಂನಿಂದ ಸರ್ವ ಸಹಕಾರ ದೊರೆಯಬೇಕಾಗಿದೆ; ಅದು ಸಿಗುತ್ತಲೂ ಇದೆ. ೧೯೬೧ರಲ್ಲಿ ೪೧ ಲಕ್ಷ ಟನ್ ದ್ವಿದಳ ಧಾನ್ಯಗಳನ್ನು ರಾಟರ್‌ಡ್ಯಾಂನಲ್ಲಿ ಇಳಿಸಲಾಯಿತು.

ಸುಯೇಜ್ ಕಾಲುವೆಯ ಒಂದು ನೋಟ

ಇಲ್ಲಿ ಇಳಿಸಲಾಗುವ ವಸ್ತುಗಳಲ್ಲಿ ಆಹಾರ ವಸ್ತುಗಳು ಮಾತ್ರವಲ್ಲದೆ, ಅದಿರು ಕಲ್ಲಿದ್ದಲು, ಖನಿಜಗಳು, ಮಂದ ದಿಮ್ಮಿಗಳು ಮುಖ್ಯ ವಸ್ತುಗಳಾಗಿವೆ. ಅದಿರು, ಕಲ್ಲಿದ್ದಲುಗಳನ್ನು ಇಳಿಸಿಕೊಳ್ಳಲು ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಮನುಷ್ಯ ನಿರ್ಮಿತ ಬಂದರು ಇಲ್ಲಿದೆ. ಅದರ ಹೆಸರು ವಾಲ್‌ಹೇವನ್. ೧೯೬೧ರಲ್ಲಿ ಒಟ್ಟು ೧೩೫ ಲಕ್ಷ ಟನ್‌ಗಳಷ್ಟು ಅದಿರನ್ನು ಇಲ್ಲಿ ಇಳಿಸಿ ಸಾಗಿಸಲಾಗಿದೆ.

ಈ ರೇವಿನಲ್ಲಿ ಸಾಗಾಣಿಕೆಯ ಕಾರ್ಯವನ್ನು ಅತ್ಯಂತ ಚುರುಕಾಗಿ ನಡೆಸಲಾಗುವುದು. ನೀರಿನಲ್ಲಿ ಹಡಗುಗಳು ನಿಂತಿರುವಂತೆಯೇ ಒಂದರ ಸಾಮಾನುಗಳನ್ನು ಮತ್ತೊಂದಕ್ಕೆ ಬೃಹದಾಕಾರದ ಕ್ರೇನ್‌ಗಳ ಸಹಾಯದಿಂದ ವರ್ಗಾಯಿಸಲಾಗುವುದು, ಎಣ್ಣೆಯನ್ನು ಸಾಗಿಸುವ ವಿಷಯದಲ್ಲಿ ಹಳೆಯ ಜಗತ್ತಿನಲ್ಲಿ ರಾಟರ್‌ಡ್ಯಾಂಗೆ ಪ್ರಥಮ ಸ್ಥಾನ! ಎಣ್ಣೆಯ ಶುದ್ಧೀಕರಣ ಕೇಂದ್ರಗಳಲ್ಲಿ ಆಧುನಿಕ ಜಗತ್ತಿನಲ್ಲಿ ಈ ರೇವಿಗೆ ಪ್ರಥಮ ಸ್ಥಾನ! ಎಣ್ಣೆಯ ಆವಶ್ಯಕತೆಯ ಏರುವಿಕೆಯನ್ನು ಗಮನಿಸಿಯೇ ಇಲ್ಲಿನ ಇನ್ನೊಂದು ಬಂದರಾದ ಯೂರೋಪೋರ್ಟನ್ನು ಅಭಿವೃದ್ಧಿಗೊಳಿಸಲಾಯಿತು ಅನೇಕ ಬಗೆಯ ವಸ್ತುಗಳನ್ನು ನಿರ್ದಿಷ್ಟ ಉಷ್ಣಾಂಶದಲ್ಲಿಡುವ ಸಲುವಾಗಿ ಇಲ್ಲಿ ಶೀತಗೃಹಗಳಿಗೆ ಆದ್ಯ ಪ್ರಾಮುಖ್ಯತೆಯನ್ನು ನೀಡಲಾಗಿದೆ,

ರಾಟರ್‌ಡ್ಯಾಂ ರೇವು ಪ್ರಾಬಲ್ಯಕ್ಕೆ ಬರುತ್ತಿರುವಂತೆಯೇ, ನಗರವೂ ಉತ್ಕರ್ಷವನ್ನು ಹೊಂದುತ್ತಿದೆ. ಆಧುನಿಕ ಶಿಲ್ಪಕ್ಕೆ ಹೆಸರಾದ ಈ ನಗರವು ಪ್ರೇಕ್ಷಕರನ್ನು ಸೆಳೆಯುತ್ತಿದೆ. ಎಂದಿನವರೆಗೆ ರೈನ್ ಹಾಗೂ ಮಾಸ್ ನದಿಗಳು ರಾಟರ್‌ಡ್ಯಾಂ ಮೂಲಕ ಹರಿದು ಸಪ್ತಸಮುದ್ರಗಳೊಂದಿಗೆ ವಿಲೀನವಾಗುತ್ತಿರುತ್ತವೆಯೋ ಅಲ್ಲಿಯ ವರೆಗೆ ಈ ನಗರದ ಅಭಿವೃದ್ಧಿಗೆ ಕುಂದಕ ಬಾರದೆಂದು ನಂಬಲಾಗಿದೆ. ರಾಟರ್‌ಡ್ಯಾಂಗೆ ಚತುರ್ದಿಕ್ಕುಗಳಿಂದಲೂ ವ್ಯಾಪಾರವು ಬರುತ್ತಿರುವುದೇ ಈ ನದೀಜಲಗಳಿಂದ. ಅಲ್ಲಿ ನಿತ್ಯವೂ ಹೊಸತಾದ ಕ್ರೇನ್‌ಗಳನ್ನೂ, ಹಡಗುಗಳನ್ನೂ ಬಂದರು ವಿಸ್ತೀರ್ಣಗಳನ್ನೂ ಕಾಣಬಹುದು. ಅಂತಹ ನಿತ್ಯ ಚಟುವಟಿಕೆಯಿಲ್ಲವೆಂದರೆ, ಅಲ್ಲಿನ ಗಡಿಬಿಡಿಯ ವ್ಯವಹಾರವನ್ನು ಸುಧಾರಿಸಿಕೊಂಡು ಹೋಗಲು ಸಾಧ್ಯವೇ ಇಲ್ಲ.

ಹೀಗೆ, ಜನರ ಉತ್ಸಾಹ, ಸರ್ಕಾರದ ನಿರ್ಧಾರಗಳು ಒಂದಾಗಿ ಸೇರಿ ರಾಟರ್‌ಡ್ಯಾಂನ್ನು ಯೂರೋಪಿನ ಹೆಬ್ಬಾಗಿಲಾಗಿಸಿದೆ!

---

ಮಹಿಳೆಯರಿಗಾಗಿ ಉಳಿತಾಯ ಯೋಜನೆ...೧

ಜೀವನ
ಸುಂದರ......
ಅದರ ಸವಿನೆನಪು
ಅತಿ ಸುಂದರ ......

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ **"ಬ್ಯಾಂಕ್ ಎಕೌಂಟ್"** ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ ಬ್ಯಾಂಕ್ ಖಾತೆಯೂ ಅಭಿವೃದ್ಧಿಯತ್ತ ಬೆಳೆಯಬಲ್ಲುದು. **"ಬ್ಯಾಂಕ್ ಖಾತೆಯು"** ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

**ಭವಿಷ್ಯತ್ತಿನ ಭದ್ರತೆಗಾಗಿ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ**

# ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: ೧೯೨೫. ಶಾಖೆಗಳು, ೧೭೬

**— ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ —**

Edited, Printed & Published by K. H. Shetty. at the Navayuga Press, Udipi, S. India.

ONTRIBUTE
OUR MITE
O OUR
IATIONAL
EFENCE
UND

# ನವಯುಗ

Estd. 1921 ಸ್ಥಾಪನೆ
Regd No. B.G 176
Vol. 42 No 33

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 25—4—1963 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6_76
ಸಂಪುಟ ೪೨ ಸಂಚಿಕೆ ೩೩

ನಮ್ಮ
ರಾಷ್ಟ್ರೀಯ
ರಕ್ಷಣಾನಿಧಿಗೆ
ಉದಾರ
ಸಹಾಯ
ಸಲ್ಲಿಸಿರಿ

## ಸಂಧಾನದ ಹೆಸರಿನಲ್ಲಿ

# ಕಾಶ್ಮೀರವನ್ನು ಬಲಿಕೊಡಬಾರದು

ಭಾರತದ ಉತ್ತರದ ಗಡಿಗೆ ಸಮೀಪವಾಗಿ ವಿಪುಲವಾದ ಚೀನೀಯ ಸೇನೆಗಳ ಜಮಾವಣೆಯಿಂದ ಚೀನವು ತನ್ನ ಅನ್ಯಾಯದ ಬೇಡಿಕೆಯನ್ನು ಮುಂದಿಟ್ಟು ತಂದುಕೊಂಡ ಭಾರತದೊಡನಿರುವ ಗಡಿ ತಂಟೆಯನ್ನು ಬಿಟ್ಟುಕೊಡಲು ಅಥವಾ ಅದನ್ನು ಸಮಾಧಾನಕರವಾಗಿ ಪರಿಹರಿಸಿಕೊಳ್ಳಲು ಬಯಸುತ್ತಿಲ್ಲವೆಂಬುದನ್ನು ಸಾರಿ ಹೇಳುತ್ತದೆ. ಪ್ರಧಾನಿ ನೆಹರುರವರ ಅಭಿಪ್ರಾಯದಂತೆ ಈ ಬಾರಿ ಚೀನೀಯ ದುರಾಕ್ರಮಣಕಾರರು ಭಾರತದ ಮೇಲೆ ನೇರವಾಗಿ ದಾಳಿ ಮಾಡುವಷ್ಟು ಮುಂದುವರಿಯಲಾರರು; ಆದರೆ, ಭಾರತೀಯ ಸಂರಕ್ಷಣೆಗೆ ಒಳಪಟ್ಟ ಭೂತಾನ ಮತ್ತು ಸಿಕ್ಕಿಂಗಳ ಗಡಿಗಳಲ್ಲಿ ಕಿರುಕುಳ ಕೊಡುವುದಕ್ಕೆ ತೊಡಗುವ ನಿರೀಕ್ಷೆಯಿದೆ. ಈ ಬೇಸಗೆಯಲ್ಲಿ ಸಾಮ್ರಾಜ್ಯ ಲೋಲುಪ ನರಭಕ್ಷಕರ ಸಮಾನರಾದ ಸಾಮ್ರಾಜ್ಯವಾದಿ ಚೀನೀಯರು ಭಾರತದ ಮೇಲೆ ದಂಡೆತ್ತಿ ಬಾರದುಳಿದರೆ, ಸಮಸ್ಯೆ ಎಳ್ಳಷ್ಟು ತಿಳಿಗೊಳ್ಳುವ ಆಶೆ ಹುಟ್ಟುವುದು ಸಹಜ. ಇದರ ಮೇಲೆ, ಆಂಧ್ರದ ಕರಾವಳಿಯಲ್ಲಿ ಕೂಡ ಚೀನೀಯರದೆಂಬ, ಹೇಳಲಾಗುವ ಹಡಗವೊಂದು ದೃಷ್ಟಿಗೋಚರವಾಗಿಂತಿದೆ ಇದರಿಂದ ಶತ್ರುಗಳು ಕಳೆದ ಸಲ ನೆಲಮಾರ್ಗವಾಗಿ ಗಡಿತಂಟೆಯ ನೆಪದಿಂದ ಆಕ್ರಮಣ ಮಾಡಿದ್ದರೆ, ಈ ಬಾರಿ ಯುದ್ಧವನ್ನೇ ಘೋಷಿಸುವ ಮಹತ್ವಾಕಾಂಕ್ಷೆಯುಳ್ಳವರೇನೋ!

### ಪಾಕ್ ಕುಹಕತನ

ಇಂತಹ ರುದ್ರ ಗಂಭೀರ ಭಯಾನಕ ಪರಿಸ್ಥಿತಿಗಳಿಂದ ವಿವಂಚನೆಗೊಳಗಾಗಬೇಕಾದವರು ಯಾರು? ಶತ್ರುಗಳಿಂದ ತಮ್ಮ ಸ್ವಾತಂತ್ರ್ಯವನ್ನೂ, ಸಮಗ್ರತೆಯನ್ನೂ ಸಾರ್ವಭೌಮತೆಯನ್ನೂ ಉಳಿಸಿಕೊಳ್ಳುವುದಕ್ಕಾಗಿ ಪ್ರಾಣ ಪಣವಿಟ್ಟು ಹೋರಾಡುವ ಪರಮ ಕರ್ತವ್ಯದೆಡೆಗೆ ಸಾಗಬೇಕಾಗಿದೆಯೆಂದು ಭಾರತೀಯನಿಗೆ ದೇಶರಕ್ಷಣೆಯ ಕಡೆಗೆ ವಿಶೇಷ ಗಮನ ಕೊಡಬೇಕಾಗಿದೆ ಆತ ತನ್ನನ್ನು ಸರ್ವ ರೀತಿಯಿಂದಲೂ ಸಮರ್ಥ ಸೈನಿಕನನ್ನಾಗಿ ಪುನಾ ರೂಪಿಸಿ, ಕೊಳ್ಳಬೇಕಾಗಿದೆಯಾತ ತನ್ನ ಶಕ್ತಿ ಸರ್ವಸ್ವವನ್ನೂ ಏಕೀಕೃತಗೊಳಿಸಿ, ತನ್ನ ಮಿತ್ರರಿಂದ ಸಹಾಯವನ್ನು ಕೂಡಿಸಿ ದೇಶಕ್ಕಾಗಿ ಹೋರಾಡುವ ಅಚಲ ಸಂಕಲ್ಪಯೋಗ ಬೇಕಾಗಿದೆಯಾತ. ಭಾರತೀಯರು ಇಂತಹ ಸಮರ ಸಿದ್ಧತೆಯಲ್ಲಿ ತೊಡಗಿರುವಾಗ, ಇಲ್ಲಿ ಕಾಣದ ತುಂಟಾಟವನ್ನು ತೋರಿಸುತ್ತಿದ್ದಾರೆ ನೆರೆಯ ಪಾಕಿಸ್ತಾನಿಗಳು.

### ಹೊಸ ಸಮಸ್ಯೆಗಳು

ಸಹೋದರ ವೈಮನಸ್ಯದಿಂದಲೇ ಹಂಚಿಹೋದ ಪಾಕಿಸ್ತಾನ ಕಿರಿಯನಾದರೆ, ಭಾರತವು ಹಿರಿಯನೆನ್ನಬಹುದು. ಒಂದಾಗಿರಲಾರದ ಕಿರಿಯನೊಬ್ಬ ತನ್ನ ಪಾಲು ಪಡೆದು ದೂರ ಹೋಗಿ ಕಾಲಾಂತರದಲ್ಲಿ ತನ್ನನ್ನೇ ತಾನು ನಷ್ಟಗೊಳಿಸಿ ಕೊನೆಗೆ ಹಿರಿಯಣ್ಣನೊಡನೆ ಸೇರಿಕೊಂಡ ಸಾಮ್ಯ ಪಾಕಿಸ್ತಾನಕ್ಕೂ ಬಹುಮಟ್ಟಿಗೆ ಅನ್ವಯಿಸಬಹುದು. ಜನ್ಮಜಾತ ಶತ್ರುತ್ವವನ್ನು ಪ್ರದರ್ಶಿಸುತ್ತ ಹೊಸ ಹೊಸ ಸಮಸ್ಯೆಗಳ ಮೂಲಕ ಹಳೆಯವನ್ನು ಮತ್ತಷ್ಟು ಸಿಕ್ಕು ಹಾಕುತ್ತಿರುವ ಪಾಕಿಸ್ತಾನ ನಿಜಕ್ಕೂ ಭಾರತಕ್ಕೆ ನುಂಗಲಾರದ ತುತ್ತಾಗಿದೆ. ಭಾರತದ ಮೇಲೆ ಕಮ್ಯುನಿಷ್ಟ ಆಕ್ರಮಣ ನಡೆದಿರುವಾಗ, ಅದನ್ನು ಸಂಪೂರ್ಣವಾಗಿ ಕಡೆಗಣಿಸಿ ಆ ಸಂಬಂಧದಲ್ಲಿ ಭಾರತ ವಿರೋಧಿ ನೀತಿಯನ್ನೇ ಅನುಸರಿಸುತ್ತಿರುವ ಪಾಕಿಸ್ತಾನಿಗಳು ಕುಹಕ ಕಿಡಿಗಳನ್ನೇ ಉಗುಳುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ.

### ಭಾರತ ದ್ವೇಷ ಪ್ರದರ್ಶನ

ಕೆಂಪು ಚೀನವು ಭಾರತದ ಮೇಲೆ ಮಾಡಿದ ನಗ್ನಾಕ್ರಮಣವು ಪಾಕಿಸ್ತಾನ ಸಹಿತವಾದ ಭಾರತ ಉಪಖಂಡದ ಮೇಲೆ ಮಾಡಿದುದು ಎಂದು ಅದಕ್ಕೆ ಅಮೇರಿಕೆ ಮತ್ತು ಬ್ರಿಟನ್ನುಗಳು ತಿಳಿದು ಹೇಳಿದುವು ಆದರೆ, ತೋರಿಕೆಗೆಂದು ಪಾಕ್ ಇದನ್ನು ಒಪ್ಪಿಕೊಂಡಂತೆ ತಲೆದೂಗಿದ್ದು ನಿಜ, ಆದರೆ, ಆ ಬಳಿಕ ಅದು ಅನುಸರಿಸಿದ ನೀತಿಯು ಮಾತ್ರ ಇದಕ್ಕೆ ಪ್ರತಿಕೂಲವಾಗಿಯೇ ಇದೆ. ಆದರೆ, ಆಕ್ರಮಣಕ್ಕೆ ತುತ್ತಾದ ಭಾರತವು ದೇಶದಲ್ಲಿ ತನ್ನ ಸೈನಿಕ ಶಕ್ತಿಯನ್ನು ಒಹಳಷ್ಟು ಹೆಚ್ಚಿಸುವುದರೊಡನೆ ವಿದೇಶಗಳಿಂದಲೂ ಅವಶ್ಯಕವೆನಿಸಿದಷ್ಟು ಮಿಲಿಟರಿ ಸಹಾಯವನ್ನೂ ಪಡೆದುಕೊಳ್ಳುತ್ತಿದೆ. ಇದರಿಂದ ಹೆಚ್ಚಿನ ವಿವಂಚನೆಗೆ ಪಾಕಿಸ್ತಾನವು ಗುರಿಯಾಗಿದೆ. ಪಾಕ್ ರಾಜಕಾರಣಿಗಳು ಹೇಳುತ್ತ ಬಂದಿದ್ದಾರೆ, 'ವಿದೇಶಗಳು ಅತಿ ದೊಡ್ಡ ಮೊತ್ತದಲ್ಲಿ ಭಾರತಕ್ಕೆ ಸೈನಿಕ ಸಹಾಯವನ್ನು ನೀಡುತ್ತಿರುವುದರಿಂದ ಪಾಕಿಸ್ತಾನವು ಭಯಗ್ರಸ್ತವಾಗಿದೆ" ಎಂದು. ಆದರೆ, ಭಾರತವು ಪಾಕಿಸ್ತಾನದ ಮೇಲೆ ದಂಡೆತ್ತಿ ಹೋಗುವ ಇರಾದೆಯನ್ನು ಈ ಮೊದಲಾಗಲಿ, ಈಗಲಾಗಲಿ ಇಟ್ಟುಕೊಂಡಿರುವುದಿಲ್ಲ; ಇನ್ನೊಬ್ಬರ ಸಾರ್ವಭೌಮತೆಯನ್ನು ತನ್ನದರಂತೆಯೇ ಉಚ್ಚ ಗೌರವದಿಂದ ಕಾಣುವುದೇ ಭಾರತ ಧೋರಣೆ. ಹಾಗಿರುವಾಗ, ಪಾಕ್ ಭೀತಿಯು ನಿರಾಧಾರ ಮತ್ತು ಭಾರತದ ಮೇಲೆ ಅದಕ್ಕಿರುವ ದ್ವೇಷದ ಪ್ರದರ್ಶನವೆಂದು ನಿರ್ಭಿಡೆಯಾಗಿ ಹೇಳಬಹುದು.

### ಅಧಃಪತನದತ್ತ ಪಾಕ್

ಆದರೆ, ಪಾಕಿಸ್ತಾನವನ್ನು ಮಾತ್ರ ನಂಬುವುದು ಸಾಧ್ಯವಿರುವುದಿಲ್ಲ. ಕಮ್ಯುನಿಸ್ಟ ಆಕ್ರಮಣವನ್ನು ತಡೆಹಿಡಿಯಲೆಂದು ಅಮೇರಿಕೆಯು ಅದಕ್ಕೆ ನೀಡಿರುವ ಸೈನಿಕ ಸಹಾಯವನ್ನು ದುರುಪಯೋಗಿಸುವ ದುರಾಲೋಚನೆಯಿಂದ ಭಾರತದೊಡನೆ ಸಮರ ಹೂಡುವ ಸಂಚನ್ನು ಅದು ಮಾಡುತ್ತಿದೆ. ಜಗತ್ತಿಗೆ ಜಗತ್ತೇ ಪ್ರತಿಭಟಿಸಿದರೂ ಚೀನಾದೊಡನೆ ಕೆಟ್ಟ ಭಾರತದ ಸಂಬಂಧದ ದುರ್ಲಾಭವನ್ನು ತಾನು ಪಡೆಯುವ ಆತುರದಿಂದ ತನ್ನದಾಗಿರದ ಕಾಶ್ಮೀರದ ಮತ್ತು ಚೀನೀಯ ಗಡಿ ಸಂಬಂಧದಲ್ಲಿ ಒಡಂಬಡಿಕೆ ಮಾಡಿಕೊಂಡು ಯಾರದೋ ಒಂದಷ್ಟು ಭೂಮಿಯನ್ನು ಕೆಂಪು ಚೀನಾದವರಿಗೆ ದಾನಮಾಡಿ ಅದು ಪುಣ್ಯ ಗಳಿಸಿತು. ಕಾಶ್ಮೀರ ವಿವಾದವನ್ನು ಬಗೆಹರಿಸುವ ಹೆಸರಿನಲ್ಲಿ ಮಾತುಕತೆಗಳಿಗೆ ತೊಡಗಿರುವಂತೆಯೇ ಅದಕ್ಕೆ ಬಾಧಕವಾದ ಹೇಯ ಕೃತ್ಯಗಳಲ್ಲಿ ಅದು ತೊಡಗಿದೆ. ತನ್ನ ದೇಶದೊಳಗೂ ಭಾರತ ವಿರೋಧಿ ನೀತಿಯನ್ನು ಬೆಂಬಲಿಸುತ್ತ ಭಾರತ ವಿರೋಧಿ ಧೋರಣೆಗಳನ್ನೇ ರೂಪಿಸುತ್ತವೆ.| ಜ| ಅಯೂಬ ಖಾನ್ ಮತ್ತು ಭುಟ್ಟೋರವರು ತಮ್ಮ ಅಧಿಕಾರದ ದುರುಪಯೋಗ ಮಾಡಿ ಅದನ್ನು ಅಧಃಪತನದತ್ತ ಒಯ್ಯುತ್ತಿದ್ದಾರೆ.

### ಅಮೇರಿಕೆಯ ನೀತಿ

ಚೀನೀಯ ಆಕ್ರಮಣದಿಂದ ಭಾರತೀಯ ಉಪಖಂಡವನ್ನು ಸಂರಕ್ಷಿಸಲು ಅಕ್ರ ಕಮ್ಯುನಿಜಂನ ಪ್ರಚಾರವನ್ನು ತಡೆಗಟ್ಟಲು ಭಾರತ ಮತ್ತು ಪಾಕಿಸ್ತಾನಗಳ ನಡುವಣ ಸಂಬಂಧವು ತಿಳಿಗೊಳ್ಳಬೇಕು; ಮುಖ್ಯವಾಗಿ ಕಾಶ್ಮೀರದ ಪ್ರಶ್ನೆಗೆ ಸೂಕ್ತ ಉತ್ತರವರಸಲು ಉಭಯತರರೂ ಸಂಧಾನಕ್ಕೆ ತೊಡಗಬೇಕು—ಎಂಬ ಅಭಿಪ್ರಾಯದಂತೆ ಸ್ವರ್ಣಸಿಂಗ — ಭುಟ್ಟೊ ಮಾತುಕತೆಯ ಐದು ಸುತ್ತುಗಳು ವ್ಯರ್ಥ ಸತ್ತಿದುವು. ಈ ಸಲಹೆಯನ್ನು ಮುಂದಿಟ್ಟವರು ಬ್ರಿಟನ್ನಿನ ಡಂಕನ್ ಸ್ಯಾಂಡಿಸರು. ಭಾರತಕ್ಕೆ ನೀಡುವ ಸೈನಿಕೋಪಕರಣಗಳ ಸಹಾಯವನ್ನೂ ಕಾಶ್ಮೀರ ತಂಟೆಯ ಪರಿಹಾರವನ್ನೂ ಒಂದಕ್ಕೊಂದು ಜತೆಗೂಡಿಸಿ ಗಂಟುಹಾಕಿದರು. ಇವರು ಅಮೇರಿಕೆಯ ರಾಯಭಾರಿ ಪ್ರೊ| ಗಾಲ್ ಬ್ರೈಥರು ಇದಕ್ಕೆ ಸೈಗುಟ್ಟಿದರು. ಆದರೆ ಈ ರೀತಿಯ ಗಂಟು ಹಾಕುವುದಕ್ಕೆ ಅಮೇರಿಕೆಯ ಅಧ್ಯಕ್ಷ ಕೆನ್ನಡಿಯವರು ವಿರೋಧಿಸಿದ್ದಾರೆ ಎಂತಲೇ ಗಾಲ್ ಬ್ರೈಥರು ತಮ್ಮ ಹುದ್ದೆಯಿಂದ ನಿವೃತ್ತಿ ಹೊಂದಲಿದ್ದಾರೆ. ಅವರ ಸ್ಥಾನವಲ್ಲಿ ಚೆಸ್ಟರ್ ಬೌಲ್ಸರು ನಾಮಕರಣಗೊಂಡಿದ್ದಾರೆ. ಭಾರತದಲ್ಲಿ ಅಮೇರಿಕೆಯ ಕಡೆಗೆ ಅನುಕೂಲಾಭಿಪ್ರಾಯ ಮೂಡಿಸುವುದೇ ಈ ಹೊಸ ನೇಮಕದ ಉದ್ದೇಶ. ಕಾಶ್ಮೀರ ಪ್ರಶ್ನೆಯ ಇತ್ಯರ್ಥದ ಹೆಸರಿನಲ್ಲಿ ಭಾರತದ ಮೇಲೆ ಒತ್ತಾಯ ಹೇರಿದ್ದರಿಂದ ಈ ಸದಭಿಪ್ರಾಯ ಹ್ರಾಸವಾಗಿವೆಯೆಂದು ಕೆನ್ನಡಿ ಅಂದುಕೊಂಡಿದ್ದಾರೆ; ಇದು ಸತ್ಯವೂ ಹೌದು.

### ಕಾಶ್ಮೀರದ ವಿಭಜನೆಯೆ?

ಅಮೇರಿಕೆಯು ಚೀನೀಯ ಆಕ್ರಮಣದಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಭಾರತಕ್ಕೆ ಸಾಧ್ಯವೆನಿಸಿದಷ್ಟು ನೆರವು ನೀಡಲು ಉತ್ಸಾಹ ತೋರಿಸುತ್ತಿದೆ. ಆದರೂ ಅಮೇರಿಕೆಯಲ್ಲಿ ಭಾರತ ಬಗ್ಗೆ ಸದಭಿಪ್ರಾಯ ಹೆಚ್ಚದೆ ಹೋದರೆ ಕೆನ್ನೆಡಿಯವರಿಗೆ ಇಂತಹ ಸಹಾಯ ನೀಡುವುದು ಕಷ್ಟವಾದೀತು. ಅದಕ್ಕಾಗಿಯೇ ಅವರು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಿರುವರು. ಭಾರತದ ತಾಟಸ್ಥ್ಯ ನೀತಿಯನ್ನು ಈಗ ಅಮೇರಿಕವು ಅರ್ಥ ಮಾಡಿಕೊಂಡಿರುವುದರಿಂದ, ಭಾರತ ಕಡೆಗಿನ ಅಭಿಮಾನವೂ ಹೆಚ್ಚುವಂತಾಗಿದೆ. ಕಾಶ್ಮೀರ ಪ್ರಶ್ನೆಯ ಪರಿಹಾರಕ್ಕೆ ಭಾರತ—ಪಾಕ್ ಪ್ರತಿನಿಧಿಗಳ ಮಾತುಕತೆಗಳು ಯಾವ ಮಾರ್ಗವನ್ನು ತೋರಿಸದೆ ಅದು ವ್ಯರ್ಥವಾಗುತ್ತಿರುವುದನ್ನು ಕಂಡುಕೊಂಡ ಅ

([illegible]ನೇ ಪುಟ ನೋಡಿರಿ)

ಮಿತವ್ಯಯ
ಮತ್ತು ಉಳಿತಾಯ
ರಕ್ಷಣಾ ತಯಾರಿಗೆ
ಸಹಾಯ

## ಮಾನವ ಪ್ರಯತ್ನದ ಪ್ರತೀಕವಾಗಿ

# ಗಂಗೆಯು ಅವತರಿಸಿದಳು

ಮಹಾರಾಜ ಹರಿಶ್ಚಂದ್ರನ ವಂಶದಲ್ಲಿ ಅವನಿಂದ ಎಷ್ಟೋ ಪೀಳಿಗೆಯ ಬಳಿಕ ರಾಜ ಬಾಹು ಎಂಬವನು ಜನ್ಮ ತಳೆದನು. ಕ್ಷತ್ರಿಯರೆಲ್ಲರೂ ಕೂಡಿ ಇವನನ್ನು ಯುದ್ಧದಲ್ಲಿ ಸೋಲಿಸಿದರು. ಅನಂತರ ಇವನು ತನ್ನ ಮಡದಿಯರೊಂದಿಗೆ ಕಾಡಿಗೆ ಹೊರಟು ಹೋದನು. ಇದೇ ಕಾಲದಲ್ಲಿ ಅವನ ಪಟ್ಟದ ರಾಣಿ ಗರ್ಭವತಿಯಾಗಿದ್ದಳು. ಪುತ್ರೋತ್ಪನ್ನವಾದರೆ ಪಟ್ಟದ ರಾಣಿಯು ಇನ್ನು ಹೆಚ್ಚು ಆದರ ಸತ್ಕಾರಗಳಿಗೆ ಪಾತ್ರಳಾಗುವಳೆಂದು ಸವತಿಯರು ಇದನ್ನು ಸಹಿಸಲಿಲ್ಲ. ಇವರೆಲ್ಲರೂ ಒಟ್ಟುಕೂಡಿ ಒಂದು ದಿನ ಆಹಾರದಲ್ಲಿ ವಿಷ ಬೆರೆಸಿ, ರಾಣಿಗೆ ಕೊಟ್ಟರು. ಆದರೆ, ರಾಣಿಗಾಗಲೀ ಆಕೆಯ ಗರ್ಭಕ್ಕಾಗಲೀ ಯಾವ ಅಪಾಯವೂ ಸಂಭವಿಸಲಿಲ್ಲ. ಕೆಲವು ಸಮಯದ ಬಳಿಕ ಆಕೆಯ ಗರ್ಭದಿಂದ ಪುತ್ರೋತ್ಪನ್ನವಾಯಿತು. ಶಿಶು ಹುಟ್ಟುವೊಡನೆಯೇ ಸವತಿಯರು ತಿನ್ನಿಸಿದ್ದ ವಿಷವೂ ಹೊರಬಂತು. ವಿಷದೊಡನೆ ಜನ್ಮ ತಳೆದವನಾದುದರಿಂದ ಆ ಮಗುವಿಗೆ "ಸಗರ" (ಗರ ಎಂದರೆ ವಿಷ) ಎಂದು ನಾಮಕರಣವಾಯಿತು.

ದೊಡ್ಡವನಾದ ಬಳಿಕ ಸಗರನು ಬಹಳ ಪ್ರತಾಪಿ ರಾಜನೆನಿಸಿದನು. ಕ್ಷತ್ರಿಯರೆಲ್ಲರನ್ನೂ ಸೋಲಿಸಿ, ಅವರು ತನ್ನ ತಂದೆಯಿಂದ ಅಪಹರಿಸಿದ್ದ ರಾಜ್ಯವನ್ನು ಹಿಂದೆ ಪಡೆಕೊಂಡನು. ಪೃಥ್ವಿಯನ್ನೇ ಗೆದ್ದು ಚಕ್ರವರ್ತಿಯೆನಿಸಿದನು.

ಸಗರ ರಾಜನಿಗೆ ಇಬ್ಬರು ರಾಣಿಯರಿದ್ದರು. ಒಬ್ಬಳು ಸುಮತಿ; ಇನ್ನೊಬ್ಬಳು ಕೇಶಿನಿ. ಓರ್ವ ಋಷಿಯ ವರದಾನದಿಂದಾಗಿ ಸುಮತಿಗೆ ಅರುವತ್ತು ಸಾವಿರ ಪುತ್ರರುತ್ಪನ್ನರಾದರು. ಕೇಶಿನಿಗೆ ಅಸಮಂಜಸ ಎಂಬೊಬ್ಬ ಪುತ್ರನಾದನು. ವಿಧಿ ನಿಯಮವನ್ನು ಯಾರೂ ತಿಳಿಯಲಾರರು. ಸಗರನ ಈ ಎಲ್ಲಾ ಪುತ್ರರೂ ಬಹಳ ದುಷ್ಟರಾಗಿದ್ದರು. ಪಿತನು ತ್ಯಜಿಸಿದ ಬಳಿಕ ಅಸಮಂಜಸನೇನೋ ಕಾಡಿಗೆ ಹೋಗಿಬಿಟ್ಟನು. ಆದರೆ ಉಳಿದ ಅರುವತ್ತು ಸಾವಿರ ಮಂದಿಯ ಉಪಟಳ ಅಸಹ್ಯವಾಯಿತು. ಜಗತ್ತಿನಲ್ಲಿ ಇವರ ಉಪಟಳದಿಂದಾಗಿ ಧಾರ್ಮಿಕ ಕರ್ಮಗಳು ನಡೆಯಲು ಅಸಾಧ್ಯವಾಯಿತು. ಕೊನೆಗೆ ದೇವತೆಗಳೆಲ್ಲರೂ ಮಹರ್ಷಿ ಕಪಿಲ ಮುನಿಗೆ ದೂರಿತ್ತರು. ಮುನಿಯು ಅವರನ್ನು ಸಮಾಧಾನಗೊಳಿಸಿ, "ಅವರ ಅವಸಾನ ದೂರವಿಲ್ಲ, ಭಯಪಡದಿರಿ" ಎಂದು ಆಶ್ವಾಸನೆಯಿತ್ತರು.

ಮಹಾರಾಜ ಸಗರನು ಒಮ್ಮೆ ಅಶ್ವಮೇಧಯಾಗವನ್ನು ಪ್ರಾರಂಭಿಸಿದನು. ಅವನು ಧರ್ಮಕರ್ಮ ನಿಷ್ಠನಾದುದರಿಂದ ತನ್ನ ಪುರಿಯನ್ನಾಕ್ರಮಿಸುವ ಭಯದಿಂದ ದೇವರಾಜ ಇಂದ್ರನು ಇವನ ಯಜ್ಞಾಶ್ವವನ್ನು ಕದ್ದುಕೊಂಡು ಹೋಗಿ, ಪಾತಾಳ ಲೋಕದಲ್ಲಿ ತಪಸ್ಗೈಯ್ಯುತಿದ್ದ ಕಪಿಲ ಮುನಿಯಾಶ್ರಮದಲ್ಲಿ ಕಟ್ಟಿ ಹಾಕಿದನು.

ಯಜ್ಞಾಶ್ವವು ಮಾಯವಾದುದರಿಂದಾಗಿ ಸಗರ ಪುತ್ರರಲ್ಲಿ ಕೋಲಾಹಲವುಂಟಾಯಿತು. ಇಡಿ ಪೃಥ್ವಿಯನ್ನವರು ಹುಡುಕಿದರೂ ಕುದುರೆಯು ಸಿಗಲಿಲ್ಲ. ಕೊನೆಗೆ ಅವರು ಭೂಮಿಯನ್ನಗೆಯಲು ಪ್ರಾರಂಭಿಸಿದರು. ಪ್ರತಿಯೊಬ್ಬ ಪುತ್ರನೂ ಒಂದೊಂದು ಯೋಜನ ಅಗೆದನು. ಎಲ್ಲರೂ ಅಗೆದು ಅಗೆದು ಒಂದು ಬಹು ದೊಡ್ಡ ತಗ್ಗು ಅಲ್ಲಿ ಉಂಟಾಯಿತು. ಅಲ್ಲಿಯೇ ನೀರು ನಿಂತು ಅದು ಸಮುದ್ರವಾಯಿತು. ಸಗರ ಪುತ್ರರು ಇದನ್ನು ಅಗೆದು ನಿರ್ಮಿಸಿದರಾದುದರಿಂದ ಇದನ್ನು ಸಾಗರ ಎಂದು ಕರೆಯುತ್ತಾರೆ. ಅಗೆಯುತಿದ್ದ ಸಗರ ಪುತ್ರನೊಬ್ಬನು ಪಾತಾಳ ಲೋಕದಲ್ಲಿ ಅಶ್ವವನ್ನು ಕಂಡನು. ಅವನು ಹಿಂತಿರುಗಿ ಬಂದು, ಪಾತಾಳ ಲೋಕದಲ್ಲಿ, ಕಪಿಲ ಮುನಿಯ ಆಶ್ರಮದಲ್ಲಿ ಕುದುರೆಯನ್ನು ಕಟ್ಟಿ ಹಾಕಿದ್ದಾರೆ. ಮುನಿಯು ಧ್ಯಾನಮಗ್ನನಾಗಿದ್ದಾನೆ ಎಂಬ ಸುದ್ದಿ ತಂದನು. ಸಗರ ಪುತ್ರರೆಲ್ಲರೂ ಪಾತಾಳಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಕಪಿಲ ಮುನಿಯನ್ನು ಕಂಡು ಅವರ ಸಿಟ್ಟು ನೆತ್ತಿಗೇರಿತು. ಕುದುರೆಯನ್ನು ಕದ್ದು ತಂದು, ಈಗ ನಮ್ಮೆಲ್ಲರನ್ನೂ ಮೋಸಗೊಳಿಸಲಿಕ್ಕಾಗಿ ಕಣ್ಣು ಮುಚ್ಚಿ ನಾಟಕವಾಡುತಿದ್ದಾನೆ ಎಂದು ಅವರು ತಿಳಿದರು. ಎಲ್ಲರೂ ತಮ್ಮ ತಮ್ಮ ಶಸ್ತ್ರಗಳನ್ನು ತೆಗೆದುಕೊಂಡು ಮುನಿಯನ್ನು ವಧಿಸಲು ಮುನ್ನುಗ್ಗಿದರು. ವಾತಾವರಣದಲ್ಲಿ ಒಮ್ಮಿಂದೊಮ್ಮೆಲೇ ಕೋಲಾಹಲ ಉಂಟಾದುದರಿಂದ ಕಪಿಲ ಮುನಿಯ ಧ್ಯಾನ ಭಂಗವಾಯಿತು. ಅವನು ಸಿಟ್ಟಿನಿಂದ ಕಣ್ತೆರೆಯುತ್ತಲೇ ಎದುರಿಗಿದ್ದ ಅರುವತ್ತು ಸಾವಿರ ಸಗರ ಪುತ್ರರೂ ಭಸ್ಮರಾದರು.

ಅಸಮಂಜಸನ ಪುತ್ರ ಅಂದರೆ ಸಗರ ರಾಜನ ಮೊಮ್ಮಗನು ದೊಡ್ಡ ಧಾರ್ಮಿಕನಾಗಿದ್ದನು. ಅವನ ಹೆಸರು ಅಂಶುಮಾನ್ ಎಂದು. ಇವನು ಯಾವಾಗಲೂ ತನ್ನ ಅಜ್ಜನ ಸೇವೆಯಲ್ಲಿ ತತ್ಪರನಾಗಿರುತಿದ್ದನು. ಸಗರನಿಗೆ ತನ್ನ ಪುತ್ರರ ಕಾರ್ಯದ ಹಾಗೂ ಕುದುರೆಯ ಸುದ್ದಿ ಸಿಕ್ಕಿದಾಗ ಅವನು ಅಂಶುಮಾನನನ್ನು ಅಲ್ಲಿಗೆ ಕಳುಹಿಸಿದನು. ಅವನು ಮುನಿಯ ಆಶ್ರಮಕ್ಕೆ ಹೋಗಿ ಅವನ ಮುಂದೆ ಅಂಜಲೀಬದ್ಧನಾಗಿ ನಿಂತು ಸ್ತುತಿಗೈದು ಸಂತೋಷಗೊಳಿಸಿದನು. ಪ್ರಸನ್ನನಾದ ಮುನಿಯು 'ಮಗೂ, ನೀನೇ ಸಗರ ರಾಜನ ನಿಜವಾದ ವಂಶಜನು. ಈ ಕುದುರೆಯನ್ನು ಕೊಂಡುಹೋಗಿ, ನಿನ್ನಜ್ಜನನ್ನು ಸಂತೋಷಗೊಳಿಸು. ಆದರೆ ಗಂಗಾಜಲದ ವಿನಃ ನಿನ್ನ ಚಿಕ್ಕಪ್ಪಂದಿರ ಉದ್ಧಾರವಾಗಲಾರದು. ಆದುದರಿಂದ ಗಂಗಾಜಲವನ್ನು ಭೂಮಿಗೆ ತರಲಿಕ್ಕಾಗಿ ನೀನೇ ತಪಸ್ಸನ್ನು ಪ್ರಾರಂಭಿಸು. ಈ ತಪಸ್ಸು ನಿನ್ನ ಮೊಮ್ಮಗನಿಂದ ಪೂರ್ಣವಾಗುವುದು. ಹಾಗೂ ಅವನೇ ಗಂಗೆಯನ್ನಿಲ್ಲಿಗೆ ಕರೆದು ತರುವನು. ಆ ಗಂಗಾಜಲ ಇವರ ಭಸ್ಮವನ್ನು ಮುಟ್ಟುತ್ತಲೇ ಇವರು ಸ್ವರ್ಗಕ್ಕೆ ಹೋಗುವರು." ಎಂದು ಆಶೀರ್ವಾದವಿತ್ತನು.

ಮುನಿಯಿಂದ ಆಶೀರ್ವಾದ ಪಡೆದು ಅಂಶುಮಾನನು ಕುದುರೆಯೊಡಗೂಡಿ ಹಿಂತಿರುಗಿ ಬಂದನು. ಅಶ್ವವು ಮರಳಿ ಬರುತ್ತಲೇ ಸಗರನು ತನ್ನ ಯಜ್ಞವನ್ನು ಪೂರ್ಣಗೊಳಿಸಿದನು.

ಅನ್ಯ ಕಾರ್ಯಗಳೆಲ್ಲವನ್ನೂ ಪೂರೈಸಿದ ಬಳಿಕ ಅಂಶುಮಾನನು ಸಗರ ರಾಜನಿಂದ ಆಶೀರ್ವಾದ ಪಡೆದು, ಮಹಾಮುನಿಯ ಆದೇಶದಂತೆ ತಪಸ್ಸನ್ನಾಚರಿಸಿದನು.

ೞ ೦ ೦

ಅಂಶುಮಾನನು ಆಜೀವ ಗಂಗೆಯನ್ನು ಭೂಮಿಗೆ ತರಲೋಸುಗ ತಪಸ್ಸನ್ನಾಚರಿಸಿದನು. ಅವನ ಮರಣಾನಂತರ ಅವನ ಪುತ್ರ ದಿಲೀಪನು ತನ್ನ ತಂದೆಯ ಕಾರ್ಯವನ್ನು ಮುಂದುವರಿಸಿದನು. ಅವನೂ ಜೀವನಪರ್ಯಂತ ತಪಗೈದನು. ದಿಲೀಪನ ಮರಣಾನಂತರ ಅವನ ಪುತ್ರನಾದ ಭಗೀರಥನು ಕಠಿಣ ತಪವನ್ನಾಚರಿಸಿದನು. ಇವನ ತಪಸ್ಸಿನಿಂದ ಪ್ರಸನ್ನಳಾದ ಗಂಗೆಯು ಅವನಿಗೆ ಕಾಣಿಸಿಕೊಂಡು—

"ವತ್ಸ, ಭಗೀರಥಾ! ನಿಮ್ಮೆಲ್ಲರ ತಪಸ್ಸಿನಿಂದ ನಾನು ಪ್ರಸನ್ನಳಾಗಿರುವೆನು. ಪೃಥ್ವಿಗೆ ಬರಲೂ ಸಿದ್ಧಳಿರುವೆನು. ಆದರೆ ಇದರಲ್ಲಿ ಒಂದು ಕಠಿಣತೆಯಿದೆ. ಬ್ರಹ್ಮಾಂಡದಲ್ಲಿ ನನ್ನ ಭಾರ ತಡೆಯಬಲ್ಲವರು ಯಾರೂ ಇಲ್ಲ. ಒಂದೊಮ್ಮೆ ಪೂರ್ಣ ರಭಸದಿಂದ ಆಕಾಶದಿಂದ ಭೂಮಿಗಿಳಿದರೆ ಈ ಭೂಮಿ ಪಾತಾಳವನ್ನು ಸೇರಬೇಕಾದೀತು" ಎಂದಳು.

ಕೂಡಲೇ ಭಗೀರಥನು ಒಂದೇ ಕಾಲಲ್ಲಿ ನಿಂತು ಬ್ರಹ್ಮನನ್ನೊಲಿಸಲು ತಪಸ್ಸನ್ನಾಚರಿಸಿದನು. ಹಲವು ವರ್ಷಗಳ ತನಕ ಅವನ ಇದೇ ರೀತಿ ತಪಸ್ಸನ್ನು ಮಾಡಿ ಬ್ರಹ್ಮನನ್ನು ಒಲಿಸಿಕೊಂಡನು. "ಗಂಗೆಯನ್ನು ಬೇಕಾದರೆ ನಾನು ನನ್ನ ಕಮಂಡಲದಲ್ಲಿಟ್ಟುಕೊಳ್ಳಬಲ್ಲೆನು. ಆದರೆ ಭೂಮಿಯ ಮೇಲೆ ಅವಳ ಭಾರ ತಡೆಯಲಾರೆನು. ಅದಕ್ಕಾಗಿ ನೀನು ಈಶ್ವರನನ್ನು ಬೇಡಿಕೊಳ್ಳೆಂ"ದನು ಬ್ರಹ್ಮ. ಯೋಗ ಬಲದಿಂದ ಕಾಲ ಬೆರಳಲ್ಲಿಯೇ ನಿಂತು ಭಗೀರಥನು ತಪಸ್ಸುಗೈದು, ಶಂಕರನನ್ನೊಲಿಸಿ, ಗಂಗೆಯ ಭಾರವನ್ನು ತಡೆಯಲು ಅವನನ್ನೊಪ್ಪಿಸಿದನು.

ಕೊನೆಗೆ ವಿಷ್ಣುವಿನ ನೆರವಿನಿಂದ ಗಂಗೆ ಹೊರಟಳು. ಅವಳನ್ನು ಬ್ರಹ್ಮನು ತನ್ನ ಕಮಂಡಲದಲ್ಲಿ ಬಂಧಿಸಿ, ಅನಂತರ ಭೂಮಿಯ ಮೇಲೆರೆದನು. ಶಿವನು ತನ್ನ ಜಟೆಯನ್ನು ಬಹಳವಾಗಿ ಹೆಚ್ಚಿಸಿಕೊಂಡಿದ್ದನು. ಈ ಜಟೆಯಲ್ಲಿಯೇ ಅವನು ಗಂಗೆಯ ಭಾರವನ್ನು ತಡೆದುಕೊಂಡನು. ಮೊದಲು ಗಂಗೆಯು ಶಿವನನ್ನು ಸೋಲಿಸುವ ಆಸೆಯಿಂದ ಭಯಂಕರವಾಗಿ ಗರ್ಜಿಸುತ್ತಾ ದುಮ್ಮಿಕ್ಕಿದಳು. ಆದರೆ ಶಿವನ ಜಟೆ ಅನಂತವಾಗಿತ್ತು. ಸೋಲಿಸಲು ಮುಂದಾದ ಗಂಗೆ ಶಿವನ ಜಟೆಯಲ್ಲಿ ಕಾಣದಾದಳು. ಇದನ್ನು ಕಂಡು ಭಗೀರಥನು ಚಿಂತಿತನಾದನು. ಅವನು ಗದ್ಗದನಾಗಿ ಶಿವನನ್ನು ಬೇಡಿಕೊಂಡನು. ಆಗ ಶಿವನು ತನ್ನ ಜಟೆಯ ತುದಿಯನ್ನು ಹಿಡಿದು, ಹಿಂಡಿ, ಒಂದು ಬಿಂದುವನ್ನು ಭೂಮಿಗೆ ಬಿಟ್ಟನು. ಈ

(೧೧ ಪುಟ ನೋಡಿರಿ)


# ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್) ರೂ.

ಕಲಂ ಸೆಂಟಿಮೀಟರಿಗೆ 1-00

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ 1-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಚಾರ್ಜ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

## ಏಷ್ಯಾದ ಭದ್ರತೆಗೆ

# ಅಜಾತ ಶತ್ರುವಿನ ಅಂತಿಮ ಆಶೆ

ಭಾರತದ ಮೇಲೆ ಸಪ್ಟೆಂಬರ ಎಂಟರಂದು ಕಮ್ಯೂನಿಸ್ಟ್ ಚೈನಾವು ಮೊದಲ ಬಾರಿ ಭಾರೀ ಪ್ರಮಾಣದಲ್ಲಿ ಆಕ್ರಮಣ ನಡೆಸಿತು. ಅದರಿಂದಾಗಿ ಕೆಲ ಪ್ರಶ್ನೆಗಳ ಅಲೆಗಳೆದ್ದಿವೆ. ಕಡಿದಾದ ಕಣಿವೆಗಳನ್ನು ದಾಟಿಕೊಂಡು ಕೆಂಪು ಸೇನೆ ಬಂದುದು ಯಾತಕ್ಕಾಗಿ ಧಾಳಿ ನಡೆಸುತ್ತಿದೆ? ಚೂಂಬಿ ನದಿ ಕಣಿವೆಯ ಮೇಲೆ ಯಾತಕ್ಕಾಗಿ ಅದು ಅಧಿಕಾರ ನಡೆಸುತ್ತಿದೆ? ತ್ರಿವಿಷ್ಟಪದಲ್ಲಿ ಚೈನಿ ಸೇನೆ ಜಮೆ ಆಗದಿರುತ್ತಿದ್ದಲ್ಲಿ, ಅದರ ಮೇಲಣ ಚೈನಾದ ಪ್ರಭುತ್ವವನ್ನು ನಾವು ಒಪ್ಪಿಕೊಳ್ಳದೆ ಇರುತ್ತಿದ್ದಲ್ಲಿ ಏನಾಗುತ್ತಿತ್ತು?

ಭಾರತದ ಪ್ರಧಾನಿಯವರು ದಿಲ್ಲಿಯ ರಾಮಲೀಲಾ ಮೈದಾನ ಅಥವಾ ಸಂಸತ್ ಭವನದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ತ್ರಿವಿಷ್ಟಪದ ಸ್ವಾತಂತ್ರ್ಯತೆಯ ಕುರಿತು ಮಾತನ್ನಾಡುವದು ಭಾರತದ ರಣ-ಕೌಶಲ್ಯತೆಯ ದೃಷ್ಟಿಯಿಂದ ಹುಚ್ಚುತನವಿದೆ ಎಂದು ಹೇಳಿರುವರು.

ತ್ರಿವಿಷ್ಟಪದ ಮೇಲೆ ಚೀನಾದ ಸಾರ್ವಭೌಮತ್ವವನ್ನು ಏಕೆ ಒಪ್ಪಿಕೊಳ್ಳಲಾಯಿತೆಂಬುದಕ್ಕೆ ಪ್ರಧಾನಿಯವರು ಕೆಲ ಕಾರಣಗಳನ್ನು ಕೊಟ್ಟಿರುವರು. ಮೊದಲನೆಯದಾಗಿ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲೂ ತ್ರಿವಿಷ್ಟಪವು ಸ್ವ. ಆಡಳಿತಕ್ಕೊಳಪಟ್ಟಿದ್ದ ದೇಶವಾಗಿತ್ತಾದರೂ ಅದು ಚೈನಾದ ಪ್ರಭುತ್ವವನ್ನು ಒಪ್ಪಿಕೊಂಡಿದ್ದಿತೆನ್ನುವದು ಒಂದು ಕಾರಣ. ಬ್ರಿಟಿಷ್ ಸರಕಾರವು ಮಾಡಿದ್ದೆಲ್ಲವನ್ನೂ ಅನುಸರಿಸಬೇಕಾಗಿರುವದು ಅನಿವಾರ್ಯವೂ ಅಲ್ಲ, ಅವಶ್ಯಕವೂ ಆಗಿರುವದಿಲ್ಲ. ಪ್ರಧಾನಿಯವರಾದರೂ ಆ ರೀತಿಯ ಪೂರ್ಣ ಅನುಸರಣೆ ಮಾಡಿರುವದಿಲ್ಲ. ನೇಪಾಲವು ಬ್ರಿಟಿಷರ ಹಿಡಿತ ಹೊರಗಿದ್ದರೂ ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಪ್ರಧಾನಿಯವರು ಅದರ ಸ್ವತಂತ್ರತೆಯನ್ನು ಒಪ್ಪಿಕೊಂಡಿರುವದಲ್ಲದೆ, ಅದನ್ನು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನನ್ನಾಗಿಯೂ ಮಾಡಿರುವರು. ಭೂತಾನವನ್ನು ಕೂಡಾ ಬಂಧನದಿಂದ ಬಿಡಿಸಿ ಅದನ್ನು ಕೊಲಂಬೊ ಕೂಟದ ಸದಸ್ಯನನ್ನಾಗಿ ಮಾಡಿರುವರು. ಹೀಗಿರುವಾಗ, ತ್ರಿವಿಷ್ಟಪದ ಸ್ವಾತಂತ್ರ್ಯವನ್ನೊಪ್ಪಿಕೊಳ್ಳುತ್ತಿದ್ದಲ್ಲಿ ಅದನ್ನು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನನ್ನಾಗಿ ಮಾಡಲು ಸಾಧ್ಯವಿರಲಿಲ್ಲವೆಂದು ಹೇಳಲು ಸಾಧ್ಯವಿರುವದಿಲ್ಲ.

ತ್ರಿವಿಷ್ಟಪದ ಮೇಲೆ ಚೀನಾದ ಪ್ರಭುತ್ವವನ್ನು ಒಪ್ಪಿಕೊಂಡಾಗ, ಹಾಗೂ ತ್ರಿವಿಷ್ಟಪದಲ್ಲಿ ಅಂಚೆ-ಟಪ್ಪಾಲು, ಸಂಚಾರ ಹಾಗೂ, ವ್ಯಾಪಾರದ ಮಾರ್ಗಗಳ ಮೇಲಿನ ವಿಶೇಷಾಧಿಕಾರವನ್ನು ನಾವು ಪರಿತ್ಯಾಗ ಮಾಡಿದ ಸಮಯದಲ್ಲಿ ಚೀನಾವು ಕೊರಿಯಾದಲ್ಲಿ ಯುದ್ಧ ಮಾಡುತ್ತಿತ್ತು. ಅದಕ್ಕೆ ಎರಡು ರಂಗಗಳಲ್ಲಿ ಸಮರ ಹೂಡಲು ಸಾಧ್ಯ ಇರಲಿಲ್ಲ. ಸಂಯುಕ್ತ ರಾಷ್ಟ್ರದ ಸೇನೆಯು ತ್ರಿವಿಷ್ಟಪಕ್ಕೂ ಬರಲು ಸಾಧ್ಯವಿತ್ತು ಅಲ್ಲದೆ ಕೊರಿಯಾದಲ್ಲೂ ಹೋರಾಡಲೂ ಸಾಧ್ಯವಿತ್ತು. ಅದರೆ ಆಗ ಸಹಾಯವನ್ನು ಯಾಚಿಸಿಕೊಂಡು ನವ-ದೆಹಲಿಗೆ ಬಂದ ದಲಾಯಿ-ಲಾಮಾರ ಪ್ರತಿನಿಧಿ ಮಂಡಳವನ್ನು ಭಾರತ ಸರಕಾರವು ಪೀಕಿಂಗಿಗೆ ಹೋಗುವಂತೆ ಮಾಡಿತು. ಇದು ಭಾರತ ಸರಕಾರದ ಪರ-ರಾಷ್ಟ್ರ ನೀತಿಗೆ ಅನುಕೂಲ ವಿಷಯವಾಗಿದೆ ಏನು?

ಪ್ರಧಾನಿಯವರು ಅದಕ್ಕೊಂದು ಸಾಂತ್ವನಪರ ಮಾತು ಹೇಳುತ್ತಾರೆ. ಆ ಸಮಯದಲ್ಲಿ ತ್ರಿವಿಷ್ಟಪಕ್ಕೆ ನಮ್ಮಿಂದ ಅದೇನ ಸಹಾಯ ಮಾಡಲು ಸಾಧ್ಯವಿತ್ತು? ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಈ ವಿಷಯಕ್ಕೆ ಪ್ರಧಾನಿಯವರು ಸ್ಪಷ್ಟ ಉತ್ತರವನ್ನಿತ್ತಿರುವದಿಲ್ಲ. ಕೊರಿಯಾದಲ್ಲಿ ೩೮ ಅಕ್ಷಾಂಶ ಪ್ರದೇಶವನ್ನು ಕಮ್ಯೂನಿಸ್ಟರು ಕಪಿಮುಷ್ಟಿಗೊಳಪಡಿಸಿಕೊಂಡಾಗಲದು ಮಾಡಿದ್ದು ಸರಿಯೆಂದು ರಕ್ಷಣಾ ಸಮಿತಿಯಲ್ಲಿ ಭಾರತ ಸರಕಾರವು ಸಮರ್ಥನೆಗೈದಿದೆಯಲ್ಲದೆ ಕೊರಿಯಾಕ್ಕೆ ವೈದ್ಯಕೀಯ ಮಂಡಳವನ್ನೂ ಕಳುಹಿಸಿಕೊಟ್ಟಿದೆ. ಭಾರತ ಆ ಸಮಯದಲ್ಲಿ ಸೇನೆಯನ್ನು ಕಳುಹಿಸುವ ಸ್ಥಿತಿಯಲ್ಲಿದ್ದಿರಲಿಲ್ಲ. ತ್ರಿವಿಷ್ಟಪದ ವಿಷಯದಲ್ಲಿ ಕನಿಷ್ಠ ಪಕ್ಷ ಇಷ್ಟನ್ನಾದರೂ ಮಾಡಲು ಸಾಧ್ಯವಿತ್ತು — ಅಂತಾರಾಷ್ಟ್ರೀಯ ಸೇನೆಯು ತ್ರಿವಿಷ್ಟಪಕ್ಕೆ ಹೋಗಲು ರಸ್ತೆ ಹಾಗೂ ವೈದ್ಯಕೀಯ ಸೇವೆ ಇವು ಸಾಧ್ಯವಾಗಿತ್ತು. ಆದರೂ ಅದನ್ನು ಆ ಕಾಲದಲ್ಲಿ ಮಾಡಲು ಹೋಗಿರುವದಿಲ್ಲ. ಭಾರತ ಸರಕಾರ ಘೋಷಿಸಿರುವ ಪರ-ರಾಷ್ಟ್ರ ಧೋರಣೆಗೆ ಇದು ಸರ್ವಥಾ ಪ್ರತಿಕೂಲ ಕಾರ್ಯವಿದೆ.

ತ್ರಿವಿಷ್ಟಪವು ಒಂದು ಚಿಕ್ಕ ರಾಷ್ಟ್ರವಿದೆ. ಚಿಕ್ಕ ರಾಷ್ಟ್ರಗಳಿಗೆ ಸ್ವತಂತ್ರವಾಗಿರುವ ಹಕ್ಕು ಇರುವದಿಲ್ಲವೇನು? ಭಾರತದ ಪರ-ದೇಶ ಧೋರಣೆಯ ಕರ್ತ ಹಾಗೂ ಪುರಸ್ಕರ್ತರು ಪ್ರಧಾನಿ ಇದ್ದಾರೆ. ಅವರು ಆಗಾಗ್ಗೆ ಅನ್ನುವದುಂಟು—ಚಿಕ್ಕ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಭಂಗ ಬರಬಾರದು. ದೊಡ್ಡ ರಾಷ್ಟ್ರಗಳ ಹಸ್ತಕ್ಷೇಪದಿಂದ ಅವುಗಳನ್ನುಳಿಸುವುದು, ಕಾಪಾಡುವದ ನಮ್ಮ ನೀತಿ ಇದೆ. ಹೀಗಿರುವಾಗ ಈ ಸಾಲಿನಲ್ಲಿ ತ್ರಿವಿಷ್ಟಪ ಬರುವದಿಲ್ಲವೇನು? ಆಫ್ರಿಕದ ರಾಷ್ಟ್ರಗಳಿಗಿಂತಲೂ ತ್ರಿವಿಷ್ಟಪವು ಕೇವಲವಾದುದೇನು?

ತ್ರಿವಿಷ್ಟಪವು ಒಮ್ಮೆ ಅದೇನೋ ಚೈನಾದ ಅಧೀನತೆಯಲ್ಲಿತ್ತೆಂಬ ಏಕಮೇವ ಕಾರಣದಿಂದಾಗಿ ಅದಕ್ಕೆ ಚೈನಾದ ಸ್ವಾಮಿತ್ವ ಅಥವಾ ಪ್ರಭುತ್ವದಿಂದ ಪಾರಾಗಲು ಅಧಿಕಾರವಿಲ್ಲವೇನು?

ತ್ರಿವಿಷ್ಟಪವು ೧೯೧೧ ರಲ್ಲೇ ಮಂಚೂ (ಮಂಚು) ಸಾಮ್ರಾಜ್ಯ ಉಳಿದಿದ್ದಾಗಲೇ, ಚೈನಾವು ಕ್ರಾಂತಿಯನ್ನು ಕಾಣುವ ಮೊದಲೇ, ಚೈನಿ ಸಾಮ್ರಾಜ್ಯದ ನೊಗದಿಂದ ಕತ್ತನ್ನು ತೆಗೆದಿತ್ತು. ಲ್ಹಾಸಾದಲ್ಲಿದ್ದ ಪೀಕಿಂಗಿನ ಪ್ರತಿನಿಧಿಯು ಅಲ್ಲಿಂದ ಪರಾರಿಯಾಗಿದ್ದನು. ದಲಾಯಿಲಾಮಾರವರು ತ್ರಿವಿಷ್ಟಪ ಸ್ವತಂತ್ರ ರಾಷ್ಟ್ರವೆಂದು ಸಾರಿದ್ದರು.

೧೯೧೧ ರಿಂದ ೧೯೫೦ ರ ವರೆಗೆ, ಚೀನಿ ಮುಕ್ತಿ ಸೇನೆ, ತ್ರಿವಿಷ್ಟಪದೊಳಗೆ ಕಾಲಿಡದಿದ್ದವರೆಗೆ, ಅದು ಸ್ವತಂತ್ರ ನಾಡಾಗಿತ್ತು ಆದರ ಸ್ವಾತಂತ್ರ್ಯವನ್ನೊಪ್ಪಲಾಗಿತ್ತು. ದ್ವಿತೀಯ ಮಹಾಯುದ್ಧದಲ್ಲಿ ಚುಂಗ್ ಕಿಂಗಿಗೆ ಸಮರ-ಸಹಾಯ ಸಾಮಗ್ರಿ-ಸಲಕರಣೆಗಳನ್ನು ಸಾಗಿಸುವ ಸಮಸ್ಯೆ ಕಟ್ಟಿ ನಿಂತಿತು. ಆಗ ಎಲ್ಲರ ದೃಷ್ಟಿಯೂ ಲ್ಹಾಸದತ್ತ ಹರಿಯಿತು. ಸ್ವಾ ಅಧ್ಯಕ್ಷ ರೂಸ್‌ವೆಲ್ಟರು ದಲಾಯಿಲಾಮಾರ ಬಳಿಗೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿ ಲ್ಹಾಸಾದಿಂದ ಚುಂಗ್ ಕಿಂಗಿಗೆ ಹೋಗಲು ಅನುಮತಿ ಕೇಳಿಸಿದರು. ಆದರೆ, ಅದಕ್ಕಾಗ ದಲಾಯಿಲಾಮಾರು ಅದೇಕೋ ಒಪ್ಪಲಿಲ್ಲ. ರೂಸ್‌ವೆಲ್ಟರು ತ್ರಿವಿಷ್ಟಪದ ಸ್ವಾತಂತ್ರ್ಯವನ್ನು ಮಾನ್ಯಮಾಡಿದ್ದರು. ಹೀಗಿರುವಾಗ, ಅಂತಾರಾಷ್ಟ್ರೀಯ ದೃಷ್ಟಿಯಿಂದ ತ್ರಿವಿಷ್ಟಪದ ಸ್ವಾತಂತ್ರ್ಯವನ್ನು ಯಾರೂ ಒಪ್ಪಿರಲಿಲ್ಲವೆನ್ನುವುದು ಸರಿಯಲ್ಲ, ಉಚಿತವಲ್ಲ.

ಆದರೆ, ಹಿಂದೇಶ್ಯದ (ದ್ವೀಪಾಂತರದ ಸ್ವಾತಂತ್ರ್ಯದ ಸಮರ್ಥನೆಗಾಗಿ ಪಾಂಡವರ ಕೋಟೆಯಲ್ಲಿ ಏಷ್ಯಾ—ಸಮ್ಮೇಳನ ಸೇರಿದ್ದಾಗ ಪ್ರಧಾನಿಯವರು ತ್ರಿವಿಷ್ಟಪಕ್ಕಾಗಿ ನಮ್ಮಿಂದೇನು ಮಾಡಲು ಸಾಧ್ಯವಿದೆ? ಬ್ರಿಟಿಷ್ ಸರಕಾರವೇ ಅದರ ಮೇಲೆ ಚೈನಾದ ಅಧಿಕಾರವನ್ನೊಪ್ಪಿಕೊಂಡಿರುತ್ತದೆಂದು ಹೇಳಿದರು. ಇದೊಂದು ಅದ್ಭುತ ಅಂತೆಯೇ ಆಶ್ಚರ್ಯ ಜನಕ ವಿಷಯವೂ ಇದೆ. ತ್ರಿವಿಷ್ಟಪದ ಮೇಲಣ ಚೈನದ ಅಧಿಕಾರವನ್ನು ಆಗ ವೈಸರಾಯಿಯಾಗಿದ್ದ ಕರ್ಜನ್ ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಆದರೆ, ಆಂಗ್ಲೇಯ ಸರಕಾರವು ಕರ್ಜನನ ಸಲಹೆಗೆ ಸಮ್ಮತಿ ಸೂಚಿಸಲಿಲ್ಲ. ಕೇವಲ ಸ್ವಲಾಭದಾಸೆಯಿಂದ—ಚೈನಾವನ್ನು ಸಂತುಷ್ಟಿಗೊಳಿಸಲಿಕ್ಕಾಗಿ-ತ್ರಿವಿಷ್ಟಪದ ಸ್ವಾತಂತ್ರ್ಯ ಕುರಿಯನ್ನು ಅಂದು ಬಲಿಗೊಡಲಾಯಿತು. ಇದೇ ಕಾರ್ಯವನ್ನು ೧೯೫೦ರಲ್ಲಿ ಭಾರತದ ಪ್ರಧಾನಿಯವರೂ ಮಾಡಿದರು. ಸಾಮ್ರಾಜ್ಯ ಸಂಪೂರ್ಣ ನಾಶವಾಗಬೇಕೆನ್ನುವವರು ಆ ರೀತಿ ಮಾಡುವದರಲ್ಲಿ ಅದೇನು ನ್ಯಾಯವಿದೆ? ಅದೆಂತಹ ಯುಕ್ತಿ—ವಾದ ತಂತ್ರ?

ಮಾಜಿ ರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನರು ಪ್ರಧಾನಿಯವರ ಅಭಿಪ್ರಾಯವನ್ನೇ ಸಮರ್ಥಿಸುತ್ತ ಭಾಷಣವೀಯುತ್ತಿರುವಾಗ, ತ್ರಿವಿಷ್ಟಪದ ಸ್ವಾತಂತ್ರ್ಯವು ಬಾನಾವಳ [ಕರ್ಟನ್] ತೆರೆಯುವದನ್ನು ಸುಲಭದ ಕಾರ್ಯವಲ್ಲವೆಂದು ಖಂಡಾತುಂಡವಾಗಿ ಹೇಳಿದರು. ಚೆನ್ನಾಗಿದೆ, ಬಲು ಚೆನ್ನಾಗಿದೆ. ದಿನದಲ್ಲಿ ೨೦-೩೦ ಕಪ್ಪು ಚಹಾವನ್ನು ಹೀರುವ ಮೆನನರಿಗೆ ಬುಸಾರ ಮುಂದಿನ ತೆರೆಯುವ ಯೋಚನೆ ಬರುವದರಲ್ಲೇನೂ ಸೋಜಿಗವಿರುವದಿಲ್ಲ. ಆದರೆ ಭಾರತದ ರಕ್ಷಣಾ ದೃಷ್ಟಿಯಿಂದ ತ್ರಿವಿಷ್ಟಪವು ಸ್ವತಂತ್ರ ರಾಷ್ಟ್ರವಾಗಿರುವ ಅವಶ್ಯಕತೆ ಇದೆ. ಇದು ದಪ್ಪ ಬುದ್ಧಿಯ ಮಾನವನ ಮೆದುಳಿಗೂ ಗೊತ್ತಾಗದಿರದು. ಅರುವತ್ತೈದು ಕೋಟಿ ಜನಸಂಖ್ಯೆ ಇರುವ ಚೈನಾ ಮತ್ತು ನಲುವತ್ತೈದು ಕೋಟಿ ಪ್ರಜಾಸಂಖ್ಯೆಯುಳ್ಳ ಭಾರತ ಪರಸ್ಪರ ಹೋರಾಡಲಾರಂಭಿಸಿದರೆ ಏಷ್ಯಾದಲ್ಲಿ ಶಾಂತಿ ನೆಲೆಸಲಾರದು. ಈ ದೃಷ್ಟಿಯಲ್ಲಿ ಕೂಡಾ ಈ ಎರಡು ರಾಷ್ಟ್ರಗಳ ನಡುವೆ ತ್ರಿವಿಷ್ಟಪದ ವಿಶಾಲ ಪೀಠಭೂಮಿ ಸ್ವತಂತ್ರವಾಗಿಯೇ ಬೇಕು

(೧೧ನೇ ಪುಟ ನೋಡಿರಿ)

**ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......**
**ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ**

**1–1–1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ $58\frac{1}{3}\%$ ಶುದ್ಧ ಪುತ್ತೇಳಿ ಚಿನ್ನ ಇರುತ್ತದೆ.
ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಜಾಗ್ರತೆಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

**ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್**

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

## ಕೃಷಿಯ ಕ್ಷೇತ್ರದಲ್ಲಿ

# ನಾವೇಕೆ ಹಿಂದೆ ಉಳಿದಿದ್ದೇವೆ?

ನಮ್ಮ ದೇಶದ ಪ್ರಮುಖ ಸಮಸ್ಯೆಗಳಲ್ಲಿ ಕೃಷಿಯ ಸಮಸ್ಯೆಯೂ ಒಂದಾಗಿದೆ ಕೃಷಿ ಪ್ರಧಾನವಾದ ಭಾರತದಲ್ಲಿ ಇದರ ವ್ಯವಸಾಯವು ಶಾಸ್ತ್ರೀಯವಾಗಿ ಚೆನ್ನಾಗಿ ಆಗುತ್ತಿಲ್ಲವೆನ್ನುವದನ್ನು ಕಣ್ಣಾರೆ ಕಂಡು ಪರಿಶೀಲಿಸಿದ ಯಾವ ಪ್ರಾಜ್ಞನೂ ಹೇಳಬಹುದು ಕೆಲವು ಕಡೆ ಒಂದೇ ಮಣ್ಣಿನಲ್ಲಿ ಸಮಾನ ನೀರಾವರಿ ಯೋಜನೆಯಿರುವಲ್ಲಿ ವಿಪುಲವಾಗಿ ಕೃಷಿಯಿಂದ ಉತ್ಪಾದನೆಯಾದರೆ ಇನ್ನೊಂದು ಕಡೆ ಅಂಥದೇ ಪ್ರದೇಶದಲ್ಲಿ ಸಿಗುವ ಕೃಷಿಯ ಉತ್ಪಾದನೆಯು ಮೊದಲಿನದರ ನಾಲ್ಕನೇ ಒಂದಂಶದಷ್ಟೂ ಇರುವುದಿಲ್ಲ ಈ ಆಹಾರೋತ್ಪಾದನೆಯ ಉತ್ತಮ ಮತ್ತು ಸಾಮಾನ್ಯ ವ್ಯತ್ಯಾಸವೇ ನಮ್ಮ ದೇಶದ ಕೃಷಿಯ ಒಂದು ವಿಶಿಷ್ಟತೆಯಾಗಿದೆ

ಡಿಲ್ಲಿಯಲ್ಲಿ ಜರಗಿದ ಅಖಿಲ ಭಾರತ ಕಾಂಗ್ರೆಸಿನ ಅಧಿವೇಶನದಲ್ಲೂ ನಮ್ಮ ಪ್ರಧಾನಿಯವರು ಇದೇ ವಿಚಾರವನ್ನು ವ್ಯಕ್ತಪಡಿಸಿದ್ದಾರೆ ಅವರು ಹೇಳಿದುದೇನೆಂದರೆ—ಪಂಜಾಬು ತನ್ನ ಸುಧಾರಿತ ಪದ್ಧತಿಯಿಂದ ಅತ್ಯಂತ ಸಮೃದ್ಧವಾಗಿ ಕೃಷಿ ಮಾಡಿ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿದ್ದರೆ, ಉತ್ತರ ಪ್ರದೇಶ, ಮಧ್ಯ ಪ್ರದೇಶ ಬಿಹಾರ ಮೊದಲಾದುವುಗಳು ಬಹು ಅಲ್ಪ ಪ್ರಮಾಣದಲ್ಲಿ ಉತ್ಪಾದಿಸುತ್ತವೆ. ಇದಕ್ಕೇನ ಕಾರಣ?" ೧೯೬೧ ೬೨ರಲ್ಲಿ ಒಂದು ಎಕ್ರೆಯಲ್ಲಿ ೨೫೩ ಪೌಂಡುಗಳಷ್ಟು ಹತ್ತಿ ಪಂಜಾಬದಲ್ಲೇ ಬೆಳೆದಿದೆ. ಮಧ್ಯ ಪ್ರದೇಶ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಒರೇ ೩೮ ಪೌಂಡುಗಳಷ್ಟು ಮಾತ್ರ ಬೆಳೆದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವ್ಯತ್ಯಾಸವು ಕಂಡು ಬರುವುದೆಂದರೆ ನಿಜಕ್ಕೂ ಶೋಚನೀಯವಲ್ಲವೆ?

ಅಮೇರಿಕದಲ್ಲಿನ ಫೋರ್ಡ್ ಸಂಸ್ಥೆಯು ಪರಿವರ್ಧಿತ ಜಿಲ್ಲಾ ಕೃಷಿ ವ್ಯವಸ್ಥೆ (Intensive agricultural district programme)ಯು ಒಂದು ವರ್ಷದ ಅವಧಿಯಲ್ಲಿ ಭತ್ತದ ಉತ್ಪಾದನೆಯನ್ನು ೫೫ರಿಂದ ೨೧೦ ತನಕ ವರ್ಧಿಸಿತು ಅದೇ ರೀತಿ ಅದು ಸೇ. ೮೦ರಿಂದ ೧೫೦ ತನಕ ಗೋಧಿಯ ಉತ್ಪಾದನೆಯನ್ನೂ ಸೇ. ೧೧೭ರಿಂದ ೨೫೦ರ ತನಕ ಬಾರ್ಲಿಯ ಉತ್ಪಾದನೆಯನ್ನು ಹೆಚ್ಚಿಸಿದೆ ಅದಲ್ಲದೆ ಜಪಾನಿನ ಕೆಲವು ರೈತರು ಉತ್ತರ ಪ್ರದೇಶದ ಸೊರಾನಾ ಜಿಲ್ಲೆಯಲ್ಲಿ ಒಂದು ಎಕ್ರೆಯಲ್ಲಿ ಒಂದನೇ ಬೆಳೆಯಲ್ಲಿ ಮೇಲಿನ ವಿಧಾನದಿಂದ ನಾಲ್ಕು ಪಾಲಷ್ಟು ಭತ್ತವನ್ನು ಅಂದರೆ ಸುಮಾರು ೪೨೬೪ ಪೌಂಡುಗಳನ್ನು ಎರಡನೇ ಬೆಳೆಯಲ್ಲಿ ೫೯೦೪ ಪೌಂಡುಗಳಷ್ಟನ್ನು ಉತ್ಪಾದಿಸಿದ್ದಾರೆ ಇದೇ ರೀತಿ ಸರಕಾರವು ಆಂಧ್ರ ಪ್ರದೇಶದ ತೆಲಂಗಾಣದಲ್ಲಿ ಸುಧಾರಿತ ಕೃಷಿಯನ್ನು ಜಾರಿಗೆ ತಂದುದರಿಂದ ಆಹಾರೋತ್ಪಾದನೆಯು ಬಹುವಾಗಿ ಹೆಚ್ಚಿದೆ

ಇದರಿಂದ ಇಂದಿನ ಈ ರಾಷ್ಟ್ರೀಯ ವಿಪತ್ತಿನ ಸಂಧಿಕಾಲದಲ್ಲಿ ದೇಶದ ಆವಶ್ಯಕತೆಯನ್ನು ಪೂರೈಸಲು ಅಧಿಕ ಪ್ರಮಾಣದಲ್ಲಿ ಆಹಾರೋತ್ಪಾದನೆ ಮಾಡಲು ಸಾಧ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ ಆದರೆ ಇಂದು ನಾವು ಕೃಷಿಯಲ್ಲಿ ಹಿಂದೆ ಬೀಳಲು ಕಾರಣವೇನು? ಇದಕ್ಕೆ ಹಣವು ಕಾರಣವೆಂದು ಹೇಳುವುದು ಯುಕ್ತವಲ್ಲ ಪ್ರಥಮ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಸರಕಾರವು ಸುಮಾರು ೨,೦೦೦ ಕೋಟಿಗಳಷ್ಟು ರೂ ಗಳನ್ನು ವೆಚ್ಚ ಮಾಡಿದೆ. ನೀರಾವರಿಯ ಸೌಲಭ್ಯ ನಿಜಕ್ಕೂ ಅಧಿಕವಾಗಿದೆ. ಕೃಷಿಯಲ್ಲಿ ತರಬೇತು ಪಡೆದ ಅಧಿಕಾರಿಗಳ, ಪದವೀಧರರ ಸಂಖ್ಯೆ ಏರಿದೆ. ಇಷ್ಟು ಮಾತ್ರವಲ್ಲದೆ ಕಮ್ಯುನಿಟಿ ಪ್ರೊಜೆಕ್ಟ್ ಡೆವಲಪ್‌ಮೆಂಟ್‌ನ ಮೂಲಕ ಸುಮಾರು ೪೦೦೦ಕ್ಕಿಂತಲೂ ಮಿಕ್ಕಿದ ರೈತರ ದಳವನ್ನು ಸ್ಥಾಪಿಸಲಾಗಿದೆ, ಇಷ್ಟಾದರೂ ನಮ್ಮ ಕೃಷಿ ಯಾಕೆ ಮುಂದರಿದಿಲ್ಲ?

ಉಪರೋಕ್ತ ಪ್ರಶ್ನೆಗೆ ಉತ್ತರವನ್ನು ಹುಡುಕುವಾಗ ನಾವು ಮೂಲತಃ ಬುನಾದಿಯಲ್ಲೇ ಎಡವಿಬಿದ್ದಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ ಕೃಷಿಯು ಪ್ರತಿಯೊಂದು ಪ್ರಾಂತ್ಯದ ಜೀವಾಳವಾಗಿದೆ. ಆದರೆ ಪ್ರತಿಯೊಂದು ಪ್ರಾಂತ್ಯವೂ ಈ ಬಗ್ಗೆ ಬಹು ಅನಾಸ್ಥೆ ಅವ್ಯವಸ್ಥೆಯನ್ನುಂಟುಮಾಡಿದೆ ಇದಕ್ಕೆ ರಾಜಕೀಯವೇ ಕಾರಣವೆಂದು ಮೊನ್ನಿನ ಕಾಂಗ್ರೆಸ್ ಅಧಿವೇಶನವು ಅಭಿಪ್ರಾಯಪಟ್ಟಿದೆ ನಮ್ಮ ಯೋಜನಾ ಮಂತ್ರಿ ಶ್ರೀ ಜಿ ಎಲ್. ನಂದಾರವರು ಕಾಂಗ್ರೆಸ್ ಅಧಿವೇಶನದಲ್ಲಿ ಆಡಳಿತ ವರ್ಗವು ರಾಜಕೀಯದ ಒತ್ತಡಗಳಿಂದ ಪ್ರಭಾವಿತವಾಗಿರುವುದರಿಂದ ಇಂದು ಕಾಂಗ್ರೆಸ್ಸಿನಲ್ಲೇ ಗುಂಪು ಬೆಳೆದು ಒಂದು ಗುಂಪು ಮತ್ತೊಂದನ್ನು ತಿರಸ್ಕರಿಸುತ್ತಾ ಬಂದಿದೆ " ಮಂತ್ರಿ ಮಾನ್ಯರ ಈ ಮಾತು ನಿಜಕ್ಕೂ ಸಂದರ್ಭೋಚಿತವಾಗಿದೆ ಇಂದು ಪ್ರಾಂತ್ಯಗಳು ಕಂಠಶೋಷಣೆಯಾಗುವ ತನಕ ಮಹಾತ್ಮ ಗಾಂಧಿಯವರನ್ನು ಹೊಗಳಿ, ಕಾರ್ಯತಃ ಅವರ ಅಭಿಪ್ರಾಯದಂತೆ ಕೃಷಿಯನ್ನು ಮಾಡುವುದರಲ್ಲಿ ಹಿಂದೆ ಬಿದಿವೆ ಅವು ಕೃಷಿಯ ಬಗ್ಗೆ ತೋರಿಸಿದ ನಿರ್ಲಕ್ಷ್ಯ ಭಾವನೆಯನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಕೃಷಿಗೆಂದು ತೆಗೆದಿಟ್ಟ ಹಣವು ಇತರ ಯೋಜನೆಗಳಿಗೆ ವೆಚ್ಚವಾಗುವುದು ಇಂದು ಸಾಮಾನ್ಯವೆನಿಸಿದೆ. ಇಂತಹ ಹಲವಾರು ವಿಷಯಗಳು ಇಂದು ಪ್ರಾಂತ್ಯ ಮಟ್ಟದಲ್ಲಿ ಕೃಷಿಯ ಪತನಕ್ಕೆ ಕಾರಣೀಭೂತವಾಗಿವೆ ಉದಾಹರಣೆಗೆ ಪಶ್ಚಿಮ ಬಂಗಾಳ ಸರಕಾರ ಮತ್ತು ಮೈಸೂರು ಸರಕಾರಗಳು ಕಳೆದ ವರ್ಷ ಕೃಷಿಗೆಂದು ತೆಗೆದಿಟ್ಟ ಹಣವನ್ನು ರಸ್ತೆ ಸಾರಿಗೆ ಮತ್ತು ಗನಿ ಕೈಗಾರಿಕೆಗಳಿಗೆ ವಿನಿಯೋಗಿಸಿದುದು ಎಲ್ಲರಿಗೆ ತಿಳಿದ ವಿಷಯ

ಕಳೆದ ಹಲವು ವರ್ಷಗಳಿಂದ ಕೃಷಿಯ ಉತ್ಪಾದನೆಯು ಎಕ್ರೆ ಎಕ್ರೆಗೆ ಕಡಿಮೆಯಾಗುತ್ತ ಬಂದಿದೆ ೧೯೪೯—೫೦ರಿಂದ ೧೯೬೧—೬೨ರ ಮಧ್ಯ ಅವಧಿಯಲ್ಲಿ ಸೇ. ಕೃಷಿಯ ಉತ್ಪಾದನೆಯು ಕೇವಲ ೧೪ರಷ್ಟೇ ಅಭಿವೃದ್ಧಿಯಾಗಿರುವುದು ನಿಜಕ್ಕೂ ಚಿಂತಾಜನಕ ವಿಷಯವಾಗಿದೆ. ನಮ್ಮ ಮಂತ್ರಿ ಮಾನ್ಯರು ಕೇವಲ ಅಧಿ... ಪಟ್ಟಣಗಳಲ್ಲಿ ಕುಳಿತು ಕೃಷಿ ಸಂಬಂಧಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಲ್ಲೇ ಏಕಾಗ್ರರಾಗಿದ್ದಾರೆಯೇ ವಿನಃ ಗ್ರಾಮಾಂತರ ಪ್ರದೇಶಗಳ ನಿಜವಾದ ಕೃಷಿಯ ಅಭಿವೃದ್ಧಿಯನ್ನು ಮಾಡುವುದರಲ್ಲಿ ಕಟಿಬದ್ಧರಾಗಿಲ್ಲ. ಸಮರ್ಥ ಕೃಷಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಘಂಟಾಘೋಷವಾಗಿ ವ್ಯಾಖ್ಯಾನ ಮಾಡುತ್ತಾರೆಯೇ ಹೊರತು ಅದು ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಒಳ್ಳೆಯ ಪ್ರಭಾವ ಬೀರಿದೆಯೆಂಬುದನ್ನು ಅವರು ಗಮನಿಸುತ್ತಿಲ್ಲ. ಸರಕಾರ ಒದಗಿಸಿದ ಸುಧಾರಿತ ಸಲಕರಣೆ, ಬೀಜ ಮೊದಲಾದ ಉಪಕರಣಗಳು ಕೃಷಿಕರಿಗೆ ಸರಿಯಾಗಿ ತಲುಪುತ್ತಿಲ್ಲ ಉಳಿದರೂ ಅಪಾತ್ರವಾಗಿ ವಿನಿಯೋಗವಾಗುತ್ತಿವೆ. ಹೀಗಿರುವಾಗ ಕೃಷಿಯ ಉದ್ಧಾರವಾಗುವುದಾದರೂ ಹೇಗೆ?

ಈ ರೀತಿಯ ಅಪವ್ಯಯ, ಅಪಾ... ವಿನಿಮಯ, ಅಲಕ್ಷ್ಯತೆಯೇ ಮೊದಲಾದುವುಗಳನ್ನು ಪ್ರತ್ಯಕ್ಷವೋ, ಅಪ್ರತ್ಯಕ್ಷವೋ ನೋಡಿದ ಸರಕಾರ ಇದರ ನಿವಾರಣಗಾಗಿ ಒಂದು ಸಮಿತಿಯನ್ನು ನೇಮಿಸಿತು ಆದರೆ ಈ ಸಮಿತಿಯು ಈ ತನಕವೂ ದೇಶದ ಕೃಷಿಯ ಮಟ್ಟವನ್ನು, ಸ್ಥಿತಿಯನ್ನು ತಿಳಿಯಪಡಿಸುವುದರಲ್ಲಿ ಸಮರ್ಥವಾಗಿಲ್ಲ. ಸರಿಯಾದ ರೀತಿಯಲ್ಲಿ ನೀರಾವ...

(೯ನೇ ಪುಟ ನೋಡಿರಿ)

ಅಮೇರಿಕೆಯು ಶನಿಗ್ರಹ ಯಾತ್ರೆಗೆಂದೇ ತಯಾರಿಸಿದ ಅಂತರಿಕ್ಷ ನೌಕೆ


## ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

**ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು**

### ೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು ಯು ರಾಘವೇಂದ್ರ ಆಚಾರ್ಯ, ಎಂ ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

### ೨. ಸಾಮಾನ್ಯ ರೋಗಗಳು

ಲೇಖಕರು. ಡಾ| ಕೆ ಎಲ್. ಐತಾಳ, ಎಂ. ಬಿ ಬಿ ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

### ೩. ಭೌತಿಕ ದರ್ಶನ

ಲೇಖಕರು ಬಡೆಕ್ಕಿಲ ಕೃಷ್ಣ ಭಟ್ಟ, ಎಲ್ಎಲ್ ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ

**ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.**

ರೂ ೩=೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ

ವಿಚಾರಿಸಿರಿ:

**ನವಭಾರತ ಪುಸ್ತಕ ಭಂಡಾರ, ಉಡುಪಿ.**

## ಬರ್ಟ್ರೆಂಡ್ ರಸ್ಸೆಲ್ ಹೇಳುತ್ತಾರೆ

# ಸಂರಕ್ಷಣೆಗಾಗಿ ಕಟಿಬದ್ಧರಾಗಬೇಕು

ಸೋವಿಯತ್ ರಶ್ಯ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸರಕಾರಗಳು ನಮ್ಮನ್ನು ತೀವ್ರವಾಗಿ ಮೃತ್ಯುವಿನತ್ತ ಒಯ್ಯುತ್ತಿವೆ.

ಈ ಭೂಮಿಯಲ್ಲಿ ಮಾನವನ ಬಾಳು ಕ್ಷಣಿಕವಾದುದು. ಜೀವನದಲ್ಲಿ ತುಚ್ಛ ಆವಶ್ಯಕತೆಗಳನ್ನು ಪೂರ್ಣ ಮಾಡುವುದಕ್ಕಾಗಿ ಒದ್ದಾಡುತ್ತಿರುವ ಮಾನವ ಸಮೂಹವನ್ನೇ ಮೃತ್ಯುವಿನ ದವಡೆಗೆ ತಳ್ಳುವುದು ಉಚಿತವೆನಿಸದೆ? ಎಂದು ನೀವು ಕೇಳಬಹುದು. ಆದರೆ, ಈ ವಿಚಾರವು ಸಂಪೂರ್ಣ ಹುಚ್ಚುತನ. ಇಂತಹ ಹೇಯ ಮತ್ತು ನಿಂದ್ಯ ವಿಚಾರವನ್ನು ಕಂಡರೇನೇ ಜುಗುಪ್ಸೆ ಬರಬೇಕು; ಸಿಟ್ಟು ಬರಬೇಕು. ಪ್ರತಿಯೊಬ್ಬನೂ ತನ್ನ ಜೀವನವನ್ನು ತನ್ನ ಮುಷ್ಟಿಯಲ್ಲೇ ಇಟ್ಟುಕೊಂಡಿದ್ದಾನೆ; ಸೆರಗಿನಲ್ಲಿ ಅದನ್ನು ಗಂಟು ಹಾಕಿಕೊಂಡಿರುತ್ತಾನೆ. ನಮ್ಮ ನಡುವೆ ನಿರ್ದಯತೆ, ಬರ್ಬರತೆಗಳೂ ಮನೆ ಮಾಡಿವೆ.

ನಾವು ದಾನವೀಯ ಯೋಜನೆಗಳ ಮುಂದೆಂದೂ ತಲೆಬಾಗಬಾರದು. ಮಾನವನು ಬಹಳಷ್ಟು ಕೆಟ್ಟುಹೋಗಿದ್ದಾನೆ; ಆತನ ಜೀವನ ಮಟ್ಟ ಮತ್ತು ನೈತಿಕಸ್ತರಗಳು ಇಳಿದುಹೋಗಿವೆ, ಮನುಷ್ಯ ಸಮುದಾಯದ ಅಸ್ತಿತ್ವವನ್ನೇ ನಾಶಮಾಡಬಲ್ಲ ಮಾರಕ ಶಕ್ತಿಯ ಮುಂದೆ ತಲೆಯೆತ್ತಿ ನಿಲ್ಲುವ ಕೆಚ್ಚೆದೆ ಒಬ್ಬನಲ್ಲೂ ಉಳಿದಿಲ್ಲವೆಂಬ ದೂರು ಎಲೆಲ್ಲೂ ಪ್ರತಿಧ್ವನಿಸುತ್ತಿದೆ. ಆದರೆ ಇವೆಲ್ಲವೂ ಅಸತ್ಯಘಟಿತವಾಗಿವೆಯೆಂದೆನ್ನಲೇಬೇಕು.

ಕೆಚ್ಚೆದೆ ಎಲ್ಲೂ ಇದ್ದೇ ಇದೆ. ಆದರೆ, ಕಾರಣಾಂತರದಿಂದದು ಮರೆಯಾಗಿದೆ. ಧೀರರಾದವರು ತಮ್ಮ ಕರ್ತವ್ಯವನ್ನು ಮರೆತು ನಿಷ್ಕ್ರಿಯರಾಗುವುದರಿಂದಲೇ ಈ ಭಯಾನಕ ಪರಿಸ್ಥಿತಿ ತಲೆದೋರಿದೆ. ನಮ್ಮ ಮುಂದೆ ಅಪಾಯ ಸರ್ಪ ಹೆಡೆಯೆತ್ತಿ ನಿಂತಿದೆ. ಇದರಿಂದ ನಾವು ಭಯಭೀತರಾಗಿ ಕೈಕಟ್ಟಿ ದೂರವೋಡಿದರೆ, ಪುರುಷಾರ್ಥ ಸಾಧನೆಯಾಗಲಿಲ್ಲ. ನಾವು ಎಚ್ಚರಿಕೆಯಿಂದಿರಬೇಕು; ಸಮಾಧಾನಚಿತ್ತರಾಗಬೇಕು; ಸಭ್ಯ ನಾಗರಿಕರು ಅನಾಹುತದಿಂದ ಪಾರಾಗಲು ಆವಶ್ಯಕ ಕ್ರಮ ಕೈಗೊಳ್ಳಬೇಕು; ತಮ್ಮ ಸರಕಾರವು ಈ ದಿಸೆಯಲ್ಲಿ ಉಪಯುಕ್ತ ಕಾರ್ಯಪ್ರವೃತ್ತವಾಗುವಂತೆ ಆಗ್ರಹ ತೊಡಬೇಕು.

ಇಂದು ವಿಶ್ವದ ಎಲ್ಲ ದೇಶಗಳ ಸರಕಾರಗಳೂ ನರನಾರಿಯರೂ ತಮ್ಮ ಹೆಸರಿನಲ್ಲಿ ಆಗುತ್ತಿರುವ ಅತ್ಯಾಚಾರಗಳನ್ನು, ದುಷ್ಕೃತ್ಯಗಳನ್ನು ತಡೆಹಿಡಿಯಬೇಕು. ಆದರೆ, ಇಂದು ಈ ಕಾರ್ಯ ನಡೆಯುತ್ತಿಲ್ಲ. ಇದಕ್ಕೆ ಭಯಭೀತ ಜನತೆ ನಿಷ್ಕ್ರಿಯವಿರುವುದೇ ಕಾರಣವೆನ್ನುವುದು ಅಸಾಧ್ಯ. ದುಷ್ಕೃತ್ಯಗಳ ಕರಾಳತೆಯಿಂದ ಜನತೆ ನೊಂದಿದೆ; ನೋಯುತ್ತಿದೆ. ಹಾಗಿದ್ದರೂ ಅದು ಇದನ್ನು ದೂರೀಕರಿಸಲು ಅಸಮರ್ಥವಾಗಿದೆ; ಅಸಹಾಯಕವೆನಿಸಿದೆ. ಈ ರೀತಿಯ ಅಂಜುಗುಳಿತನಕ್ಕೆ ಕಾರಣವಾದರೂ ಏನಿರಬಹುದು? ತನ್ನಿಂದ ಏನು ಮಾಡುವುದೂ ಅಸಾಧ್ಯವೆಂಬ ಅಸಹಾಯಕ ಮನೋಭಾವನೆಯೇ ಜನರನ್ನು ಹೆಂಗುಗಳನ್ನಾಗಿಸಿದೆ; ಅವರಲ್ಲಿರುವ ಸಹಜ ಧೈರ್ಯಪ್ರವೃತ್ತಿಯನ್ನು ನೆಲಸಮ ಮಾಡಿದೆ, ನಿಷ್ಕ್ರಿಯಗೊಳಿಸಿದೆ. ಅಂತಹ ನೈಸರ್ಗಿಕ ಶಕ್ತಿಯನ್ನೇ ಅಪಹರಿಸಿ ಕೊಂಡಿದೆ.

ಹಾಗಿರುವಾಗ ಇದಕ್ಕೆ ಜವಾಬ್ದಾರರು ಯಾರು? ಮೃತ್ಯುವಾಡುತ್ತಿರುವ ತಾಂಡವ ನೃತ್ಯಕ್ಕೆ ಕಾರಣಪುರುಷರಾರು? ತಮ್ಮ ಶಕ್ತಿಯ ಪ್ರಮಾಣವನ್ನು ಅರಿತುಕೊಳ್ಳದೆ ತಾವು ದುರ್ಬಲರು, ನಿಸ್ಸಹಾಯಕರು ಎಂಬ ಹೀನ ಮನೋವೃತ್ತಿ ತಳೆದಿರುವ ಭೀರುಗಳೇ ಈ ಅತ್ಯಾಚಾರಕ್ಕೆ ಉತ್ತರದಾಯಿಗಳೆಂದು ಹೇಳಲೇ ಬೇಕಾಗುತ್ತದೆ. ಏಕೆಂದರೆ, ಈ ನೃತ್ಯವನ್ನು ಹತ್ತಿಕ್ಕುವ ಶಕ್ತಿ ಅವರಲ್ಲಿ ಸುಪ್ತವಾಗಿ ಇರುವುದಾದರೂ ಅದನ್ನು ಜಾಗೃತಗೊಳಿಸುವ ಪ್ರಯತ್ನವನ್ನೇ ಅವರು ಮಾಡಲಿಳಿಯುವುದಿಲ್ಲ.

ಈ ಒಂದು ಶತಮಾನದಲ್ಲಿ ಎರಡು ಮಹಾಯುದ್ಧಗಳು ಸಂಭವಿಸಿದುವು. ಒಂದೊಂದು ಸಂಗ್ರಾಮದಲ್ಲಿ ಕಡಿಮೆ ಪಕ್ಷ ೫-೬ ಕೋಟಿ ಜನರು ಸಾವನ್ನಪ್ಪಿದರು. ಮಿತ್ರ ಮತ್ತು ಶತ್ರು ಪಕ್ಷಗಳಿಗೆ ಸೇರಿದ ರಾಷ್ಟ್ರಗಳು ಬದಲಾಗಿವೆ. ಯುದ್ಧವನ್ನು ವಶದಲ್ಲಿರಿಸಿಕೊಳ್ಳುವುದು ಕಷ್ಟವೆನಿಸಿದರೂ ಅದಿಂದು ಅಪರಿಹಾರ್ಯವೇ ಎಂದು ಚಿಂತಿಸುವುದು ಅತ್ಯಗತ್ಯವಿದೆ. ೬೦ ಲಕ್ಷ ಯೆಹೂದಿಗಳ ಅಂತ್ಯಕ್ಕೆ ಕಾರಣವೆನಿಸಿದ ಯುದ್ಧ ಭೀತಿ ಇಂದಿಗೂ ತಾಂಡವವಾಡುತ್ತಿದೆ. ಈ ಪರಿಸ್ಥಿತಿಗಳು ಹಿಂದೆಯೂ ಇದ್ದುವು, ಇಂದಿಗೂ ನಮ್ಮ ಜೀವನದ ಅವಿಭಾಜ್ಯ ಅಂಗವೆನಿಸಿಕೊಂಡಿವೆ.

ಇಂತಹ ಭೀಷಣತೆ ಹರಡುವುದಕ್ಕೆ ಕಾರಣವೇನು? ಮನುಷ್ಯನು ತಾನು ಕಾರ್ಯಮಾಡಲು ವ್ಯಕ್ತಿಶಃ ಅಸಮರ್ಥನಾಗುವುದರಿಂದ ಅಥವಾ ಜೀವನದಲ್ಲಿ ಕೆಲಸ ಮಾಡಲು ತಾನು ಅಸಮರ್ಥನೆಂಬ ಭಾವನೆಯನ್ನಾತ ಅನುಭವ ಮಾಡುವುದರಿಂದ. ಹೀಗಲ್ಲವಾದರೆ, ನಾವು ಪ್ರತಿಯೊಂದು ತಾಸಿನಲ್ಲಿ ೫೦ ಕೋಟಿ ರೂಪಾಯಿಗಳನ್ನು ಶಸ್ತ್ರಾಸ್ತ್ರಗಳಿಗೆಂದು ನೀರಿನಂತೆ ವ್ಯಯಿಸುತ್ತಿರಲಿಲ್ಲ. ಅದರಲ್ಲೂ ಪ್ರತಿ ಮೂವರ ಹಿಂದೆ ಇಬ್ಬರು ಹಸಿದಿರುವ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳಿಗಾದರೂ ಇಷ್ಟೊಂದು ವೆಚ್ಚ ಮಾಡುವುದೆಂದರೆ, ನಮ್ಮ ಅಸಮರ್ಥತೆಯು ಅದೆಷ್ಟು ಆಳವಾಗಿ ಬೇರು ಬಿಟ್ಟಿದೆಯೆಂದು ಊಹಿಸಬಹುದು. ಈ ಅಸಮರ್ಥತೆಯಿಲ್ಲವಾಗಿದ್ದರೆ, ಮಾನವನು ರಾಕೇಟುಗಳ ಚೌಕಟ್ಟನ್ನು ಮುರಿಯುತಿದ್ದನು, ಅಣು ಶಸ್ತ್ರಾಗಾರಗಳ ಇಟ್ಟಿಗೆಯನ್ನು ಕಿತ್ತುಹಾಕುತಿದ್ದನು. ಆದರೆ ಇಂದು ಮಾನವನಲ್ಲಿ ಇಷ್ಟೊಂದು ಶಕ್ತಿ-ಸಾಹಸಗಳಿವೆಯೆ? ತನ್ನ ಕರ್ತವ್ಯವೆಂದು ಮನವರಿಕೆಯಾದುದನ್ನು ಮಾಡಿಯೇ ತೀರುವಷ್ಟು ಮಾನವ ಶಕ್ತಿವಂತನಾಗಿದ್ದಾನೆಯೆ? ಇಲ್ಲ, ಸರ್ವಥಾ ಆತ ಅಶಕ್ತನಾಗಿದ್ದಾನೆ. ಮತ್ತದರಿಂದಾಗಿ ಕರ್ತವ್ಯಪರಾಙ್ಮುಖನಾಗಿದ್ದಾನೆ; ಗೌರವಹೀನನೆನಿಸಿದ್ದಾನೆ.

ಪ್ರಪಂಚದ ಈ ವಿಶಾಲ ಆದರೆ ವಿಕರಾಳ ಸತ್ಯಾಂಶಗಳಿಗೆ ಸರಳ ಪರಿಹಾರವನ್ನು ಕಂಡುಕೊಂಡು, ಅವನ್ನು ಕೈಗೊಳ್ಳಲು ಪ್ರಯತ್ನಿಸುತ್ತಿರುವೆವೆ? ಇದಕ್ಕೆ ಪರಿಹಾರ ಸರಳವಿಲ್ಲ; ಆದುದರಿಂದ ನಾವು ಚಡಪಡಿಸುತ್ತಿರುತ್ತೇವೆ; ನಮ್ಮೆಲ್ಲರ ಹೃದಯವನ್ನು ಕಣ್ಣಾಗಿ ನೋಡಿದರೆ, ಈ ಸಂಗತಿಯು ಮತ್ತಷ್ಟು ಸ್ಪಷ್ಟವಾಗುತ್ತದೆ— ನಮ್ಮ ಅಪರಾಧವೇ ಇದು. ಮನುಷ್ಯತೆಗೆ ವಿರುದ್ಧವಾಗಿ ಹೋರಾಡುವುದರ ಔಚಿತ್ಯವು ಪ್ರತಿಫಲದ ಆಶ್ವಾಸನೆ ಅಥವಾ ಸಫಲತೆಯ ವಿಶ್ವಾಸವನ್ನು ಹೊಂದಿಕೊಂಡಿಲ್ಲ. ಔಚಿತ್ಯವಿರುವುದು ಅದನ್ನು ವಿರೋಧಿಸುವಲ್ಲಿ.

ಸೋವಿಯತ್ ರಶ್ಯ, ಅಮೇರಿಕಾ, ನ್ಯಾಟೋ ಒಕ್ಕೂಟ, ವಾರ್ಸಾ ಒಡಂಬಡಿಕೆಗೆ ಸೇರಿದ ಕೂಟಗಳ ನೀತಿಯ ಮೇಲೆ ಪ್ರಭಾವ ಬೀರುವಷ್ಟು ನಾವು ಸಮರ್ಥರಲ್ಲವೆಂದು ಯಾರೂ ಹೇಳಬಾರದು. ನಮ್ಮ ಸರಕಾರಗಳಿಂದಲೂ ಚಡಪಡಿಸುತ್ತಲೇ ರಾತ್ರಿ ಬೇಗು ಮಾಡುತ್ತಿವೆ.

ಅಣ್ವಸ್ತ್ರ ವಿರೋಧದ ಭಾವನೆಯನ್ನು ತಳೆದವರು ಮತ್ತು ನಿರೋಧಕಾರ್ಯದಲ್ಲಿ ಸಹಕಾರ ನೀಡುವಲ್ಲಿ ಇಚ್ಛುಕರಾದವರು ಒಂದುಗೂಡಿ ಅಜೇಯ ವಿಶ್ವನೋತ್ಪಾದಕ ಶಕ್ತಿಯ ರೂಪದಲ್ಲಿ ನಿಲ್ಲಬಲ್ಲರು. ಮಾನವರು ವಾಸಿಗಳಾಗಿ ಪ್ರಪಂಚಕ್ಕೆ ಇಳಿದಿಲ್ಲ; ಸಾಯುವುದಕ್ಕಾಗಿಯೇ ಅವರ ಹುಟ್ಟಿಲ್ಲ. ಈ ಸತ್ಯವನ್ನು ಮನಗಂಡು ಈ ಶಕ್ತಿಯು ಪೂರ್ವ ಪಶ್ಚಿಮಗಳ ನಡುವೆ ವಿಶಾಲ ಸೇತುವೆಯನ್ನು ಕಟ್ಟಲು ಸಮರ್ಥರಾಗುವರು. ಆತಂಕಕಾರಿ ಪ್ರಗತಿ ನಿರೋಧಕ ನೀತಿಯನ್ನು ಬಿಟ್ಟುಕೊಟ್ಟು; ದೃಢ ಸಂಕಲ್ಪವೊಂದನ್ನು ಗ್ರಹಿಸುವಂತೆ ಮಾಡಬಹುದು ಮಾನವನು. ಒಬ್ಬನಿನ್ನೊಬ್ಬನಿಗೆ ಮುಂದೆಂದೂ ಹಾನಿಕಾರಕವಾದ ವ್ಯವಹಾರವನ್ನು ಮಾಡದಿರುವ, ಪರಸ್ಪರ ಹೊಂದಿಕೆಯ ಬದುಕನ್ನು ಬಾಳುವ

(೮ನೇ ಪುಟ ನೋಡಿರಿ)

● ಕುಮಾರಿ ಬಿಲ್ಲೆಗಳು ●

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮುಯೋಚಿತವಾದ ಆಯುರ್ವೇದೀಯ ಮಿಶ್ರಣ।

ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-

**P. Devee & Co** (N. J.) Calcutta—40

ನಿಃಶ್ಶಸ್ತ್ರತೆಯೊಡನೆ ಯುದ್ಧ ಹೂಡಿದ ಭಾರತಕ್ಕೆ ಸಾಕಷ್ಟು ಜಯಶಾಲಿಯಾಗಿದೆ. ನೆರೆಯ ನೇಪಾಳದಲ್ಲಿ ಯುವ ವಯಸ್ಕರ ಶಿಕ್ಷಣ ಪ್ರಸಾರಕ್ಕೆ ಭಾರತವು ಸಹಾಯ ಸಲ್ಲಿಸುತ್ತಿದೆ. ಅಲ್ಲದೆ ಪೋಖರಾ ಕಣಿವೆಯ ಸ್ತ್ರೀಯರು ಭಾರತೀಯರ ನೆರವಿನಿಂದ ಸುಶಿಕ್ಷಿತೆಯರಾಗುತ್ತಿದ್ದಾರೆ. ಈ ವಯಸ್ಕ ಶಿಕ್ಷಣ ಕೇಂದ್ರವಿದು.

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೩ | ೨೫-೪-೧೯೬೩ | ೩೩ |

## ಆಯುರ್ವೇದಕ್ಕೆ ಪ್ರೋತ್ಸಾಹ

ಪದ್ಮಶ್ರೀ ನೇತ್ರತಜ್ಞ ಡಾ| ಎಂ. ಸಿ. ಮೋದಿಯವರ ಅಧ್ಯಕ್ಷತೆಯಲ್ಲಿ ಕಳೆದ ವಾರ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನವು ಮಂಗಳೂರಲ್ಲಿ ಜರಗಿತು. ಪಾಶ್ಚಾತ್ಯರು ರೋಗ ನಿಧಾನ ತಂತ್ರವನ್ನರಿಯುವುದಕ್ಕೆ ಮೊದಲೇ ಸಾಕಷ್ಟು ಜನಪ್ಪಾಸಿಗೊಳಪಟ್ಟು ಪ್ರಬುದ್ಧವಾಗಿ ಬೆಳೆದು ಬಂದ ವೈದ್ಯ ಪದ್ಧತಿ ಆಯುರ್ವೇದ. ಆದರೆ, ಅದಿಂದು ಶೋಚನೀಯಾವಸ್ಥೆಗೀಡಾಗಿದೆ ಎಂಬುದು ಭಾರತೀಯರಾದ ನಮಗೆ ಕಳಂಕ. ಪಾಶ್ಚಾತ್ಯ ಪ್ರಭುತ್ವದಿಂದ ರಾಜ ಭಾಷೆಯಾಗಿ ಉಳಿದು ಬಂದ ಇಂಗ್ಲಿಷಿನ ಸ್ಥಾನದಲ್ಲಿ ದೇಶಭಾಷೆಯಾದ ಹಿಂದಿಯನ್ನಿಡಬೇಕೆಂಬ ನಿರ್ಧಾರಕ್ಕೆ ನಾವು ಬಂದಿರುವಾಗ, ನಮ್ಮದಾದ ಆಯುರ್ವೇದವನ್ನು ಕಡೆಗಣಿಸುವುದು ನ್ಯಾಯವೇ ಎಂಬ ಪ್ರಶ್ನೆಯನ್ನು ನಿಷ್ಕಲ್ಮಶ ಮನಸ್ಸಿನಿಂದ ವಿವೇಚಿಸಬೇಕಾಗಿದೆ. ಇಂದು ಜನತೆಯಲ್ಲಿ ಆಯುರ್ವೇದದ ಬಗ್ಗೆ ಉದಾಸೀನ ಮನೋವೃತ್ತಿ ಇದೆಯೆಂದು ಹೇಳಲಾಗುತ್ತಿದ್ದರೂ ಈ ಅಂಬೋಣವು ಎಷ್ಟರ ಮಟ್ಟಿಗೆ ಸತ್ಯಾಂಶ ಭರಿತವಾಗಿದೆಯೆಂದು ಪರಿಶೀಲಿಸುವುದಗತ್ಯ. ಸರಕಾರವು ಆಯುರ್ವೇದವನ್ನು ಮಲತಾಯಿ ದೃಷ್ಟಿಯಿಂದ ನೋಡುತ್ತಿರುವುದರಿಂದಲೇ ಇಂತಹ ದುರವಸ್ಥೆಯದಕ್ಕೆ ಪ್ರಾಪ್ತವಾಗಿದೆಯೆಂಬುದು ಸಂಪೂರ್ಣ ಸತ್ಯ.

ಆಯುರ್ವೇದ ಶಿಕ್ಷಣ, ಅದರ ಪ್ರಸಾರ ಮತ್ತು ಸಂಶೋಧನೆಗಳ ಕಡೆಗೆ ಪೂರ್ಣರೂಪದಿಂದ ಸರಕಾರದಿಂದು ಗಮನ ಕೊಡುತ್ತಿದೆಯೆ? ಈ ಸಂಬಂಧವಾಗಿ ನಮ್ಮ ಯೋಜನೆಗಳಲ್ಲಿ ಮೀಸಲಿಟ್ಟಿರುವ ಹಣವನ್ನು ಕೂಡ ವಿನಿಯೋಗಿಸುವಲ್ಲಿ ಸರಕಾರವು ಅಸಮರ್ಥವಾಯಿತು ಎಂಬ ಒಂದೇ ಒಂದು ನಿದರ್ಶನವೇ ಅದರ ಔದಾಸೀನ್ಯದ ಪರಮಾವಧಿಯನ್ನು ಸಾರಿ ಹೇಳುತ್ತದೆ. ಆಯುರ್ವೇದದ ಗಿಡಮೂಲಿಕೆಗಳ ಉದ್ಯಾನಗಳ ಮೇಲ್ವಿಚಾರಣೆಯನ್ನು ಸರಕಾರವು ಅರಣ್ಯ ಶಾಖೆಗೆ ಒಪ್ಪಿಸಿರುವುದರಿಂದ, ಅದರ ದೃಷ್ಟಿಯಲ್ಲಿ ಇವೆರಡೂ ಸಮಾನವೆಂದಾಯಿತು. ಆಯುರ್ವೇದ ಔಷಧಗಳಲ್ಲಿ ಮಹತ್ವಪೂರ್ಣವಾದ ಆಸವಾರಿಷ್ಟಗಳ ನಿರ್ಮಾಣಕ್ಕೆ ಕೊಡಲಿಯೇಟನ್ನು ನೀಡುವಂತೆ ಪಾನ ನಿರೋಧ ಶಾಸನವನ್ನು ಮಾದಕವಾಗಿಲ್ಲವಾದರೂ, ಇವುಗಳ ಮೇಲೆ ಹೇರಿರುವ ಸರಕಾರಿ ವರ್ತನೆಯಿಂದ ಆಯುರ್ವೇದವು ಜನಪ್ರಿಯವಾಗುವುದು, ಅದರ ಪ್ರಸಾರವಾಗುವುದು ಸಾಧ್ಯವೇ? ಎಂಬುದನ್ನು ನಾವು ಪರಿಶೀಲಿಸಬೇಕು. ಸುವರ್ಣ ನಿಯಂತ್ರಣ ಶಾಸನವಾದರೂ ಆಯುರ್ವೇದದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಆಯುರ್ವೇದ ಶಿಕ್ಷಣಕ್ಕೆ ಶಿಕ್ಷಣ ಪಡೆದವರಿಗೆ, ಅಧ್ಯಾಪಕರಿಗೆ, ಸಂಶೋಧನೆಗೆ, ಸ್ನಾತಕೋತ್ತರ ಶಿಕ್ಷಣಕ್ಕೆ ಮಹತ್ವವನ್ನು ನೀಡದೆ ಇವು ಬೇಕೇ ಬೇಡವೇ ಎಂಬ ನಿರ್ಲಕ್ಷ್ಯತನವನ್ನು ಸರಕಾರವು ಪ್ರದರ್ಶಿಸುತ್ತಿರುವುದೇ ಅದರ ಇಂದಿನ ದುಃಸ್ಥಿತಿಗೆ ಪ್ರಧಾನ ಕಾರಣವೆನ್ನಬೇಕು. ಇಂತಹ ಹೀನ ಪರಿಸ್ಥಿತಿಯಲ್ಲಿ ಆಯುರ್ವೇದವು ಬೆಳೆದು ಬರುವುದಾಗಲೀ ಅದು ಜನಪ್ರಿಯವಾಗುವುದಾಗಲೀ ಹೇಗೆ ಸಾಧ್ಯ?

ಸಮ್ಮೇಳನದ ಉದ್ಘಾಟನೆಗೈದ್ದ ಕರ್ನಾಟಕದ ವಿಧಾನಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗರು ಆಯುರ್ವೇದದ ಹಿರಿಮೆಯನ್ನೂ ಅದರ ಉಪಯುಕ್ತತೆಯನ್ನೂ ಧಾರಾಳವಾಗಿ ಪ್ರಶಂಸಿಸಿದ್ದಾರೆ. ಅದು ಬೆಳೆಯಬೇಕಾದ ಅಗತ್ಯವನ್ನು ಸರಕಾರ ಮನಗಂಡಿದೆಯೆಂದೂ ಆದುದರಿಂದ ಅದರ ಸರ್ವಾಂಗೋನ್ನತಿಗಾಗಿ ಆವಶ್ಯಕ ನೆರವನ್ನು ನೀಡುವುದೆಂದೂ ಭರವಸೆಯಿತ್ತಿದ್ದಾರೆ. ಆದರೆ ನಮ್ಮ ಶಾಸಕರ ಮಾತುಗಳಲ್ಲಿ ಜನತೆ ವಿಶ್ವಾಸವಿಡುವಂತಹ ಪರಿಸ್ಥಿತಿಯಿನ್ನೂ ಉದ್ಭವಿಸಿಲ್ಲ. ಆದುದರಿಂದ ಆಯುರ್ವೇದ ಸಮ್ಮೇಳನವು ಆಯುರ್ವೇದದ ಉನ್ನತಿಯ ದೃಷ್ಟಿಯಿಂದ ಸ್ವೀಕರಿಸಿದ ಗೊತ್ತುವಳಿಗಳನ್ನು ಸರಕಾರದ ಕಿವಿಗಳಿಗೆ ಸರಿಯಾಗಿ ಕೇಳುವಂತೆ ಮಾಡುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ಒತ್ತಾಯ ಹೇರುವುದು ಅತ್ಯವಶ್ಯವಾಗಿದೆ. ಆಯುರ್ವೇದ ಚಿಕಿತ್ಸಾ ವಿಧಾನ ಪ್ರಗತಿಗೆಂದು ಪ್ರತ್ಯೇಕಿಸಿಡುವ ಹಣವನ್ನು ಸದುಪಯೋಗ ಪಡಿಸದೆ ವ್ಯರ್ಥ ಉಳಿಸಬಾರದು; ಅಥವಾ ವ್ಯರ್ಥ ಹಾಳುಮಾಡಬಾರದು. ಆಯುರ್ವೇದದ ಪರಿಪೂರ್ಣ ವಿಕಾಸ ಕಾರ್ಯವು ಶೀಘ್ರಗತಿಯಿಂದ ಮುಂದುವರಿಯುವಂತೆ ಪ್ರತ್ಯೇಕ ಆಯುರ್ವೇದ ಇಲಾಖೆಯೊಂದನ್ನು ಸ್ಥಾಪಿಸಬೇಕು ಮತ್ತು ಮೂಲಿಕೋದ್ಯಾನಗಳ ಸಂರಕ್ಷಣೆಯನ್ನೂ ಇದಕ್ಕೆ ವಹಿಸಿಕೊಡಬೇಕು. ರಾಜ್ಯದಲ್ಲಿ ಮಂಜೂರಾಗಿರುವ ವೈದ್ಯರ ನೋಂದಣಿ ಶಾಸನವನ್ನು ಕಾರ್ಯರೂಪಕ್ಕೆ ತರಲು ಕೂಡಲೇ ರಾಜ್ಯ ಆಯುರ್ವೇದ ಬೋರ್ಡೊಂದನ್ನು ರಚಿಸಬೇಕು. ನ್ಯಾಯವಾಗಿ ಪ್ರಾರಂಭವಾಗ ಬೇಕಾಗಿದ್ದ ಆಯುರ್ವೇದ ಸ್ನಾತಕೋತ್ತರ ಶಿಕ್ಷಣ, ಸಂಶೋಧನಾ ವಿಭಾಗಗಳನ್ನು ಸರಕಾರವು ಆರಂಭಿಸಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಆಯುರ್ವೇದಕ್ಕೆ ಸ್ವಾತಂತ್ರ್ಯ ಬರಲಿಲ್ಲವಾದುದರಿಂದ ಔಷಧಿ ಸಂಬಂಧದ ಮಸೂದೆಯು ಸ್ವತಂತ್ರವಾಗಿರಬೇಕು. ಔಷಧಗಳ ಪರಿಶೀಲನೆ ಮತ್ತು ನಿಯಂತ್ರಣವು ಆಯುರ್ವೇದ ತಜ್ಞರ ಮಂಡಳಿಯ ಕೈಗಳಲ್ಲಿಯೇ ಇರಬೇಕು. ಆಯುರ್ವೇದ ಪದವೀಧರರನ್ನೂ ಅಲೋಪತಿ ಪದವೀಧರರಂತೆಯೇ ಸಮಾನ ದೃಷ್ಟಿಯಿಂದ ಕಾಣಬೇಕು. ನೀಡಲಾಗುತ್ತಿರುವ ಆಯುರ್ವೇದ ಶಿಕ್ಷಣದಲ್ಲಿ ಆಧುನಿಕ ತಂತ್ರೋಪಕರಣಗಳನ್ನೂ ಬಳಸಿಕೊಳ್ಳುವ ಅವಕಾಶಗಳನ್ನು ನೀಡಿ, ವೈದ್ಯರು ಜನತೆಗೆ ಸಮರ್ಥ ಸೇವೆ ಸಲ್ಲಿಸುವಂತೆ ಮಾಡಬೇಕು. ಔಷಧ ನಿರ್ಮಾಣದ ಮೇಲೆ ಇರುವ ಅನುಪಯುಕ್ತ ಆದರೆ ಪ್ರಗತಿ ವಿರೋಧಿ ಶಾಸನಗಳನ್ನು ಕಿತ್ತು ಹಾಕಿ ಸ್ವತಂತ್ರ ವಾತಾವರಣದಲ್ಲಿ ಆಯುರ್ವೇದವು ಬೆಳೆದು ದೇಶದಲ್ಲಿರುವ ಡಾಕ್ಟರುಗಳ ಕೊರತೆ ನೀಗಿಸುವಲ್ಲಿ ಮಹತ್ವದ ಪಾತ್ರ ವಹಿಸುವಂತೆ ಮಾರ್ಗವನ್ನು ನಿರಾತಂಕಗೊಳಿಸಬೇಕು.

ಜನತೆ ಪ್ರತಿಯೊಂದಕ್ಕೂ ಸರಕಾರದ ಮುಖವನ್ನು ನೋಡಬಾರದು ನಿಜ. ಆದರೆ, ಆಯುರ್ವೇದದ ಪ್ರಶ್ನೆಯು ಆ ರೀತಿಯಲ್ಲ. ಸರ್ವಸಮರ್ಥ ರೋಗ ನಿಧಾನವಾದ ಆಯುರ್ವೇದದ ಪ್ರಗತಿಯು ಸರಕಾರದ ನೀತಿಯನ್ನೇ ಹೊಂದಿಕೊಂಡಿದೆ; ಅದು ಬೀರುವ ದೃಷ್ಟಿಯನ್ನೇ ಅವಲಂಬಿಸಿದೆ. ಸರಕಾರವು ಸುದೃಷ್ಟಿಯಿಂದ ಇದನ್ನು ಕಾಣಬೇಕು; ಗೌರವದ ಭಾವನೆಯನ್ನು ಪ್ರದರ್ಶಿಸಿದರೆ ಮಾತ್ರ ಸಾಲದು. ಮನೋವಾಕ್ಕಾಯಗಳಿಂದ ಅದರ ಬೆಳವಣಿಗೆಯಲ್ಲಿ ಆಸಕ್ತಿ ವಹಿಸಿ, ತನಗರಿವಿಲ್ಲವಾದರೆ, ಅರಿತವರಿಂದ ತಿಳಿದುಕೊಂಡು ಮುಂದುವರಿಯಬೇಕು. ನೂತನ, ಈಗದ ಪತ್ರಗಳ ಪ್ರೋತ್ಸಾಹವಿಂದು ಬೇಕಾಗಿಲ್ಲ, ಆಯುರ್ವೇದದ ಪ್ರಗತಿಮಾರ್ಗವನ್ನು ಸುಗಮಗೊಳಿಸುವುದು ಇಂದು ಸರಕಾರ ಈ ದಿಶೆಯಲ್ಲಿ ಮಾಡಬೇಕಾದ ಆದ್ಯ ಕರ್ತವ್ಯ.

## ಪುನಶ್ಚ ಹರಿ ಓಂ

ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ನೀಡುವ ಹಾಗೂ ದೊಡ್ಡ ಮೊತ್ತದಲ್ಲಿ ಸೇವೆಯಲ್ಲಿ ನೌಕರರನ್ನು ಸೇರಿಸಿಕೊಳ್ಳುವ ಸಮಯ ಪ್ರಾಪ್ತವಾಗಿರುವಾಗ ಮರಳಿ ಎದ್ದಿದೆ ಹಿಂದುಳಿದವರು ಯಾರು ಎಂಬ ಪ್ರಶ್ನೆ. ಕರ್ನಾಟಕ ಸರಕಾರವು ೧೯೫೮ರಿಂದ ೧೯೬೩ರ ವರೆಗಿನ ಐದು ವರ್ಷಗಳಲ್ಲಿ ಐದು ಕಾನೂನುಗಳನ್ನು ಈ ಸಂಬಂಧದಲ್ಲಿ ಮಾಡಿದ್ದು, ಮೊದಲ ನಾಲ್ಕು ಉಚ್ಚ ನ್ಯಾಯಾಲಯದಿಂದಲೂ ಕೊನೆಯದು ಸರ್ವೋಚ್ಚ ನ್ಯಾಯಾಲಯದಿಂದಲೂ ಅಕ್ರಮವೆಂದು ಘೋಷಿತವಾದುದು ಸರ್ವಶ್ರುತ. ಜಾತೀಯ ತಳಹದಿಯಲ್ಲಿ ಹಿಂದುಳಿದವರನ್ನು ನಿರ್ಧರಿಸುವುದು ಅನ್ಯಾಯವೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆಯಾದರೂ ಮತ್ತಾವ ರೀತಿಯಿಂದ ಅವರನ್ನು ಗೊತ್ತುಹಚ್ಚಬೇಕೆಂದದು ಹೇಳಲಿಲ್ಲ. ಹಾಗೆ ಹೇಳುವುದು ಅದರ ಕೆಲಸವೂ ಇರಲಾರದು. ಈಗ ಮಂತ್ರಿಮಂಡಳಿ ಸಲ್ಲಿಯೇ ಒಂದು ಉಪಸಮಿತಿಯನ್ನು ರಚಿಸಿಕೊಂಡು ಈ ಪ್ರಶ್ನೆಗೆ ಉತ್ತರವರಸುವ ಹೊಣೆಗಾರಿಕೆಯನ್ನು ಅದಕ್ಕೊಪ್ಪಿಸಲಾಗಿದೆಯೆಂದು ತಿಳಿದು ಬಂದಿದೆ. ಜಾತಿಯನ್ನುಳಿದು ಮತ್ತಾವುದೆ ಧಾನಗಳಿಂದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗೊತ್ತುಹಚ್ಚುವುದು ಬಹು ಪ್ರಯಾಸ. ಏತಕ್ಕೆಂದರೆ, ಜಾತೀಯ ಲೇಬಲ್ ಸ್ಪಷ್ಟವಾಗಿಯೇ ಇರುತ್ತದೆ. ಆದರೆ, ಜಾತ್ಯತೀತ ಮತ್ತು ಸರ್ವ ಸಮತಾ ಭಾವನೆಯನ್ನು ಒಪ್ಪಿಕೊಂಡ ನಮ್ಮ ಸಂವಿಧಾನದ ಸೌಲಭ್ಯಗಳನ್ನು ಸರಕಾರವು ದುರುಪಯೋಗ ಪಡಿಸಬಾರದು. ನಾವು ಈ ಮೊದಲೇ ಹಲವು ಬಾರಿ ಆರ್ಥಿ ಮಾನದಂಡದಿಂದಲೇ ಹಿಂದುಳಿದವರ ನಿರ್ಧರಿಸಬೇಕು, ಪ್ರತಿಭಾ ಸಂಪನ್ನರಿ ಜಾತೀಯ ಉಚ್ಚತೆಯು ಪ್ರಗತಿಗೆ ಆತ ಕವೆನಿಸಿದರೆ, ದೇಶಕ್ಕೇನೇ ಬಹು ನ ವೆಂದು ಹೇಳುತ್ತ ಬಂದಿದ್ದೇವೆ. ಇಂಗಾದರೂ ಮತ್ತೊಮ್ಮೆ ಅದೇ ಅಭಿಪ್ರಾಯವನ್ನು ಶಿಕ್ಷಣ, ಪೌರಾಡಳಿತ ಮತ್ತು ಆರೋಗ್ಯ ಮಂತ್ರಿ ತ್ರಯರ ಸಮಿತಿ ಮುಂದೆ ಇಡಬಯಸುತ್ತೇವೆ: ಆರ್ಥಿ ಹಿಂದುಳಿದಿರುವಿಕೆಯನ್ನೇ ಮಾನದಂ ವಾಗಿ ಬಳಸಬೇಕು; ಪ್ರತಿಭೆಯನ್ ಯೋಗ್ಯತೆಯನ್ನೂ ಅನುಲಕ್ಷಿಸಿಯೇ ಶಿ ಣ ಸಂಸ್ಥೆಗಳಲ್ಲಿ ಮತ್ತು ಸರಕಾರಿ ನೌ ರಿಗಳಲ್ಲಿ ಪ್ರವೇಶ ಕೊಡಬೇಕು.

## ಎಲ್. ಐ. ಸಿ. ಯ ಹೊಸ ವ್ಯವಹಾರ

ಲೈಫ್ ಇನ್‌ಶೂರೆನ್ಸ್ ಕಾರ್ಪೊ ರೇಶನ್ನು ಜನವರಿ ೧೯೬೨ರಿಂದ ಮಾ ೬೩ರ ವರೆಗಿನ ೧೫ ತಿಂಗಳುಗಳ ಅ ಯಲ್ಲಿ ರೂ. ೭೬೫ ಕೋಟಿಗಳಿಗೂ ರಿದ ಹೊಸ ವ್ಯವಹಾರವನ್ನು ಮಾಡಿ ೧೯೬೧ರಲ್ಲಿ ಅದು ಮಾಡಿದ ಒಟ್ಟು ವ್ಯ ಹಾರವು ರೂ. ೬೦೮ ಕೋಟಿಗಳಾಗಿತ ೧೯೬೨ಕ್ಕೆ ಮೊದಲು ಕಾರ್ಪೊರೇಶ ಕೆಲೆಂಡರ್ ವರ್ಷವನ್ನೇ ತನ್ನ ವರ್ಷ ದು ಸ್ವೀಕರಿಸಿದ್ದರೂ ಈ ವರ್ಷದಿಂ ಅದು ಆರ್ಥಿಕ ವರ್ಷಕ್ಕೆ ಬದಲಾಯಿ ಲು ನಿರ್ಧರಿಸಿದುದರಿಂದ ಪ್ರಚಲಿತ ವ್ಯ ಹಾರವನ್ನು ಮಾರ್ಚಿ ೩೧ರಂದು ಅಂ ಗೊಳಿಸಬೇಕಾಯಿತು.

ಕಳೆದ ಅಕ್ಟೋಬರದಲ್ಲಿ ಚೀನೀ ಆಕ್ರಮಣದ ಪರಿಣಾಮವಾಗಿ ದೇಶದ ತುರ್ತು ಪರಿಸ್ಥಿತಿಯನ್ನು ಘೋಷಿಸ ಯಿತು. ಜೀವ ವಿಮೆಯ ಆವಶ್ಯ ಮತ್ತು ರಾಷ್ಟ್ರ ರಕ್ಷಣೆಯ ಹಾ ಅಭಿವೃದ್ಧಿಯ ಕಾರ್ಯಗಳಲ್ಲಿ ಜೀ ವಿಮೆಯ ಮಹತ್ವವನ್ನು ಜನತೆಯ ಗ ನಕ್ಕೆ ತರಲು ಕಾರ್ಪೊರೇಶನ್ ಸೂ ಕ್ರಮಗಳನ್ನು ಕೈಗೊಂಡಿತ್ತು. ಆದ ವ್ಯವಹಾರವನ್ನು ಭರದಿಂದ ಸಾಗಿಸ ಸಮಯ ಪ್ರಾರಂಭವಾದಾಗ ತುರ್ತು ಪರಿಸ್ಥಿತಿಯೂ ಪ್ರಾರಂಭವಾದುದರಿಂ ಅಡಚಣೆಯಾಯಿತು.

ಈ ಹದಿನೈದು ತಿಂಗಳ ಅವಧಿಯ ದಕ್ಷಿಣ ವಲಯವು ರೂ. ೨೦೧·೬ ಕೋಟಿಗಳ ವ್ಯವಹಾರವನ್ನು ಸಂಪೂರ್ಣ ಗೊಳಿಸಿ ಕಾರ್ಪೊರೇಶನ್ನಿನ ೫ ವಲ ಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ತ್ತದೆ.

ಕಾರ್ಪೊರೇಶನ್ನಿನ ವರ್ಷದ ಗಣ ನಾ ಅವಧಿಯು ಪರಿವರ್ತನೆಗೊಂಡು ದರಿಂದ ೧೯೬೩ರ ಡಿಶಂಬರ ೩೧ಕ್ಕೆ ಕೊ ನೆಗೊಳ್ಳುವ ಎರಡು ವರ್ಷಗಳ ವೇ ಲ್ಯುಯೇಶನ್‌ನ ಬದಲು ಮಾರ್ಚಿ ೩೧ ಕೊನೆಗೊಳ್ಳುವ ೧೫ ತಿಂಗಳ ಅವಧಿ ವೇಲ್ಯುಯೇಶನನ್ನು ನಡೆಸಲಾಗುವುದ ಹೀಗೆ ಕಾರ್ಪೊರೇಶನು ರಾಷ್ಟ್ರವು ಎ ರಿಸುತ್ತಿರುವ ಗಂಭೀರ ಪರಿಸ್ಥಿತಿಯ ಯೂ ಜನರಲ್ಲಿ ಜೀವ ವಿಮಾ ಪ್ರ ತ್ತಿಯನ್ನು ಉಳಿಸುವಲ್ಲಿ ಮತ್ತು ಬೆಳೆ ಸುವಲ್ಲಿ ಯಶಸ್ವಿಯಾಗಿದೆ.

## ಅಲ್ಲಲ್ಲಿಯ ಸುದ್ದಿ ಸಾರ

**ಡಾ| ನಾಗಪ್ಪಾಳ್ವರ ವಿದೇಶ ಪ್ರಯಾಣ**—ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳಾದ ಡಾ. ಕೆ. ನಾಗಪ್ಪ ಆಳ್ವರು ತಾ. 7—5—1963ರಂದು ಜಿನೇವಾದಲ್ಲಿ ಪ್ರಾರಂಭವಾಗುವ ಜಾಗತಿಕ ಆರೋಗ್ಯ ಸಭಾಧಿವೇಶನದಲ್ಲಿ ಭಾಗ ವಹಿಸಲು ತಾರೀಕು 5—5—63ರಂದು ವಿದೇಶ ಯಾತ್ರೆ ಕೈಗೊಳ್ಳಲಿರುವರು.

**ಉಪಹಾರ ಸಮಾರಂಭ**— ಶ್ರೀಮತಿ ಮತ್ತು ಶ್ರೀಯುತ ರಮೇಶ ಪೈಗಳು ತಮ್ಮ ಪುತ್ರ ಸುಧಾಕರನ ಉಪನಯನ ಸಂಬಂಧ ಇದೇ ತಾ. 20ನೇ ಸಂಜೆ ತಮ್ಮ ಮಣಿಪಾಲದ 'ಚಿತ್ರಕಲಾ' ನಿವಾಸದಲ್ಲಿ ಉಪಾಹಾರ ಸಮಾರಂಭವೊಂದನ್ನೇರ್ಪಡಿಸಿದ್ದರು ಇದಕ್ಕೆ ಆಪ್ತ ಮಹನೀಯರನೇಕರು ಬಂದಿದ್ದು ವಟುವನ್ನು ಆಶೀರ್ವಚಿಸಿದರು

**ವಿವಾಹ ಸಮಾರಂಭಗಳು** ಉಡುಪಿಯ ತರುಣೋತ್ಸಾಹೀ ಎಡ್ವೋಕೇಟರೂ ಸಾರ್ವಜನಿಕ ಸೇವಾಸಕ್ತರೂ ಆದ ಶ್ರೀ ಪಿ. ಶಿವಾಜಿ ಶೆಟ್ಟರು (ದಿ. ಉಪ್ಪೂರು ಹೊಸಮನೆ ಕೃಷ್ಣಯ್ಯ ಶೆಟ್ಟರ ಪುತ್ರ) ಚಿ. ಸೌ. ಜಯಂತಿಯನ್ನು (ಕುಂದಾಪುರ ಎಡ್ವೋಕೇಟು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ ಅವರ ಪುತ್ರಿ) ಇದೇ ತಾ. 17ರಂದು ಉಡುಪಿಯ ವಾದಿರಾಜೇಂದ್ರ ಕಲಾಮಂದಿರದಲ್ಲಿ ವಿಜೃಂಭಣೆಯಿಂದ ವಿವಾಹವಾದರು. ಈ ಸಮಾರಂಭಕ್ಕೆ ಊರು ಪರವೂರುಗಳಿಂದ ಆಪ್ತರನೇಕರು ಆಗಮಿಸಿದ್ದರು.

ಕಟಪಾಡಿ ಭುವನೇಂದ್ರ ಪ್ರೊಡಕ್ಟ್ಸ್‌ನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಾಂಗಾಳ ಜನಾರ್ದನ ನಾಯ್ಕರ ಪುತ್ರ ಚಿ ರಘುನಾಥ ನಾಯ್ಕರು ದಿ| ಉಡುಪಿ ಕಾಣಬೆಟ್ಟು ಗೋಪಾಲಕೃಷ್ಣ ನಾಯ್ಕರ ಪುತ್ರಿ ಸೌ. ಗೌರಿಯನ್ನು ಇದೇ ತಾ. 18ರಂದು ಶ್ರೀ ವಾದಿರಾಜೇಂದ್ರ ಕಲಾಮಂದಿರದಲ್ಲಿ ವೈಭವದಿಂದ ವಿವಾಹವಾದರು.

**ಸಿಂಡಿಕೇಟ್ ಬೇಂಕಿಗೆ ಅನುಮತಿ**-ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಕಿಂಗ್ ಸಿಂಡಿಕೇಟ್ ಲಿಮಿಟೆಡ್‌ಗೆ ವಿದೇಶ ವಿನಿಮಯ ವ್ಯವಹಾರ ಕೈಕೊಳ್ಳಲು ಅನುಮತಿ ದೊರೆತಿದೆಯೆಂದು ತಿಳಿದು ಬರುತ್ತದೆ.

**ಶಾಲಾಭಿವೃದ್ಧಿ ಸಮಿತಿಗಳ ಮಹಾಧಿವೇಶನ**— ಮಂಗಳೂರು ಶ್ರೇಣಿಯ ಶಾಲಾಭಿವೃದ್ಧಿ ಸಮಿತಿಗಳ ಮಹಾಧಿವೇಶನವೊಂದು ತಾ. 16—4—'63ರಂದು ಕಟೀಲು ಶ್ರೀ ದುರ್ಗಾಪರಮೇಶ್ವರೀ ಹಾ. ಎ. ಶಾಲೆಯಲ್ಲಿ ದ. ಕ. ಜಿಲ್ಲೆಯ ಎಡಿಶನಲ್ ಡಿಸ್ಟ್ರಿಕ್ಟ್ ಕಮಿಶನರಾದ ಶ್ರೀ ಕೆ. ಕಾಳೆಯ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಹೊತ್ತ ಮೊದಲು ಶ್ರೀ ಕಟೀಲು ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಕೆ. ಶ್ರೀಧರ ಶೆಟ್ಟಿ ಅತಿಥಿಗಳನ್ನು ಸ್ವಾಗತಿಸಿದರು. ಸ್ವಾಗತಸಮಿತಿಯ ಅಧ್ಯಕ್ಷರಾದ ಡಾ. ಎಸ್. ಚಂಪರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಕೆ. ಶ್ರೀಧರ ಶೆಟ್ಟರು ಸಮಾರಂಭದ ಉದ್ಘಾಟನೆ ಗೈದರು. ಪರೀಕ್ಷಾಧಿಕಾರಿಗಳಾದ ಶ್ರೀ ಎಚ್. ರಾಮ ಭಟ್ಟರು ಕಡ್ಡಾಯಶಿಕ್ಷಣದ ಸಂಕ್ಷಿಪ್ತ ವರದಿಯನ್ನೊಪ್ಪಿಸಿದರು.

ಶಾಲಾಭ್ಯುದಯಕ್ಕಾಗಿ ದಾನಿಗಳಿಗೆ ಪ್ರಶಸ್ತಿ ಪತ್ರಗಳನ್ನೂ ಈಯಲಾಯಿತು.

ಸಭಿಕರ ಪರವಾಗಿ ಶ್ರೀಗಳಾದ ವೈ. ಕೆ. ಸಂಜೀವ ಶೆಟ್ಟಿ, ಕೆ ಶಿವರಾಮ ಹೆಗ್ಡೆ, ಅನಂತಪದ್ಮನಾಭ ಉಡುಪ, ಮುಕ್ತ ರಾಮರಾಯ ಶೆಟ್ಟಿ ಇವರು ಸಮಯೋಚಿತವಾಗಿ ಭಾಷಣಗೈದರು. ಅಧ್ಯಕ್ಷರು ಭಾಷಣ ಗೈಯುತ್ತಾ, ಪಾಲಕ, ಬಾಲಕ ಹಾಗೂ ಬೋಧಕರ ನಿಕಟ ಸಂಪರ್ಕದ ಆವಶ್ಯಕತೆಯನ್ನು ವಿವರಿಸಿ, ಗ್ರಾಮೀಣ ವಲಯಗಳಲ್ಲಿ ಮಕ್ಕಳ ಹಾಜರಾತಿಯ ಬಗ್ಗೆ ಗಮನಿಸಬೇಕಾದ ಅಂಶವನ್ನು ಎತ್ತಿ ಸೂಚಿಸಿದರು. ಶಾಲಾ ಮುಖ್ಯೋಪಾಧ್ಯಾಯರೂ, ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ, ಶ್ರೀ ಕೆ. ರಾಮಣ್ಣ ಭಟ್ಟ, ಧನ್ಯವಾದ ಸಮರ್ಪಿಸಿದರು, ಕೊನೆಗೆ ಶ್ರೀ ಯು. ಆನಂದರಾಯರ ದಿಗ್ದರ್ಶನದಲ್ಲಿ ನೃತ್ಯಾಭಿನಯಗಳು ಮತ್ತು ಶಾಲಾಧ್ಯಾಪಕರ ಮಾರ್ಗದರ್ಶನದಲ್ಲಿ ಶಾಲಾ ಮಕ್ಕಳ "ಕೃಷ್ಣಾರ್ಜುನ ಕಾಳಗ"ವೆಂಬ ಯಕ್ಷಗಾನ ಪ್ರದರ್ಶನವೂ ನೆರವೇರಿದುವು ಶಾಲಾಭಿವೃದ್ಧಿ ಸಮಿತಿಗಳ ಮಹಾಧಿವೇಶನವು ಜಿಲ್ಲಾ ವಿದ್ಯಾಧಿಕಾರಿಗಳ ಕಾರ್ಯಾಲಯದ ಮಾರ್ಗದರ್ಶನದಲ್ಲಿ ಕಟೀಲು ದೇವಸ್ಥಾನದ ಆಶ್ರಯದಿಂದ ನೆರವೇರಿತು.

---

**ಕಾರ್ಕಳ ಡಿ. ಮು. ಕೋರ್ಟಿನಲ್ಲಿ**

ಕ್ರಮಸಂಖ್ಯೆ 55/1963

ಉರ್ಬನ್ ಸಾಲ್ದಾನ್ಹಾ ಕೊರ್ಡೆ .

ವಾದಿರು.

ಮತ್ತು

1. ಸುಂದರಿ ಶೆಟ್ಟಿ ಕನಕಮ್ಮ ಶೆಟ್ಟಿ ಮಗಳು
2. ವಿಟ್ಠಲ ಶೆಟ್ಟಿ 1ನೇ ಸುಂದರಿ ಶೆಟ್ಟಿ ಮಗ

ಕಾರ್ಕಳ ತಾಲ್ಲೂಕು ನಿಂಜೂರು ಗ್ರಾಮದ ಕಾನದಬೆಟ್ಟು ಎಂಬಲ್ಲಿರುವವರು.

—ಪ್ರತಿವಾದಿರು

ವಾದಿರು ಮತ್ತು ಪ್ರತಿವಾದಿರು ಕಳೆದ ತಾ. 10—5—1960ರಲ್ಲಿ ಮಾಡಿಕೊಂಡ ಚಾಲಗೇಣಿ ಕರಾರು ಪ್ರಕಾರ ಪ್ರತಿವಾದಿರು ವಾದಿರ ಹಕ್ಕಿನ ಬಾಬ್ತು ಚಾಲಗೇಣಿಯಾಗಿ ಅನುಭವಿಸಿ ಬರುವ ಆಸ್ತಿ ಬಾಬ್ತು ವಾದಿರಿಗೆ ಪ್ರತಿವಾದಿರಿಂದ ಕಳೆದ ಕಾರ್ತಿ ಮತ್ತು ಸುಗ್ಗಿ ಬೆಳೆಗಳ ಮಾರ್ಚಿ ಆಖೈರಿಗೆ ಬರಲು ಗೇಣಿ ಬಾಕಿ ಮೊಬಲಗು ರುಪಾಯಿ 514.42 N.P. ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಸದ್ರಿ ದಾವೆಯು ಪ್ರತಿವಾದಿರ ಹಾಜರಾತಿ ಬಗ್ಗೆ ತಾ. 15—6—1963ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ದಿವಸ ಬೆಳಿಗ್ಗೆ ಪ್ರತಿವಾದಿರು ಸ್ವತಹ ಯಾ ವಕೀಲರ ಮುಖಾಂತರ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದಲ್ಲಿ ಪ್ರತಿವಾದಿರನ್ನು ಶಿಕ್ಷಾ ಮಾಡಿ ಸದ್ರಿ ದಾವಾ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

(Sd) P. Vitlaldas Hegde,

ವಾದಿರಪರ ಎಡ್ವೋಕೇಟ್

ಕಾರ್ಕಳ, ತಾ. 19—4—63

---

## ವಾರ್ತಾವೇದಿಕೆ

### ಅಜೇಯ ನೆಹರು

ಚೀನೀಯರ ಆಕ್ರಮಣದಿಂದ ಮತ್ತು ದಿನ ದಿನಕ್ಕೆ ಹೆಚ್ಚುತ್ತಿರುವ ಆಕ್ರಮಣ ಭೀತಿಯಿಂದ ಭಾರತದಲ್ಲಿ ಐಕ್ಯ ಮತ್ತು ಸಮಗ್ರತೆಗಳು ಮತ್ತಷ್ಟು ದೃಢಗೊಳ್ಳಬೇಕಾದ ಈ ಸಮಯದಲ್ಲಿ ಅಧಿಕೃತ ಭಾಷಾ ವಿಧೇಯಕವೊಂದು ಭಿನ್ನಾಭಿಪ್ರಾಯ ಮೂಲಕ ವಾಗುವುದೇ ಎಂಬ ಸಂಶೇಹಕ್ಕೆಡೆಯಿದೆ. ಹಿಂದೀ ಭಾಷೆಯೊಡನೆ ಇಂಗ್ಲಿಷನ್ನೂ ಸಹ ಭಾಷೆಯಾಗಿ ಮುಂದುವರಿಸುವ ನಿರ್ಧಾರ ಈ ವಿಧೇಯಕದಲ್ಲಿರುವುದಾದರೂ ಈಗ ಹಿಂದಿಯನ್ನೇ ವಿರೋಧಿಸುವವರ ಸಂಖ್ಯೆ ಹೆಚ್ಚಾಗಿದೆ. ದೇಶದ ಬಾಹಿರ ಪ್ರಸಂಗಗಳಿಂದ ನೊಂದಿರುವ ಪ್ರಧಾನಿ ನೆಹರು ಆಂತರಿಕ ಭಿನ್ನಾಭಿಪ್ರಾಯಗಳನ್ನೂ ದೂರಮಾಡಬೇಕಾಗಿದೆ. ಎಂತಲೇ ಇಂದು ಭಾರತೀಯ ಪ್ರಧಾನಿ ನೆಹರುರವರ ಸತ್ವ ಪರೀಕ್ಷೆ ನಡೆಯುತ್ತಿದೆ. ಈ ಪರೀಕ್ಷೆಯಲ್ಲಿ ಅವರು ಹರಿಶ್ಚಂದ್ರನಂತೆ ಗೆದ್ದು ಬಂದರೆ, ಮತ್ತವರೆಂದೆಂದಿಗೂ ಅಜೇಯರು.

### ಕ್ರಾಂತಿ ಪುರುಷ ಟಿ. ಟಿ. ಕೆ.

ಕೇಂದ್ರದ ಆರ್ಥಿಕ ಮತ್ತು ಸಂರಕ್ಷಣಾ ಸಹಯೋಗ ಮಂತ್ರಿ ಟಿ. ಟಿ. ಕೆ. ಯವರ ಸ್ಥಾನಮಾನಗಳು ದಿನದಿನಕ್ಕೂ ದೆಹಲಿಯಲ್ಲಿ ಹೆಚ್ಚುತ್ತಿದೆ. ಇದಕ್ಕೆ ಅವರ ಅರ್ಹತೆಯೂ ಕಾರಣವಾಗಿರಬಹುದು. ಕಮ್ಯುನಿಷ್ಟರ ಆಕ್ರಮಣದಿಂದ ದೇಶವನ್ನು ರಕ್ಷಿಸಿಕೊಳ್ಳುವಲ್ಲಿ ವಿದೇಶಗಳಿಂದ ಸೈನಿಕ ಸಹಾಯವನ್ನು ಸಂಪಾದಿಸುವ ಗುರಿಯಿಂದವರು ತಮ್ಮ ಯಾತ್ರೆಯನ್ನಾರಂಭಿಸಿದ್ದಾರೆ ಭಾರತದ ತಾಟಸ್ಥ್ಯ ಧೋರಣೆಯನ್ನು ಸಮರ್ಥಿಸಿ ಸೀಟೋ ಸೆಂಟೋ ಒಡಂಬಡಿಕೆಗಳು ನಿರುಪಯುಕ್ತವೆಂದು ಸಾರಿದ ಟಿ. ಟಿ. ಕೆ. ನ್ಯೂಜಿಲೆಂಡ್— ಆಸ್ಟ್ರೇಲಿಯಾಗಳ ಸಂದರ್ಶನ ಮುಗಿಸಿ ಮತ್ತೆ ಪಶ್ಚಿಮದೆಡೆಗೆ ಹೊರಟಲಿದ್ದಾರೆ. ಅರ್ಥಮಂತ್ರಿಯಾಗಿರುವಾಗ ಬೃಹತ್ತರ ನಾದ ಕ್ರಾಂತಿಕಾರಣರಾದ ಟಿ ಟಿ. ಕೆ. ಇಂದೂ ಅಂತಹುದೇ ಕ್ರಾಂತಿಪುರುಷರಾದಾರು; ಇದರಿಂದ ಭಾರತದ ಭವಿಷ್ಯದ ಮೇಲೆ ಪರಿಣಾಮ ಬೀರೀತು.

### ಸರ್ದಾರ ಸಿಂಗ—ಭುಟ್ಟೋ

ಕಾಶ್ಮೀರ ತಂಟೆಯ ಪರಿಹಾರವೇ ಪ್ರಧಾನ ವಿಷಯವಾಗಿ ಭಾರತ—ಪಾಕ್ ಮಂತ್ರಿ ಮಟ್ಟದ ಸಭೆ ಐದನೆ ಬಾರಿಗೆ ಕರಾಚಿಯಲ್ಲಿ ಸೇರಿದೆ. ಪ್ರಶ್ನೆಯನ್ನು ಬಗೆಹರಿಸುವ ಆತುರವಿಬ್ಬರಲ್ಲಿದ್ದರೂ ಪರಿಹಾರ ಮಾರ್ಗದಲ್ಲಿ ಮಾತ್ರ 'ಅವನು ಬಿಡ—ಇವನು ಕೊಡ' ಎಂಬಂತಾಗಿದೆ. ಕಾಶ್ಮೀರದ ಪ್ರಶ್ನೆಗೆ ಉತ್ತರ ದೊರೆಯಬೇಕು; ಅದನ್ನು ವಿಭಜಿಸುವುದು ಸೂಕ್ತ ಪರಿಹಾರವಲ್ಲ, ಅಂದರೆ ಅದು ತಮಗೇನೇ ಸೇರಬೇಕು ಎಂಬ ಅಭಿಪ್ರಾಯಕ್ಕೆ ಇಕ್ಕಡೆಯವರೂ ಬಂದಿದ್ದಾರೆ. ಪ್ರಾರಂಭದಲ್ಲಿ ಕಾಶ್ಮೀರವನ್ನು ವಿಭಜಿಸುವ ಸೂಚನೆಯೊಂದನ್ನು ಪಾಕ್ ವಿದೇಶ ಮಂತ್ರಿ ಭುಟ್ಟೋ ಮಾಡುವುದಾಗಿದ್ದರೂ ಇಂದು ಹಾಗೆ ಮಾಡುತ್ತಿಲ್ಲ. ಇಡಿಯ ಕಾಶ್ಮೀರವನ್ನೇ ನುಂಗಲು ಬಯಸಿ, ಭಾರತ ವಿರೋಧಿ ಕೆಂಪು ಚೀನದೊಡನೆ ಕೂಡಿ ಸಮರ ಸನ್ನಾಹ ಮಾಡುವುದರ ಲಕ್ಷಣವೇ ಇದು? ಸರ್ದಾರ ಸ್ವರ್ಣಸಿಂಗರೊಡನೆ ಸಂಧಾನ ಬೇಡವಾಗಿಯೆ ಅವರು ಮಾತುಕತೆ ನಡೆಸುತ್ತಾರೆಯೆ? ಉಭಯತರರ ಸಂಧಾನ ಪ್ರಯತ್ನ ಸಂಗ್ರಾಮಕ್ಕೆ ನಾಂದಿಯಾಗಬಾರದು ಎಂದು ಎಲ್ಲರ ಆಶಯ..

### ತಿರುವು ಮುರುವು

ಕೇಂದ್ರ ಸರಕಾರದ ಸಕ್ಕರೆ ನಿಯಂತ್ರಣ ನೀತಿಯಿಂದಾಗಿ ಸಕ್ಕರೆಯು ಪೇಟೆಯಿಂದ ಮಾಯವಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಕ್ಕರೆಯ ಅಭಾವವಿಲ್ಲವೆಂದೂ ಒಂದೆರಡು ವಾರಗಳಲ್ಲಿಯೇ ಆದರ ಪರಿಸ್ಥಿತಿಯು ಹಿಂದಿನಂತೆಯೇ ಆಗುವುದೆಂದೂ ಹೇಳುತ್ತಿವೆ ಸರಕಾರವು ನಿರ್ದಿಷ್ಟ ನೀತಿಯನ್ನು ರೂಪಿಸಿಕೊಳ್ಳದೆ ನಿಯಂತ್ರಣ ಆಜ್ಞೆಯನ್ನು ಹೊರಡಿಸುವುದು ನ್ಯಾಯವೇ? ಹೊಸ ಸೀರೆ ಬರುವುದಕ್ಕೆ ಮೊದಲೇ ಹಳೆಯದನ್ನು ಒಗೆಗೆಸೆದ ಪತಿವ್ರತಾ ನಾರಿಯ ಗತಿಯಾಗಿದೆ ನಮ್ಮ ಸರಕಾರಗಳದ್ದು ಯಾವುದು ಮೊದಲಾಗಬೇಕೋ ಅದನ್ನು ಕಡೆಗೆ; ಕಡೆಗಾಗ ಬೇಕಾದುದನ್ನು ಮೊದಲು ಮಾಡುವುದೇ ಅವರ ನೀತಿ—ತಿರುವು ಮುರುವೇ ಸರಕಾರದ ಭಂಡವಾಳ. ಎಂದಿನ ವರೆಗೆ ಈ ಹೀನ ಸ್ಥಿತಿ ದೂರವಾಗುವುದಿಲ್ಲ, ಅಂದಿನ ತನಕ ನಮ್ಮ ಉದ್ಧಾರವಾಗುವುದೂ ಸಾಧ್ಯವಿಲ್ಲ, ಸರಕಾರದ ಕಡೆಗೆ ಜನರ ಒಲವು ಪ್ರದರ್ಶಿಸುವುದೂ ಸಾಧ್ಯವಿಲ್ಲ

**ಸುಬ್ರಹ್ಮಣ್ಯ**—ಶ್ರೀ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ 5.5.63ರಿಂದ ತಾ 9ರ ತನಕ ಪೂಜೆ, ಉತ್ಸವ, ವಸಂತ, ಸಂತರ್ಪಣಾದಿ ಕಾರ್ಯಕ್ರಮಗಳಿಂದ ಜರಗುವವು.

---


## ಎಡ್ತರೆ ಸಹಕಾರಿ ವ್ಯವಸಾಯಿಕ ಬೇಂಕು, ಲಿ.,

No L. 842., ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲಗಳನ್ನು ಕ್ಲಪ್ತ ಕಾಲದಲ್ಲಿ ಮರು ಪಾವತಿ ಮಾಡುವರೆ ತಪ್ಪಿರುವುದರಿಂದಲೂ ಆ ಬಗ್ಗೆ ಸದ್ರಿಯವರಿಗೆ ಬೇಂಕಿನಿಂದ ಕ್ರಮಪ್ರಕಾರವಾದ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಿದ್ದರೂ ಸದ್ರಿ ಸಾಲಗಳ ಬಾಬ್ತು ಅಸಲು ಬಡ್ಡಿ ಮೊಬಲಗನ್ನು ಸಲ್ಲಿಸದೇ ಬಾಕಿ ಮಾಡಿಕೊಂಡಿರುವುದರಿಂದಲೂ ಆ ಪೈಕಿ ಕೆಲವು ರಿಜಿಸ್ಟ್ರಿ ನೋಟೀಸುಗಳು ಅವುಗಳ ವಿಳಾಸದವರು ಹಾಲಿ ತಮ್ಮ ವಾಸಸ್ಥಳದಲ್ಲಿ ಇಲ್ಲವೆಂಬ ಕಾರಣದಿಂದ ಜಾರಿಯಾಗದೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ತಾ. 12—5—63ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಸದ್ರಿ ಬೇಂಕಿಗೆ ಅನುಕೂಲವಾದ ಇತರ ಯಾವುದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂಬುದನ್ನು ಈ ಮೂಲಕ ತಿಳಿಸೋಣಾಗುತ್ತದೆ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ಮೊಬಲಗು ಬಡ್ಡಿ ಸಮೇತ |
|---|---|---|
| 498 | ಉಲ್ಲಿ ಫೆರ್ನಾಂಡ್, ಆಂತೋನ್ ಫೆರ್ನಾಂಡರ ಮಗ, ಎಡ್ತರೆ ಗ್ರಾಮ P. O. ಬೈಂದೂರು. | 29=00 |
| 535 | ನೆಲ್ಯಾಡಿ ಶೀನಪ್ಪ ಶೆಟ್ಟಿ, ಅಂಣಪ್ಪ ಶೆಟ್ಟರ ಅಳಿಯ, P. O. ತಗ್ಗರ್ಸೆ. | 59=40 |
| 581 | ಮೂಡದ ಹಸನ್ ಸಾಹೇಬ್, ಮೂಡದ ಉಮ್ಮರ ಸಾಹೇಬರ ಮಗ, P. O. ಬೈಂದೂರು. | 98=00 |
| 680 | M. G. ಮಂಜ, ಗೋವಿಂದನ ಮಗ, ನಾಗೂರು ಗ್ರಾಮ, P. O. ಕಿರಿಮಂಜೇಶ್ವರ. | 22=40 |
| 684 | ಬಿಜೂರು ವೆಂಕಟ್ರಮಣ ಶೆರೆಗಾರ್, ಜಟ್ಟಯ್ಯ ಶೆರೆಗಾರರ ಮಗ, ಬಿಜೂರು ಗ್ರಾಮ. P. O. ಬಿಜೂರು | 550=25 |
| 700 | ಕೃಷ್ಣಿ ಹೆಂಗಸು ಚಿಕ್ಕ ಹೆಂಗ್ಸಿನ ಮಗಳು, ವೈದಿನಪುರ. P. O. ಶಿರೂರು | 90=90 |
| 714 | ನೆಲ್ಯಾಡಿ ಶೀನಪ್ಪ ಶೆಟ್ಟಿ, ಅಣ್ಣಪ್ಪ ಶೆಟ್ಟರ ಅಳಿಯ, P. O. ತಗ್ಗರ್ಸೆ | 73=30 |
| 736 | ದ್ಯಾಬಿ ಎಲ್ಯಾಸ್ ರಬೇರ, ಪಿರಂತ ರಬೇರರ ಮಗ, ಎಡ್ತರೆ ಗ್ರಾಮ, P. O. ಬೈಂದೂರು | 61=25 |
| 840 | ಮೂಡದ ಮಹಮ್ಮದ್ ಪಿಂಜಾ ಸಾಹೇಬ್, ಮೂಡದ ಹುಸೇನ್ ಸಾಹೇಬರ ಮಗ, ಎಡ್ತರೆ ಗ್ರಾಮ, P. O. ಬೈಂದೂರು. | 1010=00 |
| 900 | Do Do | 701=40 |

Office of the Yedthara Co-operative Agricultural Bank Ltd., P. O. Byndoor, S. K. Dated 22—4—63.

Y. A. Hussain, ಕಾರ್ಯದರ್ಶಿ.

ಅಷ್ಟಬಂಧದ ಸಿದ್ಧತೆಯಲ್ಲಿ

# ಮಲೆ-ಕರೆಗಳ ಸೇತು—ಪೆರಡೂರುಕ್ಷೇತ್ರ

ಕರಾವಳಿ ಮತ್ತು ಮಲೆನಾಡಿನ ಸಂಗಮದಲ್ಲಿದೆ ಪೆರಡೂರು ಕ್ಷೇತ್ರ. ಅನಂತಪದ್ಮನಾಭನೇ ಇಲ್ಲಿಯ ಅಧಿದೇವತೆ. ಬ್ರಾಹ್ಮಣೋತ್ತಮ ಕೃಷ್ಣ ಶರ್ಮನಿಗೊಲಿದು ಪೆರಡೂರಿನ ಕಂಟಕಾರಣ್ಯದ ನಿರ್ಬಿಡ ಸ್ಥಳದಲ್ಲಿ ನೆಲೆನಿಂತ ಭಗವಂತನು ತನ್ನ ಭಕ್ತರ ಮನೋಭಿಲಾಷೆಯನ್ನು ನಿರಂತರವಾಗಿ ಪೂರೈಸಿಕೊಡುತ್ತಾನೆ ಎಂಬ ಅಚಲ ವಿಶ್ವಾಸ ಜನಮನದಲ್ಲಿರುವುದರಿಂದಲೇ ಶ್ರೀ ಅನಂತಪದ್ಮನಾಭನ ಕೀರ್ತಿ ಮಲೆ ಕರಾವಳಿಗಳಲ್ಲಿ ಏಕಪ್ರಕಾರವಾಗಿ ಹಬ್ಬಿದೆ. ಎರಡನ್ನು ಜೋಡಿಸುವ ಸೇತುವಿನಂತಿದೆ. ಇದರ ಪ್ರತೀಕವಾಗಿಯೋ ಎಂಬಂತೆ ದಿನಂಪ್ರತಿ, ವಿಶೇಷವಾಗಿ ಸಂಕ್ರಮಣೋತ್ಸವದ ದಿನ, ನೂರಾರು ಮೈಲುಗಳ ದೂರವನ್ನು ಕಡೆಗಣಿಸಿ ಬಂದ ಭಕ್ತ ಕುಟುಂಬದವರು ಭಕ್ತ ಕುಟುಂಬಿಯ ದರ್ಶನ ಭಾಗ್ಯವನ್ನು ಪಡೆದು ಕೃತಾರ್ಥರಾಗಿ ಮರಳುತ್ತಾರೆ. ಅನಂತಪದ್ಮನಾಭನೊಡನೆ ಲಕ್ಷ್ಮೀ ದೇವಿಯೂ ಶ್ರೀ ಕ್ಷೇತ್ರದ ಪದ್ಮ ಸರೋವರದಲ್ಲಿ ನೆಲೆಸಿರುವಳೆಂದೂ ಈ ಸರಸ್ಸಿನಲ್ಲಿ ಮಿಂದು ಪದ್ಮನಾಭ ದರ್ಶನ ಮಾಡಿದರೆ ಚರ್ಮರೋಗಾದಿಗಳು ದೂರವಾಗುವವೆಂದೂ ದೃಢ ನಂಬಿಕೆಯಿದೆ.

ಸುಮಾರು ೮೦೦ ವರ್ಷಗಳಿಗೆ ಮೊದಲು ಇಲ್ಲಿ ಅನಂತಪದ್ಮನಾಭನನ್ನು ಕೃಷ್ಣ ಶರ್ಮನು ಪ್ರತಿಷ್ಠಿಸಿದನೆಂದು ಹೇಳುತ್ತಾರೆ. ಅಂದಿನಿಂದಲೂ ಅನೂಚಾನವಾಗಿ ನಡೆದುಬರುತ್ತಿರುವ ಪೂಜೆ ನಿಯೋಗಾದಿಗಳಿಗೆ ಕೋಟೆಕುಂಜದ ರಾಜ ಶಂಕರನು ಉಂಬಳಿ ಬಿಟ್ಟನೆಂದೂ ಐತಿಹ್ಯವಿದೆ. ಇಂದು ದೇವಾಲಯವು ಎಂಡೋಮೆಂಟ್ ಆಡಳಿತಕ್ಕೆ ಒಳಗಾಗಿದ್ದರೂ ಸಂಪ್ರದಾಯಬದ್ಧವಾಗಿ ಸರ್ವ ವ್ಯವಸ್ಥೆಯೂ ನಡೆದುಕೊಂಡು ಬರುತ್ತಿದೆ. ದೇವಳದ ಎಕ್ಸಿಕ್ಯೂಟಿವ್ ಆಫೀಸರರು ಮತ್ತು ಜನ ಆಧ್ಯ ಟ್ರಸ್ಟಿಗಳ ಮಾರ್ಗದರ್ಶನದಲ್ಲಿ ಇದನ್ನು ನೋಡಿಕೊಳ್ಳುತ್ತಿದ್ದಾರೆ.

ದೇವಾಲಯದ ಅಷ್ಟಬಂಧವು ಜೀರ್ಣವಾಗಿರುವುದರಿಂದ, ಜೀರ್ಣೋದ್ಧಾರವಾಡುವ ಉದ್ದೇಶವನ್ನಿಟ್ಟುಕೊಂಡ ಅಷ್ಟಬಂಧ ಸಮಿತಿಯು ಈಗಾಗಲೇ ತನ್ನ ಉದ್ದೇಶವನ್ನು ಕಾರ್ಯರೂಪಕ್ಕೆ ತರುತ್ತಿದೆ. ಈ ಸಂಬಂಧದ ಕಾರ್ಯಕ್ರಮವು ಇದೇ ತಾ. ೨೬ರಂದು ಪ್ರಾರಂಭವಾಗಿ ಮುಂದಿನ ತಿಂಗಳ ೨೪ಕ್ಕೆ ಕೊನೆಗೊಳ್ಳುವುದು.

ಅಷ್ಟಬಂಧ ಮಹೋತ್ಸವದ ಮುಖ್ಯ ಅಂಗವಾಗಿ ಮೇ ೬ರಂದು ಅಷ್ಟಬಂಧ ಕಲಶಾಭಿಷೇಕ, ಮೇ ೯ರಂದು ಬ್ರಹ್ಮ ಕುಂಭಾಭಿಷೇಕ ಮತ್ತು ಮೇ ೨೦ರಂದು ಮಹಾರಥೋತ್ಸವಗಳು ನಡೆಯಲಿರುವುವು. ಎಲ್ಲ ಕಾರ್ಯಕ್ರಮಗಳೂ ನಿರ್ವಿಘ್ನವಾಗಿ ಕೊನೆಗೊಳ್ಳುವುದಕ್ಕೆ ಆವಶ್ಯಕವಾದ ಸಕಲ ವ್ಯವಸ್ಥೆಗಳನ್ನೂ ಸಮಿತಿಯು ಮಾಡುತ್ತಿದೆ. ಯಾಗಶಾಲೆ, ಸಂತರ್ಪಣಾ ಶಾಲೆಗಳ ನಿರ್ಮಾಣವು ಇಷ್ಟರಲ್ಲೇ ಪೂರ್ತಿಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಮಲೆನಾಡಿನ ಜಿಲ್ಲೆಗಳಲ್ಲಿಯೂ ಹೆಸರಾಂತ ಪೆರಡೂರು ಕ್ಷೇತ್ರದಲ್ಲಿ ಸುಮಾರು ೨೦೦ ವರ್ಷಗಳ ನಂತರ ನಡೆಯುವ ಈ ಅಷ್ಟಬಂಧ ಮಹೋತ್ಸವದಲ್ಲಿ ಸಾವಿರಾರು ಭಗವದ್ಭಕ್ತರು ಭಾಗವಹಿಸಿ ಶ್ರೀ ಸ್ವಾಮಿಯ ಸಂದರ್ಶನ ಪಡೆದು ದೇವರ ಪರಮಾನುಗ್ರಹಕ್ಕೆ ಪಾತ್ರರಾಗುವ ನಿರೀಕ್ಷೆಯಿದೆ.

ಪರವೂರುಗಳಿಂದ ಬರತಕ್ಕ ಯಾತ್ರಾರ್ಥಿಗಳಿಗೆ ಕೂಡ ಎಲ್ಲ ವಿಧದ ಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆಯೂ ಇದೆಯೆಂದು ತಿಳಿಸುತ್ತದೆ. ಅಷ್ಟಬಂಧ ಸಮಿತಿಯು ತನ್ನ ಹಲವಾರು ಉಪಸಮಿತಿಗಳ ಸಹಾಯದಿಂದ ಯಾತ್ರಾರ್ಥಿಗಳು ಸಂಪೂರ್ಣ ಸಂತೃಪ್ತಿಯನ್ನು ಹೊಂದಿಯೇ ಮರಳುವಂತೆ ಸೂಕ್ತ ಕ್ರಮ ವಹಿಸುತ್ತಿದೆಯೆಂದೂ ಪರಮಾತ್ಮನ ಈ ಮಹಾನ್ ಸೇವೆಯನ್ನು ಮಾಡುವಲ್ಲಿ ಆಸ್ತಿಕ ಮಹಾಶಯರು ಸಮಿತಿಯೊಡನೆ ತನುಮನಧನರೂಪವಾಗಿ ಸಹಕರಿಸಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಕಾರ್ಯಕ್ರಮದ ಧಾರ್ಮಿಕ ವಿಧ್ಯುಕ್ತ ಅಂಗಗಳೊಂದಿಗೆ ಧಾರ್ಮಿಕ ವಿಚಾರಗಳ ಕುರಿತಾಗಿ ಪಂಡಿತೋತ್ತಮರ ಉಪನ್ಯಾಸ, ಸಂಗೀತ, ಹರಿಕತೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ವ್ಯವಸ್ಥಿತವಾಗಿ ನಡೆಯಲಿವೆಯೆಂದು ತಿಳಿದು ಬಂದಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತ ಜನರು ತಪ್ಪದೆ ಭಾಗವಹಿಸಿ ಭಗವಂತನ ಕೃಪಾಭಾಜನರಾಗದುಳಿದರೆ ಅಪೂರ್ವ ಸಂದರ್ಭವೊಂದನ್ನು ಕಳೆದುಕೊಂಡಂತಾಗುವುದು.

ಶ್ರೀ ಕೃಷ್ಣನ ಉಡುಪಿಯಿಂದ ಸೋಮೇಶ್ವರದ ದಾರಿಯಲ್ಲಿ ಹನ್ನೆರಡು ಮೈಲಿ ದೂರದಲ್ಲಿದೆ ಅನಂತಪದ್ಮನಾಭನ ಪೆರ್ಡೂರು. ಹಾಗೆಯೇ ಆಗುಂಬೆ ಘಾಟಿಯಿಳಿದು ಸೋಮೇಶ್ವರಕ್ಕೆ ಬಂದರೆ, ಉಡುಪಿಯ ದಾರಿಯಲ್ಲಿ ಹದಿನೈದು ಮೈಲು ದೂರವಿದೆ ಇದು. ಯಾತ್ರಾರ್ಥಿಗಳ ಸುಖ ಪ್ರಯಾಣಕ್ಕಾಗಿ ದಿನಂಪ್ರತಿ ಹತ್ತು ಬಸ್ ಸರ್ವಿಸ್‌ಗಳು ಉಡುಪಿ–ಸೋಮೇಶ್ವರಗಳ ನಡುವೆ ಓಡಾಡುತ್ತಿವೆ; ಮಾತ್ರವಲ್ಲ, ಅಷ್ಟಬಂಧ ಮಹೋತ್ಸವದ ವೇಳೆ ಸ್ಪೆಶಲ್ ಬಸ್ಸುಗಳನ್ನೂ ಓಡಾಡಿಸುವ ವ್ಯವಸ್ಥೆಯನ್ನೂ ಮಾಡಲು ಅಷ್ಟಬಂಧ ಸಮಿತಿಯು ಉತ್ಸುಕವಾಗಿರುತ್ತದೆ. ಆದುದರಿಂದ ಜೀವನದಲ್ಲಿ ಅತ್ಯಪೂರ್ವವಾಗಿ ದೊರೆಯುವ ಇಂತಹ ಸದವಕಾಶವನ್ನು ವ್ಯರ್ಥವಾಗಗೊಡದೆ ಕಾರ್ಯಕ್ರಮಗಳಲ್ಲಿ ಉತ್ಸಾಹ, ಭಕ್ತಿ ಶ್ರದ್ಧೆಗಳನ್ನು ಮುಂಬರಿಗೊಳಿಸಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು ಎಂಬುದೇ ಸಮಿತಿಯ ಸದಾಶಯ.

ಜನ್ಮದಿಂದ ಮಾನವ ಅಪರಾಧಿಯಾಗುವುದಿಲ್ಲ, ಪರಿಸ್ಥಿತಿವಶದಿಂದಾಗುತ್ತಾನೆ. ಆದುದರಿಂದ ಅಪರಾಧಿಗಳನ್ನೂ ಮಾನವರಂತೆ ಕಂಡು ಅವರನ್ನು ಸನ್ಮಾರ್ಗಕ್ಕೆ ಹಚ್ಚುವುದು ಮಾನವತೆಯೆನಿಸದು. ಇಂತಹ ಪ್ರಯತ್ನವು ಅಹಮ್ಮದಾಬಾದಿನ ಸಬರ್ಮತಿ ಸೆರೆಮನೆಯಲ್ಲಿ ನಡೆದಿದೆ. ಕೈದಿಗಳು ಅಂಧಶಾಲೆಗೆ ಬೇಕಾಗುವ ಬ್ರೇಯಿಲ್ ಲಿಪಿಯ ಪುಸ್ತಕಗಳನ್ನು ಪ್ರತಿ ತೆಗೆದು ಉಪಕಾರ ನಿರತರಾಗುತ್ತಿರುವ ಅಪೂರ್ವ ನೋಟವಿದು.

## ಸ್ವರಕ್ಷಣೆಗಾಗಿ ಕಟಿಬದ್ಧರಾಗಬೇಕು

(೫ನೇ ಪುಟದಿಂದ)

ಸುಖ— ಸಹಯೋಗಗಳ ಬೆಳೆದು ಬರುವ ವಾತಾವರಣವನ್ನು ಅವು ನಿರ್ಮಿಸುವಂತೆ ನಗ-ವುದು ಸರ್ವಸಾಧ್ಯ

ನಾವು ಮಾನವತಾವಾದಿಗಳಾಗಬೇಕು. ಮಾನವತಾವಾದಿಗಳು ಪ್ರಾಣವಿರುವನಕ ವಿಶ್ವಶಾಂತಿ ಮತ್ತು ವಿಶ್ವಬಂಧುತ್ವಗಳಿಗಾಗಿ ಹೋರಾಡುತ್ತಲೇ ಇರಬೇಕು. ನಾವೆಲ್ಲರೂ ಮಾನವರು. ಮಾನವತೆಯನ್ನುಳಿದು ಬೇರೆಲ್ಲವೂ ಮಿಥ್ಯ; ಅದೊಂದೇ ಸತ್ಯ. ಈ ಅಂಶವನ್ನು ಮನಗಂಡೆವೆಂದರೆ, ನೂತನ ಸ್ವರ್ಗದ ಸೋಪಾನ ನಮ್ಮ ಕಣ್ಣಮುಂದೆ ನಿಲ್ಲುವುದು, ಅದನ್ನು ಏರುವ ಸಾಹಸಪಡುವುದೂ ಸಾಧ್ಯ. ಆದರೆ, ಮಾನವತೆಯನ್ನು ನಾವು ಮರೆತುಬಿಟ್ಟೆವೆಂದರೆ, ರುದ್ರಭಯಾನಕವಾಗಿ ಪ್ರಪಂಚವೊಂದು ದಿನ ಒಂದೇ ಕ್ಷಣದಲ್ಲಿ ಧ್ವಂಸವಾಗಿ ಹೋಗುವುದು.

ನಮ್ಮ ನಿಮ್ಮ ಉಳಿವಿಗಾಗಿ ಮಾನವತೆಯೇ ಸತ್ಯವೆಂಬ ದಿವ್ಯ ಮಂತ್ರವನ್ನು ಕಂಡುಕೊಳ್ಳಬೇಕು. ವಿಶ್ವ ರಕ್ಷಣೆಯ ಮಹತ್ವಪೂರ್ಣ ಹೊಣೆಗಾರಿಕೆ ಇಂದು ರಾಜಕೀಯ ಧುರೀಣರ ಕೈಯಲ್ಲಿದೆ; ಸೇನಾಪತಿಗಳ ಹಸ್ತಗಳಲ್ಲಿಲ್ಲ; ಅವರ ವಶಕ್ಕೆ ಅದನ್ನು ಒಪ್ಪಿಸಿಕೊಡುವುದೂ ಸಾಧ್ಯವಿಲ್ಲ. ಪ್ರತ್ಯೇಕ ನಾಗರಿಕನು ತನ್ನ ಶಾಂತಿಗೋಸ್ಕರ ತನ್ನ ರಕ್ಷಣೆಗೋಸ್ಕರ ಬದ್ಧಕಟಿಯಾಗಿ ನಿಲ್ಲುವ ಸಮಯವಿದು.


ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾದಿರಿಸಿರಿ.

ಕಥಾ ಕೌಮುದಿ

(ಹದಿನಾರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ. ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)



"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ

ಬೆಲೆ ರೂ 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ 1-25 ನ ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:–

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

## ಕಾಶ್ಮೀರವನ್ನು ಬಲಿಕೊಡ ಬಾರದು

(೧ನೇ ಪುಟದಿಂದ)

ಮೆರಿಕೆಯು ಕಾಶ್ಮೀರ ವಿಭಜನೆಯು ಸೂತ್ರವೊಂದನ್ನು ಮುಂದೆ ತರುವ ಹವಣಿಕೆಯಲ್ಲಿದೆಯೆನ್ನಲಾಗಿದೆ. ಇವರಂತೆ, ಒಂದಾಗಿರುವ ಕಾಶ್ಮೀರವು ಎರಡಾಗಿ ತುಂಡಾಗುವುದು. ಅಂದು ಅಖಂಡ ಭಾರತವನ್ನು ಒಡೆದಂತೆ ಇಂದು ಭಾರತದ ಮುಕುಟಮಣಿ ಕಾಶ್ಮೀರವನ್ನೂ ಖಂಡಗೊಳಿಸುವ ದುಸ್ಸಾಹಸವಿದು.

**ಕಾಶ್ಮೀರವು ಅಖಂಡ**

ಕಾಶ್ಮೀರ ಕೊಳ್ಳವು ಆರ್ಥಿಕವಾಗಿ, ಮಾನಸಿಕವಾಗಿ ಒಂದಾದುದು. ಇದನ್ನು ವಿಭಜಿಸುವುದು ಎಂದಿಗೂ ಸಲ್ಲದು. ಯಾವುದೇ ಸಮಸ್ಯೆಗೆ ಕಂಡುಹಿಡಿಯುವ ಪರಿಹಾರವು ಸಂಬಂಧಿತರಿಗೆ ಪ್ರಿಯವಾಗಬೇಕು; ಆದರೆ, ಕಾಶ್ಮೀರ ವಿಭಜನೆಯಿಂದ ಅಪ್ರಿಯತೆಯು ಹೆಚ್ಚುವುದು. ಈ ಪರಿಹಾರ ಮಾರ್ಗವು ಸಮಸ್ಯೆಯನ್ನು ದೂರ ಮಾಡುವುದಕ್ಕೆ ಬದಲಾಗಿ ಹೊಸ ಸಮಸ್ಯೆಗಳೇ ಹುಟ್ಟುವುದಕ್ಕೆ ಬುನಾದಿಯಾಗುವುದು. ಕಾಶ್ಮೀರ ವಿವಾದದ ಯಾವ ಪರಿಹಾರ ಮಾರ್ಗವಾದರೂ ಇಕ್ಕಡೆಯವರ ಮನಸ್ಸಿಗೆ ಸಂಪೂರ್ಣ ತೃಪ್ತಿಯನ್ನು ತರಲಾರದು. ಸಂಧಾನಕ್ಕೆ ಹೊರಡುವಾಗ ತುಸು ಕೊಡಕೊಳ್ಳುವುದಕ್ಕೆ ಸಿದ್ಧವಾಗಲೇಬೇಕು. ಆದರೆ, ಅಪಾಯಕಾರಕವಾದ ಯಾವ ಸಲಹೆಯನ್ನೂ ಸ್ವೀಕರಿಸುವುದು ಸಾಧ್ಯವಿರುವುದಿಲ್ಲ. ಅಮೆರಿಕೆಯು ವಿಭಜನಾ ನೀತಿಯನ್ನು ಪಾಕಿಸ್ತಾನವೂ ಒಪ್ಪಲು ಸಿದ್ಧವಿಲ್ಲವೆಂದು 'ಡಾನ್' ಸಾರುತ್ತದೆ. ಹಾಗಾದರೆ, ವಿವಾದವು ದೂರವಾಗುವ ಹೊಸ ವಿಧಾನವೊಂದು ಅಗತ್ಯವಾಯಿತು. ಇದು ಯಾವ ಮೆದುಳಿನಿಂದ ಹೊರಡಬೇಕಾಗಿದೆಯೋ ಯಾರು ಬಲ್ಲರು? ಸದ್ಯ ಚೆಸ್ಟರ್ ಬೌಲ್ಸ್ ರವರು ಭಾರತದಲ್ಲಿ ಅಮೆರಿಕೆಯ ರಾಯಭಾರಿಗಳಾಗಿ ನೇಮಕ ಹೊಂದಿದುದರಿಂದ ಅಮೆರಿಕನ್ ಸಹಾಯ ಮತ್ತು ಕಾಶ್ಮೀರ ಸಮಸ್ಯಾ ಪರಿಹಾರಗಳ ನಡುವೆ ಯಾವ ಕರಾರೂ ನಿಲ್ಲಲಾರದು ಎಂದು ನಂಬಬಹುದು.

**ಉಪಸಂಹಾರ**

ಜಗತ್ತಿನಲ್ಲಿ ಕೀರ್ತಿವಂತವಾಗುತ್ತಿರುವ ಭಾರತವನ್ನು ಕೆಳಕ್ಕೆಳೆಯಲೆಂದೇ ಚೀನಾ ಮತ್ತು ಪಾಕಿಸ್ತಾನಗಳು ಒಂದಾಗಿ ಸೇರಿ ಒಳಸಂಚು ಮಾಡತೊಡಗಿವೆಯೆಂದು ಹೇಳಲೇ ಬೇಕಾಗುತ್ತದೆ. ಹೀಗೆ ಹಿತ ಶತ್ರುಗಳಾಗಿರುವ ಇದರಿಂದ ನಾವು ಸದಾ ಸಜ್ಜೀಕೃತರಾಗಿರಲೇ ಬೇಕು. ದೇಶವನ್ನು ಸರ್ವ ಸಮರ್ಥವಾಗಿ ರೂಪಿಸುವುದರೊಡನೆ ದೇಶಕ್ಕಾಗಿ ಸರ್ವ ತ್ಯಾಗಕ್ಕೂ ನಾವು ಸಿದ್ಧರಾಗಬೇಕು. ಆತ್ಮರಕ್ಷಣೆಗಾಗಿಯೇ ಸಮರ ಸಿದ್ಧತೆ ನಡೆಯಬೇಕು. ಇದನ್ನು ಮರೆಯದೆ ಏಕಭಾವದಿಂದ ನಮ್ಮ ಕರ್ತವ್ಯಗಳನ್ನು ನಿರ್ವಂಚನೆಯಿಂದ ಸರ್ವ ಶಕ್ತಿಯಿಂದ ಮಾಡುತ್ತ ದೇಶ ನನ್ನು ಕಟ್ಟೋಣ ಮತ್ತು ರಕ್ಷಿಸೋಣ.

---

**ನಡೆ—ನುಡಿಗಳಲ್ಲಿ**
**ಖರ್ಚು-ವೆಚ್ಚಗಳಲ್ಲಿ**
**ಎಚ್ಚರ-ವಿಚಾರ ಇರಲಿ**

---

## ನಾವೇಕೆ ಹಿಂದೆ ಉಳಿದಿದ್ದೇವೆ?

(೪ನೇ ಪುಟದಿಂದ)

ಉತ್ಪಾದಿಸಿದ ಆಹಾರ ವಸ್ತುಗಳ ಸರಿಯಾದ ವಿಂಗಡಣೆ, ಕ್ರಯಗಳ ನಿರ್ಣಯ, ಕೃಷಿಯಲ್ಲಿ ಸುಧಾರಣೆಗಳನ್ನು ಮಾಡುವುದರಲ್ಲಿ ಅದು ಪೂರ್ಣರೂಪೇಣ ಅಸಮರ್ಥವಾಗಿದೆ. ಹಳ್ಳಿಯ ರೈತರ ಪರಿಸ್ಥಿತಿಯೇನು? ಅವರಿಗೆ ಕೃಷಿಯಲ್ಲಿ ಹಿಂದೆ ಬೀಳಲು ಕಾರಣವೇನು? ಅವರು ಏನನ್ನು ಬಯಸುತ್ತಾರೆ? ಅದಕ್ಕಾಗಿ ನಾವೇನನ್ನು ಮಾಡಬೇಕು? ಎಂಬುದನ್ನು ಅವರು ನಿಜಕ್ಕೂ ಆಲೋಚನೆ ಮಾಡಿಲ್ಲ. ಇಂದು ಪ್ರತಿ ಹಳ್ಳಿಯಲ್ಲಿ ರೈತರು ಸಾಲದಿಂದ ಮುಳುಗಿ ಹೋಗಿದ್ದಾರೆ. ಆಧುನಿಕ ಕೃಷಿಯ ಗಂಧಗಾಳಿಯೂ ಅವರಿಗೆ ಸೋಂಕಿಲ್ಲ. ಹೀಗಿರುವಾಗ ನಮ್ಮ ಕೃಷಿ ಇಲಾಖೆಯು ಅಧಿಕಾರಿಗಳು ಪೇಟೆಗಳಲ್ಲಿನ ತಮ್ಮ ಆಫೀಸುಗಳಲ್ಲಿ ಕುಳಿತುಕೊಂಡು ಕೃಷಿ ಸುಧಾರಣೆ ಮಾಡುವುದಾದರೂ ಹೇಗೆ? ಇದರಿಂದಲೇ ಇಂದು ಮಹಾತ್ಮಾಜಿಯವರ ರಚನಾತ್ಮಕ ಕಾರ್ಯಗಳನ್ನು ನಾವು ಕಾರ್ಯತಃ ಮಾಡಬೇಕಾದುದು ಅನಿವಾರ್ಯವಾಗಿದೆ.

ಮೇಲೆ ಹೇಳಿದ ಎಲ್ಲಾ ತೊಂದರೆಗಳನ್ನು ಪರಿಹರಿಸಲಾಗದಿರಲು ಕಾರಣವೇನೆಂದರೆ ನಮ್ಮ ಸರಕಾರದ ನಿಶ್ಯಕ್ತತೆಯೇ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಾವು ಇಂದು ಕೃಷಿಯನ್ನು ಸರಿಯಾದ ರೀತಿಯಲ್ಲಿ ಮಾಡುವುದರಲ್ಲಿ ಪರಸ್ಪರ ಸಹಕಾರ ವ್ಯವಸ್ಥೆ ಮಾಡುವುದರಲ್ಲಿ ಹಿಂದೆ ಬಿದ್ದಿದ್ದೇವೆ. ನಮ್ಮಲ್ಲಿರುವ ಅಧಿಕಾರಿಗಳು ಇಂದು ಸರಿಯಾಗಿ ಗಮನ ಕೊಟ್ಟು ಕೆಲಸ ಮಾಡುತ್ತಿಲ್ಲವೆಂಬುದನ್ನು ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಎತ್ತಿ ಹೇಳಿದ್ದಾರೆ. ಕೃಷಿಯ ಬಗ್ಗೆ ವಿಶೇಷ ಆಸ್ಥೆಗ ಮನಕೊಟ್ಟು ಕೆಲಸ ಮಾಡಲು ಇಂದು ಕೇಂದ್ರದಲ್ಲಿ ಕಡಿಮೆಯೆಂದರೆ ಮೂರು ಮಂತ್ರಿಖಾತೆಗಳಿರುವುದು ಅತ್ಯಗತ್ಯವಾಗಿದೆ. ಅವು—೧) ಆಹಾರ ಮತ್ತು ಕೃಷಿ ಖಾತೆ, ೨) ವಿದ್ಯುಚ್ಛಕ್ತಿ, ನೀರಾವರಿ, ಮತ್ತು ಕಮ್ಯುನಿಟಿಪ್ರೊಜೆಕ್ಟ್ ಡೆವಲಪ್‌ಮೆಂಟ್ ಮತ್ತು ೩) ಪಂಚಾಯತ್ ಮತ್ತು ಸಹಕಾರಿ ಸಂಘಗಳು. ಪ್ರಾಂತ್ಯ ಸರಕಾರದಲ್ಲೂ, ನೀರಾವರಿ, ವಿದ್ಯುತ್, ಕೃಷಿ, ಕಮ್ಯುನಿಟಿ ಡೆವಲಪ್‌ಮೆಂಟ್ ಕಾಡು, ಬೇಟೆ ವ್ಯವಸಾಯ, ಮೀನುಗಾರಿಕೆ ಮತ್ತು ಪಂಚಾಯತ್ ಮೊದಲಾದವುಗಳಿಗೆ ಬೇರೆ ಬೇರೆ ವಿಭಾಗಗಳಿರಬೇಕು. ಈ ವಿಭಾಗಗಳು ಕೃಷಿಯ ಸಮಸ್ಯೆಗಳನ್ನೂ ಸದಾ ಕೂಲಂಕುಷವಾಗಿ ವಿಚಾರಮಾಡಿ ಪರಿಹರಿಸಬೇಕು.

ಹಾಗೆಂದು ಈ ತನಕ ನಾವು ಪ್ರಗತಿ ಮಾಡಿಲ್ಲವೆಂಬುದು ಮೇಲೆ ಹೇಳಿದುದರ ಅಭಿಪ್ರಾಯವಲ್ಲ. ಇಂಥ ದುರ್ಧರ ಸ್ಥಿತಿಯಲ್ಲೂ ನಾವು ತೃಪ್ತಿದಾಯಕ ಪ್ರಗತಿ ಸಾಧಿಸಿದ್ದೇವೆ. ಆದರೆ ಅದು ಏನೇನೂ ಸಾಲದು. ನಾವಿನ್ನೂ ಆಹಾರಕ್ಕಾಗಿ ಪರದೇಶಗಳನ್ನು ಅವಲಂಬಿಸಬೇಕಾಗಿ ಬಂದಿರುವುದು ನಿಜಕ್ಕೂ ನಾಚಿಕೆ ತರುವಂತಹ ವಿಷಯವಾಗಿದೆ. ನಾವಿಂದು ಹಳ್ಳಿಯ ರೈತರಿಗೆ ಸಾಕಷ್ಟು, ಅನುಕೂಲ ತ್ವರಿತವಾಗಿ ಒದಗಿಸಬೇಕಾಗಿದೆ. ರೈತರ ಬಡತನವನ್ನು ನೀಗಲು ಬಡ್ಡಿಯಿಲ್ಲದ ಸಾಲದ ವ್ಯವಸ್ಥೆ ಸಮೃದ್ಧವಾದ ಉತ್ತಮ ಬೀಜಗಳ ಪೂರೈಕೆ, ಕೃಷಿಯ ಸಾಮಾನುಗಳು, ನಿಶ್ಚಿತವಾದ ಬದಲಾಗದ ನ್ಯಾಯವಾದ ಬೆಲೆ, ಮೊದಲಾದುವುಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದೆ. ಇಷ್ಟು ಮಾತ್ರವಲ್ಲದೆ ಹಳ್ಳಿಗಳ ಬಡ ರೈತರ ಎಲ್ಲಾ ತರದ ಸಂಕಷ್ಟಗಳನ್ನು ನೀಗಲು ಸರಕಾರ ರಚನಾತ್ಮಕವಾಗಿ, ಅವರಿಗೆ ಸರಿಯಾಗಿ ಮುಟ್ಟುವಂತೆ ಸಹಾಯದ ವ್ಯವಸ್ಥೆ ಮಾಡಬೇಕಾಗಿದೆ. ರೈತರ ಉದ್ಧಾರವಾಗದೆ ಕೃಷಿಯ ಉದ್ಧಾರವಿಲ್ಲ. ಇದು ಅಕ್ಷರಶಃ ಸತ್ಯವಾದ ಮಾತು. ಆಧುನಿಕ ಸಧಾರಿತ ಕೃಷಿ ವಿಧಾನವೆಂದು ಹೇಳಿ ರೈತರ ಮೇಲೆ ಒತ್ತಾಯಪೂರ್ವಕ ಅದನ್ನು ಹೇರಿದರೆ, ಅವರಿಗದರ ಬಗ್ಗೆ ಏನೇನೂ ಪರಿಜ್ಞಾನವಿಲ್ಲದಿರುವಾಗ ಕೃಷಿಯಿಂದ ಏನು ಫಲ ಬಂದೀತು? ಸಹಕಾರಿ ಕೃಷಿಪದ್ಧತಿಯಂತಹ ಕೃಷಿಪದ್ಧತಿಯನ್ನು ಸರಕಾರ ಜಾರಿಗೆ ತರಬೇಕಾದ ಮುನ್ನ ಸರಕಾರ ಪಾರ್ಲಿಮೆಂಟಿನಲ್ಲಿ ಸದಸ್ಯರ ಅನುಮತಿ ಪಡೆಯುವುದರ ಜೊತೆಗೆ ಹಳ್ಳಿಯ ರೈತರ ಒಪ್ಪಿಗೆ ಪಡೆದು ಜಾರಿಗೆ ತಂದರೆ ಅದು ಸಾರ್ಥಕವಾದೀತು.

ಅವನತಿಯ ನಮ್ಮ ರಾಷ್ಟ್ರೀಯ ವಿಪತ್ತಿನ ಈ ಸಂಧಿಕಾಲದಲ್ಲಿ ಆಹಾರೋತ್ಪಾದನೆಯ ಬಗ್ಗೆ ತೀವ್ರವಾದ ಗಮನಹರಿಸಿ, ಸೂಕ್ತವಾದ ಕಾರ್ಯವನ್ನು ಆಚರಣೆಗೆ ತಂದರೆ ನಾವು ಆಹಾರ ಧಾನ್ಯಗಳ ಮಟ್ಟಿಗೆ ಸ್ವಾವಲಂಬಿಗಳಾಗಿ ನಮ್ಮ ಒಂದು ದೊಡ್ಡ ಸಮಸ್ಯೆಯು ಪರಿಹಾರಗೊಳ್ಳುವುದರಲ್ಲಿ ಸಂಶಯವಿಲ್ಲ.

—ಶ್ರೀ ರಾಮತನಯ.

---

## ಹೃದಯ ದೇವತೆ

ಹೃದಯ ದೇಗುಲವನ್ನು
ಬೆಳಗಿಸಿದ ದೇವಿಯೆ
ಮನದ ಮಂದಿರಕಿಂದು ನಡೆದುಬಾ ದೇವಿ
ಜ್ಞಾನ ದೀವಿಗೆ ಹಿಡಿದು
ಜಾಣ ಮಾರ್ಗವ ತೋರಿ,
ದೀನನೆಡೆಗಿಂದು ನೀ ಓಡಿ ಬಾರೆ.
ಕಲ್ಲು ಮುಳ್ಳುಗಳಿಂದ
ತುಂಬಿರುವ ಮಾರ್ಗದಲಿ
ಕೈ ಹಿಡಿದು ನಡೆಸುವ ತಾಯಿಯೆ ಬಾ ದೇವಿ,
ದೀನತೆಯ ದಾರಿಯಲಿ
ಬೇಡುವೆನು ನಾನಿಂದು
ಎನ್ನ ಹೃದಯದ ವರೆಗೆ ಅಡಿಯಿಟ್ಟು ಬಾರೆ.

ನನ್ನ ಒಡ ಬಾಳಿಗೇ
ಮಾರ್ಗ ತೋರಿದ ದೇವಿ
ಯಾಕಲ್ಲಿ ನಿಂತಿರುವೆ ಬಾರೆನ್ನ ಬಳಿಗೆ,
ಹೊಸ ಹರುಷ ಹೊಸ ವರುಷ
ನ ನಿಂದು ಪರವಶ
ಕರುಣೆ ತೋರುತ ನೀನು ನಡೆದು ಬಾರೆ,
ಓ ನನ್ನ ಸೋದರಿಯೆ
ನೀ ನನ್ನ ದೇವತೆಯೆ
ಮರೆತೆಯೇನು ನೀನು ನನ್ನನಿಂದು,
ನಾ ಮಾತ್ರ ಮರೆಯೆನು
ಎಂದೆಂದಿಗೂ ನಿನ್ನ
ಗಾಯತ್ರೀ ಅನುಜನಾ ಅನುಜೆಯೆಂದು.

—ಗಾಯತ್ರೀ ಅನುಜ",
ಬೆಳವಿನಕೊಡಿಗೆ

---

**ಸೂಚನೆ**

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

---


ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿ ಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿರ

**ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.**

**ಸಾಹಸ ಭೀಮ ವಿಜಯ (ಗದಾಯುದ್ಧ)** ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

**ಭಾರತದ ಗುರುಕುಲ** ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ

**ಲತ್ತಪಗಡೆ** ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣಪರ್ವೋಕ್ತವಾದ ಕಿರ್ಮೀರ ವಧೆಯೆಂಬ ದೃಶ್ಯವೂ ಸೇರಿವೆ.

**ಭರತೇಶ ದಿಗ್ವಿಜಯ** ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ನಿವರವಾದ ಸೂಕ್ತ ಅನುಭವ ಸೂಚಿಯಿದೆ.

**ವಾಲಿ ಸುಗ್ರೀವ (ಬಹುಮಾನಿತ)** ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ಗಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಘಾರಾಕ ಕಮಿಷನ್,

ನವಭಾರತ ಪುಸ್ತಕ ಭಂಡಾರ, ಉಡುಪಿ.

# ಅಜಾತ ಶತ್ರುವಿನ ಅಂತಿಮ ಆಶೆ

(೪ನೇ ಪುಟದಿಂದ)

ಯುದ್ಧದಲ್ಲಿ ವಿಜಯ ಪಡೆಯುವ ದೃಷ್ಟಿಯಿಂದಲೂ ಇದು ಸರಿಯಲ್ಲವೇನು? ಯುಕ್ತವಲ್ಲವೇನು?

ತ್ರಿವಿಷ್ಟಪದ ಸ್ವಾತಂತ್ರ್ಯವು ಭಾರತೀಯ ಯುದ್ಧ ಪ್ರಯತ್ನದ ಲಕ್ಷ್ಯವಾಗಿರಬೇಕೆಂಬ ಇದನ್ನು ಹೇಳುತ್ತಿರುವವರಲ್ಲಿ ಏನು ಮೂರ್ಖತೆ ಕಾಣಿಸಿಕೊಂಡಿದೆ? ಈ ಮಾತು ಸಾಧಾರಣ ವ್ಯಕ್ತಿಯೊಬ್ಬನ ಬಾಯಿಯಿಂದ ಬಂದಿದ್ದಲ್ಲಿ 'ಏನೋ ಅಂದು ಹೋಗಲಿ' ಎಂದು ಗಣನೆಗೆ ತೆಗೆದುಕೊಳ್ಳದೆ ಬಿಡುವದಕ್ಕೆ ಸಂದರ್ಭವಿತ್ತು. ಕಾನೂನು ಹಾಗೂ ವಿಧಾನದ ಪಂಡಿತ ಡಾ॥ ರಾಜೇಂದ್ರಪ್ರಸಾದರ ವಿಷಯದಲ್ಲಿ ಹಗುರ ಮಾತಾಡುವದು ಸರಿಯಲ್ಲ. ಅವರ ಕಾನೂನಿನ ಜ್ಞಾನಕ್ಕೆ ಪ್ರಸಿದ್ಧ ವ್ಯಕ್ತಿಗಳಾದ ದೇಶಬಂಧುದಾಸ, ತ್ಯಾಗಮೂರ್ತಿ ನೆಹರೂ, ರಾಜಾಜಿ ಡಾ॥ ಜಯಕರ, ಸಪ್ರು ಮುಂತಾದವರು ಬೆರಗಾಗಿದ್ದಾರೆ. ಅವರು ಕೈಲಾಸವಾಸಿಯಾದಾಗ ಕಂಪನ ಉಂಟಾಯಿತೆಂದು ಸರ್ವ ಮುಖಂಡರು ಹೇಳಿದರೆ, ಇನ್ನೊಬ್ಬರು ಗಾಂಧೀಜಿಯವರ ಮರಣಾನಂತರದ ದುಃಖಜನಕ ಘಟನೆಗಳಲ್ಲಿ ಇದೇ ಮುಖ್ಯವಾದದ್ದೆಂದೂ ಇನ್ನೊಬ್ಬರು ಹೇಳಿದರೆ, ಪ್ರಮುಖ ಮುಖಂಡನ ಭಾರೀ ನಷ್ಟವೆಂದು ಕೆಲವರು ಹೇಳಿರುವರು. ಹೀಗಿರುವದರಿಂದ ಅವರ ಅಮೋಘ ವಾಣಿಯತ್ತ ಕಿಂಚಿತ್ತಾದರೂ ಗಮನ ಹರಿಸಬೇಕಾಗಿರುತ್ತದೆ. ಅವರು ಆ ಅಭಿಪ್ರಾಯವನ್ನು ಪಾಟ್ನಾದಲ್ಲಿ ಪ್ರಕಟಪಡಿಸಿದರು. ಪಾಟ್ನಾದಲ್ಲಿ ಹಿಮಾಲಯ ಸಂರಕ್ಷಣಾ ಪರಿಷತ್ತು ನವೆಂಬರ ಹದಿನಾಲ್ಕರಂದು ಸೇರಿದ್ದಾಗ ಡಾ॥ ರಾಜೇಂದ್ರ ಬಾಬೂರವರು.

“ಚೈನಾವು ತ್ರಿವಿಷ್ಟಪದ ಸ್ವಾತಂತ್ರ್ಯಾಪಹರಣಗೈದಾಗ ಮೌನವಾಗಿದ್ದುದರಿಂದ ನಾವು 'ಪಾಪ' ಮಾಡಿರುವೆವು. ಆದುದರಿಂದ ಆ ಆಕ್ರಮಣವನ್ನು ಎದುರಿಸುವ ಘನ ಜವಾಬ್ದಾರಿ ಈಗ ನಮ್ಮ ಮೇಲೆಯೇ ಬಿದ್ದಿರುತ್ತದೆ. ಈ ಭೀಕರ ವಿಪತ್ತು ನಮ್ಮ ಮೇಲೆ ಬಂದೆರಗಲು ನಮ್ಮ ಪಾಪವೇ ಕಾರಣವಿದೆ. ಹಾಗಿರುವದರಿಂದ ಇಂದು ಆಕ್ರಮಣಗಾರರನ್ನು ತ್ರಿವಿಷ್ಟಪದಿಂದಾಚೆಗೆ ಹೊಡೆದಟ್ಟಬೇಕಾಗಿ ಬಂದಿರುತ್ತದೆ. ತ್ರಿವಿಷ್ಟಪಕ್ಕೆ ಸ್ವಾತಂತ್ರ್ಯ ಸಿಗದಿರುವ ವರೆಗೆ ನಾವು ಶಾಂತಿಯಿಂದಿರಲು ಸಾಧ್ಯ ಇರುವದಿಲ್ಲ.”

ಸ್ವ| ರಾಜೇಂದ್ರ ಪ್ರಸಾದರ ಈ ಮಾತು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರ ಸರಿಯಾಗಿರುವದಲ್ಲದೆ ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಸರಿಯಾಗಿರುತ್ತದೆ, ಯುಕ್ತವಿದೆ. ತ್ರಿವಿಷ್ಟಪವು ಸ್ವತಂತ್ರ ರಾಷ್ಟ್ರವಾಗಿ ಇರದೇ ಇದ್ದಲ್ಲಿ ಅದಕ್ಕೆ ಇತರ ರಾಷ್ಟ್ರಗಳೊಡನೆ ಸಂಧಿ-ವಿಗ್ರಹಕ್ಕೆ ಅಧಿಕಾರವಾದರೂ ಎಲ್ಲಿರುತ್ತದೆ? ಚೈನಾವು ಮೆಕಮಹೋನ್ ರೇಷೆಯನ್ನು ನ್ಯಾಯ—ಬಾಹಿರರೇಖೆ ಎನ್ನುತ್ತಿರುವ ಈ ದೃಷ್ಟಿಯಲ್ಲಿ, ಹಾಗೆ ಹೇಳುವದು ಸರಿಯಲ್ಲವೆಂದು ಭಾರತ ಸರಕಾರ ಹೇಳಲು ಅದೆಂತು ಸಾಧ್ಯ?

ಕಾಶ್ಮೀರದ ಮಹಾರಾಜಾ, ತ್ರಿವಿಷ್ಟಪ ಹಾಗೂ ಚೈನಾಗಳ ನಡುವೆ ೧೯೧೪ರಲ್ಲಿ ಒಪ್ಪಂದವು ನಡೆದಿತ್ತು. ಈ ಒಪ್ಪಂದದ ಆಧಾರದ ಮೇಲೆ ಕೂಡಾ ಲಢಾಖಿನ ಉತ್ತರ ಭಾಗ [ಸಿಂಕಿಯಾಂಗಿನೊಂದಿಗೆ ಈಗ ಚೈನಾದಲ್ಲಿರುವದು] ಮತ್ತು ಪೂರ್ವ ಭಾಗ [ತ್ರಿವಿಷ್ಟಪದೊಂದಿಗೆ] ನಿಶ್ಚಯಿಸಲ್ಪಟ್ಟಿರುತ್ತದೆ. ಅಂತಾರಾಷ್ಟ್ರೀಯ ಕಾನೂನಿನ ತಳದಲ್ಲಿ ಇದು ನಮ್ಮ ಆಧಾರವಿದೆ. ವಿಷಯ ಹಾಗಿರುವಾಗ, ನಾವು ತ್ರಿವಿಷ್ಟಪದ ಸ್ವಾತಂತ್ರ್ಯವನ್ನೇ ಒಪ್ಪದಿದ್ದಲ್ಲಿ ಹೇಗಿನ ಅಂತಾರಾಷ್ಟ್ರೀಯ ನ್ಯಾಯಾಂಗಣದಲ್ಲಿ ನಮ್ಮ ವಾದಕ್ಕೆ ಬೆಲೆ ಇಲ್ಲದೆ ಹೋಗುತ್ತದೆ.

ಈ ಮಾತು ಮೆಕ್ ಮಹೋನ್ ರೇಷೆಯ ಕುರಿತೂ ಇದೆ. ಇದು ಸಿಮ್ಲಾ ಸಭೆಯ ಫಲ ಇದೆ. ಸಿಮ್ಲಾ ಸಂಧಾನ(೧೯೧೪) ಅದಕ್ಕೆ ಬಲವನ್ನಿತ್ತಿದೆ. ಈ ಸಭೆಯಲ್ಲಿ ಬ್ರಿಟಿಷ ಸರಕಾರದ ಪ್ರತಿನಿಧಿ, ತ್ರಿವಿಷ್ಟಪ ಹಾಗೂ ಚೈನಾ ಸರ್ವಾಧಿಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು. ಚೈನಿ ಪ್ರತಿನಿಧಿಯು ಆ ಸಂಧಾನಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿರುವನು. ಆದರೆ ಚೈನಾದ ಸರ್ವಾಧಿಕಾರಿ ಸಮ್ಮತಿಸಿರಲಿಲ್ಲ. ಲ್ಹಾಸಾದ ಸರಕಾರವು ಅದಕ್ಕೆ ಒಪ್ಪಿಗೆಯನ್ನಿತ್ತಿದೆ. ಹಾಗಿರುವದರಿಂದ, ಈ ಸಂಧಾನಕ್ಕೆ ಭಾರತ—ತ್ರಿವಿಷ್ಟಪದ ಸಂಧಿ ಎಂದೇ ಹೇಳಲಾಯಿತು. ತ್ರಿವಿಷ್ಟಪ ಒಂದು ಸ್ವತಂತ್ರ ರಾಷ್ಟ್ರವಾದುದರಿಂದ ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಲ್ಲಿ ಈ ಸಂಧಾನಕ್ಕೂ ಮಹತ್ವ ಇದೆ. ಭಾರತದ ಪ್ರಧಾನಿಯವರು ಚೈನಾದ ಪ್ರಧಾನಿಗೆ ಮೊನ್ನೆ ಬರೆದಾಗ ಆ ಕುರಿತು ತಿಳಿಸಿರುವರು. ಹೀಗೆಲ್ಲಾ ಇರುವಾಗ ತ್ರಿವಿಷ್ಟ ಕಸ್ತೂರಿಯನ್ನು ಚೈನಿ ಶಕ್ತಿಯ ಕಾಲಬುಡದಲ್ಲಿ ನಾಶಕ್ಕೊಳಪಡಿಸುವದು ಸ್ವಾತಂತ್ರ್ಯಪ್ರೇಮಿ, ಮಾನವತಾವಾದಿ ಮಹಾನ್ ರಾಷ್ಟ್ರದ ಆತ್ಮ ಗೌರವಕ್ಕೆ ಭೂಷಣವಲ್ಲ.

ಸತ್ಯ ಸಂಗತಿಯೆಂದರೆ ಚೈನಾದ ದಾನವೀ ಪಾಶದಿಂದ ತ್ರಿವಿಷ್ಟಪವನ್ನು ಬಿಡುಗಡೆಗೊಳಿಸಲು ಅದು ಭಾರತದ ಸ್ವಾರ್ಥವನ್ನು ಅಪೇಕ್ಷಿಸುತ್ತದೆ ತ್ರಿವಿಷ್ಟಪದ ಮುಕ್ತಿಯೆಂದರೆ ಅದು ತ್ರಿವಿಷ್ಟಪದ್ದು ಅಥವಾ ಭಾರತದ್ದು ಮಾತ್ರವಲ್ಲ ಏಷ್ಯಾದ ಮುಕ್ತಿಯೇ ಇದೆ.

ಹಿಮಾಲಯದ ಘಾಟಿಗಳಲ್ಲಿ ಎಂದಿನ ವರೆಗೆ ಚೈನಾದ ಅಧಿಪತ್ಯ ಹಾಗೂ ನಿಯಂತ್ರಣ ಇರುತ್ತದೋ, ತ್ರಿವಿಷ್ಟಪದ ಪೀಠಭೂಮಿಯ ಮೇಲೆ ಎಂದಿನ ವರೆಗೆ ಪರಕೀಯ ರಾಕ್ಷಸ ಸೇನೆಯು ತಂಗಿರುತ್ತದೋ, ಅಂದಿನ ವರೆಗೂ ವಿಶ್ವಾಸ ಶಾಂತಿ ಸಾಗರದಲ್ಲಿ ಆಪತ್ತಿನ ತೆರೆಗಳು ಎದ್ದೇಳುತ್ತಿರುತ್ತವೆ. ಏಕೆಂದರೆ, ಚೈನಾದ ಕ್ರೂರ ಅನಾಗರಿಕ ಸೇನೆಯು ಶಾಂತಿ ವ್ಯವಸ್ಥೆ ಹಾಗೂ ಸುಖ ಸಂಪತ್ತುಗಳ ಧ್ವಂಸಮಾಡುತ್ತಲಿರುತ್ತದೆ ಅದು ರಾಷ್ಟ್ರಪ್ರೇಮಿಗಳ ರಕ್ತದಿಂದ ತನ್ನ ಧ್ವಜವನ್ನು ಮತ್ತಷ್ಟು ಕೆಂಪು ಮಾಡಿಕೊಳ್ಳುತ್ತಿರುತ್ತದೆ. ಅದು ದೇಶಭಕ್ತರ ತಲೆಯ ಮೇಲೆ ಸುತ್ತಿಗೆಯಿಂದ ಹೊಡೆಯುತ್ತದೆ. ಕತ್ತಿಯಿಂದ ಕತ್ತನ್ನು ಕೊಯ್ಯುತ್ತದೆ. ಈ ಕಾರಣದಿಂದ ಕೂಡಾ ತ್ರಿವಿಷ್ಟಪದ ಪೀಠಭೂಮಿಯ ಮೇಲೆ ಚೈನಿ ಸೈನಿಕರ ಶಿಬಿರ ಅಥವಾ ಡೇರೆ ಇರಲು ಸಂಧರ್ಭ ಕೊಟ್ಟಲ್ಲಿ ವಿಶ್ವ ಶಾಂತಿಗೆ ಸದಾ ಭಯ, ಶಂಕೆ ಹಾಗೂ ಸಂಶಯವು ಬಾಧಿಸುತ್ತಿರುತ್ತದೆ.

ತ್ರಿವಿಷ್ಟಪ ಪೀಠಭೂಮಿಯನ್ನು ಪ್ರಪಂಚದ ಮಾಡು ಎಂದು ಹೇಳಲಾಗುತ್ತದೆ. ಪೀಠಭೂಮಿಗಳಲ್ಲಿ ಅದು ಅತ್ಯಂತ ವಿಸ್ತಾರವುಳ್ಳದ್ದು, ದೊಡ್ಡದೂ ಇದ್ದು ವಿಶಾಲವಾಗಿದೆ ಇಷ್ಟು ದೊಡ್ಡ ದೇಶವನ್ನು ಪಾರತಂತ್ರ್ಯದ ನರಕದಲ್ಲಿಡಲು ಬಿಡುವುದೆಂದರೆ ಭಾರತವು ತನ್ನ ಕಾಲಿಗೆ ತಾನೇ ಕೊಡಲಿ ಪೆಟ್ಟು ಕೊಟ್ಟುಕೊಂಡಂತಿದೆ. ಎಂದಿನ ವರೆಗೆ ತ್ರಿವಿಷ್ಟಪ ಸ್ವತಂತ್ರ ದೇಶವಾಗಿರುವುದಿಲ್ಲವೋ ಅಂದಿನ ವರೆಗೂ ಹಿಮಾಲಯದ ಉಚ್ಚಧವಳ ಶಿಖರ ಸುರಕ್ಷಿತವಾಗಿರಲಾರದು. ಕೊನೆಯಲ್ಲಿ, ಹಿಮಾಲಯ ಏನಿದೆ? ಅದೂ ಪೀಠಭೂಮಿಯ ಇನ್ನೊಂದು ಮುಖವಿದೆ. ತ್ರಿವಿಷ್ಟಪ ತಗ್ಗಾಗಿ ಇದೆ, ಹಿಮಾಲಯ ಎತ್ತರವಾಗಿದೆ. ನಮ್ಮ ಈ ಗಡಿಯಲ್ಲಿ ಚೈನಿಯರು ಇರುವ ವರೆಗೆ ಆಡಳಿತ—ಸಂರಕ್ಷಣಾ ಕಾರ್ಯ ಸರಿಯಾಗಿ ನಡೆಯಲಾರದು. ಇದನ್ನು ನಾವು ತಿಳಿದುಕೊಳ್ಳುವ ವರೆಗೂ ತ್ರಿವಿಷ್ಟಪದ ಮೇಲಾಗಿರುವ ಬಲತ್ಕಾರದ ಆಕ್ರಮಣವನ್ನು ಎದುರಿಸಲು ಸಿದ್ಧರಾಗುವದಿಲ್ಲ.

ಆದ್ಯಾವ ದೃಷ್ಟಿಯಿಂದ ನೋಡಿದರೂ ತ್ರಿವಿಷ್ಟಪವು ಚೈನಾದ ಭಾಗವಾಗಿರಲು ಸಾಧ್ಯ ಇರುವದಿಲ್ಲ. ತ್ರಿವಿಷ್ಟಪದ ಶಾಂತ ಜನತೆ ಘೋರ ಹತ್ಯಾಕಾಂಡ ನಡೆಯುತ್ತಿರುವಾಗ ಅದರ ಪ್ರತಿಧ್ವನಿ ಸಂಯುಕ್ತ ರಾಷ್ಟ್ರಸಂಘದಲ್ಲಿ ಕೇಳಿಬಂತು. ಆಗ ಅಲ್ಲೇ ಇದ್ದ ಭಾರತದ ಪ್ರತಿನಿಧಿ ಮಾಡಿದ್ದಾದರೂ ಏನು? ತ್ರಿವಿಷ್ಟಪವು ಯಾವದಾದರೊಂದು ದೇಶದ ಭಾಗವಾಗುವಂತಹದಾದಲ್ಲಿ ಅದು ಭಾರತದ ಭಾಗವೇ ಇರಬೇಕಾಗುತ್ತದೆ. ಯಾಕೆಂದರೆ ಶಿವನ ಧಾಮ ಕೈಲಾಸ ಹಾಗೂ ಪವಿತ್ರ ತೀರ್ಥ ಮಾನಸರೋವರ ಅಲ್ಲಿದೆ ಅವೆಂದಿಗೂ ಭಾರತೀಯರಿಗೆ ಸೇರಬೇಕಾದವುಗಳು. ಆಂಗ್ಲೇಯರು ತಮ್ಮ ತಪ್ಪಿನಿಂದ ತ್ರಿವಿಷ್ಟಪವನ್ನು ಬಿಟ್ಟುಕೊಟ್ಟಿರುವರು. ಇಂದಿಗೂ ಹಲವಾರು ಯಾತ್ರಿಕರು ಅಲ್ಲಿಗೆ ಹೋಗಲು ತವಕಪಡುತ್ತಿದ್ದಾರೆ.

ಭಾರತೀಯ ಪುರಾಣ ಹಾಗೂ ಮಹಾಭಾರತದಲ್ಲಿ ತ್ರಿವಿಷ್ಟಪವನ್ನು ಸ್ವರ್ಗವೆಂದೇ ವಿವರಿಸಿರುವರು. ಋಷಿ ದಯಾನಂದರು ತ್ರಿವಿಷ್ಟಪವನ್ನು ಸೃಷ್ಟಿಯ ಮೂಲ ಸ್ಥಳವೆಂದು ಹೇಳಿರುವರು. ಈ ತ್ರಿವಿಷ್ಟಪ ಚೈನಾದ ಭಾಗವಾಗಿರಲು ಸಾಧ್ಯವಿದೆ ಏನು? ತ್ರಿವಿಷ್ಟಪಕ್ಕೆ ಸ್ವಾತಂತ್ರ್ಯ ಸಿಗದ ವರೆಗೂ ಭಾರತದ ಸ್ವಾತಂತ್ರ್ಯ ಅಪೂರ್ಣವೇ ಇದೆ. ಸತ್ಯವನ್ನೊಪ್ಪುವುದಕ್ಕೆ ಸಂಕೋಚಪಡುವದೇತಕ್ಕೆ?

ಈ ರೀತಿ ಶ್ರೀ ಅವನೀಂದ್ರ ವಿದ್ಯಾಲಂಕಾರರವರು ಲೇಖನವೊಂದರಲ್ಲಿ (ಪಾಂಚಜನ್ಯ) ಪ್ರಶ್ನೆ ಕೇಳಿರುವರು. ಅದು ಸ್ವಲ್ಪ ಖಾರವಾಗಿಯೇ ಇದೆ. ಕೆಲವರಿಗಂತೂ ಕಹಿಯೇ ಇದೆ. ಏನಿದ್ದರೂ ಮುಖ್ಯ ವಿಷಯವನ್ನು ಮರೆತುಬಿಡುವದು ಮಾನವ ನೀತಿಕೆ ವಿರೋಧವಿದೆ. ಯಾವ ದೇಶವಾದರೂ ತನ್ನ ಮಾನಕ್ಕೆ ಭಂಗತಂದುಕೊಂಡೀತೇ? ತನ್ನ ಮಾನವನ್ನು ಶಾಂತಿಯ ಪಾದಾರವಿಂದಗಳಲ್ಲಿ ಒತ್ತೆ ಇಡಲು ಸಾಧ್ಯವೇ? ನಮ್ಮ ಪವಿತ್ರ ವಾತ್ಸಲ್ಯಮಯಿ ಭಾರತಾಂಬೆಯ ಮಾನವಾದರೋ ಬಿಂದುವಾಗಿ ಅಲ್ಲ, ಸರೋವರವಾಗಿಯೇ ಎನ್ನುವಂತೆ ಧವಳ ಉನ್ನತ ಹಿಮಾಲಯದಲ್ಲಿದೆ. ಅದನ್ನು ನಾವು ಬಿಟ್ಟುಕೊಡುವದು ಸರಿಯೇ? ಅದನ್ನೇ ಚೆನ್ನಾಗಿ ಯೋಚಿಸಿ ರಾಜೇನ್ ಬಾಬೂರವರು ಭಾರತೀಯರ ಮುಂದೆ ಇಟ್ಟಿರುವರು. ಯೋಚನೆ ಯೋಜನೆಯಾಗುವ ವರೆಗೆ ದುರದೃಷ್ಟವಶಾತ್ ಮೃತ್ಯು ಅವರನ್ನಿರಲು ಬಿಡಲಿಲ್ಲ. ಅವರ ಪಂಚಭೂತಾತ್ಮಕ ಜಡ ದೇಹವಿಲ್ಲದಿದ್ದರೇನಂತೆ? ನಾವಿಲ್ಲವೇ ನಲ್ವತ್ತುಕೋಟಿ ನಿರ್ಭಯ ನಿಸ್ವಾರ್ಥ ನರಾಗ್ರೇಸರ ಭಾರತೀಯರು? ಅಜಾತ ಶತ್ರುವಿನ ಅಂತಿಮ ಆಶೆಯನ್ನು ಪೂರೈಸಲು ನಮ್ಮಿಂದ ಸಾಧ್ಯವಿಲ್ಲವೇ? ಅದಕ್ಕೆ ಬೇಕಾಗಿರುವದು, ಒಗ್ಗಟ್ಟು, ಶಿಸ್ತು, ನಿಸ್ವಾರ್ಥ ಸೇವೆ, ದೇಶಾಭಿಮಾನ ಹಾಗೂ ಸ್ಪಷ್ಟ ಧೋರಣೆ.

—ಶಿವಶಂಕರ, ಮದ್ರಾಸು

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ —
“ಜನತಾ ಡಿಪೊಜಿಟ್ ಸ್ಕೀಮ್”
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

25,000
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ
ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಎಲ್ಲಾ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ.

## ...ಸಾಲ್ವರು ಚಹಾಪಾನಿಗಳು

ಒಂದು ಹೋಟೇಲು. ಆಧುನಿಕ ರೀತಿ ವಾಜುಗಳಿಗೆ ಹೊಂದಿಕೊಳ್ಳುವಂತೆ ಸಜ್ಜಿಕೆಗಳು.

ಚಹಾಪಾನಕ್ಕೆಂದು ಒಬ್ಬ ಅಮೇರಿಕನ್ ವ್ಯಕ್ತಿ ಹೋಟೇಲನ್ನು ಪ್ರವೇಶಿಸಿ ಕುಳಿತ. ಆತನಿಗೆಂದು ತಂದಿಟ್ಟ ಚಹಾ ತಟ್ಟೆಯಲ್ಲಿ ನೊಣವೊಂದು ಬಿದ್ದಿತ್ತು. ಅಮೇರಿಕನ್ ನಾಗರಿಕನ ಸ್ವಭಾವದಂತೆ ಆತ ಚಹಾದೊಡನೆ ಲೋಟ-ಬಸಿಗಳನ್ನೂ ಬೀದಿಗೆಸೆದು ದರದರನೆ ನಡೆದೇ ಬಿಟ್ಟ.

ಬಳಿಕೊಬ್ಬ ಆಂಗ್ಲೇಯ ಚಹಾ ಕುಡಿಯಲು ಅದೇ ಹೋಟಲಿಗೆ ಪಾದಾರ್ಪಣ ಮಾಡಿದ. ಆತನ ಚಹಾದಲ್ಲೂ ನೊಣ ಬಿದ್ದಿತ್ತು. ಅವನು ಕೂಡಲೇ ಮ್ಯಾನೇಜರನ್ನು ಕರೆದು, ಟೀಕಿಸಿದ. ಪ್ರತ್ಯೇಕ ಚಹಾ ತರಿಸಿಕೊಂಡು ಕುಡಿದು ಹೋದ.

ಆ ಮೇಲೆ ಅದೇ ಹೊಟಲಿಗೆ ಚಹಾಪಾನಕ್ಕೆ ಹೋದವನೊಬ್ಬ ಭಾರತೀಯ. ಅವನ ಚಹಾ ಕಪ್ಪಿನಲ್ಲೂ ನೊಣಬಿದ್ದಿತ್ತು. ಭಾರತೀಯ ಆ ನೊಣವನ್ನು ಬೆರಳಿನಿಂದ ಮೇಲೆತ್ತಿ ಹೊರಗೆಸೆದ. ಬಳಿಕ ಚಹಾ ಕುಡಿದು ಹೋದ.

ಕೊನೆಗೊಬ್ಬ ಚೀನೀಯನು ಬಂದ. ಅವನ ಚಷಕದಲ್ಲೂ ನೊಣವಿದ್ದಿತ್ತು. ಚೀನೀಯನ ನೊಣ ನೋಡಿದ್ದೇ ತಡ, ಅತ್ಯಂತ ಪ್ರಸನ್ನನಾದ. ಅದನ್ನು ಮೊದಲು ತೆಗೆದು ತಿಂದ; ಆ ಮೇಲೆ ಚಹಾ ಕುಡಿದು ಸಂತೋಷದಿಂದ ಹೊರ ನಡೆದ

---

## ಗಂಗೆಯು ಅವತರಿಸಿದಳು

(ಎರಡನೇ ಪುಟದಿಂದ)

...ಒಂದು ಬಿಂದುವೇ ಭೂಮಿಗೆ ಸಾಕಾಗುವಂತಿತ್ತು. ತನ್ನ ಕಲಕಲರವದೊಡನೆ ಗಂಗೆ ಹಿಮಾಲಯದಿಂದ ಹೊರಟಳು. ಮಾರ್ಗದಲ್ಲಿ ಜಹ್ನು ಮಹರ್ಷಿಯ ಆಶ್ರಮವಿತ್ತು. ಅಲ್ಲಿ ಅವರು ಯಜ್ಞಗೈಯುತ್ತಿದ್ದರು. ಗಂಗೆಯ ತೀವ್ರಗತಿಯು ಅವರ ಯಜ್ಞದ ಸಾಮಾನನ್ನೆಲ್ಲಾ ಕೊಚ್ಚಿಕೊಂಡು ಹೋಯಿತು. ಕ್ರುದ್ಧನಾದ ಮುನಿಯು ಗಂಗೆಯ ನೀರನ್ನೆಲ್ಲಾ ಕುಡಿದು ಬಿಟ್ಟನು. ಭಗೀರಥನ ಮುಂದೆ ನವೀನ ಸಮಸ್ಯೆಯೊಂದು ಉದ್ಭವಿಸಿತು. ಭಗೀರಥನು ಬಹಳಷ್ಟು ಬೇಡಿಕೊಂಡ ನಂತರ ಜಹ್ನು ಮುನಿಯು ಗಂಗೆಯನ್ನು ಕಿವಿಯ ರಂಧ್ರದಿಂದ ಹೊರಬಿಟ್ಟನು. ಅಂದಿನಿಂದಲೇ ಗಂಗೆಗೆ ಜಾಹ್ನವಿಯೆಂದು ಹೆಸರಾಯಿತು. ತೀವ್ರಗತಿಯ ಓಡುವ ರಥದಲ್ಲಿ ಕುಳಿತ, ಭಗೀರಥನು ಮುಂದಿನಿಂದ ಹೋದನು. ಹಿಂದಿನಿಂದ ಗಂಗೆಯು ಅದೇ ತೀವ್ರತೆಯಿಂದ ಅವನನ್ನನುಸರಿಸಿದಳು. ಈ ರೀತಿ ಹರಿದ್ವಾರ, ಪ್ರಯಾಗ, ಕಾಶಿಯ ಮಾರ್ಗವಾಗಿ ಸಗರ ಪುತ್ರರು ಭಸ್ಮವಾಗಿದ್ದಲ್ಲಿಗೆ (ಗಂಗಾ ಸಾಗರ) ಗಂಗೆಯು ಬಂದಳು. ಗಂಗಾಜಲ ಸ್ಪರ್ಶವಾಗುತ್ತಲೇ ಅರುವತ್ತು ಸಾವಿರ ಸಗರ ಪುತ್ರರೂ ಸ್ವರ್ಗ ಲೋಕಕ್ಕೆ ಹೋದರು ಹಾಗೂ ಭಗೀರಥನ ಪ್ರಯಾಸ ಸಫಲವಾಯಿತು. ಭಗೀರಥನಿಂದಲೇ ಭೂಮಿಯಲ್ಲಿ ಗಂಗೆ ಹುಟ್ಟಿ ಹರಿದುದರಿಂದ ಅವಳನ್ನು ಭಾಗೀರಥಿ ಎಂದು ಸಂಬೋಧಿಸಲಾಗುತ್ತಿದೆ

—ಮೂಲ: ಭೋಲಾನಾಥ ತಿವಾರಿ.

ಅನು: ಎಸ್. ಎಂ. ಶೆಟ್ಟಿ, ಶಿವಮುಂಜೆ ಪಕಾರಿ.

ಹನಿಕತೆ

## ಸಮಾನತಾ ಸ್ಥಾಪನೆ

"ದೇವತೆಗಳು ಸ್ವಾರ್ಥಿಗಳು, ತಾವು ಬೇಕಾದಷ್ಟು ಅಮೃತ ಪಾನ ಮಾಡುತ್ತಾರೆ, ಮತ್ತು ನಮಗೆ ಮನುಷ್ಯರಿಗೆ ಮಾತ್ರ ಕುಡಿಯಲಿಕ್ಕೆ ಬರೇ ನೀರು ಕೊಡುತ್ತಾರೆ. ಅಂದ ಮೇಲೆ ಅವರಿಗೆ ಅದರ ತೋರಿಕೆ ಏಕೆ?" ಎಂದರು ಮನುಷ್ಯರು.

"ಮನುಷ್ಯರು ಬರೇ ನೀರನ್ನಲ್ಲದೆ ನಮಗೆ ಹೆಚ್ಚಿನದಿನ್ನೇನೂ ಕೊಡುವುದೇ ಇಲ್ಲ. ಅಂದ ಮೇಲೆ ನಾವು ಅವರಿಗೆ ಪ್ರಸನ್ನರಾಗುವ ಮಾತೇ ಬರುವುದಿಲ್ಲ" ಎಂದರು ಸ್ವರ್ಗದ ದೇವತೆಗಳು ಇತ್ತ ಮನುಷ್ಯನ ಮನಸ್ಸಿನಲ್ಲಿ ದ್ವೇಷ ಹೆಚ್ಚುತ್ತ ಹೋಯಿತು. ಅತ್ತ ದೇವತೆಗಳ ಸಿಟ್ಟು ಬೆಳೆಯುತ್ತ ಹೋಯಿತು. ದೇವತೆಗಳು ಶಾಪ ಕೊಡಹತ್ತಿದರೆ, ಮನುಷ್ಯರು ಹಾಡುಗಳ ರೂಪದಲ್ಲಿ ಬೈಗಳ ಸುರಿಮಳೆಗರೆದರು ದೇವತೆಗಳು ಮನುಷ್ಯರ ಮೇಲೆ ವಜ್ರಹಾರ ಮಾಡಿದರು. ಮತ್ತು ನೀರು ಪಾಯವಾಗಿ ಕತ್ತಲೆಯಲ್ಲೇ ಉಳಿಯಬೇಕಾಗುವಂತೆ ಕಣಿವೆಯಲ್ಲಿ ನೂಕಿಬಿಟ್ಟಿದರು

ಇದನ್ನು ಕಂಡು ಸರ್ವ ಶಕ್ತಿಮಾನ್ ಈಶ್ವರನಿಗೆ ದಿಗಿಲು ಬಿತ್ತು. ಅವನು ಹೇಳಿದ "ನಾನು ಸ್ವರ್ಗ ಮತ್ತು ಪೃಥ್ವಿ ಎರಡನ್ನೂ ಸುವರ್ಣ ತಂತುವಿನಿಂದ ಜೋಡಿಸಲು ಪ್ರಯತ್ನಿಸಿದ್ದೆ. ಇಷ್ಟೇ ಅಲ್ಲ, ಪರಸ್ಪರರ ಸಂಪರ್ಕದ ಬಗ್ಗೆ ಒಂದು ನಿಚ್ಚಣಿಕೆಯನ್ನು ಇಳಿಸಿದ್ದೆ. ಅದೆಲ್ಲ ವ್ಯರ್ಥವಾಯಿತು ದೇವತೆಗಳು ತಮ್ಮ ಉನ್ನತವಾದ ಆಸನಗಳ ಮೇಲೆಯೇ ಭದ್ರವಾಗಿ ಕುಳಿತರು. ಮತ್ತು ಮನುಷ್ಯರು ಆಳವಾದ ಕತ್ತಲೆಯ ಕಣಿವೆಯಲ್ಲೇ ಸಿಕ್ಕಿಬಿದ್ದರು.

ಇದಕ್ಕಾಗಿ ಈಶ್ವರನು ಒಂದು ಯೋಜನೆ ಮಾಡಿದ. ಅವನು ದೇವತೆಗಳ ಅಮೃತದಲ್ಲಿ ನೀರು ಕೂಡಿಸಿಬಿಟ್ಟ, ಗೌಳಿಗರು ಲಾಭದಾಶೆಗೆ ಹಾಲಿನಲ್ಲಿ ನೀರು ಬೆರೆಸುವಂತೆ. ಮತ್ತು ಮನುಷ್ಯರು ಕುಡಿಯುವ ನೀರಿನಲ್ಲಿ ಅಮೃತದ ಹನಿಗಳನ್ನೂ ಕೂಡಿಸಿಬಿಟ್ಟ ಅತ್ತರ ಮಾರುವವರು ಗುಲಾಬಿಯ ಸತ್ವವನ್ನು ನೀರಿನಲ್ಲಿ ಬೆರಸಿ ಗುಲಾಬಜಲ ತಯಾರಿಸುವಂತೆ.

ಇದರಿಂದ ಆಶ್ಚರ್ಯಕರ ಘಟನೆಯೊಂದು ಘಟಿಸಿತು. ದೇವತೆಗಳು ಕೆಳಗೆ ಕತ್ತಲೆಯ ಕಣಿವೆಯ ಕಡೆಗೆ ಇಳಿಯ ಹತ್ತಿದರು. ಮತ್ತು ಮನುಷ್ಯರು ಐಶ್ವರ್ಯಯುಕ್ತ ಉನ್ನತ ಪ್ರದೇಶದ ಕಡೆಗೆ ಏರಹತ್ತಿದರು. ಕೊನೆಗೆ ದೇವತೆಗಳ ಉನ್ನತ ಸ್ಥಾನವೂ ಉನ್ನತವಾಗಿ ಉಳಿಯಲಿಲ್ಲ. ಮತ್ತು ಮನುಷ್ಯರ ಕಣಿವೆಯ ಆಳವೂ ಆಳವಾಗಿ ಉಳಿಯಲಿಲ್ಲ

ಎರಡು ರೂಪಗಳು

## ಸೌಂದರ್ಯ ಮೀಮಾಂಸೆ

ಕಡಲದಂಡೆಯಲ್ಲೊಂದು ದಿನ ಸೌಂದರ್ಯವೂ ಕುರೂಪವೂ ಭೇಟಿಯಾದುವು 'ಬಾ ಕಡಲಲ್ಲಿ ಮೀಯೋಣ' ಎಂದು ಅವು ಪರಸ್ಪರ ಹೇಳಿಕೊಂಡವು.

ಅವೆರಡೂ ಬಟ್ಟೆ ಕಳಚಿ ನೀರಿಗಿಳಿದು ಈಜಾಡಿದವು.

ತುಸು ಹೊತ್ತು ಕಳೆದ ಬಳಿಕ ಕುರೂಪ ದಡಕ್ಕೆ ಬಂದು ಸೌಂದರ್ಯದ ಉಡುಪು ಧರಿಸಿಕೊಂಡು ತನ್ನ ದಾರಿ ಹಿಡಿಯಿತು.

ಸೌಂದರ್ಯ ನೀರಿನಿಂದೆದ್ದು ಬಂದಾಗ ಬಟ್ಟೆ ಮಾಯವಾಗಿತ್ತು. ಬತ್ತಲೆ ಇರುವುದು ಲಜ್ಜಾಸ್ಪದವೆಂದು ಭಾವಿಸಿ ಕುರೂಪದ ಬಟ್ಟೆಯನ್ನುಟ್ಟು ಅದು ತನ್ನ ದಾರಿ ಹಿಡಿದು ಹೋಯಿತು.

ಇಂದಿನ ವರೆಗಾದರೂ ಜನ ಕುರೂಪನ್ನೇ ಅರ್ಥಾತ್ ಪೋಷಾಕನ್ನೇ ಸೌಂದರ್ಯವೆಂದೂ ಸೌಂದರ್ಯವನ್ನು ಕುರೂಪವೆಂದೂ ಭ್ರಮಿಸುತ್ತಿರುವರು.

### ಪತಿತ ಪಾವನ

ಮಳೆಗಾಲದ ದಿವಸ ಒಬ್ಬ ಕ್ರೈಸ್ತ ಪಾದರಿ ಇಗರ್ಜಿಯೊಳಗೆ ಕೂತಿದ್ದನು. ಅಲ್ಲಿಗೆ ಒಬ್ಬಳು ಕ್ರೈಸ್ತೇತರ ಹೆಣ್ಣು ಮಗಳು ಬಂದಳು. ಪಾದರಿಯ ಮುಂದೆ ನಿಂತು 'ಪ್ರಭು, ನಾನು ಕ್ರೈಸ್ತಳಲ್ಲ. ನನಗೆ ನರಕದ ಬೆಂಕಿಯಿಂದ ಪಾರಾಗಲು ಯಾವ ಮಾರ್ಗವೂ ಇಲ್ಲವೆ?' ಎಂದು ವಿಚಾರಿಸಿದಳು. ಪಾದರಿಯು ಹೆಣ್ಣು ಮಗಳನ್ನು ನೋಡಿ ಯಾರು ವಿಧಿಪೂರ್ವಕವಾಗಿ ಕ್ರೈಸ್ತ ಧರ್ಮವನ್ನು ಸ್ವೀಕರಿಸುತ್ತಾರೋ ಅಂಥವರಿಗೆ ಮಾತ್ರ ಮುಕ್ತಿ ಲಾಭವಾಗುವುದು ಎಂದು ನುಡಿದನು.

ಪಾದರಿಯ ಬಾಯಿಯಿಂದ ಈ ವಾಕ್ಯ ಉದುರಿದುದೇ ತಡ, ಇಗರ್ಜಿಯ ಮೇಲೊಂದು ಪ್ರಬಲವಾದ ಸಿಡಿಲು ಬಂದೆರಗಿತ; ಗದ್ದಲ ಕೇಳಿ ಓಡಿಬಂದ ನಗರವಾಸಿಗಳು ಬಾಗಿಲ ಬಳಿಯ ಆ ಹೆಂಗಸನ್ನು ಮಾತ್ರ ರಕ್ಷಿಸಲು ಶಕ್ತರಾದರು. ಆದರೊಳಗಿದ್ದ ಪಾದರಿ ಅಗ್ನಿಗೆ ಆಹುತಿಯಾಗಿದ್ದ

—ಖಲೀಲ್ ಗಿಬ್ರಾನ್ (ಪ್ರ)

---

ಗುಡ್ಡ ಮತ್ತು ಕಣಿವೆಯ ನಡುವಿನ ಪ್ರದೇಶವು ಬಟ್ಟೆ ಹೋಗಿ ದೇವತೆ ಮತ್ತು ಮನುಷ್ಯರಿಬ್ಬರೂ ಒತ್ತಟ್ಟಿಗೇ ಉಳಿಯುವಂತಹ ಸಮತಲವಾದ ಸುಂದರ ಮೈದಾನ ಪ್ರದೇಶವು ತಯಾರಾಯಿತು.

ಅನಂತರ ಮನುಷ್ಯರು ಅಮೃತವನ್ನು ಅಪೇಕ್ಷಿಸಲೇ ಇಲ್ಲ ಅತ್ತ ದೇವತೆಗಳೂ ಬರೇ ನೀರಿನ ಅಭಿಷೇಕದಿಂದಲೇ ಸಂತುಷ್ಟರಾಗಿ ಇರತೊಡಗಿದರು. (ಅದೇ ಗಂಧೀಜಿ ಕನಸಾಗಿದ್ದ ಸರ್ವೋದಯ!)

ಪ್ರೊ. ಎಂ. ಬೋರಗಾಂವಕರ

---

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1-25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮಾಡಬಹುದಾದ ವಿಧಾನವು ವಿವರಿಸಲ್ಪಟ್ಟಿವೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು,
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

REGD. No. B. G. 176
LICENCE No. 31
Licensed to Post without Prepayment

## ಅಧಿಕೃತ ಭಾಷೆಯಾಗಿ

# ಇಂಗ್ಲಿಷನ್ನು ಉಳಿಸಿಕೊಳ್ಳಬೇಕೆ?

೧೯೬೫ರ ನಂತರವೂ ಇಂಗ್ಲಿಷ್ ಭಾಷೆಯನ್ನು ಭಾರತದಲ್ಲಿ ಉಳಿಸಿಕೊಳ್ಳುವ ಮತ್ತು ಅದಕ್ಕೆ ಆವಶ್ಯಕ ಪ್ರೋತ್ಸಾಹ ಕೊಡುವ ಯೋಚನೆ ನಮ್ಮ ಸರಕಾರದ್ದಿದೆ. ನಮ್ಮ ಸಂವಿಧಾನವು ಹಿಂದೀ ಭಾಷೆಯನ್ನು ರಾಜಭಾಷೆಯನ್ನಾಗಿ ಘೋಷಿಸುತ್ತಿದೆ. ಆದರೆ, ಹಿಂದೀ ಭಾಷೆಯು ನಾಗರಿಕರ ಮೇಲೆ ಸವಾರಿ ಮಾಡುವಂತೆ ಇರಬಾರದೆಂಬುದರಿಂದ ಸದ್ಯದ ಅಧಿಕೃತ ಭಾಷಾ ವಿಧೇಯಕವು ಸಂಸತ್ತಿನ ಮುಂದೆ ಮಂಡಿಸಲ್ಪಟ್ಟಿದೆ.

೧೯೬೫ರ ನಂತರದ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಹಿಂದಿ ಭಾಷೆಗೆ ದೇಶದ ಸರಕಾರಿ ಭಾಷೆಯಾಗುವ ರೀತಿಯಲ್ಲಿ ಪ್ರೋತ್ಸಾಹ ಕೊಡುವುದಕ್ಕೆ ಮತ್ತು ಈ ಅವಧಿಯೊಂದಿಗೆ ಇಂಗ್ಲಿಷ್ ಭಾಷೆಯನ್ನೂ ಸಹಾಯಕವಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ವಿಧೇಯಕವು ಉದ್ದೇಶಿಸಿದೆ. ಅಂದರೆ, ಹಿಂದೀತರ ಭಾಷಿಗಳ ಮೇಲೆ ಹಿಂದಿಯನ್ನು ಬಲಾತ್ಕಾರದಿಂದ ಹೇರಲಾಗಿಲ್ಲ. ಅವರು ಈಗಿನಂತೆಯೇ ಮುಂದೆಯೂ ಇಂಗ್ಲಿಷ್ ಭಾಷೆಯನ್ನು ವ್ಯವಹಾರಕ್ಕೆ ಉಪಯೋಗಿಸಬಹುದು. ಈ ಸೌಲಭ್ಯವಿರುವುದರಿಂದಲೇ ಜಯಪ್ರಕಾಶ ನಾರಾಯಣರೂ ಕೆ. ಎಂ. ಮುನಶಿಯವರೂ ಈ ವಿಧೇಯಕವನ್ನು ಸ್ವಾಗತಿಸಿದ್ದಾರೆ. ಆದರೆ, ಸ್ವತಂತ್ರ ಪಕ್ಷದ ನಾಯಕ ರಾಜಾಜಿ ಹೇಳುತ್ತಾರೆ: ಇಂಗ್ಲಿಷೊಂದೇ ಅಧಿಕೃತ ಭಾಷೆಯಾಗಿ ಮುಂದುವರಿಯಬೇಕು. ಪಕ್ಷ ಜೆಯೆಂದದನ್ನು ಸ್ವೀಕರಿಸ ವು ಬಹಳ ಅಪಾಯಕಾರಿ.

ದೇಶಕ್ಕೊಂದೆ ರಾಷ್ಟ್ರ ಭಾಷೆಬೇಕು ಎಂಬ ವಿಷಯದಲ್ಲಿ ಎಂದಿಗೂ ವಿವಾದವಿಲ್ಲ. ಆದರೆ, ಯಾವ ಭಾಷೆಯು ಆ ಗೌರವಕ್ಕೆ ಪಾತ್ರವಾಗಬೇಕು ಎಂಬುದಷ್ಟೆ ಇಂದು ವಿವಾದಗ್ರಸ್ತ ವಿಷಯ. ಹಿಂದಿಯು ಆ ಸ್ಥಾನಕ್ಕೇರಲು ಅರ್ಹವೆಂದು ನಮ್ಮ ಜನರು ಹಿಂದೊಮ್ಮೆ ಕಂಡುಕೊಂಡುದರಿಂದಲೇ ಹಿಂದೀತರ ರಾಜ್ಯಗಳಲ್ಲಿ ಹಿಂದೀ ಭಾಷೆಯ ಪ್ರಚಾರ ಮಾಡಲು ಹಲವಾರು ಸ್ವಯಂಸೇವಾಸಂಸ್ಥೆಗಳು ಹುಟ್ಟಿಕೊಂಡುವು; ಇಂದಿಗೂ ಅವು ಬೆಳೆದು ಬರುತ್ತಿವೆ. ಆದರೆ, ಇಂದು ಈ ಪ್ರದೇಶಗಳ ಜನರು ಹಿಂದಿಯೆಂದರೆ ಮಾರು ದೂರ ಹಾರುವಂತಾಗಿದೆ. ಇದಕ್ಕೇನು ಕಾರಣ? ಒಂದು ಕಾಲದಲ್ಲಿ ಹಿಂದೀಯೆಂಬುದು ರಾಷ್ಟ್ರಭಾಷೆ—ರಾಷ್ಟ್ರೀಯತೆಯ ದ್ಯೋತಕ—ರಾಷ್ಟ್ರಧ್ವಜದಷ್ಟೇ ಗೌರವ ಯೋಗ್ಯವೆಂಬ ಉಚ್ಚ ಮನೋಭಾವನೆಯಿಂದೇಕೆ ಮಾಯವಾಯಿತು? ಅಂದು ಸ್ವೇಚ್ಛೆಯಿಂದ ಹಿಂದಿಯ ಬಗ್ಗೆ ಅಭಿಮಾನ ಮಾಡಿದ್ದರೆ, ಇಂದದನ್ನು ಬಲಾತ್ಕಾರವಾಗಿ ತಮ್ಮ ಮೇಲೆ ಅಂತಹ ಅಭಿಮಾನ ಹುಟ್ಟುವಂತೆ ಮಾಡಲಾಗುತ್ತಿದೆಯೆಂಬ ಭೀತಿ ವ್ಯರ್ಥಭೀತಿಯೆ?

'ಹಿಂದಿಯನ್ನು ಯಾರ ಮೇಲೂ ಬಲಾತ್ಕಾರದಿಂದ ಹೇರುವುದಿಲ್ಲ'ವೆಂಬ ಆಶ್ವಾಸನೆ ನಮಗೆ ದೊರೆತಿದೆ. ಆದರೆ, ಈ ಆಶ್ವಾಸನವು ಎಷ್ಟು ಕಾಲ? ಕೇಂದ್ರ ಸರಕಾರದ ತ್ರಿಭಾಷಾ ಸೂತ್ರದಂತೆ ಶಾಲೆಗಳಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷ್‌ನೊಡನೆ ಹಿಂದೀತರ ಪ್ರದೇಶಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವ ನೀತಿಯು ಬಲಾತ್ಕಾರದಿಂದ ಅಹಿಂದೀಯರ ಮೇಲೆ ಹಿಂದಿಯನ್ನು ಹೇರುವುದಿಲ್ಲವೇನು? ಇದು ವಿರೋಧಾಭಾಸವೆನಿಸುವುದಿಲ್ಲವೇನು? ಕೇಂದ್ರದ ಆಶ್ವಾಸನವು ಹುಸಿಯಾದಂತಾಗಲಿಲ್ಲವೇನು?

ತ್ರಿಭಾಷಾ ಸೂತ್ರದಂತೆ ಹಿಂದಿಯನ್ನು ಕಲಿಸುವುದರಿಂದ ಸಂಸ್ಕೃತವನ್ನು ವಿದ್ಯಾರ್ಥಿಗಳು ಕಲಿಯುವುದು ಕಷ್ಟಸಾಧ್ಯವಾಗುತ್ತದೆ. ಹೀಗೆ ಸಂಸ್ಕೃತಿಯ ಆಗರವೆನಿಸಿದ ಭಾಷೆಯು ನಷ್ಟವಾಗಿ ಹೋಗುವಂತಾಗುತ್ತದೆ.

ಕೇಂದ್ರ ಸರಕಾರವು ಮುಂದೆ ತಂದ ಅಧಿಕೃತ ಭಾಷಾ ವಿಧೇಯಕವು ದೇಶದಲ್ಲಿ ಐಕ್ಯವನ್ನು ಸಂಸ್ಥಾಪಿಸಲು ಸಹಾಯಕವಾಗಬಲ್ಲುದು. ಇಂಗ್ಲಿಷನ್ನು ಮುಂದುವರಿಸಿಕೊಂಡು ಹೋಗುವುದರಿಂದ ಯಾರಿಗೂ ಈಗ ಇರುವುದಕ್ಕಿಂತ ಹೆಚ್ಚಿನ ತೊಂದರೆ ವ್ಯವಹಾರದಲ್ಲಾಗದು. ಹಿಂದಿಯು ರಾಜಭಾಷೆಯಾಗಲು ಸರ್ವಸಮರ್ಥವಾಗುವ ವರೆಗೆ ಇಂಗ್ಲಿಷೊಂದನ್ನೇ ಮುಂದುವರಿಸಬೇಕು ಎಂಬುದಾಗಿ ವಾದಿಸುವವರೂ ಇದ್ದಾರೆ. ಅವರು ಒಂದು ವಿಚಾರವನ್ನು ನೆನಪಿಟ್ಟುಕೊಳ್ಳಬೇಕು. ಸಮರ್ಥತೆಯೆನ್ನುವುದು ಋಷಿಣೀ ಶಕ್ತಿಯಂತೆ ಒಂದು ಕ್ಷಣದಲ್ಲಿ ಕಾರ್ಯರೂಪಕ್ಕೆ ಬರುವುದಲ್ಲ. ದಿನದಿನದಲ್ಲೂ ಬೆಳೆದು ಬಂದದು. ಅಂತಹ ಸ್ಥಿತಿಗೆ ಬರಬಲ್ಲುದು. ಆ ರೀತಿಯ ಸಮರ್ಥತೆಯನ್ನು ಒದಗಿಸಬೇಕಾದರೆ ನಿಶ್ಚಿತ ಯೋಜನೆಗಳು ಆಗತ್ಯದ್ದಾಗಿವೆ. ಯೋಜನಾರಹಿತ ಕಾರ್ಯಕ್ರಮ ವ್ಯರ್ಥ ಸಂಭ್ರಮ ಮಾತ್ರ. ಆದುದರಿಂದ ರಾಜಭಾಷಾವಾದಿಗಳು ಅಧಿಕೃತ ಭಾಷಾ ವಿಧೇಯಕದಿಂದ ನೆಮ್ಮದಿ ತಾಳಬೇಕು. ಇತರರ ಮನನೋಯಿಸುವ ವಿಧಾನವಿದೆಂದು ತಿಳಿಯಬೇಕು. ಇತರರಾದರೂ ವ್ಯವಹಾರದಲ್ಲಿ ಕಠಿಣತೆಗಳನ್ನು ಎದುರಿಸದೆ ಸ್ವೇಚ್ಛೆಯಿಂದ ಹಿಂದಿಯನ್ನು ಅಧ್ಯಯನ ಮಾಡಿಕೊಂಡು ಅದರ ಪ್ರಚಾರ ಕಾರ್ಯದಲ್ಲಿ ನೆರವಾಗಬೇಕು. ಇದೂ ಒಂದು ಬಗೆಯ ಒತ್ತಾಯವೆನಿಸಬಹುದು; ಆದರದು ಶಾಂತಿ ಸಮ್ಮಿತ; ಆದುದರಿಂದ ಗ್ರಾಹ್ಯ. ಉಭಯರೂ ಅನ್ಯ ಭಾಷೆಗಳನ್ನು ಪೂರ್ವಗ್ರಹದೃಷ್ಟಿಯಿಂದ ನೋಡದೆ ಸುದೃಷ್ಟಿಯಿಂದ ಗೌರವ ಭಾವನೆಯಿಂದ ಲಕ್ಷಿಸಿದರೆ, ಅಧಿಕೃತ ಭಾಷಾ ವಿಧೇಯಕವು ನ್ಯಾಯೋಚಿತವೆನಿಸದಿರದು. ಅದು ಇಂಗ್ಲಿಷ್ ಭಾಷೆಯನ್ನೂ ಅದರ ಮಹತ್ವವನ್ನೂ ಅಲ್ಲಗಳೆದಿಲ್ಲ.

ಹತ್ತು ವರ್ಷಗಳ ಬಳಿಕ ಇಂಗ್ಲಿಷ್ ಭಾಷೆಗೆ ಇತ್ತಿರುವ ಸಮಾನ ಸ್ಥಾನವನ್ನು ಮುಂದುವರಿಸಿಕೊಂಡು ಹೋಗಬೇಕೇ ಬೇಡವೇ ಎಂಬ ಪ್ರಶ್ನೆಯನ್ನು ಪರಿಶೀಲಿಸುವ ವ್ಯವಸ್ಥೆ ವಿಧೇಯಕದಲ್ಲಿದೆ. ಆಗಲೂ ಇಂಗ್ಲೀಷನ್ನು ಮತ್ತೂ ಮುಂದುವರಿಸುವುದು ಅಪೇಕ್ಷಣೀಯವೆನಿಸಿದರೆ ಹಾಗೆ ಮಾಡಲು ಅವಕಾಶವೂ ಇರುವುದರಿಂದ ಯಾರೂ ಧೃತಿಗೆಡಬೇಕಾಗಿಲ್ಲ. ದೇಶದ ಭಾಷೆಯಾಗಿ ದೇಶ ಭಾಷೆಯನ್ನು ಬೆಳೆಸಬೇಕಲ್ಲದೆ ಅನ್ಯದೇಶ್ಯ ಭಾಷೆಯನ್ನಲ್ಲ. ಆದುದರಿಂದ ಎಂದೆಂದಿಗೂ ಇಂಗ್ಲೀಷನ್ನೇ ಮುಂದುವರಿಸಿಕೊಂಡು ಹೋಗುವುದು ಆಸವ ಥ ತಿಯ ಲಾಂಛನ

ಇಂಗ್ಲಿಷೊಂದೇ ಅಧಿಕೃತ ಭಾಷೆಯಾಗಿ ಮುಂದುವರಿಯಬೇಕೆನ್ನುತ್ತಾರೆ ಸ್ವತಂತ್ರ ಪಕ್ಷದ ನಾಯಕ ರಾಜಾಜಿ


## ಸಿಂಡಿಕೇಟ್ ಬ್ಯಾಂಕಿನ

ಶೀಘ್ರದಲ್ಲಿಯೇ ತೆರೆಯಲಿರುವ

**14 ಹೊಸ ಶಾಖೆಗಳು**

ಬೆಂಗಳೂರು ಸಿಟಿ

- ರಾಜಾಜಿ ನಗರ (ತಾ 15-4 1963ರಲ್ಲಿ ಪ್ರಾರಂಭವಾಗಿದೆ)
- ಜಯ ನಗರ
- ಫ್ರೇಜರ್ ಟೌನ್

ಮದ್ರಾಸು ಸಿಟಿ

- ಮೌಂಟ್ ರೋಡ್
- ತ್ಯಾಗರಾಜ ನಗರ
- ಪೆರಂಬೂರು

ಹೈದರಾಬಾದ್ ಸಿಟಿ

- ಪಾತರ ಗಟ್ಟ
- ಚಿಕ್ಕಡಪಳ್ಳಿ

‡‡

- ರಾಯ ಚೋಟ್ಟಿ (ಆಂಧ್ರ)
- ಬಂಗನ ಪಳ್ಳಿ (ಆಂಧ್ರ)
- ಸದಲ್ಗ (ಬೆಳ್ಗಾಂವ್ ಜಿಲ್ಲೆ)
- ಗೋಲ್ಡನ್ ರೋಕ್ಸ್ (ಮದ್ರಾಸು ಸ್ಟೇಟ್)

ಗೋವಾ

- ಸಾಂಕ್ವೆಲಿಮ್ (ತಾ 31—3—63ರಲ್ಲಿ ಪ್ರಾರಂಭವಾಗಿದೆ)
- ಕುಚೋರೆಮ್

= ವಿಶಾಲವಾದ ಶಾಖಾ ಸಮುದಾಯದ ಮೂಲಕ ವಿಸ್ತೃತ ಸೇವೆ =

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ


Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 34 | ಉಡುಪಿ, 2—5—1963 ಗುರುವಾರ | ಸಂಪುಟ ೪೨ ಸಂಚಿಕೆ ೩೪

## ಗಡಿತಂಟೆಯ ಪರಿಹಾರಕ್ಕೆ

# ಚೀನಾವು ಸಂಗ್ರಾಮವನ್ನೇ ಬಯಸುತ್ತಿದೆ

ಸೂರ್ಯನೇ ಮೊದಲಾದ ಗ್ರಹಗಳ ಫೋಟೊ ತೆಗೆಯಲು ಅನುಕೂಲವಾಗುವ ಉಪಗ್ರಹಗಳಿಗೆ ಜೋಡಿಸಬಹುದಾದ ಕನ್ನಡಿಯನ್ನು ಪರಿಶೀಲಿಸುತ್ತಿರುವ ಸನ್ನಿವೇಶ.

ಭಾರತದ ನೆಲದ ಮೇಲೆ ಕೆಂಪು ಚೀನಾದ ಸಾಮ್ರಾಜ್ಯ ವಾದವು ಸ್ವಪ್ರಭುತ್ವವನ್ನು ಪ್ರತಿಷ್ಠಾಪಿಸಿ ಅದರ ಮೇಲೆ ಆಕ್ರಮಣ ಮಾಡಿದ ದುರ್ಧರ ಪ್ರಸಂಗದಲ್ಲಿ ಸಿಂಹಳದ ಪ್ರಧಾನಿ ಭಂಡಾರ ನಾಯಿಕೆಯವರ ಅಪೇಕ್ಷೆಯಂತೆ ಆರು ಆಫ್ರೋಸ್ಯನ್ ರಾಷ್ಟ್ರಗಳು ಸಮ್ಮೇಳನವೊಂದರಲ್ಲಿ ಭಾಗವಹಿಸಿ ಗಡಿತಂಟೆಯನ್ನು ಶಾಂತ ಮಾರ್ಗದಲ್ಲಿ ಪರಿಹರಿಸಬೇಕೆಂದು ಎರಡೂ ರಾಷ್ಟ್ರಗಳನ್ನು ವಿನಂತಿಸಿ, ಈ ಸಂಬಂಧದಲ್ಲಿ ಕೆಲವೊಂದು ಸಲಹೆ-ಸೂಚನೆಗಳನ್ನು ಇತ್ತುವು. ಸಮ್ಮೇಳನದ ಗೊತ್ತುವಳಿಗಳನ್ನು ಮುಂದಾಗಿ ಉಭಯತರಿಗೂ ಕಳಿಸಿದ್ದಲ್ಲದೆ ಕೆಲದಿನಾನಂತರ ಸಮ್ಮೇಳನದ ನಾಯಿಕೆ ಭಂಡಾರ ನಾಯಿಕೆಯವರು ಅವನ್ನು ವಿವರಿಸುವ ಸಲುವಾಗಿ ಪೀಕಿಂಗ್—ನವದೆಹಲಿಗಳತ್ತ ಹಾರಿದರು. ಅದರಿಂತಹ ವಿವರಣೆಯಿಂದ ಭಾರತವು ಕೊಲಂಬೊ ಸಮ್ಮೇಳನದ ಸಲಹೆಗಳನ್ನು ಇದ್ದಕ್ಕಿದ್ದಂತೆ ಒಪ್ಪಿಕೊಂಡಿತು. ಆದರೆ, ಚೀನಾವು ಮಾತ್ರ ಅದನ್ನು ಸಂಪೂರ್ಣವಾಗಿ ಈಗ ನಿರಾಕರಿಸಿದಂತೆ ಭಾಸವಾಗುತ್ತದೆ. ಸಂಯುಕ್ತ ಅರಬ ಪ್ರಜಾರಾಜ್ಯದ ಪ್ರತಿನಿಧಿಯಾಗಿ ಕೊಲಂಬೊ ಸಮ್ಮೇಳನದಲ್ಲಿ ಭಾಗವಹಿಸಿದ ಅಲ್ಲಿನ ಮಂತ್ರಿಮಂಡಳದ ಅಧ್ಯಕ್ಷ ಅಲಿ ಸಾಬ್ರಿಯವರು ಪೀಕಿಂಗ್‌ಗೆ ತೆರಳಿ ಈ ಸಂಬಂಧವಲ್ಲಿ ನಡೆಸಿದ ಚರ್ಚೆ ಮತ್ತು ಅದರ ಪರಿಣಾಮಗಳು ಈ ಅಭಿಪ್ರಾಯಕ್ಕೆ ಒಪ್ಪವಿಟ್ಟಂತಿವೆ.

### ನೇರ ಮಾತಿನ ಪಲ್ಲವಿ

ಶ್ರೀಮತಿ ಭಂಡಾರನಾಯಿಕೆಯವರು ಪೀಕಿಂಗಿನಿಂದ ನವದೆಹಲಿಗೆ ಬಂದು ಅಲ್ಲಿ ಪ್ರಧಾನಿ ನೆಹರುರವರೊಡನೆ ಮಾತುಕತೆ ನಡೆಸಿ ಕೊಲಂಬೋ ಮುಟ್ಟುವಷ್ಟರಲ್ಲಿಯೇ ಭಾರತವು ಕೊಲಂಬೋ ಸಲಹೆಗಳನ್ನು ಸಂಪೂರ್ಣವಾಗಿ ಸ್ವೀಕರಿಸಿದ ಘೋಷಣೆಯನ್ನು ಮಾಡಿತು. ಆದರೆ, ಅದೇ ಸಮಯಕ್ಕೆ ಪೀಕಿಂಗ್ ಅದನ್ನು ನಿರಾಕರಿಸುವಂತಹ ಹೇಳಿಕೆಯನ್ನೂ ಹೊರಡಿಸಿತು. ಪ್ರಾರಂಭದಲ್ಲಿ ಪ್ರಧಾನಿ ಚೌ-ಎನ್ ಲಾಯಿಯವರು ಅವನ್ನು ಒಪ್ಪಿದಂತೆ ತೋರಿಸಿಕೊಂಡುದರಿಂದ, ಭಂಡಾರ ನಾಯಿಕೆಯವರು ತಾನು ಮಧ್ಯಸ್ತಿಕೆಯಲ್ಲಿ ಯಶಸ್ವಿಯಾದೆನೆಂದು ತಿಳಿದುಕೊಂಡಿದ್ದರಿಂದ, ಪೀಕಿಂಗ್‌ನ ನಿಲುವನ್ನು ಕಂಡು ಅವರು ಒಮ್ಮೆಗೆ ದಿಗ್ಭ್ರಮೆಗೊಂಡರು. ಮುಂದೆ ಪತ್ರ ವ್ಯವಹಾರಕ್ಕೆ ಅನಿವಾರ್ಯವಾಗಿ ತೊಡಗಬೇಕಾಯಿತು. ಈ ತಂಟೆಯಲ್ಲಿ ಸಿಕ್ಕಿಕೊಂಡುದರಿಂದ ತಾವು ಕೈಗೊಂಡ ಕಾರ್ಯವನ್ನು ಪೂರ್ತಿಗೊಳಿಸುವ ಇರಾದೆಯಿಂದ, ಚೀನೀಯ ನಿಲುವೆಯಲ್ಲಿ ಪ್ರಗತಿ ಕಾಣುವ ಆಶಯದಿಂದ ಅವರು ಬಹಳಷ್ಟು ಪ್ರಯತ್ನ ನಡೆಸಿದರು. ಕೊಲಂಬೊ ಸಲಹೆಗಳು ಅಂತಿಮವಾದುವಲ್ಲವೆಂದೂ ಅವು ಉಭಯ ದೇಶಗಳ ನಡುವಣ ನೇರ ಮಾತುಕತೆಗಳಿಗೆ ಆವಶ್ಯಕ ಪ್ರಶಾಂತ ವಾತಾವರಣವನ್ನು ನಿರ್ಮಿಸಲು ಸಹಕಾರಿ ಮಾತ್ರವೆಂದೂ ಸ್ಪಷ್ಟೀಕರಿಸಿದರು. ಆದರೆ, ಸಾಮ್ರಾಜ್ಯವಾದಿ ಪೀಕಿಂಗ್ ಸರಕಾರಕ್ಕೆ ಇಂತಹ ವಾತಾವರಣ ನಿರ್ಮಾಣ ಅನುಕೂಲವೆನಿಸಲಿಲ್ಲ. ಅದು ನೇರ ಮಾತುಕತೆಗಳಿಗೆ ತಾನು ಸಿದ್ಧವೆಂದು ಪಲ್ಲ ಹಾಡಿತೇ ಹೊರತು ಕೊಲಂಬೊ ಸಲಹೆಗಳನ್ನು ಸ್ವೀಕರಿಸಬೇಕೆಂಬ ವಾದವನ್ನು ಅಂತಹ ಕರಾರು ಹೇರುವುದು ಅನುಚಿತವೆಂದು ಹೇಳುತ್ತ ನಿರಾಕರಿಸುತ್ತ ಬಂದಿತು

### ಅಲಿ ಸಾಬ್ರಿ ಸಾಹಸ

ಆ ಸಮಯದಲ್ಲಿಯೇ ಸಮ್ಮೇಳನದ ಸಲಹೆಗಳನ್ನು ಒಪ್ಪುವಂತೆ ಪೀಕಿಂಗಿನ ಮನವೊಲಿಸುವುದಕ್ಕೆಂದು ಅಲಿ ಸಾಬ್ರಿಯವರು ಅತ್ತ ತೆರಳುವರೆಂದು ವದಂತಿಯಿತ್ತು. ಆದರೆ, ಅದೇನು ಕಾರಣವೋ ಆಗ ಅವರು ಸಂಚಾರ ಕೈಗೊಳ್ಳಲಿಲ್ಲ. ಪ್ರಾಯಃ ಅರಬ ರಾಜ್ಯಗಳ ಆಂತರಿಕ ವಿಚಾರದತ್ತವೇ ಅವರು ತೀವ್ರ ಗಮನ ಕೊಡಬೇಕಾಗಿದ್ದುದರಿಂದ ಇದ್ದರೂ ಇರಬಹುದು; ಅಥವಾ ಭಂಡಾರ ನಾಯಿಕೆಯವರೇ ಪ್ರಯತ್ನಗಳನ್ನು ಮುಂದುವರಿಸಲಿ ಎಂದೇ ಇರಬಹುದು. ಪೀಕಿಂಗ್, ಕೊಲಂಬೊ ಸೂಚನೆಗಳನ್ನು ಸಮ್ಮತಿಗೊಳಿಸುವ ಆಶಯದಿಂದಿರುವವನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡ ಅಲಿ ಸಾಬ್ರಿಯವರು ಈಗ ಅತ್ತ ತೆರಳುವುದು ಮತ್ತು ತಂಟೆಯ ಪರಿಹಾರಕ್ಕೆ ಕೊನೆಯದಾಗಿ ಪ್ರಯತ್ನಿಸುವುದು ಅತ್ಯಗತ್ಯವೆಂಬ ಮನಗಂಡು ಅತ್ತ ತೆರಳಿದರು. ಕೆಂಪು ಚೀನವು ಭಾರತದ ಮೇಲೆ ನೇರ ಆಕ್ರಮಣ ತೊಡಗುವುದಕ್ಕೆ ಮೊದಲಿನಿಂದಲೂ, ಆ ನಂತರವೂ ಸಂಯುಕ್ತ ಅರಬ ರಾಜ್ಯವು ಭಾರತದ ನೀತಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ಬಂದ ರಾಷ್ಟ್ರ. ಕೊಲಂಬೊ ಸಮ್ಮೇಳನದಲ್ಲಿಯೂ ದರೂ ಚೀನಾವನ್ನು ಆಕ್ರಮಣಕಾರನೆಂದು ಕರೆಯುವ ಸಾಹಸ ಪ್ರದರ್ಶಿಸಿದ ರಾಷ್ಟ್ರ. ಆದರೆ, ಸಮ್ಮೇಳನವು ಆ ವಿಶಿಷ್ಟ ಯಾಗಬಾರದೆಂಬುದಕ್ಕಾಗಿ ಅಂತಹ ಸ್ಪಷ್ಟ ಉಲ್ಲೇಖವನ್ನು ಮಾಡದೆ, ಶಾಂತಿ ಸ್ಥಾಪನೆಗೆಂದು ಸೌಮ್ಯವಾದ ಶಬ್ದಗಳಿಂದ ಉಭಯ ದೇಶಗಳ ಮನ ವೊಲಿಸುವಂತಹ ಗೊತ್ತುವಳಿಯ ಕರಡನ್ನು ರಚಿಸುವಲ್ಲಿ ಸಂಪೂರ್ಣವಾಗಿ ಸಹಕಾರವಿತ್ತ ಮಿತ್ರಪ್ರಿಯ ದೇಶ. ಇಂತಹ ರಾಷ್ಟ್ರವೊಂದರ ಪ್ರತಿನಿಧಿಯಾಗಿ ಅಲಿಸಾಬ್ರಿಯವರು ಚೌ ಎನ್-ಲಾಯ್ ಹಾಗೂ ಮಾವೋರನ್ನು ಕಂಡು ಅವರ ಮನವೊಲಿಸುವ ಪ್ರಯತ್ನ ಮಾಡಿದರೆ, ಅದು ಸರ್ವಥಾ ಸಮರ್ಥನೀಯ

### ದುರಂತದ ಹಂತದಲ್ಲಿ

ಏಷ್ಯದಲ್ಲಿ ತನ್ನ ಸಮಾನರು ಯಾರೂ ಇಲ್ಲವೆಂಬ ಪಿತ್ಥ ನೆತ್ತಿಗೇರಿದ ಸಾಮ್ರಾಜ್ಯ ಲೋಲುಪ ಚೀನಾ ಮತ್ತು ಪ್ರಜಾಪ್ರಭುತ್ವವಾದಿ ಭಾರತಗಳ ನಡುವೆ ನಡೆದ ಹಲವಾರು ಪತ್ರ ವ್ಯವಹಾರಗಳ ಮೂಲಕ ಚೀನಾವು ಕೊಲಂಬೊ ಸಲಹೆಗಳನ್ನು ಜೀವಂತ ಸಮಾಧಿ ಗೊಳಿಸುತ್ತಿದೆ ಎಂಬುದು ಪ್ರಕಟವಾದರೂ, ಅದು 'ಕೊಲಂಬೋ ಸಲಹೆಗಳನ್ನು ಬದಿಗಟ್ಟಿ ನೇರ ಮಾತುಕತೆಗೆ ಬನ್ನಿ' ಎಂದು ಭಾರತಕ್ಕೆ ಕರೆಯುತ್ತಿರುವುದನ್ನು ತಿಳಿದೂ ತನ್ನ ಪಾಲಿನ ಪರಮ ಪ್ರಯತ್ನವನ್ನು ಮಾಡುವ ಕರ್ತವ್ಯ ಪರಾಯಣತೆಯ ದೃಷ್ಟಿಯಿಂದ ಅಲಿಸಾಬ್ರಿಯವರು ಪೀಕಿಂಗಿಗೆ ತೆರಳಿರು. ಅಲ್ಲಿ ಯಾವ ರೀತಿಯಲ್ಲಿ ಮಾತುಕತೆ ನಡೆಯಿತು ಎಂಬುದರ ವಿವರಗಳು ಇನ್ನೂ ಬಂದಿಲ್ಲ. ಆದರೆ, ತಿಳಿದು ಬಂದ ವಾರ್ತೆಯಿಂದ ಹೇಳುವುದಾದರೆ, ಗಡಿತಂಟೆಯನ್ನು ನೇರ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಬೇಕು' ಎಂಬ ತತ್ತ್ವವನ್ನು ಇಬ್ಬರೂ ಒಪ್ಪಿದ್ದಾರೆ. ಕೊಲಂಬೋ ಸಲಹೆಗಳನ್ನು ಒಪ್ಪುವಂತೆ ಸಾಬ್ರಿ ಚೀನವನ್ನು ಆಗ್ರಹ ಪಡಿಸಿರಬಹುದು, ಮತ್ತು ಅದಕ್ಕಿಂತಲೂ ಹೆಚ್ಚಿನ ಆಗ್ರಹದಿಂದ ಲಾಯಿ ಆ ಅಭಿಪ್ರಾಯವನ್ನು ತಿರಸ್ಕರಿಸಿರಬಹುದು. ಕೊಲಂಬೋ ಸಲಹೆಗಳನ್ನು ತತ್ತ್ವಶಃ ಒಪ್ಪಿರುವ ಲಾಯಿಯವರು ಸಂಧಾನವನ್ನು ಬಯಸುತ್ತಾರೆ ನಿಜ; ಆದರೆ, ಸಮರ ವಿಧಾನವನ್ನು ಬಿಟ್ಟುಗೊಡಲು ಮಾತ್ರ ಸಿದ್ಧರಿಲ್ಲ.

### ತಲೆ ಬಾಗಬೇಕು ಯಾರು?

"Truth differs from views" ಸತ್ಯವು ಅಭಿಪ್ರಾಯಕ್ಕಿಂತ

(೮ನೇ ಪುಟ ನೋಡಿ)

ಏಕಾಂಕ ನಾಟಕ

# ಮುತ್ತು ಕೊಟ್ಟ ಮೋಹಿನಿ

ಲೇಖಕ: ಸಿ. ಜಿ. ಪರಮೇಶ್ವರಪ್ಪ, ಚಿತ್ರದುರ್ಗ.

ಪಾತ್ರ ವರ್ಗ

ಚನ್ನಪ್ಪ.
ವಾಸು— ಚನ್ನಪ್ಪನ ಮಗ.
ಶಾಸ್ತ್ರಿ— ಚನ್ನಪ್ಪನ ದೋಸ್ತಿ.
ಮೋಹಿನಿ— ವಾಸುವಿನ ಪ್ರೇಯಸಿ.

[ಒಂದು ರೂಂ ದೃಶ್ಯ. ಒಂದು ಕಡೆ ಮಂಚದ ಮೇಲೆ ಹಾಸಿಗೆ ಇದೆ. ಸುಮಾರು ರಾತ್ರಿ 9 ಗಂಟೆ ಸಮಯ. ವಾಸು ಆಗಿಂದಾಗ್ಗೆ ಕೈಯಲ್ಲಿರುವ ಗಡಿಯಾರವನ್ನು ನೋಡುತ್ತಾ, ಯಾರನ್ನೋ ನಿರೀಕ್ಷಿಸುವಂತೆ ಅಡ್ಡಡ್ಡ ತಿರುಗುತ್ತಿರುತ್ತಾನೆ]

ವಾಸು: (ಸ್ವಗತ ಗಡಿಯಾರ ನೋಡುತ್ತಾ) ಇಷ್ಟು ಹೊತ್ತಿಗೆ ಬರಬೇಕಾಗಿತ್ತಲ್ಲಾ. ಇಂದು ಬರುತ್ತಾಳೆಯೋ ಇಲ್ಲವೋ? ಇಂದು ಬರಲಾರಳು ಮೋಹಿನಿ. ನಮ್ಮ ತಂದೆ ಸುಮಾರು ನಡೆಸಿದ ಪ್ರಸಂಗವೆಲ್ಲಾ ಅವಳಿಗೆ ಗೊತ್ತಿರಬೇಕು. ಅಹುದು ಗೊತ್ತಿರಲೇಬೇಕು, ಇನ್ನೆಂದಿಗೂ ಬರಲಾರಳು. ನನ್ನಪ್ಪ ಎಂತಹ ಕೆಲಸ ಮಾಡಿದ! ಪಾಪ! ನಿರಪರಾಧಿ ಮೋಹಿನಿಯ ಮೇಲೆ ಬೈಗಳ ಬಿರುನುಡಿಗಳೇ? ನನ್ನ ಮೋಹಿನಿ ಛಲವಂತೆ ನಿಜ. (ಸಿಗರೇಟು ಹಚ್ಚಿಕೊಂಡು ಸೇದುತ್ತಾ) ಅವಳೆಂದಿಗೂ ಬರಲಾರಳು. ಆ ಮೋಹಿನಿಯ ಸಿಹಿ ಮುತ್ತಿನ ಸವಿ ಮತ್ತೆಂದಿಗೆ? ಆ ರೂಪು! ಆ ಯೌವನ! ಆ ನೋಟ! ಅವಳ ದೇಹ ಸೌಂದರ್ಯದ ಮಾಟ! ನೋಟಕರನ್ನು ಕರೆದು ಅಪ್ಪಿ ಮುತ್ತಿಸುವಂತ ಕಣ್ಣುಗಳು ಆ ನಿಲುವು ಆ ವೈಯ್ಯಾರ. (ಸಿಗರೇಟು ಮತ್ತೊಂದು ಧಂ ಸೇದಿ) ಮೈಸೂರು ಸಿಲ್ಕ್ ಸೀರೆ. ಹಸಿರು ಜಾಕೀಟು. ಕಸ್ತೂರಿ ತಿಲಕವಿಟ್ಟಿರುವ ಅವಳ ಕೇಶರಾಶಿ. ಹುಂ! ಹಣೆಯ ಮೇಲಿನ ತಿಲಕವೋ! ಏನು ಹೇಳಲಿ, ಅವಳ ರೂಪು ನೆನಸಿದಾಗ ಎಲ್ಲಾ ಅವ್ಯಕ್ತ ಕಡಿದಂತಾಗುತ್ತದೆ. (ಸಿಗರೇಟು ಸೇದುತ್ತಾ ಶತಪಥ ಹಾಕುವನು). ಅಯ್ಯೋ ಇನ್ನೊಂದು ಆ ಭಿಸಾರಿಕೆಯ ದರ್ಶನ! ಆ ರೂಪರಾಣಿಯ ಸಂದರ್ಶನ! ಆ ಮೋಹಿನಿಯ ಸವಿ ಮುತ್ತು ಇನ್ನೆಂದಿಗೆ ಪರಮೇಶ್ವರಾ! Omy God (ಚಿಂತಿಸುತ್ತಾ) ಆ ರಾತ್ರಿ.... ನೆನಸಿಕೊಂಡರೆ. ಇಂದು ಕಣ್ಣು ಮುಂದೆ ನಡೆದಂತಿದೆ. ಅಂದು ನನ್ನ ಬಳಿಗೆ ಬಂದಾಗ ಇದೇ ಸಮಯ. ಹಾಲಿನಂತಹ ಚಂದ್ರನ ಬೆಳದಿಂಗಳು. ನನ್ನನ್ನು ಕಂಡ ತಕ್ಷಣ ಜಿಂಕೆಯ ಮರಿಯಂತೆ ಚಂಗನೆ ಹಾರಿ ಬಂದು ನನ್ನನ್ನು ಅಪ್ಪಿಕೊಂಡಳು. ಯಾಕೆ ಹೊತ್ತಾಯಿತು ಅಂತಾ ಕೇಳಿದಾಗ.... ಅವಳು ಕೊಟ್ಟ ಉತ್ತರವೇನು? ತುಟಿಯನ್ನು ಚುಂಬಿಸಿದಾಗ ಗೊತ್ತಾಯಿತು. (ಸಿಗರೇಟು ಸೇದುತ್ತಾ) ಹುಂ! ಇಂದು ಬರಲಾರಳು ನನ್ನ ಮುದ್ದಿನ ಮೋಹಿನಿ. ಅಯ್ಯೋ ದೇವಾ! ಇನ್ನೂ ನನ್ನ ಪಾಲಿಗಿಲ್ಲವೇ ಮೋಹಿನಿ. ಅವಳ ಸವಿ ಜೇನಿನಂತಹ ಮುತ್ತು ಮತ್ತೆಂದಿಗೆ. ಈ ಜನ್ಮದಲ್ಲಿ ಮತ್ತೆ ಅಂತಹ ಸವಿಯನ್ನು ಕಾಣಲಾರೆನೇ? (ಆ ಕಡೆಗೆ ತಿರುಗಿ, ಸಂತೋಷದಿಂದ) ಅಗೋ ನನ್ನ ಹೃದಯದ ಅಪ್ಸರೆ ಬರುತ್ತಿರುವಳು. (ನಿರಾಶೆಯ ಮುಖದೊಡನೆ ಮೋಹಿನಿಯ ಪ್ರವೇಶ) ನನ್ನ ರಾಣಿ ಬಂದಳು. ನನ್ನ ಚಲುವಿನ ಸುಂದರಿ ಬಂದಳು. ಮೋಹಿನೀ...

ಮೋಹಿನಿ— (........)

ವಾಸು— ಮಾತಾನಾಡಲೊಲ್ಲೇಕೆ ಮೋಹಿನಿ?

ಮೋಹಿನಿ— ( .......)

ವಾಸು— ಹಾಗೇಕೆ ಮಶಾಣದ ಕಡೆ ನೋಡುತ್ತಿದ್ದೀಯಲ್ಲಾ ಅಲ್ಲೇನಿದೆ?

ಮೋಹಿನಿ— ನನ್ನಂತವರು ಅಲ್ಲಿದ್ದಾರೆ.

ವಾಸು— ನಿನ್ನಂತೆ ಅವರು ಸುಂದರಿಯರೇ

ಮೋಹಿನಿ— ಹೌದು ನನ್ನ ದೊರೆ. ನನಗಿಂತಲೂ ಅನುಪಮ ಸುಂದರಿಯರು. ನನ್ನಾಗೆ ರೂಪು, ಯೌವನವಿದೆ. ಅವರೇ ನನ್ನ ಆದರ್ಶ ಗೆಳತಿಯರು.

ವಾಸು— ಅಯ್ಯೋ ಪಾಪ!

ಮೋಹಿನಿ— ಅಹುದು Darling ಅವರು ಪಾಪದ ಫಲವನ್ನು ಅನುಭವಿಸಿ ಆ ಸ್ಥಿತಿಗೆ ಬಂದಿದ್ದಾರೆ. ಒಬ್ಬರೊಬ್ಬರು ತಮ್ಮ ಸಂಗಾತಿಗಳನ್ನ ಕೃಷ್ಣಪಕ್ಷ ದಿನದಂದು ಆರಿಸಿಕೊಳ್ಳುತ್ತಾರೆ ಅವರೇ ಜೀವನದ ಸಂಗಾತಿಗಳಾಗುತ್ತಾರೆ. ಎಲ್ಲರಂತೆಯೂ ನಾನು ನಿಮ್ಮನ್ನು ಆರಿಸಿಕೊಂಡೆ ಸ್ವಾಮಿ.

ವಾಸು— ಅವರೆಲ್ಲಾ ಎಲ್ಲಿರುವರು ಮೋಹಿನಿ?

ಮೋಹಿನಿ— ನಿಮಗೆ ಆ ವಿಷಯ ಮಾತ್ರ ಹೇಳಬಾರದು ವಾಸು.

ವಾಸು— ಅಂತ ರಹಸ್ಯವೇನು?

ಮೋಹಿನಿ— ರಹಸ್ಯದ ಮಾತಲ್ಲ ನನ್ನ ದೊರೆ ನಾನು ಇಲ್ಲಿಗೆ ಹೇಗೆ ಬಂದೆಯೆಂತಾ ಮನುಷ್ಯನಿಗೆ ತಿಳಿಯಬಾರದು. ಅಲ್ಲಿರುವರೆಲ್ಲರೂ ತಮ್ಮ ಬಯಕೆಯನ್ನು ತೀರಿಸಿಕೊಳ್ಳಲಾರದೆ ಆ ಸ್ಥಿತಿಗೆ ಬಂದಿದ್ದಾರೆ. ಅವರೆಲ್ಲರೂ ಅಕಾಲ ಸಾವನ್ನು ಅಪ್ಪಿದರು.

ವಾಸು— ಮೋಹಿನೀ...

ಮೋಹಿನಿ— ಏನು Darling?

ವಾಸು— ಆ ದಿನ ಕೊಟ್ಟ ಮುತ್ತಿನ ಸವಿಯು ..

ಮೋಹಿನಿ— ಮತ್ತೆ ಬೇಕಾಗಿದೆಯೇ?

ವಾಸು— ಅಹುದು ಮೋಹಿನಿ. (ಹೊರಗಡೆ ಶಬ್ದ)

ಮೋಹಿನಿ— ಅಗೋ ಯಾರೋ ಬರುತಿದ್ದಾರೆ ಅಂತಾ ಕಾಣುತ್ತೆ.

(ವಾಸು ವಾಸು ಅಂತಾ ಚನ್ನಪ್ಪನವರ ಕೂಗು)

ವಾಸು— ನಮ್ಮ ತಂದೆಯವರು ಕೂಗುತ್ತಿದ್ದಾರೆ.

ಮೋಹಿನಿ— ಹಾಗಾದರೆ ನಾನು ಬರುತ್ತೇನೆ Darling.

ವಾಸು— ಆಗಿನಿಂದಲೂ ನಿನ್ನ ಚುಂಬನಕ್ಕೋಸ್ಕರ ಪರಿತಪಿಸುತ್ತಿದ್ದೇನೆ.

ಮೋಹಿನಿ— ಅವರು ಹೋದ ಮೇಲೆ ಮತ್ತೆ ಬರುತ್ತೇನೆ ನನ್ನ ದೊರೆ.

ವಾಸು— ಮತ್ತೆ ಕಾಯುವಂತೆ ಮಾಡಬೇಡ ಮೋಹಿನಿ.

ಮೋಹಿನಿ— ಇಲ್ಲ ನನ್ನ ಸ್ವಾಮಿ (ನಿರ್ಗಮನ)

ವಾಸು— (ಸ್ವಗತ) ನಮ್ಮಪ್ಪ ಕೂಗಿದ್ದು ಶಿವ ಪೂಜೆಯಲ್ಲಿ ಕರಡಿ ಬಂದಂತಾಗಾಯಿತು.

(ಚನ್ನಪ್ಪ ಮತ್ತು ಶಾಸ್ತ್ರೀಗಳು ಪ್ರವೇಶ)

ಚನ್ನಪ್ಪ— ವಾಸು ಇಲ್ಲಿಯೇ ಇದ್ದಾನೆ.

ಶಾಸ್ತ್ರಿ— ನಾನು ಬಂದದ್ದಕ್ಕೂ ಸಾರ್ಥಕವಾಯಿತು ಚನ್ನಪ್ಪನವರೇ.

ಚನ್ನಪ್ಪ— ವಾಸು...

ವಾಸು— ಏನಪ್ಪಾ

ಚನ್ನಪ್ಪ— ಹೆಣ್ಣು ದೆವ್ವದಿಂದ ತಪ್ಪಿಸಲು ಶಾಸ್ತ್ರಿಯನ್ನು ಕರೆತಂದಿದ್ದೇನೆ.

ವಾಸು— ಹಾಗೆ ಇನ್ನೂ ನಾಲ್ಕು ಜನ ಕರೆತಂದಿದ್ದರೆ ಚನ್ನಾಗಿತ್ತು.

ಶಾಸ್ತ್ರಿ— ಏಕೆ ವಾಸುದೇವ ರಾವ್ ಹಾಗೆ ಅಂತೀಯಾ

ವಾಸು— ನಾನು ದೆವ್ವದಿಂದ ಸತ್ತರೆ ಮಸಣಕ್ಕೆ ತೆಗೆದುಕೊಂಡು ಹೋಗಲು.

ಚನ್ನಪ್ಪ— ಅಂತಹ ಮಾತಾನಾಡಬಾರದು ವಾಸು. ನನ್ನ ಜೀವನದ ಸರ್ವಸ್ವವೂ ನೀನೆ. ನೀನು ಹೋದರೆ ನನ್ನ ಗತಿಯೇನು? ನನ್ನ ಆಸೆಯೆಲ್ಲಾ ನಿನ್ನಲ್ಲಿ ಹೋಮ ಮಾಡಿದಂತಾಗಬೇಕೆ? ತಂದೆಯು ಹೇಳಿದಂತೆ ಮಕ್ಕಳು ಕೇಳಬೇಕು. ಮನೆತನದ ಮರ್‍ಯಾದೆಯನ್ನು ನೀನು ಕಾಪಾಡಬೇಕ.. ನೀನೇನು ದಡ್ಡ ಶಿಖಾಮಣಿಯಲ್ಲ ವಾಸು. ಶಾಸ್ತ್ರಿಯರು ಯಂತ್ರವನ್ನು ತಂದಿದ್ದಾರೆ. ಅವರು ಹೇಳಿದಾತೆ ಕಟ್ಟಿಸಿಕೋ.

ಶಾಸ್ತ್ರಿ— ತಾಯಿತವನ್ನು ಕೈಗೆ ಕಟ್ಟಿಸಿಕೋ ವಾಸು.

ವಾಸು— ಯಾವ ತಾಯಿತವನ್ನೂ ಕಟ್ಟಬೇಡಿ. ನನಗೆ ಏನಾಗಿದೆ ಅಂತ ಕಟ್ಟುತ್ತೀರಾ

ಚನ್ನಪ್ಪ— ಹೆಣ್ಣು ದೆವ್ವದ ಕಾಟ ತಪ್ಪಲಿ ಅಂತ.

ವಾಸು— ಹುಂ! ಹೆಣ್ಣು ದೆವ್ವ!! ದೆವ್ವಾ ದೆವ್ವಾ ಅಂತಾ ಸುಮ್ಮನೆ ನಂಬುತ್ತಿದ್ದೀರಲ್ಲಾ. ದೆವ್ವ ಎಲ್ಲಿದೆ? ಹೇಗಿದೆ? ನೀವೇನಾದರೂ ಬಲ್ಲಿರಾ? ಇಲ್ಲಸಲ್ಲದ ಸುಳ್ಳಿನ ಕಂತೆಗಳನ್ನು ನಂಬುತ್ತೀರಿ. ದೊಡ್ಡ ದೊಡ್ಡ ಇಂಗ್ಲಿಷ್ ಕವಿಗಳೇ ಹೇಳಿದ್ದಾರೆ. ಇಂದಿನ ನಂಬಿಕೆಗಳನ್ನು ಬಿಡಿ. ಅದೆಲ್ಲಾ ನಮ್ಮ ಭ್ರಮೆ ವಿನಃ ಮತ್ತೇನೂ ಅಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಯಂತ್ರವನ್ನು ಕಟ್ಟಿಸಿಕೊಳ್ಳಬೇಕೆ?

ಶಾಸ್ತ್ರೀ— ಈ ಯಂತ್ರವನ್ನು ಕಟ್ಟಿಸಿಕೊಂಡರೆ ಆಗುವ ಲುಕ್ಸಾನೇನು?

ಚನ್ನಪ್ಪ— ಅಹುದು, ವಾಸು. ಹೆಣ ಹೊರುವವರಿಗೆ ಈ ಯಂತ್ರ ಭಾರವೇ?

ವಾಸು— ಒಳ್ಳೆ ರಾತ್ರಿ timeನಲ್ಲಿ ಬಂದು ನನ್ನ ಸತಾಯಿಸುತ್ತಿದ್ದೀರಲ್ಲಾ? ನಿಮ್ಮ ಮನಸ್ಸಿಗೆ ನೆಮ್ಮದಿಯಾಗಲಿ ಅಂತಾ ಕಟ್ಟಿಸಿಕೊಳ್ಳಬೇಕಾಗಿದೆ. ಶಾಸ್ತ್ರಿಗಳೇ ಕಟ್ಟಿ.

ಶಾಸ್ತ್ರಿ— (ಕೈಗೆ ಕಟ್ಟುತ್ತಾ) ಬೆಳಗ್ಗೆ ತನಕ ಇದನ್ನು ಬಿಚ್ಚಬೇಡ ವಾಸು.

ವಾಸು— ಹುಂ ಹುಂ

ಚನ್ನಪ್ಪ— ಬನ್ನಿ ಶಾಸ್ತ್ರಿಗಳೇ ಹಾಗೆ ಊಟ ಮಾಡಿಕೊಂಡು ಹೋಗುವಿರಂತೆ.

(೧೧ನೇ ಪುಟ ನೋಡಿರಿ)


# ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

**ಜಾಹೀರಾತು ದರಗಳು:**
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

**ಚಂದಾ:**
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ನೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ನೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ನೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

# ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಭಾರತ—ಅಮೆರಿಕ ಸ್ನೇಹಬಂಧಕ್ಕೆ

# ಚೆಸ್ಟರ್ ಬೌಲ್ಸರ ಪುನರ್ನಿಯುಕ್ತಿ

ಬ್ರಿಟನ್ನಿನ ಕಾಮನ್‌ವೆಲ್ತ್ ಶಾಖಾ ಮಂತ್ರಿ ಶ್ರೀ ಡಂಕನ್ ಸ್ಯಾಂಡಿಸರು ಭಾರತದ ವಿಲಿಟರಿ ಆವಶ್ಯಕತೆಯನ್ನು ಪರಿಶೀಲಿಸಿ ಬಂದವರು ಮರಳಿ ಹೋಗುವಾಗ ಅಪ್ರತ್ಯಕ್ಷವಾಗಿ ಭಾರತದ ಮೇಲೊಂದು ಶರ್ತವನ್ನೇ ಹೇರಿದರು. ಪಾಕಿಸ್ತಾನ ಮತ್ತು ಭಾರತಗಳು ಒಂದಾಗಿ ಕೆಂಪು ಚೀನಾದ ದುರಾಕ್ರಮಣವನ್ನು ಎದುರಿಸಬೇಕು; ಅದಕ್ಕಾಗಿ ಈ ಎರಡು

ದೇಶಗಳ ನಡುವೆ ಶಿಘ್ರ ಮನಸ್ಸಿನ ವ್ಯವಹಾರ ಏರ್ಪಡಬೇಕು, ಮತ್ತು ಇಂತಹ ಪರಿಸ್ಥಿತಿ ನಿರ್ಮಾಣಕ್ಕೆ ಕಾಶ್ಮೀರದ ಪ್ರಶ್ನೆಯನ್ನು ಉತ್ತರಿಸಲು ಮೂಕಕತೆಗೆ ಕೊಡಗಬೇಕು—ಎಂಬುದೇ ಅವರ ಕರಾರು ಇದ್ದಂತಿತ್ತು. ಪಾಕಿಸ್ತಾನದೊಡನಿರುವ ಯಾವ ವಿವಾದವನ್ನಾದರೂ ಸಂಧಾನದ ಮೂಲಕವೇ ಪರಿಹರಿಸಿಕೊಳ್ಳುವ ವ್ರತಧೀಕ್ಷಾಬದ್ಧ ಭಾರತವಿದನ್ನು ಒಪ್ಪಿಕೊಂಡಿತು. ಅಮೆರಿಕನ್ ರಾಯಭಾರಿ ಗಾಲ್‌ಬ್ರೈಥರಾದರೂ ಸ್ಯಾಂಡ್ರಿಸರ ಅಭಿಪ್ರಾಯವನ್ನೇ ಅನುಮೋದಿಸಿದಂತಿತ್ತು.

ಆದರೆ, ಇದರಿಂದ ವಸ್ತುಸ್ಥಿತಿ ಇತ್ತು. ಪರಿವರ್ತನೆಯೂ ಆಯಿತು. ಕಮ್ಯುನಿಸ್ಟ್ ಚೀನಾದ ಆಕ್ರಮಣದಿಂದ ಸ್ವರಕ್ಷಣೆಗೆಂದು ಮಿಲಿಟರಿ ಸಹಾಯವನ್ನು ಬಯಸಿದರೆ, ಅದರೊಂದಿಗೆ ಪರೋಕ್ಷ ಕರಾರು ಹೇರುವುದು ಭಾರತಕ್ಕೆ ಪ್ರಿಯವೆನಿಸಲಿಲ್ಲ. ಹಾಗಿದ್ದರೂ ಮರು ಮಾತಾಡದೆ, ಮಾತುಕತೆಗೆ ತೊಡಗಿತು. ಅದು ಒಂದಲ್ಲ ಐದು ಬಾರಿ ನಡೆಯಿತು. ಆದರೂ ಯಾವ ಪ್ರಗತಿಯೂ ಕಾಣಲಿಲ್ಲ. ಇದರಿಂದ ಸಂಭವಿಸಿದುದಾದರೂ ಏನು? ವಿವಾದ ಕೊನೆ ಮುಟ್ಟಲಿಲ್ಲ; ಜತೆಗೆ ಅಪ್ರಿಯವಾದ ಕರಾರು ಮುಂದಿಟ್ಟ ಬ್ರಿಟನ್ ಹಾಗೂ ಅಮೆರಿಕಗಳ ಮೇಲಿನ ಅಭಿಮಾನ ಭಾರತದಲ್ಲಿ ಹ್ರಾಸಗೊಳ್ಳಲಾರಂಭಿಸಿತು.

ಅಧ್ಯಕ್ಷ ಕೆನ್ನಡಿಯವರು ಈ ಸನ್ನಿವೇಶ ವಿಚಾರವನ್ನು ಮನನ ಮಾಡಿಕೊಂಡರು. ಭಾರತವು ಕಮ್ಯೂನಿಸ್ಟ್ ರಾಷ್ಟ್ರವಾಗುವುದು ಹಾಗೂ ಕಮ್ಯುನಿಸ್ಟ್ ರಾಷ್ಟ್ರಗಳ ಸಹಾಯವನ್ನು ಪಡೆಯುವುದು ಹಾಗೂ ಕಮ್ಯುನಿಜಂ ಪ್ರಚಾರಕ್ಕೆ ಹೇತುವಾಗುವುದು. ಆದುದರಿಂದ ಭಾರತದ ಬಗ್ಗೆ ಉದಾರ ನೀತಿಯನ್ನು ತೋರಿಸುವುದು ಮತ್ತು ಭಾರತೀಯರ ಗೌರವ ಭಾವನೆಯನ್ನು ಮರಳಿಗಳಿಸುವುದು ಅವರಿಗೆ ಅವಶ್ಯವೆನಿಸಿತು. ಇದಕ್ಕಾಗಿ ಯೋಚನಾಮಗ್ನರಾಗಿದ್ದ ಕೆನ್ನೆಡಿಯವರು ತನ್ನ ರಾಯಭಾರಿ ಗಾಲ್‌ಬ್ರೈಥರನ್ನು ಮರಳಿ ಕರೆದು, ಅವರ ಸ್ಥಾನಕ್ಕೆ ಉಭಯ ದೇಶಗಳ ಸಂಬಂಧವನ್ನು, ಮನಸ್ಸನ್ನು ಸುವ್ಯವಸ್ಥೆಯಾಗಿ ಬೆಸೆಯಬಲ್ಲವನೊಬ್ಬನನ್ನು ನೇಮಿಸುವುದನ್ನೇ ಉಚಿತವೆಂದು ಮನಗಂಡರು. ಅವರು ಈ ಉತ್ತಮ ಕಾರ್ಯಕ್ಕೆ ಆರಿಸಿದ ಮಹಾ ವ್ಯಕ್ತಿಯೇ ಶ್ರೀ ಚೆಸ್ಟರ್ ಬೌಲ್ಸ್.

"ಭಾರತವು ನಮ್ಮ ಜೀವದ ಒಂದು ತುಣುಕಾಗಿ ಪರಿಣಮಿಸಿದೆ. ನಮ್ಮ ಹಲವಾರು ಸ್ನೇಹಿತರನ್ನೂ ಈ ಅದ್ಭುತ ದೇಶವನ್ನೂ ಕಾಣಲು ಸಾಧ್ಯವೆನಿಸಿದಾಗ ನಾವು ಮರಳಿ ಬರುವೆವು" ಎಂದು ಚೆಸ್ಟರ್ ಬೌಲ್ಸ್ ೧೯೫೩ರಲ್ಲಿ ಭಾರತದಲ್ಲಿ ಅಮೆರಿಕನ್ ರಾಯಭಾರಿ ಪದವಿಯಿಂದ ನಿವೃತ್ತರಾಗಿ ಸ್ವದೇಶಕ್ಕೆ ಮರಳುವ ಸಮಯ ತಮ್ಮ ಮುಕ್ತಾಯ ಭಾಷಣದಲ್ಲಿ ಅಂದಿದ್ದರು. ಬೌಲ್ಸರು ಅಂದು ನುಡಿದ ಮಾತು ಇಂದು, ಹತ್ತು ವರ್ಷಗಳ ನಂತರ, ಸತ್ಯವಾಗಿ ಪರಿಣಮಿಸಿದೆ.

"ಭಾರತ ಮತ್ತು ಏಶ್ಯಗಳ ಸಂಬಂಧದಲ್ಲಿ ಆಳವಾದ ತಿಳುವಳಿಕೆಯಿರುವ ಅಮೆರಿಕನ್ನನು ಬೇರಿಲ್ಲ. ಭಾರತ ಮತ್ತು ಅಮೆರಿಕಗಳ ನಡುವಣ ಮೈತ್ರಿಯು ದೃಢಗೊಳ್ಳಲು ಬೌಲ್ಸ್ ಅಪಾರ ಸೇವೆ ಸಲ್ಲಿಸಿದ್ದಾರೆ. ಆದುದರಿಂದ ನನ್ನ ಈ ನೇಮಕವನ್ನು ಬೌಲ್ಸರು ಸಂತೋಷದಿಂದ ಸ್ವೀಕರಿಸುವರೆಂದು ನಂಬಿದ್ದೇನೆ. ಕಳೆದ ೩೦ ವರ್ಷಗಳಿಂದಲೂ ಇವರು ಶ್ರದ್ಧಾವಂತ, ಶಕ್ತಿವಂತ ಕೆಲಸಗಾರರೆಂದು ದೇಶದಲ್ಲಿಯೂ ವಿದೇಶಗಳಲ್ಲಿಯೂ ಹೆಸರು ಪಡೆದಿದ್ದಾರೆ. ಅಮೆರಿಕದ ಆಡಳಿತಗೆ ಅನಭಿವೃದ್ಧ ದೇಶಗಳ ಸಂಬಂಧವನ್ನು ಬಿಗಿಗೊಳಿಸುವಲ್ಲಿ ಇವರು ಅದ್ಭುತ ಕೈವಾಡವನ್ನು ತೋರಿಸಿದ್ದಾರೆ" ಎಂದು ಅಧ್ಯಕ್ಷ ಕೆನ್ನೆಡಿಯವರು ಬೌಲ್ಸರ ನಿಯುಕ್ತಿ ಘೋಷಣೆಯ ಉಲ್ಲೇಖಿಸಿದ್ದಾರೆ.

ಮನುಷ್ಯಸ್ವಭಾವದ ಆಳವಾದ ಅರಿವು ಹಾಗೂ ಕಂಪಾದಿಸುವ ವಿಲಕ್ಷಣ ಕೌಶಲ್ಯಗಳಿಂದ ಕೂಡಿದ ಬೌಲ್ಸರಿಗೆ ಅಂತರ್ರಾಷ್ಟ್ರೀಯ ವಿಷಯಗಳಲ್ಲಿಯೂ ವಿಶದ ಪರಿಜ್ಞಾನವಿದೆ. ಅಂತಾರಾಷ್ಟ್ರೀಯ ವಿಷಯಗಳ ಮೇಲೆ ಜನಪ್ರಿಯವಾದ ಪುಸ್ತಕಗಳನ್ನೂ ಬರೆದಿದ್ದಾರೆ. ೬೨ ವರ್ಷ ಪ್ರಾಯದ ಬೌಲ್ಸ್ ಮೆಸಾಚುಸೆಟ್ಸಿನ ಸ್ಪ್ರಿಂಗ್‌ಫೀಲ್ಡಿನಲ್ಲಿ ಜನಿಸಿದರು. ಯೇಲ್ ವಿಶ್ವವಿದ್ಯಾಲಯದಿಂದ ೧೯೨೪ರಲ್ಲಿ ಪದವೀಧರರಾದರು. ಇವರ ಅಜ್ಜನವರು ನಡೆಸಿಕೊಂಡು ಬರುತ್ತಿದ್ದ ವಾರ್ತಾ ಪತ್ರಿಕೆಯಲ್ಲಿ ಒಂದು ವರ್ಷ ವರದಿಗಾರರಾಗಿ ದುಡಿದರು. ಅನಂತರ ವರ್ಷದಲ್ಲಿ ಜಾಹಿರಾತಿನ ಉದ್ಯಮವನ್ನು ಪ್ರವೇಶಿಸಿ ನಾಲ್ಕು ವರ್ಷಗಳಲ್ಲಿ ಸ್ನೇಹಿತನೊಬ್ಬನೊಡನೆ ಪಾಲುಗಾರಿಕೆ ಹೊಂದಿದ ತಮ್ಮದೇ ಆದ ಜಾಹೀರಾತು, ಮಾರುಕಟ್ಟೆಗಳ ಸಂಶೋಧನೆಯೊಂದನ್ನು ನ್ಯೂಯಾರ್ಕಿನಲ್ಲಿ ಸ್ಥಾಪಿಸಿದರು.

ದ್ವಿತೀಯ ಮಹಾ ಯುದ್ಧದ ವೇಳೆ ಚೆಸ್ಟರ್ ಬೌಲ್ಸರು ಪ್ರತ್ಯಕ್ಷವಾಗಿ ರಾಜಕಾರಣಕ್ಕೆ ಧುಮುಕಿದರು. ಅಧ್ಯಕ್ಷ ಫ್ರಾಂಕ್ಲಿನ್ ರೂಜವೆಲ್ಟರು ಇವರನ್ನು ಪ್ರೈಸ್ ಅಡ್ಮಿನಿಸ್ಟ್ರೇಟರ್ ಕಚೇರಿಯ ಜನರಲ್ ಮೆನೇಜರರಾಗಿ ನೇಮಿಸಿದರು. ಅನಂತರ ಇದೇ ಕಚೇರಿಯ ಡೈರೆಕ್ಟರರಾದರು. ಬೆಲೆಗಳು ಏರದಂತೆ ಅವರು ಈ ಹುದ್ದೆಯಲ್ಲಿ ತಡೆಹಿಡಿದದ್ದರಿಂದ ಸಮಗ್ರ ದೇಶದ ದೃಷ್ಟಿಯನ್ನು ತಮ್ಮತ್ತ ಸೆಳೆದರು. ೧೯೪೮ರಲ್ಲಿ ಅವರು ಕನೆಕ್ಟಿಕಟ್ಟಿನ ಗವರ್ನರರಾಗಿ ಚುನಾಯಿತರಾದರು. ಮೂರು ವರ್ಷಗಳ ನಂತರ ಭಾರತದಲ್ಲಿನ ರಾಯಭಾರಿ ಸ್ಥಾನಕ್ಕೆ ಅಧ್ಯಕ್ಷ ಟ್ರೂಮನ್ನರು ಆರಿಸಿದರು. ಈ ಸಮಯದಲ್ಲಿಯೇ ಅಮೆರಿಕ-ಭಾರತಗಳ ಸಹಾಯ ಸಂಬಂಧದ ಒಡಂಬಡಿಕೆಯನ್ನು ಸಹಿ ಮಾಡಲಾಯಿತು. ಇದರನ್ವಯ ಭಾರತಕ್ಕೆ ಆರ್ಥಿಕ ಮತ್ತು ತಾಂತ್ರಿಕ ಸಹಾಯಗಳೂ ದೊರೆಯುವಂತಾದುವು. ೧೯೫೩ರಲ್ಲಿ ನಿವೃತ್ತರಾಗಿ ಹೋದ ಬಳಿಕ ಅವರು 'ರಾಯಭಾರಿಯ ವರದಿ'ಯೆಂಬ ಒಂದು ಪುಸ್ತಕವನ್ನು ಬರೆದರು.

ಸ್ವದೇಶಕ್ಕೆ ಮರಳಲಿರುವ ರಾಯಭಾರಿ ಪ್ರೊ। ಗಾಲ್ ಬ್ರೈತ್

೧೯೫೮ರಲ್ಲಿ ಅಮೆರಿಕದ ಪ್ರತಿನಿಧಿ ಸಭೆಗೆ ಚುನಾಯಿತರಾದ ಬೌಲ್ಸರು ವಿದೇಶಾಂಗ ವ್ಯವಹಾರಗಳ ಸಮಿತಿಗೆ ನಾಮಕರಣಗೊಂಡರು. ವಿದೇಶ ವ್ಯವಹಾರದಲ್ಲಿ ತಮ್ಮ ಪರಿಜ್ಞಾನವನ್ನು ಪ್ರದರ್ಶಿಸಿದರು.

ಗಣೇಶ ಬನೋಡಿ


ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........

ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1-1-1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

## ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ ಸೂ: ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸೆನ್ಸು ಸಿಕ್ಕಿರುತ್ತದೆ

ಮದುವೆ ಉಪನಯನಾದಿ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು

## ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ಕೆಂಕಪೇಟೆ — ಉಡುಪಿ

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66



**25,000**

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

## ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ.

## ಗೇಹ ರಾಜ್ಯದಲ್ಲಿ
# ಮೃತ್ತಿಕಾ ತುಲಾಭಾರ

'ಲೇ, ಇಲ್ಲಿ ಬಾರೇ ಬಾರೇ ಇಲ್ಲಿ.',

'ಬಂದೇ ಬಿಡಿ. ಏನಂತೆ ಅಷ್ಟು ಅರ್ಜೆಂಟು ಕೆಲ್ಸ',

'ಕೆಲ್ಸ ಅಲ್ವೇ, ಕೇಳ್ದೆಯಾ ಸುದ್ದಿಯನ್ನ?',

'ನೀವು ಓದೋರು ನೀವು, ಸುದ್ದಿ ತಿಳಿಯೋದು ನಾನು. ಕೇಳಿದ್ರೆ ಈ ತಲೆಗೆ ಮಂಗಳಾರ್ತಿ ಎತ್ತಿಕ್ಬಿಡ್ತೀರಿ ಯಾರಾದ್ರೂ',

'ಸುದ್ದಿ ಕೇಳ್ದಿಯೊ ಅಂದ್ರೆ ಹನುಮಂತ್ನ ಬಾಲ ಎಳೆಯೋದಕ್ಕೆ ಹೊರಟೆಯಲ್ಲಾ? ಓದೋ ಹೌದೂನ್ನು. ಅಲ್ಲ, ಇಲ್ಲನ್ನು ಅನು ಬಿಟ್ಟು ಮೂರನೆಯವರ ಗೊಡ್ವೆ ಯಾಕೇಂತ?

'ಚರ್ಚೋಪಾಯ ಬಿಡಿ ಏನು ಸುದ್ದೀಂತ ಹೇಳಿ ನೋಡ್ಲು ಮತ್ತೆ ಹೌದೂ ಅಲ್ಲಾಂತ ಉತ್ತರ',

'ಅಂತೂ ನಾನ್ನೇ ನಿಂಗೆ ಹೇಳ್ಬೇಕೋಂತಾಯ್ತು. ಹ್ದೂಂ, ನಿಂತೇ ಇದ್ದೀಯ ಲ್ಲೇ, ಕೂತ ಕೊಳ್ಳೆ ಇಲ್ಲಿ',

'ನಿನ್ನಲ್ಲವೇ ಹೀಗ ಒಳ್ಗಡೆ ಕಾಫಿಗೆ ಸಕ್ರೆ ನೀರು ಇಟ್ಟುಬಿಟ್ಟಿದ್ದೇನೆ ಇನ್ನೆಲ್ಲಾದ್ರೂ.

ಹೋಗ್ಲಿ ಬಿಡೆ ಸಕ್ರೆಯಂತೂ ಹಚ್ಚಿ ಬಿಟ್ಟ ಮೇಲೆ ಇನ್ನ ಕಾಫಿನ್ನೇ ಬಿಟ್ಟುಬಿಡೋಣಾಂತ, ಲ್ಲಾಗೆ?

'ಕಾಫಿ ಗೀಫಿ ಬಿಡೋದಕ್ಕಿಂತ ಪ್ರಾಣ ಬಿಟ್ಟುಬಿಟ್ರೆ...',

'ಯಾರು? ನಾನೇ? ನಾನೇ ಪ್ರಾಣ ಬಿಡ್ಬೇಕೇ,

'ಅಯ್ಯಯ್ಯೋ — ಹಾಂಗಲ್ಲಾ ಅನ್ನೇಡಿ ನಾವಿಬ್ರೂ ಜತೆಯಾಗಿ ಒಮ್ಮೆಗೇನೇ ಪ್ರಾಣ ಬಿಟ್ಬಿಡೋಣ ಆಗದೆ?.

'ಆಗಬಹುದೂನ್ನು. ಆದರೆ ..

'ಅದ್ರೆ.... ಏನೂಂತ...,

'ಮತ್ತೇನಿಲ್ಲಾ ಪ್ರಾಣ ಬಿಡೋದೂಂದ್ರೆ ಅಷ್ಟ ಸುಲಭವೇ?,

'ಹಾಗಲ್ಲಾ ನೋಡಿ. ಕಾಫಿ ಕುಡಿಯೋದನ್ನು ಬಿಟ್ಟುಬಿಡೋದು? ಅಲ್ಲ, ನಿಮ್ಮ ವಾಕಿನ ಹೆಸುವ ಸುದ್ದಿಯೇನಂತ.',

'ಹೌದು ಹೌದು. ಸುದ್ದೀನೇ ಹೇಳ್ತೀನಿ,

'ಹೇಳಿ ಮತ್ತೆ',

'ನೋಡು ನಮ್ಮ ಮುಖ್ಯಮಂತ್ರಿಯವರಿದ್ದಾರಲ್ಲಾ,

'ಹೌದು, ನಿಜಲಿಂಗಪ್ಪನವರು',

'ಹೌದು. ಅವರ ತುಲಾಭಾರವಾಯ್ತಂತೆ,

'ಎಲ್ಲಿ?,

'ಬೆಳಗಾವಿಲಿ',

'ಯಾವ ದೇವ್ರಿದುರಿಗೋ....',

'ಸರಸ್ವತಿಯೆದುರು,

'ಸರಸ್ವತಿಯೇ? ಎಲ್ಲಿಯಪ್ಪ ಅದು?,

'ಬೆಳಗಾವೀಲೀಂತಂದನಲ್ಲಾ,

'ಅದು ಸರಿ. ಆದರೆ, ಸರಸ್ವತಿ ದೇವಾಲಯ ಎಲ್ಲಿದೇಂತ,

'ಅಯ್ಯಯ್ಯೋ ಪ್ರತಿ ಗ್ರಾಮುಕ್ಕೂ ಸರಸ್ವತಿ ಮಂದಿರವೊಂದನ್ನ ಮೂರನೆ ಯೋಜನೆ ಅಂತ್ಯದಲ್ಲಿ ಕಟ್ಟಿಸಕೂಡ್ತೇವೇಂತ ನನ್ನಸರ್ಕಾರ ಪ್ರತಿಜ್ಞೆ ಮಾಡಿದ...,

'ಸರಸ್ವತಿ ಮಂದಿರವಲ್ರಿ, ನಿಮ್ಮ ವಿದ್ಯೆ ಕಲಿತೋರ ಕತೆಯೇ ಹೀಗೆ ಯಾವ್ದಾವು ದೋ ಮಂದಿರಕ್ಕೆ ಏನೇನೋ ಹೆಸರು ಹೇಳೋದು 'ಸಮಾಜ ಮಂದಿರ ಅನು ಸಮಾಜ ಮಂದಿರ,

'ಸರಿ, ಅದು ಸಮಾಜ ಮಂದಿರಾನೂ ಆಗುತ್ತೆ,

'ಏನಂತೀರೀಂತ ನೀವು. ಏನು, ಪ್ರಭು ಹೋಟೆಲ್ಲಿ ಕಾಫಿ ಗೀಫಿ ಕುಡಿದದ್ದು ವಿತಿವಿೂರಿ ಪಿತ್ತ ನೆತ್ತಿಗೇರಿಸಿದೆಯೇಂತ?,

'ಪಿತ್ತಾನೂ ಏರಿಲ್ಲ, ನೆತ್ತೀನೂ ಇಳೀಲಿಲ್ಲ.',

'ಮತ್ತೆ ಹೀಗೆಲ್ಲಾ ಅನ್ಬೇಕಾದರೆ...',

'ಅದಕ್ಕೇ ಹೇಳೋದು ನೋಡು, ಹೆಂಗಸ್ರ ಬುದ್ಧಿ ಮೊಣಕಾಲಕೆಳ್ಗೆ ಅಂತ,

'ಹೌದು, ಗಂಡಸ್ರ ಬುದ್ಧಿ ಮಾತ್ರ ತಲೆಗಿಂತ್ಲೂ ಮೇಲೆ ಆಕಾಶದಲ್ಲಿ ಹಾರ್ತಿರೋದು. ಸಾಕುಮಾಡಿ ನಿಂಮ ಪುರಾಣಾನ ಏನಾದ್ರೂ ಹೇಳ್ಬೇಕಿದ್ರೆ ಹೇಳಿ ಬೇಗ, ತಡವಾಗುತ್ತೆ ನನಗೆ,

'ಕೋಪಿಸ್ಕೋ ಬೇಡ ಕಣ್ಮಣಿ. ಸರಸ್ವತೀ ಮಂದಿರ ಅಂದ್ರೆ ಶಾರದ ಮನೆ. ಪಾರ ಶಾಲೆ.',

'ಓ, ಅಷ್ಟೇನೇ? ಅದು ನನ್ಗೆ ಮೊದ್ಲೇ ಗೊತ್ತಿಲ್ವೆ? ಮತ್ತೆ ಸಮಾಜ ಮಂದಿರಾಂತಂದ್ರಿ.;

'ಅದು ಸಮಾಜದ ಕೇಂದ್ರ ಆದ್ರಿಂದ ಸಮಾಜ ಮಂದಿರವೂ ಹೌದು.

'ಹ್ದೂಂ, ಸರಿಯಾಯ್ತು ಬಿಡಿ ನಿಮ್ಮ ಕೊಂಕು ಮಾತು,ಬಳಕುನುಡಿನನಗೆಲ್ಲಿಂದ ಬರಬೇಕು? ಈಗ್ಲಾದ್ರೂ ಹೇಳಿ. ಯಾವ ಪಾಠಶಾಲೆಯಲ್ಲೀಂತ,

'ಲಿಂಗರಾಜ ಕಾಲೇಜೂಂತ,



ಸೂರ್ಯಶಕ್ತಿಯಿಂದ ಚಲಿಸಬಲ್ಲ ಅಮೇರಿಕನ್ ಕಾರ್

'ಅಲ್ಲ, ತುಲಾಭಾರನ ದೇವ ಮಂದಿರದಲ್ಲಿ ಮಾಡ್ತಾರೆಂತ ಹೇಳಿದ್ದೆ. ಆದ್ರೆ ಕೆಲವು ತಿಂಗ್ಳ ಹಿಂದೆ ನೀವೇ ಹೇಳಿದ್ರಲ್ಲ, ನೆಹರುಗಳನ್ನ ಮುರಾರ್ಜಿಯನ್ನ ಚಿನ್ನದಲ್ಲಿ ತುಲಾಭಾರ ಮಾಡಿದ್ರು ಅಂತ.',

'ಹೌದು, ಆ ಒಡವೆಗಳನ್ನ ರಾಷ್ಟ್ರೀಯ ನಿಧಿಗೆ ಕೊಟ್ರು',

'ಹಾಗಾದರೆ ಈಗ ನಿಜಲಿಂಗಪ್ಪನವರ ತುಲಾಭಾರವೂ ನಡೆಯಿತೂನ್ನಿ',

'ಹೌದ, ಮತ್ಯಾಕೆ?,

'ಯಾವುದ್ರಲ್ಲಾಗ್ತುಂತೆ?,

'ಐದು ರೂಪಾಯಿ ಕರೆನ್ಸಿ ನೋಟುಗಳಲ್ಲಂತೆ,

'ಹ್ದೂಂ, ಏನಂದಿರಿ? ನೋಟುಗಳೇ?,

'ಹೌದು ಹೌದು ಐದು ಲಕ್ಷದ ಐವತ್ತು ಸಾವಿರ ರೂಪಾಯಿ ಬೇಕಾಯ್ತಂತೆ,

'ಅಷ್ಟೇನೇ ಹಂಗ ಪ್ರೆ ಅವರ ಭಾರ?

'ಏನೇ ಬಲು ಸಸಾರ ಮಾತಾಡ್ತಿ?,

'ಕಾರಣವೇನು ಬಂತು? ತುಲಾಭಾರ ಮಾಡಿದವರು ಯಾರಂತೆ?,

'ಯಾರೇ ಅಲ್ಲಿನ ನಾಗರಿಕರು.,

'ಅಂತೂ ಬೆಳಗಾವಿ ದೆಸೆ ಎದ್ದಿತೂನ್ನಿ,

'ಯಾಕೆ ಹಾಗಂತೀಯೆ?,

'ತುಲಾಭಾರ ಮಾಡ್ಸಿಕೊಂಡ ನಂತ್ರ ಅದಕ್ಕೆ ಕೃತಜ್ಞರಾಗಿರೋದು ಬೇಡ್ವೆ?

'ಅಂದ್ರೆ? ...ಅರ್ಥವಾಗ್ಲಿಲ್ಲ.,

'ಅಲ್ಲ, ಒಂದು ಕಪ್ಪು ಕಾಫಿ ಕುಡ್ದು ಹೋದ ಮಂತ್ರಿ ಒಂದು ಲಕ್ಷದ ಗುತ್ತಿಗೆ ಕೊಟ್ಟು ಹೋಗ್ತಾನಂದಾಗ ಐದೂವರೆ ಲಕ್ಷ ರೂಪಾಯಿಗೆ ಐದು ವರ್ಷದ ಒಂದು ಯೋಜನೆಯನ್ನೇ ಕೊಡ್ಬೇಕಾದೀತು'

'ಹಾಗೆಲ್ಲಾ ಅನ್ಬಾರ್ದು ನೋಡು. ಎಲ್ರೂ ಹಾಗೇನೇ ಮಾಡ್ತಾರೆ ಅಂದುಕೊಂಡೆಯಾ? ಎಲ್ಲೊ ಒಬ್ರು ಇಬ್ರು ಹಾಗಾದ್ರೆ ..

'ಹೋಗ್ಲಿ ಬಿಡಿ ನನ್ಗೇನು ಅದ್ರಿಂದ ಲಾಭಾಂತ ನಾನ್ಯಾಕೆ ಮಾತಾಡೋಬೇಕು? ಅದ್ರೂ ರೂಪಾಯಿಯನ್ನು ಸುರುಳಿ ಕಾಯಂತೆ ತುಲಾಭಾರ ಮಾಡಿ ಎಸೀಬೇಕಾದರೆ ಅದು ಕಳ್ಳ ಪೇಟೆ ಖದೀಮರದ್ದೇ ಇರ್ಬಹುದ! ಇಲ್ಲವಾದ್ರೆ ಹೀಗೆ ನಿಧಿಗೆ ಕೊಡಬಹುದಿತ್ತಲ್ಲ?

'ಯಾರಿಗೊತ್ತು?,

'ಗೊತ್ತು ಯಾರಿಗೆ? ಒಂದು ಚೀಲಕ್ಕೆ ಸಿಮೆಂಟು ಹಾಕ್ಸಿಂತ ನಾಲ್ಕು ತಿಂಗಳಿಂದ ಹೇಳ್ತಾ ಇದ್ದೀನಿ. ಅದಕ್ಕೂ ಹೇಳಿ ಯಾರಿಗಾಕ್ಬೇಕೂಂತ.,

'ಸಿಮೆಂಟಿನ ಹೆಸ್ರು ಕೇಳುತ್ಲೆ ನೆನಪಾಯ್ತು ನೋಡು. ಒಂದು ತಿಂಗಳಾಯ್ತು ಮುನ್ಸಿಪಾಲ್ಟಿಗೆ ಅರ್ಜಿಗುಜರಾಯಿಸಿ ಇನ್ನೂ ಅವರ ಸರ್ಟಿಫಿಕೇಟ್ ಸಿಕ್ಕಿಲ್ಲ,

'ಅದು ಸಿಕ್ಕುತ್ತೆ, ಕೆಲ್ಸ ಆಗುತ್ತೆ. ಅಲ್ಲ ಸರ್ಟಿಫಿಕೇಟು ಸಿಕ್ಕಿದ್ರೆ ಸಿಮೆಂಟು ಸಿಕ್ಕಿದ ಹಾಗಾಯ್ತೆ? ಅದ್ಕೆ ಅದನ್ನೆ ಬೂದಿ ಮಾಡಿ ಸವರೋದೇ?,

'ಇಲ್ಲ ಬಿಡು, ಅದನ್ನು ಹಿಡ್ಕೊಂಡು ಧಾಸಿಲ್ದಾರನ್ನ ಕಾಣಬೇಕು ಅಲ್ಲಿ ಅದು ನಾಲ್ಕು ತಿಂಗ್ಳು ದೂಳು ತಿಂದರೆ ಬದುಕಿ

(ಅನೇ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು ಉತ್ತಮ ಪ್ರತಿ: ರೂ ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25)
ಸಿ. ಸೂ.— ಅಂಚೆಯ ವೆಚ್ಚ ಸಹಿತ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ
ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ
ಯೂ, ಪುತ್ತೂರಲ್ಲಿ ಪಾಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ

ನಿಮಗೂ ಗೊತ್ತಿರಲಿ

# ದುರಂತಕಾರಣವಾದ ವಜ್ರಗಳು

‘ವಜ್ರವನ್ನು ವಜ್ರದಿಂದಲೇ ಕತ್ತರಿಸಬೇಕು’ ಎಂದು ಹೇಳುವಂತೆಯೇ ಅದನ್ನು ಕತ್ತರಿಸಲು ಆಂಸ್ಟರಡಾಂ ನಗರವೇ ಸರಿಯಾದ ಸ್ಥಳವೆಂದೂ ಅನ್ನುತ್ತಾರೆ. ವಜ್ರಗಳನ್ನು ಸರಿಯಾಗಿ ಕತ್ತರಿಸಿ ಎಲ್ಲರ ಕಣ್ಣು ಕುಕ್ಕುವಂತೆ ಮಾಡುವ ಅಪೂರ್ವ ಕಲೆ ಇಲ್ಲಿದೆ. ವಜ್ರವಿನ್ಯಾಸಕ್ಕೆ ವಿಖ್ಯಾತವಾದ ಈ ನಗರಕ್ಕೆ ವಜ್ರ ನಗರವೆಂಬ ಉಪನಾಮವೂ ಬಂದಿದೆ.

ವಜ್ರ ಕತ್ತರಿಸುವುದೆಂದರೆ, ಕುಶಲತೆ ಬೇಕಾದ ಒಂದು ಕಲೆ. ಹರಳುಗಳಲ್ಲಿ ವಜ್ರವು ಅಮೂಲ್ಯ ಅಂತೆಯೇ ಗಟ್ಟಿಯೂ ಹೌದು. ಅಪೂರ್ವ ಹೊಳಪಿನ ಈ ರತ್ನ ನಾಶವಾಗುವುದಿಲ್ಲ. ವಜ್ರಗಳಿಗಾಗಿ ಹಲವಾರು ಕೊಲೆಗಳು ನಡೆದಿವೆ; ಕಾದಾಟಗಳು ಸಂಭವಿಸಿವೆ. ಹಾಗಿದ್ದರೂ ವಜ್ರಗಳನ್ನು ಗಳಿಸಿ, ತೊಟ್ಟು, ಆನಂದಿಸುವ ತಹತಹ ಹೆಚ್ಚಿನವರಲ್ಲಿ ಇನ್ನೂ ಉಳಿದಿದೆ.

ಮೂವತ್ತು ಶತಮಾನಗಳ ಹಿಂದೆ ಭಾರತದಲ್ಲಿ ಮೊತ್ತಮೊದಲನೆಯದಾಗಿ ವಜ್ರದ ಶೋಧನೆಯಾಯಿತು ಎನ್ನುತ್ತಾರೆ. ವಜ್ರ ಕತ್ತರಿಸುವ ಕಲೆಯು ಆಮ್ಸ್ಟರಡಾಮಿನಲ್ಲಿ ೧೫೭೬ರಲ್ಲಿ ಹುಟ್ಟಿತೆನ್ನುತ್ತಾರೆ. ಅಂದಿನಿಂದ ಇಂದಿನ ವರೆಗೂ ವಜ್ರ ಕತ್ತನೆಯಲ್ಲಿ ಡಚ್ಚರನ್ನು ಎದುರಿಸಿದವರಿಲ್ಲ. ಪ್ರಪಂಚದ ಉತ್ತಮೋತ್ತಮ ವಜ್ರಗಳು ಇಲ್ಲಿಂದಲೇ ಕತ್ತಲ್ಪಡುತ್ತವೆಯೆಂಬುದೇ ಇದಕ್ಕೊಂದು ನಿದರ್ಶನ.

ವಜ್ರದ ವ್ಯಾಪಾರದ ಕಥೆಯೂ ಮೋಜಿನದು. ಮೊದಲಿಗೆ ಭಾರತದಿಂದ ಬರುತಿದ್ದ ವಜ್ರಗಳು ಮಧ್ಯಪ್ರಾಚ್ಯದ ಮೂಲಕ ಬರುತ್ತಿದ್ದುವು. ಪೋರ್ಚುಗೀಸರು ಭಾರತಕ್ಕೆ ಜಲಮಾರ್ಗವರಸಿದ ನಂತರ, ಅವು ಪೋರ್ಚುಗಲ್ಲಿನ ರಾಜಧಾನಿ ಲಿಸ್ಬನ್ನಿನ ಹಾದಿ ಹಿಡಿದವು. ಸ್ಪೇನ್ ಮತ್ತು ಪೋರ್ಚುಗಲ್ಲುಗಳ ನಡುವೆ ಕದನ ನಡೆದು ಎರಡನೆಯದು ಪತನಗೊಂಡಾಗ ವ್ಯಾಪಾರಿಗಳು ಆಮ್ಸ್ಟರಡೇಮಿನ ದಾರಿ ಹಿಡಿದರು. ೧೪ನೆ ಲೂಯಿಯು ಫ್ರಾನ್ಸಿನ ೬೫ ವಜ್ರನಿಷ್ಣಾತ ಫ್ರೆಂಚರನ್ನು ಆಮ್ಸ್ಟರ್ ಡೇಮಿಗೆ ಕಳಿಸಿದನು. ಆದರೆ, ೧೮೭೦ರಲ್ಲಿ ದಕ್ಷಿಣ ಆಫ್ರಿಕೆಯ ಕಲಾಹಾರಿಯಲ್ಲಿ ವಜ್ರದ ಗಣಿಗಳು ಶೋಧಿತಗೊಂಡಾಗ ಅಲ್ಲಿ ವಜ್ರಕಲೆಗೆ ನಿಜವಾದ ಕ್ರಾಂತಿಯು ಉಂಟಾಯಿತು. ಕೇವಲ ಹದಿನೆಂಟು ವಯಸ್ಸಿನ ಸೆಸಿಲ್ ಜಾನ್ ರೋಡ್ಸ್ ಎಂಬ ಡಚ್ ಯುವಕನು ವಜ್ರದ ವ್ಯಾಪಾರಕ್ಕಾಗಿಯೇ ದಕ್ಷಿಣ ಆಫ್ರಿಕಾದಲ್ಲಿ ‘ಡೀ ಬೀರ್ಸ್ ಕಂಪೆನಿ’ ಎಂಬ ಸಂಸ್ಥೆಯೊಂದನ್ನು ಆರಂಭಿಸಿದನು.

ಜಗತ್ತಿನ ಒಟ್ಟು ಉತ್ಪನ್ನದಲ್ಲಿ ನೂರಕ್ಕೆ ೯೦ರಷ್ಟು ವಜ್ರಗಳು ದಕ್ಷಿಣ ಆಫ್ರಿಕಾದ ಕಾಂಗೋ, ಅಂಗೋಲಾಗಳ ಗಣಿಗಳಲ್ಲಿಯೇ ದೊರೆಯುವುವು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಶತ್ರು ಧಾಳಿಗೆ ಗುರಿಯಾದ ದೇಶಗಳಲ್ಲಿ ನೆದರ್‌ಲೇಂಡ್ಸ್ ಒಂದು. ವಜ್ರಪರಿಣತರಲ್ಲಿ ಅನೇಕರು ಸತ್ತೋ, ಓಡಿಹೋಗಿಯೋ ಕೇವಲ ೫೦೦ ಕ್ರಿಯಾಶೀಲಿಗಳು ಮಾತ್ರ ಉಳಿದುಕೊಂಡಿದ್ದರು. ಸುದೈವವಶದಿಂದ ವಜ್ರ ಕೈಗಾರಿಕೆಯ ಕೇಂದ್ರಗಳಿಗೆ ಹಾನಿ ತಲಗಲಿಲ್ಲ. ಯುದ್ಧಾನಂತರ ದಕ್ಷಿ ಆಫ್ರಿನ ೧೪೦ ಕೇಂದ್ರಗಳಲ್ಲಿ ೧೨ ಸಾವಿರ ಕ್ಯಾರೆಟ್ ವಜ್ರಗಳಿದ್ದುವು. ಅವುಗಳ ಕಾರ್ಯ ಇನ್ನೂ ಅಪೂರ್ಣವಾಗಿಯೇ ಇದ್ದುದರಿಂದ ಮತ್ತೆ ಡಚ್ಚರು ದೃಢ ಮನಸ್ಕರಾಗಿ ಕಾರ್ಯವನ್ನಾರಂಭಿಸಿದರು.

ಡಚ್ಚರ ದೃಢತೆಗೆ ತಕ್ಕ ಫಲವೂ ಪ್ರಾಪ್ತವಾಯಿತು. ೧೯೪೫ರಲ್ಲಿ ಆಂಸ್ಟರಡಾಂನ ವಜ್ರ ಕೈಗಾರಿಕೆಯ ಆದಾಯವು ೩೦ ಲಕ್ಷ ಡಾಲರ್‌ಗಳಿದ್ದುವು. ಎರಡೇ ವರ್ಷಗಳಲ್ಲಿ ಅದು ೪೦೦ ಲಕ್ಷಗಳಿಗೇರಿತು. ದಿನದಿಂದ ದಿನಕ್ಕೆ ಗಿರಾಕಿಗಳ ಸಂಖ್ಯೆಯು ಬೆಳೆಯುತ್ತ ಹೋಗುತ್ತಿದೆ. ಪ್ರಪಂಚದ ಎಲ್ಲ ದೇಶಗಳೂ ವಜ್ರ ವ್ಯಾಪಾರದಲ್ಲಿ ಆಂಸ್ಟರಡಾಮಿನೊಡನೆ ಸಂಪರ್ಕ ಏರ್ಪಡಿಸಿಕೊಂಡಿವೆ. ಜರ್ಮನಿ, ಫ್ರಾನ್ಸ್, ಮಧ್ಯ ಪ್ರಾಂತ್ಯ, ಇಂಗ್ಲೆಂಡ್, ಸ್ವಿಜರ್‌ಲೇಂಡ್ ಮೊದಲಾದುವುಗಳು ಆಮ್ಸ್ಟರಡಾಮಿನ ಖಾಯಂ ಗಿರಾಕಿಗಳು. ಆದರೂ ಅಮೆರಿಕೆಗೆ ಇಲ್ಲಿನ ಹೆಚ್ಚಿನ ವಜ್ರವನ್ನು ನಿರ್ಯಾತ ಮಾಡುತ್ತಾರೆ.

ಆಮ್ಸ್ಟರಡಾಮಿನ ವಜ್ರ ಕೆಲಸಗಾರರ ಕುಶಲತೆ ಅದ್ವಿತೀಯ. ಅತಿ ಹಿರಿಯ ಮತ್ತು ಅತಿ ಕಿರಿಯ ವಜ್ರಗಳಲ್ಲೂ ಇವರು ಕುಸುರಿ ಕೆಲಸ ಮಾಡುತ್ತಾರೆ. ಅದೊಂದು ಅತಿ ಚಿಕ್ಕ ವಜ್ರದ ಹರಳು; ಅದರ ಕುಸುರಿ ಕೆಲಸ ಪೂರ್ಣ ಮಾಡಲು ನಿಪುಣ ಕೆಲಸಗಾರನಿಗೆ ಬೇಕಾಯ್ತು ಮೂರು ತಿಂಗಳುಗಳು! ಅದು ನೆಲಕ್ಕೆ ಬಿದ್ದಿತೆಂದರೆ, ಆರಿಸಲು ಬೇಕಾದೀತು ಅತಿ ಶಕ್ತಿವಂತ ಸೂಕ್ಷ್ಮದರ್ಶಕ! ಆದರೆ, ಕಣ್ಣು ಕೋರೈಸುವ ಅದರ ಪ್ರಕಾಶವು ಮಾತ್ರ ಅತ್ಯಪೂರ್ವ!

ಜಗತ್ತಿನಲ್ಲಿ ಹಲವಾರು ಮಹಾ ವಜ್ರಗಳಿವೆ. ಅವುಗಳಲ್ಲಿ ಕೆಲವು ಪ್ರಳಯ ಭಯಂಕರ ದುರಂತಗಳಿಗೆ ಹೆಸರಾಗಿವೆ. ಇವುಗಳ ಮಾದರಿಗಳೆಲ್ಲವೂ ಆಂಸ್ಟರಡಾಮಿನಲ್ಲಿವೆ. ಹೋಪ್ ಡೈಮಂಡ್, ಷಾ ಆಫ್ ಪರ್ಶಿಯಾ, ಓರ್ಲೋಫ್, ಗ್ರಾಂಡ್ ಮೊಗಲ್, ಫ್ಲೋರೆಂಟೈನ್, ಕೊಹಿನೂರು, ರೀಜೆಂಟ್, ಜುಬಿಲಿ ಮತ್ತು ಸೌತ್ ಸ್ಟಾರ್ ಮೊದಲಾದ ಸುವಿಖ್ಯಾತ ವಜ್ರಗಳ ಹೆಸರು ಕೇಳದವರಾರು?

೧೪೭೭ರಲ್ಲಿ ಹೋಪ್ ಡೈಮಂಡಿನ ದುರಂತ ಕತೆ ಆರಂಭವಾಯ್ತು. ಈ ವಜ್ರದ ಕಾರಣದಿಂದಲೇ ಬರ್ಗಂಡಿಯ ಡ್ಯೂಕ್ ಚಾರ್ಲ್ಸನ ಕಗ್ಗೊಲೆ ನಡೆಯಿತು. ಆ ಮೇಲದು ಫ್ರಾನ್ಸಿನ ೧೪ನೆಯ ಲೂಯಿಯ ಕಿರೀಟವನ್ನಲಂಕರಿಸಿತು. ಮೊದಮೊದಲು ವಜ್ರಗಳಿಂದ ಅಲಂಕಾರ ಮಾಡಿಕೊಳ್ಳುತಿದ್ದವರು ಗಂಡಸರೇ! ಆದರೆ, ಇತ್ತೀಚೆಗೆ ಹೆಂಗಸರಿಗೂ ಇದರ ಹುಚ್ಚು ತಗಲಿದೆ.

ಶ್ರೀರಂಗಪಟ್ಟಣದ ಶ್ರೀರಂಗನಾಥನ ಹಣೆಯಲ್ಲಿ ರಾರಾಜಿಸುತಿದ್ದ ಅತ್ಯಪೂರ್ವ ವಜ್ರ ಓರ್ಲೋಫ್. ಫ್ರೆಂಚ್ ಸೈನಿಕನೊಬ್ಬನಿದರಿಂದ ಆಕರ್ಷಿತನಾಗಿ ಅದನ್ನು ಅಪಹರಿಸಿದನು. ಅವನು ಪ್ರಯಾಣಿಸುತಿದ್ದ ಹಡಗಿನ ಕೇಪ್ಟನನ ದೃಷ್ಟಿ ಇದರ ಮೇಲೆ ಬೀಳುತ್ತಲೇ ಆತನೂ ಮೋಹಿತನಾದನು; ಮತ್ತು ಕದ್ದನು. ಇದನ್ನು ರಶ್ಯಾದ ರಾಜಕುಮಾರನು ತನ್ನ ಪ್ರೇಯಸಿ ಕೆಥರೀನಳಿಗೆಂದು ಕೊಂಡುಕೊಂಡನು. ಆತ ೫ ಲಕ್ಷ ಡಾಲರುಗಳನ್ನು ತೆತ್ತಿದ್ದನು. ೧೯೪॥ ಕ್ಯಾರೆಟ್ ತೂಕದ ಆ ವಜ್ರವೂ ಆಮ್ಸ್ಟರಡಾಮಿನಲ್ಲಿ ಪರಿಷ್ಕಾರಗೊಂಡಿತ್ತು.

ಕೊಹಿನೂರು ಅತ್ಯಂತ ಪ್ರಖ್ಯಾತವಾದ ಭಾರತೀಯ ವಜ್ರ. ಇದರ ತೂಕ ೧೦೬ ಕ್ಯಾರೆಟ್. ಈಗ ಅದು ಬ್ರಿಟಿಷ್ ಸಾಮ್ರಾಜ್ಞಿಯ ರತ್ನಕಿರೀಟದಲ್ಲಿ ರಾರಾಜಿಸುತ್ತಿದೆ. ಒಂದು ಕಾಲದಲ್ಲಿ ಕೊಹಿನೂರು ತಾನು ಹೊಕ್ಕ ಮನೆಯಲ್ಲಿ ರಕ್ತ ನದಿ ಹರಿಸಿದ ಹಲವಾರು ಕಗ್ಗೊಲೆಗಳಿಗೆ ಕಾರಣವೆನಿಸಿದೆ. ಆದರೆ, ಅದು ಭಾರತದಿಂದ ದೂರ ಹೋಗಿ ಹಲವಾರು ವರ್ಷಾನಂತರ ಬ್ರಿಟನನ್ನು ಸೇರಿತು. ಅಲ್ಲಿ ಯಾವ ರಕ್ತಪಾತವನ್ನೂ ಅದು ಮಾಡಲಿಲ್ಲ. ಇದುವರೆಗೆ ಒಂದೇ ಬಾರಿ ಹಸ್ತಪರಿವರ್ತನೆಗೊಂಡ ವಜ್ರವೆಂದರೆ ೫೦ ಲಕ್ಷ ಡಾಲರ್ ಬೆಲೆಯ ಕಲ್ಲಿನನ್ ಎಂಬುದು. ನೆಪೋಲಿಯನ್ನನ ರತ್ನ ಖಚಿತ ಖಡ್ಗದಲ್ಲಿ ಮೆರೆದ ರೀಜೆಂಟ್ ವಜ್ರವು ೩೦ ಲಕ್ಷ ಡಾಲರ್ ಬೆಲೆ ಬಾಳುತ್ತದೆ. ಈ ಎಲ್ಲಾ ವಜ್ರಗಳು ಆಂಸ್ಟರ ಡಾಮಿನಲ್ಲಿಯೇ ಪರಿಷ್ಕರಿಸಲ್ಪಟ್ಟಿವೆ.

ವಜ್ರವನ್ನು ಕತ್ತರಿಸುವುದಕ್ಕೆ ಮೊದಲು ಇದರ ಬಗ್ಗೆ ಅನೇಕ ತಿಂಗಳುಗಳ ಕಾಲ ಚಿಂತನೆ ಮಾಡಬೇಕಾಗುತ್ತದೆ. ಒಮ್ಮೆ ಕತ್ತರಿಸಿದಾಗ ಮೂಲ ವಜ್ರದಲ್ಲಿ ಮೂರನೆಯ ಒಂದು ಭಾಗ ನಷ್ಟವಾಗುತ್ತದೆ. ನಿಜ ಹೇಳುವುದಾದರೆ, ಒಂದು ಕಲ್ಲು ವಜ್ರವೆನಿಸುವ ಮಾತ್ರಕ್ಕೆ ಅದಕ್ಕೆ ಬೆಲೆ ಹುಟ್ಟುವದಿಲ್ಲ; ಕತ್ತರಿಸುವ ಚಾತುರ್ಯವೇ ಅದರ ಮೌಲ್ಯವನ್ನು ಹೆಚ್ಚಿಸುತ್ತದೆ. ಆಮ್ಸ್ಟರಡಾಮಿನಲ್ಲಿ ಒಂದು ಪ್ರಮುಖ ವಜ್ರಾಗಾರವು ತನ್ನಲ್ಲಿನ ವಜ್ರಧೂಳಿಯನ್ನು ಅಲ್ಲಿನ ಆಸ್ಪತ್ರೆಯೊಂದಕ್ಕೆ ದಾನಮಾಡುತ್ತದೆ.

ಒಂದು ವಜ್ರವನ್ನು ಕತ್ತರಿಸಲು ೩ ದಿನಗಳಿಂದ ೩ ವಾರಗಳ ಕಾಲ ತಗಲಬಹುದು. ಅನಂತರ ಅದನ್ನು ಗ್ರಾಮಫೋನಿನ ತಿರುಗುವ ತಟ್ಟೆಯಂತಹ ಸಾಧನವೊಂದರ ಮೇಲೆ ನಿರೀಕ್ಷಿತ ಪ್ರಭೆಯು ಬರುವವರೆಗೂ ಇಡಲಾಗುವುದು. ನೆದರ್‌ಲೇಂಡ್ಸಿನ ಕೆಲವರಿಗೆ ಈ ವಜ್ರದ ಕೆಲಸ ವಂಶ ಪಾರಂಪರ್ಯವಾಗಿ ಬಂದಿದೆ. ಸಾಮಾನ್ಯವಾಗಿ ೧೫ನೆಯ ವಯಸ್ಸಿನಲ್ಲಿಯೇ ಹುಡುಗರು ಈ ವೃತ್ತಿಯಲ್ಲಿ ತೊಡಗುತ್ತಾರೆ.

ವಜ್ರಕ್ಕೆ ಎಷ್ಟು ಮುಖಗಳಿವೆ ಎಂದು ಎಲ್ಲರೂ ಸಾಮಾನ್ಯವಾಗಿ ಕೇಳುವ ಪ್ರಶ್ನೆ. ಸಾಮಾನ್ಯ ತರದ ವಜ್ರಕ್ಕೆ ೧೭ ಮುಖಗಳಿವೆ. ಇನ್ನು ಉತ್ಕೃಷ್ಟವಾದುದಕ್ಕೆ ೫೮ ಮುಖಗಳೂ ಇವೆ. ಒಂದು ಚಿಕ್ಕ ಕಲ್ಲಿನ ಹರಳು—ಅದಕ್ಕೆ ೫೮ ಮುಖಗಳು ಜತೆಗೆ ಸೂರ್ಯನನ್ನೂ ಬಾಡಿಸುವ ಪ್ರಕಾಶ! ಈ ಗುಣಗಳಿಂದಲೇ ಆ ಇದ್ದಲು ತುಂಡಿನ ಬೆಲೆ ಲಕ್ಷಾಂತರ ಪಟ್ಟು ಏರಿದೆ!



ಹಿಮಾಚ್ಛಾದಿತ ಮಾರ್ಗದಲ್ಲಿ ಕೆಚ್ಚಿನಿಂದ ಭಾರತೀಯ ಜವಾನರು ಜೀಪೊಂದನ್ನು ಮುನ್ನಡೆಸುತ್ತ ಧಾವಿಸುತ್ತಿರುವ ರೋಮಾಂಚಕ ಸನ್ನಿವೇಶ.

“ನಚಿಕೇತ”ರ
ಇನ್ನೊಂದು ನವೀನ ಕಾದಂಬರಿ—
**ಋಣ ಯಾತ್ರೆ**
ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
**ಭಾವಾರ್ಚನೆ**
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

**NAVAYUGA**
Kannada Weekly
UDIPI
*Founder:*
**Late Sri A. B. Shetty**
Former Minister for Public
Health, Govt. of Madras
& Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೨-೫-೧೯೬೩ | ೩೪ |

## ಖಡ್ಡಾಯ ಠೇವಣಿ ವಿಧೇಯಕದ ನ್ಯಾಯಬದ್ಧತೆ

ಖಡ್ಡಾಯ ಠೇವಣಿ ವಿಧೇಯಕದ ನ್ಯಾಯಬದ್ಧತೆಯನ್ನು ಪ್ರಶ್ನಿಸಿದಾಗ ಲೋಕಸಭೆಯಲ್ಲಿ ಅರ್ಥ ಮಂತ್ರಿ ಮುರಾರ್ಜಿ ದೇಸಾಯಿಯವರು ಅನುಸರಿಸಿದ ಧೋರಣೆಯು ಹೆಚ್ಚಿನ ಲೋಕಸಭಾ ಸದಸ್ಯರಿಗೆ ಮಾತ್ರವಲ್ಲ, ಅಧ್ಯಕ್ಷ ಸರ್ದಾರ ಹುಕುಂ ಸಿಂಗರಿಗೂ ಅಸಮಾಧಾನ ಉಂಟುಮಾಡಿತು. ಮೊದಲು ಈ ಸಂಬಂಧದಲ್ಲಿ ಕಾಂಗ್ರೆಸ್ ಸದಸ್ಯ ಅಜಿತ ಪ್ರಸಾದ ಜೈನರು ಮಂಡಿಸಿದ ನಿಲುವಳಿ ಸೂಚನೆಯು ಬಿದ್ದು ಹೋಯಿತಾದರೂ ಹಿಂದಿನಿಂದ ಸೂಚನೆಯನ್ನು ಸರಕಾರವು ಒಪ್ಪಿಕೊಳ್ಳುವಂತಾದ ವಿಲಕ್ಷಣ ಪ್ರಸಂಗ ಭಾರತೀಯ ಲೋಕಸಭೆಗೇನೇ ಹೊಸತೆನ್ನಬೇಕು. ಖಡ್ಡಾಯ ಠೇವಣಿ ವಿಧೇಯಕವು ಸಂವಿಧಾನಾತ್ಮಕವಾಗಿದೆಯೋ ಇಲ್ಲವೋ ಎಂಬುದನ್ನು ಸಭೆಗೆ ತಿಳಿಸಲು ಅಟರ್ನಿ ಜನರಲ್ಲರನ್ನು ಕರೆಯಬೇಕು ಎಂದು ಸದಸ್ಯರು ಬಯಸಿದರು ಮಾತ್ರವಲ್ಲ, ಈ ವಿಷಯದಲ್ಲಿ ಸರ್ವಸಾಮಾನ್ಯವಾಗಿ ಎಲ್ಲರಲ್ಲಿಯೂ ಒಮ್ಮತ ಕಂಡುಬಂತು. ಆಗ, ಮುರಾರ್ಜಿ ದೇಸಾಯಿಯವರು, 'ಇದನ್ನು ಪಾರ್ಲಿಮೆಂಟು ಈ ಮೊದಲೇ ಒಪ್ಪಿಯಾಗಿದೆ. ಈಗ ಅಟರ್ನಿ ಜನರಲ್ಲರನ್ನು ಸಭೆಗೆ ಕರೆತರಲಾಗುವುದಿಲ್ಲ' ಎಂದ ಉದ್ಗಾರ ನ್ಯಾಯದೃಷ್ಟಿಯಿಂದ ವಿಮರ್ಶಿಸಿದರೂ ಅದು ಉದ್ಧಟತನದ್ದೆಂದು ಹೇಳಬೇಕಾಗುತ್ತದೆ. ಇದಕ್ಕೆ ಉತ್ತರರೂಪವಾಗಿ ಅಧ್ಯಕ್ಷರು ತಮ್ಮ ಬೇಡಿಕೆಯನ್ನು ಸರಕಾರವು ಮಾನ್ಯ ಮಾಡದೆ ಹೋದರೆ, ಸದಸ್ಯರು ಒಮ್ಮತದಿಂದ ಅಂತಹ ಸರಕಾರವನ್ನು ಕಿತ್ತುಹಾಕಬಹುದು' ಎಂದುದರಿಂದ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಲೋಕಸಭೆಗೆ ಜವಾಬ್ದಾರವಾದ ಕೇಂದ್ರ ಸರಕಾರವು ಅದರ ಬಯಕೆಯನ್ನು ಪೂರೈಸುವುದು ನ್ಯಾಯವೆಂದು ಸಿಂಗರ ಅಭಿಪ್ರಾಯವಿದ್ದಂತಿದೆ.

ಮುರಾರ್ಜಿ ದೇಸಾಯಿಯವರು ಇಲ್ಲಿ ಕಾನೂನು ರೀತ್ಯಾ ತಪ್ಪಿ ನಡೆದಿಲ್ಲವೆನ್ನಬೇಕು. ಏಕೆಂದರೆ ಅಟರ್ನಿ ಜನರಲ್ಲರು ಸರಕಾರದ ಓರ್ವ ಅಧಿಕಾರಿ. ಸರಕಾರವು ಆತನಿಂದ ಸಲಹೆಯನ್ನು ಕೇಳಿದರೆ, ಆಗ ತಿಳಿಸುವುದು ಆತನ ಕರ್ತವ್ಯ. ಲೋಕಸಭೆಗೆ ಯಾವುದೇ ವಿಧೇಯಕದ ನ್ಯಾಯಬದ್ಧತೆಯನ್ನು ಮುಂದಿಟ್ಟು ಮಾಡುವಂತೆ ಸರಕಾರವು ಬಯಸಿದರೆ ಮಾತ್ರ ಆತನು ಲೋಕಸಭೆಯನ್ನು ಉದ್ದೇಶಿಸಿ ಮಾತನಾಡಬಹುದು. ಪಾರ್ಲಿಮೆಂಟು ಆತನ ಅಭಿಪ್ರಾಯವನ್ನು ತಿಳಿಯಬೇಕೆಂದು ಬಯಸಿದರೂ ಸರಕಾರವು ಅದನ್ನು ಮಾನ್ಯಮಾಡಿದರೆ ಮಾತ್ರ ಆತನನ್ನು ಕರೆಯಬಹುದಾಗುತ್ತದೆ. ಖಡ್ಡಾಯ ಠೇವಣಿಯು ಸಂವಿಧಾನಕ್ಕೆ ವಿರೋಧಿಯಲ್ಲವೆಂದು ಸರಕಾರಕ್ಕೆ ಪೂರ್ಣ ವಿಶ್ವಾಸವಿರುವುದರಿಂದ, ಸದಸ್ಯರ ಅಭಿಪ್ರಾಯವನ್ನು ದೇಸಾಯಿಯವರು ಒಪ್ಪಿಕೊಳ್ಳಲಿಲ್ಲ. ಆದರೆ, ನಿರಾಕರಣೆಗಾಗಿ ಅವರು ಉಪಯೋಗಿಸಿದ ಶಬ್ದಗಳು ಮಾತ್ರ ಬಹಳ ಕರ್ಕಶವಾಗಿದ್ದುವು.

ಕಾನೂನು ಏನನ್ನೇ ಹೇಳಲಿ, ಸರಕಾರವು ಲೋಕಸಭೆಗೆ ಉತ್ತರದಾಯಿಯೆಂಬುದನ್ನು ಒಪ್ಪಲೇಬೇಕಾಗುತ್ತದೆ. ಸದಸ್ಯರೆಲ್ಲರೂ ಬಹುಮತದಿಂದ ಅಟರ್ನಿ ಜನರಲ್ಲರನ್ನು ಕರೆತರಬೇಕು ಎಂಬ ಅಭಿಪ್ರಾಯವನ್ನು ಪ್ರಕಟಿಸಿದರೆ (ಮುರಾರ್ಜಿ ದೇಸಾಯಿಯವರ ಇಂತಹ ಅಭಿಪ್ರಾಯವೂ ಪಾರ್ಲಿಮೆಂಟಿನ ಅಧಿಕಾರಕ್ಕೆ ಹೊರತಾದುದು.) ಸರಕಾರವೇ ಅದನ್ನು ಮನ್ನಿಸುವುದು ಕ್ರಮ ಪ್ರಾಪ್ತ. ಹಿಂದೊಮ್ಮೆ ಸರ್ದಾರ ಪಟೇಲರು ಗೃಹ ಮಂತ್ರಿಯಾಗಿದ್ದಾಗ ಸ್ಥಾನಬದ್ಧತೆ ವಿಧೇಯಕದ ಕುರಿತು ಸ್ಪಷ್ಟೀಕರಣ ನೀಡಲು ಅಟರ್ನಿ ಜನರಲ್ಲರನ್ನು ಕರೆಸಿದ್ದನ್ನು ನೆನಪಿಸಿಕೊಳ್ಳಬಹುದು. ಸದಸ್ಯರು ತಮ್ಮ ಬಯಕೆಯನ್ನು ಕಾನೂನು ರೀತ್ಯಾ ಪ್ರಕಟಿಸಲು ಅನಧಿಕಾರಿಗಳಾದರೂ ಜನಪ್ರತಿನಿಧಿಗಳಾಗಿ ಹಾಗೆ ಬೇಡುವುದು ತಪ್ಪಾಗಲಾರದು. ಜಾಣ ಸರಕಾರ ಸದಸ್ಯರ ಬಲವತ್ತರವೆಂದು ಮನಗಂಡು ತಾನೇ ಅದನ್ನು ನೆರವೇರಿಸಿ ಕೊಡುವುದು ಸರಿಯಾದ ಸಂಪ್ರದಾಯ. ಏಕೆಂದರೆ, ಸದಸ್ಯರಿಗೆ ಕೇಳಲು ಅಧಿಕಾರವಿಲ್ಲವೆಂದು ಬಹು ಸದಸ್ಯರ ಕೇಳಿಕೆಯನ್ನು ತಿರಸ್ಕರಿಸಿದರೆ, ಅವರೆಲ್ಲರಲ್ಲೂ ಸರಕಾರದ ಬಗ್ಗೆ ಇದ್ದಿರಬಹುದಾದ ಸದ್ಭಾವನೆ ನಷ್ಟವಾಗುವುದು; ಮತ್ತು ಇದರ ಪರಿಣಾಮ ಒಂದಲ್ಲ ಒಂದು ದಿನ ಅವಶ್ಯ ಸರಕಾರದ ಮೇಲಾಗುವುದು. ಇಂತಹ ದುರ್ಧರ ಪ್ರಸಂಗದಿಂದ ಸರಕಾರಕ್ಕೆ ನೆಮ್ಮದಿಯಿರಲಾರದು.

ಅಜಿತ ಪ್ರಸಾದ ಜೈನರು 'ಲೋಕಸಭೆಗೆ ಅಟರ್ನಿ ಜನರಲ್ಲರ ಅಭಿಪ್ರಾಯವೇನೆಂದು ತಿಳಿಯ ಬಯಸುತ್ತದೆ' ಎಂಬ ಒಂದು ನಿಲುವಳಿ ಸೂಚನೆಯನ್ನು ತಂದಾಗ, ದೇಸಾಯಿಯವರದನ್ನು ಅನಧಿಕಾರ ಪ್ರವೇಶವೆಂದು ಪ್ರತಿಭಟಿಸಿದರೂ ಅಧ್ಯಕ್ಷರು ಸೂಚನೆಗೆ ಅನುಮತಿಯಿತ್ತರು. ಅನಿವಾರ್ಯವಾಗಿ ಜೈನರು ಈ ವಿಧಾನವನ್ನು ಅನುಸರಿಸಬೇಕಾಗಿದ್ದರೂ ಮತದಾನದ ವೇಳೆ ಕೊನೆಯ ಗಳಿಗೆಯ ಪ್ರಯತ್ನ ಮತ್ತು ಎಲ್ಲ ಮಂತ್ರಿಗಳ ಉಗ್ರ ಸ್ಥಿತಿಗಳಿಂದಾಗಿ ಅವರು ಸೋತರು. ಆದರೆ, ಜೈನರು ಸರಕಾರದ ಸೋಲನ್ನು ಉಂಡರು. ಒಂದು ವೇಳೆ, ಜೈನರು ಗೆಲ್ಲುತ್ತಿದ್ದರೆ, ಸರಕಾರದ ಮುಖಭಂಗವಾಗುತ್ತಿತ್ತು. ಅಂತೂ ಮುರಾರ್ಜಿ ದೇಸಾಯಿಯವರ ದಿಟ್ಟತನದಿಂದ ಕಾಂಗ್ರೆಸ್ಸಿನಲ್ಲಿಯೂ ಬಿಕ್ಕಟ್ಟು ಮೂಡುವಂತಾಯಿತು; ಅಧ್ಯಕ್ಷರಿಂದಲೂ ಛೀಮಾರಿ ಹಾಕಿಸಿಕೊಳ್ಳುವಂತಾಯಿತು. ಇದನ್ನೆಲ್ಲಾ ಪರಿಶೀಲಿಸಿದ ಬಳಿಕ ಪ್ರಧಾನಿ ನೆಹರು ಅಟರ್ನಿ ಜನರಲ್ಲರನ್ನು ಲೋಕಸಭೆಗೆ ಕರೆತರಲು ನಿರ್ಧರಿಸಿದರು; ಅವರು ಸದಸ್ಯರ ಮುಂದೆ ವಿಧೇಯಕ ಕ್ರಮಬದ್ಧವೆಂದು ಹೇಳಿಯೂ ಆಯಿತು. ಆದರೆ, ಸರಕಾರದ ಸೂತ್ರಧಾರರೆನಿಸಿದವರು ಸರ್ವಾಧಿಕಾರಿ ಮನೋವೃತ್ತಿಯನ್ನು ಬಿಟ್ಟುಕೊಟ್ಟರೆ, ತನ್ನದರಂತೆಯೇ ಅನ್ಯರ ಅಭಿಪ್ರಾಯಗಳನ್ನು ಮನ್ನಿಸುವಷ್ಟು ಉದಾರತೆಯನ್ನು ತೋರಿಸಿದರೆ, ಇಂತಹ ಅನಪೇಕ್ಷಿತ ಕಹಿ ಪ್ರಸಂಗಗಳು ನಡೆಯಲಾರವು, ಬಿಕ್ಕಟ್ಟು ತಲೆದೋರಲಾರದು. ರಾಷ್ಟ್ರೀಯ ಐಕ್ಯಗಾನ ಹಾಡುವ ನಾವು ಇಂತಹ ಕ್ಷುಲ್ಲಕ ಒಡಕುಗಳಿಗೆ ಆಸ್ಪದ ಕೊಡುವುದರಿಂದ ರಾಷ್ಟ್ರ ಕಲ್ಯಾಣವಾಗಲಾರದು. ಕಲ್ಯಾಣ ರಾಷ್ಟ್ರ ಕಟ್ಟುವ ಯಾಚಕರು ಇದಕ್ಕೆಡೆಯೀಯಬಾರದು.

ಭಾರತದ ಅಭಿವೃದ್ಧಿ ಯೋಜನೆಗಳಿಗೆ ಮತ್ತು ಸಂರಕ್ಷಣಾ ವ್ಯವಸ್ಥೆಗಳಿಗಾಗಿ ವಿದೇಶೀಯ ಸಹಾಯವನ್ನು ಎದುರು ನೋಡುತ್ತಿರುವಾಗ ಪಾಶ್ಚಾತ್ಯ ರಾಷ್ಟ್ರಗಳು ಈ ದಿಸೆಯಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸದೆ ಇರುವುದರಿಂದ ಭಾರತೀಯರಲ್ಲಿ ತುಸು ನಿರಾಶೆಯು ಮೂಡುವಂತಾಗಿದೆ. ನಮ್ಮ ಆರ್ಥಿಕ ವ ಸ್ತು ಸಂರಕ್ಷಣಾ ಸಂಯೋಜನಾ ಖಾತೆಯ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಈ ಸಂಬಂಧದಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡುಗಳಿಗೆ ಸಂದರ್ಶಿಸಿ ಅಲ್ಲಿ ಆಶಾದಾಯಕ ಪರಿಣಾಮವನ್ನು ನಿರೀಕ್ಷಿಸಿದ್ದಾರೆ. ಅವರು ಇಷ್ಟರಲ್ಲಿಯೇ ಪಾಶ್ಚಾತ್ಯ ರಾಷ್ಟ್ರಗಳಿಗೂ ಭೇಟಿ ಕೊಡಲಿದ್ದಾರೆ. ಆದರೆ, ಉಂಟಾದ 'ಗೊಂದಲಮಯ ಪರಿಸ್ಥಿತಿ'ಯಿಂದಾಗಿ ಅವರ ಭೇಟಿಯು ಸಂದೇಹಾಸ್ಪದವಾಗಿಯೇ ಉಳಿಯುವಂತಿದೆ. ಒಡಿಸ್ಸಾದ ಮುಖ್ಯ ಮಂತ್ರಿ ಶ್ರೀ ಬಿಜು ಪಟ್ನಾಯಕರು ಅಮೆರಿಕೆಯಲ್ಲಿ ಸಂರಕ್ಷಣಾ ಸಹಾಯವನ್ನು ಪಡೆಯುವ ಪ್ರಯತ್ನ ನಡೆಸಿದ್ದಾರೆ. ಆ ಮೇಲೆ ಟಿ! ಜೆ! ಮೋತಿ ಸಾಗರರು ನೇತೃತ್ವದಲ್ಲಿ ಭಾರತೀಯ ಸಂರಕ್ಷಣಾ ತಜ್ಞರ ಸಮಿತಿಯೊಂದು ನ್ಯೂಯಾರ್ಕನ್ನು ಸಂದರ್ಶಿಸಿ ಈಗ ಲಂಡನ್ನಿಗೆ ಬಂದಿದೆ. ಭಾರತದ ಸಂರಕ್ಷಣೆಯ ಆವಶ್ಯಕತೆಗಳ ಸಂಪೂರ್ಣ ಯಾದಿಯೊಂದು ಈ ನಿಯೋಗದೊಡನಿದೆಯೆಂದು ತಿಳಿಯುತ್ತದೆ. ಟಿ. ಟಿ. ಕೆ.ಯವರ ಭೇಟಿಗೆ ಪೂರ್ವಭಾವಿಯಾಗಿ ನಡೆದ ಈ ಮಾತುಕತೆಗಳು ಮುಖ್ಯವಾಯಿತೆಂದರೆ, ಈ ಸಂಬಂಧದಲ್ಲಿ ಅಂತಿಮ ನಿರ್ಧಾರಕ್ಕೆ ಬರಲು ಅವರ ಸಂದರ್ಶನ ಕಾರಣವಾಗುತ್ತಿತ್ತು. ಆದರೆ, 'ವಾಯುರಕ್ಷಣಾ ಸೈನಿಕ ಸಹಾಯ'ದ ಕುರಿತು ಬ್ರಿಟನ್ ಮತ್ತು ಭಾರತಗಳ ನಡುವೆ ತೀವ್ರ ಭಿನ್ನಾಭಿಪ್ರಾಯವೆದ್ದಿರುವುದೀಗ ಬೆಳಕಿಗೆ ಬಂದಿದೆ. ಅಮೆರಿಕೆಯಿಂದ ನಿರೀಕ್ಷಿತವಾಗಿದ್ದ ಬ್ಯುರೋ ಉಕ್ಕಿನ ಕಾರಖಾನೆಯ ರಚನೆಯ ಬಗ್ಗೆ ಸಹಾಯವನ್ನು ನೀಡುವ ವಿಚಾರವನ್ನು ಪರಿಶೀಲನಾ ತಂಡವು ಅನಿರ್ದಿಷ್ಟ ಅವಧಿಯ ವರೆಗೆ ಮುಂದೂಡುವಂತೆ ಸಲಹೆ ಮಾಡಿದೆ. ಇವೆಲ್ಲ ನಿಕ್ಕಿಯಾದ ತಗಳಿಗೆ ಮುಖ್ಯ ಕಾರಣವಾವುದು? ಪ್ರಾಯಃ ಕಾಶ್ಮೀರ ಸಂಬಂಧವಲ್ಲಿ ಭಾರತ-ಪಾಕ್ ಮಾತುಕತೆಗಳಲ್ಲಿ ಯಾವ ಪ್ರಗತಿಯೂ ನಡೆಯದುದೇ ಇರಬಹುದೆ? ಅಥವಾ ಚೀನೀಯ ಮರುಧಾಳಿಯು ಸದ್ಯದಲ್ಲಿ ನಡೆಯಲಾರದು ಎಂಬ ವಿಶ್ವಾಸ ಇರಬಹುದೆ? ಇತ್ತಗಳಲ್ಲಿ ಮೊದಲನೆಯದೇ ಹೆಚ್ಚು ನಿರ್ಣಯಕವಿರಬೇಕು. ತಾವು ನೀಡುವ ಸಹಾಯವನ್ನು ಕಾಶ್ಮೀರ ಪ್ರಶ್ನೆಯನ್ನು ಒಂದೇ ಗಂಟಿನಲ್ಲಿ ಕಟ್ಟುವುದಿಲ್ಲವೆಂದು ಅಮೆರಿಕೆಯೇನೋ ಆಶ್ವಾಸನೆ ನೀಡಿದೆ. ಆದರೂ ಪಾಕಿಸ್ತಾನದ ತೀವ್ರ ಪ್ರತಿಭಟನೆಯನ್ನು ಅನುಲಕ್ಷಿಸಿ ಅವು ಭಾರತವನ್ನು ಸೈನಿಕ ಒಡಂಬಡಿಕೆಯಲ್ಲಿ ಸೇರಿಕೊಳ್ಳುವಂತೆ ಪರೋಕ್ಷ ಒತ್ತಾಯ ಹೇರುತ್ತಿರುವವೆ? ಪ್ರಧಾನಿ ನೆಹರು ಈ 'ಗೊಂದಲಮಯ ಪರಿಸ್ಥಿತಿ'ಯನ್ನು ಕೆಚ್ಚೆದೆಯಿಂದ ಎದುರಿಸಬಲ್ಲರು; ಆದರೂ ಅವರು ಇದಕ್ಕಾಗಿ ಸಮಸ್ತ ಭಾರತೀಯರ ಸಂಪೂರ್ಣ ಸಹಕಾರವನ್ನು ಬಯಸುತ್ತಾರೆ; ಅದನ್ನು ನೀಡುವುದು ನಮಗೇ ನಾವಿತ್ತ ಬೆಂಬಲವೆಂಬುದನ್ನು ಮರೆಯಬಾರದು.

## ವಿದ್ಯಾವರ್ಧಕ ಸಂಘ (ರಿ), ಶಿರ್ವ, ದ.ಕ.

### ಮಹಾಸಭೆಯ ನೋಟೀಸು

ಮೇಲಿನ ಸಂಘದ ಮಹಾ ಸಭೆಯು ತಾ. 5—5—1963ನೇ ಆದಿತ್ಯವಾರ ಅಪರಾಹ್ನ ಘಂಟೆ 3-30ಕ್ಕೆ ಶ್ರೀ ಕೆ. ಶಿವಾಜಿ ಶೆಟ್ಟಿ, B. A., LL. B., ಎಡ್ವೊಕೇಟ್, ಉಡುಪಿ, ಇವರ ಅಧ್ಯಕ್ಷತೆಯಲ್ಲಿ ಶಿರ್ವ ಹಿಂದೂ ಹಾ. ಯರ್ ಎಲಿಮೆಂಟರಿ ಶಾಲಾ ವಿತ್ಯಾನಂದ ಸದನದಲ್ಲಿ ಜರಗಲಿರುವುದು ಸದಸ್ಯರು ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು:

1. ತಾ. 8 7 1962ರಂದು ಜರಗಿದ ಮಹಾಸಭೆಯಲ್ಲಿ ಮಂಜೂರಾದ 1ನೆ ಮತ್ತು 2ನೆ ಠರಾವುಗಳ ಪುನರ್ವಿಮರ್ಶೆ.
2. ಲೆಕ್ಕ ಪತ್ರಗಳ ಮಂಜೂರಾತಿ.
3. ಹೊಸ ಕಾರ್ಯಕಾರಿ ಮಂಡಳಿಯ ಆಯ್ಕೆ
4. ಇತರ ವಿಷಯಗಳು.

**ಕೆ. ವಾಸುದೇವ ಶೆಟ್ಟಿ ನಾಗಪ್ಪ ಶೆಟ್ಟಿ**
ಕಾರ್ಯದರ್ಶಿ ಅಧ್ಯಕ್ಷ

ಶಿರ್ವ, ದ. ಕ. ತಾ. 11-4-1963.

### ಕಾರ್ಕಳ ಡಿ ಮು ಕೋರ್ಟಿನಲ್ಲಿ

### O S No. 697/1962.

M. ವೆಂಕಟೇಶ ಪೈ —ವಾದಿ.

1. ರುಕ್ಕಯ್ಯ ಪೂಜಾರಿ, ಲಿಂಗು ಹೆಂಗ್ಸಿನ ಮಗ, 2. ಚಂದ್ರು ಪೂಜಾರ್ತಿ, ರುಕ್ಕಯ್ಯ ಪೂಜಾರಿ ಹೆಂಡ್ತಿ, ಕಾರ್ಕಳ ತಾಲ್ಲೂಕು ಮುಡುಕೋಣಜೆ ಗ್ರಾಮದಲ್ಲಿರುವವರು.

—ಪ್ರತಿವಾದಿಯರು.

ಸದ್ರಿ ಪ್ರತಿವಾದಿಯರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ನೀವು ವಾದಿಯವರಿಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿಯ ಬಾಬ್ತು ನಿಮ್ಮಿಂದ ವಾದಿಗೆ ಬರತಕ್ಕ ಚಾಲಗೇಣಿ ಬದ್ಧಿ ಕೂಡಾ ರೂ. 713—21ನ್ನು ಬರಮಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 1 6-63ಕ್ಕೆ ನಿಮಗೆ ಅಖೈರ ನೋಟೀಸಿನ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

**K. V. Kamath,**
Advocate for Plaintiff.

ಕಾರ್ಕಳ, 29-4-63.

### ಡಾ| ನಾರಾಯಣ ಶೆಟ್ಟರ ನಿಧನ.

ಕೋಟದ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ 32 ವರ್ಷ ಜನಪ್ರಿಯ ಡಾಕ್ಟರಾಗಿದ್ದು ನಿವೃತ್ತರಾಗಿದ್ದ ಡಾ| ಎನ್. ನಾರಾಯಣ ಶೆಟ್ಟರು, ತಾ. 24-4-63ರಂದು, ಕಡ್ರಿಯ ತಮ್ಮ ಸ್ವಂತ ಮನೆಯಲ್ಲಿ 60ನೇ ಪ್ರಾಯದಲ್ಲಿ ಸ್ವರ್ಗಸ್ಥರಾದುದು ವಿಷಾದಕರ. ದಿವಂಗತರು ಸರಳ ಸ್ವಭಾವದವರೂ, ಸೇವಾಪ್ರಿಯರೂ ಆಗಿದ್ದರು.

## ಅಲ್ಲಲ್ಲಿಯ ಸುದ್ದಿ ಸಾರ

**ಮತದಾರ ಪಟ್ಟಿಗಳ ಪೂರ್ವ ಪ್ರಕಟಣೆ:**— ಕುಂದಾಪುರ, ಬೈಂದೂರು, ಬ್ರಹ್ಮಾವರ, ಕಾಪು ಮತ್ತು ಉಡುಪಿ ಮತದಾರ ಕ್ಷೇತ್ರಗಳಿಗೆ ಸಂಬಂಧಪಟ್ಟ 1963ರ ಮತದಾರರ ಪಟ್ಟಿಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಇಷ್ಟರಲ್ಲಿಯೇ ಪ್ರಕಟಿಸಲಾಗಿದೆ

ಕುಂದಾಪುರ ಮತದಾರ ಕ್ಷೇತ್ರದ ಪಟ್ಟಿ ಕುಂದಾಪುರ ಅಸಿ ಕಮಿಶನರ್‌ರವರ ಕಚೇರಿಯಲ್ಲಿ ಮತ್ತು ಕುಂದಾಪುರ ತಾಲೂಕು ಕಚೇರಿಯಲ್ಲಿ ಬೈಂದೂರು ಕ್ಷೇತ್ರದ ಪಟ್ಟಿ ಬೈಂದೂರು ಸಬ್ ರಿಜಿಸ್ಟ್ರಾರರ ಕಚೇರಿಯಲ್ಲಿ, ಬ್ರಹ್ಮಾವರ ಕ್ಷೇತ್ರದ ಪಟ್ಟಿ ಬ್ರಹ್ಮಾವರ ಸಬ್ ರಿಜಿಸ್ಟ್ರಾರರ ಕಚೇರಿಯಲ್ಲಿ ಉಡುಪಿ ಕ್ಷೇತ್ರದ ಪಟ್ಟಿಯು ತಾಲೂಕು ಆಫೀಸಿನಲ್ಲಿ, ಕಾಪು ಕ್ಷೇತ್ರದ ಪಟ್ಟಿ ಕಾಪು ಡೆಪ್ಯುಟಿ ಬ್ಲೋಕ್ ಡೆವೆಲಪ್‌ಮೆಂಟ್ ಆಫೀಸಿನಲ್ಲಿ, ಸಾರ್ವಜನಿಕರಿಗೆ ಪರಿಶೀಲನೆ ಬಗ್ಗೆ ದೊರೆಯುವುವು ಅಲ್ಲದೆ ಆಯಾ ಗ್ರಾಮಗಳಿಗೆ ಸಂಬಂಧಿಸಿದ ಪಟ್ಟಿಯ ವಿಭಾಗಗಳು ಸಂಬಂಧಪಟ್ಟ ಪಂಚಾಯತ್ ಕಚೇರಿಗಳಲ್ಲಿಯೂ, ಉಡುಪಿ ನಗರ ಸಭಾ ಕ್ಷೇತ್ರದ ಪಟ್ಟಿಯು ಮುನ್ಸಿಪಲ್ ಆಫೀಸಿನಲ್ಲಿಯೂ ನೋಡ ಸಿಗುವವು

ಈ ಪಟ್ಟಿಯ ಬಗ್ಗೆ ಏನಾದರೂ ಆಕ್ಷೇಪಗಳಿದ್ದಲ್ಲಿ, ಅಥವಾ ಹೊಸ ಹೆಸರುಗಳನ್ನು ಸೇರಿಸಬೇಕಾದಲ್ಲಿ ಸಂಬಂಧಪಟ್ಟ ಫಾರ್ಮುಗಳಲ್ಲಿ ತಮ್ಮ ಅರ್ಜಿಗಳನ್ನು ತಾ 15–5–63ರ ವೊದಲು ಅಸಿ ಕಮಿಶನರ್, ತಹಸಿಲ್ದಾರರ ಹಾಗೂ ಸಂಬಂಧಪಟ್ಟ ರೆವಿನ್ಯೂ ಇನ್ಸ್‌ಪೆಕ್ಟರರ ಮುಂದೆ ದಾಖಲು ಮಾಡಬೇಕಾಗಿದೆ.

**ಪಾಂಡ್ಯನ್ ಬ್ಯಾಂಕ್ ಕೆನರಾ ಬ್ಯಾಂಕಿನೊಂದಿಗೆ ಸೇರ್ಪಡೆ**— ಪಾಂಡ್ಯನ್ ಬ್ಯಾಂಕಿನ ಬ್ಯಾಂಕಿಂಗ್ ವ್ಯವಹಾರಗಳನ್ನು ಕೆನರಾ ಬ್ಯಾಂಕಿಗೆ ಹಸ್ತಾಂತರಿಸುವ ಪ್ರಶ್ನೆಯ ಕುರಿತು ಉಭಯ ಬ್ಯಾಂಕುಗಳ ಆಡಳಿತ ದ್ಯಾರೆಕ್ಟರೊಳಗೆ ಮಾತುಕತೆಯು ನಡೆಯುತ್ತಿದ್ದು ಇದೀಗ ಕೊನೆಯ ಹಂತಕ್ಕೆ ಬಂದಿದೆ

ಪಾಂಡ್ಯನ್ ಬ್ಯಾಂಕಿನ ಠೇವಣಿಗಾರರಿಗೆ ಮತ್ತು ಇತರ ಗ್ರಾಹಕರಿಗೆ ಕೆನರಾ ಬ್ಯಾಂಕಿನ ಅಧಿಕ ಅನುಕೂಲತೆಗಳ ಮತ್ತು ಸಂಪನ್ಮೂಲಗಳ ಪ್ರಯೋಜನ ದೊರಕುವುದು ಮತ್ತು ಬ್ಯಾಂಕಿನ ದೈನಂದಿನ ಕಾರ್ಯಕಲಾಪದಲ್ಲಿ ಯಾವದೇ ಅತಂಕವಾಗಲಾರದೆಂದು ಹೇಳುವುದು ಅನಗತ್ಯ

ಪಾಂಡ್ಯನ್ ಬ್ಯಾಂಕಿನ ಪಾಲುದಾರರಿಗೆ ವಿದ್ಯಮಾನವನ್ನು ತಿಳಿಸುತ್ತಿರಲಾಗುವುದು ಈ ವ್ಯವಸ್ಥೆಯು ಪ್ರಯೋಜಕವೆನಿಸಲಸಾಧ್ಯವೆಂದು, ಮುಂದಿನ ಸೂಚನೆಯ ವರೆಗೆ ತಮ್ಮ ಹೋಲ್ಡಿಂಗ್ಸನ್ನು ತಮ್ಮಲ್ಲೇ ಇರಿಸಿಕೊಳ್ಳಬೇಕಾಗಿ ಸಲಹೆ ಮಾಡಲಾಗಿದೆ.

**ಶಾಲೆಗಳ ವಾರ್ಷಿಕೋತ್ಸವ**—

ತಾ. 23–4 63ರಂದು ಹೆಬ್ರಿಯ ಸಮೀಪವಿರುವ ಕನ್ಯಾನ ಮತ್ತು ಚಾರ ಬೋರ್ಡ್ ಎಲಿಮೆಂಟರಿ ಶಾಲೆಗಳ ವಾರ್ಷಿಕೋತ್ಸವವು ಸಂಯುಕ್ತವಾಗಿ, ಶ್ರೀ ಎಸ. ಧರ್ಮಸಾಮ್ರಾಜ್ಯ ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು

ಶ್ರೀ ಕೊರಗ ಶೆಟ್ಟಿಯವರು ಸ್ವಾಗತಿಸಿ, ಅತಿಥಿಗಳ ಪರಿಚಯ ಮಾಡಿದರು ಶಾಲೆಯ ವರದಿಗಳನ್ನು ಆಯಾಯ ಮುಖ್ಯೋಪಾಧ್ಯಾಯರುಗಳು ಓದಿದರು ಡಾ ಯು ಕೃಷ್ಣನವರು ಭಾಷಣ ಮಾಡಿದ ಬಳಿಕ ಶ್ರೀ ಎಸ್. ಡಿ. ಸಾಮ್ರಾಜ್ಯರವರು ಮಾತಾಡುತ್ತಾ ಇಂದಿನ ಮಕ್ಕಳೇ ಮುಂದಿನ ಜನಾಂಗವಾದುದರಿಂದ, ಅವರ ಏಳಿಗೆಗಾಗಿ ಎಲ್ಲರೂ ಪ್ರಯತ್ನಿಸಬೇಕು ಸರಕಾರವು ಶಿಕ್ಷಣ ತರಬೇತಿಯನ್ನು ಒದಗಿಸಿದ ಹಾಗೇ ಮನೆಯಲ್ಲಿ ಮಕ್ಕಳಿಗೆ ಯೋಗ್ಯ ತರಬೇತಿ ದೊರೆಯಬೇಕು ಎಂಬಿತ್ಯಾದಿಯಾಗಿ ಹೇಳಿದರು ಅಂತ್ಯದಲ್ಲಿ ವಿವಿಧ ವಿನೋದಾವಳಿಗಳಾದುವು

**ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ**— ತಾ 27ರಂದು ಹಂಗಾರಕಟ್ಟೆ ಹೈಯ್ಯರ ಪ್ರಾಥಮಿಕ ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಶ್ರೀ ಎನ್. ಎಸ್ ಪರಮೇಶ್ವರ ಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಆರಂಭದಲ್ಲಿ ಶ್ರೀ ಪಿ ಆನಂದ ಕುಂದ ಹೆಗ್ಡೆಯವರು ಸ್ವಾಗತಿಸಿದರು ಮಾಜಿ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಸುಬ್ಬಣ್ಣ ಶೆಟ್ಟರು ಸ್ವಸ್ತಿವಾಚನ ಗೈದರು. ಕಾರ್ಯದರ್ಶಿ ಹೆಬ್ಬಾರರು ವರದಿಯನ್ನೋದಿದರು.

ಬಳಿಕ ಬಹುಮಾನ ವಿತರಣೆ, ಭಾಷಣಗಳಾದ ನಂತರ ಸದಸ್ಯರಿಂದ 'ಸಾಮ್ರಾಟ್ ಶಹಜಹಾನ್' ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

**ಮರಕಡ ನಾಗಮ್ಮ ಹೆಗ್ಗಡ್ತಿಯರ ನಿಧನ**— ದಿವಂಗತ ದಿವಾನ್ ಬಹದ್ದೂರ್ ಬಿ ಮಹಾಬಲ ಹೆಗ್ಡೆಯವರ ಧರ್ಮಪತ್ನಿ ಮರಕಡ ಗುತ್ತು ನಾಗಮ್ಮ ಹೆಗ್ಗಡ್ತಿಯವರು ತಮ್ಮ 75ನೇ ಪ್ರಾಯದಲ್ಲಿ ತಾ. 27–4–63 ರಂದು ಮರಕಡದಲ್ಲಿ ಸ್ವರ್ಗಸ್ಥರಾದರು ವಿಶಾಲ ಕರವಿದೆ ದಿವಂಗತೆಯವರು ಹಲವು ವರ್ಷ ಮರಕಡ ಕುಟುಂಬದ ಯಜಮಾನಿಯಾಗಿದ್ದು ಉದಾರ ಮನೋಭಾವದವರಾಗಿದ್ದರು

**ದೇವದಾಸ ಸ್ಮಾರಕ ನಿಧಿ**— ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಸುದೀರ್ಘ ಕಾಲ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಕೆ ಎ ದೇವದಾಸ್ ಶಿರೋಮಣಿ ಇವರು ಒಂದೂವರೆ ವರ್ಷಗಳಿಗೆ ಮೊದಲು ದಿವಂಗತರಾದರು. ಅವರ ಸ್ಮಾರಕ ಸಮಿತಿಯೊಂದು ರಚಿತವಾಗಿ ಉಡುಪಿಯ ಬೋರ್ಡು ಹೈಸ್ಕೂಲಿನಲ್ಲಿಯೂ ಅವರ ಸಾರ್ವಜನಿಕ ಕಾರ್ಯಕ್ಷೇತ್ರವಾಗಿದ್ದ ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನಲ್ಲಿಯೂ ಅವರ ತೈಲಚಿತ್ರಗಳನ್ನು ಇಡುವ ಮತ್ತು ಸಂಸ್ಕೃತ ಭಾಷೆಯಲ್ಲಿ ಅತ್ಯಧಿಕ ಗುಣಗಳನ್ನು ಪಡೆವ ಬೋರ್ಡ್ ಹೈಸ್ಕೂಲಿನ ಹತ್ತನೆಯ ತರಗತಿಯಲ್ಲಿ ಹಾಗೂ ಅಖಿಲ ಭಾರತೀಯ ಸಂಸ್ಕೃತ ಭಾಷಾ ಸಮಿತಿಯ ವಿಶಾರದ ಪರೀಕ್ಷೆಯಲ್ಲಿ ಅತ್ಯಧಿಕ ಗುಣಗಳನ್ನು ಪಡೆವ ಉತ್ತೀರ್ಣರಾಗುವವರಿಗೆ ಪಾರಿತೋಷಕಗಳನ್ನು ಶಾಶ್ವತವಾಗಿ ನೀಡುವ ಉದ್ದೇಶಗಳನ್ನು ಸಮಿತಿಯು ಇಟ್ಟುಕೊಂಡಿದೆ ದಿವಂಗತ ದೇವದಾಸರ ಅಭಿಮಾನಿಗಳು ಸಮಿತಿಯ ಕಾರ್ಯದರ್ಶಿ ಎಸ್ ಗೋಪೀಚಂದ ರಾವ್ ಹಿಂದೀ ಪ್ರಚಾರ ಪರಿಷತ್ತು ಉಡುಪಿ ಇವರಿಗೆ ತಮ್ಮ ಅನುಕೂಲ್ಯ ಕೊಡುಗೆಗಳನ್ನು ಮುಟ್ಟಿಸಬಹುದು.

**ಲೋಕ ಸೇವಾ ವೃಂದದ ವಾರ್ಷಿಕೋತ್ಸವ**— ನಮ್ಮ ದೇಶವು ಸ್ವತಂತ್ರವಾದರೂ ಇನ್ನೂ ಬಡತನದಲ್ಲೇ ನರಳುತ್ತಿದೆ. ಬಡತನವನ್ನು ನಿರ್ಮೂಲ ನಾಶ ಮಾಡುವಲ್ಲಿ ನಾವಿನ್ನೂ ಶಕ್ತರಿಲ್ಲ. ಕೃಷಿ, ಕೈಗಾರಿಕೆ, ವಿದ್ಯಾಕ್ಷೇತ್ರಗಳಲ್ಲಿ ಮೊದಲಿಗಿಂತ ನಾವೆಷ್ಟೋ ಮುಂದರಿದಿರುವೆವಾದರೂ ಅದು ವಿನೇನೂ ಸಾಲದು ಅದಕ್ಕಾಗಿ ಅನೇಕ ರಂಗವನ್ನು ಪ್ರವೇಶಿಸಿ ನಮ್ಮ ಈ ಅವಶ್ಯಕತೆಗಳ ಕಡೆಗೆ ಗಮನ ಹರಿಸಬೇಕು ಜೀವನದ ಪ್ರತಿಯೊಂದು ರಂಗದಲ್ಲಿಯೂ ಪ್ರಾಮಾಣಿಕತೆಯನ್ನು ಪ್ರವು ಹಾಗು ಹೆಚ್ಚಾಗಿ ಇರಬೇಕು ಇಂದಿನ ಪರಿಸ್ಥಿತಿಯಲ್ಲಿ ಲೋಕ ಸೇವಾ ವೃಂದದಂತಹ ಸಂಸ್ಥೆಗಳು ಅತಿ ಅವಶ್ಯಕವಾದವುಗಳು. ಪ್ರೇಮ, ಸಹಕಾರ, ಸೌಹಾರ್ದತೆ ಮತ್ತು ತ್ಯಾಗಗಳಿಂದ ಜನತೆಯ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಾರದಂತೆ ವೃಂದವು ಕೈಗೊಂಡಿರುವ ರಚನಾತ್ಮಕ ಕಾರ್ಯವನ್ನು ನೋಡಿ ನನಗೆ ಅತೀವ ಸಂತೋಷವಾಯಿತು" ಎಂಬುದಾಗಿ ತಾ 20 4 63ರಂದು ಅಲೆವೂರು ಶಾಲಾ ವಠಾರದಲ್ಲಿ ನಡೆದ ಲೋಕ ಸೇವಾ ವೃಂದದ ದ್ವಿತೀಯ ವಾರ್ಷಿಕೋತ್ಸವದ ಅಧ್ಯಕ್ಷ ಪೀಠದಿಂದ ಎಡ್ವಕೇಟ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ನುಡಿದರು.

ಪ್ರಾರ್ಥನೆಯ ನಂತರ ಶ್ರೀ ಕೆ ವಿ ಸುಬ್ರಾಯರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಯು ಗಂಗಾಧರ ಭಟ್ಟರಿಂದ ವರದಿ ವಾಚನವಾದ ಮೇಲೆ ಹಲವರ ಭಾಷಣಗಳಾದುವು ಸಭಾ ಪ್ರಾರಂಭದಲ್ಲಿ ಶ್ರೀ ಅಡಿಗರು ಸಮುದ್ರ ಲೋಕಸೇವಾ ದಳ'ದ ಉದ್ಘಾಟನೆ ಗೈದರು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಭಾಂತ್ಯವಾಯಿತು ಅದೇ ದಿನ ಬೆಳಗ್ಗೆ ವಾರ್ಷಿಕ ಸಭಾ ನಡೆದು ಜರಗಿ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು

**ಕಲ್ಪನಾ ಥಿಯೇಟರಿನ ಉದ್ಘಾಟನೆ**— ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನವರು ಉಪೇಂದ್ರ ಭಾಗದಲ್ಲಿ ಕಟ್ಟಿಸಿರುವ ಸುಸಜ್ಜಿತವಾದ ಕಲ್ಪನಾ ಥಿಯೇಟರಿನ ಉದ್ಘಾಟನಾ ಸಮಾರಂಭವನ್ನು ಡಾ| ಟಿ ಎಮ್. ಎ ಪೈಯವರು ತಾ 26.4.63ನೇ ಸಂಜೆ ನೆರವೇರಿಸುತ್ತಾ 'ಶೀಘ್ರಗತಿಯಿಂದ ಬೆಳೆಯುತ್ತಿರುವ ಉಡುಪಿ ನಗರಕ್ಕೆ ಇಂತಹ ಉತ್ತಮ ಥಿಯೇಟರಿನ ಅಗತ್ಯವಿತ್ತೆಂದೂ ಇಂದು ಅದರ ಆವಶ್ಯಕತೆಯನ್ನು ಪೂರೈಸಿದ ಇವರ ಅಭಿನಂದಿಸುವೆ. ಆಧುನಿಕ ನವೀನ ಕಾಲದಲ್ಲಿ ಚಲಚ್ಚಿತ್ರಗಳು ಮನರಂಜನೆ ಮಾಡುವುದು ಮಾತ್ರವಲ್ಲದೆ ಜನರಲ್ಲಿ ವಿಚಾರ, ವಿವೇಕವನ್ನು ಕುದುರಿಸ ಬಲ್ಲವೆಂದೂ ಥಿಯೇಟರು ಅವರ, ವಾಗಿಬೆಳೆದು ಬರಲೆಂದೂ ಹಾರೈಸಿದರು ಆರಂಭದಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ ಜಿ. ಅ ಯವರು ಸ್ವಾಗತ ಭಾಷಣ ಮಾಡುತ್ತಾ ಉಡುಪಿಯಲ್ಲಿ ಕನ್ನಡ ದೂರದರ್ಶಿತ್ವದಿಂದ ಚಲಚ್ಚಿತ್ರ ಮಂದಿರವನ್ನು ಸ್ಥಾಪಿಸಿದ ದಿ ಶ್ರೀ ಉಪೇಂದ್ರ ಪೈಯವರಲ್ಲಿ ಇದ್ದ ಆಸೆ ನಿರೀಕ್ಷೆ ಇಂದು ಸಫಲವಾದ ರೀತಿಯನ್ನು ಫಲಿಸಿತೆಂದರಲ್ಲದೆ ಥಿಯೇಟರಿನ ನಿರ್ಮಾಣಕ್ಕೆ ನೆರವಾದವರೆಲ್ಲರ ಸಹಾಯವನ್ನು ಸ್ಮರಿಸಿದರು ಅಂತ್ಯದಲ್ಲಿ ಜೊಯಿಂಟ್ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಿ ಶ್ರೀನಿವಾಸ ಶೆಟ್ಟಿಗಾರು ಧನ್ಯವಾದಗಳನ್ನರ್ಪಿಸಿದರು.

**ಸ್ಥಾಪನಾ ದಿನಾಚರಣೆ**– ಅಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ವಿವಿಧ ಸಂಸ್ಥೆಗಳ ಸ್ಥಾಪನಾ ದಿನಾಚರಣೆಯು, ಸ್ಥಾಪಕ ಡಾ| ಟಿ. ಎಂ. ಎ ಪೈಯವರ 66ನೇ ಹುಟ್ಟು ಹಬ್ಬವಾದ ತಾ 30 4.1963ರಂದು ಮಣಿಪಾಲ ನಿವಾಸದಲ್ಲಿ ಅತಿ ವಿಜೃಂಭಣೆಯಿಂದ ಜರಗಿತು ಸಮಾರಂಭದ ಅಧ್ಯಕ್ಷತೆಯನ್ನು ಕೇರಳದ ಸಾಯರ್ ಸರ್ವಿಸ್ ಸೊಸೈಟಿಯ ಅಧ್ಯಕ್ಷ ಶ್ರೀ ಮನ್ನತ್ ಪದ್ಮನಾಭನ್ ಅವರು ವಹಿಸಿದ್ದರು. ವಿವಿಧ ಸಂಘ, ಸಂಸ್ಥೆಗಳಿಂದ ಹಾರಾರ್ಪಣೆಯಾದ ಬಳಿಕ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ.ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಡಾ| ಪೈಯವರು ಆರಂಭದ ದಿನಗಳಲ್ಲಿ ಎದುರಿಸಬೇಕಾದ ಟೀಕೆ, ಅವಹೇಳನ, ಅದರೂ ಅವರು ಯಾವುದನ್ನೂ ಗಣಿಸದೆ, ಧೈರ್ಯ ಪ್ರಯತ್ನಗಳಿಂದ ಮುನ್ನುಗ್ಗಿ ಇಂದು ಯಶಸ್ವಿಯಾಗಿ ವಿಶಾಲವಾದ ಮಿತ್ರವೃಂದ, ಮೆಚ್ಚಿಗೆಯ ಜನ ಸಮುದಾಯವನ್ನು ಪಡೆದಿರುವರೆಂದೂ ಹೇಳಿದರು ಇಂದಿನ ಅಧ್ಯಕ್ಷ ಶ್ರೀ ಪದ್ಮನಾಭನ್‌ರವರು ಕೇರಳದಲ್ಲಿ ನಾಯರ್ ಸರ್ವಿಸ ಸೊಸೈಟಿ ಮೂಲಕ ಹಲವು ವಿದ್ಯಾ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಸರಕಾರದವನ್ನೇ ಅಲುಗಾಡಿಸಿದ, 86 ವರ್ಷದ ಸಾಹಸಿಗರೆಂದೂ ಹೇಳಿದರು.

ಅನಂತರ ಕರ್ನಾಟಕ ಲಿಬರಲ್ ಎಜ್ಯುಕೇಶನ್ ಸೊಸೈಟಿಯ ಡಾ| ಬಿ ಎಸ್. ಜೀರಗೆ, ತಿರುವನಂತಪುರ ವಿಮೆನ್ಸ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಶಾರದಮ್ಮ, ಗೋವಾದ ಶ್ರೀ ರಾಕೂರ್ ಇವರು ಡಾ| ಪೈಗಳ ಬಹುವಿಧ ಕ್ರಿಯಾ ಶಕ್ತಿ, ಜನಸೇವಾ ಕಾರ್ಯಗಳನ್ನು ಮೆಚ್ಚಿ ಅಭಿನಂದನೆ ಸಲ್ಲಿಸಿದರು

ಇದೇ ಸಂದರ್ಭದಲ್ಲಿ ಡಾ| ಪೈಯವರ ಕಂಚಿನ ಪ್ರತಿಮೆಯನ್ನು ಶ್ರೀ ಪದ್ಮನಾಭನವರು ಅನಾವರಣಗೊಳಿಸುತ್ತಾ, ಡಾ| ಪೈಯವರು ಕರ್ನಾಟಕದ ಹೆಮ್ಮೆಯವರು, ಅವರು ಸಾಮಾನ್ಯತರದ ಪ್ರಾರಂಭದಿಂದ ತಮ್ಮ ಅಸಾಧಾರಣ ಬುದ್ಧಿಶಕ್ತಿ ಚಾತುರ್ಯದಿಂದ ಕೈಗಾರಿಕೆ ವಿದ್ಯಾಕ್ಷೇತ್ರಗಳಲ್ಲಿ ಮಹತ್ಸಾಧನೆಗಳನ್ನು ಸಾಧಿಸಿ ಅತ್ಯಲ್ಪ ಕಾಲದಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿದ್ದು ದೇಶ ಹಿತದೃಷ್ಟಿಯಿಂದಲೂ ಸಾರ್ಥಕ ದಾನಿ ಡಾ| ಪೈಗಳಿಗೂ ಅವರ ಸಂಸ್ಥೆಗಳಿಗೆ ನನ್ನ ಶುಭಹಾರೈಕೆ ಅರ್ಪಿಸುವೆನು ಅಭಿಪ್ರಾಯ ಪಟ್ಟರು ಎಂದು ಹೇಳಿದರು.

ಡಾ| ಪೈಗಳು ಉತ್ತರಿಸುತ್ತ ಆತಿಥ್ಯ ವಹಿಸಿ ಧಾರ್ಮಿಕ ಮತ್ತು ಸೇವಾಭಾವದಿಂದ ಕಾರ್ಯವನ್ನೆಸಗಬೇಕಾಗಿ ಅಂದಿನ ಎಲ್ಲ ವಿಧಗಳಲ್ಲಿಯೂ ಬೆಳೆದು ಹೋಗಿ ಕೊನೆಗೆ ಜನ ಹಿತವಾಗಿ ಪ್ರಾಮಾಣಿಕವಾಗಿ ಬೆಳೆದು ಬಂದಿರುವ ಸಿಂಡಿಕೇಟ್ ಬ್ಯಾಂಕ್ ಇದಕ್ಕೆ ನಿದರ್ಶನವೆಂದೂ ಯುವಜನರೂ ಮಾನವ ಸೇವಾ ಕಾರ್ಯ ಮಾಡಿದರೆ ಮಾತ್ರ ನಮ್ಮ ಬಾಳು ಸಾರ್ಥಕವೆಂದೂ ಹೇಳಿದರು

ಶ್ರೀ ಎ ಜಿ ಅಣ್ಣಯನವರು ಕೃತಜ್ಞತೆಗಳನ್ನರ್ಪಿಸಿದರು.

## ವಾರ್ತಾವೇದಿಕೆ

### ದೃಢ ನಿಲುವಿನ ನೆಹರು

ಗಡಿ ತಂಟೆಯನ್ನು ಪರಿಹರಿಸಲು ಭಾರತದಂತೆಯೇ ಚೀನವೂ ಕೊಲಂಬೋ ಸಲಹೆಗಳನ್ನು ಸ್ವೀಕರಿಸುವ ಪ್ರಯತ್ನವನ್ನು ನಡೆಸಿ ವಿಫಲರಾದ ಅಲಿ ಸಾಬ್ರಿಯವರು ಪಂಡಿತ ನೆಹರುರವರಿಗೆ ಎಲ್ಲವನ್ನೂ ವಿವರಿಸಿದರು. ಚಾ-ಎನ್-ಲಾಯಿಯವರು ಯಾವ ಕರಾರನ್ನೂ ಹಾಕಿಕೊಳ್ಳದೆ ನೇರ ಮಾತುಕತೆಯನ್ನು ಕೈಗೊಳ್ಳಲು ತಾನು ನವದೆಹಲಿಗೆ ಬರುವುದಕ್ಕೂ ಸಿದ್ಧನಿರುವೆನೆಂದು ಒಪ್ಪಿಗೆಯಿತ್ತ ಹೇಳಿದರು. ಭಾರತೀಯ ಪ್ರಧಾನಿ ಅಭಿಮಾನದಿಂದಲೇ ಹೇಳುತ್ತಾರೆ: ಭಾರತವು ಮಾತುಕತೆಗಾಗಿ ಚೀನದೊಡನೆ ಸಭೆ ಸೇರುವುದಕ್ಕೆ ಮೊದಲು, ಚೀನವು ಕೊಲಂಬೊ ಸೂಚನೆಗಳನ್ನು ಒಪ್ಪಿಕೊಳ್ಳಬೇಕು' ಎಂದು. ನೆಹರುರವರ ಈ ಮಾತು ಭಾರತದ ಕನಿಷ್ಠ ಬೇಡಿಕೆ, ಇದಕ್ಕೇ ಚೀನಾ ಒಪ್ಪದೆ ಹೋದರೆ?

### ಅವಿಶ್ರಾಂತ ಬಕ್ಷಿ

ರಾಷ್ಟ್ರೀಯ ಸಂಪುಟದ ಮಾತುಕತೆ ತೊಡಗಿದಂದಿನಿಂದ ಅಲ್ಲಿನ ಪ್ರಧಾನಿ ಬಕ್ಷಿ ಗುಲಾಮ ಮಹಮ್ಮದರು ಅವಿಶ್ರಾಂತರು. ಕಾಶ್ಮೀರದ ಏಕತೆಗೆ ಕಳಂಕಪ್ರಾಯವಾದ ಅದನ್ನು ವಿಭಜಿಸುವ ಅವ್ಯಕ್ತ ಸೂಚನೆ ಯಾದವರು, ದಿಕ್ಕುಗೆಟ್ಟಿದ್ದಾರೆ ಕಾಶ್ಮೀರದ ಲಕ್ಷಾಂತರ ಪ್ರಜೆಗಳ ಮನಸ್ಸಿಗೆ ಆಘಾತವಾಗಿ, ಹಿತಕ್ಕೆ ಧಕ್ಕೆ ತಗಲುವಂತಹ ಈ ಸೂಚನೆಗಳನ್ನು ಅವರು ಉತ್ತರಿಸಬೇಕಾಗಿದೆ; ಪ್ರಜೆಗಳನ್ನು ಸಮಾಧಾನಗೊಳಿಸಬೇಕಾಗಿದೆ. ನವದೆಹಲಿಯನ್ನು ಪರಿಹರಿಸಲು ರಾಷ್ಟ್ರವನ್ನು ವಿಭಜಿಸುವುದು ಸಾಧ್ಯವಿಲ್ಲ; ಮತ್ತು ದು ಪರಿಹಾರವೂ ಇಲ್ಲ ಏಕಪಕ್ಷೀಯ ಪರಿಹಾರವೇ–ಬರೆ, ಈಗಿರುವ ಯುದ್ಧವಿರಾಮ ರೇಖೆಯನ್ನೇ ಅಲ್ಪ ಸ್ವಲ್ಪ ಹೊಂದಾಣಿಕೆಯಿಂದ ಬಲಪಡಿಸುವುದು ಎಂದವರು ಹೇಳುತ್ತಾರೆ. ಇಂತಹ ಪರಿಹಾರ ಈಗ ನಡೆಯುವ ಹೋರಾಟ ವರಂದೆಂದಿಗೂ ಅದು ಅಸಂಭವವೆನ್ನುತ್ತಾರೆ ಬಕ್ಷಿ

### ಝುಲ್ಫಿಕರ್ ಎ. ಭುಟ್ಟೊ

ಕಾಶ್ಮೀರ ಸಮಸ್ಯೆಯು ಭಾರತ ಮತ್ತು ಪಾಕಿಸ್ತಾನಗಳಿಗೆ ಮಾತ್ರ ಸಂಬಂಧಿಸಿದ್ದು ಎಂದು ಭಾರತದ ನಿಲುವಾದರೆ, ಕಾಶ್ಮೀರದ ಜನರೇ ಈ ಸಮಸ್ಯೆಗೆ ಮುಖ್ಯವಾಗಿ ಸಂಬಂಧಿಸಿರುವರೆಂದು ಪಾಕಿಸ್ತಾನ ಹೇಳುತ್ತದೆ. ಆದುದರಿಂದಲೇ ಭಾರತದ ಕಾಶ್ಮೀರ ನೀತಿಯನ್ನು ಅರ್ಥಮಾಡಿಕೊಳ್ಳುವುದು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ. ಕಾಶ್ಮೀರಿಗಳು ತಮ್ಮ ರಾಜ್ಯವನ್ನು ಭಾರತದಲ್ಲಿ ವಿಲೀನಗೊಳಿಸಿರುವಾಗ ಕಾಶ್ಮೀರಿಗಳು ಮಾತ್ರ ಈ ಸಮಸ್ಯೆಗೆ ನೇರ ಸಂಬಂಧಿಸಿರುವರೆಂಬುದನ್ನು ಭುಟ್ಟೋ ವಿವೇಚಿಸುವಂತಿಲ್ಲ. ಅವರೂ ಚೀನಾ–ಭಾರತ ಗಡಿತಂಟೆಯಿಂದಾಗಿ ಈ ಪ್ರಶ್ನೆ ಬೇಗನೆ ಬಗೆ ಹರಿಯುವುದು ಸಾಧ್ಯವೆನ್ನುತ ಇವರು ಗಡಿತಂಟೆಯ ಅನುಚಿತ ಲಾಭ ಪಡೆಯಲು ಬಯಸುತ್ತಾರೆಂದರೆ ತಪ್ಪಲ್ಲ.

## ಜಿಲ್ಲೆಯ ಮಂಡಲ, ಜಿಲ್ಲಾ ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಚುನಾವಣೆ

ತಾ 12-5-63ರಂದು ಮಂಡಲ ಕಾಂಗ್ರೆಸ್ ಸಮಿತಿಗಳಿಗೆ ಸದಸ್ಯರ ಚುನಾವಣೆಯು ನಡೆಯಲಿರುವುದು. ಅದ್ದರಿಂದ ಪ್ರತಿ ಮತದಾರ ಕ್ಷೇತ್ರಕ್ಕೆ ಈ ಕೆಳಗಿನ ಸಹಾಯಕ ಚುನಾವಣಾ ಅಧಿಕಾರಿಗಳು ನೇಮಿಸಲ್ಪಟ್ಟಿರುತ್ತಾರೆ. ಚುನಾವಣೆಗಳು ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ನಡೆಯಲಿವೆ.

1. ಬೈಂದೂರ: ಬಿ. ಎ. ಬಾದಿರ್, ತಾಲೂಕು ಬೋರ್ಡ್ ಸದಸ್ಯ. (ಚುನಾವಣಾ ಸ್ಥಳ: ಗಂಗೊಳ್ಳಿ ಮಂಡಲ ಕಾಂಗ್ರೆಸ್ ಆಫೀಸು).

2. ಕುಂದಾಪುರ: ಕೆ. ಗಣಪತಿ ಶೇಟ್ (ಚುನಾವಣಾ ಸ್ಥಳ: ತಾಲೂಕು ಕಾಂಗ್ರೆಸ್ ಆಫೀಸು, ಕುಂದಾಪುರ).

3. ಬ್ರಹ್ಮಾವರ: ಪಿ ರಂಗನಾಥ ಶೆಣೈ (ಬ್ರಹ್ಮಾವರ ಮಂಡಲ ಕಾಂಗ್ರೆಸ್ ಆಫೀಸು).

4. ಉಡುಪಿ: ಜಿ ಎಸ್. ನಗರ್‌ಕರ್ (ಉಡುಪಿ ತಾಲೂಕು ಕಾಂಗ್ರೆಸ್ ಆಫೀಸ್).

5. ಕಾರ್ಕಳ: ಪಿ ವೆಂಕಟೇಶ ಭಟ್ (ಕಾರ್ಕಳ ಮಂಡಲ ಕಾಂಗ್ರೆಸ್ ಆಫೀಸು).

6. ಮೂಡಬಿದ್ರಿ: ದಯಾನಂದ ಪೈ (ಮೂಡಬಿದ್ರಿ ಮಂಡಲ ಕಾಂಗ್ರೆಸ್ ಆಫೀಸು).

7. ಕಾಪು: ಎಸ್. ಟಿ ಸಾಲಿಯಾನ್ (ಕಾಪು ಮಂಡಲ ಕಾಂಗ್ರೆಸ್ ಆಫೀಸು).

8. ಸುರತ್ಕಲ್: ಬಾಬುರಾಯ ಕಾಮತ್ (ಸುರತ್ಕಲ್ ಮಂಡಲ ಕಾಂಗ್ರೆಸ್ ಆಫೀಸು).

9. ಮಂಗಳೂರು-1. ಸೋಮಶೇಖರ ಆಳ್ವ, ಎಡ್ವಕೇಟ್ (ಜಿಲ್ಲಾ ಕಾಂಗ್ರೆಸ್ ಆಫೀಸು).

10. ಮಂಗಳೂರು-2. ಚಿದಾನಂದ ಎಡ್ವಕೇಟ್ (ಜಿಲ್ಲಾ ಕಾಂಗ್ರೆಸ್ ಆಫೀಸು).

11 ಪಾಣೆಮಂಗಳೂರು: ವಿಶ್ವನಾಥ ಕುಡ್ವ (ಪಾಣೆಮಂಗಳೂರು ಮಂಡಲ ಕಾಂಗ್ರೆಸ್ ಆಫೀಸು).

12. ಬೆಳ್ತಂಗಡಿ: ಕೆ. ಬಿ. ಮಲ್ಲ (ಬೆಳ್ತಂಗಡಿ ಮಂಡಲ ಕಾಂಗ್ರೆಸ್ ಆಫೀಸು).

13. ಪುತ್ತೂರು-1: (ಪಟ್ಲ) ಡಾ| ಮಂಜುನಾಥ ರೈ, ಪಟ್ಲ (ಡಾ| ಮಂಜುನಾಥ ರೈಗಳ ಡಿಸ್ಪೆನ್ಸರಿ).

14. ಪುತ್ತೂರು-2: ಅನಂತಯ್ಯ ಅರಿಗ, ಎಡ್ವಕೇಟ್ (ಪುತ್ತೂರು ಮಂಡಲ ಕಾಂಗ್ರೆಸ್ ಆಫೀಸು).

ತಾ. 7-5-63ರಂದು ಬೆಳಗ್ಗೆ ಗಂಟೆ 9ರಿಂದ 12ರ ತನಕ ಹಾಗೂ ಅಪರಾಹ್ನ ಗಂಟೆ 3ರಿಂದ 6ರ ವರೆಗೂ, ತಾ. 8—5—63ರಂದು ಬೆಳಗ್ಗೆ ಗಂಟೆ 9ರಿಂದ 12ರ ವರೆಗೂ ನಾಮಪತ್ರಗಳನ್ನು ಸ್ವೀಕರಿಸಲಾಗುವುದು. ತಾ.8-5-63ರಂದು ಸಂಜೆ ಗಂಟೆ 5ಕ್ಕೆ ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸಿ ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಲಾಗುವುದು. ತಾ. 10—5—63ರಂದು ಸಂಜೆ ಗಂಟೆ 5ರೊಳಗೆ ನಾಮಪತ್ರಗಳನ್ನು ಹಿಂದೆಗೆದುಕೊಳ್ಳುವುದು. ಚುನಾವಣೆ ಇದ್ದಲ್ಲಿ ತಾ. 12—5—63ರಂದು ಬೆಳಗ್ಗೆ ಗಂಟೆ 9ರಿಂದ 12ರ ವರೆಗೂ, ಅಪರಾಹ್ನ ಗಂಟೆ 2ರಿಂದ 5ರ ವರೆಗೂ ಆಯಾಯ ಕ್ಷೇತ್ರದ ಆಫೀಸಿನಲ್ಲಿ ನಡೆಯುವುದು. ಅಂದು ಸಂಜೆ ಗಂಟೆ 5ರಿಂದ ಓಟುಗಳು ಎಣಿಸಲ್ಪಟ್ಟು ಫಲಿತಾಂಶಗಳನ್ನು ಪ್ರಕಟಿಸಲಾಗಿರುವುದು. (ನಾಮಪತ್ರದೊಂದಿಗೆ ರೂಪಾಯಿ ಒಂದನ್ನು ತೆರತಕ್ಕದ್ದು.)

### ಜಿಲ್ಲಾ ಕಾಂಗ್ರೆಸ್ ಮತ್ತು ಪ್ರದೇಶ ಕಾಂಗ್ರೆಸ್ ಚುನಾವಣೆ

ತಾ. 21—5—63ರಂದು ಬೆಳಗ್ಗೆ ಗಂಟೆ 9ರಿಂದ 12ರ ವರೆಗೂ ಹಾಗೂ ಅಪರಾಹ್ನ ಗಂಟೆ 2ರಿಂದ 5ರ ವರೆಗೂ ನಾಮಪತ್ರಗಳನ್ನು ಸ್ವೀಕರಿಸಲಾಗುವುದು. ತಾ. 21—5—63ರಂದು ಸಂಜೆ ಗಂಟೆ 6ಕ್ಕೆ ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸಿ ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಲಾಗುವುದು. ತಾ. 23-5-63ರ ಸಂಜೆ ಗಂಟೆ 5ರೊಳಗೆ ನಾಮಪತ್ರಗಳನ್ನು ಹಿಂದೆಗೆದುಕೊಳ್ಳುವುದು. ಚುನಾವಣೆ ಇದ್ದಲ್ಲಿ ತಾ 26—5—63ರಂದು ಪೂರ್ವಾಹ್ನ ಗಂಟೆ 10ರಿಂದ 12ರ ತನಕ ಹಾಗೂ ಅಪರಾಹ್ನ ಗಂಟೆ 2ರಿಂದ 5ರ ತನಕ ಆಯಾಯ ಮತದಾರ ಕ್ಷೇತ್ರದ ಕೇಂದ್ರ ಆಫೀಸಿನಲ್ಲಿ ನಡೆಯುವುದು ಜಿಲ್ಲಾ ಕಾಂಗ್ರೆಸ್ ಹಾಗೂ ಪ್ರದೇಶ ಕಾಂಗ್ರೆಸ್ ಚುನಾವಣೆಗಳಿಗೆ ಸಂಬಂಧಿಸಿದ ನಾಮಪತ್ರಗಳನ್ನು ಕ್ರಮವಾಗಿ ರೂಪಾಯಿ ಐದು ಮತ್ತು ರೂ. ಹತ್ತರೊಂದಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಫೀಸಿನಲ್ಲಿ ಸಲ್ಲಿಸತಕ್ಕದ್ದು. ತಾರೀಕು 26—5—63ರಂದು ಸಂಜೆ ಗಂಟೆ 5ಕ್ಕೆ ಮತಗಳು ಎಣಿಸಲ್ಪಡುವವು. ಚುನಾವಣೆಯ ಸಂಬಂಧವಾದ ಎಲ್ಲ ಪತ್ರವ್ಯವಹಾರವನ್ನು ಈ ಕೆಳಗಿನ ಸಹಿದಾರರೊಡನೆ ನಡೆಸತಕ್ಕದ್ದು.

(ಸಹಿ) ಅತ್ತಾವರ ಆನಂದ ಶೆಟ್ಟಿ,
ಬಿ. ಎ. ಎಲ್. ಎಲ್. ಬಿ,
ಜಿಲ್ಲಾ ಚುನಾವಣಾಧಿಕಾರಿ.

## ನೃತ್ತಿಕಾ ತುಲಾಭಾರ

(ಕಳೆದ ಪುಟದಿಂದ)

ದ್ರೆ ಪರ್ಮಿಟ್ಟು ಸಿಗ್ತಾ ಇದ್ದದ್ದನ್ನು. ಮತ್ತೆ ಅಂಗಡಿ ಸಹಿತ ಹತ್ತು ದಿವಸಕ್ಕೊಮ್ಮೆ ಪುನಃ ತಾಲೂಕಾಫೀಸಿಗೆ.

'ಹೌದು, ಸರಿ ಸರಿ. ಮೊನ್ನೆ ಆಚೆ ಮನೆ ಗೋಪಿ ಹೇಳ್ತಾ ಇದ್ದ. ಎಲ್ಲೋ ಒಬ್ಬ ನಾಲ್ಕು ತಿಂಗ್ಳು ಹರಿದಾಡಿ ಸರ್ಟಿಫಿಕೇಟು ಪಡ್ಕೊಂಡ ಮತ್ತೆ ನಾಲ್ಕು ತಿಂಗ್ಳು ತಿರುಗಾಡಿದ್ಮೇಲೆ ಪರ್ಮಿಟ್ ಸಿಕ್ತಂತೆ. ಈಗ ಎಂಟು ಸಲ ತಾಲೂಕಾಫೀಸಿಗೆ ಯಾತ್ರೆ ಮಾಡಿದ್ನಂತೆ, ಪರ್ಮಿಟಿಗೆ ಹತ್ತು ದಿವಸಕ್ಕೊಂದು ಸಲ ಜೀವ ಕೊಡ್ಬೇಕ್ಕೆ. ಇನ್ನೂ ಸಿಮೆಂಟು ಮಾತ್ರ ಸಿಕ್ಕಿಲ್ವಂತೆ'

'ಅದು ಸರೀನ್ನು, ಅಪ್ರೂ ಎಂಟು ರೂಪಾಯಿಗೆ ಹದಿನಾರೂವರೆ ಕೊಟ್ರೆ ಒಂದೊಂದೇ ಚೀಲಾಂತ ಬೇಕಾದಷ್ಟು ಸಿಕ್ಕುತ್ತಂತೆ.

'ನೋಡಿ, ಹೀಗೆ ಮಾಡ್ತಿರೋದ್ರಿಂದ್ಲೇ ನಾನೇ ತುಲಾಭಾರನೂ ಮಾಡ್ಬೋದು? ಮತ್ತೆ ನಮ್ಮ ನಿಮ್ಮಿಂದಾದೀತೆ? ನನ್ಗೆ ಮೊನ್ನೆ ಗೊತ್ತಿತ್ತು ಕಳ್ಳ ಪೇಟೇ ಕದೀಮರೇ ಮಂತ್ರಿಗಳನ್ನು ಹೊತ್ತುಕೊಳ್ಳೋದು ಅಧರ್ಮಿಗಳೇ ದೇವರು ದಿಂಡ್ರಿಗೆ ಹರಕೆ ಹೊರೋದು...,

'ಸಾಕು ಸಾಕು ಮಾಡೇ. ನಿನ್ನ ನಾಲಿಗೆ ಭಾರಿ ಉದ್ದವಾಯ್ತು.

'ಉದ್ದವಾದ್ರೆ ಕತ್ತರ್ಸಿ ಗಿಡ್ಡಮಾಡಿ

'ನನ್ಗೆ ಒಂದು ಯೋಚ್ನೆಯಾಗ್ತಾಯಿದೆ.,

'ಅದಾವ ಭಾರೀ ಯೋಚ್ನೆಯೋ...,

'ಮತ್ತೇನೂ ಇಲ್ಲ. ನನ್ನ ನಿನ್ನ ತುಲಾಭಾರ ಮಾಡಿಸ್ಬೇಕೂಂತ. ಮಾಡ್ಸುವವರಾದರೂ ಯಾರು?,

'ಯಾರು ಯಾರು ಯಾಕೆ ಮಾಡ್ಸಬೇಕು? ನಾವೇ ಮಾಡಬೇಕು.,

'ಸರಿಯಾಯ್ತು ಬಿಡಿ. ನಾವೇ ಮಾಡ್ಸೋಣ.,

'ಯಾವುದ್ರಲ್ಲಿ?,

'ಯಾವುದ್ರಲ್ಲಿ? ರೂಪಾಯಿ ನೋಟು ಕೊಡೋರಿಲ್ಲ. ಅಕ್ಕಿ ಬೇಳೆ ಭಾರಿ ತುಟ್ಟಿ ಮತ್ತೆ.... ಮತ್ತೆ ಹಾಂ, ಸರಿ ಸರಿ...,

'ಏನೇ ಯಾವುದ್ರಲ್ಲಿ?....,

'ಓ ಆ ಗುಡ್ಡೇ ಮಣ್ಣಿನಲ್ಲಿ.,

'ಮಣ್ಣಿನಲ್ಲೇ?,

'ಮಣ್ಣಿಂದ್ರೇನಂತೆ? ನಿಜಲಿಂಗಪ್ಪನವ್ರು ರೂಪಾಯಿ ತುಲಾಭಾರ ಮಾಡ್ಸಿ ರಕ್ಷಣಾನಿಧಿಗೆ ಕೊಟ್ರು ,

'ನಾವು...?,

'ನಾವು ತುಲಾಭಾರ ಮಾಡ್ಸಿಯಾದ್ಮೇಲೆ ನೆಲಕ್ಕೆ ಮಣ್ಣು ಹಾಕೋಣ. ಹೆಚ್ಚಾದ್ರೆ ಬಾಯಿಗೂ ಆಗುತ್ತೆ.,

'ಸಾಕು ನೀನು. ನಿನ್ನ ಮೆದುಳು ಇಷ್ಟು ದೂರ ಓಡುತ್ತೇಂತ ನಾ ತಿಳಿದಿರ್ಲೇ ಇಲ್ಲ....,

'ಆಯ್ತಲ್ಲ ಗಂಡಸ್ರ ಮೆದುಳೇ ಹೀಗೆ

'ಅಂತೂ ಸಿಮೆಂಟು ಸಿಗದಿದ್ರೂ ತುಲಾಭಾರದ ಹೆಸರಿನಲ್ಲಾದ್ರೂ ನೆಲ ಸರಿಯಾಗುತ್ತೇಂತಾಯ್ತು.,

'ನಿಮ್ಮ ಟೀಪಿ ಸಂಸ್ಕಾರ ಆದಕ್ಕೂ ಪರ್ಮಿಟು ಕೇಳುತ್ತೋ ಏನೋ ಒಂದು ದಿನ.,

'ಇಲ್ಲಿ, ನಿನಗೂ ಸಂಸ್ಕಾರಕ್ಕೂ ಏಕ ನಕ್ಷತ್ರವಾದ್ದಕ್ಕೆ ಯಾರನ್ನ ಯಾಕೆ ಬೈಬೇಕು? ನೀನಂತೂ ಕೃತ್ತಿಕೆ ಹುಡುಗಿ. ಮಾತುಮಾತಿಗೂ ಕತ್ತಿ ಹಿರಿಯುತ್ತಿ. ನಂಮ್ಗೆ ಸ್ವರಾಜ್ಯ ಸಿಕ್ಕಿದ್ದೂ ಅದಕ್ಕಲ್ಲೇ ಅನ್ನು.' ಏನು ಬೇಕೋ ಹಾಗೆ ಅಂದುಕೋ. ಅಪ್ರೆ ಹೀಗೆಲ್ಲಾ ನಾಲ್ಕು ಜನರ ಮುಂದೆ ಅನ್ಬೇಡ ,

'ಮತ್ತೇನನ್ಬೇಕೂಂತ? ಈ ಸರ್ಕಾರದ ಕಾರುಭಾರಿನಲ್ಲಿ ಉಸಿರಾಡೋದಕ್ಕೂ ಇಲ್ಲ. ಈಗ ನೋಡಿ, ಸಕ್ರೆಗೂ ರೇಶನ್ ಮಾಡ್ತಾರಂತೆ...,

'ಸಕ್ರೆ ಅನ್ನುತ್ಲೇ ನೆನಪಾಯ್ತು. ಸಕ್ರೆ ಹಾಕಿ ನೀರು ಇಟ್ಟಿದ್ದೆ ಅಂದಿಯಲ್ಲಾ, ಹೋಗಿ ಬೇಗ ಕಾಫಿ ಮಾಡಿಯಾದ್ರು ತರಬಾರದೆ? ,

'ಅಂತೂ ಸರ್ಕಾರವನ್ನ ಬಯ್ಯಾದ್ರೂ ಆತ ತಾನೇ ನೀವನ್ನೋದು ಏನು ಮಾಡ್ಲಿ, ಎಷ್ಟು ತಡೆದ್ರೂ ಬರುತ್ತೆ ಒಂದೊಂದ್ಸಲ ಕೋಪ ಮಾಗಿನ್ತದೀಲಿ. ಇಲ್ಲಿ ಕ್ಷಮಿಸಿ ಬಿಡಿ. ಇನ್ನು ಹಾಗನ್ನೋದಿಲ್ಲ.,

'ಕ್ಷಮೆಯೇನು ಬಂತು ಕಣೇ ಅಳ್ಬೇಡ. ಎಷ್ಟಾದ್ರೂ ನಮ್ದೇ ಸರ್ಕಾರ ತಾನೇ. ಹೋಗು ಹೋಗು, ಕಾಫಿ ಮಾಡಿ ತಾ. ಒಪ್ಸಿಕೊ ನೀನ್ನ. ಇಲ್ಲ, ನಾನೇ ಒಪ್ಸುತ್ತೇನೆ. ಇತ್ತಬಾ.,

'ಹ್ಞಾಂ......,

—ಗೋರಾ.


ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಟಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವರ್ಗ—ಊಳಿಗ ಮೊದಲಾದ ಯಾವತ್ತೂ ತರದ ಎಕೌಂಟ್ ಪುಸ್ತಕಗಳು, ಶಾಲಾ ರಿಜಿಸ್ಟ್ರಿಗಳು, ಫಾರ್ಮುಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ-ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು
ನವಭಾರತ ಪುಸ್ತಕ ಭಂಡಾರ, ಉಡುಪಿ.

## ಚೀನಾವು ಸಂಗ್ರಾಮವನ್ನೇ ಬಯಸುತ್ತಿದೆ

(೧ನೇ ಪುಟದಿಂದ)

ಭಿನ್ನವಾಗಿದೆ. ಅವೆರಡು ಅಭಿನ್ನವಾಗಿರುವುದು ಸಾಧ್ಯವಿಲ್ಲ. ಚೀನಾವು ಭಾರತದ ಭೂಮಿಯ ಮೇಲೆ ಆಕ್ರಮಣವನ್ನು ಮಾಡಿದುದು ಹಗಲಿನಷ್ಟು ಬೆಳ್ಳಗಿದೆ. ಆದರೆ, ಅದರ ನಿಲುವೆ. ಮಾತ್ರ ಅಷ್ಟೇ ಕರಾಳವಾಗಿದೆ. ಆಕ್ರಮಣವನ್ನು ಅನ್ಯಾಯವಾಗಿ ಮಾಡಿ, ಅದನ್ನು ಹಿಂತೆಗೆದುಕೊಳ್ಳದೆ, ಸಂಧಾನಕ್ಕೆ ಬರಬೇಕು ಎಂಬ ದುರಭಿಪ್ರಾಯವನ್ನಿಟ್ಟುಕೊಂಡು ಲಾಯ್ ಅವರು ಸಮರಕ್ಕಾಗಿಯೇ ಹಂಬಲಿಸುವಂತಿದೆ. ಸಂಧಾನದ ಹೆಸರಿನಲ್ಲಾಗಲೀ, ಸಂಗ್ರಾಮದ ಮುಖಾಂತರವಾಗಿಯಾಗಲಿ, ತನ್ನ ಸಾಮ್ರಾಜ್ಯವಾದದ ಕನಸನ್ನು ನನಸು ಮಾಡುವುದು ಮಾತ್ರ ಅವರಿಗೆ ಬೇಕಾಗಿದೆ. ಭಾರತದ ಸ್ನೇಹಿತನೆಂದು ಬೆನ್ನು ತಟ್ಟುತ್ತಿರುವಂತೆಯೇ ಅದರ ಮೇಲೆ ಚೂರಿ ಊರಿದ ಚೌರವರ ನಿಶ್ಚಯ ಸಂಧಾನದ ಕರೆಗೆ ಆಕ್ರಮಣಕ್ಕೆ ಗುರಿಯಾದ ಭಾರತವೆಂದಿಗೂ ಕಿವಿಗೊಡದು. ಯಾದು ಈಗಾಗಲೇ ಸಾಕಷ್ಟು ತಗ್ಗಿ ನಡೆದಿದೆ; ಭೂಮಿಯ ತನಕ ತನ್ನ ತಲೆಯನ್ನು ತಗ್ಗಿಸಿದೆ; ಇನ್ನೆಲ್ಲಿಗೆ ಪಾತಾಳಕ್ಕೆ ತಲೆಯಿಕ್ಕಬೇಕೆ? ಸತ್ಯಕ್ಕೆ ತಲೆವಾಗದೆ ಅಭಿಪ್ರಾಯವನ್ನು ಮಂದಿಸಬೇಕೆ?

**ಭಾರತದ ಉದಾರ ನೀತಿ**

ಚೀನಾವು ಏಕಪಕ್ಷೀಯವಾಗಿ ಸಮರಕ್ಕೆ ವಿರಾಮವಿತ್ತು ಸಂಧಾನಕ್ಕೆ ಮುಂದಾಗುವಂತೆ ಭಾರತಕ್ಕೆ ಕರೆಯಿತ್ತಾಗ, ನೆಹರು ಹೇಳಿದರು: "ಸಂಧಾನವು ತೊಡಗುವುದಕ್ಕೆ ಮೊದಲು ಚೀನಾವು ತನ್ನ ಸೇನೆಯನ್ನು ೧೯೬೨ನೆ ಸಪ್ಟಂಬರ ೮ರ ನೈಜ ನಿಯಂತ್ರಣ ರೇಖೆಗಿಂತ ಹಿಂದೆಗೆದುಕೊಳ್ಳಬೇಕು' ಎಂದು. ಆದರೆ, ಚೀನಾ ಈ ಸಂದರ್ಭದಲ್ಲಿ ಕುಚೋದ್ಯವಾಡಿ ಪ್ರಪಂಚವನ್ನೂ ಸತ್ಯವನ್ನೂ ಏಕಕಾಲದಲ್ಲಿ ವಂಚಿಸುವ ಸಾಹಸ ಮಾಡಿ ತಾನು ೧೯೫೯ರ ನವಂಬರ ೭ರ ನೈಜ ನಿಯಂತ್ರಣ ರೇಖೆಯಿಂದ ಹಿಂದೆ ಸರಿಯುತ್ತೇನೆಂದು ಘೋಷಿಸಿತು. ಆದರೆ, ೧೯೫೯ರ ಈ ರೇಖೆಯು ಭಾರತದ ಬಹು ಭಾಗ ನೆಲವನ್ನು ಒಳಗೊಂಡಿದೆಯೆಂದು ಮತ್ತೆ ಲೋಕಕ್ಕೆ ತಿಳಿಯಿತು! ಆದುದರಿಂದಲೇ ಪ್ರಧಾನಿ ನೆಹರು ತಮ್ಮ ಕನಿಷ್ಟ ಬೇಡಿಕೆಯನ್ನು ಮನ್ನಿಸದೆ ಸಂಧಾನ ಸಾಧ್ಯವಿಲ್ಲವೆಂದರು. ಆದರೆ, ಮುಂದೆ, ಕೊಲಂಬೊ ಸಲಹೆ ಮತ್ತು ಅವುಗಳ ವಿವರಣೆ ದೊರೆತ ಬಳಿಕ, ತನ್ನ ಉದಾರತೆಯ ಗುರುತೆಂಬಂತೆ, ಮಿತ್ರರಾಷ್ಟ್ರಗಳ ಪ್ರಯತ್ನವು ಯಶಸ್ವಿಯಾಗಲು ತಾನು ವಿಘ್ನವೆನಿಸಬಾರದೆಂದು ಈ ಬೇಡಿಕೆಯನ್ನೂ ತ್ಯಜಿಸಿ ಎರಡು ರೇಖೆಗಳ ಮಧ್ಯಂತರದಲ್ಲಿ ನಿಸ್ಸೈನ್ಯೀಕೃತ ಪ್ರದೇಶವನ್ನು ನಿರ್ಮಿಸಲು ಒಪ್ಪಿದರು. ಪಾರ್ಲಿಮೆಂಟಿನಲ್ಲಿ ಇದು ಒಮ್ಮತ ಪಡೆಯುವುದಕ್ಕೆ ಅಸಮರ್ಥವಾಯಿತೆಂಬುದನ್ನು ನಾವು ಗಮನಿಸುವುದಾದರೆ, ಇನ್ನು ಯಾವ ಶರ್ತವೂ ಇಲ್ಲದೆ ಸಂಧಾನಕ್ಕೆ ಮುಂದುವರಿಯುವುದು ಸಾಧ್ಯವಾದೀತೆ? ಏಕೆಂದರೆ, ಅದಕ್ಕಿಂತ ದೊಡ್ಡ ಅಪಮಾನ ಮತ್ತೊಂದಿಲ್ಲ.

ಅಲಿಸಾಬ್ರಿಯವರು ಸ್ವದೇಶಗಮನದ ಮಾರ್ಗಮಧ್ಯದಲ್ಲಿ ನವದೆಹಲಿಯಲ್ಲಿ ಇಳಿದರು. ಅಲ್ಲಿ ಅವರು ಪ್ರಧಾನಿ ನೆಹರುರವರಿಗೆ ತನ್ನ ಪ್ರವಾಸದ ಹಾಗೂ ಲಾಯ್-ಮಾವೊರವರೊಡನೆ ನಡೆಸಿದ ಚರ್ಚೆ ಮತ್ತು ವರ ನಿರಾಕರಣೆಯ ವಿವರಗಳನ್ನು ನೀಡಿರಬಹುದು. ತನ್ನ ಅಸಫಲತೆಯ ಭಾರತದ ದುರಂತ ಕಥೆಯನ್ನು ಹೇಳಿರ ಬಹುದು. ಅದೇ ಕಾಲದಲ್ಲಿ ಮರಳಿ ಭಂಡಾರನಾಯಿಕೆಯವರು ಪೀಕಿಂಗಿಗೆ ತೆರಳುವರೆಂದು ವದಂತಿಯಿದೆ. ಇದರ ಉದ್ದೇಶ ಮತ್ತು ಪರಿಣಾಮಗಳು ಸಾಬ್ರಿಯ ರಂಪಕ್ಕಿಂತ ಬೇರೆಯಾಗಲಾರವು ಎಂದು ಊಹಿಸಬಹುದು, ಆದರೂ ನಾಯಿಕೆಯವರು ಈ ಯಾತ್ರೆ ಕೈಗೊಂಡರೆ, ಕೊಲಂಬೊ ಸಲಹೆಗಳು ಒಂದೇ ಸಂಪೂರ್ಣ ಸಮಾಧಿಯಾಗುವುದು ಇಲ್ಲವೇ ಉಜ್ಜೀವನಗೊಳ್ಳುವುವು.

**ನಾಯಿಕೆ ತ್ರಿಶಂಕುವಿನಲ್ಲಿ**

ಭಂಡಾರನಾಯಿಕೆಯವರ ಮೇಲೆ ಅಪವಾದವನ್ನೂ ಲಾಯ್ ಹೇರಿದ್ದಾರೆ. ಅವರು ತಾನು ಹೊತ್ತು ತಂದ ಸೂಚನೆಗಳಿಗೆ ಪೀಕಿಂಗ್ ಮತ್ತು ನವದೆಹಲಿಗಳಲ್ಲಿ ವಿಭಿನ್ನ ವಿವರಣೆಗಳನ್ನಿತ್ತರು ಎಂದು ಅವರು ಆಪಾದಿಸಿದ್ದಾರೆ. ಇದರಿಂದಾಗಿ ಸ್ವಯಂ ನಾಯಿಕೆಯವರ ಮೇಲೆ ಅವರ ದೇಶದಲ್ಲಿಯೇ ಒಂದು ತರದ ದುರ್ಭಾವನೆ ಮೂಡುವಂತಾಗಿದೆ. ಇನ್ನೊಮ್ಮೆ ಅವರು ಲಾಯ್‌ರನ್ನು ಭೆಟ್ಟಿಮಾಡಿದರೆ, ಈ ಆರೋಪದ ಸತ್ಯಾಸತ್ಯತೆಯ ಬಗ್ಗೆ ಸ್ಪಷ್ಟೀಕರಣ ಬೀಳಬಹುದು. ಆದರೆ, ಚೌ-ನೆಹರು ಭೆಟ್ಟಿಯಾಗದೆ ಅವರ ಮೇಲಿನ ಆ ವಾದನೆ ಅಲ್ಲವಾಗುವ ಲಕ್ಷಣಗಳಿಲ್ಲ. ಕೊಲಂಬೊ ಸಲಹೆಗಳನ್ನು ಚೀನಾ ಮಾನ್ಯ ಮಾಡದೆ ಈ ಭೆಟ್ಟಿ ನಡೆಯುವ ಸಂಭವವೂ ಇಲ್ಲ. ಅಂತೂ ಉತ್ಸಾಹದಿಂದಲೇ ಮುಂತೋರಿದವರಾಗಿದ್ದಾರೆಂದರೆ ಅತಿಶಯವೆನಿಸದು.

**ವಿಚಾರಕ್ಕೆ ಸದವಕಾಶ**

ಇದುವರೆಗಣ ಪರಿಸ್ಥಿತಿಗಳನ್ನು ನಾವು ಅವಲೋಕಿಸುವಾಗ ಸಾಮ್ರಾಜ್ಯಶಾಹಿ ಚೀನವು ತನ್ನ ಮೊಂಡು ವಾದವನ್ನು ಬಿಟ್ಟುಕೊಡುವುದಕ್ಕೆ ಸಿದ್ಧವಾಗಿಲ್ಲ. ಹಾಗಿರುವಾಗ, ಶಾಂತಿಯೆಂದು ಬೊಬ್ಬಿರಿಯುವುದರಲ್ಲೇ ತೃಪ್ತರಾಗುತ್ತಿರುವ ಚೌ ಎನ್‌ಲಾಯಿಯವರನ್ನು ಅವರ ಪಾಡಿಗೇ ಬಿಟ್ಟು, ಭಾರತವೇ ಶಾಂತಿಯೆಂದು ಚೀನಾದ ಆಕ್ರಮಣವು ನಮ್ಮ ಪವಿತ್ರ ನೆಲದ ಮೇಲೆ ನಡೆದಿರುವಂತೆಯೇ ಮುಂದುವರಿಯಬೇಕೇ? ಎಂಬ ಪ್ರಶ್ನೆ ಎದ್ದು ತೋರುತ್ತದೆ. ಶಾಂತಿ ಬೇಕಾಗಿರುವುದು ಭಾರತಕ್ಕೆ ಮಾತ್ರವೆ? ಇದಕ್ಕಾಗಿ ನಮ್ಮ ಗೌರವವನ್ನು, ಸಾರ್ವಭೌಮತೆಯನ್ನು ಪ್ರತಿಷ್ಠೆಯನ್ನು ಬಲಿಗೊಟ್ಟು, ಅಪಮಾನದಿಂದ ತಲೆತಗ್ಗಿಸಿಕೊಳ್ಳಬೇಕೇ ಎಂದು ನಾವು ವಿಚಾರಿಸಬೇಕಾದ ಕಾಲವೀಗ ಬಂದಿದೆ. ಭಾರತೀಯರ ರಾಷ್ಟ್ರಪ್ರೇಮವನ್ನಳೆಯುವ ಮಾನದಂಡವೇ ಈ ಚೀನಿಯರ ಆಕ್ರಮಣವೆನ್ನಿಸಿದೆ. ನಮ್ಮ ಸ್ವರಕ್ಷಣಾ ಸಾಮರ್ಥ್ಯವೆಷ್ಟು ಎಂಬುದರ ಪರಿಶೀಲನಾ ರಂಗ—ಈ ಪವಿತ್ರ ಹಿಮಾಲಯವೆನಿಸುವ ಸಮಯವೀಗ ಸಮೀಪಗತವಾಗಿದೆ.

**ಗುರಿಮುಟ್ಟುವ ದೃಢ ನಿರ್ಧಾರ**

ಕವಿಕುಲಗುರು ಕಾಳಿದಾಸ ಪೂರ್ವಾಪರ ಸಮುದ್ರಗಳನ್ನು ಅಳೆಯುವ ಮಾನದಂಡವೆಂದು ನಗಾಧಿರಾಜ ಹಿಮಾಲಯವನ್ನು ವರ್ಣಿಸಿದ್ದಾನೆ. ಭಾರತೀಯರ ಅಂತಸ್ಸತ್ವವನ್ನಳೆಯುವ ಮಾನದಂಡವಾಗಲಿದೆ ಈ ನಗಾಧಿರಾಜನ ಸೋಪಾನವಿಂದು. ಇದಕ್ಕಾಗಿ ನಾವು, ಭಾರತೀಯರು ಸಿದ್ಧರಾಗಬೇಕು. ನಮ್ಮ ಶಕ್ತಿ ಸರ್ವಸ್ವವನ್ನು ಕೇಂದ್ರೀಕರಿಸಿ ನಮ್ಮ ಗೌರವವನ್ನು ರಕ್ಷಿಸಲು ಸಿದ್ಧರಾಗಬೇಕು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಬಗ್ಗೆ ಮಹಾತ್ಮಾ ಗಾಂಧೀಜಿಯವರೊಮ್ಮೆ ಅಂದಿದ್ದರು: 'Karnad Sadashiva Rao made no sacrifice, but, sacrifice made Karnad Sadashiva Rao.' (ಕಾರ್ನಾಡು ಸದಾಶಿವರಾಯರು ಏನೂ ತ್ಯಾಗ ಮಾಡಲಿಲ್ಲ; ಆದರೆ, ತ್ಯಾಗವೇ ಕಾರ್ನಾಡು ಸದಾಶಿವರಾಯರನ್ನು ರೂಪಿಸಿತು.) ಹಾಗೆಯೇ ಭಾರತೀಯರಿಂದು ಸರ್ವಸ್ವವನ್ನೂ ಸ್ವದೇಶ ರಕ್ಷಣೆಗೆ ತ್ಯಾಗ ಮಾಡಿದರು ಎಂದು ಹೇಳದೆ, ದೇಶ ರಕ್ಷಣೆಗಾಗಿ ಗೈದ ಸರ್ವಸ್ವ ತ್ಯಾಗವೇ ಭಾರತೀಯರನ್ನು ನಿರ್ಮಿಸಿತು ಎಂದು ಯುಗಯುಗವೂ ವಿಶ್ವಜನಕೋಟಿ ಸ್ಮರಿಸಿಕೊಳ್ಳುವಂತೆ ನಾವಿಂದು ನಮ್ಮನ್ನು ಸಜ್ಜುಗೊಳಿಸಬೇಕಾಗಿದೆ. ಸಂಧಾನ ಮಾರ್ಗಗಳು ಮುಚ್ಚಲ್ಪಟ್ಟರೆ, ಸಂಗ್ರಾಮದ ಹಾದಿಯನ್ನು ಹಿಡಿಯುವುದು ಅನಿವಾರ್ಯವಾದುದರಿಂದ, ನಮ್ಮ ಗುರಿಯನ್ನು ನಾವು ನಿರ್ಧರಿಸಿಕೊಳ್ಳಬೇಕಾಗಿದೆ; ಗುರಿಯತ್ತ ಸಾಗಬೇಕಾಗಿದೆ. ಅದು ಮುಟ್ಟುವವರೆಗೆ ಮುಂದರಿಯಬೇಕು.

ಜೈ ಹಿಂದ್!

## ನವಯುಗದ ಕರೆ!

ನವಯುಗದ ಕೂಗದೊ ಕೇಳುತಿಹುದು!
ನವಯುವಕರೆದ್ದೇಳಿ! ಕೀರ್ತಿ ಬಹುದು!
ಇಂದು ನಿನ್ನೆಯದಲ್ಲ ಹಿಂದಿನಿಂದವೆ ಬಂದ
ಧರ್ಮ ಮಾರ್ಗದ
ನಡತೆಯೆಮ್ಮದಹುದು!
ಕೊಟ್ಟ ಭಾಷೆಗೆ ತಪ್ಪದಿಟ್ಟ
ಹೆಜ್ಜೆಯ ಸರಿಸ
ದಿಷ್ಟು ಕಷ್ಟಕು ಬೆದರದೊಂದು ಘನತೆ!
ಇಷ್ಟವೆಂದರೆ ಎದೆಯೊಳಿಪ್ಪೊ
ದಾರಿಯನಿತ್ತ
ನಿಷ್ಠಾತ್ಮ ಪೂರ್ವಜರ ಧರ್ಮಪರತೆ!
ಅದರಂತೆ, 'ಒಡಹುಟ್ಟು ನೀನೆಂ'ದು
ನಂಬಿಸಲು
ಒಡಲೊಳತ್ತೆ ವಿಷ ದಾರಿ, ಅಪೊಡವ ಮಾರಿ
ಹಾಲನೆರೆದರು ಹಾವಿಗುಂಟೇ
ಕೃತಜ್ಞತೆಯು?
ದುಷ್ಟ ಬುದ್ಧಿಯನಾತ ನಿಂತು ತೋರಿ
ಈ ಜಗದ ಕಣ್ಣಿದಿರೆ
"ಪಂಚಶೀಲ"ವ ಮೆಟ್ಟಿ
ಕೆಣಕಿದನು ಕೆಣಕಿದಂತೆಯೆ
ಘಣಿಯನೆಮ್ಮ!
ಶಾಂತಿ ಭ್ರಾಂತರು ನಮ್ಮ
ಮಾತೆಯವಳನು ಹಿಂಸೆ
ಗೊಳಪಡಿಸಿದಾಗಲೂ
ಶಾಂತಿಯೇನೆಮ್ಮ!!
ಸತ್ವಬಲ ವೀಕ್ಷಿಸಲಿ! ಶಾಂತಿಯಂತೆಯೆ
ಕ್ರಾಂತಿ
ಹರಡಿಸಲು ಸತ್ವವಿದೆ ಭಾರತೀಯರಿಗೆ!
ಎಂಬುದನು ಜಗವರಿಯಲಿದೊ
ಪ್ರತಿಜ್ಞೆಯ ಗೈವ
ಒಂದಾಗಿ ಮಾತೆಯಾ ಚರಣತಳದೊಳಗೆ"
ಓ ಪಕ್ಷ ಪ್ರಮುಖರೆ! ಸುಜನೆ,
ಸಫಲೆಯು ನಿನ್ನ
ಕಂದರಾಗಿರಲೀಷ್ಟ ಮುಂದುವರಿವೆವು!
ಅನ್ಯಾಯ ಮಾರ್ಗಗಳ ಬಡಿವಟ್ಟು
ಬಳಿಕೊಮ್ಮೆ
ನಿನ್ನ ತೋಳ್ತಂಡದೊಳು ತಾ
ಕುಣಿವೆವು!

—ಭಾಸ್ಕರ ಭಂಡಾರಿ, ಮುಚ್ಚೈಲು

● ಕುಮಾರಿ ಬಿಲ್ಲೆಗಳು ●
(ರಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 1ರ ಸಾಮಾನ್ಯ ರೂ. 4/- ಮಧ್ಯಮ ರೂ. 6/- ಉತ್ತಮ ರೂ. 9/-
**P. Devee & Co.** (N. J.) Calcutta—40

**ಹೊಸ ಪುಸ್ತಕ—**
ನಚಿಕೇತ'ರ,
ನವೀನ ಕಾದಂಬರಿ—
# ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ಪ್ರಕಾಶಕರು,
ನವಯುಗ ಪ್ರೆಸ್, ಉಡುಪಿ.

"ಹಿಮವು ಸರ್ವಸ್ವವನ್ನು ಕೊಚ್ಚಿಕೊಂಡು ಹೋಗಬಹುದು; ಆದರೆ ನಮ್ಮ ರಾಷ್ಟ್ರ ರಕ್ಷಣೆಯ ದೃಢ ನಿರ್ಧಾರವನ್ನಲ್ಲ" ಮೇಲಿನ ಚಿತ್ರದಲ್ಲಿ ಜವಾನರ ಹಿಮಗಿರಿ ಚಲಿಸುತ್ತಿರುವುದನ್ನು ಕಾಣಬಹುದು

## ಚೆಸ್ಟರ್ ಬೌಲ್ಸರ ಪುನರ್ನಿಯುಕ್ತಿ

(೪ನೇ ಪುಟದಿಂದ)

ಜಾನ್ ಕೆನ್ನೆಡಿಯವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ, ಚುನಾವಣಾ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೆನ್ನೆಡಿಯವರು ಗೆದ್ದ ಬಳಿಕ, ವಿದೇಶ ಖಾತೆಯ ಅಂಡರ್ ಸೆಕ್ರೆಟರಿಯಾಗಿ ಬೌಲ್ಸರನ್ನು ನಿಯುಕ್ತ ಮಾಡಿದರು. ಮುಂದೆ, ಆಫ್ರಿಕ, ಏಶ್ಯ ಮತ್ತು ದಕ್ಷಿಣ ಅಮೆರಿಕೆಗಳ ಸಂಬಂಧದಲ್ಲಿ ಅಧ್ಯಕ್ಷರ ವಿಶೇಷ ಸಲಹೆಗಾರರಾದರು.

ಶ್ರೀ ಚೆಸ್ಟರ್ ಬೌಲ್ಸರಿಗೆ ಭಾರತದ ಮೇಲೆ ತುಂಬ ಅಭಿಮಾನ ಮತ್ತು ಗೌರವ. ಅಂತೆಯೇ ಶ್ರೀಮತಿ ಬೌಲ್ಸರಿಗೆ ಕೂಡ. ಶ್ರೀಮತಿಯವರು ೧೯೫೧ರ ಅವಧಿಯಲ್ಲಿ ಭಾರತದಲ್ಲಿದ್ದಾಗ ಹಿಂದೀ ಭಾಷೆಯನ್ನು ಕಲಿತಿದ್ದರು. ಭಾರತೀಯ ಸಂಗೀತದಲ್ಲಿ ಅವರಿಗೆ ವಿಶೇಷಾಸಕ್ತಿ. ಬೌಲ್ಸ ದಂಪತಿಗಳಿಗ ಇಬ್ಬರು ಮಕ್ಕಳಿದ್ದು ಅವರೂ ಭಾರತದ ಬಗ್ಗೆ ಅಭಿಮಾನ ಪಡುತ್ತಾರೆ. ಇವರಿಬ್ಬರೂ ೧೯೫೩ರ ನಂತರ ಒಂದೊಂದು ಬಾರಿ ಭಾರತಕ್ಕೆ ಆಗಮಿಸಿದ್ದರು. ಇವರಲ್ಲಿ ಸ್ಯಾಲಿಯೆಂಬವಳು 'ಅಟ್ ಹೋಂ ಇನ್ ಇಂಡಿಯಾ' ಎಂಬ ಒಂದು ಪುಸ್ತಕವನ್ನೂ ಬರೆದಿದ್ದಾರೆ.

ಹೊಸ ದಿಹಲಿಯಲ್ಲಿರುವ ರೂಜವೆಲ್ಟ್ ಭವನದಲ್ಲಿ ಸದ್ಯದಲ್ಲೇ ಬೌಲ್ಸ್ ಸಂಸಾರ ನೆಲೆಸಲಿದೆ. ಇವರ ಗುಣರಾಗಮನದ ವಾರ್ತೆಯಿಂದಲೇ ಪ್ರಸನ್ನರಾದ ಭಾರತೀಯರನೇಕರು ಅವರನ್ನು ಸಂಧಿಸಿ ತಮ್ಮ ಹಳೆಯ ಗೆಳೆತನವನ್ನು ಬಲಪಡಿಸಿಕೊಳ್ಳಲು ಕಾತರರಾಗಿ ಕಾಯುತ್ತಲಿದ್ದಾರೆ. ಬೌಲ್ಸರು ಭಾರತದ ರಾಯಭಾರಿಗಳಾಗಿ ಹಿಂದೊಮ್ಮೆ ಯಶಸ್ವಿಯಾದಂತೆಯೇ ಇಂದಿನ ಸಂಧಿಕಾಲದಲ್ಲಿಯೂ ಭಾರತ-ಅಮೆರಿಕೆಗಳ ನಡುವೆ ಸುದೃಢ ಸ್ನೇಹವು ಮೊಳೆಯುವಂತೆ ಬೆಳೆಸುವಂತೆ ಸಗುವರು ಎಂಬ ವಿಶ್ವಾಸ ಅಮೆರಿಕೆಯಲ್ಲೂ ಇದೆ, ಭಾರತದಲ್ಲಿಲ್ಲವೆ ಹೇಳಿ?

ನಮ್ಮ ವಿಶ್ವವಿದ್ಯಾಲಯಗಳು

# ಸಮಸ್ಯಾಕಾರಣ-ವಿದ್ಯಾರ್ಥಿ ಹೆಚ್ಚಳ

ಜೀವನದ ದರ್ಶನವೇ ಶಿಕ್ಷಣದ ಗುರಿ ಆದರೆ ಇಂದಿನ ಶಿಕ್ಷಣವು ನಿರೀಕ್ಷಿಸಿದ ಹಾದಿಯಲ್ಲಿ ಸಾಗಿಲ್ಲ. ಇಂದು ವಿಶ್ವವಿದ್ಯಾಲಯಗಳು ಬರೀ ಯಂತ್ರಗಳಂತಾಗಿವೆ, ಸಂತೆಯೆಂದರೂ ತಪ್ಪಲ್ಲ. ವಿದ್ಯಾರ್ಥಿಯ ಪ್ರತಿಭೆ ಹಾಗೂ ಇಚ್ಛೆಗೆ ಅನುಗುಣವಾದ ಶಿಕ್ಷಣ ಅಲ್ಲಿ ದೊರೆಯುವುದಿಲ್ಲ, ಶಿಕ್ಷಣ ಮಾಧ್ಯಮವನ್ನು ಮಾತೃಭಾಷೆಗೆ ಅಳವಡಿಸಿಲ್ಲ. ಅಧ್ಯಾಪಕರ ನೇಮಕದಲ್ಲಂತೂ ರಾಜಕೀಯವೇ ಪ್ರಧಾನ. ಅರ್ಹತೆಗಿಂತ ಶಿಫಾರಸು ಮುಖ್ಯ ವಿದ್ಯಾರ್ಥಿಗಳಲ್ಲಿ ಅಶಿಸ್ತು, ಅಸಿಸ್ತುಗಳು ತುಂಬಿ ಹೋಗಿವೆ. ಇಂಥ ನಾನಾ ಸಮಸ್ಯೆಗಳು ವಿಶ್ವವಿದ್ಯಾಲಯಗಳ ಚೌಕಟ್ಟನ್ನೇ ಅಲುಗಾಡಿಸುತ್ತಿವೆ. ಹೀಗಿರುವಾಗ ನಮ್ಮ ವಿಶ್ವ ವಿದ್ಯಾಲಯಗಳು ಮೂಲಭೂತ ಬದಲಾವಣೆಗಳೊಂದಿಗೆ ಉಚ್ಚ ಆದರ್ಶದ ಗುರಿಯಲ್ಲಿ ರೂಪುಗೊಳ್ಳ ಬೇಕಾಗಿದೆ.

### ಪ್ರಾಚೀನ ವಿದ್ಯಾ ಪೀಠ

ಭಾರತೀಯ ವಿಶ್ವವಿದ್ಯಾಲಯಗಳ ವಿಷಯ ಬಂದಾಗ ನಮಗೆ ಪುರಾತನ ಜ್ಞಾನ ಪೀಠಗಳಾದ ನಲಂದ, ತಕ್ಷಶಿಲೆ, ವಿಕ್ರಮಶಿಲೆ ಮತ್ತು ಉಜ್ಜಯಿನಿಗಳೇ ಮೊದಲಾದ ವಿದ್ಯಾಪೀಠಗಳ ಚಿತ್ರ ಕಣ್ಣೆದುರು ನಿಲ್ಲುತ್ತದೆ. ದೇಶವಿದೇಶಗಳಿಂದ ವಿದ್ಯಾರ್ಥಿಗಳು ಬಂದು ಇಲ್ಲಿ ವರ್ಷಗಟ್ಟಲೆ ನೆಲೆಸಿ ಖಗೋಳಶಾಸ್ತ್ರ, ಗಣಿತ ತತ್ವಶಾಸ್ತ್ರ, ದರ್ಶನ ಮುಂತಾದ ವಿಷಯಗಳಲ್ಲಿ ಮನ ದಣಿಯೆ ಅಧ್ಯಯನ ಮಾಡಿ, ಮಹಾ ಪಂಡಿತರಾಗಿ ಮರಳುತ್ತಿದ್ದ ಆ ಚಿತ್ರ ಇನ್ನೆಲ್ಲಿ? ಮನೆ ಮಠಗಳ ಗೊಡವೆಯಿಲ್ಲದ ಲೌಕಿಕ ಪ್ರಪಂಚದ ಪರಿವೆ ಇಲ್ಲದೆ ಜ್ಞಾನ ಸಾಗರದಲ್ಲಿ ಮುಳುಗಿದ ವಿದ್ಯಾರ್ಥಿಗಳ ಬಾಳಜ್ಯೋತಿಯನ್ನು ಪ್ರಜ್ವಲಿಸುವುದೇ ಆದ್ಯ ಕರ್ತವ್ಯವಾಗಿದ್ದ ಜ್ಞಾನದೀವಿಗೆಗಳಾದ ಆ ಆಚಾರ್ಯವರ್ಗವೆಲ್ಲಿ? ಸಕಲ ವಿದ್ಯಾಸಂಪನ್ನರಾಗಿದ್ದ ನಾವು ಇಂದು ಮತ್ತೊಮ್ಮೆ ಅಜ್ಞಾನ ಸಾಗರದಲ್ಲಿದ್ದೇವೆ. ಭಾರತದ ಇಂದಿನ ಸಂಧಿಕಾಲದಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಮಹತ್ತರವಾದದು. ನಾವಿಂದು ಆಕ್ರಾಂತಿಯ ಚೀನೀಯರಿಂದಾಗಿ ಯುದ್ಧದ ಭೀಕರ ಸನ್ನಿವೇಶದಲ್ಲಿದ್ದರೂ ಮುಂದಿನ ಪೀಳಿಗೆಯ ಭವ್ಯ ಜೀವನಕ್ಕೆ ಭದ್ರವಾದ ಬುನಾದಿ ಹಾಕುವುದು ವಿಶ್ವವಿದ್ಯಾಲಯಗಳ ಆದ್ಯ ಕರ್ತವ್ಯ ಹಾಗೂ ಮಹೋದ್ದೇಶವಾಗಿದೆ.

### ಆಧುನಿಕ ವಿದ್ಯಾಪೀಠಗಳು

ಆಧುನಿಕ ಚರಿತ್ರೆಯನ್ನು ಪರಿಶೀಲಿಸಿದರೆ ನಮ್ಮ ವಿದ್ಯಾಪೀಠಗಳ ಯುಗವು ತೀರ ಇತ್ತೀಚಿನದೆಂಬುದು ಸ್ಪಷ್ಟವಾಗುತ್ತದೆ. ೧೮೫೭ರಲ್ಲಿ ಸ್ಥಾಪಿತವಾದ ನಮ್ಮ ವಿಶ್ವವಿದ್ಯಾಲಯಗಳು ಪ್ರಥಮ ಸ್ವಾತಂತ್ರ್ಯ ಸಮರದ ನಂತರ ಆಂಗ್ಲರಿಂದ ಆರಂಭಿಸಲಾದ ದಯಾಭಿಕ್ಷೆಗಳಲ್ಲಿ ಒಂದೆಂಬುದು ವೇದ್ಯವಾಗುತ್ತದೆ. ಈ ಒಂದು ಶತಮಾನದ ವಿದ್ಯಮಾನವನ್ನೇ ನಾವು ಸ್ಥೂಲವಾಗಿ ಪರಿಶೀಲಿಸಿದಾಗ ಬೆಳವಣಿಗೆಯ ಮೂರು ವಿಭಿನ್ನ ಹಂತಗಳು ಗೋಚರವಾಗುತ್ತವೆ-೧೮೫೭ರಿಂದ ೧೯೦೫ರ ವರೆಗಿನ ಕಾಲ; ೧೯೦೫ರಿಂದ ೧೯೪೭ರ ತನಕ ೧೯೪೭ರ ನಂತರ.

ವಿಶ್ವವಿದ್ಯಾಲಯಗಳ ಸ್ಥಾಪನೆಯಾದ ಮೊದಲಿನ ಕಾಲದಲ್ಲಿ (೧೮೫೭ರಿಂದ ೧೯೦೫) ಜನತೆಯಲ್ಲಿ ಅದರ ಬಗ್ಗೆ ಆಕರ್ಷಣೆ ಮೂಡಿತು. ಶತಮಾನಗಳ ಕಾಲದಿಂದ, ಸಾಹಿತ್ಯ, ತತ್ವಶಾಸ್ತ್ರ ಮತ್ತು ವಿಜ್ಞಾನ ಇತ್ಯಾದಿ ವಿಷಯಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಚಟುವಟಿಕೆ ನಡೆಯುತ್ತಿದ್ದ ಈ ದೇಶದಲ್ಲಿ ಸಹಜವಾಗಿಯೇ ಉನ್ನತ ವಿದ್ಯಾ ಕೇಂದ್ರಗಳ ಬಗೆಗೆ ಗೌರವ ಮೂಡಿತ್ತು. ಸ್ವಾತಂತ್ರ್ಯ ಸಮಾನತೆ, ರಾಷ್ಟ್ರೀಯ ಭಾವನೆ, ಅರ್ಥ ಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಪಾಶ್ಚಾತ್ಯ ಆಧುನಿಕ ವಿಚಾರಗಳು ಕ್ರಮೇಣ ಪ್ರಸಾರವಾಗತೊಡಗಿದುವು. ಹೊಸದಾದ ಮತ್ತು ಪ್ರಾಥಮಿಕ ಈ ವಿಚಾರಗಳು ವಿಚಾರ ಶೀಲ ನಿರುದ್ಯೋಗೀ ಮನಗಳಿಗೆ ಆಹಾರವಾದುವು. ಉಚ್ಚ ಶಿಕ್ಷಣದ ಈ ಕೇಂದ್ರಗಳು ಜನತೆಯ ಅಭಿಮಾನದ ಆಸ್ತಿಗಳಾದುವು.

### ಟೀಕೆಗಳ ಪ್ರಾರಂಭ

ಆದರೆ ಸ್ವಲ್ಪ ಕಾಲದಲ್ಲೇ ಇಷ್ಟವಾಗುತ್ತಿದ್ದ ರಾಷ್ಟ್ರೀಯತೆಯ ಪ್ರವಾಹದಲ್ಲಿ ಟೀಕೆಗೆ ಒಳಗಾಗಬೇಕಾಯಿತು. ೧೯೦೫ರಿಂದ ೧೯೪೭ರ ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಲ್ಲಿ ಉಕ್ಕುತ್ತಿದ್ದ ಆ ರಾಷ್ಟ್ರಾಭಿಮಾನದ ಪ್ರವಾಹ ದೇಶದ ಕುರಿತು ಈ ವಿಶ್ವವಿದ್ಯಾಲಯಗಳ ಕರ್ತವ್ಯವನ್ನು ಕಟುವಾಗಿ ಕೋರಿಸಿತು. ರಾಷ್ಟ್ರಾಭಿಮಾನದಿಂದ ಭಾರತೀಯ ಸಂಸ್ಕೃತಿ ಸಾಹಿತ್ಯ, ಕಲೆ, ವೇದಾಂತ ಇವುಗಳಲ್ಲಿ ಆಸಕ್ತಿ ಜಾಸ್ತಿಯಾದುದಲ್ಲದೆ ಪಾಶ್ಚಾತ್ಯ ಸಂಸ್ಕೃತಿ ವಿಚಾರ ಧಾರೆಗಳಲ್ಲಿ ತಿರಸ್ಕಾರ ಅವಿಶ್ವಾಸ-ಅನಾದರಗಳನ್ನು ಬೀರೂರಿಸಿತು. ಮೆಕಾಲೆ ಸಾಹೇಬನ ಅಪೇಕ್ಷೆಯಂತೆ ಭಾರತೀಯ ವಿಶ್ವವಿದ್ಯಾನಿಲಯಗಳು "ವಿದ್ಯೆಯಲ್ಲಿ, ಆಚಾರದಲ್ಲಿ, ವಿಚಾರ-ವ್ಯವಹಾರಗಳಲ್ಲಿ, ರುಚಿಯಲ್ಲಿ ಆಂಗ್ಲರಾದ ಭಾರತೀಯರನ್ನು ಉತ್ಪಾದಿಸಬೇಕಿತ್ತು. ಈ ಗುರಿ ದೇಶಾಭಿಮಾನಿಗಳ ಕಠೋರ ಟೀಕೆಗೂ ನಿಂದೆಗೂ ಒಳಗಾಯಿತು. ರಾಷ್ಟ್ರೋದ್ಧಾರಕ್ಕೆ ಆವಶ್ಯಕವಾದ ವಿಚಾರಶೀಲ ದೇಶ ಸೇವಕರನ್ನು ತರಬೇತುಗೊಳಿಸುವ ಮಹಾ ಕಾರ್ಯದಲ್ಲಿ ಸಹಯೋಗ ನೀಡುತ್ತಿಲ್ಲವೆಂದು ಹೇಳಿ ಮಹಾತ್ಮಾ ಗಾಂಧೀಜಿಯವರು, ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ರಾಷ್ಟ್ರಾಭಿಮಾನ, ಬ್ರಹ್ಮಚರ್ಯ ಪಾಲನೆ, ಶಿಸ್ತು ಸಂಯಮ ಮುಂತಾದ ತತ್ವಗಳಿಗೆ ಪ್ರಾಮುಖ್ಯತೆ ಕೊಡುವ ವಿದ್ಯಾಪೀಠಗಳನ್ನು ಅವರು ಸ್ಥಾಪಿಸಿದರು. ಮುಂದೆ ರಾಜಕೀಯ ಸ್ವಾತಂತ್ರ್ಯ ದೊರೆತು ಸರಕಾರ ನಮ್ಮದಾಗುವ ವರೆಗೂ ವಿಶ್ವವಿದ್ಯಾನಿಲಯಗಳು ಆಂಗ್ಲ ಸರಕಾರದ ಒಂದು ಭಾಗವೆಂದೇ ಭಾವಿಸಲ್ಪಡುತ್ತಿದ್ದುದರಿಂದ ಅ

೧೨ನೇ ಪುಟ ನೋಡಿ

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

## ಮುತ್ತು ಕೊಟ್ಟ ಮೋಹಿನಿ

(೨ನೇ ಪುಟದಿಂದ)

ಶಾಸ್ತ್ರಿ— ನಮ್ಮ ಕೆಲಸವಾಯಿತಲ್ಲ ನಡೆಯಿರಿ.

(ಚನ್ನಪ್ಪ ಮತ್ತು ಶಾಸ್ತ್ರಿ ನಿರ್ಗಮನ)

ವಾಸು: (ಸ್ವಾಗತ) ಸದ್ಯ ತೊಲಗಿದರಲ್ಲಾ. ಒಳ್ಳೆ ರಂಡ ಮುಂಡೆಗೆ ಶಾನುಭೋಗ ಗಂಟು ಬಿದ್ದಂತೆ ಬೀಳುತ್ತಾರೆ. ಸಮಯ ಸಂದರ್ಭಗಳೇ ಗೊತ್ತಾಗುವುದಿಲ್ಲ. ಮೋಹಿನೀ ಮೋಹಿನೀ....(ಸ್ವಲ್ಪ ಹೊತ್ತು ಕಾದು) ಇನ್ನೂ ಬರಲಿಲ್ಲವಲ್ಲ. ಹೊರಟು ಹೋದಳೇನೋ? ಒಳ್ಳೆ ಹುಡುಗಿ ನೋಡಿದರೆ ಬಾಯಿಗೆ ಬಂದಂತೆ ಮಾತನಾಡುತ್ತಾರಲ್ಲಾ. ಜನರನ್ನು ಮೆಚ್ಚಿಸಲು ಜನಾರ್ದನನಿಂದಲೂ ಸಾಧ್ಯವಿಲ್ಲ. ಮೋಹಿನಿಯನ್ನು ದೆವ್ವ ಅಂತಾರಲ್ಲ! ಏನು ಹೇಳ್ಲಿ ನಮ್ಮಪ್ಪನಿಗೆ! ನಮ್ಮಪ್ಪನಿಗೆ ಬುದ್ಧಿ ಇದ್ದರೆ ತಾನೇ? ಮೋಹಿನಿ ಮೋಹಿನಿ.... (ಮೋಹಿನಿ ಪ್ರವೇಶ ಮುಟ್ಟಲು ಹೋಗಿ ದೂರ ಸರಿಯುವಳು) ಮೋಹಿನಿ ದೂರ ಸರಿದದ್ದೇಕೆ? ನನ್ನ ಸನ್ನಿಧಾನವು ಬೇಸರವಾಯಿತೇ.

ಮೋಹಿನಿ: (ದುಃಖದಿಂದ) ಯಾವ ತಪ್ಪಿಗಾಗಿ ಈ ಶಿಕ್ಷೆ. ನಿಮ್ಮನ್ನು ದೂರದಿಂದಲೇ ನೋಡಿ ಹೋಗ ಬೇಕಾಗಿದೆಯಲ್ಲಾ?

ವಾಸು: ನಿನ್ನ ಮಾತು ಅರ್ಥವಾಗುತ್ತಿಲ್ಲಾ ಮೋಹಿನಿ. ತಂದೆಯವರು ಹೇಳಿದ ಮಾತನ್ನು ಕೇಳಿಸಿಕೊಂಡೆಯಾ? ಅವರ ಮಾತೇನು ಲೆಕ್ಕ ಬಿಡು ಸುಂದರೀ. ನಮ್ಮ ತಂದೆಯವರ ವಿಷಯ ಗೊತ್ತೇ ಇದೆಯಲ್ಲಾ. ಬಾಯಿ ಇದ್ದವರು ಬರಗಾಲದಲ್ಲಿ ಬದಕಿದರು ಎನ್ನುವ್ಹಾಗೆ ಲೊಡಗ ಬಡಗ ಅನ್ನುತ್ತಲೇ ಇರುತ್ತಾರೆ ಅದಕ್ಕೇ ನೀನು ದುಃಖಿಸಬೇಕೇ.

ಮೋಹಿನಿ: ಅವರು ಬಂದಿದ್ದರಿಂದಲೇ ನಮ್ಮ ಮಿಲನಕ್ಕೆ ಅಡ್ಡಿಯಾಯಿತು darling.

ವಾಸು: ಏಕೆ ಮೋಹಿನಿ?

ಮೋಹಿನಿ: ಏಕೆ ಅಂತಾ ಕಣೇ ಕೇಳುತ್ತಿದ್ದೀರಲ್ಲಾ. ಅರ್ಥವಾಗದೆ ನಿಮಗೆ? ಹೆಂಗಸರಬುದ್ಧಿ ಮೊಣಕಾಲು ಕೆಳಗೆ ಅಂತೀರಾ. ಈಗ ತಮ್ಮ ಬುದ್ಧಿಯೋ...

ವಾಸು: ನೀನು ಪಕ್ಕದಲ್ಲಿದ್ದರೆ ನನಗೆ ಏದ್ಧಿನೇ ತೋಚುವುದಿಲ್ಲ.

ಮೋಹಿನಿ: ಈ ಸಿಹಿ ಮಾತುಗಳನ್ನು ಸಾಕುಮಾಡಿ ನನ್ನ ದೊರೆ, ನಿಮ್ಮ ಕೈಯಲ್ಲಿ ಕಟ್ಟಿರುವ ಯಂತ್ರವೇಕೆ?

ವಾಸು: ಈ ಯಂತ್ರದ ಮಾತೆತ್ತಿದರೆ ನನಗೆ ಭಯವಾಗುತ್ತದೆ. ನಿನ್ನಿಂದ ಅಪಾಯವಿಲ್ಲ ತಾನೇ!



ಮೋಹಿನಿ: ಅಪಾಯ! ಡೇಂಜರ್! (ನಗುತ್ತಾ) ಅದು ಮೀಸೆ ಹೊತ್ತ ಗಂಡಸಿಗೆ! ಈ ಪುಣ್ಯ ಭೂಮಿಯಲ್ಲಿ ಜನಸಿದ ಗಂಡಸಿಗೆ. ಅದೂ ಒಬ್ಬ ಅಬಲೆಯಿಂದ ಅಪಾಯ!....ಹ..ಹ...ಹ್ಹಾ...ಹ್ಹಾ.... (ಗಟ್ಟಿಯಾಗಿ ನಗುವಳು.)

ವಾಸು: (ಕಿವಿಯನ್ನು ಮುಚ್ಚಿಕೊಂಡು) ಸಾಕುಮಾಡು ಮೋಹಿನಿ. ಸಾಕು ಮಾಡು. ನಿನ್ನ ಭಯಂಕರವಾದ ಅಟ್ಟಹಾಸದ ನಗುವನ್ನು ಕೇಳಲಾರೆ.

ಮೋಹಿನಿ: ಆ ಯಂತ್ರವನ್ನು ಸ್ವಲ್ಪ ಹೊತ್ತು ಕಳಚಿ ಬನ್ನಿ. ಒಂದೇ ಬಾರಿ ಚುಂಬಿಸಿ ಹೋಗುತ್ತೇನೆ. Only once Darling. ನನ್ನಿಂದ ನಿನಗೆ ಕೇಡಿಲ್ಲ. ನನ್ನ ಪ್ರಾಣಪ್ರಿಯಾ, ದಯಮಾಡಿ ಇಲ್ಲವೆನ್ನಬೇಡಿ ಚುಂಬನದ ಭಿಕ್ಷೆಯನ್ನು ಬೇಡುತ್ತಿದ್ದೇನೆ.

ವಾಸು: ಅದೊಂದು ಮಾತ್ರ ಸಾಧ್ಯವಿಲ್ಲ ಮೋಹಿನಿ.

ಮೋಹಿನಿ: ನನ್ನ ಚುಂಬನಕೋಸ್ಕರ ಹಗಲಿರುಳು ಪರಿತಪಿಸುತ್ತಿದ್ದೀರಿ. ಸ್ವಲ್ಪ ಹೊತ್ತಿನ ಮುಂಚೆ ನನ್ನ ಚುಂಬನಕ್ಕೆ ಮುಕ್ತಳಂತೆ ಕರೆದಿರಿ.

ವಾಸು— ಇಲ್ಲವೆನ್ನುವುದಿಲ್ಲ ಮೋಹಿನಿ. ಚುಂಬನದ ಸವಿ ನನಗೆ ಗೊತ್ತಿದೆ. ದೊಡ್ಡ ಇಂಗ್ಲಿಷ್ ಕವಿ The kiss is immortal! It goes from lip to lip from century to century, from age to age Men take it and give it and die ಅಂತಾ ಹೇಳಿದ್ದಾನೆ. ಚುಂಬನಗೋಸ್ಕರವೇ ಸಾವಿಗಿಡಾಗಿದ್ದಾರೆ ಎಂದು ಕೇಳಿದ್ದೇನೆ ಆದರೆ, ಈ ಯಂತ್ರವನ್ನು ಕಟ್ಟಿಕೊಂಡ ಮೇಲೆ ನನ್ನ ಮನಸ್ಸೆ ಬದಲಾಗಿದೆ ಮೋಹಿನಿ ನೀನು ಚುಂಬಿಸಿದಾಗ ನನ್ನ ರಕ್ತವನ್ನೆಲ್ಲಾ ಕಾಫಿ ಹೀರಿದಂತೆ ಹೀರಿದರೆ ಹೇಗೆ?

ಮೋಹಿನಿ: ನಿನ್ನೆ ಅರ್ಧ ಗಂಟೆ ಲೇಟಾದರೆ ಹಂಬಲಿಸಿದಿರಿ,

ವಾಸು: ನಿನಗಾಗಿ ಹಂಬಲಿಸಿದೆ, ನಿನ್ನ ಸವಿ ಮುತ್ತಿಗಾಗಿ ಬಯಸಿದೆ. ಆದರೆ ಆದರೆ......ದೆವ್ವವೆಂದರೆ ನನಗೆ ಭಯವಾಗುತ್ತದೆ.

ಮೋಹಿನಿ: ಇದು ವರೆಗೂ ನಾಯಾರೆಂದು ತಿಳಿದಿರಲಿಲ್ಲವೇ?

ವಾಸು: ತಿಳಿಯಲು ಅವಕಾಶ ಎಲ್ಲಿ ಬಂತು ಮೋಹಿನಿ? ಬೆಳ್ಳಗಿರುವುದೆಲ್ಲಾ ಹಾಲೆಂದು ತಿಳಿದೆ. ನಿನ್ನ ಪ್ರೇಮ ಸಾಮ್ರಾಜ್ಯದಲ್ಲಿ ಮುಳುಗಿದ್ದೆ. ನಿನ್ನ ರೂಪರಾಶಿಗೆ ಮನಸೋತಿದ್ದೆ ನೀನು ಮೇಲೆಲ್ಲಾ ಥಳಕು ಒಳಗೆಲ್ಲಾ ಹುಳುಕು ಅಂತಾ ಈಗ ತಿಳಿಯಿತು.

ಮೋಹಿನಿ: ನಾನೇನೋ ಮೊಹಿನಿ ನಿಜ. ಆದರೆ ನಾನು ಅಪಾಯ ಮಾಡುವ ಹೆಣ್ಣಲ್ಲ. ಬೇಗ ಯಂತ್ರವನ್ನು ಕಳಚಿ ಬನ್ನಿ ದೊರೆ. ನನ್ನ ಅನಂತ ಆಸೆಯನು ನೆರವೇರಿಸಿ Darling

ವಾಸು: ತಾಯಿತವನ್ನೂ ಕಳಚಲು ಸಾಧ್ಯವಿಲ್ಲ.

ಮೋಹಿನಿ: ನನ್ನ ನಂಬಿಕೆಯಿಲ್ಲವೇ

ವಾಸು: ಇತ್ತು.

ಮೋಹಿನಿ: ಹಾಗಾದರೆ ಭಯವೇಕೆ Darling?

ವಾಸು: ಈಗ ನೋಡಿದರೆ ನೀನು ಹೆಣ್ಣಾಗಿ ಕಾಣುತ್ತಿಲ್ಲ. ನೀನು ನೀನು....

ಮೋಹಿನಿ: ಏನಾಗಿದ್ದೇನೆ ವಾಸು.

ವಾಸು: ದೆವ್ವವಾಗಿ ಕಾಣುತ್ತೀಯಾ

ಮೋಹಿನಿ: ದೆವ್ವ (ನಗುತ್ತಾ) ಹ... ಹ....ಹ್ಹಾ....ಹ್ಹಾ.

ವಾಸು: ಕಿವಿ (ಮುಚ್ಚಿಕೊಂಡು) ನಿನ್ನ ನಗುವನ್ನು ನಿಲ್ಲಿಸು ಮೋಹಿನಿ. ನಗು ಕೇಳಿದರೆ ಎದೆ ನಡುಗುತ್ತದೆ. ಮೋಹಿನಿ ಮೋಹಿನಿ ...

ಮೋಹಿನಿ: ಏನು ನನ್ನ ದೊರೆ

ವಾಸು: ಇಲ್ಲಿಂದ ಹೊರಟು ಹೋಗು. ಇನ್ನು ಮೇಲೆ....ಇನ್ನು ಮೇಲೆ ಇಲ್ಲಿಗೆ ಬರಬೇಡ.

ಮೋಹಿನಿ: ಇನ್ನು ಮೇಲೆ ಇಲ್ಲಿಗೆ ಬರಬೇಡವೆ? ಬರದಂತೆ ಮಾಡಿಕೊಳ್ಳುತ್ತೇನೆ. ನನ್ನ ಕಟ್ಟ ಕಡೆಯ ಆಸೆಯನ್ನು ನೆರವೇರಿಸಿಕೊಡಿ.

ವಾಸು—ಏನದು?

ಮೋಹಿನಿ; ನಿಮ್ಮ ಜೀವನದ ಅಂತ್ಯ ಚುಂಬನಕ್ಕಾಗಿ ಬೇಡುತ್ತೇನೆ Darling

ವಾಸು: ಮನುಷ್ಯನಿಗೆ ಆಸೆ ಬಹಳ ಮೋಹಿನಿ. ಒಮ್ಮೆ ಚುಂಬಿಸಿದರೆ ಮತ್ತೆ ಬೇಕು ಎನ್ನುತ್ತದೆ ಉಪ್ಪುಹುಳಿ ಉಂಡ ದೇಹ.

ಮೋಹಿನಿ: ಆ ಗುಂಪಿಗೆ ನನ್ನನ್ನು ಸೇರಿಸಬೇಡಿ ಆ ರೀತಿ ಬಯಸುವವಳು ನಾನಲ್ಲ.

ವಾಸು: ಮತ್ತೆ ಈ ಕಡೆ ಸುಳಿಯಲೇ ಬಾರದು.

ಮೋಹಿನಿ: ನಾನು ಮಾತು ಕೊಟ್ಟರೆ ತೀರಿತು. ಯಂತ್ರವನ್ನು ಕಳಚಿಬನ್ನಿ.

ವಾಸು—ಇದು ಈಗ ಬೇರೆ, ಹಾಗೆ ಮುಗಿಸಿಕೊಂಡರಾಗದು. (ಕಳಚುವನು) (ಮೋಹಿನಿ ವಾಸುವನ್ನು ಆಲಿಂಗಿಸಿಕೊಳ್ಳುವಳು.) ಅಯ್ಯೋ ಸತ್ತೇ.... (ಕಿರುಚುವನು) ಅಪ್ಪಾ ಸತ್ತೇ...(ಬೀಳುವನು

ಮೋಹಿನಿ: (ನಗುತ್ತಾ) ಈಗ ತಿಳಿಯಿತೆ ವಾಸು ನಾನು ಯಾರೆಂದು. ಹೆಣ್ಣು ಕಾಣದ ಗಂಡು ನೀನು. ರೂಪ ಯೌವನವಿದ್ದರೆ ದೆವ್ವಗಳನ್ನೇ ಮೋಹಿಸುತ್ತೀರಾ ಅಲ್ಲವೇ ನಿನ್ನನ್ನಾದರೂ ನೋಡಿ ಜನಕ್ಕೆ ಬುದ್ಧಿ ಬರಲೀ. ವಾಸು ಬರುತ್ತೇನೆ, ಟಾಟಾ (ನಿರ್ಗಮನ)

ವಾಸು: (ನರಳುತ್ತಾ) ಅಮ್ಮ.... ಅಯ್ಯೋ ಸತ್ತೇ.... ಹೊಟ್ಟೆ ಉರಿ.... ಮೋಹಿನಿ, ಮೋಹಿನಿ, ಎಂತಹ ಕೆಲಸ ಮಾಡಿದೆ ಮೋ...ಹಿ....ನಿ. ಸಾಯುವನು

(ಚನ್ನಪ್ಪ ಮತ್ತು ಶಾಸ್ತ್ರಿ ಗಾಬರಿಯಿಂದ ಪ್ರವೇಶ)

ಚನ್ನಪ್ಪ: ಏನಾಯಿತು ವಾಸು

ಶಾಸ್ತ್ರಿ: (ಕೈ ಹಿಡಿದು ನೋಡಿ) ಯಂತ್ರ ಇಲ್ಲವಲ್ಲ (ಮೂಗಿಗೆ ಬೆರಳಿಟ್ಟು ನೋಡಿ) ಆಯಿತು ಚನ್ನಪ್ಪನವರೇ ವಾಸುವಿನ ಗತಿ.

ಚನ್ನಪ್ಪ: ಅಯ್ಯೋ ಮಗನೇ ಸತ್ತು ಹೋದೆಯಾ?

(ಇಬ್ಬರು ಅಳುವರು. ಅನಂತರ ತೆರೆ ಬೀಳುವುದು.)

'ಸಂಪೂರ್ಣಂ'

ಸೂಚನೆ: ಈ ನಾಟಕವನ್ನು ಅಭಿನಯಿಸುವ ಇಚ್ಛೆಯುಳ್ಳವರು ಲೇಖಕರಾದ ಶ್ರೀ ಪಿ. ಜಿ. ಪರಮೇಶ್ವರಪ್ಪ S/o ಪಿ. ಗುರುಶಾಂತಪ್ಪ ಅಂಡ್ ಸನ್ಸ್, ಜವಳಿ ವ್ಯಾಪಾರಿ, ಸಂತೆಪೇಟೆ, ಚಿತ್ರದುರ್ಗ, (ಮೈಸೂರು ಸ್ಟೇಟ್) ಇವರಿಗೆ ಬರೆದು ಅನುಮತಿ ಪಡೆಯಬೇಕು.

---

## ದೇವದರ್ಶನ

ಮಣ್ಣಿನಿಂದ ಮಾವಿನ ಹಣ್ಣನ್ನು ತಯಾರಿಸಿ ಅದರ ಮೇಲೆ ಅರಸಿನ ಬಣ್ಣ ಬಳಿದರೆ ಅದನ್ನು ತಿಂದು ತೃಪ್ತಿಯಾಗುವದು ಸಾಧ್ಯವಿದೆಯೇ? ಇಲ್ಲ. ಯಾಕೆಂದರೆ ಅದು ಹಣ್ಣಲ್ಲ; ಹಣ್ಣಿನ ಆಕಾರ ಮಾತ್ರ. ಅದರಂತೆಯೇ ಮೂರ್ತಿಯು ದೇವರಲ್ಲ; ದೇವರ ಸಂಕೇತ ಮಾತ್ರ. ಸತ್ಯ, ಪ್ರೇಮ, ಕರುಣೆ ಇವು ಮಾತ್ರ ನಮಗೆ ಎಲ್ಲಿ ಕಾಣಿಸಿದರೂ ಅಲ್ಲಿ ಪ್ರತ್ಯಕ್ಷ ದೇವರನ್ನೇ ಕಂಡಂತೆ. ಯಾಕೆಂದರೆ ಸತ್ಯ, ಪ್ರೇಮ, ಕರುಣೆಗಳೇ ದೇವರ ರೂಪಗಳಾಗಿವೆ.

ದೇವರ ಗುಣ ಅಸಂಖ್ಯವಾಗಿವೆ. ಏಸು ಕ್ರಿಸ್ತನು ಪ್ರೇಮ ರೂಪದಲ್ಲಿ ದೇವರನ್ನು ಕಂಡ. ಉಪನಿಷತ್ತು ಸತ್ಯ ರೂಪದಲ್ಲಿ ದೇವರನ್ನು ಕಂಡಿತು. ಮಹಮ್ಮದ ಪೈಗಂಬರರು ಕರುಣೆಯ ರೂಪದಲ್ಲಿ ದೇವರನ್ನು ಕಂಡರು.

ದೇವರ ಗುಣ ಅಸಂಖ್ಯ ಇವೆ. ಅವನ್ನೆಲ್ಲ ಒಮ್ಮೆಲೇ ಧ್ಯಾನಿಸುವದು ಶಕ್ಯವಿಲ್ಲ. ನಮಗೆ ಯಾವ ಕಾಲದಲ್ಲಿ ಯಾವ ಗುಣದ ಅವಶ್ಯಕತೆ ಇದೆಯೋ ಅದನ್ನು ತಿಳಿದುಕೊಂಡು ಅದೇ ರೂಪದಲ್ಲಿ ದೇವರ ಧ್ಯಾನ ಮಾಡಬೇಕು. ನಮ್ಮ ಹೃದಯದಲ್ಲಿ ಕಠೋರತೆ ಇದ್ದರೆ ಕರುಣಾಮಯ ದೇವರನ್ನು ನೆನೆಯಬೇಕು. ನಮ್ಮ ಹೃದಯದಲ್ಲಿ ಅಸತ್ಯವಿದ್ದರೆ ಸತ್ಯ ಸ್ವರೂಪೀ ಪರಮೇಶ್ವರನನ್ನು ನೆನೆಯಬೇಕು. ನಮ್ಮ ಮನಸ್ಸಿನಲ್ಲಿ ದ್ವೇಷ ಮತ್ಸರಗಳಿದ್ದರೆ ಪ್ರೇಮಸ್ವರೂಪೀ ಪರಮಾತ್ಮನ ಚಿಂತನೆಮಾಡಬೇಕು.

— ವಿನೋಬಾ

REGD. No. B. G. 176
LICENCE No. 31
Licensed to Post without Prepayment

## ಸಮಸ್ಯಾ ಕಾರಣ— ವಿದ್ಯಾರ್ಥಿ ಹೆಚ್ಚಳ

(೧ನೇ ಪುಟದಿಂದ)

ವು ಕಠಿಣ ಟೀಕೆಗೆ ಒಳಗಾದುವು.

ಸ್ವತಂತ್ರ ಭಾರತದಲ್ಲಾಗಿರುವ ವಿಶ್ವವಿದ್ಯಾಲಯಗಳ ಬೆಳವಣಿಗೆ ಬಹಳ ಅಲ್ಪ. ಕೆಲಸವನ್ನು ಬಿಟ್ಟರೆ ಉಳಿದ ವಿಶ್ವವಿದ್ಯಾನಿಲಯಗಳು ಬರೇ ಪದವಿಯನ್ನು ಪ್ರದಾನ ಮಾಡುವ ಸಂಸ್ಥೆಗಳಾಗಿವೆ. ಯಾವ ವಿಷಯದಲ್ಲೇ ಆಗಲಿ ಗಾಢ ಸಂಶೋಧನೆಗಳನ್ನು ನಡೆಸುವಷ್ಟು ಅಭಿವೃದ್ಧಿ ಹೊಂದಿಲ್ಲ. ಸ್ನಾತಕೋತ್ತರ ಅಧ್ಯಯನ, ಮತ್ತು ಸಂಶೋಧನೆ ಬಹಳ ಮಟ್ಟಿಗೆ ಅಪ್ರಬುದ್ಧ ಸ್ಥಿತಿಯಲ್ಲೇ ಇವೆ. ಜ್ಞಾನಮಂದಿರಗಳಾಗಲು ಇವು ಇನ್ನೂ ಪ್ರಗತಿಪಥದಲ್ಲಿ ಬಹಳ ದೂರ ಸಾಗಬೇಕಾಗಿದೆ. ಸ್ವತಂತ್ರ ಭಾರತದ ಅನೇಕ ಸಮಸ್ಯೆಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಿತಿ ಸುಧಾರಣೆಯೂ ಪ್ರಮುಖ್ಯವಾದವಾಗಿವೆ. ಪ್ರಗತಿಪಥದಲ್ಲಿ ಅಡ್ಡಗಾಲು ಹಾಕುತ್ತಿರುವ ಸಮಸ್ಯೆಗಳನ್ನು ಕೆಳಕಂಡಂತೆ ಕ್ರೋಢೀಕರಿಸಬಹುದು.

### ಮಿತಿ ಮೀರುತ್ತಿರುವ ಸಂಖ್ಯೆ

ಭಾರತದ ಪ್ರಬಲ ಸಮಸ್ಯೆಯಾದ ಜನಸಂಖ್ಯೆಯಂತೆ ನಮ್ಮ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ ಸಂಖ್ಯೆಯೂ ಮಿತಿ ಮೀರುತ್ತಿದೆ. ಕಾಣಬರುತ್ತಿದೆ. ಕೇವಲ ಕೆಲವೇ ವಿದ್ಯಾರ್ಥಿಗಳು ಶಾಂತವಾಗಿ ಕುಳಿತು ಗಹನ ಅಧ್ಯಯನ ಮಾಡುವ ಬದಲು ಕೆಲವು ನೂರುಗಳಷ್ಟು ಮಂದಿ ತರಗತಿಯಲ್ಲಿ ಕುಳಿತುಕೊಂಡು ಪಾಠ ಕೇಳುವ ಸ್ಥಿತಿ ಇಂದು ಸಹಜವಾಗಿದೆ. ವಿದ್ಯೆ ಜನಪ್ರಿಯವಾಗಿದೆ. ನಿಜ, ಆದರೆ ಈ ಸಂಖ್ಯೆ ಸಮಸ್ಯೆಯಾಗುವುದು ಕಡಿಮೆಯಲ್ಲ. ಒತ್ತಡದ ಬಿಸಿ. ಏರುತ್ತಿರುವ ಜನಸಂಖ್ಯೆ ಇದಕ್ಕೆ ಮುಖ್ಯ ಕಾರಣ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಸಂಖ್ಯೆ ಏರಿದಂತೆ ಕಾಲೇಜಿನಲ್ಲಿ ಏರುತ್ತದೆ. ಅದಲ್ಲದೆ ನಮ್ಮ ಪ್ರಗತಿಯ ಯೋಜನೆಗಳಿಂದ ಸಾಮಾಜಿಕ ಸ್ಥಿತಿ ಬದಲಾದಂತೆಲ್ಲ ಈ ಸಂಖ್ಯೆಯು ಹೆಚ್ಚುತ್ತಿದೆ. ಔದ್ಯೋಗೀಕರಣದ ಫಲವಾಗಿ ಇಂದು ಎಲ್ಲರಿಗೂ ತಾಂತ್ರಿಕ ಹಾಗೂ ವ್ಯಾವಹಾರಿಕ ವಿದ್ಯೆ ಅವಶ್ಯಕವಾಗಿದೆ. ಮೊದಲು ಬೇಸಾಯದಂತಹ ಮೂಲ ಉದ್ಯೋಗಗಳಲ್ಲಿದ್ದ ಜನ ಇಂದು ಕೈಗಾರಿಕೆ, ವಾಣಿಜ್ಯ, ಸರಕಾರಿ ನೌಕರಿ ಇತ್ಯಾದಿ ಆಧುನಿಕ ಉದ್ಯೋಗಗಳಿಂದ ಜೀವನ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಪ್ರೌಢ ಶಿಕ್ಷಣ ಸಾಲದುದರಿಂದ ಕಾಲೇಜುಗಳಿಗೆ ಹೋಗುವುದು ಸಹಜವಾಗಿದೆ. ಸ್ವಂತ ಉದ್ಯೋಗಗಳು ಕೈ ಕಡ ಬಗಳು ತಪ್ಪಿ ನೌಕರಿಗಳೇ ಜೀವನಾಧಾರವಾಗುತ್ತ, ತಂದವರೂ ಕಾಲೇಜಿನಲ್ಲಿ ಪ್ರಮುಖ ಸ್ಥಾನ ಪಡೆದಿದೆ. ನೌಕರಿಯ ಭೇಟಿ ಪಡೆಯಲು ವಿಶ್ವವಿದ್ಯಾಲಯದ ಡಿಗ್ರಿ ಒಂದು ಅರ್ಹತೆಯಾದುದರಿಂದ ಅದಕ್ಕೆ ಬಹಳ ಆದರ, ಅನುಚಿತ ಪ್ರಾಮುಖ್ಯತೆ ದೊರಕಿದೆ.

### ಸಮಾನತೆಯ ಕಾಲ

ಹಿಂದೆ ಉಚ್ಚ ಶಿಕ್ಷಣ ದೊರಕುವುದು ಕೇವಲ ಕೆಲವು ಮಂದಿಗೆ—ಹೆಚ್ಚಾಗಿ ಶ್ರೀಮಂತರಿಗೆ ಸಾಧ್ಯವಾಗಿದ್ದಿತು. ಆದರೆ ಇಂದು ಸಮಾನತೆಯ ಕಾಲ—ಆರ್ಥಿಕ ಸಾಮಾಜಿಕ ರಂಗದಲ್ಲಿ ಸಮಾನತೆಯನ್ನು ಸಾಧಿಸುವುದೇ ನಮ್ಮ ಸರಕಾರದ ಪ್ರಮುಖ ಧ್ಯೇಯ. ಜೀವನದಲ್ಲಿ ಉನ್ನತ ಮಟ್ಟಕ್ಕೇರುವ ಆಕಾಂಕ್ಷೆ ಎಲ್ಲರಲ್ಲೂ ಪ್ರಬಲವಾಗಿದೆ. ಸಮಾನತೆಯ ಭಾವನೆ ಅದಕ್ಕೆ ಉತ್ತೇಜಕವಾಗಿದೆ. ಆದುದರಿಂದ ಅನೇಕ ತೊಂದರೆಗಳ ನಡುವೆಯೂ ಸ್ವಶಕ್ತಿ, ಶ್ರದ್ಧೆ, ಉತ್ಸಾಹ ಇವುಗಳ ಬಂಡವಾಳದಿಂದಲೇ ವಿಶ್ವವಿದ್ಯಾನಿಲಯದ ಮೆಟ್ಟಿಲು ಹತ್ತುವವರ ಸಂಖ್ಯೆ ಜಾಸ್ತಿಯಾಗಿದೆ. ಸರಕಾರಗಳ ನೆರವು ಈ ದಿಶೆಯಲ್ಲಿ ಬಹಳ ಉತ್ತೇಜನಕರವಾಗಿದೆಯೆಂಬುದು ನಿಸ್ಸಂದೇಹ.

ಜೀವನಾಧಾರವಾದ ವಿದ್ಯೆ ಆವಶ್ಯಕವಾಗಿರುವ ಈ ಕಾಲದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಔದ್ಯೋಗಿಕ ಶಿಕ್ಷಣ ಮಂದಿರಗಳು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪಿತವಾಗಬೇಕಾಗಿದೆ ಆದರೆ ಹಣದ ಅಭಾವ, ಉಚ್ಚ ಶಿಕ್ಷಣ ಪಡೆದ ತಂತ್ರಜ್ಞರ ಕೊರತೆ ಇವು ಮುಖ್ಯ ಅಡಚಣೆಗಳಾಗಿವೆ

ಈ ಎಲ್ಲ ಕಾರಣಗಳಿಂದಾಗಿ ಇಂದು ವಿದ್ಯಾರ್ಥಿಗಳ ಸಂಖ್ಯೆ ತೀವ್ರವಾಗಿ ಏರಿದೆ. ೧೯೪೭ರಲ್ಲಿ ಮೂರು ಲಕ್ಷವಿದ್ದ ವಿದ್ಯಾರ್ಥಿ ಸಂಖ್ಯೆ ಇಂದು ಸುಮಾರು ೯ ಲಕ್ಷಕ್ಕೂ ಮೀರಿದೆ. ಒಟ್ಟು ಜನ ಸಂಖ್ಯೆಯಲ್ಲಿ ಪ್ರತಿ ೫೦೦ಕ್ಕೆ ಒಬ್ಬನಂತೆ ಕಾಲೇಜು ವಿದ್ಯಾರ್ಥಿ ಇದ್ದಾನೆ.

ಏರುತ್ತಿರುವ ಜನ ಸಂಖ್ಯೆಯಲ್ಲಿ ಹೆಚ್ಚಿನವರು ಅಪ್ರಬುದ್ಧರು ವಿಶ್ವ ವಿದ್ಯಾಲಯದ ಶಿಕ್ಷಣ ಪಡೆಯಲು ಇವರ ಬುದ್ಧಿ ಮನಸ್ಸು, ಇನ್ನೂ ಹದಗೊಂಡಿಲ್ಲ. ಇದರ ಕಾರಣ ಸ್ವಯಂವೇದ್ಯ. ಇಂದು ನಮ್ಮಲ್ಲಿ ವಿಶ್ವವಿದ್ಯಾಲಯದ ಪೂರ್ವ ಶಿಕ್ಷಣದ ಅವಧಿ ಕೇವಲ ೧೧ ವರ್ಷಗಳು ಇಂಗ್ಲೆಂಡ್ ಅಮೇರಿಕ ಮುಂತಾದ ದೇಶಗಳಲ್ಲಿ ಇದು ೧೩ರಿಂದ ೧೫ ವರ್ಷಗಳವರೆಗೆ ಇದೆ. ೧೫ ವರ್ಷ ವಯಸ್ಸಿಗೆ ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಗಿಸಿರುವ ವಿದ್ಯಾರ್ಥಿಯ ಮನೋಬೆಳವಣಿಗೆ ಬಹಳ ಕಡಿಮೆ. ಅಲ್ಲಿಯ ವರೆಗಿನ ಶಿಕ್ಷಣದಲ್ಲಿ ಅವನು ದೈನಂದಿನ ವ್ಯವಹಾರಕ್ಕೆ ಸಾಕು ಸಾಲದಷ್ಟು ವಿದ್ಯೆ ಕಲಿತಿರುತ್ತಾನೆ. ಅದನ್ನು ವಿದ್ಯೆ ಎನ್ನುವುದಕ್ಕಿಂತ ಅಕ್ಷರತೆಯೆನ್ನುವುದು ಸೂಕ್ತ. ಪ್ರೌಢಶಾಲಾ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣದ ಉದ್ದೇಶದಲ್ಲಿರುವ ಮೂಲಭೂತ ವ್ಯತ್ಯಾಸ ಅವನಿಗೆ ಗೊತ್ತಾಗುವುದಿಲ್ಲ. ಆ ವಯಸ್ಸಿನಲ್ಲಿ ಬಾಲಬುದ್ಧಿ ಸಂಪೂರ್ಣವಾಗಿ ಅಳಿದಿರುವುದಿಲ್ಲ.

(ಸಶೇಷ)

ಬಿ. ನಾರಾಯಣ ಜೋಗಿತ್ತಾಯ

**ನಮ್ಮ ಚಂದಾದಾರ ಬಂಧುಗಳು ದಯಮಾಡಿ ತಮ್ಮ ಬಾಕಿ ಚಂದಾಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಡುವಂತೆ ವಿಜ್ಞಾಪಿಸುತ್ತೇವೆ.**

## ಚಾತಕ ಪಕ್ಷಿಗೆ

— ೧ —

ಪ್ರೇಮವನು ಆತ್ಮಂತೆ ಇತ್ತಿರುವ
ಬಾಷ್ಪವನು
ಮರಳಿ ಬೇಡಲು ಭುವಿಯು
ನಾಚುತಿಲ್ಲ.
ತನ್ನತನವನು ಮರೆತು, ಮೂಕ
ಮೌನವ ಧರಿಸಿ,
ಅದು ತನ್ನ ಸೀಯುವನು ಕರೆಯುತಿಲ್ಲ!
ಮೋಡದೊಳಗಡಗುತಿಹ ನಕ್ಷತ್ರ
ಪುಂಜವೂ
ನೀನೇಕೆ ಮೌನದಲಿ ಅಡಗಲೊಲ್ಲೆ?
ಅದಾವ ಪೀಯುಷವು ನಿನ್ನವನು
ಚಾತಕವೆ,
ಕಟ್ಟಿಹೃದಯದೊಳೇಕೆ ಇರಿಲೊಲ್ಲೆ?

— ೨ —

ತುಂಬಿರುವ ಎದೆಯನ್ನು
ಕರುಣಸಾಗರದಿಂದ,
ಅವನಿಗೇತಕೆ ನೀನು ತೋರಲೊಲ್ಲೆ
ವಿರಹದಿಂ ಹುಟ್ಟಿರುವ ಕಣ್ಣೀರ
ಕಡಲಲ್ಲಿ
ಅವನನೇತಕೆ ನೀನು ತೊಳೆಯಲೊಲ್ಲೆ?
ಅವನ ಆ ರೂಪಿನ ಶ್ಯಾಮಲತೆ
ತನುವನ್ನು
ದೃಷ್ಟಿಕೇಂದ್ರದೊಳೇಕೆ ಇರಿಸಲೊಲ್ಲೆ?

— ೩ —

ದೀಪವನು ಪ್ರೀತಿಸುವ ಚಿಟ್ಟೆಯನು
ನೋಡಲ್ಲಿ,
ಪ್ರೇಮದಲಿ ದುಃಖವನು ತಿಳಿದೇ ಇಲ್ಲ!
ಕಣ್ತೆರೆದು ನೋಡದೋ ಮೀನಿನಾ
ಜೀವನವ,
ನೀರಿನಾ ಕಟುತನಕೆ ಅತ್ತಿದ್ದೂ ಇಲ್ಲ.
ತಿಳಿದುಕೋ ತಿಳಿವನ್ನು
ಚಕೋರನನ್ನೋಡು
ನುಂಗುವಾ ಕೆಂಡದ ಸುಳಿವೂ
ಕೊಟ್ಟಿಲ್ಲ.
ಇನ್ನಾದರೂ ನಿಲಿಸು—
"ಪೀಯು"—"ಪೀಯು" ಕೂಗು,
ಕಲಿತುಕೋ ಜೀವನದಿ ಹೊಸ
ಮೌನ ಮಂತ್ರ ॥

—'ಗಿರಿಬಾಲ', —ಮುಂಬಾಯಿ

(ಆಧಾರ ಒಂದರಿಂದ)

**ಸೂಚನೆ**

'ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ಕಾವು ಸ್ತಂಭದ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ

"ಉತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ಮಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜೆನ್ಸಿ
- ಲಕ್ಷ್ಮೀ ಕೇಶ್ ಸರ್ಟಿಫಿಕೇಟ್ಸ್
- ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟ್ಸ್
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ-ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು.

ಭಾರತದಾದ್ಯಂತ ಹಬ್ಬಿರುವ 178 ಕ್ಕೂ ಮಿಕ್ಕಿದ ಶಾಖೆಗಳು....

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

— ನಗುಮುಖದ ಸೇವೆ ......ಆರ್ಥಿಕ ಭದ್ರತೆ —

Edited, Printed & Published by K. H. Shetty, at the Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 35 | ಉಡುಪಿ, 9—5—1963 ಗುರುವಾರ | ಸಂಪುಟ ೪೨ ಸಂಚಿಕೆ ೩೫

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ತೆರೆಯ ಹಿಂಬದಿಯಲ್ಲಿ
# ಚೀನೀಯರ ಕುತಂತ್ರ

ಭಾರತೀಯ ಸೈನಿಕರನ್ನು ಬಿಡುಗಡೆ ಮಾಡಲು ಆರಿಸಿಕೊಂಡಿರುವ ಸಮಯವನ್ನು ವಿಮರ್ಶೆ ಮಾಡಿ ನೋಡಿದರೆ ತಾಟಸ್ಥ್ಯ ರಾಷ್ಟ್ರಗಳ ಒಲವನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಚೀಣೀಯರು ನಡೆಸಿರುವ ಮತ್ತೊಂದು ಭಾರಿ ಕುತಂತ್ರಕ್ಕೆ ಇದು ಇತ್ತೀಚಿನ ನಿದರ್ಶನವಾಗಿದೆ ಎಂದು ಹೇಳಬಹುದು. "ತನ್ನ ಸದುದ್ದೇಶಗಳನ್ನು" ಅವರಿಗೆ ತೋರಿಸಿಕೊಡಲು ಇದೊಂದು ಸದವಕಾಶ ಎಂದು ಚೀಣೀಯರು ಭಾವಿಸಿದಂತಿದೆ.

ಭಾರತದ ಉತ್ತರದ ಗಡಿಯ ಮೇಲೆ ಚೀಣೀಯರು ಆಕ್ರಮಣ ನಡೆಸಿದಾಗಲೂ ಸಹ ಆಕ್ರಮಣ ನಡೆಸಿರುವ ರಾಷ್ಟ್ರ ಭಾರತವೇ ಹೊರತು ತಾವಲ್ಲ ಎಂಬುದನ್ನು ಜಗತ್ತಿಗೆ ಮನದಟ್ಟು ಮಾಡಿಕೊಡುವ ಸಾಹಸವನ್ನೂ ಅವರು ನಡೆಸಿದರೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಆದರೆ, ಈ ಅಪಪ್ರಚಾರ ಫಲಕಾರಿಯಾಗದೆ ಹೋಯಿತು. ಜಗತ್ತಿನ ಸಹಾನುಭೂತಿ ಭಾರತದ ಕಡೆಗೇ ಉಳಿಯಿತು. ಇಂತಹ ಪರಿಸ್ಥಿತಿಯನ್ನು ಗಮನಿಸಿದ ಚೀಣೀಯರು ತಮ್ಮ ಪ್ರಥಮ ಭಾರೀ ಕುತಂತ್ರವೊಂದನ್ನು ಜಗತ್ತಿನ ಮುಂದಿಟ್ಟರು. "ಏಕಮುಖವಾಗಿ ನಾವು ಕದನ ವಿರಾಮಕ್ರಮ ಕೈಗೊಂಡಿದ್ದೇವೆ," ಎಂದು ಜಗತ್ತಿಗೆ ಸಾರುವುದೇ ಈ ಕುತಂತ್ರವಾಗಿತ್ತು.

ಚೀಣಾದ ಈ ನಾಟಕೀಯ ವರ್ತನೆ ಸಹಾ ಫಲಕಾರಿಯಾಗದೇ ಹೋಯಿತು. ಏಕಮುಖವಾಗಿ ಚೀಣೀಯರು ಕೈಗೊಂಡ ಕದನ ವಿರಾಮ ಕ್ರಮ ಅವರ ಔದಾರ್ಯಕ್ಕೆ ಒಂದು ನಿದರ್ಶನವೇನೂ ಅಲ್ಲ ಎಂದು ತಾಟಸ್ಥ್ಯ ಜಗತ್ತು ಮನದಟ್ಟು ಮಾಡಿಕೊಂಡಿತು. ಚೀಣೀಯರು ಏಕಪಕ್ಷೀಯವಾಗಿ ಕೈಗೊಂಡಿದ್ದ ಕದನ ವಿರಾಮ ಕ್ರಮದ ಹಿಂದೆ ಕೆಲವು ಷರತ್ತುಗಳೂ ಇದ್ದವು. ಈ ಷರತ್ತುಗಳ ಅರ್ಥ ತನ್ನ ಕ್ರಮದಿಂದ ಭಾರತದ ಮುಖಭಂಗ ಸಾಧ್ಯವಾದರೆ ಸಾಕು ಎನಿಸುವ ರೀತಿಯಲ್ಲಿತ್ತು. "ನಾವು ನಿಮ್ಮ ವಿಚಾರದಲ್ಲಿ ನಡೆದುಕೊಂಡ ರೀತಿಯನ್ನು ಮರೆತುಬಿಡಿ. ಇಬ್ಬರೂ ಕುಳಿತು ಗಡಿ ವಿಚಾರವಾಗಿ ಮಾತುಕತೆ ನಡೆಸೋಣ ಮತ್ತು ಶಾಂತಿಯುತವಾಗಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ. ಈ ಮಧ್ಯೆ ನಾವು ನಡೆಸಿದ ಕದನದ ಪರಿಣಾಮವಾಗಿ ನಮಗೆ ದೊರೆತಿರುವ ಲಾಭವನ್ನು ನಮ್ಮ ಪಾಲಿಗೆ ಉಳಿಸಿಕೊಂಡಿರುತ್ತೇವೆ" ಎಂದು ಚೀಣೀಯರು ಭಾರತಕ್ಕೆ ಹೇಳಿದಂತಿತ್ತು ಅವರ ಸಂಧಾನ ಕರೆ. ಹೀಗೆ ಹೇಳುವಾಗ ಅವರ ಮುಖದಲ್ಲಿ ನಗುವು ಕಾಣಿದ್ದರೆ ಅದು ಕೇವಲ ತುಂಟ ನಗೆಯಷ್ಟೆ ಆಗಿತ್ತು.

### ಚೀಣೀಯರ ಮನಃಪ್ರವೃತ್ತಿ

ಕೊಲಂಬೋ ಸಮ್ಮೇಳನ ನಡೆಯುವುದಕ್ಕೆ ಮುಂಚೆ ಚೀಣೀ ಪ್ರಧಾನಿಗಳು ಒಂದು ಸಂದೇಶವನ್ನು ಕಳುಹಿಸಿ ಕೊಲೊಂಬೊ ರಾಷ್ಟ್ರಗಳ ಪ್ರಯತ್ನಕ್ಕೆ ಶುಭಾಶಯ ಕೋರಿದ್ದರು. ಅದೇ ಸಮಯಕ್ಕೆ ಚೀಣೀ ವಕ್ತಾರರೊಬ್ಬರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳು ಕುತಂತ್ರೀ ಚೀಣೀಯರ ಮನಸ್ಸು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದರ ಕಡೆಗೆ ಜಗತ್ತಿನ ಗಮನವನ್ನು ಸೆಳೆದುವು.

ಚೀಣೀ ವಕ್ತಾರರ ಅಭಿಪ್ರಾಯಗಳು ಹೀಗಿದ್ದವು. "ಗಡಿಕದನ ನಿಲ್ಲಬೇಕಾದರೆ ಮತ್ತು ಗಡಿ ವಿವಾದದ ಬಗ್ಗೆ ಶಾಂತಿಯುತ ಸಂಧಾನಗಳು ಆರಂಭವಾಗಬೇಕಾದರೆ ಮುಖ್ಯವಾಗಿ ಒಂದು ಪ್ರಶ್ನೆ ಇತ್ಯರ್ಥವಾಗಬೇಕು. ೧೯೫೯ರ ನವೆಂಬರ್ ೭ರಂದು ಇದ್ದಂತಹ ವಾಸ್ತವಿಕ ಹತೋಟಿ ರೇಖೆಯನ್ನು ಭಾರತ ಮೂಲತಃ ಮಾನ್ಯಮಾಡಬೇಕು ಮತ್ತು ಆ ಆಧಾರದ ಮೇಲೆ ಉಭಯ ರಾಷ್ಟ್ರಗಳ ಪಡೆಗಳು ಕದನ ನಿಲ್ಲಿಸುವುದಕ್ಕೆ ಒಂದು ಒಡಂಬಡಿಕೆ ಸಾಧ್ಯವಾಗಬೇಕು." ವಕ್ತಾರರು ಮುಂದುವರಿದು, "ಭಾರತ ಸರಕಾರವು ಚೀಣೀ ಸರಕಾರ ಇದೀಗ ಕೈಗೊಂಡಿರುವ ಮೂರು ಕ್ರಮಗಳ ಬಗ್ಗೆ ತನ್ನ ಸಕ್ರಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಸಂಧಾನಕ್ಕೆ ಸಿದ್ಧವಾಗಲು ಒಪ್ಪಬೇಕು." ಎಂದೂ ತಿಳಿಸಿದರು.

ಭಾರತವು ಇಂತಹ ವರ್ತನೆಯಿಂದ ಸಂಧಾನಕ್ಕೆ ಒಪ್ಪದೇ ಹೋದುದು ಸಹಜವೇ ಆಗಿದೆ. ಇದೇ ರೀತಿಯಲ್ಲಿ ಕೊಲಂಬೋದಲ್ಲಿ ಸಭೆ ಸೇರಿದ ರಾಷ್ಟ್ರಗಳೂ ಸಹ ಚೀಣೀಯರ ಕುತಂತ್ರಕ್ಕೆ ಸುಲಭವಾಗಿ ಬಲಿಯಾಗಲು ನಿರಾಕರಿಸಿದುವು. ಕೊಲಂಬೋ ಸಮ್ಮೇಳನದಲ್ಲಿ ಅಂಗೀಕೃತವಾದ ಸಲಹೆಗಳು ಭಾರತದ ನ್ಯಾಯವಾದ ಹಾಗೂ ಯೋಗ್ಯ ನಿಲುವಿಗೆ ಪೋಷಕವಾಗಿದ್ದುವು. ದಾಳಿಕಾರರು ಆಕ್ರಮಣದ ಮೂಲಕ ಗಳಿಸಿಕೊಂಡ ಪ್ರದೇಶಗಳನ್ನು ತಮಗೇ ಉಳಿಸಿಕೊಂಡು ಸಂಧಾನದ ಸೋಗು ಹಾಕುವುದು ಅನುಚಿತವೆಂಬ ತತ್ವವನ್ನು ಈ ರಾಷ್ಟ್ರಗಳು ಮಾನ್ಯ ಮಾಡಿದುವು. ಮತ್ತು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ತಾವು ತಯಾರಿಸಿದ ಸಲಹೆಗಳನ್ನು ಭಾರತ ಮತ್ತು ಚೀನ ಈ ಎರಡೂ ರಾಷ್ಟ್ರಗಳ ಮುಂದೆ ಇಟ್ಟುವು.

ಈ ಸಲಹೆಗಳಿಗೆ ಪೀಕಿಂಗ್‌ನ ಪ್ರತಿಕ್ರಿಯೆ ಪ್ರಾರಂಭದಲ್ಲಿ ಸಹಾಯಕವಾಗಿತ್ತು. ಸಲಹೆಗಳಿಗೆ ಚೀಣೀ ಸರ್ಕಾರವು ತನ್ನ "ಸಕ್ರಿಯ ಪ್ರತಿಕ್ರಿಯೆ"ಯನ್ನು ವ್ಯಕ್ತಪಡಿಸಿದೆ ಎಂದು ತಿಳಿಸಲಾಯಿತು. ಆದರೆ ಕೆಲವೇ ದಿನಗಳಲ್ಲಿ ಚೀಣೀ ಸರ್ಕಾರದ ಕಣ್ಣಿಗೆ ಕೊಲಂಬೋ ಸಲಹೆಗಳಲ್ಲಿ 'ಕೆಲವು ಅಸ್ಪಷ್ಟ ಅಂಶಗಳು ಹಾಗೂ ವಿರೋಧಾಭಾಸಗಳು" ಕಂಡುಬಂದುವು. ಇದರ ಬೆನ್ನಿಗೆ ಮತ್ತೆ ಪ್ರಚಾರದ ಬೊಬ್ಬೆ ಶುರುವಾಯಿತು. ಕೊಲಂಬೋ ಸಲಹೆಗಳನ್ನು ಭಾರತ ಸರ್ಕಾರ ಸಂಪೂರ್ಣವಾಗಿ ಅಂಗೀಕರಿಸಿರಬಹುದು. ಆದರೆ ಚೀಣಾ ಸಹ ಅದೇ ರೀತಿ ಈ ಸಲಹೆಗಳನ್ನು ಸಂಪೂರ್ಣವಾಗಿ ಅಂಗೀಕರಿಸಬೇಕಾದ ಅಗತ್ಯವಿಲ್ಲ ಎಂದು ಸಮ್ಮೇಳನದಲ್ಲಿ ಭಾಗವಹಿಸಿದ್ದ ಆರು ತಟಸ್ಥ ರಾಷ್ಟ್ರಗಳಿಗೆ ಮನದಟ್ಟು ಮಾಡಿಕೊಡುವ ಸಾಹಸ ಈ ಪ್ರಚಾರದ ಬೊಬ್ಬೆಯ ಹಿಂದಿತ್ತು.

ಕೊಲಂಬೋ ರಾಷ್ಟ್ರಗಳು ಚೀಣೀಯರ ಈ ವರ್ತನೆಯಿಂದ ಅಪ್ರತಿಭರಾದುದು ಆಶ್ಚರ್ಯವೇನೂ ಅಲ್ಲ.

### ಒಲವನ್ನು ಪಡೆಯುವ ಪ್ರಯತ್ನ

ಚೀಣೀಯರ ವರ್ತನೆಯಿಂದ ಕೊಲಂಬೋ ರಾಷ್ಟ್ರಗಳು ಬೇಸರಪಟ್ಟುಕೊಂಡುವು ಎನ್ನುವ ಸಮಯಕ್ಕೆ ಸರಿಯಾಗಿ ಪೀಕಿಂಗ್ ಸರ್ಕಾರ ಭಾರತೀಯ ಯುದ್ಧ ಬಂದಿಗಳನ್ನು ಬಿಡುಗಡೆ ಮಾಡುವ ನಿರ್ಧಾರವನ್ನು ಹಠಾತ್ತನೆ ಅನಿರೀಕ್ಷಿತವಾಗಿ ಪ್ರಕಟಿಸಿತು.

ತನ್ನ ಬಂಧನದಲ್ಲಿರುವ ಭಾರತೀಯ ಸೈನಿಕರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿರುವುದಾಗಿ ಚೀಣಾ ಮೊದಲಿಂದಲೂ ಹೇಳುತ್ತಾ ಬಂದಿದೆ. ಆದರೆ ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು ಭಾರತೀಯ ಸೈನಿಕರನ್ನು ಕಣ್ಣಾರೆ ಕಂಡು ಅವರ ಸ್ಥಿತಿಗತಿಗಳನ್ನು ವಿಚಾರಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ ಮಾತ್ರ ಚೀಣೀ ಸರ್ಕಾರ ಅವರ ಬೇಡಿಕೆಗೆ ಅನುಮತಿ ಕೊಡಲು ನಿರಾಕರಿಸಿತು.

ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳಿಗೆ ಅನುಮತಿ ಕೊಡಲು ಚೀಣೀಯರು ಏಕೆ ಹಿಂದೇಟು ಹಾಕಿದರು ಎಂಬುದೇ ಇಲ್ಲಿಯ ಮುಖ್ಯ ಪ್ರಶ್ನೆ.

ಭಾರತ ಮಾತ್ರ ಈ ವಿಚಾರದಲ್ಲಿ ತದ್ವಿರುದ್ಧವಾಗಿ ಮತ್ತು ಅಂತಾರಾಷ್ಟ್ರೀಯ ಸಂಪ್ರದಾಯಕ್ಕನುಗುಣವಾಗಿ ವರ್ತಿಸಿಕೊಂಡಿತು. ಸ್ಥಾನಬದ್ಧರಾಗಿದ್ದ ಚೀಣೀ ರಾಷ್ಟ್ರೀಯರನ್ನು ಕಂಡು, ಅವರನ್ನು ಸರ್ಕಾರ ಯಾವ ರೀತಿ ನೋಡಿಕೊಳ್ಳುತ್ತಿದೆ ಎಂಬುದನ್ನು ನೋಡಿಕೊಂಡು ಹೋಗಲು ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳಿಗೆ ಪೂರ್ಣಾವಕಾಶವನ್ನು ಭಾರತ ಸರ್ಕಾರ ಕಲ್ಪಿಸಿಕೊಟ್ಟಿದೆ.

### ಬಿಡುಗಡೆಯ ಕಾಲ ಮುಖ್ಯ

ಈ ಒಂದು ಹಿನ್ನೆಲೆಯಲ್ಲಿ ಭಾರತೀಯ ಸೈನಿಕರ ಬಿಡುಗಡೆಯ ಉದ್ದೇಶವನ್ನೂ ನಾವು ವಿಚಾರ ಮಾಡಿ ನೋಡಬೇಕು. ಚೀಣೀ ಅಧ್ಯಕ್ಷರು ಮೂರು ತಟಸ್ಥ ರಾಷ್ಟ್ರಗಳಿಗೆ ಪ್ರವಾಸ ಹೊರಟಿದ್ದ ಸಮಯ ಅದು. ಕೊಲಂಬೋ ಸಮ್ಮೇಳನದಲ್ಲಿ ಈ ಮೂರು ರಾಷ್ಟ್ರಗಳೂ ಭಾಗವಹಿಸಿದ್ದುವು—ಎಂಬುದು ಮುಖ್ಯ ಮತ್ತು ಕೊಲಂಬೋ ಸಲಹೆಗಳನ್ನು ಚೀಣಾ ಅಂಗೀಕರಿಸಿರಲಿಲ್ಲ ಎಂಬುದೂ ಮುಖ್ಯ. ಅಲ್ಲದೆ ಸಂಯುಕ್ತ ಅರಬ್ ಗಣರಾಜ್ಯದ ಅಲಿಸಾಬ್ರಿಯವರು ಕಳೆದ ತಿಂಗಳ ಅಂತ್ಯಭಾಗದಲ್ಲಿ ಪೀಕಿಂಗಿಗೆ ಹೋಗಿದ್ದರೆಂಬ ಅಂಶವೂ ಇಲ್ಲಿ ಮುಖ್ಯ. "ಭಾರತೀಯ ಯುದ್ಧ ಬಂದಿಗಳನ್ನು ಬಿಡುಗಡೆ ಮಾಡುವುದರ ಮೂಲಕ ಗಡಿ ವಿವಾದವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಚೀಣಾ ಮತ್ತೊಂದು ಮುಖ್ಯ ಹೆಜ್ಜೆಯನ್ನು ಮುಂದಿಟ್ಟಿದೆ" ಎಂದು ಈ ರಾಷ್ಟ್ರಗಳಿಗೆ ಮನದಟ್ಟಾದರೆ ಸಾಕು. ಆದರೆ ಈ ಕುತಂತ್ರಕ್ಕೆ ಹಿಂದಿನ ಕುತಂತ್ರಗಳಿಗೆ ಆದ ಗತಿಯೇ ಆದರೆ ಆಶ್ಚರ್ಯವಿಲ್ಲ.

---

ಮನಸ್ಸಿನಲ್ಲಿ
ಮಾತಿನಲ್ಲಿ
ಕಾರ್ಯದಲ್ಲಿ
ದೇಶ ರಕ್ಷಣೆಯೇ
ನಮ್ಮ ಧ್ಯೇಯವಾಗಿರಲಿ

---

ಆರ್ಥಿಕ ಅಭಿವೃದ್ಧಿ
ರಾಷ್ಟ್ರದ ಬಲವೃದ್ಧಿ

ರಾಜಾಜಿಯವರ ಕಲಾಸಿದ್ಧಿ

# ಸಬ್ ಕಲೆಕ್ಟರ್ ಸೀತಾರಾಮ್

ಭಾರತದಿಂದ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋಗುತ್ತಿರುವ ಯುವಕರ ಸಂಖ್ಯೆ ಈ ದಿನಗಳಲ್ಲಿ ಹಿಂದಿನವಕ್ಕಿಂತ ಹೆಚ್ಚಿದೆ; ಎನ್ನಬಹುದು. ಆದರೆ, ಹೀಗೆ ಉಚ್ಚ ಶಿಕ್ಷಣಕ್ಕಾಗಿ ಹೋದವರು, ಅಲ್ಲಿ ಪಡೆಯುವ ಉಚ್ಚ ಶಿಕ್ಷಣದ ಜೊತೆಗೆ, ಅಲ್ಲಿಯ--ಅಪ್ಸರೆಯರ ಕೃತಕವಾದ ಮಾಯಾ ರೂಪಕ್ಕೆ ಮನಸೋತು ಅವರ ಮೋಹಜಾಲದಲ್ಲಿ ಸಿಲುಕಿ, ಪಡೆಯುವ ಆ ಅನುಭವವನ್ನು ಮಾನ್ಯ ರಾಜಾಜಿಯವರು, "ಸಬ್ ಕಲೆಕ್ಟರ್ ಸೀತಾರಾಂ" ಎಂಬ, ತಮ್ಮ ಈ ಕಥೆಯ ಮೂಲಕ ಇದ್ದಕ್ಕಿದ್ದಂತೆ ವಾಚಕರ ಮುಂದಿಟ್ಟಿರುವರು. ಈ ಕಥೆಯನ್ನೋದಿದಾಗ ನಿಜವಾದ ಘಟನೆಯೊಂದು ಜರುಗಿದಂತೆ ಭಾಸವಾಗುತ್ತದೆ. ಇಂಗ್ಲೆಂಡಿಗೆ, ಉಚ್ಚ ಶಿಕ್ಷಣಕ್ಕಾಗಿ, ಹೋಗುವ, ನಮ್ಮ ದೇಶದ ತರುಣರು, ಹೊರಡುವ ಮುನ್ನ--ಈ ಕಥೆಯ ಮೂಲಕ ಒಂದು ಹಿತೋಪದೇಶವನ್ನು ಪಡೆಯಬಹುದೆಂಬುದರಲ್ಲಿ ಸಂದೇಹವಿಲ್ಲ.

ಸೀತಾರಾಮರು, ಮದುವೆಯಾದ ಕೆಲವೇ ದಿನಗಳಲ್ಲಿ ತನ್ನ ಹದಿನೆಂಟರ ಹರೆಯದ ಪ್ರಿಯತಮೆ ಸುಂದರಿಯನ್ನು ತನ್ನ ಮಾವನ ಮನೆಯಲ್ಲೇ ಬಿಟ್ಟು, 'ಐ. ಸಿ. ಎಸ್. ಶಿಕ್ಷಣ ಪಡೆಯುವುದಕ್ಕಾಗಿ, ತನ್ನ ಮಾವನ ಖರ್ಚಿನಿಂದಲೇ ಇಂಗ್ಲೆಂಡಿಗೆ ಹೋದರು. ಅವರು ಹೋಗುವಾಗ ಮದುವೆಯಾದ ಹೊಸ ಹೆಂಡತಿಯನ್ನು ಬಿಟ್ಟು ಹೋಗಬೇಕಾದ ಆ ಸಂದರ್ಭದ ಕಳವಳ ಅವರ ಮನದಲ್ಲಿ ವಿಶೇಷವಾಗಿತ್ತು. ತರುಣಿ ಸುಂದರಿಗೂ ಕೂಡ ಹಾಗೇ ಆಗಿತ್ತು. ಆದರೆ ಉಪಾಯವಿರಲಿಲ್ಲ.

ಇಂಗ್ಲೆಂಡಿಗೆ ಹೋಗಿ ತಲುಪಿದ ಸೀತಾರಾಮರು ತಾನು ಇಂಗ್ಲೆಂಡಿಗೆ ಬಂದುದಲ್ಲ! ಒಂದು ಹೊಸ ಸ್ವರ್ಗಕ್ಕೆ ಬಂದು ತಲುಪಿದ್ದೇನೆ! ಎಂದೇ ಭಾವಿಸಿಕೊಂಡರು. ಅಲ್ಲಿಗೆ ತಲುಪಿದ ಮೇಲೆ, ಅವರಿಗೆ, ತನ್ನ ಊರು, ಮನೆ, ಮತ್ತು ಹೆಂಡತಿಯ ನೆನಪು ಕೂಡ ಉಳಿಯಲಿಲ್ಲ! ಅಲ್ಲಿ ಅವರೊಡನೆ, ಸಲಿಗೆಯಿಂದ ಪ್ರೇಮದಿಂದ ವರ್ತಿಸುತ್ತಿದ್ದ, ಯುರೋಪಿಯನ್, ತರುಣಿಯರನ್ನು ಕಂಡ ಸೀತಾರಾಮರಿಗೆ, 'ಹೆಂಗುಸರೆಂದರೆ ಹೀಗಿರಬೇಕು!' ಆ ನನ್ನ ಸುಂದರಿ, ಎಂತಹ ಗುಗ್ಗು! ಅಯ್ಯೋ! ಅವಳ ರವಿಕೆಯೋ! ಸೀರೆಯೋ! ಆ ಬಳೆಗಳೋ? ಎಲ್ಲವೂ ಅಸಹ್ಯ!' ಎಂದು ಸೀತಾರಾಮರು, 'ಹೆಜ್ಜೆ ಹೆಜ್ಜೆಗೆ' ಯೋಚಿಸ ತೊಡಗಿದರು.

ಹೀಗೆಯೇ ಕೆಲವು ದಿನಗಳುರುಳಿದವು. ಅಷ್ಟಾಗುವಾಗ ಆ ಇಂಗ್ಲಿಷ್ ಲೇಡಿಯರಲ್ಲಿ ಓರ್ವ ಅಪ್ಸರೆಯು ಸೀತಾರಾಮರನ್ನು ವಿಶೇಷವಾದ ಪ್ರೀತಿಯಿಂದ ಪ್ರೇಮಿಸ ತೊಡಗಿದಳು. ಆಕೆಯ ಪ್ರೀತಿ ಸೀತಾರಾಮರ ಮೇಲೆ ಎಂತಹ ಮೋಹನಾಸ್ತ್ರವಾಗಿ ಪರಿಣಮಿಸಿತೆಂಬುದನ್ನು ಅವರ ಮಾತುಗಳಿಂದಲೇ ತಿಳಿದುಕೊಳ್ಳಬೇಕು:- ಅವರು ಈ ರೀತಿ:—'ಆಹಾ! ಈ ಆಂಗ್ಲ ರಮಣಿಯ ಪಕ್ಕದಲ್ಲಿ ಕುಳಿತು ಅವಳೊಡನೆ ಮಾತನಾಡುತ್ತಿರುವಾಗಲೇ ಇಷ್ಟು ಸುಖವಾಗುವುದೆಂದ ಮೇಲೆ, ಇನ್ನು ಇವಳ "ಸಹವಾಸ"ದಲ್ಲಿ ಮತ್ತೆಷ್ಟು ಸುಖ ಸಿಕ್ಕಬಹುದ! ಎಂತಹ ನಗೆ! ಏನು ಸಲಿಗೆ! ಆ ಸ್ಪರ್ಶ ಎಂತಹ ಸುಖಸ್ಪರ್ಶ! ಸ್ವರ್ಗವೆಂದರೆ ಇಂಗ್ಲೆಂಡ! ಸ್ವರ್ಗಸುಂದರಿಯರೆಂದರೆ ಈ ಇಂಗ್ಲೀಷ್ ರಮಣಿಯರು!" ಎಂಬ ನಿರ್ಧಾರಕ್ಕೆ ಬಂದಿದ್ದರು. ಈ ನಿರ್ಧಾರಕ್ಕೆ ಬಂದ ಸೀತಾರಾಮರು, ಅವರ ಮೇಲೆ ವಿಶೇಷ ಪ್ರೇಮವನ್ನು ತೋರಿಸುತ್ತಿದ್ದ, ಆ ಇಂಗ್ಲೀಷ್ ರಮಣಿಯನ್ನು ಮದುವೆ ಮಾಡಿಕೊಳ್ಳುವ ನಿರ್ಧಾರ ಮಾಡಿದರು. ಮತ್ತೆ ಕೆಲವೇ ದಿನಗಳಲ್ಲಿ Regd. ಮದುವೆಯೂ, ನಡೆದು ಹೋಯಿತು. ಆ ಮದುವೆಯ ಕಾಲಕ್ಕೆ ಮ್ಯಾಜಿಸ್ಟ್ರೇಟರ ಮುಂದೆ ಸೀತಾರಾಮರು "ತನಗೆ ಈ ಮೊದಲು ಮದುವೆಯಾಗಿಲ್ಲ!" ಎಂಬ ಒಂದೇ ಒಂದು ಸುಳ್ಳು ಮಾತನ್ನು ಹೇಳಿಬಿಟ್ಟಿದ್ದರು! ಆದರೆ ಕೊನೆಗೆ ಈ ಸುಳ್ಳು ಮಾತು ಅವರ ಜೀವನಕ್ಕೆ ಮುಳ್ಳಾಗಿ ಪರಿಣಮಿಸಿ, ಮುಂದೆ ಅವರು ತನ್ನ ಜೀವಮಾನವನ್ನೆಲ್ಲ ದುಃಖದಿಂದ, ಕಳೆಯಬೇಕಾಯಿತು!

ಮದುವೆಯಾದ ಕೆಲವು ಕಾಲದ ಬಳಿಕ, ತನ್ನ ಹೊಸ ಪ್ರೇಯಸಿಯ, 'ರೂಪ ರಹಸ್ಯ"ವು, ಸೀತಾರಾಮರಿಗೆ ಒಂದೊಂದಾಗಿ ತಿಳಿದುಬರಲಾರಂಭಿಸಿತು! ಆ ತನಕ ಸೀತಾರಾಮರು, ಸ್ವರ್ಗದ ಅಪ್ಸರೆಯೊಡನೆ ಸುಖ ವಿಹಾರ ಮಾಡುತ್ತಿದ್ದವರು, ಈಗ ಅನಿರೀಕ್ಷಿತವಾಗಿ ನರಕದ ಬಾಗಿಲಿಗೆ ನೂಕಲ್ಪಟ್ಟರು! ಅರ್ಥಾತ್ ಅವರ ಮಾನಸಿಕ ಸ್ಥಿತಿ, ಈ ಪರಿಯಿಂದ ಘಾಸಿಗೊಂಡಿತು.

ಒಂದುದಿನ ಸೀತಾರಾಮರಿಗೆ, ತನ್ನ 'ಮೋಹಿನಿ"ಯ ನುಣುಪಾದ ಆ ತಲೆಗೂದಲು, ಅದು ಆಕೆಯ—ಸ್ವಂತ ಕೂದಲಲ್ಲ! ಎಂಬ ವಿಷಯ ತಿಳಿದು ಬಂದಿತು. ಮರುದಿನ ನೋಡುವಾಗ ಆಕೆಯ ಹುಬ್ಬು ಬಣ್ಣ ಬಳಿದುದರಿಂದಲೇ ಕಪ್ಪಾಗಿತ್ತೆಂದೂ ತಿಳಿದು ಹೋಯಿತು! ಮತ್ತೆ ಆ ಮೋಹಿನಿಯ ವಯಸ್ಸು ಅಂದಾಜು ಮಾಡಿದಾಗ—ಸೀತಾರಾಮರಿಗೆ ಅಸಹ್ಯವಾಗಿ ಅವರ ಕಳವಳ ಮೇರೆ ಮೀರಿ ಹೋಯಿತು! ಕಟ್ಟಕಡೆಗೆ ಅವರ ಪಾಲಿಗೆ ಮತ್ತೊಂದು ವಿಚಿತ್ರ ಕಾದಿತ್ತು! ಅದೇನೆಂದರೆ, ಅವರ ಮನೋಹರಿಯ ದಾಳಿಂಬೇ ಬೀಜದಂತಹ ಆ ಹಲ್ಲುಗಳು, ಅವಳ ಸ್ವಂತದ ಹಲ್ಲುಗಳಾಗಿರಲಿಲ್ಲವೆಂಬುದೇ ಅದಾಗಿತ್ತು! ಈ ಪರಿಸ್ಥಿತಿಯನ್ನರಿತ ಸೀತಾರಾಮರಿಗೆ ಆಗಲೇ ಹೃದಯಸ್ತಂಭನವಾಗುವುದೋ ಎಂಬಂತೆ ಭಾಸವಾಯಿತು! ಇಲ್ಲಿ ಶ್ರೀ ರಾಜಾಜಿಯವರು, ಸೀತಾರಾಮರ ಮಾನಸಿಕ ಯಾತನೆ—ಹಾಗೂ ಹೃದಯ ವೇದನೆಯನ್ನು ಅತ್ಯಂತ ಸಹಜವಾಗಿ ಮಾರ್ಮಿಕವಾಗಿ ಚಿತ್ರಿಸಿರುವುದನ್ನು—ನೋಡಬೇಕಾದರೆ, ಈ ಮೂಲ ಕಥೆಯನ್ನೇ ಓದಬೇಕು!

ಮಾನಸಿಕ ಯಾತನೆಯಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದ ಸೀತಾರಾಮರಿಗೆ ಈಗ, ತನ್ನ ಊರು, ಮನೆ, ಮತ್ತು ತನ್ನ ಮುದ್ದು ಹೆಂಡತಿ ಸುಂದರಿಯ ನೆನಪು ಉಂಟಾಗ ತೊಡಗಿತು. ಈಗ ಅವರು ಬಹು ಕಳವಳಕ್ಕೆ ತುತ್ತಾದರು. "ನನ್ನ ಸುಂದರಿ! ಎಂತಹ ಸುಂದರಿ! ಆಕೆಯ ಆ ಸಹಜವಾದ ಮುಖಕಾಂತಿ! ಅದೆಷ್ಟು ಸುಂದರ! ಆಕೆಯ ಆ ರೂಪು! ಆ ಕೋಮಲತೆ! ಲಜ್ಜಾಭೂಷಣದಿಂದೊಪ್ಪಿದ ನಡೆನುಡಿ! ಆಹಾ!" ಈ ಇಂಗ್ಲೀಷ್ ರಮಣಿ! ರಮಣಿಯಲ್ಲ! ಈಕೆ ನನ್ನ ಸುಂದರಿಯ ಮುಂದೆ—ಒಂದು ಕೊಳಕು ನಾರುವ ಪ್ರಾಣಿಯಂತೆ!" ಎಂದು ನಿಜಸ್ಥಿತಿಯನ್ನು ಯೋಚಿಸಿಕೊಂಡ ಸೀತಾರಾಮರು, ಈಗ ಆತ್ಮಹತ್ಯೆಯ ಹೊರತು, ಇನ್ನು ಬೇರೆ ದಾರಿ ಇಲ್ಲವೆಂದು, ಹುಚ್ಚರಂತೆ, ಮನೆಯಿಂದ ಹೊರಗೆ ಹೊರಟರು.

ಕೊನೆಗೆ—ಸೀತಾರಾಮರ ಅದೃಷ್ಟವೆಂಬಂತೆ, ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನ ಪ್ರಾಧ್ಯಾಪಕರೊಬ್ಬರು ಸೀತಾರಾಮರಿಗೆ—ಭೇಟಿಯಾಗುತ್ತಾರೆ. ತನ್ನ ಹಳೆಯ ಕಾಲೇಜು ಶಿಷ್ಯನನ್ನು ಕಂಡ ಆ ಪ್ರಾಧ್ಯಾಪಕರಿಗೂ ಸಂತೋಷವಾಗುತ್ತದೆ. ಈಗ ಸೀತಾರಾಮರು ತನ್ನ ಆ ಗುರುಗಳೊಡನೆ, ತನ್ನ ಈ ದುರಂತ ಪ್ರಣಯದ ಕಥೆಯನ್ನು ವಿವರಿಸಿ, ತನ್ನನ್ನು ಹೇಗಾದರೂ ಈ ಆಂಗ್ಲ ಪಿಶಾಚಿಯ ಕೈಯಿಂದ ಬಿಡಿಸಿ ಉಳಿಸಬೇಕೆಂದು ಪ್ರಾರ್ಥಿಸಿಕೊಂಡರು. ಈ ವಿಚಾರವನ್ನರಿತ ಆ ಪ್ರಾಧ್ಯಾಪಕರಿಗೆ, ತನ್ನ ಹಳೆಯ ಶಿಷ್ಯನ ಮೇಲೆ ಕರುಣೆಯುಂಟಾಗುತ್ತದೆ. ಬಳಿಕ ಅವರು ಆ ಆಂಗ್ಲ ರಮಣಿಯೊಡನೆ ಮಾತುಕತೆ ನಡೆಸಿ—ಕೊನೆಗೆ— "ಸೀತಾರಾಮರು, I. C. S. ಪಾಸಾಗಿ ಕೆಲಸಕ್ಕೆ ಸೇರಿದಾಗ ಅವರಿಗೆ ಸಿಕ್ಕುವ ಸಂಬಳದ, ಮುಕ್ಕಾಲು ಭಾಗವನ್ನು ತಪ್ಪದೆ, ಪ್ರತಿ ತಿಂಗಳೂ—ಈ ಆಂಗ್ಲ ರಮಣಿಗೆ ಕಳುಹಿಸಬೇಕು!" ಎಂಬ ಶರ್ತದ ಮೇಲೆ—ಆ ಶ್ವೇತಾಂಗಿ, ಹೇಗೋ ಆ ಪ್ರಾಧ್ಯಾಪಕರ ಮಧ್ಯಸ್ಥಿಕೆಯ ಕಾರಣ ಒಪ್ಪಿಗೆ ಕೊಡುತ್ತಾಳೆ. ಈ ಮೂಲಕ ಸೀತಾರಾಮರಿಗೆ—ಆ ಮಾಯಾಜಾಲದಿಂದ ಬಿಡುಗಡೆಯಾಗುತ್ತದೆ.

ಮುಂದೆ ಸೀತಾರಾಮರು I. C. S. ಪಾಸಾಗಿ ಭಾರತಕ್ಕೆ ಮರಳಿದಾಗ ಅವರಿಗೆ ಸಬ್ ಕಲೆಕ್ಟರರ ಹುದ್ದೆ ಸಿಕ್ಕುತ್ತದೆ. ಮತ್ತೆ ಅವರು ತಮ್ಮ ಧರ್ಮಪತ್ನಿಯೊಡನೆ, ಸುಖವಾಗಿ ಸಂಸಾರ ಸಾಗಿಸುತ್ತಾರೆ. ಆದರೆ, ಅವರಿಗೆ ಸಿಕ್ಕುತ್ತಿದ್ದ ಒಂದು ಸಾವಿರದ ಇನ್ನೂರು ರೂಪಾಯಿ ಸಂಬಳದಲ್ಲಿ—ಒಂಭತ್ತು ನೂರು ರೂಪಾಯಿ ಪ್ರತಿ ತಿಂಗಳೂ ಆ ಆಂಗ್ಲ ಯುವತಿಗೆ ಅವರು ಕಳುಹಿಸಿ ಕೊಡುತ್ತಿದ್ದು. ಕೇವಲ—ಮುನ್ನೂರು ರೂಪಾಯಿಗಳಿಂದಲೇ ತಮ್ಮ ಖರ್ಚನ್ನು ಸಾಗಿಸುತ್ತಿದ್ದರು. ಸಬ್ ಕಲೆಕ್ಟರರ, ಇಂತಹ ಕೃಪಣ ಜೀವನ ಸಾಗಿಸುವುದನ್ನು ನೋಡಿದ ಇತರರು ಇವರನ್ನು ಲೋಭಿಗಳೆಂದು ತಿಳಿದಿದ್ದರು. ಪ್ರತಿ ತಿಂಗಳು 900 ರೂಪಾಯಿ ಇಂಗ್ಲೆಂಡಿಗೆ ಕಳುಹಿಸುತ್ತಿದ್ದುದರ ರಹಸ್ಯವನ್ನರಿಯದ ಸೀತಾರಾಮರ ಪತ್ನಿಗೆ ಈ ವಿಷಯ, ದುಃಖದಾಯಕವಾಗಿತ್ತು. ಆದರೆ ಸೀತಾರಾಮರು 'ನಾನು ಇಂಗ್ಲೆಂಡಿನಲ್ಲಿ ಕಲಿಯುವಾಗ ಸಾಲ ಮಾಡಿದ್ದೆ. ಅದನ್ನೀಗ ತೀರಿಸುತ್ತಿದ್ದೇನೆ" ಎಂದು ಸುಳ್ಳು ಸಮಾಧಾನ ಹೇಳುತ್ತಿದ್ದರು, ಈ ಕಥೆ ಇಲ್ಲಿಗೆ ಪೂರ್ಣವಾಗುತ್ತದೆ.

ಶ್ರೀ ರಾಜಾಜಿಯವರ ಈ ಕಥೆ ಇಂದಿನ ವಿದ್ಯಾವಂತ - ಹಾಗೂ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋಗುವ ತರುಣರಿಗೆ ಮಾರ್ಗದರ್ಶಕವಾಗಿದ್ದು—ಭಾರತೀಯ,—ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಜನತೆಗೆ ತೋರಿಸಿ ಕೊಡುವ ಕೈಗನ್ನಡಿಯಂತಿದೆ! ಎನ್ನಬಹುದು.

—ಕೆ. ಎಸ್. ಭಟ್, ತಿರಾಡಿಪಾಲ್

**ನವಯುಗ**
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ರೂ.
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

**ಆಕರ್ಷಣೀಯ ಬಡ್ಡಿ ದರಗಳು**

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕಿರಿ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

**ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.**

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

### ವೇದ ಪುರಾಣೋಲ್ಲಿಖಿತ

# ನಮ್ಮ ಭಾರತದ ಸೀಮಾರೇಖೆಗಳು

ಕೆಲ ದಿನಗಳ ಹಿಂದೆ ಸರ್ವೆಯರುಗಳ ಸಮ್ಮೇಳನದಲ್ಲಿ ಕರ್ಣಾಟಕದ ಕಂದಾಯ ಮಂತ್ರಿ ಶ್ರೀ ಯಂ. ವಿ. ಕೃಷ್ಣಪ್ಪನವರು ಭಾರತ-ಚೀನಾ ಯುದ್ಧಕ್ಕೆ ಸರ್ವೆಯರುಗಳೇ ಕಾರಣವೆಂದು ಹೇಳಿದರು. ಅದನ್ನು ವಿವರಿಸುತ್ತ ಕೆಲ ವರ್ಷಗಳ ಹಿಂದೆ ಚೀನಾದಿಂದ ಭಾರತಕ್ಕೆ ಕೆಲ ಸರ್ವೆಯರುಗಳು ಬಂದಿದ್ದರು. ಅವರು ಭಾರತದ ಕೆಲವು ಪ್ರದೇಶಗಳನ್ನು ಚೀನಾ ಭೂಪಟದಲ್ಲಿ ತೋರಿಸಿರುವರು. ಇದರಿಂದ ಜಗಳ ಪ್ರಾರಂಭವಾಯಿತೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇದು ಒಂದು ಬದಿಯ ಚಿತ್ರ. ಹಾಗೆಯೇ ನಮ್ಮ ಭೂಪಟಗಳನ್ನು ಗಮನಿಸುತ್ತ ಬಂದಲ್ಲಿ ಅಲ್ಲಿ ಕೂಡಾ ನಮ್ಮ ಗಡಿಗಳು ಬದಲಾಗುತ್ತ ದೇಶದೊಳಗೆನೇ ಗಡಿ ಬಂದಿರುವದನ್ನು ಕಾಣಬಹುದು. ಆದರಿಂದಾಗಿ ಹಲವಾರು ಚದರ ಮೈಲುಗಳಷ್ಟು ಭೂಪ್ರದೇಶವನ್ನು ಮೌನವಾಗಿ ಚೈನಿಯರಿಗೆ ಭೂದಾನ ಮಾಡಿರುವರೆಂಬುದು ಕೆಲವರ ವಾದ. ನಮ್ಮ ಸೀಮಾರೇಖೆ ಎಲ್ಲಿದೆಂಬುದರ ಸ್ಪಷ್ಟ ಚಿತ್ರ ಇಂದಿನ ಭೀಕರ ಪರಿಸ್ಥಿತಿಯಲ್ಲಂತೂ ನಮ್ಮ ಕಣ್ಮುಂದೆ ಸದಾ ಇರಲೇಬೇಕು. ಹಿಂದಿನ ಕೆಲ ಲೇಖನಗಳಿಂದ ನಮ್ಮ ಎಲ್ಲೆಯ ಕುರಿತು ಕೆಲ ಮಾಹಿತಿಗಳು ನಮಗೆ ದೊರಕಿರುತ್ತವೆ. ಈ ಲೇಖನದಲ್ಲಿ ಡಾ| ಸಿ. ಕುಞ್ಞನ್ ರಾಜಾರವರು ವೇದ ಹಾಗೂ ಪುರಾಣಗಳ ಪ್ರಕಾರ ಭಾರತದ ಸೀಮೆ ಎಲ್ಲಿತ್ತೆಂಬುದು ಕುರಿತು ಬರೆದಿರುವದನ್ನು ಕೊಡಲಾಗುತ್ತದೆ. ಭಾರತ ಸರಕಾರವು ಚೈನೀಯರಿಗೆ ಬರೆದಿರುವ ಕೆಲ ಪತ್ರಗಳಲ್ಲಿ ಪುರಾಣಾದಿಗಳಲ್ಲಿರುವ ಗಡಿ ವಿವರಣೆಗಳ ಉದಾಹರಣೆಗಳನ್ನಿತ್ತಿರುತ್ತದೆ.

ಇಂಡಿಯಾ ನಾಮವು ಇಂಡಸ್ ನದಿಯ ಹೆಸರಿನ ಮೇಲೆ ಆಧಾರಿತವಾಗಿದೆ. ಅದನ್ನು ವೇದ ಹಾಗೂ ಸಂಸ್ಕೃತ ಗ್ರಂಥಗಳಲ್ಲಿ ಸಿಂಧು ವೆಂದು ಉಲ್ಲೇಖಿಸಲಾಗಿರುತ್ತದೆ ವೇದಗಳಲ್ಲಿ ಸಿಂಧು ಹೆಸರಿಗೆ ವೈಶಿಷ್ಟ್ಯತೆ ಇದೆ. ವೇದಗಳಲ್ಲಿ 'ಸಪ್ತ ಸಿಂಧು'ವಿನ ಉಲ್ಲೇಖವೂ ಇದೆ. ಅವೆಸ್ತಾದಲ್ಲಿ 'ಸಪ್ತಸಿಂಧು'ವಿನ ರೀತಿಯಲ್ಲಿ 'ಹಪ್ತ ಹಿಂದು' ಪದ ಇದೆ. 'ಹಪ್ತ ಹಿಂದು' ಮಹಾನ್ ದೇವತೆ ಅಹುರ ಮಜದಾ ಮೂಲಕ ಉತ್ಪನ್ನವಾಗಿರುವ ಸದ್ಗುಣಗಳ ೧೬ ಕ್ಷೇತ್ರಗಳ ಹೆಸರು ಕೂಡಾ ಇದೆ. ಅದೇ ಪ್ರಕಾರ ಅದಕ್ಕೆ ಪ್ರತಿಕೂಲ ದೇವ-ಶತ್ರು ಅಂಗ್ರೆಮೆನ್ಯುನ ಮೂಲಕ ಉಂಟಾಗಿರುವ ದುರ್ಗುಣಗಳ ೧೬ ಕ್ಷೇತ್ರಗಳ ವಿಷಯ ಕೂಡಾ ಅವೆಸ್ತಾದಲ್ಲಿ ಬಂದಿರುತ್ತದೆ. ವೇದಗಳಲ್ಲಿ 'ಸರಸ್ವತೀ' ನದಿಯ ಉಲ್ಲೇಖವಿದೆ. ಅವೆಸ್ತಾದಲ್ಲಿ 'ಸರಸ್ವತಿ'ಯ ಬದಲು 'ಹರಕ್ವತೀ' ಪದದ ಉಲ್ಲೇಖವಿದೆ. ಅದು ದುರ್ಗುಣದ ೧೬ ಕ್ಷೇತ್ರಗಳ ಪ್ರತೀಕವಿದೆ. ಯುನಾನಿ ಗ್ರಂಥಗಳಲ್ಲಿ, ಈ ಅರ್ಥದಲ್ಲಿ, 'ಅರಕೋಸಿಯಾ'ದ ಉಲ್ಲೇಖ ಸಿಗುತ್ತದೆ.

ದಾರಿಯಸನು ಹಿಂದೂ ಶಬ್ದವನ್ನು ತನ್ನ ಸಾಮ್ರಾಜ್ಯದ ಒಂದು ಪ್ರಾಂತದ ಹೆಸರೆಂದು ಸೂಚಿಸಿರುವನು. ಅವನು ತನ್ನ ಒಂದು ಶಿಲಾ ಲೇಖನದಲ್ಲಿ ಆ ಪ್ರಾಂತ್ಯದಿಂದ ಆನೆಯ ದಂತ ಶೇಖರಿಸಲಿಕ್ಕಾಗಿ ಏರ್ಪಾಡು ಮಾಡಿರುವ ಕುರಿತು ತಿಳಿಸಿರುವನು. ಹೆರೋದನು ಕೂಡಾ 'ಪಾರ್ಸ ಸಾಮ್ರಾಜ್ಯದ ಒಂದು ಭಾರತೀಯ ಪ್ರಾಂತದ ಉಲ್ಲೇಖ ಮಾಡಿರುವನು. ದಾರಿಯಸನು ಪಟ್ಟಿಕೆಯಲ್ಲಿ ಕುಳಿತುಕೊಂಡಿರುವಂತಹ ಚಿತ್ರಗಳು ಕಾಣಸಿಗುತ್ತವೆ. ಆ ಪಟ್ಟಿಕೆಯನ್ನು ಹೊತ್ತುಕೊಂಡವರಲ್ಲಿ ಒಬ್ಬ ಹಿಂದೂ ರಾಜನ ಚಿತ್ರವೂ ಇದೆ ಅಂದರೆ ಆಗ ಆ ರಾಜ್ಯವು ದಾರಿಯುಸನ ಸಾಮ್ರಾಜ್ಯಕ್ಕೆ ಅಧೀನವಾಗಿದ್ದಿರಬಹುದು. ದಾರಿಯುಸನ ಕೃತಿಗಳಲ್ಲಿ ಆರ್ಯ ಹೆಸರಿನ ಪ್ರಾಂತದ ಉಲ್ಲೇಖವೂ ಇದೆ. ಅದನ್ನು ಇಂದು ಇರಾನ್ ಎಂದು ಕರೆಯುವರು. ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಉತ್ತರ ಭಾರತವನ್ನು ಆರ್ಯಾವರ್ತವೆಂದು ವಿವರಿಸಲಾಗಿರುತ್ತದೆ.

ಮಹಾಕಾವ್ಯ ಕಾಲದಲ್ಲಿ 'ಭಾರತವೆಂಬ ನಾಮಕರಣವನ್ನು ಈ ದೇಶಕ್ಕೆ ಮಾಡಲಾಗಿರುತ್ತದೆ. ಶಕುಂತಳಾ-ದುಷ್ಯಂತರ ಮಗ ಭರತನ ಹೆಸರಿನ ಮೇಲೆ ಆಧಾರಿತವಾಗಿದೆ ಆ ಹೆಸರು. ಆದರೆ ವೇದಗಳಲ್ಲಿ ಭರತ ರಾಜವಂಶದ ಉಲ್ಲೇಖವಿದೆ. ವೈದಿಕ ಸಂಸ್ಕೃತಿಯ ಶತ್ರು ಹತ್ತು ರಾಜರುಗಳ ಸಂಘಟಿತ ಆಕ್ರಮಣವನ್ನು ವಿಫಲಗೊಳಿಸುವ ರಾಜನಿಂದ ಆ ವಂಶ ಆರಂಭವಾಗಿರುತ್ತದೆ. ಋಗ್ವೇದದ ಪ್ರಕಾರ, ಆಕ್ರಮಣ ಮಾಡಿರುವ ರಾಜರು ವೈದಿಕ ಕ್ಷೇತ್ರದಿಂದ ಹೊರಗೆ ಇದ್ದರು. ಮಹಾಕಾವ್ಯ ಕಾಲದ ಭೂಗೋಲದಲ್ಲಿ ಭರತ ವರ್ಷವನ್ನು ಪೃಥ್ವಿಯ ಮಧ್ಯ ಪ್ರದೇಶವೆಂದು ಗಣಿಸಲ್ಪಟ್ಟಿರುತ್ತದೆ. ವೈದಿಕ ಕಾಲದಲ್ಲಿ ಈ ದೇಶಕ್ಕೆ ಯಾವ ಹೆಸರಿತ್ತು— ನಮಗದು ಗೊತ್ತಿರುವದಿಲ್ಲ.

ವೈದಿಕ ಕಾಲದ ಭಾರತದ ಕುರಿತು ವಿಚಾರ ಮಾಡುವ ಸಮಯ ವೈದಿಕ ಸಂಸ್ಕೃತಿಯ ವಿಕಾಸದ ಸಕ್ರಿಯ ಕೇಂದ್ರ ಹಾಗೂ ಪ್ರಸಾರ ಕ್ಷೇತ್ರವಾಗಿತ್ತು ಈ ದೇಶವೆಂಬುದು ನಮ್ಮ ಗಮನಕ್ಕೆ ಬರುತ್ತದೆ. ಸಿಂಧೂವಿನಿಂದ ಯಮುನಾ ನದಿ ತಟಾಕದ ವರೆಗಿನ ಪ್ರದೇಶವು ವೈದಿಕ ಸಂಸ್ಕೃತಿಯ ವಿಕಾಸದ ಸಕ್ರಿಯ ಕೇಂದ್ರವಾಗಿ ಇತ್ತೆಂದು ಹೇಳಲಾಗುತ್ತದೆ. ಅಲ್ಲೇ 'ಚೇದಿ' ಪ್ರಾಂತದ ಉಲ್ಲೇಖವೂ ದೊರೆಯುತ್ತದೆ. ಇದು ವರ್ತಮಾನ ಭಾರತದ ದಕ್ಷಿಣ ಭಾಗವಿರುತ್ತದೆ. ಈ ಚೇದಿ ಪ್ರದೇಶದ ನಾಲ್ಕು ಬದಿಗಳಲ್ಲಿ ಸಮುದ್ರ ಆವರಿಸಿಕೊಂಡಿದೆಂಬ ವರ್ಣನೆ ವೇದದಲ್ಲಿದೆ, ಆದರೆ ದಕ್ಷಿಣ ಭಾರತದ ಮೂರು ದಿಕ್ಕುಗಳಲ್ಲಿ ಮಾತ್ರ ಸಮುದ್ರಗಳಿವೆ.

ವೇದಗಳಲ್ಲಿ ಮುತ್ತುಗಳ ಉಲ್ಲೇಖವೂ ಇದೆ. ಅವು ಸಮುದ್ರದಲ್ಲಿ ಮಾತ್ರ ದೊರಕುತ್ತವೆ. ವೈದಿಕ ಸಂಸ್ಕೃತಿಯ ಪ್ರಸಾರವು ಪೂರ್ಣ ಭಾರತದಲ್ಲಾಗಿತ್ತು. ಹಾಗೂ ಅವರಿಗೆ ಮಹಾಸಾಗರದ ಜ್ಞಾನವಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಏಶ್ಯಾ ಮೈನರಿನ ಜನರೊಂದಿಗೂ ವೈದಿಕ ಜನತೆಗೆ ತೀವ್ರ ಸಂಬಂಧ ಇತ್ತೆಂದು ಋಗ್ವೇದ ತಿಳಿಸುತ್ತದೆ. ವೇದಗಳಲ್ಲಿ ಅಸುರ ಪದದ ಅರ್ಥ ಮಹಾನ್ ದೇವತೆ ಎಂದೂ ಆರಂಭದಲ್ಲಿತ್ತು, ನಂತರ ಅದು ರಾಕ್ಷಸನೆಂಬ ಅರ್ಥಕ್ಕೆ ಬಂದು ಮುಟ್ಟಿರುತ್ತದೆ. ಈ ಪರಿವರ್ತನೆಯ ಕಾರಣವೆಂದರೆ ವೈದಿಕ ಜನತೆಗೆ ಪಶ್ಚಿಮ ರಾಷ್ಟ್ರಗಳ ಜನರೊಡನೆ ಹಗೆತನ ಹುಟ್ಟಿದ್ದೇ ಇದೆ. ಅವೆಸ್ತಾದಲ್ಲಿ 'ಅಹುರ' (ಅಸುರ) ಪದಕ್ಕೆ ಮಹಾನ್ ದೇವತೆ ಹಾಗೂ 'ದೇವ ದೇವತೆ'ಗಳ ಶತ್ರುವೆಂದು ಹೇಳಲಾಗಿರುತ್ತದೆ.

ಪಶ್ಚಿಮದ ಸಾಮ್ರಾಜ್ಯಗಳಿಗೆ ಎಂದೂ ವೈದಿಕ ಕ್ಷೇತ್ರದ ಮೇಲೆ ಅಧಿಕಾರ ನಡೆಸಲು ಸಾಧ್ಯವಾಗಿರುವದಿಲ್ಲ. ಆಗ ನಡೆದಿರುವ ಒಂದೇ ಒಂದು ಆಕ್ರಮಣದ ಉಲ್ಲೇಖ ದೊರಕುತ್ತದೆ. ಅದರಲ್ಲಿ ವಿದೇಶೀ ಆಕ್ರಮಣ ವಿಫಲವಾಗಿರುತ್ತದೆ. ಅವನು ದುಷ್ಯಂತ ಪುತ್ರ ಭರತನ ಕೈಯಲ್ಲಿ ಪರಾಜಿತನಾಗಿರುವನು. ಇದರ ವಿವರಣೆಯು ಋಗ್ವೇದದಲ್ಲಿ ದೊರಕುತ್ತದೆ ವೇದಗಳು ಸೂಚಿಸುವಂತೆ, ಭಾರತವನ್ನು ಬಗ್ಗುಬಡಿಯಲು ನೆರೆಕರೆಯ ನಾಡುಗಳು ಆಗಾಗ ಪ್ರಯತ್ನ ನಡೆಸಿದ್ದುವು. ಅವುಗಳಲ್ಲಿ ಪಶ್ಚಿಮದ ಸಾಮ್ರಾಜ್ಯಗಳೇ ಪ್ರಮುಖವಿವೆ. ಅವರಲ್ಲಾ ಮೆಸೊಪೊಟಾಮಿಯಾ ಸಾಮ್ರಾಜ್ಯವು ಮುಖ್ಯ ಇದೆ. ಹಾಗಿದ್ದರೂ ಎಂದೆಂದೂ ಅವುಗಳಿಗೆ ಭಾರತವು ಬಗ್ಗಿಕೊಂಡಿರಲಿಲ್ಲ.

ವೈದಿಕ ಸಂಸ್ಕೃತಿಯ ಪ್ರಾರಂಭ ಎಂದಾಯಿತು—ನಮಗದರ ಮೂಲ ಗೊತ್ತಾಗುವದಿಲ್ಲ. ಕ್ರಿಸ್ತಜನ್ಮ ಪೂರ್ವ ಎರಡನೇ ಸಹಸ್ರಾಬ್ದಿಯ ಮಧ್ಯ ಕಾಲವು ವೈದಿಕ ಕಾಲದ ಆದಿ ಕಾಲವೆಂಬುದು ಇತಿಹಾಸಕಾರರ ಅಭಿಪ್ರಾಯವಿದೆ. ಇದು ಸತ್ಯವೆಂದಾದಲ್ಲಿ ವೈದಿಕ ಜನತೆಗೆ ಮೆಸೊಪೊಟಾಮಿಯ ಸಾಮ್ರಾಜ್ಯವೇ ಶತ್ರು ರಾಜ್ಯವೆಂಬುದರಲ್ಲಿ ಸಂದೇಹ ಇರುವದಿಲ್ಲ. ಅವರೊಳಗೆ ಆಗಾಗ ಘರ್ಷಣೆಯು ನಡೆಯುತ್ತಿದ್ದಿರಬೇಕು. ಏಶ್ಯಾ ಮೈನರ್ ಎಂದೂ ವೈದಿಕ ಭಾರತದ ಅಧೀನವಾಗಿತ್ತೆಂಬುದಕ್ಕೆ ಸಾಕ್ಷಿಗಳು ಸಿಗುವದಿಲ್ಲ. ಆದರೆ

( ೧೧ನೇ ಪುಟ ನೋಡಿರಿ)


**31-12-1962 ರಂದು**

**ಕೆನರಾ ಬ್ಯಾಂಕ್**

| | | | |
|---|---|---|---|
| ಪಾವತಿಯಾದ ಮೂಲಧನ | ರೂ. | 75 | ಲಕ್ಷ |
| ಕ್ಷೇಮನಿಧಿ | ರೂ. | 76 | ಲಕ್ಷ |
| ಠೇವಣಾತಿಗಳು | ರೂ. | 50·88 | ಕೋಟಿ |
| ವಿನಿಯೋಗಗಳು (ಇನ್‌ವೆಸ್ಟ್‌ಮೆಂಟ್ಸ್) | ರೂ. | 17·80 | ಕೋಟಿ |
| ಸಾಲಗಳು (ಅಡ್ವಾನ್ಸಸ್) | ರೂ. | 26·93 | ಕೋಟಿ |
| ಚಲಾವಣಾ ನಿಧಿ (ವರ್ಕಿಂಗ್ ಫಂಡ್ಸ್) | ರೂ. | 55·78 | ಕೋಟಿ |

| | |
|---|---|
| ಠೇವಣಾತಿಗೆ ಸಾಲಗಳ ಶೇಕಡಾ ಮಾನ | 52·93 |
| ಲಿಕ್ವಿಡಿಟಿ ಪರಿಮಾಣ | 51·84 % |

**ಕೆನರಾ ಬ್ಯಾಂಕ್ ಲಿಮಿಟೆಡ್**

(ಸ್ಥಾಪನೆ : 1906)

ರಿಜಿಸ್ಟರ್ಡ್ ಆಫೀಸ್ : ಮಂಗಳೂರು :: ಆಡಳಿತ ಕಛೇರಿ : ಬೆಂಗಳೂರು

**1 9 6 2**

ಗಮನಾರ್ಹ ಪ್ರಗತಿ

ಸಾಧನೆಯ ವರ್ಷ

ಸಮಗ್ರ ಸೇವೆ ಸಂಪೂರ್ಣ ಭದ್ರತೆ

ನಮ್ಮ ವಿಶ್ವವಿದ್ಯಾಲಯಗಳು

# ಜೀವನ ದರ್ಶನ ಮಾಡಿಸಬೇಕು

### ಅಪ್ರಬುದ್ಧ ವಿದ್ಯಾರ್ಥಿಗಳು

ಜೀವನರಂಗದಲ್ಲಿ ಕಾಲಿಡಲು ಅಸಮರ್ಥರಾದುದರಿಂದ ಇನ್ನೂ ೩—೪ ವರ್ಷ ಈ ವಿದ್ಯಾರ್ಥಿಗಳಿಗೆ ಯಾವುದಾದರೊಂದು ವ್ಯಾಸಂಗದಲ್ಲಿ ಕಾಲ ಕಳೆಯುವುದು ಅನಿವಾರ್ಯವಾಗುತ್ತದೆ. ಏನೂ ಕೆಲಸವಿಲ್ಲದಿದ್ದರೆ ಅವನ ಚುರುಕು ಬುದ್ಧಿ ನಾಶವಾದೀತು. ಕಾಲೇಜು ಶಿಕ್ಷಣ ಇವೆಲ್ಲಕ್ಕೂ ಸುಲಭವಾದ ಪರಿಹಾರ ಮಂತ್ರವಾಗಿದೆ. ಹೀಗಾಗಿ ಮನೆಯಲ್ಲಿ ಗಲಾಟೆ ಮಾಡುತ್ತಾರೆಂದು ಚಿಕ್ಕ ಮಕ್ಕಳನ್ನು ಕಾಲೇಜಿಗೆ ಕಳುಹಿಸುವ ಪರಿಸ್ಥಿತಿಯು ಬಂದಿದೆ. ತಮ್ಮ ಹೊಣೆಗಾರಿಕೆಯನ್ನರಿಯದ ಇಂದಿನ ವಿದ್ಯಾರ್ಥಿಗಳಲ್ಲಿ ನೈತಿಕ ಪತನವೂ ಸಹ ಈ ಅಪ್ರಬುದ್ಧತೆಯ ಕಾರಣದಿಂದಲೇ ಆಗಿದೆ.

### ಶಿಕ್ಷಣ ಮಾಧ್ಯಮ

ಮನೋಬೆಳವಣಿಗೆಯ ಈ ಅಪರಿಪೂರ್ಣತೆಯ ಜೊತೆಗೆ ವಿಶ್ವವಿದ್ಯಾಲಯದ ಶಿಕ್ಷಣ ಮಾಧ್ಯಮವೂ ಇಂದು ಶಿಕ್ಷಣ ಮಟ್ಟವನ್ನು ಇಳಿಸುವುದರಲ್ಲಿ ಸಹಕಾರಿಯಾಗಿದೆ. ಪ್ರೌಢ ಶಾಲೆಯಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಹೊಸ ವಿಷಯಗಳನ್ನು ಆಂಗ್ಲ ಭಾಷೆಯಲ್ಲಿ ಕಲಿಯುವುದೆಂದರೆ ಬಹುಕಷ್ಟ. ಆದರಲ್ಲೂ ಈಗಿನ ಪಿ. ಯು. ಸಿ ಪದ್ಧತಿಯ ಪರೀಕ್ಷೆಯಲ್ಲಿ ಒಂದೇ ವರ್ಷದಲ್ಲಿ ಭಾಷಾಜ್ಞಾನವನ್ನು ಪಡೆದು ವಿಷಯಗಳನ್ನೂ ಜೀರ್ಣಿಸಿಕೊಳ್ಳುವುದೆಂದರೆ ಅಸಾಧ್ಯ. ಇದಕ್ಕೆ ಪರಿಹಾರವೆಂದರೆ ಶಿಕ್ಷಣ ಮಾಧ್ಯಮವನ್ನು ಮಾತೃ ಭಾಷೆಗೇ ಬದಲಾಯಿಸುವುದು. ಇದು ಸಾಧ್ಯವೇ ಇಲ್ಲವಾದರೆ ಆಂಗ್ಲ ಭಾಷಾ ಜ್ಞಾನವನ್ನು ಇಲ್ಲಿಯ ಮಟ್ಟಕ್ಕೆ ಏರಿಸಲು ಹಿಂದಿನ ೩ ವರ್ಗಗಳಿಂದಲೇ ವಿದ್ಯಾರ್ಥಿಗಳಿಗೆ ತರಬೇತಿ ಕೊಡಬೇಕು

### ಅಧ್ಯಾಪಕರ ಹೊಣೆಗಾರಿಕೆ

ಮೂರನೆಯದಾಗಿ ಶಿಕ್ಷಣ ಮಟ್ಟ ಇಳಿಯುವುದರಲ್ಲಿ ಉಪಾಧ್ಯಾಯರ ಹೊಣೆಗಾರಿಕೆಯೂ ಇದೆ. ವಿದ್ಯಾರ್ಥಿ ಪ್ರಮಾಣದಿಂದ ಅಧ್ಯಾಪಕರ ಸಂಖ್ಯೆ ಬಹಳ ಕಡಿಮೆಯೆಂಬುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ವಿಶ್ವವಿದ್ಯಾಲಯಗಳ ವೇತನ ಪ್ರಮಾಣಗಳು ಆಕರ್ಷಕವಾಗಿಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ. ಇತ್ತೀಚೆಗೆ ಗ್ರಾಂಟ್ಸ್ ಕಮಿಶನ್ನಿನ ಶಿಫಾರಸಿನಂತೆ ಪುನರ್ನಿರ್ಮಿತವಾದ ಪ್ರಮಾಣಗಳು ಸ್ವಲ್ಪ ತೃಪ್ತಿಕರವಾಗಿವೆ. ಆದರೂ ಕಾಲೇಜುಗಳಲ್ಲಿ ಜೀವನದ ಬೆಲೆ ಏರಿರುವ ನಗರಗಳಲ್ಲಿರುವಾಗ ನೆಮ್ಮದಿಯಿಂದ ಜೀವನ ಸಾಗಿಸಲು ಆವಶ್ಯಕವಾದಷ್ಟು ವೇತನ ಉಪಾಧ್ಯಾಯರಿಗೆ ದೊರೆಯಬೇಕಾದುದು ಅನಿವಾರ್ಯ. ಮೇಲ್ಸಂಪಾದನೆಗೋಸ್ಕರ ನೋಟ್ಸ್, ಗೈಡ್, ಟವಿಶನ್ ಇತ್ಯಾದಿಗಳ ರಚನೆಯಲ್ಲಿ ಉಪಾಧ್ಯಾಯನು ತೊಡಗುವುದೆಂದರೆ, ಆತನ ಕೆಲಸದ ಕಡೆಗೆ ನಿರಾಸಕ್ತಿ ತೋರಿಸುವುದೆಂದು ಬೇರೆ ಹೇಳಬೇಕಾಗಿಲ್ಲ. ಈ ತೆರನ ನೋಟ್ಸ್, ಗೈಡ್ ಮತ್ತು ಟವಿಶನ್‌ಗಳಿಂದ ವಿದ್ಯಾರ್ಥಿಯ ಮಟ್ಟವೂ ಕೆಳಗೆ ಇಳಿಯುತ್ತದೆ.

### ಅರ್ಹತೆಗಿಂತ ಶಿಫಾರಸು ಮುಖ್ಯ

ಉಪಾಧ್ಯಾಯರ ನೇಮಕದಲ್ಲಿ ಇಂದು ಅನುಸರಿಸಲಾಗುತ್ತಿರುವ ರೀತಿ ನೀತಿಗಳು ಯೋಗ್ಯವಲ್ಲ. ವಿದ್ಯೆ ಮತ್ತು ಅರ್ಹತೆಗಿಂತ ಜಾತಿ, ಮತ ಮತ್ತು ಶಿಫಾರಸು ಇತ್ಯಾದಿಗಳ ಮೇಲೆ ನೇಮಕ ಮಾಡುವುದು ಬೇರೆ ಕ್ಷೇತ್ರಕ್ಕಿಂತ ಶಿಕ್ಷಣ ಕ್ಷೇತ್ರದಲ್ಲಿ ಅಪಾಯಕಾರಿ. ತನಗೇ ಬರದಿರುವ ವಿದ್ಯೆಯನ್ನು ಅಧ್ಯಾಪಕನು ತನ್ನ ವಿದ್ಯಾರ್ಥಿಗೆ ಎಷ್ಟು ಚೆನ್ನಾಗಿ ಕಲಿಸಿಯಾನು? ದಕ್ಷರಾದವರಿಗೆ ದೊರೆಯಬೇಕಾದ ಬಡ್ತಿ ಮತ್ತು ಪ್ರೋತ್ಸಾಹ ದೊರಕದಿದ್ದಲ್ಲಿ ಅವರಿಗೆ ಆ ವೃತ್ತಿಯಲ್ಲಿ ಎಷ್ಟು ಅಭಿಮಾನ ಇದ್ದೀತು? ಈ ಪರಿಸ್ಥಿತಿ ಇರುವುದರಿಂದಲೇ ಇಂದು ಪುಸ್ತಕ ನೋಡಿಕೊಂಡು ಪಾಠ ಮಾಡುವವರೂ ವಿದ್ಯಾರ್ಥಿಗಳ ಎದುರಿಗೆ ನಿಲ್ಲಲಂಜುವವರೂ, ಅಸಂಬದ್ಧ ಭಾಷಾ ಪ್ರಯೋಗಗಳನ್ನು ಮಾಡುವವರೂ ಆದ ಉಪಾಧ್ಯಾಯರ ಸಂಖ್ಯೆ ಹೆಚ್ಚಿದೆ.

### ದೋಷಪೂರ್ಣ ಪಾಠಕ್ರಮ

ನಾಲ್ಕನೆಯದಾಗಿ ಶಿಕ್ಷಣ ಮಟ್ಟದ ಇಳಿವರಿಯು ಶಿಕ್ಷಣದ ಪ್ರಧಾನ ವಿಷಯವಾದ ಪಾಠ್ಯ ಕ್ರಮಗಳಿಂದಲೇ ಆಗಿದೆ ಈ ವಿದ್ಯಾಭ್ಯಾಸ ಜ್ಞಾನದಾನವಲ್ಲ. ವಿದ್ಯಾರ್ಥಿಯ ತಲೆಗೆ ಕೆಲವಿಷಯಗಳನ್ನು ತುರುಕುವುದೇ ಆಗಿದೆ. ವಿದ್ಯಾರ್ಥಿಗೆ ಸ್ವತಂತ್ರ ವಿಚಾರಕ್ಕೆ ಅವಕಾಶವೇ ಇಲ್ಲ. ವಿಜ್ಞಾನ, ಗಣಿತ, ಚರಿತ್ರೆ ಇತ್ಯಾದಿ ವಿಷಯಗಳು ಪುಸ್ತಕದಲ್ಲಿದ್ದಂತೆಯೇ ಚಾಚೂ ತಪ್ಪದೆ ಬರೆಸಲ್ಪಡುತ್ತವೆ. ಅದೇನೆಂದು ನೋಡುವ ಗೋಜಿಗೆ ಹೋಗದೆ ಸಾರವನ್ನು ಉರು ಹೊಡೆದು ೩೫ ಅಂಕ ಪಡೆಯುವುದೇ ಇಂದಿನ ವಿದ್ಯಾರ್ಥಿಯ ಸಾಮಾನ್ಯವಾದ ಪರಮ ಗುರಿ. ಇದರಲ್ಲೂ ಸಹ ಸಂಕೀರ್ಣತೆ ಅಧಿಕ. ಒಬ್ಬ ವಿದ್ಯಾರ್ಥಿಗೆ ೨-೩ ವಿಷಯಗಳನ್ನು ಬಿಟ್ಟರೆ ಉಳಿದ ವಿಷಯಗಳ ಬಗ್ಗೆ ಚಕಾರವೂ ಗೊತ್ತಿರುವುದಿಲ್ಲ ಹೀಗಾಗಿ ಅವನ ಗ್ರಹಿಕೆ ಬಹಳ ಸಂಕುಚಿತವಾದುದು. ತಾನು ಓದುವ ವಿಷಯಗಳ ಮಹತ್ವ ಏನೆಂಬುದಾಗಲೀ, ಅದರಿಂದ ತನ್ನ ಜ್ಞಾನ ಹೇಗೆ ವೃದ್ಧಿ ಹೊಂದುವುದೆಂದಾಗಲೀ ಅವನಿಗೆ ಗೊತ್ತಿಲ್ಲ ಯಾಂತ್ರಿಕವಾಗಿ ಸಾರಹೀನವಾಗಿ ಕಲಿಸಲ್ಪಡುತ್ತಿರುವ ಈ ವಿದ್ಯೆಗೆ ಯಾವ ಪುರುಷತ್ವವೂ ಇರುವುದಿಲ್ಲ.

ಈಚಿನ ಸುಧಾರಿತ ಶಿಕ್ಷಣ ಕ್ರಮದಲ್ಲಿ ಕಲಾ ವಿದ್ಯಾರ್ಥಿಗಳಿಗೆ ಕೆಲವು ವಿಜ್ಞಾನ ವಿಷಯಗಳನ್ನೂ, ವಿಜ್ಞಾನದ ವಿದ್ಯಾರ್ಥಿಗಳಿಗೆ ಕೆಲವು ಕಲಾ ವಿಷಯಗಳನ್ನೂ ಬೋಧಿಸುತ್ತಾರೆ. ಆದರೆ ಅವರ ತಲೆಯಲ್ಲಿ ನೀರಸ ವಿಚಾರಗಳನ್ನು ತುಂಬುವುದಕ್ಕಿಂತ, ವೈಜ್ಞಾನಿಕ ದೃಷ್ಟಿಕೋಣ, ಅದರ ಮಹತ್ವ ಮಾನವ ಚರಿತ್ರೆ, ವಿಚಾರಾಭಿವೃದ್ಧಿ ಇವುಗಳಲ್ಲಿ ವಿಜ್ಞಾನದ ಪಾತ್ರ ಮುಂತಾದ ವಿಷಯಗಳನ್ನು ಬೋಧಿಸಿದರೆ ಉತ್ತಮವೆಂದು ಈಗಿನ ಶ್ರೇಷ್ಠ ಶಿಕ್ಷಣ ತಜ್ಞರು ಹೇಳಿದ್ದಾರೆ.

ಧಾರ್ಮಿಕ ಶಿಕ್ಷಣವನ್ನು ಕೊಡದ ಇಂದಿನ ಶಿಕ್ಷಣ ಬರೇ ಒಂದು ಕಾರಖಾನೆಯಂತಾಗಿದೆ. ಅದು ಡಿಗ್ರಿಗಳನ್ನು ಕೊಡುವ ಕೇಂದ್ರವೆಂದರೂ ಅತಿಶಯೋಕ್ತಿಯಾಗಲಾರದು. ಭಾರತದಂತಹ ಧರ್ಮ, ಸಂಸ್ಕೃತಿ, ಅಧ್ಯಾತ್ಮಗಳ ಜನ್ಮಭೂಮಿ ದೇಶದಲ್ಲಿ ಇಂದು ಧರ್ಮ, ಸಂಸ್ಕೃತಿ ಸಾಹಿತ್ಯ ಚರಿತ್ರೆ ಮೊದಲಾದುವುಗಳ ಬಗ್ಗೆ ಸಾಕಷ್ಟು ಶಿಕ್ಷಣ ದೊರಕುತ್ತಿಲ್ಲ. ಇಂದಿನ ಪದವೀಧರರು ಕೆಲವು ಮಟ್ಟಿಗೆ ಇಂಗ್ಲೀಷು ಒಂದು ಪ್ರದೇಶ ಭಾಷೆ, ವಿಜ್ಞಾನ, ಗಣಿತ ಇತ್ಯಾದಿ ೨-೩ ವಿಷಯಗಳು. ಇವುಗಳ ಬಗ್ಗೆ ಸ್ವಲ್ಪ ಓದಿ ಪರೀಕ್ಷೆಯಲ್ಲಿ ಬರೆದರೆ ಸಾಕು! ಜೀವನದ ಬಗ್ಗೆ ಅವನಿಗೇನೂ ಶಿಕ್ಷಣ ದೊರಕುತ್ತಿಲ್ಲ. ಇಂತಹ ಅಪೂರ್ಣ ಸಾರಹೀನ ವಿದ್ಯೆ ಯಾವ ಉಪಯೋಗಕ್ಕೆ.

ಈ ಬಗೆಯ ವಿದ್ಯಾಭ್ಯಾಸಕ್ಕೆ ಒಗ್ಗಿಹೋಗಿರುವ ನಮ್ಮ ವಿದ್ಯಾರ್ಥಿವರ್ಗಕ್ಕೆ ಜೀವನದ ನೈತಿಕ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಮಹತ್ವಾಕಾಂಕ್ಷೆ ಇಲ್ಲ. ಜೀವನದ ನಿಜವಾದ ಅರ್ಥ ಏನೆಂಬುದನ್ನು ಯೋಚಿಸಲು ಇಂದಿನ ವಿದ್ಯಾರ್ಥಿ ಇಚ್ಛಿಸುವುದಿಲ್ಲ. ಇಂತಹವನು ನಿಜವಾದ ವಿದ್ಯೆ ಏನೆಂಬುದನ್ನು ಹೇಗೆ ತಿಳಿದಾನು?

### ವಿದ್ಯಾರ್ಥಿಗಳಲ್ಲಿ ಅಶಿಸ್ತು

ಇತ್ತೀಚೆಗೆ ಉಂಟಾಗಿರುವ ಹೊಸ ಸಮಸ್ಯೆ—ವಿದ್ಯಾರ್ಥಿಗಳಲ್ಲಿ ಅಶಿಸ್ತು. ಈಚೆಗಿನ ಕೆಲವು ಘಟನೆಗಳಿಂದ ಇದು ಎಲ್ಲರ ಗಮನವನ್ನೂ ಅತಿಯಾಗಿ ಸೆಳೆದಿದೆ. ಕಾಶಿಯಂತಹ ಅತಿ ಪುರಾತನ ಹಾಗೂ ಶ್ರೇಷ್ಠ ವಿಶ್ವ ವಿದ್ಯಾಲಯವನ್ನೇ ಈ ಕಾರಣಕ್ಕಾಗಿ (ತಾತ್ಕಾಲಿಕವಾಗಿಯಾದರೂ) ಮುಚ್ಚಬೇಕಾಗಿಬಂದರೆ ಈ ವಿಚಾರದಲ್ಲಿ ಕಣ್ಣು ಮುಚ್ಚಿಕೊಂಡಿರುವುದು ಸಾಧ್ಯವೇ? ಆದರೂ ಯಾರೂ ಇದರ ಬಗ್ಗೆ ಸರಿಯಾದ ಕ್ರಮದಲ್ಲಿ ಯೋಚಿಸಿದ ಹಾಗೆ ತೋರುತ್ತಿಲ್ಲ. ಈ ಮಹಾ ಸಮಸ್ಯೆಯ ಸಂಪೂರ್ಣ ಹೊಣೆ ವಿದ್ಯಾರ್ಥಿಗಳ ಮೇಲಿಲ್ಲ ನಾಗರಿಕರಾದ ಇಂದಿನ ಪ್ರಜೆಗಳ ಮೇಲಿದೆ. ದೇಶದ ಎಲ್ಲೆಡೆಯಲ್ಲಿ ಇಂದು ಎಂಥ ಕ್ಷುಲ್ಲಕ ಕಾರಣಗಳಿಗಾಗಿಯೂ ಮುಷ್ಕರ ಸಾಮಾನ್ಯವಾಗಿರುವಾಗ ಅಧಿಕಾರ ಪೀಠಗಳಲ್ಲಿರುವ, ಜವಾಬ್ದಾರಿ

(೯ನೇ ಪುಟ ನೋಡಿರಿ)

ಕಠ್ಮಂಡುವಿನಲ್ಲಿ ಭಾರತೀಯ ನೆರವಿನಿಂದ ಪಶುವಿಜ್ಞಾನದಲ್ಲಿ ಅಧ್ಯಯನ ನಡೆಸುತ್ತಿರುವ ನೇಪಾಳಿಗಳು.


ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ
1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ
ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.




## ತಮಿಳಿನ ಶ್ರೇಷ್ಠ ಕವಿ

# ಸುಬ್ರಹ್ಮಣ್ಯ ಭಾರತಿ

ಭಾರತಿಯು ಕವಿಶ್ರೇಷ್ಠ, ದೇಶಭಕ್ತ, ಸಾಮಂತ ಮತ್ತು ತಮಿಳು ನಾಡಿನ ಅತ್ಯಂತ ಧೈರ್ಯಶಾಲಿಯಾದ ಪುರುಷ. ಭಾರತಿಗೆ ತಮಿಳು ನಾಡಿನಲ್ಲಿ ಶತ್ರುಗಳಿರಲಿಲ್ಲ. ಆತನು ಬರೆದ ಪದ್ಯಗಳು ಬಹಳ ಹೃದಯಂಗಮವಾಗಿದ್ದು ಜನರಲ್ಲಿ ಹುರುಪನ್ನು ಹುಟ್ಟಿಸುವವು. ಬ್ರಿಟಿಷರು ಆತನ ದೇಶಭಕ್ತಿಗೆ ಹೆದರಿ ಆತನನ್ನು ಹಿಂಬಾಲಿಸತೊಡಗಿದರು. ಆತನು ರಾಜದ್ರೋಹಿಯೆಂದು ಭಾವಿಸಿ ಆತನ ಕ್ರಿಯೆಗಳ ಮೇಲೆ ಎಚ್ಚರವಿಟ್ಟಾಗ, ಭಾರತಿಯು ತನ್ನ ಕೊರಳನ್ನು ಉಳಿಸುವದಕ್ಕಾಗಿ ಬ್ರಿಟಿಷ ಭಾರತವನ್ನಾಳಿದ ಫ್ರೆಂಚರ ಸ್ವಾಧೀನವಿದ್ದ ಪುದುಚೇರಿಗೆ ೧೯೦೮ರಲ್ಲಿ ಪಲಾಯನಗೈದನು.

೧೯೧೦ರಲ್ಲಿ ಸುಪ್ರಸಿದ್ಧ ಅರವಿಂದ ಘೋಷರು ರಾಜಕೀಯ ಚಳವಳಿಯನ್ನು ದೂರಮಾಡಿ ತಾತ್ವಿಕ ಸಾಧನವನ್ನು ಕೈಗೊಂಡಿದ್ದರು. ಬಂಗಾಳವನ್ನು ಮರೆತು ಪುದುಚೇರಿಯನ್ನು ಸೇರಿ ಸ್ವದೇಶ ಪ್ರೇಮದಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗೃತಿಗೊಳಿಸುತ್ತಿದ್ದರು. ಈ ಸುಸಮಯದ ಸಂದರ್ಭದಲ್ಲಿ ಭಾರತಿಯು ಅರವಿಂದರ ದರ್ಶನ ಪಡೆದು ಅವರಿಬ್ಬರಲ್ಲೂ ಉತ್ತಮ ತರಹದ ಮೈತ್ರಿಯು ಸಿದ್ಧಿಸಿತು. ಹಲವು ವರುಷಗಳ ವರೆಗೆ ಇಬ್ಬರೂ ಅಣ್ಣತಮ್ಮಂದಿರಂತಿದ್ದರು. ಅರವಿಂದರ ಸಂಗದಿಂದ ಭಾರತಿಯ ಸಂಸ್ಕೃತಿಯು ಉಬ್ಬಿಬಂದು ಅವರ ಜಿಹ್ವೆಯಿಂದ ಅತಿ ಸುಲಭವೂ, ರಸಭರಿತವೂ ಆದ ಪದ್ಯಗಳು ಹೊರಸೂಸಿದವು. ಆ ಪದ್ಯಗಳು ಇಂದು ಅತಿ ಉತ್ತಮ ವರ್ಗದ ರಾಷ್ಟ್ರೀಯ ಗೀತೆಗಳಾಗಿವೆ— ತಮಿಳಿನಲ್ಲಿರುವ ಈ ಪದ್ಯಗಳನ್ನು ಈಗ ಇತರ ವಿವಿಧ ಭಾಷೆಗಳಲ್ಲಿ ಭಾಷಾಂತರಿಸುವ ಪ್ರಯತ್ನವು ನಮ್ಮ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ನಡೆದಿದೆ.

ದೇಶವು 'ತಾಯಿ'ಗೆ ಸಮಾನವೆಂಬುದೇ ಅರವಿಂದರು ಮೊದಲು ಭಾರತಿಗೆ ಕೊಟ್ಟ ಸದುಪದೇಶವು. ಭಾರತಿಯು ದೇಶಾಭಿಮಾನದ ಪದಗಳನ್ನು ಹಾಡುವಾಗ ಅರವಿಂದರು ಮೌನಿಗಳಾಗಿ ಮಂಡಿಸಿ ಧ್ಯಾನಯೋಗದಲ್ಲಿ ಮಗ್ನರಾದರು. ಅಪಾರವಾದ ಈಶ್ವರ ಮಹಿಮೆಯು ಅಂತರವನ್ನು ಅರಿತುಕೊಳ್ಳುವ ಯೋಗದಲ್ಲಿ ಸಿದ್ಧರಾದರು. ನಮ್ಮ ಪ್ರಾಚೀನ ಪುರಾಣಗಳಲ್ಲೂ, ವೇದ ಉಪನಿಷತ್ತುಗಳಲ್ಲೂ ತುಂಬಿರುವ ಸಾರವನ್ನು ಅರವಿಂದರು ಕೂಲಂಕಶವಾಗಿ ಭಾರತಿಗೆ ವಿವರಿಸಿದಾಗ ಭಾರತಿಯ ಮನೋವಿಕಾಸವು ಸಂಪೂರ್ಣಗೊಂಡಿತು. ಆತನ ಪದ್ಯಗಳು ಚೈತನ್ಯಮಯವಾದುವು. ಅರವಿಂದರ ಯೋಗ್ಯ ಶಿಷ್ಯರೊಬ್ಬರು ಅರವಿಂದರನ್ನು ಗೀತೆಯ ಕೃಷ್ಣನಿಗೂ, ಭಾರತಿಯನ್ನು ಅರ್ಜುನನಿಗೂ ಹೋಲಿಸಿ ಹೊಗಳಿರುವರು.

ಸಮಯ ಹೋದಂತೆ ಭಾರತಿಯ ಧಾರಾಶಕ್ತಿಯು ಬಲವತ್ತರವಾಗಲಾರಂಭಿಸಿತು. ಆತನ ಮಾತುಗಳೇ ಪದ್ಯಗಳಾದವು. ಆತನ ಕಲ್ಪನಾ ಶಕ್ತಿಯು ತೇಜಸ್ಸಿನಿಂದ ಬೆಳಗಿತು. ತನಗೆ ತಿಳಿದ ವಿಚಾರಗಳನ್ನು ನವೀನ ವಿಧದಲ್ಲಿ ವರ್ಣಿಸಿದ ಭಾರತಿಯ ಹಲವು ಪದ್ಯಗಳು ಈಗಲೂ ತಮಿಳು ಓದುಗರನ್ನು ಬೆರಗುಮಾಡುತ್ತಿವೆ.

೧೯೧೮ನೇ ವರುಷದಲ್ಲಿ ಭಾರತಿಯು ಪುದುಚೇರಿಯನ್ನು ಬಿಟ್ಟು ದಕ್ಷಿಣ ಆರ್ಕಾಟು ಜಿಲ್ಲೆಯ ಮುಖ್ಯ ಪಟ್ಟಣವಾದ ಕಡಲೂರಿಗೆ ಬಂದು ಸೇರಿದಾಗ ಅಲ್ಲಿಯ ಅಧಿಕಾರಿಗಳು ಅವನನ್ನು ಬಂಧಿಸಿದರು. ಮುಂದಿನ ಗತಿಯು ಕಾರಾಗೃಹವಾಸವೆ. ಆದರೆ ಅವರು ಬಹುಕಾಲ ಕಾರಾಗೃಹದಲ್ಲಿರಲಿಲ್ಲ. ಅವನನ್ನು ಕೆಲವು ತಿಂಗಳುಗಳ ಒಳಗೆ ಬಿಡುಗಡೆ ಮಾಡಿದರು.

ಕಡಲೂರಿನಿಂದ ಮದ್ರಾಸಿಗೆ ಬಂದ ಭಾರತಿಗೆ ಮಹಾತ್ಮಾಗಾಂಧಿಜಿಯವರ ದರ್ಶನವಾದಾಗ ಭಾರತಿಯಲ್ಲಿ ನವೀನ ವಿಧದ ದೇಶಭಕ್ತಿಯು ಅಂಕುರಿಸಿತು. ಭಾರತಿಯು ಗಾಂಧಿಜಿಯ ಶಿಷ್ಯತ್ವವನ್ನು ಪಡೆದಾಗ ಹಲವು ತಮಿಳರು ಸ್ವೇಚ್ಛೆಯಿಂದ ಭಾರತಿಯ ಅನುಯಾಯಿಗಳಾಗಿ ಭಾರತಿಯ ಕೀರ್ತಿಯನ್ನು ಹಬ್ಬಿಸಿದರು. ಬಂಕಿಂ ಚಂದ್ರರ 'ವಂದೇ ಮಾತರಂ'ನ್ನು ಅನುಸರಿಸಿ ತಮಿಳಿನಲ್ಲಿ ರಾಷ್ಟ್ರಗೀತವನ್ನು ರಚಿಸಿ ಹಾಡಿದರು. ಇನ್ನು ರಾಜಕೀಯ ಮಾತ್ರವಲ್ಲ ಸಾಮಾಜಿಕ ಉದ್ಧರಣದ ಸಲುವಾಗಿ ಹಲವು ಕೀರ್ತನಗಳನ್ನು ರಚಿಸಿ ಪ್ರಸಿದ್ಧರಾದರು.

ಪ್ರಸಿದ್ಧ ಕವಯಿತ್ರಿ ಸರೋಜಿನಿ ನಾಯ್ಡುರವರು ಭಾರತಿಯನ್ನು ಕುರಿತು ಈ ರೀತಿ ಬರೆದಿರುವರು. "ಭಾರತಿಯಂತಹ ಪ್ರತಿಭಾಶಾಲಿಯು ಬರೇ ತಮಿಳು ನಾಡಿನವರೆಂದು ಭಾವಿಸುವುದು ತಪ್ಪು. ಅವರು ನಮ್ಮ ಇಡೀ ಭಾರತಕ್ಕೆ ಸಂಬಂಧಿಸಿದವರು. ಅವರ ಪದ್ಯಗಳು ನಮ್ಮ ಇಡೀ ದೇಶವನ್ನು ತೇಜಸ್ಸಿನಿಂದ ತುಂಬಿಸುತ್ತಿವೆ. ಅವರಲ್ಲಿ ಜಾತಿ ಮತ ಭೇದಗಳಿಲ್ಲ. ಹಿಂದೂ ದೇಶದ ಸಕಲ ಮಾನವರೂ ಒಂದೇ ತಾಯಿಯ ಮಕ್ಕಳೆಂದೇ ಅವರ ಪದ್ಯಗಳ ಸ್ವಾರಸ್ಯ. ಮಾತ್ರವಲ್ಲ ಭೂಲೋಕದ ಸಂಪೂರ್ಣ ಮಾನವ ವರ್ಗವೇ ಭೂಲೋಕ ಮಾತೆಯ ಮಕ್ಕಳು ಎನ್ನುವ ವಿಶಾಲ ಪ್ರೇಮಭಾವವು ಅವರ ಅನೇಕ ಕವಿತೆಗಳಲ್ಲಿ ಅಡಗಿದೆ. ಇವರ ಉತ್ತಮ ಕವಿಗಳೆಂದು ಭಾರತೀಯರು ಹೆಮ್ಮೆ ಪಡಬಹುದು.

ಸ್ತ್ರೀಯರ ಏಳಿಗೆಯು ದೇಶೋದ್ಧಾರಕ್ಕೆ ಆಗತ್ಯವೆಂಬ ಜ್ಞಾನವು ಭಾರತಿಗೆ ಸಿಸ್ಟರ್ ನಿವೇದಿತಾ ಇವರಿಂದ ದೊರಕಿತು. ಸ್ತ್ರೀಯರೂ ಪುರುಷರೂ ಸರಿಸಮಾನರೆಂದು ನಿವೇದಿತರಿಂದ ಭಾರತಿಗೆ ಭಾಸವಾಯಿತು. ನಿವೇದಿತರ ಅನುಯಾಯಿಯಾಗಿ ಕೊನೆಗೆ ಭಾರತಿಯು ಒಂದು ಪದ್ಯದಲ್ಲಿ ಸ್ತ್ರೀಯರನ್ನು ಕೀಳ ತರಗತಿಯಲ್ಲಿಡುವ ಮಾನವನು ಅಜ್ಞಾನಿಯೆಂದೂ, ವಿವೇಕದಲ್ಲಿ ಸ್ತ್ರೀ ಪುರುಷರು ಏಕಸಮಾನರೆಂದೂ ಬಹು ಗಂಭೀರ ರೀತಿಯಲ್ಲಿ ವಿವರಿಸಿರುವನು.

"ಭಾರತಿಯು ಸುಪ್ರಸಿದ್ಧ ತೇಜಸ್ವಿಯಾಗಿ ಬಾಳುವನು. ಆತನ ಮರಣಾನಂತರವೂ ಯಶವು ಆತನನ್ನು ದಿನೇ ದಿನೇ ಮನ್ನಿಸುವುದು" ಎಂಬುದಾಗಿ ನಿವೇದಿತರು ಮುಂದಾಗಿ ಭವಿಷ್ಯವನ್ನು ಹೇಳಿದ್ದರು.

"ಸ್ವಾತಂತ್ರ್ಯವೇ ನಮ್ಮ ಸಾರ್ವತ್ರಿಕ ಧರ್ಮ, ಅದೇ ನಮ್ಮ ಭೂಷಣ, ಸರ್ವರೂ ಸುಖದಲ್ಲಿರುವುದೇ ನಮ್ಮ ಧ್ಯೇಯ" ವೆಂದು ಭಾರತಿಯು ಕೆಲವು ಪದ್ಯಗಳನ್ನು ನಿವೇದಿತರ ಉಪದೇಶದಂತೆ ರಚಿಸಿದನು. ಒಗ್ಗಟ್ಟಿಲ್ಲದ ಜೀವನವು ಪಶು ಜೀವನವು. ಕಲಹಗಳಿಂದ ಸುಖವು ನಾಸ್ತಿ, ಸತ್ಯವನ್ನು ಬಿಟ್ಟಲ್ಲಿ ಅಪಜಯ, ಮಾತೆಯನ್ನು ಮರೆತಲ್ಲಿ ದುಃಖ —ವೆಂಬುದೇ ಭಾರತಿಯ ಜ್ಞಾನೋಕ್ತಿ.

ಕಾಲನು ಭಾರತಿಯನ್ನು ಬೇಗನೇ ಕರೆದನು. ಆತನ ಆಜ್ಞೆಯನ್ನು ಉಲ್ಲಂಘಿಸಲು ಭಾರತಿಗೂ ಅಸಾಧ್ಯವಾಯಿತು.

ತನ್ನ ಮೂವತ್ತೊಂಬತ್ತನೇ ವರ್ಷದಲ್ಲಿ ಭಾರತಿಯು ಕೈಲಾಸವಾಸಿಯಾದನು. ಮದ್ರಾಸಿನ ಆನೆಗಳ ರೀತಿಯ ಬಲವನ್ನು ಉಣ್ಣಿಸುವಾಗ ಅದೇ ಆನೆಯಿಂದ ಸಂಹರಿಸಲ್ಪಟ್ಟನು. ಪರಮಾತ್ಮನ ಲೀಲೆಯು ವಿಚಿತ್ರವಾದದು. ರಾಜಾಜಿಯವರು ಭಾರತಿಯನ್ನು ಅಘಸಿಪ ಅಗಸ್ತ್ಯರೆಂದು ಹೇಳುತ್ತಿದ್ದರು. ಕಟ್ಟಗಿರಿ... ರೂಪಾಂತರವಾಗುವಾಗ ಮಾನವ ದೇಹವು ಒಬ್ಬೊಬ್ಬರಿಗೆ ಒಂದೊಂದು ಅವತಾರವೆಂಬುದೇ ತಮಿಳಿನ ಸಾರವು.

—ಎಂ. ಬಿ. ಶಂಕರರಾವ್

## ಬರಲಿ ಬೇಗ ಆ ಶುಭ ದಿನ

ಉತ್ತರದಿ ನುಗ್ಗಿಹ ದುರ್ದೆಸೆಯ ಚೀನ
ವೈಮನಸ್ಯ ಕೊಬ್ಬಿರುವ ಅದಕ್ಕಿಲ್ಲ
ಇಷ್ಟು ಮಾನ
ಪಂಚಶೀಲದ ಮುಸುಕು ಹಾಕಿ
'ಭಾಯಿ-ಭಾಯಿ' ಯೆನುತ ಘೋಷಿಸಿ
ವಿಷವ ಸುರಿಸೆ ತಿನೆ ಬಯಿಸಿತು
ಮಿತ್ರವಂಚನೆಗಾಗಿ ಹೇಸದೆ
ಇರಿಯೆ ಕೈ ಬೆನ್ನಲಿ ಚಾಚಿಯುನಿತು
ಒಯ್ಯ ಹಿತ್ತಿ ಭಾರತದ ಪುಣ್ಯ ಭೂಮಿ
ಯನು

ಭಾರತದ ಧೀರ ಜನಕೋಟಿ
ಎಚ್ಚರಿಕ್ಕರವಾಗಿ ಒಂದಾಗಿ,
ಒಟ್ಟಾಗಿ ಭೇದ ಭಾವವ ಬಿಸುಟು
ನುಗ್ಗಿ ಒದೆ ನಿಲ್ಲಲುಂಟೇನು ಹಿಂದೆ ಚೀನಾ
ವೀರ ಶಿವಾಜಿ, ನೇತಾಜಿ,
ವಿವೇಕಾನಂದ ಗಾಂಧಿ ಮುರ
ಹೆತ್ತು ಹೊತ್ತಿದ್ದಳು ನಮ್ಮ ಭಾರತಾಂಬೆ
ಝಾನ್ಸಿ ಲಕ್ಷ್ಮೀಬಾಯಿ, ಮೈಸೂರು
ಹುಲಿ ಟಿಪ್ಪು

ಸಿಡಿದು ಬರಲೀ ನಮ್ಮ ಮನದಿ
ಅಮೃತವ ಯುವಶಕ್ತಿ ಜೋಶದಿ
ನಗನಗುವ ಸರಸದಿ ಹಾಹಾಂದು
ಉಕ್ಕೇರಿ ಬರುತಿರಲು ಉಂಟೇ ನಮಗೆ,
ಛಿ, ಸೋಲು?
ಮತ್ತಿದೆಯೋ ಚೀನ ಕುವರರ ಸೋಲು?
ಬರಲಿ ಬಾಳ್ವೆ ಬೇಗ ಆ ಪುಣ್ಯಮಯ
ಗಣ್ಯ ದಿನ
ಕೇಳ ತಿರತ್ತೆ ನೊಳುಗುತಿಹ ವಿಜಯ
ದುಂದುಭಿಯು
ನಮ್ಮ ವಿಜಯ ಘೋಷನೆಯ

—ಸುಬ್ರಹ್ಮಣ್ಯ ಭಟ್ಟ, ಯೇತಡ್ಕ


**ಉಡುಪಿ ಕರ್ನಾಟಕ ಸಂಘದ**

**ಒಂದೊಂದು ರೂಪಾಯಿ ಬೆಲೆಯ**

**ಮೂರು ಪ್ರಕಟಣೆಗಳು.**

**ಚಂದ್ರಲೋಕಕ್ಕೆ ಪ್ರಯಾಣ**

(ಯು ರಾಘವೇಂದ್ರ ಆಚಾರ್ಯ, ಎಂ ಎ)

**ಸಾಮಾನ್ಯ ರೋಗಗಳು**

(ಡಾ ಕೆ ಎಲ್ ಐತಾಳ, ಎಂ ಬಿ ಬಿ ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

**ಭೌತಿಕ ದರ್ಶನ**

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ, ಉಡುಪಿ.

**ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ**

# ಮನೆ-ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ ಬೆಲೆ ರೂ ಎರಡು

**ನವಭಾರತ ಪುಸ್ತಕ ಭಂಡಾರ, ಉಡುಪಿ.**

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

# ಋಣ ಯಾತ್ರೆ

ಇದೀಗ ಪ್ರಕಟವಾಗಿದೆ

ಬೆಲೆ ರೂ 1-50 ನ ಪೈಸೆ

ಮೊದಲು ಪ್ರಕಟವಾದ ಕಾದಂಬರಿ

# ಭಾವಾರ್ಚನೆ

ಬೆಲೆ ರೂ 1-25 ನ ಪೈಸೆ

ಪ್ರತಿಗಳು ಸಿಗುವ ಸ್ಥಳಗಳು—

ನವಯುಗ ಪ್ರೆಸ್, ಉಡುಪಿ

ನವಭಾರತ ಬುಕ್ ಡಿಪೊ, ಉಡುಪಿ

## ನವಯುಗಕ್ಕೆ

**ಚಂದಾದಾರರಾಗಿ**

**ಪ್ರೋತ್ಸಾಹಿಸಿರಿ**

NAVAYUGA
Kannada Weekly
UDIPI
*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಸ | ಉಡುಪಿ | ವಾರ |
|---|---|---|
| ೪೨ | ೯-೫-೧೯೬೩ | ೩೫ |

## ಮಿಲಿಟರಿ ಸಹಾಯ

ಕಮ್ಯೂನಿಸ್ಟ್ ಚೀನವು ಕೊಲಂಬೊ ಸಲಹೆಗಳನ್ನು ಸಂಪೂರ್ಣ ಸಮ್ಮತಿಗೊಳಿಸಿದ ಬಳಿಕವೂ ನೇರ ಮಾತುಕತೆಗಳಿಗೆ ಭಾರತವನ್ನು ಆಮಂತ್ರಿಸುತ್ತಿರುವ ನಾಟಕವಾಡುತ್ತಿರುವುದರ ಗುಟ್ಟೇನೆಂಬುದನ್ನು ಎಲ್ಲರೂ ಬಲ್ಲರು. ಪಂಚಶೀಲ ಮಂತ್ರವನ್ನು ಜಪಿಸುತ್ತಲೇ ಭಾರತವನ್ನು ಕಾಲಿನಿಂದೊದೆಯುವ ದುಷ್ಕೃತ್ಯವೆಸಗಿದ ಚೀನಾವು ಮಾತುಕತೆಯ ಸೋಗನ್ನು ಹಾಕಿ ತನ್ನ ಕುಹಕ ಜಾಲದಲ್ಲಿ ಭಾರತವನ್ನು ಸಿಲುಕಿಸಿಕೊಂಡು ಸಮಯ ಕಾಯುಕ್ತಿಗೆ ಹಿಚುಕುವ ಮಹಾ ತಂತ್ರವನ್ನು ಹೂಡಿದೆಯೆಂದೇ ಹೇಳಬೇಕಾಗುತ್ತದೆ. ಚೀನಾವು ವಾಸ್ತವಿಕವಾಗಿ ಗಡಿತಂಟೆಯ ಪರಿಹಾರಕ್ಕೆ ಶಾಂತಮಾರ್ಗಗಳನ್ನು, ಮಾತುಕತೆಯ ದಾರಿಯನ್ನು ಬಯಸುತ್ತಿದೆಯಾದರೆ, ಅದು ಏಕಪಕ್ಷೀಯವಾಗಿ ಸಮರ ವಿರಾಮವನ್ನು ಘೋಷಿಸಿದಂತೆ, ಭಾರತೀಯ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಿದಂತೆ, ಕೊಲಂಬೊ ಸಲಹೆಗಳನ್ನೂ ಪ್ರಾರಂಭದಲ್ಲೇ ಒಪ್ಪಿಕೊಳ್ಳಬೇಕಿತ್ತು; ಜತೆ, ಭಾರತವನ್ನು ಸ್ವೀಕರಿಸಿದ ಮೇಲಾದರೂ ಹಿಂದೆ ಮುಂದೆ ನೋಡದೆ ಅವಕ್ಕೆ ಸೈಗುಟ್ಟಬಹುದಿತ್ತು. ಇದರಿಂದ ಚೀನಾವು ಯಾವ ಮಹಾ ತ್ಯಾಗವನ್ನೂ ಮಾಡಿದಂತಾಗುತ್ತಿರಲಿಲ್ಲ; ಏಕೆಂದರೆ, ನೇರ ಮಾತುಕತೆ ನಡೆಯಲು ತಕ್ಕ ಅನುಕೂಲ ವಾತಾವರಣವನ್ನು ಕಲ್ಪಿಸುವುದಷ್ಟೇ ಆ ಸೂಚನೆಗಳ ಉದ್ದೇಶವಾಗಿತ್ತು. ಈಗ ಕೊಲಂಬೋ ಸೂಚನೆಗಳ ತಿರಸ್ಕಾರದಿಂದ ಚೀನಾದ ನಿಜಸ್ವರೂಪವಷ್ಟೇ ಬಯಲಿಗೆ ಬಿತ್ತು; ಪಂಚಶೀಲದ ಸೋಗು ಗಾಳಿಯಲ್ಲಿ ತೂರಿ ಅಡಗಿತು.

ಜೌ ಎನ್ ಲಾಯ್ ಅವರು ಕೊಲಂಬೊ ಸಮ್ಮೇಳನದ ರಾಷ್ಟ್ರಗಳನ್ನು ಎಡಗಾಲಿನಿಂದ ಒದೆದ ಬಳಿಕ ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್‌ರಸ್ಕ್, ಬ್ರಿಟನ್ನಿನ ಕಾಮನ್‌ವೆಲ್ತ್ ಮಂತ್ರಿ ಡಂಕನ್ ಸ್ಯಾಂಡೀಸ್ ಮತ್ತು ಮಹಾ ದಂಡನಾಯಕ ಲಾರ್ಡ್ ಮೌಂಟ್ ಬೇಟನ್ ಇವರು ನವದೆಹಲಿಗೆ ಆಗಮಿಸಿರುವುದು ಬಹಳ ಮಹತ್ವಪೂರ್ಣವಾಗಿದೆ. ಇವರು ಭಾರತವನ್ನು ಸಂದರ್ಶಿಸುವುದರ ಹಿನ್ನೆಲೆಯೇನೇ ಇರಲಿ, ನಮ್ಮ ಮಿಲಿಟರಿ ಆವಶ್ಯಕತೆಗಳನ್ನು ಪರಿಶೀಲಿಸುವುದು ಮತ್ತು ಈ ಸಂಬಂಧದಲ್ಲಿ ಇಲ್ಲಿನ ನಾಯಕರೊಡನೆ ವಿಚಾರವಿನಿಮಯ ಮಾಡುವುದು ಕೂಡಾ ಒಂದು ಎಂಬುದು ಸ್ಪಷ್ಟ. ಕಮ್ಯುನಿಸ್ಟ್ ಚೀನಾದ ಆಕ್ರಮಣದಿಂದ ಸ್ವರಕ್ಷಣೆಗಾಗಿ ಸಹಾಯವನ್ನು ಯಾಚಿಸಿದಾಗ, ನಮ್ಮ ಕರೆಗೆ ಕಳಕಳಿಯ ಓಗೊಟ್ಟು ಧಾವಿಸಿದ ಬ್ರಿಟನ್ ಮತ್ತು ಅಮೆರಿಕೆಗಳಿಗೆ ನಾವು ಸದಾ ಕಾಲ ಕೃತಜ್ಞರಿರಬೇಕು. ಇತ್ತೀಚೆಗೆ ಹಬ್ಬಿದ ಬಲವಾದ ಸುದ್ದಿಯೊಂದರಂತೆ, ಇಂತಹ ಸಹಾಯವನ್ನು ಅವು ನಮಗೆ ನೀಡಬೇಕಾದರೆ, ನಮ್ಮ ಮತ್ತು ಪಾಕಿಸ್ತಾನದ ನಡುವಣ ವಿವಾದಗಳು, ಮುಖ್ಯವಾಗಿ ಕಾಶ್ಮೀರ ತಂಟೆಯು ಪರಿಹಾರಗೊಳ್ಳಬೇಕು ಎಂಬ ಶರ್ತವನ್ನು ಹೇರಿವೆ. ಆದರೆ, ರಸ್ಕ್ ಹಾಗೂ ಸ್ಯಾಂಡಿಸರ ಪ್ರಕೃತದ ಸಂದರ್ಶನವು ಈ ಸುದ್ದಿಯು ಸುಳ್ಳೆಂದು ಹೇಳುತ್ತದೆ ನಿಜ; ಹಾಗಿದ್ದರೂ, ಇಂತಹ ಸೂಚನೆಯೊಂದು ಮೊದಲು ಬಂದದ್ದು ನಿಜವೆಂದೂ ಮುಂದದು ಹಿಂದುಳಿಯಿತೆಂದೂ ಗೊತ್ತಾಗುತ್ತದೆ. ಇಂದು ಅವು 'ಕಾಶ್ಮೀರ ತಂಟೆಯನ್ನು ಪರಿಹರಿಸಿಕೊಳ್ಳಬೇಕೆಂ'ಬ ಪೂರ್ವ ಶರ್ತವನ್ನು ಹೇರುವುದಿಲ್ಲ; ಆದರೆ, ಅದು ದೂರವಾಗುವುದು ಅಪೇಕ್ಷಣೀಯ. ಭಾರತ-ಪಾಕಿಸ್ತಾನಗಳ ಸಂಬಂಧ ತಿಳಿಗೊಂಡರೆ, ಭಾರತಕ್ಕೆ ಸಹಾಯ ನೀಡಲು ತಮಗೆ ಸುಲಭವಾಗುತ್ತದೆ' ಎಂದು ಹೇಳುತ್ತವೆ. ಅವರ ವಾದವು ಸಂಪೂರ್ಣ ಒಪ್ಪತಕ್ಕದ್ದಲ್ಲವಾದರೂ ಅದರಲ್ಲಿ ಅಲ್ಪಾಂಶವಾದರೂ ಹುರುಳಿದೆ; ಏಕೆಂದರೆ, ಅಮೆರಿಕೆಯ ಕಾಂಗ್ರೆಸ್ ಮತ್ತು ಬ್ರಿಟನ್ನಿನ ಪಾರ್ಲಿಮೆಂಟು ಅವು ಭಾರತಕ್ಕೆ ನೀಡುವ ಸಹಾಯದ ಮೊತ್ತವನ್ನು ಅಂತಿಮವಾಗಿ ಗೊತ್ತುಪಡಿಸಬೇಕಾಗಿದೆ. ಇದಕ್ಕಾಗಿ, ಭಾರತದ ಮೇಲೆ ಅಲ್ಲಿ ಸದಭಿಪ್ರಾಯ ಮೂಡಿಸುವುದಕ್ಕೆ ಭಾರತ—ಪಾಕ್ ಮಾತುಕತೆಗಳು ನೆರವಾದಾವು ಎಂದು ಅಲ್ಲಿನ ನಾಯಕರ ಅಭಿಪ್ರಾಯವಿದ್ದರೂ ಇರಬಹುದು ಇದನ್ನು ಮಾತ್ರ ಪೂರ್ಣ ಒಪ್ಪುವುದು ಸಾಧ್ಯವಿಲ್ಲ. ಕಮ್ಯುನಿಸ್ಟ್ ಆಕ್ರಮಣಕ್ಕೆ ತುತ್ತಾಗಿರುವ ಭಾರತಕ್ಕೆ ಕಮ್ಯೂನಿಸ್ಟರಿಂದ ವಿಮೋಚನೆಗೊಳ್ಳಲು ಸಹಾಯ ನೀಡುವುದನ್ನು ಅಮೆರಿಕೆ — ಬ್ರಿಟನ್ನುಗಳ ನಾಗರಿಕರು ಯಾರೂ ವಿರೋಧಿಸಲಾರರು. ಇದಕ್ಕೆ ನಿದರ್ಶನವಾಗಿ ಬ್ರಿಟನ್ನಿನ ಕನ್ಸರವೇಟಿವ್ ಪಕ್ಷದ ಒಂದು ಪಂಗಡವು ಹಂಚಿದ ಪರಿಪತ್ರವನ್ನೇ ಎತ್ತಿ ಹೇಳಬಹುದು. ಈ ಪತ್ರದಲ್ಲಿ ಭಾರತಕ್ಕೆ ನೀಡುವ ಸೈನಿಕ ಸಹಾಯವನ್ನು ವಿರೋಧಿಸುವ ಪಾಕಿಸ್ತಾನದ ವಾದವನ್ನು ಕೇಳಬಾರದೆಂದೂ, ಕಾಶ್ಮೀರ ತಂಟೆಯನ್ನು ಪರಿಹರಿಸಿಕೊಳ್ಳಬೇಕೆಂಬ ಶರ್ತವನ್ನು ಹೇರಬಾರದೆಂದೂ ಎತ್ತಿ ಹೇಳಿದೆ. ಪಕ್ಷದ ಒಂದು ಪಂಗಡದ ಅಭಿಮತವು ಸರಕಾರದ ಅಭಿಪ್ರಾಯವಾಗಲಾರದಾದರೂ ಭಾರತದ ಬಗ್ಗಿರುವ ಸಾಮಾನ್ಯಾಭಿಪ್ರಾಯಕ್ಕಿದೊಂದು ಕನ್ನಡಿಯೆನ್ನಲು ಅಭ್ಯಂತರವಿಲ್ಲ. ಸದ್ಯ, ಪ್ರಧಾನಿ ನೆಹರುರವರು ಕೂಡ, ಭಾರತವು ಪಾಕ್ ಸಂಬಂಧವನ್ನು ಉತ್ತಮಗೊಳಿಸಲು ಹಿಂದಿನಿಂದಲೂ ಸಿದ್ಧವಿತ್ತೆಂದೂ, ಇಂದಿಗೂ ಅದು ಈ ದೆಸೆಯಲ್ಲಿಯೇ ಮುಂದುವರಿಯುತ್ತಿದೆಯೆಂದೂ ತಿಳಿಸಿ, ತನ್ನ ಜಾತ್ಯತೀತ ನಿಲುಮೆಯನ್ನವರಿಗೆ ಮುಂದಿಟ್ಟು ಮಾಡಿದರೆಂದು ಗೊತ್ತಾಗಿದೆ. ಕಾಶ್ಮೀರವನ್ನು ಪಾಕಿಸ್ತಾನ ಕೇಳುತ್ತಿರುವುದು ಜಾತೀಯ ತಳಹದಿಯಿಂದ ಮಾತ್ರ; ಭಾರತವಿದನ್ನು ಮನ್ನಿಸುವುದು ಹಾನಿಕರ. ಆದರೂ, ಪಾಕಿಸ್ತಾನವು ಅಕ್ರಮವಾಗಿ ಆಕ್ರಮಿಸಿರುವ ಕಾಶ್ಮೀರ ಭಾಗವನ್ನು ಪ್ರತ್ಯೇಕಿಸುವ ಸಮರ ವಿರಾಮ ರೇಖೆಯನ್ನೇ ತುಸು ಹೊಂದಾಣಿಕೆ ಮಾಡಿಕೊಂಡು ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕೆ ಮುಂದಾಗುವಷ್ಟು ತ್ಯಾಗಕ್ಕೆ ನೆಹರು ಸಿದ್ಧರಾಗಿದ್ದಾರೆ. ಆದರೆ, ಪ್ರಧಾನಿ ನೆಹರೂರವರು ಹೀಗೆ ಮಾಡುವುದಕ್ಕೆ ಬಲವಾದ ವಿರೋಧವನ್ನು ಎದುರಿಸಬೇಕಾಗುತ್ತದೆ. ಕೊಲಂಬೋ ಸಲಹೆಗಳನ್ನು ಒಪ್ಪಿಕೊಳ್ಳುವುದಕ್ಕೂ ಪ್ರತಿಭಟನೆಯು ನಮ್ಮ ಪಾರ್ಲಿಮೆಂಟಿನಲ್ಲಿ ಇದ್ದುದನ್ನು ಗಮನಿಸುವಾಗ, ಕಾಶ್ಮೀರ ಸಂಬಂಧದಲ್ಲಿ ಒಮ್ಮತವಿರುವುದು ಕಷ್ಟಸಾಧ್ಯ. ಹೀಗೆಯೇ ಅಮೆರಿಕೆ-ಬ್ರಿಟನ್ನುಗಳಲ್ಲಿಯೂ ಭಾರತಕ್ಕೆ ನೀಡುವ ಸೈನಿಕ ನೆರವಿನ ಪ್ರಮಾಣದಲ್ಲಿ ಬಿನ್ನಾಭಿಪ್ರಾಯವಿದ್ದಂತಿದೆ.

ಅದೇನೇ ಇದ್ದರೂ ಮಿತ್ರ ನಾಯಕರ ಸಂದರ್ಶನದಿಂದ ಭಾರತಕ್ಕೆ ವಿದೇಶೀ ಸೈನಿಕ ನೆರವಿನ ಭರವಸೆ ಮಾತ್ರ ಹೆಚ್ಚಿತು. ಎರಡೂ ಕಡೆಯವರಲ್ಲಿ ಹೆಚ್ಚು ಸದ್ಭಾವನೆ ಮೂಡುವಂತಾಯಿತು. ಇದೇ ಸಮಯದಲ್ಲಿ ಭಾರತವು ಅಮೆರಿಕೆ ಬ್ರಿಟನ್ನಕ್ಕೆ ಸೈನಿಕ ನೆರವಿನ ಕುರಿತು ವಿಚಾರ ವಿನಿಮಯ ಮಾಡಲು ಕಳಿಸಿದ್ದ ಭೂತಲಿಂಗಂ ಆಯೋಗವೂ ತನ್ನ ಕಾರ್ಯ ಪೂರೈಸಿ ಮರಳಿ ಬಂತು. ಈ ನಿಯೋಗವು ಆರ್ಥಿಕ ಮತ್ತು ಸಂರಕ್ಷಣಾ ಸಂಯೋಜನಾ ಮಂತ್ರಿ ಟಿ. ಟಿ. ಕೆ. ಯವರಿಗೆ ತನ್ನ ವರದಿಒಪ್ಪಿಸುವುದು. ಒಮ್ಮೆ ನಿಲ್ಲಿಸಲಾಗಿದ್ದ ಟಿ. ಟಿ. ಕೆಯವರ ಅಮೆರಿಕೆ-ಬ್ರಿಟನ್ ಭೇಟಿ ನಡೆಯುವ ಸಂಭವ ಹೆಚ್ಚಿದಂತಾಯಿತು.

## ಅರಾಷ್ಟ್ರೀಯತೆಗೆ ತಡೆ

ಅರಾಷ್ಟ್ರೀಯತೆಯನ್ನು ಪ್ರತಿರೋಧಿಸುವ ಉದ್ದೇಶದಿಂದ ಸಂವಿಧಾನಕ್ಕೆ ತಂದ ಹದಿನಾರನೆಯ ತಿದ್ದುಪಡಿ ಮಸೂದೆಯು ಲೋಕಸಭೆಯಲ್ಲಿ ಮಂಡಿತವಾದುದು ನಿಜಕ್ಕೂ ಅಭಿನಂದನೀಯ. ಭಾರತದ ಸಾರ್ವಭೌಮತೆಯನ್ನೂ ಸಮಗ್ರತೆಯನ್ನೂ ಆಹ್ವಾನಿಸುವ ಅಧಿಕಾರವು ಇದರಿಂದ ಯಾರಿಗೂ ಇಲ್ಲವಾಗುವುದು. ಮಾತ್ರವಲ್ಲ ಶಾಸನ ಸಭೆಗಳಿಗೆ ಇಲ್ಲವೇ ಪಾರ್ಲಿಮೆಂಟಿಗೆ ಸ್ಪರ್ಧಿಸುವ ಪ್ರತಿಯೊಬ್ಬನೂ ರಾಷ್ಟ್ರದ ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸುವೆನೆಂದು ದೃಢ ಪತ್ರವೊಂದಕ್ಕೆ ಸಹಿಹಾಕ ಬೇಕಾಗಿದೆ. ಈ ಮಸೂದೆಯನ್ನು ತುರ್ತು ಪರಿಸ್ಥಿತಿಯಲ್ಲಿ ಸರಕಾರಕ್ಕೆ ದೊರಕಿದ ಅಧಿಕಾರದ ದುರುಪಯೋಗವೆಂದು ಕೆಲವರು ವಾದಿಸಿದರೆ, ದ್ರಾವಿಡ ಕಳಗಂನವರು ತಮ್ಮ ಪಕ್ಷವನ್ನು ಹತ್ತಿಕ್ಕಲು ಮಾಡಿದ ಕುತಂತ್ರವಿದು ಎನ್ನುವಷ್ಟು ಮುಂದುವರಿದು, ಇದರಿಂದ ಮೂಲಭೂತ ಅಧಿಕಾರಗಳಿಗೆ ಚ್ಯುತಿ ಬರುವುದೆಂದೂ ದೂರಿದರು. ಪ್ರತ್ಯೇಕ ತಮಿಳು ನಾಡಿನ ಬೇಡಿಕೆಯನ್ನು ಮುಂದಿಡುವ ಕಳಗಂ ಪ್ರಾರಂಭದಿಂದಲೂ ಸಂವಿಧಾನ ವಿರೋಧೀ ರಾಷ್ಟ್ರ ಕಾರ್ಯಾಚರಣೆಗಳಲ್ಲೇ ತನ್ಮಯವಾದುದರಿಂದ ಮತ್ತು ಪ್ರತ್ಯೇಕತೆಯನ್ನೂ ಚುನಾವಣಾ ಘೋಷಣೆಯಾಗಿ ಮಾಡಿಕೊಳ್ಳುತ್ತಿರುವುದರಿಂದ, ಇನ್ನು ಮುಂದೆ ಇದಕ್ಕೆ ಅವಕಾಶವಿಲ್ಲವಾದುದರಿಂದ ಚಡಪಡಿಸುವುದು ಸಹಜ. ಆದರೆ, ಸದ್ಯದ ಈ ತಿದ್ದುಪಡಿ ಮಸೂದೆಯು ಕೇವಲ ಒಂದೇ ಪಕ್ಷವನ್ನು ಅನುಲಕ್ಷ್ಯಿಸಿ ಮಾಡಿದ್ದಲ್ಲ. ಸಮಗ್ರ ಭಾರತದ ಹಿತವನ್ನು ಗಮನಿಸಿ ಮಾಡಿದುದು. ಒಂದು ದೇಶದ ಪ್ರಜೆಗೆ ತನ್ನ ಮಾತೃಭೂಮಿಯ ಬಗ್ಗೆ ಪೂರ್ಣಾಭಿಮಾನವಿರಬೇಕು; ಇದನ್ನು ಕಾಯಿದೆ ರೀತ್ಯಾ ತರುವುದು ಅಸಾಧ್ಯವಾದರೂ ರಾಷ್ಟ್ರ ವಿಘಾತುಕ ಚಟುವಟಿಕೆಗಳು ದಂಡನಾರ್ಹವೆಂಬುದು ಅದಕ್ಕೆ ಪ್ರೇರಕ ಶಕ್ತಿಯಾಗಬಹುದು; ಅರಾಷ್ಟ್ರೀಯತೆಯ ಚಟುವಟಿಕೆಗಳಲ್ಲಿ ತೊಡಗುವವರಿಗೊಂದು ಎಚ್ಚರಿಕೆಯೆನಿಸಬಹುದು. ನಾಗಾ ಬಂಡುಗಾರರ ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ಇದು ಮನ್ನಿಸವುದಿಲ್ಲ. ಹಾಗಾಗಿ ಇಡಿಯ ದೇಶದ ಎಲ್ಲ ಪಕ್ಷಗಳನ್ನೂ ಎಲ್ಲ ವ್ಯಕ್ತಿಗಳನ್ನೂ ಅನುಲಕ್ಷ್ಯಿಸಿ, ರಾಷ್ಟ್ರೀಯ ಸಂರಕ್ಷಣಾ ಮಂಡಳದ ಶಿಫಾರಸಿನಂತೆ ಈ ತಿದ್ದುಪಡಿಯನ್ನು ಮಾಡಿದ್ದಾಗಿದೆ. ಲೋಕ ಸಭೆಯಲ್ಲಿ ಉಪಸ್ಥಿತರಿದ್ದವರ ಸರ್ವಾನುಮತದಿಂದ ಮಂಜೂರಾದ ಘಟನೆಯೇ ನಮ್ಮಲ್ಲಿ ರಾಷ್ಟ್ರೀಯ ಭಾವನೆಯು ಜಾಗ್ರತವಾಗ ತೊಡಗಿದೆಯೆಂಬುದರ ಸೂಚನೆಯಾಗಬಾರದೆ?

---

**ಬಂಟರ ಯಾನೆ ನಾಡವರ ಸಂಘದ** — ವಾರ್ಷಿಕ ಮಹಾಸಭೆಯು ತಾರೀಕು 13—5—63ನೇ ಸೋಮವಾರ ಅಪರಾಹ್ನ ಘಂಟೆ 4ಕ್ಕೆ ವಕೀಲ್ ಶ್ರೀ ಬಿ. ಶಿವರಾಮ ಶೆಟ್ರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ತಾವು ಸಭೆಗೆ ದಯಮಾಡಿ ಬರಬೇಕಾಗಿ ಸಂಘದ ಆಡಳಿತೆ ಕಮಿಟಿಯ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ಟರು ವಿನಂತಿಸುತ್ತಾರೆ.

**ಪಾಂಗಾಳ ನಾಯಕ್ ಬೇಂಕ್ ಶೆಡ್ಯೂಲ್ಡ್ ಆಯಿತು** ಎಪ್ರಿಲ್ ಇಪ್ಪತ್ತನೇ ತಾರೀಕಿನ ಇಂಡಿಯ ಗಜೇಟಿನಲ್ಲಿ ಪ್ರಕಟವಾದ 15ನೇ ತಾರೀಕಿನ ಪ್ರಕಟಣೆಯಲ್ಲಿ ಉಡುಪಿಯ ಪಾಂಗಾಳ ನಾಯಕ್ ಬ್ಯಾಂಕ್ ಒಂದು ಶೆಡ್ಯೂಲ್ಡ್ ಬ್ಯಾಂಕೆಂದು ಘೋಷಿಸಲ್ಪಟ್ಟಿರುವುದು ಎಂದು ತಿಳಿಸಲು ಸಂತೋಷವಾಗುತ್ತದೆ.

**ದಯಾನಾ** ಕೋಲ್ಡ್ ಡ್ರಿಂಕ್ಸ್ ಎಂಡ್ ಮಿಲ್ಕ್ ಬಾರ್
ಕೆನರಾ ಮ್ಯೂಚುವಲ್ ಬಿಲ್ಡಿಂಗ್ಸ್, **ಉಡುಪಿ.**
ತರತರದ ಥಂಡಾ ಪಾನೀಯಗಳಿಗೆ, ಬಗೆಬಗೆಯ ಐಸ್‌ಕ್ರೀಮು,
ಫ್ರುಟ್ ಸಲಾದ್‌ಗಳಿಗೆ **ದಯಾನಾ** ಸಂದರ್ಶಿಸಿರಿ.
ಬಿಸಿಹಾಲು ನಮ್ಮ ವೈಶಿಷ್ಟ್ಯ.

## ಅಲ್ಲಲ್ಲಿಯ ಸುದ್ದಿ ಸಾರ

### ದ.ಕ. ಜಿಲ್ಲಾ ಖಾಸಗಿ ಪ್ರಾ. ಶಾಲಾ ಮೆನೇಜರರ ಸಂಘ, (ರಿ.) ಉಡುಪಿ.

ಕುರುಕಾಲು— ತಾ. 29.4-63ರಲ್ಲಿ ಕಾರ್ಯಕಾರಿ ಸಮಿತಿಯ ಸಭೆಯು ಸಂಘದ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ನೇತೃತ್ವದಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರು ಸಂಘದ ಪರವಾಗಿ ಕಳೆದ ಮಾರ್ಚಿಯಲ್ಲಿ ಹೋದ ನಿಯೋಗದ ವರದಿಯನ್ನೂ, ಆ ಸಂಬಂಧವಾಗಿ ಶ್ರೀ ಮಟ್ಟೇಲ್ ಶ್ರೀನಿವಾಸ ನಾಯಕ್, ಎಂ. ಎಲ್. ಎ ಯವರಿಂದ ಬಂದ ತಾ 9.4.63ರ ಪತ್ರವನ್ನೂ ಓದಿದ ಬಳಿಕ ಈ ಕೆಳಗಿನ ನಿರ್ಣಯಗಳನ್ನು ಮಾಡಲಾಯಿತು.

1) ಸರಕಾರವು ಚಾಲ್ತಿ ವರುಷದಲ್ಲಿ ಖಾಸಗಿ ಶಾಲೆಗಳಿಗೆ ಕೊಟ್ಟ ಮ್ಯೆಂಟಿನೇಂನ್ಸ್ ಗ್ರಾಂಟು ಮೆನೇಜರಿಗೆ ತಮ್ಮ ಶಾಲೆಗಳನ್ನು ನಡಿಸುವರೆ ವರ್ಷಾವಧಿ ತಗಲಿದ ಖರ್ಚಿಗಿಂತ ಬಹಳ ಕಡಿಮೆಯಾದ ವಿಚಾರವನ್ನು ಸ್ಪಷ್ಟಪಡಿಸಿದಲ್ಲಿ, ಸರಕಾರವು ಹಾಗೆ ಕಡಿಮೆ ಬಿದ್ದ ಹಣವನ್ನು ಸಪ್ಲಿಮೆಂಟರಿ ಗ್ರಾಂಟಾಗಿ ಪುನಃ ಕೊಡಲಿಕ್ಕಿದೆ ಎಂಬುದಾಗಿ ಶ್ರೀ ನಾಯಕರ ಪತ್ರದಲ್ಲಿ ಸೂಚಿಸಿದ ಕಾರಣ ಶಾಲಾ ಆಡಳಿತೆದಾರರು ತಮ್ಮ ಶಾಲೆಗಳ 1962ನೇ ಇಸವಿಯ ಜಮಾ ಖರ್ಚಿನ ವಿವರಗಳುಳ್ಳ ಸ್ಟೇಟ್‌ಮೆಂಟನ್ನು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕಳುಹಿಸುವಂತೆಯೂ, ಅದರ ಕೋಪಿಯನ್ನು ಸಂಘಕ್ಕೆ ಕಳುಹಿಸುವಂತೆಯೂ ತಿಳಿಸುವುದು

2) ಈ ಜಿಲ್ಲೆಯ ಖಾಸಗಿಶಾಲೆಗಳು ಮದ್ರಾಸು ಕ್ರಮದಂತೆ ತೆರೆಯಲ್ಪಟ್ಟದ್ದು, ರಾಜ್ಯದ ಪುನರ್ಘಟನಾ ನಂತರ ಜ್ಯಾರಿಗೆ ತರಲ್ಪಟ್ಟ ಕಡ್ಡಾಯ ವಿದ್ಯಾಭ್ಯಾಸವನ್ನು ಯಶಸ್ವಿಗೊಳಿಸುವ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರುತ್ತಾ, ಮದ್ರಾಸು ರಾಜ್ಯದಲ್ಲಿ ಖಾಸಗಿ ಶಾಲೆಗಳಿಗೆ 15%ರಂತೆ ಮ್ಯೆಂಟಿನೆಂನ್ಸ್ ಗ್ರಾಂಟು ಕೊಡುತ್ತಿರುವ ಕ್ರಮವನ್ನಾಗಲೀ, ಇಲ್ಲವೇ ಕೇರಳ ರಾಜ್ಯದಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಗೆ ರೂ. 2-25ರ ಗ್ರಾಂಟನ್ನು ಕೊಡುವ ಕ್ರಮವನ್ನಾಗಲೀ ಮೈಸೂರು ಸರಕಾರವು 1963-64ನೇ ವರ್ಷದಲ್ಲಿ ಖಾಸಗಿ ಶಾಲೆಗಳಿಗೆ ಕೊಡುವಂತೆ ಗ್ರಾಂಟ್ ಇನ್. ಏಡ್. ಕೋಡನ್ನು ಜ್ಯಾರಿಗೆ ತರಬೇಕಾಗಿ ಕೇಳಿಕೊಳ್ಳುವುದು.

3) ಸರಕಾರವು ಈ ಕುರಿತು ಮೇಲ್ಕಾಣಿಸಿದಂತೆ ಪುನರಾಲೋಚಿಸಿ ಮೆನೆಜ್‌ಮೆಂಟಿನ ನ್ಯಾಯವಾದ ಖರ್ಚನ್ನು ಭರ್ತಿಮಾಡಲು ತಪ್ಪಿದ್ದಲ್ಲಿ ಚಾಲ್ತಿಯಲ್ಲಿರುವ ಕ್ರಮದಂತೆ ಸ್ಕೂಲು ಫೀಸು ಇಡುವಂತೆಯೂ ಆ ಪೈಕಿ ಫೀಸು ರಿಯಾಯ್ತಿ ಮಾಡಿದ ಬಗ್ಗೆ ಆಡಳಿತೆದಾರರಿಗೆ ಕಂಪನ್ಸೇಶನ್ ಗ್ರಾಂಟು ಕೊಡುವಂತೆಯೂ ಕೇಳಿಕೊಳ್ಳುವುದು.

4) ಜಿಲ್ಲೆಯ ಖಾಸಗಿ ಶಾಲಾ ಮೆನೇಜರರು a) 1960-61, 61-62 ಮತ್ತು 62-63 ರಲ್ಲಿ ಪಡೆದ ಮ್ಯೆಂಟಿನೆನ್ಸ್ ಗ್ರಾಂಟು b) ಆಯಾ ವರ್ಷದಲ್ಲಿ ಮೆನೆಜರರ ಪಾಲಿನ ಪ್ರಾವಿಡೆಂಟ್ ಫಂಡು c) ಸದ್ರಿ ವರುಷಗಳಲ್ಲಿ ಶಾಲೆಗಳಲ್ಲಿದ್ದ ವಿದ್ಯಾರ್ಥಿ ವ ಅಧ್ಯಾಪಕರ ಸಂಖ್ಯೆ ಈ ವಿವರವನ್ನು ಸಂಘಕ್ಕೆ ಕಳುಹಿಸಬೇಕು.

5) ಆ ಬಳಿಕ ಇದೇ ಎಪ್ರಿಲ್ ಅಂತ್ಯದ ವರೆಗಿನ ಸಂಘದ ಜಮಾ ಖರ್ಚಿನ ಒಡಿಟ್ ಮಾಡ... ಲೆಕ್ಕಪತ್ರವನ್ನು ಓದಿ ಮಂಜೂರು ಮಾಡಲ್ಲದೆ, ಸಂಘದ ಮಹಾ ಸಭೆಯನ್ನು ಬರುವ ತಾ. 2-6-63ನೇ ಆದಿತ್ಯವಾರ ಉಡುಪಿಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಲಾಯಿತು.

### ಶ್ರೀ ಪೂರ್ಣತ್ರಯೀಶ ವಿಲಾಸಂ ಬ್ಯಾಂಕು ಕೆನರಾ ಬ್ಯಾಂಕಿನೊಂದಿಗೆ

...ವಿಲೀನಗೊಂಡಿತು—ದಕ್ಷಿಣ ಭಾರತದ ಬೃಹತ್ ಬ್ಯಾಂಕುಗಳಲ್ಲೊಂದಾದ ಕೆನರಾ ಬ್ಯಾಂಕು ...ಪೂಣೆ ತುರವ ಶ್ರೀ ಪೂರ್ಣತ್ರಯೀಶ ವಿಲಾಸಂ ಬ್ಯಾಂಕಿನ ಮೂಲಗಳನ್ನು ಪಡೆದು ...ಂಡು 29-4 1963ರಿಂದ ಆ ಬೇಂಕನ್ನು ತನ್ನೊಂದಿಗೆ ಸೇರಿಸಿಕೊಂಡಿದೆ. 1961ರಿಂದ ಕೆನರಾ ಬ್ಯಾಂಕಿನೊಂದಿಗೆ ಸೇರಿದ ಬ್ಯಾಂಕುಗಳಲ್ಲಿ ಇದು ಐದನೇಯದು.

ಶ್ರೀ ಪೂರ್ಣತ್ರಯೀಶ ವಿಲಾಸಂ ಬೇಂಕು ಪ್ರೇರಣೆಯಿಂದ ಕೆನರಾ ಬ್ಯಾಂಕಿನೊಂದಿಗೆ ವಿಲಯನ ಹೊಂದಿದುದರಿಂದ ಈಗ ಕೆನರಾ ಬ್ಯಾಂಕಿಗೆ 12 ಹೊಸ ಶಾಖೆಗಳ ದೊರೆತವು ಮಾತ್ರವಲ್ಲ ಕೇರಳದಲ್ಲಿ ಒಟ್ಟು 31 ಶಾಖೆಗಳಾದಂತಾಯಿತು. ಇದೀಗ ಕೆನರಾ ಬ್ಯಾಂಕಿಗೆ ಭಾರತಾದ್ಯಂತ ಒಟ್ಟು 134 ಶಾಖೆಗಳಿವೆ.

ಈ ವಿಲಿನೀಕರಣವನ್ನು ಆಚರಿಸಲಿಕ್ಕಾಗಿ ಕೆನರಾ ಬ್ಯಾಂಕಿನ ಅಧ್ಯಕ್ಷ ಶ್ರೀ. ಪಿ. ಜೆ. ಪ್ರಭು ಮತ್ತು ಶ್ರೀ ಪೂರ್ಣತ್ರಯೀಶ ವಿಲಾಸಂ ಬ್ಯಾಂಕಿನ ಅಧ್ಯಕ್ಷ ಶ್ರೀ ರಾಮವರ್ಮ ತಂಪುರನ್ ಇವರು ತ್ರಿಪುಣಿತುರದಲ್ಲಿ 26-4-1963ರಂದು ಜತೆಯಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಪ್ರಮುಖ ಉದ್ಯಮಿಗಳೂ ವ್ಯಾಪಾರಿಗಳೂ ಭಾಗವಹಿಸಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಕೊಚ್ಚಿಯ ಮಹಾರಾಜ ಶ್ರೀ ರಾಮವರ್ಮರು ವಹಿಸಿದ್ದರು.

**ಅಂಚೆ ತಂತಿ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವ**— ವರದೇಂದ್ರ ಕಲಾಮಂದಿರದಲ್ಲಿ ಉಡುಪಿ ಸರಕಾರಿ ಆಸ್ಪತ್ರೆಯ ಸರ್ಜನ್ ಡಾ| ಎಂ. ಎಸ್. ಶೆಟ್ಟರ ಅಧ್ಯಕ್ಷತೆಯಲ್ಲಿ ಉಡುಪಿ ಅಂಚೆ ತಂತಿ ಇಲಾಖಾ ನೌಕರರ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. 28—4—63ರಂದು ನೆರವೇರಿತು. ಪ್ರಾರಂಭದಲ್ಲಿ ಇನ್ಸ್‌ಪೆಕ್ಟರ್ ಅಫ್ ಪೋಸ್ಟ್ ಆಫೀಸ್ ಶ್ರೀ ಎಚ್. ಮಾಧವ ಬಂಗೇರರು ಸ್ವಾಗತಿಸಿದರು ಜನಾಬ್ ಜಮಾಲ್ ಖಾನ್, ಸೀನಿಯರ್ ಸುಪರಿಂಟೆಂಡೆಂಟ್ ಅಫ್ ಪೋಸ್ಟ್‌ಫೀಸಸ್, ಅವರು ಉದ್ಘಾಟಿಸಿ, ಕ್ಲಬ್ಬಿನ ಆವಶ್ಯಕತೆಯನ್ನು ವಿವರಿಸಿದರು

ವಿವಿಧ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅಧ್ಯಕ್ಷರು ಬಹುಮಾನವಿತರಣೆ ಮಾಡಿ ಭಾಷಣ ಮಾಡುತ್ತ, ಸರಕಾರಿ ನೌಕರರು ಅದರಲ್ಲೂ ಅಂಚೆ ತಂತಿ ಇಲಾಖೆಯ ನೌಕರರು ತುಂಬಾ ಚಟುವಟಿಕೆಯಿಂದ ಕೆಲಸ ಮಾಡಬೇಕು. ಅವರ ಯಾಂತ್ರಿಕ ಜೀವನಕ್ಕೆ ಇಂತಹ ಕ್ಲಬ್ಬಿನ ಆವಶ್ಯಕತೆ ತುಂಬಾ ಇದೆ ಎಂದು ಹೇಳಿದರು. ಕ್ಲಬ್ಬಿನ ಚಟುವಟಿಕೆಗಳನ್ನು ಕೊಂಡಾಡಿದರು.

ನೌಕರರಿಂದ ನಾಟಕಾಭಿನಯವಾದ ಬಳಿಕ ಉಡುಪಿ ಹೆಡ್ ಪೋಸ್ಟ್ ಆಫೀಸಿನ ಪೋಸ್ಟ್ ಮಾಸ್ಟರ್ ಶ್ರೀ ಎಸ್. ಎನ್. ರಾಯರು ಧನ್ಯವಾದ ಸಮರ್ಪಿಸಿದರು

**ಡಾ. ಐತಾಳರ ಭಾವಚಿತ್ರ ಅನಾವರಣ**— ಉಡುಪಿ ನಗರ ಸಭೆಯ ಮಾಜಿ ಅಧ್ಯಕ್ಷ ಡಾ. ಕೆ. ಎಲ್ ಐತಾಳರ ಭಾವಚಿತ್ರ ಅನಾವರಣವನ್ನು ತಾ. 4-5-63ರಂದು ಕಲ್ಪನಾ ಥಿಯೇಟರಿನಲ್ಲಿ ಡಾ| ಟಿ. ಎಂ ಎ. ಪೈಯವರು ನೆರವೇರಿಸುತ್ತಾ ಡಾ| ಐತಾಳರ ಸೇವಾಕಾಂಕ್ಷೆಯನ್ನು ಪ್ರಶಂಸಿಸಿ ಅವರು ಗಳಿಸಿದ ಜನಪ್ರಿಯತೆಯನ್ನು ಶ್ಲಾಘಿಸಿ ನಗರ ಸಭಾ ಭವನದಲ್ಲಿರಿಸಲಾದಂತೆ ಒಪ್ಪಿಸಿದ ಭಾವಚಿತ್ರವನ್ನು ನಗರ ಸಭಾಪತಿ ಶ್ರೀ ಪಿ ಆರ್. ಶೆಣೈಯವರು ಸ್ವೀಕರಿಸಿದರು. ಆರಂಭದಲ್ಲಿ ನಾಗರಿಕ ಸಮಿತಿಯ ಪರವಾಗಿ ಮಾಜಿ ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿ ಡಾ| ಐತಾಳರು ನಗರಕ್ಕೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ಕೌನ್ಸಿಲರ್ ಶ್ರೀ ಎಸ್. ಸೀತಾರಾಮ ಕಾಮತರೂ ಡಾ| ಪಿ. ಆರ್. ನಾಯಕರೂ ಡಾ| ಐತಾಳರ ಗುಣಗಾನ ಮಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ನಗರ ಸಭೆಯ ಮಾಜಿ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಇಂದಿನ ನಮ್ಮ ಮುಂದಾಳುಗಳ ಲೋಪದೋಷಗಳನ್ನು ಪ್ರಸ್ತಾಪಿಸಿ ಸ್ವಾರ್ಥ, ಸಂಕುಚಿತತೆಗಳನ್ನು ಪ್ರಸ್ತಾಪಿಸಿ, ವಿಚಾರ ಹಾಗೂ ವಿಮರ್ಶಪೂರ್ಣ ಭಾಷಣಗೈದು ಡಾ. ಐತಾಳರ ಜನಪ್ರಿಯತೆಯನ್ನು ಕೊಂಡಾಡಿದರು. ಶ್ರೀ ಎ. ಜೆ ಆಳ್ವೆಯವರು ಧನ್ಯವಾದಗಳನ್ನರ್ಪಿಸಿದರು. ಧನ್ಯವಾದಿಯ ಸಂಚಾಲಕ ಶ್ರೀ ಕೆ. ಎಲ್. ಭಟ್ಟರು ಸಮಾರಂಭದ ವ್ಯವಸ್ಥೆ ಮಾಡಿದರು.

**ಹರಿಕಥೆ**— ಉಡುಪಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಪಂಡೆ ಗುರು ವೇದವ್ಯಾಸಾಚಾರ್ಯರಿಂದ ಕಳೆದ ತಾ 26ರಿಂದ 29ರ ತನಕ ಹರಿಕಥಾ ಕಾಲಕ್ಷೇಪವು ಶ್ರೀಯು. ರಾಘವೇಂದ್ರ ಕೃಷ್ಣ ಭಟ್ರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

**ವರ್ಧಂತ್ಯುತ್ಸವ**— ಕಡಂದಲೆ ಬೋರ್ಡ್ ಹಾ. ಪ್ರಾ. ಶಾಲಾ ವರ್ಧಂತ್ಯುತ್ಸವವು ತಾ. 27—4—63ರಂದು ಶ್ರೀ ಎಸ್. ಮುಕುಂದ ರಾವ್ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ನಾರಾಯಣ ಶೆಟ್ಟರು ವರದಿಯನ್ನೋದಿದರು. ಶ್ರೀ ಕೆ. ಚಿಕ್ಕಪ್ಪ ಶೆಟ್ಟರು ಸ್ವಸ್ತಿವಾಚನ ಮಾಡಿದರು.

ಕಾರ್ಕಳ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಸ್. ಮೋಹನ್‌ದಾಸ ಅಡ್ಯಂತಾಯರು ಬಹುಮಾನ ವಿತರಣೆ ಮಾಡಿ ಶಾಲಾ ಅಭಿವೃದ್ಧಿಯ ಬಗ್ಗೆ ಮೆಚ್ಚಿಕೆಯನ್ನು ವ್ಯಕ್ತಪಡಿಸುತ್ತಾ ಇಲ್ಲಿ ಒಂದು ಹೈಸ್ಕೂಲು ಆಗಬೇಕಾದ ಆವಶ್ಯಕತೆಯನ್ನೂ ಒತ್ತಿ ಹೇಳಿದರು ಆ ಬಳಿಕ ಶಾಲಾ ಬಾಲಕರಿಂದ 'ಭಕ್ತ ಪುಂಡಲೀಕ'ನೆಂಬ ಕನ್ನಡ ನಾಟಕವೂ ಶ್ರೀ ಕೆ ಜೆ. ಶೆಟ್ಟಿಯವರು ಬರೆದ 'ಕಲ್ಕುಡದ ಪೊಣ್ಣು' ಎಂಬ ತುಳು ನಾಟಕವೂ ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು. ಕೊನೆಯಲ್ಲಿ ಶ್ರೀ ಕೆ. ನಾರಾಯಣ ಶೆಟ್ಟರು ಧನ್ಯವಾದ ಸಮರ್ಪಣೆಗೈದರು.

ಅಂದು ಮುಂಜಾನೆ ಧ್ವಜ ವಂದನಾ ಕಾರ್ಯಕ್ರಮವು ಸ್ಥಳೀಯ ಪಂಚಾಯತ್ ಅಧ್ಯಕ್ಷರಾದ ಶ್ರೀ ಕೆ. ಸಂಜೀವ ಶೆಟ್ರಿಂದ ನೆರವೇರಿಸಲ್ಪಟ್ಟಿತು.

**ವಿವಾಹ ಸಮಾರಂಭಗಳು**— ದಿ| ಶ್ರೀ ಎನ್. ವಿ. ಶಾನುಭೋಗರ ಪುತ್ರಿ ಇಂದಿರಾರ ವಿವಾಹವು ಶ್ರೀ ಯು ವಾಸುದೇವ ನಾಯಕರ ಪುತ್ರ ಶ್ರೀನಿವಾಸ ನಾಯಕರೊಂದಿಗೆ ಇದೇ ತಾ. 2ರಂದು ಉಡುಪಿಯ ಕಲಾ ಮಂದಿರದಲ್ಲಿ ನೆರವೇರಿತು.

ಮಂಗಳೂರು ಜಿಲ್ಲಾ ವೆಟರ್ನರಿ ಆಫೀಸರ್ ಡಾ. ಪೈ. ಶಿನಪ್ಪ ರೈಗಳ ಪುತ್ರಿ ಕುಮಾರಿ ಸುಲೋಚನಳನ್ನು ದಿ| ಪಾವೂರು ವಿಟ್ಠಲ ಆಳ್ವರ ಪುತ್ರ ಪ್ರೇಮನಾಥ ಆಳ್ವರು ಇದೇ ತಾ. 5ರಂದು ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವಿವಾಹವಾದರು.

ಅಟ್ಟೆಟ್ಟು ಕಾಂತಣ್ಣ ಶೆಟ್ಟರ ಪುತ್ರಿ ಚಿ. ಶಕುಂತಲಾಳನ್ನು ಶ್ರೀ ಕೆದಿಂಜೆ ವಿಠ್ಠಲ ಹೆಗ್ಡೆಯವರ ಪುತ್ರ ಶ್ರೀ ಬಾಲಕೃಷ್ಣ ಹೆಗ್ಡೆಯು ಇದೇ ತಾ. 5ರಂದು ಮಂಗಳೂರು ಡಾನ್ ಬೋಸ್ಕೋ ಹಾಲಿನಲ್ಲಿ ಪಾಣಿಗ್ರಹಣ ಮಾಡಿಕೊಂಡರು.

ದಿ| ಎನ್. ಪಿ. ಶ್ಯಾನುಭೋಗರ ಪುತ್ರಿ ವಿಮಲಾ ಮತ್ತು ಸಿಂಡಿಕೇಟ್ ಬೇಂಕಿನ ಡಿವಿಜನಲ್ ಮೆನೇಜರ್ ಶ್ರೀ ಜಿ. ಎಸ್. ನಗರ್ಕಾರರ ಪುತ್ರ ಶ್ರೀ ಚಂದ್ರಕಾಂತ್ ಇವರ ವಿವಾಹವು ತಾ. 6ರಂದು ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ನೆರವೇರಿತು

ಶ್ರೀ ಕಡ್ತಿಮಾರು ಬೀರಣ್ಣ ಶೆಟ್ಟರ ಪುತ್ರಿ ನಾಗವೇಣಿಯನ್ನು ಬಳ್ಳಮಜಲು ಕರಿಯಪ್ಪ ರೈಗಳ ಪುತ್ರ ಚಿ ರಘುನಾಥ ರೈಯು ಇದೇ ತಾ 6ರಂದು ಪುತ್ತೂರು ಅರುಣಾ ಥಿಯೇಟರಿನಲ್ಲಿ ವಿವಾಹ ಮಾಡಿಕೊಂಡರು

ಎಲ್. ಐ. ಸಿ.ಯ ಭದ್ರಾವತಿ ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಬಿ. ಎಮ್. ಶೆಟ್ಟರ ಪುತ್ರಿ ಸೌ. ಪುಷ್ಪಲತಳನ್ನು ಶ್ರೀ ಬಾಳ್ಕಟ್ಟಬೀಡು ಚಂದ್ರಶೇಖರ ಹೆಗ್ಡೆಯವರ ಪುತ್ರ ಶ್ರೀ. ಸೋಮನಾಥ ಹೆಗ್ಡೆಯವರು ಇದೇ ತಾ 6ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು

---

### ಅಶೋಕ ಮೆಹತಾ

ಪ್ರಜಾ ಸೋಶಿಯಲಿಸ್ಟ್ ಮತ್ತು ಸಮಾಜವಾದಿ ಪಕ್ಷಗಳನ್ನು ವಿಲಯನಗೊಳಿಸುವ ಉದ್ದೇಶದಿಂದ ಇತ್ತೀಚೆಗೆ ತೊಡಗಿದ ಮಾತುಕತೆಗಳು ನಿರರ್ಥಕವಾದುದರಿಂದ ಪ್ರಜಾ ಸೋಶಿಯಲಿಸ್ಟ್ ಪಕ್ಷದ ಅಧ್ಯಕ್ಷ ಅಶೋಕ ಮೆಹತಾ ಸಂಪೂರ್ಣ ನಿರಾಶರಾಗಿದ್ದಾರೆ. ಮತ್ತು ಇನ್ನು ಮುಂದೆ ಇಂತಹ ವಿಲಿಯನ ಮಾತುಕತೆಗಳನ್ನು ತೊಡಗದಿರಲು ನಿರ್ಧರಿಸಿದ್ದಾರೆ. ತನ್ನ ಪಕ್ಷದ ಧ್ಯೇಯಗಳನ್ನೇ ಪ್ರಸವಾವು ಅನುಮೋದಿಸುವುದಾದರೆ ಮಾತ್ರ ಈ ವಿಲಯನ ಸಾಧ್ಯವೆಂದು ಸಮಾಜವಾದಿ ಪಕ್ಷವು ಅಭಿಪ್ರಾಯಿಸಿದುದೇ ಇದಕ್ಕೆ ಕಾರಣವೆನ್ನಲಾಗಿದೆ.

---

### ವಿನಂತಿ

ನಮ್ಮ ಕೆಲ ಚಂದಾದಾರರು ನಾವೆಷ್ಟು ಸಲ ವಿನಂತಿಸಿದರೂ ತಮ್ಮ ಚಂದಾಹಣವನ್ನು ಪಾವತಿ ಮಾಡದಿರುವುದು ವಿಷಾದಕರವಿದೆ. ಕೆಲವರು ವಿನಂತಿಸಿದೊಡನೆ ತಾವಾಗಿ ಚಂದಾ ಕಳುಹಿಸಿದ್ದಾರೆ; ಇನ್ನು ಕೆಲವರು ವಿ.ಪಿ.ಪಿ. ಸ್ವೀಕರಿಸುವುದರ ಮೂಲಕ ಚಂದಾ ಸಲಾಯಿಸಿದ್ದಾರೆ. ಇವರೆಲ್ಲರಿಗೂ ನಾವು ತುಂಬಾ ಆಭಾರಿಗಳಾಗಿದ್ದೇವೆ.

ಇನ್ನೂ ಚಂದಾ ಬಾಕಿ ಇರುವವರು ದಯಮಾಡಿ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ. ಈಗ ಪುನರ್ವಿಮರ್ಶಿತ ಅಂಚೆ ದರಗಳಂತೆ ವಿ. ಪಿ. ಮಾಡುವದರಿಂದ ಮೊದಲಿಗಿಂತಲೂ ಹೆಚ್ಚಿನ ನಷ್ಟವಾಗುವುದು. ಆದುದರಿಂದ ನಮ್ಮ ಕಳಕಳಿಯ ವಿನಂತಿಯನ್ನು ಮನ್ನಿಸಿ ಪ್ರತಿಯೊಬ್ಬರೂ ತಮ್ಮ ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ಅಭಿಮಾನಪೂರ್ವಕ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

—ಮೆನೇಜರ್

---

### ಲಾಲ ಬಹದೂರ

ದ್ರಾವಿಡ ಕಳಗಂ ಅಧಿಕೃತ ಭಾಷಾ ವಿಧೇಯಕಕ್ಕೆ ವಿರುದ್ಧ ನೇರಕ್ರಮ ಕೈಗೊಳ್ಳುವ ಯೋಚನೆಯನ್ನು ಮಾಡಿದ್ದು ಇದನ್ನು ಅಣ್ಣಾದೊರೈಯವರು ಬಹಿರಂಗಪಡಿಸಿದರು. ಸ್ವತಂತ್ರ ಪಕ್ಷದ ನಾಯಕರೂ ಇದನ್ನು ಬೆಂಬಲಿಸುವರು. ಆದರೆ, ದೇಶದ ಕಾಯಿದೆಯನ್ನು ಉಲ್ಲಂಘಿಸುವುದನ್ನು ಸರಕಾರವು ಎಂದೂ ಸಹಿಸದೆಂದೂ ಅಂತಹ ಆಹ್ವಾನವನ್ನು ಅದು ಧೈರ್ಯದಿಂದ ಎದುರಿಸುವುದೆಂದೂ ಗೃಹ ಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಎಚ್ಚರಿಕೆ ನೀಡಿದ್ದಾರೆ. ಅಧಿಕೃತ ಭಾಷಾ ವಿಧೇಯಕವನ್ನು ಸಾಂವಿಧಾನಿಕವಾಗಿಯೇ ಪ್ರತಿಭಟಿಸಬೇಕಲ್ಲದೆ ಕಿಡಿಗೇಡಿತನದಿಂದಲ್ಲವೆಂದೂ ಅವರು ಅಂದಿದ್ದಾರೆ.

### ಸುಕರ್ಣ

ಪಶ್ಚಿಮ ನ್ಯೂಗಿನಿಯು ಇತ್ತೀಚೆಗಷ್ಟೆ ಡಚ್ಚರಿಂದ ಸಂಯುಕ್ತ ರಾಷ್ಟ್ರದ ವ್ಯವಸ್ಥೆಯ ಮೂಲಕ ಇಂಡೋನೇಶ್ಯದ ಕೈಗಳಿಗೆ ಇಂಡೋನೇಶ್ಯಾದ ಅಧ್ಯಕ್ಷ ಸುಕರ್ಣರು ತೆಗೆದುಕೊಂಡರು. ಇಷ್ಟರಿಂದಲೇ ಇಂಡೊನೇಶ್ಯ ಸಂಪೂರ್ಣ ಸ್ವತಂತ್ರವಾಗಲಿಲ್ಲವೆಂದ ಅವರು ಇಂಡೊನೇಶ್ಯ ಬಲಾಢ್ಯ ಮತ್ತು ಸಂಪನ್ನವಾಗುವ ವರೆಗೆ ಹಾಗೂ ಪ್ರಪಂಚದಿಂದ ಸಾಮ್ರಾಜ್ಯಶಾಹಿ ನಾಶವಾಗುವ ವರೆಗೆ ತಮ್ಮ ಹೋರಾಟ ನಡೆಯುವುದೆಂದು ನುಡಿದಿದ್ದಾರೆ.

---

**ಹಿರಿಯಡ್ಕ**— ಮುಡಕೋಡಿ... ಶ್ರೀ ವೀರಭದ್ರ ದೇವಸ್ಥಾನದಲ್ಲಿ ತಾ. 8-5-63ರಿಂದ ತಾ 13-5-63ರ ವರೆಗೆ ಶ್ರೀ ಮನ್ಮಹಾರಥೋತ್ಸವದ ಕಾರ್ಯಕ್ರಮಗಳು ಮಾಮೂಲ್ ಮೇರೆಗೆ ಜರಗಲಿರುವವೆಂದೂ ಸರ್ವರೂ ಬಂದು ದೇವತಾ ಕಾರ್ಯವನ್ನು ನೆರವೇರಿಸಿಕೊಡಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ವಿ. ಜನಾರ್ದನ ಆಳ್ವರು ವಿನಂತಿಸುತ್ತಾರೆ.

### ಇಂದು ಬದಲಾಗಬೇಕು—

# ಅಧ್ಯಾತ್ಮದ ಗುರಿ, ದೇವರ ಕಲ್ಪನೆ

ಪ್ರತಿ ದಿನ ಪ್ರಾರ್ಥನೆ ಮಾಡುವ ಯಾ ಪ್ರತಿ ದಿನ ದೇವರ ಮಂದಿರಕ್ಕೆ ಹೋಗಿ ಆರಾಧಿಸುವ ಭಕ್ತನು ಒಂದು ದಿನವೂ ತಪ್ಪಬಾರದು, ತಪ್ಪಿದರೆ ಭಗವಂತನಿಗೆ ಸಿಟ್ಟಾಗುತ್ತದೆಂದು ಹೇಳುವವರಿದ್ದಾರೆ. ಭಗವಂತನು ಸಿಟ್ಟಾಗುತ್ತಾನೆಂದು ಪೂಜೆ, ಪ್ರಾರ್ಥನೆ,ಭಕ್ತಿ ಮಾಡುವಲ್ಲಿ ಅಂಜಿಕೆಯು ಒತ್ತಾಯವಿದೆಯೇ ವಿನಹ ನಿಜ ಪ್ರೇಮವಲ್ಲ. ಪ್ರತಿ ದಿನ ಶಾಲೆಗೆ ಹೋಗುವ ವಿದ್ಯಾರ್ಥಿ ಅನಿವಾರ್ಯ ಒಂದು ದಿನ ತಪ್ಪಿದರೆ ತಂದೆ ಶಿಕ್ಷಿಸುತ್ತಾನೆ ಹಾಗಿರುವಾಗ ಇಂಥ ನೂರಾರು ಹಾನೆಗಳಿಗಿಂದಾ ವಿಶಾಲ ಹೃದಯನೂ, ದಯಾಮಯಿಯೂ ಆದ ಭಗವಂತನಲ್ಲಿ ಕ್ಷಮೆ ಇಲ್ಲವೇ? ಭಯದಿಂದ ಮಾಡುವ ಭಕ್ತಿ ಭಕ್ತಿ ಎನಿಸದು. ಪ್ರೇಮವೇ ಭಕ್ತಿಯ ಮೂಲಾಧಾರ.

o o o

ಅದ್ವಿತೀಯ ಪುರಾಣ ಗ್ರಂಥಗಳಾದ ರಾಮಾಯಣ, ಮಹಾಭಾರತಗಳಲ್ಲಿ ಮೂರು ಸುವರ್ಣ ನಗರಿಗಳ ಉಲ್ಲೇಖವಿದೆ ಲಂಕಾ, ದ್ವಾರಕ ಮತ್ತು ಸುಧಾಮಪುರಿ. ಅವರೆ ಕೊನೆಗೆ ಅವು ಮೂರೂ ಸಮುದ್ರದಲ್ಲಿ ಮುಳುಗಿ ಹೋದಂತೆ ಚಿತ್ರಿಸಲಾಗಿದೆ. ರಾವಣನ ಸುವರ್ಣನಗರಿ ಲಂಕೆಯೂ ಹೋಯಿತು. ಕೃಷ್ಣನ ಸ್ವರ್ಣನಗರ ದ್ವಾರಕೆಯೂ ಹೋಯಿತು, ಸುಧಾಮನ ಸ್ವರ್ಣನಗರವೂ ಮುಳುಗಿತು. ತಾತ್ಪರ್ಯವಿಷ್ಟೆ, ಇಂದು ಆಧುನಿಕ ಭಾರತದಲ್ಲಿ ಹೊಂಬಾಯಿಯನ್ನು ಸುವರ್ಣ ನಗರವೆನ್ನುತ್ತಾರೆ. ಕಾಶಿ ವಿಶ್ವನಾಥ ದೇವ ಮಂದಿರಕ್ಕೆ ಚಿನ್ನದ ತಗಡು ಹೊದಿಸಿದ್ದಾರೆ. ಅಮೃತಸರದ ಸಿಖ್ಖರ ಗುರುದ್ವಾರವೂ ಸುವರ್ಣ ಮಂದಿರವಾಗಿದೆ. ಕೃಷ್ಣನ ಸುವರ್ಣ ನಗರಿಯೇ ಮುಳುಗಿರುವಾಗ ಈ ಸುವರ್ಣ ರಚನೆಗಳೂ ಮುಳುಗಿ ನಾಮಾವಶೇಷವಾಗಬಹುದು; ದರೋಡೆಕಾರರಿಂದಾಗಿ ನಿರ್ನಾಮಗೊಳ್ಳಬಹುದು. ಅದ್ದರಿಂದಲೇ ಈ ಮಂದಿರಗಳ ದ್ವಾರದಲ್ಲಿ "ಕಿಸೆಗಳ್ಳರಿದ್ದಾರೆ ಎಚ್ಚರಿಕೆ" ಎಂಬ ಬೋರ್ಡು ಹಾಕಿದ್ದಾರೆ. ಇತ್ತಲಾಗಿ ಇಂಥಾ ದೇವಮಂದಿರಗಳಲ್ಲಿರುವ ದೇವ ವಿಗ್ರಹದ ಮೈ ಮೇಲಿರುವ ಆಭರಣಗಳೇ ಕಳವಾಗುತ್ತಿವೆ. ಜನರಿಗೆ ದರ್ಶನ ಮಾತ್ರದಿಂದಲೇ ಅಭಯದಾನ ಮಾಡಬೇಕಾಗಿದ್ದ ಆ ದೇವ ಮಂದಿರಗಳನ್ನ ಕಾಯಲು ಕೋವಿ ಹಿಡಿದ ಸಿಪಾಯಿಗಳನ್ನು ಮಂದಿರಗಳ ಹೆಬ್ಬಾಗಿಲಿನಲ್ಲಿ ನಿಲ್ಲಿಸಿದ್ದಾರೆ! ಚಿನ್ನದ ತಗಡು ಹೊದ್ದ ಮಂದಿರಗಳಲ್ಲಿದೇವರಿಲ್ಲ ಅಲ್ಲಿ ಕಾವಲುಗಾರರು ಕಾಯುತ್ತಿರುವುದು ಚಿನ್ನವನ್ನಷ್ಟೇ, ಜಗನ್ನಿಯಾಮಕ ದೇವರಿಗೆ ಕಾವಲೇಕೆ?

o o o

ಅಧ್ಯಾತ್ಮ ಈ ಚಿನ್ನದ ಮಂದಿರಗಳಲ್ಲಿ ಇಲ್ಲ. ಹಿಮಾಲಯದ ಗಿರಿಗುಹೆಗಳಲ್ಲೂ ಇಲ್ಲ. ಪರಮಾತ್ಮನ ನಿವಾಸಸ್ಥಾನ ದೇವಸ್ಥಾನದ ಗರ್ಭಗುಡಿ ಯಾ ಗಿರಿಕಂದರಗಳಲ್ಲ. ಭಗವಂತನು ಬಾಹ್ಯ ದೇವ ಮಂದಿರಯೂ ಗುರುದ್ವಾರಗಳಲ್ಲಿಲ್ಲ. ಮನುಷ್ಯನ ಹೃದಯದಲ್ಲಿಯೇ ಅತನಿದ್ದಾನೆ. ತನ್ನೊಬ್ಬನ ಹೃದಯದಲ್ಲಿ ಮಾತ್ರವಲ್ಲ; ಸರ್ವರ ಹೃದಯ ಭಗವಂತನ ನಿವಾಸ ಸ್ಥಾನವಾಗಿದೆ. ಪರಮಾತ್ಮನನ್ನು ಗಿರಿಗುಹೆಗಳಲ್ಲಿ ಹುಡುಕುವುದು ಇಂದಿನ ಆಧ್ಯಾತ್ಮ ಆವಶ್ಯಕತೆಯಲ್ಲ. ವಿರೋಧಿಯ ಹೃದಯದಲ್ಲಿರುವ ಪರಮಾತ್ಮನನ್ನು ಹುಡುಕಬೇಕಾದ್ದು ಆಧುನಿಕ ಅಧ್ಯಾತ್ಮವಾಗಿದೆ ಮನುಷ್ಯನ ಭಾವನೆಯೇ ಸಾಲಿಗ್ರಾಮವನ್ನು ಪರಮಾತ್ಮನೆನಿಸಿದೆ. ಭಾವನೆಯ ಬಲದಿಂದಲೇ ದೇವ ಮಂದಿರದ ಕಲ್ಲಿನ ಮೂರ್ತಿಯು ಭಗವಂತನ ರೂಪು ತಳೆಯುತ್ತದೆ. ಭಾವನೆ ಇಲ್ಲದಿದ್ದರೆ ದೇವ ಮಂದಿರ ಕೇವಲ ಕಲ್ಲು. ಚರ್ಚ್, ಮಸೀದಿಗಳು ಕೇವಲ ಕಟ್ಟಡಗಳು. ಇನ್ನೊಬ್ಬರ ಹೃದಯದಲ್ಲೂ ಭಗವಂತನಿದ್ದಾನೆಂಬ ಭಾವನೆಯ ಸಾಕ್ಷಾತ್ಕಾರವೇ ಪರಮ ವೇದಾಂತ: ನೀರು ಎಲ್ಲರಿಗೂ ಒಂದೇ. ಅದರೆ ಗಂಗಾ ಜಲ ಹಿಂದುಗಳಿಗೆ ತೀರ್ಥವಾಗಿರುವದು ಅವರ ಭಾವನೆಯ ಬಲದಿಂದ, ಆ ಭಾವನೆಯ ಬಲವೇ ಹೃದಯದ ಕಲ್ಮಷಗಳನ್ನು ತೊಳೆಯುತ್ತದೆ. ಸುಶುಪ್ತವಾದ ಈ ಸದ್ಭಾವನೆಯು ಗಂಗಾಜಲ ತನ್ನ ಹಾಗೂ ಪರರ ಹೃದಯಗಳಲ್ಲಿ ಅನುದಿನ ಶುದ್ಧಿಯನ್ನು ಮಾಡುತ್ತಿರಬೇಕು ಹಾಗಾದರೆ ಮಾತ್ರ ಪರಲೋಕವೆನ್ನುವ ಅಧ್ಯಾತ್ಮ ಇಹಲೋಕದ ಜೀವನದ ವ್ಯವಹಾರವಾಗುವದು. ಅದರಿಂದ ಉತ್ತಮ ಲೋಕನೀತಿ ನಿರ್ಮಾಣವಾಗುವದು.

o o o o

ಲೋಕನೀತಿ ಒತ್ತಾಯದಿಂದ ರೂಪಿಸಲ್ಪಡುವಂಥದ್ದಲ್ಲ. ಅದಕ್ಕೆ ಆಧಾರ ನ್ಯಾಯಾಲಯಗಳಾಗಲೀ, ಜೈಲುಗಳಾಗಲೀ ಅಲ್ಲ. ಪೋಲಿಸರ ಭಯಕ್ಕಾಗಿ ಕಳ್ಳತನ ಮಾಡದಿರುವದು ಉತ್ತಮ, ಲೋಕ ನೀತಿಯಲ್ಲ. ಶಿಕ್ಷೆಗೆ ಹೆದರಿ ಉತ್ತಮ ವರ್ತನೆ ಅನುಸರಿಸುವದು ಮನುಷ್ಯನ ಉತ್ತಮಿಕೆಯ ನಿದರ್ಶನವಲ್ಲ. ಸಮಾಜಕ್ಕೆ ಹೆದರಿ ನೀತಿವಂತನಾಗಿ ನಟಿಸುವವನು ಸಮಾಜದ ದೃಷ್ಟಿ ತಪ್ಪಿದಾಗ ಅನೀತಿಯ ಮಾರ್ಗ ಹಿಡಿಯುತ್ತಾನೆ! ನೀತಿ, ನಡತೆ ಮೊದಲಾದವು ಬಾಹ್ಯ ಒದಿಕೆಯಿಂದ ರೂಪುಗೊಂಡರೆ ಅವು ನಿಜವಾದ ನೀತಿ ನಡತೆಗಳಾಗವು. ನೀತಿ ನಡತೆಗಳಿಗೆ ಅವನವನ ಮನಸ್ಸಿನ ಭಾವನೆಯೇ ಆಧಾರವಾಗಬೇಕು. ಲೋಕ ನೀತಿಯ ಆಧಾರ ಅವನವನೇ ಆಗಬೇಕಲ್ಲದೆ ಸರಕಾರದ ಕಾನೂನು ಯಾ ಪೋಲಿಸರ ಭಯವಲ್ಲ. ಪ್ರಾಮಾಣಿಕತೆ ತನ್ನಿಂದಲೇ ಆರಂಭವಾಗಬೇಕು. ಸದಾಚಾರ ಸಾಪೇಕ್ಷವಾಗಿರಬಾರದು. ತನ್ನ ಮನದ ಭಾವನೆಯನ್ನು ಪರಿಷ್ಕರಿಸಿಕೊಳಿಸಿ ಅದರಂತೆ ವರ್ತಿಸುವದೇ ಅಧ್ಯಾತ್ಮ. ಬಾಹ್ಯಗೊಡ್ಡು ಸಂಪ್ರದಾಯಗಳಿಗೆ ತಲೆಬಾಗಿ ಅಂತಃಶುದ್ಧಿ ಇಲ್ಲದೆ ಮಣಗಟ್ಟಲೆ ಬೂದಿ ಧರಿಸಿದರೂ ದಿನವಹಿ ರುದ್ರಾಕ್ಷಿ ಎಣಿಸಿದರೂ ಅದು ಅಧ್ಯಾತ್ಮವಾಗದು

(ಮಾಜಿ ಧರ್ಮಾಧಿಕಾರಿಯವರ ಲೇಖನದಿಂದ ಸಂಗ್ರಹಿತ.)

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಪಕೇಶ ಅಯ್ಯರ್
ಎಂ. ಎ, ಐ. ಸಿ. ಯಸ್, ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—
TALES OF IND
ಕಥಾವಳಿಯ ಕನ್ನಡ ಅನುವಾದ
ಭಾರತೀಯ ಕಥೆಗಳು
ಚಿಕ್ಕ ಚೊಕ್ಕ ೧೫ ಕಥೆಗಳು ಬೆಲೆ ರೂ 1—12—0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,
ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

## ಅರ್ಥವತ್ತಾರ್ತೆಗಳು

ಭಾರತ—ಚೀಣಾ ಹೋರಾಟದಲ್ಲಿ ಅಂತಿಮ ಜಯವು ಭಾರತಕ್ಕೆ ಖಂಡಿತವೆನ್ನುತ್ತಾರೆ ಭಾರತದ ರಕ್ಷಣಾ ಸಚಿವ ಶ್ರೀ ವೈ. ಬಿ ಚವ್ಹಾಣರವರು ರಕ್ಷಣಾ ಸಚಿವರ ಈ ಮಾತು ಭಾರತಕ್ಕೆ ರಕ್ಷೆಯಾಗದೆ ಉಳಿದೀತೇ?

o o o

ಪಾಪ ಕೃತ್ಯಗಳನ್ನು ಮಾಡಿ ಪರಮಪಾಪಿ ಎನಿಸಿದ್ದರೂ ಕೊನೆಮರಣ ಕಾಲಕ್ಕೆ "ನಾರಾಯಣ"ನೆಂಬ ವಿಷ್ಣು ನಾಮವನ್ನುಚ್ಚರಿಸಿದ್ದರಿಂದ ಯಮನ ಪಾಶಕ್ಕೊಳಗಾಗದೆ ಸ್ವರ್ಗವನ್ನೈದಿದನಂತೆ! ಇತ್ತೀಚೆಗೆ ಫಾಶಿ ಶಿಕ್ಷೆಗೊಳಪಟ್ಟ ರಾಮೇಶ್ವರ ಚೌಧರಿಯೆಂಬ ತರುಣನು ಮೊದಲು ಪಾಪಕೃತ್ಯಗಳನ್ನು ಮಾಡಿಕೊಂಡಿದ್ದರೂ ತನ್ನ ಮರಣವು ಖಂಡಿತವೆಂದು ತಿಳಿದಾಗ ತನ್ನ ಎರಡು ಕಣ್ಣುಗಳನ್ನೇ ಉದಾರ ಹೃದಯದಿಂದ ದಾನ ಮಾಡಿದ್ದಾನಂತೆ ಪಶ್ಚಾತ್ತಾಪ ಕರೋರಾಣಿ ಮ್ಯಾಡೂನಿ ಗುಸುಮಾಡಪಿ ಎಂಬುದು ಸರಿಯಾಯಿತು.

o o o

ಪೇಟೆಯಲ್ಲಿರುವಾಗ ಪೇಟೆಯ ಬುದ್ಧಿಯೇಕೆ? ಯೆಂಬಂತಾಗಿದೆ ನಮ್ಮ ಇಂದಿನ ಪರಿಸ್ಥಿತಿ. ದೇಶದ ಮೇಲೆ ವೈರಿ ಚೀಣೀಯರು ಕಣ್ಣಿಟ್ಟಿರುವ ಈ ಸಂದರ್ಭದಲ್ಲಿ ರಾಷ್ಟ್ರಭಾಷೆ ಹಿಂದಿಯಾಗಿರಬೇಕೆಂದೂ ಇಂಗ್ಲೀಷ್ ಆಗಿಯೇ ಇರಬೇಕೆಂದೂ ನಮ್ಮ ನಮ್ಮೊಳಗೆ ಚರ್ಚೆ ಮಾಡುತ್ತಿರುವುದು ಅತ್ಯಂತ ಆಶ್ಚರ್ಯವಾಗಿ ಬೆಯೆಂದರೆ ಹೆಚ್ಚಾದೀತೇ?

o o o

ಇತ್ತೀಚೆಗೆ ಒರಿಸ್ಸಾದ ಮುಖ್ಯ ಮಂತ್ರಿ ಶ್ರೀ ಪಟ್ನಾಯಕರೊಡನೆ ವಿದೇಶ ವ್ಯವಹಾರಗಳ ಸಚಿವ ಖಾತೆಯ ವಿಶೇಷ ಅಧಿಕಾರಿಯೊಬ್ಬರು ನಮ್ಮ ಜನರಲ್‌ಗಳಿಗಿಂತ ಚೀನೀ ಜನರಲ್‌ಗಳು ತುಂಬಾ ಉತ್ತಮರಿದ್ದಾರೆ ಎಂದು ಹೇಳಿದ ಹೇಳಿಕೆಯ ಕುರಿತು ಶ್ರೀ ಹೇಮ್ ಬರುವಾರವರು ರಕ್ಷಣಾ ಮಂತ್ರಿಯವರನ್ನು ಪ್ರಶ್ನಿಸಿದಾಗ, ರಕ್ಷಣಾ ಸಚಿವರು ಹಾಗೆನ್ನುವದಿದ್ದರೆ ಚೀಣೀ ಜನರಲ್‌ಗಳಿಗಿಂತ ಭಾರತೀಯ ಜನರಲ್‌ಗಳೇ ಉತ್ತಮರಾಗಿದ್ದಾರೆಂದಿದ್ದಾರಂತೆ! ವಿಶೇಷ ಅಧಿಕಾರಿಯವರೆಂದ ಮಾತು ಸುಳ್ಳಲ್ಲ. ಕಪಟ ವಿದ್ಯೆಯಲ್ಲಿ ನಮ್ಮ ಜನರಲ್‌ಗಳು ಚೀಣೀ ಜನರಲ್‌ಗಳಿಗಿಂತ ಅದೆಷ್ಟೋ ಹಿಂದೆ ಬಿದ್ದಿದ್ದಾರೆ.

o o o

ರಷ್ಯದ ಪ್ರಧಾನಿ ಮಿ. ನಿಕಿಟಾ ಕ್ರುಶ್ಚೇವರಿಗೆ ತನ್ನ ಅಧಿಕಾರ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಧುರೀಣತ್ವ ನಿರಂತರವಾಗಿ ತನಗೆ ಉಳಿಯದೆಂಬ ಸಂಶಯವು ಬಂದಿದೆಯಂತೆ! ಯಾಗವೇನೋ ವೈಜ್ಞಾನಿಕ; ಅವರೂ ಶರೀರವೆಂಬುದು ಸರ್ವ ಯುಗಕ್ಕೂ ನಶ್ವರವಲ್ಲವೆ? ಹುಟ್ಟಿದ್ದ ಮೇಲೆ ಅಧಿಕಾರ ಮಾತ್ರ ಸ್ಥಿರವಾಗಿ ಉಳಿಯಬೇಕೆಂದರೆ ಹೇಗೆ?

"ವಾಣಿಶರಣ, ಯೋಚಿಸ್ಕ"

ಹೊಸ ಪುಸ್ತಕ—
ನಚಿಕೇತ'ರ,
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

## ಜೀವನ ದರ್ಶನ ಮಾಡಿಸ ಬೇಕು

(೮ನೇ ಪುಟದಿಂದ)

ಸ್ಥಾನದಲ್ಲಿರುವ ಗಣ್ಯವ್ಯಕ್ತಿಗಳೇ ಸ್ವಾರ್ಥ ಕ್ಕೋಸ್ಕರ ಕಚ್ಚಾಡಿ ಸ್ವಾರ್ಥಕ್ಕೋಸ್ಕರ ದೇಶ ಹಿತವನ್ನು ಅಲಕ್ಷಿಸುತ್ತಿರುವಾಗ, ಸರ್ಕಾರದ ಕೆಲಸ ಕಾರ್ಯಗಳೆಲ್ಲವೂ ಪಕ್ಷಪಾತದಿಂದ ನಡೆಯುತ್ತಿರುವಾಗ, ಸರಕಾರದ ಪ್ರತಿಯೊಂದು ಚಲನ-ವಲನಕ್ಕೂ ಪ್ರಜೆ ಇಂದು ನ್ಯಾಯ ಸ್ಥಾನದಲ್ಲಿ ವಿವರಣೆ ಕೇಳುತ್ತಿರುವಾಗ ಕೇವಲ ವಿದ್ಯಾರ್ಥಿಗಳು ಅದೂ ಬಿಸಿ ರಕ್ತದ ತರುಣರು ತಮಗೆ ನ್ಯಾಯವೆಂದು ತೋರುವ ಬೇಡಿಕೆ ಅವಶ್ಯಕತೆಗಳಿಗೆ ಶಾಂತಿಯುತ ಮಂದಗಾಮಿ ಪದ್ಧತಿಯನ್ನೇ ಏಕೆ ಅನುಸರಿಸಬೇಕು? ರಾಜನಂತೆ ಪ್ರಜೆ, ತಂದೆಯಂತೆ ಮಗ, ಅಲ್ಲದೆ ರಾಜಕೀಯ ಪಕ್ಷಗಳು ಸಹ ಇವಕ್ಕೆ ಪ್ರೋತ್ಸಾಹ ಕೊಡುತ್ತಾ ತಪ್ಪು ದಾರಿಯಲ್ಲಿ ನಡೆಸಿ, ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಹವಣಿಸುತ್ತಿವೆ. ದುಡ್ಡಿನಾಶೆಯಿಂದ ಅಶ್ಲೀಲ ಕೀಳು ಮಟ್ಟದ ಸಾಹಿತ್ಯವನ್ನೂ, ಚಲಚ್ಚಿತ್ರಗಳನ್ನೂ ಸೃಜಿಸಿ ಅನಂತರ ಅದರಿಂದ ವಿದ್ಯಾರ್ಥಿಗಳು ಕೆಡುತ್ತಿದ್ದಾರೆಂದು ಅಪಾದಿಸುವುದರಲ್ಲಿ ಏನರ್ಥವಿದೆ? ಆದ್ದರಿಂದ ಇಂದು ವಿದ್ಯಾರ್ಥಿಗಳ ನಡತೆ ಸುಧಾರಿಸಬೇಕಾದರೆ ದೊಡ್ಡವರು ನೀತಿವಂತರಾಗಿ ಉದಾತ್ತ ಧ್ಯೇಯಗಳಿಂದ ಮೇಲ್ಪಂಕ್ತಿ ಹಾಕಿಕೊಡಬೇಕು.

ಇಂದಿನ ಸಮಸ್ಯೆಗಳಿಗೆ ತುದಿಮೊದಲೇ ಇಲ್ಲ. ದೇಶದ ಸ್ಥಿತಿಯನ್ನು ನೋಡಿದರೆ ನಾವು ಮತ್ತೆಂದೂ ಒಳ್ಳೆಯಗಾಲವನ್ನು ಉಸಿರಾಡುವೆವೋ ಇಲ್ಲವೋ ಎಂಬ ಶಂಕೆ ಬರುತ್ತದೆ. ನಿರ್ಧಾರಿತ ರೀತಿಯಿಂದ ಸರಿಯಾದ ಯೋಜನೆಗಳನ್ನು ಸಾಧಿಸಿದರೆ ಮಾತ್ರ ನಾವು ಮತ್ತೆ ಬೇಕನ್ನು ಕಂಡೇವು. ವಿಶ್ವವಿದ್ಯಾಲಯದ ನಿಜವಾದ ಗುರಿಯನ್ನು ಸಾಧಿಸಬೇಕಾದರೆ ಕೆಲವು ಮೂಲಭೂತ ಸುಧಾರಣೆಯನ್ನು ಮಾಡುವುದು ಅತ್ಯವಶ್ಯಕವಾಗಿದೆ.

**ಸಂತೆಯಾಗದಿರಲಿ**

ಮೊದಲನೆಯದಾಗಿ ಇಂದು ಏರುತ್ತಿರುವ ಸಂಖ್ಯೆಯನ್ನು ಹಿಡಿತಕ್ಕೆ ತಂದು ವಿಶ್ವವಿದ್ಯಾಲಯಗಳು ಸಂತೆಯಾಗುವುದನ್ನು ತಡೆಯಬೇಕು. ಇದಕ್ಕೋಸ್ಕರ ಜೀವನಾಧಾರವಾದ ವಿದ್ಯೆಯನ್ನು ಕಲಿಸಲು ತಾಂತ್ರಿಕ ಔದ್ಯೋಗಿಕ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆರೆಯಬೇಕು. ಸರಕಾರಿ ನೌಕರರಿಗೆ ವಿಶ್ವವಿದ್ಯಾಲಯದ ಪದವಿ ರಹದಾರಿಯಾಗಿರದಂತೆ ನೋಡಿಕೊಂಡರೆ ಆಗ ಉಚ್ಚ ಶಿಕ್ಷಣ ಎಚ್ಚರಿತವಾಗುತ್ತದೆ. ಇಷ್ಟಾದ ನಂತರ ಕಾಲೇಜು ವಿದ್ಯಾರ್ಥಿಗಳ ವಯೋಪರಿಮಿತಿಯನ್ನು ಹೆಚ್ಚಿಸಿ ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ಅಲ್ಲಿಯ ಶಿಕ್ಷಣ ಮಟ್ಟಕ್ಕೆ ಹೊಂದುವಂತಹ ಒಂದು ಕನಿಷ್ಠ ಅರ್ಹತೆಯನ್ನು ನಿಯಮಿಸಿದ್ದರೆ, ವಿದ್ಯಾರ್ಥಿಗಳ ಸಂಖ್ಯೆ ತನ್ನಂತೆ ಕಡಿಮೆ ಆಗುವುದಲ್ಲದೆ ಶಿಕ್ಷಣ ಮಟ್ಟವೂ ಹೆಚ್ಚುತ್ತದೆ. ಹಿಂದೆ ಪುರಾತನ ಭಾರತದ ವಿದ್ಯಾಪೀಠಗಳಲ್ಲಿ ಪ್ರವೇಶಕ್ಕೆ ಮುಂದೆ ವಿದ್ಯಾರ್ಥಿಗಳು ದ್ವಾರ ಪಂಡಿತರನ್ನು ವಾದದಲ್ಲಿ ಗೆಲ್ಲಬೇಕಾಗಿತ್ತಂತೆ. 'ಎಂಥ ಉಚ್ಚ ಆದರ್ಶ!' ಆದರೆ ಇಂದು ಪ್ರೌಢ ಶಾಲೆಯಿಂದ ಬರುವ ವಿದ್ಯಾರ್ಥಿಯ ಮನೋವಿಕಾಸಕ್ಕೆ ಸ್ವತಂತ್ರವಾಗಿ ಅವಕಾಶವಿಲ್ಲದಿರುವುದರಿಂದ ವಿಶ್ವವಿದ್ಯಾನಿಲಯದ ಪ್ರವೇಶಕ್ಕೆ ಅತನ ಬುದ್ಧಿ ಉಚ್ಚ ಶಿಕ್ಷಣ ಪಡೆಯಲು ಅರ್ಹವಾಗುವಂತೆ ಕೆಲವು ಕಾಲ ತರಬೇತಿ ಕೊಡುವುದು ಅಗತ್ಯ.

**ಉಪಸಂಹಾರ**

ಇಷ್ಟು ಮಾತ್ರವಲ್ಲದೆ ವಿಶ್ವವಿದ್ಯಾಲಯದ ಶಿಕ್ಷಣ ಕ್ರಮದಲ್ಲೇ ಮೂಲಭೂತ ಬದಲಾವಣೆ ಆಗುವುದು ಅತ್ಯಗತ್ಯ. ವಿದ್ಯಾರ್ಥಿಯ ಜ್ಞಾನ ಭಂಡಾರವನ್ನು ಬೆಳೆಸಿ ವಿಚಾರಶಕ್ತಿಯನ್ನು ಕೆರಳಿಸಿ ಜೀವನದ ನಿಜವಾದ ಅರ್ಥ ಬಾಳಿನ ಗುರಿಗಳ ಬಗ್ಗೆ ಅವನಿಗೆ ತಿಳುವಳಿಕೆ ಕೊಡುವುದೇ ನಿಜವಾದ ವಿದ್ಯೆಯ ಉದ್ದೇಶವಾಗಿದೆ. ಪ್ರೌಢ ಶಾಲಾ ಶಿಕ್ಷಣದಿಂದ ದೈನಂದಿನ ವ್ಯವಹಾರ ಜ್ಞಾನ ಬೆಳೆಯುವಂತೆ ವಿಶ್ವವಿದ್ಯಾಲಯದ ಶಿಕ್ಷಣದಿಂದ ನೈತಿಕ ಬಲ ಬೆಳೆಯಬೇಕು. ಇಲ್ಲಿ ಶಿಕ್ಷಣ ಹೊಂದಿ ಹೊರಬಂದ ವ್ಯಕ್ತಿ ಬಾಳಿನ ಯಾವುದೇ ರಂಗದಲ್ಲಿ ಮುನ್ನುಗ್ಗಲು ಯಶಸ್ವಿಯಾಗಿ ಗುರಿ ಮುಟ್ಟಲು ಸಜ್ಜಿತನಾಗಿರಬೇಕು. ಅಂತಹ ಮನೋಭೂಮಿಕೆಯನ್ನು ಸಿದ್ಧಗೊಳಿಸುವುದೇ ನಿಜವಾದ ಶಿಕ್ಷಣದ ಕರ್ತವ್ಯ. ಶಿಕ್ಷಣದ ಸಂಸ್ಕಾರ ಹೊಂದಿದ ಮನಸ್ಸು ಸೃಷ್ಟಿಯ ಸೌಂದರ್ಯವನ್ನು ಅದರ ಪ್ರತಿ ಅಂಶದಲ್ಲಿ ಕಂಡು ಆನಂದಿಸ ಬಲ್ಲುದಾಗಿರಬೇಕು.

"ಜೀವನದ ದರ್ಶನವೇ ಶಿಕ್ಷಣದ ಗುರಿ. ಹೃದಯವನ್ನು ಸಂಕುಚಿತದಿಂದ ಅನಂತಕ್ಕೆ ಕೈ ಬಿಡುಗಡೆ ಮಾಡುವುದೇ, ನಮ್ಮ ಸುತ್ತುಮುತ್ತಲಿನ ಸೌಂದರ್ಯಕ್ಕೆ ಒಳಗಣ್ಣನ್ನು ತೆರೆಸುವುದೇ ನಿಜವಾದ ಶಿಕ್ಷಣ."

— ಡಾ॥ ರಾಧಾಕೃಷ್ಣನ್

ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯಗಳನ್ನೂ ಪೂರ್ವ ಶಿಕ್ಷಣ ಕ್ರಮವನ್ನೂ ಪುನರ್ಘಟಿಸುವುದು ಅವಶ್ಯವಲ್ಲವೆ?

— ಬಿ. ಎನ್. ಜೋಗಿತ್ತಾಯ.



ಭಾರತದಲ್ಲಿಯೇ ನಿರ್ಮಾಣಗೊಂಡ ಬಟ್ಟೆ ಗಿರಣಿ

**ಹನಿಗತೆ**

## ನೆರೆ ಹೊರೆಯವರು

ಎರಡು ಹಕ್ಕಿಗಳು ಇದ್ದುವು. ಒಂದು ಹಸಿರು. ಇನ್ನೊಂದು ಕೆಂಪು. ಒಂದೇ ದೊಡ್ಡ ಮರದ ಎರಡು ಟೊಂಗೆಗಳ ಮೇಲೆ ತಮ್ಮ ತಮ್ಮ ಗೂಡು ಕಟ್ಟಿಕೊಂಡಿದ್ದವು. ಪ್ರತಿ ದಿನ ನಸುಕು ಹರಿಯುತ್ತಲೇ ಈ ಎರಡೂ ಹಕ್ಕಿಗಳು ತಮ್ಮ ತಮ್ಮ ಗೂಡಿನ ಬಗ್ಗೆ ಹುಲ್ಲು ಕಡ್ಡಿ ಹೆಕ್ಕಿ ತರಲು ಹೋಗುತ್ತಿದ್ದವು. ಪ್ರತಿ ಒಂದು ಹಕ್ಕಿಯೂ ತನ್ನ ಗೂಡನ್ನು ಇನ್ನಷ್ಟು ದೊಡ್ಡದಾಗಿ ಮಾಡಲು ಪ್ರಯತ್ನಿಸುತ್ತಿತ್ತು.

ಆ ಎರಡೂ ಹಕ್ಕಿಗಳಲ್ಲಿ ಪರಸ್ಪರ ಅಸೂಯೆ ಇತ್ತು. ಇನ್ನೊಂದರ ಗೂಡಿಗಿಂತ ತನ್ನ ಗೂಡು ಚಿಕ್ಕದಾಗಿರಬಾರದೆಂದು ಪ್ರತಿಯೊಂದೂ ಅಪೇಕ್ಷಿಸುತ್ತಿತ್ತು.

ಅವೆರಡೂ ಒಂದನ್ನೊಂದು ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದುವು.

ಎರಡೂ ನೆರೆಹೊರೆಯಲ್ಲೇ ಇದ್ದವು. ಮತ್ತು ಅವರ ಮೇಲೊಂದು ದೋಷಾರೋಪಣೆ ಮಾಡುತ್ತಿದ್ದವು.

ಸೂರ್ಯೋದಯ ಕಾಲಕ್ಕೆ ಸೂರ್ಯನ ಬಿಸಿಲು ತನ್ನ ಗೂಡಿನ ಮೇಲೆ ಬೀಳುತ್ತದೆಂಬುದೇ ಕೆಂಪು ಹಕ್ಕಿಯ ತಕರಾರಾಗಿತ್ತು.

ಸೂರ್ಯಾಸ್ತಮ ಕಾಲಕ್ಕೆ ತನ್ನ ಗೂಡಿನ ಮೇಲೆ ಬಿಸಿಲು ಬೀಳುತ್ತದೆಂಬುದು ಹಸಿರು ಹಕ್ಕಿಯ ದೂರಾಗಿತ್ತು.

ಪರಸ್ಪರ ಜಗಳದಲ್ಲಿ ಮತ್ತು ಇನ್ನೊಂದಕ್ಕಿಂತ ನಾನು ದೊಡ್ಡದು ಎಂದು ತೋರಿಸಿಕೊಳ್ಳುವ ಭರದಲ್ಲಿ ಎರಡೂ ಹಕ್ಕಿಗಳು ತಮ್ಮ ತಮ್ಮ ಗೂಡು ಬೆಳೆಸುತ್ತಲೇ ನಡೆದವು.

ಕೊನೆಗೆ ಮರದ ಎಲೆಗಳೆಲ್ಲ ಹುಲ್ಲಿನಿಂದ ಮುಚ್ಚಿ ಹೋಗಿ ಮರದಲ್ಲಿ ಎಲೆಗಳೇ ಕಾಣದಾದವು.

ಒಂದು ದಿನ ಒಂದು ಆಕಳು ಆ ಮರದ ಹತ್ತಿರ ಬಂತು. ಅದು ಬಹಳ ಹಸಿದಿತ್ತು. ಅದು ತನ್ನ ಹೊಟ್ಟೆಗೆ ಸ್ವಲ್ಪ ಹುಲ್ಲು ಬೇಡಿತು. ಅದು ಹೇಳಿತು. 'ನಿಮ್ಮ ಹತ್ತಿರ ಇಷ್ಟೆಲ್ಲ ಹುಲ್ಲು ಇದೆ. ಇದರಲ್ಲಿ ಸ್ವಲ್ಪ ನನಗೆ ಕೊಟ್ಟರೆ ನನ್ನ ಹೊಟ್ಟೆ ತುಂಬೀತು. ಹುಲ್ಲು ತಿನ್ನದೆ ಬಹಳ ದಿನವಾಯಿತು. ನಮ್ಮ ನಾಡಿನಲ್ಲಿ ಈ ವರ್ಷ ಮಳೆ ಆಗದ್ದರಿಂದ ಹುಲ್ಲು ಕೂಡ ಬೆಳೆದಿಲ್ಲ. ನಿಮ್ಮಲ್ಲಿ ಅನಾವಶ್ಯಕವಾದ ಹುಲ್ಲು ಬಹಳವಿದೆ. ಅದರಲ್ಲೇ ಸ್ವಲ್ಪ ಕೊಟ್ಟರೆ ನನ್ನ ಮೇಲೆ ಉಪಕಾರವನ್ನು ಮಾಡಿದಂತೆ ಆದೀತು."

ಒಮ್ಮೆ ಕೆಂಪು ಹಕ್ಕಿಯ ಹತ್ತಿರ, ಇನ್ನೊಮ್ಮೆ ಹಸಿರು ಹಕ್ಕಿಯ ಹತ್ತಿರ ಹೀಗೆ ಎಷ್ಟೋ ಸರತಿ ಅದು ಎಡತಾಕಿತು. ಆದರೆ ಆ ಹಸಿದಿದ್ದ ಆಕಳಿಗೆ ಒಂದು ಕಡ್ಡಿ ಹುಲ್ಲು ಸಹ ಕೊಡುವ ಉದಾರತೆ ಯಾರೂ ಮಾಡಲಿಲ್ಲ. ಹಾಗೆ ಕೊಟ್ಟದ್ದೇ ಆದರೆ ಇನ್ನೊಂದರ ಗೂಡಿಗಿಂತ ತನ್ನಗೂಡು ಸಣ್ಣದಾದೀತಲ್ಲ! ಎಂಬ ಭೀತಿ ಈ ಎರಡೂ ಹಕ್ಕಿಗಳಿಗಿತ್ತು!

ಆದರೆ ಅದೇ ರಾತ್ರಿ ಬಿರುಗಾಳಿ ಬೀಸಿತು. ಗುಡುಗು ಮಿಂಚು ಆರಂಭವಾಯಿತು. ಮಿಂಚಿನ ಕಿಡಿಯೊಂದು ಬಿದ್ದು ಕೆಂಪು ಹಕ್ಕಿಯ ಗೂಡು ಸುಟ್ಟು ಹೋಯಿತು.

ಇದು ಹಸಿರು ಹಕ್ಕಿಯ ಕಿಡಿಗೇಡಿತನವೇ ಇರಬೇಕು ಎಂದು ಆ ಕೆಂಪು ಹಕ್ಕಿಯು ತಿಳಿಯಿತು. ಮತ್ತು ಅದರ ಸೇಡು ತೀರಿಸಲು ಅದು ಹಸಿರು ಹಕ್ಕಿಯ ಗೂಡಿಗೂ ಬೆಂಕಿ ಇಟ್ಟಿತು. ಎರಡೂ ಹಕ್ಕಿಗಳ ಗೂಡು ಸುಟ್ಟು ಹೋದವು. ಹಕ್ಕಿಗಳೂ ಉಪವಾಸವಿರಬೇಕಾಯಿತು.

---

**ಸೂಚನೆ**

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಅವು ಚಿಕ್ಕದಿರಬೇಕಲ್ಲದೆ ಕಾಲು ತಾವು ಸೃಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.

— ಸಂ. ಪ.

# ನಮ್ಮ ಭಾರತದ ಸೀಮಾರೇಖೆಗಳು

(೩ನೇ ಪುಟದಿಂದ)

ಏಶ್ಯಾ ಮೈನರ್ ನಿವಾಸಿಗಳ ಮೇಲೆ ವೈದಿಕ ಸಂಸ್ಕೃತಿಯು ಪ್ರಭಾವ ಬೀರಿದ್ದಿರಲೇಬೇಕು; ಹಾಗೂ ಅವನ್ನವರು ಗೌರವ ಭಾವದಿಂದ ಕಾಣುತ್ತಿದ್ದರು. ಅವರೂ ಅದು ವೈದಿಕ ಸಂಸ್ಕೃತಿಯನ್ನು ವಿರೋಧಿಸುತ್ತಿತ್ತು. ಈ ರೀತಿ ಭಾರತ ಹಾಗೂ ಮೆಸೊಪೊಟಾಮಿಯಾವನ್ನು ಉತ್ತರದಿಂದ ದಕ್ಷಿಣದ ವರೆಗೆ ವಿಭಜಿಸುವ ರೇಖೆಯೇ ಭಾರತದ ಪ್ರಾಚೀನ ಪಶ್ಚಿಮದ ಎಲ್ಲೆ ಎಂಬುದಾಗಿ ಪರಿಗಣಿಸಲಾಗಿತ್ತು.

ಕ್ರಿ. ಪೂ. ಪ್ರಥಮ ಸಹಸ್ರಾಬ್ದಿಯಲ್ಲಿ ದಾರಿಯುಸನು ಪಾರ್ಸಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅಲ್ಲಿ ಭಾರತ ಹಾಗೂ ಪರ್ಶಿಯಾದ ಎಲ್ಲೆ ಗುರುತಿಸಲ್ಪಟ್ಟಿರಬೇಕು. ಈ ರೀತಿ ಭಾರತೀಯ ಸಾಮ್ರಾಜ್ಯವು ಸ್ವಲ್ಪ ದೂರದ ವರೆಗೆ ಹಬ್ಬಿಕೊಂಡಿತ್ತು. ಪೂರ್ವ ಭಾಗವು ಎಂದೂ ಪಾರ್ಸಿ ಸಾಮ್ರಾಜ್ಯದ ಅಂಗವಾಗಿರಲಿಲ್ಲ. ಪಾರ್ಸಿ ಸಾಮ್ರಾಜ್ಯದಲ್ಲಿ ಯಾವುದಾದರೂ ಭಾರತೀಯ ಭಾಗವು ಇದ್ದಿತ್ತೆನ್ನುವವಾದಕ್ಕೆ ಅದು ಭಾರತದ ಪಶ್ಚಿಮ ಸೀಮೆಯ ಸಮೀಪದ ಸ್ಥಳವಾಗಿತ್ತೇ ವಿನಃ ಭಾರತೀಯ ಸಾಮ್ರಾಜ್ಯಕ್ಕೊಳಪಟ್ಟದ್ದ ಅಂಗವಲ್ಲ. ಭಾರತೀಯ ಪ್ರದೇಶದಲ್ಲಿ, ಭಾರತೀಯ ಸಾಮ್ರಾಜ್ಯದ ಸ್ವಾಧೀನದಲ್ಲಿ ಪಾರ್ಸಿ ಪ್ರದೇಶ ಇಂತಿತ್ತೆಂಬ ಉಲ್ಲೇಖ ದೊರಕುತ್ತದೆ.

ದಾರಿಯುಸನ ಆಳ್ವಿಕೆಯ ಕಾಲದಲ್ಲಿದ್ದ ಭಾರತದಲ್ಲಿ ಮಗಧ, ಕೋಸಲ, ವತ್ಸ ಹಾಗೂ ಪ್ರದ್ಯೋತ ವಂಶದ ವೀರ ಯೋಧರು ಅವನ ವಿಸ್ತಾರವಾದೀ ಇರಾದೆಗೆ ತಡೆ ಹಾಕಿದ್ದರು. ಸಿಕಂದರನು ಒಂದಾಗ ಕೂಡಾ ಅವನು ಉತ್ತರ ಆಫ್ರಿಕಾ ಹಾಗೂ ಪಶ್ಚಿಮ ಏಶ್ಯವನ್ನು ಬಹಳ ಸುಲಭದಲ್ಲಿ ಗೆಲ್ಲುತ್ತ ಬಂದಿದ್ದನು. ಭಾರತ ಭೂಮಿಯ ಮೇಲೆ ಕಾಲಿಟ್ಟೊಡನೆಯೇ ಅವನ ಮಾನಭಂಗವಾಯಿತು. ಅಲ್ಲಿ ಅವನು ಪುರುಷೋತ್ತಮ ರಾಜ್ಯದಲ್ಲಿ ಕಾಲಿಟ್ಟೊಡನೆ ಭೀಷಣ ವಿರೋಧವನ್ನು ಎದುರಿಸಬೇಕಾಗಿ ಬಂತು. ಪಾರ್ಸಿ ಸಾಮ್ರಾಜ್ಯವು ಸಿಂಧೂ ನದಿಯ ವರೆಗೆ ತಲುಪಿದ್ದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಭಾರತೀಯ ವೀರರು ಆಕ್ರಮಣದಿಂದ ಪವಿತ್ರ ಭಾರತೀಯ ಗಡಿಗಳನ್ನು ರಕ್ಷಿಸುತ್ತಿದ್ದರು. ಸಿಕಂದರನ ಉತ್ತರಾಧಿಕಾರಿ ಸೆಲ್ಯೂಕಸ ನಿಕಟರನು ಭಾರತದ ವಿರುದ್ಧ ತನ್ನ ಶಕ್ತಿ ಪರೀಕ್ಷೆ ಮಾಡಿಕೊಳ್ಳಲು ಬಂದಾಗ ಚಂದ್ರಗುಪ್ತ ಮೌರ್ಯನ ಕೈಯಿಂದ ತನ್ನ ಮುಖಕ್ಕೆ ಕರಿ ಹಚ್ಚಿಸಿಕೊಂಡು ಹಿಂತಿರುಗಬೇಕಾಯಿತಲ್ಲದೆ, ಅವನ ಪ್ರಭುತ್ವವನ್ನು ಸ್ವೀಕರಿಸಿ ಮೆಗಸ್ತನೀಸನೆಂಬ ರಾಜದೂತನನ್ನು ಕಳುಹಿಸಿಕೊಡಬೇಕಾಯಿತು. ಇದು ಉಲ್ಲೇಖನೀಯ ವಿಷಯವಿದೆ.

ಪುರಾಣಗಳಲ್ಲಿ ದಿಗ್ವಿಜಯ ಪದ ಸಿಗುತ್ತದೆ. ಅದರ ಅರ್ಥವಿದೆ— ವಿಶ್ವದ ಮೇಲೆ ವಿಜಯ. ಹಾಗಿದ್ದರೂ ಆದ್ಯಾವ ಭಾರತೀಯ ಸಾಮ್ರಾಟನೂ ವಿದೇಶೀ ಭೂಮಿಯ ಮೇಲೆ ಆಕ್ರಮಣ ನಡೆಸಿರುವದಿಲ್ಲ. ಭಾರತೀಯ ವೀರರು ಎಲ್ಲರ ಸ್ವಾತಂತ್ರ್ಯವನ್ನೂ ಗೌರವಿಸುತ್ತಿದ್ದರು

'ರಘುವಂಶ'ದಲ್ಲಿ ಮಹಾ ಕವಿ ಕಾಳಿದಾಸನು ದಿಗ್ವಿಜಯದ ಕುರಿತು ವರ್ಣಿಸಿರುವನು. ಅದರಲ್ಲಿ ರಘುವು ಭೂ-ಯಾತ್ರೆ ಮಾಡಿರುವ ವಿಷಯವೂ ಇದೆ. ಇದರಿಂದ ರಘುವು ಭಾರತದ ಉತ್ತರ ಹಾಗೂ ಪಶ್ಚಿಮ ಸೀಮೆಗಳ ವರೆಗೂ ತನ್ನ ವಿಜಯ ವೈಜಯಂತಿಯನ್ನು ಹಾರಿಸಿದ್ದನೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ವಿದೇಶೀ ನೆಲದ ಮೇಲೆ ಆಕ್ರಮಣ ಮಾಡಿಲ್ಲವೆಂಬುದು ಗೊತ್ತಾಗುತ್ತದೆ. ಅವನು ಪಾರ್ಸಿ ಸಾಮ್ರಾಜ್ಯ-ವರೆಗೂ ಭಾರತೀಯ ಸಾಮ್ರಾಜ್ಯದ ಧ್ವಜವನ್ನು ಹಾರಿಸಿ ಹಿಂತಿರುಗಿರುವನು. ಸಿಂಧೂನದಿ ಮುಖಕ್ಕಿಂತ ಬಹಳ ದೂರದಲ್ಲಿ ಭಾರತದ ಗಡಿ ಇತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರಘುವು ಉತ್ತರದಲ್ಲಿ ಹೂಣರನ್ನು ಸೋಲಿಸಿರುವನು; ಅಲ್ಲದೆ ಕಾಂಬೋಜವನ್ನು ಕೂಡಾ ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡಿದ್ದನು. ಅವನು ಆ ರೀತಿ ಹಿಮಾಲಯ ಸೀಮೆಯನ್ನು ಭದ್ರಪಡಿಸಿದ್ದನು. ಭಾರತದ ಉತ್ತರ ಎಲ್ಲೆಯು ಹಿಮಾಲಯ ಪರ್ವತ ಮಾಲೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹೀಗಿರುವದರಿಂದ ಭಾರತೀಯ ವೀರನು ಸೀಮೋಲ್ಲಂಘನೆಗೈದು ವಿದೇಶೀ ಭೂಭಾಗದ ಮೇಲೆ ಆಕ್ರಮಣ ನಡೆಸಿರುವದಿಲ್ಲ. ಪೂರ್ವದಲ್ಲಿ ಪ್ರಾಗ್ಜ್ಯೋತಿಷ ಅಥವಾ ಕಾಮ ರೂಪವು ಇದೆ. ಅರಬ್ಬಿ ಸಾಗರದಿಂದ [ಸಿಂಧೂ ಸಾಗರ ಹಿಂದೂ ಸಾಗರದ ಜಲ-ಸೀಮೆಯು ಭಾರತೀಯ ಸಾಮ್ರಾಜ್ಯದ ಪಶ್ಚಿಮ ಹಾಗೂ ದಕ್ಷಿಣದ ಎಲ್ಲೆಯಾಗಿದ್ದವು.

ಭಾರತದ ವಾಯುವ್ಯ ಗಡಿಯು ಸ್ವಲ್ಪ ಮಟ್ಟಿಗೆ ಬದಲಾವಣೆಗೊಳಗಾಗುತ್ತಿತ್ತು. ವೈದಿಕ ಕಾಲದಿಂದ ಮೊಗಲ ಕಾಲದ ವರೆಗೂ ಕಾಬೂಲು ಹಾಗೂ ಗಾಂಧಾರವು ಭಾರತೀಯ ಸಾಮ್ರಾಜ್ಯದಲ್ಲಿ ಸೇರಿಕೊಂಡಿದ್ದವು. ಅನಂತರ ಪ್ರಥಮ ಸಹಸ್ರಾಬ್ದಿಯ ಅಂತ್ಯದಲ್ಲಿ ಗಜನಿ ಮುಂತಾದ ಕೆಲ ಪ್ರದೇಶಗಳು ಭಾರತೀಯ ಸಾಮ್ರಾಜ್ಯದಿಂದ ಬೇರ್ಪಟ್ಟವು. ಕುಷಾಣರು ಹಾಗೂ ಶಕರು ಭಾರತದ ಮೇಲೆ ಆಕ್ರಮಣ ನಡೆಸಿದಾಗ ಈ ಪ್ರದೇಶಗಳು ನಮ್ಮ ಕೈಬಿಟ್ಟು ಹೋಗಿರಬಹುದು.

ಭಾರತ ರಾಷ್ಟ್ರದ ದೀರ್ಘ ಕಾಲದ ಇತಿಹಾಸದ ಸಿಂಹಾವಲೋಕನ ಮಾಡಿದಾಗ ಒಂದು ವಿಚಿತ್ರ ಸತ್ಯಾಂಶ ಪ್ರಕಟವಾಗುತ್ತದೆ-ವಿಭಜನೆಯ ಕಾಲದ ವರೆಗೆ ಭಾರತದ ಎಲ್ಲೆಯು ಸ್ಥಿರವಾಗಿತ್ತು. ಪಿದರ್‌ಸಿಯ ಲೇಖನದ ಪ್ರಕಾರ ಏಶ್ಯಾ ಮೈನರ್ [ರೋಮ್] ಹಾಗೂ ಚೈನಾವು ಪಾರ್ಸಿ ಸಾಮ್ರಾಜ್ಯದಲ್ಲಿ ಸೇರಿ ಕೊಂಡಿತ್ತೆಂದಿದೆ. ಅಲ್ಲಿ ಭಾರತದ ಹೆಸರು ಬಂದಿರುವದಿಲ್ಲ. ಭಾರತೀಯ ಸಾಹಿತ್ಯದಲ್ಲಿ ಯವನರು ಪಾರ್ಸಿ ಸಾಮ್ರಾಜ್ಯವನ್ನು ಅಧೀನಗೊಳಿಸಿಕೊಂಡಿರುವ ವಿಷಯವಿದೆ. 'ಕಾದಂಬರೀ'ಯಲ್ಲಿ ಬಾಣ ಭಟ್ಟನು ಒಂದು ವಿಷಯವನ್ನು ಬರೆದಿಟ್ಟಿರುವನು—ಆಗಿದ್ದ ರಾಜನು ತನ್ನ ಮಗನಿಗೆ ಇಂದ್ರಾಯುಧವೆಂಬ ಕುದುರೆಯನ್ನು ಕೊಟ್ಟಿದ್ದನು. ಅದು ಅವನಿಗೆ ಪಾರ್ಸಿ ಸಾಮ್ರಾಜ್ಯದಿಂದ ಕಾಣಿಕೆಯ ರೂಪದಲ್ಲಿ ದೊರಕಿತ್ತು. ಆ ರಾಜನು ಭಾರತೀಯ ಸಾಮ್ರಾಟನ ಸ್ನೇಹಿತನಾಗಿದ್ದಿರಬಹುದು; ಅಥವಾ ಭಾರತೀಯ ಸಾಮ್ರಾಜ್ಯಕ್ಕೆ ಸೇರಿದ್ದ ಪಾರ್ಸಿ ಪ್ರದೇಶದಲ್ಲಿದ್ದ ಸಾಮಂತನಾಗಿದ್ದಿರಬಹುದು.

ಯವನಾನ್ ಹಾಗೂ ರೋಮ್ ಸಾಮ್ರಾಜ್ಯಗಳು ಕೆಲವು ಶತಮಾನಗಳ ವರೆಗೆ ತಮ್ಮ ಸೀಮೆಯನ್ನು ಸುರಕ್ಷಿತವಾಗಿಟ್ಟುಕೊಂಡಿದ್ದವು. ಆದೆಂದೂ ಯುರೋಪು ಒಂದೇ ರಾಷ್ಟ್ರವಾಗಿದ್ದಿರಲಿಲ್ಲ. ಏಶ್ಯಾ ದೇಶಗಳಲ್ಲಿ ಕೂಡಾ ಗಡಿಗಳು ಬದಲಾಗುತ್ತಿದ್ದರೂ ಭಾರತವೆ ಅಖಂಡವಾಗಿದ್ದು ಅದರ ಸೀಮೆಗಳಲ್ಲಿ ಹೆಸರಿಗೆ ಮಾತ್ರ ಪರಿವರ್ತನೆ ಆಗುತ್ತಿತ್ತು. ಭಾರತೀಯ ಸೀಮೆಯ ಸ್ಥಿರತೆಗೆ ಕಾರಣವೆಂದರೆ ಭಾರತೀಯರ ವೀರತೆ, ರಾಷ್ಟ್ರೀಯ ಏಕತೆ ಸ್ವಾತಂತ್ರ್ಯದ ಮೇಲಣ ಗೌರವವೇ ಇದೆ. ಅದೆಂದೂ ಅನ್ಯರ ಆಳ್ವಿಕೆಯನ್ನು ಮಾನ್ಯ ಮಾಡಿರುವದಿಲ್ಲ. ಮಾನವೀಯ ಸ್ವಾತಂತ್ರ್ಯಕ್ಕೆ ಮಾನ್ಯತೆಯನ್ನು ಪ್ರಕಟಿಸಿರುವದರಲ್ಲಿ ಭಾರತವು ಏಕಮೇವ ಆದರ್ಶ ರಾಷ್ಟ್ರವಿದೆ. ಭಾರತವದೆಂದೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿರುವದಿಲ್ಲ. ಅದರ ಆಶೆಯು ಎಂದೂ ಸಾಮ್ರಾಜ್ಯವಾದಿಯಾಗಿದ್ದಿರಲಿಲ್ಲ. ಯಾವ ರಾಷ್ಟ್ರದ ಇತಿಹಾಸವೂ ಅಷ್ಟು ಪಾವನ ಇರುವದಿಲ್ಲ. ಪರ್ಶಿಯಾ ಹಾಗೂ ರೋಮ್ ಸಾಮ್ರಾಜ್ಯಗಳನ್ನು ಪಾದಾಕ್ರಾಂತಗೊಳಿಸಿಕೊಂಡ ಹೂಣರು ಭಾರತದಿಂದ ಮುಖ ತಿರುಗಿಸಿಕೊಳ್ಳಬೇಕಾಯಿತು. ಅರಬ್ಬರೂ ಅವಕಾಶವನ್ನು ಕಳೆದುಕೊಂಡಿರುವದಿಲ್ಲ. ಅವರೂ ಅವಸಾನವನ್ನೇ ಕಾಣಬೇಕಾಯಿತು.

ಇದು ಡಾ| ಸಿ. ಕುಜ್ಞಣ್ಣ ರಾಜಾ ಅವರ ದೃಢ ಅಭಿಪ್ರಾಯವಿದೆ. ಇದರಿಂದ ನಾವೊಂದು ನಿಶ್ಚಯಕ್ಕೆ ಬರಲು ಸಾಧ್ಯವಿದೆ—ಭಾರತ ಎಂದೂ ಆಕ್ರಮಣ ನಡೆಸಿರುವದಿಲ್ಲ, ಹಾಗೆಯೇ, ಆಕ್ರಮಣವನ್ನು ಸಹಿಸಿಕೊಂಡಿರುವದೂ ಇಲ್ಲ. ಭಾರತದ ಎಲ್ಲೆಯು ನಿಶ್ಚಿತವಿದೆ.

ಕಮ್ಯೂನಿಸ್ಟರಿಗೆ ಇದೊಂದು ಕನ್ನಡಿಯಂತಿದೆ. ಅವರು ಇದರಲ್ಲಿ ಚೆನ್ನಾಗಿ ಯೋಚನೆಗಳ ಮುಖವನ್ನು ನೋಡಿಕೊಳ್ಳಬೇಕು. ಆಗ ಗೊತ್ತಾದೀತು—ಚೈನಾ ಆಕ್ರಮಣ ನಡೆಸಿದೆ ಎನ್ನುವವರು ಅನಕ್ಷರಸ್ಥರೋ, ಅಕ್ಷರಸ್ಥರೋ ಎಂಬುದು. ಅವರು ಚೈನಿ ಅಥವಾ ರಷ್ಯನ್ ಅನಕ್ಷರಸ್ಥರಿದ್ದಿರಬಹುದು. ಆದರೆ ಭಾರತೀಯ ಭಾಷೆಗಳ ಅನಕ್ಷರಸ್ಥರಲ್ಲ. ಅವರಿಗೆ ಇದೀಗ ಗೊತ್ತು ತನ್ನ ಮಾತೃಭೂಮಿಯ ಎಲ್ಲೆ ಎಲ್ಲಿದೆ ಎಂಬುದು. ಅದನ್ನು ಅತಿಕ್ರಮಿಸಿ ಇತ್ತ ಬಂದಿರುವ ಚೈನಿ ಕಮ್ಯೂನಿಸ್ಟರ ಆಕ್ರಮಣವನ್ನು ಅವರೆಂದೂ ಸಹಿಸಿಕೊಳ್ಳಲಾರರು. 'ಶಾಂತಿ'ಯ ಹೆಸರಿನಲ್ಲಿ ನಡೆಯುವ ಆದ್ಯಾವ ನಾಟಕದಿಂದಲೂ ಅವರು ಮೈಮರೆಯಲಾರರು. ಚೈನಿ ಕಮ್ಯೂನಿಸ್ಟರಿಗೆ ಸ್ನೇಹ ಹಸ್ತವನ್ನಿತ್ತು ಸುಸ್ವಾಗತವನ್ನು ಬಯಸುತ್ತಿರುವ ಕಮ್ಯೂನಿಸ್ಟರ ಕುತಂತ್ರವೂ ಜನತೆಗೆ ಗೊತ್ತಾಗಿರುತ್ತದೆ. ಅವರಿಗೀಗ ಮುಖ ಮುಚ್ಚಿಕೊಳ್ಳುವದೂ ಕಷ್ಟವಾಗಿರುತ್ತದೆ. ಕೆಲವು ಮುಖಂಡರುಗಳು ತಲೆತಪ್ಪಿಸಿಕೊಳ್ಳಲು ಅಧಿಕಾರ ಹಾಗೂ ಮುಖಂಡರ ಪದವಿಯಿಂದ ಜಾರುತ್ತಿದ್ದಾರೆ.

ಭಾರತಕ್ಕೆ ಚೈನಾದ ಮೇಲೆ ಆಕ್ರಮಣ ನಡೆಸಲು ಇಷ್ಟ ಇರುವದಿಲ್ಲ. ಆದರೆ ಚೈನಿಯರಿಂದ ನಡೆದಿರುವ ಆಕ್ರಮಣವನ್ನು ಅವರು ಸಹಿಸಿಕೊಳ್ಳಲಾರರು.

— ಶಿವಶಂಕರ. ಮುದ್ರಾಡಿ.





ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡವಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

**ಶ್ರೀ ಕೃಷ್ಣಾ ಜ್ಯುವೆಲರಿ ವರ್ಕ್ಸ್**

ತೆಂಕಪೇಟೆ — ಉಡುಪಿ.

ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.

ಫೋನ್ ನಂಬ್ರ: 66



**ಕುಮಾರಿ ಬಿಲ್ಲೆಗಳು**

(ರಿಜಿಸ್ಟರ್ಡ್ Regd.)

ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ।

ಟ್ಯೂಬ್ 1ರ ಸಾಮಾನ್ಯ ರೂ. 4/-. ಮಧ್ಯಮ ರೂ. 6/-. ಉತ್ತಮ ರೂ. 9/-.

**P. Devee & Co.** (N. J.) Calcutta—40

**ಶಾಲೆಗಳಿಗೆ ಬೇಕಾಗುವ**
**ಯಾವತ್ತೂ ಫಾರ್ಮುಗಳೂ**
**ಹಾಜರಿ ರಿಜಿಸ್ಟರುಗಳೂ ಸಿಗುತ್ತವೆ**
**ನವಯುಗ ಪ್ರೆಸ್ ಉಡುಪಿ.**

ಭಗವಾನ ಶ್ರೀಕೃಷ್ಣ ಪ್ರಣೀತ

# ಯುದ್ಧ ಯೋಗ

ಜೀವನವೇ ಒಂದು ಹೋರಾಟವೆಂದು ಬಲ್ಲವರು ಹೇಳುತ್ತಾರೆ. ವಿಚಾರ ಪಂತರೆಲ್ಲ ಈ ಮಾತನ್ನು ಒಪ್ಪಿಕೊಂಡಿದ್ದಾರೆ ಹೋರಾಟ ಹಿಂಸಾತ್ಮಕವಾದುದೇ ಆಗಿರಲಿ ಅಹಿಂಸಾತ್ಮಕವಾದುದೇ ಆಗಿರಲಿ ಜೀವನಕ್ಕಾಗಿ ಪ್ರತಿಯೊಬ್ಬನೂ ಹೋರಾಡಲೇ ಬೇಕು. ಹೋರಾಟವಿಲ್ಲದೆ ಜೀವನವೇ ಸಾಗದೆಂದು ಹೇಳಬಹುದು. ಶ್ರೀಕೃಷ್ಣ ಪರಮಾತ್ಮನಾದರೂ ಭಗವದ್ಗೀತೆಯಲ್ಲಿ ಅರ್ಜುನನಿಗೆ ಇದೇ ಮಾತನ್ನೇ ಹೇಳಿದ್ದಾನೆ. ಶ್ರೀ ಶಂಕರಾಚಾರ್ಯರಿಂದ ಮೊದಲ್ಗೊಂಡು ಮಹಾತ್ಮಾ ಗಾಂಧೀಜಿಯವರೆಗೆ ಅನೇಕ ಮಹಾ ಪುರುಷರು ಭಗವದ್ಗೀತೆಗೆ ಟೀಕೆ-ಟಿಪ್ಪಣಿಗಳನ್ನು ಬರೆದಿದ್ದರೂ, ಅವರಾರೂ ಗೀತೆಯಲ್ಲಿ ಯುದ್ಧಯೋಗವನ್ನು ಹೇಳಿದೆಯೆಂಬ ಮಾತನ್ನು ನಿರಾಕರಿಸಿಲ್ಲ. ಸ್ವಧರ್ಮಾಚರಣೆಗೆ ಗೀತೆಯಲ್ಲಿ ಮಹತ್ವದ ಸ್ಥಾನವುಂಟು. ಯುದ್ಧವು ಕ್ಷತ್ರಿಯರ ಸ್ವಧರ್ಮವಾದ್ದರಿಂದ ಅದು ಅನಿವಾರ್ಯವೆ

### ಅಕೀರ್ತಿಕರಮರ್ಜುನ

ಸ್ವಜನ ಮೋಹದಿಂದ ಅರ್ಜುನ ಕರ್ತವ್ಯ ಚ್ಯುತನಾಗಿ ಯುದ್ಧಮಾಡಲು ನಿರಾಕರಿಸಿದ. ಆದರೆ ಯುದ್ಧ ಅತನ ಸ್ವಧರ್ಮವಾಗಿತ್ತು. ಸ್ವಧರ್ಮವನ್ನು ಮಾಡದೆ ಹೋದರೆ ಅದರಿಂದ ಅಪಕೀರ್ತಿಯು ಬರುವದಲ್ಲದೆ ಕೀರ್ತಿ ಬರಲಾರದು. ಮಹಾಪುರುಷರು ಅಪಕೀರ್ತಿಗೆ ಗುರಿಯಾಗುವುದೆಂದರೆ ಮರಣವನ್ನು ಹೊಂದಿದಂತೆಯೆ ಸರಿ. ಅದ್ದರಿಂದ ಶ್ರೀ ಕೃಷ್ಣನು ಅಕೀರ್ತಿಕರವಾದ ವಿಚಾರವನ್ನು ಬಿಟ್ಟು ಯುದ್ಧ ಪ್ರವೃತ್ತನಾಗಲು ಅರ್ಜುನನನ್ನು ಕೇಳಿಕೊಂಡಿದ್ದಾನೆ

### ತಸ್ಮಾದುತ್ತಿಷ್ಠ ಕೌಂತೇಯ

ಯುದ್ಧಮಾಡಲಾರದೆ ಅಪಕೀರ್ತಿಯುನ್ನು ಹೊಂದುವದಕ್ಕಿಂತಲೂ ಯುದ್ಧ ಮಾಡಿ ರಣದಲ್ಲಿ ಮಡಿಯುವದು ಸಾವಿರ ಪಾಲು ಮೇಲು. ಜೀವಂತ ಶವವಾಗಿ ಜಗತ್ತಿನಲ್ಲಿ ವಾಸಿಸುವದಕ್ಕಿಂತಲೂ ಯುದ್ಧಮಾಡಿ ರಣದಲ್ಲಿ ಮಡಿದರೆ ಸ್ವರ್ಗವಾದರೂ ಸಿಗುತ್ತದೆ ಯುದ್ಧದಲ್ಲಿ ಜಯಶಾಲಿಯಾದರೆ ರಾಜ್ಯವನ್ನು ಭೋಗಿಸಲು ಸಿಗುತ್ತದೆ ಅದ್ದರಿಂದ ದೃಢ ನಿಶ್ಚಯದಿಂದ ಯುದ್ಧ ಮಾಡಲು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶ ಮಾಡಿದ್ದಾನೆ.

### ತತೋ ಯುದ್ಧಾಯ ಯುಜ್ಯಸ್ವ

ನಮಗೆ ಸ್ವರ್ಗವೂ ಬೇಡ, ರಾಜ್ಯವೂ ಬೇಡ ಎಂದು ಅನ್ನಬಾರದು. ಆದರೆ, ಯುದ್ಧವು ಕ್ಷತ್ರಿಯರ, ಇಂದಿನ ಸೈನಿಕರ ರಾಜ್ಯ ರಕ್ಷಕರ ಸ್ವಧರ್ಮವಾದ್ದರಿಂದ, ಯಾವ ಇಚ್ಛೆ ಇಲ್ಲದಿದ್ದರೂ ನಿರಪೇಕ್ಷ ಬುದ್ಧಿಯಿಂದಲಾದರೂ ಅದನ್ನು ಮಾಡಲೇ ಬೇಕು. ಅದರಿಂದ ಸುಖವಾಗುತ್ತದೊ, ದುಃಖವಾಗುತ್ತದೊ; ಅಥವಾ ಲಾಭವಾಗುತ್ತದೊ, ಹಾನಿಯಾಗುತ್ತದೊ ಎಂಬುದನ್ನು ವಿಚಾರಮಾಡದೆ ಯುದ್ಧಕ್ಕಾಗಿ ಯುದ್ಧ ಮಾಡೆಂದು ಶ್ರೀಕೃಷ್ಣನು ಹೇಳುತ್ತಾನೆ.

### ನಿಮಿತ್ತಮಾತ್ರಂ ಭವ

ಅರ್ಜುನನು ಯಾವುದಕ್ಕೂ ಜಗ್ಗದಿರಲು, ಅತನಿಗೆ ವಿಶ್ವ ರೂಪವನ್ನು ತೋರಿಸಿ ಶ್ರೀಕೃಷ್ಣನು 'ಈಗಾಗಲೇ ನಾನು ಕೌರವರು, ಕೌರವರ ಸೇನೆ, ಭೀಷ್ಮ ದ್ರೋಣ ಮೊದಲಾದವರನ್ನೆಲ್ಲಾ ಕೊಂದು ಬಿಟ್ಟಿದ್ದೇನೆ ನೀನು ಅವರ ಕೊಲೆಗೆ ನಿಮಿತ್ತಮಾತ್ರನಾಗು ಅದಕ್ಕಾಗಿ ಯುದ್ಧಮಾಡೆಂದು ಹೇಳುತ್ತಾನೆ. ಇದರರ್ಥ ನಾವು ಪರಮಾತ್ಮನ ಕೈಯೊಳಗಿನ ಸಾಧನವಾಗಿದ್ದು, ಅತನು ನಮಗೆ ನಿಯಮಿಸಿಕೊಟ್ಟ ಕೆಲಸವನ್ನು ನಾವು ಮಾಡಲೇ ಬೇಕು. ಅತನು ನಮಗೆ ನಿಯಮಿಸಿಕೊಟ್ಟ ಕೆಲಸವೇ ನಮ್ಮ ಸ್ವಧರ್ಮ. ಇಂದು ಚೀನಾದ ಆಕ್ರಮಣವನ್ನು ಕಿತ್ತೊಗೆಯಲು ಸರ್ವ ಶಕ್ತಿಯಿಂದಲೂ ಹೋರಾಡುವದೇ ಭಾರತೀಯರ ಸ್ವಧರ್ಮ.

### ಮಿಥ್ಯೈಷ ವ್ಯವಸಾಯಸ್ತೇ

ಅಹಂಕಾರದಿಂದಾಗಲೀ ಅಥವಾ ಅಂಜಿಕೆಯಿಂದಾಗಲೀ ನಾನು ಯುದ್ಧಮಾಡಲಾರೆನೆಂದು ಹೇಳುವದು ಮಿಥ್ಯಾವಾದವಾಗುತ್ತದೆ. ಯಾಕೆಂದರೆ ಯುದ್ಧವು ಕ್ಷತ್ರಿಯರ ಸ್ವಧರ್ಮ ಮತ್ತು ಸ್ವಭಾವವಾದ್ದರಿಂದ ಅದು ಅವರನ್ನು ಒತ್ತಾಯದಿಂದಲಾದರೂ ಯುದ್ಧದಲ್ಲಿ ನೂಕುತ್ತದೆ. ಯುದ್ಧ ಮಾಡುವ ಇಚ್ಛೆಯಿಲ್ಲದಿದ್ದರೂ ಚೀನೀಯರ ದೌರ್ಜನ್ಯ; ಅವರ ಆಕ್ರಮಣ ಭಾರತೀಯರನ್ನು ಯುದ್ಧದಲ್ಲಿ ನೂಕಿತು.

ಹೀಗೆ ಯುದ್ಧ ಅನಿವಾರ್ಯವಾದ್ದರಿಂದ ಅದನ್ನು ಮಾಡಲೇಬೇಕು ಅರ್ಜುನ ಮೋಹದಿಂದ ಯುದ್ಧಮಾಡಲಾರೆನೆಂದ; ಕೊನೆಗೆ ಶ್ರೀ ಕೃಷ್ಣನ ಉಪದೇಶದಿಂದ ಮೋಹ ರಹಿತನಾಗಿ ಯುದ್ಧಕ್ಕೆ ಸಿದ್ಧನಾದನು. ಭಗವದ್ಗೀತೆಯಲ್ಲಿ ಹೊರೆ ಹೊರೆಯಾಗಿ ತತ್ವಜ್ಞಾನದ ಉಪದೇಶವು ಬಂದಿದ್ದರೂ ಅದರ ಮುಖ್ಯ ಉದ್ದೇಶ ಅರ್ಜುನನ್ನು ಮೋಹರಹಿತನನ್ನಾಗಿ ಮಾಡಿ ಯುದ್ಧಕ್ಕೆ ಅಣಿಗೊಳಿಸುವದೇ ಆಗಿತ್ತು. ಅದ್ದರಿಂದ ಯುದ್ಧ ಯೋಗವೇ ಗೀತೆಯ ಮುಖ್ಯ ಉದ್ದೇಶವೆಂದು ಹೇಳಬಹುದು.

ಚೀನವು ಭಾರತವನ್ನು ಆಕ್ರಮಿಸಿರುವ ಈ ಸಮಯದಲ್ಲಿ ನಾವು ಭಗವದ್ಗೀತೆಯ ಶ್ರವಣ ಮನನದಿಂದ ಯುದ್ಧಕ್ಕೆ ಪ್ರೋತ್ಸಾಹನವನ್ನು ಹೊಂದಬೇಕಲ್ಲದೆ, ಹೇಡಿತನಕ್ಕೆ ಆಸ್ಪದವನ್ನು ಕೊಡಬಾರದು. ಹಿಂಸಾತ್ಮಕವಾಗಿ ಆಗಲೀ ಅಹಿಂಸಾತ್ಮಕವಾಗಿಯಾಗಲೀ ಚೀನಿ ಆಕ್ರಮಣದ ವಿರುದ್ಧ ಹೋರಾಡುವದು ಭಾರತೀಯರ ಕರ್ತವ್ಯ. ಅದಕ್ಕಾಗಿ ಭಗವದ್ಗೀತೆಯಿಂದ ಭಾರತೀಯರು ಸ್ಫೂರ್ತಿ ಪಡೆಯಲೆಂದು ಹಾರೈಸುವಾ.

—ಶ್ರೀ ದಿಗಂಬರ ಜೋಶಿ, ಬೆಳಗಾವಿ

## ಹೃದಯ ಗಾನ

ತಾಯಿ ನೀನೆ ನನ್ನ ಹೃದಯ
 ವೀಣೆಯನ್ನು ಮಿಡಿಸಿದೇ,
ತಂತಿಯನ್ನು ಚಿಮ್ಮಿ ಎಳೆದು
 ಮಧುರ ಗಾನ ನುಡಿಸಿದೇ.
ಆದನು ಕೇಳಿ ನನ್ನ ಹೃದಯ
 ಹರ್ಷ ಸ್ಪರ್ಶಗೊಂಡಿದೇ,
ಕಿವಿಯಲದರ ಧ್ವನಿಯು ಕೇಳಿ
 ಎನ್ನಸದಕೆ ಒಲಿಸಿದೆ,
ಬಾಡಿ ಬಿದ್ದ ಬಳ್ಳಿಯನ್ನು
 ಹೃದಯ ಗಾನ ಮೊಳೆಸಿದೇ,
ಆದರ ಮೇಲೆ ಗಿಳಿಯು ಕುಳಿತು
 ಗಾನವನ್ನು ಮೊರ್ನಿಸಿದೇ.
ಮೊಗ್ಗೆಯಾಗಿ ಬಗ್ಗಿ ಕುಳಿತ
 ಹೂವು ಮತ್ತೆ ಅರಳಿದೇ,
ಮಧುವ ಹೀರುವ ದುಂಬಿಯೆಲ್ಲಾ
 ಮತ್ತೆ ಸಂತಸಗೊಂಡಿದೇ.
ಹೂವ ಮರೆಯಲಿ ಇರುವ ಕಾಯನು
 ಪಕ್ಷಿ ಕಾದು ಕುಳಿತಿದೆ,
ಬೇಗ ಬೇಗನೆ ಕಾಯಿ ಬಲಿತು
 ಹಣ್ಣದಾಗಲು ಬಯಸಿದೇ.
ತಂಟ ಕಂಪನು ಬೀರಿ ಬಂದಿಹ
 ನಿನ್ನ ಗಾನವ ಸವಿದೆನೂ,
ವೀಣೆ ನುಡಿಸಿದ ನಿನ್ನ ಹಸ್ತದಿ
 ಆಶೀರ್ವಾದವ ಪಡೆದೆನೂ.

— 'ಗಾಯತ್ರೀ ಅನುಜ',
ಬೆಳವಿನ ಕೊಡಿಗೆ.


ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 14/1963

ಗಂಗು ಮರಕಾಲ್ತಿ ಕೂಡಾ
—ಅರ್ಜಿದಾರರು.

ಮತ್ತು

ಬಾರ ಮರಕಾಲ ಕೂಡಾ —ಎದ್ರಿರು

ಯವರೊಳಗೆ

ಯೆದ್ರಿರು ವ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ತಾರೀಕು 30—5—1962ರಲ್ಲು ಮೃತಪಟ್ಟ ಗೋಪಾಲ K. ಕೋಟ್ಯಾನರ ಬಾಬ್ತು ಮೇಲ್ಕಂಡ ಅರ್ಜಿಯಲ್ಲಿ ನಮೂದಿಸಿದ ಯಿನ್ಶೂರೆನ್ಸ್ ಪೋಲೀಸಿಯ ಹ್ರವೇಜನ್ನು ಪಡೆಯುವರೇ ಅರ್ಜಿದಾರರ ಹೆಸರಿನಲ್ಲಿ ವಾರೀಸು ಹಕ್ಕು ಸರ್ಟಿಫಿಕೇಟುಕೊಡಿಸಬೇಕಾಗಿ ವಗೈರೆ ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 18—6—63ಕ್ಕೆ ಯಿಟ್ಟಿರುವುದರಿಂದ, ಆಕ್ಷೇಪವುಳ್ಳವರು ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. Balachandra Rao
Advocate for Petitioners.

ಉಡುಪಿ, ತಾ, 12—4—1963.



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ



25,000
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ
ಇದೀಗ ಮೂರನೆಯ ಸಲ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್ ಉಡುಪಿ, ದ. ಕ.

REGD. No. B. G. 176
LICENCE No. 31
Licensed to Post without Prepayment

# ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

**ಏಕ ಜಗತ್ತು ಮತ್ತು ಭಾರತ-** (ಅಜಾದ್‌ಸ್ಮಾರಕ ಉಪನ್ಯಾಸಗಳು) ಅನುವಾದಕರು: ಕೆ. ಸಂಪದ್ಗಿರಿ ರಾವ್ ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೬. ಪುಟಗಳು: ೬೭. ಬೆಲೆ: ರೂ. ೦=೭೫.

ಭಾರತ ಸರಕಾರದ ಶಿಕ್ಷಣ ಸಚಿವರಾಗಿ ದಿವಂಗತರಾದ ಮೌಲನಾ ಅಜಾದರ ಸ್ಮಾರಕೋಪನ್ಯಾಸದ ೧೯೬೦ನೆ ವರ್ಷದ ಉಪನ್ಯಾಸ ಮಾಲೆಯಿದು. ಇಂಗ್ಲೆಂಡಿನ ಪ್ರೊ| ಟಾಯ್ನ್‌ಬೀಯವರು ಸುಪ್ರಸಿದ್ಧ ಇತಿಹಾಸಜ್ಞರು. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಇತಿಹಾಸವನ್ನೂ ನಾಗರಿಕತೆಯ ಬೆಳವಣಿಗೆಯನ್ನೂ ಕೂಲಂಕುಷ ಅಧ್ಯಯನ ಮಾಡಿದ ಮಹಾ ವಿದ್ವಾಂಸರು. ಈ ಉಪನ್ಯಾಸ ಮಾಲೆಯಲ್ಲಿ ಪ್ರೊಫೆಸರರು ಏಕ ಜಗತ್ತಿನ ನಿರ್ಮಾಣದ ಆವಶ್ಯಕತೆಯನ್ನು ಪ್ರತಿಪಾದಿಸಿ, ಭಾರತವು ಈ ದಿಸೆಯಲ್ಲಿ ಅನಾದಿಯಿಂದಲೂ ಸಾಧಿಸಿದ ಪ್ರಗತಿಯನ್ನು ವಿವರಿಸಿ, ಮುಂದೆ ಅದು ಎಂತಹ ಮಹತ್ವಪೂರ್ಣ ಪಾತ್ರ ವಹಿಸಬಲ್ಲುದು ಎಂಬುವನ್ನು ಸಮರ್ಪಕವಾಗಿ ವಿವೇಚಿಸಿದ್ದಾರೆ. ವಿಶ್ವಕ್ಕೆ ವಿಶ್ವವನ್ನೇ ವಿನಾಶಗೊಳಿಸಬಲ್ಲ ಇಂದಿನ ಪರಮಾಣು ಯುಗದಲ್ಲಿ ಜಗತ್ತು ಅಸ್ತಿತ್ವದಲ್ಲುಳಿಯಬೇಕಾದರೆ ಅವರ ದೇಶದೇಶಗಳ ನಡುವೆ ಸದಿಚ್ಛೆ ಬೆಳೆಯಬೇಕು. ಇದನ್ನು ಜನತೆ ಕೆಲವು ಸಮಯ ಮೊದಲೇ ಮನಗಂಡಿದ್ದರೂ ವಿಭಿನ್ನ ಸಂಸ್ಕೃತಿ ನಾಗರಿಕತೆಗಳ ಕಾರಣದಿಂದ ಕಾಣಬೇಕಾದಷ್ಟು ಪ್ರಗತಿ ಕಾಣಲಿಲ್ಲ. ಆದರೆ, ಭಾರತವು ಹಿಂದಿನಿಂದಲೂ ಏಕತೆಯ ಅನೇಕ ರೂಪಗಳಿಗೆ ಆಶ್ರಯವಿತ್ತಿದೆ. ತನ್ನ ವೈವಿಧ್ಯ ಮತ್ತು ಈ ಬಗೆಗಿರುವ ಗೌರವಾದರಗಳು ಆಧುನಿಕ ಪ್ರಪಂಚವೇ ಕಲಿಯಬೇಕಾದುವು. ಈ ಎಲ್ಲ ವಿಚಾರವನ್ನು ಸಂಪೂರ್ಣವಾಗಿ ಪ್ರೊ| ಟಾಯ್ನ್‌ಬೀ ಪ್ರಸ್ತಾಪಿಸಿ ತಮ್ಮ ಉಪನ್ಯಾಸವನ್ನು ಮಾಡಿ ಯಶಸ್ವಿಯಾಗಿದ್ದಾರೆ. ಮೂರು ಭಾಗಗಳಿರುವ ಈ ಉಪನ್ಯಾಸ ಮಾಲೆಯು ಬಹಳಷ್ಟು ಪ್ರಯೋಜನಕಾರಿಯಾಗಬಲ್ಲುದು.

**ವೆನಿಸದ ವರ್ತಕ:** ನಿವೇದಕರು: ವರದರಾಜ ಹುಯಿಲಗೋಳ ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೋ, ಧಾರವಾಡ. ಪುಟಗಳು: ೫೫ ಬೆಲೆ: ರೂ. ೦—೫೦.

ಜಗದ್ವಿಖ್ಯಾತ ಉದ್ದಾಮ ಆಂಗ್ಲ ಕವಿ ಶೇಕ್ಸ್‌ಪಿಯರನ ಹೆಸರು ಚಿರಪರಿಚಿತ. ಆತನು ಬರೆದಿರುವ ನಾಟಕಗಳನ್ನು ಕನ್ನಡದ ಬೆಳೆಯುವ ಮಕ್ಕಳಿಗೆ ಅರ್ಥವಾಗುವಂತೆ ತಿಳಿಗನ್ನಡದಲ್ಲಿ ಬರೆಸಿ ಪ್ರಕಾಶಿಸುವ ಆಶಯದಿಂದ ರಾಮಾಶ್ರಮ ಬುಕ್ ಡಿಪೋದವರು ಮುಂದೆ ಬಂದಿದ್ದಾರೆ. 'Merchant of Vanice' ಎಂಬ ಕವಿಯ ಮೇರು ಕೃತಿಯ ಕನ್ನಡ ರೂಪಾಂತರವಿದು. ಪ್ರಾಥಮಿಕ ಶಾಲೆಗಳ ಮೇಲಣ ತರಗತಿಯ ಮಕ್ಕಳಿಗೆ ತಮ್ಮ ಓದುವ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಲು ಈ ಪುಟ್ಟ ಹೊತ್ತಗೆಯು ಸಹಾಯಕವಾಗುವುದೆಂದು ಹೇಳಲು ಸಂಕೋಚವಿಲ್ಲ. ಕತೆಯನ್ನು ಸರಳವಾಗಿ ಸುಂದರವಾಗಿ ಕೊಂಡೊಯ್ಯಲಾಗಿದ್ದು ಬಳಸಿದ ಭಾಷೆಯೂ ದರೂ ಉತ್ತಮವಿದೆ. ಮಕ್ಕಳ ಓದಿಗನುಕೂಲವಾಗುವಂತೆ ದೊಡ್ಡ ಅಚ್ಚು ಮೊಳೆಗಳನ್ನು ಬಳಸಿಕೊಂಡುದು ಶ್ಲಾಘ್ಯ. ಪ್ರಕಾಶಕರು ಸದ್ಯ ಒಡಿದಿರುವ ಈ ನಾಟಕ ಮಾಲೆಯಿಂದ ಕನ್ನಡ ಮಕ್ಕಳು ಅವಶ್ಯ ಲಾಭ ಪಡೆಯುತ್ತಾರೆ; ಎಂತಲೇ ಅವರ ಪ್ರಯತ್ನ ಪ್ರಶಂಸಾರ್ಹ.

**ದಾಸರ ಕೀರ್ತನೆಗಳು (ಭಾಗ ೧)** ಸಂಗ್ರಾಹಕರು: ಸಂಗೀತ ವಿದ್ವಾನ್ ಶ್ರೀ ಕೆ. ಮಂಜುನಾಥಯ್ಯ, ಪ್ರಕಾಶಕರು: ಮೆಜೆಸ್ಟಿಕ್ ಪ್ರೆಸ್, ಉಡುಪಿ. ಪುಟಗಳು: ೮೪. ಬೆಲೆ: ೧=೦೦.

ಭಕ್ತಿಯ ಬೀಜವನ್ನು ಕರ್ನಾಟಕದಲ್ಲಿ ಬಿತ್ತಿದವರು ಬಸವ ಯುಗದ ಕವಿ—ಕವಯಿತ್ರಿಯರಾದರೆ, ಅದನ್ನು ಬೆಳೆಸಿಕೊಂಡು ಬಂದವರು ವೈಷ್ಣವ ದಾಸರು. ಸಾಹಿತ್ಯಸಾಗರದಲ್ಲಿ ದಾಸವರ್ಯರು ಉತ್ತಮೋತ್ತಮ ಕೀರ್ತನಾ ತರಂಗಗಳಿಂದ ಜನಮನವನ್ನು ಆಕರ್ಷಿಸಿದ್ದರು. ಇದರಿಂದಾಗಿಯೇ ಅವರಿಗೂ ಅವರ ಸಾಹಿತ್ಯಕ್ಕೂ ಅಮೂಲ್ಯ ಸ್ಥಾನವಿದೆ. ಮನೆ ಮನೆಗೂ ಭಗವನ್ನಾಮ ಗಂಗಾಜಲವನ್ನು ಮುಟ್ಟಿಸಿದ ಶ್ರೀ ಗುರು ದಾಸವರ್ಯರದು. ಜನರಾದರೂ ನೂರಾರು ವರ್ಷಗಳ ವರೆಗೆ, ಈ ಹೇನಾಮ ಸಿದ್ಧಿಯನ್ನು ತ್ರಿಕಾಲವೂ ಮೆಲುಕು ಹಾಕುತಿದ್ದರು. ಆದರೆ, ಭೌತಿಕತೆಯ ಕ್ರೀತದಾಸರಾಗುತ್ತ ಜನ ಬೆಳೆದಂತೆ ತಮ್ಮಲ್ಲಿರುವ ಹರಿಭಕ್ತಿ ಸುಧೆಯ ಪರಿಜ್ಞಾನವನ್ನೂ ಕಳೆದುಕೊಳ್ಳುತ್ತ ಬರುತಿತ್ತು. ಆದರೆ, ಭೌತಿಕತೆಯೊಂದೂ ಜೀವನದ ಸರ್ವಸ್ವವಲ್ಲ, ಆಧ್ಯಾತ್ಮಿಕತೆಯಿಲ್ಲವಾದರೆ, ಜೀವನವು ಅಪೂರ್ಣವೆಂಬ ತಥ್ಯಾಂಶವನ್ನು ಈಗ ಎಲ್ಲರೂ ಮನವರಿಕೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಸಂಧಿಕಾಲದಲ್ಲಿ ಕೀರ್ತನೆಗಳ ಸಂಗ್ರಹಗಳು ಪ್ರಕಟವಾಗಿ, ಜನತೆಯ ಹಸಿವನ್ನು ದೂರ ಮಾಡಲು ಸಹಕಾರಿಯಾಗಬಹುದು.

ಈ ಪುಸ್ತಕದಲ್ಲಿ ದಾಸ ಶ್ರೇಷ್ಠರಾದ ಪುರಂದರ ಮತ್ತು ಕನಕದಾಸರ ಪದಗಳು ಅಧಿಕ ಸಂಖ್ಯೆಯಲ್ಲಿವೆ. ಶ್ರೀಪಾದರಾಯ, ವ್ಯಾಸರಾಯ, ವಾದಿರಾಜ, ರಾಘವೇಂದ್ರ, ವಿಜಯದಾಸ, ಗೋಪಾಲದಾಸ, ಜಗನ್ನಾಥ ದಾಸ, ಈ ವಿಖ್ಯಾತ ದಾಸರ ಕೃತಿಗಳಲ್ಲದೆ ಶ್ರೀಶ, ಶ್ರೀನಿವಾಸ ಪ್ರೇಮ, ದೂರ್ವಾಸ ದಾಸರ ರಚನೆಗಳೂ ಸೇರಿ ಒಟ್ಟು ೧೦೮ ಪದಗಳಿವೆ. ಕೊನೆಯಲ್ಲಿ ಈ ಎಲ್ಲ ದಾಸರ ಪರಿಚಯವನ್ನು ಚುಟುಕಿನಲ್ಲಿ ಕೊಟ್ಟಿದೆ. ಕೀರ್ತನೆಗಳು ಯೋಗ್ಯವಾಗಿಯೇ ಸಂಗ್ರಹವಾಗಿವೆ. ಬಿಡಾರಂ ಕೃಷ್ಣಪ್ಪನವರ ಶಿಷ್ಯ ಮಂಜುನಾಥಯ್ಯನವರ ಈ ಸಂಗ್ರಹ ನಮ್ಮ ಜನರಲ್ಲಿ ಆಧ್ಯಾತ್ಮಿಕತೆಯನ್ನು ಪುನರುಜ್ಜೀವಿಸಲು ನೆರವಾಗುವುದೆಂದು ಆಶಿಸಬಹುದು.

**ಶ್ರೀ ಗುರುವಚನಗಳು:** ಶ್ರೀ ರಾಮಕೃಷ್ಣ ಪರಮಹಂಸರು ಬೇರೆ ಬೇರೆ ಸಮಯಗಳಲ್ಲಿ ನೀಡಿದ ಉಪದೇಶಾಮೃತ ಬಿಂದುಗಳ ಸಂಗ್ರಹವಿದು. ಉಪದೇಶಗಳನ್ನು ಅವುಗಳು ಪ್ರತಿಪಾದಿಸುವ ವಿಷಯಗಳಿಗನುವಾಗಿ ೫೫ ವಿಭಾಗಗಳಲ್ಲಿ ವಿಭಜಿಸಲಾಗಿದೆ. ಇದರಿಂದಾಗಿ ಪಾಠಕರಿಗೆ ಯಾವ ವಿಷಯದಲ್ಲಿ ಪರಮಹಂಸರ ಅಭಿಪ್ರಾಯವೇನಿತ್ತು ಎಂದು ಸುಲಭದಲ್ಲಿ ಗ್ರಹಿಸಬಹುದು. ಗುರುಗಳ ಅಮೂಲ್ಯ ವಚನಗಳನ್ನು ಆಯ್ದು ಸಂಗ್ರಹಿಸಿದವರು ಸ್ವಾಮಿ ಬ್ರಹ್ಮಾನಂದರು. ಇವನ್ನು ಕನ್ನಡಕ್ಕೆ ಭಾಷಾಂತರಿಸಿದವರು ಶ್ರೀ ಡಿ. ಆರ್. ಚನ್ನೇಗೌಡರು. ಈ ಸಂಗ್ರಹವನ್ನು ಶ್ರೀ ರಾಮಕೃಷ್ಣ ಪುಸ್ತಕ ಭಂಡಾರ, ಗವಿಪುರ ವಿಸ್ತರಣ, ಬೆಂಗಳೂರು-೧೯ ಇವರು ಪ್ರಕಟಿಸಿದ್ದಾರೆ. ಬೆಲೆ: ರೂ. ೧—೦೦.

**ಕಾರಂತರ ಕೃತಿಗಳು:** ಕನ್ನಡದ ಶ್ರೇಷ್ಠ ಸಾಹಿತಿ ಶ್ರೀ ಕೋಟ ಶಿವರಾಮ ಕಾರಂತರ ಕೃತಿಗಳ ಸೂಚಿಯಿದು. ಸೂಚಿಯಲ್ಲಿ, ಕೃತಿ ಮತ್ತು ಅದು ಮೊತ್ತಮೊದಲು ಪ್ರಕಟವಾದ ವರ್ಷ ಹಾಗೂ ಅದರ ಪ್ರಕಾಶಕರ ಹೆಸರಲ್ಲದೆ, ಅದು ಯಾವ ವಿಷಯವನ್ನು ಅಧಿಕರಿಸಿ ಬರೆದುದು. ಅದರ ಪ್ರತಿಪಾದಿತ ವಿಚಾರ ಯಾವುದು ಎಂಬುದರ ಉಲ್ಲೇಖವೂ ಇದೆ. ಕಾರಂತರ ಕೃತಿಗಳನ್ನು ಒಂದೆಡೆ ಸಮೀಕ್ಷೆ ಮಾಡುವವರಿಗೆ ಈ ಪ್ರಕಟಣೆಯೊಂದು ಕೈದೀವಿಗೆಯಾಗಬಹುದು ಮತ್ತು ಅಂತಹರಿಗದೊಂದು ಪ್ರೇರಕ ಶಕ್ತಿಯಾಗಬಹುದು. ಕನ್ನಡದಲ್ಲಿ ಸಮೀಕ್ಷಾರೂಪದ ಈ ಬಗೆಯ ಕೃತಿಗಳಿಗೆ ಪ್ರಾಯಃ ಇದೇ ಓಂಕಾರವೆಂದು ತೋರುತ್ತದೆ. ಸಂಕಲನಕಾರ ಶ್ರೀನಿವಾಸ ಹಾವನೂರರ ಅಗಾಧ ಪರಿಶ್ರಮದ ಸತ್ಫಲಗಳನ್ನು ಕನ್ನಡಿಗರು ಉಂಡು ಆನಂದಿಸಬೇಕು ಮತ್ತು ಹೆಚ್ಚಿನ ಸುಫಲ ಬರುವಂತೆ ನೋಡಿಕೊಳ್ಳಬೇಕು.

**ಮಲೆನಾಡ ಮಲ್ಲಿಗೆ—** ಈ ಮಾಸಿಕದ ಮೂರನೆಯ ಸಂಚಿಕೆ (ಏಪ್ರಿಲ್ ೬೩) ನಮ್ಮ ಕೈಸೇರಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕತೆಗಳೇ ಕೂಡಿವೆ ಅಂದರೆ ಮಲೆನಾಡು ಮಲ್ಲಿಗೆಯು ಕತೆಗಳಿಗೇನೇ ಪ್ರಾಶಸ್ತ್ಯ ನೀಡುವಂತೆ ತೋರುತ್ತದೆ. ಇದು ಉಚಿತವೂ ಹೌದು. ಮಲ್ಲಿಗೆ ಮಲೆನಾಡಿನದಾದರೂ ಕರೆಯನ್ನು ಬಿಟ್ಟಿಲ್ಲ. ಅಖಿಲ ಕರ್ನಾಟಕದ ಉತ್ತಮ ಮಾಸಿಕವಾಗಿ ಮಲ್ಲಿಗೆ ತನ್ನ ಪರಿಮಳವನ್ನು ಸರ್ವತ್ರ ಪಸರಿಸಲಿ ಎಂದು ಹಾರೈಕೆ. ಪತ್ರಿಕೆಯ ಸಂಪಾದಕರು: ಹೆಚ್. ಎಸ್. ಸುಬ್ರಹ್ಮಣ್ಯಂ, ಹಂಚಿನಮನೆ, ಶೃಂಗೇರಿ. ಸಂಚಿಕೆಯ ಬೆಲೆ: ರೂ. ೦-೫೦.

— ಗೋರಾ,

ಮಹಿಳೆಯರಿಗಾಗಿ ಉಳಿತಾಯ ಯೋಜನೆ.......೧

ಜೀವನ
ಸುಂದರ.......
ಅದರ ಸವಿನೆನಪು
ಅತಿ ಸುಂದರ......

ಬೆಳೆಯುತ್ತಿರುವ ಚಿಕ್ಕ ಮಗುವನ್ನು ಆಶೆ, ಆಕಾಂಕ್ಷೆ ಮತ್ತು ಕುತೂಹಲದಿಂದ ನಿರೀಕ್ಷಿಸುತ್ತಿರುವ ತಾಯಿಗೆ ಜೀವನವೊಂದು ಸುಂದರ ಸ್ವಪ್ನ. ಅದೇ ರೀತಿ ಮನೆಯ ಕಾರ್ಯಭಾರವನ್ನು ಜವಾಬ್ದಾರಿಯಿಂದ ನಡೆಸುತ್ತಿರುವ ಗೃಹಲಕ್ಷ್ಮಿಗೆ "ಬ್ಯಾಂಕ್ ಎಕೌಂಟ್" ಕೂಡಾ ಅತೀ ಮುಖ್ಯ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಗುವಿನಂತೆ, ನಿಮ್ಮ ಬ್ಯಾಂಕ್ ಖಾತೆಯೂ ಅಭಿವೃದ್ಧಿಯತ್ತ ಬೆಳೆಯಬಲ್ಲುದು. "ಬ್ಯಾಂಕ್ ಖಾತೆಯು" ನಿಮ್ಮಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸುವುದರೊಂದಿಗೆ, ಭವಿಷ್ಯತ್ತಿಗೊಂದು ಸುಂದರ ರೂಪು ಕೊಡುತ್ತದೆ.

**ಭವಿಷ್ಯತ್ತಿನ ಭದ್ರತೆಗಾಗಿ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.**

# ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: ೧೯೨೫, ಶಾಖೆಗಳು: 178

— ಚಲಾವಣಾ ಸಂಪತ್ತು 40 ಕೋಟಿಗೂ ಮಿಕ್ಕಿದೆ —

Edited, Printed & Publishrdby K. H. Shetty. atthe Navayuga Press, Udipi, S. India.

CONTRIBUTE YOUR MITE TO OUR NATIONAL DEFENCE FUND

# ನವಯುಗ

ನಮ್ಮ ರಾಷ್ಟ್ರೀಯ ರಕ್ಷಣಾನಿಧಿಗೆ ಉದಾರ ಸಹಾಯ ಸಲ್ಲಿಸಿರಿ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 36 | ಉಡುಪಿ, 16—5—1963 ಗುರುವಾರ | ಸಂಪುಟ ೪೨ ಸಂಚಿಕೆ ೩೬

## ವಿವಾದ ಪರಿಹಾರಕ್ಕೆ

# ಲಾಯರಿಗೆ ನೆಹರೂರ ಹೊಸ ಕೊಡುಗೆ

ಅಕಾರಣ ಶತ್ರುವೆನಿಸಿದ ಚೀನಾದ ಆಕ್ರಮಣವೀಗ ಏಕಪಕ್ಷೀಯ ಸಮರ ವಿರಾಮದಿಂದ ಇಲ್ಲವೆನ್ನುವಂತಿದ್ದರೂ ಭಾರತವು ನಿಶ್ಚಿಂತೆಯಿಂದಿರುವುದು ಸಾಧ್ಯವಿಲ್ಲ. ಏಕೆಂದರೆ, ಕಳೆದ ವರ್ಷ ಅಕ್ಟೋಬರ ತಿಂಗಳಲ್ಲಿ ಕೆಂಪು ಚೀನಾವು ಅಕಸ್ಮಾತ್ತಾಗಿಯೇ ದೊಡ್ಡ ಪ್ರಮಾಣದಲ್ಲಿ ಭಾರತದ ಎಲ್ಲೆಯನ್ನು ನುಗ್ಗಿತ್ತು; ಅಕಸ್ಮಾತ್ತಾಗಿಯೇ ಸಮರವಿರಾಮವನ್ನು ಘೋಷಿಸಿತ್ತು. ಹಾಗಿರುವಾಗ ಇನ್ನು ಮುಂದಕ್ಕಾದರೂ ಅದು ಏನು ಮಾಡೀತೆಂದು ಯಾರಿಂದಲೂ ಹೇಳುವುದಾಗದು. ಇದರ ಮೇಲೆ, ಭಾರತದ ಉತ್ತರದ ಟಿಬೇಟಿನಲ್ಲಿ ಸಹ ಅದು ತನ್ನ ಸೇನೆಯನ್ನು ಮತ್ತಷ್ಟು ಹೆಚ್ಚಿಸುತ್ತಿರುವುದು ಮಾತ್ರವಲ್ಲ, ಅದನ್ನು ನವೀನ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತಗೊಳಿಸುತ್ತಲೂ ಇದೆ. ಹಾಗಿರುವಾಗ, ಒಮ್ಮೆ ಶತ್ರುಸ್ಥಾನವಡರಿದ್ದ ಚೀನಾವು ಇನ್ನೆಂದು ಆಕ್ರಮಣ ನಡೆಸೀತು, ಅದು ಯಾವ ಕ್ರಮ ಕೈಗೊಂಡೀತು ಎಂಬುದು ನಂಬುದಂತೂ ದೂರವುಳಿಯಿತು, ಕಲ್ಪನಾತೀತ. ಅದಕ್ಕೆಂದೇ ಭಾರತವಿಂದು ಸ್ವರಕ್ಷಣೆಗೆಂದು ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ; ಅದುದರಿಂದಲೇ ಅದು ಈ ದಿಸೆಯಲ್ಲಿ ಧಾವಿಸುತ್ತಿದೆ. ಸ್ವದೇಶದಲ್ಲಿ ಸಂರಕ್ಷಣಾ ಪಡೆಗಳನ್ನು ಸರ್ವಸಮರ್ಥಗೊಳಿಸುವುದರೊಡನೆ ಮಿತ್ರರಾಷ್ಟ್ರಗಳಿಂದಲೂ ಅದು ಸಮರೋಪಕರಣಗಳನ್ನು ಪಡೆಯುತ್ತಿದೆ.

### ಕುಹಕದೊಳಗೊಂದು ಕುಹಕ

ಈ ರೀತಿಯಾಗಿ ಭಾರತವು ತನ್ನ ಸಂರಕ್ಷಣಾ ಬಲವನ್ನು ವರ್ಧಿಸುತ್ತಿರುವುದರಿಂದ ವಿಚಿಂತೆಗೀಡಾದ ಎರಡು ರಾಷ್ಟ್ರಗಳೆಂದರೆ, ನಮ್ಮ ಹಿತಶತ್ರು ಸಮನಾದ ಪಾಕಿಸ್ತಾನ ಮತ್ತು ಶತ್ರು ಚೀನ. ಈ ಎರಡೂ ರಾಷ್ಟ್ರಗಳು ವಿವಂಚನೆಯನ್ನು ವ್ಯಕ್ತಪಡಿಸಿವೆ. ಪಾಕಿಸ್ತಾನವಂತೂ ಪಾಶ್ಚಾತ್ಯರ ಪರಮ ವಿನೀತ ಭಕ್ತನೆಂಬಂತೆ ನಾಟಕವಾಡಿ, ಭಾರತಕ್ಕೆ ನೆರವು ನೀಡಬೇಡಿರೆಂದು ಅವರ ಕಾಲಿಗೆ ಬಿದ್ದಿತ್ತು. ಆದರೆ, ಅಧ್ಯಕ್ಷ ಅಯೂಬಖಾನರ ಮಾಯಾ ನಾಟಕದಿಂದ ಅವರು ಆಕರ್ಷಿತರಾಗಲಿಲ್ಲ. ಚೀನಾದ ಪ್ರಧಾನಿ ಚೌ-ಎನ್-ಲಾಯ್ ಅವರು ನಮ್ಮ ನೆಹರುಗಳಿಗೊಂದು ಪತ್ರ ಬರೆದು, 'ಸಂಧಾನದ ಮಾತೆತ್ತುವ ನೀವು ಸೈನ್ಯ ಸಂಗ್ರಹ ಮಾಡುತ್ತಿರುವುದು ವಿರೋಧಾಭಾಸವೆಂ'ದು ಅಂದಿದ್ದಾರೆ. ಸಮರ ವಿರಾಮವನ್ನು ಸಾರಿ, ಸಂಧಾನದ ತ್ರಿಸೂತ್ರಗಳನ್ನು ಉದ್ಘೋಷಿಸಿದ ಲಾಯರೇ ಟಿಬೇಟಿನ ಗುಡ್ಡಗಳಲ್ಲಿ ಅತ್ಯದ್ಭುತ ಪ್ರಮಾಣದಲ್ಲಿ ಸಶಸ್ತ್ರ ಸೇನೆಯ ಚಟುವಟಿಕೆಗಳನ್ನು ಜಗಜ್ಜಾಹೀರುಮಾಡುತ್ತಿರುವಾಗ, ಭಾರತವು ಮಾತ್ರ ಕೈಕಟ್ಟಿ ಕುಳಿತು ಸ್ವರಕ್ಷಣಾ ಕರ್ತವ್ಯ ಬಾಹಿರವಾಗಬೇಕೆಂದು ಹೇಳುವುದು ಶುದ್ಧ ಕುತಂತ್ರವಲ್ಲದೆ ಮತ್ತಿನ್ನೇನು? ಸತ್ಯ ಹೇಳುವುದಾದರೆ, ಭಾರತವು ತನ್ನ ಸೈನಿಕ ಶಕ್ತಿ ಸಂವರ್ಧನೆಯಲ್ಲಿ ಆಸಕ್ತರಾಗುವಂತೆ ಮಾಡಿದವರು ಯಾರು? ಲಾಯರು ಕುಹಕದಿಂದ ನಮ್ಮ ಗಡಿ ಪ್ರದೇಶದಲ್ಲಿ ಆಕ್ರಮಣ ಮಾಡಿದುದರಿಂದಲೇ ಹೀಗಾಯಿತಲ್ಲವೆ? ತನ್ನ ಗೆಯ್ದ ಅಪರಾಧವನ್ನು ಮುಚ್ಚಿ ಪರರ ಕಡೆಗೆ ಬೊಟ್ಟು ಮಾಡುವುದರ ಅಂತರ್ಯವನ್ನು ಅರಿಯದಷ್ಟು ವಿಮೂಢರಿಂದು ಭಾರತದಲ್ಲಿಲ್ಲ.

### ಪೀಕಲಾಟದ ಸೃಷ್ಟಿಕಾರ ಚೌ

ಭಾರತ—ಚೀನಾಗಳ ಗಡಿ ವಿವಾದವು ಇಂದು ನಿನ್ನೆಯದಲ್ಲ, ಚೀನೀಯ ಪ್ರಧಾನಿ ಭಾರತಕ್ಕೆ ಬಂದು ಪಂಚಶೀಲ ತತ್ತ್ವಗಳನ್ನು ಒಪ್ಪಿ ಸಹಿ ಹಾಕಿ ಪೀಕಿಂಗಿಗೆ ತೆರಳಿದೊಡನೆಯೇ ಪ್ರಾರಂಭವಾಗತೊಡಗಿದೆ ಈ ಪೀಕಲಾಟ. ತಪ್ಪು ನಕ್ಷೆಗಳನ್ನು ಪ್ರಕಟಿಸುವುದು, ಅನ್ಯಾಯವಾಗಿ ಗಡಿಯೊಳಗೆ ಸೈನಿಕರನ್ನು ಕಳಿಸುವುದು.—ಇಂತಹ ಚಿಕ್ಕ ಪುಟ್ಟ ಅಪರಾಧ ಮಾಡಿ ಮುಂದೆ ಅದನ್ನೇ ಗಟ್ಟಿಗೆಯ್ದು, ಭಾರತೀಯ ನೆಲದ ಮೇಲೆ ತನ್ನ ಪ್ರಭುತ್ವವನ್ನೂ ಜಮೆ ಮಾಡುವಷ್ಟು ಮುಂದುವರಿದವರವರು. ವಿವಾದವನ್ನು ನೇರ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದಂತೆಯೇ ಬೃಹದಾಕ್ರಮಣವನ್ನು ಮಾಡಿದವರೂ ಅವರೇ. ಈ ಸೇನೆಯಿಂದ ಆಕ್ರಮಣವು ನಡೆಯುವ ವರೆಗೂ ವಿವಾದವು ಇದ್ದಿತ್ತಾದರೂ ಭಾರತವೇನೂ ಸೈನ್ಯ ಶೇಖರಣೆಗೆ ಹೋಗಲಿಲ್ಲ—ಏಕೆಂದರೆ, ಶಾಂತ ವಿಧಾನಗಳಲ್ಲಿಯೇ ಇದನ್ನು ಬಗೆಹರಿಸುತ್ತೇನೆಯೆಂಬ ಆತ್ಮವಿಶ್ವಾಸ ಭಾರತಕ್ಕಿತ್ತು. ಚೀನೀಯರು ಅಭಿನಯಿಸಿದುದು ಕೇವಲ ನಾಟಕವೆಂದು ಬಯಲಾದುದೇ ಮೊನ್ನೆ ಮೊನ್ನೆ! ಪರಿಸ್ಥಿತಿ ಹೀಗಿರುವಾಗ, ಚೀನಾವು ತನ್ನ ತಪ್ಪನ್ನು ಭಾರತದ ಮೇಲೆ ಹೇರುವ ವ್ಯರ್ಥ ಸಾಹಸ ಮಾಡುತ್ತಿದೆಯೆಂದು ಜಗತ್ತಿಗೆ ಜಗತ್ತೇ ಇಂದು ಬಹಿರಂಗವಾಗಿ ಹೇಳುತ್ತಿದೆ.

### ಒಲ್ಲದ ಗಂಡ

ಚೀನೀಯ ಪ್ರಧಾನಿಯವರು ತಾವು ನಿಸ್ಪೃಹರೆಂದು ನಾನಾ ರೀತಿಯಲ್ಲಿ ಸಮರ್ಥಿಸಿಕೊಳ್ಳುತ್ತಾರೆ ತಾವು ವಿಜಯಪಥದಲ್ಲಿದ್ದರೂ ಸಮರ ವಿರಾಮ ಘೋಷಣೆ ಮಾಡಿದುದು, ವಿವಾದ ಪರಿಹಾರಕ್ಕೆ ತ್ರಿಸೂತ್ರಗಳನ್ನು ಮುಂದಿಟ್ಟುದು, ಕೊಲಂಬೊ ಸಲಹೆಗಳನ್ನು ತತ್ತ್ವತಃ ಒಪ್ಪಿಕೊಂಡುದು, ಭಾರತೀಯ ಸಮರ ಕೈದಿಗಳನ್ನು ಬಿಡುಗಡೆ ಮಾಡುತ್ತಿರುವುದು, ಇಂದಿಗಾದರೂ ನೇರ ಮಾತುಕತೆಯ ಮೂಲಕ ವಿವಾದ ಬಗೆಹರಿಸುವ ಎಂದು ಪದೇ ಪದೇ ಕರೆ ನೀಡುತ್ತಿರುವುದು—ಅವರಿಗೆ ಶಾಂತಿಯಲ್ಲಿರುವ ಕಳಕಳಿಯನ್ನು ತೋರಿಸುತ್ತಿದೆಯಂತೆ. ಆದರೆ, ಭಾರತವೇ ಸಮರ ಪ್ರಯತ್ನವನ್ನು ಮುಂದುವರಿಸುತ್ತಿದೆಯಂತೆ; ಚೀನೀ ಭೂಪ್ರದೇಶದ ಮೇಲೆ ಅಕ್ರಮವಾಗಿ ತನ್ನವರನ್ನು ಅಟ್ಟುತ್ತಿದೆಯಂತೆ, ವಿಮಾನ ಹಾರಿಸುತ್ತಿದೆಯಂತೆ. ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು ಎಂಬಂತೆ ಶಕ್ತಿಮದಭರಿತ ಲಾಯಿಯವರ ಈ ಹೇಳಿಕೆಗಳೆಲ್ಲಾ ಹೇಳಿಕೆಯಾಗಿರಲು ಮಾತ್ರ ಯೋಗ್ಯ. ಪುಸ್ತಕದಲ್ಲಿನ ಬದನೇಕಾಯಿ ಮಾತ್ರ; ಉಪಯೋಗಕ್ಕಿಲ್ಲ.

### ಅತಿವಿನಯವಂತ ಧೂರ್ತ

ಚೀನಾದ ಪ್ರತಿಯೊಂದು ವರ್ತನೆಯೂ ಅದರ ರಾಜಕೀಯ ದುರುದ್ದೇಶ ಸಾಧನೆಗೆ ಪರಿಪೋಷಕವೆನಿಸುವ ಗತ್ತುಗಾರಿಕೆಗಳು ಮಾತ್ರ. ಕೇವಲ ಬಕಧ್ಯಾನ ಅಥವಾ ಬೆಕ್ಕು ಸನ್ಯಾಸನ. ಅವರ ಇಂಗಿತವು ಉತ್ತಮವಿರುವುದಾಗಿದ್ದರೆ, ಭಾರತದಂತೆಯೇ ಕೊಲಂಬೋ ಸಲಹೆಗಳನ್ನು ನಿಶ್ಶರ್ತವಾಗಿ ಒಪ್ಪಿಕೊಳ್ಳುವಷ್ಟು ಉದಾರತೆಯನ್ನು ತೋರಿಸಬಹುದಿತ್ತು. ಇಷ್ಟು ಮಾಡುವುದರಿಂದ ಅದರ ಪ್ರತಿಷ್ಠೆಗಾಗಲೀ ಬೇಡಿಕೆಗಳಿಗಾಗಲಿ ಚ್ಯುತಿ ಬರುತ್ತಿರಲಿಲ್ಲ. ಏಕೆಂದರೆ, ನೇರ ಮಾತುಕತೆ ನಡೆಯಲನುಕೂಲ ವಾತಾವರಣವನ್ನು ಕಲ್ಪಿಸುವುದಷ್ಟೇ ಅವುಗಳ ಉದ್ದೇಶ. ಆದರೆ ಇವನ್ನು ಒಪ್ಪುವುದರಿಂದ ತನ್ನ ಸ್ವಾರ್ಥ ಸಾಧನೆಗೆ ಅಡ್ಡಿ ಬರುವುದೆಂದು ಲಾಯಿಯವರು ತಮ್ಮ ಸ್ವಹಸ್ತಗಳಿಂದಲೇ ಅವನ್ನು ಸಮಾಧಿಗೊಳಿಸಿ ಪುಷ್ಪಗಳನ್ನಿಟ್ಟು ಕೃತಾರ್ಥರಾದರು. ಈ ಸೂಚನೆಗಳ ಮಾತನ್ನು ಬಿಟ್ಟು ನೇರ ಮಾತುಕತೆಗೆ ಸಿದ್ಧರಿರುವುದಾಗಿ, ತಾನೇ ನವದೆಹಲಿಗೆ ಬರಲು ಆತುರ ವ್ಯಕ್ತಪಡಿಸಿದ್ದಾರೆ. ಇದಾವ ತಂತ್ರ? ಅತಿವಿನಯವು ಧೂರ್ತ ಲಕ್ಷಣವಲ್ಲವೆ?

### ಅಭಿನವ ಚಾಣಕ್ಯ

ಕೆಂಪು ಚೀನಾದ ಧೋರಣೆಯೀಗ ಮುಮ್ಮುಖವಾಗಿದೆ. ಅದು ಭಾರತ-ಚೀನಾ ಸೀಮಾ ವಿವಾದದ ಹೆಸರಿನಲ್ಲಿ ಪ್ರಪಂಚವನ್ನೇ ವಂಚಿಸುವ ಪ್ರಯತ್ನದಲ್ಲಿದೆ. ಇದಕ್ಕೆಂದೇ ಕಮ್ಯುನಿಸ್ಟ ರಾಷ್ಟ್ರಗಳೊಡನೆ ಅದು ವರ್ತಿಸುವ ರೀತಿಯೊಂದು, ತಟಸ್ಥ ರಾಷ್ಟ್ರಗಳನ್ನು ಕಾಣುವ ಬಗೆಯಿನ್ನೊಂದು, ಭಾರತದೊಡನೆ ತೋರುವ ಗುಣ ಬೇರೊಂದು. ಇದರಿಂದಾಗಿ ಅದು ತನ್ನ ಬೇಳೆಯನ್ನು ಬೇಯಿಸುವ ಸಾಹಸ ಮಾಡುತ್ತಿದೆ. ಒಂದೇ ಪ್ರಸಂಗವನ್ನು ಅದು ಬೇರೆಬೇರೆಯವರೊಡನೆ ಬೇರೆ ಬೇರೆಯಾಗಿಯೇ ವರ್ಣಿಸುತ್ತಿರುವುದರಿಂದ ಒಟ್ಟಿನಲ್ಲಿ ಎಲ್ಲರೂ ಕಕ್ಕಾಬಿಕ್ಕಿಯಾಗುವಂತಾಗಿದೆ. ಅವರೇ ಪರಸ್ಪರರನ್ನು ಸಂದೇಹ ದೃಷ್ಟಿಯಿಂದ ವೀಕ್ಷಿಸುವಂತಾಗಿದೆ. ಇದು ರಾಜಕೀಯ ಚಾಣಾಕ್ಷ್ಯತನವಿರಬಹುದು; ಆದರೆ, ಪ್ರಾಮಾಣಿಕ ವ್ಯವಹಾರವಲ್ಲವೆಂದು ಯಾರೂ ಹೇಳಬಹುದು.

### ಚೌರವರ ಪರಮಾರ್ಥ

ಕೊಲಂಬೋ ಸೂಚನೆಗಳನ್ನು ಒಪ್ಪಿಕೊಳ್ಳುವುದರಿಂದ ಚೀನಕ್ಕೆ ಯಾವ ನಷ್ಟವೂ ಆಗುವುದಿಲ್ಲ; ಅಪಮಾನವೂ ಆಗುವುದಿಲ್ಲ; ಅಥವಾ ಭಾರತದ ನೆಲದ ಮೇಲೆ ಅದು ಹೇರುವ ತನ್ನ ಪ್ರಭುತ್ವವಾದಕ್ಕೂ ಚ್ಯುತಿ ಬರುವುದಿಲ್ಲ. ಅಲ್ಲದೆ, ಈ ಸೂಚನೆಗಳು ಭಾರತದವೂ ಅಲ್ಲ, ಚೀನಾದವೂ ಅಲ್ಲ. ಇವೆರಡರ ಹಿತ ಚಿಂತನಗಾರರದ್ದು. ಭಾರತವು ಕೇಳಿದ್ದಂತೆ ಗತ ಸೆಪ್ಟೆಂಬರ ೮ರ ಸೈನ್ಯ ನಿಯಂತ್ರಣ ರೇಖೆಯನ್ನೂ ಅದು ಬಿಗಿಹಿಡಿದಿಲ್ಲ, ಇಲ್ಲವೇ ಚೀನಾದ ತ್ರಿಸೂತ್ರಗಳನ್ನೂ ಪಟ್ಟು ಹಿಡಿದಿಲ್ಲ. ಉಭಯತರರ ಅಭಿಪ್ರಾಯಗಳನ್ನೂ ಮನ್ನಿಸಿ, ಅವಕ್ಕೆ ಹೊಂದಿಕೆಯಾಗುವಂತೆ ಅವು ರೂಪುಗೊಂಡಿವೆ. ಹಾಗಿರುವಾಗ, ನಿಜವಾಗಿ ಲಾಯಿಯವರು ಶಾಂತಿಯ ಪರಿಹಾರಕ್ಕೆ, ಶಾಂತ ವಿಧಾನಗಳನ್ನೇ ಬಳಸಲು ಮನಮಾಡುವವರಾದರೆ, ಹಿಂದೆ ಮುಂದೆ ನೋಡುವ ಆಗತ್ಯವಾದರೂ ಏನು? ಅವರು ತಕ್ಷಣವೇ ಇವನ್ನು ಸ್ವೀಕರಿಸಿದ್ದಾರಂತೆ; ಆದರೆ, ಈ 'ತತ್ತ್ವತಃ' ಎಂಬುದಕ್ಕೆ ಲಾಯ್ ನಿಘಂಟಿನಲ್ಲಿಯೇ ಸ್ಪಷ್ಟವಾದ ಅರ್ಥವಿಲ್ಲದಿರುವಾಗ, ಅದು ತೀರ ಅನರ್ಥವಲ್ಲದೆ ಮತ್ತಿನ್ನೇನು? ಭಾರತವನ್ನು ವಂಚಿಸುವುದು, ಉಚಿತ ಸಮಯ ಪ್ರಾಪ್ತವಾದೊಡನೆಯೇ ತನ್ನ ಆಕ್ರಮಣವನ್ನು ಮುಂದುವರಿಸುವುದು ಇ

([illegible]ನೇ ಪುಟ ನೋಡಿರಿ)

## ರಾಜಾಜಿಯವರ ಕಲಾಸಿದ್ಧಿ

# —॥ ಪಟಾಕಿ ॥—

ಶ್ರೀ ರಾಜಾಜಿಯವರ 'ಪಟಾಕಿ' ಎಂಬ ಈ ಕಥೆ ಬಾಲಮನೋ ವಿಜ್ಞಾನಕ್ಕೆ ಸಂಬಂಧಿಸಿದ್ದು ದೀಪಾವಳಿಯ ಕಾಲದಲ್ಲಿ ನಡೆದ ಒಂದು ಘಟನೆಯನ್ನು ನಿರೂಪಿಸುತ್ತದೆ.

ದೀಪಾವಳಿಗೆ ಒಂದು ದಿನಕ್ಕೆ ಮೊದಲೇ ಹುಡುಗರು ಪಟಾಕಿಯನ್ನು ಸುಡುತ್ತ ಆಟವಾಡ ತೊಡಗಿದ್ದರು. ಇವನ್ನೆಲ್ಲ ನೋಡುತ್ತ ಹರ್ಷಗೊಂಡಿದ್ದ ಹರಿಜನ ಜಾತಿಯ ವೀರನ ಮಗನು, ತನಗೂ ಪಟಾಕಿಬೇಕೆಂದು ತಂದೆಯೊಡನೆ ಹಟಹಿಡಿಯುತ್ತಾನೆ. ಆದರೆ ಆ ಕಾಲದಲ್ಲಿ ಹೊಲೆಯರು ಪಟಾಕಿಯನ್ನು ಸುಡುವುದಿರಲಿ, ಮುಟ್ಟುವುದೂ ಕೂಡ ಅಪಂಥವೆಂದು ಭಾವಿಸಲಾಗುತ್ತಿತ್ತು. ಆದರೆ ಚಿಕ್ಕ ಹುಡುಗ ವೀರನ ಮಗನಿಗೆ ಇದೆಲ್ಲ ಹೇಗೆ ಗೊತ್ತಾಗಬೇಕು? ಆತ ತಂದೆಯೊಡನೆ, ತನಗೆ ಪಟಾಕಿ ತಂದು ಕೊಡಬೇಕೆಂದು, ಹಟಹಿಡಿದು ಕೇಳಿದ, ಆಗ, ಅಮಲು ಸೇವಿಸಿ ಬಂದಿದ್ದ ವೀರನ ತಂದೆ ಮಗನಿಗೆ ಚೆನ್ನಾಗಿ ಥಳಿಸುತ್ತಾನೆ. ಏಟು ತಿಂದ ಬಳಿಕವೂ ಆ ಹುಡುಗ ತನ್ನ ಹಟವನ್ನು ಮಾತ್ರ ಬಿಡುವುದಿಲ್ಲ.

ಅಂದು, ಆ ಊರಿನ ದೊರೆಸ್ವಾಮಿ ಅಯ್ಯರರ ಮನೆಗೆ—ಹೊಸ ಅಳಿಯನು ಬರುವವನಿದ್ದನು ಮನೆಯಲ್ಲಿ ಎಲ್ಲರೂ—ಅಂದು ಸಡಗರದಿಂದಿದ್ದರು. ಆ ಅಯ್ಯರರ ಮೂರನೆಯ ಮಗಳ ಮದುವೆಯಾದ ಬಳಿಕ, ಆ ದೀಪಾವಳಿಯು ಮೊದಲ ದೀಪಾವಳಿಯಾಗಿತ್ತು. ಅಳಿಯನು ದೀಪಾವಳಿಗೆ ಮಾವನ ಮನೆಗೆ ಬರುವಾಗ ಹೊವು ಹಣ್ಣು ಮತ್ತು ತನ್ನ ಚಿಕ್ಕ ಭಾವ ನೆಂಟರಿಗಾಗಿ ಪಟಾಕಿಯ ಪೊಟ್ಟಣಗಳನ್ನೂ ತಂದಿದ್ದನು ತಂದ ಪಟಾಕಿಗಳನ್ನು ಅಳಿಯನು ತನ್ನ ಭಾವನೆಂಟರಿಗೆ ಹಂಚಿಕೊಟ್ಟನು. ಅವರಲ್ಲಿ ಒಬ್ಬ ಹುಡುಗನು ತನ್ನ ಪಾಲಿನ ಪಟಾಕಿಯನ್ನು ನಾಳೆಗಾಗಿ ತೆಗೆದಿಡಲು ತನ್ನ ತಾಯಿಯವರ ಕೊಟ್ಟನು. ಆ ತಾಯಿಯು, ಪಟಾಕಿಯ ಪೊಟ್ಟಣಗಳನ್ನು ಕಪಾಟಿನೊಳಗೆ ಭದ್ರವಾಗಿ ಇರಿಸಿದ್ದಳು.

ಸಂಭ್ರಮದಿಂದ ಆಚರಿಸಬೇಕಾಗಿದ್ದ ಆ ದೀಪಾವಳಿಯು, ಅಂದು ನಡೆದ ಒಂದು ಕಳವಿನಿಂದಾಗಿ ದುಃಖಮಯವಾಗಿ ಹೋಯಿತು. ದೀಪಾವಳಿಯ ದಿನ ಬೆಳಗ್ಗೆ ಎದ್ದು ನೋಡುವಾಗ ಬೆಳ್ಳಿಯ ಪಾತ್ರೆ—ಪಟಾಕಿ ಪೊಟ್ಟಣ ಮತ್ತು ಅದೇ ತಾನೇ ಬ್ಯಾಂಕಿನಿಂದ ತಂದಿರಿಸಿದ್ದ ನಗದು ಹಣ, ಇವೆಲ್ಲವನ್ನು ಇಟ್ಟಿದ್ದ—ಆ ಕಪಾಟಿನ ಬೀಗ ಒಡೆದು, ಕಳ್ಳರು ಎಲ್ಲವನ್ನು ತೆಗೆದುಕೊಂಡು ಹೋಗಿದ್ದುದ್ದನ್ನು ಕಂಡ, ದೊರೆಸ್ವಾಮಿ ಅಯ್ಯರರ ಪತ್ನಿಯ ಹಾಹಾಕಾರ ವಿಶೇಷವಾಯಿತು. ಪಟಾಕಿ ತೆಗದಿಡಲು ಕೊಟ್ಟಿದ್ದ ಹುಡುಗನಿಗೆ, ಕದ್ದು ಹೋದ ಹಣ, ಬೆಳ್ಳಿಯ ಪಾತ್ರೆಗಳ ಚಿಂತೆ ಇರಲಿಲ್ಲ. ಆತನಿಗೆ ತನ್ನ ಪಟಾಕಿ ಕದ್ದು ಹೋದ ಚಿಂತೆಯೇ ವಿಶೇಷವಾಯಿತು. ಆ ಕೂಡಲೇ ಮಾವನೂ ಅಳಿಯನೂ ಸೇರಿ ಪೊಲೀಸಿಗೆ ದೂರು ಕೊಟ್ಟರು.

ಮರುದಿನ ಬೆಳಗ್ಗೆ ನೋಡುವಾಗ, ಹರಿಜನರ ಹುಡುಗ ವೀರನ ಮಗ, ಹರ್ಷದೊಡನೆ ಪಟಾಕಿ ಸುಡುತ್ತಿದ್ದ ದೃಶ್ಯ ಕಂಡು ಬಂದಿತು. ಇದನ್ನು ಕಂಡ ಜನರು ಈತನಿಗೆ ಪಟಾಕಿ ಎಲ್ಲಿ ಸಿಕ್ಕಿತು? ಎಂದು ಆಶ್ಚರ್ಯಪಟ್ಟರು. ಕಳ್ಳರು ಯಾರೆಂಬುದನ್ನು ಕಂಡು ಹಿಡಿಯಲು ಮತ್ತೆ ಹೆಚ್ಚಿನ ಪುರಾವೆ ಬೇಕಾಗಲಿಲ್ಲ. ಮರುದಿನವೇ ವೀರನನ್ನು ಪೊಲೀಸಿನವರು ಹಿಡಿದು ಕೋಣೆಗೆ ಕೂಡಿಸಿದರು. ಈ ಘಟನೆಯಿಂದಾಗಿ, ವೀರನ ಮಗನೂ ಹೆಂಡತಿಯೂ, ದುಃಖದಿಂದ ಕಣ್ಣೀರು ಹಾಕಿದರು. ಇತ್ತ ಪೋಲೀಸಿನವರು ಲಾಕಪ್ಪಿಗೆ ಹಾಕಿದ ವೀರನನ್ನು ಹೊಡೆದುಬಡಿದು ಬಾಯಿ ಬಿಡಿಸಿದಾಗ, ಆತ ನಿಜವಾದ ಘಟನೆಯನ್ನು ವಿವರಿಸುತ್ತಾನೆ. ಮರುದಿನ, ಆ ಊರಿನ ಚಿನ್ನದ ಕೆಲಸ ಮಾಡುವ ಆಚಾರಿಗಳಿಬ್ಬರ ದಸ್ತಗಿರಿಯಾಗುತ್ತದೆ. ಬಳಿಕ ವಿಚಾರಣೆ ನಡೆಯುತ್ತದೆ.

ಸಾಕ್ಷಿಯ ಗೂಡಿನಲ್ಲಿ ನಿಂತಿದ್ದ ವೀರನ ಮಗನ ವಿಚಾರಣೆ ನಡೆದಾಗ ಆತ, ಒಂದೊಂದು ಸಲ ಒಂದೊಂದು ರೀತಿ ಹೇಳುತ್ತಾನೆ. ಒಟ್ಟಿನಲ್ಲಿ ಆತನು, ತನಗೆ ವೀರನು ಪಟಾಕಿ ಕೊಟ್ಟಿಲ್ಲ! ಪಟಾಕಿ ಕೇಳಿದ್ದಕ್ಕೆ ಪೆಟ್ಟನ್ನು ಮಾತ್ರ ಕೊಟ್ಟಿದ್ದ! ಎಂದೇ ಹೇಳುತ್ತಾನೆ. ಕೊನೆಗೆ ಆಪಾದಿತರೆಲ್ಲರ ವಿಚಾರಣೆ ನಡೆಯುತ್ತದೆ ಮತ್ತೆ ಒಂದು ವಾರದ ಬಳಿಕ ಮೆಜಿಸ್ಟ್ರೇಟರು ತೀರ್ಪು ಕೊಡುತ್ತಾರೆ. ಆ ತೀರ್ಪಿನ ಸಾರಾಂಶ ಹೀಗಿತ್ತು—

'ವೀರನು ಈ ಕಳ್ಳತನ ಮಾಡಿದನೆಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಹೊರಗೆ ಸಿಕ್ಕಿದ ಆ ಪಟಾಕಿಯ ಪೊಟ್ಟಣದ ಭಾಗದ ವೀರನ ಮಗ ಸುಡುತ್ತಿದ್ದ ಪಟಾಕಿಯದೇ ಆಗಿತ್ತು ಎಂದು ಹೇಳಲು ಬೇಕಾದ ಆಧಾರವಿಲ್ಲ. ಆದುದರಿಂದ ಈ ವೀರನನ್ನು ನಿರಪರಾಧಿಯೆಂದು ಬಿಡುಗಡೆ ಮಾಡಲಾಗಿದೆ. ಮತ್ತು ಚಿನ್ನದ ಕೆಲಸ ಮಾಡುವ ಆಚಾರಿಗಳು ಅಪರಾಧಿಗಳೆಂದು ದೃಢವಾಗಿರುವುದರಿಂದ ಇವರೀರ್ವರಿಗೂ ಕಠಿಣ ಸಜೆಯನ್ನು ವಿಧಿಸಲಾಗಿದೆ.'

ಈ ತೀರ್ಪನ್ನು ಕೇಳಿ ತಿಳಿದ ವೀರನ ಹೆಂಡತಿಗೂ ಮಗನಿಗೂ, ಬಹಳ ಸಂತೋಷವಾಗುತ್ತದೆ.

ದೊರೆಸ್ವಾಮಿ ಅಯ್ಯರರ ಮನೆಯಲ್ಲಿ ನಿಜವಾಗಿ ಕಳ್ಳತನ ಮಾಡಿದವರಾರೆಂದು ಕೊನೆಗೆ ಆ ಈರ್ವರು ಆಚಾರಿಗಳ ಸಂಭಾಷಣೆಯಿಂದ ತಿಳಿದುಬರುವುದು. ಆ ಈರ್ವರು ಆಚಾರಿಗಳು, ತಾವು ಕಳವಿಗೆಹೋಗುವಾಗ ವೀರನನ್ನೂ ಕರೆದುಕೊಂಡು ಹೋಗಿದ್ದರು. ಆದರೆ ವೀರನು ಬೇರೇನನ್ನೂ ತೆಗೆದುಕೊಳ್ಳದೆ ಆ ಪಟಾಕಿಯನ್ನು ಮಾತ್ರ ತೆಗೆದುಕೊಂಡಿದ್ದನು. ಆ ಪಟಾಕಿಯ ಕಾರಣದಿಂದಲೇ ಈ ಕಳವು ಬಯಲಾಯಿತೆಂದು ಆ ಕಳ್ಳರು ಪಶ್ಚಾತ್ತಾಪ ಪಡುತ್ತಾರೆ.

ವೀರನ ಮಗ ಪಟಾಕಿ ಸುಟ್ಟದ್ದು ಅದೇ ಮೊದಲು ಅದೇ ಕೊನೆಯದಾಯಿತು ಈ ಘಟನೆಯ ಬಳಿಕ ಪ್ರತಿ ವರ್ಷವೂ ದೀಪಾವಳಿ ಬರುತ್ತಿತ್ತು. ಜನರು ಪಟಾಕಿ ಸುಡುತ್ತಿದ್ದರು. ಆದರೆ ವೀರನ ಮಗನಿಗೆ ಆ ಪಟಾಕಿ ಸುಡುವುದನ್ನು ನೋಡಿದಾಗ, ಮೈ ಜುಂ ಎನ್ನುತ್ತಿತ್ತು. ಇಂತು ಈ ಕಥೆ ಪೂರ್ಣವಾಗುತ್ತದೆ.

ಈ ಕಥೆಯಿಂದ ವಿಶೇಷವಾಗಿ ಏನೂ ತಿಳಿಯದಿದ್ದರೂ ಬಾಲಕರ ಕೋಮಲವಾದ ಮನಸ್ಸಿನ ಮೇಲೆ, ಚಿಕ್ಕಂದಿನಲ್ಲಿ ಆಗುವ ಆಘಾತವು ಅವರ ಜೀವನದಲ್ಲಿ ಮುಂದೆ ಎಷ್ಟು ಪರಿಣಾಮವನ್ನುಂಟುಮಾಡುತ್ತದೆ? ಎಂಬ ವಿಚಾರ ಸ್ಪಷ್ಟವಾಗುವುದು.

—ಕೆ. ಎನ್. ಭಟ್, ಶಿಂಬಡಿಪಾಲ್

---

ಹನಿಗತೆ

## ಆಧ್ಯಾತ್ಮ ಮತ್ತು ಸಂಪಾದನೆ

ಆ ಅಂಗಡಿ ಅಷ್ಟು ದೊಡ್ಡದೇನಲ್ಲ, ಆದರೂ ಲಕ್ಷಗಟ್ಟಲೆ ವ್ಯವಹಾರವನ್ನು ನಿತ್ಯವೂ ಸಾಗಿಸುವ ಶೆಟ್ಟರು ಆ ಅಂಗಡಿಗೆ ಬರುತ್ತಿದ್ದರು. ಅವರ ಅಚೆ ಈಚೆ ಕಿಸೆಗಳಲ್ಲಿ ನೋಟಿನ ಕಂತೆಗಳೇ ತುಂಬಿರುತ್ತಿದ್ದವು. ಅಂಥವರ ವ್ಯವಹಾರ ಆ ಅಂಗಡಿಯವನಲ್ಲಲ್ಲದಿದ್ದರೂ ಆ ಅಂಗಡಿಯವನ ನಿಷ್ಠೆ, ಸತ್ಯತೆ ವಿಶೇಷವಾಗಿ ಅವನ ಆಧ್ಯಾತ್ಮಿಕ ಜ್ಞಾನ ಇವುಗಳ ರಸಪಾನ ಮಾಡಲು ಆಕರ್ಷಿತರಾಗಿ ಶೆಟ್ಟರು ಬರುತ್ತಿದ್ದರು.

ಅವನಾದರೋ ಆಧ್ಯಾತ್ಮಿಕ ತತ್ವದಲ್ಲಿ ಪರಿಣಿತ. ಯಾವ ಮಾತೇ ಆದರೂ ಶ್ರುತಿ, ಸೂತ್ರ, ವೇದಾಂತ, ಉಪನಿಷತ್ತು, ಪುರಾಣಧರ್ಮ, ನೀತಿಸಾರ, ಆತ್ಮವಿಚಾರ ಮೊದಲಾದ ಪುಣ್ಯ ಶಬ್ದಗಳಿಲ್ಲದೆ ಇರುತ್ತಿರಲಿಲ್ಲ. ಅಂತೂ ಕಾಲ ಕಳೆಯುತ್ತಲಿತ್ತು.

ಒಂದು ದಿನ ಅವನು ಮನೆಗೆ ಬಂದು ನೂರರ ನೋಟೊಂದನ್ನು ತಂದು, ಉಲ್ಲಾಸಭರಿತನಾಗಿ ಹೆಂಡತಿಗಿತ್ತ!

"ಇದೇನು? ಇಂದೇನು ಬಹು ಲಾಭವೇ?"

"ಅಕಸ್ಮಾತ್ ಲಾಭ ಯೋಗ!"

"ಹಾಗೆಂದರೆ—"

ಈಗ ಅವನ ಧ್ವನಿ ತುಸು ಇಳಿದು ಅವನ ಅಂತರಾತ್ಮ ಸ್ವಲ್ಪ ಕುಗ್ಗಿತು. "ಶೆಟ್ಟರು ಬಂದಿದ್ದರು. ಕೆಲ ಹೊತ್ತು ಹರಟೆ ಹೊಡೆಯುತ್ತ ಕುಳಿತಿದ್ದು ಹೋದರು. ಅವರು ಕುಳಿತಲ್ಲಿ ನೂರರ ನೋಟೊಂದು ಇದ್ದುದನ್ನು ಬಳಿಕ ಕಂಡೆನು. ಯಾತ್ರಾರೂ ಇದ್ದಿಲ್ಲ. ನಾನೇ ಅದಕ್ಕೆ ಅಧಿಕಾರಿಯಾಗಬೇಕಾಯಿತು"

ಛೀ, ಅವರದನ್ನು ಅವರಿಗೆ ಸಲ್ಲಿಸಬೇಡವೇ?

ನನಗೂ ಒಂದು ಸಾರಿ ಹಾಗೆಯೇ ಅನಿಸಿತು ಆದರೆ ಅವರದೇ ಎಂಬುದಕ್ಕೆ ಸಾಕ್ಷಿಯೇನು?

"ಆದರೂ ಇದು ನನಗೇನೂ ನೀತಿಯೆಂದು ಅನಿಸುವದಿಲ್ಲ ನಮ್ಮ ಹಣೆಯಲ್ಲಿ ಬರೆದದ್ದು ನಮಗೆ. ನಮ್ಮದಲ್ಲದ್ದನ್ನು..."

"....ಹಾಗಲ್ಲವೇ....ಅದು ಹೇಗೆ" ಎಂದು ತನ್ನಷ್ಟಕ್ಕೆ ತಾನೇ ಮಾಡಿಕೊಂಡ ಸಂದರ್ಭ ಸಾಧಕ ಆಧ್ಯಾತ್ಮಿಕ ಸಮಾಧಾನವನ್ನು ಸುರಿಯಿಸತೊಡಗಿದ. 'ಮರುಳೆ, ನನಗೆ ಲಭ್ಯವಿಲ್ಲದಿದ್ದರೆ ಅದು ನನಗೆ ಸಿಗುತ್ತಿತ್ತೆ? ದಿನವೂ ಲಕ್ಷಗಟ್ಟಲೆ ಹಣ ಎಣಿಸಿ ನೋಡುವ ಶೆಟ್ಟಿಗೆ ಅದು ತಿಳಿಯುತ್ತಿರಲಿಲ್ಲವೇ? ದೇವರು ಕೊಡುವದೆಂದರೆ ಹೇಗೆ ಎಂತ ಮಾಡಿದ್ದಿಯೊ? ಅವನೇನು ಪ್ರತ್ಯಕ್ಷ ಬಂದು ಕೈಯಲ್ಲಿ ಹಿಡಿಸುತ್ತಾನೆಯೇ? ಹೀಗೆ ಒಂದಿಲ್ಲೊಂದು ಕಾರಣಾಂತರಗಳಿಂದ ಕೊಡುವುದು, ತಿಳಿಯಿತೇನು?'

ಹೆಂಡತಿ ಗಂಡನ ಆಧ್ಯಾತ್ಮಿಕ ಜ್ಞಾನ ಶಕ್ತಿಯಲ್ಲಿ ವಿಶ್ವಾಸವಿಟ್ಟವಳು ನಂಬಿ ಸಂತಸಗೊಂಡಳು!

ಆದರೆ ಅವನ ಸದಸದ್ ವಿವೇಕ ನುಡಿಯುತ್ತಿತ್ತು. ಆಕರ್ಷಣೀಯವಾಗಿ ಪರರಿಗೆ ತಿಳಿವಂತೆ ಬೋಧಿಸುವದೂ ಒಂದು ಕಲೆ. ಅದು ನನಗೆ ಸಾಧಿಸಿದೆ. ಆದರೆ ಅದರಂತೆ ನಡೆದು ತೋರಿಸುವುದು ಬಹು ಕಷ್ಟಸಾಧ್ಯ. ಮಾತೆಷ್ಟು ಸುಲಭ, ಕೃತಿಯೆಷ್ಟು ಕಷ್ಟವೆಂದು ಅವನಿಗೆ ಅನಿಸಿತು.

ಹಾಗಾಗಿ ಅವನಿಗೆ ಮೊಟ್ಟ ಮೊದಲು ಭಾಸವಾಗಿಯೋ ಅಭಾಸವಾಗಿಯೊ ಅಂತರ್ಯಾಮಿಯ ಪರಿಚಯವಾಯಿತು.

—ವಿ. ತಿ. ಶೀಗೇಹಳ್ಳಿ
(ಯುಗವಾಣಿ)


### ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ನೇಕಡಾ 5
2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ನೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ನೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

## ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.


---

### ಸೂಚನೆ

'ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಲು ಭಾವು ಸೃಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ಸ.

### ಇತಿಹಾಸದ ಪುನರಾವೃತ್ತಿ

# ಗಾಂಡೀವಧಾರಿ ಭಾರತೀಯ

ಚಕ್ರ ಗರ ಗರನೆ ಸುತ್ತುತ್ತಿರುತ್ತದೆ. ಅದು ನಿಲ್ಲುವದೆಂದಿಲ್ಲ. ಜನನ ಮರಣ, ಹಗಲು-ರಾತ್ರಿ, ಜಯ-ಅಪಜಯ ಮುಂತಾದವು ಕೂಡಾ ಹಾಗೆಯೇ. ಅದನ್ನರಿತೂ ಭಾರತದ ಇತಿಹಾಸದಲ್ಲಿ ಚೆನ್ನಾಗಿ ಕಾಣಬಹುದು. ಶ್ರೀ ಮದ್ಭಗವದ್ಗೀತೆಯಲ್ಲೂ ಅದನ್ನೇ ಶ್ರೀ ಕೃಷ್ಣನು ಹೇಳುತ್ತಾ, ಯುಗ ಯುಗಗಳಲ್ಲಿ ಧರ್ಮಸಂಸ್ಥಾಪನೆಗಾಗಿ ತಾನು ಅವತಾರ ಪಡೆಯುತ್ತೇನೆಂದು ತಿಳಿಸಿರುವನು. ಭಾರತದ ಇತಿಹಾಸಕ್ಕೆ ಇದು ಒಂದು ಉತ್ತಮ ನಿದರ್ಶನ. ಅದುದರಿಂದಲೇ ಭಾರತೀಯ ಸಂಸ್ಕೃತಿ ಉಳಿದುಕೊಂಡಿದೆ ರೋಮ್, ಗ್ರೀಕ ಮುಂತಾದ ಸಂಸ್ಕೃತಿಗಳು ಇಂದೆ ನೆ? ಭಾರತದ ಇತಿಹಾಸದ ಚಕ್ರವಾ ರೋ ತಿರುಗುತ್ತಿದೆ. ಒಮ್ಮೆ ನೆ ಲ್ಲಿ, ನಮ್ಮ ಧರ್ಮದ ಮೇಲೆ ಪರಕೀಯರ ಆಕ್ರಮಣವಾದಲ್ಲಿ, ಮತ್ತೆ ಭಾರತೀಯರು ತಲೆ ಎತ್ತಿ ಪರಕೀಯರನ್ನು ಪಾದಾಕ್ರಾಂತಗೊಳಿಸಿ ಧರ್ಮ-ಧ್ವಜವನ್ನು ದಶದಿಕ್ಕುಗಳಲ್ಲೂ ವೈಭವದಿಂದ ಹಾರಾಡಿಸುತ್ತಾರೆ ಅದರ ಸಾಧ್ಯ-ಅಸಾಧ್ಯತೆ, ಗೆಲುವು-ಸೋಲು ಇವೆಂದು ನಮ್ಮ ಕಣ್ಮುಂದೆ ನರ್ತಿಸುತ್ತಿವೆ. ಓ ಭಾರತೀಯ, ನೀನ್ಯಾವದನ್ನು ಅರಿಸಿಕೊಳ್ಳುವಿ ಎಂದು ಅವು ಕೇಳುತ್ತಿವೆ. ಭಯ ಪಡಬೇಕಾಗಿಲ್ಲ, ಸಂಶೇಹಪಡಬೇಕಾಗಿಲ್ಲ ಇತಿಹಾಸದ ಪುನರಾವೃತ್ತಿ ನಡೆಯುತ್ತದೆ ಎನ್ನುತ್ತಾರೆ ಶ್ರೀ ರಾಘವಾಚಾರ್ಯರು ಪಾಂಚಜನ್ಯಕ್ಕೆ ಬರೆದಿರುವ ಒಂದು ಲೇಖನದಲ್ಲಿ.

ಹಿಮಾಲಯವು ಅನಾದಿಕಾಲದಿಂದಲೂ ಭಾರತದ್ದೇ ಆಗಿಕೊಂಡಿದ ಮತ್ತು ಅನಂತಕಾಲದ ವರೆಗೂ ಭಾರತದ್ದೇ ಆಗುಳಿಯುತ್ತದೆ. ವಿಶ್ವದ ಆದ್ಯಾತ್ಮ ಶಕ್ತಿಗೂ ಅದನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯ ಇರುವದಿಲ್ಲ. ಭಾರತದ ಸಭ್ಯತೆ ಹಾಗೂ ಸಂಸ್ಕೃತಿ ಹಿಮಾಲಯದೊಡನೆ ಸಂಬಂಧ ವಿಟ್ಟುಕೊಂಡಿರುತ್ತದೆ. ಪಿತಾಮಹ ಬ್ರಹ್ಮ, ಭೂತಗಣ ನಾಯಕ ಶಂಕರ, ದೇವರಾಜ ಇಂದ್ರ ಹಾಗೂ ದೇವಾಧಿದೇವ ವಿಷ್ಣುವಿನ ವಾಸಸ್ಥಾನ ಅದೆಂದಿಗೂ ಭಾರತದಿಂದ ಭಿನ್ನವಾಗುಳಿಯಲಾರದು. ಅದನ್ನೆಂದಿಗೂ ಬೇರ್ಪಡಿಸಲು ಸಾಧ್ಯವೇ ಇರುವದಿಲ್ಲ ಹಿಮಾಲಯದ ಸರ್ವೋಚ್ಚ ಶಿಖರದಿಂದ ದಕ್ಷಿಣದತ್ತ ಹಾಗೂ ಉತ್ತರದತ್ತಣ ಭಾಗವು ಸಹಸ್ರಾರು ಶತಮಾನಗಳಿಂದ ಭಾರತದ ಅಧಿಕಾರಕ್ಕೊಳಗಾಗಿತ್ತು ಕೆಲವರು ಉತ್ತರ ವಲಯವನ್ನು ಬೇರ್ಪಡಿಸುವ ಕುಚೇಷ್ಟೆಗಿಳಿದಾಗ ಭಾರತೀಯರೆಲ್ಲರೂ ದೃಢತೆಯಿಂದ ಆ ಚೇಷ್ಟೆಯನ್ನು ನಿರಾಕರಿಸಿರುವರು. ಕೆಲವೊಮ್ಮೆ ಅದಕ್ಕಾಗಿ ಯುದ್ಧವೂ ನಡೆದಿರುತ್ತದೆ. ಆಗ ವಿದೆಯ ವೈದಿಕ ಯಂತ್ರ ಭಾರತದ ಮೇಲೆ ಹಾರಾಡುತ್ತಿತ್ತು.

ಪ್ರಪಂಚದ ಭೂಗೋಲವನ್ನು ಅಭ್ಯಸಿಸಿದಲ್ಲಿ, ಭಾರತ ಭೂಮಿಯು ವಿಶ್ವದ ಹೃದಯವೆಂಬುದನ್ನು ಕಂಡು ಹಿಡಿದಿರುವ ಋಷಿಗಳು ಹಿಮಾಲಯದಲ್ಲಿ ಅದನ್ನು ಕಂಡುಕೊಂಡರು ಎಂಬುದು ಸ್ಪಷ್ಟವಾಗುತ್ತದೆ. ಈ ಅನ್ವೇಷಣೆಯ ಪರಿಣಾಮವೆಂದರೆ ಹಿಮಾಲಯ—ಭಾರತದ ಹಿಮಾಲಯವು ವಿಶ್ವದ ಸಂರಕ್ಷಣಾ ಹಾಗೂ ಸಂಹರಣಾ ಶಕ್ತಿಯ ಕೇಂದ್ರವಿದೆ ಎಂಬ ಸಿದ್ಧಾಂತ ಪ್ರಕಟವಾಯಿತು. ಈ ಆಧಾರದ ಮೇಲೆ ಹಿಮಾಲಯದಲ್ಲಿ ಬ್ರಹ್ಮ-ವಿಷ್ಣು-ಮಹೇಶ್ವರ ಹಾಗೂ ಇಂದ್ರನಿಗೆ ನಿವಾಸ ಸ್ಥಾನ ನೀಡಲಾಗಿರುತ್ತದೆ. ಪಿತಾಮಹ ಬ್ರಹ್ಮನ ಯಜ್ಞ ಭೂಮಿಯು ಹಿಮಾಲಯವಾಗಿತ್ತು ವಿಷ್ಣುವು ನಾರಾಯಣ ರೂಪದಿಂದ ಆಂತರಿಕ ಶತ್ರುಗಳ ಹಾಗೂ ನರರೂಪದಿಂದ ಬಾಹ್ಯ ಶಕ್ತಿಗಳ ಮೂಲ ಸಹಿತ ನಾಶಗೈದಿರುವದು. ಇಲ್ಲಿಂದಲೇ ತ್ರಿವಿಷ್ಟಪದಲ್ಲಿ (ಟಿಬೇಟಿನಲ್ಲಿ) ಇಂದ್ರನು ವೃತ್ರಾಸುರನ ವಿನಾಶಗೈದಿರುವನು ತ್ರಿಮೂರ್ತಿಗಳ ಸ್ಥಳವೂ ಇದೇ ಯುಗ ಯುಗಗಳ ನಂತರ ಇಂದೂ ಬ್ರಹ್ಮಪುತ್ರ ಹಾಗೂ ಗಂಡಕಿಯ ಪ್ರತೀ ಒಂದು ಬಿಂದು ಪಿತಾಮಹ ಬ್ರಹ್ಮ ಹಾಗೂ ದೇವಾಧಿದೇವ ವಿಷ್ಣುವಿನ ಚಿಹ್ನಾಪಕವನ್ನುಂಟು ಮಾಡುತ್ತವೆ.

ಇಂದಿನ ವಿಭಿನ್ನ ಆರ್ಥಿಕ, ಸಾಮಾಜಿಕ ಹಾಗೂ ರಾಜನೈತಿಕ ವಾದಗಳ ಎದುರಿಗೆ ಭಾರತ ರಾಷ್ಟ್ರದ ನೈಸರ್ಗಿಕ ಸಿದ್ಧಾಂತವು ರಾಷ್ಟ್ರ ಭೂಮಿಯು ರಾಷ್ಟ್ರದ ಮಾತೆ ಇದ್ದಾಳೆ ಹಾಗೂ ರಾಷ್ಟ್ರೀಯರು ಅವಳ ಸಂತಾನವೇ ಇದ್ದಾರೆಂ-ಎದೇ ಇದೆ. ರಾಷ್ಟ್ರ ಭೂಮಿಯ ಸ್ವಾಮಿಯು ವಿಶ್ವಾತ್ಮನಿರುವನು-ಅವನ ಚೇತನಾ ಬಿಂದುವು ಪ್ರತೀಯೊರ್ವನಲ್ಲಿಯೂ ಇದೆ ಭಾರತ ರಾಷ್ಟ್ರದ ಯಾವ ಮಹಾ ಪುರುಷರು ಈ ವಿಶ್ವಾತ್ಮನ ಅನುಭವ ಪಡೆಯುವರೋ, ತ್ಯಾಗದ ಮೂಲಕ ದೇವಾಧಿದೇವ ವಿಷ್ಣುವಿನ ಸಾಕ್ಷಾತ್ಕಾರ ಪಡೆದಿರುವರೋ, ಅಲ್ಲಿ ನಮ್ಮ ಇತಿಹಾಸವು ಹಿಮಾಲಯದ ಪಾರ್ವತಿಯನ್ನು ತಪೋಮೂರ್ತಿ ಶಂಕರನೊಂದಿಗೆ ದಿವ್ಯ ದಾಂಪತ್ಯದ ಭಾವವನ್ನು ಜೋಡಿಸಿ ಸಿದ್ಧಪಡಿಸಿರುವದೇನಂದರೆ ಹಿಮಾಲಯದ ಹಿಮ ಮಣ್ಣು ಎಲ್ಲಾ ಭಾರತದ್ದೇ ಇದೆ. ಪುರಾಣಗಳಲ್ಲಿ ಇಂತಹ ಅನೇಕಾನೇಕ ಆಖ್ಯಾನಗಳು ದೊರಕುತ್ತವೆ. ಅದರಲ್ಲಿ ಪಾರ್ವತಿಯ ಮೇಲೆ ಅಧಿಕಾರ ನಡೆಸುವ ಅಸುರರ ಉತ್ಸಾಹಕ್ಕೆ ಭೂತಗಣ ನಾಯಕನು ಉಚಿತ ಉತ್ತರ ರೂಪದಲ್ಲಿ ಅವರ ನಾಶಗೈದಿರುವನು. ಹಿಮಾಲಯದ ಕೈಲಾಸದ ಮೇಲೆ ಶಂಕರನ ನಿವಾಸಸ್ಥಾನವಿದೆ. ಇದರ ಅರ್ಥವಾದರೂ ಏನ? ಪರ್ವತರಾಜ ಹಿಮಾಲಯದ ಮೇಲೆ ಯಾವ ವಿಧದಲ್ಲೂ ಅನ್ಯರ ಅಧಿಕಾರ ನಡೆಯುವಂತಿರುವದಿಲ್ಲ.

ಹಿಮಾಲಯದ ಉತ್ತರದಲ್ಲಿರುವ ಹಾಗೂ ಇತರ ಪರ-ರಾಷ್ಟ್ರಗಳ ಸಂಬಂಧದಲ್ಲಿ ಭಾರತದ ಧೋರಣೆಯು ಯಾವಾಗಲೂ ಈ ರೀತಿ ಇತ್ತು— ಒಂದು ಶರೀರದಲ್ಲಿ ಯಾವ ರೀತಿ ಸರ್ವಾಂಗಗಳು ಅವುಗಳ ಸ್ಥಾನದಲ್ಲಿದ್ದು ಉಪಯುಕ್ತವಾಗಿವೆಯೋ ಹಾಗೆಯೇ ವಿಶ್ವದ ಶರೀರದಲ್ಲಿ ಪ್ರತಿಯೊಂದು ದೇಶವೂ ಅದರ ಸ್ಥಾನದಲ್ಲಿವೆ. ಶರೀರದ ಯಾವುದಾದರೂ ಒಂದು ಭಾಗವು ಇನ್ನೊಂದು ಅಂಗದ ಮೇಲೆ ತನ್ನ ಅಧಿಕಾರ ಚಲಾಯಿಸಲು ಪ್ರಯತ್ನಿಸುವುದು ದೇಹಕ್ಕೆ ಯಾವ ವಿಧದಲ್ಲೂ ಶೋಭನೀಯವಾಗಿ ಇರುವದಿಲ್ಲ. ಇದೇ ರೀತಿ ಯಾವದಾದರೂ ದೇಶವು ಇನ್ನೊಂದು ದೇಶದ ಮೇಲೆ ಆಕ್ರಮಣ ನಡೆಸುವದು ಉಚಿತ ಇರುವದಿಲ್ಲ ಭಾರತವು ಆದಿಕಾಲದಿಂದಲೂ ಈ ನೀತಿಗೆ ಗೌರವ ಕೊಟ್ಟಿರುತ್ತದೆ. ಆದರೆ ತನ್ನ ಮೇಲೆ ಆಕ್ರಮಣ ನಡೆದಾಗ ಅದನ್ನು ಕಂಡು ಸಹಿಸಿ ಅದು ಸುಮ್ಮನಿದ್ದುದಿಲ್ಲ. ಒಡನೆ ಆಕ್ರಮಣವನ್ನು ಎದುರಿಸುತ್ತಿತ್ತು, ಆಕ್ರಮಣಗಾರರನ್ನು ಅಟ್ಟುತ್ತಿತ್ತು. ಇವತ್ತು ಚೈನಾವು ಹಿಮಾಲಯದ ಮೇಲೆ ಆಕ್ರಮಣ ನಡೆಸಿರುತ್ತದೆ. ಈ ಆಕ್ರಮಣವನ್ನು ಎದುರಿಸಲು ಭಾರತವು ಸನ್ನದ್ಧವಿದೆ.

ಮಹಾಭಾರತದಲ್ಲಿ ಒಂದು ವಿಷಯ ತಿಳಿದು ಬರುತ್ತದೆ— ಸಾಧಾರಣ ಐವತ್ತು ಶತಾಬ್ಧಿಗಳ ಹಿಂದೆಯೇ ಚೈನಾವು ಭಾರತದ ವಿರೋಧಿಯಾಗಿತ್ತು ಆ ಸಮಯದಲ್ಲಿ ಗಾಂಡೀವಧಾರಿ ಅರ್ಜುನನು ಅದನ್ನು ಸೋಲಿಸಿದ್ದನು. ಸೋತ ಚೈನಾವು ಮಹಾರಾಜಾ ಯುಧಿಷ್ಠಿರನ ಧರ್ಮ ರಾಜ್ಯವನ್ನು ಒಪ್ಪಿ ಮರ್ಯಾದಿಸಿತು. ಹಾಗಿದ್ದರೂ ಅದರ ಹೃದಯದಲ್ಲಿರುವ ದಾನವತೆಯು ನಾಶವಾಗಿರುವದಿಲ್ಲ- ಹೆಚ್ಚು ಕಡಿಮೆ ಮುವ್ವತ್ತು ಶತಾಬ್ದಿಯ ವರೆಗೆ ಭಾರತದತ್ತ ಕಣ್ತೆರೆದು ನೋಡುವ ಧೈರ್ಯವು ಚೈನಾಕ್ಕೆ ಇಲ್ಲವಾಗಿತ್ತು. ಸಾಧಾರಣ ಮೂರು ಸಾವಿರ ವರ್ಷಗಳ ಹಿಂದೆ ಬುದ್ಧನ ಅನುಯಾಯಿಗಳು ಮಾನವತೆಯ ಸಂದೇಶವನ್ನು ಚೈನಾ ದೇಶಕ್ಕೆ ಕೊಂಡೊಯ್ದು ತಲುಪಿಸಿದ್ದರು. ಚೈನಿ ಯಾತ್ರಿಕರು ಭಾರತಕ್ಕೆ ಬಂದು ಮಾನವತೆಯ ಪಾಠ ಕಲಿತುಕೊಂಡಿದ್ದರು ಹಾಗಿದ್ದಾಗಲೂ ದಾನವತೆಯ ಬೀಜವು ಸಮೂಲ ನಾಶವಾಗಿರುವದಿಲ್ಲ. ಪುನಃ ಪುನಃ ಅದು ಹಿಮಾಲಯದತ್ತ ಬೇರು ಬಿಡುವ ದುಸ್ಸಾಹಸಕ್ಕೆ ಕೈಹಾಕುತ್ತಿತ್ತು. ಆದರೆ ಅದೆಂದಿಗೂ ಸಫಲತೆಯನ್ನು ಕಂಡಿರುವದಿಲ್ಲ. ಹಾಗೆಯೇ ಇಂದು ಅದರ ಅಸಫಲತೆಯು ಹಾಗೂ ಪರಾಜಯವು ನಿಶ್ಚಿತ, ನಿರ್ಧಾರಿತವಿದೆ ಐವತ್ತು ಶತಮಾನಗಳ ನಂತರ ಪುನಃ ಚೈನಾವು ಭಾರತದ ತಲೆಯ ಮೇಲೆ ಪ್ರಹಾರಮಾಡುವ ದುಸ್ಸಾಹಸಕ್ಕೆ ಮುಂದಾಗಿರುತ್ತದೆ. ಈ ರೀತಿ ಮಹಾಭಾರತದ ಪುನರಾವೃತ್ತಿಯ ಸಮಯ ಸನ್ನಿಹಿತವಾಗಿರುತ್ತದೆ. ಯಾವ ಪರಂಪರೆಯು ಅರ್ಜುನನಿಗೆ ಪ್ರೇರಣೆಯನ್ನಿತ್ತಿತ್ತೋ, ಅದೇ ಪರಂಪರೆಯು ಇಂದು ಭಾರತೀಯ ಜನತೆಗೆ ಸಮರಸನ್ನದ್ಧರಾಗಲು, ಆಕ್ರಮಣಗಾರರನ್ನು ಹೊಡೆದಟ್ಟಲು, ಧರ್ಮ ಯುದ್ಧಕ್ಕೆ ಸಿದ್ಧರಾಗಲು ಪ್ರೇರಣೆಯನ್ನೀಯುತ್ತಿದೆ.

ಹಿಮಾಲಯವು ಕೇವಲ ಕಲ್ಲು-ಮಣ್ಣಲ್ಲವೆಂಬುದನ್ನು ಶ್ರೀ ರಾಘವಾಚಾರ್ಯರು ತಮ್ಮ ಲೇಖನದಲ್ಲಿ ಸ್ಪಷ್ಟ ಪಡಿಸಿರುವರು. ಅದು ನಮ್ಮ ಪ್ರೇರಣಾ ಶಕ್ತಿ ಇದೆ. ಅದನ್ನು ನಾವು ಸಂರಕ್ಷಿಸಿದಲ್ಲಿ ಅದು ನಮ್ಮನ್ನು ಸಂರಕ್ಷಿಸುತ್ತದೆ. ಅದು ನಮ್ಮ ಎಲ್ಲ ಶಕ್ತಿಯ ಮೂಲ ಕೇಂದ್ರವಿದೆ. ಅದುದರಿಂದಲೇ ನಮ್ಮ ದೇವ-ದೇವತೆಗಳಿಗೆ ಅಲ್ಲಿ ನಿವಾಸ ಸ್ಥಾನಕೊಡಲಾಗಿರುತ್ತದೆ.

ಭಾರತದ ಪರರಾಷ್ಟ್ರ ಧೋರಣೆಯ ಕುರಿತೂ ಅವರು ತಮ್ಮ ಲೇಖನದಲ್ಲಿ ಸ್ಪಷ್ಟಪಡಿಸಿರುವರು. ಇಂದಿನ ನಿಶೆ ಬಾಳ್ವೆ ಭಾರತೀಯರಿಗೆ ಶೋಭಾಸ್ಪದವಾಗಿ ಇರುವದಿಲ್ಲ. ಆದರೆ ಗುಲಾಮಿ ಜೀವನ ನಡೆಸಲು ಅಸಾಧ್ಯವಾಗಿರುತ್ತದೆ. ಕಮ್ಯೂನಿಸ್ಟರ ತಪ್ಪು ಪ್ರಚಾರಗಳಿಗೆ ಹಾಗೂ ರಾಜಕೀಯ ಉದ್ಯೋಗಿಗಳ ನಿರಾಶಾಜನಕವಾದಗ

(೧ನೇ ಪುಟ ನೋಡಿರಿ)


**CANARA BANK**
**JUBILEE EDUCATION FUND**
**LOAN SCHOLARSHIPS**

Under the arrangement with the Canara Bank Jubilee Education Fund, the Canara Bank grants loans to students of outstanding merit who need financial assistance to prosecute higher technical education in India.

For prescribed application form apply to the Secretary Canara Bank Jubilee Education Fund, 110-112, Silver Jubilee Park Road, Bangalore—2, with Re. 1/- by M. O mentioning name and address of the applicant in block letters in the M. O coupon. For replies to enquiries please send necessary postage and correspond only in English.

Application duly filled up should reach the Fund by 30th June, 1963

Selection will be finalised by July end and loans will be granted by the Canara Bank Ltd.

**CANARA BANK LIMITED**
(Estd : 1906)
... In the Service of the Nation —

Regd. Office: MANGALORE
Admn. Office: BANGALORE




ಒಂದು ವಿವೇಚನೆ

# ಸತ್ಯೇತಿಹಾಸಕ್ಕೆ ಅಪಚಾರಬೇಡ

ವಿದ್ಯಾರ್ಥಿಗಳಿಗೆ ಸರಿಯಾದ ಹಾಗೂ ಪಕ್ಷಪಾತರಹಿತ ಇತಿಹಾಸವನ್ನು ಕಲಿಸುವುದು, ಪ್ರತಿಯೊಂದು ದೇಶದ ರಾಷ್ಟ್ರೀಯ ಸರಕಾರದ ಕರ್ತವ್ಯ. ಒಂದೊಮ್ಮೆ ರಾಷ್ಟ್ರೀಯ ಸರಕಾರ, ದೇಶದ ತರುಣ ವಿದ್ಯಾರ್ಥಿಗಳಿಗೆ ತಮ್ಮ ಅಧಿಕಾರಕ್ಕೆ ಆಧಾರಭೂತವಾಗಿರುವ ಯಾವುದೇ ಒಂದು ಸಂಸ್ಥೆ ವಿಶೇಷದ ಇತಿಹಾಸವನ್ನು ಮಾತ್ರ ಕಲಿಸುವ ಪ್ರಯತ್ನ ಮಾಡಿದರೆ ಗಂಭೀರವಾಗಿ ಅದನ್ನು ವಿರೋಧಿಸಲೇ ಬೇಕು. ಈ ರೀತಿಯ ಕೃತ್ಯ ಭೇದಭಾವ ಪೂರ್ಣವಾಗಿರುವುದಷ್ಟೆ ಅಲ್ಲ, ದೇಶದ ಕುರಿತು ಒಂದು ಬೌದ್ಧಿಕ ದ್ರೋಹ ಮಾಡಿದಂತೆಯೇ ಸರಿ.

ನಮ್ಮ ಪ್ರಕಟಿತ ಪಠ್ಯಪುಸ್ತಕವೊಂದರಲ್ಲಿ—"ಕೊನೆಗೆ ಭಾರತ ವರ್ಷ ಕೇವಲ ಗಾಂಧೀಜಿಯವರ ಅಹಿಂಸೆಯಿಂದಲೇ ಸ್ವಾತಂತ್ರ್ಯ ಯುದ್ಧದಲ್ಲಿ ವಿಜಯ ಪಡೆಯಿತು ಹಾಗೂ, ೧೯೫೦ರಲ್ಲಿ ಗಣರಾಜ್ಯದ ಸ್ಥಾಪನೆಯಾಯಿತು" ಎಂದು ಪ್ರಕಟವಾಗಿದೆ

ಐತಿಹಾಸಿಕ ದೃಷ್ಟಿಯಿಂದ ಮೇಲಿನ ಎರಡೂ ಮಾತುಗಳು ತಪ್ಪಾಗಿವೆ. ಪಕ್ಷಪಾತ ಪೂರ್ಣವಿವೆ ನಿಂದನೀಯವಿವೆ. ಇನ್ನೂ ಹಲವಾರು ಕಡೆ ಪಠ್ಯಪುಸ್ತಕಗಳ ಮುಖಾಂತರ ಹಾಗೂ ಅನ್ಯಾನ್ಯ ಸಾಧನಗಳ ಮೂಲಕ ಈ ಮಹಾನ್ ಅಸತ್ಯದ ಪ್ರಚಾರಗೈಯಲಾಗುತ್ತಿದೆ. ಸ್ವಾತಂತ್ರ್ಯವನ್ನು ಕೇವಲ ಕಾಂಗ್ರೆಸು ಅಹಿಂಸಾತ್ಮ ರೂಪದಲ್ಲಿ ರಕ್ತದ ಒಂದು ಬಿಂದುವನ್ನೂ ಭೂಮಿಗೆ ಚೆಲ್ಲಗೊಡದೆ ಪಡೆಯಿತು ಎಂದೆನ್ನಲಾಗುತ್ತಿದೆ.

ಸ್ವರಾಜ್ಯ ಪ್ರಾಪ್ತಿಯ ಸಮಸ್ತ ಶ್ರೇಯವನ್ನು ಸಶಸ್ತ್ರ ಕ್ರಾಂತಿಕಾರಿಗಳಿಗೂ ಒಪ್ಪಿಸಬಾರದು. ಭಾರತ ಮಾತೆಯನ್ನು ದಾಸ್ಯ ಶೃಂಖಲೆಯಿಂದ ಬಿಡುಗಡೆ ಮಾಡಿದ ಶ್ರೇಯ ಯಾವುದೇ ಒಂದು ಸಂಸ್ಥೆಗೆ ಸೇರುವುದಿಲ್ಲ. ಕಳೆದ ಎರಡು-ಮೂರು ತಲೆಮಾರುಗಳ ದೇಶಭಕ್ತರು ಯಾವ ಯಾವ ಕೂಟಗಳೊಡನೆ ಸಂಪರ್ಕವಿಟ್ಟುಕೊಂಡಿದ್ದರೋ ಅವೆಲ್ಲಕ್ಕೂ ಅದರ ಶ್ರೇಯ ಸಲ್ಲುತ್ತದೆ. ೧೮೫೭ರ ಕ್ರಾಂತಿ ವೀರರು, ದಾದಾಭಾಯೀ ನೌರೋಜಿಯವರಿಂದ ಹಿಡಿದು ಗೋಖಲೇಯವರ ವರೆಗಿನ ಉದಾರನಾಯಕರು, ಆ ಸಮಯದಲ್ಲಿ ಉಗ್ರ ಎಂದು ಕರೆಯಲ್ಪಡುತ್ತಿದ್ದ ಸಶಸ್ತ್ರ ಕ್ರಾಂತಿವೀರರು ಮತ್ತು ಅಹಿಂಸಾವಾದಿ ಸತ್ಯಾಗ್ರಹಿಗಳು ಇವರೆಲ್ಲರೂ ಭಾರತ ಮಾತೆಯ ಬಿಡುಗಡೆಯ ಶ್ರೇಯಾಧಿಕಾರಿಗಳಾಗಿರುವರು. ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದ ಅಲಕ್ಷಾಂತರ ಭಾರತೀಯ ನರನಾರಿಯರು ಈ ಆಂದೋಲನದ ಕುರಿತು ಸಹಾನುಭೂತಿ ಪ್ರಕಟಿಸಿದರು. ಆಂದೋಲನ ಯಶಸ್ವಿಯಾಗಿ ಭಾರತ ಭೂಮಿಯು ಸ್ವತಂತ್ರ್ಯವಾಗಲಿ ಎಂದು ದೇವರಿಗೆ ಪ್ರಾರ್ಥನೆ ಸಲ್ಲಿಸಿದರು—ಹರಕೆ ಹೊತ್ತರು. ಈ ಶ್ರೇಯದಲ್ಲಿ ಅವರ ಭಾಗವೂ ಇತರರಷ್ಟೇ ಮಹತ್ವದ್ದಿದೆ. ಇದನ್ನು ನಾವೆಂದೂ ಮರೆಯಬಾರದು—ಮರೆಯಲಾರೆವು.

ಇಂತಹ ಉದಾರ, ನಿಷ್ಪಕ್ಷ ಮತ್ತು ಪ್ರಾಮಾಣಿಕತೆಯಿಂದ ಓತಪ್ರೋತವಾದ ದೃಷ್ಟಿಕೋನವೇ ಇತಿಹಾಸದ ಝರಿಗೆ ಸರಿಯಾದ ಮಾರ್ಗದರ್ಶನ ಗೈಯಬಲ್ಲುದು. ಆದರೆ, ಕಳೆದ ಹದಿನೈದು ವರ್ಷಗಳಲ್ಲಿ ಕ್ರಾಂತಿಕಾರೀ ದೇಶಭಕ್ತರ ಹೆಸರುಗಳನ್ನು ನಮ್ಮ ಪಾಠ್ಯ ಪುಸ್ತಕಗಳಿಂದ ತೆಗೆದೊಗೆಯುವ ಪ್ರಯತ್ನ ಗೈಯಲಾಗಿದೆ. ಶಾಂತಿಪೂರ್ಣ ಸತ್ಯಾಗ್ರಹ ಗೆಯ್ದು ಜೈಲುವಾಸವನ್ನು ಅನುಭವಿಸಿ ಹಿಂತಿರುಗಿದವರು ನಿಜವಾಗಿಯೂ ಸಂಮಾನನೀಯರು ಆದರೆ, ಅವರು ಮಾತ್ರವೇ ದೇಶಭಕ್ತರು ಎಂದು ಪ್ರಚಾರಗೈಯುವುದು, ಅವರಿಂದಲೇ ಸ್ವಾತಂತ್ರ್ಯ ದೊರೆಯಿತು ಎಂದೆನ್ನುವುದು ಸ್ವಾರ್ಥೀ ಮನೋವೃತ್ತಿಯ ಪ್ರಚಾರ.

ದೇಶಭಕ್ತಿಯನ್ನು ಧನದಿಂದ ತೂಗುವುದಾದರೆ—ಇಂದು ಜೀವಂತವಿಲ್ಲದ ಆ ಕ್ರಾಂತಿಕಾರರನ್ನು ಕೋಹಿನೂರ್ ವಜ್ರಗಳಿಂದ ಶೃಂಗರಿಸಬೇಕು. ಮದನ್‌ಲಾಲ್ ಧಿಂಗ್ರಾ, ಕನ್ಹಾಯೀ ಮತ್ತು ಭಗತ್ ಸಿಂಹರಂತಹ ಮಹಾನ್ ದೇಶಭಕ್ತರು ಹಣದ ಗಂಟಿಗಾಗಿ ಯಾ ಬೇರೆ ಲೋಭದಿಂದಾಗಿ ಅಥವಾ, ಸಿಗಲಿರುವ ಆಸ್ತಿಯ ಆಸೆಗಾಗಿ ಮೃತ್ಯುವನ್ನು ಚುಂಬಿಸಿದರೇ?

ರಾಷ್ಟ್ರಹಿತ ದೃಷ್ಟಿಯಿಂದ ಅನುಭವಿಸಿದ ಒಂದು ದಿನವೇನು, ಒಂದು ಗಂಟೆಯ ಕಾರಾಗೃಹ ವಾಸವಾದರೂ ಅದು ಅನುಪಮ ಎಂಬುದನ್ನು ಮರೆಯಬಾರದು ಅಧಿಕಾರ ಪ್ರಾಪ್ತ ಜನರು ಅನ್ಯ ಕ್ರಾಂತಿವೀರರ ಮೇಲೆ ಪ್ರತ್ಯಕ್ಷವಾಗಿಯೇ ಕೆಸರು ಬಳಿಯಲು ನಾಚದಿರುವಾಗ, ಮಾತ್ರವಲ್ಲ—"ಅವರು ವಿಕೃತ ಮನೋವೃತ್ತಿಯ ಬೀಜಫಲಗಳು, ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸುವುದು ನಮಗೆ ಶೋಭಿಸುವುದಿಲ್ಲ" ಎಂದೆನ್ನುವಾಗ, ನಾವೂ ವಿಧಿವಶರಾಗಿ ಈ ನರವೀರರ ಬಲಿದಾನವು ಸಂದರ್ಭಕ್ಕೆ ತಕ್ಕಂತೆ ವೇಷ ಬದಲಿಸಬಲ್ಲ, ಸಂದರ್ಭ ಸಾಧಕರ ಬಲಿದಾನಕ್ಕಿಂತ ಎಷ್ಟೋ ಪಟ್ಟು ಅಧಿಕವಾಗಿದೆ ಎಂದೆನ್ನದೆ ನಿರ್ವಾಹವಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ಪೂರ್ಣ ಶ್ರೇಯಸ್ಸನ್ನು ಕಾಂಗ್ರೆಸಿನ ಹಾಗೂ ಗಾಂಧೀಜಿಯವರ ಹೆಗಲ ಮೇಲೆ ಹೊರಿಸುವುದು, ಈ ದೇಶದ ಆ ಅಸಂಖ್ಯ ಹುತಾತ್ಮರ ಬಗ್ಗೆ ನಾವು ಗೈಯ್ಯುವ ಅನ್ಯಾಯ ಮಾತ್ರವಲ್ಲ—ನಮ್ಮ ರಾಷ್ಟ್ರದ ಪುರುಷತ್ವವನ್ನು ಭ್ರಷ್ಟಗೊಳಿಸುವ ಭಾರತ ಜನಾಂಗದ ಪರಾಕ್ರಮವನ್ನು ಸಮೂಲವಾಗಿ ಕಿತ್ತೊಗೆಯುವ ರಾಷ್ಟ್ರಘಾತಕ ಪ್ರಯತ್ನವೂ ಆಗಿದೆ.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವ ವಿಷಯವನ್ನು ಚರ್ಚೆಗಿಟ್ಟಾಗ, ಬೇರು ಕಳಚುತ್ತಿರುವ ಬ್ರಿಟಿಷ್ ಸಾಮ್ರಾಜ್ಯ ವೃಕ್ಷದತ್ತ ದೃಷ್ಟಿಪಾತ ಗೈಯುತ್ತಾ ಶ್ರೀ ಚರ್ಚಿಲ್ ಅವರು ಅಂದಿನ ಮುಖ್ಯ ಮಂತ್ರಿ ಶ್ರೀ ಎಟ್ಲೀಯವರನ್ನುದ್ದೇಶಿಸಿ—"ಭಾರತಕ್ಕೆ ಸ್ವಾತಂತ್ರ್ಯವನ್ನೀಯದಿದ್ದರೆ ಸಾಧ್ಯವೇ ಇಲ್ಲವೇ?" ಎಂದು ಪ್ರಶ್ನಿಸಿದ್ದರು. ಈ ಪ್ರಶ್ನೆಯನ್ನು ಉತ್ತರಿಸುತ್ತಾ ಶ್ರೀ ಎಟ್ಲೀಯವರು ತನ್ನ ವಿವರತೆಯನ್ನು ಸೂಚಿಸುತ್ತಾ—"ಬ್ರಿಟಿಷ್ ಸರಕಾರವು ಭಾರತಕ್ಕೆ ಸ್ವಾತಂತ್ರ್ಯವನ್ನೀಯುವುದಕ್ಕೆ ಎರಡು ಕಾರಣಗಳಿವೆ. ವೇತನಕ್ಕಾಗಿ ದೇಶಹಿತವನ್ನು ಅಲಕ್ಷಿಸುವ ಹಾಗೂ ಬ್ರಿಟಿಷ್ ಸರಕಾರದತ್ತ ಸ್ವಾಮಿ ಭಕ್ತಿಯ ದೃಷ್ಟಿಯನ್ನು ಬೀರುವ ಸೈನ್ಯ ಈಗ ಭಾರತದಲ್ಲಿಲ್ಲ ಎಂಬುದು ಒಂದು—ಬ್ರಿಟಿಷ್ ಸರಕಾರವು ಭಾರತವನ್ನು ತನ್ನ ಮುಷ್ಟಿಯಲ್ಲಿ ಅದು ಹಿಡಿಯಲು ಬೇಕಾಗುವಷ್ಟು ವಿಶಾಲ ಸೇನೆಯನ್ನು ನಿರ್ಮಿಸಲು ಅಸಮರ್ಥವಿದೆ ಎಂಬುದಿನ್ನೊಂದು" ಎಂದರು.

ಗಾಂಧೀಜಿಯವರ ಅಹಿಂಸಾತ್ಮಕ ಆಂದೋಲನ ಯಾ ಚರಕ ಅಥವಾ ತಕಲಿಯ ಕಿಂಕಿರಿನಾದದಿಂದ ಪ್ರಭಾವಿತರಾಗಿ ನಾವು ಭಾರತವನ್ನು ಬಿಡುತ್ತಿದ್ದೇವೆ ಎಂದೋ ಅಥವಾ ತಮ್ಮ ಹೃದಯ ಪರಿವರ್ತನೆಯಾಗಿ, ತಮಗೆ ತಮ್ಮ ಸಾಮ್ರಾಜ್ಯದಾಹದಡಿಯಲ್ಲಿ ಭಾರತವನ್ನು ನುಚ್ಚುನೂರುಗೊಳಿಸುವುದು ಸರಿಯಲ್ಲ ಎಂದು ಕಂಡು, ಬಂದುದರಿಂದಾಗಿ ತಾವು ಭಾರತದ ಮೇಲಿನ ಅಧಿಕಾರವನ್ನು ಬಿಟ್ಟುಕೊಡುತ್ತಿದ್ದೇವೆ ಎಂದೊ ಎಟ್ಲೀಯವರು ಹೇಳಲ್ಲ ಉಗ್ರವಾದಿಗಳ ದೇಶಭಕ್ತಿಯ ಕೃತ್ಯಗಳು, ಬ್ರಿಟಿಷ್ ವಿರೋಧೀ ಪ್ರಚಾರಕಾರ್ಯಗಳು ಭಾರತೀಯ ಸೇನೆ ಹಾಗೂ ಜನತೆಯ ಮೇಲೆ ಬೀರಿದ ಪ್ರಭಾವಗಳೂ ಚರಕ ತಕಲಿಗಳೊಡನೆ ಕೂಡಿಕೊಂಡಿದ್ದುವು. ಕ್ರಾಂತಿಕಾರಿಗಳು ಆಂಗ್ಲ ವಿರೋಧೀ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಆಂಗ್ಲ ಶಕ್ತಿಯನ್ನು ಬಗ್ಗು ಬಡಿಯುವ ಯೋಜನೆ ಗೈದಿದ್ದರು. ಕ್ರಾಂತಿಕಾರಿಗಳಿಂದ ಉತ್ತೇಜಿತರಾಗಿ ಭಾರತೀಯ ಸೇನೆ ತೋಫಿನ ಬಾಯನ್ನು ಬ್ರಿಟಿಷ್ ಸಾಮ್ರಾಜ್ಯದತ್ತ ತಿರುಗಿಸಿದಾಗ ಆಂಗ್ಲ ಸರಕಾರ ಡೋಲಾಯಮಾನವಾಯಿತು; ಅದಕ್ಕೆ ಭಾರತವನ್ನು ಬಿಟ್ಟು ಕೊಡುವುದು ಅತ್ಯಗತ್ಯವಾಯಿತು.

೧೮೫೭ರಿಂದ ಒಂದೇ ಸವನೆ ನಡೆದಿದ್ದ ಕ್ರಾಂತಿಕಾರೀ ಸಂಘರ್ಷ, ಭಾರತೀಯ ಸೈನ್ಯದಲ್ಲಿ ಕ್ರಾಂತಿಕಾರಿಗಳ ಪ್ರವೇಶ, 'ಅಭಿನವ ಭಾರತ'ದ ಫ್ರಾನ್ಸ್ ಮತ್ತು ಇಂಗ್ಲೆಂಡಿನೊಡನಾದ ಸಂಘಟನೆ, ರಾಸ ಬಿಹಾರೀಬಸು ಅವರ ಪರಾಕ್ರಮೀ ಕಾರ್ಯ, ಬ್ರಿಟಿಷ್ ಸಾಮ್ರಾಜ್ಯ ಸೇನಾ ಶಿಬಿರಗಳಿಗೆ ತನ್ನ ಸಂದೇಶವನ್ನು ಕಳುಹಿಸಿ ವಿದ್ರೋಹಾಗ್ನಿಯನ್ನು ಪ್ರಜ್ವಲಗೊಳಿಸಿದ ವೀರ ಪಿಂಗಳೇಯವರ ಬಲಿದಾನ, ನೇತಾಜೀ ಸುಭಾಷಚಂದ್ರಬೋಸ ಅವರ 'ಆಝಾದ್ ಹಿಂದ್ ಫೌಜ್'ದ ಕರ್ಕಶ ಗರ್ಜನೆ; ಮತ್ತು ಭಾರತದ ಜಲ-ವಾಯು ಸೇನೆಗಳ ವಿದ್ರೋಹ ಬ್ರಿಟಿಷ್ ಸಾಮ್ರಾಜ್ಯವೆಂಬ ವಿಶಾಲ ಭವನದ ಅಡಿಗಲ್ಲನ್ನೇ ಅಲುಗಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸದಿರಬಹುದೇ?

ಇತಿಹಾಸ ಒಂದು ಪವಿತ್ರ ವಸ್ತು. ಯಾವುದೇ ಉದ್ದೇಶಕ್ಕಾಗಿ ಅದನ್ನು ತಮಗೆ ಬೇಕಾದಂತೆ ಬಳಸಿಕೊಂಡು ಸತ್ಯವನ್ನು ಮರೆಮಾಚುವುದು ನಿಂದನೀಯ. ವಿದ್ಯಾಲಯಗಳಲ್ಲಿ ನೈಜ ಇತಿಹಾಸವನ್ನು ಓದಿಸಬೇಕು, ಓದಗೊಡಬೇಕು.

ಆಧಾರ: ವಿನಾಯಕ ದಾಮೋದರ ಸಾವರಕರ

ಅನು: **ಶಿಮುಂಜೆ ಪರಾರಿ.**

---

## ವಿನಂತಿ

ನಮ್ಮ ಕೆಲ ಚಂದಾದಾರರು ನಾವೆಷ್ಟು ಸಲ ವಿನಂತಿಸಿದರೂ ತಮ್ಮ ಚಂದಾಹಣವನ್ನು ಪಾವತಿ ಮಾಡದಿರುವುದು ವಿಷಾದಕರವಿದೆ. ಕೆಲವರು ವಿನಂತಿಸಿದೊಡನೆ ತಾವಾಗಿ ಚಂದಾ ಕಳುಹಿಸಿದ್ದಾರೆ; ಇನ್ನು ಕೆಲವರು ವಿ.ಪಿ.ಪಿ. ಸ್ವೀಕರಿಸುವುದರ ಮೂಲಕ ಚಂದಾ ಸಲ್ಲಿಸಿದ್ದಾರೆ. ಇವರೆಲ್ಲರಿಗೂ ನಾವು ತುಂಬಾ ಆಭಾರಿಗಳಾಗಿದ್ದೇವೆ.

ಇನ್ನೂ ಚಂದಾ ಬಾಕಿ ಇರುವವರು ದಯಮಾಡಿ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ. ಈಗ ಪುನರ್ವಿಮರ್ಶಿತ ಅಂಚೆ ದರಗಳಂತೆ ವಿ. ಪಿ. ಮಾಡಿದರೆ ಮೊದಲಿಗಿಂತಲೂ ಹೆಚ್ಚಿನ ನಷ್ಟವಾಗುವುದು. ಆದುದರಿಂದ ನಮ್ಮ ಕಳಕಳಿಯ ವಿನಂತಿಯನ್ನು ಮನ್ನಿಸಿ ಸರ್ವರೂ ಶೀಘ್ರ ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ಅಭಿಮಾನಪೂರ್ವಕ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

—**ಮೆನೇಜರ್**

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗಾಗಿ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

## ಅಮರ ಕಲಾಗಾರ

# ಜಾರ್ಜ್ ಬರ್ನಾಡ್ ಶಾ

ತನ್ನ ಅಮರ ಕೃತಿಯಾದ "The man and the super man" ಗ್ರಂಥದಲ್ಲಿ ಸ್ವರ್ಗೀಯ ಬರ್ನಾಡ್ ಶಾರವರು ನಿಜವಾದ ಕಲಾಗಾರನ ಚಿತ್ರವನ್ನು ಕೆಳಗಿನ ಗೆರೆಗಳಲ್ಲಿ ಹೇಳಿದಂತೆ ಚಿತ್ರಿಸಿದ್ದಾರೆ --

"ನಿಜವಾದ ಕಲಾಗಾರನು ತನ್ನ ಹೆಂಡತಿಯು ಹಸಿವಿನಿಂದ ಸಾಯುತ್ತಿರುವುದನ್ನು ಕಾಣಬಲ್ಲನು. ಮಕ್ಕಳನ್ನು ಬೈರಾಗಿಗಳಂತೆ ಹೊಟ್ಟೆ-ಬಟ್ಟೆಗಿಲ್ಲದೆ ಅಲೆದಾಡುತ್ತಿರುವುದನ್ನು ಕಂಡಾನು. ಆದರೆ ಎಂಥ ದುರ್ಧರ ಸಂದರ್ಭದಲ್ಲೂ ಕಲೆ ಮತ್ತು ಕಲೆಯ ಆರಾಧನೆಯನ್ನು ಬಿಡಲಾರನು." ಎಂಥ ಉಚ್ಚವಾದ ಧ್ಯೇಯ! ತಮ್ಮ ಜೀವನವನ್ನೇ ಈ ಧ್ಯೇಯಕ್ಕೆ ಪಣವಾಗಿರಿಸುವ ಇಂಗ್ಲೆಂಡಿನ ಈ ಮಹಾನ್ ಕಲಾಗಾರನು ಇಂದು ನಮ್ಮ ಕಣ್ಣಿಗೆ ಮರೆಯಾದರೂ ಆತನ ಉದಾತ್ತ ವಿಚಾರಗಳು ಇಂದಿಗೂ ಹಿಂದಿಗಿಂತ ಹೆಚ್ಚು ವಿಶ್ವದ ಎಲ್ಲಾ ಕಲಾಗಾರರಿಗೆ ಮಾರ್ಗದರ್ಶಕವಾಗಿವೆ.

ತನ್ನ ಯುವಾವಸ್ಥೆಯಲ್ಲಿ ಶಾರವರು ಒಬ್ಬ ಶ್ರೇಷ್ಠ ಕಲಾಗಾರರಾಗಿದ್ದರು. ಬಡತನವೆಂಬುದು ಇವರ ನೆರಳೇ ಆಗಿದ್ದರೂ ಶಾರವರು ಕೆಣಕಿ ಸಿರಿಬಿಡುವ ತನಕವೂ ತನ್ನ ಧ್ಯೇಯ ವಾಕ್ಯವನ್ನು ಮರೆತು ಬಿಡಲಿಲ್ಲ. ಮೊದ ಮೊದಲು ತಮ್ಮ ಉಪನ್ಯಾಸಗಳನ್ನು ಪ್ರಕಟಗೊಳಿಸುವುದಕ್ಕೂ ಅವರಲ್ಲಿ ಹಣವಿಲ್ಲ. ಬಹುಕಷ್ಟಪಟ್ಟು ಅವರು ೧೮೮೫ರಲ್ಲಿ ತಮ್ಮದೊಂದು ಗ್ರಂಥವನ್ನು ಪ್ರಕಟಪಡಿಸಿ ೬|| ಶಿಲಿಂಗ್ ಹಣ ಪಡೆದು ಬಹು ಸಂತುಷ್ಟರಾದರು. ಅವರ ಆ ಗ್ರಂಥವೆಷ್ಟೊಂದು ಶ್ರೇಷ್ಠವಾಗಿತ್ತೆಂದರೆ ಮೂರನೆಯ ವರ್ಷವೇ ಶಾರವರಿಗೆ ೧೭೦ ಶಿಲಿಂಗ್ ಹಣ ಸಿಗುವಷ್ಟು ಸಂಖ್ಯೆಯಲ್ಲಿ ಪುಸ್ತಕದ ಪ್ರತಿಗಳು ಪ್ರಕಟವಾದವು. ಅಂದಿನಿಂದಲೇ ವಿಶ್ವದ ಸಾಹಿತ್ಯಾಕಾಶದಲ್ಲಿ ಅವರು ಧ್ರುವ ತಾರೆಯಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸತೊಡಗಿದರು.

೨೦ನೇ ಶತಮಾನದಲ್ಲಿ ಒಬ್ಬ ಸರ್ವಶ್ರೇಷ್ಠ ಕಲಾಗಾರನ ಸ್ಥಿತಿ ಹೀಗಿತ್ತು!

ಬಡತನದಲ್ಲಿ ಒದ್ದಾಡುತ್ತಿದ್ದರೂ ಶಾರವರು ಎಂದೂ ತನ್ನ ವ್ಯಕ್ತಿಗತ ಸಾಹಸಕ್ಕೆ ತಿಲಾಂಜಲಿಯನ್ನೀಯಲಿಲ್ಲ. ಚಿಕ್ಕಂದಿನಲ್ಲೇ ತಂದೆಯಿಂದ ವಂಚಿತರಾಗಿ ಅವರು ತಾಯಿಯ ಲಾಲನೆ-ಪಾಲನೆಯಲ್ಲಿ ಬೆಳೆದರು. ಬರೆಯುವ ಹುಚ್ಚು ಅವರಿಗೆ ಚಿಕ್ಕಂದಿನಿಂದಲೇ ಕರತಲಾಮಲಕವಾಗಿತ್ತು. ಚಿಕ್ಕಂದಿನಿಂದ ಯೌವನದ ವರೆಗಿನ ಅವರ ಬಡತನದ ಗೋಳು ಹೇಳತೀರದು. ಉಡಲು ಬಟ್ಟೆ ಸಾಕಷ್ಟಿಲ್ಲವಾದುದರಿಂದ ಶಾರವರು ಮನೆ ಬಿಡುತ್ತಿರಲಿಲ್ಲ. ಎಷ್ಟೋ ವೇಳೆ ಆ ಕಷ್ಟ ಬಡತನದಲ್ಲಿ ಒದ್ದಾಡುತ್ತಿದ್ದರೆಂಬುದು ವಿದಿತವಾಗುತ್ತದೆ. ಅವರು ಕೆಲವು ದಿನಗಳನ್ನು ಬರೀ ಆರು ಪೆನ್ನಿಗಳಿಂದಲೇ ದೂಡಿದ್ದುದುಂಟು. ಇಂತಹ ಅಮೃತತುಲ್ಯ ಅನುಭವಗಳನ್ನು ಶಾರವರು ೧೮೯೫ರಲ್ಲಿ ಬರೆದ ತನ್ನ "ವ್ಯಕ್ತಿಗತ ಆಲೋಚನೆ" ಎಂಬ ಗ್ರಂಥದಲ್ಲಿ ಒಡ್ಡಿ ಸಾಹಿತ್ಯ ಅವರನ್ನೇ ಆಕರ್ಷಿಸಿತೆಂಬುದನ್ನು ವಿವರವಾಗಿ ಹೇಳಿದ್ದಾರೆ.

ಬರ್ನಾರ್ಡ್ ಶಾರವರಿಗೆ ಪಾರಕರನ್ನು ಕಾಣುವ ಆವಶ್ಯಕತೆಯೇ ಇಲ್ಲದ-ದರ ಕಾರಣ ಬೆಲೆ ಬಾಳುವ ಬಟ್ಟೆಗಳನ್ನು ಕೊಂಡುಕೊಳ್ಳುವ ಆಗತ್ಯವೂ ಇಂದಿಲ್ಲ. ಆವರೆ ಯಾವೊಬ್ಬ ಓದುಗನೂ ಅವರ ವೈಯುಕ್ತಿಕ ಜೀವನದ ಕರುಣಾಪೂರ್ಣ ಸ್ಥಿತಿಯನ್ನು ಅರಿತುಕೊಳ್ಳುವ ಗೋಜಿಗೆ ಹೋಗಲಿಲ್ಲ. ಹರಿದ ಕೋಟು, ಪೇಂಟುಗಳು ಬೂಟ್ಸುಗಳು ಶಾರವರ ಬಡತನವನ್ನು ಎತ್ತಿ ತೋರಿಸುತ್ತಿದ್ದುವು. ಸಾಬೂನು ಹಾಕಿ ಸ್ನಾನ ಮಾಡದೆ, ತಲೆಗೆ ಎಣ್ಣೆ ಹಾಕದೆ ಎಷ್ಟು ಸಮಯವಾಗಿದೆಯೋ ಏನೋ? ಇಂಥ ಸ್ಥಿತಿಯಲ್ಲೇ ಶಾರವರು ಕೆಲವೊಂದು ಬಾರಿ ಸ್ಟ್ರೀನ್ ನಗರದ ಬೀದಿಗಳಲ್ಲಿ ತಿರುಗಾಡುತ್ತಿದ್ದರು.

ಒಮ್ಮೆ ಒಬ್ಬ ಭಿಕ್ಷುಕ ತನ್ನ ಕಷ್ಟವನ್ನು ಶಾರವರಲ್ಲಿ ಹೇಳಿಕೊಂಡಾಗ ಸ್ವಭಾವತಃ ದುಃಖಾದ್ರ ಹೃದಯದವರಾದ ಶಾರವರ ಮನಸ್ಸು ಕರಗಿತು. ಆದರೆ ಮಾಡಲೇನು? ಅವನಿಗೆ ಯಾವ ವಿಧದಲ್ಲೂ ಉಪಕಾರ ಮಾಡಲು ಅವರು ಅಸಮರ್ಥರೇ ಆಗಿದ್ದರು. ಅವರ ಈ ಬಡತನವನ್ನು ಕಂಡು ಆ ಭಿಕ್ಷುಕನು "ಹಾಗಾದರೆ ಹಣ ಇಲ್ಲದ ತಾವೂ ನನ್ನಂತೆಯೇ ಏಕೆ ಭಿಕ್ಷೆ ಬೇಡಬಾರದು?" ಎಂದು ಕೇಳಿದನು. ಶಾರವರು ನಕ್ಕುಬಿಟ್ಟರು.

ಶಾರವರು ವ್ಯಕ್ತಿಗತ ಜೀವನದಲ್ಲಿ ಯಾವ ಸ್ತ್ರೀಗೂ ಪ್ರಾಧಮಿಕ ಸ್ಥಾನವಿತ್ತಿಲ್ಲ. ಸ್ತ್ರೀಯು ತನ್ನ ಶಾರೀರಿಕ ವಾಸನೆಯ ಅಪೇಕ್ಷೆಗಿಂತ ಅಧಿಕ ತನ್ನ ಕಲಾತ್ಮಕ ಕಲ್ಪನೆಗೋಸ್ಕರ ಪ್ರಮುಖಳಾಗಿದ್ದಾಳೆ ಎಂಬುದು ಅವರ ಅಭಿಪ್ರಾಯವಾಗಿದೆ. ಸ್ತ್ರೀ ಪುರುಷರ ಶಾರೀರಿಕ ಸಂಬಂಧವನ್ನು ಶಾರವರು ಒಪ್ಪುತ್ತಿರಲಿಲ್ಲ. ಆದರೂ ಕ್ರಮೇಣ ಶಾರವರು ಸ್ತ್ರೀಯ ಸಹಜವಾದ ಸೌಂದರ್ಯದಿಂದ ಆಕರ್ಷಿತರಾಗಿದ್ದರು. ಮುಂದೆ ಪ್ರೇಮಾಭಿನಯದಲ್ಲಿ ಸಹ ಅವರು ಚತುರರೆನಿಸಿದ್ದರು.

ಒಮ್ಮೆ ಶಾರವರು ಆ ಕಾಲದ ಶ್ರೇಷ್ಠ ವಾಗ್ಮಿಯೆನಿಸಿದ ಶ್ರೀಮತಿ ಅನ್ನಿ ಬೆಸೆಂಟರನ್ನು ಭೇಟಿಯಾದರು. ಪ್ರಥಮ ಭೇಟಿಯ ಸಂದರ್ಭದಲ್ಲಿ ಶಾರವರಿಗೆ ಅವರ ಮೇಲೆ ತಿರಸ್ಕಾರವೇ ಉಂಟಾಯಿತು. ಒಮ್ಮೆ ಶಾರವರು ಅನ್ನಿ ಬೆಸೆಂಟರು ಭಾಷಣ ಮಾಡಲಿದ್ದ 'ಡಾಯಲೆಕ್ಟಿಕಲ್ ಸೊಸೈಟಿ'ಗೆ ಸಮಾಜವಾದದ ಮೇಲೆ ಭಾಷಣ ಮಾಡಲು ಹೋಗಿದ್ದರು. ಎಲ್ಲರೂ ಶ್ರೀಮತಿ ಬೆಸೆಂಟರು ಶಾರವರ ಭಾಷಣವನ್ನು ಟೀಕಿಸಿಯಾರು ಎಂದು ನಿಶ್ಚಯಿಸಿದ್ದರು. ಆದರೆ ಬೆಸೆಂಟರು ಶಾರವರ ವಿಚಾರಧಾರೆಯನ್ನು ಮುಕ್ತಕಂಠದಿಂದ ಹೊಗಳಿದಾಗ ಎಲ್ಲರಿಗೂ ಆಶ್ಚರ್ಯವಾಯಿತು. ಅಂದಿನಿಂದ ಶಾರವರ ಮತ್ತು ಬೆಸೆಂಟರ ಪರಿಚಯ ಬೆಳೆಯತೊಡಗಿತು. ಶ್ರೀಮತಿ ಬೆಸೆಂಟರು ಶಾರವರ ಕೃತಿಗಳನ್ನು ತನ್ನ ಸ್ವಂತ ಖರ್ಚಿನಿಂದಲೇ ಪ್ರಕಟಿಸತೊಡಗಿದರು. ಹೀಗೆ ಅವರಲ್ಲಿ ಪರಸ್ಪರ ಅನುರಾಗ ಬೆಳೆಯಿತು. ಒಮ್ಮೆ ಬೆಸೆಂಟರು ಶಾರವರನ್ನು ಮದುವೆಯಾಗುವ ಪ್ರಸ್ತಾಪವನ್ನೆತ್ತಿಯಾಯಿತು.

ಬಡತನದಲ್ಲಿ ಶಾರವರು ತನ್ನ ಅರ್ಧ ಜೀವಿತವನ್ನು ಸವೆದಿದ್ದರೂ ಭಾಗ್ಯವಶಾತ್ ಅವರು ಒಬ್ಬ ಶ್ರೀಮಂತ ಸ್ತ್ರೀಯನ್ನು ಮದುವೆಯಾದರು. ಈ ಮದುವೆ ೧೮೯೮ರಲ್ಲಿ ನಡೆಯಿತು. ಕುಮಾರಿ, ಟಾಉನ್ ಸೆಂಡ್ ಎಂಬ ಈ ಐರಿಶ್ ಲೇಡಿಯು 'ಡಾಯಲೆಕ್ಟಿಕಲ್ ಸೊಸೈಟಿ'ಯಲ್ಲೇ ಶಾರವರ ಪರಿಚಯ ಮಾಡಿಕೊಂಡು ಅವರನ್ನು ಪ್ರೇಮಿಸುತ್ತ ಬಂದು ಕೊನೆಗೆ ಮದುವೆಯಾದಳು. ಶಾರವರೂ ಇದಕ್ಕೆ ಪೂರ್ಣ ಒಪ್ಪಿಗೆಯನ್ನಿತ್ತರು.

ವಿವಾಹದ ಬಳಿಕ ಅವರು ಆರೋಗ್ಯ ಕ್ಷೇತ್ರ ಭೂಮಧ್ಯ ಸಾಗರೀಯ ಪ್ರದೇಶದಲ್ಲಿ ವಾಸಿಸತೊಡಗಿದರು. ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಪುನಃ ತಮ್ಮ ಲಂಡನ್ನಿನಲ್ಲಿದ್ದ ಮನೆಗೆ ಬಂದರು. ಅಂದಿನಿಂದ ಅವರು ಒಬ್ಬ ದೊಡ್ಡ ವಿಶ್ವವಿಖ್ಯಾತ ಕಲಾಗಾರ ಎಂದು ಕೀರ್ತಿ ಪಡೆದರು. ಅವರ ಕೃತಿಗಳು ವಿಶ್ವದ ಮೂಲೆ ಮೂಲೆಗೂ ತಲುಪಿ ಅವರ ಹೆಸರು ಅಮರವಾಯಿತು. ಇದರಿಂದ ಅವರು ನಿರ್ಧನತೆಯಿಂದ ಬಿಡುಗಡೆ ಹೊಂದಿ ಸುಖಮಯವಾದ ಜೀವನ ನಡೆಸತೊಡಗಿದರು. ಯೌವನದಲ್ಲಿ ಅವರು ಭಿಕಾರಿಯಂತಹ ಜೀವನ ಸಾಗಿಸುತ್ತಿದ್ದರೂ ತನ್ನ ವೃದ್ಧಾವಸ್ಥೆಯಲ್ಲಿ ವಿಶ್ವದ ಸರ್ವಶ್ರೇಷ್ಠ ವಿಭೂತಿ ಪುರುಷರಾದರು.

— ಬಿ. ಎನ್. ಜೋಗಿತ್ತಾಯ.

## ಕೋಗಿಲೆ ನೀ ಹಾಡು

ಎಷ್ಟದು ಉರಿ! ಬಿಸಿಲಿನ ಝಳ!
ಉರಿಯುವ ಧರೆ ನೋಡು!
ಹಸಿಯಲು ಮಳೆ, ತೊಳೆಯಲು ಕೊಳೆ
ಕೋಗಿಲೆ ನೀ ಹಾಡು! || ೧ ||

ಕಡು ತಾಪದ ಹೊಗೆ ಮುತ್ತಿದೆ!
ಪೊಡವಿಯ ಗತಿಯೆಂತೆ?
ತಿಳಿಗೊಳಲಿನ ಎದೆ ಬತ್ತಿದೆ!
ಉಳಿಯುವ ಪರಿಯೆಂತು? || ೨ ||

ಹಾಡೆಲೆ ಓ ಇನಿದನಿಯಲಿ
ನೀ ಮಳೆಯನು ಬೇಡು!
ಬಾಡುವ ಜಗವರಳಲಿ! ನಲಿ —
— ದಾಡುತಲೀ ಬೇಡು! || ೩ ||

ವೈಶಾಖದ ಆಗಸದಲಿ
ಮುಗಿಲಿನ ಚೆಲು ಮಾಲೆ!
ತೇಲುತಲಿವೆ ಸಂತಸದಲಿ
ನೋಡವುಗಳ ಲೀಲೆ! || ೪ ||

ನೀ ಹಾಡಲು ಜಗ ತಣಿವುದು
ಇಂಚರದಲಿ ಹಾಡು!
ಈ ಬೇಗೆಯು ನೀಗೆ ಮಣಿವುದು
ಸಂಗೀತದ ನೀಡು! || ೫ ||

ಹರಿಯುತಲಿದೆ ಬಿಸಿಲಿನ ಝಳ!
ಗೀತಾಮೃತ ಸುರಿಸು!
ಮರೆ ಮಾಡುತಲೀ ತಳಮಳ
ಕರುಣದ ತೊರೆ ಹರಿಸು || ೬ ||

'ಏತರೆ ಅಳು, ಹಾಡುತ ನಗು!'
ಎನ್ನುವೆಯೊ ಪಕ್ಕಿ!
ನಗು ನಗು ಹಾಡುತ ನೀ ನಗು!
ಚೆಲು ಹರಿಯಲು ಉಕ್ಕಿ! || ೭ ||

ಸೊಗಸಿನ ಕಣ ಧರೆಯಾಗಲಿ
ಈ ಸೊಬಗಿನ ಬೀಡು!
ನವ ಚೇತನ ಮೆಂಗಮೇರಲಿ
|| ೮ ||

ಕವಿದಿಹ ದುಗುಡವ ಕಳೆಯುವುದು
ತವ ರಾಗವು ಸೊಕ್ಕಿ! || ೯ ||

ಮಳೆ ಬಾರದೆ ಗೆಲವೇರದೆ
ಇಳೆ ಬಾಡಿದೆ ನೋಡು!
ಬೇಗೆಯ ನುರಿ, ಮಳೆಯನು ಕರೆ
ಕೋಗಿಲೆ ನೀ ಹಾಡು! || ೧೦ ||

— ಯು ನಾರಾಯಣ ಸೇರಿಗಾರ
ಉಪಾಧ್ಯಾಯರ (ಉಡುಪಿ)

---

**Notice**
**In the Court of the District Munsif of Kasaragod**

R.I.A. 197/1963 in O.S.179/1960

Between,

B. Vishnu Kakkillaya— Petitioner (Plaintiff)

And

Aisabi — Respondent

To

The Respondent:— Aisabi, D/o Kukkaje Kunhali Beary, residing at Balemoole in Ilde village, P. O. Arlapadavu.

Please take notice that the above suit stands posted for your appearance to 20—5—1963 in the above Court, in default the above suit will be decided in your absence & you will be set exparte.

(By order of Court)

M. H. Shama Bhat,
Advocate for Petitioner.

Kasaragod, 7—5—63.

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೋಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇದೇ ವಿಚಾರಿಸಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೧೬-೫-೧೯೬೩ | ೩೬ |

## ಮಧ್ಯಸ್ಥಿಕೆಯ ಸಲಹೆ

ಚೀನೀಯ ಆಕ್ರಮಣವು ಭಾರತ ಉಪಖಂಡದ ಮೇಲೆ ಬಂದುದು. ಅದು ಭಾರತದ ಮೇಲೆ ದುಷ್ಪರಿಣಾಮ ಬೀರುವಂತೆಯೇ ಪಾಕಿಸ್ತಾನಕ್ಕೂ ಗಂಡಾಂತರಕಾರಿಯಾದುದರಿಂದ ಇವೆರಡರ ನಡುವೆ ಸ್ನೇಹ ಹಸ್ತ ಬೆಳೆಯಬೇಕು— ಹೀಗಾದರೆ ತಮಗೂ ಆಕ್ರಮಣ ಪ್ರತಿಭಟನೆಗೆ ಸೈನಿಕ ನೆರವು ನೀಡುವುದು ಸುಲಭವಾಗುವುದು ಎಂಬ ಬ್ರಿಟನ್-ಅಮೆರಿಕೆಗಳ ಅಭಿಪ್ರಾಯದಂತೆ ಭಾರತ ಪಾಕ್ ನೇರ ಮಾತುಕತೆಗಳು ತೊಡಗಿದುವು. ಈ ಮಾತುಕತೆ ಉಭಯತರರ ನಡುವೆ ನೇರವಾಗಿ ನಡೆದಿತ್ತು ಎಂದು ಕಂಡುಬಂದರೂ ಇದುವರೆಗಿನ ಐದೂ ಸುತ್ತುಗಳಲ್ಲಿ ಅಪ್ರತ್ಯಕ್ಷವಾಗಿ ಪಾಶ್ಚಾತ್ಯ ಮಿತ್ರದ್ವಯರೂ ಪ್ರಭಾವ ಬೀರಿದ್ದಾರೆನ್ನಬಹುದು. ಆದರೆ, ಪಾಕಿಸ್ತಾನವು ಜಾತೀಯ ಪ್ರಶ್ನೆಯನ್ನು ಮುಂದೆ ಮಾಡಿ ಇಡಿಯ ಕಾಶ್ಮೀರವನ್ನೇ ಕಬಳಿಸಲು ಬಯಸುತ್ತಿರುವುದರಿಂದ, ಅದರ ದುರಾಸೆಯ ಕಾರಣದಿಂದಾಗಿ ಯಾವ ಪ್ರಗತಿಯೂ ಕಾಣಲಿಲ್ಲ.

ಇಂದೀಗ, ಕಾಶ್ಮೀರ ಪ್ರಶ್ನೆಯ ನಡುವೆ ಮಧ್ಯಸ್ಥರು ಬರುವ ಸುದ್ದಿ ಸ್ಪಷ್ಟವಾಗಿ ಹರಡಿದೆ. ಕಾಶ್ಮೀರದ ತಂಟೆಯನ್ನು ಮಧ್ಯಸ್ಥರ ಕೈಗಳಿಗೊಪ್ಪಿಸಿ, ಅವರ ನಿರ್ಣಯವನ್ನು ಸ್ವೀಕರಿಸಬೇಕೆಂದು ಬ್ರಿಟನ್ ತಯಾರಿಸಿದ ಸೂಚನೆಯು ಅಮೆರಿಕೆಯ ಅನುಮೋದನೆ ಪಡೆದಿದೆಯೆಂದೂ ಪ್ರಧಾನಿ ನೆಹರು ಕೂಡ ಇದನ್ನು ಒಪ್ಪಿರುವರೆಂದೂ ಈಗ ದಟ್ಟವಾಗಿ ವಾರ್ತೆ ಹರಡಿದೆ. ಆದರೆ, ಪಾಕಿಸ್ತಾನದ ನಿಲುವು ಮಾತ್ರ ಇನ್ನೂ ವ್ಯಕ್ತವಾಗಿಲ್ಲ. ಮಧ್ಯಸ್ಥಿಕೆಯನ್ನು ಪ್ರಬಲವಾಗಿ ವಿರೋಧಿಸುತ್ತಿದ್ದ ನೆಹರೂರವರು ಇಂದು ಅದಕ್ಕೆ ತಲೆದೂಗಿರುವುದು ಚೀನೀಯ ಪ್ರಧಾನಿ ಚೌ ಅವರನ್ನೂ ಆಶ್ಚರ್ಯಗೊಳಿಸಿದೆಯೆಂದಾಗ ಉಳಿದವರ ಮಾತೇನು? ಪ್ರಧಾನಿ ನೆಹರು ಈ ಸಲಹೆಯನ್ನು ಸಂಪೂರ್ಣ ಒಪ್ಪಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ಅಧಿಕೃತವಾಗಿ ತಿಳಿದು ಬಂದಿಲ್ಲ. ಒಂದು ವೇಳೆ ಅದನ್ನವರು ಸ್ವೀಕರಿಸಿದ್ದಾರಾದರೆ, ಅದರಲ್ಲಿ ತಪ್ಪಿದೆಯೆನ್ನುವಂತಿಲ್ಲ. ಕಾಶ್ಮೀರವನ್ನು ಪಾಕಿಸ್ತಾನವು ಅಕ್ರಮವಾಗಿ ನುಗ್ಗಿದಾಗ, ಪಾಕ್ ಸೇನೆಯನ್ನು ಕಾಶ್ಮೀರ ಗಡಿಯಿಂದಲೂ ಹೊರಗೆ ಓಡಿಸುವ ಶಕ್ತಿ ಭಾರತಕ್ಕಿತ್ತು. ಆದರೂ ಶಾಂತಿ-ಸೌಹಾರ್ದಗಳ ಅಮರ ತತ್ವಗಳಿಗೆ ಕಟ್ಟುಬಿದ್ದು, ಎದ್ದಿರುವ ವಿವಾದವನ್ನು ಸಂಯುಕ್ತ ರಾಷ್ಟ್ರಸಂಘಕ್ಕೊಪ್ಪಿಸಿತು. ಒಂದು ವೇಳೆ ನೆರೆಯವರು ಮಧ್ಯಸ್ಥಿಕೆಯನ್ನು ಬಯಸುತ್ತಿರಲಿಲ್ಲವಾದರೆ, ಸಂ. ರಾ. ಸಂಘಕ್ಕೆ ದೂರಿಡುವ ಅಗತ್ಯವಾದರೂ ಏನಿತ್ತು? ಆದುದರಿಂದ, ಈಗಾಗಲೀ ಮತ್ತಾವಾಗಲೀ ಭಾರತದ ಕಾಶ್ಮೀರ ನೀತಿಯು ಮೂಲಭೂತವಾಗಿ ಬದಲಾಗಿದೆಯೆನ್ನುವಂತಿಲ್ಲ; ಅದರ ಬಾಹ್ಯ ಸ್ವರೂಪದಲ್ಲಿ ಮಾತ್ರ ಪರಿವರ್ತನೆಯಾಗಿದೆಯೆನ್ನಬಹುದು.

ಸಂಯುಕ್ತ ರಾಷ್ಟ್ರ ಸಂಘವು ಸ್ವೀಕರಿಸಿದ್ದ ಗೊತ್ತುವಳಿಯನ್ನು ಪಾಕಿಸ್ತಾನವು ಕಾರ್ಯಗತ ಮಾಡಲು ತಪ್ಪಿತು; ಆದರೆ, ಅದನ್ನು ಬಲಾತ್ಕರಿಸುವ ಧೈರ್ಯವನ್ನು ಸಂಘವೂ ತೋರಿಸಲಿಲ್ಲ. ಏಕೆಂದರೆ, ಭಾರತ-ಪಾಕ್‌ಗಳ ನಡುವಣ ವಿವಾದವು ಕೊನೆಗೊಳ್ಳುವುದು ಪ್ರಾಯಃ ಪಾಶ್ಚಾತ್ಯ ಬಣಗಳಿಗೆ ಬೇಕಾಗಿರಲಿಲ್ಲ. ಆದುದರಿಂದಲೇ ಅದು ಸತ್ತ ಪ್ರಶ್ನೆಯಾಯಿತು. ಆಗಾಗ ಅದಕ್ಕೆ ಪ್ರಾಣ ತುಂಬಿಸುವ ಪ್ರಯತ್ನ ನಡೆದಿದ್ದರೂ ಕೆಲವೊಬ್ಬರು ಮಂದಿಗಾರರು ಈ ಸಂಬಂಧದಲ್ಲಿ ಮಂದಿಯೊಪ್ಪಿಸಿದ್ದರೂ ಪಾಕ್ ಅಸಭ್ಯತನದಿಂದ ಅವು ನಿರುಪಯುಕ್ತವೆನಿಸಿದುವು. ಆದರೆ, ಇಂದು ಪಾಶ್ಚಾತ್ಯ ರಾಷ್ಟ್ರಗಳು ಭಾರತ-ಪಾಕ್‌ಗಳ ನಡುವೆ ತಾತ್ಕಾಲಿಕವಾದರೂ ಸೌಹಾರ್ದವಿರಬೇಕೆನ್ನುತ್ತಾರೆ. ಏಕೆಂದರೆ ಏಶ್ಯಾದಲ್ಲಿ ಕಮ್ಯುನಿಜಮ್ಮನ್ನು ತಡೆಗಟ್ಟುವಲ್ಲಿ ಭಾರತವು ಗಣನೀಯ ಪಾತ್ರ ವಹಿಸಬಲ್ಲುದು. ತಜ್ಞರೆನ್ನುವಂತೆ ಅನಭಿವೃದ್ಧ ರಾಷ್ಟ್ರಗಳ ಅಭಿವೃದ್ಧಿಗೆ ಕಮ್ಯುನಿಜವೊಂದೇ ತಾರಕವೆಂದು ಜಗತ್ತು ನಂಬಿರುವಾಗ, ಪ್ರಜಾಪ್ರಭುತ್ವವೂ ಪರಿಣಾಮಕಾರಿಯಾಗಬಹುದೆಂಬುದನ್ನು ಲೋಕಕ್ಕೆ ತೋರಿಸುತ್ತಿದೆ ಭಾರತ. ಹಾಗಿರುವಾಗ, ಭಾರತದ ಮೇಲೆ ಕಮ್ಯುನಿಸ್ಟ ಧಾಳಿಯಾಯಿತೆಂದರೆ, ಏಶ್ಯಖಂಡವಿಡಿ ಅದರ ಕ್ರೂರ ದವಡೆಯೆಡೆ ಸಿಕ್ಕಿಬಿದ್ದಂತೆ. ಆದುದರಿಂದಲೇ ಚೀನೀಯ ಆಕ್ರಮಣವನ್ನು ಪ್ರತಿಭಟಿಸಲು ಪಾಶ್ಚಾತ್ಯರು ನೆರವು ನೀಡಲು ಉತ್ಸುಕರಾಗಿರುವರು. ಆದರೆ, ಪಾಕಿಸ್ತಾನದ ಅಪಲಾಪ ಸೂತ್ರ ಇದಕ್ಕೆ ತುಸು ಆತಂಕಕಾರಿಯಾಗಿದೆ. ಪಾಕಿಸ್ತಾನವು ಕಪಟ ನಾಟಕವಾಡುತ್ತಿರುವ ಸತ್ಯವನ್ನಿಂದು ಅವರು ಮನಗಂಡಿದ್ದಾರೆ ಎಂತಲೇ ಕಾಶ್ಮೀರ ಮತ್ತು ಸೈನಿಕ ಸಹಾಯಗಳ ನಡುವೆ ಗಂಟು ಹಾಕುವುದಿಲ್ಲವೆಂದವರು ಅನ್ನುತ್ತಾರೆ.

ಪಾಶ್ಚಾತ್ಯ ಮಿತ್ರರ ಅಭಿಲಾಷೆಯಂತೆ ಕಾಶ್ಮೀರ ಸಮಸ್ಯೆಯನ್ನು ಮಧ್ಯಸ್ಥಿಕೆಗಾರರ ತೀರ್ಮಾನಕ್ಕೆ ಬಿಟ್ಟುಬಿಡಲು ಅಧ್ಯಕ್ಷ ಅಯೂಬ ಖಾನರು ಸಿದ್ಧರಿದ್ದಾರೆಯೇ ಎಂಬುದಿನ್ನೂ ಸ್ಥಿರಪಟ್ಟಿಲ್ಲ. ಇಡಿಯ ಕಾಶ್ಮೀರವನ್ನೇ ತಿಂದು ತೇಗುವ ಹೇರಾಸೆಯಿಂದಿರುವ ಅವರು ಈ ಸೂಚನೆಗೆ ಯಾವ ರೀತಿಯ ಪ್ರತಿಕ್ರಿಯೆ ತೋರಿಸುವರೆಂಬುದನ್ನು ಗಮನಿಸಿಯೇ ಮುಂದಿನ ನಿರ್ಧಾರವಾಗಬೇಕಾಗಿದೆ. ಇಷ್ಟರಲ್ಲೇ ಭಾರತ-ಪಾಕ್‌ಗಳ ನಡುವಣ ಆರನೆಯ ಸುತ್ತಿನ ಮಾತುಕತೆ ಪ್ರಾರಂಭವಾಗಲಿದೆ. ಈ ಸಮಯದಲ್ಲಿ ಇದು ವ್ಯಕ್ತವಾದರೂ ಆಗಬಹುದು. ಅದೇನೇ ಇದ್ದರೂ ಭಾರತವು ತನ್ನ ಕಾಶ್ಮೀರದ ಮೂಲಭೂತ ನೀತಿಯಲ್ಲಿ ಯಾವ ಪರಿವರ್ತನೆಯನ್ನೂ ಮಾಡಲಾರದು. ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ಮಾಡಿದ ರಾಷ್ಟ್ರ. ಕಾಶ್ಮೀರದ ಜನತೆಯು ತಮ್ಮ ಭವಿಷ್ಯವನ್ನು ಈಗಾಗಲೇ ನಿರ್ಧರಿಸಿಕೊಂಡಿದ್ದಾರೆ, ಮತ್ತು ಜಾತೀಯ ಪೆಡಂಭೂತವನ್ನು ವಿವಾದ ಪರಿಹಾರದ ನಡುವೆ ತಳ್ಳಬಾರದು. ಈ ತ್ರಿಸೂತ್ರಗಳನ್ನು ಒಪ್ಪಿಕೊಳ್ಳಲು ಪಾಕಿಸ್ತಾನ ಮತ್ತು ಮಧ್ಯಸ್ಥ ರಾಷ್ಟ್ರಗಳು ತಯಾರಾಗಿದ್ದರೆ, ಮತ್ತು ಇವುಗಳ ಆಧಾರದ ಮೇಲೆ ಪ್ರಶ್ನೆಗೆ ಉತ್ತರವರಸುವಲ್ಲಿ ಉತ್ಸಾಹವನ್ನು ತೋರಿಸುವದಾದರೆ, ಪ್ರಧಾನಿ ನೆಹರು ಈ ಸಲಹೆಯನ್ನು ಒಪ್ಪಬಹುದು. ಅಥವಾ ಈಗಿರುವ ಸಮರ ವಿರಾಮ ರೇಖೆಯಲ್ಲೇ ಹೊಂದಾಣಿಕೆ ಮಾಡಿಕೊಂಡು ಬಗೆಹರಿಸಲೂ ಅವರು ಸಿದ್ಧರಾದರೂ ಭಾರತಕ್ಕೆ ವಿವಾದ ಪರಿಹಾರವಾಗ ಬೇಕು. ಆದರೆ, ನ್ಯಾಯ ಧರ್ಮಗಳನ್ನು ತೂರಿ ಬಿಡಬಾರದು, ಎಂಬ ಆಶಯ ಹಿಂದಿನಿಂದಲೂ ಇದೆ, ಇಂದಿಗೂ ಇದೆ. ಆದರೆ, ಪಾಕ್ ಹಿಂಜರಿತವೇ ಪ್ರಶ್ನೆಯನ್ನು ಹಿಂಬಾಲಿಸುತ್ತ ಬಂದಿದೆಯೆಂಬುದು ಐತಿಹಾಸಿಕ ಸತ್ಯ. ಇದಕ್ಕೆ ಅಪಚಾರವೆಸಗುವುದು ಯಾರಿಗೂ ಸಾಧ್ಯವಿಲ್ಲ.

## ದ. ಆಫ್ರಿಕದ ಉಗ್ರನೀತಿ

'ಏಕ ಜಗತ್ತಿನ ಕನಸು' ಕಾಣುತ್ತಿರುವ ಕೆಲವು ದಾರ್ಶನಿಕರಿಗೆ ದಕ್ಷಿಣ ಆಫ್ರಿಕೆಯು ಅನುಸರಿಸುತ್ತಿರುವ ವರ್ಣಭೇದ ನೀತಿಯು ನುಂಗಲಾರದ ತುತ್ತು. ಪರದೇಶದಿಂದ ಬಂದು ನೆಲಸಿದ ಬಿಳಿಯರು ಅಲ್ಲಿನ ಮೂಲನಾಗರಿಕರಿಗೆ ನಾಗರಿಕಾಧಿಕಾರವನ್ನು ಕೊಡದೆ ಅವರ ಮೇಲೆ ತಮ್ಮ ಪ್ರಭುತ್ವವನ್ನು ಹೇರುವ ನೀತಿಯನ್ನು ಲೋಕಕ್ಕೆ ಲೋಕವೇ ಖಂಡಿಸಿದರೂ ಪ್ರಯೋಜನವಾಗಿಲ್ಲ. ಎರಡು ವರ್ಷಗಳಿಗೆ ಮೊದಲು ಕಾಮನ್‌ವೆಲ್ತ್ ಕೂಟದಿಂದ ಅದನ್ನು ಹೊರಗೆ ಹಾಕಿದಾಗ ನಿರೀಕ್ಷಿಸಲಾಗಿದ್ದ ಪರಿಣಾಮಗಳಾವುವೂ ಇಂದಿಗೂ ತೋರಿಬರುತ್ತಿಲ್ಲ. ಸಂಯುಕ್ತರಾಷ್ಟ್ರ ಸಂಘವಾದರೂ ಈ ವರ್ಣಭೇದ ನೀತಿಯನ್ನು ಖಂಡಿಸಿದೆ, ಮತ್ತು ಅದರ ಸದಸ್ಯ ರಾಷ್ಟ್ರಗಳಲ್ಲಿ ಹೆಚ್ಚಿನವು ದ. ಆಫ್ರಿಕೆಗೆ ಆರ್ಥಿಕ ಬಹಿಷ್ಕಾರವನ್ನು ಹೇರಿವೆ. ಆದರೆ, ಪ್ರಬಲ ರಾಷ್ಟ್ರಗಳು ಇನ್ನೂ ಅದರ ಸ್ನೇಹವನ್ನು ಉಳಿಸಿಕೊಂಡಿರುವುದರಿಂದ ಯಾವ ಪ್ರಭಾವವನ್ನು ಬೀರುವಲ್ಲಿಯೂ ಈ ಬಹಿಷ್ಕಾರ ಕೃತಕೃತ್ಯವಾಗಲಿಲ್ಲ. ಇತ್ತೀಚೆಗೆ ಮೆಂಜಿಸ್ ಸರಕಾರವು ಅಲ್ಲಿ ಮೂಲ ದ. ಆಫ್ರಿಕನರನ್ನು ಸಂಪೂರ್ಣವಾಗಿ ಹತ್ತಿಕ್ಕುವ ಮಹಾ ಕಾರ್ಯದಲ್ಲಿ ತೊಡಗಿದೆ, ಮಾನವತೆಯನ್ನು ಮರೆತು, ದಾನವತೆಯನ್ನು ಕೈನೀಡಿ ಕರೆಯುತಿದೆ— ಇದು ಸಂ. ರಾ. ಸಂಘದ ಪರಿಶೀಲನಾ ಸಮಿತಿಯ ವರದಿಯಿಂದ ವ್ಯಕ್ತವಾಗುತ್ತವೆ. ಈ ಸಮಿತಿಯು ಇನ್ನೂ ದ. ಆಫ್ರಿಕೆಯೊಡನೆ ಆರ್ಥಿಕ ಸಂಬಂಧವಿರಿಸಿಕೊಂಡಿರುವ ೨೦ ರಾಷ್ಟ್ರಗಳಿಗೆ ಆ ಸಂಬಂಧವನ್ನು ಕಡಿದುಕೊಳ್ಳುವಂತೆ ಕೇಳಿಕೊಂಡಿದೆ. ಇದರಿಂದಲೇ ವರ್ಣಭೇದ ನೀತಿಯು ಅಲ್ಲಿ ಅದೆಷ್ಟು ಉಗ್ರ ರೂಪ ತಳೆದಿದೆಯೆಂದು ಸ್ಪಷ್ಟವಾಗುತ್ತದೆ. ನಾಗರಿಕ ಜಗತ್ತು ಅಖಂಡವಾಗಿ ಸರ್ವ ರೀತಿಯಿಂದಲೂ ಅದರ ಮೇಲೆ ಬಹಿಷ್ಕಾರ ಹೇರಿ, ಮಾನವತೆಯನ್ನು ಎತ್ತಿ ಹಿಡಿಯುವಂತಾಗಬೇಕು; ಏಕಜಗತ್ತಿನ ಭಾವನಾಲತೆಗೆ ಬಿಸಿ ನೀರೆರೆದರೆ, ಮುಂದೆ ಸರ್ವನಾಶಕ್ಕೆ ಅದುವೇ ನಾಂದಿಯಾದೀತು.

## ವಾರ್ತಾವೇದಿಕೆ

### ರಾಧಾಕೃಷ್ಣನ್

ಐತಿಹಾಸಿಕ ಕಾಲದಲ್ಲೂ ಭಾರತದೊಡನೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಅಫಘಾನಿಸ್ತಾನ ಮತ್ತು ಇರಾಣಗಳನ್ನು ಸಂದರ್ಶಿಸುವುದಕ್ಕಾಗಿ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಹೊರಟಿದ್ದಾರೆ. ಭಾರತದ ಹಿತೈಷಿಗಳಲ್ಲಿ ಒಂದಾದ ಅಫಘಾನಿಸ್ತಾನ ಮತ್ತು ಭಾರತದ ಮಿತ್ರ ದೇಶ ಇರಾಣಗಳಲ್ಲಿ ಅವರು ಭಾರತೀಯತೆಯ ಪ್ರಭಾವವನ್ನು ಬೀರುತ್ತಾರೆ. ಚೀನಾ-ಪಾಕಿಸ್ತಾನಗಳು ಸಂಯುಕ್ತವಾಗಿ ಭಾರತದ ಮೇಲೆ ಕಿಡಿಕಾರುತ್ತಿರುವ ಈ ಸಂದರ್ಭದಲ್ಲಿ ಭಾರತೀಯ ಮಿತ್ರರಾಷ್ಟ್ರಗಳ ಬಲವನ್ನು ಇನ್ನೂ ಹೆಚ್ಚಾಗಿ ಪಡೆಯುವುದಕ್ಕೆ ಈ ಭೆಟ್ಟಿ ಸಹಕಾರಿಯಾಗಬಲ್ಲುದು.

### ಜವಹರಲಾಲ

ಪ್ರತ್ಯೇಕತೆಯನ್ನು ಪ್ರತಿಪಾದಿಸುವುದನ್ನು ಅಪರಾಧವೆಂದು ಪರಿಗಣಿಸುವುದಕ್ಕೆ ಸಂವಾದಿಯಾದ ಸಂವಿಧಾನ ತಿದ್ದುಪಡಿ ಮಸೂದೆ ಮಂಜೂರಾಯ್ತು ನಿಜ. ಆದರೆ, ನಾಗಾಬಂಡುಗಾರರು ಮಾತ್ರ ತಮ್ಮ ಪ್ರತ್ಯೇಕತೆಯವಾದವನ್ನು ಬಿಡಲು ಸಿದ್ಧರಿಲ್ಲವೆಂದು ತೋರುತ್ತದೆ. ಬಂಡುಗಾರ ನಾಗಾ ಫಿಜೋ ತನ್ನ ಉಪದ್ವ್ಯಾಪವನ್ನು ಮತ್ತೂ ಮುಂದುವರಿಸುವ ಆಶಯದಿಂದಿದ್ದಾನೆ. ನಾಗಾ ಪ್ರದೇಶವು ಸಂಪೂರ್ಣ ಸ್ವತಂತ್ರವಾಗಬೇಕು. ಮತ್ತು ಅದು ಯಾವುದರಲ್ಲಿ ಸೇರಿಕೊಳ್ಳಬೇಕೆಂಬುದನ್ನು ಜನಮತ ಗಣನೆಯಿಂದ ನಿರ್ಧರಿಸಬೇಕು ಎಂದಾತ ಸಂ. ರಾ. ಸಂಘಕ್ಕೆ ಮನವಿ ಮಾಡಲಿರುವನಂತೆ. ಫಿಜೋ ಮತ್ತಾತನ ಅನುಯಾಯಿಗಳನ್ನು ಹದಕ್ಕೆ ತರುವಲ್ಲಿ ನೆಹರು ಸಫಲರಾಗುವರೆ?

### ಕೃಷ್ಣಮಾಚಾರಿ

ಡೀನ್‌ರಸ್ಕ್ ಮತ್ತು ಡಂಕನ್ ಸ್ಯಾಂಡಿಸರ ದಿಲ್ಲಿ ಭೇಟಿಯಿಂದ ಅವರಿಗೇನು ಲಾಭವಾಯಿತು ಎನ್ನು

ಮುದ್ರಣ
ಸಣ್ಣದಿರಲಿ, ದೊಡ್ಡದಿರಲಿ,
ಯಾವದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —
ನವಯುಗ ಪ್ರೆಸ್
ಸಂತೆಕಟ್ಟೆ
ಉಡುಪಿ

ವುದು ಸಾಧ್ಯವಿಲ್ಲ. ಆದರೆ, ವಿದೇಶೀ ನೆರವನ್ನು ಪಡೆಯುವ ವಿಚಾರದಲ್ಲಿ ಮಾತುಕತೆಗಳನ್ನು ನಡೆಸಲು ಒಮ್ಮೆ ನಿಶ್ಚಯಿಸಿದ ತಮ್ಮ ಪ್ರವಾಸವನ್ನು ಟಿ. ಟಿ. ಕೆ. ಮತ್ತೀಗ ಕೈಗೊಳ್ಳುವಂತಾಯಿತು. ಕೆನಡಾ, ಅಮೆರಿಕೆ ಮತ್ತು ಬ್ರಿಟನ್‌ಗಳ ಸಂದರ್ಶನವೇ ಇದರ ಉದ್ದೇಶ. ಕಾಶ್ಮೀರ ಪ್ರಶ್ನೆಯು ಇತ್ಯರ್ಥವನ್ನೂ ನೆರವನ್ನೂ ಹೊಂದಿಸಿ ನೋಡುವುದಿಲ್ಲವೆಂಬ ಭರವಸೆಯೀಗ ಬಂದುದರಿಂದ ಟಿ. ಟಿ. ಕೆ. ಖಂಡಿತಕ್ಕೂ ಯಶಸ್ವಿಯಾಗುತ್ತಾರೆ.

### ಜಾನ್ ಕೆನ್ನೆಡಿ

ಸಾರ್ವಜನಿಕ ಕ್ಷೇತ್ರದಲ್ಲಿ ನಿರ್ಮಾಣಗೊಳ್ಳಲಿರುವ ಬುಕಾರೊ ಉಕ್ಕಿನ ಕಾರಖಾನೆಗೆ ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರು ನೆರವು ನೀಡುವುದು ಅಮೆರಿಕೆಯ ಪರಮ ಕರ್ತವ್ಯವೆಂದು ಹೇಳುತ್ತಾರೆ. ಉಕ್ಕಿನ ಸಮಿತಿಯು ಈ ಸಂಬಂಧದ ನಿರ್ಧಾರವನ್ನು ಅನಿರ್ದಿಷ್ಟಾವಧಿಯವರೆಗೆ ಮುಂದುವರಿಸಿದ್ದರೂ ಅಮೆರಿಕನ್ ಕಾಂಗ್ರೆಸ್ ಭಾರತದ ಇಂದಿನ ಆವಶ್ಯಕತೆಯನ್ನು ಮನಗಾಣದಿರದು ಎಂದವರ ಆಶಯ. ಖಾಸಗಿ ಉದ್ದಿಮೆಗಳನ್ನು ರಾಷ್ಟ್ರೀಕರಿಸುವುದಕ್ಕೆ ಕೆನಡಾಕ್ಕೆ ಅಮೆರಿಕೆಯು ನೆರವು ನೀಡುತ್ತಿರುವಾಗ, ಸಾರ್ವಜನಿಕ ಉದ್ಯಮ ರಂಗಕ್ಕೇಕೆ ಸಹಾಯವು ಸಿಗಬಾರದು? ಎಂದು ಸವಾಲು ಹಾಕುತ್ತಾರೆ ಅವರು.

### ಅಯೂಬಖಾನ

ಭಾರತ-ಚೀನಾ ಗಡಿ ವಿವಾದದಿಂದ ಸಾಧ್ಯವಾದಷ್ಟು ಲಾಭಗಳಿಸುವ ಇರಾದೆಯಿಂದ ಕೂಡಿದ ಏಕಮೇವ ವ್ಯಕ್ತಿಯೆಂದರೆ ಪಾಕ್ ಅಧ್ಯಕ್ಷ ಅಯೂಬಖಾನರು. ಚೀನಾದೊಡನೆ ಅನ್ಯಾಯವಾಗಿ ಗಡಿ ಒಡಂಬಡಿಕೆಯನ್ನು ಮಾಡಿಕೊಂಡ ಅವರು ತಮ್ಮ ವಿದೇಶ ಮಂತ್ರಿ ಭುಟ್ಟೋರೊಡನೆ ಮೊನ್ನೆ ಮೊನ್ನೆ ನೇಪಾಲದ ಅರಸು ಮಹೇಂದ್ರರ ಅತಿಥಿಗಳಾಗಿಯೂ ಉಳಿದು ಬಂದರು. ನೇಪಾಲದಲ್ಲಿ ಒಂದೊಮ್ಮೆ ಭಾರತ ವಿರೋಧಿ ಚಳುವಳಿ ಕಂಡುಬಂದಿತ್ತು; ಆದರಿಂದದು ಕಡಿಮೆಯಾಗುತ್ತಿದೆ. ಉತ್ತರದ ಗಡಿಯಲ್ಲಿ ಕೆಂಪು ಕತ್ತಿಗಳು ಹೊಳೆಯುತ್ತಿರುವಾಗ ಧೂರ್ತ ಅಯೂಬ ಮತ್ತು ಮಹೇಂದ್ರರ ಭೆಟ್ಟಿಯ ಮೂಲ ಉದ್ದೇಶವಿನ್ನೂ ವ್ಯಕ್ತವಾಗಿಲ್ಲ.

### ಪ್ರತಾಪ ಸಿಂಹ

ಚೀನೀಯ ಆಕ್ರಮಣಕ್ಕೆ ಭಾರತವು ಬಲಿಯಾದ ದುರ್ಧರ ಸಮಯದಲ್ಲಿ ಪಾಕಿಸ್ತಾನವೂ ಆಕ್ರಮಣದ ಸಿದ್ಧತೆ ನಡೆಸಿ ದಿನವನ್ನೂ ಗೊತ್ತು ಮಾಡಿತ್ತೆಂದೂ ಆದರೆ, ದುರ್ದೈವದಿಂದ ಅದಕ್ಕೆ ಹಾಗೆ ಮಾಡಲು ಸಾಧ್ಯವಾಗಲಿಲ್ಲವೆಂದೂ ಪಂಜಾಬದ ಮುಖ್ಯಮಂತ್ರಿ ಪ್ರತಾಪಸಿಂಹ ಕೈರೊನರು ಹೇಳಿದ್ದಾರೆ. ಈ ರಹಸ್ಯವನ್ನು ಸ್ಫೋಟಗೊಳಿಸುತ್ತ ಅವರು ಭಾರತೀಯರು ಪ್ರಾಣ ಪಣಕ್ಕಿಟ್ಟು ದೇಶವನ್ನು ರಕ್ಷಿಸಲು ಸಿದ್ಧರಿರುವರೆಂಬುದನ್ನು ಉದ್ಘೋಷಿಸಿದರು. ಆದರೆ, ಕೇವಲ ಘೋಷಣೆಯಿಂದ ಕಾರ್ಯ ಸಾಗುವುದಿಲ್ಲ. ಹಗರಣದ ಮಾತುಗಳನ್ನು ಕಡಿಮೆ ಮಾಡಿ ಶತ್ರು ಬಲವನ್ನು ಎದುರಿಸಲು ಬಲಸಂವರ್ಧನಾ ಕಾರ್ಯದಲ್ಲಿ ನಾವೆಲ್ಲರೂ ನಿಮಗ್ನರಾಗಬೇಕು.

### ಡಾ| ಮಾಧವ ಪೈ

ಲಕ್ಷವಳ್ಳಿಯ ಸಮೀಪ ಲೇಕ್ ಯುನಿವರ್ಸಿಟಿಯನ್ನು ಸ್ಥಾಪಿಸುವ ತಮ್ಮ ವಿಚಾರವನ್ನು ಸಾರ್ವಜನಿಕರ ಮುಂದೆ ಇಟ್ಟಿದ್ದಾರೆ. ಡಾ. ಮಾಧವ ಪೈ ಇದನ್ನು ವಿಮರ್ಶಿಸಿ ಜನತೆಯೂ ಸರಕಾರವೂ ನಿರ್ಧಾರಕ್ಕೆ ಬರಬೇಕಾಗಿದೆ. ಅಲ್ಲಿ ಸರಕಾರವು ೧೦ ಸಾವಿರ ಎಕ್ರೆ ಭೂಮಿಯನ್ನು ಕೊಟ್ಟರೆ, ಕಟ್ಟಡಗಳಿಗೆ ಅಗತ್ಯವಾದ ಭೂಮಿಯನ್ನಿಟ್ಟುಕೊಂಡು ಉಳಿದುದನ್ನು ಮಾರಿ ಸುಮಾರು ೮ ಕೋಟಿ ರೂಪಾಯಿ ಗಳಿಸಬಹುದೆಂದೂ ಇದರಿಂದ ವಿಶ್ವವಿದ್ಯಾಲಯ ಕಟ್ಟುವುದು ಸುಲಭವಾಗುವುದೆಂದೂ ಅವರು ಹೇಳುತ್ತಾರೆ. ಈ ಬಗ್ಗೆ ಸರಕಾರವು ತೀವ್ರ ಆಸಕ್ತಿ ತಳೆಯುವುದು ಕರಾವಳಿನಾಡಿನ ಉನ್ನತೀಕರಣದ ದೃಷ್ಟಿಯಿಂದಲೂ ಅತ್ಯಗತ್ಯವೆನ್ನಬಹುದು.

## ಅಲ್ಲಲ್ಲಿಯ ಸುದ್ದಿ ಸಾರ

**ಆಡಳಿತ ಮಂಡಳಿ ಸಭೆ—** ತಾರೀಕು 9-5-63ರಂದು ಉಡುಪಿ ತಾಲೂಕು ಸೋಮಕ್ಷತ್ರಿಯ ಗಾಣಿಗ ಸಮಾಜದ ಆಡಳಿತ ಮಂಡಳಿಯ ಸಭೆಯು ಉಡುಪಿಯಲ್ಲಿ ಶ್ರೀಯುತ ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಗತ ಸಭೆಯ ವರದಿವಾಚನ, ಸಂಘದ ಆಯ-ವ್ಯಯ ಲೆಕ್ಕ ಪತ್ರ ಪರಿಶೋಧನೆಯಾದ ಬಳಿಕ ಸಂಘದಿಂದ ಸಹಾಯ ಧನವನ್ನು ಪಡೆಯಲಿಚ್ಛಿಸುವ ಬಡ ವಿದ್ಯಾರ್ಥಿಗಳಿಂದ ಅಪೇಕ್ಷಾ ಪತ್ರಗಳನ್ನು ತಾ. 8—6—63ರ ವರೆಗೆ ಪಡೆದು, ಅರ್ಹ ವಿದ್ಯಾರ್ಥಿಗಳಿಗೆ ತಾ. 9—6—63ರಂದು ಹಣವನ್ನು ಹಂಚಬೇಕೆಂದು ನಿರ್ಧರಿಸಲಾಯಿತು. ಅಧ್ಯಕ್ಷರ ಹಿತವಚನದ ಬಳಿಕ, ಕಾರ್ಯದರ್ಶಿಗಳಿಂದ ಧನ್ಯವಾದ ಸಮರ್ಪಣೆಯಾಗಿ ಸಭೆಯು ಮುಕ್ತಾಯಗೊಂಡಿತು.

**ಮಚ್ಚಿನ ಶಾಲಾ ವರ್ಧಂತ್ಯುತ್ಸವ**

ಬೋರ್ಡು ಹಾ| ಪ್ರಾ| ಶಾಲೆಯ ವರ್ಧಂತ್ಯುತ್ಸವವು ತಾ. 27-4-'63ರಂದು ಬೆಳ್ತಂಗಡಿ ತಾಲೂಕಿನ ಬಿ. ಡಿ. ಓ. ಶ್ರೀ ಕೆ. ಧರ್ಮರಾಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಕಮಿಟಿ ಅಧ್ಯಕ್ಷ ಶ್ರೀ ಎಂ. ಎಚ್. ಸಂಪಿಗೆತ್ತಾಯರು ಸ್ವಾಗತ ಭಾಷಣ ಮಾಡಿದರು. ಪ್ರಾಧ್ಯಾಪಕ ಶ್ರೀ ಬಿ. ನರಸಿಂಹ ಮಯ್ಯರು ಪ್ರಗತಿಪರ ವರದಿಯನ್ನೋದಿದರು. ಶ್ರೀಮತಿ ಧರ್ಮರಾಜರು ಬಹುಮಾನ ವಿತರಣೆ ಮಾಡಿದರು. ಶ್ರೀ ಬಿ. ನಾರಾಯಣ ಜೋಗಿತ್ತಾಯರು ತಮ್ಮ ಸ್ವಸ್ತಿವಾಚನದಲ್ಲಿ ಸರ್ವರೂ ಶಾಲೆಯ ಶ್ರೇಯೋಭಿವೃದ್ಧಿಗಾಗಿ ದುಡಿಯುವುದು ಅಗತ್ಯವೆಂದರು. ಸಭಿಕರಲ್ಲಿ ಡಾ. ಯಂ. ಸಿ. ಆರ್. ಸಂಪಿಗೆತ್ತಾಯರು ಮಾತಾಡಿದರು.

ಅಧ್ಯಕ್ಷರು ಶಾಲೆಯ ಅಭಿವೃದ್ಧಿಯ ಬಗ್ಗೆ ತೃಪ್ತಿ ಸೂಚಿಸಿ ಮಾತಾಡಿದ ಬಳಿಕ ವಿವಿಧ ವಿನೋದಾವಳಿಗಳಾದುವು

**ವಿವೇಕಾನಂದರ ಭಾವಚಿತ್ರ ಅನಾವರಣ—** ಮಚ್ಚಿನ ಬೋ| ಹಾ| ಶಾಲೆಯ ವರ್ಧಂತ್ಯುತ್ಸವದ ಬಗ್ಗೆ ಸ್ಥಳೀಯ ಪಂಚಾಯತ ಸರಕಾರದಿಂದ ವಿವೇಕಾನಂದರ ಶತಸಾಂವತ್ಸರಿಕೋತ್ಸವವನ್ನು ಬೆಳ್ತಂಗಡಿ ತಾಲೂಕ ತಹಸಿಲ್ದಾರ್ ಶ್ರೀ ಕೆ. ಸಂಜೀವನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಪಂಚಾಯತ ಸೆಕ್ರೆಟರಿ ಶ್ರೀ ಕೆ. ಸಿ. ಬಲ್ಲಾಳರು ಸ್ವಾಗತಿಸಿದರು. ಅಧ್ಯಕ್ಷರು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನಿತರಾದವರಿಗೆ ಬಹುಮಾನ ವಿತರಣೆ ಮಾಡಿದರು. ವಿವೇಕಾನಂದರ ಭಾವಚಿತ್ರವನ್ನು ಅನಾವರಣ ಮಾಡುತ್ತಾ ಡಾ. ಯಂ. ಸಿ. ಆರ್. ಸಂಪಿಗೆತ್ತಾಯರು ಇಂದಿನ ರಾಷ್ಟ್ರದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬನೂ ವೀರ ವಿವೇಕಾನಂದರಾಗಬೇಕೆಂದು ಕರೆಯಿತ್ತರು. ಶ್ರೀ ಬಿ. ನಾರಾಯಣ ಜೋಗಿತ್ತಾಯರು ವಿವೇಕಾನಂದರ ಜೀವನ, ತತ್ವ, ಉಚ್ಚ ಆದರ್ಶಗಳನ್ನು ವಿವರಿಸುತ್ತಾ ಅವರಿತ್ತ ಸಂದೇಶ ಮೈಗೂಡುವಂತಾಗಬೇಕೆಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂತಹ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಚರಿಸುವುದರಿಂದ ಸಾಮಾನ್ಯ ಜನರಲ್ಲಿ ಉಂಟಾಗುವ ಜಾಗೃತಿಯನ್ನು ಮಾರ್ಮಿಕವಾಗಿ ವಿವರಿಸಿದರು. ನಂತರ ಶ್ರೀ ಬಿ. ನರಸಿಂಹ ಮಯ್ಯರು ಧನ್ಯವಾದಗಳನ್ನು ಅರ್ಪಿಸಿದರು. ವಿವಿಧ ವಿನೋದಾವಳಿಗಳೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

**ಸಿಂಡಿಕೇಟ್ ಬೇಂಕಿನ ಹೊಸ ಕಟ್ಟಡದ ಉದ್ಘಾಟನೆ—** ಇದೇ ತಾ. 11ರಂದು ಕಿನ್ನಿಗೋಳಿ ಸಿಂಡಿಕೇಟ್ ಬೇಂಕಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಮಂಗಳೂರಿನ ಮೋ. ರೆ ಫಾ ರೆಮಂಡ್ ಡಿಮೆಲ್ಲೋರವರು ನೆರವೇರಿಸುತ್ತಾ ಸಿಂಡಿಕೇಟ್ ಬೇಂಕಿನಲ್ಲಿ ಕೆಥೋಲಿಕರ ಆರ್ಥಿಕ ಹಿತಸಾಧನೆ ಸುಭದ್ರವಾಗಿದೆಯೆಂದರು. ಪ್ರಾರಂಭದಲ್ಲಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಗಳು ಸ್ವಾಗತಿಸಿ ಮಾತಾಡುತ್ತಾ ಬೇಂಕಿನ ಪ್ರಗತಿಯನ್ನು ತಿಳಿಸಿದರು. ಸಭಿಕರ ಪರವಾಗಿ, ರೆ ಫಾ ಜೆರೋಮ್ ಡಿ'ಸೋಜಾ, ಡಾ. ಎಸ್. ಉಂಬ್ರಾ, ಎಂ.ಎಲ್.ಸಿ., ಡಾ. ಎಸ್. ವರದರಾಜ ಆಸ್ರಣ್ಣ, ಡಾ. ಎಂ. ಎಸ್. ನಾಯಕ್, ಸಂಜೀವ ಶೆಟ್ಟಿ, ಪ್ರೊ| ಸಿ. ಎ. ಸಲ್ಡಾನ್ಹಾರವರು ಬೇಂಕಿನ ಬಹುಮುಖ ಸೇವೆ, ಪ್ರಗತಿಯನ್ನು ಶ್ಲಾಘಿಸಿ ಮಾತಾಡಿದ ಬಳಿಕ ಶ್ರೀ ಟಿ. ಎ. ಪೈಗಳು ಧನ್ಯವಾದ ಸಮರ್ಪಿಸಿದರು.

**ಪೆರ್ಡೂರಿನಲ್ಲಿ ಸಾಂಸ್ಕೃತಿಕ ಮಹೋತ್ಸವದ ಉದ್ಘಾಟನೆ—** ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಅಷ್ಟಬಂಧ ಕಾರ್ಯಕ್ರಮದ ಪ್ರಯುಕ್ತವಾಗಿ ಇದೇ ತಾ. 5, 7, ಮತ್ತು 8ನೇ ದಿನಾಂಕಗಳಲ್ಲಿ ಏರ್ಪಡಿಸಲಾದ ಸಾಂಸ್ಕೃತಿಕ ಮಹೋತ್ಸವದ ಉದ್ಘಾಟನಾ ಸಮಾರಂಭವು ಉಡುಪಿಯ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾವಲ್ಲಭ ಶ್ರೀಪಾದಂಗಳವರಿಂದ, ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ತಾ. 5—5—63ರಂದು ನೆರವೇರಿಸಲ್ಪಟ್ಟಿತು.

ಆರಂಭದಲ್ಲಿ ಶ್ರೀ ಎ. ಪಿ. ಕಲ್ಯಾಣಿಯವರು ಅತಿಥಿ ಪರಿಚಯ ಮಾಡಿತ್ತ ಬಳಿಕ ಶ್ರೀ ಕೆ. ಪಿ. ಅರ್ಗ ತಂತ್ರಿಗಳು ಅಷ್ಟಬಂಧ ವಿಚಾರವನ್ನು ವಿವರಿಸಿದರು. ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಧರ್ಮ ಸಮಾಜ ಎನ್ನುವ ಕುರಿತು ಮಾತಾಡಿದರು. ಅಧ್ಯಕ್ಷ ಭಾಷಣವಾದ ಬಳಿಕ ಶ್ರೀ ಕೊಟ್ಟಾರಿ ವರದರಾಯ ಪೈಗಳು ಧನ್ಯವಾದ ಸಮರ್ಪಿಸಿದರು. ಶ್ರೀ ಎಂ. ಪ್ರಭಾಕರರವರ ದೇವರ ನಾಮ ಸಂಗೀತ ಕಾರ್ಯಕ್ರಮದೊಂದಿಗೆ ಸಭಾಂತ್ಯವಾಯಿತು.

ತಾ. 7—5—63ರ ಕಾರ್ಯಕ್ರಮಗಳು ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಭುಜಬಲಿ ಶಾಸ್ತ್ರಿ ಮತ್ತು ಶ್ರೀ ಕೆ. ಪಿ. ನಾರಾಯಣ ತಂತ್ರಿಗಳಿಂದ ಉಪನ್ಯಾಸಗಳಾದುವು. ಶ್ರೀ ರಘುರಾಮ ಐತಾಳರಿಂದ ಕಾವ್ಯವಾಚನ ಮತ್ತು ಶ್ರೀ ನರಸಿಂಹ ಸೇರಿಗಾರ ಮತ್ತು ಸಂಗಡಿಗರಿಂದ ವಾದ್ಯಗೋಷ್ಠಿ ನಡೆಯಿತು.

ತಾ. 8ರಂದು ಶ್ರೀ ಕೆ. ವರದರಾಯ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಕಾಪು ಸುಬ್ರಾಯ ಪುರಾಣಿಕರೂ ಶ್ರೀ ಕೆ. ಬಿ. ರಾಮಕೃಷ್ಣ ರಾಯರೂ ಉಪನ್ಯಾಸ ಮಾಡಿದರು. ಕು. ಬಿ. ಗಂಗಮ್ಮನವರು ದೇವರ ನಾಮಗಳನ್ನು ಹಾಡಿದರು.

**ಉಡುಪಿಗೆ ಹಿಲ್ ಕೆಟಲ್ ಡೆವೆಲೊಪ್‌ಮೆಂಟ್ ಸ್ಕೀಮ್—** ಮೈಸೂರು ರಾಜ್ಯದ ಪಶು ಸಂಗೋಪನೆ ಮತ್ತು ವೆಟರ್ನರಿ ಸರ್ವಿಸ್ಸಿನ ಡೈರೆಕ್ಟರ್ ಡಾ| ಕೆ. ಎಸ್. ಶೆಟ್ಟರು ಕಳೆದ ವಾರ ಉಡುಪಿಯ ಜಾನುವಾರು ಆಸ್ಪತ್ರೆ ಮತ್ತು ಕೃತಕ ಗರ್ಭಧಾರಣಾ ಕೇಂದ್ರವನ್ನು ಸಂದರ್ಶಿಸಿದರು. ಅವರು ದಿನೇ ದಿನೇ ಜನಪ್ರಿಯವಾಗುತ್ತಿರುವ ಕೃತಕ ಗರ್ಭಧಾರಣಾ ಕೇಂದ್ರದ ಕೆಲಸವನ್ನು ವಿಶೇಷವಾಗಿ ಪರಿಶೀಲಿಸಿದರು. ಸ್ಥಳೀಯ ಜಾನುವಾರುಗಳ ಮಟ್ಟವನ್ನು ಉನ್ನತೀಕರಿಸಲು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಡುಪಿಗೊಂದು ಹಿಲ್ ಕೆಟಲ್ ಡೆವೆಲೊಪ್‌ಮೆಂಟ್ ಸ್ಕೀಮ್ ಮಂಜೂರಾಗಿವುದೆಂದೂ ಐದು ಮೈಲುಗಳ ಸುತ್ತಳತೆಯೊಳಗೆ ಎರಡು ಪೂರಕ ಕೇಂದ್ರಗಳನ್ನಿಟ್ಟುಕೊಂಡು ಅದು ಕಾರ್ಯವೆಸಗುವುದೆಂದೂ ಇದಕ್ಕೆ ಬೇಕಾಗುವ ವೀರ್ಯವನ್ನು ದಿನಂಪ್ರತಿ ಬೆಂಗಳೂರಿನ ರಾಷ್ಟ್ರೀಯ ಕ್ಷೀರ ಶಾಲಾ ಸಂಶೋಧನಾಲಯದಿಂದ ಪೂರೈಸಲಾಗುವುದೆಂದೂ ತಿಳಿಸಿ, ಇಲ್ಲಿನ ನೌಕರರಿಗೆ ಇದನ್ನು ಕಾರ್ಯಕೃತಗೊಳಿಸುವ ಸಂಬಂಧದಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡಿದರು.

## ವಿವಾಹ ಸಮಾರಂಭಗಳು

ದಿ. ಕೊರಡ್ಕಲ್ ಶ್ರೀನಿವಾಸ ರಾಯರ ಪುತ್ರ ಡಾ. ರಮೇಶ ರಾವ್ ಕೊರಡ್ಕಲ್ ಮತ್ತು ಕಾಕಿನಾಡದ ಶ್ರೀ ಬಿ. ರಾಮಕೃಷ್ಣ ರಾಯರ ಪುತ್ರಿ ಕುಮಾರಿ ಲಕ್ಷ್ಮಿ ಇವರ ವಿವಾಹವು ಇದೇ ತಾ. 9ರಂದು ಕಾಕಿನಾಡದಲ್ಲಿ ಅನ್ನದಾನ ಸಮಾಜಂನಲ್ಲಿ ನೆರವೇರಿತು.

ದಿ. ಸಿ. ಬಾಲಕೃಷ್ಣ ಪ್ರಭುಗಳ ಪುತ್ರ ಮನೋಹರ ಪ್ರಭು ಮತ್ತು ಶ್ರೀ ಎಸ್. ನಾರಾಯಣ ರಾವ್‌ರವರ ಪುತ್ರಿ ಕುಸುಮ ಇವರ ವಿವಾಹವು ತಾ. 9ರಂದು ತೀರ್ಥಹಳ್ಳಿಯಲ್ಲಿ ರಾಮ ಮಂದಿರದಲ್ಲಿ ಜರಗಿತು.

ವೆಸ್ಟ್ ಕೋಸ್ಟ್ ಬಸ್ ಸರ್ವಿಸಿನ ಶ್ರೀ ಅಲಂಗಾರ್ ನಾರಾಯಣ ಹೆಗ್ಡೆಯವರ ಪುತ್ರ ಡಾ. ರಘುಚಂದ್ರ ಬಲ್ಲಾಳರ ವಿವಾಹವು ಬಸ್ರೂರು ತೇಜಪ್ಪ ಶೆಟ್ಟರ ಪುತ್ರಿ ಕುಮಾರಿ ಉಷಾರೊಂದಿಗೆ ತಾ. 10-5-63ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿತು.

ಎಡ್ವಕೇಟ್ ಶ್ರೀ ಎಚ್. ಸಂಜೀವ ಶೆಟ್ಟರ ಪುತ್ರಿ ಕುಮಾರಿ ಸರಸ್ವತಿ ಮತ್ತು ಶ್ರೀ ಬಾಂಗಾಳ ಮಹಾಬಲ ಶೆಟ್ಟರ ಪುತ್ರ ಟಿ. ದತ್ತಾತ್ರೇಯ ಶೆಟ್ಟಿ ಇವರ ವಿವಾಹವು ತಾ. 10—5—63ರಂದು ಮಂಗಳೂರು ಜ್ಯೋತಿ ಟಾಕೀಸಿನಲ್ಲಿ ನೆರವೇರಿತು

ಡಾ| ಎಂ. ಶಂಭು ಹೆಗ್ಡೆಯವರ ಪುತ್ರಿ ಚಿ| ಉಷಾ ಕುಮಾರಿಯ ವಿವಾಹವು ಮರಕಡ ರಾಮಣ್ಣ ಶೆಟ್ಟರ ಪುತ್ರ ಚಿ. ಮುತ್ತಯ್ಯ ಶೆಟ್ಟರೊಂದಿಗೆ ತಾ. 10-5-63ರಂದು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರವೇರಿತು.

ಪುತ್ತೂರಿನ ಡಾ| ಕೆ. ರಾಮಪ್ಪ ರೈಗಳ ಪುತ್ರಿ ಕುಮಾರಿ ಶಾಲಿನಿಯ ವಿವಾಹವು ಬಾಕ್ರಬೈಲ್ ಲಕ್ಷ್ಮಣ ಶೆಟ್ಟರ ಪುತ್ರ ಶ್ರೀ ಸುಬ್ಬಯ್ಯ ಶೆಟ್ಟರೊಂದಿಗೆ ತಾ. 10.5.63ರಂದು ಮಂಗಳೂರು ಹೊಟೇಲ್ ಓವರ್‌ಲೆಂಡ್ಸ್‌ನಲ್ಲಿ ನೆರವೇರಿತು.

ಮದ್ರಾಸಿನ ಶ್ರೀ ಪಿ. ಜಿ. ಎಂ. ಕೃಷ್ಣಯ್ಯ ಶೆಟ್ಟರ ಪುತ್ರಿ ವಿನೋದಳನ್ನು ದಿ. ಕೊಡಿಯಾಲಗುತ್ತು ರಾಮಯ್ಯ ಆಳ್ವರ ಪುತ್ರ ಚಿ| ಜಯವಂತ ಆಳ್ವರು ತಾ. 12.5.63ರಂದು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿವಾಹವಾದರು.

ಶ್ರೀ ಎಂ. ಆರ್. ನೋಡೆನ ಪೂಂಜರ ಪುತ್ರಿ ಕುಮಾರಿ ಪದ್ಮಿನಿಯನ್ನು ದಿ| ಓ. ಆರ್. ರಂಗನಾಥ ಪೂಂಜರ ಪುತ್ರ ಚಿ| ಕೃಷ್ಣಕುಮಾರ ಪೂಂಜರು ತಾ. 12.5.63ರಂದು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಪಾಣಿಗ್ರಹಣ ಮಾಡಿಕೊಂಡರು.

ಬೆಳ್ಳಿಪಾಡಿಗುತ್ತು ಬೈಂಕಿ ರೈಗಳ ಪುತ್ರಿ ಸೌ| ಜಯಶ್ರೀಯನ್ನು ಎಕ್ಕಾರಗುತ್ತು ಆವಳ ಸಂಕು ಭಂಡಾರಿಗಳ ಪುತ್ರ ಸೀತಾರಾಮ ಭಂಡಾರಿಯವರು ತಾ. 12.5.63ರಂದು ಪುತ್ತೂರು ಅರುಣಾ ಥಿಯೇಟರಿನಲ್ಲಿ ಪಾಣಿಗ್ರಹಣ ಮಾಡಿಕೊಂಡರು.

ಆವಳ ಸಂಕು ಭಂಡಾರಿಯವರ ಪುತ್ರಿ ಸೌ| ರತ್ನಳನ್ನು ಪಟ್ಟೆಮೊಗರು ದಿ| ಸಂಕಪ್ಪ ರೈಗಳ ಪುತ್ರ ಚಿ| ಭಾಸ್ಕರ ರೈಯವರಿಗೆ ತಾ. 12—6—63ರಂದು ಪುತ್ತೂರು ಅರುಣಾ ಥಿಯೇಟರಿನಲ್ಲಿ ವಿವಾಹ ಮಾಡಿಕೊಡಲಾಯಿತು.

ದಿ| ಎನ್. ಎಲ್ಲಪ್ಪ ಶೆಟ್ಟರ ಪುತ್ರಿ ಕುಮಾರಿ ಯಶೋದ ಮತ್ತು ಕೆ. ಮಂಜಯ್ಯ ಶೆಟ್ಟರ ಪುತ್ರ ಚಿ| ಸಂಜೀವ ಶೆಟ್ಟಿ ಇವರ ವಿವಾಹವು ಇದೇ ತಾ. 15ರಂದು ಮಂಗಳೂರು ಟಾನ್‌ಪೆವಿಲಿಯನ್ ಹಾಲಿನಲ್ಲಿ ಜರಗಿತು.

ಹೇರೂರು ಪಟೇಲ್ ನರಸಿಂಹ ಶೆಟ್ಟರ ಪುತ್ರ ಡಾ. ಶ್ರೀಧರ ಶೆಟ್ಟರು ಪಡುಬಿದ್ರಿ ಪೇಟೆಮನೆ ಪಟೇಲ್ ನರಸು ಶೆಟ್ಟರ ಪುತ್ರಿ ಚಿ. ಕುಸುಮಳನ್ನು ಇದೇ ತಾ. 16ರಂದು ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು

ಗೇಹರಾಜ್ಯದಲ್ಲಿ

# ಅಪ್ಪಟ ಕೆಂಪು ಯಾರದು?

'ಕೇಳಿದಿರಾ ಸುದ್ದಿಯನ್ನ....,

'ಏನದು?,

'ನಮ್ಮ ನೆರೆಮನೆ ಕಮಲು ಇದ್ದಾಳಲ್ಲ....,

'ಹೌದು, ಏನು ಇಂಥಾದ್ದೇ ಆಕೆ?,

'ನಾನು ಹೇಳೋ ಮಾತನ್ನೆಲ್ಲಾ ಕೇಳ್ಕೊಳ್ಳಿ. ಅಷ್ಟೂ ತಾಳ್ಮೆ ಇಲ್ವೆ ನಿಮ್ಗೆ? ಮಾತು ಎತ್ತೋದೇ ತಡ, ಅರ್ಧದಲ್ಲೇ ತಡೆದು ಬಿಡೋದು. ನಿಮ್ಮ ಗಂಡಸ್ರ ಜಾತೀನೆ ಹಾಗೆ; ನಾವು ಹೆಂಗಸ್ರು ತುಟಿ ಬಿಚ್ಚೋದೇ ಕೂಡ್ದೂಂತ ನಿಮ್ಮ ಹಠ....,

'ಏನೇ ಇದು, ತುಟಿ ಬಿಚ್ಚೋ ಬಾರ್ದೂಂತ ಇಪ್ರೆ ನಿನ್ಗೆ ಇಷ್ಟೆಲ್ಲಾ ಮಾತಾಡೋಕೆ ಬಿಡುತ್ತಿದ್ನೆ ನಾನು? ಮತ್ತೆ ನೋಡು, ಒಬ್ರು ಹೆಚ್ಚು ಒಬ್ರು ಕಡಿಮೆಯೆನ್ನೋ ಪ್ರಶ್ನೇನೇ ಈಗಿಲ್ಲ. ಎಲ್ರೂ ಸಮಾನರು. ಎಲ್ರೂ ಸಮಾನಾಧಿಕಾರಕ್ಕೆ ಲಾಯಕ್ಕು.,

'ಹೌದು, ಲಾಯಕ್ಕೂಂತ ಹೇಳಿದ್ದಕ್ಕೇ ನುರಿಮುತ್ತೆ ಅಧಿಕಾರ ಆಟ್ಟದ್ದೇ ಲಿಂದ....,

'ಹುಟ್ಟಿದಂದಲ್ವೇ ಸಮಾನತೆ ಬರೋಗು, ಅಧಿಕಾರ ಪ್ರಯೋಗದಿಂದ. ಸಂವಿಧಾನ ನಿನ್ಗೆ ನನ್ಗೆ ಕೊಟ್ಟಿರೋ ಮೂಲಭೂತ ಅಧಿಕಾರದಿಂದ,

'ಅದೇ ತಾನೇ ನೀವನ್ನೋದು....,

'ಯಾವುದು?,

'ನೋಡಿ, ಮತ್ತು ಹಾಕೋದು ಬಾಯಿ. ನಡುವೇನೇ, ಮತ್ತೆ ಒದ್ರೋದು ಮಾತ್ರ ಸಮಾನ ಧಿಕಾರಾಂತ.,

'ನೋಡು ಚಿನ್ನಾ, ನೀನು ಮಾತ್ನ ಮಧ್ಯದಲ್ಲೇ ನಿಲ್ಸಿದ್ರೆ ಮತ್ತೇನು ಮಾಡ್ಬೇಕೂಂತ. ದೊರೆತಿರೋ ಅಧಿಕಾರಾನ ಪೋಲ್ಮಾಡ್ತೀ ಬಳಸೋಕೆ ಬಾರದೆ ಇದ್ರೆ ಆಗೋ ಗತೀನೇ ಹೀಗೆ,

'ಸಾಕು ಸುಮ್ನಿ ನಿಮ್ಮ ಬಡಾಯಿ ಮಾತು. ಪಾಪ ನೀವೆಲ್ಲ ಅಧಿಕಾರ ಪಡ್ಕೊಂಡು ಜನ್ಮೋ ನೋಡು. ನಾವು ಮಾತ್ರ ಬೆಪ್ಪುತಕ್ಕಡಿಗಳೂಂತ ತಾನೇ ನೀವನ್ನೋದು? ಗಂಡಸ್ರ ರಕ್ತದಲ್ಲೇ ಸೇರ್ಕೊಂಡ ಗುಣ ಅದು, ಹೆಂಗಸನ್ನ ಕಡಿಮೆಯೆಂತ ತಿಳಿಯೋದು; ಮತ್ತೆ ಅವನ್ನ ತಿದ್ದೋಕಾಗುತ್ಯೆ?,

'ಮುಗೀತಲ್ಲ ಸದ್ಯ ನಿನ್ನ ಲೆಕ್ಚರ್,

'ಅಂದ್ರೆ...,

'ಅಂದ್ರೆಗಿಂದ್ರೇ ಏನಿಲ್ಲ. ನಿನ್ನ ದಿವ್ಯವಾಣಿ ಮುಕ್ತಾಯವಾಯ್ತೇಂತ ಕೇಳ್ದೆ,

'ಅಂದ್ರೆ, ನಿಮ್ಗೆ ಏನಾದ್ರೂ ಚುಚ್ಚೋದಕ್ಕಿದೇಂತ ಅನ್ನಿಸ್ತೆ ಅಲ್ವಾ, ಆಗಲಿ, ಅದರ ಸೇವೆಗೆ ಯಾಕೆ ತಡ? ನಡೇಲಿ ಈಗ್ಲೇ...,

'ನೋಡು ನೀನು ಅನ್ಯಥಾ ತಿಳೀಬಾರ್ದು. ನೀನೇ ಅಂದೆಯಲ್ಲಾ ಗಂಡಸ್ರ ರಕ್ತದಲ್ಲಿ ಹೆಂಗ್ಸ ಕಡಿಮೆಯೆಂಬ ಭಾವನೆ ತುಂಬಿಹೋಗಿದೇಂತ.,

'ಹೌದು, ಅಲ್ವೇ ಮತ್ತೆ?,

'ಅಲ್ಲಾಂತ ನಾನು ಅಂದ್ನೆ ಈಗ?,

'ಮತ್ತೇನು ನಿಮ್ಗೆ ಏನು ಹೇಳ್ಬೇಕೀಗ ಹೇಳಿ.

'ಅಂತು ರಕ್ತಗತವಾದ ಗುಣಾನ ಬದಲಾಯ್ಸೋದು ಸಾಧ್ಯವಿಲ್ಲಾಂತ ತಾನೇ ನೀನನ್ನೋದು.,

'ಹೌದೂನ್ನಿ.,

'ಹಾಗಾದ್ರೆ, ನೋಡು, ನಿಮ್ಮ ಜಾತಿಯಲ್ಲೂ ಇದೇ ಗುಣ ಸೇರ್ಕೊಳ್ಳಿಲ್ವೆ ಹೇಳು.,

'ಇಲ್ಲ, ಖಂಡಿತಕ್ಕೂ ಇಲ್ಲ.,

'ಸುಳ್ಳು, ಸುಳ್ಳು ಹೇಳ್ತೀಯಾ. ನೋಡು ನನ್ಮುಖದ ಮೇಲೆ ಕಣ್ಣಿಟ್ಟು ಒಂದು ಬಾರಿ ಹೇಳು ಇಲ್ಲಾಂತ.,

'ಛಿ, ಇದೇನು ಹೀಗೆಲ್ಲಾ ಮುಖ ಮಾಡ್ತೀರಿ? ನಾಚಿಗೆ ಆಗೋದಿಲ್ವೆ?,

'ನಾಚಿಗೇನೆ....?,

'ಬೇಡ ಬೇಡೀಂದ್ರೆ. ಯಾರಾದ್ರೂ ನೋಡಿದ್ರೆ ಏನಂದಾರು?,

'ಅನ್ನೋದೇನು? ಸಮಾನಾಧಿಕಾರಾನ ಅನುಭವಿಸ್ತಾರೇಂತ....,

'ನಿಮ್ಮ ಅಧಿಕಾರಾನೂ ಬೇಡ, ಗಿಧಿಕಾರಾನೂ ಬೇಡ. ಸದ್ಯ ನೀವು...,

'ನೋಡಿದ್ಯಾ, ಈಗ ಅಂದೆ, ಹೆಂಗಸ್ರ ರಕ್ತವೆಲ್ಲ ಛಲಬ್ಬೆ ಈ ಬರ್ನೆಯಲ್ಲಿ ತಯಾರಾದ ಹೊಚ್ಚ ಹೊಸ ಕಬ್ಬಿಣದ ರಸಾಂತ, ಈಗ ಏನಂತಿ? ತಾನು ಕಡಿಮೆಯವಳು ಅನ್ನೋ ಭಾವನೆ ರಕ್ತದಲ್ಲಿ ಇದೆಯೋ ಇಲ್ಲಾ ಅಂದು ಬಿಡು.,

'ಒಳ್ಳೇ ಪಜೀತಿಯಾಗ್ತಲ್ಲಾ ಈಗ? ನೀವು ಹೀಗೆ ಪಾಪದವರನ್ನು ಗೋಳು ಹೊಯ್ಸಿಕೊಂಡೇ ಸುಖಪಡ್ತೀರಿ,

'ಮತ್ತೆ ನಿಮಗೇನು? ಗೋಳು ಹೊಯ್ದು ನಕ್ಕು ನಲೀತ್ತೀರಿ,

'ಸರಿಯಪ್ಪಾ, ಅಂತೂ ನಾನೇ ಸೋತವಳೂನ್ನಿ ಯಾವಾಗ್ಲೂ ನಮ್ಮ ಪಾಲ್ಗೇನೇ ಸೋಲೋದು.,

ಹೌದು, ಸೋಲು ಎನ್ನುವುದು ನಿಮ್ಮ ರಕ್ತದ ಗುಣ. ಅದನ್ನ ಬಿಡುವುದಕ್ಕಾಗುತ್ಯೆ ಹುಟ್ಟುಗುಣ ಗಟ್ಟ ಹತ್ತಿದರೂ ಹೋಗೊಲ್ಲಾಂತ ಕೇಳಿಲ್ಲವೆ? ಹಿಂದಿನವರು ಸುಮ್ಸುಮ್ನೆ ಮಾತು ಕಟ್ಟಿದ್ದಾರೆಯೆ?,

'ಅದು ಸರಿಯನ್ನಿ. ಹೆಂಗಸು ಪರಾಧೀನೆಯಾಗಿರೋ ವರೆಗೂ ಹೀಗೇನೇ.,

'ಹೆಂಗಸು ಪರಾಧೀನೆಯೇನ? ಯಾರಂದರು ಹಾಗೆ?,

'ನೀವೇ ಮೊನ್ನೆ ಅಂದಿದ್ರಲ್ಲಾ, ನಿನ್ನ ತಾಯ್ತಂದೆಗಳು ನಿನ್ನನ್ನ ನನಗೆ ಕೊಟ್ಟುಬಿಟ್ಟಿದ್ದಾರೇಂತ.,

'ಅವರು ಕೊಟ್ಟಿದ್ದಾರೆ ಅನ್ನು. ಆದರೆ, ಅವ್ರು ಕೊಟ್ರೂನೂ ನೀನು ಕೊಡ್ಲಿಲ್ಲಾಂತ ಅಂದಿದ್ದೆಯಲ್ಲ?,

'ನಾನು ಅಂದ್ರೆ ಕೇಳ್ತಾರೆ ಯಾರು? ಗಂಡನೆಂಬೋ ಪ್ರಾಣಿಗೆ ಕುತ್ತಿಗೆ ಕೊಡಬೇಕಂತೆಯೇ ನಾವು ದಿನ ದೂಡಬೇಕು.,

'ಸದ್ಯ ಅಕ್ಷರಿಗಾದ್ರೂ ಬಂತೆ ನಿನ್ಗೆ? ನಿ ಇನ್ನು ಕೇಳು ನಿನ್ನ ಪುರಾಣ. ಅಂತೂ ನಿಮಗೆ ಅಧಿಕಾರ ಭೋಗಿಸೋದಿಕ್ಕೆ ಮನಸ್ಸಿಲ್ಲನ್ನು.,

'ಹೆಂಗಸಿನ ಕೈಗೆ ಅಧಿಕಾರ ಕೊಟ್ರೆ ಮಂಗನ ಕೈಗೆ ಮಾಣಿಕ್ಯ ಕೊಟ್ಟಂತಾದೀತು. ಎಷ್ಟಾದ್ರೂ ಅವರು ಅಬಲೆಯುವರಲ್ವೆ?,

'ಅಬಲೆಯರೂ ಸಬಲೆಯರಾಗ್ತಾರೆ ಒಂದು ದಿನ. ಸಿರಿಮಾವೋ ಪ್ರಧಾನಿಯಾಗ್ಲಿಲ್ವೆ? ನಿನ್ನ ಕಮಲೂ ಏನು ಮಾಡಿದ್ಳು?,

'ಅಲ್ಲ ಕಮಲೂ ಮತ್ತೆ ಮಾಚಮ್ಮ ಮೊನ್ನೆಮೊನ್ನೆ ಅದೇನೋ ಬೈದುಕೊಂಡ್ರು......,

'ಯಾಕೆಯೇ...,

'ಮತ್ತೇನೂ ಇಲ್ಲ. ಅವರು ಜೀವದ ಗೆಳತಿಯರಲ್ವೆ?

'ಸರಿ, ನಾನೂ ನೀನೂ ಇದ್ದಾಗೇನ್ನು.

'ಕಮಲೂನ ದನ ಮಾಚಮ್ಮನ ಬಾಳೆ ತಿಂದಿತಂತೆ ಅವಳು ಕಟ್ಟಿ ಹಾಕಿದಳು.,

'ಸರಿ ಸರಿ, ಗೊತ್ತಾಯ್ತು ಬಿಡು, ಎರಡೂ ಕಡೆಯವರ ವೀಣೇ ತಂತೀ ಕಡೀಲಿಲ್ಲ,

'ಹೌದು.

'ಮತ್ತೆ ಒಮ್ಮೆಲೇ ಕಡೀತು.,

'ಕಡಿದದ್ದು ಮತ್ತೆ ಕೂಡ್ಲೇ ಇಲ್ಲ.,

'ಕೂಡೋದಾದ್ರೂ ಹೇಗೆ? ತಂತಿಯಾದ್ರೂ ಅದಕ್ಕೂ ಟೆಂಪರ್ ಕಳೆದು ಬಿಟ್ರೆ ಸ್ವರವಾದ್ರೂ ಎಲ್ಲಿ ಏಳುತ್ತೆ?,

'ಅದ್ರೆ ನೋಡಿ, ಈವತ್ತು ಅವ್ರು ರಾಜಿಯಾದ್ರಂತೆ,

'ಯಾಕೋ,

'ಯಾಕೋ ಏನೋ ಯಾರಿಗ್ಗೊತ್ತು? ಪ್ರಾಯಃ ಮಾಚಮ್ಮನ ದನ ಕಮಲೂನ ತುಳಸಿ ತಿಂದಿರ್ಬೇಕು,

'ಅಂತೂ ಸರಿಯಾಯಿತೂನ್ನು. ಚಿಕ್ಕ ಹುಟ್ಟು ಪ್ರಸಂಗ ನ ಒಗ್ಗರಣೆ ಹಾಕಿ ಹಿಗ್ಗಿಸೋದು ಮತ್ತೆ ಕುಗ್ಗಿಸೋದು ಹೇಗೇ ನಿಮ್ಮ ರಕ್ತಗುಣ.,

'ಹೌದು, ಇಂತ ಗುಣ ನಮ್ಮಲ್ಲಿ ಮಾತ್ರ ಇರೋದು ಹೋಗ್ಲಿ ಬಿಡಿ. ಗಂಡು ಎಂಬ ಹೆಮ್ಮೆ ಎಲ್ಲಾ ನೀರು ನೀರಾಗಿ ಹೋಯ್ತು. ನಿಮ್ಗಿಂತ ನಾವೇ ವಾಸಿ.,

'ಏನೇ ಇದು ಏನೋ ಒಂದು ತರಾ ಮಾತಾಡ್ತಾ ಇದ್ದೀಯು?,

'ನಾವು ಆಡೋದು ಮಾಡೋದು ಎಲ್ಲಾನೂ ನಿಮ್ಗೆ ಒಂದು ತರಾನೇ ಅದ್ರೆ ನೀವು ಮಾಡೋದೆಲ್ಲ ಚಂದ,

'ಏನಾಯ್ತೀಗ?,

'ಆಗೋದೇನ? ಪೇಪ್ರ ಓದಿದ್ರಾ ನೀವು?,

'ಹ್ಞೂಂ, ಆದ್ರೂ ಅಂಥ ಸಮಾಚಾರ ಏನೂಂತ,

'ಅಲ್ಲ ನಿಮ್ಮ ಕೆಂಪಿನವರಿಬ್ರೂ ಕಳೆದ ಐದು ತಿಂಗ್ಳಲ್ಲಿ ಹೊಡ್ದಾಡಿದ್ರು, ಮತ್ತೆ ಈಗ ರಾಜಿಯಾಗ್ತಾರಂತೆ.,

'ಅಂದ್ರೆ ಯಾರನ್ನು ಕುರ್ತು ನೀನನ್ನೋದು,

'ಅಂದ್ರೆ ಯಾರಪ್ಪ ಕುರ್ತಿದ....,

'ಕ್ರುಶ್ಚೇವ... ಹಾ, ಮತ್ತೆ ...,

'ಮತ್ತೆ ಚಪ್ಪಟೆ ಮೂಗಿನವ ಚಾಯ್

'ಅವರು...,

'ರಾಜಿಯಾಗ್ತಾರಂತೆ. ಅದ್ಕೆ. ಅದೇ ಚಾಯ್ ಮಾಸ್ಕೋಗೆ ಹೋಗ್ತಾನಂತೆ

'ಓ, ಚೀನ ಮತ್ತು ರಷ್ಯದ ಗಡಿ ವಿಷಯ ತಾನೇ ನೀನನ್ನೋದು,

'ಅಲ್ಲ, ಆ ಕೆಂಪಿನವ್ರು ಯಾವುದು ಅಪ್ಪಟಕೆಂಪೂಂತ ನಿರ್ಧಾರ ಮಾಡೋದಕ್ಕೆ ತೊಡಗಿದ್ದಾರಂತೆ,

'ಪರ್ವಾಗಿಲ್ವೆ ನೀನ. ಇಷ್ಟು ನೀನು ಮುಂದುವರಿದದ್ದು ಸಂತೋಷ, ಇಲ್ಲಿ ಬಿಡು, ಹೊಡೆದಾಡೋದು, ರಾಜಿಯಾಗೋದು ಕೆಂಪಿನವರ ರಕ್ತ ಗುಣ. ಅದ್ರೆ ಅಪ್ಪಟ ಕೆಂಪು ಮಾತ್ರ ಯಾರದ್ದಾಗುತ್ತೋ ಅದಕ್ಕೂ ಕೆಂಪು ಹರೀ ಬೇಕಾದೀತೋಂತ.,

'ಹರಿಸ್ಕೊಳ್ಳಿ ಬಿಡಿ. ನಂಮ್ಗೇನು ಅದ್ರಿಂದ,

'ಅದೇ ನೋಡು ನಿನ್ನ ಹುಟ್ಟುಗುಣ. ಆದ್ರೂ ಕೆಂಪಿನವರಿಬ್ಬರ ಹುಟ್ಟುಗುಣ ಮಾತ್ರ ಒಂದಾಗಿಲ್ಲಾಂತ ಕಾಣುತ್ತೆ.,

'ಪ್ರಾಯಃ ಅವನ್ನ ಹುಟ್ಟಿಸಿದವರು ಬೇರೆಬೇರೆಯವರಿರಬಹುದು.,

'ಹೂ ಮತ್ತು ಮುಳ್ಳು ಒಂದೇ ತಾಯಿಗೆ ಹುಟ್ಟಿದ್ರೂ ನೋಡವುಗಳ ಗುಣ! ಹಾಗೇನೇ ಮಾಸ್ಕೊ ಮತ್ತು ಪೀಕಿಂಗ್‌ಗಳ ಕೆಂಪುಗಳ ನಡುವೆ ಅಂತರವಿರುವುದು ನ್ಯಾಯವೆನ್ನು, ಆದರೆ ಇನ್ನೀಗ ಯಾವುದು ಗೆಲ್ಲುತ್ತೇಂತ.

'ಹೇಳಿ ನೋಡೋಣ.,

'ಯುದ್ಧವಾದ್ರೆ ಗೆಲ್ಲೋದು ಸದ್ಯಕ್ಕೆ ಮಾಸ್ಕೊ. ಅದು ಹಳೆ ರಕ್ತ. ನನ್ನ ಹಾಗೇನೇ,

'ಅಂದ್ರೆ ಪೀಕಿಂಗಿನದು ನನ್ನ ಹಾಗೆ ಹೊಸ ರಕ್ತ ಅನ್ನೋದು ತಾನೇ ನೀವು?,

ಸರಿಯಾಯ್ತು ಬಿಡು ನಮ್ಮಿಬ್ಬರಲ್ಲಿ ಕೊನೆಗೂ ಗೆಲ್ಲೋದು ಯಾರು? ನಾನೇ ಎಂದು ಮೊದಲೇ ಒಪ್ಪಿಕೊಂಡಿಯಲ್ಲಾ?,

'ಒಳ್ಳೆ ಜನ ನೀವು. ನನ್ನ ಮಾತಿನಲ್ಲೇ ನನ್ನ ಕಟ್ಟಿಬಿಟ್ರಿ. ಅಗಲಿ ಬಿಡಪ್ಪ, ನಮ್ಮಿಬ್ಬರಲ್ಲಿ ಯಾರು ಗೆದ್ರೆ ಏನು, ಯಾರು ಸೋತ್ರೆ ಏನು?,

'ಅಂದ್ರೆ ಇಬ್ರೂ ಸರಿಸಮಾನರು ಅಂತ್ಲೆ?,

'ನೋಡಿ, ನೀವೇ ಮೊದಲು ಹೇಳಿದ್ರಲ್ಲಾ?,

'ಎ, ಹುಡುಗಿ, ನಾನು ನಿನ್ನನ್ನು ಗೆದ್ದೆ, ನೀನು ನನ್ನನ್ನ ಗೆದ್ದೆ. ಪಾಪ, ಪಾಪ ಯಲ್ಲಿ ಹೋದ್ನೋ ನಮ್ಮಿಬ್ಬರಾಟದ ನಡುವೆ,

'ಅವನು ಅಲ್ಲೆ ಗೊರಕೆ ಹೊಡೆಯುತ್ತಿದ್ದಾನೆ.,

ಅದೇ ಸರಿ ಈಗ, ಇಷ್ಟೊಂದು ಅರಾಮವಾಗಿ ಏನು ಬಂದೀಂತ ಯೋಚಿಸ್ತಾ ಇದ್ದೆ...ಓ ನೋಡಲ್ಲಿ ಮಗು ತೊಟ್ಟಿಲು ಬಡೆಯುತ್ತಿದೆ, ಎಚ್ಚರಾಯ್ತು ತೋರುತ್ತೆ.,

'ಬಂದೇ ಅಲ್ಲಿಗೇ ತೂಗಿಬರುತ್ತೇನೆ.,

'ಬೇಗ ಬಾ ಮತ್ತೆ,

'ಹ್ಞಾಂ,

—ಗೋರಾ.

---


**ಉಡುಪಿ ಕರ್ನಾಟಕ ಸಂಘದ**
**ಒಂದೊಂದು ರೂಪಾಯಿ ಬೆಲೆಯ**
**ಮೂರು ಪ್ರಕಟಣೆಗಳು.**

**ಚಂದ್ರಲೋಕಕ್ಕೆ ಪ್ರಯಾಣ**
ಯು.ರಾಘವೇಂದ್ರ ಆಚಾರ್ಯ,ಎಂ.ಎ.)

**ಸಾಮಾನ್ಯ ರೋಗಗಳು**
(ಡಾ. ಕೆ.ಎಲ್. ಐತಾಳ,ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವಲ್ಲು ಪಯುಕ್ತ ಪುಸ್ತಕ

**ಭೌತಿಕ ದರ್ಶನ**
ಬಡೆಕ್ಕಿಲ ಕೃಷ್ಣ ಭಟ್ಟ ಎಲ್.ಟಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

# ಪುಸ್ತಕವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳು ಹಿಸುವವರು ಎರಡೆರಡು ಪ್ರತಿಗಳನ್ನು ಕಳು ಹಿಸಬೇಕಾಗಿ ವಿನಂತಿ —ಸಂ. ನ]

**ಕನ್ನಡ ಗಂಗಾಲಹರಿ ಮತ್ತು ಕನ್ನಡ ಗಂಗಾಷ್ಟಕ—** ಅನುವಾದಕರು: ಶ್ರೀ ಗಲಗಲಿ ಪಂಡರಿನಾಥಾಚಾರ್ಯ. **ಪ್ರಕಾಶಕರು:** ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: XII+29+೩೪. ಬೆಲೆ: ರೂ. ೧=೫೦

ಸುಪ್ರಸಿದ್ಧ ಆಲಂಕಾರಿಕ ಅಪ್ಪಯ್ಯ ದೀಕ್ಷಿತ ಸಿದ್ಧಾಂತ ಖಂಡಕ ಪಂಡಿತೋತ್ತಮ ರಸ ಗಂಗಾಧರಕಾರ ಜಗನ್ನಾಥನು ರಾಜಾಶ್ರಯ ವಿಹೀನನಾದ ಮೇಲೆ ಕಾಶಿಯಲ್ಲಿ ಗಂಗೆಯ ತಟದಲ್ಲಿ ಪಶ್ಚಾತ್ತಾಪದಿಂದ ಕುಳಿತು ಹಾಡಿದ ಪೀಯೂಷ ಲಹರಿಯಿಂದ ಪೂತೆ ಗಂಗಾ ಮಾತೆ ಪ್ರೀತೆಯಾಗಿ ಉಕ್ಕಿ ಹರಿದು ಅಪಂಡಿತರನ್ನೂ ತನ್ನಲ್ಲಿ ವಿಲೀನಗೊಳಿಸಿದಳು. ಈ ಪೀಯೂಷ ಲಹರಿಯ ಕನ್ನಡ ಭಾವಾನುವಾದವೇ 'ಗಂಗಾಲಹರಿ'. ಮೊದಲೊಮ್ಮೆ ದಿ| ಮೂಗೂರು ಹನುಮಂತಾಚಾರ್ಯರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದರು. ಅದು ವಾರ್ಧಕ ಷಟ್ಪದಿ ಛಂದಸ್ಸಿನಲ್ಲಿದೆ. ಪಂಡಿತ ಗಲಗಲಿಯವರು ಈಗ, ಕನ್ನಡದ ಇಂದಿನ ಗತಿ-ಲಯ, ತಾಳ, ಸ್ವಚ್ಛಂದ ಛಂದದಲ್ಲಿ ಅದರ ಪಿಯೂಷವನ್ನು ಅರಿದು ಕನ್ನಡಿಗರ ಗಂಟಲಿಗೆ ಸುರಿಯುವ ಪ್ರಯತ್ನ ಮಾಡಿದ್ದಾರೆ. 'ಪೀಯೂಷ ಲಹರಿ'ಯನ್ನು ಪದೇ ಪದೇ ಪಠಿಸಿದಾಗ, ಸ್ಫೂರ್ತಿಗೊಂಡ ಆಚಾರ್ಯರ ಹೃದಯದಿಂದ ಮೃದು ಮಧುರ ಪದಪುಂಜ ತಾನೇ ತಾನಾಗಿ ಹೊರ ಸೂಸಿದೆ. ಇದಕ್ಕೊಂದು ನಿದರ್ಶನ ನೀಡಿದರೆ, ತಪ್ಪಾಗದು.

(ಪದ್ಯ ೪೬)

ದರಸ್ಮಿತ ಸಮುಲ್ಲಸದ್
ವದನ ಕಾಂತಿ ಪೂರಾಮೃತೈಃ
ಭವಜ್ವಲನ ಭರ್ಜಿತಾನ್
ಅನಿಶ ಮೂರ್ಜಯಂತೀ ನರಾನ್
ಚಿದೇಕಮಯಚಂದ್ರಿಕಾ
ಚಯ ಚಮತ್ಕೃತಿಂ ತನ್ವತೀ
ತನೋತು ಮಮ ಶಂ ತನೋಃ
ಸಪದಿ ಶಂತನೋರಂಗನಾ ॥

ಎಂಬುದರ ಭಾವವು

ಮಂದ ಹಸಿತ ಅರವಿಂದಲಸಿತ
ಮುಖದಮೃತ ಕಾಂತಿಯಿಂದ
ಭವದ ದವದಿ ಹುರುಪಳಿಸಿ
ನಿಂದಜನರೆಲ್ಲ ಶಾಂತಿ ತಂದ
ನಿನ್ನ ಚಲುವ ಚಿನ್ಮಯದ ಘನ್ನ
ಚೈತನ್ಯ ಜೊನ್ನ ಸುರಿಸಿ
ಕರುಣೆ ಕರಸಿ! ಶಂತನುವಿನರಸಿ!
ಸಂತಸವ ಬೀರಿ ಹರಸಿ ॥

ಎಂದು ವ್ಯಕ್ತವಾಗಿದೆ; ರಮ್ಯವಾಗಿದೆ. ಸಹಜ ಕಾವ್ಯತೆಯ ಗುಣ ಪ್ರಕಟವಾಗಿದೆ. ಇದೇ ಧಾಟಿಯು ವಾಲ್ಮೀಕಿ ಕವಿರಚಿತ ಗಂಗಾಷ್ಟಕದಲ್ಲೂ ಹೊಂದಿಕೊಂಡಿದೆ. ಮುನ್ನುಡಿಯಲ್ಲಿ ವರಕವಿ ಬೇಂದ್ರೆಯವರು 'ಗಂಗಾಲಹರಿ' ಗದ್ಯ-ಕಕ್ಕೆ ಒಗ್ಗುವ ಹಿಗ್ಗುವಹಾಡು, ಅದರಿಂದಲೇ ಅದರ ಪ್ರಭಾವ, 'ಪ್ರಸಾರ' ಎಂದುದು ಯಥಾರ್ಥವಾಗಿದೆ. ಹೊಸಗನ್ನಡದ ಹೊಸ ರೀತಿಗೆ ಅಳವಡಿಸಿಕೊಂಡ ಪಂಡಿತ ಆಚಾರ್ಯರ ಪ್ರತಿಭೆಯಿಂದ ಇನ್ನೂ ಸೇವೆಯನ್ನು ಭುವನೇಶ್ವರಿಯು ಬಯಸುತ್ತಾಳೆ.

**ಭಾರತದಲ್ಲಿ ಶಿಕ್ಷಣದ ಪುನರ್ನಿರ್ಮಾಣ—** ಮೂಲ: ಜಾಕೀರ್ ಹುಸೇನ್. ಅನುವಾದಕರು: ಪುತ್ತೂರ ಕೃಷ್ಣಮೂರ್ತಿ. ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೬. ಪುಟಗಳು: ೭೧. ಬೆಲೆ: ರೂ. ೦—೭೫.

ಭಾರತ ಸರಕಾರದ ಉಪ ಪ್ರಧಾನಿ ಮತ್ತು ಗೃಹ ಸಚಿವರಾಗಿದ್ದ ಸರ್ದಾರ ಪಟೇಲರ ಸ್ಮಾರಕವಾಗಿ ಆಕಾಶವಾಣಿಯವರು ೧೯೫೮ರಲ್ಲಿ ಏರ್ಪಡಿಸಿದ್ದ ಮೂರು ಭಾಷಣಗಳ ಸಂಗ್ರಹವಿದು. ವಿಶ್ವವಿದಿತ ಶಿಕ್ಷಣವೇತ್ತ ಜಾಕೀರ್ ಹುಸೇನರು ಇವನ್ನು ಮಾಡಿದ್ದರು. ಇಂದು ನಮ್ಮ ಉಪ ರಾಷ್ಟ್ರಪತಿಗಳಾದ ಜಾಕೀರ ಹುಸೇನರು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದವರು; ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯಗಳ ವರೆಗೂ ಅವರ ವ್ಯಕ್ತಿತ್ವದ ಪ್ರಭಾವ ಹರಡಿದೆ. ಮೂಲ ಶಿಕ್ಷಣದಲ್ಲಿ ಅತ್ಯಂತಾಸಕ್ತರಾದ ಇವರು ಭಾರತದಲ್ಲಿ ಮೂಲ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿ, ಇಂದಿನ ಶಿಕ್ಷಣದ ಪುನರ್ನಿರ್ಮಾಣವನ್ನು ನಾವು ಹೇಗೆ ಮಾಡಬಹುದು ಎಂಬ ವಿಚಾರವನ್ನು ಮಥಿಸಿ ಸಲಹೆಗಳನ್ನು ಈ ಉಪನ್ಯಾಸ ಮಾಲೆಯಲ್ಲಿ ನೀಡಿದ್ದಾರೆ. ಶಾಲೆ ಹುಡುಗರಿಗೆ ಏನೋ ಕೆಲವು ವಿಷಯಗಳನ್ನು ಹೇಳಿ ಕೊಡುವ ಸ್ಥಳಮಾತ್ರವಲ್ಲ, ಅವರನ್ನು ಜಾಣತನದಿಂದ ಪರೀಕ್ಷಿಸಿ, ಅರಿತುಕೊಳ್ಳುವ ಸ್ಥಾನವೂ ಆಗ ಬೇಕು. ಇದಕ್ಕೆ ಶಿಕ್ಷಣದ ಪದ್ಧತಿ, ಶಿಕ್ಷಕರ ತರಬೇತಿ, ಶಾಲೆಗಳ ಪುನಾರಚನೆ ಸಂಪೂರ್ಣವಾಗಬೇಕು. ಹೆಸರು, ಪದವಿ, ಬೋರ್ಡುಗಳನ್ನು ಬದಲಾಯಿಸಿದ ಮಾತ್ರಕ್ಕೆ ನಮ್ಮ ಗುರಿ ಸಿದ್ಧಿಸುವುದಿಲ್ಲ. ಮಕ್ಕಳ ಶಕ್ತಿಯು ಅನುಪಯುಕ್ತವಾಗದಂತೆ ಮೂಲ ಶಿಕ್ಷಣವನ್ನು ಅಳವಡಿಸಬೇಕು ಎಂದು ಮುಂತಾಗಿ ಅವರು ಪ್ರತಿಪಾದಿಸಿದ್ದಾರೆ. ಬುಡ್ಡಾಯ ಶಿಕ್ಷಣಕ್ಕೆ ಮಹತ್ವ ಕೊಡುತ್ತಿರುವ ನಾವು ಪ್ರಾಯಃ ಈ ಅವಶ್ಯಕ ವಿಚಾರಗಳನ್ನು ಕಡೆಗಣಿಸುತ್ತಿದ್ದೇವೆ. ಶಿಕ್ಷಣದ ಪುನರ್ನಿರ್ಮಾಣವಾಗಬೇಕೆ, ನಮ್ಮ ಜನಸಾಮಾನ್ಯರ ದೃಷ್ಟಿಕೋಣ ಬದಲಾಗದು. ಆದುದರಿಂದ ಇತ್ತ ಸರಕಾರಗಳ ಗಮನ ತೀವ್ರ ಹರಿಯಬೇಕಾಗಿದೆ. ಜಾಕೀರ್ ಹುಸೇನರ ಈ ಅಭಿಪ್ರಾಯಗಳು ಇನ್ನಾದರೂ ಕಾರ್ಯರೂಪಕ್ಕೆ ಬಂದಾವು.

**ಅಭಿನಂದನ ಗ್ರಂಥ—** ಕಳೆದ ತಿಂಗಳಲ್ಲಿ ಮಂಗಳೂರಲ್ಲಿ ನೆರವೇರಿದ ಇಪ್ಪತ್ತನಾಲ್ಕನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನದ ಸ್ವಾಗತ ಸಮಿತಿಯು ಈ ಗ್ರಂಥವನ್ನು ಸಮ್ಮೇಳನಾವಸರದಲ್ಲಿ ಪ್ರಕಟಿಸಿದೆ. ಆಯುರ್ವೇದದ, ಅದರ ವೈದ್ಯರ ಸಮಸ್ಯೆಗಳು, ಪರಿಹಾರ ಸೂಚನೆಗಳು, ಆಯುರ್ವೇದ ಚಿಕಿತ್ಸೆಗಳು—ಮೊದಲಾದುವುಗಳಿಗೆ ಸಂಬಂಧಪಟ್ಟ ಒಟ್ಟು ಮೂವತ್ತು ಲೇಖನಗಳು ಇದರಲ್ಲಿವೆ; ಜಿಲ್ಲೆಯ ಸಂಕ್ಷಿಪ್ತ ಸಚಿತ್ರ ಪರಿಚಯವೂ ಇದೆ. ಆಯುರ್ವೇದಾಭಿಮಾನಿಗಳು ಮಾತ್ರವಲ್ಲ ಉಳಿದವರೂ ಅವಶ್ಯ ಸಂಗ್ರಹಿಸಬಹುದಾದ ಹೊತ್ತಗೆಯಿದು. ಸಂಪಾದಕ ಮಂಡಳಿಯು ವಹಿಸಿದ ಶ್ರಮದ ಸದುಪಯೋಗವನ್ನು ಎಲ್ಲರೂ ಮಾಡಿಕೊಳ್ಳಬಹುದಾಗಿದೆ. ಅಂಚೆ ಹಾಸಲು ರೂ. ೧-೫೦ನ್ನು ಕಳಿಸಿ, ಗ್ರಂಥ ಪ್ರತಿಯನ್ನು ಸ್ವಾಗತ ಸಮಿತಿ, ಇಪ್ಪತ್ತನಾಲ್ಕನೆಯ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನ, ರಥಬೀದಿ, ಮಂಗಳೂರು-೧ ಇಲ್ಲಿಂದ ಪಡೆಯಬಹುದು.

**ರಂಜನೆ—** ಬೌದ್ಧಿಕ ಪರಿಶ್ರಮವನ್ನು ದೂರಮಾಡಲು ರಂಜನಾ ಕಾರ್ಯಕ್ರಮ ಅತ್ಯವಶ್ಯ ದಿನದಿಂದ ದಿನಕ್ಕೆ ಬೆಳೆದು ಬರುವ ಶಿರ್ವಾದ ನಾಗರಿಕರು ಇವರ ಅವಶ್ಯಕತೆಗಳನ್ನು ಮನಗಂಡು ರಿಕ್ರಿಯೇಶನ್ ಕ್ಲಬ್ಬನ್ನು ಕಟ್ಟಿಕೊಂಡಿದ್ದಾರೆ. ಬವಣೆಯನ್ನು ಮರೆಯುತ್ತಾರೆ. ಈ ಕ್ಲಬ್ ಈ ವರ್ಷ ಒಂದು ಪತ್ರಿಕೆಯನ್ನೂ ಪ್ರಕಟಿಸಿದೆ, ಅದೇ 'ರಂಜನ, ವಿಚಾರಪರಿವೇಷ್ಟಿಸಿದ ಹಲವು ಲೇಖನಗಳೂ ಕವಿತೆಗಳೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇಲ್ಲಿ ಬರೆಯಲ್ಪಟ್ಟಿವೆ. ಕ್ಲಬ್ಬಿನ ಸದಸ್ಯರ ಉತ್ಸಾಹವನ್ನು ತೋರಗೊಡುತ್ತದೆ. ಕ್ಲಬ್ಬಿಗೆ ಭವ್ಯಯಶ ದೊರೆಯುವುದರೊಡನೆ ಅದು ತನ್ನ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲಿ, ತನ್ನ ಉದ್ದೇಶಗಳನ್ನು ಸಾಧಿಸಲಿ, ಎಂದು ಹಾರೈಸುತ್ತೇವೆ.

**ಆಯುರ್ವೇದ ಕಾಲೇಜಿನ ವಾರ್ಷಿಕ ಪತ್ರಿಕೆ—** ಉಡುಪಿಯ ಆಯುರ್ವೇದ ಕಾಲೇಜಿನ ೧೯೬೨-೬೩ರ ವಾರ್ಷಿಕ ಪತ್ರಿಕೆಯಿದು. ಕಾಲೇಜಿನ ಬಹುಮುಖ ಚಟುವಟಿಕೆಗಳಿಗೆ ಪತ್ರಿಕೆಯೊಂದು ಮಾಧ್ಯಮವೆನ್ನುವುದಾದರೆ, ಅದರ ಸಂಪೂರ್ಣ ಯಶಸ್ಸನ್ನು ಕಾಲೇಜಿನ ಯುವ ಗೆಳೆಯರು ಪಡೆದಿದ್ದಾರೆನ್ನಬೇಕು. ಆಯುರ್ವೇದವನ್ನು ಅಧ್ಯಯನ ಮಾಡುವುದರೊಡನೆ ತಮ್ಮ ತಿಳುವಳಿಕೆಯನ್ನು ಪ್ರಕಟಿಸುವ ಪ್ರಯತ್ನವನ್ನು ಅವರಿಲ್ಲಿ ಮಾಡಿದ್ದಾರೆ. ಕಾಲೇಜಿನ ಸರ್ವ ಪ್ರಕಾರದ ಚಟುವಟಿಕೆಗಳ ಸ್ಥೂಲ ಚಿತ್ರವನ್ನು ಸಚಿತ್ರವಾಗಿ ನಾವಿಲ್ಲಿ ನೋಡುತ್ತೇವೆ. ಜನತೆಯಲ್ಲಿ ಆಯುರ್ವೇದದ ಬಗ್ಗೆ ಗೌರವಾದರಗಳಿಲ್ಲವೆನ್ನುವಂತಿಲ್ಲ, ಆದರೆ, ಅದೇನೋ ಅಂಜಿಕೆಯು ಅವರಲ್ಲಿ ಮನೆ ಮಾಡಿದಂತಿದೆ. ಇದನ್ನು ದೂರೀಕರಿಸಿ ಆಯುರ್ವೇದದ ಬೆಳವಣಿಗೆಯ ಮಾರ್ಗವನ್ನು ಸುಗಮಗೊಳಿಸುವ ಹೊಣೆಯಿಂದು ಹೊರುವವರು ಬೇಕಾಗಿದೆ. ಉಡುಪಿಯ ಕಾಲೇಜು ಇನ್ನೂ ಆರು ವರ್ಷದ ಕೂಸು. ಪ್ರಾಕ್ ವೈಭವದ ಆಯುರ್ವೇದವನ್ನು ಮರಳಿ ಆಸ್ಥಾನಕ್ಕೆ ಎತ್ತರಿಸಲು ಇಲ್ಲಿನ ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ದುಡಿಯಲಿ; ಅವರ ಪ್ರಯತ್ನವು ಸಫಲವಾಗಲಿ, ಕಾಲೇಜು ತನ್ನ ಕೊರತೆಗಳನ್ನು ಸಂಪೂರ್ಣವಾಗಿ ತುಂಬಿಕೊಂಡು ಉಚ್ಚ ಆದರ್ಶ ಸಂಸ್ಥೆಯಾಗಿ ಬೆಳೆಯುವಂತೆ ಜನ ಸಹಾಯವಾಗಲಿ, ಸರಕಾರದ ಕೃಪಾದೃಷ್ಟಿಯಿರಲಿ.

**ಭಾರತೀಯ ಸಂಸ್ಕೃತಿ ವಿದ್ಯಾಪೀಠ—** ರಾಜಧಾನಿ ಬೆಂಗಳೂರಿನ ಚಾಮರಾಜ ಪೇಟೆಯಲ್ಲಿನ ಈ ವಿದ್ಯಾಪೀಠ ಭಾರತೀಯ ಸಂಸ್ಕೃತಿ ಪ್ರಚಾರದಲ್ಲಿ ಕಳಕಳಿಯಿಂದ ದುಡಿಯುತ್ತಿದೆ. ಹಿಂದಿ, ಸಂಸ್ಕೃತ ತರಗತಿಗಳನ್ನು ಮಾತ್ರವಲ್ಲ ನರ್ಸರಿ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನೂ ಖಾಸಗಿ ಶಿಕ್ಷಣ ವಿಭಾಗವನ್ನೂ ನಡೆಸುತ್ತಿದೆ. ಲಲಿತಕಲೆ ಮತ್ತು ರಂಗವಲ್ಲಿ ಬಂಗಾಳಿ ಭಾಷಾ ತರಗತಿಗಳನ್ನು—ಪ್ರಚಲಿತ ವರ್ಷದಲ್ಲಿ ತೆರೆದಿದೆ. ರಾಜ್ಯ ನಗರ ಮತ್ತು ಗ್ರಾಮಾಂತರ ಭಾಗಗಳಲ್ಲಿ ತನ್ನ ಶಾಖೆಗಳನ್ನೂ ತೆರೆದಿದೆ. ಇವಲ್ಲದೆ ಪುಸ್ತಕಾಲಯ, ವಾಚನಾಲಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬರುತ್ತಿದೆ. ಪೀಠದ ವಾರ್ಷಿಕ ಪತ್ರಿಕೆಯಾದರೂ ಇವೆಲ್ಲವುಗಳ ದ್ಯೋತಕವಾಗಿದೆ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರನ್ನು ಗೌ| ಪೋಷಕರಾಗಿ ಪಡೆದ ಸಂಸ್ಥೆ

೧೦ ನೇ ಪುಟ ನೋಡಿರಿ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ಕರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕಾಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಸಂಪದಭಿವೃದ್ಧಿಯಲ್ಲಿ

# ದುಡಿಮೆಯ ಅಮರ ಪಾತ್ರ

ಯುದ್ಧೋನ್ಮಾದವನ್ನು ಕೆರಳಿಸುವ ಪ್ರಯತ್ನಗಳನ್ನು ಒಂದೆರಡು ದೇಶಗಳು ಅನವರತ ಮುಂದುವರಿಸುತ್ತಲೇ ಇರುವಾಗ, ಭಾರತವು ಆರ್ಥಿಕ, ಸಾಂಸ್ಕೃತಿಕ ಸಾಮಾಜಿಕ ವಿಕಾಸದ ಸಲುವಾಗಿಯೇ ಸಮರ ಸಿದ್ಧತೆಯನ್ನು ಮಾಡತೊಡಗಿದೆ. ಭಾರತದ ಮಿತ್ರ ರಾಷ್ಟ್ರ (ಸದ್ಯಕ್ಕೆ ಭಾರತದ ಶತ್ರು ರಾಷ್ಟ್ರ ಕೆಂಪು ಚೀನಾ ಮಾತ್ರ) ಜೆಕೊಸ್ಲೊವಾಕಿಯಾವು ಇದೇ ಉದ್ದೇಶದಿಂದ ಶಾಂತಿಯುತವಾಗಿ ಮುಂದಡಿಯಿಡುತ್ತಿದೆ. ನಾಜಿ ಬಂಧ ವಿಮುಕ್ತನಾದ ಜೆಕ್ ಮೊನ್ನೆ ೯ನೆಯ ದಿನಾಂಕ ತನ್ನ ಹದಿನೆಂಟನೆಯ ವಾರ್ಷಿಕೋತ್ಸವವನ್ನು ಹರ್ಷದಿಂದಲೇ ಆಚರಿಸಿತು. ತನ್ನ ಸಾಧನೆಗಳ ಬಗೆಗೆ ಅಭಿಮಾನದಿಂದ, ತನ್ನ ಉದ್ದೇಶಗಳ ಪೂರೈಕೆಯ ಬಗ್ಗೆ ಆತ್ಮವಿಶ್ವಾಸದಿಂದ ಅದು ನವ ಮನ್ವಂತರಕ್ಕೆ ಪದಾರ್ಪಣ ಮಾಡುತ್ತಿದೆ.

ಒಂದು ದೇಶ ಸಾಧನೆಯ ಪಥಗಮನ ಮಾಡುವಾಗ ಕೆಲವೆಡೆ ಮುಗ್ಗರಿಸಲೂ ಬಹುದು. ಇದನ್ನು ಕೊರತೆಯೆಂದು ಇದನ್ನೇ ಭೂತಕನ್ನಡಿಯೆಡೆಯಿಂದ ವೀಕ್ಷಿಸುವುದು ನ್ಯಾಯವಲ್ಲ. ಅದು ಸಾಧಿಸಿದ ಮಹತ್ಸಾಧನೆಗಳನ್ನು ಸದ್ದೃಷ್ಟಿಯಿಂದ ನೋಡಬೇಕು. ಜೆಕೊಸ್ಲೊವಾಕಿಯಾವು ಕೆಲವೆಡೆ ತಪ್ಪಿಬಿದ್ದಿದೆ; ಮತ್ತೆ ಹಲವೆಡೆ ತಲೆಯೆತ್ತಿ ನಡೆದಿದೆ.

ಇಂದು ಪ್ರಪಂಚದ ಮುಂದುವರಿದ ರಾಷ್ಟ್ರಗಳೊಡನೆಯೂ ಸ್ಪರ್ಧೆಗೆ ನಿಲ್ಲುವ ಶಕ್ತಿ ಜೆಕ್ ಪಡೆದಿದೆ. ೧೯೪೫ರ ಮೇಯಲ್ಲಿ ವಿಮೋಚನೆಗೊಂಡ ನಂತರ ಯುದ್ಧಕಾಲದ ಹಾನಿಯನ್ನೆಲ್ಲಾ ತುಂಬಿಕೊಂಡು ಕೈಗಾರಿಕೆಯ ರಂಗದಲ್ಲಿ ಬೆಳೆದು ನಿಂತಿದೆ. ಇಂದದು ಉದ್ಯಮ ರಂಗದಲ್ಲಿ ಹಿಂದಿಗಿಂತ ೪|| ಪಟ್ಟು ಹೆಚ್ಚು ಉತ್ಪಾದಿಸುತ್ತದೆ. ಅಮೆರಿಕೆಯಲ್ಲಿ ಉಕ್ಕಿನ ಉತ್ಪಾದನೆಯ ತಲಾವಾರು ಉತ್ಪಾದನೆಗಿಂತ ಜೆಕ್ಕಿನ ತಲಾ ಉತ್ಪಾದನೆ ಅಧಿಕವಿದೆ. ಕಲ್ಲಿದ್ದಲಿನಲ್ಲಿ ಇಡಿಯ ಯುರೋಪಿನ ಮೊದಲ ಐದು ದೇಶಗಳಲ್ಲಿ ಜೆಕ್ ಒಂದು, ಕಂದು ಕಲ್ಲಿದ್ದಲಿನಲ್ಲಿ ಎರಡನೆಯ, ಭಾರಯಂತ್ರೋಪಕರಣದಲ್ಲಿ ಮೂರನೆಯ, ಆವಿಯ ಟರ್ಬೈನ್‌ನಲ್ಲಿ ನಾಲ್ಕನೆಯ ಸ್ಥಾನವನ್ನು ವಿಶ್ವದಲ್ಲಿ ಗಳಿಸಿದೆ.

ರಾಷ್ಟ್ರೀಯ ಕೈಗಾರಿಕೆ ಮತ್ತು ಆರ್ಥಿಕ ಸಮತೋಲನದಲ್ಲಿ ಹೆಚ್ಚಿನ ಸಂಶ್ರಮ ಪಟ್ಟುದರಿಂದಲೇ ಜೆಕ್ ಈ ಅದ್ವಿತೀಯ ಉತ್ಕರ್ಷ ಹೊಂದುವುದು ಸಾಧ್ಯವಾಯ್ತು. ಜೀವನ ಮಟ್ಟವನ್ನು ಎತ್ತರಿಸುವ ಉದ್ದೇಶದಿಂದ ಏಕನಿಷ್ಠೆಯೊಡನೆ ಮುಂದುವರಿದುದರಿಂದಲೇ ಇಂತಹ ಉನ್ನತ ಜೀವನ ಜೆಕ್ ಪಡೆಯುವಂತಾಯ್ತು. ಕಳೆದ ನಾಲ್ಕು ವರ್ಷಗಳಲ್ಲಿ ರಾಷ್ಟ್ರೀಯ ವರಮಾನವು ಸೇ. ೩೫ರಷ್ಟು ಹೆಚ್ಚುವಂತಾಯ್ತು. ಜೆಕ್ ಪ್ರಜೆಯು ಅಮೆರಿಕನನಿಗಿಂತ ಅಧಿಕ ಕ್ಯಾಲೋರಿ ಆಹಾರ ಉಣ್ಣಲು ಶಕ್ತನಾಗಿದ್ದಾನೆ. ಫ್ರಾನ್ಸಿನ ಜನರು ಬಳಸುವುದಕ್ಕಿಂತ ಹೆಚ್ಚು ಜೆಕ್ ಪ್ರಜೆಗಳು ಉಪಯೋಗಿಸುತ್ತಾರೆ. ಕಾರ್ಮಿಕರ ಹಿತರಕ್ಷಣೆಯಲ್ಲಿ ಜೆಕ್ ಅತ್ಯಪೂರ್ವ ಯಶಸ್ಸು ಪಡೆದಿದೆ. ಅವರು ವೈದ್ಯಕೀಯ ಸೇವೆ, ವಿಮೆ, ವಿದ್ಯಾಭ್ಯಾಸವನ್ನೂ ಉಚಿತವಾಗಿ ಪಡೆಯಬಲ್ಲರು. ಪ್ರತಿ ಜೆಕ್ ಪ್ರಜೆಯೂ ಪಾದರಕ್ಷೆ ಮೆಟ್ಟುತ್ತಾನೆಯೆಂದರೆ ಅತ್ಯುಕ್ತಿಯಲ್ಲ.

ಔದ್ಯೋಗಿಕ ಪರಿಪಕ್ವತೆಗೆ ತಕ್ಕಂತೆ ಉತ್ಪಾದನೆಯ ಬೆಳವಣಿಗೆಯ ಪ್ರಮಾಣ ಇಳಿಯುತ್ತದೆಯೆಂಬ ಕೆಲವು ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಇಲ್ಲಿ ತಲೆಕೆಳಗಾಗಿದೆ. ಅಲ್ಪಾವಧಿಯಲ್ಲಿಯೇ ಪೂರ್ಣ ಸಮಾಜವಾದೀ ಆರ್ಥಿಕ ವ್ಯವಸ್ಥೆಯನ್ನು ರಚಿಸಿಕೊಳ್ಳುವುದು ಸಾಧ್ಯವಾಗಿದೆ.

ಇಂದಿನ ಪ್ರಪಂಚದಲ್ಲಿ ಅಂತಾರಾಷ್ಟ್ರೀಯ ಸಮಸ್ಯೆಗಳೊಡನೆ ದೇಶೀಯ ಪ್ರಶ್ನೆಗಳನ್ನೂ ತೂಗಿ ನೋಡಿ ಮುಂದಡಿಯಿಡುವುದು ಅತ್ಯಗತ್ಯವೆನಿಸಿದೆ. ಜೆಕೊಸ್ಲೊವಾಕಿಯಾದಲ್ಲಿ ಕೈಗಾರಿಕೆಗಳು ಏಕಪ್ರಕಾರವಾಗಿ ಮುಂದುವರಿದಿವೆ; ಆದರೆ, ಅದಕ್ಕೆ ಬೇಕಾದ ಕಚ್ಚಾ ಪದಾರ್ಥಗಳ ಪೂರೈಕೆಯು ಅತೃಪ್ತಿಕರವಿದೆ. ಆದುದರಿಂದ ವ್ಯವಸಾಯವನ್ನೇ ಕೈಗಾರಿಕೆಯ ಮಟ್ಟಕ್ಕೆ ಏರಿಸುವುದು ಅಗತ್ಯವಿದೆ.

೧೯೭೦ಕ್ಕೆ ಜೆಕೊಸ್ಲೊವಾಕಿಯಾದ ಒಂದು ಯೋಜನೆ ಮುಗಿಯುತ್ತದೆ. ಈ ಅವಧಿಯಲ್ಲಿ ಜನಜೀವನ ಪ್ರಮಾಣವನ್ನು ಓತಪ್ರೋತವಾಗಿ ವರ್ಧಿಸಬೇಕಾಗಿದೆ; ಸುಮಾರು ಇಪ್ಪಟ್ಟು ಉಕ್ಕನ್ನು ಉತ್ಪಾದಿಸಬೇಕಾಗಿದೆ. ರಾಸಾಯನಿಕ ಕೈಗಾರಿಕೆಗಳಿಗೆ ವಿಶೇಷ ಪ್ರಾಶಸ್ತ್ಯ, ಸೋವಿಯತ್ ರಶ್ಯಾದಿಂದ ತೈಲಗಳ ಆಯಾತ-ಇವುಗಳಿಗೆ ತೀವ್ರ ಗಮನ ಹರಿಸುವುದು ಜೆಕ್ಕಿಗೆ ಅಗತ್ಯವೆನಿಸಿದೆ.

ಜೆಕ್ ಸಮಷ್ಟಿ ವ್ಯವಸಾಯವನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಮಾಡುತ್ತಿರುವ ದೇಶ. ಆದರೆ, ಈ ದಿಸೆಯಲ್ಲಿ ಅದು ಸಾಧಿಸಿದ್ದು ಸಂಪೂರ್ಣ ತೃಪ್ತಿಕರವೆನ್ನುವಂತಿಲ್ಲ. ಇಲ್ಲಿಗೆ ಬೇಕಾದ ಪೂರ್ವಾವಶ್ಯಕತೆಗಳನ್ನು ಪೂರಯಿಸಿಕೊಳ್ಳಲಾಗಿದ್ದರೂ, ಧಾನ್ಯೋತ್ಪಾದನೆಯಲ್ಲಿ ಇನ್ನೂ ಗಳಿಸಬೇಕಾದದು ಬಹಳಷ್ಟಿದೆ. ಅಲ್ಲಿ ಪ್ರತಿ ನಾಗರಿಕನಿಗೆ ೦·೩೭ ಎಕ್ಟರಿನಷ್ಟು ಭೂಮಿ ಮಾತ್ರ ಇರುವುದರಿಂದ, ಉತ್ತಮೋತ್ತಮ ಗೊಬ್ಬರಗಳನ್ನು ಬಳಸಿಕೊಂಡರೆ ಮಾತ್ರ ಗುರಿ ಮುಟ್ಟುವುದು ಸಾಧ್ಯವೆನಿಸೀತು. ಕಾರ್ಯದ ತೀವ್ರತೆಗಾಗಿ ಪ್ರತಿ ವರ್ಷ ಅಲ್ಲಿ ೪೦ ಸಾವಿರ ಯುವಕರನ್ನು ಸೇವೆಗೆ ತೆಗೆದುಕೊಳ್ಳುತ್ತಾರೆ.

ಒಂದು ದೇಶವು ಅಭಿವೃದ್ಧವಾದಂತೆ, ಅದರ ವರಮಾನವು ಹೆಚ್ಚುತ್ತ ಬಂದಂತೆ ಪ್ರಜೆಗಳಿಗೂ ದೊರೆಯುವ ಸೌಕರ್ಯ-ಸೌಲಭ್ಯಗಳು ಅಧಿಕಾಧಿಕವಾಗುವುವು. ೧೯೭೦ರಲ್ಲಿ ಜೆಕ್ ಪ್ರಜೆಯ ವ್ಯಕ್ತಿಗತ ವಿನಿಯೋಗವು ನೂರಕ್ಕೆ ೩೫ರಷ್ಟು ಹೆಚ್ಚುವುದು; ಬಹು ಸಂತಾನ ಕುಟುಂಬಗಳಿಗೆ ಪೂರಕ ಸೌಲಭ್ಯಗಳು ದೊರೆಯುವುವು; ಉದ್ಯೋಗೀ ಮಹಿಳೆಯರು ಈಗಿನ ೧೮ ವಾರಗಳ ಹೆರಿಗೆ ರಜೆಗೆ ಬದಲು ೨೧ ವಾರಗಳ ವಿರಾಮ ಪಡೆಯುವರು. ಇಂದು ವಾರಕ್ಕೆ ೪೬ ತಾಸು ದುಡಿಯುವ ಕಾರ್ಮಿಕರು ಆಗ ೪೨ ತಾಸು ಮಾತ್ರ ದುಡಿದರೆ ಸಾಕಾಗುವುದು. ಆದರೆ, ಇವೆಲ್ಲವನ್ನೂ ಸಾಧಿಸಬೇಕಾದರೆ ದೃಢ ಮನಸ್ಸು ಬೇಕು. ಪ್ರಾಮಾಣಿಕ ಪರಿಶ್ರಮ ಬೇಕು. ಜೆಕ್ ಪ್ರಜೆಗಳಲ್ಲಿ ಇಂತಹ ಸಾಹಸವಿದೆ; ಎಂತಲೇ ಅವರಿಂದಿನ ಎತ್ತರವನ್ನು ಏರಿದ್ದಾರೆ, ಇನ್ನೂ ಏರಲಿದ್ದಾರೆ.

ಜೆಕ್ ಕಮ್ಯುನಿಸ್ಟ ದೇಶವಾದರೂ ಬಂಡವಳಶಾಹಿಗಳನ್ನು ದೂಷಿಸುವುದಿಲ್ಲ; ದ್ವೇಷಿಸುವುದಿಲ್ಲ. ಶಾಂತಿಯುತ ಸಹಬಾಳ್ವೆಯನ್ನು ಅದು ಬಯಸುತ್ತಿದೆ. ಆದುದರಿಂದಲೇ ಚೀನಾದ ಭಾರತಾಕ್ರಮಣವನ್ನದು ಪ್ರತಿಭಟಿಸಿದೆ. ವಿಶ್ವಶಾಂತಿ ಸ್ಥಾಪನೆಯಾಗಬೇಕೆಂಬುದು ಜೆಕ್ಕಿನ ಆಶೆ; ಅದಕ್ಕಾಗಿಯೂ ಅದು ತನ್ನ ಪಾಲಿನ ಸೇವೆ ಸಲ್ಲಿಸುತ್ತಿದೆ.

ಜೆಕ್ ಕಮ್ಯುನಿಸ್ಟ ಮಾರ್ಗದಲ್ಲಿ ಮುಂದುವರಿಯುತ್ತಿದ್ದರೆ, ನಮ್ಮ ಭಾರತವು ಪ್ರಜಾತಂತ್ರಕ್ಕೆ ಸೋತುಬಿದ್ದಿದೆ. ಭಾರತವಾದರೂ ತಾನು ಸ್ವತಂತ್ರಗೊಂಡ ಈ ೧೬ ವರ್ಷಗಳಲ್ಲಿ ಪರ್ವತದಷ್ಟು ಕಾರ್ಯ ಮಾಡಿದೆ. ದುಡಿಮೆ—ದುಡಿಮೆ ಅನವರತವೂ ದುಡಿಮೆ ಮಂತ್ರೋಚ್ಚಾರಣೆ ಮತ್ತು ಅಗಾಧ ತಪಸ್ಸೇ ಅಭಿವೃದ್ಧಿಯ ಪ್ರೇರಕ ಶಕ್ತಿ, ಅದರಿಂದಲೇ ನವ ಗೆಲ್ಲಾ ಮುಕ್ತಿ. ಇದರಲ್ಲಿ ತಳೆಯಬೇಕು ನಾವೆಲ್ಲಾ ಆತ್ಯಂತಾಸಕ್ತಿ. ನಮ್ಮ ಮಿತ್ರ ರಾಷ್ಟ್ರ ಜೆಕ್‌ನಿಂದ ನಾವೀ ಪಾಠ ಕಲಿಯದೆ ಹೋದರೆ ತಪ್ಪಲ್ಲವೆ?

## ಗಾಂಡೀವಧಾರಿ ಭಾರತೀಯ

(೩ನೇ ಪುಟದಿಂದ)

ಲಿ ಯಾರೂ ಬಲಿಯಾಗಲಾರರು. ಭಾರತವೇ ಆಕ್ರಮಣ ನಡೆಸಿದೆ ಎನ್ನುವ ಕಮ್ಯೂನಿಸ್ಟರೂ, ಹಿಮಾಲಯವು ಕೇವಲ ಕಲ್ಲು ಮಣ್ಣೆಂದು ಹೀನಾಯವಾಗಿ ರಾಗ [illegible] ಸರಿಯಲ್ಲ ಎನ್ನುವ ಅಭಿಮಾನ ಶೂನ್ಯ ನಿರ್ವೀರ್ಯರಂತೆ, ನಮಗೆ ಸಾಧಕ ರಾಜಕೀಯ [illegible] ಇವರನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಭಾರತಕ್ಕಿಂತ ಅಧಿಕ ಜನಸಂಖ್ಯೆಯುಳ್ಳ ಸೇನೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿಲ್ಲವೆನ್ನುವ ರಣ ಹೇಡಿಗಳು ಅರ್ಜುನನ ಜ್ಞಾಪಕ ಪಡಿಸಿಕೊಳ್ಳಬೇಕು. ನಾವು ಗಾಂಡೀವಧಾರಿಗಳಾಗೋಣ. ಶ್ರೀಕೃಷ್ಣನ ಪಾಂಚಜನ್ಯ ಮೊಳಗಲಿ. [illegible] ಕಮ್ಯೂನಿಸ್ಟರನ್ನು ಬೇರು ಸಹಿತ ಕಿತ್ತೊಗೆಯೋಣ. ಭಾರತ ಮಾತೆಗೆ ಜಯವಾಗಲಿ ಎನ್ನುವ ಘೋಷ ಕೇಳಿ ಬರಲಿ.

—ಶಿವಶಂಕರ





ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ
ಬೇಕಾದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆಕೊಳ್ಳುವ ಭರವಸೆ ಕೊಡುತ್ತೇವೆ.

ವಿ. ಸೂ. ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ

ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

**ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್**

**ಟೆಂಕಪೇಟೆ — ಉಡುಪಿ**

ಪ್ರೊಪ್ರೈಟರ್ ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ 66

**ಕುಮಾರಿ ಬಿಲ್ಲೆಗಳು**
(ರಿಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯಾಬ್ 18ರ ಸಾಮಾನ್ಯ ರೂ. 4/. ಮಧ್ಯಮ ರೂ. 6/. ಉತ್ತಮ ರೂ 9/.
**P. Devee & Co** (N J) Calcutta—40

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

**ಋಣ ಯಾತ್ರೆ**

ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.
**ಮೊದಲು ಪ್ರಕಟವಾದ ಕಾದಂಬರಿ**

**ಭಾವಾರ್ಚನೆ**

ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು.—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಅನುಭವಾಮೃತ

# ರೈಲುಬಂಡಿ ಚಲಿಸಿತು

ಗಲಭೆಯೋ ಗಲಭೆ. ಗಲಾಟೆಯೋ ಗಲಾಟೆ. ಎಲ್ಲಿ? ಏನು? ಏಕೆ? ರೈಲ್ವೆ ಸ್ಟೇಷನ್ನಿನಲ್ಲಿ ಗಲಾಟೆ. ಏಕೆಂದು ಗೊತ್ತಿಲ್ಲ. ಅಂತೂ ಗಲಾಟೆ. ವಿಪರೀತ ಜನಸಂದಣಿ. ಅವರದೇ ಗಲಾಟೆ. ಹೊಡೆದಾಟ ಬಡಿದಾಟಗಳೇನೂ ಇಲ್ಲ. ರೈಲು ಹತ್ತುವವರು, ಇಳಿಯುವವರು, ಬೀಳ್ಕೊಳ್ಳುವವರು, ಬೀಳ್ಕೊಡುವವರು, ದೂರದ ಪ್ರಯಾಣಿಕರು, ಹತ್ತಿರದ ಪ್ರಯಾಣ ಮಾಡುವವರು, ಫಸ್ಟ್ ಕ್ಲಾಸಿನಿಂದ ಥರ್ಡ್ ಕ್ಲಾಸಿನ ವರೆಗೂ ಹೋಗುವವರು, ಹೆಂಗಸರು, ಗಂಡಸರು, ಮಕ್ಕಳು ಮರಿಗಳು, ಅತ್ತೆ ಮಾವಂದಿರು, ಸೊಸೆ ಅಳಿಯಂದಿರು, ಗಂಡ ಹೆಂಡಿರು, ಆಳು ಕಾಳುಗಳು ಯಜಮಾನರು ಇತ್ಯಾದಿ ಇತ್ಯಾದಿ ನೂರಾರು ಜನ. ಇವರದೇ ಗಲಾಟೆ, ಅಬ್ಬಾ ಎಷ್ಟು ಜನ! ಸಂತೆಗೂ ಸೇರೋಲ್ಲ, ಜಾತ್ರೆಗೂ ಸೇರುವುದಿಲ್ಲ. ಸೈನ್ಯಕ್ಕೆ ಸೇರಲೂ ಇಷ್ಟು ಜನ ಹೋಗೋಲ್ಲ, ಸಿನೆಮಾ ನೋಡಲೂ ಹೋಗುವುದಿಲ್ಲ. ಮಂತ್ರಿಗಳನ್ನು, ಸಿನೆಮಾ ತಾರೆಯರನ್ನು ನೋಡಲು ಕೂಡಾ ಇಷ್ಟು ಜನ ಸೇರುವುದಿಲ್ಲ. ಅದೇಕೋ ಅಂದು ಮಾತ್ರ ರೈಲ್ವೆ ಸ್ಟೇಷನ್ನಿನಲ್ಲಿ ಅಷ್ಟು ಜನ ಸೇರಿದ್ದರು. ಕುಂಬಳಕಾಯಿ ಎಸೆದರೆ ಕೆಳಗೆ ಬೀಳದಷ್ಟು ಜನಸಂದಣಿ. ಕೆಲವರು ಸೀಟು ಸಿಕ್ಕಿತೆಂದು ಹಿಗ್ಗಿ ಹೀರೇಕಾಯಿ ಆಗಿ ಹೋಗಿದ್ದರೆ ಇನ್ನು ಕೆಲವರು ಒಂಟಿ ಕಾಲಲ್ಲಿ ನಿಂತು, ಅರ್ಧಾಸನದಲ್ಲಿ ಕುಳಿತ, ಫುಟ್ ಬೋರ್ಡಿನ ಮೇಲೆ ನಿಂತು ಕುಗ್ಗಿ ಕುಂಬಳಕಾಯಿ ಆಗಿ ಹೋಗಿದ್ದರು. ಇನ್ನೇನು, ರೈಲು ಹೊರಡುವ ಸಮಯ. ಸ್ಟೇಷನ್ನಿನ ಗಡಿಯಾರದ ಮುಳ್ಳು ಮುಂದುವರಿಯುತ್ತಲೇ ಇತ್ತು. ಇನ್ನು ಅರ್ಧ ಘಂಟೆ ಇದೆ, ಇನ್ನು ಕಾಲು ಘಂಟೆ ಇದೆ—ರೈಲು ಹೊರಡಲು ಎಂದು ಸೂಚಿಸುತ್ತಲೇ ಇತ್ತು. 'ಜಲ್ದಿ ಟಿಕೇಟ್ ಕೊಡ್ರಿ' ಎಂದು ಕ್ಯೂನಲ್ಲಿ ಕೊನೆಯಲ್ಲಿ ನಿಂತಿದ್ದವರೊಬ್ಬರು ಕಿರಿಚಿದರು. ಟಿಕೇಟ್ ಪಡೆದವರು ಎದ್ದು ಬಿದ್ದು ಕಂಪಾರ್ಟ್‌ಮೆಂಟಿನೊಳಕ್ಕೆ ನುಗ್ಗಿದರು. ಟಿಕೆಟ್ ಪಡೆಯುವವರು ಟಿಕೆಟ್ ಸಿಗಬಹುದೆಂಬ ಆಸೆಯನ್ನು ಇನ್ನೂ ಇಟ್ಟುಕೊಂಡಿದ್ದರು. ಕೆಲವರು ನಿರಾಶರಾಗಿ ಹಿಂದೆಯೇ ಉಳಿದರು.

ಇನ್ನೇನು ರೈಲು ಹೊರಡುವ ಸಮಯ ಆಗಿಯೇ ಹೋಯ್ತು. ಹತ್ತೇ ನಿಮಿಷ ಉಳಿದಿದೆ, ಇಲ್ಲ ಎಂಟೇ ನಿಮಿಷ. ಇನ್ನು, ಐದೇ ನಿಮಿಷ ಉಳಿದಿವೆ. ಒಬ್ಬ ತರುಣಿ ಓಡಿ ಬಂದಳು, ಓಡೋಡಿ ಬಂದಳು. ಅಲ್ಲ ಅಲ್ಲ ಬೇಗ ಬೇಗನೆ ನಡೆದು ಬಂದಳು ಎಷ್ಟು ದೂರದಿಂದ ಬಂದಿದ್ದಳೋ? ಎಷ್ಟು ವೇಗವಾಗಿ ನಡೆದು ಬಂದಳೋ? ಮೇಲುಸಿರು ಬಿಡುತಿದ್ದಳು. ಬಹಳ ಸೋತಿದ್ದಳು. ಅವಳ ಉಸಿರಾಟಕ್ಕೆ ಉಬ್ಬಿದ ಎದೆ ಮೇಲು ಕೆಳಕ್ಕೆ ಕುಣಿದಾಡುತಿತ್ತು. ಮುಖವೆಲ್ಲ ಬೆವರಿನಿಂದ ಒದ್ದೆಯಾಗಿ ಹೋಗಿತ್ತು ತೆಳುವಾಗಿ ಹಚ್ಚಿದ್ದ ಪೌಡರ್ ತೇಲಿ ಹೋಗಿತ್ತು. ತುಟಿಯ ರಂಗು ಮತ್ತು ಹೊಳೆಯುತಿತ್ತು. ಕತ್ತಿನಲ್ಲಿದ್ದ ಮೂರೆಳೆಯ ಮುತ್ತಿನ ಸರ, ಮೂಗಿನ ವಜ್ರದ ನತ್ತು ಬಿಸಿಲಿನ ಝಳಕ್ಕೆ ಫಳಫಳನೆ ಮಿನುಗುತಿತ್ತು. ಅಂದವಾಗಿ ಬಾಚಿದ್ದ ತಲೆಗೂದಲು ಕೆದರಿ ಮುಂಗುರುಳು ಮುಖದ ಮೇಲೆ ಕುಣಿದಾಡುತಿತ್ತು. ಮುಡಿದಿದ್ದ ಮಲ್ಲಿಗೆಯ ಕಂಪು ಕಂಪಾರ್ಟ್‌ಮೆಂಟಿನೊಳಗೆಲ್ಲಾ ಪಸರಿಸಿತು. ಆಕೆ ಅಷ್ಟು ಪ್ರಯಾಸಪಟ್ಟು ಕಂಪಾರ್ಟ್‌ಮೆಂಟಿನೊಳಗೆ ಬಂದರೂ ಕೂರಲು ತಾವಿಲ್ಲ. ನಿಲ್ಲಲೂ ಅವಕಾಶವಿಲ್ಲ. ಕೈಯಲ್ಲಿದ್ದ ಚೀಲವನ್ನು ಕೆಳಗಿರಿಸಲೂ ಸ್ಥಳವಿಲ್ಲ. ಸುತ್ತ ಮುತ್ತ ನೋಡಿದಳು. ಚಂಚಲ ದೃಷ್ಟಿಯನ್ನು ಎಲ್ಲರ ಮೇಲೂ ಬೀರಿದಳು. ರೈಲು ಹೊರಡಲು ಇನ್ನು ಮೂರು ನಿಮಿಷ ಉಳಿದಿದೆ. ನಿರಾಶೆಯ ಮಬ್ಬು ಕವಿಯಿತು. ಆ ಕೋಮಲೆಯ ಮುಖ ಕಮಲದ ಮೇಲೆ. ಹೆಣ್ಣು ಹೀಗೆ ಪರದಾಡುವಾಗ ನಾಗರಿಕ ಗಂಡು ಸುಮ್ಮನೆ ಕುಳಿತೀತೇ? ಅವಳಿಗೆ ಸಹಾಯ ಮಾಡುವ ಮನಸ್ಸು ಬಾರದೆ ಹೋದೀತೇ? ಆಂಗ್ಲ ಉಡುಪು ಧರಿಸಿದ್ದ ಸುಂದರ ತರುಣನೊಬ್ಬ ಎದ್ದ. ಮಂದಹಾಸವನ್ನೊಮ್ಮೆ ಆ ಬಾಲೆಯ ಮೇಲೆ ಬೀರಿ ಆಕೆಯನ್ನು ತಾನು ಕುಳಿತಿದ್ದ ಸ್ಥಳದಲ್ಲಿ ಕುಳಿತುಕೊಳ್ಳಲು ಹೇಳಿದ. ಆಕೆಯ ರೂಪಾತಿಶಯಗಳಿಗೆ ಬೆಲೆ ಕೊಟ್ಟು ಆತ ಸ್ಥಳ ಕೊಟ್ಟಿರಬಹುದೆಂದು ಕೆಲವರು ಊಹಿಸಿದರು. ಕೆಲವರ ಆವನ ಔದಾರ್ಯಕ್ಕೆ ತ್ಯಾಗಕ್ಕೆ ತಲೆಬಾಗಿದರು. ಆ ಹೆಣ್ಣಿಗೆ ಆ ಜಾಗ ದೊರೆತುದು ಆವಳ ಮುಂದಿನ ಜನ್ಮದ ಪುಣ್ಯ ಫಲವೋ ಏನೋ? ಅವಳಿಗೆ ಕಾಣದ ಸ್ವರ್ಗವನ್ನೇ ಕಂಡಂತಾಗಿರಬೇಕು. ದುರ್ಲಭವಾದುದು ಲಭ್ಯವಾಯಿತಲ್ಲಾ ಎಂದು ಹಿಗ್ಗಿದಳು. ಆಕೆಯ ಮನ ಕೃತಜ್ಞತೆಯಿಂದ ಮಿಡಿದಿತು. ತನ್ನ ಅತಿಬಿಳುಪಿನ ದಂತ ಪಂಕ್ತಿಯನ್ನು ಆಕೆ ಪ್ರದರ್ಶಿಸಿದಾಗ ಆ ತರುಣನ ಹೃದಯ ಉಬ್ಬಿ ಮೇಲೆ ಮೇಲೆ ಏರಿ ಹಾರಾಡಿರಬೇಕು.

ಆಕೆ 'ತುಂಬ ಥ್ಯಾಂಕ್ಸ್' ಎಂದಳು. ಆ ಕೋಕಿಲ ಕಂಠದ ಮಾಧುರ್ಯದ ಸವಿಯನ್ನು ಅನುಭವಿಸಿದ ಆ ಜನತೆಯೇ ಧನ್ಯ!

ತೆರವಾದ ಸ್ಥಾನದಲ್ಲಿ ಆಕೆ ಕೂರಲಿಲ್ಲ. ಆಕೆಯ ಕೈಯಲ್ಲಿದ್ದ ಚೀಲ ಕುಳಿತಿತು. ಸುಂದರಿ ರೈಲಿನಿಂದ ಕೆಳಗಿಳಿದಳು. ಆ ಹದಿನೆಂಟರ ಹೆಣ್ಣು ಎಪ್ಪತ್ತೆಂಟರ ತರುಣಿ(!)ಯನ್ನು ಕರೆದುಕೊಂಡು ಬಂದು ತರುಣ ದಾನ ಮಾಡಿದ್ದ ಆ ಸೀಟಿನಲ್ಲಿ ಕೂರಿಸಿದಳು. ಚೀಲವನ್ನು ಆವಳ ಕೈಗೆ ಕೊಟ್ಟು 'ಜಾಗ್ರತೆಯಾಗಿ ಹೋಗಿ ಬನ್ನಿ. ಹೋದ ಕೂಡಲೇ ಕಾಗದ ಬರೆಯಿರಿ. ನಾನು ಇನ್ನು ಬರುತ್ತೇನೆ' ಎಂದಳು ದಡಬಡನೆ ರೈಲಿನಿಂದ ಕೆಳಗಿಳಿದಳು.

ರೈಲು ಚಲಿಸಿತು ತುಂಬಿದ್ದ ಪ್ರಯಾಣಿಕರನ್ನು ಹೊತ್ತು ಮುಂದೆ ಚಲಿಸಿತು. ಪ್ಲಾಟ್ ಫಾರಂನಲ್ಲಿ ನಿಂತಿದ್ದವರೆಲ್ಲ 'ಬೈ ಬೈ' ಎನ್ನುತ್ತಾ ಕೈ ಬೀಸ ತೊಡಗಿದರು. ತರುಣಿಯೂ ತನ್ನ ಅಜ್ಜಿಗೆ 'ಬೈ ಬೈ' ಎಂದಳು.. ಆದರೆ ಆ ತರುಣನ ಮನಸ್ಸು ಆಕೆಯನ್ನು ಎಷ್ಟು ರೀತಿಯಲ್ಲಿ ಬೈಯುತ್ತಿತ್ತೋ? ಸ್ಥಳ ದಾನ ಮಾಡಿದ್ದ ತರುಣನಿಗೆ ಆದರೆ ಅಲ್ಲಿ ಕುಳಿತದ್ದು ಮುದುಕಿ. ಆತನ ಮುಖ ಕಸಿವಿಸಿಗೊಂಡಿತ್ತು. ಆತನ ಪರಿಸ್ಥಿತಿಯನ್ನು ಕಂಡು ಪ್ರಯಾಣಿಕರು ಒಳಗೊಳಗೇ ನಗುತಿದ್ದರು. ಮುದುಕಿ ಸುಖವಾಗಿ ಕುಳಿತಿದ್ದಳು ರೈಲು ವೇಗದಿಂದ ಚಲಿಸುತಿತ್ತು.

—ಕುಸುಮಗೋಪಾಲ

ಮಾನವ ಕಲ್ಯಾಣಕ್ಕೆ

# ಸಮುದ್ರದಿಂದಲೂ ಶುದ್ಧ ನೀರು

ಮಾನವ ನೀರಿಲ್ಲದೆ ದಿನಗಳೆಯಲಾರ; ಪ್ರಪಂಚ ನಾಗರಿಕತೆಯು ಪರಾಕಾಷ್ಠೆಯನ್ನು ಮುಟ್ಟುವಂತಿದ್ದರೂ ಕುಡಿಯುವ ನೀರಿನ ಕೊರತೆಯು ಕೆಲವೊಂದು ಪ್ರದೇಶಗಳನ್ನು ಬಿಟ್ಟೂಬಿಡದೆ ಕಾಡುತ್ತಿದೆ. ಇದಕ್ಕಾಗಿ ಎಲ್ಲೆಲ್ಲೂ ತಾನೇ ತಾನಾಗಿ ಭೋರ್ಗರೆಯುತ್ತ ಹರಡಿರುವ ಲವಣ ಸಮುದ್ರದ ನೀರನ್ನು ಕುಡಿಯುವ ನೀರನ್ನಾಗಿ ಪರಿವರ್ತಿಸುವ ಸಾಹಸವನ್ನೂ ಮಾನವನು ಮಾಡ ತೊಡಗಿದ್ದಾನೆ.

ಅಮೇರಿಕೆಯು ಕೆಲವು ವರ್ಷಗಳಿಗೆ ಮೊದಲು ಇಂತಹ ಸಾಹಸಿ ವಿಧಾನವನ್ನು ಕಂಡುಕೊಂಡಿತು. ಆದರೆ, ಅದು ಬಹಳ ವ್ಯಯದಾಯಕವಾಗಿತ್ತು. ಈಗ ಅದು ಕಡಿಮೆ ವೆಚ್ಚದ ವಿಧಾನಗಳನ್ನು ಕಂಡು ಹಿಡಿಯುವ ಕಾರ್ಯಕ್ರಮವನ್ನು ತ್ವರೆಗೊಳಿಸುತ್ತಿದೆ. ನಾಲ್ಕು ಪ್ರಾಯೋಗಿಕ ಯಂತ್ರಗಳಿಂದ ಈ ವಿಧಾನವನ್ನು ಪರಿಶೋಧಿಸುತ್ತಿದೆ; ಇನ್ನೆರಡು ವರ್ಷಗಳಲ್ಲಿಯೇ ಸುಮಾರು ೧೫ ೨೦ ಪ್ರಾಯೋಗಿಕ ಯಂತ್ರಗಳನ್ನು ಸಿದ್ಧಗೊಳಿಸಿ, ತಮ್ಮ ಗುರಿಮುಟ್ಟುವ ಆಶಯವನ್ನು ಅಮೇರಿಕನ್ನರು ಇಟ್ಟುಕೊಂಡಿದ್ದಾರೆ.

೧೯೬೩ರ ಮೊದಲ ಮೂರು ತಿಂಗಳುಗಳಲ್ಲಿ ಈ ಕಾರ್ಯಕ್ರಮವನ್ನು ನಿರ್ದೇಶಿಸುತ್ತಿರುವ ಆಂತರಿಕ ಶಾಖೆಯು ೧೧ ಲಕ್ಷ ಡಾಲರ್ ವೆಚ್ಚದ ಸಂಶೋಧನೆ ಮತ್ತು ಅಭಿವೃದ್ಧಿ ಕ್ರಮವನ್ನು ಕಂಟ್ರಾಕ್ಟ್ ಕೊಟ್ಟಿತು. ಕಂಟ್ರಾಕ್ಟ್‌ಗಳಲ್ಲಿಯೂ ಅನೇಕ ವಿಷಯ ವೈವಿಧ್ಯಗಳು ಒಳಗೊಂಡಿವೆ. ಇದರಿಂದಲೇ ಸಿಹಿ ನೀರು ತಯಾರಿಸುವ ಯೋಜನೆಯು ಎಷ್ಟು ಜಟಿಲವೆಂದು ತಿಳಿಯಬಹುದು. ಅಮೆರಿಕೆಯ ಪೂರ್ವ ಕರಾವಳಿಯಿಂದ ಶಾಂತ ಸಾಗರದ ವರೆಗೆ ಅನೇಕ ಸ್ಥಳಗಳಲ್ಲಿ ಈ ಸಂಬಂಧದ ಪ್ರಯೋಗಗಳನ್ನು ಸದ್ಯ ನಿರ್ವಹಿಸುವ ನಿರೀಕ್ಷೆಯಿದೆ.

ಉಪ್ಪು ನೀರಿನಿಂದ ಕುಡಿಯುವ ನೀರನ್ನು ತಯಾರಿಸುವುದಕ್ಕೆ ನೀರಿನ ಗುಣಗಳನ್ನು ಮೊತ್ತಮೊದಲು ಪರಿಶೀಲಿಸಬೇಕು. ಇದಕ್ಕಾಗಿ ಮೂಲಭೂತ ಸಂಶೋಧನೆಗಳನ್ನು ಮುಂದುವರಿಸಲು ಪರಮಾಣು ಶಕ್ತಿ ಏಜನ್ಸಿಗೆ ಕಂಟ್ರಾಕ್ಟ್ ಕೊಡಲಾಗಿದೆ.

ಉತ್ತರ ಕೆರೋಲಿನ್‌ನ ರೈಟ್ಸ್‌ವಿಲ್ ಬೀಚಿನಲ್ಲಿ ದಿನವೊಂದಕ್ಕೆ ೨ ಲಕ್ಷ ಗ್ಯಾಲನ್ ನೀರನ್ನು ಶುದ್ಧಗೊಳಿಸುವ ಯಂತ್ರವೊಂದರ ಸ್ಥಾಪನೆಯ ಹೊಣೆಯನ್ನು ಒಂದು ಖಾಸಗಿ ಕಂಪೆನಿಯು ಹೊತ್ತಿದೆ. ಈ ಯಂತ್ರವು ಇನ್ನೊಂದು ವರ್ಷದಲ್ಲಿ ತನ್ನ ಪರಿವರ್ತನಾ ಕಾರ್ಯದಲ್ಲಿ ತೊಡಗುವುದು

ಈಗ ಅಮೇರಿಕೆಯಲ್ಲಿ ನಾಲ್ಕು ಸ್ಥಾವರಗಳು ಸಿಹಿ ನೀರನ್ನು ಸಿದ್ಧಗೊಳಿಸುವ ತಮ್ಮ ಕಾರ್ಯದಲ್ಲಿ ತೊಡಗಿವೆ. ಟೆಕ್ಸಾಸ್‌ನ ಫ್ರೀಪೋರ್ಟ್, ದಕ್ಷಿಣ ಡಕೋಟಾದ ವೆಬ್ಸ್ಟರ್, ಕ್ಯಾಲಿಫೋರ್ನಿಯಾದ ಸಾನ್ ಡಿಯಾಗೊ ಮತ್ತು ನ್ಯೂ ಮೆಕ್ಸಿಕೋದ ರೋಸ್‌ವೆಲ್‌ನಲ್ಲಿ-ಇವು ಈಗ ದಿನವೊಂದಕ್ಕೆ ಹತ್ತು ಲಕ್ಷ ಗ್ಯಾಲನ್ ಶುದ್ಧ ನೀರನ್ನು ತಯಾರಿಸುತ್ತಿವೆ. ರೈಟ್ಸ್ ಬೀಚಿನ ಯೋಜನೆಯು ಐದನೆಯದು.

ಉಪ್ಪುನೀರನ್ನು ಸ್ವಚ್ಛ ನೀರಾಗಿ ಪರಿವರ್ತಿಸುವ ವಿಧಾನಗಳ ಬಗ್ಗೆ ಬೇರೆ ಬೇರೆ ದೇಶಗಳಲ್ಲಿಯೂ ಇಂದು ಶೋಧನೆ ನಡೆಯುತ್ತಿದೆ. ಆದರೆ, ಕಡಿಮೆ ವೆಚ್ಚದಲ್ಲಿ ಪರಿವರ್ತಿಸುವ ವಿಧಾನವನ್ನು ಕಂಡುಹಿಡಿಯುವ ಯಾವುದೇ ರಾಷ್ಟ್ರವು ಅಂತರಿಕ್ಷದಲ್ಲಿ ಅಗ್ರಸ್ಥಾನ ಪಡೆಯುವ ದೇಶಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಾನವ ಕುಲಕ್ಕೆ ಸೇವೆ ಸಲ್ಲಿಸಬಲ್ಲುದು. ಏಕೆಂದರೆ, ಅಂತರಿಕ್ಷ ಗಮನವು ಅನಿವಾರ್ಯವಲ್ಲ, ನೀರು ಬಾಳ್ವಿಕೆ ಮಾತ್ರ ಅತ್ಯವಶ್ಯ. ಆದುದರಿಂದಲೇ ಕೋಟಿ ಕೋಟಿ ಜನತೆಯ ಜೀವನದ ಮೂಲಾವಶ್ಯಕತೆಯಾದ ಶುದ್ಧ ನೀರನ್ನು ಒದಗಿಸುವ ಸರಳ ವಿಧಾನವನ್ನು ಕಂಡುಕೊಂಡು ಮಾನವ ಕುಲ ಕಲ್ಯಾಣ ಸಾಧನೆಯಲ್ಲಿ ಅಗ್ರಸ್ಥಾನ ಪಡೆಯುವ ಆಶೆಯು ಅಮೇರಿಕೆಯದು. ಅದರಲ್ಲಿ ಅದು ಯಶವನ್ನು ಗಳಿಸಬಲ್ಲುದು





ಶಾಲೆಗಳಿಗೆ ಬೇಕಾಗುವ
ಯಾವತ್ತು ಫಾರಂಗಳೂ
ಹಾಜರು ಪಟ್ಟಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

REGD. No. B. G. 176
LICENCE No. 31
Licensed to Post without Prepayment

## ಲಾಯರಿಗೆ ನೆಹರೂರ ಹೊಸ ಕೊಡುಗೆ

(೧ನೇ ಪುಟದಿಂದ)

ವೇ ಅವರ ಪರಮಾರ್ಥವೆಂದಂದರೆ ಚಕಿತರಾಗಬೇಕಾಗಿಲ್ಲ.

**ಭಾರತದ ಶರ್ತವೇಕೆ?**

ಪ್ರಧಾನಿ ನೆಹರು ಮೊದಲಿನಿಂದಲೂ ಹೇಳುತ್ತ ಬಂದಿದ್ದಾರೆ, ಸಂಧಾನ ಮೂಲಕ ಪರಿಹಾರ ನಡೆಯಲಿ ಎಂದು. ಆದರೆ, ಯಾವುದೇ ಮಾತುಕತೆಯು ತೊಡಗುವುದಕ್ಕೆ ಮೊದಲು ಕೊಲಂಬೊ ಸಲಹೆಗಳನ್ನು ಒಪ್ಪಬೇಕು ಮತ್ತವನ್ನು ಕಾರ್ಯಾಚರಣೆಗೆ ತಂದುಕೊಳ್ಳಬೇಕು. ಇದೇಕೆ ಹೀಗೆ? ನಿಶ್ಶರ್ತವಾಗಿ ಮಾತಿಗೆ ತೊಡಗೋಣವೆನ್ನುತ್ತಾರೆ ಲಾಯ್. ಪಂಚಶೀಲನೇರ ಮಾತುಕತೆಗಳ ಪವಿತ್ರ ನಾಮೋಚ್ಚಾರಣೆ ಮಾಡುತ್ತಲೇ ಕತ್ತಿ ಹಿರಿದ ಚೀನಾವು ಮಾತುಕತೆ ನಡೆಯುತ್ತಿರುವಾಗ ಮತ್ತೇನು ಮಾಡಲಾರದು? ನಮ್ಮ ರಕ್ಷಣೆ-ಭದ್ರತೆಯ ದೃಷ್ಟಿಯಿಂದಲೂ ಕೊಲಂಬೊ ಸಲಹೆಗಳು ಮಾತಿಗೆ ಮೊದಲು ಕಾರ್ಯರೂಪಕ್ಕೆ ಬರುವುದು ಅಗತ್ಯವಿದೆ. ಚೀನವು ಈ ರೀತಿ ಗೆಯ್ದ ನಂತರವೆ ಗಡಿ ತಜ್ಞ ಅಧಿಕಾರಿಗಳು ಮಾತುಕತೆಗೆ ತೊಡಗಬಹುದು, ಮಂತ್ರಿ ಮಟ್ಟದಲ್ಲಿ ಚರ್ಚಿಸಬಹುದು; ನಾಯಕ-ನಾಯಕರೇ ಒತ್ತಟ್ಟಿಗೆ ಸೇರಿ ವಿಚಾರ ವಿಮರ್ಶೆ ನಡೆಸಬಹುದು; ಆದರೆ, ಆ ಸಲಹೆಗಳನ್ನು ಒಪ್ಪದ ಹೊರತು ಸಂಧಾನದ ಮಾತು ಇಲ್ಲ; ಹಾಗೆಂದು ಸಮರಕ್ಕೆ ಆಹ್ವಾನವನ್ನೂ ಭಾರತ ಕೊಡುವುದಿಲ್ಲ

**ನೆಹರು ನೀತಿ ಪರಿವರ್ತನೆ**

ಪಂಡಿತ ನೆಹರು ಇದೀಗ ಇನ್ನೂ ಒಂದು ಹೆಜ್ಜೆ ಮುಂದುವರಿದಿದ್ದಾರೆ. 'ವಿವಾದ ಪರಿಹಾರವನ್ನು ನಮ್ಮಿಂದಲೇ ಮಾಡಿಕೊಳ್ಳುವುದು ಅಸಾಧ್ಯವೆಂದಾದರೆ, ಉಭಯತರರಿಗೂ ಒಪ್ಪಿಗೆಯಾಗುವ ಒಂದು ರಾಷ್ಟ್ರ ಅಥವಾ ರಾಷ್ಟ್ರಕೂಟದ ಮಧ್ಯಸ್ತಿಕೆಗೆ ಅವಕಾಶ ಕೊಟ್ಟು ಅದರ ನಿರ್ಣಯವನ್ನು ಒಪ್ಪಿಕೊಳ್ಳೋಣ' ಎಂದಿದ್ದಾರೆ. ಅವರ ಇತ್ತೀಚಿನ ಅಭಿಪ್ರಾಯವು ಮತ್ತಷ್ಟು ಉದಾರವಾಗಿದೆ. ರಾಷ್ಟ್ರ ಅಥವಾ ರಾಷ್ಟ್ರಕೂಟದ ಬದಲಿಗೆ ವ್ಯಕ್ತಿ ಅಥವಾ ವ್ಯಕ್ತಿಕೂಟವನ್ನು ರಚಿಸುವುದಕ್ಕಾಗಲಿ, ಹೇಗ್‌ವಿನ ಅಂತರಾಷ್ಟ್ರೀಯ ನ್ಯಾಯಾಲಯಕ್ಕೆ ವಿವಾದವನ್ನು ಒಯ್ಯುವುದಕ್ಕಾಗಲಿ ಅವರಿಂದು ಸಿದ್ಧರಾಗಿದ್ದಾರೆ. ಆದರೆ, ಕೊಲಂಬೋ ಸಲಹೆಗಳ ಸ್ವೀಕಾರ ಮತ್ತವುಗಳ ಕಾರ್ಯಾಚರಣೆ ಮಾತ್ರ ಪೂರ್ವಶರ್ತವಾಗಿದೆ.

**ಸಿಕ್ಕು ಬಿಡಿಸುವ ಉದ್ದೇಶ**

ನಮ್ಮ ಪ್ರಧಾನಿಗಳ ನಿಲುವೆಯು ಈ ರೀತಿಯಾಗಿ ಪರಿವರ್ತಿತಗೊಳ್ಳುವುದಕ್ಕೆ ಕಾರಣವಿಲ್ಲದಿಲ್ಲ. ವಿವಾದವೊಂದನ್ನು ಮಧ್ಯಸ್ತಿಕೆಗೆ ಒಪ್ಪಿಸುವುದನ್ನು ನೆಹರು, ಮುಖ್ಯವಾಗಿ ಕಾಶ್ಮೀರದಲ್ಲಿ, ಪ್ರತಿಭಟಿಸುತ್ತಾರೆ. ಇದು ಸಾರ್ವಭೌಮತೆಗೊಂದು ಆಹ್ವಾನವೆನ್ನಲೂ ಬಹುದು. ಆದರೆ, ಅಸ್ಪಷ್ಟವಾದ ಸೀಮಾ ಪ್ರದೇಶವನ್ನು ಮಧ್ಯಸ್ತಿಗಾರರ ನಿರ್ಣಯಕ್ಕೆ ಕೊಡುವುದು ತಪ್ಪಾಗಲಾರದು. ಭಾರತ — ಚೀನಾ ಸೀಮೆಯು ಹಲವಾರು ಒಡಂಬಡಿಕೆಗಳು, ಒಪ್ಪಂದಗಳು, ನಕ್ಷೆಗಳು, ಆಡಳಿತೆಯ ಪ್ರಶ್ನೆಗಳಿಂದ ಸಿಕ್ಕುಗಟ್ಟಿಕೊಂಡಿದೆ ಇವೆಲ್ಲವುಗಳಲ್ಲಿಯೂ ಎರಡೂ ದೇಶಗಳ ಮಧ್ಯೆ ಯೂಗ ಭಿನ್ನಾಭಿಪ್ರಾಯವೆದ್ದಿದೆ. ಪ್ರತಿ ರಾಷ್ಟ್ರವೂ ತನ್ನ ಪರವಾಗಿ ವಾದಿಸಬಹುದು. ಕೇವಲ ವಾದದಿಂದಲೇ ಒಮ್ಮತಕ್ಕೆ ಬರುವುದು ಸಾಧ್ಯವಿಲ್ಲವಾಗಿದೆ. ಆದುದರಿಂದ ಮಧ್ಯಸ್ತಿಕೆಗಾರರ ತೀರ್ಪಿನಂತೆ ನಡೆದುಕೊಂಡರೆ, ಶಾಂತ ವಿಧಾನಗಳಿಂದಲೇ ವಿವಾದ ಪರಿಹಾರವಾದಂತಾಗುವುದು.

**ಲಾಯ್ ನಿರಾಕರಣೆ**

ಸಂಧಾನವೆಂದೊಡನೆಯೇ ಎರಡೂ ಪಕ್ಷಗಳೂ ತುಸು ತ್ಯಾಗಕ್ಕೂ ಸಿದ್ಧವಾಗಬೇಕು, ಭೋಗಕ್ಕೂ ತಯಾರಿರಬೇಕು. ಭಾರತವು ಇವೆರಡಕ್ಕೂ ಭಾಗಿಯಾಗಲು ಸನ್ನದ್ಧನಿದ್ದರೆ, ಚೀನಾ ಮಾತ್ರ ಇದನ್ನೊಪ್ಪಲು ತನ್ನ ಅಸಮ್ಮತಿಯನ್ನೇ ಸೂಚಿಸುತ್ತಿದೆ. ಮಧ್ಯಸ್ಥಿಕೆಗೆ ಒಪ್ಪಿದರೆ ಅದು ದುರ್ಲಾಭಗಳಿಸುವುದೂ ಸಾಧ್ಯವಿಲ್ಲ. ಅದರ ಸಾಮ್ರಾಜ್ಯವಾದದ ಕನಸು ಕನಸಾಗಿಯೇ ಉಳಿಯುತ್ತದೆ. ಅದಕ್ಕೆಂದೇ ಲಾಯ್ ತನ್ನ ಹಾಡಿದ ಪಲ್ಲವಿಯನ್ನೇ ಪದೇ ಪದೇ ಹಾಡುತ್ತಿದ್ದಾರೆ.

**ಉಪಸಂಹಾರ**

ಲಾಯರ ವರ್ತನೆಯಿಂದ ಒಂದು ಮಾತು ದೃಢವಾಗುತ್ತದೆ. ಅವರಲ್ಲಿ ಸಂಧಾನಾಪೇಕ್ಷೆಗಿಂತ ಸಂಗ್ರಾಮೇಚ್ಛೆಯೇ ಪ್ರಬಲವಾಗಿದೆ. ಇದಕ್ಕಾಗಿಯೇ ಅವರು ಸಂಧಾನದ ಪ್ರತಿ ಬಾಗಿಲನ್ನೂ ಮುಚ್ಚಿ, ಮುಚ್ಚಿದ ಅಪರಾಧವನ್ನು ಭಾರತದ ಮೇಲೆ ಹೊರಿಸುತಿದ್ದಾರೆ. ಒಬ್ಬನನ್ನು ಒಂದು ಕಾಲದಲ್ಲಿ ವಂಚಿಸಬಹುದಾದರೂ ಎಲ್ಲರನ್ನೂ ಎಲ್ಲಾ ಕಾಲದಲ್ಲಿಯೂ ಮೋಸಗೊಳಿಸುವುದು ಸಾಧ್ಯವಿಲ್ಲವೆಂಬುದರಿಂದ, ಲಾಯಿಯವರು ಯಾವ ತಂತ್ರವನ್ನೇ ಹೂಡಲಿ, ಅವರು ಯಶಸ್ವಿಯಾಗುವುದಿಲ್ಲ. ಭಾರತವು ತನ್ನ ರಕ್ಷಣೆಗಾಗಿ ಸದಾ ಸನ್ನದ್ಧವಾಗಿರಬೇಕು; ಎರಬರಬಹುದಾದ ಶತ್ರುವನ್ನು ಹದೆಬಡಿಯಲು ಸಾಮರ್ಥ್ಯ ಪಡೆದಿರಬೇಕು. ಈ ದಿಸೆಯಲ್ಲಿ ನಾವು ಮುಂದುವರಿಯೋಣ.

ಜೈ ಹಿಂದ್!

## ಪುಸ್ತಕ ವಿಮರ್ಶೆ

(೯ನೇ ಪುಟದಿಂದ)

ತಿ ಪೀರ ತನ್ನ ಹೆಸರನ್ನು ಸಾರ್ಥಕಮಾಡಿಕೊಂಡು ಇತೋಪ್ಯತಿಶಯವಾಗಿ ಬಾಳಿ ಬೆಳಗಲಿ.

**ಸಮವಸರಣ** — ಸಮವಸರಣವು ಒಂದು ಉಪದೇಶ ಸಭೆ. ದಿವ್ಯ ಧ್ವನಿಯಿಂದ ಜಿನೇಶ್ವರನು ಭವ್ಯ ಸಮೂಹಕ್ಕೆ ಉಪದೇಶ ನೀಡುವನು. ಸೂರಪ್ಪನವರ ಮಕ್ಕಳು ಶ್ರೀ ಎನ್. ಅನಂತಪ್ಪ ಪಟೇಲ್ ಶ್ರೀಮತಿ ಚಂದ್ರಮ್ಮ ಇವರ ತೀರ್ಥಯಾತ್ರೆಯ ಸವಿನೆನಪಿಗಾಗಿ ವಿದ್ಯಾಭೂಷಣ ಪಂ. ಕೆ. ಭುಜಬಲಿ ಶಾಸ್ತ್ರಿಯವರು ಈ ಗ್ರಂಥವನ್ನು ರಚಿಸಿದ್ದಾರೆ. ವೃಷಭ ತೀರ್ಥಂಕರನ ಸಮವಸರಣ ಮತ್ತು ಅಲ್ಲಿ ನೀಡಿದ ಷಡ್ದ್ರವ್ಯ ಸಂಬಂಧಿ ಉಪದೇಶಗಳೇ ಇಲ್ಲಿನ ವರ್ಣಿತ ವಸ್ತು.

**ನೇತಾಜಿ ಸುಭಾಷ್ಚಂದ್ರ ಬೋಸರ ಜೀವನ ಪರಿಕ್ರಮ**—(ಲಾವಣಿ) ಮಂಗಳೂರಿನ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕ ಪಂಡಿತ ಲಕ್ಷ್ಮಣದೇವ ವಿದ್ಯಾರ್ಥಿ ಅವರು ನೇತಾಜಿಯವರ ೬೭ನೆ ಜನ್ಮ ದಿನದ ಸವಿನೆನಪಿಗಾಗಿ ಈ ಲಾವಣಿಯನ್ನು ಬರೆದು ಪ್ರಕಟಿಸಿದ್ದಾರೆ. ರಾಷ್ಟ್ರಕ್ಕೆ ಒದಗಿರುವ ಗಂಡಾಂತರದ ಇಂದಿನ ಪರಿಸ್ಥಿತಿಯಲ್ಲಿ ನೇತಾಜಿಯಂತಹ ವೀರ ಪುತ್ರರಲ್ಲಿ ಕೆಚ್ಚು ತುಂಬಿ ಹರಿಯಬೇಕು, ರಾಷ್ಟ್ರರಕ್ಷಣೆಗಾಗಿ ಅವರು ಮುಂದೆ ಬರಬೇಕು. ಹೀಗೆ ನಮ್ಮ ಜನತೆಯನ್ನು ಪ್ರೇರೇಪಿಸಲು ವೀರರ ಜೀವನ ಪರಿಕ್ರಮ ಪರಿಜ್ಞಾನ ನೆರವಾಗಬಲ್ಲದು. ಪಂಡಿತರ ಈ ಲಾವಣಿಯು ಹಾಡುವುದಕ್ಕೆ ಅನುಕೂಲವಾಗಿ ಕೇಳುವುದಕ್ಕೆ ಶ್ರಾವ್ಯವಾಗಿದೆ ಇದರ ಬೆಲೆ: ರೂ.೦=೧೨

**ಶ್ರೀ ವಿದ್ಯಾಪೂರ್ಣ ತೀರ್ಥ ಸ್ವಾಮಿಯವರು**— ಶ್ರೀ ಚಿತ್ರಾಪುರ ಮಠದ ಶ್ರೀ ವಿದ್ಯಾಪೂರ್ಣ ತೀರ್ಥರು ಆರು ತಿಂಗಳ ಹಿಂದೆ ಪಂಚತ್ವವನ್ನೈದಿದರು. ಅವರ ಶಿಷ್ಯರಲ್ಲೊಬ್ಬರಾದ ಸಂಶೋಧಕ ಸುರತ್ಕಲ್ ವೆಂಕಟರಾಯಾಚಾರ್ಯರು ಗುರುಭಕ್ತಿ ಪ್ರೇರಿತರಾಗಿ ಅವರ ಚರಿತ್ರೆಯನ್ನೂ ಮಠದ ಆಡಳಿತೆಗೆ ಸೇರಿದ ಅಲ್ಲಿನ ದುರ್ಗಾಪರಮೇಶ್ವರೀ ದೇವಾಲಯದ ಇತಿಹಾಸವನ್ನೂ ಸಂಕ್ಷಿಪ್ತವಾಗಿ ಬರೆದು ಈ ಕಿರುಹೊತ್ತಗೆಯನ್ನು ಪ್ರಕಟಿಸಿದ್ದಾರೆ. ಬೆಲೆ: ರೂ. ೦=೧೫.

—ಗೋರಾ.

ಹೊಸ ಹೆಜ್ಜೆ

● ವಾರ್ಷಿಕ ಉಳಿತಾಯ
● ರೂ ೨೫೦ರಿಂದ ಪ್ರಾರಂಭಿಸಬಹುದು

ವರುಷಕ್ಕೆ ಒಂದು ಸಾವಿರ ರೂಪಾಯಿಗಳಂತೆ ಮೂವತ್ತೈದು ವರುಷಗಳಲ್ಲಿ ಸಂಗ್ರಹವಾಗುವ ಮೂವತ್ತೈದು ಸಾವಿರ ರೂಪಾಯಿಗಳು ಒಂದು ಲಕ್ಷ ರೂಪಾಯಿಗಳಿಗಿಂತಲೂ ಅಧಿಕ ಲಾಭವನ್ನು ತರಬಲ್ಲವು.

ವಿವರಗಳಿಗೆ ದಯವಿಟ್ಟು ವಿಚಾರಿಸಿರಿ:

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

ನಗುಮುಖದ ಸೇವೆ — — — — ಆರ್ಥಿಕ ಭದ್ರತೆ

25,000
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ
ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
೧೫೦ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ,

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ. ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6 75
Vol. 42 No. 37 | ಉಡುಪಿ, 23—5—1963 ಗುರುವಾರ | ಸಂಪುಟ ೪೨ ಸಂಚಿಕೆ ೩೭

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿ

ಭಾರತ— ಪಾಕಿಸ್ತಾನಗಳ

## ಕಾಶ್ಮೀರ ಮಾತುಕತೆ ಮುರಿಯಿತು

ಭಾರತ — ಪಾಕಿಸ್ತಾನಗಳ ಮಧ್ಯೆ ಮುಖ್ಯವಾಗಿ ಕಾಶ್ಮೀರ ವಿವಾದದ ಪರಿಹಾರಕ್ಕಾಗಿ ಸಂಬಂಧಿಸಿದ ಮಂತ್ರಿಮಟ್ಟದ ಮಾತುಕತೆಗಳು ಆರನೆಯ ಸುತ್ತಿನಲ್ಲಿ ಅಸಫಲತೆಯೊಡನೆ ಮುಕ್ತಾಯಗೊಂಡುವು. ನವದೆಹಲಿಯಲ್ಲಿ ಕಳೆದ ತಿಂಗಳು ಸೇರಿದ್ದ ಐದನೆಯ ಸುತ್ತಿನಲ್ಲಿಯೇ ಮಾತುಕತೆಗಳು ವಿಫಲತೆಯ ಮಟ್ಟವನ್ನು ಮುಟ್ಟಿದಂತೆ ಭಾಸವಾಗಿದ್ದರೂ ಅಂತಿಮ ಪ್ರಯತ್ನವೆಂದು ಆರನೆಯ ಬಾರಿ ನಾಯಕದ್ವಯರು ಒಂದು ಸೇರಿದರು; ಮುಂದೆ ಒಂದು ಮಾತು ಮುಂದುವರಿಯುವುದು ನಿಷ್ಪ್ರಯೋಜಕವೆಂದು ಕಂಡು ಬಂದುದರಿಂದ ಅದು ಭಗ್ನಗೊಂಡಿತು.

### ಆಕ್ರೋಶಬಾಣ

ಈ ಮಾತುಕತೆಗಳು ಮುರಿಯುವುದಕ್ಕೆ ಏನು ಕಾರಣ? ಪಾಕ್ ವಿದೇಶ ಮಂತ್ರಿ ಹಾಗೂ ಪ್ರತಿನಿಧಿ ಮಂಡಳದ ನಾಯಕರು ಝಡ್ ಎ ಭುಟ್ಟೋರವರು ಹೇಳುವಂತೆ "ಭಾರತೀಯ ನಾಯಕರು ಹಠವಾದಿಗಳಾಗಿದ್ದಾರೆ; ತಾನು ಹೇಳುವ ಕರಾರುಗಳ ಮೇರೆಗೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಭಾರತವು ಆಗ್ರಹ ಪಡುತ್ತಿದೆ ಮಾತ್ರವಲ್ಲ, ಭಾರತದ ಧೋರಣೆಗಳು ತಪ್ಪುಗ್ರಹಿಕೆಗಳಿಂದ ಕೂಡಿವೆ" ಪಾಕ್ ನಾಯಕರ ಈ ಹೇಳಿಕೆಯು ಭಾರತದ ವಿರೋಧವಾಗಿ ಇನ್ನೊಂದು ಆಕ್ರೋಶಬಾಣ ಮಾತ್ರವೆಂದು ನಾವು ಖಂಡಿತವಾಗಿ ಹೇಳಬಹುದು.

### ಭಾರತದ ಅಚಲ ನೀತಿ

ಭಾರತವು ತನ್ನ ಕಾಶ್ಮೀರ ನೀತಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಿಕೊಂಡಿರುವುದಿಲ್ಲ. [illegible]ಗಳಿಂದಲೂ ಅದು ಅನುಸರಿಸಿಕೊಂಡು ಬಂದಿರುವ ಧೋರಣೆಯನ್ನೇ ಚಾಚೂ ತಪ್ಪದೆ ಇಂದಿಗೂ ಅನುಸರಿಸಿಕೊಂಡು ಬಂದಿದೆ. ಈ ಮೂಲ ತತ್ವಗಳಿಗೆ ಚ್ಯುತಿಯೊದಗದಂತೆ ಅಲ್ಪಸ್ವಲ್ಪ ಹೊಂದಾಣಿಕೆಯನ್ನು ಮಾಡಿಕೊಳ್ಳುವಷ್ಟು ಉದಾರತೆಯನ್ನದು ತೋರಿಸಿದೆ; ಆದರೆ ಇಡೀ ಕಾಶ್ಮೀರವನ್ನೇ ಕಬಳಿಸುವ ಸಂಚು ಹೂಡಿರುವ ಪಾಕಿಸ್ತಾನದ ಬಯಕೆಯನ್ನು ಭಾರತವು ಈಡೇರಿಸುವಂತೆ ತನ್ನ ನಿಲುಮೆಯನ್ನು ಮಾರ್ಪಡಿಸಿಕೊಳ್ಳಲಿಲ್ಲವೆಂದು ಭುಟ್ಟೋ ಅಂದುಕೊಂಡು ದೂರುತ್ತಾರೆ; ಮತ್ತಿದರಿಂದಾಗಿ, ಭಾರತದ ಯಾವುದೇ ಸಲಹೆಗಳು ಅವರಿಗೆ ಅಪ್ರಿಯವಾಗುತ್ತವೆ. ಇದನ್ನು ತಪ್ಪು ಎಂದು ಹೇಳುವಂತಿಲ್ಲವಾದರೂ ನ್ಯಾಯ ಸಮ್ಮ[illegible]

### ವ್ಯರ್ಥಾಲಾಪ

ಭಾರತ ಮತ್ತು ಪಾಕಿಸ್ತಾನಗಳ ಮೈತ್ರಿಯ ನಡುವೆ ಕಾಶ್ಮೀರ ಕೊಳ್ಳಗಳು ಅಡ್ಡವಿವೆಯೆನ್ನುತ್ತಾರೆ ಭುಟ್ಟೋ. ಈ ಪ್ರಶ್ನೆಯು ಬಗೆ ಹರಿಯಿತೆಂದರೆ, ಉಳಿದಿರುವ ಸಮಸ್ಯೆಗಳೆಲ್ಲವೂ ಸುಲಭದಲ್ಲಿ ಪರಿಹಾರಗೊಳ್ಳುವುವು ಎಂದು ಅವರ ಹಾರೈಕೆ. ಇದ್ದರೂ ಇರಬಹುದು; ಆದರೆ, ಭೂತಾಕಾರ ತಳೆದಿರುವ ಕಾಶ್ಮೀರದ ಸಂಬಂಧದಲ್ಲಿ ತನಗೆ ಬೇಕಾದಂತೆ ಸಮಯಕ್ಕೆ ನೀತಿಯನ್ನು ಪರಿವರ್ತಿಸಿಕೊಳ್ಳುವ ಪಾಕಿಸ್ತಾನದೊಡನೆ ಅಚಲ ಧೋರಣೆಯ ಭಾರತದ ಮಾತುಕತೆಗಳು ಅವರಿಗೆ ಅಪ್ರಿಯವೆನಿಸುವುದು ತೀರ ಸಾಮಾನ್ಯ. ಅಮೇರಿಕೆಯ ಡೀನ್ ರಸ್ಕ್ ಹಾಗೂ ಬ್ರಿಟನ್ನಿನ ಡಂಕನ್ ಸಾಂಡೀರು ಕೂಡ ಭಾರತದ ಅಚಲ ನೀತಿಯನ್ನು ಮೆಚ್ಚಿಕೊಂಡಿದ್ದಾರೆ, ಮತ್ತು ಇವರಿಗೆ ನ್ಯಾಯ ಸಮ್ಮತವೆಂದು ಮನವರಿಕೆಯಾದುದರಿಂದಲೇ ಕಾಶ್ಮೀರ ವಿವಾದ ಪರಿಹಾರ ಮತ್ತು ತಾವು ನೀಡುವ ಸೈನಿಕರ ನೆರವುಗಳ ನಡುವೆ ಯಾವ ಶರ್ತವನ್ನೂ ಹೇರಲಿಲ್ಲ; ಪಾಕಿಸ್ತಾನದ ವ್ಯರ್ಥ ಪ್ರತಿಭಟನೆಯನ್ನು ಕೂಡ ಅವರು ಗಮನಿಸುವಷ್ಟು ಉದಾರತೆಯನ್ನೂ ತೋರಿಸಲಿಲ್ಲ.

### ಕುತಂತ್ರೋತ್ತಿತ ಸೂಚನೆ

ಪಾಕಿಸ್ತಾನದ ಬೇಡಿಕೆಯೇನು? ವಿವಾದ ಪರಿಹಾರಕ್ಕೆ ಅದು ಮುಂದಿಡುವ ಸೂಚನೆಗಳು ಯಾವುವು? ಮೊದಲನೆಯದಾಗಿ ಜನಮತ ಗಣನೆ. ಸಂಯುಕ್ತ ರಾಷ್ಟ್ರ ಸಂಘದ ೧೫ ವರ್ಷ ಪ್ರಾಯದ ಹಳೆಯ ಗೊತ್ತುವಳಿಯೊಂದನ್ನಿಂದು ತನ್ನ ಭದ್ರ ಕವಚವನ್ನಾಗಿಟ್ಟುಕೊಂಡು ಈ ಸೂಚನೆಯನ್ನು ಮುಂದಿಟ್ಟಿದೆ. ಆದರೆ, ಅದೇ ಗೊತ್ತುವಳಿಯ ಮೊದಲನೆಯ ಅಂಶದಂತೆ ತಾನು ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳದ ಪಾಕಿಸ್ತಾನಕ್ಕೆ ಎರಡನೆಯ ಅಂಶವನ್ನು ಹಿಡಿದುಕೊಳ್ಳುವ ಅಧಿಕಾರವಾದರೂ ಎಲ್ಲಿಯದು? ಆದುದರಿಂದ ಅದು ಅಸಾಧ್ಯ ಮಾತ್ರವಲ್ಲ, ಭಾರತದ ಪ್ರಭುತ್ವದಡಿಯಲ್ಲಿ ಸಮೃದ್ಧಿ ಪಥದತ್ತ ಸಾಗುತ್ತಿರುವ ಕಾಶ್ಮೀರದಲ್ಲಿ ಇಂತಹ ಜನಮತಗಣನೆಯನ್ನು ಜಾತೀಯ ತಳಹದಿಯಲ್ಲಿ ಮಾಡಬೇಕೆಂಬ ಪಾಕ್ ಕುಯುಕ್ತಿಯಿಂದ ಅನವಶ್ಯಕ ಮತ್ತು ಅನಪೇಕ್ಷಿತ ಜಾತೀಯತೆಯು ಪರ್ವತಾಕಾರ ತಳೆದು ಅಶಾಂತತೆಗೆ ಪ್ರೇರಕವಾಗುವುದು. ಇನ್ನು ಕಾಶ್ಮೀರವ[illegible] ವಿಭಜಿಸಬೇಕೆಂಬ ಸೂಚನೆಯು ಖಂಡಿತಕ್ಕೂ ಅಗ್ರಾಹ್ಯ. ಐತಿಹಾಸಿಕವಾಗಿ ಏಕ ಘಟಕವಾಗಿರುವ ಕಾಶ್ಮೀರದ ವಿಭಜನೆಯೆಂದರೆ, ಒಂದು ದೇಹವನ್ನು ಇಬ್ಭಾಗ ಮಾಡಿ ಹಂಚಿಕೊಂಡಂತೆ. ಭುಟ್ಟೋರವರು ಮುಂದಿಟ್ಟ ಇನ್ನೊಂದು ಸೂಚನೆಯೆಂದರೆ, ಕಾಶ್ಮೀರದ ಕೊಳ್ಳವನ್ನು ಅಂತಾರಾಷ್ಟ್ರೀಯ ಆಡಳಿತೆಗೆ ಕೆಲ ಕಾಲ ಒಪ್ಪಿಸಿ ಮುಂದೆ ಅಲ್ಲಿ ಜನಮತಗಣನೆಯನ್ನು ನಡೆಸುವುದು. ತಮ್ಮ ಮನೆಯಲ್ಲಿ ಮೂರನೆಯವರೊಬ್ಬರನ್ನಿರಗೊಡುವಷ್ಟು ಮೂರ್ಖತನವಿದು; ಮಾತ್ರವಲ್ಲ, ಜಾತೀಯತೆಯನ್ನೇ ಬಡಿದೆಬ್ಬಿಸುವ ಮತ್ತೊಂದು ವಿಧಾನವಿದು. ಆದುದರಿಂದ ಇಂತಹ ಯಾವ ಸೂಚನೆಗಳನ್ನೂ ಭಾರತವು ಮನ್ನಿಸುವುದು ಸಾಧ್ಯವಿಲ್ಲ.

### ಅವಿಭಾಜ್ಯ ಅಂಗ

ಭಾರತದ ದೃಷ್ಟಿಯಲ್ಲಿ ನೋಡುವುದಾದರೆ, ಜನಮತ ಗಣನೆಗೆಂದು ಸಂ. ರಾ. ಸಂಘದ ಗೊತ್ತುವಳಿಯ ಆಶ್ರಯ ಪಡೆದ ಪಾಕಿಸ್ತಾನ ಅಂತಹ ಆಶ್ರಯ ಪಡೆಯುವ ಅಧಿಕಾರವನ್ನದು ಹಿಂದೆಯೇ ಕಳೆದುಕೊಂಡಿದೆ. ಹದಿನೈದು ವರ್ಷಗಳು ಕಳೆದ ಬಳಿಕ ಕಾಶ್ಮೀರದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳೆಲ್ಲವೂ ಬದಲಾಗಿವೆ. ಯಾವುದೋ ಒಂದು ಕಾಲದಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನು ತಾನು ಕಾರ್ಯಕ್ಷಮಗೊಳಿಸದೆ ಈಗ ಅದರ ಆಶ್ರಯ ಪಡೆಯುವುದೆಂದರೆ, ರಾಜಕೀಯ ದಿವಾಳಿ ಪ್ರದರ್ಶನ. ಕಾಶ್ಮೀರದ ಮೇಲೆ ನೊತ್ತ ಮೊದಲು ಆಕ್ರಮಣ ಮಾಡಿದುದು ಪಾಕಿಸ್ತಾನ; ಅಲ್ಲಿ ಇನ್ನೂ ಅದು ತನ್ನ ಸೈನ್ಯವನ್ನು ಇಟ್ಟುಕೊಂಡಿದೆ; ಆಕ್ರಮಣವನ್ನು ತೆರವು ಮಾಡಿಲ್ಲ. ಆದರ ಮೇಲೆ ಕಾಶ್ಮೀರಿಗಳು ಸ್ವತಂತ್ರ ಸಂವಿಧಾನವನ್ನು ರಚಿಸಿಕೊಂಡು, ತಮ್ಮ ರಾಜ್ಯವನ್ನು ಭಾರತದಲ್ಲಿ ಘಟನಾತ್ಮಕವಾಗಿ ಸೇರ್ಪಡೆಗೊಳಿಸಿದ್ದಾರೆ. ಹಾಗಿರುವಾಗ, ಕಾಶ್ಮೀರಿಗಳ ಜನಮತವೇನು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಭಾರತವು, ಸರ್ವೋಚ್ಚ ನ್ಯಾಯಾಲಯ, ಚುನಾವಣಾ ನಿಯಂತ್ರಕ ಮೊದಲಾದವರ ಅಧಿಕಾರ ಕಕ್ಷೆಯನ್ನು ಕಾಶ್ಮೀರಕ್ಕೂ ವಿಸ್ತರಿಸಿದೆ; ಹಾಗಾಗಿ ಭಾರತೀಯರ ಮತ್ತು ಕಾಶ್ಮೀರಿಗಳ ನಡುವೆ ಯಾವ ವಿವಾದವೂ ಇರುವುದಿಲ್ಲ.

### ಪ್ರತ್ಯೇಕತೆಯ ಕುರುಹು

ಆದರೂ ಕಾಶ್ಮೀರದ ಪ್ರತ್ಯೇಕತೆಯನ್ನು ತೋರಿಸುವ ಕೆಲವೊಂದು ನಿದರ್ಶನಗಳೂ ಇಲ್ಲದಿಲ್ಲ. ಕಾಶ್ಮೀರವು ಭಾರತದ ಅಂಗವೇ ಆಗಿದ್ದರೂ, ಉಳಿದ ರಾಜ್ಯಗಳಂತೆಯೇ ಅದರ ಸ್ಥಾನಮಾನಗಳಿರುವವಾದರೂ ಅದರ ಮುಖ್ಯಮಂತ್ರಿ, ಪ್ರಧಾನ ಮಂತ್ರಿಯೆನಿಸುತ್ತಾನೆ. ಭಾರತ ಸರಕಾರದ ಕಾಯಿದೆ ಕಾನೂನುಗಳು ಉಳಿದ ರಾಜ್ಯಗಳಿಗೆ ಅನ್ವಯವಾಗುವಷ್ಟು ವಿಶಾಲವಾಗಿ ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ. ರಾಜ್ಯಪಾಲರ ಬದಲು ಅಲ್ಲಿ ಸದರ್—ಇ—ರಿಯಾಸತ್ ಇರುತ್ತಾನೆ. ಇದಕ್ಕೆ ಸಾಂವಿಧಾನಿಕ ಕಾರಣಗಳೂ ಇವೆಯೆಂಬುದನ್ನು ಒಪ್ಪಬೇಕು; ಆದರೂ ಏಕ ಸಂವಿಧಾನವನ್ನು ಅಲ್ಲಿಗೂ ಅನ್ವಯಗೊಳಿಸಿದರೆ, ಅದರ ಪ್ರತ್ಯೇಕತೆಯು ದೂರವಾಗುವುದು, ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಸಾರುವ ನಮ್ಮ ನೀತಿಗೂ ಪುರಸ್ಕಾರವೀಯುವುದು. ಆದರೆ, ಹೀಗಾಗುವುದು ಪ್ರಾಯಃ ನಿಕಟ ಭವಿಷ್ಯದಲ್ಲಿ ಬಹಳ ಕಷ್ಟವೆಂದು ತೋರುತ್ತದೆ.

### ಭಾರತದ ಉದಾರ ಸೂಚನೆ

ಪಾಕಿಸ್ತಾನದ ವೈಮನಸ್ಯವು 'ಕಾಶ್ಮೀರ ವಿವಾದ'ದಿಂದ ಬೆಳೆಯುತ್ತ ಬರುತ್ತಿರುವುದರಿಂದ, ಮತ್ತು ಅದು ಅನ್ಯಾಯವಾಗಿಯಾದರೂ ಅದರ ಮೇಲೆ ತನ್ನ ಅಧಿಕಾರವನ್ನು ಹೇರಲು ಕುತಂತ್ರ ನಡೆಸಿದ್ದರಿಂದ, ಭಾರತದ ತಟಸ್ಥ ಧೋರಣೆಯಿಂದ ಅದು ರಾಜಕಾರಣದಲ್ಲಿ ತನ್ನದೇ ವಿಶಿಷ್ಟ ಸ್ಥಾನಗಳಿಸಿದ್ದರಿಂದ ಒಳಗಿಂದ ಒಳಗೆ ಕರುಬುತ್ತಿದ್ದ ಪಾಶ್ಚಾತ್ಯ ಮಿತ್ರರು ಅದರ ಮೇಲೆ ಚೀನೀಯ ಧಾಳಿ ನಡೆದ ಸಮಯವನ್ನು ಸಾಧಿಸಿ ತಮ್ಮ ಬಲೆಯಲ್ಲಿ ಸಿಕ್ಕಿಸಲು ಅವ್ಯಕ್ತ ಪ್ರಯತ್ನ ನಡೆಸಿದ್ದರಿಂದ, ಪ್ರಧಾನಿ ನೆಹರು ಪಾಕಿಸ್ತಾನದೊಡನೆ ಮಾತುಕತೆಗೆ ಒಪ್ಪಿದರು; ಆದರದು ವ್ಯರ್ಥವಾಯಿತು. ನೆಹರುರವರು ಪಾಕ್ ಆಕ್ರಮಿತ 'ಆಜಾದ ಕಾಶ್ಮೀರ' ವೆಂದು ಕರೆಯುವ ಭಾಗವನ್ನು ಕುಸು ಗಡಿ ಹೊಂದಾಣಿಕೆಯೊಡನೆ ಅದಕ್ಕೇನೇ ಬಿಟ್ಟುಕೊಡುವಷ್ಟು ಉದಾರತೆಯನ್ನು ತೋರಿಸಿದ್ದರು. ಆದರೆ, ಇದಿ ಬೇಕುವವರು ಭಾಗದಿಂದ ತೃಪ್ತರಾಗಲಿಲ್ಲ. ಮಧ್ಯಸ್ಥಗಾರರೊಬ್ಬರ ನಿರ್ಣಯಕ್ಕೆ ಇಡಿಯ ಪ್ರಶ್ನೆಯನ್ನು ಒಪ್ಪಿಸಿ, ಅದನ್ನು ಮನ್ನಿಸುವಷ್ಟೂ ಅವರು ಮುಂದಾದರು. ಈ ಸಂಬಂಧದಲ್ಲಿ ಪಾಕಿಸ್ತಾನಕ್ಕೆ ವಿವರಣೆ ಬೇಕಾಯಿತು — ಅಂದರೆ, ತನಗೆ ಅನುಕೂಲ ತೀರ್ಮಾನ ಬರುವುದಕ್ಕೆ ತಕ್ಕ ಕುತಂತ್ರ ನಡೆಸಲು ಪ್ರಾಯಃ ಅದಕ್ಕೆ ಅವಕಾಶ ಬೇಕಾಯಿತು.

### ಕಾಶ್ಮೀರಿಗಳ ದೃಢ ನಿರ್ಧಾರ

ಆಗಾಗ ಪಾಕಿಸ್ತಾನದ ಕಡೆಗೆ ಪ್ರೇರಕ ಶಕ್ತಿಯಾದ, ಸಂಯುಕ್ತ ರಾಷ್ಟ್ರ ಸಂಘಕ್ಕೂ ತೀರ್ಮಾನವೀಯಲು ಅಸಾಧ್ಯವಾದ ಮತ್ತು ಪಾಶ್ಚಾತ್ಯರ ಒತ್ತಾಯದಿಂದೆಂಬಂತೆ ಆರು ಸುತ್ತು ಮಾತು ನಡೆದೂ ವ್ಯರ್ಥವಾದ ಕಾಶ್ಮೀರದ ವಿವಾದದಲ್ಲಿ ಅನೇಕಾನೇಕ ಅಂಶಗಳು ಅಡಕವಾಗಿವೆಯೆಂಬುದನ್ನಿಂದು ನಮ್ಮ ಪಾಶ್ಚಾತ್ಯ ಮಿತ್ರರು ಅರಿತುಕೊಂಡಿದ್ದಾರೆ. ಇದರಲ್ಲಿ

([illegible]ನೇ ಪುಟ ನೋಡಿರಿ)

## ಸ್ನೇಹದ ಬೆಲೆಯುಳಿಸಲು

# ನರ ಬಲಿ

"ಗೆಳೆಯರೆ ಬಂಧುಗಳೇ, ನಿಮ್ಮೊಡನೆ ಬೇಡುವೆ – ಸಾಮ್ರಾಜ್ಯಶಾಹಿಗಳಿಗೆ ಸಹಾಯ ನೀಡಿ ಪರರ ಗುಲಾಮತ್ವದಿಂದ ಪಾರಾಗಿ! ನಮ್ಮನ್ನು ನಾವೇ ಸ್ವತಂತ್ರರಾಗಿ ಆಳಿ ಕೊಳ್ಳೋಣ, ಅದಕ್ಕಾಗಿ ಪರದೇಶೀಯರ ಬಂಗಲೆ ಮನೆಗಳ ನಾಶ ಮಾಡಲು ಮುಂದಾಗಿರಿ ಬಿಸಿ ರಕ್ತದ ತರುಣರೇ, ಭಾರತ ಮಾತೆಯ ಬಿಡುಗಡೆಗಾಗಿ ಹೋರಾಡಲು ಮುಂಬನ್ನಿ!" ತಂಗಿದ್ದ ಮನೆಯ ದಿಬ್ಬಣದವರನ್ನು ಉದ್ದೇಶಿಸಿ ಹದಿನೆಂಟರ ಹರೆಯದ ಹುಡುಗ, ಸ್ಫೂರ್ತಿಯುತನಾಗಿ, ಬೇಂಡು ವಾದ್ಯಗಳನ್ನು ಮೀರಿ, ಗರ್ಜಿಸುತ್ತಿದ್ದ.

"ಬನ್ನಿ ನಿಲ್ಲಬೇಡಿ – ಬೆಳಿಗ್ಗೆ ಆರು ಗಂಟೆಯ ಬಸ್ಸು ಬರುವ ಮೊದಲೇ ಎರಡು ಮೈಲು ದೂರದ ಊರಿನಲ್ಲೊಂದು ನಮ್ಮ ಕಾರ್ಯಕ್ರಮ ನೆರವೇರಬೇಕು. ನಾವು ಮೂವರಿದ್ದೇವೆ. ಕಚ್ಚೆದೆಯ ತರುಣ ವೀರರೇ ಅಳುಕದೆ ಬನ್ನಿ." ಆದರೆ ಆತನ ಕೂಗಿಗೆ ಬೆಲೆಕೊಟ್ಟು ಎದುರಿನಿಂದಲೇ "ನಾನು ನಾನು" ಎಂದು ಕೂಗುತ್ತಾ ಬಂದವ ಶಂಕರ, ಮದುಮಗನ ತಮ್ಮ.

"ಹೊರಟು ಶಂಕರನೇ ಎಲ್ಲಿಗೆ ಹೋಗುವೆ? ನಿನಗೇನು. ಹುಚ್ಚು ಹಿಡಿದಿದೆಯೇ?" ತಂದೆಯ ಸಿಟ್ಟಿನ ನುಡಿ ಕೇಳಿದ ಅಣ್ಣ, ಧೈರ್ಯದಿಂದ ಹೆಜ್ಜೆಯಿಟ್ಟ ಹುಡುಗನನ್ನು ತಡೆದು ನಿಲ್ಲಿಸಿತು. ಮಾತ್ರವಲ್ಲದೆ ಹಿಂತಿರುಗಿ ಬರುವಂತೆ ಮಾಡಿತು!

ಂ ಂ ಂ

"ಈ ಹಳ್ಳಿಯ ಜನರಿಗೆ ಏನೊಂದೂ ತಿಳಿಯದು. ಅಲ್ಲದಿದ್ದರೆ ಒಬ್ಬರಾದರೂ ಬರುತ್ತಿದ್ದರು.. ಇನ್ನೇನು ಮಾಡಲಿ? ನಮ್ಮ ಕಾರ್ಯಕ್ರಮದಂತೆ ಇವತ್ತು ಆ ಸೇತುವೆಯನ್ನು ಕತ್ತರಿಸಿ ಉರುಳಿಸಬೇಕು ಅದಕ್ಕಾಗಿ ಮನೆಯ ನಾಲ್ಕು ಮೈಲು ದೂರ ನಡೆದು ಪೇಟೆ ಸೇರಬೇಕು. ಗೋಪಾಲ್ ರಾಥೋರ ಪಣ್ ಬಗೆಗಿಂತ ಬೇಡಿ "ಧೈರ್ಯಂ ಸರ್ವತ್ರ ಸಾಧನಂ' ಎಂದು ಶಾಮು ಮಾತನ್ನು ಮುಂದರಿಸದೆ ನಿಲ್ಲಿಸುತ್ತಲೇ "ನಾರ್ ಸಾರ್" ಎಂದು ಹಿಂದಿನಿಂದ ಕರೆದಂತಾಯಿತು. ಮೂವರೂ ನಿಂತರು. "ನಾನು ಸಾರ್ ಶಂಕರ ತಂದೆಯವರು ಎದುರಿನಿಂದ ಬರಲು ಬಿಡಲಿಲ್ಲ. ಅವರೆಲ್ಲ ಒಳ ಹೋಗುತ್ತಲೇ ಓಡಿ ಬಂದೆ. ನನ್ನನ್ನು ಕರೆದುಕೊಂಡು ದಯಮಾಡಿ ಹೋಗಬೇಕು. ಸಾರ್" ಓಡಿ ಬಂದ ಆಯಾಸವನ್ನು ನೀಗಿಸುವ ಬಿಸಿಯುಸಿರು ಮಾತನ್ನು ತಡೆತಡೆದು ಹೊರ ಹೊರಡಿಸಿತು.

"ನಿನ್ನ ಹೆಸರು?" "ಶಂಕರ" "ಶಂಕರ ಆಯಿತು ಬಾ. ನಿನ್ನಂತಹವರೇ ನಮಗೆ ಬೇಕಾದ್ದು. ಎಂದು ತನ್ನ ನಿಯೋಜಿತ ಕಾರ್ಯಕ್ರಮವನ್ನು ಸೂಕ್ಷ್ಮವಾಗಿ ತಿಳಿಸುತ್ತ ಕರೆದೊಯ್ದ. ಅವರು ಕತ್ತರಿಸಬೇಕಾದ ಸೇತುವೆಯ ಬಳಿ ಬಂದಿದ್ದರು. ಊರಿನವರಿಂದ ಬೇಡಿ ಹಾರೆ ಪಿಕ್ಕಾಸು ತರಲು ಅಲ್ಲಿಯ ಪರಿಚಯವಿದ್ದ ಗೋಪಾಲ ಮುಂದಾದ. ಶಂಕರ ಎಲ್ಲಿ ಯಾರಾದರೂ ಬರುವರೋ ಎಂದು ಹೊಂಚು ಹಾಕಲು ಆ ಮೂವರೂ, ಎಡೆ ಬಿಡದೆ, ಸದ್ದು ಮಾಡದೆ ಸೇತುವೆ ಉರುಳಿಸಲು. ಅಂತೂ ಪಂಚಮಿಯ ಚಂದ್ರ ಮೇಲೇರಿ ಬರುವ ಹೊತ್ತಿಗೆ, ಅವರ ಕಾರ್ಯ ಸುಗಮವಾಗಿ ನೆರವೇರಿತು. ಮರುದಿನ ಅದರ ಮೂಲಕ ಹೋಗುವ ಬಸ್ಸನ್ನು ನಿಲ್ಲಿಸುವ ಪ್ರಯತ್ನ ಸಫಲವಾಗಿತ್ತು. ಮೂವರೂ ಮೂರು ಮೈಲು ನಡೆದು ಪೇಟೆಗೆ ಬಂದು, ಬೆಳಿಗ್ಗಿನ ಬಸ್ಸಿಗೆ ಟಿಕೇಟು ಕೊಂಡು ಕಾದು ಕುಳಿತರು.

"ಬೇಗ ಬೇಗ, ತಡವಾಗುತ್ತದೆ.' ಎನ್ನುತ್ತಿದ್ದ ಮೊದಲನೇ ಸೀಟಿನಲ್ಲಿ ಕುಳಿತ ರಾಂ ಡ್ರೈವರನನ್ನು ಒತ್ತಾಯಿಸುತಿದ್ದ. ಆ ಸಂಕದ ಮೇಲೆ ಉದ್ದವಾದ ಹಲಗೆಗಳನ್ನು ಹಾಸಿ, ಅಡಿ ಕಂಬಗಳನ್ನು ಕೊಟ್ಟು ಬಸ್ಸು ಸಾಗಿಸುವಾಗ, ಆ ಮೂವರೂ ಮಾತನಾಡದೆ ಬೆರಗಾಗಿ ಕುಳಿತಿದ್ದರು.

"ನಿಮಗೆಲ್ಲ ದಾರಿಯಲ್ಲಿ ಹೋಗುತ್ತಿದ್ದವನೊಬ್ಬ, ಶಾಮುನ ಬಡಿದ ಮುಖವನ್ನು ನೋಡಿ ಕೇಳಿದ.

"ನಮಗೆ ಕುಂದಾಪುರಕ್ಕೆ" ಶಾಮುನೇ ಉತ್ತರವಿತ್ತ.

"ಓಹೋ! ನಾನೂ ಆ ಕಡೆಯವನೇ. ನಿಮಗೆ ಸೌಖ್ಯವಿಲ್ಲವೇ?"

"ಇಲ್ಲ, ಬೆಳಿಗ್ಗೆ ಮೈ ಬಿಸಿಯಾಗಿತ್ತು. ಬಿಡುತ್ತದೆಂದು ಸುಮ್ಮನಿದ್ದೆ, ಈಗ ಜೋರಾಗುತ್ತ ಬಂದಿದೆ. ಇಲ್ಲೆಲ್ಲಾದರೂ ಮಲಗಲಿಕ್ಕೆ ಸ್ಥಳ ದೊರಕಿತೇ,, ನೋವನ್ನು ತಿಂದ ಸ್ವರವು ಹೊರಬಂತು.

"ಅದಕ್ಕೇನೂ ಭಯ ಪಡಬೇಡಿ. ಇಲ್ಲೇ ಸಿಮ್ಮಾಚಿಯವರ ಹೋಟೆಲ್ ಒಂದಿದೆ. ಅಲ್ಲಿಗೆ ಹೋಗನ, ಕಾಹಿಲೆಯವರಿಗೆ ಬಿಟ್ಟಾರು,, ಎನ್ನುತ್ತಲೇ ಆ ಊರನ್ನು ಆ ವರೆಗೆ ಕಾಣದ ಆವರಿಬ್ಬರನ್ನು ಹೊಸ ವ್ಯಕ್ತಿ ಕರೆದುಕೊಂಡು ಹೋಯಿತು. ಶಾಮು ಅವನನ್ನು ಮನದಲ್ಲೇ ಹಲವು ಬಾರಿ ವಂದಿಸಿದ "ಇವನೂ ನಮ್ಮ ಹಾಗೇ ಬಂದವನಿರಬೇಕು. ಅದಕ್ಕೇ ಇಷ್ಟು ಸಹಾಯ ಮಾಡುತ್ತಾನೆ. ,, ಇವನ ಮನೆಯ ತೀರ್ಪು, ಮಾತೆತ್ತದೆ ಹೆಜ್ಜೆ ಹಾಕಿದರು.

"ಸಾರ್ ಸಿಮ್ಮಾರಿನವರಿಬ್ಬರು ಬಂದಿರುತ್ತಾರೆ. ಒಬ್ಬರಿಗೆ ಬಹಳ ಜ್ವರ ಬಂದಿದೆ ಸ್ವಲ್ಪ ಸ್ಥಳ ಕೊಡುವಿರಾ? ,, ಆ ಅಪರಿಚಿತ ವ್ಯಕ್ತಿಯೇ ಹೋಟೇಲ್ ಮಾಲಕನನ್ನು ಕೇಳಿದ. "ಆಗಬಹುದು. ಎಲ್ಲಿಯವರು? ಯಾವ ಊರು ,, ಎಂದು ತನ್ನೂರವರೆಂದರೆ ಹಾತೊರೆವ ಆ ಮೇನೇಜರ್, ಸಂತಸದಿಂದಲೇ ಪ್ರಶ್ನೆ ಕೇಳಿದನು.

ಶಾಮು ತನ್ನ ಊರಿನ ಮನೆಯ, ತಂದೆ ತಾಯಿಗಳ ಪರಿಚಯವನ್ನು ವಿವರವಾಗಿ ತಿಳಿಸಿ, "ನಿಮಗೆಲ್ಲಿ, ನಮ್ಮೂರಲ್ಲಿ ,, ತನ್ನ ಪ್ರಶ್ನೆಯನ್ನು ನೀಡಿದ ಆದರೆ ಅವರಿಂದ ಬಂದ ಉತ್ತರವೆಂದರೆ ಎರಡಕ್ಷರದ ಒಂದು ಶಬ್ದ ಮಾತ್ರ, "ಕವಮ್ಮ,, ಎಂದು. ಶಾಮುನಿಗೂ ತನ್ನ ತಾಯಿ ಹೇಳಿದ ಕತೆ ನೆನಪು ಬಂತು. ೧೦ನೇ ವರ್ಷದಲ್ಲಿ ಮನೆಯಿಂದ ಹೊರಗಾಗಿ ಪರ ಊರಿಗೆ ತೆರಳಿದ ಅವನಣ್ಣನ ಮುಖ ಅವನು ಕಂಡಿರಲಿಲ್ಲ. ಏಕೆ ಆಗ ಅವನು ತಾಯಿ ಹೊಟ್ಟೆಯಲ್ಲೂ ಇರಲಿಲ್ಲ! "ಅಣ್ಣಾ ,, ಎಂದ ಶಂಕರ ಮತ್ತು ಅವರನ್ನು ಕರೆತಂದ ವ್ಯಕ್ತಿ ಬೆಪ್ಪಾಗಿ ನಿಂತಿದ್ದರು. ಅವರಿಗೆ ಕನಸೋ ನೆನಸೋ ತಿಳಿಯಲಿಲ್ಲ!

ಂ ಂ ಂ

"ಏನು ಸ್ವಾಮಿ ಬರುವುದಾದರೆ ಬನ್ನಿ! ನಾಳೆ ಬೆಳಿಗ್ಗೆ ಒಂದಿಷ್ಟು ಮಂದಿ ಹೋಗುತ್ತಾರೆ. ಅವರೊಡನೇ ಕಳಿಸುತ್ತೇನೆ, ಕೈ ತುಂಬಾ ಸಂಬಳ, ವರ್ಷಕ್ಕೆರಡು ತಿಂಗಳ ರಜೆ! ಬರುವ ಮನಸ್ಸಿದ್ದರೆ ಬೆಳಿಗ್ಗೆ ಆರು ಗಂಟೆಗೇ ಬನ್ನಿ. ,, ಪೇಟೆಗೆ ತಿರುಗಾಡಿ ಬರಲೆಂದೂ, ಅಲ್ಲಿಯ ಚಳುವಳಿಗರ ಹಾವಳಿ ಯೆಂತೆಂದೂ. ಕಂಡುಬರಲೆಂದು ಹೊರಟ ಶಂಕರನಿಗೆ ಒಬ್ಬರು ಏಜಂಟ್ ಹೇಳಿದ ಮಾತಿದು. "ಹಾಗಾದರೆ ಬೆಳಿಗ್ಗೆ ಬರುತ್ತೇನೆ.' ಎಂದುತ್ತರ ಕೊಟ್ಟು ಹೋಟೇಲಿಗೆ ಬಂದ.

ಶಾಮು ಮಂಚದ ಮೇಲೆ ಮಲಗಿದ್ದ. ಎದುರಿನ ಸ್ಟೂಲೊಂದರಲ್ಲಿ ಅನನತ್ತೆಯು, ಅಣ್ಣನ ಹೆಂಡತಿಯ ಕೃಶವಾದ ಕಡ್ಡಿಯಂತಹ ದೇಹ ಕುಳಿತಿತ್ತು. "ಏನು ಜ್ವರ ಇಳಿಯಲಿಲ್ಲವೇ? ,, ಅವರೊಡನೆ ಶಂಕರ ಒಳಗೆ ಕಾಲಿಡುತ್ತಲೇ ಕೇಳಿದ.

"ಇಲ್ಲ, ನೂರ ಎರಡು ಡಿಗ್ರಿ ಉಂಟೇಗ ನನಗಂತೂ ಅವರ ಅವಸ್ಥೆ ನೋಡಲು ಶಕ್ತಿಯಿಲ್ಲ. ಹೋಟೆಲಿನಿಂದ ಯಾರಾದರೂ ಕಳಿಸಿಕೊಡಲು ಹೇಳಿ. ,, ಅಲ್ಲಲ್ಲಿ ಕೆಮ್ಮುತ್ತಾ, ನಿಟ್ಟುಸಿರು ಬಿಡುತ್ತಾ, ಅವರು ಹೇಳಿದರು.

ಶಂಕರ ಹೋಟೇಲಿಗೆ ಹೋಗಿ, ತಿಳಿಸಿ, ಬರುವಾಗ ಅವರಲ್ಲಿ ಕುಳಿತಿರಲಿಲ್ಲ. ಶಾಮು ನೊಬ್ಬನೇ ಮಲಗಿ, ಉಸಿರ್ಗರೆಯುತ್ತಾ ಆಚೀಚೆ ಹೊರಳುತ್ತಾ ಇದ್ದ. 'ಶಾಮರಾಯರೇ" 'ಯಾರು? ಶಂಕರನೇ. ಬಹು ವಚನಬೇಡ, ನಿನ್ನಂತೆ ನಾನೂ ಹುಡುಗ, ಆಗಲಿ, ನಾಳೆಗೂ ಜ್ವರ ಬಿಡದೇ"

'ನೋಡುವ ಬಿಟ್ಟೇತು. ನಾನು ಪೇಟೆಯತ್ತ ಹೋಗಿ ಬಂದೆ. ಆದರೆ ಇಲ್ಲಿ ಅಷ್ಟೇನೂ ಚಳವಳ ಇಲ್ಲ' ಎಂದು ಶಂಕರ ನುಡಿದ.

ಹೌದು, ಹಗಲು ಹೊತ್ತಿಗೆ ಮಾಡುತ್ತಾರೆಯೇ? ರಾತ್ರಿಯಲ್ಲಿ ಯಾರೂ ಬಾರದಂತೆ ಕಂಡು, ಗುಟ್ಟಾಗಿ ಸೇತುವೆ ಕತ್ತರಿಸಬೇಕು ಅದೂ ಪೇಟೆಯಲ್ಲಿ ಕಷ್ಟವಾದ್ದರಿಂದ ಕಡಿಮೆ.

"ಅದಿರಲಿ ನಿನ್ನ ಬಳಿ ಕುಳಿತವರು ಯಾರು ಶಾಮು.'

"ನನ್ನತ್ತೆ"

"ಅವರಿಗೆ ಕ್ಷಯವಲ್ಲವೆ?" "ಹಾಂ ಕ್ಷಯ'. ಅದೆಲ್ಲಾದರೂ ನನಗೆ ಹಿಡಿದೀತೆ?

"ಹಿಡಿಯದು. ಆದರೆ ಅವರೆದುರು ಮಾತಾಡುತ್ತಿರಬೇಡ. ಅವರು ಮುಟ್ಟಿದ ಆಹಾರ ಸೇವಿಸಬಾರದು" ಎಂದಿಷ್ಟು ಅವನಿಗೆ ಎಚ್ಚರಿಕೆ ಕೊಟ್ಟ. ಆದರೆ ಶಾಮುನ ಆದ್ಯೈರ್ಯ ಕಡಿಮೆಯಾಗಲಿಲ್ಲ. ತನ್ನ ಬಾಳು ಹಾಳಾಗುತ್ತದೆಂದು ಖಂಡಿತ ಎಣಿಸಿದ. ಅರೆಗಳಿಗೆ ಇಬ್ಬರೂ ಮೌನ. ಕೊನೆಗೆ ಶಂಕರನೇ ಮೊದಲು ಮಾಡಿದ.

"ನೋಡು ಶಾಮು. ನನಗಿಂದೊಬ್ಬರು ಸಿಕ್ಕಿದರು. ಅವರು ಸೈನಿಕನಾಗುತ್ತೀಯಾ ಎಂದು ಕೇಳಿದರು. 'ನನಗೂ ಒಪ್ಪಿಗೆಯಾಯಿತು ಸೇರಲೇ?' ಎಂದು ಮೆಲ್ಲನೆ ನುಡಿದ.

"ಯಾವುದಕ್ಕೆ ಬೇಕಾದರೂ ಸೇರು, ಆದರೆ ಭಾರತ ಮಾತೆಗಾಗಿ ಹೋರಾಡಲು ಅಣಿಯಾಗು ನೀನೂ ಇಲ್ಲಿ ಹೆಚ್ಚು ಹೊತ್ತು ನಿಲ್ಲಬೇಡ. ಹೊರಡು ಕೊನೆಗೆ ಆ ರೋಗ ನಿನಗೂ ತಟ್ಟೀತು". ಜ್ವರದಿಂದ ಬೆಚ್ಚಗಾದ ದೇಹ ಕುದಿ ಕುದಿದು ನುಡಿಯಿತು.

ಮರುದಿನ ಬೆಳಿಗ್ಗೆ ಎದ್ದು ಕಣ್ಣು ತೆರೆದು ನೋಡುವಾಗ ಎದುರು ನಿಂತಿರಬೇಕಾದ ಶಂಕರನ ಬದಲು ಅನನತ್ತೆ ಬಂದು ನಿಂತಿದ್ದರು.. "ಶಂಕರ' ಎಂದು ಕ್ಷೀಣ ಸ್ವರದಲ್ಲಿ ನುಡಿದ ಶಾಮು. "ಅವರು ಈಗ ಹೊರಟು ಹೋದರಂತೆ. ಜ್ವರ ಕಡಿಮೆಯಾಯಿತೇ'ಎಂದವರೇ ಕೇಳಿದರು. ಶಾಮುನಿಗೆ ಶಂಕರ ಆಡಿದ ನುಡಿ ನೆನಪಿಗೆ ಬಂತು ಆದರೆ ತನ್ನೊಡನೆ ಮಾತನಾಡಬೇಡಿ ಎಂದು ಹೇಳುವ ಮನಸ್ಸು ಅವನದ್ದಲ್ಲ. ಏಕೆಬೇಕೆಂದು ಪ್ರಯತ್ನಿಸಿದ, ಅವರೇ ಬಂದು ಕೈ ಹಿಡಿದ. ಮೇಲಕ್ಕೆತ್ತ ಬೇಕಾಯಿತು. ಒಂದು ದಿನದ ಭಯಂಕರ ಜ್ವರದಿಂದ ಬೆಂದ ಅವನ ದೇಹ, ಏಳಲೂ ಶಕ್ತವಾಗಿರಲಿಲ್ಲ!

ರೈಲು ಬರುವ ಸಮಯಕ್ಕಿಂತ ೧೦ ನಿಮಿಷ ತಡವಾಗಿಯೇ ಬಂದಿತ್ತು. "ಗರ್, ಗರ್, ಗರ್' ಎಂದಬರ ಶಬ್ದ ಕಡಿಮೆಯಾಗುತ್ತಾ ಬಂದಂತೆ ಶಾಮುನ ಹೃದಯದ ಬಡಿಯುವಿಕೆಯ "ಡಬ್ ಡಬ್ ಡಬ್' ಎಂಬ ಶಬ್ದ ತಾಳಕ್ಕೆ ಸರಿಯಾಗಿ ಕಡಿಮೆಯಾಯಿತು. ಆದರೆ ರೈಲು ಶಬ್ದ ಸ್ಪಷ್ಟವಾಯಿತು, ಶಾಮುನದು ತಡೆಯದೆ ಬಡಿಯುತಿತ್ತು. ಇಷ್ಟೇ ವ್ಯತ್ಯಾಸ.

'ಖಾಕಿ ವಸ್ತ್ರ ಧರಿಸಿ ಬರುತ್ತೇನೆ. ನಿನಗೆ ನನ್ನ ಗುರುತು ಸಿಕ್ಕುವುದು ಕಷ್ಟ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕಿರಿ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5¼ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

## ಮಹತ್ವಪೂರ್ಣವಾದ

# ಹಿಮಾಲಯದ ಸೀಮಾ ಪ್ರದೇಶ

ವೇದ-ಪುರಾಣಗಳ ಪ್ರಕಾರ ನಮ್ಮ ಪವಿತ್ರ ಮಾತೃಭೂಮಿಯು ಎಲ್ಲಿ ಇರುವದು, ಐತಿಹಾಸಿಕ ದೃಷ್ಟಿಯಿಂದ ನಮ್ಮ ಗಡಿ ಯಾವದೆಂಬುದನ್ನು, ತ್ರಿವಿಷ್ಟಪ (ಟಿಬೇಟು) ನೇಪಾಲಗಳ ಸ್ಥಾನ ಮಾನಗಳನ್ನು ಈ ರಾಷ್ಟ್ರೀಯ ಪತ್ರಿಕೆಯ ಹಿಂದಿನ ಕೆಲವು ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ನಮ್ಮ ಸೀಮೆ ಸುಸ್ಪಷ್ಟವಾಗಿಲ್ಲವೇನು ಎಂಬದಕ್ಕೆ ಹಿಂದಿನ ಸಂಚಿಕೆಯಲ್ಲಿ ಉತ್ತರವನ್ನೀಡಲಾಗಿರುತ್ತದೆ. ಗಡಿ ಪ್ರದೇಶ ಇಷ್ಟು ಸುಸ್ಪಷ್ಟ ಇರುವಾಗ ಚೈನಿ ಕಮ್ಯೂನಿಸ್ಟರು ನಮ್ಮ ಮೇಲೆ ಯಾತಕ್ಕಾಗಿ ಆಕ್ರಮಣ ನಡೆಸುತ್ತಿದ್ದಾರೆ? ಇಂದು ಸಮಾಜವಾದಿ ರಾಷ್ಟ್ರವು ಇನ್ನೊಂದು ಸಮಾಜವಾದಿ (ಸಗ) ರಾಷ್ಟ್ರದ ಮೇಲೆ ಆಕ್ರಮಣ ನಡೆಸುವದೇ ಇಲ್ಲವೆಂದು ನಮ್ಮ ನೆಚ್ಚಿನ ಪ್ರಧಾನಿ ಆಗಾಗ ನಮಗೆ ಧೈರ್ಯ ಹೇಳುತ್ತಿದ್ದರು. "ಈಗ ನಾವು ಮೋಸ ಹೋಗಿರುವೆವು. ಚೈನಿ ಕಮ್ಯೂನಿಸ್ಟರು ಎದುರಿನಲ್ಲಿ ಆಲಂಗಿಸಿ ಹಿಂದಿನಿಂದ ಬೆನ್ನಿಗೆ ಇರಿದರು..." ಈ ರೀತಿ ಈಗ ನಮ್ಮ ನೆಚ್ಚಿನ ನೆಹರೂಜೀಯವರೇ ನುಡಿಯಾಲೋಚಿಸಿರುವರು. ಚೈನಿ ಕಮ್ಯೂನಿಸ್ಟರು ದೋಷಪೂರಿತ ಭೂಪಟವನ್ನು ಪ್ರಕಟಿಸಿರುವದನ್ನು ಅವರ ಗಮನಕ್ಕೆ ತಂದಾಗ, ಅದು ಹಿಂದಿನ ಬಂಡವಾಳ ಶಾಹಿಗಳ ತಪ್ಪು, ಅದನ್ನು ಬೇಗನೇ ನಾವು ಅದನ್ನು ಸರಿಗೊಳಿಸುತ್ತೇವೆಂದು ಸೂಪ್ನೊ ಮುಂತಾದವರು ಮಾತು ಕೊಟ್ಟಿದ್ದರು. ಚೈನಿ ಕಮ್ಯೂನಿಸ್ಟರು ಆಕ್ರಮಣ ನಡೆಸುತ್ತ ಮುಂಬರುತ್ತಿರುವದನ್ನು ಅವರ ಗಮನಕ್ಕೆ ತಂದಾಗ ಅವರು ಹಾದಿತಪ್ಪಿ ಹೋಗಿರಬಹುದು, ಬೇಟೆ ಹಿಡಿಯಲು ಹೋಗಿರಬಹುದೆಂದೂ, ನಾವು ಆಕ್ರಮಣ ಮಾಡುವುದಿಲ್ಲವೆಂದೂ ಚೌ ಎನ್ ಲೈಯವರು ಭಾಷೆ ಕೊಟ್ಟಿದ್ದರು. ಹಾಗಿದ್ದರೂ ಅದೇಕೆ ಆಕ್ರಮಣ ನಡೆಸಿದರು? ರಾಜಕೀಯ ಧುರಂಧರ ಶ್ರೀ ನೆಹರೂಜೀ, ರಾಜಕೀಯ ಸನ್ಯಾಸಿ ವಿನೋಬಾಜೀ.... ಮುಂತಾದವರು ಈಗ ಕಂಟಾಗಿರುವದು ಜಾಗಗಳಿಗಾಗಿ ಜಗಳವಲ್ಲ, ಎರಡು ತತ್ವಗಳ (ಹೋರಿಗಳ ಹಾಗೆ!) ತಾಕಲಾಟವೆಂದು ಹೇಳುತ್ತಿದ್ದಾರೆ. ಅದನ್ನು ಮಾನ್ಯ ನೆಹರೂಜೀಯವರು ಇತ್ತೀಚೆಗೆ ಅಹಮ್ಮದಾಬಾದಿನಲ್ಲಿ ಆಡಿರುವರು. ಅದೇ ಕಾರಣವೇನು? ಅದನ್ನು ಕೂಲಂಕುಷವಾಗಿ ವಿವೇಚಿಸುವ ಮುಂಚೆ ಇನ್ನೊಮ್ಮೆ ಹಿಮಾಲಯದ ಸೀಮಾ ಪ್ರದೇಶದತ್ತ ಸಿಂಹಾವಲೋಕನ ಗೈದು ಮುನ್ನಡೆಯುವ.

ಧವಳ ಹಿಮಾಲಯದ ಸೀಮಾ ಪ್ರದೇಶವನ್ನು ಜಡ ಅಥವಾ ನಿದಿತ ಸೀಮಾ ಪ್ರದೇಶವೆಂದು ಪರಿಗಣಿಸಲಾಗಿತ್ತು. ಹಿಂದೆ ಕ್ರುಶ್ಚೇವ್—ಬುಲ್ಗೇನಿನ್ ಭಾರತಕ್ಕೆ ಅತಿಥಿಗಳಾಗಿ ಬಂದಿದ್ದಾಗ ಅವರು ಮಾತಾಡುತ್ತ ರಷ್ಯಾಕ್ಕು ಭಾರತಕ್ಕು ನಡುವೆ ಇರುವದು ಹಿಮಾಲಯವೊಂದೇ ಎಂದು ಸಾಹಿತ್ಯದ ಅಭಿನಂದನೆ ಮಾಡಿದ್ದರು. ಇದೇ ಹಿಮಾಲಯದ ತಪ್ಪಲಿನಿಂದ ಹುಯೆನ್ ತ್ಸಾಂಗ್ ಮುಂತಾದ ಜ್ಞಾನ ಜಿಜ್ಞಾಸುಗಳು ಜ್ಞಾನಸಾಗರ ಭಾರತಕ್ಕೆ ಬಂದಿದ್ದರು. ಅಲ್ಲಿ ಇಂದು ಚೈನಿ ಕಮ್ಯೂನಿಸ್ಟರು ದುರಾಕ್ರಮಣ ನಡೆಸಿದಂದಿನಿಂದ ಸೈನಿಕರ ಕಾಲಿನ ಶಬ್ದವು ಆ ನಿರ್ಜನ ಪ್ರದೇಶದಲ್ಲಿ ಕೇಳಿ ಬರುತ್ತಿದೆ. ಗಿಲ್ಗಿಟ್‌ನಿಂದ ಬರ್ಮಾದ ಗಡಿಯ ವರೆಗೆ ಸುಮಾರು ೨೫೦೦ ಮೈಲುದ್ದದ ಸೀಮೆ ಅಲ್ಲಿದೆ. ಅದರಲ್ಲಿ ಉನ್ನತ ಶಿಖರಗಳು, ಆಳ ಕಣಿವೆಗಳು, ಕಡಿದಾದ ಪ್ರದೇಶಗಳು, ಫಲವತ್ತಾದ ಪ್ರದೇಶಗಳು, ಜನ ಸಂಖ್ಯಾ ಭರಿತ ವಾಸ ಸ್ಥಾನಗಳೂ ಇವೆ. ಆದುದರಿಂದ ಅದನ್ನು ನಿರ್ಜನ ಪ್ರದೇಶವೆಂದು ನಿಟ್ಟುಸಿರು ಬಿಟ್ಟು, ಕಮ್ಯೂನಿಸ್ಟರು ಬೇಕಾದರೆ ಅಲ್ಲಿ ಕಾಲುಬಿಡಲೆಂದು ನಿರುತ್ಸಾಹದಿಂದ ಹಿಂಜರಿಯುವದು ಸರಿಯಲ್ಲ. ಅಲ್ಲಿ ನಮ್ಮ ಸ್ವದೇಶ ಬಾಂಧವರಿದ್ದಾರೆ.

ಆ ಶಾಂತ ಪ್ರದೇಶಗಳು ಇಂದಿನ ಶೂರ ಸೈನಿಕರಿಗೆ ಮಾತ್ರ ಸ್ವಾಗತವನ್ನೀಯುತ್ತಿರುವದಲ್ಲ, ಜ್ಞಾನ ಗಳಿಯ ಶೋಧಕರಿಗೆ ಮಾತ್ರ ಸಹಕಾರವನ್ನು ಬಯಸಿದುದಲ್ಲ, ಅವು ಸತ್ಯಂ—ಶಿವಂ—ಸುಂದರಂ ಎಂಬ ಈಶ್ವರ ಸಾಕ್ಷಾತ್ಕಾರ ಪಡೆದಿರುವ ಋಷಿ ಮುನಿಪುಂಗವರಿಗೂ ಆಮಂತ್ರಣವನ್ನಿತ್ತು ಆಶ್ರಯವನ್ನಿತ್ತಿವೆ. ಅದು ನಮ್ಮ ದೇವ—ದೇವತೆಯ ವಾಸಸ್ಥಾನವೂ ಇದೆ ಶ್ರೀ ಶಂಕರಾಚಾರ್ಯರು ಜ್ಞಾನಾಮೃತದ ಹೊಳೆ ಹರಿಸಿರುವ ಈ ಪವಿತ್ರ ಸ್ಥಳವನ್ನು ಕೊಲೆಗಡುಕ ಚೈನಿ ಕಮ್ಯೂನಿಸ್ಟರು ಭಾರತೀಯ ಸೈನಿಕರ—ಗಿರಿಜನರ ರಕ್ತದ ಕಾಲುವೆಯನ್ನು ಹರಿಸಿ ಅಪವಿತ್ರಗೊಳಿಸಿರುವರು. ಶಿವನ ಜಟೆಯಿಂದ ಭಗೀರಥನು ಭಾಗೀರಥಿಯನ್ನು ಬರಿಸಿದ ಭೂಪ್ರದೇಶದಲ್ಲಿ ದೇಶದ್ರೋಹಿ ಕಮ್ಯೂನಿಸ್ಟರು ಚೈನಿ ಕಮ್ಯೂನಿಸ್ಟರಿಂದ ಭಾರತೀಯ ಸೈನಿಕರ—ಗಿರಿಜನರ ಕಗ್ಗೊಲೆ ನಡೆಸಿ ರಕ್ತದ ಕಾಲುವೆಯನ್ನು ಹರಿಸಿರುವರು. ಹೀಗಾದರೂ ಜಗತ್ತಿನ ಕಮ್ಯೂನಿಸ್ಟರು ಒಂದಾಗ ಬೇಕು!

ಈ ಸರಹದ್ದಿನ ಸಂರಕ್ಷಣಾ ಕಾರ್ಯ ಬಹಳ ಸುಲಭವೆನ್ನುವದು ಸರಿಯಲ್ಲ. ಆ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಬಲಾತ್ಕಾರದಿಂದ ಭಾರತದತ್ತ ದೂಡಲ್ಪಟ್ಟಿರುವ ಚೈನಿ ಕಮ್ಯೂನಿಸ್ಟರ ಬಡಪಾಯಿ ಪಡೆಯನ್ನು ಮಾತೃಭೂಮಿಯ ಮೇಲಣ ಮಮತೆಯಿಂದ ಸಾಗುವ ನಮ್ಮ ಉತ್ತಮ ಸೇನೆ ಎದುರಿಸಬಹುದು. ಆದರೆ ಅದು ನಮ್ಮ ರಾಜಕೀಯ ಧೋರಣೆಯ ಮೇಲೆ ಹೊಂದಿಕೊಂಡಿದೆ. ನಮ್ಮ ಸೇನೆಯ ಸ್ಥಿತಿಗತಿಗಳನ್ನು, ಚಲನ ವಲನಗಳನ್ನು ಚೈನಾ ಕಮ್ಯೂನಿಸ್ಟ್ ಪಕ್ಷಕ್ಕೆ ತಿಳಿಸುತ್ತಿರಬಹುದು. ಇಲ್ಲಿ ದೇಶದ್ರೋಹಿ ಕಮ್ಯೂನಿಸ್ಟ್ ಪಕ್ಷವಿದೆ. ಅವರು ಆ ಸಂದರ್ಭವನ್ನು ಹಾಳುಮಾಡಿಕೊಳ್ಳಲಾರರು. ಬಂಡಾಯ, ಚುನಾವಣೆಯ ಮೂಲಕ ಕೆಂಪು ಕೋಟೆಯ ಮೇಲೆ ಕೆಂಪು ಕೇತುವನ್ನು ಹಾರಿಸಲು ಅವರಿಂದ ಅಸಾಧ್ಯವಾಗಿರುವದರಿಂದ, ಅದವರಿಗೆ ಗಗನಕುಸುಮವಾಗಿರುವದರಿಂದ, ಸ್ವಭಾವಕ್ಕನುಗುಣವಾಗಿ ಅವರು ಕೆಂಪು ಕೇತುವನ್ನು ಹಾರಿಸಲು ಕೆಂಪು ಚೈನೀಯರ ಆಗಮನವನ್ನು (ಆಕ್ರಮಣವನ್ನು) ಎದುರು ನೋಡುತ್ತಿರುವದರಲ್ಲಿ ಆಶ್ಚರ್ಯವೇನೂ ಇರುವದಿಲ್ಲ.

ನಮ್ಮ ಸೀಮಾ ಪ್ರದೇಶದ ಸಮೀಪವೇ ತ್ರಿವಿಷ್ಟಪದಲ್ಲಿ ಚೈನಾವು ಚಲೋ ರಸ್ತೆಗಳನ್ನು ನಿರ್ಮಿಸಿಕೊಂಡಿರುತ್ತದೆ. ಅವರ ಸೇನಾ ಚಲನವಲನಕ್ಕೆ ಅವು ಬಹಳ ಸಹಾಯವಾಗಿರುತ್ತವೆ. ನಮ್ಮ ಬದಿಯಲ್ಲಿ ಆದರೋ ಮಾರ್ಗ ನಿರ್ಮಾಣದ ಕಾರ್ಯವು ಮೋಸ ಪ್ರಕರಣವೆಂಬ ಮಾತು ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ಕೇಳಬಂದಿವೆ. ಅದರ ವಿಚಾರಣೆಗೆ ಸಮಿತಿಯನ್ನು ನಿರ್ಮಿಸಲಾಗಿರುತ್ತದೆ. ಹೀಗಿದೆ ನಮ್ಮಲ್ಲಿ ದೇಶ ಪ್ರೇಮ!

ಇಪ್ಪತ್ತನೇ ಶತಮಾನದ ಆಯುಧಗಳಿಂದೇನು ಪ್ರಯೋಜನ? ಒಂದು ಗುಂಡು ಹಾರಿದರಾಯಿತು ಕಥೆಯೇ ಮುಗಿಯಿತು... ಹೀಗೆಲ್ಲ ಬಹಳ ಸಡಿಲವಾಗಿ ಮಾತಾಡುತ್ತಿದ್ದ ಅಧಿಕಾರಿ ಗಣ ಹಾಗೂ ರಾಜಕೀಯ ಪುಢಾರಿಗಳೂ ಇಂದು, ಅಯ್ಯೋ! ನವೀನ ಶಸ್ತ್ರಾಸ್ತ್ರಧಾರಿಗಳಾಗಿ ಮಿಡತೆಗಳಂತೆ ಮುಂಬರುತ್ತಿರುವ ಚೈನಿ ಕಮ್ಯೂನಿಸ್ಟ್ ಪಡೆಯನ್ನು ಎದುರಿಸಲು ನಮ್ಮ ಬಳಿ ಉತ್ತಮ ಆಯುಧವೇ ಇಲ್ಲವಲ್ಲ ಎಂದು ನಿಸ್ಸಹಾಯಕತೆಯನ್ನು ಪ್ರದರ್ಶಿಸಿ ಕಣ್ಣೀರು ಬಿಡುತ್ತಿದ್ದಾರೆ; ಸಂಧಾನದ ಭ್ರಮೆಯಲ್ಲಿ ಮುತ್ತುತ್ತಿದ್ದಾರೆ. ಇದೀಗ ಆಯುಧೋಪಕರಣಗಳ ಸಿದ್ಧತೆಗಾಗಿ ಕಾರ್ಖಾನೆ ಕಟ್ಟಲು ಸ್ಥಳ ಹುಡುಕುವ ಕಾರ್ಯದ ಆರಂಭೋತ್ಸವ ನಡೆಯಲಾರಂಭವಾಗಿರುತ್ತದೆ. ಇಲ್ಲಿ ಬರುತ್ತದೆ ಪ್ರಾಂತ್ಯ ಅಭಿಮಾನದ ಪಿಶಾಚಿಯ ಪೀಡೆ. ನಮ್ಮ 'ರಾಜ್ಯ'ದಲ್ಲಿ ನಡೆಬೇಕು, ನಮ್ಮ 'ರಾಜ್ಯ'ದಲ್ಲಿ ಇರಬೇಕೆಂಬುದರ ಮೇಲೆ ವಾಗ್ಯುದ್ಧ ದಿನ-ಪತ್ರಿಕೆಗಳಿಗೆ ಸುದ್ದಿಯ ಸಾರವಾಗಿರುತ್ತದೆ. ಅಹಮ್ಮದಾಬಾದಿನಲ್ಲಿ ಇತ್ತೀಚೆಗೆ ಶ್ರೀ ನೆಹರೂಜೀಯವರೇ ಭಾಷಣ ಕೊಡುತ್ತ ಚೈನಿಯರ ಚಕ್ರಂದಾಟದ ಕುರಿತು ವಿವರವಾಗಿ ತಿಳಿಸಿರುವರು. ಸಮಸ್ಯೆ ಮತ್ತಷ್ಟು ಜಟಿಲವಾಗುತ್ತ ಹೋಗುತ್ತಿದೆ ಎಂಬುದೇ ಅವರ ಸ್ಪಷ್ಟ ಅಭಿಪ್ರಾಯ. ಅವರ ಮಾತಿನಿಂದ ನಾವು ಮೋಸ ಹೋಗಿರುವೆವು. ಪುನಃ ಹಾಗಾಗಬಾರದು ನಾವು ಜಾಗೃತಾವಸ್ಥೆಯಲ್ಲಿರಬೇಕೆಂದು ಅವರು ಅಂದು ಎಚ್ಚರಿಕೆಯ ಮಾತುಗಳನ್ನಾಡಿರುವರು. ನಮ್ಮ ಬಲವನ್ನು—ವಾಯು ಬಲ, ಜಲ ಬಲ, ಸೇನಾ ಬಲ—ವೃದ್ಧಿಪಡಿಸಿಕೊಳ್ಳಬೇಕೆಂದೂ, ಆಯುಧೋಪಕರಣಗಳನ್ನು ಹೆಚ್ಚಿಸಿಕೊಳ್ಳುವದೂ ನಮ್ಮ ಕರ್ತವ್ಯವೆಂಬುದನ್ನವರು ಜ್ಞಾಪಕಪಡಿಸಿರುವರು. ಈ ಮಾತುಗಳಿಂದ ನಮ್ಮ ರಾಜಕಾರಣಿಗಳು ಯಾವ ಸ್ಥಿತಿಯಲ್ಲಿದ್ದಾರೆಂಬುದು ಸುಸ್ಪಷ್ಟವಾಗುತ್ತದೆ. ಅದಕ್ಕೆ ಬೇರೆ ದರ್ಪಣದ ಆವಶ್ಯಕತೆಯೇ ಇರುವದಿಲ್ಲ. ಹಾಗಿರುವಾಗ, ಚೈನಿ ಕಮ್ಯೂನಿಸ್ಟರ ಚೇಷ್ಟೆಯನ್ನು ನಮ್ಮ ಧೀರ ಸೇನಾನಿಗಳು ಸ್ವದೇಶಾಭಿಮಾನವೆಂಬ ದಿವ್ಯಾಸ್ತ್ರದಿಂದ ತಡೆಹಿಡಿದಿರುವದರಿಂದಲೇ ಇತ್ತ ಅವರಿಗೆ ಬರಲಾಗದೆ, ಅತ್ತಿಂದಲೇ ಶಾಂತಿ ಮಂತ್ರದ ಮಿಥ್ಯಕರಣವನ್ನು ನಡೆಸುತ್ತಿದ್ದಾರೆ. ಆದರೆ ಪಡೆ ಆದಷ್ಟು ಪರಾಕ್ರಮಿ ಹಾಗೂ ಸ್ವದೇಶಾಭಿಮಾನಿಯಾಗಿದ್ದರೂ ನೇತಾರರು ಉತ್ತಮ ನೇತಾರರಾಗಿರಬೇಕು. ಸರಿಯಾದ ಮಾರ್ಗದರ್ಶನವಿಲ್ಲದಿದ್ದಲ್ಲಿ ಸೇನಾ ಸಾಗರವಾದರೂ ಅದೇನು ಮಾಡೀತು?

ಈ ಸೀಮಾ ಪ್ರದೇಶವನ್ನು ಪಶ್ಚಿಮ, ಕೇಂದ್ರ ಹಾಗೂ ಪೂರ್ವವೆಂದು ಮೂರು ವಿಭಾಗಗಳನ್ನಾಗಿ ಗುರುತಿಸಿಕೊಳ್ಳಬಹುದು

(೧೦ನೇ ಪುಟ ನೋಡಿರಿ)


# ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

**ಜಾಹೀರಾತು ದರಗಳು:**

ನಿಯಮಿತ (ಕಂಟ್ರಾಕ್ಟ್) ರೂ
ಕಲಂ ಸೆಂಟಿಮೀಟರಿಗೆ 1-00
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ 1-50

**ಚಂದಾ:**

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಅನುಕೂಲತೆಯು ಇರುವುದು.



ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ........
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

## ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.



## ಪ್ರಜಾಪತಿ ನಿರೂಪಿತ

# ಆತ್ಮ ಜ್ಞಾನದ ರಹಸ್ಯ

ಕೆಡುಕನ್ನು ಬಯಸದ, ವೃದ್ಧಾಪ್ಯವನ್ನು ನೋಡದ, ಮರಣವಿಲ್ಲದ, ದುಃಖ ವಿರಹಿತನಾದ, ಹಸಿವೆ ಬಾಯಾರಿಕೆ ಇಲ್ಲದ, ಆತ್ಮನೇ 'ಸತ್ಯ'ನೆನ್ನಿಸಿಕೊಳ್ಳುವನು. ಆತ್ಮದ ಉದ್ದೇಶವು ಸ್ಥಿರವಾದುದು. ಆತನನ್ನು ಹುಡುಕಿ ತಿಳಕೊಳ್ಳುವುದು ಧರ್ಮವು. ಆತ್ಮನು ಎಲ್ಲಾ ಲೋಕಗಳಲ್ಲಿ ವ್ಯಾಪಿತನು; ಆತನನ್ನು ಅರಿತುಕೊಂಡವರಲ್ಲಿ ತಾನು ಸ್ಥಾಪಿತನಾಗುವನು. ಈ ರೀತಿ ಪ್ರಜಾಪತಿಯು ಹೇಳಿದಾಗ, ಸುರರೂ, ಅಸುರರೂ ಆತ್ಮನ ವಿಚಾರವನ್ನು ಕೇಳಿ ತಿಳಕೊಂಡರು. ಇಂತಹ ಆತ್ಮನನ್ನು ನಾವು ಹುಡುಕಲೇ ಬೇಕೆಂದು ನಿರ್ಧರಿಸಿದರು. ಸುರರ ಪರವಾಗಿ ದೇವೇಂದ್ರನೂ, ಅಸುರರ ಪಕ್ಷದಿಂದ ವಿರೋಚನನೂ ಪ್ರಜಾಪತಿಯಿದ್ದಲ್ಲಿ ಬಂದು ಯಜ್ಞಸಾಧಕ ಸಾಮಗ್ರಿಗಳ ಸಹಿತ ಆತನಲ್ಲಿ ಶಿಷ್ಯರಾದರು. ಇಬ್ಬರೂ ಬ್ರಹ್ಮಚಾರಿಗಳಾಗಿ ಬಹಳ ಶ್ರದ್ಧೆಯಿಂದ ೩೨ ವರ್ಷ ಕಾಲದ ತನಕ ಪ್ರಜಾಪತಿಯಲ್ಲಿ ಶಿಷ್ಯರಾಗಿ ಕಾಲ ಕಳೆದು, ಒಳ್ಳೆಯ ನಮ್ರತೆಯಿಂದ ನಡೆದರು. 'ಯಾವ ಉದ್ದೇಶಕ್ಕಾಗಿ ನೀವು ನನ್ನಲ್ಲಿ ಶಿಕ್ಷಣಕ್ಕೆ ಬಂದಿದ್ದೀರಿ' ಎಂದು ಪ್ರಜಾಪತಿಯು ಇಬ್ಬರಲ್ಲೂ ಕೇಳಿದಾಗ, ಅವರು ಈ ರೀತಿಯ ಉತ್ತರವಿತ್ತರು.

“ನಾವು ಕೆಡುಕನ್ನು ಬಯಸದ, ಮರಣವಿಲ್ಲದ, ದುಃಖವಿರಹಿತನಾದ, ಹಸಿವೆ ಬಾಯಾರಿಕೆ ಇಲ್ಲದ, ಸತ್ಯನಾಮಧೇಯದ ಆತ್ಮನನ್ನು ಅರಸಿ, ಆತ್ಮಜ್ಞಾನೋಪದೇಶಕ್ಕೆ ನೀವು ತಕ್ಕ ಗುರುವೆಂದು ತಿಳಿದು ಬಂದಿರುವೆವು. ಆತ್ಮನು ಎಲ್ಲಾ ಲೋಕಗಳಲ್ಲಿ ವ್ಯಾಪಿತನು, ಆತನನ್ನು ತಿಳಕೊಂಡವರಲ್ಲಿ ತಾನು ಸ್ಥಾಪಿತನಾಗುವನು ಎಂಬುದನ್ನು ನೀವೇ ತಿಳಿಸಿರುವಿರಿ”

ಈ ಉತ್ತರವನ್ನು ಕೇಳಿ ಪ್ರಜಾಪತಿಯು—“ಕಣ್ಣುಗುಡ್ಡೆಯಲ್ಲಿ ಎಂದರೆ ನಮ್ಮ ದೃಷ್ಟಿಯಲ್ಲಿ ಕಾಣುವ ಪುರುಷನೇ ಆತ್ಮನು. ಆತನಿಗೆ ಮರಣವಿಲ್ಲ. ಆತನೇ ಬ್ರಹ್ಮನು.” “ಜಲದಲ್ಲಿಯೂ, ಕನ್ನಡಿಯಲ್ಲಿಯೂ ಕಾಣುವವನು ಯಾರು?” ಎಂದು ಶಿಷ್ಯರು ಪ್ರಶ್ನಿಸಿದಾಗ ಪ್ರಜಾಪತಿಯು “ಆತ್ಮನು ಜಲದಲ್ಲಿಯೂ, ಕನ್ನಡಿಯಲ್ಲಿಯೂ ತೋರುವನು. ಜಲದಲ್ಲಿ ನೀವು ಆತನನ್ನು ಕಂಡುಹಿಡಿದು ಆ ವಿಚಾರವನ್ನು ನನಗೆ ತಿಳಿಸಬೇಕು” ಎಂದು ಶಿಷ್ಯರಿಗೆ ಆಜ್ಞೆ ಇತ್ತನು. ಇಬ್ಬರು ಶಿಷ್ಯರೂ ಜಲದಲ್ಲಿ ತಮ್ಮನ್ನು ತಾವೇ ನೋಡಿಕೊಂಡರು.

ಆಗ 'ನೀವೇನು ನೋಡುತ್ತ ಇರುವಿರಿ' ಎಂದು ಪ್ರಜಾಪತಿಯು ಕೇಳಲು ಶಿಷ್ಯದ್ವಯರು ಕೊಟ್ಟ ಉತ್ತರವು ಹೀಗೆ,—'ನಾವು ಜಲದಲ್ಲಿ ನಮ್ಮ ಪ್ರತಿಬಿಂಬವನ್ನು ಸರಿಯಾಗಿ ಕಾಲಿನಿಂದ ತಲೆಯ ವರೆಗೆ ನೋಡುತ್ತೇವೆ.' ಆಗ ಗುರುವು—ಶಿಷ್ಯರೇ, ಸುಂದರವಾದ ವಸ್ತ್ರಾಭರಣಗಳನ್ನು ತೊಟ್ಟು ಜಲದಲ್ಲಿ ನಿಮ್ಮನ್ನು ನೀವು ನೋಡಿರಿ' ಎಂದನು. ಶಿಷ್ಯರು ಅದೇ ರೀತಿ ವರ್ತಿಸಿದರು. ಮತ್ತು ತಾವು ಇರುವಂತೆಯೇ ತಮ್ಮ ಪ್ರತಿಬಿಂಬವು ಜಲದಲ್ಲಿ ತೋರುತ್ತಿದೆ ಎಂದರು. — ಹಾಗಾದರೆ ಅದೇ ಆತ್ಮನು. ಆತನಿಗೆ ಮರಣವಿಲ್ಲ. ಆತನೇ ಬ್ರಹ್ಮನು. ಎಂಬುದಾಗಿ ಪ್ರಜಾಪತಿಯು ನೆಟ್ಟಗೆ ತಿಳಿಸಿದನು. ಮಾನಸಿಕ ಶಾಂತಿಹೊಂದಿ ಇಬ್ಬರೂ ಅಲ್ಲಿಂದ ಹೊರಡಲು ಅನುವಾದರು.

ಒಡನೆಯೆ ವಿರೋಚನನು ಅಲ್ಲಿಂದ ಹೊರಟು ಅಸುರರಿದ್ದಲ್ಲಿ ಬಂದು ಆದ ವಿಷಯಗಳನ್ನು ಹೇಳಿ ಜಗತ್ತಿನಲ್ಲಿ ಜನ್ಮವೆತ್ತಿದವರು ತಮ್ಮ ಬಾಹ್ಯ ಸುಖಗಳನ್ನು ಮೇಲ್ಮೆಗೆ ತರಬೇಕೆಂದೂ, ತಂತಮ್ಮ ಪ್ರತಿಬಿಂಬಗಳೇ ಆತ್ಮನೆಂದೂ, ಇಂತಹ ಬಲದಿಂದ ಮೂರು ಜಗಗಳನ್ನು ವ್ಯಾಪಿಸಬಹುದೆಂದು ಸೂಚಿಸಿದನು. ಈ ಸೂಚನೆಯಿಂದ ಕಾಲಕ್ರಮೇಣ ಅಸುರ ವರ್ಗವು ನಾಶಹೊಂದಲಾರಂಭಿಸಿತು. ಇದು ಪ್ರಜಾಪತಿಗೆ ಮೊದಲೇ ತಿಳಿದಿತ್ತು.

ದೇವೇಂದ್ರನು ಮಾತ್ರ ಹೊರಟವನು ಸ್ವಲ್ಪ ದಾರಿ ಸಾರಿದೊಡನೆ ಬಾಹ್ಯ ಶರೀರದ ಪ್ರತಿಬಿಂಬವು ಎಂದೂ ಆತ್ಮವಾಗದು ಪ್ರಜಾಪತಿಯು ಮಾತುಗಳು ನಿಜವಾದರೆ ಬಾಹ್ಯ ಶರೀರಕ್ಕೆ ಸಾವು ಇರುವಂತೆ ಆತ್ಮಕ್ಕೂ ಸಾವು ಇರಲೇಬೇಕು. ಆದರೆ ಆತ್ಮಕ್ಕೆ ಮರಣವಿಲ್ಲವೆಂದು ಮುಂದಾಗಿಯೇ ಪ್ರಜಾಪತಿಯು ಬೋಧಿಸಿರುವನು. ಅದು ಕಾರಣ, ಸಂಶಯ ಭರಿತನಾಗಿ ಪುನಃ ಪ್ರಜಾಪತಿಯಿದ್ದಲ್ಲಿ ಹೋಗಿ ತನ್ನ ಸಂಶಯವನ್ನು ತಿಳಿಸಿದನು. ೩೨ ವರ್ಷಗಳ ತನಕ ಪುನಃ ಆತನಲ್ಲಿ ಶಿಷ್ಯತ್ವವನ್ನು ಪಡೆದು ಅಲ್ಲಿಯೇ ಉಳಿದನು. ಆಗ ಪ್ರಜಾಪತಿಯು “ಸ್ವಪ್ನಾವಸ್ಥೆಯಲ್ಲಿ ಸುಖಿಯಾಗಿ ಬಾಳುವವನು, ಯಾರೋ ಆತನೇ ಆತ್ಮನು” ಎಂದನು. ಸಂತೋಷಚಿತ್ತದಿಂದ ಸುರಪತಿಯು ಅಲ್ಲಿಂದ ಹೊರಟನು. ಸ್ವಪ್ನಾವಸ್ಥೆಯಲ್ಲಿ ಮಾನವನು ಕಣ್ಣುರುಡನಾಗಬಹುದು, ಅಂಗ ಹೀನನಾಗಬಹುದು, ಕಾಲು ಕುಂಟನಾಗಬಹುದು. ಸ್ವಪ್ನ ಬಿಟ್ಟು ಎದ್ದಾಗ ಮಾನವನು ಪೂರ್ವಾವಸ್ಥೆಯಲ್ಲಿಯೇ ತೋರುವನು. ಈ ಚಿಂತನದಿಂದ ಪುನಃ ಸಂಶಯಗೊಂಡು ದೇವೇಂದ್ರನು ಪುನರೊಮ್ಮೆ ಪ್ರಜಾಪತಿಯ ಬಳಿ ಬಂದು ತನ್ನ ಸಂದೇಹವನ್ನು ನಿರೂಪಿಸಿದನು. ಇನ್ನು ೩೨ ವರ್ಷಗಳ ಕಾಲ ತನ್ನಲ್ಲಿ ಶಿಷ್ಯನಾಗಿ ಉಳಿದರೆ ಅನಂತರ ಯುಕ್ತವಾದ ಉತ್ತರವನ್ನು ಕೊಡಬಹುದೆಂದು ಪ್ರಜಾಪತಿಯು ಹೇಳಿದಾಗ ಸುರಪತಿಯು ಮೂರನೆಯಬಾರಿ ಅಲ್ಲಿಯೇ ಉಳಿದನು. ಹೀಗೆ ಒಟ್ಟಿಗೆ ೯೬ ವರ್ಷಗಳ ಸಾಧನವು ಮುಗಿದಾಗ ಶಿಷ್ಯನನ್ನು ಬಳಿ ಕರೆದು — ಯಾವಾತನಿಗೆ ನಿದ್ರೆಯು ಭಂಗವಾಗದೆ, ನಿದ್ರೆಯಲ್ಲಿ ಸ್ವಪ್ನಗಳು ಬಾರದೆ ಶಾಂತಿಯು ಸಿಗುವದೋ ಆತನೇ ಆತ್ಮನು ಆತನೇ ಬ್ರಹ್ಮನು ಎಂದನು. ಆ ಬ್ರಹ್ಮನಿಗೆ ಭಯವೂ ಇಲ್ಲ, ಮರಣವೂ ಇಲ್ಲ—ಎಂದನು. ಇಂದ್ರನು ಅಲ್ಲಿಂದ ಹೊರಟನು. ಶರೀರವು ಕಾಲಗತಿಯಿಂದ ಕುಗ್ಗಿ ನಾಶವಾದಾಗ ಪ್ರಜಾಪತಿಯು ವಿವರಮಾಡಿ ಹೇಳಿದ ಆತ್ಮನು ಉಳಿವ ಬಗೆ ಹೇಗೆ ಎಂದು ಇನ್ನೊಮ್ಮೆ ಸಂಶಯಪಟ್ಟು, ಗುರುವಿದ್ದಲ್ಲಿ ಹೋದಾಗ, ಗುರುವು ಆತನಿಗೆ ಇನ್ನೂ ೫ ವರ್ಷಗಳ ಹೆಚ್ಚಿನ ಶಿಷ್ಯತ್ವಕ್ಕೆ ಅನುಜ್ಞೆಯಿತ್ತನು. ಬಹಳ ಸಹನೆಯಿಂದ ಸುರಪತಿಯು ಪ್ರಜಾಪತಿಯ ಸೇವೆಯನ್ನು ಶ್ರದ್ಧೆಯಿಂದ ಮಾಡಿ ಮುಗಿಸಿದಾಗ ಆತನ ಹಠ ಯೋಗವು ೧೦೧ ವರ್ಷಗಳ ತನಕ ಸರಿಯಾಗಿ ಸಾಗಿದಂತಾಯಿತು. ಇಷ್ಟು ವರುಷಗಳ ಕಾಲದಲ್ಲೂ ದೇವೇಂದ್ರನು ತನ್ನ ಗುರುವಿನ ಯಾವ ಬೋಧನೆಯನ್ನೂ ಮೀರಿ ಹೋಗದೆ ಆತನಲ್ಲಿ ವಿಧೇಯನಾಗಿದ್ದನು ಬ್ರಹ್ಮಚರ್ಯದ ಶಕ್ತಿಯನ್ನೂ ಸಂಪಾದಿಸಿಕೊಂಡಿದ್ದನು. ಕೊನೆಗೆ ಪ್ರಜಾಪತಿಯು ಶಿಷ್ಯನನ್ನು ಹತ್ತಿರ ಕರೆದು—“ಪ್ರಿಯನೇ—ಈ ಶರೀರವು ನಶ್ವರವಾದುದು. ಒಂದಲ್ಲ ಒಂದು ದಿನ ಅದು ಮರಣವನ್ನು ಅಪ್ಪುವುದು. ಆದರೆ ಮರಣವಿಲ್ಲದ ನಿರ್ಭಯನಾದ ಆತ್ಮಕ್ಕೆ ಈ ನಶ್ವರ ದೇಹವೇ ಆಧಾರ ಎಂದರೆ ತಳಹದಿಯು. ಆತನು, ಶರೀರವನ್ನು ಸೇರಿಕೊಂಡಾಗ ಸುಖ ದುಃಖಗಳ ಭಾವಗಳು ಆತನನ್ನು ಆವರಿಸುವವು. ಒಮ್ಮೆ ಈ ತರದ ಆವರಣವಾದಾಗ ಸುಖ ದುಃಖಗಳ ಬಂಧನದಿಂದ ಪ್ರತ್ಯೇಕವಾದ ಮುಕ್ತಿಯಿಲ್ಲ. ವಾಯುವಿಗೆ ಶರೀರವಿಲ್ಲ. ಅಂತೆಯೇ ವರುಣನಿಗೆ, ಅಗ್ನಿಗೆ ಮತ್ತು ಶಬ್ದಕ್ಕೂ ಶರೀರವಿಲ್ಲ. ಆದರೆ ಇವೆಲ್ಲ ಆಕಾಶದ ವಾತಾವರಣವನ್ನು ಏರಿ, ಅತೀ ಎತ್ತರವಾದ ಮತ್ತು ಉನ್ನತವಾದ ಸ್ಥಾನದಲ್ಲಿ ಪ್ರಕಾಶಮಯವಾದಾಗ, ಅವು ತಂತಮ್ಮ ಭಿನ್ನ ಭಿನ್ನ ರೂಪವನ್ನೆ ಪಡೆದು ಮೂಜಗವನ್ನು ಆವರಿಸಿ, ಆಳುವಂತೆ ಈ ನಿರಭ್ರ ಶಾಂತ ಸ್ಥಿರ ಆತ್ಮನು ನಶ್ವರ ಶರೀರಗಳನ್ನು ತೊರೆದು ಅತ್ಯುನ್ನತ ರೀತಿಯಲ್ಲಿ ಪ್ರಕಾಶಿಸುವಾಗ ಆತನಿಗೆ ಪ್ರತ್ಯೇಕವಾದ ರೂಪವು ಪರಿಣಮಿಸುವದು. ಆ ಸ್ವರೂಪಿಯೇ ಆತ್ಮನು—ಬ್ರಹ್ಮನು—ಚಿರಂಜೀವಿಯು. ಆ ಚಿರಂಜೀವಿ ಆತ್ಮನೇ ಪರಮ ಶ್ರೇಷ್ಠಪುರುಷನು. ಆ ಪುರುಷನನ್ನೇ ಛಾಂದೋಗ್ಯ ಉಪನಿಷತ್ತು ಉತ್ತಮ ಪುರುಷ ಅಥವಾ ಪುರುಷೋತ್ತಮನೆಂದು ವರ್ಣಿಸಿಯದೆ ಎಂದಾಗ ಸುರಪತಿಯು ಆತ್ಮಜ್ಞಾನ ಪಡೆದು ಬಹುಶಾಂತನಾಗಿ ಸಂಶಯಗಳನ್ನೆಲ್ಲಾ ಬಿಟ್ಟು ಸುರಲೋಕವನ್ನೇರಿದನು.

— ಎಂ. ಬಿ. ಶಂಕರ ರಾವ್

## ನಗು ಮಾತ್ರ ಸಾಕೆನಗೆ

— ೧ —

ಎಲ್ಲಿ ನೋಡಿದರಲ್ಲಿ ಕಾಣುವುದು
ನಿನ್ನೊಲುಮೆ
ಆ ನಗೆಯ, ಆ ನಗುವ ತುಂಬು ಚೆಲುವು!
ಕಣ್ಣು ಕೋರೈಸಿರುವ ಆ ದಿವ್ಯ
ರೂಪವದು
ಮನದ ಮಂದಿರದಲ್ಲಿ ನೆಲೆ ನಿಂತಿದೆ.

— ೨ —

ಸುಯ್ಯಿಂಗುಡುವ ಸುಳಿಗಾಳಿ ಎಲ್ಲೆಲ್ಲು
ಸುಳಿಯುತಿರೆ,
ಮನವು ಪುಳಕಿತವಾಗಿ ಬರ
ನೋಡುವುದು,
ತೆಂಗುಗಳ ತೂಗುವಿಕೆ, ಬಾಳೆಗಳ
ಬಾಗುವಿಕೆ,
ಕರೆಯೋಲೆಯೋ ಎನಗೆ ಎಂದು
ತಿಳಿಯೆ.

— ೩ —

ತುಂಬಿಗಳ ಝೇಂಕಾರ, ಮಧು ಕುಡಿವ
ಆಕಾರ,
ನೋಡಿ ವನ ಸುಳಿ ಸುಳಿದು ನಿನ್ನ ಬಳಿ
ಬಹುದು.
ಹುಣ್ಣಿಮೆಯ ರಾತ್ರಿಯಲಿ ತುಂಬು
ಚಂದಿರ ಇರಲು,
ವನ ಮುದುಡಿ ಕಾಣುವುದು ಆ 'ಭೂತ'
ಕನಸು.

— ೪ —

ಮಿಣುಕುತಿರೆ ತಾರೆಗಳು ಕಣ್ಮುಂದೆ
ಆಗಸದಿ,
ದಂತ ಪಂಕ್ತಿಯು ಹೊಳೆವ ನೆನಪು
ಕೊಡುತಿಹುದು.
ಗತಿಸಿರುವ ಘಟನೆಯನು ಮರೆಯಿಸಲು
ಯತ್ನಿಸುವೆ,
ಆದರದು ಹಾ! ವಿಧಿಯೆ ಮರುಕೊಳಿ
ಸುತಿಹುದು.

— ೫ —

ತುಂಬು ಬಾನಲಿ ಚಂದ್ರ ಬೆಳಗುತಿಹ
ತೆರನಂತೆ
ನಿನ್ನ ಹಣೆಯಲಿ ಹೊಳೆವ ತಿಲಕ ಮರೆಯೆ.
ಎಂದೆಂದೂ ನಗುತಾ ಇರು ಅದೆ ಎನಗೆ
ಚಿರಸ್ಫೂರ್ತಿ
ನಿನ್ನ ನಗೆಯೇ ಎನ್ನ ಬಾಳದೀಪ

“ಗಿರಿಬಾಲ”, ಮುಂಬಾಯಿ.


**INDIAN COMPANIES ACT 1956**

**In the matter of Homes & Estates Private Ltd Udipi**

At an Extra Ordinary General Body Meeting of the shareholders held at the Registered Office of the Company, on 18-5-1963 at 9 A. M. the following Special Resolutions were passed.

SPECIAL RESOLUTIONS

1. Resolved that the Company be wound up Voluntarily as Members Voluntary Liquidation in view of the fact that there is no scope for further increasing the business.
2. Resolved that Sri M. Gopalkrishna Bhat son of M. Dasa Bhat, residing near Modern Garage, Udipi be and is hereby appointed as the Liquidator of the Company on a remuneration of Rs. 500/- five hundred only for winding up the affairs of the Company speedily. He is authorised to exercise all or any powers given by clause (I) to (IV) of Sub section 2 of Sec. 450 of Companies Act 1956.

M. R. Karnad
*Director.*

## ಯಾವ ಬಣಕ್ಕೂ ಸೇರದ

# ಭಾರತೀಯ ನೀತಿಯ ಮಹತ್ವ

ಯಾವುದೇ ಬಣಕ್ಕೆ ಸೇರಬಾರದೆಂಬ ನಮ್ಮ ನೀತಿಯು ಭಾರತದ ಪ್ರಾಚೀನ ಪರಂಪರೆ, ಹಾಗೂ ಇತಿಹಾಸಕ್ಕೆ ಎಲ್ಲ ವಿಧದಲ್ಲಿಯೂ ಅನುಗುಣವಾಗಿದೆ. ಗಂಭೀರವಾದ ಸಮಸ್ಯೆಗಳು ಯಾವುದೇ ಬಣಕ್ಕೆ ಸೇರದ ವಿಚಾರವನ್ನು ಇನ್ನೂ ಹೆಚ್ಚು ಪುಷ್ಟೀಕರಿಸಿವೆ.

ಪ್ರಧಾನ ಮಂತ್ರಿ ಶ್ರೀ ನೆಹರೂ ಅವರು ೧೯೪೬ರಲ್ಲಿ ಭಾರತದ ಕಾಮನ್‌ವೆಲ್ಥ ಸಂಬಂಧಗಳ ಹಾಗೂ ವಿದೇಶಾಂಗ ವ್ಯವಹಾರ ವಿಭಾಗದ ಸದಸ್ಯರಾಗಿದ್ದಾಗ, ಭಾರತವು ಮುಂದೆ ಅನುಸರಿಸಬಹುದಾದ ನೀತಿಯನ್ನು ಕುರಿತು ಪ್ರಸ್ತಾಪಿಸುತ್ತ "ಭಾರತವು ಯಾವುದೇ ಬಣವನ್ನೂ ಸೇರುವುದಿಲ್ಲ. ಶಕ್ತಿ ಬಣಗಳಿಂದಾಗಿಯೇ ಈ ಹಿಂದೆ ವಿಶ್ವಸಮರಗಳು ನಡೆದಿವೆ. ಭವಿಷ್ಯದಲ್ಲಿಯೂ ಅವು ಬೃಹತ್ ಪ್ರಮಾಣದ ವಿನಾಶವನ್ನುಂಟು ಮಾಡಬಲ್ಲವು" ಎಂದೂ ಹೇಳಿದರು.

ಭಾರತದ ತತ್ವಶಾಸ್ತ್ರವು ಶತಮಾನಗಳಿಂದಲೂ ವಿಶ್ವ ಬಂಧುತ್ವದ ಅಮರ ಸಂದೇಶ ನೀಡುತ್ತ ಬಂದಿದೆ. ಉಪನಿಷತ್ತುಗಳು ಮನುಷ್ಯ-ಮನುಷ್ಯರ ನಡುವೆ ಐಕಮತ್ಯದ ಅಗತ್ಯವನ್ನು ಒತ್ತಿ ಹೇಳಿವೆ. ಭಗವದ್ಗೀತೆಯು ಜನ ಸೇವೆಯೇ ಜನಾರ್ದನ ಸೇವೆಯೆಂದೂ, ಆತ್ಮನನ್ನು ಮರೆತು ವಿಶ್ವಾತ್ಮನಲ್ಲಿ ಲೀನವಾಗಬೇಕೆಂದೂ ಬೋಧಿಸಿದೆ.

ಭಗವಾನ್ ಬುದ್ಧನು ಸಹಸ್ರಾರು ವರ್ಷಗಳ ಹಿಂದೆ ಉಪದೇಶಿಸಿದ ಪಂಚಶೀಲಗಳ ಬುನಾದಿಯ ಮೇಲೆ, ಬಾಂಡುಂಗ್ ಪರಿಷತ್ತಿನಲ್ಲಿ ಶಾಂತಿಯುತ ಸಹಜೀವನವನ್ನು ಬೋಧಿಸುವ ಹೊಸ ಪಂಚಶೀಲ ತತ್ವಗಳು ರೂಪುಗೊಂಡಿವೆ.

ಪ್ರಾಚೀನ ಆಧ್ಯಾತ್ಮಿಕ ಮೌಲ್ಯಗಳನ್ನು ಕುರಿತು ಗಾಂಧೀಜಿ ಅವರು ನೀಡಿದ ವ್ಯಾಖ್ಯೆಯು, ಭಾರತದ ರಾಜಕೀಯ ಜೀವನಕ್ಕೆ ಸತ್ಯ, ಅಹಿಂಸೆಗಳೆಂಬ ಎರಡು ಮಹಾ ಮಂತ್ರಗಳನ್ನು ಒದಗಿಸಿದೆ. ನೈತಿಕ ಧ್ಯೇಯಗಳೇ ಈ ಮಂತ್ರಗಳ ಒಳತಿರುಳು.

### ಕ್ರಿಯಾಶೀಲ ನೀತಿ

ಸಂಪ್ರದಾಯ ಮತ್ತು ರಾಜನೈತಿಕ ವಿಚಾರಗಳು ಪರಸ್ಪರ ಸಂಬಂಧಪಟ್ಟಿವೆ. ಪ್ರಧಾನ ಮಂತ್ರಿ ಶ್ರೀ ನೆಹರೂ ಅವರು ಈ ವಿಷಯವಾಗಿ ಪ್ರಸ್ತಾಪಿಸುತ್ತ, "ಯಾವುದೇ ಬಣಕ್ಕೆ ಸೇರದ ನೀತಿಯು, ನಮ್ಮ ಪ್ರಸ್ತುತ ಪರಿಸ್ಥಿತಿ, ಗತಕಾಲದ ಇತಿಹಾಸ, ವಿಚಾರಧಾರೆ, ಸ್ವಾತಂತ್ರ್ಯ ಆಂದೋಲನದ ಆದರ್ಶಗಳು, ಹಾಗೂ ವಿಶ್ವದ ಈಗಿನ ಪರಿಸ್ಥಿತಿಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ."ಯೆಂದೂ ಹೇಳಿದರು. "ಪ್ರಧಾನ ಮಂತ್ರಿಗಳು ಹೇಳಿದ 'ವಿಶ್ವ ಸ್ಥಿತಿ' ಶಬ್ದವು ಮಹತ್ವದ್ದಾಗಿದೆ.

ಅಂತಾರಾಷ್ಟ್ರೀಯ ಬಣಗಳನ್ನು ಸೇರಿದ ರಾಷ್ಟ್ರವು ಖಂಡಿತವಾಗಿಯೂ ದೊಡ್ಡ ರಾಷ್ಟ್ರಗಳನ್ನು ಹಿಂಬಾಲಿಸಬೇಕಾಗುವುದು. ಪರಿಣಾಮವಾಗಿ ಹಿಂಬಾಲಕ ರಾಷ್ಟ್ರಗಳು—ಬೃಹತ್ ರಾಷ್ಟ್ರಗಳು ಅನುಸರಿಸುತ್ತಿರುವ ಮಾರ್ಗವನ್ನೇ—ತನಗೆ ಅಹಿತಕರವಾದರೂ — ಅನುಸರಿಸಬೇಕಾಗುವುದು. ಚಿಕ್ಕ ಪುಟ್ಟ ರಾಷ್ಟ್ರಗಳು ಅದರಲ್ಲಿಯೂ ವಿಶೇಷವಾಗಿ ದೀರ್ಘಾವಧಿ ಹೋರಾಟದ ನಂತರ ಸ್ವತಂತ್ರವಾದ ರಾಷ್ಟ್ರಗಳು ಮತ್ತೆ ಬೃಹತ್ ರಾಷ್ಟ್ರಗಳ ಅನುಯಾಯಿಗಳಾಗಬೇಕಾಗುವುದು. ಇದರಿಂದ ಆಂತರಿಕ ಮತ್ತು ವಿದೇಶ ನೀತಿಗಳ ವಿಷಯದಲ್ಲಿಯೂ ಅವು ಹೇಳಿದುದನ್ನು ಚಾಚೂ ತಪ್ಪದಂತೆ ಅನುಸರಿಸಬೇಕಾಗುವುದು.

ಯಾವುದೇ ಬಣಕ್ಕೆ ಸೇರಬಾರದೆಂಬ ನಮ್ಮ ನೀತಿಯು ಕ್ರಿಯಾಶೀಲ ಉದ್ದೇಶದ ಕ್ರಿಯಾಶೀಲ ಸಾಧನ. ಯಾವುದೇ ಮಿಲಿಟರಿ ಒಪ್ಪಂದ ಕೂಟಗಳನ್ನು ಸೇರದೆ, ಶಕ್ತಿ ಬಣಗಳ ರಾಜಕೀಯದಿಂದ ದೂರ ಉಳಿಯುವುದು, ವಿಚಾರ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಯಂತಹ ಮಹಾನ್ ತತ್ವಗಳಿಂದ ಕೂಡಿದ, ಯಾವುದೇ ಬಣಕ್ಕೆ ಸೇರದ ನೀತಿಯು ಅರ್ಥಪೂರ್ಣವಾದುದು.

ಯಾವುದೇ ಬಣಕ್ಕೆ ಸೇರದೇ ಇರುವ ರಾಷ್ಟ್ರವು ನಿಸ್ಸಂದೇಹವಾಗಿಯೂ ವಿದೇಶೀ ಪ್ರಭಾವದಿಂದ ಮುಕ್ತವಾಗಿರುತ್ತದೆ. ಅದು ತನ್ನ ಒಳಿತು-ಕೆಡುಕುಗಳ ಬಗ್ಗೆ ಸ್ವತಂತ್ರವಾಗಿ ಆಲೋಚಿಸಬಲ್ಲದು. ಇದಕ್ಕೆ ಬದಲಾಗಿ ಶಕ್ತಿಬಣಗಳಲ್ಲಿ ಸೇರ್ಪಡೆಯೊಂದಿದರೆ ಅದು ಪರಾಧೀನವಾಗಿ ಸ್ವತಂತ್ರ ವಿವೇಚನೆಯನ್ನು ಕಳೆದುಕೊಳ್ಳುತ್ತದೆ.

ಯಾವುದೇ ಬಣಕ್ಕೆ ಸೇರದ ನೀತಿಯು ಸ್ವತಂತ್ರ ದೃಷ್ಟಿಕೋನ, ಆತ್ಮಗೌರವ ನೀಡುತ್ತದೆ. ಅಷ್ಟೇ ಅಲ್ಲ ನಮ್ಮನ್ನು ಶೀತಲ ಯುದ್ಧದ ಬಣಗಳಿಂದ ದೂರವಿರಿಸುತ್ತದೆ. ಅದು ರಾಷ್ಟ್ರದ ಪ್ರಜೆಗಳಿಗೆ ತಮ್ಮದೇ ಆದ ಜೀವನ ವಿಧಾನ, ಮತ್ತು ಮೌಲ್ಯಗಳನ್ನು ಕಾಯ್ದುಕೊಳ್ಳಲು ಸ್ವಾತಂತ್ರ್ಯ ನೀಡುತ್ತದೆ. ವಿಶ್ವದಲ್ಲಿ ಯಾವುದೇ ಬಣಕ್ಕೆ ಸೇರದ ರಾಷ್ಟ್ರವಾದ ಭಾರತದ ಸ್ಥಾನವು ಮಹತ್ವಪೂರ್ಣವಾಗಿದೆ.

ಒಪ್ಪಂದ ಕೂಟಗಳ ಸಿದ್ಧಾಂತದ ಅಸ್ತಿತ್ವವನ್ನು ನಿರಾಕರಿಸಿ, ಮಿಲಿಟರಿ ಬಣ ಸೇರದ ದೇಶವು ಶಾಂತಿಯ ಮೂಲಗಳೆಂದೂ ಭಾರತವು ಭಾವಿಸಿದೆ. ಶಾಂತಿಯನ್ನು ಕಾಯ್ದುಕೊಳ್ಳುವುದು ಮತ್ತು ಸಂಘರ್ಷಣೆಗಳನ್ನು ತಪ್ಪಿಸುವುದೇ ಭಾರತವು ಅನುಸರಿಸುತ್ತಿರುವ ನೀತಿಯ ಮುಖ್ಯಾಂಶವಾಗಿದೆ ರಾಷ್ಟ್ರದ ಉತ್ಸಾಹವನ್ನು ಮತ್ತು ಸ್ವಾತಂತ್ರ್ಯವ ಅನಿರ್ಬಂಧವಾಗಿ ಕಾಯ್ದುಕೊಂಡು ಹೋಗಲು ಇದು ನೆರವಾಗುತ್ತದೆ.

ಭಾರತವು ಇತ್ತೀಚಿನ ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಅಭಿವೃದ್ಧಿಗೆ ಅದು ಅನುಸರಿಸುತ್ತ ಬಂದಿರುವ ಯಾವುದೇ ಬಣಕ್ಕೆ ಸೇರದ ನೀತಿಯೆ ಕಾರಣವಾಗಿದೆ. ಇದರಿಂದಾಗಿ ಯಾವುದೇ ನಿರ್ಬಂಧಗಳಿಲ್ಲದೇ ಎರಡೂ ಬಣಗಳಿಗೆ ಸೇರಿದ ರಾಷ್ಟ್ರಗಳಿಂದ ನೆರವು ಪಡೆಯಲು ಸಾಧ್ಯವಾಗಿದೆ.

### ಉಭಯ ಬಣಗಳ ಬೆಂಬಲ

ಪ್ರತಿಯೊಂದು ರಾಷ್ಟ್ರಕ್ಕೂ ಸ್ವಾತಂತ್ರ್ಯದ ಹಕ್ಕಿನೊಂದಿಗೆ, ತನ್ನ ನೀತಿ ನಿರೂಪಣೆಯ, ಹಾಗೂ ಜೀವನ ವಿಧಾನ ನಿರ್ಣಯದ ಹಕ್ಕು ಇದೆಯೆಂದೂ ಭಾರತವು ದೃಢವಾಗಿ ನಂಬಿದೆ. ಚೀಣಾ ಭಾರತದ ಮೇಲೆ ಆಕ್ರಮಣ ಮಾಡಿದ ನಂತರ ಯಾವುದೇ ಬಣಕ್ಕೆ ಸೇರದ ಭಾರತದ ನೀತಿಯು ಪ್ರಶಂಸೆಗೆ ಪಾತ್ರವಾಗಿದೆ.

ರಷ್ಯದ ಪ್ರಧಾನ ಮಂತ್ರಿ ನಿಕಿಟಾ ಕ್ರುಶ್ಚೇವರು ೧೯೬೨ ಡಿಸೆಂಬರ ತಿಂಗಳಲ್ಲಿ ಅಂದರೆ ಚೀಣೀಯರು ಭಾರತದ ಮೇಲೆ ದಾಳಿ ಮಾಡಿದ ಏಳು ವಾರಗಳ ಬಳಿಕ, ಸುಪ್ರೀಂ ಸೋವಿಯಟಿನಲ್ಲಿ ಮಾತನಾಡುತ್ತಾ ಯಾವುದೇ ಬಣಕ್ಕೆ ಸೇರದ ನೀತಿಯನ್ನು ಕುರಿತು ವಿವರಿಸಿದರು. ಅವರು ತಮ್ಮ ಭಾಷಣದಲ್ಲಿ "ಯಾವುದೇ ಮಿಲಿಟರಿ ಒಪ್ಪಂದ ಕೂಟಗಳನ್ನು ಸೇರದಿರುವುದು ಮತ್ತು ವಿಶ್ವದ ಎರಡು ಬಣಗಳ ನಡುವೆ ಸಂಘರ್ಷಣೆಯು ಅನಿವಾರ್ಯವೆಂಬ ವಾದವನ್ನು ನಿರಾಕರಿಸುವುದು ಯಾವುದೇ ಬಣಕ್ಕೆ ಸೇರದ ನೀತಿಯ ತಿರುಳು ಎಂದು ಹೇಳಿದರು.

ಇದು ವಿಶ್ವದಲ್ಲಿಯ ಒಂದು ಬಣದ ಅಭಿಪ್ರಾಯವಾಯಿತು. ಇನ್ನೊಂದು ಬಣದ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳೋಣ. ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಗಾಲ್‌ಬ್ರೆಥ್ ಅವರು ೧೯೬೨ ನವಂಬರ ೭ರಂದು ನವದೆಹಲಿಯಲ್ಲಿ ಮಾತನಾಡುತ್ತ "ಭಾರತಕ್ಕೆ ಅಮೇರಿಕವು ನೀಡುತ್ತಿರುವ ಮಿಲಿಟರಿ ನೆರವಿನ ಉದ್ದೇಶ, ಭಾರತವನ್ನು ಮಿಲಿಟರಿ ಒಪ್ಪಂದ ಕೂಟಗಳಿಗೆ ಸೇರಿಸಿಕೊಳ್ಳುವುದಾಗಲಿ ಅಥವಾ ಯಾವುದೇ ಬಣಕ್ಕೆ ಸೇರದ ನೀತಿಯ ಮೇಲೆ ಪ್ರಭಾವ ಬೀರುವುದಾಗಲೀ ಅಗಿಲ್ಲ. ಭಾರತವು ಅನುಸರಿಸುತ್ತಿರುವ ನೀತಿಯು ಅದಕ್ಕೆ ಸಮ್ಮತವೆಂದು ನಾವು ಅನೇಕ ಸಲ ಸ್ಪಷ್ಟಪಡಿಸಿದ್ದೇವೆ" ಎಂದೂ ಹೇಳಿದರು.

ಭಾರತದ ಕೋಟಿ ಕೋಟಿ ಪ್ರಜೆಗಳನ್ನು ಪ್ರಜಾಪ್ರಭುತ್ವದ ಮಾರ್ಗದಲ್ಲಿ ಕೈಹಿಡಿದು ನಡೆಸುತ್ತಿರುವ ಪ್ರಧಾನ ಮಂತ್ರಿ ಶ್ರೀ ನೆಹರೂ ಅವರ ಸಾಧನೆಗಳನ್ನು ಕುರಿತು ಪ್ರಸ್ತಾಪಿಸುತ್ತ ಲಾರ್ಡ್ ಅಲ್ಟ್ರಿಂಚಾಮ್ ಅವರು "ಯಾವುದೇ ಬಣಕ್ಕೆ ಸೇರದ ನೀತಿಯನ್ನು ಅನುಸರಿಸುತ್ತಿದ್ದುದೇ ಭಾರತದ ಶ್ರೇಯಸ್ಸಿಗೆ ಕಾರಣ"ವೆಂದು ಅಭಿಪ್ರಾಯಪಟ್ಟಿದ್ದಾರೆ. ಅಮೇರಿಕದ ಅಧ್ಯಕ್ಷ ಕೆನೆಡಿ, ಬ್ರಿಟನ್ನಿನ ಪ್ರಧಾನ ಮಂತ್ರಿ ಮಿ. ಹೆರಾಲ್ಡ್ ಮ್ಯಾಕ್ಮಿಲನ್‌ರು ಭಾರತದ ನೀತಿಯನ್ನು ಗೌರವಿಸುವವರಾಗಿಯೂ ಯಾವುದೇ ಬಣಕ್ಕೆ ಸೇರದ ತತ್ವವನ್ನು ತಾಟಸ್ಥ್ಯವೆಂದು ತಪ್ಪು ಭಾವಿಸ ಕೂಡದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಭಾರತವು ವಿಶ್ವದಲ್ಲಿ ಯಾವುದಾದರೂ ಒಂದು ಬಣಕ್ಕೆ ಸೇರಿದ್ದರೆ ಚೀಣೀ ಆಕ್ರಮಣವು ಪ್ರಾದೇಶಿಕ ವಿವಾದವಾಗಿ ಉಳಿಯುತ್ತಿರಲಿಲ್ಲ. ಅದು ವಿಶ್ವ ಸಮರದ ರೂಪ ತಳೆಯುವ ಸಂಭವತೆಯೇ ಹೆಚ್ಚಿತ್ತು. ಭಾರತವು ಒಪ್ಪಂದ ಕೂಟಗಳಿಗೆ ಸೇರಿದ್ದರೆ, ಚೀಣಾದ ವಂಚನೆಯಿಂದ ಅದು ಪಾರಾಗಬಹುದಿತ್ತೆಂದು ನಂಬುವುದೂ ಹೇಡಿತನದ ಲಕ್ಷಣ. ಭಾರತದ ಮೇಲಿನ ಚೀಣೀ ಆಕ್ರಮಣ ಚೀಣಾದ ಸಾಮ್ರಾಜ್ಯ ದಾಹದ ಪ್ರತೀಕ. ಅದು ಭಾರತವನ್ನು ವಿಶ್ವದ ಇನ್ನಿತರ ರಾಷ್ಟ್ರಗಳಿಂದ ಬೇರ್ಪಡಿಸುವ ಚೀಣೀಯರ ಕುತಂತ್ರದ ಸ್ಪಷ್ಟ ನಿದರ್ಶನ.

### ಯಶಸ್ವೀ ನೀತಿ

ಚೀಣೀ ಆಕ್ರಮಣದಿಂದ ನಮ್ಮ ಯಾವುದೇ ಬಣಕ್ಕೆ ಸೇರದ ನೀತಿಯು ವಿಫಲವಾಗಿದೆಯೇ? ಇಲ್ಲ. ಸತ್ಯ ಅಷ್ಟೇ ಸ್ಪಷ್ಟವಾಗಿದೆ. ಭಾರತವು ಒಂದು ಬಣಕ್ಕೆ ಸೇರಿದ್ದರೆ ಅಪಾಯದ ಪ್ರಸಂಗಗಳಲ್ಲಿ ನೆರವಿಗಾಗಿ ಒಂದೇ ಒಂದು ಬಣದ ಮೇಲೆ ಅವಲಂಬಿಸಬೇಕಾಗುತ್ತಿತ್ತು.

ಯಾವುದೇ ಬಣಕ್ಕೆ ಸೇರದ ಭಾರತವು, ಪೀಕಿಂಗಿನ ಹೊಸ ಸಾಮ್ರಾಜ್ಯ ಶಾಹೀ ನೀತಿಯ ವಿರುದ್ಧ ಪ್ರಜಾಪ್ರಭುತ್ವವನ್ನು ರಕ್ಷಿಸಲು ನಡೆಸಿದ ಹೋರಾಟದಲ್ಲಿ, ಎರಡೂ ಬಣಗಳಿಗೆ ಸೇರಿದ ರಾಷ್ಟ್ರಗಳ ಸಹಾನುಭೂತಿ ಹಾಗೂ ನೆರವು ಪಡೆದಿವೆ.

ಅಂತಾರಾಷ್ಟ್ರೀಯ ಶಕ್ತಿ ಬಣಗಳ ಸೆಣಸಾಟ ನಡೆದಿರುವ ಈ ಅಣು ಯುಗದಲ್ಲಿ ಯಾವುದೇ ಬಣಕ್ಕೆ ಸೇರದ ನೀತಿಯು ಇತಿಹಾಸದ ಕವಲು ಹಾದಿಯಲ್ಲಿ—"ಬದುಕಿ ಉಳಿಯಲು ಈ ಮಾರ್ಗ ಅನುಸರಿಸಿರಿ." ಎಂದು—ದಾರಿ ತೋರಿಸುವ ಕೈಮರವಾಗಿದೆ.

—ಶ್ರೀ ವಿಷ್ಣು ಮಾ. ಸೂ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

**NAVAYUGA**
Kannada Weekly
UDIPI

*Founder:*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೨೩-೫-೧೯೬೩ | ೨೭ |


## ಸೌಹಾರ್ದ ಸಂಪುಟನೆ

ಭಾರತದ ರಾಷ್ಟ್ರಪತಿ ಡಾ! ಸರ್ವಪಳ್ಳಿ ರಾಧಾಕೃಷ್ಣನ್‌ರವರು ನೆರೆಯ ರಾಷ್ಟ್ರಗಳಾದ ಅಫಘಾನಿಸ್ತಾನ ಮತ್ತು ಇರಾಣಗಳಿಗೆ ಭೆಟ್ಟಿ ಕೊಟ್ಟು ಪರಸ್ಪರ ಸ್ನೇಹ ಸೌಹಾರ್ದ ವರ್ಧನೆಗೆ ಪುಷ್ಟಿಯಿತ್ತಿದ್ದಾರೆ. ಎರಡು ದೇಶಗಳಲ್ಲಿಯೂ ರಾಷ್ಟ್ರಪತಿಯವರು ಭವ್ಯ ಸ್ವಾಗತವನ್ನು ಪಡೆದರು. ಭಾರತದ ಮೇಲೆ ಒಂದೆಡೆ ಕೆಂಪು ಚೀನ ವಿದ್ರೋಹಪೂರಿತ ನಗ್ನ ಆಕ್ರಮಣವನ್ನು ಮಾಡಿ ಗಡಿತಂಟೆಯನ್ನು ಪರಿಹರಿಸಲು ಸಮರವನ್ನೇ ಕೈಕೊಳ್ಳುವ ದೆಸೆಯಲ್ಲಿ ಕಾರ್ಯನಿರತವಾಗಿರುವಾಗ, ಇನ್ನೊಂದೆಡೆ ಪಾಕಿಸ್ತಾನವು ಭಾರತ—ಚೀನಾ ವಿರಸದ ಲಾಭವೆತ್ತಲು ಹೊಂಚು ಹಾಕುತ್ತಿರುವಾಗ, ಭಾರತಕ್ಕೆ ನೆರೆಹೊರೆಯ ಇತರ ರಾಷ್ಟ್ರಗಳ ಸದ್ಭಾವನೆ ಮತ್ತು ಸದಿಚ್ಛೆಗಳು ಅತ್ಯವಶ್ಯವಿವೆ. ಆದುದರಿಂದ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವ ಭಾರತದ ರಾಷ್ಟ್ರಪತಿಗಳು ವಿದೇಶಗಳನ್ನು ಸಂಚರಿಸಿ, ಅವುಗಳ ಸಂಬಂಧವನ್ನು ದೃಢಗೊಳಿಸುವ ದಿಸೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಭಾರತದಲ್ಲಿ ಮೊದಲು ರಾಷ್ಟ್ರಪತಿಯಾಗಿ ಹತ್ತು ವರ್ಷ ಉನ್ನತ ಪದವಿಯಲ್ಲಿದ್ದ ಡಾ। ಬಾಬೂ ರಾಜೇಂದ್ರ ಪ್ರಸಾದರು ಸಂಚರಿಸಿದ ದೇಶಗಳು ಅತ್ಯಲ್ಪ. ಆರೋಗ್ಯವು ಅತ್ಯುತ್ತಮವಾಗಿರಲಿಲ್ಲವೆಂಬುದರಿಂದ ಅವರು ದೇಶದ ಒಳಗಾಗಲೀ ಹೊರಗಾಗಲೀ ಹೆಚ್ಚಿನ ಸಂಚಾರ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಹಲವಾರು ವಿದೇಶಗಳಿಂದ ಆಮಂತ್ರಣವು ಬಂದಿದ್ದರೂ ಅವುಗಳನ್ನು ಸ್ವೀಕರಿಸುವುದು ಅವರಿಗೆ ಅಸಾಧ್ಯವೆನಿಸಿತ್ತು. ಆದರೂ ನೆರೆಯ ಸಿಂಹಳ, ಬರ್ಮಾ, ಇಂಡೋನೇಶ್ಯಗಳನ್ನು ಅವರು ಸಂದರ್ಶಿಸಿದ್ದರು.

ಅಫಘಾನಿಸ್ತಾನವು ಭಾರತಕ್ಕಿಂತಲೂ ಪಾಕಿಸ್ತಾನಕ್ಕೆ ಹತ್ತಿರವಿರುವ ದೇಶ. ಆದರೆ, ಪ್ರಾಯಃ ಪಾಕಿಸ್ತಾನವು ಅದಗೊಡನೆಯೂ ಸ್ನೇಹದಿಂದ ವರ್ತಿಸುತ್ತಿರುವುದಿಲ್ಲ. ಒಂದು ಕಾಲದಲ್ಲಿ ಹಿಮಾಲಯ ಹಿಂದೂಕುಶ್ ಪರ್ವತ ಶ್ರೇಣಿಗಳನ್ನು ಮೀರಿ ಭಾರತದ ದಿವ್ಯ ಧ್ವಜ ಹಾರಾಡುತ್ತು, ಭಾರತೀಯ ಸಂಸ್ಕೃತಿ ಹರಡಿತ್ತು. ಆದರೆ, ಕಾಲಕ್ರಮದಲ್ಲಿ ಅಫಘಾನಿಸ್ತಾನವು ಇಸ್ಲಾಂ ಧರ್ಮವನ್ನು ಸ್ವೀಕರಿಸಿತು. ಮುಂದೆ ಭಾರತೀಯರಿಂದ ಪ್ರತ್ಯೇಕ ರಾಜ್ಯವಾಯಿತದು. ಬ್ರಿಟಿಷರು ಅದನ್ನಾಗೆದ್ದುಕೊಳ್ಳುವ ತಹತಹದಿಂದ ಅನೇಕ ಯುದ್ಧಗಳನ್ನು ತೊಡಗಿದರೂ ಸಾರ್ಥಕವಾಗಲಿಲ್ಲ; ಮುಂದೆ ಆ ಆಶೆಯನ್ನೇ ಬಿಟ್ಟುಬಿಟ್ಟರು. ಪ್ರಪಂಚದಲ್ಲಿ ರಾಜಸತ್ತೆಯು ಅಳಿದು ಪ್ರಜಾಸತ್ತೆಯತ್ತ ಜನದೊಲವು ಹರಿಯುತ್ತಿದೆಯಾದರೂ ಈ ಮಧ್ಯ ಪೂರ್ವದಲ್ಲಿಯೇ ಕೆಲವೊಂದು ಮುಸ್ಲಿಂ ರಾಜರಿದ್ದಾರೆ. ತಾಟಸ್ಥ್ಯ ನೀತಿಯಲ್ಲಿ ವಿಶ್ವಾಸವಿಟ್ಟು ಅದರಂತೆ ನಡೆಯುವ ರಾಷ್ಟ್ರ ಅಫಗಾನಿಸ್ತಾನ ಮತ್ತು ಎರಡು ರಾಷ್ಟ್ರಪರಿಷ್ಠರಾದರೂ ಇದನ್ನು ಮತ್ತಷ್ಟು ಸ್ಪಷ್ಟಪಡಿಸಿದ್ದಾರೆ. ಯಾವ ಶಕ್ತಿಬಣಕ್ಕೂ ಸೇರದೆ ಇರುವ ತಾಟಸ್ಥ್ಯ ನೀತಿಯು ಕಳೆಹದಿಯಲ್ಲಿ ಸಂ. ರಾ. ಸಂಘದ ತಾಮ್ರಪಟದಲ್ಲಿ, ಬಾಡುಂಗ ಮತ್ತು ಬೆಲ್ಗ್ರೇಡ್ ಸಮ್ಮೇಳನಗಳು ಸಾರಿದ ತತ್ವಗಳಲ್ಲಿ ವಿಶ್ವಾಸವಿಟ್ಟು ಮುಂದುವರಿಯುವ ನಿರ್ಧಾರವನ್ನು ಮತ್ತೊಮ್ಮೆ ಇವರು ಉದ್ಘೋಷಿಸಿದ್ದಾರೆ; ಮತ್ತು ಇದರಿಂದಲೇ ದೇಶ-ದೇಶಗಳ ಸಂಬಂಧವು ದೃಢವಾಗಿ ಜಾಗತಿಕ ಶಾಂತಿಗೆ ಕಾರಣವಾಗುವುದೆಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇತ್ತೀಚಿಗೆ ಗುಲಾಮತನದಿಂದ ಬಿಡುಗಡೆಹೊಂದಿದ ರಾಷ್ಟ್ರಗಳಿಗೆ ಸ್ವಾಗತವನ್ನು ಬಯಸಿ, ಸ್ವಾತಂತ್ರ್ಯಕ್ಕಾಗಿ ಇನ್ನೂ ಹೋರಾಡುವ ದೇಶಗಳಿಗೆ ಸಹಾನುಭೂತಿಯನ್ನು ಪ್ರಕಟಿಸಿದ್ದಾರೆ. ಶಸ್ತ್ರಾಸ್ತ್ರಗಳಲ್ಲಿ ತಮ್ಮ ಶಕ್ತಿಯನ್ನು ಹೆಚ್ಚಿಸಲು ನಡೆಯುತ್ತಿರುವ ಸ್ಪರ್ಧೆಯಿಂದಾಗಿಯೇ ಅಣ್ವಸ್ತ್ರ ಪರಿಶೀಲನೆಯ ಸಂಬಂಧದ ಒಡಂಬಡಿಕೆಯಾಗುವುದು ಅಥವಾ ನಿಶ್ಯಸ್ತ್ರೀಕರಣವು ಕಾರ್ಯಕೃತವಾಗುವುದು ಅಸಾಧ್ಯವಾಗಿದೆಯೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪರ್ಶಿಯಾ ಅಥವಾ ಇರಾಣವು ಭಾರತದ ಸಂಪರ್ಕವನ್ನು ಹಿಂದಿನಿಂದಲೂ ಪಡೆದಿದೆ. ಇವೆರಡರ ನಡುವಣ ಸಂಬಂಧವು ಪುರಾಣೇತಿಹಾಸಗಳಲ್ಲಿಯೂ ವ್ಯಕ್ತವಾಗುತ್ತದೆ. ವಿಸ್ತಾರವಾದ ಪರ್ಶಿಯದಲ್ಲಿ ಕೂಡ ಹಾರ್ದಿಕ ಸ್ವಾಗತ ಪಡೆದ ರಾಧಾಕೃಷ್ಣನ್ನರು ಅಲ್ಲಿನ ನಾಯಕರೊಡನೆಯೂ ಉಭಯ ದೇಶಗಳ ಸಂಬಂಧದ ಕುರಿತು ವಿಚಾರವಿನಿಮಯ ಮಾಡಿಕೊಂಡು, ಸಖ್ಯವನ್ನು ಬೆಳೆಸಿಕೊಂಡರು. ಈ ಎರಡೂ ದೇಶಗಳನ್ನು ವಿತ ಕಾಲದಲ್ಲಿ ಇಕ್ಕಡೆಯುವಂಗೂ ಅನ್ವಯವಾಗುವ ವಿಚಾರಗಳ ಬಗ್ಗೆಯೇ ಮಾತುಕತೆ ನಡೆದಿದ್ದರೂ ಚೀನಾದ ದುನ್ನೀತಿ ಮತ್ತು ಪಾಕ್ ಕುತಂತ್ರಗಳು ಸೂಚ್ಯವಾಗಿಯಾದರೂ ಪ್ರಸ್ತಾಪಿಸಲ್ಪಡದಿರದೆಂದು ಭಾವಿಸಬಹುದು. ಇಂದು ಭಾರತವು ಮೂರು ಮೂಲೆಗಳಲ್ಲಿಯೂ ಅನ್ಯಾಯಗಾರರ ಆಕ್ರಮಣಕ್ಕೆ ಗುರಿಯಾಗಿದೆ. ಈ ಆಕ್ರಮಣವನ್ನು ಎದುರಿಸಲು ನಾವು ಸರ್ವರೀತ್ಯಾ ಸಿದ್ಧತೆ ನಡೆಸುತ್ತಿದ್ದೇವೆ. ವಿದೇಶಗಳಿಂದಲೂ ಶಕ್ಯವಿರುವ ಸೈನಿಕ ಸಹಾಯವನ್ನು ಪಡೆಯುವ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ವಿದೇಶೀಯ ನೆರವು ಪ್ರತ್ಯಕ್ಷವಾಗಿಯೇ ನಮಗೆ ಎಲ್ಲ ದೇಶಗಳಿಂದಲೂ ದೊರೆಯಲಾರದು; ಆದರೆ, ಆಕ್ರಮಣಕಾರರ ವಿರುದ್ಧ ಜಾಗತಿಕ ಅಭಿಪ್ರಾಯವನ್ನು ಕ್ರೋಢೀಕರಿಸಿ, ಜಗತ್ತಿನ ಒಲವನ್ನು, ಅವರ ಸಹಾನುಭೂತಿಯನ್ನು ಪಡೆಯುವ ಪ್ರಯತ್ನವನ್ನು ನಾವು ನಡೆಸಬೇಕಾಗಿದೆ. ಈ ದಿಸೆಯಲ್ಲಿ ರಾಷ್ಟ್ರಪತಿ ಡಾ। ರಾಧಾಕೃಷ್ಣನ್‌ರ ವಿದೇಶ ಸಂಚಾರವು ಪರಿಣಾಮಕಾರಿ ಪ್ರಭಾವವನ್ನು ಬೀರಬಲ್ಲುದು. ಅವರು ಸದ್ಯದಲ್ಲಿಯೇ ಅಮೆರಿಕೆಯನ್ನೂ ಭೆಟ್ಟಿ ಮಾಡಲಿರುವರು. ಸಂರಕ್ಷಣಾ ಮತ್ತು ಆರ್ಥಿಕ ಸಂಯೋಜನಾ ಮಂತ್ರಿ ಟಿ. ಟಿ. ಕೆ.ಯವರು ಈಗಾಗಲೇ ಅಲ್ಲಿ ಸಂಚರಿಸಿ ಪಡೆಯಬಹುದಾದ ನೆರವಿನ ಕುರಿತು ಪರ್ಯಾಲೋಚಿಸುತಿದ್ದಾರೆ. ರಾಷ್ಟ್ರಪತಿಯವರು ಸರಕಾರದ ಪ್ರತಿನಿಧಿಯಾಗಿ ವಿಶೇಷ ಸಂಚಾರ ಕೈಗೊಳ್ಳುವುದಿಲ್ಲ, ಆದರೆ ೪೫ ಕೋಟಿ ಭಾರತೀಯರೆಲ್ಲರ ಹೃನ್ಮನಗಳ ಪ್ರತೀಕವಾಗಿ. ಆದುದರಿಂದ ಇಂತಹ ಸಂಚಾರಗಳಿಂದ ಯಾವ ರಾಜಕೀಯ ಕೃತ್ಯಂತರಗಳೂ ನಡೆಯಲಾರವು; ಹಾಗಿದ್ದರೂ ಉಭಯ ದೇಶಗಳ ನಡುವಣ ಸಂಪರ್ಕವು ದೃಢವಾಗುವುವು; ಸವಿಯಾಪವಾಗುವುವು.

## ನೀತಿ ಮತ್ತು ಉದ್ದೇಶ ಸಾಧನೆ

ಕೇಂದ್ರ ಸರಕಾರದಲ್ಲಿ ತನ್ನ ಮಂತ್ರಿಸ್ಥಾನವನ್ನು ಶಾಶ್ವತಗೊಳಿಸಿರುವ ಹಿಂದಿನ ರೇಲ್ವೆ ಮಂತ್ರಿಗಳೂ ಇಂದಿನ ಸಾರಿಗೆ ಸಂಪರ್ಕ ಮಂತ್ರಿಗಳೂ ಆಗಿರುವ ಜಗಜ್ಜೀವನ ರಾಮರು ಈಗ ತಮ್ಮ ಅಭಿಪ್ರಾಯವನ್ನು ಕೆಲವೇ ತಿಂಗಳುಗಳಲ್ಲಿ ಪರಿವರ್ತಿಸುವ ಮಟ್ಟಿಗೆ ಬಂದಿದ್ದಾರೆ. ಒಂದೊಮ್ಮೆ ಅವರು ಹರಿಜನರನ್ನುದ್ದೇಶಿಸಿ ಮಾತಾಡುತ್ತ, ಸರಕಾರವು ಅವರಿಗೆ ನೀಡುತ್ತಿರುವ ಬಹುಮುಖದ ಸಹಾಯ-ಸೌಕರ್ಯಗಳು ಸಾಲವು, ವಿಶೇಷ ರಿಯಾಯತಿಯನ್ನು ಇನ್ನೂ ಬಹು ಸಮಯದ ವರೆಗೂ ಮುಂದುವರಿಸಿಕೊಂಡು ಹೋಗಬೇಕು ಎಂದು ಮುಂತಾಗಿ ಹೇಳಿ ಉಳಿದವರ ವಿರುದ್ಧ ಹರಿಜನರನ್ನು ಎತ್ತಿಕಟ್ಟುವ ಪ್ರಯತ್ನವನ್ನು ಮಾಡಿದ್ದರು. ಆಗ ಇದನ್ನು ತುಟಿ ವಿಪರೀತ ಮಾತೆಂದೂ ಟೀಕೆ ಮಾಡಿದವರಿದ್ದರು. ಆದರೆ, ಇಂದು ಅವರು ಹರಿಜನರು ಉಳಿದವರಿಗಿಂತ ಪ್ರತ್ಯೇಕಿತವಾಗಿ ಬೆಳೆಯಗೊಡುವುದು ಅಪಾಯಕರವೆಂದು ಅನ್ನುತ್ತಾರೆ. ಭಾರತದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕಾದರೆ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಗಳು ಇಲ್ಲವಾಗ ಬೇಕು; ಹರಿಜನರಿಗಾಗಿ ಪ್ರತ್ಯೇಕ ವಸಾಹತುಗಳನ್ನು ನಿರ್ಮಿಸುವ ಧೋರಣೆಯಿಂದ ಪ್ರತ್ಯೇಕತೆ ಶಾಶ್ವತಗೊಳ್ಳುವುದರಿಂದ ಅದನ್ನು ಬಿಟ್ಟುಕೊಡ ಬೇಕು" ಎಂದು ಹೇಳಿದ್ದಾರೆ ಅವರು. ಇದನ್ನು ನಿಜಕ್ಕೂ ಸ್ವಾಗತಿಸುತ್ತೇವೆ. ಇಂತಹ ಭಾವನೆಯು ಶತಮಾನಾದಿಯಿಂದಲೂ ಬಂದುದು; ರಕ್ತಗತವಾಗಿ ಪರಿಣಮಿಸಿದುದು. ಇದನ್ನು ದೂರಮಾಡ ಬೇಕಾದರೆ ಇನ್ನೂ ಹಲವು ವರ್ಷಗಳು ಬೇಕಾಗಬಹುದು. ಆದುದರಿಂದ ಆ ಸಂಬಂಧವಲ್ಲ ನಾವು ಹೆಚ್ಚು ಚರ್ಚೆಗೆ ಹೋಗದೆ, ನೀತಿಯನ್ನು ಉದ್ದೇಶ ಸಾಧನೆಗನುಕೂಲವಾಗುವಂತೆ ರೂಪಿಸುತ್ತ ಹೋಗಬೇಕು.


ಉಳಿತಾಯದಿಂದ
ಇಂದಿನ ವಿಜಯ
ನಾಳೆಗೆ ಅಭಯ


## ಅಲ್ಲಲ್ಲಿಯ ಸುದ್ದಿಸಾರ

**ಮಹಾಸಭೆ**— ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾ ಸಭೆಯು ತಾ. 13—5—63ರಂದು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಪೂಂಜ ಸಭಾ ಸದನದಲ್ಲಿ ಕುಂದಾಪುರದ ವಕೀಲ್ ಶ್ರೀ ಪಿ. ಶಿವರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಟಿ. ಆಳ್ವರು ಸ್ವಾಗತಭಾಷಣ ಮಾಡಿದರು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಮೃತಪಟ್ಟ ಮರಕಡ ಗುತ್ತು ನಾಗಮ್ಮ ಹೆಗ್ಗಡ್ತಿ ಮತ್ತು ಸಂಕಪ್ಪ ಬಂಗರ ಕುರಿತೂ ವಕೀಲ್ ಶ್ರೀ ದಾಸಣ್ಣ ಆಳ್ವರು, ಮೃತರಾದ ಮಂಗಳಪಾಡಿ ತ್ಯಾಂಪಣ್ಣ ಶೆಟ್ಟರ ವಿಷಯವಾಗಿಯೂ ಮಾತನಾಡಿ ಸಂತಾಪ ಸೂಚಿಸಿದರು.

ಸಂಘದ ಕಾರ್ಯದರ್ಶಿ ವಕೀಲ್ ಶ್ರೀ ಕೆ. ಸುಂದರರಾಮ ಶೆಟ್ಟಿ, ಖಜಾಂಚಿ ಶ್ರೀ ಉಮ್ಮಣ್ಣ ಸೇಮಿತ ಬಡ ವಿದ್ಯಾರ್ಥಿ ಫಂಡಿನ ಕಾರ್ಯದರ್ಶಿ ಶ್ರೀ ದಾಸಣ್ಣ ಆಳ್ವ, ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಗೌರವ ಸುಪರಿಂಟೆಂಡೆಂಟ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಪುತ್ತೂರು ವಿದ್ಯಾರ್ಥಿ ಭವನದ ಶ್ರೀ ಸುಬ್ಬಣ್ಣ ಪಕ್ಕಳ ಕುಂದಾಪುರ ಭವನದ ಶ್ರೀ ಸುಂದರರಾಮ ಶೆಟ್ಟಿಯವರು ಸಂಬಂಧಪಟ್ಟ ವರದಿಗಳನ್ನು ಓದಿ ಅವುಗಳನ್ನು ಮಂಜೂರು ಮಾಡಲಾಯಿತು.

ಅಧ್ಯಕ್ಷರ ಭಾಷಣದ ಬಳಿಕ ಶ್ರೀಗಳಾದ ಸುಬ್ಬಣ್ಣ ಪಕ್ಕಳ, ಡಾ। ಕೆ. ಎಂ. ರೈ, ಡಾ। ಎಂ. ಆರ್ ಶೆಟ್ಟಿ ಮತ್ತು ತೇಜಪ್ಪ ಶೆಟ್ಟಿ ಮೊದಲಾದವರು ಅನೇಕ ಸಲಹೆಗಳನ್ನು ಸಭೆಯ ಮುಂದಿರಿಸಿದರು. ಸಭಿಕರ ಅಭಿಪ್ರಾಯದಂತೆ ಈ ಸಂಘದ ಚಟುವಟಿಕೆಗಳನ್ನು ವಿಸ್ತರಿಸುವರೆ ಮತ್ತು ಸಾರ್ವಜನಿಕರ ಸಹಕಾರ ಪಡೆಯುವರೆ ಅಗತ್ಯವುಳ್ಳ ಕಾರ್ಯಕ್ರಮವನ್ನು ರೂಪಿಸಿ ಯೋಜನೆಯೊಂದನ್ನು ಕಾರ್ಯಕಾರೀ ಸಮಿತಿಯ ಮುಂದಿಡುವರೆ ಶ್ರೀಗಳಾದ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಕೆ. ಸುಬ್ಬಣ್ಣ ಪಕ್ಕಳ, ವಿಠಲ ಶೆಟ್ಟಿ, ಎ. ಶಾಂತಪ್ಪ ಪೂಂಜ ಮತ್ತು ಕೆ. ಸುಂದರರಾಮ ಶೆಟ್ಟಿ ಇವರನ್ನೊಳಗೊಂಡ ಉಪ ಸಮಿತಿಯೊಂದನ್ನು ನೇಮಿಸಲಾಯಿತು. ಕೊನೆಯಲ್ಲಿ ಕಾರ್ಯದರ್ಶಿಗಳು ಧನ್ಯವಾದಗಳನ್ನು ಅರ್ಪಿಸಿದರು.

**ವರ್ಧಂತ್ಯುತ್ಸವ**— ತಾ. 12.5.63 ರಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಟ್ಟೆ ಇದರ ವರ್ಧಂತ್ಯುತ್ಸವವು ಶ್ರೀ ಕೆ. ಆರ್. ಪ್ರಭಾಕರ ಕಾಮತರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಕಟ್ಟೆ ವಿಠಲ ಕಾಮತರಿಂದ ಸ್ವಾಗತ ಭಾಷಣ, ಶಾಲಾ ಮುಖ್ಯೋಪಾಧ್ಯಾಯಿನಿಯಿಂದ ವರದಿ ವಾಚನ ಶ್ರೀ ಎ. ಹಿರಿಯಣ್ಣ ಶೆಟ್ಟರಿಂದ ಸಮಯೋಚಿತ ಭಾಷಣ, ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳು ಮತ್ತು "ಆಧುನಿಕ ಯುಗ" ಎಂಬ ಪ್ರಹಸನ ನಡೆದ ನಂತರ ಶ್ರೀ ಗಾಣದ ಬೆಟ್ಟು ವೀರಣ್ಣ ಶೆಟ್ರಿಂದ ಬಹುಮಾನ ವಿತರಣೆ ನಡೆಯಿತು.

ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಕಟ್ಟೆ ಗೋಪಾಲಕೃಷ್ಣ ಕಾಮತರಿಂದ ಧನ್ಯವಾದ ಸಮರ್ಪಣೆ ಆಯಿತು. ರಾತ್ರಿ ಯುವಕರಿಂದ ಯಕ್ಷಗಾನ ಬಯಲಾಟವು ಯಶಸ್ವಿಯಾಗಿ ನಡೆಯಿತು.

**ಪೂಂಜ ಹಂಚಿನ ಕಾರ್ಖಾನೆಯ ಉದ್ಘಾಟನೆ**— ತಾ 13—5—63ರಂದು ಮಂಗಳೂರು ಕಾರ್ಕಳ ರಸ್ತೆಯ ಗಂಜಿಮಠದಲ್ಲಿ ಹೊಸದಾಗಿ ಸ್ಥಾಪನೆಯಾದ ಪೂಂಜ ಟೈಲ್ ವರ್ಕ್ಸ್‌ನ ಪ್ರಾರಂಭೋತ್ಸವವನ್ನು ಮದರಾಸಿನ ಸುಪ್ರಸಿದ್ಧ ಕೈಗಾರಿಕೋದ್ಯಮಿ ಶ್ರೀ ಡಿ. ಸಿ. ಕೋಠಾರಿಯವರು ನೆರವೇರಿಸಿದರು. ಪ್ರಾರಂಭದಲ್ಲಿ ಕಾರ್ಖಾನೆಯ ಮ್ಯಾನೇಜರ್, ಶ್ರೀ ಎಂ. ಆರ್. ಹೆಚ್. ಪೂಂಜರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೋಠಾರಿಯವರು ಮಾತನಾಡುತ್ತ ಹೊಸ ಉದ್ಯಮದ ಸ್ಥಾಪಕರಾದ ಪೂಂಜ ಬಂಧುಗಳೊಡನೆ ತಮಗಿರುವ ನಿಕಟ ಸಂಪರ್ಕವನ್ನು ಪ್ರಸ್ತಾಪಿಸಿ ಈ ಸದು ಸ್ಥಾಪಿಸುವ ಕೈಗಾರಿಕೆಯ ಸಮಾರಂಭವ

ತ್ರಿ ಭಾಗವಹಿಸಲು ತಮಗಿರುವ ಸಂತೋಷವನ್ನು ವ್ಯಕ್ತಪಡಿಸಿದರು. ಹಂಚು ಇಂದು ಮುಖ್ಯ ಕೈಗಾರಿಕೆ ಎಂದೂ ವಸತಿ ಅಭಾವವನ್ನು ಹೋಗಲಾಡಿಸುವುದರಲ್ಲಿ ಅದು ಮುಖ್ಯವಾದುದೆಂದೂ ಅದರ ಕೊರತೆ ಈ ಕಾರ್ಖಾನೆಯ ಸ್ಥಾಪನೆಯಿಂದ ಬಹಳ ಮಟ್ಟಿಗೆ ಕಡಿಮೆಯಾಗುವುದೆಂದೂ ಹೇಳಿ ಕಾರ್ಖಾನೆಯಲ್ಲಿ ತಯಾರಾಗುವ ಮೊದಲ ಹಂಚುಗಳನ್ನು ತಾನೇ ಕೊಂಡುಕೊಳ್ಳುವುದಾಗಿ ತಿಳಿಸಿ ಹೊಸ ಉದ್ಯಮಕ್ಕೆ ಯಶಸ್ಸನ್ನು ಕೋರಿದರು.

ಶ್ರೀ ಎನ್. ಮೋಹನದಾಸ್ ಅಡ್ಯಂತಾಯರವರು ವಂದನೆಗಳನ್ನು ಅರ್ಪಿಸಿದರು.

**ಹಳೆ ವಿದ್ಯಾರ್ಥಿ ಸಂಘ**— ಮುಂಡ್ಕೂರು ಬೋರ್ಡ್ ಹಾಯರ್ ಎ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಸಭೆಯು ತಾ 10.5.63 ರಂದು ಶ್ರೀ ನಡಿಗುತ್ತು ಶಿವಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು ಈ ಶಾಲೆಯಲ್ಲಿ 34 ವರ್ಷಗಳಿಗೂ ಮಿಕ್ಕಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಸದ್ಯದಲ್ಲೇ ನಿವೃತ್ತರಾಗಲಿರುವ ಶ್ರೀ ಎಂ. ಸುಂದರ ಶೆಟ್ಟರ ಗೌರವಾರ್ಥವಾಗಿ ಬರುವ ತಾ. 7-6-63ರಲ್ಲು ವಿದಾಯ ಸತ್ಕಾರ ಕೂಟವನ್ನು ಸಾರ್ವಜನಿಕರ ಕೊಡುಗೆಯಿಂದ ಏರ್ಪಡಿಸಬೇಕೆಂದು ಒಮ್ಮತದಿಂದ ನಿಶ್ಚಯಿಸಲಾಯಿತು. ಈ ಬಗ್ಗೆ 16 ಸದಸ್ಯರನ್ನೊಳಗೊಂಡ ಕಮಿಟಿ ರಚಿಸಲಾಯಿತು.

**ಯಕ್ಷಗಾನ ಸಂಘದ ವಾರ್ಷಿಕೋತ್ಸವ**— ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ತಾ. 11ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ನಡೆಯಿತು. ಈ ಸಮಾರಂಭದ ಅಂಗವಾಗಿ ರಾತ್ರಿ "ಭೀಷ್ಮಾರ್ಜುನ" ಎಂಬ ಕಥಾ ಭಾಗದ ಯಕ್ಷಗಾನ ಕೂಟವು ಜರಗಿತು. ನಂತರದ ಕಾರ್ಯಕ್ರಮವಾಗಿ "ಶ್ರೀ ಕೃಷ್ಣ ವಿಜಯ" ಯಕ್ಷಗಾನ ನಾಟಕವು ಪ್ರದರ್ಶಿಸಲ್ಪಟ್ಟಿತು.

ಉತ್ಸವದ ಆರಂಭದಲ್ಲಿ ಸಂಘದ ಪರವಾಗಿ ಶ್ರೀ ರಾಮಾನಂದ ಬನಾರಿ ಅವರು ಸ್ವಾಗತ ಬಯಸಿದ್ದರು. ನಿರ್ದೇಶನ— ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್— ಅವರದಾಗಿತ್ತು. ಕೊನೆಯಲ್ಲಿ ಶ್ರೀ ಯು. ಬಿ. ಗೋವಿಂದ ಭಟ್ಟರು ಧನ್ಯವಾದವಿತ್ತರು.

**ವಿವಾಹ ಸಮಾರಂಭಗಳು**—

ದಿ| ಗುಡ್ಡೆಗುತ್ತು ತಿಮ್ಮಪ್ಪ ಭಂಡಾರಿಗಳ ಪುತ್ರ ಚಿ| ನಾರಾಯಣ ರೈಗಳ ವಿವಾಹವು ಶ್ರೀ ಬಿ. ಆನಂದ ರೈಗಳ ಪುತ್ರಿ ಸೌ| ಶಾಲಿನಿಯೊಂದಿಗೆ ತಾ 15-5-63ರಂದು ಮಂಗಳೂರು ಕೆಥೋಲಿಕ್ ಕ್ಲಬ್ಬಿನಲ್ಲಿ ಜರಗಿತು.

ಶ್ರೀ ಪಾಂಗಾಳ ಅನಂತ ನಾಯಕರ ಪುತ್ರಿ ಚಿ| ಸೌ| ಮೀರಾ ಮತ್ತು ದಿ| ಬಸ್ರೂರು ಎಚ್. ವಿಠಲ ಕಾಮತರ ಪುತ್ರ ಚಿ| ಧರ್ಮಾನಂದ ಕಾಮತ್ ಇವರ ವಿವಾಹವು ತಾರೀಕು 16-5-63ರಂದು ಉಡುಪಿ ವರದೇಂದ್ರ ಕಲಾ ಮಂದಿರದಲ್ಲಿ ಜರಗಿತು.

ದಿ| ಪೂಜ್ಯ ಗಡಿಗೆಪ್ಪನವರು ಹುರಳಿ ಇವರ ಪುತ್ರ ಚಿ| ಚಂದ್ರಶೇಖರ ಇವರಿಗೆ ಶ್ರೀ ಶಿವಲಿಂಗಪ್ಪನವರು ನೈಲಾರ ಇವರ ಪುತ್ರಿ ಸೌ| ಕಾಂ. ಶೀತೀರ್ಪತಿ ಇವರನ್ನು ತಾರೀಕು 19-5-63ರಂದು ಮುರೇಗುವಾಡ ಸ್ವಗೃಹದಲ್ಲಿ ವಿವಾಹಮಾಡಿಕೊಳ್ಳಲಾಯಿತು.

ದಿ| ಟಿ. ಕೃಷ್ಣಯ್ಯ ಹೆಗ್ಡೆಯವರ ಪುತ್ರ ಶ್ರೀ ರಾಘವ ಹೆಗ್ಡೆಯವರ ವಿವಾಹವು ಶ್ರೀ ಕೆ. ರಾಮಣ್ಣ ಸೆಟ್ಟರ ಪುತ್ರಿ ಸೌ| ಕಸ್ತೂರಿಯೊಡನೆಯೂ, ಶ್ರೀ ಬಿ. ಬಾಲಕೃಷ್ಣ ಹೆಗ್ಡೇರ ಪುತ್ರಿ ಸೌ| ಮಧುಮತಿಯ ವಿವಾಹವು ಶ್ರೀ ಕೆ. ರಾಮಣ್ಣ ಸೆಟ್ರ ಪುತ್ರ ಚಿ| ಬಾಲಕೃಷ್ಣ ಸೆಟ್ರೊಡನೆಯೂ ತಾ. 20-5-63 ರಂದು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್‌ನಲ್ಲಿ ನೆರವೇರಿತು.

ಮಂಗಳೂರಿನ ಸಿ. ಪಿ. ಸಿ. ಕಂಪೆನಿಯ ಶ್ರೀ ಎಂ. ಬಿ ನರಸಪ್ಪನವರ ಪುತ್ರಿ ಕು. ಸರೋಜಿನಿಯ ವಿವಾಹವು ಶ್ರೀ ಎನ್. ಚಂದಯ್ಯ ಕಡೇಶಿವಾಲ್ಯ ಇವರ ಪುತ್ರ ಶ್ರೀ ನರಸಿಂಹ ಇವರೊಡನೆ ತಾ. 21-5-63ರಂದು ಪಾಣೆಮಂಗಳೂರಿನ ಶ್ರೀ ನಂದಾವರ ವಿನಾಯಕ ಶಂಕರನಾರಾಯಣ ದುರ್ಗಾಂಬಾ ದೇವಸ್ಥಾನದಲ್ಲಿ ಜರಗಿತು.

## ವಾರ್ತಾವೇದಿಕೆ

### ಕೃಷ್ಣಮಾಚಾರಿ

ದ್ವಿತೀಯ ಲೋಕಸಮರದ ವೇಳೆ ಅಮೇರಿಕೆಯ ಬೆಂಬಲವನ್ನೂ ಸಹಾಯವನ್ನೂ ಪಡೆಯುವ ಬಗ್ಗೆ ಬ್ರಿಟನ್ನಿನ ಪ್ರಧಾನಿಯಾಗಿದ್ದ ವಿನ್ಸ್ಟನ್ ಚರ್ಚಿಲ್ಲರು ಒಂದಲ್ಲ ಹಲವು ಬಾರಿ ವಾಶಿಂಗ್ಟನ್ನಿಗೆ ಪ್ರಯಾಣ ಬೆಳೆಸಿದ್ದರು. ಚೀನೀ ಆಕ್ರಮಣವನ್ನು ಎದುರಿಸುವುದಕ್ಕೆ ಅಚಲ ನಿರ್ಧಾರ ಮಾಡಿದ ಭಾರತೀಯ ಜನತೆಯ ಪರವಾಗಿ ಕೇಂದ್ರ ಮಂತ್ರಿ ಟಿ. ಟಿ. ಕೆ. ಯವರೂ ಅಮೇರಿಕೆಯ ಸಂದರ್ಶನ ಕೈಕೊಂಡಿದ್ದಾರೆ. ಪಾಕಿಸ್ತಾನದ ಅಸಮಾಧಾನವೇ ಇದ್ದರೂ ಅಮೇರಿಕೆಯು ಭಾರತಕ್ಕೆ ನೀಡುವ ಸಹಾಯವು ದೊಡ್ಡ ಮತ್ತು ದೀರ್ಘ ಕಾಲೀನವಾಗುವುದು ಮಾತ್ರವಲ್ಲ, ಈ ಸಂಬಂಧದಲ್ಲಿ ಟಿ. ಟಿ. ಕೆ. ಯವರು ಜಯಭೇರಿ ಬಾರಿಸುವುದು ಖಂಡಿತವೆಂದೀಗ ತಿಳಿದುಬಂದಿದೆ.

### ಅಯೂಬ ಖಾನ್

ಕಾಶ್ಮೀರದ ಮಾತುಕತೆಯ ಆರನೆಯ ಹಾಗೂ ಈ ಮಾಲೆಯಲ್ಲಿ ಕೊನೆಯದಾದ ಸುತ್ತು ವ್ಯರ್ಥವಾಗಿ ಪರ್ಯವಸಾನಗೊಂಡುದರಿಂದ ಕಾಶ್ಮೀರದ ಪ್ರಶ್ನೆ ಹಾಗೆಯೇ ಉಳಿದಿದೆಯೆಂದು ಪಾಕಿಸ್ತಾನವು ಪ್ರಚಾರ ಮಾಡುತ್ತಿದೆ. ಅದರ ಜತೆಗೆ ಭಾರತದ ಹಠಮಾರಿತನವೇ ಈ ಪರಿಣಾಮಕ್ಕೆ ಕಾರಣವೆಂಬ ಅಪಪ್ರಚಾರವನ್ನೂ ಗೈಯುತ್ತಿದೆ. ಮಧ್ಯಸ್ಥಿಕೆಯ ಸಲಹೆಯೊಡನೆ ಅದನ್ನು ಭಾರತವು ತನ್ನ ಒಪ್ಪಿಕೊಂಡಂತೆ ಭಾಸಮಾಡಿಕೊಂಡ ಅಯೂಬ ಖಾನರು ಈ ಸಂಬಂಧದ ವಿವರಣೆಯನ್ನು ಕೇಳುವ ನೆವದಲ್ಲಿ ಭಾರತದ ಬಗ್ಗೆ ಏಕಪ್ರಕಾರವಾದ ದೋಷಾರೋಪಣೆ ಮಾಡಿ, ಅಮೇರಿಕೆಯ ಒಲವನ್ನು ಕೆಡಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ, ಅವರು ಈ ವ್ಯರ್ಥ ಸಾಹಸದಲ್ಲಿ ಎಂದಿಗೂ ಯಶಸ್ವಿಯಾಗುವುದಿಲ್ಲ; ಸುಳ್ಳು ಎಂದಿಗಾದರೂ ಸತ್ಯವೆನಿಸೀತೆ?

### ಡಾ| ಸುಕರ್ಣ

೧೯೪೫ರಲ್ಲಿ ಇಂಡೋನೇಶ್ಯವು ಸ್ವತಂತ್ರವಾದಂದಿನಿಂದಲೂ ಅದರ ಅಧ್ಯಕ್ಷರಾಗಿ ಇಂದಿಗೆ ೧೮ ವರ್ಷ ಪೂರೈಸಿದ ಡಾ| ಸುಕರ್ಣರನ್ನು ಅಲ್ಲಿಯ ಜನತೆ ಅಜೀವ ಅಧ್ಯಕ್ಷರನ್ನಾಗಿ ಅಧಿಕಾರವಿತ್ತು ಗೌರವಿಸಿದೆ. ತನ್ನ ಜೀವಮಾನವು ಒಂದೆರಡು ದಿನಗಳಲ್ಲಿಯೂ ಮುಗಿಯಬಹುದಾದರೂ ಇಂಡೋನೇಶ್ಯದ ಕ್ರಾಂತಿಯು ಒಂದೆರಡು ವರ್ಷಗಳಲ್ಲಿ ಮುಗಿಯುವುದಿಲ್ಲ. ಏಕೆಂದರೆ, ಈ ಕ್ರಾಂತಿಯು ಕೇವಲ ರಾಜಕೀಯ ರಂಗದಲ್ಲಿ ಮಾತ್ರವಲ್ಲ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ನಡೆಯುವುದೆಂದವರು ದೇಶಕ್ಕೆ ಕರೆಯಿತ್ತಿದ್ದಾರೆ. ಜೀವಾವಧಿಯ ವರೆಗೂ ಪ್ರಜಾಸತ್ತಾತ್ಮಕ ಯುಗದಲ್ಲಿ ವ್ಯಕ್ತಿಯೊಬ್ಬನಿಗೆ ಅಧಿಕಾರವನ್ನು ಬಿಟ್ಟುಕೊಟ್ಟುದು ಪ್ರಾಯಃ ಇದೇ ಮೊದಲಿನದಿರಬೇಕು. ಡಾ| ಸುಕರ್ಣರು ಕಿರೀಟಕ್ಕೆ ಗುರಿಯಿರಿಸಿದರೆಂದು ಹೇಳಬಹುದು.

### ರಾಜಾಜಿ

ಹಿಂದಿ ವಿರೋಧಿ, ಅಮೇರಿಕನ್ ಪರ ಮತ್ತು ಇಂಗ್ಲಿಷ್ ಆಗ್ರಹ ನೀತಿಯಿಂದ ರಾಜಾಜಿ ಇಂದು ಮತ್ತೊಮ್ಮೆ ರಾಜಕಾರಣಕ್ಕೆ ಬಲವಾಗಿ ಅಂಟಿಕೊಂಡಿದ್ದಾರೆ. ರಾಜಕೋಟೆಯಲ್ಲಿ ತನ್ನ ಪಕ್ಷದ ಕಾರ್ಯದರ್ಶಿ ಮಿನೂ ಮಸಾನಿಯವರ ಪರವಾಗಿ ಚುನಾವಣಾ ಪ್ರಚಾರಕ್ಕೆ ತೆರಳಿದ ಅವರನ್ನು ಕರಿಬಾವುಟಗಳು ಸ್ವಾಗತಿಸಿದುವು. ರಾಜಕೀಯ ಬರಡೆಮ್ಮೆಯನ್ನು ಕರೆಯತೊಡಗಿದವರಿಗೆ ಹಾಲು ಸುರಿದರೂ ಒಂದೇ ಸುರಿಯದಿದ್ದರೂ ಒಂದೇ ಎಮ್ಮೆಯಂತೂ ಬೇಕೇ ಬೇಕಾಗಿದೆ. 'ಚಳವಳಿಗಾರ'ನೆಂದು ವರ್ಣಿತರಾದ ರಾಜಾಜಿ ಚಳವಳಿಯಿಲ್ಲದೆ ಪ್ರಗತಿಯಿಲ್ಲ ಎಂದು ಅಚಲವಾಗಿ ನಂಬಿದವರು; ಎಂತಲೇ ಅವರು ಈ ವೃದ್ಧಾಪ್ಯದಲ್ಲಿಯೂ ಆತ್ಮವಿಶ್ವಾಸ ಬಲದಿಂದ ಒಂದಲ್ಲವೊಂದು ಬಗೆಯ ಆಂದೋಲನಕ್ಕೆ ಪ್ರೇರಕ ಶಕ್ತಿಯಾಗಿ ಉಳಿದಿದ್ದಾರೆ.

### ಗೋರ್ಡಾನ್ ಕೂಪರ್

ಅಮೇರಿಕೆಯ ಗಗನಯಾತ್ರಿ ಗೋರ್ಡಾನ್ ಕೂಪರ ಭೂಮಿಯಿಂದ ಅನತಿ ಉನ್ನತಿಯಲ್ಲಿ ಸುತ್ತುವರಿದು ಕ್ಷೇಮದಿಂದ ಇಳಿದಿದ್ದಾರೆ. ೨೨ ಬಾರಿ ಭೂ ಪ್ರದಕ್ಷಿಣೆ ಮಾಡಿದ ಇವರು ನಾಲ್ಕು ಕೆಮೆರಾಗಳಿಂದ ಪ್ರಪಂಚದ ಹಲವಾರು ಫೊಟೊಗಳನ್ನು ಹಿಡಿದಿದ್ದಾರೆ. ಮನೆ ರಸ್ತೆ, ಕೊಳಗೆ ನಳಿಗೆಯಿಂದ ಹಾರಾಡುತ್ತಿದ್ದ ಹೊಗೆಯನ್ನು ಕೂಡ ಗುರುತಿಸುವಷ್ಟು ಎತ್ತರದಲ್ಲಿಯೇ ಅವರು ವ್ಯೋಮಭ್ರಮಣಗೆಯ್ದಿದ್ದರು. 'ಕಮ್ಯುನಿಸ್ಟ್ ಚೀನಾವು ನಿಮಗೆ ಹೇಗೆ ಕಂಡಿತು?' ಎಂಬ ವರದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು 'ಗುಪ್ತ ಸೈನಿಕ ದಳದ ಸುಳಿವೇನೂ ಸಿಗಲಿಲ್ಲವೆಂ'ದು ಉತ್ತರಿಸಿದರಂತೆ. ಕೂಪರ್ ಅಪೂರ್ವ ಸಾಹಸಮಾಡಿದ್ದಾರೆ; ಅವರ ಯಶಸ್ಸಿಗಾಗಿ ಜಗತ್ತು ಕೃತಜ್ಞತೆ ವರ್ಷಿಸುತ್ತಿದೆ.

### ಶ್ರೀ ಕಂಠಿ

ಶಿಕ್ಷಣ ಮಂತ್ರಿ ಶಿವಪ್ಪ ರುದ್ರಪ್ಪ ಕಂಠಿಯವರು ಈಗ ಮರಳಿ ಹೋರಾಡಲು ಆರಂಭಿಸಿದ್ದಾರೆ. ಕೇಂದ್ರ ಸರಕಾರದ ಸಂಪೂರ್ಣ ನೆರವಿನಿಂದ ಮೈಸೂರಿನಲ್ಲಿ ಪ್ರಾದೇಶಿಕ ಶಿಕ್ಷಕ ತರಬೇತಿ ಕಾಲೇಜು ಮುಂದಿನ ಜೂನ್ ತಿಂಗಳಿಂದ ಪ್ರಾರಂಭವಾಗುವುದೆಂಬ ಶುಭ ಸಂದೇಶವನ್ನಿತ್ತ ಅವರು, ಹೈಸ್ಕೂಲುಗಳಿಗೆ ಆಯಾ ಶಾಲೆಯ ಎಸ್ ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವನ್ನು ನೋಡಿ ಅದಕ್ಕನುಸಾರವಾಗಿ ಗ್ರಾಂಟು ನೀಡುವ ವಿಚಾರವಿದೆಯೆಂದಿದ್ದಾರೆ. ಮಾನ್ಯ ಮಂತ್ರಿಯವರೇ ಹಿಂದೊಮ್ಮೆ ಸರಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳ ಶಿಕ್ಷಣ ಮಟ್ಟವು ಉನ್ನತವಿದೆಯೆಂದಿದ್ದಾರೆ. ಪರೀಕ್ಷೆಯನ್ನೇ ಮಾನದಂಡವಾಗಿ ಮಾಡುವ ಈ ಹೊಸ ಅನುಚಿತವಾದುದಾದರೂ ಸರಕಾರಿ ಶಾಲೆಗಳು ಗ್ರಾಂಟನ್ನು ಪಡೆಯದೇ ಸಂಪೂರ್ಣ ವೆಚ್ಚವನ್ನೂ ಸರಕಾರದ ತಲೆಗೆ ಹೊರಿಸುತ್ತವೆಂಬುದನ್ನು ಅವರು ನೆನಪಿಸಬೇಡವೆ?

### ಚೌ ಎನ್. ಲಯ್

ಅನಾವೃಷ್ಟಿಯಿಂದ ಕ್ಷಾಮಪೀಡಿತವಾದ ಚೀನಾದಲ್ಲಿ ಕುರುವಿನ ಮೇಲೆ ಬೊಕ್ಕೆಯೆಂಬಂತೆ ಪ್ಲೇಗು ತಾಂಡವವಾಡತೊಡಗಿದೆ. ಆಹಾರದ ಅಭಾವದಿಂದ ಚಿಂತೆಗೀಡಾದ ಚೌ ಎನ್ ಲಾಯ್ ತನ್ನ ಜನತೆ ಅನ್ನವನ್ನು ನೀಡುವರೇ? ವೈದ್ಯಕೀಯ ಸೌಕರ್ಯಗಳನ್ನು ಒದಗಿಸುತ್ತಾರೆಯೆ? ಸೈನ್ಯ ಸಾಗರದ ಮೊಟೆ, ಕುಂಬಿಸ ವ ಸಲುವಾಗಿ ಪ್ರಜಾ ಜನರನ್ನು ಉಪವಾಸ ಸಾಯಗೊಡುವ ಲಾಯರು ಜನರ ಬೊಬ್ಬೆಯಿಂದ ಕಂಗೆಟ್ಟಿರುವಾಗ ದೈವವೇ ಅವರ ನೆರವಿಗೆ ಬಂತು ಎಂದು ಹೇಳಲೇಬೇಕಾಗುತ್ತದೆ. ಮಹಾ ಚೀನ ಪ್ಲೇಗ, ಚೀನೀಯ ಅಧಿಕಾರಿಗಳ ಹುಚ್ಚು ಸಾಹಸಕ್ಕೆ, ಅನ್ಯಾಯಕ್ಕೆ ತಕ್ಕ ಉತ್ತರವನ್ನು ಕೊಡಬಹುದು; ಆದರೆ, ಪ್ರಜಾ ಹಿತವನ್ನು ಕಡೆಗಣಿಸಿದ ಲಾಯರು ಇದಕ್ಕೆಂದಿಗೂ ತಲೆಬಾಗುವವರಲ್ಲ.

## ಉಳಿತಾಯ ಮಾಡದ ಜೀವನ ನಿರರ್ಥಕ

"ಪ್ರತಿಯೊಬ್ಬ ಮನುಷ್ಯನೂ ತನ್ನ ವಾರ್ಷಿಕ ಆದಾಯದ ಹರಪ್ಪನ್ನಾದರೂ ಉಳಿಸಬೇಕು. ಹಣ ಉಳಿಸದೇ ಹೋದರೆ ಕುಟುಂಬ ಜೀವನದ ದೃಷ್ಟಿಯಿಂದ ನಿರರ್ಥಕ. ಉಳಿತಾಯದಿಂದ ಕುಟುಂಬ ಉಳಿಸಬಹುದು; ಸಮಾಜ ಉಳಿಸಬಹುದು; ದೇಶ ಉಳಿಸಬಹುದು."

—ಡಾ| ಟಿ. ಎಂ. ಎ ಪೈ.

### ಗಮಾಲ್ ನಾಸೀರ್

ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ಅಬ್ದುಲ್ ಗಮಾಲ್ ನಾಸೀರರು ಸಂಘಟನಾ ಶೀಲರು; ಸಾಹಸಿಗಳು ಇವರ ಸಾಹಸಕ್ಕೆ ಸುಯೋಜ ಕಾಲುವೆಯ ರಾಷ್ಟ್ರೀಕರಣವು ನಿದರ್ಶನವಾದರೆ, ಆಫ್ರಿಕನ್ ಧುರೀಣರ ಅಧಿವೇಶನವೊಂದನ್ನು ಸೇರಿಸುವಲ್ಲಿ ಅವರ ಪಾತ್ರವು ಸಂಘಟನಾ ಶೀಲಕ್ಕೆ ಉದಾಹರಣೆ. ಮೊದಲೊಮ್ಮೆ ಕತ್ತಲೆಯ ಖಂಡವೆನಿಸಿದ ಆಫ್ರಿಕೆಯು ಇಂದು ಸ್ವತಂತ್ರವಾಗುತ್ತ ಬೆಳಕಿನತ್ತ ಧಾವಿಸುತ್ತಿದೆ. ಆದರೆ, ಪರಸ್ಪರ ಅವಿಶ್ವಾಸ, ಅನೈಕ್ಯ ಮತ್ತು ಭಯಗ್ರಸ್ತವಾಗಿರುವ ಆಫ್ರಿಕನ್ ರಾಷ್ಟ್ರಗಳ ನಡುವೆ ಹೆಚ್ಚಿನ ತಿಳುವಳಿಕೆಯನ್ನು ಹುಟ್ಟುವಂತೆ ಮಾಡಿ, ವಿರೋಧೀ ಶಕ್ತಿಗಳ ಆಕ್ರಮಣದಿಂದ ತಮ್ಮನ್ನು ಉಳಿಸಿಕೊಳ್ಳುವ ಉಚ್ಚ ವಿಚಾರದಲ್ಲಿ ನಾಸೀರ ಪಾತ್ರ ಪ್ರಶಂಸನೀಯವಾದುದು.

### ಸೂಚನೆ

'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಲುತಾವು ಸೈಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

**ಹೊಸ ಪುಸ್ತಕ—**

ನಚಿಕೇತ'ರ,

ನವೀನ ಕಾದಂಬರಿ—

# ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ಪ್ರಕಾಶಕರು,

ನವಯುಗ ಪ್ರೆಸ್, ಉಡುಪಿ.

## ಯುಗಯುಗಗಳಿಂದ ನಡೆದುಬಂದ

# ಮಾನವ ಮಾರ್ಜಾಲ ಸಂಬಂಧ

ಬೆಕ್ಕು ಮತ್ತು ನಾಯಿಗಳಲ್ಲಿ ಯಾವುದನ್ನು ಮೆಚ್ಚುತ್ತೀರಿ ಎಂದು ಊರನ್ನು ಬರೂ ಪ್ರಶ್ನಿಸಿದರೆ, ಬೆಕ್ಕನ್ನು ಬಯಸುವವರೇ ಅಧಿಕ. ಅದೇಕೆ ಹಾಗೆ? ನಾಯಿ ಹೇಳಿ ಕೇಳಿ ಕೊಳಕು ಪ್ರಾಣಿ, ಬೆಕ್ಕು ತಿನ್ನುವುದು ಕೊಳಕನ್ನಾದರೂ ತನ್ನ ಸೌಂದರ್ಯವನ್ನು ರಕ್ಷಿಸುವ ಶಕ್ತಿ ಅಥವಾ ತಂತ್ರ ಅದಕ್ಕಿದೆ. ಆದುದರಿಂದಲೇ ನಾಯಿ ಮನೆಯಂಗಳದ ವರೆಗೆ ಮಾತ್ರ ತಿರುಗಾಡಿದರೆ, ಬೆಕ್ಕು ಮನೆಯೊಳಗೂ ಹೊರಗೂ ಸಂಚರಿಸಬಲ್ಲುದು. ಅದರ ಲಘು ಶರೀರ ಬೆಕ್ಕಿನ ಸರ್ವತಂತ್ರ ಸ್ವಾಮಿತನಕ್ಕೆ ಪರಿಪೋಷಕವಾಗುತ್ತದೆ.

ಬೆಕ್ಕು ಮಾನವನ ಮನಸ್ಸಿಗನುವಾಗಿ ವರ್ತಿಸುವುದಿಲ್ಲ. ತನಗೆ ಬೇಕಾದಾಗ ಬೇಕಾದಲ್ಲಿಗೆ ಅದು ಚಲಿಸಬಲ್ಲುದು; ಅದನ್ನು ನಿಯಂತ್ರಿಸುವ ತಂತ್ರವಿನ್ನೂ ಮಾನವನ ಕರಗತವಾಗಿಲ್ಲ. ಅದರ ಹೊಳೆಯುವ ನೇತ್ರದ್ವಯ ಮತ್ತು ಹರಿತ ಉಗುರುಗಳನ್ನು ಯಾರೂ ಮರೆಯಲಾರರು. ಮನೆಯ ಎಲ್ಲೆಡೆಗಳಲ್ಲೂ ಬೆಕ್ಕಿನ ಪ್ರಭಾವವಿರುವುದರಿಂದ, ಗುಪ್ತಾತಿಗುಪ್ತ ಪ್ರದೇಶಗಳಲ್ಲಿಯೂ ಅದು ತನ್ನ ಪ್ರಭುತ್ವವನ್ನು ಜಮಾಯಿಸುತ್ತದೆ.

ಬೆಕ್ಕು ಮಲಗದ ಒಲೆತಿಟ್ಟೆಯಿರುವ ಮನೆ ಮನೆಯೇ ಅಲ್ಲ, ಮೇಜಿನ ಮೇಲೆ, ದಿಂಬಿನ ಮೇಲೆ ಬೆಕ್ಕಿನ ಸಿಂಹಾಸನ ಸದಾ ಸಿದ್ಧ. ಇನ್ನು ಬೆಕ್ಕಿನ ಮರಿಗಳು! ನಯನಾಭಿರಾಮವಾಗಿ ಮುಗ್ಧ ಮನೋಹರವಾಗಿ ಕಾಣುತ್ತವೆ. ಅಸಹಾಯಕ ಸ್ಥಿತಿಯಲ್ಲಿರುವ ಬಿಡಾಲ ಶಿಶುಗಳು! ಅತ್ಯುತ್ತಮ ಕಾಣಿಕೆ ನೀಡಲು ಸಮುಚಿತ ವಸ್ತು ಇಂತಹ ಬೆಕ್ಕಿನ ಮರಿಗಳು ಮಲಗಿಕೊಂಡಿರುವ ಬುಟ್ಟಿ ಎಂದು ಕೆಲವರ ಅಂಬೋಣ. ಆದರೆ, ಇವೇ ಮರಿಗಳು ಬೆಳೆದು ಹಿರಿದಾದಾಗ ಅವುಗಳು ಸಹಾಯಕರೋ ಉಪಹಾಸಕರೋ ಎಂಬುದು ವೇದ್ಯವಾಗುವುದು.

ರಾಜಕುಮಾರಿ ಕೆಥರೀನಳನ್ನು ರಾಜಪುತ್ರ ಪೊಟೆಮ್ಕಿನ್ ಪ್ರೀತಿಸುತ್ತಿದ್ದನು, ತನ್ನ ಪ್ರಿಯರೆನ್ನಿಸಿಕೊಳಲೂ ತಾನುಪ್ರಿಯುತ ಮನಸಂಬಂಧವನ್ನು ಆಕೆಗೆ ಮನವರಿಕೆ ಮಾಡಿಕೊಡುವ ಆವಶ್ಯಕತೆ ಅತನಿಗೆ ಬಿತ್ತು. ಅದಕ್ಕಾಗಿ ಅತನೊಂದು ಉಡುಗೊರೆಯನ್ನು ನೀಡಲು ಮನಗಂಡನು. ಆ ಆನ್ಮೆ ಯಾವುದು? ಚಿನ್ನಾಭರಣಗಳ ಗುಡಿಯೆ? ಪರಿಮಳ ದ್ರವ್ಯರಾಶಿಯೆ? ಬೆಲೆ ಬಾಳುವ ಬಟ್ಟೆಬರೆಗಳೆ? ಅಲ್ಲ, ಆಗ ತಾನೇ ಕಣ್ಣು ತೆರೆದು ಅತ್ತಿತ್ತ ಚಲಿಸುವ ಸಡಗರ ಭರಿತ ಮಾರ್ಜಾಲ ಕೂಸು!

ನೆಪೋಲಿಯನ್ ಮಹಾಶಯನು ಬೆಕ್ಕನ್ನು ಮೆಚ್ಚದವನು. ಹಾಗೆಯೇ ಲಾರ್ಡ್ ರಾಬರ್ಟ್ಸ್‌ನಿಗೆ ಅದನ್ನು ಕಂಡರಾಗದು. ಆದರೆ ಬೆನ್ ಜಾನ್ಸನ್ನರು ತಮ್ಮ ಪ್ರಯಾಣ ಕಾಲದಲ್ಲಿಯೂ ಬೆಕ್ಕನ್ನು ಒಯ್ಯುತ್ತಿದ್ದರು ಮಾತ್ರವಲ್ಲ, ಅದರ ಆಹಾರಕ್ಕಾಗಿ ಉತ್ತಮೋತ್ತಮ ಮೀನುಗಳನ್ನು ಆರಿಸಿ ಹೋಗುತ್ತಿದ್ದರು. ಸರ್ ವಾಲ್ಟೇರ್‌ಸ್ಕೋಟ್ ತನ್ನ ಸಾಕು ಬೆಕ್ಕಿನ ಬಗ್ಗೆ ಅತೀವ ಕಳಕಳಿ ತೋರಿಸುತ್ತಿದ್ದರು. ಲಾರ್ಡ್ ಚೆಸ್ಟರ್ ಫೀಲ್ಡರು ತನ್ನ ಬಿಡಾಲಕ್ಕೆ ಪೆನ್‌ಶನನ್ನು ಕೊಟ್ಟಿದ್ದಾರೆ. ವಿಕ್ಟರ್ ಹ್ಯೂಗೊ, ಮ್ಯಾಥ್ಯೂ ಆರ್ನಾಲ್ಡ್, ಹೆನ್ರಿ ಜೇಮ್ಸ್, ವಾಲ್ಪೋಲೆ, ಗ್ರೆಗರಿ ಮಹಾಶಯ, ಕಾರ್ಡಿನಲ್ ವೂಲ್‌ಸೆ ಮೊದಲಾದವರು ತಮ್ಮ ಬೆಕ್ಕಿನ ದಾಸಾನುದಾಸರಾಗಿದ್ದರು.

ಕಾರ್ಡಿನಲ್ ರಿಚ್ಲೀಯು ತನ್ನ ಮನರಂಜನೆಗಾಗಿ ಬೆಕ್ಕುಗಳನ್ನೇ ನಂಬಿದ್ದನು. ನಡುಗುವ ಬೆಕ್ಕಿನ ಮರಿಯೊಂದು ಆತನ ಅದಾವ ತನ್ಮಯತೆಯನ್ನೂ ಭಂಗಗೊಳಿಸುತ್ತಿತ್ತು. ಆದರೆ, ತನ್ನ ಬೆಕ್ಕುಗಳು ಮುದಿಯಾಗುತ್ತ ಬಂದಂತೆ ಅವನ್ನು ಹೊರಗೆ ಹಾಕಿ ಮರಿ ಬೆಕ್ಕುಗಳನ್ನು ತನ್ನ ಸಂಗಾತಿಗಳ ಸ್ಥಾನದಲ್ಲಿ ಪ್ರತಿಕ್ಷೇಪಿಸುತ್ತಿದ್ದನು.

ಹದಿನಾಲ್ಕನೆಯ ಲೂಯಿಯು ಎಂಟು ವರ್ಷದವನಾಗಿರುವಾಗ ಒಂದು ವಿಸ್ಮಯ ನಡೆಯಿತು. ಆತನು ರಾಜಕಾರ್ಯ ಸಂಬಂಧಿ ಸಭೆಯೊಂದರಲ್ಲಿ ಭಾಗವಹಿಸುತ್ತಿದ್ದಾಗ, ಒಂದು ಮರಿ ಬೆಕ್ಕು ಎಲ್ಲಿಂದಲೋ ಉರುಳಿ ರಾಜ ಸಮ್ಮುಖ ಮೇಜಿನ ಮೇಲೆ ಉರುಳಿತು. ಅಲ್ಲಿದ್ದ ರಾಜಕೀಯ ಮಹತ್ವದ ಕಾಗದ ಪತ್ರಗಳ ಮೇಲೆ ಹೊರಳಾಡಿ ಎಲ್ಲಿಗೋ ಓಡಿಹೋಯಿತು!

ಯಾವುದಾದರೂ ಒಂದು ಪ್ರಾಣಿಯನ್ನು ಮೆಚ್ಚುವವರನ್ನು ಮನ್ನಿಸುತ್ತಿದ್ದ, ಅಂತಹರಿಗೆ ರಾಜಮನ್ನಣೆ ದೊರೆಯುತ್ತಿದ್ದ ಕಾಲವೇ ಬಿಡಾಲ ಸ್ವರ್ಣಯುಗವೆನ್ನಬಹುದು. ಒಬ್ಬಾಕೆ ರಾಜಮಹಿಳೆಯು ತನ್ನ ಬದುಕುಬಂಗಾರಗಳಿಗಿಂತ ಬೆಕ್ಕನ್ನ ವಿಶೇಷವಾಗಿ ಪ್ರೀತಿಸುತ್ತಿದ್ದಳು. ಬೆಕ್ಕು ಕೂಡ ಹಾಗೆಯೇ. ರಾಣಿಯು ನಲಿದಾಡುತ್ತಿದ್ದರೆ ಬೆಕ್ಕು ಪ್ರಸನ್ನವಾಗಿರುತ್ತಿತ್ತು; ಆಕೆ ದುಃಖಿಯೆನಿಸಿದ್ದರೆ, ಬೆಕ್ಕೂ ಗೋಳುಮೋರೆ ಹಾಕುತ್ತಿತ್ತು. ದಿನ ದಿನಕ್ಕೆ ರಾಜಗೌರವವು ಕಡಿಮೆಯಾಗುತ್ತ ಬಂದರೂ ಬೆಕ್ಕು ಸಾಕಣೆಯು ಅಪ್ರಿಯವಾಗಲಿಲ್ಲ.

ಹೆಚ್ಚಿನ ಕ್ರೂರ ಬೆಕ್ಕುಗಳು ಗುಂಪುಗುಂಪಾಗಿ ವಾಸಿಸುತ್ತಿದ್ದ ಮಾರ್ಜಾಲ ಕುಟುಂಬಗಳಿಗೆ ಸೇರಿವೆ. ಈಶಾನ್ಯ ಆಫ್ರಿಕದ ಕ್ರೂರ ಬೆಕ್ಕು ಅತಿ ಭಯಂಕರವಾದುದು. ಇದು ಏಕಾಕಿಯಾಗಿಯೇ ಬೇಟೆಯಾಡಿ ಜೀವಿಸುತ್ತದೆ; ಮತ್ತು ಸ್ವತಂತ್ರವಾಗಿಯೇ ಬಾಳುತ್ತದೆ.

ಫಿನೀಶಿಯನ್ನರು ವ್ಯಾಪಾರಕ್ಕಾಗಿ ಮೆಡಿಟರೇನಿಯನ್ ಸಮುದ್ರದಲ್ಲಿ ಯುರೋಪ್ ಮತ್ತು ಓರಿಯಂಟ್‌ಗಳಿಗೆ ಪ್ರಯಾಣಿಸುತ್ತಿದ್ದಾಗ, ಬೆಕ್ಕುಗಳನ್ನೂ ಸರಕನ್ನಾಗಿ ಒಯ್ಯುತ್ತಿದ್ದರು. ಈ ಬೆಕ್ಕುಗಳು ಹೋದಲ್ಲೆಲ್ಲಾ ಅಲ್ಲಿನ ಮೂಲ ಕ್ರೂರ ಬೆಕ್ಕುಗಳೊಡನೆ ಬಾಳಿ ಬದುಕಿ, ಮುಂದೆ ಇಂದಿನ ಮಾರ್ಜಾಲಗಳ ಸೃಷ್ಟಿಯಾಯಿತೆನ್ನುತ್ತಾರೆ

ಮೊತ್ತಮೊದಲು ಬೆಕ್ಕಿಗೆ ರಾಷ್ಟ್ರೀಯ ಮಹತ್ವವನ್ನು ನೀಡಿದ ದೇಶ ಈಜಿಪ್ಟ್. ಅನಂತರ ರೋಮನ್ ಅರಸರು ಬೆಕ್ಕಿನಿಂದ ಆಕರ್ಷಿತರಾಗಿ, ಬ್ರಿಟನ್ನಿಗೆ ಅವುಗಳನ್ನು ತಂದರು. ಈಜಿಪ್ತವು ಆಗಾಗಲೇ ಪಿರಮಿಡ್‌ಗಳಿಂದಾಗಿ ಹೆಸರುವಾಸಿಯಾಗಿತ್ತು. ಇವುಗಳಲ್ಲಿ ನೆಲಸಿ ಬಹುದಾದ ಇಲಿಗಳನ್ನು ಕೊಲ್ಲುವುದಕ್ಕಾಗಿಯೆಂದು ಬೆಕ್ಕುಗಳನ್ನು ಅಧಿಕೃತವಾಗಿ ಅಲ್ಲಿ ಸಾಕತೊಡಗಿದ್ದರು. ನೀಲ ನದಿಯ ದಡದಲ್ಲಿ ಬೆಳೆಯುವ ಕಾಳುಕಡ್ಡಿಗಳನ್ನೂ ಗಡ್ಡೆಗೆಣಸುಗಳನ್ನೂ ತಿಂದು ಹಾಳು ಮಾಡುವ ಮೂಷಕ ಸೇನೆಯನ್ನು ಎದುರಿಸುವ ಸಲುವಾಗಿ ಮಾರ್ಜಾಲ ಸೈನಿಕರನ್ನು ಸಾಕುವ ಪರಿಕ್ರಮ ಮುಂದೆ ಬೆಳೆಯಿತು. ಈ ಸೈನಿಕರು ಪೈರು ಗದ್ದೆಯನ್ನು ಕಾಯುತ್ತಿದ್ದರು.

ಕ್ಷಿಪ್ರದಲ್ಲಿಯೇ ಮಾರ್ಜಾಲವು ಬೆಳೆ ಬಾಳುವ ಆವಶ್ಯಕ ಸದಸ್ಯನೆಂದು ಐಗುಪ್ತ ಕುಟುಂಬದಲ್ಲಿ ಸ್ಥಾನ ಗಳಿಸಿತು. ಕಾಲಕ್ರಮದಲ್ಲಿ ಒಲೆಯ ಮೇಲೆ ಮಲಗುವ ಬೆಕ್ಕು ದೇವತೆಯ ಸ್ಥಾನಕ್ಕೂ ಏರಿಬಿಟ್ಟಿತು. ಈಜಿಪ್ತಿನಲ್ಲಿ ಬೆಕ್ಕಿನ ತಲೆಯಿರುವ ದೇವತೆಯೊಂದಿದೆಯೆಂದು ನಂಬುತ್ತಾರೆ. ಅದನ್ನು 'ಪಶ್ತ್' ಎನ್ನುತ್ತಾರೆ. ಈ ಶಬ್ದದಿಂದಲೇ ಆಂಗ್ಲಶಬ್ದ 'ಪುಸ್ಸಿ' ಹುಟ್ಟಿತು ಎನ್ನುವವರೂ ಇದ್ದಾರೆ.

ಐಗುಪ್ತ ಜನರು ವಿವಿಧ ಆಭರಣಗಳಿಂದ ಪೀಠದಲ್ಲಿ ಅಲಂಕರಿಸಿದ ಬೆಕ್ಕುಗಳ ವಿಗ್ರಹಗಳನ್ನು ಕೆತ್ತುತ್ತಿದ್ದರು. ಅವರು ತಮ್ಮ ಸಂಚಾರದ ವೇಳೆಯಲ್ಲಿಯೂ ಬೆಕ್ಕುಗಳನ್ನು ತಮ್ಮೊಡನೆ ಒಯ್ಯುತ್ತಿದ್ದರು. ಮಧ್ಯ ಮಾರ್ಗದಲ್ಲಿ ಅದು ಮೃತ್ಯುಮುಖವಾಯಿತೆಂದರೆ, ಐಗುಪ್ತೀಯನು ತನ್ನೊಂದಿಗೆ ಮರಳಿ ತಂದು, ಅದನ್ನು 'ಮಮ್ಮಿ' ಮಾಡಿ ಹೂಳುತ್ತಾನೆ. ಮಾರ್ಜಾಲ ಸಮಾಧಿಯ ಬಳಿ ಅವು ಹಸಿವೆಯಿಂದ ನರಳಬಾರದೆಂದು ಹಾಲನ್ನೂ ಒಣಗಿಸಿದ ಇಲಿಗಳನ್ನೂ ಇಡುತ್ತಿದ್ದರು. ಇನ್ನು ಕೆಲವು ತಮ್ಮ ಯಜಮಾನರ ಸಮಾಧಿಯಲ್ಲಿಯೇ ಸ್ಥಾನ ಪಡೆಯುತ್ತಿದ್ದುವು. ಇಂತಹ ಕೆಲವನ್ನು ಬ್ರಿಟಿಷ್ ಮ್ಯೂಜಿಯಂನಲ್ಲಿ ನಾವು ನೋಡಬಹುದು.

ಬೆಕ್ಕುಗಳ ಬಗೆಗೆ ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ಅನ್ಯಾನ್ಯ ರೀತಿಯ ವಿಚಿತ್ರ ಧಾರಣೆಗಳಿವೆ. ಬೆಕ್ಕಿನ ಕಣ್ಣುಗಳನ್ನು ನೋಡುತ್ತಲೇ ಮಧ್ಯಾಹ್ನವಾಯಿತೆಂದು ಚೀನೀಯ ರೈತನು ನಂಬುತ್ತಾನೆ. ಬೆಕ್ಕು ಕಣ್ಣು ದುರ್ದಿನದಲ್ಲಿ ಮಧ್ಯಾಹ್ನವನ್ನು ಸೂಚಿಸಲು ಉತ್ತಮ ಸಾಧನವೆಂದವನ ವಿಶ್ವಾಸ.

ಕೆಲವರು ಕರಿ ಬೆಕ್ಕುಗಳು ಅದೃಷ್ಟಶಾಲಿಗಳೆನ್ನುತ್ತಾರೆ. ಆದರೆ, ಮತ್ತೆ ಕೆಲವರು ತದ್ವಿರುದ್ಧ ನಂಬುತ್ತಾರೆ. ಸರ್ವಸಾಮಾನ್ಯವಾಗಿ ನಾವಿಕರೆಲ್ಲರೂ ಎಲ್ಲ ಬೆಕ್ಕುಗಳನ್ನೂ ಭಾಗ್ಯಶಾಲಿಗಳೆಂದು ತಿಳಿಯುತ್ತಾರೆ, ಆದುದರಿಂದಲೇ ಅವರು ತಮ್ಮ ನಾವೆಗಳನ್ನು ಬೆಕ್ಕಿಲ್ಲದೆ ಬಿಡುವುದಿಲ್ಲ. ಇದ್ದವಡೆಯ ಮತ್ತು ಬಣ್ಣ ಬಣ್ಣದ ಬೆಕ್ಕುಗಳು ಅವುಗಳ ಮಾಲಕನಿಗೆ ಭಾಗ್ಯವನ್ನು ತರಬಲ್ಲವು ಎಂದು ಬೇರೆ ಕೆಲವರ ಅಭಿಪ್ರಾಯ.

ರಾತ್ರಿಯ ಹೊತ್ತು ಬೆಕ್ಕುಗಳು ಕಚ್ಚಾಡಿಕೊಂಡು ಕೂಗುವುದು ದುರ್ಲಕ್ಷಣವೆಂದು ಭಾರತದಲ್ಲಿ ಮಾತ್ರವಲ್ಲ ಇತರತ್ರವೂ ವಿಶ್ವಾಸವಿಡುತ್ತಾರೆ. ಬಂಗಾಳದಲ್ಲಿ 'ಹುಲಿಯ ಚಿಕ್ಕಮ್ಮ ಬೆಕ್ಕು' ಎಂಬ ಮಾತಿದೆ. ಇದೇ ನುಡಿಯು ಭಾರತದಲ್ಲಿ ಹರಡಿದೆ. ಮಧ್ಯಕಾಲದ ದಿನಗಳಲ್ಲಿ ಬೆಕ್ಕುಗಳು ಮಾತಾಡುತ್ತಿದ್ದುವೆಂದೂ ಮಾಯಾವಿಗಳು ಇವುಗಳೊಡನೆ ಕೂಡಿ ಸಂಚು ಹೂಡುತ್ತಿದ್ದರೆಂದೂ ಹೇಳುತ್ತಿದ್ದರು. ಈ ಮಾಯಾವಿಗಳು ಬೆಕ್ಕಿನ ರೂಪವನ್ನು ತಾಳುತ್ತಿದ್ದರೆಂಬ ನಂಬಿಕೆಯಿಂದ ಮಾಯಾವಿಯೆಂದ ತಿಳಿಯಲಾದ ಹೆಂಗಸು ಸತ್ತರೆ, ಆಕೆಯೊಡನೆ ಅವಳ ಬೆಕ್ಕನ್ನೂ ಸಮಾಧಿಗೊಳಿಸುತ್ತಿದ್ದರು.

ನಾಯಿಯು ಒಂದು ಕಾಲದಲ್ಲಿ ಬೆಕ್ಕಿನ ಸ್ಥಾನವನ್ನು ಪಡೆಯಲು ಸ್ಪರ್ಧಿಸಲು ತೊಡಗಿದರೂ ಅದಕ್ಕೆ ಯಶಸ್ಸು ಸಿಗಲಿಲ್ಲ. ಬೆಕ್ಕು–ವ್ಯಕ್ತಿಗಳ ಸಂಬಂಧ ಯುಗ ಯುಗಗಳಷ್ಟು ಹಿಂದೆ ಇದ್ದಂತೆಯೇ ಇಂದಿಗೂ ಇದೆ. ಬೆಕ್ಕುಗಳು ತಮ್ಮ ವಾಸ್ತವ್ಯದ ಮನೆಯಿಂದ ನೂರು ಮೈಲು ದೂರ ಹೋದರೂ ಮರಳಿ ಬರುತ್ತವೆ; ಬಂದಿವೆ. ಮಾನವನ ನಿಕಟ ಸಹಚರಿಯಾದ ಈ ಮಾರ್ಜಾಲಗಳಲ್ಲಿ ಅಡಗಿರುವ ಅಪೂರ್ವ ಶಕ್ತಿ ಯಾವುದೆಂಬುದನ್ನು ಅರಿತುಕೊಳ್ಳಲು ಈ ತನಕ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಗಿವೆ.

ಯುದ್ಧಕಾಲದಲ್ಲಿ ಬ್ರಿಟನ ಬೆಕ್ಕುಗಳು ತಮ್ಮ ಮನೆಯ ನೆನಪು ಬಂದುದರಿಂದ, ಆದನ್ನು ಅದುಮಿಡಲಾರದೆ ಸುಮಾರು ೨೦ ೩೦ ಮೈಲುಗಳಷ್ಟು ದೂರ ನಡೆಯುತ್ತಿದ್ದುವು. ತಮ್ಮ ಮನೆಯ ಮಮತೆಯು ಮನೆ ಬೆಕ್ಕುಗಳಿಗೆ ಅಧಿಕವೆಂದು ಪಶುವೈದ್ಯರು ಹೇಳುತ್ತಾರೆ. ಬೆಕ್ಕು–ನಾಯಿಗಳಿಲ್ಲದ ದೇಶವಿಲ್ಲ. ಆದರೆ, ಇವುಗಳಲ್ಲಿಯೂ ಅನೇಕಾನೇಕ ಜಾತಿಗಳಿವೆ. ಜಾತಿ ಬೇರೆಯಾದರೂ ಅವುಗಳ ಗುಣಗಳಲ್ಲಿ ಭಿನ್ನತೆಗಿಂತ ಸಾಮ್ಯವೇ ಹೆಚ್ಚು.

ರಾಜ ಮಹಾರಾಜರ ಪ್ರಭುತ್ವವು ಲೋಕದಲ್ಲಿ ಹುಟ್ಟಿವೆ, ಸತ್ತಿವೆ, ಯುಗಯುಗಗಳು ಕಳೆದಿವೆ, ಆದರೂ ಮಾರ್ಜಾಲ—ಮಾನವ ಸಂಬಂಧಕ್ಕೆ ಮಾತ್ರ ಯಾವ ಪ್ರಕಾರದ ಚ್ಯುತಿಯೂ ಸಂಭವಿಸಿಲ್ಲವೆನ್ನುವುದು ವಿಸ್ಮಯವಲ್ಲವೆ?

— ಗೋರಾ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

**ಭಾವಾರ್ಚನೆ**

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಜನಮತವಿಂತಿದೆ

# ಕ್ರಿಯಾಶಾಲಿ ಪ್ರತಿನಿಧಿಗಳು ಬೇಕು

ಈಗ ಮಹಾ ಚುನಾವಣೆ ಮುಗಿದು ಒಂದೂಕಾಲು ವರ್ಷ ಕಳೆದಿದೆ. ಶಾಸನ ಸಭೆಗಳು ರಚಿತವಾಗಿ ಒಂದು ವರ್ಷ ಮುಗಿದಿದೆ. ಚುನಾವಣೆಯ ಕಾಲದಲ್ಲಿ ನಮ್ಮ ಪ್ರತಿನಿಧಿಗಳಲ್ಲಿ ಕೆಲವರು ಸರಕಾರದ ಪೂರ್ವ ಯೋಜನೆಗಳಂತೆಯೋ, ಬೇರೆ ಜನರ ಪ್ರಯತ್ನದಿಂದಲೋ ಆದ ಸಾರ್ವಜನಿಕ ಕಾರ್ಯಗಳನ್ನು ತಾವೇ ಸಾಧಿಸಿದ್ದೆಂದೂ ತಾವು ಆರಿಸಿಬಂದರೆ ಮುಂದೆ ತಮ್ಮ ಶಕ್ತಿಗೆ ಮೀರಿದ ಅನೇಕ ಕಾರ್ಯಗಳನ್ನು ಸಾಧಿಸುವುದಾಗಿಯೂ ಉಚಿತ ಅನುಚಿತ ರೀತಿಗಳಿಂದ ಪ್ರಚಾರ ಮಾಡಿದರು.

ಅವರ ಬೆಂಬಲಿಗರಲ್ಲಿ ಕೆಲವರು ತಾತ್ಕಾಲಿಕ ದಿನ ನಿರ್ವಹಣೆಗಾಗಿಯೂ, ಕೆಲವರು ಹಂಗು ದಾಕ್ಷಿಣ್ಯಗಳಿಗಾಗಿಯೂ, ಕೆಲವರು ವೈಯಕ್ತಿಕ ಹಾಗೂ ಸಾಮಾಜಿಕ ಕಾರ್ಯ ಸಾಧನೆಗಳ ಆಶೆಯಿಂದಲೂ, ಕೆಲವರು ಪಕ್ಷಗಳ ಆದೇಶದಂತೆಯೂ ಇನ್ನು ಕೆಲವರು ಹಿಂದಿನ ವೈಯಕ್ತಿಕ ಹಾಗೂ ಜಾತಿ ದ್ವೇಷಗಳ ಪ್ರತೀಕಾರಕ್ಕಾಗಿಯೂ ಅವಿಶ್ರಾಂತವಾಗಿ ಚುನಾವಣೆಗಳಲ್ಲಿ ಪ್ರಚಾರ ಮಾಡಿದರೆಂಬುದರಲ್ಲಿ ಸಂಶಯವಿಲ್ಲ. ಅಂತೂ ಆಗ ವಾತಾವರಣವೇ ಚುನಾವಣೆಯ ಕಾವಿನಿಂದ ಕಲುಷಿತವಾಗಿತ್ತು.

ಆದರೆ ಅಂದು ಚುನಾವಣೆಗಳಲ್ಲಿ ಆರಿಸಲ್ಪಟ್ಟವರಲ್ಲಿ ಹೆಚ್ಚಿನವರು ವಿಶ್ವವಿದ್ಯಾಲಯಗಳ ಪದವೀಧರರಾದ ಸುಸಂಸ್ಕೃತರೆನ್ನಿಸಿಕೊಂಡವರಾಗಿದ್ದರೂ ಅವರಿಂದು ತಮ್ಮ ಪ್ರತಿನಿಧಿತ್ವದ ಜವಾಬ್ದಾರಿಯನ್ನು ಕ್ರಮವಾಗಿ ನಿರ್ವಹಿಸುತ್ತಿಲ್ಲ. ಚುನಾವಣೆಗಳ ಸಮಯ ಜನತೆಗೆ ತಾವಿತ್ತ ಆಶ್ವಾಸನೆಗಳನ್ನು ಸಾಧಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿಲ್ಲ. ಶಾಸನ ಸಭಾ ಅಧಿವೇಶನ ಕಾಲದಲ್ಲಿ ನಮ್ಮ ಹೆಚ್ಚಿನ ಪ್ರತಿನಿಧಿಗಳು ಅಲ್ಲಿ ತಮ್ಮ ಹಾಗೂ ತಮ್ಮ ಚುನಾವಣಾ ಬೆಂಬಲಿಗರ ವೈಯಕ್ತಿಕ ಹಿತಾಸಕ್ತಿಯ ಕೆಲಸಗಳಲ್ಲಿಯೂ ವ್ಯರ್ಥ ಹರಟೆಗಳಲ್ಲಿಯೂ ತಮ್ಮ ಸಮಯವನ್ನು ಕಳೆಯುತ್ತಾರೆ. ಶಾಸನ ಸಭೆಗಳ ಕಾರ್ಯಕಲಾಪಗಳಲ್ಲಿಯೂ, ತಮ್ಮ ಜನತೆಯ ಸಾರ್ವತ್ರಿಕ ಹಿತಾಸಕ್ತಿಯಲ್ಲಿಯೂ ಅವರಿಗೆ ವಿಶೇಷ ಆಸಕ್ತಿ ಕಾಣುವುದಿಲ್ಲ. ಶಾಸನ ಸಭೆಗಳ ಅಧಿವೇಶನದ ಕಾಲದಲ್ಲಿ ಪಕ್ಷದ ಪ್ರತೋದಕರ ಆದೇಶದಂತೆ ಓಟು ಕೊಡುವ ಸಂದರ್ಭದಲ್ಲಿ ಮಾತ್ರ ಸಭೆಯಲ್ಲಿ ಹಾಜರಿರುತ್ತಾರೆ. ಉಳಿದ ಸಮಯ ಅಲ್ಲಿ ಕೆಲವೇ ಮಂದಿ ಪ್ರತಿಭಾಶಾಲಿ ಪ್ರತಿನಿಧಿಗಳೂ, ಅಧ್ಯಕ್ಷರೂ ಮತ್ತು ಸಂಬಂಧಪಟ್ಟ ಮಂತ್ರಿಗಳೂ ಶಾಸನ ಸಭೆಗಳಲ್ಲಿ ಹಾಜರಿರುತ್ತಾರೆ.

ಆದರೆ ಈ ನಮ್ಮ ಪ್ರತಿನಿಧಿಗಳು ತಮ್ಮ ಪ್ರತಿನಿಧಿತ್ವದ ಹೊಣೆ ನಿರ್ವಹಣೆ ಸಮಯದ ವೆಚ್ಚಕ್ಕಾಗಿ ತಿಂಗಳಿಗೆ ರೂ. ೩೫೦ರಿಂದ ೪೦೦ರ ವರೆಗೆ, ಶಾಸನ ಸಭೆಗಳ ಅಧಿವೇಶನ ಕಾಲದಲ್ಲಿ ರೂ ೧೫ರಿಂದ ೩೫ರ ವರೆಗೆ ದೈನಿಕ ಭತ್ತೆ ಪಡೆದು; ಬೆಂಗಳೂರು ಡಿಲ್ಲಿಗಳಂತಹ ಪಟ್ಟಣಗಳಲ್ಲಿ ಅರಮನೆಗಳಂತಹ ಸುಸಜ್ಜಿತ ಬಂಗಲೆಗಳಲ್ಲಿ ಸುಖಜೀವನ ನಡೆಸುತ್ತಾರೆ. ಅವರ ಈ ಸುಖಜೀವನದ ಸೌಕರ್ಯದ ಬೆಲೆಯನ್ನು ರಾಷ್ಟ್ರದ ಬಹು ಸಂಖ್ಯಾಕ ಬಡವರು ದುಡಿದು ತೆರುತ್ತಾರೆಂಬುದನ್ನು ಗಮನಿಸಿದರೆ ಈ ಪ್ರತಿನಿಧಿಗಳನ್ನು ಆರಿಸಿ ಕಳಿಸಿದ ನಾವು ನಾಚಿಕೆಯಿಂದ ತಲೆ ತಗ್ಗಿಸಬೇಕಾಗುತ್ತದೆ.

ಹಾಗಾದರೆ ನಮ್ಮ ಈ ಪ್ರತಿನಿಧಿಗಳು ಏನು ಮಾಡಬೇಕು? ಅವರು ಕ್ರಮವಾಗಿ ವರ್ತಿಸುವಂತೆ ಆದೇಶ ನೀಡುವವರು ಯಾರು? ಈ ಪ್ರಶ್ನೆಗಳಿಗೆ ಉತ್ತರ ಕೆಳಗಿನಂತಿದೆ. "ಪೂಜ್ಯ ದಿವಂಗತ ರಾಜೇಂದ್ರ ಪ್ರಸಾದರ ಅಭಿಪ್ರಾಯದಂತೆ" ಚುನಾವಣಾ ಪ್ರಚಾರದ ಅವಧಿ ನಾಲ್ಕು ಮುಕ್ಕಾಲು ವರ್ಷವಿರಬೇಕು. ಈ ಅವಧಿಯಲ್ಲಿ ಚುನಾವಣೆಗೆ ನಿಲ್ಲುವವರು ತಮ್ಮ ಮತದಾರ ಕ್ಷೇತ್ರಗಳ ಜನಸಾಮಾನ್ಯರ ಹಿತಸಾಧನೆಗಾಗಿ ದುಡಿಯಬೇಕು. ಚುನಾವಣೆಗೆ ಮೂರು ತಿಂಗಳಿರುವಾಗ ಎಲ್ಲಾ ತರದ ಪ್ರಚಾರ ನಡೆಸುವುದನ್ನು ನಿಲ್ಲಿಸಿ ಜನರು ಶಾಂತವಾಗಿ ವಿಚಾರ ಮಾಡಿ ತಮ್ಮ ಪ್ರತಿನಿಧಿಗಳನ್ನು ಆರಿಸುವಂತಾಗಬೇಕು" ಇದು ಉತ್ತಮ ಸ್ವೀಕಾರಾರ್ಹ ಸಲಹೆ. ಇದರ ಪ್ರಕಾರ ಚುನಾವಣೆಯಲ್ಲಿ ಆರಿಸಿ ಬಂದವರೂ ಮುಂದೆ ಚುನಾವಣೆಗೆ ನಿಲ್ಲುವವರೂ ಹೊಸದಾಗಿ ನಿಲ್ಲಬಯಸುವವರೂ ತಮ್ಮ ಮತದಾರ ಕ್ಷೇತ್ರಗಳಲ್ಲಿ ಸಂಚರಿಸುವ ಕಾರ್ಯಕ್ರಮವಿಟ್ಟುಕೊಳ್ಳಬೇಕು. ಈ ವಿಷಯವನ್ನು ಅಲ್ಲಿನ ಜನತೆಗೆ ಮುಂದಾಗಿ ಪತ್ರಿಕೆಗಳ ಮೂಲಕ ತಿಳಿಸಬೇಕು. ಸಂಚಾರದ ಕಾಲದಲ್ಲಿ ಪ್ರತಿಯೊಂದು ಊರಿನ ಜನರ ಪ್ರಾಮುಖ್ಯ ತೊಂದರೆಗಳನ್ನು ಅಧ್ಯಯನ ನಡೆಸಿ ಅಂಕೆ ಸಂಖ್ಯೆಗಳನ್ನು ಕಲೆಹಾಕಿ ಸ್ಥಳೀಯ ಉತ್ಸಾಹಿ ಜನರ ಹಾಗೂ ಸಂಸ್ಥೆಗಳ ಸಹಕಾರದಿಂದ ಅಲ್ಲಿನ ಜನರನ್ನು ಸಂಘಟಿಸಿ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸಬೇಕು. ಈ ರೀತಿಯ ಯತ್ನಕ್ಕೆ ಸಾಕಷ್ಟು ಜನ ಸಹಾಯ ಸಿಗುವುದರಲ್ಲಿ ಸಂಶಯವಿಲ್ಲ. ಸಂಘಟಿತ ರೀತಿಯಿಂದ ಪ್ರಯತ್ನಿಸುವಾಗ ಸರಕಾರದ ಸಹಾಯವು ಸುಲಭವಾಗಿ ದೊರಕುವುದು. ಇಂತಹ ಪ್ರತಿನಿಧಿಗಳು ಇಂದಿನ ನಮ್ಮ ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಇತರ ಸಮಸ್ಯೆಗಳೇನು? ಅವುಗಳ ಪರಿಹಾರಕ್ಕಾಗಿ ಸರಕಾರವು ಯಾವ ರೀತಿಯ ಸಹಾಯ ನೀಡಬಹುದು ಎಂಬುದನ್ನು ಪ್ರತ್ಯಕ್ಷ ಅನುಭವ ಹಾಗೂ ಅಂಕೆ ಸಂಖ್ಯೆಗಳಿಂದ ಸಾಧಾರವಾಗಿ ಶಾಸನ ಸಭೆಗಳಲ್ಲಿ ಮಂಡಿಸಿದರೆ ಅವರ ಮಾತಿಗೆ ಬೆಲೆ ಬಂದೇ ತೀರುವುದು. ಅವರ ಹಿಂದೆ ಸಂಘಟಿತ ಜನ ಶಕ್ತಿ ಇರುವಾಗ ಯಾವ ಪಕ್ಷದ ಸರಕಾರವಿದ್ದರೂ ಅವರ ಕೋರಿಕೆಯನ್ನು ಮನ್ನಿಸಲೇಬೇಕಾಗುತ್ತದೆ; ಮಾತ್ರವಲ್ಲ ಮುಂದಿನ ಚುನಾವಣೆಗಳಲ್ಲಿ ಅವರಿಗೆ ಬೆಂಬಲಿಗರನ್ನು ಕಲೆ ಹಾಕುವ ಆವಶ್ಯಕತೆಯಾಗಲೀ ಹೆಚ್ಚಿನ ಹಣ ವೆಚ್ಚ ಮಾಡುವ ಅಗತ್ಯವಾಗಲೀ ಕೀಳುರೀತಿಯ ಪ್ರಚಾರ ಮಾಡಬೇಕಾದ ಸಂದರ್ಭವಾಗಲೀ ಬರಲಾರದು.

ಇಂತಹ ಪ್ರತಿನಿಧಿಗಳು ಪ್ರತಿ ತಿಂಗಳು ತಮ್ಮ ಕಾರ್ಯಗಳ ವರದಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಆಗ ಇತರರಿಗೂ ಅದೊಂದು ಉತ್ತಮ ಮಾದರಿಯಾಗುವುದು. ಹೀಗೆ ವರದಿ ಒಪ್ಪಿಸುವುದು ಯಾವ ಪ್ರತಿನಿಧಿಗಳಿಗೂ ಅವಮಾನಕರವೂ ಅಲ್ಲ. ಕಾರಣ ತಮ್ಮನ್ನು ಆರಿಸುವುದರ ಮೂಲಕ ಸೇವಿಸಿದ ಜನತೆಗೆ ತಮ್ಮ ಕಾರ್ಯಭಾರಗಳ ವರದಿ ಸಲ್ಲಿಸುವುದು ಪ್ರತಿನಿಧಿಗಳ ಮತ್ತು ಪ್ರತಿನಿಧಿಗಳಾಗ ಬಯಸುವವರ ಪವಿತ್ರ ಕರ್ತವ್ಯ. ಮೇಲಿನ ಸಲಹೆಗಳ ಬಗ್ಗೆ ನಮ್ಮ ಪ್ರತಿನಿಧಿಗಳಾದವರೂ, ಆಗ ಬಯಸುವವರೂ, ಜನಸಾಮಾನ್ಯರೂ ವಿಚಾರ ಮಾಡಬೇಕಾಗಿ ನನ್ನ ನಮ್ರ ಪ್ರಾರ್ಥನೆ.

—ಒಬ್ಬ ಮತದಾರ

ಹನಿಗತೆ

## ಅಖಂಡ ಖಜಾನೆ

ಒಮ್ಮೆ ಟಾಲಸ್ಟಾಯರ ಹತ್ತಿರ ಒಬ್ಬ ತರುಣ ಬಂದು ಹೇಳಿದ 'ನಾನು ಬಡರ ಬಡವ, ನನ್ನ ಹತ್ತಿರ ಒಂದು ಕಾಸು ಕೂಡ ಇಲ್ಲ" ಎಂದ.

ತೀಕ್ಷ್ಣ ದೃಷ್ಟಿಯಿಂದ ಅವನ ಕಡೆಗೆ ನೋಡಿ ಟಾಲಸ್ಟಾಯರು ಕೇಳಿದರು. "ಒಂದು ಕಾಸೂ ಕೂಡ ಇಲ್ಲವೇ?" ಎಂದು.

"ಇಲ್ಲ ಸ್ವಾಮಿ" ಎಂದು ಅತೀ ದೈನ್ಯದಿಂದ ಆ ತರುಣನು ಉತ್ತರವಿತ್ತ.

ಆಗ ಟಾಲಸ್ಟಾಯರು ಕೇಳಿದರು. "ನನ್ನೊಬ್ಬ ಪರಿಚಿತ ವ್ಯಾಪಾರಿ ಇದ್ದಾರೆ ಅವರು ಕಣ್ಣುಗಳನ್ನು ಖರೀದಿಸುತ್ತಾರೆ. ನಿನ್ನ ಎರಡು ಕಣ್ಣುಗಳಿಗೆ ಅವರು ಎರಡು ಸಾವಿರ ರೂಪಾಯಿ ಕೊಡುವರು. ನಿನ್ನ ಕಣ್ಣು ಕೊಡುತ್ತೀಯೋ ಹೇಳು" ಎಂದರು

"ಇಲ್ಲ ಸ್ವಾಮಿ" ಎಂದನು ಆ ತರುಣ

"ನಿನ್ನ ಕೈಗಳನ್ನಾದರೂ ಮಾರಬಹುದು. ಹೇಳು" ಎಂದರು ಟಾಲಸ್ಟಾಯರು.

"ಅದೂ ಸಾಧ್ಯವಿಲ್ಲ ಸ್ವಾಮಿ" ಎಂದ ಆ ತರುಣ.

"ಕಾಲುಗಳನ್ನು ಮಾರಲೂ ಅಡ್ಡಿಯಿಲ್ಲ" ಎಂದರು.

"ಅದೂ ಸಾಧ್ಯವಿಲ್ಲ ಸ್ವಾಮಿ, ತಾವು ಇಂಥ ಪ್ರಶ್ನೆ ಯಾಕೆ ಕೇಳುತ್ತಿದ್ದೀರಿ?

"ಸರಿಯಾಗಿಯೇ ಪ್ರಶ್ನೆ ಕೇಳುತ್ತಿದ್ದೇನೆ. ನಿನ್ನನ್ನು ನೀನೇ ಮಾರಿಕೊಳ್ಳುವಂತಿದ್ದರೆ ಅವನು ಹತ್ತು ಸಾವಿರ ರೂಪಾಯಿ ಕೊಡಲಿಕ್ಕೂ ತಯಾರಿದ್ದಾನೆ"

"ಸಾವಿರ ಬಿಟ್ಟು ಲಕ್ಷಕ್ಕೂ ನನ್ನನ್ನು ಮಾರಿಕೊಳ್ಳಲಾರೆ" ಎಂದು ಅಭಿಮಾನದಿಂದ ತರುಣ ಉತ್ತರಕೊಟ್ಟ

ಕೊನೆಗೆ ನಕ್ಕು ಟಾಲಸ್ಟಾಯರು ಹೇಳಿದರು, "ಲಕ್ಷ ರೂಪಾಯಿಗೂ ಮಾರಲಿಕ್ಕೆ ಒಪ್ಪದಂಥ ದೇಹದ ಮಾಲಿಕನಾಗಿದ್ದು ಕೂಡ ನೀನು ನನ್ನ ಹತ್ತಿರ ಒಂದು ಕಾಸು ಕೂಡ ಇಲ್ಲ ಎಂದು ದೈನ್ಯ ಪಡುತ್ತೀಯಲ್ಲ! ಇದು ನಗತಕ್ಕ ಮಾತಲ್ಲವೇನಯ್ಯಾ? ಈ ಕಣ್ಣು, ಈ ಕೈ ಈ ಕಾಲು ಇವೆಲ್ಲ ಅಖಂಡ ಸಂಪತ್ತಿನ ಭಂಡಾರವಾಗಿವೆ. ಇದನ್ನು ಲಕ್ಷ್ಯವಿಟ್ಟು ದುಡಿ. ಬೆಳ್ಳಿ ಬಂಗಾರವಷ್ಟೇ ಅಲ್ಲ; ಸೂರ್ಯ ಚಂರೂ ನಿನ್ನ ಕೈಯಲ್ಲಿ ಬರುವರು.


ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಟಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ —
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.



ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ
ಎಂ. ಎ, ಐ. ಸಿ. ಯಸ್, ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—
TALES OF IND
ಕಥಾವಳಿಯ ಕನ್ನಡ ಅನುವಾದ
ಭಾರತೀಯ ಕಥೆಗಳು
ಚಿಕ್ಕ ಚೊಕ್ಕ ೧೫ ಕಥೆಗಳು ಬೆಲೆ ರೂ 1–12–0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,
ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

## ಹಿಮಾಲಯದ ಸೀಮಾ ಪ್ರದೇಶ

(೩ನೇ ಪುಟದಿಂದ)

ದು. ಪಶ್ಚಿಮ ವಿಭಾಗದಲ್ಲಿ ಜಮ್ಮೂ—ಕಾಶ್ಮೀರ, ಹಿಮಾಚಲ ಪ್ರದೇಶ, ಪಂಜಾಬಿನ ಗುಡ್ಡ ಪ್ರದೇಶ, ಉತ್ತರ ಪ್ರದೇಶದ ಕುಮಾವೊನ್ ಗ್ರಾಮ... ಇವು ರಾಜಕೀಯ ಹಾಗೂ ಸೈನಿಕ ದೃಷ್ಟಿಯಿಂದ ಒಂದಾಗಿವೆ. ಜಮ್ಮೂ—ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ಥಾನಿ ಆಕ್ರಮಣಗಾರರು ಬಲಾತ್ಕಾರದಿಂದ ಬಗ್ಗಿಸಿ ಕೊಂಡಿದ್ದರೆ, ಸ್ವಲ್ಪ ಪ್ರದೇಶವನ್ನು ಚೈನಿ ಕಮ್ಯುನಿಸ್ಟರು ಕಸಿ ಹಿಡಿತದಲ್ಲಿಟ್ಟು ಕೊಂಡಿದ್ದಾರೆ. ಇದೀಗ ಪಾಕ್-ಚೈನಾದ ನಡುವೆ ಒಪ್ಪಂದ ನಡೆಸುವವರಿಂದ ಆ ಸ್ಥಳದಲ್ಲಿ ರಕ್ತ ಪಡೆಗಳ. ಇವೆಂತು ಅನೂನ.ಪ ದ.ಷ್ಯ ಕ್ಯಗಳನ್ನಾಗಬಹುವೆಂಬುದು ಸ್ಪಷ್ಟವಿದೆ.

ಕಾಶ್ಮೀರದಕ್ಷಿಣದ ವಿಚಿತ್ರ ಸ್ಥಾನ, ಪಶ್ಚಿಮ ಬಂಡಗಾಳತನ, ಪಕ್ಷಪಾತತನ, ರಾಜಕೀಯ ಅಸ್ಥಿರತೆ ಇವು ಚೈತ್ರದವುಗಳ ಗಿಲಪ್ಪಾನವನ್ನಿತ್ತಿವೆ (ಇವುಗಳ ಕುರಿತು ಪ್ರತ್ಯೇಕ ಲೇಖನಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗುತ್ತಿದೆ) ಪಂಜಾಬಿನ ಗಡಿಯು ಹಿಮಾಚಲ ಪ್ರದೇಶವನ್ನು ವಿಭಾಗಿಸುವದರಿಂದ, ರಾಜಕೀಯ ಭವಿಷ್ಯತ್ತಿನ ಅಸ್ಥಿರತೆಯಿಂದಾಗಿ ಅಲ್ಲಿನ ಆತ್ಮಸ್ಥೈರ್ಯ ಅಲ್ಲಾಡಿ ಹೋಗುತ್ತಿದ್ದಾಳೆ. ಅಲ್ಲಿ ಪಾಕಿಸ್ಥಾನಿ ಹಾಗೂ ಚೈನಿ ಗುಪ್ತಚಾರರು ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಲಡಾಖ್-ಸ್ಪಿತಿ ಮುಂತಾದೆಡೆಗಳು ಹಿಂದಿಗೂ ಚೈನಾ ಕಣ್ಣು ನಟ್ಟಿದೆ. ಈಗಾಗಲೇ ಆ ಪ್ರದೇಶಗಳು ತಮ್ಮ ದರಾಕ್ರಮದ ಪರಿಚಯವನ್ನು ಚೈನಿ ಕಮ್ಯುನಿಸ್ಟರಿಗೆ ಮಾಡಿಕೊಟ್ಟಿವೆ. ಮಧ್ಯದಾಳಿ ಕುಮಾವೊನ್ ಪ್ರದೇಶವು ಸ್ವಲ್ಪ ಸ್ಥಿರವಾಗಿದೆ.

ಪೂರ್ವ ವಿಭಾಗದಲ್ಲಿ ನೇಪಾಲ, ಸಿಕ್ಕಿಂ ಭೂತಾನ್ ಮುಂತಾದ ರಾಜ್ಯಗಳವೆ. ನೇಪಾಗ ನೇಪಾಲಕ್ಕೂ ನಮಗೂ ಇರುವ ಸಂಬಂಧವನ್ನು ಹಿಂದಿನ ಸಂಚಿಕೆಯಲ್ಲಿ ಕಂಡಿರುವೆವು. ಪ್ರಚಲಿತ ರಾಜಕಾರಣಿಗಳಿಂದ ಸಂಪರ್ಕ-ವಾತಾವರಣ ಹದಗೆಟ್ಟಿರುತ್ತವೆ. ಅದನ್ನು ಸರಿಪಡಿಸುವ ಉದ್ದೇಶದಿಂದ ಭಾರತದ ಗೃಹಮಂತ್ರಿಗಳೂ ರಾಷ್ಟ್ರೀಯ ಹಿತೈಷಿಗಳೂ ಅಲ್ಲಿಗೆ ಹೋಗಿದ್ದರು. ಚೈನಿಯರು ಅದಾಗಲೇ ಅವರೊಡನೆ ಒಡಂಬಂಡಿಕೆಯ ಆಟವನ್ನು (ಮಕ್ಕಳು ಮದುವೆಯಾಟ ಮಾಡುವಂತೆ) ಆಡಿ, ತಮ್ಮ ಸ್ವಭಾವದ ಪರಿಚಯವನ್ನು ಪ್ರಕಟಿಸಿರುವರು. ಇದೀಗ ಪಾಕಿಸ್ಥಾನದಿಂದ ಸ್ವತಃ ಅಯೂಬ ಖಾನ್ ಹಾಗೂ ಮಾತುಕತೆ ಮುಂದುವರಿಸುವದರಲ್ಲಿ ಮುಂದಾಳಾಗಿರುವ ಜೆಡ್. ಎ. ಬುಟ್ಟೊ ನೇಪಾಲಕ್ಕೆ ಹೋಗಿರುವರು-ಬಂದಿರುವರು. ಅವರು ಅಲ್ಲಿ ಭಾರತದ ಸಂಪರ್ಕ ವಾತಾವರಣವನ್ನು ವಿಷಮಯಗೊಳಿಸಲು ತಮ್ಮ ಪೂರ್ಣ ಬಲವನ್ನು ಪ್ರಯೋಗಿಸಿದುದರಲ್ಲಿ ಸಂದೇಹವೇ ಇರುವದಿಲ್ಲ. ನೇಪಾಲಕ್ಕೆ ತೀವ್ರ ಸಹಾಯ ಮಾಡುವದಾಗಿ ಭರವಸೆ ಇತ್ತಿದ್ದಾರೆ.

ಸಿಕ್ಕಿಂ, ಭೂತಾನಗಳಂತೂ ಬಹಳ ಚಿಕ್ಕ ರಾಜ್ಯಗಳಿವೆ. ಅವುಗಳನ್ನು ಆಸೆ ತೋರಿಸಿಯಾಗಲೀ, ಬೆದರಿಸಿಯಾಗಲೀ ತನ್ನ ಮುಷ್ಟಿಯೊಳಗೆ ಬರಿಸಿಕೊಳ್ಳುವದು ಚೈನಾಕ್ಕೆ ಒಂದು ಸಾಹಸವೇ ಅಲ್ಲ. ಆ ರಾಜ್ಯಗಳಾದರೋ ಭಾರತವನ್ನೇ ನಂಬಿಕೊಂಡಿವೆ.

ಭೂತಾನದಿಂದ ಬರ್ಮಾದ ವರೆಗಿನ ಗಡಿಯನ್ನು ಪೂರ್ವ ವಿಭಾಗವೆನ್ನಬಹುದು. ಇದು ಪರ್ವತಮಯ ಪ್ರದೇಶವಿದೆ. ಬ್ರಹ್ಮಪುತ್ರ ಕಣಿವೆಯಿಂದ ತ್ರಿವಿಷ್ಟಪದ ಗಡಿಯ ವರೆಗೆ ಇದು ಹರಡಿಕೊಂಡಿದೆ. ಇಲ್ಲೇ ಈಶಾನ್ಯ ಗಡಿ ಪ್ರದೇಶ (ನೇಫಾ) ಇದೆ. ನೇಫಾ ಪ್ರದೇಶಗಳು ಕಾರಣವೇನೆಂಬುದನ್ನು ಹಿಂದಿನ ಸಂಚಿಕೆಯಲ್ಲಿ ನೋಡಿರುವೆವು. ಈಗಾಗಲೇ ಚೈನಿ ಕಮ್ಯುನಿಸ್ಟ್ ಪಡೆಗಳು ಈ ಪ್ರದೇಶವನ್ನು ರಕ್ತ ಸಿಂಚನಗೊಳಿಸಿ ಅಪವಿತ್ರ ಮಾಡಿರುವವು. ಅವರು ತಮ್ಮ ಭೂಪಟದಲ್ಲಂತೂ ೩೫,೦೦೦ ಚದರ ಮೈಲು ಭೂಪ್ರದೇಶವನ್ನು ತೋರಿಸಿಕೊಂಡಿದ್ದಾರೆ. ಈಗ ಇಲ್ಲಿಗೂ ಅಸ್ಸಾಮಿಗೂ ಆಡಳಿತ ಸಂಪರ್ಕ ಬೆಳೆಯುತ್ತಿದೆ. ಅಸ್ಸಾಮಿಗೆ ಬಂದೊದಗಿರುವ ಆಪತ್ತು ಸಾಧಾರಣದ್ದಲ್ಲ. ಭಾಷಾಗೊಂದಲ ಹಾಗೂ ಪಾಕಿಸ್ಥಾನಿಗಳ ಪೀಡೆಯನ್ನೆದುರಿಸಲು ಪ್ರಯತ್ನಿಸುತ್ತಿದ್ದಾಗಲೇ ಚೈನಿಯರ ಆಕ್ರಮಣವನ್ನೆದುರಿಸಬೇಕಾಗಿ ಬಂತು. ಅಂಜುಬುರುಕ ರಾಜಕೀಯೋದ್ಯಮಿಗಳು ಹಾಗೂ ಅಧಿಕಾರಿವರ್ಗವಂತೂ ಅಸ್ಸಾಮಿನ ಅಪಾಯವನ್ನು ಹೆಚ್ಚಿಸುತ್ತಿವೆ. ನಾಗಾ ವಿದ್ರೋಹಿಗಳ ಕಾಟವೂ ಸ್ಥಿಮಿತಕ್ಕೆ ಬಂದಿರುವದಿಲ್ಲ. ಯಾವಾಗ ಬೇಕಾದರೂ ಅವರು ರಹಸ್ಯವಾಗಿ ಪಾಕಿಸ್ಥಾನಕ್ಕೆ ಹೋಗಿ ಬರುತ್ತಿದ್ದಾರೆ. ಶಾಂತಿ ದೂತನ ವೇಷದಲ್ಲಿ ಪೀಜೋನ ರಾಯಭಾರಿಯಾಗಿ ಬಂದಿದ್ದ ಸ್ಕಾಟನು ತನ್ನ ಕೆಲಸ ಮುಗಿಸಿಕೊಂಡು ಲಂಡನಿಗೆನೇ ಹಿಂತಿರುಗಿದ್ದಾನೆ! ತ್ರಿಪುರವೂ ಈ ವಿಭಾಗದಲ್ಲೇ ಇದೆ. ಸಮಸ್ಯೆಗಳ ತವರೂರಾಗಿರುವ ತ್ರಿಪುರದ ಕುರಿತು ಹಿಂದಿನ ಸಂಚಿಕೆಯಲ್ಲಿ ಮಾಹಿತಿ ಪಡೆದುಕೊಂಡಿರುವೆವು. ಇಲ್ಲಿಯ ಆಡಳಿತ ಸಮಿತಿಯಲ್ಲಿರುವ ಕಮ್ಯೂನಿಸ್ಟ್ ಸದಸ್ಯರು, ಅಪವಾದಕ್ಕೆ ಒಬ್ಬರನ್ನು ಬಿಟ್ಟು ಉಳಿದವರೆಲ್ಲರೂ, ಕಾರಾಗೃಹದೊಳಗಿದ್ದಾರೆ. ಅವರ ಸಂಖ್ಯೆಯು ನಗಣ್ಯವಿರುವದಿಲ್ಲ. ಇದರಿಂದ ತ್ರಿಪುರಕ್ಕೆ ಒಂದೆಡೆ ಚೈನಿ ಕಮ್ಯೂನಿಸ್ಟರ ಕಾಟ, ಇನ್ನೊಂದೆಡೆ ಮುಸ್ಲಿಂ ಪಾಕಿಸ್ಥಾನಿಗಳ ಪೀಡೆ ಸಹಿಸಬೇಕಾಗಿದ್ದಲ್ಲಿ ಒಳಗಿಂದೊಳಗೆ ಸುರಂಗವಿಡುತ್ತಿದ್ದಾರೆ ಅಲ್ಲಿ ಇರುವ ಕಮ್ಯೂನಿಸ್ಟರು.

ಸೀಮಾ ಪ್ರದೇಶ ಸಮಸ್ಯಾ ಪ್ರದೇಶವಾಗಿ ಬಿಟ್ಟಿದೆ. ಅದರಿಂದ ಅದೆಂತು ಪಾರಾಗಿಸಿಕೊಳ್ಳುವದು? ಇತಿಹಾಸದ ಪುನರಾವೃತ್ತಿ ನಡೆಯುವದನ್ನು ಹಿಂದಿನ ಸಂಚಿಕೆಯಲ್ಲಿ ತಿಳಿದುಕೊಂಡಿರುವೆವು. ಸಮಸ್ಯಾ ಹಾಲಾಹಲವನ್ನು ಕುಡಿಯಲು ಸೀಮಾ ಪ್ರದೇಶದಲ್ಲೇ ಗೌರಿ—ಶಂಕರನಿದ್ದಾನೆ.

—ಶಿವಶಂಕರ, ಮುದ್ರಾಸು.


**25,000**

ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಯವಾಗಿರುವ
ಹೊಸಕೆರೆ ಚಿದಂಬರಯ್ಯನವರ

# ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ: ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ಹೆಚ್ಚು ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ.



ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ತಳಿ ಚಿನ್ನ ಇರುತ್ತದೆ.
ಬೇಕಾದಲ್ಲಿ 1 ರೂ. ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡೆದುಕೊಳ್ಳುವ ಭರವಸೆ ಕೊಡುತ್ತೇವೆ.
ವಿ. ಸೂ. ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡೆದುಕೊಳ್ಳುವರೆ ಸರಕಾರದ ಲೈಸೆನ್ಸ್ ಸಿಕ್ಕಿರುತ್ತದೆ
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡೆದುಕೊಂಡು ಜಾಗ್ರತೆಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

# ಶ್ರೀ ಕೃಷ್ಣಾ ಜ್ಯುವೆಲರಿ ಮಾರ್ಟ್

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

● ಕುಮಾರಿ ಬಿಲ್ಲೆಗಳು ●
(ರಿಜಿಸ್ಟರ್ಡ್ Regd.)
ಪ್ರಕೃತಿಯ ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಪರೀಕ್ಷೆಗೊಳಗಾದ ಆಯುರ್ವೇದೀಯ ಮಿಶ್ರಣ!
ಟ್ಯಾಬ್ಲೆಟ್ 10 ಸಾಮಾನ್ಯ ರೂ. 4/. ಮಧ್ಯಮ ರೂ. 6/.
ಉತ್ತಮ ರೂ. 9/.
P. Devee & Co. (N. J.) Calcutta—40


## ಎದ್ದೇಳು ಓ ಕಂದ!

೧

ಎದ್ದೇಳು ಓ ಕಂದ
ಮೂಡಲಲಿ ರವಿ ಬಂದ
ನಿದ್ದೆಯನು ಬಿಟ್ಟೆದ್ದು ನಲವಿನಿಂದ ||
ಉತ್ಸಾಹ ಮದದಿಂದ
ಸಂತೋಷ ಭರದಿಂದ
ಏಳೇಳು ಕನ್ನಡದ ಸಿರಿಯೆ. ಕಂದ ||

೨

ಕತ್ತಲೆಯು ಕಳೆದಿಹುದು
ಹೊಂಬೆಳಕು ಚೆಲ್ಲಿಹುದು
ಮಧುಕರಿಯ ಗಾನವದು
ಕೇಳುತಿಹುದು ||
ಸುವ ರಾಶಿ ನಗುತಿಹುದು
ಮಾಮರವ ಬೇರುಸ್ವರ
ಇನ್ನೇಕೆ ಹೇಳು ನೀನೇಳದಿಹುದು ||

೩

ಮೊರೆಯುದಕೊ ಕೇಳುತಿದೆ
ಗುರಿಯಿದಕೊ ಕಾಣುತಿದೆ
ಕರೆ ಬರಲು ಕಣ್ಮುಚ್ಚಿ ಕುಳಿತಿರುವುದೆ ||
ಜನ ನಿನ್ನ ಆರಸುತಿದೆ
ಬರವನ್ನೆ ಕಾಯುತಿದೆ
ಒಡಹುಟ್ಟಿ ಬೆಳೆಸುವರ ಮರೆಯಬಹುದೆ ||

೪

ಜನದ ಸಿರಿ ನಿನಗಿರಲಿ
ದಾಗುಣವು ಬಂದಿರಲಿ
ಕೆಚ್ಚೆದೆಯು ಕವಚವದು ನಿತ್ಯವಿರಲಿ ||
ಸಂತೃಪ್ತ ನುಡಿಯಿರಲಿ
ಸಂತಸದ ಮನವಿರಲಿ
ನಿತ್ಯ ನವ ಜೀವನವು ತುಂಬಿಬರಲಿ ||

—ಶಾ. ಶ. ನಾ. ಭ.

## ವಿನಂತಿ

ನಮ್ಮ ಕೆಲ ಚಂದಾದಾರರು ನಾವೆಷ್ಟು ಸಲ ವಿನಂತಿಸಿದರೂ ತಮ್ಮ ಚಂದಾಹಣವನ್ನು ಪಾವತಿ ಮಾಡದಿರುವುದು ವಿಷಾದಕರವಿದೆ. ಕೆಲವರು ವಿನಂತಿಸಿದೊಡನೆ ತಡವಾಗಿ ಚಂದಾ ಕಳುಹಿಸಿದ್ದಾರೆ; ಇನ್ನು ಕೆಲವರು ವಿ.ಪಿ.ಪಿ. ಸ್ವೀಕರಿಸುವುದರ ಮೂಲಕ ಚಂದಾ ಸಲಿಸುತ್ತಿದ್ದಾರೆ. ಇವರೆಲ್ಲರಿಗೂ ನಾವು ತುಂಬಾ ಆಭಾರಿಗಳಾಗಿದ್ದೇವೆ.

ಇನ್ನೂ ಚಂದಾ ಬಾಕಿ ಇರುವವರು ದಯಮಾಡಿ ಬಾಕಿಯನ್ನು ಅದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ. ಈಗ ಪುನರ್ವಿಮರ್ಶಿತ ಅಂಚೆ ದರಗಳಂತೆ ವಿ. ಪಿ. ಮಾಡಿದರೆ ಮೊದಲಿಗಿಂತಲೂ ಹೆಚ್ಚಿನ ನಷ್ಟವಾಗುವುದು. ಆದುದರಿಂದ ನಮ್ಮ ಕಳಕಳಿಯ ವಿನಂತಿಯನ್ನು ಮನ್ನಿಸಿ ದಯವಿಟ್ಟು ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ಅಭಿಮಾನಪೂರ್ವಕ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

—ಮೆನೇಜರ್


ಅಪವ್ಯಯ ನಿಲ್ಲಿಸಿ
ಸಂಪನ್ಮೂಲಗಳನ್ನು
ರಕ್ಷಿಸಿ

# ನರ ಬಲಿ

(೨ನೇ ಪುಟದಿಂದ)

ಕಷ್ಟವಾದ್ದರಿಂದ ಇಳಿದವನೆ ಕೊಡೆ ಎತ್ತಿ ಹಿಡಿದು, ಕಾಣುವಂತೆ ಬರುತ್ತೇನೆ. ನೀನು ನನ್ನನ್ನು ಬಂದು ಕಾಣು. ಎಂದು ಶಂಕರ ಬರೆದಂತೆ ಕೊಡೆ ಹಿಡಿದದ್ದು ಕಾಣದೆ ಬಾಗಿಲಿನಿಂದ ಸೈನಿಕರ ವಸ್ತ್ರ ಧರಿಸಿದ ಒಬ್ಬರ ಹೆಸರನ್ನು ಬಿಡದೆ ಕೇಳಿದ್ದ ರಾಮು. ಆದರೆ ಅವನ ಹಳೆಯ ಗೆಳೆಯ ಶಂಕರನ ಮುಖ ಅವನ ಕಣ್ಣಿಗೆ ಬೀಳಲಿಲ್ಲ. ಎಲ್ಲರೂ ಹೊರಟು ಹೋದರು. ರೈಲ್ವೇ ಸ್ಟೇಶನ್ ಪುನಃ ಖಾಲಿಯಾಯಿತು, ಇನ್ನೆರಡು ರೈಲುಗಳನ್ನು ಕಂಡೇ ಮನೆಗೆ ತೆರಳುವುದೆಂದು ಅಲ್ಲೇ ನಿಂತ ರಾಮು.

ಅರ್ಧ ಗಂಟೆಯ ಅನಂತರ ಒಂದು ರೈಲು ಬಂದು ನಿಂತಿತು. ಮೊದಲಿನಂತೆ ಅದರ ಕೂಗು ತಪ್ಪದೇ ಜರುಗುತಿತ್ತು. ಅಲ್ಲಿಗೆ ಮೊದಲು ಧಾವಿಸಿದವನೇ ಒಬ್ಬ ಸೈನಿಕ ವೇಷದವ, ಕೊಡೆ ಎತ್ತಿ ಹಿಡಿಯುದಿದ್ದರೂ, ರಾಮುನಿಗೆ ಶಂಕರನ ಮುಖ ಕಂಡಂತಾಯಿತು 'ಶಂಕರ್ ಶಂಕರ್' ಕೂಗು ಮುಂದರಿಯಿತು. "ಯಾರ ಶಂಕರ".

"ನನ್ನ ಗೆಳೆಯ ಶಂಕರ. ಇಲ್ಲಿಂದ ಸೈನಿಕನಾಗಿ ಸೇರಿದವ. ಅವನ ಗೆಳೆಯ ರಾಮು ನಾನು" ಶಂಕರನಿಗೆ ಮುಂದಿನ ಪರಿಚಯ ಬೇಡವಾಗಿತ್ತು. "ರಾಮು, ಈ ಹತ್ತು ವರುಷಗಳಲ್ಲಿ ನೀನೆಷ್ಟು ಬದಲಿಗಿದ್ದಿ. ಗುರುತೇ ಹತ್ತದಲ್ಲ" ಎಂದವನನ್ನು ತಬ್ಬಿಕೊಂಡ.

"ಹೌದು. ಶಂಕರ ನಿನ್ನ ಗುರುತು ನನಗೆ ಗೊತ್ತಾಗದ. ಎಷ್ಟೊಂದು ತುಂಬಿ ಬೆಳೆದಿದ್ದಿ. ಬಾ ಹೋಗ. ನನ್ನ ಮನೆಗೆ"

ಎಂದು ಹೋಟೆಲೊಂದಕ್ಕೆ ಹೊರಟರು

"ಏನು ಮಾಡುತ್ತಿದ್ದೀ ರಾಮು ಈಗ"

"ಕಾಫಿ ಕುಡಿ ಮತ್ತೆಲ್ಲ ಹೇಳುತ್ತೇನೆ. ,, ಎಂದು ಕಾಫಿಗೆ ತಾನೂ ಕೈಕೊಟ್ಟ. ಇಬ್ಬರ ಲೋಟ ಖಾಲಿಯಾದಾಗ ರಾಮ. ತನ್ನ ಕಥೆ ವಿವರಿದ.

"ನೋಡು ಶಂಕರ ನೀನಂದು ಹೋಗುವಾಗ ಹಾಸಿಗೆ ಮೇಲೆ ಮಲಗಿದವನು ಹುಷಾರಾಗಿ, ಮೇಲೇಳಲಿಲ್ಲ. ನನಗೆ ಸ್ವಲ್ಪ ಗುಣವಾದಾಗ, ಅತ್ತೆಯವರು ಹಾಸಿಗೆ ಹಿಡಿದು, ಇಹಲೋಕದಿಂದ ತೆರಳಿ ಅವರ ಸ್ಥಾನವನ್ನು ನನಗೆ ಕೊಟ್ಟರು. ಎಂಟು ವರ್ಷಗಳ ಪರ್ಯಂತ ಆಸ್ಪತ್ರೆಯಲ್ಲಿದ್ದೆ ಬಹಳ ಖರ್ಚು ಮಾಡಿಸಿಕೊಂಡೆ, ಅಣ್ಣನಿಂದ. ಈಗ ಒಂದೂವರೆ ತಿಂಗಳಿಂದ ಆಸ್ಪತ್ರೆಯಿಂದ ಸಾಧ್ಯವಿಲ್ಲವೆಂದು ಹೊರ ಹಾಕಿದ್ದಾರೆ. ನಾನು ಇನ್ನೊಂದು ದಿನ ಹೋರಾಡದೆ, ಸ್ವರ್ಗ ಸೇರುವುದು ,, ಎಂದು ಶಂಕರನ ಕಣ್ಣೀರೊಂದಿಗೆ ತಾನೂ ಸೇರಿ, ರಾಮು ಮುಗಿಸಿ, ನೀನೇನು ಮಾಡಿದ್ದಿ ಎಂದ ಸ್ವಲ್ಪ ಬಳಿಕ

ಶಂಕರನದ್ದು ತಿಳಿಸುವಂತಹ ಕೆಲಸವಲ್ಲ. ದಂಗೆಗಾರರನ್ನು ಮಣ್ಣಿಗೆ ಸೇರಿಸುವ ಕೆಲಸ. ಮೊದಲು ಮೊದಲು ಅದನ್ನು ಮನಸ್ಸಿಲ್ಲದಿದ್ದರೂ ನಿರ್ವಹಿಸಿದ. ಕೊನೆಗೆ ಅವನ ಮನಸ್ಸು ತಿರುಗತೊಡಗಿತು. ಹೊದಾಶೆಗಾಗಿ ನಿರ್ವಂಚನೆಯಿಂದ ಕೆಲಸ ನಡೆಸಿದ ಈಗೀಗ ದಂಗೆ ಚಳುವಳಿಗಾರರನ್ನು ಕಂಡರೆ ರಕ್ತ ಕಾರುವಂತಹ ಮುಖ ಅವನದು. ಅದಷ್ಟು ಮರೆ ಮಾಡಿ, ಅನುಕೂಲ ಪರಿಸ್ಥಿತಿ ಒದಗಿಸಿಕೊಂಡು ನುಡಿ... ಇನ್ನೊಂದು ತಿಂಗಳಲ್ಲಿ ಹೆಡ್ ಕೋನ್‌ಸ್ಟೇಬಲ್ಲರ ಕೆಲಸ ಸಿಗುತ್ತದೆ. ಎಂದ. "ಸಂತೋಷ ,, ಎಂದ ರಾಮು.

"ಶಂಕರ, ನನ್ನ ಮನದ ಇಚ್ಛೆ ನಾನೂ ಒಬ್ಬ ನಿನ್ನಂತೆ ಸೈನಿಕನಾಗಿ, ಬ್ರಿಟಿಷರ ವಿರುದ್ಧ ಹೋರಾಡಬೇಕೆಂದಿತ್ತು. ಈಗ ಮಾತ್ರ ಸ್ವಾತಂತ್ರ್ಯ ಪ್ರಾಪ್ತವಾಗಿದೆ. ಆದರೆ ಸೈನಿಕನ ವಸ್ತ್ರಗಳನ್ನು ನನಗೆ ತಂದುಕೊಡುವಿಯಾ," ಎಂದು ಬರುವ ಉತ್ತರಕ್ಕಾಗಿ ಕಾಯುತ್ತಿದ್ದ.

ಶಂಕರ ತನ್ನ ಟ್ರಂಕಿನ ಬಾಗಿಲು ತೆಗೆದು, ತನಗಾಗಿ ಹೊಲಿಸಿದ ಎರಡು ಹೊಸ ಅಂಗಿ, ಚಡ್ಡಿ, ಟೊಪ್ಪಿಗಳನ್ನು ತಂದು ತೋರಿಸಿ, 'ತೊಡ' ಎಂದ. ಇದ, ನನಗಾಗಿಯೇ ಇಂದಿ ನನ್ನ ಈ ದೇಹಕ್ಕೆ ಆಗಲಿಕ್ಕಿಲ್ಲ ,, "ಹೋ ಮರತೆ, ಬಾ ಪೇಟೆಗೆ ಹೋಗುವ ವಸ್ತ್ರವನ್ನು ನಾನೇ ತಂದುದುಂಟು. ಅಳತೆ ತೆಗೆದು ಹೊಲಿಸಿ ಕೊಡುತ್ತೇನೆ. ಆದರೆ ಸಂಜೆಯೇ ನನಗೆ ಊರಿನತ್ತ ಪ್ರಯಾಣ ಮಾಡಬೇಕು ಬರುವ ವರ್ಷ ಈ ತಿಂಗಳಲ್ಲಿ ಮದುವೆಯೂ ಆಗಲಿದೆ. ರಾಮು ನೀನೂ ಬರಬೇಕು. ,, "ಆಗಲಿ ಮರೆಯ, ನಿನ್ನ ಮಾತು ಮೀರುತ್ತೇನೆಯೇ ಮಾತಾಡುತ್ತ, ಮಾತಾಡುತ್ತ ಅವರು ಪೇಟೆಯ ಬಳಿ ಬಂದಿದ್ದರು.

ಬಹು ದಿನಗಳ ಬಯಕೆಯೇನೋ ನೆರವೇರಿತ್ತು. ಆದರೆ ಆ ವಸ್ತ್ರವನ್ನು ತೊಡಲು ನಾಚಿಕೆ ಬಿಡುತ್ತಿರಲಿಲ್ಲ. ಯಾರು ಇಲ್ಲದಾಗ, ಕೋಣೆಯೊಳಗೆ ಆ ವಸ್ತ್ರವನ್ನು ತೊಡಬೇಕೆಂದರೂ ಆಗುತ್ತಿರಲಿಲ್ಲ. ಒಬ್ಬರಲ್ಲ ಒಬ್ಬರು ಗೆಳೆಯರು ಬಂದೇ ಬರುತ್ತಿದ್ದರು. ಅಂದು ಮಾತ್ರ ಕೋಣೆ ಖಾಲಿಯಾದೊಡನೆ, ಕದವಿಕ್ಕಿ, ಆ ವಸ್ತ್ರಗಳನ್ನು ಕವಾಯತು ಮಾಡಿದ ಎದುರಿನ ಕನ್ನಡಿಯಲ್ಲಿ ತನ್ನ ಗಂಭೀರ ಭಾವವನ್ನು ನೋಡಿ ತಾನೆ ಕಳ್ಳ 'ಢಂ ಢಂ' ಬಾಯಿಂದಲೇ ಕೋವಿ ಶಬ್ದ ಹೊರಡಿಸುವ. ಹೇಗೆ ಸಂತೋಷದಲ್ಲಿರುವಾಗ "ರಾಮು ರಾಯರೇ ,, ಎಂದು ಬಾಗಿಲು ಬಡಿದ ಶಬ್ದ ಅವನನ್ನು ಎಚ್ಚರಿಸಿತು.

ಬೇಗ ಬೇಗನೇ ವಸ್ತ್ರವನ್ನೆಲ್ಲಾ ತೆಗೆದು, ತನ್ನ ನಿಜವಾದ ವೇಷದಿಂದಲೇ ಬಾಗಿಲು ತೆರೆದ. "ಓಹೋ, ಕೆಂಪಣ್ಣ ಎತ್ತ ಹೊರಟಿರಿ," ಎಂದು ರಾಮುನೇ ನುಡಿದ.

'ನಿಮ್ಮನ್ನು ಕಾಣಬೇಕಾಗಿತ್ತು ಬಂದೆ ಏನು ಮಾಡುತ್ತಾ ಇದ್ದೀರಿ ತೊಂದರೆಯಾಯಿತೇ ಮುಖ ಬಹಳ ಬೆವರಿದೆ ,,

"ಕಾಗದ ಬರೆಯಲೆಂದು ಪೆನ್ನು ಸರಿ ಮಾಡುತ್ತಿದ್ದೆ. ಅದಕ್ಕೆ ಇಷ್ಟು ಹೊತ್ತಾಯಿತು. ನಾಕು ಸಾಕಾಯಿತು ,, ಎಂದು ತಪ್ಪಿಸಿಕೊಂಡ ರಾಮು

ನಿಮ್ಮಲ್ಲಿ ಒಂದು ವಿಷಯ ಕೇಳಬೇಕಾಗಿದೆ. ಕೇಳಲೇ ,, ಅದಕ್ಕೇಕೆ ಹಿಂಜರಿಯುವಿರಿ. ಇನ್ನೆಷ್ಟು ದಿನವೋ ಈ ಬಾಳ್ವೆ ಇದ್ದಷ್ಟು ದಿನ, ಶಕ್ತಿಯಿಲ್ಲದಿದ್ದರೂ ಮಾತಿನಿಂದಲಾದರೂ ಸಲಹೆ ನೀಡಲು ಆಗದೆನ್ನುವನೇ ಕೇಳಿ"

"ನೋಡಿ, ಮೊನ್ನೆ ನಾವು ಕೆಲಸ ಮಾಡುವ ಕಾರ್ಖಾನೆಯಲ್ಲಿ ನಡೆದ ಕತೆ ಗೊತ್ತಿದೆಯಲ್ಲಾ? "ಹೌದೌದು ಬಿಸ್ಟ ಕೈ ಕಳೆದುಕೊಂಡು, ಪ್ರಾಣ ಹೋದವನಲ್ಲವೆ? ,,

"ಹೌದು ಅವನ ಕುಟುಂಬಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಕೂಲಿಕಾರ ಸಂಘದ ಪರವಾಗಿ ಕೇಳಿದೆ, ಮಾಲೀಕರನ್ನು ನಾನ. 'ಅವನು ಬೇಕೆಂತಲೇ ಯಂತ್ರಕ್ಕೆ ಕೈಕೊಟ್ಟದ.' ಎಂದು ಹೇಳಿದರು. ಮುಂದೆ ನಾವು ಸತ್ಯಾಗ್ರಹ ಹೂಡಬೇಕೆಂದಿದ್ದೇವೆ ನೀವೇನು ಮಾಡಲಿ'

"ಅದು ಸರಿ, ಕಾರ್ಖಾನೆಯ ಎದುರು ಎಲ್ಲರೂ ಮಲಗಿರಿ ಸಾಹುಕಾರರನ್ನು ಒಳಗೆ ಹೋಗಲಿಕ್ಕೆ ಬಿಡಬೇಡಿ ಏನು ಮಾಡುತ್ತಾರೆ ನೋಡುವ. ಅದೇ ಸರಿ.

"ಎಲ್ಲಾದರೂ ಪೋಲೀಸು ಪಡೆಯನ್ನು ಕರೆದು ತಂದರೆ,"

"ಅದಕ್ಕೇಕೆ ಭಯ. ಇದ್ದುದೊಂದು ಜೀವ.

ನೀವೂ ಕತ್ತಿ ಜಾರಿ ಕೊಂಡು ಹೋಗಿ ಒಂದು ಕೈ ನೋಡೀ ಬಿಡಿ. ಹಿಂಜರಿಯಬೇಡಿ. ನರ ಬಲಿಗೆ ನರಿ ಬಲಿಯೇ ಆಗಲಿ"

"ನಿಮ್ಮ ಸಲಹೆ ಎಂದಿಗೂ ಮರೆಯಲಾಗದು. ಯಾರು ನಮ್ಮೆದುರು ಕೆಲ ಪೋಲೀಸ್ ಪಡೆ ಕರೆದುಕೊಂಡು ಬರುತ್ತಾರೋ, ಅವರ ರುಂಡವನ್ನು ಮೊದಲೇ ನಾನು ಉರುಳಿಸುತ್ತೇನೆ ಇಂತಹ ಅನ್ಯಾಯ ಇನ್ನು ಲೋಕದಲ್ಲಿ ಇಲ್ಲದಿರಲಿ! ಎಂದು ಘೋಷಿಸುತ್ತಾ ನಡೆದ.

ಮರುದಿನ ರಾಮುಗೆ ಖಾಕಿ ವಸ್ತ್ರ ಧರಿಸುವ ಧೈರ್ಯವಾಯಿತು. ಸಂಜೆ ಅಂದು ಅವನೊಡನೆ ತಿರುಗಾಡಲು, ಮೈದಾನದ ಕಡೆಗೆ ತೆರಳಲು ಯಾರೂ ಇರಲಿಲ್ಲ. ಆದರೂ ತಾನೊಬ್ಬನೇ ಸೈನಿಕನಂತೆ ಹೊರಟು ಬಂಡೆಯ ಮೇಲೆ ಕುಳಿತು ದೂರದಲ್ಲಿ ಸಂಗೀತ ಹಾಡುತ್ತಿದ್ದ ರೇಡಿಯೋ ಈಗ ವಾರ್ತೆಗಳು, ಎಂದು ನುಡಿದು ತೊಡಗಿತು. ಇಂದು ಮಂಗಳೂರ ಕಡಲು ತೀರದ ಕಾರ್ಖಾನೆಯಲ್ಲಿ ಚಳುವಳಿಗಾರರು, ಅಂದರೆ ಕೂಲಿಕಾರರು ಸಾಹುಕಾರನನ್ನು ಒಳಗೆ ಹೋಗಲು ಬಿಡಲಿಲ್ಲ. ಅದಕ್ಕಾಗಿ ಅವರು ಇಲ್ಲಿಗೆ 'ಫೋನ್' ಮಾಡಿದ್ದರಿಂದ ಇಲ್ಲಿಯ ಡಿ. ಎಸ್. ಪಿ. ತಿಮ್ಮಯ್ಯನವರು ಒಂದು ಪೋಲೀಸ್ ಪಡೆ ಯನ್ನು ಶ್ರೀ ಶಂಕರ ಎಂಬ ಹೆಡ್ ಕೋನ್‌ಸ್ಟೇಬಲ್ಲರ ಕೈ ಕೆಳಗೆ ಕಳುಹಲಿದ್ದಾರೆ. ಇವರು ಮೊದಲು ಸೈನಿಕರಾಗಿ ೧೦ ವರುಷ ಸರ್ವಿಸ್ ಮಾಡಿ ನುರಿತವರು ಮುಂದಿನ ವಾರ್ತೆ ಅವನಿಗೆ ಬೇಡವಾದದ್ದು. ಶಂಕರನಿಗೆ ಬುದ್ಧಿ ಹೇಳಿ ಆತನ ಜೀವವನ್ನಾದರೂ ಉಳಿಸುವ ಎಂದು ಅಲ್ಲಿಂದ ಕಳಗಿದ.

ಎರಡು ತಿಂಗಳ ಕೆಳಗೆ, ಆಸ್ಪತ್ರೆಯಿಂದ ಹೊರ ಬರುವಾಗ ಡಾಕ್ಟರು "ಓಡುವುದು ದೂರ ಕೂಡ, ಓಡಬಾರದು.. ಸ್ವಲ್ಪವೂ ಆಡಬಾರದು, ಆಯಾಸ ಮಾಡಿಕೊಳ್ಳಬಾರದು. ಹಾಗಾದಲ್ಲಿ ಖಂಡಿತ ರಕ್ತ ಬಾಯಿಯಿಂದ ಹೊರಬಿದ್ದು ಪ್ರಾಣಕ್ಕೆ ಅಪಾಯ ಬಂದೀತು" ಎಂದು ಹೇಳಿದ ಮಾತು ತಿಳಿ ತಿಳಿದೂ ಅರ್ಧ ಮೈಲು ದೂರ ಇರುವ ಆ ಕಾರ್ಖಾನೆಯತ್ತ ನಾಗಾಲೋಟದಿಂದ "ನರಬಲಿ ನರಬಲಿ" ಎನ್ನುತ್ತಾ ಓಡತೊಡಗಿದ!

ರೋಗಿ ಹಾಗೆ ಓಡುವುದನ್ನು ಕಂಡು ಯಾರಾದರೂ ತಡೆದು ನಿಲ್ಲಿಸದಂತೆ ಆಗ್ಗ ತ್ತಲು ಸಂಪೂರ್ಣ ಕವಿದಿತ್ತು!!

—ಎಚ್. ರಾಮಕೃಷ್ಣ ಅಡಿಗ


ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರತಿಗಳು— ಮಂಗಳೂರಿನಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ
ಕೆನರಾ ಕೊಲೇಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ ಹಾಗೂ ಏಜೆನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ



ಮುದ್ರಣ

ಸಣ್ಣದಿರಲಿ, ದೊಡ್ಡದಿರಲಿ,
ಯಾವುದೇ ತರದ
ಕನ್ನಡ ಇಲ್ಲವೆ ಇಂಗ್ಲಿಷ್
ಮುದ್ರಣ ಕಾರ್ಯಗಳಿಗೆ
ವಿಚಾರಿಸಿರಿ —

ನವಯುಗ ಪ್ರೆಸ್

ಸಂತೆಕಟ್ಟೆ
ಉಡುಪಿ

REGD. No. B. G. 176
LICENCE No. 31
Licensed to Post without Prepayment

# ಪುಸ್ತಕವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ]

**ಭಗವಾನ್ ಶಿರಡಿ ಶ್ರೀ ಸಾಯಿಬಾಬಾ**—ಲೇಖಕರು: ವಿ. ಎಸ್. ಶಿಬ್ರೂರ್‌ಕರ್. ಪ್ರಕಾಶಕರು: ಸನಾತನ ಧರ್ಮ ಪ್ರಚಾರಕ, ಗೋಕುಲಾ, ಬೆಂಗಳೂರು-೧೩. ಪುಟಗಳು ೫೧ ಬೆಲೆ. ೨=೫೦.

ಧರ್ಮಕ್ಷೇತ್ರ ಭಾರತದಲ್ಲಿ ಧರ್ಮಗ್ಲಾನಿಯೂದಾಗ, ಶಿಷ್ಟ ಜನೋದ್ಧಾರಕ್ಕಾಗಿ ಭಗವಂತನು ಅವತರಿಸುತ್ತಾನೆಂಬ ನಂಬಿಕೆ. ಆತನು ಆದಾವ ರೂಪದಲ್ಲಿಯೂ ಅವತೀರ್ಣನಾಗಬಹುದು. ತನ್ನ ಅದ್ಭುತ ಪವಾಡಗಳಿಂದ ಅಮಿತ ಶಕ್ತಿಯಿಂದ ಅತ ಉಳಿದವರಿಗಿಂತ ಪ್ರತ್ಯೇಕಿತನಾಗಿ ತೋರುತ್ತಾನೆ. ಅಂತಹರನ್ನೇ ಭಗವದ್ ಶಕ್ತಿವಂತರೆಂದು ನಂಬುವುದೂ ಮನೆನೂತು. ಕಳೆದ ಶತಮಾನದ ಅಂತ್ಯ ಮತ್ತೀ ಶತಮಾನದ ಆದಿ ಭಾಗದಲ್ಲಿದ್ದು ಲಕ್ಷೋಪಲಕ್ಷ ಶಿಷ್ಯರ ಹೃದಯಗಳಿಗೆ ತಂಪನ್ನಿತ್ತು, ತನ್ನ ಭಕ್ತ ಸಮುದಾಯದ ಹೃನ್ಮನಗಳನ್ನು ಇಂದಿಗೂ ತಣಿಸುವಂತಹ ವಿಶ್ವಾಸ ಹುಟ್ಟಿಸಿದವರಲ್ಲಿ ಶಿರಡಿಯ ಸಾಯಿಬಾಬಾ ಒಬ್ಬರು. ಸತ್ಯ ಸಾಯಿಬಾಬಾ ಎಂದೂ ಇವರನ್ನು ಕರೆಯುತ್ತಾರೆ. ಜನ್ಮದಲ್ಲಿ ಮುಸಲ್ಮಾನರಾಗಿದ್ದರೂ ಇವರು ಹಿಂದೂ ಮುಸಲ್ಮಾನರಿಗೆ ಸಮಾನ ಪೂಜ್ಯರು. ಇವರ ಜೀವನ ಚರಿತ್ರೆಯನ್ನು ತಿಳಿಸುವ ಸಣ್ಣ ಗ್ರಂಥವೇ ಶೀಬ್ರೂಕರರ ಮೇಲಿನ ಕೃತಿ. ಸಾಯಿಬಾಬಾರ ಹಿತವಚನಗಳು ಮತ್ತು ಸಾಯಿಗೀತ ಮಾಲಾವಳಿ ಹಾಗೂ ಸಾಯಿಸ್ತೋತ್ರಗಳನ್ನೂ ಅವಶ್ಯವೆನಿಸಿದಲ್ಲಿ ತಾತ್ಪರ್ಯದೊಡನೆ ಇಲ್ಲಿ ಕೊಡಲಾಗಿದೆ. ಸಾಯಿಬಾಬಾರವರ ಶಿಷ್ಯವೃಂದಕ್ಕೆ ಇದರಿಂದ ಹೆಚ್ಚಿನ ಪ್ರಯೋಜನ ಸಿಗಬಹುದು.

ಗ್ರಂಥದ ಭಾಷೆಯ ಬಗೆಗೆ ಒಂದು ಮಾತು ಹೇಳಲೇ ಬೇಕಾಗುತ್ತದೆ. ಕೆಲ್ಲನ ವಾಕ್ಯಗಳಲ್ಲಿ ಕೆಲವೆಡೆ ಅಸ್ಪಷ್ಟತೆಯೂ ಅಸಹಜತೆಯೂ ತುಂಬಿವೆ. ಉದಾ:—'ಎಲ್ಲಾ ಧರ್ಮಗಳೂ ಹೇಗೆ ತಾಯಿಯು ಮಗನ ಉತ್ಕರ್ಷತೆಯನ್ನು ಬಯಸುತ್ತಾಳೋ ಅತಿಥಿಯೊಬ್ಬನ ನಿಜಸ್ಥಾನ ಎಂತಹುದೋ ಅದಕ್ಕಿಂತ ಕನಿಷ್ಠ ಸ್ಥಾನವನ್ನು ಅವನಿಗೆ ಅವರನ್ನು ಅವಮಾನ ಮಾಡಬೇಡ.' (ಪುಟ ೧೬) ಇಂತಹ ಅಸ್ಪಷ್ಟತೆಗಳು ಹಲವೆಡೆಯಿವೆ. ಹಾಗೆಯೇ ಮಹಿಮಾಸ್ತೋತ್ರಗಳಲ್ಲಿ 'ಸ್ತೋತ್ರ ಮತ್ತು ತಾತ್ಪರ್ಯ'ಗಳು ಸಂದೇಹಾಸ್ಪದವಿರುವಂತೆ ಅಚ್ಚಾಗಿರುವುದು ಸಮಂಜಸವೆನಿಸುವುದಿಲ್ಲ. ಭಾಷೆಯಲ್ಲಾದರೂ ಅನ್ಯಭಾಷಾ ಪ್ರಭಾವವು ಬಹುವಾಗಿ ಬಿದ್ದಂತೆ ಭಾಸವಾಗುತ್ತದೆ—ಈ ಪುಟ್ಟ ಲೋಪದೋಷಗಳನ್ನು ಗಮನಿಸದಿರುವುದಾದರೆ, ಸಾಯಿಭಕ್ತರಿಗೆ ಅವರ 'ಚರಿತಾಮೃತ'ವನ್ನು ಚುಟುಕಿನಲ್ಲಿ ತಿಳಿಸುವ ಈ ಗ್ರಂಥ ಸ್ವಾಗತಾರ್ಹ.

**ಅಚ್ಯುತ ತತ್ವದರ್ಶನ**--ಲೇಖಕರು: ಸ್ವಾಮಿ ಜಯತೀರ್ಥ, ಶಾಂತಿ ಕುಟೀರ. ಪ್ರಕಾಶಕರು: ಅಚ್ಯುತ ಭಕ್ತ ಮಂಡಳಿ, ಕೌತಾಳಂ, ಆದವಾನಿ ತಾಲೂಕು. ಪುಟಗಳು: ೫೩. ಬೆಲೆ: ರೂ. ೧—೦೦.

ಕಿಷ್ಕಿಂದೆಯ ಬಳಿ ಋಷ್ಯಮೂಕಾಶ್ರಮ ಸ್ಥಾಪನೆಗೆಯ್ದು ಶಿಷ್ಯ ಮಂಡಳಿಗೆ ತತ್ವ ಬೋಧೆಯನ್ನು ಮಾಡುತ್ತ ಅಜ್ಞಾತ ಸಂಚಾರವಿನಿಯೆಂದು ತೆರಳಿ ಹೋದವರು ಯೋಗಿ ಅಚ್ಯುತರೆಂದು ತಿಳಿಯುತ್ತದೆ. ಅನತಿ ಕಾಲದಲ್ಲಿ ಪುನಃ ತಾನು ಜನಾಂಗದ ಮಧ್ಯೆ ಬಹುವುದಾಗಿ ಆಶ್ವಾಸನಕೊಟ್ಟಿದ್ದಾರೆಂದೂ ಹೇಳಲಾಗುತ್ತದೆ. ಅಚ್ಯುತ ಯೋಗಿಗಳು ತನ್ನ ಶಿಷ್ಯ ಕೋಟಿಗೆ ಇತ್ತ ತತ್ವ ದರ್ಶನವನ್ನು ಅಚ್ಯುತಶಿಶು ಜಯತೀರ್ಥರು ಕನ್ನಡ ಬಂಧುಗಳಿಗೆ ಈ ಪುಸ್ತಕದಲ್ಲಿ ಮಾಡಿಕೊಟ್ಟಿದ್ದಾರೆ. ದ್ವೈತ - ಅದ್ವೈತ - ವಿಶಿಷ್ಟಾದ್ವೈತಗಳ ಮುಮ್ಮುಖದಲ್ಲಿ ನಡೆಯುತ್ತಿರುವ ದಕ್ಷಿಣ ಭಾರತೀಯರಿಗೆ ತತ್ವಜ್ಞಾನಕ್ಕೆ ಅನುಭವವೇ ಮೂಲವೆಂದೂ ಅನುಭವಕ್ಕೆ ಸಾಧನೆಯೇ ಶರಣೇಯುವೆಂದು ಸಾಧನಾವಿಹೀನವಾದ ಗ್ರಂಥ ಪಂಡಿತನು ಬಂಗಾರದ ಮೂಟೆಯನ್ನು ಹೊತ್ತ ಕತ್ತೆಯಂತೆ ಎಂದೂ ತಿಳಿಸಿ ಹೇಳಿ ತತ್ವ ದರ್ಶನದ ನಿಜ ಸ್ವರೂಪವನ್ನಿಲ್ಲಿ ಕೊಡಲಾಗಿದೆ. ಹೆಚ್ಚಿನೆಡೆಗಳಲ್ಲಿ ಭಗವದ್ಗೀತೆಯ ಹಾಗೂ ಉಪನಿಷತ್ತುಗಳ ಉದ್ಧರಣೆಗಳಿಂದ ವಿಷಯ ವಿಶ್ಲೇಶಣೆ ನಡೆದಿದೆ. ಗ್ರಂಥದ ಕೊನೆಯಲ್ಲಿ 'ಮಾನವನ ಪರಮ ಸಾಧನೆಯೆನಿಸಿದ ಆಧ್ಯಾತ್ಮಿಕ ಸಾಧನೆ"ಯ ಕುರಿತು ಅಚ್ಯುತರು ನೀಡಿದ್ದ ಭಾಷಣವೊಂದನ್ನೂ ನೀಡಲಾಗಿದೆ. ತತ್ವ ಶಾಸ್ತ್ರಗಳ ವಿಚಾರದಲ್ಲಿ ಮಾನವ ಬುದ್ಧಿಯು ದಿನದಿಂದ ದಿನಕ್ಕೆ ವಿಮುಖವಾಗುತ್ತ ಆಧ್ಯಾತ್ಮಿಕತೆಯಿಂದ ಭೌತಿಕತೆಯತ್ತ ಅದು ಧಾವಿಸುತ್ತ ಬರುವ ಆಧ್ಯಾತ್ಮಿಕ ಪತನದ ಈ ಕಾಲದಲ್ಲಿ ಅಚ್ಯುತ ತತ್ವದರ್ಶನವು ಉಪಯುಕ್ತ ಪ್ರಕಟಣೆ.

**ಹ್ಯಾಮ್ಲೆಟ್**— ನಿವೇದಕರು: ವರದರಾಜ ಹುಯಿಲಗೋಳ. ಪ್ರಕಾಶಕರು: ರಾಮಮಾತ್ರ್ಯ ಬುಕ್ ಡಿಪೋ, ಸುಭಾಷ ರೋಡ, ಧಾರವಾಡ ಪುಟಗಳು: ೫೦. ಬೆಲೆ: ರೂ. ೦—೫೦.

ಪ್ರಸಿದ್ಧ ಆಂಗ್ಲ ನಾಟಕ ಕರ್ತ ವಿಲಿಯಂ ಶೇಕ್ಸ್‌ಪಿಯರನ 'ಹ್ಯಾಮ್ಲೆಟ್' ನಾಟಕದ ಸಂಕ್ಷಿಪ್ತ ಕನ್ನಡ ಗದ್ಯ ಕಥೆಯಿದು. ಪ್ರಕಾಶಕರು ಶೇಕ್ಸ್‌ಪಿಯರನ ಎಲ್ಲ ನಾಟಕಗಳ ಕಥೆಗಳನ್ನು ಕನ್ನಡದ ಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪ್ರಕಟಿಸುವ ಗುರಿಯನ್ನಿಟ್ಟುಕೊಂಡಿದ್ದಾರೆ. ಇಂದ್ರಿಯವಶನಾದ ಕ್ಲಾಡಿಯಸ್ ತನ್ನ ಅಣ್ಣನನ್ನು ಕೊಂದು, ತಾನೇ ರಾಜನೂ ರಾಜಪತ್ನಿಯ ವರನೂ ಆಗಿ ರಾಜಪುತ್ರ ಹ್ಯಾಮ್ಲೆಟನನ್ನು ವಂಚಿಸುವ ಹವಣಿಕೆಯಲ್ಲಿದ್ದಾಗ ತಂದೆಯ ಭೂತಪ್ರೇರಿತನಾಗಿ ಪಿತೃಹತ್ಯೆಗೆ ಪ್ರತೀಕಾರ ತೆಗೆದುಕೊಂಡು ದುರಂತಾನದಿ ಮೃತನಾದ ಹ್ಯಾಮ್ಲೆಟ್ ದುರಂತ ನಾಟಕದ ನಾಯಕನಾಗಿದ್ದಾನೆ. ಕನ್ನಡದ ವಿಖ್ಯಾತ ಸಾಹಿತಿಗಳಲ್ಲಿ ಒಬ್ಬರಾದ ಹುಯಿಲಗೋಳರು ತಮ್ಮ ನಿಯೋಜನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅಂದವಾದ ಮುದ್ರಣವು ಪ್ರಕಾಶಕರ ಉದ್ದೇಶಸಾಧನೆ ಪೂರಕವೆನಿಸಿದೆ. ಕನ್ನಡ ವಿದ್ಯಾರ್ಥಿಗಳು ಕೊಂಡು ಓದಲೇಬೇಕಾದ ಪುಸ್ತಕವಿದು.

—ಗೋರಾ.

## ಕಾಶ್ಮೀರ ಮಾತುಕತೆ ಮುರಿಯಿತು

(೧ನೇ ಪುಟದಿಂದ)

ಕೇವಲ ಕಾಶ್ಮೀರದ ಭೂಮಿ ಮಾತ್ರ ಅಡಕವಾಮದಲ್ಲ, ಕಾಶ್ಮೀರಿ ಜನತೆಯ ಉನ್ನತಿ—ಪತನಗಳ ಪ್ರಶ್ನೆಯಿದೆಂಬುದನ್ನು ಅವರೂ ಮನವರಿಕೆ ಮಾಡಿಕೊಂಡಿದ್ದಾರೆ. ಆದರೆ, ಪಾಕಿಸ್ತಾನ ಮಾತ್ರ ಕಾಶ್ಮೀರವನ್ನು ತನ್ನ ಜೀವನ ಮರಣದ ಪ್ರಶ್ನೆಯೆಂದು ಡಂಗುರ ಸಾರುತ್ತಿದೆ. ವಾಸ್ತವಿಕವಾಗಿ ಅದು ಕಾಶ್ಮೀರಿಗಳ ಹಿತವನ್ನು ಬಯಸುವುದಿಲ್ಲ: ಭಾರತ ದ್ವೇಷವನ್ನು ಸಾಧಿಸಲು ಅವರನ್ನು ಬಲಿ ತೆಗೆದುಕೊಳ್ಳುವ ತವಕದಿಂದಿದೆ. ಆದರೆ, ಈ ರಾಕ್ಷಸೇಚ್ಛೆಯನ್ನರಿತ ಕಾಶ್ಮೀರಿಗಳು ಒಕ್ಕೊರಲಿನಿಂದ ಸಾರಿದ್ದಾರೆ—ಕಾಶ್ಮೀರದ ಸೇರ್ಪಡೆ ಭಾರತದೊಡನೆ ಅಭೇದ್ಯವಾದುದು; ಕಾಶ್ಮೀರದ ವಿಭಜನೆ ಎಂದಿಗೂ ಸಲ್ಲದು'.

### ಉಪಸಂಹಾರ

ಭಾರತ-ಪಾಕ್ ನೇರ ಮಾತುಕತೆಯು ಮುರಿದುದರಿಂದ ಇನ್ನು ನೆಹರು-ಅಯೂಬ ಭೆಟ್ಟಿಯಿಲ್ಲ, ಮಾತುಕತೆಯೂ ಇಲ್ಲ. ಆದರೆ, ಇಬ್ಬರೂ ವಿವಾದವನ್ನು, ಶಾಂತರೀತಿಯಿಂದಲೇ ಬಗೆಹರಿಸುವ ಆಶಯ ವ್ಯಕ್ತಪಡಿಸಿರುವುದರಿಂದ ರಾಜತಾಂತ್ರಿಕ ಮಟ್ಟದಲ್ಲಿ ಪ್ರಯತ್ನ ಮುಂದುವರಿಯಬಹುದು; ಮಧ್ಯಸ್ಥಗಾರರ ಸ್ವೀಕಾರದ ಪರಿಗೂ ಬಂದು ಮುಟ್ಟಬಹುದು; ಆದರೆ, ಅನ್ಯಾಯಕರವಾಗಿ ಭಾರತದ ಶತ್ರುಗಳೊಡನೆ ಸ್ನೇಹ ಬೆಳೆಸುವ, ಅನ್ಯಾಯವಾಗಿ, ಆಕ್ರಮಕರಾಗಿ, ಭಾರತದ ಬಗ್ಗೆ ಅಪ್ರಲಾಪವೆಬ್ಬಿಸುವ ಪಾಕ್ ನಾಯಕರ ಭಾರತದ ವಿರೋಧೀ ನೀತಿಯು ತೊಲಗದೆಹೋದರೆ, ಯಾವ ಒಡಂಬಡಿಕೆಯೂ ನಡೆಯಲಾರದೆಂದು ತೋರುತ್ತದೆ. ಪಾಕ್ ಅಧಿನಾಯಕರು ಭಾರತದ ಪ್ರಗತಿಯಿಂದ ಮನ ಮರುಗಿ ಅದರ ಮೇಲೆ ಆರೋಪ ಹೊರಿಸುತ್ತ ದ್ವೇಷ ಬೀಜವನ್ನು ಬಿತ್ತಿ ಅದಕ್ಕೆ ನೀರೆರೆಯುವುದಕ್ಕಿಂತ ನ್ಯಾಯೋಚಿತ ಒಡಂಬಡಿಕೆಗೆ ಮುಂದೆ ಬಂದು, ಸ್ನೇಹ ಬೀಜವನ್ನು ಬಿತ್ತುವ ಪ್ರಯತ್ನ ಮಾಡಿದರೆ ನಿಜಕ್ಕೂ ವಿವೇಕವಂತರೆನಿಸಿಕೊಳ್ಳುವರು. ಸ್ವತಂತ್ರವಾಗಿ ಬಾಳಿ ಬದುಕಿ, ತಮ್ಮ ಹಿತವನ್ನೂ ಸಮೃದ್ಧಿಯನ್ನೂ ಸಾಧಿಸಿಕೊಳ್ಳಬಲ್ಲರು. ಇಂತಹ ವಿವೇಕವನ್ನು ಬ್ರಿಟನ್-ಅಮೆರಿಕೆಗಳು ಅವರಿಗೆ ಒದಗಿಸಿಯಾವೆಂದು ನಿರೀಕ್ಷಿಸಬಹುದೆ?

ಸಿಂಡಿಕೇಟ್ ಲೋನ್ ಸ್ಕಾಲರ್‌ಶಿಪ್ ಎಂಡ್ ಎಜ್ಯುಕೇಶನ್ ಫಂಡ್

ವಿಶ್ವವಿದ್ಯಾಲಯಗಳಲ್ಲಿ ಉಚ್ಚ ಶಿಕ್ಷಣವನ್ನು (ಮುಖ್ಯವಾಗಿ ತಾಂತ್ರಿಕ (Technical) ವಿಷಯಗಳನ್ನಾರಿಸಿ) ಪಡೆಯಲಿಚ್ಛಿಸುವ, ವಿಶೇಷ ಯೋಗ್ಯತೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಸಾಲರೂಪದಲ್ಲಿ ಕೊಡಲಾಗುವುದು.

ಜಾತಿ ಮತ ಭೇದವಿಲ್ಲದೆ ಶೇಕಡಾ ೬೦ಕ್ಕಿಂತ ಹೆಚ್ಚು ಮಾರ್ಕುಗಳನ್ನು ಗಳಿಸಿದ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುವರು.

ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿಯು ಒಂದು ವರುಷಕ್ಕೆ ರೂ. ೫೦೦/- ನ್ನು ಪಡೆಯಬಹುದು. ಈ ಹಣವನ್ನು ಶೇಕಡಾ ಳರ ಬಡ್ಡಿಯಲ್ಲಿ ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುವುದು.

ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ.

ಕಾರ್ಯದರ್ಶಿ,

ದಿ ಸಿಂಡಿಕೇಟ್ ಲೋನ್ ಸ್ಕಾಲರ್‌ಶಿಪ್ ಎಂಡ್ ಎಜ್ಯುಕೇಶನ್ ಫಂಡ್, ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಮುಕುಂದ ನಿವಾಸ, ಉಡುಪಿ, ಮೈಸೂರು ರಾಜ್ಯ.

ಸಿಂಡಿಕೇಟ್ ಬ್ಯಾಂಕ್

— ನಗುಮುಖದ ಸೇವೆ .... ಆರ್ಥಿಕ ಭದ್ರತೆ —

## ಮಿತವ್ಯಯ ಮತ್ತು ಉಳಿತಾಯ ರಕ್ಷಣಾ ತಯಾರಿಗೆ ಸಹಾಯ

CONTRIBUTE YOUR MITE TO OUR NATIONAL DEFENCE FUND

# ನವಯುಗ

Estd. 1921 ಸ್ಥಾಪನೆ | ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ | 13 ನ ಪೈಸೆ
Regd. No. B.G. 176 | NAVAYUGA— NATIONAL WEEKLY | ವಾ. ಚಂದಾ ರೂ. 6-75
Vol. 42 No. 35 | ಉಡುಪಿ, 30-5-1963 ಗುರುವಾರ | ಸಂಪುಟ ೪೨ ಸಂಚಿಕೆ ೩೫

ನಮ್ಮ ರಾಷ್ಟ್ರೀಯ ರಕ್ಷಣಾ ನಿಧಿಗೆ ಉದಾರ ಸಹಾಯ ಸಲ್ಲಿಸಿರಿ

## ಶಕ್ತಿ ಸಂಗ್ರಹದ ಬಗ್ಗೆ

# ಟಿ.ಟಿ.ಕೆ.ಯವರ ಯಶಸ್ವೀ ರಾಯಭಾರ

ತಾಟಸ್ಥ್ಯವೆಂದರೆ ಹೇಡಿತನವಲ್ಲ; ಅದರೆ ಯಾವ ಶಕ್ತಿಕೂಟಗಳಲ್ಲಿಯೂ ಸೇರಿಕೊಂಡಿರದಿರುವುದು. ಜಾಗತಿಕ ರಾಜಕಾರಣದಿಂದ ದೂರಸರಿದು ಸನ್ಯಾಸವನ್ನು ಸ್ವೀಕರಿಸುವುದಲ್ಲ. ಆದರೆ, ತನಗೆ ಸಂಬಂಧಿಸದ ವಿವಾದಗಳೆಡೆ ತಲೆಹಾಕಿ ಅವನ್ನು ಕೆದಕಿ ನೋಡುವುದಲ್ಲ. ಪರದೇಶಗಳನ್ನು ಬೆದರಿಸಲು ಶಸ್ತ್ರಾಸ್ತ್ರಗಳನ್ನು ಕೂಡಿಡುವುದಲ್ಲ; ಸ್ವರಕ್ಷಣೆಯ ಮಾರ್ಗದಲ್ಲಿ ಮುಂದುವರಿಯುವಾಗ ಎಡತಾಕುವ ಯಾವುದೇ ಪ್ರಶ್ನೆಯನ್ನು, ಸಮಸ್ಯೆಯನ್ನು ಧೈರ್ಯದಿಂದ ಎದುರಿಸಲು ಮತ್ತು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲು ತಾಟಸ್ಥ್ಯದ ನೀತಿಯು ಅಡ್ಡ ಬರುವುದಿಲ್ಲ. ಇದರಿಂದಲೇ ಕಮ್ಯೂನಿಸ್ಟ್ ಚೀನಾವು ಗಡಿತಂಟೆಯ ನೆವದಿಂದ ನಗ್ನಾಕ್ರಮಣಗೆಯ್ದಾಗ, ತಟಸ್ಥ ಭಾರತವು ವಿದೇಶಗಳಿಂದ ಮಿಲಿಟರಿ ಸಹಾಯವನ್ನು ಯಾಚಿಸಿತು ಎಂದರೆ, ಅದು ತನ್ನ ತಾಟಸ್ಥ್ಯದ ನೀತಿಯನ್ನು ಬಿಟ್ಟುಕೊಟ್ಟಂತೆ ಅಲ್ಲ; ಸ್ವರಾಷ್ಟ್ರ ರಕ್ಷಣೆಗಾಗಿ ಸಮಯೋಪಯೋಗಿ ಕ್ರಮವನ್ನು ಕೈಗೊಂಡಿತು ಎಂದರ್ಥ.

**ಬಲ ಸಂವರ್ಧನೆ**

ಭಾರತದ ಮೇಲೆ ಸಾಮ್ರಾಜ್ಯಶಾಹಿ ಚೀನೀಯರು ಬಲವತ್ತರಾಕ್ರಮಣ ತೊಡಗಿದಾಗಲೇ ವಿದೇಶೀ-ಮಿತ್ರರಿಗೆ ಈ ವಿಷಯವನ್ನು ಮುಂದಟ್ಟುಮಾಡಿ, ಅವರ ಸಹಾನುಭೂತಿಯನ್ನು, ಅನುಕಂಪವನ್ನು, ಗಳಿಸಲು ಪ್ರಧಾನಿ ನೆಹರು ಸತ್ಯಪರಿಸ್ಥಿತಿಯನ್ನು ತಿಳಿಸಿ ಪತ್ರ ಬರೆದರು. ಭಾರತಕ್ಕೆ ಪ್ರಾಥಮಿಕ ಶಸ್ತ್ರಾಸ್ತ್ರಗಳನ್ನು ಪೂರೈಸುವಲ್ಲಿ ಕಾಮನ್‌ವೆಲ್ತಿನ ರಾಣಿ ಬ್ರಿಟನ್ನು ಮತ್ತು ಜಾಗತಿಕ ರಾಜ್ಯ ಅಮೆರಿಕೆಗಳು ಮುಂಬಂದುವು. ಚೀನೀಯರ ಏಕಪಕ್ಷೀಯ ಸಮರ ವಿರಾಮ ಘೋಷಣೆಯಿಂದ ಯುದ್ಧವೇನೋ ಒಮ್ಮೆಗೆ ನಿಂತಿತು. ಹೀಗಿದ್ದರೂ ದಿನದಿಂದ ದಿನಕ್ಕೆ ಚೀನಾವು ಮರಳಿ ಆಕ್ರಮಣ ಮಾಡುವ ಲಕ್ಷಣಗಳೇ ಸುಸ್ಪಷ್ಟವಾಗಿ ಗೋಚರಿಸತೊಡಗಿವೆ. ಆದುದರಿಂದ ಪರಕೀಯರ ಆಕ್ರಮಣದಿಂದ ಬದುಕಿ, ಅದನ್ನು ವ್ಯರ್ಥಗೊಳಿಸುವ ವ್ಯವಸ್ಥೆಯನ್ನು ನಾವು ಮಾಡಲೇ ಬೇಕಾಗಿದೆ; ಶತ್ರುಗಳನ್ನು ಹಿಮ್ಮೆಟ್ಟಿಸುವ ಬಲವನ್ನು ನಾವು ಗಳಿಸಿಯೇ ಇಡಬೇಕಾಗುತ್ತದೆ.

**ನಿಯೋಗ ಸಂಚಾರ**

ತುರ್ತಿಗೆ ಬೆಂಕಿ ಬಿದ್ದಾಗ ಆರಿಸಲು ಕರುವ ನೀರು ಯಾವ ಬಾವಿಯದು ಎಂದು ಅರಸಲು ಹೋಗುವುದಿಲ್ಲ. ಆಕ್ರಮಣ ನಡೆದಾಗ, ಅದನ್ನು ತಡೆಯುವುದಷ್ಟೇ ಮಹತ್ವದ ಕೆಲಸ. ಇಂದು ಚೀನಾದ ದುಷ್ಟಾಕ್ರಮಣದಿಂದ ರಕ್ಷಣೆಯನ್ನು ಮಾಡಿಕೊಳ್ಳುವುದು ನಮ್ಮ ಪರಮ ಕರ್ತವ್ಯವಾದುದರಿಂದ, ಸೈನಿಕ ಬಲವನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ; ಅತ್ಯವಶ್ಯವಾಗಿದೆ. ಇದಕ್ಕಾಗಿ ನಮ್ಮ ಪಾಶ್ಚಾತ್ಯ ಮಿತ್ರರನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿ ಬಂದಿದೆ. ಇತ್ತೀಚೆಗೆ ಭೂತಲಿಂಗಂ ಸಮಿತಿಯು ಕೆನಡಾ, ಅಮೆರಿಕಾ ಮತ್ತು ಗ್ರೇಟ್ ಬ್ರಿಟನ್ನುಗಳನ್ನು ಸಂಚರಿಸಿ, ಭಾರತಕ್ಕೆ ಅಗತ್ಯವಾದ ಶಸ್ತ್ರಾಸ್ತ್ರಗಳ ವಿವರಣೆಯನ್ನಿತ್ತಿತು; ಸಮಾಧಾನಕರ ಪರಿಸ್ಥಿತಿಯನ್ನು ಆ ದೇಶಗಳಲ್ಲಿ ಸೃಷ್ಟಿ ಮಾಡಿ, ನಿಯೋಗವು ಮರಳಿದ ಮೇಲೆ ಸಂರಕ್ಷಣಾ-ಆರ್ಥಿಕ ಸಂಯೋಜನಾ ಖಾತೆಯ ಮಂತ್ರಿ ಕೃಷ್ಣಮಾಚಾರಿಯವರು ಈ ಸಂಬಂಧದ ಮಾತುಕತೆಯನ್ನು ಮುಂದುವರಿಸಲು ಮತ್ತು ಪರಿಪಕ್ವಗೊಳಿಸಲು ಮರಳಿ ಯಾತ್ರೆ ಮಾಡಿದರು. ಅವರ ಕೆನಡಾ ಮತ್ತು ಅಮೆರಿಕೆಗಳ ಸಂಚಾರವೀಗ ತಾನೇ ಮುಗಿದಿದೆ; ಮತ್ತು ಇದು ನಿರೀಕ್ಷಿತ ಪರಿಣಾಮವನ್ನೂ ತರುವ ಭರವಸೆಯಿದೆ.

**ನೆಹರು ಸೇನಾಧಿಪತ್ಯ**

ಭಾರತೀಯ ಸಾರ್ವಭೌಮತೆಯನ್ನು, ೪೫ ಕೋಟಿ ಜನತೆಯನ್ನು ಆಹ್ವಾನಿಸುವ ದುಸ್ಸಾಹಸವನ್ನು ಕಮ್ಯೂನಿಸ್ಟ್ ಚೀನೀಯರು ಮಾಡಿರುವಾಗ, ಸ್ವರಕ್ಷಣೆಯನ್ನು ಮಾಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ. ನಮ್ಮ ಪ್ರಧಾನಿಯವರು ಹಿಂದೆಯೇ ಉದ್ಘೋಷಿಸಿದ್ದಾರೆ "ಭಾರತವೆಂದಿಗೂ ಶಕ್ತಿಯ ಮುಂದೆ ತಲೆ ತಗ್ಗಿಸದು, ಬಲಾತ್ಕಾರವೆದುರು ಬಗ್ಗದು." ದೇಶರಕ್ಷಣೆಯ ಪವಿತ್ರ ಕರ್ತವ್ಯ ಪಾಲನೆಯಲ್ಲಿ ಸಕಲ ಭಾರತೀಯರು ತಮ್ಮ ಸರ್ವಪ್ರಕಾರದ ಭೇದಭಾವಗಳನ್ನು ಮರೆತು, ರಾಷ್ಟ್ರರಕ್ಷಣೆಯ ಏಕಮೇವ ಗುರಿಯತ್ತ ಏಕ ಪಂಥದಲ್ಲಿ ಸಾಗುತಿದ್ದಾರೆ. ಸಂರಕ್ಷಣಾ ಮಂತ್ರಿ ಯಶವಂತ ರಾವ್ ಬಲವಂತ ರಾವ್ ಚವಣರ ಮಾತಿನಲ್ಲಿ ಪ್ರಧಾನಿ ನೆಹರು ಸೇನಾಪತಿಯಾದರೆ, ಉಳಿದೆಲ್ಲ ಭಾರತೀಯ ನಾಗರಿಕರು ಸೈನಿಕರು. ಅವರು ನಮಗೆ ವಹಿಸುವ ಯಾವ ಕರ್ತವ್ಯವನ್ನಾದರೂ ಮಾಡಲು ನಾವು ಸದಾಸಿದ್ಧರು. ಅದಕ್ಕೂ ಚೀನಾದ ಸೇನೆಯು ಆಧುನಿಕ ಶಸ್ತ್ರೋಪಕರಣಗಳಿಂದ ಸುಸಜ್ಜಿತವಾಗಿರುವಾಗ, ನಾವಾದರೂ ಹಳೆಯ ಕಾಲದ ತುಪಾಕಿ ಬಂದೂಕುಗಳಿಂದಲೇ ಎದುರಿಸುವುದು ಸಾಧ್ಯವಿಲ್ಲ. ನಾವು ಅಭಿವೃದ್ಧಿ ಯೋಜನೆಗಳಲ್ಲಿಯೇ ಹೆಚ್ಚಾಗಿ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೆವು — ಪಂಚಶೀಲ ತತ್ವವನ್ನು ನಂಬಿದ ದೇಶಕ್ಕೆ ಸೈನ್ಯದ ಆವಶ್ಯಕತೆಯೆ ಇಲ್ಲ! ಆದರೆ, ನಮ್ಮ ನಂಬುಗೆ ವ್ಯರ್ಥವಾಯಿತು. ನಮ್ಮ ಅಹಿಂಸೆಯನ್ನು ದುರ್ಬಲತೆಯೆಂದು, ಸೌಹಾರ್ದವನ್ನು ಶರಣು ಎಂದು, ಸರ್ವಜನಾದರಣೆಯನ್ನು ಮೌಢ್ಯವೆಂದು, ತಾಟಸ್ಥ್ಯವನ್ನು ಅಶಕ್ತತೆಯೆಂದು ಬಗೆದು ಕೆಂಪು ಚೀನ ತಾನು ಸುಸಜ್ಜಿತಗೊಳಿಸಿದ ಸೇನೆಯಿಂದ ಭಾರತವನ್ನು ಆಕ್ರಮಿಸಿತು. ಆದರೂ ನಮ್ಮ ವೀರ ಯೋಧರು ಚೀನೀಯರ ದುರಾಕ್ರಮಣವನ್ನು ತಡೆಯುವ ಸಾಹಸ ಮಾಡಿದರು; ದುರ್ದೈವದಿಂದ ಅವರು ಪಡೆದ ಯಶಸ್ಸು ಮಾತ್ರ ಕಡಿಮೆಯಾಯಿತು.

**ಮಳೆ ಸುರಿಯಬಹುದು**

ನಮ್ಮ ಸೇನೆಯನ್ನೂ ಅತ್ಯುತ್ತಮವಾದ ಅಸ್ತ್ರಶಸ್ತ್ರಗಳಿಂದ ಸಾರಿಗೆ ಸೌಕರ್ಯಗಳಿಂದ ಸಜ್ಜುಗೊಳಿಸುವುದು ಇಂದು ಅತ್ಯಗತ್ಯವಾಗಿದೆ. ಶರತ್ತನೆ ಜೀರುಗಟ್ಟಿ ಸುರಿಯುತಿದ್ದ ಮಳೆಯೇನೋ ನಿಂತಿದೆ. ಆದರೆ ಗುಡು ಗುಡನೆ ಗುಡುಗುವ ಗುಡುಗು ಏಕಟಾಟ್ಟಹಾಸ ಮಾಡುತ್ತಿದೆ. ಮಿಂಚು ಕಣ್ಣುಕೋರೈಸುತ್ತಿದೆ. ಆಕಾಶವಾದರೂ ತಿಳಿಯಾಗುವುದರ ಬದಲು ಅಲ್ಲಿ ಮತ್ತಷ್ಟು ಘನ ಕರಿಘಟೆಗಳು ಜಟ್ಟಣಿಸುತ್ತಿವೆ. ಹಾಗಿರುವಾಗ ಮರಳಿ ಬಿರುಮಳೆ ಬರುವುದಿಲ್ಲವೆಂದು ಭರವಸೆಯಿಡುವುದಾದರೂ ಹೇಗೆ ಸಾಧ್ಯ? ಆದುದರಿಂದಲೇ ನಮ್ಮ ಸೇನೆಯಿಂದು ರಕ್ಷಣೆಯ ಮುಖದಲ್ಲಿಯೂ ಉತ್ಪಾದನೆಯ ಬಾಬಿಯಲ್ಲೂ ಪ್ರಗತಿ ಹೊಂದಬೇಕಾಗಿದೆ. ಉತ್ಪಾದನೆಗಾಗಿ ನಮ್ಮ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವ ಅಚಲ ನಿರ್ಧಾರವನ್ನು ಮಾಡಿದ್ದೇವೆ. ದೇಶದ ಆಂತರಿಕ ಸಂಪತ್ತನ್ನು ಸರ್ವಪ್ರಕಾರೇಣ ಹೆಚ್ಚಿಸುವ, ಇದಕ್ಕಾಗಿ ಅಧಿಕ ದುಡಿಯುವ ಪ್ರತಿಜ್ಞೆಯನ್ನು ನಾವು ಮಾಡಿದ್ದೇವೆ. ದುಡಿಮೆಯಿಂದಲೇ ಗಳಿಕೆ; ಅಧಿಕ ದುಡಿಮೆಯಿಂದಲೇ ಅಧಿಕ ಗಳಿಕೆ — ಈ ತತ್ವವನ್ನು ನಾವು ಅರಿತುಕೊಂಡಿದ್ದೇವೆ; ಆದರೆ, ಶಸ್ತ್ರಾಸ್ತ್ರ ತಯಾರಿಯಲ್ಲಿ ಮಾತ್ರ ನಾವು ಅಷ್ಟು ಶೀಘ್ರದಲ್ಲಿ ಮುಂದುವರಿಯುವ ಹಾಗಿಲ್ಲ.

**ತಿರುವು ಮುರುವು**

ಚೀನೀಯ ದೌರ್ಜನ್ಯಯುತ ಆಕ್ರಮಣಕ್ಕೆ ಮೊದಲು, ನಮಗೆ ಶಸ್ತ್ರಾಸ್ತ್ರಗಳ ಆವಶ್ಯಕತೆಯಿರಲಿಲ್ಲ; ಯಾರೊಡನೆಯೂ ನಮಗೆ ವಿವಾದವಿರಲಿಲ್ಲ; ಇದ್ದರೂ ಅದರ ಪರಿಹಾರಕ್ಕೆ ಶಕ್ತಿಯ ಪ್ರಯೋಗ ಮಾಡುವ ಇಚ್ಛೆಯಾದರೂ ಇರಲಿಲ್ಲ. ಯಾವ ಅನ್ಯ ದೇಶವನ್ನಾದರೂ ಗೆಲ್ಲುವ ಸಾಮ್ರಾಜ್ಯವಾದ ಪ್ರಿಯತೆಯೂ ನಮಗಿರಲಿಲ್ಲ. ಆದುದರಿಂದಲೇ ನಮ್ಮ ಮೇಲೂ ಯಾರೂ ದಂಡೆತ್ತಲಾರರು ಎಂಬ ಭಾವನೆಯಿಂದಿರುವಾಗ, ಚೀನೀಯರು ಅನೂಹ್ಯವಾಗಿ 'ವಸ್ತುಸ್ಥಿತಿ ಹಾಗಿಲ್ಲ'ವೆಂದು ತೋರಿಸಲು ಮುಂದಾದರು. ಆಗಲೇ ಶಸ್ತ್ರಾಸ್ತ್ರಗಳು ನಮಗೂ ಬೇಕು ಎಂಬುದರ ಪರಿಜ್ಞಾನ ನಮಗಾದುದು. ನಮಗೆ ಅಗತ್ಯವಾಗುವ ಎಲ್ಲ ಶಸ್ತ್ರಾಸ್ತ್ರಗಳನ್ನು ದೇಶದಲ್ಲಿಯೇ ಉತ್ಪಾದಿಸಿಕೊಳ್ಳುವುದು ಅಪೇಕ್ಷಣೀಯ; ಆದರೆ, ಇದು ತ್ವರಿತದಲ್ಲಿ ಸಾಧ್ಯವಿಲ್ಲ. ಈಗ ಸಂರಕ್ಷಣೋಪಕರಣ ಕಾರಖಾನೆಗಳನ್ನು ನಾವು ನಿರ್ಮಿಸುತಿದ್ದೇವೆ. ಆದರೆ ಇದು ಉತ್ಪಾದನೆಗೆ ತೊಡಗಬೇಕಾದರೆ, ಇನ್ನೂ ಎರಡು ಮೂರು ವರ್ಷಗಳು ಬೇಕಾದಾವು. ಅಷ್ಟರ ವರೆಗೆ ಕೈಕಟ್ಟಿಕೊಂಡಿರುವುದು ಸಾಧ್ಯವೆ? ಅದಕ್ಕಾಗಿಯೇ ನಮ್ಮ ಮಿತ್ರರು ಕೊಡ ಮಾಡುವ ಸಹಾಯವನ್ನು ಪಡೆಯುವುದು ಅವಶ್ಯ.

**ಸೋವಿಯೆತ್ ಸಹಾಯ**

ಭಾರತಕ್ಕೆ ಸೋವಿಯೆತ್ ರಶ್ಯವು ಮಿಗ್ ವಿಮಾನಗಳನ್ನು ಕೊಟ್ಟಿದೆ. ಇದು ನಾನಾ ವಿಧದ ವಿವಾದಕ್ಕೆ ಒಳಗಾಗಿದ್ದರೂ ಕೊನೆಗೂ ಭಾರತವೇ ಗೆದ್ದಿತು. ಮಿಗ್ ವಿಮಾನಗಳನ್ನು ತಯಾರಿಸುವ ಕಾರಖಾನೆಯೊಂದನ್ನು ಕಟ್ಟಲು ನೆರವು ನೀಡಲು ರಶ್ಯ ಮುಂದೆ ಬಂದಿದೆ. ಇವನ್ನು ಬಿಟ್ಟು ಇನ್ನಾವುದೇ ರೀತಿಯಲ್ಲಿ ರಶ್ಯದಿಂದ ನಾವು ಸೈನಿಕ ಸಹಾಯವನ್ನು ನಿರೀಕ್ಷಿಸುವಂತಿಲ್ಲ. ಆದರೆ, ಪಂಚವಾರ್ಷಿಕ ಯೋಜನೆಯಲ್ಲಿ ನಾವು ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಅದು ಈ ಮೊದಲಿನಂತೆಯೇ ನೆರವನ್ನು ನೀಡುವುದು ಎಂಬ ವಿಶ್ವಾಸವನ್ನು ಭಾರತೀಯರು ಇಟ್ಟುಕೊಂಡಿದ್ದಾರೆ.

(ಉಳಿ: ಪುಟ ನೋ: ೩೦)

## ಅನುಭವ ಶಾಸ್ತ್ರ ಪರುಷದಲ್ಲಿ

# ತೈಲವಿಲ್ಲದ ಅಭ್ಯಂಜನ

ಉದರ ನಿರ್ವಹಣೆಗೊಂದು ಉದ್ಯೋಗವೆಂದಾಗಿರುವಾಗ ಅದು ಮನೆ ಬಾಗಿಲಲ್ಲಿ ದೊರೆಯುವಷ್ಟು ಭಾಗ್ಯಶಾಲಿ ನಾನಾಗಿರಲಿಲ್ಲ; ಪ್ರಾಯಃ ನನ್ನ ಹಿರಿಯರಾದರೂ ಅಷ್ಟು ಪುಣ್ಯಸಂಚಯ ಮಾಡಿಟ್ಟಿರಲಿಲ್ಲ. ಅದೇ ಕಾರಣದಿಂದಲೇ ಅವರ ಪ್ರೀತಿಯ ಪುತ್ರನಾದ ನಾನು ಊರು ಮನೆ ಬಿಟ್ಟು ಹೆಚ್ಚು ದೂರವೂ ಅಲ್ಲದ, ಸಮೀಪವೂ ಅಲ್ಲದ, ಹಳ್ಳಿಯೂ ಆಗಿರದ, ನಗರವೆಂದೂ ಕರೆಯಲಾಗದ 'ಊರು' ಒಂದರಲ್ಲಿ ಪಾದಾರ್ಪಣ ಮಾಡಲೇ ಬೇಕಾಯಿತು. ಕಿಂಕರ್ತವ್ಯ ವಿಮೂಢನಾದ ನಾನು ಹೇಗೆ ಹೇಗೋ ಮಾಡಿ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರಯತ್ನ ಮಾಡಿದೆ; ಸಾಮಾನ್ಯವಾಗಿ ಹೇಳುವುದಾದರೆ, ಊರಿಗೆ ತಕ್ಕಂತೆ ಬಾಳತೊಡಗಿದೆ; ಇಲ್ಲವೆಂದಾದರೆ, ನನ್ನ ಸುಖದುಃಖ ಹಿತ-ಅಹಿತಗಳ ಬಗ್ಗೆ ವಿಚಾರಿಸಬೇಕಾದವರಾದರೂ ಅಲ್ಲಿ ಯಾರಿದ್ದಾರೆ?

ಮಳೆಗಾಲದ ಬಲು ಸೋನೆಯು ಸುರಿಸುರಿದು ಮಾಯವಾಗುತ್ತ ಬರುತಿತ್ತು. ರಸ್ತೆಯಿಂದ ಅನತಿ ದೂರದಲ್ಲಿ ಕಂಗೊಳಿಸುತ್ತಿದ್ದ ಕೆಯ್ವೊಲಗಳು ಬರೇ ಹೊಲಗಳಾಗುತ್ತ ಬರುತಿದ್ದವು. ಉರಿ-ಚಳಿಗಳ ನಡುವೆ ಬಿರುಸಿನ ತಾಕಲಾಟ ನಡೆಯತೊಡಗಿತ್ತು. ಕಾಫಿ ಹೋಟೇಲುಗಳಲ್ಲಿ ಚುರುಕಿನ ಚಟುವಟಿಕೆಯು ಕಾಣಲು ಆರಂಭವಾಗಿತ್ತು.

ನಾನು ಬಿಡಾರ ಮಾಡಿದ್ದ ಕೋಣೆಯ ಪಕ್ಕದಲ್ಲೇ ಸಾಹುಕಾರರೊಬ್ಬರ ಗೋದಾಮು. ಪ್ರತಿ ರಾತ್ರೆಯೂ ಅಲ್ಲಿ ಸಾಮಾನುಗಳು ಬರುತಿದ್ದುವು ಮುಂಜಾವದಲ್ಲಿಯೇ ಅಲ್ಲಿಂದ ಮಾಯವಾಗುತಿದ್ದುವು. ಬಂದು ಹೋಗುವ ಹೊರೆಗಳು ಭತ್ತದ ಗೋಣಿಗಳು ಎಂದು ತಿಳಿಯಿತು. ಒಬ್ಬ ಸಾಮಾನ್ಯ ವರ್ಗದ ಸಾಹುಕಾರ ಪ್ರತಿದಿನವೂ ಒಂದೆರಡು ಲಾರಿಗಳಷ್ಟು ಭತ್ತದ ವ್ಯವಹಾರ ಮಾಡುವುದು ನನಗೊಂದು ವಿಸ್ಮಯವಾಗಿಯೇ ಕಂಡಿತ್ತು. ಅಂತೂ ನಗರದ ಗಲಭೆಯ ವಾತಾವರಣದಲ್ಲಿ ಬೆಳೆದು ಬಂದ ನನ್ನ ಮನಸ್ಸಿಗೆ ಇವನ್ನೆಲ್ಲಾ ಹಚ್ಚಿಕೊಳ್ಳುವ ಆವಶ್ಯಕತೆ ಬಂದಿರಲಿಲ್ಲ. ಹಳ್ಳಿಯ ರೈತರು ಬಡವರು ಏನೋ ತಮ್ಮ ಗರ್ಜಿಗಾಗಿ ಭತ್ತವನ್ನು ಮಾರುತಿದ್ದಾರೆ ಎಂದು ಭಾವಿಸಿ ನನ್ನಷ್ಟಕ್ಕೇ ನಾನು ಸಮಾಧಾನ ತಂದುಕೊಂಡೆ.

ದೀಪಾವಳಿಯ ಪರ್ವ ದಿನಗಳು ಸಮೀಪಿಸಿದುವು. ದುರ್ದೈವದಿಂದ ಅದು ಆ ವರ್ಷ ಮೂರು ದಿನ ಉಳಿಯ ಬೇಕೆ? ಸರಕಾರವು ಎರಡು ದಿನಗಳನ್ನು ಮಾತ್ರ ರಜಾ ದಿನವೆಂದು ಘೋಷಿಸಿತ್ತು. ಮೊದಲನೆಯ ದಿನವಂತೂ ರಜೆ ಮಾಡುವುದೇ ಅಗತ್ಯವಿತ್ತು. ಆದರೆ, ಆ ದಿನದ ಧಾರ್ಮಿಕ ಕಾರ್ಯಕ್ರಮಗಳು ಅತ್ಯಲ್ಪ ತಾನೆ? ರಾತ್ರೆ ಚಂದ್ರೋದಯದಲ್ಲಿ ತೈಲಾಭ್ಯಂಗ ಮಾಡುವುದು! ನ್ಯಾಯವಾಗಿ ಹೇಳುವುದಾದರೆ ಅಂದು ಯಾವ ಕೆಲಸವೂ ಇಲ್ಲ. ಅಭ್ಯಂಜನ ಸ್ನಾನ ಮಾಡಬೇಕಲ್ಲ ಎನ್ನಬಹುದು ನೀವು. ಆದರದು ಸೂರ್ಯೋದಯದಲ್ಲಿ ಅಲ್ಲ ತಾನೆ?. ಹಾಗಾಗಿ ನ್ಯಾಯ ಸತ್ಯ ಪಕ್ಷಪಾತಿಯೆಂದು ಹೇಳಿಕೊಳ್ಳುವ ನಾನು ಕೆಜುವಲ್ ರಜೆ ಬರೆಯುವುದು ಆ ಕಾರಣಕ್ಕೆ ಸಾಧ್ಯವಿಲ್ಲ. ಹೀಗಾಗಿ ತುಂಬ ಯೋಚನೆಯಲ್ಲಿ ಬಿದ್ದೆ. ತೈಲಾಭ್ಯಂಜನ ಮಾಡದೆ ಗತ್ಯಂತರವೂ ಉಳಿಯಲಿಲ್ಲ. ಸಂಪ್ರದಾಯಸ್ಥರ ಮನೆತನದಲ್ಲಿ ಹುಟ್ಟಿ ಬೆಳೆದು ಬಂದ ಮೇಲೆ ಅದನ್ನು ಬಿಟ್ಟುಬಿಡುವುದು ಸಾಧ್ಯವೂ ಇರಲಿಲ್ಲ.

ಸುಧಾರಕರು ಪ್ರಶ್ನಿಸಬಹುದು, 'ಅವೆಲ್ಲಾ ಎಂಥದು? ಬಿಡುವಾದಾಗ ಒಂದು ದಿನ ಅಭ್ಯಂಜನ ಮಾಡಿದರಾಯಿತು' ಎಂದು. ನಾನೂ ಮೊದ ಮೊದಲಿಗೆ ಹೀಗೆಯೇ ತಾಯಿಯೊಡನೆ ವಾದಿಸುತಿದ್ದೆ. ಆದರೆ, ಅದಕ್ಕೆ ಆಕೆಯಿತ್ತ ಉತ್ತರವಾದರೂ ಪ್ರಶ್ನಾರೂಪದಲ್ಲಿಯೇ ಇದ್ದಿತ್ತು. 'ಕೆಲಸಕ್ಕೆ ನಿನ್ನೆ ಯಾಕೆ ಹೋದಿ? ಯಾವುದಾದರೂ ಬಿಡುವಿದ್ದ ದಿನ ಹೋಗಬಹುದಿತ್ತು.' ಈ ಮೂಢತನದ ಕುತರ್ಕವೆಂದು ಯಾರಾದರೂ ಹೇಳಬಹುದು. ಆದರೆ, ಕುತರ್ಕವನ್ನು ಕುತರ್ಕದಿಂದಲೇ ಗೆಲ್ಲಬೇಕಲ್ಲವೆ? ಶಠಸ್ಯ ಪ್ರತಿ ಶಾಠ್ಯಂ ಎಂಬುದೇ ಆರ್ಯ ಸಿದ್ಧಾಂತ ತಾನೆ?

ಈ 'ಕುತರ್ಕ'ದ ಬಗ್ಗೆ ನಾನು ಒಂದು ಇಡಿ ದಿನ ತಲೆ ಕರುಡುಮಾಡಿಕೊಂಡಿದ್ದೆ. ಆ ದಿನವೇ ಅಭ್ಯಂಜನವೇಕೆ ಮಾಡಬೇಕು? ಇದಕ್ಕೆ ಪ್ರತಿಯಾಗಿ ನನ್ನ ಮನಸ್ಸಿನಲ್ಲಿಯೇ ಹಲವಾರು ಪೂರಕ ಪ್ರಶ್ನೆಗಳೇ ಎದ್ದುವು: ರಾತ್ರೆ ಹೊತ್ತೇ ನಿದ್ದೆ ಯಾಕೆ ಮಾಡಬೇಕು? ದಿನದಲ್ಲಿ ಮೂರು ಹೊತ್ತು ಯಾಕೆ ಊಟ ಮಾಡಬೇಕು? ಕಾಲುಗಳಿಂದಲೇ ನಡೆಯ ಬೇಕು ಏಕೆ? ಬಾಯಿಯಿಂದಲೇ ಉಣ್ಣ ಬೇಕು ಏಕೆ?.... ಇತ್ಯಾದಿ ಇತ್ಯಾದಿ. ಈ ಬಗ್ಗೆ ಸಂಶೋಧನೆ ನಡೆಸುವಷ್ಟು ಕುಶಾಗ್ರಮತಿಯಾಗಲೀ ಸಮಯಾಕಾಶವಾಗಲೀ ನನಗಿದ್ದಿರಲಿಲ್ಲವಾದುದರಿಂದ 'ಹಾಗೆ ಇದ್ದದ್ದು ಹಾಗೆಯೇ ಇರಲಿ' ಎಂದು ಯೋಜನಾ ಲಹರಿಯನ್ನು ಅಲ್ಲಿಗೇ ಭಂಗಿಸಿ ಮುಂದುವರಿದಿದ್ದೆ.

ಅಭ್ಯಂಜನವನ್ನಂತೂ ಮುಗಿಸಬೇಕು, ಅದಕ್ಕಾಗಿ ಏನು ಮಾಡಲಿ ಎಂದು ಚಿಂತಿಸುತ್ತ ಇರುವಾಗ, ನನ್ನ ಗೆಳೆಯನೊಬ್ಬ ಸಿಕ್ಕಿದ. ಮಾತು ಮಾತು ಪ್ರಸಂಗದಲ್ಲಿ ಅಭ್ಯಂಜನಕ್ಕೆ ತನ್ನ ಮನೆಗೆ ಬರಬೇಕೆಂದೂ ಸುಖವಾಗಿ ಸ್ನಾನ ತೀರಿಸಿ, ದೋಸೆ ಹೊಡೆದು ಹೊತ್ತಿಗೆ ಸರಿಯಾಗಿ ಕರ್ತವ್ಯಕ್ಕೆ ಅಂಟಿಕೊಳ್ಳಬಹುದೆಂದೂ ಆಹ್ವಾನವನ್ನೂ ಸಲಹೆಯನ್ನೂ ಏಕ ಕಾಲದಲ್ಲಿ ಕೊಟ್ಟನು. 'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ', ಎಂದು ಅರ್ಜುನ ಕೃಷ್ಣನೊಡನೆ ಗೀತೆಯಲ್ಲಿ ಒಪ್ಪಿಕೊಂಡಂತೆ ನಾನೂ ನಿರುತ್ಸಾಹ, ಸಂಕೋಚಗಳನ್ನು ಬಹಿರಂಗದಲ್ಲಿ ಪ್ರಕಟಿಸುತ್ತ 'ಬೇಡ ಬೇಡ', ವೆನ್ನುತ್ತ ಆದೀತು ಎಂದೆ.

ಅಂದು ಸಂಜೆಯಾಗುವುದರಲ್ಲಿತ್ತು. ಶುಭ್ರ ಮೇಘ ಮಾಲಿಗಳೊಳಗೆ ಓಡೋಡುತ್ತ ಸೂರ್ಯ ದೇವ ಅಸ್ತಾಚಲದ ತುದಿಯನ್ನು ಅಡರಿದ್ದನು. ಅಥವಾ ಅಪರಾಂಬುಧಿಯ ಉತ್ತುಂಗ ತರಂಗಕ್ಕೆ ನೆಗೆದಿದ್ದನೆನ್ನುವುದೇ ಸಮುಚಿತವಾದೀತು, ಅದು ಹೇಗೂ ಇರಲಿ, ಅರುಣ ವರ್ಣದ ಲೇಪವನ್ನು ಪಶ್ಚಿಮ ದಿಗಂಗನೆ ಹಚ್ಚಿಕೊಂಡಿದ್ದಳು. ನಿಷ್ಪ್ರಭಕಿಂತು ಪವಿತ್ರ ಭಾಸ್ಕರ ಬಿಂಬ ಹೊಳೆಯುತಿತ್ತು. ನಾವು ನೋಡುನೋಡುತ್ತಲೇ ಇದ್ದೆವು. ಎವೆಯನ್ನೊಮ್ಮೆ ಮುಚ್ಚಿ ಮತ್ತೆ ತೆರೆದಾಗ ಕೆಂಬಣ್ಣದ ಗೀರು ಆಕಾಶದಲ್ಲಿ ತೋರಲಿಲ್ಲ. ಅಸ್ತವಾಯಿತು ಎಂದುಕೊಂಡು ಮಿತ್ರನೊಡನೆ ಆತನ ಮನೆ ದಾರಿಯನ್ನು ಮೆಟ್ಟತೊಡಗಿದೆ.

ಕೃಷ್ಣಪಕ್ಷದ ತ್ರಯೋದಶಿಯ ರಾತ್ರಿಯ ಆರಂಭ ಭಾಗ. ದೀಪಾವಳಿಯ ಪರ್ವ ದಿನಗಳ ಆನಂದಾತಿರೇಕವನ್ನು ಮಿತಿಗೊಳಿಸಲು ಮೇಘರಾಜ ಇಂದ್ರನು ಆಕಾಶದಲ್ಲಿ ಮೋಡಗಳನ್ನು ಒಟ್ಟುಗೂಡಿಸಿರಬೇಕು; ಮತ್ತು ತನ್ನ ಸಹಚರ ವಾಯುವಿನ ಪಥ ಪ್ರತೀಕ್ಷೆಯನ್ನು ಮಾಡುತ್ತಿರಬೇಕು ಏಕೆಂದರೆ, ರಾತ್ರಿಯಾಗುವುದೇ ತಡ ನಕ್ಷತ್ರ ಪುಂಜಗಳು ಮಿಂಚು ಹುಳಗಳಂತಾದರೂ ಮಿಂಚಿ ಬೆಳಕು ಹರಿಸಬೇಕಾಗಿತ್ತು ಇಲ್ಲವೇ ಮದುವೆ ಚಪ್ಪರಗಳಲ್ಲಿ ವರನ ದಿಬ್ಬಣದವರ ತಲೆಗೆ ಪನ್ನೀರು ಸುರಿಸುವಂತೆ ಮಳೆ ನೀರಾದರೂ ಸುರಿಯಬೇಕಿತ್ತು. ಇವೆರಡರ ಅಭಾವವೇ ನನ್ನ ಅಲ್ಪ ಮತಿಯಲ್ಲೂ ಅಂತಹ ಕಲ್ಪನೆ ಮೂಡುವಂತೆ ಮಾಡಿತ್ತು.

ಒಂದರ್ಧ ಮೈಲು ನಡೆಯುವಷ್ಟರಲ್ಲಿಯೇ ಮಾರ್ಗ ಬಿಟ್ಟು ಮೂರು-ನಾಲ್ಕು ಫರ್ಲಾಂಗು ದೂರದಲ್ಲಿ ದೀಪವೊಂದು ಕಾಣಿಸಿತು. ಅದು ಪೆಟ್ರೋಮೇಕ್ಸ್ ಎಂದು ನೋಡಿದವರು ಯಾರಾದರೂ ಹೇಳಬಹುದಿತ್ತು. ಆ ಊರಿಗೆ ವಿದ್ಯುದ್ದೀಪಗಳು ಇನ್ನೂ ಬೆಳಕಿತ್ತಿಲ್ಲವಾದುದರಿಂದ ಈ ಸಿದ್ಧಾಂತ ಮತ್ತುಷ್ಟು ಪುಷ್ಟಿಯಾಗುತ್ತದೆ. ಅದರ ಜತೆಗೇನೇ ಕೆಯ್ಯ ಪಡಿಮಂಚಕ್ಕೆ ಬಡೆಯುವ ಭತ್ತವನ್ನು ಒಗ್ಗೂಡಿಸುವ ಧ್ವನಿಯೂ ಅಸ್ಪಷ್ಟವಾಗಿ ಕೇಳತೊಡಗಿತು. ಅರೆಕ್ಷಣ ಆ ಕಡೆಗೆ ಕಿವಿಗೊಟ್ಟಾಗ, ನನ್ನ ಮನಸ್ಸಿಗೆ ಹೊಳೆದ ವಿಚಾರವಿಷ್ಟು. ಮೋಡ ಕವಿದಿದೆ. ಮಳೆ ಬರುವುದೆಂಬ ಭೀತಿಯಿಂದ ರಾತ್ರಿ ದೀಪವಿಟ್ಟಾದರೂ ಕಾಳನ್ನು ಪ್ರತ್ಯೇಕಿಸಿ ಬೆಚ್ಚಗಿಡುವ ಕಾರ್ಯದಲ್ಲಿ ಮನೆಯ ಎಲ್ಲರೂ ತತ್ಪರರಾಗಿದ್ದಾರೆ. ಕಾಳು ಒದ್ದೆಯಾದರೆ, ಅವರಿಗೆ ನಷ್ಟ—ಅಂದರೆ ಅದು ರಾಷ್ಟ್ರೀಯ ನಷ್ಟ. ಎಂತಲೇ ಆನಂದದಿಂದ ಮಿತ್ರನನ್ನು ಕುರಿತು ಹೇಳಿದೆ

'ಪರವಾ ಇಲ್ಲ. ನಿಮ್ಮ ಊರಿನ ರೈತರು ನಿಜಕ್ಕೂ ಪರಿಶ್ರಮ ಶೀಲರು'

ಆತನ ಮುಖ ಚರ್ಯೆ ಹೇಗಿತ್ತೋ ಕಾಣಲಿಲ್ಲ. ಆದರೆ, ಬಾಯಿಯಿಂದ ಯಾವ ಉತ್ತರವೂ ಹೊರಡದಿರುವುದರಿಂದ ನನ್ನ ಮಾತು ಕೇಳಿಸಲಿಲ್ಲವೆಂದುಕೊಂಡು, ಅದೇ ಮಾತಿನ ಅರ್ಥವನ್ನು ಪುನರುಚ್ಚರಿಸಿದೆ.

'ಹ್ಞಾಂ ಸರಿಯೇ. ಆದರೆ, ನೀನೇಕೆ ಹಾಗೆ ಹೇಳುತ್ತಿ?' ಎಂದಾತನ ಧ್ವನಿಯಲ್ಲಿ ತುಸು ಉದಾಸೀನತೆಯೇ ಪ್ರಕಟವಾಗಿತ್ತು.

'ಅಲ್ಲ, ನಾಳೆ ಹಬ್ಬವಾದರೂ ಇಂದು ನೋಡು, ರಾತ್ರಿ ದೀಪವಿರಿಸಿಕೊಂಡು, ಕಾಳನ್ನು ಪ್ರತ್ಯೇಕಿಸುತ್ತಾರೆ. ಇಂತಹ ರೈತರಿಂದ ದೇಶೋದ್ಧಾರವಾಗುವುದು; ಅಧಿಕ ಉತ್ಪಾದನೆಯಾಗುವುದು.' ನನ್ನ ಅರ್ಥ ಶಾಸ್ತ್ರದ ಸಿದ್ಧಾಂತವನ್ನೇ ಬಿಚ್ಚ ತೊಡಗಿದೆ.

'ದೇಶವೇನೋ ಉದ್ಧಾರವಾಗಬಹುದು; ಆದರೆ, ಅದರಿಂದ ಏನು ಪ್ರಯೋಜನ?'

ನನಗೆ ತುಸು ರೇಗಿತು. ಅರ್ಥಶಾಸ್ತ್ರದ ಅ ಆ ಇ ಕೂಡ ಅರಿಯದ ಹಳ್ಳಿ ಗೂಬೆಯಂತೆ ಭಾಸವಾದ ಆ ನನ್ನ ಸನ್ಮಿತ್ರ. ತಿಳಿಯದವರಿಗೆ ತಿಳಿಸಿ ಹೇಳುವುದು ಅಗತ್ಯವಾದುದರಿಂದ ಆತನಿಗೆ ವಿವರಿಸುವವನಂತೆ ಹೇಳಿದೆ: 'ಉತ್ಪಾದನೆಯು ಹಾಳಾಗದೆ ಎಲ್ಲವೂ ಕೈಗೆ ಬಂದರೆ, ಒಟ್ಟು ಉತ್ಪತ್ತಿಯು ಹೆಚ್ಚುವುದು. ಉತ್ಪಾದನೆಯು ದೇಶದಲ್ಲಿ ಅಧಿಕವಾದಂತೆ ರಾಷ್ಟ್ರೀಯ ಆದಾಯವೂ ಹೆಚ್ಚುವುದು. ಹೀಗೆ ರಾಷ್ಟ್ರೀಯ ಆದಾಯದ ಏರಿಕೆಯಿಂದ ದೇಶದ ಪ್ರಜೆಯ ಸರಾಸರಿ ಆದಾಯದ ಮಿತಿಯೂ ಏರುವುದು!'

'ಸರಿಯಯ್ಯಾ, ಆದಾಯದ ಮಿತಿ ಏರಿದರೆ, ರೈತನಿಗೇನು ಲಾಭ ಎಂದು ನಾನು ಕೇಳುವುದು' ಆತ ನಡುವೆಯೇ ಅಡ್ಡ ಸವಾಲು ಹಾಕಿದ.

ನನಗೆ ಮತ್ತೂ ರೇಗಿತು. ನನ್ನ ಮುಂದೆ ಕನ್ನಡಿಯು ಇರುತಿದ್ದರೆ ಆ ದೂರದ ಹರಕು ಮುರುಕು ಬೆಳಕಿನಲ್ಲಾದರೂ ಬಿದ್ದ ನನ್ನ ಪ್ರತಿಬಿಂಬದ ಪರಿಚಯ ನನಗೆ ಆಗಲಾರದೆಂದು ಭಾಸವಾಯಿತು. ನಾನು ರೇಗಿ ಹೇಳುವವನಂತೆ ಹೇಳಿದೆ: 'ರೈತನಿಗೆ ಅಧಿಕ ಉತ್ಪತ್ತಿಯಾದರೆ, ಆತನ ಸಾಂಪತ್ತಿಕ ಸ್ಥಿತಿಯೂ ಉನ್ನತವಾಗುವುದಿಲ್ಲವೆ?

'ಆಗುತ್ತದೆ. ಆದರೆ, ಅದಕ್ಕೊಂದು ತಿದ್ದುಪಡಿ ಮಾಡ ಬೇಕು.'

ಸರಕಾರಕ್ಕೆ ವಿರೋಧ ಪಕ್ಷವಿರುತ್ತದೆ.

(೧೦ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5

2. ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ

3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

## ಶತ್ರು ಚೀನೀಯರನ್ನು ಕೂಡಿ

# ಪಾಕಿಸ್ಥಾನ ಆಕ್ರಮಣ ನಡೆಸೀತೆ?

ನಮ್ಮ ಪುಣ್ಯಭೂಮಿ ಭಾರತದ ಸೀಮಾ ಪ್ರದೇಶ ಸುಸ್ಪಷ್ಟ ಇರುವಾಗ ಚೈನೀಯರು ದಂಡೆತ್ತಿಕೊಂಡು ಬರಲು ಕಾರಣವೇನೆಂಬುದನ್ನು ನೋಡಲು ಚೀನಾದ ಅಂತರಂಗವನ್ನು ಕಾಣಬೇಕು. ಅದಕ್ಕಿಂತ ಮುಂಚೆ ನಡುದಾರಿಯಲ್ಲಿ ಇನ್ನೊಂದು ಸಮಸ್ಯೆ ತಲೆ ಎತ್ತಿ ನಿಂತುಕೊಂಡು ಪ್ರಯಾಣಕ್ಕೆ ಅಡ್ಡಿಯುಂಟು ಮಾಡಿರುತ್ತದೆ. ಭಾರತದ ಗೃಹ ಮಂತ್ರಿಗಳು ಹಾಗೂ ಇತರ ಕೆಲ ರಾಷ್ಟ್ರೀಯ ಪ್ರಮುಖ ಮುಂದಾಳುಗಳು ನೇಪಾಲಕ್ಕೆ ಹೋಗಿ ಬಂದುದರಿಂದ ಪಾಕಿಸ್ಥಾನಕ್ಕೆ ಒಂದು ಸಮಾನವಾಗಿತ್ತು. ಅಲ್ಲಿಂದ ಸರ್ವಾಧಿಕಾರಿ ಅಯೂಬಖಾನ ಹಾಗೂ ಅಂತರರಾಷ್ಟ್ರೀಯ ಸಂಪರ್ಕ ಸಚಿವ—ಮಾತುಕತೆ ಮುಂದರಿಸುವ ಮಲ್ಲ—ಜೆಡ್. ಎ. ಭುಟ್ಟೋರೂ ನೇಪಾಲಕ್ಕೆ ಹೋಗಿ ಕೆಲ ಒಪ್ಪಂದಗಳನ್ನು ಮಾಡಿಕೊಂಡು ಬಂದರು. ಅಲ್ಲಿಂದ ಮರಳಿರುವ ಭುಟ್ಟೋವೇ ದಿನಾಂಕ ಹದಿನಾಲ್ಕರಂದು ದಿಲ್ಲಿಯಲ್ಲಿ ಬಂದಿಳಿದರು. ಇದು ಅವರು ನಡೆಸುವದು ಆರನೇ ಸಲದ ಮಾತುಕತೆ. ಅವರು ಆಗಮಿಸಿದೊಡನೆ ಪತ್ರಿಕಾಕರ್ತರೊಡನೆ ಮಾತನಾಡುತ್ತಿದ್ದಾಗ ಕೆಲ ಸೂಚನೆಗಳನ್ನು ಕೊಟ್ಟಿರುವರು. ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಮಾತುಕತೆ ಮುಂದರಿಯುವದೆಂದು ಅವರು ಆಗ ತಿಳಿಸಿದರು. ಎರಡೂ ಪಕ್ಷಗಳು ಒಂದು ನಿಲುವಿಗೆ ಬಂದಲ್ಲಿ ಸಮಸ್ಯೆ ಸರಳ ರೀತಿಯಲ್ಲಿ ಬಗೆಹರಿಯುತ್ತದೆಂಬುದು ಅವರ ಅಭಿಪ್ರಾಯ. ಕಾಶ್ಮೀರದ ಪ್ರಶ್ನೆ ಇತ್ಯರ್ಥವಾಗದೆ ಎರಡು ದೇಶಗಳ ನಡುವೆ ನಡೆಯುವ ಅದ್ಯಾವ ಕೌಲಿಗೆ ಕಾಸಿನ ಬೆಲೆಯೂ ಬರುವದಿಲ್ಲವೆಂಬ ತಮ್ಮ ಮನೋಗತವನ್ನು ಇಂದು ಬಯಲು ಮಾಡಿದರು. ಭುಟ್ಟೋರು ಮಾತ್ರ ಬಹಳ ಅವಸರದಿಂದ ಇತ್ತ ಆಗಮಿಸಿದ್ದರು. ಆಗ ಪಾಕಿಸ್ಥಾನದ ಮಂತ್ರಿ ಮಂಡಲ ಯಾವೊಂದು ನಿರ್ಧಾರಕ್ಕೂ ಬಂದಿರಲಿಲ್ಲ. ಆ ಸ್ಥಿತಿಯಲ್ಲಿ ಪಾಕಿಸ್ಥಾನದೊಳಗೆ ಹೊಸ ರೀತಿಯ ಕ್ರಾಂತಿಯೊಂದು ಸಂಭವಿಸಿದುದರಿಂದ ಭುಟ್ಟೋರು ಇಲ್ಲಿಂದ ಒಡನೆ ಹಿಂತಿರುಗಬೇಕಾಯಿತು. ಅವರ ಮಾತುಕತೆಗೆ ಸರಕು ಪಾಕಿಸ್ತಾನದಿಂದ ಬರಬೇಕಾಗಿತ್ತು. ಅದು ಬರಲು ಸಂದರ್ಭ ಇಲ್ಲದೇ ಇದ್ದುದರಿಂದ ಭುಟ್ಟೋರೇ ಅಲ್ಲಿಗೆ ಹಿಂತಿರುಗಬೇಕಾಯಿತು. ಅಮ್ರೋಹಾ ಚುನಾವಣೆಗೂ ಭುಟ್ಟೋರು ಬಿಟ್ಟ ಓಟನ್ನು ಸಂದರ್ಭ ಕಲ್ಪಿಸುವವರೂ ಇದ್ದಾರೆ! ಏನಿದ್ದರೂ ನಡೆದ ಮಾತುಕತೆಗಳ ನಡುವೆ 'ಯುದ್ಧ ನಿಷೇಧ'ದ ಮಾತೂ ಬಂದಿತ್ತು. ಕಾಶ್ಮೀರ ಪ್ರಶ್ನೆ ಬಗೆಹರಿಯದೆ ಯಾವ ಕೌಲಿಗೂ ತಾನು ಒಪ್ಪುವದಿಲ್ಲವೆಂದು ತಿಳಿಸಿದ್ದ ಭುಟ್ಟೋ 'ಯುದ್ಧ ನಿಷೇಧ', ನಿರ್ಧಾರಕ್ಕೂ ಒಪ್ಪಿರುವದಿಲ್ಲ. ಹಾಗಿರುವದರಿಂದ ಕಾಶ್ಮೀರಕ್ಕಾಗಿ (ಅದೊಂದು ಕೇವಲ ನೆವನ) ಪಾಕಿಸ್ಥಾನವು ಭಾರತದ ಮೇಲೆ ರಣಭೇರಿ ಬಾರಿಸೀತೆ? ಇದು ಸ್ವಾಭಾವಿಕವಾಗಿ **ಬರುವ ಪ್ರಶ್ನೆ ಇದೆ. ಚೈನಾದ ಕೆಂಪು ಪ**ರದೆಯನ್ನು ಕಾಣಲು ತೆರಳುವ ಮುಂಚೆ ಈ ಪ್ರಶ್ನೆಗೆ ಉತ್ತರವನ್ನು ಹುಡುಕುವದು ಒಳ್ಳೆಯದು. ಅದಕ್ಕೆ ಪಾಕಿಸ್ಥಾನದಲ್ಲೇ ಇದ್ದ, ಉನ್ನತಾಧಿಕಾರದಲ್ಲಿದ್ದವರ ಅಭಿಪ್ರಾಯವನ್ನು ನೋಡಿದರೆ ಉತ್ತರ ದೊರಕೀತು. ಡಾ|| ಸೀತಾರಾಮಯ್ಯ ಹಿಂದೆ ಅಲ್ಲಿ ರಾಯಭಾರಿ (ಹೈಕಮೀಶನರ್) ಹುದ್ದೆಯಲ್ಲಿದ್ದರು. ಅವರ ಅಭಿಪ್ರಾಯ ಏನೆಂಬುದನ್ನು ತಿಳಿದುಕೊಳ್ಳೋಣ.

ಜಾಗತಿಕ ಸಂರಕ್ಷಣಾ ಸಮಿತಿಯಲ್ಲಿ ೧೯೬೨ನೇ ಇಸವಿಯಲ್ಲಿ ಕಾಶ್ಮೀರದ ಕುರಿತು ಮಾತುಕತೆ ಬಂದಾಗ ಸರ್ ಝಫರುಲ್ಲಾ ಖಾನರು, ವಿವಾದವು ಶಾಂತರೀತಿಯಿಂದ ಬಗೆಹರಿಯಬೇಕೇ ವಿನಃ ಸೈನಿಕ ಬಲದಿಂದ ಪರಿಹಾರವಾಗಕೂಡದೆಂದು ಕೇಳುತ್ತ ಬಂದಿದ್ದರು. ಉದ್ದೇಶಪೂರ್ತಿಗಾಗಿ ಸೈನಿಕ ಶಕ್ತಿಯನ್ನುಪಯೋಗಿಸಲು ಪಾಕಿಸ್ಥಾನಕ್ಕೆ ಸ್ವಲ್ಪ ಸಹಾ ಇಷ್ಟವಿಲ್ಲವೆಂದೂ ಅವರಾಗ ಹೇಳಿದ್ದರು. ಆದರೂ 'ಯುದ್ಧ ನಿಷೇಧ' ಕೌಲಿಗೆ ಸಹಿ ಹಾಕಲು ಅವರು ನಿರ್ಧಿಷ್ಟವಾಗಿ ನಿರಾಕರಿಸಿದರು. ಪ್ರಧಾನಿ ನೆಹ್ರೂಜೀಯವರು ಕೌಲಿನ ವಿಷಯ ಹಿಂದಿನಿಂದಲೇ ಹೇಳುತ್ತ ಬಂದಿದ್ದರು. ಆಗ ರಕ್ಷಣಾ ಮಂತ್ರಿಯಾಗಿದ್ದ ಶ್ರೀ ಕೃಷ್ಣ ಮೆನನರು ಭಾರತದ ಪರವಾಗಿ ಇದೇ ಆಶ್ವಾಸನೆಯನ್ನಿತ್ತಿದ್ದರು. ಭಾರತವಿತ್ತ ಆಶ್ವಾಸನೆ ಅಕ್ಷರಶಃ ಪೂರ್ಣರೂಪದಲ್ಲಿ ಪರಿಪಾಲಿಸಲ್ಪಡುತ್ತದೆ. ಪಾಕಿಸ್ತಾನದ ವಿಷಯದಲ್ಲಿ ಹೇಗೆ ಹೇಳುವದು?

ಗಡಿಯಲ್ಲಿದ್ದ ಸಶಸ್ತ್ರ ದರೋಡೆಗಾರರು ಕಾಶ್ಮೀರದ ಮೇಲೆ ಹಲ್ಲೆ ನಡೆಸಿದಾಗ ಪಾಕಿಸ್ಥಾನವು ಮೊದಲು ಉಪೇಕ್ಷೆಯಿಂದಿತ್ತು; ಅನಂತರ ಸಶಸ್ತ್ರ ಸೈನಿಕ ದಳವು ಅವರಿಗೆ ಪೂರ್ಣ ಸಹಾಯವನ್ನಿತ್ತಿದೆಂಬ ಸತ್ಯ ಸಂಗತಿಯನ್ನು ಝಫರುಲ್ಲಾ ಖಾನರು ಮೊದಲು ನಿರಾಕರಿಸಿದರಾದರೂ ನಂತರ ಒಪ್ಪಲೇಬೇಕಾಯಿತು.

ಈಗ ಪಾಕಿಸ್ಥಾನದ ವಶದಲ್ಲಿರುವ ಕಾಶ್ಮೀರದ ಭಾಗಕ್ಕೆ ಜನ್ನಾರ ಪ್ರತಿನಿಧಿಯಾಗಿ ಖುರ್ಶಿದ್ ಮೊದಲು ಹೋಗಿ ಗಲಾಟೆ ಆರಂಭಿಸಿದರು. ಗಲಾಟೆಯಿಂದಾರಂಭಿಸಿ ಯುದ್ಧಕ್ಕೇನೇ ಅವರು ಮುಂದಾದರು. ತಾನೇಕೆ ಹಿಂದೆ ಬೀಳಬೇಕೆಂದು ಅಬ್ಬಾಸ್ ಸಹಾ "ಕಾಶ್ಮೀರದ ಬಂಧವಿಮೋಚನಾ ಚಳುವಳಿ" ಹೂಡುತ್ತೇನೆಂದು ಬೆದರಿಕೆ ಹಾಕಿದರು. ಇವರ ಈ ಘೋಷಣೆ—ದೂಷಣೆಗಳಿಗೆ ಪಾಕಿಸ್ಥಾನದ ಪತ್ರಿಕೆಗಳು ಪ್ರಚಾರವನ್ನೀಯುತ್ತ ಬಂದಿವೆ. ಇದಕ್ಕೆಲ್ಲಾ ಒಗ್ಗರಣೆ ಕೊಡುವಂತಿದೆ ಪಾಕಿಸ್ಥಾನದ ಈಗಿನ ಅಧ್ಯಕ್ಷ ಅಯೂಬ ಖಾನರ ಮಾತುಗಳು. ತಮ್ಮ ಒಪ್ಪಿಸುವಿಕೆಯ ದಾರಿಯಲ್ಲಿ ಪಾಕಿಸ್ಥಾನವು ಹೇಗೆ ಸಾಗುತ್ತಿದೆಂಬುದಕ್ಕೆ ಇವು ಮೈಲಿಗಲ್ಲುಗಳು.

ಪಶ್ಚಿಮ ಪಾಕಿಸ್ಥಾನಕ್ಕೆ ನಮ್ಮ ವಿಮಾನವೊಂದು ಹಕೋಟಿ ತಪ್ಪಿ ಹೋಗಿದ್ದಾಗ ಅದನ್ನು ಹೊಡೆದುರುಳಿಸುವ ದೌರ್ಜನ್ಯಕ್ಕೂ ಪಾಕಿಸ್ಥಾನವು ಮುಂದಾಗಿತ್ತು. ಗೋವಾದ ಸ್ವಾತಂತ್ರ್ಯ ಚಳುವಳಿಯ ಸಮಯ ಅವರು ಪೋರ್ಚುಗಲ್ಲಿನೊಡನೆ ಇಟ್ಟುಕೊಂಡಿದ್ದ ಸಂಬಂಧ, ನಂತರ ಗೋವಾದಲ್ಲಿ ಪಾಲು ಕೇಳಿರುವ ಸಂಗತಿಗಳು ಪಾಕಿಸ್ಥಾನದ ಮನಸ್ಸನ್ನು ಪ್ರಪಂಚದ ಮುಂದೆ ಪ್ರದರ್ಶಿಸುತ್ತವೆ

ಚೈನೀ ಕಮ್ಯೂನಿಸ್ಟರು ಭಾರತವನ್ನು ಆಕ್ರಮಿಸಿಕೊಂಡಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪಾಕಿಸ್ಥಾನವು ಚೈನಾಕ್ಕೆ ಹೋಗಿ ಒಪ್ಪಂದವನ್ನು ಮಾಡಿಕೊಂಡು ಬಂದಿರುತ್ತದೆ. ಒಪ್ಪಂದದ ಪ್ರಕಾರ ಭಾರತದ ಭಾಗವು ಚೈನಾಕ್ಕೆ ಸೇರಬೇಕಾಗುತ್ತದೆ! ಪಾಕಿಸ್ಥಾನದ ಆಕಾಶವಾಣಿಯಂತೂ ಚೈನೀಯರ ಪ್ರಚಾರಕ್ಕೆ ಉತ್ತಮ ಸಾಧನವಾಗಿರುತ್ತದೆ. ಚೈನೀಯರು ಆಚೆಯಿಂದ ಆಕ್ರಮಣ ನಡೆಸುತ್ತಿದ್ದಂತೆ ಈಚೆಯಿಂದ ಕಾಶ್ಮೀರವನ್ನು ಮುತ್ತಲು ಪಾಕಿಸ್ಥಾನವು ದಿನವನ್ನೂ ನಿಶ್ಚಯಿಸಿತ್ತು. ಆದರೆ ಕೆಲ ಕಾರಣಗಳಿಂದಾಗಿ ಪ್ರಯತ್ನ ವಿಫಲವಾಗಿದೆಯೆಂಬ ವಿಷಯವನ್ನು ಪಂಜಾಬಿನ ಮುಖ್ಯಮಂತ್ರಿ ಕೈರೋನರು ಬಹಿರಂಗಗೊಳಿಸಿರುವರು.

ಭಾರತದಲ್ಲಿ ನಡೆದ ಕ್ಷುಲ್ಲಕ ಘಟನೆಗೂ ಪಾಕಿಸ್ಥಾನದಲ್ಲಿ ಬಣ್ಣ ಕೊಡಲಾಗುತ್ತದೆ. ಆಮ್ರೋಹಾ ಚುನಾವಣೆಗೆನೇ ಅವರು ವಿಪರೀತಾರ್ಥ ಹಚ್ಚಿಬಿಟ್ಟಿರುವರು.

ಭಾರತವನ್ನು ಪ್ರತ್ಯೇಕವನ್ನಾಗಿ ಮಾಡಿಬಿಟ್ಟು ಬ್ರಿಟನ್ ಹಾಗೂ ಅಮೇರಿಕನರ ಮನಸ್ಸಿನಲ್ಲಿ ಭಾರತ ವಿರೋಧಿ ವಿಷಭಾವನೆಯ ಬೀಜ ಬಿತ್ತಲು ಅದು ತನ್ನಿಂದಾದಷ್ಟು ಪ್ರಯತ್ನಿಸುತ್ತಿದೆ.

ಇಸ್ಲಾಮಿನ ಜಗತ್ತಿನಲ್ಲಿರುವ ರಾಷ್ಟ್ರಗಳು ಭಾರತದ ವಿರೋಧ ಎದ್ದೇಳುವಂತೆ ಭಾರತದಲ್ಲಿ ಮಹಮ್ಮದೀಯರನ್ನು ಹೀನಾಯವಾಗಿ ಕಾಣಲಾಗುತ್ತದೆಂಬ ಅಪಪ್ರಚಾರವನ್ನು ಎಡೆಬಿಡದೆ ಅಲ್ಲಿ ನಡೆಸಲಾಗುತ್ತಿದೆ. ಕಳೆದ ವರ್ಷ ಆಫ್ರಿಕಾದಲ್ಲಿ ನಡೆದ ಮುಸ್ಲಿಂ ಸಮ್ಮೇಳನದಲ್ಲಿ ಅಂತಹ ಒಂದು ನಿರ್ಣಯವನ್ನು ತೀರ್ಮಾನಿಸಲಾಗಿತ್ತು.

ಪಾಕಿಸ್ಥಾನಕ್ಕೆ ಭಾರತದ ಮೇಲೆ ಅದೆಷ್ಟು ಪ್ರೀತಿ ಇದೆ ಎಂಬುದಕ್ಕೆ ಇನ್ನೊಂದು ಉತ್ತಮ ನಿದರ್ಶನ ಇಲ್ಲಿದೆ. ಭಾರತದಲ್ಲಿ ದಂಗೆ ಎದ್ದು ತಲೆಮರೆಸಿಕೊಳ್ಳಲು ಹಾಗೂ ಶಸ್ತ್ರ ಸಂಗ್ರಹಣೆಗಾಗಿ ನಾಗಾಗಳು ಹೋಗುವದಾದರೂ ಪಾಕಿಸ್ಥಾನಕ್ಕೆನೆ ಫಿಝೋನು ಕರಾಚಿಯಲ್ಲಿ ಕಾಲಿಟ್ಟಿದ್ದಾಗ ಇಲ್ಲಿಂದ ನೂರಾರು ನಾಗಾಗಳು ಪಾಕಿಸ್ಥಾನಕ್ಕೆ ಹೋಗಿ ಬಂದಿರುವರು. ಇವರೆಲ್ಲರಿಗೂ ಅಲ್ಲಿ ಚೆನ್ನಾಗಿ ವ್ಯವಸ್ಥೆ ಮಾಡಲಾಗಿತ್ತು.

ಪಾಕಿಸ್ಥಾನಿಗಳು ಮೆಲ್ಲಮೆಲ್ಲನೆ ಕ್ರಮಶಃ ಗಡಿಯ ಇತ್ತ ಬಂದು ತಂಗುತ್ತಿದ್ದಾರೆ. ಆಸ್ಸಾಂ, ತ್ರಿಪುರ, ಕಚ್ಚ, ಗುಜರಾತ್ ಹಾಗೂ ಇತರ ಗಡಿ ಪ್ರದೇಶದಲ್ಲಿ ಭಾರತಕ್ಕೆ ಅವರು ತಲೆನೋವು ಉಂಟು ಮಾಡುತ್ತಿದ್ದಾರೆ. ಅವರು ಅಲ್ಲಿ ಸ್ಥಾನೀಯ ಅಧಿಕಾರ ಗದ್ದುಗೆಯನ್ನು ಆಕ್ರಮಿಸಿಕೊಂಡಿರುವರು. ಅಲ್ಲಿನ ಸ್ಥಳೀಯ ರಾಜಕೀಯ ಧುರೀಣರ ಮೇಲೂ ಅವರು ಪ್ರಭಾವ ಬೀರಿರುವರು. ಮತದ ಆಸೆಯಿಂದಾಗಿ ರಾಜಕೀಯ ಉದ್ಯಮಿಗಳು ದೇಶದ್ರೋಹಿ ಕಾರ್ಯಕ್ಕೂ ಮುಂದಾಗುತ್ತಿದ್ದಾರೆ! 'ಸಮಸ್ಯೆಗಳ ತವರೂರು ತ್ರಿಪುರ' ಲೇಖನದಲ್ಲಿ ನಮಗದರ ಮಾಹಿತಿ ದೊರಕಿರುತ್ತದೆ. ಸರಕಾರವು ಇತ್ತೀಚೆಗೆ ಒಂದು ನಿರ್ಣಯಕ್ಕೆ ಬಂದ ಅವರನ್ನು ಮೆಲ್ಲನೆ ಹಿಂದಕ್ಕೆ ಕಳುಹಿಸುವ ಯೋಜನೆ ಕೈಗೊಂಡಿರುತ್ತದೆ. ಅಷ್ಟರಲ್ಲೇ 'ಮಾನವಹತ್ಯೆ'ಯ, 'ನರಮೇಧ'ದ ಅಪರಾಧವನ್ನು ಭಾರತದ ಮೇಲೆ ಪಾಕಿಸ್ಥಾನ ಹೊರಿಸಿರುತ್ತದೆ. ಪಶ್ಚಿಮ ಪಂಜಾಬ, ಬಲೂಚಿಸ್ಥಾನ ಹಾಗೂ ಗಡಿನಾಡಿನಿಂದ ಶೇಕಡಾ ೯೯ ಹಿಂದೂಗಳನ್ನು (ಸಿಖ್ಖರನ್ನು ಸಹಿತ) ಪಾಕಿಸ್ಥಾನದಿಂದ ಹೊರಗಟ್ಟಲಾಗಿರುತ್ತದೆ. ಸಿಂಧಿನಿಂದ ಶೇಕಡಾ ೯೦ ಹಿಂದೂಗಳನ್ನು ಹೊರಗೋಡಿಸಲಾಗಿರುತ್ತದೆ. ಇದೀಗ ದಮನ ಚಕ್ರವು ಪೂರ್ವ ಪಾಕಿಸ್ಥಾನದತ್ತ ಹೊರಳಿರುತ್ತದೆ.

ಭಾರತದ ದಾಖಲೆ ನೋಡಿರೋ ಸ್ಫಟಿಕದಂತೆ ಸ್ಪಷ್ಟವಿದೆ. ಪ್ರಧಾನಿ ಪಂಡಿತ ಜವಾಹರ ಲಾಲ ನೆಹ್ರೂಜೀಯವರು ಬಹುಶಃ ಎಲ್ಲಾ ತಪ್ಪುಗಳನ್ನೂ ಸಹಿಸಿಕೊಳ್ಳುತ್ತಿದ್ದಾರೆ. ನಮ್ಮ ರಾಷ್ಟ್ರದ ಸಂದೇಶವಿರುವ 'ಸತ್ಯಮೇವ ಜಯತೆ', ಯಂತೆ ಅವರು ಆ ವಿಷಯದಲ್ಲಿ ನಡೆದುಕೊಳ್ಳುತ್ತಿದ್ದಾರೆ. ಸ್ಪಷ್ಟ ಮಾನವೀಯತಾ ದೃಷ್ಟಿಯಿಂದ ಪಾಕಿಸ್ಥಾನಿಗಳನ್ನು ಕಾಣುತ್ತಿದ್ದಾರೆ. ಪಾಕಿಸ್ಥಾನಿಗಳು ತಾವು ಆಕ್ರಮಣ ನಡೆಸಿ, ದೂರನ್ನು ಶೂರ ಪಠಾಣರ ಮೇಲೆ ಹೊರಿಸಿ ಅವರ ಖ್ಯಾತಿಗೆ ಕಪ್ಪು ಬಳಿದಿದ್ದಾರೆ. ವಿವಾದವನ್ನು ನಮ್ಮ ಪ್ರಧಾನಿ ಜೀಯವರು ಸಂಯುಕ್ತ ರಾಷ್ಟ್ರಸಂಘಕ್ಕೆ ಕೊಂಡುಹೋಗಿದ್ದಾರೆ. ವಿರಾಮರೇಖೆಯೂ ನಿಶ್ಚಯವಾಗಿರುತ್ತದೆ. ಆದರೆ ಅದನ್ನು ಅದೆಷ್ಟರ ಮಟ್ಟಿಗೆ ಅನುಸರಿಸಲಾಗಿರುತ್ತದೆ?

ಭಾರತ ಸರಕಾರವು ಯಾವ ಪ್ರಚೋದನೆಯಿಂದಲ ಪ್ರೇರೇಪಿಸಲ್ಪಟ್ಟಿರುವದಿಲ್ಲ. ಇಷ್ಟೆಲ್ಲ ಆದರೂ ಪ್ರಧಾನಿಯವರು ಕರಾಚಿಗೆ ಹೋಗಿ ಕಾಲುವೆ ಕೌಲಿಗೆ ಒಪ್ಪಿಕೊಂಡು ಬಂದಿರುವರು. ಆದರೆ ಪಾಕಿಸ್ತಾ

(ಶೇಷ ಪುಟ [illegible])

ನಿಮ್ಮ ಆಕಾಂಕ್ಷೆಗಳ ಸಾಧನೆಗೆ ಮತ್ತು ಅನಿಶ್ಚಿತ ಅವಶ್ಯಕತೆಗಳಿಗೆ.......
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

**1—1—1963ರಿಂದ ಠೇವಣಾತಿಗಳ ಮೇಲೆ ಹೆಚ್ಚಿಸಲ್ಪಟ್ಟ ಬಡ್ಡಿ ಧಾರಣೆ**

ನಿಮ್ಮ ಉಳಿತಾಯವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

**ದಿ ವಿಜಯ ಬ್ಯಾಂಕ್ ಲಿಮಿಟೆಡ್,**

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3

ಚಾಣಾಕ್ಯ ದಿಗ್ದರ್ಶನ

# ಕೌಟಿಲ್ಯನ ಅರ್ಥಶಾಸ್ತ್ರ

"ಪೃಥಿವ್ಯಾ ಲಾಭೇ ಪಾಲನೇ ಚ
ಯಾವನ್ತ್ಯರ್ಥ ಶಾಸ್ತ್ರಾಣಿ ಪೂರ್ವಾ
ಚಾರ್ಯೈಃ ಪ್ರಸ್ಥಾಪಿತಾನಿ,
ಪ್ರಾಯಶಸ್ತಾನಿ, ಸಂಹೃತ್ಯೈಕ
ಮಿದ ಮರ್ಥಶಾಸ್ತ್ರಂ ಕೃತಂ"

ಎಂದು ಹೇಳುತ್ತಾ, "ನಮಃಶುಕ್ರ ಬೃಹಸ್ಪತಿಭ್ಯಾಂ" ಎಂದು ಕೈಮುಗಿಯುತ್ತಾ, ಆರಂಭಿಸುತ್ತಾನೆ ಕೌಟಿಲ್ಯ ತನ್ನ ಕೃತಿಯನ್ನು. 'ಕೌಟಿಲ್ಯ ದರ್ಶನ'ವೆಂದರೆ ಪೂರ್ವಾಚಾರ್ಯರು ಈ ಶಾಸ್ತ್ರದ ಕುರಿತೇನು ಹೇಳಿದ್ದಾರೆ; ಭಾರತೀಯರು ಏನೇನನ್ನು ಆಚರಣೆಗೆ ತಂದಿದ್ದರು; ಅಂದಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ, ಅನುಭವ ಲಾಭದ ಫಲವಾಗಿ, ಏನು ಬದಲಾವಣೆಗಳನ್ನು ಸಹಜವಾಗಿ ಮಾಡಿಕೊಂಡಿದ್ದರು, ಇವುಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು, ಸಜೀವ ಸಮಾಜಕ್ಕುಚಿತವೆನಿಸುವಂತೆ ಸಮರಸಗೊಳಿಸಿ, ಉಕ್ಕಿನ ಚೌಕಟ್ಟುಗಳನ್ನು ಬೆಸೆಯುವ, ಅರ್ಥಶಾಸ್ತ್ರವನ್ನು ರಚಿಸಿದ್ದಾನೆ ಅವನು ತತ್ವಪ್ರತಿಪಾದನೆ—ಶೋಧನೆ ಮಾಡುವುದಕ್ಕೆ ಬದಲಾಗಿ, ಪರೀಕ್ಷೆಗೆ ಒಳಪಡಿಸಿ, ಅಂಗೀಕೃತವಾದ ತತ್ವಗಳನ್ನು, ಆಚರಣೆಗೆ ತಂದು, ಸುರಳವಾಗಿ, ಆಡಳಿತ ನಡೆಸಲು ಅನುಕೂಲವಾಗುವ ಯಂತ್ರ ನಿರ್ಮಾಣ ರಚನಾ ಕೌಶಲ್ಯವನ್ನು ತೋರಿಸಿದ್ದಾನೆ. ಆ ಯಂತ್ರದ ಅಂಗಾಂಗಗಳನ್ನೂ ಚೆನ್ನಾಗಿ ರೂಪುಗೊಳಿಸಿ, ಭದ್ರವಾಗಿ ಕೂಡಿರಿಸಿದ್ದಾನೆ

### ಪ್ರಜಾ ಹಿತವೇ ರಾಜರ ಹಿತ

"ಪ್ರಜಾ ಸುಖೇ ಸುಖಂ ರಾಜ್ಞಃ
ಪ್ರಜಾನಾಂಚ ಹಿತೇ ಹಿತಂ
ನ ತ್ಮ ಪ್ರಿಯಂ ಹಿತಂ ರಾಜ್ಞಃ
ಪ್ರಜಾನಾಂತು ಪ್ರಿಯಂ ಹಿತಂ"

ಪ್ರಜೆಗಳ ಹಿತವೇ ರಾಜರ ಹಿತ, ಪ್ರಜೆಗಳ ಸುಖವೇ ರಾಜರ ಸುಖ ರಾಜರಿಗೇ ಪ್ರತ್ಯೇಕವಾದ ಹಿತವೆಂಬುದಿಲ್ಲ, ಪ್ರಿಯವೆಂಬುದಿಲ್ಲ ಪ್ರಜೆಗಳ ಹಿತ ಪ್ರಜೆಗಳ ಪ್ರಿಯ—ಇವಿಷ್ಟೆ ಪ್ರಧಾನ. ಪ್ರಭು ಪ್ರಜೆ ಇವೆರಡೂ 'ಅಭಿನ್ನ', 'ಅವಿಭಕ್ತ'ವೆಂದು ಕೌಟಿಲ್ಯನು ಹೇಳುವಾಗ "ಪರಮಾಧಿಕಾರ ಮೂಲ ಪ್ರಜೆ" ಎಂಬ ಇಂದಿನ ಕೂಗು ಪ್ರತಿಧ್ವನಿಸುತ್ತಿಲ್ಲವೆ? 'ಆರ್ಯಮರ್ಯಾದೆ'ಯಂತೆ, ನಮ್ಮ ಜನರ ರೂಢಿಯ ಮಾತಿನಂತೆ, 'ಪ್ರಜೆಯೆ ದೈವ' ಅರಸಿಗೆ. ಕೌಟಿಲ್ಯನ, ಪೂರ್ವಾಚಾರ್ಯ ಮರ್ಯಾದಿತ ರಾಜಧರ್ಮವೂ, ಇಂದಿನ ಭಾರತದ 'ಪ್ರಜಾತಂತ್ರ'ವೂ ಒಂದೇ ಆಗಿದೆ ಪ್ರಜಾಧಿಕಾರ, ಪ್ರಜಾಹಿತ ಸಾಧನೋದ್ದೇಶ್ಯದ "ಮೇರುಮಟ್ಟ"ವನ್ನು ಮುಟ್ಟಿದೆಯೆಂದೂ ಹೇಳಬಹುದು. 'ಪವಿತ್ರ ಪ್ರಭಾವಲಯ'ದಲ್ಲಿದೆಯೆಂದೂ ಹೇಳಬಹುದು

### ಅರ್ಥಬಲ

ಕೌಟಿಲ್ಯನ 'ರಾಜತಂತ್ರ'ದಲ್ಲಿ ಅರ್ಥಬಲ, ಅರ್ಥಮೂಲ, ಅರ್ಥ ಪ್ರಯೋಜನ, ಕುರಿತೇನು ಹೇಳುವನೋ ನೋಡೋಣ.

"ತಸ್ಮಾನ್ನಿತ್ಯೋತ್ಥಿತೋ ರಾಜಾ
ಕುರ್ಯಾದರ್ಥಾನು ಶಾಸನಂ"
ಅರ್ಥಸ್ಯ ಮೂಲ ಮುತ್ಥಾನಂ
ಅನರ್ಥಸ್ಯ ವಿಪರ್ಯಯಃ
ಅನುತ್ಥಾನೇ ಧ್ರುವೋ ನಾಶಃ
ಪ್ರಾಪ್ತಸ್ಯಾ ನಾಗತಸ್ಯ ಚ
ಪ್ರಾಪ್ಯತೇ ಫಲ ಮುತ್ಥಾನಾ
ಲ್ಲಭತೇ ಚಾರ್ಥ ಸಂಪದಂ"

ಜನಪದವೊಂದರ ಯೋಗಕ್ಷೇಮ ಸಾಧನೆ ಆದರ ಅರ್ಥಸಂಪತ್ತಿನ ಮೇಲೆ ನಿಂತಿದೆ. ಪುರೋಭಿವೃದ್ಧಿಗೆ ಹಣವೇ ಮೂಲ; ಹಣವಿಲ್ಲವಾದರ ಜೀವನ ರಚನೆಗಳೆಲ್ಲ ಕಳಚಿಬಿದ್ದು, ಮಣ್ಣಾಗೂಡುತ್ತವೆ. ಆದ ಕಾರಣ ರಾಜನು (ಪ್ರಭುತ್ವವು) ಹಣಕಾಸಿನ ವಿಚಾರದಲ್ಲಿ ಸದಾ ಎಚ್ಚರಾಗಿರಬೇಕು; ಇಲ್ಲವೋ ಸರ್ವನಾಶ. ಇದು ಕೌಟಿಲ್ಯನ ಸಾಮಾನ್ಯ ವಾದ. ರಾಜನೀತಿ ವಿಶಾರದನಿಗೆ ಸಹಜವಾದ, ಅಭಿಪ್ರಾಯ. ಧನಬಲದ ಆವಶ್ಯಕತೆ-ಅನಿವಾರ್ಯತೆ ಕುರಿತು ಅವನಿಗೆ ಸಂಶಯವಿಲ್ಲ; ಅದನ್ನು ಕುರಿತು ಹೇಳುವಾಗ ಅವನಿಗೆ ಸಂಕೋಚವೂ ಇಲ್ಲ ಆದರೆ ಅವನು ಶುದ್ಧ "ಐಹಿಕ ಜೀವನ ವಾದಿ, ಯಲ್ಲ. ಅವನ 'ದರ್ಶನ, ವು 'ಆರ್ಯ ಮರ್ಯಾದಿ, ಗೆ ಬದ್ಧವಾಗಿದೆ 'ಅರ್ಥ-ಕಾಮ, ಗಳೆರಡೂ ಧರ್ಮ-ಮೋಕ್ಷಗಳ ರಕ್ಷಾ ಪ್ರಾಕಾರಗಳಲ್ಲಿನ ಅರ್ಥವಷ್ಟು ಅಮೂಲ್ಯವೋ ಆ ಅರ್ಥವನ್ನು ಗಳಿಸುವ ಮಾರ್ಗವೂ ಅಷ್ಟೇ ಅಮೂಲ್ಯವಾಗಿರಬೇಕು. ನ್ಯಾಯಸಮ್ಮತವಾಗಿರಬೇಕು, ನೀತಿಸಮ್ಮತವಾಗಿರಬೇಕು ಹಾಗಾದರೆ ಕೌಟಿಲ್ಯನು ಸೂಚಿಸುವ ಅರ್ಥಮೂಲಗಳು ಯಾವುವು?

### ಅರ್ಥಮೂಲ: ಅರ್ಥಪ್ರಯೋಜನ

ಮೊದಲಾಗಿ ಭೂಮಿ ಅರ್ಥಮೂಲ; ರಾಜ್ಯವೊಂದರ ಭೂಮಿಯೆಲ್ಲ ರಾಜನದು ಅಂದರೆ ಪ್ರಜೆಗಳದು. ಭೂಮಿಯ ಮೇಲಿನದೂ ಅವನದೇ, ಭೂಗರ್ಭದೊಳಗಿನದೂ ಅವನದೇ, ಅಂದರೆ ಕಾಡುಗಳು ಗಣಿಗಳು ಎಲ್ಲ ರಾಜನ ಅಥವಾ ಪ್ರಜೆಗಳ ಸೊತ್ತು. ನದಿಗಳು ಸಹ; ಅವುಗಳಲ್ಲಿರುವ ಮೀನುಗಳೂ ಸಹ. ಅರಣ್ಯಗಳು, ಅವುಗಳಲ್ಲಿರುವ ಸಾಧು-ದುಷ್ಟ ಮೃಗಗಳುಸಹ ಇವುಗಳಿಂದ ರಾಜ್ಯದ ಕೋಶಕ್ಕೆ ಅಥವಾ ಭಂಡಾರಕ್ಕೆ ಹಣ ಬಂದು ಸೇರಬೇಕು.

'ಅಧ್ಯಕ್ಷ ಪ್ರಚಾರ:, ಎಂಬ ಗ್ರಂಥ ಭಾಗದಲ್ಲಿ ಕೌಟಿಲ್ಯನು ಅರ್ಥಮೂಲಗಳ ವಿವರಗಳನ್ನು ಕೊಡುತ್ತಾನೆ. ಉಳುವ ಅಥವಾ ಸಾಗುವಳಿಯ ಭೂಮಿಯಲ್ಲಿ ರಾಜನೇ ಸ್ವಂತವಾಗಿ ಕೊಂಚ ಉಳಿಸಿಕೊಂಡು, ಬೇಸಾಯ ಮಾಡಿಸುತ್ತಾನೆ. ಉಳಿದ ಸಾಗುವಳಿ ಭೂಮಿಯನ್ನೆಲ್ಲ ಬೇಸಾಯಗಾರರಿಗೆ ಹಂಚುತ್ತಾನೆ. ಅವರು ಉತ್ತು, ಬಿತ್ತಿ, ಬೆಳೆ ತೆಗೆದು, ಅರಮನೆಗೆ ಅಂದರೆ ರಾಜ್ಯದ ಭಂಡಾರಕ್ಕೆ ಅದರಲ್ಲಿ ಒಂದಂಶವನ್ನು ಕೊಡುತ್ತಾರೆ. ಕಾಡುಗಳನ್ನು ಕಡಿದು ಹೊಸ ಹೊಸ ಬೇಸಾಯ ಕ್ಷೇತ್ರಗಳನ್ನು ವಿಂಗಡಿಸಲೂ, ಗ್ರಾಮಗಳನ್ನು ನಿರ್ಮಿಸಲು ನಿವೇಶನಗಳನ್ನು ಮಾಡಲೂ, ರಾಜನು ಜನರಿಗೆ ಅನುಗ್ರಹ ಮಾಡುತ್ತಾನೆ. ಇನ್ನೊಂದು ಕಡೆ ಗ್ರಾಮ ಪಟ್ಟಣಗಳ ವಿಸ್ತಾರವಾಗುತ್ತ ಹೋಗುತ್ತದೆ ಇವೆರಡೂ ಮೂಲಗಳಿಂದಲೂ ರಾಜ ಭಂಡಾರಕ್ಕೆ ಹಣ ಬರುತ್ತದೆ. ರಾಜ ಭಂಡಾರ ಸದಾ ತುಂಬಿರುವುದರ ಕಡೆ ರಾಜ ಸದಾ ಕಣ್ಣಿಟ್ಟಿರುತ್ತಾನೆ

### ಪ್ರಭುತ್ವಾದಾಯ

ಕಂದಾಯ ಅಥವಾ ಭೂಮಿಯಿಂದ ಬರುವ ಆದಾಯವೇ ಪ್ರಭುತ್ವಾದಾಯಗಳಲ್ಲಿ ಧ್ರುವವಾದದ್ದು. ಕಂದಾಯವನ್ನು ವಸೂಲು ಮಾಡುವ ವ್ಯವಸ್ಥೆಯು ಬಹು ಸಮರ್ಪಕವಾಗಿತ್ತು ರಾಜನೇ ನೇರವಾಗಿ 'ಭೂಮಿಯಿಂದ ಪಡೆಯುತ್ತಿದ್ದ ಭಾಗ ವೊಂದಾದರೆ ಸಾಗುವಳಿದಾರರಿಂದ ಬರುವ ಕಂದಾಯವಿನ್ನೊಂದು ಭಾಗ ಈ ಕಂದಾಯವಾದರೋ ನಾಲ್ಕನೆಯ ಒಂದು ಭಾಗವೋ, ಐದನೆಯ ಒಂದು ಭಾಗವೋ ಆಗಿತ್ತು. ಭಾಗವೆಂದೂ ಉದಕ ಭಾಗವೆಂದೂ, ಕಂದಾಯಕ್ಕೆ ಹೆಸರು. ಸಾಗುವಳಿಗಾಗಿ ಜಮೀನು ಪಡೆದವನಿಗೆ 'ಕ್ರಯ, ದಾನ, ಭೋಗ್ಯ ಇತ್ಯಾದಿ ಪರಿವರ್ತನಾಧಿಕಾರವಿತ್ತು ಇಂತಹ ಅಧಿಕಾರ ಪಡೆದವರು 'ಷಡ್ಭಾಗ, ಅದರಲ್ಲೊಂದು ಭಾಗವನ್ನು ಕಂದಾಯವಾಗಿ ಕೊಡುವರು. ಇದು ಕಾಡಾರಂಭ ಮುಕ್ತ ಜಮೀನಿನ ಮಾತಾಯಿತು ನೀರಾರಂಭವಾದರೆ—ತರಿ ಬೇಸಾಯವಾದರೆ 'ಉದಕ ಭಾಗ, ಬೇರೆ ಕೊಡಬೇಕಾಗುತ್ತಿತ್ತು. ವ್ಯವಸಾಯ ವೃತ್ತಿಯ ಅಭಿವೃದ್ಧಿ ಕಡೆಗೆ ಪ್ರಭುತ್ವ ಕೊಡಬೇಕಾದದ್ದು ಕರ್ತವ್ಯವಾಯಿತು; ಅಷ್ಟು ಮಾತ್ರವಲ್ಲ ವ್ಯವಸಾಯಗಾರರನ್ನು ಬಟ್ಟಿ, ಬಿರಾಡ, ದಂಡಗಳಿಂದ ರಕ್ಷಿಸುವುದು ಪರಮಧರ್ಮವಾಯಿತು.

### ವನ ಸಂಪತ್ತು

ಮೀಸಲು, ಸುರಕ್ಷಿತ, ಅವರ್ಗೀಕೃತ—ಹೀಗೆ ಅರಣ್ಯ ಮೂರು ಬಗೆಯಾಗಿತ್ತು. ಅವೆಲ್ಲ ಪ್ರಭುತ್ವದ ಒಡವೆ ಅವುಗಳಲ್ಲಿರುವ ವನೌಷಧಿ ವಸ್ತುಗಳೆಲ್ಲ ಪ್ರಭುತ್ವದ್ದು, ದುಷ್ಟ ಮೃಗ, ಸಾಧು ಪ್ರಾಣಿ ಪ್ರಾಣಿವರ್ಗವೆಲ್ಲ ಪ್ರಭುತ್ವದ್ದು, ವನ್ಯ ಅಥವಾ ಅರಣ್ಯ ಮೂಲವಾಗಿ ಬರುವ ನಾನಾ ವಸ್ತುಗಳನ್ನು ಉಪಯೋಗಿಸಿ ಪ್ರಭುತ್ವವು ನಾನಾ ಕೈಗಾರಿಕೆಗಳನ್ನು ಸ್ಥಾಪಿಸುತ್ತಿತ್ತು, ದಿನ ಬಳಕೆಯ ಭೋಜ್ಯ ವಸ್ತುಗಳೆ, ಸುಖ ಜೀವನದ ಭೋಗ್ಯ ವಸ್ತುಗಳೆ; ಒಳನಾಡಿನ ಶಾಂತಿ ಸಮಾಧಾನ ಪಾಲನೆಗಾಗಿಯೂ, ಗಡಿಗಳನ್ನು ಶತ್ರುಗಳಿಂದ ಸಂರಕ್ಷಿಸುವುದಕ್ಕೂ, ಬೇಕಾದ ಶಸ್ತ್ರಾಸ್ತ್ರಗಳೆ; — ಇವೆಲ್ಲ ಕೈಗಾರಿಕೆಗಳ ಕಡೆಗೂ ಪ್ರಭುತ್ವ ಗಮನ ಕೊಡುತ್ತಿತ್ತು. ದೇಶದ ಆವಶ್ಯಕತೆ ಪೂರೈಸುವುದು ಮಾತ್ರವಲ್ಲ ಕೈಗಾರಿಕೆಯ ವಸ್ತುಗಳನ್ನು ಪರದೇಶಗಳಿಗೂ ರಫ್ತು ಮಾಡುತ್ತಿತ್ತು. ಹೀಗೆ ಕೈಗಾರಿಕೆಗಳು ರಾಜಭಂಡಾರಕ್ಕೆ ವರಮಾನ ಮೂಲಗಳಾದುವು.

### ಖನಿಜ ಸಂಪತ್ತು

ಇನ್ನು ಗಣಿಗಳನ್ನು ಕುರಿತ ಮಾತು; ಚಿನ್ನ, ಬೆಳ್ಳಿ, ತಾಮ್ರ, ಈ ಮೂರು ಲೋಹಗಳ ಮೂಲವಾಗಿ ರಾಜ ಭಂಡಾರಕ್ಕೆ ವಿಪುಲ ದ್ರವ್ಯ ಬರುತ್ತಿತ್ತು. ಕೆಲವು ಗಣಿಗಳ ಕೆಲಸವನ್ನು ಪ್ರಭುತ್ವವೇ ನಡೆಸುತ್ತಿತ್ತು ಕೆಲವು ಲೋಹಗಳು ಪ್ರಭುತ್ವದ ಗುತ್ತಿಗೆ ಮತ್ತೆ ಕೆಲವು ಗಣಿಗಳನ್ನು ಸಾರ್ವಜನಿಕರೂ ನಡೆಸಬಹುದಾಗಿತ್ತು ಹಾಗೆ ನಡೆಸುವವರು ರಾಜಾದಾಯವನ್ನು ಪ್ರಭುತ್ವಕ್ಕೆ ಸಲ್ಲಿಸಬೇಕು. ಪ್ರಭುತ್ವದವರೂ, ಸಾರ್ವಜನಿಕರೂ, ಸೇರಿ ನಡೆಸುತ್ತಿದ್ದ ಗಣಿ ಕೈಗಾರಿಕೆಗಳೂ ಉಂಟು ಗಣಿಗಳ ಮೇಲ್ವಿಚಾರಣೆಗಾಗಿ ವಿಶೇಷಾಧಿಕಾರಿಗಳಿದ್ದರು. ಮೂಲ, ಭಾಗ, ಪರಿಘ, ಶುಲ್ಕ, ವೈಧರಣ, ರೂಪ, ರೂಪಿಕ —ಇವೆಲ್ಲ ಚಿನ್ನ, ಬೆಳ್ಳಿ ಮೊದಲಾದ ಸಾಂಪತ್ತಿಕ ಲೋಹಗಳ ಮೂಲವಾಗಿ ಪ್ರಭುತ್ವ ಪಡೆಯುತ್ತಿದ್ದ ದ್ರವ್ಯಾಂಶ, ದ್ರವ್ಯ ಕಾರಣಗಳನ್ನು ಸೂಚಿಸುತ್ತವೆ. ಮೂಲವೆಂದರೆ ಗಣಿಗಳ ನಿವ್ವಳ ಫಲ; ಭಾಗವೆಂದರೆ ಪ್ರಭುತ್ವಕ್ಕೆ ಬರಬೇಕಾದ ಅಂಶ; ಪರಿಘವೆಂದರೆ ಲೋಹ ಪರೀಕ್ಷೆಗಾಗಿ ಕೊಡಬೇಕಾದ ಶುಲ್ಕ; ಅಥವಾ ಲೋಹ ಪರಿವರ್ತನಕ್ಕಾಗಿ ತೆರಬೇಕಾದ ಶುಲ್ಕ; ಶುಲ್ಕವೆಂದರೆ ಸುಂಕ, ವೈಧರಣ

(೯ನೇ ಪುಟ ನೋಡಿರಿ)

ಸಾಮಾನ್ಯರಿಗೂ ಸಿರಿವಂತರಿಗೂ
ಅನುಕೂಲವಾಗಿರುವ
ದೈನಂದಿನ ಉಳಿತಾಯ ಯೋಜನೆ—
"ಜನತಾ ಡಿಪೊಜಿಟ್ ಸ್ಕೀಮ್"
ಆಕರ್ಷಕ ಶರ್ತಗಳು — ವಿಶೇಷ ಸೌಲಭ್ಯಗಳು
ವಿವರಗಳಿಗಾಗಿ ಇಂದೇ ವಿಚಾರಿಸಿರಿ:
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು. ಮಂಗಳೂರು.

25,000
ಪ್ರತಿಗಳಿಗೂ ಮಿಕ್ಕಿ
ಈ ವರೆಗೆ ಕರ್ನಾಟಕದಲ್ಲೆಲ್ಲ
ವಿಕ್ರಿತವಾಗಿರುವ
ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ಇದೀಗ ಮಾರಾಟಕ್ಕೆ ಸಿದ್ಧವಾಗಿದೆ.
360 ಪುಟಗಳಿಗೂ ಮಿಕ್ಕಿದ
ಪಾಕೆಟ್ ಎಡಿಶನ್!
ದಪ್ಪವಾದ ಬಿಳಿ ನುಣುಪು ಕಾಗದ!
ಬೆಲೆ. ಸಾದಾ ಪ್ರತಿ ರೂ. ೧-೦೦
ಉತ್ತಮ ಪ್ರತಿ ರೂ. ೧-೫೦
ರಖಂ ಪ್ರತಿಗಳ ದರಕ್ಕೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ, ದ. ಕ,

### ಅಭೂತಪೂರ್ವ ವಿಜ್ಞಾನಿ

# ಗೆಲಿಲಿಯೋವಿನ ದುರಂತ ಜೀವನ

ಗೆಲಿಲಿಯೋ ಓರ್ವ ಅಭೂತಪೂರ್ವ ವಿಜ್ಞಾನಿ. ಆದರೆ ಅವನ ಅಂತ್ಯ ಆದಾವ ರೀತಿಯಲ್ಲಾಯಿತು?; ಅಂತಹ ಬುದ್ಧಿಶಾಲಿಗೆ ಅಂದಿನ ಜನತೆ ಯಾವ ರೀತಿಯ ಮನ್ನಣೆಯನ್ನಿತ್ತಿರು?—ಎಂಬುದನ್ನು ತಿಳಿದಾಗ ಯಾವನೂ ದುಃಖಪಡದಿರಲಾರ. ಆತನಿಗಾಗಿ ತನ್ನ ಸಹಾನುಭೂತಿಯನ್ನು ತೋರಿಸದಿರಲಾರ.

ಉತ್ತಮ ಕುಲದಲ್ಲಿ ಜನ್ಮವೆತ್ತಿದ ವಿನ್ಸೆನ್ ಸೋ ಎಂಬ ಇಟೇಲಿಯನನ ಪುತ್ರನಾಗಿ ಗೆಲಿಲಿಯೊ ಫೆಬ್ರುವರಿಯ ಹದಿನೆರಡನೇ ದಿನಾಂಕದಂದು ೧೫೬೪ರ ನೇ ಇಸವಿಯಲ್ಲಿ ಜನಿಸಿದನು. ತಂದೆಗೆ ತನ್ನ ಮಗನು ವೈದ್ಯನಾಗಬೇಕು. ಅಂದು ಪ್ರಾಶಸ್ತ್ಯವಿರದ ಗಣಿತವನ್ನಭ್ಯಸಿಸಬಾರದು ಎಂಬ ಮನೋಭಾವನೆಯಿತ್ತು. ಆದರೆ "ತಾನೊಂದು ಬಗೆದರೆ ದೈವವಿನ್ನೊಂದು ಬಗೆಯಿತು" ಎಂಬ ಸೊಲ್ಲು ಆತನ ವಿಷಯಕ್ಕೆ ಸತ್ಯವಾಯಿತು. ಗೆಲಿಲಿಯೋ ವೈದ್ಯಕೀಯ ಗ್ರಂಥಗಳನ್ನು ಮೂಲೆಗೊತ್ತಿ ಗಣಿತ ಶಾಸ್ತ್ರದಲ್ಲಿ ಹೆಚ್ಚಿನ ಅಧ್ಯಯನವನ್ನು ನಡೆಸಿ ತನ್ನ ಇಪ್ಪತ್ತಾರರ ಹರೆಯದಲ್ಲೇ ಗಣಿತದಲ್ಲಿ ಪ್ರೊಫೆಸರ್ ಪದವಿಯನ್ನು ಪಡೆದನು. ಸಂಬಳ ಅತ್ಯಲ್ಪವಾದರೂ, ತಾತ್ಕಾಲಿಕವಾಗಿ, ಉದ್ಯೋಗವೊಂದಕ್ಕೆ ಸೇರಿದರು.

ಇಂದು ಅತ್ಯಧಿಕ ಪ್ರಮಾಣದಲ್ಲಿ ಬಳಕೆಯಲ್ಲಿರುವ ಗಡಿಯಾರಗಳ ಹೊಸ ಹೊಸ ಸಂಶೋಧನೆಗಳನ್ನು ಗೆಲಿಲಿಯೋ ನಡೆಸಿದನು. ಲೋಲಕವನ್ನು ಸಂಶೋಧಿಸಿ ಅದರ ಉಪಯೋಗದ ಮಹತ್ವವನ್ನು ಜಗತ್ತಿಗೆ ತಿಳಿಯಪಡಿಸಿದನು.

ಅತಿ ಹಗುರವಾದ ಹತ್ತಿ, ಕಾಗದ ಮೊದಲಾದುವುಗಳು ವಾಯು ಮಂಡಲದಿಂದ ಕೆಳಗಿಳಿಯುವಾಗ ವಾಯುವಿನ ತಡೆಯಿಂದಲಾಗಿ ಸಾವಕಾಶವಾಗಿ ಬೀಳುವುದೆಂದೂ ಇತರ ಭಾರದ ವಸ್ತುಗಳು ಒಂದೇ ರೀತಿಯಲ್ಲಿ ಬೀಳುವುವೆಂದೂ ತನ್ನ ಪ್ರಯೋಗಗಳ ಮೂಲಕ ತಿಳಿಯಪಡಿಸಿದನು.

ಉನ್ನತ ಅಧಿಕಾರಿಯೋರ್ವನು ತಯಾರಿಸಿದ ಯಂತ್ರದಲ್ಲಿ ಹುಳುಕನ್ನು ತಿಳಿಸಿದುದಕ್ಕಾಗಿ ಆತನನ್ನು ಕೆಲಸದಿಂದ ನಿವೃತ್ತಗೊಳಿಸಿದರು. ಆ ವೇಳೆ, ವೆನಿಸ್‌ನ ವಿಶ್ವವಿದ್ಯಾಲಯವೊಂದರಲ್ಲಿ ಆತನಿಗೆ ಉದ್ಯೋಗ ದೊರಕಿತು.

ಗೆಲಿಲಿಯೋನ ಇನ್ನೊಂದು ಶೋಧನೆ ದೂರದರ್ಶಕ ಆಗಿದೆ. ಉನ್ನತೋದರ ಮತ್ತು ನತೋದರ ಮಸೂರಗಳೆರಡರ ಸಂಯೋಜನೆಯಿಂದ ದೂರದಲ್ಲಿರುವ ವಸ್ತುಗಳ ವೃದ್ಧಿಸಲ್ಪಟ್ಟ ಪ್ರತಿಬಿಂಬವನ್ನು ಗೋಚರಿಸಿದನು.

ಭೂಮಿಯು ಅಚಲವಾದುದೆಂದೂ, ಗ್ರಹಗಳೆಲ್ಲಾ ಭೂಮಿಗೆ ಪ್ರದಕ್ಷಿಣೆ ಮಾಡುತ್ತಾ ಇರುತ್ತವೆಯೆಂಬುದು ಪ್ರಾಚೀನರ ಅಚಲವಾದ ನಂಬುಗೆಯಾಗಿತ್ತು. ಈ 'ಸಿದ್ಧಾಂತ'ವನ್ನು ವಿರೋಧಿಸುವವರನ್ನು ಕಠಿಣ ಶಿಕ್ಷೆಗೆ ಕ್ರೈಸ್ತ ಗುರುಗಳು ಗುರಿಪಡಿಸುತ್ತಿದ್ದರು. ಆದರೆ ಆದಾವ ಹೆದರಿಕೆ, ಭಯ, ಭೀತಿಗಳಿಗೆ ತಲೆವಾಗದೆ ಗೆಲಿಲಿಯೋ — ಭೂಮಿ ಅಚಲವಾದುದಲ್ಲ; ಸೂರ್ಯನ ಸುತ್ತಲೂ ಅದು ಪ್ರದಕ್ಷಿಣೆ ಬರುತ್ತದೆ—ಎಂಬ ತನ್ನ ನಿಜವಾದ ಸಿದ್ಧಾಂತವನ್ನು ಪ್ರಕಟಗೊಳಿಸಿದನು. ಪೂರ್ವಿಕರ ತಪ್ಪು ಭಾವನೆ ನುಚ್ಚುನೂರಾಯಿತು,

ತನ್ನ ಟೆಲಿಸ್ಕೋಪಿನ ಮೂಲಕ ಆಗಸದ ಕಡೆಗೆ ಈಕ್ಷಿಸಿದಾಗ ಚಂದ್ರನಲ್ಲಿ, ಜಿಂಕೆ ಮೊಲಗಳು ಕಾಣದೆ ಭೂಮಿಯ ಹೋಲಿಕೆ ಕಂಡುವು. ಏರುತಗ್ಗುಗಳು; ಕೊರಕಲು ಪ್ರದೇಶಗಳು ಅಲ್ಲಿಯೂ ಇದ್ದುವು, ಕ್ಷೀರಪಥವುಂಟಾಗಲು ಕಾರಣವನ್ನು ಆತನು ಶೋಧಿಸಿದನು. ಗುರು ಗ್ರಹದ ಉಪಗ್ರಹಗಳನ್ನು ಕಂಡು ಹುಡುಕಿದನು. ಚಂದ್ರನಲ್ಲಿರುವಂತೆ ಸೂರ್ಯನಲ್ಲಿಯೂ ಕಲೆಗಳಿವೆಯೆಂದು ತೋರಿಸಿದನು. ಗೆಲಿಲಿಯೋನ ಹೊಸ ಸಿದ್ಧಾಂತಗಳು ಹಳೆಯ ಭಾವನೆಯನ್ನು ಯಶಸ್ವಿಯಾಗಿ ಎದುರಿಸಿದುವು. ಜನರಿಗೆ ಗೆಲಿಲಿಯೋನ ಬಗ್ಗೆ ಗೌರವ; ವಿಶ್ವಾಸ ಹೆಚ್ಚುಗುತ್ತಾ ಬಂತು. ಅಧಿಕಾರಿಗಳ ಮತಾಚಾರ್ಯರ ಪ್ರಭಾವಕ್ಕೆ ಇದರಿಂದ ಧಕ್ಕೆ ಬಂತು. ಅವರ ಮತ್ಸರ ದ್ವೇಷಗಳಿಗೆ ನಿರಪರಾಧಿ ಗೆಲಿಲಿಯೋ ಬಲಿಯಾಗ ಬೇಕಾಯಿತು.

ತನ್ನ ಮತದಲ್ಲಿ ಮತ್ತು ಚರ್ಚಿನಲ್ಲಿ ಆತನಿಗೆ ಭಕ್ತಿಯಿತ್ತು. ಹಳೆಯ ನಂಬಿಕೆಗಳಿಗೆ ಸತ್ಯದ ಕೊಡಲಿ ಏಟನ್ನು ಈಯುತ್ತಿರುವ ಗೆಲಿಲಿಯೋ, ಇನ್ನು ತಮ್ಮ ಮತದಲ್ಲಿ ಕೈಹಾಕಿ ತಮ್ಮ ಅಧಿಕಾರವನ್ನು ಪ್ರಶ್ನಿಸಬಹುದೆಂದು ಮತಾಧಿಕಾರಿಗಳು ಹೆದರಿದರು. ತಮ್ಮ ಕೆಲವು ಸಿದ್ಧಾಂತಗಳು ನಿಜವಲ್ಲವೆಂದು ಗೆಲಿಲಿಯೋ ಪ್ರಕಟಿಸಿದಾಗ ಅವರು ಕ್ರೋಧಗೊಂಡು ಪೋಪರಲ್ಲಿ ದೂರಿತ್ತರು. ಪೋಪ್ ಗುರು ಗೆಲಿಲಿಯೋನೊಡನೆ ಸಂಭಾಷಿಸಿ ತೃಪ್ತಿಗೊಂಡು ದೂರಿನ ಕಡೆಗೆ ಗಮನವೀಯಲಿಲ್ಲ ಆದರೆ ಮತಾಚಾರ್ಯರ ಒತ್ತಾಯದಿಂದ ಮನಸ್ಸಿಲ್ಲದಿದ್ದರೂ ಪೋಪನು ಗೆಲಿಲಿಯೋವಿಗೆ ತನ್ನ ಭೂಮಿಯ ಕುರಿತಾದ ಸಿದ್ಧಾಂತವನ್ನು ಇನ್ನು ಪ್ರತಿಪಾದಿಸಬಾರದೆಂದು ಆಜ್ಞೆಯಿತ್ತನು.

ಅನಂತರ, ಪ್ರಾಚೀನ ಸಿದ್ಧಾಂತಗಳ ಕುರಿತು ಗ್ರಂಥವೊಂದನ್ನು ಗೆಲಿಲಿಯೋ ಬರೆದು ಪ್ರಕಟಿಸಿದಾಗ ಪುನಃ ಪೋಪರಿರುವ ರೋಮ್ ನಗರಕ್ಕೆ ಕರೆಯಲ್ಪಟ್ಟನು. ಅಶಕ್ತನಾಗಿದ್ದ, ಎಪ್ಪತ್ತರ ಹರೆಯದ ಗೆಲಿಲಿಯೋ ರೋಮ್‌ಗೆ ಬಂದನು. ಅವನ ಸಂಶೋಧನೆಗಳನ್ನೂ ಕೃತ್ಯಗಳನ್ನೂ ಉದ್ಧಟತನವೆಂದು ಆರೋಪಿಸಿದರು, ಅವನಿಗೆ ಶಿಕ್ಷೆಯನ್ನೂ ವಿಧಿಸಿದರು.

ತನ್ನ ಎಪ್ಪತ್ತೆಂಟನೆಯ ಹರೆಯದಲ್ಲಿ ಗೆಲಿಲಿಯೋ ದೇಹ ತ್ಯಾಗ ಗೆಯ್ದು ಪರಮ ಸಾಯುಜ್ಯವನ್ನು ಪಡೆದನು ಆ ಮಹಾತ್ಮನ ಅಂತ್ಯಕರ್ಮಗಳನ್ನು ಸರಿಯಾಗಿ ನೆರವೇರಿಸುವುದಕ್ಕೂ ಅವನ ಸ್ಮಾರಕ ಕಟ್ಟುವುದಕ್ಕೂ ಆ ಮದಾಂಧ ಮತಾಚಾರ್ಯರು ಅಡ್ಡಿಪಡಿಸಿದರು.

ಮಹಾ ವಿಜ್ಞಾನಿಯ ವೃದ್ಧಾಪ್ಯವು ಜೈಲಿನಲ್ಲಿ ಶಿಕ್ಷೆಯನ್ನು ಹಿಂಸಾತ್ಮಕವಾಗಿ ಅನುಭವಿಸಬೇಕಾದುದು ಲೋಕದ ದುರ್ದೈವ-ಗಿದೆ. ಅವನ ಸಿದ್ಧಾಂತಗಳು ಲೋಕದ ಅಮರ ಸಂಪತ್ತು. ಅಂತಹ ಸಂಪತ್ತಿನ ಕುಬೇರ ತನ್ನ ಜೀವಿತ ಕಾಲದಲ್ಲಿ ಪ್ರಾಯಶ್ಚಿತ್ತ ... ಜ್ಯರಿನಿಸಿಕೊಳ್ಳುತ್ತಿದ್ದವರಿಂದ ಅವಮಾನಿಸಲ್ಪಡಬೇಕಾಯಿತು. ಆದರೆ ಆತನ ಕಾಣಿಕೆಗಳ ಕೀರ್ತಿ ಉಳಿಯಿತು. ಅವನ ಸಿದ್ಧಾಂತಗಳು ಮಹಾ ಪ್ರಚಾರಗೊಂಡಿವೆ.

ಯೇಸು ಮತೀಯ ಕಾರ್ಯಗಳಲ್ಲಿ ಕೈಹಾಕಿದುದಕ್ಕಾಗಿ ಶಿಕ್ಷಿಸಲ್ಪಟ್ಟರೆ ಗೆಲಿಲಿಯೋ ವೈಜ್ಞಾನಿಕ ಕಾರ್ಯಗಳಲ್ಲಿ ಕೈ ಇಕ್ಕಿದುದಾಗಿ ಹಿಂಸಿಸಲ್ಪಟ್ಟನು. ಯೇಸುವಿನ ಸಹನೆ, ತ್ಯಾಗ, ದೈವಿಕ ಮನೋಭಾವನೆ ಗೆಲಿಲಿಯೋನಲ್ಲಿ ಮತ್ತೊಮ್ಮೆ ಮೂಡಿಬಂದಿತ್ತೆಂದರೂ ನಾವು ತಪ್ಪು.

—ಸಚಿತ್ರ ಯಾತ್ರಿಕ

### ಲೋಕ ಸಭೆಯಲ್ಲಿ

# ಹಳೆಯ ಹುಲಿಗಳ ಪ್ರವೇಶ

ಭಾರತದ ತೃತೀಯ ಲೋಕ ಸಭೆಗೆ ಕಳೆದ ವರ್ಷ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ದೊಡ್ಡ ನಾಯಕರೂ ಪಕ್ಷಗಳಲ್ಲಿ ಉನ್ನತ ಅಧಿಕಾರ ಸಂಪನ್ನರೂ ಆಗಿದ್ದ ಅನೇಕ ಪ್ರತಿಭಾವಂತರು ಪರಾಜಿತರಾಗಿದ್ದುದು ವಿಸ್ಮಯಕ್ಕೆ ಕಾರಣವಾಗಿದ್ದರೆ, ಅನಂತರದ ಅವಧಿಯಲ್ಲಿ ಅದರಲ್ಲೂ ಇತ್ತೀಚೆಗೆ,ನಡೆದ ಉಪ ಚುನಾವಣೆಗಳಲ್ಲಿ ಅವರಲ್ಲಿ ಹೆಚ್ಚಿನವರು ಗೆದ್ದು ಬಂದುದೂ ಆಶ್ಚರ್ಯಕರವಾಗಿದೆ ಹಿರಿಯ ಮುತ್ಸದ್ದಿಗಳಸಾಲಿನಲ್ಲಿ ಸೇರಿದ ಜೆ. ಬಿ ಕೃಪಲಾನಿ, ಮತ್ತು ಪ್ರೊ॥ ಎನ್. ಜಿ. ರಂಗ ಮತ್ತು ತೀವ್ರ ಪ್ರತಿಭಟಕ ಲೋಹಿಯಾ ಇವರು ಹೀಗೆ ಆಯ್ಕೆಗೊಂಡವರಲ್ಲಿ ಅಗ್ರಗಣ್ಯರು.

ಅಮ್ರೋಹಾ ಚುನಾವಣೆಯು ನಡೆವ ಸಂಜೆಯಲ್ಲಿಯೇ ಆಚಾರ್ಯ ಕೃಪಲಾನಿಯವರು ಚುನಾವಣೆಯಲ್ಲಿ ಹಲವಾರು ನ್ಯೂನತೆಗಳಿದ್ದುವೆಂದು ದೂರಿ ಇದು ರದ್ದಾಗುವುದಕ್ಕೆ ಅರ್ಹವಾದುದು ಎಂದು ಉದ್ಗರಿಸಿದ್ದರು. ಅಲ್ಲಿ ಕೊನೆಯ ಗಳಿಗೆಯಲ್ಲಿ ಕೇಂದ್ರದ ನೀರಾವರಿ ಸಚಿವ ಹಫೀಜ ಇಬ್ರಾಹಿಮರು ಕಾಂಗ್ರೆಸ್ ಪಕ್ಷದ ಹುರಿಯಾಳಾಗಿ ನಿಂತುದರಿಂದ ಮತ್ತು ಚುನಾವಣಾ ಪ್ರಚಾರ ಕಾರ್ಯದಲ್ಲಿ ಮಂತ್ರಿ ಮಹೋದಯರೂ ಪಾಲುಗೊಂಡಿದ್ದುದರಿಂದ, ತನಗೆ ಪರಾಜಯವು ಸುನಿಶ್ಚಿತವೆಂದು ಅವರಂದು ಊಹಿಸಿದ್ದಿರಲೂ ಬಹುದು. ಆದರೆ, ಇಂದು ಚುನಾವಣೆಯ ಪಲಿತಾಂಶವು ಪ್ರಾಯಃ ಅವರ ನಿರೀಕ್ಷೆಯ ವಿರುದ್ಧ ಬಂದ ಬಳಿಕವೂ ಅಪರಾ ಉದ್ಗಾರವನ್ನು ಪುನರುಚ್ಚರಿಸುತ್ತಾರೆಯೇ ಎಂಬುದಿನ್ನೂ ತಿಳಿದು ಬಂದಿಲ್ಲ. ಶುದ್ಧ ಗಾಂಧೀವಾದಿಗಳಾದ ಕೃಪಲಾನಿಯವರು ಕೇಂದ್ರದ ಅತಿರಥ ಮಹಾರಥರ ಪಂಥ ಪರಾಕ್ರಮವನ್ನೂ ಮೀರಿಸಿ, ಅತ್ಯಧಿಕ ಬಹುಮತದಲ್ಲಿ ಬೊಂಬಾಯಿಯಲ್ಲಿ ತನಗಾಗಿದ್ದ ಸೋಲನ್ನು ಇಂದು ಅದೇ ಪ್ರಮಾಣದಲ್ಲಿ ಜಯಗಳಿಸಿ ಮರೆಯುವಂತಾಯಿತು.

ರಾಮ ಮನೋಹರ ಲೋಹಿಯಾರವರು ತಾನೊಂದು ಚುನಾವಣೆಯಲ್ಲಿ ವಿಜಯಿಯಾಗುವೆನೆಂದು ಪ್ರಾಯಃ ಕನಸಿನಲ್ಲೂ ಊಹಿಸಿರಲಾರರು. ಅವರು ಕೇವಲ ಪ್ರತಿರೋಧದ ಸಂಕೇತವೆಂಬಂತೆ ಚುನಾವಣೆಗಳಲ್ಲಿ ಸ್ಪರ್ಧಿಸಿದವರು. ಈ ಪ್ರತಿಭಟನೆಯಾದರೂ ಸತ್ಯ ಕಾರಣಗಳಿಗಾಗಿಯೂ ಇರಬಹುದು. ಅಥವಾ ಸ್ವಕಪೋಲ ಕಲ್ಪಿತ ಕಾರಣಗಳೂ ಅದಕ್ಕೆ ಪ್ರೇರಕವಾಗಬಹುದು. ಕಳೆದ ಬಾರಿ ಪ್ರಧಾನಿ ನೆಹರುರವರಿಗೇನೇ ಎದುರಾಳಿಯಾಗಿ ಅವರು ನಿಂತಿದ್ದರು. ಅವರ ಉಲ್ಲೇಖಾರ್ಹ ವಿಜಯಾನಂತರ ರಾಮಮನೋಹರ ಲೋಹಿಯಾರನ್ನು ಬಳಸಲಾದ ಚುನಾವಣಾ ತಂತ್ರದ ಬಗ್ಗೆ ಪ್ರಶ್ನಿಸಿದಾಗ, ಅವರೆಂದಿದ್ದರು: "ನನ್ನ ಪ್ರತಿಸ್ಪರ್ಧಿಗಳು ನನ್ನ ಪರವಾಗಿ ನೂರಾರು ಹೆಮ್ಮಕ್ಕಳು ಚಳುವಳಿ ಹೂಡಿದ್ದರೆಂದು ಆರೋಪಿಸಿದ್ದಾರೆ." ರಹಸ್ಯವೆಂದರೆ ೫೩ ವರ್ಷದ ಬ್ರಹ್ಮಚಾರಿಯಾಗಿದ್ದಾರೆ, ಲೋಹಿಯಾ.

ಕೃಪಲಾನಿ ಮತ್ತು ಲೋಹಿಯಾ ವಿಜಯದ ಅರ್ಥವೇನು? ಪ್ರತಿಭಾವಂತ ಪ್ರಭಾವಿ ಕಾಂಗ್ರೆಸ್ ಸ್ಪರ್ಧಾಳುಗಳನ್ನೇ ಇವರು ಸೋಲಿಸಿದರು, ಇದರ ರಹಸ್ಯವೇನು? ತೋರಿಕೆಯ ಮಟ್ಟಿಗೆ ಹೇಳುವುದಾದರೆ, ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳೆಲ್ಲವೂ (ಕಮ್ಯುನಿಸ್ಟ್ ಉಳಿದು) ಆಯಾ ಮತದಾರ ಕ್ಷೇತ್ರದಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದುವು.

೭೫ ವರ್ಷ ಪ್ರಾಯದ ಆಚಾರ್ಯ ಜೀವಂತರಾಮ್ ಭಗವಾನ್‌ದಾಸ್ ಕೃಪಲಾನಿಯವರು ಹಲವಾರು ರಾಜಕೀಯ ಪಕ್ಷಗಳಲ್ಲಿ ಅನುಭವಗಳಿಸಿದವರು ಹನ್ನೆರಡು ವರ್ಷಗಳ ಸುದೀರ್ಘಾವಧಿಯ ವರೆಗೆ ಕಾಂಗ್ರೆಸ್ ಕಾರ್ಯದರ್ಶಿಯಾಗಿ ೧೯೪೬ರಲ್ಲಿ ಅವರ ಅಧ್ಯಕ್ಷರಾದ ಹಳೆಯ ಹುಲಿಯಿವರು. ಬಳಿಕವರು ಕಿಸಾನ್ ಮಜದೂರ ಪಕ್ಷವನ್ನು ಸ್ಥಾಪಿಸಿದರು, ಮುಂದದನ್ನು ಸಮಾಜವಾದಿ ಪಕ್ಷದಲ್ಲಿ ಸಮಾವಿಗೊಳಿಸಿ ಪ್ರಜಾಸಮಾಜವಾದಿ ಪಕ್ಷವನ್ನು ಕಟ್ಟಿದರು. ಇದರಿಂದಲೂ ಅವರು ಹೊರಗೆ ಬಂದು ಬಿಟ್ಟರು. ಕಳೆದ ಬಾರಿ ಆಗಿನ ಸಂರಕ್ಷಣಾ ಸಚಿವ ಕೃಷ್ಣಮೆನನ್ನರ ವಿರುದ್ಧ ಚುನಾವಣೆಗೆ ನಿಂತಾಗಲೇ ಅವರು ಸ್ವತಂತ್ರ ಹುರಿಯಾಳು ಕೃಪಲಾನಿಯವರೂ ಆ ಸಮಯದಲ್ಲಿ ಬೇರೆ ಬೇರೆ ಪಕ್ಷಗಳ ನೆರವನ್ನು ಪಡೆದಿದ್ದರು; ಆದರೆ, ಕಾಂಗ್ರೆಸಿಗೊಂದು ಎದುರಾಳಿಯೆಂಬುದೇ ಇದಕ್ಕೆ ಕಾರಣವಾಗಿತ್ತಲ್ಲದೆ, ಇವರು ಆ ಪಕ್ಷಗಳೊಡನೆ ಸಂಪರ್ಕವಿರಿಸಿಕೊಂಡವರೆಂದಲ್ಲ. ಗಾಂಧೀಜಿಯವರ ಹಲವಾರು ರಚನಾತ್ಮಕ ಕಾರ್ಯಗಳಲ್ಲಿ ನಿಷ್ಠೆಯಿಂದ ದುಡಿದ ಕೃಪಲಾನಿಯವರು ಇಂದಿಗೂ ತಮ್ಮನ್ನು ಗಾಂಧಿವಾದಿಯೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಇಂದು ಇವರೊಬ್ಬರದೇ ಒಂದು ಪಕ್ಷ.

(೬ನೇ ಪುಟ ನೋಡಿರಿ)

ಬೇಸಾಯ ಮಾಡಿದವ — ಬೇಗ ಸಾಯ;
ಉಳಿತಾಯ ಮಾಡಿದವ — ಬೇಗ ಅಳಿಯ

NAVAYUGA
Kannada Weekly
UDIPI
*Founder*
**Late Sri A. B. Shetty**
Former Minister for Public Health, Govt. of Madras & Govt. of Mysore.

# ನವಯುಗ

| ವರುಷ | ಉಡುಪಿ | ವಾರ |
|---|---|---|
| ೪೨ | ೩೦-೫-೧೯೬೩ | ೩೮ |

## ಗೋವೆಯ ಭವಿಷ್ಯ

ಪೋರ್ಚುಗೀಸರ ಕಪಿ ಮುಷ್ಟಿಯಿಂದ ವಿಮೋಚಿತ ಗೋವೆಯು ಭಾರತದಲ್ಲಿ ವಿಲೀನಗೊಂಡು ಒಂದೂವರೆ ಸಂವತ್ಸರಗಳು ಕಳೆದುವು. ಈ ನಡುವೆ ಪ್ರಧಾನಿ ನೆಹರು ಗೋವೆಯನ್ನು ಸಂದರ್ಶಿಸುವ ಆಶಯವನ್ನೂ ಇಟ್ಟುಕೊಂಡಿದ್ದರು. ತಮ್ಮ ವಿಮೋಚಕರನ್ನು ಮನಃಪೂರ್ವಕ ಸ್ವಾಗತಿಸಲು ಗೋವಾಂತಕರೂ ಉತ್ಸಾಹಿತರಾಗಿದ್ದರು. ಆದರೆ, ಇನ್ನಿತರ ಅತಿ ಮಹತ್ವದ ರಾಜಕೀಯ ಕಾರ್ಯಭಾರದಿಂದ ಈ ಮೊದಲೇ ಅವರು ಜನತೆಯ ಆಶೆಯನ್ನು ಪೂರೈಸಲು ಅಶಕ್ತರಾದರು. ಕಳೆದ ವಾರ ಅವರು ಈ ಕಾರ್ಯಕ್ರಮವನ್ನು ಕೈಗೊಂಡು ಗೋವಾಂತಕರ ಹೃದಯಗಳನ್ನು ತಣಿಸಿದರು. ಪ್ರಧಾನಿಯವರ ವ್ಯಕ್ತಿತ್ವವೇ ಅಂತಹುದು

ಗೋವೆಯಿಂದು ಕೇಂದ್ರ ಸರಕಾರದ ಅಧೀನದಲ್ಲಿನ ಭಾರತದ ಒಂದು ಪ್ರದೇಶವಾಗಿದೆ ಇದನ್ನು ಲೋಕಸಭೆಯಲ್ಲಿ ಪ್ರತಿನಿಧಿಸುವವರೂ ಇದ್ದಾರೆ. ಇತ್ತೀಚಿಗೆ ಮಾಡಿದ ಸಂವಿಧಾನ ತಿದ್ದುಪಡಿಯಂತೆ ಕೇಂದ್ರಾಧೀನ ಪ್ರದೇಶಗಳಲ್ಲಿಯೂ ವಿಧಾನ ಸಭೆಯು ರಚಿಸಲ್ಪಡುವುದು. ಇದರಂತೆ ಇನ್ನು ಕೆಲವೇ ತಿಂಗಳುಗಳಲ್ಲಿ ಈಯಲ್ಲೆಡೆಯೂ ಸಾರ್ವತ್ರಿಕ ಚುನಾವಣೆಗಳು ನಡೆಯಲಿರುವುವು. ಗೋವೆಯಲ್ಲಿಯೂ ಅಂತಹ ಚುನಾವಣೆಗಳು ನಡೆದುವೆಂದರೆ ಅಲ್ಲಿಗೆ ಸಾಮ್ರಾಜ್ಯವಾದದ ನೊಗ ನೇಣಿನಲ್ಲಿ ಸಿಲುಕಿ ನವೆದು ಬಳಲಿ ಬೆಂಡಾಗಿದ್ದ ಗೋವಾಂತಕರು ಸ್ವತಂತ್ರ ಭಾರತದ ಇನ್ನಿತರ ಪ್ರಜೆಗಳಂತೆಯೇ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಂಡಂತಾಗುವುದು. ಗೋವೆಯ ಭವಿಷ್ಯವೇನು-ಎಂಬುದರ ಬಗ್ಗೆ ಅಲ್ಲಲ್ಲಿ ವಿವಿಧ ಅಭಿಪ್ರಾಯಗಳು ಪ್ರಕಟಗೊಂಡಿದ್ದುವು. ರಾಷ್ಟ್ರೀಯ ಗಂಭೀರ ಪರಿಸ್ಥಿತಿ ವಶದಿಂದ ಇಂದು ಆ ಸವಾಲು ಡಣಾ ಡಂಗುರವಾಗಿ ಕೇಳಿ ಬರುತ್ತಿಲ್ಲವಾದರೂ ಒಳಗಿಂದೊಳಗೇನೇ ಕಪಟ ಕಾರಸ್ಥಾನಗಳು ನಡೆಯುತ್ತಲೂ ಇರಬಹುದು. ಗೋವೆಯ ಭವಿಷ್ಯವನ್ನು ರೂಪಿಸುವ ಧೈರ್ಯವನ್ನು ಮೊತ್ತ ಮೊದಲು ತೋರಿದವರು ಮಹಾರಾಷ್ಟ್ರೀಯರು. ಅದು ತಮ್ಮ ರಾಜ್ಯದಲ್ಲಿ ವಿಲೀನಗೊಳ್ಳಬೇಕು ಎಂಬ ಹೇರಾಸೆ ಇಟ್ಟುಕೊಂಡು ಅದಕ್ಕನುಕೂಲವಾದ ಮಾರ್ಗಗಳನ್ನು ಅನುಸರಿಸುವುದಕ್ಕೆ ಅವರು ಮುಂದಾದರು. ಆಗ ನೆರೆಯ ಕರ್ನಾಟಕ ರಾಜ್ಯವಾದರೂ ಅದು ಕರ್ನಾಟಕದ ಅಂಗವಾಗಬೇಕು ಎಂಬ ವಾದಕ್ಕೆ ತೊಡಗಿತ್ತು. ಹೀಗೆ ಕೋಣನೆರಡೂ ತಮ್ಮದಲ್ಲದ ಗಿಡವನ್ನು ಬಯಸಿ ಬರೀ ಆಟೋಪ ಪ್ರಕೋಪಗಳಲ್ಲಿ ಕಾಲಹರಣ ಮಾಡಿ ಗೋವಾಂತಕರಲ್ಲಿ ಭಯಭೀತಿ ಭಾವವನ್ನೂ ಹುಟ್ಟಿಸಿದವೆಂದರೆ ತಪ್ಪಾಗಲಾರದು. ಕರ್ನಾಟಕದವರು ಕೊನೆಗಾದರೂ ಈ ವಿಷಯದಲ್ಲಿ ಅಗ್ರಹಕ್ಕೆ ಮುಂದುವರಿಯದೆ ಸೌಜನ್ಯವನ್ನೇ ಬಳಸುವ ಉದಾರತೆ ತೋರಿದರೆ, ಮರಾಠಿಗರು ಮಾತ್ರ ತಮ್ಮ ಸ್ವಭಾವಸಿದ್ಧ ಪುಂಡುಗಾರಿಕೆಯನ್ನು ಅಷ್ಟು ಸುಲಭದಲ್ಲಿ ಬಿಟ್ಟುಕೊಡಲಿಲ್ಲ. ಆದರೆ, ಚೀನೀಯ ಆಕ್ರಮಣವು ನಮ್ಮ ದೇಶದ ಹಲವಾರು ಆಂತರಿಕ ವಿವಾದಗಳಿಗೆ ಮತ್ತು ಅನವಶ್ಯ ಟೀಕೆ ಟಿಪ್ಪಣಿಗಳಿಗೆ ಅರ್ಧವಿರಾಮ ವಿಕ್ಕಿದಂತೆ ಗೋವೆಯ ಪ್ರಶ್ನೆಯನ್ನೂ ಅಲ್ಲಿಗೇ ನಿಲ್ಲಿಸಿತೆಂದರೆ ಅತ್ಯುಕ್ತಿಯಲ್ಲ.

ಹಿಂದೆ ಗೋವೆಯನ್ನು ಹೇಗೆ ರೂಪಿಸಬೇಕು ಎಂಬ ಪ್ರಶ್ನೆ ಲೋಕಸಭೆಯಲ್ಲಿ ಎದ್ದಾಗ, ಅದನ್ನು ಪ್ರತ್ಯೇಕವಾಗಿಯೇ ಇರಿಸಬೇಕು ಎಂಬ ದೃಢ ಧೋರಣೆಯನ್ನು ತಳೆದವರು ಪ್ರಧಾನಿ ನೆಹರು. ಸುಮಾರು ಆರು ಶತಮಾನಗಳ ಸುದೀರ್ಘಾವಧಿ ದಾಸ್ಯದಲ್ಲಿ ಗೋವೆಯು ಭಾರತೀಯ ಪ್ರದೇಶಗಳಿಗಿಂತ ಭಿನ್ನ ರೀತಿಯಲ್ಲಿಯೇ ಬೆಳೆದು ಬಂದಿದೆ. ಅಲ್ಲಿನ ಸಂಸ್ಕೃತಿ—ನಾಗರಿಕತೆಗಳು, ಆಚಾರ—ವಿಚಾರಗಳು, ಆಹಾರ—ವಿಹಾರಗಳು ವಿಶಿಷ್ಟವಾಗಿವೆ. ಆದುದರಿಂದ, ಗೋವಾಂತಕರ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವುದರಿಂದಲೇ ಅವರ ಕಲ್ಯಾಣ ಸಾಧನೆಯೆಂಬುದರಿಂದ ಅವರು ಈ ನಿರ್ಧಾರಕ್ಕೆ ಬಂದಿದ್ದರು. ಇಂದಿಗಾದರೂ ಪ್ರಧಾನಿಯವರು ಈ ನಿಶ್ಚಯದಿಂದ ಅಚಲರಾಗಿದ್ದಾರೆ. ಗೋವೆಯಲ್ಲಿ ಕೊಂಕಣಿ ಮತ್ತು ಮರಾಠಿ ಭಾಷೆಗಳು ಬಳಕೆಯಲ್ಲಿವೆ. ಕೊಂಕಣಿಯು ಮರಾಠಿಯ ಅಪಭ್ರಂಶವೆನ್ನುವ ಭಾಷಾವಿದರೂ ಇದ್ದಾರೆ, ಭಾರತವು ವಿಭಿನ್ನ ಜಾತಿಗಳ, ವಿಭಿನ್ನ ಮತಗಳ, ವಿಭಿನ್ನ ಸಂಪ್ರದಾಯಗಳ, ವಿಭಿನ್ನ ರೀತಿರಿವಾಜುಗಳ, ವಿಭಿನ್ನ ಭಾಷೆಗಳ ವಿಭಿನ್ನ ಬುಡಕಟ್ಟಿನ ಜನರ ದೇಶ. ಆದರೆ, ಒಂದೇ ಸಂಸ್ಕೃತಿ ಸೂತ್ರದಿಂದ ಕೋಯಲ್ಪಟ್ಟಿದ್ದಾರೆ. ಭಾರತೀಯ ಸಂಸ್ಕೃತಿಯ ಮೇಲೆ ಹಲವರಿಂದ ಆಕ್ರಮ ಅವಿಚ್ಛಿನ್ನವಾಗಿ ನಡೆದಿದ್ದರೂ ಅದು ಇನ್ನೂ ಜೀವಂತವಿದೆ, ಜಗತ್ತಿನ ವಿಖ್ಯಾತ ಸಂಸ್ಕೃತಿಗಳಲ್ಲಿ ಒಂದಾಗಿದೆ ಇದಕ್ಕೆ ಅದರ ಗುರಿ—ಉದ್ದೇಶ—ಅತಿ ವಿಶಾಲ ಮತ್ತು ಅತಿ ಉದಾರವಾದುದೇ ಕಾರಣ. ಗೋವಾಂತಕರ ವೈಶಿಷ್ಟ್ಯವೂ ಭಾರತಮಾತೆಗೊಂದು ಆಭರಣ. ಎಂತಲೇ ಅದನ್ನು ಕೆಡಿಸುವ ಸಾಹಸವನ್ನು ಯಾರೂ ಮಾಡಬಾರದು. ಪ್ರಧಾನಿ ನೆಹರು ತಮ್ಮ ಸಂಚಾರಾವಧಿಯಲ್ಲಿ ಗೋವಾಂತರಿಗೊಂದು ಭರವಸೆಯಿತ್ತಿದ್ದಾರೆ! 'ಗೋವೆಯನ್ನು ಪ್ರತ್ಯೇಕ ಘಟಕವಾಗಿಯೇ ಮುಂದುವರಿಸಿಕೊಂಡು ಹೋಗಲಾಗುವುದು.' ತಮ್ಮ ಭವಿಷ್ಯವನ್ನು ಗೋವಾಂತಕರೇ ರೂಪಿಸಿಕೊಳ್ಳಬೇಕು ಅಲ್ಲದೆ, ಈ ಪ್ರಸಂಗದಲ್ಲಿ ಅನ್ಯರನ್ನು ತಲೆಹಾಕಲು ಬಿಡಬಾರದು. ಪ್ರಧಾನಿಯವರು ನೀಡಿದ ಈ ಸ್ಪಷ್ಟ ಆಶ್ವಾಸನೆಯಿಂದ ಗೋವಾಂತಕರು ತೃಪ್ತರಾಗಿದ್ದಾರೆ. ಉಳಿದವರಾದರೂ ಈ ಆಶ್ವಾಸನೆಯನ್ನು ಉಳಿಸಿಕೊಡುವಲ್ಲಿ ಪ್ರಧಾನಿಯವರಿಗೆ ತ್ರಿಕರಣ ಪುರಸ್ಸರ ಸಹಾಯ ನೀಡಬೇಕು. ಗೋವಾಂತಕರ ಭವಿಷ್ಯ ರೂಪಿಸುವ ಅಧಿಕಾರವನ್ನು ಮಹಾರಾಷ್ಟ್ರೀಯರಿಗಾಗಲೀ, ಕನ್ನಡಿಗರಿಗಾಗಲೀ ಯಾರೂ ಒಪ್ಪಿಸಿಲ್ಲವೆಂಬುದನ್ನು ಮನಗಂಡು, ಅದರ ಸರ್ವಾಂಗೀಣ ಅಭಿವೃದ್ಧಿ ಕಾರ್ಯದಲ್ಲಿ ಎಲ್ಲರೂ ಸಹಾನುಭೂತಿ ಪ್ರಕಟಿಸಬೇಕು.

## ಲೇಕ್ ಸಿಟಿ ಯುನಿವರ್ಸಿಟಿ

ಜನತೆಯಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಯುತ್ತ ಬರುತ್ತಿರುವಂತೆ ವಿದ್ಯಾರ್ಥಿಗಳ ಸಂಖ್ಯೆಯೂ ದಟ್ಟಣಿಸುತ್ತದೆ; ಅಧಿಕ ಶಾಲೆ ಕಾಲೇಜುಗಳು ನಿರ್ಮಾಣಗೊಳ್ಳುವುದು ಪ್ರಗತಿಯ ಸಂಕೇತ. ಹಾಗೆಯೇ ಕಾಲೇಜುಗಳ ಸಂಖ್ಯೆಯು ಹೆಚ್ಚಿದಂತೆ ವಿಶ್ವವಿದ್ಯಾಲಯಗಳ ಜವಾಬ್ದಾರಿಯೂ ಬೆಳೆಯುತ್ತಿದೆ. ಮಿತಿಮೀರಿದ ವಿದ್ಯಾರ್ಥಿ ಸಂಖ್ಯೆಯು ಶಿಕ್ಷಣಾಲಯದ ಅವ್ಯವಸ್ಥೆಗೆ ಕಾರಣವಾಗುವಂತೆಯೇ ಅಧಿಕ ಸಂಖ್ಯೆಯ ಕಾಲೇಜುಗಳ ಸೇರ್ಪಡೆಯು ವಿಶ್ವವಿದ್ಯಾಲಯಗಳ ಅವ್ಯವಸ್ಥೆಗೆ ಹೇತುವಾಗುತ್ತದೆ. ಆದುದರಿಂದಲೇ ವಿಶ್ವವಿದ್ಯಾಲಯಗಳ ಸಂಖ್ಯೆಯೂ ಹೆಚ್ಚುವುದು ಅಗತ್ಯವಾಗಿದೆ ವಿಶ್ವವಿದ್ಯಾಲಯಗಳ ಏಕಮೇವ ಕರ್ತವ್ಯವೆಂದರೆ, ಪಾಠ್ಯಕ್ರಮವನ್ನು ಸಿದ್ಧಗೊಳಿಸಿ, ಪರೀಕ್ಷೆಗಳನ್ನು ನಡೆಸಿ ಉಪಾಧಿ ಪತ್ರ ಪ್ರದಾನ ಮಾಡುವುದು ಮಾತ್ರ ವಿದೇಶಗಳಲ್ಲಿ ಒಂದೊಂದು ಕಾಲೇಜೂ ವಿಶ್ವವಿದ್ಯಾಲಯದ ರೂಪ ಧರಿಸಿದ್ದುಂಟು. ನಮ್ಮಲ್ಲಿ ಅಂತಹ ಸಾಧನೆಯೂ ಬಹುದೂರದ ಮಾತು. ವಿಶ್ವವಿದ್ಯಾಲಯ ಸ್ಥಾಪನೆಯು ಬಹು ವೆಚ್ಚಪ್ರದವಾದುದರಿಂದ ಆ ದಿಸೆಯಲ್ಲಿ ಯಾರೂ ಆಸಕ್ತಿ ತೋರುವುದಿಲ್ಲ. ಆದರೆ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರ್ ಡಾ| ಮಾಧವ ಪೈ ಅವರು ಲೇಕ್ ಸಿಟಿಯುನಿವರ್ಸಿಟಿಯೊಂದನ್ನು ಸ್ಥಾಪಿಸುವ ಬೃಹದ್ಯೋಜನೆಯನ್ನು ಜನತೆಯ, ಸರಕಾರದ ಮುಂದೆ ಇಟ್ಟಿದ್ದಾರೆ. ಇದಕ್ಕಾಗಿ ಸರಕಾರವು ಯಾವ ವೆಚ್ಚವನ್ನೂ ವಹಿಸ ಬೇಕಾಗಿಲ್ಲ; ಆದರೆ, ಭದ್ರಾಜಲಾಶಯದ ಬಳಿಯ ಹತ್ತು ಸಾವಿರ ಎಕ್ರೆ ಪಡ ಜಮೀನನ್ನು ಎಕೆಡೆಮಿಗೆ ದಾನವಾಗಿ ನೀಡಬೇಕು. ಅಧಿಕಾರ ಪತ್ರವನ್ನೀಯಬೇಕು ಇಷ್ಟರಿಂದಲೇ ಇತರ ಯಾವ ವಿಶ್ವವಿದ್ಯಾಲಯ ಕಡಿಮೆಯೆನಿಸದ ಲೇಕ್ ಸಿಟಿ ಯುನಿವರ್ಸಿಟಿಯನ್ನು ಕಟ್ಟುವ ಸ್ವರೂಪವನ್ನವರು ತಯಾರಿಸಿದ್ದಾರೆ. ಸರಕಾರವು ಈ ಯೋಜನೆಯನ್ನು ಒಪ್ಪಿಕೊಳ್ಳುವುದಕ್ಕೆ ವಿಳಂಬ ಮಾಡುತ್ತದೆ ನಿಜ. ಬೆಂಗಳೂರಿನ ವಿಶ್ವವಿದ್ಯಾಲಯ ಯೋಜನೆಯನ್ನು ತಾನಿನ್ನೂ ಮೂರ್ತಸ್ವರೂಪಕ್ಕೆ ತಾರದಿರುವಾಗ ಈ ಹೊಸ ಸೂಚನೆಯನ್ನು ಒಪ್ಪುವುದು ತನ್ನ ಮುಖಭಂಗ ತಾನು ಮಾಡಿಕೊಂಡಂತೆ ಎಂದದು ಭಾವಿಸಬಹುದು. ಅಥವಾ ಎಕೆಡೆಮಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಭ್ಯರ್ಥಿಗಳು 'ಸಹಾಯಧನ' ತೆರಬೇಕು ಎಂಬ ಒಂದು ಕಾರಣದಿಂದ ನಡೆದ ಅಪಪ್ರಚಾರಕ್ಕೆ ಸರಕಾರ ಕಿವಿಗೊಡುತ್ತಿರಬಹುದು. ಆದರೆ, ಈ ಬಗೆಯ ಅಪಪ್ರಚಾರಗಳಿಗೆ ಈಗಾಗಲೇ ಸಾಕಷ್ಟು ಸಮಾಧಾನಕರ ಉತ್ತರ ದೊರೆತಿದೆ. ಆದುದರಿಂದ ಸರಕಾರವು ತನ್ನ ಕರ್ತವ್ಯವನ್ನು ಮಾಡಬೇಕು. ನಾಗರಿಕರು ಉತ್ಸಾಹದಿಂದ ಮುಂದೆ ಬಂದಾಗ, ಅವರನ್ನು ಉತ್ಸಾಹಭಂಗಗೊಳಿಸಬಾರದು; ಒಂದುವೇಳೆ ಸರಕಾರವು ಕೆಳಗಿಸಿಕೇಳದರೆ, ತಮ್ಮ ಅಭಿಮತವನ್ನು ಸರಕಾರಕ್ಕೆ ಸ್ಪಷ್ಟವಾಗಿ ಮುಂದಿಟ್ಟು ಮಾಡಿಕೊಡುವುದು ನಾಗರಿಕರ ಪರಮ ಕರ್ತವ್ಯವಾಗಿದೆ. ಸರಕಾರ ಮತ್ತು ನಾಗರಿಕರು ಕರ್ತವ್ಯಬಾಹಿರರಾಗದೆ ಉಳಿದರೆ ಮಾತ್ರ ರಾಜ್ಯದ ಅಭಿವೃದ್ಧಿ ಸಾಧನೆಯಾದೀತು.

---

## ಚಂದಾದಾರರಲ್ಲಿ ವಿನಂತಿ

ನಮ್ಮ ಚಂದಾದಾರರಲ್ಲಿ ಕೆಲವರು ವಿನಂತಿಸಿದೊಡನೆ ಚಂದಾ ಕಳುಹಿಸಿದ್ದಾರೆ; ಇನ್ನು ಕೆಲವರು ವಿ.ಪಿ.ಪಿ. ಸ್ವೀಕರಿಸುವುದರ ಮೂಲಕ ಚಂದಾ ಸಲ್ಲಾಯಿಸಿದ್ದಾರೆ. ಇವರೆಲ್ಲರಿಗೂ ನಾವು ತುಂಬಾ ಆಭಾರಿಗಳಾಗಿದ್ದೇವೆ.

ಇನ್ನೂ ಚಂದಾ ಬಾಕಿ ಇರುವವರು ದಯಮಾಡಿ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸುವಂತೆ ಬಿನ್ನವಿಸುತ್ತೇವೆ. ಈಗ ಪುನರ್ವಿಮರ್ಶಿತ ಅಂಚೆ ದರಗಳಂತೆ ವಿ. ಪಿ. ಮಾಡಿದರೆ ಮೊದಲಿಗಿಂತಲೂ ಹೆಚ್ಚಿನ ನಷ್ಟವಾಗುವುದು. ಆದುದರಿಂದ ನಮ್ಮ ಕಳಕಳಿಯ ವಿನಂತಿಯನ್ನು ಮನ್ನಿಸಿ ಸರ್ವರೂ ತಪ್ಪದೆ ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ಅಭಿಮಾನಪೂರ್ವಕ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ಅಂತೂ ತಾ. 5—6—63ರೊಳಗಾದರೂ ಚಂದಾ ಬಾರದಿದ್ದರೆ ತಾರೀಕು 6—6—63ರ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುವೆವು. ಅದನ್ನು ಸ್ವೀಕರಿಸುವಂತೆ ಮುಂದಾಗಿ ಬಿನ್ನಹಿಸುತ್ತೇವೆ

—ಮೆನೇಜರ್

---

## ಖಡ್ಡಾಯ ಉಳಿತಾಯ ಯೋಜನೆ

ಅರ್ಥಮಂತ್ರಿ ಮುರಾರ್ಜಿ ದೇಸಾಯಿಯವರು ಉದ್ದೇಶಿಸಿದ ಖಡ್ಡಾಯ ಉಳಿತಾಯ ಯೋಜನೆಯು ಮುಂದಿನ ಜುಲೈ ಮೊದಲನೆ ದಿನಾಂಕದಿಂದ ವ್ಯವಸ್ಥಿತವಾಗುವುದು. ಇದರನ್ವಯ ರೂ. ೧೫೦೦ ಅಥವಾ ಹೆಚ್ಚು ವಾರ್ಷಿಕ ಉತ್ಪನ್ನವಿರುವವರು (ಭೂಕಂದಾಯ ತೆರುತ್ತಿರುವವರಿಗೆ ಸಂಬಂಧಿಸಿದ ವಿವರ ಮುಂದಕ್ಕೆ ನಿರ್ಧರಿಸಲಾಗುವುದು) ತಮ್ಮ ಆದಾಯ ಸೇ. ೩ರಷ್ಟನ್ನು ಈ ಯೋಜನೆಯಲ್ಲಿ ತೊಡಗಿಬೇಕಾಗುತ್ತದೆ. ಆದಾಯಕರ ತೆರುವವರಿಗೂ ಈ ನಿಯಮವು ಅನ್ವಯಿಸುವುದು.

ಆದಾಯ ಕರಕ್ಕೆ ಒಳಗಾಗದೆ ಕೇವಲ ಈ ಖಡ್ಡಾಯ ಠೇವಣಾತಿ ಯೋಜನೆಗೆ ಮಾತ್ರ ಒಳಗಾಗುವವರು ಜೀವವಿಮೆ, ಪ್ರೊವಿಡೆಂಟ್ ಫಂಡ್ ಮತ್ತು ಅಂಚೆ ಕಛೇರಿಯ ನಿಯತ ಕಾಲಿಕ ಠೇವಣಿ ಯೋಜನೆಯನ್ವಯ ಈಗಾಗಲೇ ತಮ್ಮ ವರಮಾನದ ೧೯ರಷ್ಟು ಉಳಿತಾಯ ಮಾಡುತ್ತಿರುವರಾದರೆ, ಅವರು ಮಾತ್ರ ಈ ಉಳಿತಾಯ ಯೋಜನೆಯಿಂದ ವಿನಾಯಿತಿ ಪಡೆಯಲು ಅರ್ಹರಾಗುತ್ತಾರೆ. ಮ

ಧ್ಯಮ ವರ್ಗದ ನೌಕರರಿಗೆ ಈ ವಿನಾಯಿತಿ ಉಪಯುಕ್ತವೆಂದು ಹೇಳಬಹುದು.

ಆದಾಯ ತೆರಿಗೆಗೆ ಒಳಗಾಗದೆ ಇರುವ ಈ ಯೋಜನೆಯೊಳಗೆ ಸೇರುವ ನೌಕರರ ಮಾಲಿಕರು ನೌಕರರ ವೇತನದಲ್ಲಿ ಈ ಠೇವಣಿ ಮೊಬಲಗನ್ನು ಮುರಿದುಕೊಂಡು ಸಂಬಂಧಿತ ಕಛೇರಿಗೆ ಕಟ್ಟಬೇಕಾಗುತ್ತದೆ. ಹೀಗೆ ನೌಕರನು ಉಳಿಸಿದ ಹಣವು ಐದು ವರ್ಷಗಳ ನಂತರ ಸೇ. ೪ರ ಬಡ್ಡಿಯೊಡನೆ ಮರಳಿಸಲ್ಪಡುವುದು. ಈ ಉಳಿತಾಯದ ಹಣವು ಠೇವಣಿದಾರರ ಸಾಲ ಸಂಬಂಧದ ನ್ಯಾಯಾಲಯಗಳ ಡಿಕ್ರಿ ಮತ್ತು ಆಜ್ಞೆಗಳಿಂದ ಮುಕ್ತವಿರುವುದು ತನ್ನ ನಿಧನದ ಸಂದರ್ಭಗಳಲ್ಲಿ ಈ ಹಣವನ್ನು ಯಾರಿಗೆ ಮರಳಿಸಬೇಕು ಎಂಬುದನ್ನು ಠೇವಣಿದಾರರು ಮೊದಲೇ ಸಾರಬೇಕು

ಆದಾಯ ತೆರಿಗೆಗೆ ಒಳಪಡುವವರಿಗೆ ಯಾವ ರೀತಿಯ ವಿನಾಯಿತಿಯೂ ದೊರಕುವುದಿಲ್ಲ. ಅವರು ತಮ್ಮ ಉಳಿತಾಯವೆಷ್ಟೇ ಇರಲಿ, ಕಡ್ಡಾಯ ಠೇವಣಿಯನ್ನು ಇಡಲೇ ಬೇಕಾಗುತ್ತದೆ ಆದರೆ, ಈ ಮೊತ್ತವನ್ನು ನೌಕರನ ಮಾಲೀಕರು ಮುರಿದುಕೊಳ್ಳಲೇ ಬೇಕೆಂಬ ನಿಯಮವಿರುವುದಿಲ್ಲ ಕಡ್ಡಾಯ ಉಳಿತಾಯ ಯೋಜನೆಯ ಠೇವಣಿಗಳನ್ನು ಎಲ್ಲ ಅಂಚೆ ತಂತೀ ಕಛೇರಿಗಳು, ಉಪ ಅಂಚೆ ಕಛೇರಿಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಗಳು, ರಿಜರ್ವ್ ಬ್ಯಾಂಕಿನ ಎಲ್ಲ ಕಾರ್ಯಾಲಯಗಳಲ್ಲಿ ಸ್ವೀಕರಿಸುವ ವ್ಯವಸ್ಥೆಯಿದೆ.

೧೯೬೩ ಜುಲೈರ ಮಟ್ಟಿಗೆ ಒಬ್ಬನು ತನ್ನ ವಾರ್ಷಿಕ ಆದಾಯದ ಸೇ. ೨.೫ ಮಾತ್ರ ಠೇವಣಿಯಿಟ್ಟರೆ ಸಾಕಾಗುವುದು; ಏಕೆಂದರೆ, ಈ ಯೋಜನೆಯು ಜಾರಿಗೆ ಬರುವಾಗಲೇ ಮೂರು ತಿಂಗಳು ತಡವಾಗುವುದು

## ವಾರ್ತಾವೇದಿಕೆ

### ರಾಮಮನೋಹರ

ಕಳೆದ ವರ್ಷ ನೆಹರುವಿಂದ ಪರಾಜಿತರಾದ ರಾಮಮನೋಹರ ಲೋಹಿಯಾ ಈ ವರ್ಷ ಗೆದ್ದು ಸಮಾಜವಾದಿಯ ರಾಷ್ಟ್ರ ರಚನೆಯು ಸಂಪೂರ್ಣ ನಷ್ಟವಾಗಿದೆ; ಆದುದರಿಂದಲೇ ಇಂದು ಪ್ರಧಾನಿ ನೆಹರು ರಾಜಿನಾಮೆಯಿತ್ತು ಮರಳಿ ಚುನಾವಣೆಗೆ ನಿಲ್ಲಬೇಕು ಎಂದು ಕೇಳಿಕೊಂಡಿದ್ದಾರೆ. ಲೋಹಿಯಾ ಈ ಬಾರಿ ಸೋಲಿಸಿದ ವ್ಯಕ್ತಿಯಾದರೂ ಹಿಂದಿನ ಕೇಂದ್ರ ಮಂತ್ರಿವರ್ಯರಲ್ಲ. ಆದರೆ, ಗಂಭೀರಗೆಟ್ಟು ಮಾತನಾಡುವ ಲೋಹಿಯಾ ಏಕಮೇವಾದ್ವಿತೀಯರು ಮಾತ್ರವಲ್ಲ, ಉತ್ತಮ ಮನರಂಜಕರೂ ಹೌದು. ಆದುದರಿಂದ ಪ್ರಧಾನಿ ನೆಹರೂ ಇವಕ್ಕೆ ಉತ್ತರ ಕೊಡುವ ಅಗತ್ಯವೇ ಇಲ್ಲ.

### ಹಫೀಜ ಮಹಮ್ಮದ

'ನೆಹರುರವರಿಗಿಂತ ಹೆಚ್ಚಾಗಿ ದೇಶವನ್ನು ಪ್ರೀತಿಸುತ್ತೇನೆ' ಎನ್ನುವ ಕೃಪಲಾನಿ ಸತ್ಯವನ್ನೇ ನುಡಿದಿದ್ದಾರೆ. ಅವರು ಲೋಕ ಸಭೆಗೆ ಆಯ್ಕೆಗೊಂಡುದರಿಂದ ಸಭೆಯ ಗೌರವ—ಘನತೆಗಳು ಎತ್ತರಿಸುತ್ತವೆ ನಿಜ. ಆದರೆ, ಅವರಿಂದ ಸೋಲುಂಡ ನೀರಾವರಿ ಸಚಿವ ಹಫೀಜ ಇಬ್ರಾಹಿಮರು ಮತ್ತು ಪ್ರಧಾನಿ ನೆಹರುಗಳು ತ್ರಿಶಂಕುವಿನಲ್ಲಿ ಬಿದ್ದಿದ್ದಾರೆ ಇಬ್ರಾಹಿಮರು ರಾಜೀನಾಮೆಯೀಯಲು ಮನದಂದಿದ್ದಾರೆಂದು ತಿಳಿಯುತ್ತದೆ; ಆವರೂ ಅದನ್ನು ಸ್ವೀಕರಿಸಬೇಕೋ ಬೇಡವೋ ಎಂಬ ನಿರ್ಧಾರಕ್ಕೆ ಬರಬೇಕಾದವರು ನೆಹರು. ಇಬ್ರಾಹಿಮ್ ರಾಜ್ಯ ಸಭೆಯ ಸದಸ್ಯರು ನಿಜ, ಆದರೆ, ಪ್ರಜಾಪ್ರಭುತ್ವದಲ್ಲಿ ಜನಮತವನ್ನು ಕಡೆಗಣಿಸುವುದು ಸಾಧ್ಯವಿಲ್ಲವೆಂಬುದೂ ಅಷ್ಟೇ ಸತ್ಯ.

### ಗಾಡಗೀಳ

ಮರಾಠಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನರಹರಿ ವಿಷ್ಣು ಗಾಡಗೀಳರು ಪ್ರತಿಭಾ ಸಂಪನ್ನರು ಪಂಜಾಬದ ರಾಜ್ಯಪಾಲ ಪದವಿಯಿಂದ ನಿವೃತ್ತರಾದ ಬಳಿಕ ಅವರಿಗೆ ಮತ್ತಾವ ಕೆಲಸವೂ ದೊರೆಯಲಿಲ್ಲ. ಅದಕ್ಕೆಂದೇ ಇರಬೇಕು, ಅವರು ಗೋವೆಯನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕು ಎಂಬ ವಾದವನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾರೆ ಅವರು ಹೇಳುವಂತೆ ಮರಾಠಿಯ ಒಂದು ರೂಪವೇ ಕೊಂಕಣಿ; ಗೋವೆಗೆ ಯಾವ ವೈಶಿಷ್ಟ್ಯವೂ ಇರುವುದಿಲ್ಲ. ಇತಿಹಾಸವರಿಯದ ಪೋರ್ಚುಗೀಸರು ವೈಶಿಷ್ಟ್ಯವುಂಟೆಂದು ಕರೆದುದನ್ನೇ ಇತಿಹಾಸಜ್ಞ ನೆಹರು ಇದ್ದಕ್ಕಿದ್ದಂತೆ ನಂಬುವುದೆಂದರೆ? ಎಂಬ ಪ್ರಶ್ನೆ ಅವರಿಗೆ.

### ಕತ್ತಲೆಯಲ್ಲಿ ಬೆಳಕು

ಆಫ್ರಿಕನ್ ರಾಷ್ಟ್ರಗಳಲ್ಲಿ ಏಕತೆಯನ್ನುಳಿಸಿಕೊಳ್ಳುವ ಬಗ್ಗೆ ಮೂವತ್ತು ರಾಷ್ಟ್ರಗಳ ವರಿಷ್ಠರ ಮತ್ತು ಪ್ರಧಾನಿಗಳ ಸಮ್ಮೇಳನವು ಆಡಿಸ್ ಅಬಾಬಾದಲ್ಲಿ ಸಮಾವೇಶಗೊಂಡಿತ್ತು. ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ದೇಶಗಳು ಒಂದಾಗಿರುವಾಗ, ಅವರ ಉದ್ದೇಶವು ಈಡೇರದೆ ಉಳಿದೀತೆ? ಆಫ್ರಿಕನ್ ಐಕ್ಯಮತದ ಆವಶ್ಯಕತೆಯನ್ನು ಎಲ್ಲರೂ ಒಪ್ಪಿಕೊಂಡರು. ದ. ಆಫ್ರಿಕೆಯ ವರ್ಣನೀತಿ ಮತ್ತು ಪೋರ್ಚುಗಲಿನ ವಸಾಹತುಶಾಹಿಯನ್ನು ಪ್ರತಿಭಟಿಸಿ ಅದಕ್ಕೆ ಬಹಿಷ್ಕಾರ ಹೇರುವ, ಉಳಿದ ದೇಶಗಳಿಗೂ ಬಹಿಷ್ಕರಿಸುವಂತೆ ಕರೆಯಿತ್ತುವು. ಕತ್ತಲೆಯ ಖಂಡ ಆಫ್ರಿಕದಲ್ಲಿಯೂ ಸೂರ್ಯೋದಯವಾಗುತ್ತ ಬರುತ್ತಿರುವುದು ಏಕಪಕ್ಷತೆಗೆ, ತುಂಬ ಅನುಕೂಲವಾದೀತು.

## ಅಲ್ಲಲ್ಲಿಯ ಸುದ್ದಿ ಸಾರ

**ಎಂ. ಪಿ. ಸಿ. ಸಿ.ಗೆ ಅವಿರೋಧ ಆಯ್ಕೆಯಾದವರು—** ಕೆಳಗಿನವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ತಿಳಿದು ಬಂದಿದೆ.

ಬೈಂದೂರು— ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ.; ಕುಂದಾಪುರ— ಶ್ರೀ ಎಸ್. ಎಸ್ ಕೊಳ್ಕೆಬೈಲ್, ಎಂ. ಎಲ್. ಎ; ಕಾಪು— ಶ್ರೀ ಟಿ. ಎ. ಪೈ; ಮೂಡಬಿದ್ರಿ— ಶ್ರೀ ಎಸ್. ಡಿ. ಸಾಮ್ರಾಜ್ಯ, ಎಂ. ಎಲ್. ಎ; ಸುರತ್ಕಲ್— ಶ್ರೀ ಬಿ. ರಾಜೀವ ಭಂಡಾರಿ; ಉಡುಪಿ— ಶ್ರೀ ಕೆ. ಎಸ್. ಎನ್. ಅಡಿಗ, ಪಾಣೆಮಂಗಳೂರು— ಡಾ| ನಾಗಪ್ಪ ಆಳ್ವ, ಎಂ. ಎಲ್. ಎ.; ಬೆಳ್ತಂಗಡಿ— ಶ್ರೀ ಬಿ ನಾರಾಯಣ ನಾಯಕ್; ಪುತ್ತೂರು-1 (ವಿಟ್ಲ) ಶ್ರೀ ವಿಠಲದಾಸ್ ಶೆಟ್ಟಿ, ಪುತ್ತೂರು-2— ಶ್ರೀ ಕೆ. ಜತ್ತಪ್ಪ ರೈ; ಮಂಗಳೂರು-1— ಶ್ರೀ ಎಂ. ಶ್ರೀನಿವಾಸ ನಾಯಕ್, ಎಂ. ಎಲ್. ಎ.

ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಈ ಕೆಳಗಿನವರು ಅವಿರೋಧವಾಗಿ ಆರಿಸಿ ಬಂದಿದ್ದಾರೆ. ಬೈಂದೂರು— ಶ್ರೀ ಆರ್. ಕೆ. ಸಂಜೀವ ರಾವ್; ಉಡುಪಿ— ಶ್ರೀ ಎ. ಜಿ. ಆಳ್ವ; ಕಾರ್ಕಳ— ಶ್ರೀ ವೈ. ತನಿಯಪ್ಪ; ಮೂಡಬಿದ್ರಿ— ಶ್ರೀ ಟಿ. ವಾಸುದೇವ ಪೈ; ಕಾಪು— ಶ್ರೀ ಪಿ. ಜನಾರ್ಧನ ನಾಯಕ್; ಸುರತ್ಕಲ್— ಡಾ| ಎಂ. ರಾಮಣ್ಣ ಶೆಟ್ಟಿ; ಬೆಳ್ತಂಗಡಿ— ಶ್ರೀ ಕೆ. ವಿಶ್ವನಾಥ ಕಾಮತ್; ಪುತ್ತೂರು— ಶ್ರೀ ಕೆ. ಶಾಂತಪ್ಪ ಆಳ್ವ; ಪಾಣೆಮಂಗಳೂರು— ಶ್ರೀ ಪಿ. ಮಾಧವ ಪಡಿಯಾರ್.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಇತರ ಕ್ಷೇತ್ರಗಳಿಗೆ ಜೂನ್ 2ರಂದು ಚುನಾವಣೆ ನಡೆಸಲಾಗುವುದು.

ಪ್ರದೇಶ ಕಾಂಗ್ರೆಸ್ಸಿನ ಮಂಗಳೂರು 2ನೇ ಕ್ಷೇತ್ರದಲ್ಲಿ ಸ್ಪರ್ಧೆಯಿದ್ದು ಇಲ್ಲಿ ಶ್ರೀ ಎ ಶಂಕರ ಆಳ್ವ, ಶ್ರೀ ಕೆ. ವಿಶ್ವನಾಥ ಕಾಮತ್, ಶ್ರೀ ಬಿ. ಎಂ ಇದಿನಬ್ಬ, ಮತ್ತು ಡಾ| ಕೆ. ಬಿ. ಶೆಟ್ಟಿಯವರು ನಾಮಪತ್ರ ಸಲಿಸಿರುವರು.

ಬ್ರಹ್ಮಾವರದಿಂದ ಪ್ರದೇಶ ಕಾಂಗ್ರೆಸ್ ಸಮಿತಿಗೆ ಶ್ರೀ ಹಲಂಗಾರು ನಾರಾಯಣ ಹೆಗ್ಡೆ, ಶ್ರೀ ಎಫ್. ಎಕ್ಸ್. ಡಿ. ಪಿಂಟೋ ಮತ್ತು ಶ್ರೀ ಕೆ ಮಹಾಬಲ ಶೆಟ್ಟಿಯವರು ನಾಮಪತ್ರ ಹಾಕಿದ್ದಾರೆ. ಕಾರ್ಕಳದಿಂದ ಶ್ರೀ ವೈ. ತನಿಯಪ್ಪ, ಶ್ರೀ ಎಫ್. ಎಕ್ಸ್ ಡಿ. ಪಿಂಟೋ, ಶ್ರೀ ಎಂ. ಆರ್. ಕಿಣಿ, ಮತ್ತು ಜೆ. ಎ. ಬ್ರಿಟ್ಟೋರವರು ನಾಮಪತ್ರ ಸಲ್ಲಿಸಿರುವರು.

**ಸಚಿವ ಡಾ| ಆಳ್ವ** — ವಿದೇಶ ಸಂಚಾರ ಕೈಗೊಂಡಿದ್ದ ಮೈಸೂರು ರಾಜ್ಯದ ಆರೋಗ್ಯ ಸಚಿವ ಡಾ. ಕೆ. ನಾಗಪ್ಪ ಆಳ್ವರು ಜೂನ್ 8ರಂದು ಜಿನೇವಾದಿಂದ ಹಿಂತಿರುಗಿ ಬರುವರೆಂದು ತಿಳಿದುಬರುತ್ತದೆ.

**ಮಂಗಳೂರು ಬಂದರದ ಯೋಜನೆಗೆ ಒಪ್ಪಿಗೆ—** ಮಂಗಳೂರನ್ನು ಸರ್ವಋತು ಬಂದರವನ್ನಾಗಿ ಮಾರ್ಪಡಿಸಲು, ಪಣಂಬೂರನ್ನು ಅಂತಿಮವಾಗಿ ಸರಕಾರವು ಆರಿಸಿದೆ ಹಾಗೂ 15.42 ಕೋಟಿ ರೂ ಗಳ ಸಹಾಯವನ್ನೂ ಕೊಡುತ್ತದೆ. ಈ ಬೃಹತ್ ಯೋಜನೆಯನ್ನು ಕೂಡಲೇ ಕೈಕೊಳ್ಳಲಾಗುವುದು ಎಂದು ಕೇಂದ್ರದ ಹಡಗು ಸಾರಿಗೆ ಸಚಿವರಾದ ಶ್ರೀ ರಾಜಬಹಾದ್ದೂರರು ಸಾರಿರುವರು. ಪಣಂಬೂರು ಎಲ್ಲಾ ರೀತಿಯಿಂದಲೂ ಉತ್ತಮವಾಗಿರುವುದೆಂದೂ, ಕ್ರಮೇಣ ವಿಸ್ತರಿಸಲಿಕ್ಕೂ ಅನುಕೂಲತೆ ಇರುವುದೆಂದೂ ತಿಳಿದು ಬಂದಿದೆ.

**ಮೂಲ್ಕಿ ಮತ್ತು ಕಲ್ಯಾಣಪುರ ಸೇತುವೆಗಳ ಉದ್ಘಾಟನೆ—** ತಾರೀಕು 23—5—63ರಂದು ಮೂಲ್ಕಿ ಮತ್ತು ಕಲ್ಯಾಣಪುರ ಸೇತುವೆಗಳು ಕೇಂದ್ರ ಸಚಿವ ರಾಜಬಹಾದ್ದೂರರವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ರಾಜ್ಯದ ಕಾಮಗಾರಿ ಸಚಿವ ವೀರೇಂದ್ರ ಪಾಟೀಲರು ವಹಿಸಿದ್ದರು.

ಸ್ಪೆಶಲ್ ವೆಸ್ಟ್ ಕೋಸ್ಟ್ ಸರ್ಕಲಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಸುಂದರ ನಾಯ್ಕರು ಸೇತುವೆಗಳ ಸಂಪೂರ್ಣ ವಿವರಗಳನ್ನಿತ್ತರು. ಶ್ರೀ ರಾಜ್ ಬಹಾದ್ದೂರರವರು ಮಾತಾಡುತ್ತಾ, ರಸ್ತೆ ಸಾರಿಗೆ ಸಂಪರ್ಕಗಳ ಅಭಿವೃದ್ಧಿಯಾಗದೇ ರಾಷ್ಟ್ರದ ಅಭಿವೃದ್ಧಿ ಅಸಾಧ್ಯ. ಸರಕಾರವು ಇದಕ್ಕೆ ಗಮನ ಕೊಡುತ್ತಿರುವುದು ತುಂಬಾ ಶ್ಲಾಘನೀಯ ಎಂದು ಹೇಳಿದರು. ಮಾತ್ರವಲ್ಲದೇ ಶ್ರೀ ಯು. ಎಸ್ ಮಲ್ಯರ ಕಾರ್ಯಗಳನ್ನು ಹೊಗಳಿದರು

ಅಧ್ಯಕ್ಷ ಪಾಟೀಲರು ಕರಾವಳಿ ರಸ್ತೆಯ ಕೆಲಸವನ್ನು ಗೋವಾ ಗಡಿ ತನಕ ರಾಜ್ಯ ಸರಕಾರ ಕೈಗೊಳ್ಳುವುದೆಂದೂ ಘಾಟಿ ರಸ್ತೆಯ ಅಭಿವೃದ್ಧಿಯ ಕುರಿತು ಕೇಂದ್ರ ಸರಕಾರ ಆಲೋಚಿಸಬೇಕೆಂದೂ ಮುಂತಾಗಿ ಹೇಳಿದರು

ಸಮಾರಂಭಗಳ ಆದಿಯಲ್ಲಿ ಸುಪರಿಂಟೆಂಡಿಂಗ್ ಇಂಜಿನೀಯರ ಶ್ರೀ ಹಬ್ಬು, ಜಿ ಎಸ್ ಸಲ್ಡಾನರವರು ಅತಿಥಿಗಳನ್ನು ಸ್ವಾಗತಿಸಿದರು. ಕಲ್ಯಾಣಪುರದಲ್ಲಿ ಶ್ರೀ ಸುಂದರ ನಾಯ್ಕರೂ, ಮೂಲ್ಕಿಯಲ್ಲಿ ಶ್ರೀ ಕರಿಸಿದ್ದಪ್ಪನವರೂ ವಂದನಾರ್ಪಣೆಗೈದರು.

ಹಿಂತೆರಳುವಾಗ ಮಂತ್ರಿಗಳು ಪಾಂಗಾಳ ಸೇತುವೆಯನ್ನೂ ಉದ್ಘಾಟಿಸಿದರು

**ರೇಡಿಯೋ ಕಾರ್ಯಕ್ರಮ—** ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ದಿನಾಂಕ 11-6-63ನೇ ಮಂಗಳವಾರ ಬೆಳಗ್ಗೆ 8.15 ರಿಂದ 8.30ರ ವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಶ್ರೀ ರಮಾನಂದ ಬನಾರಿ ದೇಲಂಪಾಡಿ— ಅವರ ದೇಶಭಕ್ತಿ ಗೀತೆಗಳು ಪ್ರಸಾರವಾಗಲಿರುವುದಾಗಿ ತಿಳಿದುಬಂದಿದೆ.

**ಪೆರ್ಡೂರು ಕಲಾ ಸೇವಾ ಮಂಡಳಿಯವರಿಗೆ ವಿಜಯ—** ಭದ್ರಾವತಿಯ ಮಿತ್ರ ಕಲಾ ಮಂಡಳಿಯವರು ಕಳೆದ ತಿಂಗಳು, 4ನೇ ವರ್ಷದ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯನ್ನು ಜರಗಿಸಿದಾಗ, ಪೆರ್ಡೂರಿನ ಕಲಾ ಸೇವಾ ಮಂಡಳಿಯವರಿಗೆ ನಾಟಕ ವಿಭಾಗದಲ್ಲಿ, ಶ್ರೀ ಶಿವರಾಮ ಕಾರಂತರು ರಚಿಸಿದ ಹಾಗೂ ಪೆರ್ಡೂರಿನವರು ಅಭಿನಯಿಸಿದ "ಕಠಾರಿ ಭೈರವ" ನಾಟಕಕ್ಕೆ ದ್ವಿತೀಯ ಬಹುಮಾನವೂ ಏಕಾಂಕ ನಾಟಕಗಳ ವಿಭಾಗದಲ್ಲಿ ಇವರು ಅಭಿನಯಿಸಿದ "ಪುನರ್ಜನ್ಮ" ನಾಟಕಕ್ಕೆ ಪ್ರಥಮ ಬಹುಮಾನವೂ, ಏಕಪಾತ್ರಾಭಿನಯದ ವಿಭಾಗದಲ್ಲಿ ಪೆರ್ಡೂರಿನ ಶ್ರೀ ಪಿ ಆರ್ ಕಲ್ಯಾಣಿಯವರಿಗೆ ಪ್ರಥಮ ಬಹುಮಾನವೂ, ಅಭಿನಯದಲ್ಲಿ ಪೆರ್ಡೂರಿನ ಶ್ರೀ ಎಚ್. ಶ್ರೀನಿವಾಸರಾಯರಿಗೆ 2ನೇ ಬಹುಮಾನವೂ ಶ್ರೀಗಳಾದ ಎ. ಪಿ. ಕಲ್ಯಾಣಿ, ಪಿ. ಆರ್. ಕಲ್ಯಾಣಿ, ಎಚ್. ಶ್ರೀನಿವಾಸರಾವ್, ಗೋಪಾಲಕೃಷ್ಣ ಉಪಾಧ್ಯಾಯರಿಗೆ ವೈಯುಕ್ತಿಕ ಬಹುಮಾನಗಳೂ ದೊರೆತಿವೆಯೆಂದು ತಿಳಿದು ಬಂದಿದೆ.

ಭದ್ರಾವತಿಯ ಶಾರದಾ ಮಂದಿರದಲ್ಲಿ ತಾ. 23 5-63ರಂದು, ಐರನ್ ಫ್ಯಾಕ್ಟರಿಯ ಮ್ಯಾನೇಜಿಂಗ್ ಡೈರೆಕ್ಟರರು ಶ್ರೀ ಎಂ. ಶಿವನಂಜಪ್ಪನವರ ಘನ ಅಧ್ಯಕ್ಷತೆಯಲ್ಲಿ ಶ್ರೀ ಪರ್ವತ ವಾಣಿಯವರ ಸಮಾರೋಪ ಭಾಷಣದೊಂದಿಗೆ ಬಹುಮಾನ ವಿತರಣೆಗಳಾದುವು.

**ತುಳು ಕರ್ನಾಟಕ ಮೊಗವೀರ ಶ್ರೀ ಜ್ಞಾನೋದಯ ಸಮಾಜ—** ಇದರ ಒಂದು ಮಹಾ ಸಭೆಯು ಶ್ರೀ ಎನ್. ಉಮೇಶ ಅಮೀನರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿ ಸಮಾಜದ 1961-62 ಮತ್ತು 1963ರ ಮಾರ್ಚಿನ ತನಕದ ಆಯವ್ಯಯ ಪಟ್ಟಿಯನ್ನು ಓಡಿಟ್ ಮಾಡಬೇಕೆಂದೂ ಸಮಾಜ ಮಂದಿರದಲ್ಲಿ ಮುನಿಸಿಪಾಲಿಟಿಯವರು ನಡೆಸಿಕೊಂಡು ಬರುವ ಶಾಲೆಯನ್ನು ಅವರ ಹೊಸ ಕಟ್ಟಡಕ್ಕೆ ವರ್ಗಾಯಿಸಿ ಸಮಾಜ ಮಂದಿರವನ್ನು ಅವರು ಬಿಟ್ಟುಕೊಡುವಂತೆ ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಆಡಳಿತ ಸಭೆಗೆ ಶ್ರೀ ಯು. ಕೆ. ತಿಂಗಳಾಯರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಕೀರ್ತಿಶೇಷ ಬಿ. ಮೋಹನಪ್ಪ ತಿಂಗಳಾಯರು ಸಮಾಜಕ್ಕಾಗಿ ಗೈದ ನಿಸ್ವಾರ್ಥ ಸೇವೆಗಾಗಿ ಸಭೆಯು ತನ್ನ ಕೃತಜ್ಞತೆಯನ್ನು ಹೇಳಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು.

. ಸಮಾಜದ ಚಟುವಟಿಕೆಗಳನ್ನು ಇನ್ನೂ ಪ್ರಗತಿಪಥದಲ್ಲಿ ನಡೆಸಿ, ಅದಷ್ಟು ಸದಸ್ಯರನ್ನು ಸೇರಿಸಿಕೊಳ್ಳುವ ಇತ್ಯಾದಿ ಠರಾವು ಮಾಡಲಾಯಿತು ಕೊನೆಗೆ ಅಧ್ಯಕ್ಷರ ಭಾಷಣ, ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು

## ವಿವಾಹ ಸಮಾರಂಭಗಳು

ಕಾರ್ಕಳದ ದಿ| ಡಾ| ಎನ್. ಎಸ್. ಅಡ್ಯಂತಾಯರ ಪುತ್ರಿ ಕುಮಾರಿ ವತ್ಸಲಾ ಮತ್ತು ಡಾ| ಎಂ. ರಾಮಣ್ಣ ಶೆಟ್ಟರ ಪುತ್ರ ಶ್ರೀ ರಮಾನಾಥ ಇವರ ವಿವಾಹವು ತಾರೀಕು 24.5.63ರಂದು ಕಾರ್ಕಳ ಜೈ ಹಿಂದ್ ಟಾಕೀಸಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಯು. ಗೋಪಾಲಕೃಷ್ಣ ಮಲ್ಯರ ಪುತ್ರ ಶ್ರೀ ರಾಮಚಂದ್ರ ಮಲ್ಯ ಮತ್ತು ಶ್ರೀ ಶ್ರೀನಿವಾಸ ಕಾಮತರ ಪುತ್ರಿ ಕುಮಾರಿ ಶೆಲ್ಲಿ ಇವರ ವಿವಾಹವು ತಾ 29.5.63ರಂದು ಉಡುಪಿ ವರೇಂದ್ರ ಕಲಾ ಮಂದಿರದಲ್ಲಿ ವಿಜೃಂಭಣೆಯಿಂದ ಜರಗಿತು.

ದಿವಂಗತ ಸೂಡಾ ಪಟೇಲ್ ಶಿರ್ವಕೋಡ್ ಶೀನಪ್ಪ ಹೆಗ್ಡೆಯವರ ಪುತ್ರ ಸದಾಶಿವ ಮತ್ತು ಮಟ್ಟು ವೆಂಕಪ್ಪ ರೈಗಳ ಪುತ್ರಿ ಜೇಮಕಿ ಇವರ ಕಲ್ಯಾಣ ಮಹೋತ್ಸವವು ತಾ. 29.5.63ರಂದು ಕಾರ್ಕಳ ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲ್ ಆವರಣದಲ್ಲಿ ವೈಭವದಿಂದ ಜರಗಿತು.

## ಟಿ. ಟಿ. ಕೆ. ಯವರ ಯಶಸ್ವೀ ರಾಯಭಾರ

(೧ನೇ ಪುಟದಿಂದ)

**ಬೇಡಿಕೆಯಿಲ್ಲ**

ಭಾರತಕ್ಕೆ ಆವಶ್ಯಕವಾದ ಸಹಾಯವನ್ನು ನೀಡುವವರು ಯಾರು? ಮೊದಲನೆಯದಾಗಿ, ಕಾಮನ್‌ವೆಲ್ತ್ ರಾಷ್ಟ್ರಗಳು, ಮತ್ತು ಎರಡನೆಯದಾಗಿ ಅಮೆರಿಕಾ. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿಯೂ ಆಸ್ಟ್ರೇಲಿಯಾ, ಕೆನಡಾ ಮತ್ತು ಬ್ರಿಟನ್ನುಗಳು ಮಾತ್ರವೇ ಶಸ್ತ್ರಾಸ್ತ್ರ ಸಹಾಯ ನೀಡಬಲ್ಲವು. ಕೃಷ್ಣಮಾಚಾರಿಯವರು ಇವುಗಳಲ್ಲಿ ಮೊದಲಿನೆರಡನ್ನು ಈಗಾಗಲೇ ಸಂದರ್ಶಿಸಿದ್ದಾರೆ. ಮೂರನೆಯದಕ್ಕೆ ಅಮೆರಿಕೆಯಿಂದ ಮರಳಿ ಬರುವ ದಾರಿಯಲ್ಲಿ ಭೆಟ್ಟಿ ನೀಡುತಿದ್ದಾರೆ. ಸರ್ವಸಾಮಾನ್ಯವಾಗಿ, ನಿರೀಕ್ಷಿಸಿದ ಸಹಾಯವು ದೊರೆಯುವುದು ಎಂಬ ಭರವಸೆಯಿದೆ. ಚೀನಾದ ಆಕ್ರಮಣಾವಿಗ ಗುಡ್ಡ-ಕಾಡು ಪ್ರದೇಶದಲ್ಲಿ ಯಾವನದರಿಂದ ಅಲ್ಲಿ ಹೋರಾಡಲು ಉಪಯುಕ್ತವಾದ ಉಪಕರಣಗಳೇ ನಮಗೆ ಬೇಕಾಗಿವೆ ಇವುಗಳದೊಂದು ಪಟ್ಟಿಯು ತಯಾರಾಗಿದೆ. “ನಮಗೆ ಇದನ್ನು ಕೊಡಿ, ಅದನ್ನು ಕೊಡಿ” ಎಂದು ನನ್ನ ಮಿತ್ರರನ್ನು ಕೇಳಿಲ್ಲ; ಅವರ ಮುಂದೆ ನಮ್ಮೆಲ್ಲ ಆವಶ್ಯಕತೆಗಳನ್ನು ವಿವರಿಸಿದ್ದೇವೆ. ಇವುಗಳಲ್ಲಿ ತಮಗೆ ಶಕ್ಯವಿದ್ದುದನ್ನು ಅವರು ಪೂರೈಸಿಯಾರು ಎಂಬ ವಿಶ್ವಾಸ ನನಗಿದೆ” ಎನ್ನುತ್ತಾರೆ ಕೃಷ್ಣಮಾಚಾರಿಯವರು. ಕೆನಡಾವು ಕಾರಿಬೋ ವಿಮಾನಗಳನ್ನು ಭಾರತಕ್ಕೆ ನೀಡಲು ತನ್ನ ಸಮ್ಮತಿಯನ್ನು ನೀಡಿರುವುದನ್ನು ನಾವು ಅವಶ್ಯ ಗಮನಿಸಬೇಕು.

**ನಮ್ಮ ಅಗತ್ಯಗಳು**

ಸಾರಿಗೆಯ ವಿಮಾನಗಳು ಅತಿ ತುಟ್ಟಿಯವಾದರೂ ನಮಗೆ ಬೇಕಾಗಿವೆ. ಫೈಟರ್ ಬಾಂಬರ್ ವಿಮಾನಗಳು ಆವಶ್ಯವಾಗಿವೆ. ಚೀನಾದೊಡನೆ ಕೆನ್‌ಬೆರಾ ವಿಮಾನಗಳು ಮಾತ್ರವಿರುವದಾದರೂ ಭಾರತವು ಸೂಪರ್ ಸಾನಿಕ್‌ಗಳನ್ನೂ ತನ್ನ ಪಟ್ಟಿಯಲ್ಲಿ ಸೇರಿಸಿದೆ. ಇಷ್ಟುಮಾತ್ರವಲ್ಲದೆ, ಬಾಂಬರ್ ಮತ್ತು ರಸ್ಸಾ ಬಾಂಬರ್‌ಗಳು ನಮಗೆ ಬೇಕಾಗಿವೆ. ಚೀನವು ಮತ್ತೊಮ್ಮೆ ಆಕ್ರಮಣವನ್ನು ನಡೆಸಿತೆಂದರೆ, ಅದನ್ನು ಕಚ್ಚೆದೆಯಿಂದ ಬಗ್ಗುಬಡಿಯುವ ಸಕಲ ಶಸ್ತ್ರಾಸ್ತ್ರಗಳೂ ನಮ್ಮ ಇಂದಿನ ಆವಶ್ಯಕ ವಸ್ತುಗಳಾಗಿವೆ. ಇವೆಲ್ಲವುಗಳ ಮೌಲ್ಯವು ಮಿತಿಮೀರಿದೆಯೆಂಬುದು ನಿಜ. ಆದರೆ, ಮೌಲ್ಯವನ್ನಿಂದು ಗಣಿಸುವಂತಿಲ್ಲ, ಗುಣವನ್ನಷ್ಟೇ ಪರಿಗ್ರಹಿಸಬೇಕಾಗಿದೆ. ಇವೆಲ್ಲವುಗಳನ್ನೂ ಭಾರತವು ತನ್ನದಾಗಿಸಿಕೊಳ್ಳಲು ಬಯಸುತ್ತದೆ; ಆದರೆ, ಅವನ್ನು ಪೂರೈಸುವವರು ನಗದಿಗೆ ವಿಕ್ರಯಿಸಬಹುದು, ಸಾಲರೂಪದಲ್ಲಿ ಕೊಡಬಹುದು, ಉದಾರವಾಗಿ ದಾನ ನೀಡಲೂ ಬಹುದು, ಅಥವಾ ಎರವಲು ಕೊಟ್ಟು, ಬೇಡವೆಂದಾಗ ಮರಳಿ ಹಿಂದೆ ಪಡೆದುಕೊಳ್ಳಲೂ ಬಹುದು. ಚೀನಾವು ಇಂದು ಅಣ್ವಸ್ತ್ರಗಳನ್ನು ಯುದ್ಧಕ್ಕೆಂದು ಉಪಯೋಗಿಸುತ್ತಿಲ್ಲ; ಅವರದು ಅಣ್ವಸ್ತ್ರ ಪರಿಶೀಲನೆಯಲ್ಲಿ ಮುಂದುವರಿದು ಅವನ್ನೂ ಬಳಸಿಕೊಂಡಿತೆಂದರೆ, ನಾವೂ ಅವನ್ನು ಉತ್ಪಾದಿಸುವುದು ಅಥವಾ ಪಡೆಯುವುದು ಅನಿವಾರ್ಯವಾಗಬಹುದು.

**ಆಯೂಬಾಷ್ಟಕ ರಾಗ**

ಭಾರತಕ್ಕೆ ಶಸ್ತ್ರ ಸಹಾಯ ನೀಡಿಕೆಯನ್ನು ತ್ರಿಕರಣಪೂರ್ವಕವಾಗಿ ವಿರೋಧಿಸುವ ಪಾಕ್ ಸೈನಿಕಾಧಿಕಾರಾಧ್ಯಕ್ಷ ಆಯ್ಯೂಬಖಾನರು ಸಪ್ತರಾಗಗಳೂ ನಿಷ್ಪ್ರಯೋಜಕವಾದುದನ್ನು ಕಂಡು ಈಗ ಅಷ್ಟಮ ಸ್ವರವನ್ನು ಎಬ್ಬಿಸಿದ್ದಾರೆ. “ಭಾರತೀಯ ನಾಯಕತ್ವವು ಹಿಂದೂ ಸಾಮ್ರಾಜ್ಯವಾದ ಮತ್ತು ಕುರುಡು ವಿಸ್ತಾರವಾದದ ಪಥದಲ್ಲಿ ಮುಂದುವರಿಯುತ್ತಿದೆ ಭಾರತದ ಈ ವಾದವು ತನ್ನ ಎಲ್ಲೆಯು ಇಂದಿನಗಿಂತ ಹೊರಗಿದೆಯೆಂದು ಭಾವಿಸಿದೆ ಮತ್ತು ತನ್ನ ಸಂಸ್ಕೃತಿ ಹರಡಿರುವ ಅಫಘಾನಿಸ್ತಾನದಿಂದ ಇಂಡೋನೇಶ್ಯದವರೆಗೂ ತನ್ನ ಸೀಮೆಯು ಇದೆ. ಈ ಸಾಮ್ರಾಜ್ಯ ಸ್ಥಾಪನೆಯ ಕನಸನ್ನು ಅದು ಕಾಣುತ್ತಿದೆ” ಎಂದು ಅವರು ಜಾನ್ ಸ್ಟ್ರಾಚಿ ನಾಯಕತನದಲ್ಲಿ ಬಂದ ಬ್ರಿಟಿಷ್ ಲೇಬರ್ ಪಕ್ಷದ ಪಾರ್ಲಿಮೆಂಟರಿ ನಿಯೋಗವೊಂದರ ಮುಂದೆ ಆಲಾಪನೆ ಮಾಡಿದ್ದಾರೆ.

**ಉಪಸಂಹಾರ**

ಬ್ರಿಟನ್ನಾಗಲಿ, ಅಮೆರಿಕೆಯಾಗಲಿ ಅಥವಾ ಇನ್ನಾವುದೇ ದೇಶವಿರಲಿ, ಭಾರತದ ಮನೀಷೆಯೇನೆಂಬುದನ್ನು ಅರಿತಿದೆ. ಪಾಕಿಸ್ತಾನವು ಈರ್ಷ್ಯೆಗೆ ಬಲಿಬಿದ್ದೇ ವ್ಯರ್ಥಾಲಾಪ ಮಾಡುತ್ತಿದೆಯೆಂದು ಇಂದೆಲ್ಲರೂ ತಿಳಿದಿದ್ದಾರೆ ಭಾರತವು ಮುಂದೆ ಮಾಡಿದ ‘ಯುದ್ಧವಿಲ್ಲ’ ಒಡಂಬಡಿಕೆಯನ್ನು ಕಡೆಗಣಿಸಿದ ಪಾಕಿಸ್ತಾನವು ದುರ್ವಿಚಾರ ಮತ್ತು ವಂಚನೆಗಳಲ್ಲಿಯೇ ತತ್ಪರವಾಗಿದೆಯೆಂಬುದಿಂದು ಜಗಜ್ಜಾಹೀರಾಗಿದೆ; ಹಾಗಿರುವಾಗ ಹೀಗೆ ಅಪಲಾಪವೆಬ್ಬಿಸುವುದರಿಂದ ಪಾಕಿಸ್ತಾನದ ನಿಜ ಸ್ವರೂಪವಷ್ಟೇ ಬಯಲಾದೀತು. ಅಮೆರಿಕ-ಇತ್ಯಾದಿ ನಮ್ಮ ಮಿತ್ರ ರಾಷ್ಟ್ರಗಳು ನಮ್ಮ ಆವಶ್ಯಕತೆಯೇನೆಂಬುದನ್ನು ಸ್ಪಷ್ಟವಾಗಿ ಅರಿತುಕೊಂಡಿವೆ, ಮತ್ತು ಅವನ್ನು ಪೂರೈಸುವ ಸದಿಚ್ಛೆಯನ್ನೂ ತಾಳಿವೆ. ಉಚಿತ ಪರಿಶೀಲನಾ ನಂತರ ಅವು ತಮ್ಮ ನಿರ್ಧಾರವನ್ನು ಭಾರತಕ್ಕನುಕೂಲವಾಗಿ ಕೈಗೊಳ್ಳುತ್ತವೆ ಎಂದು ನಿಯೋಗಿ ಕೃಷ್ಣಮಾಚಾರಿಯವರು ನಿರೀಕ್ಷಿಸುತ್ತಾರೆ. ಅವರ ನಿಯೋಗವು ಯಶಸ್ವಿಯಾಗುವುದು ಎಂದು ಎಲ್ಲ ಭಾರತೀಯರು ಭರವಸೆಯಿಟ್ಟಿದ್ದಾರೆ.


# ಮುದ್ರಣ

**ಸಣ್ಣದಿರಲಿ, ದೊಡ್ಡದಿರಲಿ, ಯಾವದೇ ತರದ ಕನ್ನಡ ಇಲ್ಲವೆ ಇಂಗ್ಲಿಷ್ ಮುದ್ರಣ ಕಾರ್ಯಗಳಿಗೆ**

ವಿಚಾರಿಸಿರಿ —

**ನವಯುಗ ಪ್ರೆಸ್**

ಸಂತೆಕಟ್ಟೆ

ಉಡುಪಿ


## ● ಅಮೃತ ಬಿಂದು ●

ಅಸಾಧ್ಯವನ್ನು ಅಪೇಕ್ಷಿಸುವವನ ಜೀವನ ದುರಂತದ ದುರಾಗ್ರಹವಾಗುವದು.

೦೦ ೦೦

ಪ್ರೇಮಿಗಳ ಕಲಹ ಬೇಸಿಗೆಯ ಮಳೆಯಂತೆ, ಅದರಿಂದ ವನರಾಜ ಹೆಚ್ಚು ಶುಭ್ರ ಹಾಗೂ ಸುಂದರವಾಗುವದು.

೦೦ ೦೦

## ಹಳೆಯ ಹುಲಿಗಳ ಪ್ರವೇಶ

(೫ನೇ ಪುಟದಿಂದ)

ಲೋಹಿಯಾರವರ ಪಕ್ಷದಲ್ಲೂ ಅವರು ಏಕಾಕಿ. ೧೯೫೬ರಲ್ಲಿ ಪ್ರಜಾ ಪಕ್ಷದಿಂದ ಸಿಡಿದು ತನ್ನದೇ ಸಮಾಜವಾದಿ ಪಕ್ಷವನ್ನವರು ಕಟ್ಟಿಕೊಂಡರು ನಿಜ, ಆದರೆ, ಅವರ ಗುರಿಯಿನ್ನೂ ಅಸ್ಪಷ್ಟ. ೧೯೪೨ರ ಭೂಗತ ಚಳುವಳಿಯಲ್ಲಿ ಪ್ರಧಾನ ಪಾತ್ರಧಾರಿಗಳಾದ ಲೋಹಿಯಾ ಬ್ರಿಟಿಷ, ನೇಪಾಳಿ, ಪೋರ್ಚುಗಲ್ ಮತ್ತು ಸ್ವತಂತ್ರ ಭಾರತ ಸರಕಾರಗಳಿಂದ ಒಟ್ಟು ಹದಿನೆಂಟು ಬಾರಿ ಜೇಲುವಾಸವನ್ನು ಅನುಭವಿಸಿದ್ದಾರೆ.

ಅವರ ಜೇಲುವಾಸವೆಂಬುದು ವರ್ತಮಾನ ಪತ್ರಿಕೆಗಳಿಗೊಂದು ಶೀರ್ಷಿಕಾ ವಿಷಯ ಮಾತ್ರವಲ್ಲದೆ ಮತ್ತೇನೂ ಅಲ್ಲ. ಲೋಕಸಭೆಗೆ ಲೋಹಿಯಾ ಪ್ರವೇಶಿಸುವುದೆಂದರೆ, ಗಾಜಿನ ಅಂಗಡಿಯೊಳಗೆ ಬಸವ ಹೊಕ್ಕಂತೆಯೆಂದರೂ ತಪ್ಪಲ್ಲ ಕೃಪಲಾನಿಯವರಿಗೆ ಪ್ರಧಾನಿ ನೆಹರುಗಳ ಮೇಲೆ ಆದರವಿದೆ. ವಿಶ್ವಾಸವಿದೆ. ತನ್ನ ಇತರ ಪಕ್ಷದ ಸದಸ್ಯರಂತೆಯೇ ವ್ಯಕ್ತಿ ಗೌರವವನ್ನು ಪ್ರದರ್ಶಿಸುವವರಲ್ಲ ಲೋಹಿಯಾ. ತಾನೂ ತನ್ನ ಪಕ್ಷದ ನಾಯಕಮಣಿ ಎಂದು ಉಬ್ಬಿ, ತನ್ನ ಅಭಿಪ್ರಾಯ ಮಾತ್ರ ಸರಿಯಾದುದು ಎಂದು ನಿಲುವಿಗೆ ಜೋತು ಬೀಳುವ ಮಹಾ ಮಾನವ ಇವರು.

ಉತ್ತಮ ಪಾರ್ಲಿಮೆಂಟೇರಿಯನ್ನರಾದ ಡಾಂಗೆ, ವಾಜಪೇಯಿ, ಮಸಾನಿ, ಕೃಪಲಾನಿ ಮೊದಲಾದವರಿಲ್ಲದ ಭಾರತೀಯ ಲೋಕಸಭೆ ಸಿಂಹವಿಲ್ಲದ ಗವಿಯಂತಿತ್ತು. ಈಗ ಕೃಪಲಾನಿ ಪ್ರವೇಶದಿಂದ ಅದಕ್ಕೆ ಸ್ವಲ್ಪ ಜೀವಕಳೆ ಬಂತು ಆದರೆ, ಲೋಹಿಯಾ ಮತ್ತವರ ಬೆಂಬಲಿಗರು ಒರಟು ಮಾರ್ಗ ಕೈಗೊಂಡಲ್ಲಿ, ಸಭೆಯಲ್ಲಿ ಪ್ರಕಾಶದ ಬದಲು ತಾಪವೇ ಹೊರಟೀತು ಸಮಾಜವಾದಿ ರಕ್ತದೊಡನೆ ಈ ಕಾವೂ ಸೇರಿಕೊಂಡಿತೆಂದರೆ, ಅಧ್ಯಕ್ಷ ಹುಕುಂಸಿಂಗರು ತುಸು ಕಟುನೀತಿಯನ್ನೂ ಅನುಸರಿಸಬೇಕಾಗಬಹುದು. ಇಲ್ಲವಾದರೆ, ಲೋಕಸಭೆ ಸಂತೆಯ ಮಂದಿಯ ಗದ್ದಲವಾಗಿ ಪರಿಣಮಿಸೀತು

ಕೃಪಲಾನಿ-ಲೋಹಿಯಾರವರ ಆಯ್ಕೆ ಭಾರತ ಸರಕಾರದ ಸಂರಕ್ಷಣಾ ಕ್ರಮವನ್ನು ಅಹ್ವಾನಿಸಲಿಲ್ಲ; ಆದರೆ, ಕಾಂಗ್ರೆಸ್‌ಯ ಆಸಕ್ತಿಯ ನೀತಿಗೆ ಅದು ಪಂಥಾಹ್ವಾನ ನೀಡಿದೆಯೆನ್ನುವವರು ಬಹುಮಂದಿ. ಅದೇನೇ ಇದ್ದರೂ ಹಳೆ ಹುಲಿಗಳಲ್ಲಿ ಕೆಲವರಾದರೂ ಲೋಕಸಭಾಗಮನ ಮಾಡಿದುದು ಸ್ವಾಗತಾರ್ಹ. ಲೋಹಿಯಾಗಮನ-ಮಾತ್ರ ಪ್ರೇಕ್ಷಕರಿಗೆ ಮನರಂಜನೆಗೆ ಕಾರಣವಾಗಬಹುದಾದರೂ ಪ್ರಧಾನಿ ನೆಹರೂರವರ ಬೆಳೆದ ಮೊಂಡಕ್ಕೆ ಮುಳ್ಳಾಗುವ ಸಂಧರ್ಭವೂ ಉಂಟು.

ಒಂದು ಸುಳ್ಳನ್ನು ಹೇಳುವದು ಸುಲಭ. ಆದರೆ ಒಂದನ್ನು ಮಾತ್ರ ಹೇಳಿ ಸುಮ್ಮನಿರಲಸಾಧ್ಯ. ಅದನ್ನು ಮುಚ್ಚಲು ನೂರು ಸುಳ್ಳಾಡ ಬೇಕಾಗುತ್ತದೆ.

೦೦ ೦೦

ಒಮ್ಮೆ ಒಬ್ಬನು ನಿನ್ನನ್ನು ಮೋಸಗೊಳಿಸಿದರೆ ಅದು ಅವನ ತಪ್ಪು. ಅತನು ಎರಡು ಬಾರಿ ಮೋಸಮಾಡಿದರೆ ಅದು ನಿನ್ನ ತಪ್ಪು.

೦೦ ೦೦

ಕಾಲೇಜು ಮತ್ತು ಶಾಲೆಗಳಲ್ಲಿ ಕಲಿಸುವದು ವಿದ್ಯೆಯಲ್ಲ; ವಿದ್ಯೆಯ ದಿಕ್ಸೂಚಿಗಳು ಮಾತ್ರ.

೦೦ ೦೦

ಐಶ್ವರ್ಯ, ಅಧಿಕಾರ ಮತ್ತು ದಕ್ಷತೆ ಇವೇ ಜೀವನವಲ್ಲ, ಇವು ಜೀವನದ ಸಹಾಯಕಗಳು.

೦೦ ೦೦

ಜಗತ್ತಿನಲ್ಲಿ ಎರಡೇ ವಿಧದ ಜನರಿದ್ದಾರೆ. ದಕ್ಷರು ಮತ್ತು ಸೋಮಾರಿಗಳು. ಮತ್ತು ಅವರಲ್ಲಿ ಎರಡೇ ಗುಣಗಳಿವೆ. ಯೋಗ್ಯತೆ ಮತ್ತು ಅಯೋಗ್ಯತೆ.

೦೦ ೦೦

ಇತರರಿಗಿಂಥ ತಾನು ಹೆಚ್ಚು ಚತುರನೆಂದು ಭಾವಿಸಿಕೊಳ್ಳುವದು ತನ್ನನ್ನು ತಾನು ವಂಚಿಸಿಕೊಳ್ಳುವ ಹೆದ್ದಾರಿ.

೦೦ ೦೦

ಜನರು ನಿನ್ನನ್ನು ಹೊಗಳಬೇಕಿದ್ದರೆ ನೀನು ನಿನ್ನನ್ನು ಹೊಗಳಿಕೊಳ್ಳದಿರಬೇಕು

೦೦ ೦೦

ಎಚ್ಚರಿಕೆ ಇರುವವನು ರಾಜ್ಯವನ್ನು ಸರಿಪಥದಲ್ಲಿ ನಡೆಸಬಹುದು. ಆದರೆ ಉತ್ಸಾಹಿಯಾದವನೇ ಅದರ ಪುನರ್ರಚನೆ ಮಾಡಬಲ್ಲನು.

೦೦ ೦೦

ಉತ್ತಮ ಬಟ್ಟೆಯಾದರೂ ಅದನ್ನು ನುಸಿ ತಿಂದು ಹಾಳುವಂತೆ ಉತ್ತಮ ಮನುಷ್ಯನಾದರೂ ದ್ವೇಷ ಹಾಳುಗೆಡವುತ್ತದೆ

೦೦ ೦೦

ನಮ್ಮ ದುರಾದೃಷ್ಟಕ್ಕೆ ಸಹಾನುಭೂತಿ ಸೂಚಿಸುವವರು ಒಬ್ಬರೂ ಇರಲಾರರು, ಆದರೆ ನಮ್ಮ ಅದೃಷ್ಟಕ್ಕೆ ದ್ವೇಷಮಾಡುವವರು ಸಾವಿರಾರು ಜನರಿರುತ್ತಾರೆ.

೦೦ ೦೦

ಪ್ರೇಮಿಸಿದಾಗ ಎಲೆ ಹೂವಾಗುತ್ತದೆ: ಆರಾಧಿಸಿದಾಗ ಹೂವು ಹಣ್ಣಾಗುತ್ತದೆ.

೦ ೦ ೦

ಭಗವಂತನ ಅಮೋಘ ಶಕ್ತಿ ಭಯಂಕರ ಬಿರುಗಾಳಿಯಲ್ಲಿಲ್ಲ; ಬದಲು ಕಣ್ಣಿಗೆ ಕಾಣದ ಆದರೆ ಜೀವ ತುಂಬುವ ಮೃದು ತಂಗಾಳಿಯಲ್ಲಿದೆ!

೦ ೦ ೦

ಹೂವಿನ ಎಸಳನ್ನು ಕಿತ್ತು ತೆಗೆದುಕೊಳ್ಳುವದರಿಂದ ಹೂವಿನ ಸೌಂದರ್ಯ ಕರಗತವಾಗುವದು.

೦ ೦ ೦

ಉಜ್ವಲ ಸೂರ್ಯನು ಅಸ್ತಮಾನವಾಗಿಟ್ಟ ಮಹಾ ಜವಾಬ್ದಾರಿಯನ್ನು ಮಣ್ಣಿನ ಹಣತೆ ತೆಗೆದುಕೊಂಡು ತನ್ನ ಶಕ್ತಿಗೆ ತಕ್ಕಂತೆ ನಿರ್ವಹಿಸುತ್ತದೆ.

**ಆರ್ಥಿಕ ಅಭಿವೃದ್ಧಿ— ರಾಷ್ಟ್ರದ ಬಲವೃದ್ಧಿ**

# ದೇಶಭಕ್ತರಿಗೆ ಕರೆ

ಓ ನಮ್ಮ ಬಂಧುಗಳೇ ಹೆದರಬೇಕೇ ನೀವು
ಈ ನಮ್ಮ ದೇಶಕ್ಕೆ ಬಂದಿರುವ ಶತ್ರುಕ್ಕೆ
ರಜಪೂತ ವೀರರೆಲ್ಲ ಪ್ರಾಣ ನೀಗಲಿಲ್ಲವೇ ಇಲ್ಲಿ
ಅಜರಿಂದ ಬಂದಿರುವ ಈ ದೇಶವ ರಕ್ಷಿಸಲು
ಗಾಂಧಿ ನಮ್ಮಯ ತಾತ ಜಯಿಸಲಿಲ್ಲವೇ ಸತ್ಯವ
ನಾಂದಿ ಹಾಕಲಿಲ್ಲವೇ ಗೆಲಲು ಪರಾಳ್ವಿಕೆಯ ಮಿಥ್ಯವ
ಸತ್ಯ, ಧರ್ಮಗಳೊಳಗೆ ಭೇದವಿಹುದೇ ನಿಮಗೆ
ಮಿಥ್ಯವಲ್ಲವು ಎಂದೂ ಸತ್ಯದ ಚಿರಹಾದಿ
ರಕ್ತವಿಲ್ಲವೇ ನಿಮ್ಮಲ್ಲಿ ವೀರ ಯೋಧರಾಗಿ-
ಭಕ್ತರಲ್ಲವೇ ನೀವು ಈ ನಾಡ ಸ್ವಾತಂತ್ರ್ಯದ-
ಶಕ್ತಿ ಇಲ್ಲವೇ ನಿಮ್ಮಲ್ಲಿ ತಾಯ್ನಾಡ ರಕ್ಷಣೆಗೆ
ಮುಕ್ತಿಗಾಣಿರಿ ಮಡಿಯೆ ಹೋರಾಟದಲಿ.

ದೇಹಕ್ಕೂ ದೇಶಕ್ಕೂ ಬೇಧವೆಣಿಸಿಹ-ವೀರರೇ ನೀವು
ದೇಹವೇನು ದೇಶವೇನು ಬೇರೆಯಾಗಿಹುದೇ?
ನಡೆಯಿರಿ ವೀರರೇ ನಿಮ್ಮ ಶತ್ರುಶತರನ್ನಳಿದು
ಗಡಿನಾಡ ಪ್ರದೇಶಕ್ಕೆ; ನಿಮ್ಮ ರಾಜ್ಯ ರಕ್ಷಣೆಗೆ
ಬಡಿಯಿರಿ ವೀರರೇ ಆ ಸ್ವಾತಂತ್ರ್ಯ ಭಕ್ಷಕರನು
ಕಡಿಯಿರಿ ಕಲಿಗಳಂತೆ ಆ ಷಂಡ ರಾಕ್ಷಸರನು
ಚಿಂತೆ ಬೇಡ ನಿಮಗೆ ನಿಮ್ಮ ಸತಿ ಸುತರನು ಹೊರುವ
ಅಂತೆ ಆಶೆ ಇಲ್ಲವೇ ನಿಮ್ಮ ಸಲಹಿದ ತಾಯಿಗೆ
ಸಲಹಳೇ ಆ ಮಾತೆ ನಿಮ್ಮ ಪ್ರಿಯ ಜನಗಳನು
ಬಿಡುವಳೇ ಅವರನು ಸರ್ವ ದುಃಖಕ್ಕೆಡೆಮಾಡಿ?
ನೀವು ವೀರರಹುದು ತನ ಮನವ ಅರ್ಪಿಸಿದಿರಿ
ನಾವು ನಿಮಗೇನು ಮಾಡಲಹುದು ನಿಮ್ಮ
ತ್ಯಾಗದ ಮುಂದೆ
ಆಹವು ನಿಮ್ಮಲಿ ರಕ್ತ—ಇಹುದು ನಿಮ್ಮಲಿ ಭಕ್ತಿ,

ಮಹ ಆಶ್ಚರ್ಯ ನೀವಯ್ಯ! ದೇಶಕ್ಕಾಗಿ ಬಳಲಿಹರು
ತಿಳಿಯಲಿಲ್ಲ ನೀವು ದೇಶ-ದೇಹ ಬೇರೆಂದು--
ಬಳಿಸಲಿಲ್ಲ ಮಸಿಯ ಅಳಿದ ವೀರರ ಮುಖಕೆ—
ಬನ್ನಿರಿ, ಬನ್ನಿರಿ ಓ ನಮ್ಮ ಬಂಧುಗಳೇ
ತನ್ನಿರಿ, ತನ್ನಿರಿ ನಿಮ್ಮೆಲ್ಲ ಸರ್ವಸ್ವವನು
ನಡೆಯಿರಿ ನಡೆಯಿರಿ ಆ ನಮ್ಮ ಗಡಿ ಮುಖಕೆ
ಬಡಿಯಿರಿ ಬಡಿಯಿರಿ ಆ ಮಿತ್ರ ದ್ರೋಹಿಗಳನು
ಸತ್ಯ, ಧರ್ಮವು ಆಗ ನಿಮ್ಮ ಕಡೆಗಿರಲಿ
ಮಿಥ್ಯ-ಮೋಸಗಳ ಭಾರಿ ಸಂಚು ನಡೆಯಲಿ
ಕ್ಷುದ್ರ-ಕಪಟಗಳು ನಿಲ್ಲಲಿ-ರವೆ ಎಂದೂ—
ಭದ್ರವಾಗುವುದಾಗ ಈ ನಮ್ಮ ತಾಯ್ನಾಡು.

—ಕೆ. ಭದ್ರಿನಾಥ್, ಉಡುಪಿ.

## ಪಾಕಿಸ್ಥಾನ ಆಕ್ರಮಣ ನಡೆಸೀತೆ?

(೪ನೇ ಪುಟದಿಂದ)

ನವು ಭಾರತಕ್ಕೆ ಕೊಡಬೇಕಾಗಿರುವ ಬಾಕಿಯಿಂದ ಒಂದು ಕಾಸನ್ನು ಕೊಟ್ಟಿರುವದಿಲ್ಲ ಅದು ವಿಷ ಕಾರುತ್ತಲೇ ಇದೆ. ಇತ್ತೀಚೆಗೆ ಶ್ರೀ ದಿವಾನ ಅಲಿಕಥಾರಿಯುವರು ಅಂಬಾಲದಲ್ಲಿ ಇದನ್ನು ಶ್ರೀ ನೆಹ್ರೂಜೀಯವರಿಗೆ ಜ್ಞಾಪಕಪಡಿಸಿದಾಗ ಸಂದರ್ಭ ಸಿಕ್ಕಿದಾಗ ಆ ಮಾತನ್ನು ಪಾಕಿಸ್ಥಾನದ ಬಳಿ ಚರ್ಚಿಸಲಾಗುವದೆಂದ ಪ್ರಧಾನಿಯವರು ತಿಳಿಸಿರುವರು.

ನಮ್ಮ ಘನ ಸರಕಾರವು ಬೆರುಬಾರಿಯ ದೊಡ್ಡ ಭಾಗವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಡಲು ನಿಶ್ಚಯಿಸಿರುತ್ತದೆ. ಹಾಗಿದ್ದರೂ ಪಾಕಿಸ್ಥಾನವು ಬಲಾತ್ಕಾರದಿಂದ ಜಲಪಾಯ ಗುರಿ ಹಾಗೂ ಕರೀಂಗಂಜ್ ಮುಂತಾದೆಡೆಗಳಲ್ಲಿ ಆಕ್ರಮವಾಗಿ ಬೀಡು ಬಿಟ್ಟಿದೆ ನಾವು ಪ್ರತಿಭಟನಾ ಪತ್ರಗಳನ್ನು ಅರ್ಪಿಸುವೆವಾದರೂ ಅವಂದನ್ನು ಲಕ್ಷ್ಯಕ್ಕೆ ತಂದುಕೊಂಡಿರುವದಿಲ್ಲ.

ಕಾಶ್ಮೀರದ ಆಣೆಕಟ್ಟನ್ನು ಪಾಕಿಸ್ಥಾನವು ಕಟ್ಟಾಕ್ಕಿರುವದಕ್ಕ ನಾವು ಪ್ರತಿಭಟನಾ ಪತ್ರ ಸಲ್ಲಿಸಿರುವೆವು. ಭಟ್ಟಾಚಾರ್ಯರನ್ನು ಬಲಾತ್ಕಾರದಿಂದ ಕದೊಯ್ದಾಗಲೂ ನಾವು ಅದನ್ನೇ ಕಳುಹಿಸಿರುವೆವು. ಆದರೆ ಆ ನೆಲ್ಲ ಪತ್ರಗಳ ಪ್ರಯೋಜನವಾದರೂ ಏನು?

ಹೀಗೆ, ಪ್ರಚೋದನಾ ಕುಚೋದ್ಯ ಸಾಗುತ್ತ ಬಂದಿದೆ. ಭಾರತವಾದರೋ ಅದನ್ನು ಅತ್ಯಂತ ತಾಳ್ಮೆಯಿಂದ ಸಹಿಸಿಕೊಂಡು ಬಂದಿರುತ್ತದೆ. ಏನಿದ್ದರೂ ಪಾಕಿಸ್ತಾನವು ನಮ್ಮಿಂದಲೇ ಉಂಟಾಗಿರುವ ನೆರೆಕರೆಯ ರಾಜ್ಯವಿದೆ ಇಂದಲ್ಲದಿದ್ದಲ್ಲಿ ನಾಳೆಯಾದರೂ ಪಾಕಿಸ್ತಾನಕ್ಕೆ ಸದ್ಬುದ್ಧಿ ಬರಲೆಂಬುದೇ ಆಶೆಯು ಶಿಶುಪಾಲನನ್ನು ಸಂಹರಿಸುವ ಮುಂಚೆ ಶ್ರೀ ಕೃಷ್ಣನೂ ಅನೇಕ ಸಲ ಅವನ ಕುಚೋದ್ಯವನ್ನು ತಾಳ್ಮೆಯಿಂದ ಸಹಿಸಿಕೊಂಡಿರುವುದು ಮಾತ್ರವಲ್ಲ, ಅವನತ್ತ ಮುಗುಳ್ನಗೆಯನ್ನು ಬೀರುತ್ತಿದ್ದಿಲ್ಲವೇನು? ಅದನ್ನೇ ಓರ್ವ ಕವಿಯು ತನ್ನ ಮಾತುಗಳಲ್ಲಿ ತಿಳಿಸುವಾಗ ಬರೆಯುತ್ತಾನೆ....

« ಗುಡುಗ ಲಾಲಿಸೆ ದೊಡ್ಡಿ
ಗರ್ಜಿಸುದು ಕೇಸರಿ ಮೇಘ ಸರಿ
ರಾ ಕೂಗ ಕೇಳಿ ಗರ್ಜಿಪುದುಂಟೇ?

ಮುಳುಗಿ ಸಾಯುತ್ತಿದ್ದ ಚೇಳಿನ ಜೀವವನ್ನುಳಿಸಿದಾಗ, ಆ ಸಂತನನ್ನೇ ಅದು ಕಡಿಯಿತಾದರೂ ಸಂತನ, ಕಡಿಯುವದು ಚೇಳಿನ ಸ್ವಭಾವವೆಂದು ಸುಮ್ಮಗಿದ್ದಂತೆ ಭಾರತ ಸರಕಾರವೂ ಪಾಕಿಸ್ಥಾನದ ಪೀಡೆಯನ್ನು ಸಹಿಸಿಕೊಂಡಿದೆ.

ನಮ್ಮ ಮುಂದೆ ಇರುವ ಪ್ರಶ್ನೆ ಸ್ಪಷ್ಟವಿದೆ. ಹೀಗೆ ಇದೆಷ್ಟು ದಿನ ನಡೆದೀತು? ಇದು ಕೇವಲ ಗಡಿಗಲಾಟೆಯಲ್ಲೇ ಇದ್ದೀತೇ ಅಥವಾ ಸಂಪೂರ್ಣ ಸಮರವಾಗಿ ಬದಲಾದೀತೇ? ಪಾಕಿಸ್ಥಾನದ ಉದ್ದೇಶ್ಯವಾದರೂ ಏನಿದೆ? ಚೈನಾದೊಡನೆ ವಾದ ವಿವಾದ ನಡೆಯುತ್ತಿರುವ ಸಮಯವನ್ನು ನೋಡಿ ಪಾಕಿಸ್ಥಾನವು ಪಡೆ ತೆಗೆದುಕೊಂಡು ಬಂದು ಆಕ್ರಮಣ ನಡೆಸೀತೇ? ಇದನ್ನು ಗಂಭೀರವಾಗಿ ಆಲೋಚಿಸಲೇ ಬೇಕು.

ಪಾಕಿಸ್ಥಾನವು ಎಂದೆಂದಿಗೂ ತಾನಾಗಿ ಯುದ್ಧವನ್ನು ಖಂಡಿತವಾಗಿ ಘೋಷಿಸುವದಿಲ್ಲ ಅನ್ಯ ರಾಷ್ಟ್ರಗಳ್ಯಾವವಾದರೂ ಅವನ್ನು ಹುರಿದುಂಬಿಸಿದಲ್ಲಿ ಮಾತ್ರ ಏನಾದೀತೆಂದು ಹೇಳುವದು ಕಷ್ಟವೆನ್ನುವದು ಡ ! ಸೀತಾರಾಮರ ಅಭಿಪ್ರಾಯ ಪಾಕಿಸ್ಥಾನಕ್ಕೆ ಸದ್ಬುದ್ಧಿ ಬರಲೆಂದು ಅವರು ಪರಮಾತ್ಮನಿಗೆ ಪ್ರಾರ್ಥಿಸಿರುವರು

ಇವರಿಂದ, ರಣವಾದ್ಯ ಕೇಳಿ ಬರಲಿಕ್ಕಿಲ್ಲವೆಂದು ವೈಮುರಿ ಮುವರು ಸಂಬಲ್ಲವೆಂಬುದು ಸ್ಪಷ್ಟವಾಗುತ್ತದೆ. ಬರುವ ವಾರ ಡಾ। ಶಿವರಾಮ್ಯನವರ ಅಭಿಪ್ರಾಯವನ್ನೂ, ಒಂದು ವೇಳೆ ಯುದ್ಧವಾದಲ್ಲಿ ಪಾಕಿಸ್ತಾನದಿಂದ ಮಾತ್ರವಲ್ಲ ಚೈನಾದಿಂದಲೂ ಇದನ್ನು ತಡೆಯುವ ಶಕ್ತಿ ನಮ್ಮಲ್ಲಿದೆಯೇ ಎಂಬುದನ್ನು ನೋಡುವ.

—ಶಿವಶಂಕರ ಮುದ್ರಾಸು.

**ಶಾಲೆಗಳಿಗೆ ಬೇಕಾಗುವ**
**ಯೂಪತ್ರೂ ಫಾರಂಗಳೂ**
**ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ**
**ನವಯುಗ ಪ್ರೆಸ್ ಉಡುಪಿ.**

## ಕೌಟಿಲ್ಯನ ಅರ್ಥಶಾಸ್ತ್ರ

(೪ನೇ ಪುಟದಿಂದ)

ನೆಂದರೆ ಪ್ರಭುತ್ವದ ಗುತ್ತಿಗೆ ಹಕ್ಕನ್ನು ಉಲ್ಲಂಘಿಸಿದಾಗ ಕೊಡಬೇಕಾದ ದಂಡ; ಟಂಕಸಾಲೆಗೆ ಚಿನ್ನವನ್ನೊಯ್ದು ನಾಣ್ಯಗಳನ್ನು ಮಾಡಿಸಿದಾಗ ಕೊಡಬೇಕಾದ ಪರಿವರ್ತನ ಶುಲ್ಕಕ್ಕೆ ರೂಪ ಮಾತ್ರ ರೂಪಿಕ ಎಂಬುದಾಗಿ ಕರೆಯುತ್ತಿದ್ದರು. ಕಬ್ಬಿಣ, ತಾಮ್ರ, ತವರ, ಇತ್ಯಾದಿ ಲೋಹಗಳಿಂದ ಪ್ರಭುತ್ವವು ಸಂಗ್ರಾಮ ಸಂಬಂಧವಾದ ಶಸ್ತ್ರಾಸ್ತ್ರಗಳನ್ನು, ಶಸ್ತ್ರೋಪಕರಣಗಳನ್ನು ಮಾಡಿಸಿ, ಬೇಕಾದಷ್ಟು ಸಂಪಾದನೆ ಮಾಡಿ, ವರಮಾನ ಬಲಪಡಿಸಿಕೊಳ್ಳುತ್ತಿತ್ತು.

ಉಪ್ಪು ಸಹ ಪ್ರಭುತ್ವದ ಗುತ್ತಿಗೆ ಕೈಗಾರಿಕೆಯಾಗಿತ್ತು ಬೇರೆ ಉಪ್ಪಿನ ಅಪರಾಧಕ್ಕಾಗಿ ಗೃಹಸ್ಥನನ್ನಾಗಲಿ, ವಾನಪ್ರಸ್ಥನನ್ನಾಗಲಿ, ಅಧಿಕಾರಿಗಳು ಹಿಡಿದು ದಂಡಿಸುತ್ತಿದ್ದರು.

**ಸಮುದ್ರ ಸಂಪತ್ತು: ಸುಂಕಾದಾಯ**

ಭೂಗಣಿಗಳ ಮಾತಾಯಿತಲ್ಲ; ಸಮುದ್ರ ಗಣಿಗಳು ಬೇರೆ ಉಂಟು. ಆ ಗಣಿಗಳಲ್ಲಿ ವಿಶೇಷವಾಗಿ ಸಿಗುತ್ತಿದ್ದುದು ಮುತ್ತು, ಹವಳ, ಶಂಖ, ಹಡಗುಗಳಲ್ಲಿ ಸಂಚಾರ ಮಾಡುವವರೂ, ಮೀನು ಹಿಡಿಯುವವರೂ, ನೌಕಾ ವ್ಯಾಪಾರಿಗಳೂ, ಎಲ್ಲರೂ ಸುಂಕ ಕೊಡಬೇಕಾಗಿತ್ತು. ವ್ಯಾಪಾರದ ಸಲುವಾಗಿಯೇ 'ಪಣ್ಯಾಧ್ಯಕ್ಷ' ನೆಂಬೊಬ್ಬ ಅಧಿಕಾರಿ ಇದ್ದ. ದೇಶ-ವಿದೇಶ ವ್ಯಾಪಾರ ಸೂತ್ರಗಳೆಲ್ಲ ಅವನ ಕೈಲಿದ್ದುವು. ಪರದೇಶಗಳಿಂದ ಆಮದಾಗಿ ಬರುತ್ತಿದ್ದ ವಸ್ತುಗಳಿಗೆಲ್ಲ ಸುಂಕ ಹಾಕುತ್ತಿದ್ದರು. ದೇಶದಿಂದ ಹೊರಕ್ಕೆ ಹೋಗುವ ವಸ್ತುಗಳ ಮೇಲೆಲ್ಲ ರಫ್ತು ಸುಂಕ ಹಾಕುತ್ತಿದ್ದರು. ಆಮದು-ರಫ್ತು ವ್ಯಾಪಾರವು ಸುಗಮವಾಗಿ ನಡೆಯಲು ಎಲ್ಲ ಬಗೆಯ ಸಂಚಾರ ಸೌಲಭ್ಯಗಳನ್ನು ಕಲ್ಪಿಸಿ, ರಕ್ಷಿಸುವುದು ಪ್ರಭುತ್ವದ ಕರ್ತವ್ಯವಾಗಿತ್ತು. ಒಳ್ಳೆ ರಸ್ತೆಗಳು, ನದಿ ಕಾಲುವೆಗಳ ಮೇಲೆ ಸೇತುವೆಗಳು 'ವಣಿಕ್ಪಥ' ಗಳೆಂದು ಇವುಗಳಿಗೆ ಹೆಸರು—ಇವುಗಳನ್ನು ವೃದ್ಧಿಗೊಳಿಸಿ ಉತ್ತಮ ಸ್ಥಿತಿಯಲ್ಲಿಟ್ಟಷ್ಟೂ, ವಾಣಿಜ್ಯ ಮೂಲವಾಗಿ ರಾಜ್ಯ ಭಂಡಾರಕ್ಕೆ ಹೆಚ್ಚು ಹೆಚ್ಚು ಹಣ ಬಂದು ಬೀಳುವುದೆಂಬುದು ಪ್ರಭುತ್ವಕ್ಕೆ ಗೊತ್ತು. 'ಸೂತ್ರಾಧ್ಯಕ್ಷ' ನೆಂಬ ಅಧಿಕಾರಿ ಇದ್ದು ಹತ್ತಿ, ಉಣ್ಣೆ, ರೇಶ್ಮೆ ಬಟ್ಟೆಗಳ ನೂಲಿಗೆ, ನೆಯ್ಗೆ, ವಿಚಾರದಲ್ಲಿ ದಕ್ಷತೆ ತೋರಿಸುತ್ತಿದ್ದ. ಇದೂ ಒಂದು ಆದಾಯ ಮೂಲ.

**ಪಾನ: ವರಮಾನ ಮೂಲ**

ಪಾನವೂ ಪ್ರಭುತ್ವದ ವರಮಾನ ಮೂಲವಾಗಿತ್ತು. ಈ ಕೈಗಾರಿಕೆ ಸರಕಾರದ ಗುತ್ತಿಗೆ ನಾನಾ ಪಾನ ಪಾನಕಗಳು ಸಿದ್ಧವಾಗಿ, ಮಾರುಕಟ್ಟೆಗೆ ಸರಬರಾಯಾಗುತ್ತಿತ್ತು. ಸರ್ವ ಜನಿಕರು ಯಾರೂ ಕಳ್ಳಭಟ್ಟಿ ಮಾಡದಂತೆ ನಿರೋಧ ಶಾಸನಗಳನ್ನು ಮಾಡಲಾಗಿತ್ತು. ಶಾಸನವನ್ನು ಉಲ್ಲಂಘಿಸಿದವರಿಗೆ ಉಗ್ರ ಶಿಕ್ಷೆಯೂ ಆಗುತ್ತಿತ್ತು.

**ವರಮಾನ ತೆರಿಗೆ**

ನಟ—ನಟಿಯರು, ಗಾಯಕ—ವಾದಕರು, ಹಾವಾಡಿಗರು—ಡೊಂಬರು, ಜೋತಿಷ್ಯರು—ಕಣಿ ಹೇಳುವವರು, ಗಣಿಕೆಯರು, ರೂಪದಾಸಿಗಳು—ಇವರೆಲ್ಲ ವರಮಾನ ತೆರಿಗೆ ಕೊಡಬೇಕಾಗಿತ್ತು.

ಅಧಿಕ ಲಾಭ, ವಿಶೇಷ ಸ್ಥಿರ ಆಸ್ತಿ, ಜೂಜು ಇವುಗಳ ಮೇಲೆಲ್ಲ ತೆರಿಗೆ ಇತ್ತು. 'ಯಾತ್ರವೇತನ' ವಸೂಲು ಮಾಡುತ್ತಿದ್ದರು. ಪ್ರಭುತ್ವವು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ವರಮಾನ ಮೂಲಗಳನ್ನು ಬೆಳೆಸುವುದರಲ್ಲೂ, ವರಮಾನವನ್ನು ಕೂಡಿಸಿಕೊಂಡು, ಭಂಡಾರವನ್ನು ಸದಾ ತುಂಬಿಟ್ಟಿರುವುದರಲ್ಲೂ, ಎಷ್ಟು ಆಸಕ್ತಿ ತೋರಿಸುತ್ತಿತ್ತೋ ಅಷ್ಟೇ ಆಸಕ್ತಿಯನ್ನು ಜನರ ಆರೋಗ್ಯ, ಅವರ ಶಿಕ್ಷಣ, ಅವರ ಜೀವನಾವಕಾಶಗಳು, ಅವರ ಅಪ್ರಮಾದ ಜೀವನ—ಇತ್ಯಾದಿಗಳ ಕಡೆಗೂ ತೋರಿಸುತ್ತಿತ್ತು.

(ಸೌಜನ್ಯ: ಆಕಾಶವಾಣಿ)

—ತಿರುಮಲೆ ತಾತಾಚಾರ್ಯ ಶರ್ಮ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

# ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

**ನವಭಾರತ ಪುಸ್ತಕ ಭಂಡಾರ, ಉಡುಪಿ.**

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

# ತೈಲವಿಲ್ಲದ ಅಭ್ಯಂಜನ

(೨ನೇ ಪುಟದಿಂದ)

ಸರಕಾರವು ಯಾವುದೇ ಗೊತ್ತುವಳಿಯನ್ನು ತರಲಿ, ಅದರಲ್ಲಿ ಏನಾದರೂ ತಿದ್ದುಪಡಿಯನ್ನು ಅದು ಸೂಚಿಸಲೇ ಬೇಕಾಗುತ್ತದೆ. ಅಂದರೆ, ಮಂಜೂರಾಗುವುದು ಸರಕಾರದ ಮೂಲಗೊತ್ತುವಳಿಯೆಂಬುದು ಸ್ವತಃ ಸಿದ್ಧವಾದರೂ ಪ್ರತಿಭಟನೆಯನ್ನು ವ್ಯಕ್ತಪಡಿಸದೆ ಹೋದರೆ, ಪ್ರತಿಪಕ್ಷವಿದ್ದೂ ಸತ್ರಂತೆಯೇ,' ಹೀಗೆ ಭಾವಿಸುತ್ತ ಕೇಳಿದೆ 'ಏನದು ನಿನ್ನ ತಿದ್ದುಪಡಿ'

'ಅದೇನೂ ಅಷ್ಟು ದೊಡ್ಡದಲ್ಲ. ರೈತನಿಗೆ ಅಧಿಕ ಉತ್ಪತ್ತಿ ಆದರೆ ಅದ ಮೇಲೆ 'ಮತ್ತು ಅದು ಆತನಿಗೇನೇ ಉಳಿದರೆ' ಎಂಬುದನ್ನು ಸೇರಿಸಿ ಮುಂದುವರಿಸಬೇಕು.'

'ಅಂದರೆ?' ಆಶ್ಚರ್ಯದಿಂದ ನಾನು ಕಕ್ಕಾಬಿಕ್ಕಿಯಾಗಿ ಅರಚಿದೆ

'ಅಂದರೆ ಏನಿಲ್ಲ. ನಿನ್ನ ಅರ್ಥಶಾಸ್ತ್ರ ನೀತಿಶಾಸ್ತ್ರವೆಲ್ಲ ನೋಡು, ಇದೇ ತೋಡಿಗೆ ಎಸೆ. ಮತ್ತೆ ಬಂದು ಮಾತಿಗೆ ನಿಲ್ಲು'

ತೋಡು ಎಂದೊಡನೆ ನಾನು ಅತ್ತಿತ್ತ ನೋಡಿದೆ ಅದು, ಕಲ ಕಲ ನಾದ ಮಾಡುತ್ತ ಹರಿಯುವ ನೀರಿನ ಅಸ್ತಿತ್ವವು ಭಾಸವಾದುದರಿಂದ ಅಲ್ಲಿಂದು ತೋಡು ಇದೆಯೆಂದು ಮನವರಿಕೆ ಮಾಡಿಕೊಂಡೆ. ಮತ್ತು ಕೇಳಿದೆ 'ನೋಡಪ್ಪ, ನನ್ನ ಅರ್ಥಶಾಸ್ತ್ರ ನಿತ್ಯ ಸತ್ಯವಾದುದು. ನಿನ್ನ ಈ ವ್ಯರ್ಥ ಶಾಸ್ತ್ರದ ರಹಸ್ಯವೇನು? ನನಗೊಂದೂ ಅರ್ಥವಾಗುವುದಿಲ್ಲ.'

'ಹೇಗೆ ಅರ್ಥವಾಗಬೇಕು? ಅದೆಲ್ಲಾ ನಿನ್ನ ಅರ್ಥಶಾಸ್ತ್ರ, ನ್ಯಾಯಶಾಸ್ತ್ರ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಇನ್ನು ಏನೇನು ಶಾಸ್ತ್ರವಿದೆಯೋ ಅವಾವುದರಲ್ಲೂ ಬರೆದಿಲ್ಲ. ಅದಿರುವುದು ಕೇವಲ ಅನುಭವ ಶಾಸ್ತ್ರದಲ್ಲಿ ಮಾತ್ರ. ನಾಲ್ಕಕ್ಷರದ ಸರ್ಟಿಫಿಕೇಟಿಗೆ ಬೆಲೆಯಿರುವ ಈ ಕಾಲದಲ್ಲಿ ಅನುಭವ ಶಾಸ್ತ್ರವನ್ನು ಗಮನಿಸುವವರಾದರೂ ಯಾರು?'

ಆತನ ಮಾತು ಒಳಸು ಬಳಸು ನನ್ನ ಬೆನ್ನ ಮೇಲೆಯೇ ಏಟಿತ್ತು ಎಂದು ನಾನು ತಿಳಿದುಕೊಂಡೆ. ಇವನ್ನು ನನ್ನ ಪುಸ್ತಕದ ಕಂತೆ ಬಿಚ್ಚಿ ಹೊರಟರೆ ಅನೇದುರು ಪ್ರಯೋಜನವಿಲ್ಲವೆಂದುಕೊಂಡು ಹೇಳಿದೆ. 'ಏನಿದು? ಬರೇ ಒಗಟಿನಂತೆ ಮಾತಾಡುತ್ತೀಯಲ್ಲಾ? ಸಮಾಚಾರವಾದರೂ ಏನು? ಎಂಥದು? ಸ್ವಲ್ಪ ವಿವರಿಸಿ ಹೇಳಿದರೆ ನನಗೂ ನಿನ್ನ ಅನುಭವ ಶಾಸ್ತ್ರ ಅರ್ಥವಾಗುವುದೋ ಏನೋ ನೋಡಬಹುದಿತ್ತು."

'ಸದ್ಯ ನಿನಗಾದರೂ ಈ ಶಾಸ್ತ್ರವನ್ನು ತಿಳಿಯುವ ಆತುರ ಹುಟ್ಟಿತಲ್ಲಾ....'

ಆತನ ಧ್ವನಿಯು ನಿರಾಶೆಯ ಕಾರ್ಮೋಡದ ನಡುವೆ ಮಿಂಚಿದ ಆಶಾಲತೆಯನ್ನು ಪ್ರಕಟಿಸುವಂತಿತ್ತು. ಇದು ಮೊದಲೂ ಆತನು ತನ್ನ 'ಅನುಭವ, ಶಾಸ್ತ್ರವನ್ನು ಅನೇಕರಿಗೆ ತಿಳಿಯಪಡಿಸಲು ಉದ್ದೇಶಿಸಿ, ಅಸಮರ್ಥನಾದ ನೋವು ಅದರಲ್ಲಿ ತುಂಬಿತ್ತು. ಆತ ಮುಂದುವರಿಸಿದ: 'ನೀವು ಪೇಟೆಯಲ್ಲಿ, ಕಚೇರಿಗಳಲ್ಲಿ ಕುಳಿತು ಭ್ರಮಾತ್ಮಕವಾದ ಅಂಕೆ-ಸಂಖ್ಯೆ, ಸಿದ್ಧಾಂತ ತತ್ವಗಳನ್ನು ಕಲಿ ಹಾಕುವುದರಲ್ಲಿಯೇ ಮಗ್ನರಾಗುತ್ತೀರಿ. ಮತ್ತು ದೇಶದಲ್ಲಿ ಇಷ್ಟು ಉತ್ಪತ್ತಿ ಹೆಚ್ಚಿತು, ದೇಶದ ಸಂಪತ್ತು ಅಷ್ಟು ಏರಿತು, ವ್ಯಕ್ತಿಯ ಸರಾಸರಿ ಆದಾಯ ಸೇ. ಇಂತಿಷ್ಟು ಹೆಚ್ಚಾಯಿತು. ರಾಮರಾಜ್ಯದ ದಾರಿಯಲ್ಲಿ ದೇಶ ಮುಂದುವರಿಯುತ್ತಿದೆಯೆಂದು ತಿಳಿಯುತ್ತೀರಿ, ಅದರ ಪ್ರಚಾರ ಮಾಡುತ್ತೀರಿ. ಆದರೆ, ರೈತನು ದಿನದಿಂದ ದಿನಕ್ಕೆ ಆರ್ಥಿಕವಾಗಿ ತನ್ನ ಶಕ್ತಿಯನ್ನು ಕಳೆದುಕೊಳ್ಳುತಿದ್ದಾನೆ ಎಂಬ ತಥ್ಯವನ್ನೂ, ಅದರ ಕಾರಣವನ್ನೂ ತಿಳಿದುಕೊಳ್ಳ ಬಯಸುವುದಿಲ್ಲ. ಮತ್ತೆ ರೈತನೇ ದೇಶದ ಬೆನ್ನೆಲುಬು ಎಂದು ಸಾರುತ್ತೀರಿ ಆದರೆ, ಬೆನ್ನೆಲುಬಿನ ಹುರಿಗಳು ಪರಸ್ಪರಸಂಬಂಧ ಕಡಿದಿರುವುದನ್ನೂ ತನ್ಮೂಲಕ ಅದು ಬಾಗಿ ನಿರ್ಬಲವಾಗಿರುವುದನ್ನೂ ಗಮನಿಸುವ ಗೋಜಿಗೆ ಅರ್ಥಶಾಸ್ತ್ರ ಹೋಗುವುದಿಲ್ಲ.'

ಆತನ ಉಪನ್ಯಾಸ ಕಂಬಿಯಿಲ್ಲದ ರೈಲಿನಂತೆ ಓಡುತಿತ್ತು. ನಾನು ತಡೆದು ಕೇಳಿದೆ—'ಅಲ್ಲಾ, ನೀನು ಈಗ ಹೇಳುವುದಾದರೂ ಏನು?'

'ಕೇಳು, ಅಲ್ಲಿ ದೀಪದಡಿಯಲ್ಲಿ ಕಾಳು ಕೂಡಿಸುತ್ತಾರೆ ಯಾರು ಗೊತ್ತೆ?'

'ಮತ್ತ್ಯಾರು? ಅದರ ಯಜಮಾನರು.'

'ಸರಿಯಾದುದನ್ನೇ ಹೇಳಿದೆ; ಆದರೆ, ಅದರ ಯಜಮಾನರು ಯಾರು ಗೊತ್ತೆ?'

'ಅಂದರೆ? ಅದನ್ನು ಬೆಳೆಸಿದವರು?'

'ಹ್ಞಾಂ, ಅದೂ ಸರಿಯೆನ್ನು. ಅದನ್ನು ಬೆಳೆಸಿದವರು ಯಾರು?'

'ಇದೇನು ಹೀಗೆಲ್ಲಾ ಕೇಳುತ್ತಿದ್ದೀಯಾ? ಬೆಳೆಸಿದವರು ಯಾರು ಎಂದರೆ? ರೈತರು. ಮತ್ತ್ಯಾರು ಬರುತ್ತಾರೆ?'

'ಇಲ್ಲಿಯೇ ನೋಡು ನಿಮ್ಮ ಅರ್ಥಶಾಸ್ತ್ರವೋ ಮತ್ತ ಶಾಸ್ತ್ರವೋ ಏನೋ ಇವೆಯಲ್ಲ, ಅದು ತಪ್ಪಿಬಿದ್ದಿದೆ.'

'ಹಾಗೆಂದರೆ?'

'ನೋಡು ಯಜಮಾನರು ರೈತರು ಎಂದೆಯಲ್ಲ? ಸತ್ಯ ಹೇಳುವುದಾದರೆ, ಕಾಳಿನ ಯಜಮಾನರು ಅವರಲ್ಲ ಸಾಹುಕಾರರು ಅದನ್ನು ಬೆಳೆಸಿದವರು ಅವರೇ ತಿಳಿಯಿತೇ?'

ನಾನು ಚಕಿತಚಿತ್ತನಾಗಿ ಉಗುರು ಕಚ್ಚಿಕೊಂಡೆ.

'ನೋಡು, ಈ ಪೆಟ್ರೋಮೇಕ್ಸ್ ದೀಪವನ್ನು ತಂದಿರಿಸಿ ಕಾಳಿನ ಯಜಮಾನರು ಅವನ್ನು ಕೂಡಿಸಿ ಗೋಣಿ ಚೀಲಗಳಲ್ಲಿ ತುಂಬಿಸುತ್ತಾರೆ. ಇದೇ ಇಲ್ಲಿ ನೋಡು ಪಕ್ಕದಲ್ಲಿ ಗಾಡಿ ಇದರಲ್ಲಿ ನೋಡು ನಾಲ್ಕಾರು ಗೋಣಿ ತುಂಬಿಯಾಗಿದೆ" ಎಂದು ಅವನು ಅಲ್ಲೇ ಪಕ್ಕದಲ್ಲಿ ಗಾಡಿಯೊಂದನ್ನು ತೋರಿಸಿದ. ಬಾರಿ ನಡೆಯುತ್ತ ನಾವು ಮುಂದ ವರಿಯುತಿದ್ದೆವು. ಆ ದೀಪದ ಮಂದ ಪ್ರಕಾಶವು ನೇರವಾಗಿ ಅಲ್ಲಿ ಬೀಳುತಿತ್ತು. ಆತನೇ ಮಾತು ಮುಂದುವರಿಸಿದ. 'ಮಳೆಗಾಲದ ದಿನಗಳಲ್ಲಿ ಮುಡಿಗೆ ನಾಲ್ಕು ಮುಡಿ ಬತ್ತ ಮರಳಿ ಕೊಡುವ ಶರ್ತದ ಮೇಲೆ ರೈತರು ಅಕ್ಕಿ-ಕಾಳು ಎರವಲು ತರುತ್ತಾರೆ. ಕೊಯ್ಲಿಗೆ ಸಿದ್ಧ ಆಗುವುದೇ ತಡ ದೀಪ-ಜನ ಹಿಡಿದುಕೊಂಡು ಕೊಯ್ಸಿ, ಬಡಿಸಿ ತಮ್ಮ ಲೆಕ್ಕಾಚಾರವನ್ನು ಮುಗಿಸಿಕೊಂಡು ಹೋಗುತ್ತಾರೆ'

'ಅಂದರೆ, ರೈತರಿಗೆ ಅವರ ಕಾಳಿನಲ್ಲಿ ಅಧಿಕಾರವಿಲ್ಲ?"

'ಇಲ್ಲವೆಂದವರು ಯಾರು? ಸಾಹುಕಾರರು ತಮ್ಮದನ್ನು ಕೊಂಡೊಯ್ಯುತ್ತಾರೆ. ಉಳಿದುದು ಮತ್ತಾರಿಗೆ?"

'ಅಷ್ಟೂ ನಿರ್ಧಯರೇನು ಸಾಹುಕಾರರು? ರೈತನನ್ನು ಅಪರಾಧಿಯಂತೆ ನಡೆಸಿಕೊಳ್ಳುವುದಕ್ಕೆ? ಆತನೇ ಎರವಲನ್ನು ಮರಳಿಸುವುದಿಲ್ಲವೆ?'

'ನೋಡು, ಅದೂ ಸಪ್ಪವೇ. ರೈತರು ಒಂದಕ್ಕೆ ಎಂಟು-ಹತ್ತು ಪಟ್ಟು ಬಡ್ಡಿ ತೆರಬೇಕಾಗುತ್ತದೆ; ಅದರ ಮೇಲೆ ಗದ್ದೆಯ ಒಡೆಯರ ಗೇಣಿ ತೀರಿಸ ಬೇಕಾಗುತ್ತದೆ. ಆಗ ಬೆಳೆದ ಹತ್ತು ಮುಡಿಯನ್ನು ಆತ ಯಾರಿಗೆ ಹಂಚಬೇಕು? ತಾನೇನನ್ನು ಉಣ್ಣಬೇಕು? ಯಾರು ಮೊದಲು ದೊಣ್ಣೆ ಹಿಡಿದುಬರುತ್ತಾರೆಯೋ ಅವರ ಋಣ ಸಂದಾಯವಾಗುತ್ತದೆ ಅಷ್ಟೆ. ಮತ್ತೆ ಹೀಗೆ ಮಾಡದೆ ಹೋದರೆ, ಸಾಲವೂ ವಸೂಲಾಗುವುದಿಲ್ಲ, ಗೇಣಿಯೂ ತೀರುವುದಿಲ್ಲ.'

'ಅಷ್ಟು ಕೆಟ್ಟವರೇನು ರೈತರು?'

'ಜನ್ಮದಿಂದ ಯಾರೂ ಕೆಟ್ಟವರಾಗುವುದಿಲ್ಲ. ಪರಿಸ್ಥಿತಿ ವಶದಿಂದ ಹಾಗಾಗ್ತಾರೆ. ಏನೋ ದುರದೃಷ್ಟವಶದಿಂದ ಒಂದು ವರ್ಷ ಸಾಲಕ್ಕೆ ಬಿದ್ದರೆ ಸರಿ, ಅದರ ಬಡ್ಡಿ ತೆರುವುದಕ್ಕೇನೆ ಉತ್ಪತ್ತಿ ಸಾಲದಾಗುವಾಗ, ಅಸಲು ಎಲ್ಲಿಂದ ತೀರಬೇಕು? ರೈತನಿಗೆ ನಿದ್ರೆಯಾದರೂ ಹೇಗೆ ಬೀಳಬೇಕು? ಮತ್ತೆ, ಸುವಿಚಾರ, ಸುಶೀಲ, ಧರ್ಮ ಧರ್ಮ ವಿವೇಕ ಎಲ್ಲಿಂದ ಬರಬೇಕು? ಮಾನಸಿಕ ಅಶಾಂತಿಗೆ ಬಲಿಬಿದ್ದ ಆತ ದೇಶದ ಬೆನ್ನೆಲುಬಾಗಲು ಹೇಗೆ ತಕ್ಕವನಾದಾನು? ಅವನ ಹುರಿ ಮುರಿದಿದೆ, ಬೆನ್ನು ಬಾಗಿದೆ, ಮುಖ ಜೋಲು ಬಿದ್ದಿದೆ; ಕಣ್ಣು ನಿಸ್ತೇಜವೆನಿಸಿದೆ........'

'ಅಲ್ಲ, ಕೃಷಿಕರ ಸಹಕಾರಿ ಬೇಂಕು ಈಗ ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲೂ ಇದೆಯಲ್ಲ ಸಹಕಾರಿ ಸಂಘಗಳಿವೆ. ಅವುಗಳು ರೈತರಿಗೆ ಆರ್ಥಿಕ ಸಹಾಯವನ್ನು ನೀಡುತ್ತವೆಯಲ್ಲ?'

'ಹೌದು, ನೀಡುತ್ತವೆ. ಆದರೆ, ಎಂತಹ ರೈತನಿಗೆ? ಶ್ರೀಮಂತ ಭೂಮಾಲಿಕನಾಗಿ ಕೂಲಿಗಳಿಂದ ಕೆಲಸ ಮಾಡಿಸಿ ರೈತನೆಂಬ ಹೆಸರು ಇಟ್ಟುಕೊಂಡಂತವರ ಕೈಯಲ್ಲಿವೆ ಈ ಬೇಂಕುಗಳು, ಸಂಘಗಳು. ಅಲ್ಲಿ ಸಾಮಾನ್ಯ ರೈತನಿಗೆ ಪ್ರವೇಶ ದೊರೆತೀತೆ?'

'ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರದಲ್ಲಿಯೂ ಪ್ರವೇಶವಿಲ್ಲವೆಂದರೆ........?'

'ಅದೇ ನೋಡು ನಿನ್ನ ಪುಸ್ತಕದ ಉದ್ದೇಶ ಮತ್ತು ಸಾಧನೆ. ಆದರೆ ಕಾರ್ಯನೀತಿ ಮತ್ತು ಪರಿಣಾಮದಲ್ಲಿ ಅಸಮಾನತೆ, ಅಸಮಾಜವಾದಿ, ಅಕಲ್ಯಾಣವೇ ತೋರುತ್ತವೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ; ಚಿಕ್ಕ ಸಾಹುಕಾರರು ದೊಡ್ಡ ಮಂಡಿ ವರ್ತಕರಾಗುತ್ತಾರೆ. ಆದರೆ, ಸಾಮಾನ್ಯ ರೈತರ ಈ ಸ್ಥಿತಿ ದಿನದಿಂದ ದಿನಕ್ಕೆ ಕುಂಠಿತವಾಗುತ್ತಿದೆ.'

'ಎಂದರೆ, ಸಾಹುಕಾರರು ರೈತರ ರಕ್ತ ಹೀರುತ್ತಾರೆ ಅಲ್ಲವೆ?'

'ಹಾಗೇ ಏಕೆ ಹೇಳಬೇಕು? ರಕ್ತ ಹೀರುವುದು ಜಿಗಳೆಯ ಗುಣ ಹೀರು ಎಂದು ನಾವಾಗಿಯೇ ಜಿಗಳೆಯ ಬಳಿ ನಡೆದರೆ, ಆ ತಪ್ಪು ನಮ್ಮದೆ, ಅಥವಾ ಜಿಗಳೆಯದೆ?'

'ನಮ್ಮದೇ ಎಂದು ಹೇಳಬೇಕು.'

(೧೩ನೇ ಪುಟ ನೋಡಿರಿ)


ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—.

**ಸುಲಭದಲ್ಲಿ ಇಂಗ್ಲಿಷ್**

**(ENGLISH MADE EASY)**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

**LETTER WRITING MADE EASY**

**ಸುಲಭದಲ್ಲಿ ಪತ್ರಲೇಖನ**

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ವಿ. ಸೂ.—ಆರ್ಡರು ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾದ
0=25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ ಕೆನರಾ ಕೋಟಿಜ್ ಬುಕ್ ಕೊ, [illegible] & ಪಬ್ಲಿಶರ್ಸ್ ಇವರಲ್ಲಿಯೂ, ಪುತ್ತೂರಲ್ಲಿ [illegible] ಗಳಲ್ಲಿಯೂ ದೊರೆಯುತ್ತವೆ.

**ಸಂಸಾರ ರಥದ ಚಕ್ರಗಳು**

## ಗಂಡಸು

ಗಂಡಸು ತನ್ನ ವಿಜಯವನ್ನು ಹೋರಾಟ ಮತ್ತು ಶೌರ್ಯಗಳಿಂದ ಸಂಪಾದಿಸುತ್ತಾನೆ.

ಗಂಡಸು ಶಾಂತಿಪ್ರಿಯನಿದ್ದು ಹೆಂಗಸಿನೊಡನೆ ಒಪ್ಪಂದ ಮಾಡಿಕೊಳ್ಳಲು ಸದಾ ಸಿದ್ಧನು.

ಎಷ್ಟೇ ಹಠವಾದಿಯಾದರೂ, ಹೆಂಗಸಿನ ಕಣ್ಣೀರಿನಿಂದ ಕರಗಿ ಹೋಗಿ ಅವಳಿಂದಂತೆ ವರ್ತಿಸುವದು ಗಂಡಸಿನ ರೀತಿ.

ಸೌಂದರ್ಯವತಿಯೆಂದರೆ ಅಯೋಗ್ಯ ಹೆಂಗಸನ್ನೂ ವರಿಸಲು ಗಂಡಸು ಹಿಂಜರಿಯನು.

ದೊಡ್ಡ ಶರೀರದ, ಶಕ್ತಿಶಾಲಿನಿಯಾದ ಆಟೋಟ ಸ್ಪರ್ಧೆಗಳಲ್ಲಿ ತುಂಬಾ ನಿಪುಣೆಯಾದವಳನ್ನು ಗಂಡಸು ತಿರಸ್ಕರಿಸುತ್ತಾನೆ.

ಗಂಡಸು ತನ್ನ ಹಿಂದಿನ ಅಧಿಕಾರ, ಬಲ, ಸಾಮರ್ಥ್ಯಗಳನ್ನು ಕಳಕೊಂಡುದರಿಂದಲೇ ಇಂದು ಹೆಂಗಸು ದಾರಿಬಿಟ್ಟು ನಡೆಯುತ್ತಿದ್ದಾಳೆ

ಗಂಡಸು ಸಾಯಿಲೆಯನ್ನು ಸಹಿಸಲಾರನು. ಕಾರಣವೆಂದರೆ ತನ್ನ ಸ್ವತಂತ್ರ ತಿರುಗಾಟಕ್ಕೆ ಅಸ್ಪದವಿಲ್ಲವೆಂದು!

ನಿರಾಸೆಯಲ್ಲಿ ಗಂಡಸು ಆತ್ಮಹತ್ಯೆ ಮಾಡಿಕೊಳ್ಳಬಹುದು; ಅನಾಹುತವನ್ನೆಸಗಬಹುದು. ನಿರಾಸೆಯಲ್ಲಿ ಗಂಡಸು ಯಾರ ನೆರವೂ ಇಲ್ಲನೆನ್ನುತ್ತಾನೆ.

ಗಂಡಸು ಯಾವಾಗಲೂ ಬಹಿರಂಗ ಆತನ ಪ್ರೇಮ ಎಲ್ಲರಿಗೂ ತಿಳಿಯುವಂತೆ ಆತನ ಕೆಲಸ ಎಲ್ಲರೂ ನೋಡುವಂತೆ ಆತನ ಶ್ರಮವೆಲ್ಲವೂ ಕೀರ್ತಿಗಾಗಿ!

ಗಂಡಸು ದಂಗೆ ಪ್ರವೃತ್ತಿಯವನು. ನೀತಿ ನಿಯಮಗಳು ತನಗನುಕೂಲವಾಗಿದ್ದರೆ ಮಾತ್ರ ಒಳ್ಳೆವೆನ್ನುವವನು. ಸುಖಕ್ಕಾಗಿ ತನ್ನ ಕುಟುಂಬವನ್ನೂ ಒಡೆದು ಹಾಕಬಲ್ಲನು

ಗಂಡಸು ಸಂಸಾರವೆಂಬ ಕಟ್ಟಡದ ಕಲ್ಲು ಇಟ್ಟಿಗೆಗಳಂತೆ; ಆತನೇ ಸಂಸಾರದ ಪ್ರಧಾನಾಂಗ!

## ಹೆಂಗಸು

ಹೆಂಗಸು ತನ್ನ ವಿಜಯವನ್ನು ಸಹನೆ ಮತ್ತು ಉಪಾಯಗಳಿಂದ ಸಾಧಿಸುತ್ತಾಳೆ

ಹೆಂಗಸು ಛಲವಾದಿಯಾಗಿದ್ದು ತನ್ನ ಗೆರೆಯ ಮೇಲೆ ಗಂಡಸನ್ನು ತನ್ನಿಚ್ಛೆಯಂತೆ ಸಹಿ ಹಾಕಿಸದೆ ಬಿಡಳು.

'ಪ್ರಥಮ ಪ್ರಯತ್ನದಲ್ಲಿ ನಿನಗೆ ಜಯ ದೊರೆತಿಲ್ಲವಾದರೆ ಪುನಃ ಕಣ್ಣೀರು ಕರೆ' ಎಂಬುದು ಹೆಂಗಸಿನ ಮಂತ್ರ.

ಶೌರ್ಯ ಧೈರ್ಯಶಾಲಿಯೆಂದರೆ ತಿಳಿಗೇಡಿಯನ್ನೂ ಮದುವೆಯಾಗಲು ಹೆಂಗಸು ಸಿದ್ಧ

ತನಗಿಂಥಾ ಶಕ್ತಿಶಾಲಿ, ಪಶು ಶಕ್ತಿಯುಳ್ಳ, ತನಗೆ ಆಜ್ಞೆ ವಿಧಿಸುವ ಗಂಡಸನ್ನು ಹೆಂಗಸು ಯಾವಾಗಲೂ ಮೆಚ್ಚಿ ಆತನ ಆಜ್ಞಾಧಾರಕಳಾಗುತ್ತಾಳೆ.

ಹೆಂಗಸು ತನ್ನ ಸೌಮ್ಯತೆಯನ್ನು ಬಿಟ್ಟು, ತನ್ನ ರಟ್ಟೆಶಕ್ತಿ, ಸಂಪಾದನೆಯ ಶಕ್ತಿ ಬೆಳೆಸಿಕೊಳ್ಳ ತೊಡಗಿದುವದರಿಂದಲೇ ಮದುವೆಯ ಮುರಿತ ದೂರವಾಗುತ್ತಿದೆ.

ಹೆಂಗಸು ಸಾಯಿಲೆಯನ್ನು ಸಹನೆಯಿಂದ ಸಹಿಸುತ್ತಾಳೆ ಕಾರಣವೆಂದರೆ ಮನೆಯ ಓಡಾಟದಿಂದ ವಿಶ್ರಾಂತಿ ದೊರೆಯಿತೆಂದು

ನಿರಾಸೆಯಲ್ಲೂ ಹಿಂದುಮುಂದು ಆಲೋಚಿಸುವ ಸಹನೆ ಹೆಂಗಸಿನದು. ನಿರಾಸೆಯಲ್ಲಿ ಹೆಂಗಸು ಭಗವಂತನನ್ನು ಆಶ್ರಯಿಸುತ್ತಾಳೆ

ಹೆಂಗಸು ಯಾವಾಗಲೂ ಗುಪ್ತಗಾಮಿನಿ. ಆಕೆ ಪ್ರೀತಿಸಿದರೂ ತಿಳಿಯದಂತೆ ಯಾವ ಕೆಲಸ ಮಾಡಿದರೂ ತೆರೆಮರೆಯಲ್ಲಿ. ಆಕೆಯ ಶ್ರಮವೆಲ್ಲವೂ ಆತ್ಮತೃಪ್ತಿಗಾಗಿ!

ಹೆಂಗಸು ಸಂಪ್ರದಾಯ ಪ್ರಿಯಳು; ರೀತಿ ನೀತಿಗಳನ್ನು ಲಕ್ಷಿಸುವವಳು. ಕುಟುಂಬದ ಕಟ್ಟು ಸಂಪ್ರದಾಯಗಳಲ್ಲಿ ವಿಶ್ವಾಸವಿರುವವಳು.

ಹೆಂಗಸು ಸಂಸಾರವೆಂಬ ಕಟ್ಟಡದ ಸಿಮೆಂಟಿನಂತೆ ಆಕೆಯಿಂದಲೇ ಸಂಸಾರಕ್ಕೆ ಭದ್ರತೆ.

ನಮ್ಮಲ್ಲಿ 14 ಕೆರೆಟ್ ಚಿನ್ನದ ಚಿನ್ನಾಭರಣಗಳು ಮಾರಾಟಕ್ಕೆ ಸಿದ್ಧವಾಗಿರುತ್ತವೆ.
14 CT ಚಿನ್ನದ ಆಭರಣಗಳಲ್ಲಿ 58⅓% ಶುದ್ಧ ಪುತ್ಥಳಿ ಚಿನ್ನ ಇರುತ್ತದೆ.
ಬೇಡದಿದ್ದಲ್ಲಿ 1 ರೂ ಕಮ್ಮಿಯಲ್ಲಿ ಯಾವಾಗಲೂ ಬಜಾರು ಧಾರಣೆಗೆ ಪಡಕೊಳ್ಳುವ ಭರವಸೆ ಕೊಡುತ್ತೇವೆ.
ವಿ ಸೂ ಹಳೆ ಚಿನ್ನದ ಆಭರಣ ಯಾ ಚಿನ್ನದ ಗಟ್ಟಿಗಳನ್ನು ಪಡಕೊಳ್ಳುವರೆ ಸರಕಾರದ ಲೈಸನ್ಸ್ ಸಿಕ್ಕಿರುತ್ತದೆ.
ಮದುವೆ ಉಪನಯನದ ಸಮಯ ಬೇಕಾದ 14 CT ಚಿನ್ನದ Order ಪಡಕೊಂಡು ಖಾತ್ರಿಯಾಗಿ ಸಮಯಕ್ಕೆ ಸರಿಯಾಗಿ ಕೊಡಲಾಗುವುದು.

**ಶ್ರೀಕೃಷ್ಣ ಜ್ಯುವೆಲರಿ ಮಾರ್ಟ್**

ತೆಂಕಪೇಟೆ — ಉಡುಪಿ.
ಪ್ರೊಪ್ರೈಟರ್: ರಾಘವೇಂದ್ರ ಕೃಷ್ಣ ಭಟ್.
ಫೋನ್ ನಂಬ್ರ: 66

**ಕುಮಾರಿ ಬಿಲ್ಲೆಗಳು**

(ರಜಿಸ್ಟರ್ಡ್ Regd.)
ಪ್ರಕೃತಿಯು ವಿಫಲಗೊಂಡಾಗ ಉಂಟಾಗುವ ಕಾತರ ನಿವಾರಣೆಗೆ ಸಮಯೋಚಿತವಾದ ಆಯುರ್ವೇದೀಯ ಮಿಶ್ರಣ!
ಟ್ಯೂಬ್ 10 ಸಾಮಾನ್ಯ ರೂ. 4/. ಮಧ್ಯಮ ರೂ. 6/. ಉತ್ತಮ ರೂ. 9/.
**P. Devee & Co.** (N. J.) Calcutta—40

## ಪುಸ್ತಕವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

**ಕೋಕಿಲವಾಣಿ**— (ಜಾನಪದ ಗೀತೆಗಳು) ಲೇಖಕ ಸಂಪಾದಕ **ಸಿರಿಪತಿ** ಪ್ರಕಾಶಕರು: ಲೇಖಕರೇ (?) ಪುಟಗಳು: ೫೫. ಬೆಲೆ: ೧—೦೦

ಸಾಹಿತ್ಯದ ಪ್ರಕಾರಗಳಲ್ಲಿ ಜಾನಪದ ಗೀತೆಗಳಿಗೆ ಇಂದು ಮಹತ್ವಪೂರ್ಣ ಸ್ಥಾನವಿದೆ. ಹಿಂದಿನಿಂದಲೂ ನಮ್ಮ ಜನ ಆಶು ಕವಿತೆಗಳನ್ನು ರಚಿಸುತ್ತ ಅದನ್ನು ಹಾಡಿ ಆನಂದಪಡುತಿದ್ದರು. ಇಂತಹ ಗೀತೆಗಳು ಇಂದಿಗೂ ಸ್ಮರಣರೂಪದಲ್ಲಿಯೇ ಇವೆ ಇವುಗಳ ಸಂಗ್ರಹಕಾರ್ಯವು ನಡೆಯಿತೆಂದರೆ, ಈ ದೇಶ್ಯ ಸಾಹಿತ್ಯವು ಮಾರ್ಗ ಸಾಹಿತ್ಯಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲುದು. ಆದರೆ, ಸಂಗ್ರಹ ಕಾರ್ಯದಲ್ಲಿ ನಾವು ತೋರಿಸುತ್ತಿರುವ ಉತ್ಸಾಹ ಮಾತ್ರ ಅತ್ಯಲ್ಪ. ತಮ್ಮ 'ಕಪಾಲ ಮೋಕ್ಷ' ಕಥಾಸಂಕಲನದಿಂದಲೂ ಹಲವಾರು ಲೇಖಗಳಿಂದಲೂ ಕನ್ನಡಿಗರಿಗೆ ಪರಿಚಿತರಾದ 'ಸಿರಿಪತಿ'ಯವರ ಸುದೃಷ್ಟಿ ಜನಪದ ಗೀತೆಗಳ ಕಡೆಗೆ ಹೊರಳಿದುದು ಸಂತೋಷ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಪ್ರಚಲಿತವಿರುವ ಕೆಲವೊಂದು ಗೀತೆಗಳನ್ನು ಅವರು ಇಲ್ಲಿ ಸಂಗ್ರಹಿಸಿದ್ದಾರೆ ಅವುಗಳ ಪ್ರಾತಿಪದಿಕ ವಿಷಯ, ಗುಣ ನುಸಾರವಾಗಿ ಅವನ್ನು ಆರು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಹೆಣ್ಣಿನ ಮುಗ್ಧ ಮನಸ್ಸು ಚರಿತ್ರೆಗಳು ತವರಿನ ಮಹಿಮೆ, ಸಹೋದರತೆಯ ಬಂಧನ, ರಸಿಕತೆ, ನೈತಿಕತೆ, ಸಮಾಜಧರ್ಮ ವೆಂಬ ವಿಭಾಗದಲ್ಲಿ ಆಯಾ ವಿಭಾಗಕ್ಕೆ ಸಂಬಂಧಿಸಿದ ಗೀತೆಗಳನ್ನೂ ಅವುಗಳ ಸಂಬಂಧದಲ್ಲಿ ಚಿಕ್ಕ ವಿಮರ್ಶಾತ್ಮಕ ವಿವರಣೆಗಳನ್ನ ನೀಡಿದ್ದಾರೆ. ಇಲ್ಲಿ ಕಾಣುವ ಪ್ರತಿ ಗೀತೆಯ ಹಿಂದೆ ಒಂದೆ ಇನ್ನಿತರ ಮುಕ್ತಕಗಳ ಸಂಬಂಧವಿದೆಯೆಂದು ಊಹಿಸಲು ಅವಕಾಶವಿದೆ. ಇಂತಹ ಸಂಪೂರ್ಣ ಗೀತೆಗಳನ್ನೂ ಸಂಗ್ರಹಿಸಿ, ಅವನ್ನೂ ಮುಂದಿನ ತಲೆಮಾರಿನವರಿಗೆ ಉಳಿಸಿಕೊಡುವ ಪ್ರಯತ್ನವನ್ನು ರಸಭಿಜ್ಞರು, ಸಾಹಿತ್ಯ ಕಲಾವಿದರು ಮುಂದುವರಿಸುವುದು ಅಗತ್ಯವಿದೆ; ಇಲ್ಲವಾದರೆ, ಹಿಂದಿನವರ ಹಿಂದೆ ನಮ್ಮ ಅನೇಕಾನೇಕ ಅನರ್ಘ್ಯ ಮುಕ್ತಾವಳಿಗಳು ನಷ್ಟವಾದಂತೆ ಇಂದು ಅಳಿದುಳಿದಿರುವ ಅಲ್ಪ ಸಂಪತ್ತಿನಿಂದಲೂ ದೂರವಾದೀತು. 'ಸಿರಿಪತಿ'ಯವರು ಪರಿಶ್ರಮಪೂರ್ವಕ ಸಂಗ್ರಹಿಸಿದ 'ಕೋಕಿಲವಾಣಿ'ಯು ನಮ್ಮ ಕನ್ನಡದ ಹಳ್ಳಿಯ ಕೋಟಿ ಕಂಠಗಳು ಕುಕಿಲಿದುವ ವಾಣಿ—ಬಹು ಸುರಮ್ಯ, ಸೇವ್ಯಗೇಯ ಮತ್ತು ಅರ್ಥವತ್.

**ಶ್ರೀ ಕಟೀಲು ಕ್ಷೇತ್ರದ ಕೈಪಿಡಿ:** ಲೇಖಕರು ಮತ್ತು ಪ್ರಕಾಶಕರು: ನಾರಾಳ ಮ.ರ ಅನಂತ ಉಪಾಧ್ಯಾಯ, ಗಂಜೀಮಠ ಪುಟಗಳು: ೩೨

ನಂದಿನೀ ನದೀಸ್ಪೃಷ್ಟ ಪ್ರದೇಶದಲ್ಲಿರುವ ಕಟೀಲು ದುರ್ಗಾಪರಮೇಶ್ವರೀ ದೇವಾಲಯವು ಜಿಲ್ಲೆಯ ದರ್ಗಾ ಮಂದಿರಗಳಲ್ಲಿ ವಿಖ್ಯಾತವಾದುದು. ಕುಪಿತ ಜಾಬಾಲೀ ಶಾಪದಿಂದ ನದಿಯಾಗಿ ಹರಿದ ನಂದಿನಿಯು ಮಹಾಲಕ್ಷ್ಮೀ ವರಪ್ರಸಾದದಿಂದ, ತನ್ನ ತಟ ಪ್ರದೇಶದಲ್ಲಿ ಅರುಣಾಸುರ ವಧೆಗಾಗಿ ಭ್ರಾಮರಿಗೆ ಜನ್ಮವಿತ್ತಳು ಈ ಸ್ಕಾಂದ ಪುರಾಣದ ನಿರ್ಗಾರಣ್ಯ ಮಹಾತ್ಮ್ಯೆಯ ಕಥೆಯನ್ನು ಕ್ಷೇತ್ರದ ಸಾಮಾನ್ಯ ಪರಿಚಯ, ದೇವಳದ ಹಿರಿಮೆಗಳೊಡನೆ ನಾವು ಈ ಚಿಕ್ಕ ಕೈ ಪಿಡಿಯಲ್ಲಿ ಕಾಣಬಹುದು. ಕಟೀಲು ದುರ್ಗಾಪರಮೇಶ್ವರಿಯ ಸ್ತುತಿಸ್ತವನಗಳನ್ನು ಬೇರೆ ಬೇರೆಯವರು ಬರೆದಿದ್ದು ಅವುಗಳಲ್ಲಿ ಎಂಟನ್ನೂ ಸೇವಾ ಪಟ್ಟಿಯನ್ನೂ ಕೈಪಿಡಿಯು

೧೫ನೇ ಪುಟ ನೋಡಿರಿ

**ಹನಿಕತೆ**

### ಅಕ್ಷಯ ಪಾತ್ರದ ಆಧಾರ.

ಧರ್ಮರಾಜನ ಸೂಚನೆಯ ಪ್ರಕಾರ ದ್ರೌಪದಿಯು ಸೂರ್ಯದೇವನ ಉಪಾಸನೆ ಮಾಡಿದಳು. ಆಗ ಸೂರ್ಯ ದೇವನು ಪ್ರಸನ್ನನಾಗಲು ದ್ರೌಪದಿ ಬೇಡಿದಳು "ನಾವು ನಮ್ಮ ಬಗ್ಗೆ ಏನೊಂದೂ ಬೇಡುವದಿಲ್ಲ. ಆದರೆ ಮನೆಗೆ ಬಂದ ಅತಿಥಿಗಳಿಗೆ ಅನ್ನ ನೀಡುವ ಅನುಕೂಲತೆ ಆಗುವಂತೆ ನಮ್ಮ ಮೇಲೆ ಅನುಗ್ರಹಿಸು" ಎಂದು.

ಉತ್ತರವಾಗಿ ಸೂರ್ಯದೇವ ಹೇಳಿದ "ನನ್ನ ಹತ್ತಿರ ಅಕ್ಷಯ ಪಾತ್ರವಿದೆ; ವನವಾಸದಲ್ಲಿ ನೀನು ಇದನ್ನು ನಿನ್ನ ಹತ್ತಿರ ಇರಿಸಿಕೋ ಅದರಲ್ಲಿ ನಿನಗೆ ಬೇಕಾದಷ್ಟು ಅನ್ನ ಸಿಗುವುದು! ಆದರೆ ಒಂದು ನಿಯಮ ಮಾತ್ರ ಮರೆಯಬೇಡ ನಿನ್ನ ಊಟ ತೀರಿದ ನಂತರ ಮಾತ್ರ ಅದರಲ್ಲಿ ಏನೂ ದೊರೆಯಲಾರದು." ಎಂದು.

ಅಂದಿನಿಂದ ವನವಾಸದ ೧೨ ವರ್ಷ ಕಾಲವೂ ದ್ರೌಪದಿಯು ಸಾಯಂಕಾಲ ಮಾತ್ರ ಉಣ್ಣುತ್ತಿದ್ದಳು ಆಕೆಯ ಊಟ ಮುಗಿದ ಮೇಲೆ ಆ ದಿನಕ್ಕೆ ಬೇರೆ ಅನ್ನ ಅಕ್ಷಯ ಪಾತ್ರದಲ್ಲಿ ದೊರೆಯುವಂತಿರಲಿಲ್ಲ. ಆದಕ್ಕಾಗಿ ಆಕೆ ಸಂಜೆ ಮಾತ್ರ ಉಣ್ಣುತ್ತಿದ್ದಳು. ಅತಿಥಿಗಳಿಗೆ ಅನ್ನವಿಲ್ಲದೇ ಹೋದೀತೆಂದು ಹಗಲು ಉಣ್ಣುತ್ತಲೇ ಇರಲಿಲ್ಲ. ಅದರಿಂದ ಯಾವ ಅತಿಥಿಗೂ ಅನ್ನದ ಕೊರತೆ ಆಗಲಿಲ್ಲ.

ಇಂದಿಗೂ ಅದೇ ಸೂರ್ಯ ದೇವ ಇದ್ದಂತೆಯೇ ಇದ್ದಾನೆ. ಸೃಷ್ಟಿಯ ಅಕ್ಷಯ್ಯ ಪಾತ್ರವು ಇದ್ದಕ್ಕಿದ್ದಂತೆಯೇ ಇದೆ. ನಮ್ಮ ವನವಾಸವೂ ನಡೆದಿದೆ ಆದರೆ ಸರ್ವಶ್ರೇಷ್ಠ ಪ್ರೇಮ ಮೂರ್ತಿಯಾದ ಪಾಂಚಾಲಿ (ದ್ರೌಪದಿ) ಮಾತ್ರ ಇಲ್ಲ! ಅಂಥವಳ ತ್ಯಾಗಮಯ ಕರಸ್ಪರ್ಶದಿಂದ ಬೇಕಾದುದನ್ನು ಅರ್ಪಿಸಲು ಅಕ್ಷಯ ಪಾತ್ರವೂ ಆತುರಪಡಿದೆ. ಆದರೆ ಅಂದಿನ ಸಾಧ್ವಿ ದ್ರೌಪದಿ ಇಂದಿಲ್ಲ. ನಿರಪೇಕ್ಷ ಸ್ನೇಹದಿಂದಲೇ ಸಮೃದ್ಧಿ ಹುಟ್ಟುತ್ತದೆ.

—ಭೂದಾನ



REGD. No B. G. 176
LICENCE No 31
Licensed to Post without Prepayment

## ತೈಲವಿಲ್ಲದ ಅಭ್ಯಂಜನ

(೧ನೇ ಪುಟದಿಂದ)

ಎಸರಿ ಹಾಗಾದರೆ. ರೈತರಲ್ಲಿ ತಮ್ಮ ಬಡತನಕ್ಕಿರುವ ಕಾರಣಗಳನ್ನು ತಿಳಿದುಕೊಂಡು ಅವನ್ನು ದೂರೀಕರಿಸುವ ಪ್ರಜ್ಞೆ ಹುಟ್ಟಬೇಕು ಪ್ರಜ್ಞಾಹೀನರು ಕೃಷಿವಲಯದಲ್ಲಿ ಅದೆಂತಹ ಹೋರಾಟ ನಡೆಸಬಲ್ಲರು? ನಿಮ್ಮ ಶಾಸ್ತ್ರ ರೈತರಾಟಿ ಶ್ರೀಮಂತರ ಪರಿಸ್ಥಿತಿಯನ್ನು ಕಂಡು ತೃಪ್ತಿಪಡುತ್ತದೆ, ಆದಕ್ಕೆ ನೈಜ ರೈತನ ದರ್ಶನವಾದಂತಿಲ್ಲ ಅದ ದರಿಂದಲೇ ಹೀಗೆ ,

'ನೀನು ಹೇಳುವುದು ಸರಿಯೆಂದು ಕಾಣುತ್ತದೆ, ಎಂದ ನನ್ನ ಕಿವಿಗೆ ಗಟ್ಟಿಯಾಗಿ ಎಡುವ ಸದ್ದು ಕೇಳಿಸಿತು ಅತ್ತ ತಿರುಗಿದೆ

...ಯಿಂದ ಸ್ಟೇಷನ ವರೆಗೆ ಹತ್ತು ... ೫೦ ಮೈಡಿ ಆಗುತ್ತೆ ... ರೂ ೧೦೪—೫೯ ... ಕಡ. ಮು... ಎಂದಿಟ್ಟು ಕೊಂಡ ... ಅದಕ್ಕೆ ... ಇಲ್ಲಿ ... ಕೊಡ್ಬೇಕಾಗುತ್ತೆ ... ಕೊಡ್ತೀಯಾ?

... ನಾನು ಊಹಿಸಿಕೊಂಡೆ ... ಕೊಟ್ಟೆ ... ಸುಗ್ಗಿ ... ಬರುವ ವರೆಗೆ ... ?

... ಒಡೆಯ. ... ನಾವಾ ... ಬೇಕಲ್ಲಾ? ನಿಮ್ಮ ... ಸುಗ್ಗಿ ... ಕೊಟ್ಟೇನೆ.'

... ಹೇಗಾಗುತ್ತೆ ... ? ನಿನ್ನ ... ದವಾಖಾನೆಗೆ ಬಂದದ್ದೇ ... ನೀನು ... ?'

'ಹಾಗಲ್ಲ ಸ್ವಾಮಿ, ನಿಮ್ಮ ಹತ್ರ ಧರ್ಮಕ್ಕೆ ಬಿಡಿ ಅಂದ್ರೆ? ,

'ತಿಸ್ಟ್ರು ನೀನು ಬೇಕೇ ಬೇಕ. ಎಂದು ... ಕಾಗುತ್ತೆ? ... ಸುಗ್ಗಿಯಲ್ಲಿ ೧೦ಕ್ಕೆ ೨೦ ಕೊಡಬೇಕಾದೀತು"

'ಮತ್ತೇನು ಮಾಡ್ಲಿ ಸ್ವಾಮಿ ನಿಮ್ಮ ಹೆಸರು ಹೇಳ್ಕೊಂಡಾದ್ರೂ ... ಮಾಡ್ತೀನಿ. ಮತ್ತೆ, ನಾಳೆ ...?,

'ಕೇಳದಿಯಾ ಶಾಮೂ , ಎಂಬ ಧ್ವನಿ ಕಿವಿದೆರೆಗೆ ಬಡಿದಾಗಲೇ ನನಗೆ ಎಚ್ಚರ ಕಣ್ಣುಗಳಿಂದ ನೀರು ಸುರಿಯತೊಡಗಿತ್ತು. ಭಾರವಾದ ಕಣ್ಣುಗಳೆಡೆ ತುಂಬಿದ ನೀರಹನಿಗಳ ಮಧ್ಯದಿಂದ ಆ ... ಕಿರಣಗಳೆಡೆ ಗಳಿಯ ... ಸನ್ನು ಕಂಡೆ ಆತನ ನಯನಗಳು ಬಹಳಾ ಯಕತೆಯನ್ನು ಪ್ರಕಟಿಸುವಂತಿದ್ದುವು ಅವ್ವರಲ್ಲಿಯೇ ಒಂದು ಮಿಂಚು ಮಿಂಚಿತು. ಗುಡುಗು ಗುಡುಗಿತು. ನೆಲೆಮಿಂಚಿನ ಸಸುಬೆಳಕಿನಲ್ಲಿ ನಮ್ಮನ್ನು ನಾವೇ ನೋಡಿಕೊಂಡಿದ್ದೆವು, ರಾತ್ರಿ ಚಂದ್ರೋದಯದಲ್ಲಿ ಆಗಬೇಕಾದ ತೈಲಾಭ್ಯಂಜನದಲ್ಲಿ ಅಭ್ಯಂಜನವಂತೂ ಆಗಲೇ ನಡೆದಿತ್ತು. ತೈಲದ ಅಭಾವ ಮಾತ್ರ ಎಂದೆಂದಿಗೂ ಎದ್ದು ತೋರುವಂತಿತ್ತು

—ಗೋರಾ

## ಪುಸ್ತಕ ವಿಮರ್ಶೆ

(೧ನೇ ಪುಟದಿಂದ)

ಲ್ಲಿ ಸೇರಿದ್ದಾರೆ. ಗ್ರಾಮಕ್ಕೊಂದು ದೇವಾಲಯ, ದೇಗುಲಕ್ಕೊಂದ ಪುರಾಣ ಕಥೆ ಇವು ನಮ್ಮ ನಾಡಿನ ಪರಂಪರೆ ಶ್ರೀ ಉಪಾಧ್ಯಾಯರು ಮೆಟ್ಟಿದ ದಾರಿಯನ್ನು ಇತರ ಕ್ಷೇತ್ರ ಭಕ್ತರೂ ಮೆಟ್ಟುವುದ ಶ್ಲಾಘನೀಯ

**ಗಾಂಧಿ ವಿಚಾರದೋಹನ**—ಮೂಲ: ಕಿಶೋರಲಾಲ ಮಶ್ರುವಾಲಾ. ಅನುವಾದ: ಗುರುನಾಥ ಜೋಶಿ. ಸಂಪಾದಕರು: ರಂಗನಾಥ ರಾ ದಿವಾಕರ ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೧೯೪. ಬೆಲೆ. ರೂ ೩-೦೦.

ಗಾಂಧಿಯೆಂಬ ಉಪನಾಮವನ್ನು ಅಂಕಿತನಾಮವನ್ನಾಗಿಸಿಕೊಂಡು ಲೋಕ ಜನಕೋಟಿಯಿಂದ ಮಹಾತ್ಮಾ ಎನಿಸಿಕೊಂಡು ಅದ್ವಿತೀಯ ಯುಗ ವಿಭೂತಿಯಾಗಿ ಮೆರೆದ ರಾಷ್ಟ್ರಪಿತ ಗಾಂಧೀಜಿಯವರ ವಿಚಾರ ಸರ್ವಸ್ವದ ತಿರುಳನ್ನು ಏಕತ್ರ ಒದಗಿಸುವ ಅದ್ವಿತೀಯವಾದ ಗಾಂಧೀಜಿಯವರ ವಿಚಾರ ಧಾರೆಯು ರಾಮರಾಜ್ಯದತ್ತ ಯಾವ ದಿಸೆಯಲ್ಲಿ ಪ್ರವಹಿಸುತ್ತದೆ ಮತ್ತು ನಿಜವಾದ ಸ್ವರಾಜ್ಯ ಸ್ಥಾಪನೆ ಮತ್ತದರ ಅಭಿವೃದ್ಧಿ ಹೇಗಾಗುತ್ತದೆಯೆಂಬುದನ್ನು ಮಥಿಸುವ ಗಾಂಧಿಜಿವಿಚಾರದಧಿಯನ್ನು ಮಥಿಸಿ ಸೂತ್ರರೂಪೀ ನವನೀತವನ್ನು ಭಾರತೀಯರಿಗೆ ಉಣ್ಣಿಸಲು ಸರ್ವಶಕ್ತವಾದ ಬೋಧಪ್ರದ ವಿಚಾರಪ್ರದ ಅಧ್ಯಯನಪ್ರದ ಗ್ರಂಥವಿದು.

ಗಾಂಧೀ ವಿಚಾರ ದೋಹನವು ೧೪ ಖಂಡಗಳಲ್ಲಿ ವಿಭಜಿತವಾಗಿದೆ. ಧರ್ಮ, ಧರ್ಮ ಮಾರ್ಗಗಳು, ಸಮಾಜ, ಸತ್ಯಾಗ್ರಹ, ಸ್ವರಾಜ್ಯ, ವಾಣಿಜ್ಯ, ಉದ್ಯೋಗ, ಗೋಪಾಲನೆ, ಖಾದಿ, ಸ್ವಚ್ಛತೆಯೂ ಆರೋಗ್ಯವೂ,ಶಿಕ್ಷಣ, ಸಾಹಿತ್ಯವೂ ಕಲೆಯೂ, ಲೋಕ ಸೇವಕ ಮತ್ತು ಸಂಸ್ಥೆಗಳು—ಎಂಬಿವೇ ಅವು ಆಯಾ ಖಂಡದಲ್ಲಿ ಆಯಾ ವಿಷಯಗಳ ಕುರಿತು ಮಹಾತ್ಮರ ಅಭಿಪ್ರಾಯವು—ಅವರ ವಿಚಾರದ ಹಿನ್ನಿಯು ಯಾವ ರೀತಿ ಹರಿಯುತಿತ್ತು ಎಂಬುದು ಸೂತ್ರರೂಪೇಣ ವ್ಯಕ್ತವಾಗಿದೆ.

ಮಹಾತ್ಮರ ಅನನ್ಯ ಶಿಷ್ಯರಲ್ಲೊಬ್ಬರೂ ನಿಷ್ಠಾವಂತ ಗಾಂಧಿ ಭಕ್ತರೂ ಆಗಿ ಹರಿಜನ ಪತ್ರಿಕೆಯ ಸಂಪಾದಕರಾಗಿದ್ದ ಕಿಶೋರಲಾಲ ಮಶ್ರುವಾಲಾರು ಈ ಗ್ರಂಥರಚನೆಯನ್ನು ಮಾಡಲು ಅಧಿಕಾರವಂತರು ಈ ಗುರು-ಶಿಷ್ಯರ ನಡುವೆ ಅನೇಕ ವಿಚಾರಗಳಲ್ಲಿ ಐಕಮತ್ಯವಿದ್ದುದರಿಂದ ಗುರುವು ಸಂತೋಷದಿಂದಲೇ ಈ ದೋಹನವನ್ನು ಒಪ್ಪಿಕೊಂಡಿದ್ದಾರೆ. ಹಾಗಾಗಿ ಗಾಂಧೀ ವಿಚಾರವನ್ನು ಮಥಿಸುವ ಅಧಿಕಾರಿಕ ಗ್ರಂಥವಿದು ಎಂದರೂ ತಪ್ಪಲ್ಲ. ಗುರುನಾಥ ಜೋಶಿಯವರು ಉತ್ತಮ ಅನುವಾದಕರು. ಗಾಂಧಿವಾದಿ ದಿವಾಕರರು ಗ್ರಂಥದ ಪರಿಪೂರ್ಣತೆ ಮತ್ತು ಪರಿಶುದ್ಧತೆಯ ಕಡೆಗೆ ವಿಶೇಷ ಲಕ್ಷ್ಯ ಹರಿಸಿ ಸಂಪಾದಿಸಿದ್ದಾರೆ.

ಇಂದು ನಮ್ಮ ದೇಶ ಸ್ವತಂತ್ರವಾಗಿದೆ; ಗಾಂಧೀಜಿಯವರ ತತ್ವಗಳನ್ನು ನೆಮ್ಮಿಕೊಂಡು ನಾವು ಮುಂದುವರಿಯುವ ಸಾಹಸ ಮಾಡುತಿದ್ದೇವೆ ಆದರೆ, ರಾಮರಾಜ್ಯ ಸ್ಥಾಪನೆಯ ದಿಸೆಯಲ್ಲಿಯೇ ನಾವು ಮುಂದುವರಿಯುತಿದ್ದೇವೆಂಬ ವಿಷಯದಲ್ಲಿ ಕೆಲವರಲ್ಲಿ ಇನ್ನೂ ಅವಿಶ್ವಾಸವಿದೆ ಅಲ್ಲದೆ, ಗಾಂಧೀ ವಿಚಾರಗಳನ್ನು ತಿಳಿದುಕೊಳ್ಳದೆ ಅವರ ಅಮೂಲ್ಯ ತತ್ವಗಳಿಂದ ವಿಮುಖರಾಗುತ್ತಿರುವವರೂ ದಿನ ದಿನಕ್ಕೆ ಹೆಚ್ಚಾಗಿದ್ದಾರೆ ಇಂತಹ ದುರ್ದೆಸೆಯಲ್ಲಿ ನಾವಿರುವಾಗ, ಪ್ರತಿಯೊಬ್ಬರೂ ಗಾಂಧೀಜಿ ಸಾರಿದ ಅಮೂಲ್ಯ ತತ್ವಗಳನ್ನು ಅರಿತುಕೊಳ್ಳುವುದು ಅತ್ಯಗತ್ಯವಿದೆ, ಮತ್ತು ಅವುಗಳನ್ನು ಸಮಯಕ್ಕೆ ಹೊಂದಿಸಿಕೊಂಡು ಅನುಷ್ಠಾನಕ್ಕೆ ತರಬೇಕಾಗಿದೆ. ಪ್ರಾಯ ಎಂದಿಗಿಂತಲೂ ಇಂದು ಈ ವಿಚಾರ ದೋಹನವು ಅತ್ಯಂತಾವಶ್ಯಕವೆನ್ನಿಸುತ್ತದೆ ೧೯೩೭ರಲ್ಲಿ, ಅಂದರೆ ಸ್ವಾತಂತ್ರ್ಯಕ್ಕೆ ಸಾಕಷ್ಟು ಪೂರ್ವದಲ್ಲಿಯೇ ಕನ್ನಡದಲ್ಲಿ ಈ ಗ್ರಂಥವು ಮೊದಲ ಮುದ್ರಣವನ್ನು ಕಂಡಿತ್ತು. ಇಂದಿನದು ನಾಲ್ಕನೆಯದು. ಪ್ರತಿಯೊಬ್ಬ ಕನ್ನಡಿಗನೂ, ಅವನು ಗಾಂಧೀವಾದಿಯಾಗಿರಲಿ, ಇಲ್ಲದಿರಲಿ, ವಿಚಾರವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮತ್ತು ಉಚಿತವಾದುದನ್ನು (ಎಲ್ಲವೂ ಉಚಿತವೇ ಏಕೆಂದರೆ, ಗಾಂಧೀ ವಿಚಾರಗಳು ಯಾವುದೇ ಒಂದು ಪಂಗಡದ ಇಲ್ಲವೇ ಪಕ್ಷದ ಸೀಮೆಯಲ್ಲಿ ಸುಳಿದಾಡುತ್ತಿಲ್ಲ, ಇಡಿಯ ಮಾನವ ಸಮುದಾಯದ ಮೇಲೆ ಶಾಂತಿ ಮತ್ತು ಸೌಹಾರ್ದಗಳ ಎಲ್ಲೆಯೊಳಗೆ ಪ್ರಭಾವ ಬೀರುತ್ತದೆ) ಅನುಷ್ಠಾನಕ್ಕೆ ತರಬೇಕು ಇದಕ್ಕೆ ಹೆಚ್ಚಿನ ಪ್ರಾಸ್ತಾಪ ಪಡಬೇಕಾದ ಅಗತ್ಯವೂ ಇಲ್ಲ. ಲಲಿತವಾದ ಭಾಷೆ, ವಿಚಾರ ಪ್ರಕಟಣೆಯಲ್ಲಿ ಸುಸ್ಪಷ್ಟತೆ ಮತ್ತು ಸರಳತೆ ಅಂದವಾದ ಮುದ್ರಣ —ಇವು ಗಾಂಧೀಜಿ ಎಲ್ಲೆಲ್ಲಿಯೂ ಇರಬೇಕೆಂದು ಬಯಸುವಂತೆ, ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಪುಸ್ತಕಕ್ಕೆ ಪೂರೈಸಿವೆ.

—ಗೋರಾ

ಶ್ರೀಮಂತರಾಗಲು.......

ನಿಮ್ಮ ವಾರ್ಷಿಕ ಉಳಿತಾಯವನ್ನು
ಅಧಿಕ ಲಾಭ ತರುವಂತೆ
ವಿನಿಯೋಗಿಸಬೇಕೆಂದಿದ್ದರೆ

ಸಂಪಾದನೆ ಮಾಡುವ
ಪ್ರಾಯದಲ್ಲಿ
(ಸುಮಾರು ೩೫ ವರುಷಗಳ ಅವಧಿಯಲ್ಲಿ)
ಉಳಿಸಿ ವೃದ್ಧಿಗೊಳಿಸ
ಬೇಕೆಂಬ ಅಪೇಕ್ಷೆ
ನಿಮಗಿದ್ದರೆ

ಕೊನೆಯ ಪಕ್ಷ ರೂ. ೩೬೫ನ್ನಾದರೂ
ವಾರ್ಷಿಕವಾಗಿ ಉಳಿಸಲು
ನೀವು ಬಯಸುವುದಾದರೆ

ನಿಮಗೆ—
ಇನ್ವೆಸ್ಟರ್ಸ್ ಏಜನ್ಸಿಯ
ಆದರದ ಆಹ್ವಾನವಿದೆ

ಸಿಂಡಿಕೇಟ್ ಬ್ಯಾಂಕ್
ಸಮಾನ ಸೇವೆ - - - - ಸರಿಯಾದ ಭದ್ರತೆ
ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್
ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

**ಸೂಚನೆ**

**'ನವಯುಗ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಲು ಹಾವು ಸ್ಫೆಜಿನ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಸುವಾಚ್ಯವಾಗಿಯೂ ಇರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ಸ.**

Edited, Printed & Published by K. H.Shetty. at the Navayuga Press, Udipi, S. India.